ಕರ್ನಾಟಕ ಸರ್ಕಾರ

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು



೧೪

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು-560 056

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೧೪೮
ವಿಚಾರ ಸಾಹಿತ್ಯಮಾಲೆ - ೬೧

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು
ಮತ್ತು
# ಭಾಷಣಗಳು
ಸಂಪುಟ ೧೪

## ಸಂಪಾದನ ಸಮಿತಿ

| | |
|---|---|
| **ಅಧ್ಯಕ್ಷರು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ | ಅಧ್ಯಕ್ಷರು |
| **ಡಾ. ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ. ದೇವನೂರ ಮಹದೇವ** | ಸದಸ್ಯರು |
| **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

## ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

(ಸಂಪುಟ ೧೪)

**ಆಯ್ದ ಸಮಿತಿಗೆ ಹಿಂದೂ ಸಂಹಿತೆ ಕೋಡ್‌ನ್ನು ಕಳಿಸಿಕೊಟ್ಟಿದ್ದು; ಕರಡು ಹಿಂದೂ ಕೋಡ್ ಮಸೂದೆ**
**(ಆಯ್ದ ಸಮಿತಿಯಿಂದ ತಿದ್ದುಪಡಿಯಾದಂತೆ);**
**ಆಯ್ದ ಸಮಿತಿಯಿಂದ ಹಿಂತಿರುಗಿಸಲಾಗಿದ್ದ ಹಿಂದೂ ಕೋಡ್ ಮಸೂದೆಯ ಮೇಲೆ ಚರ್ಚೆ**


## ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

## ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**Dr. Baba Saheb Ambedkar Avara Samagra Barehagalu Mattu Bhashanagalu: Samputa 14** — Kannada translation of Collected Works of Baba Saheb Ambedkar; Published by **Kannada Mattu Samskruti Ilakhe**; **Kuvempu Bhasha Bharati Pradhikara**, Kalagrama, Jnanabharathi, Behind Bangalore University Campus, Mallattahalli, Bangalore - 560 056; Third Edition : 2015; Pp. xxviii + 768; Price: Rs. 50/-.

© : ಹಕ್ಕುಗಳನ್ನು ಕಾದಿರಿಸಿದೆ

ಮೂರನೇ ಮುದ್ರಣ : ೨೦೧೫
ಪುಟಗಳು : xxviii + ೭೬೮
ಬೆಲೆ : ರೂ. ೫೦/–
ಪ್ರತಿಗಳು : ೫೦೦೦

ಪ್ರಕಾಶಕರು :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಮತ್ತು
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ: **ಮೆ॥ ರಾಜಾ ಪ್ರಿಂಟರ್ಸ್**

**ISBN : 978-81-906513-5-6**

ಮುದ್ರಕರು :
**ಮೆ॥ ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು – ೫೬೦ ೦೨೭
ದೂ: ೦೮೦–೨೨೨೩೪೦೬೬, ೦೮೦–೨೨೨೭೯೯೬೫

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೦೫.೦೬.೨೦೧೫

ಸಿಎಂ/ಪಿಎಸ್/೧೫೦/೨೦೧೫

## ಸಂದೇಶ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುನ್ನತ ಸಾಹಿತ್ಯಕ ಸಾಧನೆಯ ಪ್ರತೀಕವಾಗಿರುವ ರಾಷ್ಟ್ರಕವಿ ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ನಮ್ಮ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಲೇಖಕರ ಹಾಗೂ ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ ಸಂಚಯಗಳನ್ನು ಹೊರತರುತ್ತಿರುವುದು ಅಭಿನಂದನೀಯ ಮತ್ತು ಅನುಕರಣ ಯೋಗ್ಯ. ಕುವೆಂಪು, ಪು. ತಿ. ನರಸಿಂಹಾಚಾರ್ ಮತ್ತು ಜಿ. ಎಸ್. ಶಿವರುದ್ರಪ್ಪ ಅವರ ಸಂಚಯಗಳನ್ನು ಈಗಾಗಲೇ ಪ್ರಕಟಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಇನ್ನಿತರ ಜ್ಞಾನಪೀಠ ಪ್ರಶಸ್ತಿ ಹಾಗೂ ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ನನ್ನಲ್ಲಿ ಅಭಿಮಾನ ಮತ್ತು ಹೆಮ್ಮೆ ಮೂಡಿಸಿದೆ.

ಇವುಗಳೆಲ್ಲದರ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ ಮತ್ತು ಗರಿಮೆ ಸಾರಸ್ವತ ಲೋಕದಲ್ಲಿ ಮತ್ತಷ್ಟು ಪ್ರಜ್ವಲಿಸಲಿದೆ. ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೂ ಕೊಡುಗೆಯಾಗಬಲ್ಲ ಮಹತ್ವದ ಮೌಲಿಕ ಕೃತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮತ್ತಷ್ಟು ಹೊರತರಲಿ ಎಂಬುದೇ ನಮ್ಮ ಸರ್ಕಾರದ ಸದಾಶಯ.

**ಭಾರತದ ಸಂವಿಧಾನ ಶಿಲ್ಪಿ** ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಭಾಷಾಂತರದ ಹೊಣೆ ಹೊತ್ತು ಅನುವಾದದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಅಕ್ಕರೆಯ ಅಭಿನಂದನೆಗಳು ಹಾಗೂ ಆತ್ಮೀಯ ವಂದನೆಗಳು.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ

**ಹೆಚ್. ಆಂಜನೇಯ**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
ಹಾಗೂ
ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು

ದೂ.ಸಂ. ೦೮೦ ೨೨೩೫ ೩೧೦೪
೨೨೦೩ ೯೮೮
ಕೊಠಡಿ ಸಂಖ್ಯೆ: ೩೪೦/೩೪೦ಎ,
೩ನೇ ಮಹಡಿ, ವಿಧಾನ ಸೌಧ,
ಬೆಂಗಳೂರು – ೫೬೦ ೦೦೧
ದಿನಾಂಕ: ೧೨.೧.೨೦೧೬

## ಸಂದೇಶ

ನಮ್ಮ ಸುತ್ತಣ ಸಮಾಜದಲ್ಲಿ ಇರುವ ಅಸಮಾನತೆಗಳಿಗೆ ಕಾರಣಗಳೇನೇ ಇರಲಿ, ಆ ಅಸಮಾನತೆಯು ಬೆಳೆಯುವ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಡ್ಡಿಗಳನ್ನು ಉಂಟು ಮಾಡಬಾರದು. ಇಂತಹ ಅಡ್ಡಿಗಳು ಇರದಂತೆ ನೋಡಿಕೊಳ್ಳಲು ಸರ್ಕಾರಗಳು ತಕ್ಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೆ ಕೊಡುತ್ತಿವೆ. ಕರ್ನಾಟಕ ಸರಕಾರವೂ ಕೂಡ ತನ್ನ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಕ್ಕಳು ಈ ವಿದ್ಯಾರ್ಥಿನಿಲಯ ಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅವರ ಭೌತಿಕ ಅಗತ್ಯಗಳಿಗೆ ಬೇಕಾದ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುವಂತೆ ನೋಡಿಕೊಳ್ಳಲಾಗಿದೆ.

ಇವೆಲ್ಲದರ ಜೊತೆಗೆ ಆ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ಕಲ್ಪಿಸುವುದು ಕೂಡ ಇಲಾಖೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕರಾಗಿ ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ನಿರಂತರ ಹೋರಾಟ ಮಾಡಿದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪರಿಚಯಮಾಡಿಕೊಡುವುದು ಅಗತ್ಯವೆನಿಸಿ ಇಲಾಖೆ ಒಂದು ಯೋಜನೆಯನ್ನು ರೂಪಿಸಿತು. ಅಂಬೇಡ್ಕರ್ ಅವರ ಎಲ್ಲ ಬರೆಹಗಳು ಮತ್ತು ಭಾಷಣಗಳು ಕನ್ನಡ ಅನುವಾದದ ಸಂಪುಟಗಳನ್ನು ಈ ವಿದ್ಯಾರ್ಥಿನಿಲಯಗಳಿಗೆ ಒದಗಿಸುವುದೇ ಈ ಯೋಜನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ೨೦೧೫–೧೬ನೇ ಸಾಲಿನ ವರ್ಷದ ತಮ್ಮ ಆಯವ್ಯಯವನ್ನು ಮಂಡನೆ ಮಾಡುವಾಗ ಈ ಯೋಜನೆಯನ್ನು ಘೋಷಿಸಿದರು. ಅದರಂತೆ ಈ ಸಂಪುಟಗಳನ್ನು ಅಚ್ಚುಮಾಡಿ ವಿದ್ಯಾರ್ಥಿನಿಲಯಗಳಿಗೆ ಒದಗಿಸುವ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಅನುವಾದಿಸಿ ಪ್ರಕಟಿಸುವ ಕೆಲಸವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ವಹಿಸಿತು. ಈಗ ಈ ಸಂಪುಟಗಳನ್ನು ಸಿದ್ಧಗೊಳಿಸಿ ಪ್ರಾಧಿಕಾರವು ತನ್ನ ಹೊಣೆಯನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆಗೆ ಚಾಲನೆಯನ್ನು ನೀಡಿದ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**(ಹೆಚ್.ಆಂಜನೇಯ)**

ಕರ್ನಾಟಕ ಸರ್ಕಾರ

**ಉಮಾಶ್ರೀ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ: ಕಛೇರಿ : ೨೨೨೫೫೨೮೨
೨೨೦೩೩೪೯೯
ಕೊಠಡಿ ಸಂಖ್ಯೆ: ೨೫೨, ೨ನೇ ಮಹಡಿ
ವಿಧಾನ ಸೌಧ, ಬೆಂಗಳೂರು


ಸಂ: ಮ.ಮ.ಅ.ಕ.ಸಂ.ಸ/೨೪೮/೨೦೧೫

ದಿನಾಂಕ: ೦೪.೬.೨೦೧೫

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದು ಒಂದಾಗಿದೆ. ಈ ಯೋಜನೆಯನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರೂಪಿಸಲಾಗಿದೆ. ಈ ಸಮಿತಿಯ ನೇತೃತ್ವದಲ್ಲಿ ಅನುವಾದಿತ ಕೃತಿಗಳನ್ನು ಹೊರತಂದಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ. ಪ್ರಕಟವಾದ ಎಲ್ಲ ಸಂಪುಟಗಳು ಜನಮನ್ನಣೆ ಗಳಿಸಿವೆ. ಅವುಗಳನ್ನು ಮರುಮದ್ರಿಸಿ ಓದುಗರಿಗೆ ಒದಗಿಸಲು ನಮ್ಮ ಇಲಾಖೆಯು ಮುಂದಾಗಿದೆ ಮತ್ತು ಈ ಹೊಣೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ನೀಡಿದೆ. ಪ್ರಾಧಿಕಾರವು ಈಗ ಈ ಸಂಪುಟಗಳನ್ನು ಓದುಗರ ಮುಂದೆ ಇರಿಸಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲರನ್ನೂ ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಡಾ. ಎನ್.ಎಸ್. ಚನ್ನಪ್ಪಗೌಡ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ: ೩, ನೆಲಮಹಡಿ
ವಿಕಾಸಸೌಧ
ಬೆಂಗಳೂರು – ೫೬೦ ೦೦೧
ಮೊ.: +೯೧ ೮೦ ೨೨೦೩೪೦೦೨
ಫ್ಯಾಕ್ಸ್: +೯೧ ೮೦ ೨೨೩೫೩೧೦೫

# ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ. ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಯಾಗಿರುತ್ತದೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ. ಇಪ್ಪತ್ತೆರಡು ಸಂಪುಟಗಳಲ್ಲಿ ಹಲವು ಈಗಾಗಲೇ ಹೊರಬಂದಿದ್ದು ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಕರ್ನಾಟಕ ಸರಕಾರವು ಈ ಸಂಪುಟಗಳನ್ನು ಮರು ಮುದ್ರಿಸುವ ಯೋಜನೆಗೆ ಅಗತ್ಯವಾದ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒದಗಿಸಿದೆ. ಈಗ ಈ ಎಲ್ಲ ಸಂಪುಟಗಳು ಹೊಸ ಮೆರುಗಿನೊಂದಿಗೆ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಡಾ. ಎನ್.ಎಸ್. ಚನ್ನಪ್ಪಗೌಡ)

ಕರ್ನಾಟಕ ಸರ್ಕಾರ


**ಶ್ರೀ ಕೆ.ಎ. ದಯಾನಂದ**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦ ೦೦೨

ದಿನಾಂಕ : ೧೦.೬.೨೦೧೫

# ಸಂದೇಶ

ಕರ್ನಾಟಕ ಸರ್ಕಾರ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಸ್ಥಾಪಿಸಿ ಸಾಹಿತ್ಯಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಕನ್ನಡದೊಡನೆ ಭಾರತೀಯ ಹಾಗೂ ವಿದೇಶೀಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದು, ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು; ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು; ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸೂಕ್ತ ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಇತಿಹಾಸ', ಜೆ.ಡಿ.ಬರ್ನಾಲ್ ಅವರ 'ವಿಜ್ಞಾನದ ಇತಿಹಾಸ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು – ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಪ್ರಾಧಿಕಾರವು ಪ್ರಕಟಿಸಿದ್ದ 'ಡಾ. ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು' ಮಾಲಿಕೆಯ ಹಲವು ಸಂಪುಟಗಳು ಈಗ ಮರಳಿ ಮುದ್ರಿತವಾಗುತ್ತಿವೆ. ಈ ಸಂಪುಟಗಳು ಓದುಗರಿಗೆ ಸದಾಕಾಲವು ದೊರೆಯುತ್ತಿರಬೇಕೆಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರಿಯಾಗಿದೆ. ಅದಕ್ಕಾಗಿ ಅಗತ್ಯವಾದ ಅನುದಾನವನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ. ಈ ಸಂಪುಟಗಳನ್ನು ಸಿದ್ಧಪಡಿಸಲು ನೆರವಾದ ಸಲಹಾ ಸಮಿತಿಯ ಸದಸ್ಯರಿಗೆ, ಅನುವಾದಕರಿಗೆ ಮತ್ತು ಪ್ರಾಧಿಕಾರಕ್ಕೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

10/6/15

ಕೆ. ಎ. ದಯಾನಂದ

# ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ (೧೮೯೧ ರಿಂದ ೧೯೫೬) ತಮ್ಮ ಕಾಲಮಾನವನ್ನು ಮೆಟ್ಟಿನಿಂತು ಗೋಪುರೋಪಮವಾಗಿ ಬೆಳೆದುನಿಂತ ಮಹಾಮಾನವರಲ್ಲಿ ಒಬ್ಬರು. ರಾಷ್ಟ್ರೀಯತಾವಾದಿಯಾಗಿ, ಕಾನೂನು ತಜ್ಞರಾಗಿ, ರಾಜಕೀಯ ನೇತಾರರಾಗಿ, ಕ್ರಿಯಾಶೀಲ ಸಾಮಾಜಿಕ ಕಾರ್ಯಕರ್ತರಾಗಿ, ಶ್ರೇಷ್ಠ ಇತಿಹಾಸಕಾರರಾಗಿ, ಮಹಾ ದಾರ್ಶನಿಕರಾಗಿ, ಅಪ್ರತಿಮ ಚಿಂತಕರಾಗಿ, ಮಾನವಶಾಸ್ತ್ರಜ್ಞರಾಗಿ, ಖ್ಯಾತ ಅರ್ಥಶಾಸ್ತ್ರಜ್ಞರಾಗಿ, ಸಮೃದ್ಧ ಬರೆಹಗಾರರಾಗಿ, ಕ್ರಾಂತಿಕಾರಿಯಾಗಿ, ಅಸಾಮಾನ್ಯ ವಾಕ್ಪಟುವಾಗಿ, ಬೌದ್ಧ ಧರ್ಮದ ಪುನರುಜ್ಜೀವಕರಾಗಿ, ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಅವರು ಮಾಡಿರುವ ಮಹತ್ತರ ಸಾಧನೆಗಳನ್ನು ಗಮನಿಸಿದರೆ, ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೆಲ್ಲ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂದು ಬೆರಗಾಗಿ ನಿಲ್ಲುವಂತೆ ಆಗುತ್ತದೆ. ಆಧುನಿಕ ಅರ್ಥದಲ್ಲಿ ಅವರನ್ನು 'ಪವಾಡ ಪುರುಷ'ರೆಂದೇ ಹೆಸರಿಸಬೇಕಾಗುತ್ತದೆ.

ಸಾಮಾಜಿಕ ಭೇದಭಾವಕ್ಕೊಳಗಾಗಿ ನರಳುತ್ತಿದ್ದ ಬಡ ಕುಟುಂಬದಲ್ಲಿ ಹುಟ್ಟಿದ ಅವರು ತಮ್ಮ ಇಡೀ ಜೀವಮಾನವನ್ನು ಈ ಸಾಮಾಜಿಕ ಭೇದಭಾವಕ್ಕೆ, ಸಮಾಜದ ಎಲ್ಲ ಪಿಡುಗುಗಳಿಗೂ ಕಾರಣವಾಗಿರುವ ಜಾತಿಪದ್ಧತಿಯ ವಿರುದ್ಧವಾಗಿ ಹೋರಾಡುವುದಕ್ಕೆ ಮೀಸಲಾಗಿ ಇಡಬೇಕಾಯಿತು. ತಮ್ಮ ಈ ಅವಿರತ ಹೋರಾಟದಿಂದ, ಈ ಹಿಂದಿನ ಸಮಾಜ ಸುಧಾರಕರು ಯಾರೂ ಸಾಧಿಸದಿದ್ದಂಥ ಮಹಾಕ್ರಾಂತಿಯನ್ನು ಎಸಗಿ ಹೊಸ ಇತಿಹಾಸವನ್ನೇ ಸೃಷ್ಟಿಸಿದರು. ಸಾಮಾಜಿಕ–ಆರ್ಥಿಕ ಸಂಕಷ್ಟಗಳನ್ನು ಮೀರಿ ನಿಂತು ಅನೇಕ ಪ್ರಥಮಗಳನ್ನೂ ಅವರು ಸಾಧಿಸಿದರು. ಕಾಲೇಜು ಶಿಕ್ಷಣವನ್ನು ಪಡೆದ ದಲಿತರಲ್ಲಿಯೂ ಮೊದಲಿಗರಾಗಿದ್ದವರಲ್ಲಿ ಅವರು ಪ್ರಮುಖರಾದರು. ನ್ಯಾಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಸಂಬಂಧವಾದ ತಮ್ಮ ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಕೊಲಂಬಿಯಾದಂಥ ವಿಶ್ವವಿದ್ಯಾನಿಲಯದಿಂದ, ಲಂಡನ್ನಿನ ಅರ್ಥಶಾಸ್ತ್ರ ಶಾಲೆಯಿಂದ ಡಾಕ್ಟೊರೇಟ್ ಪದವಿಗಳನ್ನು ಪಡೆದ ಮಹಾಮೇಧಾವಿಗಳಲ್ಲೂ ಅವರೊಬ್ಬರಾದರು. ಹೀಗೆ ಶ್ರೇಷ್ಠ ವಿದ್ವಾಂಸರಾಗಿ ಭಾರತಕ್ಕೆ ಹಿಂದಿರುಗಿ ಬಂದ ಅವರು ಸಮಾಜದ ಕೆಳವರ್ಗಗಳ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ, ರಾಜಕೀಯ ಹಕ್ಕುಗಳಿಗಾಗಿ ಅಹರ್ನಿಶಿ ದುಡಿದರು. ಬರೆಹಗಳ–ಭಾಷಣಗಳ ಮೂಲಕ, ವೈಚಾರಿಕ ಚರ್ಚೆ–ಸಂವಾದಗಳ ಮೂಲಕ ಸಾಮಾಜಿಕ–ರಾಜಕೀಯ ಜಾಗೃತಿಯನ್ನೇ ಮೂಡಿಸಿದರು; 'ಆಧುನಿಕ ಬೋಧಿಸತ್ವ'ರೆಂಬ ಕೀರ್ತಿಗೂ ಪಾತ್ರರಾದರು. ಸಮಾಜದ ಎಲ್ಲ ವರ್ಗಗಳಲ್ಲಿ, ವಿವಿಧ ಧರ್ಮಗಳಲ್ಲಿ ಪ್ರತ್ಯಕ್ಷವಾಗಿ, ಪ್ರಚ್ಛನ್ನವಾಗಿ ಬೇರುಬಿಟ್ಟಿದ್ದ ಸಾಮಾಜಿಕ ಕೆಡಕುಗಳ ವಿರುದ್ಧ ದನಿಯೆತ್ತಿದ ಹಿರಿಮೆಯೂ ಅವರದಾಗಿದೆ. ಅಂತಿಮವಾಗಿ ದೇಶ ವಿಭಜನೆಯ ಅನಿವಾರ್ಯತೆಯನ್ನು ಒಪ್ಪಿದರಾದರೂ, ಅದರ ಭಯಾನಕ ಪರಿಣಾಮಗಳ ವಿರುದ್ಧ ಎಚ್ಚರಿಕೆಯ ಗಂಟೆಯನ್ನೂ ಅವರು ಮೊದಲೇ ಮೊಳಗಿಸಿದ್ದರೆಂಬುದು ಗಮನಾರ್ಹವಾದ ಸಂಗತಿ.

ಬುದ್ಧ, ಕಬೀರ್, ಏಸು, ಅಶೋಕ, ಶಿವಾಜಿ, ಜಾರ್ಜ್ ವಾಷಿಂಗ್‌ಟನ್, ಥಾಮಸ್ ಪೇನ್, ಅಬ್ರಹಾಂ ಲಿಂಕನ್, ಎಡ್ಮಂಡ್ ಬರ್ಕ್, ಮಾರ್ಟಿನ್ ಲೂಥರ್, ಶಾಹೂ ಮಹಾರಾಜ್, ಮಹಾರಾಜ ಸಯ್ಯಾಜಿರಾವ್ ಗಾಯಕ್‌ವಾಡ್–III ಮುಂತಾದವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅಂಬೇಡ್ಕರ್ ಅವರು ಈಚಿನ ತಲೆಮಾರಿನ ಶ್ರೀ ಎ.ಎಚ್. ಸಾಳುಂಕೆ ಅವರಿಂದ ಹಿಡಿದು ಕು. ಮಾಯಾವತಿಯವರ ವರೆಗೆ ಅನೇಕ ಸಮಾಜ ಚಿಂತಕರು ಮತ್ತು ರಾಜಕೀಯ ನೇತಾರರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ್ದಾರೆ.

ಅವರ ಅಸಾಮಾನ್ಯ ಜೀವಿತ–ಸಾಧನೆಗಳನ್ನು ಕುರಿತಂತೆ ವಿವಿಧ ಭಾಷೆಗಳಲ್ಲಿನ ಹಿರಿ–ಕಿರಿಯ ಲೇಖಕರುಗಳು ಹತ್ತಾರು ಜೀವನ–ಚರಿತ್ರೆಗಳನ್ನು ರಚಿಸಿರುವುದು ಆಶ್ಚರ್ಯದ ಸಂಗತಿಯೇನೂ ಅಲ್ಲ. ದೆಹಲಿಯೂ ಸೇರಿದಂತೆ ನಾಡಿನ ಅನೇಕ ಕಡೆಗಳಲ್ಲಿ ಅವರ ಸ್ಮಾರಕಗಳು ನಿರ್ಮಾಣಗೊಂಡಿವೆ. ಹೈದರಾಬಾದಿನಲ್ಲಿ 'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ', ಮುಜಫ್ಫರ್‌ಪುರದಲ್ಲಿನ 'ಬಿ.ಆರ್. ಅಂಬೇಡ್ಕರ್ ಬಿಹಾರ್ ವಿಶ್ವವಿದ್ಯಾನಿಲಯ'ಗಳು ಸ್ಥಾಪನೆಗೊಂಡಿರುವುದಲ್ಲದೆ, ನಾಗಪುರದಲ್ಲಿನ ಅಂತರ–ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಅಂಬೇಡ್ಕರ್ ಅವರ ಹೆಸರನ್ನಿಡಲಾಗಿದೆ. ಸಂಸತ್ ಭವನದಲ್ಲಿಯೂ ಅವರ ಭಾವಚಿತ್ರವನ್ನು ಅನಾವರಣಗೊಳಿಸಲಾಗಿದೆ. ಅವರ ಹುಟ್ಟುಹಬ್ಬವನ್ನು (ಏಪ್ರಿಲ್ ೧೪) ಮತ್ತು ಪರಿನಿರ್ವಾಣ ದಿನವನ್ನು (ಡಿಸೆಂಬರ್ ೬) ನಾಡಿನಾದ್ಯಂತ ಆಚರಿಸಲಾಗುತ್ತಿದೆ. ಅವರ ಬಹುಮುಖೀ ಸಾಧನೆಯನ್ನು ಗುರುತಿಸಿ, ಮರಣೋತ್ತರವಾಗಿ ೧೯೯೦ರಲ್ಲಿ ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನೂ ನೀಡಲಾಗಿದೆ. ಅಂಬೇಡ್ಕರ್ ಅವರು "ಶಿಕ್ಷಣ ! ಸಂಘಟನೆ !! ಹೋರಾಟ !!! (Educate ! Organize!! Agitate !!!) ಎಂಬ ತತ್ವಗಳನ್ನು ತಮ್ಮ ಅನುಯಾಯಿಗಳಿಗೆ ಹಾಗೂ ನಾಡಿಗೆ ನೀಡಿದ್ದಾರೆ.

ಮಹಾಮಾನವರೇ ಆಗಿದ್ದ ಅಂಬೇಡ್ಕರ್ ಸಮೃದ್ಧವಾಗಿ ಬರೆವಣಿಗೆಯನ್ನೂ ಮಾಡಿದ್ದಾರೆ–ಸಂಸತ್ತಿನ ಒಳಗೆ, ಹೊರಗೆ ಹಾಗೂ ಪತ್ರಿಕೋದ್ಯಮದ ಮೂಲಕ. ಇವೆಲ್ಲ ಐತಿಹಾಸಿಕ ಪ್ರಾಮುಖ್ಯದ ಬರೆವಣಿಗೆಗಳೇ ಆಗಿವೆ. ಇವುಗಳ ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿದ ಮುಂಬಯಿ ಸರ್ಕಾರ ಡಾ. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಇಪ್ಪತ್ತೊಂದು ಸಂಪುಟಗಳಲ್ಲಿ ಹೊರತಂದಿದೆ. ಈ ಸಂಪುಟಗಳನ್ನು ಕನ್ನಡದಲ್ಲಿಯೂ ಹೊರತರಬೇಕೆಂದು, ಆ ಮೂಲಕ ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಿಗರಿಗೂ ಅವರದೇ ಭಾಷೆಯಲ್ಲಿ ಮುಟ್ಟಿಸಬೇಕೆಂದು ಸಂಕಲ್ಪಿಸಿದ ಕರ್ನಾಟಕ ಸರ್ಕಾರ, ಕರ್ನಾಟಕ ವಿಶ್ವ ವಿದ್ಯಾನಿಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ. ಎ.ಎಂ. ರಾಜಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಅನುವಾದ ಸಂಪಾದನ ಸಮಿತಿಯೊಂದನ್ನು ನೇಮಿಸಿ, ೧೪ ಸಂಪುಟಗಳ ಕನ್ನಡ ಆವೃತ್ತಿಯನ್ನು ಹೊರತಂದಿತು. ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಕ್ಕೆ ಅಳವಡಿಸುವ ಮಹಾಸಾಹಸದ ಕಾರ್ಯವನ್ನು ಆ ಸಮಿತಿ ನಿರ್ವಹಿಸಿತು. ನಾಡಿನ ಹಲವಾರು ಗಣ್ಯ ವಿದ್ವಾಂಸರು ಆ ಮಹಾಕಾರ್ಯದಲ್ಲಿ ಸಹಕರಿಸಿದರು. ಅಂಬೇಡ್ಕರ್ ಅವರ ಇಂಗ್ಲಿಷ್ ಅತ್ಯಂತ ವಿದ್ವತ್‌ಪೂರ್ಣವೂ, ವಿಶಿಷ್ಟವೂ ಆಗಿದ್ದು, ಅನೇಕ ಬಗೆಯ ಸವಾಲುಗಳನ್ನು ಒಡ್ಡುವಂಥದಾಗಿದ್ದುದರಿಂದ, ಕನ್ನಡ ಅನುವಾದದಲ್ಲಿ ಕೆಲವೊಂದು ಅರೆಕೊರೆಗಳು ಉಳಿದುಕೊಂಡು ಬಿಟ್ಟುದು ಸಹಜವೇ ಆಗಿತ್ತು. ತಜ್ಞ ವಿದ್ವಾಂಸರು ಇಂಥ ಅರೆಕೊರೆಗಳತ್ತ ಬೆಟ್ಟುಮಾಡಿ ತೋರಿಸಿದ್ದೂ ಉಂಟು. ಈ ಆವೃತ್ತಿಯ ಪ್ರತಿಗಳೂ ಮುಗಿದು ಹೋಗಿ, ಅಂಬೇಡ್ಕರ್ ಅವರ ಕೃತಿಗಳಿಗೆ ಇದ್ದ ಬೇಡಿಕೆಯನ್ನು ಗಮನಿಸಿ, ಇದರ ಪರಿಷ್ಕೃತ ಆವೃತ್ತಿಯೊಂದನ್ನು ಹೊರತರುವ ಯೋಜನೆಯನ್ನು ಕರ್ನಾಟಕ ಸರ್ಕಾರ ಹಮ್ಮಿಕೊಂಡಿತು. ಈ ಹೊತ್ತಿಗೆ 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ಬಂದಿದ್ದುದರಿಂದ, ಈ ಹೊಣೆಯನ್ನು ಸದರಿ ಅಕಾಡೆಮಿಗೆ ವಹಿಸಬೇಕೆಂದು ತೀರ್ಮಾನಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಈ ಸಂಬಂಧವಾಗಿ ಮಂಜೂರು ಮಾಡಲಾಗಿದ್ದ ೯೫ ಲಕ್ಷ ರೂಪಾಯಿಗಳ ಸಹಾಯಧನವನ್ನೂ, ಕಾರ್ಯನಿರ್ವಹಣೆಯ ಹೊಣೆಯನ್ನೂ ಅನುವಾದ ಸಾಹಿತ್ಯ ಅಕಾಡೆಮಿಗೆ ವರ್ಗಾಯಿಸಲಾಯಿತು. ಈ ಸಂಬಂಧವಾಗಿ ಅನುವಾದ ಸಂಪಾದನ ಸಮಿತಿಯನ್ನು ನೇಮಿಸಲಾಯಿತು. ಅನುವಾದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಪ್ರಧಾನ್ ಗುರುದತ್ತ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಈ ಸಮಿತಿಯಲ್ಲಿ ಈ ಕೆಳಕಂಡ ಮಹನೀಯರನ್ನು ಸದಸ್ಯರಾಗಿ ನಾಮಕರಣ ಮಾಡಲಾಯಿತು

(ಆದೇಶ ಸಂಖ್ಯೆ: ಸಂ ವಾ ಪ್ರ ೨೮ ಕರಹ ೨೦೦೮ ದಿನಾಂಕ ೨೪–೩–೨೦೦೮)

೧. ಡಾ. ಸಿದ್ಧಲಿಂಗಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ; ೧೨–೬–೨೦೦೮ರಿಂದ ಈಚೆಗೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು

೨. ಶ್ರೀ ದೇವನೂರ ಮಹದೇವ, ಖ್ಯಾತ ಸಾಹಿತಿಗಳು

೩. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅನುವಾದ ಅಕಾಡೆಮಿಯನ್ನು ವಿಧ್ಯುಕ್ತವಾಗಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿದ್ದರಿಂದ ಹಾಗೂ ಡಾ. ಪ್ರಧಾನ್ ಗುರುದತ್ತ ಅವರನ್ನೇ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿದ್ದರಿಂದ ಇದೇ ಸಂಪಾದನ ಸಮಿತಿ ಡಾ. ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಸಂಪಾದನೆ ಮತ್ತು ಪ್ರಕಟಣೆಯ ಕಾರ್ಯಗಳನ್ನು ಮುಂದುವರಿಸಿಕೊಂಡುಬರುತ್ತಿದೆ.

ಸಂಪುಟಗಳ ಪರಿಷ್ಕರಣ ಕಾರ್ಯದ ಸ್ವರೂಪದ ಬಗ್ಗೆಯೂ ವ್ಯಾಪಕವಾದ ಚರ್ಚೆಯನ್ನು ನಡೆಸಲಾಯಿತು. ಖ್ಯಾತ ವಿದ್ವಾಂಸರುಗಳೇ ಈ ಅನುವಾದ ಕಾರ್ಯದಲ್ಲಿ ಭಾಗಿಯಾಗಿರುವುದನ್ನು ಗಮನಿಸಿ, ಎದ್ದು ಕಾಣುವಂಥ ಲೋಪದೋಷಗಳು ಇರುವಲ್ಲಿ ಮಾತ್ರವೇ ಅವುಗಳನ್ನು ಸರಿಪಡಿಸುವ, ಓರೆಕೋರೆಗಳನ್ನು ತಿದ್ದುವ ಕೆಲಸಮಾಡಬೇಕೆಂದೂ ನಿರ್ಧರಿಸಲಾಯಿತು. ಅದರಂತೆ, ಮೊದಲ ಪರಿಷ್ಕೃತ ಸಂಪುಟವನ್ನು ೧೯–೮–೨೦೦೯ರಂದು ಹೊರತರಲಾಯಿತು. ಈ ಕಾರ್ಯವನ್ನು ಮುಂದುವರಿಸಿ ೨, ೩ ಮತ್ತು ೪ನೇ ಸಂಪುಟಗಳ ಪರಿಷ್ಕತ ಆವೃತ್ತಿಯನ್ನು ೬.೧೨.೨೦೧೦ ರಂದು ಬಿಡುಗಡೆ ಮಾಡಲಾಯಿತು. ಈ ಕಾರ್ಯದಲ್ಲಿ ಈ ಕೆಳಕಂಡ ವಿದ್ವಾಂಸರು ಸಹಕರಿಸಿದ್ದರು.

೧. ಶ್ರೀ ವಿ. ಕೃಷ್ಣ, ಬೆಂಗಳೂರು (೨ನೆಯ ಸಂಪುಟ)

೨. ಶ್ರೀ ಕೇಶವ ಮಳಗಿ, ಬೆಂಗಳೂರು (೩ನೆಯ ಸಂಪುಟ)

೩. ಶ್ರೀ ಜೆ.ಎನ್. ಶಾಮರಾವ್, ಬೆಂಗಳೂರು (೪ನೆಯ ಸಂಪುಟ)

ಕೆಲಮಂದಿ ಪರಿಷ್ಕರಣಕಾರರ ಅತಿವ್ಯಸ್ತತೆಯಿಂದಾಗಿ, ಪರಿಷ್ಕರಣ ಕಾರ್ಯದಲ್ಲಿಯೂ ವಿಳಂಬವಾಯಿತು. ನಮ್ಮ ಒತ್ತಾಯ–ಒತ್ತಡಗಳನ್ನು ಮನ್ನಿಸಿ ಅವರು ನಮಗೆ ನೆರವು ನೀಡಿದ್ದಾರೆ. ಈ ವಿದ್ವಾಂಸರು ಸಾಧ್ಯವಿದ್ದಷ್ಟು ಮಟ್ಟಿಗೆ ಈ ಸಂಪುಟಗಳನ್ನು ಪರಿಷ್ಕರಿಸಿದ್ದಾರೆ. ಈಗಾಗಲೇ ೫, ೬, ೭, ೮ ಮತ್ತು ೯ ಸಂಪುಟಗಳ ಪರಿಷ್ಕೃತ ಆವೃತ್ತಿಯನ್ನು ಹೊರತರಲಾಗಿದೆ. ಇವುಗಳ ಪರಿಷ್ಕರಣ ಕಾರ್ಯದಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ:

೧. ಶ್ರೀಮತಿ ಬಿ.ಎನ್. ಶಾಂತಾ (ಸಂ. ೫)

೨. ಶ್ರೀ ವಿ. ಕೃಷ್ಣ (ಸಂ. ೬)

೩. ಶ್ರೀ ಕೆ.ಎಲ್. ಚಂದ್ರಶೇಖರ (ಸಂ. ೭)

೪. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೮)

೫. ಶ್ರೀ ಜೆ.ಎನ್. ಶಾಮರಾವ್ (ಸಂ. ೯)

ಈಗ ೧೦ ರಿಂದ ೧೪ ರವರೆಗಿನ ಸಂಪುಟಗಳ ಪರಿಷ್ಕೃತ ಆವೃತ್ತಿಗಳನ್ನು ಹಾಗೂ ಹೊಸದಾಗಿ ಅನುವಾದಿಸಿ ಪ್ರಕಟಿಸಲಾಗುತ್ತಿರುವ ೧೯ ಮತ್ತು ೨೦ನೆಯ ಸಂಪುಟಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಕಾರ್ಯಗಳಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ.

೧. ಶ್ರೀ ಎಸ್.ಆರ್. ಗೌತಮ್ (ಸಂ. ೧೦; ಭಾಗಗಳು ೧–೩ ಮತ್ತು ಸಂ. ೧೪, ಭಾಗ ೨)

೨. ಶ್ರೀ ಜೆ.ಎನ್. ಶಾಮರಾವ್ (ಸಂ. ೧೧; ಭಾಗಗಳು ೧–೨)

೩. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೧೨; ಭಾಗಗಳು ೧–೨)
೪. ಶ್ರೀ ಕೃಷ್ಣ ಮೂರ್ತಿ ಸಿರ್ಸಿ (ಸಂ. ೧೩; ಭಾಗಗಳು ೧–೨; ಸಂ. ೧೪ ಭಾಗ ೧(ಅ) ಮತ್ತು (ಆ)), ಶ್ರೀ ಎಸ್.ಆರ್. ಗೌತಮ್ (ಸಂ. ೧೪ ಭಾಗ–೩)
೫. ಶ್ರೀಮತಿ ಅಕ್ಷತಾ ದೇಶಪಾಂಡೆ ಮತ್ತು ಶ್ರೀಮತಿ ಸುಮಾ ದ್ವಾರಕನಾಥ (ಸಂ. ೧೯)
೬. ಶ್ರೀಮತಿ ಶ್ಯಾಮಲಾ ಮಾಧವ್ ಮತ್ತು ಶ್ರೀ ವಿರೂಪಾಕ್ಷ ಕುಲಕರ್ಣಿ (ಸಂ. ೨೦)

ಇವರೆಲ್ಲರ ಸಹಾಯ–ಸಹಕಾರಗಳಿಗಾಗಿ ನಾವು ಕೃತಜ್ಞರಾಗಿದ್ದೇವೆ. ಅವರ ಗಮನವನ್ನು ತಪ್ಪಿಸಿ ಬಿಟ್ಟು ಹೋಗಿದ್ದ ಭಾಗಗಳನ್ನು ಸೇರಿಸಲಾಗಿದೆ; ಸಾರಣಿಗಳ ಮಾಹಿತಿಯನ್ನು ಸರಿಪಡಿಸಲಾಗಿದೆ; ಉಲ್ಲೇಖಗಳನ್ನು, ಅಂಕಿತನಾಮಗಳನ್ನು ಪರಿಷ್ಕರಿಸಲಾಗಿದೆ. ಹೀಗೆ ಪರಿಷ್ಕೃತವಾದ ಪಠ್ಯದ ಪ್ರಕಟಣೆಗೆ ಅನುವಾದ ಸಂಪಾದನ ಸಮಿತಿಯ ಒಪ್ಪಿಗೆಯನ್ನೂ ಪಡೆದುಕೊಳ್ಳಲಾಗಿದೆ.

ಹೊಸ ಆಕಾರದಲ್ಲಿ ಹಾಗೂ ಸ್ವರೂಪದಲ್ಲಿ ಹೊರತರಲಾದ ಮೊದಲನೆಯ ಸಂಪುಟ ಸಾರ್ವತ್ರಿಕ ಮೆಚ್ಚುಗೆಯನ್ನು ಗಳಿಸಿದ್ದರಿಂದ, ಅದೇ ವಿನ್ಯಾಸವನ್ನು ಇತರ ಸಂಪುಟಗಳೂ ಅವಳವಡಿಸಿಕೊಳ್ಳಲಾಗಿದೆ.

ಈ ದಿಕ್ಕಿನಲ್ಲಿ ನಮಗೆ ಎಲ್ಲ ಸಹಾಯ–ಸಹಕಾರ–ಮಾರ್ಗದರ್ಶನಗಳನ್ನು ಇತ್ತಿರುವ ಕನ್ನಡ ಮತ್ತು ಸಂಸ್ಕೃತಿ, ಹಾಗೂ ವಾರ್ತಾ ಇಲಾಖೆಯ ಸನ್ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಸವರಾಜು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ಆಯುಕ್ತರಾದ ಶ್ರೀ ಕೆ.ಆರ್. ರಾಮಕೃಷ್ಣ ಅವರಿಗೆ ನಮ್ಮ ಕೃತಜ್ಞತೆಗಳು.

ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳ ಮೂಲ ಪ್ರತಿಗಳು ಹಾಗೂ ಅನುವಾದದ ಎಲ್ಲ ಸಂಪುಟಗಳು ನಮ್ಮಲ್ಲಿಯಾಗಲೀ, ಹೊರಗಾಗಲೀ ಲಭ್ಯವಿಲ್ಲದೆ ಇದ್ದುದರಿಂದ, ಅನಿವಾರ್ಯವಾದ ವಿಳಂಬಕ್ಕೆ ಎಡೆದೊರೆಯಿತು. ಅಂಬೇಡ್ಕರ್ ಸಾಹಿತ್ಯಾಸಕ್ತ ಕೆಲವು ಮಿತ್ರರ ಖಾಸಗಿ ಗ್ರಂಥ ಸಂಗ್ರಹಗಳಿಂದ ಕೆಲವು ಸಂಪುಟಗಳನ್ನು ಸಂಗ್ರಹಿಸಲಾಯಿತು. ಸಂಪಾದನ ಸಮಿತಿಯ ಮಾನ್ಯ ಸದಸ್ಯರುಗಳು ತಮ್ಮ ಮಿತ್ರರುಗಳ ಖಾಸಗಿ ಸಂಗ್ರಹಗಳಿಂದಲೂ ಕೆಲವು ಸಂಪುಟಗಳನ್ನು ಒದಗಿಸಿಕೊಡುವ ಕೃಪೆಯನ್ನು ತೋರಿದರು. ಅವರ ಈ ಕೃಪೆಗಾಗಿ ಹಾಗೂ ಸಂಪಾದನ ಕಾರ್ಯದಲ್ಲಿ ಅವರು ನೀಡುತ್ತಿರುವ ಆತ್ಮೀಯ ಸಹಕಾರಕ್ಕಾಗಿ ವಂದನೆಗಳನ್ನು ಸಲ್ಲಿಸ ಬಯಸುತ್ತೇನೆ.

ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ವಿದ್ವಾಂಸರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ.ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ ಹಾಗೂ ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆರ್ಡ್ಸ್‌ನ ಶ್ರೀ ಬಿ.ಎಲ್.ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ
ಸಂಪಾದನ ಸಮಿತಿ

## ಎರಡನೇ ಮುದ್ರಣಕ್ಕೆ ಮುನ್ನುಡಿ

'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು' ಮಾಲೆಯ ಹಲವು ಹೊತ್ತಗೆಗಳು ಅಚ್ಚಾಗಿ ಕನ್ನಡ ಓದುಗರ ಕೈಸೇರಿವೆ. ಪ್ರತಿಗಳು ಮುಗಿದಿರುವ ಹಿನ್ನೆಲೆಯಲ್ಲಿ ಮರುಮುದ್ರಣ ಕೈಗೊಳ್ಳುವ ಯೋಜನೆಗೆ ಕರ್ನಾಟಕ ಸರ್ಕಾರ ಅನುದಾನ ಮತ್ತು ಅನುಮತಿ ನೀಡಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಈ ಹೊಸ ಆವೃತ್ತಿಯಲ್ಲಿ ಸಂಪುಟಗಳ ಅಳವಡಿಕೆ ಮತ್ತು ಹೊದಿಕೆಯ ವಿನ್ಯಾಸದಲ್ಲಿ ಕೊಂಚ ಬದಲಾವಣೆ ಮಾಡಿದೆ. ಈ ಸಂಪುಟಗಳು ಓದುಗರಿಗೆ ಆಪ್ತವಾಗುತ್ತವೆಂಬ ನಂಬಿಕೆ ನಮ್ಮದು. ಈ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಪ್ರಾಧಿಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇವೆ.

**ಕೆ. ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ಮೂರನೇ ಮುದ್ರಣಕ್ಕೆ ಮುನ್ನುಡಿ

ಕರ್ನಾಟಕ ಸರಕಾರವು ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡದಲ್ಲಿ ಪ್ರಕಟಿಸಲು ಯೋಜಿಸಿ ಅದನ್ನು ಯಶಸ್ವಿಯಾಗಿ ಪೂರೈಸಿದೆ. ಹಲವು ಸಂಪುಟಗಳಲ್ಲಿ ಪ್ರಕಟಗೊಂಡಿರುವ ಅಂಬೇಡ್ಕರ್ ಅವರ ಬರೆಹಗಳ ಕನ್ನಡ ಅನುವಾದ ಪರಿಷ್ಕರಣಗೊಂಡು ಮತ್ತೆ ಮತ್ತೆ ಅಚ್ಚಾಗುತ್ತಿವೆ. ಇದೀಗ ಎಲ್ಲ ಸಂಪುಟಗಳು ಒಮ್ಮೆಗೆ ಮತ್ತೊಮ್ಮೆ ಅಚ್ಚಾಗಿ ಪ್ರಕಟಗೊಳ್ಳುತ್ತಿವೆ. ಈವರೆಗೆ ಕನ್ನಡದಲ್ಲಿ ದೊರಕದೇ ಇದ್ದ ಅಂಬೇಡ್ಕರ್ ಅವರ ಮರಾಠಿ ಬರೆಹಗಳು ಮತ್ತು ಭಾಷಣಗಳು ಈಗ ಮೊದಲ ಬಾರಿಗೆ ಅಚ್ಚಾಗುತ್ತಿವೆ. ಒಟ್ಟು ಇಪ್ಪತ್ತೆರಡು ಸಂಪುಟಗಳನ್ನು ಈಗ ವಿಷಯಸೂಚಿಯೊಂದಿಗೆ ಪ್ರಕಟಿಸಲಾಗುತ್ತಿದೆ. ಹಿಂದಿನ ಮುದ್ರಣಗಳಲ್ಲಿ ವಿಷಯಸೂಚಿಗಳು ಇಲ್ಲದಿದ್ದುದರಿಂದ ಸಂಪುಟಗಳನ್ನು ಓದುವವರಿಗೆ ಅಗತ್ಯ ವಿಷಯಗಳನ್ನು ಗುರುತಿಸಲು ಕಷ್ಟವಾಗುತ್ತಿದ್ದುದನ್ನು ಗಮನಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಎಲ್ಲ ಸಂಪುಟಗಳ ವಿಷಯಸೂಚಿಗಳ ಸಂಕಲನವೂ ಈಗ ಹೊರಬಂದಿದೆ. ಇದರಿಂದ ಯಾವ ಸಂಪುಟದಲ್ಲಿ ಯಾವ ವಿಷಯದ ಬಗೆಗೆ ಮಾಹಿತಿ ಇದೆ ಎಂಬುದನ್ನು ಗುರುತಿಸಿಕೊಳ್ಳುವುದು ಓದುಗರಿಗೆ ಸುಲಭವಾಗಲಿದೆ. ಹಿಂದೆ ಪ್ರಕಟಗೊಂಡಿದ್ದ ಸಂಪುಟಗಳಲ್ಲಿ ಅಲ್ಲಲ್ಲಿ ಉಳಿದಿದ್ದ ಅಚ್ಚಿನ ತಪ್ಪುಗಳನ್ನು ತಿದ್ದಿ ಸರಿಪಡಿಸಲು ಕ್ರಮ ವಹಿಸಲಾಗಿದೆ.

ಈ ಸಂಪುಟಗಳನ್ನು ಅಚ್ಚು ಮಾಡಲು ಕರ್ನಾಟಕ ಸರ್ಕಾರವು ವಿಶೇಷ ಅನುದಾನವನ್ನು ಒದಗಿಸಿದೆ. ಅಚ್ಚಾದ ಸಂಪುಟಗಳು ರಾಜ್ಯದ ಎಲ್ಲೆಡೆ ಇರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ವಿದ್ಯಾರ್ಥಿನಿಲಯಗಳಿಗೆ ಉಚಿತವಾಗಿ ದೊರಕಬೇಕೆಂಬುದು ಸರ್ಕಾರದ ಸದಾಶಯ. ಇದರಿಂದ ಡಾ. ಅಂಬೇಡ್ಕರ್ ಅವರ ಚಿಂತನೆಗಳು ಮುಂದಿನ ತಲೆಮಾರಿಗೂ ಹರಿಯುವ ಅವಕಾಶ ಸೃಷ್ಟಿಯಾಗಿದೆ. ಕುವೆಂಪು ಭಾಷಾ ಭಾರತಿಗೆ ಇಂತಹ ಅಪೂರ್ವ ಹೊಣೆಯನ್ನು ನೀಡಿದ ಕರ್ನಾಟಕ ಸರ್ಕಾರಕ್ಕೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳ ಸಿದ್ಧತೆಗೆ ನಿಯುಕ್ತಿಗೊಂಡಿರುವ ಸಂಪಾದಕ ಮಂಡಲಿಯ ಸದಸ್ಯರಾದ ಡಾ. ದೇವನೂರ ಮಹದೇವ, ಡಾ. ಸಿದ್ಧಲಿಂಗಯ್ಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ. ಎ. ದಯಾನಂದ ಅವರು ತಮ್ಮ ಸಕಾಲಿಕ ಸೂಕ್ತ ಸಲಹೆಗಳ ಮೂಲಕ ನಮ್ಮ ಕೆಲಸ ಹೆಚ್ಚು ಪರಿಪೂರ್ಣವಾಗುವಂತೆ ಮಾಡಿದ್ದಾರೆ.

**ಕೆ. ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ಸಂಪಾದಕೀಯ

ಸ್ವಾತಂತ್ರ್ಯಪೂರ್ವ ಭಾರತದ ರಾಜಕೀಯ ಕ್ಷಿತಿಜದಲ್ಲಿ ಅನೇಕ ಉದ್ದಾಮ ವ್ಯಕ್ತಿಗಳು, ಪ್ರತಿಭಾನ್ವಿತ ಮುಖಂಡರು ರಾಜಕಾರಣಿಗಳು, ಮುತ್ಸದ್ದಿಗಳು ಮತ್ತು ದೇಶಪ್ರೇಮಿಗಳು ಕಾಣಿಸಿಕೊಂಡು ದೇಶದ ವಿಮೋಚನೆಗಾಗಿ ತಮ್ಮ ಸರ್ವಸ್ವವನ್ನು ತ್ಯಾಗಮಾಡಿ ಚಿರಸ್ಮರಣೀಯರಾಗಿದ್ದಾರೆ. ಡಾ॥ ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರು ದೇಶದ ಇಂತಹ ನಾಯಕರಲ್ಲಿ ಒಬ್ಬರಾಗಿದ್ದರು. ಅವರು ಭಾರತದ ದೀನದಲಿತರ ವಿಮೋಚನೆಗಾಗಿ ತಾವು ನಡೆಸಿದ ಹೋರಾಟವನ್ನು ದೇಶದ ಸ್ವಾತಂತ್ರ್ಯ ಹೋರಾಟದ ಅಂಗವಾಗಿಯೇ ಸಂಘಟಿಸಿ, ಅಸ್ಪೃಶ್ಯತಾ ನವಾರಣೆ ಮತ್ತು ಎಲ್ಲಾ ದುರ್ಬಲ ವರ್ಗಗಳ ವಿಮೋಚನೆಯಾಗದ ಹೊರತು ದೇಶದ ಸ್ವಾತಂತ್ರ್ಯ ಅರ್ಥರಹಿತ ಎಂಬ ಮೂಲ ತತ್ತ್ವವನ್ನು ಪ್ರತಿಪಾದಿಸಿದ ಏಕೈಕ ನಾಯಕರಾಗಿರದೆ ಇಡೀ ಮಾನವ ಕುಲದ ಹಕ್ಕುಗಳು, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಸ್ಥಾಪನೆಗಾಗಿ ಹೋರಾಡಿದ ಮಹಾನುಭಾವರಾಗಿದ್ದರು, ಅವರು ತಮ್ಮ ಇಡೀ ಜೀವನವನ್ನು ಈ ಗುರಿಸಾದನೆಗಾಗಿ ಮುಡಿಪಾಗಿಟ್ಟರು.

ಡಾ॥ ಅಂಬೇಡ್ಕರ್ ಜಾತ್ಯತೀತ, ಸಮಾಜವಾದಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಚಲ ವಿಶ್ವಾಸ ಹೊಂದಿದ್ದರು. ಅವರು ಮಾನವೀಯತೆಯ ಸಾಕಾರ ಮೂರ್ತಿಗಳಾಗಿದ್ದು, ದೀನದಲಿತರ ನೋವಿಗೆ ಸದಾ ಸ್ಪಂದಿಸುತ್ತಿದ್ದ ಮಹಾಪುರುಷರಾಗಿದ್ದರು.

ಡಾ॥ ಅಂಬೇಡ್ಕರ್ ಅವರು ಕೇವಲ ರಾಜಕೀಯ ಮುಖಂಡರಾಗಿರದೇ, ಆಧುನಿಕ ಭಾರತ ನಿರ್ಮಾಪಕರೂ ಆಗಿದ್ದರೆಂದರೆ ಅತಿಶಯೋಕ್ತಿಯಾಗಲಾರದು. ಅವರು ಒಬ್ಬ ಘನ ವಿದ್ವಾಂಸರೂ, ವಿಚಾರವೇತ್ತರೂ, ಪ್ರೌಢ ಲೇಖಕರೂ, ಕಾನೂನು ಪಂಡಿತರೂ ಹಾಗೂ ಸಂವಿಧಾನ ತಜ್ಞರೂ ಆಗಿದ್ದರಲ್ಲದೆ ಗಣ್ಯ ಸಮಾಜಶಾಸ್ತ್ರಜ್ಞರೂ, ಖ್ಯಾತ ಸಂಶೋಧಕರೂ ಆಗಿದ್ದರು. ಜಾತಿಪದ್ಧತಿ, ಅಸ್ಪ್ರಶ್ಯತೆ, ಬಡತನ ಮುಂತಾದ ಸಾಮಾಜಿಕ. ಆರ್ಥಿಕ ಸಮಸ್ಯೆಗಳ ಆಳವಾದ ಅಧ್ಯಯನ ಮಾಡಿ ಇವುಗಳ ಉಗಮ, ಬೆಳವಣಿಗೆ ಮತ್ತು ವಸ್ತುಸ್ಥಿತಿಯ ಬಗ್ಗೆ ವಿಶಿಷ್ಟ ಸಿದ್ಧಾಂತಗಳನ್ನು ತಮ್ಮದೇ ಆದ ರೀತಿಯಲ್ಲಿ ಪ್ರಸ್ತುತಪಡಿಸಿದರಲ್ಲದೆ, ಇವುಗಳ ನಿವಾರಣೆಯ ವಿಧಾನಗಳನ್ನು ನಿರೂಪಿಸಿದರು. ಅದೃಷ್ಟವಶಾತ್ ಅವರು ತಮ್ಮ ಅಮೂಲ್ಯವಾದ ವಿಚಾರಗಳನ್ನು ತಮ್ಮ ಅನೇಕ ಸಂಶೋಧನಾತ್ಮಕ ಗ್ರಂಥಗಳು, ಲೇಖನಗಳು ಮತ್ತು ವಿದ್ವತ್ಪೂರ್ಣ ಭಾಷಣಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರ ಜೀವಿತ ಕಾಲದಲ್ಲಿಯೇ ಸುಮಾರು ಹದಿಮೂರು ಗ್ರಂಥಗಳು ಇಂಗ್ಲಿಷಿನಲ್ಲಿ ಪ್ರಕಟವಾಗಿದ್ದು ಇವುಗಳಲ್ಲಿ ಜಾತಿ ನಿರ್ಮೂಲನೆ, ಶೂದ್ರರು ಯಾರು; ಅಸ್ಪೃಶ್ಯರು ಯಾರು – ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು, ರೂಪಾಯಿಯ ಸಮಸ್ಯೆ; ಪಾಕಿಸ್ತಾನ ಅಥವಾ ಭಾರತದ ವಿಭಜನೆ – ಪ್ರಮುಖವಾಗಿದೇ ಅವರ ಅಪ್ರಕಟಿತ ಬರಹಗಳು ಅಸಂಖ್ಯಾತ. ಅವರ ಮರಣಾನಂತರ ಇವು ಆಸ್ತಿವಿವಾದದಲ್ಲಿ ಸಿಲುಕಿಕೊಂಡಿದ್ದರಿಂದ ಇತ್ತೀಚಿನವರೆಗೆ ಅವುಗಳ ಪ್ರಕಟಣೆ ಸಾಧ್ಯವಾಗಿರಲಿಲ್ಲ. ಹೀಗಾಗಿ ಅವುಗಳ ಅಧ್ಯಯನ ಸಾಧ್ಯವಾಗಿರಲಿಲ್ಲ. ಆದರೆ ಮಹಾರಾಷ್ಟ್ರ ಸರ್ಕಾರದ ಸತತ ಪ್ರಯತ್ನ, ಪರಿಶ್ರಮದಿಂದಾಗಿ ಮತ್ತು ಡಾ॥ ಅಂಬೇಡ್ಕರ್ ಅವರ ಕುಟುಂಬದ ಸದಸ್ಯರ ಸಹಕಾರ, ಸಮ್ಮತಿಯಿಂದಾಗಿ ಈಗ ಇವುಗಳ ಪ್ರಕಟಣೆಯೂ ಸಾಧ್ಯವಾಗಿದೆ.

ಡಾ॥ ಅಂಬೇಡ್ಕರ್ ಅವರು ಹೆಚ್ಚಾಗಿ ಇಂಗ್ಲಿಷ್ ಭಾಷೆಯಲ್ಲಿಯೇ ಬರೆದಿದ್ದಾರೆ. ಅವರ ಬರವಣಿಗೆಯ ಕೆಲಭಾಗಗಳು, ಅದರಲ್ಲಿಯೂ ಅವರು ತಾವೇ ಆರಂಭಿಸಿ ನಡೆಸಿಕೊಂಡು ಬಂದ ಪಾಕ್ಷಿಕಗಳಾದ ಸಮತಾ,

ಜನತಾ ಮತ್ತು ಬಹಿಷ್ಕೃತ ಭಾರತ – ಇವುಗಳಲ್ಲಿ ಮರಾಠಿಯಲ್ಲಿಯೇ ಅಗ್ರಲೇಖನಗಳಾಗಿ ಬಂದಿವೆ. ಅವರು ಮಾಡಿದ ಅನೇಕ ಸಾರ್ವಜನಿಕ ಭಾಷಣಗಳೂ ಮರಾಠಿ ಭಾಷೆಯಲ್ಲಿಯೇ ಇವೆ.

ಡಾ॥ ಅಂಬೇಡ್ಕರ್ ಅವರು ತಮ್ಮ ಕೆಲವು ವಿದ್ವತ್ಪೂರ್ಣ ಪ್ರಬಂಧಗಳನ್ನು ತಾವು ಅಮೆರಿಕದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಸಿದ್ಧಪಡಿಸಿ ೧೯೧೮ರಲ್ಲಿಯೇ ಪ್ರಕಟಿಸಿದರು. ನಂತರ ೧೯೨೩ರಿಂದ ೧೯೫೫ರವರೆಗೆ ಅವರ ಇತರ ಗ್ರಂಥಗಳು ಪ್ರಕಟವಾದವು. ಇವೂ ಅಲ್ಲದೆ ತಮ್ಮ ಸಾರ್ವಜನಿಕ ಜೀವನದ ಸುಮಾರು ಮೂರು ದಶಕಗಳ ಅವಧಿಯಲ್ಲಿ ಅವರು ಅನೇಕ ಸಮಿತಿಗಳು, ಆಯೋಗಗಳು ಮತ್ತು ದುಂಡುಮೇಜಿನ ಪರಿಷತ್ತುಗಳಿಗೆ ಸಲ್ಲಿಸಿದ ಮನವಿಗಳು, ವಿಜ್ಞಾಪನಾ ಪತ್ರಗಳು, ಮಾಡಿದ ಭಾಷಣಗಳು, ಅವರ ರಾಜಕೀಯ ಮತ್ತು ಸಂವಿಧಾನದ ವಿಚಾರಗಳು ಮಹತ್ವದವುಗಳಾಗಿವೆ ಮತ್ತು ಅವರು ಮುಂಬಯಿ ಪ್ರಾಂತ್ಯ ಮತ್ತು ಕೇಂದ್ರ ಶಾಸನ ಸಭೆಗಳಲ್ಲಿ, ನಂತರ ಸಂವಿಧಾನ ಸಭೆಯ ಸದಸ್ಯರಾಗಿ, ಕರಡು ಸಮಿತಿಯ ಅಧ್ಯಕ್ಷರಾಗಿ ಸಿದ್ಧಪಡಿಸಿ, ಮಂಡಿಸಿದ ಕರಡು ಸಂವಿಧಾನ ಮತ್ತು ಅದರ ಮೇಲೆ ನಡೆದ ಚರ್ಚೆಗೆ ಅವರು ನೀಡಿದ ಉತ್ತರ, ಸಮಾಧಾನ, ವಿವರಣೆಗಳು ಮತ್ತು ಸ್ವತಂತ್ರ ಭಾರತದ ಪ್ರಥಮ ಕಾನೂನು ಮಂತ್ರಿಯಾಗಿ ಅವರು ವ್ಯಕ್ತಪಡಿಸಿದ ವಿಚಾರಗಳು ಮಂಡಿಸಿದ ಮಸೂದೆಗಳು ಮುಂತಾದವು ಒಬ್ಬ ಮೇಧಾವಿ ಹಾಗೂ ಮುತ್ಸದ್ದಿ ವ್ಯಕ್ತಪಡಿಸಿದ ಅಮೂಲ್ಯ ವಿಚಾರಗಳಾಗಿದ್ದು ಇಂದಿಗೂ ಸಂವಿಧಾನದ ಪ್ರಸ್ತಾಪ ಬಂದಾಗಲೆಲ್ಲಾ ಅವರು ಅಂದು ನೀಡಿದ ವಿವರಣೆಗಳೇ ಕೊನೆಯ ಮಾತೆಂದು ಪರಗಣಿಸಲಾಗಿದೆ. ಆದ್ದರಿಂದ ಡಾ॥ ಅಂಬೇಡ್ಕರ್ ಅವರ ವಿಚಾರಗಳು ಅಂದೂ ಅಲ್ಲದೆ ಇಂದೂ ಪ್ರಸ್ತುತವಾಗಿದ್ದು ಅವುಗಳ ಅಧ್ಯಯನ ಮತ್ತು ಪರಿಚಯ ಅನಿವಾರ್ಯ.

ಆದರೆ ಕಾಲಕ್ರಮೇಣ ಅವರ ಪ್ರಕಟಿತ ಕೃತಿಗಳು ಲಭ್ಯವಾಗುತ್ತಿಲ್ಲ ಮತ್ತು ಅವು ಮುಂದೆ ದೊರೆಯುವ ಸಾಧ್ಯತೆಯೂ ಇಲ್ಲದಾಗಿದೆ. ಅವುಗಳೆಲ್ಲವು ಸಂಪೂರ್ಣವಾಗಿ ಅಳಿದು ಹೋಗುವ ಅಪಾಯ ಇದೆ. ಇದನ್ನರಿತ ಮಹಾರಾಷ್ಟ್ರ ಸರ್ಕಾರ ಡಾ॥ ಅಂಬೇಡ್ಕರ್ ಅವರ ಇಂಗ್ಲಿಷಿನಲ್ಲಿರುವ ಎಲ್ಲಾ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳನ್ನು ಸಂಗ್ರಹಿಸಿ, ಮುದ್ರಿಸಿ, ಪ್ರಕಟಿಸುವ ಅತ್ಯಂತ ಅವಶ್ಯ ಮತ್ತು ಉಪಯುಕ್ತ ಯೋಜನೆಯನ್ನು ಹಾಕಿಕೊಂಡಿದ್ದು, ಈ ಯೋಜನೆಯ ರೂಪು–ರೇಷೆಗಳನ್ನು ಸಿದ್ಧಪಡಿಸಿ ಕಾರ್ಯಗತಗೊಳಿಸಲು ಆ ರಾಜ್ಯದ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಡಾ॥ ಅಂಬೇಡ್ಕರ್ ಅವರ ಒಡನಾಡಿಗಳು, ತಜ್ಞರು ಮತ್ತು ಮುಖಂಡರುಗಳಿಂದ ಕೂಡಿದ ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೂಲ ವಿಷಯಗಳ ಪ್ರಕಟನಾ ಸಮಿತಿ, ಮಹಾರಾಷ್ಟ್ರ ಸರ್ಕಾರ ಎಂಬ ಸಮಿತಿಯನ್ನು ರಚಿಸಿ, ಅದು ಕಾರ್ಯತತ್ಪರವಾಯಿತು. ಈ ಸಮಿತಿಯನ್ನು ೧೯೭೬ರಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ಶರದ್ ಪವಾರ್ ಅವರ ನೇತೃತ್ವದಲ್ಲಿ ರಚಿಸಲಾಯಿತು. ಈ ಸಮಿತಿಯ ಯಶಸ್ಸಿಗೆ ಇದರ ವಿಶೇಷ ಅಧಿಕಾರಿ ಶ್ರೀ ವಸಂತ್ ಮೂನ್ ಅವರ ಬರಹಗಳನ್ನೂ ಸಂಗ್ರಹಿಸಿ ಒಟ್ಟು "ಡಾ॥ ಅಂಬೇಡ್ಕರ್: ಬರೆಹಗಳು ಮತ್ತು ಭಾಷಣಗಳು" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸುವ ಯೋಜನೆ ಹಾಕಿಕೊಂಡು ಇದುವರೆಗೆ ಒಟ್ಟು ಹದಿನೈದು ಸಂಪುಟಗಳನ್ನು ಪ್ರಕಟಿಸಿದೆ. ಇದುವರೆಗೆ ಪ್ರಕಟಿತವಾದ ಹದಿನೈದು ಸಂಪುಟಗಳಲ್ಲಿ ಬಹಳಷ್ಟು ಅವರ ಪ್ರಕಟಿತ ಮತ್ತು ಅಪ್ರಕಟಿತ ಬರಹಗಳು ಸೇರಿವೆ. ೧೯೭೯ರಲ್ಲಿ ಬಿಡುಗಡೆಯಾದ ಒಂದನೆಯ ಸಂಪುಟದಲ್ಲಿ ಜಾತಿ ನಿರ್ಮೂಲನೆ; ಭಾಷಾವರು ಪ್ರಾಂತ್ಯಗಳು; ರಾನಡೆ, ಗಾಂಧಿ, ಜಿನ್ನಾ; ರಾಜ್ಯಗಳು ಮತ್ತು ಅಲ್ಪಸಂಖ್ಯಾತರು; ಸಂಯುಕ್ತ ರಾಜ್ಯವೇ ಅಥವಾ ಸ್ವಾತಂತ್ರ್ಯವೇ ಮುಂತಾದ ಪರಿಚಿತ ಮತ್ತು ಪ್ರಕಟಿತ ಕೃತಿಗಳು ಸೇರಿವೆ. ಎರಡನೆಯ ಸಂಪುಟ (೧೯೮೨)ದಲ್ಲಿ ಮುಂಬಯಿ ಶಾಸಕಾಂಗದಲ್ಲಿ ಮತ್ತು ದುಂಡುಮೇಜಿನ ಪರಿಷತ್ತುಗಳಲ್ಲಿ ಅವರು ಮಾಡಿದ ಭಾಷಣಗಳೂ ಅಲ್ಲದೆ ಸೈಮನ್ ಆಯೋಗಕ್ಕೆ ಅವರು ನೀಡಿದ ಹೇಳಿಕೆಗಳೂ, ಮನವಿಗಳೂ ಸೇರಿವೆ. ಮೂರನೆಯ ಸಂಪುಟ (೧೯೮೭)ದಲ್ಲಿ ಅವರ

ಅಪ್ರಕಟಿತ ಕೃತಿಗಳಾದ ಹಿಂದೂ ಧರ್ಮ ದರ್ಶನ, ಪ್ರಾಚೀನ ಭಾರತದಲ್ಲಾ ಕ್ರಾಂತಿ ಮತ್ತು ಪ್ರತಿಕಾಂತಿ, ಭಾರತ ಮತ್ತು ಸಮತಾವಾದದ ಪೂರ್ವಭಾವಿ ಅವಶ್ಯಕತೆಗಳು, ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್ ಮುಂತಾದವು ಸೇರಿವೆ. ೧೯೮೭ರಲ್ಲಿಯೇ ಪ್ರಕಟವಾದ ನಾಲ್ಕನೆಯ ಸಂಪುಟ ಮಹಾರಾಷ್ಟ್ರದಲ್ಲಿ ವಿವಾದದ ಅಲೆಯನ್ನೇ ಎಬ್ಬಿಸಿತು. ಇದರಲ್ಲಿ ಅವರ ಇನ್ನೊಂದು ಅಪ್ರಕಟಿತ ಬರಹಮಾಲೆ 'ಹಿಂದೂ ಧರ್ಮದ ಒಗಟುಗಳು' ಪ್ರಕಟವಾಗಿದ್ದೇ ಆಂದೋಲನಕ್ಕೆ ಪ್ರಚೋದನೆಯಾಯಿತು. ಇದರಿಂದಾಗಿ ಮಹಾರಾಷ್ಟ್ರ ಸರ್ಕಾರ ಈ ಸಂಪುಟದ ಮಾರಾಟವನ್ನು ಕೆಲಕಾಲ ತಡೆಹಿಡಿಯಬೇಕಾಯಿತು. ನಂತರ ಆದ ಒಪ್ಪಂದದಿಂದ ಪುನ: ಇದರ ಮಾರಾಟ ಮುಂದುವರಿಯಿತು. ೧೯೮೯ರಲ್ಲಿ ಪ್ರಕಟವಾದ ಐದನೆಯ ಸಂಪುಟವು ಸಂಪೂರ್ಣವಾಗಿ ಅಪ್ರಕಟಿತ ಬರಹಗಳಿಂದ ಕೂಡಿದ್ದು ಇದರಲ್ಲಿ ಅಸ್ಪೃಶ್ಯರು ಮತ್ತು ಅಸ್ಪೃಶ್ಯತೆಯ ಬಗ್ಗೆ ಅವರ ಸಾಮಾಜಿಕ, ರಾಜಕೀಯ, ಧಾರ್ಮಿಕ, ವಿಶ್ಲೇಷಣೆಯ ಸಮಸ್ಯೆ' ಇದರಲ್ಲಿ ಸೇರಿದೆ. ೧೯೯೦ರಲ್ಲಿ ಪ್ರಕಟವಾಗಿರುವ ಏಳನೆಯ ಸಂಪುಟದಲ್ಲಿ ಶೂದ್ರರು ಯಾರು – ಮತ್ತು ಅಸ್ಪೃಶ್ಯರು ಯಾರು – ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು?– ಎಂಬ ಅವರ ಈ ಎರಡು ಸಂಶೋಧನಾತ್ಮಕ ಮತ್ತು ಅತಿ ಮಹತ್ವದ ಗ್ರಂಥಗಳನ್ನು ಪುನರ್ ಮುದ್ರಿಸಲಾಗಿದೆ. ಇದೇ ವರ್ಷ ಪ್ರಕಟಿಸಲಾಗಿರುವ ಎಂಟನೆಯ ಸಂಪುಟದಲ್ಲಿ ಡಾ॥ ಅಂಬೇಡ್ಕರ್ ಅವರ ಅತ್ಯಂತ ವಿವಾದಾತ್ಮಕ ಆದರೆ ಅಷ್ಟೇ ವಿದ್ವತ್‌ಪೂರ್ಣ ಹಾಗೂ ವಾಸ್ತವಿಕತೆಯಿಂದ ಪ್ರೇರಿತವಾದ ಗ್ರಂಥ 'ಪಾಕಿಸ್ತಾನ ಅಥವಾ ಭಾರತದ ವಿಭಜನೆ'ಯ ಪುನರ್ ಮುದ್ರಣವಾಗಿದೆ. ಇದು ಅವರ ಮೇರುಕೃತಿ, ಮುಂಬರುವ ಸಂಪುಟಗಳಲ್ಲಿ ಗವರ್ನರ್ ಜನರಲ್ ಪರಿಷತ್ತು, ಸಂವಿಧಾನಸಭೆ ಮತ್ತು ಸಂಸತ್ತಿನಲ್ಲಿ ಡಾ॥ ಅಂಬೇಡ್ಕರ್ ಅವರು ಭಾಗವಹಿಸಿರುವುದು (೧೯೪೨–೧೯೪೬) ಕಾಂಗ್ರೆಸ್ ಮತ್ತು ಮಿಸ್ಟರ್ ಗಾಂಧಿ ಅಸ್ಪೃಶ್ಯರಿಗೆ ಮಾಡಿದುದು ಏನು? ಹಾಗೂ ಮಿಸ್ಟರ್ ಗಾಂಧಿ ಹಾಗೂ ಅಸ್ಪೃಶ್ಯರ ವಿಮೋಚನೆ (೯ನೆಯ ಸಂಪುಟ (೧೯೯೧) ದಲ್ಲಿ ಅವರು ಗವರ್ನರ್ ಜನರಲ್‌ರವರ ಕಾರ್ಯಕಾರಿ ಪರಿಷತ್ತಿನ ಸದಸ್ಯರಾಗಿದ್ದಾಗಿನ ದಾಖಲೆಗಳಿವೆ (೧೯೯೨). ೧೧ನೆಯ ಸಂಪುಟವು "ಬುದ್ಧ ಮತ್ತು ಅವನ ಧರ್ಮ" ಗ್ರಂಥದ ಪನರ್ ಮುದ್ರಣವಾಗಿದೆ. ೧೯೯೩ರಲ್ಲಿ ಪ್ರಕಟವಾಗಿರುವ ೧೨ನೆಯ ಸಂಪುಟದಲ್ಲಿ ಅವರ ಅಪ್ರಕಟಿತ ಕೃತಿಗಳಾದ 'ಪ್ರಾಚೀನ ಭಾರತದ ವಾಣಿಜ್ಯ'. ಅಸ್ಪೃಶ್ಯರು ಮತ್ತು ಬ್ರಿಟಿಷ್ ಸಾಮ್ರಾಜ್ಯ', ಇಂಗ್ಲಿಷ್ ಸಂವಿಧಾನದ ಮೇಲೆ ಉಪನ್ಯಾಸಗಳು, 'ಕಾಯ್ದೆ ಮತ್ತು ಕಾನೂನುಗಳ ಮೇಲೆ ಟಿಪ್ಪಣಿಗಳು', 'ವೀಸಾಕ್ಕಾಗಿ ಕಾದಿದ್ದು' ಮತ್ತು ಇತರ ಸಮ್ಮಿಶ್ರ ಲೇಖನಗಳು ಸೇರಿವೆ. ೧೯೯೪ರಲ್ಲಿ ಪ್ರಕಟವಾಗಿರುವ ಹದಿಮೂರನೆಯ ಸಂಪುಟವು ಬಹಳ ಮಹತ್ವದ್ದಾಗಿದ್ದು ಅತ್ಯಂತ ಉಪಯುಕ್ತವೂ ಆಗಿದೆ. ಇದರಲ್ಲಿ ಡಾ॥ ಅಂಬೇಡ್ಕರ್‌ರವರು ಭಾರತ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಭಾರತ ಸಂವಿಧಾನ ಸಭೆಯಲ್ಲಿ ನಿರ್ವಹಿಸಿದ ಜವಾಬ್ದಾರಿಯ ಸಂಪೂರ್ಣ ಪರಿಚಯವನ್ನು ದಾಖಲೆಗಳೊಂದಿಗೆ ಮಾಡಲಾಗಿದೆ. ಇದರಲ್ಲಿ ಸಂವಿಧಾನದ ಸಿದ್ದಾಂತಗಳು ಮತ್ತು ನಿಯಮಗಳು ಹಾಗೂ ಅವುಗಳಿಂದ ಉದ್ಭವಿಸಬಹುದಾದ ಸಮಸ್ಯೆಗಳನ್ನು ಮನಗಂಡು ಅವುಗಳಿಗೆ ಡಾ॥ ಅಂಬೇಡ್ಕರರು ನೀಡಿದ ವಿವರಣೆಗಳೂ ಸೇರಿವೆ. ಇತ್ತೀಚೆಗೆ ಪ್ರಕಟವಾಗಿರುವ ಸ್ವತಂತ್ರ ಭಾರತದ ಸಂಸತ್ತಿನಲ್ಲಿ ಮಂಡಿಸಿದ ಮಹತ್ತರವಾದ ಮಸೂದೆ ಎನಿಸಿದ 'ಹಿಂದೂ ಕೋಡ್ ಬಿಲ್' ಬಗ್ಗೆ ಪೂರ್ಣ ಪರಿಚಯವಿದೆ. ಈ ಮಸೂದೆಯ ರೂಪುರೇಷೆಗಳು ಮತ್ತು ಅದರ ಬಗ್ಗೆ ಡಾ॥ ಅಂಬೇಡ್ಕರರು ನೀಡಿದ ವಿವರಣೆ ಮತ್ತು ನಂತರ ಜರುಗಿದ ಚರ್ಚೆಗಳ ಸಂಪೂರ್ಣ ವಿವರಣೆ ಈ ಸಂಪುಟದ ಎರಡೂ ಭಾಗಗಳಲ್ಲಿ ಲಭ್ಯವಿದೆ.

ಮಹಾರಾಷ್ಟ್ರ ಸರ್ಕಾರ ಡಾ॥ ಅಂಬೇಡ್ಕರ್‌ರವರ ಅಮೂಲ್ಯ ಮತ್ತು ಸಮಗರ ವೈಚಾರಿಕ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಓದುಗರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡುವ ಮೂಲಕ ವೈಚಾರಿಕ

ಸಾಹಿತ್ಯಕ್ಕೆ ಹಾಗೂ ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಗಳನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗಳಿಗೆ ನೀಡುವ ಮೂಲಕ ಮಹತ್ತರವಾದ ಸೇವೆ ಸಲ್ಲಿಸಿದೆ.

ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಅವರ ಈ ಸಮಗ್ರ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿರುವುದರಿಂದ ಈ ಭಾಷೆಯನ್ನು ಚೆನ್ನಾಗಿ ಬಲ್ಲವರು ಮಾತ್ರ ಇದರ ಉಪಯೋಗ ಹೊಂದಬಹುದಾಗಿದೆ. ಆದ್ದರಿಂದ ಈ ಭಾಷೆಯಲ್ಲಿ ಪರಿಶ್ರಮವಿಲ್ಲದ ಇತರ ಭಾಷಿಕರಿಗೆ ಡಾ॥ ಅಂಬೇಡ್ಕರ್ ಅವರ ಉಪಯುಕ್ತ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳು ಲಭ್ಯವಿಲ್ಲ, ಇದು ಒಂದು ದೊಡ್ಡ ಕೊರತೆ, ಇದನ್ನು ನಿವಾರಿಸುವ ಏಕೈಕ ಮಾರ್ಗವೆಂದರೆ ಅವರ ಎಲ್ಲಾ ಬರೆಹಗಳನ್ನು ಭಾರತದ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದಿಸಿ ಪ್ರಕಟಿಸುವುದು. ಈ ಕೆಲಸ ಎಲ್ಲಾ ಭಾಷೆಗಳಲ್ಲಿ ತುರ್ತಾಗಿ ಆಗಬೇಕಾಗಿದೆ.

ಈ ಅವಶ್ಯಕತೆಯನ್ನು ಮೊಟ್ಟ ಮೊದಲು ಮನಗಂಡ ಕರ್ನಾಟಕ ರಾಜ್ಯ ಸರ್ಕಾರ ೧೯೮೮ ಜೂನ್ ತಿಂಗಳಲ್ಲಿ ಡಾ॥ ಅಂಬೇಡ್ಕರ್ ಅವರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಲು ಮಹತ್ವದ ನಿರ್ಣಯ ತೆಗೆದುಕೊಂಡು ಈ ಕೆಳಕಂಡವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ನೇಮಿಸಿ ಅದೇಶ ಹೊರಡಿಸಿತು.

| | | |
|---|---|---|
| ೧. ಡಾ॥ ಎ.ಎಂ. ರಾಜಶೇಖರಯ್ಯ | – | ಸಂಪಾದಕರು |
| ೨. ಡಾ॥ ಸಿದ್ದಲಿಂಗಯ್ಯ | – | ಸದಸ್ಯರು |
| ೩. ಶ್ರೀ ದೇವನೂರು ಮಹಾದೇವ | – | ಸದಸ್ಯರು |
| ೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | – | ಸದಸ್ಯ–ಕಾರ್ಯದರ್ಶಿ |

ಸಮಿತಿಯ ಪ್ರಥಮ ಸಭೆ ೩೦–೮–೧೯೮೮ರಂದು ಬೆಂಗಳೂರಿನಲ್ಲಿ ಸೇರಿ ಡಾ॥ ಅಂಬೇಡ್ಕರ್ ಅವರ ಪ್ರಕಟಿತ ಸುಪರಿಚಿತವಾದ ಹದಿನಾಲ್ಕು ಬಿಡಿ ಕೃತಿಗಳನ್ನು ಮಾತ್ರ ಭಾಷಾಂತರ ಮಾಡದೆ ಮತ್ತು ಅವುಗಳಲ್ಲಿ ಕೆಲವು ಅಲಭ್ಯವಿರುವ ಕಾರಣದಿಂದಲೂ, ಮಹಾರಾಷ್ಟ್ರ ಸರ್ಕಾರದ ಯೋಜನೆಯಂತೆ ಪ್ರಕಟವಾಗುತ್ತಿರುವ ಎಲ್ಲಾ ಸಂಪುಟಗಳನ್ನು ಮಹಾರಾಷ್ಟ್ರ ಸರ್ಕಾರದ ಅನುಮತಿ ಪಡೆದುಕೊಂಡು ಕನ್ನಡಕ್ಕೆ ಭಾಷಾಂತರಿಸಬೇಕೆಂದು ನಿರ್ಣಯ ತೆಗೆದುಕೊಂಡಿತು. ಈ ಪ್ರಕಾರ ಮಹಾರಾಷ್ಟ್ರ ಸರ್ಕಾರದ ಅನುಮತಿ ಕೋರಿ ಪತ್ರ ಬರೆಯಲಾಯಿತು. ಮಹಾರಾಷ್ಟ್ರ ಸರ್ಕಾರದವರು ದಿನಾಂಕ ೨–೫–೮೯ರ ಪತ್ರದಲ್ಲಿ ತಮ್ಮ ಅನುಮತಿ ನೀಡಿ, ಕರ್ನಾಟಕ ಸರ್ಕಾರಕ್ಕೆ ತಿಳಿಸಿದರು. ಅನಂತರ ಭಾಷಾಂತರ ಕಾರ್ಯವನ್ನು ವ್ಯವಸ್ಥಿತವಾಗಿ ಕೈಗೆತ್ತಿಕೊಳ್ಳಲಾಯಿತು.

ನಮ್ಮ ಸಂಪಾದಕ ಸಮಿತಿಯ ಭಾಷಾಂತರ ಕಾರ್ಯಕ್ಕಾಗಿ ನಾಡಿನ ಗಣ್ಯ ವಿದ್ವಾಂಸರನ್ನು ಗುರುತಿಸಿ ಅವರ ಸಮ್ಮತಿ, ಸಹಕಾರ ಕೋರಿತು. ಅವರ ಒಪ್ಪಿಗೆ ಪಡೆದ ನಂತರ ಪ್ರತಿಯೊಬ್ಬರಿಗೂ ಮೂಲ ಕೃತಿಯ ಸುಮಾರು ಒಂದುನೂರು ಪುಟಗಳನ್ನು ವಹಿಸಲಾಯಿತು. ಡಾ॥ ಅಂಬೇಡ್ಕರ್ ಅವರ ಬರಹಗಳ ಭಾಷೆ ಮತ್ತು ವಿಚಾರಗಳು ಅತ್ಯಂತ ಕ್ಲಿಷ್ಟ ಹಾಗೂ ಗಹನವಾದವುಗಳಾಗಿರುವುದರಿಂದ ಅವುಗಳ ಆಳವಾದ ಅಧ್ಯಯನ ಮತ್ತು ಮನನ ಅವಶ್ಯ. ಆದ್ದರಿಂದ ಭಾಷಾಂತರಕಾರರಿಗೆ ಹೆಚ್ಚು ಅವಧಿ ಬೇಕಾಯಿತು. ಕೆಲವರು ಭಾಷಾಂತರ ಮಾಡಿ ಕಳುಹಿಸಿದ ನಂತರ ಭಾಷೆ, ಶೈಲಿ, ಪಾರಿಭಾಷಿಕ ಪದಗಳು ಮುಂತಾದವುಗಳ ಪರಿಶೀಲನೆ ಅಗತ್ಯವೆನಿಸಿತು. ಈ ಸಂದರ್ಭದಲ್ಲಿ ಭಾಷಾತಜ್ಞರ ನೆರವು ಪಡೆಯಬೇಕೆಂದು ಸಂಪಾದಕ ಸಮಿತಿ ತೀರ್ಮಾನಿಸಿ ಕೆಳಕಂಡ ಮಹನೀಯರನ್ನು ಆಹ್ವಾನಿಸಲಾಯಿತು.

೧. ಡಾ॥ ಆರ್.ಸಿ. ಹಿರೇಮಠ, ಮಾಜಿ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೨. ಡಾ॥ ದೇ. ಜವರೇಗೌಡ, ಮಾಜಿ ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಮತ್ತು

೩. ಶ್ರೀ. ವೈ. ಎಂ. ಸಿ. ಶರ್ಮ, ಅಂದಿನ ಅಧ್ಯಕ್ಷರು, ಕರ್ನಾಟಕ ರಾಜ್ಯ ಭಾಷಾ ಆಯೋಗ, ಬೆಂಗಳೂರು. ನಂತರ ಶ್ರೀ ಕಂಠೀರಾವ್ ಇವರು ಅನುವಾದಿತ ಭಾಗಗಳ ಪರಿಶೀಲನೆ ಮಾಡಲು ಒಪ್ಪಿಕೊಂಡರು. ಅನುವಾದ ಮಾಡಿದ ಭಾಗಗಳಲ್ಲಿ ಪದಬಳಕೆ, ಭಾಷೆ, ಶೈಲಿ ಮುಂತಾದವುಗಳಲ್ಲಿ ಸಾಧ್ಯವಾದಷ್ಟು ಏಕರೂಪತೆ ತರುವ ಕಾರ್ಯ ಭಾಷಾಂತರ ಮಾಡುವುದಕ್ಕಿಂತಲೂ ತಮ್ಮ ತಮ್ಮ ಪ್ರಾದೇಶಿಕ ಭಾಷೆ, ಶೈಲಿಯನ್ನನುಸರಿಸುವುದು ಸಹಜ. ಆದಷ್ಟು ಈ ಪ್ರಾದೇಶಿಕ ವೈವಿಧ್ಯವನ್ನು ಉಳಿಸಿಕೊಂಡು ಬರಲಾಗಿದೆ. ಈ ಹಿರಿಯ ತಜ್ಞರು ತಮ್ಮ ಅಮೂಲ್ಯ ಸಮಯವನ್ನು ಈ ಕಾರ್ಯಕ್ಕಾಗಿ ವಿನಿಯೋಗಿಸಿ ಹೆಚ್ಚು ಶ್ರಮವಹಿಸಿ ಭಾಷಾಂತರದ ಮಟ್ಟವನ್ನು ಸುಧಾರಿಸುವ ಪ್ರಯತ್ನಮಾಡಿದ್ದಾರೆ. ಇವರ ಸಹಕಾರವಿಲ್ಲದೆ ಈ ಕಾರ್ಯ ಸುಗಮವಾಗುತ್ತಿಲ್ಲರಲಿಲ್ಲ. ಇವರು ಮೊದಲು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ, ನಂತರ ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ ಮೂರು ದಿನಗಳ ಭಾಷಾಂತರ ಕಮ್ಮಟದಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಿದರು. ಈ ತಜ್ಞರಿಗೆ ಸಂಪಾದಕ ಸಮಿತಿ ಅತ್ಯಂತ ಋಣಿಯಾಗಿದೆ.

ಈಗ ಪ್ರಕಟವಾಗಿರುವ ಈ ಸಂಪುಟವು ಡಾ॥ ಅಂಬೇಡ್ಕರ್ ರಾಜಕೀಯ ಜೀವನ ಮತ್ತು ಮುಖಂಡತ್ವದಲ್ಲಿ ಅತ್ಯಂತ ಮಹತ್ವದ ಅವಧಿಗೆ ಸಂಬಂಧಪಟ್ಟ ದಾಖಲೆಗಳನ್ನೊಳಗೊಂಡಿವೆ. ಏಕೆಂದರೆ ಅವರು ಪ್ರಥಮ ಬಾರಿಗೆ ಭಾರತದ ಗವರ್ನರ್ ಜನರಲ್‌ರವರ ಕಾರ್ಯಕಾರಿ ಪರಿಷತ್ತಿನಲ್ಲಿ ಕಾರ್ಮಿಕ ಸದಸ್ಯ (ಸಚಿವ)ರಾಗಿ ೧೯೪೨ರಲ್ಲಿ ನೇಮಕಗೊಂಡರು. ೧೯೪೩ರಿಂದ ೧೯೪೬ರ ಅವಧಿಯಲ್ಲಿ ಅವರು ಈ ಮಹತ್ವದ ಸ್ಥಾನವನ್ನು ಅಲಂಕರಿಸಿದ್ದು, ಈ ಅವಧಿಯಲ್ಲಿ ಅದರಲ್ಲಿಯೂ ಎರಡನೆಯ ಮಹಾಯುದ್ಧದ ಸಂಕಟ ಕಾಲದಲ್ಲಿ ಕಾರ್ಮಿಕ ಖಾತೆಯ ಸಚಿವರಾಗಿ ಕಾರ್ಮಿಕ ಸಮಸ್ಯೆಗಳತ್ತ ರಚನಾತ್ಮಕ ರೀತಿಯಲ್ಲಿ ಗಮನಹರಿಸಿದರು. ಸಾಮಾನ್ಯವಾಗಿ ಯುದ್ಧಕಾಲದಲ್ಲಿ ಕಾರ್ಮಿಕರು ವಿಶೇಷವಾಗಿ ಶೋಷಣೆಗೆ ಒಳಗಾಗುತ್ತಾರೆ ಮತ್ತು ಅವರ ತೀವ್ರ ಸಮಸ್ಯೆಗಳತ್ತ ಯಾರೂ ಗಮನ ಹರಿಸುವುದಿಲ್ಲ. ಆದರೆ ಡಾ॥ ಅಂಬೇಡ್ಕರರು ತಮ್ಮ ಅಧಿಕಾರಾವಧಿಯಲ್ಲಿ ಭಾರತೀಯ ಕಾಮಿಕರ ಅನೇಕ ಸಮಸ್ಯೆಗಳನ್ನು ಬಗೆಹರಿಸಿದರಲ್ಲದೆ ಅವರ ಸ್ಥಿತಿಗತಿಗಳಲ್ಲಿ ಗಮನಾರ್ಹವಾದ ಸುಧಾರಣೆಗಳನ್ನು ತಂದರು. ಇದರ ಕೀರ್ತಿ ಡಾ॥ ಅಂಬೇಡ್ಕರರಿಗೆ ಸಲ್ಲುವುದು.

ಅವರ ಬರೆಹಗಳು ಮತ್ತು ಭಾಷಣಗಳ ಮಾಲಿಕೆಯ ಹತ್ತನೆಯ ಸಂಪುಟದಲ್ಲಿ ಡಾ॥ ಅಂಬೇಡ್ಕರರು ಕೇಂದ್ರ ಶಾಸನಸಭೆಯಲ್ಲಿ ೧೯೪೨ರಿಂದ ೧೯೪೬ರ ಅವಧಿಯಲ್ಲಿ ವಿವಿಧ ವಿಷಯಗಳ ಮೇಲೆ ಮಾಡಿದ ಭಾಷಣಗಳು ಅದರಲ್ಲಿಯೂ ಪ್ರಮುಖವಾಗಿ ಭಾರತದ ಕಾರ್ಮಿಕರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿವೆ. ಈ ಭಾಷಣಗಳು ವಿದ್ವತ್‌ಪೂರ್ಣವೂ ಬೋಧಪ್ರದವೂ ಮತ್ತು ಸಂವೇದನಾಶೀಲವೂ ಆಗಿರುವುದಲ್ಲದೇ ಈ ದಿನಗಳಲ್ಲಿ ಕಾಣ ಸಿಗದಂತಹ ಸಾಹಿತ್ಯದ ವೈಖರಿಯನ್ನು ಪ್ರತಿಬಿಂಬಿಸುತ್ತವೆ. ಅವು ಅತ್ಯಂತ ಸ್ವೋಪಜ್ಞವಾಗಿವೆ. ಎಲ್ಲಕ್ಕಿಂತಲೂ ಮಿಗಿಲಾಗಿ ಅವುಗಳಲ್ಲಿ ಡಾ॥ ಅಂಬೇಡ್ಕರರು ಕಾರ್ಮಿಕ ಸಮಸ್ಯೆಗಳ ಬಗ್ಗೆ ಅಗಾಧ ಅರಿವನ್ನು ಹೊಂದಿದ್ದರೆಂಬ ಅಂಶ ಗೊತ್ತಾಗುತ್ತದೆ. ಅವರೇ ಮುಂಬಯಿ ಪರೇಲ್‌ನಲ್ಲಿ ಕೂಲಿಕಾರರ ಕಠಿಣ ಜೀವನದ ಅರಿವು ಅವರಲ್ಲುಂಟಾಗಿತ್ತು. ಈ ಕಟು ಅನುಭವದ ಹಿನ್ನೆಲೆಯಲ್ಲಿ ಅವರು ಅಧಿಕಾರದ ಅವಕಾಶ ಸಿಕ್ಕಾಗ ಸ್ವತಃ ತಾವೆ ಕಾರ್ಮಿಕ ಇಲಾಖೆಯನ್ನು ಆಯ್ದುಕೊಂಡು ಕಾರ್ಮಿಕರ ಕಲ್ಯಾಣ ಸಾಧಿಸುವ ಪಣ ತೊಟ್ಟರು.

ಅವರು ಅಧಿಕಾರದಲ್ಲಿದ್ದ ದ್ವಿತೀಯ ಮಹಾಯುದ್ಧದ ಕಾಲ ದೇಶಕ್ಕೆ ಕಠಿಣ ಕಾಲವಾಗಿತ್ತಾದರೂ ಯುದ್ಧದ ಅವಶ್ಯಕತೆಗಳ ಒತ್ತಡಗಳಿಂದಾಗಿ ದೇಶದ ಆರ್ಥಿಕ ಪರಿಸ್ಥಿತಿಯಲ್ಲಿ ಗಮನೀಯ ಪರವರ್ತನೆಯಾಯಿತು. ಔದ್ಯೋಗಿಕ ವಿಸ್ತರಣೆಯ ಅವಕಾಶಗಳೊದಗಿ ಬಂದವು. ಇದರಿಂದ ಉದ್ಯಮಿಗಳು ಮತ್ತು ಉದ್ಯೋಗಪತಿಗಳಿಗೆ ಅಭಿವೃದ್ಧಿಯ ವಿಪುಲ ಅವಕಾಶ ದೊರೆತವಾದರೂ ಕಾರ್ಮಿಕರಿಗೆ ಅದರ ಲಾಭ ದೊರೆಯಲಿಲ್ಲ. ಇದನ್ನರಿತಿದ್ದ

ಡಾ॥ ಅಂಬೇಡ್ಕರರು ಕಾರ್ಮಿಕ ಕಲ್ಯಾಣ ಕುರಿತ ಅನೇಕ ಮಸೂದೆಗಳನ್ನು ಮಂಡಿಸಿ ಅವುಗಳನ್ನು ಸಮರ್ಥ ರೀತಿಯಲ್ಲಿ ನಡೆಸಿ ಕಾನೂನುಗಳನ್ನು ಮಾಡಿದರು.

ಕಾರ್ಮಿಕರ ಬಗ್ಗೆ ಅವರು ತಳೆದಿದ್ದ ನಿಲುವು ಮತ್ತು ಸಿದ್ಧಾಂತಗಳನ್ನು ಅವರು ೧೫ನೆಯ ಸೆಪ್ಟೆಂಬರ್ ೧೯೪೩ರಲ್ಲಿ ಕಾರ್ಮಿಕ ಸಮ್ಮೇಳನದ ಬಹಿರಂಗ ಅಧಿವೇಶನದ ಮೊದಲನೆಯ ಗೋಷ್ಠಿಯಲ್ಲಿ ಮಾಡಿದ ಭಾಷಣದಿಂದ ತಿಳಿದುಕೊಳ್ಳಬಹುದು. ಅವರ ಮಾತಿನಲ್ಲಿಯೇ ಹೇಳುವುದಾದರೆ ಈ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ, ಉದ್ಯೋಗಿಗಳು ಮತ್ತು (ಕೆಲಸ ಕೊಡುವ) ಧಣಿಗಳು ಪರಸ್ಪರ ಜವಾಬ್ದಾರಿ, ಗೌರವ ಮತ್ತು ಪ್ರತಿಯೊಬ್ಬರೂ ಕೊಡುಕೊಳ್ಳುವ ಭಾವನೆಯಿಂದ ಕೆಲಸ ಮಾಡಲು ಸಿದ್ಧವಾಗಬೇಕು. ಈ ರೀತಿಯ ಪರಸ್ಪರ ಗೌರವ ಮತ್ತು ಜವಾಬ್ದಾರಿ ಬೆಳೆಯದೇ ಹೋದರೆ ಔದ್ಯೋಗಿಕ ಕಾರ್ಮಿಕರ ಕಲ್ಯಾಣದ ಸಮಸ್ಯೆ ನಿವಾರಣೆಯಾಗುವುದು ಸಾಧ್ಯವಿಲ್ಲ.

ಈ ಹಿನ್ನಲೆಯಲ್ಲಿ ಸ್ವತಂತ್ರ ಭಾರತದ ಪುರೋಗಾಮಿ ಕಾರ್ಮಿಕ ಧೋರಣೆಗಳಿಗೆ ಬಹುಮಟ್ಟಿಗೆ ಡಾ॥ ಅಂಬೇಡ್ಕರರು ನಲವತ್ತರ ದಶಕದಲ್ಲಿ ಅನುಷ್ಠಾನಕ್ಕೆ ತಂದಂತಹ ಅನೇಕ ಕಾನೂನು ವಿಧಿಗಳೇ ಕಾರಣ ಎಂದು ನಿಸ್ಸಂಕೋಚವಾಗಿ ಹೇಳಬಹುದು. ಅವರು ಔದ್ಯಮಿಕ ಬೆಳವಣಿಗೆಗೆ ಬಹುಮುಖ್ಯವಾದ ಕಾರ್ಮಿಕರ ತಾಂತ್ರಿಕ ತರಬೇತಿ ಮತ್ತು ನೈಪುಣ್ಯಗಳ ವೃದ್ಧಿಯತ್ತ ಹೆಚ್ಚು ಒತ್ತು ನೀಡಿದರು. ಇವುಗಳ ಬೆಳವಣಿಗೆ ಸುಲಭ ಸಾಧ್ಯವಲ್ಲ ಮತ್ತು ಅದರಲ್ಲಿ ವಿಳಂಬವೂ ಸಹಜ. ಶಾಂತಿಯುತ ಬದಲಾವಣೆಯಲ್ಲಿ ಯಾವಾಗಲೂ ವಿಳಂಬವಾಗುತ್ತದೆ. ಸಾಮಾಜಿಕ ಪ್ರಜ್ಞೆ ಹೊಂದಿರದ ಭಾರತದಂತಹ ಪುರಾತನ ದೇಶದಲ್ಲಿ ಪ್ರಗತಿ ಮಂದಗತಿಯಲ್ಲಿಯೇ ಸಾಗುವುದು. ಆದ್ದರಿಂದ ಡಾ॥ ಅಂಬೇಡ್ಕರರು ನಮ್ಮ ಜನತೆಯ ದೃಷ್ಟಿಕೋನದಲ್ಲಿ ಬದಲಾವಣೆಯಾಗಬೇಕೆಂದು ಪ್ರತಿಪಾದಿಸಿದರು. ಇದೂ ಅಲ್ಲದೆ ಸ್ವಾತಂತ್ರ್ಯ ಅರ್ಥಪೂರ್ಣವಾಗಬೇಕಾದರೆ ಒಳ್ಳೆಯ ಸರ್ಕಾರ, ಒಳ್ಳೆಯ ಸಮಾಜ ಅವಶ್ಯ ಎಂದೂ ಅವರು ಹೇಳಿದರು.

ಭಾರದಲ್ಲಿ ಕಾರ್ಮಿಕರು ಬಹುವಾಗಿ ಶೋಷಿತರಾಗಿದ್ದಾರೆ. ಕಾರ್ಮಿಕ ವರ್ಗವನ್ನು ಸಾಮಾಜಿಕ ಭದ್ರತೆಯ ರಕ್ಷಣೆಯಡಿಯಲ್ಲಿ ತರುವುದೇ ಡಾ॥ ಅಂಬೇಡ್ಕರರ ಮೂಲ ಗುರಿಯಾಗಿತ್ತು. ಕಾರ್ಮಿಕರ ಪರಿಹಾರ ಕಾಯ್ದೆ, ಹೆರಿಗೆ ಸೌಕರ್ಯ ಕಾಯ್ದೆ ಮುಂತಾದವು ಅವರು ಕೈಗೊಂಡ ಶಾಶ್ವತ ಮಹತ್ವದ ಕ್ರಮಗಳಾಗಿದ್ದವು.

ಡಾ॥ ಅಂಬೇಡ್ಕರ್‌ರವರು ಕಾರ್ಮಿಕ ಸಚಿವರಾಗಿದ್ದಾಗ ಕಲ್ಲಿದ್ದಲು ಗಣಿಗಳಲ್ಲಿನ ಪರಿಸ್ಥಿತಿಗಳನ್ನು ಖುದ್ದಾಗಿ ಪರಿಶೀಲಿಸಲು ಮುಂದಾದರು. ಅವರು ಕಲ್ಲಿದ್ದಲು ಮತ್ತು ಅಭ್ರಕ ಗಣಿಗಳಲ್ಲಿ ಸುಮಾರು ೪೦೦ ಅಡಿಗಳಷ್ಟು ಆಳದವರೆಗೆ ಸ್ವತಃ ಇಳಿದು ಪರಿಸ್ಥಿತಿಯನ್ನು ಪರಿಶೀಲಿಸಿದರು. ಕಾರ್ಮಿಕರ ಬಗ್ಗೆ ಅವರು ಹೊಂದಿದ್ದ ಈ ಕಾಳಜಿ, ಅದರಲ್ಲಿಯೂ ಕಲ್ಲಿದ್ದಲು ಗಣಿಗಳ ಕೆಲಸಗಾರರ ಬಗ್ಗೆ ಅವರಿಗಿದ್ದ ಕಾಳಜಿಯ ಪ್ರತಿಫಲವೇ ಕಲ್ಲಿದ್ದಲು ಗಣಿ ಕೆಲಸಗಾರರ ಕಲ್ಯಾಣ ಅಧ್ಯಾದೇಶ, ೧೯೪೪, ಆದ್ದರಿಂದ ಅವರು ಕಾರ್ಮಿಕ ಕಲ್ಯಾಣ ಸಮಸ್ಯೆಯ ವಿವಿಧ ಮುಖಗಳ ಬಗ್ಗೆ ಮಾಡಿದ ಅನೇಕ ಭಾಷಣಗಳು ಬಹಳ ಬೋಧಪ್ರದವಾಗಿದೆ.

ಕಾರ್ಮಿಕರ ಸಮಸ್ಯೆಗಳು ಅಲ್ಲದೆ ಆರ್ಥಿಕ ಪ್ರಗತಿಯ ಇನ್ನೊಂದು ಮುಖವೆನಿಸಿದ ಇತರ ಅಭಿವೃದ್ಧಿಪರ ಯೋಜನೆಗಳಿಗೂ ಅವರ ಕೊಡುಗೆ ಅಪಾರ. ಅವರು ಕಾರ್ಮಿಕ ಸದಸ್ಯರಾಗಿದ್ದಾಗಲೇ ಕೈಗೊಂಡ ದಾಮೋದರ ಕಣಿವೆ ವಿವಿಧೋದ್ದೇಶ ಅಭಿವೃದ್ದಿಯ ಬೆಳವಣಿಗೆ, ಒರಿಸ್ಸಾದ ನದಿಗಳ ಬಗ್ಗೆ ವಿವಿಧೋದ್ದೇಶ ಯೋಜನೆಗಳು, ಅಂತರ್ದೇಶೀಯ ಜಲಸಂಚಾರ ಯೋಜನೆ ಮುಂತಾದವು ಉಲ್ಲೇಖನಾರ್ಹ. ಈ ಸಂಪುಟದಲ್ಲಿ ಈ ವಿಷಯಗಳ ಕುರಿತು ಅವರು ಮಾಡಿದ ಭಾಷಣಗಳೂ, ವಿಧಾನಸಭೆಯಲ್ಲಿ ಕೇಳಲಾದ ಪ್ರಶ್ನೆಗಳಿಗೆ ಅವರು ನೀಡಿದ ಉತ್ತರಗಳೂ ಬಹಳ ಮಹತ್ವದವುಗಳಾಗಿವೆ. ಇವುಗಳಿಂದ ದೇಶದ ಆರ್ಥಿಕ ಪ್ರಗತಿಯ ಸಮಸ್ಯೆಗಳ

ಬಗ್ಗೆ ಅವರಿಗೆ ಎಷ್ಟು ಅರಿವಿದ್ದಿತೆಂಬುದು ಗೊತ್ತಾಗುತ್ತದೆ. ನದಿಗಳ ಪ್ರವಾಹ ನಿಯಂತ್ರಣ, ಜಲಸಂಚಾರ, ನೀರಾವರಿ ವ್ಯವಸಾಯ ಮತ್ತು ಮಣ್ಣಿನ ರಕ್ಷಣೆ ಹಾಗೂ ವಿದ್ಯುಚ್ಛಕ್ತಿ ಉತ್ಪಾದನೆ ಮುಂತಾದವುಗಳ ಬಗ್ಗೆ ಅವರ ವಿಚಾರಗಳು ಎಷ್ಟು ಆಧುನಿಕ ಮತ್ತು ವೈಜ್ಞಾನಿಕವಾಗಿದ್ದವೆಂಬುದು ಗಮನಾರ್ಹವಾಗಿದೆ.

ಅವರು ಸಚಿವರಾಗಿದ್ದಾಗ ಸರ್ಕಾರದ ಕಾರ್ಯವಿಧಾನವನ್ನು ಸುಧಾರಿಸಲು ಕೂಡ ಗಮನ ನೀಡಿದರು. ಅವರು ಕಾಗದ ನಿಯಂತ್ರಣ ಆಜ್ಞೆಯನ್ನು ಕುರಿತು ವಿಧಾನ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಸರ್ಕಾರದಲ್ಲಿ ಬಳಸಲಾಗುತ್ತಿದ್ದ ಯುದ್ಧಕಾಲದಲ್ಲಿ ೧೪೯ ವ್ಯವಹಾರ ನಮೂನೆ (Form)ಗಳನ್ನು ಅಮಾನತಿನಲ್ಲಿಟ್ಟು ೧೯೦ ನಮೂನೆಗಳನ್ನು ರದ್ದು ಪಡಿಸಿರುವುದಾಗಿ ತಿಳಿಸಿದರು. ಅದೇ ರೀತಿ ಕೆಲವು ವ್ಯವಹಾರವನ್ನು ಕಡಿಮೆ ಮಾಡಬಹುದೆಂಬ ಅಂಶವನ್ನು ಭಾರತ ಸರ್ಕಾರದ ಗಮನಕ್ಕೆ ತಂದರು.

ಒಟ್ಟಿನಲ್ಲಿ ಡಾ॥ ಬಾಬಾಸಾಹೇಬ್ ಅಂಬೇಡ್ಕರ್‌ರವರ ಬರೆಹಗಳು ಮತ್ತು ಭಾಷಣಗಳ ಮಾಲಿಕೆಯ ಹತ್ತನೆಯ ಸಂಪುಟದಲ್ಲಿ ಪ್ರಕಟಿತವಾಗಿರುವ ಈ ಬರಹಗಳು ಮತ್ತು ಭಾಷಣಗಳು ಇಂದಿಗೂ ಸಹ ಪ್ರಸ್ತುತವಾಗಿರುವ ಅಮೂಲ್ಯ ವಿಚಾರಗಳನ್ನೊಳಗೊಂಡಿವೆ. ಇವು ಸಾಮಾನ್ಯ ಓದುಗರಿರೂ, ಆಡಳಿತಗಾರರಿಗೂ, ಸಂಶೋಧಕರಿಗೂ, ಕಾರ್ಮಿಕ ವಕೀಲರಿಗೂ, ಕಾರ್ಮಿಕ ಮುಖಂಡರಿಗೂ, ಅರ್ಥಶಾಸ್ತ್ರಜ್ಞರಿಗೂ ಮತ್ತು ಇತಿಹಾಸದ ವಿದ್ಯಾರ್ಥಿಗಳಿಗೂ ಅತ್ಯುಪಯುಕ್ತವೂ ಬೋಧಪ್ರದವೂ ಮತ್ತು ಜ್ಞಾನಪ್ರದವೂ ಆಗಿವೆ.

ಕೊನೆಯಲ್ಲಿ ಒಂದು ಮಾತು. ಮೊದಲಿನಿಂದಲೂ ನಿಮ್ನ ವರ್ಗಗಳ ಹಿತಾಸಕ್ತಿಗಳು ಮತ್ತು ಅಭಿವೃದ್ಧಿಯನ್ನು ಚಿಂತಿಸುತ್ತಿದ್ದು ಮತ್ತು ಅಸ್ಪೃಶ್ಯತೆಯನ್ನು ಅಮೂಲಾಗ್ರವಾಗಿ ನಿರ್ಮೂಲ ಮಾಡಲು ಪಣತೊಟ್ಟಿದ್ದ ಡಾ॥ ಅಂಬೇಡ್ಕರರು ೪೦ರ ದಶಕದ ಆರಂಭದಲ್ಲಿ ಎಂದರೆ ೧೯೪೨ರಲ್ಲಿ, ಅದರಲ್ಲಿಯೂ ಬ್ರಿಟಿಷರ ಅಧಿಕಾರಾವಧಿ ಪರ್ಯವಸಾನವಾಗುತ್ತಿರುವುದು ಸ್ಪಷ್ಟ ಗೋಚರವಾಗುತ್ತಿರುವ ಕಾಲದಲ್ಲಿ ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಬ್ರಿಟಿಷರಿಗೆ ದೇಶ ಬಿಟ್ಟು ತೊಲಗಿ ಎಂದು ಕರೆ ನೀಡಿದ ಸಂದರ್ಭದಲ್ಲಿ ವೈಸ್‌ರಾಯ್‌ರವರ ಕಾರ್ಯಕಾರಿ ಪರಿಷತ್ತಿನ ಸದಸ್ಯರಾಗಿ ಏಕೆ ಸೇರಿದರು ಎಂಬ ಜಿಜ್ಞಾಸೆ ಓದುಗರ ಮನಸ್ಸಿನಲ್ಲಿ ಸುಳಿಯುವುದು ಸಹಜ. ಇದಕ್ಕೆ ಉತ್ತರ ಬಹುಶಃ ಡಾ॥ ಅಂಬೇಡ್ಕರರ ವಿಚಾರದಲ್ಲಿಯೇ ಅಡಗಿದೆ ಎಂದೆನಿಸುತ್ತದೆ. ಅವರ ಅಭಿಪ್ರಾಯದಲ್ಲಿ ಸರ್ಕಾರದ ಹೊರಗುಳಿದು ಹೋರಾಡುವುದಕ್ಕಿಂತಲೂ ಒಳಗಿನಿಂದ ಹೋರಾಡುವುದು ಹೆಚ್ಚು ಉಪಯುಕ್ತ ಮತ್ತು ಪ್ರಭಾವಿ ಹೋರಾಟವಾಗಬಲ್ಲದು. ಆದುದರಿಂದಲೇ ಅವರು ಸಮಾಜದ ಅತ್ಯಂತ ಶೋಷಣೆಗೊಳಗಾದ ಕಾರ್ಮಿಕವರ್ಗದ ಹಿತವನ್ನು ಗಮನದಲಿಟ್ಟುಕೊಂಡು ಮಂತ್ರಿಮಂಡಲದಲ್ಲಿ ಕಾರ್ಮಿಕ ಇಲಾಖೆಯನ್ನೇ ಸ್ವಸಂತೋಷದಿಂದ ಆಯ್ದುಕೊಂಡರು.

ಈ ಸಂದರ್ಭದಲ್ಲಿ ಗಮನಿಸಬೇಕಾದ ಇನ್ನೊಂದು ವಿಷಯವೆಂದರೆ ಡಾ॥ ಅಂಬೇಡ್ಕರರ ಪ್ರಕಾರ ದೇಶದ ಕಾರ್ಮಿಕರಲ್ಲಿ ಸುಮಾರು ಶೇಕಡ ೯೦ರಷ್ಟು ಕಾರ್ಮಿಕರು ನಿಮ್ನ ವರ್ಗಕ್ಕೆ ಸೇರಿದವರು. ಈ ಕಾರಣದಿಂದ ಅವರು ಸರ್ಕಾರ ಸೇರುವ ಈ ನಿರ್ಧಾರಕ್ಕೆ ಬಂದಿದ್ದರೆನ್ನಬಹುದು.

ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಅಲ್ಲಿಯವರೆಗೂ ಜಾತಿಪ್ರಜ್ಞೆಗೇ ಪ್ರಾಧಾನ್ಯತೇ ಇತ್ತಿದ್ದ ಡಾ॥ ಅಂಬೇಡ್ಕರರು ಕಾರ್ಮಿಕ ಸಮಸ್ಯೆಗಳಿಗೆ ಮಹತ್ವ ನೀಡಿದ್ದು ಅವರಲ್ಲುಂಟಾದ ವರ್ಗಪ್ರಜ್ಞೆಯ ಸಂಕೇತವಾಗಿದೆಯೆ? ಅವರಲ್ಲಿಯ ಈ ವರ್ಗಪ್ರಜ್ಞೆಯ ದ್ಯೋತಕವಾಗಿಯೇ ಅವರು 'ಇಂಡಿಪೆಂಡೆಂಟ್ ಲೇಬರ್ ಪಾರ್ಟಿ'ಯನ್ನು ಸ್ಥಾಪಿಸಿದರೆನ್ನಬಹುದೇ? ಹೀಗೆ ಅವರು ತಮ್ಮ ಕಾರ್ಯಕ್ಷೇತ್ರದಡಿಯಲ್ಲಿ ತಮ್ಮ ವರ್ಗ ಪ್ರಜ್ಞೆಯು ಜಾತಿಪ್ರಜ್ಞೆಗೆ ವಿಶಾಲ ತಳಹದಿಯಾದಗಿಸಿತೆಂದು ಹೇಳಬಹುದೆ? ಈ ಕುರಿತ ಹೆಚ್ಚಿನ ಚಿಂತನೆ ಅವಶ್ಯ.

ಈ ಸಂಪುಟದ ಗಾತ್ರವನ್ನು ಗಮನದಲ್ಲಿಟ್ಟುಕೊಂಡು ಇದನ್ನು ಎರಡು ಭಾಗಗಳಲ್ಲಿ ಪ್ರಕಟಿಸಲಾಗಿದೆ. ಒಂದನೆಯ ಭಾಗದಲ್ಲಿ ಡಾ॥ ಅಂಬೇಡ್ಕರರು ಕೇಂದ್ರ ವಿಧಾನ ಸಭೆಯಲ್ಲಿ ಕಾರ್ಮಿಕ ಕಲ್ಯಾಣ ಮತ್ತು ತತ್ಸಂಬಂಧ ಮಸೂದೆಗಳನ್ನು ಮಂಡಿಸಿದ ಸಂದರ್ಭದಲ್ಲಿ ಭಾಗವಹಿಸಿ ಮಾಡಿದ ಭಾಷಣಗಳನ್ನು ಪ್ರಕಟಿಸಲಾಗಿದೆ. ಎರಡನೆಯ ಭಾಗದಲ್ಲಿ ಕೇಂದ್ರ ವಿಧಾನ ಸಭೆಯಲ್ಲಿ ಕಾರ್ಮಿಕ ಸದಸ್ಯರಾಗಿದ್ದ ಅವರು ಸದಸ್ಯರು ತಮ್ಮ ಇಲಾಖೆಯ ಬಗ್ಗೆ ಕೇಳಿದ ಅನೇಕ ಪ್ರಶ್ನೆಗಳಿಗೆ ನೀಡಿದ ಉತ್ತರಗಳ ಪ್ರಶ್ನೋತ್ತರಗಳೂ ಸೇರಿವೆ. ಓದುಗರು ಈ ಸೂಚನೆಯನ್ನು ಗಮನಿಸಬೇಕಾಗಿ ವಿನಂತಿ.

ಈಗ ಪ್ರಕಟವಾಗುತ್ತಿರುವ ೧೪ನೆಯ ಸಂಪುಟದಲ್ಲಿ ಭಾರತೀಯರ ಸಂವಿಧಾನದ ರಚನೆಯ ಅವಧಿಯಲ್ಲೇ ಕೈಗೊಂಡ ಇನ್ನೊಂದು ಮಹತ್ವದ ಶಾಸನ ರಚನೆಯ ಪ್ರಯತ್ನವಾಗಿದೆ. ಹಿಂದೂ ಕೋಡ್ ಎಂದೇ ಪರಿಚಯವಾಗಿರುವ ಈ ಮಸೂದೆಯ ಡಾ॥ ಬಿ.ಆರ್. ಅಂಬೇಡ್ಕರ್ ಅವರ ಸತತ ಪರಿಶ್ರಮದ ಫಲವಾಗಿ ರೂಪುಗೊಂಡಿತ್ತು. ಈ ಮಸೂದೆ ಎಷ್ಟು ಮಹತ್ವದ್ದಾಗಿತ್ತೋ ಅಷ್ಟೇ ವಿವಾದಾತ್ಮಕವಾಗಿತ್ತು. ಈ ಮಹತ್ವದ ಮಸೂದೆಯ ಮೇಲೆ ಜರುಗಿದ ವಿವರವಾದ ಚರ್ಚೆ, ಉತ್ತರ – ಪ್ರತ್ಯುತ್ತರಗಳು ಇಂದು ನಮ್ಮ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆಯ ದ್ಯೋತಕವಾಗಿವೆ. ಆದರೆ ದುರದೃಷ್ಟವಶಾತ್ ಈ ಮಸೂದೆಯ ಕೆಲವೇ ಅಂಶಗಳನ್ನು ಈಗ ಕಾನೂನಾಗಿ ಉಳಿದ ಹೆಚ್ಚಿನ ಭಾಗಗಳು ಕಾನೂನು ರೂಪ ತಳೆಯದೇ ನಿರಾಕರಿಸಲ್ಪಟ್ಟವು. ಈ ಮಸೂದೆ ಕಾನೂನಾಗಿದ್ದರೆ ನಮ್ಮ ಇಂದಿನ ಸಮಾಜದ ರೂಪುರೇಷೆಗಳೇ ಬದಲಾಗುತ್ತಿದ್ದವು.

ಗ್ರಾತ್ರದ ದೃಷ್ಟಿಯಿಂದ ಈ ಸಂಪುಟವನ್ನು ಎರಡು ಭಾಗಗಳಲ್ಲಿ ಮುದ್ರಿಸಿ ಪ್ರಕಟಿಸಲಾಗುತ್ತಿದೆ. ಈ ಸಂಪುಟದ ಒಂದನೆಯ ಭಾಗವನ್ನು ಪ್ರಕಟಿಸುವಲ್ಲಿ ನೆರವಾದ ಎಲ್ಲರಿಗೂ ಸಂಪಾದಕ ಸಮಿತಿ ಋಣಿಯಾಗಿದೆ. ಸಕಾಲದಲ್ಲಿ ಮುದ್ರಿಸಿಕೊಟ್ಟ ಮಯೂರ ಪ್ರಿಂಟ್ ಆಡ್ಸ್‌ನ ಮಾಲೀಕರಿಗೆ ನಮ್ಮ ಧನ್ಯವಾದಗಳು.

**ಡಾ॥ ಎ.ಎಂ. ರಾಜಶೇಖರಯ್ಯ**
ಸಂಪಾದಕ ಸಮಿತಿಯ ಪರವಾಗಿ

# ಪರಿವಿಡಿ


ಸಂದೇಶಗಳು v

ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ x

ಎರಡನೇ ಮುದ್ರಣಕ್ಕೆ ಮುನ್ನುಡಿ xiv

ಮೂರನೇ ಮುದ್ರಣಕ್ಕೆ ಮುನ್ನುಡಿ xv

ಸಂಪಾದಕೀಯ xvi

**ಭಾಗ – ೧** ೧–೪೨
ಆಯ್ಕೆ ಸಮಿತಿಗೆ ಕಳುಹಿಸಿಕೊಡಲಾದ ಹಿಂದೂ ಸಂಹಿತೆ ಮಸೂದೆ
(೧೭ ನವೆಂಬರ್ ೧೯೪೭ ರಿಂದ ೯ ಏಪ್ರಿಲ್ ೧೯೪೮ರ ವರೆಗೆ)

**ಭಾಗ – ೨** ೪೩–೨೩೮
ಕರಡು ಹಿಂದೂ ಸಂಹಿತೆ ಮಸೂದೆ
–ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಆಗ ಅಸ್ತಿತ್ವದಲ್ಲಿದ್ದ ಹಿಂದೂ ಸಂಹಿತೆ,
ಸೆಲೆಕ್ಟ್ ಕಮಿಟಿಯು ತಿದ್ದುಪಡಿ ಮಾಡಿದಂತೆ.

**ವಿಭಾಗ – ೩** ೨೩೯–೪೦೬
ಪರಿಶೀಲನಾ ಸಮಿತಿಯವರಿಂದ ಹಿಂದೂ ಸಂಹಿತೆ ಮಸೂದೆ ತಿರುಗಿ
ಬಂದ ನಂತರ ಹಿಂದೂ ಮಸೂದೆಯ ಮೇಲಣ ಚರ್ಚೆ
(ದಿನಾಂಕ ೧೧ನೇ ಫೆಬ್ರವರಿ ೧೯೪೯ ರಿಂದ ದಿನಾಂಕ ೧೪ ಡಿಸೆಂಬರ್ ೧೯೫೦ರ ವರೆಗೆ)

ಆಯ್ಕೆ ಸಮಿತಿಯಿಂದ ಹಿಂದಿರುಗಿಸಲಾಗಿದ್ದ ೪೦೭–೭೫೬
ಹಿಂದೂ ಸಂಹಿತೆ ಮಸೂದೆಯ ಮೇಲೆ ಚರ್ಚೆ
(ಮುಂದುವರಿದುದು)

ವಿಷಯಸೂಚಿ ೭೫೭

# ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್
# ಬರೆಹಗಳು ಮತ್ತು ಭಾಷಣಗಳು

## ಹಿಂದೂ ಸಂಹಿತೆ ಮಸೂದೆಯ ಮಹತ್ವ

ಭಾರತದ ಶಾಸಕಾಂಗದಿಂದ ಈ ಹಿಂದೆ ಪಾಸು ಮಾಡಿದ ಮುಂದೆ ಪಾಸು ಮಾಡಬಹುದಾದ, ಯಾವುದೇ ಕಾನೂನಿಗೆ ಅದರ ಮಹತ್ವದ ದೃಷ್ಟಿಯಿಂದ ಇದಕ್ಕೆ ಹಿಂದೂ ಕಾನೂನಿಗೆ ಹೋಲಿಸಲಾಗುವುದಿಲ್ಲ. ಭಾರತೀಯ ಸಮಾಜದ ಜೀವಾಳವೆನಿಸಿರುವ ವರ್ಗ ವರ್ಗಗಳ ನಡುವೆ ಮತ್ತು ಲಿಂಗ ಲಿಂಗಗಳ ನಡುವೆ ಇರುವ ಅಸಮಾನತೆಯನ್ನು ತೊಡೆದು ಹಾಕದೆ, ಆರ್ಥಿಕ ಸಮಸ್ಯೆಗಳ ಕುರಿತಾದ ಕಾನೂನುಗಳನ್ನು ಪಾಸು ಮಾಡುತ್ತಾ ಹೋಗುವುದೆಂದರೆ ಅದು ನಮ್ಮ ಸಂವಿಧಾನದ ಗೇಲಿ ಮಾಡಿದಂತಾಗುತ್ತದೆಯಲ್ಲದೆ ಸೆಗಣಿಯ ರಾಶಿಯ ಮೇಲೆ ಅರಮನೆಯನ್ನು ಕಟ್ಟಿದಂತಾಗುತ್ತದೆ. ಇದು ನಾನು ಹಿಂದೂ ಸಂಹಿತೆಗೆ ಕೊಟ್ಟಿರುವ ಮಹತ್ವ.

**ಹಿಂದೂ ಸಂಹಿತೆ ಮಸೂದೆಯ**
ಕುರಿತು ಡಾ. ಬಿ.ಆರ್. ಅಂಬೇಡ್ಕರ್‌ರವರ ನುಡಿಗಳು

# ಭಾಗ – ೧

# ಆಯ್ಕೆ ಸಮಿತಿಗೆ ಕಳುಹಿಸಿಕೊಡಲಾದ

# ಹಿಂದೂ ಸಂಹಿತೆ ಮಸೂದೆ

## ೧೭ ನವೆಂಬರ್ ೧೯೪೭ರಿಂದ

## ೯ ಏಪ್ರಿಲ್ ೧೯೪೮ರ ವರೆಗೆ

# ಹಿಂದೂ ಸಂಹಿತೆ ಮಸೂದೆ

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** (ಕಾನೂನು ಸಚಿವರು) : ಮಾನ್ಯರೆ ನಾನು ಹೀಗೆ ಮಂಡಿಸುತ್ತೇನೆ:

"ಹಿಂದೂ ಕಾನೂನಿನ ಕೆಲವು ಶಾಖೆಗಳನ್ನು ಕ್ರೋಡೀಕರಿಸಿ ತಿದ್ದುಪಡಿ ಮಾಡುವ ಮಸೂದೆಯು ಮುಂದುವರಿಯಬೇಕು."

**ಅಧ್ಯಕ್ಷರು :** ಸೂಚನೆಯು ಮಂಡಿತವಾಗಿದೆ:

"ಹಿಂದೂ ಕಾನೂನಿನ ಕೆಲವು ಶಾಖೆಗಳನ್ನು ಕ್ರೋಡೀಕರಿಸಿ ತಿದ್ದುಪಡಿ ಮಾಡುವ ಮಸೂದೆಯು ಮುಂದುವರಿಯಬೇಕು."

**ಮಾನ್ಯ ನಝೀರುದ್ದೀನ್ ಅಹಮದ್** (ಪಶ್ಚಿಮ ಬಂಗಾಳ: ಮುಸ್ಲಿಂ) : ಈ ಬಹು ಮುಖ್ಯವಾದ ಮಸೂದೆಯು ಈಗ ಯಾವ ಹಂತದಲ್ಲಿದೆ ಎಂಬುದನ್ನು ನಾನು ತಿಳಿದುಕೊಳ್ಳಬಹುದೆ? ಅದನ್ನು ಕುರಿತು ನಮ್ಮ ಹಿಂದೂ ಮಿತ್ರರಲ್ಲಿ ಗಣನೀಯ ಪ್ರಮಾಣದ ಕಳವಳ ಉಂಟಾಗಿದೆ ಎಂಬುದನ್ನು ನಾನು ಬಲ್ಲೆ. ಆದ್ದರಿಂದ ಈಗ ಮಸೂದೆಯು ಇರುವ ಹಂತವನ್ನು ತಿಳಿದುಕೊಳ್ಳುವುದು ಉತ್ತಮ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಅದನ್ನು ಮಂಡಿಸಲಾಯಿತು. ಅದರ ನಂತರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ.

**ಶ್ರೀ ಆರ್. ವಿ. ಧುಳೇಕರ್** : (ಯು.ಪಿ : ಸಾಮಾನ್ಯ) : ಹೊಸ ವ್ಯವಸ್ಥೆಯಲ್ಲಿ ನಮಗೆ ಹಿಂದೂ ಕಾನೂನು ಮತ್ತು ಮುಸ್ಲಿಂ ಕಾನೂನು ಎಂದು ಬೇಡ. ನಮಗೆ ಒಂದು ಸಾಮಾನ್ಯ ಕಾನೂನು ಬೇಕು. ಆದ್ದರಿಂದ.......

**ಅಧ್ಯಕ್ಷರು :** ಸನ್ಮಾನ್ಯ ಸದಸ್ಯರು ಮಸೂದೆಯ ಗುಣಾವಗುಣಗಳನ್ನು ಕುರಿತು ಮಾತನಾಡುತ್ತಿದ್ದಾರೆ. ಮಸೂದೆಯು ಸದನದ ಮುಂದೆ ಬಂದಾಗ ಅವರಿಗೆ ಅದನ್ನು ಹೇಳುವ ಅವಕಾಶ ದೊರಕುತ್ತದೆ. ಈಗಿರುವ ಒಂದೇ ಒಂದು ಪ್ರಶ್ನೆ ಮಸೂದೆಯು ಮುಂದುವರಿಯಬೇಕೆ ಅಥವಾ ಬೇಡವೆ ಎನ್ನುವುದು.

**ಶ್ರೀ ಆರ್. ವಿ. ಧುಳೇಕರ್ :** ಆದ್ದರಿಂದ ಸ್ವಾಮಿ, ನಾನು ಪ್ರತಿಭಟಿಸುತ್ತೇನೆ, ಅದನ್ನು ಮುಂದುವರಿಸಬಾರದು.

**ಅಧ್ಯಕ್ಷರು :** ಪ್ರಶ್ನೆ ಇದು.

"ಹಿಂದೂ ಕಾನೂನಿನ ಕೆಲವು ಶಾಖೆಗಳನ್ನು ಕ್ರೋಡೀಕರಿಸಿ ತಿದ್ದುಪಡಿ ಮಾಡುವ ಮಸೂದೆಯು ಮುಂದುವರಿಯಬೇಕು."

ಸೂಚನೆಯು ಅಂಗೀಕೃತವಾಯಿತು.

**ಹಿಂದೂ ಅಂತರ್ಜಾತೀಯ ವಿವಾಹ ನಿಬಂಧನೆ ಮತ್ತು ವಿಧಿಸಮ್ಮತಗೊಳಿಸುವ ಮಸೂದೆ**

**ಶ್ರೀ ಮೋಹನ್‌ಲಾಲ್ ಸಕ್ಸೇನ** (ಯು.ಪಿ : ಸಾಮಾನ್ಯ): ಸ್ವಾಮಿ, ಕಾನೂನು ಸಚಿವರು ಹಿಂದೂ ಕೋಡನ್ನು ಪ್ರಸ್ತುತ ಅಧಿವೇಶನದಲ್ಲಿ ಒಂದು ಆಯ್ಕೆ ಸಮಿತಿಗೆ ಒಪ್ಪಿಸಲು ಉದ್ದೇಶಿಸಿರುವುದಾಗಿ ನನಗೆ ಹೇಳಿರುವುದರಿಂದ, ಪ್ರಸ್ತುತ ಸೂಚನೆಯನ್ನು ಮಂಡಿಸಬಯಸುವುದಿಲ್ಲ.

**ಅಧ್ಯಕ್ಷರು :** ಸನ್ಮಾನ್ಯ ಸದಸ್ಯರು ಈಗ ಸೂಚನೆಯನ್ನು ಮಂಡಿಸಲು ಬಯಸುವುದಿಲ್ಲ, ಆದರೆ ಆ

ಅವಕಾಶವನ್ನು ಜೀವಂತವಾಗಿಟ್ಟುಕೊಳ್ಳಲು ಬಯಸುತ್ತಾರೆ ಎಂದು ನಾನು ತಿಳಿದುಕೊಳ್ಳಬೇಕೆ?

**ಶ್ರೀ ಮೋಹನ್‌ಲಾಲ್ ಸಕ್ಸೇನ :** ಹೌದು ಸ್ವಾಮಿ, ಕಾನೂನು ಸಚಿವರು ತಮ್ಮ ಸೂಚನೆಯನ್ನು ಮಂಡಿಸದೆ ಹೋದ ಪಕ್ಷದಲ್ಲಿ ನಾನು ನನ್ನ ಸೂಚನೆಯನ್ನು ತರಬೇಕಾಗುತ್ತದೆ.

## ಹಿಂದೂ ವಿವಾಹಗಳನ್ನು ವಿಧಿಸಮ್ಮತಗೊಳಿಸುವ ಮಸೂದೆ

**ಪಂಡಿತ್ ಠಾಕೂರ್ ದಾಸ್ ಭಾರ್ಗವ** (ಪೂರ್ವಪಂಜಾಬ್: ಸಾಮಾನ್ಯ): ಮಾನ್ಯರೆ, ಹಿಂದೂಗಳು, ಸಿಖ್ಖರು, ಜೈನರು ಮತ್ತು ಅವರ ಬೇರೆ ಬೇರೆ ಜಾತಿಗಳು ಮತ್ತು ಉಪಜಾತಿಗಳ ನಡುವೆ ವಿವಾಹಗಳನ್ನು ಊರ್ಜಿತಗೊಳಿಸುವ ಮಸೂದೆಯನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

**ಅಧ್ಯಕ್ಷರು :** ಪ್ರಶ್ನೆ ಹೀಗಿದೆ:

"ಹಿಂದೂಗಳು, ಸಿಖ್ಖರು, ಜೈನರು ಮತ್ತು ಅವರ ಬೇರೆ ಬೇರೆ ಜಾತಿಗಳು ಮತ್ತು ಉಪಜಾತಿಗಳ ನಡುವೆ ವಿವಾಹಗಳನ್ನು ವಿಧಿಸಮ್ಮತಗೊಳಿಸುವ ಒಂದು ಮಸೂದೆಯನ್ನು ಮಂಡಿಸಲು ಅನುಮತಿ ನೀಡಬಹುದು."

ಸೂಚನೆಯನ್ನು ಅಂಗೀಕರಿಸಲಾಯಿತು.

**ಪಂಡಿತ್ ಠಾಕೂರ್ ದಾಸ್ ಭಾರ್ಗವ :** ಮಾನ್ಯರೆ, ನಾನು ಮಸೂದೆಯನ್ನು ಮಂಡಿಸುತ್ತೇನೆ.

## ಹಿಂದೂ ಸಂಹಿತೆ ಮಸೂದೆ

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** : ನಾನು ಹೀಗೆ ಮಂಡಿಸಬಯಸುತ್ತೇನೆ: "ಹಿಂದೂ ಕಾನೂನಿನ ಕೆಲವು ಶಾಖೆಗಳನ್ನು ಕ್ರೋಡೀಕರಿಸಿ ತಿದ್ದುಪಡಿ ಮಾಡುವ ಮಸೂದೆಯನ್ನು ಒಂದು ಆಯ್ಕೆ ಸಮಿತಿಗೆ ಒಪ್ಪಿಸಬಹುದು. ಆ ಸಮಿತಿಯಲ್ಲಿ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಡಾ. ಭಕ್ಷಿ ಟೇಕ್‌ಚಂದ್, ಶ್ರೀ ಎಂ. ಅನಂತಶಯನಮ್ ಅಯ್ಯಂಗಾರ್, ಶ್ರೀಮತಿ ಜಿ. ದುರ್ಗಾಬಾಯಿ, ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ, ಶ್ರೀ ಯು. ಶ್ರೀನಿವಾಸ ಮಲ್ಯ, ಶ್ರೀ ಮಿಹಿರ್‌ಲಾಲ್ ಚಟ್ಟೋಪಾಧ್ಯಾಯ, ಡಾ. ಪಿ.ಎಸ್. ದೇಶ್‌ಮುಖ್, ಶ್ರೀಮತಿ ರೇಣುಕಾ ರೇ, ಡಾ. ಪಿ.ಕೆ. ಸೇನ್, ಬಾಬು ರಾಮನಾರಾಯಣಸಿಂಗ್, ಶ್ರೀ ಕಿಶೋರಿ ಮೋಹನ್ ತ್ರಿಪಾಠಿ, ಶ್ರೀಮತಿ ಅಮ್ಮು ಸ್ವಾಮಿನಾಥನ್, ಪಂಡಿತ್ ಬಾಲಕೃಷ್ಣ ಶರ್ಮ, ಶ್ರೀ ಖುರ್ಷಿದ್ ಲಾಲ್, ಶ್ರೀ ಬ್ರಜೇಶ್ವರ್ ಪ್ರಸಾದ್, ಶ್ರೀ ವಿ. ಶಿವರಾವ್, ಶ್ರೀ ಬಲದೇವ್ ಸ್ವರೂಪ್, ಶ್ರೀ ವಿ.ಸಿ. ಕೇಶವರಾವ್ ಮತ್ತು ಮಸೂದೆಯ ಸೂಚಕರು ಇರುತ್ತಾರೆ. ಅಸೆಂಬ್ಲಿಯ ಮುಂದಿನ ಅಧಿವೇಶನದ ಮೊದಲನೆಯ ವಾರದ ಕೊನೆಯ ದಿನಕ್ಕೆ ಮುಂಚೆ ವರದಿಯನ್ನು ಸಲ್ಲಿಸಬೇಕೆಂದು ಆದೇಶಿಸಲಾಗಿದೆ. ಸಮಿತಿಯ ಸಭೆಯನ್ನು ನಡೆಸಲು ಇರಲೇಬೇಕಾದ ಸದಸ್ಯರ ಸಂಖ್ಯೆ ಐದು ಆಗಿರುತ್ತದೆ."

ಮಾನ್ಯರೆ, ಹಿಂದೂ ಕಾನೂನ ಕ್ರೋಡೀಕರಣ ಹಂತದ ಅತ್ಯಂತ ಮುಖ್ಯವಾದ ಒಂದು ಕ್ರಮವು ಹೆಚ್ಚುಕಡಿಮೆ ಅಧಿವೇಶನದ ಕೊಟ್ಟ ಕೊನೆಯಲ್ಲಿ ಚರ್ಚೆಗೆ ಬಂದಿರುವುದು ನನಗೂ ಸದನದ ಸದಸ್ಯರಿಗೂ ತುಂಬಾ ವಿಷಾದವನ್ನುಂಟುಮಾಡುವ ಸಂಗತಿಯಾಗಿದೆ ಎಂದು ನನ್ನ ಭಾವನೆ. ಇಂದು ಬೆಳಗ್ಗೆ ಸನ್ಮಾನ್ಯ ಅಧ್ಯಕ್ಷರು ಪ್ರಕಟಿಸಿದ ವ್ಯವಸ್ಥೆಯಂತೆ ಈ ಗೊತ್ತುವಳಿಯ ಮೇಲಿನ ಚರ್ಚೆಯನ್ನು ನಾವು ಇಲ್ಲಿಂದ ಏಳು ಗಂಟೆಯ ಒಳಗೆ ಮುಗಿಸಬೇಕಾಗಿದೆ. ಮಧ್ಯ ಅರ್ಧಗಂಟೆ ಬಿಡುವಿರುತ್ತದೆ. ಈಗ ನಾವಿರುವ ಈ ಸೀಮಿತ ಪರಿಸ್ಥಿತಿಯಲ್ಲಿ ಶಾಸನಸಭಾ ಸದಸ್ಯರು ಈ ಮಸೂದೆಯು ಎತ್ತಿರುವ ಹಲವು ಅಂಶಗಳನ್ನು ಕುರಿತು ತಮ್ಮ

ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಹೆಚ್ಚಿಗೆ ಸಮಯವನ್ನು ನಾನು ಒದಗಿಸಬೇಕು. ಈ ಅಪೇಕ್ಷೆಯನ್ನು ಪೂರೈಸಲು ನಾನೇ ಮೊದಲು ನೆರವಾಗ ಬಯಸುತ್ತೇನೆ. ಅದನ್ನು ಸಾಧಿಸಲು ಇರುವ ಒಂದೇ ದಾರಿ ಪ್ರಾರಂಭಿಕ ಭಾಷಣವನ್ನು ಎಷ್ಟು ಸಾಧ್ಯವೋ ಅಷ್ಟು ಕಿರಿದುಗೊಳಿಸಿ ಇತರರಿಗೆ ಮಾದರಿಯನ್ನು ಹಾಕಿಕೊಡುವುದು. ಹೀಗೆ ನಿರ್ಣಯಿಸಬೇಕಾದುದಕ್ಕೆ ನನಗೆ ತುಂಬಾ ವಿಷಾದವಿದೆ. ಏಕೆಂದರೆ ಇಷ್ಟು ವ್ಯಾಪಕವಾದ ಸ್ವರೂಪವುಳ್ಳ ಮಸೂದೆಯನ್ನು ಪೂರ್ತಿಯಾಗಿ ಮತ್ತು ಸಮಗ್ರವಾಗಿ ಪ್ರತಿಪಾದಿಸಿ, ಅದರ ನಿಬಂಧನೆಗಳನ್ನು ಪ್ರಸ್ತುತ ಚಾಲ್ತಿಯಲ್ಲಿರುವ ಹಿಂದೂ ಕಾನೂನಿನ ಹಿನ್ನೆಲೆಯಲ್ಲಿ ವಿವರಿಸಲು, ಅಂತಹ ಪ್ರಯತ್ನಕ್ಕೆ ನಾಲ್ಕು ಅಥವಾ ಐದು ಗಂಟೆಗಳಿಗಿಂತ ಕಡಿಮೆ ಇಲ್ಲದಷ್ಟು ಸಮಯ ಅಗತ್ಯ ಎನ್ನುವುದರಲ್ಲಿ ನನಗೆ ಎಳ್ಳಷ್ಟು ಸಂದೇಹವಿಲ್ಲ. ಆದರೆ ಅದು ಅಸಾಧ್ಯವಾಗಿದೆ. ಆದ್ದರಿಂದ ನಾನು ಈಗಿರುವ ಕಾನೂನಿನಿಂದ ನಮಗಿಂದು ತಿಳಿದಿರುವಂತೆ ಅತಿಮುಖ್ಯವಾದ ವ್ಯತ್ಯಾಸಗಳನ್ನು ತೋರಿಸುವಷ್ಟಕ್ಕೆ ನನ್ನನ್ನು ಸೀಮಿತಗೊಳಿಸಿಕೊಂಡರೆ ಸದನವು ನನ್ನನ್ನು ಕ್ಷಮಿಸಬೇಕು.

ಮಾನ್ಯರೆ, ಈ ಮಸೂದೆಯ ಉದ್ದೇಶವೆಂದರೆ ಹಿಂದೂ ಕಾನೂನಿನ ನಿಯಮಗಳನ್ನು ಸೂತ್ರೀಕರಿಸುವುದು. ಆ ನಿಯಮಗಳು ಈಗ ದೇಶದ ಹೈಕೋರ್ಟ್‌ಗಳ ಮತ್ತು ಪ್ರಿವಿ ಕೌನ್ಸಿಲಿನ ಅಸಂಖ್ಯಾತ ತೀರ್ಪುಗಳಲ್ಲಿ ಚದುರಿಹೋಗಿವೆ. ಅದು ಸಾಮಾನ್ಯ ಮನುಷ್ಯನನ್ನು ದಿಗ್ಭ್ರಮೆಗೊಳಿಸುವ ಕಲಬೆರಕೆಯಾಗಿದ್ದು ನಿರಂತರವಾದ ವ್ಯಾಖ್ಯಾನಗಳ ಹುಟ್ಟಿಗೆ ಕಾರಣವಾಗಿದೆ. ಮಸೂದೆಯು ಏಳು ಬೇರೆ ಬೇರೆ ವಿಷಯಗಳನ್ನು ಕುರಿತ ಕಾನೂನುಗಳನ್ನು ಸೂತ್ರೀಕರಿಸಲು ಬಯಸುತ್ತದೆ. ಮೊದಲನೆಯದಾಗಿ, ಸ್ತ್ರೀಯಾಗಲಿ ಪುರುಷನಾಗಲಿ ಉಯಿಲನ್ನು ಬರೆದಿಡದೆ ಮೃತನಾದ ಹಿಂದುವಿನ ಆಸ್ತಿಯ ಹಕ್ಕುಗಳಿಗೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸಲು ಬಯಸುತ್ತದೆ. ಎರಡನೆಯದಾಗಿ, ಉಯಿಲು ಬರೆದಿಡದೆ ಮೃತನಾದ ವ್ಯಕ್ತಿಯ ಆಸ್ತಿಗೆ ಇರಬಹುದಾದ ಬೇರೆ ಬೇರೆ ವಾರಸುದಾರರಲ್ಲಿ ಸ್ವಲ್ಪಮಟ್ಟಿಗೆ ವ್ಯತ್ಯಾಸವಾದ ಉತ್ತರಾಧಿಕಾರ ಕ್ರಮವನ್ನು ಅದು ವಿಧಿಸಲು ಬಯಸುತ್ತದೆ. ಮಸೂದೆಯು ಪರಿಶೀಲಿಸುವ ಮುಂದಿನ ಅಂಶಗಳೆಂದರೆ ಪಾಲನೆ, ವಿವಾಹ, ವಿವಾಹ ವಿಚ್ಛೇದನ, ದತ್ತುಸ್ವೀಕಾರ, ಅಲ್ಪಸಂಖ್ಯಾತತೆ ಮತ್ತು ಪೋಷಕತ್ವ. ಈ ಮಸೂದೆಯ ಎಲ್ಲೆ ಮತ್ತು ವ್ಯಾಪ್ತಿ ಎಷ್ಟು ದೊಡ್ಡದೆಂಬುದನ್ನು ಸದನವು ಗಮನಿಸಬಹುದು. ಮೊದಲನೆಯದು ಪಿತ್ರಾರ್ಜಿತದ ಪ್ರಶ್ನೆ. ಈ ಶೀರ್ಷಿಕೆಯಲ್ಲಿ ಮಸೂದೆಯು, ಕೊನೆಯ ಪಕ್ಷ ಬ್ರಿಟಿಷ್ ಇಂಡಿಯಾದ ಕೆಲವು ಭಾಗಗಳಿಗಾದರೂ ಒಂದು ಹೊಸ ತತ್ವವನ್ನು ಶಾಸನಗೊಳಿಸಬಯಸುತ್ತದೆ. ಈ ಸದನದಲ್ಲಿ ವಕೀಲರಾಗಿರುವ ಅನೇಕ ಜನ ಸದಸ್ಯರಿದ್ದು ಅವರಿಗೆ ಚೆನ್ನಾಗಿ ತಿಳಿದಿರುವಂತೆ, ಪಿತ್ರಾರ್ಜಿತಕ್ಕೆ ಸಂಬಂಧಿಸಿದಂತೆ, ಹಿಂದುಗಳು ಎರಡು ಬೇರೆ ಬೇರೆ ಕಾನೂನುಗಳನ್ನು ಅನುಸರಿಸುತ್ತಿದ್ದಾರೆ. ಒಂದು ವ್ಯವಸ್ಥೆಗೆ ಮಿತಾಕ್ಷರ ಎಂದು ಹೆಸರು ಮತ್ತು ಇನ್ನೊಂದು ದಾಯಭಾಗ ಎನಿಸುತ್ತದೆ. ಈ ಎರಡೂ ಪದ್ಧತಿಗಳ ನಡುವೆ ಒಂದು ಮೂಲಭೂತ ವ್ಯತ್ಯಾಸವಿದೆ. ಮಿತಾಕ್ಷರದ ಪ್ರಕಾರ ಒಬ್ಬ ಹಿಂದೂವಿನ ಆಸ್ತಿ ಅವನ ವ್ಯಕ್ತಿಗತ ಆಸ್ತಿಯಲ್ಲ, ಅದು ಜಂಟಿ ಆಸ್ತಿ, ಅದರಲ್ಲಿ ತಂದೆ, ಮಗ, ಮೊಮ್ಮಗ, ಮತ್ತು ಮರಿಮಗ ಇವರೆಲ್ಲರ ಸಹಭಾಗಿತ್ವವಿದೆ. ಈ ಎಲ್ಲರಿಗೂ ಆ ಆಸ್ತಿಯಲ್ಲಿ ಆಜನ್ಮಸಿದ್ಧ ಹಕ್ಕಿದೆ. ಈ ಸಹಭಾಗಿತ್ವದ ಯಾವನೇ ಒಬ್ಬ ಸದಸ್ಯನು ಮೃತಪಟ್ಟರೆ ಅವನ ಭಾಗದ ಆಸ್ತಿಯು ಉಳಿಯುವ ಭಾಗೀದಾರರಿಗೆ ಸೇರುತ್ತದೆಯೇ ಹೊರತು ಮೃತನ ವಾರಸುದಾರರಿಗಲ್ಲ. ಪ್ರಸ್ತುತ ಮಸೂದೆಯಲ್ಲಿರುವ ಹಿಂದೂ ಸಂಹಿತೆಯು ದಾಯಭಾಗ ಪದ್ಧತಿಯನ್ನು ಅಳವಡಿಸಿಕೊಳ್ಳುತ್ತದೆ. ಅದರ ಪ್ರಕಾರ ಮೃತ ಭಾಗೀದಾರನ ವಾರಸುದಾರನು ಆ ಆಸ್ತಿಯನ್ನು ತನ್ನ ಸ್ವಂತದ ಆಸ್ತಿಯನ್ನಾಗಿ ಪಡೆಯುತ್ತಾನೆ; ತನ್ನ ಅಪೇಕ್ಷೆಗೆ ತಕ್ಕಂತೆ ಅದನ್ನು ಉಡುಗೊರೆಯಾಗಿ ನೀಡಿಯೋ, ಉಯಿಲು ಬರೆದೋ, ಅಥವಾ ಬೇರೆ

ಯಾವುದೇ ರೀತಿಯಾಗಿಯೋ ವಿಲೇವಾರಿ ಮಾಡಲು ಸಂಪೂರ್ಣ ಹಕ್ಕನ್ನು ಪಡೆಯುತ್ತಾನೆ. ಇದು ಪ್ರಸ್ತುತ ಮಸೂದೆಯು ಜಾರಿಗೆ ತರಲು ಬಯಸುವ ಒಂದು ಮೂಲಭೂತ ಬದಲಾವಣೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಈಗ ಮಿತಾಕ್ಷರ ಪದ್ಧತಿಯು ವರ್ತಿಸುತ್ತಿರುವ ಕ್ಷೇತ್ರಕ್ಕೆ ದಾಯಭಾಗ ನಿಯಮವನ್ನು ವಿಸ್ತರಿಸಿ ಪಿತ್ರಾರ್ಜಿತ ಕಾನೂನನ್ನು ಸಾರ್ವತ್ರೀಕರಿಸುತ್ತದೆ.

ಉತ್ತರಾಧಿಕಾರಿಗಳ ನಡುವೆ ಅನುಕ್ರಮ ಹೇಗಿರಬೇಕು ಎಂಬ ಪ್ರಶ್ನೆಗೆ ಬಂದರೆ ಅಲ್ಲಿಯೂ ಮಿತಾಕ್ಷರದ ನಿಯಮಕ್ಕೂ, ದಾಯಭಾಗದ ನಿಯಮಕ್ಕೂ ನಡುವೆ ಸಾಮಾನ್ಯ ಸ್ವರೂಪದ ಮೂಲಭೂತ ವ್ಯತ್ಯಾಸವಿದೆ. ಮಿತಾಕ್ಷರದ ನಿಯಮದಂತೆ ಪಿತೃವಂಶಜರಿಗೆ (ಜ್ಞಾತಿಗಳಿಗೆ) ಮೃತನ ರಕ್ತಸಂಬಂಧಿಗಳಿಗಿಂತ ಹೆಚ್ಚಿನ ಪ್ರಾಮುಖ್ಯವಿದೆ; ದಾಯಭಾಗದಲ್ಲಾದರೆ ವಾರಸುದಾರಿಕೆಯ ಆಧಾರವು ಮೃತನಿಗೆ ರಕ್ತಸಂಬಂಧಿಗಳಿರಬೇಕೆಂಬುದೇ ಹೊರತು ಪಿತೃವಂಶಜರು ಅಥವಾ ಜ್ಞಾತಿಗಳು ಎಂಬ ಭೇದ ಅಲ್ಲಿ ಬರುವುದಿಲ್ಲ. ಇದು ಪ್ರಸ್ತುತ ಮಸೂದೆಯು ಉದ್ದೇಶಿಸಿರುವ ಬದಲಾವಣೆ. ಅಂದರೆ, ಇಲ್ಲಿಯೂ ಕೂಡ ಮಿತಾಕ್ಷರ ಪದ್ಧತಿಗಿಂತ, ದಾಯಭಾಗ ಪದ್ಧತಿಯನ್ನು ಆರಿಸಿ ನಿಯಮವನ್ನು ರೂಪಿಸಲಾಗಿದೆ.

ಮೃತ ಹಿಂದುವಿನ ವಾರಸುದಾರಿಕೆಯ ಅನುಕ್ರಮಕ್ಕೆ ಸಂಬಂಧಿಸಿದಂತೆ ಈ ಸಾಮಾನ್ಯ ವ್ಯತ್ಯಾಸ ಮಾಡುವುದರ ಜೊತೆಗೆ ಮಸೂದೆಯು ನಾಲ್ಕು ಬದಲಾವಣೆಗಳನ್ನು ತರಲು ಉದ್ದೇಶಿಸಿದೆ. ಒಂದು ಹೀಗಿದೆ : ವಿಧವೆ ಪತ್ನಿ, ಮಗಳು, ಮೊದಲೇ ಮೃತಪಟ್ಟಿದ್ದ ಮಗನ ವಿಧವೆ ಇವರೆಲ್ಲರಿಗೂ ಪಿತ್ರಾರ್ಜಿತದ ವಿಷಯದಲ್ಲಿ ಸಮಾನ ಶ್ರೇಣಿಯನ್ನು ಕಲ್ಪಿಸಲಾಗಿದೆ. ಅದರ ಜೊತೆಗೆ ಮಗಳಿಗೆ ಕೂಡ ತಂದೆಯ ಆಸ್ತಿಯಲ್ಲಿ ಒಂದು ಪಾಲನ್ನು ಕೊಡಲಾಗಿದೆ; ಆಕೆಯ ಪಾಲು ಮಗನ ಪಾಲಿನ ಅರ್ಧ ಎಂದು ವಿಧಿಸಲಾಗಿದೆ. ಮತ್ತೆ, ಇಲ್ಲಿ ಪ್ರಸ್ತುತ ಮಸೂದೆಯ ಹೆಣ್ಣು ವಾರಸುದಾರರಿಗೆ ಸಂಬಂಧಿಸಿದಂತೆ ಮಾಡಲು ಬಯಸುವ ಒಂದೇ ಒಂದು ಬದಲಾವಣೆ ಮಗಳಿಗೆ ಸೀಮಿತಗೊಂಡಿದೆ. ಇತರ ಸ್ತ್ರೀವಾರಸುದಾರರ ಹಕ್ಕುಗಳನ್ನು, **ಹಿಂದೂ ವಿಮೆನ್ಸ್ ರೈಟ್ ಟು ಪ್ರಾಪರ್ಟಿ ಆಕ್ಟ್ – ೧೯೩೭** ಶಾಸನದಲ್ಲಿ ಪುರಸ್ಕರಿಸಲಾಗಿದೆ. ಆದ್ದರಿಂದ ಮಸೂದೆಯು ಆ ಭಾಗಕ್ಕೆ ಸಂಬಂಧಿಸಿದಂತೆ ಹೊಸ ಬದಲಾವಣೆ ಏನೂ ಇಲ್ಲ. ಈಗ ಉಲ್ಲೇಖಿಸಿದ ಶಾಸನದಲ್ಲಿ ಯಾವ ಅವಕಾಶಗಳಿದ್ದುವೋ ಅವುಗಳನ್ನು ಹಾಗೆಯೇ ಸೇರಿಸಿಕೊಳ್ಳಲಾಗಿದೆ.

ಸ್ತ್ರೀವಾರಸುದಾರರಿಗೆ ಸಂಬಂಧಿಸಿದಂತೆ ಮಸೂದೆಯಲ್ಲಿ ಮಾಡಿರುವ ಎರಡನೆಯ ಬದಲಾವಣೆ ಇದು; ಮಿತಾಕ್ಷರದಲ್ಲಾಗಲೀ, ದಾಯಭಾಗದಲ್ಲಾಗಲೀ ಹೇಳಿರುವುದಕ್ಕಿಂತ ಹೆಚ್ಚು ಸಂಖ್ಯೆಯ ಸ್ತ್ರೀ ವಾರಸುದಾರರನ್ನು ಗುರುತಿಸಲಾಗಿದೆ.

ಮಸೂದೆಯಲ್ಲಿ ಮಾಡಲಾದ ಮೂರನೆಯ ಬದಲಾವಣೆ ಇದು: ಹಳೆಯ ಕಾನೂನಿನಲ್ಲಿ ಮಿತಾಕ್ಷರವಾಗಲಿ ದಾಯಭಾಗವಾಗಲಿ ಸ್ತ್ರೀವಾರಸುದಾರುಗಳ ವಿಷಯದಲ್ಲಾಗಲೀ ಅಷ್ಟೊಂದು ತಾರತಮ್ಯ ಮಾಡಲಾಗಿತ್ತು. ವ್ಯಕ್ತಿಯು ಮೃತನಾದಾಗ ಅವನಿಗೆ ಸಂಬಂಧಿಸಿದ ಸ್ತ್ರೀಯು ಶ್ರೀಮಂತಳಾಗಿದ್ದಳೆ ಅಥವಾ ಬಡವಳೆ ಅವಳು ವಿವಾಹಿತಳಾಗಿದ್ದಳೆ ಅಥವಾ ಅವಿವಾಹಿತಳೆ, ಅವಳಿಗೆ ಸಂತಾನವಿದೆಯೇ ಅಥವಾ ಇಲ್ಲವೇ ಇತ್ಯಾದಿ. ಪಕ್ಷಪಾತಕ್ಕೆ ಎಡೆಮಾಡುವ ಈ ಎಲ್ಲಾ ಪರಿಗಣನೆಗಳನ್ನು ಪ್ರಸ್ತುತ ಮಸೂದೆಯು ರದ್ದುಪಡಿಸುತ್ತದೆ. ಆಸ್ತಿಯನ್ನು ಪಡೆಯಲು ಹಕ್ಕಿರುವ ಒಬ್ಬ ಮಹಿಳೆಯು, ಅವಳು ಒಬ್ಬಳು ವಾರಸುದಾರಳು ಎಂದು ಘೋಷಿಸಿರುವುದರ ಆಧಾರದಿಂದ, ಬೇರೆ ಯಾವ ಪರಿಗಣನೆಯೂ ಇಲ್ಲದೆ ಆಸ್ತಿಯನ್ನು ಪಡೆಯುತ್ತಾಳೆ.

ಕೊನೆಯ ಬದಲಾವಣೆಯು ದಾಯಭಾಗದಲ್ಲಿನ ಪಿತ್ರಾರ್ಜಿತದ ವಾರಸ ನಿಯಮಕ್ಕೆ ಸಂಬಂಧಿಸಿದೆ. ದಾಯಭಾಗದಲ್ಲಿ ತಾಯಿಗಿಂತಲೂ ಮೊದಲು ತಂದೆಯು ವಾರಸದ ಹಕ್ಕು ಪಡೆಯುತ್ತಾನೆ. ಪ್ರಸ್ತುತ

ಮಸೂದೆಯಲ್ಲಿ ಈ ಸ್ಥಿತಿಯನ್ನು ಬದಲಾಯಿಸಿ ತಂದೆಗಿಂತ ಮೊದಲು ತಾಯಿ ವಾರಸಹಕ್ಕು ಪಡೆಯುವಂತೆ ಮಾಡಲಾಗಿದೆ.

ಮೃತ ಹಿಂದೂ ಪುರುಷನ ವಾರುಸದಾರರ ಅನುಕ್ರಮಕ್ಕೆ ಸಂಬಂಧಿಸಿದಂತೆ ಇಷ್ಟಾಯಿತು. ಈಗ ಉಯಿಲು ಬರೆದಿಡದ ಸಂದರ್ಭದಲ್ಲಿ ಸ್ತ್ರೀಯರವಾರಸುದಾರಿಕೆಗೆ ಸಂಬಂಧಿಸಿದಂತೆ ಮಸೂದೆಯಲ್ಲಿ ಏನು ಮಾಡಲಾಗಿದೆ ಎಂಬುದಕ್ಕೆ ಈಗ ಬರುತ್ತೇನೆ. ಹಿಂದೂ ಕಾನೂನಿನ ಪರಿಚಯವಿರುವ, ಸದನದ ಸದಸ್ಯರು ತಿಳಿದುಕೊಂಡಿರುವಂತೆ ಈಗಿರುವ ಕಾನೂನಿನಲ್ಲಿ ಒಬ್ಬ ಹಿಂದೂ ಮಹಿಳೆಯ ಆಸ್ತಿಯು ಎರಡು ವರ್ಗಗಳಿಗೆ ಸೇರುತ್ತದೆ: ಒಂದು ಆಕೆಯ **ಸ್ತ್ರೀಧನ,** ಇನ್ನೊಂದು "ಆ ಮಹಿಳೆಯ ಆಸ್ತಿ". ಮೊದಲು ಸ್ತ್ರೀಧನದ ಪ್ರಶ್ನೆ. ಪ್ರಸ್ತುತ ಇರುವ ಕಾನೂನಿನಲ್ಲಿ ಸ್ತ್ರೀಧನವು ಹಲವು ಬಗೆಗಳಾಗಿದೆ. ಅದು ಒಂದು ಬಗೆಯಲ್ಲ. ಮಹಿಳೆಯ ಸ್ತ್ರೀಧನಕ್ಕೆ ವಾರಸುದಾರಿಕೆಯು ಆ ಸ್ತ್ರೀಧನದ ಶ್ರೇಣಿ ಪ್ರಕಾರ ಬೇರೆಬೇರೆಯಾಗುತ್ತದೆ; ಸ್ತ್ರೀಧನದ ಒಂದು ಬಗೆಯು ಇನ್ನೊಂದು ಬಗೆಗಿಂತ ಬೇರೆಯೇ ಆದ ವಾರಸುದಾರಿಕೆಯ ಕಾನೂನು ಹೊಂದಿದೆ. ಈ ನಿಯಮಗಳು ಮಿತಾಕ್ಷರ ಮತ್ತು ದಾಯಭಾಗ ಎರಡಕ್ಕೂ ಒಂದೇ ಬಗೆ. ಮಸೂದೆಯು ಇಲ್ಲಿ ಎರಡು ಬದಲಾವಣೆಗಳನ್ನು ಮಾಡುತ್ತದೆ. ಅದು ಸ್ತ್ರೀಧನದ ವಿವಿಧ ಶ್ರೇಣಿಗಳನ್ನು ಕ್ರೋಢೀಕರಿಸಿ ಒಂದೇ ಶ್ರೇಣಿಯ ಆಸ್ತಿಯನ್ನಾಗಿ ಮಾಡುತ್ತದೆ. ಮತ್ತು ಏಕರೂಪದ ವಾರಸುದಾರಿಕೆಯನ್ನು ರೂಪಿಸುತ್ತದೆ. ಈಗ ಸ್ತ್ರೀಧನದ ವಿಭಿನ್ನ ಶ್ರೇಣಿಗೆ ಅನುಗುಣವಾಗಿ ವಿವಿಧ ವಾರಸುದಾರ ವರ್ಗವಿಲ್ಲ. ಎಲ್ಲಾ ಸ್ತ್ರೀ ಧನವೂ ಒಂದೇ ಮತ್ತು ವಾರಸುದಾರಿಕೆಯ ಕಾನೂನು ಒಂದೇ.

ಈ ಮಸೂದೆಯು ಸ್ತ್ರೀಧನದ ವಾರಸುದಾರಿಕೆಗೆ ಸಂಬಂಧಿಸಿ ಮಾಡಲು ಉದ್ದೇಸಿಸುವ ಎರಡನೆಯ ಬದಲಾವಣೆ ಎಂದರೆ ಈಗ ಸ್ತ್ರೀಧನದ ಪಾಲನ್ನು ಪಡೆಯಲು ಮಗನಿಗೂ ಹಕ್ಕು ನೀಡಲಾಗಿದೆ. ಮಗಳು ಪಡೆಯುವ ಪಾಲಿನ ಅರ್ಧವನ್ನು ಮಗನು ಪಡೆಯುತ್ತಾನೆ. ಮಾನ್ಯ ಸದಸ್ಯರು ಇದನ್ನು ಗಮನಿಸಬೇಕು. ಪ್ರಸ್ತುತ ಮಸೂದೆಯನ್ನು ರೂಪಿಸಿ ವಾರಸುದಾರಿಕೆ ನಿಯಮಗಳಲ್ಲಿ ಬದಲಾವಣೆಗಳನ್ನು ಮಾಡುವಾಗ, ತಂದೆಯ ಆಸ್ತಿಯಲ್ಲಿ ಮಗನು ಪಡೆಯುವುದರ ಅರ್ಧಪಾಲು ಮಗಳಿಗೆ ಬರುವುದಾದರೆ ತಾಯಿಯ ಆಸ್ತಿಯಲ್ಲಿ ಮೊದಲು ಪಡೆಯುವುದರ ಅರ್ಧಪಾಲು ಮಗನಿಗೂ ಬರುತ್ತದೆ. ಅಂದರೆ ಒಂದು ಅರ್ಥದಲ್ಲಿ ಮಸೂದೆಯು ಮಗ ಮತ್ತು ಮಗಳು ಇಬ್ಬರಿಗೂ ಸ್ಥಾನ ಸಮಾನತೆಯನ್ನು ಉಳಿಸುತ್ತದೆ.

"ಮಹಿಳೆಯ ಸಂಪದಾಸ್ತಿ"ಯ ಪ್ರಶ್ನೆಗೆ ಬಂದರೆ, ಸದನದ ಸದಸ್ಯರಿಗೆ ತಿಳಿದಿರುವಂತೆ ಒಬ್ಬ ಮಹಿಳೆಯು ಆಸ್ತಿಯನ್ನು ಪಡೆದಾಗ ಅವಳು "ಜೀವಾವಧಿ ಸಂಪದಾಸ್ತಿ"ಯನ್ನು ಮಾತ್ರ ಪಡೆಯುತ್ತಾಳೆ ಎಂಬುದಾಗಿ ಹಿಂದೂ ಕಾನೂನು ಹೇಳುತ್ತದೆ. ಆಕೆಯು ಸಂಪದಾಸ್ತಿಯ ಮೇಲಿನ ವರಮಾನವನ್ನು ಅನುಭೋಗಿಸಬಹುದು, ಆದರೆ ನ್ಯಾಯಬದ್ಧ ಅಗತ್ಯದ ಹೊರತು ಮೂಲಧನವನ್ನು ಮುಟ್ಟುವಂತಿಲ್ಲ. ಆ ಮಹಿಳೆಯು ಮೃತಳಾದ ನಂತರ ಆ ಆಸ್ತಿಯು ಆಕೆಯ ಪತಿಯ ಪ್ರತ್ಯಾವರ್ತ ಅನುಭೋಗಿಗಳಿಗೆ ಸಲ್ಲಬೇಕು. ಪ್ರಸ್ತುತ ಮಸೂದೆಯು ಮತ್ತೆ ಇಲ್ಲೂ ಎರಡು ಬದಲಾವಣೆಗಳನ್ನು ತರುತ್ತಿದೆ. ಅದು ಈ ಸೀಮಿತ ಸಂಪದಾಸ್ತಿಯನ್ನು ಪರಿಪೂರ್ಣ ಸಂಪದಾಸ್ತಿಯನ್ನಾಗಿ ಪರಿವರ್ತಿಸುತ್ತದೆ. ಒಬ್ಬ ಪುರುಷನು ಪಿತ್ರಾರ್ಜಿತ ಆಸ್ತಿಯನ್ನು ಪಡೆದಾಗ ಅದರ ಪರಿಪೂರ್ಣ ಹಕ್ಕನ್ನು ಪಡೆದ ಹಾಗೆ ಈ ಕ್ರಮ. ಎರಡನೆಯದಾಗಿ ವಿಧವೆಯ ಮರಣಾನಂತರ ವಾರಸುದಾರರಿಗೆ ಆಕೆಯ ಆಸ್ತಿಯ ಮೇಲಿರುವ ಹಕ್ಕನ್ನು ರದ್ದುಪಡಿಸುತ್ತದೆ.

ಪ್ರಸ್ತುತ ಮಸೂದೆಯಲ್ಲಿ ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯನ್ನು ಪಡೆಯಲು ಇರುವ ಹಕ್ಕುಗಳಿಗೆ ಅಧೀನವಾಗಿ, ವರದಕ್ಷಿಣೆಗೆ ಸಂಬಂಧಿಸಿದಂತೆ ಒಂದು ಅವಕಾಶವನ್ನು ಕಲ್ಪಿಸಲಾಗಿದೆ. ಈ ವರದಕ್ಷಿಣೆಯು

ಎಂತಹ ಹಗರಣಕ್ಕೆಡೆಮಾಡಿದೆ ಎಂಬುದನ್ನು ಸದನದ ಎಲ್ಲಾ ಸದಸ್ಯರೂ ಬಲ್ಲರು. ಮದುವೆಯಾಗಿ ತಂದೆತಾಯಿಗಳ ಮನೆಯಿಂದ ವರದಕ್ಷಿಣೆ ಅಥವಾ ಸ್ತ್ರೀಧನ ಅಥವಾ ಉಡುಗೊರೆಗಳಾಗಿ ಬೇಕಾದಷ್ಟು ಪ್ರಮಾಣದ ಆಸ್ತಿಯನ್ನು ತರುವ ಹೆಣ್ಣುಮಕ್ಕಳನ್ನು ಹೇಗೆ ಅತೀವ ತಿರಸ್ಕಾರ ದಬ್ಬಾಳಿಕೆ ಮತ್ತು ದೌರ್ಜನ್ಯಗಳಿಂದ ನಡೆಸಿಕೊಳ್ಳಲಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತು. ಮಸೂದೆಯು ಅತ್ಯಂತ ಪ್ರಶಂಸನೀಯವಾದ ಒಂದು ಅವಕಾಶವನ್ನು ಇಲ್ಲಿ ಕಲ್ಪಿಸಿದೆ ಎಂದು ನನ್ನ ಅಭಿಪ್ರಾಯ. ಮದುವೆಯ ಸಂದರ್ಭದಲ್ಲಿ ಒಬ್ಬ ವಧುವಿಗೆ ವರದಕ್ಷಿಣೆಯಾಗಿ ಕೊಟ್ಟ ಈ ಆಸ್ತಿಯನ್ನು ನ್ಯಾಸ ಆಸ್ತಿಯನ್ನಾಗಿ ಪರಿಗಣಿಸಲಾಗುತ್ತದೆ. ಅದರ ಬಳಕೆಯು ಆಕೆಗೆ ಅಭ್ಯಾಸವಾಗಿ ಹದಿನೆಂಟು ವರ್ಷವಾಗುತ್ತಲೇ ಆ ಆಸ್ತಿಯ ಮೇಲೆ ಅವಳು ತನ್ನ ಹಕ್ಕನ್ನು ಪಡೆಯುತ್ತಾಳೆ. ಆಕೆಯ ಪತಿಗಾಗಲಿ ಅಥವಾ ಅವನ ಬಂಧುಗಳಿಗಾಗಲೀ ಆ ಆಸ್ತಿಯಲ್ಲಿ ಯಾವುದೇ ಲಾಭವಿರುವುದಿಲ್ಲ; ಹಾಗೆಯೇ ಆ ಆಸ್ತಿಯನ್ನು ಪೋಲುಮಾಡಿ ಜೀವನದುದ್ದಕ್ಕೂ ಆಕೆಯನ್ನು ಅಸಹಾಯಕಳನ್ನಾಗಿ ಮಾಡುವ ಯಾವುದೇ ಅವಕಾಶವಿರುವುದಿಲ್ಲ.

ಇನ್ನು ಜೀವನಾಂಶಕ್ಕೆ ಸಂಬಂಧಿಸಿದ ಅವಕಾಶಗಳಿಗೆ ಬರುವುದಾದರೆ ಮಸೂದೆಯು ಈ ಭಾಗದಲ್ಲಿ ಬಹುಮಟ್ಟಿಗೆ ಹೊಸದೇನೂ ಇಲ್ಲ. ಮೃತನ ಅವಲಂಬಿಗಳು, ಅವನ ಆಸ್ತಿಯನ್ನು ಇಷ್ಟಪತ್ರವಿಲ್ಲದ ಸಂದರ್ಭದ ನಿಯಮಗಳ ಪ್ರಕಾರವೋ ಅಥವಾ ಉಯಿಲಿನ ಪ್ರಕಾರವೋ ಆಸ್ತಿಯನ್ನು ಪಡೆದಿದ್ದರೆ ಅವರಿಂದ ತಮಗೆ ಜೀವನಾಂಶವನ್ನು ಕೇಳಲು ಹಕ್ಕು ಬರುತ್ತದೆ ಎಂದು ಮಸೂದೆಯು ವಿಧಿಸುತ್ತದೆ. ಈ ಮಸೂದೆಯಲ್ಲಿ ಹನ್ನೊಂದು ಬೇರೆ ಬೇರೆ ಬಗೆಯ ಆಶ್ರಿತರು ಅಥವಾ ಅವಲಂಬಿಗಳನ್ನು ಪಟ್ಟಿ ಮಾಡಲಾಗಿದೆ. ಕೊನೆಯ ಪಕ್ಷ ನನ್ನ ಮಟ್ಟಿಗೆ ಹೇಳುವುದಾದರೆ ಅವಲಂಬಿಗಳ ವರ್ಗದಲ್ಲಿ ಇಟ್ಟುಕೊಂಡವಳನ್ನು ಸೇರಿಸಿರುವುದು ದುರದೃಷ್ಟಕರ ಸಂಗತಿ ಎಂದು ನನ್ನ ನಂಬಿಕೆ. ಆದರೆ ಅದು ಸೇರಿದೆ, ಅದನ್ನು ಪರಿಶೀಲನೆಗೆ ಬಿಡಲಾಗಿದೆ. ಜೀವನಾಂಶ ಕೊಡುವ ಕರ್ತವ್ಯ ಮೃತನ ಸ್ಥಿರಾಸ್ತಿಯನ್ನು ಪಡೆಯುವವರ ಮೇಲೆ ನಿಲ್ಲುತ್ತದೆ. ಮೊದಲೇ ನಾನು ಹೇಳಿದಂತೆ ಮಸೂದೆಯ ಈ ಭಾಗದಲ್ಲಿ ತುಂಬಾ ಹೊಸತಾದುದು ಏನೂ ಇಲ್ಲ.

ಮಸೂದೆಯಲ್ಲಿ ಮುಖ್ಯವಾದ ಇನ್ನೊಂದು ಭಾಗವಿದೆ. ಪತ್ನಿಯು ಪತಿಯಿಂದ ಅಗಲಿ ಪ್ರತ್ಯೇಕವಾಗಿ ಬದುಕುತ್ತಿರುವಾಗ ಪ್ರತ್ಯೇಕ ಜೀವನಾಂಶವನ್ನು ಕೇಳುವ ಹಕ್ಕಿಗೆ ಅದು ಸಂಬಂಧಿಸಿದೆ. ಸಾಮಾನ್ಯವಾಗಿ ಹಿಂದೂ ಶಾಸನ ವಿಧಿಸುವ ಕಾನೂನುಗಳ ಪ್ರಕಾರ, ಪತ್ನಿಯು ಪತಿಯೊಂದಿಗೆ ಅವನ ಮನೆಯಲ್ಲಿ ಬದುಕುತ್ತಿಲ್ಲವಾದರೆ ಅವನಿಂದ ಜೀವನಾಂಶವನ್ನು ಆಕೆಗೆ ಕೇಳಲು ಹಕ್ಕು ಇರುವುದಿಲ್ಲ. ಆದರೆ ಪತ್ನಿಯು ಪತಿಯಿಂದ ಅಗಲಿ ದೂರವಾಗಿ ಜೀವಿಸುತ್ತಿರುವ ಸನ್ನಿವೇಶಗಳು ನಿಸ್ಸಂದೇಹವಾಗಿವೆ. ಅವುಗಳನ್ನು ಮಸೂದೆಯು ಗುರುತಿಸುತ್ತದೆ. ಅದು ಆಕೆಯ ಹತೋಟಿ ಮೀರಿದ ಕಾರಣಗಳಾಗಿರಬೇಕು. ಆ ಕಾರಣಗಳನ್ನು ಗುರುತಿಸದಿರುವುದು, ಆಕೆಗೆ ಪ್ರತ್ಯೇಕ ಜೀವನಾಂಶ ಕೊಡದಿರುವುದು ತಪ್ಪಾಗುತ್ತದೆ. ಆದ್ದರಿಂದ ಮಸೂದೆಯು ಹೀಗೆ ಅವಕಾಶ ಕಲ್ಪಿಸಿದೆ. ಪತಿಯು (೧) ಅಸಹ್ಯವನ್ನುಂಟುಮಾಡುವ ವ್ಯಾಧಿಯನ್ನು ಅನುಭವಿಸುತ್ತಿದ್ದರೆ, (೨) ಅವನು ಒಬ್ಬ ಉಪಪತ್ನಿಯನ್ನು ಇಟ್ಟುಕೊಂಡಿದ್ದರೆ, (೩) ಕ್ರೌರ್ಯ ದೌರ್ಜನ್ಯಗಳನ್ನು ಎಸಗಿದ್ದರೆ, (೪) ಆಕೆಯನ್ನು ಎರಡು ವರ್ಷಕಾಲ ತೊರೆದಿದ್ದರೆ, (೫) ಅವನು ಬೇರೊಂದು ಧರ್ಮಕ್ಕೆ ಮತಾಂತರಗೊಂಡರೆ, (೬) ಆಕೆಯು ಬೇರೆಯಾಗಿ ಬದುಕುವುದನ್ನು ಸಮರ್ಥಿಸುವ ಬೇರೆ ಯಾವುದೇ ಕಾರಣವಿದ್ದರೆ– ಈ ಸಂದರ್ಭಗಳಲ್ಲಿ ಪತ್ನಿಯು ತನ್ನ ಪತಿಯಿಂದ ಜೀವನಾಂಶವನ್ನು ಕೇಳಲು ಹಕ್ಕು ಪಡೆಯುತ್ತಾಳೆ.

ಇಲ್ಲಿ ನಾನು ಉಲ್ಲೇಖಿಸಬಯಸುವ ಮುಂದಿನ ಅಂಶ ವಿವಾಹಕ್ಕೆ ಸಂಬಂಧಿಸಿದ ಪ್ರಶ್ನೆ. ಸಂಹಿತೆಯು

ಎರಡು ಬಗೆಯ ವಿವಾಹಗಳನ್ನು ಗುರುತಿಸುತ್ತದೆ: ಒಂದು "ಪವಿತ್ರ ಸಂಸ್ಕಾರ"ವಾದ ವಿವಾಹ, ಎರಡನೆಯದು "ಸಿವಿಲ್" ವಿವಾಹ. ಸದಸ್ಯರಿಗೆ ತಿಳಿದಿರುವಂತೆ ಇದು ಪ್ರಸ್ತುತ ಇರುವ ಕಾನೂನಿಗಿಂತ ಬೇರೆಯಾಗಿದೆ. ಈಗ ಚಾಲ್ತಿಯಲಿರುವ ಹಿಂದೂ ಕಾನೂನು "ಪವಿತ್ರ ಸಂಸ್ಕಾರ ವಿವಾಹ"ವನ್ನು ಮಾತ್ರ ಪುರಸ್ಕರಿಸುತ್ತದೆ, ಯಾವುದನ್ನು ನಾವು "ವ್ಯವಹಾರಿಕ ಅಥವಾ ಸಿವಿಲ್ ವಿವಾಹ" ಎಂದು ಕರೆಯುತ್ತೇವೆಯೋ ಅದನ್ನು ಪುರಸ್ಕರಿಸುವುದಿಲ್ಲ. ಊರ್ಜಿತವಾಗುವ ಸಂಸ್ಕಾರ ವಿವಾಹದ ನಿಯಮಗಳನ್ನೂ ಊರ್ಜಿತವಾಗುವ ರಿಜಿಸ್ಟರ್ಡ್ ಮದುವೆಯ 'ನೋಂದಾಯಿತ ವಿವಾಹ'ದ ನಿಯಮಗಳನ್ನೂ ಪರಿಶೀಲಿಸಿದರೆ ಎರಡರ ನಡುವೆ, ಸಂಹಿತೆಯ ಪ್ರಕಾರ ಅಷ್ಟಾಗಿ ವ್ಯತ್ಯಾಸವೇನೂ ಇಲ್ಲ. ಪವಿತ್ರ ವಿವಾಹಕ್ಕೆ ಐದು ನಿಯಮಗಳಿವೆ. ಮೊದಲನೆಯದಾಗಿ ವರನಿಗೆ ಹದನೆಂಟು ವರ್ಷ ಆಗಿರಲೇಬೇಕು, ವಧುವಿಗೆ ಹದಿನಾಲ್ಕು ವರ್ಷ ತುಂಬಿರಲೇಬೇಕು. ಎರಡನೆಯದಾಗಿ, ವಿವಾಹ ಸಮಯದಲ್ಲಿ ವಧು–ವರ ಇಬ್ಬರಲ್ಲಿ ಯಾರೊಬ್ಬರಿಗೂ ಇನ್ನೊಬ್ಬ ಗಂಡನಾಗಲೀ, ಹೆಂಡತಿಯಾಗಲೀ, ಬದುಕಿರಬಾರದು. ಮೂರನೆಯದಾಗಿ ಇಬ್ಬರೂ ನಿಷಿದ್ಧ ಬಾಂಧವ್ಯದ ಪರಧಿಯೊಳಗಿರಬಾರದು. ನಾಲ್ಕನೆಯದಾಗಿ ಅವರು ಪರಸ್ಪರ **ಸಪಿಂಡ**ರಾಗಿರಬಾರದು. ಐದನೆಯದಾಗಿ ಇಬ್ಬರಲ್ಲಿ ಯಾರೊಬ್ಬರೂ ಬುದ್ಧಿಹೀನ ಅಥವಾ ಬುದ್ಧಿಭ್ರಮಿತರಾಗಿರಬಾರದು. ಒಂದು ರಿಜಿಸ್ಟರ್ಡ್ ಮದುವೆಗೆ **ಸಪಿಂಡತನವು** ಅಡ್ಡಿಯಾಗುವುದಿಲ್ಲ ಎಂಬ ಅಂಶವನ್ನು ಹೊರತುಪಡಿಸಿದರೆ ಇತರ ನಾಲ್ಕು ನಿಯಮಗಳಿಗೆ ಸಂಬಂಧಿಸಿದಂತೆ ಎರಡೂ ವಿವಾಹಗಳ ನಡುವೆ ಯಾವ ವ್ಯತ್ಯಾಸವೂ ಇಲ್ಲ. ಇನ್ನೊಂದೇ ಒಂದು ವ್ಯತ್ಯಾಸ ರಿಜಿಸ್ಟರ್ ಮದುವೆಯು ಮಸೂದೆಯಲ್ಲಿರುವ ಅವಕಾಶಗಳಿಗೆ ಅನುಗುಣವಾಗಿ ರಿಜಿಸ್ಟರ್ ಆಗಬೇಕು ಎನ್ನುವುದು. ಪವಿತ್ರ ವಿವಾಹವಾದರೆ ವಧೂವರ ಇಬ್ಬರೂ ಇಷ್ಟಪಟ್ಟರೆ ಮಾತ್ರ ಅದನ್ನು ನೋಂದಾಯಿಸಬಹುದು. ಮಸೂದೆಯಲ್ಲಿರುವ ವಿವಾಹ ನಿಯಮಗಳನ್ನು ಪ್ರಚಲಿತ ಕಾನೂನನ್ನು ಹೋಲಿಸಿ ನೋಡಿದರೆ, ಮಸೂದೆಯು ಮೂರು ವ್ಯತ್ಯಾಸಗಳನ್ನು ಮಾಡಿರುವುದು ಗಮನಕ್ಕೆ ಬರಬಹುದು. ಒಂದು ಹೀಗಿದೆ: ಪ್ರಚಲಿತ ಕಾನೂನು ಪವಿತ್ರ ವಿವಾಹವೊಂದರ ಊರ್ಜಿತತೆಗೆ ಜಾತಿ ಮತ್ತು ಉಪಜಾತಿಗಳನ್ನು ಸ್ಪಷ್ಟಪಡಿಸಬೇಕು ಎಂದು ಹೇಳುತ್ತದೆ. ಮಸೂದೆಯಾದರೋ ಈ ನಿಯಮವನ್ನು ತಳ್ಳಿಹಾಕುತ್ತದೆ. ಮದುವೆ ಮಾಡಿಕೊಳ್ಳುವ ವ್ಯಕ್ತಿಗಳ ಜಾತಿ ಮತ್ತು ಉಪಜಾತಿ ಏನೇ ಇರಲಿ ಅದರ ವಿವಕ್ಷೆ ಇಲ್ಲದೆ ವಿವಾಹವು ಊರ್ಜಿತವಾಗುತ್ತದೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ** (ಪೂರ್ವ ಪಂಜಾಬ್: ಸಾಮಾನ್ಯ): ಮದುವೆಯು ಬೇರೆ ಬೇರೆ ಜಾತಿಗಳಿಗೆ ಸೇರಿದ ವ್ಯಕ್ತಿಗಳ ನಡುವೆ ನಡೆದರೆ ಅದು ಊರ್ಜಿತವಾಗುತ್ತದೆಯೇ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** : ನನ್ನ ಭಾಷಣವನ್ನು ಮುಂದುವರಿಸಲು ಬಿಡಿ. ಮಾನ್ಯ ಸದಸ್ಯರು ತಮ್ಮ ಭಾಷಣ ಮಾಡುವಾಗ ನಾನು ಅದಕ್ಕೆ ಉತ್ತರ ಕೊಡುತ್ತೇನೆ.

ಈ ಮಸೂದೆಯಲ್ಲಿನ ಎರಡನೆಯ ಅವಕಾಶ **ಗೋತ್ರ ಪ್ರವರ**ದ ವಿಶಿಷ್ಟತೆಯು ಒಂದು ಮದುವೆಗೆ ತಡೆಯಾಗುವುದಿಲ್ಲ, ಅದು ಪ್ರಚಲಿತ ಕಾನೂನಿನ ಪ್ರಕಾರವಾಗಿದ್ದರೆ ಸರಿ ಎನ್ನುವುದು. ಮೂರನೆಯ ವಿಶಿಷ್ಟ ಲಕ್ಷಣ ಇದು. ಹಳೆಯ ಕಾನೂನಿನಲ್ಲಿ ಬಹುಪತ್ನಿತ್ವಕ್ಕೆ ಅನುಮತಿ ಇದ್ದಿತು. ನೂತನ ಮಸೂದೆಯಲ್ಲಿ ಅದನ್ನು ತಪ್ಪಿಸಿ ಏಕಪತ್ನಿತ್ವವನ್ನು ವಿಧಿಸಿದೆ. ಪವಿತ್ರ ವಿವಾಹವು ವಿಸರ್ಜಿಸಲು ಅವಕಾಶವೇ ಇದ್ದಿರದ ಒಂದು ವಿವಾಹ. ವಿಚ್ಛೇದನ ಅಲ್ಲಿ ಸಾಧ್ಯವಿರಲಿಲ್ಲ. ಪ್ರಸ್ತುತ ಮಸೂದೆಯಾದರೋ ಹಾಗೆ ವಿವಾಹವನ್ನು ವಿಸರ್ಜಿಸುವ ಅವಕಾಶವನ್ನು ಕಲ್ಪಿಸಿದೆ. ನೂತನ ಸಂಹಿತೆಯಂತೆ ವಿವಾಹ ಮಾಡಿಕೊಳ್ಳುವ ಯಾವುದೇ ಪಕ್ಷಕ್ಕೆ ವಿವಾಹದ ಒಪ್ಪಂದದಿಂದ ಹೊರಬರಲು ಮೂರು ದಾರಿಗಳಿವೆ. ಒಂದು, ಆ ವಿವಾಹವನ್ನು ಊರ್ಜಿತವಲ್ಲ ಎಂದು

ಘೋಷಿಸುವಂತೆ ಮಾಡುವುದು; ಎರಡನೆಯದು ವಿವಾಹವು ನಿರರ್ಥಕ ಎಂದು ಘೋಷಿಸುವಂತೆ ಮಾಡುವುದು; ಮತ್ತು ಮೂರನೆಯದು ಅದನ್ನು ವಿಸರ್ಜನೆ ಮಾಡಿಸುವುದು. ವಿವಾಹ ಅನೂರ್ಜಿತವಾಗಲು ಎರಡು ಆಧಾರಗಳಿವೆ. ಒಂದು, ವಿವಾಹ ಮಾಡಿಕೊಳ್ಳುತ್ತಿರುವ ಒಬ್ಬ ವ್ಯಕ್ತಿಗೆ ವಿವಾಹ ಸಮಯದಲ್ಲಿ ಪತ್ನಿ ಅಥವಾ ಪತಿ ಬದುಕಿರುವುದು. ಆಗ ಅಂತಹ ವಿವಾಹವು ಊರ್ಜಿತವಾಗುವುದಿಲ್ಲ. ಎರಡನೆಯದು ವಧೂವರರ ಸಂಬಂಧವು ನಿಷಿದ್ಧ ಮಟ್ಟಗಳ ವ್ಯಾಪ್ತಿಯೊಳಗೆ ಬರದಿರುವುದು. ಆಗಲೂ ವಿವಾಹವು ಊರ್ಜಿತವಲ್ಲ ಎಂದು ಘೋಷಿಸಬಹುದು. ವಿವಾಹದ ಅನೂರ್ಜಿತತೆಗೆ ಆಧಾರಗಳು ನಾಲ್ಕು. ಮೊದಲನೆಯದು ಷಂಡತ್ವ; ಎರಡನೆಯದು ವಧೂವರರು ಸಪಿಂಡರಾಗಿರುವುದು; ಮೂರನೆಯದು ಇಬ್ಬರಲ್ಲಿ ಒಬ್ಬರು ಬುದ್ಧಿಹೀನರಾಗಿರುವುದು ಅಥವಾ ಮತಿಭ್ರಂಶರಾಗಿವುದು. ನಾಲ್ಕನೆಯದು ಅದಕ್ಕೆ ಪೋಷಕರ ಅನುಮತಿಯನ್ನು ಬಲತ್ಕಾರವಾಗಿಯೋ, ಮೋಸದಿಂದಲೋ ಪಡೆದಿರುವುದು. ವಿಚ್ಛೇದನದ ಖಡ್ಗವು ಯಾವಾಗಲೂ ತಲೆಯ ಮೇಲೆ ತೂಗುತ್ತಿರುವುದನ್ನು ತಪ್ಪಿಸಲು ಮಸೂದೆಯು, ನನ್ನ ಅಭಿಪ್ರಾಯದಲ್ಲಿ ತುಂಬಾ ಬುದ್ಧಿವಂತಿಕೆಯಿಂದ, ವಿವಾಹವನ್ನು ಅನೂರ್ಜಿತಗೊಳಿಸುವ ಕ್ರಮಕ್ಕೆ ಒಂದು ಮಿತಿಯನ್ನು ವಿಧಿಸುತ್ತದೆ. ವಿವಾಹ ಅನೂರ್ಜಿತತೆಯ ಮೊಕದ್ದಮೆಯನ್ನು ಮದುವೆಯಾದ ತಾರೀಖಿನಿಂದ ಮೂರು ವರ್ಷಗಳ ಒಳಗಾಗಿ ಹೂಡತಕ್ಕದ್ದು; ಇಲ್ಲವಾದರೆ ಮೊಕದ್ದಮೆಗೆ ಕಾಲ ಮೀರಿ ಹೋಗಿ ನಿರರ್ಥಕತೆಗೆ ಯಾವ ಆಧಾರವೂ ಇಲ್ಲದಂತೆ ವಿವಾಹ ಜೀವನವು ಮುಂದುವರಿಯುತ್ತದೆ ಎಂದು ಅವಕಾಶ ಕಲ್ಪಿಸಲಾಗಿದೆ. ವಿವಾಹವನ್ನು ನ್ಯಾಯಾಲಯವು ಅನೂರ್ಜಿತವೆಂದು ಸಾರಿದ್ದರೂ, ಊರ್ಜಿತವಲ್ಲವೆಂದು ಹೇಳಿದ್ದರೂ ಆ ವಿವಾಹ ಅನೂರ್ಜಿತತೆಯು ಆ ದಂಪತಿಗಳಿಗೆ ಹುಟ್ಟಿದ ಮಕ್ಕಳ ಶಾಸನಬದ್ಧತೆಯ ಮೇಲೆ ಯಾವ ಹಾನಿಯನ್ನೂ ಉಂಟುಮಾಡುವುದಿಲ್ಲ. ಆ ಮಕ್ಕಳು ಶಾಸನಬದ್ಧ ಸಂತತಿಯಾಗಿಯೇ ಉಳಿಯುತ್ತಾರೆ.

ವಿಚ್ಛೇದನದ ಪ್ರಶ್ನೆಗೆ ಬರುವುದಾದರೆ, ಏಳು ಆಧಾರಗಳ ಮೇಲೆ ವಿವಾಹ ವಿಚ್ಛೇದನವನ್ನು ಪಡೆಯಬಹುದು.

(೧) ತೊರೆಯುವುದು, (೨) ಇನ್ನೊಂದು ಧರ್ಮಕ್ಕೆ ಮತಾಂತರಗೊಳ್ಳುವುದು, (೩) ಉಪಪತ್ನಿಯನ್ನಿಟ್ಟುಕೊಳ್ಳುವುದು ಅಥವಾ ಉಪಪತ್ನಿಯಾಗುವುದು, (೪) ವಾಸಿಯಾಗದ ಬುದ್ಧಿಭ್ರಮಣೆ (೫) ಉಗ್ರವೂ ಪರಿಹಾರರಹಿತವೂ ಆದ ಕುಷ್ಠರೋಗ (೬) ಸೋಂಕು ಗುಹ್ಯ ರೋಗಗಳು ಮತ್ತು (೭) ಅತಿಯಾದ ಕ್ರೌರ್ಯ, ದೌರ್ಜನ್ಯ.

ಈಗ ದತ್ತು ಸ್ವೀಕಾರ ಪ್ರಶ್ನೆಗೆ ಬರಬಹುದು. ಇಲ್ಲಿಯೂ ಕೂಡ ಮಸೂದೆಯಲ್ಲಿರುವ ಬಹುತೇಕ ನಿಯಮಗಳು ಪ್ರಸ್ತುತ ಇರುವ ಕಾನೂನಿನ ನಿಯಮಗಳಿಗಿಂತ ಯಾವ ರೀತಿಯಲ್ಲೂ ಬೇರೆಯಲ್ಲ. ದತ್ತು ಸ್ವೀಕಾರವನ್ನು ಕುರಿತ ಈ ಭಾಗಕ್ಕೆ ಎರಡು ನೂತನ ಅವಕಾಶಗಳನ್ನು ಸೇರಿಸಲಾಗಿದೆ. ಮೊದಲನೆಯದಾಗಿ ಸಂಹಿತೆಯ ಪ್ರಕಾರ ಪತಿಯು ದತ್ತು ಸ್ವೀಕಾರ ಮಾಡಬೇಕಾದರೆ ಅದಕ್ಕೆ ತನ್ನ ಪತ್ನಿಯ ಸಮ್ಮತಿಯನ್ನು ಪಡೆಯುವುದು ಅಗತ್ಯ. ಒಬ್ಬಳಿಗಿಂತ ಹೆಚ್ಚು ಪತ್ನಿಯರಿದ್ದರೆ ಕೊನೆಯ ಪಕ್ಷ ಅವರಲ್ಲಿ ಒಬ್ಬರ ಅನುಮತಿಯನ್ನು ಪಡೆದಿರಬೇಕು. ಎರಡನೆಯದಾಗಿ ವಿಧವೆಯು ದತ್ತು ಸ್ವೀಕಾರ ಮಾಡಬೇಕಾದರೆ ಪತಿಯು ದತ್ತು ಸ್ವೀಕಾರ ಮಾಡಲು ಆಕೆಗೆ ಅಧಿಕಾರ ನೀಡಿ ಸ್ಪಷ್ಟವಾದ ಆದೇಶವನ್ನು ಬಿಟ್ಟುಹೋಗಿದ್ದರೆ ಮಾತ್ರ ಆಕೆ ಸ್ವೀಕಾರ ಮಾಡಬಹುದು. ಪತಿಯು ತನ್ನ ಪತ್ನಿಗೆ ಅಂತಹ ಆದೇಶವನ್ನು ನೀಡಿದ್ದೇನೆ ಎಂಬ ವಿಷಯವಾಗಿ ವ್ಯಾಜ್ಯವನ್ನು ತಪ್ಪಿಸುವ ಸಲುವಾಗಿ ಸಂಹಿತೆಯು, ಆ ಅದೇಶವು ನೋಂದಾಯಿತ ಪತ್ರದ ಮೂಲಕವಾಗಿರಬೇಕು ಅಥವಾ ಉಯಿಲಿನಲ್ಲಿ ಬರೆದಿರಬೇಕು, ಎಂದು ಅವಕಾಶವನ್ನು ಕಲ್ಪಿಸಿದೆ. ಬಾಯಿಮಾತಿನದಾದರೆ ಅದು

ನಿಲ್ಲುವುದಿಲ್ಲ. ಹಾಗಾಗಿ ಇಲ್ಲಿ ವ್ಯಾಜ್ಯಗಳಿಗೆ ಅವಕಾಶಗಳು ಗಣನೀಯವಾಗಿ ಕಡಿಮೆಯಾಗಿವೆ. ದತ್ತುಸ್ವೀಕಾರವನ್ನು ರಿಜಿಸ್ಟರ್ ಮಾಡಿಸಿ ಕೂಡ ಸ್ವೀಕರಿಸಬಹುದು ಎಂದು ಅವಕಾಶ ಕೊಡುತ್ತದೆ. ಈ ದೇಶದಲ್ಲಿ ವಿವಾದಕ್ಕೆ, ಮೊಕದ್ದಮೆಗೆ ತುಂಬಾ ಫಲವತ್ತಾದ ಮೂಲಗಳಲ್ಲಿ ಒಂದು, ಈ ದತ್ತಸ್ವೀಕಾರದ ಪ್ರಶ್ನೆ. ಎಲ್ಲಾ ಬಗೆಯ ಮೌಖಿಕ ಸಾಕ್ಷ್ಯಗಳನ್ನು ತಯಾರಿಸಲಾಗುತ್ತದೆ, ಕಲ್ಪಿಸಲಾಗುತ್ತದೆ; ಸಾಕ್ಷೀದಾರರನ್ನು ಸುಳ್ಳು ಸಾಕ್ಷಿ ಕೊಡಲು ಪ್ರಚೋದಿಸಲಾಗುತ್ತದೆ; ವಿಧವೆಯರನ್ನು ವಂಚಿಸಲಾಗುತ್ತದೆ; ಒಂದು ದಿನ ಒಂದು ದತ್ತುಸ್ವೀಕಾರ ಮಾಡಿರುವುದಾಗಿ ಘೋಷಿಸಿಕೊಂಡವರೇ ಇನ್ನೊಂದು ದಿನ ತಾವು ಹಾಗೆ ಮಾಡಿಲ್ಲವೆಂದು ಪ್ರಮಾಣ ಮಾಡುತ್ತಾರೆ. ಈ ಎಲ್ಲಾ ಬಗೆಯ ದುರ್ವ್ಯವಹಾರಗಳಿಗೆ ಒಂದು ಪೂರ್ಣವಿರಾಮ ಹಾಕುವ ಸಲುವಾಗಿ ಒಬ್ಬ ಹಿಂದುವು ದತ್ತುಸ್ವೀಕಾರ ಮಾಡಿದುದನ್ನು ನೋಂದಾಯಿಸಬೇಕು, ಎಂದು ಬಹು ಪ್ರಶಂಸನೀಯವಾದ ಒಂದು ಅವಕಾಶವನ್ನು ಸಂಹಿತೆಯು ಮಾಡಿದೆ.

ಆಮೇಲೆ ಅಪ್ರಾಪ್ತತೆ ವಯಸ್ಕತೆಯ ಪ್ರಶ್ನೆ ಬರುತ್ತದೆ. ಮತ್ತು ಪಾಲಕತ್ವದ ಪ್ರಶ್ನೆಯೂ ಇದೆ. ಮಸೂದೆಯು ಸೂತ್ರೀಕರಿಸಲು ಬಯಸುವ ಕೊನೆಯ ವಿಷಯ ಇದು. ಸಂಹಿತೆಯ ಈ ಭಾಗದಲ್ಲಿ ಹೊಸತೇನೂ ಇಲ್ಲವಾದುದರಿಂದ ಮಸೂದೆಯ ಈ ಭಾಗಕ್ಕೆ ಸಂಬಂಧಿಸಿದಂತೆ ನಾನು ಇಲ್ಲಿ ಏನನ್ನೂ ಹೇಳಬಯಸುವುದಿಲ್ಲ.

ಸದಸ್ಯರಿಗೆ ಈಗ ವೇದ್ಯವಾಗಿರುವಂತೆ ಈ ಮಸೂದೆಯಿಂದ ಪರಿಶೀಲನೆಗಾಗಿ ಹೊರಪಡುವ ಅಂಶಗಳು ಮತ್ತು ಅವುಗಳಲ್ಲಿ ಹೊಸತಾದುವು ಹೀಗಿವೆ. ಮೊದಲನೆಯದು ಜನ್ಮಸಿದ್ಧ ಹಕ್ಕನ್ನು ರದ್ದುಪಡಿಸಿ ಉತ್ತರಜೀವಿತಾಧಿಕಾರ ಆಧಾರದಿಂದ ಆಸ್ತಿಯನ್ನು ಪಡೆಯುವುದು. ಎರಡನೆಯದು ಮಗಳಿಗೆ ಅರ್ಧಪಾಲನ್ನು ಕೊಡುವುದು. ಮೂರನೆಯದು ಮಹಿಳೆಯರ ಸೀಮಿತ ಸಂಪದಾಸ್ತಿಯನ್ನು ನಿರುಪಾಧಿಕ ಸಂಪದಾಸ್ತಿಯನ್ನಾಗಿ ಪರಿವರ್ತಿಸುವುದು. ನಾಲ್ಕನೆಯದಾಗಿ ವಿವಾಹ ಮತ್ತು ದತ್ತುಸ್ವೀಕಾರದಲ್ಲಿ ಜಾತಿ ವಿವಕ್ಷೆಯನ್ನು ರದ್ದುಪಡಿಸುವುದು, ಐದನೆಯದು ಏಕಪತ್ನಿತ್ವ ತತ್ವ ಮತ್ತು ಆರನೆಯದು ವಿಚ್ಛೇದನದ ತತ್ವ. ಈ ಅಂಶಗಳನ್ನು ಪ್ರತ್ಯೇಕವಾಗಿ ಮತ್ತು ಸ್ಪಷ್ಟವಾಗಿ ನಿರೂಪಿಸಲು ಪ್ರಯತ್ನಿಸಿದ್ದೇನೆ. ಏಕೆಂದರೆ ನಮಗಿರುವ ಸೀಮಿತ ಸಮಯದ ದೃಷ್ಟಿಯಿಂದ, ಚರ್ಚೆ ಮಾಡಬೇಕಾದ ಅಂಶಗಳು ಯಾವುವು, ಯಾವುದರ ಮೇಲೆ ಗಮನವನ್ನು ಏಕಾಗ್ರಗೊಳಿಸಬೇಕು ಎಂಬುದನ್ನು ನಾನು ತೋರಿಸಿಕೊಟ್ಟರೆ ಸದನದ ಮಾನ್ಯ ಸದಸ್ಯರಿಗೆ ಸಹಾಯವಾಗಬಹುದು. ಪ್ರಸ್ತುತ ಮಸೂದೆಯಲ್ಲಿ ವಿಭಿನ್ನವಾಗಿರುವ ಅಂಶಗಳಿಗೆ ಸಮರ್ಥನೆ ನಿಸ್ಸಂದೇಹವಾಗಿ ಬೇಕು. ಆದರೆ ಈ ಹಂತದಲ್ಲಿ ನಾನು ಪ್ರಸ್ತುತ ಮಸೂದೆಯು ಶಾಸನಗೊಳಿಸಲು ಬಯಸುವ ಅನ್ಯ ಮಾರ್ಗಗಳನ್ನು ಸಮರ್ಥಿಸುತ್ತಾ ಹೋದರೆ ಅದು ಸಮಯವನ್ನು ಪೋಲು ಮಾಡಿದ ಹಾಗಾಗುತ್ತದೆ. ನಾನು ಪಟ್ಟಿ ಮಾಡಿರುವ ಅಂಶಗಳ ಮೇಲೆ ಗೌರವಾನ್ವಿತ ಸದಸ್ಯರು ಏನು ಹೇಳಲಿಕ್ಕಿದೆ ಎನ್ನುವುದನ್ನು ಮೊದಲು ನಾನು ಆಲಿಸಬಯಸುತ್ತೇನೆ. ಸಮರ್ಥನೆ ಮಾಡುವುದು ಅಗತ್ಯ ಎಂದು ನನಗೆ ತೋರಿದರೆ ನನ್ನ ಉತ್ತರದ ಸಮಯದಲ್ಲಿ ಆ ಕೆಲಸ ಮಾಡುತ್ತೇನೆ. ಮಾನ್ಯರೆ, ನಾನು ಸೂಚನೆಯನ್ನು ಮಂಡಿಸುತ್ತೇನೆ.

**ಅಧ್ಯಕ್ಷರು** : ಸೂಚನೆಯನ್ನು ಮಂಡಿಸಲಾಗಿದೆ: "ಹಿಂದೂ ಕಾನೂನಿನ ಕೆಲವು ಶಾಖೆಗಳನ್ನು ಕ್ರೋಡೀಕರಿಸಿ ತಿದ್ದುಪಡಿ ಮಾಡುವ ಮಸೂದೆಯನ್ನು ಒಂದು ಆಯ್ಕೆ ಸಮಿತಿಗೆ ಒಪ್ಪಿಸಬಹುದು. ಆ ಸಮಿತಿಯಲ್ಲಿ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಡಾ. ಭಕ್ಷಿ ತೇಕ್‌ಚಂದ್, ಶ್ರೀ ಎಂ. ಅನಂತಶಯನಂ ಅಯ್ಯಂಗಾರ್, ಶ್ರೀಮತಿ ಜಿ. ದುರ್ಗಾಬಾಯಿ, ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ, ಶ್ರೀ ಯು. ಶ್ರೀನಿವಾಸ ಮಲ್ಯ, ಶ್ರೀ ಮಿಹಿರ್ ಲಾಲ್ ಚಟ್ಟೋಪಾಧ್ಯಾಯ, ಡಾ. ಪಿ.ಎಸ್.ದೇಶ್‌ಮುಖ್, ಶ್ರೀಮತಿ ರೇಣುಕಾ ರೇ, ಡಾ. ಪಿ.ಕೆ. ಸೇನ್, ಬಾಬು ರಾಮನಾರಾಯಣ ಸಿಂಗ್, ಶ್ರೀ ಕಿಶೋರಿ ಮೋಹನ್ ತ್ರಿಪಾಠಿ, ಶ್ರೀಮತಿ

ಅಮ್ಮು ಸ್ವಾಮಿನಾಥನ್, ಪಂಡಿತ್ ಬಾಲಕೃಷ್ಣ ಶರ್ಮ, ಶ್ರೀ ಖುರ್ಷಿದ್‌ಲಾಲ್, ಶ್ರೀ ಬ್ರಜೇಶ್ವರ್ ಪ್ರಸಾದ್, ಶ್ರೀ ಬಿ. ಶಿವರಾವ್, ಶ್ರೀ ಬಲದೇವ್ ಸ್ವರೂಪ್, ಶ್ರೀ ವಿ.ಸಿ. ಕೇಶವರಾವ್ ಮತ್ತು ಸೂಚಕರು ಸದಸ್ಯರಾಗಿರುತ್ತಾರೆ. ಅವರು ಅಸೆಂಬ್ಲಿಯ ಮುಂದಿನ ಅಧಿವೇಶನದ ಮೊದಲನೆಯ ವಾರದ ಕೊನೆಯ ದಿನಕ್ಕೆ ಮೊದಲು ತಮ್ಮ ವರದಿಯನ್ನು ಸಲ್ಲಿಸಬೇಕೆಂದು ಸೂಚಿಸಲಾಗಿದೆ. ಸಮಿತಿಯ ಸಭೆಯನ್ನು ನಡೆಸಲು ಅತ್ಯಗತ್ಯವಾದ ಸದಸ್ಯರ ಸಂಖ್ಯೆ ಐದು ಆಗಿರುತ್ತದೆ."

**ಡಾ. ಬಿ. ಪಟ್ಟಾಭಿ ಸೀತಾರಾಮಯ್ಯ** (ಮದರಾಸು: ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಸ್ವಾಮಿ, ನಿಮ್ಮ ಕಣ್ಣನ್ನು ಕಿವಿಯನ್ನು ಮತ್ತು ಸದನದ ಅಧ್ಯಕ್ಷರ ಕಣ್ಣುಗಳನ್ನು ಸೆಳೆಯುವ ಆಸೆಯಿಂದ ನಾನು ಬಹಳ ಮುಂದಾಗಿ ನಿಂತಿದ್ದೇನೆ. ಈಗ ಈ ಸದನದ ಮುಂದೆ ಒಂದು ಬಹು ಸ್ವಾರಸ್ಯವಾದ ಶಾಸನಾಂಶವನ್ನು ಮಂಡಿಸಲಾಗಿದೆ. ವಾಸ್ತವವಾಗಿ ದೇಶವು ಇದಕ್ಕಾಗಿ ಬಹುದೀರ್ಘ ಕಾಲದಿಂದ ಕಾಯುತ್ತಿತ್ತು. ಈ ದೇಶವು ಅನ್ಯ ದೇಶೀಯರ ಆಳಿಕೆಯಲ್ಲಿ ಸುಮಾರು ಒಂದು ಸಾವಿರ ವರ್ಷಗಳನ್ನು ಕಳೆದುದರಿಂದ, ಜಗತ್ತಿನಲ್ಲಾಗುತ್ತಿರುವ ಬದಲಾವಣೆಗಳಿಗೆ ಅಥವಾ ಬದಲಾಗುವ ಪದ್ಧತಿಗಳ ಒತ್ತಡಕ್ಕೆ ಸಿಕ್ಕಿ ಅಗೋಚರವಾಗಿ ಸಮಾಜದಲ್ಲಿ ಸಂಭವಿಸುವ ಬದಲಾವಣೆಗಳಿಗೆ ಪೂರಕವಾಗಿ ಸಾಮಾಜಿಕ ಪ್ರಗತಿಯನ್ನು ಜಾರಿಗೆ ತರಲು ಸಾಧ್ಯವಾಗಿಲ್ಲ. ಪದ್ಧತಿ ಎನ್ನುವುದು ಸಾಮಾನ್ಯವಾಗಿ ಆಳುವವರು ಪೋಷಿಸುವ, ಮೆಚ್ಚುವ ಮತ್ತು ಪುರಸ್ಕರಿಸುವ ಒಂದು ಶಕ್ತಿ. ದುರದೃಷ್ಟಕ್ಕೆ, ಸಮಾಜದಲ್ಲಾಗುವ ಯಾವುದೇ ಬದಲಾವಣೆಗಳಿಗೆ ಸ್ಫೂರ್ತಿದಾಯಕ ಮಾದರಿಯಾಗಿ ನಿಲ್ಲುವ ರಾಜರನ್ನು ಈ ದೇಶವು ಬಹಳ ಕಾಲದಿಂದ ಕಂಡಿಲ್ಲ. ಪ್ರಜೆಗಳು ಅವರ ಕಡೆಗೆ ನೋಡುವ ಅವಕಾಶ ಒದಗಲಿಲ್ಲ. ಪಶ್ಚಿಮದಲ್ಲಾದರೆ ಇಂದಿಗೂ ಒಂದು ಸಾಮಾಜಿಕ ಬದಲಾವಣೆ ಆಗಬೇಕಾಗಿದ್ದರೆ, ಇಷ್ಟು ಮಾಡಿದರೆ ಸಾಕು: ರಾಜನು ಮೊದಲು ಆ ಬದಲಾವಣೆಯನ್ನು ಆಚರಿಸಿ ತೋರಿಸಬೇಕು, ಆಗ ಎಲ್ಲಾ ಪ್ರಜೆಗಳು ತಾವಾಗಿಯೇ ಅದನ್ನು ಅನುಸರಿಸುತ್ತಾರೆ. ಎಂಟನೆಯ ಎಡ್ವರ್ಡನ ಕಥೆಯನ್ನು ತಾವು ಕೇಳಿರಬಹುದು. ಅವನು ಪ್ರಿನ್ಸ್ ಆಫ್ ವೇಲ್ಸ್ ಆಗಿದ್ದಾಗ ಬಹು ದೂರದ ಒಂದು ದ್ವೀಪಕ್ಕೆ ಹೋಗಿದ್ದನು. ಫ್ಯಾಷನ್ನುಗಳಲ್ಲಿ ಆದ ಬದಲಾವಣೆಯಿಂದ ತಮ್ಮ ವೃತ್ತಿಗೆ ಧಕ್ಕೆಯುಂಟಾಗಿದೆ ಎಂದು ಅಲ್ಲಿಯ ಜನರು ಅವನೊಂದಿಗೆ ಹೇಳಿಕೊಂಡರು. ಯಾವ ಫ್ಯಾಷನ್ನು ವೃತ್ತಿಯನ್ನು ಹಾಳುಮಾಡಿತು ಎಂದು ಅವನು ಕೇಳಿದನು. ಹಿಂದೆ ಅವರೆಲ್ಲರೂ ಒಣಹುಲ್ಲಿನ ಹ್ಯಾಟುಗಳನ್ನು ತಯಾರಿಸುತ್ತಿದ್ದರು, ಈಗಲಾದರೋ ಅವುಗಳ ಸ್ಥಾನದಲ್ಲಿ ಫೆಲ್ಟ್ ಹ್ಯಾಟುಗಳು ಬಂದುಬಿಟ್ಟಿರುವುದರಿಂದ ತಮಗೆ ಕೆಲಸವಿಲ್ಲದಂತಾಗಿದೆ ಎಂದು ಅವರು ಹೇಳಿಕೊಂಡರು. ಮರುದಿನವೇ ಎಡ್ವರ್ಡ್‌ನು ಒಂದು ಸಮಾರಂಭದಲ್ಲಿ ಒಣಹುಲ್ಲಿನ ಹ್ಯಾಟು ಧರಿಸಿ ಬಹಿರಂಗವಾಗಿ ಕಾಣಿಸಿಕೊಂಡನು. ಅಷ್ಟೆ. ಒಡನೆಯೇ ಒಣ ಹುಲ್ಲಿನ ಹ್ಯಾಟು ಉದ್ಯಮವು ಮತ್ತೆ ಮೇಲೇರಿತು. ರಾಜನ ಶಕ್ತಿ ಅದು. ಅವನು ಕೇವಲ ಒಂದು ರಾಜ್ಯದ ರಾಜಕೀಯ ನಾಯಕನಲ್ಲ, ಸಮಾಜದ ನಾಯಕ, ಮಾದರಿ, ಸಲಹೆಗಾರ, ಎಚ್ಚರ ಕೊಡುವ ಮುಂದಾಳು. ಹಾಗಾಗಿ ಯುಗಯುಗಾಂತರದಿಂದ, ಸಾಂಪ್ರದಾಯಿಕವಾಗಿ ಮತ್ತು ಪೂಜ್ಯವಾಗಿ ಬಂದಿರುವ ಪದ್ಧತಿಗಳ ಮೌಲ್ಯಮಾಪನ ಮಾಡುತ್ತಾನೆ. ಆ ಪದ್ಧತಿಯನ್ನು ಈ ರೀತಿಯಾಗಿಯೋ ಆ ರೀತಿಯಾಗಿಯೋ ಬದಲಾಯಿಸುವುದು ಅವರ ಅಧಿಕಾರದಲ್ಲಿದೆ. ಆದರೆ ಬ್ರಿಟಿಷ್ ಆಳ್ವಿಕೆಯು ಅಸ್ತಿತ್ವಕ್ಕೆ ಬಂದಂದಿನಿಂದ ನಮ್ಮ ವಿಧಿ ಏನಾಗಿದೆ? ಮುಸ್ಲಿಮರು ಈ ದೇಶವನ್ನು ಆಳುತ್ತಿರುವವರೆಗೆ ನಮ್ಮ ಕೆಲವು ಪದ್ಧತಿಗಳನ್ನು ಅವರು ನಕಲು ಮಾಡುತ್ತಿದ್ದರು, ಅವರ ಕೆಲವು ಪದ್ಧತಿಗಳನ್ನು ನಾವು ನಕಲು ಮಾಡಿಕೊಂಡಿದ್ದೆವು; ರೂಢಿ–ಪದ್ಧತಿಗಳಲ್ಲಿ ಒಂದು ಬಗೆಯ ಅಂತರ್–ಮಿಶ್ರಣ ಮತ್ತು ಅಂತರ್ ಚಲಾವಣೆ ಇದ್ದಿತು; ಆದ್ದರಿಂದ ಸಾಮಾಜಿಕ ಪ್ರಗತಿಯ ಕೆಲವು

ಕ್ರಮಗಳು ಗೋಚರಿಸುತ್ತಿದ್ದವು– ಆದರೆ ಬ್ರಿಟಿಷರು ಬಂದ ಮೇಲೆ ಅವರನ್ನು ಅಸ್ಪೃಶ್ಯರಂತೆ ನೋಡಲಾಯಿತು. ಈ ದೇಶದ ಅಗಾಧ ಬಹುಸಂಖ್ಯಾತ ಜನತೆಗೆ ಅವರು ಸಮೀಪಿಸಲು ಅಸಾಧ್ಯರಾಗಿ ಕಂಡರು. ಪರಿಸ್ಥಿತಿ ಹೇಗಾಯಿತೆಂದರೆ ಬ್ರಿಟಿಷರು ಈ ದೇಶದ ರೂಢಿ ಆಚಾರಗಳನ್ನು ಉದ್ದವಾದ ಕೋಲಿನ ತುದಿಯಿಂದಲೂ ಮುಟ್ಟಲು ಹೆದರಿದರು. ರಸಾಯನ ತಕ್ಕಡಿಯಲ್ಲಿ ತೂಗಬೇಕಾದ ಬಹು ಸೂಕ್ಷ್ಮವಾದ ರಚನೆಯಲ್ಲಿ ಸಾಮಾಜಿಕ–ಧಾರ್ಮಿಕ ವ್ಯವಸ್ಥೆಯ ಮಧ್ಯಪ್ರವೇಶ ಮಾಡಲು ಅವರು ಹೆದರಿದರು. ಹೊರದೇಶದಿಂದ ಮತ್ತು ಅಪರಿಚಿತ ಮೂಲಗಳಿಂದ ಬರುವ ಅತಿ ಸಣ್ಣ ಬದಲಾವಣೆಯೂ ಅಲ್ಲಿ ಪರಿಣಾಮವನ್ನುಂಟುಮಾಡುತ್ತಿತ್ತು. ಆ ಪರಿಣಾಮವು ಈ ದೇಶದಲ್ಲಿ ತಮ್ಮ ಸಾಮ್ರಾಜ್ಯದ ಭದ್ರತೆಗೆ ಹಾನಿಕರವಾಗುತ್ತದೆ ಎಂಬ ಭೀತಿ ಅವರಿಗಿದ್ದುದರಿಂದ ಅವರು ನಾಡಿನ ಧರ್ಮ ಅಥವಾ ಇತರ ಪದ್ಧತಿಗಳಿಗೆ ಮೂಗು ಹಾಯಿಸದಿರುವ, ವಿಹಿತವೆಂಬಂತೆ ತೋರುವ ನೀತಿಯನ್ನು ಅಳವಡಿಸಿಕೊಂಡರು. ಈ ರೀತಿಯಲ್ಲಿ ಹೈಕೋರ್ಟುಗಳ ನ್ಯಾಯಮೂರ್ತಿಗಳು ಹಿಂದಿನ ಹಲವು ಶತಮಾನಗಳಿಂದ ಬಂದ ಪದ್ಧತಿ, ರೂಢಿಗಳನ್ನು ದಾಖಲು ಮಾಡಲು ಉದ್ದಕ್ಕೂ ಸಹಾಯ ಮಾಡುತ್ತಾ ಬಂದರು. ಸಮಾಜದಲ್ಲಿ ಪದ್ಧತಿಯ ಯಾವುದೇ ಬದಲಾವಣೆಯು ಪ್ರಗತಿ ಸಾಧಿಸಿರುವುದನ್ನು ಅವರು ದಾಖಲಿಸಿಲ್ಲ. ಹಾಗಾಗಿ ಪದ್ಧತಿಯು ಜಡವಾಯಿತು, ಅದು ಜಡವಾಗುತ್ತಿದ್ದಂತೆ, ಪ್ರಗತಿಗೆ ತಡೆಯುಂಟಾಯಿತು. ನೂರ ಐವತ್ತು ವರ್ಷಗಳ ಕಾಲ ನಮ್ಮ ಸಮಾಜವು ಯಾವುದೇ ಪ್ರಗತಿಯನ್ನು ಸಾಧಿಸಿಲ್ಲ. ಒಂದು ಹಂತದಲ್ಲಿ ಮಿಶನರಿಗಳು ಸಾಮಾಜಿಕ ಪಿಡುಗುಗಳನ್ನು ಬೆಟ್ಟುಮಾಡಿ ತೋರಿಸಿದ್ದರೆ ಅದು, ಟೀಕೆ–ವಿಮರ್ಶೆ ಮಾಡುವ ಸಲುವಾಗಿಯೇ ಹೊರತು ಪ್ರಗತಿಶೀಲ ನೆರವು ನೀಡುವ ಬುದ್ಧಿಯಿಂದಲ್ಲ. ಕಾಲವು ಉರುಳಿ, ಇಂಗ್ಲಿಷ್ ವಿದ್ಯಾಭ್ಯಾಸವು ಬೇರುಬಿಟ್ಟು, ಪ್ರಜಾಪ್ರಭುತ್ವವು ಜನರ ಅಕ್ಕರೆಯ ಮೇಲೆ ಬಿಗಿಯಾದ ಹಿಡಿತವನ್ನು ಸ್ಥಾಪಿಸಿಕೊಂಡ ಮೇಲೆ ಇನ್ನೊಂದು ಬದಲಾವಣೆ ಕಂಡುಬಂದಿತು. ವಿದ್ಯಾವಂತ ಭಾರತೀಯರು ತಮ್ಮ ಸಾಂಪ್ರದಾಯಿಕ ಆಚಾರದ ತಡೆಗಳನ್ನು ಕಳಚಿಹಾಕಬೇಕೆಂದು ಉತ್ಸುಕರಾಗಿದ್ದರು. ಅದೇ ಮಿಶನರಿಗಳು ಮತ್ತು ಕ್ರೈಸ್ತ ಪುರೋಹಿತ ವರ್ಗದವರು ಈಗ ಇದ್ದಕ್ಕಿದ್ದಂತೆ ಸಂಪ್ರದಾಯವಾದಿಗಳಾಗಿಬಿಟ್ಟರು. ಇಂಗ್ಲಿಷ್ ಕಲಿತ ಜನರು ಸ್ವಲ್ಪ ಬೇಜವಾಬ್ದಾರಿಯಿಂದಲೇ ಕೈಗೊಳ್ಳಲು ಹವಣಿಸುತ್ತಿದ್ದ ತೀವ್ರ ಬದಲಾವಣೆಗಳನ್ನು ಖಂಡಿಸತೊಡಗಿದರು. ಈ ಬದಲಾವಣೆಗಳನ್ನು ತಟಕ್ಕನೆ ಒಪ್ಪಿಕೊಳ್ಳುತ್ತಿದ್ದ ಜನರು ನೇರವಾಗಿ ಆ ಉದ್ದೇಶ ಉಳ್ಳವರಾಗಿದ್ದರೋ ಇಲ್ಲವೆ ಯುಗಾಂತರಗಳಿಂದ ಬಂದ ಸಮಾಜದ ಕಟ್ಟುನಿಟ್ಟಾದ ಪದ್ಧತಿಗಳನ್ನು ಸಡಿಲಗೊಳಿಸಲು ಹೊರಟಿದ್ದರೋ ಎನ್ನುವುದು ತಿಳಿಯದೆ ವಿಚಾರಮಾಡಲು ತೊಡಗಿದರು. ಅವರಿಗದು ಇಷ್ಟವಾಗಲಿಲ್ಲ. ಏಕೆಂದರೆ ಸುಧಾರಣಾ ಮನೋಧರ್ಮವು ಯಾವಾಗಲೂ ತಮ್ಮ ಶಕ್ತಿಯನ್ನೇ ಹಾಳುಮಾಡುತ್ತದೆ. ಸುಧಾರಣೆಗೆ ಪ್ರೋತ್ಸಾಹ ಕೊಡುವುದರಲ್ಲಿ ತಮ್ಮ ಆಳ್ವಿಕೆಗೇ ಅಪಾಯವಿರುವುದು ಅವರಿಗೆ ಮನವರಿಕೆಯಾಯಿತು. ಶೀಘ್ರಗತಿಯಲ್ಲಿ ರಾಷ್ಟ್ರದಲ್ಲಿ ಒಂದು ಪ್ರಮಾಣದ ದಂಗೆಕೋರ ಪ್ರವೃತ್ತಿಯನ್ನು ತಾವು ಪ್ರೋತ್ಸಾಹಿಸುತ್ತಿರುವುದನ್ನು ಮಿಶನರಿಯು ಕಂಡುಕೊಂಡನು. ಈಗ ಬ್ರಾಹ್ಮೋ ಪಂಥವು ಈ ದೇಶದಲ್ಲಿ ರಕ್ಷಕ ಅಂಶವಾಗಿ ಅವರಿಗೆ ಕಾಣಿಸಿತು. ಆದರೆ ಬ್ರಾಹ್ಮೋ ಪಂಥವನ್ನು ಮಿಶನರಿಯು ಖಂಡಿಸಿದನು. ಏಕೆಂದರೆ ದೇಶದ ಸುಧಾರಣಾ ಮನೋಭಾವಕ್ಕೆ ಅದೊಂದು ತಂಗುದಾಣವನ್ನು ಒದಗಿಸಿತ್ತು. ಹಾಗಾಗಿ ಮಿಶನರಿಯೇ ಸಂಪ್ರದಾಯವಾದಿಯಾದನು. ಇಂಗ್ಲಿಷರು ಸಂಪ್ರದಾಯವಾದಿಗಳಾದರು, ಪದ್ಧತಿಯು ಗಡುಸಾಯಿತು, ಸಮಾಜವು ಕಲ್ಲಾಗಿ ಹೆಪ್ಪುಗಟ್ಟಿತು, ಘನೀಕರಿಸಿತು, ಅದೂ ಸಾಕಷ್ಟು ವಿಶಾಲ ಮತ್ತು ವ್ಯಾಪಕವಾಗಿರದ ಆವರಣದಲ್ಲಿ. ಹಾಗಾಗಿ ಪ್ರೌಢಳಾದ ನಂತರ ಆದ ವಿವಾಹದಿಂದ ಜನಿಸಿದ ಮಗುವನ್ನು ಪಂಜಾಬಿನಲ್ಲಿ ಹೈಕೋರ್ಟು ನ್ಯಾಯವಿರುದ್ಧ ಎಂದು ತೀರ್ಪು

ನೀಡಿತು! ಇದು ಪ್ರಗತಿಶೀಲ ಸಮಾಜದ ಬೆನ್ನನ್ನು ಮುರಿದ ಕೊನೆಯ ಎಳೆ. ಒಡನೆಯೇ ಪದ್ಧತಿಯ ಬೆನ್ನು ಮೂಳೆ ಮುರಿಯಲು ಪ್ರಯತ್ನ ನಡೆಯಿತು. ವಿವಾಹ ಕಾನೂನನ್ನು ಸುಧಾರಿಸುವ ಪ್ರಯತ್ನ ನಡೆದು, ೧೮೭೦ರ ೩ನೆಯ ಶಾಸನವು, ಜನಪ್ರಿಯವಾಗಿ ಬ್ರಾಹ್ಮೋ ವಿವಾಹಶಾಸನ ಎಂದು ಪ್ರಸಿದ್ಧವಾದ ಶಾಸನ ಬಂದಿತು. ಆದರೆ ಅದರಲ್ಲಿ ಹೀಗೆ ಒಂದು ನಿರಾಕರಣೆಯ ಘೋಷಣೆ ಇರಬೇಕಾಗಿತ್ತು: "ನಾನೊಬ್ಬ ಹಿಂದೂ ಎನ್ನುವುದನ್ನು, ಮುಸ್ಲಿಂ ಅಥವಾ ಕ್ರಿಶ್ಚಿಯನ್ ಅಥವಾ ಪಾರ್ಸಿ ಅಥವಾ ಜೈನ ಅಥವಾ ಯೆಹೂದಿ ಎನ್ನುವುದನ್ನು ನಿರಾಕರಿಸುತ್ತೇನೆ." ಈ ಆಕ್ಷೇಪಣೀಯ ಘೋಷಣೆಯು ಆ ಶಾಸನದ ನಿಯಮ ಅವಕಾಶಗಳೊಂದಿಗೆ ಸಂಬಂಧಪಟ್ಟಿತ್ತು. ಆದ್ದರಿಂದ ಅದು ಜನಪ್ರಿಯವಾಗಲಿಲ್ಲ. ಆಮೇಲೆ ಶಾರ್ದಾ ಕಾನೂನು ಜಾರಿಗೆ ಬಂದಿತು. ಅದೃಷ್ಟವಶಾತ್, ಆಚಾರವಂತಿಕೆಯ ಮುಂದಾಳುಗಳು ಜನರಮೇಲೆ ಹೇರುತ್ತಿದ್ದ ಮತ್ತು ಪ್ರಗತಿಗೆ ತಡೆಯೊಡ್ಡುತ್ತಿದ್ದ ಸಮಾಜ ಸುಧಾರಣೆಯ ಮೇಲೆ ಅದು ಅಧಿಕೃತತೆಯ ಮೊಹರನ್ನು ಒತ್ತಿತ್ತು. ನೂತನ ಶಕೆಯೊಂದು ಆರಂಭಗೊಂಡಿತ್ತು. ೧೮೮೫ರಲ್ಲಿ ಪ್ರಾರಂಭಗೊಂಡ ಭಾರತ ರಾಷ್ಟ್ರೀಯ ಕಾಂಗ್ರೆಸ್ ೧೯೧೯ರವರೆಗೂ ತನ್ನ ಅಧೀನವಾಗಿ ಮತ್ತು ತನಗೆ ಸಹಾಯಕವಾಗಿ ಒಂದು ಸಮಾಜ ಸುಧಾರಣಾ ಸಂಸ್ಥೆಯನ್ನು ಹೊಂದಿತ್ತು. ಅದು ದೇಶದ ಸಾಮಾಜಿಕ ಪಿಡುಗುಗಳನ್ನು ಎದುರಿಸಿ, ಹಲವು ಶಾಸಕಾಂಗ ಕ್ರಮಗಳನ್ನೂ ಸೂಚಿಸಿತು. ಆದರೆ ಬ್ರಿಟಿಷ್ ಸರಕಾರಕ್ಕೆ ಆ ಶಾಸಕಾಂಗ ಕ್ರಮಗಳನ್ನು ಕಾರ್ಯಗತಗೊಳಿಸಲು ಅಪೇಕ್ಷೆಯಿರಲಿಲ್ಲ. ಕಾಲ ಉರುಳಿದಂತೆ ಈ ದೇಶದಲ್ಲಿ ಅನ್ಯದೇಶೀಯರು ಸುಧಾರಣಾ ಕ್ರಮಗಳನ್ನು ಕೈಗೊಳ್ಳುವುದನ್ನು ಸಮಾಜವೂ ಒಪ್ಪದಾಯಿತು.

ಸ್ವಾಮಿ, ಇಂದು ನಾವು ಸುದೈವದಿಂದ ಆ ಕಾಲವನ್ನು ದಾಟಿ ಬಂದಿದ್ದೇವೆ. ರಾಷ್ಟ್ರಿಯ ಸರಕಾರವು ತಾನೇ ಮುಂದಾಗಿ ಒಂದು ಪ್ರಗತಿಶೀಲ ಸುಧಾರಣಾ ಕ್ರಮವನ್ನು ಕೈಗೊಳ್ಳುತ್ತಿರುವ ಯುಗದಲ್ಲಿ ನಾವು ಜೀವಿಸಿದ್ದೇನಲ್ಲ ಎಂದೇ ಸಂತೊಷಪಡುತ್ತೇನೆ. ಇದು ದೃಷ್ಟಿಯಲ್ಲಿ ಸಮಗ್ರವಾಗಿದೆ, ಫಲದಲ್ಲಿ ದೂರಸ್ಪರ್ಶಿಯಾಗಿದೆ, ಸ್ವರೂಪದಲ್ಲಿ ಚಿಕಿತ್ಸಕವಾಗಿದೆ, ಅಂಥದೊಂದು ಕ್ರಮವನ್ನು ಮುಂದಿಡಲಾಗುತ್ತಿದೆ. ಇದು ಪಿತ್ರಾರ್ಜಿತಕ್ಕೆ ಸಂಬಂಧಿಸಿ, ವಿವಾಹಕ್ಕೆ ಸೇರಿದಂತೆ, ಆಸ್ತಿಗೆ ಸಂಬಂಧಿಸಿದಂತೆ, ವಿವಾಹವಿಚ್ಛೇದನಕ್ಕೆ ಸೇರಿದಂತೆ, ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಮಹಿಳೆಯರ ಹಕ್ಕುಗಳನ್ನು ಒಳಗೊಂಡಿದೆ. ಕಾಲವು ಮುಂದುವರಿದಂತೆ ಈ ದಿಸೆಯಲ್ಲಿ ಪ್ರಸ್ತುತ ಕ್ರಮವು ಸೂಚಿಸಿರುವ ದಿಕ್ಕಿನಲ್ಲಿ ಇನ್ನೂ ಹೆಚ್ಚು ಹೆಚ್ಚು ಸುಧಾರಣೆಗಳನ್ನು ನೋಡುತ್ತೇವೆ ಎಂದು ನಾನು ಆಶಿಸುತ್ತೇನೆ.

ಪತಿಯು ಮೃತನಾದನಂತರ ಪತ್ನಿಗೆ ಬರುವ ಪೂರ್ಣ ಹಕ್ಕುಗಳಿಂದ ನಾವು ಚರ್ಚೆಗೆ ತೊಡಗೋಣ. ನಮ್ಮ ಶಾಸ್ತ್ರಗಳು ಹೆಣ್ಣನ್ನು, ಅವಳು ಕನ್ಯೆಯಾಗಿದ್ದಾಗ ತಂದೆಯ ಅಧೀನೆಯೆಂದೂ, ಮಧ್ಯವಯಸ್ಕಳಾದಾಗ ತನ್ನ ಪತಿಯ ದಾಸಿಯೆಂದೂ, ತಾಯಿಯಾದಾಗ ಮಗನ ಅಧೀನೆಯೆಂದೂ ಹೇಳುತ್ತದೆ. ಎಲ್ಲಾ ಸೂತ್ರಗಳು, ಸೂಕ್ತಿಗಳು, ನುಡಿಗಟ್ಟುಗಳು, ಗಾದೆಗಳು, ಸಾಮಾನ್ಯವಾಗಿ ಆಡುವ ಮಾತುಗಳು ಮತ್ತು ಸ್ವತಃ ಸ್ಪಷ್ಟೋಕ್ತಿಗಳು – ಎಲ್ಲವೂ ಅರೆಸತ್ಯಗಳು. ಅವುಗಳಲ್ಲಿ ಮಧ್ಯೆ ಸ್ವಲ್ಪ ಸತ್ಯವಿರುತ್ತದೆ. ಕೆಲವೊಮ್ಮೆ ಇವುಗಳನ್ನು ಉದ್ಧರಿಸುವುದು ನಮಗೆ ಉಪಯುಕ್ತವಾಗಿ ಕಾಣಿಸುತ್ತದೆ. ಆದರೆ ಅವುಗಳ ಅಂತರಾಳದಲ್ಲಿ ಅಸತ್ಯವೂ ಉಂಟು. ಇವೆಲ್ಲದರ ಪೂರ್ತಿ ಅರ್ಥವನ್ನು ತಿಳಿದುಕೊಳ್ಳಲು ನಾವು ಪ್ರಯತ್ನಿಸಬೇಕು.

ನಮ್ಮೆದುರಿಗಿರುವ ಸುಧಾರಣಾ ಕ್ರಮದ ಪ್ರಕಾರ, ಒಬ್ಬ ಮಹಿಳೆಯು ಆಸ್ತಿಯನ್ನು ತನ್ನ ಪೂರ್ಣ ಹಕ್ಕಿನಿಂದ ಪಡೆಯುತ್ತಾಳೆ, ಅದನ್ನು ತನ್ನ ಇಷ್ಟದಂತೆ ವಿನಿಯೋಗಮಾಡಲು ಸಮರ್ಥಳಾಗಿರುತ್ತಾಳೆ. ಈ ಹಕ್ಕುಗಳು ಯಾವಾಗ ಜಾರಿಗೆ ಬರುತ್ತವೆ ಎಂಬುದನ್ನು ಕಾನೂನು ಸಚಿವರು ವಿವರಿಸುತ್ತಾರೆಯೆ ಎಂದು

ನೋಡಲು ನಾನು ಪ್ರಯತ್ನಿಸುತ್ತಿದ್ದೇನೆ. ಒಂದು ವೇಳೆ ಇದನ್ನು ಅಂಗೀಕರಿಸಿದ ನಂತರ ಒಬ್ಬ ಮನುಷ್ಯನು ಮೃತಪಟ್ಟು, ಅವನ ವಿಧವೆ ಪತ್ನಿಯು ಆಸ್ತಿಯನ್ನು ಪಡೆಯುತ್ತಾಳೆ ಎಂದಿಟ್ಟುಕೊಳ್ಳೋಣ. ಒಂದು ವರ್ಷದ ಹಿಂದೆ ಪತಿಯು ಮೃತನಾದ ವಿಧವೆ ಪತ್ನಿಗಿರುವ ಹಕ್ಕುಗಳೊಂದಿಗೆ ಅದು ಹೇಗೆ ಹೋಲಿಕೆಗೆ ನಿಲ್ಲುತ್ತದೆ? ಎರಡನೆಯ ಬಗೆಯವರಿಗೆ ಸೀಮಿತ ಸಂಪದಾಸ್ತಿಯಿರುತ್ತದೆ. ಇಲ್ಲಿ ಜಾರಿಗೆ ತರಲು ಬಯಸಿರುವ ಬದಲಾವಣೆ ಏನು? ಕೇವಲ ಸೀಮಿತ ಸಂಪದಾಸ್ತಿಯಿದ್ದ ವಿಧವೆಯರು ಅದನ್ನು ಪೂರ್ಣ ಹಕ್ಕುಗಳ ಸಂಪದಾಸ್ತಿಯನ್ನಾಗಿ ಪರಿವರ್ತಿಸಿ, ಅದನ್ನು ದಾನ, ಮಾರಾಟ, ಅಡಮಾನ, ಮುಂತಾದ ಹಲವು ರೀತಿಗಳಲ್ಲಿ ವಿನಿಯೋಗ ಮಾಡಲು ಹಕ್ಕು ಪಡೆಯುತ್ತಾರೆಯೆ? ಕುಟುಂಬದ ಹಿತಾಸಕ್ತಿಗಳ ಕಾನೂನುಸಮ್ಮತ ಅಗತ್ಯದ ವಿವಕ್ಷೆಯಿಲ್ಲದೆ ಅವಳು ಆ ಕ್ರಮಗಳನ್ನು ಕೈಗೊಳ್ಳಬಹುದೆ? ಇಲ್ಲವೇ? ನನ್ನೆದುರಿಗಿರುವ ಮಸೂದೆಯ ಪುಟಗಳನ್ನು ತಿರುವುಹಾಕುತ್ತಾ ಈ ವಿಷಯವನ್ನು ತಿಳಿದುಕೊಳ್ಳಲು ನಾನು ಪ್ರಯತ್ನಿಸುತ್ತಿದ್ದೇನೆ. ಆದರೆ ಅದಿನ್ನೂ ನನಗೆ ಅರ್ಥವಾಗಿಲ್ಲ. ಮಸೂದೆಯ ಸೂಚಕರು ಚರ್ಚೆಗೆ ಉತ್ತರ ನೀಡುವಾಗ ಈ ವಿಚಾರವಾಗಿ ವಿಸ್ತರಿಸುತ್ತಾರೆ ಎಂದು ಆಶಿಸುತ್ತೇನೆ.

ಮಗಳ 'ಹಕ್ಕು' ಗಳನ್ನು ಕುರಿತು ನಮಗೆ ಆಳವಾದ ಭಾವನೆಗಳಿವೆ. ಇಂಗ್ಲಿಷ್ ಜನರೊಂದಿಗೆ ಮಾತನಾಡುವಾಗ ಅಥವಾ ವಿದೇಶದಿಂದ ಬರುವ ಪಂಡಿತರು ಮತ್ತು ವಿದ್ವಾಂಸರೊಂದಿಗೆ ಭಾರತೀಯ ಪರಿಸ್ಥಿತಿಗಳು ಮತ್ತು ಸಮಾಜವನ್ನು ಕುರಿತು ಮಾತನಾಡುವಾಗ, ನನ್ನದೇ ಪದ್ಧತಿಯನ್ನು ಎಷ್ಟು ಹೊಗಳಿಕೊಂಡರೂ ನನಗೆ ಬಳಲಿಕೆಯಾಗುವುದಿಲ್ಲ. ಯಾವುದಾದರೂ ಒಂದು ಪದ್ಧತಿಯ ಆಧಾರವನ್ನು ಅರ್ಥಮಾಡಿಕೊಳ್ಳಬೇಕಾದರೆ, ಅದರ ಸಾಮಾಜಿಕ ರೂಢಿಗಳು ಅಥವಾ ಆಚರಣೆಗಳನ್ನು ನೋಡಬೇಕಾದರೆ, ಅದನ್ನು ಇಂದು ಅದಿರುವ ಕುಲಗೆಟ್ಟರೂಪದಲ್ಲಿ ತೆಗೆದುಕೊಳ್ಳಬಾರದು. ಹಿಂದೆ ಅದಿದ್ದ ನಿರ್ಮಲ, ಶುದ್ಧ, ಭವ್ಯ, ಸ್ಥಿತಿಯಲ್ಲಿ ತೆಗೆದುಕೊಳ್ಳಬೇಕು. ಬಾಲ್ಯವಿವಾಹ ಒಂದು ಅತ್ಯುತ್ಕೃಷ್ಟವಾದ ವ್ಯವಸ್ಥೆ ಎಂದು ನನ್ನ ಭಾವನೆ. ನಮ್ಮ ಪ್ರಾಚೀನರು ಅದನ್ನು ಹಾಗೆ ಕಲ್ಪಿಸಿದುದಕ್ಕೆ ಕಾರಣ, ಅದು ಸರಾಸರಿ ಗಂಡು ಮತ್ತು ಸರಾಸರಿ ಹೆಣ್ಣು ಮದುವೆಯಾಗಲು ಉತ್ತಮವಾದ ವಿಧಾನ ಎಂದು ಅರಿತುಕೊಂಡದ್ದು. ಮದುವೆ ಮಾಡಿದ ಮೇಲೆ ಮಗುವನ್ನು ಇನ್ನೊಂದು ಕುಟುಂಬದಲ್ಲಿ ಕಸಿಕಟ್ಟಬೇಕು. ಗಿಡವು ಎಳೆಯದಾಗಿರುವಾಗ ಕಸಿಕಟ್ಟಬೇಕೇ ಹೊರತು, ಬಲಿತು ಮರವಾದ ಮೇಲಲ್ಲ. ಆದರೆ ಈಗ ಪರಿಕಲ್ಪನೆ ತುಂಬಾ ಬದಲಾಗಿದೆ. ಈಗ ನಾವು ಮದುವೆ ಮಾಡಿಕೊಂಡು ಮಕ್ಕಳನ್ನು ಹೆತ್ತುಕೊಳ್ಳುವುದಕ್ಕಿಂತ ಬ್ರಹ್ಮಚಾರಿಗಳಾಗಿಯೇ ಇದ್ದು ಇತರರ ಪತ್ನಿಯರನ್ನು ಟೀಕಿಸುವುದರಲ್ಲಿ ಹೆಚ್ಚು ಸಂತೋಷಪಡುವ ಒಂದು ಯುಗದಲ್ಲಿ ಜೀವಿಸುತ್ತಿದ್ದೇವೆ. ಅದರಿಂದಾಗಿ ನಮ್ಮ ಆದರ್ಶಗಳು ಬದಲಾಗಿವೆ. ಆದ್ದರಿಂದ ಬಾಲ್ಯವಿವಾಹ ತತ್ವವು ನಮಗೆ ಕಡ್ಡಾಯವೇನಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ತನಗಿಷ್ಟ ಬಂದಂತೆ ಜೀವನವನ್ನು ರೂಪಿಸಿಕೊಳ್ಳಲು ಸ್ವಾತಂತ್ರ್ಯವಿದೆ, ಸಮಾಜವು ಯಾವುದೇ ಬಾಧ್ಯತೆಯನ್ನು ಹೊರಿಸಿಲ್ಲ. ಸಾಮಾಜಿಕ ಪರಿಸ್ಥಿತಿಗಳು ಬದಲಾಗಿವೆ. ಈ ಪರಿಸ್ಥಿತಿಯಲ್ಲಿ ನಾವು ಗತಸಂಪ್ರದಾಯದ ಗತಕಾಲದ ರೂಢಿಗಳ, ಘಟನೆಗಳ ಬಲಿಗಳಾಗಬಾರದು.

ಆದರೆ ಇಂದು ಕಂಡುಬರುತ್ತಿರುವ ಸಂಗತಿಗಳನ್ನು ಕುರಿತು ವ್ಯವಹರಿಸುವುದು ಹೇಗೆ? ಅಷ್ಟೊಂದು ಜನ ಹೆಣ್ಣುಮಕ್ಕಳು ಅಷ್ಟೊಂದು ಜನ ಸೋದರಿಯರು ಸೋಮಾರಿಗಳಾಗಿ ಬೆಳೆಯುತ್ತಿದ್ದಾರೆ. ತಮ್ಮ ಮನೆಗಳಲ್ಲಿ ಕೊಳೆಯುತ್ತಿದ್ದಾರೆ. ನಮ್ಮಲ್ಲಿರುವ ಪದ್ಧತಿಗಳನ್ನು ಕುರಿತು ಇತರರ ಎದುರಿಗೆ ಹೊಗಳಿಕೊಳ್ಳುವಾಗ, ನಮ್ಮ ಸೋದರಿಯರು, ಹೆಣ್ಣುಮಕ್ಕಳು ಮತ್ತಿತರ ಬಂಧುಗಳು ಯಾವುದೇ ಪರಿಹಾರ ಕಾಣದೆ ಮನೆಗಳಲ್ಲಿ ಕೊಳೆಯುತ್ತಿರುವುದರ ಕಡೆಗೆ ಕಣ್ಣುಮುಚ್ಚಿಕೊಂಡಿರಲು ಸಾಧ್ಯವಿಲ್ಲ. ಈಚೆಗೆ ನಾನು ನಮ್ಮ ಹೆಂಗಸರಿಗೆ

ಪ್ರೇಮ–ಮುಷ್ಕರವನ್ನು ಸಲಹೆ ಮಾಡಿದೆ. ನಾನು ಯೋಚಿಸಿರುವ ಏಕೈಕ ಮದ್ದು ಅದು; ಈ ವ್ಯವಸ್ಥೆಗೆದುರಾಗಿ ಪ್ರಯೋಗಿಸಬಹುದಾದ ಚಿಕಿತ್ಸಕ ಕ್ರಮ. "ದ ಇಂಪ್ರೆಗ್ನಬಲ್ ವಿಮೆನ್" ಎಂಬ ಪುಸ್ತಕವನ್ನು ಓದಿದ್ದೆ. ಆಗ ನಾನು ಅಹಮದ್ ನಗರ ಕೋಟೆಯಲ್ಲಿದ್ದೆ. ಇಂಗ್ಲೆಂಡಿನಲ್ಲಿ ಯುದ್ಧ ನಡೆದಿತ್ತು. ಸ್ತ್ರೀಯರು ಆ ಯುದ್ಧವನ್ನು ತಡೆಯಲು ಬಯಸಿದರು. ಅವರು ಹೇಗೆ ಅದನ್ನು ತಡೆಯುವುದು? ಗಂಡಸರು ದುರಾಶಾಪೀಡಿತರಾಗಿದ್ದಾರೆ. ಅವರಲ್ಲಿ ಜಗಳಗಂಟತನವಿದೆ. ರಕ್ತದಾಹವಿದೆ. ಅವರು ಯುದ್ಧಮಾಡಲು ಬಯಸುತ್ತಾರೆ. ತಮ್ಮಲ್ಲಿರುವ ಹುಲಿಯನ್ನು ಮಂಗವನ್ನು ಇತರರಲ್ಲಿರುವ ಹುಲಿ ಮತ್ತು ಮಂಗಗಳ ಶಕ್ತಿಯೊಂದಿಗೆ ತೂಗಿ ನೋಡಲು ಬಯಸುತ್ತಾರೆ. ಆದ್ದರಿಂದ ಹೆಂಗಸರು ಹೇಳಿದರು: ನಾವು ಪ್ರೇಮ ಮುಷ್ಕರ ಹೂಡೋಣ. ತರುಣಿಯು ತನ್ನ ಪ್ರೇಮಿಯೊಂದಿಗೆ ಮಾತನಾಡುವುದಿಲ್ಲ; ಪತ್ನಿಯು ಪತಿಯೊಂದಿಗೆ ಮಾತನಾಡುವುದಿಲ್ಲ; ಯಾವ ತಾಯಿಯೂ ಮಗನೊಂದಿಗೆ ಮಾತನಾಡುವುದಿಲ್ಲ. ಗಂಡಸರನ್ನು ಬಹಿಷ್ಕರಿಸಲಾಗುತ್ತದೆ. ಇನ್ನೇನು ಪ್ರಾರಂಭವಾಗಬೇಕಾಗಿದ್ದ ಯುದ್ಧವನ್ನು ರದ್ದುಪಡಿಸುವವರೆಗೂ ಸ್ತ್ರೀ ಪುರುಷರ ನಡುವೆ ಸಾಮಾಜಿಕ ಜೀವನವೇ ನಿಂತುಹೋಯಿತು. ಈ ಗಂಡಸರೊಂದಿಗೆ ನಾವು ಬೆರೆಯುವುದಿಲ್ಲ ಎಂದು ಅವರು ಹೇಳಿಬಿಟ್ಟರು. ಆದರೆ ಈ ವಿಚಾರವನ್ನು ಇನ್ನೂ ಮುಂದಕ್ಕೆ ನಾನು ನೂಕುವುದಿಲ್ಲ. ಒಂದು ಹಳ್ಳಿಯಲ್ಲಿ, ನಗರ, ಮೊಹಲ್ಲಾದಲ್ಲಿ ಒಬ್ಬ ಹೆಂಗಸಿನ ಮೇಲೆ ದೌರ್ಜನ್ಯ ನಡೆದರೆ, ನಮ್ಮೆಲ್ಲರ ಪತ್ನಿಯರೂ ಒಂದು ಮಂಡಲಿಯಾಗಿ ಮನೆಬಿಟ್ಟು ಹೊರಟುಹೋಗಲಿ. ೨೪ ಗಂಟೆಗಳ ಕಾಲ ಅಲ್ಲಿ ಇರಲಿ. ಅಪರಾಧಮಾಡಿದ ಗಂಡನಿಗೆ ಖಂಡಿತವಾಗಿಯೂ ವಿವೇಕ ಮೂಡುತ್ತದೆ. ಅವನು ದಾರಿಗೆ ಬರುತ್ತಾನೆ. ಇತರ ಎಲ್ಲಾ ಗಂಡಸರು ಅವನ ಮೇಲೆ ನೈತಿಕ ಪ್ರಭಾವ– ಒತ್ತಡ ತರುತ್ತಾರೆ. ಅವರು ಹೇಳುತ್ತಾರೆ, "ಅಯ್ಯ, ನೀನು ಏನು ಕೆಲಸ ಮಾಡುತ್ತಿದ್ದೀಯೆ? ನಮ್ಮ ಮನೆಗಳೆಲ್ಲ ಮುರಿದುಹೋಗಿವೆಯೆಲ್ಲ. ನಿನ್ನ ಪತ್ನಿಯನ್ನು ನೀನು ಸ್ವೀಕರಿಸುವವರೆಗೂ ಅವು ಹಾಗೆಯೇ ಬಿದ್ದಿರುತ್ತವಲ್ಲ."

ಈಗ ನೀವು ನಗಬಹುದು, ಆದರೆ ಬೇರೆ ಏನು ಮಾಡುತ್ತೀರಿ? ಆ ಮನುಷ್ಯನ ಮೇಲೆ ಮೊಕದ್ದಮೆ ಹೂಡುತ್ತೀರಾ? ಅವನೂ ಆರೋಪಗಳ ಮಾಲೆಯನ್ನೇ ತರುತ್ತಾನೇ ಪತ್ನಿಯ ಮೇಲೆ. ಪತ್ನಿಯ ಮೇಲೆಯೂ ಮೊಕದ್ದಮೆ ಹಾಕುತ್ತೀರಾ? ಅವಳೂ ಅನೇಕಾನೇಕ ಆರೋಪಗಳನ್ನು ತರುತ್ತಾಳೆ ಪತಿಯ ಮೇಲೆ. ಗಂಡ–ಹೆಂಡತಿಯರ ನಡುವಣ ಜಗಳದಲ್ಲಿ ತಲೆಹಾಕಬಾರದು. ಒಮ್ಮೆ ಒಬ್ಬ ಗಂಡನು ತನ್ನ ಹೆಂಡತಿಗೆ ಹೊಡೆಯುತ್ತಿದ್ದುದನ್ನು ನಾನು ನೋಡಿದೆ. ನಾನು ಅದನ್ನು ತಡೆಯಲು ಹೋದೆ. ಒಡನೆಯೇ ಆ ಹೆಂಗಸು ಸರಕ್ಕನೆ ತಿರುಗಿ ನನ್ನ ಮೇಲೆ ಹಸಿದ ತೋಳದ ಹಾಗೆ ಬಂದಳು. "ನನ್ನನ್ನು ಹೊಡೆಯುತ್ತಿರುವವನು ನನ್ನ ಗಂಡ, ಮಧ್ಯೆ ಬಾಯಿಹಾಕಲು ನೀನು ಯಾರು?" ಆದ್ದರಿಂದ ಗೃಹಕೃತ್ಯ ವಿಷಯಗಳಲ್ಲಿ ನೀವು ಮಧ್ಯಪ್ರವೇಶ ಮಾಡುವುದು ಸುಲಭವಲ್ಲ. ಕೌರವ–ಪಾಂಡವರೇ ಪರಸ್ಪರ ಯುದ್ಧ ಮಾಡುವಾಗ ಹೀಗೆ ಹೇಳುತ್ತಿದ್ದರು "ನಾವು ೫ ಜನರ ಮೇಲೆ ೧೦೦ ಜನ, ಆದರೆ ಮೂರನೆಯ ಒಬ್ಬ ವೈರಿಯೆದುರಿಗೆ ನಾವು ೧೦೫ ಜನ." ಆದ್ದರಿಂದ ಗೃಹಕೃತ್ಯದ ಜಗಳದಲ್ಲಿ ನಾವು ಬಾಯಿಹಾಕಲು ಹೋದರೆ ಇಬ್ಬರೂ ನಮಗೆ ವಿರೋಧಿಗಳಾಗುತ್ತಾರೆ. ಆದ್ದರಿಂದ ಮಗಳು ಸಂತೋಷವಾಗಿರಬೇಕಾದರೆ ಅವಳಿಗೆ ತನ್ನ ಸ್ವಯಂ ಹಕ್ಕಿನಿಂದಲೇ ಆಸ್ತಿ ಬರಬೇಕು. ಪತ್ನಿಯ ಸ್ಥಾನವು ಅತ್ಯಂತ ದಾಸ್ಯ ಸ್ಥಿತಿಯದು ಎಂದು ನನಗನ್ನಿಸುತ್ತದೆ. ಅವಳ ಅಕ್ಕನ ಅಥವಾ ತಂಗಿಯ ಮಗ ಬರುತ್ತಾನೆ. ಆಕೆಯ ಸಹೋದರನೇ ಬರುತ್ತಾನೆ. ಅವರಿಗೆ ಒಂದು ಒಳ್ಳೆಯ ಉಡುಗೊರೆ ಕೊಡಬೇಕೆಂದು ಅವಳಿಗೆ ಇಷ್ಟ, ಆದರೆ ಐದು ರೂಪಾಯಿ ಬೇಕಾದರೂ ಅವಳು ತನ್ನ ಗಂಡನ ಮಾತಿಗೆ ಕಾಯಬೇಕು. ಅವನಿಗೋ ನೂರಾರು

ಮನಃಸ್ಥಿತಿಗಳು. ಒಳ್ಳೆಯ ಮನಃಸ್ಥಿತಿಯಲ್ಲಿರಬಹುದು, ಇಲ್ಲವೆ ಕೆಟ್ಟ ಮನಃಸ್ಥಿತಿಯಲ್ಲಿರಬಹುದು. ಆದ್ದರಿಂದ ತನ್ನದು ಎಂದು ಹೇಳಿಕೊಳ್ಳುವಂತಹ ಸ್ವಲ್ಪ ಆಸ್ತಿ ಅವಳಿಗಿರಬೇಕು. ಅವಳು ತನ್ನ ಆಭರಣಗಳನ್ನು ಮಾರಿಬಿಡಬೇಕೆಂದು ಹೇಳುವಿರಾ? ವಿಚಾರವೇ ವಿಚಿತ್ರವಾಗಿದೆ. ಯಾವ ಮಹಿಳೆಯು ತನ್ನ ಆಭರಣಗಳನ್ನು ಮಾರುವುದಿಲ್ಲ, ಪತಿಯು ಮೃತನಾದ ಮೇಲೆಯೂ ಅಷ್ಟೆ. ಏಕೆಂದರೆ ಅವನ ನಿಧನಾನಂತರ ಅವಳ ಮತ್ತು ಅವನ ಐಕ್ಯತೆಯ ಸಂಕೇತ ಆ ಆಭರಣಗಳು ಅವಳ ಬಳಿ ಇರುತ್ತವೆ. ನನಗದು ಗೊತ್ತು. ಅನೇಕ ಮಹಿಳೆಯರೊಂದಿಗೆ ನಾನು ಮಾತನಾಡಿದ್ದೇನೆ.

**ಅಧ್ಯಕ್ಷರು** : ಸನ್ಮಾನ್ಯ ಸದಸ್ಯರು ಇನ್ನೂ ಬಹಳ ಸಮಯ ಮಾಡನಾಡುವುದಿದೆಯೇ?

**ಡಾ. ಬಿ. ಪಟ್ಟಾಭಿ ಸೀತಾರಾಮಯ್ಯ :** ಕ್ಷಮಿಸಬೇಕು, ನಾನು ಸಮಯವನ್ನೇ ನೋಡಲಿಲ್ಲ. ನಾನು ಮಾತನ್ನು ಮುಂದುವರಿಸಲು ಬಯಸುತ್ತೇನೆ.

**ಅಧ್ಯಕ್ಷರು** : ಈಗ ಸದನವು ಅರ್ಧ ಗಂಟೆ ಮುಂದಕ್ಕೆ ಹೋಗುತ್ತದೆ. ಮತ್ತೆ ಐದೂವರೆ ಗಂಟೆಗೆ ಸೇರುತ್ತದೆ.

ಆಮೇಲೆ ಸದನವು ಸಂಜೆ ಐದೂವರೆ ಗಂಟೆಯವರೆಗೆ ಮುಂದಕ್ಕೆ ಹೋಯಿತು.

ಸದನವು ಐದೂವರೆ ಗಂಟೆಗೆ ಸ್ಪೀಕರರ (ಗೌರವಾನ್ವಿತ ಶ್ರೀ ಜಿ.ವಿ. ಮಾವಳಂಕರ) ಅಧ್ಯಕ್ಷತೆಯಲ್ಲಿ ಮತ್ತೆ ಸೇರಿತು.

**ಡಾ. ಬಿ. ಪಟ್ಟಾಭಿ ಸೀತಾರಾಮಯ್ಯ :** ಮಾನ್ಯ ಅಧ್ಯಕ್ಷರೆ, ಪಿತ್ರಾರ್ಜಿತದಲ್ಲಿ ಮಗಳಿಗೆ ಒಂದು ಪಾಲು ಕೊಡುವ ಪ್ರಶ್ನೆಯನ್ನು ನಾನು ವಿವೇಚಿಸುತ್ತಿದ್ದೆ. ನನ್ನ ಗೆಳತಿಯರನ್ನು ನಾನು ಆಗಾಗ ಹೀಗೆ ಛೇಡಿಸುವುದುಂಟು : "ನಿಮಗೆ ಪಾಲೇಕೆ ಬೇಕು? ನೀವು ಬೇರೊಂದು ಮನೆಯ ಮಹಾರಾಣಿಯಾಗುವಿರಿ. ನನ್ನ ಪತ್ನಿ ನನ್ನ ಮನೆಯ ಮಹಾರಾಣಿಯಾಗಿದ್ದಾಳೆ, ಅವಳು ಕುಟುಂಬದ ಪ್ರಶ್ನಾತೀತ ನಾಯಕ. ನನ್ನ ಪೆಟ್ಟಿಗೆಯ ಕೀಲಿಕೈ ಅವಳ ಬಳಿ ಇರುತ್ತದೆ. ಹಾಗೆಯೇ ಇನ್ನೊಂದು ಮನೆಯ ಕಬ್ಬಿಣದ ಪೆಟ್ಟಿಗೆಯ ಕೀಲಿಕೈ ನಿಮಗೆ ಸಿಕ್ಕುತ್ತದೆ." ಆದರೆ ಅದಷ್ಟೇ ಸಾಲದು. ಪತಿಯು ಎಷ್ಟೇ ಪ್ರೀತಿಸುವವನಾದರೂ ಸಂಪೂರ್ಣವಾಗಿ ಅವನ ಮೆಚ್ಚುಗೆಯಲ್ಲಿರುವುದು ಸರಿಯಲ್ಲ. ಹೆಂಗಸಿಗೆ ತನ್ನದೆ ಆದ ಹಕ್ಕಿರಬೇಕು. ಹೆಣ್ಣು ತನ್ನನ್ನು ತಾನು ಹಿಂದಿರಿಸಿಕೊಳ್ಳಬೇಕೆಂಬ ಸಿದ್ಧಾಂತವನ್ನು ನಮ್ಮ ದೇಶದಲ್ಲಿ ಮತ್ತು ಸಮಾಜದಲ್ಲಿ ಯುಗಾಂತರಗಳಿಂದ ಆಚರಿಸಿಕೊಂಡು ಬರಲಾಗುತ್ತಿದೆಯಾದರೂ ಇಂದು ಆತ್ಮಗೌರವದ ಪರಿಕಲ್ಪನೆಯು ಪರಿಸ್ಥಿತಿಯನ್ನು ಸಂಪೂರ್ಣವಾಗಿ ಬದಲಾಯಿಸಿದೆ. ತನ್ನ ಹಕ್ಕಿನಂತೆ, ತನ್ನ ಇಷ್ಟಪ್ರಕಾರ ನಿರ್ವಹಿಸಿಕೊಳ್ಳಲು ಸ್ವಲ್ಪ ಹಣ ತನ್ನ ಬಳಿ ಇದೆ ಎಂದು ಹೇಳಲು ಅವಳು ಶಕ್ತಳಾಗಬೇಕು.

ಮಗಳು ಪಾಲುತೆಗೆದುಕೊಳ್ಳಲು ಬಂದರೆ ಗಂಡುಮಕ್ಕಳಿಗೆ ಎಲ್ಲರಿಗೂ ಸೇರಬೇಕಾದ ಪಾಲಿನಲ್ಲಿ ಕೊರತೆ ಮಾಡಿದಂತಾಗುವುದಿಲ್ಲವೆ ಎಂಬ ಒಂದು ಸಣ್ಣ ಸಂದೇಹ ನನ್ನನ್ನು ಕಾಡುತ್ತಿತ್ತು. ಆದರೆ ನಮ್ಮ ಮುಂದಿರುವ ಮಸೂದೆಯು, ತಂದೆಯ ಆಸ್ತಿಯಲ್ಲಿ ಮಗಳಿಗೆ ಪಾಲು ಕೊಡುವ ಹಾಗೆಯೇ ತಾಯಿಯ ಸ್ತ್ರೀ-ಧನದಲ್ಲಿ ಗಂಡುಮಕ್ಕಳಿಗೆ ಪಾಲು ಕೊಡುತ್ತದೆ. ಈಗ ಸಮಾನತೆಯು ಸಾಧಿತವಾಗಿದೆ, ತಂದೆತಾಯಿಯರು ಸಮಾನ ಸಂಖ್ಯೆಯಲ್ಲಿ ಗಂಡು-ಹೆಣ್ಣುಮಕ್ಕಳನ್ನು ಪಡೆಯಬೇಕೆಂದು ಸೂಚನೆಯನ್ನು ಕೊಡುತ್ತದೆ! ಅದರಿಂದ ನಮ್ಮ ಅರ್ಥವ್ಯವಸ್ಥೆ ಸರಿದೂಗುತ್ತದೆ. ನಾನು ನಮ್ಮ ಸಂತಾನವನ್ನು ಏರುಪೇರಿಲ್ಲದಂತೆ ಸರಿದೂಗಿಸಿಕೊಳ್ಳಬೇಕಷ್ಟೆ

ಆದರೆ ಈಗ ಇನ್ನೊಂದು ಕಷ್ಟವಿದೆ. ಈಗಿರುವಂತೆ, ಇನ್ನು ಮುಂದೆ ಮದುವೆಯ ಕರೆಯೋಲೆಗಳಲ್ಲಿ ನನ್ನ ಮಗಳನ್ನು ಇಂಥವರಿಗೆ ವಿವಾಹಮಾಡಿಕೊಡಲಾಗುತ್ತದೆ ಇತ್ಯಾದಿಯಾಗಿ ಹೇಳುವಂತಿಲ್ಲ. ಈಗ

ಹೊಸ ವಾಕ್ಯಸರಣಿಯನ್ನು ಅಳವಡಿಸಿಕೊಳ್ಳಬೇಕು: ನನ್ನ ಮಗಳೂ ಇಂಥವರೂ ಒಬ್ಬರನ್ನೊಬ್ಬರು ಮದುವೆಯಾಗುತ್ತಿದ್ದಾರೆ. ನಮ್ಮ ಹೊಸ ಭಾಷೆ ಹೀಗಾಗುತ್ತದೆ. ಇನ್ನು ಒಂದು ವಾಸ್ತವ ಸಂಗತಿ ಇದ್ದೇ ಇದೆ. ಗಂಡಂದಿರು ತಮ್ಮ ಹೆಂಡತಿಯರ ಮನೆಗೆ ಹೋಗುವ ಮಲಬಾರ್ ಬಿಟ್ಟರೆ ನಮ್ಮ ಹೆಣ್ಣುಮಕ್ಕಳು ಸಾಮಾನ್ಯವಾಗಿ ತಮ್ಮ ಗಂಡನ ಮನೆಗೆ ಹೋಗುತ್ತಾರೆ. ಮಲಬಾರಿನಲ್ಲಿನ ಪರಿಸ್ಥಿತಿ ಸಂಪೂರ್ಣವಾಗಿ ತಲೆಕೆಳಗಾಗಿದೆ, ಆ ಪ್ರಶ್ನೆಯನ್ನು ಪರಿಶೀಲಿಸಲು ಗಂಟೆಗಟ್ಟಲೆಬೇಕು. ತುಂಬಾ ಸ್ವಾರಸ್ಯವಾಗಿರುವ ಆ ವಿಚಾರಕ್ಕೆ ನಾನು ಈಗ ಹೋಗುವುದಿಲ್ಲ. ಮಗಳು ತಂದೆಯ ಮನೆಯಿಂದ ಹೋಗುವಾಗ ಅವರು ಕೊಟ್ಟ ಆಸ್ತಿಯನ್ನು ಅನುಭೋಗಿಸಲು ಆಕೆಗೆ ಸಾಧ್ಯವಾಗುತ್ತದೆಯೇ ಎನ್ನುವುದು ಪ್ರಶ್ನೆ. ನನ್ನ ಅನೇಕ ಮುಸ್ಲಿಂ ಸೋದರ ಸೋದರಿಯರನ್ನು ನಾನು ಕೇಳಿದ್ದೇನೆ. ಎಂದಿನಿಂದಲೂ ಬಂದ ರೂಢಿಯಂತೆ ಮಗಳಿಗೆ ಪಾಲಿನ ಅರ್ಧವನ್ನು, ಮಗನ ಪಾಲಿನ ಅರ್ಧವನ್ನು ಕೊಡುವುದುಂಟಷ್ಟೆ. ಅದನ್ನು ನಿಜವಾಗಿ ವಾಸ್ತವಿಕವಾಗಿ, ಆಕೆ ಅನುಭವಿಸುತ್ತಾಳೆಯೇ? ಪಟ್ಟಣಗಳಲ್ಲಿ ಬಿಟ್ಟರೆ ಬೇರೆ ಕಡೆ ಅವಳಿಗೆ ಅದು ದಕ್ಕುವುದಿಲ್ಲ ಎಂದು ಅವರು ಉತ್ತರ ಕೊಟ್ಟರು. ಹೇಗೋ ಸಹೋದರನು ಆಕೆಯ ಕಣ್ಣು ಒರೆಸಿ ಅವಳ ಆಸ್ತಿಯನ್ನು ನುಂಗಿಬಿಡುತ್ತಾನೆ. ಪರಿಹಾರವೆಂದು ಅಷ್ಟೋ ಇಷ್ಟೋ ಕೊಟ್ಟುಬಿಡುತ್ತಾನೆ. ನೇರವಾಗಿ ಹೀಗಿದೆಯೋ ಇಲ್ಲವೋ ತಿಳಿಯದು. ಆದರೆ ಆ ಅಪಾಯವಂತೂ ಇದ್ದೇ ಇದೆ. ಪಟ್ಟಾದಾರರಲ್ಲಿ ಶೇಕಡಾ ೮೦ ಜನ ೨.೫ ಎಕರೆ ಗದ್ದೆಗೆ ಅಥವಾ ನಾಲ್ಕೈದು ಎಕರೆ ಹೊಲಕ್ಕೆ ಕೇವಲ ೧೦ ರೂಪಾಯಿಗಳನ್ನು ತೆರಿಗೆಯಾಗಿ ಪಾವತಿಮಾಡುತ್ತಾನೆ ಎಂದಮೇಲೆ, ಮಗಳಿಗೆ ಒಂದುಪಾಲು ಕೊಟ್ಟು ಅವಳು ಅದನ್ನು ತನ್ನೊಂದಿಗೆ ಒಯ್ಯುವ ಅಥವಾ ಅನುಭೋಗಿಸುವ ಅವಕಾಶವೆಲ್ಲಿದೆ! ವಾಸ್ತವಿಕತೆಯ ದೃಷ್ಟಿಯಿಂದ ನನಗೆ ತುಂಬಾ ಸಂದೇಹವಿದೆ. ಆದರೆ ತತ್ವತಃ ಅದು ಸರಿ ಎನ್ನುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ.

ಹೀಗೆ ನೀವು ಸಮಾಜದಲ್ಲಿ ಮಹಿಳೆಯರ ಸ್ಥಾನವನ್ನು ಮೇಲಿರಿಸಿ, ಪರಿಪೂರ್ಣ ಆಸ್ತಿ ಹಕ್ಕನ್ನು ಅವಳಿಗೆ ನೀಡಿದಾಗ ಸಹಜವಾಗಿಯೇ ಆತ್ಮಗೌರವದ ದೃಷ್ಟಿಯಿಂದ ಇರಬೇಕಾದ ಕೆಲವು ಹಕ್ಕುಗಳನ್ನು ನೀಡಬೇಕಾಗುತ್ತದೆ. ಮದುವೆಯ ನಿಯಮಗಳು ಗುಲಾಮಗಿರಿಯ ನಿಯಮಗಳಲ್ಲ. ಮದುವೆಗಳು ಸ್ವರ್ಗದಲ್ಲಿ ನಿರ್ಧಾರವಾಗುತ್ತವೆ: ಒಮ್ಮೆ ಪತಿ ಯಾವಾಗಲೂ ಪತಿ, ಒಮ್ಮೆ ಪತ್ನಿ ಸದಾ ಪತ್ನಿ ಹೀಗೆಲ್ಲಾ ಹೇಳಲು ತುಂಬಾ ಚೆನ್ನಾಗಿರುತ್ತದೆ. ಆದರೆ ಪತಿಯು ಕುಡುಕನಾಗಿರುವುದು, ಕ್ರೂರಿಯಾಗಿರುವುದು, ಅನೈತಿಕ ಚಾರಿತ್ರ್ಯ ಉಳ್ಳವನಾಗಿರುವುದು, ಕುಷ್ಠ–ಷಂಡತ್ವ ಮೊದಲಾದ ರೋಗಗಳು ಹೀಗೆ ಅನೇಕ ಸ್ಥಿತಿಗಳನ್ನು ಕಾನೂನು ಸಚಿವರು ಪಟ್ಟಿ ಮಾಡಿದ್ದಾರೆ. ಅದು ಪತಿ–ಪತ್ನಿಯರ ವಿವಾಹ ವಿಚ್ಛೇದನವನ್ನು ಸಮರ್ಥಿಸುವ ಪರಿಸ್ಥಿತಿಗಳು. ಗಂಡಸು ಸ್ವಚ್ಛಂದವಾಗಿ ವಿಹರಿಸುತ್ತಾ, ವಿದೇಶದಲ್ಲಿ ತಂಗಿ, ಅಥವಾ ತನಗಿಷ್ಟಬಂದಂತೆ ಮಾಡುವ ಹಕ್ಕನ್ನು ಪಡೆದಿರುವುದಾದರೆ, ಮೊದಲನೆಯ ಹೆಂಡತಿ ಬದುಕಿರುವಾಗಲೇ ಎರಡನೆಯ ಮದುವೆ ಮಾಡಿಕೊಳ್ಳುವುದಾದರೆ, ಹೆಂಡತಿಗೂ ಮೊದಲನೆಯ ಪತಿ ಬದುಕಿರುವಾಗಲೇ ಎರಡನೆಯ ಪತಿಯನ್ನು ವಿವಾಹವಾಗಲು ಅಷ್ಟೇ ಮಟ್ಟಿಗೆ ಅವಕಾಶವಿರಬೇಕು. ಆ ಪರಿಸ್ಥಿತಿಯನ್ನು ಸ್ವಲ್ಪ ಕಲ್ಪಿಸಿಕೊಳ್ಳಿ. ತರುಣನೊಬ್ಬನು ಹ್ಯಾಟು, ಬೂಟು, ಸೂಟು, ಧರಿಸಿ ಠೀಕಾಗಿ ನಡೆಯುತ್ತಾ, ಪಕ್ಕದಲ್ಲಿ ಸುಂದರವಾದ ನೆರಿಗೆಗಳನ್ನು ಚಿಮ್ಮುವ ಸೀರೆಯನ್ನುಟ್ಟು, ಬರುವ ಹಿಂದೂ ತರುಣಿಯನ್ನು ನೋಡಿದಾಗ ನಾನು ನನ್ನ ಮಿತ್ರರೊಂದಿಗೆ ಹೇಳುವುದುಂಟು: "ನಿಮ್ಮ ಉಡುಗೆಗಳನ್ನು ಸ್ವಲ್ಪ ಅದಲುಬದಲು ಮಾಡುವಿರಾ? ಪತಿಯು ದೋತಿಯನ್ನುಟ್ಟು ಪತ್ನಿಯು ಯೂರೋಪಿಯನ್ ಮಹಿಳೆ ಧರಿಸುವ ಹ್ಯಾಟ್ ಮತ್ತು ಸ್ಕರ್ಟ್ ಧರಿಸಿ ನಡೆದರೆ ಹೇಗೆ ಕಾಣಿಸುತ್ತದೆ?" ಅದು ತಂಬಾ ಅಸಂಗತವಾಗಿ ಕಾಣಿಸುತ್ತದೆ. ಇಂಗ್ಲಿಷ್ ದಾಖಲೆಯ

ಮೇಲೆ ನಿಮ್ಮ ಮಾತೃಭಾಷೆಯಲ್ಲಿ ಸಹಿ ಮಾಡಿದಷ್ಟೇ ಅಸಂಗತವಾಗಿ ತೋರುತ್ತದೆ. ಒಮ್ಮೆ ಒಬ್ಬ ಅಧಿಕಾರಿಯು ಇಂಗ್ಲಿಷ್ ಪತ್ರವೊಂದರಮೇಲೆ ತೆಲುಗಿನಲ್ಲಿ ಸಹಿಮಾಡಬಾರದೆಂದು ಹೇಳಿದರು. ಆಗ ನಾನು ಅದರ ವಿರುದ್ಧ ಸ್ಥಿತಿ, ಅಂದರೆ "ತೆಲುಗು ದಾಖಲೆಯ ಮೇಲೆ ಇಂಗ್ಲಿಷ್‌ನಲ್ಲಿ ಸಹಿಮಾಡುವುದು ಕೂಡ ಅಷ್ಟೇ ಮಟ್ಟಿಗೆ ಅಸಂಗತವಾಗುತ್ತದೆ ಎಂದು ನಾನು ಹೇಳಿದೆ. ಆದ್ದರಿಂದ ನಾವು ನಮ್ಮ ಸೋದರಿಯರಿಗೆ, ತಾಯಂದಿರಿಗೆ, ಹೆಣ್ಣುಮಕ್ಕಳಿಗೆ ಪೂರ್ಣ ಸ್ವಾತಂತ್ರ್ಯವನ್ನು ನೀಡಬೇಕು, ಅವರು ಕಾನೂನಿನ ಪ್ರಕಾರ ಅಗಲಲು, ಅಗತ್ಯ ಬಂದರೆ ವಿಚ್ಛೇದನ ಮಾಡಿಕೊಳ್ಳಲು ಅವಕಾಶ ಕೊಡಬೇಕು. ಆದರೆ ಅನೇಕ ವರ್ಷಗಳಿಂದ ಮಹಿಳೆಯರ ಹಕ್ಕುಗಳಿಗಾಗಿ ಹೋರಾಡುತ್ತಿರುವ ಮತ್ತು ಈಗ ಇಲ್ಲಿರುವ ಪ್ರತಿಷ್ಠಿತ ಮಹಿಳೆಯರು ಒಂದು ಸಂಗತಿಯನ್ನು ಬೋಧಿಸಬೇಕು ಮತ್ತು ಪ್ರಚಾರ ಮಾಡಬೇಕು. ವಿಚ್ಛೇದನ ಅಥವಾ ಡೈವೋರ್ಸ್ ಎನ್ನುವುದು ಒಂದು ಮೀಸಲು ನಿಧಿ ಇದ್ದ ಹಾಗೆ. ಅದನ್ನು ದಿನನಿತ್ಯದ ವೆಚ್ಚಗಳಿಗೆ ಉಪಯೋಗಿಸಿಕೊಳ್ಳಬಾರದು. ಬೇರೆ ರೀತಿಯಾಗಿ ಪರಿಹಾರ ಸಾಧ್ಯವೇ ಇಲ್ಲ ಎಂಬಂತಹ ಕಾರಣಗಳಿದ್ದಾಗ ವಿಚ್ಛೇದನ ಅಂತಿಮ ಮಾರ್ಗವಾಗಬೇಕು. ಸಾರ್ವಜನಿಕ ಅಭಿಪ್ರಾಯ, ವೈಯಕ್ತಿಕ ಪ್ರಭಾವ, ಕುಟುಂಬದ ಒತ್ತಡ ಇವೆಲ್ಲಾ ಇದ್ದೇ ಇವೆ. ಒಬ್ಬ ಗಂಡನಿಗೂ ಹೆಂಡತಿಗೂ ಹಗಲಲ್ಲಿ ನಡೆಯುವ ಜಗಳಗಳು ಸಾಮಾನ್ಯವಾಗಿ ರಾತ್ರಿ ಮುಗಿದು ಹೋಗುತ್ತದೆ. ಆದ್ದರಿಂದ ಈ ಕಲಹಗಳನ್ನು ಮುಂದುವರಿಸುವಲ್ಲಿ ಯಾವ ಪ್ರಯೋಜನವೂ ಇಲ್ಲ. ನಾವು ಅದನ್ನು ಹೆಚ್ಚಾಗಿ ಹಚ್ಚಿಕೊಳ್ಳಬಾರದು. ಅಮೆರಿಕಾದಲ್ಲಿ ಇಂಡಿಯಾನಾ ಪೊಲಿಸ್ ಎಂಬ ರಾಜ್ಯವಿದೆ. ಅಲ್ಲಿ ರೈಲು ನಿಲ್ದಾಣದ ಕೂಲಿಯು "ಇಂಡಿಯಾನಾ ಪೊಲಿಸ್ ಸ್ಟೇಷನ್, ವಿವಾಹ ವಿಚ್ಛೇದನಕ್ಕೆ ಇಪ್ಪತ್ತು ನಿಮಿಷ" ಎಂದು ಕೂಗುತ್ತಿರುತ್ತಾನೆ. ವಿಚ್ಛೇದನ ನ್ಯಾಯಾಲಯವು ರೈಲ್ವೇ ನಿಲ್ದಾಣದಲ್ಲೇ ಇದೆ. ರೈಲಿನಲ್ಲಿ ಬರುವಾಗ ಜಗಳಮಾಡಿಕೊಂಡು ಬಂದ ಪತಿ ಪತ್ನಿಯರು ಇಲ್ಲಿ ವಿಚ್ಛೇದನಕ್ಕೆ ಅರ್ಜಿಹಾಕಿ, ರೈಲು ಹೊರಡುವಷ್ಟರಲಿ ವಿಚ್ಛೇದನದ ತೀರ್ಪುಪಡೆಯಬಹುದು. ನಮ್ಮ ಸ್ಥಿತಿ ಹಾಗಾಗಬಾರದು. ನಮ್ಮ ವಿಚ್ಛೇದನವು ಒಂದು ಬಗೆಯ ಮೀಸಲು ನಿಧಿ, ಒಬ್ಬ ಹೆಣ್ಣಿನ ಮೈಮೇಲಿನ ಒಡವೆಗಳಂತೆ, ಅತ್ಯಂತ ಅಗತ್ಯವಾದ ಪರಿಸ್ಥಿತಿಗಳಲ್ಲಿ ಮಾತ್ರ ಅದನ್ನು ತೆಗೆದು ಉಪಯೋಗಿಸಬಹುದು. ಎಂದಿಗೂ ಅದನ್ನು ಲಘುವಾಗಿ ಬಳಸಬಾರದು.

ದತ್ತುಸ್ವೀಕಾರ ತುಂಬಾ ಕಷ್ಟದ ಪ್ರಶ್ನೆಯಾಗಿದೆ. ಸನ್ಮಾನ್ಯ ಕಾನೂನು ಸಚಿವರು ಇಲ್ಲಿ ದಾಯಭಾಗಕ್ಕಿಂತ ಮಿತಾಕ್ಷರವನ್ನು ಹೆಚ್ಚಾಗಿ ಅನುಸರಿಸಿದ್ದಾರೆ. ದಾಯಭಾಗವು ಬಂಗಾಳದಲ್ಲೂ, ಮಿತಾಕ್ಷರವು ದಕ್ಷಿಣ ಭಾರತದಲ್ಲೂ ತುಂಬಾ ಪ್ರಚಲಿತವಾಗಿದೆ. ಮುಂಬೈಯಲ್ಲಿ ಮಯೂಖ ಎಂಬ ಹೆಸರಿನ ಇನ್ನೊಂದು ಕಾನೂನಿದೆ. ಅದರ ಪ್ರಕಾರ ಬ್ರಾಹ್ಮಣೇತರರಲ್ಲಿ ಪತಿಯು ತನ್ನ ಪತ್ನಿಗೆ ಮಗುವನ್ನು ದತ್ತಕ ಪಡೆಯಲು ಅನುಮತಿ ಕೊಡಬೇಕಾದ ಅವಶ್ಯತೆ ಇಲ್ಲ. ಸುಮಾರು ಹತ್ತು ಅಥವಾ ಹನ್ನೆರಡು ವರ್ಷಗಳ ಹಿಂದೆ ಪ್ರಿವಿ ಕೌನ್ಸಿಲಿನಲ್ಲಿ ಒಂದು ತೀರ್ಪನ್ನು ನಾನು ಓದಿದ್ದೆ. ಆ ಕಾನೂನು ಇತರ ಭಾಗಗಳಲ್ಲೂ ಜಾರಿಗೆ ಬರಬೇಕು. ಮಿತಾಕ್ಷರದ ಪ್ರಕಾರ ಎಲ್ಲಿ ದತ್ತುಸ್ವೀಕಾರ ಸಾಧ್ಯವಿಲ್ಲವೋ ಅಲ್ಲೆಲ್ಲಾ ಈ ಕಾನೂನು ಚಾಲ್ತಿಗೆ ಬರಬೇಕು. ಒಂದು ಕುಟುಂಬವು ಒಬ್ಬ ಹುಡುಗನನ್ನು ದತ್ತಕ ಪಡೆಯಬೇಕೆಂದು ಏಕೆ ಬಯಸುತ್ತದೆ? ವಂಶವನ್ನು ಮುಂದುವರಿಸುವ ಸಲುವಾಗಿ. ವಂಶವನ್ನು ಮುಂದುವರಿಸುವುದು ಮೃತನಾದ ವ್ಯಕ್ತಿಗೆ ಸೇರಿದ ಹಕ್ಕಿನಂತೆಯೇ ವಿಧವೆ ಪತ್ನಿ ಹಕ್ಕು ಅಲ್ಲವೇ? ವಂಶವನ್ನು ಮುಂದುವರಿಸಬೇಕಾಗಿದ್ದದ್ದು ಗಂಡಸಿಗೆ ವಿಶಿಷ್ಟವಾದ ಹಕ್ಕೇನು? ವಿಧವೆ ಪತ್ನಿಗೆ ಆ ಹಕ್ಕು ಇಲ್ಲವೇ? ಹುಡುಗನು ಆಸ್ತಿಯನ್ನು ಪಡೆದುಕೊಳ್ಳಬಹುದಾದರೆ ಗಂಡನು ಬರಹದಲ್ಲಿ ನೀಡಿದ ಅಥವಾ ನೋಂದಾಯಿಸಿದ ಅಂದರೆ ಯಾವುದೇ ಇಷ್ಟಪತ್ರದಲ್ಲಿ ಅಥವಾ ಉಯಿಲಿನಲ್ಲಿ ಅನುಮತಿಯನ್ನು ದಾಖಲುಪಡಿಸಿರದಿದ್ದರೂ ಪತ್ನಿಯು ತನ್ನ ಸ್ವಂತ ಹಕ್ಕಿನಿಂದ ದತ್ತುಸ್ವೀಕಾರ ಮಾಡಬಾರದೆ?

ಇಂಗ್ಲಿಷ್ ಕಾನೂನಿನಲ್ಲಿ ಬಾಯಿಮಾತಿನಲ್ಲಿ ಹೇಳಿದ ಉಯಿಲನ್ನು ಒಪ್ಪಿಕೊಳ್ಳಲಾಗುತ್ತದೆ. ಬರಹದಲ್ಲಿರುವ ಉಯಿಲಿಗೆ ಇಬ್ಬರ ಸಹಿ ಬೇಕು, ಮೌಖಿಕ ಉಯಿಲಿಗೆ ಅದೂ ಅವಶ್ಯಕತೆ ಇಲ್ಲ. ಬಾಯಿಮಾತಿನ ಉಯಿಲಿನ ಪ್ರಕಾರ ಲಕ್ಷಾಂತರ, ಕೋಟ್ಯಾಂತರ ರೂಪಾಯಿ ಬೆಲೆಯ ಆಸ್ತಿ ಪರಭಾರೆಯಾಗುತ್ತದೆ. ಒಂದು ವೃತ್ತಪತ್ರಿಕೆಯ ತುಂಡಿನ ಮೇಲೆ "ಎಲ್ಲವೂ ನನ್ನ ಪತ್ನಿಗೆ" ಎಂದು ಬರೆದರೆ ಸಾಕು, ಅದು ಊರ್ಜಿತವಾಗುವ ಉಯಿಲಾಗುತ್ತದೆ. ಹಾಗಿರುವಾಗ ಪತಿಯು ತನ್ನ ಪತ್ನಿಗೆ ಯಾವ ಮಾರ್ಗವನ್ನು ಅನುಸರಿಸಬೇಕು ಎಂದು ಬಾಯಿ ಮಾತಿನಲ್ಲೂ ಹೇಳಿದರೂ ಸಾಕು, ಅವಳು ದತ್ತಕ ಸ್ವೀಕಾರ ಮಾಡಬಹುದು. ಆಯ್ಕೆ ಸಮಿತಿಯು ಪರಿಶೀಲಿಸಬೇಕಾದ ಅಂಶಗಳು ಈ ಕೆಲವು. (ಒಬ್ಬ ಸದಸ್ಯ : ಹಾಗಾದರೆ ಅನುಮತಿ ತಾನೆ ಏಕೆ ಬೇಕು) ಅದು ನನ್ನ ಅಭಿಪ್ರಾಯ. ಅನುಮತಿ ಅಗತ್ಯ ಎನ್ನುವುದಾದರೆ ಮಾತಿನ ಅನುಮತಿ ಸಾಲದೆ? ದತ್ತು ಸ್ವೀಕಾರವನ್ನು ಕ್ರಮಬದ್ಧಗೊಳಿಸುವ ಕಾನೂನನ್ನು ಸಾಧ್ಯವಾದಷ್ಟೂ ಸರಳವನ್ನಾಗಿ ಮಾಡಿ.

ಆಮೇಲೆ ಏಕಪತ್ನಿತ್ವದ ಪ್ರಶ್ನೆ ಬರುತ್ತದೆ. ನಮ್ಮ ತರುಣಿಯರು ಅದೆ ತಾನೆ ಅರಳುತ್ತಿರುವ ಯೌವ್ವನದಲ್ಲಿ, ಮದುವೆಗೆ ತಕ್ಕ ಸಂಗಾತಿಯನ್ನು ಆರಿಸಿಕೊಳ್ಳಲು ಇರುವ ನಿಯಮಗಳನ್ನು ಸರಿಯಾಗಿ ಅನುಸರಿಸುವುದಿಲ್ಲ. ಪತಿಯನ್ನು ಆರಿಸಿಕೊಳ್ಳುವುದಕ್ಕೆ ಮುಂಚೆ ಶ್ರೀಮಂತಿಕೆ, ಚೆನ್ನಾಗಿ ಕಾಣುವಿಕೆ, ಸಂಪ್ರದಾಯ, ವಂಶ, ಸಂಸ್ಕೃತಿ, ಇತ್ಯಾದಿ ಎಲ್ಲವನ್ನೂ ಪರಿಶೀಲಿಸಬೇಕು. ಆದರೆ ಈಗ ವಿದ್ಯಾವಂತ ಯುವತಿಯರು ಸಿದ್ಧ ಪತಿಗಳನ್ನು ಆಯ್ಕೆ ಮಾಡಿಕೊಳ್ಳುವ ಅಭ್ಯಾಸ ಹೊಂದಿರುತ್ತಾರೆ. ಆ ಗಂಡಂದಿರಿಗೋ ಆಗಲೇ ಒಬ್ಬ ಪತ್ನಿ ಮತ್ತು ಐದೋ ಆರೋ ಮಕ್ಕಳು ಇರುತ್ತಾರೆ. ಏಕೆ ಹೀಗಾಗುತ್ತದೆ, ಈ ವಿಚಾರಗಳಲ್ಲಿ ಕಾಲೇಜು ದಿನಗಳಲ್ಲಿ ಸರಿಯಾದ ಶಿಕ್ಷಣದ ಕೊರತೆಯೇ ಇದಕ್ಕೆ ಕಾರಣ. ಹೇಗೋ ಈ ವಿಷಯಗಳನ್ನು ಬಾಯಲ್ಲಿ ಆಡಬಾರದ ನಿಷಿದ್ಧ ವಿಷಯಗಳೆಂದು ಭಾವಿಸಲಾಗುತ್ತದೆ. ಬಹಿರಂಗವಾಗಿ ಮಾತನಾಡಲು ಹಿಂಜರಿದರೂ ಖಾಸಗಿಯಾಗಿ ಬೇಕಾದಷ್ಟು ಮಾತುಗಳು ನಡೆಯುತ್ತವೆ. ನಿಷಿದ್ಧ ಫಲವನ್ನು ಯಾರೂ ರುಚಿನೋಡದೆ ಬಿಟ್ಟಿಲ್ಲ. ಆದ್ದರಿಂದ ನಾವು ಈ ವಿಚಾರಗಳಲ್ಲಿ ಸರಿಯಾದ ಶಿಕ್ಷಣ ಒದಗಿಸುವುದು ಅಗತ್ಯ. ನನ್ನ ಒಬ್ಬ ಮಿತ್ರನೊಂದಿಗೆ ಈಚೆಗೆ ಮಾತನಾಡುತ್ತಿದ್ದೆ. ಅವನು ಅಳಿಯನ ಆಯ್ಕೆಗೆ ಸಂಬಂಧಿಸಿದ್ದಂತೆ ತನ್ನ ಮಗಳಿಗೆ ಸಂಪೂರ್ಣ ಹಕ್ಕು ನೀಡಿದ್ದಾನೆ. ಮಾತಿನ ನಡುವೆ ಅವನು ಒಂದು ಕತೆ ಹೇಳಿದ. ಅದನ್ನು ಅವನ "ಮಗಳು ಮತ್ತು ಅಳಿಯನಿಗೆ ಹೇಳಿ ಸಂತೋಷಪಡಿಸಿದೆ. ಅವನು ಅವಳನ್ನು ಕೇಳಿದ "ಇಂಥವನನ್ನೂ, ಸುಂದರನಾದ, ಒಳ್ಳೆಯ ನೊಟದ ಉತ್ತಮ ಶಿಕ್ಷಣ ಪಡೆದ ಬಿ.ಎಲ್. ಓದಿ ಮುಗಿಸಿರುವ, ಅಥವಾ ಇಂತಹ ವ್ಯಕ್ತಿಯಲ್ಲಿರುವ ಶ್ರೀಮಂತನ ಮಗನಾಗಿ ಮಹಡಿ ಮನೆ ಕಟ್ಟಿಸಿಕೊಂಡಿರುವ ಹುಡುಗನನ್ನು ಮದುವೆಯಾಗುವೆಯಾ?" ಅದಕ್ಕೆ ಅವಳು ಹೇಳಿದಳು "ಇಲ್ಲ ತಂದೆಯೇ, ಅವನ ಬಳಿ ಕಾರಿದೆಯೇ ಮತ್ತು ವಿದ್ಯುತ್ ದೀಪಗಳಿದೆಯೇ? ಕಾರು ಮತ್ತು ವಿದ್ಯುತ್ ದೀಪ ಇದ್ದರೆ ಸಾಕು. ನಾನು ಯಾರನ್ನು ಬೇಕಾದರೂ ಮದುವೆಯಾಗಲು ಸಿದ್ಧವಾಗಿದ್ದೇನೆ." ಶಿಕ್ಷಣ ಪಡೆದಿರದ ತರುಣ ತರುಣಿಯರ ಮನೋಭಾವನೆಗಳು, ಪ್ರವೃತ್ತಿಗಳು ಮತ್ತು ಒಲವುಗಳು ಹೀಗಿರುತ್ತವೆ. ಆದ್ದರಿಂದ ಈ ಎಲ್ಲಾ ವಿಷಯಗಳನ್ನು ಕುರಿತು ಅವರಿಗೆ ಬೋಧಿಸುವುದು ಅತ್ಯಗತ್ಯ. ಕಾನೂನು ಮಾಡಿದರೆ ಸಾಲದು, ಅದನ್ನು ಸರಿಯಾಗಿ ಹರಡಿ ಪ್ರಚಾರಮಾಡಿ. ನಮ್ಮ ತರುಣಿಯರಿಗೆ ಏಕಪತಿತ್ವದ ದಿಸೆಯಲ್ಲಿ ಶಿಕ್ಷಣ ಕೊಡಬೇಕಾದುದು ಅತ್ಯಗತ್ಯ.

ಪ್ರಸ್ತುತ ಮಸೂದೆಯ ಪ್ರತಿಯೊಂದು ಅಂಶವನ್ನೂ ನಾನು ಸ್ವಾಗತಿಸುತ್ತೇನೆ. ಅಲ್ಲಿ ಇಲ್ಲಿ ಎದ್ದು ಕಾಣುವ ದೋಷಗಳಿದ್ದರೆ ಅವುಗಳನ್ನು ಆಯ್ಕೆ ಸಮಿತಿ ರಚನೆಯ ಸಂಬಂಧವಾಗಿ ಹೇಳಲಾಗಿರುವ ಹೆಸರಿನ ಮಹನೀಯರು ಪರಿಹರಿಸುತ್ತಾರೆ. ಅಗತ್ಯವಾದುದಕ್ಕಿಂತ ಸ್ವಲ್ಪ ಹೆಚ್ಚು ಸಮಯವನ್ನು ನಾನು

ತೆಗೆದುಕೊಂಡಿದ್ದೇನೆ. ೬೮ ವರ್ಷಗಳ ಅನುಭವ ನನಗಿದೆ. ಎಲ್ಲಾ ಬಗೆಯ ಪರಿಸ್ಥಿತಿಗಳ ಜಾಗರೂಕ ಅಧ್ಯಯನ ಮಾಡಿರುವುದರಿಂದ ನಾನು ಇನ್ನೂ ಮಾತನಾಡಬಹುದಾಗಿತ್ತು. ಆದರೆ ಇಂದು ಸಮಯ ಸೀಮಿತವಾಗಿದೆ. ಏಳು ಗಂಟೆಗೆ ನಾವು ಈ ವಿಚಾರ ಮುಗಿಸಲೇ ಬೇಕು. ನಮ್ಮ ಸೋದರಿಯರು ಮಾತನಾಡಲು ಕಾತರರಾಗಿದ್ದಾರೆ. ಅವುಗಳನ್ನೂ ಕೇಳಲು ನಾನೂ ಅಷ್ಟೇ ಕಾತರನಾಗಿದ್ದೇನೆ.

**ಮಿ. ನಝೀರುದ್ದೀನ್ ಅಹಮದ್** (ಪಶ್ಚಿಮ ಬಂಗಾಳ : ಮುಸ್ಲಿಂ) : ಮಾನ್ಯರೆ, ನನ್ನ ಕೆಲವು ಮಿತ್ರರು ಕೆಲವು ವಿಚಾರಗಳನ್ನು ನನ್ನಲ್ಲಿ ತುಂಬಿ ಕಳಿಸಿದ್ದಾರೆ. ಅವು ಮಸೂದೆಯನ್ನು ಕುರಿತು ಕೆಲವು ಟೀಕೆಗಳು. ಆದರೆ ಸದನಕ್ಕೆ ಭರವಸೆ ಕೊಡುತ್ತೇನೆ, ವೈಯಕ್ತಿಕವಾಗಿ ನಾನೂ ಮಸೂದೆಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಅದರ ಅವಕಾಶಗಳು ಬಹುತೇಕ ನನ್ನ ಮತದಲ್ಲಿ ಪ್ರಚಲಿತವಾಗಿರುವ ಕಾನೂನುಗಳಿಗೆ ಅನುಗುಣವಾಗಿವೆ. ಮಸೂದೆಯು ವಾಸ್ತವಿಕ ಫಲಗಳ ಪರಿಗಣಿಸದೆ ಎಲ್ಲರಿಗೂ ಸಂಪೂರ್ಣ ನ್ಯಾಯವನ್ನು ಒದಗಿಸಲು ಪ್ರಯತ್ನಿಸುತ್ತದೆ. ಸ್ವಲ್ಪ ಅಳುಕಿನಿಂದಲೇ ನಾನು ಮಾತನಾಡಲು ನಿಂತಿದ್ದೇನೆ. ಮಸೂದೆಯ ವಿರುದ್ಧವಾಗಿ ಮಾತನಾಡಿ ಐದು ಜನ ಗಣ್ಯ ಮಹಿಳಾ ಸದಸ್ಯರ ಪ್ರಬಲವಾದ ಸಾಲಿನ ಎದುರು ತಲೆತಗ್ಗಿಸಿ ನಿಲ್ಲಬೇಕಾದ ಸಂದರ್ಭವಿರುವುದರಿಂದ ನಾನು ಸಭೆಗೆ ತಿಳಿಸಬೇಕೆಂದು ಉದ್ದೇಶಿಸಿರುವ ಅಭಿಪ್ರಾಯಗಳನ್ನು ಮುಂದಿಡಲು ಸ್ವಲ್ಪವೂ ನನಗೆ ಧೈರ್ಯ ಸಾಲದು.

ಮಾನ್ಯರೆ, ಸಂಗ್ರಹಿಸಿ ಕರಪತ್ರಗಳ ರೂಪದಲ್ಲಿ ಮುದ್ರಿಸಿ ನಮಗೆ ಹಂಚಲಾಗಿರುವ ಅಭಿಪ್ರಾಯಗಳ ವಿಷಯದಲ್ಲಿ ಮಾನ್ಯ ಕಾನೂನು ಸಚಿವರು ನಮಗೆ ಏನನ್ನೂ ಹೇಳಿಲ್ಲ. ಅವುಗಳನ್ನು ನಮಗೆ ಬಹಳ ತಡವಾಗಿ ಕೊಡಲಾಯಿತು. ಮಾನ್ಯ ಸದಸ್ಯರು ಅವುಗಳನ್ನು ಓದಬೇಕು, ವಿಶ್ಲೇಷಿಸಬೇಕು, ಮತ್ತು ಅದರ ಫಲವನ್ನು ಸದನಕ್ಕೆ ತಿಳಿಸಬೇಕು ಎಂದು ಬಯಸಿದ ಪಕ್ಷದಲ್ಲಿ, ಸಮಯ ಕಡಿಮೆ ಎಂದು ನಾನು ಹೇಳಲೇಬೇಕು. ಅನೇಕ ಅಭಿಪ್ರಾಯಗಳನ್ನು ಒಳಗೊಂಡ ಹಿಂದೂ ಲಾ ಕಮಿಟಿಯ ವರದಿ ಎಂಬುದೊಂದು ಕರಪತ್ರವಿದೆ, ಕ್ಷಮಿಸಬೇಕು. ಅದನ್ನು ಸದಸ್ಯರಿಗೆ ಹಂಚಿಯೇ ಇಲ್ಲ. (ಒಬ್ಬ ಸದಸ್ಯರು :"ಕಳುಹಿಸಿಕೊಡಲಾಗಿತ್ತು"). ಇಲ್ಲ ಕಳುಹಿಸಿರಲಿಲ್ಲ, ಈ ಪತ್ರಿಕೆಯು ನಮಗೆ ಬಂದಿರಲಿಲ್ಲ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಅದನ್ನು ಗ್ರಂಥಾಲಯದಲ್ಲಿ ಬಹಳಕಾಲ ಇಡಲಾಗಿತ್ತು.

**ಮಿ. ನಝೀರುದ್ದೀನ್ ಅಹಮದ್ :** ಬಹಳ ಕಾಲದಿಂದೇನೊ ಅಲ್ಲ, ಅದನ್ನು ಗ್ರಂಥಾಲಯದಲ್ಲಿಟ್ಟಿದ್ದು ತೀರ ಇತ್ತೀಚೆಗೆ. ನಾನು ಮಾರುಕಟ್ಟೆಯಲ್ಲಿ ಇದನ್ನು ಕೊಂಡುಕೊಂಡೆ, ಕೇವಲ ಈಚೆಗೆ ಕೆಲವು ಪ್ರತಿಗಳನ್ನು ಗ್ರಂಥಾಲಯದಲ್ಲಿರಿಸಲಾಗಿದೆ.

**ಪ್ರೊ. ಎನ್. ಜಿ. ರಂಗ :** (ಮದರಾಸು : ಸಾಮಾನ್ಯ) : ಏನದು?

**ಮಿ. ನಝೀರುದ್ದೀನ್ ಅಹಮದ್ :** ಪ್ರೊ. ರಂಗ ಅವರಂತಹ ಸನ್ಮಾನ್ಯ ಸದಸ್ಯರು "ಏನದು" ಎಂದು ಕೇಳಿದರೆ, ಅದು ತೋರಿಸುವುದು ...

**ಪ್ರೊ. ಎನ್. ಜಿ. ರಂಗ :** ನೀವು ಏನನ್ನು ಉಲ್ಲೇಖಿಸುತ್ತಿದ್ದೀರಿ ಎಂದು ಕೇಳಿದೆ.

**ಮಿ. ನಝೀರುದ್ದೀನ್ ಅಹಮದ್ :** ಲಾ ಕಮಿಟಿಯ ವರದಿ.

**ಪ್ರೊ. ಎನ್. ಜಿ. ರಂಗ:** ಅಂದರೆ ರಾವ್ ಸಮಿತಿ. ಅದರ ವರದಿಯನ್ನು ಒಂದು ವರ್ಷದಿಂದ ಜನತೆಯ ಮುಂದಿರಿಸಲಾಗಿದೆ.

**ಅಧ್ಯಕ್ಷರು :** ಅದು, ಹೇಗೆ ಇರಲಿ, ಮಾನ್ಯ ಸದಸ್ಯರು ಮುಂದುವರಿಸಬಹುದು.

**ಮಿ. ನಝೀರುದ್ದೀನ್ ಅಹಮದ್ :** ವರದಿಯು ಈಚೆಗಷ್ಟೇ ಪ್ರಕಟವಾಗಿದೆ. ಈ ವರದಿಯಲ್ಲಿ

ದಿವಂಗತ ಜಸ್ಟೀಸ್ ಡಿ. ಎನ್. ವಿಠ್ಠಲ್‌ರವರ ಭಿನ್ನಮತವು ದಾಖಲಾಗಿದೆ. ಅವರು ಮಸೂದೆಯ ವಿರುದ್ಧವಾಗಿ ಬೇಕಾದಷ್ಟು ಅಭಿಪ್ರಾಯಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ನಾನಿಲ್ಲಿ ಓದಬಯಸುವುದಿಲ್ಲ. ಅವರದನ್ನು ಪ್ರಾಂತವಾರು, ವಿಷಯವಾರು ವರ್ಗೀಕರಿಸಿದ್ದಾರೆ. ಅವೆಲ್ಲವನ್ನೂ ಪರಿಶೀಲಿಸಲು ಇಲ್ಲಿ ಸಮಯವಿಲ್ಲ. ಮಸೂದೆಯ ತತ್ವಗಳನ್ನು ಸಮಸ್ತ ಹಿಂದೂ ಸಮುದಾಯವು, ಅಂದರೆ ಆಚಾರವಂತ ವರ್ಗವು ವಿರೋಧಿಸುತ್ತದೆ ಎಂದು ಹೇಳಿದ್ದಾರೆ.

ಸರಕಾರವು ಸಂಗ್ರಹಿಸಿ ನಮಗೆ ಹಂಚಿರುವ, ಮಸೂದೆಯನ್ನು ಕುರಿತ ಈಚಿನ ಅಭಿಪ್ರಾಯಗಳನ್ನು, ದೊರಕಿದ ಅತ್ಯಲ್ಪ ಸಮಯದಲ್ಲಿ ಸಾಧ್ಯವಾದಷ್ಟು ಜಾಗರೂಕತೆಯಿಂದ ಅಧ್ಯಯನ ಮಾಡಿದ್ದೇನೆ. ಮಸೂದೆಯ ವಿರುದ್ಧವಾಗಿ ಬೇಕಾದಷ್ಟು ಅಭಿಪ್ರಾಯಗಳು ನನಗೆ ಅಲ್ಲಿ ಕಂಡುಬರುತ್ತಿವೆ. ಸಮಿತಿಯು ಸಾಕ್ಷ್ಯಾಧಾರಗಳನ್ನು ಆಲಿಸುತ್ತಿದ್ದಾಗ ಬಂಗಾಳದಲ್ಲಿನ ಸಾಕ್ಷ್ಯಾಧಾರವು ಸ್ಪಷ್ಟವಾಗಿ ಮಸೂದೆಗೆ ವಿರುದ್ಧವಾಗಿ ಏಕಮುಖವಾಗಿತ್ತು. ಆಶ್ಚರ್ಯದ ಅಂಶವೆಂದರೆ ಬಂಗಾಳ ಸರಕಾರದ ಕಾನೂನು ಸಚಿವಾಲಯದ ಕಾರ್ಯದರ್ಶಿಯವರ ಅಭಿಪ್ರಾಯವೇ (ಪತ್ರ ೪, ಅಭಿಪ್ರಾಯ ೧೭) ಮಸೂದೆಗೆ ವಿರುದ್ಧವಾಗಿದೆ. ಇದು ಮಸೂದೆಯನ್ನು ಕೈಗೆತ್ತಿಕೊಳ್ಳಲು ಸೂಕ್ತವಾದ ಸಮಯವಲ್ಲ ಎಂದು ಹೇಳುತ್ತದೆ. (ಒಬ್ಬ ಸದಸ್ಯ : ಅದು ಯಾವಾಗ?) ಅದಕ್ಕೆ ತಾರೀಖನ್ನು ನಮೂದಿಸಿಲ್ಲ. ಈಚೆಗಷ್ಟೇ ಐದೋ–ಆರೋ ದಿನಗಳ ಹಿಂದೆ ಅದನ್ನು ಹಂಚಲಾಗಿದೆ. ವಾಸ್ತವವಾಗಿ ಅದು ಹೇಳುವಂತೆ ಮಸೂದೆಯು ಬಹು ದೂರಸ್ಪರ್ಶಿಯಾದ ಪ್ರಾಮುಖ್ಯವನ್ನು ಹೊಂದಿದೆ. ಮತ್ತು ವ್ಯಕ್ತಪಡಿಸಲಾದ ಅಭಿಪ್ರಾಯಗಳನ್ನು ಕುರಿತು ಸಾಕಷ್ಟು ಪರಿಶೀಲನೆ ನಡೆದಿಲ್ಲ. ಸದನವು ಬೇರೆ ಬೇರೆ ಬಗೆಯ ಆಕ್ಷೇಪಣೆಗಳನ್ನು ಕುರಿತು ಪರಿಶೀಲಿಸಬೇಕು. ಒಂದು ಹೀಗಿದೆ, ಪ್ರಸ್ತುತ ಮಸೂದೆಯನ್ನು ವಿವಿಧ ಸಮುದಾಯಗಳಿಗೆ ಸೇರಿದ ಸದಸ್ಯರನ್ನು ಒಳಗೊಂಡ ಸಮ್ಮಿಶ್ರ ಶಾಸಕಾಂಗವು ಪರಿಶೀಲಿಸಬಾರದು. ಬೇರೆ ಬೇರೆ ಮತಧರ್ಮಗಳ ಜನರು ಮಸೂದೆಯನ್ನು ಬೆಂಬಲಿಸಿ ಆಚಾರವಂತ ಹಿಂದೂ ಧರ್ಮದ ನಿಲುವನ್ನು ಕೆಡಿಸುತ್ತಾರೆ ಎಂಬ ಹೆದರಿಕೆ ಇದ್ದುದರಿಂದ ನಾನು ಮಾತನಾಡಲು ಬಯಸುತ್ತೇನೆ. ಈ ಕಾರಣದಿಂದಲೇ, ಹಿಂದೂ ಸಮಾಜವು ಅದಕ್ಕೆ ವಿರುದ್ಧವಾಗಿರುವುದರಿಂದ ನಾನು ಮಸೂದೆಯನ್ನು ಬೆಂಬಲಿಸುವುದಿಲ್ಲ ಎಂದು ಘೋಷಿಸಬಯಸುತ್ತೇನೆ.

ಹೆಂಗಸರಿಗೆ ಆಸ್ತಿಯಲ್ಲಿ ಪಾಲು ಕೊಡುವುದರಿಂದ ವ್ಯಾಜ್ಯಗಳು ಮೊಕದ್ದಮೆಗಳು ಹೆಚ್ಚುತ್ತವೆ ಎನ್ನುವುದು ಆಕ್ಷೇಪಣೆಗಳಲ್ಲಿ ಒಂದು. ಇದು ಅತಿರೇಕದ ವಿಭಜನೆಯನ್ನು ಉಂಟುಮಾಡಿ ಅಂತಿಮವಾಗಿ ಹಿಂದುಗಳಲ್ಲಿ ಕೂಡುಕುಟುಂಬ ವ್ಯವಸ್ಥೆಯನ್ನು ನಾಶಮಾಡಿಬಿಡುತ್ತದೆ. ಮುಸ್ಲಿಮರು ಅನುಭವಿಸುತ್ತಿರುವ ಭಯಂಕರವಾದ ವಿಭಜನೆಯ ವಿನಾಶಕ ಪರಿಣಾಮಗಳಿಂದ ಸಮುದಾಯವನ್ನು ರಕ್ಷಿಸಿದ್ದುದೇ ಕೂಡುಕುಟುಂಬ ವ್ಯವಸ್ಥೆ. ಹಿಂದೂ ಕಾನೂನು – ವೈದಿಕ ಸಾಹಿತ್ಯ ಮತ್ತು ಶ್ರುತಿಗಳು ಹಾಗು ಸ್ಮೃತಿಗಳು ಎಂದು ಕರೆಯುವ ವೇದೋತ್ತರ ಸಾಹಿತ್ಯ – ಒಂದು ದೈವಿಕವಾದ ಮೂಲವನ್ನು ಹೊಂದಿದೆ. ಆದರೆ ಪ್ರಸ್ತುತ ಮಸೂದೆಯ ರಚನೆಯು, ಧಾರ್ಮಿಕ ತಳಹದಿಯ ಮತ್ತು ಹಿಂದೂಗಳ ಅತ್ಯಂತ ಧಾರ್ಮಿಕ ರಚನೆಯ ವಿರುದ್ಧವಾಗಿದೆ ಎಂದು ಹೇಳಲಾಗಿದೆ. ಈ ಆಧಾರದ ಮೇಲೆ ಅದನ್ನು ಗಂಭೀರವಾಗಿ ವಿರೋಧಿಸಲಾಗಿದೆ. ಈ ಎಲ್ಲಾ ಧಾರ್ಮಿಕ ಕಾನೂನನ್ನು, ಎಲ್ಲಾ ಪವಿತ್ರ ಸಾಹಿತ್ಯವನ್ನು ಅರ್ಥಹೀನ ಮೂಢನಂಬಿಕೆ ಎಂದು ನೀವು ತಳ್ಳಿಹಾಕಲು ಸಾಧ್ಯವಿಲ್ಲ. ಒಂದು ಸಮಾಜವು ನಿಂತನೀರಾಗಿ ಉಳಿಯಲು ಸಾಧ್ಯವಿಲ್ಲವೆನ್ನುವುದು ನಿಜವಾದರೂ ಅವು ಹಿಂದೂ ಸಮಾಜವನ್ನು ಯುಗಯುಗಾಂತರಗಳಿಂದ ಜೀವಂತವಾಗಿ ಉಳಿಸಿವೆ. ಅದು ಚಲಿಸಲೇಬೇಕು. ಆದರೆ ಬಹು ಎಚ್ಚರಿಕೆಯಿಂದ ಮತ್ತು ಅನುಭವದ ಆಧಾರದಿಂದ ಚಲಿಸಬೇಕು.

ಪ್ರಸ್ತುತ ಮಸೂದೆಯು ಒಂದೇ ಏಟಿಗೆ ಆಮೂಲಾಗ್ರ ಬದಲಾವಣೆಯನ್ನು ಮಾಡುತ್ತದೆ. ಆಕ್ಷೇಪಣೆಗಳಲ್ಲಿ ಸ್ಪಷ್ಟಪಡಿಸಿರುವ ಇನ್ನೊಂದು ಅಂಶ ಇದು. ಪ್ರಸ್ತುತ ಶಾಸಕಾಂಗವನ್ನು ಒಂದು ಉದ್ದೇಶದಿಂದ, ಸ್ವಾತಂತ್ರ್ಯ ಸಾಧನೆ ಎಂಬ ಉದ್ದೇಶದಿಂದ ಚುನಾಯಿಸಲಾಗಿದೆ. ನಿಜವಾಗಿಯೂ ಮೂಲಭೂತವೂ ಜಟಿಲವೂ ಆದ ಲಕ್ಷಣವುಳ್ಳ ಪ್ರಸ್ತುತ ಮಸೂದೆಯೂ ಅದರ ತತ್ವಗಳೂ ಇನ್ನೂ ಸಾರ್ವಜನಿಕರ ಮುಂದೆ ಹೋಗಿಲ್ಲ. ಆದ್ದರಿಂದ ಈಗ ಅಭಿಪ್ರಾಯಗಳನ್ನು ಅರಗಿಸಿಕೊಳ್ಳುವುದಕ್ಕಾಗಿ ಕಾದು, ಒಂದು ಸಂವಿಧಾನವನ್ನು ಅಂಗೀಕರಿಸಿ ಇದನ್ನೊಂದು ನಿರ್ದಿಷ್ಟ ವಿಷಯವನ್ನಾಗಿ ಜನತೆಯ ಮುಂದಿರಿಸಿ ಚುನಾವಣೆಗಳನ್ನು ನಡೆಸಬೇಕು. ಜನಕ್ಕೆ ಇದು ಬೇಕೆ ಅಥವಾ ಬೇಡವೆ ಎನ್ನುವುದು ಆಗ ತಿಳಿಯತ್ತದೆ. ವಾಸ್ತವವಾಗಿ ಪ್ರಸ್ತುತ ಮಸೂದೆಯು ಸೂಕ್ತವಾಗಿ ಎಲ್ಲಾ ಕಡೆಯೂ ಹರಡಿಲ್ಲ ಎಂದೂ ಗೊತ್ತಾಗುತ್ತದೆ. ಅನೇಕ ಸಂಘ ಸಂಸ್ಥೆಗಳಿಗೆ ಇದನ್ನು ಪರಿಶೀಲಿಸಿ ತಮ್ಮ ಅಭಿಪ್ರಾಯಗಳನ್ನು ಕೊಡಲು ಕೆಲವೇ ದಿನಗಳ, ಅಥವಾ ಗಂಟೆಗಳ ಅವಕಾಶವಿದ್ದಿತು. ಈ ಸನ್ನಿವೇಶದಲ್ಲಿ ಮಸೂದೆಯನ್ನು ಈ ಹಂತದಲ್ಲಿ ಪರಿಶೀಲನೆಗೆ ಎತ್ತಿಕೊಳ್ಳುವುದು ಬೇಡ ಎಂದು ವಾದಿಸಲಾಗುತ್ತಿದೆ.

ಇನ್ನೊಂದು ಮುಖ್ಯವಾದ ವಿಚಾರವಿದೆ. ಶಾಸನವು ಭಾರತದಾದ್ಯಂತ ಸಮರೂಪದಲ್ಲಿ ಹಿಂದುಗಳೆಲ್ಲರಿಗೂ ಅನ್ವಯವಾಗುವಂತೆ ಮಾಡಲು ಮಸೂದೆಯು ಪ್ರಯತ್ನಿಸುತ್ತದೆ. ಆದರೆ ಕಾಲದ ಕೊರತೆಯಿಂದಾಗಿ ಸಮಾನತೆಯ ಪರಿಣಾಮ ಸಿದ್ಧಿಸುವುದಿಲ್ಲ. ಕೃಷಿ ಭೂಮಿಯು ಈ ಸದನದ ಪರಿಗಣನೆಗೆ ಮೀರಿದ್ದು. ಅದು ಪ್ರಾಂತೀಯ ವಿಷಯ. ಇಲ್ಲಿ ನಾವು ಯಾವುದೇ ಕಾನೂನು ಅಂಗೀಕರಿಸಿದರೂ ಅದು ಕೃಷಿಯೇತರ ನೆಲಕ್ಕೆ ಮಾತ್ರ ಅನ್ವಯಿಸುತ್ತದೆ. ಅದರ ವಿವರಣೆ ಏನೇ ಇರಲಿ ಆ ಉಕ್ತಿಯು ಸ್ಪಷ್ಟವಾಗೇ ಇದೆ. ಇದನ್ನು ತೆರಿಗೆಯ ಉದ್ದೇಶಕ್ಕಾಗಿ ವರಮಾನ ತೆರಿಗೆ ಶಾಸನದಲ್ಲಿ ವಿವರಿಸಲಾಗಿದೆ. ಪ್ರಸ್ತುತ ಮಸೂದೆಯೂ ಹಲವು ಇತರ ಶಾಸನಗಳೂ ಅದನ್ನೇ ಆಧಾರವಾಗಿಟ್ಟುಕೊಂಡಿವೆ. ಕೃಷಿ ಭೂಮಿಗೂ ಮತ್ತು ಕೃಷಿಯೇತರ ಭೂಮಿಗೂ ನಡುವೆ ಬೇರೆ ಬಗೆಯ ಭೂಮಿಗಳು ಇರಬಹುದು. ವಾಸ್ತವವಾಗಿ ಈ ಭೇದವು ಇದ್ದರೂ, ನಮ್ಮ ಆಸ್ತಿಯ ಹೆಚ್ಚಿನ ಪ್ರಮಾಣವು – ಸುಮಾರು ಶೇ.೮೦ ಕೃಷಿಯೋಗ್ಯ ನೆಲವಾಗಿದೆ. ಆದ್ದರಿಂದ ಅವುಗಳನ್ನು ಕುರಿತು ಪ್ರಾಂತಗಳು ಪರಿಶೀಲಿಸಬೇಕೆನ್ನುವುದು ಸ್ಪಷ್ಟವಾಗಿದೆ. ಪ್ರಾಂತಗಳು ಅದನ್ನು ಬೇರೆ ರೀತಿಯಾಗಿ ನಿರ್ವಹಿಸಬಹುದು. ಕೆಲವು ಪ್ರಾಂತಗಳು ಈ ವಿಷಯವನ್ನು ಕೈಗೆತ್ತಿಕೊಳ್ಳದೆಯೇ ಇರಬಹುದು. ಮತ್ತೇ, ವಿಲೀನಗೊಂಡ ರಾಜ್ಯಗಳಿಗೆ ಹಿಂದೂ ಕಾನೂನು ಒಂದೇ ಆಗಿರಬೇಕಾದರೂ – ಅದನ್ನ ಏಕರೂಪವನ್ನಾಗಿ ಮಾಡಲು ಪ್ರಯತ್ನಿಸಲಾಗುತ್ತಿದೆ. ರಾಜ್ಯಗಳ ಜನತೆ ಈ ವಿಷಯವಾಗಿ ಕಾನೂನು ಮಾಡಬಹುದು, ಮಾಡದಿರಬಹುದು. ಮಾಡುವುದೇ ಆದರೆ ಅವರು ಬೇರೆಯೇ ಅವಕಾಶಗಳನ್ನು ಕಲ್ಪಿಸಬಹುದು. ಪ್ರಾಂತೀಯ ಸರಕಾರಗಳು ಮತ್ತು ರಾಜ್ಯಗಳು ಬಹುಮಟ್ಟಿಗೆ ಸ್ಥಳೀಯ ಪದ್ಧತಿಯಿಂದ ಮತ್ತು ಸ್ಥಳೀಯ ಅಭಿಪ್ರಾಯದಿಂದ ಮಾರ್ಗದರ್ಶನ ಪಡೆಯುತ್ತವೆ. ಆ ನಿದರ್ಶನಕ್ಕೆ ಪಶ್ಚಿಮ ಬಂಗಾಳ ಶಾಸಕಾಂಗವು ಆ ಪ್ರಾಂತದ ಅಭಿಪ್ರಾಯಕ್ಕೆ ಇಷ್ಟು ಮಟ್ಟಿಗೆ ವಿರುದ್ಧವಾದ ಒಂದು ಕಾನೂನು ಜಾರಿಗೆ ತರಲು ಬಹಳ ಕಷ್ಟವಾಗಬಹುದು. ಆದ್ದರಿಂದ ವಿಷಯ ಇಷ್ಟಕ್ಕೆ ಬಂದು ನಿಲ್ಲುತ್ತದೆ. ನಾವು ಈ ಕಾನೂನನ್ನು ಅಂಗೀಕರಿಸಿದ್ದೇ ಆದರೆ ಫಲಿತಾಂಶವು, ಒಂದು ಮನೆ ಅಥವಾ ಕಟ್ಟಡ ಮತ್ತು ಸ್ವಲ್ಪ ಕೃಷಿ ಭೂಮಿ ಈ ಎರಡೂ ವರ್ಗಗಳ ಆಸ್ತಿ ಇದ್ದ ಒಬ್ಬ ಮನುಷ್ಯನಿಗೆ ಒಂದು ಕಾನೂನು, ಕೃಷಿಯೇತರ ಭೂಮಿಗೂ ಇನ್ನೊಂದು ಕಾನೂನು ಕೃಷಿ ಭೂಮಿಗೂ ಅನ್ವಯವಾಗುವಂತಾಗುತ್ತದೆ. ನಾವು ಯಾವುದೇ ಕಾನೂನು ಮಾಡಿದರೂ ಅದು ಏಕರೂಪದ್ದಾಗಿರಬೇಕು. ಆದ್ದರಿಂದ ನಾವು ಕೆಲವು ವಿಷಯಗಳಲ್ಲಿ ಮಾಡಿರುವಂತೆ

ಪ್ರಾಂತೀಯ ಸರಕಾರಗಳಿಂದ ಅಭಿಪ್ರಾಯಗಳನ್ನು ಸಂಗ್ರಹಿಸಿ ಒಂದು ಸಮಗ್ರ ಶಾಸನವನ್ನು ಅಂಗೀಕರಿಸುವ ಅಧಿಕಾರವ್ಯಾಪ್ತಿಯನ್ನು ಈ ಸದನಕ್ಕೆ ನೀಡಲು ಅವರ ಸಮ್ಮತಿಯನ್ನು ಕೇಳಬೇಕು. ಉದ್ದೇಶವು ಸಮಗ್ರತೆ ಮತ್ತು ಸಂಪೂರ್ಣತೆಗಳಾದ ಪಕ್ಷದಲ್ಲಿ ಕೇಂದ್ರ ಶಾಸಕಾಂಗವು ಅವರ ಸಮ್ಮತಿಯಿಂದ ಸುಸಜ್ಜಿತವಾಗಿ ಅಖಿಲಭಾರತ ಮಟ್ಟದಲ್ಲಿ ವ್ಯವಹರಿಸಬೇಕು. ಈ ವಿಚಾರವಾಗಿ ದಯವಿಟ್ಟು ಸಹಕರಿಸಬೇಕೆಂದು ಕೇಳಿಕೊಳ್ಳುವುದೂ ಸೂಕ್ತವೇ. ಇವು ಕೆಲವು ಕಷ್ಟಗಳು. ನಾವು ಕಾಲದೊಂದಿಗೆ ಹೋರಾಡುತ್ತಿರುವುರಿಂದ, ಸನ್ಮಾನ್ಯ ಕಾನೂನು ಸಚಿವರು ಸೂಚಿಸಿರುವಂತೆ ಮಸೂದೆಯ ಕೆಲವು ಮುಖ್ಯ ಅಂಶಗಳನ್ನು ಕುರಿತು ವ್ಯವಹರಿಸುವುದೂ ಕಷ್ಟ. ಕೆಲವು ಆಕ್ಷೇಪಣೆಗಳನ್ನು ಕುರಿತು ವಿಷಯದ ಅಂಚಿನ ಪರಿಶೀಲನೆ ಸಾಧ್ಯವೇ ಹೊರತು ಪೂರ್ಣ ವ್ಯವಹಾರ ಸಾಧ್ಯವಿಲ್ಲ. ನನಗೆ ತೋರುತ್ತಿರುವ ಇನ್ನೊಂದು ವಿಚಾರ, ಅಭಿಪ್ರಾಯಗಳನ್ನು ಜಾಗರೂಕತೆಯಿಂದ ಅಧ್ಯಯನ ಮಾಡಿಲ್ಲ ಎನ್ನುವುದು. ಈ ಅಭಿಪ್ರಾಯಗಳು ವಿಶ್ಲೇಷಣೆಯನ್ನು ಒಂದೊಂದೇ ಒಳ ಅಂಶಗಳಿಗನುಗುಣವಾಗಿ ಸಂಗ್ರಹಿಸಿ ಸದಸ್ಯರಿಗೆ ಒದಗಿಸಿಲ್ಲ. ಖಾಸಗಿ ಸದಸ್ಯರಿಗೆ ಅಭಿಪ್ರಾಯಗಳನ್ನು ವೇಗವಾಗಿ ಓದಿ, ವಿಶ್ಲೇಷಿಸಿ, ತಮ್ಮ ಮೆದುಳಿನ ಬೇರೆ ಬೇರೆ ಅರೆಗಳಲ್ಲಿ ಇರಿಸಿಕೊಂಡು ಅವುಗಳನ್ನು ಒಂದು ವರ್ಗೀಕೃತರೂಪದಲ್ಲಿ ಉಪಯೋಗಿಸಿಕೊಳ್ಳುವುದು ತುಂಬಾ ಕಷ್ಟವಾದ ವಿಷಯ. ಇಷ್ಟು ಮಹತ್ವಪೂರ್ಣವಾಗಿರುವ ವಿಷಯವನ್ನು ಕುರಿತು ಸನ್ಮಾನ್ಯ ಸಚಿವರ ಇಲಾಖೆಯು ಅಭಿಪ್ರಾಯಗಳನ್ನು ವರ್ಗೀಕರಿಸಿ ಸದಸ್ಯರಿಗೆ ಕಳುಹಿಸಬೇಕಾಗಿದ್ದುದು ಅತ್ಯಂತ ಅಪೇಕ್ಷಣೀಯ. ಇಂತಹ ವಿಚಾರಗಳಲ್ಲಿ ಹಿಂದೆ ಮಾಡಿರುವಂತೆ ಮಾನ್ಯ ಸದಸ್ಯರು ವಿಚಾರದ ಒಂದೊಂದು ಎಳೆಯನ್ನೂ ಆಕ್ಷೇಪಣೆಯ ಬೆಳಕಿನಲ್ಲಿ ಪರಿಶೀಲಿಸಲು ಅಥವಾ ಬೆಂಬಲಿಸಲು ಸಾಧ್ಯವಾಗುತ್ತಿತ್ತು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದರಾಸು : ಸಾಮಾನ್ಯ) : ಲಾ ಕಮಿಟಿಯ ವರದಿಯನ್ನು ವರ್ಗೀಕರಿಸಿ ವಿಶ್ಲೇಷಿಸಿ ಕೊಡಲಾಗಿದೆಯಲ್ಲ.

**ಮಿ. ನಝೀರುದ್ದೀನ್ ಅಹಮದ್ :** ಈಗ ನಾನು ಮಾತನಾಡುತ್ತಿರುವ ಅಭಿಪ್ರಾಯಗಳು ವರದಿ ಬಂದ ನಂತರ ಸ್ವೀಕರಿಸಿ ಹಂಚಿದಂತವು. ವಾಸ್ತವವಾಗಿ ಎಲ್ಲರಿಗೂ ತಮ್ಮ ಈ ಷರಾಕ್ಕಾಗಿ ನನ್ನ ಕೃತಜ್ಞತೆಗಳು. ಪ್ರಚುರಪಡಿಸಿರುವ ಅಭಿಪ್ರಾಯಗಳು ಕೇವಲ ಈಚೆಗೆ ಬಂದವು. ಅವು ಹೇಗಿದೆಯೋ ಹಾಗೆಯೇ ಮಸೂದೆಯಲ್ಲಿವೆ. ಆದರೆ ಹಿಂದೂ ಲಾ ಕಮಿಟಿಯ ವರದಿಯಲ್ಲಿ ಸಂಗ್ರಹವಾಗಿರುವ ಅಭಿಪ್ರಾಯಗಳು ಮಸೂದೆಯ ಕರಡು ರಚಿಸುವುದಕ್ಕಿಂತ ಮೊದಲೇ ಅಂದರೆ ವಿಚಾರಣೆಯ ಹಂತದಲ್ಲೇ ಬಂದಿದ್ದಂತವು. ನಾನು ಉಲ್ಲೇಖಿಸುತ್ತಿರುವ ಅಭಿಪ್ರಾಯಗಳು ವರದಿಯಲ್ಲಿ ಪ್ರಕಟವಾಗಿಲ್ಲ. ಅವನ್ನು ಬೇರೆಯಾಗಿ ಮುದ್ರಿಸಿ ಹಂಚಲಾಯಿತು. ಇವುಗಳನ್ನು ಜಾಗರೂಕತೆಯಿಂದ ವಿಶ್ಲೇಷಿಸಿ ಹಲವು ಅಂಶಗಳೊಂದಿಗೆ ಪ್ರಕಟಿಸಬೇಕಾಗಿತ್ತು. ಮಾನ್ಯರೆ, ಇನ್ನು ಈ ವಿಚಾರದಲ್ಲಿ ಹೆಚ್ಚು ಎಳೆದಾಡಲು ಇಷ್ಟಪಡುವುದಿಲ್ಲ. ವೈಯಕ್ತಿಕವಾಗಿ ನಾನು ಮಸೂದೆಯ ಪರವಾಗಿದ್ದೇನೆ. ಆದರೆ ಮಂಡಿಸಬೇಕೆಂದು ನನ್ನ ಕೆಲವು ಮಿತ್ರರು ಎತ್ತಿರುವ ಆಕ್ಷೇಪಣೆಗಳು ಇವು. ಸದನದ ಮುಂದೆ ನಾನು ಅವುಗಳನ್ನು ಇರಿಸಲು ಇದೇ ಕಾರಣ. ಇನ್ನು ಅನೇಕಾನೇಕ ವಿಷಯಗಳಿವೆ, ಆದರೆ ಅವೆಲ್ಲಾ ಸಣ್ಣಪುಟ್ಟವು. ನಮಗಿರುವ ಕಾಲದ ಅಭಾವವನ್ನು ಗಮನಿಸಿ ನನ್ನ ಭಾಷಣವನ್ನು ತುಂಡರಿಸಬೇಕಾಗಿದೆ. ಶಾಸನವು ಸಾರ್ವಜನಿಕ ಅಭಿಪ್ರಾಯವನ್ನೂ ಅನುಸರಿಸಬೇಕು. ಸಾರ್ವಜನಿಕ ಅಭಿಪ್ರಾಯವನ್ನು ಹೊಸದಾಗಿ ಸೃಷ್ಟಿಸುವುದೋ ಅಥವಾ ಅದನ್ನು ಮೀರಿ ನಿಲ್ಲುವುದೋ ಯೋಗ್ಯವಲ್ಲ. ಅದನ್ನು ಅನುಸರಿಸಬೇಕು. ಆಧುನಿಕ ರಾಜನೀತಿ ಶಾಸ್ತ್ರದ ಪಿತಾಮಹ ಎಡ್ಮಂಡ್ ಬರ್ಕ್ ಎನ್ನುವವನ ಸುಪ್ರಸಿದ್ಧವಾದ ಒಂದು ಉದ್ಧರಣವನ್ನು ಇಲ್ಲಿ ಕೊಡುತ್ತೇನೆ :

"ನಿಜವಾದ ಶಾಸನದ ಗುರಿ ಸಾರ್ವಜನಿಕ ಒಲವುಗಳನ್ನು ಹೇರುವುದಲ್ಲ, ಅನುಸರಿಸುವುದು; ಸಾಮಾನ್ಯ ಸಾಮುದಾಯಿಕ ಭಾವನೆಗೆ ಮಾರ್ಗದರ್ಶನ, ಒಂದು ರೂಪ, ಮತ್ತು ತಾಂತ್ರಿಕ ಉಡುಗೆ ಕೊಡುವುದು."

ಆದರೆ ಪ್ರಸ್ತುತ ಮಸೂದೆಯ ಹಿಂದೆ ಸಾರ್ವಜನಿಕ ಅಭಿಪ್ರಾಯವಿಲ್ಲ ಎಂಬುದಾಗಿ ತೋರಿಸಿಕೊಡಲಾಗಿದೆ. ಕೆಲವು ಆಕ್ಷೇಪಣೆಗಳಲ್ಲಿ ಅದರ ಹಿಂದೆ ಕೆಲವು ವಿದ್ಯಾವಂತ ವರ್ಗಗಳು ಮತ್ತು ಕೆಲವು ಅತ್ಯಾಧುನಿಕ ವರ್ಗಗಳು ಇವೆ ಎಂದು ತೋರಿಸಿಕೊಡಲಾಗಿದೆ. ಆದರೆ ಜನಸಾಮಾನ್ಯರು, ಬಹುತೇಕ ಜನ ಅಜ್ಞಾನಿಗಳಾಗಿ ಅದರ ಬಗೆಗೆ ಅಲಕ್ಷ್ಯ ಹೊಂದಿದ್ದಾರೆ. ಇಷ್ಟು ಮುಖ್ಯವಾದ ವಿಷಯವನ್ನು ಹೇಗೆ ಮಾಡಬೇಕೋ ಹಾಗೆ ಪೂರ್ತಿಯಾಗಿ ಪ್ರಚುರಗೊಳಿಸಿಲ್ಲ. ಈ ಪರಿಸ್ಥಿತಿಯಲ್ಲಿ ವಿವಾದಾಸ್ಪದ ವಿಷಯಗಳಲ್ಲಿ ಆಯ್ಕೆ ಸಮಿತಿಗೆ ಸದನವು ನಿರ್ದೇಶನಗಳನ್ನು ನೀಡಿದ್ದರೆ ಉತ್ತಮವಾಗಿರುತ್ತಿತ್ತು ಎಂದು. ಆದರೆ ಪ್ರಸ್ತುತ ವಿಚಾರದಲ್ಲಿ ಅಂಥ ಯಾವುದೇ ನಿರ್ದೇಶನಗಳಿಲ್ಲದೇ ಮಸೂದೆಯನ್ನು ಕಳುಹಿಸುತ್ತಿದ್ದೇವೆ. ಕಾನೂನು ಮಂತ್ರಿಗಳು ಇದನ್ನು ಸ್ವಲ್ಪ ಸ್ಪಷ್ಟಪಡಿಸಬೇಕು ಎಂದು ಕೋರುತ್ತೇನೆ.

ಆಯ್ಕೆ ಸಮಿತಿಯ ವ್ಯಕ್ತಿಗಳ ವಿಷಯದಲ್ಲಿ ಹೇಳಬೇಕಾದದ್ದು ಏನೂ ಇಲ್ಲ. ಅವರು ಅತ್ಯಂತ ಸಮರ್ಥರು, ಅತ್ಯಂತ ಅಧಿಕಾರ ಉಳ್ಳವರು, ತುಂಬಾ ವಿದ್ಯಾವಂತರು. ಅವರು ಮಸೂದೆಯ ವಿರುದ್ಧವಾಗಿ ಎತ್ತಿರುವ ಆಕ್ಷೇಪಣೆಗಳಿಗೆ ಪೂರ್ತಿ ನ್ಯಾಯ ದೊರಕಿಸುತ್ತಾರೆ ಎಂದು ನಂಬಲಾಗಿದೆ.

**ಶ್ರೀಮತಿ ಹನ್ಸಾ ಮೆಹತಾ** (ಮುಂಬಯಿ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಅಧಿವೇಶನದ ಕೊನೆಯ ಸಮಯವಾದರೂ ಲಕ್ಷಿಸದೆ ಈ ಮಸೂದೆಯನ್ನು ಮಂಡಿಸಿರುವ ಕಾನೂನು ಸಚಿವರಿಗೆ ಅಭಿನಂದನೆಗಳು. ಸರ್ ಬಿ.ಎನ್. ರಾವ್ ಅವರು ಮತ್ತು ಅವರ ಸಹೋದ್ಯೋಗಿಗಳು ವರದಿಯನ್ನು ಕುರಿತು ಬಹು ಕಷ್ಟಪಟ್ಟು ಕೆಲಸಮಾಡಿದ್ದಾರೆ. ಅವರ ವರದಿಯನ್ನು ಆಧರಿಸಿಯೇ ಪ್ರಸ್ತುತ ಅಧಿವೇಶನದ ತೀರ್ಮಗಳು ನಿಲ್ಲುತ್ತವೆ. ಅವರನ್ನು ನಾನು ಅಭಿನಂದಿಸುತ್ತೇನೆ. ಹಿಂದೂ ಕಾನೂನು ಸಂಹಿತೆಯನ್ನು ಕ್ರೋಡೀಕರಿಸಲು ಹೊರಡಿರುವ ಈ ಮಸೂದೆಯು ಒಂದು ಕ್ರಾಂತಿಕಾರಕ ಮಸೂದೆಯಾಗಿದೆ. ನಮಗೆ ಅದು ಸಂಪೂರ್ಣವಾಗಿ ತೃಪ್ತಿಕರವಾಗಿಲ್ಲದೆ ಹೋದರೂ ಅದು ಹಿಂದುಗಳ ಸಾಮಾಜಿಕ ಇತಿಹಾಸದಲ್ಲಿ ಒಂದು ದೊಡ್ಡ ಮಜಲಾಗುತ್ತದೆ. ಆದರೆ ಈ ಮಸೂದೆಯ ಕರಡು ತಯಾರಿಸಿದ ಮೇಲೆ ಅನೇಕ ಘಟನೆಗಳು ಸಂಭವಿಸಿವೆ. ಅವುಗಳಲ್ಲಿ ಅತ್ಯಂತ ಮುಖ್ಯವಾದ ಘಟನೆ ನಮ್ಮ ರಾಜಕೀಯ ಸ್ವಾತಂತ್ರ್ಯದ ಸಾಧನೆ. ನೂತನ ಸಂವಿಧಾನವು ಸಿದ್ಧವಾಗುತ್ತಿದೆ. ಈ ನೂತನ ಸಂವಿಧಾನವನ್ನು ಯಾವುದರ ಆಧಾರದ ಮೇಲೆ ರಚಿಸಬೇಕೋ ಆ ಮೂಲತತ್ವಗಳನ್ನು ನಾವು ಈಗಾಗಲೇ ಒಪ್ಪಿದ್ದೇವೆ. ನಮ್ಮ ನೂತನ ಸರಕಾರವು ಪ್ರಜಾಪ್ರಭುತ್ವ ಸರಕಾರವಾಗಿರುತ್ತದೆ. ಮತ್ತು ಪ್ರಜಾಪ್ರಭುತ್ವವಾದರೋ ವ್ಯಕ್ತಿಗಳ ಸಮಾನತೆಯ ಮೇಲೆ ಆಧಾರಗೊಂಡಿರುತ್ತದೆ. ನಾವು ಈ ದೃಷ್ಟಿಯಿಂದ ನಮ್ಮೆದುರಿಗಿರುವ ಪಿತ್ರಾರ್ಜಿತ, ವಿವಾಹ ಮೊದಲಾದ ಸಮಸ್ಯೆಗಳನ್ನು ಪರಿಶೀಲಿಸಬೇಕು. ಆದ್ದರಿಂದ ಆಯ್ಕೆ ಸಮಿತಿಯು ನೂತನ ಮಸೂದೆಯು ಈ ತತ್ವದ ಆಧಾರದಿಂದ ರಚಿತವಾಗುವಂತೆ ನೋಡಿಕೊಳ್ಳಬೇಕು.

ಪಿತ್ರಾರ್ಜಿತದ ಹಕ್ಕನ್ನು ಕುರಿತು ಸಂಹಿತೆಯು ಲಿಂಗಭೇಧವನ್ನು ರದ್ದುಪಡಿಸಿರುವುದು ನಿಜ. ಒಬ್ಬ ಹೆಂಗಸನ್ನೂ ವಾರಸುದಾರಳನ್ನಾಗಿ ಪುರಸ್ಕರಿಸಲಾಗಿದೆ ಮತ್ತು ತನ್ನ ಆಸ್ತಿಯನ್ನು ತನ್ನದೇ ಸಂಪೂರ್ಣ ಹಕ್ಕಿನಿಂದ ಅನುಭವಿಸಲು ಅವಕಾಶ ಕಲ್ಪಿಸಲಾಗಿದೆ. ಅಂದರೆ ಮಹಿಳೆಯ ಸೀಮಿತ ಸಂಪದಾಸ್ತಿಯನ್ನು ಸಂಹಿತೆಯು ಹೋಗಲಾಡಿಸಿದೆ. ಈಗಲೂ ಅದೇನೂ ಬಹಳ ಮುಂದಿನ ಹೆಜ್ಜೆ ಅಲ್ಲ ಎಂದು ಹೇಳಬೇಕಾಗುತ್ತದೆ. ವಾರಸುದಾರಳೆಂದು ಪರಿಗಣಿಸಲ್ಪಟ್ಟ ಮಗಳು ಆಸ್ತಿಯನ್ನು ಪಡೆಯುತ್ತಾಳೆ. ಆದರೆ ಅವಳಿಗೆ ಬರುವುದು

ಮಗನಿಗೆ ಬರುವುದರ ಅರ್ಧಪಾಲು ಮಾತ್ರ. ನಮ್ಮ ಸಂವಿಧಾನಕ್ಕೆ ಆಧಾರವಾಗಿರಬೇಕೆಂದು ನಾನು ಮತ್ತೆ ಮತ್ತೆ ಹೇಳುತ್ತಿರುವ ಸಮಾನತೆಯ ತತ್ವವನ್ನು ಇದು ಉಲ್ಲಂಘಿಸುತ್ತದೆ. ನಮ್ಮ ನೂತನ ಸಂವಿಧಾನವು ಈ ದೇಶದ ಜನರಿಗೆ ಸಾಮಾಜಿಕ ರಾಜಕೀಯ ಮತ್ತು ಆರ್ಥಿಕ ನ್ಯಾಯವನ್ನು ಒದಗಿಸುವ ಉದ್ದೇಶ ಹೊಂದಿದೆ. ಆದ್ದರಿಂದ ನಮ್ಮ ಅಭಿಪ್ರಾಯವೆಂದರೆ ಮಗಳು ತನ್ನ ತಂದೆಯ ಆಸ್ತಿಯಲ್ಲಿ ಮಗ ಪಡೆಯುವುದಕ್ಕೆ ಸಮಾನವಾದ ಆಸ್ತಿಯ ಪಾಲನ್ನು ಪಡೆಯಬೇಕು. ಹಾಗೆಯೇ ತನ್ನ ತಾಯಿಯ ಆಸ್ತಿಯಲ್ಲೂ ಮಗಳಿಗೆ ದೊರಕುವ ಪಾಲಿಗೆ ಸಮಾನವಾದ ಪಾಲನ್ನು ಮಗನು ಪಡೆಯಬೇಕು. ಮಗಳು ತಂದೆಯಿಂದಲೂ ಹಾಗೆಯೇ ಪತಿಯಿಂದಲೂ ಆಸ್ತಿಯ ಪಾಲನ್ನು ಪಡೆಯುತ್ತಾಳೆ. ಆದರೆ ಅವನಿಗೆ ತನ್ನ ಪತ್ನಿಯ ಕಡೆಯಿಂದ ಏನೂ ದೊರಕುವುದಿಲ್ಲ ಎಂದು ವಾದಿಸಲಾಗಿದೆ. ನಾವು ಈಗಾಗಲೇ ಸಲಹೆ ಮಾಡಿರುವಂತೆ ಅಂದರೆ ಮಹಿಳಾ ಸಂಘಸಂಸ್ಥೆಗಳು ಹೇಳಿರುವಂತೆ ಪತಿಯು ತನ್ನ ಪತ್ನಿಯ ಆಸ್ತಿಯಿಂದಲೂ ಪಡೆಯಬಹುದು: ಪತ್ನಿಯು ತನ್ನ ಪತಿಯ ಆಸ್ತಿಯಿಂದ ಪಡೆಯುವ ಹಾಗೆ ಇಂಡಿಯನ್ ಸಕ್ಸೆಷನ್ ಆಕ್ಟ್‌ನಲ್ಲಿ ಪತಿಗೆ ಬರಬೇಕಾದ ಆಸ್ತಿಯ ಪಾಲಿಗೆ ಹೇಗೋ ಅವಕಾಶ ಕಲ್ಪಿಸಲಾಗಿದೆ. ನಾವು ಅದನ್ನು ನಕಲು ಮಾಡಿಕೊಳ್ಳಬೇಕು ಅಷ್ಟೇ.

ಮಗಳಿಗೆ ಅವಳ ಪಾಲನ್ನು ಕೊಟ್ಟರೆ ಅದು ಭೂಮಿ ಆಸ್ತಿಯಾಗಿದ್ದರೆ ಅದರಿಂದ ನೆಲವು ತುಂಡುತುಂಡಾಗುತ್ತದೆ ಎಂದು ಜನರು ವಾದಿಸಿದ್ದಾರೆ. ಮತ್ತು ನನಗಿಂತ ಮುಂಚೆ ಮಾತನಾಡಿದ ಸನ್ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಮಗಳಿಗೆ ಆಸ್ತಿ ಬರುವ ವಿಷಯದಲ್ಲಿ ಮಾತ್ರ ಈ ವಾದ ಏಕೆ ಮುಂದೆ ಬಂದಿದೆ? ಒಬ್ಬ ವ್ಯಕ್ತಿಗೆ ಒಬ್ಬನಿಗಿಂತ ಹೆಚ್ಚು ಪುತ್ರರಿದ್ದರೆ ಇದೇ ವಿಷಯ ಅನ್ವಯವಾಗುವುದಿಲ್ಲವೆ? ಅವನಿಗೆ ನಾಲ್ಕೋ, ಐದೋ ಜನ ಗಂಡುಮಕ್ಕಳಿದ್ದರೆ ಆಗಲೂ ನೆಲವು ತುಂಡುತುಂಡಾಗುತ್ತದೆ. ಆಗ ಏಕೆ ಈ ವಾದವನ್ನು ಮುಂದಿಡಲಿಲ್ಲ; ಮಗಳು ಆಸ್ತಿಯನ್ನು ಪಡೆಯುವ ಸಂದರ್ಭ ಬಂದಾಗ ಏಕೆ ಮುಂದೊಡ್ಡಲಾಗುತ್ತಿದೆ? ಅತ್ಯುತ್ತಮವಾದ ಕೆಲಸವೆಂದರೆ ಆಸ್ತಿಯನ್ನು ಒಡೆದು ಚೂರುಮಾಡುವುದರ ವಿರುದ್ಧವಾಗಿ ಕಾನೂನು ಮಾಡುವುದು. ನಿಗದಿತ ಮಿತಿಯ ಒಳಗೆ ಬರುವುದಾದರೆ ಆ ಆಸ್ತಿಯನ್ನು ಮಾರಿಬಿಡಬೇಕು. ಇದಕ್ಕಿನ್ನೊಂದು ಬದಲಿಯೂ ಇದೆ. ಅದು ನೆಲದ ಸಮಷ್ಟೀಕರಣ.

ಇನ್ನು ವಿವಾಹದ ಪ್ರಶ್ನೆ, ಏಕಪತ್ನಿತ್ವ ತತ್ವವನ್ನು ಪುರಸ್ಕರಿಸಲಾಗಿದೆ. ಇದರಿಂದ ನನಗೆ ತುಂಬಾ ಸಂತೋಷವಾಗಿದೆ. ಭಾರತದ ಮಹಿಳೆಯರೂ ತುಂಬಾ ಸಂತೋಷಪಡುತ್ತಾರೆ. ಸಂಹಿತೆಯು ಅಸ್ತಿತ್ವಕ್ಕೆ ಬಂದು ಏಕಪತ್ನಿತ್ವ ತತ್ವವು ಸ್ಥಾಪಿತವಾಗುತ್ತದೆ. ಮಾನ್ಯರೆ, ಎಲ್ಲಾ ನಾಗರಿಕ ಸಮುದಾಯಗಳು ನಾಗರಿಕ ರಾಷ್ಟ್ರಗಳು ಏಕಪತ್ನಿತ್ವ ತತ್ವವನ್ನು ಅಳವಡಿಸಿಕೊಂಡಿವೆ. ಹೆಣ್ಣಿಗೆ ತೋರಿಸುತ್ತಿರುವ ಅಗೌರವ, ಮಹಿಳೆಯ ಮೇಲೆ ತೋರಿಸುತ್ತಿರುವ ಎಲ್ಲಾ ಬಗೆಯ ದೌರ್ಜನ್ಯ ಇವುಗಳಿಗೆ ಕಾರಣ ಬಹುಪತ್ನಿತ್ವ ತತ್ವವು ಇರುವುದೇ ಆಗಿದೆ. ಏಕಪತ್ನಿತ್ವವು ಇದ್ದಿದ್ದರೆ ಮಹಿಳೆಯರನ್ನು ಅಪಹರಿಸುತ್ತಿರಲಿಲ್ಲ. ಬೇರೆಯವರಿಗೆ ಅವರನ್ನು ಮದುವೆ ಮಾಡುತ್ತಿರಲಿಲ್ಲ ಅಥವಾ ಅವರಿಗೆ ಬೇರೆ ಯಾವುದೇ ಕಷ್ಟವಾಗುತ್ತಿರಲಿಲ್ಲ. ಇದು ಬಹಳ ಸಮಗ್ರವಾದ ತತ್ವವಾದ್ದರಿಂದ ಸದನವು ಅದನ್ನು ಒಪ್ಪಿಕೊಳ್ಳುತ್ತದೆ ಎಂದು ಆಶಿಸುತ್ತೇನೆ. ವಿವಾಹದ ಷರತ್ತುಗಳನ್ನು ಕುರಿತು ಒಂದೋ ಎರಡೋ ಅಂಶಗಳನ್ನು ಸೂಚಿಸಬಯಸುತ್ತೇನೆ. **ಸಪಿಂಡರ** ವಿವಾಹವನ್ನು ಕುರಿತು ಮತ್ತು ಸಪಿಂಡ ಎನ್ನುವುದರ ವಿವರಣೆಯನ್ನು ಕುರಿತು ಸ್ವಲ್ಪ ಪರಿಷ್ಕರಣ ಅಗತ್ಯವಾಗಿದೆ. ಸಂಹಿತೆಯಲ್ಲಿ ಕೊಡಲಾಗಿರುವ ವಿವರಣೆ ಸಾಕಷ್ಟು ತೃಪ್ತಿಕರವಾಗಿಲ್ಲ. ಮತ್ತೆ ವಿವಾಹದ ವಯಸ್ಸು ಕೂಡ ಊರ್ಜಿತವಾಗುವ ವಿಭಾಗಕ್ಕೆ ಒಂದು ನಿಯಮವಾಗಿರಬೇಕು. ಶಾರ್ದಾ ಆಕ್ಟ್ ಇದೆ, ಆದರೆ ಅದು ತೃಪ್ತಿಕರವಾಗಿಲ್ಲ. ಅದು

ಜನರಿಗೆ ಏಕೆ ತೃಪ್ತಿತಂದಿಲ್ಲವೆಂದರೆ, ಬಾಲ್ಯವಿವಾಹಗಳನ್ನು ತಪ್ಪಿಸಲು ಅದಕ್ಕೆ ಸಾಧ್ಯವಾಗಲಿಲ್ಲ ; ಅದು ಪರಿಣಾಮಕಾರಿಯಾಗಿಲ್ಲ. ಆದ್ದರಿಂದ ಪ್ರಸ್ತುತ ಮಸೂದೆಯು ಇನ್ನು ಸ್ವಲ್ಪ ಉಗ್ರವಾಗಿರಬೇಕೆಂದು ನಾವು ಬಯಸುತ್ತೇವೆ. ಮದುವೆಯ ವಯಸ್ಸು ಹದಿನಾರು ವರ್ಷ ಎಂದು ನಾವು ಬಯಸುವುದಾದರೆ, ಅದನ್ನು ಕ್ರಮಬದ್ಧ ವಿವಾಹದ ಒಂದು ನಿಯಮವನ್ನಾಗಿ ಸೇರಿಸುವುದು ಅಗತ್ಯವಾಗುತ್ತದೆ. ಸೆಲೆಕ್ಟ್ ಕಮಿಟಿಯು ಈ ಬದಲಾವಣೆಯನ್ನು ಮಾಡಬೇಕೆಂಬುದು ನನ್ನ ಅಪೇಕ್ಷೆ.

ಆಮೇಲೆ ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದಂತೆ ಎರಡು ಮಾತು. ಕೆಲವರ ದೃಷ್ಟಿಯಲ್ಲಿ ಅದೂ ಬಹಳ ಮುಂದೆ ಹೋಗಿಲ್ಲ. ಸೆಲೆಕ್ಟ್ ಕಮಿಟಿಯ ಸದಸ್ಯರ ಗಮನಕ್ಕೆ ತರಬಯಸುವ ಒಂದು ವಿಚಾರ ಪರಿತ್ಯಾಗಕ್ಕೆ ಕೊಟ್ಟಿರುವ ಸಮಯ. ಪುರುಷನೋ ಮಹಿಳೆಯೋ ತನ್ನ ಸಂಗಾತಿಯನ್ನು ತೊರೆದರೆ, ಐದು ವರ್ಷಗಳ ಅನಂತರ ಆತನನ್ನು ಅಥವಾ ಆಕೆಯನ್ನು ವಿಚ್ಛೇದಿಸಬಹುದು ಎಂದು ಅವಕಾಶ ಕಲ್ಪಿಸಿದೆ. ಐದು ವರ್ಷ ಎನ್ನುವುದು ಸಂಹಿತೆಯಲ್ಲಿ ಕೊಟ್ಟಿರುವ ಕಾಲಮಿತಿ. **ನಾರದಸ್ಮೃತಿ**ಯಲ್ಲಿಯೂ ಮಗುವಿಲ್ಲದ ಹೆಣ್ಣು ಮೂರು ವರ್ಷಗಳ ಕಾಲ ಕಾಯಬೇಕು ಎಂದು ಹೇಳಿದೆ. ಮೂರು ವರ್ಷಗಳ ನಂತರ ಅವರು ಮತ್ತೆ ಮದುವೆ ಮಾಡಿಕೊಳ್ಳಬಹುದು. ಆದ್ದರಿಂದ ಆ ಅವಕಾಶವನ್ನು ಇಲ್ಲಿ ಏಕೆ ಅಳವಡಿಸಬಾರದು? ಮಹಿಳೆಯು ಮಕ್ಕಳಿರದಿದ್ದರೆ ಐದು ವರ್ಷಗಳ ಕಾಲ ಕಾಯಬೇಕಾಗಿಲ್ಲ, ತನ್ನ ಪತಿಯಿಂದ ಮೂರು ವರ್ಷವಾದ ಮೇಲೆ ವಿಚ್ಛೇದನ ಪಡೆಯಬಹುದು ಎಂದೇಕೆ ಹೇಳಬಾರದು? ಮಕ್ಕಳಿದ್ದರೆ ಐದು ವರ್ಷ ಸರಿಯಾದ ಕಾಲವ್ಯಾಪ್ತಿ, ಇಲ್ಲದ ಮಹಿಳೆಗೆ ಮೂರು ವರ್ಷವೆ ವಿಹಿತ ಕಾಲಾವಧಿ.

ಪೋಷಕತ್ವಕ್ಕೆ ಸಂಬಂಧಿಸಿದಂತೆಯೂ ಸಂಹಿತೆಯಲ್ಲಿ ಈ ಮಸೂದೆಯು ಯಾವ ಬದಲಾವಣೆಯನ್ನೂ ಮಾಡಿಲ್ಲ. ತಂದೆಯು ಮಕ್ಕಳ ಸಹಜ ಪೋಷಕ. ತಾಯಿ ಇಲ್ಲಿ ಬರುವುದೇ ಇಲ್ಲ. ಆಕೆಯೂ ತಂದೆಯ ಜೊತೆಗೆ ಮಕ್ಕಳ ಸಹ–ಪಾಲಿಕೆಯಾಗಿರಬೇಕೆಂಬುದು ನಮ್ಮ ಅಪೇಕ್ಷೆಯಾಗಿದೆ.

ದತ್ತು ಸ್ವೀಕಾರಕ್ಕೆ ಸಂಬಂಧಿಸಿದಂತೆ ಇಡೀ ಪ್ರಕರಣವನ್ನೇ ಕಿತ್ತು ಹಾಕಬಹುದು ಎಂದು ನನ್ನ ಭಾವನೆ. ನಮ್ಮದು ಜಾತ್ಯತೀತ ರಾಷ್ಟ್ರ. ನಾವು ಧರ್ಮನಿರಪೇಕ್ಷ ದೇಶವಾಗಿರಬೇಕೆಂದು ಬಯಸುತ್ತೇವೆ. ಹಿಂದೂ ಕಾನೂನಿನಲ್ಲಿ ದತ್ತಕ ಸ್ವೀಕಾರ ಧಾರ್ಮಿಕ ಉದ್ದೇಶಗಳಿಗಾಗಿ ನಡೆಯುತ್ತದೆ. ಧರ್ಮನಿರಪೇಕ್ಷ ಸರಕಾರಕ್ಕೂ ಧಾರ್ಮಿಕ ಪದ್ಧತಿಗೂ ಏನು ಸಂಬಂಧ? ಈಗ ನಮಗಿರುವ ಕಾಳಜಿ ಇಷ್ಟೆ. ಧಾರ್ಮಿಕ ಉದ್ದೇಶಗಳಿಂದ ಮಾಡಿಕೊಂಡಿರುವ ದತ್ತಕವನ್ನು ಪಿತ್ರಾರ್ಜಿತ ಆಸ್ತಿಯನ್ನು ಪಡೆಯುವುದಕ್ಕೆ ಮಾನ್ಯ ಮಾಡಬಾರದು ಎಂದು. ಅದು ಕೂಡದು ಎಂದು ನಾವು ಹೇಳುತ್ತೇವೆ. ಗಂಡುಮಗುವಾಗಲಿ, ಹೆಣ್ಣುಮಗುವಾಗಲಿ ಅದನ್ನು, ಧಾರ್ಮಿಕ ಕಾರಣಕ್ಕಾಗಿಯಲ್ಲದೆ ನಿಜವಾದ ಉದ್ದೇಶಕ್ಕೆ, ತಂದೆತಾಯಿಗಳಿಗೆ ಮಗು ಬೇಕಾಗಿದೆ, ಆದ್ದರಿಂದ ದತ್ತಕ ತೆಗೆದುಕೊಂಡಿದ್ದರೆ, ಆಗ ಆ ಮಗುವಿಗೆ ಹೆತ್ತ ಮಗುವಿಗಿರುವಷ್ಟೇ ಹಕ್ಕುಗಳು ಬರತಕ್ಕದ್ದು. ಆದರೆ ಅದು ಧಾರ್ಮಿಕ ಕಾರಣಗಳಿಗಾಗಿ ನಡೆದಿದ್ದರೆ, ಅದನ್ನು ಆಸ್ತಿಯ ವಾರಸುದಾರಿಕೆಗೆ ಪರಿಗಣಿಸಬಾರದು.

ಸೆಲೆಕ್ಟ್ ಕಮಿಟಿಯು ಪರಿಶೀಲಿಸಬೇಕೆಂದು ನಾನು ಬಯಸುವ ಮುಖ್ಯವಾದ ವಿಚಾರಗಳಲ್ಲಿ ಇವು ಕೆಲವು. ಈಗ ಹಲವು ಭಾಷಣಗಳನ್ನು ಮಾಡಲಾಗಿದೆ. ಕೊನೆಯ ಪಕ್ಷ ನನ್ನ ಮಾನ್ಯ ಮಿತ್ರ ಡಾ. ಪಟ್ಟಾಭಿಯವರು ನಮ್ಮ ಹಿಂದಿನ ಸಂಪ್ರದಾಯಗಳನ್ನು ಕೊಂಡಾಡುವ ಸುದೀರ್ಘ ಭಾಷಣ ಮಾಡಿದ್ದಾರೆ. ಭೂತಕಾಲವನ್ನು ನಾವು ತುಂಬಾ ನೋಡಿಯಾಗಿದೆ, ಈಗ ಭವಿಷ್ಯತ್ತನ್ನು ನೋಡಬೇಕಾಗಿದೆ. ನಾವು ಈ ಕಾನೂನನ್ನು ಮಾಡುತ್ತಿರುವುದೇ ಮುಂದಿನ ಪೀಳಿಗೆಗಾಗಿ. ಪ್ರಸ್ತುತ ಕಾನೂನು ನಮಗೆ ಅನ್ವಯವಾಗುವುದಕ್ಕಿಂತ

ಹೆಚ್ಚಾಗಿ ನಾವಾದ ಮೇಲೆ ಬರುವ ಪೀಳಿಗೆಗೆ ಅನ್ವಯವಾಗುತ್ತದೆ. ಆದ್ದರಿಂದ ಮುಂದಿನ ಪರಿಸ್ಥಿತಿಗಳನ್ನು ನಾವು ನೋಡಬೇಕು. ವಾಸ್ತವವಾಗಿ ಕಾನೂನು ನಿರ್ಧಾರವಾಗುವುದೇ ಪರಿಸ್ಥಿತಿಗಳಿಂದ. ಕಾನೂನು ಸಮಾಜವನ್ನು ಪ್ರತಿಬಿಂಬಿಸುತ್ತದೆ. ಜನರು ಬದುಕಿರುವ ಪರಿಸ್ಥಿತಿಗಳನ್ನು ಅದು ಪ್ರತಿಫಲಿಸುತ್ತದೆ. ಮದುವೆಯಾಗಲಿ ವಿಚ್ಛೇದನವಾಗಲಿ ಅಥವಾ ಬೇರೆ ಏನೇ ಆಗಲಿ ನಮ್ಮ ಪೂರ್ವಗ್ರಹಗಳಿಂದ ಮುಂದಿನ ಪೀಳಿಗೆಯು ಹಾನಿಗೊಳ್ಳದಂತೆ ನಾವು ನೋಡಿಕೊಳ್ಳಬೇಕು. ಆಯ್ಕೆ ಸಮಿತಿಯು ಇದನ್ನು ಪರಿಗಣಿಸಿ ಮುಂದಿನ ಹಿಂದೂ ಸಮಾಜಕ್ಕೆ ಬಹು ದೊಡ್ಡ ವರವಾಗುವಂತಹ ಒಂದು ಮಸೂದೆಯನ್ನು ತಯಾರಿಸುತ್ತದೆ ಎಂದು ನಾನು ಆಶಿಸುತ್ತೇನೆ.

**ಶ್ರೀ ರಾಮ ಸಹಾಯ್** (ಗ್ವಾಲಿಯರ್ ರಾಜ್ಯ) : (ಹಿಂದೀ ಭಾಷಣದ ಇಂಗ್ಲಿಷ್ ಅನುವಾದ) ಮಾನ್ಯ ಅಧ್ಯಕ್ಷರೇ, ನಿರ್ದಿಷ್ಟವಾಗಿ ಮಸೂದೆಯನ್ನು ಕುರಿತು ನಾನು ಹೇಳುವಂಥದೇನೂ ಇಲ್ಲ. ಇಂದಿನ ಹಿಂದೂ ಸಮಾಜದ ಅಗತ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಮಸೂದೆಯನ್ನು ರಚಿಸಿರುವ ರೀತಿಯನ್ನು ನಾನು ಮೆಚ್ಚುತ್ತೇನೆ. ಆದರೆ ಅದರಲ್ಲಿ ನನಗೆ ಒಂದೆರಡು ದೋಷಗಳು ಕಾಣಿಸುತ್ತಿವೆ. ಸೆಲೆಕ್ಟ್ ಕಮಿಟಿಯ ಪರಿಶೀಲನೆಗಾಗಿ ಅವುಗಳನ್ನು ವಿವರಿಸುವುದು ಅಗತ್ಯ ಎಂದು ನಾನು ಭಾವಿಸುತ್ತೇನೆ.

ಮಸೂದೆಯ ನಾಲ್ಕನೇ ಭಾಗದ ೩(೬)ನೇ ವಿಭಾಗದಲ್ಲಿ, ಅಪ್ರಾಪ್ತ ವಯಸ್ಕ ಬಾಲಕಿಯರ ಮದುವೆಯ ವಿಚಾರವಾಗಿ ಆಕೆಯ ಪೋಷಕನ ಸಮ್ಮತಿಯನ್ನು ಪಡೆದಿರಲೇಬೇಕು ಎಂದು ಹೇಳಲಾಗಿದೆ. ಆದರೆ ವಿವಾಹವು ಅನೂರ್ಜಿತ ಎಂದು ಘೋಷಿಸುವ ಪ್ರಶ್ನೆ ಬಂದಾಗ, ಐದನೇ ವಿಭಾಗದಲ್ಲಿ, ಅಂತಹ ಸಮ್ಮತಿಯನ್ನು ಪಡೆಯಲಿಲ್ಲ ಅಥವಾ ಪಡೆದಿರಲಿಲ್ಲ ಎಂಬ ಆಧಾರದ ಮೇಲೆ ಮಾತ್ರವೇ ಅದು ಅನೂರ್ಜಿತ ಎಂದು ಸಾರಲು ಸಾಧ್ಯವಿಲ್ಲ ಎನ್ನಲಾಗಿದೆ. ಪೋಷಕನ ಅನುಮತಿಯನ್ನು ಪಡೆದಿರಲೇಬೇಕೆಂದು ಬಹು ಸ್ಪಷ್ಟವಾಗಿ ಹೇಳಿರುವಾಗ, ಹಾಗೆ ಅನುಮತಿ ಪಡೆದಿರದ ಮದುವೆಯನ್ನು ಅನೂರ್ಜಿತವೆಂದು ಏಕೆ ಭಾವಿಸಲಾಗುವುದಿಲ್ಲವೋ ನನಗೆ ಅರ್ಥವಾಗುವುದಿಲ್ಲ. ಒಂದು ವೇಳೆ ಪೋಷಕನ ಸಮ್ಮತಿಯನ್ನು ವಂಚನೆಯ ಮೂಲಕವೋ ಬಲಾತ್ಕಾರದಿಂದಲೋ ಪಡೆದಿದ್ದರೆ ಆ ಮದುವೆಯನ್ನು ಅನೂರ್ಜಿತವೆಂದು ಪರಿಗಣಿಸಬಹುದು. ಆದರೆ ಅನುಮತಿಯನ್ನೇ ಪಡೆಯದಿದ್ದಾಗಲೂ ಆ ಮದುವೆಯನ್ನು ಏಕೆ ಅನೂರ್ಜಿತಪಡಿಸಲಾಗುವುದಿಲ್ಲ? ಅದಕ್ಕೆ ಬದಲು ಇದೊಂದು ಕಾರಣದಿಂದಲೇ ಮದುವೆಯನ್ನು ಅನೂರ್ಜಿತವೆಂದು ಭಾವಿಸಲಾಗುವುದಿಲ್ಲ ಎಂದು ಮಸೂದೆಯು ಹೇಳುತ್ತದೆ. ಈ ದೋಷವನ್ನು ಸಮಿತಿಯು ಪರಿಶೀಲಿಸಬೇಕು.

ನಾನು ಸೂಚಿಸಬಯಸುವ ಇನ್ನೊಂದು ಅಂಶ "ವಾರಸುದಾರಿಕೆ"ಗೆ ಸಂಬಂಧಪಟ್ಟದ್ದು. ಶ್ರೀಮತಿ ಹನ್ಸಾ ಮೆಹತಾ ಈಗಷ್ಟೇ ತಮ್ಮ ಭಾಷಣದಲ್ಲಿ ಅದನ್ನು ಪ್ರಸ್ತಾಪಿಸಿದ್ದಾರೆ. ಆದರೆ ಅವರ ಅಭಿಪ್ರಾಯಗಳನ್ನು ನಾನು ಒಪ್ಪಲಾರೆ. ನನ್ನ ಅಭಿಪ್ರಾಯದಲ್ಲಿ ವಾರಸುದಾರಿಕೆಯ ಕ್ರಮವನ್ನು ನಿರೂಪಿಸಿರುವ ರೀತಿಯು ಧರ್ಮಶಾಸ್ತ್ರಗಳ ಮೂಲತತ್ವಗಳನ್ನು ಅಲಕ್ಷಿಸುತ್ತದೆ. (ಹಿಂದೂ ಕೋಡ್ ಆಫ್ ಲಾ) ಮಹಿಳೆಯರಿಗೆ ಯಾವುದೇ ಹಕ್ಕುಗಳನ್ನು ಕೊಡಬಾರದೆನ್ನುವುದು ನನ್ನ ಅಭಿಪ್ರಾಯವಲ್ಲ. ಇಲ್ಲಿ ಪುರುಷರಿಗಿಂತಲೂ ಹೆಚ್ಚಿನ ಹಕ್ಕುಗಳನ್ನು ಅವರಿಗೆ ನೀಡಲಾಗಿದೆ ಎಂಬುದು ನನ್ನ ಅಭಿಪ್ರಾಯ. ಮಗಳಿಗೆ ಪಿತ್ರಾರ್ಜಿತದಿಂದಲೂ ಪಾಲು ಬರುತ್ತದೆ, ಪತಿಯ ಕುಟುಂಬದ ಆಸ್ತಿಯಿಂದಲೂ ಪಾಲು ಬರುತ್ತದೆ. ಆದರೆ ಪುರುಷನಿಗೆ ಅವನ ಪಿತ್ರಾರ್ಜಿತದ ಜೊತೆಗೆ ಅವನ ಮಾವನ ಆಸ್ತಿಯಿಂದಲೂ ಪಾಲು ಬರುವಂತಹ ಯಾವ ಅವಕಾಶವೂ ಈ ಮಸೂದೆಯಲ್ಲಿಲ್ಲ. ಹಾಗಾಗಿ ಇದುವರೆಗೆ ಸ್ತ್ರೀಯರು ಅನ್ಯಾಯವನ್ನು ಅನುಭವಿಸುತ್ತಿದ್ದರೋ ಅದೇ ಅನ್ಯಾಯವನ್ನೇ ಈಗ ಪುರುಷರು ಅನುಭವಿಸುವಂತಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಪತ್ನಿಯು ತನ್ನ ಪಿತ್ರಾರ್ಜಿತದಲ್ಲಿ

ಪಡೆಯುವ ಪಾಲು ಈ ಕೊರತೆಯನ್ನು ತುಂಬುತ್ತದೆ ಎಂದು ವಾದಿಸಬಹುದು. ಆದರೆ ಮಸೂದೆಯಲ್ಲಿ ಅಂತರ್ಗತವಾಗಿರುವ ಉದ್ದೇಶಗಳನ್ನೂ, ಅವು ಅಗತ್ಯವಾಗುವಂತೆ ಮಾಡಿರುವ ಜಾಗತಿಕ ಪರಿಸ್ಥಿತಿಗಳನ್ನೂ ಪರಿಶೀಲಿಸಿದರೆ ನಿಜವಾದ ಸಮಸ್ಯೆ ಪರಿಹಾರವಾಗದೆಯೇ ಉಳಿದಿದೆ ಎಂದು ಭಾವಿಸಬೇಕಾಗುತ್ತದೆ. ಇದಕ್ಕೆ ಕಾರಣ ಪತ್ನಿಯು ಅವಳ ಪಿತ್ರಾರ್ಜಿತದಿಂದ ಪಡೆಯುವ ಪಾಲನ್ನು ಅವಳ ಸ್ತ್ರೀಧನ ಎಂದು ಪರಿಗಣಿಸುವುದರಿಂದ ಅವಳ ಪತಿಗೆ ಅದರ ಮೇಲೆ ಯಾವ ಹಕ್ಕೂ ಇರುವುದಿಲ್ಲ. ಆದ್ದರಿಂದ ಅವನು ಯಾವ ಲಾಭವನ್ನು ಪಡೆಯಲು ಸಾಧ್ಯವಿಲ್ಲ. ಇದು ಸೆಲೆಕ್ಟ್ ಕಮಿಟಿಯು ಪರಿಶೀಲಿಸಬೇಕಾದ ಎರಡನೆಯ ಅಂಶ.

ಇನ್ನೂ ಒಂದೂ ವಿಷಯವಿದೆ. ಧರ್ಮಶಾಸ್ತ್ರದ ತತ್ವಗಳಿಗೂ ಇಂದಿನ ಪರಿಸ್ಥಿತಿಗಳಿಗೂ ನಡುವೆ ವ್ಯತ್ಯಾಸಗಳು ಏನೇ ಇರಲಿ ಅಲ್ಲಿ ಪ್ರತಿಪಾದಿತವಾದ ಮೂಲ ತತ್ವಗಳನ್ನು ನಾವು ಪಾಲಿಸಲೇ ಬೇಕೆಂಬುದು ನನ್ನ ಭಾವನೆ; ಇವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಎಲ್ಲಾ ವಿಚಾರಗಳನ್ನೂ ನಿರ್ಧರಿಸಬೇಕು. ಇಂದಿನ ಪರಿಸ್ಥಿತಿಗಳು ಮತ್ತು ಸಮಾಜದ ಒಲವುಗಳ ದೃಷ್ಟಿಯಿಂದ ಅತ್ಯಗತ್ಯವೆನಿಸುವ ಬದಲಾವಣೆಗಳನ್ನು ಮಾತ್ರ ಮಾಡಬೇಕು. ಕೇವಲ ಉದ್ವೇಗಕ್ಕೆ ಸಿಕ್ಕಿ ಅಥವಾ ಪಾಶ್ಚಾತ್ಯ ನಾಗರಿಕತೆಯ ಅನುಕರಣೆಯಿಂದ ನಾವು ಯಾವ ಬದಲಾವಣೆಯನ್ನೂ ಮಾಡಬಾರದು. ಅದು ನಮ್ಮ ಸಮಾಜದ ಬೆಳವಣಿಗೆಗೆ ತಡೆಯೊಡ್ಡುತ್ತದೆ ಮತ್ತು ಅಪೇಕ್ಷಣೀಯವಲ್ಲದ ಕಷ್ಟಗಳನ್ನು ಉಂಟುಮಾಡುತ್ತದೆ. ಆದ್ದರಿಂದ, ಮಾನ್ಯರೆ, ಸೆಲೆಕ್ಟ್ ಸಮಿತಿಯ ಸದಸ್ಯರು ಈ ವಿಚಾರಗಳನ್ನು ಪರಿಗಣಿಸಿ ಅಗತ್ಯ ತಿದ್ದುಪಡಿಗಳನ್ನು ಮಾಡಲು ಪ್ರಯತ್ನಿಸಬೇಕೆಂದು ಕೋರುತ್ತೇನೆ.

**ಡಾ. ಬಿ.ವಿ. ಕೇಸ್ಕರ್** (ಯು.ಪಿ. : ಸಾಮಾನ್ಯ) : ಮಾನ್ಯರೇ, ಈ ವಿಚಾರವನ್ನು ಮೊದಲು ಪರಿಕಲ್ಪಿಸಿಕೊಂಡ ನಂತರ ಇಷ್ಟು ದೀರ್ಘವಾದ ವಿಳಂಬವಾಗಿದ್ದರೂ ಮಸೂದೆಯನ್ನು ಮಂಡಿಸಿರುವುದಕ್ಕಾಗಿ ಸನ್ಮಾನ್ಯ ಕಾನೂನು ಸಚಿವರನ್ನು ಈ ಸಂದರ್ಭದಲ್ಲಿ ನಾನು ಅಭಿನಂದಿಸುತ್ತೇನೆ. ಇದು ಬಹಳ, ಬಹಳ ಮುಖ್ಯವಾದ ಮಸೂದೆ ಎನ್ನುವುದರಲ್ಲಿ ಸಂದೇಹವಿಲ್ಲ. ನನ್ನ ಮಾನ್ಯ ಮಿತ್ರರಾದ ಡಾ. ಪಟ್ಟಾಭಿಯವರು ಹೇಳಿದಂತೆ ಇಷ್ಟು ಮೂಲ ಸ್ವರೂಪದ, ಇಷ್ಟು ಕ್ರಾಂತಿಕಾರಕವಾದ ಮತ್ತೊಂದು ಮಸೂದೆ ಇದೆ ಎಂದು ನನಗೆ ತೋರುವುದಿಲ್ಲ. ಕಳೆದ ಒಂದು ಸಾವಿರ ವರ್ಷಗಳಿಂದ ಜಡಗಟ್ಟಿ ಹೋಗಿರುವ ಹಿಂದೂ ಸಮಾಜದ ತಳಹದಿಗಳನ್ನು ಬದಲಾಯಿಸಲು ಇದು ಪ್ರಯತ್ನಿಸುತ್ತದೆ. ಹೀಗೆ ಈ ಸಮಾಜವು ಕಳೆದ ಒಂದು ಸಾವಿರ ವರ್ಷ ಮರಗಟ್ಟಿ ಜಡತ್ವನ್ನು ಬೆಳೆಸಿಕೊಂಡಿರುವ ವಿಷಯದ ಕಡೆಗೆ ಈ ಸದನದ ಹಾಗೂ ಸೆಲೆಕ್ಟ್ ಸಮಿತಿಯ ಸದಸ್ಯರ ಗಮನವನ್ನು ಸೆಳೆಯಲು ನಾನು ಬಯಸುತ್ತೇನೆ. ರಾಜ್ಯಾಡಳಿತದಲ್ಲಿ ಅಂತಹ ಜಡತ್ವದಿಂದಾಗಿ ಹಲವು ಬಗೆಯ ಶಕ್ತಿಗಳು ಹಲವು ರೀತಿಯಾಗಿ ಮುಂದೆ ಬಂದು ಈ ಮಸೂದೆಯ ಅಂಗೀಕಾರವನ್ನು ತಡೆಯಲು ಯತ್ನಿಸುವುದು ಸಹಜ. ಹಿಂದೂ ಸಮಾಜದ ಈಗಿರುವ ರಚನೆಯನ್ನು ಬದಲಾಯಿಸುವ ಯಾವುದೇ ಮಸೂದೆಯನ್ನು ಇವು ತಡೆಯುತ್ತವೆ. ಈ ಜಡತೆಯನ್ನು ಹಿಂದೂ ಸಮಾಜದ ಈ ಆಲಸ್ಯವನ್ನು ಸಮಿತಿಯ ಸದಸ್ಯರು, ಸನ್ಮಾನ್ಯ ಕಾನೂನು ಸಚಿವರು ದಯವಿಟ್ಟು ಗಮನಿಸಬೇಕು. ಏಕೆಂದರೆ ಈ ಮಸೂದೆಯು ಅಂಗೀಕಾರವಾಗುವವರೆಗೂ, ಕೊನೆಯ ಕ್ಷಣದವರೆಗೂ, ಮಸೂದೆಯು ಶಾಸನವಾಗದಂತೆ ತಡೆಯಲು ಎಲ್ಲಾ ಬಗೆಯ ಪ್ರಯತ್ನಗಳನ್ನೂ ಮಾಡಲಾಗುತ್ತದೆ ಎನ್ನುವುದರಲ್ಲಿ ನನಗೆ ಸಂದೇಹವಿಲ್ಲ. ಸೂಚಿತವಾಗಿರುವ ಬದಲಾವಣೆಗಳು ಹೇಗಿವೆ ಅಂದರೆ ಹಿಂದೂ ಕಾನೂನಿನಲ್ಲಿ ಅವುಗಳಿಂದ ಮೂಲಭೂತ ಬದಲಾವಣೆ ಆಗುತ್ತದೆ. ಅದನ್ನು ತಡೆಯಲು ಸಂಪ್ರದಾಯಶರಣ ವರ್ಗವು ಎಲ್ಲಾ

ವಿಧಾನಗಳಿಂದಲೂ ಪ್ರಯತ್ನಿಸುತ್ತದೆ. ನನ್ನ ಮಾನ್ಯ ಮಿತ್ರರಾದ ಮಿ. ನಸೀರುದ್ದೀನ್ ಅಹಮದ್ ಅವರು ಈ ಮಸೂದೆಯ ಕ್ರಾಂತಿಕಾರಕ ಸ್ವರೂಪವನ್ನು ಕುರಿತು ಆಚಾರವಂತ ಸಮಾಜದ ಒಂದು ವರ್ಗದ ಕಡೆಯಿಂದ ಬರಲಿರುವ ಭೀತಿಯನ್ನು ಸೂಚಿಸಿದ್ದಾರೆ. ಮಸೂದೆಯಲ್ಲಿ ಸೂಚಿತವಾದ ಬದಲಾವಣೆಗಳಲ್ಲಿ ಕೆಲವು ಕ್ರಾಂತಿಕಾರಕವೆಂಬಂತೆ ತೋರಿದರೂ, ಡಾ. ಪಟ್ಟಾಭಿಯವರು ವಿಹಿತವಾಗಿ ಹೇಳಿರುವಂತೆ ಅವು ನಿಜವಾಗಿ ಹಾಗಿಲ್ಲ. ಅವು ಹಾಗಿರಲು ಕಾರಣ ಕಳೆದ ಎಷ್ಟೋ ಶತಮಾನಗಳ ಕಾಲ ಹಿಂದೂ ಸಮಾಜವು ವಿಕಾಸಗೊಳ್ಳಲು ಅವಕಾಶವಾಗದೆಯೇ ಹೋದದ್ದು. ಆದ್ದರಿಂದ ನಾವು ಶತಮಾನಗಳಲ್ಲಿ ಏನನ್ನು ಮಾಡಬಹುದಾಗಿತ್ತೋ ಅದನ್ನು ಕೆಲವು ದಿನಗಳಲ್ಲಿ ಮಾಡಲು ಪ್ರಯತ್ನಿಸಬೇಕಾಗಿದೆ. ಆದ್ದರಿಂದ ಸಂಪ್ರದಾಯಶರಣ ಅಭಿಪ್ರಾಯ ಎಂದು ಹೇಳಿಕೊಳ್ಳುವ, ಆದರೆ ನಿಜವಾಗಿಯೂ ಹಲವು ಶತಮಾನಗಳ ಕಾಲದ ಜಡತ್ವದ, ಯಾವ ಬದಲಾವಣೆಯನ್ನೂ ಒಲ್ಲದ ಅಭಿಪ್ರಾಯದ ಒತ್ತಡಕ್ಕೆ ಬಲಿಯಾಗಬಾರದು ಎಂಬುದಾಗಿ ಸೆಲೆಕ್ಟ್ ಕಮಿಟಿಯ ಸದಸ್ಯರನ್ನು ನಾನು ಕೋರುತ್ತೇನೆ. ಹಲವು ವರ್ಷಗಳ ಕಾಲ ಇದನ್ನೇ ಕುರಿತು ಯೋಚನೆ ಮಾಡಿ ಮಾಡಿ ಯಾವುದೇ ಬದಲಾವಣೆಯನ್ನು ಸೂಚಿಸಿದರೆ, ಅದು ಹಿಂದೂ ಧರ್ಮದ ಮೇಲೆ ಮಾಡಿದ ಆಕ್ರಮಣ ಎಂದು ಪರಿಗಣಿಸುವಂತಾಗಿಬಿಟ್ಟಿದೆ. ಇವುಗಳಿಗೆದುರಾಗಿ ರಕ್ಷಣೆ ಮಾಡಿಕೊಂಡು ಈ ಎಲ್ಲಾ ಒತ್ತಡಗಳ ನಡುವೆಯೂ ಮುನ್ನಡೆಯಬೇಕೆಂದು ಅವರಿಗೆ ನಾನು ಸೂಚಿಸುತ್ತೇನೆ.

ಹಿಂದೂ ಕಾನೂನಿನಲ್ಲಿ ಯಾವುದೇ ಮೂಲಭೂತ ಬದಲಾವಣೆ ಮಾಡುವುದರ ಜೊತೆಗೆ, ಹಿಂದೂ ಕಾನೂನನ್ನು ಕ್ರೋಡೀಕರಿಸುವ ಅಗತ್ಯ ತುಂಬಾ ತುರ್ತಾಗಿತ್ತು ಎನ್ನುವುದರಲ್ಲಿ ಸಂಶಯವಿಲ್ಲ. ಮಾನ್ಯರೆ, ಇಂದು ಹಿಂದೂ ಕಾನೂನು ಒಂದು ಗೊಂದಲಪುರವಾಗಿದೆ. ಅದು ತರಾಯಿ ಅಥವಾ ಸುಂದರ್‌ಬನ್ಸ್ ಅಂತಹ ಕಾಡಾಗಿದೆ. ಅಲ್ಲಿ ಎಲ್ಲಾ ಬಗೆಯ ಆಚರಣೆಗಳೂ ಮತ್ತು ಸಂಪ್ರದಾಯಗಳೂ ಮೇಲೆ ಬಂದಿವೆ; ಹಲವು ಪುರಾಣಗಳು ಭಾರತದ ಹಲವು ಭಾಗಗಳಲ್ಲಿನ ಪ್ರಚಲಿತ ಪದ್ಧತಿಗಳು, ಅನೇಕ ಧರ್ಮಗಳಲ್ಲಿ ಮತ್ತು ಪ್ರಾಂತಗಳಲ್ಲಿ, ಅನೇಕ ಜಾತಿಗಳು, ಉಪಜಾತಿಗಳು ಮತ್ತು ಉಪ–ಉಪ ಜಾತಿಗಳು ರೂಢಿಯಲ್ಲಿವೆ. ಸಹಜವಾಗಿಯೇ ಇದು ವಕೀಲರಿಗೆ ಒಂದು ಸ್ವರ್ಗವಾಗಿದೆ. ಒಂದು ಮಟ್ಟದವರೆಗೆ ಇದು ಅನಪೇಕ್ಷಣೀಯವಾಗಿರಲಿಲ್ಲ, ಸರಿ. ಆದರೆ ಇದು ಎಷ್ಟು ಬೆಳೆದಿದೆ ಎಂದರೆ ಈ ಪದ್ಧತಿಗಳು ಮತ್ತು ಪ್ರತಿ ಪದ್ಧತಿಗಳ ಗೋಜಲನ್ನು ಕೊನೆಗೊಳಿಸಬೇಕಾದ ಸಮಯಬಂದಿದೆ. ನಾವು ಕಾನೂನನ್ನು ಸಾರ್ವತ್ರಿಕಗೊಳಿಸಿ ವಿಚಾರಯುತವಾಗಿಸಿ ಕ್ರೋಡೀಕರಿಸಬೇಕು. ಇದು ಹಿಂದೂ ಕಾನೂನನ್ನು ಬದಲಾಯಿಸುವ ಯಾವುದೇ ಒಂದು ವಿಚಾರದ ಜೊತೆಗೆ ನಡೆಯಬೇಕಾದದ್ದು. ಆದ್ದರಿಂದ ಎರಡು ದೃಷ್ಟಿಗಳಿಂದಲೂ ಈ ಬಗೆಯ ಒಂದು ಮಸೂದೆಯು ಬಹಳ ಮೊದಲೇ ಬರಬೇಕಾಗಿತ್ತು.

ಮಸೂದೆಯನ್ನು ಇನ್ನೂ ತುಂಬಾ ತಡಮಾಡಬಾರದು ಎಂದು ಸಮಿತಿಯ ಸದಸ್ಯರಿಗೆ ಎಚ್ಚರಿಕೆ ನೀಡಬಯಸುತ್ತೇನೆ. ಮೊದಲನೆಯ ಸಮಿತಿಯು ನೇಮಿತವಾದದ್ದು ೧೯೪೪ರಲ್ಲಿ. ಈ ವಿಚಾರವೂ ಮಸೂದೆಯನ್ನು ಕುರಿತ ಕೆಲವು ಸಲಹೆಗಳೂ ಕಳೆದ ಕೆಲವು ವರ್ಷಗಳಿಂದ ಸುಳಿದಾಡುತ್ತಲೇ ಇವೆ. ಈಗ ಚರ್ಚೆಯ ಅವಧಿಯನ್ನು ಆದಷ್ಟು ಮೊಟಕು ಮಾಡಿ ಹೆಚ್ಚೆಂದರೆ ಮುಂದಿನ ಅಧಿವೇಶನಕ್ಕೆ ಮುಂಚೆ ಮಸೂದೆಯನ್ನು ಸದನದ ಮುಂದೆ ತರಬೇಕೆಂದು ನಾನು ಸೂಚಿಸುತ್ತೇನೆ. ಮಾನ್ಯರೇ, ನಾನು ಮಸೂದೆಯನ್ನು ಸ್ವಾಗತಿಸುತ್ತೇನೆ.

**ಬೇಗಂ ಎಜಾಜ್ ರಸೂಲ್** (ಯು.ಪಿ.: ಮುಸ್ಲಿಂ) : ಮಾನ್ಯರೇ, ಸದನದ ಸಮಯವನ್ನು ಹೆಚ್ಚಾಗಿ ಉಪಯೋಗಿಸಿಕೊಳ್ಳಲು ನಾನು ಬಯಸುವುದಿಲ್ಲ. ಏಕೆಂದರೆ ಇರುವ ಸಮಯ ತುಂಬಾಕಡಿಮೆ ಎಂದು

ನನಗೆ ಗೊತ್ತು. ಆದರೆ ನಾನು ಎದ್ದು ನಿಂತು, ಕಾನೂನು ಸಚಿವರು ಈಗ ತಾನೆ ಸದನದ ಮುಂದೆ ಈ ಮಸೂದೆಯನ್ನು ತಂದಿರುವ ಕ್ರಮವನ್ನು ಸ್ವಾಗತಿಸದೇ ಹೋದರೆ ನನ್ನ ಕರ್ತವ್ಯದಲ್ಲಿ ವಿಮುಖಳಾದಂತಾಗುತ್ತದೆ. ಮಾನ್ಯರೇ, ಈ ದೇಶಕ್ಕೆ ಸ್ವಾತಂತ್ರ್ಯವನ್ನು ಸಾಧಿಸಿಕೊಂಡು ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿರುವಾಗ ಇಂತಹ ಮಸೂದೆಯನ್ನು ತಂದಿರುವುದು ಅತ್ಯಂತ ಸಮುಚಿತವಾಗಿದೆ. ಆಯ್ಕೆ ಸಮಿತಿಯು ವಿಳಂಬವಿಲ್ಲದೆ ವರದಿಯನ್ನು ಸಲ್ಲಿಸಿ ಈ ಸದನವು ಮಸೂದೆಯನ್ನು ಶಾಸನವನ್ನಾಗಿ ಅಂಗೀಕರಿಸಿ ಸಾಧ್ಯವಾದಷ್ಟು ಬೇಗ ಕಾನೂನು ಪುಸ್ತಕಕ್ಕೆ ಸೇರಿಸಲಾಗುತ್ತದೆ ಎಂದು ಆಶಿಸುತ್ತೇನೆ.

ಪ್ರಸ್ತುತ ಮಸೂದೆಯ ಅವಕಾಶಗಳು ಅತ್ಯಂತ ದೂರಸ್ಪರ್ಶಿಯಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ವಿವಾಹ, ವಿಚ್ಛೇದನ, ಪಿತ್ರಾರ್ಜಿತ ಮತ್ತು ದತ್ತುಸ್ವೀಕಾರಗಳಿಗೆ ಸಂಬಂಧಿಸಿದ ಅವಕಾಶಗಳು ಅತ್ಯಂತ ಮೂಲಭೂತವಾದ ಬದಲಾವಣೆಯ ಕ್ರಮಗಳು. ಹಿಂದೂ ಕಾನೂನಿನ ಕ್ರೋಡೀಕರಣವು ಅತ್ಯಂತ ಮುಖ್ಯವಾದ ವಿಷಯವಾಗಿದೆ. ಈ ಸದನದ ಮುಂದೆ ಇಷ್ಟು ಮಹತ್ವಪೂರ್ಣವಾದ ಶಾಸಕಾಂಗ ಕ್ರಮವು ಹಿಂದೆಂದೂ ಕಂಡುಬಂದಿರಲಿಲ್ಲ.

ಮಾನ್ಯರೇ, ಮಸೂದೆಯ ಬೇರೆ ಬೇರೆ ವಿಭಾಗಗಳನ್ನು ಪ್ರಸ್ತಾಪಿಸಲು ಹೋಗದೆ, ಕೈಕೊಂಡಿರುವ ಈ ಕ್ರಮವನ್ನು ಇಡಿಯಾಗಿ ನಾನು ಸ್ವಾಗತಿಸುತ್ತೇನೆ. ಒಂದು ದೇಶದ ಮಹಿಳೆಯರ ಸ್ಥಾನಮಾನದ ಮೂಲಕ ಆ ದೇಶದ ಸಮಾಜವು ಹೇಗಿದೆ ಎಂದು ತೀರ್ಮಾನಿಸಲಾಗುತ್ತದೆ. ಭಾರತದಲ್ಲಿ ಹಿಂದೂ ಮಹಿಳೆಯರು ತುಂಬಾ ಹಿಂದುಳಿದಿದ್ದಾರೆ ಎನ್ನುವುದರಲ್ಲಿ ಸಂದೇಹವಿಲ್ಲ. ಶರಿಯತ್ ಕಾನೂನು ತಮಗೆ ಹೆಚ್ಚಿನ ಹಕ್ಕುಗಳನ್ನು ಕೊಡುತ್ತದೆ ಎಂದು ಮುಸ್ಲಿಮರು ಹೆಮ್ಮೆ ಪಡುತ್ತಾರೆ. ಶರಿಯತ್ ಅನೇಕ ಹಕ್ಕುಗಳನ್ನು ಕೊಟ್ಟಿದ್ದರೂ ಅವುಗಳನ್ನು ಅಕ್ಷರಶಃ ಪಾಲಿಸುತ್ತಿಲ್ಲ ಎಂದು ನನ್ನ ಮುಖ್ಯ ಮಿತ್ರರಾದ ಡಾ. ಪಟ್ಟಾಭಿಯವರು ಹೇಳಿದುದನ್ನು ನಾನು ಒಪ್ಪುತ್ತೇನೆ. ಭಾರತದ ಅನೇಕ ಭಾಗಗಳಲ್ಲಿ ಮುಸ್ಲಿಂ ಮಹಿಳೆಯರು ಶರಿಯತ್ ನೀಡಿರುವ ಹಕ್ಕುಗಳನ್ನು ಅನುಭೋಗಿಸುತ್ತಿದ್ದರೂ ಅವುಗಳನ್ನು ಅಕ್ಷರಶಃ ಪಾಲಿಸುತ್ತಿಲ್ಲ ಎನ್ನುವುದು ಸತ್ಯ ಸಂಗತಿ. ಪಂಜಾಬಿನಲ್ಲಿ ಪರಂಪರೆಯಿಂದ ಬಂದ ಕಾನೂನೇ ಇನ್ನೂ ಚಾಲ್ತಿಯಲ್ಲಿದ್ದು ಹೆಣ್ಣುಮಕ್ಕಳಿಗೆ ಅವರ ತಂದೆಯಂದಿರ ಆಸ್ತಿಯಿಂದ ಏನೂ ದೊರಕುವುದಿಲ್ಲ. ಅದೇ ರೀತಿಯಾಗಿ ಯು.ಪಿ. ಪ್ರಾಂತದ ಕೆಲವು ಭಾಗಗಳಲ್ಲಿ ಶರಿಯತ್ ಚಾಲ್ತಿಯಲ್ಲಿದ್ದರೂ ಮುಸ್ಲಿಂ ಮಹಿಳೆಯರು ತಾಲ್ಲೂಕ್‌ದಾರನೊಂದಿಗೆ ಆಸ್ತಿಯನ್ನು ಹಂಚಿಕೊಳ್ಳುವುದಿಲ್ಲ. ಆದ್ದರಿಂದ ಈಗ ನಮ್ಮೆದುರಿಗಿರುವ ಮಸೂದೆಯು ಹಿಂದೂ ಮಹಿಳೆಯರನ್ನು, ಅವರ ಹಕ್ಕುಗಳಿಗೆ ಸಂಬಂಧಿಸಿದಂತೆ ಮುಸ್ಲಿಂ ಮಹಿಳೆಯರ ಸಮಕ್ಕೆ ನಿಲ್ಲಿಸುತ್ತದೆ. ಆಗಲೇ ನಾನು ಹೇಳಿದಂತೆ ಸಮಾಜದ ಯಾವ ವಿಭಾಗವೂ ಈ ಕ್ರಮವನ್ನು ವಿರೋಧಿಸುವುದಿಲ್ಲ. ಇದು ಬಹು ಮೂಲಭೂತವಾದ ವಿಧಿಯಾಗಿದ್ದು ಅನೇಕ ಶಾಖೆಗಳಲ್ಲಿ ಧರ್ಮದೊಂದಿಗೆ ಸಂಬಂಧ ಪಟ್ಟಿರುವುದರಿಂದ ಸಮಾಜದಲ್ಲಿನ ಹಿಂದೂಗಳಲ್ಲಿ ಕೆಲವು ವರ್ಗಗಳು ಅದನ್ನು ವಿರೋಧಿಸಬಹುದು, ಸಂದೇಹವಿಲ್ಲ. ಆದರೆ ದಿಟ್ಟತನದ ಕ್ರಮಗಳನ್ನು ಮುಂದಿಡಲು ಧೈರ್ಯ ತುಂಬಿದ ಮನಸ್ಸುಗಳು ಬೇಕು. ಆದ್ದರಿಂದ ಈ ಶಾಸನವನ್ನು ಅಸಮ್ಮತಿಯಿಂದ ನೋಡುವ ದೇಶದ ಆಚಾರವಂತ ವರ್ಗದ ಅಭಿಪ್ರಾಯವು ಅದನ್ನು ಶಾಸನವಾಗಿ ಅಂಗೀಕರಿಸುವ ದಾರಿಗೆ ಅಡ್ಡಿಬರುವುದಿಲ್ಲ ಎಂದು ನಾನು ಆಶಿಸುತ್ತೇನೆ. ಈಗ ಸೆಲೆಕ್ಟ್ ಕಮಿಟಿಯ ಮುಂದೆ ಹೋಗುತ್ತಿರುವ ಪ್ರಸ್ತುತ ಮಸೂದೆಯು ಇನ್ನೂ ಉತ್ತಮವಾದ ರೂಪದಲ್ಲಿ ಅಲ್ಲಿಂದ ಬರುತ್ತದೆ ಎಂದೂ, ಈ ಕಾರ್ಯವು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ ಎಂದೂ ಆಶಿಸುತ್ತೇನೆ. ಸಮಾಜವು ಒಂದು ಕಡೆ ಜಡವಾಗಿ ನಿಂತುಬಿಡಬಾರದು. ಪ್ರಗತಿಯ ದಾರಿಯಲ್ಲಿ ನಾವು ಮುಂದಕ್ಕೆ ಹೋಗುತ್ತಿದ್ದಂತೆ, ಮಹಿಳೆಯರು

ತಮ್ಮ ಕಾಲ ಮೇಲೆ ನಿಂತುಕೊಳ್ಳುವುದು ಅಗತ್ಯವಾಗುತ್ತದೆ. ಭಾರತದ ಮಹಿಳೆಯರು ಆರ್ಥಿಕವಾಗಿ ತಮ್ಮ ಕಾಲ ಮೇಲೆ ನಿಂತುಕೊಳ್ಳದೆ ಹೋದರೆ ಭಾರತವು ಪ್ರಗತಿ ಪಥದಲ್ಲಿ ಮುಂದುವರಿಯುವುದು ಸುತರಾಂ ಅಸಾಧ್ಯವಾಗುತ್ತದೆ. ಈ ಕೆಲವು ಮಾತುಗಳೊಂದಿಗೆ ಪ್ರಸ್ತುತ ಶಾಸಕಾಂಗ ಕ್ರಮಕ್ಕೆ ಹೃತ್ಪೂರ್ವಕ ಬೆಂಬಲ ನೀಡುತ್ತೇನೆ.

**ಶ್ರೀ ರೋಹಿಣಿಕುಮಾರ್ ಚೌಧರಿ** (ಅಸ್ಸಾಂ : ಸಾಮಾನ್ಯ) : ಮಾನ್ಯರೆ, ಈ ಮಸೂದೆಯನ್ನು ಮಂಡಿಸಿರುವ ಗೌರವಾನ್ವಿತ ಕಾರ್ಯಭಾರಿ ಸಚಿವರನ್ನು ನಾನು ಅಭಿನಂದಿಸಲೇಬೇಕು. ಸದನದ ಕೆಲವು ಭಾಗಗಳಿಂದ ಇಷ್ಟೊಂದು ಪ್ರಶಂಸೆಯನ್ನು ಪಡೆದಿರುವಾಗ ಇಂದಿನ ಈ ಸಂಜೆಯನ್ನು ಅವರು ಬಹುವಾಗಿ ಪ್ರೀತಿಸಿರುತ್ತಾರೆ. ಆದರೆ ಈ ಮಸೂದೆಯ ಶೀರ್ಷಿಕೆಯು ಒಂದು ತಪ್ಪು ಪ್ರಯೋಗವಾಗಿದೆ ಎಂದು ನಾನು ಹೇಳಿದರೆ, ಕೆಟ್ಟ ಭಾವನೆಯಿಂದ ಟೀಕಿಸುತ್ತಿದ್ದೇನೆ ಎಂದು ತಿಳಿದುಕೊಳ್ಳಬಾರದು. ಅದು ಹಿಂದೂ ಸಂಹಿತೆಯಲ್ಲಿ, ಹೆಚ್ಚು ವಿಹಿತವಾದ ರೀತಿಯಲ್ಲಿ ಕರೆಯಬೇಕೆಂದರೆ ಅದು ಹಿಂದೂ ಮಹಿಳೆಯರ ಸಂಹಿತೆ (Hindu Women's Code). ಈ ದೇಶದಲ್ಲಿ ಒಂದು ಧರ್ಮನಿರಪೇಕ್ಷ ಸರಕಾರವನ್ನು ಹೊಂದಿರಬೇಕೆಂದು ನಿರ್ಣಯ ಕೈಗೊಂಡು ಮತೀಯ ಸಂಸ್ಥೆಗಳನ್ನು ನಿಲ್ಲಿಸುವ ನಿರ್ಧಾರ ಮಾಡಿದ ಕೇವಲ ಮೂರು–ನಾಲ್ಕು ದಿನಗಳ ನಂತರ ಇಷ್ಟು ಅವಸರವಾದ ರೀತಿಯಲ್ಲಿ, ಒಂದು ನಿರ್ದಿಷ್ಟ ಸಮುದಾಯದ ಸಲುವಾಗಿ ಏಕೆ ಶಾಸನ ಮಾಡಲು ಹೋಗಬೇಕು ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಎಲ್ಲಾ ಮತೀಯ ಸಂಘಸಂಸ್ಥೆಗಳನ್ನೂ ರದ್ದುಪಡಿಸಲು ನಿರ್ಧರಿಸಿದ ಮೇಲೆ, ಸ್ವಲ್ಪ ನಿಧಾನಿಸಿ, ಆಲೋಚನೆಗೆ ಸಮಯಕೊಟ್ಟು ರಾಜ್ಯದ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಮೊದಲಾದ ಎಲ್ಲಾ ಪ್ರಜೆಗಳನ್ನೂ ಒಳಗೊಳ್ಳುವಂತೆ ಒಂದು ಮಸೂದೆಯನ್ನು ಏಕೆ ರೂಪಿಸಬಾರದಾಗಿತ್ತು ಎಂಬುದು ನನಗೆ ತಿಳಿಯಬೇಕಾಗಿದೆ. ಈ ಸದನದಲ್ಲಿರುವ ಸ್ತ್ರೀ ಪ್ರಭಾವಗಳಿಗೆ ಸಿಕ್ಕಿಕೊಳ್ಳದೆ ಹೋದರೆ ಸನ್ಮಾನ್ಯ ಸಚಿವರಿಗೆ ಒಂದು ಕಿವಿಮಾತು. ಈಗಲೂ ಮಸೂದೆಯನ್ನೂ ಹಿಂತೆಗೆದುಕೊಳ್ಳಲು ತಡವಾಗಿಲ್ಲ. ಇನ್ನೂ ಸಮಗ್ರವಾದ ಮಸೂದೆಯನ್ನು ಮುಂದೆ ಮಂಡಿಸಲಾಗುತ್ತದೆ ಎಂಬ ಭರವಸೆಯೊಂದಿಗೆ ಈಗ ಹಿಂತೆಗೆದುಕೊಂಡರೆ ಆ ಕ್ರಮವು ಇನ್ನೂ ಹೆಚ್ಚಿನ ಪ್ರಶಂಸೆಯನ್ನು ಪಡೆಯುತ್ತದೆ. ನಮ್ಮ ದೇಶದ ಕೆಲವು ಮಹಿಳೆಯರು ಪಿತ್ರಾರ್ಜಿತ ಒಂದು ಪಾಲನ್ನು ತಮ್ಮ ಸೋದರರಿಂದ ಕಿತ್ತುಕೊಳ್ಳಲು ತುಂಬಾ ಕಾತರರಾಗಿದ್ದಾರೆ ಎಂದೂ ನನಗೆ ಗೊತ್ತು: ಈ ದೇಶದ ಕೆಲವು ಪ್ರಭಾವಶಾಲಿ ಮಹಿಳೆಯರು ತಮ್ಮ ಇಚ್ಛೆಯಿಲ್ಲದೆ ನಡೆದ, ಸಹಿಸಲಾಸಾಧ್ಯವಾಗಿ ಪರಿಣಮಿಸಿರುವ ವಿವಾದಗಳಿಗೆ ಮಂಗಳ ಹಾಡಲು ಕಾತರರಾಗಿದ್ದಾರೆ ಎಂದೂ ನನಗೆ ಗೊತ್ತು. ನಮ್ಮ ದೇಶದ ಕೆಲವು ಸುಶಿಕ್ಷಿತ ಮತ್ತು ಪ್ರಗತಿಶೀಲ ಮಹಿಳೆಯರು ಇವುಗಳನ್ನು ರದ್ದುಪಡಿಸಲು ಶಾಸನವನ್ನು ಅಂಗೀಕರಿಸುವುದರಲ್ಲಿ ತುಂಬಾ ಆಸಕ್ತರಾಗಿದ್ದಾರೆ. ಏಕೆಂದರೆ ಬಹುಪತ್ನಿತ್ವ/ಪತಿತ್ವಗಳನ್ನು ಅವರು ಯೋಚಿಸಲಾರರು. ಈ ಹಿಂದೂ ಸಂಹಿತೆಯನ್ನು ಶಾಸನವಾಗಿ ಮಾಡುವುದರಿಂದ ಹಿಂದೂ ಜೀವನ, ಕಾನೂನು ಮತ್ತು ಪದ್ಧತಿಗಳ ಇಡೀ ರಚನೆಯಲ್ಲಿ ಕ್ರಾಂತಿಯನ್ನುಂಟು ಮಾಡುತ್ತಿದ್ದೀರಿ. ಆದರೆ ಯಾರಿಗಾಗಿ ಇದನ್ನು ಮಾಡುತ್ತಿದ್ದೀರಿ? ಇದರಿಂದ ಯಾರು ಲಾಭ ಪಡೆಯುತ್ತಿದ್ದಾರೆ? ಈ ದೇಶದ ಬಹುತೇಕ ಜನ ಸಮುದಾಯವು ಕೃಷಿಯನ್ನು ಅವಲಂಬಿಸಿದೆ. ಹಾಗೆಯೇ ಕೃಷಿ ಆಸ್ತಿಯನ್ನು ಸಹ. ಅವು ಹೇಗೋ ಪ್ರಸ್ತುತ ಶಾಸನದ ವ್ಯಾಪ್ತಿಯೊಳಗೆ ಬರುವುದಿಲ್ಲ. ನಮ್ಮ ಹಳ್ಳಿಗಳಲ್ಲಿನ ಬಡ ಹಿಂದೂಗಳು ವಿವಾಹ ವಿಚ್ಛೇದನ ಬೇಕೆಂದು ಹಂಬಲಿಸುತ್ತಿದ್ದಾರೆಯೇ? ತಮ್ಮ ತಂದೆತಾಯಿಗಳ ಆಸ್ತಿಬೇಕೆಂದು ಹಂಬಲಿಸುತ್ತಿದ್ದಾರೆಯೇ? ಇಲ್ಲವೇ ಇಲ್ಲ. ನೀವು ಈ ಶಾಸನವನ್ನು ಮಾಡಬಯಸುತ್ತಿರುವುದು ನಮ್ಮ ಜನರ, ಗಂಡಸರು ಮತ್ತು ಹೆಂಗಸರ ವಿದ್ಯಾವಂತ ವರ್ಗಕ್ಕಾಗಿ. ಶ್ರೀಮಂತನೊಬ್ಬನು ತನ್ನ ಮಗಳನ್ನು ಒಬ್ಬ

ಬಡವನಿಗೆ ಮದುವೆ ಮಾಡಿಕೊಡುತ್ತಾನೆ. ಆ ಬಡವನು ತನ್ನ ಪತ್ನಿಗೆ ಒಂದು ವಿಶಿಷ್ಟ ಸ್ಥಾನವನ್ನು ಕೊಡಬೇಕೆಂದು ಅಪೇಕ್ಷಿಸುತ್ತಾನೆ. ಆದರೆ ಅವನಿಗೆ ಶಕ್ತಿ ಇಲ್ಲ. ಅವನ ಮಗಳು ಅಸಂತುಷ್ಟಳಾಗಿದ್ದಾಳೆ, ಈ ವಿವಾಹದ ಕಟ್ಟುಪಾಡಿನಿಂದ ಬಿಡುಗಡೆಯಾಗಬೇಕೆಂದು ಅವನು ಬಯಸುತ್ತಾನೆ. ಪ್ರಸ್ತುತ ಶಾಸನವು ಆ ವ್ಯಕ್ತಿಗೆ ಸಹಾಯ ಮಾಡುತ್ತದೆ.

ಇನ್ನು ಪದ್ಧತಿ ಮತ್ತು ರೂಢಿಗಳನ್ನು ಕುರಿತು, ನನ್ನ ಪ್ರಾಂತದಲ್ಲಿ ಜಾರಿಯಲ್ಲಿರುವ ಹಿಂದೂ ಕಾನೂನಿನಲ್ಲಿ ಪದ್ಧತಿಯು ಬಹಳ ಮುಖ್ಯವಾದ ಪಾತ್ರ ವಹಿಸುತ್ತದೆ. ನಮ್ಮ ಪ್ರಾಂತವನ್ನು ಕುರಿತು ನಿರ್ದಿಷ್ಟವಾಗಿ ಒತ್ತಿಹೇಳುವುದೇನೆಂದರೆ ಸೆಲೆಕ್ಟ್ ಕಮಿಟಿಯಲ್ಲಿ ನಮ್ಮನ್ನು ಪ್ರತಿನಿಧಿಸುವವರು ಯಾರು ಇಲ್ಲ. ವಕೀಲರಿಗೆ ತಿಳಿದಿರುವಂತೆ ಅಸ್ಸಾಮಿನಲ್ಲಿ ಹಿಂದೂ ಕಾನೂನಿನ ಸ್ಥಾನದಲ್ಲಿರುವ ಪದ್ಧತಿಯು ತುಂಬಾ ವಿಚಿತ್ರವಾಗಿದೆ. **"ಮಣಿರಾಮ್ ಕತಿತ"** ವಿರುದ್ಧ **"ಕೇರಿ ಕಲಿತಾನಿ"** ಎಂಬ ಪ್ರಿವಿ ಕೌನ್ಸಿಲ್ ಮೊಕದ್ದಮೆಯನ್ನು ಇಲ್ಲಿ ನಾನು ಉಲ್ಲೇಖಿಸುತ್ತೇನೆ. ಅದು ವಾಸ್ತವವಾಗಿ ಹಿಂದೂ ಕಾನೂನಿನಲ್ಲಿ ಕ್ರಾಂತಿಯನ್ನುಂಟುಮಾಡಿದೆ.

ಆಮೇಲೆ ಬುಡಕಟ್ಟು ಜನರ ಪ್ರಶ್ನೆ ಇದೆ. ಪ್ರಸ್ತುತ ಮಸೂದೆಯಂತೆ ಅವರನ್ನು ಹಿಂದೂಗಳೆಂದು ಪರಿಗಣಿಸಲಾಗುತ್ತದೆ. ಅವರು ಇಸ್ಲಾಂಧರ್ಮವನ್ನೋ, ಕ್ರೈಸ್ತ ಅಥವಾ ಬೌದ್ಧ ಧರ್ಮವನ್ನೋ ಅಳವಡಿಸಿಕೊಂಡಿರದಿದ್ದರೆ ಅವರ ಮೇಲೆ ಈ ಶಾಸನವನ್ನು ನೀವು ಹೇರುವಿರಾ? ಪಿತ್ರಾರ್ಜಿತದ ಆ ಪದ್ಧತಿಯನ್ನು ಇಟ್ಟುಕೊಳ್ಳಿ ಎಂದು ನೀವು ಹೇಳಿದರೆ ಅವರು ನಿಮ್ಮ ಮೇಲೆ ಹರಿಹಾಯ್ದು ಬೀಳುತ್ತಾರೆ ಅಷ್ಟೆ. ಅಸ್ಸಾಮಿನ **ಖಸಿಯಾ** ಜನರಲ್ಲಿ ಅತ್ಯಂತ ಕಿರಿಯ ಮಗಳು ಆಸ್ತಿಯನ್ನು ಪಡೆಯುತ್ತಾಳೆ. ಈಗ ನೀವು ಅದನ್ನು ವಿಧವೆ ಪತ್ನಿ, ಮಗನ ವಿಧವೆ, ವಿಧವೆಯಾದ ಮಗಳು, ಮಗನ ಸೊಸೆ ಮುಂತಾಗಿ ಎಲ್ಲರಿಗೂ ಹಂಚುತ್ತೀರಿ. ಈ ಶಾಸನವನ್ನು ಅವರಲ್ಲಿ ಜಾರಿಗೆ ತಂದರೆ ಅವರು ಒಂದು ಕ್ಷಣವಾದರೂ ಅದನ್ನು ಸಹಿಸಿಕೊಳ್ಳುತ್ತಾರೆ ಎನ್ನುವಿರಾ? ನೀವು ಪವಿತ್ರ ಸಂಸ್ಕಾರ ವಿವಾಹ ಮತ್ತು ಸಿವಿಲ್ ವಿವಾಹಗಳನ್ನು ಹೇಳಿದ್ದೀರಿ. **ಚಚರಿಗಳು** ಹೇಗೆ ಮದುವೆ ಮಾಡಿಕೊಳ್ಳುತ್ತಾರೆ ಎಂದು ಹೇಳಲೇನು? ಒಬ್ಬ ಹುಡುಗನಿಗೂ ಹುಡುಗಿಗೂ ಪರಿಚಯವಾಗುತ್ತದೆ, ಹುಡುಗಿಯನ್ನು ಅವಳ ತಂದೆತಾಯಿಗಳಿಂದ ಬಲಾತ್ಕಾರವಾಗಿ ಸೆಳೆದುಕೊಂಡು ಹೋಗುತ್ತಾರೆ. ಆಮೇಲೆ ಮದುವೆ ನಡೆಯುತ್ತದೆ. ನೀವು ಅವರನ್ನು ರಿಜಿಸ್ಟ್ರಾರರ ಕಛೇರಿಗೆ ಹೋಗಿ ನೋಂದಾಯಿಸಿ ಮದುವೆ ಮಾಡಿಕೊಳ್ಳಿ ಎಂದು ಹೇಳುವಿರಾ?

ನಾವು ವರದಕ್ಷಿಣೆ ವಿರೋಧಿಗಳಾಗಿದ್ದೇವೆ. ಧಾರಾಳವಾಗಿ ವರದಕ್ಷಿಣೆ ಕೊಡಬಲ್ಲ ಶ್ರೀಮಂತ ಜನರು ತಮ್ಮ ಹೆಣ್ಣುಮಕ್ಕಳು ಕುರುಡರಾಗಿದ್ದರೂ, ಕುರೂಪಿಗಳಾಗಿದ್ದರೂ ಬೇಗನೆಯೇ ಅವರ ಮದುವೆ ಮಾಡಿಬಿಡುತ್ತಾರೆ. ನನ್ನ ಬಳಿ ಹಣವಿಲ್ಲದೆ ಹೋದರೆ ನನ್ನ ಮನೆಯನ್ನು ಅಡಮಾನವಾಗಿಟ್ಟು ಮತ್ತು ನನ್ನ ಬಳಿ ಇರುವ ಸಮಸ್ತವನ್ನು ಮಾರಿ ವರದಕ್ಷಿಣೆ ಕೊಟ್ಟು ನನ್ನ ಮಗಳ ಮದುವೆ ಮಾಡಿ ಕೈ ತೊಳೆದುಕೊಳ್ಳುತ್ತೇನೆ. ಈಗ ಏನಾಗುತ್ತದೆ? ಮಗಳು ಆಸ್ತಿಯ ಒಂದು ಪಾಲು ಪಡೆಯುತ್ತಾಳೆ. ಆದ್ದರಿಂದ ನನ್ನ ಗಂಡುಮಕ್ಕಳಿಗೆ ಕನ್ಯೆಯರನ್ನು ಹುಡುಕುತ್ತಿರುವಾಗ – ಅದೃಷ್ಟವಶಾತ್ ನನಗೆ ಐವರು ಪುತ್ರರಿದ್ದಾರೆ – ಹೆಣ್ಣುಮಕ್ಕಳಿಗೆ ಸ್ವಲ್ಪವಾದರೂ ಆಸ್ತಿ ಬರುವಂಥ ಕುಟುಂಬವನ್ನೇ ನಾನು ಹುಡುಕುತ್ತೇನೆ. ಮದುವೆಗಾಗಿ ಸಾಲ ಮಾಡುವ ಅಥವಾ ತನ್ನ ಆಸ್ತಿಯನ್ನು ಅಡವಿಡುವ ಸಾಮಾನ್ಯ ವ್ಯಕ್ತಿಯ ಬಳಿಗೆ ಹೋಗುವುದೇ ಇಲ್ಲ. ಸರಿ, ಬಡಜನರಿಗಾಗಿ ಈ ಶಾಸನ ಮಾಡುವಿರೇನು?ಬಡವರ ಬಳಿ ಇರುವುದು ಕೃಷಿ ಭೂಮಿ ಮಾತ್ರ. ಟೀ ಎಸ್ಟೇಟುಗಳನ್ನು ಅದಕ್ಕೆ ಸೇರಿಸಿದರೆ ಅದು ಬೇರೆ ವಿಚಾರ. ಆದರೆ ಅವರ ಬಳಿ ಕೃಷಿ ಆಸ್ತಿ ಇರುವುದಿಲ್ಲ. ಭಾರಿ ಪಿತ್ರಾರ್ಜಿತ ಪ್ರಶ್ನೆ ಇಲ್ಲವಾದ್ದರಿಂದ ಬಡ ವ್ಯಕ್ತಿಯ ಮಗಳು ಎಷ್ಟೇ ಸುಂದರಿಯಾಗಿದ್ದರೂ, ವಿದ್ಯಾವತಿಯಾಗಿದ್ದರೂ

ಅವಳಿಗೆ ಅವಕಾಶ ತುಂಬಾ ಕಡಿಮೆ. ಪ್ರಸ್ತುತ ಕ್ರಮವನ್ನು ತುಂಬಾ ಗಂಭೀರವಾಗಿ ಪರಿಶೀಲಿಸಬೇಕೆಂದು ನನ್ನ ಭಾವನೆ. ಅದರಲ್ಲೂ ಪದ್ಧತಿಗಳು ಮತ್ತು ರೂಢಿ ಮುಂತಾದವುಗಳನ್ನು ಕುರಿತಂತೆ ಪ್ರಸ್ತುತ ಶಾಸನವನ್ನು ಇಷ್ಟು ಅವರಸರದಲ್ಲಿ ಅಂಗೀಕರಿಸುವುದು ಸೂಕ್ತವಲ್ಲ. ನಾನು ಇನ್ನೂ ಹೆಚ್ಚಿನ ಮಾತುಗಳನ್ನು ಹೇಳಬೇಕು. ಆದರೆ ಈ ಸದನದಲ್ಲಿ ಇನ್ನೂ ಮದುವೆಯಾಗದಿರುವ ಅನೇಕ ಜನರಿದ್ದಾರೆ. ಆದ್ದರಿಂದ ಪ್ರಸ್ತುತ ಮಸೂದೆಗೆ ನನ್ನ ಎಲ್ಲ ಆಕ್ಷೇಪಣೆಗಳನ್ನೂ ಬಯಲುಪಡಿಸುವುದು ಸರಿಯಾಗುವುದಿಲ್ಲ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೇ, ಪ್ರಸ್ತುತ ಮಸೂದೆಗೆ ಈ ಸದನದಿಂದ ಇಷ್ಟು ವಿಪುಲ ಪ್ರಮಾಣದ ಬೆಂಬಲ ದೊರಕಿರುವುದರಿಂದ ನನ್ನ ಕೆಲಸವು ಗಣನೀಯವಾಗಿ ಹಗುರವಾಗಿದೆ. ಆದ್ದರಿಂದ ಈ ಚರ್ಚೆಯಲ್ಲಿ ಭಾಗವಹಿಸಿದ ಭಾಷಣಕಾರರು ಮುಂದಿಟ್ಟಿರುವ ಕೆಲವು ವಿಷಯಗಳಿಗೆ ಉತ್ತರ ಕೊಡುವುದಷ್ಟಕ್ಕೇ ನನ್ನ ಮಾತುಗಳನ್ನು ಸೀಮಿತಗೊಳಿಸಿಕೊಳ್ಳುತ್ತೇನೆ.

ನನ್ನ ಮಾನ್ಯ ಮಿತ್ರರಾದ ಮಿ. ನಸೀರುದ್ದೀನ್ ಅಹಮದ್ ಅವರ ಅಭಿಪ್ರಾಯಗಳಿಂದ ಪ್ರಾರಂಭಿಸುತ್ತೇನೆ. ಮಾನ್ಯರೆ, ಶಾಸನಸಭೆಯು ಒಂದು ನ್ಯಾಯಾಲಯವಲ್ಲ; ವಕೀಲರಾಗಿರುವ ಸದನದ ಸದಸ್ಯರೊಬ್ಬರು ಇಲ್ಲಿಗೆ ಬರುವುದು ವಕೀಲವೃತ್ತಿಯನ್ನು ನಡೆಸುವುದಕ್ಕಾಗಿ ಅಲ್ಲವೇ ಅಲ್ಲ. ಆದರೆ, ಅದು ಹೇಗೋ ನನ್ನ ಮಿತ್ರರು ಶುಲ್ಕಕ್ಕಾಗಿಯೋ, ಅಥವಾ ಶುದ್ಧ ಔದಾರ್ಯದಿಂದಲೋ ತಮ್ಮ ಕೆಲವು ಕಕ್ಷಿದಾರರಿಂದ ದೃಷ್ಟಿಗಳನ್ನು ಪ್ರತಿನಿಧಿಸುವ ಕಾರ್ಯವನ್ನು ಕೈಗೊಂಡರು. ಆ ಕಕ್ಷಿದಾರರಿಗೆ ತಮ್ಮ ಮನಸ್ಸಿನಲ್ಲಿ ಏನಿತ್ತೋ ಅದನ್ನು ಸ್ಪಷ್ಟವಾಗಿ ಹೇಳುವ ಧೈರ್ಯವಿರಲಿಲ್ಲ. ಆದರೂ ಯಾವುದೇ ತಾಂತ್ರಿಕ ಆಕ್ಷೇಪಣೆಯನ್ನು ಎತ್ತದೆ ಅವರು ಹೇಳಿರುವ ವಿಷಯಗಳನ್ನು ಮಾತ್ರ ಪ್ರಸ್ತಾಪಿಸುತ್ತೇನೆ.

ಮಾನ್ಯರೆ, ಮಸೂದೆಗೆ ಸಾಕಷ್ಟು ಪ್ರಚಾರವಿರಲಿಲ್ಲ. ಇಂತಹದೊಂದು ಕ್ರಮದ ಮಹತ್ವವು ಕೋರುವ ಧಾರಾಳ ಅವಕಾಶವನ್ನು ಸಾರ್ವಜನಿಕರಿಗೆ ಕೊಡಲಿಲ್ಲ ಎನ್ನುವುದು ಅವರ ಆಕ್ಷೇಪ. ನನ್ನ ಸನ್ಮಿತ್ರರ ಕಕ್ಷಿದಾರರು ಈ ವಿಚಾರವಾಗಿ ಅವರಿಗೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಈ ಮಸೂದೆಗೆ ಮೂಲ ೧೯೩೭ನೇ ಇಸವಿಯಲ್ಲಿ ಜಾರಿಗೊಂಡ ಒಂದು ಶಾಸಕಾಂಗ ಕ್ರಮ. ಆ ವರ್ಷದಿಂದ ಮುಂದಕ್ಕೆ ಉದ್ದಕ್ಕೂ ಪ್ರಸ್ತುತ ಮಸೂದೆಯ ಅವಕಾಶಗಳು ಅತ್ತಿಂದಿತ್ತ, ಸಮಿತಿಯಿಂದ ಸಮಿತಿಗೆ ತಿರುಗುತ್ತಲೇ ಇವೆ. ನಿದರ್ಶನಕ್ಕೆ ೧೯೪೧ನೆಯ ಇಸವಿಯಲ್ಲಿ ಗೃಹ ಇಲಾಖೆಯು **೧೯೩೭ರ ಆಸ್ತಿಗೆ ಮಹಿಳೆಯರ ಹಕ್ಕುಗಳ ಶಾಸನ (**Women's Rights to Property Act of 1937) ದಿಂದ ಮಾಡಿದ ಕೆಲವು ಕಷ್ಟಗಳನ್ನು ಪರಿಶೀಲಿಸಿ ಪರಹಾರವನ್ನು ವರದಿ ಮಾಡಲು ನೇಮಿಸಿತು. ರಾವ್ ಕಮಿಟಿ ಎಂಬ ಹೆಸರಿದ್ದ ಈ ಸಮಿತಿಯು ೧೯೪೧ ಜೂನ್ ೧೯ರಂದು ತನ್ನ ವರದಿಯನ್ನು ಸಲ್ಲಿಸಿತು. ನನ್ನ ಮಾನ್ಯಮಿತ್ರರು ಈ ವರದಿಯನ್ನು ನೋಡಿದ್ದರೆ, ಸಮಿತಿಯು ತನ್ನ ಸಲಹೆಗಳಿಗೆ ನೀಡಿದ ಭಾರಿ ಪ್ರಚಾರ ತಯಾರಿಸಿ ಹಂಚಿದ ಪ್ರಶ್ನಾವಳಿಗಳ ಸಂಖ್ಯೆ, ಸಮಿತಿಗೆ ಬಂದ ವಿವರಗಳು, ಅದು ಪರೀಕ್ಷಿಸಿದ ಸಾಕ್ಷಿಗಳು, ಸಮಿತಿಯ ಸ್ಥಳೀಯ ಸಾರ್ವಜನಿಕ ಅಭಿಪ್ರಾಯವನ್ನು ಸ್ಥಿರಪಡಿಸಿಕೊಳ್ಳಲು ಪ್ರಾಂತಗಳಲ್ಲಿ ಮಾಡಿದ ಸಂಚಾರ– ಇವೆಲ್ಲಾ ಅವರ ಗಮನಕ್ಕೆ ಬರುತ್ತಿತ್ತು. ಮತ್ತೆ ೧೯೪೨ರಲ್ಲಿ ಇದೇ ಸಮಿತಿಯು ಎರಡು ಕರಡು ಮಸೂದೆಗಳನ್ನು ಒಪ್ಪಿಸಿತು. ಒಂದು ವಾರಸುದಾರಿಕೆಯನ್ನು ಕುರಿತು, ಇನ್ನೊಂದು ವಿವಾಹವನ್ನು ಕುರಿತು, ಹಿಂದೂ ವಾರಸುದಾರಿಕೆ ಮಸೂದೆಯನ್ನು (The Hindu Succession Bill) ೧೯೪೩ರಲ್ಲಿ ಅಸೆಂಬ್ಲಿಯಲ್ಲಿ ಮಂಡಿಸಲಾಯಿತು. ಅದನ್ನು ಉಭಯ ಸದನಗಳ ಒಂದು ಜಂಟಿ ಸಮಿತಿಗೆ ಒಪ್ಪಿಸಲಾಯಿತು. ಆ ಜಂಟಿ ಸಮಿತಿಯು ಮತ್ತೆ ಸಾರ್ವಜನಿಕ ಅಭಿಪ್ರಾಯವನ್ನು ಆಹ್ವಾನಿಸಿತು. ಅವುಗಳನ್ನು ಸಂಕಲಿಸಿ ಒಂದು ಸಂಪುಟವನ್ನಾಗಿ ಮಾಡಿ ಆಗಿನ

ಶಾಸನಸಭೆಯಲ್ಲಿ ಹಂಚಲಾಯಿತು. ಇದನ್ನೆಲ್ಲಾ ಗಮನಿಸಿದರೆ ಸರಕಾರವು ಸಾಕಷ್ಟು ಪ್ರಚಾರವನ್ನು ಕೊಟ್ಟಿಲ್ಲ ಎಂದು ನನ್ನ ಮಾನ್ಯ ಮಿತ್ರರು ಹೇಳುವ ಮಾಡು ಸತ್ಯವೆಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಅವರು ಜಸ್ಟಿಸ್ ಮಿಟ್ಟರ್ ಅವರು ನೀಡಿದ 'ಮೈನಾರಿಟಿ ರಿಪೋರ್ಟ್' ವರದಿಯನ್ನು ಉಲ್ಲೇಖಿಸಿದರು. ಅಲ್ಲಿಯೂ ಈ ಮಸೂದೆಯಲ್ಲಿರುವ ಹಲವು ವಿಚಾರಗಳ ಸಾಧಕಬಾಧಕಗಳನ್ನು ವಿಶ್ಲೇಷಣೆ ಮಾಡಿದ್ದಾರೆ. ಮಾನ್ಯರೆ, ಅಷ್ಟು ಉಪಯುಕ್ತ ಕೆಲಸವನ್ನು ಮಾಡಿರುವ ಒಂದು ಸಮಿತಿಯ ಸದಸ್ಯರನ್ನು ಅವಹೇಳನ ಮಾಡುವ ಏನನ್ನೂ ನಾನು ಹೇಳಬಯಸುವುದಿಲ್ಲ. ಆದರೆ ಈ ಸದಸ್ಯರು ತಮ್ಮ ಅಭಿಪ್ರಾಯವನ್ನೇ ತೊರೆದು ಓಡಿಹೋದರು ಎಂದು ಹೇಳದೆ ವಿಧಿಯಿಲ್ಲ. ನನ್ನ ಸನ್ಮಿತ್ರ ಮಿ. ನಸೀರುದ್ದೀನ್ ಅಹಮದ್‌ರವರು ಬಹುಸಂಖ್ಯಾತರ ವರದಿಯನ್ನು ಓದಿದ್ದರೆ ಮಹಿಳೆಯರಿಗೆ ಹಕ್ಕುಗಳನ್ನು ಕೊಡುವ ಆ ಮಸೂದೆಯಲ್ಲಿರುವ ಎಲ್ಲಾ ಸಲಹೆಗಳಿಗೂ ಆಧಾರ ೧೯೩೦ರಲ್ಲಿ ಹೊರಬಂದ ಈ ಸದಸ್ಯರ ಒಂದು ಪ್ರಕಟಣೆ ಎನ್ನುವುದು ತಿಳಿಯುತ್ತಿತ್ತು. ಆ ಪುಸ್ತಕದಲ್ಲಿ ಅವರು ಸ್ತ್ರೀಯರ ಹಕ್ಕುಗಳನ್ನು ಸೀಮಿತಗೊಳಿಸಿರುವ ಕಾನೂನಿಗೆ ತಳಹದಿಯೇ ಇಲ್ಲ ಎಂದು ಪ್ರತಿಪಾದಿಸಿದ್ದರು. ಕೊನೆಗೆ, ಅವರಿಗೆ ಮಾತ್ರ ತಿಳಿದ ಕಾರಣಗಳಿಗಾಗಿ, ವರದಿಯನ್ನು ಅವರು ಒಪ್ಪಿಸಲಿಲ್ಲ. ಆದ್ದರಿಂದ ಈ ವಾದದಲ್ಲಿ ಅರ್ಥವಿಲ್ಲ.

ನನ್ನ ಮಿತ್ರರು ಈ ಮಸೂದೆಯು ಕೃಷಿ ಭೂಮಿ ಅಲ್ಲದ ಆಸ್ತಿಗೆ ಮಾತ್ರವೇ ಸೀಮಿತಗೊಂಡಿದೆ ಎಂದು ಹೇಳಿದ್ದಾರೆ. ಅದ್ದರಿಂದ ಈಗ ಕೈಗೊಂಡಿರುವುದು ಕೇವಲ ಭಾಗಶಃ ಕ್ರೋಡೀಕರಣ, ಏಕೆಂದರೆ ಪಿತ್ರಾರ್ಜಿತವಾಗುವಂತಹ ಆಸ್ತಿಯ ಬಹುಭಾಗವನ್ನು ಪ್ರಸ್ತುತ ಮಸೂದೆಯ ಅವಕಾಶಗಳು ಸ್ಪರ್ಶಿಸುವುದೇ ಇಲ್ಲ ಎಂದು ಹೇಳಿದ್ದಾರೆ. ಮಾನ್ಯರೆ, ಕೃಷಿಯ ಆಸ್ತಿಯನ್ನು ಸೇರಿಸದಿರುವುದಕ್ಕೆ ಎರಡು ವಿವರಣೆಗಳಿವೆ. ನನ್ನ ಮಿತ್ರರು ಗೌರ್ನಮೆಂಟ್ ಆಫ್ ಇಂಡಿಯಾ ಆಕ್ಟ್ ಶಾಸನದ ಪರಿಶಿಷ್ಟಗಳನ್ನು ನೋಡಬೇಕು. ಅಲ್ಲಿ ಕೇಂದ್ರ ಹಾಗೂ ಪ್ರಾಂತಗಳು ಶಾಸನ ಮಾಡಬೇಕಾದ ವಿಷಯಗಳ ಪಟ್ಟಿ ಇದೆ. ಅಲ್ಲಿ ಭೂಮಿಯನ್ನು "ಪ್ರಾಂತೀಯ ಪಟ್ಟಿ"ಯಲ್ಲಿ ಸೇರಿಸಿದೆ. ಫೆಡರಲ್ ನ್ಯಾಯಾಲಯವು ನೀಡಿದ ನ್ಯಾಯಿಕ ವ್ಯಾಖ್ಯಾನದ ಫಲವಾಗಿ "ಭೂಮಿ" ಎಂಬ ಪದ ಅಥವಾ "ಭೂಮಿ" ಎಂಬ ವಸ್ತು ಪ್ರಾಂತೀಯ ಪಟ್ಟಿಯಲ್ಲಿ ಸೇರಿದೆ; ಅದು ಗೇಣಿ ಕೊಟ್ಟಿರುವ ಭೂಮಿಯನ್ನು ಮಾತ್ರವಲ್ಲದೆ ಭೂಮಿಗೆ ವಾರಸುದಾರಿಕೆಯನ್ನೂ ಒಳಗೊಳ್ಳುತ್ತದೆ. ಪರಿಣಾಮವಾಗಿ ಕೇಂದ್ರ ಸರಕಾರವು ಭೂಮಿಯ ವಾರಸುದಾರಿಕೆಗೆ ಸಂಬಂಧಿಸಿದಂತೆ ಕಲ್ಪಿಸುವ ಯಾವುದೇ ಅವಕಾಶವು ಅದರ ಅಧಿಕಾರವ್ಯಾಪ್ತಿಯನ್ನು ಮೀರಿರುತ್ತದೆ. ಹೀಗಾಗದಂತೆ ನೋಡಿಕೊಳ್ಳಲು ಸಮಿತಿಯು ಉದ್ದೇಶಪೂರ್ವಕವಾಗಿ ಮಸೂದೆಯ ಅವಕಾಶಗಳಿಂದ ಕೃಷಿ ಭೂಮಿಗೆ ವಿನಾಯಿತಿ ಕೊಟ್ಟಿತು. ಆದರೆ ನಾನು ಹೇಳಬೇಕಾಗಿರುವುದು ಸ್ವಲ್ಪ ಬೇರೆ, ಪ್ರಸ್ತುತ ಮಸೂದೆಯಿಂದ ಭೂಮಿಯನ್ನು ಕೈಬಿಟ್ಟಿದ್ದು ಮಸೂದೆಯ ಕೊರತೆ ಅಥವಾ ದೋಷ ಆಗುವುದಕ್ಕೆ ಬದಲು ಒಂದು ಅನುಕೂಲವೇ ಆಯಿತು. ಎಲ್ಲಾ ಬಗೆಯ ಆಸ್ತಿಗಳಿಗೂ ಒಂದೇ ಬಗೆಯ ಉತ್ತರಾಧಿಕಾರ ನಿಯಮವು ಅನ್ವಯವಾಗಬೇಕಾದ ಅಗತ್ಯವಿಲ್ಲ ಎಂದು ನನ್ನ ನಂಬಿಕೆ. ಆಸ್ತಿಯು ಸ್ವರೂಪದಲ್ಲಿ ಬೇರೆ ಬೇರೆ ಆಗುತ್ತದೆ. ಒಂದು ಸಮುದಾಯದ ಸಾಮಾಜಿಕ ಜೀವನದ ಪ್ರಾಮುಖ್ಯದಲ್ಲಿ ವ್ಯತ್ಯಾಸಗೊಳ್ಳುತ್ತದೆ. ಆದ್ದರಿಂದ ಕೃಷಿ ಭೂಮಿಯ ಉತ್ತರಾಧಿಕಾರಕ್ಕೆ ಸಂಬಂಧಿಸಿದ ನಿಯಮವನ್ನೂ, ಕೃಷಿಯೇತರ ಆಸ್ತಿಗೆ ಇನ್ನೊಂದು ಉತ್ತರಾಧಿಕಾರದ ನಿಯಮವನ್ನೂ ಹೊಂದಿರಬಹುದು. ಪರಿಸ್ಥಿತಿಯನ್ನು ಇನ್ನೂ ಉತ್ತಮವಾಗಿ ಪರಿಶೀಲಿಸಿದಾಗ ಇಂಡಿಯನ್ ಅಥವಾ ಹಿಂದೂ ಸಮಾಜವು ತನ್ನ ಆರ್ಥಿಕ ಜೀವನದ ತಳಹದಿಯಾಗಿ ಆ ಭೂಮಿಯನ್ನು ಪರಿಗಣಿಸಬಹುದು. ಅಲ್ಲಿ ಹಿರಿಯ ಮಗನ ವಾರಸುದಾರಿಕೆಯ ತತ್ವವು ಅನ್ವಯವಾಗಬಹುದು. ಆಗ ಕಿರಿಯ ಮಕ್ಕಳಿಗಾಗಲಿ, ಹೆಂಗಸರಿಗಾಗಲಿ

ಪಿತ್ರಾರ್ಜಿತದಲ್ಲಿ ಭಾಗ ಪಡೆಯುವಂತಿಲ್ಲ. ನಾನು ಮೊದಲೇ ಹೇಳಿದಂತೆ, ಪ್ರಶ್ನೆಯನ್ನು ತೆರೆದೇ ಇಟ್ಟಿರುವುದು ಸಮಾಜಕ್ಕೆ ಅನುಕೂಲಕರವಾಗುತ್ತದೆ. ಅದು ವಿಷಯವನ್ನು ಮತ್ತೆ ಹೊಸದಾಗಿ ಪರಿಶೀಲಿಸಬಹುದು. ಆದ್ದರಿಂದ ನನ್ನ ಸನ್ಮಾನ್ಯ ಮಿತ್ರರು ಈ ಮಸೂದೆಯ ಒಂದು ಭಾಗದ ಮೇಲೆ ಮಾಡಿರುವ ಟೀಕೆಗಳು ಕ್ಷಮಾಪಣೆ ಕೇಳುವಂತವು ಎಂದೇನೂ ನಾನು ಪರಿಗಣಿಸುವುದಿಲ್ಲ.

ಇನ್ನು ನನ್ನ ಮಿತ್ರ ಮಿ. ಚೌಧುರಿಯವರ ವಿಷಯಕ್ಕೆ ಬಂದರೆ, ಪ್ರಸ್ತುತ ಶಾಸನಕ್ರಮವನ್ನು ಒಂದು ಮತೀಯ ಶಾಸನವೆಂಬಂತೆ ಪರಿಗಣಿಸುತ್ತಾರೆ. ಅದು ಹಿಂದೂ ಸಮಾಜವನ್ನು ಉಲ್ಲೇಖಿಸುವುದಾದರೆ ನಾನು ಒಪ್ಪುತ್ತೇನೆ. ಅದು ಈ ದೇಶದಲ್ಲಿ ನೆಲೆಸಿರುವ ಅನೇಕ ಸಮುದಾಯಗಳಲ್ಲಿ ಒಂದು, ಆದರೆ ಅದಕ್ಕೆ ಬದಲಿ ಏನು? ನನ್ನ ಮಿತ್ರರು ಸೂಚಿಸಿರುವ ಬದಲಿಯಲ್ಲಿ ಮತೀಯ ಪಿತ್ರಾರ್ಜಿತ ನಿಯಮಗಳಿರುವುದಿಲ್ಲ; ವಿವಾಹವನ್ನು ಕುರಿತು ಮತೀಯ ಕಾನೂನುಗಳು ಇರುವುದಿಲ್ಲ. ಅದು ಎಲ್ಲಾ ಸಮುದಾಯಗಳ ಎಲ್ಲಾ ವರ್ಗದ ಜನಗಳಿಗೆ ಒಂದು ಸಾಮಾನ್ಯ ಪ್ರೌಢ ಸಂಹಿತೆ ಇರಬೇಕು. ವಾಸ್ತವವಾಗಿ, ಧರ್ಮ, ಪಂಥ, ಮೊದಲಾದುವುಗಳ ವಿವಕ್ಷೆಯಿಲ್ಲದೆ ಪ್ರಜೆಗಳಿಗೆ ಅನ್ವಯವಾಗುವುದಾದರೆ ನಾನು ಅವರ ಜೊತೆಗೂಡುತ್ತೇನೆ. ಆದರೆ ಖಂಡಿತವಾಗಿಯೂ ಅವರ ನಿರ್ಣಯ ಅದಲ್ಲ. ಅವರ ನಿರ್ಣಯವು, ನಾನು ಸರಿಯಾಗಿ ಅರ್ಥಮಾಡಿಕೊಂಡಿದ್ದರೆ, ಹೀಗಿದೆ: ಮುಂದಿನ ಸಮಾಜವು ಜಾತ್ಯತೀತವಾಗಿರುತ್ತದೆ, ಜಾತಿವಾದಿ ಸಮುದಾಯಕ್ಕಾಗಿ ಶಾಸನ ಮಾಡಲು ಅದಕ್ಕೆ ಹಕ್ಕಿಲ್ಲ. ಅದು ಅತ್ಯಂತ ಹಾನಿಕರವಾದ ನಿರ್ಣಯವಾಗುತ್ತದೆ. ಈ ದೇಶದಲ್ಲಿ ಅನೇಕಾನೇಕ ಸಮುದಾಯಗಳಿಗೆ ಸೇರಿದ ಜನರು ವಾಸಮಾಡುತ್ತಿದ್ದಾರೆ, ಪ್ರತಿಯೊಂದು ಸಮುದಾಯಕ್ಕೂ ಅದರದ್ದೇ ವಿಶಿಷ್ಟವಾದ ಕಾನೂನುಗಳು ಇವೆ. ಸರಕಾರವು ಧರ್ಮನಿರಪೇಕ್ಷ ಲಕ್ಷಣವನ್ನು ಹೊಂದಿರಬೇಕೆಂದು ಬಯಸಿದ್ದರಿಂದ ಅದು ವಿವಿಧ ಸಮುದಾಯಗಳ ಜೀವನಗಳನ್ನು ನಿಯಂತ್ರಿಸಲು ಹೋಗಬಾರದು. ಅದರ ಫಲಿತಾಂಶವು ಗೊಂದಲ ಮತ್ತು ಅನಾಯಕತ್ವವಲ್ಲದೆ ಬೇರೇನೂ ಇರುವುದಿಲ್ಲ. ಆ ಬಗೆಯ ಸಲಹೆಗೆ ಪುಷ್ಟಿಕೊಡಲು ನಾನು ನಿಜವಾಗಿಯೂ ಸಿದ್ಧನಾಗಿಲ್ಲ.

ಅವರ ಎರಡನೆಯ ಟೀಕೆ, ಮಸೂದೆಯು ಪ್ರಚಲಿತ ಪದ್ಧತಿಯನ್ನು ಗಣನೆಗೆ ತೆಗೆದುಕೊಂಡಿಲ್ಲ ಎನ್ನುವುದು. ಪ್ರಿವಿ ಕೌನ್ಸಿಲ್ಲಿನ ಕೆಲವು ಆದೇಶಗಳನ್ನು ಅವರು ಉದ್ಧರಿಸಿದರು. ದಿನದ ಈ ಸಮಯದಲ್ಲಿ ಪ್ರಿವಿ ಕೌನ್ಸಿಲ್ಲಿನ ಅಧಿಕಾರವನ್ನು ಉದ್ಧರಿಸುವುದು ಅನಗತ್ಯವಾಗಿತ್ತು. ಏಕೆಂದರೆ ಅದನ್ನು ಬೇಕಾದಷ್ಟು ತೀರ್ಪುಗಳಿಂದ ಸ್ಥಾಪಿಸಲಾಗಿದೆ. ಹಿಂದುಗಳಿಗೆ ಸಂಬಂಧಿಸಿದಂತೆ ಸ್ಮೃತಿಯ ಪಾಠವನ್ನೂ ಮೀರಿ ಪದ್ಧತಿ ನಿಲ್ಲುತ್ತದೆ. ನಮಗೆಲ್ಲರಿಗೂ ಇದು ಗೊತ್ತು. ಆದರೆ ನಾವೇನು ಮಾಡುತ್ತಿದ್ದೇವೆ? ನೂತನ ಪದ್ಧತಿಗಳ ಬೆಳವಣಿಗೆಯನ್ನು ಮುಚ್ಚಿಹಾಕುತ್ತಿದ್ದೇವೆ; ಇರುವ ಪದ್ಧತಿಗಳನ್ನು ನಾಶ ಮಾಡುತ್ತಿಲ್ಲ. ನಾವು ಪುರಸ್ಕರಿಸುವ ಪ್ರಚಲಿತ ಪದ್ಧತಿಗಳು ಹಿಂದೂ ಸಮಾಜದಲ್ಲಿ ಪ್ರಚಲಿತವಾದ ಕಾನೂನುಗಳು ಪದ್ಧತಿಗಳ ಫಲಗಳು. ಅವು ಪದ್ಧತಿಯಿಂದ ಹುಟ್ಟುತ್ತವೆ. ಈಗ ಅವು ಎಷ್ಟು ಬಲವಾಗಿ ಬೆಳೆದಿವೆ ಎಂದರೆ ಅವಕ್ಕೆ ನಮ್ಮ ರಾಜ್ಯಾಡಳಿತದಲ್ಲಿ ಶಾಸಕಾಂಗ ಪ್ರಕ್ರಿಯೆಯ ಮೂಲಕ ನಿಜವಾಗಿ ಹೊಸ ಜನ್ಮವನ್ನು ಕೊಡಬಹುದು.

ಬುಡಕಟ್ಟು ಜನಗಳ ಪ್ರಶ್ನೆಯನ್ನು ನಾವೂ ಪರಿಶೀಲಿಸಿಯೇ ಇಲ್ಲ ಎಂದು ಅವರು ಹೇಳಿದರು. ಬುಡಕಟ್ಟು ಜನಗಳ ಬದುಕು ಬಹುಮಟ್ಟಿಗೆ ರೂಢಿಯ ಕಾನೂನಿನಿಂದ ಬೆಳೆದಿದೆ. ಈ ಸಂಹಿತೆಯಲ್ಲಿ ಹಿಂದೂ ಯಾರು, ಯಾರು ಹಿಂದೂ ಅಲ್ಲ ಎಂಬುದನ್ನು ಓದಿದ್ದರೆ ಯಾರಿಗೆ ಈ ಸಂಹಿತೆ ಅನ್ವಯವಾಗುತ್ತದೆ ಎಂದು ತಿಳಿದುಕೊಳ್ಳಬಹುದಿತ್ತು. ಮುಸ್ಲಿಮರಾಗಲಿ, ಪಾರಸಿಗಳಾಗಲಿ ಅಥವಾ ಕ್ರಿಶ್ಚಿಯನ್ನರಾಗಲಿ ಅಲ್ಲದ ವ್ಯಕ್ತಿಗಳನ್ನು ಹಿಂದೂಗಳೆಂದು ಭಾವಿಸಲಾಗುತ್ತದೆ: ಅವರು ಹಿಂದೂಗಳಲ್ಲ. ಒಬ್ಬ ಬುಡಕಟ್ಟಿನವನು ತಾನು

ಹಿಂದೂವಲ್ಲ ಎಂದು ಹೇಳಲು ಇಚ್ಛಿಸುವುದಾದರೆ ತನ್ನ ಅಭಿಪ್ರಾಯಕ್ಕೆ ಪೋಷಣೆಯಾಗಿ ಸಮರ್ಥನೆ ನೀಡಲು ಅವನಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಆ ನಿರ್ಧಾರವನ್ನು ನ್ಯಾಯಾಲಯ ಒಪ್ಪಿದರೆ ಈ ಮಸೂದೆಯ ಯಾವುದಕ್ಕೂ ಅವನು ಬದ್ಧನಾಗಿರಬೇಕಾಗಿಲ್ಲ.

**ಶ್ರೀ ರೋಹಿಣಿ ಕುಮಾರ್ ಚೌಧರಿ :** ನಾನು ಹೇಳಬೇಕಾಗಿರುವುದೇನೆಂದರೆ ಅವನಿಗೆ ತನ್ನನ್ನು ಹಿಂದೂ ಎಂದು ಕರೆಸಿಕೊಳ್ಳಲು ಇಷ್ಟವಿಲ್ಲ. ಆದರೆ ಹಿಂದೂಗಳ ಎಲ್ಲಾ ಪದ್ಧತಿಗಳನ್ನೂ ಉಳಿಸಿಕೊಳ್ಳುವ ಅಪೇಕ್ಷೆ ಇದೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** : ನಿಲುವು ಇದು: ಒಬ್ಬ ವ್ಯಕ್ತಿಯು ತನ್ನನ್ನು ಹಿಂದೂ ಎಂದು ಕರೆಸಿಕೊಂಡರೆ ಹಿಂದುವಿಗೆ ವಿಧಿಸಲಾಗಿರುವ ಸಾಮಾನ್ಯವಾದ ಕಾನೂನನ್ನು ಅವನು ಒಪ್ಪಿಕೊಳ್ಳಲೇಬೇಕು. ಈ ನಿರಂಕುಶತೆ ನಮಗೆ ಬೇಕಿಲ್ಲ. ಒಬ್ಬ ಹಿಂದೂ ಎಲ್ಲಾ ಉದ್ದೇಶಗಳಿಂದಲೂ ಹಿಂದುವೇ. ಬುಡಕಟ್ಟು ಜನಾಂಗದವನು ಹಿಂದೂ ಎನಿಸಿಕೊಳ್ಳಲು ಇಷ್ಟಪಡದಿದ್ದರೆ ಅದನ್ನು ಸಮರ್ಥಿಸಲು ದಾರಿ ತೆರದೇ ಇದೆ. ಮತ್ತು ಮಸೂದೆಯು ಅವನಿಗೆ ಅನ್ವಯವಾಗುವುದಿಲ್ಲ. ಆಮೇಲೆ, ನನ್ನ ಮಿತ್ರ ಡಾ. ಸೀತಾರಾಮಯ್ಯ ಕೇಳಿದರು. ಮಹಿಳೆಯರು ಈ ಮಸೂದೆಯಂತೆ ಪಡೆಯುವ ಪಿತ್ರಾರ್ಜಿತ ಆಸ್ತಿಯ ಸಂಪೂರ್ಣ ಹಕ್ಕನ್ನು ಪಡೆಯುತ್ತಾರೆ ಎನ್ನುವುದು. ಶಾಸನವು ಜಾರಿಯಾಗುವುದಕ್ಕೂ ಮೊದಲೇ ಆಸ್ತಿಯನ್ನು ಪಡೆದುಕೊಂಡಿರುವ ವಿಧವೆಯರಿಗೂ ಅನ್ವಯವಾಗುತ್ತದೆಯೇ ಎಂದು ಹೇಳಿದರು. ಮಸೂದೆ ಪೂರ್ವಾನ್ವಯ ಪರಿಣಾಮಗೊಂಡಿಲ್ಲ ಎಂದು ನಾನು ಹೇಳಬಯಸುತ್ತೇನೆ.

ಮಹಿಳೆಯರ ಸಂಪೂರ್ಣ ಹಕ್ಕಿನ ಆಸ್ತಿಯ ತತ್ವಗಳಿಗೆ ಪುರ್ವಾನ್ವಯ ಪರಿಣಾಮವನ್ನು ಕೊಡುವುದು ಸಾಧ್ಯವಿಲ್ಲ ಎಂಬುದಕ್ಕೆ ಸರಳವಾದ ಕಾರಣವಿದೆ. ಈ ಮಸೂದೆಯು ಜಾರಿಗೆ ಬರುವುದಕ್ಕೆ ತುಂಬಾ ಮೊದಲೇ ಅನೇಕ ಪಟ್ಟಭದ್ರ ಹಿತಾಸಕ್ತಿಗಳು ವರ್ತಿಸತೊಡಗುತ್ತವೆ, ವಿಧವೆಯನ್ನು ಕುರಿತು ನಮ್ಮ ಸಹಾನುಭೂತಿ ಎಷ್ಟೇ ಇದ್ದರೂ ಅವುಗಳನ್ನು ನಿವಾರಿಸುವುದು ನ್ಯಾಯವೂ ಸೂಕ್ತವೂ ಆಗುವುದಿಲ್ಲ.

ಶ್ರೀಮತಿ ಹನ್ಸಾ ಮೆಹತಾ ಹಲವು ಪ್ರಶ್ನೆಗಳನ್ನು ಎತ್ತಿದರು. ಮಸೂದೆಯಲ್ಲಿ ಮಹಿಳೆಯರ ಹಕ್ಕುಗಳನ್ನು ಕುರಿತು ಅವರಿಗೆ ತೃಪ್ತಿ ಆಗಿಲ್ಲ. ಇರಬಹುದು, ಆದರ್ಶದ ಅರ್ಥದಲ್ಲಿ ಮಸೂದೆಯು ಅವರ ನಿರೀಕ್ಷೆಯ ಮಟ್ಟಕ್ಕೆ ಬಾರದೇ ಹೋಗಿರಬಹುದು. ಆದರೆ, ಇದೊಂದು ಜಡಸಮಾಜ ಎನ್ನುವುದನ್ನು ಅವರು ನೆನಪನಲ್ಲಿಟ್ಟುಕೊಳ್ಳಬೆಕು. ನಿಯಮಗಳನ್ನು ವಿಧಿಸುವುದು ದೇವರ ಕೆಲಸ ಅಥವಾ "ಸ್ಮೃತಿ"ಯ ಕರ್ತವ್ಯ ಎಂದೇ ಹಿಂದೂ ಸಮುದಾಯವು ಉದ್ದಕ್ಕೂ ನಂಬಿಕೊಂಡು ಬಂದಿದೆ. ಕಾನೂನನ್ನು ಬದಲಾಯಿಸುವ ಹಕ್ಕು ಹಿಂದೂ ಸಮಾಜಕ್ಕಿಲ್ಲ. ಆದ್ದರಿಂದಲೇ ಹಿಂದೂ ಸಮಾಜದಲ್ಲಿ ಕಾನೂನು ಹಿಂದೆ ಹೇಗಿತ್ತೋ ಹಾಗೆಯೇ ಅನೇಕ ಪೀಳಿಗೆಗಳವರೆಗೂ ಉಳಿದಿದೆ. ಸಮಾಜವು ತನ್ನ ಸಮಾಜಿಕ, ಆರ್ಥಿಕ, ನ್ಯಾಯಿಕ, ಜೀವನವನ್ನು ರೂಪಿಸುವ ತನ್ನದೇ ಶಕ್ತಿಯನ್ನೂ ಹೊಣೆಗಾರಿಕೆಯನ್ನೂ ಎಂದೂ ಒಪ್ಪಿಕೊಂಡಿಲ್ಲ. ಈಗ ಮೊದಲನೆಯ ಬಾರಿಗೆ ಈ ದೊಡ್ಡ ಹೆಜ್ಜೆಯನ್ನಿಡಲು ಹಿಂದೂ ಸಮಾಜವನ್ನು ಒಲಿಸುತ್ತಿದ್ದೇವೆ. ನಾವು ಕೇಳುತ್ತಿರುವ ದೊಡ್ಡ ಹೆಜ್ಜೆಯನ್ನು ಸಹಿಸಿಕೊಳ್ಳಲು ತಕ್ಕಷ್ಟು ಧೈರ್ಯ ತುಂಬಿಕೊಂಡು ಉಳಿದಿರುವ ದಾರಿಯನ್ನು ಕ್ರಮಿಸಿ ಗುರಿಯನ್ನು ಮುಟ್ಟುತ್ತದೆ ಎಂಬುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ.

ಮಾನ್ಯರೆ, ಪ್ರಸ್ತುತ ಮಸೂದೆಯನ್ನು ವಿರೋಧಿಸಿ ಬೇಕಾದಷ್ಟು ಭಿನ್ನಾಭಿಪ್ರಾಯವು ರೂಪುಗೊಂಡಿದೆ ಎಂದೂ ಹೇಳಲಾಗಿದೆ, ನಮಗೆ ಬಂದಿರುವ ಅಭಿಪ್ರಾಯಗಳನ್ನು ನಾವು ತೂಗಿನೋಡಿಲ್ಲ. ಆದರೆ ಇಷ್ಟು ಮಾತ್ರ ಹೇಳುತ್ತೇನೆ: ಇದು ತಲೆಗಳನ್ನು ಎಣಿಸಿ ತೀರ್ಮಾನಿಸಬೇಕಾದ ಪ್ರಶ್ನೆಯಲ್ಲವೇ ಅಲ್ಲ. ಬಹುಮತದ

ಅಭಿಪ್ರಾಯಕ್ಕೆ ಅನುಗುಣವಾಗಿ ನಿರ್ಧರಿಸಬೇಕಾದ ಪ್ರಶ್ನೆಯೂ ಅಲ್ಲ. ಸಮಾಜವು ಗತಕಾಲವನ್ನು ಬಿಟ್ಟು ಭವಿಷ್ಯತ್ತಿಗೆ ನಡೆಯುತ್ತಾ ನಡುವೆ ತಾತ್ಕಾಲಿಕ ಹಂತದಲ್ಲಿರುವಾಗ ಪರಸ್ಪರ ವಿರುದ್ಧ ಪರಿಗಣನೆಗಳು ಬಂದೇ ಬರುತ್ತವೆ. ಒಂದು ಭೂತಕಾಲದ ಕಡೆಗೆ ಸೆಳೆದರೆ ಇನ್ನೊಂದು ಭವಿಷ್ಯತ್ತಿನ ಕಡೆಗೆ ಸೆಳೆಯುತ್ತದೆ. ಇಲ್ಲಿ ನಾವು ಅನ್ವಯಿಸಬಹುದಾದ ಪರೀಕ್ಷೆ ವ್ಯಕ್ತಿಯ ಆತ್ಮಸಾಕ್ಷಿ ಒಂದೇ. ಪ್ರಸ್ತುತ ಮಸೂದೆಯ ಅವಕಾಶಗಳು ಸಮುದಾಯದ ಆತ್ಮಸಾಕ್ಷಿಯೊಂದಿಗೆ ಪರಿಪೂರ್ಣವಾಗಿ ಹೊಂದಿಕೊಂಡಿವೆ ಎಂಬುದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ. ಆದ್ದರಿಂದ ನಮ್ಮ ದೇಶಬಾಂಧವರಲ್ಲಿ ಬಹುತೇಕ ಜನರು ಒಪ್ಪದಿದ್ದರೂ ಈ ಮಸೂದೆಯನ್ನು ಮಂಡಿಸಲು ನನಗೆ ಹಿಂಜರಿಕೆ ಇಲ್ಲ.

**ಅಧ್ಯಕ್ಷರು :** ವಿಷಯ ಹೀಗಿದೆ :

**“**ಹಿಂದೂ ಕಾನೂನಿನ ಕೆಲವು ಶಾಖೆಗಳನ್ನು ಕ್ರೋಡೀಕರಿಸಿ ತಿದ್ದುಪಡಿ ಮಾಡುವ ಮಸೂದೆಯನ್ನು ಒಂದು ಆಯ್ಕೆ ಸಮಿತಿಗೆ ಒಪ್ಪಿಸಬಹುದು. ಆ ಸಮಿತಿಯಲ್ಲಿ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಡಾ. ಭಕ್ಷಿ ತೇಕ್‌ಚಂದ್, ಶ್ರೀ ಎಂ. ಅನಂತಶಯನಂ ಅಯ್ಯಂಗಾರ್, ಶ್ರೀಮತಿ ಜಿ. ದುರ್ಗಾಬಾಯಿ, ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ, ಶ್ರೀ ಯು. ಶ್ರೀನಿವಾಸ ಮಲ್ಯ, ಶ್ರೀ ಮಿಹಿರ್ ಲಾಲ್ ಚಟ್ಟೋಪಾಧ್ಯಾಯ ಡಾ.ಪಿ.ಎಸ್. ದೇಶ್‌ಮುಖ್, ಶ್ರೀಮತಿ ರೇಣುಕಾ ರೇ, ಡಾ. ಪಿ.ಕೆ. ಸೇನ್, ಬಾಬು ರಾಮನಾರಾಯಣ ಸಿಂಗ್, ಶ್ರೀ ಬಿ. ಕಿಶೋರಿ ಮೋಹನ್ ತ್ರಿಪಾಠಿ, ಶ್ರೀಮತಿ ಅಮ್ಮು ಸ್ವಾಮಿನಾಥನ್, ಪಂಡಿತ ಬಾಲಕೃಷ್ಣ ಶರ್ಮ, ಶ್ರೀ ಖುರ್ಷಿದ್ ಲಾಲ್, ಶ್ರೀ ಬ್ರಜೇಶ್ವರ್ ಪ್ರಸಾದ್, ಶ್ರೀ ಬಿ. ಶಿವರಾವ್, ಶ್ರೀ ಬಲದೇವಸ್ವರೂಪ್, ಶ್ರೀ ವಿ.ಪಿ. ಕೇಶವರಾವ್ ಮತ್ತು ಮಸೂದೆಯ ಸೂಚಕರು ಇರುತ್ತಾರೆ. ಅಸೆಂಬ್ಲಿಯ ಮುಂದಿನ ಅಧಿವೇಶನದ ಮೊದಲನೆಯ ವಾರದ ಕೊನೆಯ ದಿನಕ್ಕೆ ಮುಂಚಿತವಾಗಿ ಸಮಿತಿಯು ವರದಿಯನ್ನು ಸಲ್ಲಿಸಬೇಕೆಂದು ಆದೇಶಿಸಲಾಗಿದೆ. ಸಮಿತಿಯ ಸದಸ್ಯರ ಸಭೆಯನ್ನು ನಡೆಸಲು ಇರಬೇಕಾದ ಸದಸ್ಯರ ಸಂಖ್ಯೆ ಐದು ಆಗಿರುತ್ತದೆ.**”**

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

**ಅಧ್ಯಕ್ಷರು :** ಇಲ್ಲಿಗೆ ಜನವರಿ ೨೮ರಂದು ಪ್ರಾರಂಭವಾದ ನಮ್ಮ ಸುದೀರ್ಘ ಅಧಿವೇಶನವು ಸಮಾಪ್ತವಾಗುತ್ತದೆ. ಎಲ್ಲ ಸದಸ್ಯರೂ ನನಗೆ ತೋರಿಸಿರುವ ಪ್ರಾಮಾಣಿಕ ಸಹಕಾರಕ್ಕಾಗಿ ಅವರನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ.

[ಆಮೇಲೆ ಅಸೆಂಬ್ಲಿಯು ಅನಿರ್ದಿಷ್ಟವಾಗಿ ಮುಂದೆ ಹೋಯಿತು]

# ಭಾಗ – ೨

## ಕರಡು ಹಿಂದೂ ಸಂಹಿತೆ ಮಸೂದೆ

**–ಡಾ. ಬಿ.ಆರ್. ಅಂಬೇಡ್ಕರ್**
**ಹಾಗೂ ಆಗ ಅಸ್ತಿತ್ವದಲ್ಲಿದ್ದ ಹಿಂದೂ ಕೋಡ್,**
**ಸೆಲೆಕ್ಟ್ ಕಮಿಟಿಯು ತಿದ್ದುಪಡಿ ಮಾಡಿದಂತೆ.**

# ಹಿಂದೂ ಸಂಹಿತೆ

## (ದಿ ಹಿಂದೂ ಕೋಡ್)

**–ಡಾ. ಬಿ.ಆರ್. ಅಂಬೇಡ್ಕರ್**

# ಟಿಪ್ಪಣಿ

ಸರಕಾರವು ಮಂಡಿಸಲು ಉದ್ದೇಶಿಸಿರುವ ತಿದ್ದುಪಡಿಗಳ ಒಂದು ಸ್ಪಷ್ಟ ಚಿತ್ರವನ್ನು ಕೊಡುವ ಸಲುವಾಗಿ, ಸಲಹೆ ಮಾಡಿರುವ ಸಂಹಿತೆಯನ್ನು ಎಡಪಕ್ಕದಲ್ಲಿ ಕೊಡಲಾಗಿದೆ. ಅನುಕೂಲತೆಯ ದೃಷ್ಟಿಯಿಂದ ಕರಡು ಮಸೂದೆಯ ಈಗಿರುವ ಅವಕಾಶಗಳನ್ನು ಬಲಪಕ್ಕದಲ್ಲಿ ಮುದ್ರಿಸಲಾಗಿದೆ. ಇದು ಸೆಲೆಕ್ಟ್ ಕಮಿಟಿಯು ತಿದ್ದುಪಡಿ ಮಾಡಿರುವ ಕರಡು ಮಸೂದೆ. ಮಂಡಿಸಲಾಗಿರುವ ವಾಸ್ತವ ತಿದ್ದುಪಡಿಗಳನ್ನು ಕೆಳಗೆರೆ ಅಥವಾ ಪಕ್ಕಗೆರೆಗಳಿಂದ ತೋರಿಸಲಾಗಿದೆ. ಕೈ ಬಿಟ್ಟಿರುವ ಭಾಗಗಳಲ್ಲಿ ನಕ್ಷತ್ರ ಚಿಹ್ನೆಗಳಿಂದ ಸೂಚಿಸಲಾಗಿದೆ. ಯಾವುದಾದರೂ ಪಕ್ಕವು ತೆರವಾಗಿದ್ದರೆ ಅದರರ್ಥ ಸೆಲಕ್ಟ್ ಕಮಿಟಿಯ ಸಂಹಿತೆಯಲ್ಲಿ ಅದಕ್ಕೆ ಸಂಬಂಧಪಟ್ಟ ಅವಕಾಶ ಇಲ್ಲ ಎಂದು; ಅಥವಾ ಸೆಲೆಕ್ಟ್ ಕಮಿಟಿಯ ಸಂಹಿತೆಯಲ್ಲಿ ಒಂದು ಭಾಗವನ್ನು ಬಿಟ್ಟುಬಿಡಲಾಗಿದೆ ಎಂದು.

**[ಮುಂದಿನ ತಿದ್ದುಪಡಿಯನ್ನು ಸಲಹೆ ಮಾಡಿರುವಂತೆ]**

ಹಿಂದೂ ಕಾನೂನಿನ ಕೆಲವು ಶಾಖೆಗಳಿಗೆ ತಿದ್ದುಪಡಿಮಾಡಿ, ಕ್ರೋಡೀಕರಿಸಲು ಒಂದು ಮಸೂದೆ.

**ಸಂಸತ್ತು ಈ ರೀತಿಯಾಗಿ ಶಾಸನ ಮಾಡಬಹುದು:–**

**ಭಾಗ – ೧ : ಪೀಠಿಕೆ**

೧. ಸಂಕ್ಷಿಪ್ತ ಶೀರ್ಷಿಕೆ ಮತ್ತು ವ್ಯಾಪ್ತಿ ......

(೧) ಶಾಸನವನ್ನು ಹಿಂದೂ ಸಂಹಿತೆ, ೧೯೫೦ ಎಂದು ಕರೆಯಬಹುದು.

(೨) ಜಮ್ಮು ಮತ್ತು ಕಾಶ್ಮೀರ ರಾಜ್ಯದ ಹೊರತು ಇಡೀ ಭಾರತಕ್ಕೆ ಇದು ಅನ್ವಯಿಸುತ್ತದೆ.

*(೨)

**೨. ಸಂಹಿತೆಯ ಅನ್ವಯ –**

(೧) ಈ ಸಂಹಿತೆಯು ಯಾರಿಗೆ ಅನ್ವಯಿಸುವುದೆಂದರೆ –

(ಅ) ಎಲ್ಲಾ ರೂಪಗಳಲ್ಲಿ, ಅಥವಾ ಬೆಳವಣಿಗೆಗಳಲ್ಲಿ ಧರ್ಮತಃ ಹಿಂದೂಗಳಾಗಿರುವ ಎಲ್ಲಾ ವ್ಯಕ್ತಿಗಳಿಗೆ, ವೀರಶೈವರು ಅಥವಾ ಲಿಂಗಾಯಿತರು ಮತ್ತು ಬ್ರಾಹ್ಮೋ, ಪ್ರಾರ್ಥನಾ ಅಥವಾ ಆರ್ಯ ಸಮಾಜಗಳ ಸದಸ್ಯರೂ

**[ಸೆಲೆಕ್ಟ್ ಕಮಿಟಿಗೆ ಸಲಹೆ ಮಾಡಿರುವಂತೆ]**

ಹಿಂದೂ ಕಾನೂನಿನ ಕೆಲವು ಶಾಖೆಗಳಿಗೆ ತಿದ್ದುಪಡಿ ಮಾಡಿ, ಕ್ರೋಡೀಕರಿಸಲು ಒಂದು ಮಸೂದೆ

ಭಾರತದ ಪ್ರಾಂತಗಳಲ್ಲಿ ಈಗ ಜಾರಿಯಲ್ಲಿರುವ ಹಿಂದೂ ಕಾನೂನಿನ ಕೆಲವು ಶಾಖೆಗಳಿಗೆ ತಿದ್ದುಪಡಿ ಮಾಡಿ ಅವುಗಳನ್ನು ಕ್ರೋಡೀಕರಿಸುವುದು ವಿಹಿತವಾಗಿರುವುದರಿಂದ ಈ ಕೆಳಗಿನಂತೆ ಶಾಸನ ಮಾಡಲಾಗಿದೆ :–

**ಭಾಗ–೧ : ಪೀಠಿಕೆ**

೧. ಸಂಕ್ಷಿಪ್ತ ಶೀರ್ಷಿಕೆ, ವ್ಯಾಪ್ತಿ ಮತ್ತು ಉಪಕ್ರಮ ಈ **ಶಾಸನವನ್ನು ಹಿಂದೂ** ಸಂಹಿತೆ, ೧೯೪೮ ಎಂದು ಕರೆಯಬಹುದು.

**ಭಾಗ–೧ ಉಪಭಾಗ–೧ ಪುಟ–೧**

(೨) ಇದು ಭಾರತದ ಎಲ್ಲಾ ಪ್ರಾಂತಗಳಿಗೂ ವಿಸ್ತರಿಸುತ್ತದೆ.

(೩) ಇದು ೧೯೫೦ ಜನವರಿ ಒಂದರಿಂದ ಜಾರಿಗೆ ಬರುತ್ತದೆ

**೨. ಸಂಹಿತೆಯ ಅನ್ವಯ**

(೧) ಈ ಸಂಹಿತೆಯು ಯಾರಿಗೆ ಅನ್ವಯಿಸುತ್ತದೆಂದರೆ

ಭಾಗ–೧ ಉಪವಿಭಾಗ–೨ ಪುಟ–೧

(ಅ) ಎಲ್ಲಾ ಹಿಂದೂಗಳಿಗೆ, ಅಂದರೆ, ಹಿಂದೂಧರ್ಮವನ್ನು ಅದರ ಯಾವುದೇ ರೂಪಗಳಲ್ಲಿ ಅಥವಾ ಬೆಳವಣಿಗೆಗಳಲ್ಲಿ ಅನುಸರಿಸುವ ಎಲ್ಲಾ ವ್ಯಕ್ತಿಗಳಿಗೆ, ವೀರಶೈವರು ಅಥವಾ

---

* ಭಾರತ ಸರಕಾರದ ಪ್ರಕಟಣೆಯ ಮೂಲ ಪುಟಸಂಖ್ಯೆಯನ್ನು ಸಂಬಂಧಿತ ಭಾಗಗಳ ಮೇಲೆ ಮತ್ತು ಕೆಳಗೆ ಕಂಸಗಳಲ್ಲಿ ನಮೂದಿಸಿದೆ.

| | |
|---|---|
| ಸೇರಿದಂತೆ; | ಲಿಂಗಾಯತರು ಮತ್ತು ಬ್ರಾಹ್ಮೋ, ಪ್ರಾರ್ಥನಾ ಅಥವಾ ಆರ್ಯ ಸಮಾಜದ ಸದಸ್ಯರೂ ಸೇರಿದಂತೆ; |
| (ಆ) ಧರ್ಮತಃ ಬೌದ್ಧ, ಜೈನ ಅಥವಾ ಸಿಖ್ಖನಾಗಿರುವವನಿಗೆ; | (ಆ) ಧರ್ಮತಃ ಬೌದ್ಧನೋ, ಜೈನನೋ ಸಿಖ್ಖನೋ ಆಗಿರುವ ಯಾವನೇ ವ್ಯಕ್ತಿಗೆ; |
| (ಇ) (i) ಈ ವಿಭಾಗದ ಅರ್ಥದಲ್ಲಿ ತಂದೆತಾಯಿ ಹಿಂದುವಾಗಿರುವ ಯಾವುದೇ ಶಾಸನಸಮ್ಮತ ಅಥವಾ ಶಾಸನಬಾಹಿರ ಮಗುವಿಗೆ; | (ಇ) (i) ಈ ವಿಭಾಗದ ಅರ್ಥದಲ್ಲಿ ತಂದೆ ತಾಯಿ ಹಿಂದುಗಳಾಗಿರುವ ಯಾವುದೇ ಶಾಸನಬದ್ಧ ಅಥವಾ ಶಾಸನಬಾಹಿರ ಮಗುವಿಗೆ; |
| (ii) ತಂದೆ–ತಾಯಿಗಳಲ್ಲಿ ಯಾರಾದ ರೊಬ್ಬರು ಈ ವಿಭಾಗದ ಅರ್ಥವ್ಯಾಪ್ತಿಯಲ್ಲಿ ಹಿಂದುವಾಗಿ ದ್ದರೆ, ಅಂತಹ ಶಾಸನಸಮ್ಮತ ಅಥವಾ ಶಾಸನಬಾಹಿರ ಮಗುವಿಗೆ; ಆ ಮಗುವನ್ನು ಆ ತಂದೆ–ತಾಯಿ ಸೇರಿರುವ ಅಥವಾ ಸೇರಿದ್ದ ಪಂಗಡವು ಅಥವಾ ಕುಟುಂಬವು ಸಾಕುತ್ತಿದ್ದರೆ ಅಂತಹ ಮಗುವಿಗೆ; | (ii) ತಂದೆ ತಾಯಿಗಳಲ್ಲಿ ಯಾರಾದರೊಬ್ಬರು ಈ ವಿಭಾಗದ ಅರ್ಥವ್ಯಾಪ್ತಿಯಲ್ಲಿ ಹಿಂದುವಾಗಿದ್ದರೆ ಅಂತಹ ಶಾಸನಬದ್ಧ ಅಥವಾ ಶಾಸನಬಾಹಿರ ಮಗುವಿಗೆ; ಆ ಮಗುವನ್ನು ಆ ತಂದೆ ಅಥವಾ ತಾಯಿ ಸೇರಿರುವ ಅಥವಾ ಸೇರಿದ್ದ ಪಂಗಡವು ಅಥವಾ ಕುಟುಂಬವು ಸದಸ್ಯನನ್ನಾಗಿ ಸಾಕುತ್ತಿದ್ದರೆ; ಮತ್ತು |
| (ಈ) ಹಿಂದೂ, ಬೌದ್ಧ, ಜೈನ ಅಥವಾ ಸಿಖ್ ಧರ್ಮಗಳಿಗೆ ಪರಿವರ್ತಿತನಾದವನಿಗೆ | (ಈ) ಹಿಂದೂ ಧರ್ಮಕ್ಕೆ ಪರಿವರ್ತಿತನಾದವನಿಗೆ **ಭಾಗ–೧ ಉಪವಿಭಾಗ–೨ ಪುಟ–೧** |
| (೨) ಈ ಸಂಹಿತೆಯು ಧರ್ಮತಃ ಮುಸ್ಲಿಮನೋ, ಕ್ರಿಶ್ಚಿಯನ್ನನೋ, ಪಾರ್ಸಿಯನೋ ಅಥವಾ ಯಹೂದ್ಯನೋ ಆಗಿರದಿದ್ದರೆ ಅಂತಹ ವ್ಯಕ್ತಿಗೂ ಅನ್ವಯಿಸುತ್ತದೆ. ಅಂತಹ ವ್ಯಕ್ತಿಯು ಈ ಸಂಹಿತೆಯು ಅಂಗೀಕೃತವಾಗಿರದಿದ್ದರೆ ಯಾವ ವಿಷಯಗಳನ್ನು ವ್ಯವಹರಿಸು ತ್ತಿದ್ದನೋ ಆ ವಿಚಾರಗಳಲ್ಲಿ ಹಿಂದೂ ಕಾನೂನು ಅಥವಾ ಅದರ ಭಾಗವಾಗಿ ಯಾವುದೇ | (೨) ಈ ಸಂಹಿತೆಯು ಧರ್ಮತ: ಮುಸ್ಲಿಂ, ಕ್ರೈಸ್ತ, ಪಾರ್ಸಿ, ಅಥವಾ ಜ್ಯೂ ಆಗಿರದ ಯಾವನೇ ವ್ಯಕ್ತಿಗೂ ಅನ್ವಯಿಸುತ್ತದೆ. **ಭಾಗ–೧ ಉಪವಿಭಾಗ–೨ ಪುಟ–೧** ಈ ಸಂಹಿತೆಯು ಅಂಗೀಕೃತವಾಗಿ ರದಿದ್ದರೆ ಇಲ್ಲಿ ವ್ಯವಹರಿಸಿರುವ ವಿಚಾರಗಳಲ್ಲಿ ಅಂತಹ ವ್ಯಕ್ತಿಯು ಹಿಂದೂ ಕಾನೂನು ಅಥವಾ ಅದರ ಭಾಗವಾದ ಪದ್ಧತಿ ಅಥವಾ |

ಪದ್ಧತಿ ಅಥವಾ ರೂಢಿಗೆ ಒಳಪಡುವುದಿಲ್ಲ ಎಂದು ಸಮರ್ಥಿಸಿದ ಪಕ್ಷದಲ್ಲಿ, ಈ ಸಂಹಿತೆಯು, ಆ ವಿಚಾರಗಳಿಗೆ ಸಂಬಂಧಿಸಿದಂತೆ ಆ ವ್ಯಕ್ತಿಗೆ ಅನ್ವಯಿಸುವುದಿಲ್ಲ.

(೩) ಈ ಸಂಹಿತೆಯ ಯಾವುದೇ ಭಾಗದಲ್ಲಿ "ಹಿಂದೂ" ಎಂಬ ಉಕ್ತಿಯನ್ನು ಧರ್ಮತಃ ಹಿಂದೂ ಆಗಿರದಿದ್ದರೂ ಈ ಸಂಹಿತೆಯ ಅವಕಾಶಗಳಿಗೆ ಒಳಪಟ್ಟು ನಡೆಯುವ ವ್ಯಕ್ತಿಗೂ ಅನ್ವಯಿಸಿದೆಯೆಂದು ಭಾವಿಸಲಾಗುತ್ತದೆ.

ರೂಢಿಗೆ ಒಳಪಡುತ್ತಿರಲಿಲ್ಲ ಎಂದು ಸಮರ್ಥಿಸಲು ಸಾಧ್ಯವಾದ ಪಕ್ಷದಲ್ಲಿ ಅಂತಹ ವ್ಯಕ್ತಿಗೆ ಆ ವಿಚಾರಗಳಲ್ಲಿ ಈ ಸಂಹಿತೆಯು ಅನ್ವಯವಾಗುವುದಿಲ್ಲ.

(೩) ಈ ಸಂಹಿತೆಯ ಯಾವುದೇ ಭಾಗದಲ್ಲಿ "ಹಿಂದೂ" ಎಂಬ ಉಕ್ತಿಯನ್ನು, ಧರ್ಮತಃ ಹಿಂದೂ ಆಗಿರದಿದ್ದರೂ, ಈ ಸಂಹಿತೆಯ ಅವಕಾಶಗಳಿಗೆ ಒಳಪಟ್ಟು ನಡೆ ಯುವ ವ್ಯಕ್ತಿಗೆ ಅನ್ವಯಿಸಿದೆಯೆಂದು ಭಾವಿಸಲಾಗುತ್ತದೆ.

(೪) ೧೮೭೨ರ ವಿಶೇಷ, ವಿವಾಹ ಶಾಸನ (Special Marriage ಮತ್ತು Act-1872 (1872ರ ३ನೇ ಶಾಸನ)ದಲ್ಲಿ ಏನೇ ಹೇಳಿದ್ದರೂ, ಈ ಸಂಹಿತೆಯು ಜಾರಿಯಾಗುವುದಕ್ಕೆ ಮುಂಚಿತವಾಗಿ ಆ ಶಾಸನದ ಅವಕಾಶಗಳ ಪ್ರಕಾರ ಯಾರ ವಿವಾಹಗಳು ವಿಧಿವಿಹಿತವಾಗಿಯೋ ಆ ಎಲ್ಲಾ ಹಿಂದೂಗಳಿಗೂ ಈ ಸಂಹಿತೆಯು ಅನ್ವಯವಾಗುತ್ತದೆ.

**ಭಾಗ–೧ ಉಪವಿಭಾಗ–೬ ಪುಟ–೨ ಮತ್ತು ಪರಿಶಿಷ್ಟ ೧ ಪುಟ ೩೦**

(೩)

೩. ವಿವರಣೆಗಳು . ಈ ಸಂಹಿತೆಯಲ್ಲಿ ಸಂದರ್ಭವು ಬೇರೆ ರೀತಿಯಾಗಿ ತೋರದಿದ್ದರೆ –

(i) **"ಅಳಿಯ ಸಂತಾನ ಕಾನೂನು" ಎನ್ನುವುದು ಈ ಸಂಹಿತೆಯು ಅಂಗೀಕಾರವಾಗಿರದಿದ್ದರೆ ಯಾವುದು**

(೨)

(೩) ವಿವರಣೆಗಳು : ಈ ಸಂಹಿತೆಯಲ್ಲಿ ವಿಷಯದಲ್ಲಾಗಲಿ ಸಂದರ್ಭದಲ್ಲಾಗಲಿ ವಿರುದ್ಧವಾದುದು ಏನೂ ಇರದಿದ್ದರೆ,

(i) "ಪದ್ಧತಿ" ಮತ್ತು "ರೂಢಿ" ಎಂಬ ಉಕ್ತಿಗಳು ಬಹು

**ಭಾಗ–೧ ಉಪ ವಿಭಾಗಗಳು ೪ ಮತ್ತು ೫ ಪುಟ ೨**

**೧೯೪೯ರ ಮದರಾಸು ಅಳಿಯ ಸಂತಾನ ಶಾಸನದ (ಮದರಾಸು ೧೯೪೯ರ ೯ನೆಯ ಶಾಸನ) ಅಂಕೆಗೆ ಒಳಪಡುತ್ತಿತ್ತೋ ಆ ಕಾನೂನು ವ್ಯವಸ್ಥೆ ಎಂಬ ಅರ್ಥವನ್ನು ಹೊಂದಿದೆ.**

(ii) "ಪದ್ಧತಿ" ಮತ್ತು "ರೂಢಿ" ಎಂಬ ಪದಗಳು ಬಹಳ ಕಾಲದಿಂದ ನಿರಂತರವಾಗಿ, ಏಕರೂಪದಲ್ಲಿ ಆಚರಿಸಲಾಗುತ್ತಿರುವ, ಯಾವುದೇ ಸ್ಥಳೀಯ ಪ್ರದೇಶ, ಬುಡಕಟ್ಟು. ಸಮುದಾಯ, ಪಂಗಡ ಅಥವಾ ಕುಟುಂಬದ ಹಿಂದೂಗಳಲ್ಲಿ ಕಾನೂನಿನ ಶಕ್ತಿಯನ್ನು ಪಡೆದಿರುವ ಯಾವುದೇ ನಿಯಮವನ್ನು ಹೇಳುತ್ತವೆ. ನಿಯಮವು ಖಚಿತವಾಗಿರಬೇಕು. ನ್ಯಾಯಸಮ್ಮತವಾಗಿರಬೇಕು, ಸಾರ್ವಜನಿಕ ನೀತಿಗೆ ವಿರುದ್ಧ ವಾಗಿರಬಾರದು; ಮತ್ತು ಒಂದು ನಿಯಮವು ಒಂದು ಕುಟುಂಬಕ್ಕೆ ಮಾತ್ರವೇ ಅನ್ವಯಿಸುವ ಸಂದರ್ಭದಲ್ಲಿ, ಅದನ್ನು ಕುಟುಂಬವು ನಿಲ್ಲಿಸಿಬಿಟ್ಟಿರಬಾರದು.

(iii) "ಪೂರ್ಣರಕ್ತ "ಅಥವ "ಅರ್ಧ ರಕ್ತ", ಇಬ್ಬರು ವ್ಯಕ್ತಿಗಳು ಸಮಾನ ತಂದೆಗೆ ಒಬ್ಬಳೇ ಪತ್ನಿಯಿಂದ ಜನಿಸಿದವರಾಗಿದ್ದರೆ ಅವರು ಪೂರ್ಣ ರಕ್ತಸಂಬಂಧಿಗಳೆಂದು ಹೇಳಲಾಗುತ್ತದೆ; ಒಬ್ಬನೇ ತಂದೆಗೆ ಹಲವು ಪತ್ನಿಯರಿಂದ ಜನಿಸಿದವರಾಗಿದ್ದರೆ ಅವರು ಅರೆ-ರಕ್ತಸಂಬಂಧಪಟ್ಟವರೆಂದು ಹೇಳಲಾಗುತ್ತದೆ.

(v) "ಸಮಾನ ಮಾತೃಕರಕ್ತ"–ಇಬ್ಬರು ವ್ಯಕ್ತಿಗಳು ಏಕಮಾತೃವಿನಿಂದ ಬೇರೆ ಕಾಲದಿಂದ ಒಂದೇ ಸಮನೆ ಮತ್ತು ಏಕರೂಪದಲ್ಲಿ ಆಚರಣೆಯಲ್ಲಿ ಬಂದಿರುವ, ಯಾವುದೇ ಸ್ಥಳೀಯ ಪ್ರದೇಶ, ಬುಡಕಟ್ಟು, ಸಮುದಾಯ, ಪಂಗಡ ಅಥವಾ ಕುಟುಂಬದ ಹಿಂದುಗಳಲ್ಲಿ ಕಾನೂನಿನ ಶಕ್ತಿಯನ್ನು ಪಡೆದಿರುವ ಯಾವುದೇ ನಿಯಮವನ್ನು ಹೇಳುತ್ತವೆ.

ನಿಯಮವು ಖಚಿತವಾಗಿರಬೇಕು. ನ್ಯಾಯಸಮ್ಮತವಾಗಿರಬೇಕು. ಸಾರ್ವಜನಿಕ ನೀತಿಗೆ ವಿರುದ್ಧವಾಗಿರಬಾರದು; ಮತ್ತು ಒಂದು ಕುಟುಂಬಕ್ಕೆ ಮಾತ್ರ ಅನ್ವಯವಾಗುವ ಒಂದು ನಿಯಮದ ವಿಷಯದಲ್ಲಿ ಅದನ್ನು ಕುಟುಂಬವು ನಿಲ್ಲಿಸಿಬಿಟ್ಟಿರಬಾರದು.

(ii) "ಜಿಲ್ಲಾ ನ್ಯಾಯಾಲಯ" ಎಂಬ ಉಕ್ತಿಗೆ ಅರ್ಥ, ಮೂಲ ನ್ಯಾಯಾಧಿಕಾರ ವ್ಯಾಪ್ತಿಯುಳ್ಳ ಮುಖ್ಯ ಸಿವಿಲ್ ಕೋರ್ಟ್ ಳಿಳ ಮತ್ತು ೪೯ನೆಯ ಪ್ರಕರಣಗಳಲ್ಲಿ ಹೊರತು ಮಿಕ್ಕಂತೆ ತನ್ನ ಮೂಲ ಸಿವಿಲ್ ನ್ಯಾಯಾಧಿಕಾರ ಚಲಾವಣೆಯಲ್ಲಿ ಹೈಕೋರ್ಟನ್ನು ಒಳಗೊಳ್ಳುತ್ತದೆ.

**ಭಾಗ–೧ ಉಪವಿಭಾಗ–೫ (d) ಪುಟ–೨**

(iii) 'ಪೂರ್ಣ ರಕ್ತಸಂಬಂಧ' ಮತ್ತು 'ಅರೆ-ರಕ್ತಸಂಬಂಧ'– ಇಬ್ಬರು ವ್ಯಕ್ತಿಗಳು ತಂದೆಗೆ ಒಬ್ಬಳೇ ಪತ್ನಿಯಿಂದ ಜನಿಸಿದ್ದರೆ ಅದನ್ನು ಪೂರ್ಣ ರಕ್ತಸಂಬಂಧವೆಂದೂ, ತಂದೆಗೆ ಬೇರೆ ಬೇರೆ ಪತ್ನಿಯರಿಂದ ಜನಿಸಿದ್ದರೆ ಅರೆ-ರಕ್ತಸಂಬಂಧ ಎಂದೂ ಹೇಳಲಾಗುತ್ತದೆ.

**(೮)೫ C–ಪುಟ**

ಬೇರೆ ಪತಿಗಳಿಗೆ ಜನಿಸಿದ್ದರೆ ಅಂಥವರನ್ನೂ ಏಕಮಾತೃಕ ಅಥವಾ ಸಮಾನಮಾತೃಕ ಸಂಬಂಧಿಗಳೆಂದು ಕರೆಯ ಲಾಗುತ್ತದೆ.

ವಿವರಣೆ : (iv) ಮತ್ತು (v)ನೆಯ ಉಪವಾಕ್ಯಗಳಲ್ಲಿ ''ಪೂರ್ವಜ'' ಎಂದಾಗ ತಂದೆಯನ್ನು ಪೂರ್ವಜೆ" ಎಂದಾಗ ತಾಯಿಯನ್ನೂ ಆ ಪದವು ಒಳಗೊಳ್ಳುತ್ತದೆ.

(vi) "ಮರುಮಕ್ಕತ್ತಾಯಂ ಕಾನೂನು" ಎಂದರೆ ಈ ವ್ಯಕ್ತಿಗಳಿಗೆ ಅನ್ವಯಿಸುವ ಕಾನೂನು:–

(ಅ) ಈ ಸಂಹಿತೆಯು ಜಾರಿಗೊಂಡಿರ ದಿದ್ದರೆ ಯಾರು ೧೯೩೨ ಮದರಾಸು ಮರುಮಕ್ಕತ್ತಾಯಂ ಶಾಸನ (೧೯೩೩ರ ಮದರಾಸು ೨೨ನೆಯ ಶಾಸನ)ಕ್ಕೆ ೧೧೦೦ರ ಟ್ರಾವಂಕೂರು ನಾಯರ್ ಆಕ್ಟ್ IIಕ್ಕೆ; ೧೨೦೦ ಟ್ರಾವಂಕೂರು ಎಳವ ಶಾಸನ IIIಕ್ಕೆ ೧೧೦೧ರ ನಂಬಿನಾಡು ಮೂಲ ಶಾಸನಕ್ಕೆ ; ೧೧೦೮ರ ಟ್ರಾವಂಕೂರು ಕ್ಷತ್ರಿಯ ಶಾಸನಕ್ಕೆ, ೧೧೧೫ರ ಟ್ರಾವಂಕೂರು ಕೃಷ್ಣವಾಕ – ಮರುಮಕ್ಕತಾಯೀ ಶಾಸನಕ್ಕೆ; ೧೧೦೭ರ ಕೊಚಿನ್ ತಿಯ್ಯಾ viiiನೆಯ ಶಾಸನಕ್ಕೆ; ೧೧೧೩ ೨೯ನೆಯ ನೇಟಿವ್ ನಾಯರ್ ಶಾಸನಕ್ಕೆ ಅಥವಾ ೧೧೧೩ರ ೩೩ನೆಯ ಕೊಚಿನ್ ಮರುಮಕ್ಕತ್ತಾಯಂ ಶಾಸನಕ್ಕೆ –

(iv) 'ಸಮಾನ ಮಾತೃಕ' ರಕ್ತಸಂಬಂಧ ಇಬ್ಬರು ವ್ಯಕ್ತಿಗಳು ಒಬ್ಬಳೇ ತಾಯಿಗೆ ಬೇರೆ ಬೇರೆ ತಂದೆಯರಿಂದ ಜನಿಸಿದ್ದಾಗ ಅವರನ್ನು ಸಮಾನ ರಕ್ತ ಸಂಬಂಧವುಳ್ಳವರೆಂದು ಹೇಳಲಾಗುತ್ತದೆ. [ಕಲಂ–C ೫(೮)]

ವಿವರಣೆ : ಈ ಉಪವಾಕ್ಯದಲ್ಲಿ ಪೂರ್ವಜ 'ancestor' ಎನ್ನುವುದು ತಂದೆಯನ್ನು 'ancestress' ಪೂರ್ವಜೆ ತಾಯಿಯನ್ನು ಒಳಗೊಳ್ಳುತ್ತದೆ

(v) 'ಭಾಗ' ಎಂದರೆ ಈ ಸಂಹಿತೆಯ ಯಾವುದೇ ಭಾಗ; [ಕಲಂ–C ೫(೨ಟ)]

(vi) 'ವಿಧಿಸಿದ' ಎಂದರೆ ಈ ಸಂಹಿತೆಯ ಪ್ರಕಾರವಾದ ನಿಯಮಗಳು ವಿಧಿಸಿರುವ ಎಂದರ್ಥ

(vii) 'ಸಂಬಂಧಿಸಿದ' ಎಂದರೆ ಶಾಸನ ಸಮ್ಮತವಾದ ಬಂಧುತ್ವದಿಂದ ಸಂಬಂಧಪಟ್ಟ ಎಂದು ಅರ್ಥ. [ಕಲಂ–೫(೨)]

'ಶಾಸನಬಾಹಿರವಾದ ಮಕ್ಕಳನ್ನು' ತಮ್ಮ ತಾಯಿಗೆ ಸಂಬಂಧ ಪಟ್ಟವರೆಂದು ಭಾವಿಸಲಾಗುತ್ತದೆ ಮತ್ತು ಅವರು ಪರಸ್ಪರ ಸಂಬಂಧಿತರೆಂದೂ ಭಾವಿಸ ಲಾಗುತ್ತದೆ. ಅವರ ಕಾನೂನು ಸಮ್ಮತ ಮಕ್ಕಳು ಅವರಿಗೆ ಹಾಗೂ ಪರಸ್ಪರ ಸಂಬಂಧಿಕರೆನಿಸುತ್ತಾರೆ. ಬಾಂಧವ್ಯವನ್ನು ವ್ಯಕ್ತಪಡಿಸುವ ಅಥವಾ ಒಬ್ಬ ಬಂಧುವನ್ನು ಸೂಚಿಸುವ ಯಾವುದೇ ಪದವನ್ನು ಹಾಗೆ ಭಾವಿಸಲಾಗುತ್ತದೆ.

(viii) 'ಮಗ' ಎನ್ನುವುದು ದತ್ತಕವಾಗಿ ಸ್ವೀಕೃತವಾದ ಮಗನನ್ನು ಒಳಗೊಳ್ಳುತ್ತದೆ. ಅದು ಈ

ಒಳಪಡುತ್ತಿದ್ದರೋ ಅವರಿಗೆ ಅನ್ವಯವಾಗುತ್ತದೆ.

(ಅ) ಯಾವುದೇ ಸಮುದಾಯಕ್ಕೆ ಸೇರಿದವರು ಸದಸ್ಯರು ಬಹುತೇಕ ತಿರುವಾಂಕೂರು – ಕೊಚಿನ್ ರಾಜ್ಯದಲ್ಲೇ ಮದರಾಸು ರಾಜ್ಯದಲ್ಲೇ ವಾಸವಾಗಿರುವವರು; ಈ ಸಂಹಿತೆಯು ಅಂಗೀಕೃತ ವಾಗಿರದಿದ್ದರೆ ಹೆಂಗಸಿನ ಕಡೆಯಿಂದ ವಂಶವನ್ನು ಗುರುತಿಸುವ ಯಾವುದೇ ಪಿತ್ರಾರ್ಜಿತ ಅನುಭೋಗ ವ್ಯವಸ್ಥೆಗೆ ಒಳಪಡುತ್ತಿದ್ದವರು ಸೇರುತ್ತಾರೆ. ಆದರೆ ಇದರಲ್ಲಿ ಅಳಿಯ ಸಂತಾನ ಕಾನೂನು ಸೇರುವುದಿಲ್ಲ.

(vii) 'ನಂಬೂದ್ರಿ ಕಾನೂನು' ಎಂದರೆ, ಈ ಸಂಹಿತೆಯು ಜಾರಿಯಾಗದಿದ್ದರೆ ಯಾರು ಮದರಾಸು ನಂಬೂದ್ರಿ ಶಾಸನ ೧೯೩೨ (೧೯೩೩ರ ಮದರಾಸು ೨೧ನೆಯ ಶಾಸನ): ಕೊಚಿನ್ ನಂಬೂದ್ರಿ ಶಾಸನ (೧೧೧೪ರ ೧೭ನೆ ಶಾಸನ) ಅಥವಾ ತಿರುವಾಂಕೂರು ಮಲಯಾಳ ಬ್ರಾಹ್ಮಣ ಶಾಸನ (೧೧೦೬ರ ನಿಯಮಾವಳಿ) ಗಳಿಗೆ ಬದ್ಧರಾಗುತ್ತಿದ್ದವರಿಗೆ ಅನ್ವಯವಾಗುವ ಕಾನೂನು ಎಂದರ್ಥ.

(viii) 'ಭಾಗ'ಎಂದರೆ ಈ ಸಂಹಿತೆಯ ಭಾಗ

ಸಂಹಿತೆಯು ಕಾರ್ಯಗತಗೊಳ್ಳುವುದಕ್ಕೆ ಮುಂಚೆಯೇ ಅಥವಾ ಆಮೇಲೆ ದತ್ತಕವಾಗಿರಬಹುದು. ಆದರೆ ಇದು ಕಾನೂನುಬಾಹಿರವಾದ ಮಗನನ್ನು ಒಳಗೊಳ್ಳುವುದಿಲ್ಲ.

**ಭಾಗ–೨ ಉಪವಿ–೨೮ ಪುಟ–೩**

**(೩)**

ಸಂಹಿತೆಯ ಅತಿಮುಖ್ಯವಾದ ಪರಿಣಾಮ ಈ ಸಂಹಿತೆಯಲ್ಲಿ ಕೊಟ್ಟಿರುವುದಕ್ಕಿಂತ ಬೇರೆಯಾದ ರೀತಿಯಲ್ಲಿ ವ್ಯಕ್ತಪಡಿಸಿರದಿದ್ದರೆ ಈ ಸಂಹಿತೆಯು ಜಾರಿಯಾಗುವುದಕ್ಕೆ ಮೊದಲು ಚಾಲತಿಯಲ್ಲಿದ್ದ ಯಾವುದೇ ಪಠ್ಯ, ನಿಯಮ ಅಥವಾ ಹಿಂದೂ ಕಾನೂನಿನ ವಿವರಣೆ, ಅಥವಾ ಯಾವುದೇ ರೂಢಿ ಅಥವಾ ಬೇರೆ ಯಾವುದೇ ಕಾನೂನು ಈ ಸಂಹಿತೆಯಲ್ಲಿ ನಿರೂಪಿಸಿರುವ ವಿಚಾರಗಳಿಗೆ ಸಂಬಂಧಿಸಿದಂತೆ ಯಾವುದೇ ಪರಿಣಾಮವನ್ನು ಹೊಂದಿರುವುದಿಲ್ಲ.

(ix) **'ವಿಧಿಸಿದ'** ಎಂದರೆ ಈ ಸಂಹಿತೆಯ ಪ್ರಕಾರವಾದ ನಿಯಮಾವಳಿಗಳಂತೆ ವಿಧಿಸಿದ ಎಂದರ್ಥ

(x) **'ಸಂಬಂಧಿತ'** ಎಂದರೆ ಶಾಸನಬದ್ಧ ಬಾಂಧವ್ಯದಿಂದ ಸಂಬಂಧಿತ ಎಂದರ್ಥ, ಕಾನೂನು ಬಾಹಿರವಾದ ಮಕ್ಕಳು ತಮ್ಮ ತಾಯಿಯೊಂದಿಗೆ ಸಂಬಂಧಿಸಿ ರುತ್ತವೆ ಎಂದೂ, ಪರಸ್ಪರ ಸಂಬಂಧಿಸಿರುತ್ತವೆ ಎಂದೂ ಅವರ ಶಾಸನವಿಹಿತ ಮಕ್ಕಳು ಅವರೊಂದಿಗೆ ಮತ್ತು ಪರಸ್ಪರ ಸಂಬಂಧಿಸಿರುತ್ತಾರೆ ಎಂದೂ ಭಾವಿಸಲಾಗುತ್ತದೆ. ಬಾಂಧವ್ಯಗಳನ್ನು ವ್ಯಕ್ತಪಡಿಸುವ ಇಲ್ಲವೆ ಒಬ್ಬ ಬಂಧುವನ್ನು ಸೂಚಿಸುವ ಯಾವುದೇ ಪದವನ್ನು ಹಾಗೆ ಭಾವಿಸಲಾಗುತ್ತದೆ.

(xi) **'ಮಗ'** ಎಂದರೆ ದತ್ತಕವಾಗಿರುವ ಮಗನನ್ನೂ ಅದು ಒಳಗೊಳ್ಳುತ್ತದೆ. ದತ್ತಕ ಸ್ವೀಕಾರವು ಈ ಸಂಹಿತೆಯು ಜಾರಿಗೊಳ್ಳುವುದಕ್ಕಿಂತ ಮೊದಲೋ ಅಥವಾ ಆಮೇಲೋ ನಡೆದಿರಬಹುದು. ಆದರೆ ಇದರಲ್ಲಿ ಕಾನೂನುಬಾಹಿರವಾದ ಮಗನು ಸೇರುವುದಿಲ್ಲ.

**(೪)**

೪. **ಸಂಹಿತೆಯ ಅತಿಮುಖ್ಯ ಪರಿಣಾಮ:** ಈ ಸಂಹಿತೆಯಲ್ಲಿ ಬೇರೆ ವಿಧವಾಗಿ ಸ್ಪಷ್ಟವಾಗಿ ಹೇಳಿರದಿದ್ದರೆ–

(ಅ) ಈ ಸಂಹಿತೆಯು ಜಾರಿಯಾಗುವುದಕ್ಕಿಂತ ಮೊದಲು ಚಾಲ್ತಿಯಲ್ಲಿದ್ದ ಯಾವುದೇ ಪಠ್ಯ, ನಿಯಮ ಅಥವಾ ಹಿಂದೂ ಕಾನೂನಿನ ವಿವರಣೆ ಅಥವಾ

ರೂಢಿ, ಪದ್ಧತಿ ಇವು ಈ ಸಂಹಿತೆಯಲ್ಲಿ ನಿರೂಪಿಸಿರುವ ಅಂಶಗಳ ಮೇಲೆ ಯಾವ ಪರಿಣಾಮವನ್ನು ಹೊಂದಿರುವುದಿಲ್ಲ.

## ಭಾಗ – ೨
## ವಿವಾಹ ಮತ್ತು ವಿವಾಹ ರದ್ದತಿ
### ಅಧ್ಯಾಯ – ೧ : ವಿವಾಹ

೫. ವ್ಯಾಖ್ಯಾನ : ಈ ಭಾಗದಲ್ಲಿ ಸಂದರ್ಭಕ್ಕೆ ಬೇರೆ ರೀತಿಯಾಗಿ ಅಗತ್ಯವಾಗಿರದೆ ಹೋದರೆ,

(ಅ) "ಜಿಲ್ಲಾ ನ್ಯಾಯಾಲಯ"ವು, ರಾಜ್ಯ ಸರ್ಕಾರವು ಅಧಿಕೃತ ಗೆಜೆಟ್ಟಿನಲ್ಲಿ ಈ ಸಂಬಂಧವಾಗಿ ಪ್ರಕಟಿಸುವ ಮೂಲಕ ನಿರ್ದಿಷ್ಟಪಡಿಸುವ ಯಾವುದೇ ಅಧೀನ ನ್ಯಾಯಾಲಯವನ್ನು ಒಳಗೊಳ್ಳುತ್ತದೆ;

(ಆ) "ಸಪಿಂಡಸಂಬಂಧ" – ಒಬ್ಬ ಪುರುಷನು ಮೂರನೆಯ ಪರಿಶಿಷ್ಟದ ಮೊದಲನೆಯ ವಿಭಾಗದ ಮೊದಲನೆಯ ಕಲಮಿನಲ್ಲಿ ಹೇಳಿರುವ ಯಾವುದೇ ವ್ಯಕ್ತಿಯ "ಸಪಿಂಡ"ನಾಗಿರುತ್ತಾನೆ. ಒಬ್ಬ ಮಹಿಳೆಯ ಅದೇ ವಿಭಾಗದ ಎರಡನೆಯ ಕಲಮಿನಲ್ಲಿ ಹೇಳಿರುವ ಯಾವುದೇ ವ್ಯಕ್ತಿಯ "ಸಪಿಂಡ"ಳಾಗಿರುತ್ತಾಳೆ;

(ಇ) "ನಿಷಿದ್ಧ ಸಂಬಂಧದ ಹಂತಗಳು'– ಒಬ್ಬ ಪುರುಷನಿಗೂ ಮೂರನೆಯ ಪರಿಶಿಷ್ಟದ ಎರಡನೆಯ ವಿಭಾಗದ ಮೊದಲನೆಯ ಕಲಮಿನಲ್ಲಿ ಹೇಳಿರುವ ಯಾವುನೇ ವ್ಯಕ್ತಿ; ಅದೇ ವಿಭಾಗದ ಎರಡನೆಯ ಕಲಮಿನಲ್ಲಿ ಹೇಳಿರುವ ವ್ಯಕ್ತಿಗಳಿಗೂ ಒಬ್ಬ ಮಹಿಳೆಗೂ ಇರುವ ಸಂಬಂಧವು ನಿಷಿದ್ಧ

## ಭಾಗ – ೨
## ವಿವಾಹ ಮತ್ತು ವಿಚ್ಛೇದನ
### ಅಧ್ಯಾಯ – ೧ : ವಿವಾಹ

**ಭಾಗ–೬ ಪ್ರಕರಣ–೧ ಪುಟ–೧೪**

೫. ವ್ಯಾಖ್ಯಾನ : ಈ ಭಾಗದಲ್ಲಿ ವಿಷಯ ಅಥವಾ ಸಂದರ್ಭದಲ್ಲಿ ಯಾವುದೇ ಅಸಾಂಗತ್ಯವಿಲ್ಲದೆ ಹೋದ ಪಕ್ಷದಲ್ಲಿ

(ಅ) (i) ಯಾವನೇ ವ್ಯಕ್ತಿಗೆ ಸಂಬಂಧಪಟ್ಟಂತೆ "ಸಪಿಂಡ ಸಂಬಂಧ"ವು ತಲೆಮಾರಿನವರೆಗೆ (ಅದೂಕೂಡಿ) ತಾಯಿಯ ಕಡೆಯೂ, ಐದನೆಯ ತಲೆಮಾರಿನವರೆಗೆ (ಅದೂ ಕೂಡಿ) ತಂದೆಯ ಕಡೆಯೂ ಗುರುತಿಸಲ್ಪಡುತ್ತದೆ. ಪ್ರತಿ ಸಂದರ್ಭದಲ್ಲಿ ಸಂಬಂಧಿತ ವ್ಯಕ್ತಿಯಿಂದ ಮೇಲಕ್ಕೆ ತಲೆ ಮಾರುಗಳನ್ನು ಲೆಕ್ಕಹಾಕಲಾಗುತ್ತದೆ. ಅವನು ಮೊದಲನೆಯ ತಲೆಮಾರಿನವನಾಗುತ್ತನೆ.

(ii) ಒಬ್ಬ ವ್ಯಕ್ತಿಯು ಇನ್ನೊಬ್ಬನ ನೇರ ತಲೆಮಾರಿನ ಮೂಲ ಪುರುಷನಾಗಿದ್ದರೆ, ಸಪಿಂಡ ಬಾಂಧವ್ಯದ ಮಿತಿಗಳೊಡನಿದ್ದರೆ ತಮ್ಮಲ್ಲಿ ಯಾರಾದರೊಬ್ಬರೊಂದಿಗೆ ಸಪಿಂಡ ಬಾಂಧವ್ಯದ ಮಿತಿಯುಳ್ಳ ವಾಂಶಿಕ ಮುಖ್ಯನಾಗಿದ್ದರೆ ಅಂತಹ ಇಬ್ಬರು ವ್ಯಕ್ತಿಗಳನ್ನು ಸಪಿಂಡರೆಂದು ಹೇಳಲಾಗುತ್ತದೆ.

(ಆ) "ನಿಷಿದ್ಧ ಬಾಂಧವ್ಯದ ಹಂತಗಳು"–

ಸಂಬಂಧವೆನಿಸಿಕೊಳ್ಳುತ್ತದೆ.

**ವಿವರಣೆ :** (ಬಿ) ಮತ್ತು (ಸಿ) ಕಲಮುಗಳಿಗಾಗಿ ಸಂಬಂಧವು ಇವುಗಳನ್ನು ಒಳಗೊಳ್ಳುತ್ತದೆ;

(i) ಮಲಸಂಬಂಧ ಅಥವಾ ಮಾತೃಕ ಸಂಬಂಧ

(ii) ಕಾನೂನುಬಾಹಿರವಾದ ಮತ್ತು ಕಾನೂನುಸಮ್ಮತವಾದ ಸಂಬಂಧ

(iii) ದತ್ತು ಸ್ವೀಕಾರದಿಂದ ಮತ್ತು ರಕ್ತಬಾಂಧವ್ಯದಿಂದ ಸಂಬಂಧ; ಮತ್ತು ಉಪವಾಕ್ಯಗಳಲ್ಲಿ ನಿರೂಪಿಸಿದ ಸಂಬಂಧ ನಿಯಮಗಳನ್ನು ಸೂಕ್ತವಾಗಿ ಪರಿಗಣಿಸಲಾಗುವುದು.

ಒಬ್ಬ ವ್ಯಕ್ತಿಯು ಇನ್ನೊಬ್ಬನ ನೇರ ಸಂತತಿಯ ಮೂಲ ಪುರುಷನಾಗಿದ್ದರೆ ಆ ಇಬ್ಬರು ವ್ಯಕ್ತಿಗಳು "ನಿಷಿದ್ಧ ಬಾಂಧವ್ಯದ ಹಂತಗಳ ಒಳಗಿದ್ದಾರೆ" ಎಂದು ಭಾವಿಸಲಾಗುತ್ತದೆ. ಅಥವಾ ಒಬ್ಬ ನೇರ ಸಂತತಿಯ ಮೂಲ ಪುರುಷನ ಅಥವಾ ವಂಶಜನ ಪತ್ನಿಯೋ ಪತಿಯೋ ಆಗಿದ್ದರೆ ಅಥವಾ ಅವರಿಬ್ಬರೂ ಸೋದರ ಸೋದರಿಯರಾಗಿದ್ದರೆ, ಸೋದರಮಾವ ಸೋದರಸೊಸೆ ಆಗಿದ್ದರೆ, ಅತ್ತೆ ಮತ್ತು ಸೋದರಳಿಯ ಆಗಿದ್ದರೆ, ಇಬ್ಬರೂ ಸೋದರರ ಅಥವಾ ಸೋದರಿಯರ ಮಗಳಾಗಿದ್ದರೆ.

ವಿವರಣೆ : ಮೇಲ್ಕಂಡ (ಅ) ಮತ್ತು (ಆ) ಉಪವಾಕ್ಯಗಳ ದೃಷ್ಟಿಯಿಂದ ಸಂಬಂಧವು ಇವುಗಳನ್ನು ಒಳಗೊಳ್ಳುತ್ತವೆ.

(i) ಮಲಸೋದರಿಕೆ ಅಥವಾ ಸಮಾನ ಮಾತೃಕತೆ ಮತ್ತು ಶುದ್ಧವಂಶದಿಂದ ಸಂಬಂಧ

(ii) ಕಾನೂನು ಬಾಹಿರ ಮತ್ತು ಕಾನೂನುಬದ್ಧ ರಕ್ತಸಂಬಂಧ

(iii) ದತ್ತಕ ಸ್ವೀಕಾರದಿಂದ ಹಾಗೂ ರಕ್ತಸಂಬಂಧದಿಂದ; ಆ ಎಲ್ಲಾ ಉಪವಾಕ್ಯಗಳಲ್ಲಿನ ಸಂಬಂಧ ಗಳನ್ನು ಅದಕ್ಕೆ ತಕ್ಕಂತೆ ಭಾವಿಸಲಾಗುತ್ತದೆ.

**ನಿದರ್ಶನಗಳು**

(i) ಸಿ ಯ ಎ ಯ ತಂದೆಯ ತಾಯಿಯ ತಂದೆಯ ತಂದೆ ಮತ್ತು ಬಿ ಯ ತಾಯಿಯ ತಂದೆ ಸಿ ಯು ಎಗೆ ತಂದೆಯ ಕಡೆಯಿಂದ ಮೂರನೆಯ

ತಲೆಮಾರು ಈಗ ಎ ಮತ್ತು ಬಿ ಪರಸ್ಪರ **ಸಪಿಂಡರು**

(ii) ಎ ಮತ್ತು ಬಿ ಒಂದೇ ವಂಶದ ಸೋದರ ಮತ್ತು ಸೋದರಿ, ಅವರ ವಂಶಸ್ಥರು **ಸಪಿಂಡ** ಸಂಬಂಧದ ಮಿತಿಯಲ್ಲಿ ಪರಸ್ಪರ **ಸಪಿಂಡ**ರಾಗುತ್ತಾರೆ. ಅವರ ತಂದೆಯ ವಂಶಜರು ಮತ್ತು ಆತನ ಪೂರ್ವಜರು ಕೂಡ ಎ ಮತ್ತು ಬಿ ಹಾಗೂ ಅವರ ವಂಶಸ್ಥರ **ಸಪಿಂಡ**ರಾಗುತ್ತಾರೆ. **ಸಪಿಂಡ** ಸಂಬಂಧದ ಮಿತಿಗಳಿಗೆ ಒಳಪಟ್ಟು. ಆದರೆ ಎ ಯ ಮಾತಾಮಹನು ಬಿ ಯು ಮಾತಾಮಹನಿಗೆ **ಸಪಿಂಡ**ನಾಗಲೇಬೇಕೆಂದಿಲ್ಲ. ಹಾಗೆಯೇ ಮಾತಾಮಹನ ಮಗನ **ಸಪಿಂಡ**ನಾಗಿರಲೇಬೇಕಾಗಿಲ್ಲ.

(iii) ಎ ಮತ್ತು ಬಿ ಶುದ್ಧರಕ್ತ ಸೋದರ – ಸೋದರಿಯರು. ಅವರ ವಂಶಜರು, **ಸಪಿಂಡ** ಬಾಂಧವ್ಯದ ಮಿತಿಗೊಳಪಟ್ಟು ಪರಸ್ಪರ **ಸಪಿಂಡ**ರಾಗುತ್ತಾರೆ. ಅವರ ತಾಯಿಯ ವಂಶಜರು ಮತ್ತು ಆಕೆಯ ಪೂರ್ವಜರು ಕೂಡ ಎ ಮತ್ತು ಬಿ ಗಳಿಗೆ **ಸಪಿಂಡ**ರಾಗುತ್ತಾರೆ. ಎ–ಬಿಗಳ ವಂಶಜರೂ ಅಷ್ಟೆ. ಆದರೆ ಎ ಯ ಪಿತಾಮಹ ಬಿ ಯ ಪಿತಾಮಹನ **ಸಪಿಂಡ**ನಾಗಲೇ ಬೇಕೆಂದಿಲ್ಲ; ಹಾಗೆಯೇ ಎ ಯ ಪಿತಾಮಹನ ಮಗನು ಬಿ ಯ ಪಿತಾಮಹನ ಮಗನಿಗೆ ಅಗತ್ಯವಾಗಿ **ಸಪಿಂಡ**ನಾಗಿರಬೇಕಾಗಿಲ್ಲ.

**(೬)**

೬. ಹಿಂದೂ ವಿವಾಹದ ವಿವಿಧ ರೂಪಗಳು. ಬೇರೆ ರೀತಿಯಾಗಿ ಹೇಳಿರದಿದ್ದ ಪಕ್ಷದಲ್ಲಿ

**(೫)**

**೬. ಹಿಂದೂ ವಿವಾಹದ ರೂಪಗಳು:** ಬೇರೆ ರೀತಿಯಲ್ಲಿ ಸ್ಪಷ್ಟವಾಗಿ ಅವಕಾಶ ಮಾಡಿರದಿದ್ದ

ಹಿಂದೂಗಳಲ್ಲಿ ನಡೆಯುವ ಯಾವುದೇ ವಿವಾಹವು ಈ ಕೆಳಗಿನ ಯಾವುದಾದರೂ ರೀತಿಯಿಂದ ವಿಧಿವತ್ತಾಗದೇ ಹೋದರೆ ಊರ್ಜಿತವಾಗುವುದಿಲ್ಲ;

(i) ಧಾರ್ಮಿಕ ವಿವಾಹವಾಗಿ;

(ii) ರಿಜಿಸ್ಟರ್ ಅಥವಾ ಸಿವಿಲ್ ವಿವಾಹವಾಗಿ ಅಥವಾ

(iii) 24A ಪ್ರಕರಣವು ಅನ್ವಯವಾಗುವ ಸಂದರ್ಭಗಳಲ್ಲಿ ಅದರ ಅವಕಾಶಗಳಿಗೆ ಅನುಗುಣವಾಗಿ

### (೭)
### ಧಾರ್ಮಿಕ ವಿವಾಹದ ಸಾಮಾನ್ಯ ಅವಕಾಶಗಳು

೭. **ಊರ್ಜಿತವಾಗುವ ಧಾರ್ಮಿಕ ವಿವಾಹದ ಅಗತ್ಯ ಅಂಶಗಳು :** ಇಬ್ಬರು ಹಿಂದೂಗಳ ನಡುವೆ ಧಾರ್ಮಿಕ ರೂಪದಲ್ಲಿ ವಿಧ್ಯುಕ್ತವಾಗುವ ಒಂದು ವಿವಾಹವು ಈ ಕೆಳಗಿನ ಅಂಶಗಳನ್ನು ಪೂರೈಸಿದ್ದರೆ ಊರ್ಜಿತವಾದ ವಿವಾಹವಾಗುತ್ತದೆ.

(i) ಎರಡು ಪಕ್ಷಗಳಲ್ಲಿ ಯಾರಿಗೂ ಪತಿ ಅಥವಾ ಪತ್ನಿ, ವಿವಾಹದ ಸಮಯದಲ್ಲಿ ಜೀವಂತವಾಗಿರ ಬಾರದು.

(ii) ಇಬ್ಬರಲ್ಲಿ ಯಾರೊಬ್ಬರು ಮದುವೆಯ ಸಮಯದಲ್ಲಿ ಬುದ್ಧಿಭ್ರಮಣೆಗೊಳಗಾಗಿರಬಾರದು.

(iii) ವರನಿಗೆ ಹದಿನೆಂಟು ವರ್ಷವೂ ವಧುವಿಗೆ ಹದಿನೈದು ವರ್ಷವೂ ತುಂಬಿರಬೇಕು.

(iv) ಇಬ್ಬರೂ ನಿಷೇಧಿತ ಸಂಬಂಧ ವ್ಯಾಪ್ತಿಗೆ ಒಳಪಟ್ಟಿರಬಾರದು.

(v) ಪದ್ಧತಿ ಅಥವಾ ರೂಢಿಯು ಧಾರ್ಮಿಕ ವಿವಾಹ ಕ್ರಮವನ್ನು ಅನುಮತಿಸಿದ್ದ ಪಕ್ಷದಲ್ಲಿ, ಹಿಂದೂಗಳಲ್ಲಿ ನಡೆಯುವ ವಿವಾಹವು, ಈ ಭಾಗದ ಅವಕಾಶಗಳಿಗೆ ಅನುಗುಣವಾಗಿ ವಿವಾಹ ಸಂಸ್ಕಾರವೆಂದೋ ಸಿವಿಲ್ (ರಿಜಿಸ್ಟರ್) ವಿವಾಹವೆಂದೋ ವಿಧಿಯುಕ್ತವಾಗದೆ ಹೋದರೆ ಊರ್ಜಿತವೆಂದು ಪರಿಗಣಿಸಲಾಗುವುದಿಲ್ಲ. ಭಾಗ–೪ ಪ್ರಕರಣ–೧ ಪುಟ–೧೫

### (೬)
### ಸಂಸ್ಕಾರ ವಿವಾಹ

೭. **ವಿವಾಹ ಸಂಸ್ಕಾರಕ್ಕೆ ಸಂಬಂಧಿಸಿದ ನಿಯಮಗಳು :** ಯಾರೇ ಇಬ್ಬರು ಹಿಂದೂಗಳ ನಡುವೆ ನಡೆಯುವ ಒಂದು ವಿವಾಹವನ್ನು ಪವಿತ್ರ ಸಂಸ್ಕಾರದ ರೂಪದಲ್ಲಿ ವಿಧ್ಯುಕ್ತಗೊಳಿಸಬಹುದು. ಅದಕ್ಕೆ ಈ ಕೆಳಗಿನ ನಿಯಮಗಳನ್ನು ಪೂರೈಸಿರಬೇಕಾಗುತ್ತದೆ.

(೧) ಮದುವೆಯ ಸಮಯದಲ್ಲಿ ಪತಿಗಾಗಲಿ ಪತ್ನಿಗಾಗಲಿ ಬೇರೊಬ್ಬ ಪತಿಯಾಗಲಿ ಪತ್ನಿಯಾಗಲಿ ಜೀವಿಸಿರಬಾರದು.

(೨) ಇಬ್ಬರಲ್ಲಿ ಯಾರೊಬ್ಬರೂ ಮದುವೆಯ ಸಮಯದಲ್ಲಿ ಬುದ್ಧಿ ಭ್ರಮಣೆಗೊಳಗಾಗಿರಬಾರದು.

(೩) ಮದುವೆಯ ಸಮಯದಲ್ಲಿ ವರನಿಗೆ ಹದಿನೆಂಟು ವರ್ಷ ತುಂಬಿರಬೇಕು, ವಧುವಿಗೆ ಹದಿನಾಲ್ಕು ವರ್ಷ ತುಂಬಿರಬೇಕು.

(೪) ಎರಡೂ ಪಕ್ಷಗಳು ನಿಷೇಧಿತ ಸಂಬಂಧದ ವ್ಯಾಪ್ತಿಯಲ್ಲಿರ ಬಾರದು.

(೫) ಅವರು ಪರಸ್ಪರ **ಸಪಿಂಡ**

ಹೊರತು, ಅವರು **ಸಪಿಂಡ**ರಾಗಿರಬಾರದು.

(vi) ವಧುವಿಗೆ ಹದಿನಾರನೆಯ ವರ್ಷ ಮುಗಿದಿರದಿದ್ದರೆ, ಆಗ ವಿವಾಹದಲ್ಲಿ ಆಕೆಯ ಪಾಲಕರ ಅನುಮತಿಯನ್ನು ಪಡೆದಿರಬೇಕು.

ರಾಗಿರಬಾರದು, ಅವರ ಪದ್ಧತಿ ಅಥವಾ ರೂಢಿಯು ಅಂತಹ ಇಬ್ಬರ ನಡುವೆ ಸಂಸ್ಕಾರ ವಿವಾಹಕ್ಕೆ ಅನುಮತಿ ನೀಡಿದ್ದ ಹೊರತು. **ಭಾಗ–೪ ಪ್ರಕರಣ–೩ ಪುಟ–೧೫**

(೬) ವಧುವಿಗೆ ಹದಿನಾರನೆಯ ವರ್ಷ ಮುಗಿದಿಲ್ಲದ ಸಂದರ್ಭದಲ್ಲಿ ವಿವಾಹಕ್ಕೆ ಅವಳ ಪಾಲಕರ ಸಮ್ಮತಿಯನ್ನು ಪಡೆದಿರಬೇಕು.

(ಲ)

**ಲೌಕಿಕ ವಿವಾಹದ ಸಾಮಾನ್ಯಾವಕಾಶಗಳು**

ಲ. **ಊರ್ಜಿತವಾಗುವ ಒಂದು ಲೌಕಿಕ ವಿವಾಹಕ್ಕೆ ಅಗತ್ಯ ಅಂಶಗಳು:**

ಇಬ್ಬರು ಹಿಂದುಗಳ ನಡುವೆ ಲೌಕಿಕ ರೀತಿಯಲ್ಲಿ ವಿಧ್ಯುಕ್ತವಾಗುವ ವಿವಾಹವು ಈ ಕೆಳಗಿನ ನಿಯಮಗಳು ಪೂರೈಕೆಯಾಗಿದ್ದರೆ ಊರ್ಜಿತವಾಗುತ್ತದೆ.

(i) ವಿವಾಹದ ಸಮಯದಲ್ಲಿ ವಧು–ವರ ಇಬ್ಬರಲ್ಲಿ ಯಾರೊಬ್ಬರಿಗೂ ಪತಿ ಅಥವ ಪತ್ನಿ ಜೀವಂತವಾಗಿರಬಾರದು.

(ii) ವಿವಾಹದ ಸಮಯದಲ್ಲಿ ಯಾರೊಬ್ಬರೂ ಹುಚ್ಚ ಅಥವಾ ಬುದ್ಧಿಭ್ರಮಿತವಾಗಿರಬಾರದು.

(iii) ವರನು ಹದಿನೆಂಟು ವರ್ಷಗಳನ್ನು ವಧುವು ಹದಿನೈದು ವರ್ಷಗಳನ್ನೂ ಮುಗಿಸಿರಬೇಕು.

(iv) ಅವರು ನಿಷೇಧಿತ ಸಂಬಂಧಗಳ ವ್ಯಾಪ್ತಿಗೆ ಒಳಪಟ್ಟಿರಬಾರದು.

(v) ಅವನಾಗಲಿ ಅವಳಾಗಲಿ ಇಪ್ಪತ್ತೊಂದು ವರ್ಷ ವಯಸ್ಸನ್ನು ದಾಟಿರದಿದ್ದ ಪಕ್ಷದಲ್ಲಿ, ವಿವಾಹಕ್ಕಾಗಿ ಪಾಲಕರ ಸಮ್ಮತಿಯನ್ನು ಪಡೆದಿರಬೇಕು.

(೭)

**೧೦. ಲೌಕಿಕ ವಿವಾಹಕ್ಕೆ ಸಂಬಂಧಿಸಿದ ನಿಯಮಗಳು**

: ಇಬ್ಬರು ಹಿಂದುಗಳ ನಡುವೆ ಕಾಯಿದೆ ಪ್ರಕಾರ ನಡೆಯುವ ಲೌಕಿಕ ವಿವಾಹಕ್ಕೆ ಈ ಕೆಳಗಿನ ನಿಯಮಗಳನ್ನು ಪೂರೈಸಿರಬೇಕಾಗುತ್ತದೆ. **ಭಾಗ–೪ ಪ್ರಕರಣ–೭ ಪುಟ–೧೬**

(೧) ಮದುವೆಯ ಸಮಯದಲ್ಲಿ ವಧು–ವರ ಇಬ್ಬರಲ್ಲಿ ಯಾರೊಬ್ಬರಿಗೂ ಬೇರೊಬ್ಬ ಪತಿ ಅಥವಾ ಪತ್ನಿ ಇರಬಾರದು.

(೨) ಯಾರೊಬ್ಬರೂ ಮದುವೆಯ ಸಮಯದಲ್ಲಿ ಹುಚ್ಚ ಅಥವಾ ಬುದ್ಧಿ ಭ್ರಮಿತರಾಗಿರಬಾರದು.

(೩) ವರನಿಗೆ ಹದಿನೆಂಟು ವರ್ಷವೂ ವಧುವಿಗೆ ಹದಿನಾಲ್ಕು ವರ್ಷವೂ ತುಂಬಿರಬೇಕು.

(೪) ಅವರು ನಿಷೇಧಿತ ಸಂಬಂಧಗಳ ವ್ಯಾಪ್ತಿಗೆ ಒಳಪಟ್ಟಿರಬಾರದು.

(೫) ಅವನಾಗಲಿ ಅವಳಾಗಲಿ ಇಪ್ಪತ್ತೊಂದು ವರ್ಷಗಳನ್ನು ಪೂರೈಸಿರದಿದ್ದರೆ, ಅವನ/ಅವಳ ಪಾಲಕರ ಅನುಮತಿಯನ್ನು, ವಿವಾಹಕ್ಕಾಗಿ ಪಡೆದಿರಬೇಕು.

ವಧುವು ವಿಧವೆಯಾಗಿದ್ದರೆ, ಅಂತಹ ಸಮ್ಮತಿಯ ಅಗತ್ಯವಿರುವುದಿಲ್ಲ.

(೯)

**ಧಾರ್ಮಿಕ ವಿವಾಹದ ವಿಧಿತ ಆಚರಣೆಗಳು**

೯. **ಸಮಾರಂಭಗಳು :**

(೧) ಎರಡೂ ಪಕ್ಷಗಳು ಸಾಂಪ್ರದಾಯಿಕ ಆಚರಣೆಗಳನ್ನು ನಡೆಸಿ ವಿಧ್ಯುಕ್ತಗೊಳಿಸದೆ ಹೋದರೆ, ಧಾರ್ಮಿಕ ವಿವಾಹವು ಸಂಪೂರ್ಣವಾಗುವುದಿಲ್ಲ ಮತ್ತು ಎರಡೂ ಪಕ್ಷಗಳು ಅದಕ್ಕೆ ಬದ್ಧವಾಗಿರುವುದಿಲ್ಲ.

(೨) ಅಂತಹ ಸಾಂಪ್ರದಾಯಿಕ ಆಚರಣೆಗಳು ಸಪ್ತಪದಿಯನ್ನು (ಅಂದರೆ ಪವಿತ್ರಾಗ್ನಿಯ ಸಮ್ಮುಖದಲ್ಲಿ ವರನೂ ವಧೂವೂ ಒಟ್ಟಾಗಿ ಏಳು ಹೆಜ್ಜೆಗಳನ್ನು ನಡೆಯುವುದು) ಒಳಗೊಂಡಿದ್ದರೆ ಆ ಮದುವೆಯು ಸಂಪೂರ್ಣವಾಗುತ್ತದೆ. ಏಳನೆಯ ಹೆಜ್ಜೆಯನ್ನಿಡುವುದರ ಮೂಲಕ ಬಂಧಕವಾಗುತ್ತದೆ.

(೩) ಈ ಪ್ರಕರಣದಲ್ಲಿ ನಿರೂಪಿಸಿರುವ ಅಂಶಗಳು ಏನೇ ಇದ್ದರೂ, ಧಾರ್ಮಿಕ ರೂಪದಲ್ಲಿ ವಿಧ್ಯುಕ್ತಗೊಂಡ ಒಂದು ವಿವಾಹವು ಯಾವುದೇ ಪಕ್ಷವು ಯಾವುದೇ ಸಾಂಪ್ರದಾಯಿಕ ಆಚರಣೆಗಳನ್ನು ನಡೆಸುವುದರಲ್ಲಿ ಕ್ರಮ ತಪ್ಪಿದೆಯೆಂಬಷ್ಟೇ ಕಾರಣದಿಂದ ಅನೂರ್ಜಿತವಾಗುವುದಿಲ್ಲ.

ವಿಧವೆಯ ವಿಷಯದಲ್ಲಿ ಅಂತಹ ಸಮ್ಮತಿಯು ಅಗತ್ಯವಾಗಿರುವುದಿಲ್ಲ.

೮

೧. **ಅಗತ್ಯವಾದ ಸಾಂಪ್ರದಾಯಿಕ ಆಚರಣೆಗಳು**

(೧) ಅಂತರ ವಿವಾಹಕ್ಕೆ ಅತ್ಯಗತ್ಯವಾಗಿರುವ, ಎರಡೂ ಪಕ್ಷಗಳು ಆಚರಿಸಬೇಕಾದ ಸಾಂಪ್ರದಾಯಿಕ ಆಚರಣೆಗಳನ್ನು ನಡೆಸಿ ವಿಧ್ಯುಕ್ತಗೊಳಿಸಿದೆ ಹೋದರೆ ಒಂದು ಧಾರ್ಮಿಕ ವಿವಾಹವು ಸಂಪೂರ್ಣವಾಗುವುದಿಲ್ಲ ಮತ್ತು ಪಕ್ಷಗಳು ಅದಕ್ಕೆ ಬದ್ಧರಾಗುವುದಿಲ್ಲ. ಭಾಗ–೪ ಪ್ರಕರಣ–೪ ಪುಟ–೧೫

(೨) ಅಂತಹ ಆಚರಣೆಗಳಲ್ಲಿ ಸಪ್ತಪದಿ (ಪವಿತ್ರಾಗ್ನಿಯ ಮುಂದೆ ವರನೂ ವಧುವೂ ಒಟ್ಟಾಗಿ ಏಳು ಹೆಜ್ಜೆಗಳನ್ನು ನಡೆಯುವುದು) ಸೇರಿದ್ದರೆ ಆ ಮದುವೆಯು ಸಂಪೂರ್ಣ ವಾಗುತ್ತದೆ. ಏಳನೆಯ ಹೆಜ್ಜೆಯನ್ನು ಇಡುವುದರಿಂದ ಅದು ಬಂಧಕವಾಗುತ್ತದೆ.

(೩) ಈ ಪ್ರಕರಣದಲ್ಲಿ ಏನೇ ಹೇಳಿದ್ದರೂ, ಧಾರ್ಮಿಕ ವಿವಾಹ ರೂಪದಲ್ಲಿ ವಿಧ್ಯುಕ್ತಗೊಂಡ ವಿವಾಹವು, ಯಾವುದೇ ಸಾಂಪ್ರದಾಯಿಕ ಆಚರಣೆಗಳನ್ನು ಯಾವುದೇ ಪಕ್ಷವು ನಡೆಸಲಿಲ್ಲವೆಂಬ ಮಾತ್ರದಿಂದ, ಅದು ಕ್ರಮರಾಹಿತ್ಯವೆಂದು ಹೇಳಿ ಅನೂರ್ಜಿತವೆಂದು ಪರಿಗಣಿಸಲು ಸಾಧ್ಯವಿಲ್ಲ.

(೧೦)

**೧೦. ಧಾರ್ಮಿಕ ವಿವಾಹದ ನೋಂದಣಿ:**

(೧) ಯಾವುದೇ ಧಾರ್ಮಿಕ ವಿವಾಹದ ಸಾಕ್ಷ್ಯಧಾರವನ್ನು ಒದಗಿಸುವ ಉದ್ದೇಶದಿಂದ, ರಾಜ್ಯ ಸರಕಾರವು ಕಾನೂನಿನ ಪ್ರಕಾರ ಈ ಅವಕಾಶಗಳನ್ನು ಕಲ್ಪಿಸಬಹುದು:

(ಅ) ಅಂತಹ ಮದುವೆಗಳ ಸಂಬಂಧ ವಾದ ವಿವರಗಳನ್ನು, ಅದೇ ಉದ್ದೇಶಕ್ಕಾಗಿ ಇರಿಸಿರುವ ಧಾರ್ಮಿಕ ವಿವಾಹ ರಿಜಿಸ್ಟರಿನಲ್ಲಿ ನಮೂದಿಸಲಾಗುತ್ತದೆ, ಮತ್ತು

(ಆ) ರಾಜ್ಯದಲ್ಲಿ ಅಥವಾ ಅಂತಹ ಪ್ರದೇಶಗಳಲ್ಲಿ, ಕಾನೂನುಗಳು ನಿರ್ದಿಷ್ಟಪಡಿಸುವ ಸಂದರ್ಭಗಳಲ್ಲಿ ಹಾಗೆ ನಮೂದಿಸುವುದು ಕಡ್ಡಾಯವಾಗಿರುತ್ತದೆ.

(೨) (೧)ನೆಯ ಉಪವಿಭಾಗದಲ್ಲಿ ಹೇಳಿದಂತೆ ಕಾನೂನು ಮಾಡುವಾಗ ರಾಜ್ಯಸರಕಾರವು, ಅದನ್ನು ಉಲ್ಲಂಘಿಸುವವರನ್ನು ಒಂದು ನೂರು ರೂಪಾಯಿವರೆಗೆ ದಂಡ ವಿಧಿಸುವ ಶಿಕ್ಷೆಗೊಳಪಡಿಸಬಹುದು.

(೯)

**(೯) ಧಾರ್ಮಿಕ ವಿವಾಹಗಳ ನೋಂದಣಿ:**

(೧) ಯಾವುದೇ ಧಾರ್ಮಿಕ ವಿವಾಹಕ್ಕೆ ಸಾಕ್ಷ್ಯಾಧಾರವನ್ನು ಒದಗಿಸುವ ಉದ್ದೇಶದಿಂದ, ಪ್ರಾಂತ ಸರಕಾರವು ಕಾನೂನು ಮಾಡಬಹುದು:– ಭಾಗ–೪ ಪ್ರಕರಣ–೬ ಪುಟ–೧೫

(ಅ) ಅಂತಹ ವಿವಾಹಗಳಿಗೆ ಸಂಬಂಧಿ ಸಿದ ವಿವರಗಳನ್ನು ಅದಕ್ಕಾಗಿ ಇರಿಸಿರುವ ಹಿಂದೂ ಧಾರ್ಮಿಕ ವಿವಾಹ ರಿಜಿಸ್ಟರಿನಲ್ಲಿ ನಮೂದಿಸಬಹುದು. ಯಾವ ವಿಧಾನವು ಸರಿಯೆಂದು ತೋರುತ್ತದೋ ಯಾವ ಪರಿಸ್ಥಿತಿಯು ಸೂಕ್ತವೆಂದು ತೋರುತ್ತದೋ ಆ ವಿಧಾನದಲ್ಲಿ ಆ ಪರಿಸ್ಥಿತಿಯಲ್ಲಿ ನಮೂದಿಸಬೇಕು.

(ಆ) ಹಾಗೆ ವಿವರಗಳನ್ನು ನಮೂದಿ ಸುವುದು ಕಡ್ಡಾಯವಾಗಿರುತ್ತದೆ. ನಿಯಮಗಳು ನಿರ್ದಿಷ್ಟಪಡಿಸುವ ಸಂದರ್ಭಗಳಲ್ಲಿ ಮತ್ತು ಪ್ರದೇಶಗಳಲ್ಲಿ ಅದು ಕಡ್ಡಾಯ.

(೨) (೧)ನೆಯ ಉಪವಿಭಾಗದಲ್ಲಿ ಯಾವುದೇ ಕಾನೂನು ಮಾಡುವಾಗ, ಅದನ್ನು ಉಲ್ಲಂಘಿಸಿ ದರೆ, ಒಂದು ನೂರು ರೂಪಾಯಿಗಳವರೆಗೆ ದಂಡ ವಿಧಿಸುವ ಶಿಕ್ಷೆ ವಿಧಿಸಬಹುದು.

(೧೧)

**ಲೌಕಿಕ ವಿಚಾರದ ವಿಹಿತಾಚರಣೆಗಳು**

**೧೧. ವಿವಾಹ ರಿಜಿಸ್ಟ್ರಾರರು :–** ರಾಜ್ಯ ಸರಕಾರವು ಹಿಂದೂ ವಿವಾಹಗಳ ನೋಂದಣಿ ಅಧಿಕಾರಿಗಳಾಗಿ ಕೆಲಸ ಮಾಡಲು

(೧೦)

**೧೧. ವಿವಾಹ ರಿಜಿಸ್ಟ್ರಾರರು :–**

ಪ್ರಾಂತೀಯ ಸರಕಾರವು ಒಬ್ಬರನ್ನೋ ಹೆಚ್ಚು ಜನರನ್ನೋ ಹಿಂದೂ ವಿವಾಹಗಳ ನೋಂದಣಿ ಅಧಿಕಾರಿಗಳಾಗಿ ನೇಮಕ

ರಿಜಿಸ್ಟ್ರಾರ್‌ರನ್ನು ನೇಮಿಸ ಬಹುದು. ಈ ಭಾಗದಲ್ಲಿ ಇವರನ್ನು "ರಿಜಿಸ್ಟ್ರಾರ್" ಎಂದು ಉಲ್ಲೇಖಿಸಲಾಗಿದೆ. ಹಾಗೆ ನೇಮಿತವಾದ ರಿಜಿಸ್ಟ್ರಾರನಿಗೆ ಸೇರಿದ ರಾಜ್ಯ ಅಥವಾ ಅದರ ಯಾವುದೇ ಭಾಗವನ್ನು ಆ ಪ್ರದೇಶವನ್ನು ಅವನ ಜಿಲ್ಲೆ ಎಂದು ಕರೆಯಲಾಗುತ್ತದೆ.

(೧೨)

**೧೨. ರಿಜಿಸ್ಟ್ರಾರರಿಗೆ ವಿವಾಹದ ನೋಟೀಸು:-**

ಈ ವಿಭಾಗದ ಪ್ರಕಾರ ಒಂದು ಲೌಕಿಕ ವಿವಾಹವನ್ನು ವಿಧ್ಯುಕ್ತಗೊಳಿಸುವ ಉದ್ದೇಶವಿದ್ದರೆ, ವಿವಾಹದ ಎರಡೂ ಪಕ್ಷಗಳು ಬರಹದಲ್ಲಿ, ನಾಲ್ಕನೆಯ ಷೆಡ್ಯೂಲಿನಲ್ಲಿ ನಿರ್ದಿಷ್ಟಪಡಿಸಿರುವ ನಮೂನೆಯಲ್ಲಿ ಆ ಜಿಲ್ಲೆಯ ರಿಜಿಸ್ಟ್ರಾರರಿಗೆ ತಿಳಿಸಬೇಕು. ಆ ಜಿಲ್ಲೆಯಲ್ಲಿ ಇಬ್ಬರಲ್ಲಿ ಯಾರಾದರೂ ಒಬ್ಬರು, ಆ ತಿಳುವಳಿಕೆ ಕೊಟ್ಟ ದಿನಕ್ಕಿಂತ ಕೊನೆಯ ಪಕ್ಷ ಮೂವತ್ತುದಿನ ಹಿಂದಿನಿಂದ ವಾಸ ಮಾಡುತ್ತಿರಬೇಕು.

(೧೩)

**೧೩. ವಿವಾಹ ತಿಳುವಳಿಕೆಯ ಪುಸ್ತಕ ಮತ್ತು ಪ್ರಕಟಣೆ :-**

(೧) ರಿಜಿಸ್ಟ್ರಾರರು ೧೨ನೆಯ ಪ್ರಕರಣದ ಅನ್ವಯ ಬಂದ ಎಲ್ಲಾ ನೋಟೀಸುಗಳನ್ನೂ ತನ್ನ ಕಚೇರಿಯ ದಾಖಲೆಗಳೊಂದಿಗೆ ಇರಿಸುತ್ತಾರೆ. ಮತ್ತು ಒಡನೆಯೇ ಅಂತಹ ಪ್ರತಿಯೊಂದು ನೋಟೀಸಿನ ನಿಜ ನಕಲನ್ನು ರಾಜ್ಯ ಸರಕಾರವು ಆ ಉದ್ದೇಶಕ್ಕಾಗಿ ಒದಗಿಸಿರುವ "ಹಿಂದೂ ಲೌಕಿಕ ವಿವಾಹ ನೋಟೀಸು ಪುಸ್ತಕ"

ಮಾಡಬಹುದು- ಹಾಗೆ ನೇಮಿತರಾದವರನ್ನು ಈ ಭಾಗದಲ್ಲಿ "ರಿಜಿಸ್ಟ್ರಾರ್" ಎಂದು ಉಲ್ಲೇಖಿಸಲಾಗುತ್ತದೆ. ಆ ಪ್ರಾಂತ ಅಥವಾ ಅದರ ಭಾಗವನ್ನು, ರಿಜಿಸ್ಟ್ರಾರರನ್ನು ನೇಮಿಸಿರುವ ಪ್ರದೇಶವನ್ನು ಅವರ ಜಿಲ್ಲೆ ಎಂದು ಕರೆಯಲಾಗುತ್ತದೆ. **ಭಾಗ-೪ ಪ್ರಕರಣ-೮ ಪುಟ-೧೬**

(೧೧)

**೧೨. ರಿಜಿಸ್ಟ್ರಾರರಿಗೆ ವಿವಾಹದ ನೋಟೀಸು :-** ಈ ಭಾಗದ ಪ್ರಕಾರ ಒಂದು ಲೌಕಿಕ ವಿವಾಹವನ್ನು ವಿಧ್ಯುಕ್ತಗೊಳಿಸಬೇಕಾದ ಪಕ್ಷದಲ್ಲಿ, ಎರಡೂ ಪಕ್ಷಗಳು ಮೂರನೆಯ ಷೆಡ್ಯೂಲಿನಲ್ಲಿ ನಿರ್ದಿಷ್ಟಪಡಿಸಿರುವ ನಮೂನೆಯಂತೆ ಬರವಣಿಗೆಯಲ್ಲಿ ರಿಜಿಸ್ಟ್ರಾರರಿಗೆ ನೋಟೀಸು ಕೊಡಬೇಕು. ಇಬ್ಬರಲ್ಲಿ ಕೊನೆಯ ಪಕ್ಷ ಒಬ್ಬರು ಆ ಜಿಲ್ಲೆಯಲ್ಲಿ, ನೋಟೀಸು ಕೊಡುವ ದಿನಕ್ಕಿಂತ ಮೂವತ್ತು ದಿನಗಳ ಹಿಂದಿನಿಂದ ವಾಸಮಾಡುತ್ತಿರಬೇಕು. **ಭಾಗ-೪ ಪ್ರಕರಣ-೯ ಪುಟ-೧೬**

(೧೨)

**ವಿವಾಹ ನೋಟೀಸು ಪುಸ್ತಕ ಮತ್ತು ಪ್ರಕಟಣೆ:-**

೧೨ನೆಯ ಪ್ರಕರಣದನ್ವಯ ತನಗೆ ಬಂದ ಎಲ್ಲಾ ವಿವಾಹನೋಟೀಸುಗಳನ್ನು ತಮ್ಮ ಕಚೇರಿಯ ದಾಖಲೆಗಳೊಂದಿಗೆ ಇಡುತ್ತಾರೆ. ಅಂತಹ ಪ್ರತಿಯೊಂದು ನೋಟೀಸಿನ ನಿಜ ನಕಲಿನಲ್ಲಿ ಪ್ರಾಂತೀಯ ಸರಕಾರವು "ಹಿಂದೂ ಸಿವಿಲ್ ಮ್ಯಾರೇಜ್ ನೋಟೀಸ್ ಬುಕ್" **ಭಾಗ-೪ ಪ್ರಕರಣ-೧೦ ಪುಟ-೧೬**

ಎಂದು ಕರೆಯುವ ಒಂದು ಪುಸ್ತಕದಲ್ಲಿ ಬರೆದಿರುತ್ತಾರೆ. ಆ ಪುಸ್ತಕವನ್ನು ಯಾರು ಬೇಕಾದರೂ, ವಿಹಿತವಾದ ಸಮಯದಲ್ಲಿ ಯಾವುದೇ ಶುಲ್ಕವಿಲ್ಲದೆ ನೋಡಿಕೊಳ್ಳಬಹುದು.

(೨) ಅಂತಹ ಪ್ರತಿಯೊಂದು ನೋಟೀಸನ್ನು ವಿಧಿಸಲಾದ ಕ್ರಮದಲ್ಲಿ ರಿಜಿಸ್ಟ್ರಾರರು ಪ್ರಕಟಿಸಬಹುದು.

(೧೪)

**೧೪. ವಿವಾಹಕ್ಕೆ ಆಕ್ಷೇಪಣೆ :–**

(೧) ಉದ್ದೇಶಿತ ವಿವಾಹದ ಬಗೆಗೆ ೧೨ನೆಯ ಪ್ರಕರಣದಂತೆ ನೋಟೀಸು ಕೊಟ್ಟ ಮೂವತ್ತು ದಿನಗಳು ಮುಗಿದ ನಂತರ ಉಪವಾಕ್ಯ (೨)ರಂತೆ ಆಕ್ಷೇಪಣೆ ಬರದಿದ್ದ ಪಕ್ಷದಲ್ಲಿ ಅದನ್ನು ವಿಧ್ಯುಕ್ತಗೊಳಿಸಬಹುದು.

(೨) ಒಂದು ಉದ್ದೇಶಿತ ವಿವಾಹದ ಬಗೆಗೆ ನೋಟೀಸು ಕೊಟ್ಟು ಮೂವತ್ತು ದಿನಗಳು ಮುಗಿ ಯುವುದರೊಳಗಾಗಿ, ಲನೆಯ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಒಂದೋ ಹಲವೋ ಷರತ್ತುಗಳನ್ನು ಉಲ್ಲಂಘಿಸಲಾಗಿದೆಯೆಂಬ ಆಧಾರದ ಮೇಲೆ ಆ ವಿವಾಹಕ್ಕೆ ಆಕ್ಷೇಪಣೆಯನ್ನು ತಿಳಿಸಬಹುದು.

(೩) ಆಕ್ಷೇಪಣೆಯ ಸ್ವರೂಪವನ್ನು ರಿಜಿಸ್ಟ್ರಾರರು ಹಿಂದೂ ಮ್ಯಾರೇಜ್ ನೋಟೀಸ್ ಬುಕ್‌ನಲ್ಲಿ. ಬರವಣಿಗೆಯಲ್ಲಿ ದಾಖಲು ಮಾಡಬೇಕು. ಮತ್ತು ಅಗತ್ಯವಾದರೆ, ಆಕ್ಷೇಪಿಸುತ್ತಿರುವ ವ್ಯಕ್ತಿಗೆ ಅದನ್ನು ಓದಿ

ಎಂದು ಕರೆಯುವ ಅದೇ ಉದ್ದೇಶಕ್ಕಾಗಿ ಒದಗಿಸಿರುವ ಒಂದು ಪುಸ್ತಕದಲ್ಲಿ ಬರೆದಿರುತ್ತಾರೆ. ಆ ಪುಸ್ತಕವನ್ನು ವಿಹಿತವಾದ ಎಲ್ಲಾ ಸಮಯಗಳಲ್ಲಿ, ಯಾವ ವ್ಯಕ್ತಿ ಬೇಕಾದರೂ, ಯಾವ ಶುಲ್ಕವನ್ನೂ ಕೊಡದೆ ಪರೀಕ್ಷಿಸಬಹುದಾಗಿರುತ್ತದೆ.

(೨) ಅಂತಹ ಪ್ರತಿಯೊಂದು ನೋಟೀಸನ್ನು ವಿಧಿಸಲಾಗಿರುವ ಕ್ರಮದಲ್ಲಿ ರಿಜಿಸ್ಟ್ರಾರರು ಪ್ರಕಟಿಸುತ್ತಾರೆ.

(೧೩)

**೧೪. ವಿವಾಹಕ್ಕೆ ಆಕ್ಷೇಪಣೆ**

(೧) ೧೨ನೆಯ ಪ್ರಕರಣದಂತೆ ಉದ್ದೇಶಿತ ವಿವಾಹವನ್ನು ಕುರಿತ ನೋಟೀಸನ್ನು ಕೊಟ್ಟ ತಾರೀಖಿ ನಿಂದ ಮೂವತ್ತು ದಿನಗಳು ಮುಗಿದ ನಂತರ, ಯಾರೂ (೨)ನೇ ಉಪವಾಕ್ಯದಲ್ಲಿ ಆಕ್ಷೇಪಣೆ ವ್ಯಕ್ತಪಡಿಸದೆ ಹೋದ ಪಕ್ಷದಲ್ಲಿ ಆ ವಿವಾಹವನ್ನು ವಿಧ್ಯುಕ್ತಗೊಳಿಸಬಹುದು.

**ಭಾಗ–೪**
**ಪ್ರಕರಣ–೧೧**
**ಪುಟ–೧೬**

(೨) ಯಾವ ವ್ಯಕ್ತಿ ಬೇಕಾದರೂ, ಉದ್ದೇಶಿತ ವಿವಾಹವೊಂದನ್ನು ಕುರಿತ ನೋಟೀಸನ್ನು ಕೊಟ್ಟಂದಿನಿಂದ ಮೂವತ್ತು ದಿನಗಳು ಮುಗಿಯುವುದರೊಳ ಗಾಗಿ, ಅದು ೧೦ನೇ ಪ್ರಕರಣದ (೧), (೨), (೩), (೪) ಮತ್ತು (೫)ನೆಯ ಉಪವಾಕ್ಯಗಳಲ್ಲಿ ವಿಧಿಸಲಾಗಿರುವ ಒಂದೋ ಹಲವೋ ನಿಯಮಗಳನ್ನು ಅತಿಕ್ರಮಿಸಲಾಗಿದೆ ಎಂಬ ಆಧಾರದ ಮೇಲೆ ಆಕ್ಷೇಪಣೆಯನ್ನು ವ್ಯಕ್ತಪಡಿಸ ಬಹುದು.

ವಿವರಿಸಬೇಕು. ಅದಕ್ಕೆ ಆ ವ್ಯಕ್ತಿಯು ಅಥವಾ ಅವನ ಪರವಾಗಿ ಬೇರೊಬ್ಬರು ಸಹಿ ಮಾಡಬೇಕು.

(೩) ಆಕ್ಷೇಪಣೆಯ ಕಲಾಪವನ್ನು ಹಿಂದೂ ಸಿವಿಲ್ ಮ್ಯಾರೇಜ್ ನೋಟೀಸ್ ಬುಕ್‌ನಲ್ಲಿ, ಬರಹದಲ್ಲಿ ದಾಖಲುಮಾಡತಕ್ಕದ್ದು. ಅದನ್ನು ಅಗತ್ಯವಾದರೆ, ಆಕ್ಷೇಪಿಸುತ್ತಿರುವ ವ್ಯಕ್ತಿಗೆ ಓದಿಹೇಳಿ, ವಿವರಿಸಿ, ಅದಕ್ಕೆ ಅವನಿಂದ ಅಥವಾ ಅವನ ಪರವಾಗಿ ಬೇರೊಬ್ಬರಿಂದ ಸಹಿಯನ್ನು ಪಡೆಯತಕ್ಕದ್ದು.

(೧೫)

**೧೫. ಆಕ್ಷೇಪಣೆಯನ್ನು ಪಡೆದ ಮೇಲಿನ ಕ್ರಮ:–**

(೧) ಉದ್ದೇಶಿತ ವಿವಾಹವೊಂದನ್ನು ಕುರಿತು ೧೪ನೆಯ ಪ್ರಕರಣದಂತೆ ಅಕ್ಷೇಪಣೆಮಾಡಿದ ಪಕ್ಷದಲ್ಲಿ, ಆ ಅಕ್ಷೇಪಣೆ ಬಂದಂದಿನಿಂದ ಮೂವತ್ತು ದಿನಗಳವರೆಗೆ ವಿವಾಹವನ್ನು ವಿಧ್ಯುಕ್ತಗೊಳಿಸಲು ರಿಜಿಸ್ಟ್ರಾರನು ಆಸ್ಪದ ಕೊಡುವುದಿಲ್ಲ. ಸಮುಚಿತ ನ್ಯಾಯಾಧಿಕಾರ ವ್ಯಾಪ್ತಿಯಿರುವ ಒಂದು ನ್ಯಾಯಾಲಯವು ಆಗ ತೆರೆದಿದ್ದರೆ, ಅಥವಾ ಆ ಸಮಯದಲ್ಲಿ ನ್ಯಾಯಾಲಯವು ತೆರೆದಿರದಿದ್ದಾಗ, ತೆರೆದಮೇಲೆ ಮೂವತ್ತು ದಿನಗಳು ಕಳೆಯುವವರೆಗೆ ವಿವಾಹವನ್ನು ವಿಧ್ಯುಕ್ತಗೊಳಿಸಲಾಗುವುದಿಲ್ಲ.

(೨) ಉದ್ದೇಶಿತ ವಿವಾಹವನ್ನು ಆಕ್ಷೇಪಿಸುವ ವ್ಯಕ್ತಿಯು ಸ್ಥಳೀಯ ನ್ಯಾಯಾಧಿಕಾರ ವ್ಯಾಪ್ತಿಯುಳ್ಳ ಜಿಲ್ಲಾ ನ್ಯಾಯಾಲಯದಲ್ಲಿ ಒಂದು ಮೊಕದ್ದಮೆಯನ್ನು ಹೂಡಬಹುದು. ಆ ಮದುವೆಯು **೮ನೆಯ ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿರುವ** ಒಂದೋ ಹಲವೋ ನಿಯಮಗಳನ್ನು

(೧೪)

**೧೫. ಆಕ್ಷೇಪಣೆಯನ್ನು ಪಡೆದ ಮೇಲಿನ ಕ್ರಮ:–**

**ಭಾಗ–೪ ಪ್ರಕರಣ–೧೨ ಪುಟ–೧೬**

(೧) ಉದ್ದೇಶಿತ ವಿವಾಹವೊಂದನ್ನು ಕುರಿತು ೧೪ನೇ ಪ್ರಕರಣದನ್ವಯ ಒಂದು ಆಕ್ಷೇಪಣೆ ಬಂದಾಗ, ಆ ಆಕ್ಷೇಪಣೆಯು ಬಂದ ಮೂವತ್ತು ದಿನಗಳು ಮುಗಿಯುವವರೆಗೆ ವಿವಾಹವನ್ನು ವಿಧ್ಯುಕ್ತಗೊಳಿಸಲು ರಿಜಿಸ್ಟ್ರಾರನು ಅವಕಾಶ ಕೊಡುವುದಿಲ್ಲ. ಸಮುಚಿತ ನ್ಯಾಯಾಧಿಕಾರ ವ್ಯಾಪ್ತಿಯುಳ್ಳ ಒಂದು ನ್ಯಾಯಾಲಯವು ಆ ಸಮಯದಲ್ಲಿ ತೆರೆದಿದ್ದರೆ, ಅಥವಾ ಅಂಥದೊಂದು ನ್ಯಾಯಾಲಯವು ತೆರೆದಿರದಿದ್ದರೂ, ಅಂತಹ ನ್ಯಾಯಾಲಯವು ತೆರೆದ ಮೂವತ್ತು ದಿನಗಳವರೆಗೆ ವಿವಾಹವನ್ನು ವಿಧ್ಯುಕ್ತಗೊಳಿಸುವುದಿಲ್ಲ.

(೨) ಉದ್ದೇಶಿತ ವಿವಾಹವನ್ನು ಆಕ್ಷೇಪಿಸುತ್ತಿರುವ ವ್ಯಕ್ತಿಯು ಸ್ಥಳೀಯ ನ್ಯಾಯವ್ಯಾಪ್ತಿಯುಳ್ಳ ಜಿಲ್ಲಾ ನ್ಯಾಯಲಯದಲ್ಲಿ (ಅಥವಾ ಪ್ರಾಂತ ಸರಕಾರವು ಅಧಿಕಾರ ಕೊಟ್ಟು ಅಂತಹ

ಅತಿಕ್ರಮಿಸಿದೆ ಎಂಬ ಹೇಳಿಕೆಗೆ, ಮೊಕದ್ದಮೆಯನ್ನು ಹೂಡಿರುವ ನ್ಯಾಯಾಲಯವು ಆ ವ್ಯಕ್ತಿಗೆ, ಅಂಥದೊಂದು ಮೊಕದ್ದಮೆ ಹೂಡಲಾಗಿದೆ ಎಂಬರ್ಥದ ಒಂದು ಪ್ರಮಾಣಪತ್ರವನ್ನು ಕೊಡುತ್ತದೆ.

(೩) (೨)ನೆಯ ಉಪಪ್ರಕರಣದಲ್ಲಿ ಹೇಳಿರುವ ಪ್ರಮಾಣಪತ್ರವನ್ನು, ರಿಜಿಸ್ಟ್ರಾರರಿಗೆ ಆಕ್ಷೇಪಣೆಯು ಬಂದ ಮೂವತ್ತು ದಿನಗಳೊಳಗಾಗಿ ತಲುಪಿಸದೆ ಹೋದರೆ, ಸಮುಚಿತ ನ್ಯಾಯಾಧಿಕಾರ ವ್ಯಾಪ್ತಿಯುಳ್ಳ ಒಂದು ನ್ಯಾಯಾಲಯವು ಆಗ ತೆರೆದಿರದಿದ್ದರೆ, ತೆರೆದ ಮೂವತ್ತು ದಿನಗಳೊಳಗಾಗಿ, ನ್ಯಾಯಾಲಯವು ತೀರ್ಪು ನೀಡುವವರೆಗೂ ವಿವಾಹವನ್ನು ವಿಧ್ಯುಕ್ತಗೊಳಿಸಲಾಗುವುದಿಲ್ಲ. ಆ ತೀರ್ಪಿನ ಮೇಲೆ ಮೇಲ್ಮನವಿ ಸಲ್ಲಿಸಿದ್ದರೆ, ಮೇಲ್ಮನವಿ ನ್ಯಾಯಾಲಯದ ತೀರ್ಪು ಬರುವವರೆಗೆ ವಿವಾಹವು ವಿಧ್ಯುಕ್ತವಾಗುವುದಿಲ್ಲ.

(a) ಅಂಥದೊಂದು ಪ್ರಮಾಣ ಪತ್ರವನ್ನು (೩)ನೆಯ ಉಪ–ಪ್ರಕರಣದಲ್ಲಿ ನಿಗದಿಪಡಿಸಿರುವ ರೀತಿಯಲ್ಲಿ ಮತ್ತು ಕಾಲಾವಧಿಯಲ್ಲಿ ಸಲ್ಲಿಸದೆ ಹೋದ ಪಕ್ಷದಲ್ಲಿ, ಅಥವಾ ಆ ವಿವಾಹವು ೮ನೆಯ ಉಪಪ್ರಕರಣದಲ್ಲಿ ನಿಗದಿ ಪಡಿಸಿರುವ ನಿಯಮಗಳನ್ನು ಅತಿಕ್ರಮಿಸುವುದಿಲ್ಲ ಎಂಬುದಾಗಿ ನ್ಯಾಯಾಧಿಕಾರ ವ್ಯಾಪ್ತಿಯನ್ನು ಪಡೆದಿರುವ ಯಾವುದೇ ನ್ಯಾಯಾಲಯದಲ್ಲಿ)* ಒಂದು ಮೊಕದ್ದಮೆಯನ್ನು ಹೂಡ ಬಹುದು. ಅಂತಹ ಮದುವೆಯು ೧೦ನೆಯ ಪ್ರಕರಣದ (೧), (೨), (೩), (೪) ಮತ್ತು (೫) ನೆಯ ಉಪವಾಕ್ಯಗಳಲ್ಲಿ ವಿಧಿಸಿರುವ ಒಂದೋ ಹಲವೋ ನಿಯಮಗಳನ್ನು ಅತಿಕ್ರಮಿಸುತ್ತದೆ ಎಂಬ ಹೇಳಿಕೆಗೆ, ಮೊಕದ್ದಮೆಯನ್ನು ಹೂಡಿರುವ ನ್ಯಾಯಾಲಯವು ಅಂಥದೊಂದು ಮೊಕದ್ದಮೆ ಹೂಡಲಾಗಿದೆ ಎಂದು ಒಂದು ಪ್ರಮಾಣಪತ್ರವನ್ನು ನೀಡುತ್ತದೆ.

(೩) ೨ನೆಯ ಉಪ–ಪ್ರಕರಣದಲ್ಲಿ ಹೇಳಿದ ಪ್ರಮಾಣಪತ್ರವನ್ನು, ರಿಜಿಸ್ಟ್ರಾರರಿಗೆ, ಅವರು ಆಕ್ಷೇಪಣೆಯನ್ನು ಸ್ವೀಕರಿಸಿದ ಮೂವತ್ತು ದಿನಗಳೊಳಗಾಗಿ ಸಲ್ಲಿಸಿದ ಪಕ್ಷದಲ್ಲಿ, ಸಮುಚಿತ ನ್ಯಾಯಾಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯವು ಆಗ ತೆರೆದಿರದಿದ್ದರೂ, ಅಥವಾ ಆಗ ತೆರೆದಿದ್ದರೂ, ತೆರೆದ ಮೂವತ್ತು ದಿನಗಳ ಒಳಗಾಗಿ ಆ ನ್ಯಾಯಾಲಯದಿಂದ ತೀರ್ಪು ಬಂದ ಹೊರತು ವಿವಾಹವನ್ನು ವಿಧ್ಯುಕ್ತಗೊಳಿಸಲಾಗುವುದಿಲ್ಲ. ಮೇಲ್ಮನವಿಗೆ ಕೊಟ್ಟಿರುವ ಕಾಲಾವಕಾಶವು ಮುಗಿದು ಹೋಗಿದ್ದರೆ ಅಥವಾ ತೀರ್ಪಿನಮೇಲೆ ಮೇಲ್ಮನವಿ ದಾಖಲಾಗಿದ್ದು ಅದರ ಮೇಲೆ

---

* ಸ್ವಂತ ಪ್ರತಿಯಲ್ಲಿ ಡಾ. ಅಂಬೇಡ್ಕರ್ ಅವರು ಮಾಡಿಕೊಂಡಿರುವ ಟಿಪ್ಪಣಿ ನೀಲಿ ಪೆನ್ಸಿಲಿನಲ್ಲಿ ಬರೆದಿರುವುದು "ಕೈಬಿಡಲಾಗಿದೆ, ಅನವಶ್ಯಕ" ನ್ಯಾಯಾಲಯದ ಹೊಸ ವಿವರಣೆ ನೋಡಿ –ಸಂ.

ನ್ಯಾಯಾಲಯವು ತೀರ್ಪು ನೀಡಿದರೆ, ವಿವಾಹದ ನೋಟೀಸನ್ನು ಯಾರಿಗೆ ಸಲ್ಲಿಸಲಾಗಿದೆಯೋ ಆ ರಿಜಿಸ್ಟ್ರಾರನು ಆ ವಿವಾಹವನ್ನು ವಿಧ್ಯುಕ್ತಗೊಳಿಸ ಬಹುದು.

(೫) ನ್ಯಾಯಾಲಯದ ತೀರ್ಪು, ಆ ವಿವಾಹವು ೮ನೆಯ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ನಿಯಮಗಳನ್ನು ಅತಿಕ್ರಮಿಸುತ್ತದೆ ಎಂದಾದರೆ, ಆ ವಿವಾಹವನ್ನು ವಿಧ್ಯುಕ್ತ ಗೊಳಿಸಲಾಗುವುದಿಲ್ಲ.

ಮೇಲ್ಮನವಿ ನ್ಯಾಯಾಲಯದ ತೀರ್ಪು ಬರುವವರೆಗೆ ವಿವಾಹವು ವಿಧ್ಯುಕ್ತಗೊಳ್ಳುವುದಿಲ್ಲ.

೪. ಅಂಥದೊಂದು ಪ್ರಮಾಣ ಪತ್ರವನ್ನು ೩ನೆಯ ಉಪ-ಪ್ರಕರಣದಲ್ಲಿ ಹೇಳಿರುವ ರೀತಿಯಲ್ಲಿ ಮತ್ತು ಆ ಕಾಲಾವಧಿಯಲ್ಲಿ ಸಲ್ಲಿಸದೆ ಹೋದ ಪಕ್ಷದಲ್ಲಿ, ಅಥವಾ ಆ ವಿವಾಹವು ೧೦ನೆಯ ಪ್ರಕರಣದ (೧), (೨), (೩) (೪) ಮತ್ತು (೫)ನೆಯ ಉಪವಾಕ್ಯಗಳಲ್ಲಿ ವಿಧಿಸಿರುವ ನಿಯಮಗಳಲ್ಲಿ ಯಾವುದಾದರೂ ಒಂದನ್ನು ಅತಿಕ್ರಮಿಸುವುದಿಲ್ಲ ಎಂದು ನ್ಯಾಯಾಲಯವು ತೀರ್ಪಿತ್ತರೆ, ವಿವಾಹದ ನೋಟೀಸನ್ನು ಯಾರಿಗೆ ಕೊಡಲಾಗಿದೆಯೋ ಆ ರಿಜಿಸ್ಟ್ರಾರನು ಆ ವಿವಾಹವನ್ನು ವಿಧ್ಯುಕ್ತಗೊಳಿಸುತ್ತಾನೆ.

೫. ನ್ಯಾಯಾಲಯದ ತೀರ್ಪು ಆ ವಿವಾಹವು ೧೦ನೆಯ ಪ್ರಕರಣದ (೧), (೨), (೩), (೪) ಮತ್ತು (೫)ನೆಯ ಉಪವಾಕ್ಯಗಳಲ್ಲಿ ವಿಧಿಸಿರುವ ಯಾವುದೇ ನಿಯಮವನ್ನು ಅತಿಕ್ರಮಿಸಿದೆ ಎಂದಾಗಿದ್ದ ಪಕ್ಷದಲ್ಲಿ ಆ ವಿವಾಹವನ್ನು ವಿಧ್ಯುಕ್ತಗೊಳಿಸು ವುದಿಲ್ಲ.

(೧೬)

**೧೬. ಆಕ್ಷೇಪಣೆಯು ನ್ಯಾಯವಾಗಿರದಿದ್ದರೆ ದಂಡವಿಧಿಸಲು ನ್ಯಾಯಾಲಯಕ್ಕಿರುವ ಅಧಿಕಾರ :-**

ಮೊಕದ್ದಮೆ ಹೂಡಿರುವ ನ್ಯಾಯಲಯಕ್ಕೆ ಆಕ್ಷೇಪಣೆಯು ತರ್ಕಸಮ್ಮತವಾಗಿಲ್ಲ. ವಿಶ್ವಾಸಾರ್ಹವಾಗಿಲ್ಲ ಎಂದು ತೋರಿದರೆ,

(೧೫)

**೧೬. ಆಕ್ಷೇಪಣೆಯು ನ್ಯಾಯವಾಗಿರದಿದ್ದರೆ ದಂಡ ವಿಧಿಸಲು ನ್ಯಾಯಾಲಯಕ್ಕೆ ಇರುವ ಅಧಿಕಾರ:-**

ಮೊಕದ್ದಮೆಯನ್ನು ಹೂಡಿರುವ ನ್ಯಾಯಾಲಯಕ್ಕೆ ಆಕ್ಷೇಪಣೆಯು ನ್ಯಾಯಯುತವಾಗಿರಲಿಲ್ಲ,

**ಭಾಗ-೪**
**ಪ್ರಕರಣ-೧೩**
**ಪುಟ-೧೭**

ಆಕ್ಷೇಪಣೆ ಎತ್ತಿದ ವ್ಯಕ್ತಿಗೆ ನ್ಯಾಯಾಲಯವು ಒಂದು ಸಾವಿರ ರೂಪಾಯಿ ಮೀರದಂತೆ ದಂಡ ವಿಧಿಸಬಹುದು. ಅದನ್ನು ಅಥವಾ ಅದರ ಒಂದು ಭಾಗವನ್ನು ಉದ್ದೇಶಿತ ವಿವಾಹ ಮಾಡಿಕೊಳ್ಳುವವರಿಗೆ ಕೊಡುವಂತೆ ಆದೇಶಿಸಬಹುದು.

(೧೭)

**೧೭. ವಿವಾಹ ಭಾಗೀದಾರರು ಮತ್ತು ಸಾಕ್ಷಿಗಳ ಹೇಳಿಕೆ:–**

(೧) ವಿವಾಹವನ್ನು ವಿಧ್ಯುಕ್ತಗೊಳಿಸುವುದಕ್ಕೆ ಮುಂಚಿತವಾಗಿ ವಧು–ವರರು ಮತ್ತು ಮೂರು ಜನ ಸಾಕ್ಷಿದಾರರು, ರಿಜಿಸ್ಟ್ರಾರರ ಎದುರಿಗೆ, ಐದನೆಯ ಷೆಡ್ಯೂಲಿನಲ್ಲಿ ನಿರ್ದಿಷ್ಟಪಡಿಸಿರುವ ನಮೂನೆಯಂತೆ ಒಂದು ಹೇಳಿಕೆಯನ್ನು ಸಹಿಮಾಡಬೇಕು. ವಿವಾಹ ಭಾಗೀದಾರರಲ್ಲಿ ಯಾರೊಬ್ಬರು ಇಪ್ಪತ್ತೊಂದು ವರ್ಷವನ್ನು ಮುಗಿಸಿರದಿದ್ದರೆ, ಹೇಳಿಕೆಗೆ ಅವನ/ ಅವಳ ಪಾಲಕರೂ ಸಹಿಮಾಡಬೇಕು. ವಿಧವೆಗೆ ಸಂಬಂಧಿಸಿದಂತೆ ಈ ನಿಯಮವು ಅನ್ವಯವಾಗುವುದಿಲ್ಲ.

(೨) (೧)ನೆಯ ಉಪವಿಭಾಗದಂತೆ ನೀಡಿದ ಪ್ರತಿಯೊಂದು ಹೇಳಿಕೆಗೂ ರಿಜಿಸ್ಟ್ರಾರ್ ಮೇಲುಸಹಿ ಮಾಡತಕ್ಕದ್ದು.

(೧೮)

**೧೮. ವಿವಾಹವನ್ನು ವಿಧ್ಯುಕ್ತಗೊಳಿಸುವ ಸ್ಥಳ ಮತ್ತು ಸ್ವರೂಪ :–**

(೧) ವಿವಾಹವನ್ನು ಈ ಕೆಳಕಂಡಂತೆ ವಿಧ್ಯುಕ್ತಗೊಳಿಸಬಹುದು.

ವಿಶ್ವಾಸಾರ್ಹವಾಗಿಲ್ಲ ಎಂದು ಮನವರಿಕೆಯಾದ ಪಕ್ಷದಲ್ಲಿ, ಆಕ್ಷೇಪಿಸಿದ ವ್ಯಕ್ತಿಗೆ ಒಂದು ಸಾವಿರ ರೂಪಾಯಿಗಳನ್ನು ಮೀರದ ಹಾಗೆ ದಂಡವನ್ನು ವಿಧಿಸಬಹುದು, ಅದನ್ನು ಉದ್ದೇಶಿತ ವಿವಾಹದ ಭಾಗೀದಾರರಿಗೆ (ವಧು–ವರರಿಗೆ) ಕೊಡುವಂತೆ ಆದೇಶಿಸಬಹುದು.

(೧೬)

**೧೭. ಭಾಗೀದಾರರು ಮತ್ತು ಸಾಕ್ಷಿಗಳ ಹೇಳಿಕೆ:–**

**ಭಾಗ–೪ ಪ್ರಕರಣ–೧೪ ಪುಟ–೧೭**

(೧) ವಿವಾಹವನ್ನು ವಿಧ್ಯುಕ್ತ ಗೊಳಿಸುವುದಕ್ಕಿಂತ ಮೊದಲು, ವಿವಾಹ ಭಾಗೀದಾರರು ಮತ್ತು ಮೂವರು ಸಾಕ್ಷಿದಾರರು, ರಿಜಿಸ್ಟ್ರಾರರೆದುರಿಗೆ, ನಾಲ್ಕನೆಯ ಷೆಡ್ಯೂಲಿನಲ್ಲಿ ನಿರ್ದಿಷ್ಟಪಡಿಸಿರುವ ನಮೂನೆಯಲ್ಲಿ ಒಂದು ಹೇಳಿಕೆಗೆ ಸಹಿ ಮಾಡಬೇಕು. ವಧು–ವರ ಇವರಲ್ಲಿ ಯಾರೇ ಆದರೂ ಇಪ್ಪತ್ತೊಂದು ವರ್ಷಗಳನ್ನು ಮುಗಿಸಿರದಿದ್ದರೆ, ಹೇಳಿಕೆಗೆ ಅವನ/ ಅವಳ ಪಾಲಕರು ಕೂಡ ಸಹಿಮಾಡಬೇಕು.

(೨) (೧)ನೆಯ ಉಪವಿಭಾಗದನ್ವಯ ಮಾಡಿದ ಪ್ರತಿಯೊಂದು ಹೇಳಿಕೆಗೂ ರಿಜಿಸ್ಟ್ರಾರರು ಮೇಲುಸಹಿ ಮಾಡಬೇಕು.

**೧೮. ವಿವಾಹವನ್ನು ವಿಧ್ಯುಕ್ತಗೊಳಿಸುವ ಸ್ಥಳ ಮತ್ತು ಸ್ವರೂಪ :–**

**ಭಾಗ–೪ ಪ್ರಕರಣ–೧೫ ಪುಟ–೧೭**

(೧) ವಿವಾಹವನ್ನು ಈ ಕೆಳಕಂಡ ಸ್ಥಳದಲ್ಲಿ

(ಅ) ರಿಜಿಸ್ಟ್ರಾರರ ಕಚೇರಿಯಲ್ಲಿ ಅಥವಾ

(ಆ) ವಿವಾಹ ಭಾಗೀದಾರರು ಅಪೇಕ್ಷಿಸುವ ನ್ಯಾಯಯುತವಾದ ದೂರದಲ್ಲಿರುವ ಬೇರೊಂದು ಸ್ಥಳದಲ್ಲಿ, ವಿಧಿಸುವ ನಿಯಮಗಳ ಪ್ರಕಾರ ಮತ್ತು ವಿಧಿಸಿದ ಶುಲ್ಕದ ಮೇಲೆ.

(ಅ) ವಿವಾಹವನ್ನು ಯಾವುದೇ ಒಂದು ರೂಪದಲ್ಲಿ ವಿಧ್ಯುಕ್ತಗೊಳಿಸಬಹುದು. "ನಾನು (A) ನಿನ್ನನ್ನು (B) ನನ್ನ ನ್ಯಾಯಸಮ್ಮತ ಪತ್ನಿಯನ್ನಾಗಿ (ಅಥವಾ ಪತಿಯನ್ನಾಗಿ ಸ್ವೀಕರಿಸುತ್ತೇನೆ" ಎಂದು ರಿಜಿಸ್ಟ್ರಾರರ ಹಾಗೂ ಮೂವರು ಸಾಕ್ಷಿದಾರರ ಎದುರಿಗೆ ಹೇಳಿದ ಹೊರತು ಅದು ಸಂಪೂರ್ಣವಾಗುವುದಿಲ್ಲ ಮತ್ತು ಭಾಗೀದಾರರ ಮೇಲೆ ಬಂಧಕವಾಗುವುದಿಲ್ಲ.

(೨) ವಿವಾಹವನ್ನು ರಿಜಿಸ್ಟ್ರಾರರು ಮತ್ತು ಮೂವರು ಸಾಕ್ಷಿ ದಾರರ ಸಮ್ಮುಖದಲ್ಲಿ ವಿಧ್ಯುಕ್ತಗೊಳಿಸಲಾಗುತ್ತದೆ.

ವಿಧ್ಯುಕ್ತಗೊಳಿಸ ಬಹುದು.

(ಅ) ರಿಜಿಸ್ಟ್ರಾರರ ಕಚೇರಿಯಲ್ಲಿ, ಅಥವಾ

(ಆ) ವಿವಾಹ ಭಾಗೀದಾರರು ಅಪೇಕ್ಷಿಸುವ, ಅಲ್ಲಿಂದ ನ್ಯಾಯಯುತವಾದ ದೂರದಲ್ಲಿರುವ ಬೇರೊಂದು ಸ್ಥಳದಲ್ಲಿ, ವಿಧಿಸುವ ನಿಯಮಗಳ ಪ್ರಕಾರ ಮತ್ತು ವಿಧಿಸಿದ ಶುಲ್ಕದ ಮೇಲೆ.

(೨) ವಿವಾಹವನ್ನು ಯಾವುದೇ ಒಂದು ರೂಪದಲ್ಲಿ ವಿಧ್ಯುಕ್ತಗೊಳಿಸಬಹುದು. "ನಾನು (A) ನಿನ್ನನ್ನು (B) ನನ್ನ ನ್ಯಾಯಸಮ್ಮತ ಪತ್ನಿಯನ್ನಾಗಿ (ಅಥವಾ ಪತಿಯನ್ನಾಗಿ) ಸ್ವೀಕರಿಸುತ್ತೇನೆ" ಎಂದು ರಿಜಿಸ್ಟ್ರಾರರ ಹಾಗೂ ಮೂವರು ಸಾಕ್ಷಿದಾರರ ಸಮ್ಮುಖದಲ್ಲಿ ಹೇಳಿದ ಹೊರತು ಅದು ಸಂಪೂರ್ಣವಾಗುವುದಿಲ್ಲ ಮತ್ತು ಭಾಗೀದಾರರ ಮೇಲೆ ಬಂಧಕವಾಗುವುದಿಲ್ಲ.

(೧೯)

**೧೯. ವಿವಾಹ ಪ್ರಮಾಣಪತ್ರ :-**

(೧) ವಿವಾಹವನ್ನು ವಿಧ್ಯುಕ್ತಗೊಳಿಸಿದ ಮೇಲೆ ರಿಜಿಸ್ಟ್ರಾರನು, ತನ್ನ ಬಳಿ ಆ ಉದ್ದೇಶಕ್ಕಾಗಿ ಇರಿಸಿಕೊಂಡಿರುವ "ಹಿಂದೂ ಲೌಕಿಕ ವಿವಾಹ ಪ್ರಮಾಣಪತ್ರ ಪುಸ್ತಕ" ಎಂಬ ಹೆಸರಿನ ರಿಜಿಸ್ಟರಿನ ಆರನೆಯ ಪರಿಶಿಷ್ಟದಲ್ಲಿ ಕೊಟ್ಟಿರುವ ನಮೂನೆಯಂತೆ ಒಂದು ಪ್ರಮಾಣ ಪತ್ರವನ್ನು ತುಂಬುತ್ತಾನೆ. ಆ ಪ್ರಮಾಣಪತ್ರಕ್ಕೆ ವಿವಾಹ

**೧೯. ವಿವಾಹ ಪ್ರಮಾಣಪತ್ರ :-**

**ಭಾಗ-೪**
**ಪ್ರಕರಣ-೧೭**
**ಪುಟ-೧೮**

(೧) ವಿವಾಹವನ್ನು ವಿಧ್ಯುಕ್ತಗೊಳಿಸು ವಾಗ ರಿಜಿಸ್ಟ್ರಾರನು ಆ ಉದ್ದೇಶಕ್ಕಾಗಿ ತನ್ನ ಬಳಿ ಇರಿಸಿಕೊಂಡಿರುವ "ಹಿಂದೂ ಲೌಕಿಕ ವಿವಾಹ ಪ್ರಮಾಣಪತ್ರ ಪುಸ್ತಕ"ದ ಐದನೆಯ ಷೆಡ್ಯೂಲಿನಲ್ಲಿ ನಿರ್ದಿಷ್ಟ ಪಡಿಸಿರುವ ನಮೂನೆಯಂತೆ ಒಂದು ಪ್ರಮಾಣಪತ್ರವನ್ನು ತುಂಬಬೇಕು. ಆ

ಭಾಗೀದಾರರೂ ಮೂವರು ಸಾಕ್ಷಿದಾರರೂ ಸಹಿಮಾಡುತ್ತಾರೆ.

(೨) "ಹಿಂದೂ ಸಿವಿಲ್ ಮ್ಯಾರೇಜ್ ಸರ್ಟಿಫಿಕೇಟ್ ಬುಕ್"ನಲ್ಲಿ ರಿಜಿಸ್ಟ್ರಾರನು ಪ್ರಮಾಣಪತ್ರವನ್ನು ಬರೆದಮೇಲೆ ಆ ಪ್ರಮಾಣಪತ್ರವು ಲೌಕಿಕ ವಿವಾಹವನ್ನು ವಿಧ್ಯುಕ್ತಗೊಳಿಸಲಾಗಿರುವುದಕ್ಕೆ ನಿರ್ಣಾಯಕವಾದ ಆಧಾರವಾಗುತ್ತದೆಂದು ಭಾವಿಸತಕ್ಕದ್ದು; ಸಾಕ್ಷೀದಾರರ ಸಹಿಗಳಿಗೆ ಸಂಬಂಧಪಟ್ಟ ಎಲ್ಲಾ ವಿಹಿತ ಕ್ರಿಯೆಗಳೂ ಪುರೈಸಿವೆಯೆಂದು ಭಾವಿಸತಕ್ಕದ್ದು.*

ಪ್ರಮಾಣಪತ್ರಕ್ಕೆ ವಿವಾಹ ಭಾಗೀದಾರರೂ ಮೂವರು ಸಾಕ್ಷಿದಾರರೂ ಸಹಿಮಾಡಬೇಕು.

(೨) ಹೀಗೆ ರಿಜಿಸ್ಟ್ರಾರನು "ಹಿಂದೂ ಸಿವಿಲ್ ಮ್ಯಾರೇಜ್ ಸರ್ಟಿಫಿಕೇಟ್ ಬುಕ್" ನಲ್ಲಿ ಪ್ರಮಾಣಪತ್ರವನ್ನು ತುಂಬಿದಾಗ ಅದು ಒಂದು ಲೌಕಿಕ ವಿವಾಹಕ್ಕೆ ಸಾಕ್ಷಿಗಳ ಸಹಿಗಳ ಸಂಬಂಧವಾಗಿ ಎಲ್ಲಾ ವಿಹಿತ ಕ್ರಿಯೆಗಳು ನಡೆದಿವೆಯೆಂಬುದರ ನಿರ್ಣಾಯಕವಾದ ಆಧಾರವಾಗುತ್ತದೆ.

(೨೦)

**೨೦. ನೋಟೀಸು ಕೊಟ್ಟ ಮೂರು ತಿಂಗಳ ಒಳಗಾಗಿ ವಿವಾಹವು ವಿಧ್ಯುಕ್ತಗೊಳ್ಳದೆ ಹೋದ ಪಕ್ಷದಲ್ಲಿ ಹೊಸ ನೋಟೀಸನ್ನು ಕಳುಹಿಸುವುದು ಅಗತ್ಯ:–**

೧೨ನೆಯ ಪ್ರಕರಣದಲ್ಲಿ ನಿರೂಪಿಸಿರುವಂತೆ ರಿಜಿಸ್ಟ್ರಾರರಿಗೆ ನೋಟೀಸು ಕೊಟ್ಟಂದಿನಿಂದ ಮೂರು ಕ್ಯಾಲೆಂಡರ್ ತಿಂಗಳ ಒಳಗಾಗಿ ವಿವಾಹವನ್ನು ವಿಧ್ಯುಕ್ತಗೊಳಿಸದೆ ಹೋದ ಪಕ್ಷದಲ್ಲಿ; ಅಥವಾ ಉದ್ದೇಶಿತ ವಿವಾಹವನ್ನು ಆಕ್ಷೇಪಿಸುವ ವ್ಯಕ್ತಿಯು ಸೂಕ್ತ ನ್ಯಾಯಾಧಿಕಾರವ್ಯಾಪ್ತಿ ಇರುವ ನ್ಯಾಯಾಲಯದಲ್ಲಿ ಒಂದು ಮೊಕದ್ದಮೆಯನ್ನು ಹೂಡಿದ್ದು, ಆ ನ್ಯಾಯಾಲಯವು ತೀರ್ಪುನೀಡಿ, ಆ ತೀರ್ಪಿನ

(೧೯)

**೨೦. ನೋಟೀಸು ಕೊಟ್ಟ ಮೂರು ತಿಂಗಳ ಒಳಗಾಗಿ ಮದುವೆಯನ್ನು ವಿಧ್ಯುಕ್ತಗೊಳಿಸದೆ ಹೋದ ಪಕ್ಷದಲ್ಲಿ ಹೊಸ ನೋಟೀಸು ಅಗತ್ಯವಾಗುತ್ತದೆ:–**

೧೨ನೆಯ ಪ್ರಕರಣದಲ್ಲಿ ಹೇಳಿರುವ ರೀತಿಯಲ್ಲಿ ರಿಜಿಸ್ಟ್ರಾರರಿಗೆ ನೋಟೀಸು ಕೊಟ್ಟ ಮೂರು ತಿಂಗಳ ಒಳಗಾಗಿ ವಿವಾಹವನ್ನು ವಿಧ್ಯುಕ್ತಗೊಳಿಸದಿದ್ದ ಪಕ್ಷದಲ್ಲಿ; ಉದ್ದೇಶಿತ ವಿವಾಹಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿರುವ ವ್ಯಕ್ತಿಯು ಸೂಕ್ತ ನ್ಯಾಯಾಧಿಕಾರ ವ್ಯಾಪ್ತಿಯಿರುವ ನ್ಯಾಯಾಲಯದಲ್ಲಿ ಒಂದು ಮೊಕದ್ದಮೆಯನ್ನು ಹೂಡಿದ್ದು, ಆ ನ್ಯಾಯಾಲಯವು ತೀರ್ಪುನೀಡಿ, ಅದರ ಮೇಲೆ ಅಪೀಲು ಮಾಡಲು ಕಾನೂನು

ಶಿ: ೪

* ಈ ೧೯ನೆಯ ಪ್ರಕರಣದಲ್ಲಿ ಡಾ. ಅಂಬೇಡ್ಕರ್ ಅವರು ತಮ್ಮ ಸ್ವಂತ ಪ್ರತಿಯಲ್ಲಿ ಪೆನ್ಸಿಲಿನಲ್ಲಿ ಮಾಡಿಕೊಂಡಿರುವ ಟಿಪ್ಪಣಿ ಇದು: "ವಿಹಿತ ಕ್ರಿಯೆಗಳು ಪೂರೈಸಿವೆಯೆಂದು ಹೇಳಿದರೆ ಸಾಲದು. ಅದರಿಂದ ಏನೂ ಪ್ರಯೋಜನವಿಲ್ಲ. ನಿರ್ಣಾಯಕವಾದ ಆಧಾರವು ವಿಧ್ಯುಕ್ತಗೊಳಿಸುವಿಕೆಯೇ ಹೊರತು ಸಮುಚಿತ ಕ್ರಿಯೆಗಳಲ್ಲ"

ಮೇಲೆ ಅಪೀಲು ಹೋಗಲು ನೀಡಲಾಗಿರುವ ಮೂರು ತಿಂಗಳ ಅವಧಿಯು ಮುಗಿದುಹೋಗಿದ್ದ ಪಕ್ಷದಲ್ಲಿ; ಅಪೀಲು ನ್ಯಾಯಾಲಯದ ತೀರ್ಪು ಬಂದ ಮೂರು ತಿಂಗಳ ಒಳಗಾಗಿ ಒಂದು ಮೇಲ್ಮನವಿಯಿದ್ದ ಪಕ್ಷದಲ್ಲಿ – ನೋಟೀಸು ಮತ್ತು ಅದರ ಮೇಲೆ ಸಂಭವಿಸಿದ ಎಲ್ಲಾ ಕಾರ್ಯಕಲಾಪಗಳೂ ರದ್ದಾಗಿವೆ ಎಂದು ಭಾವಿಸಬೇಕು. ಮತ್ತು ಈ ಅಧ್ಯಾಯದಲ್ಲಿ ನಿರೂಪಿಸಿರುವ ರೀತಿಯಲ್ಲಿ ಹೊಸದಾಗಿ ನೋಟೀಸನ್ನು ಕೊಟ್ಟಹೊರತು ಯಾವ ರಿಜಿಸ್ಟ್ರಾರನೂ ಆ ವಿವಾಹವನ್ನು ವಿಧ್ಯುಕ್ತಗೊಳಿಸುವಂತಿಲ್ಲ.

(೨೧)

**ಧಾರ್ಮಿಕ ವಿವಾಹಗಳನ್ನು ಲೌಕಿಕ ವಿವಾಹಗಳಂತೆ ನೋಂದಣಿ ಮಾಡುವುದು**

**೨೧. ಕೆಲವು ಧಾರ್ಮಿಕ ವಿವಾಹಗಳನ್ನು ನೋಂದಾಯಿಸುವ ವಿಧಾನ :–**

(೧) ಇಬ್ಬರು ಹಿಂದೂಗಳು ಧಾರ್ಮಿಕ ರೂಪದ ವಿವಾಹವಾಡಿ ಕೊಂಡಿರುವಾಗ,–

(ಅ) ಈ ಸಂಹಿತೆಯು ಚಾಲನೆಗಿಂತ ಮುಂಚಿತವಾಗಿ, ಹಿಂದೂ ಕಾನೂನಿನ ಯಾವುದೇ ಅವಕಾಶ ನಿಯಮ ಅಥವಾ ವ್ಯಾಖ್ಯಾನ ಅಥವಾ ವಿವಾಹದ ಸಮಯದಲ್ಲಿ ಪ್ರಚಲಿತವಾಗಿರುವ ಯಾವುದೇ ರೂಢಿ ಅಥವಾ ಪದ್ಧತಿಗಳು ಕಾರಣವಾಗಿ ಆ ವಿವಾಹದ ಸಿಂಧುತ್ವದ ಸಂಬಂಧವಾಗಿ ಸಂದೇಹಗಳು ಬಂದಿದ್ದರೆ,

ಅಥವಾ

(ಆ) ಈ ಸಂಹಿತೆಯು ಚಾಲನೆಗೊಂಡ ನಂತರ, ೭ನೆಯ ಪ್ರಕರಣದ (v)ನೆಯ ಉಪವಾಕ್ಯದಲ್ಲಿರುವ ಅವಕಾಶಗಳನ್ನು

ನೀಡಿರುವ ಮೂರು ತಿಂಗಳ ಅವಧಿಯು ಮುಗಿದುಹೋಗಿದ್ದ ಪಕ್ಷದಲ್ಲಿ; ಅಥವಾ ಆ ಅಪೀಲು ನ್ಯಾಯಾಲಯದ ತೀರ್ಪಿನ ಮೇಲೆ ಆ ತೀರ್ಪಿನ ತಾರೀಕಿನಿಂದ ಮೂರು ತಿಂಗಳ ಒಳಗಾಗಿ ಮತ್ತೆ ಅಪೀಲು ದಾಖಲಾಗಿದ್ದ ಪಕ್ಷದಲ್ಲಿ, ವಿವಾಹ ಸಂಬಂಧವಾಗಿ ಕೊಟ್ಟಿದ್ದ ನೋಟೀಸು ಮತ್ತು ಅದರ ಮೇಲೆ ನಡೆದ ಎಲ್ಲ ಕಾರ್ಯಕಲಾಪಗಳು ರದ್ದಾಗಿವೆಯೆಂದು ಪರಿಗಣಿಸಲಾಗುತ್ತದೆ. ಈ ಅಧ್ಯಾಯದಲ್ಲಿ ವಿಧಿಸಿರುವಂತೆ ಹೊಸ ನೋಟೀಸೊಂದನ್ನು ಸಲ್ಲಿಸುವವರೆಗೂ ವಿವಾಹವನ್ನು ವಿಧ್ಯುಕ್ತಗೊಳಿಸಲು ರಿಜಿಸ್ಟ್ರಾರನಿಗೆ ಅನುಮತಿಯಿರುವುದಿಲ್ಲ.

**೨೧. ಕೆಲವು ಧಾರ್ಮಿಕ ವಿವಾಹಗಳ ನೋಂದಣಿಗೆ ಕ್ರಮ :–**

(೧) ಯಾರೇ ಇಬ್ಬರು ಹಿಂದೂಗಳು ಧಾರ್ಮಿಕರೂಪದ ವಿವಾಹ ಮಾಡಿ ಕೊಂಡಿದ್ದಾಗ,

**ಭಾಗ–೪ ಪ್ರಕರಣ–೧೮ ಪುಟ–೧೮**

(ಅ) ಈ ಸಂಹಿತೆಯು ಚಾಲನೆಗಿಂತ ಮುಂಚಿತವಾಗಿ ಮತ್ತು ಹಿಂದೂ ಲಾ ಕುರಿತ ಯಾವುದೇ ಅವಕಾಶ, ನಿಯಮ ಅಥವಾ ವ್ಯಾಖ್ಯಾನಗಳು ಕಾರಣವಾಗಿ, ಅಥವಾ ವಿವಾಹ ಸಮಯದಲ್ಲಿ ಪ್ರಚಲಿತವಾಗಿರುವ ರೂಢಿ ಅಥವಾ ಪದ್ಧತಿಗಳು ಕಾರಣವಾಗಿ ಆ ವಿವಾಹದ ಸಿಂಧುತ್ವ ಕುರಿತು ಸಂದೇಹಗಳು ಬಂದಿದ್ದ ಪಕ್ಷದಲ್ಲಿ,

(ಆ) ಸಂಹಿತೆಯು ಚಾಲನೆಗೊಂಡ ಮೇಲೂ, ಏಳನೆಯ ಪ್ರಕರಣದ (೫)ನೆಯ ಉಪವಾಕ್ಯದಲ್ಲಿ

ಅತಿಕ್ರಮಿಸಿದೆ ಎಂಬ ಕಾರಣದಿಂದ ಆ ವಿವಾಹವು ಅನೂರ್ಜಿತವಾಗಿದೆ ಎಂದು ಪರಿಗಣಿಸಿದ ಪಕ್ಷದಲ್ಲಿ, ಆ ವ್ಯಕ್ತಿಗಳು ಯಾವ ಸಮಯದಲ್ಲಿ ಬೇಕಾದರೂ, ಅರ್ಜಿಹಾಕುವುದಕ್ಕಿಂತ ಮುಂಚೆ ತಮ್ಮಿಬ್ಬರಲ್ಲಿ ಯಾರಾದರೂ ಒಬ್ಬರು ಮೂರು ತಿಂಗಳ ಕಾಲ ವಾಸವಾಗಿದ್ದ ಜಿಲ್ಲೆಯ ರಿಜಿಸ್ಟ್ರಾರರಿಗೆ ಅರ್ಜಿ ಸಲ್ಲಿಸಿ, ತಮ್ಮ ಮದುವೆಯನ್ನು, ರಿಜಿಸ್ಟ್ರಾರರ ಸಮ್ಮುಖದಲ್ಲಿ ವಿಧ್ಯುಕ್ತಗೊಳಿಸಿದ ಲೌಕಿಕ ವಿವಾಹದಂತೆ, ನೊಂದಾಯಿಸ ಬೇಕೆಂದು ಕೇಳಿಕೊಳ್ಳಬಹುದು.

(೨) ಅಂತಹ ಅರ್ಜಿಯು ಬಂದಾಗ, ರಿಜಿಸ್ಟ್ರಾರನು, ವಿಧಿಸಲಾದ ವಿಧಾನದಲ್ಲಿ ಒಂದು ಬಹಿರಂಗ ನೋಟೀಸನ್ನು ಕೊಡಬೇಕು. ಯಾವುದಾದರೂ ಆಕ್ಷೇಪಣೆಯಿದ್ದರೆ ಅದನ್ನು ತಿಳಿಸಲು ಮೂರು ತಿಂಗಳ ಕಾಲಾವಕಾಶ ಕೊಡಬೇಕು. ಹಾಗೆ ಬಂದ ಆಕ್ಷೇಪಣೆಗಳನ್ನು ಪರಿಶೀಲಿಸಿ ರಿಜಿಸ್ಟ್ರಾರನಿಗೆ

(ಅ) ಅರ್ಜಿಯಲ್ಲಿ ನಮೂದಿಸಿದ ತಾರೀಕಿನಂದು ವಿವಾಹ ಸಮಾರಂಭವು ನಡೆದಿದೆ, ಆಗಿನಿಂದಲೂ ವಿವಾಹ ಭಾಗೀದಾರರು ಪತಿ–ಪತ್ನಿಯರಾಗಿ ಜೀವಿಸುತ್ತಿದ್ದಾರೆ ಎಂದೂ;

(ಆ) ಅರ್ಜಿಯ ದಿನದಂದು ವಿವಾಹ ಭಾಗೀದಾರರ ನಡುವೆ ನಿರ್ದಿಷ್ಟ ಪಡಿಸಲಾದ, ೮ನೆಯ ಪ್ರಕರಣದ (i), (ii), (iii) ಮತ್ತು (iv) ನೆಯ ಉಪವಾಕ್ಯಗಳಲ್ಲಿ ನಿರ್ದಿಷ್ಟಪಡಿಸಿರುವ ನಿಯಮಗಳು ಪೂರೈಸಲ್ಪಟ್ಟಿವೆ ಎಂದೂ

ನಿರೂಪಿಸಿರುವ ಅವಕಾಶಗಳನ್ನು ಅತಿಕ್ರಮಿಸಿದೆ ಎಂಬ ಕಾರಣದಿಂದ ಅಸಿಂಧುವಾಗಿದ್ದರೆ,
ಅಂತಹ ವ್ಯಕ್ತಿಗಳು ಅರ್ಜಿಯ ತಾರೀಕಿಗಿಂತ ಹಿಂದೆ ಮೂರು ತಿಂಗಳಿಗಿಂತ ಕಡಮೆಯಿಲ್ಲದಷ್ಟು ಕಾಲ ವಾಸವಾಗಿರುವ ಜಿಲ್ಲೆಯ ರಿಜಿಸ್ಟ್ರಾರರಿಗೆ ತಮ್ಮ ಮದುವೆಯನ್ನು, ರಿಜಿಸ್ಟ್ರಾರರ ಸಮ್ಮುಖದಲ್ಲಿ ನಡೆದ ಲೌಕಿಕ ವಿವಾಹವೆಂಬಂತೆ ನೋಂದಾಯಿಸಬೇಕೆಂದು ಅರ್ಜಿ ಹಾಕಿಕೊಳ್ಳಬಹುದು.

(೨) ಹಾಗೆ ಒಂದು ಅರ್ಜಿ ಬಂದ ಮೇಲೆ ರಿಜಿಸ್ಟ್ರಾರನು, ವಿಧಿಸಿರುವ ರೀತಿಯಲ್ಲಿ ಒಂದು ಬಹಿರಂಗ ನೋಟೀಸನ್ನು ಪ್ರಕಟಿಸುತ್ತಾನೆ. ಅದರ ಮೇಲೆ ಏನಾದರೂ ಆಕ್ಷೇಪಣೆಯಿದ್ದರೆ ತಿಳಿಸಲು ಮೂವತ್ತು ದಿನಗಳ ಕಾಲಾವಕಾಶವಿರುತ್ತದೆ. ಆ ಅವಧಿಯೊಳಗೆ ಬರಬಹುದಾದ ಆಕ್ಷೇಪಣೆಗಳನ್ನು ಪರಿಶೀಲಿಸಿದ ಮೇಲೆ –

(ಅ) ಅರ್ಜಿಯಲ್ಲಿ ನಮೂದಿಸಿರುವ ದಿನಾಂಕದಂದು ವಿವಾಹವು ನಡೆದಿದೆ, ಅಂದಿನಿಂದಲೂ ವಿವಾಹ ಭಾಗೀದಾರರು ಪತಿ–ಪತ್ನಿಯರಾಗಿ ಒಟ್ಟಿಗೆ ವಾಸ ಮಾಡುತ್ತಿದ್ದಾರೆ ;

(ಆ). ವಿವಾಹ ಭಾಗೀದಾರರ ನಡುವೆ ಅರ್ಜಿಯ ತಾರೀಕಿನಂದು ೧೧ನೆಯ ಪ್ರಕರಣದ ೧ರಿಂದ ೪ರವರೆಗಿನ ಉಪವಾಕ್ಯಗಳಲ್ಲಿ ನಿರೂಪಿಸಿರುವ ನಿಯಮಗಳನ್ನು ಪೂರೈಸಲಾಗಿದೆ.

(ಇ). ಮದುವೆಯ ಸಮಯದಲ್ಲಿ ವರ–ವಧು

ಮನವರಿಕೆಯಾಗಿದ್ದರೆ

(ಇ) ವಿವಾಹದ ಸಮಯದಲ್ಲಿ ಭಾಗೀದಾರರು ಒಬ್ಬ ವಿಧವೆ/ವಿಧುರ ಆಗಿರದಿದ್ದರೆ, ಅರ್ಜಿ ಹಾಕಿದ ದಿನದಂದು ಇಪ್ಪತ್ತೊಂದು ವರ್ಷ ತುಂಬಿರದಿದ್ದರೆ, ಆತನ/ಆಕೆಯು ಪಾಲಕರ ಸಮ್ಮತಿಯನ್ನು ಪಡೆದಿದ್ದರೆ, ಆ ಮದುವೆಯನ್ನು ಒಂದು ಲೌಕಿಕ ವಿವಾಹದಂತೆ ನೋಂದಾಯಿಸಲು ಅವರಿಗೆ ಸಮ್ಮತಿಯಿದ್ದರೆ.

ಆಗ ರಿಜಿಸ್ಟ್ರಾರನು ಹಿಂದೂ ಧಾರ್ಮಿಕ ವಿವಾಹ ರಿಜಿಸ್ಟರಿನಲ್ಲಿ, ಏಳನೆಯ ಷೆಡ್ಯೂಲಿನಲ್ಲಿ ನಿರ್ದಿಷ್ಟ ಪಡಿಸಿರುವ ನಮೂನೆಯಲ್ಲಿ ಒಂದು ಪ್ರಮಾಣಪತ್ರವನ್ನು ತುಂಬುತ್ತಾನೆ. ಆ ಪ್ರಮಾಣಪತ್ರಕ್ಕೆ ವಿವಾಹ ಭಾಗೀದಾರರು, ಮೂವರು ಸಾಕ್ಷಿದಾರರೂ ಸಹಿಮಾಡತಕ್ಕದ್ದು.

(೩) (೨)ನೆಯ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಪ್ರಮಾಣ ಪತ್ರವನ್ನು ನಮೂದಿಸಿದ ಮೇಲೆ, ಆ ವಿವಾಹವು ಎಲ್ಲಾ ದೃಷ್ಟಿಗಳಿಂದಲೂ ಊರ್ಜಿತವಾಗಿದೆಯೆಂದು ಪರಿಗಣಿ ಸಲಾಗುತ್ತದೆ. ಮತ್ತು ಧಾರ್ಮಿಕ ವಿವಾಹ ಮಾಡಿಕೊಂಡ ಭಾಗೀದಾರರಿಗೆ ಆ ದಿನಾಂಕದಿಂದ ಮುಂದಕ್ಕೆ ಜನಿಸುವ ಮಕ್ಕಳು (ಪ್ರಮಾಣ ಪತ್ರದಲ್ಲೂ ಹಿಂದೂ ಧಾರ್ಮಿಕ ವಿವಾಹ ರಿಜಿಸ್ಟರಿನಲ್ಲೂ ಹೆಸರುಗಳನ್ನು ನಮೂದಿಸಲಾಗುತ್ತದೆ), ಎಲ್ಲಾ ದೃಷ್ಟಿಗಳಿಂದಲೂ ಮತ್ತು ಸದಾ ಆ ತಂದೆತಾಯಿಯರ ಶಾಸನಸಮ್ಮತ ಮಕ್ಕಳೆಂದು ಪರಿಗಣಿಸಲಾಗುತ್ತದೆ.

ಯಾರೊಬ್ಬರು ವಿಧುರನಾಗಲಿ ವಿಧವೆಯಾಗಲಿ ಆಗಿರಲಿಲ್ಲ; ಇಪ್ಪತ್ತೊಂದು ವರ್ಷವು ತುಂಬದೆ ಇರುವುದರಿಂದ, ಮದುವೆಯನ್ನು ಲೌಕಿಕ ವಿವಾಹವೆಂಬಂತೆ ನೋಂದಾಯಿಸಲು ಆತನ/ಆಕೆಯ ಪಾಲಕರ ಸಮ್ಮತಿಯನ್ನು ಪಡೆಯ ಲಾಗಿದೆ – ಎಂದು ಮನವರಿಕೆಯಾದ ಪಕ್ಷದಲ್ಲಿ.

ಹಿಂದೂ ಧಾರ್ಮಿಕ ವಿವಾಹ ರಿಜಿಸ್ಟರಿನಲ್ಲಿ, ಆರನೆಯ ಷೆಡ್ಯೂಲಿನಲ್ಲಿ ನಿರ್ದಿಷ್ಟಪಡಿಸಿರುವ ನಮೂನೆಯಂತೆ ರಿಜಿಸ್ಟ್ರಾರನು ಒಂದು ಪ್ರಮಾಣಪತ್ರವನ್ನು ತುಂಬುತ್ತಾನೆ. ಆ ಪ್ರಮಾಣಪತ್ರಕ್ಕೆ ವಿವಾಹ ಭಾಗೀದಾರರೂ ಮೂರುಜನ ಸಾಕ್ಷಿದಾರರೂ ಸಹಿಮಾಡತಕ್ಕದ್ದು.

(೩) ಎರಡನೆಯ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಪ್ರಮಾಣ ಪತ್ರವನ್ನು ಬರೆದ ನಂತರ, ವಿವಾಹವು ಎಲ್ಲಾ ಉದ್ದೇಶಗಳಿಗೂ ಊರ್ಜಿತವೆಂದು ಪರಿಗಣಿಸಲಾಗುತ್ತದೆ. ಭಾಗೀದಾರರು ಧಾರ್ಮಿಕ ಸ್ವರೂಪದ ವಿವಾಹ ಮಾಡಿಕೊಂಡ ನಂತರ (ಅವರ ಹೆಸರುಗಳನ್ನು ಪ್ರಮಾಣಪತ್ರದಲ್ಲೂ, ಹಿಂದೂ ಧಾರ್ಮಿಕವಿವಾಹ ರಿಜಿಸ್ಟರಿನಲ್ಲೂ, ನಮೂದಿಸಲಾ ಗುತ್ತದೆ) ಅವರಿಗೆ ಜನಿಸಿದ ಎಲ್ಲಾ ಮಕ್ಕಳು, ಎಲ್ಲಾ ದೃಷ್ಟಿಗಳಿಂದ ಎಲ್ಲಾ ಸಮಯದಲ್ಲೂ ತಂದೆ– ತಾಯಿಯರ ಶಾಸನಸಮ್ಮತ ಮಕ್ಕಳೆಂದು ಪರಿಗಣಿಸಲಾಗುತ್ತದೆ.

(೪). ಈ ಪ್ರಕರಣದಂತೆ ಹೊರಡಿಸಿದ

(೪) ಈ ಪ್ರಕರಣದನ್ವಯ ತೊಂದರೆಗೊಳಗಾದ ವಿವಾಹ ಭಾಗೀದಾರರು ಯಾರೇ ಆಗಲಿ, ಆ ಆದೇಶದ ವಿರುದ್ಧವಾಗಿ ಸ್ಥಳೀಯ ಮಿತಿಗಳೊಳಗೆ, ೩ನೆಯ ಪ್ರಕರಣದಲ್ಲಿ ವಿವರಿಸಿದಂತೆ ಜಿಲ್ಲಾ ನ್ಯಾಯಾಲಯದಲ್ಲಿ ಮೇಲು ಮನವಿ ಹೂಡಬಹುದು. ಅಂತಹ ಅಪೀಲಿನ ಮೇಲೆ ಜಿಲ್ಲಾ ನ್ಯಾಯಾಲಯವು ನೀಡುವ ತೀರ್ಪು ಅಂತಿಮವಾಗಿರುತ್ತದೆ.

ಯಾವುದೇ ಆದೇಶದಿಂದ ತೊಂದರೆಗೊಳಗಾದ ಭಾಗೀದಾರರಲ್ಲಿ ಯಾರೊಬ್ಬರು ಆ ಆದೇಶದ ವಿರುದ್ಧವಾಗಿ ಸ್ಥಳೀಯ ಮಿತಿಗೊಳಪಟ್ಟ ಜಿಲ್ಲಾ ನ್ಯಾಯಾಲಯದಲ್ಲಿ ಅಪೀಲು ಹಾಕಬಹುದು. ಜಿಲ್ಲಾ ನ್ಯಾಯಾಲಯವು ಅದರ ಮೇಲೆ ಕೊಡುವ ತೀರ್ಪು ಅಂತಿಮವಾಗಿರುತ್ತದೆ.

(೨೨)

**ವಿವಾಹ ದಾಖಲೆಗಳ ಉಪಯೋಗ**

೨೨. ವಿವಾಹ ದಾಖಲೆಗಳು ಪರೀಕ್ಷೆ ಮೊದಲಾದವುಗಳಿಗೆ ಲಭ್ಯವಾಗಿರುತ್ತವೆ – ಹಿಂದು ಧಾರ್ಮಿಕ ವಿವಾಹ ರಿಜಿಸ್ಟರ್ ಹಾಗೂ ಹಿಂದೂ ಲೌಕಿಕ ವಿವಾಹ ಪ್ರಮಾಣ ಪುಸ್ತಕ ಇವು, ನ್ಯಾಯಸಮ್ಮತವಾದ ಎಲ್ಲಾ ಸಮಯಗಳಲ್ಲೂ ತಪಾಸಣೆಗೆ ಲಭ್ಯವಾಗಿರುತ್ತವೆ. ಅಲ್ಲಿರುವ ಹೇಳಿಕೆಗಳ ಸತ್ಯತೆಯ ಸಾಕ್ಷ್ಯವಾಗಿ ಅಂಗೀಕೃತವಾಗುತ್ತವೆ. ಅವುಗಳನ್ನು ಪ್ರಮಾಣಿತ ನಕಲುಗಳನ್ನು ವಿಧಿಸಿರುವ ಶುಲ್ಕವನ್ನು ಪಾವತಿ ಮಾಡಿದಲ್ಲಿ ರಿಜಿಸ್ಟ್ರಾರನು ಒದಗಿಸುತ್ತಾನೆ.

**೨೨. ತಪಾಸಣೆಗಾಗಿ ವಿವಾಹ ದಾಖಲೆಗಳು ಲಭ್ಯವಾಗುವಿಕೆ ಇತ್ಯಾದಿ**

ಹಿಂದೂ ಧಾರ್ಮಿಕ ವಿವಾಹ ರಿಜಿಸ್ಟರ್ ಹಾಗೂ ಹಿಂದೂ ಲೌಕಿಕ ವಿವಾಹ ಪ್ರಮಾಣಪತ್ರ ಪುಸ್ತಕಗಳು, ನ್ಯಾಯಸಮ್ಮತವಾದ ಎಲ್ಲಾ ಸಮಯಗಳಲ್ಲೂ ತಪಾಸಣೆಗೆ ಲಭ್ಯವಾಗಿರುತ್ತವೆ. ಅಲ್ಲಿರುವ ಹೇಳಿಕೆಗಳ ಸತ್ಯತೆಗೆ ಸಾಕ್ಷ್ಯಾಧಾರವಾಗಿ ಅವು ಅಂಗೀಕೃತ ವಾಗುತ್ತದೆ.

ಅವುಗಳ ಪ್ರಮಾಣಿತ ಪ್ರತಿಗಳನ್ನು ಅರ್ಜಿ ಹಾಕಿಕೊಂಡು ನಿಗದಿತ ಶುಲ್ಕವನ್ನು ಪಾವತಿ ಮಾಡಿದರೆ ರಿಜಿಸ್ಟ್ರಾರನು ಒದಗಿಸುತ್ತಾನೆ.

(೨೩)

**೨೩. ಜನನ, ಮರಣ ಮತ್ತು ವಿವಾಹಗಳ ರಿಜಿಸ್ಟ್ರಾರ್ ಜನರಲ್ ಅವರಿಗೆ ವಿವಾಹ ದಾಖಲೆಗಳಲ್ಲಿನ ನಮೂದುಗಳ ಪ್ರತಿಗಳನ್ನು ರವಾನಿಸುವುದು:–**

ರಿಜಿಸ್ಟ್ರಾರನು ತನ್ನ ಜಿಲ್ಲೆಯಿರುವ ರಾಜ್ಯದ ಜನನಗಳು, ಮರಣಗಳು ಮತ್ತು ವಿವಾಹಗಳ ರಿಜಿಸ್ಟ್ರಾರ್ ಜನರಲ್ ಅವರಿಗೆ

(೨೨)

**೨೩ ವಿವಾಹ ದಾಖಲೆಗಳಲ್ಲಿ ನಮೂದುಗಳ ಪ್ರತಿಗಳನ್ನು ಜನನಗಳು, ಮರಣಗಳು ಮತ್ತು ವಿವಾಹಗಳ ರಿಜಿಸ್ಟ್ರಾರ್ ಜನರಲ್ ಅವರಿಗೆ ರವಾನಿಸುವುದು :–**

ರಿಜಿಸ್ಟ್ರಾರನು ತನ್ನ ಜಿಲ್ಲೆಯಿರುವ ಪ್ರಾಂತದ ಜನನಗಳು,

**ಭಾಗ–೪**
**ಪ್ರಕರಣ–೨೦**
**ಪುಟ–೧೮**

ನಿಗದಿಗೊಳಿಸುವ ಕಾಲಾವಧಿಯಲ್ಲಿ, ಹಿಂದೂ ಧಾರ್ಮಿಕ ವಿವಾಹ ರಿಜಿಸ್ಟರ್ ಹಾಗೂ ಹಿಂದೂ ಲೌಕಿಕ ವಿವಾಹ ಪ್ರಮಾಣಪತ್ರ ರಿಜಿಸ್ಟರುಗಳಲ್ಲಿ, ಹಿಂದಿನ ಕಾಲಾವಧಿಯಿಂದ ಈಚೆಗೆ ಮಾಡಿರುವ ನಮೂದುಗಳೆಲ್ಲದರ ನೇರ ಪ್ರತಿಯನ್ನು ನಿಗದಿತ ನಮೂನೆಯಲ್ಲಿ ಸಿದ್ಧಪಡಿಸಿ, ಅದನ್ನು ಪ್ರಮಾಣಿಸಿ ಕಳಿಸಬೇಕು.

**(೨೪)**

**ವಿವಾಹದಲ್ಲಿ ಪಾಲಕತ್ವ**

**೨೪. ವಿವಾಹದಲ್ಲಿ ಪಾಲಕರ ನಡುವೆ ಆದ್ಯತೆಗಳು:–**

IVನೆಯ ಭಾಗದ ಅವಕಾಶಗಳಿಗೆ ಒಳಪಟ್ಟು, ವಿವಾಹದಲ್ಲಿ ಪಾಲಕರ ಅನುಮೋದನೆ ಎಲ್ಲೆಲ್ಲಿ ಅಗತ್ಯವಾಗಿದೆಯೋ ಅಲ್ಲೆಲ್ಲಾ ಅಂತಹ ಸಮ್ಮತಿ ನೀಡಲು ಈ ಕೆಳಗೆ ನಮೂದಿಸಿರುವ ನಿರ್ದಿಷ್ಟ ಕ್ರಮದಲ್ಲಿ ಹಕ್ಕು ಪಡೆದಿರುತ್ತಾರೆ.

(೧) ತಂದೆ :

(೨) ತಾಯಿ:

(೩) ಸಹೋದರ:

......................................

......................................

(೪) ಬೇರೆ ಯಾರೇ ಸಂಬಂಧಿಕರು, ದೂರದವರಿಗಿಂತ ಹತ್ತಿರದ ಬಂಧುಗಳಿಗೆ ಆದ್ಯತೆ.

ವಿವರಣೆ :– ಇಬ್ಬರು ಬಂಧುಗಳಲ್ಲಿ ಮೇಲಿನ (೪)ನೆಯ ಪಂಕ್ತಿಗೆ ಯಾರು ಹೆಚ್ಚು ಹತ್ತಿರದವರು ಎಂದು ನಿರ್ಧರಿಸುವಾಗ, VIIನೆಯ ಭಾಗದಲ್ಲಿ ಉಯಿಲಿನಲ್ಲಿ ನಮೂದಿಸಿರದ ವಾರಸುದಾರಿಕೆಯ ನಿಯಮಗಳ ಪ್ರಕಾರ ಪೋಷಿತನಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯನ್ನು ಪಡೆಯಲು ಯಾರಿಗೆ ಮೊದಲ ಅರ್ಹತೆಯಿದೆಯೋ ಅವರು ಎಂದು

ಮರಣಗಳು ಮತ್ತು ವಿವಾಹಗಳ ರಿಜಿಸ್ಟ್ರಾರ್ ಜನರಲ್ ಅವರಿಗೆ ನಿಗದಿತ ಕಾಲಾವಧಿಯಲ್ಲಿ ಹಿಂದಿನ ಕಾಲಾವಧಿಯಿಂದ ಈಚೆಗೆ ಹಿಂದೂ ಧಾರ್ಮಿಕ ವಿವಾಹ ರಿಜಿಸ್ಟರ್ ಹಾಗೂ ಹಿಂದೂ ಲೌಕಿಕ ವಿವಾಹ ಪ್ರಮಾಣಪತ್ರ ಪುಸ್ತಕಗಳಲ್ಲಿ ಮಾಡಿರುವ ನಮೂದುಗಳ ನಿಜ ಪ್ರತಿಗಳನ್ನು ನಿಗದಿತ ನಮೂನೆಯಲ್ಲಿ ತಯಾರಿಸಿ, ಪ್ರಮಾಣಿಸಿ ಕಳಿಸಿಕೊಡುತ್ತಾನೆ.

**(೨೩)**

**೨೪. ವಿವಾಹದ ಪಾಲಕತ್ವ :–**

ಭಾಗ–೪

**ಭಾಗ–೪ ಪ್ರಕರಣ–೨೨ ಪುಟ–೧೯**

(i) IVನೆಯ ಭಾಗದ ಅವಕಾಶಗಳಿಗೆ ಒಳಪಟ್ಟು, ಈ ಭಾಗದ ಪ್ರಕಾರ ಎಲ್ಲೆಲ್ಲಿ ಒಬ್ಬ ಪಾಲಕನ ಸಮ್ಮತಿಯ ಅಗತ್ಯವಿದೆಯೋ ಅಲ್ಲೆಲ್ಲಾ ಸಮ್ಮತಿ ನೀಡಲು ಈ ಕೆಳಗಿನವರು ಅನುಕ್ರಮದಲ್ಲಿ ಹಕ್ಕು ಪಡೆದಿರುತ್ತಾರೆ.

(೧) ತಂದೆ

(೨) ತಾಯಿ

(೩) ತಂದೆಯ ತಂದೆ–ಅಜ್ಜ

(೪) ಸಮೀಪ ಸೋದರ ಅಥವಾ ಮಲಸೋದರ. ಮಲ ಸೋದರನಿಗಿಂತ ಸಮೀಪದ ಸೋದರನಿಗೆ ಆದ್ಯತೆ; ಇಬ್ಬರೂ ಸಮೀಪ ಸೋದರರೋ ಮಲಸೋದರರೋ ಆಗಿದ್ದರೆ ವಯಸ್ಸಿನಲ್ಲಿ ಹಿರಿಯನಾದವನಿಗೆ ಆದ್ಯತೆ ;

**ಭಾಗ–೪ ಪ್ರಕರಣ–೧೯ ಪುಟ–೧೮**

(೫) ಚಿಕ್ಕಪ್ಪ (ತಂದೆಯ ತಮ್ಮ) ಸಮೀಪ ಅಥವಾ ಮಲಚಿಕ್ಕಪ್ಪ ಇಲ್ಲವೆ ದೊಡ್ಡಪ್ಪ, ಮೇಲಿನ (೪)ನೆಯ ನಮೂದಿನಲ್ಲಿರುವ ನಿಯಮವನ್ನೇ

ನಿರ್ಧರಿಸಬಹುದು.

(೨) ವ್ಯಕ್ತಿಯು ತನ್ನ ಇಪ್ಪತ್ತೊಂದನೆಯ ವರ್ಷವನ್ನು ಮುಗಿಸಿರದಿದ್ದರೆ, ಈ ಪ್ರಕರಣದ ಅವಕಾಶಗಳ ಪ್ರಕಾರ ವಿವಾಹದಲ್ಲಿ ಪಾಲಕನಾಗಿ ವರ್ತಿಸಲು ಅವನಿಗೆ/ಅವಳಿಗೆ ಅರ್ಹತೆಯಿರುವುದಿಲ್ಲ.

(೩) ಮೇಲೆ ಹೇಳಿದ ಅವಕಾಶಗಳ ಪ್ರಕಾರ ವಿವಾಹದಲ್ಲಿ ಪಾಲಕನಾಗಿ ವರ್ತಿಸಲು ಅರ್ಹತೆ ಪಡೆದಿರದ ಯಾವನಾದರೂ ವ್ಯಕ್ತಿಯು ಅದನ್ನು ನಿರಾಕರಿಸಿದರೆ, ಗೈರು ಹಾಜರಾಗಿಂಯೋ, ಏನಾದರೂ ಅಂಗವಿಕಲತೆಯಿಂದಲೋ ಬೇರಾವುದೋ ಕಾರಣದಿಂದಲೋ ಅಸಮರ್ಥನಾದರೆ, ಅಥವಾ ಯೋಗ್ಯನಲ್ಲವಾದರೆ, ಅನುಕ್ರಮದ ಮುಂದಿನ ವ್ಯಕ್ತಿಯು ವಿವಾಹದಲ್ಲಿ ಪಾಲಕನಾಗಿ ಅರ್ಹನಾಗುತ್ತಾನೆ.

(೩) ಅಪ್ರಾಪ್ತ ವಯಸ್ಕ ಮಗುವಿನ ಹಿತದ ದೃಷ್ಟಿಯಿಂದ ಅಗತ್ಯವೆಂದು ನ್ಯಾಯಾಲಯವು ಭಾವಿಸಿದ ಪಕ್ಷದಲ್ಲಿ ಆದೇಶ ನೀಡಿ, ವಿವಾಹದಲ್ಲಿನ ಪಾಲಕನು ವ್ಯವಸ್ಥೆ ಮಾಡಿರುವ ಉದ್ದೇಶಿತ ವಿವಾಹವನ್ನು ನಿಷೇಧಿಸುವ ನ್ಯಾಯಾಲಯದ ಅಧಿಕಾರವನ್ನು ಈ ಭಾಗದ ಯಾವ ಅಂಶವೂ ತಡೆಯುವುದಿಲ್ಲ.

**(೨೫)**

**ಮರುಮಕ್ಕತ್ತಾಯಿಗಳು ಮೊದಲಾದವರಲ್ಲಿ ಊರ್ಜಿತವಾಗುವ ವಿವಾಹವನ್ನು ಕುರಿತ ವಿಶೇಷ ಅವಕಾಶಗಳು.**

**೨೪ A. ಮರುಮಕ್ಕತ್ತಾಯಂ ಅಥವಾ ಅಳಿಯ ಸಂತಾನ ಹೆಣ್ಣಿನ ಮದುವೆಗೆ ಸಂಬಂಧಿಸಿದ** ಇಲ್ಲಿಯೂ ಅನ್ವಯಿಸಲಾಗುತ್ತದೆ.

(೬) ತಾಯಿಯ ತಂದೆ (ತಾತ)

(೭) ಸೋದರಮಾವ, ಆದ್ಯತೆಯು ನಿಯಮಗಳು ಮೇಲೆ (೪)ನೆಯ ನಮೂದಿನಲ್ಲಿ ಹೇಳಿರುವ ಹಾಗೆಯೇ ಅನ್ವಯಿಸುತ್ತವೆ.

(೮) ಬೇರೆ ಯಾವನೇ ಬಂಧು, ದೂರದವರಿಗಿಂತ ಸಮೀಪದವರಿಗೆ ಆದ್ಯತೆ, ಒಂದೇ ರೀತಿಯ ಸಂಬಂಧವಿದ್ದರೆ ಮೇಲೆ (೪)ರಲ್ಲಿ ಹೇಳಿರುವ ಅನುಕ್ರಮ ಆದ್ಯತೆ ಇಲ್ಲಿಯೂ ಅನ್ವಯಿಸುತ್ತದೆ.

ವಿವರಣೆ :– ಮೇಲಿನ (೮)ನೆಯ ನಮೂದಿಗೆ ಸೇರಿಸುವ ಉದ್ದೇಶದಿಂದ ಇಬ್ಬರು ಬಂಧುಗಳಲ್ಲಿ ಯಾರು ಹೆಚ್ಚು ಹತ್ತಿರದವರು ಎಂದು ನಿರ್ಧರಿಸಲು VIIನೆಯ ಭಾಗದಲ್ಲಿ ಉಯಿಲು ಬರೆದಿಡದ ವಾರಸುದಾರಿಕೆ ನಿಯಮಗಳ ಪ್ರಕಾರ ಪೋಷಿತನ ಪಿತ್ರಾರ್ಜಿತ ಆಸ್ತಿಗೆ ಯಾರು ಮೊದಲು ಅರ್ಹನಾಗಿರುತ್ತಾನೋ ಅವನು ಹೆಚ್ಚು ಹತ್ತಿರದವನು ಎಂದು ನಿರ್ಧರಿಸಲಾಗುತ್ತದೆ.

(೨) ಈ ಪ್ರಕರಣದ ಅವಕಾಶಗಳ ಪ್ರಕಾರ ವ್ಯಕ್ತಿಯು ತಾನೇ ಇಪ್ಪತ್ತೊಂದು ವರ್ಷ ವಯಸ್ಸನ್ನು ಮುಗಿಸಿರದಿದ್ದರೆ, ಅಂತಹ ಯಾವವ್ಯಕ್ತಿಗೂ ಮದುವೆಯಲ್ಲಿ ಪಾಲಕನಾಗಿ ವರ್ತಿಸಲು ಅರ್ಹತೆಯಿರುವುದಿಲ್ಲ.

(೩) ಮೇಲೆ ಹೇಳಿದ ಅವಕಾಶಗಳ ಪ್ರಕಾರ ವಿವಾಹದಲ್ಲಿ ಪಾಲಕನಾಗಲು ಅರ್ಹತೆಯಿರುವ ಯಾವನೇ ವ್ಯಕ್ತಿಯು ಅದನ್ನು ಒಪ್ಪದೆ ಹೋದರೆ, ಅಥವಾ ಗೈರುಹಾಜರಾಗಿಯೋ, ಅಂಗ ವಿಕಲತೆ

**ನಿಯಮಗಳು :–**

(೧) ಈ ಸಂಹಿತೆಯು ಜಾರಿಗೆ ಬರದೆ ಹೋಗಿದ್ದರೆ ಮರುಮಕ್ಕತ್ತಾಯಂ ಅಥವಾ ಅಳಿಯ ಸಂತಾನ ಕಾನೂನು ಯಾರಿಗೆ ಅನ್ವಯವಾಗುತ್ತಿದ್ದಿತೋ ಆ ಒಬ್ಬ ಹೆಣ್ಣಿಗೂ, ಒಬ್ಬ ಹಿಂದೂ ಗಂಡಿಗೂ ಮದುವೆಯನ್ನು ಈ ಸಂಹಿತೆಯು ಜಾರಿಗೆ ಬಂದ ನಂತರ ವಿಧ್ಯುಕ್ತಗೊಳಿಸಿದ ಪಕ್ಷದಲ್ಲಿ, ೭ನೆಯ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ನಿಯಮಗಳನ್ನು ಅದು ಪೂರೈಸಿದ್ದರೆ, ಅದು ಒಂದು ಊರ್ಜಿತವಾದ ವಿವಾಹವಾಗುತ್ತದೆ.

ಮೇಲೆ ಹೇಳಿದ ಪ್ರಕರಣದ (V)ನೆಯ ಉಪವಾಕ್ಯದಲ್ಲಿ ನಿರ್ದಿಷ್ಟಪಡಿಸಿದ ನಿಯಮವು ಅಂತಹ ಯಾವುದೇ ವಿವಾಹಕ್ಕೆ ಅನ್ವಯವಾಗುವುದಿಲ್ಲ.

(೨) ಈ ಪ್ರಕರಣದ ಪ್ರಕಾರ ಪ್ರತಿಯೊಂದು ವಿವಾಹವನ್ನೂ ವಿವಾಹ ಭಾಗೀದಾರರು ಸೇರಿರುವ ಅಥವಾ ಇಬ್ಬರಲ್ಲಿ ಒಬ್ಬರು ಸೇರಿರುವ ಸಮುದಾಯದಲ್ಲಿ ಪ್ರಚಲಿತವಾದ ರೂಢಿಯ ಕಾರ್ಯಾಚರಣೆಗಳ ಪ್ರಕಾರ ಬಹಿರಂಗವಾಗಿ ವಿಧ್ಯುಕ್ತಗೊಳಿಸಲಾಗುತ್ತದೆ.

ಮೇಲೆ ಹೇಳಿದ ಯಾವುದೇ ರೂಢಿಯ ಆಚರಣೆಗಳನ್ನು ನಡೆಸುವುದರಲ್ಲಿ ಲೋಪದೋಷಗಳಿವೆಯೆಂಬ ಕಾರಣದಿಂದ ಮಾತ್ರವೇ ಅಂತಹ ವಿವಾಹವನ್ನು ಅನೂರ್ಜಿತವೆಂದು ಪರಿಗಣಿಸುವುದು ಸಾಧ್ಯವಿಲ್ಲ.

(೩) ಈ ಪ್ರಕರಣದ ಪ್ರಕಾರ, ವಿಧಿಸಲಾಗುವ ಬಗೆಯ ವ್ಯಕ್ತಿಯು, ಅಂತಹ ಅಥವಾ ಬೇರೆ ಯಾವುದೇ ಕಾರಣದಿಂದಲೋ ಹಾಗೆ ವರ್ತಿಸಲು ಅಸಮರ್ಥನಾಗಿದ್ದರೆ, ಅಥವಾ ಯೋಗ್ಯತೆಯಿಲ್ಲದವನಾಗಿದ್ದರೆ, ಅನುಕ್ರಮದಲ್ಲಿ ಮುಂದಿನ ವ್ಯಕ್ತಿಯು ಪಾಲಕನಾಗಲು ಅರ್ಹತೆ ಪಡೆಯುತ್ತಾನೆ.

(೪) ಒಬ್ಬ ಪಾಲಕನ ಉದ್ದೇಶಿತ ವಿವಾಹವನ್ನು, ಅಪ್ರಾಪ್ತ ವಯಸ್ಕ ಮಗುವಿನ ಹಿತದ ದೃಷ್ಟಿಯಿಂದ ನ್ಯಾಯಾಲಯವು ಅಗತ್ಯವೆಂದು ಭಾವಿಸಿದರೆ, ಒಂದು ಆದೇಶದ ಮೂಲಕ ನಿಷೇಧಿಸಬಹುದು. ನ್ಯಾಯಾಲಯ ಕೇಳಿರುವ ಈ ನ್ಯಾಯಾಧಿಕಾರ ವ್ಯಾಪ್ತಿಗೆ ಈ ವಿಭಾಗದಲ್ಲಿರುವ ಯಾವ ಅಂಶವೂ ತಡೆಯಾಗುವುದಿಲ್ಲ.

(೨೪)

**೨೫. ದ್ವಿಪತ್ನಿತ್ವ ವಿವಾಹ ಮತ್ತು ಅದಕ್ಕಾಗಿ ಶಿಕ್ಷೆ:–**

**ಭಾಗ–೫ ಪ್ರಕರಣ–೨೪ ಪುಟ–೧೯**

ಯಾವುದೇ ವ್ಯಕ್ತಿಯು ತನ್ನ ಪತಿ/ಪತ್ನಿಯು ಬದುಕಿರುವಾಗಲೇ, ಪತಿ/ಪತ್ನಿಯೊಂದಿಗಿನ ವಿವಾಹವನ್ನು ನ್ಯಾಯಾಲಯವು ಸೂಕ್ತ ನ್ಯಾಯಾಧಿಕಾರವುಳ್ಳ ನ್ಯಾಯಾಲಯವು ರದ್ದುಪಡಿಸಿರದಿದ್ದರೆ, ಈ ಸಂಹಿತೆಯು ಕಾರ್ಯಾರಂಭಮಾಡಿದ ಮೇಲೆ, ಯಾವುದೇ ಮದುವೆ ಮಾಡಿಕೊಂಡ ಪಕ್ಷದಲ್ಲಿ, ಇಂಡಿಯನ್ ಪೀನಲ್ ಕೋಡ್ ೧೮೬೦ (XLV-1860)ನ ೪೯೪–೪೯೫ನೆಯ ಪ್ರಕರಣಗಳ ಪ್ರಕಾರವಾಗಿ ಪತಿ–ಪತ್ನಿ ಜೀವಂತವಾಗಿರುವಾಗಲೆ ಮರು ವಿವಾಹಮಾಡಿಕೊಂಡ ಅಪರಾಧಕ್ಕಾಗಿ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸಲಾಗುವುದು.

ಅಧಿಕಾರಿಗೆ, ಆ ಬಗೆಯ ರೂಪದಲ್ಲಿ ಆ ಕಾಲಾವಧಿಯೊಳಗಾಗಿ ಪ್ರತಿಯೊಂದು ಮದುವೆಯ ನೋಟೀಸನ್ನು ಸಲ್ಲಿಸುತ್ತಾನೆ.

(೪) ಈ ಸಂಹಿತೆಯು ಜಾರಿಗೆ ಬರದೆ ಹೋಗಿದ್ದರೆ ಮರುಮಕ್ಕತ್ತಾಯಂ ಅಥವಾ ಅಳಿಯ ಸಂತಾನ ಕಾನೂನು ಅನ್ವಯುವಾಗುತ್ತಿದ್ದ ಹೆಣ್ಣಿಗೂ, ಅಂಥದೊಂದು ಕಾನೂನು ಅನ್ವಯುವಾಗದ ಒಬ್ಬ ಹಿಂದು ಗಂಡಿಗೂ ನಡುವೆ ವಿವಾಹವನ್ನು ಈ ಪ್ರಕರಣದ ಅವಕಾಶಗಳ ಪ್ರಕಾರ ವಿಧ್ಯುಕ್ತಗೊಳಿಸಿದ ಪಕ್ಷದಲ್ಲಿ (೩)ನೆಯ ಉಪಪ್ರಕರಣದಲ್ಲಿ ಕೊಟ್ಟಿರುವ ನೋಟೀಸಿನಂತೆ ಒಂದು ಹೇಳಿಕೆಯನ್ನು ಆ ವಿವಾಹ ಭಾಗೀದಾರರು ಕೊಡಬೇಕು. ಅದರಲ್ಲಿ, ಮರುಮಕ್ಕತ್ತಾಯಂ ಅಥವಾ ಅಳಿಯ ಸಂತಾನ ವಿವಾಹಗಳ ರದ್ದತಿಗೆ ಸಂಬಂಧಿಸಿದಂತೆ ಈ ಭಾಗದಲ್ಲಿರುವ ವಿಶೇಷ ಅವಕಾಶಗಳಿಗೆ ತಾವು ಒಳಪಡಲು ಬಯಸುವುದಾಗಿ ಆ ಹೇಳಿಕೆಯಲ್ಲಿ ಸ್ಪಷ್ಟಪಡಿಸಬೇಕು. ಅಂತಹ ಹೇಳಿಕೆಯನ್ನು ನೀಡದೆ ಹೋದ ಪಕ್ಷದಲ್ಲಿ –

(ಅ) ಆ ವಿಶೇಷ ಅವಕಾಶದಲ್ಲಿ (ಈ ಪ್ರಕರಣ ಹೊರತು) ಇರುವ ಏನೊಂದೂ ಭಾಗೀದಾರರಲ್ಲಿ ಯಾರೊಬ್ಬರಿಗೂ ಅನ್ವಯಿಸುವುದಿಲ್ಲ; ಮತ್ತು

(ಆ) ಈ ಭಾಗದ II ಮತ್ತು III ನೆಯ ಅಧ್ಯಾಯಗಳು ಒಂದು ಧಾರ್ಮಿಕ ವಿವಾಹಕ್ಕೆ ಅನ್ವಯವಾಗುತ್ತವೆ. ಅಥವಾ ಅದಕ್ಕೆ ಸಂಬಂಧಿಸಿದಂತೆ ಆ ಬಗೆಯ (೨೬)

ವಿವಾಹಕ್ಕೆ ಅನ್ವಯಿಸುತ್ತವೆ.

(೫) (೩) ನೆಯ ಉಪಪ್ರಕರಣದಲ್ಲಿ ಹೇಳಿರುವಂತೆ ವಿವಾಹದ ನೋಟೀಸನ್ನು ಯಾವನೇ ಒಬ್ಬ ವ್ಯಕ್ತಿಯು ಕೊಡದೆಹೋದರೆ ಅವನಿಗೆ ೫೦ ರೂಪಾಯಿವರೆಗೆ ವಿಸ್ತರಿಸಬಹುದಾದ ದಂಡ ವಿಧಿಸಿ ಶಿಕ್ಷಿಸಬಹುದು.

ಹಾಗೆ ನೋಟೀಸು ಕೊಡದಿರುವುದು ಮದುವೆಯನ್ನು ಅನೂರ್ಜಿತಗೊಳಿಸುವುದಿಲ್ಲ ಅಥವಾ ವಿವಾಹ ಭಾಗೀದಾರರ ಅಥವಾ ಅಂತಹ ವಿವಾಹ ಫಲವಾದ ಸಂತಾನದ ನ್ಯಾಯಿಕ ಹಕ್ಕುಗಳ ಮೇಲೆ ದುಷ್ಪರಿಣಾಮವನ್ನು ಉಂಟುಮಾಡುವುದಿಲ್ಲ.

**(೨೬)**

**ಜುಲ್ಮಾನೆಗಳು ಇತ್ಯಾದಿ**

ಯಾವನೇ ಒಬ್ಬ ವ್ಯಕ್ತಿಯು ತನ್ನ ಪತಿ/ಪತ್ನಿಯು ಜೀವಿಸಿರುವಾಗ, ಆ ವಿವಾಹವು ಈ ಸಂಹಿತೆಯ ಅವಕಾಶಗಳ ಪ್ರಕಾರ ರದ್ದುಗೊಂಡಿರದ ಪಕ್ಷದಲ್ಲಿ, ಕಾನೂನು ಪ್ರಕಾರ, ಆ ಕಾಲದಲ್ಲಿ ಚಾಲ್ತಿಯಲ್ಲಿರುವ ರೂಢಿ ಅಥವಾ ಪದ್ಧತಿಗಳ ಪ್ರಕಾರ ರದ್ದುಗೊಂಡಿರದ ಪಕ್ಷದಲ್ಲಿ, ಅವನು/ಅವಳು ಬೇರೊಂದು ವಿವಾಹವನ್ನು ಮಾಡಿಕೊಂಡರೆ, ಈ ಸಂಹಿತೆಯು ಜಾರಿಗೆ ಬಂದಿದ್ದರೆ, ಅವನು/ಅವಳು, ಪತಿ/ ಪತ್ನಿ ಜೀವಿಸಿರುವಾಗ ಬೇರೊಂದು ವಿವಾಹ ಮಾಡಿಕೊಂಡ ಅಪರಾಧಕ್ಕಾಗಿ ಇಂಡಿಯನ್ ಪೀನಲ್ ಕೋಡ್ (೧೮೬೦ರ XLVನೆಯ ಶಾಸನ)ನ ೪೯೪ಮತ್ತು ೪೯೫ನೆಯ ಪ್ರಕರಣಗಳಲ್ಲಿ ಹೇಳಿರುವ ಜುಲ್ಮಾನೆಗಳಿಗೆ ಒಳಪಡಬೇಕಾಗುತ್ತದೆ.

**(೨೭)**

**೨೬. ಸುಳ್ಳು ಹೇಳಿಕೆ ಅಥವಾ ಪ್ರಮಾಣ ಪತ್ರಕ್ಕೆ ಸಹಿಮಾಡಿದುದಕ್ಕೆ ಶಿಕ್ಷೆ:–**
ಈ ಭಾಗದಲ್ಲಿ ಅಗತ್ಯವೆಂದು ಹೇಳಿರುವ, ಸುಳ್ಳಾದ, ತಾನು ಸುಳ್ಳೆಂದು ತಿಳಿಯುವ ಅಥವಾ ನಂಬಿರುವ ಅಥವಾ ಸತ್ಯವೆಂದು ನಂಬದ ಒಂದು ಹೇಳಿಕೆಗೆ ಅಥವಾ ಪ್ರಮಾಣಪತ್ರವನ್ನು ರಚಿಸುವ, ಅಥವಾ ಅದಕ್ಕೆ ಸಹಿಮಾಡುವ ಅಥವಾ ಅದನ್ನು ಪ್ರಮಾಣಿಸುವ ಪ್ರತಿಯೊಬ್ಬ ವ್ಯಕ್ತಿಯೂ ಇಂಡಿಯನ್ ಪೀನಲ್ ಕೋಡ್ (೧೮೬೦ರ XLVನೆಯ ಶಾಸನ) ೧೯೯ನೆಯ ಪ್ರಕರಣದಲ್ಲಿ ವಿವರಿಸಿರುವ ಅಪರಾಧ ಮಾಡಿದಂತಾಗುತ್ತದೆ.

**(೨೮)**

**ಅಧ್ಯಾಯ – ೨**

**ದಾಂಪತ್ಯ ಹಕ್ಕುಗಳ ಪುನಃ ಪ್ರದಾನ ಮತ್ತು ನ್ಯಾಯಿಕ ಬೇರ್ಪಡಿಕೆ**

**೨೭. ದಾಂಪತ್ಯ ಹಕ್ಕುಗಳ ಪುನಃ ಪ್ರದಾನಕ್ಕಾಗಿ ಮನವಿ :–** ಪತಿ ಅಥವಾ ಪತ್ನಿಯು ನ್ಯಾಯಸಮ್ಮತವಾದ ಕಾರಣವಿಲ್ಲದೆ ಸಹವಾಸದಿಂದ ಹಿಂದೆಗೆದಿದ್ದರೆ, ನೊಂದ ವ್ಯಕ್ತಿಯು ದಾಂಪತ್ಯ ಹಕ್ಕುಗಳನ್ನು ಮರಳಿ ದೊರಕಿಸಿಕೊಡಬೇಕೆಂದು ಜಿಲ್ಲಾ ನ್ಯಾಯಾಲಯಕ್ಕೆ ಮನವಿ ಮಾಡಿಕೊಳ್ಳಬಹುದು. ಆ ಅರ್ಜಿಯಲ್ಲಿ ನೀಡಿರುವ ಹೇಳಿಕೆಗಳ ಸತ್ಯಾಂಶದ ಬಗೆಗೆ ತೃಪ್ತಿಯಾದರೆ, ಆ ಮನವಿಯನ್ನು ಪುರಸ್ಕರಿಸದಿರುವುದಕ್ಕೆ ಯಾವುದೇ ನ್ಯಾಯಿಕ ಆಧಾರವಿಲ್ಲದೆ ಹೋದ ಪಕ್ಷದಲ್ಲಿ ಸೂಕ್ತವಾಗಿ ದಾಂಪತ್ಯ ಹಕ್ಕುಗಳನ್ನು ಪುನಃ ಪ್ರದಾನಮಾಡಿ ತೀರ್ಪುಕೊಡಬಹುದು.

**೨೬. ಸುಳ್ಳು ಹೇಳಿಕೆಗೆ ಅಥವಾ ಪ್ರಮಾಣ ಪತ್ರಕ್ಕೆ ಸಹಿ ಮಾಡಿದುದಕ್ಕಾಗಿ ಶಿಕ್ಷೆ:–**
ಈ ಭಾಗದಲ್ಲಿ ಅಗತ್ಯವಾಗಿರುವಂತೆ, ಸುಳ್ಳಾಗಿರುವ ಮತ್ತು ಸುಳ್ಳೆಂದು ತಿಳಿದಿರುವ ಅಥವಾ ನಂಬಿರುವ, (**ಭಾಗ–೪ ಪ್ರಕರಣ–೨೨ ಪುಟ–೧೮**) ಅಥವಾ ಸತ್ಯವಲ್ಲವೆಂದು ಭಾವಿಸುವ ಒಂದು ಹೇಳಿಕೆಯನ್ನು ನೀಡುವ, ಅದಕ್ಕೆ ಸಹಿ ಮಾಡುವ ಅಥವಾ ಪ್ರಮಾಣಿಸುವ ಪ್ರತಿಯೊಬ್ಬ ವ್ಯಕ್ತಿಯೂ ಭಾರತೀಯ ದಂಡ ಸಂಹಿತೆ (Indian Penal Code) 1860 (XLV-1860)ದ ೧೯೯ನೆಯ ಪ್ರಕರಣದಲಿ ವರ್ಣಿಸಿರುವ ಅಪರಾಧ ಮಾಡಿರುವನೆಂದು ಪರಿಗಣಿಸಲಾಗುತ್ತದೆ.

**(೨೭)**

**೩೧. ದಾಂಪತ್ಯ ಹಕ್ಕುಗಳ ಪುನಃ ಪ್ರದಾನಕ್ಕಾಗಿ ಅಹವಾಲು :–** ಪತಿ ಅಥವಾ ಪತ್ನಿಯು, ನ್ಯಾಯಸಮ್ಮತ ಕಾರಣವಿಲ್ಲದೆ ಒಬ್ಬರು ಇನ್ನೊಬ್ಬರ ಸಹವಾಸದಿಂದ [illegible] ಪ್ರತ್ಯೇಕಗೊಂಡಿದ್ದಲ್ಲಿ, ನೊಂದ ವ್ಯಕ್ತಿಯು ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, ದಾಂಪತ್ಯ ಹಕ್ಕುಗಳ ಪುನಃ ಪ್ರದಾನವನ್ನು ಕೋರಬಹುದು. ಅಂತಹ ಅರ್ಜಿಯಲ್ಲಿ ಕೊಟ್ಟಿರುವ ಹೇಳಿಕೆಗಳ ಸತ್ಯತೆಯನ್ನು ಮನಗಂಡಮೇಲೆ, ಕೋರಿಕೆಯನ್ನು ಈಡೇರಿಸದಿರುವುದಕ್ಕೆ ನ್ಯಾಯಿಕವಾದ ಆಧಾರ ಯಾವುದೂ ಇಲ್ಲದ ಪಕ್ಷದಲ್ಲಿ, ನ್ಯಾಯಾಲಯವು ದಾಂಪತ್ಯ ಹಕ್ಕುಗಳ ಪುನಃ ಪ್ರದಾನಕ್ಕೆ ಆದೇಶ ನೀಡಬಹುದು.

(೨೯)

**೨೮. ದಾಂಪತ್ಯ ಹಕ್ಕುಗಳ ಪುನಃ ಪ್ರದಾನಕ್ಕಾಗಿ ಸಲ್ಲಿಸುವ ಮನವಿಗೆ ಉತ್ತರ:–**
ದಾಂಪತ್ಯ ಹಕ್ಕುಗಳ ಪುನಃ ಪ್ರದಾನಕ್ಕಾಗಿ ಸಲ್ಲಿಸುವ ಅರ್ಜಿಗೆ, ಉತ್ತರವಾಗಿ, ನ್ಯಾಯಿಕ ಬೇರ್ಪಡಿಕೆ ಅಥವಾ ವಿವಾಹರದ್ದತಿ ಆದೇಶಕ್ಕೆ ಆಧಾರವಾಗುವಂತಹ ಏನನ್ನೂ ಹೇಳುವಂತಿಲ್ಲ.

(೩೦)

**೨೯. ನ್ಯಾಯಿಕವಾದ ಬೇರ್ಪಡಿಕೆ:– ಈ** ಸಂಹಿತೆಯು ಚಾಲನೆಗೊಳ್ಳುವ ಮೊದಲು ಅಥವಾ ಆಮೇಲೆ ವಿಧ್ಯುಕ್ತಗೊಂಡ ವಿವಾಹದ ಭಾಗೀದಾರರಲ್ಲಿ ಯಾರೊಬ್ಬರು ಈ ಕೆಳಗಿನ ಆಧಾರದ ಮೇಲೆ ನ್ಯಾಯಿಕ ಬೇರ್ಪಡಿಕೆಯನ್ನು ಕೋರಿ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿಸಲ್ಲಿಸಬಹುದು. ಇನ್ನೊಬ್ಬ ಭಾಗೀದಾರರು–

(ಅ) ಅರ್ಜಿಸಲ್ಲಿಸುವುದಕ್ಕಿಂತ ಮೊದಲು ಎರಡು ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಗೆ **ಯಾವ ಕಾರಣವೂ ಇಲ್ಲದೆ** ಅರ್ಜಿದಾರರನ್ನು ಬಿಟ್ಟು ಹೋಗಿದ್ದರೆ;

(ಆ) ಇನ್ನೊಬ್ಬ ಭಾಗೀದಾರರೊಂದಿಗೆ ಬದುಕುವುದು ಅರ್ಜಿದಾರರಿಗೆ ಕ್ಷೇಮಕರವಲ್ಲದ ಹಾಗೆ ಕ್ರೂರವಾಗಿ ನಡೆದುಕೊಂಡಿದ್ದರೆ.

(ಇ) ಅರ್ಜಿಯನ್ನು ಸಲ್ಲಿಸುವುದಕ್ಕಿಂತ ಒಂದು ವರ್ಷಕ್ಕೆ ಕಡಿಮೆಯಿಲ್ಲದ ಅವಧಿಯಲ್ಲಿ, ಸೋಂಕು ಗುಹ್ಯರೋಗಗಳಿಂದ ನರಳುತ್ತಿದ್ದರೆ, ಆದರೆ, ಅದನ್ನು ಅರ್ಜಿದಾರರಿಂದ ಸೋಂಕು ಹತ್ತಿಸಿಕೊಂಡಿರದಿದ್ದರೆ;

(ಈ) ಸಾಂಕ್ರಾಮಿಕ ರೂಪದ ಕುಷ್ಠ ರೋಗದಿಂದ ನರಳುತ್ತಿದ್ದರೆ ;

(೨೮)

**೩೧. ದಾಂಪತ್ಯ ಹಕ್ಕುಗಳ ಪುನಃ ಪ್ರದಾನಕ್ಕಾಗಿ ಸಲ್ಲಿಸುವ ಮನವಿಗೆ ಉತ್ತರ :–**
ದಾಂಪತ್ಯ ಹಕ್ಕುಗಳ ಪುನಃ ಪ್ರದಾನಕ್ಕಾಗಿ ಸಲ್ಲಿಸುವ ಅರ್ಜಿಗೆ ಉತ್ತರವಾಗಿ, ನ್ಯಾಯಿಕ ಬೇರ್ಪಡಿಕೆಗಾಗಲಿ, ವಿವಾಹರದ್ಧತಿ ಆದೇಶಕ್ಕಾಗಲಿ ಆಧಾರವಾಗುವಂತಹ ಏನನ್ನೂ ಹೇಳುವಂತಿಲ್ಲ.

(೨೯)

**ನ್ಯಾಯಿಕವಾದ ಬೇರ್ಪಡಿಕೆ**

**೩೨. ನ್ಯಾಯಿಕ ಬೇರ್ಪಡಿಕೆ :–**
ಈ ಸಂಹಿತೆಯು ಚಾಲನೆಗೊಳ್ಳುವುದಕ್ಕೆ ಮುಂಚಿತವಾಗಿಯೋ **ಭಾಗ–೪**
ಆಮೇಲೋ ವಿಧ್ಯುಕ್ತಗೊಂಡಿದ್ದ **ಪ್ರಕರಣ–೩೦**
ವಿವಾಹದ ಭಾಗೀದಾರರಲ್ಲಿ **ಪುಟ–೨೧**
ಯಾರೇ ಒಬ್ಬರು ನ್ಯಾಯಿಕ ಬೇಡಿಕೆಯ ಆದೇಶವನ್ನು ಕೋರಿ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು. ಅದಕ್ಕೆ ಆಧಾರವಾಗಿ

(ಅ) ಇನ್ನೊಬ್ಬ ಭಾಗೀದಾರರು ಅರ್ಜಿದಾರರನ್ನು ಕೊನೆಯ ಪಕ್ಷ ಎರಡು ವರ್ಷಗಳ ಕಾಲ ಅಗಲಿರ ಬೇಕು;

(ಆ) ಅರ್ಜಿದಾರರು ಒಟ್ಟಿಗೆ ಜೀವಿಸಲು ಸಾಧ್ಯವಿರದಷ್ಟು ಮಟ್ಟಿಗೆ ಕ್ರೌರ್ಯವನ್ನು ಎಸಗಿರಬೇಕು.

(ಇ) ಅರ್ಜಿ ಸಲ್ಲಿಸುವುದಕ್ಕೆ ಒಂದು ವರ್ಷ ಮುಂಚಿನಿಂದ, ವಾಸ ಮಾಡಲು ಸಾಧ್ಯವಿಲ್ಲದ ರೀತಿಯಲ್ಲಿ ಗುಹ್ಯರೋಗವನ್ನು ಹೊಂದಿರ ಬೇಕು. ಆದರೆ ಅದನ್ನು ಅರ್ಜಿದಾರರಿಂದ ಅಂಟಿಸಿ ಕೊಂಡಿರಬಾರದು; ಅಥವಾ

(ಈ) ಸಾಂಕ್ರಾಮಿಕ ರೂಪದ

(ಉ) ಮದುವೆಯಾದ ದಿನದಿಂದ ಮನಃಸ್ವಾಸ್ತ್ಯವಿರದಿದ್ದರೆ.

(ಊ)ವಿವಾಹ ಸಮಯದಲ್ಲಿ ವ್ಯಭಿಚಾರ ಮಾಡಿದ್ದರೆ.

ವಿವರಣೆ:– ಈ ಪ್ರಕರಣದಲ್ಲಿ "ಅಗಲುವುದು" ಎಂಬ ಪದವು ವ್ಯಾಕರಣ ವ್ಯತ್ಯಾಸಗಳು ಮತ್ತು ಅರ್ಥವ್ಯತ್ಯಾಸಗಳಿದ್ದರೂ, ವಿವಾಹ ಭಾಗೀದಾರನನ್ನು/ಳನ್ನು ನ್ಯಾಯವಾದ ಕಾರಣವಿಲ್ಲದೆ, ಆ ವ್ಯಕ್ತಿಯ ಅನುಮತಿಯಿಲ್ಲದೆ ಅಥವಾ ಅವರ ಇಚ್ಛೆಗೆ ವಿರುದ್ಧವಾಗಿ ಅಗಲುವುದು ಎಂದರ್ಥವಾಗುತ್ತದೆ.

(೩೧)

**ಅಧ್ಯಾಯ – ೩**

**ವಿವಾಹರದ್ಧತಿಯನ್ನು ಕುರಿತ ಸಾಮಾನ್ಯ ಅವಕಾಶಗಳು**

೩೦. **ನ್ಯಾಯಾಲಯದ ಆದೇಶವಿಲ್ಲದೆ ಯಾವುದೇ ವಿವಾಹವನ್ನು ರದ್ದುಪಡಿಸುವಂತಿಲ್ಲ :–** ಈ ಪ್ರಕರಣದಲ್ಲಿ ಹೇಳಿರುವುದು ಏನೇ ಇರಲಿ, ಈ ಸಂಹಿತೆಯು ಜಾರಿಗೊಳ್ಳುವುದಕ್ಕೆ ಮುಂಚಿತವಾಗಿಯೋ ಆಮೇಲೋ ವಿಧ್ಯುಕ್ತಗೊಂಡ ವಿವಾಹವು, ಸೂಕ್ತ ಅರ್ಹತೆಯಿರುವ ನ್ಯಾಯಾಲಯವು ಈ ಸಂಬಂಧವಾಗಿ ನೀಡಿದ ಆದೇಶ ವಿಲ್ಲದೆ ಕಾನೂನು ಪ್ರಕಾರ ಅನೂರ್ಜಿತಗೊಳಿಸಿದಂತಾಗುವುದಿಲ್ಲ.

ಕುಷ್ಠರೋಗದಿಂದ ನರಳುತ್ತಿರ ಬೇಕು; ಅಥವಾ

(ಉ) ವಿವಾಹದ ದಿನದಿಂದಲೂ ಮನಃಸ್ವಾಸ್ಥ್ಯವಿಲ್ಲದವರಾಗಿರಬೇಕು.

(ಊ)ವಿವಾಹದ ಸಮಯದಲ್ಲಿ ವ್ಯಭಿಚಾರ ನಡೆಸಿರಬೇಕು. ವಿವರಣೆ: ಈ ಪ್ರಕರಣದಲ್ಲಿ "ಅಗಲುವುದು" ಎಂಬ ಉಕ್ತಿಯು, ಎಲ್ಲಾ ವ್ಯಾಕರಣ ವ್ಯತ್ಯಾಸಗಳು ಮತ್ತು ಅರ್ಥ ವ್ಯತ್ಯಾಸಗಳಿದ್ದರೂ, ಪತಿ/ಪತ್ನಿಯರಲ್ಲಿ ಒಬ್ಬರು ಇನ್ನೊಬ್ಬರನ್ನು ನ್ಯಾಯವಾದ ಕಾರಣವಿಲ್ಲದೆ, ಅವರ ಸಮ್ಮತಿಯಿಲ್ಲದೆ, ಅಥವಾ ಅವರ ಇಚ್ಛೆಗೆ ವಿರುದ್ಧವಾಗಿ ಅಗಲುವುದು ಎಂದರ್ಥವಾಗುತ್ತದೆ.

(೩೦)

೩೪. **ನ್ಯಾಯಲಯದ ಆದೇಶವಿಲ್ಲದೆ ಯಾವುದೇ ವಿವಾಹವನ್ನು ಅನೂರ್ಜಿತ ಗೊಳಿಸುವಂತಿಲ್ಲ:–** ಈ ಪ್ರಕರಣದಲ್ಲಿ ಏನೇ ಹೇಳಿದ್ದರೂ, ಈ ಸಂಹಿತೆಯು ಜಾರಿಗೊಳ್ಳುವುದಕ್ಕೆ ಮುಂಚಿತವಾಗಿಯೋ, ಅನಂತರವೋ, ವಿಧ್ಯುಕ್ತಗೊಂಡಿದ್ದ ವಿವಾಹವು ರದ್ದುಪಡಿಸಲು ಅರ್ಹವಾಗಿದ್ದರೂ ಇಲ್ಲದಿದ್ದರೂ, ರದ್ದತಿಗಾಗಿ ಹಾಕಿರುವ ಅರ್ಜಿಯ ಮೇಲೆ ಅಥವಾ ವಿವಾಹದ ಊರ್ಜಿತತೆಯು ಮುಖ್ಯವಾಗಿರುವ ಯಾವುದೇ ಕ್ರಮದ ಮೇಲೆ, ಅರ್ಹತೆಯುಳ್ಳ ನ್ಯಾಯಾಲಯವು ಸ್ಪಷ್ಟವಾಗಿ ಆದೇಶ ನೀಡಿದ ಹೊರತು, ಅದು ನ್ಯಾಯಯುತವಾಗಿ ಅನೂರ್ಜಿತ ಗೊಳಿಸಲ್ಪಟ್ಟಿದೆ ಎಂದು ಭಾವಿಸುವಂತಿಲ್ಲ.

(೩೨)

**೩೦A. ವಿವಾಹರದ್ದತಿಯ ವಿಧಾನಗಳು :–** ೩೧ನೆಯ ಪ್ರಕರಣದಲ್ಲಿ ಹೇಳಿರುವ ಕಾರಣಗಳಿಂದ, ರದ್ದತಿಯ ಆದೇಶದಿಂದ, ೩೨ನೆಯ ಪ್ರಕರಣದಲ್ಲಿ ಹೇಳಿರುವ ಕಾರಣಗಳಿಂದ ರದ್ದಾಗಲು ಅರ್ಹವಾಗಿದ್ದರೆ, ೩೩ನೆಯ ಪ್ರಕರಣದಲ್ಲಿ ನಿರೂಪಿಸಿದ ಯಾವುದೇ ಕಾರಣದಿಂದ ವಿಚ್ಛೇದನದ ಆದೇಶ ನೀಡಿದ್ದರೆ, ಈ ಯಾವುದೇ ಕಾರಣದಿಂದ ರದ್ದತಿ ಆದೇಶ ನೀಡಿ ವಿವಾಹವನ್ನು ಅನೂರ್ಜಿತಗೊಳಿಸ ಬಹುದು.

(೩೧)

(೩೨)

**೨೮. ಅನೂರ್ಜಿತ ವಿವಾಹ :–**

(೧) ಈ ಸಂಹಿತೆಯು ಜಾರಿಗೆ ಬರುವುದಕ್ಕಿಂತ ಮುಂಚೆ ವಿಧ್ಯುಕ್ತ ಗೊಂಡಿರುವ ಯಾವುದೇ ವಿವಾಹವು ಈ ಕೆಳಗೆ ನಮೂದಿಸಿರುವ ಸಂದರ್ಭಗಳಲ್ಲಿಅನೂರ್ಜಿತವಾಗುತ್ತದೆ.

**ಭಾಗ–೪ ಪ್ರಕರಣ–೨೯ ಪುಟ–೨**

(ಅ) ವಿವಾಹ ಸಮಯದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿನ ಪ್ರಕಾರ, ವಿವಾಹ ಸಮಯದಲ್ಲಿ ಪತಿ/ಪತ್ನಿ ಇನ್ನೊಬ್ಬ ಪತಿ/ಪತ್ನಿ ಜೀವಂತವಾಗಿದ್ದು ಅದು ಅನೂರ್ಜಿತವಾಗಲು ಅರ್ಹವಾಗಿದ್ದರೆ,

(ಆ) ಭಾಗೀದಾರರು ೫ನೆಯ ಪ್ರಕರಣದ (ಆ) ಉಪ ವಾಕ್ಯದಲ್ಲಿ ವಿವರಿಸಿರುವಂತೆ ನಿಷೇಧಿತ ಬಾಂಧವ್ಯದ ವಲಯಕ್ಕೆ ಸೇರಿದ್ದರೆ, ವಿವಾಹ ಸಮಯದಲ್ಲಿ ಚಾಲ್ತಿಯಲ್ಲಿದ್ದ ಯಾವುದೇ ಕಾನೂನಿನ ಅವಕಾಶಗಳ ಪ್ರಕಾರ ಊರ್ಜಿತವಾಗಿದ್ದರೆ, ಅಂತಹ ಯಾವುದೇ ವಿವಾಹವನ್ನು (ಆ) ಉಪವಾಕ್ಯದ (೧)ನೇ ಉಪವಿಭಾಗದ ಅವಶ್ಯಗಳನ್ವಯ ಅನೂರ್ಜಿತವೆಂದು ಭಾವಿಸು ವಂತಿಲ್ಲ.

(೨) ಈ ಸಂಹಿತೆಯು ಜಾರಿಗೊಂಡ ನಂತರ ವಿಧ್ಯುಕ್ತಗೊಂಡ ಯಾವುದೇ ವಿವಾಹವನ್ನು ಈ ಕೆಳಗಿನ ಕಾರಣಗಳಿಂದ ರದ್ದು ಗೊಳಿಸಬಹುದು.

(ಅ) ಒಂದು ಧಾರ್ಮಿಕ ವಿವಾಹವೆಂದು ಹೇಳಿಕೊಂಡು ೭ನೆಯ ಪ್ರಕರಣದ

(೧), (೪), ಮತ್ತು (೫)ನೆಯ ಉಪವಾಕ್ಯಗಳಲ್ಲಿ ನಿರ್ದಿಷ್ಟಪಡಿಸಿದ ಒಂದೋ ಹಲವೋ ನಿಯಮಗಳನ್ನು ಅತಿಕ್ರಮಿಸಿದ್ದರೆ –

(ಆ) ಲೌಕಿಕ ವಿವಾಹವೆಂದು ಹೇಳಿ ಕೊಂಡು ೧೦ನೆಯ ಪ್ರಕರಣದ (೧) ಮತ್ತು (೪)ನೆಯ ಉಪವಾಕ್ಯಗಳಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ನಿಯಮವನ್ನು ಅತಿಕ್ರಮಿಸಿದ್ದರೆ– (೨)ನೆಯ ಉಪ–ಪ್ರಕರಣದ (ಅ)ಉಪವಾಕ್ಯದಲ್ಲಿ ಹೇಳಿರುವ ಸಂದರ್ಭಕ್ಕೆ ಯಾವುದೇ ನ್ಯಾಯಾಲಯಕ್ಕೆ ರದ್ದತಿ ಕೋರಿ ಯಾವುದೇ ಅರ್ಜಿ ಸಲ್ಲಿಸುವುದಕ್ಕೆ ಮುಂಚಿತವಾಗಿ ಒಂದು ಲೌಕಿಕ ವಿವಾಹವಾಗಿ ಅದು ಆಮೇಲೆ ನೊಂದಾಯಿತವಾದರೆ ೮ನೆಯ ಪ್ರಕರಣದ (೫)ನೆಯ ಉಪವಾಕ್ಯದಲ್ಲಿ ನಿರ್ದಿಷ್ಟಪಡಿಸಿರುವ ನಿಯಮವು ಅನ್ವಯವಾಗುವುದಿಲ್ಲ.

### ವಿವಾಹಗಳ ಅನೂರ್ಜಿತತೆ

**೩೧. ಅನೂರ್ಜಿತತೆಯ ಆದೇಶಕ್ಕೆ ಆಧಾರಗಳು:**

(೧) ಈ ಸಂಹಿತೆಯು ಜಾರಿಗೆ ಬರುವುದಕ್ಕಿಂತ ಮೊದಲು ವಿಧ್ಯುಕ್ತಗೊಂಡ ಯಾವುದೇ ವಿವಾಹವನ್ನು ರದ್ದತಿಯ ಆದೇಶ ನೀಡಿ ಅನೂರ್ಜಿತ ಗೊಳಿಸಬಹುದು.

(ಅ) ವಿವಾಹದ ಸಮಯದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿನ ಅವಕಾಶಗಳ ಕಾರಣದಿಂದ ಆ ವಿವಾಹವು ಅನೂರ್ಜಿತವಾಗುವಂತಿದ್ದರೆ, ವಿವಾಹದ ಸಮಯದಲ್ಲಿ ಪತಿ–ಪತ್ನಿ

(೩೩)

**೨೯. ಅನೂರ್ಜಿತವಾಗಬಹುದಾದ ವಿವಾಹಗಳು:–**

(೧) ಈ ಸಂಹಿತೆಯು ಜಾರಿಗೆ ಬರುವುದಕ್ಕಿಂತ ಮೊದಲು ವಿಧ್ಯುಕ್ತ ಗೊಂಡ ಯಾವುದೇ ವಿವಾಹವು ಭಾಗೀದಾರರಲ್ಲಿ ಯಾರೊಬ್ಬ ರಾದರೂ ವಿವಾಹ ಸಮಯದಲ್ಲಿ ಹುಚ್ಚರೋ ಬುದ್ಧಿಭ್ರಮಿತರೋ ಆಗಿದ್ದರೆ ಅನೂರ್ಜಿತವಾಗ ಬಹುದಾಗುತ್ತದೆ.

**ಭಾಗ–೪ ಪ್ರಕರಣ–೫ ಪುಟ–೧೫**

(೨) ಈ ಸಂಹಿತೆಯು ಜಾರಿಗೆ ಬಂದ

ಇಬ್ಬರಲ್ಲಿ ಯಾರೊಬ್ಬರಿಗಾದರೂ ಬೇರೊಬ್ಬ ಪತಿ/ಪತ್ನಿ ಜೀವಿಸಿದ್ದರೆ;

(ಆ) ವಿವಾಹ ಸಮಯದಲ್ಲಿ ಭಾಗೀದಾರರು ೫ನೆಯ ಪ್ರಕರಣದ (೨) ಉಪವಾಕ್ಯದಲ್ಲಿ ನಿರೂಪಿಸಿದಂತೆ ನಿಷೇಧಿತ ಸಂಬಂಧ'ದ ವಲಯದಲ್ಲಿದ್ದರೆ.

ವಿವಾಹ ಸಮಯದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿನ ಅವಕಾಶಗಳ ಪ್ರಕಾರ ಅದು ಊರ್ಜಿತವಾಗಿದ್ದ ಪಕ್ಷದಲ್ಲಿ, ಈ ಉಪ ಪ್ರಕರಣದ (ಆ) ಉಪವಾಕ್ಯದ ಅವಕಾಶಗಳ ಪ್ರಕಾರ ಆ ವಿವಾಹವನ್ನು ಅನೂರ್ಜಿತಗೊಳಿಸಲು ಸಾಧ್ಯವಿಲ್ಲ.

(೨) ಈ ಸಂಹಿತೆಯು ಜಾರಿಗೊಂಡ ಅನಂತರ ವಿಧ್ಯುಕ್ತಗೊಂಡ ಯಾವುದೇ ವಿವಾಹವನ್ನು ಈ ಕೆಳಗಿನ ಕಾರಣಗಳಿಂದ, ರದ್ದತಿಯ ಆದೇಶವನ್ನು ಹೊರಡಿಸಿ ಅನೂರ್ಜಿತಗೊಳಿಸಬಹುದು.

(ಅ) ಧಾರ್ಮಿಕ ವಿವಾಹವೆಂದು ಹೇಳಿಕೊಂಡು ೭ನೆಯ ಪ್ರಕರಣದ (i),(iv), ಮತ್ತು (v)ನೆಯ ಉಪವಾಕ್ಯಗಳಲ್ಲಿ ನಿರ್ದಿಷ್ಟ ಪಡಿಸಿರುವ ಯಾವುದೇ ನಿಯಮವನ್ನು ಅತಿಕ್ರಮಿಸಿದ್ದರೆ;

(ಆ) ಲೌಕಿಕ ವಿವಾಹವೆಂದು ಹೇಳಿಕೊಂಡು ೮ನೆಯ ಪ್ರಕರಣದ (i) ಮತ್ತು (iv)ನೆಯ ಉಪವಾಕ್ಯಗಳಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ನಿಯಮವನ್ನು ಅತಿಕ್ರಮಿಸಿದ್ದರೆ,

೭ನೆಯ ಪ್ರಕರಣದ (v) ನೆಯ ಉಪವಾಕ್ಯದಲ್ಲಿ ಹೇಳಿರುವ ನಿಷೇಧದ ನಂತರ ವಿಧ್ಯುಕ್ತಗೊಳಿಸಿದ ಯಾವುದೇ ವಿವಾಹವು ಈ ಕೆಳಗಿನ ಸಂದರ್ಭಗಳಲ್ಲಿ ಅನೂ ರ್ಜಿತಗೊಳ್ಳಬಹುದಾಗುತ್ತದೆ.

(ಅ) ಧಾರ್ಮಿಕ ವಿವಾಹವೆಂದು ಹೇಳಿಕೊಂಡು, ೭ನೆಯ ಪ್ರಕರಣದ (೨), (೩) ಮತ್ತು (೬)ನೆಯ ಉಪವಾಕ್ಯಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಿಯಮವನ್ನು ಅತಿಕ್ರಮಿಸಿದ್ದರೆ;

(ಆ) ಲೌಕಿಕ ವಿವಾಹ ಎಂದು ಹೇಳಿಕೊಂಡು, ೧೦ನೆಯ ಪ್ರಕರಣದ (೨), (೩) ಮತ್ತು (೫)ನೆಯ ಉಪವಾಕ್ಯಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಿಯಮವನ್ನು ಅತಿಕ್ರಮಿಸಿದ ಪಕ್ಷದಲ್ಲಿ, ಬಲಾತ್ಕಾರವಾಗಲಿ ಮೋಸವಾಗಲಿ ಇಲ್ಲದೆ ಹೋದರೆ ಒಂದು ಧಾರ್ಮಿಕ ವಿವಾಹವು, ಅದು ಸಂಪೂರ್ಣ ಗೊಂಡ ಮೇಲೆ ಅನೂರ್ಜಿತವೆಂದು ಭಾವಿಸಲ್ಪಡು ವುದಿಲ್ಲ. ವಿವಾಹಕ್ಕೆ ವಧುವಿನ ಪಾಲಕನ ಸಮ್ಮತಿಯನ್ನು ಪಡೆದಿಲ್ಲ ಅಥವಾ ಪಡೆದಿರಲಿಲ್ಲ ಎಂಬ ಆಧಾರದಿಂದ ಮಾತ್ರವೇ ಅದು ಅನೂರ್ಜಿತವೆಂದು ಪರಿಗಣಿಸಲು ಸಾಧ್ಯವಿಲ್ಲ.

(೩) ಈ ಸಂಹಿತೆಯು ಜಾರಿಗೆ ಬಂದ ನಂತರ ಅಥವಾ ಅದಕ್ಕೆ ಮುಂಚೆ ವಿಧ್ಯುಕ್ತಗೊಂಡ ಯಾವುದೇ ವಿವಾಹವು ೩೦ನೆಯ ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದ ಯಾವುದೇ ಆಧಾರದ ಮೇಲೆ ಅನೂರ್ಜಿತಗೊಳ್ಳಬಹುದಾಗಿದೆ.

(ಅ) ಈ ಭಾಗದಲ್ಲಿ ಹೇಳಿರುವಂತೆ, ಯಾವುದೇ ಮನವಿ ಸಲ್ಲಿಸಲು ಒಂದು ಮಿತಿಯನ್ನು ನಿಗದಿ ಪಡಿಸಿರುವ

ವಲಯದೊಳಕ್ಕೆ, ಈ ಪ್ರಕರಣದಲ್ಲಿ ಹೇಳಿರುವ ಏನೂ ಸೇರಿರದಿದ್ದರೆ, ವಿವಾಹವು ೨೧ನೆಯ ಪ್ರಕರಣದ ಪ್ರಕಾರ ಒಂದು ಲೌಕಿಕ ವಿವಾಹವೆಂದು ನೋಂದಾಯಿತವಾಗಿದ್ದು, ವಿವಾಹ ರದ್ದತಿಯ ಯಾವುದೇ ಕ್ರಮವನ್ನು ಕೈಗೊಳ್ಳುವುದಕ್ಕಿಂತ ಮುಂಚೆ;

(೩೪)

### ವಿವಾಹದ ರದ್ದತಿ

**೩೨. ರದ್ದತಿಯ ಆದೇಶಕ್ಕೆ ಆಧಾರಗಳು:–**

(೧) ಈ ಸಂಹಿತೆಯು ಜಾರಿಗೆ ಬರುವುದಕ್ಕಿಂತ ಮುಂಚಿತವಾಗಿ ವಿಧ್ಯುಕ್ತಗೊಂಡ ಯಾವುದೇ ವಿವಾಹವನ್ನು, ವಿವಾಹ ಸಮಯ ದಲ್ಲಿ ವಿವಾಹ ಭಾಗೀದಾರರಲ್ಲಿ ಯಾರೇ ಒಬ್ಬರು ಹುಚ್ಚರೋ ಬುದ್ಧಿಭ್ರಮಿತರೋ ಆಗಿದ್ದರೆಂಬ ಆಧಾರದ ಮೇಲೆ, ಆದೇಶದ ಮೂಲಕ ರದ್ದುಪಡಿಸ ಬಹುದು.

(೨) ಸಂಹಿತೆಯು ಜಾರಿಗೆ ಬಂದ ನಂತರ ವಿಧ್ಯುಕ್ತಗೊಳಿಸಿದ ಯಾವುದೇ ವಿವಾಹವನ್ನು, ರದ್ದತಿ ಆದೇಶದ ಮೂಲಕ :

(ಅ) ಧಾರ್ಮಿಕ ವಿವಾಹವೆಂದು ಹೇಳಿಕೊಂಡು ೭ನೆಯ ಪ್ರಕರಣದ (ii),(iii)ಮತ್ತು (iv)ನೆಯ ಉಪವಾಕ್ಯಗಳಲ್ಲಿ ನಿರ್ದಿಷ್ಟ ಪಡಿಸಿರುವ ಯಾವುದೇ ನಿಯಮವನ್ನು ಅತಿಕ್ರಮಿಸಿದ್ದರೆ;

(ಆ) ಲೌಕಿಕ ವಿವಾಹವೆಂದು ಹೇಳಿ ಕೊಂಡು ೮ನೆಯ ಪ್ರಕರಣದ (ii), (iii) ಮತ್ತು (v)ನೆಯ ಉಪವಾಕ್ಯಗಳಲ್ಲಿ ನಿರ್ದಿಷ್ಟ ಸಂದರ್ಭದಲ್ಲಿ, ಹಾಗೆ ವಿಧಿಸಿದ ಕಾಲಮಿತಿ ಯೊಳಗೆ ಯಾವ ಅರ್ಜಿಯೂ ಬಂದಿರದೆ ಹೋದರೆ, ಆ ವಿವಾಹವನ್ನು ಎಲ್ಲಾ ಉದ್ದೇಶಗಳಿಗಾಗಿ, ಊರ್ಜಿತವಾಗಿದೆ ಯೆಂದು ಭಾವಿಸ ಲಾಗುತ್ತದೆ.

**೩೬. ವಿವಾಹದ ರದ್ದತಿ :–**

(೧) ೩೫ನೆಯ ಪ್ರಕರಣದ ಅವಕಾಶಗಳಿಗೆ ಒಳಪಟ್ಟು, ವಿವಾಹ ಭಾಗೀದಾರರಲ್ಲಿ ಯಾರೊಬ್ಬರೂ ಯಾವುದೇ ಸಮಯದಲ್ಲಿ, ಒಂದು ವಿವಾಹವನ್ನು ಅನೂರ್ಜಿತ ಗೊಳಿಸಬಹುದಾದ ಯಾವುದಾದರೊಂದು ಆಧಾರದ ಮೇಲೆ ಜಿಲ್ಲಾ ನ್ಯಾಯಾಲಯಕ್ಕೆ, ವಿವಾಹ ರದ್ದತಿಯನ್ನು ಕೋರಿ ಅಹವಾಲು ಸಲ್ಲಿಸಬಹುದು.

(೨) (೧)ನೆಯ ಉಪ–ಪ್ರಕರಣದಲ್ಲಿ ಇರುವ ಯಾವುದೂ ಈ ಕೆಳಗಿನ ಸಂದರ್ಭಗಳಲ್ಲಿ ಡಿಕ್ರಿ ನೀಡುವ ಅಧಿಕಾರವನ್ನು ನ್ಯಾಯಾಲಯಕ್ಕೆ ಕೊಡುವುದಿಲ್ಲ.

(i) ಈ ಸಂಹಿತೆಯು ಜಾರಿಗೊಳ್ಳು ವುದಕ್ಕಿಂತ ಮುಂಚಿತವಾಗಿ ವಿಧ್ಯುಕ್ತಗೊಂಡಿದ್ದ ವಿವಾಹದ ವಿಷಯದಲ್ಲಿ, ಆ ಸಮಯದಲ್ಲಿ ಊರ್ಜಿತವಾಗಿದ್ದ ವಿವಾಹವನ್ನು;

(ಅ) ವಿವಾಹದ ಸಮಯದಲ್ಲಿ ವರನ ಹಿಂದಿನ ಪತ್ನಿ ಜೀವಂತವಾಗಿದ್ದಾಳೆ ಎಂಬ ಆಧಾರದ ಮೇಲೆ;

ಪಡಿಸಿರುವ ಯಾವುದೇ ನಿಯಮವನ್ನು ಅತಿಕ್ರಮಿಸಿದ್ದರೆ ರದ್ದುಗೊಳಿಸಬಹುದು. ಬಲಾತ್ಕಾರವಾಗಲಿ, ಮೋಸವಾಗಲಿ, ಇಲ್ಲದೆ ಹೋದ ಪಕ್ಷದಲ್ಲಿ, ಒಂದು ಧಾರ್ಮಿಕ ವಿವಾಹವು, ಅದು ಸಂಪೂರ್ಣಗೊಂಡ ಮೇಲೆ, ಅನೂರ್ಜಿತವೆಂದು ಭಾವಿಸಲ್ಪಡುವುದಿಲ್ಲ. ಅಥವಾ ಮದುವೆಗೆ ವಧುವಿನ ಪಾಲಕರ ಸಮ್ಮತಿಯನ್ನು ಪಡೆದಿಲ್ಲ ಅಥವಾ ಪಡೆದಿರಲಿಲ್ಲ ಎಂಬ ಆಧಾರದಿಂದ ಮಾತ್ರವೇ ಅದು ಅನೂರ್ಜಿತವೆಂದು ಪರಿಗಣಿಸಲು ಸಾಧ್ಯವಿಲ್ಲ.

## (೩೫)
## ವಿವಾಹ ವಿಚ್ಛೇದನ

**೩೫. ವಿವಾಹ ವಿಚ್ಛೇದನದ ಆದೇಶಕ್ಕೆ ಆಧಾರಗಳು** :– ಪ್ರಸ್ತುತ ಸಂಹಿತೆಯು ಜಾರಿಗೆ ಬರುವುದಕ್ಕೆ ಮುಂಚಿತವಾಗಿಯೋ, ಬಂದ ಮೇಲೆಯೋ ವಿಧ್ಯುಕ್ತಗೊಂಡ ಯಾವುದೇ ವಿವಾಹವನ್ನು, ಈ ಕೆಳಗಿನ ಯಾವುದೇ, ಆಧಾರದಿಂದ, **ಒಂದು ವಿಚ್ಛೇದನದ ಡಿಕ್ರಿ ನೀಡಿ ರದ್ದು ಪಡಿಸಬಹುದು.**

(i) ಪತಿ–ಪತ್ನಿ ಇಬ್ಬರಲ್ಲಿ ಯಾರೇ ಒಬ್ಬರು ವಿವಾಹ ಸಮಯದಲ್ಲಿ ಷಂಡರಾಗಿದ್ದು, ಅರ್ಜಿಯು ಕಲಾಪಗಳನ್ನು ತೊಡಗಿಸುವ ಸಮಯದವರೆಗೂ ಹಾಗೆಯೇ ಮುಂದುವರಿದ್ದರೆ ;

(ii) ಪತಿಯು...... ಉಪಪತ್ನಿಯನ್ನು ಇಟ್ಟುಕೊಂಡಿದ್ದರೆ ಅಥವಾ ಪತ್ನಿಯು ಮತ್ತೊಬ್ಬನ ಉಪಪತ್ನಿಯಾದರೆ, ಅಥವಾ ವೇಶ್ಯಾಜೀವನ ನಡೆಸುತ್ತಿದ್ದರೆ;

(ಆ) ೫ನೆಯ ಪ್ರಕರಣದ (ಆ) ಉಪವಾಕ್ಯದಲ್ಲಿ ವಿವರಿಸಿರುವಂತೆ ವಿವಾಹ ಭಾಗೀದಾರರು ನಿಷೇಧಿತ ಸಂಬಂಧದ ವಲಯಕ್ಕೆ ಸೇರಿದ್ದಾರೆ ಎಂಬ ಆಧಾರದಿಂದ ;

(ii) ಅನೂರ್ಜಿತವಾಗಬಹುದಾದ ವಿವಾಹದ ವಿಷಯದಲ್ಲಿ, ಅದು ಈ ಸಂಹಿತೆಯು ಜಾರಿಗೊಳ್ಳುವುದಕ್ಕೆ ಮುಂಚಿತವಾಗಿ ವಿಧ್ಯುಕ್ತಗೊಂಡಿರಲಿ ಅಥವಾ ಆಮೇಲೆ ಆಗಿರಲಿ, ಭಾಗೀದಾರರಲ್ಲಿ ಯಾರೇ ಒಬ್ಬರು ಬುದ್ಧಭ್ರಮಿತರಾಗಿದ್ದರು ಎಂಬ ಆಧಾರದಿಂದ ; ಅಥವಾ ವಾದಿಯು ವಿವಾಹದ ಸಮಯದಲ್ಲಿ ಷಂಡನಾಗಿದ್ದನು ಮತ್ತು ಮೊಕದ್ದಮೆ ನಡೆಯುವ ಸಮಯದಲ್ಲೂ ಅವನು ಷಂಡನಾಗಿಯೇ ಇದ್ದಾನೆ ಎಂಬ ಆಧಾರದಿಂದ; ವಿವಾಹವು ವಿಧ್ಯುಕ್ತಗೊಂಡ ಮೂರು ವರ್ಷದೊಳಗಾಗಿ ರದ್ದತಿಗೆ ಅರ್ಜಿ ಸಲ್ಲಿಸದೆ ಹೋಗಿದ್ದರೆ ಅಥವಾ ಸಂಹಿತೆಯು ಜಾರಿಗೊಳ್ಳುವುದಕ್ಕಿಂತ ಮುಂಚೆ ವಿಧ್ಯುಕ್ತಗೊಂಡಿದ್ದರೆ, ಜಾರಿಗೊಂಡ ಎರಡು ವರ್ಷಗಳೊಳಗಾಗಿ ಸಲ್ಲಿಸಿದ ಆಧಾರದಿಂದ; ಅಥವಾ

(iii) ಊರ್ಜಿತವಾಗಬಹುದಾದ ವಿವಾಹದ ವಿಷಯದಲ್ಲಿ, ಅದು ಈ ಸಂಹಿತೆಯು ಜಾರಿಗೊಳ್ಳುವುದಕ್ಕೆ ಮುಂಚಿತವಾಗಿ ವಿಧ್ಯುಕ್ತಗೊಂಡಿರಲಿ ಅಥವಾ ಆಮೇಲೆ ಆಗಿರಲಿ, ಅರ್ಜಿದಾರನ ಸಮ್ಮತಿಯಾಗಲಿ, ಅವನ/ಅವಳ ಪಾಲಕನ ಸಮ್ಮತಿ ಅಗತ್ಯವಾಗಿರುವಾಗ,

(iii) ಭಾಗೀದಾರರಲ್ಲಿ ಯಾರೊಬ್ಬರು ಅನ್ಯಧರ್ಮಕ್ಕೆ ಮತಾಂತರಗೊಂಡು ಹಿಂದುವಾಗಿ ಉಳಿಯದೇ ಹೋದರೆ;

(iv) ಯಾರೇ ಒಬ್ಬರು ಬುದ್ಧಿಭ್ರಮಣೆಯಾಗಿ, ಅರ್ಜಿ ಸಲ್ಲಿಸುವ ಸಮಯಕ್ಕೆ ಮುಂಚೆ ಐದು ವರ್ಷಕ್ಕೂ ಕಡಿಮೆ ಇಲ್ಲದಷ್ಟು ಕಾಲ ಒಂದೇ ಸಮನೆ ಚಿಕಿತ್ಸೆ ಪಡೆಯುತ್ತಿದ್ದರೆ;

(v) ಯಾರೇ ಒಬ್ಬರು ಅತಿ ದಾರುಣವಾದ... ಕುಷ್ಠರೋಗದಿಂದ ನರಳುತ್ತಿದ್ದರೆ;

(vi) ಯಾರೇ ಒಬ್ಬ ಭಾಗೀದಾರರು ನ್ಯಾಯಿಕ ಪ್ರತ್ಯೇಕತೆಯ ಆದೇಶ ನೀಡಿದ ಎರಡು ವರ್ಷ ಅಥವಾ ಇನ್ನೂ ಹೆಚ್ಚುಕಾಲ ಇನ್ನೊಬ್ಬರೊಂದಿಗೆ ದೇಹ ಸಂಪರ್ಕಗೊಂಡಿರದಿದ್ದರೆ ;

(vii) ಯಾರೇ ಒಬ್ಬ ಭಾಗೀದಾರರು ದಾಂಪತ್ಯಹಕ್ಕುಗಳ ಪುನರ್ ನೀಡಿಕೆಯ ಆದೇಶವನ್ನು ಎರಡು ವರ್ಷ ಅಥವಾ ಅದಕ್ಕಿಂತಲೂ ಹೆಚ್ಚು ಕಾಲ ಪಾಲಿಸಲು ವಿಫಲನಾ/ಳಾಗಿದ್ದರೆ.

ಅದನ್ನು ಬಲಾತ್ಕಾರವಾಗಿಯೋ ಮೋಸದಿಂದಲೋ ಪಡೆದು ಕೊಳ್ಳಲಾಗಿದೆ ಎಂಬ ಆಧಾರದಿಂದ ರದ್ದತಿ ಕೋರಿ ಅರ್ಜಿಯನ್ನು ಆ ಪರಿಸ್ಥಿತಿ ಕಳೆದ ಮೇಲೆ ಅಥವಾ ಮೋಸವು ಬೆಳಕಿಗೆ ಬಂದ ಮೇಲೆ ಒಂದು ವರ್ಷದೊಳಗಾಗಿ ಸಲ್ಲಿಸಿದ್ದರೆ ನ್ಯಾಯಾಲಯ ಅಂತಹ ಅರ್ಜಿಯನ್ನು ವಜಾಮಾಡುತ್ತದೆ. ಅದಕ್ಕೆ ಸಂದರ್ಭವು ಹೀಗಿರಬೇಕು:

(ಅ) ರದ್ದಾಗಲು ಯೋಗ್ಯವಾಗಿರುವ ವಿವಾಹವು ಈ ಸಂಹಿತೆಯು ಕಾರ್ಯಪ್ರವೃತ್ತವಾಗುವುದಕ್ಕೆ ಮುಂಚಿತವಾಗಿ ಪಾಲಕರ ಮೇಲಿನ ಬಲಾತ್ಕಾರವು ಮುಗಿದಿದ್ದರೆ, ಮೋಸವು ಹಾಗೆ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಬೆಳಕಿಗೆ ಬಂದಿದ್ದರೆ, ಮತ್ತು ರದ್ದತಿಗೆ ಅರ್ಜಿಯನ್ನು ಈ ಸಂಹಿತೆಯು ಜಾರಿಗೊಳ್ಳುವುದಕ್ಕೆ ಒಂದು ವರ್ಷ ಮುಂಚೆ ಸಲ್ಲಿಸಿದ್ದರೆ–

(ಆ) ಭಾಗೀದಾರರು ತಮ್ಮ ಸ್ವಂತ ಇಚ್ಛೆಯಂತೆ, ಬಲಪ್ರಯೋಗವು ಇಲ್ಲವಾದ ಮತ್ತು ಮೋಸವು ಬೆಳಕಿಗೆ ಬಂದ ಮೇಲೆ ಪತಿ–ಪತ್ನಿಯರಂತೆ ಜೀವಿಸಿದ್ದರೆ.

**(೩೬)**

**೩೪. ವಿವಾಹವನ್ನು ರದ್ದುಪಡಿಸಿಕೊಳ್ಳುವ ಹಕ್ಕು:–**

(೧) ವಿವಾಹದ ಭಾಗೀದಾರರಲ್ಲಿ ಒಬ್ಬರು, ಅಥವಾ ಒಬ್ಬ ಪ್ರಾಕ್ಟರ್ ಅಥವಾ ವಿವಾಹದಿಂದ ಹಾನಿಗೊಳಗಾದ ಯಾವುದೇ ವ್ಯಕ್ತಿ ಅಥವಾ ಆಸಕ್ತ ವ್ಯಕ್ತಿ:

**(೩೪)**

**೩೦. ವಿವಾಹರದ್ದತಿಗೆ ಇತರ ಆಧಾರಗಳು :–**

ಒಂದು ವಿವಾಹವು ಈ ಸಂಹಿತೆಯು ಜಾರಿ ಗೊಳ್ಳುವುದಕ್ಕಿಂತ ಮೊದಲೋ ಆಮೇಲೋ ವಿಧ್ಯುಕ್ತವಾಗಿದ್ದರೂ

**ಭಾಗ–೪ ಪ್ರಕರಣ–೨೯ ಮತ್ತು ೩೦ ಪುಟ–೨**

ರದ್ದತಿ ಆದೇಶ ನೀಡಿ ವಿವಾಹವನ್ನು ರದ್ದು ಪಡಿಸಬೇಕೆಂದು ಅರ್ಜಿಸಲ್ಲಿಸುವ ಮೂಲಕ ಅಥವಾ ಬೇರಾವುದೋ ಮೊಕದ್ದಮೆಯ ಕಲಾಪದಲ್ಲಿ ಮಂಡಿಸಿದ ಕೋರಿಕೆಯ ಆಧಾರದಿಂದ ವಿವಾಹರದ್ದತಿಯ ಆದೇಶವನ್ನು ಪಡೆಯಬಹುದು.

(೨) ವಿವಾಹ ರದ್ದತಿಯ ಅಥವಾ ವಿಚ್ಛೇದನದ ಆದೇಶವನ್ನು ಕೋರಿ ಸಲ್ಲಿಸಿದ ಅರ್ಜಿಯು ನಿಲ್ಲಬೇಕಾದರೆ ವಿವಾಹ ಭಾಗೀದಾರರಲ್ಲಿ ಯಾರೇ ಒಬ್ಬರು ಅದನ್ನು ಕೇಳಬೇಕು – ಪರಿಹಾರಕ್ಕಾಗಿ ಅವನ/ಅವಳ ಲೋಪವನ್ನಾಗಲಿ, ಅಸಾಮರ್ಥ್ಯವನ್ನಾಗಲಿ ಉಪ ಯೋಗಿಸಿಕೊಳ್ಳಲು ಅರ್ಹರಾಗಿದ್ದರೆ ಮಾತ್ರ.

(೩೭)

**೩೫.** ಪ್ರಾಕ್ಟರರ ನೇಮಕ (೧) ರಾಜ್ಯ ಸರಕಾರವು ಒಬ್ಬರು ಅಥವಾ ಹೆಚ್ಚು ಜನ ಪ್ರಾಕ್ಟರರನ್ನು ರಾಜ್ಯಕ್ಕೆ ಅಥವಾ ರಾಜ್ಯದ ಯಾವುದೇ ಒಂದು ಭಾಗಕ್ಕೆ ನೇಮಕಮಾಡಬಹುದು_

(i) ಯಾವುದೇ ವಿವಾಹದ ರದ್ದತಿಯನ್ನು ಕುರಿತ ವಿಚಾರಣೆಯ ಸಮಯದಲ್ಲಿ ಹಾಜರಿರಲು ಅಥವಾ ಸ್ವಇಚ್ಛೆಯಿಂದ ಮಧ್ಯಪ್ರವೇಶ ಮಾಡಲು, ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೆ ಮಾಡುವುದು ಅಗತ್ಯ ಎಂದು ಪ್ರಾಕ್ಟರನ ಅಭಿಪ್ರಾಯವಾಗಿದ್ದರೆ ಆತನು ನ್ಯಾಯಾಲಯದ ಆದೇಶದಂತೆ ಹಾಜರಾಗಲು ಹಕ್ಕು ಪಡೆದಿರುತ್ತಾನೆ.

(ii) ಎಲ್ಲಿ ಅನೂರ್ಜಿತತೆಗೆ ಸೂಕ್ತ ಪರಿಹಾರವು ರದ್ದತಿಯ ಆದೇಶವಾಗಿರುತ್ತದೆಯೋ ಅಲ್ಲಿ ಈ ಕೆಳಗಿನ ಯಾವುದೇ ಆಧಾರದ ಮೇಲೆ ಅದನ್ನು ರದ್ದುಪಡಿಸಬಹುದು:

(i) ವಿವಾಹದ ಸಮಯದಲ್ಲಿ ಭಾಗೀದಾರರಲ್ಲಿ ಯಾರೇ ಒಬ್ಬರು ಷಂಡರಾಗಿದ್ದರೆ ಮತ್ತು ರದ್ದತಿಯನ್ನು ದಾಖಲು ಮಾಡುವವರೆಗೂ ಹಾಗೆಯೇ ಮುಂದುವರಿದಿದ್ದರೆ ;

(ii) ಪತಿಯು ಒಬ್ಬ ಹೆಂಗಸನ್ನು ಉಪಪತ್ನಿಯನ್ನಾಗಿ ಇಟ್ಟು ಕೊಂಡಿದ್ದರೆ ಅಥವಾ ಪತ್ನಿಯು ಇನ್ನೊಬ್ಬ ವ್ಯಕ್ತಿಯ ಉಪಪತ್ನಿಯಾದರೆ ಅಥವಾ ವೇಶ್ಯಾವೃತ್ತಿಯನ್ನು ಹಿಡಿದರೆ;

(iii) ಇಬ್ಬರಲ್ಲಿ ಯಾರೊಬ್ಬರು ಇನ್ನೊಂದು ಧರ್ಮವನ್ನು ಅವಲಂಬಿಸಿ ಮತಾಂತರಗೊಂಡು ಹಿಂದುವಾಗಿ ಉಳಿಯದೆ ಹೋದರೆ;

(iv) ಗುಣಪಡಿಸಲು ಸಾಧ್ಯವಿಲ್ಲದ ಹಾಗೆ ಬುದ್ಧಿಭ್ರಮಿತರಾಗಿದ್ದರೆ ಮತ್ತು ಅರ್ಜಿಸಲ್ಲಿಸುವುದಕ್ಕಿಂತ ಐದು ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ಅದಕ್ಕೆ ಚಿಕಿತ್ಸೆ ಪಡೆಯುತ್ತಿದ್ದರೆ;

(v) ಇಬ್ಬರಲ್ಲಿ ಯಾರೇ ಒಬ್ಬರು ದಾರುಣವಾದ, ಗುಣಪಡಿಸಲಾಗದ ಕುಷ್ಠ ರೋಗದಿಂದ ನರಳುತ್ತಿದ್ದರೆ,

**೩೮. ರದ್ದತಿಗೆ ಇನ್ನಷ್ಟು ಆಧಾರಗಳು:**

ಈ ಸಂಹಿತೆಯು ಜಾರಿಗೊಳ್ಳುವುದಕ್ಕೆ ಮೊದಲೋ ಆಮೇಲೋ ವಿಧ್ಯುಕ್ತಗೊಂಡ ವಿವಾಹದ ಭಾಗೀದಾರರಲ್ಲಿ ಒಬ್ಬರು ಈ ಕೆಳಗಿನ ಆಧಾರಗಳಿಂದ, ತನ್ನ ವಿವಾಹವನ್ನು ರದ್ದುಪಡಿಸಲು ಕೋರಿ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು.

(ಅ) ವಾದಿಯ ವಿರುದ್ಧವಾಗಿ ನ್ಯಾಯಿಕ

ಯಾವುದೇ ವಿವಾಹದ ರದ್ದತಿಗೆ ಕ್ರಮಗಳನ್ನು ತೊಡಗಲು.

(೨) ಪ್ರಾಕ್ಟರನು ತನ್ನ ಹಕ್ಕನ್ನು ಹೇಗೆ ಚಲಾಯಿಸಬಹುದು ಎಂಬುದನ್ನು ನಿಯಂತ್ರಿಸಲು ಹಾಗೂ ಹಕ್ಕಿನ ಚಲಾವಣೆಗೆ ಸಾಂದರ್ಭಿಕವಾದ ಅಥವಾ ಅದರ ಪರಿಣಾಮವಾದ ಎಲ್ಲಾ ವಿಚಾರಗಳನ್ನು ರಾಜ್ಯ ಸರಕಾರವು ಮಾಡಬಹುದು.

**(೩೮)**

೩೬. ವಿವಾಹದ ಮೂರು ವರ್ಷಗಳೊಳಗೆ ವಿಚ್ಛೇದನಕ್ಕೆ ಅರ್ಜಿಯನ್ನು ಸಲ್ಲಿಸುವಂತಿಲ್ಲ.

(೧) ಈ ಭಾಗದಲ್ಲಿರುವ ನಿಯಮಗಳು ಏನೇ ಇದ್ದರೂ, ವಿವಾಹವು ನಡೆದು ಆ ತಾರೀಖಿನಿಂದ ಮೂರು ವರ್ಷಗಳು ಕಳೆದಿರದಿದ್ದ ಪಕ್ಷದಲ್ಲಿ ವಿವಾಹ ವಿಚ್ಛೇದನ ಆದೇಶವನ್ನು ಕೋರುವ ಯಾವುದೇ ಅರ್ಜಿಯನ್ನು ಯಾವುದೇ ನ್ಯಾಯಾಲಯುವು ಸ್ವೀಕರಿಸಲು ಅಧಿಕಾರ ಪಡೆದಿರುವುದಿಲ್ಲ.. ಆದರೆ ಹೈಕೋರ್ಟ್ ಆ ಸಂಬಂಧವಾಗಿ ಮಾಡಿರುವ ನಿಯಮಗಳ ಪ್ರಕಾರ ಅರ್ಜಿಯುನ್ನು ವಿವಾಹವಾದ ದಿನದಿಂದ ಮೂರು ವರ್ಷಗಳು ಕಳೆಯುವ ಮೊದಲು ಸಲ್ಲಿಸಿದರೆ ಅದನ್ನು ಸ್ವೀಕರಿಸಬಹುದು. ಅದಕ್ಕೆ ಆಧಾರವು ಅರ್ಜಿದಾರರಿಗೆ ಅಸಾಧಾರಣವಾದ ಕಷ್ಟವುಂಟಾಗಿರುವುದೋ ಅಥವಾ ಪ್ರತಿವಾದಿಯು ಅಪವಾದ ರೂಪದಲ್ಲಿ ದುಷ್ಟ ತನವನ್ನು ಹೊಂದಿರುವುದೋ ಆಗಿರಬೇಕು. ಅರ್ಜಿಯನ್ನು ಪರಿಶೀಲಿಸಿದ ಮೇಲೆ ನ್ಯಾಯಾಲಯಕ್ಕೆ, ಅರ್ಜಿದಾರನು/ಳು ಅಗಲಿಕೆಯ ಆದೇಶವನ್ನು ನೀಡಿ ಎರಡು ಅಥವಾ ಅದಕ್ಕಿಂತ ಹೆಚ್ಚುಕಾಲ ವೈವಾಹಿಕ ದೇಹಸಂಪರ್ಕ–ವಾಗಿರದಿದ್ದರೆ ;

(ಆ) ವಾದಿಯು ದಾಂಪತ್ಯಹಕ್ಕುಗಳ ಪುನರ್ ನೀಡಿಕೆಯ ಆದೇಶವನ್ನು ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಕಾಲ ಪಾಲಿಸಲು ವಿಫಲನಾಗಿದ್ದರೆ.

**೩೫. ವಿವಾಹರದ್ದತಿಗೆ ಅರ್ಜಿ ಸಲ್ಲಿಸಲು ಅರ್ಹತೆಯಿರುವ ವ್ಯಕ್ತಿಗಳು.**

(೧) ಈ ಸಂಹಿತೆಯು ಜಾರಿಗೊಳ್ಳುವ ಮೊದಲು ಅಥವಾ ಅನಂತರ ವಿಧ್ಯುಕ್ತವಾದ ಒಂದು ವಿವಾಹ ವನ್ನು, ಅನೂರ್ಜಿತವಾದ ವಿವಾಹವೆಂದು ಆಕ್ಷೇಪಿಸಿದಾಗ ಅದನ್ನು ನ್ಯಾಯಾಲಯವು ಸ್ವೀಕರಿಸಬಹುದು.

(i) ವಿವಾಹ ಭಾಗೀದಾರರಲ್ಲಿ ಯಾರೇ ಒಬ್ಬರು ರದ್ಧತಿಯನ್ನು ಕೋರಿ ಅರ್ಜಿಸಲ್ಲಿಸದಾಗ; ಅಥವಾ

(ii) ಬೇರೆ ಯಾವುದೇ ವಿಚಾರಣೆಯಲ್ಲಿ ತೊಂದರೆಗೊಳಗಾದ, ಅಥವಾ ಆ ವಿವಾಹದಲ್ಲಿ ಆಸಕ್ತಿಯಿದ್ದ ಯಾವನೇ ವ್ಯಕ್ತಿಯ ವಿಷಯವು ಚರ್ಚೆಗೆ ಬಂದಾಗ

(೨) ಈ ಸಂಹಿತೆಯು ಜಾರಿಗೊಳ್ಳುವ ಮೊದಲು ಅಥವಾ ಅನಂತರ ವಿಧ್ಯುಕ್ತಗೊಂಡ ಒಂದು ವಿವಾಹವು ಅನೂರ್ಜಿತವಾಗಬಲ್ಲ ವಿವಾಹವೆಂದು ಆಕ್ಷೇಪಿಸಿದಾಗ ಭಾಗೀದಾರರಲ್ಲಿ ಯಾರಾದರೂ ಒಬ್ಬರು ಒತ್ತಾಯಪಡಿಸಿದ ಹೊರತು ನ್ಯಾಯಾಲಯುವು ವಿಚಾರಣೆಗೆ

ತಪ್ಪು ವಿಚಾರಗಳನ್ನು ಹೇಳಿದ್ದಾನೆ, ಕೇಸಿನ ನಿಜವಾದ ಸ್ವರೂಪವನ್ನು ಮುಚ್ಚಿಟ್ಟಿದ್ದಾನೆ ಎಂದು ಮನವರಿಕೆಯಾದ ಪಕ್ಷದಲ್ಲಿ, ನ್ಯಾಯಾಲಯವು ಡಿಕ್ರಿಯನ್ನು ಕೊಡಬಹುದು. ಆದರೆ ಅದು ವಿವಾಹದ ನಂತರ ಮೂರು ವರ್ಷ ಮುಗಿಯುವವರೆಗೆ ಪರಿಣಾಮ ಹೊಂದಿರುವುದಿಲ್ಲ. ಅಥವಾ ಅರ್ಜಿಯನ್ನು ವಜಾ ಮಾಡಬಹುದು ಹಾಗೆ ವಜಾ ಮಾಡಿದರೂ, ವಿವಾಹವಾಗಿ ಮೂರು ವರ್ಷಗಳು ಮುಗಿದ ನಂತರ ಮತ್ತೆ ಅದೇ ಅಂಶಗಳನ್ನು ಅಥವಾ ವಜಾ ಆದ ಅರ್ಜಿಗೆ ಪೋಷಕವಾಗಿದ್ದ ಅತಿ ಮೂಲಭೂತ ಅಂಶಗಳನ್ನು ಮಂಡಿಸಿ ಅರ್ಜಿ ಸಲ್ಲಿಸಬಹುದು.

(೨) ವಿವಾಹವಾಗಿ ಮೂರು ವರ್ಷಗಳು ಕಳೆಯುವುದಕ್ಕೆ ಮೊದಲೇ ವಿಚ್ಛೇದನಕ್ಕೆ ಅರ್ಜಿಯನ್ನು ಸಲ್ಲಿಸಿದ್ದರೆ ಅದನ್ನು ವಿಚಾರಣೆ ನಡೆಸುವಾಗ ನ್ಯಾಯಾಲಯವು ಆ ವಿವಾಹದಿಂದ ಜನಿಸಿರುವ ಮಕ್ಕಳ ಹಿತಾಸಕ್ತಿಗಳನ್ನು; ಮೇಲೆ ಹೇಳಿದ ಮೂರು ವರ್ಷಗಳು ಮುಗಿಯುವುದಕ್ಕೆ ಮೊದಲು ವಿವಾಹ ಭಾಗೀದಾರರ ನಡುವೆ ರಾಜಿಯಾಗಬಹುದಾದ ಸಾಧ್ಯತೆ ಏನಾದರೂ ಇದೆಯೆ ಎಂಬುದನ್ನು ಪರಿಗಣಿಸಬೇಕು.

ಸ್ವೀಕರಿಸುವುದಿಲ್ಲ.

ಯಾವುದೇ ಭಾಗೀದಾರರು ಆತ/ಆಕೆ ತನ್ನ ಲೋಪ ಅಥವಾ ಅಸಾಮರ್ಥ್ಯವನ್ನು ಉಪಯೋಗಪಡಿಸಿಕೊಳ್ಳುವುದಕ್ಕೆ ಅರ್ಹರಾಗಿರುವುದಿಲ್ಲ.

**(೩೬)**

**(೩೮)**

**೫೦. ಮತ್ತೆ ಮದುವೆ ಮಾಡಿಕೊಳ್ಳಲು ಭಾಗೀದಾರರಿಗೆ ಸ್ವಾತಂತ್ರ್ಯ :–**

ಜಿಲ್ಲಾ ನ್ಯಾಯಾಧೀಶರ ಆದೇಶವನ್ನು ಹೈಕೋರ್ಟ್ ಸಮರ್ಥನೆ ಮಾಡಿದ ಆಜ್ಞೆ
ನಂತರ ಆರು ತಿಂಗಳು ಕಳೆದಿದ್ದ ಪಕ್ಷದಲ್ಲಿ, ಅಥವಾ ಒಂದು ವಿವಾಹವನ್ನು ರದ್ದುಪಡಿಸಿದ ಹೈಕೋರ್ಟಿನ ಯಾವುದೇ ಆದೇಶದ ತಾರೀಕಿನಿಂದ ಆರು ತಿಂಗಳು ಕಳೆದುಹೋಗಿದ್ದರೆ, ಅದರ ವಿರುದ್ಧವಾಗಿ ಯಾವುದೇ ಮೇಲ್ಮನವಿಯನ್ನು ದಾಖಲು ಮಾಡಿರದಿದ್ದರೆ, ಅಥವಾ ಅಂಥದೊಂದು ಅಪೀಲನ್ನು ವಜಾಮಾಡಿದ್ದರೆ ಅಥವಾ ಆ ಅಪೀಲಿನ ಫಲವಾಗಿ ಯಾವುದೇ ವಿವಾಹವು ರದ್ದಾಗಿದ್ದರೆ, ಭಾಗೀದಾರರು, ಹಿಂದಿನ ವಿವಾಹವು ತಮ್ಮಲ್ಲಿ ಯಾರೊಬ್ಬರ ಮರಣದ ಕಾರಣವಾಗಿ ರದ್ದಾಗಿದ್ದರೆ ಹೇಗೋ ಹಾಗೆ, ಮತ್ತೆ ಮದುವೆ, ಮಾಡಿಕೊಳ್ಳುವುದು ಸಕ್ರಮವಾಗಿರುತ್ತದೆ, ಕಾನೂನು ಸಮ್ಮತವಾಗಿರುತ್ತದೆ.

(೩೯)

**ವಿವಾಹರದ್ದತಿಯ ಪರಿಣಾಮ**

**೩೭. ಭಾಗೀದಾರರಿಗೆ ಮತ್ತೆ ಮದುವೆ ಮಾಡಿಕೊಳ್ಳುವ ಸ್ವಾತಂತ್ರ್ಯ.**

ಒಂದು ವಿವಾಹವನ್ನು ತಕ್ಕ ಅರ್ಹತೆಯಿರುವ ನ್ಯಾಯಾಲಯವು ಡಿಕ್ರಿ ನೀಡಿ ರದ್ದುಪಡಿಸಿದ್ದರೆ, ಅದರ ವಿರುದ್ಧವಾಗಿ ಮೇಲ್ಮನವಿ (ಅಪೀಲು)ಯನ್ನು ದಾಖಲು ಪಡಿಸಿರದಿದ್ದರೆ, ಅಥವಾ ದಾಖಲಾಗಿದ್ದ ಮೇಲ್ಮನವಿಯನ್ನು ವಜಾ ಮಾಡಿದ್ದರೆ, ವಿವಾಹ ಭಾಗೀದಾರರು, ಹಿಂದಿನ ವಿವಾಹವು ಯಾರೊಬ್ಬರ ಮರಣ ಕಾರಣವಾಗಿ ರದ್ದಾಗಿದ್ದರೆ ಹೇಗೋ ಹಾಗೆ ಮತ್ತೆ ವಿವಾಹ ಮಾಡಿಕೊಳ್ಳುವುದು ಸಕ್ರಮವಾಗಿರುತ್ತದೆ, ಕಾನೂನು ಸಮ್ಮತವಾಗಿರುತ್ತದೆ.

(೪೦)

**೩೮. ವಿವಾಹರದ್ದತಿಯ ಪರಿಣಾಮಗಳು:–**

(೧) ಒಂದು ವಿವಾಹವನ್ನು ರದ್ದತಿಯ ಆದೇಶ ಹೊರಡಿಸಿ ರದ್ದು ಪಡಿಸಿದ್ದ ಪಕ್ಷದಲ್ಲಿ ****** ಭಾಗೀದಾರರು ವಿವಾಹವನ್ನೇ ಮಾಡಿಕೊಂಡಿರಲಿಲ್ಲ ಎಂಬಂತೆ ಪರಿಗಣಿಸಲಾಗುತ್ತದೆ, ಅವರು ಪರಸ್ಪರ ಪತಿ – ಪತ್ನಿಯರಂತೆ ಸಂಬಂಧಪಟ್ಟಿಲ್ಲ ಎಂದು ಪರಿಗಣಿಸ ಲಾಗುತ್ತದೆ. ಆದರೆ ಈ ಕೆಳಗಿನ ಸಂದರ್ಭದಲ್ಲಿ ಈ ನಿಯಮವು ಅನ್ವಯವಾಗುವುದಿಲ್ಲ. ಮದುವೆ ಮಾಡಿಕೊಳ್ಳುವಾಗ ಪತಿ ಅಥವಾ ಪತ್ನಿ ಜೀವಂತವಾಗಿದ್ದನು/ಳು ಎಂಬ ಆಧಾರದ ಮೇಲೆ ರದ್ದತಿಯ ಆದೇಶ ನೀಡಿ ನ್ಯಾಯಾಲಯವು ಆ ವಿವಾಹವನ್ನು ರದ್ದುಪಡಿಸುವಾಗ,

(೩೯)

**೩೭. ವಿವಾಹವನ್ನು ರದ್ದಾಗಿದೆ ಎಂದು ನಿರ್ಣಯಿಸುವುದರ ಪರಿಣಾಮ:–**

(೧) ಒಂದು ವಿವಾಹವನ್ನು, ಅದು ಅನೂರ್ಜಿತ ವಿವಾಹವೆಂಬ ಆಧಾರದ ಮೇಲೆ ರದ್ದಾಗಿದೆ ಎಂದು ಘೋಷಿಸಿದರೆ, ಅಥವಾ ಒಂದು ವಿವಾಹವನ್ನು ಅನೂರ್ಜಿತ ವಾಗಬಲ್ಲ (ಆಗಲಿರುವ) ವಿವಾಹವೆಂಬ ಆಧಾರದಿಂದ, ಮೊದಲಿನಿಂದಲೇ ರದ್ದಾಗಿದೆ ಎಂದು ಭಾವಿಸಲಾಗುತ್ತದೆ. ಈ ವಿವಾಹದಿಂದ ಜನಿಸಿದ ಯಾವುದೇ ಮಕ್ಕಳನ್ನು ಕಾನೂನುಬಾಹಿರ ಎಂದು ಯಾವುದೇ ಕಾಲಕ್ಕೂ ಕಾನೂನು ಬಾಹಿರರೆಂದು ಪರಿಗಣಿಸಲಾಗುತ್ತದೆ. ಹಿಂದಿನ ಪತಿಯೋ ಪತ್ನಿಯೋ ಜೀವಂತವಾಗಿದ್ದರು ಎಂಬ ಆಧಾರದ ಮೇಲೆ ಒಂದು ವಿವಾಹವನ್ನು ಅನೂರ್ಜಿತ ಗೊಳಿಸದಿದ್ದರೆ ಅಥವಾ ರದ್ದು ಪಡಿಸಿದ್ದರೆ, ಮುಂದಿನ ಮದುವೆಯನ್ನು ನಂಬಿಕೆಯಿಂದ, ಹಿಂದಿನ ಪತಿ–ಪತ್ನಿ ಜೀವಿಸಿಲ್ಲ ಎಂಬ ನಂಬಿಕೆಯಿಂದ ವಿಧ್ಯುಕ್ತಗೊಳಿಸಿದ್ದರೆ, ಒಬ್ಬರು ಅಥವಾ ಇಬ್ಬರು ಭಾಗೀದಾರರೂ ಹಾಗೆಯೇ ಪೂರ್ಣ ನಂಬಿಕೆ ಹೊಂದಿದ್ದರೆ. ಆದೇಶ ನೀಡುವುದಕ್ಕಿಂತ ಮೊದಲು ಜನಿಸಿದ್ದ ಮಕ್ಕಳನ್ನು ಆ ಡಿಕ್ರಿಯಲ್ಲಿ ನಮೂದಿಸತಕ್ಕದ್ದು. ಎಲ್ಲಾ ದೃಷ್ಟಿಯಿಂದಲೂ ಎಲ್ಲಾ ಕಾಲಕ್ಕೂ ಅವರು ತಂದೆ ತಾಯಂದಿರ ಕಾನೂನುಸಮ್ಮತ ಮಕ್ಕಳೆಂದು ಪರಿಗಣಿಸತಕ್ಕದ್ದು.

ಮರು ವಿವಾಹವು ನಂಬಿಕೆಯ ಆಧಾರದ ಮೇಲೆ ವಿಧ್ಯುಕ್ತಗೊಂಡಿದ್ದು, ಪತಿ ಪತ್ನಿಯರಲ್ಲಿ ಯಾರೊಬ್ಬರು ಹಿಂದಿನ ಪತಿಯೋ ಪತ್ನಿಯೋ ಸತ್ತುಹೋಗಿದ್ದರೆ ಎಂದು ಸಂಪೂರ್ಣವಾಗಿ ನಂಬಿರುವಾಗ, ರದ್ದತಿ ಕ್ರಿಯೆಯನ್ನು ನೀಡುವುದಕ್ಕೆ ಮುಂಚೆ ಹುಟ್ಟಿದ ಮಕ್ಕಳನ್ನು ಡಿಕ್ರಿಯಲ್ಲಿ ನಿರ್ದಿಷ್ಟಪಡಿಸಿ ಅವರನ್ನು ತಂದೆತಾಯಿಯರ ಶಾಸನ ಸಮ್ಮತ ಮಕ್ಕಳು ಎಂಬುದಾಗಿ ಪರಿಗಣಿಸಲಾಗುತ್ತದೆ, ಯಾವಾಗಲೂ ಅವರು ಹಾಗೆಂದೇ ಭಾವಿಸಲ್ಪಡುತ್ತಾರೆ.

(೨) ಒಂದು ವಿವಾಹವನ್ನು ರದ್ದತಿಯ ಆದೇಶದಿಂದಲೋ, ವಿಚ್ಛೇದನದ ಆದೇಶದಿಂದಲೋ ರದ್ದು ಪಡಿಸಿದಾಗ, ಆ ಡಿಕ್ರಿಯ ತಾರೀಖಿನಿಂದ ಮುಂದಕ್ಕೆ ಭಾಗೀದಾರರಿಬ್ಬರೂ ಪತಿ – ಪತ್ನಿಯರಂತೆ ಸಂಬಂಧ ಪಡೆದಂತಾಗುತ್ತದೆ.

ವಿವಾಹದಿಂದ ಜನಿಸಿದ ಮಕ್ಕಳು ಎಲ್ಲಾ ದೃಷ್ಟಿ ಗಳಿಂದಲೂ ತಂದೆತಾಯಂದಿರ ಕಾನೂನು ಸಮ್ಮತ ಮಕ್ಕಳೆಂದು ಭಾವಿಸಬೇಕು, ಯಾವಾಗಲೂ ಹಾಗೆ ಭಾವಿಸಲಾಗುತ್ತದೆ. ಆ ಮಕ್ಕಳ ಹೆಸರುಗಳನ್ನು ಡಿಕ್ರಿಯಲ್ಲಿ ನಿರ್ದಿಷ್ಟಪಡಿಸಲಾಗುತ್ತದೆ.

(೪೧)

**ನ್ಯಾಯನಿರ್ವಹಣೆ ಮತ್ತು ಕಾರ್ಯವಿಧಾನ**

**೩೯. ಈ ಭಾಗದನ್ವಯ, ಪರಿಹಾರವನ್ನು ಕೊಡಲು ಅಧಿಕಾರದ ವ್ಯಾಪ್ತಿ :-**

ಈ ಭಾಗದಲ್ಲಿರುವ ಏನೊಂದೂ ಯಾವುದೇ ನ್ಯಾಯಾಲಯಕ್ಕೂ ಈ ಅಧಿಕಾರಗಳನ್ನು

(೨) ೨೯ ಮತ್ತು ೩೦ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಆಧಾರದ ಮೇಲೆ ಒಂದು ವಿವಾಹವನ್ನು ಅನೂರ್ಜಿತಗೊಳಿಸಿದ್ದರೆ ಆ ವಿವಾಹದಿಂದ ಜನಿಸಿದ ಮಕ್ಕಳನ್ನು ಎಲ್ಲಾ ದೃಷ್ಟಿಗಳಿಂದಲೂ, ಎಲ್ಲಾ ಕಾಲಕ್ಕೂ ತಂದೆತಾಯಂದಿರ ಕಾನೂನು ಸಮ್ಮತ ಮಕ್ಕಳೆಂದು ಪರಿಗಣಿಸಲಾಗುತ್ತದೆ. ಅವರ ಹೆಸರುಗಳನ್ನು ಡಿಕ್ರಿಯಲ್ಲಿ ನಿರ್ದಿಷ್ಟಪಡಿಸಲಾಗುತ್ತದೆ.

**ಭಾಗ-೪**
**ಪ್ರಕರಣ-೨೯(೧)**
**ಪುಟ-೨೧**

(೪೦)

**ನ್ಯಾಯನಿರ್ವಹಣೆ ಮತ್ತು ಕಾರ್ಯವಿಧಾನ**

**೩೯. ಈ ಭಾಗದನ್ವಯ ಪರಿಹಾರವನ್ನು ಕೊಡಲು ಅಧಿಕಾರದ ವ್ಯಾಪ್ತಿ :-**

ಈ ಭಾಗದಲ್ಲಿರುವ ಏನೊಂದೂ ಯಾವುದೇ ನ್ಯಾಯಾಲಯಕ್ಕೂ ಈ

ಕೊಡುವುದಿಲ್ಲ:

(ಅ) ವಿವಾಹವನ್ನು ಭಾರತದಲ್ಲಿ ವಿಧ್ಯುಕ್ತಗೊಳಿಸಿದ್ದ ಪಕ್ಷದಲ್ಲಿ ಹಾಗೂ ಮನವಿಯನ್ನು ಸಲ್ಲಿಸಿರುವಾಗ ಅರ್ಜಿದಾರರು ಭಾರತದಲ್ಲಿ ವಾಸಮಾಡುತ್ತಿದ್ದ ಪಕ್ಷದಲ್ಲಿ ವಿವಾಹ ರದ್ದತಿಯ ಆದೇಶವವನ್ನು ನೀಡಲು;

(ಆ) ವಿವಾಹ ಭಾಗೀದಾರರು ಅರ್ಜಿ ಸಲ್ಲಿಸುವ ಸಮಯದಲ್ಲಿ ಭಾರತ ನಿವಾಸಿಗಳಾಗಿದ್ದ ಹೊರತು, ಅನೂರ್ಜಿತತೆ ಅಥವಾ ರದ್ದತಿಯ ಡಿಕ್ರಿಯನ್ನು ನೀಡಲು;

(i) ಅರ್ಜಿದಾರನು ಅರ್ಜಿಸಲ್ಲಿಸುವ ಸಮಯದಲ್ಲಿ ಭಾರತದಲ್ಲೇ ವಾಸವಾಡುತ್ತಿದ್ದ ಸಂದರ್ಭದ ಹೊರತು ಮಿಕ್ಕಂತೆ ವಿವಾಹ ರದ್ದತಿ ಆದೇಶ ಅಥವಾ ವಿವಾಹ ಅನೂರ್ಜಿತತೆಯ ಅಥವಾ ವಿಚ್ಛೇದನದ ಆದೇಶಗಳ ಹೊರತು ಬೇರೆ ಯಾವುದೇ ಪರಿಹಾರವನ್ನು ನೀಡಲು.

ಅಧಿಕಾರವನ್ನು ಕೊಡುವುದಿಲ್ಲ:

(ಅ) ವಿವಾಹ ಅನೂರ್ಜಿತತೆಯ ಡಿಕ್ರಿಗಳನ್ನು ನೀಡಲು–

(i) ೭ನೆಯ ವಿಭಾಗದ (೨)ನೆಯ ಉಪವಾಕ್ಯದಂತೆ ಅಥವಾ ೧೦ನೆಯ ವಿಭಾಗದ (೨) ನೆಯ ಉಪವಾಕ್ಯದಂತೆ ಇರುವ ಅವಕಾಶಗಳನ್ನು ಅತಿಕ್ರಮಿಸುವ, ಅನೂರ್ಜಿತವಾಗಬಲ್ಲ ವಿವಾಹದ ವಿಷಯದಲ್ಲಿ; ವಿವಾಹದ ಸಮಯದಲ್ಲಿ ಭಾಗೀದಾರರು ಯಾರಾದರೂ ಒಬ್ಬರು ಷಂಡರಾಗಿದ್ದು, ರದ್ದತಿಗೆ ಅರ್ಜಿ ಸಲ್ಲಿಸುವವರೆಗೂ ಹಾಗೆಯೇ ಇದ್ದ ಪಕ್ಷದಲ್ಲಿ; ವಿವಾಹವು ಒಂದು ಪ್ರಾಂತದಲ್ಲಿ ವಿಧ್ಯುಕ್ತಗೊಂಡಿದ್ದು ಅರ್ಜಿ ಸಲ್ಲಿಸುವಾಗ ಅದೇ ಪ್ರಾಂತದಲ್ಲಿ ಅರ್ಜಿದಾರನು/ಳು ನಿವಾಸಿಯಾಗಿದ್ದರೆ,

(ii) ಈ ವಿಭಾಗದ (ಅ) ಉಪವಾಕ್ಯದ (i)ನೆಯ ಉಪವಿಭಾಗದಲ್ಲಿ ಸೇರದಿರುವ, ರದ್ದಾಗಬಲ್ಲ ಒಂದು ವಿವಾಹದ ವಿಷಯದಲ್ಲಿ ಅರ್ಜಿ ಸಲ್ಲಿಸುವ ಸಮಯದಲ್ಲಿ ವಿವಾಹ ಭಾಗೀದಾರರು ಅದೇ ಪ್ರಾಂತದ ನಿವಾಸಿಗಳಾಗಿದ್ದರೆ,

(ಆ) ಅರ್ಜಿದಾರರು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ, ವಿವಾಹವು ವಿಧ್ಯುಕ್ತಗೊಂಡಿದ್ದ ಪ್ರಾಂತದಲ್ಲೇ ನಿವಾಸಿಯಾಗಿದ್ದ ಹೊರತು, ವಿವಾಹ ರದ್ದತಿಯ ಆದೇಶವಲ್ಲದೆ ಬೇರೆ ಯಾವುದೇ ಪರಿಹಾರವನ್ನು ನೀಡಲು.

(೪೨)

**೪೦ ಅರ್ಜಿಯನ್ನು ಸಲ್ಲಿಸಬೇಕಾದ ನ್ಯಾಯಾಲಯ ಮತ್ತು ಗೋಪ್ಯವಾಗಿ ವಿಚಾರಣೆ ನಡೆಸುವುದು**

(i) ಈ ಭಾಗದಲ್ಲಿ ಪ್ರತಿಯೊಂದು ಅಹವಾಲನ್ನೂ ಸ್ಥಳೀಯ ಮಿತಿಯೊಳಗಿರುವ ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಸಬೇಕು. ಅದರ ಸಾಮಾನ್ಯ ನ್ಯಾಯಾಧಿಕಾರ ವ್ಯಾಪ್ತಿಯಲ್ಲಿ ವಿವಾಹವು ವಿಧ್ಯುಕ್ತ ಗೊಂಡಿದ್ದು, ಅಥವಾ ಪತಿ ಮತ್ತು ಪತ್ನಿ ಆ ವ್ಯಾಪ್ತಿಯ ಪ್ರದೇಶದಲ್ಲಿ ಒಟ್ಟಿಗೆ ವಾಸವಾಗಿರಬೇಕು ಅಥವಾ ಅರ್ಜಿಸಲ್ಲಿಸುವಾಗ ಕೊನೆಯಲ್ಲಿ ಅಲ್ಲಿ ವಾಸ ಮಾಡಿರಬೇಕು.

(೨) ಈ ಭಾಗದಂತೆ ವಿಚಾರಣೆಯನ್ನು ಭಾಗೀದಾರರಲ್ಲಿ ಯಾರೇ ಒಬ್ಬರು ಅಪೇಕ್ಷಿಸಿದ ಪಕ್ಷದಲಿ, ಅಥವಾ ನ್ಯಾಯಾಲಯವು ಹಾಗೆ ಮಾಡುವುದು ಸೂಕ್ತ ಎಂದು ಭಾವಿಸಿದ ಪಕ್ಷದಲ್ಲಿ ಅದನ್ನು ಗೋಪ್ಯವಾಗಿ ನಡೆಸಬೇಕು.

(೪೩)

**೪೧ ಅರ್ಜಿಗಳ ಒಳಪಿಡಿ ಮತ್ತು ಸರಿನೋಡುವಿಕೆ–**

(೧) ಈ ಭಾಗದ ಪ್ರಕಾರ ಸಲ್ಲಿಸುವ ಪ್ರತಿಯೊಂದು ಅರ್ಜಿಯೂ, ಸಂದರ್ಭದ ಸ್ವರೂಪವು ಅವಕಾಶ ಕೊಡುವಷ್ಟು ಸ್ಪಷ್ಟವಾಗಿ, ಯಾವ ಸಂಗತಿಗಳ ಆಧಾರದಿಂದ ಪರಿಹಾರವನ್ನು ಕೇಳ ಲಾಗುತ್ತಿದೆಯೋ ಆ ಸಂಗತಿಗಳನ್ನು ನಿರೂಪಿಸಿರಬೇಕು. ಯಾವುದೇ ವಿವಾಹದ ರದ್ದತಿಯನ್ನಾಗಲಿ, ನ್ಯಾಯಿಕವಾದ ಬೇರ್ಪಡಿಕೆಯನ್ನಾಗಲಿ ಕೋರುವ

**೪೦. ಅರ್ಜಿ ಸಲ್ಲಿಸಬೇಕಾದ ನ್ಯಾಯಾಲಯ.**

ಈ ಭಾಗದಂತೆ ಪ್ರತಿಯೊಂದು ಅರ್ಜಿಯನ್ನು ಸ್ಥಳೀಯ ಎಲ್ಲೇ ಭಾಗ–೩(೨) ಯೊಳಗಿರುವ ಜಿಲ್ಲಾ ನ್ಯಾಯಾಲಯಲಕ್ಕೆ ಸಲ್ಲಿಸಬೇಕು. ಆದರೆ ಸಾಮಾನ್ಯ ಸಿವಿಲ್ ನ್ಯಾಯವ್ಯಾಪ್ತಿಯಲ್ಲಿ ಪತಿಯೋ ಪತ್ನಿಯೋ ವಾಸವಾಗಿರಬೇಕು ಅಥವಾ ಕೊನೆಯಲ್ಲಿ ವಾಸಮಾಡುತ್ತಿದ್ದಿರ ಬೇಕು.

ಭಾಗ–೧೫ **Ind Div Act**

**೪೮. ಗೋಪ್ಯವಾಗಿಯೇ ವಿಚಾರಣೆ ನಡೆಸಬಹುದು.**

ವಿವಾಹ ಭಾಗೀದಾರರಲ್ಲಿ ಯಾರಾದ ರೊಬ್ಬರು ಕೇಳಿಕೊಂಡ ಪಕ್ಷದಲ್ಲಿ, ಅಥವಾ ಹಾಗೆ ಮಾಡುವುದು ಸೂಕ್ತ ಎಂದು ನ್ಯಾಯಾಲಯವು ಭಾವಿಸಿದ ಪಕ್ಷದಲ್ಲಿ ವಿಚಾರಣೆಯನ್ನು ಗೋಪ್ಯವಾಗಿ ನಡೆಸಬಹುದು.

(೪೨)

**೪೧. ಅರ್ಜಿಗಳ ಒಳಪಿಡಿ ಮತ್ತು ಸರಿನೋಡುವಿಕೆ**

(೧) ಈ ಭಾಗದ ಪ್ರಕಾರ ಸಲ್ಲಿಸುವ ಪ್ರತಿಯೊಂದು ಅರ್ಜಿಯೂ ಸಂದರ್ಭದ ಸ್ವರೂಪವು ಅವಕಾಶ ಕೊಡುವಷ್ಟು ಸ್ಪಷ್ಟವಾಗಿ, ಯಾವ ಸಂಗತಿಗಳ ಆಧಾರದಿಂದ ಪರಿಹಾರವು ಆಧಾರಗೊಂಡಿದೆಯೋ ಆ ಸಂಗತಿಗಳನ್ನು ನಿರೂಪಿಸಬೇಕು. ಒಂದು ವಿವಾಹದ ಅನೂರ್ಜಿತತೆಯ ಡಿಕ್ರಿಯನ್ನು ನೀಡಬೇಕೆಂದು ಕೋರುವ ಅಥವಾ ನ್ಯಾಯಿಕವಾದ

ಯಾವುದೇ ಅರ್ಜಿಯು ಅರ್ಜಿದಾರನಿಗೂ ವಿವಾಹದ ಇನ್ನೊಬ್ಬ ಭಾಗೀದಾರನಿಗೂ ನಡುವೆ ಯಾವುದೇ ವಂಚನೆ, ತಂತ್ರ ಇಲ್ಲ ಎಂದು ಹೇಳಬೇಕು.

(೨) ಈ ಭಾಗದಂತೆ ಪ್ರತಿಯೊಂದು ಅರ್ಜಿಯಲ್ಲಿ ಮಾಡಿರುವ ಹೇಳಿಕೆಗಳನ್ನು ಅರ್ಜಿದಾರನೋ ಅಥವಾ ಬೇರೆ ಯಾರಾದರೂ ಅರ್ಹತೆ ಪಡೆದ ವ್ಯಕ್ತಿಯೊ, ದೂರುಗಳ ಪರೀಕ್ಷೆಗೆಂದು ವಿಧಿಸಲಾಗಿರುವ ಕಾನೂನು ಹೇಳುವ ರೀತಿಯಲ್ಲಿ ಪರೀಕ್ಷೆ ಮಾಡಬೇಕು ಮತ್ತು ವಿಚಾರಣೆಯಲ್ಲಿ ಅದನ್ನು ಸಾಕ್ಷ್ಯಾಧಾರವಾಗಿ ಉಲ್ಲೇಖಿಸ ಬಹುದು.

ಬೇರ್ಪಡಿಕೆಯನ್ನು ಕೋರುವ ಪ್ರತಿಯೊಂದು ಅರ್ಜಿಯು, ವಿವಾಹ ಭಾಗೀದಾರರಲ್ಲಿ ಅರ್ಜಿದಾರರಿಗೂ ಇನ್ನೊಬ್ಬರಿಗೂ ನಡುವೆ ಯಾವುದೇ ಮೋಸ ಇಲ್ಲ ಎಂದು ಹೇಳಬೇಕು.

(೨) ಪ್ರತಿಯೊಂದು ಅರ್ಜಿಯಲ್ಲಿಯೂ ನಿರೂಪಿಸಿರುವ ಹೇಳಿಕೆಗಳನ್ನು ಅರ್ಜಿದಾರನಾ/ಳಾಗಲಿ, ಬೇರೆ ಯಾರೇ ತಕ್ಕ ವ್ಯಕ್ತಿಯಾಗಲಿ, ದೂರುಗಳ ವಿಚಾರಣೆಗೆಂದು ವಿಧಿಸಲಾಗಿರುವ ಕಾನೂನು ಪ್ರಕಾರ ಸರಿನೋಡಬೇಕು ಮತ್ತು ವಿಚಾರಣೆಯಲ್ಲಿ ಅದನ್ನು ಸಾಕ್ಷ್ಯಾಧಾರವಾಗಿ ಉಲ್ಲೇಖಿಸ ಬಹುದು.

(೪೪)

**೪೨. ಸಿವಿಲ್ ಪ್ರೊಸೀಜರ್ ಸಂಹಿತೆಯನ್ನು ಅನ್ವಯಿಸುವುದು:–** ಈ ಭಾಗದಲ್ಲಿ ಉಕ್ತವಾಗಿರುವ ಇತರ ಅವಕಾಶಗಳಿಗೆ ಒಳಪಟ್ಟು, ವಿವಾಹ ಭಾಗೀದಾರರ ನಡುವೆ, ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ೧೯೦೮ರ ಸಿವಿಲ್ ಪ್ರೊಸೀಜರ್ ಸಂಹಿತೆಯ ಪ್ರಕಾರ ಕ್ರಮಗೊಳಿಸತಕ್ಕದ್ದು.

(೪೩)

**೪೨. ಸಿವಿಲ್ ಪ್ರೊಸೀಜರ್ ಸಂಹಿತೆಯ ಅನ್ವಯ:–** ಈ ಭಾಗದಲ್ಲಿ ನಿರೂಪಿಸಿರುವ ಇತರ ಅವಕಾಶಗಳಿಗೆ ಒಳಪಟ್ಟು ಭಾಗೀದಾರರ ನಡುವೆ ವಿಚಾರಣಾ ವ್ಯವಹರಣೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಸಿವಿಲ್ ಪ್ರೊಸೀಜರ್ ಸಂಹಿತೆ೧೯೦೮ (೧೯೦೮ರ v)ಯು ಪ್ರಕಾರ ಕ್ರಮಬದ್ಧಗೊಳಿಸತಕ್ಕದು.

**ಭಾಗ–೧೫ Ind Div Act**

(೪೫)

**೪೩. ವಿಚಾರಣೆಯಲ್ಲಿ ಡಿಕ್ರಿ ನೀಡುವಿಕೆ–** ಈ ಭಾಗದ ಪ್ರಕಾರ ಸಲ್ಲಿಸಿದ ಯಾವುದೇ ಅರ್ಜಿಗೆ ಪ್ರತಿವಾದ ಬರಲಿ, ಬಿಡಲಿ, ಪರಿಹಾರ ನೀಡುವ ಅಗತ್ಯವಿದೆ ಎಂದು ನ್ಯಾಯಾಲಯಕ್ಕೆ ಮನವರಿಕೆಯಾದ ಪಕ್ಷದಲ್ಲಿ, ವಾದಿಗೆ ಮೋಸಮಾಡಿ ಅರ್ಜಿಯನ್ನು ಸಲ್ಲಿಸಿರದ

(೪೪)

**(೪೩). ವಿಚಾರಣೆಯಲ್ಲಿ ಡಿಕ್ರಿ (ಆದೇಶ) ನೀಡುವಿಕೆ:–** ಈ ಭಾಗದ ಪ್ರಕಾರ ಯಾವುದೇ ಅರ್ಜಿಗೆ ಪ್ರತಿವಾದವಿರಲಿ ಬಿಡಲಿ, ಪರಿಹಾರವನ್ನು ನೀಡಬೇಕಾದ ಆಧಾರವಿದೆ ಎಂಬುದು ನ್ಯಾಯಾಲಯಕ್ಕೆ ಮನವರಿಕೆಯಾಗಿದ್ದ ಪಕ್ಷದಲ್ಲಿ; ವಾದಿಗೆ ಮೋಸ

ಪಕ್ಷದಲ್ಲಿ, ವ್ಯಭಿಚಾರದ ದೂರು ಬಂದಿದ್ದರೆ ಅದನ್ನು ಕಂಡೂ ಕಾಣದಂತಿದ್ದರೆ ಅಥವಾ ಕ್ಷಮಿಸಿದ್ದರೆ ನ್ಯಾಯಾಲಯವು ಆ ಪರಿಹಾರವನ್ನು ಸೂಕ್ತವಾಗಿ ಅದೇಶಿಸಬಹುದು.

**(೪೬)**

**ರದ್ದತಿಯ ವಿಚಾರಣೆಯಲ್ಲಿ ನೀಡಬಹುದಾದ ಇತರ ಅದೇಶಗಳು.**

೪೪. **ಜೀವನಾಂಶ, ದಾವೆ ಇನ್ನೂ ನಡೆಯುತ್ತಿರುವಾಗ– ಈ** ಭಾಗದ ಪ್ರಕಾರ ಯಾವುದೇ ವಿಚಾರಣೆ ನಡೆದಿರುವಾಗ, ಪತ್ನಿಗೆ ಜೀವನ ನಿರ್ವಹಣೆಗೂ, ವಿಚಾರಣೆ ನಡೆಸಲು ಅಗತ್ಯವಾದ ವೆಚ್ಚಗಳಿಗೂ ಸಾಕಾಗುವಷ್ಟು ಸ್ವತಂತ್ರ ವರಮಾನವಿಲ್ಲ ಎಂದು ನ್ಯಾಯಾಲಯಕ್ಕೆ ಮನವರಿಕೆಯಾದ ಪಕ್ಷದಲ್ಲಿ, ಪತ್ನಿಯು ಅರ್ಜಿಹಾಕಿಕೊಂಡರೆ, ಆಕೆಯು ವಿಚಾರಣೆಗೆ ಕೊಡಲೇಬೇಕಾದ ವೆಚ್ಚವನ್ನು, ವಿಚಾರಣೆಯ ಕಾಲದಲ್ಲಿ ನ್ಯಾಯಾಲಯಕ್ಕೆ ವಿಹಿತವೆನಿಸಿರುವ ನಿವ್ವಳ ವರಮಾನದ ಐದನೆ ಒಂದು ಭಾಗಕ್ಕೆ ಮೀರದಂತೆ ಹಣವನ್ನು ಪತ್ನಿಗೆ ಕೊಡತಕ್ಕದ್ದೆಂದು ಆಜ್ಞೆಮಾಡಬಹುದು.

ಮಾಡಿ ಅರ್ಜಿಸಲ್ಲಿಸಿಲ್ಲ ಎಂದೂ ದೂರು ಕೊಟ್ಟಿರುವ, ವ್ಯಭಿಚಾರವನ್ನು ಕಂಡೂ ಕಾಣದಂತಿದ್ದರೆ ಅಥವಾ ಕಲ್ಪಿಸಿದ ಪಕ್ಷದಲ್ಲಿ ನ್ಯಾಯಾಲಯವು ಆ ಪರಿಹಾರವನ್ನು ಸೂಕ್ತವಾಗಿ ಆದೇಶಿಸಿಬಹುದು.

೪೫. **ದಾವೆಯು ನಡೆಯುತ್ತಿರುವಾಗ ಜೀವನಾಂಶ:** ಈ ಭಾಗದ ಪ್ರಕಾರ ಯಾವುದೇ ವಿಚಾರಣೆಯು ನಡೆಯುತ್ತಿರುವಾಗ, ಪತ್ನಿಗೆ ತನ್ನ ಜೀವನನಿರ್ವಹಣೆಗೂ, ವಿಚಾರಣೆ ಅಗತ್ಯವಾಗಿರುವ ವೆಚ್ಚಗಳಿಗೂ ಸಾಕಷ್ಟು ಸ್ವತಂತ್ರ ವರಮಾನವಿಲ್ಲ ಎಂದು ನ್ಯಾಯಾಲಯಕ್ಕೆ ಮನವರಿಕೆಯಾದ ಪಕ್ಷದಲ್ಲಿ, ಪತ್ನಿಯು ಅರ್ಜಿ ಹಾಕಿದರೆ, ಆಕೆಯ ದಾವೆಯ ನಿರ್ವಹಣೆಗೆ ಕೊಡಬೇಕಾದ ವೆಚ್ಚವನ್ನು, ವಿಚಾರಣೆ ನಡೆಯುತ್ತಿರುವವರೆಗೆ ನ್ಯಾಯಾಲಯಕ್ಕೆ ವಿಹಿತವಾಗಿದೆ ಎಂದು ತೋರಿರುವ ನಿವ್ವಳ ವರಮಾನದ ಐದನೇ ಒಂದು ಭಾಗವನ್ನು ಮೀರದಂತೆ ಹಣವನ್ನು ಪತ್ನಿಗೆ ಕೊಡತಕ್ಕದೆಂದು ನ್ಯಾಯಾಲಯವು ಪತಿಗೆ ಆದೇಶ ನೀಡಬಹುದು.

**ಭಾಗ–೬ ಬಾಂಬೇ ಶಾಸನ**

(೪೭)

**೪೫. ಖಾಯಂ ಜೀವನಾಂಶ:–**

(೧) ಈ ಭಾಗದ ಪ್ರಕಾರ ತನ್ನ ನ್ಯಾಯಾಧಿಕಾರವನ್ನು ನಿರ್ವಹಿಸುತ್ತಿರುವ ಯಾವುದೇ ನ್ಯಾಯಾಲಯವು, ಡಿಕ್ರಿ ನೀಡುವ ಸಮಯದಲ್ಲಿ, ಅಥವಾ ಅದಾದ ಮೇಲೆ ಯಾವುದೇ ಸಮಯದಲ್ಲಿ, ಪತ್ನಿಯು ಅರ್ಜಿ ಹಾಕಿಕೊಂಡರೆ, ಅವಳು ಎಲ್ಲಿಯುವರೆಗೆ ಪತಿವ್ರತೆಯಾಗಿ ಅವಿವಾಹಿತಳಾಗಿ ಇರುತ್ತಾಳೆಯೋ ಅಲ್ಲಿಯವರೆಗೆ ಅವಳಿಗೆ ಜೀವನ ನಿರ್ವಹಣೆಗೆ ಪೋಷಣೆಗಳ ಸಲುವಾಗಿ, ಅಗತ್ಯವಾದರೆ ಪತಿಯ ಆಸ್ತಿಯನ್ನು ಪರಿಗಣಿಸಿ ಒಂದು ಮೊತ್ತವನ್ನಾಗಲಿ, ಅಥವಾ ಆಕೆ ಬದುಕಿರುವ ಅವಧಿಯುನ್ನು ಮೀರದಂತೆ ಪ್ರತಿ ತಿಂಗಳು ಅಥವಾ ನಿರ್ದಿಷ್ಟ ಪಡಿಸುವ ಕಾಲಾವಧಿಯಲ್ಲಿ ಹಣವನ್ನು ಕೊಡಬೇಕೆಂದು ಆದೇಶಿಸಬಹುದು. ಆಗ ಆಕೆಯದೇ ಆಸ್ತಿ ಏನಾದರೂ ಇದ್ದರೆ ಆಕೆಯ ಪತಿಯ ಆಸ್ತಿ ಮತ್ತು ಅವರಿಬ್ಬರ ನಡವಳಿಕೆ ಇವುಗಳನ್ನು ಪರಿಗಣಿಸಿ ತನಗೆ ನ್ಯಾಯುಯುತ ಎನಿಸಿದ ಮೊತ್ತವನ್ನು ನ್ಯಾಯಾಲಯುವು ನಿಗದಿಪಡಿಸುತ್ತದೆ.

(೨) (೧)ನೇ ಉಪವಿಭಾಗದ ಪ್ರಕಾರ ಆದೇಶ ನೀಡಿದ ಮೇಲೆ ಯಾವುದೇ ಸಮಯದಲ್ಲಿ ಎರಡು ಪಕ್ಷಗಳಲ್ಲಿ ಯಾವುದೇ ಒಂದರ ಸನ್ನಿವೇಶದಲ್ಲಿ ಬದಲಾವಣೆಯಾಗಿದೆ ಎಂದು ನ್ಯಾಯಾಲಯಕ್ಕೆ ಮನವರಿಕೆಯಾದ

(೪೬)

**೪೬. ಖಾಯಂ ಜೀವನಾಂಶ.**

(೧) ಈ ಭಾಗದ ಪ್ರಕಾರ ನ್ಯಾಯಾಧಿಕಾರವನ್ನು ನಿರ್ವಹಿಸುತ್ತಿರುವ ಯಾವುದೇ ನ್ಯಾಯಾಲಯವು ಆದೇಶ ನೀಡುವ ಸಮಯದಲ್ಲಿ, ಅಥವಾ ಅದಾದ ಮೇಲೆಯೂ, ಅದಕ್ಕಾಗಿ ಪತ್ನಿಯು ಅರ್ಜಿ ಹಾಕಿಕೊಂಡ ಪಕ್ಷದಲ್ಲಿ,...... ಎಲ್ಲಿಯವರೆಗೆ ಆಕೆಯು ಪತಿವ್ರತೆಯಾಗಿ ಅವಿವಾಹಿತೆ ಯಾಗಿರುತ್ತಾಳೆಯೋ ಅಲ್ಲಿಯವರೆಗೆ ಪತ್ನಿಗೆ, ಅವಳ ಜೀವನ ನಿರ್ವಹಣೆಗಾಗಿ ಪೋಷಣೆಗಾಗಿ, ಪತಿಯ ಆಸ್ತಿಯನ್ನು ಪರಿಗಣಿಸಿ ಒಂದು ಮೊತ್ತವನ್ನಾಗಲಿ, ಅಥವಾ ಆಕೆ ಬದುಕಿರುವ ಅವಧಿಯುನ್ನು ಮೀರದಂತೆ ಪ್ರತಿ ತಿಂಗಳೂ ಅಥವಾ ನಿರ್ದಿಷ್ಟಪಡಿಸಿದ ಕಾಲಾವಧಿಯಲ್ಲಿ ಇಂತಿಷ್ಟು ಹಣವನ್ನಾಗಲಿ ಕೊಡತಕ್ಕದ್ದೆಂದು ಆದೇಶಿಸಬಹುದು. ಆಗ ಆಕೆಗೆ ಏನಾದರೂ ಆಸ್ತಿಯಿದ್ದರೆ, ಆಕೆಯ ಪತಿಯ ಆಸ್ತಿ ಅವರಿಬ್ಬರ ನಡವಳಿಕೆ ಇವುಗಳನ್ನು ಪರಿಗಣಿಸಿ ನ್ಯಾಯುಯುತವಾದುದೆನಿಸಿದ ಮೊತ್ತವನ್ನು ನ್ಯಾಯಾಲಯವು ನಿಗದಿ ಪಡಿಸುತ್ತದೆ.

(೨) ಉಪವಿಭಾಗ (೧) ಪ್ರಕಾರ ಒಂದು ಆದೇಶ ನೀಡಿದ ಅನಂತರ ಯಾವುದೇ ಸಮುಯದಲ್ಲಿ ಎರಡರಲ್ಲಿ ಯಾವುದೇ ಪಕ್ಷದ ಸನ್ನಿವೇಶದಲ್ಲಿ ಬದಲಾವಣೆಯಿದೆ ಎಂದು ನ್ಯಾಯಾಲಯಕ್ಕೆ ಮನವರಿಕೆಯಾದ ಪಕ್ಷದಲ್ಲಿ, ಇಬ್ಬರಲ್ಲಿ ಯಾರೇ ಒಬ್ಬರು

ಪಕ್ಷದಲ್ಲಿ, ಇಬ್ಬರಲ್ಲಿ ಯಾರೊಬ್ಬರು ಕೇಳಿದಾಗ, ಆ ಆದೇಶವನ್ನು ನ್ಯಾಯವೆಂದು ಕಂಡುಬಂದ ರೀತಿಯಲ್ಲಿ ಬದಲಿಸಬಹುದು, ಪರಿಷ್ಕರಿಸಬಹುದು, ಅಥವಾ ರದ್ದು ಪಡಿಸಬಹುದು.

(೩) ಯಾರ ಪರವಾಗಿ (೧) ಅಥವಾ (೨) ನೇ ಉಪವಿಭಾಗಗಳ ಅನ್ವಯ ಆದೇಶವನ್ನು ಹೊರಡಿಸಿಯಾದ ಮೇಲೆ, ಆ ಪತ್ನಿಯು ಮರುಮದುವೆ ಮಾಡಿಕೊಂಡಿದ್ದಾಳೆ, ಅಥವಾ ಪತಿವ್ರತೆಯಾಗಿ ಉಳಿದಿಲ್ಲ ಎಂದು ನ್ಯಾಯಾಲಯಕ್ಕೆ ಮನವರಿಕೆಯಾದ ಪಕ್ಷದಲ್ಲಿ ಅದು ಆದೇಶವನ್ನು ರದ್ದು ಪಡಿಸುತ್ತದೆ.

(೪೮)

**೪೬. ಮಕ್ಕಳ ರಕ್ಷಣೆ:–** ಈ ಭಾಗದ ಪ್ರಕಾರ ನಡೆಯುವ ಯಾವುದೇ ವಿಚಾರಣೆಯಲ್ಲಿ ನ್ಯಾಯಾಲಯವು ಆಗಿಂದಾಗ, ಅಪ್ರಾಪ್ತ ವಯಸ್ಕ ಮಕ್ಕಳ ರಕ್ಷಣೆ, ಪಾಲನೆ, ಶಿಕ್ಷಣ ಇವುಗಳ ದೃಷ್ಟಿಯಿಂದ ನ್ಯಾಯ ಮತ್ತು ಸೂಕ್ತ ಎಂದು ತೋರುವ ಮಧ್ಯಕಾಲೀನ ಆದೇಶಗಳನ್ನು ಹೊರತು ಪಡಿಸಬಹುದು, ಡಿಕ್ರಿಯಲ್ಲಿ ಸೂಕ್ತವೆನಿಸುವ ಅವಕಾಶಗಳನ್ನು ಅವರ ಇಚ್ಛೆಗೆ ಹೊಂದುವಂತೆ ಮಾಡಬಹುದು. ಡಿಕ್ರಿ ನೀಡಿದ ನಂತರ ಅಹವಾಲಿನ ಮೂಲಕ ಅರ್ಜಿ ಹಾಕಿಕೊಂಡರೆ, ಡಿಕ್ರಿಯ ಪ್ರಕಾರ ನಡೆಯುವ ಅಂತಹ ಮಕ್ಕಳ ರಕ್ಷಣೆ, ಪಾಲನೆ, ಶಿಕ್ಷಣ ಇವುಗಳೀಗೆ ಸಂಬಂಧಿಸಿದಂತೆ ಆ ಡಿಕ್ರಿಯನ್ನು, ಇನ್ನೂ ಡಿಕ್ರಿ ನೀಡದೆ ಮಾಡಿರುವ ಎಲ್ಲಾ ಮಧ್ಯಕಾಲೀನ ಆದೇಶಗಳನ್ನೂ ಹಿಂತೆಗೆದು

ಕೇಳಿದಾಗ, ಆ ಆದೇಶವನ್ನು ನ್ಯಾಯಾಲಯವು ತನಗೆ ಸೂಕ್ತವೆಂದು ಕಂಡುಬಂದ ರೂಪದಲ್ಲಿ ವ್ಯತ್ಯಾಸಗೊಳಿಸಬಹುದು, ಪರಿಷ್ಕರಿಸಬಹುದು ಅಥವಾ ರದ್ದುಪಡಿಸಬಹುದು.

(೩) (೧) ಅಥವಾ (೨)ನೇ ಉಪ ವಿಭಾಗದ ಪ್ರಕಾರ ಪತ್ನಿಯ ಪರವಾಗಿ ಆದೇಶನೀಡಿದ ಮೇಲೆ, ಆಕೆಯು ಮರುವಿವಾಹ ಮಾಡಿಕೊಂಡಿದ್ದಾಳೆ ಅಥವಾ ಪತಿವ್ರತೆಯಾಗಿ ಉಳಿದಿಲ್ಲ ಎಂದು ನ್ಯಾಯಾಲಯಕ್ಕೆ ಮನವರಿಕೆಯಾದ ಪಕ್ಷದಲ್ಲಿ ಅದು ಆದೇಶವನ್ನು ಬದಲಾಯಿಸಬಹುದು ಅಥವಾ ರದ್ದುಪಡಿಸಬಹುದು.

(೪೭)

**೪೭. ಮಕ್ಕಳ ರಕ್ಷನೆ:–** ಈ ಭಾಗದ ಪ್ರಕಾರ ಯಾವುದೇ ವಿಚಾರಣೆಯಲ್ಲಿ ನ್ಯಾಯಾಲಯವು ಆಗಿಂದಾಗ ಅಪ್ರಾಪ್ತ ವಯಸ್ಕ ಮಕ್ಕಳ ರಕ್ಷಣೆ, ಪಾಲನೆ ಮತ್ತು ಶಿಕ್ಷಣ ಇವುಗಳ ದೃಷ್ಟಿಯಿಂದ ನ್ಯಾಯ ಮತ್ತು ಸೂಕ್ತ ಎಂದು ಭಾವಿಸುವ ಮಧ್ಯಕಾಲೀನ ಆದೇಶಗಳನ್ನು, ಅವರ ಅಪೇಕ್ಷೆಯಿರುವ ರೀತಿಯಲ್ಲಿ ಮಾಡಬಹುದು. ಡಿಕ್ರಿ ನೀಡಿದ ನಂತರ ಅಹವಾಲು ಮೂಲಕ ಅರ್ಜಿಹಾಕಿಕೊಂಡ ಪಕ್ಷದಲ್ಲಿ, ಡಿಕ್ರಿಯ ಪ್ರಕಾರ ನಡೆಯುವ ಅಂತಹ ಮಕ್ಕಳ ರಕ್ಷಣೆ, ಪಾಲನೆ, ಶಿಕ್ಷಣ ಇವುಗಳಿಗೆ ಸಂಬಂಧಿಸಿದ ಆ ಡಿಕ್ರಿಯನ್ನು ಇನ್ನೂ ಡಿಕ್ರಿ ನೀಡದಿರುವಾಗ ನೀಡಿರುವ ಎಲ್ಲಾ ಮಧ್ಯಕಾಲೀನ ಆದೇಶಗಳನ್ನೂ ಹಿಂತೆಗೆದುಕೊಳ್ಳಬಹುದು, ತಿದ್ದುಪಡಿಮಾಡಬಹುದು ಅಥವಾ

**ಭಾಗ–೧೫ ಮುಂಬೈ ಆಕ್ಟ್**

ಕೊಳ್ಳಬಹುದು, ತಿದ್ದುಪಡಿ ಮಾಡಬಹುದು, ವಜಾ ಮಾಡಬಹುದು, ಪರಿಷ್ಕರಿಸ ಬಹುದು.

(೪೯)

**೪೭ ಆಸ್ತಿಯ ವಿಲೇವಾರಿ :–** ಈ ಭಾಗದ ಪ್ರಕಾರ ನ್ಯಾಯಾಧಿಕಾರವನ್ನು ಚಲಾಯಿಸುತ್ತಿರುವ ಯಾವುದೇ ನ್ಯಾಯಾಲಯವು ಡಿಕ್ರಿ ನೀಡುವಾಗ ಈ ಕೆಳಕಂಡವುಗಳಿಗೆ ಸಂಬಂಧಿಸಿದಂತೆ ಡಿಕ್ರಿಯಲ್ಲಿ ಅವಕಾಶಗಳನ್ನು ಮಾಡಬಹುದು.

- (i) ಡಿಕ್ರಿಗೆ ಮುಂಚಿತವಾಗಿ ಪತಿಗೂ ಪತ್ನಿಗೂ ಜಂಟಿಯಾಗಿ ಸೇರಿದ್ದ ಯಾವುದೇ ಆಸ್ತಿ;
- (ii) ೯೩ನೆಯ ಭಾಗದಲ್ಲಿ ನಿರೂಪಿಸಿ ದಂತೆ ವರದಕ್ಷಿಣೆಯಾಗಿಯೋ ಬೇರೆ ರೀತಿಯಲ್ಲಿಯೋ ಪತ್ನಿಗೆ ಸೇರಿದ್ದು ಪತಿಯ ವಶದಲ್ಲಿರುವ ಯಾವುದೇ ಆಸ್ತಿ.

(೫೦)

**೪೮. ಡಿಕ್ರಿಗಳು ಮತ್ತು ಆದೇಶಗಳನ್ನು ಕಾರ್ಯಗತಗೊಳಿಸುವಿಕೆ ಮತ್ತು ಅಪೀಲು (ಮೇಲ್ಮನವಿ)**

ಈ ಭಾಗದ ಪ್ರಕಾರ ಯಾವುದೇ ವಿಚಾರಣೆ ನಡೆಸಿದ ನ್ಯಾಯಾಲಯವು ನೀಡಿದ ಎಲ್ಲಾ ಡಿಕ್ರಿಗಳು ಮತ್ತು ಆದೇಶಗಳು ಅವುಗಳನ್ನು ನೀಡಿರುವ ರೀತಿಯಲ್ಲಿಯೇ ಕಾರ್ಯ ಗತಗೊಳ್ಳುತ್ತವೆ. ಅದು ನ್ಯಾಯಾ ಲಯಕ್ಕಿರುವ ಸಿವಿಲ್ ನ್ಯಾಯಾಧಿಕಾರದ ಪ್ರಕಾರ ನೀಡಲಾಗುವ ಡಿಕ್ರಿಗಳು ಮತ್ತು ಆದೇಶಗಳ ರೀತಿಯಲ್ಲಿಯೇ ಅದರ ಮೇಲೆ ಜಾರಿಗೊಳ್ಳುತ್ತದೆ. ಆಗ ಚಾಲ್ತಿಯಲ್ಲಿರುವ ಕಾನೂನಿನ ಪ್ರಕಾರ ಮೇಲ್ಮನವಿ (ಅಪೀಲು) ಸಲ್ಲಿಸಬಹುದು.

* * * *

ಬದಲಾಯಿಸಬಹುದು.

(೪೮)

(೪೯)

**೪೯. ಡಿಕ್ರಿಗಳು ಮತ್ತು ಆದೇಶಗಳನ್ನು ಜಾರಿಗೊಳಿಸುವಿಕೆ ಮತ್ತು ಅಪೀಲು:–**

ಈ ಭಾಗದನ್ವಯ ನ್ಯಾಯಾಲಯವು ಮಾಡಿದ ಎಲ್ಲಾ ಡಿಕ್ರಿಗಳು ಮತ್ತು ಆದೇಶಗಳು, ನ್ಯಾಯಾಲಯಕ್ಕಿರುವ ಮೂಲ ಸಿವಿಲ್ ನ್ಯಾಯಾಧಿಕಾರದ ಡಿಕ್ರಿ ಮತ್ತು ಆದೇಶಗಳನ್ನು ಜಾರಿಗೊಳಿಸುವ ರೀತಿಯಲ್ಲಿಯೇ ಕಾರ್ಯಗತ ಗೊಳಿಸಲಾಗುತ್ತದೆ. ಅವುಗಳ ಮೇಲೆ ಆ ಸಮಯದಲ್ಲಿ ಚಾಲ್ತಿಯಲ್ಲಿರುವ ಕಾನೂನಿನ ಪ್ರಕಾರ ಮೇಲ್‌ಮನವಿ(ಅಪೀಲು) ಮಾಡ ಬಹುದು.

(d) ಜಿಲ್ಲಾ ನ್ಯಾಯಾಲಯವು ವಿವಾಹ ರದ್ದತಿಯನ್ನು ಕುರಿತು ಮಾಡಿದ ಡಿಕ್ರಿಯಮೇಲೆ, ಅಥವಾ ಅಂತಹ ಆದೇಶವನ್ನು ಸ್ವೀಕರಿಸಿದ ಅಥವಾ ನಿರಾಕರಿಸಿದ ಹೈಕೋರ್ಟ್‌ನ ಆದೇಶದ ಮೇಲೆ ಅಪೀಲು ಮಾಡುವಂತಿಲ್ಲ.

(ಆ) ಕೇವಲ ವೆಚ್ಚಗಳಿಗೆ ಸಂಬಂಧ ಪಟ್ಟಂತೆ ಅಪೀಲು ಮಾಡುವಂತಿಲ್ಲ

(೫೦)

ಕೇವಲ ವೆಚ್ಚಗಳಿಗೆ ಸಂಬಂಧಪಟ್ಟಂತೆ ಅಪೀಲು ಮಾಡುವಂತಿಲ್ಲ.

(೫೧)

**ಅಧ್ಯಾಯ – ೪**

**ಮರುಮಕ್ಕತ್ತಾಯಂ ಅಥವಾ ಅಳಿಯಸಂತಾನ ವಿವಾಹದ ರದ್ದತಿಗಾಗಿ ವಿಶೇಷ ಅವಕಾಶಗಳು:–**

**೪೯. ಮರುಮಕ್ಕತ್ತಾಯಂ ಅಥವಾ ಅಳಿಯ ಸಂತಾನ ವಿವಾಹದ ರದ್ದತಿ :– ೨೪**

(ಅ) ಪ್ರಕರಣದ ೪ನೇ ಉಪ ಪ್ರಕರಣದಲ್ಲಿ ಅವಕಾಶ ಮಾಡಿರುವಂತೆ ಹೊರತು, ಮಿಕ್ಕಂತೆ, ಆ ಪ್ರಕರಣದ ಅನ್ವಯ ವಿಧ್ಯುಕ್ತಗೊಳಿಸಿದ, ಒಂದು ವಿವಾಹವನ್ನು

(ಅ) ೪೯ (ಆ) ಪ್ರಕರಣದ ಅನ್ವಯ ರದ್ದತಿಯ ಆದೇಶದಿಂದ ;

(ಅ) ೪೯ (ಆ) ಪ್ರಕರಣದನ್ವಯು ವಿಚ್ಛೇದನದ ಆದೇಶದಿಂದ:

(ಇ) ವಿವಾಹ ಭಾಗೀದಾರರು ಮಾಡಿದ ನೋಂದಾಯಿತ ರದ್ದತಿಯ ಪತ್ರದಿಂದ. ವಿವಾಹ ಭಾಗೀದಾರರಲ್ಲಿ ಹೆಣ್ಣಿಗೆ ಹದಿನೆಂಟು ವರ್ಷ ವಯುಸ್ಸು ತುಂಬಿರದಿದ್ದರೆ, ಆ ವಯಸ್ಸು ಆಕೆಗೆ ತುಂಬುವವರೆಗೂ ವಿಚ್ಛೇದನದ ಅದೇಶ ನೀಡಿ ವಿವಾಹವನ್ನು ರದ್ದು ಪಡಿಸುವಂತಿಲ್ಲ.

(೨) ನೋಂದಾಯಿತ ರದ್ದತಿ ಪತ್ರದ ಮೂಲಕವಾಗಿ ಒಂದು ವಿವಾಹದ ರದ್ದತಿಯು ಆ ಪತ್ರವು ನೋಂದಣಿಗೊಂಡ ದಿನದಿಂದ ಜಾರಿಗೆ ಬರುತ್ತದೆ.

**(೫೨)** **(೫೧)**

**೪೯A. ಮರುಮಕ್ಕತ್ತಾಯಂ ಅಥವಾ ಅಳಿಯ ಸಂತಾನ ವಿವಾಹದ ರದ್ದತಿ ಆದೇಶಕ್ಕೆ ಆಧಾರಗಳು.**

(೧) ಈ ಸಂಹಿತೆಯು ಜಾರಿಗೆ ಬರುವುದಕ್ಕಿಂತ ಮೊದಲು ಅಥವಾ ಅಳಿಯಸಂತಾನ ಕಾನೂನಿನ ಮೇರೆಗೆ ವಿಧ್ಯುಕ್ತ ಗೊಳಿಸಲಾದ ಯಾವುದೇ ವಿವಾಹವನ್ನು ಈ ಕೆಳಗಿನ ಸಂದರ್ಭಗಳಲ್ಲಿ ರದ್ದತಿಯ ಆದೇಶದ ಮೂಲಕ ರದ್ದು ಗೊಳಿಸಬಹುದು.

(ಅ) ವಿವಾಹದ ಸಮಯದಲ್ಲಿ ಚಾಲ್ತಿಯಲ್ಲಿದ್ದ ಯಾವುದೇ ಕಾನೂನಿನ ಅವಕಾಶಗಳ ಪ್ರಕಾರ, ಭಾಗೀದಾರರಾದ ಪತಿಪತ್ನಿಯರಲ್ಲಿ ಯಾರೊಬ್ಬರಿಗೆ ಹಿಂದಿನ ಪತಿಪತ್ನಿ ಜೀವಿಸಿದ್ದರೆಂಬ ಆಧಾರದ ಮೇಲೆ ವಿವಾಹವು ಅನೂರ್ಜಿತವಾಗಿದ್ದರೆ; ಅಥವಾ

(ಆ) ವಿವಾಹದ ಸಮಯದಲ್ಲಿ ಭಾಗೀದಾರರು ೫ನೆಯ ಪ್ರಕರಣದ (ಇ) ಉಪ ವಾಕ್ಯದಲ್ಲಿ ವಿವರಿಸಿರುವಂತೆ ನಿಷೇಧಿತ ಬಾಂಧವ್ಯದ ವಲಯದಲ್ಲಿದ್ದರೆ, ಹಾಗೆ ವಿಧ್ಯುಕ್ತಗೊಂಡಿದ್ದ ಯಾವುದೇ ವಿವಾಹವು ವಿವಾಹ ಸಮಯದಲ್ಲಿ ಚಾಲ್ತಿಯಲ್ಲಿದ್ದ ಯಾವುದೇ ಕಾನೂನಿನ ಅವಕಾಶಗಳ ಪ್ರಕಾರ ಊರ್ಜಿತವಾಗಿದ್ದ ಪಕ್ಷದಲ್ಲಿ, ಈ ಉಪಪ್ರಕರಣದ (ಆ) ಉಪವಾಕ್ಯದ ಅವಕಾಶಗಳ ಪ್ರಕಾರ ರದ್ದಾಗುವುದಿಲ್ಲ.

(೨) ೨೪A ಈ ಪ್ರಕರಣದ (೪)ನೇ ಉಪವಿಭಾಗದಲ್ಲಿ ಹೊರತು, ವಿಧ್ಯುಕ್ತಗೊಂಡಿದ್ದ ಒಂದು

ವಿವಾಹವನ್ನು, ಅದು ೭ನೆಯ ಪ್ರಕರಣದ (i)ನೇ ಉಪವಾಕ್ಯ ಅಥವಾ (iv)ನೇ ಉಪವಾಕ್ಯಗಳಲ್ಲಿ ಹೇಳಿದ ನಿಯಮಗಳನ್ನು ಉಲ್ಲಂಘಿಸಿದ ಪಕ್ಷದಲ್ಲಿ ರದ್ದತಿ ಆದೇಶವನ್ನು ನೀಡಿ ರದ್ದು ಪಡಿಸಬಹುದು.

(೩) ಈ ಪ್ರಕರಣದನ್ವಯ ರದ್ದತಿ ಆದೇಶದಿಂದ ಒಂದು ವಿವಾಹವು ರದ್ದುಗೊಂಡಿರುವಾಗ, ಭಾಗೀದಾರರು ಎಂದೂ ವಿವಾಹಿತರಾಗಿರಲಿಲ್ಲ ಎಂಬಂತೆ ಹಾಗೂ ಪರಸ್ಪರ ಪತಿ–ಪತ್ನಿಯರಂತೆ ಸಂಬಂಧಪಟ್ಟಿರಲಿಲ್ಲ ಎಂಬಂತೆ ಪರಿಗಣಿಸಲಾಗುತ್ತದೆ. ಆದರೆ, ಹಿಂದಿನ ಪತಿಯೋ ಪತ್ನಿಯೋ ಜೀವಂತವಾಗಿದ್ದರು ಎಂಬ ಆಧಾರದಿಂದ ವಿವಾಹವು ರದ್ದತಿ ಆದೇಶದಿಂದ ರದ್ದುಗೊಂಡ ಪಕ್ಷದಲ್ಲಿ, ಮುಂದಿನ ವಿವಾಹವನ್ನು ಪೂರ್ಣ ನಂಬಿಕೆಯಿಂದ ವಿಧ್ಯುಕ್ತಗೊಳಿಸಲಾಗಿದ್ದ ಪಕ್ಷದಲ್ಲಿ ಭಾಗೀದಾರರಲ್ಲಿ ಒಬ್ಬರೋ ಇಬ್ಬರೋ ಹಿಂದಿನ ಪತಿ ಅಥವಾ ಪತ್ನಿ ಸತ್ತುಹೋಗಿದ್ದಾರೆ ಎಂದು ಸಂಪೂರ್ಣವಾಗಿ ನಂಬಿದ್ದ ಪಕ್ಷದಲ್ಲಿ, ಡಿಕ್ರಿ ಹೊರಡಿಸುವುದಕ್ಕಿಂತ ಮೊದಲು ಜನಿಸಿದ್ದ ಮಕ್ಕಳನ್ನು ಡಿಕ್ರಿಯಲ್ಲಿ ನಿರ್ದಿಷ್ಟವಾಗಿ ನಮೂದಿಸಲಾಗುತ್ತದೆ ಮತ್ತು ಅವರು ತಮ್ಮ ತಂದೆ – ತಾಯಂದಿರ ಕಾನೂನು ಸಮ್ಮತವಾದ ಮಕ್ಕಳಾಗಿದ್ದರು, ಎಲ್ಲ ಕಾಲಕ್ಕೂ ಆಗಿರುತ್ತಾರೆ ಎಂದು ಪರಿಗಣಿಸಲಾಗುತ್ತದೆ.

**(೫೩)** **(೫೨)**

**೪೯B. ಮರುಮಕ್ಕತ್ತಾಯಂ ಅಥವಾ ಅಳಿಯ ಸಂತಾನ ವಿವಾಹದ ವಿಚ್ಛೇದನಕ್ಕೆ ಮನವಿ ಮತ್ತು ವಿಚಾರಣೆಯ ವಿಧಾನ.**

(೧) ೨೪ ಪ್ರಕರಣದ (೪)ನೇ ಉಪಪ್ರಕರಣದಲ್ಲಿನ ಅವಕಾಶಗಳ ಹೊರತು, ವಿವಾಹ ಭಾಗೀದಾರರಲ್ಲೇ ಯಾರೇ ಒಬ್ಬರು ಆ ಪ್ರಕರಣದಂತೆ, ಒಂದು ವಿಚ್ಛೇದನದ ಆಜ್ಞೆಯು ಮೂಲಕ ಆ ವಿವಾಹವನ್ನು ರದ್ದು ಪಡಿಸಬೇಕೆಂದು ಜಿಲ್ಲಾ ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಬಹುದು.

(೨) ಆ ಮನವಿಯಲ್ಲಿ ವಿವಾಹವು ನಡೆದ ಸ್ಥಳ, ತಾರೀಕು, ಯಾರ ಅನುಮತಿಯಿಂದ ವಿವಾಹವು ವಿಧ್ಯುಕ್ತಗೊಂಡಿತೋ ಆ ಪಾಲಕರ ಹೆಸರು ಮತ್ತು ವಿಳಾಸಗಳನ್ನು ಸ್ಪಷ್ಟವಾಗಿ ಹೇಳಿರಬೇಕು.

(೩) ಆ ಮನವಿಯ ಒಂದು ಪ್ರತಿಯನ್ನು ಮನವಿದಾರನ ವೆಚ್ಚದಲ್ಲಿ ಪ್ರತಿವಾದಿಗೆ ಒದಗಿಸಲಾಗುವುದು.

(೪) ಮೇಲೆ ಹೇಳಿದಂತೆ ಮನವಿಯ ಪ್ರತಿಯನ್ನು ಪ್ರತಿವಾದಿಗೆ ಒದಗಿಸಿ ಆರು ತಿಂಗಳಿಗಿಂತ ಮುಂಚಿತವಾಗಿ ಅಲ್ಲದೆ ಒಂದು ವರ್ಷಕ್ಕಿಂತ ವಿಳಂಬವಾಗಿ ಅಲ್ಲದೆ ಅರ್ಜಿದಾರನ ಕೋರಿಕೆಯಂತೆ ಅಷ್ಟರಲ್ಲಿ ಅರ್ಜಿಯನ್ನು ಹಿಂತೆಗೆದುಕೊಂಡಿರ ದಿದ್ದರೆ, ೨೪A ಪ್ರಕರಣದಂತೆ ಊರ್ಜಿತವಾದ ವಾದ ವಿವಾದವು ಭಾಗೀದಾರರ ನಡುವೆ ವಿಧ್ಯುಕ್ತಗೊಂಡಿದ್ದಿತು ಎಂದು ಅದು ೭ನೆಯ ಪ್ರಕರಣದ (i) ಮತ್ತು

(iv)ನೆಯ ಉಪವಾಕ್ಯಗಳಲ್ಲಿ ನಿರ್ದಿಷ್ಟಪಡಿಸಿದ ನಿಯಮಗಳನ್ನು ಪಾಲಿಸಿದೆ ಎಂದೂ ಮನವರಿಕೆ ಯಾದರೆ, ನ್ಯಾಯಾಲಯವು ವಿವಾಹವು ರದ್ದಾಗಿದೆಯೆಂದು ಬರವಣಿಗೆಯ ಮೂಲಕ ಘೋಷಿಸಬಹುದು.

(೫) ವಿವಾಹದ ರದ್ದತಿಯು ಆದೇಶದ ತಾರೀಖಿನಿಂದ ಕಾರ್ಯಗತವಾಗುತ್ತದೆ. ಭಾಗೀದಾರರಲ್ಲಿ ಯಾರೇ ಆಗಲಿ, ಈ ಭಾಗದ ಅವಕಾಶಗಳಿಗೆ ಒಳಪಟ್ಟು ಮರುವಿವಾಹ ಮಾಡಿಕೊಳ್ಳಲು ಸ್ವತಂತ್ರರಾಗಿರುತ್ತಾರೆ.

(೬) ಈ ಪ್ರಕರಣದನ್ವಯ ವಿಚ್ಛೇದನದ ಆಜ್ಞೆಯ ಮೂಲಕ ಒಂದು ವಿವಾಹವು ರದ್ದಾಗಿದ್ದ ಪಕ್ಷದಲ್ಲಿ, ವಿವಾಹ ಭಾಗೀದಾರರು ಆ ಆದೇಶದ ದಿನಾಂಕದಿಂದ ಮುಂದಕ್ಕೆ ಪತಿ–ಪತ್ನಿ ಸಂಬಂಧವನ್ನು ಹೊಂದಿರುವುದಿಲ್ಲ; ಆ ವಿವಾಹದಿಂದ ಜನಿಸಿದ್ದ ಮಕ್ಕಳು ಎಲ್ಲಾ ದೃಷ್ಟಿಯಿಂದಲೂ ತಮ್ಮ ತಂದೆತಾಯಂದಿರಿಗೆ ಜನಿಸಿದ ಮಕ್ಕಳು ಎಂದು ಪರಿಗಣಿಸಲಾಗುತ್ತದೆ. ಅವರು ಮುಂದೆ ಎಂದೆಂದೂ ಹಾಗೆಯೇ ಪರಿಗಣಿಸಲ್ಪಡುತ್ತಾರೆ.

**(೫೪)**

**೫೦. ಮರುಮಕ್ಕತ್ತಾಯಂ ಅಥವಾ ಅಳಿಯಸಂತಾನ ವಿವಾಹಕ್ಕೆ ಕೆಲವು ಅವಕಾಶಗಳ ಅನ್ವಯ.** (೫೭)

(೧) ಈ ಅಧ್ಯಾಯದ ಪ್ರಕಾರ ೨೪A ಪ್ರಕರಣದಂತೆ ವಿಧ್ಯುಕ್ತಗೊಂಡಿದ್ದ ಯಾವುದೇ ವಿವಾಹವನ್ನು ರದ್ದತಿ ಡಿಕ್ರಿಯಿಂದಲೋ ಅನೂರ್ಜಿತತೆಯ ಆದೇಶದಿಂದಲೋ ರದ್ದುಪಡಿಸಲು

ನ್ಯಾಯವಿಚಾರಣೆ ನಡೆಯುವಾಗ, ಅದಕ್ಕೆ ೩೯ರಿಂದ ೪೮ರ ವರೆಗಿನ (ಅದೂ ಸೇರಿ) ಪ್ರಕರಣಗಳ ಅವಕಾಶಗಳು ಸಾಧ್ಯವಾದಷ್ಟು ಮಟ್ಟಿಗೆ ಅನ್ವಯಿಸುತ್ತವೆ.

(೨) ಈ ಪ್ರಕರಣದಲ್ಲಿರುವ ಏನೊಂದೂ ೨೪A ಪ್ರಕರಣದ (೪)ನೆಯ ಉಪಪ್ರಕರಣದ ಪ್ರವರ್ತನೆಗೆ ಅಡ್ಡ ಪರಿಣಾಮವನ್ನುಂಟುಮಾಡುವುದಿಲ್ಲ. ಉಪಪ್ರಕರಣದ Iರಲ್ಲಿ ಹೇಳಿರುವುದರ ಹೊರತು II ಅಥವಾ IIIನೇ ಅಧ್ಯಾಯದಲ್ಲಿರುವ ಏನೊಂದೂ ಆ ಭಾಗದಂತೆ ವಿಧ್ಯುಕ್ತಗೊಂಡ ಯಾವುದೇ ವಿವಾಹಕ್ಕೆ ಸಂಬಂಧಪಡುವುದಿಲ್ಲ ಅಥವಾ ಅನ್ವಯಿಸುವುದಿಲ್ಲ.

**(೫೫)**

**ಅಧ್ಯಾಯ – ೫**

**ಉಳಿಸುವಿಕೆ**

**೫೧. ಹಿಂದಿನ ವಿವಾಹಗಳನ್ನು ಉಳಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ವಿಶೇಷ ಅವಕಾಶಗಳು.**

(೧) ಈ ಸಂಹಿತೆಯು ಜಾರಿಗೆ ಬರುವುದಕ್ಕಿಂತ ಮುಂಚೆ ಹಿಂದುಗಳ ನಡುವೆ ವಿಧ್ಯುಕ್ತಗೊಳಿಸಿದ್ದ ಒಂದು ವಿವಾಹವು ಮಿಕ್ಕಂತೆ ಊರ್ಜಿತವಾದುದಾಗಿರುವಾಗ, ಭಾಗೀದಾರರು ಒಂದೇ ಗೋತ್ರ ಅಥವಾ ಪ್ರವರಕ್ಕೆ ಸೇರಿದವರು ಅಥವಾ ಒಂದೇ ಜಾತಿಯ ಬೇರೆ ಬೇರೆ ಉಪಜಾತಿಗಳಿಗೆ ಅಥವಾ ಉಪಪಂಗಡಗಳಿಗೆ ಸೇರಿದವರು ಎಂಬ ಒಂದು ಕಾರಣದಿಂದ ಅನೂರ್ಜಿತವೆಂದು

**(೫೪)**

**೨೭. ಹಿಂದಿನ ವಿವಾಹಗಳನ್ನು ಉಳಿಸಬಹುದು:** ಈ ಸಂಹಿತೆಯು ಜಾರಿಗೆ ಬರುವುದಕ್ಕಿಂತ ಮುಂಚಿತವಾಗಿ ಹಿಂದುಗಳ ನಡುವೆ ವಿಧ್ಯುಕ್ತಗೊಂಡ ವಿವಾಹವನ್ನು, ಭಾಗೀದಾರರು ಒಂದೇ ಗೋತ್ರ ಅಥವಾ ಪ್ರವರಕ್ಕೆ ಸೇರಿದವರು ಅಥವಾ ಅದೇ ಜಾತಿಯ ಬೇರೆ ಬೇರೆ ಉಪಜಾತಿಗಳಿಗೆ ಅಥವಾ ಉಪಪಂಗಡಗಳಿಗೆ ಸೇರಿದವರು ಎಂಬ ಕಾರಣ ಮಾತ್ರದಿಂದ ಅನೂರ್ಜಿತವೆಂದಾಗಲಿ ಎಂದಾದರೂ ಅನೂರ್ಜಿತವಾಗಿತ್ತೆಂದಾಗಲಿ ಭಾವಿಸಲಾಗುವುದಿಲ್ಲ.

ಪರಿಗಣಿಸುವುದಿಲ್ಲ. ಎಂದಾದರೂ ಅನೂರ್ಜಿತವಾಗಿತ್ತೆಂದು ಪರಿಗಣಿಸುವುದಿಲ್ಲ.

(೨) ಈ ಸಂಹಿತೆಯು ಜಾರಿಗೆ ಬರುವುದಕ್ಕಿಂತ ಮುಂಚೆ ವಿವಾಹ ಸಮಯದಲ್ಲಿ ಮರುಮಕ್ಕತ್ತಾಯಂ ಅಥವಾ ಅಳಿಯಸಂತಾನ ಕಾನೂನಿಗೆ ಒಳಪಟ್ಟಿದ್ದ ಹೆಣ್ಣು ಮತ್ತು ಹಿಂದೂ ಗಂಡು ಇವರ ನಡುವೆ ವಿಧ್ಯುಕ್ತಗೊಂಡಿದ್ದ ವಿವಾಹವು ಊರ್ಜಿತವಾಗಿದ್ದು ಸಂಹಿತೆಯ ಜಾರಿ ಸಮಯದಲ್ಲಿ ಒಂದು ಊರ್ಜಿತ ವಿವಾಹವಾಗಿಯೇ ಮುಂದುವರಿಯುತ್ತದೆ. ಮರುಮಕ್ಕತ್ತಾಯಂ ಅಥವಾ ಅಳಿಯಸಂತಾನ ವಿವಾಹದ ರದ್ದತಿಗೆ ಸಂಬಂಧಿಸಿದಂತೆ ಈ ಸಂಹಿತೆಯಲ್ಲಿರುವ ವಿಶೇಷ ಅವಕಾಶಗಳು, ಭಾಗೀದಾರರಿಬ್ಬರೂ ಆ ಕಾನೂನಿಗೆ ಒಳಪಟ್ಟಿರುವಾಗ ನಡೆದ ಒಂದು ವಿವಾಹಕ್ಕೆ ಸಂಬಂಧಿಸಿದಂತೆ ಹೇಗೆ ಅನ್ವಯಿಸುತ್ತದೆಯೋ ಅದೇ ರೀತಿಯಲ್ಲಿ ಅನ್ವಯಿಸುತ್ತವೆ.

(೩) ೩ನೆಯ ಪ್ರಕರಣದಲ್ಲಿ (ಬಿ) ಉಪವಾಕ್ಯದಲ್ಲಿ ವಿವರಿಸಿರುವ ಮರುಮಕ್ಕತ್ತಾಯಂ ಅಥವಾ ಅಳಿಯಸಂತಾನ ಕಾನೂನಿನ ವ್ಯಾಪ್ತಿಗೆ ಒಳಪಟ್ಟ ಯಾವುದೇ ಸಮುದಾಯಕ್ಕೆ ಸೇರಿದ ಹೆಣ್ಣು, ಆ ಕಾನೂನಿಗೆ ಒಳಪಟ್ಟು ಅಥವಾ ಒಳಪಡದ ಗಂಡು ಇವರ ನಡುವೆ ದಾಂಪತ್ಯ ಸಂಬಂಧ ಏರ್ಪಟ್ಟು ಅದನ್ನು ಈ ಸಂಹಿತೆಯು ಜಾರಿಗೊಳ್ಳುವುದಕ್ಕಿಂತ ಮುಂಚಿತವಾಗಿ

**(೫೧) ಉಳಿಸುವಿಕೆ :**

ಮುಂಬಯಿ ಶಾಸನ

(೧) ಈ ಭಾಗದಲ್ಲಿರುವ ಯಾವುದೊಂದೂ, ಮದರಾಸು ಮರುಮಕ್ಕತ್ತಾಯಂ ಶಾಸನವು ೧೯೩೨ (೧೯೩೨ರ ಮದರಾಸು xxiiನೆಯ ಶಾಸನ) ನೀಡುವ ಯಾವುದೇ ಹಕ್ಕಿಗೆ ಈ ಸಂಹಿತೆಯು ಜಾರಿಗೊಳ್ಳುವ ಮುಂಚೆಯೋ, ಆಮೇಲೋ ವಿಧ್ಯುಕ್ತಗೊಂಡ ಒಂದು ಧಾರ್ಮಿಕ ವಿವಾಹದ ಅನೂರ್ಜಿತವಾಗಲು ಅಡ್ಡಿಯಾಗುವುದಿಲ್ಲ.

ಭಾಗ–೪
ಪ್ರಕರಣ–೩೪
ಪುಟ–೨೨
ಪ್ರಕರಣ–೧೭
ಮುಂಬೈ ಶಾಸನ

(೨) ಈ ಸಂಹಿತೆಯು ಜಾರಿಗೊಳ್ಳುವ ತಾರೀಕಿನಂದು ಹಾಗೆಯೇ ಕಾದಿರಿಸಿದ್ದ ವಿವಾಹರದ್ದತಿ, ಅಥವಾ ವಿವಾಹ ಅನೂರ್ಜಿತತೆ, ಅಥವಾ ವಿವಾಹ ವಿಚ್ಛೇದನಗಳನ್ನು ಕುರಿತು ಆಗ ಪ್ರಚಲಿತವಾಗಿದ್ದ ಕಾನೂನುಗಳ ಪ್ರಕಾರ ನಡೆಯುವ ಯಾವ ನ್ಯಾಯ ವಿಚಾರಣೆಗೂ ಈ ಭಾಗದಲ್ಲಿರುವ ಏನೊಂದೂ ತಡೆಯಾಗುವುದಿಲ್ಲ. ಆ ವಿಚಾರಣೆಯನ್ನು ಮುಂದುವರೆಸಿ, ಈ ಸಂಹಿತೆ ಅಂಗೀಕೃತವಾಗಿಲ್ಲ ಎಂಬ ರೀತಿಯಲ್ಲಿಯಲ್ಲೇ ತೀರ್ಪುಕೊಡಬಹುದು.

**(೫೫)**

ಬಹಿರಂಗವಾಗಿ ವಿಧ್ಯುಕ್ತಗೊಳಿಸಿದ್ದರೆ, ಇಬ್ಬರೂ ಅಥವಾ ಒಬ್ಬರು ಸೇರಿರುವ ಸಮುಯದಲ್ಲಿ ಪ್ರಚಲಿತವಾದ ಸಾಂಪ್ರದಾಯಿಕ ಸಮಾರಂಭಗಳು ನಡೆದಿದ್ದರೆ, ಆ ಭಾಗೀದಾರರ ನಡುವೆ ಅವರಲ್ಲಿ ಒಬ್ಬರೋ ಅಥವಾ ಇಬ್ಬರೋ ಸೇರಿದ ಸಮುದಾಯದ ರೂಢಿ, ಪದ್ಧತಿಯಂತೆ ನಿಷಿದ್ಧವಾಗಿರುವ ಬಗೆಯ ಮತ್ತು ಆ ಪ್ರಮಾಣದ ಸಂಬಂಧ ಅವರ ನಡುವೆ ಇಲ್ಲದಾಗ ಆ ವಿವಾಹವು ಊರ್ಜಿತ ವಾಗುತ್ತದೆ, ಎಲ್ಲಕಾಲಕ್ಕೂ ಊರ್ಜಿತವಾಗುವುದಾಗಿ ಭಾವಿ ಸಲಾಗುತ್ತದೆ.

ಭಾಗೀದಾರರಲ್ಲಿ ಇಬ್ಬರೂ ಅಥವಾ ಒಬ್ಬರು ಸೇರಿದ ಸಮುದಾಯದಲ್ಲಿ ಪ್ರಚಲಿತವಾದ ರೂಢಿಯ ಪ್ರಕಾರವಾಗಿ, ಈ ಸಂಹಿತೆಯು ಜಾರಿಗೊಳ್ಳುವುದಕ್ಕೆ ಪೂರ್ವ ನೀಡಿದ ವಿವಾಹ ರದ್ದತಿಯು ಅನೂರ್ಜಿತವಾಗಲು ಉಪ ವಿಭಾಗದ ಏನೊಂದೂ ಕಾರಣವಾಗುವುದಿಲ್ಲ.

೫೧ A ಸಂಹಿತೆಗೆ ಪೂರ್ವದಲ್ಲಿ ಅಥವಾ ಆಮೇಲೆ ಕೆಲವು ಊರ್ಜಿತ ವಿವಾಹಗಳ ರದ್ದತಿಯು ಮಕ್ಕಳ ಹಕ್ಕಿನ ಮೇಲೆ ಪರಿಣಾಮವನ್ನುಂಟು ಮಾಡುವುದಿಲ್ಲ:–

ಈ ಸಂಹಿತೆಯು ಕಾರ್ಯಾರಂಭ ಮಾಡುವುದಕ್ಕೆ ಮುಂಚಿತವಾಗಿಯೋ ಅನಂತರವೋ, ಮರುಮಕ್ಕತ್ತಾಯಂ ಅಥವಾ ಅಳಿಯಸಂತಾನ ಕಾನೂನಿಗೆ ಒಳಪಟ್ಟ ಹೆಣ್ಣಿಗೂ ಹಿಂದೂ ಗಂಡಿಗೂ ನಡುವೆ ವಿಧ್ಯುಕ್ತಗೊಂಡ ಒಂದು ವಿವಾಹವು, ಆ ಸಮಯದಲ್ಲಿ ಜಾರಿಯಲ್ಲಿದ್ದ ಅಥವಾ ಆಮೇಲೆ ಜಾರಿಗೊಂಡ ಯಾವುದೇ ಕಾನೂನಿನ ಪ್ರಕಾರ ಊರ್ಜಿತವಾದ

ವಿವಾಹವಾಗದಿದ್ದ ಪಕ್ಷದಲ್ಲಿ, ಅಥವಾ ೫೧ನೆಯ ಪ್ರಕರಣದಂತೆ ವಿವಾಹವು ಅನೂರ್ಜಿತ ವಾಗಿದ್ದರೆ, ಮರಣದಿಂದಲೋ ಬೇರೆ ರೀತಿಯಿಂದಲೋ ಈ ಸಂಹಿತೆಯು ಜಾರಿಯಾಗುವ ಮೊದಲೋ ಆಮೇಲೋ ಅನೂರ್ಜಿತಗೊಂಡಿದ್ದರೆ, ಅದು ಈ ಸಂಹಿತೆಯ ಪ್ರಕಾರ ಆ ಮದುವೆಯ ಫಲವಾದ ಮಕ್ಕಳ ಅಥವಾ ಅವರ ವಂಶಜರ ನ್ಯಾಯಿಕವಾದ ಹಕ್ಕುಗಳಿಗಾಗಲಿ, ಸ್ಥಾನಮಾನಗಳಿಗಾಗಲಿ ಯಾವ ಚ್ಯುತಿಯನ್ನೂ ಉಂಟುಮಾಡುವುದಿಲ್ಲ.

೫೧ B. ಇತ್ಯರ್ಥವಾಗಿರದ ವಿಚಾರಣೆಗಳ ಉಳಿಸುವಿಕೆ.

ತತ್ಕಾಲದಲ್ಲಿ ಯಾವುದೇ ಕಾನೂನಿನ ಪ್ರಕಾರ ಯಾವುದೇ ವಿವಾಹ ರದ್ದತಿಗೆ, ಅಥವಾ ನ್ಯಾಯಯುತವಾದ ಬೇರ್ಪಡಿಕೆಗೆ ವಿಚಾರಣೆ ನಡೆಯುತ್ತಿದ್ದು ಈ ಸಂಹಿತೆಯು ಜಾರಿಗೊಳ್ಳುವ ದಿನಾಂಕದಂದು ಇನ್ನೂ ಇತ್ಯರ್ಥವಾಗಿರದ ಯಾವುದೇ ವಿಚಾರಣೆಯ ಮೇಲೆ ಈ ಭಾಗದಲ್ಲಿರುವ ಯಾವುದೊಂದು ಅಂಶವೂ ಹಾನಿಯನ್ನುಂಟುಮಾಡುವುದಿಲ್ಲ. ಆ ವಿಚಾರಣೆಯು ಮುಂದುವರಿದು, ಈ ಸಂಹಿತೆಯು ಇನ್ನೂ ಜಾರಿಗೆ ಬಂದಿಲ್ಲದಿರುವಂತೆಯೇ ಪರಿಗಣಿಸಿ ನಿರ್ಧರಿಸಬಹುದು.

**(೫೬)**

**ಭಾಗ – ೩ ದತ್ತಕ ಸ್ವೀಕಾರ**

**ಅಧ್ಯಾಯ – ೧**

**ದತ್ತಕ –ಸಾಮಾನ್ಯ**

**೫೨. ಈ ಭಾಗವನ್ನು ಉಲ್ಲಂಘಿಸುವ ದತ್ತಕದ ನಿಷೇಧ :–**

(೧) ಈ ಸಂಹಿತೆಯು ಜಾರಿಗೊಂಡ ಮೇಲೆ ಈ ಭಾಗದಲ್ಲಿ ನಿರೂಪಿಸಿರುವ

**(೫೬)**

**ಭಾಗ–III ದತ್ತಕ ಸ್ವೀಕಾರ**

**ಅಧ್ಯಾಯ ೧**

**ದತ್ತಕ –ಸಾಮಾನ್ಯ**

**೫೨. ಈ ಭಾಗವನ್ನು ಉಲ್ಲಂಘಿಸುವ ದತ್ತಕದ**

ಭಾಗ–೬
ಪ್ರಕರಣ–೧ ೧೭, ೨೭
ಪುಟ–೨೪, ೨೭
ಮತ್ತು ೨೮

ಅವಕಾಶಗಳ ಪ್ರಕಾರವಾಗಿ ಹೊರತು, ಬೇರೆ ರೀತಿಯಾಗಿ ಹಿಂದೂ ಪುರುಷನು ದತ್ತಕ ಗ್ರಹಣವಾಡಕೂಡದು ಅಥವಾ ಅವನಿಗೆ ದತ್ತಕವಾಗಕೂಡದು.

(೨) ೬೬ನೇ ಪ್ರಕರಣದ ೨ನೆಯ ಉಪವಿಭಾಗದಲ್ಲಿ ಉಲ್ಲೇಖಿಸಿರುವ ಸಂದರ್ಭಗಳಲ್ಲಿ ಹೊರತು, ಬೇರೆ ರೀತಿ ಈ ಭಾಗವನ್ನು ಉಲ್ಲಂಘಿಸಿ ಮಾಡಿಕೊಂಡ ದತ್ತಕವು ಅನೂರ್ಜಿತವಾಗುತ್ತದೆ.

(೩) ಅನೂರ್ಜಿತವಾದ ದತ್ತಕವು ದತ್ತಕ ಸ್ವೀಕರಿಸಿದ ಕುಟುಂಬದಲ್ಲಿ ಯಾವುದೇ ವ್ಯಕ್ತಿಗೆ, ದತ್ತಕ ಕಾರಣವಾಗಿಯಲ್ಲದೆ ಬೇರೆ ರೀತಿಯಲ್ಲಿ ಗಳಿಸಲು ಸಾಧ್ಯವಿರದಿದ್ದ ಯಾವುದೇ ಹಕ್ಕುಗಳನ್ನು ಸೃಷ್ಟಿಸಿಕೊಡುವುದಿಲ್ಲ; ಹಾಗೆಯೇ ಹುಟ್ಟಿದ ಕುಟುಂಬದಲ್ಲಿ ಯಾವುದೇ ವ್ಯಕ್ತಿಯ ಹಕ್ಕುಗಳನ್ನು ಹಾಳು ಮಾಡುವುದೂ ಇಲ್ಲ.

(೫೭)

**೫೩. ಒಂದು ಊರ್ಜಿತ ದತ್ತಕದ ಅಗತ್ಯಗಳು:–** ಈ ಕೆಳಗಿನ ಅಂಶಗಳು ಇರದಿದ್ದರೆ ಯಾವುದೇ ದತ್ತಕವು ಊರ್ಜಿತವಾಗುವುದಿಲ್ಲ.

(i) ಸ್ವೀಕರಿಸುವ ವ್ಯಕ್ತಿಗೆ ದತ್ತಕ ಸ್ವೀಕರಿಸುವ ಶಕ್ತಿಯೂ, ಹಕ್ಕೂ ಇರಬೇಕು ;

(ii) ದತ್ತಕ ಕೊಡುವ ವ್ಯಕ್ತಿಗೆ ಹಾಗೆ ಮಾಡಲು ಸಾಮರ್ಥ್ಯವಿರಬೇಕು;

(iii) ದತ್ತಕವಾಗುವ ವ್ಯಕ್ತಿಗೆ ದತ್ತಕ ಸ್ವೀಕೃತವಾಗುವ ಸಾಮರ್ಥ್ಯ ವಿರಬೇಕು;

(iv) ದತ್ತಕವು ದೈಹಿಕವಾಗಿ ಕೊಡುವುದು ಮತ್ತು ಪಡೆಯುವುದು ಇದರಿಂದ

**ನಿಷೇಧ :–**

(೧) ಈ ಸಂಹಿತೆಯು ಜಾರಿಗೊಂಡ ಮೇಲೆ, ಈ ಭಾಗದಲ್ಲಿ ನಿರೂಪಿಸಿರುವ ಅವಕಾಶಗಳ ಹೊರತು, ಬೇರೆ ರೀತಿಯಾಗಿ ಒಬ್ಬ ಹಿಂದೂ ಪುರುಷನು ದತ್ತಕ ಸ್ವೀಕಾರ ಮಾಡಕೂಡದು ಅಥವಾ ಅವನಿಗೆ ದತ್ತಕವಾಗಕೂಡದು.

(೨) ೬೬ನೆಯ ಪ್ರಕರಣದ (೨)ನೆಯ ಉಪವಿಭಾಗದಲ್ಲಿ ಹೇಳಿರುವ ಸಂದರ್ಭಗಳಲ್ಲಿ ಹೊರತು, ಬೇರೆ ರೀತಿಯಾಗಿ, ಈ ಭಾಗವನ್ನು ಉಲ್ಲಂಘಿಸಿ ಮಾಡಿಕೊಂಡ ದತ್ತಕವು ಅನೂರ್ಜಿತವಾಗುತ್ತದೆ.

(೩) ಅನೂರ್ಜಿತವಾದ ಒಂದು ದತ್ತಕವು, ಸ್ವೀಕರಿಸಿದ ಕುಟುಂಬದಲ್ಲಿ ಯಾವುದೇ ವ್ಯಕ್ತಿಯ ಪರವಾಗಿ, ದತ್ತಕದ ಹೊರತು ಬೇರೆ ಯಾವುದೇ ರೀತಿಯಲ್ಲಿ ಗಳಿಸಲು ಸಾಧ್ಯವಿರದಿದ್ದ ಯಾವುದೇ ಹಕ್ಕುಗಳನ್ನು ಸೃಷ್ಟಿಸುವುದಿಲ್ಲ; ಹಾಗೆಯೇ ಹುಟ್ಟಿದ ಕುಟುಂಬದಲ್ಲಿ ಯಾವುದೇ ವ್ಯಕ್ತಿಯ ಹಕ್ಕುಗಳನ್ನು ಹಾಳುಮಾಡುವುದಿಲ್ಲ.

**(೫೩) ಒಂದು ಊರ್ಜಿತ ದತ್ತಕದ ಅಗತ್ಯಗಳು:–** ಈ ಕೆಳಗಿನ ಅಂಶಗಳು ಇರದಿದ್ದರೆ ಯಾವುದೇ ದತ್ತಕವು ಊರ್ಜಿತವಾಗುವುದಿಲ್ಲ.

**ಭಾಗ–೬ ಪ್ರಕರಣ–೪**

(i) ದತ್ತಕ ಸ್ವೀಕರಿಸುವ ವ್ಯಕ್ತಿಗೆ ದತ್ತಕ ಸ್ವೀಕರಿಸುವ ಸಾಮರ್ಥ್ಯವೂ ಹಕ್ಕೂ ಇರಬೇಕು ;

(ii) ದತ್ತಕ ಕೊಡುವ ವ್ಯಕ್ತಿಗೆ ಹಾಗೆ ಮಾಡಲು ಸಾಮರ್ಥ್ಯವಿರಬೇಕು;

(iii) ದತ್ತಕವಾಗುವ ವ್ಯಕ್ತಿಗೆ ದತ್ತಕ

ಪೂರ್ಣಗೊಳ್ಳಬೇಕು; ಮತ್ತು

(v) ದತ್ತಕವು ಈ ಭಾಗದಲ್ಲಿ ನಿರೂಪಿಸಿರುವ ಇತರ ನಿಯಮಗಳಿಗೆ ಅನುಗುಣವಾಗಿರಬೇಕು.

(೫೮)

**ದತ್ತಕ ಸ್ವೀಕಾರ ಸಾಮರ್ಥ್ಯ**

೫೪. **ದತ್ತಕ ಸ್ವೀಕಾರ ಮಾಡಲು ಒಬ್ಬ ಹಿಂದೂ ಪುರುಷನಿಗಿರಬೇಕಾದ ಸಾಮರ್ಥ್ಯ:** ಸ್ವಸ್ಥಮನಸ್ಕನಾಗಿರುವ, ಹದಿನೆಂಟು ವರ್ಷ ತುಂಬಿರುವ ಯಾವನೇ ಹಿಂದೂ ಪುರುಷನು ಒಬ್ಬ ಮಗನನ್ನು ದತ್ತಕವಾಗಿ ಸ್ವೀಕಾರ ಮಾಡಲು ಸಾಮರ್ಥ್ಯ ಹೊಂದಿರುತ್ತಾನೆ.

ಹಿಂದೂ ಪತ್ನಿಯು ಜೀವಂತವಾಗಿರುವಾಗ ಆಕೆಯ ಸಮ್ಮತಿಯಿಲ್ಲದೆ, ಅಥವಾ ಅವನಿಗೆ ಒಬ್ಬನಿಗಿಂತ ಹೆಚ್ಚು ಪತ್ನಿಯರಿದ್ದರೆ ಅವರಲ್ಲಿ ಕೊನೆಯ ಪಕ್ಷ ಒಬ್ಬರ ಅನುಮತಿಯಿಲ್ಲದೆ, ಆ ಪತ್ನಿ ಅಥವಾ ಪತ್ನಿಯರು ಸಮ್ಮತಿ ಕೊಡಲು ಅಸಮರ್ಥರಾಗಿದ್ದ ಹೊರತು, ದತ್ತಕ ಸ್ವೀಕಾರ ಮಾಡುವಂತಿಲ್ಲ.

**ವಿವರಣೆ :** ಈ ವಿಭಾಗದ ಉದ್ದೇಶಕ್ಕಾಗಿ, ಪತ್ನಿಯು ಸ್ಥಿಮಿತ, ಸ್ವಸ್ಥಮನಸ್ಕಳಾಗಿರದಿದ್ದರೆ ಅಥವಾ ಹದಿನೆಂಟು ವರ್ಷ ತುಂಬಿರದಿದ್ದರೆ ಅವರು ಸಮ್ಮತಿ ಕೊಡಲು ಅಸಮರ್ಥಳು ಎಂದು ಭಾವಿಸಲಾಗುತ್ತದೆ.

(೫೯)

೫೫. **ವಿಧವೆಗೆ ದತ್ತಸ್ವೀಕಾರ ಸಾಮರ್ಥ್ಯ:–**

(೧) ಸ್ವಸ್ಥಮನಸ್ಕಳಾಗಿರುವ ಮತ್ತು ಹದಿನೆಂಟು ವರ್ಷ ತುಂಬಿರುವ ಯಾವ ಹಿಂದೂ ವಿಧವೆ ಬೇಕಾದರೂ ಒಬ್ಬ ಮಗನನ್ನು ತನ್ನ ಪತಿಗೆ ದತ್ತಕನನ್ನಾಗಿ ಸ್ವೀಕರಿಸುವ ಸಾಮರ್ಥ್ಯ

ಸ್ವೀಕೃತವಾಗುವ ಸಾಮರ್ಥ್ಯ ವಿರಬೇಕು;

(iv) ದೈಹಿಕವಾಗಿ ಕೊಡುವುದು ಮತ್ತು ಸ್ವೀಕರಿಸುವುದು ಇದರಿಂದ ದತ್ತಕವು ಸಂಪೂರ್ಣವಾಗಬೇಕು; ಮತ್ತು

(v) ದತ್ತಕವು ಈ ಭಾಗದಲ್ಲಿ ನಿರೂಪಿಸಿರುವ ಇತರ ನಿಯಮಗಳಿಗೆ ಅನುಗುಣವಾಗಿರಬೇಕು.

(೫೭)

**ದತ್ತಕ ಸ್ವೀಕಾರ ಸಾಮರ್ಥ್ಯ**

೫೪. **ದತ್ತಕ ಸ್ವೀಕಾರ ಮಾಡಲು ಒಬ್ಬ ಹಿಂದೂ ಪುರುಷನಿಗಿರಬೇಕಾದ ಸಾಮರ್ಥ್ಯ:** ಸ್ವಸ್ಥಮನಸ್ಕನಾಗಿರುವ, ಹದಿನೆಂಟು ವರ್ಷ ತುಂಬಿರುವ ಹಿಂದೂ ಪುರುಷನು ಒಬ್ಬ ಮಗನನ್ನು ದತ್ತಕವಾಗಿ ಸ್ವೀಕರಿಸಲು ಸಾಮರ್ಥ್ಯ ಹೊಂದಿರುತ್ತಾನೆ. ಹಿಂದುವು ತನ್ನ ಪತ್ನಿಯು ಜೀವಂತವಾಗಿರುವಾಗ ಆಕೆಯ ಸಮ್ಮತಿಯಿಲ್ಲದೆ, ಅಥವಾ ಅವನಿಗೆ ಒಬ್ಬರಿಗಿಂತ ಹೆಚ್ಚು ಪತ್ನಿಯರಿದ್ದರೆ ಅವರಲ್ಲಿ ಕೊನೆಯ ಪಕ್ಷ ಒಬ್ಬಳ ಸಮ್ಮತಿಯಲ್ಲದೆ, ಆ ಪತ್ನಿ ಅಥವಾ ಪತ್ನಿಯರು ಸಮ್ಮತಿ ಕೊಡಲು ಸಮರ್ಥರಾಗಿರದಿದ್ದ ಹೊರತು, ದತ್ತಕ ಸ್ವೀಕಾರ ಮಾಡುವಂತಿಲ್ಲ.

**ವಿವರಣೆ :** ಈ ವಿಭಾಗದ ಉದ್ದೇಶಕ್ಕಾಗಿ, ಪತ್ನಿಯು ಸ್ವಸ್ಥಮನಸ್ಕಳಾಗಿರದಿದ್ದರೆ ಅಥವಾ ಅವಳಿಗಿನ್ನು ೧೮ ವರ್ಷ ತುಂಬಿರದಿದ್ದರೆ, ಸಮ್ಮತಿ ಕೊಡಲು ಅಸಮರ್ಥಳು ಎಂದು ಭಾವಿಸಲಾಗುತ್ತದೆ.

(೫೮)

೫೫. **ವಿಧವೆಗೆ ದತ್ತಕ ಸ್ವೀಕಾರ ಸಾಮರ್ಥ್ಯ:–**

(೧) ಸ್ವಸ್ಥಮನಸ್ಕಳಾಗಿರುವ ಮತ್ತು ಹದಿನೆಂಟು ವರ್ಷ ತುಂಬಿರುವ ಯಾವ ಹಿಂದೂ ವಿಧವೆ ಬೇಕಾದರೂ

ಪಡೆದಿರುತ್ತಾಳೆ, ಆದರೆ–

(ಅ) ಆಕೆಯ ಪತಿಯು...... ದತ್ತ ಸ್ವೀಕಾರ ಮಾಡಲು ಅವಳನ್ನು ನಿಷೇಧಿಸಿರಬಾರದು;

(ಆ) ದತ್ತಸ್ವೀಕಾರ ಮಾಡುವ ಅವಳ ಅಧಿಕಾರ ಕೊನೆಗೊಂಡಿರಬಾರದು.

(೨) ಹದಿನೆಂಟು ವರ್ಷ ತುಂಬಿರುವ ಒಬ್ಬ ಹಿಂದೂ ವಿಧವೆಗೆ, ತನ್ನ ಪತಿಯು ಹೆಸರಿಸಿದ್ದ ಒಬ್ಬ ಬಾಲಕನನ್ನು, ಮುಂದೆ ನಿರೂಪಿಸಿರುವ ವಿಧಾನದಿಂದ ಅವಳಿಗೆ ನೀಡಲಾಗಿರುವ ಅಧಿಕಾರವನ್ನು ಬಳಸಿ ದತ್ತುಸ್ವೀಕಾರಮಾಡಲು ಉಪ ವಿಭಾಗ (೧)ರಲ್ಲಿರುವ ಏನೊಂದೂ ತಡೆಯಾಗುವುದಿಲ್ಲ.

(೬೦)

**೫೬. ದತ್ತಕ ಸಂಬಂಧವಾದ ಅಧಿಕಾರ ಅಥವಾ ನಿಷೇಧ :–**

(೧) ಒಬ್ಬ ಮಗನನ್ನು ದತ್ತಕ ತೆಗೆದುಕೊಳ್ಳುವ ಸಾಮರ್ಥ್ಯವಿರುವ ಒಬ್ಬ ಹಿಂದೂ ಪುರುಷನು ಮೇಲೆ ಹೇಳಿದಂತೆ, ತನ್ನ ಮರಣಾನಂತರ ಒಬ್ಬ ಮಗನನ್ನು ತನ್ನ ದತ್ತಕ ಪುತ್ರನನ್ನಾಗಿ ಸ್ವೀಕರಿಸುವ ಅಧಿಕಾರವನ್ನು ಪತ್ನಿಗೆ ನೀಡ ಬಹುದು ಇಲ್ಲವೆ ಅವಳನ್ನು ಆ ಕೆಲಸ ಮಾಡದಂತೆ ನಿಷೇಧಿಸಬಹುದು.

(೨) ಒಬ್ಬಳಿಗಿಂತ ಹೆಚ್ಚು ಪತ್ನಿಯರಿರುವಾಗ ಅವರಲ್ಲಿ ಯಾರೊಬ್ಬರಿಗೆ ಅಥವಾ ಎಲ್ಲರಿಗೂ ಅಧಿಕಾರ ನೀಡಬಹುದು, ಇಲ್ಲವೆ ನಿಷೇಧ ಹೇರಬಹುದು.

(೩) ಒಬ್ಬ ಹಿಂದುವು ಇಬ್ಬರು ಅಥವಾ ಹೆಚ್ಚು

ಒಬ್ಬ ಮಗನನ್ನು ತನ್ನ ಪತಿಗೆ ದತ್ತಕನನ್ನಾಗಿ ಸ್ವೀಕರಿಸುವ ಸಾಮರ್ಥ್ಯ ಪಡೆದಿರುತ್ತಾಳೆ. ಆದರೆ

(ಅ) ಆಕೆಯು ಪತಿಯು ಸ್ಪಷ್ಟವಾಗಿಯೋ ಸೂಚ್ಯವಾಗಿಯೋ ದತ್ತಕ ಸ್ವೀಕಾರಮಾಡಕೂಡದೆಂದು ಅವಳನ್ನು ನಿಷೇಧಿಸಿರಬಾರದು;

**ಭಾಗ–೬ ಪ್ರಕರಣ–೫(೨) ಪುಟ–೨೪**

(ಆ) ದತ್ತಕಸ್ವೀಕಾರ ಮಾಡುವ ಅವಳ ಅಧಿಕಾರವು ಕೊನೆ ಗೊಂಡಿರಬಾರದು.

(೨) ಹದಿನೆಂಟು ವರ್ಷ ತುಂಬಿರದ ಒಬ್ಬ ಹಿಂದೂ ವಿಧವೆಗೆ, ತನ್ನ ಪತಿಯು ಹೆಸರಿಸಿರುವ ಬಾಲಕನಲ್ಲಿ, ಇಲ್ಲಿಂದ ಮುಂದೆ ನಿರೂಪಿಸಿರುವ ವಿಧಾನದಲ್ಲಿ ಅವಳಿಗೆ ನೀಡಲಾಗಿರುವ ಅಧಿಕಾರವನ್ನು ಬಳಸಿ ದತ್ತು ಸ್ವೀಕರಿಸಲು ಉಪವಿಭಾಗ (೧) ರಲ್ಲಿರುವ ಯಾವೊಂದೂ ತಡೆಯಾಗುವುದಿಲ್ಲ.

(೫೯)

**೫೬. ದತ್ತಕ ಸಂಬಂಧವಾದ ಅಧಿಕಾರ ಅಥವಾ ನಿಷೇಧ :–**

(೧) ಮಗನನ್ನು ದತ್ತಕ ತೆಗೆದುಕೊಳ್ಳುವ ಸಾಮರ್ಥ್ಯವಿರುವ ಒಬ್ಬ ಹಿಂದೂ ಪುರುಷನು, ತನ್ನ ಮರಣಾನಂತರ ಒಬ್ಬ ಮಗನನ್ನು ತನ್ನ ದತ್ತಕ ಪುತ್ರನನ್ನಾಗಿ ಸ್ವೀಕರಿಸುವ ಅಧಿಕಾರವನ್ನು ಪತ್ನಿಗೆ ನೀಡಬಹುದು, ಇಲ್ಲವೆ ಹಾಗೆ ಮಾಡದಂತೆ ಅವಳನ್ನು ನಿಷೇಧಿಸಬಹುದು.

**ಭಾಗ–೬ ಪ್ರಕರಣ–೬ ಪುಟ–೨೪**

(೨) ಒಬ್ಬಳಿಗಿಂತ ಹೆಚ್ಚು, ಪತ್ನಿ

ಜನ ವಿಧವೆಯರನ್ನು ಬಿಟ್ಟು ಮೃತಪಟ್ಟಿದ್ದರೆ, ಅವರಲ್ಲಿ ಯಾರಾದರೂ ಒಬ್ಬಳಿಗೋ ಹೆಚ್ಚಿನವರಿಗೋ ದತ್ತಕ ಸ್ವೀಕಾರಮಾಡುವ ಅಧಿಕಾರವನ್ನು ಸ್ಪಷ್ಟವಾಗಿ ನೀಡಿದ್ದ ಪಕ್ಷದಲ್ಲಿ, ಇತರರು ದತ್ತು ಸ್ವೀಕಾರ ಮಾಡದಂತೆ ನಿಷೇಧಿಸಿದ್ದಾನೆ ಎಂದೇ ಭಾವಿಸಲಾಗುತ್ತದೆ.

ಯರಿರುವಾಗ, ಅವರಲ್ಲಿ ಯಾರೊಬ್ಬರಿಗೆ ಅಥವಾ ಎಲ್ಲ ರಿಗೂ ಅಧಿಕಾರ ನೀಡಬಹುದು, ಇಲ್ಲವೆ ನಿಷೇಧ ಹೇರಬಹುದು.

(೩) ಒಬ್ಬ ಹಿಂದುವು ಇಬ್ಬರು ಅಥವಾ ಹೆಚ್ಚು ವಿಧವೆಯರನ್ನು ಬಿಟ್ಟು ಸತ್ತಿದ್ದರೆ, ಅವರಲ್ಲಿ ಒಬ್ಬರಿಗೋ ಹೆಚ್ಚಿನವರಿಗೋ ದತ್ತಕ ಸ್ವೀಕಾರದ ಅಧಿಕಾರವನ್ನು ಸ್ಪಷ್ಟವಾಗಿ ನೀಡಿದ್ದ ಪಕ್ಷದಲ್ಲಿ, ಇತರರು ದತ್ತಕ ಸ್ವೀಕಾರ ಮಾಡದಂತೆ ಅವನು ನಿಷೇಧಿಸಿದ್ದಾನೆ ಎಂದು ಭಾವಿಸಲಾಗುತ್ತದೆ.

(೬೧)

**೫೭. ಅಧಿಕಾರ ನೀಡುವ, ನಿಷೇಧ ವಿಧಿಸುವ ಅಥವಾ ಹಿಂದಕ್ಕೆ ಪಡೆಯುವ ವಿಧಾನ.**

೧. ೧೯೦೮ರ ಭಾರತೀಯ ನೋಂದಣಿ ಶಾಸನ (೧೯೦೮ರ xvi ನೆಯ ಶಾಸನ)ದ ಪ್ರಕಾರ ನೋಂದಾಯಿಸಿದ ಪತ್ರದಿಂದ ಅಥವಾ ೧೯೨೫ರ ಭಾರತೀಯ ಉತ್ತರಾಧಿಕಾರ ಶಾಸನ (೧೯೨೫ರ xxxixನೆಯ ಶಾಸನ)ದ ೬೩ನೆಯ ಪ್ರಕರಣದ ಅವಕಾಶಗಳನ್ವಯ ಬರೆದ ಒಂದು ಉಯಿಲಿನಿಂದ ಕೊಟ್ಟಿರದಿದ್ದರೆ ಅಥವಾ ವಿಧಿಸಿರದಿದ್ದರೆ ದತ್ತಕ ಸ್ವೀಕಾರದ ಅಧಿಕಾರವಗಲಿ, ದತ್ತಕ ಅಧಿಕಾರದ ನಿಷೇಧವಾಗಲಿ ಊರ್ಜಿತವಾಗುವುದಿಲ್ಲ.

(೨) ಮೇಲೆ ಹೇಳಿದಂತೆ ನೋಂದಾಯಿಸಿದ ಪತ್ರದಿಂದ ಅಥವಾ ಬರೆದ ಉಯಿಲಿನಿಂದ, ನೀಡಿದ್ದ ಅಧಿಕಾರವನ್ನಾಗಲಿ ವಿಧಿಸಿದ್ದ

(೬೦)

**೫೭. ಅಧಿಕಾರ ನೀಡುವ, ನಿಷೇಧ ವಿಧಿಸುವ ಅಥವಾ ಹಿಂದಕ್ಕೆ ಪಡೆಯುವ ವಿಧಾನ**

(೧) ೧೯೦೮ ಭಾರತೀಯ ನೋಂದಣಿ ಶಾಸನ (೧೯೦೮ರ xvi)ದನ್ವಯ ನೋಂದಾಯಿಸಿದ ಪತ್ರದಿಂದಲೋ, ೧೯೨೫ರ ಭಾರತೀಯ ಉತ್ತರಾಧಿಕಾರ ಶಾಸನ (೧೯೨೫ರ xxxix)ದ ೬೩ನೆಯ ಪ್ರಕರಣದ ಅವಕಾಶಗಳ ಅನ್ವಯ ಬರೆದ ಒಂದು ಉಯಿಲಿನಿಂದಲೋ ಅಧಿಕಾರ ನೀಡಿರದಿದ್ದರೆ ಅಥವಾ ನಿಷೇಧ ವಿಧಿಸಿರದಿದ್ದರೆ ಅದು ಊರ್ಜಿತವಾಗುವುದಿಲ್ಲ.

ಭಾಗ–೬
ಪ್ರಕರಣ–೭
ಪುಟ–೨೪

(೨) ಮೇಲೆ ಹೇಳಿದಂತೆ ನೊಂದಾಯಿಸಿದ ಪತ್ರದಿಂದ ಅಥವಾ ಬರೆದ ಉಯಿಲಿನಿಂದ ನೀಡಿದ ದತ್ತಕ ಸ್ವೀಕಾರ ಅಧಿಕಾರವನ್ನಾಗಲಿ, ವಿಧಿಸಿದ ನಿಷೇಧವನ್ನಾಗಲಿ ಹಿಂತೆಗೆದು

ನಿಷೇಧವನ್ನಾಗಲಿ ಹಿಂತೆಗೆದು ಕೊಳ್ಳಬಹುದು.

(೩) ಅಧಿಕಾರವನ್ನಾಗಲಿ, ನಿಷೇಧ ವನ್ನಾಗಲಿ ಒಂದು ಉಯಿಲಿನಿಂದ ನೀಡಿದ್ದರೆ ಅಥವ ವಿಧಿಸಿದ್ದರೆ ಭಾರತೀಯ ಉತ್ತರಾಧಿಕಾರ ಶಾಸನ ೧೯೨೫ (೧೯೨೫ರ xxxixನೆಯ ಶಾಸನ)ದ ೭೦ನೆಯ ಪ್ರಕರಣದಲ್ಲಿ ನಿರೂಪಿಸಿದ ಇತರ ವಿಧಾನಗಳಿಂದ ಕೂಡ ಅದನ್ನು ಹಿಂತೆಗೆದುಕೊಳ್ಳಬಹುದು.

ಶಾಸನದ ೩ನೆಯ ಷೆಡ್ಯೂಲಿನಲ್ಲಿ ಅದನ್ನು ಪರಿಷ್ಕರಿಸಿದೆ.

(೬೨)

**೫೮ ಇಬ್ಬರು ಅಥವಾ ಹೆಚ್ಚು ಸಂಖ್ಯೆಯ ವಿಧವೆಯರ ನಡುವೆ ದತ್ತಕದ ಹಕ್ಕು:–**

ಹಿಂದುವೊಬ್ಬನು ಒಬ್ಬ ಬಾಲಕನನ್ನು ಮಗನಾಗಿ ದತ್ತಕ ತೆಗೆದುಕೊಳ್ಳುವ ಸಾಮರ್ಥ್ಯವಿದ್ದು, ಇಬ್ಬರು ಅಥವಾ ಹೆಚ್ಚು ಮಂದಿ ವಿಧವೆಯರನ್ನು ಬಿಟ್ಟು ಮೃತಪಟ್ಟಿದ್ದರೆ, ಅವರಲ್ಲಿ ಯಾರಿಗೆ ದತ್ತು ಸ್ವೀಕಾರದ ಹಕ್ಕು ಬರುತ್ತದೆ ಎಂಬುದನ್ನು ಈ ಕೆಳಗಿನ ಅವಕಾಶಗಳಿಂದ ನಿರ್ಧರಿಸಲಾಗುತ್ತದೆ.

(ಅ) ಅವರಲ್ಲಿ ಎಲ್ಲರಿಗೂ ಅಥವಾ ಯಾರಾದರೂ ಒಬ್ಬರಿಗೆ ದತ್ತು ಸ್ವೀಕಾರದ ಅಧಿಕಾರವನ್ನು ಕೊಟ್ಟಿದ್ದರೆ, ಆ ಸಂಬಂಧವಾಗಿ ಸೂಚಿಸಿದ್ದರೆ, ಹಕ್ಕು ಅದೇ ಅನುಕ್ರಮವನ್ನು ಅನುಸರಿಸುತ್ತದೆ.

(ಆ) ಅವನು ಅಂಥದೊಂದು ಸೂಚನೆಯನ್ನು ಕೊಟ್ಟಿರದಿದ್ದರೆ, ಅಧಿಕಾರಕೊಟ್ಟಿರುವ ವಿಧವೆಯರ ಹಿರಿಯತನದ ಕ್ರಮವನ್ನು ೫೯ನೆಯ

ಕೊಳ್ಳಬಹುದು.

(೩) ಅಧಿಕಾರವನ್ನಾಗಲಿ, ನಿಷೇಧವನ್ನಾಗಲಿ ಒಂದು ಉಯಿಲಿನಿಂದ ನೀಡಿದ್ದರೆ ಅಥವಾ ವಿಧಿಸಿದ್ದರೆ, ೧೯೨೫ರ ಭಾರತೀಯ ಉತ್ತರಾಧಿಕಾರ ಶಾಸನ (೧೯೨೫ರ xxxix)ದ, ೩ನೆಯ ಷೆಡ್ಯೂಲಿನಲ್ಲಿ ಪರಿಷ್ಕರಿಸಿರುವಂತೆ, ೭೦ನೆಯ ಪ್ರಕರಣದಲ್ಲಿ ನಿರೂಪಿಸಿದ ಇತರ ವಿಧಾನಗಳಿಂದಲೂ ಹಿಂತೆಗೆದು ಕೊಳ್ಳಬಹುದು.

(೬೧)

**೫೮. ಇಬ್ಬರು ಅಥವಾ ಹೆಚ್ಚು ಸಂಖ್ಯೆಯ ವಿಧವೆಯರ ನಡುವೆ ದತ್ತಕದ ಹಕ್ಕು:–**

**ಭಾಗ–೬ ಪ್ರಕರಣ–೮ ಪುಟ–೨೫**

ದತ್ತಕ ಸ್ವೀಕರಿಸುವ ಸಾಮರ್ಥ್ಯವಿರುವ ಒಬ್ಬ ಹಿಂದುವು ಇಬ್ಬರು ಅಥವಾ ಅಧಿಕ ಸಂಖ್ಯೆ ವಿಧವೆಯರನ್ನು ಬಿಟ್ಟು ಮೃತನಾಗಿದ್ದರೆ, ಅವರಲ್ಲಿ ದತ್ತ ಸ್ವೀಕಾರದ ಹಕ್ಕನ್ನು ಈ ಕೆಳಗಿನ ಅವಕಾಶಗಳಿಂದ ನಿರ್ಧರಿಸಲಾಗುತ್ತದೆ :

(ಅ) ಅವರಲ್ಲಿ ಎಲ್ಲರಿಗೂ ಅಥವಾ ಕೆಲವರಿಗೆ ದತ್ತುಸ್ವೀಕಾರದ ಅಧಿಕಾರವನ್ನು ನೀಡಿದ್ದರೆ, ಆ ಸಂಬಂಧವಾಗಿ ಆಯ್ಕೆಯ ಅನುಕ್ರಮವನ್ನು ಸೂಚಿಸಿದ್ದರೆ ಅದೇ ಕ್ರಮವನ್ನು ಅನುಸರಿಸಲಾಗುತ್ತದೆ.

(ಆ) ಅವನು ಅಂಥದೊಂದು ಸೂಚನೆಯನ್ನು ಕೊಟ್ಟಿರದಿದ್ದರೆ, ದತ್ತು ಸ್ವೀಕಾರದ ಹಕ್ಕು, ಅಧಿಕಾರ ಕೊಟ್ಟಿರುವ ವಿಧವೆಯಾದಲ್ಲಿ ೫೯ನೆಯ ಪ್ರಕರಣದ ಪ್ರಕಾರ ಹಿರಿಯತನವನ್ನು ನಿರ್ಧರಿಸಿ

ಪ್ರಕರಣದ ಪ್ರಕಾರ ನಿರ್ಧರಿಸಲಾಗುತ್ತದೆ.

(ಇ) ಅವನು ಅಧಿಕಾರವನ್ನು ಕೊಡದೆ, ನಿಷೇಧವನ್ನು ವಿಧಿಸದೆ ಹೋಗಿದ್ದ ಪಕ್ಷದಲ್ಲಿ, ದತ್ತಕ ಸ್ವೀಕಾರದ ಹಕ್ಕು ೫೯ನೆಯ ಪ್ರಕರಣವು ನಿರ್ಧರಿಸುವಂತೆ ವಿಧವೆಯರ ಹಿರಿಯತನದ ಕ್ರಮವನ್ನು ಅನುಸರಿಸುತ್ತದೆ.

(ಈ) ಒಬ್ಬ ವಿಧವೆಯು (ಅ) (ಇ) ಉಪವಾಕ್ಯಗಳ ಪ್ರಕಾರ ದತ್ತುಸ್ವೀಕಾರಮಾಡುವ ಹಕ್ಕನ್ನು ಪಡೆದಿದ್ದರೂ, ಆಕೆಯು ಒಂದು ನೋಂದಾಯಿತ ಪತ್ರದಿಂದ ಅದನ್ನು ಹಿರಿಯತನದಲ್ಲಿ ತನ್ನ ನಂತರದ ಹಿರಿಯ ವಿಧವೆಗೆ ಅದನ್ನು ಬಿಟ್ಟುಕೊಡಬಹುದು. ಹಾಗೆ ಅವಳು ತ್ಯಾಗ ಮಾಡದಿದ್ದರೆ, ನ್ಯಾಯಯುತವಾದಷ್ಟು ಕಾಲಾವಕಾಶದೊಳಗೆ ಸರಿಯಾದ ಕಾರಣವಿಲ್ಲದೆ ತನ್ನ ಹಕ್ಕನ್ನು ಬಿಟ್ಟುಕೊಡಲು ಅವಳು ನಿರಾಕರಿಸಿದರೆ, ತನ್ನ ನಂತರದ ವಿಧವೆಯನ್ನು ಅಥವಾ ಪತಿಯ ಬೇರೆ ಯಾವೊಬ್ಬ ವಿಧವೆಗೆ ಆ ಹಕ್ಕು ಚಲಾಯಿಸುವಂತೆ ಹೇಳದಿದ್ದರೆ, ಹಕ್ಕು ತಾನಾಗಿ ಮುಂದಿನ ಹಿರಿಯ ವಿಧವೆಗೆ ಹೋಗುತ್ತದೆ, ಹೀಗೆಯೇ ಅನುಕ್ರಮವಾಗಿ ಕೊನೆಯ ವಿಧವೆಯವರೆಗೂ ನಡೆಯುತ್ತದೆ.

(೬೩)

**೫೯ ಪತ್ನಿಯರು ಮತ್ತು ವಿಧವೆಯರಲ್ಲಿ ಹಿರಿಯತನ:** **ಈ** ಭಾಗದ ಉದ್ದೇಶಕ್ಕಾಗಿ, ಒಬ್ಬ ವ್ಯಕ್ತಿಯ ಪತ್ನಿಯರು ಅಥವಾ ವಿಧವೆಯರ ಹಿರಿಯತನದ ಅನುಕ್ರಮವನ್ನು ಆತನು ಅವರನ್ನು ಮದುವೆ ಮಾಡಿಕೊಂಡ ಅನುಕ್ರಮವು ನಿರ್ಧರಿಸುತ್ತದೆ. ಮೊದಲು

ಆ ಅನುಕ್ರಮವನ್ನು ಅನುಸರಿಸಲಾಗುತ್ತದೆ.

(ಇ) ಅಧಿಕಾರವನ್ನು ಕೊಡದೆ, ನಿಷೇಧವನ್ನು ಹೇರದೆ ಹೋಗಿದ್ದ ಪಕ್ಷದಲ್ಲಿ, ದತ್ತಕ ಸ್ವೀಕಾರದ ಹಕ್ಕು ೫೯ನೆಯ ಪ್ರಕರಣವು ನಿರ್ಧರಿಸುವಂತೆ ವಿಧವೆಯರ ಹಿರಿಯತನದ ಅನುಕ್ರಮವನ್ನು ಅನುಸರಿಸುತ್ತದೆ.

(ಈ) ಒಬ್ಬ ವಿಧವೆಯು (ಅ), (ಇ) ಉಪವಾಕ್ಯಗಳ ಪ್ರಕಾರ ದತ್ತಕ ಸ್ವೀಕಾರದ ಹಕ್ಕನ್ನು ಪಡೆದಿದ್ದರೂ, ಒಂದು ನೋಂದಾಯಿತ ಪತ್ರದ ಮೂಲಕ ಅದನ್ನು ಅನುಕ್ರಮದಲ್ಲಿ ತನ್ನ ನಂತರದ ಹಿರಿಯ ವಿಧವೆಗೆ ಬಿಟ್ಟುಕೊಡಬಹುದು. ಹಾಗೆ ತ್ಯಾಗಮಾಡದೆ, ತನ್ನ ಹಕ್ಕನ್ನು ಚಲಾಯಿಸಬೇಕೆಂದು ತನ್ನ ಮುಂದಿನ ವಿಧವೆಯು ಕೇಳಿದಾಗ ನ್ಯಾಯಯುತ ಕಾರಣವಿಲ್ಲದೆ ನ್ಯಾಯಯುತ ಕಾಲಾವಧಿಯೊಳಗೆ ನಿರಾಕರಿಸಿದರೆ, ಅಥವಾ ವಿಫಲಳಾದರೆ, ಹಕ್ಕು ತಾನಾಗಿ ಹಿರಿಯತನದಲ್ಲಿ ಅವಳ ನಂತರದ ವಿಧವೆಗೆ ಹೋಗುವುದು. ಅದೇ ರೀತಿ ಅನುಕ್ರಮವಾಗಿ ಕೊನೆಯ ವಿಧವೆಯವರೆಗೂ ನಡೆಯುವುದು.

(೬೨)

**೫೯. ಪತ್ನಿಯರು ಮತ್ತು ವಿಧವೆಯರಲ್ಲಿ ಹಿರಿಯತನ :–**

**ಭಾಗ–೬ ಪ್ರಕರಣ–೯ ಪುಟ–೨೫**

ಈ ಭಾಗದ ಉದ್ದೇಶಕ್ಕಾಗಿ, ಒಬ್ಬ ವ್ಯಕ್ತಿಯ ಪತ್ನಿಯರು ಅಥವಾ ವಿಧವೆಯರ ಹಿರಿಯತನದ ಅನುಕ್ರಮವನ್ನು ಆತನು ಅವರನ್ನು

ಅವನನ್ನು ಮದುವೆಮಾಡಿಕೊಂಡವಳು ಅನಂತರದವಳಿಗಿಂತ ಹಿರಿಯಳಾಗುತ್ತಾಳೆ.

(೬೪)

೬೦ ವಿಧವೆಯ ದತ್ತಕ ಸ್ವೀಕಾರದ ಹಕ್ಕು ಒಂದೇ ಸಾರಿಗೆ ಮುಗಿದುಹೋಗುವುದಿಲ್ಲ. ಈ ಭಾಗದ ಅವಕಾಶಗಳ ಪ್ರಕಾರ, ವಿಧವೆಯು, ಒಬ್ಬನು ಸತ್ತಮೇಲೆ ಇನ್ನೊಬ್ಬನಂತೆ ಹಲವು ಮಕ್ಕಳನ್ನು, ಪತಿಯು ತನಗೆ ನೀಡಿರುವ ಅಧಿಕಾರವು ಬೇರೊಂದು ವಿಧವಾಗಿ ಸೂಚಿಸಿರದಿದ್ದರೆ, ದತ್ತಕವಾಗಿ ತೆಗೆದುಕೊಳ್ಳಬಹುದು.

(೬೫)

**೬೧ ವಿಧವೆಯ ಹಕ್ಕಿನ ಮುಕ್ತಾಯ:–**

(೧) ವಿಧವೆಗಿರುವ ದತ್ತಕ ಸ್ವೀಕಾರದ ಹಕ್ಕು ಈ ಕೆಳಗಿನ ಸಂದರ್ಭದಲ್ಲಿ ಮುಗಿಯುತ್ತದೆ:

(ಅ) ಅವಳು ಮರುವಿವಾಹ ಮಾಡಿ ಕೊಂಡರೆ;

(ಆ) ಅವಳ ಪತಿಯ ಹಿಂದೂ ಮಗನು ಒಬ್ಬ ಹಿಂದೂ ಮಗನನ್ನು, ವಿಧವೆ ಅಥವಾ ಮಗನ ವಿಧವೆಯನ್ನು ಬಿಟ್ಟು ಮೃತಪಟ್ಟರೆ;

(ಇ) ಅವಳು ಹಿಂದೂ ಆಗಿ ಉಳಿಯದಿದ್ದರೆ.

ವಿವರಣೆ :– ಈ ಉಪವಿಭಾಗದಲ್ಲಿ ಮಗ ಎಂದರೆ ಒಬ್ಬ ಮಗ, ಮಗನ ಮಗ, ಅಥವಾ ಮಗನ ಮಗನ ಮಗ, ನ್ಯಾಯವಾದ ರಕ್ತ ಸಂಬಂಧದಿಂದ ಅಥವಾ ದತ್ತಕದಿಂದ.

(೨) ವಿಧವೆಗಿರುವ ದತ್ತಕ ಸ್ವೀಕಾರದ ಹಕ್ಕು ಒಮ್ಮೆ ಮುಕ್ತಾಯವಾದರೆ ಮತ್ತೆ ಅವಳಿಗೆ ಬರುವುದಿಲ್ಲ.

ಮದುವೆಯಾದ ಅನುಕ್ರಮ ನಿರ್ಧರಿಸುತ್ತದೆ. ಮೊದಲು ಅವನನ್ನು ಮದುವೆ ಮಾಡಿ ಕೊಂಡವಳು, ಅನಂತರದವಳಿಗಿಂತ ಹಿರಿಯಳು ಎಂದು ಭಾವಿಸಲಾಗುತ್ತದೆ.

೬೦. ವಿಧವೆಗಿರುವ ದತ್ತಕ ಸ್ವೀಕಾರದ ಹಕ್ಕು ಒಂದು ಸಲಕ್ಕೆ ಮುಗಿದು ಹೋಗುವುದಿಲ್ಲ. ಈ ಭಾಗದ ಅವಕಾಶಗಳ ಪ್ರಕಾರ, ಒಬ್ಬ ವಿಧವೆಯು ಒಬ್ಬನು ಸತ್ತ ಮೇಲೆ ಇನ್ನೊಬ್ಬನಂತೆ ಹಲವು ಮಕ್ಕಳಿದ್ದಲ್ಲಿ, ಪತಿಯು ತನಗೆ ನೀಡಿರುವ ಅಧಿಕಾರವು ಬೇರೊಂದು ವಿಧವಾಗಿ ಸೂಚಿಸಿರದಿದ್ದರೆ, ದತ್ತಕವಾಗಿ ತೆಗೆದುಕೊಳ್ಳಬಹುದು.

**೬೧. ವಿಧವೆಯ ಹಕ್ಕಿನ ಮುಕ್ತಾಯ:–**

(೧) ದತ್ತಕ ಸ್ವೀಕಾರ ಮಾಡಲು ವಿಧವೆಗಿರುವ ಹಕ್ಕು ಈ ಕೆಳಗೆ ಕಾಣಿಸಿರುವ ಸಂದರ್ಭಗಳಲ್ಲಿ ಮುಕ್ತಾಯವಾಗುತ್ತದೆ:

(ಅ) ಅವಳು ಮರು ವಿವಾಹ ಮಾಡಿ ಕೊಂಡರೆ;

**ಭಾಗ–೫ ಪ್ರಕರಣ–೧೦ ಪುಟ–೨೫**

(ಆ) ಪತಿಯ ಹಿಂದೂ ಮಗನು ಒಬ್ಬ ಹಿಂದೂ ಮಗನನ್ನು, ವಿಧವೆ ಅಥವಾ ಮಗನ ವಿಧವೆಯನ್ನು ಬಿಟ್ಟು ಮೃತಪಟ್ಟರೆ;

(ಇ) ಅವಳು ಹಿಂದೂ ಆಗಿ ಉಳಿಯ ದಿದ್ದರೆ.

ವಿವರಣೆ :– ಈ ಉಪವಿಭಾಗದಲ್ಲಿ ಮಗ ಎಂದರೆ ಒಬ್ಬ ಮಗ, ಮಗನ ಮಗ, ಮಗನ ಮಗನ ಮಗ ಅದು ರಕ್ತ ಸಂಬಂಧದಿಂದ ಅಥವಾ ದತ್ತಕದಿಂದ.

(೨) ವಿಧವೆಯ ದತ್ತಕ ಗ್ರಹಣದ ಹಕ್ಕು ಒಮ್ಮೆ ಮುಕ್ತಾಯವಾದರೆ ಮತ್ತೆ ಅವಳಿಗೆ ಬರುವುದಿಲ್ಲ.

(೬೬)

**ದತ್ತಕ ಕೊಡಲು ಸಾಮರ್ಥ್ಯ**

**೬೨. ದತ್ತಕ ಕೊಡಲು ಸಮರ್ಥರಾಗಿರುವ ವ್ಯಕ್ತಿಗಳು :–**

(೧) ಬಾಲಕನ ತಂದೆ ಅಥವಾ ತಾಯಿ ಹೊರತು ಬೇರೆ ಯಾರಿಗೂ ಅವನನ್ನು ದತ್ತಕವಾಗಿ ಕೊಡುವ ಅರ್ಹತೆಯಿರುವುದಿಲ್ಲ.

(೨). (೩)ನೇ ಉಪಪ್ರಕರಣದ (ಆ) ಮತ್ತು (ಇ) ಉಪವಾಕ್ಯಗಳ ಅವಕಾಶಗಳಿಗೆ ಒಳಪಟ್ಟು, ತಂದೆಗೆ, ಅವನು ಜೀವಿಸಿದ್ದರೆ, ಮಾತ್ರವೇ ದತ್ತಕ ನೀಡುವ ಹಕ್ಕು ಇರುತ್ತದೆ. ಆದರೆ ತಾಯಿಯ ಸಮ್ಮತಿಯು ಹೊರತು, ಅವಳು ಸಮ್ಮತಿ ಕೊಡಲು ಸಮರ್ಥಳಾಗಿದ್ದ ಪಕ್ಷದಲ್ಲಿ, ಆ ಹಕ್ಕನ್ನು ಅವನು ಚಲಾಯಿಸುವಂತಿಲ್ಲ.

(೩) ತಾಯಿಯು ಮಗನನ್ನು ದತ್ತಕವಾಗಿ ನೀಡಬಹುದು.

(ಅ) ತಂದೆಯು ಮೃತಪಟ್ಟಿದ್ದರೆ ;

(ಆ) viiನೇ ಭಾಗದ ೧೧೦ನೇ ಪ್ರಕರಣದ (೩)ನೆಯ ಉಪಪ್ರಕರಣದಲ್ಲಿ ನಿರೂಪಿಸಿರುವ ಯಾವುದಾದರೂ ಒಂದು ವಿಧಾನದಿಂದ ಅವನು ಸಂಪೂರ್ಣವಾಗಿ ಮತ್ತು ಅಂತಿಮವಾಗಿ ಪ್ರಾಪಂಚಿಕ ವ್ಯವಹಾರ ಪರಿತ್ಯಾಗ ಮಾಡಿದ್ದರೆ;

(ಇ) ಅವನು ಹಿಂದೂ ಆಗಿ ಉಳಿದಿರದಿದ್ದರೆ,

(ಈ) ಒಪ್ಪಿಗೆ ಕೊಡಲು ಶಕ್ತನಾಗಿರದಿದ್ದರೆ. ಆದರೆ ಅವನು ೧೯೦೮ರ ಭಾರತೀಯ ನೋಂದಣಿ ಶಾಸನ (೧೯೦೮ರ xvi) ದಂತೆ ನೋಂದಾಯಿಸಿದ ಒಂದು

(೬೫)

**ದತ್ತಕ ಕೊಡಲು ಸಾಮರ್ಥ್ಯ**

**೬೨. ದತ್ತಕ ಕೊಡಲು ಸಮರ್ಥರಾಗಿರುವ ವ್ಯಕ್ತಿಗಳು :–**

**ಭಾಗ–೫ ಪ್ರಕರಣ–೧೨ ಪುಟ–೨೫**

(೧) ಬಾಲಕನ ತಂದೆ ಅಥವಾ ತಾಯಿ ಹೊರತು ಬೇರೆ ಯಾರಿಗೂ ಅವನನ್ನು ದತ್ತಕ ಕೊಡುವ ಅರ್ಹತೆಯಿರುವುದಿಲ್ಲ.

(೨) (೩)ನೆಯ ಉಪಪ್ರಕರಣದ (ಆ) ಮತ್ತು (ಇ) ಉಪವಾಕ್ಯಗಳ ಅವಕಾಶಗಳಿಗೆ ಒಳಪಟ್ಟು, ತಂದೆಗೆ, ಅವನು ಬದುಕಿದ್ದರೆ, ಮಾತ್ರ ದತ್ತಕ ನೀಡುವ ಹಕ್ಕು ಬರುತ್ತದೆ. ಆದರೆ ಬಾಲಕನ ತಾಯಿಯ ಸಮ್ಮತಿಯ ಹೊರತು, ಅವಳು ಸಮ್ಮತಿ ಕೊಡುವುದಕ್ಕೆ ಸಮರ್ಥಳಾಗಿದ್ದರೆ, ಆ ಹಕ್ಕನ್ನು ಅವನು ಚಲಾಯಿಸುವಂತಿಲ್ಲ.

(೩) ತಾಯಿಯು ಬಾಲಕನನ್ನು ದತ್ತಕವಾಗಿ ನೀಡಬಹುದು. ಯಾವಾಗಲೆಂದರೆ:–

(ಅ) ಬಾಲಕನ ತಂದೆಯೂ ಸತ್ತು ಹೋಗಿದ್ದರೆ;

(ಆ) ಅವನು viiನೆಯ ಭಾಗದ ೧೧೦ನೆಯ ಪ್ರಕರಣದ ೧೧೭ನೆಯ ಉಪಪ್ರಕರಣದಲ್ಲಿ ನಿರೂಪಿಸಿರುವ ಯಾವುದೇ ವಿಧಾನದಲ್ಲಿ ಸಂಪೂರ್ಣವಾಗಿ, ಅಂತಿಮವಾಗಿ ಈ ಪ್ರಾಪಂಚಿಕ ಪರಿತ್ಯಾಗ ಮಾಡಿದ್ದರೆ:

(ಇ) ಅವನು ಹಿಂದೂ ಆಗಿ ಉಳಿದಿರದಿದ್ದರೆ;

(ಈ) ಅವನು ಒಪ್ಪಿಗೆ ಕೊಡಲು ಶಕ್ತನಾಗಿಲ್ಲವಾದರೆ.

ಆದರೆ ಅವನು ೧೯೦೮ರ ಭಾರತೀಯ

ಪತ್ರದಿಂದ, ಅಥವಾ ೧೯೨೫ರ ಭಾರತೀಯ ಉತ್ತರಾಧಿಕಾರ ಶಾಸನ (೧೯೨೫ರ xxxix)ದ ೬೩ನೆಯ ಪ್ರಕರಣದ ಅವಕಾಶಗಳ ಪ್ರಕಾರ ಉಯಿಲು ಬರೆದು, ಆಕೆಯನ್ನು ದತ್ತಕ ನೀಡದಂತೆ ನಿಷೇಧಿಸಿರಬಾರದು.

(೪) ಬಾಲಕನನ್ನು ದತ್ತಕವಾಗಿ ನೀಡುವ ತಂದೆ ಅಥವಾ ತಾಯಿ ಸ್ವಸ್ಥವಾದ ಮನಸ್ಸುಳ್ಳವರಾಗಿದ್ದು ಅವರಿಗೆ ವಯಸ್ಸು ಹದಿನೆಂಟು ವರ್ಷ ತುಂಬಿರಲೇಬೇಕು. ವಿವರಣೆ :– ಈ ಪ್ರಕರಣದ ಉದ್ದೇಶಕ್ಕಾಗಿ.

(i) 'ತಂದೆ' ಅಥವಾ 'ತಾಯಿ' ಎಂಬ ಪದಗಳು ದತ್ತಕ ಸ್ವೀಕರಿಸಿರುವ ತಂದೆ ಅಥವಾ ದತ್ತಕ ಸ್ವೀಕರಿಸಿರುವ ತಾಯಿಯನ್ನು ಒಳಗೊಳ್ಳುವುದಿಲ್ಲ.

(ii) ತಂದೆ ಅಥವಾ ತಾಯಿ ಬುದ್ಧಿ ಭ್ರಮಣೆಗೊಳಗಾಗಿದ್ದರೆ, ಅಥವಾ ಅವರಿಗಿನ್ನೂ ವಯಸ್ಸು ಹದಿನೆಂಟು ವರ್ಷ ತುಂಬಿರದಿದ್ದರೆ, ಸಮ್ಮತಿ ಕೊಡಲು ಅವರು ಅಸಮರ್ಥರು ಎಂದು ಪರಿಗಣಿಸಲಾಗುತ್ತದೆ.

ನೋಂದಣಿ ಶಾಸನ (೧೯೦೮ರ xvi)ದಂತೆ ನೋಂದಾಯಿತವಾದ ಒಂದು ಪತ್ರದಿಂದ, ಇಲ್ಲವೆ ಶಾಸನ ೧೯೨೫ರ ಭಾರತೀಯ ಉತ್ತರಾಧಿಕಾರ ಶಾಸನ (೧೯೨೫ರ xxxix)ದ ೬೩ನೆಯ ಪ್ರಕರಣದ ಅವಕಾಶಗಳ ಪ್ರಕಾರ ಉಯಿಲು ಬರೆದುಕೊಡದಂತೆ ನಿಷೇಧಿಸಿರ ಬಾರದು.

(೪) ಬಾಲಕನನ್ನು ದತ್ತಕವಾಗಿ ಕೊಡುವ ತಂದೆ ಅಥವಾ ತಾಯಿ ಸ್ವಸ್ಥ ಮನಸ್ಕರಾಗಿದ್ದು ಹದಿನೆಂಟು ವರ್ಷ ತುಂಬಿದವರಾಗಿದ್ದರೆ.

ವಿವರಣೆ: ಆ ಪ್ರಕರಣದ ಉದ್ದೇಶಕ್ಕಾಗಿ–

(i) 'ತಂದೆ' ಅಥವಾ 'ತಾಯಿ' ಎಂಬ ಪದಗಳು ದತ್ತಕ ತೆಗೆದುಕೊಂಡಿರುವ ತಂದೆ ಅಥವಾ ದತ್ತಕ ತೆಗೆದುಕೊಂಡಿರುವ ತಾಯಿಯನ್ನು ಒಳಗೊಳ್ಳುವುದಿಲ್ಲ; ಮತ್ತು

(ii) ತಂದೆ ಅಥವಾ ತಾಯಿ ಬುದ್ಧಿ ಭ್ರಮಣೆಗೊಳಗಾಗಿದ್ದರೆ ಅಥವಾ ಅವರಿಗಿನ್ನೂ ವಯಸ್ಸು ಹದಿನೆಂಟು ವರ್ಷ ತುಂಬಿರದಿದ್ದರೆ ಸಮ್ಮತಿ ಕೊಡಲು ಅವರು ಅಸಮರ್ಥರು ಎಂದು ಭಾವಿಸಲಾಗುತ್ತದೆ.

**(೬೭)**

**ದತ್ತಕವಾಗಿ ಸ್ವೀಕೃತವಾಗಲು ಅರ್ಹತೆ**

**೬೩. ಯಾರನ್ನು ದತ್ತಕವಾಗಿ ಸ್ವೀಕರಿಸಬಹುದು:–**

(೧) ಹೆಣ್ಣನ್ನು ದತ್ತಕವಾಗಿ ತೆಗೆದು ಕೊಳ್ಳುವಂತಿಲ್ಲ ; ಹಾಗೆಯೇ ಯಾವುದೇ ಹಿಂದೂ ಪುರುಷನಿಗೆ ಅಥವಾ ಸ್ತ್ರೀಗೆ, ಹೆಣ್ಣು

**(೬೬)**

**ದತ್ತಕವಾಗಿ ಸ್ವೀಕೃತವಾಗಲು ಅರ್ಹತೆ**

**೬೩. ಯಾರನ್ನು ದತ್ತಕವಾಗಿ ಸ್ವೀಕರಿಸಬಹದು:–**

(೧) ಹೆಣ್ಣನ್ನು ದತ್ತಕ ಸ್ವೀಕರಿಸುವಂತಿಲ್ಲ, ಹಾಗೆಯೇ ಹಿಂದೂ ಪುರಷನಿಗೆ ಅಥವಾ ಸ್ತ್ರೀಗೆ, ಹೆಣ್ಣು

**ಭಾಗ–೬ ಪ್ರಕರಣ–೩ ಪುಟ–೨೪**

ದತ್ತಕವಾಗುವಂತಿಲ್ಲ.

(೨) ಈ ಕೆಳಗಿನ ನಿಯಮಗಳು ಪೂರೈಸಿದ ಹೊರತು ಒಬ್ಬ ಬಾಲಕನನ್ನು ದತ್ತಕವಾಗಿ ಸ್ವೀಕರಿಸುವಂತಿಲ್ಲ:–

(i) ಅವನು ಹಿಂದುವಾಗಿರಬೇಕು;

(ii) ಅವನಿಗೆ ಮದುವೆಯಾಗಿರ ಕೂಡದು:

(iii) ಅದಾಗಲೇ ಅವನು ಬೇರೆಯವರಿಗೆ ದತ್ತಕವಾಗಿರಬಾರದು;

(iv) ಹದಿನೈದು ವರ್ಷ ವಯಸ್ಸನ್ನು ದಾಟಿರಬಾರದು

(೬೮)

**೬೪. ದತ್ತಕವಾಗಿ ಸ್ವೀಕೃತವಾಗುವ ಕೆಲವು ವ್ಯಕ್ತಿಗಳು:** ಸಂದೇಹಕ್ಕೆ ಎಡೆಯಿರದಂತೆ ಇಲ್ಲಿ ಸ್ಪಷ್ಟ ಪಡಿಸಲಾಗುತ್ತಿದೆ. ಈ ಕೆಳಕಂಡ ವ್ಯಕ್ತಿಗಳನ್ನು ದತ್ತಕವಾಗಿ ಸ್ವೀಕರಿಸಲು ಅನುಮತಿಯಿದೆ:–

(i) ತನ್ನ ತಂದೆಗೆ ಅತ್ಯಂತ ಹಿರಿಯ ಅಥವಾ ಏಕೈಕ ಪುತ್ರನಾಗಿರುವವನು;

(ii) ಒಬ್ಬ ಹೆಂಗಸನ್ನು ನ್ಯಾಯ ಸಮ್ಮತರೀತಿಯಲ್ಲಿ ವಿವಾಹ ಮಾಡಿಕೊಳ್ಳಲು ಸಾಧ್ಯವಿರದಿದ್ದಾಗ ಆ ಹೆಂಗಸಿನ ಮಗ, ನಿರ್ದಿಷ್ಟವಾಗಿ ಮಗಳ ಮಗ, ಸಹೋದರಿಯ ಮಗ ತಾಯಿಯ ಸಹೋದರಿಯ ಮಗ;

(iii) ದತ್ತಕ ಸ್ವೀಕರಿಸುವ ತಂದೆಯ ಸಮೀಪ ಬಂಧುಗಳಿದ್ದರೂ, ಒಬ್ಬ ಅಪರಿಚಿತ.

(೬೯)

**ಅಗತ್ಯ ಸಮಾರಂಭಗಳು**

**೬೫. ದತ್ತಕವು ಸಂಪೂರ್ಣವಾಗುವುದು :–** ದತ್ತಕ ಸ್ವೀಕಾರ ಮಾಡಲಿರುವ ಬಾಲಕನನ್ನು ತಂದೆತಾಯಿಗಳು ದೈಹಿಕವಾಗಿ ಕೊಟ್ಟು, ತೆಗೆದುಕೊಳ್ಳದೆ ಹೋದರೆ ದತ್ತು ಸ್ವೀಕಾರವು

ದತ್ತಕವಾಗುವಂತಿಲ್ಲ.

(೨) ಈ ಕೆಳಗಿನ ನಿಯಮಗಳು ಪೂರೈಸಿದ ಹೊರತು ಒಬ್ಬ ಬಾಲಕನನ್ನು ದತ್ತಕ ಸ್ವೀಕರಿಸು ವಂತಿಲ್ಲ.

(i) ಅವನು ಹಿಂದುವಾಗಿರಬೇಕು;

(ii) ಅವನಿಗೆ ಮದುವೆಯಾಗಿರ ಬಾರದು;

(iii) ಅದಾಗಲೇ ಅವನು ಬೇರೆಯವರಿಗೆ ದತ್ತಕವಾಗಿರಬಾರದು;

(iv) ಹದಿನೈದು ವರ್ಷ ತುಂಬಿರಬಾರದು.

**೬೪. ದತ್ತಕವಾಗಿ ಸ್ವೀಕೃತವಾಗಿರುವ ಕೆಲವು ವ್ಯಕ್ತಿಗಳು:** ಸಂದೇಹಕ್ಕೆ ಅವಕಾಶವಿರದಂತೆ ಈ ಕೆಳಗಿನ ವ್ಯಕ್ತಿಗಳು ದತ್ತಕವಾಗಲು ಅರ್ಹರೆಂದು ಸ್ಪಷ್ಟ ಪಡಿಸಲಾಗುತ್ತಿದೆ:

**ಭಾಗ–೬ ಪ್ರಕರಣ–೧೪ ಪುಟ–೨೬**

(i) ತಂದೆಗೆ ಅತ್ಯಂತ ಹಿರಿಯ ಮತ್ತು ಏಕೈಕ ಪುತ್ರನಾಗಿರುವವನು;

(ii) ಒಬ್ಬ ಹೆಂಗಸನ್ನು ನ್ಯಾಯಸಮ್ಮತ ರೀತಿಯಲ್ಲಿ, ವಿವಾಹಮಾಡಿ ಕೊಳ್ಳಲು ಸಾಧ್ಯವಿರದಿದ್ದಾಗ ಆ ಹೆಂಗಸಿನ ಮಗ, ನಿರ್ದಿಷ್ಟವಾಗಿ ಮಗಳ ಮಗ, ಸೋದರಿಯ ಮಗ, ಅಥವಾ ತಾಯಿಯ ಸಹೋದರಿಯ ಮಗ.

(iii) ದತ್ತಕ ಸ್ವೀಕರಿಸುವ ತಂದೆಗೆ ಸಮೀಪ ಬಂಧುಗಳಿದ್ದರೂ, ಒಬ್ಬ ಅಪರಿಚಿತ.

(೬೮)

**ಅಗತ್ಯ ಸಮಾರಂಭಗಳು**

**೬೫. ದತ್ತಕ ಪ್ರಕ್ರಿಯೆಯು ಸಂಪೂರ್ಣವಾಗುವುದು** ದತ್ತಕವಾಗಿ ಸ್ವೀಕೃತನಾಗಲಿರುವ ಬಾಲಕನನ್ನು ಸಂಬಂಧಿಸಿದ ತಂದೆ ತಾಯಿ ದೈಹಿಕವಾಗಿ

**ಭಾಗ–೬ ಪ್ರಕರಣ–೧೫ ಪುಟ–೨೬**

ಊರ್ಜಿತವಾಗುವುದಿಲ್ಲ, ಬಂಧಕ ವಾಗುವುದಿಲ್ಲ. ಅವರು ನೀಡಿದ ಅಧಿಕಾರದಂತೆ ಉದ್ದೇಶಪೂರ್ವಕವಾಗಿ ಬಾಲಕನನ್ನು ಜನಿಸಿದ ಕುಟುಂಬದಿಂದ ಸ್ವೀಕೃತ ಕುಟುಂಬಕ್ಕೆ ವರ್ಗಾಯಿಸಬೇಕು.

ವಿವರಣೆ : ದತ್ತಕ ಸ್ವೀಕಾರವು ಊರ್ಜಿತವಾಗಬೇಕಾದರೆ, ದತ್ತ ಹೋಮದ ಆಚರಣೆ ಅಗತ್ಯವೇನಲ್ಲ.

(೭೦)

**೬೬. ಇತರ ನಿಯಮಗಳು :–**

(೧) ಪ್ರತಿಯೊಂದು ದತ್ತಕ ಸ್ವೀಕಾರದಲ್ಲಿಯೂ ಈ ಕೆಳಗಿನ ನಿಯಮಗಳನ್ನು ಪಾಲಿಸಿರಬೇಕು.

(i) ದತ್ತಕ ಸ್ವೀಕರಿಸುವ ತಂದೆಗೆ ಹಿಂದೂ ಮಗನಾಗಲಿ, ಮಗನ ಮಗನಾಗಲಿ, ಮಗನ ಮಗನ ಮಗನಾಗಲಿ, (ಕಾನೂನುಸಮ್ಮತ ರಕ್ತ ಸಂಬಂಧ ದಿಂದಾಗಲಿ, ದತ್ತಕದಿಂದಾಗಲಿ) ದತ್ತಕ ಸ್ವೀಕಾರ ಸಮಯದಲ್ಲಿ ಇರಬಾರದು.

ವಿವರಣೆ:– ಈ ಉಪವಾಕ್ಯದ ಉದ್ದೇಶಕ್ಕಾಗಿ, ದತ್ತಕ ಸಂದರ್ಭದಲ್ಲಿ ವಾಸ್ತವವಾಗಿ ಹುಟ್ಟಿದರೆ, ತಾಯಿಯ ಗರ್ಭದಲ್ಲಿದ್ದು, ಆಮೇಲೆ ಜೀವಂತವಾಗಿ ಜನಿಸಿದರೆ ಅಂತಹ ವ್ಯಕ್ತಿಯನ್ನು ದತ್ತಕದ ಸಮಯದಲ್ಲಿ ಜೀವಿಸಿರಲಿಲ್ಲ ಎಂದು ಹೇಳುವುದಿಲ್ಲ.

(ii) ಒಬ್ಬನೇ ಬಾಲಕನು ಒಂದೇ ಸಮಯಕ್ಕೆ ಇಬ್ಬರು ಅಥವಾ ಹೆಚ್ಚು ಮಂದಿಗೆ ದತ್ತಕವಾಗಲು ಸಾಧ್ಯವಿಲ್ಲ. ಹಾಗೆಯೇ ಒಬ್ಬ ವ್ಯಕ್ತಿಯು ಇಬ್ಬರು ಅಥವಾ ಹೆಚ್ಚು ಬಾಲಕರನ್ನು ಏಕಕಾಲದಲ್ಲಿ ದತ್ತಕ ಸ್ವಿಕರಿಸಲು ಸಾಧ್ಯವಿಲ್ಲ.

ಕೊಟ್ಟು ತೆಗೆದುಕೊಳ್ಳದೆ ಹೋದರೆ ದತ್ತಕ ಸ್ವೀಕಾರವು ಊರ್ಜಿತವಾಗುವುದಿಲ್ಲ. ಅವರು ನೀಡಿದ ಅಧಿಕಾರದಂತೆ, ಉದ್ದೇಶಪೂರ್ವಕವಾಗಿ ಬಾಲಕನನ್ನು ಜನಿಸಿದ ಕುಟುಂಬದಿಂದ ಸ್ವೀಕೃತ ಕುಟುಂಬಕ್ಕೆ ವರ್ಗಾಯಿಸಬೇಕು.

ವಿವರಣೆ : ದತ್ತಕ ಸ್ವೀಕಾರವು ಊರ್ಜಿತವಾಗಬೇಕಾದರೆ, ದತ್ತ ಹೋಮದ ಆಚರಣೆ ಅಗತ್ಯವೇನಲ್ಲ.

(೬೯)

**ದತ್ತಕಕ್ಕೆ ಇತರ ನಿಯಮಗಳು**

**೬೬. ಇತರ ನಿಯಮಗಳು :–**

(೧) ಪ್ರತಿಯೊಂದು ದತ್ತಕ ಸ್ವೀಕಾರ ದಲ್ಲಿಯೂ ಈ ಕೆಳಗಿನ ನಿಯಮಗಳನ್ನು ಪಾಲಿಸಿರಬೇಕು.

**ಭಾಗ–೬ ಪ್ರಕರಣ–೧೬ ಪುಟ–೨೬**

(i) ದತ್ತಕ ಸ್ವೀಕರಿಸಿರುವ ತಂದೆಗೆ ಹಿಂದೂ ಮಗನಾಗಲಿ, ಮಗನ ಮಗನಾಗಲಿ, ಮಗನ ಮಗನ ಮಗನಾಗಲಿ (ಕಾನೂನುಸಮ್ಮತ ರಕ್ತ ಸಂಬಂಧದಿಂದಾಗಲಿ, ದತ್ತಕ ದಿಂದಾಗಲಿ) ದತ್ತಕ ಸ್ವೀಕಾರದ ಸಮಯದಲ್ಲಿ ಇರಬಾರದು.

ವಿವರಣೆ :– ಈ ಉಪವಾಕ್ಯದ ಉದ್ದೇಶಕ್ಕಾಗಿ, ದತ್ತಕ ಸ್ವೀಕಾರ ಸಂದರ್ಭದಲ್ಲಿ ನಿಜವಾಗಿ ಹುಟ್ಟಿರದೆ, ಇನ್ನೂ ತಾಯಿಯ ಗರ್ಭದಲ್ಲಿದ್ದು, ಆಮೇಲೆ ಜೀವಂತವಾಗಿ ಜನಿಸಿದರೆ ಅಂತಹ ವ್ಯಕ್ತಿಯನ್ನು ದತ್ತಕ ಸಮಯದಲ್ಲಿ ಜೀವಿಸಿರಲಿಲ್ಲ ಎಂದು ಹೇಳಲಾಗುವುದಿಲ್ಲ.

(ii) ಒಬ್ಬನೇ ಬಾಲಕನು ಒಂದೇ ಸಮಯಕ್ಕೆ ಇಬ್ಬರು ಅಥವಾ ಹೆಚ್ಚು ಮಂದಿಗೆ

(iii) ಪ್ರತಿಯೊಂದು ದತ್ತಕವೂ ಕೊಡುವ ವ್ಯಕ್ತಿಯ ಮತ್ತು ಸ್ವೀಕರಿಸುವ ವ್ಯಕ್ತಿಯ ಸಂಪೂರ್ಣ ಅನಿರ್ಬಂಧಿತ ಸಮ್ಮತಿಯೊಂದಿಗೆ ನಡೆಯ ತಕ್ಕದ್ದು.

(೨) ದತ್ತಕ ಕೊಡುತ್ತಿರುವ ವ್ಯಕ್ತಿಯ ಅಥವಾ ತೆಗೆದುಕೊಳ್ಳುವ ವ್ಯಕ್ತಿಯ ಸಮ್ಮತಿಯನ್ನು ಬಲಾತ್ಕಾರದಿಂದ, ಅನಗತ್ಯ ಪ್ರಭಾವದಿಂದ, ಮೋಸದಿಂದ ತಪ್ಪಾಗಿ ತಿಳಿಯಪಡಿಸಿ, ಅಥವಾ ತಪ್ಪಾಗಿ ಪಡೆಯಲಾಗಿದೆ ಎಂದಾದರೆ, ಯಾವುದೇ ಪಕ್ಷವು, ಆ ದತ್ತಕವು ಅನೂರ್ಜಿತವೆಂದು ಸಾರಲು ಕೋರಿ ದಾವೆ ಹಾಕಬಹುದು. ಈ ಕೆಳಗಿನ ಸಂದರ್ಭಗಳಲ್ಲಿ ಅಂತಹ ದಾವೆಯನ್ನು ನ್ಯಾಯಾಲಯವು ರದ್ದುಪಡಿಸುತ್ತದೆ:

(ಅ) ಬಲಾತ್ಕಾರವೋ ಅನಗತ್ಯ (ಪ್ರಭಾವವೋ ಆಗಿದ್ದು) ಮೋಸ, ತಪ್ಪು ಭಾವನೆಗಳನ್ನು ಕಂಡುಹಿಡಿದು ಎರಡು ವರ್ಷಗಳ ನಂತರ ಮೊಕದ್ದಮೆಯನ್ನು ಹೂಡಿದ್ದರೆ; ಅಥವಾ

(ಆ) ಯಾರ ಸಮ್ಮತಿ ಪಡೆಯಲಾಗಿದೆಯೋ ಆ ವ್ಯಕ್ತಿಯು, ಬಲಾತ್ಕಾರ ಮತ್ತು ಅನಗತ್ಯ ಪ್ರಭಾವಗಳು ಮುಗಿದಮೇಲೆ ಅಥವಾ ಮೋಸ, ತಪ್ಪುತಿಳುವಳಿಕೆ ಅಥವಾ ದೋಷವನ್ನು ಕಂಡು ಹಿಡಿದ ನಂತರ ದತ್ತಕವನ್ನು ಸ್ಥಿರಿಕರಿಸಿದರೆ, ಆ ಸ್ಥಿರೀಕರಣವು ಇತರರ ಹಕ್ಕುಗಳಿಗೆ ಅಡ್ಡಿಯಾಗದಿದ್ದರೆ,

(೩) ಮೇಲೆ ಹೇಳಿದ (೨)ನೇ ಉಪ–ಪ್ರಕರಣದ

(ಅ) ಉಪವಾಕ್ಯದಲ್ಲಿ ನಿರ್ದಿಷ್ಟಪಡಿಸಿದ ಕಾಲಮಿತಿಯೊಳಗೆ ದಾವೆ ಹೂಡಿರದಿದ್ದರೆ ಅಥವಾ ದತ್ತಕವಾಗಲು ಸಾಧ್ಯವಿಲ್ಲ. ಹಾಗೆಯೇ ಒಬ್ಬನು ಇಬ್ಬರು ಅಥವಾ ಹೆಚ್ಚು ಬಾಲಕರನ್ನು ದತ್ತಕ ಸ್ವೀಕರಿಸಲು ಸಾಧ್ಯವಿಲ್ಲ.

(iii) ಪ್ರತಿಯೊಂದು ದತ್ತಕವೂ, ಕೊಡುವ ವ್ಯಕ್ತಿಯ ಮತ್ತು ಸ್ವೀಕರಿಸುವ ವ್ಯಕ್ತಿಯ ಅನಿರ್ಬಂಧಿತ ಸಮ್ಮತಿಯೊಂದಿಗೆ ನಡೆಯತಕ್ಕದ್ದು.

(೨) ದತ್ತಕ ಕೊಡುತ್ತಿರುವ ವ್ಯಕ್ತಿಯ ಮತ್ತು ತೆಗೆದುಕೊಳ್ಳುವ ವ್ಯಕ್ತಿಯ ಸಮ್ಮತಿಯನ್ನು ಬಲಾತ್ಕಾರದಿಂದ, ಅನಗತ್ಯ, ಪ್ರಭಾವದಿಂದ, ಮೋಸದಿಂದ, ತಪ್ಪು ಅಭಿಪ್ರಾಯಕೊಟ್ಟು ಅಥವಾ ತಪ್ಪಾಗಿ ಪಡೆಯಲಾಗಿದೆ ಎಂದಾದ ಪಕ್ಷದಲ್ಲಿ, ಆ ದತ್ತಕವು ಅನೂರ್ಜಿತ ವಾಗಿದೆಯೆಂದು ಸಾರಲು ಕೋರಿ ದಾವೆ ಹೂಡಬಹುದು. ಆದರೆ ಕೆಳಗಿನ ಸಂದರ್ಭಗಳಲ್ಲಿ ಅಂತಹ ದಾವೆಯನ್ನು ನ್ಯಾಯಾಲಯವು ರದ್ದುಪಡಿಸುತ್ತದೆ.

(ಅ) ಬಲಾತ್ಕಾರವೋ ಅನಗತ್ಯ ಪ್ರಭಾವವೋ ಉಂಟಾದ; ಮೋಸ, ತಪ್ಪುಗಳನ್ನು ಕಂಡುಹಿಡಿದ ಎರಡು ವರ್ಷಗಳ ಅನಂತರ ಮೊಕದ್ದಮೆಯನ್ನು ಹೂಡಿದ್ದರೆ; ಅಥವಾ

(ಆ) ಯಾರ ಸಮ್ಮತಿ ಪಡೆಯಲಾಗಿದೆಯೋ ಆ ವ್ಯಕ್ತಿಯು ಬಲಾತ್ಕಾರ ಮತ್ತು ಅನಗತ್ಯ ಪ್ರಭಾವಗಳು ಮುಗಿದ ಮೇಲೆ, ಅಥವಾ ಮೋಸ, ತಪ್ಪು ತಿಳುವಳಿಕೆ ಅಥವಾ ತಪ್ಪುಗಳನ್ನು ಕಂಡುಹಿಡಿದ ಮೇಲೆ ದತ್ತಕವನ್ನು ಸ್ಥಿರೀಕರಿಸಿದರೆ, ಆ ಸ್ಥಿರೀಕರಣವು ಇತರರ ಹಕ್ಕುಗಳಿಗೆ ಅಡ್ಡಿಯಾಗದಿದ್ದರೆ.

(೩). (೨) ಉಪಪ್ರಕರಣದ (ಅ)

ಆ ಉಪಪ್ರಕರಣದ
(ಆ) ಉಪವಾಕ್ಯದಂತೆ ದತ್ತಕವನ್ನೂ ಸ್ಥಿರೀಕರಿಸದಿದ್ದರೆ, ದತ್ತಕದ ತಾರೀಕಿನಿಂದಲೂ ಎಲ್ಲಾ ಉದ್ದೇಶಗಳಿಗೂ ಊರ್ಜಿತ, ಕ್ರಮಬದ್ಧ ಎಂದು ಪರಿಗಣಿಸಲಾಗುತ್ತದೆ.

(೭೧)

## ಅಧ್ಯಾಯ – ೨

## ದತ್ತಕದ ಪರಿಣಾಮಗಳು

**೬೭ ದತ್ತಕದ ಪರಿಣಾಮಗಳು :–** ದತ್ತಕ ಮಗನು ದತ್ತಕವಾದ ತಾರೀಕಿನಿಂದಲೂ ಎಲ್ಲಾ ಉದ್ದೇಶಗಳಿಗೂ, ತನ್ನನ್ನು ದತ್ತಕವಾಗಿ ಸ್ವೀಕರಿಸಿದ ತಂದೆಯು ಮಗನೆಂದು ಪರಿಗಣಿಸಲಾಗುತ್ತದೆ. ಆ ತಾರೀಕಿನಿಂದ, ಜನಿಸಿದ ಕುಟುಂಬದೊಂದಿಗೆ ಅವನ ಎಲ್ಲಾ ಬಂಧನವೂ ಕಡಿದುಹೋಗುತ್ತದೆ, ಅವುಗಳ ಬದಲಿಗೆ, ದತ್ತಕವಾದ ಕುಟುಂಬ ಬಂಧನಗಳಿಗೆ ಅವನು ಒಳಪಡುತ್ತಾನೆ.

(ಅ) ಜನಿಸಿದ ಕುಟುಂಬದಲ್ಲಿಯೇ ಮುಂದುವರಿದಿದ್ದರೆ ಯಾರನ್ನು ಮದುವೆಮಾಡಿಕೊಳ್ಳಲು ಸಾಧ್ಯ ವಿರಲಿಲ್ಲವೋ ಆ ವ್ಯಕ್ತಿಯನ್ನು ಮದುವೆಯಾಗಲು ಸಾಧ್ಯವಿಲ್ಲ;

(ಆ) ದತ್ತಕಕ್ಕೆ ಮೊದಲು ಅವನಿಗಿದ್ದ ಆಸ್ತಿಯು ಹಾಗೆಯೇ ಅವನಲ್ಲಿ ಮುಂದುವರಿಯುತ್ತದೆ. ಆ ಆಸ್ತಿಯ ಒಡೆತನಕ್ಕೆ ಸೇರಿದ ಬಾಧ್ಯತೆಗಳು ಏನಾದರೂ ಇದ್ದರೆ ಅವುಗಳಿಗೆ

ಉಪವಾಕ್ಯದಲ್ಲಿ ನಿರ್ದಿಷ್ಟಪಡಿಸಿದ ಕಾಲಮಿತಿಯೊಳಗೆ ದಾವೆ ಹೂಡಿರದಿದ್ದರೆ, ಅಥವಾ ಆ ಉಪಪ್ರಕರಣದ (ಆ) ಉಪವಾಕ್ಯದಂತೆ ದತ್ತಕವನ್ನು ಸ್ಥಿರೀಕರಿಸಿದರೆ, ಎಲ್ಲಾ ದೃಷ್ಟಿ ಗಳಿಂದಲೂ ದತ್ತಕದ ತಾರೀಕಿ ನಿಂದಲೂ ಅದು ಊರ್ಜಿತ ಮತ್ತು ಕ್ರಮಬದ್ಧ ಎಂದು ಪರಿಗಣಿಸಲಾಗುತ್ತದೆ.

(೭೦)

## ಅಧ್ಯಾಯ – ೨

## ದತ್ತಕದ ಪರಿಣಾಮಗಳು

**೬೭. ದತ್ತಕದ ಪರಿಣಾಮಗಳು :–** ದತ್ತ ಪುತ್ರನು ತಾರೀಕಿನಿಂದಲೇ ಎಲ್ಲಾ ಉದ್ದೇಶಗಳಿಗೂ ದತ್ತಕ ಸ್ವೀಕರಿಸಿದ ತಂದೆಯ ಮಗನೆಂದು ಪರಿಗಣಿಸಲಾಗುತ್ತದೆ. ಜನಿಸಿದ ಕುಟುಂಬದೊಂದಿಗೆ, ಆ ತಾರೀಕಿನಿಂದ ಅವನಿಗಿದ್ದ ಎಲ್ಲಾ ಬಂಧನವೂ ಕಡಿದು ಹೋಗುತ್ತದೆ. ಬದಲಿಗೆ, ದತ್ತಕವಾದ ಕುಟುಂಬದ ಬಂಧುಗಳಿಗೆ ಅವನು ಒಳಪಡುತ್ತಾನೆ.

**ಭಾಗ–೬**
**ಪ್ರಕರಣ–೧೮**
**ಪುಟ–೨೭**

(ಅ) ಅವನು ಜನಿಸಿದ ಕುಟುಂಬದಲ್ಲೇ ಮುಂದುವರಿದಿದ್ದರೆ ಯಾರನ್ನು ಮದುವೆಯಾಗಲು ಸಾಧ್ಯವಿರ ಲಿಲ್ಲವೋ ಆ ವ್ಯಕ್ತಿಯನ್ನು ಈಗಲೂ ಮದುವೆಯಾಗಲು ಸಾಧ್ಯವಿಲ್ಲ;

(ಆ) ದತ್ತಕಕ್ಕೆ ಮೊದಲು ಅವನಿಗೆ ಸೇರಿದ್ದ ಆಸ್ತಿಯು ಹಾಗೆಯೇ ಆಮೇಲೂ ಅವನಲ್ಲಿ ಮುಂದುವರಿಯುತ್ತವೆ. ಆಸ್ತಿಗೆ ಒಳಪಟ್ಟಿದ್ದ ಬಾಧ್ಯತೆಗಳು ಏನಾದರೂ

ಒಳಪಟ್ಟಿರುತ್ತದೆ. ತಾನು ಜನಿಸಿದ ಕುಟುಂಬದ ಬಂಧುಗಳನ್ನು ಉಳಿಸಿಕೊಳ್ಳುವ ಕರ್ತವ್ಯವೂ ಸೇರಿರುತ್ತದೆ ;

(ಇ) ದತ್ತಕ ಪುತ್ರನು, ದತ್ತಕವಾಗುವುದಕ್ಕೆ ಮೊದಲು ಬೇರೆಯಾರಲ್ಲಿಯಾದರೂ ಇದ್ದ ಯಾವುದೇ ಸೊತ್ತನ್ನು ಕಸಿದು ಕೊಳ್ಳುವುದಿಲ್ಲ, ೬೮ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಮತ್ತು ಆ ಪ್ರಮಾಣದಲ್ಲಿ ಹೊರತು.

ಇದ್ದರೆ ಹಾಗೆಯೇ ಅವನಿಗೆ ಸೇರಿರುತ್ತವೆ. ತಾನು ಜೀವಿಸಿದ ಕುಟುಂಬದ ಬಂಧುಗಳನ್ನು ಉಳಿಸಿಕೊಳ್ಳುವ ಕರ್ತವ್ಯವೂ ಸೇರಿರುತ್ತದೆ;

(ಇ) ದತ್ತಪುತ್ರನು, ದತ್ತಕವಾಗುವದಕ್ಕೆ ಮೊದಲು ಬೇರೆಯಾ ರಲ್ಲಿಯಾದರೂ ಇದ್ದ ಯಾವುದೇ ಸೊತ್ತನ್ನು ಅವನಿಂದ ಕಸಿದುಕೊಳ್ಳುವುದಿಲ್ಲ, ೬೮ನೆಯ ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದ ರೀತಿಯಲ್ಲಿ ಮತ್ತು ಆ ಪ್ರಮಾಣದಲ್ಲಿ ಹೊರತು.

(೭೨)

**೬೮. ದತ್ತಕದಿಂದಾಗಿ ಆಸ್ತಿಗಳ ಪರಭಾರೆ:**

ಈ ಸಂಹಿತೆಯು ಜಾರಿಗೆ ಬಂದ ನಂತರ ಒಬ್ಬ ವಿಧವೆಯು ದತ್ತಕ ಸ್ವೀಕಾರ ಮಾಡಿದರೆ, ದತ್ತಕ ಪುತ್ರನಿಗೆ–

(ಅ) ಆಕೆಗೆ ಮತ್ತು ಆಕೆಯ ಸಹ–ವಿಧವೆಯಂತೆ ದತ್ತು ಸ್ವೀಕರಿಸಿದ ತಂದೆಯು ವಾರಸುದಾರರಾಗಿ ಬಂದಿರುವ ಆಸ್ತಿಯ ಅರ್ಧವು ಬರುತ್ತದೆ.

(ಆ) ಮಗ, ಮಗನ ಮಗ, ಮಗನ ಮಗನ ಮಗ ಇವರ ಮರಣದ ನಂತರ ದತ್ತಕವು ನಡೆದಿದ್ದರೆ. ದತ್ತಕ ಸ್ವೀಕರಿಸಿದ ತಾಯಿ ಮತ್ತು ಆಕೆಯ ಸಹ–ವಿಧವೆಯರು ದತ್ತಕ ತೆಗೆದುಕೊಂಡ ತಂದೆಯಿಂದ ಪಡೆದ ಆಸ್ತಿಯಲ್ಲಿ ಅರ್ಧವನ್ನು ದತ್ತು ಪುತ್ರನು ಪಡೆಯುತ್ತಾನೆ. ಜೊತೆಗೆ, ದತ್ತು ತಾಯಿಯು ತನ್ನ ಮಗನ, ಮಗನ ಮಗನ, ಮಗನ ಮಗನ ಮಗನ

(೭೧)

**೬೮. ದತ್ತಕದಿಂದಾಗಿ ಆಸ್ತಿಗಳ ಪರಭಾರೆ:**

ಈ ಸಂಹಿತೆಯು ಜಾರಿಗೆ ಬಂದ ನಂತರ ಒಬ್ಬ ವಿಧವೆಯು ದತ್ತಕ ಸ್ವೀಕಾರಮಾಡಿದರೆ ದತ್ತಕ ಪುತ್ರನು –

**ಭಾಗ–೬**
**ಪ್ರಕರಣ–೧೯**
**ಪುಟ–೨೭**

(ಅ) ಆಕೆಗೆ ಮತ್ತು ಆಕೆಯ ಸಹ ವಿಧವೆಯರಿಗೆ ದತ್ತು ತಂದೆಯು ವಾರಸುದಾರರಾಗಿ ಬಂದ ಆಸ್ತಿಯ ಅರ್ಧಭಾಗವು ಸೇರುತ್ತದೆ.

(ಆ) ಮಗ, ಮೊಮ್ಮಗ, ಮರಿಮಗ ಇವರ ಮರಣದ ನಂತರ ದತ್ತಕವು ನಡೆದಿದ್ದರೆ, ದತ್ತು ತಾಯಿ ಮತ್ತು ಆಕೆಯ ಸಹವಿಧವೆಯರು, ದತ್ತಕ ತಂದೆಯಿಂದ ಪಡೆದಿದ್ದರೆ ಅದರ ಅರ್ಧಭಾಗವು ಸೇರುತ್ತದೆ. ಜೊತೆಗೆ, ದತ್ತಕ ತಾಯಿಯು ತನ್ನಮಗ, ಮೊಮ್ಮಗ, ಮರಿ ಮಗ ಇವರ ವಾರಸುದಾರಳಾಗಿ ಪಡೆದ ಆಸ್ತಿಯ ಅರ್ಧಪಾಲು ಸೇರುತ್ತದೆ.

ವಾರಸುದಾರಳಾಗಿ ಪಡೆದ ಆಸ್ತಿಯ ಅರ್ಧವನ್ನು ಪಡೆಯುತ್ತಾನೆ.

ಆಸ್ತಿಯ ಪಾಲನ್ನು ಪರಿಗಣಿಸುವಾಗ, ಪ್ರತಿ ಸಂದರ್ಭದಲ್ಲೂ ದತ್ತಕವಾಗುವುದಕ್ಕೆ ತಕ್ಷಣದ ಹಿಂದೆ ಹೇಗಿತ್ತೋ ಅದನ್ನು ಗಮನಿಸಲಾಗುತ್ತದೆ.

ಆಕೆ ಅಥವಾ ಅವರು ಪಿತ್ರಾರ್ಜಿತವಾಗಿ ಪಡೆದಿರುವ ಇಡೀ ಆಸ್ತಿಯ ಅಥವಾ ಅದರ ಭಾಗವು ರೂಢಿ, ಪದ್ಧತಿಗಳಿಂದಾಗಲಿ, ಯಾವುದೇ ದಾವೆ ಅಥವಾ ಕಾನುನು ಪ್ರಕಾರ ಪಾಲುಮಾಡಲಾಗದಂತಿದ್ದರೆ, ಆ ಅವಿಭಾಜ್ಯ ಆಸ್ತಿಯು ಪೂರ್ತಿಯಾಗಿ ದತ್ತಕಕ್ಕೆ ಮೊದಲು ಹೇಗಿತ್ತೋ ಹಾಗೆ, (ಅ) ಮತ್ತು (ಆ) ಉಪವಾಕ್ಯಗಳ ಪ್ರಕಾರ ಬರುವುದರ ಜೊತೆಗೆ ದತ್ತಕ ಪುತ್ರನಿಗೆ ಬರುತ್ತದೆ.

(೨) (೧)ನೇ ಉಪ–ಪ್ರಕರಣದ ಅವಕಾಶಗಳು, ಭಾರತದ ಯಾವುದೇ ಪ್ರಾಂತದಲ್ಲಿ ಇರಲಿ, ಆ ಕೃಷಿಭೂಮಿಗೆ ಅನ್ವಯಿಸುತ್ತದೆ.

ಆಸ್ತಿಯ ಪಾಲನ್ನು ನಿರ್ಧರಿಸುವಾಗ ಅದು ದತ್ತಕಕ್ಕೆ ತಕ್ಷಣದ ಹಿಂದೆ ಇದ್ದ ಸ್ಥಿತಿಯನ್ನು ಪರಿಗಣಿಸಲಾಗುತ್ತದೆ.

ಆಕೆ ಅಥವಾ ಅವರು ಪಿತ್ರಾರ್ಜಿತವಾಗಿ ಪಡೆದಿರುವ ಇಡೀ ಆಸ್ತಿಯು ಅಥವಾ ಅದರ ಭಾಗವು ರೂಢಿ, ಪದ್ಧತಿಗಳಿಂದಾಗಲಿ, ಯಾವುದೇ ದಾನ, ಅಥವಾ ಕಾನೂನುಗಳ ಪ್ರಕಾರ ಪಾಲುಮಾಡಲಾಗದಂತಿದ್ದರೆ, ಆ ಅವಿಭಾಜ್ಯ ಆಸ್ತಿಯನ್ನು ದತ್ತಕ ಪುತ್ರನು, ಪೂರ್ತಿಯಾಗಿ, ಅದು ದತ್ತಕಕ್ಕೆ ತಕ್ಷಣದ ಮೊದಲು ಹೇಗಿತ್ತೋ ಹಾಗೆ, (ಅ) ಮತ್ತು (ಆ) ಉಪವಾಕ್ಯಗಳ ಪ್ರಕಾರ ಬರುವ ಆಸ್ತಿಯ ಜೊತೆಗೆ ಅವನಿಗೆ ಬರುತ್ತದೆ.

(೨) (೧)ನೇ ಉಪ–ಪ್ರಕರಣದ ಅವಕಾಶಗಳು, ಭಾರತದ ಯಾವುದೇ ಪ್ರಾಂತದಲ್ಲಿರಲಿ, ಆ ಕೃಷಿಭೂಮಿಗೆ ಅನ್ವಯವಾಗುತ್ತದೆ.

(೭೩)

**೬೯. ದತ್ತಕ ಸ್ವೀಕಾರ ಮಾಡಿದವರಿಗೆ ತಮ್ಮ ಆಸ್ತಿಗಳನ್ನು ವಿಲೇವಾರಿ ಮಾಡಲು ಇರುವ ಹಕ್ಕು:–**

ವಿರುದ್ಧವಾಗಿ ಯಾವುದಾದರೂ ಒಪ್ಪಂದವಿದ್ದರೆ ಹೊರತು ದತ್ತಕ ಸ್ವೀಕಾರ ಮಾಡಿದುದರಿಂದ, ದತ್ತು ತಂದೆ ಅಥವಾ ತಾಯಿಗೆ ತನ್ನ ಆಸ್ತಿಯನ್ನು ಜೀವಂತರಾಗಿರುವವರಿಗೆ ವರ್ಗಾಯಿಸುವುದರ ಮೂಲಕ ಅಥವಾ ಉಯಿಲಿನ ಮೂಲಕ ವಿಲೇವಾರಿ ಮಾಡಲು

(೭೨)

**೬೯. ದತ್ತು ತಂದೆ ತಾಯಿಯರಿಗೆ ತಮ್ಮ ಆಸ್ತಿಗಳನ್ನು ವಿಲೇವಾರಿ ಮಾಡಲು ಇರುವ ಹಕ್ಕು:–**

**ಭಾಗ–೬**
**ಪ್ರಕರಣ–೨೧(೨)**
**ಪುಟ–೨೭**

ವಿರುದ್ಧವಾಗಿ ಯಾವುದೇ ಒಪ್ಪಂದವಿದ್ದರೆ ಹೊರತು ದತ್ತಕ ಸ್ವೀಕಾರ ಮಾಡಿದ್ದರಿಂದಾಗಿ, ದತ್ತು ತಂದೆ–ತಾಯಿಯರಿಗೆ ತಮ್ಮ ಆಸ್ತಿಯನ್ನು ಜೀವಂತವಾಗಿರುವವರಿಗೆ ವರ್ಗಾಯಿಸುವುದರ ಮೂಲಕ ಅಥವಾ ಉಯಿಲಿನ

ಅವಕಾಶ ತಪ್ಪುವುದಿಲ್ಲ.

(೭೪)

೭೦. ವಿಧುರನು ದತ್ತಕ ಸ್ವೀಕಾರ ಮಾಡಿದಾಗ ದತ್ತು ತಾಯಿಯ ನಿರ್ಧಾರ.

(೧) ಹಿಂದುವು ತನ್ನ ಪತ್ನಿಯು ಜೀವಂತವಾಗಿರುವಾಗ ದತ್ತಕ ಸ್ವೀಕಾರ ಮಾಡಿದರೆ ಆಕೆಯು ದತ್ತು ತಾಯಿಯಾಗುತ್ತಾಳೆ.

(೨) ಒಬ್ಬ ಹಿಂದುವಿಗೆ ಒಬ್ಬಳಿಗಿಂತ ಹೆಚ್ಚು ಪತ್ನಿಯರು ಜೀವಂತರಾಗಿದ್ದ ಪಕ್ಷದಲ್ಲಿ,

(i) ಯಾರ ಸಹಯೋಗದಿಂದ ಅಥವಾ ಯಾರ ಸಮ್ಮತಿಯಿಂದ ಅವನು ದತ್ತಕಸ್ವೀಕಾರ ಮಾಡಿರುವನೋ ಆ ಪತ್ನಿಯು, ಅಥವಾ

(ii) ಒಬ್ಬಳಿಗಿಂತ ಹೆಚ್ಚು ಪತ್ನಿಯರಿದ್ದರೆ ಅಥವಾ ಅವರು ಸಮ್ಮತಿಸಿದ್ದರೆ, ಅವರಲ್ಲಿ ಮೊದಲು ವಿವಾಹವಾದ ಪತ್ನಿಯು, ಅಂದರೆ ಹಿರಿಯತನವುಳ್ಳ ಪತ್ನಿಯು ದತ್ತುತಾಯಿ ಎನಿಸುತ್ತಾಳೆ, ಇತರ ಪತ್ನಿಯರು ದತ್ತಕ ಪುತ್ರನ ಬಲತಾಯಿಯರೆನಿಸುತ್ತಾರೆ.

(೩) ಪತ್ನಿಯ ಮರಣಾನಂತರ ವಿಧುರನು ಯಾವುದಾದರೂ ಸಮಯದಲ್ಲಿ ದತ್ತಕ ಸ್ವೀಕರಿಸಿದರೆ, ದತ್ತಕ ಸ್ವೀಕಾರಕ್ಕೆ ತಕ್ಷಣದ ಹಿಂದೆ ಮೃತಪಟ್ಟ ಪತ್ನಿಯನ್ನು ದತ್ತುತಾಯಿ ಎಂದೂ, ಬೇರೆ ಗತಿಸಿದ ಅಥವಾ ವ್ಯಕ್ತಿಯು ವಿವಾಹವಾಗಿದ್ದ ಪತ್ನಿಯರನ್ನು ದತ್ತುಪುತ್ರನ ಬಲತಾಯಿಯರೆಂದೂ ಭಾವಿಸಲಾಗುತ್ತದೆ. ತಂದೆ ಏನಾದರೂ ತನ್ನ ಪತ್ನಿಯರಲ್ಲಿ ಬೇರೆ ಯಾರನ್ನಾದರೂ ಮೂಲಕ ವಿಲೇವಾರಿ ಮಾಡಲು ಅವಕಾಶ ತಪ್ಪುವುದಿಲ್ಲ.

(೭೩)

೭೦. ವಿಧುರನು ದತ್ತಕ ಸ್ವೀಕಾರ ಮಾಡಿದರೆ, ದತ್ತು ತಾಯಿಯ ನಿರ್ಧಾರ

(೧) ಒಬ್ಬ ಹಿಂದುವು, ಪತ್ನಿಯು ಜೀವಂತವಾಗಿರುವಾಗ, ಆಕೆಯನ್ನು ದತ್ತುತಾಯಿ ಎಂದು ಭಾವಿಸಲಾಗುತ್ತದೆ.

ಭಾಗ–೬
ಪ್ರಕರಣ–೨೨
ಪುಟ–೨೭,೨೮

(೨) ಒಬ್ಬ ಹಿಂದುವಿಗೆ ಒಬ್ಬಳಿಗಿಂತ ಹೆಚ್ಚು ಪತ್ನಿಯರು ಜೀವಂತವಾಗಿದ್ದರೆ –

(i) ಯಾರೊಂದಿಗೆ ಅಥವಾ ಯಾರ ಸಮ್ಮತಿಯಿಂದ ಅವನು ದತ್ತಕ ಸ್ವೀಕಾರ ಮಾಡಿರುವನೋ ಆ ಪತ್ನಿಯು, ಅಥವಾ

(ii) ಒಬ್ಬಳಿಗಿಂತ ಹೆಚ್ಚು ಪತ್ನಿಯರೊಂದಿಗೆ ಸಹಯೋಗವಿದ್ದರೆ ಅಥವಾ ಹಾಗೆ ಸಮ್ಮತಿಯನ್ನು ಪಡೆದಿದ್ದರೆ, ಎಲ್ಲರಿಗಿಂತ ಮೊದಲು ಮದುವೆ ಮಾಡಿಕೊಂಡಿದ್ದವಳನ್ನು ದತ್ತಕ ಪುತ್ರನ ದತ್ತು ತಾಯಿಯೆಂದೂ ಮಿಕ್ಕವರನ್ನು ಬಲತಾಯಿಯರೆಂದೂ ಪರಿಗಣಿಸಲಾಗುತ್ತದೆ.

(೩) ಪತ್ನಿಯ ಮರಣಾನಂತರ ವಿಧುರನು ಯಾವುದಾದರೊಂದು ಸಮಯದಲ್ಲಿ ದತ್ತಕ ಸ್ವೀಕರಿಸಿದರೆ, ದತ್ತಕಕ್ಕೆ ತಕ್ಷಣ ಹಿಂದೆ ಮೃತಪಟ್ಟ ಪತ್ನಿಯನ್ನು ದತ್ತುತಾಯಿಯೆಂದೂ, ಬೇರೆ ಗತಿಸಿದ ಅಥವಾ ವ್ಯಕ್ತಿಯು ವಿವಾಹಮಾಡಿಕೊಂಡಿದ್ದ ಪತ್ನಿಯರನ್ನು ಬಲತಾಯಿಯರೆಂದೂ

ದತ್ತು ತಾಯಿ ಎಂದು ಭಾವಿಸುವಂತೆ ಸ್ಪಷ್ಟವಾಗಿ ನಿರ್ದೇಶನ ನೀಡಿದ್ದರೆ ಅಥವಾ ಸೂಚನೆ ಕೊಟ್ಟಿದ್ದರೆ ಮಾತ್ರ ಅಂತಹ ಬೇರೆ ಪತ್ನಿಯೋ, ದತ್ತು ತಂದೆ, ಆಮೇಲೆ ವಿವಾಹವಾದ ಬೇರೆ ಪತ್ನಿಯೋ ದತ್ತಕ ಪುತ್ರನ ಬಲತಾಯಿಯರೆಂದು ಭಾವಿಸಲಾಗುತ್ತದೆ.

(೪) ಬ್ರಹ್ಮಚಾರಿಯೊಬ್ಬನು ದತ್ತಕ ಸ್ವೀಕರಿಸಿದ ಪಕ್ಷದಲ್ಲಿ, ಆಮೇಲೆ ಅವನು ವಿವಾಹ ಮಾಡಿಕೊಂಡ ಪತ್ನಿಯು ದತ್ತಕ ಪುತ್ರನ ಬಲತಾಯಿಯೆನಿಸುತ್ತಾಳೆ.

ಪರಿಗಣಿಸಲಾಗುತ್ತದೆ. ತಂದೆಯು ಪತ್ನಿಯರಲ್ಲಿ ಬೇರೆ ಯಾರನ್ನಾದರೂ ದತ್ತುತಾಯಿ ಎಂದು ಭಾವಿಸುವಂತೆ ಸ್ಪಷ್ಟವಾದ ನಿರ್ದೇಶನ ನೀಡಿದ್ದರೆ ಅಥವಾ ಸೂಚನೆ ಕೊಟ್ಟಿದ್ದರೆ ಮಾತ್ರ, ಅಂತಹ ಇತರ ಪತ್ನಿಯೇ, ದತ್ತು ತಂದೆ ವಿವಾಹವಾದ ಬೇರೆ ಪತ್ನಿಯೇ ದತ್ತುಪುತ್ರನ ಬಲತಾಯಿಯರಾಗುತ್ತಾರೆ.

(೪) ಬ್ರಹ್ಮಚಾರಿಯು ದತ್ತಕ ತೆಗೆದುಕೊಂಡ ಪಕ್ಷದಲ್ಲಿ, ಆಮೇಲೆ ಅವನು ವಿವಾಹವಾಡಿಕೊಂಡ ಪತ್ನಿಯು ದತ್ತುಪುತ್ರನ ಬಲತಾಯಿಯೆಂದು ಭಾವಿಸ ಲಾಗುತ್ತದೆ.

**(೭೫)**

**೭೧. ವಿಧವೆಯು ದತ್ತಕ ಸ್ವೀಕರಿಸಿದಾಗ ದತ್ತುತಾಯಿಯ ನಿರ್ಧಾರಣ:–**

(೧) ಗತಿಸಿದ ಹಿಂದೂ ವ್ಯಕ್ತಿಯ ಹಲವು ವಿಧವೆಯರಲ್ಲಿ ಒಬ್ಬಳು ದತ್ತಕ ಸ್ವೀಕಾರ ಮಾಡಿದರೆ ಆಕೆಯನ್ನು ದತ್ತುತಾಯಿ ಎಂದು ಪರಿಗಣಿಸಿ, ಮಿಕ್ಕವರನ್ನು ಅವನ ಬಲತಾಯಿಯರೆಂದು ಪರಿಗಣಿಸ ಲಾಗುವುದು.

(೨) ಇಬ್ಬರು ಅಥವಾ ಹೆಚ್ಚುಜನ ವಿಧವೆಯರು ಜಂಟಿಯಾಗಿ ದತ್ತಕ ಸ್ವೀಕರಿಸಿದ್ದರೆ, ಅವರ ಪೈಕಿ ವ್ಯಕ್ತಿಯನ್ನು ಮೊದಲು ವಿವಾಹವಾಗಿ ಆ ಹಿರಿಯತನವುಳ್ಳವಳು ದತ್ತಕ ಪುತ್ರನ ದತ್ತುತಾಯಿ ಎನಿಸುತ್ತಾಳೆ. ಮಿಕ್ಕವರು ಬಲತಾಯಿಯರೆಂದು ಭಾವಿಸಲಾಗುತ್ತದೆ.

**(೭೪)**

**೭೧. ವಿಧವೆಯು ದತ್ತಕ ಸ್ವೀಕರಿಸಿದಾಗ ದತ್ತುತಾಯಿಯ ನಿರ್ಧಾರಣ:–**

(೧) ಮೃತ ಹಿಂದೂ ವ್ಯಕ್ತಿಯ ಹಲವು ವಿಧವೆಯರ ಪೈಕಿ ಒಬ್ಬಳು ದತ್ತಕ ಸ್ವೀಕರಿಸಿದರೆ ಆಕೆಯನ್ನು ದತ್ತುತಾಯಿ ಎಂದು ಪರಿಗಣಿಸಿ ಮಿಕ್ಕ ವಿಧವೆಯರನ್ನು ದತ್ತಪುತ್ರನ ಬಲತಾಯಿಯರೆಂದು ಪರಿಗಣಿ– ಸಲಾಗುವುದು.

**ಭಾಗ–೬ ಪ್ರಕರಣ–೨೩ ಪುಟ–೨೮**

(೨) ಇಬ್ಬರು ಅಥವಾ ಹೆಚ್ಚು ವಿಧವೆಯರು ಜಂಟಿಯಾಗಿ ದತ್ತಕ ಸ್ವೀಕರಿಸಿದರೆ, ಅವರ ಪೈಕಿ ಮೊದಲು ವಿವಾಹವಾಗಿ ಆ ಹಿರಿಯತನವುಳ್ಳವಳು ದತ್ತಕ ಪುತ್ರನ ದತ್ತುತಾಯಿಯೆನಿಸುತ್ತಾಳೆ, ಮಿಕ್ಕವರು ಮಲತಾಯಿಯರಾಗುತ್ತಾರೆ.

(೭೬)

**೭೨. ಊರ್ಜಿತವಾದ ದತ್ತಕವನ್ನು ರದ್ದು ಪಡಿಸುವಂತಿಲ್ಲ:–**

ಊರ್ಜಿತವಾದ ರೀತಿಯಲ್ಲಿ ಘಟಿಸಿದ ಯಾವುದೇ ದತ್ತಕವನ್ನು ದತ್ತುತಂದೆ, ಅಥವಾ ತಾಯಿ ಅಥವಾ ಯಾವನೇ ವ್ಯಕ್ತಿಯು ರದ್ದುಪಡಿಸಲು ಸಾಧ್ಯವಿಲ್ಲ; ಹಾಗೆಯೇ ದತ್ತಕಪುತ್ರನು ಆತನ ದತ್ತಕ ಸ್ಥಾನ ಮಾನವನ್ನು ತ್ಯಜಿಸಿ, ಜನಿಸಿದ ಕುಟುಂಬಕ್ಕೆ ಮತ್ತೆ ಹಿಂದಿರುಗುವಂತಿಲ್ಲ.

(೭೫)

**೭೨. ಊರ್ಜಿತ ದತ್ತಕವನ್ನು ರದ್ದು ಗೊಳಿಸುವಂತಿಲ್ಲ:–**

ಊರ್ಜಿತವಾದ ರೀತಿಯಲ್ಲಿ ನಡೆಸಿದ ಯಾವುದೇ ದತ್ತಕವನ್ನು ದತ್ತು ತಂದೆಯಾಗಲಿ, ತಾಯಿಯಾಗಲಿ ಅಥವಾ ಬೇರೆ ಯಾವನೇ ವ್ಯಕ್ತಿಯಾಗಲಿ ರದ್ದುಪಡಿಸುವಂತಿಲ್ಲ; ಹಾಗೆಯೇ ದತ್ತಕ ಪುತ್ರನು ಆತನ ದತ್ತಕ ಸ್ಥಾನಮಾನವನ್ನು ತ್ಯಜಿಸಿ, ತಾನು ಹುಟ್ಟಿದ ಕುಟುಂಬಕ್ಕೆ ಹಿಂತಿರುಗುವಂತಿಲ್ಲ.

(೭೭)

**೭೩. ಕೆಲವು ಕರಾರುಗಳು ಅನೂರ್ಜಿತ:–**

ದತ್ತಕ ತೆಗೆದುಕೊಳ್ಳಬಾರದು ಎಂಬ ಅಥವಾ ದತ್ತಕ ಪುತ್ರನ ಹಕ್ಕುಗಳನ್ನು ಕುಂಠಿತಗೊಳಿಸುವ ಒಪ್ಪಂದವು ಅನೂರ್ಜಿತವಾಗುತ್ತದೆ.

(೭೬)

**೭೩. ಕೆಲವು ಕರಾರುಗಳು ಅನೂರ್ಜಿತ :–**

ದತ್ತಕ ತೆಗೆದುಕೊಳ್ಳಬಾರದು ಎಂಬ ಒಪ್ಪಂದ, ಅಥವಾ ಒಬ್ಬ ದತ್ತಕ ಪುತ್ರನ ಹಕ್ಕುಗಳನ್ನು ಕುಂಠಿತಗೊಳಿಸುವ ಒಪ್ಪಂದ ಅನೂರ್ಜಿತವಾಗುತ್ತದೆ.

(೭೮)

**ಅಧ್ಯಾಯ – ೩**

**ದತ್ತಕಗಳ ನೋಂದಣಿ ಅಥವಾ ದಾಖಲಾತಿ**

**೭೪ ದತ್ತಕಗಳ ಪುರಾವೆ ಮತ್ತು ನೋಂದಣಿ:–**

(೧) ರಾಜ್ಯ ಸರಕಾರವು ಅಧಿಕೃತ ಗೆಜೆಟ್ಟಿನಲ್ಲಿ ಪ್ರಕಟಣೆಯನ್ನು ಕೊಡುವುದರ ಮೂಲಕ, ರಾಜ್ಯದಲ್ಲಿ ಅಥವಾ ಪ್ರಕಟಣೆಯು ನಿರ್ದಿಷ್ಟಪಡಿಸುವ ಪ್ರದೇಶಗಳಲ್ಲಿ, ಈ ಭಾಗದ ಅವಕಾಶಗಳ ಪ್ರಕಾರ ನಡೆದ ಯಾವುದೇ ದತ್ತಕವು, ಸೂಕ್ತ ದಾಖಲೆಯನ್ನು ಬರೆದು ದಾಖಲೆಗಳ ನೋಂದಣಿಗೆ ಸಂಬಂಧಿಸಿದಂತೆ ಆ ಸಮಯದಲ್ಲಿ ಚಾಲ್ತಿಯಲ್ಲಿರುವ ಯಾವುದೇ ಕಾನೂನಿನ ಪ್ರಕಾರ ನೋಂದಾಯಿಸದಿದ್ದರೆ,

(೭೭)

**ಅಧ್ಯಾಯ –೩**

**ದತ್ತಕಗಳ ದಾಖಲೆ**

**೭೪. ದತ್ತಕವನ್ನು ದಾಖಲಿಸಲು ಅರ್ಜಿ:–**

ಈ ಭಾಗದ ಅವಕಾಶಗಳ ಅನ್ವಯ ಒಂದು ದತ್ತಕವನ್ನು ಮಾಡಿಕೊಂಡಾಗ, ಸಂಬಂಧಿತರು ಈ ಉದ್ದೇಶಕ್ಕಾಗಿಯೇ ನಿರ್ವಹಿಸಲಾಗುತ್ತಿರುವ ದತ್ತಕಗಳ ರಿಜಿಸ್ಟರಿನಲ್ಲಿ ದತ್ತಕವನ್ನು ದಾಖಲು ಮಾಡಬೇಕೆಂದು ಬಯಸಿದ ಪಕ್ಷದಲ್ಲಿ, ಪ್ರಾಂತ ಸರಕಾರವು ಅಧಿಕೃತ ಗೆಜೆಟ್ಟಿನಲ್ಲಿ ಪ್ರಕಟಣೆ ಕೊಟ್ಟು ನೇಮಿಸಿರುವ, ದತ್ತಕವು ನಡೆದ ಸ್ಥಳದಲ್ಲಿ ನ್ಯಾಯಾಧಿಕಾರವನ್ನುಳ್ಳ ಪ್ರಾಧಿಕಾರಕ್ಕೆ ಈ ಸಂಬಂಧವಾಗಿ ಅರ್ಜಿಯನ್ನು ಹಾಕಿಕೊಳ್ಳಬಹುದು.

**ಭಾಗ–೬**
**ಪ್ರಕರಣ–೩೦**
**ಪುಟ–೨೯**

ಊರ್ಜಿತವಾಗುವುದಿಲ್ಲ ಎಂದು ಆದೇಶಿಸಬಹುದು.

(೨) ಒಂದು ದತ್ತಕಕ್ಕೆ (೧)ನೇ ಉಪ- ಪ್ರಕರಣದ ಪ್ರಕಾರ ನೋಂದಾಯಿಸಿದ ದಾಖಲೆಯು ಪುರಾವೆಯನ್ನು ಒದಗಿಸಬೇಕಾಗಿರುವುದರಿಂದ ಅದರ ಹೊರತು ಬೇರೆ ಯಾವುದೇ ಪುರಾವೆಯು ಆ ದತ್ತಕಕ್ಕೆ ಆವಶ್ಯಕವಾಗಿರುವುದಿಲ್ಲ.

**೭೪A. 74ನೆಯ ಪ್ರಕರಣವು ಅನ್ವಯವಾಗದ ಸಂದರ್ಭಗಳಲ್ಲಿ ದತ್ತಕಗಳ ನೋಂದಣಿ:–**

೭೪ನೆಯ ಪ್ರಕರಣದ ಪ್ರಕಾರ ಯಾವುದೇ ಪ್ರಕಟಣೆಯನ್ನು ಹೊರಡಿಸಿರದಿದ್ದ ಪಕ್ಷದಲ್ಲಿ, ಈ ಭಾಗದ ಅವಕಾಶಗಳನ್ವಯ ಮಾಡಿಕೊಂಡ ಯಾವುದೇ ದತ್ತಕಕ್ಕೆ ಪುರಾವೆಯನ್ನು ಒದಗಿಸುವ ಉದ್ದೇಶದಿಂದ, ರಾಜ್ಯ ಸರಕಾರವು, ಸೂಕ್ತ ನಿಯಮಗಳನ್ನು ವಿಧಿಸಿ, ರಾಜ್ಯ ಸರಕಾರವು ಈ ಉದ್ದೇಶಕ್ಕಾಗಿಯೇ ನೇಮಿಸುವ ಪ್ರಾಧಿಕಾರವು ಈ ಸಂಬಂಧವಾಗಿ ನಿರ್ವಹಿಸುತ್ತಿರುವ ದತ್ತಕಗಳ ರಿಜಿಸ್ಟರಿನಲ್ಲಿ, ದತ್ತಕಕ್ಕೆ ಸಂಬಂಧಿಸಿದ ವಿವರಗಳನ್ನು ನಮೂದಿಸತಕ್ಕದ್ದು ಎಂದು ಹೇಳಬಹುದು. ಆ ಪ್ರಾಧಿಕಾರಕ್ಕೆ ೭೫ನೆಯ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು.

(೭೯)

**೭೫. ಅರ್ಜಿಯನ್ನು ಯಾವಾಗ ಸಲ್ಲಿಸಬೇಕು, ಮತ್ತು ಅದರಲ್ಲಿ ನಮೂದಿಸಬೇಕಾದ ಅಂಶಗಳು:–**

೭೪A ಪ್ರಕರಣದ ಪ್ರಕಾರ, ಹಾಕುವ ಅರ್ಜಿಗೆ ದತ್ತಕ ಸ್ವೀಕರಿಸುವ ವ್ಯಕ್ತಿ, ಕೊಡುವ ವ್ಯಕ್ತಿ,

(೭೮)

**೭೫. ಅರ್ಜಿಯನ್ನು ಯಾವಾಗ ಸಲ್ಲಿಸಬೇಕು, ಮತ್ತು ಅದರಲ್ಲಿ ನಮೂದಿಸಬೇಕಾದ ವಿವರಗಳು.**

ಅರ್ಜಿಗೆ ದತ್ತಕ ತೆಗೆದುಕೊಳ್ಳುತ್ತಿರುವವನು, ಕೊಡುತ್ತಿರುವವನು ಸಹಿಮಾಡಬೇಕು.

ಸಹಿ ಮಾಡಬೇಕು. ಮತ್ತು ಅರ್ಜಿಯನ್ನು ದತ್ತಕವಾದ ತೊಂಬತ್ತು ದಿನಗಳೊಳಗಾಗಿ ಸಲ್ಲಿಸಬೇಕು. ಅದರಲ್ಲಿ ಈ ಕೆಳಗಿನ ಮಾಹಿತಿ ಹಾಗೂ ವಿಧಿಸಲಾಗುವ ಇತರ ಅಂಶಗಳು ಸೇರಿರಬೇಕು.

(i) ದತ್ತಕದ ತಾರೀಕು;

(ii) ದತ್ತಕದ ಸ್ವರೂಪ;

(iii) ದತ್ತಕ ಸ್ವೀಕರಿಸುವ ವ್ಯಕ್ತಿಯ/ ವ್ಯಕ್ತಿಗಳ ಹೆಸರು/ಹೆಸರುಗಳು, ಮತ್ತು ವಯಸ್ಸು/ ವಯಸ್ಸುಗಳು

(iv) ದತ್ತಕ ತಂದೆಯು ವಿವಾಹಿತನಾಗಿದ್ದರೆ, ಅವನ ಪತ್ನಿಯ ಹೆಸರು; ಅವನು ವಿಧುರನಾಗಿದ್ದರೆ ಪೂರ್ವಭಾವಿ – ಮರಣಹೊಂದಿದ ಪತ್ನಿಯ ಹೆಸರು; ಮೊದಲೇ ಗತಿಸಿರುವ ಇಬ್ಬರು ಅಥವಾ ಹೆಚ್ಚು ಜನ ಪತ್ನಿಯರಿದ್ದರೆ, ವ್ಯಕ್ತಿಯನ್ನು ಅವರು ಮದುವೆಮಾಡಿಕೊಂಡ ತಾರೀಕಿನ ಅನುಕ್ರಮದಲ್ಲಿ ಅವರ ಹೆಸರುಗಳು; ಮತ್ತು ದತ್ತುತಾಯಿ ಆದ ಪತ್ನಿಯ ಅಥವಾ ಪೂರ್ವಭಾವೀ ಮರಣಹೊಂದಿದ ಪತ್ನಿಯ ಹೆಸರು.

(v) ದತ್ತಕ ಸ್ವೀಕರಿಸುವ ವ್ಯಕ್ತಿಯು ಮಹಿಳೆಯಾದರೆ, ಆಕೆಯ ಪತಿಯ ಹೆಸರು ಮತ್ತು ಆಕೆಯ ಸಹ–ಪತ್ನಿಯರ ಅಥವಾ ಸಹ–ವಿಧವೆಯರ ಹೆಸರುಗಳಿದ್ದರೆ ಅವು;

(vi) ದತ್ತಕ ಕೊಡುತ್ತಿರುವ ವ್ಯಕ್ತಿಯ ಹೆಸರು ಮತ್ತು ವಯಸ್ಸು;

(vii) ದತ್ತಕ ಬಾಲಕನ ಹೆಸರು, ಅವನು ಜನಿಸಿದ ಕುಟುಂಬದಲ್ಲಿದ್ದಂತೆ;

(viii) ದತ್ತಕವಾದ ಬಾಲಕನ ವಯಸ್ಸು;

(ix) ದತ್ತಕವಾದ ಬಾಲಕನ ಹೆಸರು ದತ್ತಕ ಸ್ವೀಕಾರ ಮಾಡಿದ

ಅರ್ಜಿಯನ್ನು ದತ್ತಕ ನಡೆದ ತೊಂಬತ್ತು ದಿನಗಳೊಳಗಾಗಿ ಸಲ್ಲಿಸಬೇಕು. ಅರ್ಜಿಯಲ್ಲಿರುವ ಈ ಕೆಳಗಿನ ಹಾಗೂ ವಿಧಿಸಲಾಗುವ ಇತರ ಸಂಗತಿಗಳು ನಮೂದಾಗಿರಬೇಕು:–

ಭಾಗ–೬
ಪ್ರಕರಣ–೩೧
ಪುಟ–೨೯

(i) ದತ್ತಕದ ತಾರೀಕು :

(ii) ದತ್ತಕದ ಸ್ವರೂಪ

(iii) ದತ್ತಕ ಸ್ವೀಕರಿಸುತ್ತಿರುವ ವ್ಯಕ್ತಿಯ/ ವ್ಯಕ್ತಿಗಳ ಹೆಸರು/ ಹೆಸರುಗಳು ಮತ್ತು ವಯಸ್ಸು/ವಯಸ್ಸುಗಳು.

(iv) ದತ್ತಕ ಸ್ವೀಕರಿಸುವ ವ್ಯಕ್ತಿಯು ವಿವಾಹಿತನಾಗಿದ್ದರೆ ಅವನ ಪತ್ನಿಯ ಹೆಸರು; ಅವನು ವಿಧುರನಾಗಿದ್ದರೆ ಪೂರ್ವಭಾವಿ – ಮರಣ ಹೊಂದಿರುವ ಪತ್ನಿಯ ಹೆಸರು; ಪೂರ್ವಭಾವಿ – ಮರಣ ಹೊಂದಿದ ಇಬ್ಬರು ಅಥವಾ ಹೆಚ್ಚುಜನ ಪತ್ನಿಯರಿದ್ದರೆ, ವ್ಯಕ್ತಿಗೆ ಅವರು ಮದುವೆಯಾದ ತಾರೀಕುಗಳ ಅನುಕ್ರಮದಲ್ಲಿ ಅವರ ಹೆಸರುಗಳು; ಮತ್ತು ದತ್ತುತಾಯಿ ಆದ ಪತ್ನಿಯ ಅಥವಾ ಪೂರ್ವಭಾವಿ ಮರಣ ಹೊಂದಿದ ಪತ್ನಿಯ ಹೆಸರು;

(v) ದತ್ತಕ ಸ್ವೀಕರಿಸುತ್ತಿರುವ ವ್ಯಕ್ತಿ ಮಹಿಳೆಯಾದರೆ ಆಕೆಯ ಪತಿಯ ಹೆಸರು ಮತ್ತು ಆಕೆಯ ಸಹಪತ್ನಿಯರ ಅಥವಾ ಸಹ–ವಿಧವೆಯರ ಹೆಸರುಗಳಿದ್ದರೆ, ಅವು;

(vi) ದತ್ತಕ ಕೊಡುತ್ತಿರುವ ವ್ಯಕ್ತಿಯ ಹೆಸರು ಮತ್ತು ವಯಸ್ಸು;

(vii) ದತ್ತಕವಾದ ಬಾಲಕನ ಹೆಸರು, ಅವನ ಜನನವಾದ ಕುಟುಂಬದಲ್ಲಿದ್ದಂತೆ;

(viii) ದತ್ತಕವಾದ ಬಾಲಕನ ವಯಸ್ಸು;

ಕುಟುಂಬದಲ್ಲಿರುವಂತೆ.

(೮೦)

**೭೬. ದತ್ತಕದ ದಾಖಲೆ:–**

೭೪A. ಪ್ರಕರಣದ ಪ್ರಕಾರ ನೇಮಿತನಾದ ಅಧಿಕಾರಿಗೆ, ದತ್ತಕ ಪಡೆಯುವ ಹಾಗೂ ದತ್ತಕ ಕೊಡುವ ವ್ಯಕ್ತಿಗಳು ಸಹಿಮಾಡಿದ್ದರೆ, ಹೇಳಿರುವ ರೀತಿಯಲ್ಲಿ ದತ್ತಕವು ನಡೆದಿದೆ ಎಂದು ಮನವರಿಕೆಯಾದ ಪಕ್ಷದಲ್ಲಿ, ಅವನು ದತ್ತಕದ ರಿಜಿಸ್ಟರಿನಲ್ಲಿ ದತ್ತಕವನ್ನು ದಾಖಲು ಮಾಡುತ್ತಾನೆ.

(೮೧)

**ಭಾಗ – IV**

**ಅಪ್ರಾಪ್ತವಯಸ್ಕತೆ ಮತ್ತು ಪಾಲಕತ್ವ**

೭೭ ವಿವರಣೆಗಳು – ಈ ಭಾಗದಲ್ಲಿ (ಅ) "ಅಪ್ರಾಪ್ತವಯಸ್ಕ" (ಮೈನರ್) ಎಂದರೆ ವಯಸ್ಸು ಹದಿನೆಂಟು ವರ್ಷ ತುಂಬಿರದವನು.

(ಆ) "ಸಹಜ ಪಾಲಕ" ಎಂದರೆ ೭೮ನೆಯ ಪ್ರಕರಣದಲ್ಲಿ ಹೇಳಿರುವ ಪಾಲಕರ ಪೈಕಿ ಯಾರಾದರೊಬ್ಬರು. ಆದರೆ –

(i) ಅಪ್ರಾಪ್ತವಯುಸ್ಕನ ತಂದೆಯು ಉಯಿಲಿನ ಮೂಲಕ ನೇಮಿಸಿದವನು;

(ii) ನ್ಯಾಯಾಲಯವು ನೇಮಿಸಿದ ಅಥವಾ ಘೋಷಿಸಿದ ವ್ಯಕ್ತಿ;

(iii) ಯಾವುದೇ ಪಾಲಿತರ ನ್ಯಾಯಾಲಯಕ್ಕೆ (Court of Wards) ಸಂಬಂಧಿಸಿದ ಯಾವುದೇ ಶಾಸನದ ಪ್ರಕಾರ ಅಧಿಕಾರ ಪಡೆದ ವ್ಯಕ್ತಿ – ಇವರನ್ನು ಅದು ಒಳಗೊಳ್ಳುವುದಿಲ್ಲ.

(ix) ದತ್ತಕ ಬಾಲಕನ ಹೆಸರು, ದತ್ತಕ ಸ್ವೀಕೃತ ಕುಟುಂಬದಲ್ಲಿರುವಂತೆ.

(೭೯)

**೭೬. ದತ್ತಕದ ದಾಖಲಾತಿ:–**

೭೪A. ಪ್ರಕರಣದ ಅನ್ವಯ ನೇಮಿತನಾದ ಅಧಿಕಾರಿಗೆ, ದತ್ತಕ ಪಡೆಯುವ ವ್ಯಕ್ತಿ ಹಾಗೂ ದತ್ತಕ ನೀಡುವ ವ್ಯಕ್ತಿ ಇಬ್ಬರೂ ಸಹಿಮಾಡಿದ್ದರೆ, ದತ್ತಕವು ವಿಧಿಸಿದ ರೀತಿಯಲ್ಲಿ ನಡೆದಿದೆ ಎಂದು ಮನವರಿಕೆಯಾದರೆ, ಅವನು ದತ್ತಕದ ರಿಜಿಸ್ಟರಿನಲ್ಲಿ ದತ್ತಕವನ್ನು ದಾಖಲು ಮಾಡುತ್ತಾನೆ.

(೮೦)

**ಭಾಗ – IV**

**ಅಪ್ರಾಪ್ತವಯಸ್ಕತೆ ಮತ್ತು ಪಾಲಕತ್ವ**

೭೭. ವಿವರಣೆಗಳು – ಈ ಭಾಗದಲ್ಲಿ –

(ಅ) "ಅಪ್ರಾಪ್ತವಯಸ್ಕ "(ಮೈನರ್) ಎಂದರೆ ವಯುಸ್ಸು ಹದಿನೆಂಟು ವರ್ಷ ತುಂಬಿರದವನು;

**ಭಾಗ–೫ ಪ್ರಕರಣ–೧ ಪುಟ–೩೩**

(ಆ) "ಸಹಜ ಪಾಲಕ" ಎಂದರೆ ೭೮ನೆಯ ಪ್ರಕರಣದಲ್ಲಿ ಹೇಳಿರುವ ಪಾಲಕರ ಪೈಕಿ ಯಾರೊಬ್ಬರು. ಆದರೆ –

(i) ಅಪ್ರಾಪ್ತ ವಯಸ್ಕನ ತಂದೆಯು ಉಯಿಲು ಮೂಲಕ ನೇಮಿಸಿ ದವನು;

(ii) ಒಂದು ನ್ಯಾಯಾಲಯವು ನೇಮಿಸಿದ ಅಥವಾ ಘೋಷಿಸಿದ ವ್ಯಕ್ತಿ; ಅಥವಾ ಯಾವುದೇ ಪಾಲಿತರ ನ್ಯಾಯಾಲಯಕ್ಕೆ (Court of Wards) ಸಂಬಂಧಿಸಿದ ಯಾವುದೇ ಶಾಸನದ ಪ್ರಕಾರ ಅಧಿಕಾರ ಪಡೆದವ್ಯಕ್ತಿ– ಇವರನ್ನು ಅದು ಒಳಗೊಳ್ಳುವುದಿಲ್ಲ.

(೮೨)

**೭೮. ಒಬ್ಬ ಹಿಂದೂ ಅವಯಸ್ಕನ ಸಹಜ ಪಾಲಕರು–**
ಒಬ್ಬ ಮೈನರನಿಗೆ ಹಾಗೂ ಅವನ ಆಸ್ತಿಗೆ ಸಂಬಂಧಿಸಿದಂತೆ ಸಹಜ ಪಾಲಕರು ಯಾರೆಂದರೆ–

(ಅ) ಬಾಲಕ ಅಥವಾ ಅವಿವಾಹಿತ ಬಾಲಿಕೆಯರ ವಿಷಯದಲ್ಲಿ ತಂದೆ, ಅವನ ನಂತರ ತಾಯಿ, ಮೂರು ವರ್ಷ ತುಂಬಿರದ ಅವಯಸ್ಕ ಮಗುವು ಸಾಮಾನ್ಯವಾಗಿ ತಾಯಿಯ ಸ್ವಾಧೀನದಲ್ಲಿರುತ್ತದೆ;

(ಆ) ಕಾನೂನುಬಾಹಿರನಾದ ಬಾಲಕ ಅಥವಾ ಕಾನೂನುಬಾಹಿರ ಅವಿವಾಹಿತ ಬಾಲಿಕೆ ಇವರ ವಿಷಯದಲ್ಲಿ ತಾಯಿ, ಮತ್ತು ಆಕೆಯ ನಂತರ ತಂದೆ,

(ಇ) ವಿವಾಹಿತ ಬಾಲಿಕೆಯ ವಿಷಯದಲ್ಲಿ ಪತಿ.

ಯಾವ ವ್ಯಕ್ತಿಯೂ ಕೆಳಕಂಡ ಸಂದರ್ಭಗಳಲ್ಲಿ, ಈ ಪ್ರಕರಣದ ಅವಕಾಶಗಳನ್ವಯ ಅವಯಸ್ಕನ ಸಹಜ ಪಾಲಕನಾಗಿ ವರ್ತಿಸಲು ಅರ್ಹತೆ ಪಡೆದಿರುವುದಿಲ್ಲ;

(ಅ) ಅವನು ಹಿಂದೂ ಆಗಿ ಉಳಿಯದಿದ್ದರೆ ;

(ಆ) 110ನೇ ಪ್ರಕರಣದ (೧)ನೇ ಉಪ–ಪ್ರಕರಣದಲ್ಲಿ ನಿರೂಪಿಸಿರುವ ಯಾವುದಾದರೂ ವಿಧಾನದಂತೆ ಅವನು ಸಂಪೂರ್ಣವಾಗಿ ಮತ್ತು ಅಂತಿಮವಾಗಿ ಪ್ರಾಪಂಚಿಕ ವ್ಯವಹಾರವನ್ನು ಪರಿತ್ಯಾಗ ಮಾಡಿದ್ದರೆ.

(೮೩)

(೮೧)

**೭೮. ಹಿಂದೂ ಅಪ್ರಾಪ್ತವಯಸ್ಕನ ಸಹಜ ಪಾಲಕರು:–**

ಒಬ್ಬ ಅಪ್ರಾಪ್ತ ವಯಸ್ಕನಿಗೆ ಮತ್ತು ಅವನ ಆಸ್ತಿಗೆ ಸಂಬಂಧಿಸಿದಂತೆ ಹಿಂದೂ ಮೈನರನ ಸಹಜ ಪಾಲಕರು ಯಾರೆಂದರೆ– ಭಾಗ-೫ ಪ್ರಕರಣ-೪ ಪುಟ-೨೨

(ಅ) ಬಾಲಕ ಅಥವಾ ಅವಿವಾಹಿತ ಬಾಲಿಕೆಯರ ವಿಷಯದಲ್ಲಿ – ತಂದೆ, ಅವನ ನಂತರ ತಾಯಿ. ಮೂರುವರ್ಷ ತುಂಬಿರದ ಅಪ್ರಾಪ್ತ ವಯಸ್ಕ ಮಗುವು ಸಾಮಾನ್ಯವಾಗಿ ತಾಯಿಯ ಸ್ವಾಧೀನದಲ್ಲಿರುತ್ತದೆ.

(ಆ) ಕಾನೂನುಬಾಹಿರನಾದ ಬಾಲಕ ಅಥವಾ ಕಾನೂನುಬಾಹಿರ ಅವಿವಾಹಿತ ಬಾಲಿಕೆ ಇವರ ವಿಷಯದಲ್ಲಿ ತಾಯಿ, ಆಕೆಯ ನಂತರ ತಂದೆ,

(ಇ) ವಿವಾಹಿತ ಬಾಲಿಕೆಯ ವಿಷಯದಲ್ಲಿ ಪತಿ,

ಯಾವ ವ್ಯಕ್ತಿಯೂ ಈ ಕೆಳಕಂಡ ಸಂದರ್ಭಗಳಲ್ಲಿ, ಈ ಪ್ರಕರಣದ ಅವಕಾಶಗಳ ಅನ್ವಯ ಅಪ್ರಾಪ್ತ ವಯಸ್ಕನ ಸಹಜಪಾಲಕರಾಗಿ ವರ್ತಿಸಲು ಅರ್ಹತೆ ಪಡೆದಿರುವುದಿಲ್ಲ.

(ಅ) ಅವನು ಹಿಂದೂ ಆಗಿ ಉಳಿಯದಿದ್ದರೆ ;

(ಆ) ೧೧೦ನೇ ಪ್ರಕರಣದ (೧)ನೇ ಉಪ–ಪ್ರಕರಣದಲ್ಲಿ ನಿರೂಪಿಸಿರುವ ಯಾವುದೇ ವಿಧಾನದಂತೆ ಅವನು ಸಂಪೂರ್ಣವಾಗಿ ಮತ್ತು ಅಂತಿಮವಾಗಿ ಪ್ರಾಪಂಚಿಕ ವ್ಯವಹಾರವನ್ನು ಪರಿತ್ಯಾಗ ಮಾಡಿದ್ದರೆ.

**೭೯. ದತ್ತಕ ಪುತ್ರನ ಸಹಜ ಪಾಲಕತ್ವ:–**

ದತ್ತಕನಾದ ಒಬ್ಬ ಅವಯಸ್ಕ ಬಾಲಕನ ಸಹಜ ಪಾಲಕತ್ವವು, ದತ್ತಕವಾದ ಮೇಲೆ, ಅವನು ಜನಿಸಿದ ಕುಟುಂಬದಿಂದ, ದತ್ತಕನಾಗಿ ಬಂದ ಕುಟುಂಬಕ್ಕೆ ಬರುತ್ತದೆ.

(೮೪)

**೮೦ ಸಹಜ ಪಾಲಕನ ಅಧಿಕಾರ :–**

(೧) ಹಿಂದೂ ಅಪ್ರಾಪ್ತವಯಸ್ಕನ ಸಹಜ ಪಾಲಕನಿಗೆ, ಈ ಪ್ರಕರಣದ ಅವಕಾಶಗಳಿಗೆ ಒಳಪಟ್ಟು, ಅವಯಸ್ಕನ ಪ್ರಯೋಜನಕ್ಕಾಗಿ ಅಗತ್ಯವಾದುದು ಅಥವಾ ನ್ಯಾಯಯುತವಾದುದು, ಸೂಕ್ತವಾದುದಾಗಿರುವ; ಅಥವಾ ಅವಯಸ್ಕನ ಆಸ್ತಿಯ ಸ್ವಾಧೀನತೆ, ರಕ್ಷಣೆ ಅಥವಾ ಲಾಭಗಳಿಗೆ ಸೂಕ್ತವಾದುದು ಎಂದು ಭಾವಿಸಿರುವ ಎಲ್ಲಾ ಕೆಲಸಗಳನ್ನು ಮಾಡಲು ಅಧಿಕಾರವಿರುತ್ತದೆ; ಆದರೆ ಯಾವುದೇ ಸಂದರ್ಭದಲ್ಲಿಯೂ ಪಾಲಕನು ಅಪ್ರಾಪ್ತವಯಸ್ಕನನ್ನು ಒಂದು ವೈಯಕ್ತಿಕ ಕರಾರಿಗೆ ಬದ್ಧಗೊಳಿಸಲು ಸಾಧ್ಯವಿಲ್ಲ.

(೨) ನ್ಯಾಯಾಲಯದಿಂದ ಪೂರ್ವಭಾವಿ ಅನುಮತಿಯನ್ನು ಪಡೆದಹೊರತು, ಸಹಜ ಪಾಲಕನು–

(ಅ) ಅಪ್ರಾಪ್ತ ವಯಸ್ಕನ ಸ್ಥಿರಾಸ್ತಿಯ ಯಾವುದೇ ಭಾಗವನ್ನು ಅಡಮಾನವಿಡುವಂತಿಲ್ಲ, ವಹಿಸುವಂತಿಲ್ಲ, ಮಾರಾಟ, ಉಡುಗೊರೆ, ವಿನಿಮಯ ಅಥವಾ ಬೇರಾವುದೇ ವಿಧಾನದಿಂದ ಪರಭಾರೆ ಮಾಡುವಂತಿಲ್ಲ.

**೭೯. ದತ್ತಕ ಪುತ್ರನ ಸಹಜ ಪಾಲಕತ್ವ:–**

ದತ್ತಕನಾದ ಒಬ್ಬ ಅಪ್ರಾಪ್ತ ವಯಸ್ಕ ಬಾಲಕನ ಸಹಜ ಪಾಲಕತ್ವವು, ದತ್ತಕವಾದ ಮೇಲೆ ಅವನು ಜನಿಸಿದ ಕುಟುಂಬದಿಂದ ದತ್ತಕವಾಗಿ ಬಂದ ಕುಟುಂಬಕ್ಕೆ ಬರುತ್ತದೆ.

**ಭಾಗ–೫ ಪ್ರಕರಣ–೫ ಪುಟ–೨**

(೮೩)

**೮೦. ಸಹಜ ಪಾಲಕನ ಅಧಿಕಾರ :–**

(೧) ಹಿಂದೂ ಅಪ್ರಾಪ್ತವಯಸ್ಕನ ಸಹಜ ಪಾಲಕನಿಗೆ, ಈ ಪ್ರಕರಣದ ಅವಕಾಶಗಳಿಗೆ ಒಳಪಟ್ಟು, ಅವನ ಪ್ರಯೋಜನಕ್ಕಾಗಿ ಅಗತ್ಯ, ನ್ಯಾಯಯುತ, ಸೂಕ್ತವೆನಿಸಿರುವ ಅಥವಾ ಅವನ ಆಸ್ತಿಯ ಸ್ವಾಧೀನತೆ, ರಕ್ಷಣೆ ಅಥವಾ ಲಾಭಗಳಿಗೆ ಸೂಕ್ತವಾದುದೆಂದು ಭಾವಿಸಿರುವ ಎಲ್ಲಾ ಕೆಲಸಗಳನ್ನು ಮಾಡಲು ಅಧಿಕಾರವಿರುತ್ತದೆ. ಆದರೆ ಯಾವುದೇ ಸಂದರ್ಭದಲ್ಲಿಯೂ ಪಾಲಕನು ಅಪ್ರಾಪ್ತವಯಸ್ಕನನ್ನು ಒಂದು ವೈಯಕ್ತಿಕ ಕರಾರಿಗೆ ಬದ್ಧಗೊಳಿಸಲು ಸಾಧ್ಯವಿಲ್ಲ.

(೨) ನ್ಯಾಯಾಲಯದಿಂದ ಪೂರ್ವ ಭಾವೀ ಅನುಮತಿಯನ್ನು ಪಡೆದ ಹೊರತು ಸಹಜ ಪಾಲಕನು–

(ಅ) ಅಪ್ರಾಪ್ತ ವಯಸ್ಕನ ಸ್ಥಿರಾಸ್ತಿಯ ಯಾವುದೇ ಭಾಗವನ್ನು ಅಡಮಾನ ಮಾಡುವಂತಿಲ್ಲ, ಮಾರಾಟ, ಉಡುಗೊರೆ, ವಿನಿಮಯ ಅಥವಾ ಬೇರಾವುದೇ ವಿಧಾನದಿಂದ ಪರಭಾರೆ ಮಾಡುವಂತಿಲ್ಲ.

(ಆ) ಆ ಸ್ಥಿರಾಸ್ತಿಯ ಯಾವುದೇ ಭಾಗವನ್ನು ಐದು ವರ್ಷ ಮೀರಿದ ಅವಧಿಗೆ

(ಆ) ಆ ಸ್ಥಿರಾಸ್ತಿಯ ಯಾವುದೇ ಭಾಗವನ್ನು, ಐದು ವರ್ಷಗಳನ್ನು ಮೀರಿದ ಅವಧಿಗೆ ಅಥವಾ ಅಪ್ರಾಪ್ತ ವಯಸ್ಕನು ವಯಸ್ಕನಾಗುವ ದಿನದಿಂದ ಒಂದು ವರ್ಷದಿಂದಾಚೆಗೆ ವ್ಯಾಪಿಸುವ ಕಾಲಾವಧಿಗೆ ಭೋಗ್ಯಕ್ಕೆ ಹಾಕುವಂತಿಲ್ಲ.

(೩) ಉಪ–ಪ್ರಕರಣ (೧) ಅಥವಾ ಉಪ–ಪ್ರಕರಣ (೨)ಗಳನ್ನು ಉಲ್ಲಂಘಿಸಿ ಒಬ್ಬ ಸಹಜ ಪಾಲಕನು ಸ್ಥಿರಾಸ್ತಿಯನ್ನು ಯಾವುದೇ ರೀತಿಯಲ್ಲಿ ವಿಲೇವಾರಿ ಮಾಡಿದ್ದರೆ, ಅಪ್ರಾಪ್ತ ವಯಸ್ಕನಾಗಲಿ ಅಥವಾ ; ಆ ವಿಲೇವಾರಿಯಿಂದ ಹಾನಿಗೊಳಗಾದ ಯಾವ ವ್ಯಕ್ತಿಯೇ ಆಗಲಿ ಕೇಳಿದರೆ ಆ ವಿಲೇವಾರಿಯನ್ನು ರದ್ದುಪಡಿಸಲಾಗುತ್ತದೆ.

(೪) ತುರ್ತು ಅಗತ್ಯ ಅಥವಾ ಅವಯಸ್ಕನಿಗೆ ಸ್ಪಷ್ಟವಾಗಿ ಕಂಡುಬರುವ ಪ್ರಯೋಜನ ವಿರುವುದಾದರೆ ಹೊರತು, (೨)ನೆಯ ಉಪ–ಪ್ರಕರಣದಲ್ಲಿ ಹೇಳಿರುವ ಯಾವುದೇ ಕೆಲಸವಮಾಡಲು ನ್ಯಾಯಾಲಯವು ಅನುಮತಿ ನೀಡುವುದಿಲ್ಲ.

(೫) ೧೮೯೦ರ ಪಾಲಕರು ಮತ್ತು ಪಾಲಿತರ ಶಾಸನ (೧೮೯೦ರ viii)ವು (೨)ನೆಯ ಉಪ– ಪ್ರಕರಣದ ಪ್ರಕಾರ, ಅರ್ಜಿಯನ್ನು ಎಲ್ಲಾ ದೃಷ್ಟಿಗಳಿಂದಲೂ ಅದು ಆ ಶಾಸನದ ೨೯ನೆಯ ಪ್ರಕರಣದನ್ವಯ ನ್ಯಾಯಾಲಯದ ಅನುಮತಿಯನ್ನು ಪಡೆಯುವುದ ಕ್ಕಾಗಿ ಮನವಿಯೆಂಬಂತೆ ಪರಿಗಣಿಸುತ್ತದೆ. ಮತ್ತು ಅದಕ್ಕೆ ಅನ್ವಯಿಸುತ್ತದೆ. ವಿಶೇಷವಾಗಿ –

(ಅ) ಅರ್ಜಿಗೆ ಸಂಬಂಧಿಸಿದಂತೆ ಅಥವಾ ಅವನು ವಯಸ್ಕನಾಗುವ ದಿನದಿಂದ ಒಂದು ವರ್ಷದಿಂದಾಚೆಗೆ ವ್ಯಾಪಿಸುವ ಅವಧಿಗೆ ಭೋಗ್ಯಕ್ಕೆ ಹಾಕುವಂತಿಲ್ಲ.

(೩) (೧)ಮತ್ತು (೨)ನೆಯ ಉಪ–ಪ್ರಕರಣಗಳನ್ನು ಉಲ್ಲಂಘಿಸಿ ಒಬ್ಬ ಸಹಜ ಪಾಲಕನು ಅಪ್ರಾಪ್ತ ವಯಸ್ಕನ ಸ್ಥಿರಾಸ್ತಿಯನ್ನು ಯಾವುದೇ ರೀತಿಯಲ್ಲಿ ವಿಲೇವಾರಿ ಮಾಡಿದ್ದರೆ, ಅದರಿಂದಾಗಿ ಅವಯಸ್ಕನಾಗಲಿ ಹಾನಿಗೊಳಗಾದ ಯಾವ ವ್ಯಕ್ತಿಯೇ ಆಗಲಿ ಕೇಳಿದಾಗ ಆ ವಿಲೇವಾರಿಯನ್ನು ರದ್ದುಪಡಿಸ ಲಾಗುತ್ತದೆ.

(೪) ತುರ್ತು ಅಗತ್ಯವಿರುವುದಾದರೆ ಅಥವಾ ಅವಯಸ್ಕನಿಗೆ ಸ್ಪಷ್ಟವಾಗಿ ಕಾಣುವ ಪ್ರಯೋ ಜನವಿರುವುದಾದರೆ ಹೊರತು, (೨)ನೆಯ ಉಪ–ಪ್ರಕರಣದಲ್ಲಿ ಹೇಳಿರುವ ಯಾವುದೇ ಕೆಲಸ ಮಾಡಲು ನ್ಯಾಯಾಲಯವು ಅನುಮತಿ ನೀಡುವುದಿಲ್ಲ.

(೫) ೧೮೯೦ರ ಪಾಲಕರು ಮತ್ತು ಪಾಲಿತರ ಶಾಸನ (೧೮೯೦ರ viii)ವು (೨)ನೆಯ ಉಪ–ಪ್ರಕರಣದ ಪ್ರಕಾರ ಅರ್ಜಿಯನ್ನು ಅದು ಎಲ್ಲಾ ದೃಷ್ಟಿಗಳಿಂದಲೂ ಆ ಶಾಸನದ ೨೯ನೆಯ ಪ್ರಕರಣದನ್ವಯ ನ್ಯಾಯಾಲಯದ ಅನುಮತಿಯನ್ನುಪಡೆಯುವುದಕ್ಕಾಗಿ ಮನವಿ ಯೆಂಬಂತೆ ಪರಿಗಣಿಸುತ್ತದೆ, ಮತ್ತು ಅದಕ್ಕೆ ಅನ್ವಯಿಸುತ್ತದೆ, ವಿಶೇಷವಾಗಿ–

(ಅ) ಅರ್ಜಿಗೆ ಸಂಬಂಧಿಸಿದಂತೆ ವಿಚಾರಣೆಯು, ಆ ಶಾಸನದ 4A

ವಿಚಾರಣೆಯು, ಆ ಶಾಸನದ ೪A ಪ್ರಕರಣದ ಅರ್ಥವ್ಯಾಪ್ತಿಯೊಳಗೆ ನಡೆಸಿದ ವಿಚಾರಣೆಯೆಂದು ಭಾವಿಸಲಾಗುತ್ತದೆ.

(ಆ) ನ್ಯಾಯಾಲಯವು ಆ ಶಾಸನದಲ್ಲಿ ನಿರೂಪಿತವಾದ ವಿಚಾರಣಾ ಕ್ರಮವನ್ನು ಪಾಲಿಸುತ್ತದೆ. ಅಲ್ಲಿಯ ೩೧ನೆಯ ಪ್ರಕರಣದ (೨), (೩), (೪) ಉಪ–ಪ್ರಕರಣಗಳಲ್ಲಿ ನಿರ್ದಿಷ್ಟ ಪಡಿಸಿದ ಅಧಿಕಾರಗಳನ್ನು ಪಡೆದಿರುತ್ತದೆ.

(ಇ) ಈ ಪ್ರಕರಣದ (೨) ನೆಯ ಉಪ–ಪ್ರಕರಣದಲ್ಲಿ ಹೇಳಿರುವ ಯಾವುದೇ ಕ್ರಮಕೈಗೊಳ್ಳಲು ಸಹಜ ಪಾಲಕನಿಗೆ ನ್ಯಾಯಾಲಯವು ಅನುಮತಿಯನ್ನು ನಿರಾಕರಿಸಿದಾಗ, ಅದರ ಮೇಲೆ ಹೈಕೋರ್ಟಿನಲ್ಲಿ (ಉಚ್ಚ ನ್ಯಾಯಾಲಯದಲ್ಲಿ) ಅಪೀಲು ಮಾಡಬಹುದು.

(ಈ) ಈ ಪ್ರಕರಣದಲ್ಲಿ "ನ್ಯಾಯಾಲಯ" ಎನ್ನುವುದು, ಅರ್ಜಿಯನ್ನು ಹಾಕಲಾಗಿರುವ ಸ್ಥಿರಾಸ್ತಿಯು ಅಥವಾ ಅದರ ಭಾಗವು ಎಲ್ಲಿದೆಯೋ ಆ ಸ್ಥಳೀಯ ಎಲ್ಲೆಯೊಳಗಿನ ನ್ಯಾಯಾಧಿಕಾರ ವುಟ್ಟ ಜಿಲ್ಲಾ ನ್ಯಾಯಾಲಯ ಅಥವಾ ೧೮೯೦ರ ಪಾಲಕರು ಮತ್ತು ಪಾಲಿತರ ಶಾಸನ (೧೮೯೦ ರviii)ದ ೪A ಪ್ರಕರಣದ ಪ್ರಕಾರ ಅಧಿಕಾರ ಪಡೆದ ನ್ಯಾಯಾಲಯ.

ಪ್ರಕರಣದ ಅರ್ಥವ್ಯಾಪ್ತಿಯೊಳಗೆ ನಡೆಸಿದ ವಿಚಾರಣೆಯೆಂಬಂತೆ ಭಾವಿಸಲಾಗುತ್ತದೆ.

(ಆ) ನ್ಯಾಯಾಲಯವು ಆ ಶಾಸನದಲ್ಲಿ ನಿರೂಪಿತವಾದ, ಅಲ್ಲಿಯ ೩೧ನೇ ಪ್ರಕರಣದ (೨), (೩) ಮತ್ತು (೪)ನೆಯ ಉಪ–ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಕ್ರಮದಲ್ಲಿ ವಿಚಾರಣೆ ನಡೆಸುತ್ತದೆ, ಆ ಅಧಿಕಾರಗಳನ್ನು ಪಡೆದಿರುತ್ತದೆ.

(ಇ) ಈ ಪ್ರಕರಣದ (೨)ನೆಯ ಉಪ–ಪ್ರಕರಣದಲ್ಲಿ ಹೇಳಿರುವ ಯಾವುದೇ ಕ್ರಮ ಕೈಗೊಳ್ಳಲು ಸಹಜ ಪಾಲಕನಿಗೆ ನ್ಯಾಯಾಲಯವು ಅನುಮತಿಯನ್ನು ನಿರಾಕರಿಸಿದಾಗ, ಅದರ ಮೇಲೆ ಹೈಕೋರ್ಟಿನಲ್ಲಿ ಅಪೀಲು ಮಾಡಬಹುದು.

(ಈ) ಈ ಪ್ರಕರಣದಲ್ಲಿ "ನ್ಯಾಯಾಲಯ" ಎಂದರೆ ಅರ್ಜಿಯನ್ನು ಹಾಕಲಾಗಿರುವ ಸ್ಥಿರಾಸ್ತಿಯ ಅಥವಾ ಅದರ ಭಾಗವು ಎಲ್ಲಿದೆಯೋ ಆ ಸ್ಥಳೀಯ ಎಲ್ಲೆಯೊಳಗಿನ ನ್ಯಾಯಾಧಿಕಾರವುಳ್ಳ ಜಿಲ್ಲಾ ನ್ಯಾಯಾಲಯ ಅಥವಾ ೧೮೯೦ರ ಪಾಲಕರು ಮತ್ತು ಪಾಲಿತರ ಶಾಸನ (೧೮೯೦ರ viii)ದ ೪A ಪ್ರಕರಣದ ಪ್ರಕಾರ ಅಧಿಕಾರ ಪಡೆದ ನ್ಯಾಯಾಲಯವಾಗಿರುತ್ತದೆ.

(೮೫)

**೮೧. ಸಹಜಪಾಲಕನು ಅಧಿಕಾರವನ್ನು ಹಿಂದಕ್ಕೆ ಪಡೆಯುವುದು :-**

ಹಿಂದೂ ಅಪ್ರಾಪ್ತವಯಸ್ಕನ ಪಾಲಕನು ಅವನ ಹೊಣೆಯನ್ನು ಹೊರುವಂತೆ ಬೇರೊಬ್ಬ ವ್ಯಕ್ತಿಗೆ ಅಧಿಕಾರ ಹೊರಿಸಿದ್ದರೆ ಆ ಅಧಿಕಾರವನ್ನು ಹಿಂತೆಗೆದುಕೊಳ್ಳ ಬಹುದು;

(ಅ) ಹಾಗೆ ಹಿಂತೆಗೆದುಕೊಳ್ಳುವುದು ಅಪ್ರಾಪ್ತವಯಸ್ಕನ ಹಿತಾಸಕ್ತಿಗಳಿಗೆ ಅನುಗುಣವಾಗಿರದಿದ್ದರೆ;

(ಆ) ಸಹಜಪಾಲಕನು ಹಿಂದುವಾಗಿ ಉಳಿಯದಿದ್ದರೆ; ಅಥವಾ

(ಇ) ಬೇರೆ ಯಾವುದೇ ಸೂಕ್ತ ಕಾರಣಕ್ಕಾಗಿ ಹಿಂತೆಗೆದುಕೊಳ್ಳುವುದು ಅನಪೇಕ್ಷಣೀಯವಲ್ಲವಾದರೆ.

(೮೬)

**೮೨. ಅಂತಿಮ ಇಷ್ಟಪತ್ರದ ಪ್ರಕಾರ ಪಾಲಕನಾದವನು ಮತ್ತು ಅವನ ಅಧಿಕಾರಗಳು:-**

(೧) ಒಬ್ಬ ಹಿಂದೂ ತಂದೆಯು ತನ್ನ ಕಾನೂನುಸಮ್ಮತ ಅಪ್ರಾಪ್ತ ವಯಸ್ಕ ಮಗನ/ಮಕ್ಕಳ ಪೋಷಣೆಗೂ ಅವರ ಆಸ್ತಿಪಾಸ್ತಿಯ ರಕ್ಷಣೆಯ ಸಂಬಂಧವಾಗೂ, ಎರಡಕ್ಕೂ ಸೇರಿದಂತೆಯೂ ಉಯಿಲಿನ ಮೂಲಕ ಒಬ್ಬನನ್ನು ಪಾಲಕನನ್ನಾಗಿ ನೇಮಿಸಬಹುದು.

ಆದರೆ ತಾಯಿಯು ಜೀವಂತವಾಗಿದ್ದು, ತನ್ನ ಅಪ್ರಾಪ್ತ ವಯಸ್ಕ ಮಗುವಿನ ಸಹಜ ಪಾಲಕಳಾಗಿ ವರ್ತಿಸಲು ಸಾಮರ್ಥ್ಯ ಪಡೆದಿದ್ದರೆ, ಈ ಭಾಗದಲ್ಲಿರುವ ಯಾವುದೇ ನಿಯಮವು ಯಾವ ವ್ಯಕ್ತಿಗೂ ತನ್ನ ಅಪ್ರಾಪ್ತವಯಸ್ಕ

(೮೪)

**೮೧. ಸಹಜಪಾಲಕನು ಅಧಿಕಾರವನ್ನು ಹಿಂದಕ್ಕೆ ತೆಗೆದುಕೊಳ್ಳುವುದು :-**

ಹಿಂದೂ ಅಪ್ರಾಪ್ತವಯಸ್ಕನ ಪಾಲಕನು ಅವನ ಹೊಣೆಯನ್ನು ಹೊರುವಂತೆ ಬೇರೊಬ್ಬವ್ಯಕ್ತಿಗೆ ಅಧಿಕಾರ ಕೊಟ್ಟಿದ್ದರೆ, ಆ ಅಧಿಕಾರವನ್ನು ಹಿಂತೆಗೆದುಕೊಳ್ಳಬಹುದು;

(ಅ) ಹಿಂತೆಗೆದುಕೊಳ್ಳುವುದು ಅಪ್ರಾಪ್ತ ವಯಸ್ಕನ ಹಿತಾಸಕ್ತಿಗಳಿಗೆ ಅನುಗುಣವಾಗಿರದಿದ್ದರೆ;

(ಆ) ಸಹಜಪಾಲಕನು ಹಿಂದುವಾಗಿ ಉಳಿಯ ದಿದ್ದರೆ; ಅಥವಾ

**ಭಾಗ-೫ ಪ್ರಕರಣ-೭ ಪುಟ-೨೩**

(ಇ) ಬೇರೆ ಯಾವುದೇ ಸೂಕ್ತಕಾರಣಕ್ಕಾಗಿಹಿಂತೆಗೆದುಕೊಳ್ಳುವುದು ಅನಪೇಕ್ಷಣೀಯವಲ್ಲವಾದರೆ.

(೮೫)

**೮೨. ಅಂತಿಮ ಇಷ್ಟಪತ್ರದ ಪ್ರಕಾರ ಪಾಲಕ ಮತ್ತು ಅವನ ಅಧಿಕಾರಗಳು :-**

(೧) ಒಬ್ಬ ಹಿಂದೂ ತಂದೆಯು ತನ್ನ ಕಾನೂನುಸಮ್ಮತ ಅವಯಸ್ಕ ಮಗನ/ ಮಗಳ ಪೋಷಣೆಯ ಅಥವಾ ಅವರ ಆಸ್ತಿಪಾಸ್ತಿಯ ರಕ್ಷಣೆಯ ಸಂಬಂಧವಾದ ಅಥವಾ ಎರಡೂ ಉದ್ದೇಶಗಳಿಗಾಗಿ ಒಬ್ಬ ಪಾಲಕನನ್ನು ನೇಮಿಸಬಹುದು.

**ಭಾಗ-೫ ಪ್ರಕರಣ-೮ ಪುಟ-೨೩**

ಆದರೆ ತಾಯಿಯು ಜೀವಂತವಾಗಿದ್ದು ತನ್ನ ಅಪ್ರಾಪ್ತ ವಯಸ್ಕ ಮಗುವಿನ ಪಾಲಕಳಾಗಿ ವರ್ತಿಸಲು ಸಾಮರ್ಥ್ಯ ಪಡೆದಿದ್ದರೆ, ಈ ಭಾಗದಲ್ಲಿರುವ ಯಾವುದೇ ನಿಯಮವು ಯಾವವ್ಯಕ್ತಿಗೂ ಅಪ್ರಾಪ್ತವಯಸ್ಕ

ಮಗುವಿನ ಸಹಜಪಾಲಕನಾಗಿ ವರ್ತಿಸಲು ಅಧಿಕಾರ ಕೊಡುವುದಿಲ್ಲ.

(೨) ಹೀಗೆ ನೇಮಿತನಾದ ಪಾಲಕನು, ಮಗುವಿನ ತಂದೆಯು ಮೃತನಾದ ಮೇಲೆ ಅಪ್ರಾಪ್ತವಯಸ್ಕ ಮಗುವಿನ ಪಾಲಕನಾಗಿ ವರ್ತಿಸುವ ಎಲ್ಲಾ ಹಕ್ಕುಗಳನ್ನು ಪಡೆಯುತ್ತಾನೆ. ಉಯಿಲಿನಲ್ಲಿ ನಿರ್ದಿಷ್ಟಪಡಿಸಿರುವ ತಡೆಗಳಿಗೆ ಒಳಪಟ್ಟು, ಆ ಪ್ರಮಾಣಕ್ಕೆ ಸಹಜಪಾಲಕನಾಗಿ ವರ್ತಿಸಿ ಹಕ್ಕುಗಳನ್ನು ಚಲಾಯಿಸುವ ಅಧಿಕಾರ ಅವನಿಗೆ ಬರುತ್ತದೆ.

(೩) ಈ ಭಾಗದ ಅವಕಾಶಗಳಿಗೆ ಒಳಪಟ್ಟ, ಒಬ್ಬ ಹಿಂದೂ ವಿಧವೆಯು, ಉಯಿಲು ಬರೆದು ತನ್ನ ಅಪ್ರಾಪ್ತವಯಸ್ಕ ಮಕ್ಕಳ ಪೋಷಣೆಗೆ ಸಂಬಂಧಿಸಿದಂತೆ ಒಬ್ಬ ಪಾಲಕನನ್ನು ನೇಮಿಸಬಹುದು. ಆಕೆಯ ಪತಿಯು ಆಗಲೇ, ಉಯಿಲಿನ ಮೂಲಕ ತನ್ನ ಅಪ್ರಾಪ್ತ ವಯಸ್ಕ ಮಗುವಿನ ಪಾಲನೆ ಪೋಷಣೆಗಳಿಗಾಗಿ ಒಬ್ಬ ಪಾಲಕನನ್ನು ನೇಮಕ ಮಾಡಿ ಬಿಟ್ಟಿರಬಾರದು.

(೪) ಅಪ್ರಾಪ್ತವಯಸ್ಕ ವ್ಯಕ್ತಿಯು ಬಾಲಿಕೆಯಾಗಿದ್ದಾಗ, ಹಾಗೆ ನೇಮಿತವಾಗಿದ್ದ ಪಾಲಕನ ಹಕ್ಕು, ಅವಳಿಗೆ ಮದುವೆಯಾದ ಮೇಲೆ ಕೊನೆಗೊಳ್ಳುತ್ತದೆ.

(೮೭)

*೮೩. ಅಪ್ರಾಪ್ತವಯಸ್ಕನನ್ನು ಹಿಂದುವನ್ನಾಗಿ ಬೆಳೆಸಲು ಪಾಲಕನಿಗಿರುವ ಕರ್ತವ್ಯ:–

ಮಗುವಿನ ಸಹಜ ಪಾಲಕನಾಗಿ ವರ್ತಿಸಲು ಅಧಿಕಾರ ಕೊಡುವುದಿಲ್ಲ.

(೨) ಹೀಗೆ ನೇಮಿತನಾದ ಪಾಲಕನು, ಮಗುವಿನ ತಂದೆಯು ಮೃತನಾದ ಮೇಲೆ ಅಪ್ರಾಪ್ತವಯಸ್ಕ ಮಗುವಿನ ಪಾಲಕನಾಗಿ ವರ್ತಿಸುವ ಎಲ್ಲಾ ಹಕ್ಕುಗಳನ್ನೂ ಪಡೆಯುತ್ತಾನೆ. ಉಯಿಲಿನಲ್ಲಿ ನಿರ್ದಿಷ್ಟ ಪಡಿಸಿರುವ ಇತಿಮಿತಿಗಳಿಗೆ ಒಳಪಟ್ಟಂತೆ, ಮತ್ತು ಆ ಪ್ರಮಾಣಕ್ಕೆ ಸಹಜ ಪಾಲಕನಾಗಿ ವರ್ತಿಸಿ ಹಕ್ಕುಗಳನ್ನು ಚಲಾಯಿಸುವ ಅಧಿಕಾರ ಅವನಿಗೆ ಬರುತ್ತದೆ.

(೩) ಈ ಭಾಗದ ಅವಕಾಶಗಳಿಗೆ ಒಳಪಟ್ಟು, ಹಿಂದೂ ವಿಧವೆಯು ಉಯಿಲು ಬರೆದು ತನ್ನ ಅಪ್ರಾಪ್ತ ವಯಸ್ಕ ಮಕ್ಕಳ ಪೋಷಣೆಗೆ ಪಾಲಕನನ್ನು ನೇಮಿಸಬಹುದು. ಆದರೆ ಆ ವೇಳೆಗಾಗಲೆ ಆಕೆಯ ಪತಿಯು ಅಪ್ರಾಪ್ತವಯಸ್ಕ ಮಗುವಿನ ಪಾಲನೆ ಪೋಷಣೆಗಳಿಗಾಗಿ ಪಾಲಕನನ್ನು ನೇಮಕ ಮಾಡಿರಬಾರದು.

(೪) ಅಪ್ರಾಪ್ತವಯಸ್ಕ ಹುಡುಗಿಯ ವಿಷಯದಲ್ಲಿ, ಹಾಗೆ ನೇಮಿತನಾದ ಪಾಲಕನ ಹಕ್ಕು, ಆಕೆಯು ಮದುವೆ ಮಾಡಿಕೊಂಡ ಮೇಲೆ ಕೊನೆಗೊಳ್ಳುತ್ತದೆ.

(೮೬)

೮೩. ಅವಯಸ್ಕನನ್ನು ಹಿಂದುವನ್ನಾಗಿ ಬೆಳೆಸಲು ಪಾಲಕನಿಗಿರುವ ಕರ್ತವ್ಯ:–

---

* ತಮ್ಮ ಸ್ವಂತದ ಪ್ರತಿಯಲ್ಲಿ ಡಾ. ಅಂಬೇಡ್ಕರರು ಮಾಡಿರುವ ಟಿಪ್ಪಣಿ: 'ಮಂಡಿಸಬೇಕಾಗಿಲ್ಲ' – ಸಂ.

ಹಿಂದೂ ಅಪ್ರಾಪ್ತವಯಸ್ಕನನ್ನು ಅವನ ತಂದೆಯ ಧರ್ಮದಲ್ಲಿಯೇ ಬೆಳೆಸುವ ಕರ್ತವ್ಯವು ಪಾಲಕನಿಗಿರುತ್ತದೆ.

ಹಿಂದೂ ಅವಯಸ್ಕ ಬಾಲಕನನ್ನು ಹಿಂದುವಾಗಿ ಬೆಳೆಸುವುದು ಪಾಲಕನ ಕರ್ತವ್ಯವಾಗಿರುತ್ತದೆ. ಭಾಗ–೫ ಪ್ರಕರಣ–೯ ಪುಟ–೨೩

(೮೮)

**೮೪. ವಸ್ತುತಃ ಪಾಲಕನಾದವನು ಅಪ್ರಾಪ್ತ ವಯಸ್ಕ ಬಾಲಕನ ಆಸ್ತಿಯನ್ನು ವ್ಯವಹರಿಸುವಂತಿಲ್ಲ :–**

ಈ ಸಂಹಿತೆಯು ಜಾರಿಗೆ ಬಂದ ನಂತರ ವಾಸ್ತವವಾಗಿ ಹಿಂದೂ ಅಪ್ರಾಪ್ತವಯಸ್ಕನ ಪಾಲಕನೆಂಬ ಒಂದೇ ಆಧಾರದಿಂದ ಅವನಿಗೆ ಸೇರಿದ ಆಸ್ತಿಯನ್ನು ವಿಲೇವಾರಿ ಮಾಡಲು ಅಥವಾ ಬೇರೆ ಕ್ರಮದಲ್ಲಿ ವ್ಯವಹರಿಸಲು ಹಕ್ಕಿರುವುದಿಲ್ಲ.

(೮೭)

**೮೪. ವಸ್ತುತಃ ಪಾಲಕನಾದವನು ಅವಯಸ್ಕ ಬಾಲಕನ ಆಸ್ತಿಯನ್ನು ವ್ಯವಹರಿಸುವಂತಿಲ್ಲ:–**

ಈ ಸಂಹಿತೆಯು ಜಾರಿಗೆ ಬಂದ ನಂತರದ, ಹಿಂದೂ ಅವಯಸ್ಕನ ವಸ್ತುತಃ ಪಾಲಕನೆಂಬ ಒಂದೇ ಆಧಾರದಿಂದ, ಅವನಿಗೆ ಸೇರಿದ ಆಸ್ತಿಯನ್ನು ವಿಲೇವಾರಿ ಮಾಡಲು ಅಥವಾ ಬೇರೆ ಕ್ರಮದಲ್ಲಿ ವ್ಯವಹರಿಸಲು ಹಕ್ಕಿರುವುದಿಲ್ಲ. ಭಾಗ–೫ ಪ್ರಕರಣ ಪುಟ–೨೩

(೮೯)

**೮೫. ಅಪ್ರಾಪ್ತವಯಸ್ಕನ ಕಲ್ಯಾಣವೇ ಅತಿಮುಖ್ಯವಾದ ಪರಿಗಣನೆ :–**

ಯಾವನೇ ವ್ಯಕ್ತಿಯನ್ನು ಒಬ್ಬ ಹಿಂದೂ ಅಪ್ರಾಪ್ತವಯಸ್ಕನ ಪಾಲಕನನ್ನಾಗಿ ನೇಮಿಸಿದಾಗ ಅಥವಾ ನ್ಯಾಯಾಲಯವು ಘೋಷಿಸಿದಾಗ.

ಅವಯಸ್ಕ ಬಾಲಕನ ಯೋಗಕ್ಷೇಮವೇ ಅತ್ಯಂತ ಮುಖ್ಯವಾದ ಪರಿಗಣನೆಯಾಗಿರತಕ್ಕದ್ದು. ಈ ಭಾಗದ ಅಥವಾ ೨೪ನೆಯ ಪ್ರಕರಣದ ಅವಕಾಶಗಳ ಪ್ರಕಾರ, ಒಬ್ಬವ್ಯಕ್ತಿಯ ಪಾಲಕತ್ವವು ಅಪ್ರಾಪ್ತವಯಸ್ಕನ ಕಲ್ಯಾಣಕ್ಕೆ ಸೂಕ್ತವಾದುದಲ್ಲವೆಂದು ನ್ಯಾಯಾಲಯವು ಭಾವಿಸಿದರೆ ಅಂತಹ ಯಾವ ವ್ಯಕ್ತಿಯನ್ನೂ ಪಾಲಕನೆಂದು ಪರಿಗಣಿಸಲಾಗುವುದಿಲ್ಲ.

(೮೮)

**೮೫. ಅವಯಸ್ಕನ ಕಲ್ಯಾಣವೇ ಅತಿ ಮುಖ್ಯ ಪರಿಗಣೆಯಾಗಿರುತ್ತದೆ.**

ನ್ಯಾಯಾಲಯವು ಒಬ್ಬ ವ್ಯಕ್ತಿಯನ್ನು ಹಿಂದೂ ಅವಯಸ್ಕ ಬಾಲಕನ ಪಾಲಕನೆಂದು ನೇಮಿಸಿದಾಗ ಆ ಅವಯಸ್ಕನ ಯೋಗಕ್ಷೇಮವೇ ಅತ್ಯಂತ ಮುಖ್ಯವಾದ ಪರಿಗಣನೆಯಾಗಿರುತ್ತದೆ. ಈ ಭಾಗದ ಅಥವಾ ೨೪ನೆಯ ಪ್ರಕರಣದ ಅವಕಾಶಗಳ ಪ್ರಕಾರ, ಒಬ್ಬ ವ್ಯಕ್ತಿಯ ಪಾಲಕತ್ವವು ಅಪ್ರಾಪ್ತ ವಯಸ್ಕನ ಕಲ್ಯಾಣದ ದೃಷ್ಟಿಯಿಂದ ಸೂಕ್ತವಾಗಿಲ್ಲವೆಂದು ನ್ಯಾಯಾಲಯವು ಅಭಿಪ್ರಾಯಪಟ್ಟರೆ, ಅಂತಹ ವ್ಯಕ್ತಿಯನ್ನು ಪಾಲಕನೆಂದು ಪರಿಗಣಿಸಲಾಗುವುದಿಲ್ಲ. ಭಾಗ–೫ ಪ್ರಕರಣ–೧೨ ಪುಟ–೨೩

(೯೦)

**ಭಾಗ ೫ :**

**ಅವಿಭಕ್ತ ಕುಟುಂಬ ಮತ್ತು ದಾಯಾದಿತ್ವ**

**ಅಧ್ಯಾಯ ೧**

**ಸಾಮಾನ್ಯ**

**೮೬. ಸಾಮಾನ್ಯವಾಗಿ ಜನನ ಮತ್ತು ಬದುಕಿ ಉಳಿಯುವುದರಿಂದ ಹಕುಗಳನ್ನು ಕಿತ್ತು ಹಾಕುವುದು :** ಈ ಭಾಗದಲ್ಲಿ ಸ್ವಷ್ಟವಾಗಿ ವ್ಯಕ್ತಪಡಿಸಿದಂತಹವರಿಗೆ ಈ ಕಾನೂನು ಜಾರಿಯಲ್ಲಿ ಬಂದನಂತರ ಯಾವ ಹಿಂದೂವಿಗೆ ಯಾವುದೇ ಹಕ್ಕನ್ನು ಪಡೆದುಕೊಳ್ಳುವುದು, ಇಲ್ಲವೆ ಅದರಲ್ಲಿ ಹಿತಾಸಕ್ತಿಯು ಉಂಟಾಗುವುದಿಲ್ಲ.

(ಅ) ಯಾವುದೇ ಪಿತ್ರಾರ್ಜಿತ ಆಸ್ತಿಯಲ್ಲಿ ತಾನು ಜೀವಂತ ಇರುವವರೆಗೆ ಕೇವಲ ತಾನು ಆ ಮನೆತನದಲ್ಲಿ ಜನಿಸಿರುವನೆಂಬ ಕಾರಣದಿಂದ, ಇಲ್ಲವೆ

(ಬ) ಯಾವುದೇ ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ಯಾವುದೇ ಬದುಕಿ ಉಳಿಯುವುದರ ನಿಯಮದ ಮೇಲೆ ಅವಲಂಬಿಸಿದೆಯೊ ಅಂತಹ ಆಸ್ತಿಯಲ್ಲಿ.

(೮೯)

**ಭಾಗ – ೫**

**ಅವಿಭಕ್ತ ಕುಟುಂಬದ ಆಸ್ತಿ**

**೮೬. ಒಂದು ಮನೆತನದಲ್ಲಿ ಜನಿಸಿದ ಕಾರಣದಿಂದ ಅವನಿಗೆ ಆಸ್ತಿಯಲ್ಲಿ ಹಕ್ಕು ಉಂಟಾಗುವುದಿಲ್ಲ.** ಈ ಕಾನೂನು ಜಾರಿಯಲ್ಲಿ ಬಂದ ದಿನಾಂಕದಂದು ಮತ್ತು ತದನಂತರ ಯಾವುದೇ ಪಿತ್ರಾರ್ಜಿತ ಆಸ್ತಿಯಲ್ಲಿ ಆತನ ಜೀವಿತ ಅವಧಿಯಲ್ಲಿ ಆ ಆಸ್ತಿಯ ಮಾಗಣಿ ಮಾಡುವ ವ್ಯಕ್ತಿಯು ಆ ಮನೆತನದಲ್ಲಿ ಜನಿಸಿದನೆಂಬ ಒಂದೇ ಕಾರಣದಿಂದ ಅವನು ಮನೆತನದ ಪೂರ್ವಜರಿಂದ ಅವನನ್ನು ಗಣನೆಗೆ ತೆಗೆದುಕೊಳ್ಳಲು ಬರುವುದಿಲ್ಲ.

**ಭಾಗ–೩(ಅ) ಕಲಂ–೨ ಪುಟ–೧೨**

**ವಿವರಣೆ :** ಈ ಕಲಮಿನಲ್ಲಿ ಆಸ್ತಿಯು ಅಂದರೆ ಚರ ಮತ್ತು ಸ್ಥಿರ ಆಸ್ತಿಗಳನ್ನು ಒಳಗೊಳ್ಳುತ್ತದೆ. ಅದು ಪಿತ್ರಾರ್ಜಿತವು ಇರುವುದೊ ಅಥವಾ ಇಲ್ಲವೊ ಮತ್ತು ಅದನ್ನು ಅವಿಭಕ್ತ ಕುಟುಂಬದ ಸದಸ್ಯರು ಜಂಟಿಯಾಗಿ ಉಳಿದ ಪ್ರತಿಯೊಬ್ಬ ಸದಸ್ಯರು ಅದನ್ನು ಗಳಿಸಿರುವರು ಇಲ್ಲವೆ ಪಿತ್ರಾರ್ಜಿತ ಆಸ್ತಿಗೆ ಆ ಆಸ್ತಿಯನ್ನು ಕೂಡಿಸಿರುವುದು ಇಲ್ಲವೆ ಇನ್ನಾವುದೋ ರೀತಿಯಲ್ಲಿ ಅದನ್ನು ಸಂಪಾದಿಸಿರುವರೆಂದು ಗ್ರಹಿಸಲಾಗುವುದು.

(೯೧)

**೮೭. ಸಮಷ್ಟಿ ಗೇಣಿದಾರರು : ಸಮಷ್ಟಿ ಹಕ್ಕುದಾರರು** ಇವರನ್ನು ಸಾಮಾನ್ಯವಾಗಿ ಜಂಟೀ **ಗೇಣಿದಾರಿಕೆಯನ್ನು ಇದರಲ್ಲಿ ಬದಲಾಗಿ ಇಡುವುದು :**

(೯೦)

**೮೭. ಸಮಷ್ಠಿ ಗೇಣಿದಾರರು : ಸಮಷ್ಠಿ ಹಕ್ಕುದಾರರು ಇವರನ್ನು ಸಾಮಾನ್ಯವಾಗಿ ಜಂಟಿ ಗೇಣಿದಾರರು ಈ ಸ್ಥಳದಲ್ಲಿ ಬದಲಾಗಿ ಇರುವುದು :**

ಈ ಅಧಿನಿಯಮವು ಜಾರಿಯಲ್ಲಿ ಬಂದ

ಈ ಭಾಗದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗದ ಹೊರತು, ಎಲ್ಲ ಜನರು ಈ ಅಧಿನಿಯಮವು ಜಾರಿಯಲ್ಲಿ ಬಂದ ನಂತರ ಯಾವುದೇ ವ್ಯಕ್ತಿಯು ಅವಿಭಕ್ತ ಕುಟುಂಬದಲ್ಲಿ ಜಂಟಿಯಾಗಿ ಹೊಂದಿದ ಆಸ್ತಿಯನ್ನು ಸಮಷ್ಟಿ ಗೇಣಿದಾರಿಕೆಯ ಆಸ್ತಿ ಎಂದು ಗ್ರಹಿಸತಕ್ಕದ್ದು. ಅಂತಹ ಆಸ್ತಿಯ ಬಗೆಗೆ ಈ ಕಾನೂನು ಜಾರಿಯಲ್ಲಿ ಬಂದ ನಂತರ ಅವರು ಹಿಸ್ಸೆ ಮಾಡಿಕೊಂಡಿರದಿದ್ದರೆ ಮತ್ತು ಪ್ರತಿಯೊಬ್ಬನು ಅವನು ಇಲ್ಲವೆ ಅವಳು ತನ್ನ ತನ್ನ ಹಿಸ್ಸೆಯನ್ನು ತಾನು ಪ್ರತ್ಯೇಕವಾಗಿ ಅದರ ಸಂಪೂರ್ಣ ಮಾಲಿಕತ್ವದ ದೃಷ್ಟಿಯಿಂದ ಆ ಆಸ್ತಿ ಹೊಂದಿದೆ. **ಪರಂತು** ಈ ಕಲಮಿನಲ್ಲಿ ಏನೇ ಹೇಳಿದ್ದರೂ ಯಾರೊಬ್ಬರ ಉಪ ಜೀವನದ ಹಕ್ಕು ಹಾಗೂ ವಾಸಿಸುವ ಹಕ್ಕು ಇವುಗಳಿಗೆ ಯಾವುದೇ ಬಾಧೆ ಬರುವುದಿಲ್ಲ, ಯಾವುದೇ ವ್ಯಕ್ತಿ ಅವಿಭಕ್ತ ಕುಟುಂಬದ ಯಾವುದೇ ಸದಸ್ಯನು ಇಲ್ಲವೆ ಸದಸ್ಯರು ಇವರನ್ನು ಹೊರತುಪಡಿಸಿ ಉಳಿದ ಯಾವುದೇ ಸದಸ್ಯನು ಇಲ್ಲವೆ ಸದಸ್ಯರು ತನ್ನ ಇಲ್ಲವೆ ತಮ್ಮ ಪ್ರತ್ಯೇಕ ಹಿಸ್ಸೆಯನ್ನು ಹೊಂದಲು ಅರ್ಹರಾಗುತ್ತಾರೆ ಮತ್ತು ಈ ಕಾನೂನು ಅಸ್ತಿತ್ವದಲ್ಲಿ ಬಂದಿಲ್ಲವೆಂದು ತಿಳಿದು ತಮ್ಮ ಯಾವುದೇ ಹಕ್ಕನ್ನು ಚಲಾಯಿಸಲು ಅಧಿಕಾರ ಉಳ್ಳವರಿಗೆ ಇದು ಅನ್ವಯಿಸುವುದಿಲ್ಲ.

**ಭಾಗ–೩(ಅ)**
**ಪ್ರಕರಣ–೨**
**ಪುಟ–೧೧**

ದಿನಾಂಕದಂದು ಮತ್ತು ತದನಂತರ ಯಾವ ನ್ಯಾಯಾಲಯವು ಯಾವ ಆಸ್ತಿಯು ಕೇವಲ ಬದುಕಿ ಉಳಿದವರಿಗೆ ಇರುತ್ತದೆಯೋ ಅಂತಹ ಆಸ್ತಿಯಲ್ಲಿ ಯಾವುದೇ ವ್ಯಕ್ತಿಗೆ ಯಾವುದೇ ಆಸ್ತಿಯಲ್ಲಿ ಹಕ್ಕು ಮತ್ತು ಹಿತ ಸಂಬಂಧವನ್ನು ಮಾನ್ಯ ಮಾಡತಕ್ಕದ್ದು ಅಲ್ಲ. ಈ ಅಧಿನಿಯಮವು ಜಾರಿಯಲ್ಲಿ ಬಂದ ದಿನಾಂಕದಂದು ಯಾವ ವ್ಯಕ್ತಿಗಳು ಅವಿಭಕ್ತ ಕುಟುಂಬದಲ್ಲಿ ಜಂಟಿಯಾಗಿ ಆಸ್ತಿಯನ್ನು ಹೊಂದಿರುವರೋ ಅವರು ಅಂತಹ ಆಸ್ತಿಯನ್ನು ಅವರು ಜಂಟಿ ಗೇಣಿದಾರರೆಂದು ಗ್ರಹಿಸಲಾಗುವುದು. ಮತ್ತು ಆ ಅವಿಭಕ್ತ ಕುಟುಂಬದ ಸದಸ್ಯರಲ್ಲಿ ಆ ಸದಸ್ಯರು ಈ ಅಧಿನಿಯಮ ಜಾರಿಯಲ್ಲಿ ಬಂದ ದಿನಾಂಕದಂದು ಆ ಆಸ್ತಿಯ ಬಗ್ಗೆ ಅವರಲ್ಲಿ ಪ್ರತಿಯೊಬ್ಬನು ಇಲ್ಲವೆ ಪ್ರತಿಯೊಬ್ಬಳು ತನ್ನ ಅಥವಾ ಅವರ ಹಿಸ್ಸೆಯ ಆಸ್ತಿಯನ್ನು ಪ್ರತ್ಯೇಕವಾ ಗಿಟ್ಟುಕೊಂಡು ಸಂಪೂರ್ಣ ಮಾಲಿಕತ್ವದಿಂದ ಆ ದಿನದಿಂದ ಉಪಯೋಗಿಸುತ್ತಾರೆಂದು ಗ್ರಹಿಸಬೇಕು. **ಪರಂತು** ಈ ಕಲಮಿನಲ್ಲಿ ಹೇಳಿದ ಯಾವುದೇ ಸಂಗತಿಯು ಯಾವನೊಬ್ಬನ ಆ ಆಸ್ತಿಯ ಮೇಲೆ ಉಪಜೀವನದ ಹಕ್ಕು ಹೊಂದಿದ್ದರೆ ಇಲ್ಲವೆ ವಾಸದ ಹಕ್ಕು ಹೊಂದಿದ್ದರೆ ಅಂತಹದು ಇದಕ್ಕೆ ಅನ್ವಯಿಸುವುದಿಲ್ಲ. ಯಾವುದೇ ಅವಿಭಕ್ತ ಕುಟುಂಬದ ಸದಸ್ಯನು ಅವಿಭಕ್ತ ಕುಟುಂಬದ ಆಸ್ತಿಯಿಂದ ತನ್ನ ಆಸ್ತಿಯನ್ನು ಪ್ರತ್ಯೇಕವಾಗಿ ಇಟ್ಟುಕೊಳ್ಳಲು ಅಧಿಕಾರವನ್ನು ಹೊಂದಿದ್ದರೆ ಅಂಥವನನ್ನು ಹೊರತುಪಡಿಸಿ ಮತ್ತು ಈ ಅಧಿನಿಯಮವು ಜಾರಿಯಲ್ಲಿ ಬರದಿದ್ದರೆ, ಇಂತಹ ಅಧಿಕಾರವನ್ನು ಅವನು ಪರಿಣಾಮ

ಕಾರಿಯಾಗಿ ಜಾರಿಮಾಡಬಲ್ಲನು.

**ಪರಂತು** ಇನ್ನೂ ಹೇಳುವುದೇನೆಂದರೆ : ಯಾವುದೇ ಹೆಣ್ಣುಮಗಳು ಈ ಅಧಿನಿಯಮದ ಈ ಕಲಮಿನ ಉಪಬಂಧಗಳ ಅನ್ವಯ ತನ್ನ ಹಿಸ್ಸೆಯ ಆಸ್ತಿಯನ್ನು ಪ್ರತ್ಯೇಕವಾಗಿ ಇಟ್ಟುಕೊಳ್ಳುವ ಆಸ್ತಿಯಲ್ಲಿ ಸೀಮಿತ ಅಧಿಕಾರವಿದ್ದರೆ ಅವಳು ಕೇವಲ ಸೀಮಿತ (ಪರಿಮಿತ) ಆಸ್ತಿಯನ್ನು ಪಡೆಯುತ್ತಾಳೆ. ಈ ಅಧಿನಿಯಮವು ಜಾರಿಯಲ್ಲಿ ಬರುವ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಹಿಂದೂ ಹೆಣ್ಣುಮಕ್ಕಳ ಆಸ್ತಿ ಅಧಿನಿಯಮದ ಅನ್ವಯ ಅವಳಿಗೆ ಸೀಮಿತ ಅಧಿಕಾರ ಇರುತ್ತದೆ ಮತ್ತು ಅವಳ ಮರಣದ ನಂತರ ಅಂತಹ ಆಸ್ತಿಯು ಯಾವ ವ್ಯಕ್ತಿಯು ಅದನ್ನು ಪಡೆಯಲು ಹಕ್ಕುಳ್ಳವನು ಇರುವನೋ ಅಂತಹ ವ್ಯಕ್ತಿಗೆ ಹಿಂದಕ್ಕೆ ಬರುತ್ತದೆ. ಯಾಕೆಂದರೆ ಈ ಅಧಿನಿಯುಮವು ಜಾರಿಗೆ ಬರುವ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಅಧಿನಿಯಮದ ಅನ್ವಯ ಹೋಗುತ್ತದೆ.

(೯೨)

**೮೮. ಧಾರ್ಮಿಕ ಕರ್ತವ್ಯ ಪವಿತ್ರ ಕರ್ತವ್ಯ: ನಿಯಮ ತೆಗೆದುಹಾಕುವುದು:**

ಈ ಅಧಿನಿಯಮವು ಜಾರಿಯಲ್ಲಿ ಬಂದ ನಂತರ ಯಾವುದೇ ನ್ಯಾಯಾಲಯವು, ಉಪಕಲಂ (೧)ರಲ್ಲಿ ಕಾಣಿಸಿದಂತೆ ಯಾವುದೇ ಗಂಡು ನೇರ ಸಂತತಿ ಮತ್ತು ಪಿತೃವಂಶೀಯನ ವಿರುದ್ಧ ಅವನ ತಂದೆ, ತಂದೆಯ ತಂದೆ ಇವರಿಂದ ಬರಬೇಕಾದ ಸಾಲದ ಬಾಕಿ ಬಗ್ಗೆ ಯಾವುದೇ ನ್ಯಾಯಾಲಯವು ಅವರ ವಿರುದ್ಧ ಯಾವುದೇ ಕ್ರಮ ಹಕ್ಕನ್ನು ನ್ಯಾಯಾಲಯವು ಮಾನ್ಯಮಾಡಲು ಬರುವುದಿಲ್ಲ. ಇಲ್ಲವೆ

(೯೧)

**೮೮. ಒಬ್ಬ ಹಿಂದೂ ಮಗನ ಪವಿತ್ರ ಕರ್ತವ್ಯ, ಧಾರ್ಮಿಕ ಕರ್ತವ್ಯಗಳ ನಿಯಮ –**

(೧) ಈ ಅಧಿನಿಯಮವು ಜಾರಿಯಲ್ಲಿ ಬಂದನಂತರ ಉಪಕಲಂ (೨)ರಲ್ಲಿ ಹೇಳಿದಂತೆ ನ್ಯಾಯಾಲಯವು ಮಗ, ಮಗನ ಮಗ, ಮಗನ ಮಗನ ಮಗ, ಇವರ ವಿರುದ್ಧ ಅವನ ತಂದೆ, ತಂದೆಯ ತಂದೆ, ತಂದೆಯ ತಂದೆಯ ತಂದೆ, ಇವರ ವಿರುದ್ಧ ಯಾವುದೇ ಸಾಲ ತೀರಿಸಲು ಯಾವುದೇ ಆಸ್ತಿ ಹಸ್ತಾಂತರ ಮಾಡಿದ್ದರೆ, ಅಂತಹ ಸಾಲ ತೀರಿಸುವುದಕ್ಕಾಗಿ ಮಗ, ಮಗನ ಮಗ,

ಅಂತಹ ಯಾವುದೇ ಸಾಲವನ್ನು ತೀರಿಸುವುದಕ್ಕಾಗಿ ಅವನು ಧಾರ್ಮಿಕ ಕರ್ತವ್ಯವೆಂದು ನ್ಯಾಯಾಲಯವು ಆದೇಶಿಸಲು ಬರುವುದಿಲ್ಲ.

ಈ ಅಧಿನಿಯಮವು ಜಾರಿಯಲ್ಲಿ ಬರುವ ಪೂರ್ವ ಯಾವುದೇ ಸಾಲನ್ನು ತೆಗೆದುಕೊಂಡಿದ್ದರೆ ಉಪಕಲಂ (೧)ರ ಕೆಳಗೆ ಕಾಣಿಸಿದ್ದು ಯಾವುದೂ ಪರಿಣಾಮಕಾರಿಯಾಗಿ ಜಾರಿ ಯಾಗುವುದಿಲ್ಲ.

(ಅ) ಯಾವುದೇ ಸಾಲಕೊಟ್ಟವನಿಗೆ ಅಂತಹ ಸಾಲವನ್ನು ತೆಗೆದುಕೊಂಡ ವಂಶಜರ ವಿರುದ್ಧ ಇಲ್ಲವೆ

ಬ) ಯಾವುದೇ ಸಾಲವನ್ನು ಮರು ಪಾವತಿ ಮಾಡಲು ಆಸ್ತಿ ಪರಾಧೀನ ಮಾಡಿದ್ದರೆ ಇಲ್ಲವೆ ಯಾವುದೇ ಸಾಲವನ್ನು ತೀರಿಸುವುದಕ್ಕಾಗಿ ಇಂತಹ ಆಸ್ತಿಯನ್ನು ಈ ಅಧಿನಿಯಮವು ಪಾಸಾಗಿಲ್ಲವೆಂದು ತಿಳಿದು ಧಾರ್ಮಿಕ ಕರ್ತವ್ಯ : ಪವಿತ್ರ ಕರ್ತವ್ಯ ಇದರ ಅಡಿಯಲ್ಲಿ ಅವರ ವಿರುದ್ಧ ಪರಿಣಾಮಕಾರಿಯಾಗಿ ಜಾರಿಮಾಡಬಹುದು.

ವಿವರಣೆ : ಉಪಕಲಂ (೨)ರ ಉದ್ದೇಶ ಅಂತಹ ವಂಶಜರು ಅಂದರೆ ನೇರವಾದ ಗಂಡು ಸಂತಾನವೆಂದು ಉಲ್ಲೇಖಿಸಿ ದೆಯೆಂದು ಗ್ರಹಿಸತಕ್ಕದ್ದು ಮತ್ತು ಅಂತಹ ವ್ಯಕ್ತಿಯು ಈ ಅಧಿನಿಯಮವು ಜಾರಿಯಲ್ಲಿ ಬರುವ ಪೂರ್ವದಲ್ಲಿ ಅವನ ಜನನವಾಗಿರಬೇಕು ಇಲ್ಲವೆ ಅವನನ್ನು ದತ್ತಕ ತೆಗೆದು ಕೊಂಡಿರಬೇಕು.

ಮಗನ ಮಗನ ಮಗ, ಇವರು ಧಾರ್ಮಿಕ ಪವಿತ್ರ ನಿಯಮದ ಕರ್ತವ್ಯದ ಪ್ರಕಾರ ಅವರ ವಿರುದ್ಧ ಕ್ರಮ ಕೈಕೊಳ್ಳುವ ಹಕ್ಕು ಇರುವುದಿಲ್ಲ.

(೨) ಯಾವುದೇ ಸಾಲವನ್ನು ಈ ಅಧಿನಿಯಮವು ಜಾರಿಯಲ್ಲಿ ಬರುವ ಪೂರ್ವದಲ್ಲಿ ಮಾಡಿದ್ದರೆ ಉಪಕಲಂ (೧)ರಲ್ಲಿ ಹೇಳಿದವುಗಳಿಗೆ ಪರಿಣಾಮಕಾರಿ ಯಾಗುವುದಿಲ್ಲ

(ಅ) ಒಬ್ಬ ಸಾಲಕೊಟ್ಟವನು ಸಾಲತೆಗೆದುಕೊಂಡವನ ಮಗ, ಮಗನ ಮಗ ಇಲ್ಲವೆ ಮಗನ ಮಗನ ಮಗ ಇವರ ವಿರುದ್ಧ ಯಾರೇ ಇದ್ದರೂ ಇಲ್ಲವೆ,

ಬ) ಯಾವುದೇ ಆಸ್ತಿಯ ಹಸ್ತಾಂತರ ಮಾಡಿದ್ದು ಕುರಿತ ಇಲ್ಲವೆ ಅಂತಹ ಸಾಲ ತಿರುಗಿ ಕೊಡುವುದಕ್ಕಾಗಿ ಯಾವುದೇ ಹಸ್ತಾಂತರ ಮಾಡಿದರೆ ಅದು ಪವಿತ್ರ ಕರ್ತವ್ಯದ ನಿಯಮದ ಅನುಸಾರ ಪರಿಣಾಮಕಾರಿ ಯಾಗುವುದಿಲ್ಲ ಮತ್ತು ಅಂತಹ ಯಾವುದೇ ಹಸ್ತಾಂತರ ಹಾಗೂ ಹಕ್ಕನ್ನು ಈ ನಿಯಮದ ಅನ್ವಯ ಚಲಾಯಿಸಬಹುದು. ಅಂದರೆ ಈ ಅಧಿನಿಯಮವು ಜಾರಿಗೆ ಬರುವ ಕ್ರಮದಲ್ಲಿ ಯಾವ ರೀತಿ ಜಾರಿ ಮಾಡಲಾಗುತ್ತಿತ್ತೋ ಅದೇ ರೀತಿ ಜಾರಿಮಾಡತಕ್ಕದ್ದು.

**ವಿವರಣೆ :** ಈ ಉಪಕಲಂ (೨)ರಲ್ಲಿ ಕಾಣಿಸಿದ, ಮಗ, ಮಗನ ಮಗ, ಇಲ್ಲವೆ ಮಗನ ಮಗನ ಮಗ ಈ ಅಧಿನಿಯಮ ಜಾರಿಯಲ್ಲಿ ಬರುವ ಪೂರ್ವದಲ್ಲಿ ಮಗ, ಮಗನ ಮಗ,

(೯೩)

**೮೯. ಈ ಅಧಿನಿಯಮವು ಜಾರಿಗೆ ಬರುವ ಪೂರ್ವದಲ್ಲಿ ಅವಿಭಕ್ತ ಕುಟುಂಬದ ಸದಸ್ಯರಿಗೆ ಈ ಅಧಿನಿಯಮವು ಜಾರಿಯಾಗುವುದಿಲ್ಲ –** ಅವಿಭಕ್ತ ಕುಟುಂಬದ ಮ್ಯಾನೇಜರ್ ಇಲ್ಲವೆ ಕರ್ತೃ ಇರುವ ಈ ಅಧಿನಿಯಮವು ಜಾರಿಯಲ್ಲಿ ಬರುವ ಪೂರ್ವದಲ್ಲಿ ಮನೆತನದ ಅಡಚಣೆ ಸಲುವಾಗಿ ಮಾಡಿದ ಸಾಲಕ್ಕೆ ಮೇಲೆ ಹೇಳಿದ್ದು – ಸದಸ್ಯರ ಮೇಲೆ ಮನೆತನದ ಅಡಚಣೆ ಸಲುವಾಗಿ ಮಾಡಿದ ಸಾಲ ತೀರಿಸಲು ಹೊಣೆಗಾರಿಕೆ ಇದರಲ್ಲೆ ಮೇಲೆ ಹೇಳಿದ್ದು ಅದಕ್ಕೆ ಪರಿಣಾಮಕಾರಿಯಾಗುವುದಿಲ್ಲ. ಈ ಅಧಿನಿಯಮವು ಜಾರಿಯಲ್ಲಿ ಬರದಿದ್ದರೆ ಅವರೆಲ್ಲರ ವಿರುದ್ಧ ಇಲ್ಲವೆ ಯಾರೊಬ್ಬರ ವಿರುದ್ಧ ವಸೂಲು ಮಾಡಲು ಕ್ರಮ ಕೈಕೊಳ್ಳಬೇಕಾಗಿತ್ತೋ. ಅದೇ ರೀತಿಯಲ್ಲಿ ಇದರ ಅನ್ವಯ ಕ್ರಮ ಕೈಕೊಳ್ಳಬಹುದು.

## ಅಧ್ಯಾಯ ೨
## ಮಿತಾಕ್ಷರದಾಯಾದಿತ್ವ

**೯೦. ಈ ಅಧ್ಯಾಯದ ಅನ್ವಯ: ಈ** ಅಧಿನಿಯಮವು ಪಾಸಾಗದಿದ್ದರೆ ಹಿಂದುಗಳಿಗೆ ಮಿತಾಕ್ಷರ ಪದ್ಧತಿಯು ಹಿಂದೂ ಕಾನೂನು ಅನ್ವಯಿಸುತ್ತಿತ್ತೋ ಅಂಥವರಿಗೆ ಈ ಅಧ್ಯಾಯವು ಅನ್ವಯಿಸುತ್ತದೆ.

**೯೦. (ಅ) ವ್ಯಾಖ್ಯೆ : ಈ** ಅಧ್ಯಾಯದಲ್ಲಿ– "ಪಿತ್ರಾರ್ಜಿತ ಆಸ್ತಿ" ಅಂದರೆ ಯಾವುದೇ

ಮಗನ ಮಗನ ಮಗ ಅವರು ಯಾರೇ ಇದ್ದರೂ ಅವರು ಈ ಅಧಿನಿಯಮವು ಜಾರಿಗೆ ಬರುವ ಪೂರ್ವದಲ್ಲಿ ಜನನವಾಗಿರಬೇಕು ಇಲ್ಲವೆ ಅವನನ್ನು ದತ್ತಕ ತೆಗೆದುಕೊಂಡಿರಬೇಕು.

(೯೨)

**೮೯. ಅವಿಭಕ್ತ ಕುಟುಂಬದ ಸದಸ್ಯರು ಮಾಡಿದ ಸಾಲದ ಹೊಣೆಗಾರಿಕೆಗೆ ಈ ಅಧಿನಿಯಮವು ಪರಿಣಾಮಕಾರಿಯಾಗಿರುವುದಿಲ್ಲ.** ಈ ಅಧಿನಿಯಮವು ಜಾರಿಗೆ ಬರುವ ಪೂರ್ವದಲ್ಲಿ ಅವಿಭಕ್ತ ಕುಟುಂಬದ ಮ್ಯಾನೇಜರ್ ಇಲ್ಲವೆ ಕರ್ತೃ ಮನೆತನದ ಅಡಚಣೆಗಾಗಿ ಮಾಡಿದ ಸಾಲಕ್ಕೆ ಇದರಲ್ಲಿ ಹೇಳಿದ ಯಾವುದೂ ಅವಿಭಕ್ತ ಕುಟುಂಬದ ಸದಸ್ಯರು ಅಂತಹ ಸಾಲವನ್ನು ತೀರಿಸುವ ಹೊಣೆಗಾರಿಕೆ ಪರಿಣಾಮಕಾರಿಯಾಗುವುದಿಲ್ಲ ಮತ್ತು ಅಂತಹ ಹೊಣೆಗಾರಿಕೆಯನ್ನು ಎಲ್ಲ ಸದಸ್ಯರ ವಿರುದ್ಧ ಇಲ್ಲವೆ ಯಾರೊಬ್ಬ ಸದಸ್ಯರ ಹೊಣೆಗಾರಿಕೆಗೆ ಈ ಅಧಿನಿಯಮವು ಜಾರಿಗೆ ಬರುವ ಪೂರ್ವ ಯಾವ ರೀತಿ ಜಾರಿ ಮಾಡುತ್ತಿತ್ತೋ ಅದೇ ರೀತಿ ಜಾರಿ ಮಾಡಬಹುದು.

ಹಿಂದು ಗಂಡುಮಗನು ತಂದೆಯಿಂದ ಇಲ್ಲವೆ ತಂದೆಯ ತಂದೆ ಅಥವಾ ತಂದೆಯ ತಂದೆಯ ತಂದೆಯಿಂದ ಯಾವುದೇ ಆಸ್ತಿಯನ್ನು ಪಡೆದಿದ್ದರೆ ಮತ್ತು ಅದು ಈ ಕೆಳಗಿನವುಗಳನ್ನು ಒಳಗೊಂಡಿದ್ದು ಇರುತ್ತದೆ.

(ಅ) ತಂದೆಯ ಕಡೆಯಿಂದ ಬಂದ ಯಾವುದೇ ಆಸ್ತಿ ವಾಟಣಿಯಲ್ಲಿ ಅವನ ಹಿಸ್ಸೆಗೆ ಕೊಟ್ಟಿದ್ದರೆ ಇಲ್ಲವೆ (ಬ) ಪಿತ್ರಾರ್ಜಿತ ಆಸ್ತಿಗೆ ಹೆಚ್ಚಿನದನ್ನು ಕೂಡಿಸಿದ್ದರೆ ಆದರೆ ಅದು ಈ ಮುಂದೆ ಹೇಳಿದ್ದನ್ನು ಒಳಗೊಂಡಿದೆಯೆಂದು ಗ್ರಹಿಸ ತಕ್ಕದಲ್ಲ.

(i) ಹಿಂದೂ ವ್ಯಾಸಂಗ ಗಳಿಕೆಗಳ ಅಧಿನಿಯಮ ೧೯೩೦(೧೯೩೦ರ ೩೦ನೆಯ ಅಧಿನಿಯಮದ) ಅನ್ವಯ ಗಳಿಸಿದ್ದು.

(ii) ಯಾವುದೇ ಆಸ್ತಿ ವಾರಸದಿಂದ ಹೊರತುಪಡಿಸಿ ಅವನು ಗಳಿಸಿದ್ದು,

(iii) ಯಾವುದೇ ಆಸ್ತಿ ಮೇಲೆ ಕಾಣಿಸಿದ ಮೂವರು ಪಿತೃವಂಶ ಜನರನ್ನು ಹೊರತುಪಡಿಸಿ ಬೇರೆಯವರಿಂದ ಆ ಆಸ್ತಿಯನ್ನು ಪಡೆದಿದ್ದರೆ ಮತ್ತು

(iv) ಬೇರೆ ಯಾವುದೇ ಆತನ ಪ್ರತ್ಯೇಕ ಆಸ್ತಿ ಆತನ ಕಬ್ಜಯಲ್ಲಿ ಇರುವುದು.

ಇವೆಲ್ಲ ಆಸ್ತಿಗಳನ್ನು ಇಲ್ಲವೆ ಇವುಗಳಲ್ಲೆ ಯಾವುದಾದರೊಂದನ್ನು ತನ್ನ ದಾಯಾದಿತ್ವದ ಜೊತೆಗೆ ಉಪಯೋಗ ಮಾಡುತ್ತಿದ್ದರೂ ಸಹಿತ –

**ವಿವರಣೆ** : ಪಿತ್ರಾರ್ಜಿತ ಆಸ್ತಿಗೆ ಹೆಚ್ಚಿನ ಆಸ್ತಿ ಕೂಡಿಸುವುದು ಅಂದರೆ ಅಂತಹ ಆಸ್ತಿಯಿಂದ ಬಂದ ಉತ್ಪನ್ನದಿಂದ ಆಸ್ತಿಯನ್ನು ಖರೀದಿಸಿದ್ದು, ಅಂತಹ ಆಸ್ತಿಗಳಿಂದ ಬಂದ ಉತ್ಪನ್ನ ಇಲ್ಲವೆ ಅಂತಹ ಆಸ್ತಿಯ ಮಾರಾಟ ದಿಂದ ಇಲ್ಲವೆ ಆಸ್ತಿಯ ಸಹಾಯದಿಂದ ಇಲ್ಲವೆ ಅಂತಹ ಆಸ್ತಿ

ಮಾರಾಟದಿಂದ ಬಂದ ಹಣದಿಂದ ಖರೀದಿಸಿದ ಆಸ್ತಿ ಇವೆಲ್ಲವುಗಳನ್ನು ಒಳಗೊಂಡಿರುತ್ತದೆ.

**೯೦. ಬ. ದಾಯಾದಿತ್ವ :** (೧) ಒಬ್ಬ ವ್ಯಕ್ತಿಯು ಈ ಕೆಳಗಣ ಕರಾರುಗಳನ್ನು ಪೂರೈಸಿದರೆ ಅವನು ದಾಯಾದಿಯಾಗುತ್ತಾನೆ. ಅವು ಯಾವುವೆಂದರೆ –

(೧) ಅವನು

(ಅ) ಯಾವುದೇ ಆಸ್ತಿಯನ್ನು ಅವನು ಪಿತ್ರಾರ್ಜಿತವಾಗಿ ವಾರಸಾ ಪಡದಿದ್ದರೆ, ಇಲ್ಲವೆ

(ಬ) ಅಂತಹ ಆಸ್ತಿಯನ್ನು ಹೊಂದಿದವನ ಮನೆತನದಲ್ಲಿ ಅವನ ಜನನವಾಗಿದ್ದರೆ ಮತ್ತು ಅವನು ನೇರವಾಗಿ ಗಂಡುಮಗನಾಗಿದ್ದರೆ ಮತ್ತು

(ii) ಸದ್ಯಕ್ಕೆ ಉಪಕಲಂ 'ಬ' ಖಂಡ(೧)ರಲ್ಲಿ ಅವನು ಉಲ್ಲೇಖಿಸಿದ್ದರಲ್ಲಿ ನಾಲ್ಕನೆಯ ತಲೆಮಾರಿಗಿಂತ ಹೆಚ್ಚಿನ ತಲೆಮಾರಿನಲ್ಲಿರದಿದ್ದರೆ –

(ಅ) ಯಾವ ವ್ಯಕ್ತಿಯು ಅಂತಹ ಆಸ್ತಿಯನ್ನು ವಾರಸಾ ಮೂಲಕ ಇಲ್ಲವೆ

(ಬ) ಹಾಗೆ ವಾರಸಾದಿಂದ ಪಡೆದವನ ವಂಶಜದವನು ಮತ್ತು ಆ ಗಂಡು ಸಂತತಿಯಲ್ಲಿ ಅತ್ಯಂತ ಹಿರಿಯ ಗಂಡು ವಾರಸುದಾರ

(೨) ಒಬ್ಬನು ಉಪಕಲಂ (೧)ರ ಅನ್ವಯ ಆತನ ಪೂರ್ವಜರಿಂದ ಯಾವ ತಲೆಮಾರಿನಲಿ ಬರುವನೆಂದು ಲೆಕ್ಕ ಹಾಕಲು ಮತ್ತು ಅವನ ಸಂಬಂಧವನ್ನು ಎಲ್ಲಿಂದ ಹಾಗೂ ಯಾರಿಂದ ಅಂತಾ ಗೊತ್ತುಹಚ್ಚಲು ಆ ವ್ಯಕ್ತಿಯು ಮಧ್ಯಂತರದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯನ್ನು ಒಂದು ತಲೆಮಾರೆಂದು ಗ್ರಹಿಸಬೇಕು.

(೩) ಒಂದು ಅವಿಭಕ್ತ ಕುಟುಂಬದಲ್ಲಿ
ದಾಯಾದಿಗಳು ತಮ್ಮ ತಮ್ಮಲ್ಲಿ ಹಿಸ್ಸೆ (೯೩)
ವಾಟಣಿ ಆದರೆ ಯಾರು ತಮ್ಮ (೯೪)
ಹಿಸ್ಸೆ ತೆಗೆದುಕೊಂಡು ಬೇರೆಯಾಗಿರುತ್ತಾರೆಯೋ ತಮ್ಮ ತಮ್ಮಲ್ಲಿ ಬೇರೆಯಾಗಿದ್ದರೆ ಆತನ ನೇರ ಗಂಡು ಸಂತಾನಕ್ಕೆ ಸಂಬಂಧಿಸಿದಂತೆ ದಾಯಾದಿತ್ವ ಕೊನೆಗಾಣುತ್ತದೆ ಇಲ್ಲವೆ

(ಬ) ಒಬ್ಬನೇ ದಾಯಾದಿ (ಅವಿಭಕ್ತ ಕುಟುಂಬದ ಸದಸ್ಯನು) ತನ್ನ ಹಿಸ್ಸೆ ಪಡೆದು ಬೇರೆಯಾಗಿದ್ದರೆ ಈ ರೀತಿ ಅವನು ಬೇರೆಯಾದ ಒಂದೇ ಕಾರಣದಿಂದ ಆ ಅವಿಭಕ್ತ ಕುಟುಂಬದ ಸದಸ್ಯರು ದಾಯಾದಿಗಳು ತಮ್ಮತಮ್ಮಲ್ಲಿ ದಾಯಾದಿಗಳೆಂದು ಕೊನೆಗೊಳ್ಳುತ್ತಾರೆ.

(೪) ದಾಯಾದಿತ್ವ ಸದ್ಯಕ್ಕೆ ಇಬ್ಬರು ಇಲ್ಲವೆ ಹೆಚ್ಚಿನ ಗಂಡುಮಕ್ಕಳು ಇರುವ ಒಂದು ಸಮುದಾಯವಾಗಿದೆ.

(೯೫)

**೯೦. (ಕ) ದಾಯಾದಿತ್ವದ ಆಸ್ತಿಗಳ ಪರಿಣಾಮಗಳು** : ಕೆಳಗಣ ನಿಯಮಗಳು ಅವಿಭಕ್ತ ಕುಟುಂಬದ ಸದಸ್ಯರು ಈ ಅಧಿನಿಯಮವು ಜಾರಿಗೆ ಬರುವ ಪೂರ್ವದಲ್ಲಿ ಇಲ್ಲಿ ಜಾರಿಗೆ ಬಂದ ನಂತರ ಪಿತ್ರಾರ್ಜಿತ ಆಸ್ತಿಗಳನ್ನು ಗಳಿಸಿದ್ದರೆ ಕೆಳಗಣ ನಿಯಮಗಳು ಅನ್ವಯಿಸುತ್ತವೆ.

(ಅ) ಯಾವನು ಪಿತ್ರಾರ್ಜಿತ ಆಸ್ತಿ ಹೊಂದಿದ (೯೫)
ಮನೆತನದಲ್ಲಿ ಜನ್ಮವೆತ್ತಿದ ಕಾರಣದಿಂದ ಅವನಿಗೆ ಅವನ ತಂದೆಯ ಹಿಸ್ಸೆಗೆ ಸಮನಾಗಿ ಪಿತ್ರಾರ್ಜಿತ ಆಸ್ತಿಯಲ್ಲಿ ಹಿತಾಸಕ್ತಿ ಇರುತ್ತದೆ.

(ಬ) ಪ್ರತಿಯೊಬ್ಬ ದಾಯಾದಿ ಸದಸ್ಯನು ಆ ಆಸ್ತಿಯನ್ನು ಜಂಟಿ ಗೇಣಿದಾರನೆಂದು ಹೊಂದುತ್ತಾನೆ.

(ಕ) ಅಂತಹ ಯಾವುದೇ ದಾಯಾದಿ ಮರಣ ಹೊಂದಿದರೆ ಒಬ್ಬನೇ ಮುಖ್ಯಸ್ಥನನ್ನು ಹೊರತುಪಡಿಸಿ ಆತನ ಆಸ್ತಿಯಲ್ಲಿಯು ಹಿತಾಸಕ್ತಿಯು ಜೀವಿಸಿರುವ ಇತರ ದಾಯಾದಿಗಳಿಗೆ ಹೋಗುತ್ತದೆ. ಆದರೆ ಅವನಿಗೆ ವಾರಸಾ ನಾತೆಯಿಂದ ಅವನ ವಾರಸು ದಾರರಿಗೆ ಹೋಗುವುದಿಲ್ಲ.

(ಡ) ಖಂಡ (ಕ)ದಲ್ಲಿ ಏನೇ ಹೇಳಿದ್ದರೂ ಒಬ್ಬ ದಾಯಾದಿಯು ತೀರಿಕೊಂಡರೆ ಅವನ ಹೆಂಡತಿ ಮತ್ತು ಮಗಳು ಅವರಿಗೆ ಸಹ ಈ ಕೆಳಗಿನಂತೆ ಆಸ್ತಿಯಲ್ಲಿ ಹಿಸ್ಸೆ ದೊರೆಯುತ್ತದೆ.

(i) ವಿಧವೆಯ ವಿಷಯದಲ್ಲಿ ಅವಳು ಮಗನಿಗೆ ಸರಿಸಮನಾದ ಹಿತಾಸಕ್ತಿ ಉಳ್ಳವಳು ಅಂದರೆ ಮಗನಷ್ಟು ಪಾಲು ಪಡೆಯುವಳು.

(ii) ಲಗ್ನವಾಗದೆ ಇರುವ ಮಗಳು ಮಗನ ಹಿಸ್ಸೆಯ ಅರ್ಧದಷ್ಟು ಹಿಸ್ಸೆ ಪಡೆಯುವಳು. ಲಗ್ನವಾದ ಮಗಳು ಮಗನ ಹಿಸ್ಸೆಯ ೧/೪ದಷ್ಟು ಪಡೆಯುತ್ತಾಳೆ.

(೯೬)

**೯೦. ಡ. ಅವಿಭಕ್ತ ಕುಟುಂಬದ ಆಸ್ತಿಯನ್ನು ದಾಯಾದಿಗಳು ಹಸ್ತಾಂತರಗೊಳಿಸುವ ಹಕ್ಕು**– ಕಲಂ ೯೦ 'ಕ' ಮತ್ತು 'ಡ' ಇವುಗಳ ಉಪಬಂಧದ ಅನ್ವಯ ಯಾವುದೇ ದಾಯಾದಿ ಇಲ್ಲವೆ ಹೆಣ್ಣುಮಗಳು ಪಿತ್ರಾರ್ಜಿತ ಆಸ್ತಿಯನ್ನು ಪಡೆದರೆ ಅದು ಒಂದೇ ಕಾರಣದಿಂದ ಇಲ್ಲವೆ ದಾಯಾದಿಗಳೆಂಬ ಕಾರಣದಿಂದ ಆಸ್ತಿಯನ್ನು ಹಸ್ತಾಂತರಿಸುವ ಇಲ್ಲವೆ ಇನ್ನಾವುದೇ ಕಾರಣದಿಂದ ಆಸ್ತಿಯ ಮೇಲೆ ಭೋಜಾ ಕೂಡಿಸುವ ಹಕ್ಕು ಇರುವುದಿಲ್ಲ, ಇಲ್ಲವೆ ಅದು

ಅವಿಭಕ್ತ ಕುಟುಂಬದ ಆಸ್ತಿಯ ಮೇಲೆ ಹೀಗೆ ಮಾಡಲು ಬರುವುದಿಲ್ಲ. ಯಾವುದೇ ನ್ಯಾಯಾಲಯ ಅಂಥ ದಾಯಾದಿಗಳು ಮತ್ತು ಹೆಣ್ಣುಮಕ್ಕಳ ವಿರುದ್ಧ ಡಿಕ್ರಿ ಇರುವಾಗ, ಅದನ್ನು ಅಮಲಬಜಾವಣೆ ಮಾಡುವಾಗ ಅಂಥವರು ದಾಯಾದಿಗಳು ವೈಯಕ್ತಿಕ ಆಸ್ತಿಯ ಹಿತಾಸಕ್ತಿ ಇಲ್ಲವೆ ಹೆಣ್ಣುಮಕ್ಕಳು ಯಾರೇ ಇದ್ದರೂ ಅವರದು ಆಸ್ತಿಯಲ್ಲಿ ವೈಯಕ್ತಿಕ ಹಿತಾಸಕ್ತಿ ಹೊರತುಪಡಿಸಿ ಪಿತ್ರಾರ್ಜಿತ ಆಸ್ತಿಯ ಮೇಲೆ ಜಾರಿಮಾಡಲು ಬರುವುದಿಲ್ಲ.

(೯೭)

**೯೦. ಇ. ದಾಯಾದಿಗಳು ಅವಿಭಕ್ತ ಕುಟುಂಬದಲ್ಲಿ ಆಸ್ತಿ ಹಿಸ್ಸೆ (ವಾಟಣಿ) ಕೇಳುವ ಹಕ್ಕು–**

(೧) ಕಲಂ ೯೦ ಕ ಮತ್ತು ಖಂಡ(ಡ) ಕಾಣಿಸಿದ ಉಪಬಂಧ'ಗಳ ಕಾರಣದಿಂದ ಯಾವುದೇ ದಾಯಾದಿ ಇಲ್ಲವೆ ಹೆಣ್ಣುಮಗಳು ಪಿತ್ರಾರ್ಜಿತ ಆಸ್ತಿಯಲ್ಲಿ ಹಿತಾಸಕ್ತಿ ಹೊಂದಿದ್ದರೆ ಯಾವುದೇ ವೇಳೆಯಲ್ಲಿ ಉಳಿದ ದಾಯಾದಿಗಳು ಹಿಸ್ಸೆ ವಾಟಣಿಗೆ ಒಪ್ಪಲಿ ಇಲ್ಲ ಒಪ್ಪದಿರಲಿ ಅವರು ತಮ್ಮ ಪ್ರತ್ಯಕ್ಷ ಹಿಸ್ಸೆ ಕೇಳಲು ಹಕ್ಕುಳ್ಳವರಾಗಿದ್ದಾರೆ.

(೨) ಯಾವುದೇ ದಾಯಾದಿತ್ವ (ಅವಿ ಭಕ್ತ ಕುಟುಂಬ ಆಸ್ತಿಯಲ್ಲಿ) ಉಪಕಲಂ ೧ರಲ್ಲಿ ಹೇಳಿದಂತೆ ಆಸ್ತಿಯಲ್ಲಿ ಹಿತಾಸಕ್ತಿ ಹೊಂದಿದವನು ಹಾಗೆ ಪ್ರತ್ಯೇಕ ಹಿಸ್ಸೆ ಪಡೆದುಕೊಳ್ಳದೆ ಮತ್ತು ಅದನ್ನು ಪ್ರತ್ಯೇಕವಾಗಿ ಉಪಭೋಗಿಸದೆ ಮರಣ ಹೊಂದಿದರೆ ಆ ಆಸ್ತಿಯಲ್ಲಿಯ ಆಕೆಗೆ ಇರುವ ಹಕ್ಕು ಹಿತಾಸಕ್ತಿಯು ಆಕೆಯ ಮರಣದ ನಂತರ ಆಕೆಯ ದಾಯಾದಿತ್ವಗಳಿಗೆ ಮರಳಿ ಹೋಗುತ್ತದೆ.

(೯೮)

೯೦. **ಎಫ್. ಕೆಲವು ಪ್ರಕರಣಗಳಲ್ಲೇ ಒಬ್ಬ ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ದಾಯಾದಿಯ ಹಿಸ್ಸೆಯನ್ನು ಇನ್ನೊಬ್ಬ ದಾಯಾದಿ ಕೊಳ್ಳುವ ಹಕ್ಕುಗಳು ಮುಂತಾದವುಗಳು** ಕಲಂ ೯೦(ಡ) ದಲ್ಲಿ ಕಾಣಿಸಿದಂತೆ ಏನೇ ಹೇಳಿದ್ದರೂ ಒಬ್ಬ ದಾಯಾದಿಯು ಹಿಂದೂ ಧರ್ಮದಿಂದ ಬೇರೊಂದು ಧರ್ಮಕ್ಕೆ ಮತಾಂತರ ಹೊಂದಿದ್ದರೆ ಅವನ ಹಿಂದುತ್ವ ಮುಕ್ತಾಯಗೊಳ್ಳುತ್ತದೆ. ಇಲ್ಲವೆ ಒಬ್ಬ ಹೆಣ್ಣುಮಗಳು ಕಲಂ ೯೦ರ ಖಂಡ (ಡ) ಇದರ ಉಪಬಂಧಗಳಲ್ಲಿ ಕಾಣಿಸಿದ ಕಾರಣದಿಂದ ಹೆಣ್ಣುಮಗಳು ಪಿತ್ರಾರ್ಜಿತ ಆಸ್ತಿಯಲ್ಲಿ ಹಿತಾಸಕ್ತಿ ಹೊಂದಿದ್ದರೆ ಇಲ್ಲವೆ ಅವಳ ಹಿಸ್ಸೆ ಪ್ರತ್ಯೇಕವಾಗಿ ಪಡೆದು ಅವಳು ಉಪಭೋಗಿಸುತ್ತಿದ್ದಳು. ಮತ್ತು ಆಮೇಲೆ ವಾಟಣಿ ಅಧಿನಿಯಮ ೧೮೯೩ (೧೮೯೩ನೆಯ ೪ನೆಯ ಅಧಿನಿಯಮ) ಅದು ಅನ್ವಯಿಸುತ್ತದೆ. ಅಲ್ಲಿ ವಾಟಣಿ ಈಗಾಗಲೇ ಆಗಿದೆಯೆಂದು ಮತ್ತು ದಾಯಾದಿತ್ವವು ಹೆಣ್ಣುಮಗಳು ಹಿಂದೂ ಆಗಿ ಉಳಿದಿಲ್ಲವೆಂದೂ ಯಾರೇ ಇರಲಿ ಆ ದಾಯಾದಿಗಳ ಅವಿಭಕ್ತ ಕುಟುಂಬದ ಮನೆಯನ್ನು ಯಾರ ಹಿಸ್ಸೆಗೆ ವರ್ಗಾಹಿಸಲಾಗಿದೆಯೋ ಅವರಿಗೆ ಅನ್ವಯಿಸುವಂತೆ ಇತರ ದಾಯಾದಿಗಳಿಗೂ ಅನ್ವಯಿಸುತ್ತದೆ.

(೯೯)

೯೦ **ಜಿ. ವಾಟಣಿ : ಹಿಸ್ಸೆ ಆದನಂತರ ಹಿಸ್ಸೆಗಳನ್ನು ಹಂಚುವುದು–**

ಅವಿಭಕ್ತ ಕುಟುಂಬದ ಸದಸ್ಯರಲ್ಲಿ ಈ ದಾಯಾದಿಗಳು ತಮ್ಮತಮ್ಮಲ್ಲಿ ಹಿಸ್ಸೆ ವಾಟಣಿ

ಮಾಡಿಕೊಂಡರೆ ಅವರ ಹಿಸ್ಸೆಗಳನ್ನು ನಿಯಂತ್ರಿಸುವ ಕುರಿತು ಕೆಳಗಣ ನಿಯಮಗಳು ಅನ್ವಯಿಸುತ್ತವೆ ಅವುಗಳೆಂದರೆ–

(ಅ) ಹಿಸ್ಸೆ ವಾಟಣಿ ತಂದೆ ಹಾಗೂ ಮಕ್ಕಳಲ್ಲಿ ಆದರೆ ಮಗನು ತಂದೆಯ ಹಿಸ್ಸೆಗೆ ಸಮನಾಗಿ ಹಿಸ್ಸೆ ಪಡೆಯುತ್ತಾನೆ.

(ಬ) ಅಣ್ಣ ತಮ್ಮಂದಿರಲ್ಲೆ ಹಿಸ್ಸೆ ವಾಟಣಿ ಆದರೆ ಅವರೆಲ್ಲರೂ ಸಮನಾಗಿ ತಮ್ಮ ತಮ್ಮ ಹಿಸ್ಸೆ ಪಡೆಯುತ್ತಾರೆ.

(ಕ) ವಾಟಣಿಯು ಮನೆತನದ ಬೇರೆ ಶಾಖೆಗಳ ದಾಯಾದಿಗಳಲ್ಲಿ ಹಿಸ್ಸೆ ಆದರೆ ಆ ಆಸ್ತಿಯನ್ನು ಸರಿಯಾಗಿ ಎಷ್ಟು ಶಾಖೆಗಳು ಇರುವವೋ ಅಷ್ಟು ಶಾಖೆಗಳಲ್ಲಿ ಭಾಗಿಸಿ, ಆಯಾ ಭಾಗಮಾಡಿ ಅವರಲ್ಲಿ ಹಂಚಬೇಕು.

(ಡ) ಒಂದೇ ಶಾಖೆಯ ದಾಯಾದಿಗಳಲ್ಲಿ ಹಿಸ್ಸೆ ಆದರೆ ಆಸ್ತಿಯನ್ನು ಎಷ್ಟು ಜನರಿರುವರೋ ಅಷ್ಟೇ ಭಾಗಮಾಡಿ ಹಂಚಬೇಕು.

(೧೦೦)

೯೦. **ಎಚ್. ದಾಯಾದಿತ್ವವನ್ನು ಕೊನೆಗಾಣಿಸುವುದು–** ಎಲ್ಲಿಯುವರೆಗೆ ಆ ಮನೆತನದಲ್ಲಿ ಬೇರೊಬ್ಬ ದಾಯಾದಿಯು ಇರುವುದಿಲ್ಲವೋ ಅಲ್ಲಿಯವರೆಗೆ ಅವನು ಪಿತ್ರಾರ್ಜಿತ ಆಸ್ತಿ ಹೊಂದಿದ್ದರೆ ಅವನು ಆ ಆಸ್ತಿಯು ಸಂಪೂರ್ಣವಾಗಿ ಏಕೈಕ ಮಾಲೀಕನಾಗಿ ಆಸ್ತಿಯನ್ನು ಉಪಭೋಗ ಮಾಡುತ್ತಾನೆ ಮತ್ತು ಆತನ ಮರಣದ ನಂತರ ಆ ಆಸ್ತಿಯು ಆತನ ವಾರಸಾನಾತೆಯಿಂದ ಅವನ ವಾರಸುದಾರರಿಗೆ ಹೋಗುತ್ತದೆ. ಆದರೆ ಜೀವಂತ ಇರುವರೆಂಬ ಕಾರಣದಿಂದ ಉಳಿದವರಿಗೆ ಅದು ಹೋಗುವುದಿಲ್ಲ.

(೧೦೧)

## ಅಧ್ಯಾಯ ೩

## ಮರುಮಕ್ಕತ್ತಾಯಂ, ಅಳಿಯ ಸಂತಾನ, ಮತ್ತು ನಂಬೂದ್ರಿ ಅವಿಭಕ್ತ ಕುಟುಂಬಗಳು

**೯೦. ಆಯ್. ಮರುಮಕ್ಕತ್ತಾಯಂ, ಅಳಿಯ ಸಂತಾನ ಮತ್ತು ನಂಬೂದ್ರಿ ಅವಿಭಕ್ತ ಕುಟುಂಬಗಳ ಬಗೆಗೆ ವಿಶೇಷ ಉಪಬಂಧಗಳು.** ಈ ಅಧ್ಯಾಯದಲ್ಲಿ ಕಾಣಿಸಿದ ಯಾವುದೇ ವಿಷಯವು ತಾರವಾಡ, ತವಾಝಿ, ಕುಟುಂಬ, ಕವರು ಇಲ್ಲವೆ ಇಲ್ಲಂ ಇವುಗಳಿಗೆ ಇಲ್ಲವೆ ಈ ಅಧಿನಿಯುಮವು ಪಾಸಾಗದಿದ್ದರೆ ಮರುಮಕ್ಕತ್ತಾಯಂ, ಅಳಿಯ ಸಂತಾನ ಇಲ್ಲವೆ ನಂಬೂದ್ರಿ ಕಾನೂನು ಅನ್ವಯಿಸುತ್ತಿತ್ತು. ಈ ಅಧಿನಿಯಮದಲ್ಲಿ ಏನೇ ಹೇಳಿದ್ದರೂ, ಎಲ್ಲ ವಿಷಯಗಳು (ಹಕ್ಕಿಗೆ ಸಂಬಂಧಿಸಿ ವಾರಸಾ ಮೂಲಕ ಇಲ್ಲವೆ ಬೇರೆ ಇನ್ನಾವುದೋ ಮೂಲಕ) ಯಾವುದೇ ವ್ಯಕ್ತಿ, ತಾರವಾಡ, ತವಝಿ, ಕುಟುಂಬ, ಕವರು ಅಥವಾ ಇಲ್ಲಂ ಈ ಜನರ ಆಸ್ತಿ ವ್ಯವಸ್ಥೆ ಇಲ್ಲವೆ ಹಿಸ್ಸೆ ದಿಸೆ ವಾಟಣಿ ಮಾಡಿಕೊಳ್ಳುವ ಕುರಿತು ಈ ಆಸ್ತಿಗಳನ್ನು ಕುರಿತು ಕಾನೂನಿನ ಅನ್ವಯ ಅದನ್ನು ಮುಂದುವರೆಯಿಸಿಕೊಂಡು ಹೋಗತಕ್ಕದ್ದು. ಈ ಅಧಿನಿಯುಮವು ಜಾರಿಯಲ್ಲಿ ಬರುವ ಪೂರ್ವದಲ್ಲೇ ಆಸ್ತಿತ್ವದಲ್ಲಿ ಆ ಕಾನೂನು ಈ ಅಧಿನಿಯಮದ ಅನ್ವಯ ನಿರಸನಗೊಳಿಸದಿದ್ದರೆ ಆ ಕಾನೂನು ಜಾರಿಯಲ್ಲಿರುತ್ತದೆ.

(೧೦೨)

**ಅಧ್ಯಾಯ ೪**

**ಸಮ್ಮಿಶ್ರ**

**೯೦. ಜಿ. ಉಳಿಸುವಿಕೆ :** ಈ ಭಾಗದಲ್ಲಿ ಕಾಣಿಸಿದ್ದು ಯಾವುದೂ ಕೆಳಗಣ ವಿಷಯಕ್ಕೆ ಅನ್ವಯಿಸುವುದಿಲ್ಲ. (ಅ) ಯಾವುದೇ ಆಸ್ತಿಯೂ ಒಬ್ಬನಿಗೆ – ವಾರಸಾ ನಾತೆಯಿಂದ ಇಲ್ಲವೆ ಯಾವುದೇ ರೂಢಿ ಸಾಂಪ್ರದಾಯದ ಮೂಲಕ ವಾರಸಾದಿಂದ ಇಲ್ಲವೆ ಯಾವುದೇ ಅನುದಾನದಿಂದ ಇಲ್ಲವೆ ಶಾಸನದ ಅನ್ವಯ ಬಂದರೆ, ಇಲ್ಲವೆ.

ಬ) ಯಾವುದೇ ಆಸ್ತಿಯು ಸ್ಥಾನಂ (ಆ ಹುದ್ದೆಯ ಗೌರವ ಕಾಯಲು) ಮತ್ತು ಒಬ್ಬನೇ ಆ ಆಸ್ತಿಯನ್ನು ಕಾಲಕಾಲಕ್ಕೆ ಉಪಭೋಗ ಮಾಡುತ್ತ ಯಾವುದೇ ಕಾನೂನಿನ ಮೂಲಕ ಉಪಯೋಗಿಸುತ್ತಿದ್ದರೆ, ಇಲ್ಲವೆ ಆ ರಾಜ್ಯದ ರೂಢಿ ಸಂಪ್ರದಾಯದ ಪ್ರಕಾರ ತಿರುವಾಂಕೂರು, ಕೋಚಿನ್ ರಾಜ್ಯಗಳಲ್ಲಿ ಪ್ರಚಲಿತವಿರುವ ಇಲ್ಲವೆ ಮಲಬಾರ, ದಕ್ಷಿಣ ಕನ್ನಡ ಮತ್ತು ನೀಲಗಿರಿ – ಮದ್ರಾಸ ರಾಜ್ಯದ ಈ ಜಿಲ್ಲೆಗಳಲ್ಲಿ ಪ್ರಚಾರದಲ್ಲಿರುವ ರೂಢಿ ಸಂಪ್ರದಾಯಗಳು ಇಲ್ಲವೆ

ಕ) ಕೆಳಗೆ ಕಾಣಿಸಿದ ಆಸ್ತಿಗಳು ತಿರುವಾಂಕೂರು, ಕೋಚಿನ್ ರಾಜ್ಯಗಳಲ್ಲಿ ಜಾರಿಯಲ್ಲಿರುವ ರೂಢಿ ಸಂಪ್ರದಾಯದಂತೆ ಆಸ್ತಿಗಳು ಅವು ಯಾವುವೆಂದರೆ– ಇಡಪಲ್ಲಿ, ಪೂಂಜಾ, ಮತ್ತು ಕಿಲಿಮನ್ನೂರ ಇಸ್ಟೇಟುಗಳು ಮತ್ತು ವಲಿಯುವಮ್, ತಾಂಪುರಂ ಕೋವಿಲಗಮ್, ಇಸ್ಟೇಟ ಅರಮನೆಯ ನಿಧಿಯನ್ನೊಳಗೊಂಡು.

(೧೦೨)

**೯೦. ವಿಭಜನೆ ಮಾಡಲು ಬಾರದಂತಹ ಎಸ್ಟೇಟುಗಳು–** ಈ ಅಧ್ಯಾಯದಲ್ಲಿ ಕಾಣಿಸಿದ ಯಾವುದೇ ವಿಷಯವು ಒಬ್ಬನೇ ವ್ಯಕ್ತಿ ವಾರಸ ಮೂಲಕ ರೂಢಿ ಸಾಂಪ್ರದಾಯಿಕ ವಾರಸಾ ಕಾನೂನಿನಿಂದ ಇಲ್ಲವೆ ಯಾವುದೇ ಅನುದಾನದಿಂದ ಇಲ್ಲವೆ ಶಾಸನದ ಮೂಲಕ ಬಂದುದು.

(೧೦೩)

ಭಾಗ ೬

ಹೆಣ್ಣುಮಕ್ಕಳ ಆಸ್ತಿ

**೯೧. ಹೆಣ್ಣು ಮಕ್ಕಳ ಆಸ್ತಿಯ ಸ್ವರೂಪ:**

(೧) ಯಾವುದೇ ಆಸ್ತಿಯನ್ನು ಹೆಣ್ಣು ಮಕ್ಕಳು ಈ ಅಧಿನಿಯಮವು ಜಾರಿಯಲ್ಲಿ ಬಂದನಂತರ ಸಂಪಾದಿಸಿದ್ದರೆ ಅದು ಅವಳ ಸಂಪೂರ್ಣ ಮಾಲ್ಕಿ ಆಸ್ತಿಯಾಗುತ್ತದೆ.

ಉಪಕಲಮ (೧) ರಲ್ಲಿ ಕಾಣಿಸಿದ್ದು ಯಾವುದೇ ಒಬ್ಬ ಹೆಣ್ಣುಮಗಳು ಒಂದು ಆಸ್ತಿಯನ್ನು ಬಕ್ಷೀಸು ತರೀಖು ಪಡೆದಿದ್ದರೆ ಇಲ್ಲವೆ ಒಂದು ಮೃತ್ಯುಪತ್ರದ ಮೂಲಕ ಪಡೆದಿದ್ದರೆ ಆ ಬಕ್ಷೀಸು ಪತ್ರದಲ್ಲಿ ಇಲ್ಲವೆ ಮೃತ್ಯು ಪತ್ರದಲ್ಲಿ ಸ್ಪಷ್ಟವಾಗಿ ಇಲ್ಲವೆ ಅದರಲ್ಲಿ ಅವಶ್ಯವಾಗಿ ಅಡಕವಾಗಿರುವ ಅಂತರ್ಗತ ಕರಾರುಗಳ ಮೇಲಿಂದ ಆ ಆಸ್ತಿಯು ಅವಳಿಗೆ ಸೀಮಿತ ಅಧಿಕಾರಕೊಟ್ಟರೆ.

**ಪರಂತು,** ಇಂತಹ ಯಾವುದೇ ಅಂತರ್ಗತ ಕರಾರುಗಳು ಅವಳು ಕೇವಲ ಹೆಣ್ಣುಮಗಳಾಗಿರುವ ಕಾರಣದಿಂದ ಮಾತ್ರ ಅಂತಹ ಅಂತರ್ಗತ ಕರಾರು ಉಂಟಾಗಬಾರದು.

**ವಿವರಣೆ :** ಈ ಕಲಮಿನಲ್ಲಿ ಆಸ್ತಿ ಅಂದರೆ ಸ್ಥಿರ ಹಾಗೂ ಚರ ಆಸ್ತಿಗಳು ಒಬ್ಬ ಹೆಣ್ಣುಮಗಳು ಸಂಪಾದಿಸಿದ್ದು, ಅಂತಹ ಸಂಪಾದನೆಯು ಅವಳ ಮದುವೆಗಿಂತ ಪೂರ್ವದಲ್ಲಿ ಸಂಪಾದಿಸಿದ್ದೋ ಅಥವಾ ಅವಳ ಮದುವೆಯ ನಂತರ ಸಂಪಾದಿಸಿದ್ದೋ ಅಥವಾ ಅವಳು ವಿಧವೆಯಾದಾಗ ಸಂಪಾದಿಸಿದ್ದೋ ಇಲ್ಲವೆ ಅವಳು

(೧೦೩)

ಭಾಗ ೬

ಹೆಣ್ಣುಮಕ್ಕಳ ಆಸ್ತಿ

**೯೧. ಹೆಣ್ಣುಮಕ್ಕಳ ಆಸ್ತಿಯ ಸ್ವರೂಪ:**

(೧) ಯಾವುದೇ ಆಸ್ತಿ ಒಬ್ಬ ಹೆಣ್ಣು ಮಗಳು ಈ ಅಧಿನಿಯಮ ಜಾರಿಗೆ ಬಂದ ನಂತರ ಅವಳು ಆ ಆಸ್ತಿ ಸಂಪಾದಿಸಿದ್ದರೆ, ಅದು ಅವಳ ಸಂಪೂರ್ಣ ಮಾಲ್ಕಿ ಆಸ್ತಿಯಾಗುತ್ತದೆ.

**ಭಾಗ–೨ ಕಲಂ–೧೩ ಪುಟ–೯**

(೨) ಉಪಕಲಂ (೧) ರಲ್ಲಿ ಕಾಣಿಸಿದ ಯಾವುದೇ ವಿಷಯವು ಯಾವ ಒಬ್ಬ ಹೆಣ್ಣುಮಗಳೂ ಬಕ್ಷೀಸು ಮೂಲಕ ಇಲ್ಲವೆ ಮೃತ್ಯುಪತ್ರದಲ್ಲಿ ಸ್ಪಷ್ಟವಾಗಿ ವ್ಯಕ್ತಮಾಡಿದ್ದರೆ ಇಲ್ಲವೆ ಅವಶ್ಯಕವಾಗಿ ಅಡಕವಾದ ಕರಾರುಗಳ ಪ್ರಕಾರ ಅವಳಿಗೆ ಆ ಆಸ್ತಿಯಲ್ಲಿ ಸೀಮಿತ ಅಧಿಕಾರವನ್ನು ಕೊಟ್ಟಿದ್ದರೆ.

**ಪರಂತು** ಅಂತಹ ಯಾವುದೇ ಅಡಕವಾದ ಕರಾರು ಅವಳು ಹೆಣ್ಣುಮಗಳು ಅನ್ನುವ ಒಂದೇ ಕಾರಣದಿಂದ ಉಂಟಾಗಿದ್ದರೆ.

**ವಿವರಣೆ :** ಇ ಕಲಮಿನಲ್ಲಿ 'ಆಸ್ತಿ' ಅಂದರೆ ಚರ ಆಸ್ತಿ ಹಾಗೂ ಸ್ಥಿರ ಆಸ್ತಿಗಳೆರಡನ್ನೂ ಒಬ್ಬ ಹೆಣ್ಣುಮಗಳು ಪಡೆದುಕೊಂಡಿದ್ದರೆ ಅಂತಹ ಆಸ್ತಿಯನ್ನು ಅವಳು ತನ್ನ ಮದುವೆ ಪೂರ್ವದಲ್ಲಿ ಇಲ್ಲವೆ ನಂತರ ಸಂಪಾದಿಸಿದ್ದು, ಇಲ್ಲವೆ ಅವಳು ವಿಧವೆಯಾದ ನಂತರ ಪಡೆದುಕೊಂಡದ್ದು, ಇಲ್ಲವೆ ವಾರಸಾದಿಂದ ಪಡೆದುಕೊಂಡದ್ದು, ಇಲ್ಲವೆ ಒಬ್ಬನು ತನ್ನ ಕೊನೆಯ ಇಷ್ಟಪತ್ರದ ಮೂಲಕ ಕೊಟ್ಟ ಸ್ಥಿರ ಆಸ್ತಿಯೋ, ಇಲ್ಲವೆ ವಾಟಣಿ ಮೂಲಕ ಇಲ್ಲವೆ ಅವಳ ಉಪಜೀವನದ ಬದಲು ಕೊಟ್ಟ ಆಸ್ತಿಯೋ ಇಲ್ಲವೆ ಅವಳಿಗೆ ಕೊಡಬೇಕಾದ ಉಪಜೀವನದ

ಅದನ್ನು ವಾರಸಾ ನಾತೆಯಿಂದ ಪಡೆದಿರುವಳೋ ಇಲ್ಲವೆ ಅಂತಿಮ ಮೃತ್ಯುಪತ್ರದ ಮೂಲಕ ಸ್ಥಿರ ಆಸ್ತಿ ಬರೆದು ಕೊಟ್ಟುದರಿಂದ ಬಂದ ಆಸ್ತಿಯೋ ಇಲ್ಲವೆ ವಾಟಣಿ ಮಾಡಿದ್ದರ ಮೂಲಕ ಬಂದ ಆಸ್ತಿಯೋ, ಇಲ್ಲವೆ ಅವಳ ಉಪಜೀವನದ ಸಲುವಾಗಿ ಕೊಟ್ಟ ಆಸ್ತಿಯೋ, ಇಲ್ಲವೆ ಅವಳಿಗೆ ಕೊಡಬೇಕಾದ ಉಪಜೀವನದ ಬಾಕಿ ಹಣದ ಸಲುವಾಗಿ ಕೊಟ್ಟ ಆಸ್ತಿಯೋ, ಇಲ್ಲವೆ ಯಾವನೊಬ್ಬನು ಅವಳಿಗೆ ಬಕ್ಷೀಸು ತರೀಖ ಕೊಟ್ಟಿದ್ದೊ, ಅವನು ಸಂಬಂಧಿಕನು ಅಹುದೋ, ಇಲ್ಲವೋ, ಇಲ್ಲವೆ ಅವಳು ತನ್ನ ವಿದ್ಯೆಯಿಂದ : ನೈಪುಣ್ಯತೆಯಿಂದ ಇಲ್ಲವೆ ಅವಳು ತನ್ನ ಶ್ರಮದಿಂದ ಇಲ್ಲವೆ ಅದನ್ನು ಕೊಳ್ಳುವುದರಿಂದ ಇಲ್ಲವೆ ಆಸ್ತಿಯ ಉಪ ಭೋಗದಿಂದ ಇಲ್ಲವೆ ಇನ್ನಾವುದೋ ರೀತಿಯಲ್ಲಿ ಸಂಪಾದಿಸಿದ ಆಸ್ತಿಯು.

(೧೦೪)

**೯೨. ಹೆಣ್ಣುಮಕ್ಕಳ ಆಸ್ತಿಯು ಪ್ರಾಪ್ತವಾಗುವುದು:**

(೧) ಈ ಅಧಿನಿಯಮವು ಜಾರಿಗೆ ಬಂದ ನಂತರ ಯಾವುದೇ ಹೆಣ್ಣುಮಗಳು ತೀರಿಕೊಂಡರೆ ಅವಳ ಆಸ್ತಿಯು ಅವಳು ಸಂಪಾದಿಸಿದ್ದು ಅಂತಹ ಸಂಪಾದಿಸಿದ ಆಸ್ತಿಯು ಈ ಅಧಿನಿಯಮವು ಜಾರಿಯಲ್ಲಿ ಬರುವ ಪೂರ್ವದಲ್ಲಿ ಸಂಪಾದಿಸಿದ್ದೋ, ಇಲ್ಲವೆ ಈ ಅಧಿನಿಯಮವು ಜಾರಿಗೆ ಬಂದ ನಂತರ ಸಂಪಾದಿಸಿದರುವಳೋ, ಅದು ಪಾಲು ಮಾಡಲು ಬರುವಂತಹ ಆಸ್ತಿ ಆಗಿದ್ದರೆ, ಅದು ಅವಳ ವಾರಸುದಾರರಿಗೆ ಭಾಗ ೭ರ ಅನ್ವಯ ಹೋಗುತ್ತದೆ.

(೨) ಉಪಕಲಮು (೧)ರಲ್ಲಿ ಕಾಣಿಸಿದ ಯಾವುದೇ ವಿಷಯವು ಯಾವುದೇ

ಬಾಕಿ ಹಣದ ಬಗ್ಗೆ ಕೊಟ್ಟ ಆಸ್ತಿಯೋ ಇಲ್ಲವೆ ಯಾವುದೇ ವ್ಯಕ್ತಿಯಿಂದ ಬಕ್ಷೀಸ ರೀತಿಯಿಂದ ಬಂದದ್ದು ಅವನು ಸಂಬಂಧಿಕನು ಅಹುದೋ ಅಲ್ಲವೋ ಇಲ್ಲವೆ ಅವಳು ತನ್ನ ನೈಪುಣ್ಯತೆಯಿಂದ ಇಲ್ಲವೆ ತನ್ನ ಶ್ರಮದಿಂದ ಗಳಿಸಿದ್ದು ಇಲ್ಲವೆ ಕೊಳ್ಳುವುದರಿಂದ ಇಲ್ಲವೆ ಚಿರಭೋಗದಿಂದ ಇಲ್ಲವೆ ಇನ್ನಾವುದೋ ರೀತಿಯಿಂದ ಬಂದದ್ದು.

(೧೦೪)

**೯೨. ಹೆಣ್ಣು ಮಕ್ಕಳ ಆಸ್ತಿಯ ವಿತರಣೆ:**

೧. ಯಾವುದೇ ಹೆಣ್ಣು ಮಗಳು ಈ ಅಧಿನಿಯಮವು ಜಾರಿಯಲ್ಲಿ ಬಂದ ನಂತರ ತೀರಿಕೊಂಡರೆ ಅವಳು ಸಂಪಾದಿಸಿದ ಯಾವುದೇ ಆಸ್ತಿಯು ಅವಳು ಈ ಅಧಿನಿಯಮವು ಜಾರಿಯಲ್ಲಿ ಬಂದ ನಂತರ ಸಂಪಾದಿಸಿದಳೋ ಇಲ್ಲವೆ ಈ ಅಧಿನಿಯಮವು ಜಾರಿಗೆ ಬರುವ ಪೂರ್ವದಲ್ಲಿ ಸಂಪಾದಿಸಿದಳೋ ಅದು ಪಾಲು ಮಾಡಲು ಬರುವ ಆಸ್ತಿಯಾಗಿದ್ದರೆ ಅದು ಅವಳ ವಾರಸುದಾರರಿಗೆ ಭಾಗ ೭ರಲ್ಲಿ ಕಾಣಿಸಿದಂತೆ ಹೋಗುತ್ತದೆ. **ಭಾಗ–೨ ಕಲಂ–೩ ಪುಟ–೩**

೨. ಉಪಕಲಂ (೧)ರಲ್ಲಿ ಕಾಣಿಸಿದ್ದು ಯಾವುದು, ಯಾವುದೇ ಹೆಣ್ಣು ಮಗಳು

ಹೆಣ್ಣುಮಗಳ ಆಸ್ತಿಯು ಅವಳ ಮರಣದ ಕಾಲಕ್ಕೆ ಅವಳಿಗೆ ಸೀಮಿತ ಅಧಿಕಾರವು ಹಿಂದೂ ಹೆಣ್ಣುಮಕ್ಕಳ ಆಸ್ತಿ ಅಧಿನಿಯಮದ ಅನ್ವಯ ಅಂತಹ ಆಸ್ತಿಯು ಅವಳ ಮರಣದ ನಂತರ ಕೆಳಗಿನಂತೆ ಹೋಗುತ್ತದೆ.

(೧) ಎಲ್ಲಿ ಅಂತಹ ಆಸ್ತಿಯನ್ನು ವಾರಸಾ ಮೂಲಕ ಅವಳಿಗೆ ಕೊಡಲಾಗಿದೆಯೋ, ಅಂತಹ ಆಸ್ತಿಯು ಭಾಗ ೭ರ ಕೆಳಗೆ ಕಾಣಿಸಿದಂತೆ ಅವಳ ಆ ಆಸ್ತಿಗೆ ಸಂಪೂರ್ಣ ಮಾಲೀಕರಾಗಿರುತ್ತಾರೆ, ಒಂದು ವೇಳೆ ಅಂತಹ ವ್ಯಕ್ತಿಯು ಮೃತ್ಯುಪತ್ರವಿಲ್ಲದೆ ಆ ಹೆಣ್ಣುಮಗಳ ಮರಣವಾದ ಕೂಡಲೆ ಅವನೂ ತೀರಿಕೊಂಡರೆ

(೨) ಎಲ್ಲಿ ಇಂತಹ ಸೀಮಿತ ಆಸ್ತಿಯು ವಾಟಣಿ ಕಾಲಕ್ಕೆ ಪಡೆದುಕೊಂಡಿದ್ದು ಇಲ್ಲವೆ ಇನ್ನು ಯಾವುದೇ ರೀತಿಯಿಂದ ಪಡೆದುಕೊಂಡದ್ದು, ಇದರಲ್ಲಿ ಉಪಬಂಧಿಸದೇ ಇರುವುದು, ಅಂತಹ ಆಸ್ತಿಯು ಈ ಅಧಿನಿಯಮವು ಪಾಸಾಗಿ ಜಾರಿಯಲ್ಲಿ ಬರದಿದ್ದರೆ ಯಾರಿಗೆ ಹೋಗುತ್ತಿತ್ತೋ ಅಂತಹ ವ್ಯಕ್ತಿಗೆ ಪ್ರಾಪ್ತಿಯಾಗುತ್ತದೆ.

(೧೦೫)

**೯೨. ಹೆಂಡತಿಗೆ ಕೊಟ್ಟ ವರದಕ್ಷಿಣೆಯ ಹಣವನ್ನು ನ್ಯಾಸರೂಪದಲ್ಲಿಡತಕ್ಕದ್ದು.**

(೧) ಈ ಅಧಿನಿಯಮವು ಜಾರಿಗೆ ಬಂದ ನಂತರ ಯಾವುದೇ ವಿವಾಹವು ನಡೆಯುವ ಸಂದರ್ಭದಲ್ಲಿ ಇಲ್ಲವೆ ಕರಾರು ಇದ್ದರೆ ಇಲ್ಲವೆ ಆ ಮದುವೆಗೆ ಪ್ರತಿಫಲವಾಗಿ ಕೊಟ್ಟ ವರದಕ್ಷಿಣೆಯ

ಅವಳ ತನ್ನ ಮರಣದ ಕಾಲಕ್ಕೆ ಆ ಆಸ್ತಿಯಲ್ಲಿ ಅವಳಿಗೆ ಸೀಮಿತ ಅಧಿಕಾರವಿದ್ದರೆ ಅದು ಹಿಂದೂ ಹೆಣ್ಣುಮಗಳ ಆಸ್ತಿ ಅಧಿನಿಯಮದ ಅನ್ವಯ ಇದ್ದರೆ, ಅಂತಹ ಆಸ್ತಿಯು ಈ ಕೆಳಗೆ ಕಾಣಿಸಿದಂತೆ ಹೋಗುತ್ತದೆ.

(೧) ಎಲ್ಲಿ ಇಂತಹ ಸೀಮಿತ ಆಸ್ತಿಯು ವಾರಸಾ ಮೂಲಕ ಪಡೆದುಕೊಂಡದ್ದು ಅದು ಭಾಗ ೭ರಲ್ಲಿ ಕಾಣಿಸಿದ ವ್ಯಕ್ತಿಗಳಿಗೆ ಹೋಗುತ್ತದೆ. ಅವರು ಆ ಆಸ್ತಿಯ ಸಂಪೂರ್ಣ ಮಾಲೀಕರು ಆಗಿರುತ್ತಾರೆ. ಅಂಥ ಮಾಲೀಕರು ಮೃತ್ಯುಪತ್ರವಿಲ್ಲದೆ, ಅವಳ ಮರಣದ ನಂತರ ಅವರು ತೀರಿಕೊಂಡರೆ,

(೨) ಎಲ್ಲಿ ಅಂತಹ ಸೀಮಿತ ಅಧಿಕಾರವುಳ್ಳ ಆಸ್ತಿಯನ್ನು ವಾಟಣಿ ಮೂಲಕ ಪಡೆದುಕೊಂಡರೆ, ಇಲ್ಲವೆ ಇನ್ನಾವುದೇ ರೀತಿಯಲ್ಲಿ ಇಲ್ಲಿ ಉಪಬಂಧಿಸದೆ ಇರುವಂತಹದ್ದು ಅದು ಅಂತಹ ವ್ಯಕ್ತಿಗಳಿಗೆ ಅಂದರೆ ಈ ಅಧಿನಿಯಮವು ಪಾಸಾಗಿ ಜಾರಿಯಲ್ಲಿ ಬರದಿದ್ದರೆ, ಯಾರಿಗೆ ಹೋಗಬಹುದಿತ್ತೋ ಅಂತಹವರಿಗೆ ಹೋಗುತ್ತದೆ.

(೧೦೫)

**೯೩. ವರದಕ್ಷಿಣೆಯು ಹೆಂಡತಿಗೆ ಕೊಟ್ಟ ನ್ಯಾಸ**

(೧) ಈ ಅಧಿನಿಯಮವು ಜಾರಿಯಲ್ಲಿ ಬಂದ ನಂತರ ಯಾವುದೇ ಲಗ್ನಕ್ಕೆ ಸಂಬಂಧಿಸಿದಂತೆ ಆ ಲಗ್ನದ ಕಾಲಕ್ಕೆ ಕೊಟ್ಟ ವರದಕ್ಷಿಣೆ, ಇಲ್ಲವೆ ಆ ಕರಾರುಗಳೊಂದಿಗೆ ಇಲ್ಲವೆ ಅಂತಹ

**ಭಾಗ–೪ ಕಲಂ–೨೮ ಪುಟ–೨೦**

ಹಣವು ಆ ಹೆಣ್ಣು ಮಗಳ ಆಸ್ತಿಯೆಂದು ಗ್ರಹಿಸತಕ್ಕದ್ದು.

(೨) ಈ ರೀತಿ ಲಗ್ನವಾದ ಮೇಲೆ, ಮೇಲೆ ಹೇಳಿದಂತೆ ಯಾರು ಆ ವರದಕ್ಷಿಣೆಯನ್ನು ಲಗ್ನವಾದ ಹೆಣ್ಣುಮಗಳ ಹೊರತುಪಡಿಸಿ, ಉಳಿದವರು ಯಾರು ಆ ಹಣವನ್ನು ಸ್ವೀಕರಿಸುತ್ತಾರೆಯೋ ಅವರು ಆ ಹೆಣ್ಣುಮಗಳ ಹಿತಕ್ಕಾಗಿ ಹಾಗೂ ಆ ಹೆಣ್ಣುಮಗಳ ವೈಯುಕ್ತಿಕ ಉಪಯೋಗಕ್ಕಾಗಿ ಆ ಹಣವನ್ನು ನ್ಯಾಸವನ್ನಾಗಿ ಇಡಬೇಕು. ಅವಳು ೧೮ ವರ್ಷದವಳಾದ ನಂತರ ಆ ಹಣವನ್ನು ಆ ಹೆಣ್ಣುಮಗಳ ಹೆಸರಿಗೆ ವರ್ಗಾಯಿಸಬೇಕು. ಇಲ್ಲವೆ ಅವಳು ೧೮ ವರ್ಷ ಪೂರೈಸುವ ಪೂರ್ವದಲ್ಲಿ ಮರಣ ಹೊಂದಿದರೆ ಆಗ ಭಾಗ ೭ರಲ್ಲಿ ನಿರ್ದಿಷ್ಟಪಡಿಸಿದ ಅವಳ ವಾರಸುದಾರರಿಗೆ ವರ್ಗಾಯಿಸಬೇಕು.

**ವಿವರಣೆ** : ಈ ಕಲುಮಿನಲ್ಲಿ **'ವರದಕ್ಷಿಣೆ'** ಇದು ಅಂದರೆ ಯಾವುದೇ ವರ್ಗಾಯಿಸಿದ ಇಲ್ಲವೆ ವರ್ಗಾಯಿಸಲು ಒಪ್ಪಿದ ಆಸ್ತಿ ಇಲ್ಲವೆ ಇಬ್ಬರಲ್ಲಿ ಒಬ್ಬರ ಪರವಾಗಿ, ಯಾವುದೇ ಇನ್ನೊಬ್ಬನು ಆ ಪಕ್ಷಗಾರನ ಸಂಬಂಧಿಕನು ಇಲ್ಲವೆ ಆ ಸಂದರ್ಭದಲ್ಲಿ ಅವನು ನೇರವಾಗಿ ಇಲ್ಲವೆ ಪರೋಕ್ಷವಾಗಿ ಆ ಕರಾರಿನ ಮೇಲೆ ಆ ಮದುವೆಯ ಪ್ರತಿಫಲವಾಗಿ ಇವೆಲ್ಲವುಗಳನ್ನು ಒಳಗೊಂಡಿರುತ್ತದೆ. ಆದರೆ ಯಾವುದೇ ರೂಢಿ ಸಂಪ್ರದಾಯದ ಪ್ರಕಾರ ವರನಿಗೆ ಕೊಟ್ಟ ಚಿಕ್ಕಪುಟ್ಟ ಕಾಣಿಕೆಗಳು ಇಲ್ಲವೆ ಆ ಮದುವೆಗೆ ಸಂಬಂಧಿಸಿದ ಎರಡು ಪಕ್ಷದವರಲ್ಲಿ ಯಾರೊಬ್ಬರು ಕೊಟ್ಟರೆ, ಇವು ಒಳಗೊಂಡಿರುವುದಿಲ್ಲ.

ಮದುವೆಗೆ ಪ್ರತಿಫಲವೆಂದು ಕೊಟ್ಟಿದ್ದು, ಈ ರೀತಿ ಮದುವೆಯಾದ ಹೆಣ್ಣುಮಗಳು ಅದು ಅವಳ ಆಸ್ತಿಯೆಂದು ಗ್ರಹಿಸತಕ್ಕದ್ದು.

(೨) ಈ ಮೇಲೆ ಹೇಳಿದಂತೆ, ಯಾವ ಹೆಣ್ಣುಮಗಳು ಮದುವೆಯಾಗಿರುವಳೋ ಅವಳ ಹೊರತಾಗಿ ಬೇರೆ ಯಾರಾದರೂ ವರದಕ್ಷಿಣೆಯನ್ನು ಸ್ವೀಕರಿಸಿದರೆ ಅವರು ಆ ಹೆಣ್ಣುಮಗಳ ಪ್ರಯೋಜನಕ್ಕಾಗಿ ಮತ್ತು ಅವಳ ಉಪಯೋಗಕ್ಕಾಗಿ ಅದು ಅವಳ ನ್ಯಾಸವೆಂದು ಇರುತ್ತದೆ ಮತ್ತು ಅದನ್ನು ಅವಳು ೧೮ ವರ್ಷಗಳನ್ನು ಪೂರೈಸಿದ ನಂತರ ಅದನ್ನು ಅವಳ ಹೆಸರಿಗೆ ವರ್ಗಾಯಿಸಬೇಕು ಇಲ್ಲವೆ ಅವಳು ೧೮ ವರ್ಷ ಪೂರೈಸುವ ಪೂರ್ವದಲ್ಲಿ ಮರಣ ಹೊಂದಿದರೆ ಆಗ ಭಾಗ vii ನಿರ್ದಿಷ್ಟ ಪಡಿಸಿದ ಅವಳ ವಾರಸುದಾರರಿಗೆ ವರ್ಗಾಯಿಸಬೇಕು.

**ವಿವರಣೆ:** ಈ ಕಲಂನಲ್ಲಿ ವರದಕ್ಷಿಣೆ ಅಂದರೆ ಯಾವುದೇ ಆಸ್ತಿ ವರ್ಗಾಯಿಸಿದರೆ ಇಲ್ಲವೆ ಅವರಿಂದ ಅವರ ಪರವಾಗಿ ಮದುವೆಗೆ ಸಂಬಂಧಿಸಿದ ಯಾವುದೇ ಪಕ್ಷಗಾರನು ಇಲ್ಲವೆ ಅವನ ಯಾವುದೇ ಸಂಬಂಧಿಕರು ಇಲ್ಲವೆ ಇನ್ನೊಂದು ಪಕ್ಷದ ಸಂಬಂಧಿಕರು ಇಲ್ಲವೆ ಅವರು ನೇರವಾಗಿ ಇಲ್ಲವೆ ಅಪರೋಕ್ಷವಾಗಿ ಅಂತಹ ಸಂದರ್ಭದಲ್ಲಿ ಕರಾರಿಗೆ ಒಳಪಟ್ಟು ಇಲ್ಲವೆ ಅಂತಹ ಮದುವೆಗೆ ಪ್ರತಿಫಲವಾಗಿ ಇವೆಲ್ಲವುಗಳನ್ನು

ಒಳಗೊಂಡಿದ್ದು ಇರುತ್ತದೆ. ಆದರೆ ವರನಿಗೆ, ಸಂಪ್ರದಾಯ ರೂಢಿ ಪ್ರಕಾರ ಚಿಕ್ಕಮುಟ್ಟ ಕಾಣಿಕೆಯನ್ನು ಕೊಟ್ಟರೆ ಇಲ್ಲವೆ ಆ ಎರಡು ಪಕ್ಷದ ಸಂಬಂಧಿಕರು ಏನಾದರೂ ಕೊಟ್ಟರೆ ಅದು ಇವುಗಳನ್ನು ಒಳಗೊಂಡಿರುವುದಿಲ್ಲ.

(೧೦೬)

**ಭಾಗ ೭–ವಾರಸಾ**

**ಅಧ್ಯಾಯ ೧**

**೯೪. ಕೆಲವು ಆಸ್ತಿಗಳನ್ನು ಈ ಭಾಗದ ಜಾರಿಯಿಂದ ಹೊರಗೆ ಇಡಲಾಗಿದೆ–**

ಅವುಗಳಿಗೆ ಈ ಭಾಗವು ಅನ್ವಯಿಸುವುದಿಲ್ಲ ........

(i) ಯಾವುದೇ ಆಸ್ತಿಯು ಒಬ್ಬನೇ ವ್ಯಕ್ತಿಗೆ ವಂಶಪರಂಪರೆಯಾಗಿ ರೂಢಿ ಸಂಪ್ರದಾಯದ ವಾರಸಾ ನಾತೆಯಿಂದ ಬಂದರೆ ಇಲ್ಲವೆ ಯಾವುದೇ ಅನುದಾನದಿಂದ ಬಂದರೆ, ಇಲ್ಲವೆ ಯಾವುದೇ ಶಾಸನದ ಮೂಲಕ ಬಂದರೆ ಇಲ್ಲವೆ ಯಾವುದೇ ಆಸ್ತಿಯು ಕಲಂ ೯೦ ಜೆ ದ ಅನ್ವಯ ಬಂದರೆ ಇಲ್ಲವೆ

(ii) ಯಾವುದೇ ಆಸ್ತಿಯು ಭಾಗ ivರಲ್ಲಿ ನಮೂದಿಸಿದಂತೆ ಬದುಕಿ ಉಳಿದ ದಾಯಾದಿತ್ವದಿಂದ ಬಂದಿದ್ದರೆ, ಇಲ್ಲವೆ

(iii) ಯಾವುದೇ ಆಸ್ತಿಯು ತಾರವಾಡ, ತವಳ್ಳಿ, ಕುಟುಂಬ, ಕವರು ಇಲ್ಲವೆ ಇಲ್ಲಂ, ಇವುಗಳಿಗೆ ಕಲಂ ೯೦ ಆಯ್ ಇದರ ಉಪಬಂಧಗಳು ಅನ್ವಯಿಸುತ್ತವೆ.

(೧೦೬)

**ಭಾಗ ೭ – ವಾರಸಾ**

**ಅಧ್ಯಾಯ ೧**

**ಸಾಮಾನ್ಯ**

**೯೪. ಕೆಲವು ಆಸ್ತಿಗಳನ್ನು ಈ ಭಾಗವು ಅನ್ವಯಿಸದಂತೆ ಹೊರಗಿಡಲಾಗಿದೆ**

**ಭಾಗ–೨**
**ಕಲಂ–೧**
**ಪುಟ–೨**

ಈ ಭಾಗವು ಕೆಳಗಿನವುಗಳಿಗೆ ಅನ್ವಯಿಸುವುದಿಲ್ಲ.

(೧) ರಾಜ್ಯಪಾಲರ (ಗವರ್ನರ್) ಪ್ರಾಂತಗಳಲ್ಲಿರುವ ಒಕ್ಕಲುತನ ಜಮೀನುಗಳಿಗೆ ಇಲ್ಲವೆ

(ii) ಯಾವುದೇ ಆಸ್ತಿಯು ಒಬ್ಬನೇ ವ್ಯಕ್ತಿಗೆ ಸಾಂಪ್ರದಾಯಕ ರೂಢಿ ವಾರಸಾದ ಪ್ರಕಾರ ಬಂದ ಯಾವುದೇ ಆಸ್ತಿಗೆ ಇಲ್ಲವೆ ಯಾವುದೇ ಅನುದಾನ ಕರಾರುಗಳಿಂದ ಬಂದಿದ್ದರೆ ಇಲ್ಲವೆ ಯಾವುದೇ ಶಾಸನದಿಂದ ಬಂದಿದ್ದರೆ–

(೧೦೭)

**೯೫. ಈ ಭಾಗವು ಅನ್ವಯಿಸುವುದು**

೯೪ರಲ್ಲಿ ಸ್ಪಷ್ಟವಾಗಿ ವ್ಯಕ್ತಮಾಡಲಾಗಿದೆ. ಯಾವ ಹಿಂದೂ ಮೃತ್ಯುಪತ್ರ ಮಾಡದೆ ಈ ಅಧಿನಯಮವು ಜಾರಿಗೆ ಬಂದ ನಂತರ ಮರಣ ಹೊಂದಿದ್ದರೆ, ಆಗ ಈ ಭಾಗವು ಕೆಳಗಿನಂತೆ ನಿಯಂತ್ರಿಸುತ್ತದೆ. ಅದೆಂದರೆ

(ಅ) ಎಲ್ಲಿ ಜಂಗಮ ಮಾಲು ಇರುತ್ತದೆಯೋ ಮತ್ತು ಆ ಮೃತ್ಯುಪತ್ರ ಮಾಡದೆ ತೀರಿಕೊಂಡರೆ ಅವನು ಭಾರತದ ಅಧಿವಾಸಿಯಲ್ಲವೆಂದೂ ಅವನ ಮರಣದ ಕಾಲಕ್ಕೆ ಅವನಿಗೆ ಇಲ್ಲವೆ ಅವಳಿಗೆ ಈ ಅಧಿನಿಯಮವು ಅನ್ವಯಿಸುವು ದಿಲ್ಲವೆಂದೂ

(ಬ) ಎಲ್ಲಿ ಆಸ್ತಿಯು ಸ್ಥಿರ ಆಸ್ತಿ ಇದೆಯೋ, ಅದು ಅಂತಹ ಪ್ರದೇಶದಲ್ಲಿದೆ ಆ ಮೃತ್ಯುಪತ್ರ ಮಾಡದೆ ತೀರಿಕೊಂಡ ವನು ಅಲ್ಲಿಯ ಅಧಿವಾಸಿಯು ಮರಣದ ಕಾಲಕ್ಕೆ ಅವನು ಇಲ್ಲವೆ ಇವಳು ಅಧಿವಾಸಿಯಾಗಿದ್ದರೋ ಇಲ್ಲವೋ.

**ವಿವರಣೆ :** ಈ ಭಾಗದ ಉದ್ದೇಶಕ್ಕಾಗಿ ಒಬ್ಬ ಹಿಂದೂ ಅವನು ಅಧಿವಾಸಿ ಅಂತಾ ನಿರ್ಣಯಕ್ಕೆ ಬರಲು ಭಾರತ ವಾರಸಾ ಕಾನೂನು ೧೯೨೫ರ ೩೯ನೆಯ ಅಧಿನಿಯಮ ಇದರ ಕಲಮುಗಳು ೬ ರಿಂದ ೧೮ ಎರಡನ್ನು ಒಳಗೊಂಡು ಈ ಉಪಬಂಧಗಳಲ್ಲಿ ಕಾಣಿಸಿದಂತೆ ಅವುಗಳ ಪ್ರಕಾರ ನಿರ್ಣಯಿಸಬೇಕು.

(೧೦೭)

**೯೫. ಈ ಭಾಗದ ಅನ್ವಯ :**

ಕಲಂ ೯೪ರಲ್ಲಿ ಹೇಳಿದ್ದನ್ನು ಹೊರತುಪಡಿಸಿ ಯಾವುದೇ ಹಿಂದೂ ಈ ಅಧಿನಿಯಮವು ಜಾರಿಯಲ್ಲಿ ಬಂದ ನಂತರ ಯಾವ ನೊಬ್ಬನು ಮೃತ್ಯುಪತ್ರಮಾಡದೆ ಮರಣ ಹೊಂದಿದರೆ ಈ ಕೆಳಗಣ ಪ್ರಕರಣ ಅಂತಹ ಹಿಂದುಗಳ ಆಸ್ತಿಯ ವಾರಸವು ಈ ಭಾಗದಂತೆ ನಿಯಂತ್ರಿಸಲ್ಪಡುತ್ತದೆ ಅದೆಂದರೆ **ಭಾಗ–೨ ಕಲಂ–೩ ಪುಟ–೩**

(ಅ) ಯಾವ ಆಸ್ತಿಯು ಜಂಗಮ ಆಸ್ತಿ ಇದ್ದರೆ ಆ ಮೃತ್ಯುಪತ್ರ ಮಾಡದೇ ತೀರಿಕೊಂಡ ವ್ಯಕ್ತಿಯು ಮರಣದ ಕಾಲಕ್ಕೆ ಭಾರತದ ಯಾವುದೇ ಪ್ರಾಂತಗಳಲ್ಲಿ ಅದಿವಾಸಿ ಯಾಗಿದ್ದನೆಂದು ಸಿದ್ಧಪಡಿಸದ ಹೊರತು

(ಬ) ಆಸ್ತಿಯು ಸ್ಥಿರ ಆಸ್ತಿಯಾಗಿದ್ದು ಭಾರತದ ಯಾವುದೇ ಪ್ರಾಂತದಲ್ಲಿ ಇದ್ದರೆ, ಆ ಮೃತ್ಯುಪತ್ರ ಮಾಡದೆ ತೀರಿಕೊಂಡ ವ್ಯಕ್ತಿಯು ಭಾರತದ ಯಾವುದೇ ಪ್ರಾಂತಗಳಲ್ಲಿ ಆತನ ಮರಣದ ಕಾಲಕ್ಕೆ ಅದಿವಾಸಿ ಇರಬಹುದು ಇಲ್ಲವೆ ಆತನ ಇಲ್ಲವೆ ಅವಳ ಇರಬಹುದು, ಇರಲಿಕ್ಕಿಲ್ಲ

**ವಿವರಣೆ :** ಈ ಭಾಗದ ಉದ್ದೇಶಕ್ಕಾಗಿ ಒಬ್ಬನು ಹಿಂದೂ ಎಂದು ನಿರ್ಣಯಕ್ಕೆ ಬರಬೇಕಾದರೆ ಭಾರತ ವಾರಸಾ ಅಧಿನಿಯಮ ೧೯೨೫ನೇ ಇಸ್ವಿಯ ೩೯ನೆಯ ಅದಿನಿಯಮ ಇದರ ಕಲಂ ೬ ರಿಂದ ೧೮ ಎರಡೂ ಕಲಮುಗಳನ್ನು ಒಳಗೊಂಡು ಆ ಉಪಬಂಧಗಳು ಅನುಗುಣವಾಗಿ ನಿರ್ಣಯಿಸತಕ್ಕದ್ದು.

(೧೦೮)

**೯೬. ಹಿಸ್ಸೆ ಮಾಡಿಕೊಂಡ ಮಕ್ಕಳು ಮತ್ತು ಹಿಸ್ಸೆ ಮಾಡದೆ ಇದ್ದವರು ಮುಂತಾದವರು ಈ ವಾರಸಾ ಉದ್ದೇಶಕ್ಕಾಗಿ ಯಾವುದೇ ಅಂತರವು ಇರುವುದಿಲ್ಲ. ಮೃತ್ಯು ಪತ್ರಮಾಡದೆ ತೀರಿಕೊಂಡ ವ್ಯಕ್ತಿಯ ಆಸ್ತಿಯು ವಾರಸಾದ ಬಗ್ಗೆ ಈ ಕೆಳಗಿನಂತೆ ತಾರತಮ್ಯ ಮಾಡುವಂತಿಲ್ಲ.**

(೧) ತನ್ನ ಆಸ್ತಿ ಪಾಲು ಮಾಡಿಕೊಂಡು ಬೇರೆಯಾದ ಮಗ ಮತ್ತು ತಂದೆಯ ಜೊತೆಗೆ ಕೂಡಿ ಇದ್ದ ಮಗ, ಇಲ್ಲವೇ ಬೇರೆಯಾದ ಮಗ ಮತ್ತು ಹಿಸ್ಸೆ ಮಾಡಿಕೊಂಡು ಬೇರೆ ಇದ್ದ ನಂತರ ಪುನಃ ತಂದೆಯೊಂದಿಗೆ ಕೂಡಿ ಕೊಂಡವ

(೨) ಹೆಣ್ಣುಮಕ್ಕಳ ವಾರಸಾ ಕುರಿತು ಯಾವಳು ವಿಧವೆ ಇರುವಳು? ಯಾವಳು ವಿಧವೆಯಲ್ಲ ಇಲ್ಲವೆ ಯಾವ ಹೆಣ್ಣುಮಗಳು ವಾರಸಾದಿಂದ ಬಡವರಿರುವರೋ ಮತ್ತು ಯಾರು ಸಿರಿವಂತರು ಇರುವರೋ ಇಲ್ಲವೆ ಹೆಣ್ಣುಮಕ್ಕಳಿಗೆ ವಾರಸಾ ಮಕ್ಕಳಿದ್ದವರು ಮತ್ತು ಮಕ್ಕಳಿಲ್ಲದವರು ಇಲ್ಲವೆ ಮಕ್ಕಳು ಆಗಬಹುದಾದವರು ಇವರಲ್ಲಿ ಯಾವುದೇ ತಾರತಮ್ಮ ಮಾಡಬಾರದು.

(೧೦೯)

**ಅಧ್ಯಾಯ ೧೧**

**ಮೃತ್ಯುಪತ್ರ ಮಾಡದೆ ತೀರಿಕೊಂಡ ಗಂಡು ಮಕ್ಕಳ ಆಸ್ತಿಯ ವಾರಸಾ ಕುರಿತು ಸಾಮಾನ್ಯ ಉಪಬಂಧಗಳು**

**೯೭. ವ್ಯಾಖ್ಯೆಗಳು :** (೧) ಈ ಭಾಗದಲ್ಲಿ ಬೇರೆಯಾಗಿರದಿದ್ದರೆ

(೧೦೮)

**೯೬. ಹಿಸ್ಸೆ ಮಾಡಿಕೊಂಡು ಬೇರೆಯಾದ ಮತ್ತು ಬೇರೆಯಾಗದ ಮಕ್ಕಳು ಮುಂತಾದವು ವಾರಸಾದ ಉದ್ದೇಶಕ್ಕಾಗಿ ಒಬ್ಬರು ಮೃತ್ಯುಪತ್ರ ಮಾಡದೆ ಮರಣ ಹೊಂದಿದರೆ ಈ ಕೆಳಗಿನವರಲ್ಲಿ ಯಾವುದೇ ಅಂತರ ಮಾಡಬಾರದು.**

(i) ತಂದೆಯಿಂದ ಬೇರೆಯಾದ ಮಗ ಮತ್ತು ತಂದೆಯಿಂದ ಬೇರೆ ಆಗದೆ ಇದ್ದ ಮಗ ಇಲ್ಲವೆ ಬೇರೆಯಾದ ಮಗ ಮತ್ತು ಬೇರೆಯಾಗಿ ಪುನಃ ತಂದೆಯೊಂದಿಗೆ ಕೂಡಿದ ಮಗ.

*ಭಾಗ–೨ ಕಲಂ–೭ (ನಿಯಮಗಳು ೨ ಮತ್ತು ೪) ಪುಟ–೬*

(ii) ಹೆಣ್ಣುಮಕ್ಕಳು ಲಗ್ನವಾದವರು ಮತ್ತು ಲಗ್ನವಾಗದೆ ಇದ್ದವರ ಇಲ್ಲವೆ ವಿಧವೆಯಾದ ಹೆಣ್ಣು ಮಗಳು ಮತ್ತು ವಿಧವೆಯಾಗದ ಹೆಣ್ಣುಮಗಳು ಇಲ್ಲವೆ ಮಕ್ಕಳಿದ್ದ ಹೆಣ್ಣುಮಗಳು ಮತ್ತು ಮಕ್ಕಳಿಲ್ಲದ ಹೆಣ್ಣುಮಗಳು ಇಲ್ಲವೆ ಬಡ ಹೆಣ್ಣುಮಕ್ಕಳು ಮತ್ತು ಶ್ರೀಮಂತರ ಹೆಣ್ಣುಮಗಳು ಇಲ್ಲವೆ ಮಕ್ಕಳಾಗಬಹುದಾದ ಹೆಣ್ಣುಮಗಳು ಇವರಲ್ಲಿ ಯಾವುದೇ ಅಂತರ ಮಾಡಬಾರದು.

**ಅಧ್ಯಾಯ ೧೧**

**೯೭. ಮೃತ್ಯುಪತ್ರವಿಲ್ಲದೆ ತೀರಿಕೊಂಡ ಗಂಡು ಮಗನ ಆಸ್ತಿಯ ವಾರಸಾ ಕುರಿತು**

(ಅ) ಗೋತ್ರಜ ಅಂದರೆ ಒಬ್ಬನು ಇನ್ನೊಬ್ಬನ ಗೋತ್ರಜನೆಂದು

*ಭಾಗ–೧೧ ಕಲಂ–೨ ಪುಟ–೨*

(ಅ) ಗೋತ್ರದ ಒಬ್ಬನು ಇನ್ನೊಬ್ಬನ ಗೋತ್ರದವನೆಂದರೆ, ಅವರಿಬ್ಬರ ನಡುವಣ ರಕ್ತಸಂಬಂಧವು ಇಲ್ಲವೆ ಯಾವನೊಬ್ಬನು ಒಂದು ಗಂಡುಮಗುವನ್ನು ದತ್ತಕ ತೆಗೆದುಕೊಂಡರೆ ಅಂತಹವರು ಗೋತ್ರಜರೇ ಎಂದು ತಿಳಿಯತಕ್ಕದ್ದು.

ಬ) 'ಬಂಧು' ಇಬ್ಬರು ಒಬ್ಬರಿಗೊಬ್ಬರು ರಕ್ತಸಂಬಂಧಿಗಳು ಇಲ್ಲವೆ ಯಾವನನ್ನು ಒಬ್ಬ ಗಂಡುಮಗನು ಒಂದು ಗಂಡುಕೂಸನ್ನು ದತ್ತಕ ತೆಗೆದುಕೊಂಡರೆ ಅಂತಹವರನ್ನು ಬಂಧುಗಳೆಂದು ಕರೆಯಲಾಗುವುದು.

(ಕ) ವಾರಸಾ ಅಂದರೆ ಯಾವುದೇ ವ್ಯಕ್ತಿ ಇಲ್ಲವೆ ಹೆಣ್ಣುಮಗಳು ಈ ಭಾಗದಲ್ಲಿ ಯಾವನೊಬ್ಬನು ಮೃತ್ಯುಪತ್ರವಿಲ್ಲದೆ ತೀರಿಕೊಂಡರೆ ಅಂಥವನ ಆಸ್ತಿಗೆ ವಾರಸಾ ಆಗುವ ಹಕ್ಕುಳ್ಳವರು.

(ಡ) ಮತ್ಯುಪತ್ರ ಮಾಡದೇ ತೀರಿಕೊಂಡ ಒಬ್ಬನು ತನ್ನ ಆಸ್ತಿಗೆ ಮೃತ್ಯುಪತ್ರ ಮಾಡದೆ ಹಾಗೆಯೇ ತೀರಿಕೊಂಡರೆ ಆತನಿಗೆ ಮೃತ್ಯುಪತ್ರ ಮಾಡದೆ ತೀರಿಕೊಂಡವನೆಂದು ಹೇಳಲಾಗುತ್ತದೆ.

(೨) ಈ ಭಾಗದಲ್ಲಿ ಸಂದರ್ಭಕ್ಕೆ ಬೇರೆ ಅರ್ಥ ಬರದಿದ್ದರೆ ಗಂಡು ಎಂಬ ಪದವು ಹೆಣ್ಣು ಎಂಬ ಅರ್ಥವನ್ನು ಒಳಗೊಳ್ಳುವುದಿಲ್ಲ.

ಅವರಿಬ್ಬರೂ ರಕ್ತಸಂಬಂಧ ಹೊಂದಿದ್ದರೆ ಇಲ್ಲವೆ ಒಬ್ಬ ಗಂಡು ಮಗನು ಒಂದು ಗಂಡು ಕೂಸನ್ನು ದತ್ತಕ ತೆಗೆದುಕೊಂಡರೆ ಅವರಿಗೆ ಗೋತ್ರಜರೆನ್ನುತ್ತಾರೆ.

ಬ) ಬಂಧು ಒಬ್ಬನು ಇನ್ನೊಬ್ಬನಿಗೆ ರಕ್ತಸಂಬಂಧ ಇಲ್ಲವೆ ದತ್ತಕ ತೆಗೆದುಕೊಳ್ಳುವ ಮೂಲಕ, ಆದರೆ ಅದು ಸಂಪೂರ್ಣವಾಗಿ ಗಂಡುಮಕ್ಕಳ ಮುಖಾಂತರ ಇರದಿದ್ದರೆ ಬಂಧುವೆಂದು ಕರೆಯಲಾಗುವುದು.

(ಕ) ವಾರಸಾ ಅಂದರೆ ಯಾವುದೇ ವ್ಯಕ್ತಿಯು ಗಂಡು ಇಲ್ಲವೆ ಹೆಣ್ಣು–ಯಾವನೊಬ್ಬ ಹಿಂದೂ ತನ್ನ ಆಸ್ತಿಗೆ ಮೃತ್ಯುಪತ್ರ ಮಾಡದೆ ಹಾಗೆ ತೀರಿಕೊಂಡರೆ ಈ ಭಾಗದಲ್ಲಿ ಕಾಣಿಸಿದಂತೆ ಆತನ ಆಸ್ತಿಗೆ ವಾರಸುದಾರನೆಂದು ಕರೆಯಲಾಗುವುದು.

(ಡ) ಮೃತ್ಯುಪತ್ರ ಮಾಡದೆ ತೀರಿಕೊಂಡ ವ್ಯಕ್ತಿಯು ಒಬ್ಬನು ತನ್ನ ಆಸ್ತಿಯ ಕುರಿತು ಮೃತ್ಯುಪತ್ರ ಮಾಡದೆ ಮರಣ ಹೊಂದಿದರೆ ಅವನಿಗೆ ಮೃತ್ಯುಪತ್ರ ಮಾಡದೆ ಮರಣ ಹೊಂದಿದವನು ಎಂದು ಕರೆಯಲಾಗುವುದು.

**ಭಾಗ–೨**
**ಕಲಂ–೧೩**
**ಪುಟ–೯**

(೨) ಈ ಭಾಗದಲ್ಲಿ ಗಂಡು ಅನ್ನುವ ಪದವು ಹೆಣ್ಣು ಅನ್ನುವುದನ್ನು ಒಳಗೊಳ್ಳುವುದಿಲ್ಲ.

(೧೧೦)

**೯೮. ಗಂಡುಮಕ್ಕಳ ವಾರಸಾದ ಸಾಮಾನ್ಯ ನಿಯಮಗಳು** ಕಲಂ ೧೦೫ (ಅ) ದಿಂದ ೧೦೫ ಜೆ.ದ ಉಪಬಂಧ'ಗಳಲ್ಲಿ ವ್ಯಕ್ತವಾಡಿದ್ದನ್ನು ಹೊರತುಪಡಿಸಿ ಯಾವನೊಬ್ಬ ಹಿಂದೂ ಮೃತ್ಯುಪತ್ರ ಮಾಡದೆ ಮರಣ ಹೊಂದಿದರೆ ಈ ಭಾಗದಲ್ಲಿ ಕಾಣಿಸಿದ ನಿಯಮಗಳ ಅನುಸಾರವಾಗಿ ಆಸ್ತಿಯು ಹೋಗುತ್ತದೆ.

ಅ. ಪರಿಶಿಷ್ಟ viii ರಲ್ಲಿ ನಿರ್ದೇಶಿಸಿದಂತೆ (೧)ನೆಯ ವರ್ಗದ ಸಂಬಂಧಿಕರು ಮೊದಲು ಆದ್ಯತೆ ಮೇರೆಗೆ ವಾರಸಾದ ಅನ್ವಯ

ಬ. ಎರಡನೆಯದಾಗಿ, ಒಂದು ವೇಳೆ ೧ನೆಯ ವರ್ಗದವರು ಅದ್ಯತೆಯ ಮೇರೆಗೆ ಸಂಬಂಧಿಕರು ಇರದಿದ್ದರೆ ಆಗ ೨ನೆಯ ವರ್ಗದಲ್ಲಿ ಕಾಣಿಸಿದ ಸಂಬಂಧಿಕರಿಗೆ ಆದ್ಯತೆಯ ಮೇರೆಗೆ ಹೋಗುತ್ತದೆ.

ಕ. ಮೂರನೆಯದಾಗಿ ೧ನೆಯ ಇಲ್ಲವೆ ೨ನೆಯ ವರ್ಗದ ವಾರಸುದಾರರು ಆದ್ಯತೆಯು ಇರದಿದ್ದರೆ ಕಲಂ ೧೦೨ರಲ್ಲಿ ನಿರ್ದೇಶಿಸಿದ ಗೋತ್ರಜರಿಗೆ ಮತ್ತು

ಡ. ಕೊನೆಯದಾಗಿ ಯಾವ ಗೋತ್ರಜನೂ ಇರದಿದ್ದರೆ ಕಲಂ ೧೦೩ರಲ್ಲಿ ನಿರ್ದೇಶಿಸಿದಂತೆ ಬಂಧುಗಳಿಗೆ ಹೋಗಬೇಕು.

(೧೧೧)

**೯೯. ಪ್ರಾಶಸ್ತ್ಯದ ಮೇಲಿನ ವಾರಸುದಾರರು :** ಎಂಟನೆಯ ಪರಿಶಿಷ್ಟದಲ್ಲಿ ಕಾಣಿಸಿದ ೧ನೆಯ ವರ್ಗ ಪ್ರಾಶಸ್ತ್ಯದ ಮೇಲಿನ ವಾರಸುದಾರರು ಎಲ್ಲರೂ ಏಕಕಾಲಕ್ಕೆ ಸಮಪಾಲು

(೧೦೯)

**೯೮. ಹಿಂದೂ ಗಂಡುಮಕ್ಕಳ ವಾರಸಾಕುರಿತು ನಿಯಮಗಳು ಈ** ಭಾಗದಲ್ಲಿ ಉಪಬಂಧಗಳಿಗೆ ಅನುಸಾರ ವಾಗಿ ಒಬ್ಬ ಹಿಂದೂ ಗಂಡುಮಗನು ಯಾವುದೇ ಮೃತ್ಯುಪತ್ರ ಇಲ್ಲದೆ ತೀರಿಕೊಂಡರೆ ಆತನ ಆಸ್ತಿಯು ಈ ಕೆಳಗಿನಂತೆ ಹೋಗುತ್ತದೆ. **ಭಾಗ-೧೧ ಕಲಂ-೪ ಪುಟ-೪**

(ಅ) ಮೊದಲನೆಯದಾಗಿ ಪ್ರಾಶಸ್ತ್ಯದ ಮೇಲೆ ಪರಿಶಿಷ್ಟ ಏಳು ವರ್ಗ ೧ರಲ್ಲಿ ಕಾಣಸಿದ ೧ನೆಯ ವರ್ಗದ ವಾರಸುದಾರರು

ಬ) ಎರಡನೆಯದಾಗಿ ೧ನೆಯ ವರ್ಗದ ಪ್ರಾಶಸ್ತ್ಯದ ವಾರಸುದಾರರು ಇರದಿದ್ದರೆ ಪರಿಶಿಷ್ಟ ಏಳರಲ್ಲಿ ವರ್ಗ ೯೭ರಲ್ಲಿ ನಿರ್ದೇಶಿಸಿದ ಸಂಬಂಧಿಕರು.

ಕ) ಮೂರನೆಯದಾಗಿ ಮೇಲೆ ಕಾಣಿಸಿದ ಎರಡೂ ವರ್ಗದಲ್ಲಿ ಹೇಳಿದ ಯಾರೂ ವಾರಸುದಾರರು ಇರದಿದ್ದರೆ ಅವರ ಬಂಧುಗಳ ಸಂಬಂಧಿಕರು ಕಲಂ ೧೦೨ರಲ್ಲಿ ನಿರ್ದೇಶಿಸಿದಂತೆ ಗೋತ್ರಜರಿಗೆ ಮತ್ತು

ಡ) ಕೊನೆಯದಾಗಿ ಯಾವ ಗೋತ್ರ ಜನೂ, ಇರದಿದ್ದರೆ ಅವರ ಬಂಧುಗಳಿಗೆ ಕಲಂ ೧೦೩ರಲ್ಲಿ ನಿರ್ದೇಶಿಸಿದಂತೆ ಹೋಗುತ್ತದೆ.

(೧೧೦)

**೯೯. ಪ್ರಾಶಸ್ತ್ಯದ ಮೇಲೆ ಇರುವ ವಾರಸುದಾರರಲ್ಲಿ** ಅವರು ಅನುಕ್ರಮವಾಗಿ ವಾರಸುದಾರಿಗೆ ಪರಿಶಿಷ್ಟ ಏಳರಲ್ಲಿ ಕಾಣಿಸಿದ ೧ನೆಯ ವರ್ಗದ **ಭಾಗ-೧೧ ಕಲಂ-೬ ಪೇಜು-೬**

ತೆಗೆದುಕೊಳ್ಳುತ್ತಾರೆ ಮತ್ತು ೨ನೆಯ ವರ್ಗದಲ್ಲಿ ಮೊದಲನೆಯ ಎಂಟ್ರಿಯಲ್ಲಿದ್ದವರಿಗೆ ೨ನೆಯ ಎಂಟ್ರಿಯಲ್ಲಿನವರಿಗಿಂತ ಪ್ರಾಶಸ್ತ್ಯ ಮತ್ತು ೨ನೆಯ ಎಂಟ್ರಿಯಲ್ಲಿದ್ದವರಿಗೆ ೩ನೆಯ ಎಂಟ್ರಿಯಲ್ಲಿದ್ದವರಿಗಿಂತ ಪ್ರಾಶಸ್ತ್ಯ ಈ ಪ್ರಕಾರ ವಾರಸಾ ಇರುತ್ತದೆ.

(೧೧೨)

**೧೦೦. ೧ನೆಯ ವರ್ಗದ ಪ್ರಾಶಸ್ತ್ಯ (ಮೊದಲ ಹಕ್ಕಿನ) ಹಕ್ಕಿನ ವಾರಸುದಾರರಲ್ಲಿ ಆಸ್ತಿಯನ್ನು ಹಂಚುವುದು.**

೧. ಮೃತ್ಯುಪತ್ರ ಮಾಡದೆ ತೀರಿಕೊಂಡ ಒಬ್ಬ ವ್ಯಕ್ತಿಯ ಆಸ್ತಿಯನ್ನು ಆತನ ಮೊದಲಿನ ಹಕ್ಕಿನ ವಾರಸುದಾರರು ಅಂದರೆ ಪರಿಶಿಷ್ಟ ಎಂಟರ ೧ನೆಯ ವರ್ಗದಲ್ಲಿ ಕಾಣಿಸಿದ ವಾರಸುದಾರರಲ್ಲಿ ಹಂಚಬೇಕು. ವಿಧವೆಯ ಹಿಸ್ಸೆಯು ಅವಳ ಪ್ರತಿಯೊಂದು ಮಗನ ಹಿಸ್ಸೆಗೆ ಸಮಾನವಾಗಿರತಕ್ಕದ್ದು. ಮೊದಲೇ ತೀರಿಕೊಂಡ ಮಗ ಅವನು ತನ್ನ ಹಿಂದೆ ಒಬ್ಬ ಗಂಡು ಇಲ್ಲವೆ ಮಗನ ಮಗನು ಮೃತ್ಯುಪತ್ರ ಮಾಡದೆ ತೀರಿಕೊಂಡವನ ಜೀವಿತ ಕಾಲದಲ್ಲಿ ಬದುಕಿ ಉಳಿದವನು ಮತ್ತು ಲಗ್ನವಾಗದೆ ಇರುವ ಪ್ರತಿಯೊಬ್ಬ ಮಗಳಿಗೆ ಪ್ರತಿಯೊಬ್ಬ ಗಂಡು ಮಗನ ಹಿಸ್ಸೆಗೆ ಕೊಟ್ಟ ಹಿಸ್ಸೆಯ ಅರ್ಧದಷ್ಟನ್ನು ಮದುವೆಯಾಗದ ಹೆಣ್ಣುಮಗಳಿಗೆ ಕೊಡತಕ್ಕದ್ದು ಮತ್ತು ಪ್ರತಿಯೊಬ್ಬ ಲಗ್ನವಾದ ಮಗಳಿಗೆ ಹಿಸ್ಸೆಯು ಪ್ರತಿಯೊಬ್ಬ ಗಂಡುಮಗನಿಗೆ ಕೊಟ್ಟ ಹಿಸ್ಸೆಯ

ವಾರಸುದಾರರು ಏಕಕಾಲಕ್ಕೆ ಸಮನಾಗಿ ಆಸ್ತಿ ಪಡೆಯುವ ಮತ್ತು ಎರಡನೆಯ ವರ್ಗದಲ್ಲಿ ಮೊದಲನೆಯ ಎಂಟ್ರಿಯಲ್ಲಿದ್ದವರು ಎರಡನೆಯ ಎಂಟ್ರಿಯಲ್ಲಿ ಇದ್ದವರಿಗಿಂತ ಪ್ರಾಶಸ್ತ್ಯ ಪಡೆಯುತ್ತಾರೆ, ಎರಡನೆಯ ಎಂಟ್ರಿಯಲ್ಲಿದ್ದವರು ೩ನೆಯ ಎಂಟ್ರಿಯಲ್ಲಿದ್ದವರಿಗಿಂತ ಪ್ರಾಶಸ್ತ್ಯ ಪಡೆಯುತ್ತಾರೆ, ಈ ರೀತಿ ವಾರಸವು ಮುಂದುವರೆಯುತ್ತದೆ.

(೧೧೧)

**೧೦೦. ಮೊದಲು ಹಕ್ಕಿನ ವಾರಸುದಾರರಲ್ಲಿ ೧ನೆಯ ವರ್ಗದ ಆಸ್ತಿಯ ಹಂಚುವಿಕೆಯು:**

**ಭಾಗ–೪ ಕಲಂ–೭ ಪುಟ–೬**

(೧) ಮೃತ್ಯುಪತ್ರ ಮಾಡದೆ ತೀರಿಕೊಂಡವನ ಆಸ್ತಿಯನ್ನು ಆತನ ಮೊದಲು ಹಕ್ಕಿನ ೧ನೆಯ ವರ್ಗದ ವಾರಸುದಾರರಲ್ಲಿ ಹೀಗೆ ವಿಭಾಗಿಸಬೇಕು. ವಿಧವೆಯ ಹಿಸ್ಸೆಯ ಪಾಲು ಅವಳ ಪ್ರತಿ ಮಗನ ಹಿಸ್ಸೆಗೆ ಸಮನಾಗಿ ಇರತಕ್ಕದ್ದು ಮತ್ತು ಮೊದಲೇ ತೀರಿಕೊಂಡ ಮಗನ ಒಬ್ಬನೇ ಮಗನನ್ನು ಇಲ್ಲವೆ ಮಗನ ಮಗ ಜೀವಿಸಿರುವವರನ್ನು–ಅವರನ್ನು ಆ ಮೃತ್ಯುಪತ್ರ ಮಾಡದೇ ತೀರಿಕೊಂಡವನ ಮರಣದ ಕಾಲಕ್ಕೆ ಜೀವಿಸಿದ್ದರೆ ಅವರ ಹಿಸ್ಸೆ ಪಾಲು ಮತ್ತು ಪ್ರತಿಯೊಬ್ಬ ಮಗಳ ಹಿಸ್ಸೆ ಪಾಲು ಮಗನ ಪಾಲಿನ ಸಮನಾಗಿರುತ್ತದೆ. **ಪರಂತು :** ಮೊದಲೇ ತೀರಿಕೊಂಡ ಮಗನು ತನ್ನ ಹಿಂದೆ ತನ್ನ ಮಗ ಇಲ್ಲವೆ ಮಗನ ಮಗ ಇವರನ್ನು ಬಿಡದೆ, ಆದರೆ ತನ್ನ ವಿಧವೆ ಇಲ್ಲವೆ ಮಗನ ವಿಧವೆ ಅವರನ್ನು ತನ್ನ ಹಿಂದೆ ಆ ಮೃತ್ಯುಪತ್ರ ಮಾಡದೆ ತೀರಿಕೊಂಡವನ ಮರಣದ

 

ಒಂದು ನಾಲ್ಕನೆಯ ಅಂಶದಷ್ಟನ್ನು ಲಗ್ನವಾದ ಪ್ರತಿಯೊಬ್ಬ ಮಗಳ ಹಿಸ್ಸೆಗೆ ಕೊಡಬೇಕು.

**ಪರಂತು :** ಮೊದಲೇ ತೀರಿಕೊಂಡ ಮಗನು ಮಗನನ್ನು ಇಲ್ಲವೆ ಮಗನ ಮಗನನ್ನು ತನ್ನ ಹಿಂದೆ ಬಿಡದೆ ತನ್ನ ವಿಧವೆಯನ್ನು ಇಲ್ಲವೆ ಮಗನ ವಿಧವೆಯನ್ನು ಆ ಮೃತ್ಯುಪತ್ರ ಮಾಡದೆ ತೀರಿಕೊಂಡರೆ, ಆಗ ಮುಂಚಿತವಾಗಿ ತೀರಿಕೊಂಡ ಮಗನ ಪಾಲು ಆಗ ಅಂತಹ ಪಾಲು, ಆ ಮೃತ್ಯುಪತ್ರ ಮಾಡದೆ ತೀರಿಕೊಂಡವನ ಹಿಸ್ಸೆಯ ಅರ್ಧದಷ್ಟು ಕೊಡಬೇಕು.

೨. ಮೃತ್ಯುಪತ್ರ ಮಾಡದೆ ತೀರಿ ಕೊಂಡವನ ಜೀವಿತಕಾಲದಲ್ಲಿಯೇ ತೀರಿಕೊಂಡ ಮಗನ ಪಾಲು ಉಪಕಲಮು (೧)ರ ಅನ್ವಯ ಕೆಳಗೆ ಕಾಣಿಸಿದಂತೆ ಪಾಲು ಇಲ್ಲವೆ ವಿಭಾಗ ಮಾಡಬೇಕು.

(ಅ) ಹೀಗೆ ಮೊದಲೇ ತೀರಿಕೊಂಡ ಮಗನು ತನ್ನ ಹಿಂದೆ ತನ್ನ ಮಗನನ್ನು ಇಲ್ಲವೆ ತನ್ನ ಮಗನ ಮಗನನ್ನು ಆ ಮೃತ್ಯುಪತ್ರ ಮಾಡದೆ ತೀರಿಕೊಂಡವನ ಮರಣದ ಕಾಲಕ್ಕೆ ಬಿಟ್ಟಿದ್ದರೆ ಆಗ ಆತನ ಪಾಲನ್ನು ಹೀಗೆ ವಿಭಾಗಿಸಬೇಕು. ಮೊದಲೇ ತೀರಿಕೊಂಡ ಮಗನ ವಿಧವೆಯ ಪಾಲು ಅವನನ್ನು ಒಳಗೊಂಡು ಅವನು ಸಹ ಮೃತ್ಯುಪತ್ರ ಮಾಡದೆ ತೀರಿಕೊಂಡವನು ಸಾಯುವ ಪೂರ್ವದಲ್ಲಿ ತನ್ನ ಹಿಂದೆ ಒಬ್ಬ ಮಗನನ್ನು ಆ ಮೃತ್ಯುಪತ್ರ ಮಾಡದೆ ತೀರಿಕೊಂಡವನ ಮರಣದ ಕಾಲಕ್ಕೆ ಜೀವಂತ ಇದ್ದರೆ–

**ಪರಂತು :** ಹೀಗೆ ಮೊದಲೇ ತೀರಿಕೊಂಡ ಮಗನ ಮಗನು ಆ ಮೃತ್ಯುಪತ್ರ ಮಾಡದೆ ಕಾಲಕ್ಕೆ ಬಿಟ್ಟು ತೀರಿಕೊಂಡರೆ, ಆಗ ಅಂತಹ ಮೊದಲೇ ತೀರಿಕೊಂಡ ಮಗನ ಹಿಸ್ಸೆ : ಆ ಮೃತ್ಯುಪತ್ರ ಮಾಡದೆ ತೀರಿಕೊಂಡವನ ಮಗನ ಅರ್ಧದಷ್ಟು ಇರುತ್ತದೆ.

(೨) ಮೃತ್ಯುಪತ್ರ ಮಾಡದೆ ತೀರಿಕೊಂಡವನ ಮೊದಲೇ ತೀರಿಕೊಂಡ ಮಗನಿಗೆ ಉಪಕಲಂ (೧)ರ ಕೆಳಗೆ ಕೊಟ್ಟ ಪಾಲು ಇದನ್ನು ಕೆಳಗೆ ಕಾಣಿಸಿದಂತೆ ವಿಭಾಗಿಸಬೇಕು.

(ಅ) ಮೊದಲೇ ತೀರಿಕೊಂಡ ಮಗನು ತನ್ನ ಹಿಂದೆ ತನ್ನ ಮಗ ಇಲ್ಲವೆ ಮಗನ ಮಗ ಇವರು ಜೀವಂತವಾಗಿರುವಾಗ ಮೃತ್ಯುಪತ್ರ ಮಾಡದೆ ತೀರಿಕೊಂಡವನ ಮರಣದ ಕಾಲಕ್ಕೆ ಜೀವಿಸಿದ್ದರೆ, ಅವರ ಹಿಸ್ಸೆಯನ್ನು ಹೀಗೆ ವಿಭಾಗಿಸಬೇಕಲ್ಲದೇ ಮೊದಲೇ ತೀರಿಕೊಂಡವನ ಮಗನ ವಿಧವೆ ಆಕೆಯ ಪಾಲು, ಮೊದಲೇ ತೀರಿಕೊಂಡ ಮಗನ ಮಗನ ಪಾಲಿಗೆ ಸಮನಾಗಿ ಇರತಕ್ಕದ್ದು–

ಯಾವುದೇ ಮಗನು ಯಾವನು ಮೃತ್ಯುಪತ್ರ ಮಾಡದೆ ಸತ್ತವನಿಗಿಂತ ಪೂರ್ವದಲ್ಲಿಯೇ ತನ್ನ ಹಿಂದೆ ಒಬ್ಬ ಮಗ ಜೀವಿಸಿರುವವನನ್ನು ಆ ಮೃತ್ಯುಪತ್ರ ಮಾಡದೆ ತೀರಿಕೊಂಡವನ ಮರಣದ ಕಾಲಕ್ಕೆ ಜೀವಿಸಿದ್ದರೆ ಅವನ ಹಿಸ್ಸೆಯುನ್ನು ಸಹ ಅದು ಒಳಗೊಳ್ಳುತ್ತದೆ–

**ಪರಂತು :** ಮೊದಲೇ ತೀರಿಕೊಂಡ ಮಗನ ಮಗನು ಮೃತ್ಯುಪತ್ರ ಮಾಡದೇ ತೀರಿಕೊಂಡವನಿಗಿಂತ ಮೊದಲೇ ತೀರಿಕೊಂಡರೆ ಮತ್ತು ಅವನು ತನ್ನ ಹಿಂದೆ ವಿಧವೆಯನ್ನು ಬಿಟ್ಟು ಆದರೆ ಮಗನು ಜೀವಂತ ಮೃತ್ಯುಪತ್ರ ಮಾಡದೆ

ತೀರಿಕೊಂಡವನ ಜೀವಿತ ಕಾಲದಲ್ಲಿಯೇ ಅವನ ಮುಂದೆ ತೀರಿಕೊಂಡರೆ ಮತ್ತು ಅವನು ತನ್ನ ಹಿಂದೆ ತನ್ನ ವಿಧವೆಯನ್ನು ಮಾತ್ರ ಬಿಟ್ಟು ಯಾವುದೇ ಮಕ್ಕಳನ್ನು ಆ ಮೃತ್ಯುಪತ್ರ ಮಾಡದೇ ತೀರಿಕೊಂಡವನ ಮರಣದ ಕಾಲಕ್ಕೆ ಮರಣ ಹೊಂದಿದರೆ, ಆಗ ಮೊದಲೇ ತೀರಿಕೊಂಡ ಅಂತಹವನ ಪಾಲು ಮೃತ್ಯುಪತ್ರ ಮಾಡದೇ ತೀರಿಕೊಂಡ ಆತನ ಉಳಿದ ಗಂಡು ಮಕ್ಕಳ ಹಿಸ್ಸೆಯ ಅರ್ಧದಷ್ಟು ಇರುತ್ತದೆ.

ಬ) ಮೊದಲೇ ತೀರಿಕೊಂಡ ಮಗನ ಮಗನು, ಮೃತ್ಯುಪತ್ರ ಮಾಡದೆ ತೀರಿಕೊಂಡವನಕ್ಕಿಂತ ಪೂರ್ವದಲ್ಲಿಯೆ ಸತ್ತರೆ ಅವನ ಪಾಲು, ಅವನ ವಿಧವೆ ಮತ್ತು ಅವನ ಗಂಡುಮಕ್ಕಳಲ್ಲಿ ಸರಿಯಾಗಿ ಪಾಲುಮಾಡತಕ್ಕದ್ದು.

ಕ) ಇಂತಹ ಮೊದಲೇ ತೀರಿಕೊಂಡ ಮಗನು ತನ್ನ ಹಿಂದೆ ತನ್ನ ವಿಧವೆ ಇಲ್ಲವೆ ಒಬ್ಬ ಮಗನ ಇಲ್ಲವೆ ಇಬ್ಬರು ಇಲ್ಲವೆ ಹೆಚ್ಚಿನ ಗಂಡುಮಕ್ಕಳ ವಿಧವೆಯವರನ್ನು ಮಾತ್ರ ಬಿಟ್ಟು, ಅಂದರೆ ಒಬ್ಬ ಮಗನನ್ನಾಗಲಿ, ಇಲ್ಲವೆ ಮಗನ ಮಗನನ್ನು ಆ ಮೃತ್ಯುಪತ್ರ ಮಾಡದೆ ತೀರಿ ಕೊಂಡವನ ಮರಣದ ಕಾಲಕ್ಕೆ ಬಿಟ್ಟಿರದಿದ್ದರೆ ಆಗ ಮೊದಲೇ ತೀರಿಕೊಂಡ ಮಗನ ಪಾಲು ಆತನ ವಿಧವೆ ಮತ್ತು ಅವನ ಮಗನ ವಿಧವೆ ಇವರಲ್ಲಿ ಹೀಗೆ ವಿಭಾಗಿಸಬೇಕು. ಮೊದಲೇ ತೀರಿಕೊಂಡ ಮಗನ ಸತ್ತವನ ಮರಣದ ಕಾಲಕ್ಕೆ ಮಗನು ಜೀವಂತ ಇರುವುದಿಲ್ಲ, ಆಗ ಮೊದಲೇ ತೀರಿಕೊಂಡ ಮಗನ ಮಗನ ಹಿಸ್ಸೆಯು ಆ ಮೃತ್ಯುಪತ್ರ ಮಾಡದೆ ತೀರಿಕೊಂಡವನ ಯಾವನೇ ಮಗನ ಹಿಸ್ಸೆ ಪಾಲಿನ ಅರ್ಧದಷ್ಟು ಇರತಕ್ಕದ್ದು.

ಬ) ಮೊದಲೇ ತೀರಿಕೊಂಡ ಮಗನ ಮಗ ಯಾವನು ಆ ಮೃತ್ಯು ಪತ್ರ ಮಾಡದೆ ತೀರಿಕೊಂಡವನಿಗಿಂತ ಮೊದಲೇ ತೀರಿಕೊಂಡರೆ ಅಂತಹನ ಹಿಸ್ಸೆಯನ್ನು ಆತನ ವಿಧವೆ ಮತ್ತು ಮಗ ಇವರಲ್ಲಿ ಸಮನಾಗಿ ಹಂಚಬೇಕು.

ಕ) ಮೊದಲೇ ತೀರಿಕೊಂಡ ಮಗನು ತನ್ನ ವಿಧವೆಯನ್ನು ಇಲ್ಲವೆ ಮಗನ ವಿಧವೆ ಇಲ್ಲವೆ ಇಬ್ಬರು ಇಲ್ಲವೆ ಹೆಚ್ಚಿನ ಗಂಡುಮಕ್ಕಳ ವಿಧವೆಯರನ್ನು ಬಿಟ್ಟು ಆದರೆ ಮಗ ಇಲ್ಲವೆ ಮಗನ ಮಗ ಇವರು ಆ ಮೃತ್ಯುಪತ್ರ ಮಾಡದೆ ತೀರಿಕೊಂಡವನ ಮರಣದ ಕಾಲಕ್ಕೆ ಜೀವಂತ ಇರದಿದ್ದರೆ ಆಗ ಅಂತಹ ಮೊದಲೇ ತೀರಿಕೊಂಡ ಮಗನ ಹಿಸ್ಸೆ ಪಾಲನ್ನು ಅವನ ವಿಧವೆ ಮತ್ತು ಅವನ ಮಗನ ವಿಧವೆ ಇವರಲ್ಲಿ ಹೀಗೆ ವಿಭಾಗಿಸಬೇಕು. ಮೊದಲೇ ತೀರಿಕೊಂಡ ಮಗನ ವಿಧವೆಯ ಪಾಲು ಮೊದಲೇ ತೀರಿಕೊಂಡ ಮಗನ ಮಗನ ವಿಧವೆಯ ಪಾಲಿಗಿಂತ ಎರಡು ಪಟ್ಟು ಇರತಕ್ಕದ್ದು.

(೩) ಈ ಕಲಮಿನ ಉದ್ದೇಶಗಳಿಗಾಗಿ ಎಲ್ಲಿ ಒಬ್ಬ ಮನುಷ್ಯನು ಒಬ್ಬರಿಗಿಂತ ಹೆಚ್ಚಿನ ವಿಧವೆಯವರನ್ನು ಬಿಟ್ಟು ಸತ್ತಿದ್ದರೆ ಅವರೆಲ್ಲರೂ ಕೂಡ ಒಂದೇ ಹಿಸ್ಸೆ ಪಡೆಯುತ್ತಾರೆ. ಮತ್ತು ತಮ್ಮಲ್ಲಿ ಸರಿಯಾಗಿ ಹಂಚಿಕೊಳ್ಳತಕ್ಕದ್ದು.

ವಿಧವೆಗೆ ಆತನ ಪ್ರತಿಯೊಬ್ಬ ಮೊದಲೇ ತೀರಿಕೊಂಡ ಮಕ್ಕಳ ವಿಧವೆಯ ಪಾಲಿನ ಎರಡು ಪಟ್ಟು ಹಿಸ್ಸೆ ಪಾಲು ಕೊಡಬೇಕು.

೩. ಈ ಕಲಮಿನ ಉದ್ದೇಶಕ್ಕಾಗಿ ಒಬ್ಬ ಮನುಷ್ಯನು ಒಬ್ಬಳಿಗಿಂತ ಹೆಚ್ಚಿನ ವಿಧವೆಯರನ್ನು ಬಿಟ್ಟು ಸತ್ತಿದ್ದರೆ, ಆ ಎಲ್ಲ ವಿಧವೆಯರು ಒಟ್ಟಾಗಿ ಅವರಿಗೆ ಕೊಟ್ಟ ಒಂದೇ ಹಿಸ್ಸೆ ಪಾಲನ್ನು ಆ ಎಲ್ಲ ವಿಧವೆಯರು ಒಂದೇ ಎಂದು ಗ್ರಹಿಸಿ ಅವರಿಗೆ ಒಂದೇ ಒಂದು ಹಿಸ್ಸೆ ಕೊಡಲಾಗುವುದು. ಅವರೆಲ್ಲರೂ ಆ ಒಂದು ಪಾಲಿನಲ್ಲಿ ಸರಿಯಾಗಿ ಹಂಚಿಕೊಳ್ಳಬೇಕು.

* * * *

ಆಕೆ ಒಬ್ಬಳೇ ಇದ್ದರೆ ಹೇಗೆ ಒಂದು ಹಿಸ್ಸೆ ಪಡೆಯುತ್ತಿದ್ದಳೋ ಹಾಗೆ ಅವರೆಲ್ಲರೂ ಕೂಡಿ ಒಂದೇ ಹಿಸ್ಸೆ ಪಡೆಯುತ್ತಾರೆ.

**ಉದಾಹರಣೆ** : i) ಮೃತ್ಯುಪತ್ರ ಮಾಡದೇ ತೀರಿಕೊಂಡವನ ಜೀವಂತ ಇರುವ ವಾರಸುದಾರರು – ಮೂರು ಜನ ಗಂಡುಮಕ್ಕಳು ಅ, ಬ ಮತ್ತು ಕ ಮೊದಲೇ ತೀರಿಕೊಂಡ ಮಗ ಡ ಈತನ ಐದು ಜನ ಮೊಮ್ಮಕ್ಕಳು ಮೊದಲೇ ತೀರಿಕೊಂಡ ಮತ್ತೊಬ್ಬ ಮಗ ಮೊದಲೇ ತೀರಿಕೊಂಡ ಮಗ ಇ ಅವನ ಇಬ್ಬರು ಮರಿಮೊಮ್ಮಕ್ಕಳು ಅ ಬ ಮತ್ತು ಕ ಇವರು ಮೂರು ಹಿಸ್ಸೆಗಳನ್ನು ಪಡೆಯುತ್ತಾರೆ. ಡ ನ ಶಾಖೆಯು ಮತ್ತು ಇ ಈತನ ಶಾಖೆಯು ಒಂದೊಂದು ಹಿಸ್ಸೆಯನ್ನು ಪಡೆಯುತ್ತದೆ. ಡ ನ ಮೊಮ್ಮಗನು ಡ ನ ಶಾಖೆಯಲ್ಲಿ ಮತ್ತು ಮರಿಮೊಮ್ಮಕ್ಕಳ ಇ ನ ಶಾಖೆಯಲ್ಲಿ ಇವರು ಆ ಶಾಖೆಗೆ ಕೊಟ್ಟ ಅನುಕ್ರಮ ಪಾಲುಗಳಲ್ಲಿ ಸರಿಯಾಗಿ ಸಮಪಾಲು ಪಡೆಯುತ್ತಾರೆ. ಮೃತ್ಯುಪತ್ರ ಮಾಡದೆ ತೀರಿಕೊಂಡವನ ಪ್ರತಿಯೊಬ್ಬ ಮಗನು ಆದ್ದರಿಂದ ಆ ಆಸ್ತಿಯ ಒಂದು ಐದನೆಯ ಅಂಶದಷ್ಟು ಹಿಸ್ಸೆ ಪಡೆಯುತ್ತಾರೆ.

ಪ್ರತಿಯೊಬ್ಬ ಮೊಮ್ಮಗನು ಒಂದು ಇಪ್ಪತ್ತೈದನೆಯ ಅಂಶದಷ್ಟು ಪಡೆಯುತ್ತಾನೆ ಮತ್ತು ಪ್ರತಿಯೊಬ್ಬ ಮರಿಮೊಮ್ಮಗನು ಒಂದು ಹತ್ತನೆಯ ಅಂಶದಷ್ಟು ಪಾಲು ಮಾಡಿಕೊಳ್ಳಬಲ್ಲ.

(ii) ಮೃತ್ಯುಪತ್ರ ಮಾಡದೆ ತೀರಿಕೊಂಡವನ ವಿಧವೆ ಇಲ್ಲವೆ ಮಗಳು ಯಾರು ಆ ಮೃತ್ಯುಪತ್ರ ಮಾಡದೆ ತೀರಿಕೊಂಡವನ ನಂತರ ಬದುಕಿ ಉಳಿಯುವರೋ ಅವರು ಪಾಲುಮಾಡಿಕೊಳ್ಳಬಹುದಾದ ಎಲ್ಲ ಆಸ್ತಿಯನ್ನು ಪಡೆಯುತ್ತಾರೆ.

(iii) ಜೀವಿತವಿರುವ ಒಬ್ಬ ವಿಧವೆಯ

ವಾರಸುದಾರರು ಮತ್ತು ಮೊದಲೇ ತೀರಿಕೊಂಡ ಮಗನ ಇಬ್ಬರು ಮೊಮ್ಮಕ್ಕಳು. ಪಾಲುಮಾಡಲು ಬರುವ ಆಸ್ತಿಯಲ್ಲಿ ವಿಧವೆಯು ಒಂದು ಪಾಲನ್ನು ಪಡೆಯುವಳು, ಇಬ್ಬರೂ ಮೊಮ್ಮಕ್ಕಳು ಒಟ್ಟಿಗೆ ಒಂದು ಪಾಲು ಪಡೆಯುತ್ತಾರೆ. ವಿಧವೆ ಆದ್ದರಿಂದ ಪಾಲುಮಾಡಿಕೊಳ್ಳಬಲ್ಲ ಆಸ್ತಿಯಲ್ಲಿ ಅರ್ಧ ಹಿಸ್ಸೆ ಪಡೆಯುತ್ತಾಳೆ : ಮತ್ತು ಪ್ರತಿಯೊಬ್ಬ ಮೊಮ್ಮಗನು ಪಾಲು ಮಾಡಲು ಬರುವ ಆಸ್ತಿಯಲ್ಲಿ ಒಂದು ನಾಲ್ಕನೆಯ ಅಂಶದಷ್ಟು ಆಸ್ತಿ ಪಡೆಯುತ್ತಾನೆ.

(iv) ಜೀವಿಸಿರುವ ವಾರಸುದಾರರು, ಮಗಳು ಮತ್ತು ಮೊದಲೇ ತೀರಿಕೊಂಡ ಮಗನ ವಿಧವೆ ಮಗಳು ಇವಳು ಒಂದು ಪಾಲು ಪಡೆಯುತ್ತಾಳೆ. ವಿಧವೆಯು ಅರ್ಧ ಪಾಲು ಪಡೆಯುತ್ತಾಳೆ.

(v) ಬದುಕಿ ಉಳಿದ ವಾರಸುದಾರರು ಮಗ, ಮಗಳು ಮತ್ತು ಮೊದಲೇ ತೀರಿಕೊಂಡ ಮಗನ ವಿಧವೆ ಮಗನಿಗೆ ಒಂದು ಹಿಸ್ಸೆ ಮಗಳಿಗೆ ಒಂದು ಹಿಸ್ಸೆ ಮತ್ತು ಮೊದಲೇ ಸತ್ತ ಮಗನ ವಿಧವೆಯು ಅರ್ಧದಷ್ಟು ಪಾಲು ಪಡೆಯುವಳು.

(vi) ಜೀವಿಸಿರುವ ವಾರಸುದಾರರು ಒಬ್ಬ ಮಗ ಒಬ್ಬ ಮಗಳು ಮತ್ತು ವಿಧವೆ ಮತ್ತು ಮೊದಲೇ ತೀರಿಕೊಂಡ ಮಗನ ಮಗನು ಒಂದು ಪಾಲನ್ನು ಪಡೆಯುತ್ತಾನೆ. ಮಗಳು ಒಂದು ಪಾಲು ಪಡೆಯುತ್ತಾಳೆ. ವಿಧವೆ ಮೊದಲೇ ತೀರಿಕೊಂಡ ಮಗನ ಮಗ

ಅವರು ತಮ್ಮ ಒಂದು ಪಾಲು ಪಡೆಯುತ್ತಾರೆ. ನಂತರ ಅದನ್ನು ಅವರಲ್ಲಿ ವಿಭಾಗಿಸಬೇಕು.

(vii) ಜೀವಿಸಿರುವ ವಾರಸುದಾರರು, ವಿಧವೆ ಮಗ, ಮಗಳು ಮೊದಲೇ ತೀರಿಕೊಂಡ ಮಗನ ಮಗ, ವಿಧವೆ ಮತ್ತು ಮೊದಲೇ ತೀರಿಕೊಂಡ ಇನ್ನೊಬ್ಬ ಮಗನ ಎರಡು ವಿಧವೆಯು ಒಂದು ಹಿಸ್ಸೆ, ಮಗನು ಒಂದು ಹಿಸ್ಸೆ ಮಗಳಿಗೆ ಒಂದು ಹಿಸ್ಸೆ ಮೊದಲೇ ತೀರಿಕೊಂಡ ಮಗನ ವಿಧವೆ (ಡ) ಅವಳಿಗೆ ಅರ್ಧಹಿಸ್ಸೆ ದೊರೆಯುತ್ತದೆ (ವಾರಸುದಾರರು ಮೇಲೆ ಕಾಣಿಸಿದವರು) ಅವರಿಗೆ ಒಂದು ಪಾಲು, ಆಮೇಲೆ ಅದನ್ನು ಸರಿಯಾಗಿ ವಿಭಜಿಸಬೇಕು.

(viii) ಜೀವಿಸಿರುವ ವಾರಸುದಾರರ–ಒಬ್ಬ ಮಗ, ವಿಧವೆ ಮತ್ತು ಮೊದಲೇ ತೀರಿಕೊಂಡ ಮಗನ ಮೂವರು ಗಂಡುಮಕ್ಕಳು, ಮೊದಲೇ ತೀರಿಕೊಂಡ ಮಗನ ವಿಧವೆ (ಬ) ದಲ್ಲಿ ಉಲ್ಲೇಖಿಸಿದಂತೆ ಮಗನಿಗೆ ಒಂದು ಹಿಸ್ಸೆ ಮತ್ತು ಎಂಟ್ರಿ ಬ ಅ (ಸಿ) ಒಟ್ಟಿಗೆ ಅವರಿಗೆ ಒಂದು ಪಾಲು, ನಂತರ ಈ ಹಿಸ್ಸೆಯನ್ನು ಹೀಗೆ ವಿಭಾಗಿಸಬೇಕು. ಎಂಟ್ರಿಯಲ್ಲಿ (ಬ) ಕಾಣಿಸಿದಂತೆ ಭಾಗವನ್ನು ಪ್ರತಿಯೊಬ್ಬನು ಪಡೆಯುತ್ತಾನೆ ಎಂಟ್ರಿ ಸಿ ದಲ್ಲಿ ಕಾಣಿಸಿದವರು ಅಂತಹ ಆಸ್ತಿಯಲ್ಲಿ ೧/೨ ಪಡೆಯುತ್ತಾರೆ. ಇದರ ಪರಿಣಾಮವಾಗಿ ಮೃತ್ಯುಪತ್ರ ಮಾಡದೆ ಸತ್ತವನ ಗಂಡುಮಗನು ಪಾಲುಮಾಡಲು ಬರುವ ಆಸ್ತಿಯ

ಒಂದು ಎರಡನೆಯ ಅಂಶದಷ್ಟು ಆಸ್ತಿ ಪಡೆಯುತ್ತಾನೆ. ಮೊದಲೇ ತೀರಿಕೊಂಡ ಮಗನ ವಿಧವೆ ಅವಳಿಗೆ ೧/೯ (ಒಂದು ಒಂಬತ್ತನೆಯ ಅಂಶದಷ್ಟು) ಪಾಲು ಪಡೆಯುತ್ತಾರೆ. ಪ್ರತಿಯೊಬ್ಬ ಮಗ ಹಾಗೆ ಮೃತ್ಯುಪತ್ರ ಮಾಡದೆ ತೀರಿಕೊಂಡ ಮಗನ ಪ್ರತಿಯೊಬ್ಬರು ೧/೯ನೆಯ ಅಂಶದಷ್ಟು ಪಾಲು ಪಡೆಯುವರು. ಮೃತ್ಯುಪತ್ರ ಮಾಡದೆ ಸತ್ತವನ ವಿಧವೆ ಮೊಮ್ಮಗ ಅವರು ೧/೧೮ ಆಸ್ತಿ ಪಡೆಯುತ್ತಾರೆ.

(೧೧೪)

**೧೦೧. ಒಂದನೆಯ ವರ್ಗದಲ್ಲಿರುವ ವಾರಸುದಾರರಲ್ಲಿ ಅಂದರೆ ಮೊದಲಿಗೆ ಹಕ್ಕುಳ್ಳವರು ಅವರಿಗೆ ಆಸ್ತಿಯನ್ನು ಹಂಚುವ ವಿಧಾನ :**

ಮೃತ್ಯುಪತ್ರ ಮಾಡದೆ ತೀರಿಕೊಂಡವನ ಆಸ್ತಿಯನ್ನು ಅವನನ್ನು ಮೊದಲು ಹಕ್ಕುಳ್ಳ ವಾರಸುದಾರರಲ್ಲಿ ವಿಭಾಗಿಸಿ ಸಮನಾಗಿ ಹಂಚಬೇಕು ಮತ್ತು ಎಂಟನೆಯ ಪರಿಶಿಷ್ಟ ವರ್ಗ ೧೧ರಲ್ಲಿ ಮೊದಲನೆಯ ಎಂಟ್ರಿಯಲ್ಲಿ ಕಾಣಿಸಿದವರಿಗೆ ಸಮನಾಗಿ ಹಂಚಬೇಕು.

(೧೧೩)

**೧೦೧.ಮೊದಲಿಗೆ ಹಕ್ಕುಳ್ಳ ಕ್ಲೇಮು ಮಾಡುವ ವಾರಸುದಾರರಲ್ಲಿ – ಎರಡನೆಯ ವರ್ಗದಲ್ಲಿ ಕಾಣಿಸಿದ ವಾರಸುದಾರರಲ್ಲಿ ಆಸ್ತಿಯನ್ನು ಹಂಚುವ ವಿಧಾನ;** ಒಬ್ಬ ಮೃತ್ಯುಪತ್ರ ಮಾಡದೆ ತೀರಿಕೊಂಡರೆ ಅವನ ಆಸ್ತಿಯನ್ನು ಅವನ ವಾರಸುದಾರರು ಮೊದಲಿನ ಹಕ್ಕುಳ್ಳ ಷೇರುದಾರ ವಾರಸುದಾರರು ಎಂಟ್ರಿ ಪರಿಶಿಷ್ಟ ಏಳರಲ್ಲಿ ವರ್ಗ ೯೨ರಲ್ಲಿಯ ಎಂಟ್ರಿಗಳಂತೆ, ಒಂದು ಎಂಟ್ರಿಯಲ್ಲಿ ಕಾಣಿಸಿದ ಎಲ್ಲರೂ ತಮ್ಮ ಹಿಸ್ಸೆ ಷೇರನ್ನು ಸಮಪಾಲು ಪಡೆಯುತ್ತಾರೆ. ಸಮನಾಗಿ ಭಾಗಿಸಿ ಸಮಪಾಲು ತೆಗೆದುಕೊಳ್ಳುತ್ತಾರೆ.

(೧೧೫)

**೧೦೨. ಸಹೋತ್ರ ವಾರಸುದಾರರು**

ಮೊದಲಿನ ಹಕ್ಕು ಪಡೆಯುವ ಪ್ರಾಶಸ್ತ್ಯದ ಪಾಲು ಪಡೆಯುವವರು ಎಂಟನೆಯ ಪರಿಶಿಷ್ಟದ ವರ್ಗ ೧ ಮತ್ತು ೨ ನೇದ್ದರಲ್ಲಿ ನಿರ್ದಿಷ್ಟಪಡಿಸಿದ ವಾರಸುದಾರರು ಯಾರೂ

(೧೧೪)

**೧೦೨. ಗೋತ್ರಜರು ವಾರಸುದಾರರು ಇರುವಾಗ:**

ವರ್ಗ ೧೧ರಲ್ಲಿ ನಿರ್ದೇಶಿಸಿದ ಮೊದಲು ಹಕ್ಕಿನ ಷೇರುದಾರರು ಯಾರೂ ಇರದಿದ್ದರೆ ಆಗ ಆ ಮೃತನ

**ಭಾಗ–೧**
**ಕಲಂ–೮**
**ಪುಟ–೭**
**ಪರಿಶಿಷ್ಟ vii**

ಇರದಿದ್ದರೆ, ಮೃತನ ಸಹೋತ್ರಜರು –ಮೃತನ ಸಂಬಂಧಿಕರು ೫ನೆಯ ತಲೆಮಾರಿನ ಒಳಗೆ ಇದ್ದವರು ಆ ಆಸ್ತಿಗೆ ಈ ಭಾಗದಲ್ಲಿ ಕಾಣಿಸಿದ ನಿಯಮಗಳಂತೆ ಹೋಗತಕ್ಕದ್ದು.

ಗೋತ್ರಜರು. ಆ ಮೃತ್ಯುಪತ್ರ ಮಾಡದೆ ತೀರಿಕೊಂಡವನ ಗೋತ್ರಜರು ೫ನೆಯ ತಲೆಮಾರಿನ ಒಳಗೆ ಇರುವವರು ಈ ಭಾಗದಲ್ಲಿರುವ ನಿಯಮಗಳ ಅನ್ವಯ ವಾರಸುದಾರರಾಗಿ ಆ ಆಸ್ತಿಯನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

(೧೧೬)

**೧೦೩. ಬಂಧುಗಳು ವಾರಸುದಾರರು**

ಇರುವಾಗ ಮೊದಲು ಹಕ್ಕುಳ್ಳ ವಾರಸುದಾರರು ಹಾಗೂ ಗೋತ್ರಜರು ಯಾರೂ ಇಲ್ಲದಿರುವಾಗ ಮೃತ್ಯುಪತ್ರ ಮಾಡದೆ ತೀರಿಕೊಂಡವನು ಸಂಬಂಧಿಸಿದ ಬಂಧುಗಳು ೫ ತಲೆಮಾರಿನ ಒಳಗಿನವರು ಈ ಭಾಗದಲ್ಲಿ ಹೇಳಿದ ನಿಯಮಗಳ ಅನುಸಾರವಾಗಿ ಮೃತನ ವಾರಸುದಾರರಾಗಿ ಅವನ ಆಸ್ತಿಗೆ ಹಕ್ಕುಳ್ಳವರಾಗುತ್ತಾರೆ.

(೧೧೫)

**೧೦೩. ಬಂಧುಗಳು ವಾರಸುದಾರರು :**

ಮೊದಲು ಹಕ್ಕಿನ ಯಾವ ವಾರಸುದಾರರು ಮತ್ತು ಗೋತ್ರಜರು ಯಾರು ಇಲ್ಲದಿದ್ದ ಮೃತನಿಗೆ ಸಂಬಂಧಿಸಿದ ಬಂಧುಗಳ ೫ ತಲೆಮಾರಿನ ಒಳಗಿನವರು ಈ ಭಾಗದ ನಿಯಮಗಳಲ್ಲಿ ಹೇಳಿದ ಅನುಸಾರ ಮೃತನ ಆಸ್ತಿಗೆ ವಾರಸುದಾರರಾಗಲು ಹಕ್ಕುಳ್ಳವರಾಗುತ್ತಾರೆ.

**ಭಾಗ–೧ ಕಲಂ–೮ ಪುಟ–೭**

(೧೧೭)

**೧೦೪.** ಗೋತ್ರಜರು ಮತ್ತು ಬಂಧುಗಳು ಇವರಲ್ಲಿ ವಾರಸಾದ ಅನುಕ್ರಮಣಿಕೆಯ ಗೋತ್ರಜರು ಇಲ್ಲವೆ ಬಂಧುಗಳು ಇವರಲ್ಲಿ ಯಾರೇ ಇದ್ದರೂ ಅನುಕ್ರಮವಾಗಿ ಯಾರು ಮೊದಲು ಹಕ್ಕುಳ್ಳವರೆಂಬುದನ್ನು ಈ ಕೆಳಗಣ ನಿಯಮಗಳಿಗನುಸಾರವಾಗಿ ನಿರ್ಧರಿಸತಕ್ಕದ್ದು.

**ನಿಯಮ ೧ :** ಇಬ್ಬರು ವಾರಸುದಾರರಲ್ಲಿ ಯಾರು ಕಡಿಮೆ ತಲೆಮಾರಿನ ವಾರಸುದಾರರು ಹಾಗೂ ಇನ್ನೊಬ್ಬರು ಯಾವುದೇ ಪೂರ್ವಜರಿಗೆ ಸಂಬಂಧ ಇಲ್ಲದವ ಹೀಗೆ ಇದ್ದಾಗ ಯಾರಿಗೆ ಪೂರ್ವಜರು ಇರುವುದಿಲ್ಲವೋ ಅಂಥವನಿಗೆ ಮೊದಲಿಗೆ ಹಕ್ಕುಕೊಡಲಾಗುವುದು.

(೧೧೬)

**೧೦೪.** ಗೋತ್ರಜರು ಮತ್ತು ಬಂಧುಗಳಲ್ಲಿ ವಾರಸುದಾರರ ಅನುಕ್ರಮಣಿಕೆ ಗೋತ್ರಜರು ಮತ್ತು ಬಂಧುಗಳು ಇವರಲ್ಲಿ ನಿಯಮಗಳಿಗನುಸಾರವಾಗಿ ಮೊದಲಿನ ಹಕ್ಕು ಪ್ರಾಶಸ್ತ್ಯವನ್ನು ಗೊತ್ತುಪಡಿಸ ತಕ್ಕದ್ದು.

**ಭಾಗ–೨ ಕಲಂ–೯ ಪುಟಗಳು ೭ಮತ್ತು೮**

**ನಿಯಮ ೧ :** ಇಬ್ಬರು ವಾರಸುದಾರರಲ್ಲಿ ಯಾರು ಕಡಿಮೆ ತಲೆಮಾರು ವಾರಸುದಾರರು ಹಾಗೂ ಇನ್ನೊಬ್ಬರು ಯಾವುದೇ ಪೂರ್ವಜರಿಗೆ ಸಂಬಂಧ ಇಲ್ಲದವರು ಹೀಗೆ ಇರುವಾಗ ಯಾರಿಗೆ ಪೂರ್ವಜರು ಇರುವುದಿಲ್ಲವೋ ಅಂಥವನಿಗೆ ಮೊದಲಿನ ಹಕ್ಕು ಕೊಡಲಾಗುವುದು.

**ನಿಯಮ ೨ :** ಇಬ್ಬರು ವಾರಸುದಾರರು ಸಮಾನವಾದ ತಲೆಮಾರಿನಲ್ಲಿದ್ದು ಇಲ್ಲವೆ ಯಾವುದೇ ತಲೆಮಾರು ಇಲ್ಲದವನು ಇಂತಹ ವಾರಸುದಾರರಲ್ಲಿ ಯಾರು ಕಡಿಮೆ ತಲೆಮಾರಿನಲ್ಲಿರುವರೋ ಅವರು ಇಲ್ಲವೆ ಯಾವುದೇ ವಂಶಜನು ಇಲ್ಲದಿದ್ದರೆ ಅಂಥವನಿಗೆ ಮೊದಲಿನ ಹಕ್ಕು ಪ್ರಾಪ್ತವಾಗುತ್ತದೆ.

**ನಿಯಮ ೩ :** ಇಬ್ಬರು ವಾರಸುದಾರರು ಒಬ್ಬನೇ ವಂಶಜನಿಂದ ಬಂದವರು ಇಲ್ಲವೆ ಹಾಗೆ ಒಂದೇ ವಂಶಜ ಇಲ್ಲದವನು ಮೊಟ್ಟಮೊದಲಿನ ಗಂಡು ಸಂತಾನದಿಂದ ಬಂದವನಿಗೆ ಹೆಣ್ಣು ಸಂತಾನದಿಂದ ಬಂದವರಿಗಿಂತ ಮೊದಲು ಹಕ್ಕು ಬರುತ್ತದೆ (ಮೃತ್ಯುಪತ್ರ ಮಾಡದೆ ಸತ್ತವನಿಂದ ಪ್ರಾರಂಭಿಸಿ ವಾರಸುದಾರನವರೆಗೆ ಮುಂದುವರೆಯುತ್ತದೆ)

ಈ ಎರಡೂ ವಾರಸುದಾರರಲ್ಲಿ ವ್ಯತ್ಯಾಸವನ್ನುಂಟುಮಾಡುವಂತಿದ್ದರೆ ಆಗ ಗಂಡು ವಂಶಜರಿಗೆ ಪ್ರಾಶಸ್ತ್ಯ – ಹಕ್ಕು ಕೊಡಲಾಗುವುದು.

**ನಿಯಮ ೪ :** ಈ ಮೇಲೆ ಹೇಳಿದಂತೆ ಎರಡೂ ವಾರಸುದಾರರ ಅಂತರವನ್ನು ಕಂಡುಹಿಡಿಯದಿದ್ದಾಗ ಗಂಡು ಸಂತಾನದ ವಂಶಜನಿಗೆ ಹೆಣ್ಣು ಸಂತಾನದ ವಂಶಜನಿಗಿಂತ ಹೆಚ್ಚಿನ ಪ್ರಾಧಾನ್ಯ ಕೊಡಲಾಗುವುದು. ಅವನಿಗೆ ಮೊದಲು ಹಕ್ಕು ಪ್ರಾಪ್ತವಾಗುತ್ತದೆ.

**ನಿಯಮ ೫ :** ಕೆಳಗಿನ ನಿಯಮಗಳ ಪ್ರಕಾರ ಎಲ್ಲಿ ಯಾವುದೇ ವಂಶಜರಲ್ಲಿ ಒಬ್ಬರಿಗಿಂತ ಇನ್ನೊಬ್ಬರಿಗೆ ಮೊದಲು ಹಕ್ಕು ಪ್ರಾಪ್ತವಾಗುವುದಿಲ್ಲವೋ ಅಂತ ಪ್ರಸಂಗದಲ್ಲಿ ಇಬ್ಬರೂ ಕೂಡಿಯೇ ಆ ಆಸ್ತಿ ತೆಗೆದುಕೊಳ್ಳುತ್ತಾರೆ.

**ನಿಯಮ ೨ :** ಇಬ್ಬರು ವಾರಸುದಾರರು ಸಮಾನವಾದ ತಲೆಮಾರಿನಲ್ಲಿದ್ದು ಇಲ್ಲವೆ ಯಾವುದೇ ತಲೆಮಾರು ಇಲ್ಲದವನು ಇಂತಹ ವಾರಸುದಾರರಲ್ಲಿ ಯಾರು ಕಡಿಮೆ ತಲೆಮಾರಿನಲ್ಲಿರುವರೋ ಅವರು ಇಲ್ಲವೆ ಯಾವುದೇ ವಂಶಜನು ಇಲ್ಲದಿದ್ದರೆ, ಅಂಥವನಿಗೆ ಮೊದಲು ಹಕ್ಕು ಪ್ರಾಪ್ತವಾಗುತ್ತದೆ.

**ಭಾಗ–೪ ಕಲಂ–೭ ಪುಟ–೬**

**ನಿಯಮ ೩ :** ಇಬ್ಬರು ವಾರಸುದಾರರು ಒಬ್ಬನೇ ವಂಶಜನಿಂದ ಬಂದವರು ಇಲ್ಲವೆ ಹಾಗೆ ಒಂದೇ ವಂಶಜ ಇಲ್ಲದವನು ಮೊಟ್ಟಮೊದಲು ಗಂಡು ಸಂತಾನದಿಂದ ಬಂದವನಿಗೆ ಹೆಣ್ಣು ಸಂತಾನದಿಂದ ಬಂದವರಿಗಿಂತ ಮೊದಲ ಹಕ್ಕು ಬರುತ್ತದೆ. (ಮೃತ್ಯುಪತ್ರ ಮಾಡದೆ ಸತ್ತವನಿಂದ ಪ್ರಾರಂಭಿಸಿ – ಅದು ವಾರಸುದಾರನವರೆಗೆ ಮುಂದುವರೆಯುತ್ತದೆ) ಈ ಎರಡೂ ವಾರಸುದಾರರಲ್ಲಿ ವ್ಯತ್ಯಾಸವನ್ನುಂಟು ಮಾಡುತ್ತಿದ್ದರೆ ಆಗ ಗಂಡು ವಂಶಜನಿಗೆ ಪ್ರಾಶಸ್ತ್ಯ – ಮೊದಲು ಹಕ್ಕು ಕೊಡಲಾಗುವುದು.

**ನಿಯಮ ೪ :** ಈ ಮೇಲೆ ಹೇಳಿದಂತೆ ಎರಡೂ ವಾರಸುದಾರರ ನಡುವಿನ ಅಂತರವನ್ನು ಕಂಡುಹಿಡಿಯದಿದ್ದಾಗ, ಗಂಡು ಸಂತಾನದ ವಂಶಜನಿಗೆ ಹೆಣ್ಣು ಸಂತಾನದ ವಂಶಜನಿಗಿಂತ ಹೆಚ್ಚಿನ ಪ್ರಾಧಾನ್ಯ ಕೊಡಲಾಗುವುದು. ಅವನಿಗೆ ಮೊದಲ ಹಕ್ಕು ಪ್ರಾಪ್ತವಾಗುತ್ತದೆ.

**ನಿಯಮ ೫ :** ಕೆಳಗಿನ ನಿಯಮಗಳ ಪ್ರಕಾರ, ಎಲ್ಲಿ ಯಾವುದೇ ವಂಶಜರಲ್ಲಿ ಒಬ್ಬರಿಗಿಂತ ಇನ್ನೊಬ್ಬರಿಗೆ ಮೊದಲು ಹಕ್ಕು ಪ್ರಾಪ್ತವಾಗುವುದಿಲ್ಲವೋ ಅಂತಹ ಪ್ರಸಂಗದಲ್ಲಿ

ಇಬ್ಬರೂ ಕೂಡಿಯೇ ಆ ಆಸ್ತಿ ತೆಗೆದುಕೊಳ್ಳುತ್ತಾರೆ.

**ಉದಾಹರಣೆ** : ಈ ಕೆಳಗಿನ ಉದಾಹರಣೆಗಳಲ್ಲಿ ಎಫ್ ಮತ್ತು ಎಮ್ ಈ ಅಕ್ಷರಗಳು ತಂದೆ ಮತ್ತು ತಾಯಿ – ಅನುಕ್ರಮವಾಗಿ ಮೂಲ ಪುರುಷರವರೆಗೆ ಮೃತ್ಯುಪತ್ರವಿಲ್ಲದೆ ತೀರಿಕೊಂಡವನಿಂದ ಮೂಲ ವಂಶಜನವರೆಗೆ ವಂಶಾವಳಿ ಮತ್ತು ಎಸ್ ಮತ್ತು ಡಿ ಈ ಅಕ್ಷರಗಳು ಮಗ ಮತ್ತು ಮಗಳು ಈ ಪದಗಳು ಅನುಕ್ರಮವಾಗಿರುತ್ತದೆ. ಮೃತನ ಮೂಲವಂಶಜರಿಂದ ಹಿಡಿದು ವಾರಸುದಾರರವರೆಗೆ ವಂಶಾವಳಿ ಹೀಗೆ ಎಮ್. ಎಫ್ ಎಸ್. ಎಸ್. ಇವು ಮೃತ್ಯುಪತ್ರ ಮಾಡದೆ ಮರಣ ಹೊಂದಿದವನ ತಾಯಿ ತಂದೆಯ ಮಗನ ಮಗ (ತಾಯಿಯ ಸಹೋದರನ ಮಗ) ಮತ್ತು ಎಫ್ ಡಿ ಎಸ್ ಈ ಪದಗಳು ಮೃತ್ಯು ಪತ್ರವಿಲ್ಲದೆ ಮರಣ ಹೊಂದಿದವನ ತಂದೆಯ ಮಗಳ ಮಗಳು (ಸಹೋದರಿಯ ಮಗ) ಇವುಗಳಿಗೆ ನಿಲ್ಲುತ್ತವೆ. ಸ್ಪರ್ಧೆಯಲ್ಲಿರುವ ವಾರಸುದಾರರು (೧) ಎಸ್‌ಡಿಎಸ್‌ಎಸ್ (ಮಗನ ಮಗಳ ಮಗನ ಮಗ) ಮತ್ತು (೨) ಎಫ್ ಡಿ ಡಿ ಎಸ್ (ಸಹೋದರಿಯ ಮಗಳ ಮಗ).

ಸಂಖ್ಯೆ ೧ : ಯಾವನಿಗೆ ವಂಶಜನ ತಲೆಮಾರು ಅವನಿಗೆ ಮೊದಲು ಹಕ್ಕಿನ ಪ್ರಾಶಸ್ತ್ಯ ಕೊಡಲಾಗುವುದು.

ಸಂಖ್ಯೆ ೨ : ಯಾವನೊಬ್ಬನಿಗೆ ಒಂದು ವಂಶಜ ತಲೆಮಾರು ಇರುತ್ತದೆಯೋ ಇವರಿಬ್ಬರೂ ಸ್ಪರ್ಧೆಯಲ್ಲಿರುವ ವಾರಸುದಾರರು ಇರುತ್ತಾರೆ.

(ii) ಸ್ಪರ್ಧೆಯಲ್ಲಿರುವ ವಾರಸುದಾರರು (೧) ಎಸ್‌ಡಿಡಿಡಿ ಸಹೋದರಿಯ ಮಗಳ ಮಗಳು ಮತ್ತು (೨) ಎಮ್. ಎಫ್. ಎಸ್. ಎಸ್. ಡಿ ಸೋದರ ಮಾವನ

ಮಗನ ಮಗಳು, ಮೊದಲು ಹೇಳಿದ ವಂಶಜರು ಒಂದೇ ಒಂದು ತಲೆಮಾರಿನ ವಂಶಜರಿಗೆ ನಂತರ ಹೇಳಿದ ಎರಡು ತಲೆಮಾರಿನವರಿಗೆ ಮೊದಲು ಪ್ರಾಶಸ್ತ್ಯದ ಹಕ್ಕು ಸಿಗುತ್ತದೆ. ಇವರು ಸ್ಪರ್ಧೆ ಯಲ್ಲಿರುವ ವಾರಸುದಾರರು.

(iii) ಸ್ಪರ್ಧೆಯಲ್ಲಿರುವ ವಂಶಜರು (೧) ಎಫ್‌ಡಿಎಸ್‌ಎಸ್ (ಸಹೋದರಿಯ ಮಗನ ಮಗ) ಮತ್ತು ಎಮ್.ಎಫ್.ಎಸ್.ಎಸ್‌ಡಿ (ಸೋದರ ಮಾವನ ಮಗನ ಮಗಳು) ಮೊದಲಿನ ವಂಶಜನ ಒಂದೇ ಒಂದು ತಲೆಮಾರು ವಂಶಜನಿರುತ್ತಾನೆ. ನಂತರದವನು ಎರಡು ತಲೆಮಾರಿನವನಿಗಿಂತ ಮೊದಲು ಹಕ್ಕಿನ ಪ್ರಾಶಸ್ತ್ಯ ಪಡೆಯುತ್ತಾನೆ. ಹೀಗೆ ವಾರಸಾ ಸ್ಪರ್ಧಾಳು ಇರುತ್ತಾರೆ.

(iv) ಸ್ಪರ್ಧೆಯಲ್ಲಿರುವ ವಾರಸುದಾರರು (೧) ಎಮ್ ಎಫ್ ಡಿ ಎಸ್ ಎಸ್ (ತಾಯಿಯ ಸಹೋದರಿಯ ಮಗನ ಮಗ) ಮತ್ತು (೨) ಎಮ್ ಎಫ್ ಎಫ್ ಡಿ ಎಸ್ (ತಾಯಿಯ ತಂದೆಯ ಸಹೋದರಿಯ ಮಗ) ಮೊದಲು ಹೇಳಿದ ಎರಡು ವಂಶಜರು ಅವರಿಗೆ ಎರಡು ತಲೆಮಾರಿನ ನಂತರ ಹೇಳಿದ ಮೂರು ತಲೆಮಾನವರಿಗಿಂತ ಮೊದಲು ಪ್ರಾಶಸ್ತ್ಯದ ಹಕ್ಕುಳ್ಳವರಿರುವರು. ಇವರು ಸ್ಪರ್ಧೆ ಯಲ್ಲಿರುವ ವಾರಸುದಾರರು.

(v) ಸ್ಪರ್ಧೆಯಲ್ಲಿರುವ ವಾರಸುದಾರರು (೧) ಎಮ್‌ಎಫ್‌ಎಮ್ (ತಾಯಿಯ ತಂದೆಯ ತಾಯಿ) ಮತ್ತು (೨) ಎಫ್ ಎಫ್. ಎಫ್. ಎಸ್. ಎಸ್ (ತಂದೆಯ

ತಂದೆಯ ಸಹೋದರಿಯ ಮಗನ ಮಗ). ಇವರೆಡೂ ವಂಶಜರಲ್ಲಿ ತಲೆಮಾರಿನ ಸಂಖ್ಯೆಯು ಒಂದೇ ಆಗಿರುತ್ತದೆ.

**ಉದಾಹರಣೆ :** ಮೂರು. ಆದರೆ ಮೊದಲು ಹೇಳಿದ್ದರಲ್ಲಿ ಅವರಲ್ಲಿ ವಂಶಾನುಕ್ರಮ ಇರುವುದಿಲ್ಲ. ಆದರೆ ನಂತರದ ವಂಶಜರಲ್ಲಿ ಮೂರು ತಲೆಮಾರು ವಂಶಾನುಕ್ರಮ ಇದೆ. ಆದ್ದರಿಂದ ಮೊದಲಿನ ವಂಶಜನಿಗೆ ಮೊದಲು ಹಕ್ಕಿನ ಪ್ರಾಶಸ್ತ್ಯ ಕೊಡಲಾಗುವುದು.

vi ಸ್ಪರ್ಧೆಯಲ್ಲಿರುವ ವಾರಸುದಾರರು (೧) ಎಫ್‌ಎಮ್‌ಎಫ್ (ತಂದೆಯ ತಾಯಿಯ ತಂದೆ) ಮತ್ತು (೨) ಎಮ್. ಎಫ್. ಎಫ್. (ತಾಯಿಯ ತಂದೆಯ ತಂದೆ) ಇವರಿಬ್ಬರ ನಡುವಣ ತಲೆಮಾರು ಮೇಲಕ್ಕೆ ಹೋಗುವುದು ಒಂದೇ ಆಗಿದೆ. ವಂಶಾವಳಿಯಲ್ಲಿ ಬಂದವರು ಇರುವುದಿಲ್ಲ. ಇವರಿಬ್ಬರೂ ವಾರಸುದಾರರಲ್ಲಿ ಮೊದಲಿಗೆ ಅವರಿಬ್ಬರೂ ಬೇರೆ ಬೇರೆ ದಿಕ್ಕಿಗೆ ಹೋಗುತ್ತಾರೆ. ೧ನೆಯವರು ಅವರು ಗಂಡು ಸಂತಾನದಲ್ಲಿ ಇದ್ದಾರೆ ೨ನೆಂಯುವರು ಹೆಣ್ಣು ಸಂತಾನದಲ್ಲಿದ್ದಾರೆ. (೧)ನೆಯವರಿಗೆ ಮೊದಲು ಹಕ್ಕು ಪ್ರಾಶಸ್ತ್ಯವು ೨ ನೆಯವರಿಗಿಂತ ಹೆಚ್ಚು ಪ್ರಾಶಸ್ತ್ಯ ಸಿಗುತ್ತದೆ.

vii ಸ್ಪರ್ಧೆಯಲ್ಲಿರುವ ವಾರಸುದಾರರು ಎಫ್‌ಡಿಡಿಎಸ್ (ಸಹೋದರಿಯ ಮಗಳ ಮಗ) ಇಬ್ಬರಿಬ್ಬರೂ ವಂಶಾವಳಿಯ ಏರಿಕೆ ಇಲ್ಲವೆ ಇಳಿಕೆಯ ಸ್ಥಾನದಲ್ಲಿದ್ದಾರೆ. ಅವರಲ್ಲಿಯು ವ್ಯತ್ಯಾಸವೆಂದರೆ ಮೂರನೆಯ

ವಿಷಯದಲ್ಲಿ ಈ ವಿಷಯದಲ್ಲಿ (೧) ಮೊದಲನೆಯವನು ಗಂಡು ಸಂತಾನದಲ್ಲಿ ಇರುತ್ತಾನೆ ಎರಡನೆಯವನು ತಂದೆಯ ತಾಯಿಯ ಸಹೋದರಿ ಮಗ. ಮೊದಲನೆಯವನಿಗೆ ಮೊದಲು ಹಕ್ಕಿನ ಪ್ರಾಶಸ್ತ್ಯವು ಸಿಗುತ್ತದೆ.

viii ಸ್ಪರ್ಧೆಯಲ್ಲಿರುವ ವಾರಸುದಾರರು : (೧) ಎಫ್‌ಎಮ್ ಎಫ್‌ಎಸ್‌ಎಸ್ (ತಾಯಿಯ ಸಹೋದರನ ಮಗ) ಮತ್ತು (೨) ಎಫ್‌ಎಮ್‌ಎಫ್‌ಡಿಎಸ್ (ತಂದೆಯ ತಾಯಿಯ ಸಹೋದರಿಯ ಮಗ) ಇದರಲ್ಲಿ ಮೊದಲಿನವನಿಗೆ ಮೊದಲು ಪ್ರಾಶಸ್ತ್ಯದ ಹಕ್ಕು ಸಿಗುತ್ತದೆ.

ix ಸ್ಪರ್ಧೆಯಲ್ಲಿರುವ ವಾರಸುದಾರರು (೧) ಎಫ್‌ಡಿಎಸ್ (ಸಹೋದರಿಯ ಮಗಳ ಮಗ) ಮತ್ತು (೨) ಎಫ್‌ಡಿಡಿ (ಸಹೋದರಿಯ ಮಗಳ ಮಗಳು) ಮೊದಲಿನ ವಂಶಜನಿಗೆ ಮೊದಲು ಪ್ರಾಶಸ್ತ್ಯ ಹಕ್ಕು ಸಿಗುತ್ತದೆ.

**(೧೧೭) ಅ**

**೧೦೫. ತಲೆಮಾರನ್ನು ಲೆಕ್ಕಮಾಡುವುದು**

(೧) ಗೋತ್ರಜರಲ್ಲಿ ಇಲ್ಲವೆ ಬಂಧುಗಳಲ್ಲಿ ವಾರಸುದಾರರ ವಾರಸಾ ಹಕ್ಕನ್ನು ನಿರ್ಧರಿಸಲು ಈ ಸಂಬಂಧವನ್ನು ಮೃತ್ಯುಪತ್ರ ಮಾಡದೆ ತೀರಿಕೊಂಡವನಿಂದ ಹಿಡಿದು ವಂಶಜನ ವಂಶಾವಳಿಯ ತಲೆಮಾರಿನವರೆಗೆ ಇಲ್ಲವೆ ವಂಶಾನುಕ್ರಮದ ತಲೆಮಾರು ಇಲ್ಲವೆ ಎರಡು ಯಾವುದೇ ಆದರೂ

**(೧೧೭)**

**೧೦೫. ತಲೆಮಾರನ್ನು ಲೆಕ್ಕಹಾಕುವುದು.**

**ಭಾಗ–೨**
**ಕಲಂ–೮**
**ಪುಟ–೭**

(೧) ವಾರಸಾದ ಅನುಕ್ರಮಣಿಕೆಯ ಉದ್ದೇಶಕ್ಕಾಗಿ ಗೋತ್ರಜರಲ್ಲಿ ಮತ್ತು ಬಂಧುಗಳ ಸಂಬಂಧಿಯನ್ನು ಲೆಕ್ಕಹಾಕಲು ಮೃತ್ಯುಪತ್ರದೊಡನೆ ತೀರಿಕೊಂಡಂದಿನಿಂದ ಹಿಡಿದು ವಾರಸುದಾರನವರೆಗೆ ಡಿಗ್ರಿಯು ವಂಶಾವಳಿ ಮೇಲುಗಡೆಗೆ ಎಣಿಸುತ್ತ ಹೋಗಬೇಕು ಇಲ್ಲವೆ ಮೇಲಿನಿಂದ

(೨) ಮೃತ್ಯಪತ್ರ ಮಾಡದೆ ತೀರಿಕೊಂಡವನನ್ನು ಬಿಟ್ಟು ವಂಶಜರ ಏರಿಕೆ ಹಾಗೂ ಇಳಿಕೆಯ ತಲೆಮಾರನ್ನು ಲೆಕ್ಕಹಾಕಬೇಕು ಇಲ್ಲವೆ ಗಣನೆಗೆ ತೆಗೆದುಕೊಳ್ಳಬೇಕು.

(೩) ವಂಶಾನುಕ್ರಮದಲ್ಲಿ ಪ್ರತಿಯೊಂದು ಪೀಳಿಗೆ ಏರಿಕೆ ಇಲ್ಲವೆ ಇಳಿಕೆ ಕ್ರಮ ಕೂಡಿಕೊಂಡಿರುತ್ತದೆ.

* * * *

ಕೆಳಗಡೆ ಎಣಿಸಬೇಕು, ಇಲ್ಲವೆ ಎರಡನ್ನೂ ಎಣಿಸಬೇಕು, ಪ್ರಕರಣ ಯಾವುದೇ ಇರಲಿ.

(೨) ಏರಿಕೆಯ ತಲೆಮಾರು ಮತ್ತು ಇಳಿಕೆಯ ಕ್ರಮದಲ್ಲಿ ತಲೆಮಾರು ಲೆಕ್ಕಹಾಕಬೇಕು ಆದರೆ ಮೃತ್ಯುಪತ್ರ ಮಾಡದೆ ತೀರಿಕೊಂಡವವನನ್ನು ಬಿಟ್ಟು ಈ ಲೆಕ್ಕಹಾಕಬೇಕು.

೩) ಪ್ರತಿಯೊಂದು ಪೀಳಿಗೆ ಒಂದು ತಲೆಮಾರಾಗುತ್ತದೆ. ಅದು ಏರಿಕೆಯ ಅಥವಾ ಇಳಿಕೆಯ ರೂಪದಲ್ಲಿ ಇರಬಹುದು.

**ಉದಾಹರಣೆ :** ೧)

ಪರಿಗಣಿಸಬೇಕಾದ ವಾರಸುದಾರರು ತಂದೆಯ ತಾಯಿಯ ತಂದೆಯು ಅಂದರೆ ಮೃತ್ಯುಪತ್ರ ಮಾಡದೆ ತೀರಿಕೊಂಡವನ ತಂದೆ : ಅವನಿಗೆ ನೇರವಾದ ವಂಶಾವಳಿಯಲ್ಲಿ ಯಾರೂ ಇರುವುದಿಲ್ಲ. ಆದರೆ ಮೂರು ತಲೆಮಾರಿನವರೆಗೆ ಪ್ರತಿನಿಧಿಸುವ ಏರಿಕೆಯ ತಲೆಮಾರಿನಲ್ಲಿ (೧) ಮೃತ್ಯುಪತ್ರ ಮಾಡದೇ ತೀರಿಕೊಂಡವನ ತಂದೆಯು (೨) ಆ ತಂದೆಯ ತಾಯಿ ಮತ್ತು (೩) ಅವಳ ತಂದೆಯು (ವಾರಸುದಾರರು).

(ii) ಪರಿಗಣಿಸಬೇಕಾದ ವಾರಸುದಾರರೆಂದರೆ – ತಂದೆಯ ತಾಯಿಯ ತಂದೆಯ ತಾಯಿ ಯಾವಳು ಮೃತ್ಯುಪತ್ರ ಮಾಡದೆ ತೀರಿಕೊಂಡವನ ತಾಯಿ ಅವಳಿಗೆ ವಂಶಾವಳಿಯ ಇಳುವರಿಕೆಯಲ್ಲಿ ತಲೆಮಾರು ಇರುವುದಿಲ್ಲ ಆದರೆ

ವಂಶಾವಳಿಯು ಏರಿಕೆಯಲ್ಲಿ ಅವಳಿಗೆ ನಾಲ್ಕನೆಯ ತಲೆಮಾರು ಇದೆ, ಪ್ರತಿನಿಧಿಸುವುದರಿಂದ.
(೧) ಮೃತ್ಯುಪತ್ರ ಮಾಡದೆ ತೀರಿ ಕೊಂಡವನ ತಂದೆ.
(೨) ಆ ತಂದೆಯ ತಾಯಿ
(೩) ಅವಳ ತಂದೆ ಮತ್ತು (೪) ಅವನ ತಾಯಿ (ವಾರಸುದಾರರು)

(iii) ಪರಿಗಣಿಸಬೇಕಾದ ವಾರಸುದಾರರು ಮಗನ ಮಗಳ ಮಗನ ಮಗಳು ಅಂದರೆ ಮೃತ್ಯುಪತ್ರ ಮಾಡದೆ ತೀರಿಕೊಂಡವನ ಮಗಳು ಅವಳಿಗೆ ವಂಶಾವಳಿಯು ಏರಿಕೆಯಲ್ಲಿ ತಲೆಮಾರು ಇಲ್ಲ. ಆದರೆ ವಂಶಾವಳಿಯ ಇಳಿಕೆಯಲ್ಲಿ ೪ನೆ ತಲೆಮಾರಿನ ಪ್ರತಿನಿಧಿಸುವ (೧) ಮೃತ್ಯುಪತ್ರ ಮಾಡದೆ ತೀರಿ ಕೊಂಡವನ ಮಗ (೨) ಆ ಮಗನ ಮಗಳು (೩) ಅವಳ ಮಗ ಮತ್ತು (೪) ಅವನ ಮಗಳು – ವಾರಸುದಾರರು.

(iv) ಪರಿಗಣಿಸಬೇಕಾದ ವಾರಸುದಾರರು ತಾಯಿಯ ತಂದೆಯ ತಂದೆಯ ಮಗಳ ಮಗ ಅಂದರೆ ಮೃತ್ಯುಪತ್ರ ಮಾಡದೆ ತೀರಿಕೊಂಡವನ ಮಗ, ಅವನಿಗೆ ತಲೆಮಾರಿನಲ್ಲಿ ವಂಶಾವಳಿಯು ಏರಿಕೆಯು ತಲೆಮಾರು ಪ್ರತಿನಿಧಿಸುವ (೧) ಮೃತ್ಯುಪತ್ರ ಮಾಡದೆ ತೀರಿಕೊಂಡವನ ತಾಯಿ (೨) ಅವಳ ತಂದೆ ಮತ್ತು (೩)ತಂದೆಯ ತಂದೆ ಮತ್ತು ಮೃತನಿಗೆ ಎರಡು ತಲೆಮಾರಿನ ವಂಶಾವಳಿಯು

ಇಳಿಕೆಯ ಎಣಿಕೆಯಲ್ಲಿ ಪ್ರತಿನಿಧಿಸುವ ಸಾಮಾನ್ಯ ಪೂರ್ವಜನ ಮಗಳು.

**ಉದಾಹರಣೆ :** ತಾಯಿಯ ತಂದೆಯ ತಂದೆ ಮತ್ತು (೨) ಅವಳ ಮಗ ವಾರಸುದಾರರು.

**(೧೧೭)ಎ**

**ಹಿಂದೂ ಹೆಣ್ಣಮಗಳ ಆಸ್ತಿಗೆ ವಾರಸಾ**

೧೦೬. ಹಿಂದೂ ಹೆಣ್ಣುಮಗಳ ವಾರಸದಾರರು ಈ ಅಧ್ಯಾಯದ ಬಂಧಗಳಿಗೆ ಒಳಪಟ್ಟು ಒಬ್ಬ ಹಿಂದೂ ಹೆಣ್ಣುಮಗಳು ಮೃತ್ಯಪತ್ರ ಇಲ್ಲದೆ ತೀರಿಕೊಂಡರೆ ಆಕೆಯ ಆಸ್ತಿಯು ಈ ಕೆಳಗಿನಂತೆ ಹೋಗುತ್ತದೆ–

ಅ. ಮೊದಲನೆಯದಾಗಿ – ಗಂಡ ಹಾಗೂ ಮಕ್ಕಳಲ್ಲಿ ಅದರಲ್ಲಿ ಮೊದಲೇ ತೀರಿಕೊಂಡ ಮಕ್ಕಳ ಮಕ್ಕಳನ್ನು ಸಹ ಒಳಗೊಂಡಿದ್ದು ಇರುತ್ತದೆ ಮತ್ತು ಬ. ಎರಡನೆಯದಾಗಿ – ಖಂಡ (ಅ)ದಲ್ಲಿ ಕಾಣಿಸಿದ ಯಾವ ವಾರಸದಾರರು ಇರದಿದ್ದರೆ ಕಲಂ ೧೦೯ರಲ್ಲಿ ಅನುಕ್ರಮವಾಗಿ ನಿರ್ದೇಶಿಸಿದ ವಾರಸುದಾರರಿಗೆ ಹೋಗುವುದು.

(೧೧೮)

**ಮರುಮಕ್ಕತ್ತಾಯಂ ಅವರ ಆಸ್ತಿಯ ವಾರಸ ಮುಂತಾದವು**

೧೦೫. **ಅ. ಒಬ್ಬ ಗಂಡು ಮರುಮಕ್ಕತ್ತಾಯಂ ಅವರ ವಾರಸಾ ನಿಯಮ ಮುಂತಾದವು** – ಮೃತ್ಯುಪತ್ರ ಮಾಡದೆ ತೀರಿಕೊಂಡರೆ ಈ ಅಧ್ಯಾಯದಲ್ಲಿ ಏನೇ ಹೇಳಿದ್ದರೂ ಮೃತ್ಯುಪತ್ರ ಮಾಡದೆ ಒಬ್ಬ ಹಿಂದೂ ತೀರಿಕೊಂಡರೆ ಆತನ ಪ್ರತ್ಯೇಕ ಆಸ್ತಿ ಇಲ್ಲವೆ ಸ್ವಸಂಪಾದಿತ ಆಸ್ತಿಯ ಕುರಿತು ನಿಯಮ ಕೆಳಗಿನಂತಿದೆ.

(ಅ) ಯಾವನಿಗೆ ಮರಮಕ್ಕತ್ತಾಯಂ ಕಾನೂನು ಇಲ್ಲವೆ ಅಳಿಯ ಸಂತಾನ ಕಾನೂನು ಈ ಅಧಿನಿಯಮವು ಜಾರಿಯಲ್ಲಿ ಬರದಿದ್ದರೆ ಯಾವನಿಗೆ ಮರಮಕ್ಕತ್ತಾಯಂ ಇಲ್ಲವೆ ಅಳಿಯ ಸಂತಾನ ಕಾನೂನು ಅನ್ವಯವಾಗುತ್ತಿತ್ತೊ ಅಂಥವನಿಗೆ (ಕಲಂ ೧೦೫ ಸಿ ರಿಂದ ೧೦೫ ಆರ್ಎ ವರೆಗಿನ ಎರಡೂ ಕಲಮುಗಳನ್ನು ಸೇರಿಸಿ) ಈ ಮೇಲಿನ ನಿಯಮದ ಅನ್ವಯ ವಾರಸಾ ಹೋಗತಕ್ಕದ್ದು.

ಬ) ಈ ಅಧಿನಿಯಮವು ಜಾರಿಯಲ್ಲಿ ಬರದಿದ್ದ ಯಾರಿಗೆ ನಂಬೂದ್ರಿ ಕಾನೂನು ಅನ್ವಯವಾಗುತ್ತಿತ್ತೊ ಅಂಥವರಿಗೆ ಅವರಿಗೆ ಕಲಂ ೧೦೫ ಜೆ ಅನ್ವಯ ಆಸ್ತಿ ಹೋಗುತ್ತದೆ.

(೧೧೯)

೧೦೫. **ಬಿ. ನೇರ ಸಂತತಿಯ : ಪಿತೃವಂಶೀಯ ವಂಶಜ ವ್ಯಾಖ್ಯಾಯಿಸುವುದು.** ಕಲಂ ೧೦೫ ಸಿ ದಿಂದ ಕಲಂ ೧೦೫ ಜೆ ಇವುಗಳನ್ನೊಳಗೊಂಡು ಕಲಂ ೧೧೯ ಅ ಮತ್ತು ೧೧೯ಬ ಇವುಗಳಲ್ಲಿ ಉಲ್ಲೇಖಿಸಿದಂತೆ

ನೇರ ಸಂತತಿಯ ಪಿತೃವಂಶ. ಅಂದರೆ ಯಾವನೊಬ್ಬನು ಗಂಡು ಸಂತಾನ ಹಾಗೂ ಹೆಣ್ಣು ಸಂತಾನದಿಂದ ಬಂದ ಶ್ರೇಣಿ ಇಲ್ಲವೆ ಭಾಗಶಃ ಹೆಣ್ಣು ಇಲ್ಲವೆ ಗಂಡು ಇವರಿಂದ ಬಂದ ಮಗು ಸಹ ಇದರಲ್ಲಿ ಅಳವಡುತ್ತದೆ.

(೧೨೦)

೧೦೫. ಸಿ. **ನೇರವಾಗಿ ಪಿತೃವಂಶಜನಿದ್ದರೆ ಆಸ್ತಿಯ ವಾರಸಾ ವಿವರಣೆ** – (೧) ಒಬ್ಬನು ಮೃತ್ಯುಪತ್ರ ಮಾಡದೆ ತೀರಿಕೊಂಡರೆ, ತನ್ನ ಹಿಂದೆ, ಪಿತೃವಂಶಜನನ್ನು ಬಿಟ್ಟು ಸತ್ತಿದ್ದರೆ ಇಲ್ಲವೆ ತನ್ನ ಪಿತೃವಂಶಜ ಹಾಗೂ ತಾಯಿ ಇಲ್ಲವೆ ಆತನ ವಿಧವೆ ಇಬ್ಬರನ್ನೂ ಅಂದರೆ ತಾಯಿ ಹಾಗೂ ವಿಧವೆ ಇವರನ್ನು ತನ್ನ ಹಿಂದೆ ಬಿಟ್ಟು ತೀರಿಕೊಂಡಿದ್ದರೆ ಅಂಥವನ ಆಸ್ತಿಯು ಅವರಿಗೆ ವಾರಸಾ ನಾತೆಯಿಂದ ಅವನ ಆಸ್ತಿಯು ಹೋಗುತ್ತದೆ.

(೨) ಒಂದು ವೇಳೆ ಅವನ ತಾಯಿ ಇಲ್ಲವೆ ಅವನ ವಿಧವೆ ಇಲ್ಲದ ಪಕ್ಷದಲ್ಲಿ ಅವನ ಆಸ್ತಿಯು ನೇರವಾಗಿ ಅವನ ಪಿತೃವಂಶಜರಿಗೆ ಹೋಗುತ್ತದೆ.

೧೦೫. ಡಿ. ಆಸ್ತಿಯ ಹಂಚುವಿಕೆಯ ನಿಯಮಗಳು ಎಲ್ಲಿ ನೇರವಾಗಿ ಪಿತೃವಂಶಜರು ಇರುತ್ತಾರೆಯೋ ಆಗ ಕಲಂ ೧೦೫ ಸಿ ದ ಅನ್ವಯ ಆತನ ವಾರಸುದಾರರಿಗೆ ಈ ಕಲುಮಿನಡಿ ಕೆಳಗಿನ ನಿಯಮಗಳ ಅನುಸಾರ ಹೋಗುತ್ತದೆ. **ಉದಾಹರಣೆ:**

(ಅ) ಪ್ರತಿಯೊಬ್ಬ ಮಗ (ಮಗ ಅಥವಾ ಮಗಳು) ಸಮಾನವಾದ ಭಾಗಕ್ಕೆ ಅರ್ಹರು.

(ಬ) ಆ ಕೂಸು ತಂದೆಗಿಂತ ಮೊದಲೇ ತೀರಿಕೊಂಡರೆ ಆ ಮಗುವಿನ ಪಿತೃವಂಶಜರು ಖಂಡ (ಇ)ದ

ಉಪಬಂಧಗಳ ಅನ್ವಯ ಆ ಮಗುವು ಜೀವಂತವಿದ್ದರೆ ಎಷ್ಟು ಭಾಗಕ್ಕೆ ಅರ್ಹವಾಗುತ್ತಿತ್ತೋ ಅಷ್ಟು ಭಾಗಕ್ಕೆ ಅವರು ಅರ್ಹರಿರುತ್ತಾರೆ.

(ಕ) ಮೊಮ್ಮಗ – ಮೃತ್ಯುಪತ್ರ ಮಾಡದೆ ತೀರಿಕೊಂಡವನ ಮೊಮ್ಮಗ ಇದು. ತೀರಿಕೊಂಡ ಆ ಮೊಮ್ಮಗನು ಜೀವಂತ ಇದ್ದರೆ ಎಷ್ಟು ಭಾಗ : ಶೇರಿಗೆ ಅರ್ಹನೋ ಅಷ್ಟು ಭಾಗಕ್ಕೆ ಅವರು ಅರ್ಹರಿರುತ್ತಾರೆ.

**ಪರಂತು,** ಎಲ್ಲಿ ಅಂತಹ ಮೊಮ್ಮಗನ, ಆ ಮೃತ್ಯಪತ್ರ ಮಾಡದೆ ತೀರಿಕೊಂಡವನಿಗಿಂತ ಮೊದಲೇ ತೀರಿಕೊಂಡರೆ ಆ ಮಗುವಿನ ನೇರ ಪಿತೃವಂಶಜರು ಆ ಮಗುವು ಜೀವಂತವಿದ್ದರೆ ಎಷ್ಟು ಭಾಗಕ್ಕೆ ಅರ್ಹವಾಗುತ್ತಿತ್ತೋ ಅಷ್ಟು ಭಾಗವು ಖಂಡ (ಇ)ದ ಉಪಬಂಧಗಳಿಗೆ ಒಳಪಟ್ಟು ಅ ಪಿತೃವಂಶಜರಿಗೆ ಹೋಗುತ್ತದೆ.

(ಡ) ಇದೇ ರೀತಿಯಾಗಿ ಆ ಆಸ್ತಿಯು ಆ ಮಗುವಿನ ಜೀವಿಸಿರುವ ಮೃತ್ಯುಪತ್ರ ಮಾಡದೆ ತೀರಿಕೊಂಡವನ ದೂರದ ಪಿತೃವಂಶಜರಿಗೆ ಹೋಗುತ್ತವೆ.

(ಇ) ಮಗುವಿನ, ಮೊಮ್ಮಗನ ಪಿತೃವಂಶಜರು ಇಲ್ಲವೆ ನೇರ ಪಿತೃವಂಶಜರ ಅಂದರೆ ಮೃತ್ಯುಪತ್ರ ಮಾಡದೆ ತೀರಿಕೊಂಡವನ ನೇರಪಿತೃ ವಂಶಜರ ಯಾವುದೇ ಆ ಆಸ್ತಿಗೆ ಹಕ್ಕುಳ್ಳವರು ಇರುವುದಿಲ್ಲ. ಆದರೆ ಇಂತಹ ಮಗು, ಮೊಮ್ಮಗ ಮತ್ತು

ಯಾವುದೇ ವಂಶಜರು ಆ ಮೃತ್ಯುಪತ್ರ ಮಾಡದೆ ಸತ್ತವನ ಮರಣದ ಕಾಲಕ್ಕೆ ಜೀವಂತ ಇದ್ದರೆ ಅವರಿಗೆ ಏನೂ ಸಿಗುವುದಿಲ್ಲ.

(ಎಫ್)ಒಬ್ಬ ವಿಧವೆ, ಇಲ್ಲವೆ ಒಬ್ಬರಿಗಿಂತ ಹೆಚ್ಚು ಜನ ವಿಧವೆಯರು ಆ ಎಲ್ಲ ವಿಧವೆಯರು ಬಿಟ್ಟುಕೊಟ್ಟ ಒಂದು ಪಾಲು ಹಿಸ್ಸೆ ಆ ಕೂಸಿನ ಸರಿಸಮಾನ ಪಾಲು. ಅಂತಹ ಶೇರನ್ನು ಸರಿಯಾಗಿ ಅವನ ವಿಧವೆಯರು ಎಲ್ಲರೂ ಒಂದು ಹಿಸ್ಸೆ ಪಡೆಯುತ್ತಾರೆ, ಅಂದರೆ ಆ ಕೂಸಿಗೆ ಸಮಾನವಾದ ಒಂದು ಹಿಸ್ಸೆ ಪಡೆಯುತ್ತಾಳೆ.

(ಜಿ) ತಾಯಿಗೆ ಮಗನ ಸಮನಾದ ಪಾಲು ದೊರೆಯುತ್ತದೆ.

(೧೨೨)

**೧೦೫. ಇ. ನೇರ ಪಿತೃವಂಶಜರು ಇರದಿದ್ದರೆ ಆಸ್ತಿಯು ವಾರಸಾ ಪ್ರಕಾರ ಹೋಗುವುದು ಆದರೆ ವಿಧವೆ ಇಲ್ಲವೆ ತಾಯಿ ಇದ್ದರೆ–**

(೧) ಮೃತ್ಯಪತ್ರ ಮಾಡದೆ ತೀರಿಕೊಂಡವನು ತನ್ನ ಹಿಂದೆ ನೇರವಾದ ಪಿತೃವಂಶಜ ಯಾರನ್ನೂ ಬಿಟ್ಟು ಸತ್ತರೆ ಹಾಗೂ ಅವನು ತನ್ನ ತಾಯಿ ಇಲ್ಲವೆ ತನ್ನ ವಿಧವೆ ಇಲ್ಲವೆ ವಿಧವೆಯರನ್ನು ಬಿಟ್ಟು ಸತ್ತರೆ ಆಗ ಒಂದು ಎರಡನೆಯ ಅಂಶದಷ್ಟು ಆಸ್ತಿಯು ಆತನ ತಾಯಿಗೆ ಹಾಗೂ ಉಳಿದ ಒಂದೆರಡು ಅಂಶ ಅವನ ವಿಧವೆ ಇಲ್ಲವೆ ವಿಧವೆಯರಿಗೆ ಸಮ ಹಿಸ್ಸೆಯಲ್ಲಿ ಹೋಗುತ್ತದೆ.

(೨) ವಿಧವೆಯು ಇಲ್ಲದಿದ್ದರೆ ಆತನ ಸಂಪೂರ್ಣ ಆಸ್ತಿಯು ಆತನ ತಾಯಿಗೆ ವಾರಸಾನಾತೆಯಿಂದ ಹೋಗುತ್ತದೆ.

**(೧೨೩)**

**೧೦೫.(ಎಫ್) ತಾಯಿಯು ಇಲ್ಲದಿರುವುದು ಆದರೆ ವಿಧವೆ ಇಲ್ಲವೆ ತಾಯಿಯ ನೇರ ಪಿತೃವಂಶಜರು ಇದ್ದರೆ ಆಸ್ತಿಯು ವಾರಸಾ ಪ್ರಕಾರ ಹೋಗುವ ನಿಯಮ**

(೧) ಮೃತ್ಯಪತ್ರ ಮಾಡದೆ ಸತ್ತವನು ಹಿಂದೆ ನೇರ ಪಿತೃವಂಶಜರನ್ನು ಇಲ್ಲವೆ ತಾಯಿಯನ್ನು ತನ್ನ ಹಿಂದೆ ಬಿಟ್ಟಿರದಿದ್ದರೆ ಆದರೆ ಅವನು ತನ್ನ ವಿಧವೆ ಇಲ್ಲವೆ ವಿಧವೆಯರನ್ನು ಇಲ್ಲವೆ ತಾಯಿಯ ವಂಶಜರನ್ನು ಬಿಟ್ಟು ಸತ್ತಿದ್ದರೆ ಆ ಆಸ್ತಿಯಲ್ಲಿ ಒಂದು ಎರಡನೆಯ ಅಂಶದಷ್ಟು ವಿಧವೆ ಇಲ್ಲವೆ ವಿಧವೆಯರಿಗೆ ಸಮ ಹಿಸ್ಸೆಯಲ್ಲಿ ಹೋಗುತ್ತದೆ. ಮತ್ತು ಉಳಿದ ಒಂದು ಎರಡನೆಯ ಅಂಶದಷ್ಟು ಆಸ್ತಿ ವಂಶಜರಿಗೆ ಇಲ್ಲವೆ ಪಿತೃವಂಶಜರಿಗೆ ಹೋಗುತ್ತದೆ.

(೨) ಮೃತ್ಯುಪತ್ರವಿಲ್ಲದೆ ಸತ್ತವನ ತಾಯಿಯು ಪಿತೃವಂಶಜರು ಇಲ್ಲದಿದ್ದರೆ ಆ ಪೂರ್ಣ ಆಸ್ತಿಯು ಯಾವುದೇ ಅವನ ವಿಧವೆ ಇಲ್ಲವೆ ವಿಧವೆಯರು ಸರಿಯಾಗಿ ತಮ್ಮ ತಮ್ಮ ಹಿಸ್ಸೆ ಹಂಚಿಕೊಳ್ಳುತ್ತಾರೆ ಮತ್ತು ಆ ವಿಧವೆಯರು ಇಲ್ಲದಿದ್ದರೆ ಆ ಸಂಪೂರ್ಣ ಆಸ್ತಿಯು ತಾಯಿಯ ಪಿತೃವಂಶಜರಿಗೆ ವಾರಸಾ ಮೂಲಕ ಹೋಗುತ್ತದೆ.

(೧೨೪)

**೧೦೫. ಜಿ. ತಾಯಿಯ ಅಮ್ಮ ಇಲ್ಲವೆ ಅವಳ ವಂಶಸ್ಥರು ಇಲ್ಲವೆ ಅವಳ ತಂದೆ ಇವರಿಗೆ ವಾರಸಾ ನಾತೆಯಿಂದ ಆಸ್ತಿ ಹೋಗುವುದು.**

**ಭಾಗ–೨**
**ಕಲಂ–೮**
**ಪುಟ–೭**

ಮೃತ್ಯುಪತ್ರ ಮಾಡದೆ ತೀರಿಕೊಂಡವನು ತನ್ನ ಹಿಂದೆ ತನ್ನ ಕಲಂ ೧೦೫ (ಕ) (ಇ) (ಎಫ್) ಇವುಗಳಲ್ಲಿ ನಿರ್ದೇಶಿಸಿದ ವಾರಸಾದವರು ಯಾರೂ ಇರದಿದ್ದರೆ ಆದರೆ ತನ್ನ ತಂದೆ ಮತ್ತು ತಾಯಿ ನೇರ ವಂಶಜರು ಇದ್ದರೆ ತಂದೆ ಒಂದು ಎರಡನೆಯ ಹಿಸ್ಸೆ ಮತ್ತು ಇನ್ನುಳಿದ ಒಂದೆರಡು ಅಂಶ ತಾಯಿಯ ತಾಯಿಗೆ, ಅವಳು ಇಲ್ಲದಿದ್ದರೆ ಅವಳ ನೇರ ಪಿತೃವಂಶಜರಿಗೆ ಹೋಗುತ್ತದೆ.

೨. ತಾಯಿಯ ತಾಯಿ ಅಮ್ಮನ ನಂತರ ಪಿತೃವಂಶಜರು ಇಲ್ಲದಿರುವಾಗ ತಂದೆಗೆ ಸಂಪೂರ್ಣ ಆಸ್ತಿ ಹೋಗುತ್ತದೆ. ಮತ್ತು ತಂದೆಯು ಇಲ್ಲದಿರುವಾಗ ಆ ಸಂಪೂರ್ಣ ಆಸ್ತಿಯು ತಾಯಿಯ ತಾಯಿಗೆ ಹೋಗುತ್ತದೆ ಇಲ್ಲವೆ ಆಕೆಯ ವಂಶಜರು ಯಾರೇ ಇದ್ದರೂ ಅವರಿಗೆ ಹೋಗುತ್ತದೆ.

(೧೨೫)

**೧೦೫. ಎಚ್. ಆಸ್ತಿಯು ವಾರಸಾ ನಾತೆಯಿಂದ ಬೇರೆ ಪ್ರಸಂಗದಲ್ಲಿ ಹೇಗೆ ಹೋಗುತ್ತದೆ.**

೧. ಮೃತ್ಯುಪತ್ರವಿಲ್ಲದೆ ತೀರಿಕೊಂಡವನು ತನ್ನ ಹಿಂದೆ ಕಲಂ ೧೦೫ ಸಿ, ೧೦೫ ಇ, ೧೦೫ ಎಫ್, ೧೦೫ ಜಿ ಇವುಗಳಲ್ಲಿ ನಿರ್ದೇಶಿಸಿದ ಯಾವುದೇ ವಾರಸುದಾರರು ಇರದಿದ್ದರೆ, ಆ ಸಂಪೂರ್ಣ ಆಸ್ತಿಯು ಆತನ ತಾಯಿಯ ತಾಯಿಗೆ ಹೋಗುತ್ತದೆ. ಇಲ್ಲವೆ, ಆಕೆಯು ಇಲ್ಲದಿದ್ದರೆ ಆಕೆಯ ವಂಶಜ : ವಂಶಜರಿಗೆ ಹೋಗುತ್ತದೆ.

೨. ಇಂತಹ ವಂಶಜರು ಯಾರೂ ಇರದಿದ್ದರೆ ಆ ಸಂಪೂರ್ಣ ಆಸ್ತಿಯು ಆ ಮೃತ್ಯುಪತ್ರ ಮಾಡದೆ ತೀರಿಕೊಂಡವನ ದೂರದ ಹೆಣ್ಣುವಂಶಜರಿಗೆ ಇಲ್ಲವೆ ಅವಳು ಇರದಿದ್ದರೆ ಅವಳ ವಂಶಜ ಇಲ್ಲವೆ ವಂಶಜರಿಗೆ ಸಮೀಪದವರು ಏರಿಕೆಯ ಪ್ರಮಾಣ ಇಲ್ಲವೆ ಇಳಿಕೆಯ ಪ್ರಮಾಣದ ವಂಶಜರು ಅತಿ ದೂರದ ಏರಿಕೆ ಇಲ್ಲವೆ ಇಳಿಕೆ ಪ್ರಮಾಣದ ವಂಶಜರನ್ನು ಹೊರತುಪಡಿಸಿ, ಅಂಥವರಿಗೆ ಆ ಆಸ್ತಿಯು ಹೋಗುತ್ತದೆ.

(೧೨೬)

**೧೦೫. ಆಯ್. ತಾಯಿಯ ನೇರ ವಂಶಜರಲ್ಲಿ ಇಲ್ಲವೆ ಬೇರೆ ವಂಶಾವಳಿಯ ಏರಿಕೆಯ ರೂಪದಲ್ಲಿರುವ ಬೇರೆಯವರಿಗೆ ಆಸ್ತಿಯ ಹಂಚುವಿಕೆಯ ನಿಯಮಗಳು :**

ಒಬ್ಬ ಮೃತ್ಯುಪತ್ರವಿಲ್ಲದೆ ತೀರಿಕೊಂಡವನ ಆಸ್ತಿ ಇಲ್ಲವೆ ಆತನ ಹಿಸ್ಸೆಗೆ ಇಬ್ಬರು ಇಲ್ಲವೆ ಹೆಚ್ಚು ತಾಯಿಯ ನೇರ ವಂಶಜರು ಇಲ್ಲವೆ ವಂಶಾವಳಿಯ ಬೇರೆ ಏರಿಕೆ ರೂಪದ ವಂಶಜರು ಹಕ್ಕುಳ್ಳವರು ಈ ಕೆಳಗೆ ನಮೂದಿಸಿದ ಕಲಮುಗಳ ಅನ್ವಯ ಮತ್ತು ಕಲಂ ೧೦೫ (ಕ) ಕಂಡ (ಅ) ದಿಂದ (ಇ) ದವರೆಗೆ ಕಾಣಿಸಿದ ನಿಯಮಗಳ ಅನ್ವಯ ತಾಯಿ ಇಲ್ಲವೆ ಏಕರೂಪದ ವಂಶಜರು ಅಂತಹ ಆಸ್ತಿಗೆ ಮೃತ್ಯುಪತ್ರ ಮಾಡದೆ ತೀರಿಕೊಂಡವನ ಹಿಸ್ಸೆ, ಮೇಲೆ ಕಾಣಿಸಿದ ವಂಶಜರಿಗೆ ಹೋಗತಕ್ಕದ್ದು.

(೧೨೭)

**೧೦೫. ಜೆ. ಈ ಅಧ್ಯಾಯದಲ್ಲಿ ಏನೇ ಹೇಳಿದ್ದರೂ ಈ ಅಧಿನಿಯಮವು ಪಾಸಾಗಿರದಿದ್ದರೆ, ನಂಬೂದ್ರಿ ಕಾನೂನು ಅವರಿಗೆ ಅವನ ಪ್ರತ್ಯೇಕ ಇಲ್ಲವೆ ಸ್ವಸಂಪಾದಿತ ಆಸ್ತಿಗೆ ಗಂಡು ಹಿಂದೂ ಮೃತ್ಯುಪತ್ರವಿಲ್ಲದೆ ಮರಣ ಹೊಂದಿದರೆ ಈ ಕೆಳಗೆ ನಮೂದಿಸಿದ ನಿಯಮಗಳ ಅನ್ವಯ ಅನುಕ್ರಮಗಳ ಆಸ್ತಿಯು ಹೋಗುತ್ತದೆ ಅವುಗಳೆಂದರೆ,**

(ಅ) ಮೃತ್ಯುಪತ್ರ ಮಾಡದೆ ಸತ್ತ ವ್ಯಕ್ತಿಯು ತನ್ನ ಹಿಂದೆ ಯಾವುದೇ ನೇರ ವಂಶಜರು ಇಲ್ಲವೆ ವಂಶಜರು ಇಲ್ಲವೆ ವಿಧವೆ: ವಿಧವೆಯರು ಇಲ್ಲವೆ ಅಂತಹ ಇಬ್ಬರೂ ವಂಶಜರು ಇಲ್ಲವೆ ವಂಶಜರು ಮತ್ತು ವಿಧವೆ: ವಿಧವೆಯರು ಅಂಥವರಿಗೆ ಆ ಸಂಪೂರ್ಣ ಆಸ್ತಿಯು ಖಂಡ (ಆ) ದಿಂದ ಖಂಡ (ಎಫ್) ದ ನಿಯಮಗಳಿಗನುಸಾರವಾಗಿ ಆಸ್ತಿಯು ವಾರಸಾದಿಂದ ಹೋಗುತ್ತದೆ.

(ಬ)ಮೃತ್ಯುಪತ್ರ ಮಾಡದೆ ತೀರಿ ಕೊಂಡವನು ಖಂಡ (ಅ)ದಲ್ಲಿ ಕಾಣಿಸಿದ ಯಾವುದೇ ವಾರಸುದಾರರು ಇರದಿದ್ದರೆ ಆತನ ಆಸ್ತಿಯು ಕಲಂ ೯೭ ರಿಂದ ೧೦೮ ರ ವರೆಗಿನ ಕಲಂಗಳಲ್ಲಿ ನಿರ್ದೇಶಿಸಿದ ನಿಯಮಗಳಿಗನು ಸಾರವಾಗಿ ಆ ವಾರಸುದಾರರಿಗೆ ಆಸ್ತಿಯು ಹೋಗುತ್ತದೆ.

(೧೨೮)

**ಮೃತ್ಯುಪತ್ರವಿಲ್ಲದೆ ತೀರಿಕೊಂಡ ಒಬ್ಬ ಹಿಂದೂ ಹೆಣ್ಣುಮಗಳ ಆಸ್ತಿಗೆ ವಾರಸಾ ಸಾಮಾನ್ಯ ಉಪಬಂಧಗಳು**

೧೦೬. **ಹಿಂದೂ ಹೆಣ್ಣುಮಗಳ ವಾರಸುದಾರರು**

ಕಲಂ ೧೧೯ ಅ ಮತ್ತು ಕಲಂ ೧೧೯ ಬ ಇವುಗಳಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸಿದ ಹೊರತು, ಒಬ್ಬ ಹಿಂದೂ ಹೆಣ್ಣುಮಗಳು ಮೃತ್ಯುಪತ್ರ ಮಾಡದೆ ತೀರಿಕೊಂಡರೆ ಈ ಭಾಗದಲ್ಲಿ ಕಾಣಿಸಿದ ನಿಯಮಗಳ ಅನುಸಾರ ಆಸ್ತಿಯು ಆ ವಾರಸಾ ನಾತೆಯಿಂದ ಹೋಗುತ್ತದೆ.

(ಅ) ಮೊದಲನೆಯದಾಗಿ ಗಂಡ ಮತ್ತು ಮಕ್ಕಳು, ಆಕೆಯ ಮರಣಕ್ಕಿಂತ ಮೊದಲೇ ಸತ್ತ ಮಕ್ಕಳ ಮಕ್ಕಳು ಮತ್ತು (ಬ) ಎರಡನೆಯದಾಗಿ ಒಂದು ವೇಳೆ ಖಂಡ (ಅ) ಕಾಣಿಸಿದ ವಾರಸುದಾರರು ಇರದಿದ್ದರೆ ಕಲಂ ೧೧೯ರಲ್ಲಿ ಅನುಕ್ರಮವಾಗಿ ಹೆಸರಿಸಿದ ವಾರಸುದಾರರಿಗೆ ಆಸ್ತಿಯು ಹೋಗುತ್ತದೆ.

(೧೨೯)

೧೦೭. **ವಾರಸುದಾರರಲ್ಲಿ ಆಸ್ತಿಯನ್ನು ವಿಭಾಗ ಮಾಡುವುದು.**

೧. ಒಬ್ಬ ಹಿಂದೂ ಹೆಣ್ಣುಮಗಳು ಮೃತ್ಯುಪತ್ರ ಮಾಡದೆ ತೀರಿಕೊಂಡರೆ ಅವಳು ತನ್ನ ಹಿಂದೆ ಗಂಡ ಹಾಗೂ ಮಕ್ಕಳನ್ನು ಬಿಟ್ಟುಹೋಗಿದ್ದರೆ ಆಕೆಯ ಆ ಆಸ್ತಿಯು ಗಂಡ ಹಾಗೂ ಮಕ್ಕಳಿಗೆ ಸಮನಾಗಿ ಹಿಸ್ಸೆ ಮಾಡಿಕೊಳ್ಳತಕ್ಕದ್ದು. ಎಲ್ಲರಿಗೂ ಸರಿಯಾಗಿ ಹಂಚತಕ್ಕದ್ದು.

೨. ಒಬ್ಬ ಹಿಂದೂ ಹೆಣ್ಣುಮಗಳು ಮೃತ್ಯುಪತ್ರ ಮಾಡದೆ, ತನ್ನ ಹಿಂದೆ

(೧೨೮)

೧೦೭. **ವಾರಸುದಾರರಲ್ಲಿ ಆಸ್ತಿಯು ಭಾಗ ಮಾಡುವಿಕೆ :**

**ಭಾಗ–೨ ಕಲಂ–೧೪ ಪುಟ–೯**

೧. ಒಬ್ಬ ಹಿಂದೂ ಹೆಣ್ಣುಮಗಳು ಮೃತ್ಯುಪತ್ರ ಮಾಡದೆ ತನ್ನ ಹಿಂದೆ ಗಂಡ ಮತ್ತು ಮಕ್ಕಳನ್ನು ಬಿಟ್ಟು ತೀರಿಕೊಂಡರೆ ಆಕೆಯ ಆಸ್ತಿಯನ್ನು ಆಕೆಯ ಗಂಡ ಮತ್ತು ಮಕ್ಕಳಲ್ಲಿ ಭಾಗ ಮಾಡಬೇಕು ಮತ್ತು ಪ್ರತಿಯೊಬ್ಬರಿಗೆ ಸಮಾನವಾದ ಪಾಲು ಕೊಡಬೇಕು.

ತನ್ನ ಮಕ್ಕಳನ್ನು ಬಿಟ್ಟು ಗಂಡನು ತೀರಿಕೊಂಡಿದ್ದರೆ ಆಕೆಯ ಆ ಆಸ್ತಿಯು ಆ ಮಕ್ಕಳಲ್ಲಿ ಭಾಗಮಾಡಿ ಅವರಿಗೆ ಸರಿಯಾದ ಸಮಪಾಲು ಕೊಡತಕ್ಕದ್ದು.

೩. ಯಾವುದೇ ಹಿಂದೂ ಹೆಣ್ಣುಮಗಳು ಆಕೆಯು ಜೀವಿತ ಕಾಲದಲ್ಲಿ ಮೃತ್ಯುಪತ್ರವಿಲ್ಲದೆ ತೀರಿಕೊಂಡರೆ ಆ ಹೆಣ್ಣು ಮಗಳ ಜೀವಿತ ಕಾಲದಲ್ಲಿ ತಮ್ಮ ಮಕ್ಕಳನ್ನು ಬಿಟ್ಟು ತೀರಿಕೊಂಡರೆ ಅಂತಹ ಮಕ್ಕಳ ಮಕ್ಕಳು ಅವರು ಜೀವಿತವಿದ್ದರೆ ಎಷ್ಟು ಹಿಸ್ಸೆ: ಭಾಗ ಆಸ್ತಿ ಪಡೆಯುತ್ತಿದ್ದರೋ ಅಷ್ಟು ಆಸ್ತಿ ಪಾಲು ಆ ಮಕ್ಕಳ ಮಕ್ಕಳು ಪಡೆಯುತ್ತಾರೆ. ಆದರೆ ಅವರು ಸಹ ಮೃತ್ಯುಪತ್ರವಿಲ್ಲದೆ ತೀರಿಕೊಂಡಿದ್ದರೆ ಅವರಿಗೆ ಎಷ್ಟು ಆಸ್ತಿಯು ಬರುತ್ತಿತ್ತೊ ಅಷ್ಟು ಆಸ್ತಿಯು ಅವರಿಗೆ ವಾರಸಾದಿಂದ ಹೊಗುತ್ತದೆ.

(೧೩೦)

**೧೦೮. ಎಲ್ಲಿ ಮಕ್ಕಳಿರುವುದಿಲ್ಲವೋ ಅಲ್ಲಿ ಗಂಡಸು ವಾರಸುದಾರನಾಗುತ್ತಾನೆ.**

ಎಲ್ಲಿ ಒಬ್ಬ ಹಿಂದೂ ಹೆಣ್ಣುಮಗಳು ತನ್ನ ಹಿಂದೆ ಮಕ್ಕಳಿಲ್ಲದೆ ಗಂಡನನ್ನು ಮಾತ್ರ ಬಿಟ್ಟು ತೀರಿಕೊಂಡರೆ ಅವಳ ಜೀವಿತಕಾಲದಲ್ಲಿ ತೀರಿಕೊಂಡ ಮಕ್ಕಳ ಮಕ್ಕಳನ್ನೊಳಗೊಂಡು ಗಂಡನು ಕಲಂ ೧೦೭ ಇದರ ಅನ್ವಯ ಆಕೆಯ ಮೃತ್ಯು ಪತ್ರವಿಲ್ಲದೆ ತೀರಿಕೊಂಡರೆ ಆಕೆಯ ಆಸ್ತಿಗೆ ಹಕ್ಕುದಾರರಾಗುತ್ತಾರೆ. ಕಲಂ ೧೦೭ರ ಅನ್ವಯ ವಾರಸಾ ಹಕ್ಕುದಾರರಾಗುತ್ತಾರೆ.

೨. ಒಬ್ಬ ಹಿಂದೂ ಹೆಣ್ಣುಮಗಳು ತನ್ನ ಹಿಂದೆ ತನ್ನ ಗಂಡನಿಲ್ಲದೆ ತನ್ನ ಮಕ್ಕಳನ್ನು ಮಾತ್ರ ಬಿಟ್ಟು ಮೃತ್ಯುಪತ್ರ ಮಾಡದೆ ತೀರಿಕೊಂಡರೆ ಆಕೆಯ ಆಸ್ತಿಯನ್ನು ಆಕೆಯ ಮಕ್ಕಳಲ್ಲಿ ಸರಿಯಾಗಿ ಭಾಗ ಮಾಡಿ ಹಂಚತಕ್ಕದ್ದು.

೩. ಒಬ್ಬ ಹಿಂದೂ ಹೆಣ್ಣುಮಗಳು ಮೃತ್ಯುಪತ್ರ ಇಲ್ಲದೆ ತೀರಿಕೊಂಡರೆ, ಆಕೆಯ ಜೀವಿತ ಕಾಲದಲ್ಲಿಯೇ ಆಕೆಯ ಮಕ್ಕಳು, ತಮ್ಮ ಮಕ್ಕಳನ್ನು ಬಿಟ್ಟು ತೀರಿಕೊಂಡರೆ ಆಕೆಯು ತನ್ನ ಜೀವಿತ ಕಾಲದಲ್ಲಿ ಎಷ್ಟು ಭಾಗ : ಹಿಸ್ಸೆ ಪಡೆಯುತ್ತಿದ್ದಳೋ ಅಷ್ಟು ಆಸ್ತಿಯನ್ನು ಆಕೆಯ ಮಕ್ಕಳು ಪಡೆಯುತ್ತಾರೆ.

೧೨೯

(೧೩೦)

**೧೦೮. ಮಕ್ಕಳು ಇಲ್ಲದಾಗ ಗಂಡನು ವಾರಸುದಾರನಾಗುತ್ತಾನೆ** – ಒಬ್ಬ ಹಿಂದೂ ಹೆಣ್ಣುಮಗಳು ಗಂಡನನ್ನು ಮಾತ್ರ ಬಿಟ್ಟು ಮಕ್ಕಳಿಲ್ಲದೆ ಮೃತ್ಯುಪತ್ರವಿಲ್ಲದೆ ತೀರಿಕೊಂಡರೆ ಮಕ್ಕಳು ಅಂದರೆ ಜೀವಿತಕಾಲದಲ್ಲಿಯೇ ತೀರಿಕೊಂಡ ಮಕ್ಕಳ ಮಕ್ಕಳನ್ನು ಒಳಗೊಂಡು ಕಲಂ ೧೦೭ರ ಅನ್ವಯ ಆಕೆಯ ಗಂಡನಿಗೆ ವಾರಸಾದಿಂದ ಹೋಗುತ್ತದೆ. ಅಂದರೆ ಮೃತ್ಯು ಪತ್ರವಿದ್ದು ಆಕೆ ಸತ್ತರೆ ಆಕೆಯ ಗಂಡನಿಗೆ

(೧೩೧)

೧೦೯. **ಹಿಂದೂ ಹೆಣ್ಣುಮಗಳ ಆಸ್ತಿಯ ಇತರ ವಾರಸುದಾರರು** – ಎಲ್ಲಿ ಒಬ್ಬ ಹಿಂದೂ ಹೆಣ್ಣುಮಗಳು ಕಲಂ ೧೦೭ ಮತ್ತು ೧೦೮ರಲ್ಲಿ ನಿರ್ದೇಶಿಸಿದ ವಾರಸುದಾರರು ಯಾರೂ ಇರದಿದ್ದರೆ (ತೀರಿಕೊಂಡಿದ್ದರೆ) ಅಂತಹ ಹೆಣ್ಣುಮಗಳು ಮೃತ್ಯುಪತ್ರವಿಲ್ಲದೆ ತೀರಿಕೊಂಡರೆ ಆಕೆಯ ಆಸ್ತಿಯಲ್ಲಿ ಈ ಕೆಳಗೆ ಕಾಣಿಸಿದ ಆಕೆಯ ವಾರಸುದಾರರಿಗೆ ಅನುಕ್ರಮವಾಗಿ ಹೋಗತಕ್ಕದ್ದು. **ಭಾಗ–೨ ಕಲಂ–೮ ಪುಟ–೭**

ಅಂದರೆ – ೧. ತಾಯಿ, ತಂದೆ

೨. ಗಂಡನ ವಾರಸುದಾರರು ಗಂಡನ ಆಸ್ತಿ ಇದ್ದರೆ ಮತ್ತು ಅವನು ಮೃತ್ಯುಪತ್ರ ಮಾಡದೆ ಅವನ ಹೆಂಡತಿ ತೀರಿಕೊಂಡ ಕೊಡಲೇ ಅವನೂ ತಕ್ಷಣ ತೀರಿಕೊಂಡಿದ್ದರೆ ಆಸ್ತಿ ಅವನದಾಗಿದ್ದರೆ ಯಾವ ನಿಯಮಗಳಿಗನುಸಾರವಾಗಿ ಆಸ್ತಿಯು ಹೋಗುತ್ತಿತ್ತೊ ಆ ನಿಯಮ ಗಳಿಗನುಸಾರವಾಗಿ ಆಕೆಯು ಗಂಡನ ವಾರಸುದಾರರಿಗೆ ಹೋಗುತ್ತದೆ.

೩. ತಾಯಿಯ ವಾರಸುದಾರರಿಗೆ –ತಾಯಿ ಒಂದು ವೇಳೆ ಯಾವುದೇ ಮೃತ್ಯುಪತ್ರವಿಲ್ಲದೆ ಮಗಳ ಮರಣದ ನಂತರ ಆಕೆಯೂ ತೀರಿಕೊಂಡಿದ್ದರೆ ಆಕೆಯ ವಾರಸುದಾರರಿಗೆ ಯಾವ ನಿಯಮಗಳ ಅನುಸಾರ ಆ ಆಸ್ತಿಯು ಹೋಗುತ್ತಿತ್ತೋ ಅದೇ ನಿಯಮಗಳ ಅನುಸಾರವಾಗಿ ಆಕೆಯ ವಾರಸುದಾರರಿಗೆ ಹೋಗುತ್ತದೆ. ಆ ಆಸ್ತಿಯು ತಾಯಿಯದು ಆಗಿದ್ದರೆ–

೪. ತಂದೆಯ ವಾರಸುದಾರರು – ಆ ಆಸ್ತಿಯು ಅವನದೆ ಆಗಿದ್ದರೆ ಮತ್ತು ಅವನು ಹೋಗುತ್ತದೆ.

(೧೩೧)

(೧೩೨)

೧೦೯. **ಹಿಂದೂ ಹೆಣ್ಣುಮಗಳ ಆಸ್ತಿಗೆ ವಾರಸುದಾರರು** ಎಲ್ಲಿ ಹಿಂದು ಹೆಣ್ಣುಮಗಳು ಕಲಂ ೧೦೭ ಇಲ್ಲವೆ ೧೦೮ ಇವುಗಳಲ್ಲಿ ಕಾಣಿಸಿದ ಯಾವುದೇ ವಾರಸುದಾರರು ಇರದೆ ತೀರಿಕೊಂಡಿದ್ದರೆ ಮೃತ್ಯು ಪತ್ರವಿಲ್ಲದೆ ತೀರಿಕೊಂಡಾಗ ಆಕೆಯ ಆಸ್ತಿಯು ಈ ಕೆಳಗೆ ಹೆಸರಿಸಿದ ಪ್ರಕಾರ ಅನುಕ್ರಮವಾಗಿ ಆ ವಾರಸುದಾರರಿಗೆ ಹೋಗುತ್ತದೆ. **ಭಾಗ–೨ ಕಲಂ–೧೪ ಪುಟ–೨**

೧. ತಾಯಿ, ತಂದೆ–

೨. ಗಂಡನ ವಾರಸುದಾರರು ಒಂದು ವೇಳೆ ಅದು ಅವನದೇ ಆಗಿದ್ದರೆ ಅವನು ಮೃತ್ಯುಪತ್ರವಿಲ್ಲದೆ ಅವನು ತೀರಿಕೊಂಡ ನಂತರ ತಕ್ಷಣ ಅವನೇ ತೀರಿಕೊಂಡರೆ ಯಾವ ನಿಯಮಗಳ ಅನುಸಾರ ಆ ಆಸ್ತಿಯು ಹೋಗುತ್ತಿತ್ತೊ ಆ ನಿಯಮಗಳ ಅನುಸಾರ ಮತ್ತು ಅನುಕ್ರಮವಾಗಿ ಗಂಡನ ವಾರಸುದಾರರಿಗೆ ಹೋಗುತ್ತದೆ.

೩. ತಾಯಿಯ ವಾರಸುದಾರರು: ಆಸ್ತಿಯು ಆಕೆಯದಾಗಿದ್ದರೆ ಆಕೆಯು ಮೃತ್ಯುಪತ್ರವಿಲ್ಲದೆ ಆಕೆಯ ಮಗಳು ತೀರಿಕೊಂಡ ತಕ್ಷಣ ಆಕೆಯೂ ತೀರಿಕೊಂಡಿದ್ದರೆ ಯಾವ ನಿಯಮಗಳು ಅನ್ವಯವಾಗು ತ್ತಿದ್ದವೋ ಆ ನಿಯಮಗಳಿಗನು ಸಾರವಾಗಿ ಮತ್ತು ಅನುಕ್ರಮವಾಗಿ ತಾಯಿಯ ವಾರಸುದಾರರಿಗೆ ಹೋಗುತ್ತದೆ.

೪. ತಂದೆಯ ವಾರಸುದಾರರು – ಆ

ಮೃತ್ಯುಪತ್ರ ಮಾಡದೆ ಅವನ ಮಗಳು ತೀರಿಕೊಂಡ ನಂತರ ತಕ್ಷಣ ತೀರಿಕೊಂಡಿದ್ದರೆ, ಯಾವ ನಿಯಮಗಳು ಅನ್ವಯವಾಗುತ್ತಿದ್ದವೋ ಆ ನಿಯಮಗಳ ಅನುಸಾರವಾಗಿ ತಂದೆಯ ವಾರಸುದಾರರಿಗೆ ಹೋಗುತ್ತದೆ.

(೧೩೨)

**ಮರುಮಕ್ಕತ್ತಾಯಂ ಹೆಣ್ಣುಮಗಳ ಆಸ್ತಿಯ ವಾರಸಾ ಮುಂತಾದವು**

೧೦೯.ಅ. **ಮರುಮಕ್ಕತ್ತಾಯಂ ಇಲ್ಲವೆ ಅಳಿಯ ಸಂತಾನ ಹೆಣ್ಣುಮಗಳು ಮೃತ್ಯುಪತ್ರವಿಲ್ಲದೆ ತೀರಿಕೊಂಡರೆ ಅವಳ ಆಸ್ತಿಯ ವಾರಸಾ ನಿಯಮಗಳು :** ಈ ಭಾಗದಲ್ಲಿ ಏನೇ ಹೇಳಿದ್ದರೂ ಯಾವುದೇ ಹಿಂದೂ ಹೆಣ್ಣುಮಗಳು ಪ್ರತ್ಯೇಕ ಇಲ್ಲವೆ ಸ್ವಸಂಪಾದಿತ ಆಸ್ತಿಯು ಈ ಅಧಿನಿಯಮವು ಪಾಸಾಗಿರದಿದ್ದರೆ ಅವರಿಗೆ ಮರುಮಕ್ಕತ್ತಾಯಂ ಕಾನೂನು ಇಲ್ಲವೆ ಅಳಿಯ ಸಂತಾನ ಕಾನೂನು ಅನ್ವಯಿಸುತ್ತಿತ್ತು. ಅವಳು ಮೃತ್ಯುಪತ್ರ ಮಾಡದೆ ತೀರಿಕೊಂಡರೆ ಅವಳ ಆಸ್ತಿಯು ಈ ಕೆಳಗೆ ನಿರ್ದೇಶಿಸಿದಂತೆ ಅವಳ ವಾರಸುದಾರರಿಗೆ ಹೋಗುತ್ತದೆ.

ಆ. ಮೃತ್ಯುಪತ್ರವಿಲ್ಲದೆ ತೀರಿಕೊಂಡ ಹೆಣ್ಣು ಮಗಳು ತನ್ನ ಹಿಂದೆ ಜೀವಿಸಿರುವ ಪಿತೃ ವಂಶೀಯ ನೇರ ವಂಶಜರನ್ನು ಇಲ್ಲವೆ ಪಿತೃವಂಶಜರನ್ನು ಬಿಟ್ಟು ಮೃತ್ಯುಪಟ್ಟಿದ್ದರೆ ಆ ಸಂಪೂರ್ಣ ಆಸ್ತಿಯು ಆ ಪಿತೃವಂಶಜರಿಗೆ ವಾರಸಾ ನಾತೆಯಿಂದ ಹೋಗುತ್ತದೆ ಇಲ್ಲವೆ ಪಿತೃವಂಶಜರಿಗೆ ಖಂಡ (ಅ)ದಿಂದ (ಇ)ದವರೆಗಿನವು ಕಲಂ ೧೦೫ ಡ ದ ಅನ್ವಯ ಉಪಬಂಧಗಳಿಗೊಳಪಟ್ಟು ವಾರಸಾ ಹೋಗುತ್ತದೆ.

ಬ. ಮೃತ್ಯುಪತ್ರ ಮಾಡದೆ ತೀರಿಕೊಂಡರೆ ಆಸ್ತಿಯು ಆತನದೇ ಆಗಿದ್ದರೆ ಅವನು ಮೃತ್ಯುಪತ್ರವಿಲ್ಲದೆ ಅವನ ಮಗಳು ತೀರಿಕೊಂಡ ತಕ್ಷಣ ಅವನೂ ತೀರಿಕೊಂಡಿದ್ದರೆ ಯಾವ ನಿಯಮಗಳು ಅನ್ವಯವಾಗುತ್ತಿದ್ದವೋ ಆ ನಿಯಮಗಳಿಗನುಸಾರವಾಗಿ ಮತ್ತು ಅನುಕ್ರಮವಾಗಿ ತಂದೆಯ ವಾರಸುದಾರರರಿಗೆ ಹೋಗುತ್ತದೆ.

ಆ ಪೂರ್ಣ ಆಸ್ತಿಯು ಆ ಮೃತ್ಯುಪತ್ರ ಮಾಡದೆ ತೀರಿಕೊಂಡವಳ ತಾಯಿಗೆ ಇಲ್ಲವೆ ಅವಳು ಇರದಿದ್ದರೆ ಅವಳ ಪಿತೃವಂಶಜ ಇಲ್ಲವೆ ವಂಶಜರಿಗೆ ವಾರಸಾನಾತೆಯಿಂದ ಹೋಗುತ್ತದೆ.

ಕ. ಮೃತ್ಯುಪತ್ರ ಮಾಡದೆ ತೀರಿಕೊಂಡವಳು ತನ್ನ ಹಿಂದೆ ಜೀವಿಸಿರುವ ಯಾವ ಪಿತೃ ವಂಶಜನನ್ನು ಬಿಟ್ಟಿರದಿದ್ದರೆ ಇಲ್ಲವೆ ಅವಳ ತಾಯಿ, ಆದರೆ ಅವಳು ತನ್ನ ಗಂಡನನ್ನು ಮತ್ತು ಅವಳು ತಾಯಿಯ ಅಮ್ಮ (ಅಜ್ಜಿ)ಇಲ್ಲವೆ ಅವಳ ಪಿತೃವಂಶಜ ಇಲ್ಲವೆ ಪಿತೃವಂಶಜರನ್ನು ಬಿಟ್ಟಿದ್ದರೆ ಆಸ್ತಿಂಯು ಒಂದು ಎರಡನೆಯದಷ್ಟು ಆಸ್ತಿ ಅವಳ ಅಜ್ಜಿ (ಅಮ್ಮ) ವಾರಸಾದಿಂದ ಹೋಗುತ್ತದೆ, ಇಲ್ಲವೆ ಪಿತೃವಂಶಜ ಇಲ್ಲವೆ ವಂಶಜರಿಗೆ ಹೋಗುತ್ತದೆ. ಆಸ್ತಿಯು ಒಂದು ಎರಡನೆಯ ಅಂಶದಷ್ಟು ಆಸ್ತಿಯು ಅಜ್ಜಿ (ಅವ್ಮ)ನಿಗೆ ವಾರಸಾದಿಂದ ಹೋಗುತ್ತದೆ. ಇಲ್ಲವೆ ಅವಳು ಇರದಿದ್ದರೆ ಅವಳ ಪಿತೃವಂಶಜ ಇಲ್ಲವೆ ವಂಶಜರಿಗೆ ಅವರಿಗೆ ವಾರಸಾದಿಂದ ಹೋಗುತ್ತದೆ.

ಡ. ಮೃತ್ಯುಪತ್ರ ಮಾಡದೆ ತೀರಿಕೊಂಡವಳ ತಾಯಿಯ ಅಮ್ಮನು ಇರದಿದ್ದರೆ ಮತ್ತು ಅವಳ ಪಿತೃವಂಶಜರು ಜೀವಿಸಿರದಿದ್ದರೆ ಆ ಆಸ್ತಿಯು ತಾಯಿ ಅಮ್ಮ (ಅಜ್ಜಿಗೆ) ವಾರಸಾದಿಂದ ಹೋಗುತ್ತದೆ ಇಲ್ಲವೆ ಪಿತೃವಂಶಜ : ಪಿತೃ ವಂಶಜರಿಗೆ ಸಂದರ್ಭ ಹೇಗಿದೆಯೋ ಹಾಗೆ.

ಇ. ಮೃತ್ಯುಪತ್ರವಿಲ್ಲದೆ ತೀರಿಕೊಂಡವಳು ತನ್ನ ಹಿಂದೆ ಜೀವಿಸಿರುವ ವಂಶಜರು ಮೇಲೆ ಕಾಣಿಸಿದ ಖಂಡಗಳಲ್ಲಿ

ನಿರ್ದೇಶಿಸಿದ ವಂಶಜರನ್ನು ಬಿಟ್ಟಿರದಿದ್ದರೆ, ಅವಳ ಸಂಪೂರ್ಣ ಆಸ್ತಿಯು ಅವಳ ತಾಯಿಯ ಅಮ್ಮನಿಗೆ ಹೋಗುತ್ತದೆ. ಇಲ್ಲವೆ ಅವಳ ವಂಶಜರು ಆ ಶ್ರೇಣಿಯಲ್ಲಿ ಪಿತೃವಂಶಜ ಇಲ್ಲವೆ ವಂಶಜರು ಇರದಿದ್ದರೆ ಇಲ್ಲವೆ ಇಂತಹ ಯಾವುದೇ ವರ್ಗದ ಯಾವನೊಬ್ಬನೂ ಸಮೀಪದವನು ಜೀವಿಸಿರದಿದ್ದರೆ ಆಗ ಅತಿದೂರದ ಹೆಣ್ಣುವಂಶಜ ಹೆಣ್ಣುಮಕ್ಕಳ ಶ್ರೇಣಿಯಲ್ಲಿ, ಅವಳೂ ಇರದಿದ್ದರೆ ಅವಳ ಅತಿದೂರದ ಹೆಣ್ಣು ವಂಶದವಳಿಗೆ ಆ ಹೆಣ್ಣುಮಕ್ಕಳ ಶ್ರೇಣಿಯಲ್ಲಿ, ಅವಳೂ ಇಲ್ಲದಿದ್ದರೆ ಅವಳ ಪಿತೃವಂಶದ ಇಲ್ಲವೆ ವಂಶಜರು ಸಮೀಪದ ವಂಶಜರು ಯಾರೂ ಇರದಿದ್ದರೆ ಅತಿ ದೂರದ ಸಂಬಂಧಿ ಪೂರ್ವಜಳಿಗೆ, ಹೆಣ್ಣುಮಕ್ಕಳ ತಾಯಿತನದಲ್ಲಿ ಇಲ್ಲವೆ ಅವಳೂ ಇರದಿದ್ದರೆ ಅವಳ ನೇರ ಪಿತೃವಂಶಜ ಇಲ್ಲವೆ ವಂಶಜರಿಗೆ ಸಮೀಪದ ವಂಶದವಳು ಮತ್ತು ಅವಳ ಪಿತೃವಂಶಜರು ಅತಿ ದೂರದ ವಂಶಜರನ್ನು ಮತ್ತು ಅವಳ ವಂಶಜರನ್ನು ಹೊರತುಪಡಿಸಿ ಮೇಲೆ ಕಾಣಿಸಿದ ಉಳಿದವರಿಗೆ ಈ ಆಸ್ತಿಯು ವಾರಸಾ ಮೂಲಕ ಹೋಗುತ್ತದೆ.

ಎಫ್. ಮೃತ್ಯುಪತ್ರ ಮಾಡದೆ ತೀರಿಕೊಂಡ ಅವಳ ಆಸ್ತಿಯು ಹಂಚುವಿಕೆಯಲ್ಲಿ ಇಲ್ಲವೆ ಅವಳ ಯಾವುದೇ ಹಿಸ್ಸೆ ಪಾಲು : ಹಿಸ್ಸೆ ಯಲ್ಲಿ ಎರಡು ಇಲ್ಲವೆ ಅವಳ ತಾಯಿಯ ಪಿತೃವಂಶಜರು ಇಲ್ಲವೆ ಉಳಿದ ವಂಶಜರು ಮೇಲಿನ ಖಂಡಗಳನ್ವಯ

ಕಲಂ ೧೦೫ ಡ ದ ಪ್ರಕಾರ ಗಂಡು ವಂಶಜರು, ನಿಯಮಗಳು ನಿರ್ದೇಶಿಸಿದಂತೆ, ಹಾಗೂ ಖಂಡ (ಅ) ದಿಂದ (ಇ)ದಲ್ಲಿ ನಿರ್ದೇಶಿಸಿದಂತೆ, ತಾಯಿ ಇಲ್ಲವೆ ಪೂರ್ವಜರು ಅಂತಹ ಆ ಆಸ್ತಿಗೆ ಮೃತ್ಯುಪತ್ರವಿಲ್ಲದೆ ತೀರಿಕೊಂಡಿರುವರೆಂದು ಭಾವಿಸಿ, ಇಲ್ಲವೆ ಮೇಲೆ ಹೇಳಿದಂತೆ ಅವಳ ವಂಶಜದವರು ಜೀವಿಸಿರುವರೆಂದು ಭಾವಿಸಲಾಗುವುದು.

(೧೩೩)

೧೦೯.ಬ. **ನಂಬೂದ್ರಿ ಹೆಣ್ಣುಮಕ್ಕಳು ಮೃತ್ಯುಪತ್ರ ಮಾಡದೆ ತೀರಿಕೊಂಡವರ ಆಸ್ತಿಯ ವಾರಸಾದ ನಿಯಮಗಳು** ಈ ಆಧ್ಯಾಯದಲ್ಲಿ ಏನೇ ಹೇಳಿದ್ದರೂ, ಪ್ರತ್ಯೇಕ ಇಲ್ಲವೆ ಸ್ವಸಂಪಾದಿತ ಆಸ್ತಿಯು ಒಬ್ಬ ಹಿಂದೂ ಹೆಣ್ಣುಮಕ್ಕಳದು. ಈ ಅಧಿನಿಯಮವು ಜಾರಿಗೆ ಬರದಿದ್ದರೆ, ನಂಬೂದ್ರಿ ಕಾನೂನು ಅವಳಿಗೆ ಅನ್ವಯಿಸುತ್ತಿತ್ತು ಮತ್ತು ಅವಳು ತನ್ನ ಆಸ್ತಿ ಕುರಿತು ಮೃತ್ಯುಪತ್ರ ಮಾಡದೆ ತೀರಿಕೊಂಡರೆ ಅವಳ ಆಸ್ತಿಯು ಅನುಕ್ರಮವಾಗಿ ಕಾನೂನು ಪ್ರಕಾರ ಕೆಳಗೆ ನಿರ್ದೇಶಿಸಿದಂತೆ ವಾರಸಾ ಮೂಲಕ ಹೋಗುತ್ತದೆ. ಅವೆಂದರೆ–

ಅ. ಮೃತ್ಯುಪತ್ರ ಮಾಡದೆ ತೀರಿಕೊಂಡ ಅವಳು ತನ್ನ ಹಿಂದೆ ಜೀವಿಸಿರುವ ಪಿತೃವಂಶಜ ಇಲ್ಲವೆ ವಂಶಜರನ್ನು ಬಿಟ್ಟಿದ್ದರೆ ಆ ಸಂಪೂರ್ಣ ಆಸ್ತಿಯು ಅಂತಹ ವಂಶಜನಿಗೆ ಖಂಡ (ಅ) ದಿಂದ (ಇ) ಕಲಂ ೧೦೫ ಡ ದ ಖಂಡ (ಅ) ದಿಂದ (ಇ) ದವರೆಗೆ ನಿರ್ದೇಶಿಸಿದಂತೆ ಪಿತೃವಂಶಜ ಇಲ್ಲವೆ ವಂಶಜರಿಗೆ

ಕಾನೂನಿನ ಪ್ರಕಾರ ಹೋಗುತ್ತದೆ.

ಬ. ಅಂತಹ ಪಿತೃವಂಶಜನು ಇರದಿದ್ದರೆ ಆ ಆಸ್ತಿಯು ವಾರಸಾದಿಂದ ಅವಳ ಗಂಡನಿಗೆ ಹೋಗುತ್ತದೆ.

ಕ. ಗಂಡನು ಇರದಿದ್ದರೆ ಆ ಆಸ್ತಿಯು ಕಲಂ ೧೧೯ರ ಅನ್ವಯ ನಿರ್ದೇಶಿಸಿದಂತೆ ಅವಳ ವಾರಸುದಾರರಿಗೆ ನಿಯಮಗಳ ಅನ್ವಯ ವಾರಸಾ ಪ್ರಕಾರ ಹೋಗುತ್ತದೆ.

**(೧೩೪)**

**ಸನ್ಯಾಸಿಯ ಆಸ್ತಿಯ ವಾರಸಾ**

**೧೧೦. ಸನ್ಯಾಸಿಗಳಿಗೆ ನಿಯಮಗಳು ಮುಂತಾದವು**

೧. ಒಬ್ಬ ಮನುಷ್ಯನು ಸಂಪೂರ್ಣವಾಗಿ ಮತ್ತು ಅಂತಿಮವಾಗಿ ಜಗತ್ತಿನ ಭೋಗವನ್ನು ಪರಿತ್ಯಜಿಸಿ ಸನ್ಯಾಸಿಯಾಗುತ್ತಾನೆ. ಇಲ್ಲವೆ ತಪಸ್ವಿ ವಿರಕ್ತ ದೇಹವನ್ನು ದಂಡಿಸುವವನಾಗುತ್ತಾನೆ ಇಲ್ಲವೆ ಆಜೀವ ಪರ್ಯಂತ ಬಿಷಪ್ ಇಲ್ಲವೆ ಪುರೋಹಿತ ಧರ್ಮಗುರು ಆದರೆ ಅವನು ಮೃತ್ಯುಪತ್ರ ಮಾಡದೆ ಹಾಗೆ ಸತ್ತರೆ ಅವನು ಸನ್ಯಾಸಿ, ವಿರಕ್ತ ಸ್ವಾಮಿಯಾಗುವ ಪೂರ್ವದಲ್ಲಿ ಯಾವ ರೀತಿ ವಾರಸಾದಿಂದ ಹೋಗುತ್ತಿತ್ತೋ ಅದೇ ಪ್ರಕಾರ ಅವನ ಆಸ್ತಿ ವಾರಸಾದಿಂದ ಹೋಗುತ್ತದೆ.

೨. ಅಂತಹ ಮನಷ್ಯನು, ಇಂತಹ ಜಗತ್ತಿನ ಭೋಗಸುಖವನ್ನು ತ್ಯಜಿಸಿ ಸನ್ಯಾಸಿಯಾದವನು ಆಸ್ತಿಯನ್ನು ಸಂಪಾದಿಸಿದರೆ ಅವನ ಆಸ್ತಿಯು ಆತನ ಮರಣದ ನಂತರ ಅವನ

**(೧೩೩)**

**ಸನ್ಯಾಸಿಯ ಆಸ್ತಿಗೆ ವಾರಸುದಾರರು**

**೧೧೦. ಸನ್ಯಾಸಿಗಳಿಗೆ ನಿಯಮಗಳು ಮುಂತಾದವು**

(೧) ಎಲ್ಲಿ ಒಬ್ಬ ಮನುಷ್ಯನು ಸಂಪೂರ್ಣವಾಗಿ ಹಾಗೂ ಅಂತಿಮವಾಗಿ ಈ ಜಗತ್ತಿನ ಭೋಗಸುಖವನ್ನು ಪರಿತ್ಯಜಿಸಿ ಸನ್ಯಾಸಿಯಾಗುತ್ತಾನೆ. ಇಲ್ಲವೆ ತಪಸ್ವಿ ವಿರಕ್ತ ದೇಹವನ್ನು ದಂಡಿಸುವ ಇಲ್ಲವೆ ಆಜೀವಪರ್ಯಂತ ಧಾರ್ಮಿಕ ವಿಷಯದ ವಿಧ್ಯಾರ್ಥಿ – ಇವನ ಆಸ್ತಿಯು ಆತನ ವಾರಸುದಾರರಿಗೆ ಆತನು ಅವನು ಈ ಜಗತ್ತನ್ನು ತ್ಯಜಿಸಿ ಸನ್ಯಾಸಿಯಾಗುವ ಕಾಲಕ್ಕೆ ಅವನು ಮೃತ್ಯುಪತ್ರವಿಲ್ಲದೆ ಹಾಗೆ ಸತ್ತಿದ್ದರೆ ಅವನ ಆಸ್ತಿಯು ಯಾರಿಗೆ ಹೋಗುತ್ತಿತ್ತೊ ಅದೇ ರೀತಿ, ಅದೇ ಅನುಕ್ರಮಣಿಯಲ್ಲಿ ಅವನು ಸನ್ಯಾಸಿಯಾದರೆ ಹೋಗುತ್ತದೆ.

೩. ಅಂತಹ ವ್ಯಕ್ತಿಯು ಸನ್ಯಾಸಿಯಾದ ನಂತರ ಯಾವುದೇ ಆಸ್ತಿ ಸಂಪಾದಿಸಿದರೆ, ಆತನ ಮರಣದ

ವಾರಸುದಾರರಿಗೆ ಸಂಬಂಧಿಕರಿಗೆ ಹೋಗುವುದಿಲ್ಲ. ಆದರೆ ಕೆಳಗೆ ಕಾಣಿಸಿದಂತೆ ಹೋಗುತ್ತದೆ.

ಅ. ಆ ಸನ್ಯಾಸಿಯ ಆಸ್ತಿಯು ಆತನ ಧಾರ್ಮಿಕ ಸಹೋದರ ಒಂದೇ ಮಠ ಇಲ್ಲವೆ ಆಶ್ರಮದವನಿಗೆ ಹೋಗುತ್ತದೆ.

ಬ. ಒಬ್ಬ ವಿರಕ್ತ ಸನ್ಯಾಸಿಯ ಆಸ್ತಿಯು ಯಾವುದೇ ರೂಢಿ ಸಂಪ್ರದಾಯದ ಅನ್ವಯ ಆತನ ಅನೇಕ ಭಕ್ತರಿಗೆ, ಮತ್ತು

ಕ. ಆಜನ್ಮಪರ್ಯಂತ ಸನ್ಯಾಸ ಧಾರ್ಮಿಕ ವಿಧಿಯನ್ನು ಕೈಕೊಂಡವನ ಆಸ್ತಿಯು ಆತನ ಬೋಧಕ : ಉಪದೇಶಕನಿಗೆ ಹೋಗುತ್ತದೆ.

(೧೩೫)

**ವಾರಸಾಕ್ಕೆ ಸಂಬಂಧಿಸಿದ ಸಾಮಾನ್ಯ ಉಪಬಂಧಗಳು**

೧೧೧. **ಅರ್ಧರಕ್ತ ಸಂಬಂಧಿಗಳಿಗಿಂತ ಪೂರ್ಣರಕ್ತ ಸಂಬಂಧಿಗಳಿಗೆ ಪ್ರಾಶಸ್ತ್ಯ** ಮೃತ್ಯುಪತ್ರ ಮಾಡದೆ ತೀರಿಕೊಂಡ ಒಬ್ಬ ವ್ಯಕ್ತಿಯ ಪೂರ್ಣರಕ್ತ ಸಂಬಂಧ ಉಳ್ಳ ವಾರಸುದಾರನಿಗೆ ಅರ್ಧರಕ್ತ ಸಂಬಂಧಿಗಳಿಗಿಂತ ಪ್ರಾಶಸ್ತ್ಯಕೊಡ ಲಾಗುವುದು. ಉಳಿದ ಯಾವುದೇ ರೀತಿಯಿಂದ ಅವರ ಸಂಬಂಧ ಎಲ್ಲ ರೀತಿಯಿಂದಲೂ ಒಂದೇ ತೆರನಾಗಿದ್ದರೆ.

* * * * *

ನಂತರ ಅವನ ಸಂಬಂಧಿಕರಿಗೆ ಹೋಗುವುದಿಲ್ಲ. ಆದರೆ ಕೆಳಗಿನಂತೆ ಹೋಗುತ್ತದೆ.

(ಅ) ಆ ಸನ್ಯಾಸಿಯ ಆಸ್ತಿಯು ಆತನ ಧಾರ್ಮಿಕ ಸಹೋದರ ಒಂದೇ ಮಠ ಇಲ್ಲವೆ ಆಶ್ರಮದವನಿಗೆ ಹೋಗುತ್ತದೆ.

ಬ. ಒಬ್ಬ ವಿರಕ್ತ ಸನ್ಯಾಸಿಯ ಆಸ್ತಿಯು ಯಾವುದೇ ರೂಢಿ ಸಂಪ್ರದಾಯದ ಅನ್ವಯ ಆತನ ಅನೇಕ ಭಕ್ತರಿಗೆ ಮತ್ತು

ಕ. ಆಜನ್ಮಪರ್ಯಂತ ಸನ್ಯಾಸ ಧಾರ್ಮಿಕ ವಿಧಿಯನ್ನು ಕೈಕೊಂಡವನ ಆಸ್ತಿಯು ಆತನ ಬೋಧಕ : ಉಪದೇಶಕನಿಗೆ ಹೋಗುತ್ತದೆ.

(೧೩೪)

**ವಾರಸಾಕ್ಕೆ ಸಂಬಂಧಿಸಿದ ಸಾಮಾನ್ಯ ಉಪಬಂಧಗಳು**

೧೧೧. **ಅರ್ಧರಕ್ತ ಸಂಬಂಧಿಗಳಿಗಿಂತ ಪೂರ್ಣರಕ್ತ ಸಂಬಂಧಿಗಳಿಗೆ ಪ್ರಾಶಸ್ತ್ಯ** –

**ಭಾಗ–೨ ಕಲಂ–೧೫ ಪುಟ–೧೦**

ಮೃತ್ಯುಪತ್ರ ಮಾಡದೆ ತೀರಿಕೊಂಡ ಒಬ್ಬ ವ್ಯಕ್ತಿಯು ಪೂರ್ಣರಕ್ತ ಸಂಬಂಧವುಳ್ಳ ವಾರಸುದಾರನಿಗೆ ಅರ್ಧರಕ್ತ ಸಂಬಂಧಿಗಳಿಗಿಂತ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗುವುದು. ಉಳಿದ ಯಾವುದೇ ರೀತಿಯಿಂದ ಅವರ ಸಂಬಂಧ ಎಲ್ಲ ರೀತಿಯಿಂದ ಒಂದೇ ತರನಾಗಿದ್ದರೆ.

**ಉದಾ :** ಪೂರ್ಣರಕ್ತ ಸಂಬಂಧದ ಸಹೋದರನಿಗೆ ಅರ್ಧರಕ್ತ ಸಂಬಂಧದ ಸಹೋದರರಿಗಿಂತ ಹೆಚ್ಚು ಪ್ರಾಶಸ್ತ್ಯ ಕೊಡಲಾಗುವುದು. ಆದರೆ ಅರ್ಧರಕ್ತದ ಸಹೋದರನು ಪೂರ್ಣರಕ್ತದ ಸಹೋದರನ ಮಗನಿಗಿಂತ ಅರ್ಧರಕ್ತದ ಸಹೋದರನಿಗೆ ವಾರಸಾ ಹಕ್ಕು ಪ್ರಾಪ್ತವಾಗುತ್ತದೆ. ಅವನಿಗೆ

ಪ್ರಾಶಸ್ತ್ಯಸಿಗುತ್ತದೆ. ಪೂರ್ಣರಕ್ತದ ಸಹೋದರನು ಸಮೀಪದ ಸಂಬಂಧಿ ಇರುತ್ತಾನೆ. ಆದರೆ ಪೂರ್ಣ ರಕ್ತದ ಸಹೋದರನ ಮಗ ದೂರದ ಸಂಬಂಧಿಯಾಗುತ್ತಾನೆ.

(೨) ಅರ್ಧರಕ್ತ ಸಂಬಂಧದ ತಂದೆಯ ತಮ್ಮ ಇಲ್ಲವೆ ಈತನನ್ನು ಪೂರ್ಣರಕ್ತದ ತಂದೆಯ ತಮ್ಮ ಇಲ್ಲವೆ ಅಣ್ಣನು ಇವನಿಗಿಂತ ಹೆಚ್ಚು ಪ್ರಾಶಸ್ತ್ಯ ಕೊಡಲಾಗುವುದು. ಕಾಕಾನು ಸಮೀಪದ ಸಂಬಂಧಿ. ಕಾಕಾನ ಮಗನು ದೂರದ ಸಂಬಂಧಿಯಾಗಿರುತ್ತಾನೆ.

(೩) ಪೂರ್ಣರಕ್ತದ ಸಹೋದರನ ಮಗಳು, ಅರ್ಧರಕ್ತದ ಸಹೋದರನ ಮಗಳ ಮಗಳಿಗಿಂತಲೂ ಹೆಚ್ಚು ಪ್ರಾಶಸ್ತ್ಯ ಪಡೆಯುತ್ತಾಳೆ. ಆದರೆ ಮೊದಲನೆಯವಳನ್ನು ಅರ್ಧ ರಕ್ತದ ಸಹೋದರನ ಮಗಳ ಮಗನಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದೆ – ಯಾಕೆಂದರೆ ರಕ್ತಸಂಬಂಧವು ಇವರೆಡೂ ಪ್ರಸಂಗದಲ್ಲಿ ಒಂದೇ ಆಗಿಲ್ಲ. ನಂತರದವನು ಕಲಂ ೧೦೪ ನಿಯಮ ಇದರ ಅನ್ವಯ ಸಮೀಪದ ವಾರಸುದಾರನಾಗುತ್ತಾನೆ ಆದರೂ ಅವನಿಗೆ ಪ್ರಾಶಸ್ತ್ಯ ಕೊಡಲಾಗಿದೆ. ಅವನು ಕೇವಲ ಅರ್ಧರಕ್ತ ಸಂಬಂಧಿ ಇದ್ದರೂ ಅವನಿಗೆ ಪ್ರಾಶಸ್ತ್ಯ ಕೊಡಲಾಗಿದೆ.

(೧೩೬)

**೧೧೨. ಇಬ್ಬರೂ ಇಲ್ಲವೆ ಅದಕ್ಕೂ ಹೆಚ್ಚಿನ ವಾರಸುದಾರರಿದ್ದರೆ ಅವರು ವಾರಸುದಾರರಾಗುವ ರೀತಿ –**

(೧೩೫)

**೧೧೨. ಇಬ್ಬರು ಇಲ್ಲವೆ ಅದಕ್ಕೂ ಹೆಚ್ಚಿನ ವಾರಸುದಾರರಿದ್ದರೆ ಅವರು ವಾರಸುದಾರರಾಗುವ ರೀತಿ**

ಸಾಂಪ್ರದಾಯ ಮೃತ್ಯುಪತ್ರ ಇಲ್ಲದೆ ತೀರಿಕೊಂಡ ಒಬ್ಬನ ಆಸ್ತಿಗೆ ಇಬ್ಬರು ಇಲ್ಲವೆ ಹೆಚ್ಚಿನ ವಾರಸುದಾರರು ಒಂದು ಆಸ್ತಿಗೆ ಜಂಟಿಯಾಗಿ ವಾರಸುದಾರರಾದರೆ ಅವರು ಆ ಆಸ್ತಿಯನ್ನು –

ಅ. ಈ ಭಾಗದಲ್ಲಿ ಸ್ಪಷ್ಟವಾಗಿ ಕಾಣಿಸಿದಂತೆ ಅವರು ಆ ಆಸ್ತಿಯನ್ನು ತಲಾ ಒಬ್ಬನಿಗೆ ಹೋಗುತ್ತದೆ. ಆದರೆ ಶಾಖಾವಾರು ಹೋಗುವುದಿಲ್ಲ, ಮತ್ತು

ಬ. ಆದರೆ ಅವರು ಉಭಯ ಸಾಮಾನ್ಯ ಕೂಡೊಕ್ಕಲು ಇರುವರೆ ಹೊರತು ಜಂಟಿ ಕೂಡೊಕ್ಕಲುಗಳಾಗಿರುವುದಿಲ್ಲ.

ಮೃತ್ಯುಪತ್ರ ಇಲ್ಲದೆ ತೀರಿಕೊಂಡ ಒಬ್ಬನ ಆಸ್ತಿಗೆ ಇಬ್ಬರು ಇಲ್ಲವೆ ಹೆಚ್ಚಿನ ವಾರಸುದಾರರು ಜಂಟಿಯಾಗಿ ವಾರಸುದಾರರಾದರೆ, ಅವರು ಆ ಆಸ್ತಿಯನ್ನು **ಭಾಗ–೨ ಕಲಂ–೨೪ ಪುಟ–೧೧**

(ಅ) ಈ ಭಾಗದಲ್ಲಿ ಸ್ಪಷ್ಟವಾಗಿ ಕಾಣಿಸಿದಂತೆ ಅವರು ಆ ಆಸ್ತಿಯನ್ನು ತಲಾ ಒಬ್ಬನಿಗೆ ಹೋಗುತ್ತದೆ. ಆದರೆ ಶಾಖಾವಾರು ಹೋಗುವುದಿಲ್ಲ ಮತ್ತು (ಬ) ಆದರೆ ಅವರು ಉಭಯ ಸಾಮಾನ್ಯ ಕೂಡೊಕ್ಕಲು ಗಳಾಗಿರುವವರೆ ಹೊರತು ಜಂಟಿ ಒಕ್ಕಲುಗಳಾಗಿರುವುದಿಲ್ಲ.

(೧೩೭)

೧೧೩. **ತಾಯಿಯ ಗರ್ಭದಲ್ಲಿರುವ ಮಗುವಿನ ಹಕ್ಕುಗಳು** ಮೃತ್ಯುಪತ್ರ ಮಾಡದೆ ತೀರಿಕೊಂಡವನ ಮರಣದ ಕಾಲಕ್ಕೆ ಒಂದು ಕೂಸು ತನ್ನ ತಾಯಿಯ ಗರ್ಭದಲ್ಲಿದ್ದರೆ ನಂತರ ಆ ಕೂಸು ಜೀವಂತವಾಗಿ ಜನಿಸಿದರೆ ಅಂತಹ ಕೂಸಿಗೆ ಮೃತ್ಯುಪತ್ರ ಮಾಡದೆ ತೀರಿಕೊಂಡ ತಂದೆಯ ಆಸ್ತಿಯಲ್ಲಿ ಆ ಕೂಸು ತಂದೆಯು ಮರಣಹೊಂದುವ ಪೂರ್ವದಲ್ಲಿ ಜನಿಸಿದ ಕೂಸುಗಳಿಗೆ ಇರುವಷ್ಟೇ ಹಕ್ಕುಗಳು ಇರುತ್ತವೆ. ಇಂತಹ ಮಗುವಿನ ವಾರಸಾವು ಆ ಕೂಸಿನ ಮೃತ್ಯುಪತ್ರ ಮಾಡದೆ ಸತ್ತ ತಂದೆಯ ಮರಣ ದಿನಾಂಕದಿಂದ ವಾರಸಾವು ಪ್ರಾರಂಭವಾಗುತ್ತದೆಂದು ಭಾವಿಸಲಾಗುವುದು.

(೧೩೬)

೧೧೩. **ತಾಯಿಯ ಗರ್ಭದಲ್ಲಿರುವ ಮಗುವಿನ ಹಕ್ಕುಗಳು –** ಮೃತ್ಯುಪತ್ರ ಮಾಡದೇ ತೀರಿಕೊಂಡವನ ಮರಣದ ಕಾಲಕ್ಕೆ ಒಂದು ಕೂಸು ತನ್ನ ತಾಯಿಯ ಗರ್ಭದಲ್ಲಿದ್ದರೆ ನಂತರ ಆ ಕೂಸು ಜೀವಂತವಾಗಿ ಜನಿಸಿದರೆ, ಅಂತಹ ಕೂಸಿಗೆ ಮೃತ್ಯುಪತ್ರ ಮಾಡದೇ ತೀರಿಕೊಂಡ ತಂದೆಯ ಆಸ್ತಿಯಲ್ಲಿ ಆ ಕೂಸು ತಂದೆಯ ಮರಣ ಹೊಂದುವ ಪೂರ್ವದಲ್ಲಿ ಜನಿಸಿದ ಕೂಸುಗಳಿಗೆ ಇರುವಷ್ಟು ಹಕ್ಕುಗಳು ಇರುತ್ತವೆ. ಇಂತಹ ಮಗುವಿನ ವಾರಸಾವು ಆ ಕೂಸಿನ ಮೃತ್ಯುಪತ್ರ ಮಾಡದೆ ಸತ್ತ ತಂದೆಯ ಮರಣ ದಿನಾಂಕದಿಂದ ವಾರಸಾ ಪ್ರಾರಂಭವಾಗುವುದೆಂದು ಭಾವಿಸಲಾಗುವುದು.

(೧೩೮)

೧೧೪. **ಬದುಕಿ ಉಳಿದವರೆಂಬುದಕ್ಕೆ ಪೂರ್ವ ಭಾವನೆ :** ಇಬ್ಬರು ಇಂತಹ ಒಂದು ಸಂದರ್ಭದಲ್ಲಿ ತೀರಿಕೊಂಡರೆ, ಆ ಸಂದರ್ಭಗಳಲ್ಲಿ ಯಾರು ಮೊದಲು

(೧೩೭)

೧೧೪. **ಬದುಕಿ ಉಳಿದಿರುವರೆಂಬುದಕ್ಕೆ ಪೂರ್ವಭಾವನೆಯು**

ಇಬ್ಬರು ಇಂತಹ ಒಂದು ಸಂದರ್ಭದಲ್ಲಿ ತೀರಿಕೊಂಡರೆ, ಆ ಸಂದರ್ಭಗಳಲ್ಲಿ ಯಾರು

ತೀರಿಕೊಂಡರು ಅನ್ನುವುದು ಅನಿಶ್ಚಿತವಿದ್ದಾಗ ಇಬ್ಬರಲ್ಲಿ ಯಾರು ಬದುಕಿ ಉಳಿದರು, ಎಲ್ಲ ಉದ್ದೇಶಗಳಿಗೆ ಹಾಗೂ ಆಸ್ತಿಯ ವಾರಸಾಕ್ಕೆ ಸಂಬಂಧಿಸಿ ಇದಕ್ಕೆ ವಿರುದ್ಧ ಯಾವುದೇ ಸಿದ್ಧವಾಗದಿದ್ದರೆ, ದೊಡ್ಡವನಿಗಿಂತ ಸಣ್ಣವನು ಆ ಸಂಧರ್ಭದಲ್ಲಿ ಬದುಕಿ ಉಳಿದನೆಂದು ಪೂರ್ವಭಾವನೆಯು ಇದೆ.

(೧೩೯)

**೧೧೫. ವಿಭಜನೆಯ ಅಧಿನಿಯಮ ೧೮೯೩ ವನ್ನು ಕೆಲವು ಪ್ರಕರಣಗಳಲ್ಲಿ ಅನ್ವಯಿಸುವುದು.**

ಈ ಅಧಿನಿಯಮವು ಜಾರಿಯಲ್ಲಿ ಬಂದನಂತರ, ಮೃತ್ಯುಪತ್ರ ಮಾಡದೆ ತೀರಿಕೊಂಡ ಒಬ್ಬನ ಸ್ಥಿರ ಆಸ್ತಿಯಲ್ಲಿ ಇಲ್ಲವೆ ವ್ಯವಹಾರ ಯಾವುದನ್ನು ಆ ಮೃತ್ಯುಪತ್ರ ಮಾಡದೆ ತೀರಿಕೊಂಡವನು ಸಂಪೂರ್ಣವಾಗಿ ಏಕೈಕ ಇಲ್ಲವೆ ಇತರರೊಂದಿಗೆ ಕೂಡಿ ನಡೆಯಿಸಿದ ವ್ಯಾಪಾರವು.

(ಅ) ಮೃತ್ಯುಪತ್ರ ಮಾಡದೆ ತೀರಿಕೊಂಡವನ ಮಗ, ಮಗನ ಮಗ, ಮಗನ ಮಗನ ಮಗ ಹಾಗೂ ಉಳಿದ ಸಂಬಂಧಿಕರೊಂದಿಗೆ ಹಾಗೂ ವಾರಸುದಾರರಲ್ಲಿ ಒಬ್ಬನು ವಿಭಜನೆಗಾಗಿ ದಾವೆ ಮಾಡುತ್ತಾನೆ.

ಅಥವಾ

(ಬ) ಅದು ಅವನ ಹೆಣ್ಣುಮಕ್ಕಳಿಗೆ ಯಾವುದೇ ಗಂಡು ಸಂಬಂಧಿಕರೊಂದಿಗೆ ಎಂಟನೆಯ ಪರಿಶಿಷ್ಟದ ೧ನೆಯ ವರ್ಗದಲ್ಲಿ ನಿರ್ದಿಷ್ಟಪಡಿಸಿದಂತೆ ಮತ್ತು ಯಾವುದೇ ಅಂತಹ ಗಂಡು ಸಂಬಂಧಿಕರು ಅವನ ಮಗಳು ಅವಳ ಆಸ್ತಿಯಲ್ಲಿಯ ಹಿಸ್ಸೆ ತೆಗೆದುಕೊಳ್ಳಲು ಒತ್ತಾಯಿಸಿದ್ದು ಅಂದರೆ ಮೃತ್ಯುಪತ್ರ ಮಾಡದೆ

ಮೊದಲು ತೀರಿಕೊಂಡರೆಂಬುದು ಅನಿಶ್ಚಿತವಿದ್ದಾಗ ಇಬ್ಬರಲ್ಲಿ ಯಾರು ಬದುಕಿ ಉಳಿದರು ಎಲ್ಲ ಉದ್ದೇಶ ಹಾಗೂ ಆಸ್ತಿಯ ವಾರಸಾಕ್ಕೆ ಸಂಬಂಧಿಸಿ ಇದಕ್ಕೆ ವಿರುದ್ಧ ಯಾವುದೇ ಸಿದ್ಧವಾಗದಿದ್ದರೆ ದೊಡ್ಡವನಿಗಿಂತ ಸಣ್ಣವನು ಆ ಸಂದರ್ಭದಲ್ಲಿ ಬದುಕಿ ಉಳಿದನೆಂದು ಪೂರ್ವಭಾವನೆಯು ಇದೆ.

(೧೩೮)

**೧೧೫. ಕೆಲವು ಪ್ರಕರಣಗಳಲ್ಲಿ ವಿಭಜನೆಯ ಅಧಿನಿಯಮವನ್ನು ಅನ್ವಯಿಸುವುದು**

**ಭಾಗ–೧೧ ಕಲಂ–೧೨ ಪುಟ–೯**

ಈ ಅಧಿನಿಯಮವು ಜಾರಿಯಲ್ಲಿ ಬಂದ ನಂತರ ಮೃತ್ಯುಪತ್ರವಿಲ್ಲದೆ ಮರಣ ಹೊಂದಿದವನ ಸ್ಥಿರ ಆಸ್ತಿಯಲ್ಲಿಯ ಆತನ ಹಿಸ್ಸೆ ಇಲ್ಲವೆ ಆ ಮೃತ್ಯುಪತ್ರ ಮಾಡಲು ತೀರಿಕೊಂಡವನು ವ್ಯಾಪಾರ ಮಾಡಿದ್ದರೆ ಅವನ ಹಿಸ್ಸೆ ಇಲ್ಲವೆ ಏಕೈಕವಾಗಿ ಇಲ್ಲವೆ ಬೇರೆಯವರೊಂದಿಗೆ ಕೂಡಿ ಮಾಡಿದ್ದರೂ, ಹೇಗೆ ಇದ್ದರು, ಅದು ಮೃತ್ಯುಪತ್ರ ಮಾಡದೆ ತೀರಿಕೊಂಡವನ ಮಗ, ಮಗನ ಮಗ, ಮಗನ ಮಗನ ಮಗ ಇವರಿಗೆ ಹಾಗೂ ಉಳಿದ ಸಂಬಂಧಿಕರೊಂದಿಗೆ ಕೂಡಿ, ಆಸ್ತಿ ವಾರಸಾ ಮೂಲಕ ಹೋಗುತ್ತದೆ ಮತ್ತು ಅದರಲ್ಲಿ ಒಬ್ಬ ವಾರಸುದಾರನು ವಿಭಜನೆಯ ದಾವೆ ಮಾಡಿದರೆ ಈ ಹಿಂದೆ ವಿಭಜನೆಯಾಗಿದೆಯೆಂದು ಗ್ರಹಿಸಿ ಮತ್ತು ಅವನಿಗೆ ಇಲ್ಲವೆ ಅವಳಿಗೆ ಮನೆಯಲ್ಲಿ ಹಿಸ್ಸೆಯನ್ನು ವರ್ಗಾಯಿಸಿದೆಯೆಂದು ಗ್ರಹಿಸಿ ಮತ್ತು ಮೃತ್ಯುಪತ್ರವಿಲ್ಲದೆ ತೀರಿಕೊಂಡವನು ಮನೆತನ ಅವಿಭಕ್ತ ಕುಟುಂಬವೆಂದು ತಿಳಿದು ವಿಭಜನೆಯ ಅಧಿನಿಯಮ ೧೮೯೩ದ ಉಪಬಂಧಗಳು ಯಾವ ರೀತಿ ಅನ್ವಯಿಸುತ್ತಿದ್ದವೋ ಅದೇ ರೀತಿ ಅನ್ವಯಿಸುತ್ತವೆ.

ತೀರಿಕೊಂಡವನ ಹಿಸ್ಸೆಯನ್ನು ಪ್ರತ್ಯೇಕ ತೆಗೆದುಕೊಂಡು ಆಸ್ತಿಯ ಉಪಭೋಗ ಮಾಡಲು ಒತ್ತಾಯಿಸಬಹುದು (ಅವನು ಹಾಗೆ ಮಾಡಲು ಕಾನೂನಿನಲ್ಲಿ ಹಕ್ಕಿದೆ) ವಿಭಜನೆಯ ಅಧಿನಿಯಮವು ೧೮೯೩ (೧೮೯೩ನೆಯ ಇಸ್ವಿಯ ೪ನೆಯ ಅಧಿನಿಯಮವು) ಇದರ ಉಪಬಂಧಗಳು ಅಲ್ಲಿ ವಿಭಜನೆಯಾಗಿಯೆಂದು ಮತ್ತು ಅವನು ಇಲ್ಲವೆ ಅವಳು ಒಂದು ವಾಸದ ಮನೆಯ ಹಿಸ್ಸೆ ಮತ್ತು ಆ ಮೃತ್ಯುಪತ್ರ ಮಾಡದೇ ತೀರಿಕೊಂಡವನ ಮನೆತನದ ಸದಸ್ಯರು ಅವಿಭಕ್ತ ಕುಟುಂಬದಲ್ಲಿ ವಾಸಿಸುತ್ತಿದ್ದರೆ ಮತ್ತು ಆ ಮನೆಯಲ್ಲಿ ಅವರು ವಾಸವಾಗಿದ್ದರೆ ಆ ಮನೆಯಲ್ಲಿ ತನ್ನ ಹಿಸ್ಸೆಯನ್ನು ಪರಿಶಿಷ್ಟ ವರ್ಗ ೧ರಲ್ಲಿ ನಿರ್ದೇಶಿಸಿದಂತೆ ಗಂಡು ಸಂಬಂಧಿಕರು ಯಾವ ರೀತಿ ವಾರಸಾದಿಂದ ಹಕ್ಕು ಪಡೆಯುವರೋ ಅದೇ ರೀತಿ ಮಗಳು ಆ ಹಕ್ಕು ಪಡೆಯುತ್ತಾಳೆ: ಮತ್ತು ಯಾವುದೇ ಗಂಡು ಸಂಬಂಧಿಕರು ಮೃತ್ಯುಪತ್ರವಿಲ್ಲದೆ ಸತ್ತವನ ಆಸ್ತಿಯಲ್ಲಿ ಆಕೆಯ ಪ್ರತ್ಯೇಕ ಹಿಸ್ಸೆಯನ್ನು ಆಕೆಯ ಪ್ರತ್ಯೇಕ ಉಪಭೋಗಕ್ಕೆ ಒತ್ತಾಯ ಮಾಡ ಬಹುದು (ಇದನ್ನು ಅವನು ಮಾಡಲು ಅಧಿಕಾರವುಳ್ಳವನಾಗಿದ್ದಾನೆ) ಆಗ ವಿಭಜನೆಯ ಅಧಿನಿಯಮವು ೧೮೯೩ (೧೮೯೩ನೆಯ ಇಸ್ವಿಯ ೪ನೆಯ ಅಧಿನಿಯಮವು), ಈ ಅಧಿನಿಯಮದ ಉಪಬಂಧಗಳು

ಈಗಾಗಲೇ ಅಲ್ಲವೆ ವಿಭಜನೆಯಾಗಿದೆಯೆಂದು ಮತ್ತು ಅವನು ಇಲ್ಲವೆ ಅವಳು ಅವರ ಹೆಸರಿಗೆ ಬಂದ ಮನೆಯ ಆಸ್ತಿ ಅವಳಿಗೆ ವರ್ಗಾಯಿಸಿದೆಂಬಂತೆ ಮತ್ತು ಮೃತ್ಯುಪತ್ರವಿಲ್ಲದೆ ಮರಣ ಹೊಂದಿದವನ ಮನೆತನವು ಅವಿಭಕ್ತ ಕುಟುಂಬವೆಂಬಂತೆ ಈ ಅಧಿನಿಯಮದ ಉಪಬಂಧಗಳು ಅನ್ವಯವಾಗುತ್ತವೆ.

(೧೪೦)

**ವಾರಸುದಾರನ ಅನರ್ಹತೆಗಳು**

**೧೧೬. ಸನ್ಯಾಸಿ ಮುಂತಾದವರು ಅನರ್ಹರು:** ಯಾವುದೇ ಮನುಷ್ಯರು ಕಲಂ ೧೧೦ ಉಪಕಲಂ (೧)ರಲ್ಲಿ ಕಾಣಿಸಿದಂತೆ ಯಾವುದೇ ರೀತಿಯಿಂದ ಜಗತ್ತಿನ ಭೋಗ ಸುಖವನ್ನು ಅಂತಿಮವಾಗಿ ಪರಿತ್ಯಜಿಸಿದ್ದರೆ ಅವನು ತನ್ನ ರಕ್ತಸಂಬಂಧಿ ಲಗ್ನ ಇಲ್ಲವೆ ದತ್ತಕ ಈ ರೀತಿಯಿಂದ ಆಸ್ತಿಗೆ ವಾರಸಾ ಆಗಲು ಅನರ್ಹನಿರುತ್ತಾನೆ.

(೧೩೯)

**ವಾರಸುದಾರರ ಅನರ್ಹತೆ**

**೧೧೬. ಸನ್ಯಾಸಿ ಮುಂತಾದವರು ಅನರ್ಹರು :** ಯಾವುದೇ ಮನುಷ್ಯ ಕಲಂ ೧೧೦ ಉಪಕಲಂ (೧) ರಲ್ಲಿ ಕಾಣಿಸಿದಂತೆ ಯಾವುದೇ ರೀತಿಯಿಂದ ಜಗತ್ತಿನ ಭೋಗಸುಖವನ್ನು ಅಂತಿಮವಾಗಿ ಪರಿತ್ಯಜಿಸಿದ್ದರೆ ಅವನು ತನ್ನ ರಕ್ತ ಸಂಬಂಧ ಲಗ್ನದ ಇಲ್ಲವೆ ದತ್ತಕ ಈ ರೀತಿಯಿಂದ ಆಸ್ತಿವಾರಸುದಾರನಾಗಲು ಅನರ್ಹನಿರುತ್ತಾನೆ.

(೧೪೧)

**೧೧೭. ಶೀಲಭ್ರಷ್ಟ : ವ್ಯಭಿಚಾರಿ ಹೆಂಡತಿಯು ಅನರ್ಹಳು :** ಯಾವ ಹೆಣ್ಣುಮಗಳು ಆಕೆಯ ಲಗ್ನದ ನಂತರ ತನ್ನ ಗಂಡನ ಜೀವಿತ ಕಾಲದಲ್ಲಿ ಶೀಲಭ್ರಷ್ಟಳು : ವ್ಯಭಿಚಾರಿಯಾಗುತ್ತಾಳೆಯೋ ಆಕೆಯನ್ನು ಆಕೆಯ ಗಂಡನು ಆಕೆಯ ಶೀಲ ಭ್ರಷ್ಟತೆಯನ್ನು ಕ್ಷಮಿಸದ ಹೊರತು ಆಕೆಯು ಆತನ ಆಸ್ತಿಗೆ ವಾರಸುದಾರಳಾಗಲು ಅನರ್ಹಳಿರುತ್ತಾಳೆ.

(೧೪೦)

**೧೧೭. ಶೀಲಭ್ರಷ್ಟ : ವ್ಯಭಿಚಾರಿ ಹೆಂಡತಿಯು ಅನರ್ಹ.** ಯಾವ ಹೆಣ್ಣುಮಗಳು ಆಕೆಯ ಲಗ್ನದ ನಂತರ ತನ್ನ ಗಂಡನ ಜೀವಿತ ಕಾಲದಲ್ಲಿ ಶೀಲಭ್ರಷ್ಟಳು : ವ್ಯಭಿಚಾರಿ ಆಗುತ್ತಾಳೋ ಆಕೆಯನ್ನು ಆಕೆಯ ಗಂಡ ಆಕೆಯ ಶೀಲಭ್ರಷ್ಟತೆಯನ್ನು ಕ್ಷಮಿಸದ ಹೊರತು ಆಕೆಯು ಆತನ ಆಸ್ತಿಗೆ ವಾರಸುದಾರಳಾಗಲು ಅನರ್ಹಳಿರುತ್ತಾಳೆ.

**ಪರಂತು :** ಒಂದು ವೇಳೆ ಈ ಬಗ್ಗೆ ನ್ಯಾಯಾಲಯಲದಲ್ಲಿ ಪ್ರಕರಣ ದಾಖಲಾಗಿ ಆ ಪ್ರಕರಣದಲ್ಲಿ ಇದೇ ಒಂದು ವಿಶೇಷ ವಿವಾದ ಇದ್ದರೆ – ನ್ಯಾಯಾಲಯವು ಅವಳು ಶೀಲಭ್ರಷ್ಟಳು : ವ್ಯಭಿಚಾರಿ ಅಂತಾ ನಿರ್ಣಯ ಕೊಟ್ಟಿದ್ದರೆ ಹಾಗೂ ಆ ನಿರ್ಣಯವು ಮುಂದೆ ತಿರುವುಮುರುವು ಆಗದಿದ್ದರೆ ಮೇಲಿನ ಒಂದೇ ಕಾರಣದಿಂದ ಆಕೆಯ ಹಕ್ಕನ್ನು ಅಲ್ಲಗಳೆಯುವಂತಿಲ್ಲ.

(೧೪೨)

೧೧೮. **ಕೆಲವು ವಿಧವೆಯರು ಪುನಃ ಲಗ್ನವಾಗುವುದರಿಂದ ಅನರ್ಹರಾಗುತ್ತಾರೆ –** ಮೊದಲೇ ತೀರಿಕೊಂಡ ಮಗನ ವಿಧವೆ, ಮೊದಲೇ ತೀರಿಕೊಂಡ ಮಗನ ಮಗನ ವಿಧವೆ, ತಂದೆಯ ವಿಧವೆ ಸಹೋದರನ ವಿಧವೆ ಪುನರ್‌ವಿವಾಹ ಮಾಡಿಕೊಂಡಲ್ಲಿ ಅವರು ವಾರಸುದಾರರೆಂದು ಆಸ್ತಿ ಪಡೆಯಲಾರರು, ಯಾಕೆಂದರೆ ಅವರಿಗೆ ವಾರಸ ಹಕ್ಕು ಉಂಟಾದ ಕಾಲಕ್ಕೆ ಅವರು ಪುನಃ ಲಗ್ನವಾದುದರಿಂದ ಅವರಿಗೆ ಆಸ್ತಿಯಲ್ಲಿ ಹಕ್ಕು ಉಂಟಾಗುವುದು ಇಲ್ಲ.

(೧೪೩)

೧೧೯. **ಖೂನಿ : ಕೊಲೆ ಮಾಡಿದವನು ಅನರ್ಹನು.** ಯಾವನೊಬ್ಬನು ಒಬ್ಬನ ಕೊಲೆ ಮಾಡಿದವನು ಇಲ್ಲವೆ ಕೊಲೆ ಮಾಡಲು ಉತ್ತೇಜಿಸಿದವನು ಕೊಲೆಗೈದ ವ್ಯಕ್ತಿಯ ಆಸ್ತಿಗೆ ವಾರಸುದಾರನಾಗಲು ಅನರ್ಹನು. ಇನ್ನು ಯಾವ ವ್ಯಕ್ತಿಯ ಕೊಲೆ ಮಾಡಿರುವನೋ, ಅಂತಹ ವ್ಯಕ್ತಿಗೆ ವಾರಸಾದಿಂದ ಬರುವ ಆಸ್ತಿಗೆ ಸಹಿತ ಅವನು ಅನರ್ಹನಾಗುತ್ತಾನೆ.

**ಪರಂತು :** ಒಂದುವೇಳೆ ಈ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣವು ದಾಖಲಾಗಿ ಆ ಪ್ರಕರಣದಲ್ಲಿ ಇದೇ ಒಂದು ವಿಶೇಷ ಮುದ್ದೆ ಇದ್ದರೆ ನ್ಯಾಯಾಲಯವು ಅವಳು ಶೀಲಭ್ರಷ್ಟಳು: ವ್ಯಭಿಚಾರಿ ಅಂತಾ ನಿರ್ಣಯ ಕೊಟ್ಟಿದ್ದರೆ ಹಾಗೂ ಆ ನಿರ್ಣಯವು ತಿರುವುಮುರುವು ಆಗದಿದ್ದರೆ ಈ ಮೇಲಿನ ಒಂದೇ ಕಾರಣದಿಂದ ಆಕೆಯ ಹಕ್ಕನ್ನು ಅಲ್ಲಗಳೆಯುವಂತಿಲ್ಲ.

(೧೪೧)

೧೧೮. **ಕೆಲವು ವಿಧವೆಯರು ಪುನಃ ಲಗ್ನವಾಗುವುದರಿಂದ ಅನರ್ಹರಾಗುತ್ತಾರೆ –** ಮೊದಲೇ ತೀರಿಕೊಂಡವನ ಮಗನ ವಿಧವೆ, ತಂದೆಯ ವಿಧವೆ, ಸಹೋದರನ ವಿಧವೆ ಪುನರ್ ವಿವಾಹ ಮಾಡಿಕೊಂಡಲ್ಲಿ ವಾರಸುದಾರರೆಂದು ಆಸ್ತಿ ಪಡೆಯಲಾರರು. ಯಾಕೆಂದರೆ ಅವರಿಗೆ ವಾರಸಾ ಹಕ್ಕು ಉಂಟಾದ ಕಾಲಕ್ಕೆ ಅವರು ಪುನಃ ಲಗ್ನವಾದುದರಿಂದ ಅವರಿಗೆ ಆಸ್ತಿಯಲ್ಲಿ ಹಕ್ಕು ಉಂಟಾಗುವುದಿಲ್ಲ.

(೧೪೨)

೧೧೯. **ಕೊಲೆ: ಖೂನಿ ಮಾಡಿದವನು ಅನರ್ಹನು.** ಯಾವನೊಬ್ಬನು ಒಬ್ಬನ ಕೊಲೆ ಮಾಡಿದವನು ಇಲ್ಲವೆ ಕೊಲೆ ಮಾಡಲು ಉತ್ತೇಜಿಸಿದವನು, ಕೊಲೆಗೈದ ವ್ಯಕ್ತಿಯ ಆಸ್ತಿಗೆ ವಾರಸುದಾರನಾಗಲು ಅನರ್ಹನು ಇಲ್ಲವೆ ಅವನು ಯಾವ ವ್ಯಕ್ತಿಯ ಕೊಲೆ ಮಾಡಿರುವನೋ ಅಂತಹ ವ್ಯಕ್ತಿಗೆ ವಾರಸಾದಿಂದ ಬರುವ ಆಸ್ತಿಗೆ ಅವನು ಅನರ್ಹನಾಗುತ್ತಾನೆ.

**ಭಾಗ–೨**
**ಕಲಂ–೨೦**
**ಪುಟ–೧೧**

(೧೪೪)

**೧೨೦. ಮತಾಂತರ ಹೊಂದಿದವರ ವಂಶಜರು ಅನರ್ಹರು.** ಈ ಅಧಿನಿಯಮವು ಜಾರಿಯಲ್ಲಿ ಬಂದ ನಂತರ ಇಲ್ಲವೆ ಜಾರಿಗೆ ಬರುವ ಪೂರ್ವದಲ್ಲಿ ಒಬ್ಬ ಹಿಂದೂ ಹಿಂದೂ ಧರ್ಮವನ್ನು ತ್ಯಜಿಸಿ ಬೇರೊಂದು ಧರ್ಮಕ್ಕೆ ಮತಾಂತರ ಹೊಂದಿದ್ದರೆ ಅವನಿಗೆ ಹುಟ್ಟಿದ ಮಕ್ಕಳು, ಇಲ್ಲವೆ ಅವಳಿಗೆ ಹುಟ್ಟಿದ ಮಕ್ಕಳು ಮತ್ತು ಅಂತಹ ಮತಾಂತರದ ನಂತರ ಹುಟ್ಟಿದ ಮಕ್ಕಳು ಮತ್ತು ಅವನ ವಂಶಜರು ಯಾವುದೇ ಹಿಂದೂ ಸಂಬಂಧಿಕರ ಆಸ್ತಿಗೆ ವಾರಸುದಾರರಾಗಲು ಅನರ್ಹರು, ಆದರೆ ಅವರು ವಾರಸಾ ಆಗಲು ಹಕ್ಕುಳ್ಳವರು ಆದ ದಿನಾಂಕದಂದು ಅವರು ಹಿಂದೂ ಆಗಿದ್ದರೆ ಮಾತ್ರ ಅವರು ಆಸ್ತಿಗೆ ಹಕ್ಕುಳ್ಳವರು ಆಗುತ್ತಾರೆ.

(೧೪೫)

**೧೨೧. ವಾರಸುದಾರರು ಯಾವಾಗ ವಾರಸುದಾರ ಆಗಲು ಅನರ್ಹರಾಗುತ್ತಾರೆ.** ಈ ಅಧ್ಯಾಯದ ಅನ್ವಯ ಯಾವುದೇ ವ್ಯಕ್ತಿಯು ಯಾವುದೇ ಆಸ್ತಿಗೆ ವಾರಸಾ ಆಗಲು ಅನರ್ಹನಿದ್ದ ಸಂದರ್ಭದಲ್ಲಿ ಅವರು ಮೃತ್ಯುಪತ್ರ ಮಾಡದೆ ಸಾಯುವ ಪೂರ್ವದಲ್ಲಿ ಅವನಿಗೆ ಯಾವ ರೀತಿ ಆಸ್ತಿ ಹೋಗುತ್ತಿತ್ತೊ ಅದೇ ರೀತಿ ಆಸ್ತಿಯು ಹೋಗುತ್ತದೆ.

(೧೪೬)

**೧೨೨. ರೋಗ ದೋಷ ಮುಂತಾದವು ಅನರ್ಹತೆಗೆ ಕಾರಣಗಳಾಗುವುದಿಲ್ಲ :** ಯಾವುದೇ ವ್ಯಕ್ತಿಯು ರೋಗಿ ಅನ್ನುವ ಕಾರಣದಿಂದ, ಅವನಿಗೆ ದೋಷವಿದೆಯೆಂಬ

(೧೪೩)

**೧೨೦. ಮತಾಂತರ ಹೊಂದಿದವರ ವಂಶಜರು ಅನರ್ಹರು.** ಈ ಅಧಿನಿಯಮವು ಜಾರಿಗೆ ಬರುವ ಪೂರ್ವದಲ್ಲಿ ಇಲ್ಲವೆ ಜಾರಿಯಲ್ಲಿ ಬಂದನಂತರ ಯಾವನೊಬ್ಬ ಹಿಂದೂ ಧರ್ಮವನ್ನು ತ್ಯಜಿಸಿ ಬೇರೊಂದು ಧರ್ಮಕ್ಕೆ ಮತಾಂತರ ಹೊಂದಿದ್ದರೆ ಅವನಿಗೆ ಇಲ್ಲವೆ ಅವಳಿಗೆ ಹುಟ್ಟಿದ ಮಕ್ಕಳು ಮತ್ತು ಅಂಥವರು ಮತಾಂತರದ ನಂತರ ಹುಟ್ಟಿದ ಮಕ್ಕಳು ಮತ್ತು ಅವರ ವಂಶಜರು ಯಾವುದೇ ಹಿಂದೂ ಸಂಬಂಧಿಕರ ಆಸ್ತಿಗೆ ವಾರಸುದಾರರಾಗಲು ಅನರ್ಹರು. ಆದರೆ ಅವರು ವಾರಸುದಾರರಾಗಲು ಹಕ್ಕುಳ್ಳವರಾಗುವ ದಿನಾಂಕದಂದು ಅವರು ಹಿಂದೂ ಆಗಿದ್ದರೆ ಮಾತ್ರ ಅವರು ಆಸ್ತಿಗೆ ಹಕ್ಕುಳ್ಳವರು ಆಗುತ್ತಾರೆ.

**ಭಾಗ–೨**
**ಕಲಂ–೨೦**
**ಪುಟ–೧೧**

(೧೪೪)

**೧೨೧. ವಾರಸುದಾರರು ಯಾವಾಗ ವಾರಸುದಾರರಾಗಲು ಅನರ್ಹರಾಗುತ್ತಾರೆ:** ಈ ಅಧ್ಯಾಯದ ಅನ್ವಯ ಯಾವುದೇ ವ್ಯಕ್ತಿಯು ಯಾವುದೇ ಆಸ್ತಿಗೆ ವಾರಸುದಾರನಾಗಲು ಅನರ್ಹನಾಗದಿದ್ದರೆ ಅವನು ಮೃತ್ಯುಪತ್ರ ಮಾಡದೆ ತೀರಿಕೊಳ್ಳುವ ಪೂರ್ವದಲ್ಲಿ ಅವನಿಗೆ ಯಾವ ರೀತಿ ಆಸ್ತಿಯು ಹೋಗುತ್ತಿತ್ತೋ ಅದೇ ರೀತಿ ಆ ಆಸ್ತಿಯು ಹೋಗುತ್ತದೆ.

**ಭಾಗ–೧೧**
**ಕಲಂ–೨೨**
**ಪುಟ–೧೧**

(೧೪೬)

**೧೨೨. ರೋಗ ದೋಷ ಮುಂತಾದವು ಅನರ್ಹತೆಗೆ ಕಾರಣವಾಗುವುದಿಲ್ಲ.** ಯಾವುದೇ ವ್ಯಕ್ತಿಯು ರೋಗಿ ಎಂಬುವ ಕಾರಣದಿಂದ

**ಭಾಗ–೨**
**ಕಲಂ–೨೩**
**ಪುಟ–೧೧**

ಕಾರಣದಿಂದ, ಇಲ್ಲವೆ ಅಂಗವಿಕಲತೆಯ ಕಾರಣದಿಂದ ಇಲ್ಲವೆ ಈ ಅಧ್ಯಾಯದಲ್ಲಿ ಕಾಣಿಸಿದ ಕಾರಣಗಳನ್ನು ಹೊರತುಪಡಿಸಿ ಬೇರೆ ಯಾವುದೇ ಕಾರಣದಿಂದ ಯಾವುದೇ ವ್ಯಕ್ತಿಯು ವಾರಸುದಾರನಾಗಲು ಅನರ್ಹನಾಗುವುದಿಲ್ಲ.

ಅವನಿಗೆ ದೋಷವಿದೆಯೆಂಬ ಕಾರಣದಿಂದ, ಇಲ್ಲವೆ ಅಂಗವಿಕಲತೆಯ ಕಾರಣದಿಂದ ಇಲ್ಲವೆ ಅಧ್ಯಾಯದಲ್ಲಿ ಕಾಣಿಸಿದ ಯಾವುದೇ ಕಾರಣಗಳನ್ನು ಹೊರತುಪಡಿಸಿ ಬೇರೆ ಯಾವುದೇ ಕಾರಣದಿಂದ ಯಾವುದೇ ವ್ಯಕ್ತಿಯು ವಾರಸುದಾರನಾಗಲು ಅನರ್ಹನಾಗುವುದಿಲ್ಲ.

### (೧೪೭)

### ರಾಜ್ಯಗಾಮಿ ಸ್ವತ್ತು (ಸರಕಾರದ ಸೊತ್ತು)

**೧೨೩. ವಾರಸುದಾರರು ಇರದೇ ಇದ್ದಾಗ:** ಮೃತ್ಯುಪತ್ರ ಮಾಡದೆ ತೀರಿಕೊಂಡ ವ್ಯಕ್ತಿಯು ಈ ಅಧ್ಯಾಯದ ಅನ್ವಯ ವಾರಸುದಾರರು ಆಗಲು ಅರ್ಹರಿದ್ದ ವ್ಯಕ್ತಿಯನ್ನು ತನ್ನ ಹಿಂದೆ ಬಿಡದೆ ತೀರಿಕೊಂಡಿದ್ದರೆ ಅಂತಹ ಆಸ್ತಿಯು ಸರಕಾರಕ್ಕೆ ಹೋಗುತ್ತದೆ ಮತ್ತು ಸರಕಾರವು ಆ ಆಸ್ತಿಗೆ ವಾರಸುದಾರರಿಗೆ ಒಂದು ವೇಳೆ ಇರತಕ್ಕ ಹೊಣೆಗಾರಿಕೆಗೆ ಒಳಪಟ್ಟು ಅದು ಸರಕಾರಕ್ಕೆ ಈ ಕರಾರುಗಳಿಗೆ ಒಳಪಟ್ಟು ಸರಕಾರಕ್ಕೆ ಹೋಗುತ್ತದೆ.

### (೧೪೬)

**೧೨೩. ವಾರಸುದಾರರು ಇಲ್ಲದಿರುವಾಗ:** ವೃತ್ಯುಪತ್ರ ಮಾಡದೇ ತೀರಿಕೊಂಡ ವ್ಯಕ್ತಿಯು ಈ ಅಧ್ಯಾಯದ ಅನ್ವಯ ವಾರಸುದಾರರಾಗಲು ಅರ್ಹನಾದ ವ್ಯಕ್ತಿಯನ್ನು ತನ್ನ ಹಿಂದೆ ಬಿಡದೆ ತೀರಿಕೊಂಡಿದ್ದರೆ ಅಂಥವನ ಆಸ್ತಿಯು ಸರಕಾರಕ್ಕೆ ಹೋಗುತ್ತದೆ. ಸರಕಾರವು ಅಂತಹ ಆಸ್ತಿಯನ್ನು ಆ ವಾರಸುದಾರರಿಗೆ ಇರತಕ್ಕ ಹೊಣೆಗಾರಿಕೆಗೆ ಒಳಪಟ್ಟು ಅದು ಸರಕಾರಕ್ಕೆ ಹೋಗುತ್ತದೆ.

**ಭಾಗ-೧೧ ಕಲಂ-೨೫ ಪುಟ-೧೧**

### (೧೪೮)

### ಅಧ್ಯಾಯ ೧೧೧

### ಮೃತ್ಯುಪತ್ರದ ಮೂಲಕ ವಾರಸುದಾರಿಕೆ

**೧೨೪. ಮೃತ್ಯುಪತ್ರದ ಮೂಲಕ ವಾರಸುದಾರಿಕೆ**

(೧) ಹಿಂದೂಗಳಿಗೆ ಅನ್ವಯವಾಗುವಂತೆ ಯಾವುದೇ ಕಾನೂನು ಜಾರಿಯಲ್ಲಿದ್ದರೆ ಇಲ್ಲವೆ ಭಾರತೀಯ ವಾರಸಾ ಅಧಿನಿಯಮ ೧೯೨೫ (೧೯೨೫ನೆಯ ಇಸ್ವಿ ೩೯ನೆಯ ಅಧಿನಿಯಮ) ಇದರ ಉಪಬಂಧಗಳ ಅನ್ವಯ ಯಾವನಿಗೆ ತನ್ನ ಆಸ್ತಿಯನ್ನು ಮಾರಾಟ ಮಾಡುವ ಹಕ್ಕು

### (೧೪೭)

### ಅಧ್ಯಾಯ ೧೧೧

### ಮೃತ್ಯುಪತ್ರದ ಮೂಲಕ ವಾರಸುದಾರಿಕೆ

೧೨೪. ಮೃತ್ಯುಪತ್ರದ ಮೂಲಕ ವಾರಸುದಾರರಿಗೆ ಭಾರತೀಯ ವಾರಸಾ ಅಧಿನಿಯಮ ೧೯೨೫ (೧೯೨೫ನೆಯ ಇಸ್ವಿ ೩೯ನೆಯ ಅಧಿನಿಯಮ) ಇಲ್ಲವೆ ಹಿಂದುಗಳಿಗೆ, ಅನ್ವಯವಾಗುವ ಯಾವುದೇ ಅಧಿನಿಯಮ ಜಾರಿಯಲ್ಲಿರುವುದು ಇದರ ಉಪ ಬಂಧಗಳಿಗೆ ಅನುಗುಣವಾಗಿ ಒಬ್ಬ ಹಿಂದೂ ತನ್ನ ಯಾವುದೇ ಆಸ್ತಿಯನ್ನು ಯಾರಿಗಾದರೂ ಕೊಡಲು ಹಕ್ಕುಳ್ಳವನಾಗಿದ್ದರೆ ಅಂತಹ

**ಭಾಗ-೧೩ ಕಲಂ-೧ ಪುಟ-೧೨**

ಇರುವುದೋ ಅಂತಹ ಹಿಂದೂ ತನ್ನ ಯಾವುದೇ ಆಸ್ತಿಯನ್ನು ಮೃತ್ಯುಪತ್ರದ ಮೂಲಕ ಇಲ್ಲವೆ ಬೇರೆ ಯಾವುದೇ ಮರಣ ಶಾಸನದ ಮೂಲಕ ತನ್ನ ಆಸ್ತಿಯನ್ನು ಯಾರಿಗಾದರೂ ಕೊಡಬಹುದು.

(೨) ಈ ಕೆಳಗಿನವುಗಳು ಹಿಂದೂವಿಗೆ ಅಧಿಕಾರವನ್ನು ಕೊಡುವುದಿಲ್ಲ

(ಅ) ಈ ಅಧಿನಿಯುಮದ ಅನ್ವಯ ಯಾವುದೇ ವ್ಯಕ್ತಿಗೆ ಜೀವನೋಪಾಯಕ್ಕೆ ಇದ್ದಂತಹ ಹಕ್ಕನ್ನು ಕಸಿದುಕೊಳ್ಳಲು ಹಿಂದೂವಿಗೆ ಅಧಿಕಾರ ಇರುವುದಿಲ್ಲ. ಇಲ್ಲವೆ ಯಾವುದೇ ಕಾನೂನು ಜಾರಿಯಲ್ಲಿದ್ದ ಜೀವನೋಪಾಯಕ್ಕೆ ಹಕ್ಕು ಇದ್ದರೆ ಅದನ್ನು ಕಸಿದುಕೊಳ್ಳಲು ಹಿಂದೂವಿಗೆ ಅಧಿಕಾರ ಇರುವುದಿಲ್ಲ.

(ಬ) ಅವಳು ಅಥವಾ ಅವನು ಕಾನೂನು ಬದ್ಧವಾಗಿ ಆಸ್ತಿಗೆ ಯಾವುದೇ ಹಿತಾಸಕ್ತಿಯುಂಟುಮಾಡಲು ಬಾರದೆ ಇದ್ದರೆ ಆಸ್ತಿಗೆ ಆ ರೀತಿ ಹಿತಾಸಕ್ತಿ ಮಾಡಲು ಹಿಂದೂವಿಗೆ ಅಧಿಕಾರ ಇರುವುದಿಲ್ಲ.

ಆಸ್ತಿಯನ್ನು ಮೃತ್ಯುಪತ್ರದ ಮೂಲಕ ಇಲ್ಲವೆ ಇತರ ಮರಣಶಾಸನ ಮೂಲಕ ತನ್ನ ಆಸ್ತಿಯನ್ನು ಕೊಡಬಹುದು.

(೨) ಈ ಕೆಳಗಿನವುಗಳನ್ನು ಮಾಡಲು ಹಿಂದೂವಿಗೆ ಅಧಿಕಾರ ಇರುವುದಿಲ್ಲ:

(ಅ) ಈ ಅಧಿನಿಯಮದ ಉಪಬಂಧಗಳ ಅನ್ವಯ ಇಲ್ಲವೆ ಜಾರಿಯಲ್ಲಿರುವ ಕಾನೂನಿನ ಅನ್ವಯ ಯಾವುದೇ ವ್ಯಕ್ತಿಗೆ ಆತನ ಜೀವನಾಂಶದ ಹಕ್ಕು ಇದ್ದಾಗ ಅದನ್ನು ಕಸಿದುಕೊಳ್ಳುವ ಅಧಿಕಾರ ಹಿಂದೂವಿಗೆ ಇರವುದಿಲ್ಲ.

(ಬ) ಅವನು ಇಲ್ಲವೆ ಅವಳು ಕಾನೂನು ಪ್ರಕಾರ ಯಾವುದೇ ಆಸ್ತಿಗೆ ಹಿತಾಸಕ್ತಿ ಹುಟ್ಟಿಸಲು ಬರದಿದ್ದರೆ ಅಂತಹ ಆ ಆಸ್ತಿಗೆ ಹಿಂದೂ ಸಹ ಆಸ್ತಿಗೆ ಹಿತಾಸಕ್ತಿ ಹುಟ್ಟಿಸುವ ಅಧಿಕಾರ ಇರುವುದಿಲ್ಲ.

(೧೪೯)

**ಭಾಗ – viii ಉಪಜೀವನ**

**೧೨೫. ಉಪಜೀವನ ಇದನ್ನು ವಿವರಿಸಲಾಗಿದೆ** – ಈ ಭಾಗದಲ್ಲಿ ಉಪಜೀವನ ಅಂದರೆ ಕೆಳಗಿನವುಗಳನ್ನು ಒಳಗೊಳ್ಳುತ್ತದೆ.

(೧) ಎಲ್ಲ ಪ್ರಕರಣಗಳಲ್ಲಿ ಇದು ಆಹಾರ, ಅರಿವೆ, ವಸತಿ, ವಿದ್ಯೆ ಕಲಿಸುವುದು ವೈದ್ಯಕೀಯ ಉಪಚಾರಕ್ಕೆ ತಗಲುವ ಖರ್ಚು.

(೨) ಲಗ್ನವಾಗದೆ ಇರುವ ಮಗಳ

(೧೪೮)

**ಭಾಗ ೧೧೧ – ಉಪಜೀವನ**

**೧೨೫. ಈ ಭಾಗದಲ್ಲಿ ಉಪಜೀವನ ಈ ಪದವು ಮುಂದೆ ಕಾಣಿಸಿದುದನ್ನು ಒಳಗೊಂಡಿರುತ್ತದೆ.**

(೧) ಎಲ್ಲ ಪ್ರಕರಣಗಳಲ್ಲಿ ಆಹಾರ, ಬಟ್ಟೆ, ವಸತಿ, ಶಿಕ್ಷಣ, ಔಷಧ ಉಪಚಾರ ಮತ್ತು ಆರೈಕೆ ಇವುಗಳಿಗೆ ಅವಕಾಶ ಕಲ್ಪಿಸಿಕೊಡತಕ್ಕದ್ದು.

**ಭಾಗ–೩(ಅ) ಪ್ರಕರಣ–೩ ಪುಟ–೨**

(೨) ಮದುವೆಯಾಗದ ಮಗಳು ಇದ್ದರೆ

ಪ್ರಕರಣದಲ್ಲಿಯೂ ಸಹ ಯೋಗ್ಯ ಮದುವೆಯ ಪ್ರಸಂಗದ ಖರ್ಚಿಗಾಗಿ ಕೊಡುವುದು ಸಹ ಒಳಗೊಳ್ಳುತ್ತದೆ. ಮನೆತನದ ಸದಸ್ಯರನ್ನು ಪೋಷಿಸುವುದು ರಕ್ಷಿಸುವುದು ವೈಯಕ್ತಿಕ ಹೊಣೆಗಾರಿಕೆಯಾಗಿದೆ.

**೧೨೬. ಹೆಂಡತಿಯನ್ನು ರಕ್ಷಿಸುವುದು:** ಪೋಷಿಸುವುದು ಈ ಕಲಮಿನ ಉಪಬಂಧಗಳಿಗೆ ಒಳಪಟ್ಟು ಒಬ್ಬ ಹಿಂದೂ ಹೆಂಡತಿ ಅವಳ ಲಗ್ನವು ಈ ಅಧಿನಿಯಮವು ಜಾರಿಯಲ್ಲಿ ಬಂದ ನಂತರವಾಗಿದೆಯೋ ಇಲ್ಲವೆ ಈ ಅಧಿನಿಯಮವು ಜಾರಿಗೆ ಬರುವ ಪೂರ್ವದಲ್ಲಿಯೇ ಆಗಿದೆಯೋ ಅವಳು ಗಂಡನಿಂದ ಜೀವನಾಂಶ ಪಡೆಯಲು ಹಕ್ಕುಳ್ಳವಳಾಗಿದ್ದಾಳೆ. ಗಂಡನ ಜೀವಿತ ಅವಧಿಯಲ್ಲಿ ಅವಳು ಜೀವನಾಂಶ ಪಡೆಯುವ ಹಕ್ಕುಳ್ಳವಳಾಗಿದ್ದಾಳೆ ಮತ್ತು ಅವನ ಮರಣದ ನಂತರವೂ ಅವಳು ಜೀವನಾಂಶವನ್ನು ಗಂಡನ ತಂದೆಯಿಂದ ಪಡೆಯುವ ಹಕ್ಕಿದೆ.

೨. ಒಬ್ಬ ಹಿಂದೂ ಹೆಂಡತಿಯು ತನ್ನ ಗಂಡನ ಸಂಗಡ ಇರುವಾಗ ತನ್ನ ಉಪಜೀವನವನ್ನು ತನ್ನ ಗಂಡನಿಂದ ಕ್ಷೇಮ : ಮಾಗಣಿ ಮಾಡಬೇಕು.

**ಪರಂತು :** ಅವಳು ಗಂಡನಿಂದ ಪ್ರತ್ಯೇಕವಾಗಿದ್ದರೂ, ಅವಳು ತನ್ನ ಜೀವನಾಂಶಕ್ಕಾಗಿ ಹಣ ಕೇಳುವ ಹಕ್ಕನ್ನು ಕಳೆದುಕೊಳ್ಳುವುದಿಲ್ಲ.

(ಅ) ಅವಳು ಉಗ್ರರೂಪದ ಕುಷ್ಠ ರೋಗದಿಂದ ಬಳಲುತ್ತಿದ್ದರೆ ಇಲ್ಲವೆ ಗುಹ್ಯರೋಗದಿಂದ ಬಳಲುತ್ತಿದ್ದು ಅದು ಇನ್ನೊಬ್ಬರಿಗೆ ಸಾಂಕ್ರಾಮಿಕ ಹಬ್ಬುವ ರೀತಿಯಲ್ಲಿದ್ದು ಮತ್ತು ಅವನು ಅದನ್ನು ಅವಳನ್ನೂ ಕೂಡ ಅವಳ ಮದುವೆಯ ಸಲುವಾಗಿ ಮತ್ತು ಇತರ ಯೋಗ್ಯವಾದ ಖರ್ಚಿಗೆ ಅವಕಾಶ ಕಲ್ಪಿಸಿಕೊಡಬೇಕು.

**ಕುಟುಂಬದ ಸದಸ್ಯರನ್ನು ಜೋಪಾನ ಮಾಡುವುದು ವೈಯಕ್ತಿಕ ಹೊಣೆಗಾರಿಕೆ**

**೧೨೬.** ಈ ಕಲಮಿನ ಉಪಬಂಧಗಳಿಗೆ ಒಳಪಟ್ಟು ಒಬ್ಬ ಹಿಂದೂ ಹೆಂಡತಿ ಆಕೆಯ ಮದುವೆಯು ಈ ಅಧಿನಿಯಮವು ಜಾರಿಗೆ ಬರುವ ಪೂರ್ವದಲ್ಲಿ ಇಲ್ಲವೆ ಬಂದನಂತರ ಆಕೆಯ ಲಗ್ನವಾಗಿದ್ದರೆ ಆಕೆಯ ಗಂಡನು ಆತನ ಜೀವಿತ ಕಾಲದಲ್ಲಿ ಅವಳನ್ನು ಜೋಪಾನ ಮಾಡಲು ಬಾಧ್ಯಸ್ಥನಿರುತ್ತಾನೆ. ಆತನ ಮರಣದ ನಂತರ ಅವನ ತಂದೆ ಅವಳನ್ನು ಸಂರಕ್ಷಿಸಲು ಬಾಧ್ಯಸ್ಥನಿರುವುದು.

**ಭಾಗ–೪ ಕಲಂ–೨೬ ಪುಟ–೧೯ ಮತ್ತು–೨೦**

೨. ಒಬ್ಬ ಹಿಂದೂ ಹೆಂಡತಿಯು ತನ್ನ ಗಂಡನ ಸಂಗಡ ಇದ್ದಾಗ ಮಾತ್ರ ತನ್ನ ಜೀವನಾಂಶ ಕೇಳಲು ಹಕ್ಕುಳ್ಳವಳಾಗಿದ್ದಾಳೆ –

**ಪರಂತು :** ಆಕೆಯು ತನ್ನ ಈ ಹಕ್ಕನ್ನು ಜೀವನಾಂಶದ ಹಕ್ಕನ್ನು ಬಿಟ್ಟುಕೊಡದೆ ಪ್ರತ್ಯೇಕವಾಗಿ ಇರಲು ಹಕ್ಕುಳ್ಳವಳಾಗಿದ್ದಾಳೆ. ಕಾರಣವೇನೆಂದರೆ.

(ಅ) ಅವನು ಅಸಹ್ಯಕರ ರೋಗದಿಂದ ಬಳಲುತ್ತಿದ್ದು.

(ಬ) ಆತನ ಹೆಂಡತಿಯು ವಾಸಿಸುತ್ತಿರುವ ಮನೆಯಲ್ಲಿಯೇ ಅವನು ತನ್ನ ಹೆಂಗಸನ್ನು ತಂದು ಇಟ್ಟರೆ.

(ಕ) ಆತನು ಕೊಡುವ ಹಿಂಸೆಯಿಂದ ಆಕೆಗೆ ಅವನ ಜೊತೆಗೆ ಇರಲು ಸುರಕ್ಷತೆ

ಅವಳಿಂದ ಅದನ್ನು ಹಚ್ಚಿಕೊಳ್ಳದಿದ್ದರೆ.

(ಬ) ತನ್ನ ಹೆಂಡತಿಯು ವಾಸವಾಗಿರುವ ಮನೆಯಲ್ಲಿಯೇ ಅವನು ಒಬ್ಬ ಹೆಂಗಸನ್ನು ತಂದು ಇಟ್ಟುಕೊಂಡರೆ.

(ಕ) ಅವನು ಕೊಡುವ ಹಿಂಸೆಯು ಇಂತಹ ಸ್ವರೂಪದ್ದು ಇದೆಯಲ್ಲ ಅವಳು ಅವನೊಂದಿಗೆ ಇರಲು ಯಾವ ಸುರಕ್ಷತೆಯೂ ಇರುವುದಿಲ್ಲ. ಆತನು ಈ ರೀತಿ ಹಿಂಸೆ ಕೊಡುವ ತಪ್ಪುಗಾರನಾಗಿದ್ದರೆ.

(ಡ) ಅವನು ಅವಳನ್ನು ಯಾವುದೇ ಯೋಗ್ಯ ಕಾರಣವಿಲ್ಲದೆ ಬಿಟ್ಟು ಬಿಟ್ಟಿದ್ದರೆ ಹಾಗೂ ಅದಕ್ಕೆ ಅವಳ ಒಪ್ಪಿಗೆಯು ಇರದಿದ್ದರೆ ಇಲ್ಲವೆ ಅವಳ ಮನಸ್ಸಿನ ವಿರುದ್ಧ ಅವನು ಬಿಟ್ಟು ಓಡಿ ಹೋದ ತಪ್ಪುಗಾರನಾಗಿದ್ದರೆ ಈ ಮೇಲೆ ಕಾಣಿಸಿದ ಎಲ್ಲ ಕಾರಣಗಳಿಂದ

(ಇ) ಅವನು ಹಿಂದೂ ಧರ್ಮದಿಂದ ಬೇರೊಂದು ಧರ್ಮಕ್ಕೆಮತಾಂತರ ಹೊಂದಿ, ಹಿಂದೂ ಧರ್ಮವನ್ನು ತ್ಯಜಿಸಿದ್ದರೆ.

(ಎಫ್)ಇಲ್ಲವೆ ಇನ್ನಾವುದೇ ಸಮರ್ಥವಾದ ಬೇರೆ ಯಾವುದೇ ಕಾರಣದಿಂದ ಅವಳು ಪ್ರತ್ಯೇಕವಾಗಿ ಇರಲು ಕಾರಣಗಳಿದ್ದರೆ.

೩. ಒಬ್ಬ ಹಿಂದೂ ಹೆಂಡತಿಯು ಶೀಲ ಭ್ರಷ್ಟಳಾದವಳು : ವ್ಯಭಿಚಾರಿ ಇಲ್ಲವೆ ಹಿಂದೂ ಧರ್ಮವನ್ನು ತ್ಯಜಿಸಿ ಬೇರೊಂದು ಧರ್ಮಕ್ಕೆ ಮತಾಂತರ ಹೊಂದಿದ್ದರೆ ಅಂತಹ ಹಿಂದೂ ಹೆಂಡತಿ ಪ್ರತ್ಯೇಕವಾಗಿ ವಾಸಿಸಲು ಹಾಗೂ ಜೀವನಾಂಶವನ್ನು ಗಂಡನಿಂದ ಕೇಳಲು ಹಕ್ಕಿಲ್ಲದವಳಾಗಿದ್ದಾಳೆ.

ಇರದಿದ್ದರೆ ಇಲ್ಲವೆ ಅಪೇಕ್ಷಣೀಯವಲ್ಲವೆಂದರೆ ಇಂತಹ ಹಿಂಸೆಗೆ ತಪ್ಪುಗಾರನಾಗಿದ್ದರೆ.

(ಡ) ಅವನು ಅವಳನ್ನು ಬಿಟ್ಟು ಓಡಿಹೋದವನು ಅಂದರೆ ಆಕೆಯನ್ನು ಯೋಗ್ಯ ಕಾರಣವಿಲ್ಲದೆ ಬಿಟ್ಟಿದ್ದರೆ ಮತ್ತು ಆಕೆಯ ಒಪ್ಪಿಗೆಯು ಇಲ್ಲದೆ ಇಲ್ಲವೆ ಆಕೆಯ ಮನಸ್ಸಿನ ವಿರುದ್ಧ ಬಿಟ್ಟಿದ್ದರೆ.

(ಇ) ಅವನು ಹಿಂದೂ ಧರ್ಮವನ್ನು ತ್ಯಜಿಸಿ, ಬೇರೊಂದು ಧರ್ಮಕ್ಕೆ ಮತಾಂತರ ಹೊಂದಿದ್ದರೆ.

(ಎಫ್) ಆಕೆಗೆ ಪ್ರತ್ಯೇಕವಾಗಿರಲು ಬೇರೆ ಯಾವುದೇ ಸಮರ್ಥನೀಯ ಕಾರಣಗಳಿದ್ದರೆ.

೩. ಹಿಂದೂ ಹೆಂಡತಿ ಶೀಲ ಭ್ರಷ್ಟಳಾಗಿದ್ದರೆ, ವ್ಯಭಿಚಾರಿಯಾಗಿದ್ದರೆ ಇಲ್ಲವೆ ಹಿಂದೂ ಧರ್ಮ ತ್ಯಜಿಸಿ ಬೇರೊಂದು ಧರ್ಮಕ್ಕೆ ಮತಾಂತರ ಹೊಂದಿದ್ದರೆ ಆಕೆಯು ತನ್ನ ಗಂಡನಿಂದ ಪ್ರತ್ಯೇಕವಾಗಿ ವಾಸಿಸುವ ಹಾಗೂ ತನ್ನ ಜೀವನಾಂಶ ಕೇಳಲು ಹಕ್ಕುಳ್ಳವಳು ಇರುವುದಿಲ್ಲ.

(೧೫೦)

**೧೨೭. ವಿಧವೆಯಾದ ಸೊಸೆಯ ಜೀವನಾಂಶ ಮಾವನಾದವನು** ತನ್ನ ಗಂಡನನ್ನು ಕಳೆದುಕೊಂಡ ಸೊಸೆಯನ್ನು ಕಲಂ ೧೨೬ ರ ಪರಿಮಿತಿಯಲ್ಲಿ ತನಗೆ ಇರುವ ಆಸ್ತಿಯ ಮೂಲದಿಂದ ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯವರೆಗೆ ಅವಳನ್ನು ಜೋಪಾನ ಮಾಡಲು ಹೊಣೆಗಾರನಿರುತ್ತಾನೆ. ಮತ್ತು ಅಂತಹ ಸೊಸೆಯು ತನ್ನ ಆಸ್ತಿಯ ಉತ್ಪನ್ನದ ಮೇಲೆ ತನ್ನನ್ನು ತಾನು ಜೋಪಾನ ಮಾಡಲು : ಸಂರಕ್ಷಿಸಲು ಅಶಕ್ತಳು ಇರಬೇಕು. ಇಲ್ಲವೆ ಅವಳ ಗಂಡನ ಆಸ್ತಿಯಿಂದ ಇಲ್ಲವೆ ಅವಳು ಮಗ ಇದ್ದರೆ ಇಲ್ಲವೆ ಅವರ ಆಸ್ತಿಯಿಂದ ಜೀವನಾಂಶ ಪಡೆಯಲು ಅಶಕ್ತಳಿರಬೇಕು. ಇಂತಹ ಯಾವುದೇ ಹೊಣೆಗಾರಿಕೆ ಆಕೆಯು ಪುನಃ ಮದುವೆಯಾದರೆ : ಅಂತಹ ಹೊಣೆಗಾರಿಕೆಯು ಮುಕ್ತಾಯವಾಗುತ್ತದೆ.

(೧೫೦)

(೧೫೧)

**೧೨೮. ಮಕ್ಕಳ ಮತ್ತು ತಂದೆ ತಾಯಿಗಳ ಜೀವನಾಂಶ** – (೧) ಈ ಕಲಮಿನ ಉಪಬಂಧಗಳಿಗೆ ಒಳಪಟ್ಟು ಒಬ್ಬ ಹಿಂದೂ ತನ್ನ ಜೀವಿತ ಕಾಲದಲ್ಲಿ ತನ್ನ ಮಕ್ಕಳು ಕಾನೂನುಬದ್ಧವಾದ ಇಲ್ಲವೆ ಗೈರಕಾನೂನಿಂದ ಹುಟ್ಟಿದ ಮಕ್ಕಳ ಮತ್ತು ವಯಸ್ಸಾದ ಮುಪ್ಪಿನ ತಂದೆತಾಯಿಗಳ ಜೀವನವನ್ನು ನೋಡಿಕೊಳ್ಳಲು ಹೊಣೆಗಾರನಾಗಿದ್ದಾನೆ.

೨. ಕಾನೂನುಬದ್ಧವಾಗಿ ಹುಟ್ಟಿದ ಮಕ್ಕಳು ಇಲ್ಲವೆ ಗೈರಕಾನೂನಿನ ಮೂಲಕ ಜನಿಸಿದ ಮಕ್ಕಳು ಅವರು ಅಲ್ಪವಯ ಇರುವವರೆಗೆ ಅವರ ತಂದೆಯಿಂದ

(೧೪೯)

**೧೨೭. ವಿಧವೆಯಾದ ಸೊಸೆಯ ಜೀವನಾಂಶ** ಮಾವನು ವಿಧವೆಯಾದ ಸೊಸೆಯನ್ನು ಜೋಪಾನಮಾಡುವ: ಉಪ ಜೀವನಕ್ಕೆ ಕೊಡುವ ಹೊಣೆಗಾರಿಕೆಯು ಕಲಂ ೧೨೬ರಲ್ಲಿ ವಿಸ್ತರಿಸಿದಂತೆ ತನಗೆ ಬರುವ ಉತ್ಪನ್ನದ ಮೇಲಿಂದ ಇರುತ್ತದೆ ಮತ್ತು ಆ ವಿಧವೆಯಾದ ಸೊಸೆಯು ತನ್ನ ಆಸ್ತಿಯ ಮೇಲಿಂದ ತನ್ನಷ್ಟಕ್ಕೆ ತಾನೇ ಜೀವನ ನಡೆಯಿಸಲು ಅಶಕ್ತಳು ಇದ್ದರೆ ಇಲ್ಲವೆ ಆಕೆಯ ಗಂಡನ ಆಸ್ತಿಯಿಂದ ಜೀವನಾಂಶ ಪಡೆಯುವುದು ಇಲ್ಲವೆ ಆಕೆಗೆ ಯಾರಾದರೂ ಮಕ್ಕಳಿದ್ದರೆ ಅವರಿಂದ ಇಲ್ಲವೆ ಅವನ ಆಸ್ತಿಯಿಂದ ಜೀವನಾಂಶ ಪಡೆಯಲು ಅಶಕ್ತಳಾಗಿದ್ದರೆ. ಮಾವನಿಂದ ಜೀವನಾಂಶ ಪಡೆಯುವ ಹಕ್ಕುಳ್ಳವಳಾಗಿದ್ದರೆ ಅಂತಹ ಮಾವನ ಹೊಣೆಗಾರಿಕೆಯು ಅವಳು ಪುನಃ ಲಗ್ನವಾದರೆ ಅದು ಮುಕ್ತಾಯವಾಗುತ್ತದೆ.

**ಭಾಗ–೩**
**ಕಲಂ–೮**
**ಪುಟ–೧೩**

(೧೫೦)

**೧೨೮. ಮಕ್ಕಳನ್ನು ಹಾಗೂ ವಯಸ್ಸಾದ ತಂದೆ ತಾಯಿಗಳನ್ನು ಜೋಪಾನ ಮಾಡುವುದು–**

(೧) ಈ ಕಲಮಿನ ಉಪಬಂಧಗಳಿಗೆ ಒಳಪಟ್ಟ ಒಬ್ಬ ಹಿಂದೂ ತನ್ನ ಜೀವಿತ ಕಾಲದಲ್ಲಿ ಕಾನೂನುಬದ್ಧವಾಗಿ ಜನಿಸಿದ ಹಾಗೂ ಗೈರ ಕಾನೂನಿನಿಂದ ಜನಿಸಿದ ಮಕ್ಕಳನ್ನು ಹಾಗೂ ವಯಸ್ಸಾದ ತಂದೆ ತಾಯಿಗಳನ್ನು ಜೋಪಾನ ಮಾಡಲು ಜೀವನಾಂಶ ಕೊಡಲು ಬಾಧ್ಯಸ್ಥನಿರುತ್ತಾನೆ.

(೨) ಕಾನೂನುಬದ್ಧವಾಗಿ ಜನಿಸಿದ ಇಲ್ಲವೆ

ಜೀವನಾಂಶವನ್ನು ಮಾಗಣಿ : ಕ್ಲೇಮು ಮಾಡಬಹುದು

**ಪರಂತು :** ಮದುವೆಯಾಗದ ಮಗಳು ತಾನು ತನ್ನ ಮದುವೆಯಾಗದೆ ತನ್ನ ತಂದೆಯ ಸಂಗಡ ಇರುವವರೆಗೆ ಹಾಗೂ ಮದುವೆ ಆಗದೆ ಉಳಿದರೆ ಅಂತಹ ಮದುವೆ ಆಗದ ಮಗಳು ಜೀವನಾಂಶವನ್ನು ತಂದೆಯಿಂದ ಕೇಳಬಹುದು.

೨. ತಂದೆಯು ತಾನು ಮುಪ್ಪಿನ ವಯಸ್ಕನಾಗಿದ್ದರೆ ಮತ್ತು ದುರ್ಬಲನಾಗಿದ್ದರೆ ತನ್ನ ಮಕ್ಕಳಿಂದ ಜೀವನಾಂಶವನ್ನು ಕೇಳಬಹುದು.

ಗೈರ ಕಾನೂನಿನಿಂದ ಜನಿಸಿದ ಆಕೆಯು: ಅವಳು ತಾನು ಅಲ್ಪವಯಿ ಇರುವವರೆಗೆ ಅವಳ ತಂದೆಯಿಂದ ಜೀವನಾಂಶ ಕೇಳಬಹುದು.

**ಪರಂತು :** ಮದುವೆಯಾಗದ ಮಗಳು, ಎಲ್ಲಿಯವರೆಗೆ ತನ್ನ ತಂದೆಯ ಜೊತೆಗೆ ಇರುತ್ತಾಳೆಂಬೋ ಹಾಗೂ ಎಲ್ಲಿಯುವರೆಗೆ ಮದುವೆ ಯಾಗುವುದಿಲ್ಲವೋ ಅಲ್ಲಿಯವರೆಗೆ ತಂದೆಯಿಂದ ಜೀವನಾಂಶ ಕೇಳಬಹುದು.

(೩) ತಂದೆಯು ಮಗನಿಂದ ಜೀವನಾಂಶ ಕೇಳಬಹುದು ಆದರೆ ಅವನು ವಯುಸ್ಸಾದವನಿರಬೇಕು ಹಾಗೂ ದುರ್ಬಲನಾಗಿರಬೇಕು.

(೧೫೨)

**೧೯೯. ತಾಯಿಯ ಮಕ್ಕಳನ್ನು ಜೋಪಾನ ಮಾಡುವುದು** – ಒಬ್ಬ ಹಿಂದೂ ಹೆಣ್ಣು ಮಗಳು ತನ್ನ ಗಂಡನು ತನ್ನ ಕಾನೂನುಬದ್ಧ ಮಕ್ಕಳನ್ನು ಇಲ್ಲವೆ ಗೈರ ಕಾನೂನಿನಿಂದ ಹುಟ್ಟಿದ ಮಕ್ಕಳನ್ನು ಜೋಪಾನ ಮಾಡಲು ಅಶಕ್ತನಾದರೆ ಆಕೆಗೆ ತನ್ನನ್ನು ಜೋಪಾನ ಮಾಡಿಕೊಳ್ಳಲು ಅವಶ್ಯವಾದ ಆಸ್ತಿ – ಉತ್ಪನ್ನ ಇದ್ದರೆ ಅಂತಹ ಕಾನೂನುಬದ್ಧವಾದ ಇಲ್ಲವೆ ಗೈರ ಕಾನೂನಿನಿಂದ ಜನಿಸಿದ ಮಕ್ಕಳನ್ನು ಜೋಪಾನ ಮಾಡಲು ಬಾಧ್ಯಸ್ಥಳಿರುತ್ತಾಳೆ.

(೧೫೧)

**೧೯೯. ತಾಯಿಯು ಮಕ್ಕಳನ್ನು ಜೋಪಾನ ಮಾಡುವುದು** –ಒಬ್ಬ ಹಿಂದೂ ಹೆಣ್ಣು ಮಗಳು ತನ್ನ ಜೀವಿತಕಾಲದಲ್ಲಿ ಆಕೆಯ ಗಂಡ, ತನ್ನ ಕಾನೂನುಬದ್ಧ ಮಕ್ಕಳನ್ನು ಇಲ್ಲವೆ ಗೈರುಕಾನೂನು ಮಕ್ಕಳನ್ನು ಜೋಪಾನ ಮಾಡಲು ಅಶಕ್ತನಾಗಿದ್ದರೆ ಮತ್ತು ಆಕೆಗೆ ಅವರನ್ನು ಜೋಪಾನ ಮಾಡಲು ಆಸ್ತಿ ಉತ್ಪನ್ನ ಇದ್ದರೆ ಆಕೆಯು ತನ್ನ ಕಾನೂನು ಬದ್ಧ ಮಕ್ಕಳನ್ನು ಇಲ್ಲವೆ ಗೈರು ಕಾನೂನು ಮಕ್ಕಳನ್ನು ಜೋಪಾನ ಮಾಡಲು ಬಾಧ್ಯಸ್ಥಳಿರುತ್ತಾಳೆ.

(೧೫೨)

(೧೫೩)

**ಆಸ್ತಿಯ ಉತ್ಪನ್ನದೊಳಗಿಂದ ಅವಲಂಬಿತರಾಗಿರುವ ವಾರಸುದಾರರನ್ನು ಪೋಷಿಸುವ ಸಂರಕ್ಷಿಸುವ ಹೊಣೆಗಾರಿಕೆಯು**

(೧೫೨)

**೧೬೦. ಅವಲಿಂಬಿತರನ್ನು ಸಂರಕ್ಷಿಸುವ ಹೊಣೆಯು** ಕಲಂ ೧೬೧ರ ಉಪಬಂಧಗಳಿಗೆ ಒಳಪಟ್ಟು ಒಬ್ಬ ಮೃತ ಹಿಂದೂವಿನ

**೧೩೦. ಅವಲಂಬಿತರನ್ನು ಸಂರಕ್ಷಿಸುವ ಹೊಣೆಯು**

(೧) ಕಲಂ ೧೩೧ರ ಉಪಬಂಧಗಳಿಗೆ ಒಳಪಟ್ಟು, ಒಬ್ಬ ಮೃತ ಹಿಂದೂವಿನ ವಾರಸುದಾರರು, ಮೃತನ ಅವಲಂಬಿತರನ್ನು ಸಂರಕ್ಷಿಸುವ ಹೊಣೆಗಾರಿಕೆಯು ಮೃತನ ಆಸ್ತಿಯ ಉತ್ಪನ್ನದಿಂದ ವಾರಸುದಾರರ ಮೃತನ ಅವಲಂಬಿತರನ್ನು ಸಂರಕ್ಷಿಸುವ ಹೊಣೆಗಾರಿಕೆಯು ಇರುತ್ತದೆ.

(೨) ಕೆಳಗೆ ಕಾಣಿಸಿದ ಹಿಂದೂವಿನ ಸಂಬಂಧಿಕರು ಅವನ ಅವಲಂಬಿತರೆಂದು ಈ ಭಾಗಕ್ಕೆ ಗ್ರಹಿಸಲಾಗುವುದು.

ಉದಾಹರಣೆ –

(೧) ಅವನ ತಂದೆ

(೨) ಅವನ ತಾಯಿ

(೩) ಅವನ ವಿಧವೆ (ಎಲ್ಲಿಯವರೆಗೆ ಅವಳು ಪುನಃ ಲಗ್ನವಾಗುವು ದಿಲ್ಲವೋ)

೪. ಅವನ ಮಗ, ಅವನಿಗಿಂತ ಮೊದಲೇ ತೀರಿಕೊಂಡ ಮಗ, ಇಲ್ಲವೆ ಮೊದಲೇ ತೀರಿಕೊಂಡ ಮಗನ, ಮಗನ ಮಗ, ಯಾವನು ಅಲ್ಪವಯ ಇರವನೋ, ಎಲ್ಲಿಯವರೆಗೆ ಅವನು ಅಲ್ಪವಯ ಇರುವನೋ

**ಪರಂತು** ಅವನು ತನ್ನ ಜೀವನವನ್ನು ನಡೆಸಲು ಅಶಕ್ತನಿರುವನೋ, ಒಬ್ಬ ಮೊಮ್ಮಗನ ವಿಷಯದಲ್ಲಿ ಅವನ ತಂದೆಯ ಆಸ್ತಿಯಲ್ಲಿ ಗಿರಿಮೊಮ್ಮಗನ ವಿಷಯದಲ್ಲಿ ಅವನ ತಂದೆ ಆಸ್ತಿಯಲ್ಲಿ ಇಲ್ಲವೆ ತಂದೆಯ ತಂದೆಯ ಆಸ್ತಿಯಲ್ಲಿ ಹಿಸ್ಸೆ ಪಡೆಯುವನು.

ವಾರಸುದಾರರ ಮೃತನ ಅವಲಂಬಿತರನ್ನು ಸಂರಕ್ಷಿಸುವ ಹೊಣೆಗಾರಿಕೆಯು ಮೃತನ ಆಸ್ತಿಯ ಉತ್ಪನ್ನದಿಂದ ವಾರಸುದಾರರು ಆ ಮೃತನ ಅವಲಂಬಿತರನ್ನು ಸಂರಕ್ಷಿಸುವ ಹೊಣೆಗಾರಿಕೆಯು ಇರುತ್ತದೆ. ಭಾಗ–೩(ಅ) ಕಲಂ–೫ ಪುಟ–೧೨

(೨) ಕೆಳಗೆ ಕಾಣಿಸಿದ ಹಿಂದುವಿನ ಸಂಬಂಧಿಕರು ಅವನ ಅವಲಂಬಿತರೆಂದು ಈ ಭಾಗದಲ್ಲಿ ಗ್ರಹಿಸಲಾಗುವುದು.

ಉದಾ :

(೧) ಅವನ ತಂದೆ

(೨) ಅವನ ತಾಯಿ

(೩) ಅವನ ವಿಧವೆ (ಎಲ್ಲಿಯವರೆಗೆ ಅವಳು ಪುನಃ ಲಗ್ನವಾಗುವು ದಿಲ್ಲವೋ)

(೪) ಅವನ ಮಗ (ಅವನಿಗಿಂತ ಮೊದಲೇ ತೀರಿಕೊಂಡ ಇಲ್ಲವೆ ಮೊದಲೇ ತೀರಿಕೊಂಡ ಮಗನ ಮಗನ ಮಗ, ಯಾವನು ಅಲ್ಪವಯ ಇರುವನೋ ಎಲ್ಲಿಯವರೆಗೆ ಅವನು ಅಲ್ಪವಯ ಆಗಿರುವನೋ)

**ಪರಂತು–** ಅವನು ತನ್ನ ಜೀವನವನ್ನು ನಡೆಸಲು ಅಶಕ್ತನಿರುವನೋ ಒಬ್ಬ ಮೊಮ್ಮಗನ ವಿಷಯದಲ್ಲಿ ಆತನ ಮೊಮ್ಮಗನ ವಿಷಯದಲ್ಲಿ ಅವನ ತಂದೆಯ ಆಸ್ತಿಯಲ್ಲಿ ಗಿರಿಮೊಮ್ಮಗನ ವಿಷಯುದಲ್ಲಿ ಅವನ ತಂದೆಯು ಆಸ್ತಿಯಲ್ಲಿ ತಂದೆಯ ತಂದೆಯ ಆಸ್ತಿಯಲ್ಲಿ ಹಿಸ್ಸೆ ಪಡೆಯುವನು **ಭಾಗ–೪ ಕಲಂ–೧೮ ಪುಟ–೧೧**

೫. ಅವನ ಲಗ್ನವಾಗದ ಮಗಳು, ಎಲ್ಲಿಯುವರೆಗೆ ಅವಳು ಮದುವೆಯಾಗದೆ ಇರುವಳೊ,

೬. ಅವನ ಲಗ್ನವಾದ ಮಗಳು **ಪರಂತು,** ಅಲ್ಲಿಯುವರೆಗೆ ಅವಳು ತನ್ನ ಗಂಡನಿಂದ ತನ್ನ ಉಪಜೀವನಕ್ಕೆ ಪಡೆಯಲು ಅಶಕ್ತಳಾದಾಗ, ಇಲ್ಲವೆ ಅವಳ ಮಗನಿಂದ – ಆತನ ಯಾವುದೇ ಆಸ್ತಿಯು

೭. ಆತನ ವಿಧವೆಯಾದ ಮಗಳು **ಪರಂತು** – ಅವಳು ತನ್ನ ಜೀವನ ನಡೆಸಲು ಅಶಕ್ತಳಿದ್ದಾಗ

(ಅ) ಅವಳ ಗಂತನ ಆಸ್ತಿಯಿಂದ ಇಲ್ಲವೆ

(ಬ) ಅವಳ ಮಗನಿಂದ ಯಾರಾದರೂ ಇದ್ದರೆ ಅವನ ಆಸ್ತಿಯಿಂದ ಇಲ್ಲವೆ

(ಕ) ಅವಳ ಮಾವನಿಂದ, ಇಲ್ಲವೆ ಅವನ ತಂದೆ ಇಲ್ಲವೆ ಇಬ್ಬರಲ್ಲಿಯ ಒಬ್ಬರ ಆಸ್ತಿ

(೮) ಮಗ ಇಲ್ಲವೆ ಮಕ್ಕಳ ಯಾವುದೇ ವಿಧವೆ ಅಥವಾ ವಿಧವೆಯರು ಇಲ್ಲವೆ ಅವನ ಜೀವಿತ ಕಾಲದಲ್ಲಿಯೇ ಮೃತನಾದ ಮಗನ ವಿಧವೆ – ಎಲ್ಲಿಯುವರೆಗೆ ಅವಳು ಪುನಃ ಲಗ್ನವಾಗುವುದಿಲ್ಲವೋ ಅಲ್ಲಿಯವರೆಗೆ **ಪರಂತು:** ಅವಳು ತನ್ನ ಉಪಜೀವನವನ್ನು ತನ್ನ ಗಂಡನ ಆಸ್ತಿಯಿಂದ ಪಡೆಯಲು ಅಶಕ್ತಳಿದ್ದಾಗ ಇಲ್ಲವೆ ಅವಳ ಮಗನಿಂದ ಯಾರಾದರೂ ಇದ್ದರೆ ಇಲ್ಲವೆ ಅವನ ಆಸ್ತಿಯಿಂದ ಇಲ್ಲವೆ ಅವನ ಮೊಮ್ಮಕ್ಕಳ ವಿಧವೆಯರು ಇಲ್ಲವೆ ತನ್ನ ಮಾವನ ಆಸ್ತಿಯಿಂದ–

(೯) ಅವನ ಅಲ್ಪವಯಿ ಮಗ ಅನೈತಿಕವಾಗಿ

೫. ಅವನ ಲಗ್ನವಾಗದ ಮಗಳು ಎಲ್ಲಿಯುವರೆಗೆ ಅವಳು ಲಗ್ನವಾಗುವುದಿಲ್ಲವೋ ಅಲ್ಲಿಯ ವರೆಗೆ

೬. ಅವನ ಲಗ್ನವಾಗದ ಮಗಳು **ಪರಂತು** – ಎಲ್ಲಿಯವರೆಗೆ ಅವಳು ತನ್ನ ಗಂಡನಿಂದ ತನ್ನ ಜೀವನವನ್ನು ನಡೆಸಲು ಅಶಕ್ತಳಾದಾಗ ಇಲ್ಲವೆ ಅವಳ ಮಗನಿಂದ ಆತನ ಯಾವುದೇ ಆಸ್ತಿಯು

೭. ಆತನ ವಿಧವೆಯಾದ ಮಗಳು **ಪರಂತು** ಅವಳು ತನ್ನ ಜೀವನ ನಡೆಸಲು ಅಶಕ್ತಳು ಆದಾಗ

ಅ) ಅವಳ ಗಂಡನ ಆಸ್ತಿಯಿಂದ ಇಲ್ಲವೆ–

ಬ) ಅವಳ ಮಗನಿಂದ (ಮಗನಿದ್ದರೆ ಅವನ ಆಸ್ತಿಯಿಂದ)

ಕ) ಅವಳ ಮಾವನಿಂದ ಇಲ್ಲವೆ ಅವನ ತಂದೆ ಇಲ್ಲವೆ ಇಬ್ಬರಲ್ಲಿ ಒಬ್ಬರ ಆಸ್ತಿ

೮. ಮಗ ಇಲ್ಲವೆ ಮಕ್ಕಳ ವಿಧವೆ ಇಲ್ಲವೆ ವಿಧವೆಯುರು ಇಲ್ಲವೆ ಅವನ ಜೀವಿತ ಕಾಲದಲ್ಲಿಯೇ ಮೃತನಾದ ಮಗನ ವಿಧವೆ ಎಲ್ಲಿಯುವರೆಗೆ ಅವಳು ಪುನಃ ಲಗ್ನವಾಗುವುದಿಲ್ಲವೋ ಅಲ್ಲಿ–ಯವರೆಗೆ **ಪರಂತು:** ಅವಳು ತನ್ನ ಉಪಜೀವನವನ್ನು ತನ್ನ ಗಂಡನ ಆಸ್ತಿಯಿಂದ ಪಡೆಯಲು ಅಶಕ್ತಳಿದ್ದಾಗ ಇಲ್ಲವೆ ಅವಳ ಮಗನಿಂದ ಯಾರಾದರೂ ಇದ್ದರೆ ಇಲ್ಲವೆ ಅವನ ಆಸ್ತಿಯಿಂದ ಇಲ್ಲವೆ ಅವನ ಮೊಮ್ಮಕ್ಕಳ ವಿಧವೆಯರು ಇಲ್ಲವೆ ಅವಳು ತನ್ನ ಮಾವನ ಆಸ್ತಿಯಿಂದ

೯. ಅವನ ಅಲ್ಪವಯಿ ಮಗ, ಅನೈತಿಕವಾಗಿ ಹುಟ್ಟಿದವನು ಎಲ್ಲಿಯವರೆಗೆ ಅವನು

ಹುಟ್ಟಿದವನು ಎಲ್ಲಿಯವರೆಗೆ ಅವನು ಅಲ್ಪವಯನಾಗಿರುವನೋ

(೧೦) ಅವನ ಮದುವೆಯಾಗದ ಅನ್ಯೈತಿಕವಾಗಿ ಹುಟ್ಟಿದ ಮಗಳು, ಎಲ್ಲಿಯವರೆಗೆ ಲಗ್ನವಾಗುವುದಿಲ್ಲವೋ ಆಸ್ತಿಯ ಉತ್ಪನ್ನದಿಂದ ಉಪಜೀವನ ಹೊಂದುವ ವಾರಸುದಾರರನ್ನು ಸಂರಕ್ಷಿಸುವ ಹೊಣೆಗಾರಿಕೆಯು.

(೧೫೪)

**೧೩೧. ಅವಲಂಬಿತರನ್ನು ಸಂರಕ್ಷಿಸುವ ಹೊಣೆಗಾರಿಕೆಯು ಎಷ್ಟರಮಟ್ಟಿಗೆ ಇರುತ್ತದೆ.** ಎಲ್ಲಿ ಒಬ್ಬನು ಮೃತ್ಯುಪತ್ರ ಮೂಲಕ ಇಲ್ಲವೆ ಮೃತ್ಯುಪತ್ರವಿಲ್ಲದೆ ಸತ್ತವನ ಆಸ್ತಿಯನ್ನು ವಾರಸಾ ಅಂತಹ ಗಂಡುಮಕ್ಕಳ ವಾರಸಾದಿಂದ ಪಡೆಯುದಿದ್ದರೆ ಈ ಅಧಿನಿಯಮವು ಜಾರಿಯಲ್ಲಿ ಬಂದ ನಂತರ ಇಲ್ಲವೆ ಎಲ್ಲಿ ಮರಣಶಾಸನದ ಮೂಲಕ ಅವನ ಅವಲಂಬಿತನು ಪಡೆಯಬಹುದಾಗಿದ್ದ ಹಿಸ್ಸೆಗಿಂತ ಕಡಿಮೆ ಹಿಸ್ಸೆ ಪಡೆದರೆ ಇಲ್ಲವೆ ಅವಳಿಗೆ ಸಿಕ್ಕರೆ, ಅವರಿಗೆ ಈ ಭಾಗದಲ್ಲಿ – ಅವನು ಇಲ್ಲವೆ ಅವಳು ಈ ಭಾಗದ ಉಪಬಂಧಗಳಿಗೆ ಒಳಪಟ್ಟು ಯಾರು ಆಸ್ತಿ ಪಡೆಯುವರೊ ಅಂಥವರು **ಪರಂತು** – ಅಂತಹ ಪ್ರಸಂಗದಲ್ಲಿ ಪ್ರತಿಯೊಬ್ಬ ವಾರಸುದಾರನು ಆ ಆಸ್ತಿಯ ಕಿಮ್ಮತ್ತಿನ ಇಲ್ಲವೆ ಆಸ್ತಿಯ ಒಂದು ಭಾಗವನ್ನು ಅವನು ಇಲ್ಲವೆ ಅವಳು ಒಂದು ಭಾಗವನ್ನು ತೆಗೆದುಕೊಂಡಿದ್ದರೆ.

**ಪರಂತು** ಇನ್ನೂ ಹೆಚ್ಚಿಗೆ ಹೇಳುವುದೇನೆಂದರೆ – ಯಾವ ಮನುಷ್ಯನು ತಾನೇ ಇನ್ನೊಬ್ಬರ ಮೇಲೆ ಅವಲಂಬಿತನಿರುವನೋ ಇಲ್ಲವೆ ಅವಲಂಬಿತಳು ಇರುವಳೊ ಅಂಥವರು

ಅಲ್ಪವಯ ಮಗ ಅನ್ಯೈತಿಕವಾಗಿ ಹುಟ್ಟಿರುವನೊ ಅವನು ಅಲ್ಪವಯನಾಗಿರುವನೋ **ಭಾಗ–೨ ಕಲಂ–೨೦ ಪುಟ–೧೧**

೧೦. ಅವನ ಮದುವೆಯಾಗದ ಅನ್ಯೈತಿಕವಾಗಿ ಹುಟ್ಟಿದ ಮಗಳು ಎಲ್ಲಿಯವರೆಗೆ ಲಗ್ನವಾಗುವುದಿಲ್ಲವೋ.

(೧೫೩)

**೧೩೧. ಅವಲಂಬಿತರನ್ನು ವಾರಸುದಾರರು ಸಂರಕ್ಷಿಸುವ ಹೊಣೆಗಾರಿಕೆಯ**

**ವ್ಯಾಪ್ತಿ :** ಎಲ್ಲಿ ಒಬ್ಬ ಅವಲಂಬಿತನು ಮೃತ್ಯು ಪತ್ರದ ಮೂಲಕವಾಗಲಿ ಇಲ್ಲವೆ ಮೃತ್ಯುಪತ್ರ ಮಾಡದೆ ಸತ್ತವನ ವಾರಸಾದಿಂದಾಗಲಿ, ಒಬ್ಬ ಗಂಡು ಹಿಂದೂ ಈ ಅಧಿನಿಯಮವು ಜಾರಿಯಲ್ಲಿ ಬಂದನಂತರ ಇಲ್ಲವೆ ಈ **ಭಾಗ–೩(ಅ) ಕಲಂ–೪ ಪುಟ–೧೨** ಭಾಗದಲ್ಲಿ ಒಂದು ಮರಣ ಶಾಸನದ ಮೂಲಕ ವಾರಸಾದಲ್ಲಿ ಹೀಗೆ ಅವಲಂಬಿತನು ಪಡೆದು ಷೇರು ಪಾಲು ಇದು ಅವನಿಗೆ ಕೊಡಬೇಕಾದದ್ದಕ್ಕಿಂತ ಜೀವನಾಂಶ ಮೊತ್ತವು ಅವನಿಗೆ ಇಲ್ಲವೆ ಅವಳಿಗೆ ಕೊಡಬೇಕಾದದ್ದು ಕಡಿಮೆಯಾದರೆ ಈ ಭಾಗದಲ್ಲಿಯ ಉಪಬಂಧಗಳಿಗೆ ಒಳಪಟ್ಟು ಅವನು ಇಲ್ಲವೆ ಅವಳು ಆಸ್ತಿಯನ್ನು ಪಡೆಯಲು ಹಕ್ಕುಳ್ಳವರಾದರೆ **ಪರಂತು,** ಆಗ ಪ್ರತಿಯೊಬ್ಬ ವಾರಸುದಾರನ ಹೊಣೆಗಾರಿಕೆಯು ಅವನಿಗೆ ಇಲ್ಲವೆ ಅವಳಿಗೆ ಕೊಟ್ಟ ಹಿಸ್ಸೆವಾರಿನ ಮೌಲ್ಯದ ಅನುಪಾತ/ಪ್ರಮಾಣವನ್ನು ಗಣನೆಗೆ ತೆಗೆದುಕೊಳ್ಳಬೇಕು.

**ಪರಂತು,** ಇನ್ನೂ ಹೆಚ್ಚಿಗೆ ಏನೆಂದರೆ ಯಾವ ವ್ಯಕ್ತಿ, ಅವನಾಗಲಿ ಇಲ್ಲವೆ ಅವಳಾಗಲಿ ಇನ್ನೊಬ್ಬರ ಮೇಲೆ ಅವಲಂಬಿತರಾಗಿದ್ದರೆ

ಉಪಜೀವನಕ್ಕೆ ತಮ್ಮ ಕೊಡುಗೆಯನ್ನು ಕೊಡಲು ಭಾಧ್ಯಸ್ಥನಿರುತ್ತಾರೆ. ಅವನು ಇಲ್ಲವೆ ಅವಳು ತನ್ನ ಪಾಲು ಇಲ್ಲವೆ ಅದರ ಭಾಗ ತೆಗೆದುಕೊಂಡಿದ್ದರೆ ಅದರ ಬೆಲೆಯು ಇಲ್ಲವೆ ವಂತಿಗೆಯನ್ನು ಉಪಜೀವನಕ್ಕೆ ಕೊಡುವುದು ಉಳಿದವರಿಗಾಗಿ ಅವನು ಇಲ್ಲವೆ ಅವಳು ತಮ್ಮ ಪಾಲಿನ ಆಸ್ತಿಯ ಕೆಲವು ಭಾಗ ತೆಗೆದುಕೊಂಡಿದ್ದರೆ ಅದರ ಕಿಮ್ಮತ್ತು ಇಲ್ಲವೆ ವಂತಿಗೆ ಕೊಡುವ ಹೊಣೆಗಾರಿಕೆಯನ್ನು ಕಾನೂನು ಬದ್ಧವಾಗಿ ಪರಿಣಾಮಗೊಳಿಸಿದರೆ ಅವರಿಗೆ ಸಿಗಬೇಕಾದದ್ದಕ್ಕಿಂತ ಕಡಿಮೆ ಸಿಕ್ಕರೆ ಇಲ್ಲವೆ ಅವಳಿಗೆ ಜೀವನಕ್ಕಾಗಿ ಈ ಭಾಗದಲ್ಲಿ ಹೇಳಲಾಗಿದೆ.

(೧೫೫)

**ಜೀವನಾಂಶ ಒಟ್ಟು ಮೊಬಲಗು**

**೩೨. ಜೀವನಾಂಶದ ಒಟ್ಟು ಮೊಬಲಗು**

(೧) ಜೀವನಾಂಶ ಒಟ್ಟು ಮೊಬಲಗನ್ನು ಗೊತ್ತುಮಾಡುವಾಗ ಹೆಂಡತಿಗೆ ಮಕ್ಕಳಿಗೆ ಇಲ್ಲವೆ ವಯಸ್ಸಾದ ಮುಪ್ಪಿನ ತಂದೆತಾಯಿಗಳಿಗೆ ಅದನ್ನು ಈ ಭಾಗದ ಅಡಿಯಲ್ಲಿ ಕೊಡುವಾಗ ಕೆಳಗಣ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

ಅ. ಪಕ್ಷಗಾರರ ಸಮಾಜದಲ್ಲಿಯ ಸ್ಥಾನಮಾನ.

ಬ. ಮಾಗಣಿ – ಕ್ಲೇಮು ಮಾಡುವವರ ಯೋಗ್ಯವಾದ ಅವಶ್ಯಕತೆಗಳು.

ಕ. ಆ ಮಾಗಣಿ ಕ್ಲೇಮು ಮಾಡುವವನು ತಂದೆಯಿಂದ ಪ್ರತ್ಯೇಕವಾಗಿದ್ದರೆ, ಅವನು ಇಲ್ಲವೆ ಅವಳು ಹೀಗೆ ಮಾಡುವುದು ಸಮರ್ಥನೀಯವಾದುದೆ.

ಡ. ಮಾಗಣಿ : ಕ್ಲೇಮು ಮಾಡುವವರ

ಅವನು ವಂತಿಗೆಯನ್ನು ಉಪಜೀವನಕ್ಕೆ ಇನ್ನೊಬ್ಬರಿಗೆ ಕೊಡುವ ಹೊಣೆಗಾರಿಕೆಯು ಇರುವುದಿಲ್ಲ. ಅವನು ಇಲ್ಲವೆ ಅವಳು ಒಂದು ವೇಳೆ ಆಸ್ತಿ ಇಲ್ಲವೆ ಆಸ್ತಿಯ ಬೆಲೆ ತೆಗೆದುಕೊಂಡಿದ್ದರೆ, ಅವರ ಮೇಲೆ ಇರುವ ಹೊಣೆಗಾರಿಕೆಯನ್ನು ಜಾರಿ ಮಾಡಿದರೆ ಹೊಣೆಗಾರಿಕೆಯ ವಂತಿಗೆ ಕೊಡುವುದನ್ನು ಜಾರಿ ಮಾಡಿದರೆ ಅದು ಅವನಿಗೆ ಇಲ್ಲವೆ ಅವಳಿಗೆ ಈ ಭಾಗದಲ್ಲಿ ಜೀವನಕ್ಕೆ ಕೊಡಬೇಕಾದುದಕ್ಕಿಂತ ಕಡಿಮೆಯಾದರೆ, ಅವನು ಇಲ್ಲವೆ ಅವಳು ಬೇರೆಯವರ ಉಪಜೀವನಕ್ಕೆ ಕೊಡುವ ಅವಶ್ಯಕತೆಯೆ ಇಲ್ಲ.

(೧೫೪)

**ಜೀವನಾಂಶ ಮೊಬಲಗು**

೧. ಒಟ್ಟು ಜೀವನಾಂಶ ಮೊಬಲಗನ್ನು ಗೊತ್ತುಮಾಡುವಾಗ, ಹೆಂಡತಿಗೆ ಮಕ್ಕಳಿಗೆ ಇಲ್ಲವೆ ವಯಸ್ಸಾದ ಮುಪ್ಪಿನ ತಂದೆ ತಾಯಿಗಳಿಗೆ ಅದನ್ನು ಈ ಭಾಗದ ಅಡಿಯಲ್ಲಿ ಕೊಡುವಾಗ ಈ ಕೆಳಗಣ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

**ಭಾಗ–೩(ಅ) ಕಲಂ–೬ ಪುಟ–೧೩**

ಅ. ಪಕ್ಷಗಾರರ ಸಮಾಜದಲ್ಲಿಯ ಸ್ಥಾನಮಾನ.

ಬ. ಮಾಗಣಿ– ಕ್ಲೇಮು ಮಾಡುವವರ ಯೋಗ್ಯವಾದ ಅವಶ್ಯಕತೆಗಳು.

ಕ. ಆ ಮಾಗಣಿ– ಕ್ಲೇಮು ಮಾಡುವವನು ತಂದೆಯಿಂದ ಪ್ರತ್ಯೇಕವಾಗಿದ್ದರೆ, ಅವನು ಇಲ್ಲವೆ ಅವಳು ಹೀಗೆ ಮಾಡುವುದು ಸಮರ್ಥನೀಯವಾದುದೆ.

ಡ. ಮಾಗಣಿ– ಕ್ಲೇಮು ಮಾಡುವವರ

ಆಸ್ತಿಯ ಮೌಲ್ಯ ಮತ್ತು ಅದರಿಂದ ಯಾವುದೇ ಉತ್ಪನ್ನ ಬರುತ್ತಿದ್ದರೆ.

ಇ. ಎಷ್ಟು ಜನರಿಗೆ ಉಪಜೀವನಕ್ಕೆ ಈ ಭಾಗದ ಉಪಬಂಧ'ಗಳ ಅನ್ವಯಕೊಡಬೇಕಾಗುವುದು.

೨. ಉಪಜೀವನದ ಒಟ್ಟು ಮೊಬಲಗನ್ನು ಈ ಭಾಗದ ಅಡಿಯಲ್ಲಿ ಆತನ ಮೇಲೆ ಅವಲಂಬಿತರಿಗೆ ಕೊಡಬೇಕಾದ, ಕೆಳಗಣ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಅ. ಮೃತನ ಆಸ್ತಿಯ ನಿವ್ವಳ ಮೌಲ್ಯ, ಸಾಲಗಳು, ಮರುಪಾವತಿಯ ಬಗೆಗೆ ವ್ಯವಸ್ಥೆ ಮಾಡಿದ ನಂತರ

ಬ. ಮೃತನು ಯಾವುದೇ ಮೃತ್ಯುಪತ್ರ ಮಾಡಿ ಇಟ್ಟಿದ್ದರೆ, ಅದರಲ್ಲಿ ಅವಲಂಬಿತರಿಗೆ ಯಾವುದೇ ವ್ಯವಸ್ಥೆ ಮಾಡಿದ್ದರೆ.

ಕ. ಸಮಾಜದಲ್ಲಿ, ಮೃತನ ಸ್ಥಾನಮಾನ ಮತ್ತು ಅವನ ಅವಲಂಬಿತರ ಸ್ಥಾನಮಾನ.

ಡ. ಜೀವನಾಂಶ ಪಡೆಯುವವನ ಹಾಗೂ ಜೀವನಾಂಶ ಕೊಡುವವರ ನಡುವಿನ ಸಂಬಂಧವು ಯಾವ ತಲೆಮಾರಿನಲ್ಲಿರುವುದು.

ಇ. ಅವಲಂಬಿತರ ಯೋಗ್ಯವಾದ ಅವಶ್ಯಕತೆಗಳು.

ಎಫ್. ಮೃತನ ಹಾಗೂ ಅವಲಂಬಿತರ ಹಿಂದಿನ ಸಂಬಂಧ.

ಜಿ. ಅವನ ಇಲ್ಲವೆ ಅವಳ ಆಸ್ತಿಯ ಮೌಲ್ಯ ಮತ್ತು ಅದರಿಂದ ಯಾವುದೇ ಉತ್ಪನ್ನವು ಬರುತ್ತಿದ್ದರೆ ಇಲ್ಲವೆ ಅವನ ಇಲ್ಲವೆ ಅವಳ ಸ್ವಂತ ಗಳಿಕೆಯಿಂದ ಬರುವ ಹಣ ಇಲ್ಲವೆ ಬೇರೆ ಇನ್ನಾವುದೋ ಮೂಲದಿಂದ ಬರುವ

ಆಸ್ತಿಯ ಮೌಲ್ಯ ಮತ್ತು ಅದರಿಂದ ಯಾವುದೇ ಉತ್ಪನ್ನ ಬರುತ್ತಿದ್ದರೆ.

ಭಾಗ–೧೩
ಕಲಂ–೧
ಪುಟ–೧೨

ಇ. ಎಷ್ಟು ಜನರ ಜೀವನಕ್ಕೆ ಈ ಭಾಗದ ಉಪಬಂಧಗಳ ಅನ್ವಯ ಕೊಡಬೇಕಾಗುವುದು.

೨. ಉಪಜೀವನದ ಒಟ್ಟು ಮೊಬಲಗನ್ನು ಈ ಭಾಗದಡಿಯಲ್ಲಿ ಆತನ ಮೇಲೆ ಅವಲಂಬಿತರಿಗೆ ಕೊಡಬೇಕಾದಾಗ ಕೆಳಗಣ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಅ. ಮೃತನ ಆಸ್ತಿಯ ನಿವ್ವಳ ಮೌಲ್ಯ ಸಾಲಗಳ ಮರುಪಾವತಿಗಳ ಬಗ್ಗೆ ವ್ಯವಸ್ಥೆ ಮಾಡಿದ ನಂತರ.

ಬ. ಮೃತನು ಯಾವುದೇ ಮೃತ್ಯುಪತ್ರ ಮಾಡಿ ಇಟ್ಟಿದ್ದರೆ, ಅದರಲ್ಲಿ ಅವಲಂಬಿತರಿಗೆ ಯಾವುದೇ ವ್ಯವಸ್ಥೆ ಮಾಡಿದ್ದರೆ.

ಕ. ಸಮಾಜದಲ್ಲಿ ಮೃತನ ಸ್ಥಾನ – ಮಾನ ಹಾಗೂ ಅವನ ಅವಲಂಬಿತರ ಸ್ಥಾನಮಾನ.

ಡ. ಜೀವನಾಂಶ ಪಡೆಯುವವನ ಹಾಗೂ ಜೀವನಾಂಶ ಕೊಡುವವರ ನಡುವಿನ ಸಂಬಂಧವು ಯಾವ ತಲೆಮಾರಿನಲ್ಲಿ ಇರುವುದು.

ಇ. ಅವಲಂಬಿತರ ಯೋಗ್ಯವಾದ ಅವಶ್ಯಕತೆಗಳು.

ಎಫ್. ಮೃತನ ಹಾಗೂ ಅವಲಂಬಿತರ ಹಿಂದಿನ ಸಂಬಂಧ.

ಜಿ. ಅವನ ಇಲ್ಲವೆ ಅವಳ ಆಸ್ತಿಯ ಮೌಲ್ಯ ಮತ್ತು ಅದರಿಂದ ಯಾವುದೇ ಉತ್ಪನ್ನವು ಬರುತ್ತಿದ್ದರೆ ಇಲ್ಲವೆ ಅವನ ಇಲ್ಲವೆ ಅವಳ ಸ್ವಂತ ಗಳಿಕೆಯಿಂದ

ಉತ್ಪನ್ನ.

ಎಚ್.ಉಪಜೀವನಕ್ಕೆ ಈ ಭಾಗದಲ್ಲಿ ಅವಲಂಬಿತರ ಸಂಖ್ಯೆ.

ಆಯ್.ವಿಧವೆಯಾಗಿದ್ದರೆ ಅವಳ ನಡತೆ.

(೧೫೬)

**೧೩೩. ಜೀವನಾಂಶ ಮೊಬಲಗನ್ನು ನಿರ್ಧರಿಸುವದು ನ್ಯಾಯಾಲಯದ ವಿವೇಚನೆಗೆ ಇರತಕ್ಕದ್ದು –**

೧. ಕಲಂ ೧೩೨ ಉಪಕಲಂ (೧) ಇಲ್ಲವೆ (೨) ಈ ಭಾಗದ ಉಪ ಬಂಧಗಳಿಗೆ ಅನ್ವಯವಾಗುವಂತೆ ಇವೆಲ್ಲವುಗಳನ್ನು ಗಮನಿಸಿ ಅವು ಎಷ್ಟರವಮಟ್ಟಿಗೆ ಅನ್ವಯವಾಗುತ್ತವೆಯೋ ಅಷ್ಟರಮಟ್ಟಿಗೆ ಜೀವನಾಂಶದ ಮೊಬಲಗನ್ನು ನಿರ್ಧರಿಸುವುದು ನ್ಯಾಯಾಲಯದ ವಿವೇಚನೆಗೆ ಬಿಡತಕ್ಕದ್ದು.

೨. ಹೆಣ್ಣುಮಗಳ, ಆಕೆಯ ಮದುವೆಯ ಖರ್ಚಿಗೆ ಅವನು ಮೃತ್ಯುಪತ್ರವಿಲ್ಲದೆ ತೀರಿಕೊಂಡಿದ್ದರೆ, ಅಂಥವನ ಆಸ್ತಿಯಲ್ಲಿ ಅವಳಿಗೆ ಸಿಗಬಹುದುದಾಗಿದ್ದ ಆಸ್ತಿಯ ಅರ್ಧ ಆಸ್ತಿಯ ಮೌಲ್ಯಕ್ಕೆ ಹೆಚ್ಚಾಗಿದಂತೆ ಆಕೆಯ ಮದುವೆ ಖರ್ಚು ಕೊಡಬೇಕಾಗುತ್ತದೆ.

(೧೫೭)

**೧೩೪. ಬದಲಾದ ಸಂದರ್ಭಕ್ಕೆ ಅನುಸಾರವಾಗಿ ಜೀವನಾಂಶದ ಮೊಬಲಗನ್ನು ಹೆಚ್ಚು ಕಡಿಮೆ ಮಾಡಬಹುದು –** ಈ ಅಧಿನಿಯಮವು ಜಾರಿಯಲ್ಲಿ ಬರುವ ಪೂರ್ವದಲ್ಲಿ ಇಲ್ಲವೆ ಜಾರಿಯಲ್ಲಿ ಬಂದನಂತರ ನ್ಯಾಯಾಲಯದ ಡಿಕ್ರಿ ಮೂಲಕ ಇಲ್ಲವೆ ಒಪ್ಪಿಗೆ ಕರಾರಿನ ಮೇಲೆ

ಬರುವ ಹಣ ಇಲ್ಲವೆ ಬೇರೆ ಇನ್ನಾವುದೋ ಮೂಲದಿಂದ ಬರುವ ಉತ್ಪನ್ನ.

ಎಚ್. ಉಪಜೀವನಕ್ಕೆ ಈ ಭಾಗದಲ್ಲಿ ಹಕ್ಕುಳ್ಳ ಅವಲಂಬಿತರ ಸಂಖ್ಯೆ.

ಆಯ್.ವಿಧವೆಯಾಗಿದ್ದರೆ ಅವಳ ನಡತೆ.

(೧೫೫)

**೧೩೩. ಜೀವನಾಂಶದ ಮೊಬಲಗನ್ನು ನಿರ್ಧರಿಸುವುದು ನ್ಯಾಯಾಲಯದ ವಿವೇಚನದೆ ಇರತಕ್ಕದ್ದು –**

(೧) ಕಲಂ ೧೩೨ ಉಪಕಲಂ ೧ ಇಲ್ಲವೆ ೨ ಈ ಭಾಗದ ಉಪಬಂಧಗಳಿಗೆ ಅನ್ವಯವಾಗುವಂತೆ, ಇವೆಲ್ಲವುಗಳನ್ನು ಗಮನಿಸಿ ಅವು ಎಷ್ಟರವಮಟ್ಟಿಗೆ ಅನ್ವಯವಾಗುವುವೋ ಅಷ್ಟರ ಮಟ್ಟಿಗೆ ಜೀವನಾಂಶ ಮೊಬಲಗನ್ನು ನಿರ್ಧರಿಸುವುದು ನ್ಯಾಯಾಲಯದ ವಿವೇಚನೆಗೆ ಬಿಡತಕ್ಕದ್ದು.

**ಭಾಗ–೩(ಅ) ಕಲಂ–೬(೨) ಪುಟ–೧೩**

೨. ಮದುವೆಯಾಗದ ಹೆಣ್ಣುಮಗಳು, ಆಕೆಯ ಮದುವೆಯ ಖರ್ಚಿಗೆ ಅವನು ಮೃತ್ಯುಪತ್ರವಿಲ್ಲದೆ ತೀರಿಕೊಂಡಿದ್ದರೆ ಅಂಥ ಆಸ್ತಿಯಲ್ಲಿ ಅವಳಿಗೆ ಸಿಗಬೇಕಾಗಿದ್ದ ಆಸ್ತಿಯ ಕಿಮ್ಮತ್ತಿಗೆ ಹೆಚ್ಚಾಗದಂತೆ ಆಕೆಯ ಮದುವೆಯ ಖರ್ಚು ಕೊಡಬೇಕಾಗುತ್ತದೆ.

(೧೫೬)

(೧೫೭)

**೧೩೪. ಬದಲಾದ ಸಂದರ್ಭಕ್ಕೆ ಅನುಸಾರವಾಗಿ ಜೀವನಾಂಶದ ಮೊಬಲಗನ್ನು ಹೆಚ್ಚು ಕಡಿಮೆ ಮಾಡಬಹುದು –** ಈ ಅಧಿನಿಯಮವು ಜಾರಿಯಲ್ಲಿ ಬರುವ ಪೂರ್ವದಲ್ಲಿ ಇಲ್ಲವೆ

ಜೀವನಾಂಶದ ಮೊಬಲಗನ್ನು ನಿರ್ದಿಷ್ಟಪಡಿಸದ್ದರೆ ಅದನ್ನು ನಂತರ ಬದಲಾವಣೆ ಮಾಡಬಹುದು. ಒಂದು ವೇಳೆ ಅಂತಹ ಸಂದರ್ಭದಲ್ಲಿ ಮಹತ್ವದ ಬದಲಾವಣೆಗಳಾದರೆ, ಅಂತಹ ಬದಲಾವಣೆಗಳು ಸಮರ್ಥನೀಯವಾದರೆ ಆಗ ಹೆಚ್ಚು ಮಾಡಬಹುದು.

ಜಾರಿಯಲ್ಲಿ ಬಂದ ನಂತರ ನ್ಯಾಯಾಲಯದ ಡಿಕ್ರಿ ಮೂಲಕ ಇಲ್ಲವೆ ಒಪ್ಪಿಗೆ ಕರಾರುಗಳ ಮೇಲೆ ಜೀವನಾಂಶದ ಮೊಬಲಗನ್ನು ಗೊತ್ತುಪಡಿಸಿದ್ದರೆ ಅವನ್ನು ನಂತರ ಬದಲಾವಣೆ ಮಾಡಬಹುದು. ಒಂದು ವೇಳೆ ಅಂಥ ಸಂದರ್ಭದಲ್ಲಿ ಮಹತ್ವದ ಬದಲಾವಣೆಗಳಾದರೆ, ಅಂತಹ ಬದಲಾವಣೆಯು ಸಮರ್ಥನೀಯವಾದರೆ ಆಗ ಹೆಚ್ಚು ಕಡಿಮೆ ಮಾಡಬಹುದು.

(೧೫೮)

೧೩೫. **ಸಾಲದ ಮರುಪಾವತಿಗೆ ಪ್ರಾಶಸ್ತ್ಯವಿದೆ –** ಈ ಭಾಗದಲ್ಲಿ ಜೀವನಾಂಶಕ್ಕೆ ಯಾರು ಅವಲಂಬಿತರು ಇರುತ್ತಾರೋ ಅವರಿಗಿಂತ ಹೆಚ್ಚಾಗಿ ಈ ಭಾಗದ ಉಪಬಂಧಗಳಿಗೆ ಒಳಪಟ್ಟ ಸಾಲದ ಮರುಪಾವತಿಗೆ ಹೆಚ್ಚಿನ ಪ್ರಾಶಸ್ತ್ಯವಿರುತ್ತದೆ.

(೧೫೯)

೧೩೬. **ಜೀವನಾಂಶವನ್ನು ಯಾವಾಗ ಭೋಜಾ ಇಡಬೇಕು** – ಅವಲಂಬಿತರ ಜೀವನಕ್ಕಾಗಿ ಈ ಭಾಗದ ಅನ್ವಯ ಹಕ್ಕು ಇದ್ದರೆ ಅದು ಮೃತನ ಆಸ್ತಿಯ ಮೇಲೆ ಇಲ್ಲವೆ ಆಸ್ತಿಯ ಯಾವುದೇ ಭಾಗದ ಮೇಲೆ ಭೋಜಾ ಆಗುವುದಿಲ್ಲ. ಭೋಜಾ ಇಡಬೇಕಿದ್ದರೆ ಅದು ಮೃತನ ಮೃತ್ಯುಪತ್ರದ ಮೂಲಕ ಮಾಡಿದ್ದರೆ ಇಲ್ಲವೆ ನ್ಯಾಯಾಲಯದ ಡಿಕ್ರಿಯಿಂದ ಇಲ್ಲವೆ ಆ ಆಸ್ತಿಯ ಮಾಲೀಕರು ಇಲ್ಲವೆ ಆಸ್ತಿಯ ಭಾಗದ ಮಾಲೀಕರ ಇಲ್ಲವೆ ಇನ್ನಾವುದೇ ಕರಾರಿನಿಂದ ಆಗಿದ್ದರೆ ಮಾತ್ರ ಭೋಜಾ ಕೂಡ್ರಿಸಲು ಬರುತ್ತದೆ.

(೧೫೮)

೧೩೬. **ಜೀವನಾಂಶವನ್ನು ಯಾವಾಗ ಭೋಜಾ ಇಡಬೇಕು** ಅವಲಂಬಿತರ ಜೀವನಕ್ಕೆ ಈ ಭಾಗದ ಅನ್ವಯ ಹಕ್ಕು ಇದ್ದರೆ ಅದು ಮೃತನ ಆಸ್ತಿಯ ಮೇಲೆ ಇಲ್ಲವೆ ಆತನ ಆಸ್ತಿಯ ಯಾವುದೇ ಭಾಗದ ಮೇಲೆ ಭೋಜಾ ಆಗುವುದಿಲ್ಲ. ಭೋಜಾ ಇಡಬೇಕೆಂದರೆ ಅದು ಮೃತನ ಮೃತ್ಯುಪತ್ರದ ಮೂಲಕ ಮಾಡಿದ್ದರೆ, ಇಲ್ಲವೆ ನ್ಯಾಯಾಲಯದ ಡಿಕ್ರಿಯಿಂದ ಇಲ್ಲವೆ ಆಸ್ತಿ ಮಾಲೀಕರು ಇಲ್ಲವೆ ಆಸ್ತಿಯ ಭಾಗದ ಮಾಲೀಕರು ಇಲ್ಲವೆ ಇನ್ನಾವುದೋ ಕರಾರಿನಿಂದ ಆಗಿದ್ದರೆ ಮಾತ್ರ ಭೋಜಾ ಕೂಡ್ರಿಸಲು ಬರುತ್ತದೆ.

**ಭಾಗ–೩(ಅ) ಕಲಂ–೯ ಪುಟ–೧೪**

(೧೬೦)

**೧೩೭. ಮೂರನೆಯ ವ್ಯಕ್ತಿಯು ಜೀವನಾಂಶಕ್ಕೆ ಹಕ್ಕುಳ್ಳವನಾಗಿದ್ದರೆ ವರ್ಗಾಯಿಸುವುದು –** ಒಂದು ಆಸ್ತಿಯ ಮೇಲೆ ಒಬ್ಬ ವ್ಯಕ್ತಿಗೆ ಜೀವನಾಂಶ ಪಡೆಯುವ ಹಕ್ಕು ಇದ್ದರೆ ಆ ಆಸ್ತಿ ಇಲ್ಲವೆ ಆ ಆಸ್ತಿಯ ಒಂದು ಭಾಗವು ವರ್ಗಾಯಿಸಲ್ಪಟ್ಟಿದ್ದರೆ ಈ ಜೀವನಾಂಶ ಪಡೆಯುವ ಹಕ್ಕನ್ನು ಯಾರ ಹೆಸರಿಗೆ ಆ ಆಸ್ತಿ ವರ್ಗಾಯಿಸಿದೆಯೋ ಅವರ ವಿರುದ್ಧ ಜಾರಿ ಮಾಡಬಹುದು. ಆ ರೀತಿ ವರ್ಗಾಯಿಸಿದವರಿಗೆ ಯಾರ ಹೆಸರಿಗೆ ವರ್ಗಾಯಿಸಿದೆಯೋ ಅವರಿಗೆ ಆಸ್ತಿಯ ಮೇಲೆ ಇರುವ ಅವರ ಹಕ್ಕು ಗೊತ್ತಿರಬೇಕು ಮತ್ತು ಅಂತಹ ಪ್ರಕರಣದಲ್ಲಿ ಈ ಅಧಿನಿಯಮವನ್ನು ಪಾಸುಮಾಡದಿದ್ದರೆ ಯಾವ ರೀತಿ ಬಾಧ್ಯಸ್ಥವಾಗುತ್ತಿತ್ತೋ ಅಷ್ಟರವಟ್ಟಿಗೆ ಆ ಹಕ್ಕನ್ನು ಜಾರಿಮಾಡಬಹುದು.

(೧೬೧)

**ಭಾಗ ix - ಸಂಕೀರ್ಣ**

**೧೩೮. ನಿಯಮ ಮಾಡುವ ಅಧಿಕಾರವು**

(೧) ಈ ಅಧಿನಿಯಮದ ಉದ್ದೇಶವನ್ನು ಜಾರಿಮಾಡಲು ಸರಕಾರವು ನಿಯಮಗಳನ್ನು ಮಾಡಬಹುದು.

೨. ಅವುಗಳಲ್ಲಿ ವಿಶೇಷವಾಗಿ ಮತ್ತು ಈ ಕೆಳಗಿನವುಗಳ ಅಧಿಕಾರಗಳಿಗೆ ವ್ಯತಿರಿಕ್ತವಾಗದಂತೆ ನಿಯಮಗಳನ್ನು ನಿರ್ಧರಿಸಬಹುದು.

I ಧರ್ಮದ ರೂಢಿ ಸಂಪ್ರದಾಯದಂತೆ ಲಗ್ನವಾದರೆ ಅದನ್ನು ಧಾರ್ಮಿಕ ಮದುವೆಯ ರಿಜಿಸ್ಟರದಲ್ಲಿ ಸೇರಿಸುವಂತಹದಿದ್ದರೆ ಸಂಬಂಧಿಸಿದ ವಿವರಗಳನ್ನು ಮತ್ತು ಯಾವ ರೀತಿ

(೧೫೯)

**೧೩೭. ಮೂರನೆಯ ವ್ಯಕ್ತಿಯ ಜೀವನಾಂಶಕ್ಕೆ ಹಕ್ಕುಳ್ಳವನಾಗಿದ್ದರೆ – ವರ್ಗಾಯಿಸುವುದು.** ಒಂದು ಆಸ್ತಿಯ ಮೇಲೆ ಒಬ್ಬ ವ್ಯಕ್ತಿಗೆ ಜೀವನಾಂಶ ಪಡೆಯುವ ಹಕ್ಕಿದ್ದರೆ ಆ ಆಸ್ತಿಯು ಇಲ್ಲವೆ ಆ ಆಸ್ತಿಯ ಒಂದು ಭಾಗವು ವರ್ಗಾಯಿಸಲ್ಪಟ್ಟಿದ್ದರೆ ಈ ಜೀವನಾಂಶ ಪಡೆಯುವ ಹಕ್ಕನ್ನು ಯಾರ ಹೆಸರಿಗೆ ಆಸ್ತಿ ವರ್ಗಾಯಿಸಿದೆಯೋ ಅವರ ವಿರುದ್ಧ ಜಾರಿಮಾಡಬಹುದು. ಆ ರೀತಿ ಯಾರ ಹೆಸರಿಗೆ ವರ್ಗಾಯಿಸಿದೆಯೋ ಅವರಿಗೆ ಆ ಆಸ್ತಿಯ ಮೇಲೆ ಇರುವ ಅವರ ಹಕ್ಕು ಗೊತ್ತಿರಬೇಕು ಮತ್ತು ಅಂತಹ ಪ್ರಕರಣದಲ್ಲಿ ಈ ಅಧಿನಿಯಮವನ್ನು ಪಾಸು ಮಾಡದಿದ್ದರೆ ಯಾವ ರೀತಿ ಬಾಧ್ಯಸ್ಥವಾಗುತ್ತಿತ್ತೋ ಅಷ್ಟರವಟ್ಟಿಗೆ ಆ ಹಕ್ಕನ್ನು ಜಾರಿಮಾಡಬಹುದು.

(೧೬೦)

**ಭಾಗ ix - ಸಂಕೀರ್ಣ**

**೧೩೮. ನಿಯಮಗಳನ್ನು ಮಾಡುವ ಅಧಿಕಾರವು**

(೧) ಪ್ರಾಂತೀಯ ಸರಕಾರವು ಈ ಅಧಿನಿಯಮದ ಉದ್ದೇಶ ಜಾರಿಮಾಡುವ ಕುರಿತು ನಿಯಮಗಳನ್ನು ರಚಿಸಬಹುದು.

೨. ಅವುಗಳಲ್ಲಿ ವಿಶೇಷವಾಗಿ ಈ ಕೆಳಗಿನವುಗಳ ಅಧಿಕಾರಗಳಿಗೆ ವ್ಯತಿರಿಕ್ತವಾಗದಂತೆ ನಿಯಮಗಳನ್ನು ರಚಿಸಬಹುದು.

I ಧರ್ಮರೂಢಿ, ಸಂಪ್ರದಾಯದಂತೆ ಲಗ್ನವಾದರೆ ಅದನ್ನು ಧಾರ್ಮಿಕ ಮದುವೆಯ ರಿಜಿಸ್ಟರದಲ್ಲಿ ಸೇರಿಸುವಂತಿದ್ದರೆ ಸಂಬಂಧಿಸಿದ

ಹಾಗೂ ಯಾವ ಸಂದರ್ಭಗಳಲ್ಲಿ ಆ ರಿಜಿಸ್ಟರದಲ್ಲಿ ಅವುಗಳನ್ನು ಸೇರಿಸಬೇಕು ಎಂಬುದರ ವಿವರ ಕುರಿತು.

II ಯಾವ ಕ್ಷೇತ್ರ ಮತ್ತು ಯಾವ ಪ್ರಕರಣಗಳಲ್ಲಿ ಹಿಂದೂ ಸಂಪ್ರದಾಯದ ಮದುವೆಗಳನ್ನು ಕಡ್ಡಾಯವಾಗಿ ರಿಜಿಸ್ಟರದಲ್ಲಿ ಸೇರಿಸಬೇಕು ಮತ್ತು ಅದಕ್ಕೆ ವ್ಯತಿರಿಕ್ತವಾಗಿ ಯಾರಾದರೂ ನಡೆಯಿಸಿಕೊಂಡರೆ ಯಾವ ಶಿಕ್ಷೆ ವಿಧಿಸಬೇಕೆಂಬುದನ್ನು ಕುರಿತು –

III ಯಾವ ಕ್ಷೇತ್ರಕ್ಕೆ ಮದುವೆಯ ರಿಜಿಸ್ಟ್ರಾರರನ್ನು ನೇಮಕ ಮಾಡಬೇಕು ಮತ್ತು ಅವರ ಈ ಕರ್ತವ್ಯ ಹಾಗೂ ಅವರು ನಿರ್ವಹಿಸಬೇಕಾದ ಕಾರ್ಯಗಳು.

IV ಯಾವ ರೀತಿಯಿಂದ ಹಿಂದೂ ಧಾರ್ಮಿಕ ಮದುವೆಯ ರಿಜಿಸ್ಟರ ಮತ್ತು ಹಿಂದೂ ನಾಗರಿಕ (ಸಿವಿಲ್) ಮದುವೆಯ ಪುಸ್ತಕ ಇವುಗಳನ್ನು ಇಡಬೇಕು ಮತ್ತು ಕಲಂ ೧೨ರ ಕೆಳಗೆ ಮದುವೆಯ ನೋಟೀಸನ್ನು ಯಾವರೀತಿ ಪ್ರಕಟಿಸಬೇಕೆಂಬುದನ್ನು ಕುರಿತು.

V. ಕಲಂ ೨೧ರ ಅನ್ವಯ ಅರ್ಜಿಯ ಬಗ್ಗೆ ನೋಟೀಸು ಯಾವ ರೀತಿ ಕೊಡಬೇಕೆಂಬುದನ್ನು ಕುರಿತು.

VI ಸಿವಿಲ್ ಲಗ್ನ ಮಾಡುವ ಕುರಿತು ಎಷ್ಟು ಶುಲ್ಕ ಕೊಡಬೇಕು.

ಹಿಂದೂ ಮದುವೆ ರಿಜಿಸ್ಟ್ರಾರ್ ಅವರು ಮಾಡುವ ಇತರ ಕೆಲಸ ಹಾಗೂ ಕರ್ತವ್ಯ ಕುರಿತು.

VII ಹಿಂದೂ ಧಾರ್ಮಿಕ ಲಗ್ನದ ವಿವರಗಳನ್ನು ಮತ್ತು ಯಾವ ರೀತಿ ಯಾವ ಸಂದರ್ಭಗಳಲ್ಲಿ ಅವುಗಳನ್ನು ಆ ರಿಜಿಸ್ಟರದಲ್ಲಿ ಸೇರಿಸಬೇಕೆಂಬುದನ್ನು ಕುರಿತು.

II. ಯಾವ ಕ್ಷೇತ್ರ ಮತ್ತು ಯಾವ ಪ್ರಕರಣಗಳಲ್ಲಿ ಹಿಂದೂ ಸಂಪ್ರದಾಯದ ಮದುವೆಗಳನ್ನು ಕಡ್ಡಾಯವಾಗಿ ರಿಜಿಸ್ಟರದಲ್ಲಿ ಸೇರಿಸಬೇಕು ಮತ್ತು ಅದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡರೆ ಯಾವ ಶಿಕ್ಷೆ ವಿಧಿಸಬೇಕೆಂಬುದನ್ನು ಕುರಿತು.

III. ಯಾವ ಕ್ಷೇತ್ರಕ್ಕೆ ಮದುವೆಯ ರಿಜಿಸ್ಟ್ರಾರ್ ಅವರನ್ನು ನೇಮಕ ಮಾಡಬೇಕು ಅವರ ಕರ್ತವ್ಯ ಹಾಗೂ ನಿರ್ವಹಿಸಬೇಕಾದ ಕಾರ್ಯಗಳು.

IV. ಯಾವ ರೀತಿಯಿಂದ ಹಿಂದೂ ಧಾರ್ಮಿಕ ಮದುವೆಯ ರಿಜಿಸ್ಟರ ಮತ್ತು ಹಿಂದೂ ಸಿಫಿಲ್ ಮದುವೆಯ ಪುಸ್ತಕ ಇವುಗಳನ್ನು ಇಡಬೇಕು ಮತ್ತು ಕಲಂ ೧೨ರ ಕೆಳಗೆ ಮದುವೆಯ ನೋಟೀಸನ್ನು ಯಾವ ರೀತಿ ಪ್ರಕಟಿಸ ಬೇಕೆಂಬುದನ್ನು ಕುರಿತು.

V. ಕಲಂ ೨೧ರ ಅನ್ವಯ ಅರ್ಜಿಯ ಬಗ್ಗೆ ನೋಟೀಸನ್ನು ಯಾವ ರೀತಿ ಕೊಡಬೇಕೆಂಬುದನ್ನು ಕುರಿತು.

VI. ಸಿಫಿಲ್ ಲಗ್ನಮಾಡುವ ಕುರಿತು ಎಷ್ಟು ಶುಲ್ಕ ಕೊಡಬೇಕು ಮದುವೆಯ ರಿಜಿಸ್ಟ್ರಾರ ಅವರು ಮಾಡುವ ಇತರ ಕೆಲಸ ಹಾಗೂ ಕರ್ತವ್ಯ ಕುರಿತು.

VII. ಹಿಂದೂ ಧಾರ್ಮಿಕ ಲಗ್ನದ ರಿಜಿಸ್ಟರದಿಂದ ಅವುಗಳ ನಕಲು ಪ್ರತಿ ಪಡೆಯಲು ಮತ್ತು ರಿಜಿಸ್ಟರನ್ನು ಪರಿವೀಕ್ಷಣೆ ಮಾಡಲು ಎಷ್ಟು ಶುಲ್ಕ

ರಿಜಿಸ್ಟರದಿಂದ ಅವುಗಳ ನಕಲು ಪ್ರತಿ ಪಡೆಯುವುದಕ್ಕಾಗಿ ಮತ್ತು ರಿಜಿಸ್ಟರನ್ನು ಪರಿವೀಕ್ಷಣೆ ಮಾಡಲು ಎಷ್ಟು ಶುಲ್ಕಕೊಡಬೇಕೆನ್ನುವ ಬಗೆಗೆ ಅದರಂತೆ ಹಿಂದೂ ಸಿಫಿಲ್ ಮದುವೆ ಸರ್ಟಿಫಿಕೇಟ್ ಪುಸ್ತಕ ಇವುಗಳ ಪರಿವೀಕ್ಷಣೆಗೆ ಹಾಗೂ ಪ್ರತಿಗೆ ಕೊಡಬೇಕಾದರೆ ಎಷ್ಟು ಶುಲ್ಕ ಕೊಡಬೇಕೆಂಬುದರ ಬಗ್ಗೆ.

VIII. ಹಿಂದೂ ಧಾರ್ಮಿಕ ವಿವಾಹಗಳ ನೋಂದಣೆ ರಿಜಿಸ್ಟರ್ ಮತ್ತು ಹಿಂದೂ ಸಿವಿಲ್ ಲಗ್ನಗಳ ನೋಂದಣಿ ಪುಸ್ತಕದಲ್ಲಿ ನೋಂದಣಿ ಆದ ಬಗ್ಗೆ ಅವುಗಳ ನಕಲು ಪ್ರತಿಗಳನ್ನು ಎಷ್ಟು ದಿನಗಳ ಅಂತರದಲ್ಲಿ ಮತ್ತು ಯಾವ ನಮೂನೆಯಲ್ಲಿ ಅದನ್ನು ರಿಜಿಸ್ಟ್ರಾರ ಜನರಲ್ ಆಫ್ ಜನನ ಮರಣ ಹಾಗೂ ಮದುವೆ ಇವರಿಗೆ ಕಳುಹಿಸ ಬೇಕು ಅನ್ನುವ ಕುರಿತು.

IX. ಕಲಂ ೨೪(ಅ)ದ ಕೆಳಗೆ ಮದುವೆ ಬಗ್ಗೆ ಯಾರು ಯಾವ ನಮೂನೆಯಲ್ಲಿ ಮತ್ತು ಯಾವ ಅಧಿಕಾರಿಗೆ ಇವರಿಗೆ ನೋಟೀಸು ಕೊಡಬೇಕು ಅನ್ನುವ ಕುರಿತು.

X. ದತ್ತಕವನ್ನು ನೊಂದಾಯಿಸುವ ಕುರಿತು ವಿವರಣೆ ಕುರಿತು ನಿಯಮಗಳು.

XI. ಇಂತಹ ದತ್ತಕವನ್ನು ನೊಂದಾಯಿಸುವ ಕುರಿತು ಶುಲ್ಕ.

XII. ಯಾವ ನಮೂನೆ ರೀತಿ ದತ್ತಕದ ರಿಜಿಸ್ಟರುಗಳನ್ನು ಇಡಬೇಕು ಮತ್ತು

XIII. ದತ್ತಕ ರಿಜಿಸ್ಟರದಲ್ಲಿಯ ಎಂಟ್ರಿಗಳ ಪ್ರಮಾಣಿತ ಪ್ರತಿಯನ್ನು ಯಾವರೀತಿ ಪ್ರಮಾಣಿಕರಿಸಬೇಕೆಂಬುದನ್ನು ಕುರಿತು.

ಕೊಡಬೇಕು ಅನ್ನುವ ಬಗ್ಗೆ ಅದರಂತೆ ಹಿಂದೂ ಸಿಫಿಲ್ ಮದುವೆ ಸರ್ಟಿಫಿಕೆಟ್ ಪುಸ್ತಕ ಇವುಗಳ ಪರಿವೀಕ್ಷಣೆಗೆ ಹಾಗೂ ಪ್ರತಿ ಕೊಡಬೇಕಾದರೆ ಎಷ್ಟು ಶುಲ್ಕ ಕೊಡಬೇಕೆಂಬದರ ಬಗೆಗೆ.

VIII. ಹಿಂದೂ ಧಾರ್ಮಿಕ ವಿವಾಹಗಳ ನೋಂದಣಿ ರಿಜಿಸ್ಟರ್ ಮತ್ತು ಸಿಫಿಲ್ ಲಗ್ನಗಳ ನೊಂದಣಿ ಪುಸ್ತಕದಲ್ಲಿ ನೊಂದಣಿ ಆದ ಬಗ್ಗೆ ಅವುಗಳ ನಕಲು ಪ್ರತಿಯನ್ನು ಎಷ್ಟುದಿನಗಳ ಅಂತರದಲ್ಲಿ ಮತ್ತು ಯಾವ ನಮೂನೆಯಲ್ಲಿ ಅದನ್ನು ರಿಜಿಸ್ಟ್ರಾರ ಜನರಲ್ ಆಫ್ ಜನನ ಮರಣ ಮತ್ತು ಮದುವೆ ಇವರಿಗೆ ಕಳುಹಿಸ ಬೇಕು ಅನ್ನುವ ಕುರಿತು.

IX. ಕಲಂ ೨೪ (ಅ)ದ ಕೆಳಗೆ ಮದುವೆಯ ಬಗ್ಗೆ ಯಾರು ಯಾವ ನಮೂನೆಯಲ್ಲಿ ಮತ್ತು ಯಾವ ಅಧಿಕಾರಿಗೆ ನೋಟೀಸು ಕೊಡಬೇಕೆನ್ನುವ ಕುರಿತು.

X. ದತ್ತಕವನ್ನು ನೋಂದಾಯಿಸುವ ಕುರಿತು ವಿವರಣೆ ಕುರಿತು ನಿಯಮಗಳು.

XI. ಇಂತಹ ದತ್ತಕವನ್ನು ನೊಂದಾಯಿಸುವ ಕುರಿತು ಶುಲ್ಕ.

XII. ಯಾವ ನಮೂನೆಯ ದತ್ತಕದ ರಿಜಿಸ್ಟರಗಳನ್ನು ಇಡಬೇಕು ಮತ್ತು

XIII. ದತ್ತಕ ರಿಜಿಸ್ಟರದಲ್ಲಿ ಎಂಟ್ರಿಗಳ ಪ್ರಮಾಣಿತ ಪ್ರತಿಯನ್ನು ಯಾವ ರೀತಿ ಪ್ರಮಾಣೀಕರಿಸಬೇಕೆನ್ನುವ ಕುರಿತು.

೧೩೯. **ತಿದ್ದುಪಡಿಗಳು ಮತ್ತು ನಿರಸನ –** ಮೊದಲನೆಯ ಪರಿಶಿಷ್ಟದ ಮೂರನೆಯ ಕಾಲಂದಲ್ಲಿ ಕಾಣಿಸಿದ ಅಧಿನಿಯಮಗಳನ್ನು ನಾಲ್ಕನೆಯ ಕಾಲಂನಲ್ಲಿ ಎಷ್ಟರಮಟ್ಟಿಗೆ ನಿರ್ದೇಶಿಸಿದೆಯೋ ಅಷ್ಟರಮಟ್ಟಿಗೆ ತಿದ್ದುಪಡಿಮಾಡಬಹುದು ಮತ್ತು ಎರಡನೆಯ ಪರಿಶಿಷ್ಟದಲ್ಲಿ ಮೂರನೆಯ ಕಾಲಂದಲ್ಲಿ ಕಾಣಿಸಿದ ಅಧಿನಿಯಮಗಳನ್ನು ನಾಲ್ಕನೆಯ ಕಾಲಂದಲ್ಲಿ ಎಷ್ಟರಮಟ್ಟಿಗೆ ನಿರ್ದೇಶಿಸಿದೆಯೋ ಅಷ್ಟರಮಟ್ಟಿಗೆ ನಿರಶನಗೊಳಿಸಲಾಗಿದೆ.

(೧೬೧)

೧೩೯. **ತಿದ್ದುಪಡಿಗಳು ಮತ್ತು ನಿರಶನ –** ಮೊದಲನೆಯ ಪರಿಶಿಷ್ಟದ ಮೂರನೆಯ ಕಾಲಂದಲ್ಲಿ ಕಾಣಿಸಿದ ಅಧಿನಿಯಮಗಳನ್ನು ನಾಲ್ಕನೆಯ ಕಾಲಂದಲ್ಲಿ ನಿರ್ದೇಶಿಸಿದಂತೆ ಎಷ್ಟರಮಟ್ಟಿಗೆ ನಿರ್ದೇಶಿಸಿದೆಯೋ ಅಷ್ಟರಮಟ್ಟಿಗೆ ತಿದ್ದುಪಡಿಮಾಡಬಹುದು. ಎರಡನೆಯ ಪರಿಶಿಷ್ಟದಲ್ಲಿ ಮೂರನೆಯ ಕಾಲಂದಲ್ಲಿ ಕಾಣಿಸಿದ ಅಧಿನಿಯಮಗಳನ್ನು ನಾಲ್ಕನೆಯ ಕಾಲಂನಲ್ಲಿ ಎಷ್ಟರಮಟ್ಟಿಗೆ ನಿರ್ದೇಶಿದೆಯೋ ಅಷ್ಟರಮಟ್ಟಿಗೆ ನಿರಸನಗೊಳಿಸಲಾಗಿದೆ.

೧೬೩

## ಮೊದಲನೆಯ ಪರಿಶಿಷ್ಟ

(ಕಲಂ ೧೩೯ ನೋಡಿರಿ)

**ತಿದ್ದುಪಡಿಗಳು**

| **ವರ್ಷ** | **ಸಂಖ್ಯೆ** | **ಸಂಕ್ಷಿಪ್ತ ಶಿರೋನಾಮೆ** | **ತಿದ್ದುಪಡಿಗಳು** |
|---|---|---|---|
| ೧ | ೨ | ೩ | ೪ |
| ೧೮೭೨ | ೩ | ವಿಶೇಷ ಮದುವೆಯ ಅಧಿನಿಯಮ | ೧. ಪ್ರಸ್ತಾವನೆಯಲ್ಲಿ ಮತ್ತು ಜನರು ಯಾರು ಹಿಂದೂ, ಬೌದ್ಧರು, ಶಿಖ್‌ರು ಇಲ್ಲವೆ ಜೈನ ಧರ್ಮವನ್ನು ಪಾಲಿಸುವರೊ ಈ ಪದಗಳನ್ನು ತೆಗೆದು ಹಾಕತಕ್ಕದ್ದು.<br>೨. ಕಲಂ ೨ರಲ್ಲಿಯ ಪದಗಳು ಇಲ್ಲವೆ ಯಾವ ಪ್ರತಿಯೊಬ್ಬನು ಕೆಳಗಣ ಯಾವುದೊಂದು ಧರ್ಮವನ್ನು ಅಂದರೆ ಹಿಂದೂ, ಬೌದ್ಧ, ಸಿಖ್ ಇಲ್ಲವೆ ಜೈನ ಧರ್ಮ ಇವುಗಳನ್ನು ತೆಗೆದು ಹಾಕತಕ್ಕದ್ದು.<br>೩. ಕಲಂ ೨೩, ೨೪,......೨೫ ಮತ್ತು ೨೬ ಇವುಗಳನ್ನು ನಿರಸನಗೊಳಿಸಲಾಗಿದೆ. |

**ಮೊದಲನೆಯ ಪರಿಶಿಷ್ಟ**

**(ಕಲಂ ೧೩೯ ನೋಡಿರಿ)**

**ತಿದ್ದುಪಡಿಗಳು**

| ವರ್ಷ | ಸಂಖ್ಯೆ | ಸಂಕ್ಷಿಪ್ತ ಶಿರೋನಾಮೆ | ತಿದ್ದುಪಡಿಗಳು |
|---|---|---|---|
| ೧ | ೨ | ೩ | ೪ |
| ೧೮೭೨ | ೩ | ವಿಶೇಷ ಮದುವೆಯ ಅಧಿನಿಯಮ ೧೮೭೨ | ೧. ಪ್ರಸ್ತಾವನೆಯಲ್ಲಿಯ ಪದಗಳು 'ಹಿಂದೂ ಬೌದ್ಧರು, ಸಿಖ್ ಇಲ್ಲವೆ ಜೈನ ಧರ್ಮಗಳು' ಈ ಪದಗಳನ್ನು ತೆಗೆದುಹಾಕಬೇಕು.<br>೨. ಕಲಂ ೨ರಲ್ಲಿಯ ಪದಗಳು 'ಇಲ್ಲವೆ ಯಾವ ಪ್ರತಿಯೊಬ್ಬನೂ ಯಾವುದೊಂದು ಧರ್ಮವನ್ನು ಅಂದರೆ ಹಿಂದೂ ಬೌದ್ಧರು ಸಿಖ್ ಮತ್ತು ಜೈನ ಧರ್ಮ' ಈ ಪದಗಳನ್ನು ತೆಗೆದು ಹಾಕಬೇಕು<br>೩. ಕಲಂ ೨೩, ೨೪ ಇವು ಎಷ್ಟರಮಟ್ಟಿಗೆ ಒಕ್ಕಲು ಭೂಮಿ ರಾಜ್ಯಪಾಲರ ಪ್ರಾಂತೀಯ ಸರಕಾರಗಳಲ್ಲಿ ಮತ್ತು ಕಲಂ ೨೫ ಮತ್ತು ೨೬ ಈ ಪೂರ್ಣ ಕಲಮುಗಳನ್ನು ನಿರಸನಗೊಳಿಸತಕ್ಕದ್ದು. |

೧೬೪

ಎರಡನೆಯ ಪರಿಶಿಷ್ಟ

(ಕಲಂ ೧೩೭ ನೋಡಿರಿ)

ನಿರಶನಗಳು

| ವರ್ಷ | ಸಂಖ್ಯೆ | ಚಿಕ್ಕ ಶಿರೋನಾಮೆ | ಎಷ್ಟರಮಟ್ಟಿಗೆ ನಿರಶನಗೊಳಿಸಿದೆ |
|---|---|---|---|
| ೧ | ೨ | ೩ | ೪ |
| | | ಕೇಂದ್ರ ಅಧಿನಿಯಮಗಳು | |
| ೧೮೬೬ | ೨೧ | ದೇಶಿಯರನ್ನು ಪರಿವರ್ತಿಸುವ ಮದುವೆಗಳನ್ನು ರದ್ದುಪಡಿಸುವ ಅಧಿನಿಯಮ ೧೮೬೬ | ಈ ಪೂರ್ಣ ಅಧಿನಿಯಮ ಎಲ್ಲಿಯವರೆಗೆ ಅದು ಹಿಂದುಗಳಿಗೆ ಅದರ ಉಪಬಂಧಗಳು ಹಿಂದೂವಿಗೆ ಅಸಂಗತವಾಗಿವೆಯೊ ಅಷ್ಟರಮಟ್ಟಿಗೆ ಸಂಪೂರ್ಣ ಅಧಿನಿಯಮ ........... |
| ೧೯೨೩ | ೧೨ | ಹಿಂದೂ ವಾರಸಾ (ಅನರ್ಹತೆಗಳನ್ನು ತೆಗೆದುಹಾಕುವ) ಅಧಿನಿಯಮ ೧೯೨೮ | |
| ೧೯೨೯ | ೧೭ | ಹಿಂದೂ ವಾರಸಾ ಕಾನೂನು (ತಿದ್ದುಪಡಿ) ಅಧಿನಿಯಮ ೧೯೨೯ | ಪೂರ್ಣ ಅಧಿನಿಯಮ |
| ೧೯೩೭ | ೧೮ | ಹಿಂದೂ ಹೆಣ್ಣುಮಕ್ಕಳ ಆಸ್ತಿಯ ಹಕ್ಕಿನ ಅಧಿನಿಯಮ ೧೯೩೭ | ಪೂರ್ಣ ಅಧಿನಿಯಮ |
| ೧೯೪೬ | ೧೯ | ಮದುವೆಯಾದ ಹಿಂದೂ ಹೆಣ್ಣುಮಗಳ ಪ್ರತ್ಯೇಕ ವಾಸಸ್ಥಾನ ಮತ್ತು ಜೀವನಾಂಶ ಅಧಿನಿಯಮ ೧೯೪೬ | ಪೂರ್ತಿ ಅಧಿನಿಯಮ |
| ೧೯೪೬ | ೨೮ | ಹಿಂದೂಗಳ ವಿವಾಹದ ಅನರ್ಹತೆಗಳನ್ನು ತೆಗೆದುಹಾಕುವ ಅಧಿನಿಯಮ ೧೯೪೬ ರಾಜ್ಯ ಕಾನೂನುಗಳು | |
| ೧೯೩೩ | ೨೧ | ಮದ್ರಾಸ ನಂಬೂದ್ರಿ ಅಧಿನಿಯಮ ೧೯೩೨ | ಪೂರ್ತಿ ಅಧಿನಿಯಮ |
| ೧೯೩೩ | ೨೧ | ಮದ್ರಾಸ ನಂಬೂದ್ರಿ ಅಧಿನಿಯಮ ೧೯೩೨ | ಪೂರ್ಣ ಅಧಿನಿಯಮ ಆದರೆ ಭಾಗ ೫ ಮತ್ತು ೭ಗಳಲ್ಲಿ ಕಾಣಿಸಿದುದನ್ನು ಹೊರತುಪಡಿಸಿ |
| ೧೯೩೩ | ೨೨ | ಮದ್ರಾಸ ನಂಬೂದ್ರಿ ಅಧಿನಿಯಮ ೧೯೩೨ | ಸಂಪೂರ್ಣ ಅಧಿನಿಯಮ ಭಾಗ ೫ ಮತ್ತು ೭ರಲ್ಲಿ ಕಾಣಿಸಿದವುಗಳನ್ನು ಹೊರತುಪಡಿಸಿ |
| ೧೯೪೯ | ೯ | ಮದ್ರಾಸ ಅಳಿಯ ಸಂತಾನ ಅಧಿನಿಯಮ ೧೯೪೯ | |

## ಎರಡನೆಯ ಪರಿಶಿಷ್ಟ

**(ಕಲಂ ೧೩೯ ನೋಡಿರಿ)**

**ನಿರಶನಗಳು**

| ವರ್ಷ | ಸಂಖ್ಯೆ | ಚಿಕ್ಕ ಶಿರೋನಾಮೆ | ಎಷ್ಟರಮಟ್ಟಿಗೆ ನಿರಶನಗೊಳಿಸಿದೆ |
|---|---|---|---|
| ೧ | ೨ | ೩ | ೪ |
| ೧೮೬೬ | ೨೧ | ದೇಶಿಯರನ್ನು ಪರಿವರ್ತಿಸುವ ಮದುವೆಗಳ ರದ್ದುಗೊಳಿಸುವ ಅಧಿನಿಯಮ ೧೮೬೬ | ಈ ಪೂರ್ಣ ಅಧಿನಿಯಮ ಎಲ್ಲಿಯವರೆಗೆ ಅದು ಹಿಂದೂಗಳಿಗೆ ಅದರ ಉಪಬಂಧಗಳು ಅಸಂಗತವಾಗಿವೆಯೋ ಅಷ್ಟರಮಟ್ಟಿಗೆ. |
| ೧೯೨೮ | ೧೨ | ಹಿಂದೂ ವಾರಸಾ ಅನರ್ಹತೆಯನ್ನು ತೆಗೆಹಾಕುವ ಅಧಿನಿಯಮ ೧೯೨೮ | ಸಂಪೂರ್ಣ ಆದರೆ ರಾಜ್ಯಪಾಲರ ಪ್ರಾಂತಗಳಲ್ಲಿ ಒಕ್ಕಲುತನದ ಜಮೀನುಗಳಿಗೆ ವಾರಸಾ ಇದು ಪರಿಣಾಮವನ್ನು ಉಂಟುಮಾಡುತ್ತದೆಯೋ ಅಷ್ಟನ್ನು ಹೊರತುಪಡಿಸಿ. |
| ೧೯೨೯ | ೨ | ಹಿಂದೂ ವಾರಸಾ (ತಿದ್ದುಪಡಿ) ಅಧಿನಿಯಮ ೧೯೨೯ | " " |
| ೧೯೩೭ | ೧೮ | ಹಿಂದೂ ಹೆಣ್ಣುಮಗಳ ಆಸ್ತಿಯ ಹಕ್ಕಿನ ಅಧಿನಿಯಮ ೧೯೩೭ | ಸಂಪೂರ್ಣ |
| ೧೯೪೬ | ೧೯ | ಮದುವೆಯಾದ ಹಿಂದೂ ಹೆಣ್ಣುಮಗಳ ಪ್ರತ್ಯೇಕ ವಾಸಸ್ಥಾನ ಮತ್ತು ಉಪಜೀವನ ಅಧಿನಿಯಮ ೧೯೪೬ | " " |
| ೧೯೪೬ | ೨೮ | ಹಿಂದೂ ವಿವಾಹಗಳ ಅನರ್ಹತೆಯನ್ನು ತೆಗೆದುಹಾಕುವ ಅಧಿನಿಯಮ ೧೯೪೬ | ಸಂಪೂರ್ಣ |

| ಕೊಲ್ಲಂ ವರ್ಷ | | | |
|---|---|---|---|
| ೧೧೦೦ | ೨ | ತಿರುವಾಂಕೂರು ನಾಯರ ಅಧಿನಿಯಮ ೧೧೦೦ | ಸಂಪೂರ್ಣ ಭಾಗ ೫ ಮತ್ತು ೭ರಲ್ಲಿ ಕಾಣಿಸಿದ್ದನ್ನು ಹೊರತುಪಡಿಸಿ |
| ೧೧೦೦ | ೩ | ತಿರುವಾಂಕೂರು ಇಳವಾ ಅಧಿನಿಯಮ ೧೧೦೦ | " " |
| ೧೧೦೧ | ೬ | ನಂಜನಾಡ ವೆಲ್ಲಾಳ ಅಧಿನಿಯಮ ೧೧೦೧ | " " |
| ೧೧೦೬ | ೩ | ತಿರುವಾಂಕೂರು ಮಲಯಾಳ ಬ್ರಾಹ್ಮಣ ಅಧಿನಿಯಮ ೧೧೦೬ | ಸಂಪೂರ್ಣ ಭಾಗ ೭ರಲ್ಲಿ ಕಾಣಿಸಿದ್ದನ್ನು ಹೊರತುಪಡಿಸಿ |
| ೧೧೦೮ | ೭ | ತಿರುವಾಂಕೂರು ಕ್ಷತ್ರಿಯರ ಅಧಿನಿಯಮ ೧೧೦೮ | ಸಂಪೂರ್ಣ ಅಧಿನಿಯಮ ಆದರೆ ಭಾಗ ೫ ಮತ್ತು ೭ರಲ್ಲಿ ಕಾಣಿಸಿದ್ದನ್ನು ಹೊರತುಪಡಿಸಿ |
| ೧೧೧೫ | ೭ | ತಿರುವಾಂಕೂರು ಕೃಷ್ಣವಕ ಮರುಮಕ್ಕತಾಯಿ ಅಧಿನಿಯಮ ೧೧೧೫ | " " |
| ೧೧೦೭ | ೮ | ಕೋಚಿನ್ ಥಿಯಾ ಅಧಿನಿಯಮ ೧೧೦೭ | " " |
| ೧೧೧೩ | ೧೯ | ಕೋಚಿನ್ ನಾಯರರ ಅಧಿನಿಯಮ ೧೧೧೩ | " " |
| ೧೧೧೩ | ೩೩ | ಕೋಚಿನ್ ಮರುಮಕ್ಕತ್ತಾಯಂ ಅಧಿನಿಯಮ ೧೧೧೩ | " " |
| ೧೧೧೪ | ೧೭ | ಕೋಚಿನ್ ನಂಬೂದ್ರಿ ಅಧಿನಿಯಮ ೧೧೧೪ | ಸಂಪೂರ್ಣ ಆದರೆ ೭ರಲ್ಲಿ ಕಾಣಿಸಿದ್ದನ್ನು ಹೊರತುಪಡಿಸಿ |
| ೧೧೧೫ | ೧೭ | ಕೋಚಿನ್ ಮರಿಮಕ್ಕತಾಯಂ ಥೀಯಾ ಅಧಿನಿಯಮ ೧೧೧೫ | ಸಂಪೂರ್ಣ |

**(೧೬೫ – ೬೭)**

**ಮೂರನೆಯ ಪರಿಶಿಷ್ಟ – ಮೊದಲ ವಿಭಾಗ**

**(ಕಲಂ ೫ (ಅ) ನೋಡಿರಿ) ಸಪಿಂಡ ಸಂಬಂಧ**

| ಕಾಲಂ ೧ | ಕಾಲಂ ೨ |
|---|---|
| ೧. ಮಗಳು | ೧. ಮಗ |
| ೨. ಮಗಳ ಮಗಳು | ೨. ಮಗನ ಮಗ |
| ೩. ಮಗನ ಮಗಳು | ೩. ಮಗಳ ಮಗ |
| ೪. ಮಗಳ ಮಗನ ಮಗಳು | ೪. ಮಗನ ಮಗನ ಮಗ |
| ೫. ಮಗನ ಮಗನ ಮಗಳು | ೫. ಮಗಳ ಮಗನ ಮಗ |
| ೬. ಮಗಳ ಮಗಳ ಮಗನ ಮಗಳು | ೬. ಮಗನ ಮಗಳ ಮಗನ ಮಗ |
| ೭. ಮಗಳ ಮಗನ ಮಗನ ಮಗಳು | ೭. ಮಗನ ಮಗನ ಮಗನ ಮಗ |
| ೮. ಮಗನ ಮಗಳ ಮಗನ ಮಗಳು | ೮. ಮಗಳ ಮಗಳ ಮಗನ ಮಗ |
| ೯. ಮಗನ ಮಗನ ಮಗನ ಮಗಳು | ೯. ಮಗಳ ಮಗನ ಮಗನ ಮಗ |
| ೧೦. ತಾಯಿ | ೧೦. ತಂದೆ |
| ೧೧. ಸಹೋದರಿ | ೧೧. ಸಹೋದರ |
| ೧೨. ಸಹೋದರಿಯ ಮಗಳು | ೧೨. ಸಹೋದರನ ಮಗ |
| ೧೩. ಸಹೋದರನ ಮಗಳು | ೧೩. ಸಹೋದರಿಯ ಮಗ |
| ೧೪. ಸಹೋದರಿಯ ಮಗನ ಮಗಳು | ೧೪. ಸಹೋದರನ ಮಗನ ಮಗ |
| ೧೫. ಸಹೋದರನ ಮಗನ ಮಗಳು | ೧೫. ಸಹೋದರಿಯ ಮಗನ ಮಗ |
| ೧೬. ಸಹೋದರಿಯ ಮಗಳ ಮಗನ ಮಗಳು | ೧೬. ಸಹೋದರನ ಮಗಳ ಮಗನ ಮಗ |
| ೧೭. ಸಹೋದರಿಯ ಮಗನ ಮಗನ ಮಗಳು | ೧೭. ಸಹೋದರನ ಮಗನ ಮಗನ ಮಗ |
| ೧೮. ಸಹೋದರನ ಮಗಳ ಮಗನ ಮಗಳು | ೧೮. ಸಹೋದರಿಯ ಮಗಳ ಮಗನ ಮಗ |
| ೧೯. ಸಹೋದರನ ಮಗನ ಮಗನ ಮಗಳು | ೧೯. ಸಹೋದರಿಯ ಮಗನ ಮಗನ ಮಗ |
| ೨೦. ತಾಯಿಯ ತಾಯಿ | ೨೦. ತಂದೆಯ ತಂದೆ |
| ೨೧. ತಾಯಿಯ ಸಹೋದರಿ | ೨೧. ತಂದೆಯ ಸಹೋದರ |
| ೨೨. ತಾಯಿಯ ಸಹೋದರಿಯ ಮಗಳು | ೨೨. ತಂದೆಯ ಸಹೋದರನ ಮಗ |
| ೨೩. ತಾಯಿಯ ಸಹೋದರನ ಮಗಳು | ೨೩. ತಂದೆಯ ಸಹೋದರಿಯ ಮಗ |
| ೨೪. ಸಹೋದರಿಯ ಮಗನ ಮಗಳು | ೨೪. ತಂದೆಯ ಸಹೋದರನ ಮಗನ ಮಗ |
| ೨೫. ತಾಯಿಯ ಸಹೋದರನ ಮಗನ ಮಗಳು | ೨೫. ತಂದೆಯ ಸಹೋದರಿಯ ಮಗನ ಮಗ |
| ೨೬. ತಾಯಿಯ ಸಹೋದರಿಯ ಮಗಳ ಮಗನ ಮಗಳು | ೨೬. ತಂದೆಯ ಸಹೋದರನ ಮಗಳ ಮಗನ ಮಗ |

೨೭. ತಾಯಿಯ ಸಹೋದರಿಯ ಮಗನ ಮಗನ ಮಗಳು
೨೮. ತಾಯಿಯ ಸಹೋದರನ ಮಗಳ ಮಗನ ಮಗಳು
೨೯. ತಾಯಿಯ ಸಹೋದರನ ಮಗನ ಮಗನ ಮಗಳು
೩೦. ತಂದೆಯ ತಾಯಿ
೩೧. ತಂದೆಯ ಸಹೋದರಿ
೩೨. ತಂದೆಯ ಸಹೋದರಿಯ ಮಗಳು
೩೩. ತಂದೆಯ ಸಹೋದರನ ಮಗಳು
೩೪. ತಂದೆಯ ಸಹೋದರಿಯ ಮಗನ ಮಗಳು
೩೫. ತಂದೆಯ ಸಹೋದರನ ಮಗನ ಮಗಳು
೩೬. ತಂದೆಯ ಸಹೋದರಿಯ ಮಗಳ ಮಗನ ಮಗಳು
೩೭. ತಂದೆಯ ಸಹೋದರಿಯ ಮಗನ ಮಗನ ಮಗಳು
೩೮. ತಂದೆಯ ಸಹೋದರನ ಮಗಳ ಮಗನ ಮಗಳು
೩೯. ತಂದೆಯ ಸಹೋದರನ ಮಗನ ಮಗನ ಮಗಳು
೪೦. ತಂದೆಯ ತಾಯಿಯ ತಾಯಿ
೪೧. ತಂದೆಯ ತಾಯಿಯ ಸಹೋದರ
೪೨. ತಂದೆಯ ತಾಯಿಯ ಸಹೋದರಿಯ ಮಗಳು
೪೩. ತಂದೆಯ ತಾಯಿಯ ಸಹೋದರನ ಮಗಳು
೪೪. ತಂದೆಯ ತಾಯಿಯ ಸಹೋದರಿಯ ಮಗನ ಮಗಳು
೪೫. ತಂದೆಯ ತಾಯಿಯ ಸಹೋದರನ ಮಗನ ಮಗಳು
೪೬. ತಂದೆಯ ತಾಯಿಯ ಸಹೋದರಿಯ ಮಗಳ ಮಗನ ಮಗಳು
೪೭. ತಂದೆಯ ತಾಯಿಯ ಸಹೋದರಿಯ ಮಗನ ಮಗನ ಮಗಳು

೨೭. ತಂದೆಯ ಸಹೋದರನ ಮಗನ ಮಗನ ಮಗ
೨೮. ತಂದೆಯ ಸಹೋದರಿಯ ಮಗಳ ಮಗನ ಮಗ
೨೯. ತಂದೆಯ ಸಹೋದರಿಯ ಮಗನ ಮಗನ ಮಗ
೩೦. ತಾಯಿಯ ತಂದೆ
೩೧. ತಾಯಿಯ ಸಹೋದರ
೩೨. ತಾಯಿಯ ಸಹೋದರನ ಮಗ
೩೩. ತಾಯಿಯ ಸಹೋದರಿಯ ಮಗ
೩೪. ತಾಯಿಯ ಸಹೋದರನ ಮಗನ ಮಗ
೩೫. ತಾಯಿಯ ಸಹೋದರಿಯ ಮಗನ ಮಗ
೩೬. ತಾಯಿಯ ಸಹೋದರನ ಮಗಳ ಮಗನ ಮಗ
೩೭. ತಾಯಿಯ ಸಹೋದರನ ಮಗನ ಮಗನ ಮಗ
೩೮. ತಾಯಿಯ ಸಹೋದರಿಯ ಮಗಳ ಮಗನ ಮಗ
೩೯. ತಾಯಿಯ ಸಹೋದರಿಯ ಮಗನ ಮಗನ ಮಗ
೪೦. ತಂದೆಯ ತಂದೆಯ ತಂದೆ
೪೧. ತಂದೆಯ ತಂದೆಯ ಸಹೋದರ
೪೨. ತಂದೆಯ ತಂದೆಯ ಸಹೋದರನ ಮಗ
೪೩. ತಂದೆಯ ತಂದೆಯ ಸಹೋದರಿಯ ಮಗ
೪೪. ತಂದೆಯ ತಂದೆಯ ಸಹೋದರನ ಮಗನ ಮಗ
೪೫. ತಂದೆಯ ತಂದೆಯ ಸಹೋದರಿಯ ಮಗನ ಮಗ
೪೬. ತಂದೆಯ ತಂದೆಯ ಸಹೋದರನ ಮಗಳ ಮಗನ ಮಗ
೪೭. ತಂದೆಯ ತಂದೆಯ ಸಹೋದರನ ಮಗನ ಮಗನ ಮಗ

೪೮. ತಂದೆಯ ತಾಯಿಯ ಸಹೋದರನ ಮಗಳ ಮಗನ ಮಗಳು

೪೯. ತಂದೆಯ ತಾಯಿಯ ಸಹೋದರನ ಮಗನ ಮಗನ ಮಗಳು

೫೦. ತಂದೆಯ ತಂದೆಯ ತಾಯಿ

೫೧. ತಂದೆಯ ತಂದೆಯ ಸಹೋದರಿ

೫೨. ತಂದೆಯ ತಂದೆಯ ಸಹೋದರಿಯ ಮಗಳು

೫೩. ತಂದೆಯ ತಂದೆಯ ಸಹೋದರನ ಮಗಳು

೫೪. ತಂದೆಯ ತಂದೆಯ ಸಹೋದರಿಯ ಮಗನ ಮಗಳು

೫೫. ತಂದೆಯ ತಂದೆಯ ಸಹೋದರನ ಮಗನ ಮಗಳು

೫೬. ತಂದೆಯ ತಂದೆಯ ಸಹೋದರಿಯ ಮಗಳ ಮಗನ ಮಗಳು

೫೭. ತಂದೆಯ ತಂದೆಯ ಸಹೋದರಿಯ ಮಗನ ಮಗನ ಮಗಳು

೫೮. ತಂದೆಯ ತಂದೆಯ ಸಹೋದರನ ಮಗಳ ಮಗನ ಮಗಳು

೫೯. ತಂದೆಯ ತಂದೆಯ ಸಹೋದರನ ಮಗಳ ಮಗನ ಮಗಳು

೬೦. ತಂದೆಯ ತಾಯಿಯ ತಾಯಿಯ ತಾಯಿ

೬೧. ತಂದೆಯ ತಾಯಿಯ ತಾಯಿಯ ಸಹೋದರ

೬೨. ತಂದೆಯ ತಾಯಿಯ ತಾಯಿಯ ಸಹೋದರಿಯ ಮಗಳು

೬೩. ತಂದೆಯ ತಾಯಿಯ ತಾಯಿಯ ಸಹೋದರನ ಮಗಳು

೬೪. ತಂದೆಯ ತಾಯಿಯ ತಾಯಿಯ ಸಹೋದರಿಯ ಮಗನ ಮಗಳು

೬೫. ತಂದೆಯ ತಾಯಿಯ ತಾಯಿಯ ಸಹೋದರನ ಮಗನ ಮಗಳು

೬೬. ತಂದೆಯ ತಾಯಿಯ ಸಹೋದರಿಯ ಮಗಳ ಮಗನ ಮಗಳು

೪೮. ತಂದೆಯ ತಂದೆಯ ಸಹೋದರಿಯ ಮಗಳ ಮಗನ ಮಗ

೪೯. ತಂದೆಯ ತಂದೆಯ ಸಹೋದರಿಯ ಮಗನ ಮಗನ ಮಗ

೫೦. ತಂದೆಯ ತಾಯಿಯ ತಂದೆ

೫೧. ತಂದೆಯ ತಾಯಿಯ ಸಹೋದರ

೫೨. ತಂದೆಯ ತಾಯಿಯ ಸಹೋದರನ ಮಗ

೫೩. ತಂದೆಯ ತಾಯಿಯ ಸಹೋದರಿಯ ಮಗ

೫೪. ತಂದೆಯ ತಾಯಿಯ ಸಹೋದರನ ಮಗನ ಮಗ

(೧೬೬)

೫೫. ತಂದೆಯ ತಾಯಿಯ ಸಹೋದರಿಯ ಮಗನ ಮಗ

೫೬. ತಂದೆಯ ತಾಯಿಯ ಸಹೋದರನ ಮಗಳ ಮಗನ ಮಗ

೫೭. ತಂದೆಯ ತಾಯಿಯ ಸಹೋದರನ ಮಗನ ಮಗನ ಮಗ

೫೮. ತಂದೆಯ ತಾಯಿಯ ಸಹೋದರಿಯ ಮಗಳ ಮಗನ ಮಗ

೫೯. ತಂದೆಯ ತಾಯಿಯ ಸಹೋದರಿಯ ಮಗನ ಮಗನ ಮಗ

೬೦. ತಂದೆಯ ತಂದೆಯ ತಂದೆಯ ತಂದೆ

೬೧. ತಂದೆಯ ತಂದೆಯ ತಂದೆಯ ಸಹೋದರ

೬೨. ತಂದೆಯ ತಂದೆಯ ತಂದೆಯ ಸಹೋದರನ ಮಗ

೬೩. ತಂದೆಯ ತಂದೆಯ ತಂದೆಯ ಸಹೋದರಿಯ ಮಗ

೬೪. ತಂದೆಯ ತಂದೆಯ ಸಹೋದರನ ಸಹೋದರನ ಮಗನ ಮಗ

೬೫. ತಂದೆಯ ತಂದೆಯ ತಂದೆಯ ಸಹೋದರಿಯ ಮಗನ ಮಗ

೬೬. ತಂದೆಯ ತಂದೆಯ ತಂದೆಯ ಸಹೋದರನ ಮಗಳ ಮಗನ ಮಗನ ಮಗ

೬೭. ತಂದೆಯ ತಾಯಿಯ ತಾಯಿಯ ಸಹೋದರಿಯ ಮಗನ ಮಗನ ಮಗಳು
೬೮. ತಂದೆಯ ತಾಯಿಯ ತಾಯಿಯ ಸಹೋದರನ ಮಗಳ ಮಗನ ಮಗಳು
೬೯. ತಂದೆಯ ತಾಯಿಯ ತಾಯಿಯ ಸಹೋದರನ ಮಗನ ಮಗನ ಮಗಳು
೭೦. ತಂದೆಯ ತಾಯಿಯ ತಂದೆಯ ತಾಯಿ
೭೧. ತಂದೆಯ ತಾಯಿಯ ತಂದೆಯ ಸಹೋದರಿ
೭೨. ತಂದೆಯ ತಾಯಿಯ ತಂದೆಯ ಸಹೋದರಿಯ ಮಗಳು
೭೩. ತಂದೆಯ ತಾಯಿಯ ತಂದೆಯ ಸಹೋದರನ ಮಗಳು
೭೪. ತಂದೆಯ ತಾಯಿಯ ತಂದೆಯ ಸಹೋದರಿಯ ಮಗನ ಮಗಳು
೭೫. ತಂದೆಯ ತಾಯಿಯ ತಂದೆಯ ಸಹೋದರನ ಮಗನ ಮಗಳು
೭೬. ತಂದೆಯ ತಾಯಿಯ ತಂದೆಯ ಸಹೋದರಿಯ ಮಗಳ ಮಗನ ಮಗಳು
೭೭. ತಂದೆಯ ತಾಯಿಯ ತಂದೆಯ ಸಹೋದರನ ಮಗಳ ಮಗನ ಮಗಳು
೭೮. ತಂದೆಯ ತಾಯಿಯ ತಂದೆಯ ಸಹೋದರನ ಮಗಳ ಮಗನ ಮಗಳು
೭೯. ತಂದೆಯ ತಾಯಿಯ ತಂದೆಯ ಸಹೋದರನ ಮಗನ ಮಗನ ಮಗಳು
೮೦. ತಂದೆಯ ತಂದೆಯ ತಾಯಿಯ ತಾಯಿ
೮೧. ತಂದೆಯ ತಂದೆಯ ತಾಯಿಯ ಸಹೋದರಿ
೮೨. ತಂದೆಯ ತಂದೆಯ ತಾಯಿಯ ಸಹೋದರಿಯ ಮಗಳು
೮೩. ತಂದೆಯ ತಂದೆ ತಾಯಿಯ ಸಹೋದರನ ಸಹೋದರನ ಮಗಳು
೮೪. ತಂದೆಯ ತಂದೆಯ ತಾಯಿಯ ಸಹೋದರಿಯ ಮಗನ ಮಗಳು
೮೫. ತಂದೆಯ ತಂದೆಯ ತಾಯಿಯ ಸಹೋದರನ

೬೭. ತಂದೆಯ ತಂದೆಯ ತಂದೆಯ ಸಹೋದರನ ಮಗನ ಮಗನ ಮಗ
೬೮. ತಂದೆಯ ತಂದೆಯ ತಂದೆಯ ಸಹೋದರಿಯ ಮಗಳ ಮಗನ ಮಗ
೬೯. ತಂದೆಯ ತಂದೆಯ ತಂದೆಯ ಸಹೋದರಿಯ ಮಗನ ಮಗನ ಮಗ
೭೦. ತಂದೆಯ ತಂದೆಯ ತಾಯಿಯ ತಂದೆ
೭೧. ತಂದೆಯ ತಂದೆಯ ತಾಯಿಯ ಸಹೋದರ
೭೨. ತಂದೆಯ ತಂದೆಯ ತಾಯಿಯ ಸಹೋದರನ ಮಗ
೭೩. ತಂದೆಯ ತಂದೆಯ ತಾಯಿಯ ಸಹೋದರಿಯ ಮಗ
೭೪. ತಂದೆಯ ತಂದೆಯ ತಾಯಿಯ ಸಹೋದರನ ಮಗನ ಮಗ
೭೫. ತಂದೆಯ ತಂದೆಯ ತಾಯಿಯ ಸಹೋದರಿಯ ಮಗನ ಮಗ
೭೬. ತಂದೆಯ ತಂದೆಯ ತಾಯಿಯ ಸಹೋದರನ ಮಗಳ ಮಗನ ಮಗ
೭೭. ತಂದೆಯ ತಂದೆಯ ತಾಯಿಯ ಸಹೋದರನ ಮಗನ ಮಗನ ಮಗ
೭೮. ತಂದೆಯ ತಂದೆಯ ತಾಯಿಯ ಸಹೋದರಿಯ ಮಗಳ ಮಗನ ಮಗ
೭೯. ತಂದೆಯ ತಂದೆಯ ತಾಯಿಯ ಸಹೋದರಿಯ ಮಗನ ಮಗನ ಮಗ
೮೦. ತಂದೆಯ ತಾಯಿಯ ತಂದೆಯ ತಂದೆ
೮೧. ತಂದೆಯ ತಾಯಿಯ ತಂದೆಯ ಸಹೋದರ
೮೨. ತಂದೆಯ ತಾಯಿಯ ತಂದೆಯ ಸಹೋದರನ ಮಗ
೮೩. ತಂದೆಯ ತಾಯಿಯ ತಂದೆಯ ಸಹೋದರಿಯ ಮಗ
೮೪. ತಂದೆಯ ತಾಯಿಯ ತಂದೆಯ ಸಹೋದರನ ಮಗನ ಮಗ
೮೫. ತಂದೆಯ ತಾಯಿಯ ತಂದೆಯ

ಮಗನ ಮಗಳು
೮೬. ತಂದೆಯ ತಂದೆಯ ತಾಯಿಯ ಸಹೋದರಿಯ ಮಗಳ ಮಗನ ಮಗಳು
೮೭. ತಂದೆಯ ತಂದೆಯ ತಾಯಿಯ ಸಹೋದರಿಯ ಮಗನ ಮಗ
೮೮. ತಂದೆಯ ತಂದೆಯ ತಾಯಿಯ ಸಹೋದರನ ಮಗಳ ಮಗನ ಮಗಳು
೮೯. ತಂದೆಯ ತಂದೆಯ ತಾಯಿಯ ಸಹೋದರನ ಮಗನ ಮಗನ ಮಗಳು
೯೦. ತಂದೆಯ ತಂದೆಯ ತಂದೆಯ ತಾಯಿ
೯೧. ತಂದೆಯ ತಂದೆಯ ತಂದೆಯ ಸಹೋದರಿ
೯೨. ತಂದೆಯ ತಂದೆಯ ತಂದೆಯ ಸಹೋದರಿಯ ಮಗಳು
೯೩. ತಂದೆಯ ತಂದೆಯ ತಂದೆಯ ಸಹೋದರನ ಮಗಳು
೮೪. ತಂದೆಯ ತಂದೆಯ ತಂದೆಯ ಸಹೋದರಿಯ ಮಗನ ಮಗಳು
೮೫. ತಂದೆಯ ತಂದೆಯ ತಂದೆಯ ಸಹೋದರನ ಮಗನ ಮಗಳು
೮೬. ತಂದೆಯ ತಂದೆಯ ತಂದೆಯ ಸಹೋದರಿಯ ಮಗಳ ಮಗನ ಮಗಳು
೯೭. ತಂದೆಯ ತಂದೆಯ ತಂದೆಯ ಸಹೋದರಿಯ ಮಗನ ಮಗನ ಮಗಳು
೯೮. ತಂದೆಯ ತಂದೆಯ ತಂದೆಯ ಸಹೋದರನ ಮಗಳ ಮಗನ ಮಗಳು
೯೯. ತಂದೆಯ ತಂದೆಯ ತಂದೆಯ ಸಹೋದರನ ಮಗನ ಮಗನ ಮಗಳು
*೧೦೦. ಗಂಡನ ಸಹೋದರನ ವಿಧವೆ
೧೦೧. ಗಂಡನ ಸಹೋದರನ ಮಗನ ವಿಧವೆ
೧೦೨. ಗಂಡನ ಸಹೋದರನ ಮಗನ ಮಗನ ವಿಧವೆ

ಸಹೋದರಿಯ ಮಗನ ಮಗ
೮೬. ತಂದೆಯ ತಾಯಿಯ ತಂದೆಯ ಸಹೋದರನ ಮಗಳ ಮಗನ ಮಗ
೮೭. ತಂದೆಯ ತಾಯಿಯ ತಂದೆಯ ಸಹೋದರನ ಮಗಳು ಮಗನ ಮಗನ ಮಗ
೮೮. ತಂದೆಯ ತಾಯಿಯ ತಂದೆಯ ಸಹೋದರಿಯ ಮಗಳ ಮಗನ ಮಗ
೮೯. ತಂದೆಯ ತಾಯಿಯ ತಂದೆಯ ಸಹೋದರಿಯ ಮಗನ ಮಗನ ಮಗ
೯೦. ತಂದೆಯ ತಾಯಿಯ ತಾಯಿಯ ತಂದೆ
೯೧. ತಂದೆಯ ತಾಯಿಯ ತಾಯಿಯ ಸಹೋದರ
೯೨. ತಂದೆಯ ತಾಯಿಯ ತಾಯಿಯ ಸಹೋದರನ ಮಗ
೯೩. ತಂದೆಯ ತಾಯಿಯ ತಾಯಿಯ ಸಹೋದರಿಯ ಮಗ

(೧೬೭)

೯೪. ತಂದೆಯ ತಾಯಿಯ ತಾಯಿಯ ಸಹೋದರನ ಮಗನ ಮಗ
೯೫. ತಂದೆಯ ತಾಯಿಯ ತಾಯಿಯ ಸಹೋದರಿಯ ಮಗನ ಮಗ
೯೬. ತಂದೆಯ ತಾಯಿಯ ತಾಯಿಯ ಸಹೋದರನ ಮಗಳ ಮಗನ ಮಗ
೯೭. ತಂದೆಯ ತಾಯಿಯ ತಾಯಿಯ ಸಹೋದರನ ಮಗನ ಮಗನ ಮಗ
೯೮. ತಂದೆಯ ತಾಯಿಯ ತಾಯಿಯ ಸಹೋದರಿಯ ಮಗಳ ಮಗನ ಮಗ
೯೯. ತಂದೆಯ ತಾಯಿಯ ತಾಯಿಯ ಸಹೋದರಿಯ ಮಗನ ಮಗನ ಮಗ
೧೦೦. ಗಂಡನ ಸಹೋದರನ ಮಗ
೧೦೧. ಗಂಡನ ತಂದೆಯ ಸಹೋದರನ ಮಗಳು
೧೦೨. ಗಂಡನ ತಂದೆಯ ತಂದೆಯ ಮಗ

ಅ.ನಂ. ೧೦೦ರಿಂದ ೧೦೨–ಇದನ್ನು ಡಾ. ಅಂಬೇಡ್ಕರ್ ಅವರು ತಮ್ಮ ಸ್ವಂತ ಅಕ್ಷರಗಳಿಂದ ಬರೆದಿದ್ದಾರೆ.

## ಎರಡನೆಯ ವಿಭಾಗ
## ನಿಷೇಧಿತ ಸಂಬಂಧದ ತಲೆಮಾರು
## (ಕಲಂ ೫ (ಬ) ನೋಡಿರಿ)

### ವಿಭಾಗ ೧

೧. ತಾಯಿ
೨. ತಂದೆಯ ವಿಧವೆ (ಮಲತಾಯಿ)
೩. ತಾಯಿಯ ತಾಯಿ
೪. ತಾಯಿಯ ಅಪ್ಪನ ವಿಧವೆ (ಮಲತಾಯಿ ತಾಯಿ)
೫. ತಾಯಿಯ ತಾಯಿಯ ತಾಯಿ
೬. ತಾಯಿಯ ತಾಯಿಯ ತಂದೆಯ ವಿಧವೆ (ಮಲತಾಯಿಯ ಅಮ್ಮ)
೭. ತಾಯಿಯ ತಂದೆಯ ತಾಯಿ
೮. ತಾಯಿಯ ಅಪ್ಪನ ಅಪ್ಪನ ವಿಧವೆ (ಮಲ ಅಮ್ಮ)
೯. ತಂದೆಯ ತಾಯಿ
೧೦. ತಂದೆಯ ತಂದೆಯ ವಿಧವೆ (ಮಲಅಮ್ಮ)
೧೧. ತಂದೆಯ ತಾಯಿಯ ತಾಯಿ
೧೨. ತಂದೆಯ ತಾಯಿಯ ತಂದೆಯ ವಿಧವೆ (ಮಲಅಮ್ಮ)
೧೩. ತಂದೆಯ ತಂದೆಯ ತಾಯಿ
೧೪. ತಂದೆಯ ತಂದೆಯ ತಂದೆಯ ವಿಧವೆ (ಮಲಅಮ್ಮ)
೧೫. ಮಗಳು
೧೬. ಮಗನ ವಿಧವೆ
೧೭. ಮಗಳ ಮಗಳು
೧೮. ಮಗಳ ಮಗನ ವಿಧವೆ
೧೯. ಮಗನ ಮಗಳು
೨೦. ಮಗನ ಮಗನ ವಿಧವೆ
೨೧. ಮಗಳ ಮಗಳ ಮಗಳ ಮಗಳು
೨೨. ಮಗಳ ಮಗಳ ಮಗನ ವಿಧವೆ

### ವಿಭಾಗ ೨

೧. ತಂದೆ
೨. ತಾಯಿಯ ಗಂಡ (ಮಲತಂದೆ)
೩. ತಂದೆಯ ತಂದೆ
೪. ತಂದೆಯ ತಾಯಿಯ ಗಂಡ (ಮಲ ಅಜ್ಜ)
೫. ತಂದೆಯ ತಂದೆಯ ತಂದೆ
೬. ತಂದೆಯ ತಂದೆಯ ತಾಯಿಯ ಗಂಡ (ಮಲ ಅಜ್ಜ)
೭. ತಂದೆಯ ತಾಯಿಯ ತಂದೆ
೮. ತಂದೆಯ ತಾಯಿಯ ತಾಯಿಯ ಗಂಡ (ಮಲ ಅಜ್ಜ)
೯. ತಾಯಿಯ ತಂದೆ
೧೦. ತಾಯಿಯ ತಾಯಿಯ ಗಂಡ ಮಲ ಅಪ್ಪನ ಅಪ್ಪ
೧೧. ತಾಯಿಯ ತಂದೆಯ ತಂದೆ
೧೨. ತಾಯಿಯ ತಂದೆಯ ತಾಯಿಯ ಗಂಡ (ಮಲ ಅಜ್ಜ)
೧೩. ತಾಯಿಯ ತಾಯಿಯ ತಂದೆ
೧೪. ತಾಯಿಯ ತಾಯಿಯ ತಾಯಿಯ ಗಂಡ (ಮಲ ಅಜ್ಜ)
೧೫. ಮಗ
೧೬. ಮಗಳ ಗಂಡ
೧೭. ಮಗನ ಮಗ
೧೮. ಮಗನ ಮಗಳ ಗಂಡ
೧೯. ಮಗಳ ಮಗ
೨೦. ಮಗಳ ಮಗಳ ಗಂಡ
೨೧. ಮಗನ ಮಗನ ಮಗ
೨೨. ಮಗನ ಮಗನ ಮಗಳ ಗಂಡ

| | |
|---|---|
| ೨೩. ಮಗಳ ಮಗನ ಮಗಳು | ೨೩. ಮಗನ ಮಗನ ಮಗ |
| ೨೪. ಮಗಳ ಮಗನ ಮಗನ ವಿಧವೆ | ೨೪. ಮಗನ ಮಗಳ ಮಗಳ ಗಂಡ |
| ೨೫. ಮಗನ ಮಗಳ ಮಗಳು | ೨೫. ಮಗಳ ಮಗನ ಮಗ |
| ೨೬. ಮಗನ ಮಗಳ ಮಗನ ವಿಧವೆ | ೨೬. ಮಗಳ ಮಗನ ಮಗಳ ಗಂಡ |
| ೨೭. ಮಗನ ಮಗನ ಮಗಳು | ೨೭. ಮಗಳ ಮಗಳ ಮಗ |
| ೨೮. ಮಗನ ಮಗನ ಮಗನ ವಿಧವೆ | ೨೮. ಮಗಳ ಮಗಳ ಮಗಳ ಗಂಡ |
| ೨೯. ಸಹೋದರಿ | ೨೯. ಸಹೋದರ |
| ೩೦. ಸಹೋದರಿಯ ಮಗಳು | ೩೦. ಸಹೋದರನ ಮಗ |
| ೩೧. ಸಹೋದರನ ಮಗಳು | ೩೧. ಸಹೋದರಿಯ ಮಗ |
| ೩೨. ತಾಯಿಯ ಸಹೋದರಿ | ೩೨. ತಾಯಿಯ ಸಹೋದರ |
| ೩೩. ತಂದೆಯ ಸಹೋದರಿ | ೩೩. ತಂದೆಯ ಸಹೋದರ |
| ೩೪. ತಂದೆಯ ಸಹೋದರನ ಮಗಳು | ೩೪. ತಂದೆಯ ಸಹೋದರನ ಮಗ |
| ೩೫. ತಾಯಿಯ ಸಹೋದರಿಯ ಮಗಳು | ೩೫. ತಾಯಿಯ ಸಹೋದರಿಯ ಮಗ |

**(೧೬೯)**

## ನಾಲ್ಕನೆಯ ಪರಿಶಿಷ್ಟ

**(ಕಲಂ ೧೨ನ್ನು ನೋಡಿ)**

## ಮದುವೆಯ ನೋಟೀಸು

ಗೆ ......................ರಿಜಿಸ್ಟ್ರಾರ್ ಹಿಂದೂ ವಿವಾಹಗಳ ಭಾಗ ೨ ಹಿಂದೂ ಕಾನೂನು ............................ ಜಿಲ್ಲಾ ನಾವು ನಿಮಗೆ ಕೊಡುವ ನೋಟೀಸು ಏನೆಂದರೆ ಹಿಂದೂ ಕಾನೂನಿನ ಭಾಗ ೨ರ ಅನ್ವಯ ಒಂದು ಹಿಂದು ಸಿಫಿಲ್ ಮದುವೆಯನ್ನು ನಮ್ಮ ನಡುವೆ ಇಂದಿನಿಂದ ಕ್ಯಾಲೆಂಡರದ ಮೂರು ತಿಂಗಳ ಅವಧಿ ಇಂದಿನಿಂದ ನೆರವೇರಿಸಲು ಇಚ್ಛಿಸಿದ್ದೇವೆ.

| ಹೆಸರುಗಳು | ಕರಾರುಗಳು | ಶ್ರೇಣಿ ಅಥವಾ ವೃತ್ತಿ | ವಯಸ್ಸು | ವಾಸಿಸುವ ಸ್ಥಳ | ವಾಸದ ಅವಧಿ |
|---|---|---|---|---|---|
| ಅ ಬ | ಅವಿವಾಹಿತ<br>ವಿಧುರ<br>ಗಂಡಬಿಟ್ಟವಳು | ಭೂಮಾಲೀಕ | ..... | ... | ... |
| ಕ ಡ | ಮದುವೆಯಾಗದ<br>ಹೆಣ್ಣುಮಗಳು<br>ವಿಧವೆ | ... | ... | ... | ... |

ಸಾಕ್ಷಿದಾರರು ನಾವು ನಮ್ಮ ಸಹಿಯನ್ನು ಇಂದು ದಿನಾಂಕ............ರಂದು................ನಮ್ಮ ಸಹಿ ಮಾಡಿರುತ್ತೇವೆ.

(ಸಹಿ) ಅ ಬ

ಕ ಡ

**ಮೂರನೆಯ ಪರಿಶಿಷ್ಟ**

**(ಕಲಂ ೧೨ ನ್ನು ನೋಡಿ**

**ಮದುವೆಯ ನೋಟೀಸು**

ಗೆ.......................................... ಹಿಂದೂ ವಿವಾಹಗಳ ನೋಂದಣಿ ಭಾಗ ೨೮ ಅನ್ವಯ ......................................ಜಿಲ್ಲೆ ನಾವು ನಿಮಗೆ ಈ ಮೂಲಕ ಕೊಡುವುದು ಏನೆಂದರೆ ಹಿಂದೂ ಕಾನೂನಿನ ಭಾಗ ೨೮ ಅನ್ವಯ ನಾವು ಹಿಂದೂ ಸಿಫಿಲ್ ಮದುವೆಯನ್ನು ನಮ್ಮ ನಡುವೆ ಇಂದಿನಿಂದ ಕ್ಯಾಲೆಂಡರದ ೩ ತಿಂಗಳ ಅವಧಿಯಲ್ಲಿ ನೆರವೇರಿಸಲು ಇಚ್ಚಿಸಿದ್ದೇವೆ.

| **ಹೆಸರುಗಳು** | **ಕರಾರುಗಳು** | **ಶ್ರೇಣಿ ಅಥವಾ ವೃತ್ತಿ** | **ವಯಸ್ಸು** | **ವಾಸಿಸುವ ಸ್ಥಳ** | **ವಾಸದ ಅವಧಿ** |
|---|---|---|---|---|---|
| ಅ ಬ | ಅವಿವಾಹಿತ<br>ವಿಧುರ<br>ವಿಚ್ಛೇದಿತಳು | ಭೂಮಾಲಿಕ | ..... | ... | ... |
| ಕ ಡ | ಮದುವೆ ಆಗದವಳು<br>ವಿಧವೆ | ... | ... | ... | ... |

ಸಾಕ್ಷಿದಾರರಾದ ನಾವು ನಮ್ಮ ಸಹಿಯನ್ನು ಇಂದು ದಿನಾಂಕ...........ರಂದು ......... ನಮ್ಮ ಸಹಿ ಮಾಡಿರುತ್ತೇವೆ.

(ಸಹಿ) ಅ ಬ

ಕ ಡ

(೧೬೯)

## (೧೬೦)

## ಐದನೆಯ ಪರಿಶಿಷ್ಟ

## (ಕಲಂ ೧೬ನ್ನು ನೋಡಿರಿ)

## ಮದುಮಗನು ಮಾಡಬೇಕಾದ ಘೋಷಣೆ

೧. ಅ. ಬ. ಇವರು ಈ ಕೆಳಗಿನಂತೆ ಘೋಷಿಸುತ್ತಾರೆ.

(೧) ಸದ್ಯಕ್ಕೆ ನಾನು ಅವಿವಾಹಿತನಿರುತ್ತೇನೆ (ವಿಧುರ ಯಾವುದೇ ಇದ್ದಂತೆ)

೨. ನಾನು ಹಿಂದೂ ಧರ್ಮವನ್ನು ಪಾಲನೆ ಮಾಡುತ್ತೇನೆ (ಬೌದ್ಧ, ಶಿಖ್, ಇಲ್ಲವೆ ಜೈನ, ಯಾವುದೇ ಇದ್ದುದು)

೩. ನನಗೆ ...............................ವಯಸ್ಸಾಗಿದೆ.

೪. ನಾನು ಕಂಡ ಇವರಿಗೆ (ಮದುಮಗಳಿಗೆ) ನಿಷೇಧಿತ ತಲೆಮಾರಿನಲ್ಲಿಯ ಸಂಬಂಧಿಕನಲ್ಲ. ಭಾಗ ೨ರಲ್ಲಿ ಹಿಂದೂ ಕಾನೂನು ನಿಷೇದಿಸಿದಂತೆ ಇರುವುದಿಲ್ಲ.
(ಮದುಮಗನು ಯಾವಾಗ ೨೧ ವರ್ಷಗಳನ್ನು ಪೂರ್ತಿಗೊಳಿಸಿರುವುದಿಲ್ಲವೋ)

೫. ಎಮ್.ಎನ್. ನನ್ನ ತಂದೆಯ ಸಮ್ಮತಿ (ಇಲ್ಲವೆ ಆಜ್ಞಾಪಾಲಕ ಯಾರೇ ಇರಲಿ ಇವರು ನನ್ನ ಮದುವೆ ಕೂಡ ಇವರೊಂದಿಗೆ ನೆರವೇರಿಸಲು ಸಮ್ಮತಿ ಕೊಟ್ಟಿದ್ದಾರೆ ಮತ್ತು ಆ ಅವರ ಸಮ್ಮತಿಯನ್ನು ತಿರುಗಿ ಪಡೆದುಕೊಂಡಿಲ್ಲ)

೬. ನನ್ನ ಘೋಷಣೆಯಲ್ಲಿ ಯಾವುದೇ ಸುಳ್ಳು ಸಂಗತಿ ಕಾಣಿಸಿದಲ್ಲಿ ಅಂತಹ ಹೇಳಿಕೆ ಕೊಡುವುದರಿಂದ, ನಾನು ಗೊತ್ತಿದ್ದು ಇಲ್ಲವೆ ತಿಳಿದು ತಿಳಿದೂ ಇಲ್ಲವೆ ಅದು ನಿಜವೆಂದು ನಂಬುವುದಿಲ್ಲವಾದರೆ ನನಗೆ ಸೆರೆಮನೆಯ ವಾಸ ಹಾಗೂ ದಂಡ ವಿಧಿಸಲಾಗುವುದೆಂದು ಗೊತ್ತಿದೆ.

(ಸಹಿ) ಅ ಬ ಮದುಮಗ

## ಮದುಮಗಳು ಕೊಡಬೇಕಾದ ಘೋಷಣೆ

೧. ಕ.ಡ. ಇವಳು ಕೆಳಗಿನಂತೆ ಘೋಷಣೆ ಮಾಡುತ್ತಾಳೆ

೧) ಸದ್ಯಕ್ಕೆ ನಾನು ಅವಿವಾಹಿತಳಿದ್ದೇನೆ (ಇಲ್ಲವೆ ವಿಧವೆ ಯಾವುದಿದೆ ಅದನ್ನು ಕಾಣಿಸಬೇಕು)

೨) ನಾನು ಹಿಂದೂ ಧರ್ಮವನ್ನು ಪಾಲಿಸುತ್ತೇನೆ (ಇಲ್ಲವೆ ಬೌದ್ಧ ಶಿಖ್, ಮತ್ತು ಜೈನಧರ್ಮ ಯಾವುದಿದೆಯೋ ಆ ಧರ್ಮ)

೩) ನನಗೆ ....................................ವರ್ಷಗಳು ತುಂಬಿವೆ

೪) ನಾನು ಅ. ಬ. ಇವನಿಗೆ ಹಿಂದೂ ಕಾನೂನು ನಿಷೇಧಿಸಿದ ತಲೆಮಾರಿನಲ್ಲಿ ಭಾಗ ೨ ಹಿಂದೂ ಕಾನೂನಿನಲ್ಲಿ ಕಾಣಿಸಿದಂತೆ ಅವರ ಸಂಬಂಧಿಕನಲ್ಲ. ಮದುಮಗಳು ೨೧ ವರ್ಷಗಳನ್ನು ಪೂರ್ತಿಗೊಳಿಸಿರದಿದ್ದರೆ ಅವಳು

## ನಾಲ್ಕನೆಯ ಪರಿಶಿಷ್ಟ
## (ಕಲಂ ೧೭ನ್ನು ನೋಡಿರಿ)
## ಮದುಮಗನು ಮಾಡಬೇಕಾದ ಘೋಷಣೆ

೧. ಅ. ಬ. ಇವರು ಈ ಕೆಳಗಿನಂತೆ ಘೋಷಿಸುತ್ತಾರೆ.

೧) ಸದ್ಯಕ್ಕೆ ಅವಿವಾಹಿತನಿರುತ್ತೇನೆ (ವಿಧುರ ಯಾವುದೇ ಇದ್ದಂತೆ)

೨) ನಾನು ಹಿಂದೂ ಧರ್ಮವನ್ನು ಪಾಲನೆ ಮಾಡುತ್ತೇನೆ (ಬೌದ್ಧ, ಶಿಖ್, ಇಲ್ಲವೆ ಜೈನಧರ್ಮ ಯಾವುದೇ ಇದ್ದುದು)

೩) ನನಗೆ.................. ವಯಸ್ಸಾಗಿದೆ.

೪) ನಾನು ಕ ಡ ಇವರಿಗೆ (ಮದುಮಗಳಿಗೆ ನಿಷೇಧಿತ ತಲೆಮಾರಿನಲ್ಲಿಯ ಸಂಬಂಧಿಕನಲ್ಲ – ಭಾಗ ೨ ಹಿಂದೂ ಕಾನೂನಿನಲ್ಲಿ ನಿಷೇಧಿಸಿದಂತೆ ಸಂಬಂಧ ಇರುವುದಿಲ್ಲ. (ಮದುಮಗನು ಯಾವಾಗ ೨೧ ವರ್ಷಗಳನ್ನು ಪೂರ್ತಿಗೊಳಿಸಿರುವುದಿಲ್ಲವೋ)

೫) ಎಮ್.ಎನ್. ನನ್ನ ತಂದೆಯ ಸಮ್ಮತಿ (ಇಲ್ಲವೆ ಆಜ್ಞಾಪಾಲಕನ ಸಮ್ಮತಿ ಯಾರೇ ಇರಲಿ) ಇವರು ನನ್ನ ಮದುವೆ ಕ ಡ ಇವರೊಂದಿಗೆ ನೆರವೇರಿಸಲು ಸಮ್ಮತಿ ಕೊಟ್ಟಿದ್ದರೆ ಮತ್ತು ಅವರು ತಮ್ಮ ಸಮ್ಮತಿಯನ್ನು ತಿರುಗಿ ಪಡೆದುಕೊಂಡಿಲ್ಲ.

೬) ನನ್ನ ಘೋಷಣೆಯಲ್ಲಿ ಯಾವುದೇ ಸುಳ್ಳು ಸಂಗತಿ ಕಾಣಿಸಿದಲ್ಲಿ ಅಂತಹ ಹೇಳಿಕೆ ಕೊಡುವುದರಿಂದ ನಾನು ಗೊತ್ತಿದ್ದು ಇಲ್ಲವೆ ತಿಳಿದೂ ತಿಳಿದೂ ಇಲ್ಲವೆ ಅದು ನಿಜವೆಂದು ನಂಬುವುದಿಲ್ಲವಾದರೆ ನನಗೆ ಸೆರೆಮನೆಯ ವಾಸ ಹಾಗೂ ದಂಡವಿಧಿಸುವರೆಂದು ಗೊತ್ತಿದೆ.

(ಸಹಿ) ಅ ಬ (ಮದುಮಗ)

## ಮದುಮಗಳು ಕೊಡಬೇಕಾದ ಘೋಷಣೆ

೧. ಕ ಡ ಇವಳು ಕೆಳಗಿನಂತೆ ಘೋಷಣೆ ಮಾಡುತ್ತಾಳೆ

೧) ಸದ್ಯಕ್ಕೆ ನಾನು ಅವಿವಾಹಿತಳಿರುತ್ತೇನೆ (ಇಲ್ಲವೆ ಯಾವುದಿದೆಯೋ ಅದನ್ನು ಕಾಣಿಸಬೇಕು)

೨) ನಾನು ಹಿಂದೂ ಧರ್ಮವನ್ನು ಪಾಲಿಸುತ್ತೇನೆ (ಇಲ್ಲವೆ ವಿಧವೆ ಬೌದ್ದಧರ್ಮ, ಶಿಖ್ ಜೈನಧರ್ಮ ಇವುಗಳು ಯಾವುದಿದೆಯೋ ಅದನ್ನು ಕಾಣಿಸಬೇಕು)

೩) ನನಗೆ ...............ವರ್ಷಗಳು ತುಂಬಿವೆ.

೪) ನಾನು ಅ ಬ ಇವನಿಗೆ ಹಿಂದೂ ಕಾನೂನು ನಿಷೇಧಿಸಿದ ತಲೆಮಾರಿನಲ್ಲಿ ಭಾಗ ೨ ಹಿಂದೂ ಕಾನೂನಿನಲ್ಲಿ ಕಾಣಿಸಿದಂತೆ ಅವನ ಸಂಬಂಧಿಕನಲ್ಲ. (ಮದುಮಗಳು ೨೧ ವರ್ಷಗಳನ್ನು ಪೂರ್ತಿಗೊಳಿಸಿರದಿದ್ದರೆ ಇಲ್ಲವೆ ವಿಧವೆಯಾಗಿದ್ದರೆ) ವಿಧವೆಯಾಗಿರದಿದ್ದರೆ.

೫) ನನ್ನ ತಂದೆ ಓ. ಪಿ. ಅವರ ಸಮ್ಮತಿ (ಇಲ್ಲವೆ ಆಜ್ಞಾಪಾಲನ ಯಾರೂ ಇರುವರೋ ಅವರು) ಕೊಟ್ಟಿದ್ದಾರೆ ಆ ಸಮ್ಮತಿಯನ್ನು ಅವರು ತಿರುಗಿ ಪಡೆದುಕೊಂಡಿಲ್ಲ.

೬) ನನ್ನ ಘೋಷಣೆಯಲ್ಲಿ ಯಾವುದೇ ಸುಳ್ಳು ಸಂಗತಿಯನ್ನು ಕಾಣಿಸಿದ್ದರೆ ಅಂತ ಹೇಳಿಕೆ ಕೊಡುವುದರಿಂದ ನಾನು ಸಂಗತಿ ನಿಜವಿದೆ ಹಾಗೂ ನಿಜವಿದೆಯೆಂದು ನಂಬಿ ಮತ್ತೇನೆ ಸುಳ್ಳು ಸಂಗತಿ ಕಾಣಿಸಿದ ನನಗೆ ಸೆರೆಮನೆ ವಾಸ ಹಾಗೂ ದಂಡ ವಿಧಿಸಲಾಗುವುದೆಂದು ಗೊತ್ತಿದೆ.

(ಸಹಿ) ಸಿ. ಡಿ. (ಮದುಮಗಳು)

ನಮ್ಮ ಸಮ್ಮುಖದಲ್ಲಿ ಮೇಲ್ಕಾಣಿಸಿದ ಆ ಮತ್ತು ಬ ಮತ್ತು ಕ ಡ ಇವರು ಸಹಿ ಮಾಡಿರುತ್ತಾರೆ ನಮಗೆ ತಿಳಿದಮಟ್ಟಿಗೆ ಅವರ ನಡುವಿನ ವಿವಾಹಕ್ಕೆ ಯಾವುದೇ ತೊಡಕು ಇರುವುದಿಲ್ಲ.

ಜಿ. ಎಚ್

ಆಯ್. ಜಿ ಮೂರು ಸಾಕ್ಷಿಗಳು

ಕೆ. ಎಲ್

(ಮದುಮಗ ಇಲ್ಲವೆ ಮದುಮಗಳು ಇಬ್ಬರಲ್ಲಿ ಯಾರಾದರೂ ೨೧ ವರ್ಷಗಳನ್ನು ಪೂರ್ತಿಗೊಳಿಸಿರದಿದ್ದರೆ ಆದರೆ ವಿಧವೆಯನ್ನು ಹೊರತುಪಡಿಸಿ)

ನನ್ನ ಸಮ್ಮುಖದಲ್ಲಿ ಅ ಬ ಮತ್ತು ಕ ಡ ಎಮ್. ಎನ್. (ಓ. ಪಿ. ತಂದೆ ಇಲ್ಲವೆ ಆಜ್ಞಾಪಾಲಕ ಮೇಲ್ಕಾಣಿಸಿದ ಅ ಬ ಇಲ್ಲವೆ ಕ ಡ ಯಾರೇ ಇರಲಿ)

(ಮೇಲುರುಜು ಮಾಡಲಾಗಿದೆ ಇ ಎಫ್)

ರಿಜಿಸ್ಟ್ರಾರ್ ಹಿಂದೂ ವಿವಾಹಗಳು

ಭಾಗ ೧೧ ಹಿಂದೂ ಕಾನೂನು .....

ಜಿಲ್ಲೆ

ದಿನಾಂಕ............ದಿವಸ..................ತಿಂಗಳು.......................

೫) ನನ್ನ ತಂದೆ ಓ ಪಿ ಅವರ ಸಮ್ಮತಿ (ಇಲ್ಲವೆ ಆಜ್ಞಾಪಾಲಕನು ಯಾರಿರುವರೋ ಅವರು) ಸಮ್ಮತಿ ಕೊಟ್ಟಿದ್ದಾರೆ. ಸಮ್ಮತಿಯನ್ನು ಅವರು ತಿರುಗಿ ಪಡೆದುಕೊಂಡಿಲ್ಲ.

೬) ನನ್ನ ಘೋಷಣೆಯಲ್ಲಿ ಯಾವುದೇ ಸುಳ್ಳು ಸಂಗತಿಯನ್ನು ಕಾಣಿಸಿದ್ದರೆ ಅಂತಹ ಹೇಳಿಕೆ ಕೊಡುವುದರಿಂದ ನಾನು ಸಂಗತಿ ನಿಜವಿದೆ ಹಾಗೂ ನಿಜವಿದೆಯೆಂದು ನಂಬುತ್ತೇನೆ. ಘೋಷಣೆಯಲ್ಲಿ ಯಾವುದೇ ಸುಳ್ಳು ಸಂಗತಿ ಕಾಣಿಸಿದ್ದರೆ ಅಂತಹ ಹೇಳಿಕೆ ಕೊಡುವುದರಿಂದ ನಾನು ಸಂಗತಿ ನಿಜವಿದೆಯೆಂದು ನಂಬುತ್ತೇನೆ. ಸುಳ್ಳು ಸಂಗತಿ ಕಾಣಿಸಿದರೆ ನನಗೆ ಸೆರೆಮನೆಯ ವಾಸ ಹಾಗೂ ದಂಡ ವಿಧಿಸಲಾಗುವುದೆಂದು ಗೊತ್ತಿದೆ.

(ಸಹಿ) ಕ ಡ (ಮದುಮಗಳು)

ನಮ್ಮ ಸಮ್ಮುಖದಲ್ಲಿ ಮೇಲ್ಕಾಣಿಸಿದ ಅ ಬ ಮತ್ತು ಕ ಡ ಇವುರ ಸಹಿ ಮಾಡಿರುತ್ತಾರೆ ನಮಗೆ ತಿಳಿದಮಟ್ಟಿಗೆ ಅವರ ನಡುವಣ ವಿವಾಹಕ್ಕೆ ಯಾವುದೇ ಅಡ್ಡಿ ಇರುವುದಿಲ್ಲ.

ಜಿ. ಎಚ್
ಆಯ್. ಜೆ ಮೂರು ಸಾಕ್ಷಿಗಳು
ಕೆ ಎಲ್

(ಮದುಮಗ ಇಲ್ಲವೆ ಮದುಮಗಳು ಇಬ್ಬರಲ್ಲಿ ಯಾರಾದರೂ ಒಬ್ಬರು ೨೪ ವರ್ಷಗಳನ್ನು ಪೂರ್ತಿಗೊಳಿಸಿರದಿದ್ದರೆ ಆದರೆ ವಿಧವೆಯನ್ನು ಹೊರತುಪಡಿಸಿ)

ನನ್ನ ಸಮ್ಮುಖದಲ್ಲಿ ಅ ಬ ಮತ್ತು ಕ ಡ ಎಮ್ ಎನ್ (ಓಸಿ ತಂದೆ ಇಲ್ಲವೆ ಆಜ್ಞಾಪಾಲಕ ಮೇಲ್ಕಾಣಿಸಿದ ಅ ಬ ಇಲ್ಲವೆ ಕ ಡ ಯಾರೇ ಇರಲಿ)

ಮೇಲುರುಜು ಮಾಡಿದ ಇ ಎಫ್
ರಿಜಿಸ್ಟ್ರಾರ್, ಹಿಂದೂ ವಿವಾಹಗಳು
ಹಿಂದೂ ಕಾನೂನು ಭಾಗ ೨
.....................ಜಿಲ್ಲೆ

ದಿನಾಂಕ..................ದಿವಸ...........................................ತಿಂಗಳು................................

**(೧೭೦)**

**(೧೭೧)**

**ಆರನೆಯ ಪರಿಶಿಷ್ಟ**

**(ಕಲಂ ೧೯ ನೋಡಿರಿ)**

**ರಿಜಿಸ್ಟ್ರಾರ್ ಇವರು ಕೊಟ್ಟ ಸಿವಿಲ್ ವಿವಾಹದ ಸರ್ಟಿಫಿಕೇಟ್**

ನಾನು ಇ ಎಫ್ ಈ ಮೂಲಕ ಪ್ರಮಾಣೀಕರಿಸುವುದು ಏನೆಂದರೆ ದಿನಾಂಕ ......................ತಿಂಗಳ ...................... ೧೯ ಇಸ್ವಿ ದಿವಸ ಅ ಬ ಮತ್ತು ಕ ಡ ಇವರು ನನ್ನ ಮುಂದೆ ಹಾಜರಾದರು ಮತ್ತು ನನ್ನಸಮಕ್ಷಮ ಹಾಗೂ ನಂಬಲರ್ಹವಾದ ಕೆಳಗೆ ಸಹಿಮಾಡಿದ ೩ ಜನ ಸಾಕ್ಷಿದಾರರ ಸಮಕ್ಷಮ ಹಿಂದೂ ಕಾನೂನು ಇದರ ಭಾಗ ೨ರಲ್ಲಿ ಅವಶ್ಯವಿರುವಂತೆ ಮತ್ತು ಆ ಭಾಗದ ಕೆಳಗೆ ಅವರಿಬ್ಬರ ನಡುವೆ ಮದುವೆಯನ್ನು ನೆರವೇರಿಸಲಾಯಿತು. ಈ ಭಾಗ ೨ ರಲ್ಲಿ ಅವಶ್ಯವಾದ ಘೋಷಣೆಯನ್ನು ನನ್ನ ಸಮಕ್ಷಮ ಮಾಡಿದರು.

(ನನ್ನ ಸಹಿ) ಇ ಎಫ್

ರಿಜಿಸ್ಟ್ರಾರ್ ಹಿಂದೂ ವಿವಾಹ ಕಾನೂನು ಭಾಗ
೨......ಜಿಲ್ಲೆ
(ಸಹಿ ಮಾಡಿದ್ದು) ಅ ಬ
ಕ ಡ
ಜಿ. ಎಚ್
ಆಯ್. ಜೆ ಮೂವರು ಸಾಕ್ಷಿದಾರರು
ಕೆ. ಎಲ್

ದಿನಾಂಕ..................ತಿಂಗಳ.......................... ಇಸ್ವಿ....................................................

**(೧೭೨)**

**ಏಳನೆಯ ಪರಿಶಿಷ್ಟ**

**(ಕಲಂ ೨೧ ನೋಡಿರಿ)**

**ರಿಜಿಸ್ಟ್ರಾರ್ ಇವರು ಕೊಟ್ಟ ಧಾರ್ಮಿಕ ವಿವಾಹದ ಪ್ರಮಾಣಪತ್ರ**

ನಾನು ಇ ಎಫ್ ಪ್ರಮಾಣೀಕರಿಸುವುದೇನೆಂದರೆ ಈ ದಿವಸ ಅ ಬ ಮತ್ತು ಕ ಡ ಇವರು ನನ್ನ ಮುಂದೆ ಹಾಜರಾದರು ಮತ್ತು ಅವರಿಬ್ಬರು ನನ್ನ ಈ ಕೆಳಗೆ ಸಹಿ ಮಾಡಿದ ನಂಬಲರ್ಹವಾದ ಮೂರು ಜನ ಸಾಕ್ಷಿದಾರರ ಸಮಕ್ಷಮ ಈ ಧಾರ್ಮಿಕ ವಿವಾಹವನ್ನು ಅವರಿಬ್ಬರಲ್ಲಿ ಹಿಂದೂ ವಿಧಿ ವಿಧಾನಗಳ ಅನ್ವಯ ದಿನಾಂಕ.......... ತಿಂಗಳ.............ಇಸ್ವಿ ನೆರವೇರಿತೆಂದು ಘೋಷಿಸಿದರು. ಮತ್ತು ಅಂತಹ ಮದುವೆಯು, ನೊಂದಾವಣೆಯಾಬೇಕೆಂದು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು.

## ೫ನೆಯ ಪರಿಶಿಷ್ಟ
## (ಕಲಂ ೧೯ ನೋಡಿರಿ)
## ರಿಜಿಸ್ಟ್ರಾರ್ ಇವರು ಕೊಟ್ಟ ಸಿವಿಲ್ ವಿವಾಹ ಸರ್ಟಿಫಿಕೇಟ್

ನಾನು ಇ ಎಫ್ ಈ ಮೂಲಕ ಪ್ರಮಾಣೀಕರಿಸುವುದೆನೆಂದರೆ ದಿನಾಂಕ .............................. ತಿಂಗಳು ......................ಇಸ್ವಿ ೧೯ ದಿವಸ ಅ ಬ ಮತ್ತು ಕ ಡ ಇವರು ನಂಬಲರ್ಹವಾದ ಕೆಳಗೆ ಮಾಡಿದ ೩ ಜನ ಸಾಕ್ಷಿದಾರರ ಸಮಕ್ಷಮ ಹಿಂದೂ ಕಾನೂನು ಇದರ ಭಾಗ ೨ರಲ್ಲಿ ಅವಶ್ಯವಿರುವಂತೆ ಮತ್ತು ಆ ಭಾಗದ ಕೆಳಗೆ ಅವರಿಬ್ಬರ ನಡುವೆ ಮದುವೆಯನ್ನು ನೆರವೇರಿಸಲಾಯಿತು. ಈ ಭಾಗ ೨ರಲ್ಲಿ ಅವಶ್ಯವಾದ ಘೋಷಣೆಯನ್ನು ನನ್ನ ಸಮಕ್ಷಮ ಮಾಡಿದ್ದರು.

(ಸಹಿ) ಇ ಎಫ್

ರಿಜಿಸ್ಟ್ರಾರ್ ಹಿಂದೂ ವಿವಾಹ ಕಾನೂನು ಭಾಗ ೨.........ಜಿಲ್ಲೆ

(ಸಹಿ) ಅ ಬ

ಕ ಡ

ಜಿ. ಎಚ್

ಆಯ್. ಜೆ ಮೂವರು ಸಾಕ್ಷಿದಾರರು

ಕೆ. ಎಲ್

ದಿನಾಂಕ..................ತಿಂಗಳ.......................... ಇಸ್ವಿ.

(೧೭೧)

## ಆರನೆಯ ಪರಿಶಿಷ್ಟ
## (ಕಲಂ ೨೧ ನೋಡಿರಿ)
## ರಿಜಿಸ್ಟ್ರಾರ್ ಇವರು ಕೊಟ್ಟ ಪವಿತ್ರ ಸಂಸ್ಕಾರ ವಿವಾಹ ಸರ್ಟಿಫಿಕೇಟ್

ನಾನು ಇ ಎಫ್ ಪ್ರಮಾಣೀಕರಿಸುವುದೇನೆಂದರೆ ಅ ಬ ಮತ್ತು ಕ ಡ ಇವರು ನನ್ನ ಮುಂದೆ ಹಾಜರಾಗಿ ಹಾಗೂ ಅವರಿಬ್ಬರೂ ಈ ಕೆಳಗೆ ಸಹಿ ಮಾಡಿದ ನಂಬಲರ್ಹವಾದ ಮೂರು ಜನ ಸಾಕ್ಷಿದಾರರ ಸಮಕ್ಷಮ ಹಾಗೂ ನನ್ನ ಸಮಕ್ಷಮ ಅವರಿಬ್ಬರೂ ಪವಿತ್ರ ಸಂಸ್ಕಾರ ಹಿಂದೂ ವಿವಾಹ, ಹಿಂದೂ ಧಾರ್ಮಿಕ ಪದ್ಧತಿಗೆ ಅನುಗುಣವಾಗಿ ಆಗಿದೆಯೆಂದು ಪ್ರಮಾಣೀಕರಿಸಿದ ವಿವಾಹ ದಿನಾಂಕ........... ತಿಂಗಳು............ಇಸ್ವಿ.......... ಆಗಿದೆಯೆಂದು ಘೋಷಿಸಿದರು. ಅಂತಹ ಮದುವೆಯು ನೊಂದಣಿ ಆಗಬೇಕೆಂದು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು ಮತ್ತು ಅವರ ಇಚ್ಛೆಗೆ ಮತ್ತು ಅವರ ಇಚ್ಛೆಗೆ ಅನುಸಾರವಾಗಿ ಆ ಮದುವೆಯನ್ನು ಈ ದಿವಸದಂದೂ ವಿವಾಹ ಕಾನೂನು ಭಾಗ ೨ ಕಲಂ ೨೧ ರ ಅಡಿಯಲ್ಲಿ ನೊಂದಣೆ ಮಾಡಲಾಯಿತು. ಇದಕ್ಕೆ ದಿನಾಂಕ.............ತಿಂಗಳ.............ಇಸ್ವಿ ಅಂದರೆ ಅರ್ಜಿಯನ್ನು ನೊಂದಣಿ ಮಾಡಿ

ಮೇಲೆ ಹೇಳಿದ ಕಲಂ ೨೧ರ ಅಡಿಯಲ್ಲಿ ಕೊಟ್ಟ ದಿನಾಂಕದಿಂದ................ತಿಂಗಳು...............ಇಸ್ವಿಯಿಂದ ಅದು ಪರಿಣಾಮಕಾರಿಯಾಗಿ ಜಾರಿಗೆ ಬರುತ್ತದೆ.

ಕೆಳಗೆ ಕಾಣಿಸಿದಂತೆ ಈ ಮೇಲೆ ಹೇಳಿದ ಹಿಂದೂ ಕಾನೂನು ವಿವಾಹ ಕಾನೂನು ಪದ್ಧತಿಯಿಂದ ವಿವಾಹ ಆದ ನಂತರ ಜನಿಸಿದ ಮಕ್ಕಳು ಅವರ ಕಾನೂನುಬದ್ಧವಾದ ಮಕ್ಕಳೆಂದೂ ಮತ್ತು ಯಾವಾಗಲೂ ಅವರು ಕಾನೂನುಬದ್ಧ ಮಕ್ಕಳೆಂದು ಗ್ರಹಿಸಲಾಗುವುದು.

(ಇಲ್ಲಿ ಅವರ ಮಕ್ಕಳ ಹೆಸರನ್ನು ಆ ಹೆಸರಿನ ಅವರು ಹುಟ್ಟಿದ ದಿನಾಂಕವನ್ನು ಅವರ ಹೆಸರಿನ ಮುಂದೆ ನಿರ್ದೇಶಿಸಬೇಕು ಅವಳು ಅಥವಾ ಅವನು ಅನುಕ್ರಮವಾಗಿ ಹುಟ್ಟಿದಂತೆ ಸೇರಿಸಬೇಕು.

(ಸಹಿ) ಇ ಎಫ್

ರಿಜಿಸ್ಟ್ರಾರ್ ಹಿಂದೂ ವಿವಾಹ ಕಾನೂನು ಭಾಗ ೨.........ಜಿಲ್ಲೆಗೆ

(ಸಹಿ) ಅ ಬ

ಕ ಡ

ಜಿ. ಎಚ್

ಆಯ್. ಜೆ ಮೂವರು ಸಾಕ್ಷಿದಾರರು

ಕೆ. ಎಲ್

(೧೭೩)

## ಎಂಟನೆಯ ಪರಿಶಿಷ್ಟ

## ಮೊದಲು ಹಕ್ಕಿನ ಷೇರಿನ ವಾರಸುದಾರರು

### ವರ್ಗ – ೧

### (ಕಲಂ ೯೮ ನೋಡಿರಿ)

ಮಗ, ವಿಧವೆ (ಅ) ಮಗಳು ಮೊದಲೇ ತೀರಿಕೊಂಡ ಮಗನ ಮಗ ಮೊದಲೇ ತೀರಿಕೊಂಡ ಮಗನ ವಿಧವೆ, ಮೊದಲೇ ತೀರಿಕೊಂಡ ಮಗನ ಮಗ ಮೊದಲೇ ತೀರಿಕೊಂಡ ಮಗನ ಮಗನ ವಿಧವೆ.

ಅನುಸಾರವಾಗಿ ಆ ಮದುವೆಯನ್ನು ಈ ದಿವಸ ಹಿಂದೂ ವಿವಾಹ ಕಾನೂನು ಭಾಗ ೨ ಕಲಂ ೨೧ರ ಅಡಿಯಲ್ಲಿ ನೊಂದಣೆ ಮಾಡಲಾಯಿತು ಇದಕ್ಕೆ ದಿನಾಂಕ.....................................ತಿಂಗಳ...............................ಇಸ್ವಿಯಿಂದ ಅದು ಪರಿಣಾಮಕಾರಿಯಾಗಿ ಜಾರಿಗೆ ಬರುತ್ತದೆ.

ಕೆಳಗೆ ಕಾಣಿಸಿದ ಮೇಲೆ ಹೇಳಿದ ಪವಿತ್ರ ಸಂಸ್ಕಾರ ಹಿಂದೂ ಪದ್ಧತಿಯಂತೆ ವಿವಾಹವಾದ ನಂತರ ಜನಿಸಿದ ಮಕ್ಕಳು ಅವರ ಕಾನೂನುಬದ್ಧ ಮಕ್ಕಳೆಂದೂ ಅವರು ಯಾವಾಗಲೂ ಕಾನೂನುಬದ್ಧ ಮಕ್ಕಳೆಂದು ಗ್ರಹಿಸಲಾಗುವುದು.

(ಇಲ್ಲಿ ಅವರ ಮಕ್ಕಳ ಹೆಸರನ್ನು ಅವರ ಹೆಸರಿನ ಅವರ ಜನ್ಮ ದಿನಾಂಕವನ್ನು ನಿರ್ದೇಶಿಸಬೇಕು ಅವನು ಇಲ್ಲವೆ ಅವಳು ಅನುಕ್ರಮವಾಗಿ ಹುಟ್ಟಿದಂತೆ ಸೇರಿಸಬೇಕು.

(ಸಹಿ) ಇ ಎಫ್

ರಿಜಿಸ್ಟ್ರಾರ್ ಹಿಂದೂ ವಿವಾಹ ಕಾನೂನು ಭಾಗ ೨ ಹಿಂದೂ

ಕಾನೂನು ಜಿಲ್ಲೆ

(ಸಹಿ) ಅ ಬ

ಕ ಡ

ಮೂವರು ಸಾಕ್ಷಿದಾರರು

ಜಿ. ಎಚ್

ಆಯ್. ಜೆ

ಕೆ. ಎಲ್

(೧೮೨)

**ಏಳನೆಯ ಪರಿಶಿಷ್ಟ**

**ಮೊದಲು ಹಕ್ಕಿನ ಷೇರುದಾರರು ವಾರಸುದಾರರು**

**ವರ್ಗ ೧**

**(ಕಲಂ ೯೮ ನೋಡಿರಿ)**

ಮಗ: ವಿಧವೆ : ಮಗಳು : ಮೊದಲೇ ತೀರಿಕೊಂಡ ಮಗನ ಮಗ ಮೊದಲೇ ತೀರಿಕೊಂಡ ಮಗನ ವಿಧವೆ : ಮೊದಲೇ ತೀರಿಕೊಂಡ ಮಗನ ಮಗನ ಮಗ, ಮೊದಲೇ ತೀರಿಕೊಂಡ ಮಗನ ಮಗನ ವಿಧವೆ.

## ವರ್ಗ ೧೧
### (ಕಲಂ ೯೮ ನೋಡಿರಿ)

i ತಂದೆ, ತಾಯಿ (ಬ)

ii (೧) ಮಗಳ ಮಗ
(೨) ಮಗಳ ಮಗಳು
(3) ಮಗಳ ಮಗಳು

iii (೧) ಮಗನ ಮಗಳ ಮಗ
(೨) ಮಗನ ಮಗನ ಮಗಳು
(3) ಮಗನ ಮಗಳ ಮಗಳು
(೪) ಸಹೋದರ (೫) ಸಹೋದರಿ.

iv (೧) ಮಗಳ ಮಗನ ಮಗ
(೨) ಮಗಳ ಮಗನ ಮಗಳು
(3) ಮಗಳ ಮಗಳ ಮಗ
(೪) ಮಗಳ ಮಗಳ ಮಗಳು

v. (೧) ಸಹೋದರನ ಮಗ
(೨) ಸಹೋದರಿಯ ಮಗ
(೩) ಸಹೋದರನ ಮಗಳು ಮತ್ತು
(೪) ಸಹೋದರಿಯ ಮಗಳು.

vi. ತಂದೆಯ ತಂದೆ, ತಂದೆಯ ತಾಯಿ

vii. ತಂದೆಯ ವಿಧವೆ, ಸಹೋದರನ ವಿಧವೆ

viii. ತಂದೆಯ ಸಹೋದರ – ತಂದೆಯ ಸಹೋದರಿ

ix. ತಾಯಿಯ ತಂದೆ, ತಾಯಿಯ ತಾಯಿ

x ತಾಯಿಯ ಸಹೋದರ ತಾಯಿಯ ಸಹೋದರಿ

**ವಿವರಣೆ :** ಈ ಪರಿಶಿಷ್ಟದಲ್ಲಿ ಸಹೋದರ ಇಲ್ಲವೆ ಸಹೋದರಿ ಕುರಿತು ಹೇಳಿದ್ದು ಏಕೋದರ ರಕ್ತದ ಸಹೋದರಿ ಸಹೋದರನನ್ನು ಒಳಗೊಂಡಿರುವುದಿಲ್ಲ.

* * * *

# ವಿಭಾಗ – ೩

# ಪರಿಶೀಲನಾ ಸಮಿತಿಯವರಿಂದ ಹಿಂದೂ ಕಾನೂನು ಮಸೂದೆ ತಿರುಗಿ ಬಂದ ನಂತರ

## ಹಿಂದೂ ಮಸೂದೆಯ ಮೇಲಣ ಚರ್ಚೆ

### ದಿನಾಂಕ ೧೧ನೇ ಫೆಬ್ರವರಿ ೧೯೪೯ರಿಂದ
### ದಿನಾಂಕ ೧೪ ಡಿಸೆಂಬರ್ ೧೯೫೦ರ ವರೆಗೆ

## (೧೭೩)

# ಹಿಂದೂ ವಿವಾಹಗಳ ವಿಧಿಮಾನ್ಯತೆಯ ಮಸೂದೆ

**ಪಂಡಿತ ಠಾಕೂರ ದಾಸ ಭಾರ್ಗವ : (ಪೂರ್ವ ಪಂಜಾಬ, ಸಾಮಾನ್ಯ) ನಾನು ಈ ಸೂಚನೆಯನ್ನು ಮಂಡಿಸುತ್ತೇನೆ.**

ಈ ಮಸೂದೆಯಲ್ಲಿ ಹಿಂದೂಗಳ ಶೀಖರ ಜೈನರ ನಡುವೆ ನಡೆಯುವ ವಿವಾಹಗಳ ಮತ್ತು ಅದರ ಬೇರೆ ಬೇರೆ ಜಾತಿ ಮತ್ತು ಉಪಜಾತಿಗಳ ನಡುವೆ ನಡೆಯುವ ಮದುವೆಗಳು ಕಾನೂನುಬದ್ಧವಾಗಲು ಉಪಬಂಧವನ್ನು ಒದಗಿಸುವುದು ಅವಶ್ಯವಿದ್ದು ಅದನ್ನು ಪರಿಶೀಲನಾ ಸಮಿತಿ – ಗಿಯಾನಿ ಗುರುಮುಖ ಸಿಂಗ ಮುಸಾಫೀರ್, ಸರದಾರ ಹುಕುಮಸಿಂಗ, ಶ್ರೀ ಎಮ್ ಅನಂತಶಯನಮ್ ಅಯ್ಯಂಗಾರ, ಶ್ರೀ ದೇಶಬಂಧು ಗುಪ್ತಾ, ಶ್ರೀಮತಿ ಜಿ ದುರ್ಗಬಾಯಿ, ಶ್ರೀಮತಿ ರೇಣುಕಾರಾಯ, ಶ್ರಿ ರಾಮನಾಥ ಗೋಯಂಕ, ಡಾ. ಬಕ್ಷಿ ಟೀಕಚಂದಲಾಲ, ಅಚಿಂತರಾಮ, ಚ. ರಣಬೀರ ಸಿಂಗ, ಶ್ರೀ ಮಹಾವೀರ ತ್ಯಾಗಿ, ಇವರನ್ನೊಳಗೊಂಡ ಪರಿಶೀಲನ ಸಮಿತಿಗೆ ಒಪ್ಪಿಸಬೇಕು. ಈ ನಿಲುವಳಿ ಸೂಚನೆ ಮಂಡಿಸುತ್ತಿರುವವರು ಹಾಗೂ ಅನೇಕ ಜನ ಸದಸ್ಯರು ಹಾಜರಿರುವುದು ಮತ್ತು ಆ ಸಮತಿಯ ಐದು ಜನ ಸದಸ್ಯರ ಸಭೆ ಕರೆಯುವುದು ಅವಶ್ಯವಿದೆ.

ಮಾನ್ಯರೆ, ಈ ಸೂಚನೆಯನ್ನು ಮಂಡಿಸಲು ನಿಮ್ಮ ಅನುಮತಿಯನ್ನು ಕೋರುತ್ತೇನೆ. ಕಾನೂನಿನ ಸ್ಥಿತಿಯು ಈಗ ಏನಿದೆಯೆಂದೂ, ಯಾವ ಪರಿಸ್ಥಿತಿಯಲ್ಲಿದೆಯೆಂದು ನಾನು ಇದೀಗ ಹೇಳುತ್ತೇನೆ – ಈಗ ಸದ್ಯಕ್ಕೆ ಎಲ್ಲ ಹಿಂದೂ, ಶೀಖರು ಮತ್ತು ಜೈನರು ಇವರು ಹಿಂದೂ ಕಾನೂನಿಗೆ ಬದ್ಧರಾಗಿರಲೇಬೇಕಾಗುತ್ತದೆ. ಒಂದು ವಿವಾಹ ಬೇರೆ ಬೇರೆ ಜಾತಿಯ ನಡುವಣ ಬೇರೆ ಬೇರೆ ಜಾತಿಗೆ ಸೇರಿದವರ ಮುಂಬೈಯೊಂದನ್ನು ಹೊರತುಪಡಿಸಿ ಕಾನೂನುಬದ್ಧವಾಗುವುದಿಲ್ಲ. ಮುಂಬೈಯಲ್ಲಿ ಅನುಲೋಮ 'ವಿವಾಹಗಳು' ನಡೆಯುವುದಕ್ಕೆ ಪುರಸ್ಕಾರ, ಅವಕಾಶವಿದೆ ಅಲಹಾಬಾದ್, ಮದ್ರಾಸ್ ಮತ್ತು ಕಲ್ಕತ್ತಗಳಲ್ಲಿ ಹೈಕೋರ್ಟಗಳು ಅನುಲೋಮ ವಿವಾಹ ಸಹಾ ವಿಧಿಮಾನ್ಯತೆ ಪಡೆದಿಲ್ಲ ಎಂದು ಘೋಷಿಸಿವೆ. ಹಿಂದೂ ಕಾನೂನನ್ನು ಕಟ್ಟುನಿಟ್ಟಾಗಿ ಅನ್ವಯಿಸುವುದರಿಂದ ವಿವಿಧ ಭಾಗಗಳಲ್ಲಿ ಹಿಂದೂ ತತ್ವ ಹಾಗೂ ಹಿಂದೂ ರೂಢಿ ಸಂಪ್ರದಾಯಗಳನ್ನು ಕಟ್ಟುನಿಟ್ಟಾಗಿ ಅನ್ವಯಿಸುವುದರಿಂದ ಬೇರೆ ಬೇರೆ ಜಾತಿಯವರ ನಡುವೆ ನಡೆಯುವ ಲಗ್ನಕ್ಕೆ ಪುರಸ್ಕಾರ ಕೊಡುವುದಿಲ್ಲ ಮತ್ತು ಅವಕಾಶ ಕೊಡುವುದಿಲ್ಲ. ಉದಾಹರಣೆಗಾಗಿ ಪಂಜಾಬಿನಲ್ಲಿ 'ಕರ್ವಾರಿ' ಮತ್ತು 'ಚಂದ್ರದಾರಿ' ಮದುವೆಗಳಿಗೆ ಅವಕಾಶ ಇರುತ್ತದೆ. ಹಿಂದೂ ಕಾನೂನಿನ ಕಟ್ಟುನಿಟ್ಟಿನ ತತ್ವದ ಪ್ರಕಾರ ಹಿಂದೂ ಧರ್ಮದ ಬೇರೆ ಬೇರೆ ಸಮುದಾಯಗಳ ನಡುವಿನ ರೀತಿ ಸಂಪ್ರದಾಯಗಳು ಆ ಭಾಗದಲ್ಲಿ ಅಸ್ತಿತ್ವದಲ್ಲಿ ಇರುವುದರಿಂದ ಅಂತಹ ಮದುವೆಗಳಿಗೆ ಅವಕಾಶ ಇರುವುದಿಲ್ಲ. ಆದರೆ ಕೆಲವು ಭಾಗಗಳಲ್ಲಿ ಇಂತಹ ಲಗ್ನಗಳಿಗೆ ಅವಕಾಶವಿದೆ.

**ಉದಾಹರಣೆಗೆ :** ನೇಪಾಳದಲ್ಲಿ ಇಂತಹ ಮದುವೆಗಳು ಕಾನೂನುಬದ್ಧವೆಂದು ಹೇಳಲಾಗುತ್ತದೆ. ಪಂಜಾಬದಲ್ಲಿ ಯಾವುದು ಜಾತಿಯ ಮೇಲೆ ಹೋಗುವ ಪ್ರಾಂತವಾಗಿದೆಯೋ ಅಲ್ಲಿ ಸಿಖ್ಖರ ಮತ್ತು

ಹಿಂದುಗಳ ನಡುವಿನ ವಿವಾಹವು ಕಾನೂನುಬದ್ಧವೆಂದು ಹೇಳಲಾಗುತ್ತದೆ, ಆದರೆ ಅದು ನ್ಯಾಯಾಲಯಗಳಿಂದ ಅಲ್ಲ. ಆದರೆ ಸಾಮಾನ್ಯವಾಗಿ ಸಮಾಜವು ಆ ಲಗ್ನ ಕಾನೂನುಬದ್ಧವೆಂದು ತಿಳಿಯುತ್ತದೆ. ಅವರ ಮಕ್ಕಳು ಅವರ ಆಸ್ತಿಯನ್ನು ವಾರಸಾನಾತೆಯಿಂದ ಪಡೆಯಲು ಅವಕಾಶವಿದೆ. ಕಾನೂನು ಪ್ರಕಾರ ಲಗ್ನವಾಗಿದೆಯೆಂದು ತಿಳಿದು ಅವರ ಮಕ್ಕಳಿಗೆ ಆಸ್ತಿ ವಾರಸಾ ಹಕ್ಕುಕೊಡಲಾಗಿದೆ. ಒಂದು ಮದುವೆ ಜೈನ ಹಾಗೂ ಹಿಂದೂಗಳ ನಡುವೆ ಹಿಂದಕ್ಕೆ ನಡೆಯುತ್ತಿರಲೇ ಇಲ್ಲ. ಆದರೆ ಈಗ ಸದ್ಯಕ್ಕೆ ತೂಗಾಡುವ ವಸ್ತು ಬೇರೊಂದು ಸ್ಥಾನಕ್ಕೆ ಜಿಗಿದಿದೆ. ಈಗ ಜೈನರ ಹಾಗೂ ಹಿಂದೂಗಳ ನಡುವೆ ಮದುವೆಗಳು ನಡೆಯುತ್ತವೆ. ಅದರಲ್ಲಿಯೂ ವಿಶೇಷವಾಗಿ ಜೈನರು ಅಗ್ಗರವಾಲಾಜ ಮತ್ತು ಹಿಂದೂ ಅಗ್ಗರವಾಲಾಜರಲ್ಲಿ ವಿಶೇಷವಾಗಿ ನಡೆಯುತ್ತವೆ. ಆದರೆ ಒಬ್ಬ ಜೈನ ಅಗ್ಗರವಾಲಾ ಈತನು ಒಬ್ಬ ಶೂದ್ರನನ್ನು ಇಲ್ಲವೆ ಬ್ರಾಹ್ಮಣನನ್ನು ಕಾನೂನುಬದ್ಧವಾಗಿ ಲಗ್ನವಾಗಬಹುದೆ? ಎಂಬುದು ಬಹಳ ಸಂಶಯಾಸ್ಪದವಾಗಿದೆ. ಉಪವಿಭಾಗ ಮತ್ತು ಉಪಜಾತಿಗಳ ನಡುವೆ ಸಹ ೧೯೪೬ರ ಅಧಿನಿಯಮ ಜಾರಿಗೆ ಬರುವ ಪೂರ್ವದಲ್ಲಿ ಹಿಂದೂಗಳ ಉಪವಿಭಾಗಗಳು ಮತ್ತು ಉಪಜಾತಿಗಳ ಈ ಸಮುದಾಯಗಳ ನಡುವಿನ ಮದುವೆಗಳು ಕೆಲವು ಭಾಗಗಳಲ್ಲಿ ಕಾನೂನು ಬದ್ಧವೆಂದೂ ಮತ್ತು ಕೆಲವು ಭಾಗಗಳಲ್ಲಿ ಕಾನೂನುಬಾಹಿರವೆಂದೂ ಘೋಷಿಸಲಾಯಿತು. ಆದರೆ ವಿಷಯಕ್ಕೆ ಸರಿಸಮಾನವಾದ ವಿಷಯ ಇಲ್ಲದೆ ಈ ಉಪವಿಭಾಗ ಮತ್ತು ಉಪಜಾತಿ ಇವು ಎರಡೂ ಒಂದೇ ಆದರೆ ನಾನು ಉಪವಿಭಾಗ ಮತ್ತು ಉಪಜಾತಿ ಪದಗಳನ್ನು ಬಳಸಿದ್ದಕ್ಕೆ ವಿಷಾದಿಸುತ್ತೇನೆ. ಮುಖ್ಯ ಹಿಂದೂಧರ್ಮದ ಉಪಜಾತಿಗಳ ನಡುವಣ ಮದುವೆಗಳು ಕಾನೂನು ಬದ್ಧವಾಗಿವೆ. ಉಳಿದವುಗಳ ಬಗೆ ಉದಾ : ಬೇರೆ ಬೇರೆ ಧರ್ಮಕ್ಕೆ ಸೇರಿದವರು ಮತ್ತು ಬೇರೆ ಬೇರೆ ಜಾತಿಗಳಿಗೆ ಸಂಬಂಧಿಸಿದವರು ಮದುವೆಯಾಗಲು ಇಚ್ಛಿಸಿದರೆ, ನನ್ನ ಸವಿನಯ ವಿನಂತಿ ಏನೆಂದರೆ ಈಗಿನ ಸದ್ಯದ ಕಾನೂನಿನಂತೆ ಅಂತಹ ಮದುವೆಗಳು ಕಾನೂನುಬದ್ಧವಾಗಿರುವುದಿಲ್ಲ. ಸದ್ಯಕ್ಕೆ ಜನಾಭಿಪ್ರಾಯದ ಪ್ರಕಾರ ಸ್ಪಷ್ಟವಾಗಿ ಇದು ಹೋಗಲಿಕ್ಕೇಬೇಕು. ಬೇರೆ ಬೇರೆ ಧರ್ಮದಲ್ಲಿ ನಂಬಿಕೆ ಇಟ್ಟವರು, ಅದರಂತೆ ಬೇರೆ ಬೇರೆ ಜಾತಿಯವರು ಇವರ ನಡುವೆ ಆಗುವ ವಿವಾಹಗಳನ್ನು ಕಾನೂನುಬದ್ಧವಾದವುಗಳೆಂದು ಮಾಡಲಿಕ್ಕೇಬೇಕು. ಸದ್ಯಕ್ಕೆ ಅನೇಕ ತರುಣರು ಮತ್ತು ಹೆಣ್ಣುಮಕ್ಕಳು ತಮ್ಮ ಜಾತಿಯ ಹೊರಗಡೆ ವಿವಾಹವಾಗಲು ಇಚ್ಛಿಸುವ ಸಾರ್ವಜನಿಕ ಅಭಿಪ್ರಾಯವು ಇರುವಂತೆ ನನಗೆ ಖಾತರಿ ಇದೆ. ನಾವು ಬಂಡೆಗಲ್ಲಿನ ತಳಹದಿಯ ಮೇಲೆ ಈ ಉದ್ದೇಶಕ್ಕಾಗಿ ನಿಂತಿದ್ದೇವೆ.

ಇದನ್ನು ರಾಷ್ಟ್ರೀಯ ದೃಷ್ಟಿಯಿಂದ ನೋಡುವ ಈ ವಿಷಯವನ್ನು ನಾನು ವಿನಯದಿಂದ ಹೇಳಬಯಸುವುದೇನೆಂದರೆ ಈ ಸದನವು ನಾನು ಸದ್ಯಕ್ಕೆ ತಂದ ಮತವಿರೋಧಿ ಮಸೂದೆಯನ್ನು ಪಾಸು ಮಾಡಬೇಕು. ಈ ಮತವಿರೋಧಿ ಮಸೂದೆಯು ಹಿಂದೂಗಳು, ಸಿಖ್ಖರು ಪಂಜಾಬದಲ್ಲಿ ಇರುವ ನೂರಾರು ಹುಡಿಗೆಯರು ಸಿಖ್ ಧರ್ಮಕ್ಕೆ ಸೇರಿದವರು ಮತ್ತು ನೂರಾರು ಹೆಣ್ಣುಮಕ್ಕಳು ಮದುವೆಯಾಗಿದ್ದರೆ, ಸಿಖ್ಖರು ಮತ್ತು ಹಿಂದುಗಳು ಲಗ್ನವಾಗಿದ್ದರೆ, ಈ ಸಂಪೂರ್ಣ ತೊಂದರೆಯು ನಿವಾರಣೆಯಾಗಬಹುದಿತ್ತು. ನಿಜವಾಗಿಯೂ ನನ್ನ ದೃಷ್ಟಿಯಲ್ಲಿ ಹಿಂದುಗಳು ಮತ್ತು ಮುಸಲ್ಮಾನರು ಉಳಿದವರೊಂದಿಗೆ ಲಗ್ನವಾದರೆ, ತಮ್ಮ ತಮ್ಮ ನಡುವೆ ಲಗ್ನವಾಗಿದ್ದರೆ ಪಾಕಿಸ್ತಾನವು ಅಸ್ತಿತ್ವದಲ್ಲಿಯೇ ಬರುತ್ತಿರಲಿಲ್ಲ ಅಂತರಜಾತಿ ವಿವಾಹಗಳನ್ನು ಒಂದು ಪದ್ಧತಿಯನ್ನಾಗಿ ನಾವು ಸ್ವೀಕರಿಸಿದ್ದರೆ ನಮ್ಮಲ್ಲಿ ಅಳವಡಿಸಿಕೊಂಡಿದ್ದರೆ ನನಗೆ ಸಂಪೂರ್ಣ ನಂಬಿಕೆ : ವಿಶ್ವಾಸ ಇದೆ– ಎಲ್ಲ ಜಾತಿಯ ವೈಷಮ್ಯತೆ, ಬೇರೆ ಬೇರೆ ಜಾತಿಯವರ ನಡುವಿನ ವೈಷಮ್ಯ ಇರುತ್ತಿರಲಿಲ್ಲ.

ನಾವು ಯಾಕೆ ಇಂತಹ ಕ್ರಮ ಕೈಕೊಳ್ಳುವುದಿಲ್ಲವೆಂಬುದು ನನಗೆ ತಿಳಿಯದಾಗಿದೆ. ನಿಜವಾಗಿ ಹಿಂದೂ ಧರ್ಮದ ತತ್ವಗಳು ನಮ್ಮ ಹಾದಿಯಲ್ಲಿ ಬರುತ್ತವೆ, ಆದ್ದರಿಂದ ಮಿಥ್ಯೆಯ ಮಾರ್ಗವನ್ನು

ಸರಿಸಬೇಕು ಇದಕ್ಕೆ ವಿರುದ್ಧವಾದ ಕ್ರಮಗಳನ್ನು ನಾವು ಸ್ವೀಕರಿಸುತ್ತಿದ್ದೇವೆ ಎಂಬುದು ಸುಳ್ಳು. ನಮಗೆ ಈ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಟ್ಟಿರುವುದಿಲ್ಲ. ನಾನು ವಿನಯದಿಂದ ತಿಳಿಯಬಯಸುವುದೇನೆಂದರೆ ಮಹಾಭಾರತದಲ್ಲಿ ಮೊದಲಿನ ಶ್ಲೋಕವು ಈ ರೀತಿ ಪ್ರಾರಂಭವಾಗುತ್ತದೆ– ಈ ಭೂಮಿಯಲ್ಲಿ ಬಹಳ ಜನ ಕ್ಷತ್ರಿಯರು ಇರಲಿಲ್ಲ. ಆದ್ದರಿಂದ ಕೆಲವು ಬ್ರಾಹ್ಮಣರನ್ನು ಕರೆತಂದು ಅವರು ಕ್ಷತ್ರಿಯರನ್ನು ಸೃಷ್ಟಿಸಿದರು. ನಮ್ಮ ಧರ್ಮ ಮತ್ತು ವೇದ ಉಪನಿಷತ್ತುಗಳು ಹೇಳುವುದೇನೆಂದರೆ ಇಂತಹ ಮದುವೆಗಳು ಅಪರೂಪವಾಗಿರಲಿಲ್ಲ. ಈ ಜಾತಿಗಳ ಪದ್ಧತಿಯು ಘನೀಭವವಾಗುವ ಹಿಂದುಗಳ ಅಂತರಜಾತಿ ವಿವಾಹವನ್ನು ಭಾರತದಲ್ಲಿ ನಿಷೇಧಿಸಿರಲಿಲ್ಲ. ಅಂತರಜಾತಿ ವಿವಾಹ ಕುರಿತು ಮೇಲಿನಂತೆ ಇತ್ತು. ಆದ್ದರಿಂದ ಮದುವೆಯ ಮೂಲದ ದೃಷ್ಟಿಯಿಂದ ನನಗೆ ತಿಳಿದಂತೆ ಇದನ್ನು ಸ್ವೀಕರಿಸುವುದರಲ್ಲಿ ತೊಂದರೆಯು ಇರುವುದಿಲ್ಲ.

ಒಟ್ಟಾರೆ ನಾನು ಹೇಳಬೇಕೆಂದಿರುವ ವಿಷಯವೇನೆಂದರೆ ಇದು. ಈ ಕ್ರಮ ಅವಕಾಶ ಕಲ್ಪಿಸುವ ಒಂದು ಹೆಜ್ಜೆಯಾಗಿದೆ. ಇದು ಯಾರಿಗೂ ಒತ್ತಾಯ ಮಾಡಿ ಜಾತಿಯ ಹೊರಗಿನವರನ್ನು ಮದುವೆ ಮಾಡಿಕೊಳ್ಳಲು ಹೇಳುವುದಿಲ್ಲ. ಒಬ್ಬ ಮನುಷ್ಯನು ಹಾಗೆ ಇಚ್ಛಿಸಿದರೆ ಒಬ್ಬ ಹುಡುಗ ಮತ್ತು ಹೆಣ್ಣುಮಗಳು ಹಾಗೆ ಮನಸ್ಸು ಮಾಡಿದರೆ ಅವರ ತಂದೆತಾಯಿಗಳು ಅಂತಹ ಮನಸ್ಸಿನವರಾಗಿದ್ದರೆ, ನನಗೆ ಬೇಕಾದುದು ಏನೆಂದರೆ ಅವರು ಲಗ್ನವಾಗಲು ಅವಕಾಶ ಕಲ್ಪಿಸುತ್ತದೆ ಮತ್ತು ಅವರ ಮಕ್ಕಳು ಕಾನೂನುಬದ್ಧ ಮಕ್ಕಳಾಗುತ್ತಾರೆ. ಒಬ್ಬ ಹಿಂದೂ ತನ್ನ ಜಾತಿಯ ಹೊರಗಡೆ ಮದುವೆಯಾಗಲು ಇಚ್ಛಿಸಿದರೆ ಸುಳ್ಳಿನಿಂದ ಅವನು ತನ್ನ ಉದ್ದೇಶವನ್ನು ಪರಿಣಾಮಕಾರಿಯಾಗಿ ಸಾಫಲ್ಯಗೊಳಿಸುವ ಅಗತ್ಯವಿಲ್ಲ. ಆರ್ಯರ ರೀತಿಯ ಆರ್ಯವಿವಾಹಗಳ ಸಿಂಧುತ್ವಗೊಳಿಸುವ ಅಧಿನಿಯಮದಡಿಯಲ್ಲಿ ಅವನು ಯಾವುದೇ ಹಿಂದುವನ್ನು ತನ್ನ ಜಾತಿಯ ಹೊರಗೆ ವಿವಾಹ ಮಾಡಿಕೊಳ್ಳಬಹುದು. ಹೀಗೆ ತಿಳಿಯಿರಿ ಒಬ್ಬ ವ್ಯಕ್ತಿಯು ಆರ್ಯ ಸಮಾಜಕ್ಕೆ ಸೇರಿದವನಲ್ಲವಾದರೂ ಅವನು ಸುಳ್ಳು ಹೇಳಿ ಏಕೆ ಉದ್ದೇಶ ಸಫಲಮಾಡಿಕೊಳ್ಳಬೇಕು?

ಕಾನೂನು ಕಾಳಜಿ ವಹಿಸಬೇಕಾದದ್ದು ಏನೆಂದರೆ ಜನರು ಆ ಸಂಗತಿಗಳನ್ನು ಕಾನೂನು ಪ್ರಕಾರ ಮಾಡಬೇಕು. ನನಗೆ ಸಹ ಗೊತ್ತಿದೆ. ಅದೆಂದರೆ ವಿಶೇಷ ವಿವಾಹದ ಅಧಿನಿಯಮ (ಅಧಿನಿಯಮ ೩, ೧೮೭೨ನೆಯ ಇಸ್ವಿ) ಈ ಅಧಿನಿಯಮದ ಉಪಬಂಧಗಳ ಅನ್ವಯ ಒಬ್ಬ ಹಿಂದೂ ಮದುವೆಯ ಒಪ್ಪಂದ ಮಾಡಿಕೊಳ್ಳಬಲ್ಲನು, ಇದರ ತಿದ್ದುಪಡಿಯಾಗದ ಉಪಬಂಧಗಳ ಅನ್ವಯ ಒಂದು ಘೋಷಣೆ ನೀಡಬೇಕು. ಅದೆಂದರೆ ತಾನು ಹಿಂದುವಲ್ಲವೆಂದು ಘೋಷಣೆ ಮಾಡಬೇಕು. ಆದರೆ ಅವನು ಹಿಂದೂ ಆಗಿಯೇ ಮುಂದುವರೆಯುತ್ತಾನೆ. ಇದಕ್ಕೆ ಒಂದು ಅತ್ಯುತ್ತಮ ಅಸಂಗತೋಕ್ತಿಯನ್ನು ಹಿಂದೂ ಸಂಹಿತೆಯಲ್ಲಿ ಎಚ್.ಎಸ್. ಗೌರ್ ಪ್ಯಾರಾ ಸಂಖ್ಯೆ ೪೫೭ರಲ್ಲಿ ಕೊಟ್ಟಿದ್ದಾರೆ. ಅದು ಹೀಗೆ ಹೇಳುತ್ತದೆ:

"ವಿಶೇಷ ಮದುವೆಯ (ತಿದ್ದುಪಡಿ) ಅಧಿನಿಯಮವು ಒಂದು ಅಸಂಗತೋಕ್ತಿಯನ್ನು ನಿರ್ಮಿಸಿದುದನ್ನು ನಾವು ಕಾಣುತ್ತೇವೆ. ಒಬ್ಬ ಹಿಂದೂ ತನ್ನಷ್ಟಕ್ಕೆ ತಾನೇ ತಾನು ಹಿಂದು ಅಲ್ಲವೆಂದು ಘೋಷಣೆ ಮಾಡಿ ಲಗ್ನವಾಗುತ್ತಾನೆ. ಅವನು ಹಿಂದೂ ಕಾನೂನುಗಳಿಗೆ ಒಳಪಟ್ಟಿರುತ್ತಾನೆ. ಅವನು ಹಾಗೆ ಮಾಡದಿದ್ದರೆ, ಘೋಷಣೆ ಕೊಡದಿದ್ದರೆ ಅವನಿಗೆ ಹಿಂದೂ ಕಾನೂನು ಅನ್ವಯಿಸುವುದಿಲ್ಲ. ಅವನು ಒಂದು ಸಮಸ್ಯೆಯ ಸುಳಿಯಲ್ಲಿ ಸಿಕ್ಕಿಕೊಂಡಿದ್ದಾನೆ. ಯಾವಾಗ ಒಬ್ಬ ಹಿಂದೂ ಹಿಂದೂಯೇತರನಾಗುತ್ತಾನೆ? ಯಾವಾಗ ಅವನು ಹಿಂದೂ ಅಂತಾ ವಿಶೇಷ ವಿವಾಹದ (ತಿದ್ದುಪಡಿ) ಅಧಿನಿಯಮದ ಅನ್ವಯ ವಿವಾಹವಾದ ಸಂದರ್ಭದಲ್ಲಿ ಎಂಬುದೇ ಅದಕ್ಕೆ ಉತ್ತರ."

೧೯೨೩ನೆಯ ಅಧಿನಿಯಮವು ಪಾಸಾದಾಗ ನಾನು ಆ ಕಾಲದ ಅದರ ವ್ಯವಹರಣೆಗಳನ್ನು

ಓದಿದ್ದೇನೆ. ನನಗೆ ಅನಿಸಿದಂತೆ ಡಾ. ಗೌರ್ ಅವರನ್ನು ಮೂಲೆಯಲ್ಲಿ ಸಿಲುಕಿಸಲಾಗಿದೆ. ಅವರು ಸಂದರ್ಭವನ್ನು ಒಪ್ಪಿಕೊಳ್ಳಲೇಬೇಕಾಗಿತ್ತು. ಅವರು ಸ್ವತಂತ್ರರಿದ್ದಲ್ಲಿ ಈ ಪರಿಸ್ಥಿತಿಯನ್ನು ಅವರು ಯಾವಾಗಲೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಇಲ್ಲಿ ಪರಿಸ್ಥಿತಿಯು ಅತಿ ವಿಚಿತ್ರವಾಗಿದೆ. ಒಬ್ಬ ಮನುಷ್ಯನು ತನ್ನ ಜಾತಿಯ ಹೊರಗಡೆ ಲಗ್ನವಾಗಲು ಇಚ್ಛಿಸಿದರೆ ಅಂದರೆ ಒಬ್ಬ ಹಿಂದೂ ಹಿಂದೂಗಳಲ್ಲದವರನ್ನು ಲಗ್ನವಾಗಲು ಇಚ್ಛಿಸಿದರೆ ಆಗ (ತಿದ್ದುಪಡಿ) ಅಧಿನಿಯಮ (ಅವರ ಹಿಂದಿನ ಹಕ್ಕುಗಳಿಗೆ ಯಾವುದೇ ಜಾತಿಯ ಅನರ್ಹತೆಯನ್ನು ತೆಗೆದುಹಾಕುವ ಅಧಿನಿಯಮ)ದಲ್ಲಿ ಕಾಣಿಸಿದಂತೆ ಯವ ಬಾಧಕವೂ ಇರುವುದಿಲ್ಲ. ಆದರೆ ಇನ್ನೂ ಏನಾಗುವುದೆಂದರೆ ಅವರು ಲಗ್ನವಾದರೆ ಈ ಅನರ್ಹತೆ ಯಾವುದರಿಂದ ಅವರು ಬಳಲುವರೋ ಅದನ್ನು ನಾನು ಗೌರ್ ಅವರ 'ಹಿಂದೂ ಕಾನೂನು, ಈ ಪುಸ್ತಕದಿಂದ ವರ್ಣಿಸುತ್ತೇನೆ – ಅವರ ಹಿಂದಿನ ಹಕ್ಕುಗಳು ಅಬಾಧಿತವಿರುತ್ತವೆ. ಅವು ಎಷ್ಟರಮಟ್ಟಿಗೆ ಅಂದರೆ ಜಾತಿಯ ಅನರ್ಹತೆಯನ್ನು ತೆಗೆದುಹಾಕುವ ಅಧಿನಿಯಮದ ಮಟ್ಟಿಗೆ ಯಾವ ಪರಿಣಾಮವನ್ನು ಮಾಡುವುದಿಲ್ಲ. ಅವರಿಗೆ ದತ್ತಕ ತೆಗೆದುಕೊಳ್ಳುವ ಅಧಿಕಾರವಿಲ್ಲ. ಹೀಗೆ ಲಗ್ನವಾದ ಮನುಷ್ಯನು ಒಬ್ಬರು ದತ್ತಕ ತೆಗೆದುಕೊಂಡವನಾಗಿದ್ದರೆ ಅವನನ್ನು ದತ್ತಕ ತೆಗೆದುಕೊಂಡ ತಂದೆಯು ಇಚ್ಛಿಸಿದಲ್ಲಿ ಮತ್ತೊಬ್ಬನನ್ನು ದತ್ತಕ ತೆಗೆದುಕೊಳ್ಳಬಹುದು. ಹಾಗೆ ಆ ಬಡಮನುಷ್ಯನು ಲಗ್ನವಾಗಲು ಅವನ ಹಕ್ಕು, ಹಾಗೆ ದತ್ತಕ ತೆಗೆದುಕೊಂಡಾಗ ಇದ್ದವು ಹೋಗಿಬಿಡುತ್ತವೆ ಮತ್ತು ಅವನ ತಂದೆಯು ಮತ್ತೊಬ್ಬನನ್ನು ದತ್ತಕ ತೆಗೆದುಕೊಳ್ಳಲು ಅರ್ಹನಿರುತ್ತಾನೆ. ಆಗ ಅಂತಹ ಲಗ್ನ ಅವಿಭಕ್ತ ಕುಟುಂಬವನ್ನು ಒಡೆಯುತ್ತದೆ. ಇದು ಮತ್ತೊಂದು ದೊಡ್ಡ ಅನರ್ಹತೆ. ಒಬ್ಬನು ಹಿಂದೂ ಅಲ್ಲದವರನ್ನು ಲಗ್ನವಾಗಲು ಇಚ್ಛಿಸಿದರೆ ಅವನು ಹಿಂದೂ ಧರ್ಮದಿಂದ ಮುಕ್ತನಾಗಬೇಕು. ಅಂದರೆ ಅವಿಭಕ್ತ ಕುಟುಂಬಕ್ಕೆ ಸಂಬಂಧಿಸಿದಂತೆ ಅವನ ಸಂಬಂಧ ಮುಕ್ತಾಯವಾಗುತ್ತದೆ. ಅವನ ಆಸ್ತಿಗೆ ವಾರಸಾಕ್ಕೆ ಸಂಬಂಧಿಸಿದಂತೆ ಮತ್ತು ಮಕ್ಕಳ ಆಸ್ತಿಗೆ ಸಂಬಂಧಿಸಿ ಅವರ ಹಕ್ಕುಗಳನ್ನು ಭಾರತೀಯ ವಾರಸಾ ಕಾನೂನಿನ ಅನ್ವಯ ನಿಯಂತ್ರಿಸಲಾಗುವುದು. ನನ್ನ ವಿನಮ್ರ ಹೇಳಿಕೆಯೇನೆಂದರೆ ನಾವು ಇಂತಹ ಅನರ್ಹತೆಗಳನ್ನು ಅನುಭವಿಸುವ ಕಾರಣವಿಲ್ಲ. ಒಬ್ಬ ಮನುಷ್ಯ ಹಿಂದೂ ಅಲ್ಲದವರನ್ನು ಯಾಕೆ ಲಗ್ನವಾಗಬೇಕು? ಇವೆಲ್ಲ ಅನರ್ಹತೆಗಳನ್ನು ಮೇಲೆ ತೋರಿಸಿದಂತೆ ಅನುಭವಿಸಬೇಕು. ನಿಜವಾಗಿ ಅವನು ತನಗೆ ಪ್ರಿಯವಾದ ಮತ್ತು ವಂಶಪರಂಪರೆಯಾಗಿ ವಾರಸಾನಾತೆಯಿಂದ ಬಂದ ಎಲ್ಲ ಕಾನೂನುಗಳನ್ನು ತ್ಯಜಿಸಬೇಕು. ಇದು ತಪ್ಪು ಉಪಬಂಧವಾಗಿದೆ ಮತ್ತು ಇದು ಮೋಸಕ್ಕೆ ಎಡೆಮಾಡುತ್ತದೆ. ಮೊದಲಿನ ಸ್ಥಿತಿಗಿಂತ ಈಗಿನ ಸ್ಥಿತಿಯು ಸ್ವಲ್ಪಮಟ್ಟಿಗೆ ಉತ್ತಮವೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಆರ್ಯ ವಿವಾಹವನ್ನು ಸಿಂಧುತ್ವಗೊಳಿಸುವ ಅಧಿನಿಯಮ ಜಾರಿಗೆ ಬರುವ ಪೂರ್ವದಲ್ಲಿ ಆರ್ಯಸಮಾಜದವರನ್ನು ಲಗ್ನವಾದ ಪ್ರಕರಣ ನನಗೆ ಗೊತ್ತಿದೆ. ಅನೇಕ ವರ್ಷಗಳವರೆಗೆ ಅವರು ತಾವು ಗಂಡ ಹೆಂಡತಿಯೆಂದು ಘೋಷಿಸಲಿಲ್ಲ. ಅವರು ಘೋಷಣೆಯನ್ನು ಕೊಡಲಿಕ್ಕೆ ಅಂಜಿದರು ಮತ್ತು ತಮ್ಮ ಮಕ್ಕಳಿಗೆ ಏನಾಗುವುದೋ ಎಂದು ಅಂಜಿದರು. ಈಗ ಹಿಂದೂ ಮಸೂದೆಯು ಮೂಸೆಯಲ್ಲಿದೆ. ಆದುದರಿಂದ ಈ ಹಂತದಲ್ಲಿ ಕ್ರಮಕೈಗೊಳ್ಳುವ ಅವಶ್ಯಕತೆಯು ಎಲ್ಲಿದೆ? ಎಂದು ಕೇಳಬಹುದು. ಇಂತಹ ಕಾನೂನು ಅನ್ವಯ ವಿಷಯವನ್ನು ವಿವರಿಸಲು ನನಗೆ ಪರವಾನಗಿಯನ್ನು ಕೊಡಬೇಕು.

ಮೊದಲನೆಯದಾಗಿ, ನಾನು ವಿನಂತಿಪೂರ್ವಕ ಹೇಳುವುದೇನೆಂದರೆ ಹಿಂದೂ ಕೋಡ್ ಮಸೂದೆಯು ಪಾಸಾಗುವುದೋ ನನಗೆ ಗೊತ್ತಿಲ್ಲ. ಇದೇ ಅಧಿವೇಶನದಲ್ಲಿ ಇಲ್ಲವೆ ಮುಂದಿನ ಅಧಿವೇಶನದಲ್ಲಿ ಇಲ್ಲವೆ ಮತ್ತೊಂದು ಬೇರೆ ಅಧಿವೇಶನದಲ್ಲಿ ಪಾಸಾಗುವುದೂ ಸಂಶಯಾಸ್ಪದವಾಗಿದೆ.

ಎರಡನೆಯದಾಗಿ, ಈ ಮಸೂದೆಯನ್ನು ಸ್ವೀಕರಿಸಿದರೆ ಈ ಉಪಬಂಧಗಳಿಗೆ ಹಿಂದೂ ಕಾನೂನು ದಾರಿಮಾಡಿಕೊಡುತ್ತದೆ. ಅಲ್ಲಿ ಕಾಣಿಸಿದಂತೆ ಅದರಿಂದ ಆ ಕಾನೂನು ಪಾಸುಮಾಡಲು ಅನುಕೂಲವಾಗುತ್ತದೆ. ಬಹಳ ಜನರು ಈ ಕಾನೂನು ಹೀಗೆ ಇರುವುದರಿಂದ ಲಗ್ನವಾಗಲಿಲ್ಲ. ಹಾಗೆಯೆ ಇರುವವರಿಗೆ ಏನಾಗುತ್ತದೆ.? ಯಾವುದೇ ಮನಷ್ಯನು ತೀರಿಕೊಂಡರೆ ಅವನ ಆಸ್ತಿಗೆ ಕಾನೂನುಬದ್ಧವಾಗಿ ಪರಿಣಾಮ ಹೊಂದುವವೆ? ಅದೇ ವೇಳೆಗೆ ಈ ಮಸೂದೆಯನ್ನು ಕಾನೂನು ಆಗದಂತೆ ಪಾಸುಮಾಡದಿದ್ದರೆ ಈ ಕಾನೂನಿನ ಅಡಿಯಲ್ಲಿ ಅನೇಕ ಪ್ರಕರಣಗಳು ಈಗಿನ ಕಾನೂನಿನ ಅನ್ವಯ ಇರುತ್ತವೆ. ಇದರಿಂದ ಜನರು ತೊಂದರೆ ಅನುಭವಿಸುತ್ತಾರೆ. ಇದರಿಂದ ಇಡೀ ರಾಷ್ಟ್ರ ತೊಂದರೆ ಅನುಭವಿಸುತ್ತದೆ. ನಾವು ಈ ರಾಷ್ಟ್ರ ಗಟ್ಟಿಯಾಗಿ ಸುಭದ್ರವಾಗಿ ನಿಲ್ಲಲು ಅಗತ್ಯವಾದ ಪರಿಸ್ಥಿತಿ ನಿರ್ಮಾಣ ಮಾಡುವವರೆಗೆ ಮತ್ತು ಇಡೀ ರಾಷ್ಟ್ರಕ್ಕೆ ಒಂದೇ ನಮೂನೆಯ ಕಾನೂನು ಮಾಡುವವರೆಗೆ ಇದು ಸಾಧ್ಯವಿಲ್ಲ.

ಇದು ಶಾಸನದ ಒಂದು ಭಾಗವೆಂದು ಹೇಳಬಹುದು. ನನಗೆ ಅಂತಹ ಶಾಸನದ ಭಾಗಗಳ ಬಗೆಗೆ ಅನೇಕ ಉದಾಹರಣೆಗಳು ಗೊತ್ತಿವೆ. ನಾವು ೧೯೪೬ರಲ್ಲಿ ಒಂದು ಅಧಿನಿಯಮವನ್ನು ಪಾಸು ಮಾಡಿ, ಅದರಲ್ಲಿ ಮದುವೆಯ ಸಿಂಧುತ್ವ ಉಪಕಲಮಿನ ಅಡಿಯಲ್ಲಿ ಜಾತಿಗಳ ಹಾಗೂ ನಂತರ ನಾವು ಬಾಂಬೆ ದ್ವಿಪತ್ನಿತ್ವ ತಡೆಯುವಿಕೆ ಅಧಿನಿಯಮ ಮತ್ತು ಇತರ ಕಾನೂನುಗಳನ್ನು ಪಾಸುಮಾಡಿದೆವು. ಅವುಗಳ ಬಗೆಗೆ ಯಾವುದೇ ತಕರಾರು ಎತ್ತಿದ್ದೂ ನನಗೆ ಗೊತ್ತಿಲ್ಲ ಮತ್ತು ಅದರಂತೆ ಈ ಮಸೂದೆಯ ಬಗೆಗೂ ಯಾವ ತಕರಾರು ಇದೆಯೆಂಬುದು ನನಗೆ ಗೊತ್ತಿಲ್ಲ. ಇದೊಂದು ಸಣ್ಣ ಕ್ರಮವಾಗಿದೆ. ಇದು ಒಂದು ವರ್ಗದ ಮಸೂದೆ. ಒಟ್ಟಾರೆ ಅದು ಹೇಳುವುದೇನೆಂದರೆ ಹಿಂದಿನ ಮದುವೆಗಳನ್ನು ಕಾನೂನುಬದ್ಧವೆಂದು ಗ್ರಹಿಸಲಾಗುವುದು ಮತ್ತು ಇನ್ನು ಮುಂದೆ ಇಂತಹ ಮದುವೆಗಳು ಕಾನೂನುಬದ್ಧವಾಗುತ್ತವೆ. ಇಷ್ಟಲ್ಲದೆ ಇನ್ನೇನನ್ನು ಅದು ಮಾಡಲು ಉದ್ದೇಶಿಸಿಲ್ಲ.

ನಿಜವಾಗಿ, ನಾನು ಈ ಸದನದ ಮುಂದೆ ಇಂತಹ ಒಂದು ನೇರ ಮಸೂದೆಯೊಂದಿಗೆ ಬರುವ ಸಾಹಸ ಮಾಡಿದ್ದೇನೆ. ಅದು ಕಾನೂನು ಆಗುವುದೆಂದು ನಾನು ತಿಳಿಯುವೆನು. ಯಾಕೆಂದರೆ ಸಂಸತ್ತಿನಲ್ಲಿ ಬಹುರೂಢಿಯಾದ ಸಂಪ್ರದಾಯವಿದೆ. ಅದೆಂದರೆ ಪರಿಶೀಲನಾ ಸಭೆಗೆ ಒಪ್ಪಿಸುವುದು. ಈ ಅಧಿವೇಶನದಲ್ಲಿಯೇ ಈ ಮಸೂದೆಯನ್ನು ಪಾಸುಮಾಡಬೇಕೆಂಬ ಆತುರವು ನನಗೆ ಇದೆ. ಸಾರ್ವಜನಿಕರಿಗೆ ಸಂಬಂಧಿಸಿದಂತೆ ಅವರಿಗೆ ಮನವರಿಕೆಯಾಗುವುದೆಂದರೆ ಅದು ವ್ಯವಹಾರವಾಗುತ್ತದೆ. ಮತ್ತು ನಾವು ವರ್ಗರಹಿತ ಸಮಾಜವನ್ನು ರೂಪಿಸಬೇಕೆಂದು ಇಚ್ಛಿಸುತ್ತೇವೆ. ನಾನು ಹೇಳುವುದು ನಿಮ್ಮ ಮನಸ್ಸಿಗೆ ಬರಲಿಕ್ಕಿಲ್ಲ. ಇಂತಹ ಅಭಿಪ್ರಾಯವನ್ನು ಪೇಪರಿನಲ್ಲಿ ವ್ಯಕ್ತಪಡಿಸಿದ್ದಕ್ಕೆ ನನ್ನ ಮೇಲೆ ಕ್ರಮ ಕೈಕೊಳ್ಳಬಹುದು. ನಾನು ಇದನ್ನು ಸದನದಲ್ಲಿ ಓದುತ್ತೇನೆ. ಆದರೆ ಇಂತಹ ಮಹತ್ವದ ವಿಷಯದಲ್ಲಿ ನಾವು ಯಾರಿಗೂ ಅಂಜಬಾರದು. ಮಹಾತ್ಮಾ ಗಾಂಧಿಯವರು ನಮಗೆ ವರ್ಗರಹಿತ ಸಮಾಜ ಇರಲಿಕ್ಕೇ ಬೇಕೆಂದು ಹೇಳಿದ್ದಾರೆ. ವರ್ಗರಹಿತ ಸಮಾಜ ನಿರ್ಮಾಣಕ್ಕೆ ಇದುವೇ ಸರಿಯಾದ ಮಾರ್ಗವಾಗಿದೆ. ಇದಕ್ಕೆ ವಿರುದ್ಧವಾದವರು ತಮ್ಮ ತಮ್ಮ ಅಭಿಪ್ರಾಯವನ್ನು ಮರೆತು ಸಾಮಾಜಿಕ ಹಕ್ಕುಗಳನ್ನು ಕೊಡುವ ದೃಷ್ಟಿಯಿಂದ ಮತ್ತು ಆರ್ಥಿಕ ಹಕ್ಕುಗಳನ್ನು ಹಾಗೂ ರಾಜಕೀಯ ಹಕ್ಕುಗಳನ್ನು ಕೊಡುವ ದೃಷ್ಟಿಯಿಂದ ನಾವು ಇದನ್ನು ಬಯಸುತ್ತೇನೆ. ಇದರಿಂದ ನಾವು ಈ ಮಸೂದೆಯನ್ನು ಸ್ವೀಕರಿಸಿದರೆ ಎಲ್ಲ ಭಿನ್ನಾಭಿಪ್ರಾಯ ಮಾಯವಾಗಿ ಒಂದೇ ವರ್ಗದ ಸಮಾಜ ನಿರ್ಮಾಣವಾಗುತ್ತದೆ. ನಾನು ಈ ಸಂಸತ್ತಿಗೆ ಸೆರಗೊಡ್ಡಿ ಬೇಡಿಕೊಳ್ಳುವುದೇನೆಂದರೆ ಈ ಅಧಿವೇಶನದಲ್ಲಿಯೇ ಇಂದು ಇದನ್ನು ಪರಿಶೀಲನೆಯ ಸಮಿತಿಗೆ ಕಳುಹಿಸಿ ಈ ಮಸೂದೆಯನ್ನು ಪಾಸು

ಮಾಡಬೇಕೆಂದು ಬೇಡಿಕೊಳ್ಳುತ್ತೇನೆ.

**ಮಾನ್ಯ ಉಪ–ಸಭಾಪತಿ:** ಸೂಚನೆ ಮಂಡಿಸಲಾಗಿದೆ :

**"**ಹಿಂದೂಗಳ, ಶೀಖರ, ಜೈನರ ಹಾಗೂ ಅವರ ಬೇರೆ ಬೇರೆ ಜಾತಿಗಳ ಹಾಗೂ ಉಪಜಾತಿಗಳ ನಡುವೆ ನಡೆಯುವ ವಿವಾಹಗಳು ಕಾನೂನುಬದ್ಧವಾಗಲು ಈ ಮಸೂದೆಯ ಉಪಬಂಧವನ್ನು ಗಿಯಾನಿ ಗುರ್‌ಮುಖ್ ಸಿಂಗ್ ಮುಸಾಫಿರ್, ಸರದಾರ ಹುಕುಮ್‌ಸಿಂಗ, ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್, ಶ್ರೀ ದೇಶಬಂಧು, ಶ್ರೀಮತಿ ದುರ್ಗಬಾಯಿ; ಶ್ರೀಮತಿ ರೇಣುಕಾ ರೇ, ಶ್ರೀ ರಾಮನಾಥ ಗೋಯಂಕ, ಡಾ. ಬಕ್ಷಿತೇಕ ಚಂದ, ಲಾಲ ಅಚಿಂತರಾಮ, ಚ. ರಣಬೀರಸಿಂಗ್, ಶ್ರೀ ಮಹಾವೀರತ್ಯಾಗಿ ಮತ್ತು ಈ ಸೂಚನೆಯನ್ನು ಮಂಡಿಸುವ ಈ ಸದಸ್ಯರನ್ನೊಳಗೊಂಡ ಪರಿಶೀಲನಾ ಸಮಿತಿಗೆ ಒಪ್ಪಿಸತಕ್ಕದ್ದು."

ಈ ಸಮಿತಿಯ ಸಭೆಯಲ್ಲಿ ಐದು ಜನ ಸದಸ್ಯರು ಹಾಜರಿರುವುದು ಅವಶ್ಯವಿದೆ.

ಸಾಮಾನ್ಯ ಪದ್ಧತಿಯೆಂದರೆ ಯಾವ ತಾರೀಖಿಗೆ ವರದಿಯನ್ನು ಸಲ್ಲಿಸತಕ್ಕದ್ದು,ಅವರಿಗೆ ಸೂಚನೆಗಳೊಂದಿಗೆ ಯಾವ ದಿನಾಂಕಕ್ಕೆ ವರದಿ ಸಲ್ಲಿಸಬೇಕೆಂದು ಕಳಿಸಿರಿ.

**ಪಂಡಿತ ಠಾಕೂರದಾಸ ಭಾರ್ಗವ:** ಈ ತಿಂಗಳ ಕೊನೆಗೆ ಅಂದರೆ ೨೮ನೆಯ ಫೆಬ್ರವರಿ ೧೯೪೯.

**ಮಾನ್ಯ ಉಪ ಸಭಾಪತಿಗಳು:** ೨೮ನೆಯ ಫೆಬ್ರವರಿ ೧೯೪೯ರೊಳಗೆ ವರದಿ ಸಲ್ಲಿಸುವ ಸೂಚನೆಗಳೊಂದಿಗೆ.

**ಶ್ರೀ ಕೆ. ಹನುಮಂತಯ್ಯ** (ಮೈಸೂರು ರಾಜ್ಯ): ಮಾನ್ಯರೇ ಈ ಮಸೂದೆಯನ್ನು ನಾನು ತುಂಬಾ ಸಂತೋಷದಿಂದ ಸ್ವಾಗತಿಸುತ್ತೇನೆ. ಪಂಡಿತ ಠಾಕೂರದಾಸ ಭಾರ್ಗವ ಅವರು ಒಳ್ಳೆ ಅತ್ಯುತ್ತಮವಾದ ಕಾರಣಗಳನ್ನು ತಮ್ಮ ಮಸೂದೆಯನ್ನು ಮಂಡಿಸಲು ಮುಂದೆ ಇಟ್ಟಿದ್ದಾರೆ. ಅದಕ್ಕೆ ಬೇರೆ ಯಾರ ಪುಷ್ಟೀಕರಣವೂ ಬೇಡ, ಇಲ್ಲವೆ ಹೆಚ್ಚಿಗೆ ಏನನ್ನೂ ಸೇರಿಸುವುದರ ಅವಶ್ಯಕತೆಯು ಇರುವುದಿಲ್ಲ. ೧೯೪೭ನೆಯ ಆಗಸ್ಟ್ ತಿಂಗಳ ಪೂರ್ವದಲ್ಲಿ ನಮ್ಮ ಘೋಷಣೆಯು ಸ್ವಾತಂತ್ರ್ಯವಾಗಿತ್ತು. ಮತ್ತು ಮಹಾತ್ಮ ಗಾಂಧಿಯವರು ನಮಗೆ 'ಭಾರತ ಬಿಟ್ಟು ತೊಲಗಿರಿ' ಸ್ವಾತಂತ್ರ್ಯ ದೊರೆತ ನಂತರ ಸರದಾರ ಪಟೇಲರು 'ಕ್ರೋಡೀಕರಿಸು' 'ಒಟ್ಟುಗೂಡಿಸು' ಎಂದು ಘೋಷಿಸಿದ್ದಾರೆ. ಅವರು ಅದನ್ನು ರಾಜಕೀಯದ ಮೂಲಕ ಮಾಡುತ್ತಿದ್ದಾರೆ. ಅದು ಅತ್ಯಂತ ಹಿರಿದಾದ ಸಾಧನೆಯಾಗಿದೆ. ಅದನ್ನು ಈ ದೇಶವು ಅತ್ಯಂತ ಹೆಮ್ಮೆಯಿಂದ ಹೇಳಿಕೊಳ್ಳುತ್ತದೆ. (ಗದ್ದಲ ಅಡಚಣೆ) ನಾವು ಇದನ್ನು ಸಹ ಮಾಡಬೇಕಾಗಿದೆ. ನಾನು ವಿನಮ್ರವಾಗಿ ನಿಷ್ಕಪಟವಾಗಿ ಮತ್ತು ಹುಡುಗಾಟಿಕೆಯಿಲ್ಲದೆ ವಿನಂತಿಸಿಕೊಳ್ಳುತ್ತೇನೆ. ಸಾಮಾಜಿಕ ವಲಯದಲ್ಲೂ ಇದು ಅವಶ್ಯವಿದೆ. ಭಾರತಕ್ಕೆ ಇರುವ ದೊಡ್ಡ ಗಂಡಾಂತರವೆಂದರೆ ಬಲವಂತದಿಂದ ಚೂರುಚೂರು ಮಾಡುವ ಪ್ರವೃತ್ತಿಗಳು ಇವೆ. ಜಾತಿಯ ಒಲವು ಪ್ರವೃತ್ತಿ ಮದುವೆಯ ಸೂಚನೆ ಇದು ಬುರುಜು ಕೊತ್ತಲ. ಈ ಎಲ್ಲಾ ಅನೇಕ ಭಿನ್ನತೆಗಳನ್ನು ಒಂದೆಡೆ ಗಟ್ಟಿಯಾಗಿ ನಿಲ್ಲಿಸಬೇಕು. ಇದಕ್ಕೆ ಕ್ರಮವು ನನ್ನ ವಿನಮ್ರ ಕ್ರಮದಲ್ಲಿ ಎಲ್ಲ ಛಿದ್ರಗೊಳಿಸುವ ಶಕ್ತಿಗಳನ್ನು ಇಲ್ಲದಂತೆ ಮಾಡಿ ಮುಂಬರುವ ದಿನಗಳಲ್ಲಿ ಹಿಂದೂಗಳ ಕ್ರೋಡೀಕರಣಕ್ಕೆ ಉತ್ತಮ ಪ್ರಾರಂಭವಾಗಲೆಂದು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುವೆನು. ನಾನು ಸೂಚಿಸಿದ ಈ ಕ್ರಮವು ಈ ಸೂಚನೆಯನ್ನು ಮಂಡಿಸಿದವರು ಇನ್ನೊಬ್ಬ ಸದಸ್ಯನನ್ನು ಪರಿಶೀಲನಾ ಸಮಿತಿಗೆ ತೆಗೆದುಕೊಳ್ಳಬಹುದು. ಶ್ರೀಮತಿ ಅನ್ನೆ ಮಸ್ಕರೆನು ಎಮ್. ಎ., ಬಿ. ಎಲ್ ಅವರನ್ನು ಪರಿಶೀಲನೆಯ ಸಮಿತಿಯಲ್ಲಿ ತೆಗೆದುಕೊಳ್ಳಬಹುದು.

**ಪಂಡಿತ ಠಾಕೂರದಾಸ್ ಭಾರ್ಗವ :** ಆ ಹೆಸರನ್ನು ಸೇರಿಸಲು ನನ್ನ ಅಭ್ಯಂತರವಿಲ್ಲ.

**ಶ್ರೀ ಕೆ. ಎಮ್. ಮುನಷಿ :** (ಬಾಂಬೆ ಜನರಲ್) ನಾನು ಈ ಸೂಚನೆಗೆ ಬೆಂಬಲ ಸೂಚಿಸುತ್ತೇನೆ.

ನನ್ನ ಸನ್ಮಿತ್ರರಾದ ಪಂಡಿತ ಠಾಕೂರದಾಸ ಭಾರ್ಗವ ಈ ಕ್ರಮ ಒಂದು ಸಣ್ಣ ಕ್ರಮವೆಂದು ಬಣ್ಣಿಸಿದ್ದಾರೆ. ಅವರ ಅಭಿಪ್ರಾಯಕ್ಕೆ ನಾನು ವಿರೋಧಿಸುತ್ತೇನೆ. ಇದು ಒಂದು ದೊಡ್ಡ ಕ್ರಮವಾಗಿದ್ದು ಬಹಳ ಮಹತ್ವದ್ದೂ ಆಗಿದೆ. ಇದನ್ನು ಇಂದಿಗೆ ೪೦ ವರ್ಷಗಳ ಹಿಂದೆಯೇ ಪಾಸು ಮಾಡಬೇಕಾಗಿತ್ತು ಆದರೆ ಈಗ ಅಲ್ಲಿ ನ್ಯಾಯಾಲಯದ ಮುಂದೆ ಮೊದಲು ಇದನ್ನು ಎತ್ತಿದಾಗ ಬೇರೆ ಬೇರೆ ಪ್ರಾಂತಗಳಲ್ಲಿಯ ನ್ಯಾಯಾಲಯಗಳು ಬೇರೆ ಬೇರೆ ತೀರ್ಪು ಕೊಟ್ಟು ಹಿಂದೂ ಧರ್ಮದ ಬೇರೆ ಬೇರೆ ಜಾತಿಯ ನಡುವಣ ಮದುವೆಯು ಒಂದಿಲ್ಲೊಂದು ಕಾರಣದಿಂದ ಕಾನೂನು ಬದ್ಧವಲ್ಲವೆಂದು ತೀರ್ಪು ಕೊಟ್ಟವು. ಆದರೆ ಆಗಿನ ಸರಕಾರಕ್ಕೆ ಹಿಂದೂ ಧರ್ಮವು ಶಕ್ತಿಯುತವಾಗಿ ಬೆಳೆಯಗೊಡುವ ಇಚ್ಚೆ ಇರಲಿಲ್ಲ ಮತ್ತು ಈ ರೂಢೀಸಂಪ್ರದಾಯಗಳು ೭೦೦-೮೦೦ ವರ್ಷಗಳಿಂದ ನಡೆದು ಬಂದವು. ಪಠ್ಯಪುಸ್ತಕದಲ್ಲಿ ಕಾಣಿಸಿದವುಗಳು, ಅವ್ಯಾಹತವಾಗಿ ನಿರಂತರ ನಡೆಯಬೇಕೆಂದು ಅವರು ಇಚ್ಛಿಸಿದ್ದರು. ಮಾನ್ಯರೆ, ನನಗೆ ಒಂದು ಪ್ರಕರಣದ ನೆನಪು ಆಗುತ್ತದೆ. ನನಗೆ ಅನಿಸಿದಂತೆ ಇದು ಸುಮಾರು ೪೦ ವರ್ಷಗಳ ಹಿಂದೆ ನಡೆಯಿತು. ಒಬ್ಬ ವಿಧವೆಯ ವಿವಾಹ ಸಿಂಧುತ್ವವು ಆ ಪ್ರಕರಣದಲ್ಲಿ ಅಡಗಿತ್ತು. ಅವಳ ಗಂಡನು ಬಹಳ ವರ್ಷಗಳ ಹಿಂದೆ ತೀರಿಕೊಂಡು ಹೋಗಿದ್ದನು. ಈ ವಿಷಯವು ಮುಂಬೈ ಉಚ್ಚ ನ್ಯಾಯಾಲಯದ ಮುಂದೆ ಬಂದಿತ್ತು. ಅನೇಕ ವರ್ಷಗಳ ಹಿಂದೆ ಲಗ್ನವಾಗಿದ್ದು ಅವರು ಗಂಡಹೆಂಡಿರೆಂದು ಬಾಳ್ವೆ ಮಾಡಿದವರ ಪ್ರಕರಣದಲ್ಲಿ ಅವರ ವಿವಾಹವನ್ನು ಕಾನೂನುಬದ್ಧವೆಂದು ಸಾರಲು ನನಗೆ ನಾಲ್ಕು ವರ್ಷಗಳು ಹಿಡಿದವು. ಅವಳಿಗೆ ಮೊಮ್ಮಕ್ಕಳು ಆಗಿದ್ದರು. ಅವಳ ಲಗ್ನವು ಬೇಕಾಯಿದೇಶೀರ ಆಗಿದೆ. ಯಾಕೆಂದರೆ ಅವಳ ಜಾತಿಯು ಅವಳ ಗಂಡನ ಜಾತಿಗಿಂತ ಶ್ರೇಷ್ಠವಾಗಿತ್ತು. ನನಗೆ ಸಂಬಂಧಿಸಿದಂತೆ ಇನ್ನೊಂದು ಮಹತ್ವದ ಪ್ರಕರಣದಲ್ಲಿ ಗಂಡನು ಉಚ್ಚ ಜಾತಿಯವ ಹೆಂಡತಿಯು ಕಡಿಮೆ ಜಾತಿಯವಳು ಇವರ ನಡುವಣ ಮದುವೆಯು ಅಸಿಂಧು, ಬೇಕಾಯಿದೇಶೀರ ಅಂತಾ ನಿರ್ಣಯಿಸಲು ನಾಲ್ಕು ವರ್ಷಗಳು ಬೇಕಾದವು. ಆದರೆ ಶ್ರೀ ಲಾಲೂಬಾಯಿ ಶಹಾ ಅವರು ಮನೋವೈಶಾಲ್ಯದ ನ್ಯಾಯಾಧೀಶರಾಗಿದ್ದರು. ಒಂದು ವೇಳೆ ನಾನು ಆ ಪ್ರಕರಣದಲ್ಲಿ ಗೆಲ್ಲಬಹುದಾಗಿತ್ತು. ನಾವು ಕರೆಯುವ ಅನುಲೋಮ ಮದುವೆಯ ಸಿಂಧುತ್ವವು ಅದರಲ್ಲಿತ್ತು. ಅಂದರೆ ಗಂಡನು ಉಚ್ಚ ಜಾತಿಯವನು ಹೆಂಡತಿಯು ಕೆಳಗಿನ ವರ್ಗದವಳು. ಇದನ್ನು ಕೆಲವು ಪ್ರಾಂತಗಳಲ್ಲಿ ಅಸಿಂಧುವೆಂದು ನ್ಯಾಯಾಲಯಗಳು ತೀರ್ಪುಕೊಟ್ಟಿದ್ದವು. ದೇಶದ ಕೆಲವು ಭಾಗಗಳಲ್ಲಿ ಜೈನರ ಹಾಗೂ ಹಿಂದುಗಳ ನಡುವಣ ವಿವಾಹದ ಪ್ರಶ್ನೆಯನ್ನೂ ಎತ್ತಲಾಗಿತ್ತು. ಹಿಂದೂಗಳು ಹಾಗೂ ಜೈನರ ನಡುವೆ ವಿವಾಹಗಳು ಯಾವ ಅಡೆತಡೆಯೂ ಇಲ್ಲದೆ ನಡೆಯುತ್ತದೆ. ಆದರೆ ವಕೀಲರ ಮುಂದೆ ಯಾವಾಗಲೂ ಬಂದ ಪ್ರಶ್ನೆಗಳನ್ನು ನಾವು ಬಿಡಿಸಲೇಬೇಕಾಗಿದ್ದಿತು. ನಾನು ಹೇಳಿದಂತೆ ಬಹಳ ದಿನಗಳಿಂದ ಈಗ ನಾವು ಇಂತಹ ಸ್ಥಿತಿಗೆ ಬಂದಿರುವವರಲ್ಲ. ಈಗ ನಾವು ಈ ಪ್ರಶ್ನೆಯನ್ನು ಕೂಡಲೇ ಬಿಡಿಸಬೇಕಾಗಿದೆ.

ನನ್ನ ಸನ್ಮಿತ್ರರಾದ ಪಂಡಿತ ಠಾಕೂರದಾಸ ಭಾರ್ಗವ ಅವರು ಪಂಜಾಬದ ವಿಶೇಷ ಪ್ರಕರಣವನ್ನು ಉಲ್ಲೇಖಿಸಿದರು. ಆದರೆ ಇದು ನಿರ್ದಿಷ್ಟವಾದ ಯಾವುದೊಂದು ಪ್ರಾಂತದ ವಿಶೇಷ ಪ್ರಕರಣವು ಆಗಿರುವುದಿಲ್ಲ. ಇದು ಇಡೀ ರಾಷ್ಟ್ರಕ್ಕೆ ಸಂಬಂಧಿಸಿದುದು, ಶಿಕ್ಷಣದ ಸಲುವಾಗಿ ಮತ್ತು ಮದುವೆಯ ಸ್ವಾತಂತ್ರ್ಯವನ್ನು ಕೊಟ್ಟಿದುದು. ಬೇರೆ ಬೇರೆ ಜಾತಿಯವರ ನಡುವೆ ವಿವಾಹಗಳು ನಡೆಯುತ್ತವೆ. ಆದರೆ ಹಿಂದೂ ಕಾನೂನಿನ ತತ್ವದಿಂದ ಅವರು ಬಹಳ ತೊಂದರೆಯಲ್ಲಿ ಸಿಲುಕುತ್ತಾರೆ. ನನಗೆ ಒಂದು ಇಲ್ಲವೆ ಎರಡು ಪ್ರಕರಣಗಳು ಮಾತ್ರ ಗೊತ್ತಿಲ್ಲ. ಆದರೆ (ಡಜನ್ಸ್) ಹನ್ನೆರಡಕ್ಕಿಂತ ಹೆಚ್ಚಿನ ಪ್ರಕರಣಗಳು ಗೊತ್ತಿವೆ. ಅಲ್ಲ ಇವರು ಮಾತ್ರ ಸಿವಿಲ್ ಮದುವೆ ಮಾಡಿಕೊಳ್ಳಲು ಉದ್ದೇಶಿಸಿದ್ದಾರು, ಆದರೆ ಅವರು ಹಾಗೆ ಮಾಡಲು ಇಚ್ಛಿಸುವುದಿಲ್ಲ.

ಹಾಗೆ ಮಾಡುವುದನ್ನು ಅವರು ದ್ವೇಷಿಸುತ್ತಾರೆ, ಅವರು ಅವಿಭಕ್ತ ಕುಟುಂಬವನ್ನು ಒಡೆಯಲು ಇಚ್ಛಿಸುವುದಿಲ್ಲ. ಅವರಿಗೆ ವಾರಸಾ ಅಧಿನಿಯಮವು ಅನ್ವಯಿಸುವುದು ಬೇಡವಾಗಿದೆ. ಅವರು ತಂದೆ – ತಾಯಿಗಳಿಂದ ಬೇರೆಯಾಗುವುದು ಅವರಿಗೆ ಬೇಡವಾಗಿದೆ. ಆದರೆ ಕಾನೂನಿನ ಶೋಚನೀಯ ಸ್ಥಿತಿಯಿಂದ ಅವರು ಸಿವಿಲ್ ವಿವಾಹದ ಅಧಿನಿಯಮದ ಅಡಿಯಲ್ಲಿ ಲಗ್ನವಾಗಬೇಕಾಗಿದೆ. ಆದ್ದರಿಂದ ಮಾನ್ಯರೇ, ನಾನು ವಿನಂತಿಪೂರ್ವಕ ಹೇಳುವುದೇನೆಂದರೆ ಈಗ ಸದ್ಯಕ್ಕೆ ಇರುವ ತೊಂದರೆಗೆ ಪರಿಹಾರವನ್ನು ಅದಷ್ಟು ಬೇಗನೆ ಕಂಡು ಹಿಡಿಯಬೇಕಾಗಿದೆ. ಈ ಸೂಚನೆಯನ್ನು ಮಂಡಿಸಿದವರು ದಿನಾಂಕ ೨೮ನೆಯ ಫೆಬ್ರವರಿಯನ್ನು ಸೂಚಿಸಿದ್ದಕ್ಕೆ ನನಗೆ ಸಂತೋಷವಾಗಿದೆ. ಈ ಮಸೂದೆಯನ್ನು ಎಷ್ಟು ಬೇಗನೆ ಪಾಸು ಮಾಡಲು ಸಾಧ್ಯವೋ ಅಷ್ಟು ಬೇಗನೆ ಪಾಸು ಮಾಡಬೇಕು.

ಇಲ್ಲಿ ಒಂದು ಚಿಕ್ಕ ಕೊರತೆ, ಇದೆ, ನಾನು ಅದನ್ನು ಕಾಣಿಸಲು ಇಚ್ಛೆಪಡುತ್ತೇನೆ. ಈ ಕುಂದುಕೊರತೆಯನ್ನು ಕಾನೂನುಬದ್ಧವಾಗಿ ಪರಿಶೀಲನಾ ಸಮಿತಿಯು ಸರಿಪಡಿಸುವುದೆಂದು ನನಗೆ ವಿಶ್ವಾಸವಿದೆ.

ಅದರಲ್ಲಿ ಇರುವ ಪದಗಳು–

ಹಿಂದೂ ಕಾನೂನಿನ ಯಾವುದೇ ಪಠ್ಯದಲ್ಲಿ ನಿಯಮದಲ್ಲಿ ಅರ್ಥೈಸುವಾಗ ಇಲ್ಲವೆ ಯಾವುದೇ ರೂಢಿ ಸಂಪ್ರದಾಯದಲ್ಲಿ ಏನೇ ಹೇಳಿದ್ದರೂ ಯಾವುದೇ ಹಿಂದುಗಳಲ್ಲಿನ ವಿವಾಹವು ಲಗ್ನವಾದ ಪಕ್ಷದವರು ಬೇರೆ ಬೇರೆ ಧರ್ಮಕ್ಕೆ ಸಂಬಂಧಿಸಿದವರೆಂಬ ಕಾರಣದಿಂದ ಅಸಿಂಧು ಆಗುವುದಿಲ್ಲ. ಇದನ್ನು ಬಹುತೇಕವಾಗಿ ಹೀಗೆ ಅರ್ಥೈಸಬಹುದು. ಈ ಉಪಬಂಧವು ಜೀವಂತ ಇರುವ ಪಕ್ಷಗಾರರ ನಡುವೆ ನಡೆಯುವ ವಿವಾಹಕ್ಕೆ ಅನ್ವಯಿಸುತ್ತದೆ. ಇದನ್ನು ಸಂಪೂರ್ಣವಾಗಿ ಸ್ಪಷ್ಟಪಡಿಸಬೇಕು. ಈ ರೀತಿಯ ವಿವಾಹಗಳು ಹಿಂದಕ್ಕೆ ಆದವು, ಅವುಗಳ ಬಗೆಗೆ ವಾರಸಾದ ಪ್ರಶ್ನೆಯು ಉದ್ಭವಿಸುತ್ತದೆ ಅದು ಕಾನೂನುಬದ್ದವೆಂದು ಇನ್ನು ಮೇಲೆ ಗ್ರಹಿಸಲಾಗುವುದು. ಪರಿಶೀಲನಾ ಸಭೆಯಲ್ಲಿ ಯೋಗ್ಯವಾಗಿ ಸರಿಪಡಿಸುವರೆಂಬ ವಿಶ್ವಾಸ ನನಗೆ ಇದೆ.

ಆದ್ದರಿಂದ ನಾನು ಈ ಸೂಚನೆಗೆ ಹೃತ್ಪೂರ್ವಕವಾಗಿ ನನ್ನ ಅನುಮೋದನೆಯನ್ನು ಕೊಡುತ್ತೇನೆ.

**ಶ್ರೀ ದೇಶಬಂಧು ಗುಪ್ತಾ** (ದಿಲ್ಲಿ): ಸಂಸತ್ತಿನ ಮುಂದೆ ಇರುವ ಈ ಸೂಚನೆಯನ್ನು ನಾನು ಬೆಂಬಲಿಸುತ್ತೇನೆ. ನನ್ನ ಸನ್ಮಿತ್ರರಾದ ಶ್ರೀ ಮುನಷಿ ಅವರು ಎತ್ತಿತೋರಿಸಿದಂತೆ ನನಗೂ ಅದು ತುಂಬಾ ಮಹತ್ವದ ಕ್ರಮವೆಂದು ಅನಿಸುತ್ತದೆ. ಬಹಳ ವರ್ಷಗಳಿಂದ ಹಿಂದುಗಳ ಐಕ್ಯತೆಗೆ ಮತ್ತು ರಾಷ್ಟ್ರದ ಐಕ್ಯತೆಗೆ ಅಡ್ಡಿಬರುವುದೆಂದರೆ ಒಂದು ಧರ್ಮ ಸಮಾಜ ವಿವಿಧ ಜಾತಿಗಳ ವಿಭಜನೆಯಿಂದ ದೇಶದ ಐಕ್ಯತೆಗೆ ಭಂಗ ಉಂಟಾಗುತ್ತದೆ. ಇಂತಹ ಕ್ರಮಗಳನ್ನು ಕೈಗೊಳ್ಳಲು ಈಗ ಯೋಗ್ಯಸಮಯ ಬಂದಿದೆ. ಇಂತಹ ಕೃತ್ರಿಮ ಅಡೆತಡೆಗಳನ್ನು ಇನ್ನು ಮೇಲೆ ಯಾವುದೇ ತಡೆಯಿಲ್ಲದೆ ತಡಮಾಡದೆ ಕಿತ್ತುಹಾಕಬೇಕು. ನನಗೆ ಕೆಲವು ಉದಾಹರಣೆಗಳು ಗೊತ್ತಿವೆ. ನನ್ನ ಹತ್ತಿರದ ಗೆಳೆಯರೊಬ್ಬರಿಗೆ ಸಿವಿಲ್ ವಿವಾಹದಲ್ಲಿ ನಂಬುಗೆ ಇರಲಿಲ್ಲ. ಅದಕ್ಕೆ ಅವರು ಬೇರೆ ಜಾತಿಯ ಸಂಗಾತಿಯನ್ನು ಆರಿಸಿಕೊಂಡಿದ್ದರಿಂದ ಸಿವಿಲ್ ವಿವಾಹ ಆಗಬೇಕಾಯಿತು.

ಮಾನ್ಯರೇ, ತಮಗೆ ಗೊತ್ತಿದೆ ಆರ್ಯ ಸಮಾಜವು ಯಾವಾಗಲೂ ಜಾತಿಯಲ್ಲಿ ನಂಬುಗೆ ಇಟ್ಟಿದ್ದು ಅದು ಗುಣ ಮತ್ತು ಕರ್ಮ, ಇವುಗಳಲ್ಲಿ ನಂಬುಗೆ ಇಟ್ಟಿದೆ. ಹೀಗಿದ್ದರೂ ಆರ್ಯ ಸಮಾಜವನ್ನು ಸ್ಥಾಪಿಸಿದವರು ಒಂದು ಮತಶ್ರದ್ಧೆಯನ್ನು ಬೋಧಿಸಿದರು ಮತ್ತು ಪ್ರಾರಂಭದಲ್ಲಿಯೇ ಯಾವನೂ ಜನ್ಮದಾರಭ್ಯ ಜಾತಿಯನ್ನು ಹೊಂದುವುದಿಲ್ಲವೆಂದು ಸಾರಿದರು. ಆರ್ಯ ಸಮಾಜದವರು ಸಹ ಉಳಿದ ಜನರು ಯಾವ

ರೀತಿ ಅನರ್ಹರಾಗಿ ಬಳಲುತ್ತಿರುವರೋ ಅದೇ ರೀತಿ ಬಳಲುತ್ತಿದ್ದಾರೆ.

ಅನೇಕ ವರ್ಷಗಳ ಹೋರಾಟದ ನಂತರ ಆರ್ಯ ವಿವಾಹ ಸಿಂಧುತ್ವ ಅಧಿನಿಯಮವು ಪಾಸಾಯಿತು. ಆದರೆ ಹಿಂದೂಗಳ ಸಾರ್ವತ್ರಿಕ ಅಭಿಪ್ರಾಯದಲ್ಲಿ ಕೇವಲ ಆರ್ಯ ಸಮಾಜದವರಲ್ಲದೆ ಬಹಳಷ್ಟು ಜನರು ಜನ್ಮದಾರಭ್ಯ ಇರುವ ಜಾತಿ ಸಂಕೋಲೆಯನ್ನು ಮಾನ್ಯ ಮಾಡುವುದಿಲ್ಲ. ಆದ್ದರಿಂದ ಅವರು ಆರ್ಯ ವಿವಾಹ ಸಿಂಧುತ್ವ ಅಧಿನಿಯಮ ಇಲ್ಲವೆ ಸಿವಿಲ್ ವಿವಾಹ ಅಧಿನಿಯಮ ಇವುಗಳ ಕಾನೂನಿನ ಆಶ್ರಯಕ್ಕೆ ಬಲವಂತವಾಗಿ ಯಾಕೆ ಮೊರೆ ಹೋಗಬೇಕು. ಇಂದು ಸಾರ್ವಜನಿಕ ಅಭಿಪ್ರಾಯ ಮುಂದುವರೆದು ಹಿಂದೂಗಳ ಐಕ್ಯತೆಗೆ ಜಾತಿ ಅಡ್ಡಬಂದಿದೆ ಮತ್ತು ರಾಷ್ಟ್ರದ ಮಟ್ಟಿಗೆ ಐಕ್ಯತೆಗೆ ಅಡ್ಡಿಬಂದಿದೆ. ಇಂತಹ ಕ್ರಮಕೈಕೊಳ್ಳಲು ತಡ ಮಾಡಬಾರದು, ಹಿಂದೂ ಕಾನೂನು ಜಾರಿಯಲ್ಲಿ ಬರಲಿದೆ, ಅದಕ್ಕಾಗಿ ತುಂಡು ಶಾಸನಗಳನ್ನು ಮಾಡಬಾರದೆಂದು ಹೇಳುವಲ್ಲಿ ಸ್ವಲ್ಪ ಸತ್ಯವಿದೆ, ನನ್ನ ಅನೇಕ ಗೆಳೆಯರೊಂದಿಗೆ ಇಂತಹ ಒಂದು ಕ್ರಮ ಯಾವುದೇ ಸುಧಾರಣೆಯ ಕ್ರಮ – ಹಿಂದೂ ಕಾನೂನಿನಲ್ಲಿ ಇದ್ದಂತೆ ಇರುತ್ತದೆ. ಆದ್ದರಿಂದ ಹಿಂದೂ ಕಾನೂನನ್ನು ಪಾಸು ಮಾಡಲು ತಡಮಾಡಬಾರದು.

ನನ್ನ ಸನ್ಮಿತ್ರರಾದ ಡಾ. ಅಂಬೇಡ್ಕರ್ ಅವರು ಇದೇ ಅಧಿವೇಶನದಲ್ಲಿ ಹಿಂದೂ ಕೋಡ್ ಪಾಸಾಗುವುದೆಂದು ಹೇಳಿದ್ದರು. ನಮ್ಮಲ್ಲಿ ಬಹಳಷ್ಟು ಜನರಿಗೆ ಆ ದೃಷ್ಟಿಯು ಸರಿಯೆನಿಸುವುದಿಲ್ಲ. ಅದಕ್ಕೆ ವೇಳೆ ಬೇಕಾಗುತ್ತದೆ. ಅದರಲ್ಲಿ ವಿರೋಧಾತ್ಮಕ ಖಂಡಗಳಿವೆ. ಅದ್ದರಿಂದ ಈ ಕ್ರಮವನ್ನು ನಾವು ಸ್ವಾಗತಿಸೋಣ. ಅದು ಪಾಸಾಗಲು ತಡಮಾಡಬಾರದು.

ಪಂಡಿತ ಠಾಕೂರದಾಸ ಭಾರ್ಗವ ಅವರು ತಂದ ಸೂಚನೆಯನ್ನು ನಾನು ತುಂಬಿದ ಹೃದಯದಿಂದ ಬೆಂಬಲಿಸುತ್ತೇನೆ. ಡಾ. ಅಂಬೇಡ್ಕರ್ ಅವರು ಸಹ ಒಪ್ಪಿಕೊಳ್ಳುವರೆಂದು ಭಾವಿಸಿದ್ದೇನೆ. ಆದ್ದರಿಂದ ಸಂಸತ್ತು ಈ ಸಣ್ಣ ಕ್ರಮವನ್ನು ಪಾಸುಮಾಡಬೇಕು. ಇದು ಹಿಂದೂ ಸಮಾಜಕ್ಕೆ ಅತ್ಯಂತ ಪ್ರಮುಖವಾದುದು. ಇದನ್ನು ಇದೇ ಅಧಿವೇಶನದಲ್ಲಿ ಪಾಸುಮಾಡಬೇಕು.

**ಡಾ. ಬಕ್ಷಿ ಟೀಕಚಂದ (ಪೂರ್ವ ಪಂಜಾಬ, ಜನರಲ್)** ಪಂಡಿತ ಠಾಕೂರದಾಸ ಭಾರ್ಗವ ಅವರು ತಂದ ಸೂಚನೆ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕು ಎಂಬುದಕ್ಕೆ ನಾನು ಸಂಪೂರ್ಣ ಬೆಂಬಲಿಸುವೆನು. ಈ ಮಸೂದೆಗೆ ಸಂಸತ್ತಿನ ವಿವಿಧ ವರ್ಗಗಳಿಂದ ಬೆಂಬಲ ಸಿಕ್ಕಿದೆ. ಇದರ ಬಗೆಗೆ ಒಂದೂ ವಿರುದ್ಧ ಸೂಚನೆ ಬೀಳುವುದಿಲ್ಲವೆಂದು ನನಗೆ ಭರವಸೆ ಇದೆ.

ಆ ಮಸೂದೆ ನಾನು ಹೇಳಬೇಕೆಂದರೆ, ಹೊಸ ಕ್ರಮವಾಗಿರುವುದಿಲ್ಲ. ಇದಕ್ಕೆ ಸಮಾನಾಂತರವಾಗಿ ಮಸೂದೆಯನ್ನು ಹಳೆಯ ಇಂಪೀರಿಯಲ್ ಕೌನ್ಸಿಲ್ಲದಲ್ಲಿ ಮಂಡಿಸಲಾಗಿತ್ತು. ಅವನ್ನು ವಿಠಲಬಾಯಿ ಪಟೇಲ ಅವರು ೧೯೧೯ರಲ್ಲಿಯೇ ಮಂಡಿಸಿದ್ದರು. ಆ ಮಸೂದೆಯನ್ನು ಅಭಿಪ್ರಾಯಕ್ಕಾಗಿ ಸದಸ್ಯರಿಗೆ ಹಂಚಲಾಗಿತ್ತು, ನಿಜವಾಗಿಯೂ ಬೇರೆ ಬೇರೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಾಯಿತು. ಸಾಂಪ್ರದಾಯಕ ಜನರು ಅದನ್ನು ವಿರೋಧಿಸಿದರೂ, ಅಧಿಕಾರಿಗಳು ಅದನ್ನು ವಿರೋಧಿಸಿದರೂ, ಅನೇಕ ಜನ, ಸಂಘ ಸಂಸ್ಥೆಗಳು ಅದಕ್ಕೆ ಬೆಂಬಲ ಕೊಟ್ಟವು. ಕೌನ್ಸಿಲ್ಲಿನ ಮುಂದೆ ಮಸೂದೆ ಬರುವ ಪೂರ್ವದಲ್ಲಿ ಮಾಂಟೆಗೋ ಚೆಲ್ಮ್ಸ್‌ಫೋರ್ಡ್ ಅವರ ಸುಧಾರಣೆಗಳು ಜಾರಿಯಲ್ಲಿ ಬಂದವು. ಆಗ ಕೌನ್ಸಿಲ್ಲನ್ನು ವಿಸರ್ಜಿಸಲಾಯಿತು, ಆ ಮಸೂದೆಯೂ ಬಿದ್ದುಹೋಯಿತು. ತದನಂತರ ಡಾ. ಗೌರ್ ಅವರು ೧೯೨೩ರಲ್ಲಿ ಹಳೆಯ ಅಧಿನಿಯಮ ೧೮೭೨ರಲ್ಲಿ ಸುಧಾರಣೆಯ ಮಾರ್ಪಾಡು ಮಾಡಲು ಪ್ರಯತ್ನಿಸಿದರು, ಆಗಲೂ ಅದಕ್ಕೆ ವಿರೋಧವಿತ್ತು. ಆ ಮಸೂದೆಯನ್ನು ಅನೇಕ ನಿರ್ದಿಷ್ಟ ವಿಷಯಗಳಲ್ಲಿ ರೂಪಿಸಿದ್ದರು, ಅದು ಸಿವಿಲ್ ವಿವಾಹದ ಮಾದರಿಯಲ್ಲಿತ್ತು. ಬೇರೆ ಬೇರೆ

ಜಾತಿಯ ಉಪಜಾತಿಯವರು ತಮ್ಮ ತಮ್ಮಲ್ಲಿ ಧಾರ್ಮಿಕ ಪವಿತ್ರ ವಿವಾಹ ಮಾಡಿಕೊಳ್ಳಲು ಪರವಾನಗಿ ಕೊಡಲಿಲ್ಲ. ಪವಿತ್ರ ವಿವಾಹ ಹಿಂದೂ ಕಾನೂನಿನ ಅಡಿಯಲ್ಲಿ ಬೇರೆ ಬೇರೆ ಪ್ರಾಂತಗಳಲ್ಲಿ ಭಿನ್ನವಾಗಿದೆ. ಕೆಲವು ಪ್ರಾಂತಗಳು, ನಾನು ಎತ್ತಿ ಹೇಳಿದಂತೆ, ಅವುಗಳಿಗೆ ಅನುಲೋಮ ವಿವಾಹವೆಂದು ಕರೆಯುತ್ತಾರೆ. ಅವುಗಳಿಗೆ ಮಾನ್ಯತೆಯು ಇದೆ. ಉಳಿದ ಪ್ರಾಂತಗಳು ಅದಕ್ಕೆ ಮನ್ನಣೆ ಕೊಡುವುದಿಲ್ಲ, ನಂತರದ ಪ್ರಾಂತಗಳಲ್ಲಿ ನ್ಯಾಯಾಲಯಗಳು ಹೇಳಿದ್ದೇನೆಂದರೆ ಸ್ಮೃತಿಯಲ್ಲಿ ಅನುಲೋಮ ವಿವಾಹಕ್ಕೆ ಅನುಮತಿ ಇದೆಯೆಂದು ಹೇಳಿದವು. ಆದ್ದರಿಂದ ಅವು ಬಳಿಕೆಯಲ್ಲಿಲ್ಲದೆ ತ್ಯಜಿಸಿ ಬಿಟ್ಟುವುಗಳಾಗಿದ್ದು ಈಗ ಅವುಗಳನ್ನು ಮಾನ್ಯ ಮಾಡಿಲ್ಲ. ಬಹುತೇಕ ಎಲ್ಲ ಪ್ರಾಂತಗಳಲ್ಲಿ ಪ್ರತಿಲೋಮ ವಿವಾಹಗಳು ಅಸಿಂಧುವೆಂದು ಘೋಷಿಸಿದ ಪಂಜಾಬ ಮತ್ತು ಉಳಿದ ಪ್ರಾಂತಗಳಲ್ಲಿ ರೂಢಿ ಸಂಪ್ರದಾಯಗಳು ಕಾನೂನಿನಂತೆ ನಿರ್ಣಯಿಸುವುದು, ಕೆಲವು ರೂಢಿ ಸಂಪ್ರದಾಯದ ಮೇರೆಗೆ ಕೆಲವು ಜಾತಿಗಳ ನಡುವೆ ನಡೆಯುವುದನ್ನು ಮಾನ್ಯ ಮಾಡಿವೆ. ಆದರೆ ಕೆಲವು ಇತರ ಜಾತಿಗಳ ಮಧ್ಯೆ ಇದು ನಡೆಯಲು ಅನುಮತಿ ಇರುವುದಿಲ್ಲ. ಈಗ ಯೋಗ್ಯ ಸಮಯ ಬಂದಿದೆ. ನಾವು ದೃಢನಿರ್ಧಾರ ಕೈಗೊಳ್ಳತಕ್ಕದ್ದು, ಈ ಕ್ರಮವನ್ನು ಶಾಸನದ ಪುಸ್ತಕದಲ್ಲಿ ಕಾಣಿಸಿಬೇಕು, ಹಿಂದೂ ಕೋಡ್ ನಮ್ಮ ಮುಂದೆ ಇರುವುದು ಈ ಬಗ್ಗೆ ಉಪಬಂಧಗಳನ್ನು ಕಲ್ಪಿಸಲಾಗಿದೆಯಾದರೂ ಹಿಂದೂ ಕಾನೂನು ಒಂದು ವ್ಯಾಪಕವಾದ ಕಾನೂನು ಆಗಿದ್ದು ಅದರಲ್ಲಿ ಅನೇಕ ವಿಷಯಗಳು ಅಡಕವಾಗಿವೆ. ಬಹಳಷ್ಟು ವಿಷಯಗಳನ್ನು ವ್ಯಾಪಕವಾಗಿ ಹೇಳುತ್ತದೆ. ಅದರ ಕೆಲವು ಭಾಗಗಳಿಗೆ ತುಂಬಾ ವಿರೋಧವಿದೆ. ಆ ಮಸೂದೆಯು ಪಾಸಾಗಲು ಎಷ್ಟು ಅವಧಿ ಬೇಕೆಂದು ಹೇಳಲು ಬರುವುದಿಲ್ಲ. ಯಾವ ನಮೂನೆಯಲ್ಲಿ ಅದು ಪಾಸಾಗುತ್ತದೆ ಇಲ್ಲವೆ ಅದು ಪಾಸಾಗುವುದೋ ಇಲ್ಲವೋ ಗೊತ್ತಿಲ್ಲ.

**ಶ್ರೀ ಕೃಷ್ಣಸ್ವಾಮಿ ಭಾರತಿ :** ಅದು ಪಾಸಾಗುವುದು. ಆದರೆ ನಿಜವಾಗಿ ಅದು ವೇಳೆಯನ್ನು ತೆಗೆದುಕೊಳ್ಳುತ್ತದೆ. ಆದ್ದರಿಂದ ಈ ಸಾಮಾನ್ಯ ಕ್ರಮವನ್ನು ಬೇಗನೆ ಪಾಸು ಮಾಡೋಣ. ತಡಮಾಡುವುದು ಬೇಡ, ಬಹಳಷ್ಟು ಸದಸ್ಯರು ಈ ಮಸೂದೆಗೆ ಒಪ್ಪಿದ್ದಾರೆ. ಆದ್ದರಿಂದ ನಾನು ಈ ಮಸೂದೆಯನ್ನು ಬೆಂಬಲಿಸುತ್ತೇನೆ.

**ಶ್ರೀ ಮಹಾವೀರ ತ್ಯಾಗಿ** (ಯು.ಪಿ., ಜನರಲ್) ನನ್ನ ಸನ್ಮಿತ್ರರಾದ ಶ್ರೀ ಮುನಷಿಯವರು ಹೇಳಿದಂತೆ ಈ ಮಹತ್ವದ ಸುಧಾರಣೆಯ ಮಸೂದೆಗೆ ನನ್ನ ಬೆಂಬಲವನ್ನು ಸೂಚಿಸುತ್ತೇನೆ.

ಭಾರತವು ಕೋಮು ಭಿನ್ನಾಭಿಪ್ರಾಯದಿಂದ ನರಳುತ್ತಿದೆ, ಮದುವೆಗಳು ಮೂಲಕಾರಣ. ಚುನಾವಣೆಯಗಳು ಫಲ ಕಾರಣ. ಇವೆಲ್ಲ ಭಿನ್ನಾಭಿಪ್ರಾಯಕ್ಕೆ ಮೂಲತಃ ವಿವಾಹದ ಕಾಲಕ್ಕೆ ಒಬ್ಬರು ಇನ್ನೊಬ್ಬರ ಜಾತಿಯ ಬಗೆಗೆ ವಿಚಾರಿಸುತ್ತಾರೆ. ಒಬ್ಬನ ಜಾತಿಯ ಬಗ್ಗೆ ವಿಚಾರಿಸಿದ ನಂತರ ಅವನು ಚುನಾವಣೆಗೆ ನಿಲ್ಲುತ್ತಾನೆ. ಆಗ ನಾವು ಜಂಟಿ ಮತದಾರರನ್ನು ಹೊಂದಬೇಕೆಂದು ನಿರ್ಧರಿಸಿದ್ದೇವೆ. ಆದ್ದರಿಂದ ಜಾತಿಯ ಆಧಾರ ಬಹಳಷ್ಟು ಇಲ್ಲದಂತೆ ಮಾಡಿದ್ದೇವೆ.

ರಾಜಕೀಯವಾಗಿ ನಾವು ಸರಿಯಾದ ಮಾರ್ಗದಲ್ಲಿ ನಡೆದಿದ್ದೇವೆ. ಇದೀಗ ನನ್ನ ಗೆಳೆಯರಾದ ಹನುಮಂತಯ್ಯನವರು ಹೇಳಿದಂತೆ ನಮ್ಮ ದೇಶದಲ್ಲಿ ರಾಜಕೀಯ ಒಗ್ಗಟ್ಟನ್ನು ಕೊಟ್ಟ ಗೌರವವು ಗೌರವಾನ್ವಿತ ಸರದಾರ ಪಟೇಲರಿಗೆ ಹೋಗುತ್ತದೆ. ರಾಜಕೀಯ ಕ್ರೋಡೀಕರಣವಾದನಂತರ ನಮ್ಮ ಮುಂದಿನ ತಕ್ಷಣದ ಅವಶ್ಯಕತೆಯೆಂದರೆ ನಮ್ಮಲ್ಲಿ ಸಾಮಾಜಿಕ ಕ್ರೋಡೀಕರಣ. ಈ ಮಸೂದೆಯು ಇದನ್ನು ಒದಗಿಸುತ್ತದೆ ಎಂದು ನನಗೆ ಭರವಸೆ ಇದೆ. ಈ ಮಸೂದೆಯು ಕಾನೂನು ಆದರೆ ವಿವಾಹಗಳು ಮುಕ್ತವಾಗುತ್ತವೆ. ನಾನು ಮುಕ್ತ ವಿವಾಹಗಳಲ್ಲಿ ನಂಬಿಕೆಯುಳ್ಳವನಾಗಿದ್ದೇನೆ. ಈ ಭಾರತವು ಸ್ವತಂತ್ರ ಮದುವೆಗಳ ಸಹಿತ ಸ್ವತಂತ್ರ ಮತ್ತು ಅಲ್ಲಿ ಯಾವುದೇ ನಿರ್ಬಂಧವಿರಬಾರದು. ನನಗೆ ವಿಷಾದವೆನಿಸುತ್ತದೆ ನಮ್ಮ ಜೀವನದ

ಕೊನೆಯ ಹಂತದಲ್ಲಿ ಈ ಮಸೂದೆಯು ಬಂದಿದೆ. ಆದರೆ ನಮ್ಮ ಮುಂದಿನ ಜನಾಂಗ ಇದನ್ನು ಆಚರಣೆಯಲ್ಲಿ ತರಲು ನಾವು ಈ ಮಸೂದೆಯನ್ನು ಪಾಸು ಮಾಡೋಣ. ಈ ಅಧಿನಿಯಮದಲ್ಲಿ ಕೊಟ್ಟ ಸ್ವಾತಂತ್ರವನ್ನು ಈ ದೇಶವು ಅನುಭೋಗಿಸುತ್ತದೆಂದು ಆಶಿಸುತ್ತೇನೆ. ನಾನು ತುಂಬಿದ ಹೃದಯದಿಂದ ಈ ಸೂಚನೆಯನ್ನು ಬೆಂಬಲಿಸುತ್ತೇನೆ.

**ಶ್ರೀ ಉಪೇಂದ್ರನಾಥ ಬರ್ಮನ್** (ಪಂ. ಬಂಗಾಲ, ಸಾಮಾನ್ಯ) ನಾನು ಸಹ ಈ ಮಸೂದೆಯನ್ನು ಮತ್ತು ಪರಿಶೀಲನಾ ಸಮಿತಿಗೆ ಕಳಿಸಿದ್ದ ಕ್ರಮವನ್ನು ತುಂಬು ಹೃದಯದಿಂದ ಬೆಂಬಲಿಸುತ್ತೇನೆ. ಮನಸ್ಸಿನಲ್ಲಿ ಒಂದು ವಿಷಯವು ಖಾತರಿ ಇದೆ. ನಮ್ಮ ದೇಶದಲ್ಲಿ ರಾಷ್ಟ್ರೀಯತೆ ಭಾವದಲ್ಲಿ ಅಡೆತಡೆಗಳುಂಟಾದ ಸಂದರ್ಭಗಳೆಂದರೆ ಜಾತೀಯ ನಿರ್ಬಂಧ, ಇದು ಎಲ್ಲಿಯವರೆಗೆ ಇರುತ್ತದೆಯೋ ಹಿಂದೂ ಜನಾಂಗ ವಿವಿಧ ವಿಭಾಗ ಮತ್ತು ಮುಸ್ಲಿಂಯೇತರ ಜನಾಂಗಗಳು ಇಬ್ಬರೂ ಒಂದಾಗುವುದಿಲ್ಲ ಮತ್ತು ನಿಜವಾದ ಅರ್ಥದ ರಾಷ್ಟ್ರೀಯತೆಯ ಭಾವನೆಯನ್ನು ಅಳವಡಿಸಿಕೊಳ್ಳುವುದಿಲ್ಲ. ಮಗ ಎಲ್ಲಿಯವರೆಗೆ ತಮ್ಮ ನೆರೆಹೊರೆಯವರ ಮಗ ಇಲ್ಲವೆ ಮಗಳನ್ನು ಮದುವೆ ಆಗುವುದಿಲ್ಲವೆಂದು ಗೊತ್ತಿದೆಯೋ ಅಲ್ಲಿಯವರೆಗೆ ಅವರು ಒಂದು ಎಂಬ ನಿಜವಾದ ಭಾವನೆ ಬರಲು ಸಾಧ್ಯವಿಲ್ಲ. ನನಗೆ ಅನಿಸಿದಂತೆ ಈ ಕ್ರಮವನ್ನು ಪಾಸು ಮಾಡುವುದರಿಂದ ಆ ನಿರ್ಬಂಧವನ್ನು ಗೆದ್ದಂತೆ ಆಗುತ್ತದೆ ಎಂದು ನನ್ನ ಭಾವನೆಯಾಗಿದೆ. ನಮ್ಮ ಸಂಬಂಧದ ಭಾವನೆಯು ಅದೇ ನಿಜವಾದ ರಾಷ್ಟ್ರೀಯತೆಯ ಭಾವನೆಯ ತಳಹದಿಯಾಗಿದೆ ಮತ್ತು ನಾನು ತುಂಬು ಹೃದಯದಿಂದ ಈ ಮಸೂದೆಯನ್ನು ಬೆಂಬಲಿಸುತ್ತೇನೆ ಮತ್ತು ಅದಷ್ಟು ಬೇಗನೆ ಆ ಮಸೂದೆಯನ್ನು ಕಾನೂನನ್ನಾಗಿ ಮಾಡುವಿರೆಂದು ಆಶಿಸುತ್ತೇನೆ. ಸನ್ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ (ಕಾನೂನು ಮಂತ್ರಿ) ಈ ಮಸೂದೆಗೆ ಸಂಬಂಧಿಸಿದಂತೆ ನನ್ನ ಹಾಗೂ ಈ ಮಸೂದೆಯನ್ನು ಮಂಡಿಸಿದ ಮಾನ್ಯ ಗೆಳೆಯರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇರುವುದಿಲ್ಲ. ಇದಕ್ಕೆ ಒಂದೇ ಕಾರಣವೆಂದರೆ ನಾನು ಪ್ರತಿಪಾದಿಸುವ ಹಿಂದೂ ಕೋಡ್ ಅದರ ಒಂದು ಭಾಗವಾಗಿದೆ. ಈ ಮಸೂದೆಗೆ ನನ್ನದು ಒಂದು ತಕರಾರು ಇದೆ. ಅದೇನೆಂದರೆ ಈ ಸಂಸತ್ತು ಒಮ್ಮೆ ಹಿಂದೂ ಕಾನೂನನ್ನು ಕ್ರೋಡೀಕರಿಸಬೇಕೆಂಬ ತತ್ವವನ್ನು ಒಪ್ಪಿಕೊಂಡಿದ್ದರಿಂದ ಅದರ ಒಂದೊಂದೇ ಭಾಗದ ಮೇಲೆ ಕಾನೂನು ಮಾಡುವುದು ತಪ್ಪು. ಈ ಮಸೂದೆಯ ಹಿಂದೆ ಇರುವ ತತ್ವಗಳ ಬಗ್ಗೆ ನನ್ನ ಭಿನ್ನಾಭಿಪ್ರಾಯವಿಲ್ಲವೆಂದು ನಾನು ಹೇಳಿದ್ದೇನೆ, ಇದೇ ತತ್ವಗಳನ್ನು ಹಿಂದೂ ಕೋಡಿನಲ್ಲಿ ಅಳವಡಿಸಲಾಗಿದೆ ಮತ್ತು ಆದ್ದರಿಂದ ನನ್ನ ಸನ್ಮಿತ್ರರಿಗೆ ಸೂಚಿಸುವುದು ಏನೆಂದರೆ ಅವರು ಈ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳಲಿ ಇಲ್ಲವೇ ಈ ಮಸೂದೆಯ ಮೇಲಣ ಚರ್ಚೆಯನ್ನು ಮುಂದಕ್ಕೆ ಹಾಕೋಣ. ಇದರಿಂದ ಹಿಂದೂ ಕೋಡ್ ಬಗ್ಗೆ ನಿಜವಾಗಿ ಏನಾಗುತ್ತದೆಂಬುದು ನಮಗೆ ಗೊತ್ತಾಗುತ್ತದೆ. ನಾನು ಹಿಂದೂ ಕೋಡನ್ನು ಪ್ರತಿಪಾದಿಸುತ್ತಿದ್ದೇನೆ ಮತ್ತು ಪರಿಶೀಲನಾ ಸಮಿತಿಯವರು ಸಲ್ಲಿಸಿದ ಮಸೂದೆಯು ಸಂಸತ್ತಿನ ಮುಂದೆ ಚರ್ಚೆ ಮಾಡದೆ ಸೂಚಿಸಿದ್ದನ್ನು ನೋಡಿದರೆ ನನಗೆ ಭಯವಾಗುತ್ತದೆ. ನಾನು ಈಗಾಗಲೇ ತೆಗೆದುಕೊಂಡ ನಿರ್ಣಯವನ್ನು ಬಿಟ್ಟು ಬೇರೆ ಯಾವ ನಿರ್ಣಯವನ್ನು ತೆಗೆದುಕೊಳ್ಳಲು ನನಗೆ ಭಯವಾಗುತ್ತದೆ.

**ಚ. ರಣಬೀರ ಸಿಂಗ್ :** ಎದ್ದು ನಿಂತರು

**ಶ್ರೀ ಎಲ್ ಕೃಷ್ಣಸ್ವಾಮಿ ಭಾರತಿ** (ಮದ್ರಾಸ, ಸಾಮಾನ್ಯ) : ನೀವು ಅವರಿಗೆ ಹೇಗೆ ಮಾತನಾಡಲು ಅವಕಾಶ ಕೊಡುವಿರಿ. ಚರ್ಚೆಯನ್ನು ಕೊನೆಗಾಣಿಸುವ ಸೂಚನೆ ಮಂಡಿತವಾಗಿದೆ.

**ಸನ್ಮಾನ್ಯ ಉಪಾಧ್ಯಕ್ಷ :** ನಾನು ಡಾ. ಅಂಬೇಡ್ಕರರಿಗೆ ಮಾತನಾಡಲು ಅವಕಾಶಕೊಟ್ಟಿದ್ದೇನೆ. ಅವರು

ಅದರ ಪ್ರತಿವಾದಕರಲ್ಲ. ಈಗ ಪ್ರಶ್ನೆಯನ್ನು ಕೇಳಲಾಗುವುದಿಲ್ಲ.

**ಚ. ರಣಬೀರ್ ಸಿಂಗ್** (ಪೂ, ಪಂಜಾಬ, ಸಾಮಾನ್ಯ) (ಹಿಂದಿ ಭಾಷಣ ಇಂಗ್ಲಿಷ್ ಭಾಷಾಂತರ) ಸನ್ಮಾನ್ಯ ಉಪಾಧ್ಯಕ್ಷರೆ, ಹಾಗೂ ಮಾನ್ಯರೇ, ನಾನು ಈ ಜಾತಿಗೆ ಸಂಬಂಧಿಸಿದವನಿದ್ದು ಯಾವತ್ತೂ ಹಿಂದೂಗಳು ಈ ಮಸೂದೆಯ ತತ್ವದ ಮೇಲೆ ನಂಬಿಕೆ ಇಟ್ಟಿದ್ದಾರೆ. ಆದ್ದರಿಂದ ಮೊಟ್ಟಮೊದಲು ನಾನು ಇದನ್ನು ಬೆಂಬಲಿಸುತ್ತೇನೆ ಎಂದು ಹೇಳಲು ಬಹಳ ಸಂತೋಷವೆನಿಸುತ್ತದೆ. ಒಂದು ವೇಳೆ ಯಾವುದೇ ಬೇರೆ ಧರ್ಮದವರು ಹಿಂದೂಗಳಲ್ಲಿ ಯಾವುದೇ ಜಾತಿಯವರೊಂದಿಗೆ ಸಂಬಂಧ ಬೆಳಸಿದರೆ ಅಲ್ಲಿ ಬೇರೆ ಭಿನ್ನಾಬಿಪ್ರಾಯ ಇರಲಿಲ್ಲ. ಆದರೆ ಜಾಟ್ ಸಮಾಜಕ್ಕೆ ಸಂಬಂಧ ಬೆಳೆಸಿದ ಸಂದರ್ಭದಲ್ಲಿ ಭಿನ್ನಾಭಿಪ್ರಾಯವಿದೆ.

ಕೆಲವು ಭಿನ್ನಾಭಿಪ್ರಾಯ ಇರುವುದು ನಿಜ, ಸಮಾಜದ ನಿಯಂತ್ರಣವಿರುವದು, ಆದರೆ ಅದು ಅಂತಹ ಹೇಳಿಕೊಳ್ಳುವಂತಹದ್ದಲ್ಲ. ಈ ಮಸೂದೆಯು ನಮ್ಮ ರಾಷ್ಟ್ರವ್ಯಾಪ್ತಿಯಾಗಿ ಬಹುದೂರ ಹೋಗುತ್ತದೆ. ನಾವು ಕಳೆದ ಸಾವಿರಾರು ವರ್ಷಗಳಿಂದ ನಂಬಿಕೆ ಇಟ್ಟುಕೊಂಡು ಬಂದ ತತ್ವವನ್ನು ಸ್ಥಾಪಿಸಲು ತುಂಬಾ ದಿನಗಳು ಬೇಕಾಗಬಹುದು. ಇಂತಹದನ್ನು ಬೆಂಬಲಿಸಲು ಸಂತೋಷವೆನಿಸುತ್ತದೆ. ಎರಡನೆಯದಾಗಿ, ನನ್ನ ಸನ್ಮಿತ್ರರಾದ ತ್ಯಾಗಿ ಅವರು ಈ ಮಸೂದೆಯು ನಮ್ಮನಮ್ಮಲ್ಲಿಯೆ ಭಿನ್ನಾಭಿಪ್ರಾಯಗಳು ನಮ್ಮ ಗುಲಾಮಗಿರಿಗೆ ಕಾರಣವಾಗಿದ್ದವು ಅವುಗಳನ್ನು ಈ ಮಸೂದೆ ಹೋಗಲಾಡಿಸುತ್ತದೆಂದು ಹೇಳಿದ್ದಾರೆ. ಸಣ್ಣ ಸಂಸ್ಥಾನಗಳನ್ನು ನಮ್ಮ ನೇತಾರರಾದ ಗೌರವಾನ್ವಿತ ಸರದಾರ ಪಟೇಲರು ಕ್ರೋಡೀಕರಿಸಿ ಒಂದು ರಾಷ್ಟ್ರವನ್ನಾಗಿ ಮಾಡಿದ್ದಾರೆ ಮತ್ತು ಆ ಸಮಸ್ಯೆಯು ಈಗ ಚೆನ್ನಾಗಿ ಪರಿಹಾರವಾಗಿದೆ. ಈ ಮಸೂದೆಯು ನಮ್ಮ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು ಬಹಳ ಉತ್ತಮ ಕ್ರಮವಾಗಿದೆ.

ಹಿಂದೂ ಸಂಹಿತೆ ಮಸೂದೆ ಸಾಮಾಜಿಕ ಸಮಸ್ಯೆಗೆ ಸಂಬಂಧಿಸಿದಂತೆ ದೊಡ್ಡ ಕೆಲಸವಾಗಿದೆ. ಇದನ್ನು ಈ ದೇಶವು ಇಲ್ಲವೇ ಸಂಸತ್ತು ಸ್ವೀಕರಿಸುವುದೋ ಇಲ್ಲವೋ ಎಂಬುದು ಇನ್ನೂವರೆಗೆ ಗೊತ್ತಿಲ್ಲ. ಇದರಲ್ಲಿಯ ಕೆಲವು ಉಪಬಂಧಗಳ ಮೇಲೆ ನಮ್ಮ ನೇತಾರರು ಕೆಲವು ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಆ ಮಸೂದೆಯನ್ನು ನನ್ನ ಮಟ್ಟಿಗೆ ಹೇಳುವುದಾದರೆ ತಿರಸ್ಕರಿಸುವುದು ಎಷ್ಟರಮಟ್ಟಿಗೆ ಸರಿ ಎಂಬುದು ನನಗೆ ತಿಳಿಯದಾಗಿದೆ. ಅದಕ್ಕೆ ಕಾರಣವೆಂದರೆ – ಇದು ಮಸೂದೆಯ ಒಂದು ಭಾಗವಾಗಿದೆ. ಹಿಂದೂ ಸಂಹಿತೆ ಮಸೂದೆ ಪಾಸಾದರೆ ಅದರಲ್ಲಿ ಈ ಮಸೂದೆಯನ್ನು ಸಹಾ ಸೇರಿಸಲ್ಪಡುತ್ತದೆ. ಅದನ್ನು ಒಂದು ವೇಳೆ ಪಾಸುಮಾಡದಿದ್ದರೆ ಕೊನೆಗೆ ಈ ಮಸೂದೆಯನ್ನು ಪಾಸುಮಾಡುವ ಸಾಧ್ಯತೆಗಳಿವೆ. ಈ ಶಬ್ದಗಳಿಂದ ನಾನು ತುಂಬು ಹೃದಯದಿಂದ ಇದನ್ನು ಬೆಂಬಲಿಸುತ್ತೇನೆ.

**ಶ್ರೀ ಕೆ.ಎಮ್.ಮುನಿಷಿ :** ಡಾ. ಅಂಬೇಡ್ಕರ್ ಅವರು ಮಾಡಿದ ವಿಷಯಕ್ಕೆ ಉತ್ತರಿಸುವುದಕ್ಕಾಗಿ ಪರವಾನಗಿ ಕೊಡಬೇಕಾಗುತ್ತದೆ.

**ಒಬ್ಬ ಸನ್ಮಾನ್ಯ ಸದಸ್ಯರು :** ಪಂಡಿತ ಭಾರ್ಗವ ಅವರು ಅದನ್ನು ವಿವರಿಸಲಿ.

**ಪಂಡಿತ ಠಾಕೂರದಾಸ ಭಾರ್ಗವ :** ಮಾನ್ಯರೆ, ಇದಕ್ಕೆ ಸಂಸತ್ತಿನ ಎಲ್ಲಾ ಭಾಗದ ಜನರಿಂದ ಬೆಂಬಲ ಸಿಕ್ಕುದಕ್ಕೆ ನನಗೆ ತುಂಬಾ ಸಂತೋಷವಾಗಿದೆ. ಇದು ಇಂತಹ ರೀತಿಯ ಕ್ರಮವಾಗಿದೆ. ನನಗೆ ಅದು ಅತ್ಯಂತ ವೇಗದಿಂದ ಹೋಗುವುದೆಂದು ನನ್ನ ಮುಂದಾಲೋಚನೆ. ಯಾವುದೇ ರೀತಿಯಿಂದ ನನ್ನ ಕಲ್ಪನೆಯಲ್ಲಿ ಯಾರಾದರೂ ತಕರಾರು ಎತ್ತುವರೆಂದು ಭಾವಿಸಿ ಈ ಕ್ರಮವು ಪ್ರತಿಯೊಬ್ಬರಿಗೂ ಮನಸ್ಸಿಗೆ ಬಂದಿದೆ. ಇದರಿಂದ ನನಗೆ ತುಂಬಾ ಸಂತೋಷವಾಗಿದೆ. ಒಂದು ತಕರಾರನ್ನು ಎತ್ತಿದ್ದಾರೆ. ಆ ಒಂದು ತಕರಾರು ಏನೆಂದರೆ, ಹಿಂದೂ ಸಂಹಿತೆ ಮಸೂದೆಯು ಬಂಡೆಗಲ್ಲಿನಂತೆ ನಿಂತಿದೆ, ಆದ್ದರಿಂದ ನಾವು ಈ

ಮಸೂದೆಯನ್ನು ಮುಂದುವರೆಸಬಾರದು, ಈ ಮಸೂದೆಯ ತತ್ವಗಳು ಮತ್ತು ಹಿಂದೂ ಕೋಡಿನ ತತ್ವಗಳು ಮತ್ತು ವಿಷಯಗಳು ಒಂದಕ್ಕೊಂದು ತದ್ವಿರುದ್ಧವಾಗಿದ್ದರೆ, ಆಗ ನಾನು ಈ ತಕರಾರನ್ನು ಒಪ್ಪಿಕೊಳ್ಳಬಹುದಾಗಿತ್ತು, ಆದರೆ ಹಿಂದೂ ಕೋಡ್ ಮಸೂದೆಯು ಈ ಕ್ರಮದಂತೆ ನಡೆಯುತ್ತದೆ. ನಾವು ಮುಂಚಿತವಾಗಿ ಈ ಮಸೂದೆಯನ್ನು ಪಾಸು ಮಾಡಿದರೆ ಅದು ಹಿಂದೂ ಸಂಹಿತೆ ಮಸೂದೆಗೆ ಹೇಗೆ ಅಡ್ಡಿಯುಂಟಾಗುತ್ತದೆಂಬುದು ನನಗೆ ತಿಳಿಯದಾಗಿದೆ. ನಿಜವಾಗಿಯೂ ಇದನ್ನು ಪಾಸುಮಾಡುವುದರಿಂದ ಹಿಂದೂ ಕೋಡ್ ಪಾಸು ಮಾಡುವುದಕ್ಕೆ ಅದು ವೇಗವನ್ನು ಹೆಚ್ಚಿಸುತ್ತದೆ. ಹಿಂದೂ ಕೋಡ್‌ನಂತಹ ಎಲ್ಲಾ ವಿಷಯಗಳನ್ನು ಒಳಗೊಂಡ ಒಂದು ಮಸೂದೆಯು ಸಿದ್ಧವಾಗುತ್ತಿರುವಾಗ ಮತ್ತೊಂದು ಮಸೂದೆಯನ್ನು ಪಾಸುಮಾಡಬಾರದೆಂದು ಯಾವ ಕಾನೂನು ಇಲ್ಲವೆ ನಿಯಮ ಇಲ್ಲವೆಂದು ಸಂಪ್ರದಾಯ ಹೇಳುತ್ತದೆ, ಆದ್ದರಿಂದ ಮತ್ತೊಂದು ಮಸೂದೆಯನ್ನು ಪಾಸು ಮಾಡಬಾರದೆಂದು ಹೇಳುವುದಿಲ್ಲ. ಅಂತಹ ಸಂಪ್ರದಾಯ ಇರುವುದಿಲ್ಲ. ಇಂತಹ ಒಂದು ಕ್ರಮ ಅದು ಒಂದು ಭಾಗದ ವಿಷಯವನ್ನು ಒಳಗೊಂಡಿದ್ದರೆ ಮತ್ತೊಂದು ಅಂತಹ ಕ್ರಮವನ್ನು ಪಾಸುಮಾಡಬಾರದು ಎಂಬ ಸಂಪ್ರದಾಯ ಇರುವುದಿಲ್ಲ. ಆದ್ದರಿಂದ ಮತ್ತೊಂದು ಕ್ರಮ ಅಡ್ಡಿಯಲ್ಲ.

**ಬಕ್ಷಿ ಟೇಕಚಂದ** – ಅವರು ಈ ವಿಷಯವು ೧೯೧೯ರ ಮಸೂದೆಯಲ್ಲಿ ಒಳಗೊಂಡಿತ್ತೆಂದು ಈ ಕ್ರಮವು ಅದರಲ್ಲಿತ್ತೆಂದು ಎತ್ತಿ ತೋರಿಸಿದರು. ಈ ಮಸೂದೆಯಲ್ಲಿ ಸನ್ಮಾನ್ಯ ಅಧ್ಯಕ್ಷರಾದ ಶ್ರೀ ವಿ.ಕೆ ಪಟೇಲ ಅವರು ಇದರಲ್ಲಿ ಭಾಗಿಯಾಗಿದ್ದಾರೆ. ಈ ಸಂದರ್ಭದಲ್ಲಿ ಹಿಂದೂ ಕೋಡ್ ಈ ರೀತಿಯ ಕ್ರಮವನ್ನು ಬಹಳಷ್ಟು ಮುಂಚಿತವಾಗಿಯೇ ತೆಗೆದುಕೊಳ್ಳಬೇಕಾಗಿತ್ತು. ಈ ರೀತಿಯ ವಿಷಯದಲ್ಲಿ ತಾಂತ್ರಿಕತೆಗಳು ಕಾನೂನು ಬದ್ಧವಾಗಿದ್ದರೂ ಅವು ನಿಲ್ಲಲು ಆಸ್ಪದ ಕೊಡಬಾರದು, ಆ ಸಾವಿರಾರು ಗಂಡುಮಕ್ಕಳಿಗೆ ಮತ್ತು ಹೆಣ್ಣುಮಕ್ಕಳಿಗೆ ಈ ಹಿಂದೂ ಕೋಡ್ ಪಾಸಾದರೆ ಏನು ಆಗುತ್ತದೆ? ನನಗೆ ತಿಳಿದಂತೆ ಇದನ್ನು ಖಂಡದಿಂದ ಖಂಡಕ್ಕೆ ಈ ಅಧಿವೇಶನದಲ್ಲಿ ತೆಗೆದುಕೊಳ್ಳಬೇಕಾಗಿಲ್ಲ. ಅದು ಸೆಪ್ಟಂಬರದವರೆಗೆ ಇಲ್ಲವೆ ಅಕ್ಟೋಬರವರೆಗೆ ಹೋಗಬಹುದು. ಈ ಅಧಿವೇಶನದಲ್ಲಿ ಇದು ಪಾಸಾಗದಿರಬಹುದು ಯಾಕೆಂದರೆ ಇದು ವಿವಾದಾತ್ಮಕಕ್ರಮ, ಇದಕ್ಕೆ ಒಂದು ವರ್ಷಬೇಕಾಗುತ್ತದೆ. ಆದರೆ ಮಸೂದೆಯ ಉಪಬಂಧಗಳಲ್ಲಿ ವಿವಾದಾತ್ಮಕ ವಿಷಯಗಳಿವೆ. ಆ ಅವಧಿಯಲ್ಲಿ ಮದುವೆಯಾಗುವ ತರುಣರು ಮತ್ತು ಹೆಣ್ಣುಮಕ್ಕಳ ಗತಿ ಏನಾಗುತ್ತದೆ? ಈ ಅಧಿನಿಯಮದ ಉಪಬಂಧಗಳು ಮತ್ತು ನಮ್ಮ ಕಾರ್ಯಕ್ರಮಗಳು ನಿಜವಾಗಿಯೂ ಈ ರಾಷ್ಟ್ರವನ್ನು ಕ್ರೋಡೀಕರಿಸುವುದನ್ನು ರೂಪಿಸಲು ಅನುಕೂಲಕರವಾಗಿದೆಯೇ? ಮಾನ್ಯರೆ, ಇದು ಸಹಾಯ ಮಾಡುತ್ತದೆ. ಅವರ ವಿವಾಹವೂ ಈ ಮಸೂದೆಯನ್ನು ಪಾಸು ಮಾಡುವುದರಿಂದ ಡಾ. ಅಂಬೇಡ್ಕರ್ ಅವರ ಮದುವೆಯು ಕಾನೂನುಬದ್ಧವಾಗುತ್ತದೆ, ಅವರು ಇದಕ್ಕೆ ಯಾಕೆ ನಗಬೇಕು, ಅದು ಅನ್ವಯಿಸುವುದು ಇಲ್ಲವೆ ಅನ್ವಯಿಸದಿರಬಹುದು ಆದರೂ ಈ ಅನರ್ಹತೆಯನ್ನು ಯಾರಾದರೂ ತೆಗೆದುಹಾಕಿದರೆ, ನೂರಾರು ಜನರು ಈ ಕಾನೂನಿನ ನಿಯಮದ ಅಡಿಯಲ್ಲಿ ಲಗ್ನವಾಗುವವರಿಗೆ ಅದು ಸಹಾಯಕ? ನನ್ನ ಮಟ್ಟಿಗೆ ಯಾರಾದರೂ ಯಾವುದೇ ತಕರಾರು ಒಡ್ಡಿದರೆ, ನಾನು ಅವರಿಗೆ ಬೇಡವೆಂದು ಪ್ರಾರ್ಥಿಸುತ್ತೇನೆ.

ಇದೇ ಅಧಿವೇಶನದಲ್ಲಿ ಪಾಸಾಗುವುದಕ್ಕೆ ಪ್ರಾರ್ಥಿಸುವೆನು, ನಮ್ಮ ಎಲ್ಲ ಪ್ರಯತ್ನಗಳು ಮತ್ತು ಗಾಂಧೀಜಿಯವರ ಪ್ರಯತ್ನಗಳು ನಿಷ್ಪ್ರಯೋಜಕವಾಗುತ್ತವೆ. ನಾನು ವಿನಂತಿಪೂರ್ವಕ ಹೇಳುವುದೇನೆಂದರೆ ಡಾ. ಅಂಬೇಡ್ಕರ್ ಅವರು ತಮ್ಮ ತಕರಾರನ್ನು ತಿರುಗಿ ತೆಗೆದುಕೊಳ್ಳಬೇಕು, ಈ ಮಸೂದೆಯು ಪಾಸಾಗಲು

ಅನುವು ಮಾಡಿಕೊಡಬೇಕು. ಯಾಕೆಂದರೆ ಇದು ಅವರ ಹಿಂದೂ ಕೋಡ್ ಮಸೂದೆಯು ಪಾಸಾಗಲು ಈ ಭಾಗವು ಅನುಕೂಲ ಮಾಡಿಕೊಡುವುದು.

**ಶ್ರೀ ಕೆ ಹನುಮಂತಯ್ಯ :** ಮಾನ್ಯ ಸದಸ್ಯರು ನಾನು ಸೂಚಿಸಿದ ಶ್ರೀಮತಿ ವಿನ್ನಿ ಮೆಸಕೆರಿನ್ ಅವರ ಹೆಸರನ್ನು ಒಪ್ಪಿದ್ದಾರೆಯೆ?

**ಮಾನ್ಯ ಉಪಸಭಾಪತಿಗಳು :** ಹೌದು, ಸನ್ಮಾನ್ಯ ಕಾನೂನು ಮಂತ್ರಿಗಳು ಕಾಯ್ದಿಟ್ಟ ಪಟ್ಟಿಯಲ್ಲಿರುವ ಸದಸ್ಯರ ಹೆಸರುಗಳನ್ನು ತಿಳಿಯಬಯಸುತ್ತಾರೆ, ಆ ಪ್ರಶ್ನೆಯು ಹೀಗೆ ಇದೆ.

"ಹಿಂದೂಗಳ, ಸಿಖ್ಖರ, ಜೈನರ ಮತ್ತು ಅವರ ಬೇರೆ ಬೇರೆ ಜಾತಿಗಳ ಹಾಗೂ ಉಪಜಾತಿಗಳ ನಡುವಣ ಮದುವೆಗಳು ಕಾನೂನುಬದ್ಧವಾಗಲು ಈ ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಇದನ್ನು ಅನಂತಶಯನಂ ಅಯಂಗಾರ್, ದೇಶಬಂಧು ಗುಪ್ತಾ, ಶ್ರೀಮತಿ ಜಿ ದುರ್ಗಾಬಾಯಿ, ಶ್ರೀಮತಿ ರೇಣುಕಾ ರೇ, ಶ್ರೀ ರಾಮನಾಥ ಗೋಯಂಕಾ, ಡಾ. ಬಕ್ಷಿ ಟೇಕಚಂದ, ಲಾಲಾ ಅಚಿಂತರಾಮ, ಚ ರಣವೀರಸಿಂಗ, ಶ್ರೀ ಮಹಾವೀರ ತ್ಯಾಗಿ, ಶ್ರೀಮತಿ ಅನ್ನೀ ಮಾಸ್ಕರೀನ್ ಮತ್ತು ಈ ಮಸೂದೆಯನ್ನು ಮಂಡಿಸಿದವರನ್ನೊಳಗೊಂಡ ಪರಿಶೀಲನಾ ಸಮಿತಿಗೆ ಒಪ್ಪಿಸಿ ಅವರು ತಮ್ಮ ವರದಿಯನ್ನು ದಿನಾಂಕ ೨೮ನೆಯ ಫೆಬ್ರವರಿ ೧೯೪೯ರ ಒಳಗೆ ಒಪ್ಪಿಸುವಂತೆ ಕೇಳಲಾಗಿದೆ ಮತ್ತು ಈ ಸಮಿತಿಗೆ ಅವಶ್ಯವಾಗಿರಬೇಕಾದ ಸದಸ್ಯರ ಸಂಖ್ಯೆಯು ೫ ಇರುತ್ತದೆ."

ಈ ಸೂಚನೆಯು ಸ್ವೀಕೃತವಾಯಿತು.

## ಹಿಂದೂ ಕೋಡ್ – ಮುಂದುವರೆದುದು

**ಮಾನ್ಯ ಅಧ್ಯಕ್ಷರು :** ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್

**ಪಂಡಿತ ಠಾಕೂರದಾಸ ಭಾರ್ಗವ :** ಎದ್ದು ನಿಂತರು.

**ಶ್ರೀ ಜಸಪತ್ ರಾಯ್ ಕಪೂರ** (ಉ.ಪ್ರ. ಜನರಲ್) ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಧಿಬಿಂದು ಎತ್ತುತ್ತೇನೆ. ಅದನ್ನು ಸ್ವೀಕರಿಸಿದರೆ ಹಿಂದಿನ ಅಧಿವೇಶನದಲ್ಲಿ ನನ್ನ ಸನ್ಮಿತ್ರರಾದ ಶ್ರೀ ನಝಿರುದ್ದೀನ ಅಹ್ಮದ್ ಅವರು ಎತ್ತಿದ ವಿಧಿಬಿಂದುವಿನ ಬಗ್ಗೆ ಈ ಅಧಿವೇಶನದಲ್ಲಿ ಚರ್ಚಿಸುವುದು ಕಾನೂನುಸಮ್ಮತವೂ? ಆದ್ದರಿಂದ ನಾನು ವಿನಯಪೂರ್ವಕವಾಗಿ ಹೇಳುವುದೇನೆಂದರೆ ನಾನು ನನ್ನ ವಿಧಿಬಿಂದುವನ್ನು ತಮ್ಮ ಪರಿಶೀಲನೆಗೆ ಬಿಡುತ್ತೇನೆ.

**ಮಾನ್ಯ ಅಧ್ಯಕ್ಷರು :** ಶ್ರೀ ಪಂಡಿತ ಠಾಕೂರದಾಸ ಭಾರ್ಗವ ಅವರು ತುದಿಗಾಲಮೇಲೆ ನಿಂತಿದ್ದಾರೆ. ಆದ್ದರಿಂದ ನಾನು ಮೊದಲು ಅವರ ಹೇಳಿಕೆಯನ್ನು ಕೇಳುತ್ತೇನೆ, ಅವರು ಏನು ಹೇಳುತ್ತಾರೆಂಬುದನ್ನು ನಾನು ಮುಂಚಿತವಾಗಿ ಹೇಳಲಾರೆನು. ನಾನು ಎತ್ತಿದ ವಿಧಿಬಿಂದುವಿನ ಬಗ್ಗೆ ನನಗೆ ನನ್ನದೇ ಅಭಿಪ್ರಾಯವಿದೆ, ಆದರೆ ಪಂಡಿತ ಠಾಕೂರದಾಸ ಅವರು ಏನು ಹೇಳುತ್ತಾರೆ ನೋಡೋಣ.

**ಪಂಡಿತ ಠಾಕೂರದಾಸ ಭಾರ್ಗವ** (ಪೂರ್ವ ಪಂಜಾಬ, ಜನರಲ್): ಮಾನ್ಯರೆ, ಕಳೆದ ಅಧಿವೇಶನದಲ್ಲಿ ಡಾ. ಅಂಬೇಡ್ಕರ್ ಅವರು ಈ ವಿಷಯವನ್ನು ಮಂಡಿಸಿದಾಗ ಶ್ರೀ ನಝಿರುದ್ದೀನ ಅಹ್ಮದ್ ಅವರು ಒಂದು ವಿಧಿಬಿಂದುವನ್ನು ಎತ್ತಿದರು. ಪರಿಶೀಲನಾ ಸಮಿತಿಯು ವಿಚಾರಮಾಡಿದ್ದು ಈ ಸಂಸತ್ತು ಅವರಿಗೆ ಕಳುಹಿಸಿದ ಮಸೂದೆಯು ಅಲ್ಲ. ಆ ವಿಷಯವನ್ನು ವಿಚಾರಿಸಿದಾಗ ನಾನು ಕೆಲವು ವಿಷಯಗಳನ್ನು ತಮ್ಮ ಅವಗಾಹನೆಗೆ ತರಬಯಸುವೆನು, ಯಾಕೆ ವಿಧಿಬಿಂದು ಅಷ್ಟೊಂದು ದೊಡ್ಡ ವಿಷಯವಾಯಿತು? ಅದನ್ನು ಹಾಗೆ ಮಾಡುವಾಗ,

ನೀವು ಆ ಚರ್ಚೆಯನ್ನು ನಿಲ್ಲಿಸಿದಿರಿ ಮತ್ತು ಆ ವಿಷಯವನ್ನು ಮೊಟಕುಗೊಳಿಸಿದಿರಿ. ಸಂಸತ್ತಿನ ವ್ಯವಹರಣೆಗಳ ಪುಸ್ತಕದ ಪುಟ ೨೭೮ರಲ್ಲಿ ದಿನಾಂಕ ೩೧–೮–೧೯೪೮ರಲ್ಲಿ ಇದು ಕಂಡುಬರುತ್ತದೆ. ಆ ಕಾಲಕ್ಕೆ ಮಾನ್ಯರೆ, ನೀವು ನಮಗೆ ನಿಮ್ಮ ಮನಸ್ಸಿನಲ್ಲಿ ಏನೆಂಬುದನ್ನು ಹೇಳಿರಿ ಮತ್ತು ನೀವು ಅದನ್ನು ಯೋಗ್ಯ ವೇಳೆಯಲ್ಲಿ ಎರಡು ಇಲ್ಲವೆ ಮೂರು ಪ್ರಶ್ನೆಗಳನ್ನು ವಿಚಾರಿಸುವುದಾಗಿ ಹೇಳಿದಿರಿ, ಅವುಗಳನ್ನು ಪುಟ ೨೭೯ರಲ್ಲಿ ಕಾಣಿಸಲಾಗಿದೆ. ಆ ಎರಡು ಪ್ರಶ್ನೆಗಳು ಯಾವು ನಿಮ್ಮನ್ನು ಕಾಡುತ್ತಿದ್ದವೊ ಅವು, ಮೊದಲನೆಯದಾಗಿ, ಪರಿಶೀಲನಾ ಸಮಿತಿಯು ತನ್ನ ಮಾರ್ಗವನ್ನು ಬಿಟ್ಟು ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿದೆಯೆ? ಮತ್ತು ಎರಡನೆಯದಾಗಿ, ಆ ಪರಿಶೀಲನಾ ಸಮಿತಿಯು ಅದಕ್ಕೆ ಉಲ್ಲೇಖಿಸಿದುದನ್ನು ಬಿಟ್ಟು ಹೋಗಿದೆಯೇ? ಇವೆರಡೂ ಪ್ರಶ್ರೆಗಳು ನಿಮ್ಮ ಮನಸ್ಸಿನಲ್ಲಿ ಇದ್ದವು, ಚರ್ಚೆಯು ನಡೆದಿತ್ತು, ಅಂತಿಮವಾಗಿ ನೀವು ಪುಟ ೨೮೦ರಲ್ಲಿ ಕಾಣಿಸಿದಂತೆ ನಿರ್ಧರಿಸಿದಿರಿ. ನೀವು ಈ ಎಲ್ಲ ವಿಷಯಗಳನ್ನು ಅಧ್ಯಯನ ಮಾಡಿ ನಮ್ಮ ಅಭಿಪ್ರಾಯ – ನಿರ್ಣಯ ಕೊಡುವುದಾಗಿ ಹೇಳಿದ್ದೀರಿ. ಆ ಬಗ್ಗೆ ತಮ್ಮ ವಿಚಾರಕ್ಕೆ ನಾನು ವಿನಯಪೂರ್ವಕವಾಗಿ ಹೇಳುತ್ತಿದ್ದೇನೆ. ಅಂದರೆ ಶ್ರೀ ನಝೀರುದ್ದೀನ್ ಅಹ್ಮದ್ ಅವರು ಎತ್ತಿದ ವಿಧಿಬಿಂದುವಿನ ಬಗ್ಗೆ ಹೇಳಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು** : ನಾನು ವರದಿಯ ಮುದ್ರಿತ ಹಾಳೆಗಳ ಮೇಲಿಂದ ನಾನು ಹೇಳಿದ್ದು ಇದು. ನನಗೆ ಪ್ರಿಂಟು ಮಾಡಿದ ವರದಿ ಕೊಟ್ಟಿಲ್ಲ, ನನಗೆ ಕೊಟ್ಟು ತಿದ್ದಲು ಕೊಟ್ಟ ಪೇಪರುಗಳಿವೆ: ಸನ್ಮಾನ್ಯ ಸದಸ್ಯರಾದ ಶ್ರೀ ಬಿಸ್ವದಾಸ ಅವರು ಎತ್ತಿದ ವಿಷಯಕ್ಕೆ ನಾನು ಈ ಕೆಳಗಿನಂತೆ ಹೇಳಿದೆನು.

"ನಾನು ಹೇಳಿದುದು ಏನೆಂದರೆ, ನಾನು ಈ ವಿಷಯವನ್ನು ನಿರ್ಣಯಿಸುವುದೇ ಇಲ್ಲ, ಈ ವಿಧಿಬಿಂದುವನ್ನು ಒಳಗೊಂಡು ಎಲ್ಲ ವಿಷಯಗಳನ್ನು ಮುಕ್ತವಾಗಿ ಇಡುತ್ತೇನೆ. ಇದು ಅನೇಕ ವಿಷಯಗಳನ್ನು ಒಳಗೊಂಡಿದೆಯೆಂಬುದನ್ನು ತೋರಿಸುತ್ತದೆ. ನಾನು ಇವೆಲ್ಲ ಸಂಗತಿಗಳನ್ನು ಚೆನ್ನಾಗಿ ಅಭ್ಯಾಸಮಾಡಿಲ್ಲ. ಈಗಿದ್ದಂತೆ ಈ ವಿಷಯವನ್ನು ನಾನು ಬಿಡಬಹುದೆ."

ಆದ್ದರಿಂದ ಅದನ್ನು ಆಭ್ಯಸಿಸಿ ನಾನೇ ಇಟ್ಟುಕೊಂಡೆನು. ಈಗ ನಾನು ಹೇಳುವುದೇನೆಂದರೆ ನಾನು ಅದನ್ನು ಅಭ್ಯಾಸ ಮಾಡಿದ್ದೇನೆ. ಆ ವಿಧಿಬಿಂದುವಿನ ಬಗೆಗೆ ಸನ್ಮಾನ್ಯ ಸದಸ್ಯರು ಏನನ್ನೇ ಹೇಳಿರಲಿ ಆ ಪರಿಶೀಲನಾ ಸಮಿತಿಯ ವರದಿಯ ಮೊದಲನೆಯ ಕರಡನ್ನು ಅಭ್ಯಸಿಸಿದ್ದೇನೆ. ಮತ್ತೊಂದು ಕರಡನ್ನು ಸಹ ಖಂಡಿತವಾಗಿ ಅಭ್ಯಸಿಸಿದ್ದೇನೆ ಅದುವೇ ಪರಿಶೀಲನಾ ಸಮಿತಿಯ ಮುಂದೆ ಬಂದಿವೆಯೆಂದು ಆಪಾದಿಸಲಾಗಿದೆ. ಸನ್ಮಾನ್ಯ ಸದಸ್ಯರು ಆ ಬಗೆಗೆ ಏನನ್ನಾದರೂ ಹೇಳುವುದಿದೆಯೆ?

**ಪಂಡಿತ ಠಾಕೂರದಾಸ ಭಾರ್ಗವ:** ಆ ವಿಷಯದ ಬಗ್ಗೆ ನಾನು ಈಗ ಮಾತನಾಡಬೇಕೆಂದಿದ್ದೇನೆ. ನಿಜವಾಗಿಯೂ ನಾನು ಸಹ ಇದೇ ವಿಧಿಬಿಂದು ಎತ್ತಿದ್ದೆನು. ಆದರೆ ಶ್ರೀ ನಝೀರುದ್ದೀನ್ ಅಹ್ಮದ್ ಅವರು ನಿಮ್ಮ ಕಣ್ಣಿಗೆ ಬಿದ್ದ ಅದೃಷ್ಟಶಾಲಿ. ಈ ಬಗ್ಗೆ ನನಗೆ ಒಂದಿಷ್ಟು ಹೇಳುವುದಿದೆ.

**ಶ್ರೀ ಮೋಹನಲಾಲ ಗೌತಮ :** ಈ ವಿಧಿಬಿಂದುವಿನ ಮೇಲೆ, ಮಾನ್ಯರೆ, ಪ್ರಕ್ರಿಯೆಯ ನಿಯಮದಂತೆ, ಯಾವುದೇ ಉಪಬಂಧವನ್ನು ವಿಧಿಬಿಂದುವಿನ ಬಗೆಗೆ ಹೇಳಿಲ್ಲ. ಈ ವರದಿಯು ಸಂಸತ್ತಿನ ಕೈ ಸೇರಿದ ನಂತರ ಏನೂ ಬಂದಿಲ್ಲ. ಆದ್ದರಿಂದ ಸನ್ಮಾನ್ಯ ಸದಸ್ಯರಿಗೆ ನಾನು ವಿನಂತಿಸಿಕೊಳ್ಳುವುದೇನೆಂದರೆ, ಆ ನಿಯಮವನ್ನು ಹೇಳಿರಿ. ನಾನು ಅದನ್ನು ಪರಿಶೀಲಿಸುತ್ತೇನೆ. ನನ್ನಷ್ಟಕ್ಕೆ ನಾನು ವಿಧಿಬಿಂದು ಎತ್ತಿದ್ದು ವಿಧಿಬಾಹಿರವೇ ಎಂಬುದನ್ನು ಖಾತರಿ ಮಾಡಿಕೊಳ್ಳುತ್ತೇನೆ.

**ಮಾನ್ಯ ಅಧ್ಯಕ್ಷರು :** ಇವೆಲ್ಲ ಸಂಗತಿಗಳನ್ನು ಸ್ಪಷ್ಟವಾಗಿ ವಾದ ಮಾಡಲು ಆಗುವುದಿಲ್ಲ,

ಆ ವಿಷಯದ ಮೇಲೆ ನಾವು ಭಿನ್ನಾಭಿಪ್ರಾಯ ಹೊಂದಿದ್ದರೆ, ಆ ವಿಷಯದ ಚರ್ಚೆಗೆ ಅವಕಾಶವನ್ನು ಕೊಡಿರಿ. ಹೀಗೆ ತಾಂತ್ರಿಕತೆಗಳ ವಿಷಯದ ಬಗೆಗೆ ವೇಳೆಯನ್ನು ಹರಣ ಮಾಡುವುದಕ್ಕಿಂತ ಜನರು ಕೋಡಿಗೆ ವಿರುದ್ಧವಾಗಿದ್ದರೆ ಆಗ ಇದು ವಿಷಯಕ್ಕೆ ಸಂಬಂಧಪಟ್ಟಿದ್ದು ಆಗುತ್ತದೆ.

ಆದರೆ ಅವರು ಅದು ಬೇಕೆಂದು ಅಂದರೆ ಆಗ ಸಹ ಅದು ಸಂಗತಿಯಾಗುತ್ತದೆ. ಆದರೆ ನಾವು ಸದನದ ವೇಳೆಯನ್ನು ತಾಂತ್ರಿಕತೆಗಾಗಿ ಹರಣಮಾಡುವುದು ಬೇಡ.

ನಂತರ ಕಾಣಿಸಿದ ವಿಧಿಬಿಂದುವೆಂದರೆ ಪರೀಶೀಲನಾ ಸಮಿತಿಗೆ ಒಪ್ಪಿಸಿದ್ದ ಸಂಗತಿಗಳ ಬಗ್ಗೆ, ಆದರೆ ಪರಿಶೀಲನಾ ಸಮಿತಿಯು ಮಸೂದೆಯನ್ನು ವಿಚಾರಿಸಿತು. ಆದುದರಿಂದ ಆ ವರದಿಯು ಬೇರೊಂದು ವಿಷಯದ ಬಗೆಗೆ ಇದೆ. ಅದುವೇ ವಿಧಿಬಿಂದು. ಸ್ವಲ್ಪದರಲ್ಲಿ ಹೇಳಬೇಕೆಂದರೆ, ಆ ವಿಷಯದ ಮೇಲೆ ವಾದ ನಡೆಯಿತು. ಸನ್ಮಾನ್ಯ ಸದಸ್ಯರಾದ ಪಂಡಿತ ಭಾರ್ಗವ ಅವರು ಸಭೆಯನ್ನು ಉದ್ದೇಶಿಸಿ ಸಂಗತಿ ಬಗ್ಗೆ ಹೇಳುವರು ಇಲ್ಲವೆ ಮಾತನಾಡುವರು, ಆದರೆ ವಿಷಯಗಳು ಬೇರೆಯಾಗಿರುತ್ತದೆ. ಆ ವಿಷಯವು – ನಾನು ಭಾವಿಸಿದಂತೆ ಬಹಳಷ್ಟು ವಿಷಯಗಳನ್ನು ಒಳಗೊಂಡಿದೆ. ಆದ್ದರಿಂದ ಶ್ರೀ ನಝೀರುದ್ದೀನ ಅಹ್ಮದ್ ಅವರು ಹೇಳಿದರು, ಉಳಿದ ಸಂಗತಿಗಳ ಬಗೆಗೆ ಇವರು ನನ್ನ ಗಮನವನ್ನು ಸೆಳೆಯುವರೆ?

**ಜಸಪತರಾಯ್ ಕಪೂರ್:** ನಾನು ವಿನಂತಿಪೂರ್ವಕವಾಗಿ ತಮ್ಮಲ್ಲಿ ವಿಜ್ಞಾಪಿಸಿಕೊಳ್ಳುತ್ತೇನೆ. ಮಾನ್ಯರೆ, ನಾನು ನನ್ನ ವಿಷಯವನ್ನು ಹೇಳಲು ಪರವಾನಗಿ ಕೊಡಿರಿ. ನಿಮ್ಮ ಮುಂದೆ ಇರುವ ಅನುಕ್ರಮ ಸಂಖ್ಯೆಯಲ್ಲಿ ಈಗಿನ ಸದ್ಯದ ಈ ವಿಷಯವನ್ನು ಇದೇ ಅಧಿವೇಶನದಲ್ಲಿ ಚರ್ಚಿಸುವುದು ಯೋಗ್ಯವಾದುದೇ ಅಥವಾ ವಿಧಿಬಿಂದುವಿನ ಮೂಲಕ ನನ್ನ ಗೆಳೆಯರಾದ ಶ್ರೀ ನಝೀರುದ್ದೀನ್ ಎತ್ತಿದ ವಿಷಯವನ್ನು ಚರ್ಚಿಸೋಣವೆ? ಯಾಕೆಂದರೆ ನನ್ನ ವಿಧಿಬಿಂದುವನ್ನು ಸ್ವೀಕರಿಸಿದರೆ, ಇದು ಎಲ್ಲ ಚರ್ಚೆಯನ್ನು ಈಗಿನ ಅಧಿವೇಶನದಲ್ಲಿ ಇಲ್ಲದಂತೆ ಮಾಡುತ್ತದೆ.

**ಮಾನ್ಯ ಅಧ್ಯಕ್ಷರು :** ನನಗೆ ಅನಿಸಿದಂತೆ ನಾನು ಹಂತಹಂತವಾಗಿ ಹೋಗುತ್ತೇನೆ. ಮೊದಲನೆಯ ವಿಷಯ ಅನುಕ್ರಮವಾಗಿರುವುದನ್ನು ತೆಗೆದುಕೊಳ್ಳೋಣ.

ಮೊದಲನೆಯ ವಿಧಿಬಿಂದು ಮಸೂದೆಯ ಪರವಾಗಿ ಹೋಗುತ್ತದೆಂದು ತಿಳಿಯೋಣ. ಆ ಮೇಲೆ ಎರಡನೆಯ ವಿಧಿಬಿಂದು ಯಾವುದನ್ನು ಸನ್ಮಾನ್ಯ ಸದಸ್ಯರು ಎತ್ತಿರುವರೋ ಸಂಸತ್ತು ಇದನ್ನು ವಿಚಾರಿಸಲು ಅರ್ಹತೆಯುಳ್ಳದ್ದಾಗಿದೆ. ಆದ್ದರಿಂದ ಅವರು ಅದನ್ನು ಆಮೇಲೆ ಎತ್ತಬಹುದು.

**ಶ್ರೀ ಜಸಪತ್ ರಾಯ್ ಕಪೂರ :** ನನ್ನ ವಿನಂತಿ ಏನೆಂದರೆ ವಿಧಿಬಿಂದು ಶ್ರೀ ನಿಝಾಮುದ್ದೀನ್ ಅಹ್ಮದ್ ಅವರು ಎತ್ತಿದ್ದು ಅದನ್ನು ಸಂಸತ್ತು ವಿಚಾರಿಸಬೇಕಾಗುತ್ತದೆ.

**ಮಾನ್ಯ ಅಧ್ಯಕ್ಷರು :** ನಾನು ಇದಕ್ಕೆ ಒಪ್ಪುವುದಿಲ್ಲ, ನಾನು ಮೊದಲು ಆ ವಿಷಯವನ್ನು ತೆಗೆದುಕೊಳ್ಳುತ್ತೇನೆ. ಇದು ಸನ್ಮಾನ್ಯ ಅಧ್ಯಕ್ಷರ ವಿವೇಚನೆಗೆ ಬಿಟ್ಟ ವಿಷಯ, ಪರಿಶೀಲನಾ ಸಮಿತಿಯು ಈ ಮಸೂದೆಯನ್ನು ವಿಚಾರಿಸಿತೋ ನಾವು ಯಾವ ಮಸೂದೆಯನ್ನು ಒಪ್ಪಿಸಿದೆವೊ ಆ ಮಸೂದೆಯನ್ನು ಅದು ವಿಚಾರಿಸಿತೋ ಇಲ್ಲವೆ ಬೇರೆ ಏನನೋ ವಿಚಾರಿಸಿತೋ? ಆದ್ದರಿಂದ ಅದರ ವರದಿಯನ್ನು ಸ್ವೀಕರಿಸಬೇಕೆ? ಇಲ್ಲವೆ ಅದನ್ನು ತಿರಸ್ಕರಿಸಬೇಕೆ? ಇಲ್ಲವೆ ಅದನ್ನು ಗಣನೆಗೆ ತೆಗೆದುಕೊಳ್ಳುವುದು ಬೇಡವೇ ಎಂಬುದನ್ನು ನಿರ್ಧರಿಸಲಾಗಿದೆ. ಸನ್ಮಾನ್ಯ ಸದಸ್ಯರು ಯಾವುದೇ ವಿಷಯಗಳನ್ನು ಇಲ್ಲವೆ ಯಾವುದೇ ಕಾನೂನು ಇಲ್ಲವೆ ಯಾವುದೇ ಸಂಪ್ರದಾಯದ ಮತ್ತು ರೂಢಿ ಅನ್ವಯ ಈ ಸಂಸತ್ತು ವಿಷಯವನ್ನು ವಿಚಾರಣೆಗೆ ಈಗ

ತೆಗೆದುಕೊಳ್ಳಲು ಬರುವುದಿಲ್ಲ. ಅಂದರೆ ಈಗಿನ ಸದ್ಯದ ಮಸೂದೆ ಇವುಗಳನ್ನು ನನ್ನ ಗಮನಕ್ಕೆ ತರುವುದು ಸೂಕ್ತವಾದುದು, ಅದು ಉತ್ತಮ ಮಾರ್ಗವಾಗಿದೆ, ನಾವು ವೇಳೆಯನ್ನು ಉಳಿಸೋಣ.

**ಶ್ರೀ ಜಸಪತ್‌ರಾಯ ಕಪೂರ :** ಮಾನ್ಯರೆ, ನಾನು ಒಂದು ಶಬ್ದವನ್ನು ಹೇಳಲೆ?

**ಅಧ್ಯಕ್ಷರು :** ಇಲ್ಲ ಇಲ್ಲ.

**ಪಂಡಿತ ಠಾಕೂರದಾಸ ಭಾರ್ಗವ :** ಮಾನ್ಯರೆ, ನಾನು ಸದನದ ಮುಂದೆ ಕೆಲವು ಸಂಗತಿಗಳನ್ನು ಪ್ರಸ್ತಾಪಿಸಬಯಸುತ್ತೇನೆ. ಕೆಲವು ಕಾನೂನುಗಳು ಈ ಸಂಗತಿಗಳಿಗೆ ಅನ್ವಯಿಸುತ್ತದೆ. ಉದಾಹರಣೆಗಾಗಿ ಪರಿಶೀಲನಾ ಸಮಿತಿಯು ಮುಂದಿನ ವ್ಯವಹರಣೆಗಳನ್ನು ಈ ಸದನದ ಮುಂದೆ ತರುವುದು ನಿಯಮದ ದುರುಪಯೋಗ ಮಾಡಿಕೊಂಡಂತೆ ಆಗುತ್ತದೆ. ಈ ಸದನದ ನಿಯಮದ ವಿಶೇಷ ಸವಲತ್ತನ್ನು ಪರಿಶೀಲನಾ ಸಮಿತಿಯು ಉಲ್ಲಂಘಿಸಿದೆ. ಕಾನೂನು ವಿಭಾಗದ ಪ್ರಕ್ರಿಯೆಯನ್ನು ಉಲ್ಲಂಘಿಸಿದೆ. ಎರಡನೆಯದಾಗಿ ಇದು ನಿಜವಿದ್ದರೆ ಸಂಸತ್ತು ಅದಕ್ಕೆ ಒಪ್ಪಿಸಿದುದನ್ನು ಬಿಟ್ಟು ಬೇರೊಂದು ಮಸೂದೆಯನ್ನು ಪರಿಗಣಿಸಿದೆ. ಇಲ್ಲಿ ಉದ್ಭವಿಸುವ ಪ್ರಶ್ನೆಯೆಂದರೆ ಅದು ಕಾನೂನಿನ ಪ್ರಶ್ನೆಯಾಗಿದೆ, ಇಂತಹ ಪ್ರಕ್ರಿಯೆಯು ನ್ಯಾಯಸಮ್ಮತವಾದುದೆ? ಈ ಸದನವು ವರದಿಯನ್ನು ಈ ಮಸೂದೆಯ ವರದಿಯೆಂದು ಸ್ವೀಕರಿಸಬೇಕೆ? ಯಾವುದನ್ನು ಈ ಸಂಸತ್ತು ಪರಿಶೀಲನಾ ಸಮಿತಿಗೆ ಒಪ್ಪಿಸಿತ್ತು? ಇದು ಕಾನೂನುಬದ್ಧವಲ್ಲದ ದಸ್ತಾವೇಜು ಆಗಿದೆಯೇ? ಆದ್ದರಿಂದ ನಾನು ಎರಡು ರೀತಿಯ ಪ್ರಶ್ನೆಗಳಿಗೆ ಸೀಮಿತಗೊಳಿಸುವೆನು, ಇವರೆಡೂ ಒಂದಕ್ಕೊಂದು ಸಂಬಂಧಿಸಿದವುಗಳಾಗಿವೆ. ನಿಮ್ಮ ಪರವಾನಿಗೆಯೊಂದಿಗೆ ನಾನು ನಂತರ ಕೆಲವು ಸಂಗತಿ ಹೇಳುತ್ತೇನೆ. ಪರಂತು ನಿಮ್ಮ ಆದೇಶವು ಏನೆಂದರೆ ಈ ಪ್ರಶ್ನೆಯು ಸಹ ಇದಕ್ಕೆ ಸುಸಂಬದ್ಧವಾಗಿದೆ. ನನ್ನ ವಿನಮ್ರ ಅಭಿಪ್ರಾಯದಲ್ಲಿ ಈ ಪ್ರಶ್ನೆಯು ಸಹ ಇದಕ್ಕೆ ಸುಸಂಬದ್ಧವಾಗಿದೆ. ನನ್ನ ವಿನಮ್ರ ಅಭಿಪ್ರಾಯದಲ್ಲಿ ಈ ಪ್ರಶ್ನೆಯನ್ನು ಎರಡು ಭಾಗಗಳನ್ನಾಗಿ ಮಾಡಿ, ಒಂದನೆಯದು ಸದನಕ್ಕೆ ಒಪ್ಪಿಸಿದ ವರದಿಯು ಪ್ರಕ್ರಿಯೆಯ ದೃಷ್ಟಿಯಿಂದ ಉತ್ತಮ ವರದಿಯೆ? ಎರಡನೆಯದಾಗಿ ಆ ವರದಿಯು ಮಸೂದೆಯ ವ್ಯಾಪ್ತಿಯನ್ನು ಬಿಟ್ಟುಹೋಗಿದೆಯೆ? ಮೋದಲನೆಯ ಪ್ರಶ್ನೆಯನ್ನು ಕುರಿತು ನಾನು ಸದನಕ್ಕೆ ವಿವರಿಸುವೆನು. ನಂತರ ಎರಡನೆಯ ಪ್ರಶ್ನೆಗೆ ಬರುವೆನು.

ಮೊಟ್ಟಮೊದಲು ನಿಮ್ಮ ಪರವಾನಿಗೆಯೊಂದಿಗೆ ನಾನು ಈ ಸದನಕ್ಕೆ ಮೊದಲನೆಯ ಪ್ರಶ್ನೆಯನ್ನು ಕುರಿತು ಸಂಬೋಧಿಸುತ್ತೇನೆ. ಕೆಲವು ಸಂಗತಿಗಳನ್ನು ಈ ಸದನದ ಮುಂದೆ ಇಡುವ ಪೂರ್ವದಲ್ಲಿ ನನ್ನ ವಿನಮ್ರ ವಿನಂತಿಯೇನೆಂದರೆ ನಮಗೆ ದೊರೆತ ಪರಿಶೀಲನಾ ಸಮಿತಿಯ ವರದಿಯಲ್ಲಿ ಮತ್ತು ನಮಗೆ ಹಂಚಿದ ಪೇಪರುಗಳಿಂದ ಅವು ನಮಗೆ ಗ್ರಂಥಾಲಯದಲಿ ದೊರೆಯುತ್ತವೆ. ಮಸೂದೆಯನ್ನು ಪರೀಶೀಲನಾ ಸಮಿತಿಗೆ ಒಪ್ಪಿಸಿದ ನಂತರ ಕಾನೂನು ವಿಭಾಗವು ಅದೇ ಆಗ ಆ ಮಸೂದೆಯ ಬದಲು ಮತ್ತೊಂದು ಮಸೂದೆಯನ್ನು ಬದಲಾಗಿ ಸೇರಿಸಿತು, ಈ ಮಸೂದೆಯನ್ನು ಪರೀಶೀಲನಾ ಸಮಿತಿಯು ವಿಚಾರಿಸಿತು, ಎಂಬ ನಿರ್ಣಯಕ್ಕೆ ನಾನು ಬಂದಿದ್ದೇನೆ, ಈ ಸಂಗತಿಗಳು ಸಂಪೂರ್ಣವಾಗಿ ಸತ್ಯವೆಂದು ನನಗೆ ಗೊತ್ತಿಲ್ಲ, ಆದರೆ ನಾನು ಪರಿಶೀಲನಾ ಸಮಿತಿಯ ಸದಸ್ಯರನ್ನು ವಿಚಾರಿಸಿದೆನು, ಅವರು ಅದರ ಬಗೆಗೆ ನನಗೆ ತಿಳಿಸಿದರು. ನಿಜವಾಗಿ ಅದೇ ಕಾಲಕ್ಕೆ ಪರಿಶೀಲನಾ ಸಮಿತಿಯು ಸಹ ತನ್ನ ವರದಿಯನ್ನು ಕಳುಹಿಸಿದಂತೆ ಕಂಡುಬರುತ್ತದೆ. ನಾನು ಆ ವರದಿಯನ್ನು ಓದಿದ್ದೇನೆ. ಎಲ್ಲ ಎತ್ತಿದ ವಿಷಯಗಳು ನನ್ನ ಮನಸ್ಸಿನಲ್ಲಿ ಕಟೆಯುತ್ತಿವೆ. ಎಲ್ಲ ಮಾನ್ಯ ಸದಸ್ಯರಿಗೆ ಅವರ ಅಭಿಪ್ರಾಯಗಳನ್ನು ಮಂಡಿಸಲು ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡಲಾಗುವುದು.

**ಮಾನ್ಯ ಅಧ್ಯಕ್ಷರು :** ನನ್ನ ಆತಂಕವೆಂದರೆ ಮಾನ್ಯ ಗೌರವಾನ್ವಿತ ಸದಸ್ಯರು ಗೌರವಾನ್ವಿತ ಸದಸ್ಯರಾದ ನಝೀರುದ್ದೀನ್ ಅಹ್ಮದ್ ಹೇಳಿದ್ದನ್ನು ಪುನರುಕ್ತಿಸುತ್ತಿದ್ದಾರೆ. ನಾನು ಈಗಾಗಲೆ ಎತ್ತಿರುವ ವಿಧಿಬಿಂದುವನ್ನು ಗಮನದಲ್ಲಿರಿಸಿಕೊಂಡು ವರದಿಯನ್ನು ಪರಿಗಣಿಸಿದ್ದೇನೆ. ನಝೀರುದ್ದೀನ್ ಅಹ್ಮದ್ ಭಾಷಣದಲ್ಲಿ ಉಲ್ಲೇಖಿಸದೇ ಇರುವ ಅಂಶಗಳನ್ನು ಮಂಡಿಸಲು ಸನ್ಮಾನ್ಯ ಸದಸ್ಯರಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದೇನೆ. ಆದರೆ ಪುನರಪಿ ಅದೇ ವಿಷಯಗಳನ್ನು ಪುನರುಕ್ತಿಸಬಾರದೆಂದು ನನ್ನ ಅನಿಸಿಕೆ.

**ಪಂಡಿತ್ ಠಾಕೂರದಾಸ ಭಾರ್ಗವ :** ನಾನು ಹೇಳಿದ್ದನ್ನೇ ಪುನಃ ಹೇಳುವುದಿಲ್ಲ ಈ ಸಂಗತಿಗಳು ನಿಜವಿರಬಹುದೇ ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಒಂದು ವೇಳೆ ಮತ್ತೊಬ್ಬ ಸನ್ಮಾನ್ಯ ಸದಸ್ಯರು ಅಂತಿಮವಾಗಿ ಎದ್ದು ನಿಂತು, ಈ ಸಂಗತಿಗಳು ತಪ್ಪು ಇವೆಯೆಂದು ಹೇಳಿದರೆ ಆಗ ಆ ಸಂಪೂರ್ಣ ವಾದವಿವಾದವು ಬಿದ್ದುಹೋಗುತ್ತದೆ. ಆದ್ದರಿಂದ ನಿಮ್ಮ ಮುಂದು ನಾನು ಹೇಗೆ ಆ ತೀರ್ಮಾನಕ್ಕೆ ಬಂದೆನೆಂದು ಹೇಳುತ್ತೇನೆ. ಆ ಸಂಗತಿಗಳು ಸರಿಯಾಗಿ ಇರುತ್ತವೆ. ನೀವು ಅವು ಸರಿಯಾಗಿವೆಯೆಂದು ಗ್ರಹಿಸಿದರೆ ಆಗ ನಾನು ಸದನಕ್ಕೆ ಹಾಗೂ ತಮಗೆ ತೊಂದರೆ ಕೊಡುವುದಿಲ್ಲ. ನಾನು ವಿನಂತಿಪೂರ್ವಕವಾಗಿ ಹೇಳುವುದೇನೆಂದರೆ ನಿಜವಾಗಿ ಪರಿಶೀಲನಾ ಸಮಿತಿಯ ವರಿದಿಯ ಮೇಲೆ ಕಂಡು ಬರುವುದೇನೆಂದರೆ, ಆ ಬದಲಿ ಮಾಡಿದ ಮಸೂದೆಯನ್ನು ಮಾತ್ರ ವಿಚಾರಿಸಿದರು – ಯಾಕೆಂದರೆ ಸಮಿತಿಯ ಬಹುಜನ ಸದಸ್ಯರು ವರದಿ ಮತ್ತು ಅದರಂತೆ ಭಿನ್ನಾಭಿಪ್ರಾಯದ ವರದಿಯ ಮೇಲಿಂದ ಬೇರೊಂದು ಮಸೂದೆಯನ್ನು ವಿಚಾರಿಸಿಲ್ಲ. ಸಮಿತಿಗೆ ಒಪ್ಪಿಸಿದ ಮಸೂದೆಯನ್ನು ವಿಚಾರಿಸಲೇ ಇಲ್ಲ.

ಈಗ ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ ಅವರು ದಯವಿಟ್ಟು ನಮ್ಮ ಮುಂದೆ ಅವೆರಡರ ಸಮಾಂತರ ಹೇಳಿಕೆಗಳನ್ನು ಕೊಟ್ಟಿದ್ದಾರೆ. ತಾವು ದಯವಿಟ್ಟು ಈ ಕೋಷ್ಟಕಗಳನ್ನು ನೋಡಿದರೆ ಅಲ್ಲಿ ಎರಡು ಭಾಗಗಳಿರುವುದು ಕಂಡುಬರುತ್ತದೆ. ಇದರಿಂದ ಮೂಲ ಮಸೂದೆಯು ಭಿನ್ನವಾಗಿದೆಂದು ಕಂಡುಬರುತ್ತದೆ. ಅವರು ಮತ್ತೊಂದು ಕೋಷ್ಟಕ ಕೊಟ್ಟಿದ್ದಾರೆ. ಅಲ್ಲಿ ಮಸೂದೆಯ ಹಾಗೂ ಸಮಿತಿಯ ವರದಿ ಇವುಗಳಲ್ಲಿಯ ಅಂತರವನ್ನು ತೋರಿಸುತ್ತದೆ. ಅದು ಸಹ ಕೇವಲ ಪುನಃ ರಚಿಸಿದ ಮಸೂದೆಯನ್ನು ಮಾತ್ರ ವಿಚಾರಿಸಿದ್ದಾರೆ. ಆದರೆ ಮೂಲ ಮಸೂದೆಯನ್ನಲ್ಲ, ಏನೇ ಆದರೂ ಅದು ಸರಿಯಾದುದೆಂದು ಭಾವಿಸಿದರೆ ಇದನ್ನು ಸ್ವೀಕರಿಸಿದರೆ ಕೇವಲ ಪುನಃ ಬರೆದ ಮಸೂದೆಯನ್ನು ಅವರು ವಿಚಾರಿಸಿದ್ದರೆ ಆಗ ನಿಮ್ಮ ಮುಂದೆ ಬರುವ ಪ್ರಶ್ನೆಯೆಂದರೆ ಆ ಪುನಃ ಬರೆದ ಮಸೂದೆಯನ್ನು ಆ ಪರಿಶೀಲನೆ ವಿಚಾರ ಮಾಡಬಹುದೆ? ಇಲ್ಲವೆ ಅವರ ಈ ಕೃತಿಯು ಸಂಸತ್ತಿನ ವಿಶೇಷ ಸವಲತ್ತಿಗೆ ತಿಲಾಂಜಲಿ ಇಟ್ಟಂತೆ ಆಗುತ್ತದೆ. ಆ ಸಮಿತಿಗೆ ಈ ಸದನವು ಕೊಟ್ಟ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಂತೆ ಆಗುತ್ತದೆ. ಮಾನ್ಯರೇ, ಈಗ ನಾನು ಅವರಿಗೆ ಯಾವುದೇ ತಪ್ಪು ಉದ್ದೇಶವಿರಲಿಲ್ಲವೆಂದು ನಾನು ಹೇಳುವುದಿಲ್ಲ. ಇಂತಹ ಕ್ರಮವು ಉದ್ದೇಶಪೂರ್ವಕವಾದುದು, ಇಲ್ಲವೆ ಉದ್ದೇಶರಹಿತವಾದುದು ಇರಬೇಕು. ಅವನ್ನು ಸದುದ್ದೇಶದಿಂದ ಇಲ್ಲ ದುರುದ್ದೇಶದಿಂದ ಮಾಡಿದ್ದು ಇರಬಹುದು. ನನಗೆ ಇದು ಸಂಬಂಧ ಇಲ್ಲ. ನಾನು ಒಂದು ಮೂಲ ವಿಷಯಕ್ಕೆ ಸಂಬಂಧಿಸಿದ್ದೇನೆ. ಅದೇ ನಂತರ ಮೂಲ ಮಸೂದೆಯು ಯಾವುದನ್ನು ಈ ಸದನವು ಪರಿಶೀಲನಾ ಸಮಿತಿಗೆ ಒಪ್ಪಿಸಿವೆಯೋ ಅದನ್ನು ಈ ಪರಿಶೀಲನಾ ಸಮಿತಿಯು ವಿಚಾರಿಸಲೇ ಇಲ್ಲ.

**ಸನ್ಮಾನ್ಯ ಕೆ. ಸಂತಾನಂ** (ರೇಲ್ವೆ ಹಾಗೂ ಸಾರಿಗೆ ಇಲಾಖೆಯ ರಾಜ್ಯ ಮಂತ್ರಿ) ಒಂದು ವಿಷಯ. ಮೇಲಣ ಆದೇಶದ ಅನ್ವಯ ಈ ಸದನವು ಈ ರೀತಿಯಾಗಿ ಪರಿಶೀಲನಾ ಸಮಿತಿಯ ಬಗೆಗೆ ಮಾಡಿದ್ದನ್ನು

ಚರ್ಚಿಸಬಹುದೇ? ಇಂತಹ ಪ್ರಸಂಗದಲ್ಲಿ ಅದಕ್ಕೆ ಪರೀಶೀಲನಾ ಸಭೆಯಲ್ಲಿ ಅಕ್ಷರಶಃ ನಡೆದುದನ್ನು ವರದಿಯಲ್ಲಿ ಕಾಣಿಸಬೇಕು. ನಾವು ವರದಿಯನ್ನು ಸ್ವೀಕರಿಸಬಹುದು ಇಲ್ಲವೆ ತಿರಸ್ಕಾರ ಮಾಡಬಹುದು ಇಲ್ಲವೆ ಏನನ್ನಾದರೂ ಆ ವರದಿಯಿಂದ ಮಾಡಬಹುದು, ಅದರಲ್ಲಿ ಪರಿಶೀಲನಾ ಸಮಿತಿ ಆ ವಿಷಯವನ್ನು ಹೇಗೆ ನಿರ್ವಹಿಸಿತು ಎಂಬುದು ಈಗ ಸುಸಂಬದ್ಧವಲ್ಲ. ಈ ಸಂಸತ್ತಿನ ವ್ಯವಹರಣೆಯೂ ಅಲ್ಲ, ಇಲ್ಲವೆ ಅದರಲ್ಲಿ ಒಳಹೋಗುವುದಿಲ್ಲ. ಇಲ್ಲವಾದರೆ ಮುಂದಿನ ಪ್ರತಿಯೊಂದು ಪರಿಶೀಲನಾ ಸಮಿತಿಯು ತನ್ನ ಸಭೆಯಲ್ಲಿಯ ಅಕ್ಷರಶಃ ವರದಿಯನ್ನು ಈ ಸಂಸತ್ತಿಗೆ ಒಪ್ಪಿಸಬೇಕಾಗುತ್ತದೆ. ಆಗ ನಮಗೆ ಅದರ ಔಚಿತ್ಯವು ಗೊತ್ತಾಗುತ್ತದೆ.

**ಮಾನ್ಯ ಅಧ್ಯಕ್ಷರು:** ಅನೇಕ ವಿಧಿಬಿಂದುಗಳನ್ನು ಎತ್ತಿದ್ದಾರೆ ಮತ್ತು ಅವುಗಳನ್ನು ವಿಶಾಲವಾಗಿ ಹೇಳಿದ್ದಾರೆ. ಈಗಿನ ವಿಷಯಕ್ಕೆ ಸಂಬಂಧಿಸಿ ಈ ಸಂಸತ್ತು ಒಪ್ಪಿಸಿದ ಮಸೂದೆಯನ್ನು ಪರಿಶೀಲನಾ ಸಮಿತಿಯು ಪರಿಗಣಿಸಲೇ ಇಲ್ಲ. ಈಗ ನಾವು ಆ ಪರಿಶೀಲನಾ ಸಮಿತಿಯು ನಾವು ಒಪ್ಪಿಸಿದ ಮಸೂದೆಯನ್ನು ಪರಿಗಣಿಸಿತೋ ಅಥವಾ ಇಲ್ಲವೋ, ಹಾಗಿದ್ದಲ್ಲಿ ಪರೀಶೀಲನಾ ಸಮಿತಿಯ ವ್ಯವಹರಣೆಗಳಲ್ಲಿ ನಾವು ಕೈಹಾಕುವುದು ಎಷ್ಟರಮಟ್ಟಿಗೆ ವಿಹಿತ. ಇದಕ್ಕೆ ಸದ್ಯದ ವಿರೋಧವೆಂದರೆ ಈ ಸಂಸತ್ತು ಇಲ್ಲವೆ ನಾನು ಸತ್ಯ ಸಂಗತಿಯನ್ನು ಕಂಡುಹಿಡಿಯುವ ನ್ಯಾಯಾಲಯವಲ್ಲ. ಆದರೆ ನಾವು ಗಣನೆಗೆ ತೆಗೆದುಕೊಳ್ಳುತ್ತೇವೆ. ನಾವು ಗಣನೆಗೆ ತೆಗೆದುಕೊಳ್ಳಲು ಹಕ್ಕುಳ್ಳವರಾಗಿದ್ದೇವೆ.

ಪರಿಶೀಲನಾ ಸಮಿತಿಯು ತಾನೇ ತನ್ನ ವರದಿಯಲ್ಲಿ ಹೇಳಿದೆ. ಆದ್ದರಿಂದ ಆ ವಿಷಯವು ಹೆಚ್ಚು ಕಡಿಮೆ ಊಹೆಯಾಗಿದೆ. ಈ ಊಹೆಯಿಂದ ನಾನು ಕೆಲವು ನಿರ್ಣಯಕ್ಕೆ ಬರುತ್ತೇನೆ. ಆ ಸಮಿತಿಯು ಪ್ರತಿಯೊಬ್ಬ ಸದಸ್ಯನ ಸಾಕ್ಷಿಯನ್ನು ಮಾತ್ರ ತೆಗೆದುಕೊಳ್ಳದೆ ಹೆಚ್ಚಿನ ಸಾಕ್ಷಿಯನ್ನು ಸಹ ತೆಗೆದುಕೊಂಡಿದೆ. ನಾನು ನನ್ನ ಗೆಳೆಯರಾದ ಶ್ರೀ ಭಾರ್ಗವ ಅವರಿಗೆ ಎತ್ತಿ ತೋರಿಸುವುದೇನೆಂದರೆ ಇದೆಲ್ಲವು ಇದ್ದಾಗ್ಯೂ ಅವರು ತಮ್ಮ ವಾದವನ್ನು ಮುಂದುವರೆಯಿಸಲಿಲ್ಲ. ಇದನ್ನು ನೀವು ಸದನದ ವಿಶೇಷ ಸವಲತ್ತಿನ ಉಲ್ಲಂಘನೆ ಇಲ್ಲವೆ ಪ್ರಕ್ರಿಯೆಯ ದುರುಪಯೋಗವಾಗುವುದು. ವಾದವು ಸ್ವಲ್ಪದರಲ್ಲಿ ಪರಿಶೀಲನಾ ಸಮಿತಿಯು ಬದಲಿ ಮಸೂದೆಯನ್ನು ಪರಿಗಣಿಸಿತು. ಅದು ಈ ಸಂಸತ್ತು ಒಪ್ಪಿಸಿದ ಮೂಲ ಮಸೂದೆಯನ್ನು ಪರಿಗಣಿಸಲಿಲ್ಲ. ಈ ನಿರ್ಣಯವನ್ನು ಆ ಪರಿಶೀಲನಾ ಸಮಿತಿಯ ಷರಾ ಹಾಗೂ ಅವಲೋಕನ ಅದನ್ನು ಆ ಸಮಿತಿಯ ವರದಿಯಲ್ಲಿ ಮಾಡಿದ್ದು ಇದೆ. ಬಹುಮತದ ಅದರಂತೆ ಅಲ್ಪಮತದ ಅಭಿಪ್ರಾಯಗಳನ್ನು ಕಾಣಿಸಲಾಗಿದೆ. ಅದರಿಂದ ಊಹಿಸುವುದೇನೆಂದರೆ, ಈ ದಾಖಲೆಗಳಿಂದ ಮೂಲ ಮಸೂದೆಯನ್ನು ಪರಿಗಣಿಸಲೇ ಇಲ್ಲ. ಸ್ವಲ್ಪದರಲ್ಲಿ ಸದನದ ವಿಶೇಷ ಸವಲತ್ತಿನ ಉಲ್ಲಂಘನೆ ಇಲ್ಲವೆ ಪ್ರಕ್ರಿಯೆಗಳಲ್ಲಿ ದುರುಪಯೋಗ, ಅವರು ಊಹಿಸಿದಂತೆ ಈ ನಿರ್ಣಯಕ್ಕೆ ಬಂದರೆ, ಆ ಪರಿಶೀಲನಾ ಸಮಿತಿಯು ಅವರು ಊಹಿಸಿದಂತೆ ಮಾಡಿರದಿದ್ದರೆ, ಆಗ ಸಂಸತ್ತಿನ ವಿಶೇಷ ಸವಲತ್ತಿನ ಉಲ್ಲಂಘನೆಯೂ ಆಗುವುದಿಲ್ಲ ಹಾಗೂ ಪ್ರಕ್ರಿಯೆಯ ದುರುಪಯೋಗವು ಆಗುವುದಿಲ್ಲ. ನಾನು ಸನ್ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ. ನಾನೂ ಪ್ರತಿಯೊಂದು ವಿಷಯವನ್ನು ಸೂಕ್ಷ್ಮವಾಗಿ ಓದಿದ್ದೇನೆ. ಸನ್ಮಾನ್ಯ ಸದಸ್ಯರು ಆ ವರದಿಯಲ್ಲಿಯ ಪ್ರತಿಯೊಬ್ಬ ಸದಸ್ಯನು ಓದಬೇಕಾದುದುನ್ನು ಓದಿದ್ದೇನೆ. ಬಹುತೇಕ ಹೆಚ್ಚಿನದನ್ನು ಓದಿದ್ದೇನೆ. ಅದರ ಬಗೆಗೆ ನನ್ನದೇ ಆದ ನಿರ್ಣಯಗಳಿವೆ.

ನಾನು ಈ ಪೂರ್ಣವಿಷಯವನ್ನು ಸ್ವಲ್ಪದರಲ್ಲಿ ಆ ಮಸೂದೆ ಬಗೆಗೆ ನನಗೆ ಅನಿಸಿದುದನ್ನು ಹೇಳುತ್ತೇನೆ ಮತ್ತು ಅದಕ್ಕೆ ನಿರ್ಣಯ ಕೊಡುತ್ತೇನೆ. ಸದನದಲ್ಲಿನ ವೇಳೆಯನ್ನು ಹರಣಮಾಡಲು ಇಚ್ಛಿಸುವುದಿಲ್ಲ.

ಈ ವಿಷಯದಲ್ಲಿ ಇದು ನನ್ನ ಅಭಿಪ್ರಾಯವಾಗಿದೆ.

(ಕೆಲವು ಸನ್ಮಾನ್ಯ ಸದಸ್ಯರು ಇದು ಹೀಗೆ ಇದೆ) "ಏನೇ ಆಗಲಿ ಈ ಮಸೂದೆಯನ್ನು ಇಂದು ಪೂರ್ತಿಗೊಳಿಸುವುದಿಲ್ಲ. ನಾವು ಅದರ ನೆಲಗಟ್ಟುಗಳನ್ನು ಸ್ಪಷ್ಟಮಾಡೋಣ ಮತ್ತು ಹೆಚ್ಚಿನ ವಾದ ವಿವಾದಕ್ಕೆ ಇಳಿಯದೆ ನಾನು ಬಹುತೇಕ....."

**ಪಂಡಿತ ಠಾಕೂರದಾಸ ಭಾರ್ಗವ :** ತಾವು ಇದೀಗ ಹೇಳಿದ್ದನ್ನು ಕೇಳಿ, ನಡೆದ ಸಂಗತಿಯ ಮೊದಲಿಂದ ನಾನು ಮುಂದೆ ಹೆಚ್ಚಿನ ವಾದ ಮಾಡಲು ಬಯಸುವುದಿಲ್ಲ ಆದರೆ ನಾನು ಕೆಲವು ನಿರ್ಣಯಗಳನ್ನು ತಮ್ಮ ಮುಂದೆ ಇಡಬಯಸುತ್ತೇನೆ. ನನ್ನ ಕಡೆಗೆ ಇರುವ ಕೆಲವು ನಿರ್ಣಯಗಳು ಈ ಪರಿಶೀಲನಾ ಸಮಿತಿಯವರಿಂದ ಬಂದ ಮಸೂದೆಯು ಸಂಪೂರ್ಣವಾಗಿ ಅನವಶ್ಯಕವಿತ್ತು, ಗೈರ ಕಾನೂನು ಮತ್ತು ಈ ಪರೀಶೀಲನಾ ಸಮಿತಿಯ ವರದಿಯನ್ನು ಸಂಪೂರ್ಣ ಕಾನೂನುಬಾಹಿರವೆಂದು ಹೇಳುತ್ತೇನೆ ಮತ್ತು ಈ ಸಂಸತ್ತಿನ ಮುಂದೆ ಯಾವುದೇ ವರದಿಯು ಇರುವುದಿಲ್ಲ. ನನ್ನ ಬಳಿ ಇರುವ ನಿರ್ಣಯಗಳು ಈ ಎಲ್ಲ ಸಂಗತಿಗಳನ್ನು ತೋರಿಸಿಕೊಡುತ್ತವೆ, ನಾನು ಇದನ್ನು ಅಷ್ಟೇ ಹೇಳುತ್ತೇನೆ. ತಾವು ಪರವಾನಗಿ ಕೊಟ್ಟಲ್ಲಿ ಕೆಲವು ನಿರ್ಣಯಗಳನ್ನು ತಮ್ಮ ಮುಂದೆ ಇಡಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಈ ಪ್ರಕರಣದಲ್ಲಿ ಈ ನಿರ್ಣಯಗಳು ಕೆಲವು ಸಂಗತಿಗಳ ಮೇಲಿಂದ ಹೋಗುತ್ತವೆ. ನಿಜವಾಗಿ ಈ ಪರೀಶೀಲನಾ ಸಮಿತಿಯವರು ಮೂಲ ಮಸೂದೆಯನ್ನು ಗಣನೆಗೆ ತೆಗೆದುಕೊಂಡಿಲ್ಲವೆಂಬ ಆಪಾದನೆಯು ಇರುತ್ತದೆ. ಒಂದು ವೇಳೆ ಅದು ಸಿದ್ಧವಾದರೆ, ನಮಗೆ ಈ ವಿಷಯಗಳನ್ನು ವಿಚಾರಿಸಲು ಸಾಕಷ್ಟು ವೇಳೆಯನ್ನು ತೆಗೆದುಕೊಳ್ಳೋಣ.

**ಪಂಡಿತ ಠಾಕೂರದಾಸ ಭಾರ್ಗವ :** ಈ ಸಂಗತಿಯನ್ನು ಯಾರೂ ಅಲ್ಲಗಳೆಯುತ್ತಿಲ್ಲ.

**ಮಾನ್ಯ ಅಧ್ಯಕ್ಷರು :** ಅದೇ ಒಂದು ವಿಷಯ. ಈಗ ಸನ್ಮಾನ್ಯ ಸದಸ್ಯರು ನಾನು ನಿರ್ಣಯಕೊಟ್ಟಾಗ ಎಲ್ಲಾ ಕಾಗದ ಪತ್ರಗಳನ್ನು ನೋಡಿ, ನಾನು ತಯಾರಿಸಿದ ನಿರ್ಣಯಗಳನ್ನು ನಾನು ಅವರಿಗೆ ಕೊಟ್ಟನಂತರ ಮಾನ್ಯ ಸದಸ್ಯರಿಗೆ ತಿಳಿಯವುದೇನೆಂದರೆ ನಾನು ಹೇಳಿದ್ದಕ್ಕಿಂತ ಹೆಚ್ಚಿನ ಸಂಗತಿಯನ್ನು ಯಾವುದೇ ಸದಸ್ಯರು ಎತ್ತಿದರೆ, ಅವುಗಳನ್ನು ಸ್ವೀಕರಿಸಿದರೆ, ಅಂತಹ ವಿಧಿಬಿಂದುಗಳನ್ನು ವಿಚಾರಿಸಬಹುದು.

**ಶ್ರೀ ಎಮ್. ತಿರುಮಲರಾವ್** (ಮದ್ರಾಸ, ಸಾಮಾನ್ಯ) ನಿಮ್ಮ ನಿರ್ಣಯವನ್ನು ಕೊಡುವ ಪೂರ್ವದಲ್ಲಿ ಸತ್ಯವನ್ನು ತಿಳಿಯಲು ಊಹೆಯನ್ನು ಹೊರತುಪಡಿಸಿ, ಬೇರೆ ಮಾರ್ಗವಿಲ್ಲವೆ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** (ಕಾನೂನು ಸಚಿವರು) ತಮ್ಮ ಪರವಾನಗಿಯೊಂದಿಗೆ ಒಂದು ನಿಮಿಷ ನನ್ನ ಗೆಳೆಯರು ಕೊಟ್ಟ ಅಭಿಪ್ರಾಯವನ್ನು ಸರಿಪಡಿಸಲು ನಾನು ಮಧ್ಯ ಪ್ರವೇಶಿಸಬಹುದೆ? ಯಾಕೆಂದರೆ ನನ್ನ ಗೆಳೆಯರಾದ ಭಾರ್ಗವ ಅವರು ಈ ಸಂಸತ್ತಿನಲ್ಲಿ ಮೂಲ ಮಸೂದೆಯು ಈ ಸಂಗತಿಯಿಂದ ಪರಿಶೀಲನಾ ಸಮಿತಿಗೆ ಹೋಗಿಯೇ ಇಲ್ಲ ಎಂಬ ಅಭಿಪ್ರಾಯವನ್ನು ಈ ಸಂಸತ್ತಿಗೆ ಕೊಟ್ಟಿದ್ದಾರೆ. ನನ್ನ ಅನಿಸಿಕೆಯಂತೆ ಇದು ತಪ್ಪುದಾರಿಗೆ ಎಳೆಯುವಂತಹದು ಆಗಿದೆ. ನನ್ನ ಸನ್ಮಿತ್ರರು ಉಲ್ಲೇಖಿಸಿ..........

**ಮಾನ್ಯ ಅಧ್ಯಕ್ಷರು :** ನಾನೇ ಸ್ವತಃ ವಿವರವಾಗಿ ಅದರ ಎಲ್ಲ ಸ್ಥಿತಿಯನ್ನು ಅಭ್ಯಾಸ ಮಾಡಿದ್ದೇನೆ, ನಾನು ನಿರ್ಣಯವನ್ನು ಓದಿ, ಅದನ್ನು ಸ್ಪಷ್ಟಪಡಿಸುತ್ತೇನೆ.

**ಪಂಡಿತ ಮುಕುಟ ಬಿಹಾರಿಲಾಲ ಭಾರ್ಗವ** (ಅಜಮೀರ, ಮೇರವಾರ) ನನ್ನಲ್ಲಿ ಹೆಚ್ಚಿನ ಸಂಗತಿಗಳಿವೆ.

**ಮಾನ್ಯ ಅಧ್ಯಕ್ಷರು :** ಶಾಂತರಾಗಿರಿ, ಶಾಂತರಾಗಿರಿ.

**ಪಂಡಿತ ಮುಕುಟ ಬಿಹಾರಿಲಾಲ ಭಾರ್ಗವ:** ಮಾನ್ಯ ಅಧ್ಯಕ್ಷರ ಗಮನಕ್ಕೆ ಬಾರದ ಒಂದು ಸಂಗತಿ ಇರುತ್ತದೆ. ನಾನು ಕಾನೂನು ವಿಭಾಗಕ್ಕೆ ಒಂದು ಪತ್ರ ಬರೆದು ಪುನಃ ತಯಾರಿಸಿದ ಮಸೂದೆಯ ಪ್ರಿಂಟು ಆಗಿದ್ದು ಇದೆಯೋ ಇಲ್ಲವೋ ಎಂಬುದನ್ನು ಹುಡುಕಲು ಕೇಳಿದ್ದೆನು. ನನಗೆ ದೊರೆತ ಮಾಹಿತಿ ಪ್ರಕಾರ ಕೆಲವೇ ಪ್ರತಿಗಳನ್ನು ಪ್ರಿಂಟು ಮಾಡಿದ್ದರು. ಅವು ಗ್ರಂಥಾಲಯದಲ್ಲಿ ಲಭ್ಯವಿರುವುದಾಗಿ ನನಗೆ ಉತ್ತರ ಕೊಟ್ಟಿದ್ದರು. ನಾನು ಮಸೂದೆಗೆ ಸಂಬಂಧಿಸಿದಂತೆ ಮತ್ತು ಇದು ಪುನಃ ತಯಾರಿಸಿದ ಮಸೂದೆಯಲ್ಲಿ ಜುಲೈ ೧೯೪೮ರಲ್ಲಿ ಮೊದಲು ಪರಿಶೀಲನಾ ಸಮಿತಿಯವರು ಸಭೆ ಕೂಡುವ ಪೂರ್ವದಲ್ಲಿ ಪುನಃ ತಯಾರಿಸಿದ ಮಸೂದೆಯು ಪ್ರಿಂಟಾಗಿತ್ತು ಅನ್ನುವುದು ಸತ್ಯವಿದೆ. ಆ ಮಸೂದೆಯು ಪ್ರಿಂಟಾಗಿತ್ತು ಅನ್ನುವುದು ಸತ್ಯವಿದೆ. ಆ ಮಸೂದೆಯನ್ನು ಖಂಡದಿಂದ ಖಂಡಕ್ಕೆ ಪರಿಶೀಲನಾ ಸಮಿತಿಯವರು ಚರ್ಚಿಸಿದರು. ಅದುವೆ ಪರಿಶೀಲನಾ ಸಮಿತಿ ವರದಿಯೊಂದಿಗೆ ಹೊರಬಂದ ಮಸೂದೆಯಾಗಿದೆ. ಆ ವರದಿಯಲ್ಲಿ ಇದನ್ನು ಕಾಣಿಸಿದ್ದಾರೆ. ಆದ್ದರಿಂದ ಗೌರವ ಪೂರ್ವಕವಾದ ನನ್ನ ವಿನಂತಿ ಏನೆಂದರೆ ಪುನಃ ಬರೆದ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಪರಿಶೀಲನಾ ಸಮಿತಿಯವರಿಗೆ ಪರಿಗಣನೆಗೆ ಕಳುಹಿಸಿದ ಆ ಪರಿಶೀಲನಾ ಸಮಿತಿಯವರು ಅದಕ್ಕೆ ತಮ್ಮ ಗಮನವನ್ನು ವಿನಿಯೋಗಿಸಿರುವರೆ? ಇಲ್ಲವೆ ಬೇರೆ ಪುನಃ ತಯಾರಿಸಿದ ಮಸೂದೆ ಅಂಬೇಡ್ಕರ ಅವರ ಸಹಿಯೊಂದಿಗೆ ಉಂಟಾದುದು, ಮೂಲ ಮಸೂದೆಯ ಪರಿಶೀಲನೆಯ ನಂತರ ಪ್ರಿಂಟು ಆದದ್ದು ಮತ್ತು ಅದು ಸಂಪೂರ್ಣವಾಗಿ ಬೇರೆ ನಮೂನೆಯಲ್ಲಿ ಇದ್ದುದು, ಇವೆಲ್ಲವುಗಳನ್ನು ತಿಳಿದುಕೊಳ್ಳಲು ಈ ಪುನಃ ತಯಾರಿಸಿದ ಮಸೂದೆಯನ್ನು ಚರ್ಚಿಸಬೇಕೆಂದು ನಾನು ಗೌರವಪೂರ್ವಕ ಕೇಳಿಕೊಳ್ಳುತ್ತೇನೆ. ಇದು ಬಹಳ ಮಹತ್ವದ ಮತ್ತು ಹೆಚ್ಚಿನ ವಿಷಯವಾಗಿದ್ದು ಇದನ್ನು ತಾವು ತಮ್ಮ ನಿರ್ಣಯಕೊಡುವ ಪೂರ್ವದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಪಂಡಿತ ಠಾಕೂರದಾಸ ಭಾರ್ಗವ** : ನನ್ನ ಹತ್ತಿರ ಮಸೂದೆಯ ಒಂದು ಪ್ರತಿಯು ಇದೆ. ಮಾನ್ಯ ಅಧ್ಯಕ್ಷರು ಸನ್ಮಾನ್ಯ ಸದಸ್ಯರಿಗೆ ಗೊತ್ತಿಲ್ಲದ ಕೆಲವು ಸಂಗತಿಗಳು ನನ್ನಲ್ಲಿ ಇವೆ. ವಿಧಿಬಿಂದು ಏನೆಂದರೆ ಸನ್ಮಾನ್ಯ ಕಾನೂನು ಮಂತ್ರಿಗಳೂ ಕರಡು ಹಿಂದೂ ಸಂಹಿತೆ ಸೂಚನೆಯು ಪರಿಶೀಲನಾ ಸಮಿತಿಯ ವರಿದಿಯನ್ನು ವಿಚಾರಿಸುವುದು ಅಪೂರ್ಣವಾಗಿದೆ. ಈ ವಿಷಯವನ್ನು ಸನ್ಮಾನ್ಯರಾದ ಶ್ರೀ ನಝಿರುದ್ದೀನ್ ಅವರು ಎತ್ತಿದರು. ಅದಕ್ಕೆ ಇನ್ನು ಕೆಲವು ಸದಸ್ಯರು ದಿನಾಂಕ ೩೧ನೆಯ ಆಗಸ್ಟ್ ೧೯೪೮ರಂದು ಬೆಂಬಲಕೊಟ್ಟರು. ಅದು ಬಹು ಸಂಕುಚಿತ ಸಂಗತಿಗಳ ಮೇರೆಯಲ್ಲಿ ಬೆಂಬಲಿಸಿದರು. ಎತ್ತಿದ ಕ್ರಿಯಾ ಲೋಪನೆಯು ಒಂದು ಸರಪಳಿಯ ಕೊಂಡಿಯಂತೆ ಇದ್ದ ಕೆಳಕಾಣಿಸಿದ ಕಾರಣಗಳ ನಮೂನೆಯಲ್ಲಿ ಸಾದರಪಡಿಸಿದರು. ಪರಿಶೀಲನಾ ಸಮಿತಿಯು ಪರಿಗಣನೆಗೆ ಒಂದು "ಬದಲಿ'ಯನ್ನು ಮೂಲ ಮಸೂದೆಯ ಜಾಗದಲ್ಲಿ ಒಂದು ಪುನರಾವರ್ತಿತ ಮಸೂದೆಯನ್ನು ಕೊಡಲಾಯಿತು, ಆದ್ದರಿಂದ ಪರಿಶೀಲನಾ ಸಮಿತಿಯು ಸಂಸತ್ತು ಒಪ್ಪಿಸಿದ ಮಸೂದೆಯನ್ನು ಪರಿಗಣಿಸಲಿಲ್ಲ. ಆದರೆ ಒಂದು 'ಹೊಸ ದಸ್ತಾವೇಜು' ಮತ್ತು ಈಗಿನ ಮತ್ತು ಪರಿಶೀಲನಾ ಸಮಿತಿಯ ವರದಿಯು ದಸ್ತಾವೇಜಿನ ಮೇಲೆ ಮಾಡಿದ್ದು ಇದೆ. ಆದ್ದರಿಂದ ಮೂಲ ಮಸೂದೆಯ ಮೇಲೆ ಪರಿಶೀಲನಾ ಸಮಿತಿಯ ವರದಿಯು ಇರುವುದಿಲ್ಲ. ಸನ್ಮಾನ್ಯ ಕಾನೂನು ಮಂತ್ರಿಗಳ ಸೂಚನೆಯು ಪರಿಶೀಲನಾ ಸಮಿತಿಯವರಿಂದ ಬಂದ ಮಸೂದೆಯನ್ನು ಪರಿಗಣಿಸುವುದು ಯೋಗ್ಯವಾದುದು ಆಗಿರುವುದಿಲ್ಲ. ಇದುವೆ ವಿಧಿಬಿಂದುವಿಗೆ ಉತ್ತರ, (ಶ್ರೀ ಮಹಾವೀರ ತ್ಯಾಗಿ; ಇದುವೆ ನಿಮ್ಮ) ತೀರ್ಪು. ನಾನು ಹೇಳಬೇಕಾದುದನ್ನು ಸರಿಯಾಗಿ ಹೇಳಿದ್ದೇನೆಂದು ಭಾವಿಸುವೆನು.

(ಯಾವ ಸದಸ್ಯರೂ ಶ್ರೀ ನಝೀರುದ್ದೀನ್ ಅಹಮ್ಮದ್, ಪಂಡಿತ ಠಾಕೂರದಾಸ ಭಾರ್ಗವ ಮತ್ತು

ಸರ್ಜಿತ) ಬಿಸ್ವನಾಥ ದಾಸ ಈ ಯಾವ ಸದಸ್ಯರು ಎತ್ತಿದ ವಿಧಿಬಿಂದುವಿನ ಆ ವಿಷಯಕ್ಕೆ ತಮ್ಮ ಬೆಂಬಲ ಸೂಚಿಸಲು ಅವರು ಪರಿಶೀಲನೆಯ ಸಮಿತಿಯ ಸದಸ್ಯರಾಗಿದ್ದರು. ಆದ್ದರಿಂದ ಸ್ವಾಭಾವಿಕವಾಗಿ ಅವರಿಗೆ ಯಾವ ಜ್ಞಾನವೂ ಇರಲಿಲ್ಲ ಮತ್ತು ವೈಯಕ್ತಿಕವಾಗಿ ಪರಿಶೀಲನೆ ಸಮಿತಿಯಲ್ಲಿ ಯಾವ ನಿರ್ಣಯ ತೆಗೆದುಕೊಂಡರು ಎಂಬುದರ ಬಗೆಗೆ ಏನೂ ಗೊತ್ತಿರಲಿಲ್ಲ. ಆದ್ದರಿಂದ ಅವರು ಪರಿಶೀಲನಾ ಸಮಿತಿಯ ವರದಿಯಲ್ಲಿ ಕೆಲವು ಸಾಕ್ಷಿಗಳ ಹೇಳಿಕೆಯ ಮೇಲೆ ಅವಲಂಬಿಸಿದರು. ಮತ್ತು ಅದರಿಂದ ಅದು ಮೂಲ ಮಸೂದೆಯೆಂದು ಊಹಿಸಿದರು. ಪರಿಶೀಲನಾ ಸಮಿತಿಯು ಉಲ್ಲೇಖಿಸಿದಂತೆ ಅವು ಯಾವವನ್ನೂ ಗಣನೆಗೆ ತೆಗೆದುಕೊಂಡಿರುವುದಿಲ್ಲ.

ಹೀಗೆ ಎತ್ತಿದ ಪ್ರಶ್ನೆಯು ಕೇವಲ ಸಂಗತಿಗಳ ಮೇಲೆ ಅವಲಂಬಿಸಿದ್ದು, ಅದೆಂದರೆ ಪರಿಶೀಲನಾ ಸಮಿತಿಗೆ ಒಪ್ಪಿಸಿದ ಮಸೂದೆ ಅದರಲ್ಲಿಯ ಅನೇಕ ಮಹತ್ವದ ಉಪಬಂಧಗಳು, ಅವು ನಮೂನೆ ಇಲ್ಲವೆ ಕ್ರಮಾಂಕದಲ್ಲಿ ಅವುಗಳನ್ನು ಇಡಲಾಗಿದ್ದನ್ನು ಪರಿಶೀಲನಾ ಸಮಿತಿಯು ವಿಚಾರಿಸಿದರೋ ಅಥವಾ ಇಲ್ಲವೋ, ಆ ಪರಿಶೀಲನಾ ಸಮಿತಿಯು ಈ ಮಸೂದೆಯ ಉಪಬಂಧಗಳಿಗೆ ತಮ್ಮ ಮನಸ್ಸನ್ನು ಹಾಕಿದರೋ ಇಲ್ಲವೋ, ಪರಿಶೀಲನಾ ಸಮಿತಿಗೆ ಒಪ್ಪಿಸಿದ ಮಸೂದೆಯ ಮೇಲೆ ನಿರ್ಣಯಿಸಲು ಇಲ್ಲವೆ ಅದರಲ್ಲಿ ಸುಧಾರಣೆ ಮಾಡುವ ಹಕ್ಕು ಅವರಿಗೆ ಇದೆಯೋ ಇಲ್ಲವೋ ಇದರ ಬಗ್ಗೆ ಆಕ್ಷೇಪ ಇರುವುದಿಲ್ಲ. ಪರಂತು ಹೆಚ್ಚಿಗೆ ಕೂಡಿಸಿದವುಗಳನ್ನು ಹಾಗೂ ತೆಗೆದು ಹಾಕಿದವುಗಳನ್ನು ಹಾಗೂ ಸುಧಾರಣೆ ಇತ್ಯಾದಿ ಪರಿಶೀಲನಾ ಸಮಿತಿಯು ಸೂಚಿಸಿದ್ದು ಸದರಿ ಮಸೂದೆಯ ವ್ಯಾಪ್ತಿಯಲ್ಲಿ ಒಳಗೊಂಡಿದೆಯೋ ಇಲ್ಲವೋ. ಆದ್ದರಿಂದ ನಾನು ಈ ವಿಷಯದೊಳಗೆ ಹೋಗುವುದು ಅವಶ್ಯವಿಲ್ಲ. ಯಾಕೆಂದರೆ ಪರಿಶೀಲನಾ ಸಮಿತಿಯು ತನ್ನ ಅಧಿಕಾರವ್ಯಾಪ್ತಿಯ ಹೊರಗೆ ಹೋಗಿದೆ ಎಂಬುದರ ಬಗೆಗೆ ಯಾರೂ ಪ್ರಶ್ನೆಯನ್ನು ನನ್ನ ಮುಂದೆ ಎತ್ತಿರುವುದಿಲ್ಲ. ಆದ್ದರಿಂದ ಈಗ ನಾನು ಲಿಖಿತ ಮತ್ತು ಲೌಖಿಕ ಸಾಕ್ಷಿಗಳನ್ನು ಪರೀಕ್ಷಿಸುತ್ತೇನೆ.

ಸಂಗತಿಯ ಮೇಲಿನ ಹೇಳಿಕೆಯನ್ನು ಸದಸ್ಯರು ತಾವು ಎತ್ತಿದ ಪ್ರಶ್ನೆಗೆ ರೂಪಿಸಿದಂತೆ ನಾನು ಹೇಳುವುದೇನೆಂದರೆ ಈ ಮಸೂದೆಯನ್ನು ರೂಪಿಸಿ, ಅದನ್ನು ಮಂಡಿಸಲಾಯಿತು. ಈ ಬಗ್ಗೆ ಕೇಂದ್ರ ಸರಕಾರವು ಸಾರ್ವಜನಿಕ ತಕರಾರು ಮತ್ತು ಕಾರಣಗಳನ್ನು ಕೇಳಿ ದಿನಾಂಕ ೨೦–೧–೧೯೪೪ರಲ್ಲಿ ಠರಾವು ಪಾಸುಮಾಡಿ, ಒಂದು ಕಾನೂನು ಸಮಿತಿಯನ್ನು ಹಿಂದೂ ಕಾನೂನನ್ನು ರೂಪಿಸುವ ಉದ್ದೇಶದಿಂದ ರಚಿಸಿದ್ದು, ಅದನ್ನು ಸಾಧ್ಯವಾದಷ್ಟು ಬೇಗನೆ ಮುಗಿಸಬೇಕು ಎಂದಿದ್ದಿತು. ಇದನ್ನು ಸಾರ್ವಜನಿಕ ಅಭಿಪ್ರಾಯದ ಮೇರೆಗೆ ಹಿಂದೂ ಕಾನೂನನ್ನು ಕ್ರೋಡೀಕರಿಸುವುದು ಮತ್ತು ಎಲ್ಲರಿಗೂ ಏಕ ರೀತಿಯ ಕಾನೂನು ಇರಬೇಕೆಂದೂ ಅವು ಹಿಂದೂ ಕಾನೂನಿನ ಬೇರೆ ಬೇರೆ ವಿಷಯಗಳಿದ್ದರೂ ಎಲ್ಲ ಪ್ರಾಂತಗಳು ಮತ್ತು ಹಿಂದೂ ಧರ್ಮವಿಲ್ಲದ ವಿಭಾಗ, ಜಾತಿ, ಉಪಜಾತಿಯವರಿಗೆ ಅನ್ವಯಿಸುವಂತೆ ಮಾಡಲು ಉದ್ದೇಶಿಸಿದರು. ಈಗ ಇರುವ ಹಿಂದೂ ಧರ್ಮ ಪರಿಸ್ಥಿತಿ ಹಾಗೂ ಒಲವುಗಳ ಮೇಲಿಂದ ಈ ಕಾನೂನನ್ನು ತಿದ್ದುಪಡಿ ಮಾಡುವುದು ಅವಶ್ಯವಿದೆ. ಯಾಕೆಂದರೆ ಹಿಂದೂ ಸಮಾಜವು ವೇಗದಿಂದ ಹೊರಟು ಹೊಸ ಪದ್ಧತಿಯನ್ನು ಸ್ವೀಕರಿಸಲು ಸಿದ್ಧವಾಗಿದೆ. ಈ ಸೂಚನೆಯನ್ನು ದಿನಾಂಕ ೯–೪–೧೯೪೮ರಂದು ಪರಿಶೀಲನಾ ಸಮಿತಿಗೆ ಒಪ್ಪಿಸಿದಾಗ ಮಾನ್ಯ ಸದಸ್ಯರಿಗೆ ವಿಷಯದ ತಮ್ಮ ಅಭಿಪ್ರಾಯ ಮತ್ತು ನಮೂನೆಯ ಬಗೆಗೆ ಮತ್ತು ಮಸೂದೆಯನ್ನು ತಯಾರಿಸುವುದು, ಹಿಂದೂ ಕಾನೂನು ಸಮಿತಿಯವರು ತಯಾರಿಸಿದ ಮಸೂದೆಯು ಅವರು ನಿರೀಕ್ಷಿಸಿದ ಮಟ್ಟಕ್ಕೆ ಬರಲಿಲ್ಲವೆಂದು ಅಭಿಪ್ರಾಯಪಟ್ಟು ಮಸೂದೆಯ ಕರಡನ್ನು ಪುನಃ ಪರಿಶೀಲನೆ ಮಾಡಲು ನಿರ್ಧರಿಸಿದರು. ಅದರಲ್ಲಿಯ ನ್ಯೂನತೆಗಳನ್ನು ತೆಗೆದುಹಾಕಲು ನಿರ್ಧರಿಸಿದರು ಮತ್ತು ಅದರಿಂದ

ಸಂಪೂರ್ಣ ಹಿಂದೂ ಕಾನೂನಿನ ದೃಷ್ಟಿ ಪ್ರತಿಯೊಬ್ಬರಿಗೂ ತಿಳಿಯುವ ಹಾಗೆ ಅದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ನಿರ್ಧರಿಸಿದರು. ಆದ್ದರಿಂದ ಅವರು ಅದರ ಭಾಗಗಳನ್ನು, ವಿಭಾಗಗಳನ್ನು ಅನುಕ್ರಮವಾಗಿ ಮೂಲಮಸೂದೆಯನ್ನು ಮತ್ತೊಮ್ಮೆ ತರ್ಕದ ಅನುಕ್ರಮಣಿಕೆಯಲ್ಲಿ ಪುನಃ ಹೊಂದಿಸುವ ಹೊಣೆಯನ್ನು ಹೊತ್ತರು ಮತ್ತು ತಮಗೆ ಯೋಗ್ಯವೆನಿಸಿದ ಸಲಹೆ ಸೂಚನೆಗಳನ್ನು ಪರಿಶೀಲನಾ ಸಮಿತಿಯ ವಿವೇಚನೆಗೆ ಸೂಚಿಸಿದರು. ಕಾನೂನು ಮಂತ್ರಾಲಯ ಒಂದು ಯೋಗ್ಯ ನಮೂನೆಯನ್ನು ಈ ಪರಿಶೀಲನಾ ಸಮಿತಿಯವರ ವಿವೇಚನೆಗೆ ಮುಂದಿಡಬಹುದಿತ್ತು. ಅದರಿಂದ ಅವರು ಅದರಲ್ಲಿ ತಾವು ಒಂದು ರೂಪವನ್ನು ಕೊಡುವಂತೆ ಇಲ್ಲವೆ ಅವರು ಕರಡು ಬರೆಯುವವರಿಗೆ ಬದಲಾವಣೆಯನ್ನು ನಿರ್ದೇಶಿಸಬಹುದಿತ್ತು. ಈ ಪರಿಷ್ಕೃತ ಕರಡು ಮಸೂದೆಯನ್ನು ಸದಸ್ಯರಿಗೆ ಹಂಚುವಾಗ ಕಾನೂನು ಮಂತ್ರಾಲಯದವರು ಪರಿಶೀಲನಾ ಸಮಿತಿ ಸದಸ್ಯರಿಗೆ ಪರಿಷ್ಕೃತ ಹಿಂದೂ ಕಾನೂನಿನ ಕಲಮಗಳನ್ನು ಹಿಂದೂ ಕಾನೂನು ಸಮಿತಿಯವರು ಮೂಲ ಮಸೂದೆಯಲ್ಲಿಯ ಅನುರೂಪದ ಕಲಂಗಳ ಸ್ಥಾನಗಳ ಉಲ್ಲೇಖದ ಸಲುವಾಗಿ ಪರಿವಿಡಿಯನ್ನು ಹಂಚಿದರು.

ಪರಿಶೀಲನಾ ಸಮಿತಿಯ ಸದಸ್ಯರ ಮುಂದೆ ಎಲ್ಲ ಕಾಲಕ್ಕೂ ಮತ್ತು ಎಲ್ಲ ಹಂತಗಳಲ್ಲಿ ಮೂಲ ಮಸೂದೆಯಲ್ಲಿಯ ಉಪಬಂಧಗಳು ಮೂಲ ಮಸೂದೆಯಲ್ಲಿ ಕಾಣಿಸಿದಂತೆ ಇದ್ದವು. ಕಾನೂನು ಮಂತ್ರಾಲಯ ಪರಿಷ್ಕೃತ ಮಸೂದೆಯಲ್ಲಿ ತಾವು ಬದಲಾವಣೆ ಮಾಡಬೇಕೆಂಬ ವಿಷಯವನ್ನು ಪರಿಶೀಲನಾ ಸಮಿತಿಯವರ ಗಮನಕ್ಕೆ ತಂದರು. ಇದರಿಂದ ಪ್ರತಿಯೊಂದು ಹಂತದ ಪರಿಶೀಲನಾ ಸಮಿತಿಯ ಮಸೂದೆಯ ಉಪಬಂಧಗಳ ಚರ್ಚೆಯಲ್ಲಿ ಅಂದರೆ ಪರಿಷ್ಕೃತ ಮತ್ತು ಮೂಲ ಇವೆರಡೂ ಅವರ ಮುಂದೆ ಇದ್ದವು ಮತ್ತು ಚರ್ಚೆಯು ಎರಡನ್ನೂ ಒಂದಕ್ಕೊಂದು ಅನುರೂಪವಾಗಿ ಮೂಲ ಉಪಬಂಧಗಳು ಮತ್ತು ಕಾನೂನು ಮಂತ್ರಾಲಯದವರು ಸೂಚಿಸಿದಂತೆ ಪರಿಷ್ಕೃತವಾದ ಪಠ್ಯದಲ್ಲಿ ಕಾಣಿಸಿದವುಗಳನ್ನು ಅವರ ಗಮನಕ್ಕೆ ತಂದು ಚರ್ಚಿಸಿದ್ದು ಸ್ಪಷ್ಟವಾಗಿರುತ್ತದೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಸಾಕ್ಷಿಗಳ ಪ್ರಶ್ನೆಗೆ ಬಂದರೆ–ಪರಿಶೀಲನಾ ಸಮಿತಿ ಸದಸ್ಯರು ವಿಧಿಬಿಂದುವಿನ ಮೇಲೆ ಮಾತನಾಡಿದವರೆಂದರೆ ಪಂಡಿತ ಬಾಳಕೃಷ್ಣ ಶರ್ಮಾ ಅವರು. ಸದನಕ್ಕೆ ಅವರು ಹೇಳಿದ್ದೇನೆಂದರೆ ಸಂಸತ್ತು ನಮಗೆ ಮಸೂದೆಯನ್ನು ಚರ್ಚಿಸಲು ಹೇಳಿದ್ದು ನಮ್ಮ ಮುಂದೆ ಯಾವತ್ತೂ ಬಿದ್ದಿತ್ತು. ದಾಖಲೆಯಲ್ಲಿರುವ ಸಾಕ್ಷಿಗಳು, ಮೂಲವರದಿಯಲ್ಲಿ ಮತ್ತು ಅದಕ್ಕೆ ಟಿಪ್ಪಣಿಗಳನ್ನೊಳಗೊಂಡ ಪುರಾವೆಗಳು ಈ ಹೇಳಿಕೆಯನ್ನು ಸಂಪೂರ್ಣವಾಗಿ ಸಮರ್ಥಿಸುತ್ತವೆ.

ಗೌರವಾನ್ವಿತ ಸದಸ್ಯರೇ : ಪರಿಶೀಲನಾ ಸಮಿತಿಯವರ ವರದಿಯನ್ನು ಅವಲಂಬಿಸಿ ವಿರೋಧವನ್ನು ಮಾಡಿದರೂ, ತಕರಾರು ಎತ್ತಿದವರು ಇಲ್ಲವೆ ಕೆಲವು ಕಾನೂನು ಖಂಡಗಳನ್ನು ಹಿಂತೆಗೆದುಕೊಳ್ಳಲು ವಿರೋಧ ವ್ಯಕ್ತಪಡಿಸಿದವರು ತಮ್ಮಷ್ಟಕ್ಕೆ ತಾವೆ ಹಿಂತೆಗೆದುಕೊಳ್ಳಬಯಸುತ್ತಾರೆ. ಇದನ್ನೆ ಮೂಲ ವರದಿಯಲ್ಲಿ ಹೇಳುತ್ತದೆ. ನಾವು ಕೆಳಗೆ ಸಹಿ ಮಾಡಿದವರು ಈ ಮಸೂದೆಯನ್ನು ವಿಚಾರಿಸಿ– ಆದರೆ ಪರಿಷ್ಕೃತ ಮಸೂದೆಯನ್ನೆಲ್ಲ ಈಗ ಗೌರವದಿಂದ ಒಪ್ಪಿಸುತ್ತೇನೆ. ಈ ರೀತಿ ಅವರ ವರದಿಯು ಪ್ರಾರಂಭವಾಗುತ್ತದೆ.

ಈಗ ಅವರು ಮಸೂದೆಯನ್ನು ಪರಿಗಣಿಸಿದ್ದೆವೆಂದು ಮತ್ತು ಪರಿಷ್ಕೃತ ಮಸೂದೆಯನ್ನು ಪರಿಶೀಲಿಸಿಲ್ಲವೆಂದು ಅನ್ನುತ್ತಾರೆ. ಇನ್ನೂ ಮುಂದೆ ಅವರು ಹೇಳುವುದೇನೆಂದರೆ, ಹಿಂದೂ ಕಾನೂನಿನ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದ್ದು ಕಾನೂನಿನ ಮಂತ್ರಿಯು ಈಗ ಪರಿಷ್ಕೃತ ಮಸೂದೆಯನ್ನು ಮಂಡಿಸಿದ್ದಾರೆ. ಇದು ನಮ್ಮ ದೃಷ್ಟಿಯಲ್ಲಿ ಅನೇಕ ರೀತಿಯಿಂದ ಸಮಾಧಾನಕರವಾಗಿದೆ. ಈ ಪರಿಷ್ಕೃತ ಮಸೂದೆಯಲ್ಲಿ ಯಾವುದೇ ಮಹತ್ವದ ಬದಲಾವಣೆಯನ್ನು ಈ ಪರಿಷ್ಕೃತ ಮಸೂದೆಯಲ್ಲಿ ಮಾಡಿಲ್ಲ.

ಸಾಮಾನ್ಯವಾಗಿ ಸಂಸತ್ತಿಗೆ ಒಪ್ಪಿಸುವ ಸಮೂನೆಯಲ್ಲಿ ಮಸೂದೆಯನ್ನು ಮಂಡಿಸಲಾಗಿದೆ. ಆದ್ದರಿಂದ ಪರಿಶೀಲನಾ ಸಮಿತಿಯವರು ಮೂಲ ಮಸೂದೆಗೆ ತಮ್ಮ ಮನಸ್ಸನ್ನು ಕೊಟ್ಟು ಒಂದು ನಿರ್ಣಯಕ್ಕೆ ಬಂದಿದ್ದಾರೆ. ಅದರಲ್ಲಿ ಪರಿಷ್ಕೃತದಲ್ಲಿ ಕೇವಲ ನಮೂನೆ ಮಾತ್ರ, ಆದರೆ ಮಹತ್ವದ ವಿಷಯಗಳಲ್ಲಿ ಅಲ್ಲ. ಅವರು ಯಾಕೆ ಈ ಮಸೂದೆಯನ್ನು ಪರಿಷ್ಕೃತ ಮಸೂದೆಯಲ್ಲಿ ಪರಿಗಣಿಸಿದ್ದಾರೆಂದರೆ ಮೂಲ ಮಸೂದೆಗಿಂತ ಪರಿಷ್ಕೃತ ಮಸೂದೆಯು ಚೆನ್ನಾಗಿತ್ತು ಮತ್ತು ಅವರು ಹೇಳುವುದೇನೆಂದರೆ ನಾವು ನಮ್ಮ ಚರ್ಚೆಯನ್ನು ಪರಿಷ್ಕೃತ ಮಸೂದೆಯನ್ವಯ ಮಾಡಲು ನಿರ್ಧರಿಸಿದೆವು.

**'ತದನಂತರ'** ಎಂಬ ಈ ಪದವು ಮಹತ್ವದ್ದು, ಮೂಲ ಮಸೂದೆಯ ಮಹತ್ವದ ಉಪಬಂಧಗಳನ್ನು ಪರಿಶೀಲಿಸಿ ಮತ್ತು ಪರಿಷ್ಕೃತ ಮಸೂದೆಯನ್ನು ಅವರು ಸ್ವಾಬಾವಿಕವಾಗಿ ಪರಿಷ್ಕರಿಸಿ ಮಸೂದೆಯು ಹೆಚ್ಚು ಯೋಗ್ಯವೆಂದು ತಿಳಿದರು. ಅದು ಮೂಲ ಮಸೂದೆಗಿಂತ ಯಾವುದೇ ರೀತಿ ಭಿನ್ನವಾಗಿರಲಿಲ್ಲ. ಆದರೆ ಅದು ಸುಧಾರಿಸಿದ ನಮೂನೆಯಲ್ಲಿತ್ತು. ಆ ಪರಿಶೀಲನಾ ಸಮಿತಿಯು ಇನ್ನೂ ಹೇಳುವುದೇನೆಂದರೆ ಉಲ್ಲೇಖಗಳನ್ನು ಪ್ರತಿಕಲಮಿನ ಮಾರ್ಜಿನ ಜಾಗದಲ್ಲಿ ಮೂಲ ಮಸೂದೆಯ ಅನುರೂಪದ ಕಲಂಗಳನ್ನೂ ಕೊಡಲಾಗಿದೆ.

ಇದೊಂದು ಪುಷ್ಠೀಕರಿಸುವ ಸಾಧನೆಯಾಗಿದೆ. ಅವರ ಚರ್ಚೆಯು ಪರಿಷ್ಕೃತ ಮಸೂದೆಗೆ ಸೀಮಿತವಾಗಿದ್ದರೂ ಅವರು ತಮ್ಮ ನಿರ್ಣಯಕ್ಕೆ ಮೂಲ ಮಸೂದೆಯ ಪ್ರತಿಯೊಂದು ಖಂಡವನ್ನು ಪರಿಗಣಿಸಿದ್ದಾರೆ. ಇದನ್ನು ತಮ್ಮ ಟಿಪ್ಪಣಿಯಲ್ಲಿ ಇನ್ನೂ ಹೆಚ್ಚು ಸ್ಪಷ್ಟಪಡಿಸಿದ್ದಾರೆ.

ಮಸೂದೆಯ ಬೇರೆ ಬೇರೆ ಭಾಗ ಹಾಗೂ ಖಂಡಗಳನ್ನು ಚರ್ಚಿಸುವಾಗ ಮೂಲ ಮಸೂದೆಯನ್ನು ಉಲ್ಲೇಖಿಸಿದ್ದು ಜಂಟೀ ಠರಾವು ಒಪ್ಪದಿರುವ ಬಗ್ಗೆ.

ಡಾ. ಬಕ್ಷಿ ಟೇಕಚಂದ ಮತ್ತು ಪಂಡಿತ ಬಾಲಕೃಷ್ಣ ಶರ್ಮಾರವರು ಹೇಳಿದ್ದೇನೆಂದರೆ ಒಂದು ಕಡೆ ಪಾಸು ಮಾಡುವುದರಿಂದ ಮೂಲ ಮಸೂದೆಯನ್ನು ಬಿಟ್ಟು ಪರಿಷ್ಕೃತ ಮಸೂದೆಯನ್ನು ಪರಿಶೀಲನಾ ಸಮಿತಿಯು ಪರಿಗಣನೆಗೆ ತೆಗೆದುಕೊಂಡಿತು. ಇದನ್ನು ಮೇಲೆ ಹೇಳಿದ ಮೇಲಿಂದ ಅರ್ಥೈಸಬೇಕು. ಯಾವ ವಿಷಯದಲ್ಲಿ ಅವರು ಪರಿಷ್ಕೃತ ಮಸೂದೆಯನ್ನು ಪರಿಗಣಿಸಿರುವರೋ ಅವರ ವಿಷಯದಲ್ಲಿ ಪರಿಷ್ಕೃತ ಮಸೂದೆಯಲ್ಲಿಯ ಬದಲಾವಣೆಗಳು, ಅವು ಕೇವಲ ನಮೂನೆಯಲ್ಲಿ ಮಾತ್ರ ಬದಲಾವಣೆಯಲ್ಲ. ಆದರೆ ಮಹತ್ವದ ವಿಷಯಗಳಿಗೆ ಸಂಬಂಧಿಸಿದ್ದು. ಅವರ ಸುದೀರ್ಘ ಹಾಗೂ ಸಭೆಯಲ್ಲಿಯ ಸೂಕ್ತ ಠರಾವುಗಳು ಅವರು ಮೂಲ ಮಸೂದೆಯನ್ನು ಗಣನೆಗೆ ತೆಗೆದುಕೊಂಡಿಲ್ಲ. ಪರಿಷ್ಕೃತ ಮಸೂದೆಯಲ್ಲಿ ಸೂಚಿಸಿದ ಬದಲಾವಣೆಗಳು ಯೋಗ್ಯವಿರಬಹುದು. ಇಲ್ಲದೆ ಇರಬಹುದು. ಅದನ್ನು ಅವರು ತಮ್ಮ ವಿರೋಧ ವ್ಯಕ್ತಪಡಿಸಿದ್ದರಲ್ಲಿ ಕಾಣಬಹುದು. ದಾಖಲೆಗಳ ಮೇಲಿಂದ ಕಂಡುಬರುವುದರಿಂದ ನನಗೆ ಅನಿಸಿದಂತೆ ಪರಿಶೀಲನಾ ಸಮಿತಿಯು ಸಂಪೂರ್ಣ ಹಾಗೂ ಕಾನೂನುಬದ್ಧವಾದ ಪರಿಶೀಲನೆಯನ್ನು ಮಹತ್ವದ ವಿಷಯಗಳ ಬಗ್ಗೆ ಅವರಿಗೆ ಒಪ್ಪಿಸಿದಂತೆ ಮಾಡಿದ್ದಾರೆ. ಈಗ ಸದ್ಯದ ಕಾನೂನು ಮಂತ್ರಿಗಳು ಹಾಗೆ ಮಾಡಲು ಯೋಗ್ಯ ಹಾಗೂ ಸೂಕ್ತವಾದವರು. ಸಂಗತಿಗಳ ಮೇಲೆ ಶ್ರೀ ಕಪೂರ ಅವರ ವಿಧಿಬಿಂದು ಏನು?

*ಈಗ ಐದು ಗಂಟೆ ಆದ ಕಾರಣ ಮಾನ್ಯ ಸದಸ್ಯರೊಬ್ಬರು ಚರ್ಚೆಯನ್ನು ಮುಂದಕ್ಕೆ ಹಾಕಬೇಕೆಂದರು.*

**ಮಾನ್ಯ ಅಧ್ಯಕ್ಷರು :** ಈಗ ಸದನವನ್ನು ಮುಂದೂಡಬಹುದು. ಸಂಸತ್ತು ದಿನಾಂಕ ೧೮–೨–೧೯೪೯ರ ಶುಕ್ರವಾರ ೧೦–೪೫ಕ್ಕೆ ಮುಂದೂಡಲಾಗಿದೆ. ಹಿಂದೂ ಕೋಡ್–ಮುಂದುವರಿದುದು

(೧೧–೪೫ ಮುಂಜಾನೆ).

**ಮಾನ್ಯ ಉಪಾಧ್ಯಕ್ಷರು :** ಈಗ ನಾವು ಹಿಂದೂ ಕೋಡಿನ ವಿಚಾರಣೆಯನ್ನು ಮುಂದುವರೆಸೋಣ.

**ಶ್ರೀ. ಜಸಪತರಾಯ್ ಕಪೂರ** (ಉ.ಪ್ರ. ಜನರಲ್) ನಾನು ಒಂದು ವಿಧಿಬಿಂಧು ಎತ್ತಬಹುದೇ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಎದ್ದು ನಿಂತರು

**ಮಾನ್ಯ ಉಪಾಧ್ಯಕ್ಷರು :** ಶ್ರಿ ಕಪೂರ ಅವರು ವಿಧಿಬಿಂದು ಎತ್ತಿರುವರು.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** (ಕಾನೂನು ಮಂತ್ರಿಗಳು)

ನಾನು ಈಗ ಅದನ್ನೇ ಹೇಳುವವನಿದ್ದೇನೆ, ಮಾನ್ಯರೆ, ಇಂದಿನ ವಿಷಯಪಟ್ಟಿಯಲ್ಲಿ ೧೬ ಬೇರೆ ಬೇರೆ ಸೂಚನೆಗಳು ಇರುತ್ತವೆ. ಕೆಲವು ವಿಧಿಬಿಂದುವನ್ನು ಎತ್ತುತ್ತೇವೆ. ಕೆಲವು ಮಹತ್ವದ ಸೂಚನೆಗಳು ಇರುತ್ತವೆ. ನಾನು ನನ್ನ ಸೂಚನೆಯು ಮೇಲೆ ಮಾತನಾಡುವ ಪೂರ್ವದಲ್ಲಿ ಆ ವಿಷಯಗಳ ಮೇಲೆ ಮಾತನಾಡಲು ಹೊರಟಿದ್ದೆನು. ಆದಾಗ್ಯೂ ನನ್ನ ಗೆಳೆಯರು ಏನಾದರೂ ಹೇಳುವುದಿದ್ದರೆ ಹೇಳಲಿ.

**ಮಾನ್ಯ ಉಪಾಧ್ಯಕ್ಷರು :** ಅವರ ವಿಧಿಬಿಂದುವನ್ನು ನಾವು ಕೇಳೋಣ.

**ಶ್ರೀ ಜಸಪತ್‌ರಾಯ ಕಪೂರ :** ಮಾನ್ಯರೆ ನಾನು ಈ ಹಿಂದೆ ಈ ಸೂಚನೆ ಮಂಡಿಸಿದಾಗ ನಾನು ಎದ್ದುನಿಂತು ವಿಧಿಬಿಂದು ಎತ್ತಿದ್ದೆನು. ಆಗ ಗೌರವಾನ್ವಿತ ಅಧ್ಯಕ್ಷರು ನನ್ನ ಗೆಳೆಯರಾದ ನಝಿರುದ್ದೀನ್ ಅಹ್ಮದ್ ಅವರು ಮುಕ್ತಾಯವಾಗುವವರೆಗೆ ನಾನು ತಡೆಯಬೇಕೆಂದು ನನಗೆ ನಿರ್ದೇಶಿಸಿದ್ದರು. ಆ ವಿಧಿಬಿಂದುವಿನ ಚರ್ಚೆ ಆ ದಿವಸವೇ ಸಂಜೆ ೫ ಗಂಟೆಗೆ ಮುಕ್ತಾಯವಾಗಿತ್ತು. ಆ ನಂತರ ಸಂಸತ್ತು ಒಂದು ದಿನದ ಮಟ್ಟಿಗೆ ಮುಂದೂಡಿತು. ಈಗ ತಾವು ನನಗೆ ಆ ವಿಧಿಬಿಂದು ಎತ್ತಲು ದಯವಿಟ್ಟು ಪರವಾನಗಿ ಕೊಡುವಿರೆಂದು ಆಶಿಸುತ್ತೇನೆ.

ಆದರೆ ಆ ರೀತಿ ಮಾಡುವ ಪೂರ್ವದಲ್ಲಿ ನಾನು ಸಂಸತ್ತಿಗೆ ಅದರ ಉದ್ದೇಶದ ಬಗ್ಗೆ ಆಶ್ವಾಸನೆಯನ್ನು ಕೊಡುತ್ತೇನೆ.

**ಸನ್ಮಾನ್ಯ ಉಪಾಧ್ಯಕ್ಷ :** ಸನ್ಮಾನ್ಯ ಸದಸ್ಯರು ತಮ್ಮ ವಿಧಿಬಿಂದುವನ್ನು ಹೇಳಲಿಲ್ಲ. ಅಲ್ಲಿ ಯಾವುದೇ ಕ್ರಮ ಇಲ್ಲವೆ ವಾದ ಬೇಡ. ನಾನು ವಿಧಿಬಿಂದುವನ್ನು ಕೇಳಲು ಇಚ್ಛಿಸುತ್ತೇನೆ.

**ಶ್ರೀ ಜಯಪಾಲ ಕಪೂರ್ :** ಮಸೂದೆಯನ್ನು ಮುಂದುವರೆಸಲು ನನ್ನ ಅನೇಕ ಸ್ನೇಹಿತರು ಅಸಹನೆಯಿಂದಿರುವರೆಂದು ನನಗೆ ತಿಳಿದಿದೆ. ಆದ್ದರಿಂದಲೇ ನಾನು ಈ ಮೊದಲೇ ಸದನಕ್ಕೆ ಈ ಮಸೂದೆಯನ್ನು ಹಾಳುಮಾಡುವ ಉದ್ದೇಶವಿಲ್ಲವೆಂದು ಏಕೆಂದರೆ ನನಗೆ ಅದರ ಅನೇಕ ಅಂಶಗಳನ್ನು ಕುರಿತು ಒಪ್ಪಿಗೆ ಇದೆಯೆಂದು ಆಶ್ವಾಸನೆ ನೀಡಿದ್ದೆ. ನನ್ನ ಅಪೇಕ್ಷೆ ಏನೆಂದರೆ ಕೈಗೊಳ್ಳುವ ಕ್ರಮ ಸಂವಿಧಾನಬದ್ಧವಾಗಿರಬೇಕು. ಸರಿಯಾದ ಕ್ರಮವನ್ನು ಸರಿಯಾದ ರೀತಿಯಲ್ಲಿ ಸರಿಯಾದ ಕಾಲದಲ್ಲಿ ಮಾಡಬೇಕು ನಿಮಗೆ ತಿಳಿಸಿರುವಂತೆ.

**ಶ್ರೀ ಜಸಪತ್‌ರಾಯ ಕಪೂರ :** ಮೊದಲು ನನ್ನ ವಿಧಿಬಿಂದು ಸಂಸತ್ತಿನ ಸದಸ್ಯರ ಹಕ್ಕು ಹಾಗೂ ವಿಶೇಷ ಹಕ್ಕುಗಳಿಗೆ ಸಂಬಂಧಿಸಿದ್ದು. ಎರಡನೆಯದಾಗಿ ಈಗ ಸಂಸತ್ತಿಗೆ ಈ ಅಧಿವೇಶನದಲ್ಲಿ ಇಂತಹ ಮಹತ್ವದ ವಿವಾದಾತ್ಮಕ ಕ್ರಮ ಹಿಂದೂ ಕೋಡಿನಂತಹುದನ್ನು ಚರ್ಚಿಸಲು ಅಧಿಕಾರವಿದೆಯೆ? ಯಾಕೆಂದರೆ ಬಹುತೇಕ ಸದಸ್ಯರು ಈ ಅಧಿವೇಶನದಲ್ಲಿ ಹಾಜರಿಲ್ಲ. ಅವರು ಹಾಜರಾಗಲು ಸಾಧ್ಯವಿಲ್ಲ. ಅದಕ್ಕೆ ವೈಯಕಿಕ ಕಾರಣವಲ್ಲ. ಇಲ್ಲವೆ ತಕ್ಷಣದ ಕಾರಣವೂ ಅಲ್ಲ. ಬಾಬು ರಾಮನಾರಾಯಣಸಿಂಗ ನಿಮಗೆ

ಗೌರವದೊಂದಿಗೆ –

**ಮಾನ್ಯ ಸದಸ್ಯರು –** ಇದು ವಿಧಿಬಿಂದುವೇ ಅಲ್ಲ.

**ಮಾನ್ಯ ಉಪಾಧ್ಯಕ್ಷರು :** ವಿಧಿಬಿಂದು ಹೌದೋ ಅಲ್ಲವೋ ಎಂಬುದನ್ನು ನಿರ್ಧರಿಸಲು ನಾನು ಇಲ್ಲಿದ್ದೇನೆ. ದಯವಿಟ್ಟು ನಾನು ಹೇಳುವುದು ಕೇಳಿ. ಅವರು ತಮ್ಮ ವಾಕ್ಯವನ್ನು ಕ್ಷೀಣಗೊಳಿಸುವರೆಂದು ನಿರೀಕ್ಷಿಸುತ್ತೇನೆ.

**ಬಾಬು ರಾಮನಾರಾಯಣಸಿಂಗ :** ಈ ಮೊದಲು ತಾವು ಕೊಟ್ಟ ನಿರ್ಣಯ............

**ಮಾನ್ಯ ಉಪಾಧ್ಯಕ್ಷ :** ನಾನು ಈ ಮೊದಲಿನ ಎಲ್ಲ ನಿರ್ಣಯಗಳನ್ನು ಗಣನೆಗೆ ತೆಗೆದುಕೊಂಡಿದ್ದೇನೆ. ಅವು ನನ್ನ ಬಳಿ ಇಲ್ಲಿ ಇರುತ್ತವೆ.

**ಶ್ರೀ ವಿ.ಎಸ್. ಸರ್ವತೆ –** (ಮಧ್ಯ ಭಾರತ) ನಾನು ಸಹ ಒಂದು ವಿಧಿಬಿಂದು ಎತ್ತಲು ಇಚ್ಛಿಸುತ್ತೇನೆ.

**ಮಾನ್ಯ ಉಪಾಧ್ಯಕ್ಷ :** ಇದು ವಿಧಿಬಿಂದುವೆ?

**ಶ್ರೀ ವಿ.ಎಸ್. ಸರ್ವತೆ :** ಹೌದು.

**ಉಪಾಧ್ಯಕ್ಷರು :** ಸನ್ಮಾನ್ಯ ಸದಸ್ಯರು ಸಂಕ್ಷಿಪ್ತವಾಗಿ ದಯವಿಟ್ಟು ವಿಧಿಬಿಂದುವನ್ನು ಹೇಳುವಿರಾ? ಅದು ಏನೆಂಬುದು ನನಗೆ ಗೊತ್ತಿದೆ. ಆದ್ದರಿಂದ ನಾನು ಈ ಮಸೂದೆಯಲ್ಲಿಯ ಅನೇಕ ಉಪಬಂಧಗಳನ್ನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ಅದನ್ನು ಹಾಳುಮಾಡುವ ಉದ್ದೇಶ ನನಗೆ ಇರಲಿಲ್ಲವೆಂಬುದನ್ನು ಮೊಟ್ಟ ಮೊದಲು ಸಂಸತ್ತಿಗೆ ಭರವಸೆ ಕೊಡಲು ಇಚ್ಛಿಸಿದ್ದೆನು. ನನ್ನ ಉದ್ದೇಶವೆಂದರೆ, ಸಂವಿಧಾನಬದ್ಧವಾಗಿ ಕೆಲಸ ನಡೆಯಬೇಕು. ಸರಿಯಾದ ಕೆಲಸ ಸರಿಯಾದ ವೇಳೆಗೆ ಆಗಬೇಕು. ಅದು ಸರಿಯಾದ ರೀತಿಯಲ್ಲಿ ನಡೆಯಬೇಕು. ಅದು ನಿಮ್ಮೆಲ್ಲರಿಗೂ ಗೊತ್ತಿದೆ.

**ಮಾನ್ಯ ಉಪಾಧ್ಯಕ್ಷರು :** ನಾನು ವಿಧಿಬಿಂದುವನ್ನು ಕೇಳಿದ್ದೇನೆ. ಸನ್ಮಾನ್ಯ ಸದಸ್ಯರು ಈ ಮಸೂದೆಯ ವಿಚಾರವನ್ನು ಮುಂದುವರೆಯಿಸಲು ಈ ಸಂಸತ್ತಿಗೆ ಅಧಿಕಾರ ಇಲ್ಲವೆಂಬ ಭಾವನೆಯನ್ನು ಹೊಂದಿದ್ದಾರೆ. ಇದು ಮೊದಲನೆಯದು.

ಎರಡನೆಯದು ಅದೇನೆಂದರೆ ಅವರ ಕೆಲಸ ಸದಸ್ಯರು ಹಾಜರಿಲ್ಲವೋ, ಅವರು ಹಾಜರಿರಬೇಕೆಂದು ಇಚ್ಛಿಸುತ್ತಾರೆಯೋ ಅವರು ಹಾಜರಿರುವುದಿಲ್ಲ. ಇವು ಯಾವೂ ಈ ಸೂಚನೆಯನ್ನು ಚರ್ಚಿಸಲು ವಿಧಿಬಿಂದು ಆಗಿರುವುದಿಲ್ಲ.

ಆದರೆ ರಾಜ್ಯಗಳು ಮತ್ತು ದೇಶದ ಯಾವತ್ತೂ ಸಂಪೂರ್ಣ ಹಿತದೃಷ್ಟಿಯಿಂದ ಈಗ ಸದ್ಯಕ್ಕೆ ಅವರೆಲ್ಲರೂ ಪ್ರಾಂತೀಯ ಆಯವ್ಯಯದ ಶಾಸನದ ಅಧಿವೇಶನದಲ್ಲಿ ನಿರತರಾಗಿದ್ದಾರೆ, ಅವರು ಹಾಜರಾಗಲು ಉತ್ಸುಕರಾಗಿದ್ದಾರೆ ಮತ್ತು ಸಂಸತ್ತಿಗೆ ಹಾಜರಾಗಲು ಕುತೂಹಲವುಳ್ಳವರಾಗಿದ್ದಾರೆ ಮತ್ತು ಈ ಸೂಚನೆಯ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಲು ಅಷ್ಟೆ ಉತ್ಸುಕರಾಗಿದ್ದಾರೆ. ಹೀಗಿದ್ದರೂ ಸಹಿತ ಅವರು ಪ್ರಾಂತೀಯ ಶಾಸನದ ಆಯವ್ಯಯದಲ್ಲಿ ತೊಡಗಿದ್ದರಿಂದ ಬಹು ಸಂಖ್ಯೆಯಲ್ಲಿ ಹಾಜರಿ ಇರುವುದಿಲ್ಲ, ಇದರಿಂದ ಇಡೀ ಹಿಂದು ಸಮಾಜಕ್ಕೆ ಬಹುವಾಗಿ ಪರಿಣಾಮ ಉಂಟುಮಾಡುತ್ತದೆ.

**ಸನ್ಮಾನ್ಯ ಸದಸ್ಯರು :** ಇದು ವಿಧಿಬಿಂದು ಅಲ್ಲವೇ ಅಲ್ಲ.

**ಸನ್ಮಾನ್ಯ ಉಪಾಧ್ಯಕ್ಷರು :** ಅದು ವಿಧಿಬಿಂದು ಅಹುದು ಇಲ್ಲವೆ ಅಲ್ಲವೆಂದು ನಿರ್ಧರಿಸಲು ನಾನು ಇಲ್ಲಿ ಇದ್ದೇನೆ. ತಾವು ನನ್ನೊಂದಿಗೆ ದಯವಿಟ್ಟು ಸಹಕರಿಸಿರಿ. ಅವರು ಬೇಗನೆ ತಮ್ಮ ವಾಕ್ಯವನ್ನು ಮುಗಿಸುವರೆಂದು ಭಾವಿಸುವೆನು.

**ಶ್ರೀ ಜಸಪತ್‌ರಾಯ ಕಪೂರ :** ಇಲ್ಲಿರುವ ನನ್ನ ಅನೇಕ ಗೆಳೆಯರು ಮಸೂದೆಯೊಂದಿಗೆ ಮುಂದುವರೆಯಲು ಕಾತರರಾಗಿದ್ದರು. ಇದು ಸಾರ್ವಭೌಮ ಶಾಸಕಾಂಗದ ಸಂಸತ್ತು ತನಗೆ ಬೇಕಾದ ಯಾವುದೇ ಕಾನೂನನ್ನು ಪಾಸು ಮಾಡಬಹುದು. ನಾನು ವಿಧಿಬಿಂದುವಿನ ಬಗೆಗೆ ಕೇಳಿದ್ದೇನೆ. ಮತ್ತು ಅದರ ಪರವಾಗಿ ಯಾವುದೇ ಹೆಚ್ಚಿನ ವಾದವನ್ನು ಕೇಳಲು ನಾನು ಇಚ್ಚಿಸುವುದಿಲ್ಲ. ಕೆಲವು ಸದಸ್ಯರು ಹಾಜರಿ ಇರುವುದಿಲ್ಲವೆಂಬುದು ಸತ್ಯ, ಪ್ರಾಂತಗಳಿಂದ ಹಾಗೂ ರಾಜ್ಯಗಳಿಂದ ಅನೇಕ ಸಂಖ್ಯೆಯ ಸದಸ್ಯರು ಇಲ್ಲಿ ಹಾಜರಿರುವುದಿಲ್ಲ ಮತ್ತು ಅವರು ಬೇಕಾದಾಗ ಬಂದು ಚರ್ಚೆಯಲ್ಲಿ ಭಾಗವಹಿಸಬಹುದು.

**ಬಾಬು ರಾಮನಾರಾಯಣಸಿಂಗ :** (ಬಿಹಾರ, ಸಾಮಾನ್ಯ) ನಾನು ಹೇಳಬಹುದೇ?

**ಸನ್ಮಾನ್ಯ ಉಪಾಧ್ಯಕ್ಷರು –** ಅಧ್ಯಕ್ಷರಿಗೆ ಸಂಬಂಧಿಸಿದಂತೆ ಮತ್ತು ಈ ಸಂಸತ್ತಿಗೆ ಸಂಬಂಧಿಸಿದಂತೆ ಅಂತಹ ಯಾವುದೇ ನಿರ್ದೇಶನ ಕೊಟ್ಟಿರುವುದಿಲ್ಲ ಮತ್ತು ಈ ಸಂಸತ್ತು ಈ ಮಸೂದೆ, ಮಾನ್ಯ ಅಧ್ಯಕ್ಷರು ಸನ್ಮಾನ್ಯ ಸದಸ್ಯರು, ವಾಸ್ತವಾಗಿ ಸನ್ಮಾನ್ಯ ಸದಸ್ಯರು ಶ್ರೀ ನಝಿರುದ್ದೀನ ಅವರು ಹೇಳಿದ್ದನ್ನೇ ಹೇಳುತ್ತಿದ್ದಾರೆಂದು ನನಗೆ ಭಯವಾಗುತ್ತದೆ. ನಾನು ವ್ಯವಹರಣೆಯನ್ನು ಮುಂದುವರೆಯಿಸಲು ಅಧಿಕಾರ ಉಳ್ಳದ್ದಾಗಿದೆ, ಸನ್ಮಾನ್ಯ ಸದಸ್ಯರು ಯಾವುದೇ ವೇಳೆಯಲ್ಲಿ ಒಳಗೆ ಬರಬಹುದು ಮತ್ತು ಚರ್ಚೆಯಲ್ಲಿ ಭಾಗವಹಿಸಬಹುದು. ನಾನು ಈ ವಿಧಿಬಿಂದುವನ್ನು ತಿರಸ್ಕರಿಸುತ್ತೇನೆ.

**ಬಾಬುನಾರಾಯಣ ಸಿಂಗ :** ತಮಗೆ ಗೌರವದಿಂದ

**ಗೌರವಾನ್ವಿತ ಸದಸ್ಯರು:** ಆರ್ಡರ್, ಆರ್ಡರ್ ................

**ಉಪಾಧ್ಯಕ್ಷರು :** ಈ ಬಗ್ಗೆ ನಾನು ಹೆಚ್ಚಿನದೇನನ್ನೂ ಕೇಳಬಯಸುವುದಿಲ್ಲ.

**ಬಾಬುನಾರಾಯಣ ಸಿಂಗ :** ತಮ್ಮ ಹಿಂದಿನ ರೂಲಿಂಗ್‌ಗಳು..........

**ಉಪಾಧ್ಯಕ್ಷರು :** ನನ್ನ ಹಿಂದಿನ ಎಲ್ಲಾ ರೂಲಿಂಗ್‌ಗಳನ್ನು ಪರಿಗಣಿಸಿದ್ದೇನೆ. ಅವೆಲ್ಲವೂ ನನ್ನೊಂದಿಗೆ ಇವೆ.

**ವಿ.ಎಸ್. ಸರ್ವತೆ :** (ಮಧ್ಯಭಾರತ) ನಾನು ಸಹಾ ವಿಧಿಬಿಂದುವನ್ನು ಎತ್ತಲು ಅಪೇಕ್ಷಿಸುತ್ತೇನೆ.

**ಉಪಾಧ್ಯಕ್ಷರು:** ಏನಾದರೂ ವಿಧಿಬಿಂದು ಇದೆಯೇ?

**ವಿ.ಎಸ್ ಸರ್ವತೆ :** ಹೌದು.

**ಉಪಾಧ್ಯಕ್ಷರು:** ಸದಸ್ಯರು ದಯವಿಟ್ಟು ಸಂಕ್ಷಿಪ್ತವಾಗಿ ತಮ್ಮ ವಿಧಿಬಿಂದುವನ್ನು ಹೇಳಬಹುದು.

**ಶ್ರೀ ವಿ.ಎಸ್. ಸರ್ವತೆ :** ನಾನು ಬಹಳ ಸಂಕ್ಷಿಪ್ತವಾಗಿ ಹೇಳುತ್ತೇನೆ. ನನ್ನ ವಿಧಿಬಿಂದು ಈ ರೀತಿ ಇದೆ. ಈ ಮಸೂದೆಯ ಉದ್ದೇಶಕ್ಕಾಗಿ ಪ್ರಕಟಣೆಗೆ ಸಂಬಂಧಿಸಿದ ಉಪಬಂಧಗಳು ತೃಪ್ತಿದಾಯಕವಾಗಿಲ್ಲ. ಅಂತಹ ಉಪಬಂಧಗಳನ್ನು ಆಚರಣೆಯಲ್ಲಿ ತರುವುದು ಅಧ್ಯಕ್ಷರ ಕರ್ತವ್ಯವಾಗಿದೆ – ನಾನು ನಿಯಮ ೨೦ ಇದನ್ನು ಉಲ್ಲೇಖಿಸುತ್ತೇನೆ – ಅದು ಹೀಗೆ ಹೇಳುತ್ತೇದೆ:

"ಒಂದು ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದ ಕೂಡಲೇ ಆ ಮಸೂದೆಯು ಆಗ ಒಂದು ವೇಳೆ ಈ ಒಳಗಾಗಿ ಪ್ರಕಟವಾಗಿರದಿದ್ದರೆ ಅದನ್ನು ರಾಜ್ಯ ಪರಿಪತ್ರದ ಪ್ರಕಟಿಸಬೇಕು. ಅದರಲ್ಲಿ ಪರಿಶೀಲನಾ ಸಮಿತಿಯ ವರದಿಯನ್ನು ತಿದ್ದುಪಡಿಯ ಮಸೂದೆಯೊಂದಿಗೆ ಪ್ರಕಟಿಸಲು ಉಪಬಂಧವಿದೆ. ಈ ಪ್ರಕರಣದಲ್ಲಿ ನನ್ನ ವಿನಂತಿ ಏನೆಂದರೆ – ಈ ಮಸೂದೆಯನ್ನು ೧೯೪೭ರ ಸ್ವಾತಂತ್ರ್ಯದ ದಿನಕ್ಕಿಂತ ಪೂರ್ವದಲ್ಲಿ ಮೂಲತಃ ಈ ಮಸೂದೆಯನ್ನು ಕೆಲವು ಸಮಯ ಮೊದಲು ಮೂಲ ಮಸೂದೆಯನ್ನು ಪ್ರಕಟಿಸಲಾಗಿತ್ತು. ಭಾರತ ರಾಜಕೀಯ ವ್ಯವಸ್ಥೆಯಲ್ಲಿ ಬದಲಾವಣೆಯಾಗಿದೆ ಮತ್ತು ಈ ಬದಲಾವಣೆ ಒಳ್ಳೆಯದಕ್ಕೆ ಆಗಿದೆ

ಎಂಬ ವಿಷಯಕ್ಕೆ ನಿಮ್ಮ ಗಮನವನ್ನು ನಾನು ಸೆಳೆಯಬಯಸುವುದು, ಇದು ಭಾರತದ ರಾಜ್ಯಗಳು (ಸಂಸ್ಥಾನಗಳು) ಬ್ರಿಟೀಷ ಭಾರತದ ಭಾಗಗಳಾಗಿ ಯಾವ ಸಂಸ್ಥಾನವೂ ಇರಲಿಲ್ಲ. ಮಸೂದೆಯಿಂದ ಅವುಗಳಿಗೆ ಯಾವುದೇ ಪರಿಣಾಮ ಉಂಟಾಗುತ್ತಿದ್ದಿಲ್ಲ. ನಂತರ ಕೆಲವು ಸಂಸ್ಥಾನಗಳು ವಿಲೀನಗೊಂಡವು. ಇನ್ನು ಕೆಲವು ಭಾರತದ ಒಕ್ಕೂಟವನ್ನು ಎಲ್ಲ ರೀತಿಯಿಂದ ೧೯೪೭ರ ಆಗಸ್ಟದಲ್ಲಿ ಸೇರಿಕೊಂಡವರು. ಇದು ಪ್ರಕಟಣೆ ಆದ ನಂತರ ಆದದ್ದು, ಅಧ್ಯಕ್ಷರಿಗೆ ಗೊತ್ತಿದ್ದಂತೆ ೧೯೪೭ರಲ್ಲಿ ಆಗಸ್ಟದಲ್ಲಿ ಕೆಲ ಸಂಸ್ಥಾನಗಳಲ್ಲಿ ಒಂದು ಒಡಂಬಡಿಕೆಯಾಗಿದೆ. ಒಡಂಬಡಿಕೆಯ ಪರಿಣಾಮವಾಗಿ ಸಂಸ್ಥಾನಗಳು ತಮ್ಮಷ್ಟಕ್ಕೆ ತಾವೇ ಕೇಂದ್ರ ಸರಕಾರವು ತನ್ನ ಅಧಿಕಾರವು ತನ್ನ ಸ್ವತಂತ್ರ ಅಧಿಕಾರದಲ್ಲಿ ಪಾಸುಮಾಡಿದ ಕಾನೂನು ಇಲ್ಲದೆ ಸಮವರ್ತಿ ಅಧಿಕಾರದಲ್ಲಿ ಪಾಸುಮಾಡಿದ ಕಾನೂನುಗಳಿಂದ ಅದು ತನ್ನಷ್ಟಕ್ಕೆ ತಾನೇ ಬಾಧಿತವಾಗುತ್ತವೆ. ಆದ್ದರಿಂದ ನಾನು ವಿನಂತಿಸುವುದೇನೆಂದರೆ ಈ ಮಸೂದೆಯಿಂದ ಯಾವ ರಾಜ್ಯ ಪ್ರಾಂತದ ಜನರು ಇದರಿಂದ ಬಾಧಿತರಾಗುವರೋ ಅವರನ್ನು ಅವರ ಹಕ್ಕುಗಳನ್ನು ರಕ್ಷಿಸುವುದು ಹಾಗೂ ಕಾಯುವುದು ಅಧ್ಯಕ್ಷರ ಕರ್ತವ್ಯವೆಂದು ನಾನು ಹೇಳಬಯಸುವೆನು. ಇದರ ಉದ್ದೇಶವು ಎರಡು ರೀತಿಯದೆಂದು ನಾನು ಹೇಳಬಯಸುತ್ತೇನೆ. ಇಂತಹ ಉಪಬಂಧವು ಉಪಬಂಧಗಳ ಪ್ರಕಟಣೆಯ ಚುನಾವಣೆ ಮತಕ್ಷೇತ್ರಕ್ಕೆ ಅನುಕೂಲವಾಗುತ್ತದೆ. ಇಲ್ಲವೆ ಈ ಮಸೂದೆಯಿಂದ ಬಾಧಿತವಾದ ಜನರು ತಮ್ಮ ಪ್ರತಿಕ್ರಿಯೆಯನ್ನು ತಮ್ಮ ಆಭಿಪ್ರಾಯ ಮತ್ತು ಅವರ ಬಗೆಗೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಅನುಕೂಲವಾಗುತ್ತದೆ. ಯಾವುದೇ ಮಸೂದೆ, ಅದರಿಂದ ಬಾಧಿತವಾದ ಜನರಿಗೆ ಅವರ ಅಭಿಪ್ರಾಯ ಕೇಳುವ ಅವಕಾಶ ಕೊಡದೆ ಅಂತಹ ಮಸೂದೆಯನ್ನು ಪಾಸುಮಾಡಬಾರದು. ಇದು ನಿಜವಾದ ಪ್ರಜಾಪ್ರಭುತ್ವದ ತತ್ವವೆಂದು ನಾನು ನಂಬಿದ್ದೇನೆ. ಅವರಿಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಅವಕಾಶವನ್ನು ಕಲ್ಪಿಸಿಕೊಡಬೇಕು. ಎರಡನೆಯದಾಗಿ ಈ ಪ್ರಕಟಣೆಯ ಉದ್ದೇಶವೆಂದರೆ ಈ ಸಂಸತ್ತಿನ ಮಸೂದೆಯ ಬಗೆಗೆ ಸದಸ್ಯರಿಗೆ ತಮ್ಮ ಮತಕ್ಷೇತ್ರದ ಮತದಾರರ ಅಭಿಪ್ರಾಯ ಏನೆಂಬುದನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಮಾನ್ಯ ಸದಸ್ಯರು ವೈಯಕ್ತಿಕವಾಗಿ ತಮ್ಮ ಅಭಿಪ್ರಾಯಗಳನ್ನು ಹೇಳಬಾರದು ಎಂದು ನಾನು ಹೇಳುವ ಅವಶ್ಯಕತೆಯು ಇರುವುದಿಲ್ಲ. ಮಹತ್ವದ ವಿಷಯಗಳನ್ನು ಕುರಿತು ಅವರು ತಮ್ಮ ಮತಕ್ಷೇತ್ರದ ಜನರ ಅಭಿಪ್ರಾಯವನ್ನು ಪ್ರತಿನಿಧಿಸಬೇಕು. ಚಿಕ್ಕ ವಿಷಯಗಳನ್ನು ಕುರಿತು ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ವಿವೇಚನಾಧಿಕಾರವಿದೆ. ಯಾವುದೇ ಕ್ರಮವು ಒಬ್ಬರ ಜೀವನವನ್ನು ಸಂಪೂರ್ಣವಾಗಿ ಬಾಧಿಸುತ್ತಿದ್ದರೆ ಆ ಸಮಾಜದ ಸಂಪೂರ್ಣ ರೂಪರೇಖೆಯು ಬದಲಾಗುತ್ತದೆ. ಇಂತಹ ಮಹತ್ವ ಪ್ರಕರಣಗಳಲ್ಲಿ ಸದಸ್ಯರು ತಮ್ಮ ಮತದಾರರ ಅಭಿಪ್ರಾಯವನ್ನು ಸಂಗ್ರಹಿಸಿ, ಸದನದಲ್ಲಿ ಸರಿಯಾಗಿ ಪ್ರತಿನಿಧಿಸಬೇಕು. ಅವರು ತಮಗೆ ಅನಿಸಿದ್ದನ್ನು ಅಲ್ಲೇ ಹೇಳಬಾರದು, ಅವರು ತಮ್ಮ ಮತದಾರರು ಏನು ಅನ್ನುತ್ತಾರೆ ಅವನ್ನು ಪ್ರತಿನಿಧಿಸಬೇಕು. ಈ ಉದ್ದೇಶಕ್ಕಾಗಿ ಮಸೂದೆಯನ್ನು ಪ್ರಕಟಿಸಬೇಕು. ನಾನು ವಿನಂತಿಪೂರ್ವಕ ಹೇಳುವುದೇನೆಂದರೆ ಈ ಮಸೂದೆಯನ್ನು ರಾಜ್ಯ ಪರಿಪತ್ರದಲ್ಲಿ ಪ್ರಕಟಿಸಲಾಯಿತು. ಆ ಕಾಲಕ್ಕೆ ನಂತರ ಭಾರತ ಸರಕಾರಕ್ಕೆ ಕೂಡಿದ ಸಂಸ್ಥಾನಗಳು ಹಾಗೂ ವಿಲೀನವಾದ ರಾಜ್ಯಗಳು ಅದರ ಬಗ್ಗೆ ಸರಿಯಾದ ಗಮನ ಕೊಡುವ ಸ್ಥಿತಿಯಲ್ಲಿದ್ದಾಗ ಆ ಮಸೂದೆಯನ್ನು ಪ್ರಕಟಿಸಲಿಲ್ಲ. ಅದು ಈ ಮಸೂದೆಗೆ ಅತ್ಯವಶ್ಯವಿದೆ. ಆದುದರಿಂದ ನಾನು ವಿನಯಪೂರ್ವಕ ಹೇಳಬಯಸುವುದೇನೆಂದರೆ ಯೋಗ್ಯ ಪ್ರಕಟಣೆಯಾಗಿಲ್ಲ. ಆ ಜನರಿಗೆ ಸಂಬಂಧಿಸಿದಂತೆ ಈಗ ಅಧ್ಯಕ್ಷರು, ಅವರ ಹಿತಾಸಕ್ತಿಯನ್ನು ಕಾಪಾಡಬೇಕು. ಆದುದರಿಂದ ನಾನು ಅಧ್ಯಕ್ಷರಿಗೆ ಹೀಗೆ ಮನವಿ ಮಾಡುತ್ತೇನೆ. ಅವರು ಈ ಮಸೂದೆಯನ್ನು ಪ್ರಕಟಿಸಲು ಮೊದಲು ಆದೇಶ ಮಾಡಬೇಕು. ನಂತರ ಈ

ಮಸೂದೆಯ ಚರ್ಚೆಯನ್ನು ಕೈಗೆತ್ತಿಕೊಳ್ಳಬೇಕು.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನನ್ನ ಸನ್ಮಿತ್ರರು ವಿಧಿಬಿಂದುವಿಗೆ ಕೊಟ್ಟ ಉತ್ತರವು ಎರಡು ವಿಧವಾಗಿದೆ. ಮೊದಲನೆಯದಾಗಿ ಈ ಸದನಕ್ಕೆ ಯಾವುದೇ ಮಸೂದೆಯನ್ನು ಹಂಚುವ ಹಾಗೂ ಪ್ರಕಟಿಸುವ ಹೊಣೆಗಾರಿಕೆಯು ಇರುವುದಿಲ್ಲ. ಕೇವಲ ವಿಶೇಷ ಪ್ರಕರಣಗಳಲ್ಲಿ ಸದನವು ಠರಾವಿನ ಮೂಲಕ ಇಲ್ಲವೆ ಸರಕಾರದ ಯಾವುದೇ ಕಾರ್ಯನಿರ್ವಾಹಕ ಅಧಿಕಾರಿಯು ಈ ಮಸೂದೆಯು ಬಹಳ ಮಹತ್ವದ್ದು ಆದ್ದರಿಂದ ಸಾರ್ವಜನಿಕ ಅಭಿಪ್ರಾಯ ಪಡೆಯಬೇಕೆಂದು ನಿರ್ಧರಿಸಿದರೆ ಆಗ ಸಾರ್ವಜನಿಕರಿಂದ ಆ ಬಗ್ಗೆ ತಕರಾರು ಕೇಳಲು ಪ್ರಕಟಿಸಬೇಕು. ಆ ಸಾರ್ವಜನಿಕ ಅಭಿಪ್ರಾಯ ಕೇಳಬೇಕು ಎಂಬ ಹಕ್ಕು ಅಥವಾ ಹೊಣೆಗಾರಿಕೆಯು ಶಾಸಕಾಂಗ ಇಲ್ಲವೆ ಸರಕಾರದ ಮೇಲೆ ಇರುವುದಿಲ್ಲ. ಆದ್ದರಿಂದ ಆ ದೃಷ್ಟಿಯಿಂದ ಈ ವಿಧಿಬಿಂದು ನಿಜವಾಗಿ ವಿಧಿಬಿಂದುವೇ ಅಲ್ಲ. ವಿಧಿಬಿಂದುವಿನ ಬಗ್ಗೆ ನನ್ನ ಎರಡನೆಯ ವಿನಂತಿ ಏನೆಂದರೆ ನಾವು ಈ ಮಸೂದೆಯನ್ನು ಬುದ್ಧ್ಯಾಪೂರ್ವಕವಾಗಿ ಭಾರತದ ಪ್ರಾಂತಗಳಿಗೆ ಮಾತ್ರ ಸೀಮಿತಗೊಳಿಸಿದ್ದೇವೆ. ಈ ಉಪಬಂಧಗಳನ್ನು ಕುರಿತು ಮೂರು ಸಲ ಅಭಿಪ್ರಾಯವನ್ನು ಪಡೆಯಲಾಗಿದೆ. ಪುನಃ ನಾಲ್ಕನೆಯ ಸಲ ಜನರ ಅಭಿಪ್ರಾಯ ಪಡೆಯಲು ಪ್ರಕಟಿಸುವುದರಿಂದ ಯಾವುದೇ ಉದ್ದೇಶ ಸಾಧಿಸಿದಂತೆ ಆಗುವುದಿಲ್ಲ. ಈ ಮಸೂದೆಯನ್ನು ಭಾರತದ ಸಂಸ್ಥಾನಗಳಿಗೆ ವಿಸ್ತರಿಸುವ ಸಂದರ್ಭ ಬಂದಾಗ ಈ ಮಸೂದೆಯಲ್ಲಿ ಯೋಗ್ಯ ಉಪಬಂಧ ಕಲ್ಪಿಸಿ ಸದನದ ಮುಂದೆ ಆಗಿನ ಸರಕಾರವು ಆ ಜನರ ಅಭಿಪ್ರಾಯವನ್ನು ಕೇಳಿ ಅವರ ಇಚ್ಛೆಯಂತೆ ಭಾರತದ ಒಕ್ಕೂಟಕ್ಕೆ ಸೇರಿದ ಸಂಸ್ಥಾನಗಳ ಅಭಿಪ್ರಾಯವನ್ನು ಪಡೆಯಲಾಗುವುದು.

**ಮಾನ್ಯ ಉಪಸಭಾಧ್ಯಕ್ಷರು :** ಈ ಮಸೂದೆಯ ಸೀಮಿತಗೊಳಿಸುವ ವ್ಯಾಪ್ತಿ ಕುರಿತು ಸನ್ಮಾನ್ಯ ಕಾನೂನು ಮಂತ್ರಿಗಳು ಹೇಳಿದುದಕ್ಕೆ ನಾನು ಒಪ್ಪುತ್ತೇನೆ. ಮೊದಲ ಹಂತದಲ್ಲಿ ಕೇವಲ ಭಾರತದ ಪ್ರಾಂತಗಳಿಗೆ ಮತ್ತು ಇದು ತುಂಬಾ ಸಮಸ್ಯಾತ್ಮಕವಾಗಿತ್ತು. ಇದು ಭಾರತದ ಒಕ್ಕೂಟಕ್ಕೆ ಸೇರಿದ ರಾಜ್ಯಗಳಿಗೂ ಅನ್ವಯಿಸಲಾಗುವುದೆ? ಹಾಗೂ ಒಕ್ಕೂಟಕ್ಕೆ ಸೇರುವಾಗಿನ ಯಾವ ಕರಾರುಗಳ ಮೇಲೆ ಹಾಗೂ ನಿಬಂಧನೆಗಳ ಮೇಲೆ ವಿಚಾರಿಸಲು ಈಗ ಅವರಿಗೆ ಅವಕಾಶ ಬಂದಿದೆ. ಅವರು ಒಳಗೆ ಬರಬಹುದೇ ಅಥವಾ ಇಲ್ಲವೋ, ಇನ್ನೊಂದನ್ನು ಕುರಿತು ಮಸೂದೆಯನ್ನು ಹಂಚುವಿಕೆಗಾಗಿ ಕಳುಹಿಸಿಕೊಡುವುದು ಹೊಣೆಗಾರಿಕೆಯಾಗಿಲ್ಲ. ಆದರೆ ಈ ಬಗ್ಗೆ ಸದನದಲ್ಲಿ ಒಂದು ಸೂಚನೆಯನ್ನು ಮಂಡಿಸಿ, ಅದು ಸದನದಲ್ಲಿ ಪಾಸಾದರೆ, ಪರಿಶೀಲನಾ ಸಮಿತಿಯು ಈ ವಿಷಯವನ್ನು ಬಹುವಾಗಿ: ಬಹಳಷ್ಟು ಬದಲಾವಣೆಯನ್ನು ಮಾಡಿರದಿದ್ದರೆ ಮತ್ತು ಅದನ್ನು ಪುನಃ ರಾಜ್ಯ ಪರಿಪತ್ರದಲ್ಲಿ ಪ್ರಕಟಿಸುವುದು ಅವಶ್ಯವಿದೆಯೆಂದು ಅವರು ಹೇಳುವವರೆಗೆ ಅದನ್ನು ಪ್ರಕಟಿಸುವ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ನಾನು ಈ ವಿಧಿಬಿಂದುವನ್ನು ಕಿತ್ತುಹಾಕುತ್ತೇನೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ನನ್ನ ಸೂಚನೆಯ ಮೇಲೆ ಮಾತನಾಡುವ ಮೊದಲು ನನಗೆ ಅನಿಸಿದಂತೆ ನಾನು ಮಾತನಾಡುವುದೆ ಅಪೇಕ್ಷಣೀಯ............

**ಶ್ರೀ ಬಿ. ದಾಸ** (ಒರಿಸಾ, ಜನರಲ್) : ಎಲ್ಲ ಕಡೆಗೂ ಅಡ್ಡಿ ಆತಂಕವಿದೆ. ಪ್ರತಿಯೊಬ್ಬರು ವಿಧಿಬಿಂದು ಎತ್ತುತ್ತಾರೆ. ಶ್ರೀ ನಝೀರುದ್ದೀನ್ ಅಹ್ಮದ್ ಅವರು ೬ ತಿಂಗಳ ಹಿಂದೆಯೇ ಎದ್ದುನಿಂತರು.

**ಶ್ರೀ ನಝೀರುದ್ದೀನ್ ಅಹ್ಮದ್** (ಪ. ಬಂಗಾಲ ಜನರಲ್) : ಇದು ಬೇರೊಂದು ತರಹದ ವಿಧಿಬಿಂದು. ಸನ್ಮಿತ್ರ ಗೆಳೆಯರಿಗೆ ಸ್ವಲ್ಪ ಸಹನಶೀಲತೆಯು ಬೇಕು.

**ಸನ್ಮಾನ್ಯ ಉಪಾಧ್ಯಕ್ಷರು :** ಮಾನ್ಯ ಸದಸ್ಯರು ವಿಧಿಬಿಂದು ಎತ್ತುವ ಪೂರ್ವದಲ್ಲಿ ಈ ಬಗ್ಗೆ ತೀರ್ಮಾನ ಕೈಕೊಳ್ಳಬೇಕೆ. ಅದು ತಿಳಿಮಾಡುವ ಸೂಚನೆ ಆಗಬೇಕೆಂದು ನಾನು ಇಚ್ಛಿಸುತ್ತೇನೆ. ಅವರು ಈ ಸದನದ

ಟೀಕೆ ಮಾಡುವುದರಿಂದ ಸದನದ ಕಾರ್ಯಕ್ಕೆ ಅಡ್ಡಿಮಾಡುತ್ತಿದ್ದೇವೆ ಎಂಬುದನ್ನು ತಾವೇ ಯೋಚಿಸಬೇಕು.

**ಶ್ರೀ ನಝೀರುದ್ದೀನ್ ಅಹ್ಮದ್ :** ನನ್ನ ವಿಧಿಬಿಂದು ಹಾಗಿರುವುದಿಲ್ಲ.

**ಮಾನ್ಯ ಉಪಾಧ್ಯಕ್ಷರು :** ಯಾವುದೇ ಸನ್ಮಾನ್ಯ ಸದಸ್ಯರು ವಿಧಿಬಿಂದುವನ್ನು ಎತ್ತಲು ಅವಕಾಶವಿದೆ. ಒಬ್ಬ ಸನ್ಮಾನ್ಯ ಸದಸ್ಯರು ಬೇಕಾದಷ್ಟು ವಿಧಿಬಿಂದುಗಳನ್ನು ಎತ್ತಬಹುದು. ಅವು ಯೋಗ್ಯ ಕಾರಣಗಳು ಉಳ್ಳವು ಆಗಿರಬೇಕು.

**ಶ್ರೀ ನಝೀರುದ್ದೀನ್ ಅಹ್ಮದ್:** ಈ ವಿಧಿಬಿಂದುವಿನ ಉದ್ದೇಶವು ತಿಳಿಸುವುದು ಏನೆಂದರೆ : ಸನ್ಮಾನ್ಯ ಕಾನೂನು ಮಂತ್ರಿಗಳು ಈ ಬಗ್ಗೆ ಈಗಾಗಲೇ ಈ ವಿಷಯದ ಬಗ್ಗೆ ಮಾತನಾಡಿ ಅವರು ಸೂಚನೆಯ ಮೊದಲನೆಯ ಭಾಗವನ್ನು ಪೂರ್ತಿಗೊಳಿಸಿದ್ದಾರೆ ಮತ್ತು ನಂತರ ಮುಂದಿನ ಭಾಗ ಆರಂಭಿಸುತ್ತಾರೆ. ಅವರಿಗೆ ಚರ್ಚೆಯ ಮುಕ್ತಾಯದ ನಂತರ ಉತ್ತರಿಸುವ ಹಕ್ಕು ಇರುತ್ತದೆ. ಈಗ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಲು ಸೂಚನೆ ಮಂಡಿಸಲಾಗಿದೆ. ದಿನಾಂಕ ೩೧–೮–೧೯೪೮ರಂದು ಈ ವಿಷಯದ ಮೇಲೆ ಭಾಷಣ ಮಾಡಿದ್ದಾರೆ.

ನಮ್ಮ ಇಂದಿನ ಸಭೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ಅನೇಕ ತಿದ್ದುಪಡಿಗಳಿವೆ. ನಾವು ನೇರವಾಗಿ ಸಭೆಯ ಕಲಾಪಕ್ಕೆ ಬರೋಣ. ಸನ್ಮಾನ್ಯ ಮಂತ್ರಿಗಳು ಒಂದು ಸೂಚನೆಯ ಮೇಲೆ ಉತ್ತರಿಸಲು ಅವರಿಗೆ ಹಕ್ಕಿದೆ. ಈ ಹಂತದಲ್ಲಿ ಸನ್ಮಾನ್ಯ ಮಂತ್ರಿಗಳು ಎರಡನೆಯ ಭಾಷಣ ಮಾಡಲು ಅವಕಾಶ ಇರುವುದಿಲ್ಲ.

**ಮಾನ್ಯ ಉಪಾಧ್ಯಕ್ಷರು :** ದಿನಾಂಕ ೩೧–೮–೧೯೪೮ ಸಂಸದ್ ವ್ಯವಹರಣೆಗಳಲ್ಲಿ ನಾನು ಕೆಳಗಿನವುಗಳನ್ನು ನೋಡಿದ್ದೇನೆ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** (ಕಾನೂನು ಮಂತ್ರಿಗಳು) : ಮಾನ್ಯರೆ, ನಾನು ಮಂಡಿಸುತ್ತೇನೆ. ತಿದ್ದುಪಡಿ ಮಾಡುವ ಮಸೂದೆ ಮತ್ತು ಪರಿಶೀಲನಾ ಸಮಿತಿಯವರು ಮಾಡಿದ ಕಾನೂನಿನ ಭಾಗಗಳನ್ನು ಕ್ರೋಢೀಕರಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು.

**ಶ್ರೀ ನಝೀರುದ್ದೀನ್ ಅಹ್ಮದ್** (ಪ. ಬಂಗಾಲ, ಮುಸ್ಲಿಂ) : ನನ್ನ ವಿಧಿಬಿಂದುವಿನ ಮೇಲೆ............

**ಮಾನ್ಯ ಅಧ್ಯಕ್ಷರು :** ನಾನು ಮೊದಲು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಆಮೇಲೆ ನಿಮ್ಮ ವಿಧಿಬಿಂದು ತೆಗೆದುಕೊಳ್ಳುತ್ತೇನೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಇಂದಿನ ವಿಷಯ ಪಟ್ಟಿಯಲ್ಲಿ ಸರಕಾರದ ಇತರ ವ್ಯವಹರಣೆಗಳ ತುರ್ತು ವ್ಯವಹರಣ ಮತ್ತು ಸರಕಾರವು ಅವುಗಳಿಗೆ ಹೆಚ್ಚು ಆದ್ಯತೆ ಕೊಡಬೇಕೆಂದು ಭಾವಿಸಿದೆ. ಆದ್ದರಿಂದ ನಾನು ನನ್ನ ಸೂಚನೆಯ ಬಗ್ಗೆ ಭಾಷಣ ಮಾಡುವ ಉದ್ದೇಶವು ನನಗೆ ಇಲ್ಲ. ಯಾಕೆಂದರೆ ನಾನು ನನ್ನ ಸೂಚನೆಯ ಬಗ್ಗೆ ಭಾಷಣ ಮಾಡಿದ್ದರೆ ಮೇಲುನೋಟಕ್ಕೆ ಅದು ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತದೆ ಮತ್ತು ಇದರ ಪರಿಣಾಮವಾಗಿ ಸರಕಾರದ ಹೆಚ್ಚಿನ ವೇಳೆಯನ್ನು ತೆಗೆದುಕೊಳ್ಳುತ್ತದೆ. ಈಗ ಸಂಸತ್ತು ಮುಗಿಯಲು ನಮ್ಮ ಮುಂದೆ ಕೆಲವೇ ದಿನಗಳು ಉಳಿದಿವೆ. ಮತ್ತು ನಾನು ವಿನಂತಿಸಿಕೊಳ್ಳುವುದೇನೆಂದರೆ ಸೂಚನೆಯನ್ನು ಮುಂದಿನ ಅಧಿವೇಶನದವರೆಗೆ ಚರ್ಚಿಸಲು ತಡೆ ಹಿಡಿಯಬೇಕು.

ಈ ಮೇಲೆ ಕಾಣಿಸಿದಂತೆ ಅಂಬೇಡ್ಕರ್ ಅವರು ಮುಂದುವರೆಯಲು ಹಕ್ಕುಳ್ಳವರಾಗಿದ್ದಾರೆ. ಈ ವಿಧಿಬಿಂದು ಎತ್ತಿದ್ದರ ಬಗ್ಗೆ ನನಗೆ ಬಹಳ ಖೇದವೆನಿಸುತ್ತದೆ. ಇದು ಕೇವಲ ತಡೆ ಮಾಡುವ ಒಂದು ಸೂಚನೆಯಾಗಿದೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ತಾವು ನನಗೆ ೧೬ನೆಯ ಸೂಚನೆಗೆ ಸಂಬಂಧಿಸಿದಂತೆ ಆ

ಸೂಚನೆಯ ವಿರುದ್ಧ ತಾವು ಯಾವ ರೀತಿಯ ಪ್ರಕ್ರಿಯೆಯನ್ನು ಅನುಸರಿಸುತ್ತೀರಿ ಎಂಬುದು ನನಗೆ ತಮ್ಮಿಂದ ತಿಳಿದರೆ ಮತ್ತು ಅವು ನನಗೆ ಮುಂದಿನ ಅಧಿವೇಶನದಲ್ಲಿ ಪ್ರಸ್ತಾಪ ಮಾಡಲು ಬಹಳ ಅನುಕೂಲವಾಗುತ್ತದೆ. ನನ್ನ ಕೆಲಸ ಹಗುರಾಗುತ್ತದೆ ಅಂತಾ ನಾನು ಹೇಳಲು ಹೊರಟಿದ್ದೇನೆ. ಈ ೧೬ನೆಯ ಸೂಚನೆಯು ಮೂರು ಬೇರೆ ಬೇರೆ ವರ್ಗಗಳಲ್ಲಿ ಇರುತ್ತವೆ. ಕೆಲವು ಸೂಚನೆಗಳು ಈ ಮಸೂದೆಯನ್ನು ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಹಂಚಬೇಕೆಂದು ಕೆಲವು ಹೇಳುತ್ತವೆ. ಇನ್ನು ಕೆಲವು ಸೂಚನೆಗಳು ಮಸೂದೆಯನ್ನು ಪರಿಶೀಲನಾ ಸಮಿತಿಗೆ ಕಳುಹಿಸಬೇಕೆಂದು ಸೂಚಿಸುತ್ತವೆ. ಆದರೆ ಈ ಪರಿಶೀಲನಾ ಸಮಿತಿಯು ಈ ಮಸೂದೆಯ ಮೇಲೆ ವರದಿ ಸಲ್ಲಿಸಿವೆ. ಅದು ಪರಿಶೀಲನಾ ಸಮಿತಿಗಿಂತ ಬೇರೆಯಾಗಿದೆ.

ಇನ್ನು ಕೆಲವು ಸೂಚನೆಗಳು ಏನು ಹೇಳುತ್ತವೆ ಎಂದರೆ ಈ ಮಸೂದೆಯ ಮೇಲೆ ವರದಿ ಕೊಟ್ಟ ಪರಿಶೀಲನಾ ಸಮಿತಿಗೆ ಪುನಃ ಈ ಮಸೂದೆಯನ್ನು ಒಪ್ಪಿಸಬೇಕೆಂದು ಸೂಚಿಸುತ್ತವೆ. ಮತ್ತೊಂದು ಇಲ್ಲವೆ ಬೇರೆ ಎರಡು ಸೂಚನೆಗಳು ಒಂದು ನನ್ನ ಸನ್ಮಿತ್ರರ ಹೆಸರಿನಲ್ಲಿ ಇರುವುದು. ಶ್ರೀ ಪ್ರಭುದಯಾಳ ಹಿಮ್ಮತ ಸಿಂಗ ಮತ್ತು ಇನ್ನೊಂದು ನನ್ನ ಸನ್ಮಿತ್ರರಾದ ಶ್ರೀ ವಿಶ್ವನಾಥದಾಸ ಇದರ ಹೆಸರ ಮೇಲೆ ಇರುವುದು. ಇವು ಈ ಮಸೂದೆಯನ್ನು ಭಾರತದ ಒಕ್ಕೂಟಕ್ಕೆ ಸೇರಿದ ರಾಜ್ಯಗಳಲ್ಲಿ ನೆಲೆಸಿರುವ ಜನರಿಗೆ ಹಂಚಬೇಕೆಂದು ಹೇಳಿದ್ದಾರೆ. ಈ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳುವ ಮೊದಲು ಹಂಚಬೇಕೆಂದು ಸೂಚಿಸುತ್ತವೆ. ಈ ಎರಡು ಸೂಚನೆಗಳ ಬಗ್ಗೆ ನನ್ನ ಮಿತ್ರರಾದ ಶ್ರೀ ವಿ.ಎಸ್. ಸರ್ವತೆ ಇವರು ಇತ್ತೀಚೆಗೆ ಕೆಲದಿನಗಳ ಹಿಂದೆ ವಿಧಿಬಿಂದು ಎತ್ತಿದ್ದರು. ಅದನ್ನು ತಾವು ಕಿತ್ತುಹಾಕಿದಿರಿ. ಆದ್ದರಿಂದ ಸೂಚನೆ ೭ ಹಾಗೂ ೮ ಇವೆರಡೂ ವಿಷಯಗಳನ್ನು ಇಂದಿನ ಕಾರ್ಯಕ್ರಮ ಪಟ್ಟಿಯಿಂದ ತೆಗೆದುಹಾಕಿದರೆಂದು ಗ್ರಹಿಸುತ್ತೇನೆ. ಉಳಿದ ಸೂಚನೆಗಳು ಹಾಗೆಯೇ ಉಳಿಯುತ್ತವೆ.

ತಾವು ಈ ಸೂಚನೆಗಳನ್ನು ನನ್ನ ಸೂಚನೆಯೊಂದಿಗೆ ಏಕಕಾಲಕ್ಕೆ ತೆಗೆದುಕೊಳ್ಳಲು ಇಚ್ಛಿಸುತ್ತೀರಾ? ಇದರಿಂದ ಎಲ್ಲ ಸೂಚನೆಗಳನ್ನು ಕೂಡಿಯೇ ಚರ್ಚಿಸಬಹುದು ಮತ್ತು ಅಂತಿಮವಾಗಿ ಎಲ್ಲ ಸೂಚನೆಗಳನ್ನು ಪ್ರತ್ಯೇಕವಾಗಿ ಸಂಸತ್ತಿನ ಮುಂದೆ ಇಡಬೇಕಾಗುತ್ತದೆ ಇಲ್ಲವೆ ನನ್ನ ಸೂಚನೆಯನ್ನು ಕೈಗೆತ್ತಿಕೊಳ್ಳುವ ಮೊದಲು ಅವುಗಳನ್ನು ತೆಗೆದುಕೊಳ್ಳಬೇಕೆಂದು ಸೂಚಿಸುವಿರಾ? ಇದರಿಂದ ಅವುಗಳನ್ನು ಪರಿಶೀಲನೆ ಮಾಡಿದ ನನ್ನ ಸೂಚನೆಯ ಬಗ್ಗೆ ನನಗೆ ಮಾಡನಾಡಲು ಅವಕಾಶವು ಸಿಕ್ಕಂತಾಗುತ್ತದೆ. ಇವುಗಳಲ್ಲಿ ತಮ್ಮ ಇಚ್ಛೆ ಏನು ಎಂಬುದನ್ನು ನಾನು ನಿಮ್ಮಿಂದ ತಿಳಿದುಕೊಳ್ಳಬಯಸುತ್ತೇನೆ. ನಾನು ಈ ಸೂಚನೆಗಳ ಮೇಲೆ ಒಂದು ಇಲ್ಲವೆ ಎರಡು ವಿಷಯಗಳನ್ನು ಹೇಳಬಹುದಾಗಿತ್ತು. ಕೆಲವು ಸೂಚನೆಗಳನ್ನು ತಾವು ಇಡಬಹುದಾಗಿತ್ತು. ಈ ಸೂಚನೆಗಳನ್ನು ಮಂಡಿಸಿದವರು ತಾವೇ ಅವುಗಳನ್ನು ಮಂಡಿಸುವುದಿಲ್ಲವೆಂದು ಹೇಳಬಹುದಾಗಿತ್ತು ಎಂದು ನಾನು ಒಪ್ಪುತ್ತೇನೆ. ಕೆಲವು ಸೂಚನೆಗಳು ನಿಮ್ಮ ವಿವೇಚನೆಯಲ್ಲಿವೆ. ಮತ್ತು ಈ ಮಸೂದೆಗಳು ತಿಳಿಗೊಳಿಸುವ ಮಸೂದೆಗಳು ಅಲ್ಲ ಎಂದು ತಮಗೆ ಖಾತರಿಯಾಗದ ಹೊರತು, ಆದರೆ ಅವುಗಳ ಹಿಂದೆ ಸ್ವಲ್ಪ ಮಹತ್ವದ ಸಂಗತಿ ಇದೆಯೆಂದು ಖಾತರಿಯಾಗದ ಹೊರತು ಹಿಂದಿನ ಅಧ್ಯಕ್ಷರು ಈ ವಿಷಯದ ಬಗ್ಗೆ ಚರ್ಚಿಸಿ ಕೊಟ್ಟ ನಿರ್ಣಯದಂತೆ ಈಗ ಈ ನಿರ್ಣಯ ಕೊಡಲು ಸಂದರ್ಭವು ಮುಕ್ತವಾಗಿಲ್ಲ. ಯಾಕೆಂದರೆ ಅಧ್ಯಕ್ಷರು, ಈ ಸೂಚನೆಗಳು ತಿಳಿಮಾಡುವ ಸೂಚನೆಗಳಲ್ಲ. ಆ ಸೂಚನೆಗಳ ಹಿಂದೆ ಮಹತ್ವದ ವಿಷಯ ಹಾಗೂ ಕಾರಣಗಳಿವೆ ಎಂದು ಆ ಮೂಲಕ ಮನವರಿಕೆ ಮಾಡಿಕೊಳ್ಳಬೇಕಾಗುತ್ತದೆ. ಉದಾ: ಈಗ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂಬ ಸೂಚನೆ– ಈಗ ನಾನು ಈ ಕುರಿತು

ಹೇಳುವುದು ತಮ್ಮ ವಿವೇಚನೆಗೆ ಬಿಟ್ಟ ವಿಷಯ. ಹಿಂದಿನ ಅಧ್ಯಕ್ಷರು ಕೊಟ್ಟ ನಿರ್ಣಯದ ಪ್ರಕಾರ ತಾವು ನನ್ನ ಗೆಳೆಯರು ದಯವಿಟ್ಟು ಕಾರಣಗಳು ಮಹತ್ವದ್ದಿವೆಯೆಂದು ಮನವರಿಕೆಯಾದರೆ ತಾವು ಆ ಸೂಚನೆಯನ್ನೆ ಸಂಸತ್ತಿನ ಮುಂದೆ ಇಡಬೇಕು. ಉದಾ: ಒಂದು ಸೂಚನೆ ಪುನಃ ಕಳುಹಿಸುವ ಸೂಚನೆ ಒಂದು, ಯಾಕೆಂದರೆ ತಾವು ಇವೆರಡೂ ನಿರ್ಣಯಗಳ ಎರಡೂ ಸಂಪುಟಗಳನ್ನು ನೋಡಿದರೆ ನನಗೆ ಅವು ಖಾತರಿಯಾಗುತ್ತದೆ.

**ಮಾನ್ಯ ಉಪಾಧ್ಯಕ್ಷರು :** ನಾನು ಏನು ಮಾಡಬಹುದೆಂದರೆ,

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ತಮ್ಮ ಮಾರ್ಗದರ್ಶನ ಈ ವಿಷಯದಲ್ಲಿ ನನಗೆ ಬೇಕು.

**ಮಾನ್ಯ ಉಪಾಧ್ಯಕ್ಷರು :** ನಾನು ಈ ವಿಷಯವನ್ನು ಮತ್ತು ಬಂದ ಅನೇಕ ಸೂಚನೆಗಳನ್ನು ಚರ್ಚೆಗೆ ಬಂದವುಗಳನ್ನು ಪರಿಶೀಲಿಸಿದ್ದೇವೆ– ಸೂಚನೆ ೧ ಮತ್ತು ೨ ಇವುಗಳಿಗೆ ಸಂಬಂಧಿಸಿದ್ದಂತೆ ಸೂಚನೆ ೧– ಪರಿಶೀಲನಾ ಸಮಿತಿಯವರು ಮಾಡಿದ ತಿದ್ದುಪಡಿ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದು.

**ಪಂಡಿತ ಠಾಕೂರದಾಸ ಭಾರ್ಗವ (ಪೂ. ಪಂಜಾಬ ಜನರಲ್) :** ನಾನು ಈ ಹಂತದಲ್ಲಿ ಇದನ್ನು ಮಂಡಿಸಲು ಇಚ್ಛಿಸುವುದಿಲ್ಲ......................ನಾನು ಅದನ್ನು ಮಂಡಿಸಲು ನನಗೆ ಹಕ್ಕಿಲ್ಲವೆಂಬ ಕಾರಣದಿಂದ ಅಲ್ಲ.

**ಮಾನ್ಯ ಉಪಾಧ್ಯಕ್ಷರು :** ಹಾಗಾದರೆ ಇದು ಸರಿಯಾಗಿದೆಯೋ ಇಲ್ಲವೋ ಎಂಬುದನ್ನು ನೋಡುವ ಅವಶ್ಯಕತೆಯು ಇರುವುದಿಲ್ಲ.

ಎರಡನೆಯ ಸೂಚನೆಯ....................

**ಪಂಡಿತ ಠಾಕೂರದಾಸ ಭಾರ್ಗವ :** ಈ ಹಂತದಲ್ಲಿ ನಾನು ಇದನ್ನು ಮಂಡಿಸುವುದಿಲ್ಲ.

**ಮಾನ್ಯ ಉಪಾಧ್ಯಕ್ಷರು :** ಮಾಸ್ಟರ್ ನಂದಲಾಲ ಅವರು ಈ ಮಸೂದೆಯನ್ನು ೧೯೫೧ ಆಯವ್ಯಯದ ಅಧಿವೇಶನಕ್ಕೆ ಮುಂದೂಡಲು ತಿದ್ದುಪಡಿ ತಂದಿದ್ದಾರೆ.

**ಮಾಸ್ಟರ ನಂದಲಾಲ** (ಪು. ಪಂಜಾಬ ಜನರಲ್) : ಈಗ ನಾನು ಮಂಡಿಸುವುದಿಲ್ಲ.

**ಮಾನ್ಯ ಉಪಾಧ್ಯಕ್ಷರು :** ಈ ಮೂರು ಸೂಚನೆಗಳನ್ನು ಹಿಂದಕ್ಕೆ ತೆಗೆದುಕೊಂಡದ್ದರಿಂದ ಚರ್ಚೆಯು ಮುಕ್ತವಾಯಿತು. ಈ ಮೂರು ಸೂಚನೆಗಳನ್ನು ಯಾವುದೇ ಹೆಸರಿನಿಂದ ಕರೆದರೂ ಬಹುತೇಕ ಎಲ್ಲ ಸೂಚನೆಗಳು ಚರ್ಚೆಯನ್ನು ಮುಂದೂಡಲು ಇದ್ದವು. ಕಾನೂನು ಮಂತ್ರಿಗಳು ಮಸೂದೆಯ ಮಂಡಿಸುವ ಮೊದಲು ಈ ಮೂರು ಸೂಚನೆಗಳನ್ನು ಸೂಚಿಸಿದವರು ತಮ್ಮ ಸ್ಥಾನದಲ್ಲಿ ಎದ್ದು ನಿಂತು ತಮ್ಮ ಸೂಚನೆಗಳನ್ನು ತೆಗೆದುಕೊಳ್ಳಲು ಒತ್ತಾಯಿಸುತ್ತಾರೆಂದು ನಾನು ಭಾವಿಸಿದ್ದೆನು. ಯಾಕೆಂದರೆ ಅವರ ಸೂಚನೆಗಳನ್ನು ನಿಖಾಲಿ ಮಾಡುವ ಪೂರ್ವದಲ್ಲಿ ಮಸೂದೆ ಮಂಡಿಸಿದವರಿಗೆ ಮಾತನಾಡಲು ಅವಕಾಶ ಇರಲಿಲ್ಲ. ಈಗ ಅವುಗಳನ್ನು ಮಂಡಿಸಿರುವುದಿಲ್ಲ. ನಾನು ಸುಮ್ಮನಾದೆನು. ಈಗ ಅವುಗಳನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ಈಗ ಯಾವ ತೊಂದರೆಯೂ ಇಲ್ಲ. ಉಳಿದ ಸೂಚನೆಗಳು ಉದಾ: ಪುನಃ ಹಂಚುವ ಸಲುವಾಗಿ ಮಾಡಿದ ಸೂಚನೆ ಇಲ್ಲವೆ ಪರಿಶೀಲನಾ ಸಮಿತಿಗೆ ಒಪ್ಪಿಸಲು ಮಾಡಿದ ಸೂಚನೆಗಳು ಅವು ಯಾವ ರೂಪದಲ್ಲಿರುವವೋ ಆ ನಿಯಮಗಳ ಅನ್ವಯ ಹಕ್ಕುಳ್ಳ ವ್ಯಕ್ತಿಗಳು ಮಾಡಿದ ಸೂಚನೆಗಳಾಗಿವೆ. ಸಂಸತ್ತು ಇವುಗಳನ್ನು ವಿಚಾರಿಸಬೇಕೋ ಅಥವಾ ಬೇಡವೋ ಎಂಬುದು ಸಂಸತ್ತಿಗೆ ಬಿಟ್ಟ ಪ್ರಶ್ನೆಯಾಗಿದೆ, ಪರಿಶೀಲನಾ ಸಮಿತಿಯ ಸೂಚನೆಗಳಿಗೆ ಸಂಬಂಧಿಸಿದ್ದೇನೆಂದರೆ ಅವುಗಳ ಅವಶ್ಯಕತೆಯ ಬಗೆಗೆ ನನಗೆ ಮೊದಲು ಮನವರಿಕೆಯಾಗಬೇಕಾಗಿದೆ. ಅದಲ್ಲದೆ, ಪುನಃ ಹಂಚಲು ಮಾಡಿದ ಸೂಚನೆ ಮತ್ತು ಅವುಗಳಿಗೆ

ಸಂಬಂಧಿಸಿದಂತೆ ಅವಶ್ಯಕತೆಗಳನ್ನು ಹೇಳಿಲ್ಲ. ನಾನು ನನ್ನ ನಿರ್ಣಯ ಇಲ್ಲವೆ ನಿರ್ಣಯಗಳಿಂದ ಇವುಗಳ ಅವಶ್ಯಕತೆಯ ಬಗ್ಗೆ ಮನವರಿಕೆ ಮಾಡಿಕೊಳ್ಳಬೇಕಾಗಿದೆ. ಆದ್ದರಿಂದ ಈ ಮಸೂದೆಯನ್ನು ಮಂಡಿಸುವವರಿಗೆ ಮಾತನಾಡಬೇಕೆಂದು ಸೂಚಿಸುತ್ತಾ ಅವರ ಭಾಷಣದ ನಂತರ ಅದನ್ನು ಪರಿಶೀಲನಾ ಸಮಿತಿಗೆ ಒಪ್ಪಿಸಬೇಕು ಮತ್ತು ಹಂಚಬೇಕೆಂದು ಯಾವುದೇ ಭಾಷಣವಿಲ್ಲದೆ ಈ ಹಂತದಲ್ಲಿ ಹೇಳಬಯಸುತ್ತೇನೆ. ಆ ನಂತರ ಎಲ್ಲ ಸೂಚನೆಗಳ ಮೇಲೆ ಚರ್ಚೆ ನಡೆಯುತ್ತದೆ. ನಾನು ಅವುಗಳನ್ನು ಒಂದರ ನಂತರ ಒಂದರಂತೆ ಸಂಸತ್ತಿನ ಮುಂದೆ ಇಡುತ್ತೇನೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** : ನಿಮ್ಮ ಮಾರ್ಗದರ್ಶನಕ್ಕೆ ನಾನು ಋಣಿಯಾಗಿದ್ದೇನೆ. ಮಸೂದೆಯ ಸೂಚನೆಯನ್ನು ಮಂಡಿಸುವಾಗ ಸಹಜವಾಗಿ ಪರಿಶೀಲನಾ ಸಮಿತಿಯ ವರದಿಯಂತೆ ಈ ಪರಿಶೀಲನಾ ಸಮಿತಿಯ ಅಧ್ಯಕ್ಷರ ಮೊಟ್ಟ ಮೊದಲಿನ ಕರ್ತವ್ಯವೆಂದರೆ ಆ ಮಸೂದೆಯಲ್ಲಿ ಅವರು ಮಾಡಿದ ಬದಲಾವಣೆಗಳನ್ನು ಸಂಸತ್ತಿನ ಸದಸ್ಯರ ಗಮನ ಸೆಳೆಯುವುದು. ಯಾವ ಮೂಲ ಮಸೂದೆಯನ್ನು ಪರಿಶೀಲನಾ ಸಮಿತಿಗೆ ಒಪ್ಪಿಸಿತ್ತೋ ಅದರ ಮೇಲಿನ ವರದಿ ಈ ಪ್ರತಿಕ್ರಿಯೆಯನ್ನು ಮೊಟ್ಟಮೊದಲು ಅನುಸರಿಸಬೇಕೆಂದು ನಾನು ಸೂಚಿಸುತ್ತೇನೆ.

ಮಾನ್ಯರೆ, ಮೊದಲನೆಯ ಭಾಗವು ವಿವಾಹ ಮತ್ತು ವಿಚ್ಛೇದನೆಯ ಬಗೆಗೆ ಹೇಳುತ್ತದೆ. ಮಸೂದೆಯ ಈ ಭಾಗಕ್ಕೆ ಸಂಬಂಧಿಸಿದಂತೆ ಪರಿಶೀಲನಾ ಸಮಿತಿಯವರು ಎರಡು ಖಂಡಗಳನ್ನು ಸೇರಿಸಿದ್ದಾರೆ. ಒಂದು ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿ ಮಾಡುವುದಕ್ಕೆ ಮತ್ತು ನ್ಯಾಯಿಕ ಪ್ರತ್ಯೇಕೀಕರಣ ಇವುಗಳಿಗೆ ಸಂಬಂಧಿಸಿದವು. ಈ ಉಪಬಂಧಗಳು ವಿಶೇಷವಾಗಿ ಮೂಲ ಮಸೂದೆಯಲ್ಲಿ ಇರಲಿಲ್ಲ. ಮೂಲ ಮಸೂದೆಯನ್ನು ತಯಾರಿಸಿದವರು ಭಾರತೀಯ ವಿಚ್ಛೇದನ ಅಧಿನಿಯಮ ೧೮೬೯ ಅಧಿನಿಯಮದಲ್ಲಿ ಇದ್ದ ಉಪಬಂಧಗಳು ಅದರಲ್ಲಿ ಇದ್ದುದಕ್ಕೆ ಅವರು ಸಮಾಧಾನಪಟ್ಟಿದ್ದರು. ಆದ್ದರಿಂದ ಮೂಲ ಮಸೂದೆಯನ್ನು ತಯಾರಿಸಿದವರು ಈ ಮಸೂದೆಯಲ್ಲಿ ಭಾರತೀಯ ವಿಚ್ಛೇದನ ಅಧಿನಿಯಮವನ್ನು ಉಲ್ಲೇಖಿಸುವುದರಿಂದ ಈ ಎರಡು ಉಪಬಂಧಗಳು ಅದರಲ್ಲಿ ಇರುವುದರಿಂದ ಅದು ಅಷ್ಟೇ ಸಾಕಾಗಬಹುದೆಂದು ಮತ್ತು ಪರಿಣಾಮವಾಗಿ ಇವೆರಡೂ ವಿಷಯಗಳನ್ನು ಸ್ಪಷ್ಟವಾಗಿ ವ್ಯಕ್ತಮಾಡುವ ಅವಶ್ಯಕತೆಯು ಇಲ್ಲವೆಂದು ಅಭಿಪ್ರಾಯಪಟ್ಟಿದ್ದರು. ಆದರೆ ಪರಿಶೀಲನಾ ಸಮಿತಿಯು ಇದಕ್ಕೆ ವಿರುದ್ಧ ಅಭಿಪ್ರಾಯಪಟ್ಟರು. ಪರಿಶೀಲನಾ ಸಮಿತಿಯವರು ಇದು ಸಂಪೂರ್ಣ ಹಿಂದೂ ಕಾನೂನು ಆಗುತ್ತದೆ. ಮತ್ತು ಇದನ್ನು ಅರ್ಧಕ್ಕೆ ಬಿಡುವುದು ಸರಿಯಲ್ಲವೆಂದು ಹೇಳಬೇಕೆಂದರೆ ಉಲ್ಲೇಖನ ಹೇಳುವುದು ಸರಿಯಲ್ಲವೆಂದು ಅಭಿಪ್ರಾಯಪಟ್ಟರು. ಆದ್ದರಿಂದ ಅವರು ಈ ವಿಷಯವನ್ನು ಭಾರತೀಯ ವಿಚ್ಛೇದನ ಅಧಿನಿಯಮವನ್ನು ಉಲ್ಲೇಖಿಸಬೇಕೆಂಬುದರ ಬದಲು ಅದರಲ್ಲಿ ಕಾಣಿಸಿದ ಉಪಬಂಧಗಳನ್ನು ಈ ಮಸೂದೆಯಲ್ಲಿ ಸೇರಿಸುವುದು ಅಪೇಕ್ಷಣೀಯವೆಂದು ತಿಳಿದರು. ಅದರ ಪರಿಣಾಮವಾಗಿ ಮದುವೆ ಮತ್ತು ವಿಚ್ಛೇದನ ಕುರಿತ ಭಾಗವನ್ನು ಪರಿಶೀಲನಾ ಸಮಿತಿಯವರು ಈ ಖಂಡಗಳನ್ನು ಸೇರಿಸಿ ಈ ಭಾಗವನ್ನು ವಿಸ್ತರಿಸಿದ್ದಾರೆ. ಈ ಸಂಸತ್ತು ಮೂಲ ಮಸೂದೆ ಮತ್ತು ಪರಿಶೀಲನಾ ಸಮಿತಿ ತಯಾರಿಸಿದ ಮಸೂದೆ ಇವುಗಳಲ್ಲಿ ಯಾವುದೇ ಬದಲಾವಣೆ ಇಲ್ಲವೆಂಬುದನ್ನು ಸದನ ಮನಗಾಣಬಹುದು. ಇದರಲ್ಲಿ ಮಾಡಿದ್ದು ಇಷ್ಟೇ– ಅಂದರೆ ಭಾರತೀಯ ವಿಚ್ಛೇದನ ಅಧಿನಿಯಮಕ್ಕೆ ಸಂಬಂಧಿಸಿ ಸ್ಪಷ್ಟವಾಗಿ ವ್ಯಕ್ತಪಡಿಸಿದ್ದು ಮತ್ತು ಅವುಗಳಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಇರುವ ವಿಶೇಷ ಕಲಂಗಳನ್ನು ಈ ಅಧಿನಿಯಮದಲ್ಲಿ ಸೇರಿಸಿದ್ದು.

ದತ್ತಕಕ್ಕೆ ಸಂಬಂಧಿಸಿದಂತೆ ಪರಿಶೀಲನಾ ಸಮಿತಿಯವರು ಕೆಲವು ಹೊಸ ಬದಲಾವಣೆಗಳನ್ನು

ತಂದಿದ್ದಾರೆ. ಅವರು ಮಾಡಿದ ಮೊದಲನೆಯ ಬದಲಾವಣೆ ಅಂದರೆ ತಂದೆಯು ತನ್ನ ಧರ್ಮವನ್ನು ಪರಿತ್ಯಜಿಸಿ ಮತ್ತೊಂದು ಧರ್ಮಕ್ಕೆ ಮತಾಂತರ ಹೊಂದಿದ್ದರೆ ಈ ಕಾರಣದಿಂದ ಮಗನನ್ನು ದತ್ತಕಕ್ಕೆ ಕೊಡಲು ಅನರ್ಹನಾಗುತ್ತಾನೆ. ಇದರಿಂದ ಆ ದತ್ತಕ ಕೊಡುವ ಹಕ್ಕು ತಾಯಿಗೆ ಕೊಡಲಾಗಿದೆ. ಬೇರೆ ಶಬ್ದಗಳಲ್ಲಿ ಹೇಳುವುದೇನೆಂದರೆ ತಂದೆಯು ಹಿಂದೂ ಧರ್ಮವನ್ನು ಪರಿತ್ಯಜಿಸಿ ಮತಾಂತರಗೊಂಡು ಬೇರೊಂದು ಧರ್ಮ ಸ್ವೀಕರಿಸಿದರೆ ಅವನು ತನ್ನ ಮಗನನ್ನು ದತ್ತಕ ಕೊಡುವ ಅಧಿಕಾರದಿಂದ ಅನರ್ಹನಾಗುತ್ತಾನೆ ಎಂದು ಸೇರಿಸಲಾಗಿದೆ. ಇದರ ಪರಿಣಾಮವಾಗಿ ಇಂತಹ ಸಂದರ್ಭದಲ್ಲಿ ತಾಯಿಯು ದತ್ತಕ ಕೊಡಲು ಅಧಿಕಾರವುಳ್ಳವಳಾಗಿದ್ದಾಳೆ. ಒಂದು ವೇಳೆ ವಿಧವೆ ಇದ್ದರೆ ಮತ್ತು ಅವಳ ಮಗನಿದ್ದರೆ ಆ ಹುಡುಗನನ್ನು ಆ ತಾಯಿಯು ದತ್ತಕ ಕೊಡಬಹುದು. ತಂದೆಯು ಜೀವಂತ ಇಲ್ಲದಾಗ ತಾಯಿ ಮಗನನ್ನು ದತ್ತಕ ಕೊಡಬಹುದು. ಇಲ್ಲಾ ಪುನಃ ಅನರ್ಹತೆಯನ್ನು ಸೇರಿಸಿದ್ದಾರೆ. ಅದೇನೆಂದರೆ ಈ ವಿಧವೆ ಹಿಂದೂ ಧರ್ಮ ತ್ಯಜಿಸಿದ್ದರೆ ಆ ತಾಯಿಯು ಆ ಹುಡುಗನನ್ನು ದತ್ತಕ ಕೊಡಲು ಇರತಕ್ಕ ಆ ಹಕ್ಕನ್ನು ಕಳೆದುಕೊಳ್ಳುತ್ತಾಳೆ. ಪರಿಶೀಲನಾ ಸಮಿತಿಯವರು ದತ್ತಕ ತೆಗೆದುಕೊಳ್ಳುವ ಬೇರೆ ಬೇರೆ ಪದ್ದತಿಗಳ ಬಗ್ಗೆ ಬದಲಾವಣೆ ಮಾಡಿದ್ದಾರೆ. ಈ ಸಂಸತ್ತಿಗೆ ಗೊತ್ತಿರುವಂತೆ ದತ್ತಕ ತೆಗೆದುಕೊಳ್ಳುವ ವಿಧಾನಗಳು ಅನೇಕ ಇರುತ್ತವೆ. ಸ್ಮೃತಿ ಪ್ರಕಾರ ಮಾನ್ಯ ಮಾಡಿದ ದತ್ತಕ ಪದ್ಧತಿ ಇದನ್ನು ದತ್ತಕ ಪದ್ಧತಿ ಅಂತಾ ಕರೆಯಲಾಗಿದೆ. ಈ ದತ್ತಕ ಪದ್ಧತಿ ಅಲ್ಲದೆ ಅವರು ರೂಢಿ ಸಂಪ್ರದಾಯದ ಪ್ರಕಾರ ದತ್ತಕ ತೆಗೆದುಕೊಳ್ಳುವ ಅವು ಯಾವುವೆಂದರೆ ಗೋದಾ ದತ್ತಕ, ಕೃತ್ರಿಮ ದತ್ತಕ, ದ್ವಾಶಾಯ ದತ್ತಕ. ಪರಿಶೀಲನಾ ಸಮಿತಿಗೆ ಅನಿಸಿದ್ದಂತೆ ಅವರು ಈ ಕಾನೂನುಗಳನ್ನು ಕ್ರೋಢೀಕರಿಸಬೇಕೆಂದು ಹೇಳಿದರು. ರೂಢಿಸಂಪ್ರದಾಯಗಳಿಗೆ ಅನುಮತಿ ಕೊಡುವುದು ಮತ್ತು ಅವು ಬೆಳೆಯುವುದು ಅಪೇಕ್ಷಣೀಯವಲ್ಲ. ಯಾಕೆಂದರೆ ಅದರ ರೂಢಿ ಸಂಪ್ರದಾಯಗಳನ್ನು ಶಾಸನದಲ್ಲಿ ಅಳವಡಿಸಬೇಕು ಮತ್ತು ಹಿಂದೂ ಕೋಡ್ ಇದು ಕೆಲವು ವರ್ಷಗಳ ನಂತರ ಅವು ರದ್ದು ಆಗುತ್ತವೆ. ಆದ್ದರಿಂದ ಪರಿಶೀಲನಾ ಸಮಿತಿಯು ಹೇಳಿದ್ದೇನೆಂದರೆ ಈ ಅಧಿನಿಯಮದ ಅಡಿಯಲ್ಲಿ ಯಾರಾದರೂ ದತ್ತಕ ತೆಗೆದು ಕೊಳ್ಳಲು ಇಚ್ಛಿಸಿದರೆ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಮಾತ್ರವಲ್ಲದೆ ಬೇರೆ ರೀತಿ ದತ್ತಕ ತೆಗೆದುಕೊಳ್ಳಲು ಬರುವುದಿಲ್ಲ. ದತ್ತಕವು ಒಂದೇ ನಮೂನೆಯಾಗಿದೆ. ಮತ್ತು ಬೇರೆ ಯಾವುದೂ ಇರುವುದಿಲ್ಲ.

ಮಾನ್ಯರೇ, ನಾನು ಈಗ ದತ್ತಕ ತೆಗೆದುಕೊಂಡ ಹುಡುಗನ ಆಸ್ತಿಯು ಆತನನ್ನು ದತ್ತಕ ತೆಗೆದುಕೊಳ್ಳುವ ಪೂರ್ವದಲ್ಲಿ ಯಾರಲ್ಲಿ ಅದು ನಿಹಿತವಾಗಿತ್ತು ಅವರಿಂದ ಅದನ್ನು ತಪ್ಪಿಸುವುದು. ಈ ಸದನದ ಪ್ರತಿ ಸದಸ್ಯನಿಗೂ ಈಗ ಹಿಂದೂ ಕಾನೂನಿನ ಉಪಬಂಧಗಳ ಬಗೆಗೆ ಗೊತ್ತಿದೆ. ಈಗಿದ್ದ ಹಿಂದೂ ಕಾನೂನಿನಲ್ಲಿ ಒಬ್ಬ ಹುಡುಗ ದತ್ತಕ ತೆಗೆದುಕೊಂಡವನು ಅವನನ್ನು ಯಾವುದೇ ಹಂತದಲ್ಲಿ ದತ್ತಕ ತೆಗೆದುಕೊಂಡರೆ ಅದು ನಡೆಯುತ್ತದೆ ಕಾನೂನಿನ ಅನ್ವಯವಾಗುತ್ತದೆ. ಅದಕ್ಕೆ ಪರವಾನಗಿ ಇದೆ. ತಂದೆಯ ನಿಧನದ ನಂತರ ೪೫ ವರ್ಷಗಳು ಆದ ಮೇಲೆ ಆತನನ್ನು ದತ್ತಕ ತೆಗೆದುಕೊಂಡಿರಬಹುದು, ಕಾಲ ಅವಧಿಯು ಅವನ ಹಕ್ಕಿನಲ್ಲಿ ಯಾವುದೇ ಬದಲಾವಣೆ ಮಾಡುವುದಿಲ್ಲ. ಆ ಹಕ್ಕು ಯಾವುವೆಂದರೆ ಆ ವಿಧವೆ ಆ ಹುಡುಗನನ್ನು ದತ್ತಕ ತೆಗೆದುಕೊಳ್ಳುವ ಪೂರ್ವದಲ್ಲಿ ಯಾವುದೇ ಆಸ್ತಿಯನ್ನು ಪರಾಧೀನಮಾಡಿದ್ದರೆ ಅಂತಹ ಪರಾಧೀನಮಾಡಿದ ಆಸ್ತಿಯನ್ನು ರದ್ದುಪಡಿಸಲು ದಾವೆ ಮಾಡುವ ಹಕ್ಕು, ಆ ಹುಡುಗನಿಗೆ ಇದೆ. ಈ ವಿಷಯದ ಮೇಲೆ ಯಾವುದೊಂದು ವ್ಯಾಜ್ಯ ಈ ವಿಷಯದ ಮೇಲೆ ಹೋಗುತ್ತದೆ ಯಾರಾದರೂ ಹಿಂದೂ ಕಾನೂನಿನ ಅನ್ವಯ ಇರತಕ್ಕಂತಹ ಹಿಂದೂಗಳಲ್ಲಿಯ ವ್ಯಾಜ್ಯಗಳನ್ನು ಪರಿಶೀಲಿಸಿ ನೋಡಿದರೆ,

ಅಂತಹ ವ್ಯಾಜ್ಯಗಳಲ್ಲಿ ಇರುವ ಪ್ರಶ್ನೆಯು ದತ್ತಕ ತೆಗೆದುಕೊಂಡ ಹುಡುಗರ ಆಸ್ತಿಗೆ ಸಂಬಂಧಿಸಿದವುಗಳು ಬಹು ಸಂಖ್ಯೆಯಲ್ಲಿ ಇರುತ್ತವೆಂದು ನನಗೆ ಖಾತರಿ ಇದೆ. ಆದ್ದರಿಂದ ಈ ವಿಷಯವನ್ನು ಅಂತಿಮವಾಗಿ ನಿರ್ಣಯಿಸುವುದು ಸೂಕ್ತವಾದ ಸಮಿತಿಯವರು ಈ ದತ್ತಕವನ್ನು ಎರಡು ಭಾಗವಾಗಿ ವರ್ಗೀಕರಿಸಿದರು. ತಂದೆಯು ತೀರಿಕೊಳ್ಳುವ ಪೂರ್ವದಲ್ಲಿ ೩ ವರ್ಷ ಮೊದಲು ಆದ ದತ್ತಕ ಮತ್ತು ಈ ಅಧಿನಿಯಮವು ಜಾರಿಯಲ್ಲಿ ಬಂದ ನಂತರ ಆದ ದತ್ತಕ. ದತ್ತಕ ತಂದೆ ತೀರಿಕೊಳ್ಳುವ ೩ ವರ್ಷ ಮೊದಲು ದತ್ತಕ ಆಗಿದ್ದರೆ ಹಿಂದೂ ಅಧಿನಿಯಮದಲ್ಲಿ ದತ್ತಕ ಮಗನಿಗೆ ಇರುವ ಮೂಲ ಹಕ್ಕು ಈತನಿಗೂ ಆ ಹಕ್ಕುಗಳು ಪ್ರಾಪ್ತವಾಗುತ್ತವೆ. ಆದರೆ ದತ್ತಕ ತಂದೆ ತೀರಿಕೊಂಡ ೩ ವರ್ಷ ನಂತರ ದತ್ತಕವಾದರೆ ಅವನು ಅಂತಹ ಪರಾಧೀನ ಮಾಡಿದ ಆಸ್ತಿ ರದ್ದುಗೊಳಿಸುವ ಅಧಿಕಾರವು ಅವನಿಗೆ ಇರುವುದಿಲ್ಲ. ಈ ದತ್ತಕದಿಂದ ಹಿಂದೂ ಕಾನೂನಿನಲ್ಲಿ ಆದ ಪರಿಣಾಮವೆಂದರೆ ದತ್ತಕ ತೆಗೆದುಕೊಂಡ ವಿಧವೆ ತಾಯಿಯಿಂದ ಆ ಆಸ್ತಿಯನ್ನು ದತ್ತಕ ಮಗನು ಪಡೆಯುವುದು ಇದರ ಪರಿಣಾಮವಾಗಿ ಸಂಪೂರ್ಣ ಸ್ಥಿರ ಹಾಗೂ ಜಂಗಮ ಆಸ್ತಿ ದತ್ತಕ ಮಗನಿಗೆ ಹೋಗುತ್ತದೆ. ಅಂಥವನು ಒಂದು ದೃಷ್ಟಿಯಲ್ಲಿ ಅಪರಿಚಿತನಿದ್ದನು. ಆ ಮನೆತನದಲ್ಲಿ ಆ ಹುಡುಗನನ್ನು ದತ್ತಕ ತಂದೆಯ ಮನೆ ಸೇರಿದನೆಂದು ಭಾವನೆಯು ಏನೇ ಇದ್ದರೂ ಅವನು ವಿಶೇಷವಾಗಿ ತನ್ನ ಸಂಬಂಧವನ್ನು ತಂದೆಯ ಮನೆತನದ ಸದಸ್ಯರೊಂದಿಗೆ ಮುಂದುವರೆಯಿಸುತ್ತಾನೆ. ಇದರ ಪರಿಣಾಮವಾಗಿ ದತ್ತಕ ತೆಗೆದುಕೊಂಡ ನಂತರ ದತ್ತಕ ತೆಗೆದುಕೊಂಡ ವಿಧವೆಗೆ ದತ್ತಕದ ಪರಿಣಾಮವಾಗಿ ಆಕೆಯು ಯಾವುದೇ ನಮೂನೆಯ ಸಂರಕ್ಷಣೆಯನ್ನು ತನಗಾಗಿ ಪಡೆಯದೆ ತನ್ನ ಸ್ವಂತ ತಾಯಿಯಿಂದ, ಸ್ವಂತ ಮಗನಿಂದ ಪಡೆಯತಕ್ಕ ಸಂರಕ್ಷಣೆಯನ್ನು ಈಕೆಯು ಪಡೆಯದೆ ಈ ಹುಡುಗನು ಆಸ್ತಿಯೊಂದಿಗೆ ಓಡಿಹೋದನು. ತಾಯಿಗೆ ಜೀವನಾಂಶ ಪಡೆಯುವ ಹಕ್ಕನ್ನು ಮಾತ್ರಬಿಟ್ಟು ಓಡಿಹೋದನೆಂದು ಅವಳಿಗೆ ಅನಿಸುತ್ತದೆ. ಹೆಣ್ಣು ಮಕ್ಕಳಿಗೆ ಸಂರಕ್ಷಣೆ ಕೊಡುವ ದೃಷ್ಟಿಯಿಂದ ಹೀಗೆ ಮಾಡುವುದು ಅಪೇಕ್ಷಣೀಯವಲ್ಲವೆಂದು ನಮಗೆ ಅನಿಸಿತು ಮತ್ತು ಅದರ ಪರಿಣಾಮವಾಗಿ ನಾವು ಕೆಲವು ಬದಲಾವಣೆಗಳನ್ನು ಮಾಡಿದೆವು. ರಾವ್ ಸಮಿತಿಯಲ್ಲಿ ಮಾಡಿದ ಮೂಲ ಭಿನ್ನತೆಯನ್ನು ಕೈಬಿಡಲಾಯಿತು. ಮಗನಿಗೆ ಅವನ ತಂದೆ ತೀರಿಕೊಂಡ ನಂತರ ಅವನಿಗೆ ಹಕ್ಕು ಬರದೇ ಅವನು ದತ್ತಕ ದತ್ತಕವಾದ ದಿನಾಂಕದಿಂದ ಅವನಿಗೆ ಹಕ್ಕು ಬರುವಂತೆ ಉಪಬಂಧ ಕಲ್ಪಿಸಲಾಯಿತು. ಆದ್ದರಿಂದ ಅವನ ದತ್ತಕವಾಗುವ ಪೂರ್ವದಲ್ಲಿ ಮಾಡಿದ ಯಾವುದೇ ಪರಾಧೀನತೆಯು ಅವನ ಕೈಗೆ ನಿಲುಕದಂತೆ ಇದ್ದು ಅವನು ಅವುಗಳನ್ನು ಪ್ರಶ್ನಿಸದಂತೆ ಮಾಡಲಾಯಿತು. ಎರಡನೆಯ ಉಪಬಂಧ ನಾವು ಕಲ್ಪಿಸಿದ್ದು ದತ್ತಕ ಮಗನು ದತ್ತಕ ತಾಯಿಯ ಹಕ್ಕನ್ನು ದತ್ತಕದ ಪರಿಣಾಮವಾಗಿ ಆಕೆಯ ಆಸ್ತಿಯ ಮೇಲಿನ ಹಕ್ಕನ್ನು ಕಸಿದುಕೊಳ್ಳದಂತೆ ಉಪಬಂಧವನ್ನು ಮಾಡಿದ್ದೇವೆ. ಈ ತಿದ್ದುಪಡಿಯಾದ ಮಸೂದೆಯು ಏನು ಹೇಳುತ್ತದೆಂದರೆ ಕೇವಲ ಆಸ್ತಿ ದತ್ತಕ ತಾಯಿಯ ವಿಧವೆಯ ಅರ್ಧ ಆಸ್ತಿ ಮಾತ್ರ ದತ್ತಕ ಮಗನಿಗೆ ಹೋಗುತ್ತದೆ. ಉಳಿದ ಅರ್ಧ ಆಸ್ತಿ ಆ ವಿಧವೆ ದತ್ತಕ ತೆಗೆದುಕೊಂಡಿದ್ದು ಏನೇ ಇದ್ದರೂ ಆಸ್ತಿಯ ಆಕೆಯ ಕಬಜ ಮತ್ತು ಉಪಭೋಗದಲ್ಲಿ ಮುಂದುವರೆಯುತ್ತದೆ. ಇದರ ಪರಿಣಾಮವೆಂದರೆ ಸಮಿತಿಯವರು ದತ್ತಕ ತೆಗೆದುಕೊಳ್ಳಲು ಪರವಾನಗಿ ಕೊಟ್ಟಿದ್ದಾರೆ. ಹಿಂದೂಗಳಿಗೆ ತಮ್ಮ ವಂಶ ಅವ್ಯಾಹತವಾಗಿ ಬೆಳೆಯಲು ಅವಶ್ಯವೆಂದು ಈ ದತ್ತಕಕ್ಕೆ ಪರವಾನಗಿ ಕೊಟ್ಟಿದ್ದಾರೆ. ಆದರೆ ಅದೇ ವೇಳೆಗೆ ಈ ದತ್ತಕವು ತಾಯಿಯನ್ನು ಸಂಪೂರ್ಣ ಭಿಕ್ಷುಕಿಯಾಗದಂತೆ ನಾವು ಸಂಪೂರ್ಣ ಕಾಳಜಿ ವಹಿಸಿದ್ದೇವೆ.

**ಮಾನ್ಯ ಉಪಾಧ್ಯಕ್ಷರು:** ಇದು ದೇಶಮುಖ ಅಧಿನಿಯಮದ ಕೆಳಗೆ ಆದ ಪರಿಣಾಮವಲ್ಲವೆ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಇಲ್ಲ, ನಾನು ಹೇಳಿದಂತೆ ಅವಳು ಜೀವನಾಂಶ ಮಾತ್ರ

ಪಡೆಯುತ್ತಾಳೆ.

**ಮಾನ್ಯ ಉಪಾಧ್ಯಕ್ಷರು :** ಆಕೆಯು ಆಸ್ತಿಯಲ್ಲಿ ಅರ್ಧ ಹಿಸ್ಸೆ ಪಡೆಯುತ್ತಾಳೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ದತ್ತಕವಾದ ತತ್‌ಕ್ಷಣ ಆದು ಎಲ್ಲವೂ ಮಗನಿಗೆ ಹೊಗುತ್ತದೆ.

**ಪ್ರಭುದಯಾಳ ಹಿಮತ್ಸಿನಿಂಗಕಾ** (ಪ. ಬಂಗಾಳ ಸಾಮಾನ್ಯ) : ೧೯೩೭ನೆಯ ಅಧಿನಿಯಮದ ಅನ್ವಯ ಅವಳು ಮಗನ ಜೊತೆಗೆ ಸಹವಾರಸುದಾರಳಾಗುತ್ತಾಳೆ.

**ಶ್ರೀ ಕೃಷ್ಣಸ್ವಾಮಿ ಭಾರತಿ** (ಮದ್ರಾಸ್ ಸಾಮಾನ್ಯ) : ಮಗನು ನಂತರ ಬರುತ್ತಾನೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಅದು ಹಾಗೆ ಇರಬಹುದು. ಈಗ ನಾವು ಅಲ್ಪವಯಿ ಆಜ್ಞಾನ ಪಾಲಕತ್ವ ಬರುತ್ತದೆ. ಈ ಮಸೂದೆಯಲ್ಲಿ ಕೇವಲ ಎರಡು ಬದಲಾವಣೆಗಳು. ಪರಿಶೀಲನಾ ಸಮಿತಿಯು ಮಾಡಿದ ಮೊದಲನೆಯ ಬದಲಾವಣೆಯೆಂದರೆ ತಂದೆಯು ಹಿಂದೂ ಧರ್ಮವನ್ನು ತ್ಯಜಿಸಿದರೆ ಅವನಿಗೆ ತನ್ನ ಅಲ್ಪವಯಿ ಮಗನ ಸಂರಕ್ಷಕನಾಗುವ ಅಧಿಕಾರವನ್ನು ಕಳೆದುಕೊಳ್ಳುತ್ತಾನೆ. ಇದನ್ನು ತೆಗೆದುಹಾಕಲಾಗಿದೆ. ಮೊದಲಿನ ಕಾನೂನಿನ ತಂದೆಯ ಸಹಜ ಪಾಲಿಕೆ ಮತ್ತು ಅವನಿಗೆ ಧರ್ಮದಲ್ಲಿ ಇಲ್ಲವೆ ಇನ್ನಾವುದೋ ಬದಲಾವಣೆ ಆದಲ್ಲಿ ಅದಕ್ಕೆ ಏನೂ ಆಗುತ್ತಿರಲಿಲ್ಲ. ಅವನು ಅಲ್ಪವಯಿ ಸಂರಕ್ಷಣಾದಾರನೆಂದು ಮುಂದುವರೆಯುತ್ತಿದ್ದನು. ಸದಸ್ಯರು ಭಾವಿಸಿದ್ದೇನೆಂದರೆ ಸಮಿತಿಗೆ ಅನಿಸಿದ್ದು ಏನೆಂದರೆ, ಈ ಹಿಂದೂ ಕೋಡು ಹಿಂದೂ ಸಮಾಜವನ್ನು ಮತ್ತು ಅದರ ಕಾನೂನನ್ನು ಕ್ರೋಢೀಕರಿಸುವ ಉದ್ದೇಶವಿತ್ತೆಂದು ಭಾವಿಸುತ್ತದೆ.

ಈ ಕರಾರನ್ನು ವಿಧಿಸುವುದು ಅಪೇಕ್ಷಣೀಯವೆಂದು ಕಂಡುಬಂದಿತು. ತಂದೆಯು ಹಿಂದೂ ಆಗಿ ಮುಂದುವರೆಯುವವರೆಗೆ ಅವನು ಸಹಜಪಾಲಕನಾಗಿ ತಂದೆ ಮುಂದುವರೆಯಲು ಅಪೇಕ್ಷಣೀಯವೆಂದು ಭಾವಿಸಿತು. ಈ ತಿದ್ದುಪಡಿ ಮಸೂದೆಯನ್ನು ಸಹ ಮತ್ತೊಂದು ಬದಲಾವಣೆಯನ್ನು ತಂದಿದ್ದು ಅದೇನೆಂದರೆ ಹಿಂದೂ ವಿಧವೆಯು ತನ್ನ ಅಲ್ಪವಯಿ ಮಕ್ಕಳಿಗೆ ಒಂದು ದಸ್ತಾವೇಜಿನ ಮೂಲಕ ಪಾಲಕನನ್ನು ನೇಮಕ ಮಾಡಲು ಅಧಿಕಾರವನ್ನು ಕೊಡಲಾಗಿದೆ. ಆದರೆ ಅವಳ ಗಂಡನು ಯಾರನ್ನೂ ಆಜ್ಞಾಪಾಲಕನೆಂದು ನೇಮಿಸಿರಬಾರದು. ಆಕೆಗೆ ಇಂತಹ ಯಾವುದೇ ಅಧಿಕಾರವು ಇರಲಿಲ್ಲ. ಆದರೆ ಪರಿಶೀಲನಾ ಸಮಿತಿಯವರು ಆಕೆಗೆ ಈ ಅಧಿಕಾರವನ್ನು ಕೊಟ್ಟಿದ್ದಾರೆ.

ಮಾನ್ಯರೇ, ನಾನು ಮಸೂದೆಯಲ್ಲಿಯ ವಾರಸಾ ಭಾಗಕ್ಕೆ ಬರುತ್ತೇನೆ. ಗಂಡುಮಕ್ಕಳ ವಾರಸಾದಲ್ಲಿ ಆದ ಬದಲಾವಣೆಯ ಬಗ್ಗೆ ಮೊದಲು ಹೇಳುತ್ತೇನೆ. ರಾವ್ ಸಮಿತಿಯವರು ಹಿಂದು ಕಾನೂನಿನಲ್ಲಿ ನಿಬಿಡ ಶ್ರೇಣಿಯ ವಾರಸುದಾರರನ್ನು ಮೊದಲನೆಯ ವರ್ಗದಲ್ಲಿ ಇಟ್ಟಿದ್ದನ್ನು ಸಂಬಂಧಿಸಿದಂತೆ ಪರಿಶೀಲನಾ ಸಮಿತಿಯು ಯಾವುದೇ ಬದಲಾವಣೆಯನ್ನು ಮಾಡಿರುವುದಿಲ್ಲ – ಕಾರಣ ನಿಬಿಡ ಶ್ರೇಣಿಯನ್ನು ವಾರಸದಿಂದ ಹಾಗೂ ಅವರ ವಾರಸಾ ಅನುಕ್ರಮಣಿಕೆಯಲ್ಲಿ ಹೀಗೆ ಎರಡರಲ್ಲಿ ಅದನ್ನು ಹಾಗೆಯೇ ಇಟ್ಟದ್ದಾರೆ. ಆ ವಿಷಯವನ್ನು ಯಾವುದೇ ರೀತಿ ಬದಲಾವಣೆ ಮಾಡಿಲ್ಲ. ಆದರೆ ಈ ರಾವ್ ಸಮಿತಿಯಲ್ಲಿಯೇ ಒಂದರಿಂದ ನಾಲ್ಕು ವರ್ಗಗಳಲ್ಲಿ ಸೇರಿಸಿದ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ವಂಶಾವಳಿಯ ಅನುಕ್ರಮಣ ಅಲ್ಲದೆ ವಂಶಾವಳಿಗೆ ಪ್ರಾಶಸ್ತ್ಯಕೊಡುವ ವಿಷಯ ಬಗ್ಗೆ ಹೀಗೆ ಎರಡೂ ವಿಷಯಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದ್ದಾರೆ. ಸಮಿತಿಯವರು ರಕ್ತಸಂಬಂಧವಲ್ಲದೆ ಸ್ವಾಭಾವಿಕ ಪ್ರೀತಿ ಮತ್ತು ವಾತ್ಸಲ್ಯ ಈ ತತ್ವಗಳನ್ನು ಅನುಸರಿಸಿದ್ದಾರೆ. ಈ ದೃಷ್ಟಿಯಿಂದ ಪರಿಶೀಲನಾ ಸಮಿತಿಯವರು ಮೂಲ ಮಸೂದೆಯಲ್ಲಿಯ ಖಂಡ ೧ರಿಂದ ೪ರಲ್ಲಿ ಹೇಳಿದ ವಾರಸುದಾರರ ಬಗ್ಗೆ ಕೆಲವು ಬದಲಾವಣೆಯನ್ನು ಪರಿಶೀಲನಾ ಸಮಿತಿಯು ಮಾಡಿ, ಈ

ಸಮಿತಿಯು ಒಂದು ಹೆಚ್ಚಿನ ಕೆಲಸ ಮಾಡಿದೆ. ಮೃತನ ವಾರಸುದಾರರಲ್ಲಿ ಗೋತ್ರದ ಮತ್ತು ಸಜಾತಿಯ ಬಂಧು ಇವರಲ್ಲಿ ತಲೆಮಾರಿನ ಸಂಖ್ಯೆಯನ್ನು ಕಡಿಮೆ ಮಾಡಿದ್ದಾರೆ. ಮತ್ತು ಉಳಿದ ಇತರ ವಾರಸುದಾರರನ್ನು ತೆಗೆದುಹಾಕಿದ್ದಾರೆ. ಉದಾಹರಣೆಗಾಗಿ– ವಾರಸುದಾರರು ಯಾರು ಸಂಬಂಧ ಇರುವುದಿಲ್ಲ, ಬ್ರಹ್ಮಚಾರಿ ಗುರು ಮತ್ತು ಇಂತಹವರು ಅದರ ಮೂಲ ಮಸೂದೆಯಲ್ಲಿಯ ವಾರಸುದಾರರ ಸಂಖ್ಯೆಯನ್ನು ಕಡಿಮೆ ಮಾಡಿದ ಕಾರಣವೆಂದರೆ ನಾವು ಕೋಡಿನ ಅಡಿಯಲ್ಲಿ ಪ್ರತಿಯೊಬ್ಬ ಹಿಂದೂವಿಗೆ ಮೃತ್ಯುಪತ್ರ ಮಾಡುವ ಹಕ್ಕು ಕೊಡುತ್ತಿದ್ದೇವೆ. ಪ್ರತಿಯೊಂದು ಮಹತ್ವದ ಪತ್ರಿಕೆಯಲ್ಲಿ ಈ ಬಗ್ಗೆ ಟೀಕೆಯ ಪಟ್ಟಿಯನ್ನು ಮಾಡಿದ್ದಾರೆ. ಉದಾಹರಣೆಗಾಗಿ ಜರ್ನಲ್ ಆಫ್ ಕಂಪೆರೇಟಿವ್ಸ್ ರಿಜಿಸ್ಟ್ರೇಶನ್ ಈ ಪತ್ರಿಕೆಯಲ್ಲಿ ಒಬ್ಬ ಶ್ರೇಷ್ಠ ವಕೀಲರು ಹೀಗೆ ಹೇಳಿದ್ದಾರೆ. ಅದೇನೆಂದರೆ ನೀವು ಪ್ರತಿಯೊಬ್ಬ ಹಿಂದುವಿಗೆ ಮೃತ್ಯುಪತ್ರ ಮಾಡುವ ಹಕ್ಕು ಯಾವಾಗ ಕೊಡುತ್ತೀರಿ. ಆಗ ಮೃತನಿಂದ ೧೪ ತಲೆಮಾರಿನವರೆಗೆ ವಿಸ್ತರಿಸುವ ವಾರಸುದಾರರ ಉದ್ದವಾದ ಪಟ್ಟಿಯನ್ನು ಕೊಡುವುದು ಅನವಶ್ಯಕ. ಒಂದು ವೇಳೆ ಮೃತ ವ್ಯಕ್ತಿಯು ಅವನಿಗೆ ಸಂಬಂಧಿಕ ನಾದವನು ೧೪ ತಲೆಮಾರಿನವನಿದ್ದರೆ ಅವನಿಗೆ ಅವನ ಆಸಕ್ತಿ ಇದ್ದರೆ ಮತ್ತು ಆಸಕ್ತಿವುಳ್ಳ ನಿರ್ದಿಷ್ಟ ವ್ಯಕ್ತಿಗೆ ತನ್ನ ಆಸ್ತಿಯ ಭಾಗವನ್ನು ಮೃತ್ಯುಪತ್ರ ಮಾಡಿಕೊಡಲು ಮುಕ್ತನಾಗಿದ್ದಾನೆ.

ಒಂದು ವೇಳೆ ಮೃತನು ತನ್ನ ಜೀವಿತ ಕಾಲದಲ್ಲಿ ತಾನೇ ತನ್ನ ಸಂಬಂಧಿಕರನ್ನು ೧೪ನೆಯ ತಲೆಮಾರಿನವ ನನ್ನ ತನ್ನ ಸಂಬಂಧಿಕನೆಂದು ನೆನಪನ್ನು ಇಟ್ಟುಕೊಳ್ಳದಿದ್ದರೆ ಆಗ ಕೇವಲ ಅವನು ಮೃತ್ಯುಪತ್ರವಿಲ್ಲದೆ ಸತ್ತರೆ ಅವನಿಗೆ ಆ ಆಸ್ತಿಯ ಅವನಿಗೆ ಯಾಕೆ ಹೋಗಬೇಕು, ಅದಕ್ಕೆ ವಿಶೇಷ ಕಾರಣವಿಲ್ಲ. ಪರಿಶೀಲನಾ ಸಮಿತಿಯವರು ಈ ಒಂದು ಉಪಬಂಧವನ್ನು ಅಂಗೀಕರಿಸಲು ಇದೊಂದು ಕಾರಣವಾಗಿದೆ.

ನಾನು ಈ ಸಂಸತ್ತಿನ ಗಮನವನ್ನು ವಿಧವೆಯ ಅನರ್ಹತೆಯ ಕುರಿತು ಪರಿಶೀಲನಾ ಸಮಿತಿಯವರು ಸೇರಿಸಿದ್ದು ಅಂದರೆ ಅದು ಹೀಗೆ ಇದೆ– ವಿಧವೆ ಪುನಃ ಲಗ್ನವಾದರೆ ಈಕೆಯು ತನ್ನ ವಾರಸಾ ಹಕ್ಕನ್ನು ಕಳೆದುಕೊಳ್ಳುತ್ತಾಳೆ. ಈಗ ನಾನು ಸಂಸತ್ತಿನ ಗಮನ ಸೆಳೆಯಬಹುದು.

ಈಗ, ಮಗಳ ಹಿಸ್ಸೆಯ ಸಂಬಂಧವಾಗಿ ಮೂಲ ಮಸೂದೆಯಲ್ಲಿ ಇದ್ದು ಪರಿಶೀಲನಾ ಸಮಿತಿಯವರು ಮಹತ್ವದ ಬದಲಾವಣೆಯನ್ನು ಮಾಡಿದ್ದಾರೆ. ಮೂಲ ಮಸೂದೆಯಲ್ಲಿ ಮಗಳು ಮಗನ ಹಿಸ್ಸೇದ ಅರ್ಧ ಹಿಸ್ಸೆಗೆ ಸಮಾನಾಗಿ ಹಿಸ್ಸೆ ಪಡೆಯುವಳೆಂದು ಹೇಳಿದೆ ಮತ್ತು ಇದನ್ನು ಸಮತೋಲನ ಮಾಡಲು ವಾರಸಾ ಪಟ್ಟಿಯಲ್ಲಿ ಸ್ತ್ರೀಧನ ಆಸ್ತಿಯಲ್ಲಿ ಸಮಿತಿಯವರು ಮಗನಿಗೆ ಮಗಳು ಎಷ್ಟು ಹಿಸ್ಸೆ ತೆಗೆದುಕೊಳ್ಳುವಳೋ ಅಷ್ಟು ತೆಗೆದುಕೊಳ್ಳುವಳು. ಆದರೆ ಅರ್ಧದಷ್ಟು ಮಗನು ತೆಗೆದುಕೊಳ್ಳುತ್ತಾನೆಂದು ಅವಕಾಶ ಕಲ್ಪಿಸಿದ್ದಾರೆ. ಇದರಿಂದ ಮಗಳು ತಂದೆ ಆಸ್ತಿಯಲ್ಲಿ ಅರ್ಧ ಹಿಸ್ಸೆ ಮತ್ತು ಮಗನು ತಾಯಿಯ ಆಸ್ತಿಯಲ್ಲಿ ಅರ್ಧ ಪಡೆಯುತ್ತಾನೆ. ಅದು ಅಸಮಾನತೆಯ ಪ್ರಮಾಣವಾಗುವುದೆಂದು ಹೇಳುವುದಿಲ್ಲ. ಆದರೆ ಹೇಗೊ ಪರಿಶೀಲನಾ ಸಮಿತಿಯಲ್ಲಿ ನಾನು ನಂಬಿದ್ದು ಏನೆಂದರೆ ಸದಸ್ಯರು ಹುರುಪಿನಲ್ಲಿ ನಿರ್ಣಯಿಸುವಾಗ ಮಗಳಿಗೆ ತಂದೆಯ ಆಸ್ತಿಯಲ್ಲಿ ಅರ್ಧದಿಂದ ಮಗನಿಗೆ ಸಮನಾಗಿ ಬಂದು ಪೂರ್ಣ ಹಿಸ್ಸೆಗೆ ಹೆಚ್ಚಿಸಿದ್ದಾರೆ.

**(ಮಾನ್ಯ ಸದಸ್ಯರು ....** ಮಗನಿಗೂ ಕೊಡಲಾಗಿದೆ)

ನನಗೆ ಅದು ಗೊತ್ತಿದೆ. ಪರಿಶೀಲನಾ ಸಮಿತಿಯವರು ಹೆಣ್ಣುಮಕ್ಕಳ ವಾರಸಾಕ್ಕೆ ಸಂಬಂಧಿಸಿದಂತೆ ಕೇವಲ ಎರಡು ಬದಲಾವಣೆಗಳನ್ನು ಮಾಡಿದ್ದಾರೆ. ಈಗ ಅಸ್ತಿತ್ವದಲ್ಲಿರುವ ಕಾನೂನಿನ ಪ್ರಕಾರ ಸ್ತ್ರೀಧನ ಆಸ್ತಿಯಲ್ಲಿ ಹೆಣ್ಣುಮಗಳ ಗಂಡನು ಹಿಂದೂ ಕಾನೂನಿನಲ್ಲಿ ಬಹಳ ತಡವಾಗಿ ಬರುತ್ತಾನೆ ಮತ್ತು ಅದನ್ನು ರಾವ್ ಸಮಿತಿಯು ಸೇರಿಸಿದೆ. ಪರಿಶೀಲನಾ ಸಮಿತಿಯವರಿಗೆ ಅದು ಅಸಮಂಜಸವೆಂದು ಅಭಿಪ್ರಾಯಪಟ್ಟರು.

ಯಾಕೆಂದರೆ ಇದು (ಇದು ಮೇಲಿಂದ ಮೇಲೆ ಸಾಧ್ಯವಿದೆ) ಹೆಚ್ಚಿನ ಆಸ್ತಿ ಯಾವುದು ಸ್ತ್ರೀಧನವೆನ್ನುತ್ತೇವೆಯೋ ಇಲ್ಲವೆ ಯಾವ ಆಸ್ತಿ ಹೆಣ್ಣುಮಕ್ಕಳ ಕೈಗೆ ಬರುವುದಿಲ್ಲ, ಬಹುತೇಕ ಬಹಳಷ್ಟು ಹೆಚ್ಚಿನ ಪ್ರಕರಣಗಳಲ್ಲಿ ಅದು ಗಂಡನಿಂದ ಬಂದಿರುತ್ತದೆ– ಇದನ್ನು ಬೇರೆ ವಾರಸುದಾರರಿಗೆ ಮುಂದೂಡುವುದು ಸರಿಕಾಣುವುದಿಲ್ಲ. ಅದರ ಪರಿಣಾಮವಾಗಿ ಪರಿಶೀಲನಾ ಸಮಿತಿಯವರು ಆ ಉಪಬಂಧದಲ್ಲಿ ಬದಲಾವಣೆ ಮಾಡಿದರು. ಮತ್ತು ಗಂಡನನ್ನು ಇತರರ ಜೊತೆಗೆ ಸ್ತ್ರೀಧನ ವಾರಸಾ ಪಟ್ಟಿಯಲ್ಲಿ ತಂದರು. ಇದರಿಂದ ಗಂಡನು ಹೆಣ್ಣುಮಕ್ಕಳು ವಾರಸಾದ ಜೊತೆಗೆ ಹಿಸ್ಸೆ ಪಡೆಯುತ್ತಾನೆ ಅಂದರೆ ಸ್ತ್ರೀಧನ ಆಸ್ತಿಯಲ್ಲಿ ಯಾವ ಹೆಣ್ಣುಮಕ್ಕಳು ವಾರಸಾನಾತೆಯಿಂದ ಹಿಸ್ಸೆ ಪಡೆಯುತ್ತಾರೋ ಅವರ ಜೊತೆಗೆ ಗಂಡನು ಹಿಸ್ಸೆ ಹೆಚ್ಚಿಸಿದ್ದರಿಂದ ಅವರು ಮಗನಿಗೆ ತಾಯಿಯ ಸ್ತ್ರೀಧನ ಆಸ್ತಿಯಲ್ಲಿ ಮಗಳಿಗೆ ಸಮನಾಗಿ ಹಿಸ್ಸೆ ಮಾಡಿದರು.

**ಮಾನ್ಯ ಉಪಾಧ್ಯಕ್ಷರು :** ಅವರು ಮಗ ಹಾಗೂ ಮಗಳನ್ನು ಸಮತೋಲನ ಮಾಡಿದರು.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಜೀವನಾಂಶಕ್ಕೆ ಸಂಬಂಧಿಸಿದ ಕಾನೂನಿನಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ, ಅದು ಸಂಸತ್ತಿಗೆ ತಿಳಿಸುವಂತಹ ಮಹತ್ವದ ಸಂಗತಿ ಇರುವುದಿಲ್ಲ.

ಆಮೇಲೆ ನಾನು ಅವಿಭಕ್ತ ಕುಟುಂಬದ ಪ್ರಶ್ನೆಗೆ ಬರುತ್ತೇನೆ.

ಈ ಮಸೂದೆಯಲ್ಲಿ ಒಳಗೊಂಡ ಉಪಬಂಧಗಳು– ಪರಿಶೀಲನಾ ಸಮಿತಿಯವರಿಂದ ಹೊರಬಂದವು. ಮಸೂದೆಯಲ್ಲಿರುವ ಉಪಬಂಧಗಳು ಅವಿಭಕ್ತ ಕುಟುಂಬಕ್ಕೆ ಸಂಬಂಧಿಸಿದವು. ಯಾವುವು ಅವು ಸಂಪೂರ್ಣವಾಗಿ ಹೊಸವು. ನಾನು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಆ ಸೂಚನೆಯನ್ನು ನಿರಾಕರಿಸುತ್ತೇನೆ. ಪರಿಶೀಲನಾ ಸಮಿತಿಯು ಯಾವ ಬದಲಾವಣೆಯನ್ನು ಮಾಡಿಲ್ಲ. ಮಿತಾಕ್ಷರ ಅವಿಭಕ್ತ ಕುಟುಂಬದ ಉಪಬಂಧಗಳು ರಾವ್ ಸಮಿತಿಯವರು ತಯಾರಿಸಿದ ಮೂಲ ಮಸೂದೆಯಲ್ಲಿರುವುವು. ಇದನ್ನು ದಿನಾಂಕ ೯ನೆಯ ಆಗಸ್ಟ್‌ರಂದು ಸಂಸತ್ತಿನ ಮುಂದೆ ಇಡಲಾಯಿತು. ಸಂಸತ್ತು ಅದನ್ನು ಸ್ವೀಕರಿಸಿತು ಮತ್ತು ಅದನ್ನು ಪರಿಶೀಲನಾ ಸಮಿತಿಗೆ ಕಳಿಸಲಾಯಿತು.

**(ಸನ್ಮಾನ್ಯ ಸದಸ್ಯರು ೯ನೆಯ ಏಪ್ರಿಲ್):** ಆದ್ದರಿಂದ ನನ್ನ ಮೊದಲನೆಯ ವಿನಂತಿ ಏನೆಂದರೆ ಯಾವುದೇ ಹೊಸ ಬದಲಾವಣೆಯನ್ನು ಪರಿಶೀಲನಾ ಸಮಿತಿಯು ಮಾಡಿಲ್ಲ. ಒಟ್ಟಾರೆ ಪರಿಶೀಲನಾ ಸಮಿತಿಯು ಮಾಡಿದುದೇನೆಂದರೆ ಎರಡು ಹೊಸ ಖಂಡಗಳನ್ನು– ಖಂಡ ಸಂಖ್ಯೆ ೮೮ ಮತ್ತು ೮೯ ಖಂಡ ೮೮ ಇದು ಧಾರ್ಮಿಕ ಕರ್ತವ್ಯ ಪವಿತ್ರ ಕರ್ತವ್ಯದ ಸಿದ್ಧಾಂತವೆಂದು ಕರೆಯಲಾಗುವುದು. ಖಂಡ ೮೯ ಇದು ಅವಿಭಕ್ತ ಕುಟುಂಬದ ಸಾಲದ ಹೊಣೆಯನ್ನು ಅವಿಭಕ್ತ ಕುಟುಂಬದ ಸದಸ್ಯರು ಹೊರಬೇಕಾದುದನ್ನು ಕುರಿತು ಹೇಳುತ್ತದೆ. ಈ ಖಂಡಗಳನ್ನು ಸೇರಿಸುವುದು ಅನವಶ್ಯಕವಾಗಿದ್ದಿತು. ಯಾಕೆಂದರೆ ಒಮ್ಮೆ ದಾಯಾದಿತ್ವದ ಆಸ್ತಿಯ ಒಡೆದರೆ ಧಾರ್ಮಿಕ ಕರ್ತವ್ಯ ಪವಿತ್ರ ಕರ್ತವ್ಯದ ಬಗ್ಗೆ ವ್ಯಕ್ತಪಡಿಸುವ ಉಪಬಂಧಗಳನ್ನು ಪವಿತ್ರ ಕರ್ತವ್ಯ: ಧಾರ್ಮಿಕ ಕರ್ತವ್ಯದ ಸಿದ್ಧಾಂತವನ್ನು ಮಾಡಿದ್ದು ಅನವಶ್ಯಕವಾಗಿತ್ತು. ಯಾಕೆಂದರೆ ಈ ಧಾರ್ಮಿಕ ಪವಿತ್ರ ಕರ್ತವ್ಯ ಸಿದ್ಧಾಂತ ಇದು ಎಲ್ಲ ಬದುಕಿ ಉಳಿದವರ ಆಸ್ತಿ ಇರುವುದೋ ಅಲ್ಲಿ ಅದು ಅವಶ್ಯವಿದೆ. ಯಾಕೆಂದರೆ ಆ ಬದುಕಿ ಉಳಿದಿರುವ 'ಅ'ನು ಆಸ್ತಿಯನ್ನು ತೆಗೆದುಕೊಳ್ಳುತ್ತಾನೆ. 'ಬ'ನ ಆಸ್ತಿಯ ಮೇಲೆ ಸಾಲಗಳ ಪೂರ್ವಾದಿ: ಭೇಜಾ ಇದೆ, ಯಾವ ವಿಶೇಷ ಸಿದ್ಧಾಂತದ ಅವಶ್ಯಕತೆಯೂ ಇರುವುದಿಲ್ಲ. ಎಲ್ಲ 'ಬ'ನ ಆಸ್ತಿಯ ಮೇಲೆ ಹೊಣೆಗಾರಿಕೆಯನ್ನು ವಿಧಿಸಲು ಯಾವ ಸಿದ್ಧಾಂತದ ಅವಶ್ಯಕತೆಯು ಇರುವುದಿಲ್ಲ. ವಂಶಪರಂಪರೆಯಾಗಿ ಪಡೆಯುವ ಆಸ್ತಿಯನ್ನು ಒಬ್ಬ ಮನಷ್ಯನು ಪಡೆದರೆ ಅವನು ಅದರ ಲಾಭವನ್ನು ಮತ್ತು ಅದರ ಮೇಲಣ ಹೊಣೆಗಾರಿಕೆ ಒಳಪಟ್ಟು ತೆಗೆದುಕೊಳ್ಳುತ್ತಾನೆ. ಮಿತಾಕ್ಷರದ ತತ್ವದ ಮೇಲಿಂದ

ಪ್ರತಿಯೊಬ್ಬ ದಾಯಾದಿಯು ಬದುಕಿ ಉಳಿಯದಿರುವುದರಿಂದ ಮೃತನ ಆಸ್ತಿಯನ್ನು ಪಡೆಯುತ್ತಾನೆ. ಒಂದು ಆಸ್ತಿ ಮೃತನ ಮಾಲ್ಕಿಯದು ಆಗಿರದಿದ್ದರೆ. ಪಾಟಣಾ ಉಚ್ಚ ನ್ಯಾಯಾಲಯ, ಅದರಂತೆ ಮುಂಬೈಉಚ್ಚ ನ್ಯಾಯಾಲಯದ ಮೂಲ ಸಂಘಟಣೆಗಳು ನಮ್ಮ ಮೇಲೆ ಬಹಳ ಗಟ್ಟಿ ಒತ್ತಾಯ ತಂದಿದೆ. ಇದು ಅತ್ಯಂತ ಅಪೇಕ್ಷಣೀಯವಾದುದು ಅದೆಂದರೆ ಇವೆರಡೂ ಅಂತರ್ಗತವಾಗಿರತಕ್ಕದ್ದು. ಹೇಳಬೇಕೆಂದರೆ ಮಿತಾಕ್ಷರ ಶಾಖೆಯ ಅವಿಭಕ್ತ ಕುಟುಂಬದ ಪವಿತ್ರ ಧಾರ್ಮಿಕ ಕರ್ತವ್ಯ. ಇದನ್ನು ಸ್ಪಷ್ಟವಾಗಿ ಮಸೂದೆಯಲ್ಲಿ ವ್ಯಕ್ತಪಡಿಸಲಾಗಿದೆ. ಯಾಕೆಂದರೆ ಯಾವಾಗ ನ್ಯಾಯಿಕ ಅರ್ಥೈಸುವಿಕೆಯು ಪ್ರಾರಂಭವಾಗುತ್ತದೆಯೋ ಆಗ ತಂಟೆ ತಕರಾರಿಗೂ ಆಸ್ಪದ ಇರಬಾರದು. ಮತ್ತು ತದ್ವಿರುದ್ಧವಾಗಿರಬಾರದು. ಈ ಮಸೂದೆಯ ವಿಶೇಷವು ಈ ಕಾನೂನನ್ನು ಕೇವಲ ವಕೀಲರಿಗೆ ಮಾತ್ರ ಸ್ಪಷ್ಟಪಡಿಸುವುದಿಲ್ಲ. ಆದರೆ ಸಾಮಾನ್ಯ ಜನರಿಗೂ ಅದು ಅರ್ಥವಾಗಬೇಕು. ಇಂತಹ ಒತ್ತಾಯ ಮುಂಬೈ ಉಚ್ಚ ನ್ಯಾಯಾಲಯ ವಕೀಲ ಸಂಘದವರಿಂದ, ಇಂತಹ ದೊಡ್ಡವರಿಂದ ಈ ಮಾಗಣಿ ಮಾಡಲಾಯಿತು. ಇವೆರಡನ್ನೂ ಇದರಲ್ಲಿ ಅಳವಡಿಸುವುದು ಅಪೇಕ್ಷಣೀಯವೆಂದು ನಮಗೆ ಅನಿಸಿತು. ಅದೆಂದರೆ ಸಾಲವನ್ನು ತಿರುಗಿಕೊಡುವುದು ಮೂಲತಃ ಪವಿತ್ರ, ಧಾರ್ಮಿಕ ಕರ್ತವ್ಯವೆಂದು ಕೊಡುವ ಕಾರಣವಿಲ್ಲ ಮತ್ತು ಮೂಲತಃ ಆ ಮನೆತನಕ್ಕೆ ಇರುವ ಹಿಂದಿನ ಸಾಲವನ್ನು ಸಹ ಕೊಡುವ ಹೊಣೆಗಾರಿಕೆಯು ಇರುವುದಿಲ್ಲ. ಇಷ್ಟನ್ನು ಹೊರತುಪಡಿಸಿ ಬೇರೆ ಯಾವ ಬದಲಾವಣೆಯೂ ಇರುವುದಿಲ್ಲ. ನನ್ನ ಗೆಳೆಯರಿಗೆ ಈ ವಿಷಯದಲ್ಲಿ ಯಾವುದೇ ಸಂಶಯವಿದ್ದಲ್ಲಿ ನಾವು ಮೂಲದಲ್ಲಿ ಮಾಡಿದ ಮಾರ್ಪಾಡಿನ ಬಗ್ಗೆ ಅಂದರೆ ಅವಿಭಕ್ತ ಮಿತಾಕ್ಷಾರ ಶಾಖೆಯಲ್ಲಿ ಸಂಶಯವಿದ್ದರೆ ನಾನು ಅವರ ಗಮನವನ್ನು ಕಲಂ ೮೬ಕ್ಕೆ (ಭಾಗ ೫, ಅವಿಭಕ್ತ ಕುಟುಂಬದ ಆಸ್ತಿ) ಈ ಭಾಗಕ್ಕೆ ಎಳೆಯುತ್ತೇನೆ.

ಹೊಸ ಮಸೂದೆಯ ಕಲಂ ೮೬ ಇದು ಪರಿಶೀಲನಾ ಸಮಿತಿಯವರಿಂದ ಮಾಡಿದುದಾಗಿದೆ. ಇದರಲ್ಲಿ ಕ್ರಿಯಾಪದವನ್ನು ಹೊರತುಪಡಿಸಿ ಇದು ಶಬ್ದಕ್ಕೆ ಶಬ್ದ ಮೂಲದಂತೆಯೆ ರಾವ್ ಸಮಿತಿಯವರು ಪುಟ ೧೨, ಕಲಂ ೨ಭಾಗ ೧೧೧ಅ ದಲ್ಲಿ ಇದ್ದಂತೆ ಇದೆ. ಅದರಂತೆ ಕಲಂ ೮೭ ಇದು ಅವಿಭಕ್ತ ಕುಟುಂಬದ ಆಸ್ತಿ ಕುರಿತು ಇದ್ದು ಇದು ಸಹ ಶಬ್ದಶಃ ಭಾಗ ೧೧೧ ಅ ಕಲಂ, ೨ ಪುಟ ಇದರಲ್ಲಿ ಇದ್ದಂತೆ ಇದೆ. ಯಾರಾದರೂ ಇವೆರಡನ್ನೂ ಹೋಲಿಸಿ ನೋಡಿದಾಗ ನನಗೆ ಭರವಸೆ ಇದೆ. ಅದು ಏನೆಂದರೆ ನಾನು ಸದನದಲ್ಲಿ ಮಂಡಿಸಿದ್ದು ಇದು ಪರಿಶೀಲನಾ ಸಮಿತಿಯವರು ತಂದ ಹೊಸ ನವೀಕರಣ ಆಗಿರುವುದೇ ಇಲ್ಲ. ಅವು ಮೊದಲು ರಾವ್ ಸಮಿತಿಯವರು ಮಾಡಿದ ಮೂಲ ಮಸೂದೆಯ ಅವಿಭಾಜ್ಯ ಅಂಗವಾಗಿದೆ.

ಈ ಬಗ್ಗೆ ಯಾವುದೇ ಸಂಶಯವಿದ್ದರೆ ನಾನು ರಾವ್ ಸಮಿತಿಯ ವರದಿ (ಪುಟ ೧೩) ಇದನ್ನು ಉಲ್ಲೇಖಿಸಿ ಸಂಶಯವನ್ನು ದೂರ ಮಾಡುತ್ತೇನೆ. ಇದನ್ನೇ ರಾವ್ ಸಮಿತಿಯು ಹೇಳುತ್ತದೆ:

(ಪ್ಯಾರಾಗ್ರಾಫ್ ೫೧)

(ಈಗ ಮಸೂದೆಯ ಕೋಡಿಗೆ ಬರೋಣ, ಮುಖ್ಯ ಪ್ರಸ್ತಾವನೆಗಳು ಯಾವುಗಳ ಬಗ್ಗೆ ಭಿನ್ನಾಭಿಪ್ರಾಯ ಮೇಲುನೋಟಕ್ಕೆ ಕಣ್ಣಿಗೆ ತಾವೇ ಬೇರೆ ಬೇರೆ ಡಿಗ್ರಿಗಳಲ್ಲಿ ಕಂಡುಬರುತ್ತವೆ. ಅವು ಕೆಳಗಿನಂತೆ ಇವೆ–

(೧) ಹುಟ್ಟಿನ ಒಂದೇ ಕಾರಣದಿಂದ ಬದುಕಿ ಉಳಿದಿರುವನೆಂಬ ತತ್ವವನ್ನು ಮತ್ತು ದಾಯ ಭಾಗದ ಬದಲು ಮಿತಾಕ್ಷರವನ್ನು ಸೇರಿಸಿದ್ದು ಮಿತಾಕ್ಷರ ಎಲ್ಲಿ ಯಾವ ಪ್ರಾಂತದಲ್ಲಿದೆಯೋ ಅಲ್ಲಿ.

(೨) ಮಗಳಿಗೆ ಅರ್ಧ ಹಿಸ್ಸೆ ಕೊಡುವುದು.

(೩) ಹಿಂದೂ ಹೆಣ್ಣುಮಗಳ ಸೀಮಿತ ಅಧಿಕಾರವುಳ್ಳ ಆಸ್ತಿಯನ್ನು ಆಕೆಯ ಸಂಪೂರ್ಣ ಮಾಲೀಕತ್ವದ

ಆಸ್ತಿಯನ್ನು ಮಾಡುವುದು.

(೪) ಏಕಪತ್ನಿತ್ವ ಇದನ್ನು ಕಾನೂನಿನ ಭಾಗವಾಗಿ ಮಾಡಿದರು.

(೫) ವಿವಾಹ ವಿಚ್ಛೇದನೆಗೆ ಕೆಲವು ಕರಾರುಗಳನ್ನು ಹಾಕಿದ್ದಾರೆ. ನನಗೆ ಅನಿಸಿದಂತೆ ಸನ್ಮಾನ್ಯ ಸದಸ್ಯರಿಗೆ ಮನವರಿಕೆಯಾಗಬಹುದು. ಅದೇನೆಂದರೆ ರಾವ್ ಸಮಿತಿಯು ತನ್ನ ಕಾರ್ಯವನ್ನು ಅತ್ಯಂತ ತೃಪ್ತಿಕರವಾಗಿ ಮಾಡಿದೆಂಬುದು ಈ ದೇಶದಲ್ಲಿ ಎಲ್ಲರಿಗೂ ಗೊತ್ತಿದೆ. ಅವರು ಮಾಡಿದ ಸಂಹಿತೆಯು ನಂತರ ಅವರು ಅದನ್ನು ಶಾಸನದ ರೂಪದಲ್ಲಿ ತಂದುದರಲ್ಲಿ ನಿರ್ದಿಷ್ಟ ಉಪಬಂಧಗಳನ್ನು ಒಳಗೊಂಡಿದೆ. ಯಾರಾದರೂ ಅವರು ಸಂಗ್ರಹಿಸಿದ ಸಾಕ್ಷಿಗಳನ್ನು ಸಂಗ್ರಹಿಸಿ ಅವರು ಅದನ್ನು ಸಂಪುಟಗಳಲ್ಲಿ ತಂದುದನ್ನು ಓದಿದರೆ ಮೊದಲು ಜಂಟೀ ಪರಿಶೀಲನಾ ಸಮಿತಿಯು ಯಾವುದನ್ನು ಈ ಸಂಸತ್ತು ನೇಮಿಸಿದ್ದು ಇವುಗಳಲ್ಲಿ ಈ ಸದನದ ಯಾವ ಸದಸ್ಯನೂ ಇರುವುದಿಲ್ಲ. ಅದರಂತೆ ಹೊರಗಿನವರು ಇನ್ನೊಂದು ಸದನದವರೂ ಇರುವುದಿಲ್ಲ. ಯಾರಾದರೂ ಈ ಕಾನೂನಿನ ಈ ಭಾಗಕ್ಕೆ ಲಕ್ಷ್ಯವನ್ನು ಕೊಟ್ಟಿರುವರೋ ಅವರು ತಪ್ಪು ತಿಳುವಳಿಕೆಯಲ್ಲಿ ಇರುವರು. ರಾವ್ ಸಮಿತಿಯವರು ದಾಯದಿತ್ವವನ್ನು ರದ್ದುಪಡಿಸಬಾರದೆಂದು ಹೇಳಿತ್ತು– ಆದ್ದರಿಂದ ಇದು ಪರಿಶೀಲನೆ ಸಮಿತಿಯವರು ಹೊಸದಾಗಿ ಸೇರಿಸಿದ ವಿಷಯವಾಗಿಲ್ಲ.

ಪರಿಶೀಲನಾ ಸಮಿತಿಯವರು ಹಿಂದೂ ಕಾನೂನು ಯಾರಿಗೆ ಅನ್ವಯಿಸುತ್ತದೆ ಎಂಬುದರಲ್ಲಿ ಕೆಲವು ಬದಲಾವಣೆ ಮಾಡಿದ್ದಾರೆ. ರಾವ್ ಸಮಿತಿಯ ಮಸೂದೆಯ ಒಂದು ಉಪಬಂಧವನ್ನು ಒಳಗೊಂಡಿತ್ತು. ಅದೇಂದರೆ ಈ ಮಸೂದೆಯು ಮರುಮಕ್ಕತ್ತಾಯಮ್ ಮತ್ತು ಅಳಿಯ ಸಂತಾನಂ ಕಾನೂನು ಇರುವ ಪ್ರದೇಶಗಳಿಗೆ ಅನ್ವಯಿಸಬಾರದೆಂದು ಹೇಳಿತ್ತು. ಆದರೆ ಪರಿಶೀಲನಾ ಸಮಿತಿಯು ತನ್ನ ಉತ್ಸಾಹದಲ್ಲಿ ಇದನ್ನು ಉಲ್ಲಂಘನೆ ಮಾಡಿದೆ ಎಂದು ನಾನು ಭಾವಿಸುತ್ತೇನೆ. ಯಾವುದೇ ಅನುಮಾನವಿಲ್ಲದೆ ನಾನು ಒಂದು ನಿರ್ಧಾರಕ್ಕೆ ಬಂದಿದ್ದೇನೆ. ಅದೇನೆಂದರೆ ಈ ಮಸೂದೆಯು ಅನ್ವಯವಾಗದೆ ಇರುವ ಯಾವ ಕ್ಷೇತ್ರವೂ ಇರಬಾರದು, ಅದರ ಪರಿಣಾಮವಾಗಿ ಅವರು ಉಪಬಂಧವನ್ನೆ ತೆಗೆದುಹಾಕಿದರು.

**ಮಾನ್ಯ ಉಪಾಧ್ಯಕ್ಷರು :** ಏಕರೂಪತೆ ಇರುವ ದೃಷ್ಟಿಯಿಂದ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಅದನ್ನು ಸರಿಯಾಗಿ ಮಾಡಿರುವರೋ ಇಲ್ಲವೆ ತಪ್ಪಾಗಿ ಮಾಡಿರುವರೋ ನನಗೆ ಗೊತ್ತಿಲ್ಲ. ಈ ವಿಷಯವನ್ನೆ ಸದನವು ನಂತರ ವಿಚಾರಿಸುತ್ತದೆ.

**ಪಂಡಿತ ಮುಕಟು ಬಿಹಾರಿಲಾಲ ಭಾರ್ಗವ** (ಅಜಮೀರ, ಮೇವಾಡ): ಮಾತನಾಡುವ ಸನ್ಮಾನ್ಯ ಸದಸ್ಯರು ಆ ಅಭಿಪ್ರಾಯಕ್ಕೆ ವಿರೋಧಿಸುವರೆ? ಎಂದು ನಾನು ಕೇಳಬಹುದೆ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನಾನು ಮುಂದೆ ಬೇರೆ ಹಂತದಲ್ಲಿ ಬಹುತರವಾಗಿ ವಿರೋಧಿಸುತ್ತೇನೆ. ನನ್ನ ಮನಸ್ಸು ಖಾಲಿ ಇಲ್ಲ ಆದರೂ ನನ್ನದೂ ಮುಕ್ತ ಮನಸ್ಸು ಇದೆ.

**ಶ್ರೀ ಎಚ್.ವಿ. ಕಾಮತ** (ಸಿ. ಪಿ. ಬಿಹಾರ, ಸಾಮಾನ್ಯ) : ಮನಸ್ಸು ಖಾಲಿ ಇಲ್ಲವೆ.

**ಪಂಡಿತ ಮುಕಟು ಬಿಹಾರಿಲಾಲ ಭಾರ್ಗವ :** ಪ್ರತಿಯೊಂದು ಪ್ರಶ್ನೆಗೂ ಹೀಗೆಂದು ನಾನು ಆಶಿಸುವೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೇ ನಾನು ಸಾಮಾನ್ಯ ಈ ರೀತಿಯ ಭಾಷಣದಲ್ಲಿ ಎಲ್ಲರೂ ಮೆಚ್ಚುವಂತೆ ಯೋಗ್ಯವಾಗುವುದು ಅಷ್ಟೆ ಅಲ್ಲ, ಆದರೆ ಆ ಸಂದರ್ಭಕ್ಕೆ ಅನುಗುಣವಾಗಿರಬೇಕು ಉಕ್ತವಾದ ಒಂದು ಕಲಮು ಕಿರಿದಾದ್ದನ್ನು ಮುಚ್ಚಿಟ್ಟಲ್ಲಿ ನನ್ನ ಶ್ರಮವು ವ್ಯರ್ಥ ಆಗುತ್ತದೆ, ಈ ಸದನದಲ್ಲಿ

ಬಹಳಷ್ಟು ಸದಸ್ಯರು ಇಲ್ಲದಿದ್ದರೆ ಇದ್ದ ಸದಸ್ಯರು ಈ ಮಸೂದೆಯ ಕೆಲವು ಭಾಗಗಳ ಬಗ್ಗೆ ಕೆಲವರು ಅಳಕು ಮನಸ್ಸಿನಿಂದ ಇದ್ದಾರೆ. ಈ ಸದನದ ಹೊರಗಡೆ ಅನೇಕ ಜನರು ಈ ಮಸೂದೆಯ ಬಗ್ಗೆ ತುಂಬಾ ಆಸಕ್ತಿ ಹೊಂದಿರುವರಲ್ಲದೆ ಅದರ ಬಗ್ಗೆ ತುಂಬಾ ಆತಂಕದಿಂದ ವಿಚಾರಿಸುತ್ತಾರೆ. ಆದ್ದರಿಂದ ನೀವು ನನಗೆ ಕೆಲವು ಸಾಮಾನ್ಯ ಟಿಪ್ಪಣಿಗಳನ್ನೂ ಸದನ ಮುಂದೆ ಈ ವಿರೋಧಭಾಸ ಸಂಗತಿಗಳನ್ನು ನಾನು ಅನೇಕ ಪತ್ರಿಕೆಗಳಲ್ಲಿ ಓದಿದ್ದೇನೆ ಮತ್ತು ಆದ್ದರಿಂದಲೇ ಆ ಮಸೂದೆಯ ಬೆಂಬಿಡದೇ ಆರಂಭದಿಂದಲೂ ಗಮನಿಸಿಕೊಳ್ಳುತ್ತಿದ್ದು ಹಾಗೂ ಅಂದಿನಿಂದ ಜನಾಭಿಪ್ರಾಯವನ್ನು ತಿಳಿಯುತ್ತಲೇ ಇದ್ದೇವೆ. ನಾನು ಈ ವಿಷಯವನ್ನು ಭಾಗ ಭಾಗವಾಗಿ ಹಾಗೂ ಕಲಮುವಾರು ಚರ್ಚಿಸುತ್ತೇನೆ. ನಾನು ಯಾವ ಭಾಗಗಳು ವಿರೋಧಕ್ಕೆ ಕಾರಣವಾಗಿದೆ ಆ ಭಾಗಗಳನ್ನು ಮಾತ್ರ ಚರ್ಚಿಸುತ್ತೇನೆ. ನಾನು ಈಗ ಮದುವೆ ಹಾಗೂ ವಿಚ್ಛೇದ ಇವುಗಳನ್ನು ತೆಗೆದುಕೊಳ್ಳುತ್ತೇನೆ. ಇಲ್ಲಿ ಮೂರು ರೀತಿಯ ವಿರೋಧಗಳಿವೆ. ಮೊದಲನೆಯ ವಿರೋಧದ ಸಂಗತಿಯೆಂದರೆ ಜಾತಿಯ ನಿರ್ಮೂಲನೆಯು ಕಾನೂನುಬದ್ಧ ಮದುವೆಗೆ ವಿರೋಧ, ಎರಡನೆಯ ವಿರೋಧವೆಂದರೆ ಏಕಪತ್ನಿತ್ವ ಮತ್ತು ಮೂರನೆಯ ವಿರೋಧವೆಂದರೆ– ವಿವಾಹ ವಿಚ್ಛೇದನಕ್ಕೆ ಅನುಮತಿ.

ಮೊದಲನೆಯ ವಿರೋಧದ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಉದಾ: ಜಾತಿಯ ನಿರ್ಬಂಧವನ್ನು ರದ್ದುಗೊಳಿಸುವುದು. ಈ ಮಸೂದೆಗೆ ಸಂಬಂಧಿಸಿದಂತೆ ಹೇಳುವುದಾದರೆ ಈ ಮಸೂದೆಯು ಹಳೆಯ ಹಾಗೂ ಹೊಸ ಜನಾಂಗದ ನಡುವೆ ಒಂದು ರೀತಿಯ ರಾಜೀ ಆದಂತೆ. ಈ ಮಸೂದೆಯು ಹೇಳುವುದೇನೆಂದರೆ ಒಬ್ಬ ಹಿಂದೂ ಸಂಪ್ರದಾಯಬದ್ಧ ಶಾಸ್ತ್ರ ಆಚರಿಸಬಲ್ಲ, ಸಂಪ್ರದಾಯಬದ್ಧ ಪದ್ಧತಿಗಳನ್ನು ಅನುಸರಿಸಲು ಇಚ್ಛಿಸಿದರೆ ಅಂಥವನ ಮದುವೆಯು ವರ ಮತ್ತು ಕನ್ಯಾ ಒಂದೇ ವರ್ಣದವರಾಗಿದ್ದರೆ ಮಾತ್ರ ಕಾನೂನುಬದ್ಧವಾಗುತ್ತದೆ. ಒಂದೇ ಜಾತಿ ಇಲ್ಲವೆ ಒಂದೆ ಉಪಜಾತಿ ಇದ್ದರೆ ಅದು ಕಾನೂನುಬದ್ಧ ಮದುವೆಯಾಗುತ್ತದೆ. ಅವನ ಇಚ್ಛೆಗೆ ವಿರೋಧ ವ್ಯಕ್ತಪಡಿಸುವ ಯಾವ ಉಪಬಂಧವೂ ಇಲ್ಲಿ ಇರುವುದಿಲ್ಲ. ಅವನು ಯಾವುದಕ್ಕೆ ಧರ್ಮವೆನ್ನುವನೊ ಅದಕ್ಕೆ ಪರಿಣಾಮ ಕೊಡಲು ಇಲ್ಲಿ ಆಸ್ಪದವಿದೆ. ಅದೇ ರೀತಿ ಒಬ್ಬ ಹಿಂದು ಯಾವನು ಮತೀಯ ಸುಧಾರಣೆಯ ಮುಂದಾಳು ಯಾವನು ಜಾತಿ ಉಪಜಾತಿ ವರ್ಣಗಳಲ್ಲು ನಂಬಿಕೆ ಇಲ್ಲವೋ ಅವನು ಒಬ್ಬ ಹುಡುಗಿಯನ್ನು ತನ್ನ ವರ್ಣಜಾತಿ, ಉಪಜಾತಿಯ ಹೊರಗೆ ಇದ್ದವಳನ್ನು ಲಗ್ನವಾಗಲು ಇಚ್ಛಿಸಿದರೆ ಕಾನೂನು ಅವನ ಲಗ್ನವನ್ನು ಸಹ ಕಾನೂನುಬದ್ಧವೆಂದು ಸಾರುವುದು. ಮದುವೆಯ ಕಾನೂನಿಗೆ ಸಂಬಂಧಿಸಿದಂತೆ ಅಲ್ಲಿ ಯಾವುದೇ ರೀತಿಯ ಒತ್ತಾಯ ಇರುವುದಿಲ್ಲ. ವೈದಿಕರು ಸಾಂಪ್ರದಾಯಿಕವಾಗಿ ತಮ್ಮ ಧರ್ಮದಂತೆ ಮಾಡಲು ಅರ್ಹರಿದ್ದಾರೆ. ಯಾವನು ಮತೀಯ ಸುಧಾರಣೆ ಮುಂದಾಳು ಧರ್ಮವನ್ನು ಪಾಲಿಸುವುದಿಲ್ಲ ಅವನು ಕಾರಣಗಳನ್ನು ಬೆನ್ನು ಹತ್ತುತ್ತಾನೆ. ಯಾರಿಗೆ ಸದನದ ವಿವೇಚನೆ ಇದೆಯೋ ಅಂಥವರು ತಮ್ಮ ಮನಸ್ಸಿಗೆ ವಿವೇಚನೆಗೆ ತೋರಿದಂತೆ ನಡೆದುಕೊಳ್ಳುವರು.

**ಶ್ರೀ ಮಹಾವೀರ ತ್ಯಾಗಿ** (ಸಂ.ಪ್ರಾಂ. ಸಾಮಾನ್ಯ) : ತಮ್ಮ ಧರ್ಮದವರನ್ನು ಬಿಟ್ಟು ಬೇರೆಯವರನ್ನು ಮದುವೆ ಆಗಲು ಅವರ ಮನಸ್ಸು ಒಪ್ಪಿದರೆ, ಆ ರೀತಿ ಮದುವೆ ಆಗಲು ಅವರಿಗೆ ಅವಕಾಶ ಕೊಡಲಾಗುತ್ತದೆಯೇ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಹೌದು, ಅದಕ್ಕೂ, ನಾವು ಇನ್ನೊಂದು ಮಸೂದೆ ತರೋಣ. ಮಾನ್ಯ ಗೆಳೆಯ ಶ್ರೀ ಮಹಾವೀರ ತ್ಯಾಗಿಯವರಿಗೆ ಮದುವೆ ಆಗಿದೆಯೋ, ಇಲ್ಲವೋ ನನಗೆ ಗೊತ್ತಿಲ್ಲ.

ಅವರಿಗೆ ಮದುವೆ ಆಗಿರದಿದ್ದರೆ, ನಾನು ಅಂತಹ ಮಸೂದೆಯನ್ನು ಬೇಗನೆ ತರುವ ಪ್ರಯತ್ನ ಮಾಡುತ್ತೇನೆ.

**ಶ್ರೀ ಮಹಾವೀರ ತ್ಯಾಗಿ :** ಇತರರಿಗೆ ಅನುಕೂಲ ಆಗಲೆಂದು ನಾನು ಹೇಳುತ್ತಿದ್ದೇನೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಮದುವೆ ಕಟ್ಟುಕಟ್ಟಳೆ ಬಗ್ಗೆ ಹೇಳುವುದಾದರೆ, ಹಳೆಯ ಹಾಗೂ ಹೊಸ ಕಟ್ಟುಕಟ್ಟಳೆ ನಡುವೆ ಸಂಘರ್ಷ ಉಂಟಾದ ಪಕ್ಷದಲ್ಲಿ ಆಗ ಹಿಂದೂ ಸಮಾಜದಲ್ಲಿ ಏನೇನಾಗುತ್ತದೆ? ಹೊಸ ರೀತಿ ನೀತಿಯನ್ನು ಯಾರು ಅನುಸರಿಸುತ್ತಾರೋ ಅವರಿಗೆ ಗೆಲುವಾಗಬಹುದು. ಅವರುಗಳು ಗೆಲುವಾಗಿದ್ದರೆ, ಎರಡು ಪರ್ಯಾಯ ಮದುವೆ ಪದ್ಧತಿಗೆ ನಾವು ಅವಕಾಶ ಕೊಡಲೇಬೇಕಾಗಬಹುದು. ಯಾರಾದರೂ, ತನಗೆ ಇಷ್ಟವಾದದ್ದನ್ನು ಆಯ್ಕೆ ಮಾಡಿಕೊಳ್ಳಬಹುದು. ಶಾಸ್ತ್ರದ ಉಲ್ಲಂಘನೆ ಆಗುವುದಿಲ್ಲ, ಯಾವುದೇ ಸ್ಮೃತಿಯ ಉಲ್ಲಂಘನೆಯಂತೂ ಆಗುವುದೇ ಇಲ್ಲ.

ಒಬ್ಬನೇ ಗಂಡ, ಒಬ್ಬಳೇ ಹೆಂಡತಿ ಪದ್ಧತಿ ಬಗ್ಗೆ ಹೇಳುವುದಾದರೆ, ಅದೊಂದು ಹೊಸ ಆವಿಷ್ಕಾರ ಇರಬಹುದು. ಆದರೆ, ಸಾಂಪ್ರದಾಯಿಕ ಕಟ್ಟಳೆ ಪ್ರಕಾರ ಅಥವಾ ನಮ್ಮ ಶಾಸ್ತ್ರಗಳ ಪ್ರಕಾರ, ಒಬ್ಬ ಹಿಂದೂ ಗಂಡನಿಗೆ ಎಲ್ಲ ಕಾಲದಲ್ಲೂ ಅನೇಕ ಹೆಂಡತಿಯರನ್ನೂ ಹೊಂದುವ ಅನಿರ್ಬಂಧಿತ, ಸಂಪೂರ್ಣವಾದ ಹಕ್ಕು ಇತ್ತು ಎನ್ನುವುದನ್ನು ಈ ಸದನದ ಯಾರೇ ಸದಸ್ಯರು ಖಡಾಖಂಡಿತವಾಗಿ ಹೇಳಲಾರರೆಂದು ನಾನು ಹೇಳಲೇಬೇಕಾಗಿದೆ, ಎಂದೂ ಹಾಗಿರಲೇ ಇಲ್ಲ. ಇಂದೂ ಕೂಡ ದಕ್ಷಿಣ ಭಾರತದ ಕೆಲವು ಭಾಗಗಳಲ್ಲಿ ಈ ಪದ್ಧತಿಯನ್ನು ಅನುಸರಿಸುವ ಜನರಿದ್ದಾರೆ. ನಟ್ಟು ಕೋಟಿ ಚೆಟ್ಟಿಯಾರರ ಒಂದು ವರ್ಗ ಅನುಸರಿಸುತ್ತದೆ. ಪ್ರೀವಿ ಕೌನ್ಸಿಲ್ ವರದಿಗಳಲ್ಲೇ ವಿಷಯ ವರದಿಯಾಗಿದೆ. ಕೇವಲ ಗಾಳಿ ಮಾತಿನ ಆಧಾರದ ಮೇಲೆಯೇ ನಾನು ಹೇಳುತ್ತಿಲ್ಲ. ಗಂಡ, ತನ್ನ ಮೊದಲನೇ ಹೆಂಡತಿಯ ಒಪ್ಪಿಗೆ ಪಡೆಯದಿದ್ದರೆ, ಇನ್ನೊಬ್ಬಳನ್ನು ಮದುವೆ ಆಗುವ ಹಾಗಿಲ್ಲ ಎನ್ನುವ ಸಂಪ್ರದಾಯ ನಟ್ಟು ಕೋಟ್ಟೈಚೆಟ್ಟಿಯಾರರಲ್ಲಿದೆ. ಒಂದು ವೇಳೆ, ಮೊದಲನೇ ಹೆಂಡತಿ ಒಪ್ಪಿದರೆ, ಅವನು ಆಕೆಗೆ ಕೆಲವೊಂದು ಆಸ್ತಿಪಾಸ್ತಿ ಕೊಡಬೇಕಾಗುತ್ತದೆ. ತಮಿಳು ಭಾಷೆಯಲ್ಲಿ ಅದನ್ನು "ಮೊಪ್ಪು" ಎಂದು ಕರೆಯುತ್ತಾರೆಂದು ನನಗೆ ತಿಳಿದುಬಂದಿದೆ. ಅದು ಆಕೆಯದೇ ಆಸ್ತಿಯಾಗುತ್ತದೆ. ಆಕೆ ಒಪ್ಪಿದ ಮೇಲೂ, ಎರಡನೇ ಮದುವೆಯಾದ ಗಂಡ ಆಕೆಯನ್ನು ಸರಿಯಾಗಿ ನೋಡಿಕೊಳ್ಳದಿದ್ದ ಪಕ್ಷದಲ್ಲಿ, ಆಕೆ ಸ್ವತಂತ್ರವಾಗಿ ಜೀವನ ನಡೆಸಲು ಆ ಆಸ್ತಿಯು ಆಕೆಗೆ ಕೆಲವೊಂದು ಆರ್ಥಿಕ ಭದ್ರತೆ ಒದಗಿಸುತ್ತದೆ. ಅನೇಕ ಹೆಂಡತಿಯರನ್ನು ಹೊಂದುವ ಸಂಪೂರ್ಣ ಹಕ್ಕು ಇರಲಿಲ್ಲವೆಂಬುದನ್ನು ತಿಳಿಸಲು ನಾನು ಈ ಒಂದು ದೃಷ್ಟಾಂತವನ್ನು ಹೇಳುತ್ತಿದ್ದೇನೆ.

ಕೌಟಿಲ್ಯನ ಅರ್ಥಶಾಸ್ತ್ರದಿಂದ ನಾನು ಇನ್ನೂ ಒಂದು ದೃಷ್ಟಾಂತವನ್ನು ಹೇಳಬಯಸುತ್ತೇನೆ. ಆ ಗ್ರಂಥವನ್ನು ಈ ಸದನದ ಎಷ್ಟು ಮಂದಿ ಸದಸ್ಯರು ಓದಿದ್ದಾರೋ ನನಗೆ ಗೊತ್ತಿಲ್ಲ. ಹಲವರು ಓದಿರಬಹುದು. ಓದಿದ್ದ ಪಕ್ಷದಲ್ಲಿ, ಇನ್ನೊಬ್ಬಳನ್ನು ಮದುವೆ ಆಗುವ ಹಕ್ಕನ್ನು ಕೌಟಿಲ್ಯ ತುಂಬಾ ನಿರ್ಬಂಧಕ್ಕೆ ಒಳಪಡಿಸಿದ್ದಾನೆಂಬುದು ಅವರಿಗೇ ಗೊತ್ತಾಗುತ್ತದೆ. ಮೊದಲನೇ ನಿರ್ಬಂಧ ಎಂದರೆ, ಮೊದಲ ಹತ್ತು ಅಥವಾ ಹನ್ನೆರಡು ವರ್ಷಗಳಲ್ಲಿ ಯಾವನೂ ಮದುವೆ ಆಗುವಂತಿರಲಿಲ್ಲ. ಏಕೆಂದರೆ ತನ್ನ ಹೆಂಡತಿ ಮಕ್ಕಳನ್ನು ಹೆರಲಾರಳು ಎಂಬುದು ಅವನಿಗೆ ಮನವರಿಕೆ ಆಗಿರಬೇಕಿತ್ತು. ಎರಡನೆಯ ಮದುವೆ ಹಕ್ಕಿನ ಮೇಲೆ ಕೌಟಿಲ್ಯ ಹೇಳಿರುವ ಇನ್ನೊಂದು ನಿರ್ಬಂಧ ಎಂದರೆ, ಮದುವೆ ಸಮಯದಲ್ಲಿ ಮೊದಲನೇ ಹೆಂಡತಿಗೆ ಕೊಟ್ಟಿದ್ದ ಎಲ್ಲ ಸ್ತ್ರೀಧನವನ್ನು ಗಂಡ ಆಕೆಗೇ ವಾಪಸ್ಸು ಮಾಡಬೇಕಾಗಿತ್ತು. ಈ ಎರಡೂ ಕಟ್ಟಳೆಗಳನ್ನು ಪಾಲಿಸಿದ್ದರೆ ಮಾತ್ರವೇ, ಕೌಟಿಲ್ಯನ ಅರ್ಥಶಾಸ್ತ್ರವು ಹಿಂದೂ ಗಂಡ, ಎರಡನೇ ಮದುವೆ ಆಗುವುದಕ್ಕೆ ಅವಕಾಶವನ್ನು ಕಲ್ಪಿಸಿತ್ತು.

ಮೂರನೆಯದಾಗಿ, ನಮ್ಮ ದೇಶದಲ್ಲೇ, ಹಲವಾರು ಪ್ರಾಂತ್ಯಗಳಲ್ಲಿ ಅಂಗೀಕೃತವಾಗಿರುವ ಶಾಸನಗಳಲ್ಲಿ, ಒಬ್ಬನೇ ಗಂಡ, ಒಬ್ಬಳೇ ಹೆಂಡತಿ ಪದ್ಧತಿಯನ್ನು ಅಂಗೀಕರಿಸಲಾಗಿದೆ. ಉದಾಹರಣೆಗೆ, ಮರುಮುಕ್ಕತಾಯಂ ಮತ್ತು ಅಳಿಯ ಸಂತಾನ ಈ ಎರಡೂ ಸಂಪ್ರದಾಯಗಳು ವೈವಾಹಿಕ ಜೀವನದ ಕಟ್ಟಳೆಯಾಗಿ ಒಬ್ಬಳೇ ಹೆಂಡತಿ, ಒಬ್ಬನೇ ಗಂಡ ಪದ್ಧತಿಯನ್ನು ಗೊತ್ತುಪಡಿಸಿವೆ. ಹಾಗೆಯೇ, ಬಾಂಬೆಯಲ್ಲಿ ಅಥವಾ ಮದ್ರಾಸಿನಲ್ಲಿ, ಹಾಗೆಯೇ ಬರೋಡಾದಲ್ಲೂ ಕೂಡ, ಅಂಗೀಕೃತವಾಗಿರುವ ಇತ್ತೀಚಿನ ಶಾಸನದಲ್ಲಿ ಒಬ್ಬನೇ ಗಂಡ, ಒಬ್ಬಳೇ ಹೆಂಡತಿ ಪದ್ಧತಿಯೇ ಅಂಗೀಕೃತ ಪದ್ಧತಿಯಾಗಿದೆ.

ನಾನು ಹೇಳಿರುವ ದೃಷ್ಟಾಂತಗಳಿಂದ, ನಾವೇನೂ ಯಾವುದೇ ತೀರಾ ಆಮೂಲಾಗ್ರವಾದ ಅಥವಾ ಕ್ರಾಂತಿಕಾರಿ ಬದಲಾವಣೆಯನ್ನೇನೂ ಮಾಡುತ್ತಿಲ್ಲ ಎಂಬುದನ್ನು ಈ ಸದನ ಕಂಡುಕೊಳ್ಳುತ್ತದೆ ಎಂಬ ನಂಬಿಕೆ ನನಗಿದೆ. ನಾವೇನು ಮಾಡುತ್ತಿದ್ದೇವೋ ಅದಕ್ಕೆ, ಭಾರತದಲ್ಲಿನ ಹಲವಾರು ರಾಜ್ಯಗಳಲ್ಲಿ ಅಂಗೀಕೃತವಾಗಿರುವ ಕಾನೂನುಗಳಲ್ಲಿ, ಹಾಗೆಯೇ ಕೌಟಿಲ್ಯನ ಅರ್ಥಶಾಸ್ತ್ರದಂತಹ ಪ್ರಾಚೀನ ಶಾಸ್ತ್ರಗಳಲ್ಲೂ ಕೂಡ ನಮಗೆ ನಿದರ್ಶನಗಳಿವೆ. ಇನ್ನೂ ಹೇಳುವುದಾದರೆ, ವೈವಾಹಿಕ ಸಂಬಂಧದಲ್ಲಿ ಒಬ್ಬನೇ ಗಂಡ, ಒಬ್ಬಳೇ ಹೆಂಡತಿ ಪದ್ಧತಿಯೇ ಅತ್ಯಂತ ಶ್ರೇಷ್ಠವಾದ ತತ್ವವೆಂದು ಇಡೀ ಪ್ರಪಂಚವೇ ಮನ್ನಣೆ ಇತ್ತಿರುವ ನಿದರ್ಶನ ನಮ್ಮ ಮುಂದಿದೆ.

**ಶ್ರೀ ದೇಶಬಂಧು ಗುಪ್ತ** (ದೆಹಲಿ) : ಮೊಹಮದೀಯ ನ್ಯಾಯ ಏನು ಹೇಳುತ್ತದೆ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಮೊಹಮದೀಯ ನ್ಯಾಯದ ಬಗ್ಗೆ ನಾವು ಚರ್ಚಿಸುವಾಗ ಆ ವಿಚಾರಕ್ಕೆ ಬರೋಣ. ಇನ್ನು ವಿಚ್ಛೇದನದ ವಿಷಯ. ಇದೂ ಕೂಡ, ಯಾವುದೇ ರೀತಿಯಲ್ಲೂ ಹೊಸ ಆವಿಷ್ಕಾರ ಅಲ್ಲವೆಂಬುದನ್ನು ನಾನು ಈ ಸದನಕ್ಕೆ ಬಿನ್ನವಿಸಿಕೊಳ್ಳಬಯಸುತ್ತೇನೆ. "ಶೂದ್ರ"ರೆಂದು ಕರೆಯಲಾಗುವ ಸಮುದಾಯಗಳಲ್ಲಿ ಸಾಂಪ್ರದಾಯಿಕ ವಿಚ್ಛೇದನ ಪದ್ಧತಿ ಇದೆಯೆಂಬುದು ಈ ಸದನದ ಪ್ರತಿಯೊಬ್ಬರಿಗೂ ಗೊತ್ತಿದೆ. ಶೂದ್ರರೆಂದು ನಾವು ಯಾರನ್ನು ಕರೆಯುತ್ತೇವೆಯೋ ಅವರ ಒಟ್ಟು ಸಂಖ್ಯೆ ಎಷ್ಟು? ಹಿಂದೂ ಸಮಾಜದ ರಚನೆಯಲ್ಲಿ ಒಳಗೊಂಡಿರುವ ಶೂದ್ರರ ಒಟ್ಟು ಸಂಖ್ಯೆ ಎಷ್ಟು ಎಂಬ ಬಗ್ಗೆ ಬಹುಶಃ ಯಾರೂ ಎಂದೂ ಲೆಕ್ಕ ಹಾಕಿಲ್ಲ. ಆದರೆ, ಹಿಂದೂಗಳ ಒಟ್ಟು ಸಂಖ್ಯೆಯಲ್ಲಿ ವಾಸ್ತವಾಗಿ ಶೇ. ೯೦ರಷ್ಟು ಶೂದ್ರರೇ ಇದ್ದಾರೆಂಬುದರಲ್ಲಿ ನನಗೆ ಸ್ವಲ್ಪವೂ ಸಂಶಯ ಇಲ್ಲ. "ಹೊಸ ಸುಧಾರಣಾ" ವರ್ಗದವರೆಂದು ಕರೆಯಲ್ಪಡುತ್ತಿರುವವರು ಈ ದೇಶದ ಒಟ್ಟು ಜನಸಂಖ್ಯೆಯಲ್ಲಿ ಬಹುಶಃ ಶೇ. ಹತ್ತಕ್ಕಿಂತ ಹೆಚ್ಚಿಗೆ ಇಲ್ಲ.

ಶೇ. ೯೦ರಷ್ಟಿರುವ ಈ ಜನರ ಪದ್ಧತಿಯನ್ನೇ ದೇಶದ ಸಾಮಾನ್ಯ ಪದ್ಧತಿಯೆಂದು ಅಂಗೀಕರಿಸುತ್ತೀರಾ? ಇಲ್ಲವೇ, ಶೇ. ೧೦ರಷ್ಟು ಮಾತ್ರವೆ ಇರುವ ಜನರ ಪದ್ಧತಿಯನ್ನೇ ಶೇ. ೯೦ರಷ್ಟಿರುವ ಎನ್ನುವ ಪ್ರಶ್ನೆಯನ್ನು ನಾನು ಮಾನ್ಯ ಸದಸ್ಯರಿಗೆ ಕೇಳ ಬಯಸುತ್ತೇನೆ. ಜನರ ಮೇಲೆ ಹೇರುತ್ತೀರಾ? ಇದೇ, ಪ್ರತಿಯೊಬ್ಬ ಸದಸ್ಯರೂ ಉತ್ತರಿಸಬೇಕಾದ ಸರಳ ಪ್ರಶ್ನೆ. ಉತ್ತರ ಹೇಳುವುದಾದರೆ, ಹೇಳಬಹುದು.

ಹೊಸ ಸುಧಾರಣಾ ವರ್ಗದವರ ಬಗ್ಗೆ ಹೇಳುವುದಾದರೆ, ನಾರದ ಸ್ಮೃತಿಯನ್ನು ಅಥವಾ ಪರಾಶರ ಸ್ಮೃತಿಯನ್ನು ಬರೆದ ಕಾಲವನ್ನು ಯಾರಾದರೂ ಗಮನಿಸಿದರೆ, ಒಬ್ಬ ಮಹಿಳೆಯು ತನ್ನ ಗಂಡ, ತನ್ನನ್ನು ಬಿಟ್ಟಾಗ, ಆ ಗಂಡನಿಗೆ ವಿಚ್ಛೇದನ ಕೊಡಬಹುದಿತ್ತು, "ಪರಿವ್ರಾಜ" ವನ್ನು ತೆಗೆದುಕೊಂಡಾಗ, ಇನ್ನೊಬ್ಬನನ್ನು ಮದುವೆ ಆಗಬಹುದಿತ್ತು ಅನ್ನುವ ಕಾಲ ಒಂದಿತ್ತು. ಹಾಗಿತ್ತು ಎನ್ನುವುದನ್ನು ತೋರಿಸಲು ಮುಂದೆ ಇನ್ನೊಂದು ಸಮಯದಲ್ಲಿ ನಿಮ್ಮ ಶಾಸ್ತ್ರಗಳಿಂದ ಕೆಲವೊಂದು ಸಾಲುಗಳನ್ನು ನಾನು ಓದಿ ಹೇಳುತ್ತೇನೆ. **(ಒಬ್ಬರು ಮಾನ್ಯ ಸದಸ್ಯರು :** ೧೧ ನಿಮ್ಮ ಶಾಸ್ತ್ರಗಳು), ಸರಿ, ಏಕೆಂದರೆ, ನಾನು ಬೇರೆ ಜಾತಿಯವನಲ್ಲವೆ.

ಈ ದೇಶದಲ್ಲಿ ಏನಾಗಿದೆಯೆಂದರೆ, ವೈವಾಹಿಕ ಸಂಬಂಧಗಳು ಸರಿಯಾದ ರೀತಿಯಲ್ಲಿರುವುದಕ್ಕೆ ಒಲವು ತೋರಿದ್ದ ಎಲ್ಲ ಶಾಸ್ತ್ರಗಳ ಕಟ್ಟಳೆಗಳನ್ನು ಸಂಪ್ರದಾಯವು ತಿರಸ್ಕರಿಸುವುದಕ್ಕೆ ಅವಕಾಶ ಕೊಟ್ಟಿರುವುದು ಏಕೋ ಏನೋ ದುರದೃಷ್ಟಕರ, ಯಾರ ಗಮನಕ್ಕೂ ಬಂದಿಲ್ಲ, ಅಜಾಗರೂಕತೆಯಿಂದ ಹಾಗಾಗಿದೆ. ಆದ್ದರಿಂದ, ಈ ಸದನಕ್ಕೆ ನನ್ನ ಬಿನ್ನಹ ಏನೆಂದರೆ, ವಿವಾಹ ಅಥವಾ ವಿಚ್ಛೇದನ ಕಾನೂನಿಗೆ ತಂದಿರುವ ಹೊಸ ತತ್ವಗಳ ಮಟ್ಟಿಗೆ ಹೇಳುವುದಾದರೆ, ಏನನ್ನು ತರಲಾಗಿದೆಯೋ ಅದು ನ್ಯಾಯೋಚಿತ ಹಾಗೂ ಸಮಂಜಸವಾದುದಾಗಿದೆ. ಅವುಗಳಿಗೆ ನಮ್ಮ ಶಾಸ್ತ್ರಗಳ ನಿದರ್ಶನಗಳ ಬೆಂಬಲವಿದೆಯಷ್ಟೇ ಅಲ್ಲ ಇಡೀ ಪ್ರಪಂಚದ ಅನುಭವದ ಹಿನ್ನೆಲೆಯೂ ಇದೆ.

ದತ್ತು ತೆಗೆದುಕೊಳ್ಳುವ ಬಗ್ಗೆ ಹೇಳುವುದಾದರೆ, ಮೂರು ಅಂಶಗಳ ಬಗ್ಗೆ ವಿವಾದ ಇದೆ. ಒಂದೆಂದರೆ, ಹಳೆಯ ಹಿಂದೂ ನ್ಯಾಯದಂತೆ, ನ್ಯಾಯಸಮ್ಮತ ದತ್ತು ಆಗಬೇಕಾದರೆ, ಜಾತಿ ಒಂದೇ ಆಗಿರಬೇಕೆಂದು ಅಥವಾ ಜಾತಿ ಅದೇ ಆಗಿರಬೇಕೆಂದು ನಾವು ಗೊತ್ತುಪಡಿಸುವುದಿಲ್ಲ. ಮದುವೆ ಬಗ್ಗೆ ನಾವು ಯಾವ ಕಟ್ಟಳೆಯನ್ನು ಅನುಸರಿಸುತ್ತೇವೆಯೋ ಅದೇ ಕಟ್ಟಳೆಯನ್ನು ಅನುಸರಿಸುತ್ತೇವೆ. ಈಗಲೂ ಕೂಡ, ಒಬ್ಬ ಬ್ರಾಹ್ಮಣ, ಒಂದು ಬ್ರಾಹ್ಮಣ ಮಗುವನ್ನು ದತ್ತು ತೆಗೆದುಕೊಳ್ಳಬಯಸಿದರೆ, ದತ್ತು ತೆಗೆದುಕೊಳ್ಳಲು ಅಭ್ಯಂತರವೇನಿಲ್ಲ. ಒಬ್ಬ ಕಾಯಸ್ಥ, ಒಂದು ಕಾಯಸ್ಥ ಮಗುವನ್ನು ದತ್ತು ತೆಗೆದುಕೊಳ್ಳಬಯಸಿದರೆ, ದತ್ತು ತೆಗೆದುಕೊಳ್ಳಲು ಅಭ್ಯಂತರವೇನಿಲ್ಲ. ಒಬ್ಬ ಶೂದ್ರ, ತನ್ನದೇ ಜಾತಿಯ ಒಂದು ಮಗುವನ್ನು ದತ್ತು ತೆಗೆದುಕೊಳ್ಳಬಯಿಸಿದರೆ, ದತ್ತು ತೆಗೆದುಕೊಳ್ಳಲು ಅಭ್ಯಂತರವೇನಿಲ್ಲ. ಆದರೆ, ಒಬ್ಬ ಬ್ರಾಹ್ಮಣ, ತನ್ನದೇ ಜಾತಿಯ ಮಗುವನ್ನು ಬಿಟ್ಟು, ಒಂದು ಶೂದ್ರ ಮಗುವನ್ನು ದತ್ತು ತೆಗೆದುಕೊಳ್ಳುವಂತಹ ದೊಡ್ಡಮನಸ್ಸಿನವನಾಗಿದ್ದರೆ, ಅವನಿಗೂ ದತ್ತು ತೆಗೆದುಕೊಳ್ಳುವ ಅವಕಾಶ ಇರುತ್ತದೆ ಎಂದು ಹೇಳಬಯುಸುತ್ತೇನೆ. ಆದ್ದರಿಂದ, ಈ ವಿಷಯದಲ್ಲಿ ಯಾವುದೇ ರೀತಿಯ ನಿರ್ಬಂಧ ಇಲ್ಲ.

**ಸೇಠ್ ಗೋವಿಂದ ದಾಸ** (ಕೇಂದ್ರೀಯ ಸಂಸ್ಥಾನ ಮತ್ತು ಬೀರಾರ್: ಸಾಮಾನ್ಯ): ಅಂತಹ ಬ್ರಾಹ್ಮಣನನ್ನು ದೊಡ್ಡ ಮನಸ್ಸಿನವನೆಂದು ನೀವೇಕೆ ಭಾವಿಸುತ್ತೀರಿ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** : ಏಕೆಂಬುದು ನನಗೆ ಗೊತ್ತಿಲ್ಲ. ಆದರೂ, ನನ್ನ ದೃಷ್ಟಿಯಲ್ಲಿ ಆತ ನಿಜವಾಗಿಯೂ ದೊಡ್ಡ ಮನಷ್ಯನೇ, ನಿಮ್ಮ ದೃಷ್ಟಿಯಲ್ಲಿ ಆತ ತೀರ ಅಜ್ಞಾನಿಯಾಗಿ ಕಾಣಬಹುದು, ಅದು ಅವರವರ ಅಭಿಪ್ರಾಯ.

ದತ್ತು ತೆಗೆದುಕೊಳ್ಳುವುದಕ್ಕೂ ಮೊದಲು, ವಿಧವೆಯು ಮಾಡಿದ ಎಲ್ಲ ಪರಭಾರೆಯನ್ನು ದತ್ತು ಮಗ ಪ್ರಶ್ನಿಸುವ ಹಕ್ಕಿನ ಮೇಲಿನ ನಿರ್ಬಂಧದ ಬಗ್ಗೆ ಹೇಳುವುದಾದರೆ, ಅದರ ಬಗ್ಗೆ ಯಾವುದೇ ವಿವಾದ ಇದೆಯೆಂದು ನನಗೆ ಅನ್ನಿಸುವುದಿಲ್ಲ. ಒಬ್ಬ ಹುಡುಗನನ್ನು ದತ್ತುತೆಗೆದುಕೊಂಡ ತಂದೆಯು ಮರಣ ಹೊಂದಿದ ತರುವಾಯವೂ ಆ ಹುಡುಗ ಆ ತಂದೆಯ ದತ್ತು ಮಗನಾಗಿಯೇ ಇರುತ್ತಾನೆಂಬ ಕಲ್ಪನೆಗೆ ನಾವೇಕೆ ಅಂಟಿಕೊಳ್ಳಬೇಕೆಂಬುದಕ್ಕೆ ಅರ್ಥವೇ ಇಲ್ಲ. ಇದು ಬರೀ ಕಲ್ಪನೆ. ಅದಕ್ಕೆ ಯಾವ ಕಿಮ್ಮತ್ತೂ ಇಲ್ಲ. ಅದೊಂದು ಬರಿಯ ಕಲ್ಪನೆ ಅಷ್ಟೇ. ಬಹಳಷ್ಟು ಜಗಳಕ್ಕೆ ಮತ್ತು ಹೇಳತೀರದಷ್ಟು ತೊಂದರೆಗಳಿಗೆ ದಾರಿ ಮಾಡಿಕೊಡುತ್ತಿರುವ ಕಲ್ಪನೆ ಅದು. ಆದ್ದರಿಂದ, ದತ್ತು ತೆಗೆದುಕೊಳ್ಳುವುದು, ಆಸ್ತಿಯನ್ನು ಕೊಡುವುದು ಎರಡೂ ಕಾರ್ಯ ಒಟ್ಟಿಗೇ ಆಗುವುದೇ ಸರಿ. ಈ ಹಂತದಲ್ಲಿ ಈ ವಿಚಾರವು ನಾವು ಒಪ್ಪಿಕೊಳ್ಳುವಂತಹ ವಿಚಾರ ಅಲ್ಲ ಎಂದು ಸದನದ ಯಾರೇ ಸದಸ್ಯರು ಭಾವಿಸುತ್ತಾರೆಂದು ನನಗೆ ಅನ್ನಿಸುತ್ತಿಲ್ಲ. (**ಶ್ರೀ ಬಿ. ದಾಸ್** : "ನಾವೆಲ್ಲರೂ ಒಪ್ಪುತ್ತೇವೆ").

ಹಾಗೆಯೇ ದತ್ತು ಮಗನಿಗೆ, ತಾಯಿಯಿಂದ ಎಲ್ಲವನ್ನೂ ಕಿತ್ತುಕೊಳ್ಳುವ, ಅವನು ಕೊಡುವ ಅನ್ನ ಬಟ್ಟೆಯನ್ನೆ ನೆಚ್ಚಿಕೊಂಡು ಆಶ್ರಿತಳಾಗಿರುವಂತೆ ಮಾಡುವ ಹಕ್ಕು ಇರುತ್ತದೆ ಎನ್ನುವುದರ ಮೇಲಿನ ನಿರ್ಬಂಧದ ಬಗ್ಗೆ ಹೇಳುವುದಾದರೆ, ಅಂತಹ ದುಸ್ಥಿತಿಯನ್ನು ಯಾವುದೇ ಆಧಾರದ ಮೇಲೆ ಸಮರ್ಥನೆ ಮಾಡಿಕೊಳ್ಳಬಹುದು ಎಂದು ಸದನದ ಯಾರೇ ಸದಸ್ಯರು ಭಾವಿಸುತ್ತಾರೆಂದು ನನಗೆ ಅನ್ನಿಸುವುದಿಲ್ಲ. ಸಂಪ್ರದಾಯಸ್ಥ ಜನರು ಬೆಳೆಸಿಕೊಂಡು ಬಂದಿರುವ ದತ್ತು ಹಕ್ಕನ್ನು ನಾವು ಉಳಿಸಿಕೊಳ್ಳುವುದು ಸರಿ ಎಂಬುದು ನನ್ನ ಭಾವನೆ. ಆದರೆ, ಸರ್, ದತ್ತು ಏಕಿರಬೇಕೆಂಬುದೇ ನನಗೆ ಅರ್ಥವಾಗುತ್ತಿಲ್ಲ. ವೈಯಕ್ತಿಕವಾಗಿ ಹೇಳುವುದಾದರೆ, ನನ್ನ ಹೆಸರು ಇತಿಹಾಸಕ್ಕೆ ಸೇರುವುದು ನನಗೆ ಇಷ್ಟ ಇಲ್ಲ. ಏಕೆಂದರೆ ನನ್ನ ವೃತ್ತಾಂತ ತೀರಾ ಸಪ್ಪೆ. ಹಿಂದೂ ಸಮಾಜದಲ್ಲಿ ನಾನೊಬ್ಬ ಸಾಧಾರಣ ಮನುಷ್ಯ, ವೃತ್ತಾಂತಗಳೇ ಇಲ್ಲದಂಥವರು ಬೇಕಾದಷ್ಟು ಜನರಿದ್ದಾರೆ. ಅಂಥವರೂ ಕೂಡ, ಏಕೆ, ಮಂಕ ಮಡೆಯನಾದ, ಅವಿದ್ಯಾವಂತನಾದ, ಯಾವುದೇ ಒಳ್ಳೆಯ ಗುಣ ಇರದ, ಪೂರ್ವಾಪರಗಳು ಗೊತ್ತಿರದ ಹುಡುಗನನ್ನು ದತ್ತು ತೆಗೆದುಕೊಳ್ಳುತ್ತಾರೋ, ಬಡ ಹೆಂಗಸಿನ ಜವಾಬ್ದಾರಿ ವಹಿಸುತ್ತಾರೋ, ಆಕೆಯ ಬಳಿ ಇರುವ ಆಸ್ತಿಪಾಸ್ತಿಯನ್ನು ಅವನು ಕಿತ್ತುಕೊಳ್ಳುವಂತೆ ಮಾಡುತ್ತಾರೋ ನನಗೆ ಅರ್ಥವಾಗುತ್ತಿಲ್ಲ. ಆದ್ದರಿಂದ, ನನ್ನ ಮನವಿ ಏನೆಂದರೆ, ದತ್ತು ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ನಿಮ್ಮ ಹಳೆಯ ಕಾಲದ ಕಲ್ಪನೆಗಳನ್ನು ಅನುಸರಿಸುವುದು ನಿಮಗೆ ಬೇಕಿಲ್ಲವಾದರೆ, ಆಕೆಯ ಬದುಕಿಗೆ ಆಧಾರವಾದ ಆಸ್ತಿಪಾಸ್ತಿಯನ್ನು ದತ್ತು ಹುಡುಗ ಕಿತ್ತುಕೊಳ್ಳುವ ಹಾಗಿಲ್ಲ ಎನ್ನುವ ಈ ನಿಬಂಧನೆಯನ್ನು ಮಾಡಿರಿ. ಅಂಥ ನಿರ್ಬಂಧ ವಿವಾದಕ್ಕೆ ಆಸ್ಪದ ಕೊಡುತ್ತೇವೆಂದು ನನಗೆ ಅನ್ನಿಸುವುದಿಲ್ಲ. ಸಾಂಪ್ರದಾಯಿಕ ದತ್ತು ಪದ್ಧತಿಯನ್ನು ರದ್ದು ಮಾಡುವ ವಿಚಾರದ ಬಗ್ಗೆ ಹೇಳುವುದಾದರೆ, ನಾನು ಎರಡು ವಿಚಾರಗಳನ್ನು ಹೇಳಬಯಸುತ್ತೇನೆ. ಈ ಸದನವು ಗಮನಕ್ಕೆ ತೆಗೆದುಕೊಳ್ಳಬಹುದಾದ ಒಂದು ವಾದ ಇದೆ. ನ್ಯಾಯ ಸಂಹಿತೆಯು ಸಾಂಪ್ರದಾಯಿಕ ಕಟ್ಟುಕಟ್ಟಳೆಗೆ ಅಸಂಗತವಾಗಿರುತ್ತದೆ ಎನ್ನುವುದೇ ಆ ವಾದ. ಇದೊಂದು ಮೂಲಭೂತ ತರ್ಕ. ನೀವು ನ್ಯಾಯಶಾಸ್ತ್ರವನ್ನು ಇರಲೂ ಬಿಟ್ಟು, ಅದೇ ಕಾಲದಲ್ಲಿ ಸಂಪ್ರದಾಯವನ್ನು ಬೆಳೆಯಲು ಬಿಟ್ಟರೆ, ಸಂಪ್ರದಾಯವು ನ್ಯಾಯಶಾಸ್ತ್ರಕ್ಕೆ ವ್ಯತಿರಿಕ್ತವಾಗಿ ಹೋಗಲು ಬಿಟ್ಟರೆ, ಆಗ ನ್ಯಾಯಶಾಸ್ತ್ರದ ಅವಶ್ಯಕತೆಯೇ ಇರುವುದಿಲ್ಲ. ಏಕೆಂದರೆ, ಸಂಪ್ರದಾಯವು ನ್ಯಾಯಶಾಸ್ತ್ರದಲ್ಲಿ ಯಾವಾಗಲೂ ತಲೆ ಹಾಕಿ, ಆ ನ್ಯಾಯಶಾಸ್ತ್ರನವನ್ನೇ ನಿರರ್ಥಕವನ್ನಾಗಿ ಮಾಡಿಬಿಡುತ್ತದೆ. ಕೃತ್ರಿಮ ದತ್ತು, ಗೋಧಾ ದತ್ತು ಹಾಗೂ ದ್ವೈಮುಷಾಯನ ದತ್ತು ಮುಂತಾದಂತಹ ಸಾಂಪ್ರದಾಯಿಕ ದತ್ತು ಪದ್ಧತಿ ಬಗ್ಗೆ ನಿರ್ದಿಷ್ಟವಾಗಿ ಹೇಳುವುದಾದರೆ, ನನ್ನ ಮನವಿ ಏನೆಂದರೆ, ಇವೆಲ್ಲವೂ, ನಿಜವಾಗಿಯೂ, ದತ್ತು ಅಲ್ಲವೇ ಅಲ್ಲ. ಪ್ರಿವಿ ಕೌನ್ಸಿಲ್, ತನ್ನ ಒಂದು ತೀರ್ಪಿನಲ್ಲಿ ಹೇಳಿರುವಂತೆ, ದತ್ತು ತೆಗೆದುಕೊಳ್ಳುವುದು ಸಂಪೂರ್ಣವಾಗಿ ಒಂದು ಧಾರ್ಮಿಕ ಆಚಾರ, ವಿದ್ಯಮಾನ, ದತ್ತು ಮಗ ಆಸ್ತಿಯನ್ನು ಪಡೆಯುವುದೇ ಬೇರೆ ವಿಚಾರ. ಅವನಿಗೆ ಆಸ್ತಿ ಸಿಗಬಹುದು, ಸಿಗದಿರಬಹದು. ಅವನಿಗೆ ಆಸ್ತಿ ಸಿಗದಿದ್ದರೂ ಕೂಡ, ಅವನ ದತ್ತು ಧಾರ್ಮಿಕ ದೃಷ್ಟಿಯಿಂದ ಮಾನ್ಯವಾಗಬಹುದು. ಆದ್ದರಿಂದ, ನನ್ನ ಮನವಿ ಏನೆಂದರೆ, ಈ ಎಲ್ಲ ಸಾಂಪ್ರದಾಯಿಕ ದತ್ತು ಪದ್ಧತಿಗಳು, ಈ ಆಚಾರ ವಿಚಾರವನ್ನು ಅನುಸರಿಸುವ ಎರಡು ಕುಟುಂಬಗಳಲ್ಲಿ ಆಸ್ತಿಯು ಉಳಿದುಕೊಳ್ಳುವಂತೆ ಮಾಡುವ ಸಾಧನಗಳೇ ಹೊರತು ಮತ್ತೇನೂ ಅಲ್ಲ. ನಾವು ಸಂವಿಧಾನವನ್ನು ಅಂಗೀಕರಿಸಿರುವುದರಿಂದ ಮತ್ತು ಒಬ್ಬನಲ್ಲಿ ಅಥವಾ ಹಲವರಲ್ಲಿ ಆಸ್ತಿಯು ಕೇಂದ್ರೀಕೃತವಾಗಲು ಆಸ್ಪದ ಆಗದಂತೆ ರಾಜ್ಯವು ಕ್ರಮ ಕೈಗೊಳ್ಳಬೇಕೆಂದು ಹೇಳುವ ಒಂದು ಕಲಮನ್ನು ನಿರ್ದೇಶಕ ತತ್ವಗಳಲ್ಲಿ ಸೇರಿಸುವುದರಿಂದ ಆಸ್ತಿಯನ್ನು ಪಾಲು ಮಾಡಿಕೊಳ್ಳಲು ಉಭಯತ್ರರು ಒಪ್ಪಿಕೊಳ್ಳುವ, ಅದರಂತೆ ಆಸ್ತಿಯನ್ನು ಇಟ್ಟುಕೊಳ್ಳುವ

ದ್ವೈಮುಷಾಯನದಂತಹ ಸಾಧನಗಳನ್ನು ನಾವು ಸಹಿಸಿಕೊಳ್ಳಬಾರದು. ಅಲ್ಲದೇ, ನಿಜವಾಗಿ ದತ್ತು ತೆಗೆದುಕೊಳ್ಳುವವರು, ಕಾನೂನಿನಲ್ಲಿ ಅನುಮತಿ ಕೊಟ್ಟಿರುವ ದತ್ತಕ ದತ್ತುಗೆ ಸಂಬಂಧಿಸಿದ ನಿಯಮ, ನಿಬಂಧನೆಗಳನ್ನು ಏಕೆ ಪಾಲಿಸುವುದಿಲ್ಲವೋ ಗೊತ್ತಾಗುತ್ತಿಲ್ಲ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈಗ ಒಂದು ಗಂಟೆ ಸಮಯ ಆಗಿದೆ, ಮಾನ್ಯ ಸದಸ್ಯರುಗಳು, ಊಟ ಆದ ಮೇಲೆ ಚರ್ಚೆಯನ್ನು ಮುಂದುವರಿಸಬಹುದು.

*ಊಟಕ್ಕಾಗಿ, ಸಭೆಯನ್ನು ೨–೩೦ವರೆಗೆ ಮುಂದೂಡಲಾಯಿತು.*

*ಊಟದ ನಂತರ, ಸಭೆಯು ೨–೩೦ಕ್ಕೆ ಪುನಃ ಸೇರಿತು. ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ (ಶ್ರೀ ಅನಂತಶಯನಂ ಅಯ್ಯಂಗಾರ್) ಪೀಠದಲ್ಲಿದ್ದರು.*

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ದಾಯಾದಿ ಕಾನೂನಿನ ವಿಷಯಕ್ಕೆ ಸಂಬಂಧಿಸಿದ ವಿವಾದಾಂಶಗಳನ್ನು ನಾನು ಹೇಳಬಯಸುವುದಿಲ್ಲ.

ಈ ಮಸೂದೆಯು ಮಿತಾಕ್ಷರ ನ್ಯಾಯವು ಹೇಳಿರುವ ದಾಯಾದಿತ್ವವನ್ನು ಏಕೆ ರದ್ದು ಮಾಡಬಯಸಿದೆ ಅನ್ನುವ ಪ್ರಶ್ನೆ ಉದ್ಭವವಾಗಿದೆ. ಈಗ ಸರ್, ಈ ವಿಷಯಗಳನ್ನು ಚೆನ್ನಾಗಿ ಮನನ ಮಾಡಿಕೊಂಡಿರುವ ನಾನು, ಈ ವಿಷಯಗಳನ್ನು ಎಳೆಎಳೆಯಾಗಿ ಬಿಡಿಸಿ ಹೇಳಬಲ್ಲೆ ಎಂದು ಭಾವಿಸಿದ್ದೇನೆ. ಈ ವಿಷಯವು ಮೂರು ಬೇರೆ ಬೇರೆ ದೃಷ್ಟಿಕೋನಗಳಿಂದ ಪರಿಶೀಲಿಸುವ ಅಗತ್ಯವಿದೆ ಎಂದು ನನ್ನ ಅನಿಸಿಕೆ. ಒಂದು ದಾಯಾದಿ ಆಸ್ತಿಯ ಮಿತಿಯೊಳಗೆ ಎಷ್ಟು ದೊಡ್ಡ ಪ್ರಮಾಣದ ಆಸ್ತಿಯನ್ನು ಸೇರಿಸಬೇಕು? ದಾಯಾದಿ ಆಸ್ತಿಯಲ್ಲಿ ಒಳಗೊಂಡಿರುವ ಆಸ್ತಿಯ ಪ್ರಮಾಣವು ಈ ದಿನಗಳಲ್ಲಿ ಒಬ್ಬ ಮನುಷ್ಯ ಇಟ್ಟುಕೊಳ್ಳುವ ಆಸ್ತಿಯಂತೆ ತುಂಬಾ ದೊಡ್ಡ ಭಾಗ ಆಗಿದ್ದರೆ, ಆಗ, ಈ ವಿಷಯಕ್ಕೆ ತುಂಬಾ ಗಮನ ಕೊಡಬೇಕಾಗುತ್ತದೆಂಬುದರಲ್ಲಿ ಸಂಶಯವೇ ಇಲ್ಲ. ಆದ್ದರಿಂದ, ಈ ವಿಷಯದ ಮೊದಲನೇ ಅಂಶವನ್ನು ಪರಿಶೀಲಿಸಬೇಕಾಗುತ್ತದೆ.

ದಾಯಾದಿ ಆಸ್ತಿಯನ್ನು ಇಟ್ಟುಕೊಳ್ಳುವುದಕ್ಕೆ ಸಂಬಂಧಿಸಿದಂತೆ ನಾವು ಪರಿಶೀಲಿಸಬೇಕಾದ ಎರಡನೇ ಅಂಶವೆಂದರೆ, ದಾಯಾದಿಗೆ ಆಸ್ತಿಯನ್ನು ತಾನೇ ಪರಭಾರೆ ಮಾಡುವ ಹಕ್ಕು ಇರುತ್ತದೆಯೇ ಎಂಬುದು, ಮೂರನೇ ಅಂಶವೆಂದರೆ ದಾಯಾದಿಗೆ, ದಾಯಾದಿತ್ವದಿಂದ ಬಿಡಿಸಿಕೊಳ್ಳುವ ಅಂತರ್ಗತ ಹಕ್ಕು ಇರುತ್ತದೆಯೇ ಎಂಬುದು. ಸ್ಪಷ್ಟವಾಗಿ ಹೇಳುವುದಾದರೆ, ದಾಯಾದಿ ಆಸ್ತಿ ವರ್ಗದ ಆಸ್ತಿಯಲ್ಲಿ ಒಳಗೊಂಡಿರುವ ಆಸ್ತಿಯು, ಆ ಆಸ್ತಿಯಲ್ಲಿ ಸಣ್ಣ ಭಾಗ ಆಗಿದ್ದರೆ, ಬೇರೆ ಬೇರೆ ಪ್ರಶ್ನೆಗಳು ಏಳುತ್ತವೆ. ಹಾಗೆಯೇ ದಾಯಾದಿಗೆ, ಈಗಿನ ಹಿಂದೂ ಕಾನೂನು ಪ್ರಕಾರ, ಆ ಆಸ್ತಿಯಲ್ಲಿನ ಅವನ ಪಾಲನ್ನು ಪರಭಾರೆ ಮಾಡುವ ಹಕ್ಕು ಈಗಾಗಲೇ ಇದ್ದರೆ, ಆಗ, ಈ ಕಾನೂನು ಅಥವಾ ಈ ಮಸೂದೆಯು ದಾಯಾದಿ ಆಸ್ತಿಯನ್ನು ಅತಿಕ್ರಮಿಸುತ್ತದೆಯೇ ಎಂಬುದು ಬೇರೆ ವಿಚಾರ. ಹಾಗೆಯೇ, ಈಗಿನ ಹಿಂದೂ ನ್ಯಾಯದ ಪ್ರಕಾರ, ದಾಯಾದಿಗೆ ದಾಯಾದಿತ್ವದಿಂದ ಬಿಡಿಸಿಕೊಳ್ಳುವ ಅಂತರ್ಗತ ಹಕ್ಕು ಇರುತ್ತದೆ ಎಂದಾದರೆ, ನನ್ನ ಮನವಿ ಏನೆಂದರೆ, ಈ ಮಸೂದೆಯು ದಾಯಾದಿತ್ವದಿಂದ ಬಿಡಿಸಿಕೊಳ್ಳಲು ಆಸ್ಪದ ಕೊಡುತ್ತದೆ ಎನ್ನುವ ವಿಚಾರವು, ಸದನದ ಬಹಳಷ್ಟು ಮಂದಿ ಸದಸ್ಯರು ಹಾಗೂ ಹೊರಗಡೆಯ ಜನರು ಆಲೋಚನೆ ಮಾಡಿದ್ದಕ್ಕಿಂತಲೂ ತೀರಾ ಕಡಿಮೆ ಪ್ರಾಮುಖ್ಯತೆಯ ವಿಷಯವಾಗುತ್ತದೆ.

ಆದ್ದರಿಂದ ನಾನು ಈಗ ಮೊದಲನೆ ಪ್ರಶ್ನೆ ಬಗ್ಗೆ ಹೇಳುತ್ತಿದ್ದೇನೆ : ದಾಯಾದಿಯು, ದಾಯಾದಿಗಳಲ್ಲಿ ಒಬ್ಬನಾಗಿದ್ದರೂ ಕೂಡ, ಅವನು ದಾಯಾದಿ ಆಸ್ತಿ ಅಲ್ಲದ ಆಸ್ತಿಯಲ್ಲಿ ಎಷ್ಟನ್ನು ಹೊಂದಬಹುದು?

ಈ ವಿಷಯಕ್ಕೆ ಗಮನ ಕೊಟ್ಟಿರುವ ಹಾಗೂ ಹಿಂದೂ ಕಾನೂನು ಏನು ಹೇಳಿದೆ ಎನ್ನುವುದನ್ನು ತಿಳಿದುಕೊಂಡಿರುವ ನನ್ನ ಸ್ನೇಹಿತರಿಗೆ, ಅವನು ದಾಯಾದಿಯಾಗಿ ಮುಂದುವರಿಯುವ ತನಕವೂ ಬೇರೆ ಆಸ್ತಿಯನ್ನು ಹೊಂದುವುದಕ್ಕೆ ಯಾವ ಅನರ್ಹತೆಯೂ ಇಲ್ಲವೆನ್ನುವುದು ಗೊತ್ತಾಗುತ್ತದೆ. ಎರಡು ಬೇರೆ ಬೇರೆ ರೀತಿಯ ಆಸ್ತಿಯನ್ನು ಎಂದರೆ ದಾಯಾದಿತ್ವ ಆಸ್ತಿಯನ್ನು ಮತ್ತು ದಾಯಾದಿತ್ವದ್ದು ಅಲ್ಲದ ಎಂದರೆ ತನ್ನದೇ ಆದ ಹಾಗೂ ಉತ್ತರ ಜೀವಿತಾಧಿಕಾರಕ್ಕೆ ಒಳಪಡದ ಆಸ್ತಿಯನ್ನು ಹೊಂದುವ ಸಾಮರ್ಥ್ಯ ಇರುಬಹುದು.

ದಾಯಾದಿಯು, ಅವನು ದಾಯಾದಿಗಳಲ್ಲಿ ಒಬ್ಬನಾಗಿದ್ದರೂ ಅವನು ಹೊಂದಬಹುದಾದ ಆಸ್ತಿಯ ಪ್ರಮಾಣ ಮತ್ತು ಸ್ವರೂಪ ಎಷ್ಟು ಎಂಬುದರ ಬಗ್ಗೆ ನಾನು ಸದನಕ್ಕೆ ಕೆಲವೊಂದು ವಿಷಯ ಹೇಳುತ್ತೇನೆ. ದಾಯಾದಿಯು, ದಾಯಾದಿಗಳಲ್ಲಿ ಒಬ್ಬನಾಗಿದ್ದರೂ ಕೂಡ, ಅವನು ಹೊಂದಬಹುದಾದ ಆಸ್ತಿಯ ವರ್ಗಗಳನ್ನು ನಾನು ಹಿಂದೂ ನ್ಯಾಯದ ಈಗಿನ ಗ್ರಂಥಗಳಿಂದ ಉದಾಹರಿಸಿ ಹೇಳುತ್ತಿದ್ದೇನೆ. ಮೊದಲನೆಯದು, ಹಿಂದೂ ವ್ಯಕ್ತಿಗೆ, ತನ್ನ ತಂದೆ ಅಲ್ಲದ, ಅಜ್ಜ ಅಲ್ಲದ, ಮುತ್ತಜ್ಜ ಅಲ್ಲದ ವ್ಯಕ್ತಿಯಿಂದ ಬಂದಿರುವ ಆಸ್ತಿ. ಹಿಂದೂ ವ್ಯಕ್ತಿಗೆ, ತನ್ನ ತಂದೆ ಅಲ್ಲದ, ಅಜ್ಜ ಅಲ್ಲದ ಮುತ್ತಜ್ಜ ಅಲ್ಲದ ವ್ಯಕ್ತಿಯಿಂದ ಆಸ್ತಿ ಬಂದಿದ್ದರೆ, ಅದು ಅವನ ಬಳಿ ಇರುತ್ತದೆ. ಅದು ಪ್ರತ್ಯೇಕವಾದ ಆಸ್ತಿ, ಅದು ದಾಯಾದಿತ್ವಕ್ಕೆ ಒಳಪಡುವುದಿಲ್ಲ. ಎರಡನೆಯದು, ಅವನಿಗೆ, ತನ್ನ ತಾಯಿಯ ಅಜ್ಜನಿಂದ ಬಂದಿರುವ ಆಸ್ತಿ. ಮೂರನೆಯದು, ಅವನ ತಂದೆಯು ಅವನಿಗೆ ಕೊಟ್ಟ ದಾನ ಅಥವಾ ಪಿತ್ರಾರ್ಜಿತ ಚರಾಸ್ತಿಗಳು. ನಾಲ್ಕನೆಯದು, ದಾಯಾದಿಗಳಲ್ಲಿ ಒಬ್ಬನಿಗೆ ಸರ್ಕಾರವು ಕೊಟ್ಟಿರುವ ಆಸ್ತಿ. ಇದು, ಅವನ ವೈಯಕ್ತಿಕ ಆಸ್ತಿಯಾಗುತ್ತದೆಯೇ ಹೊರತು ದಾಯಾದಿ ಆಸ್ತಿಯಾಗುವುದಿಲ್ಲ. ಐದನೆಯದು, ಕುಟುಂಬದಿಂದ ಕೈತಪ್ಪಿಹೋಗಿದ್ದ, ಆದರೆ, ಕುಟುಂಬದ ಆಸ್ತಿಯ ಸಹಾಯದಿಂದ ಮರಳಿ ಗಳಿಸಿದ ಆಸ್ತಿ. ಇದೂ ಕೂಡ, ಮೂಲತಃ ದಾಯಾದಿ ಆಸ್ತಿಯಾಗಿದ್ದರೂ, ಅವನ ವೈಯಕ್ತಿಕ ಆಸ್ತಿಯಾಗುತ್ತದೆ. ಆರನೆಯದು, ಪ್ರತ್ಯೇಕ ಆಸ್ತಿಯಿಂದ ಬಂದ ವರಮಾನ ಮತ್ತು ಅಂಥ ಆಸ್ತಿಯ ವರಮಾನದಿಂದ ಮಾಡಿದ ಕ್ರಯಗಳು. ಅವೂ ಕೂಡ, ವೈಯಕ್ತಿಕ ಆಸ್ತಿಗಳಾಗುತ್ತವೆ. ಏಳನೆಯದು ದಾಯಾದಿಗೆ ಗಂಡು ಮಗು ಇಲ್ಲದಿದ್ದರೆ, ಅವನಿಗೆ ಹಿಸ್ಸೆಯಿಂದ ಬರುವ ಭಾಗ. ಎಂಟನೆಯದು, ದತ್ತು ಅಧಿಕಾರ ಇರುವಂತಹ ವಿಧವೆ ಇಲ್ಲದಿದ್ದ ಪಕ್ಷದಲ್ಲಿ, ಜೀವಂತ ಇರುವ ಒಬ್ಬನೇ ದಾಯಾದಿಯು ಹೊಂದಿರುವ ಆಸ್ತಿ. ಒಂಭತ್ತನೆಯದು, ಅವಿಭಕ್ತ ಕುಟುಂಬದ ದಾಯಾದಿಯು ಪ್ರತ್ಯೇಕವಾಗಿ ಗಳಿಸಿದ್ದು. ಹತ್ತನೆಯದು, ವಿದ್ಯೆಯಿಂದ ಗಳಿಸಿದ್ದು. ಈ ಎಲ್ಲ ಹತ್ತು ಪ್ರಕಾರದ ವ್ಯಾಪಕ ಪ್ರಮಾಣದ ಆಸ್ತಿಗಳು ಮಿತಾಕ್ಷರ ನ್ಯಾಯದಲ್ಲಿ ಇಂದೂ ಕೂಡ, ದಾಯಾದಿಯ ವೈಯಕ್ತಿಕ ಆಸ್ತಿಯೆಂದು ಹೇಳಲಾಗಿದೆ.

ಒಂದು ಸರಳ ದೃಷ್ಟಾಂತ ಕೊಟ್ಟು, ವಿವರಿಸಬಯಸುತ್ತೇನೆ. ನಮ್ಮ ಸಚಿವಾಲಯದಲ್ಲಿ ನೂರಾರು ಗುಮಾಸ್ತರುಗಳಿದ್ದಾರೆ. ಕೆಲವರು ಸಣ್ಣ ಸಂಬಳದವರು. ಕೆಲವರು ದೊಡ್ಡ ಸಂಬಳದವರು–ಕ್ಯಾಬಿನೆಟ್ ಮಂತ್ರಿಗಳಿಗಿಂತಲೂ ಹೆಚ್ಚು, ೪೦೦೦ ರೂಪಾಯಿ ಪಡೆಯುತ್ತಿರುವರು. (**ಮಾನ್ಯ ಸದಸ್ಯರುಗಳು :** "ಗುಮಾಸ್ತರೆ? ಅವರು ಗುಮಾಸ್ತರೇನು?" ಅಂದರೆ, ಅಧಿಕಾರಿಗಳು, ಒಂದರ್ಥದಲ್ಲಿ ಅವರು ವೈಭವೀಕೃತ ಗುಮಾಸ್ತರು.)

ಈ ಸದನಕ್ಕೆ ನಾನು ಹೇಳಬೇಕೆಂದಿರುವ ಅಂಶ ಏನೆಂದರೆ, ಪ್ರತಿಯೊಬ್ಬನೂ ಗಳಿಸುವ ೪೦೦೦ ರೂಪಾಯಿಗಳನ್ನು ಗಣನೆಗೆ ತೆಗೆದುಕೊಂಡರೆ, ವಿದ್ಯೆಯಿಂದಾಗಿ ಗಳಿಸುವ ಆ ಭಾರೀ ವರಮಾನವು, ನಿಜವಾದ ಅರ್ಥದಲ್ಲಿ ಒಂದು ಅವಿಭಕ್ತ ಕುಟುಂಬ ಇದ್ದ ಪಕ್ಷದಲ್ಲಿ, ಅದು ಆ ಕುಟುಂಬದ ಪಾಲನೆ ಪೋಷಣೆಗಾಗಿ, ಆ ಅವಿಭಕ್ತ ಕುಟುಂಬಕ್ಕೆ ವಿನಿಯೋಗವಾಗಬೇಕಾಗುತ್ತದೆ. ಆಗೇನಾಗುತ್ತದೆ? ಕೆಲವೇ

ವರ್ಷಗಳ ಹಿಂದೆ ಅಂಗೀಕರಿಸಿದ, ವಿದ್ಯೆಯಿಂದ ಗಳಿಸಿದ ವರಮಾನಗಳ ಕಾಯ್ದೆ ಅಡಿಯಲ್ಲಿ, ಇದೇ ಸಭೆಯು, ಅಂದರೆ ಇದೇ ಸದಸ್ಯರೆಂದು ನಾನು ಹೇಳುತ್ತಿಲ್ಲ. ವಿದ್ಯೆಯಿಂದ ಗಳಿಸಿದ ಆ ವರಮಾನವು ಎಂದರೆ ಅವಿಭಕ್ತ ಕುಟುಂಬದ ವರಮಾನದ ಮುಖ್ಯ ಭಾಗ ಆಗುವ ಮತ್ತು ಕುಟುಂಬದ ವರಮಾನದಿಂದ ಅವನನ್ನು ವಿದ್ಯಾವಂತನನ್ನಾಗಿ ಮಾಡಿದ ಪ್ರಯುಕ್ತ ಅವನು ಗಳಿಸಲು ಸಾಧ್ಯವಾದ ವರಮಾನವು ಈಗ ಅವನ ಸ್ವಂತ ಮತ್ತು ವೈಯಕ್ತಿಕ ವರಮಾನವಾಗುತ್ತದೆ ಎನ್ನುವ ಒಂದು ಕಾನೂನನ್ನು ಅಂಗೀಕರಿಸಿದೆ.

ನಾನು ಈಗಾಗಲೇ ಹೇಳಿದಂತೆ, ಮಿತಾಕ್ಷರ ವೈಯಕ್ತಿಕ ಆಸ್ತಿಯ ಮೂಲ ಕಟ್ಟುಕಟ್ಟಳೆಗಳಲ್ಲಿ ಮಾರ್ಪಾಟು ಮಾಡಿ, ಈ ಹತ್ತು ವಿವಿಧ ವರ್ಗಗಳಲ್ಲಿ ಅಷ್ಟೊಂದು ದೊಡ್ಡ ಆಸ್ತಿಯನ್ನು ಈಗಾಗಲೆ ಸೇರಿಸಿರುವುದರಿಂದ ದಾಯಾದಿ ಆಸ್ತಿಯಲ್ಲಿ ಒಳಗೊಂಡಿದೆಯೆಂದು ಹೇಳಬಹುದಾದ ಆಸ್ತಿ ಇನ್ನಾವುದು ಉಳಿಯುತ್ತದೆ? ದಾಯಾದಿ ಆಸ್ತಿಯಲ್ಲಿ ಸೇರ್ಪಡೆ ಆಗುವುದಕ್ಕೆ ನಿಜವಾಗಿಯೂ ತುಂಬಾ ತುಂಬಾ ಚಿಕ್ಕ ಪ್ರಮಾಣದ ಆಸ್ತಿ ಉಳಿಯುತ್ತದೆ. ನಾನು ಇನ್ನೊಂದು ವಿಚಾರಕ್ಕೆ ಬರುತ್ತೇನೆ. ದಾಯಾದಿ ಪದ್ಧತಿಯು–ದಾಯಾದಿ ಅರ್ಥವು ತುಂಬಾ ಸಂಕುಚಿತವಾದುದು ಮತ್ತು ಸೀಮಿತವಾದುದು, ಅದು ಅವಿಭಕ್ತ ಕುಟುಂಬದಂತಲ್ಲ, ಅದೇ ಬೇರೆ ವಿಷಯ ಎನ್ನುವುದನ್ನು ಸದಸ್ಯರು ಅರ್ಥ ಮಾಡಿಕೊಳ್ಳುವರೆಂಬ ನಂಬಿಕೆ ನನಗಿದೆ– ಹಿಂದೂಗಳಿಗೆ ಆಸ್ತಿಯನ್ನು ಸಂರಕ್ಷಿಸಿಕೊಳ್ಳುವುದಕ್ಕೆ, ಇಟ್ಟುಕೊಳ್ಳುವುದಕ್ಕೆ, ಆಸ್ತಿ ಕರಗಿಹೋಗದಂತೆ ನೋಡಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸುತ್ತದೆ, ಕುಟುಂಬದ ಯಾರೇ ವ್ಯಕ್ತಿ ಹಣವನ್ನು ಬೇಕಾಬಿಟ್ಟಿಯಾಗಿ ಖರ್ಚು ಮಾಡದಂತೆ ನಿರ್ಬಂಧ ವಿಧಿಸುತ್ತದೆ.

ಈಗಿನ ಮಿತಾಕ್ಷರ ನ್ಯಾಯದ ಪ್ರಕಾರ, ಈ ಆಸ್ತಿಯನ್ನು ಪರಭಾರೆ ಮಾಡುವ ಹಾಗಿಲ್ಲ, ಹಣವನ್ನು ದುಂದು ವೆಚ್ಚ ಮಾಡುವ ಹಾಗಿಲ್ಲ ಎಂಬುದು ನಿಜವೇ? ಎನ್ನುವ ಪ್ರಶ್ನೆಯನ್ನು ನಾನು ಈ ಸದನಕ್ಕೆ ಕೇಳಬಯಸುತ್ತೇನೆ. ಅದರಲ್ಲಿ ಹಾಗಿಲ್ಲ. ನಾನು ಒಂದು ಅಥವಾ ಎರಡು ದೃಷ್ಟಾಂತ ಕೊಡುತ್ತೇನೆ. ನಾನು, ತಂದೆಯ ವ್ಯವಹಾರದ ಬಗ್ಗೆ ಹೇಳುತ್ತೇನೆ. ಹಳೆಯ ಕಾಲದ ಋಣ ತೀರಿಸಲು, ತಂದೆಗೆ, ಅವಿಭಕ್ತ ಆಸ್ತಿಯನ್ನು ಪರಭಾರೆ ಮಾಡುವುದಕ್ಕೆ ಅವಕಾಶ ಇರುತ್ತದೆ. ಅವನು ಏನು ಮಾಡಬೇಕಾಗುತ್ತದೆಂದರೆ, ಮೊದಲಿಗೆ, ಒಂದು ಸಾವಿರ ಅಥವಾ ಎರಡು ಸಾವಿರ ರೂಪಾಯಿಯನ್ನು ಪ್ರಾಮಿಸರಿ ನೋಟ್ ಬರೆದುಕೊಟ್ಟು ಸಾಲ ತೆಗೆದುಕೊಳ್ಳಬೇಕು. ಅನಂತರ, ಆರು ತಿಂಗಳಾದ ಮೇಲೆ, ಆ ಋಣವನ್ನು ತೀರಿಸಬೇಕಾದ ಸಂದರ್ಭ ಬಂದರೆ, ಆಗ ಅವನು ಆ ಇಡೀ ದಾಯಾದಿ ಆಸ್ತಿಯನ್ನು ಮಾರಾಟ ಮಾಡಲು ಹಕ್ಕುಳ್ಳವನಾಗುತ್ತಾನೆ.

ಹಳೆಯ, ವೈಯಕ್ತಿಕ ಋಣವನ್ನು ತೀರಿಸುವ ಸಲುವಾಗಿ ಆಸ್ತಿಯನ್ನು ಮಾರಾಟ ಮಾಡಲು ತಂದೆಗೆ ಅಷ್ಟೊಂದು ಅಧಿಕಾರ ಕೊಡುವುದು ಸರಿಯೇ? ಆಸ್ತಿಯ ಪರಭಾರೆ ವಿಷಯದಲ್ಲಿ ಮಿತಾಕ್ಷರ ನ್ಯಾಯವು, ತಂದೆ ಬೇರೆ, ಕರ್ತ ಬೇರೆ ಎಂದು ಹೇಳಿದೆಯೆಂಬುದನ್ನು ಈ ಸದನ ಗಮನಿಸಬೇಕು. ಕುಟುಂಬದ ಅವಶ್ಯಕತೆಗಾಗಿ ಆಸ್ತಿಯನ್ನು ಪರಭಾರೆ ಮಾಡುವ ಅಗತ್ಯವಿದೆಯೆಂದು ರುಜುವಾತಾಗುವ ತನಕ ಕರ್ತ ಆಸ್ತಿಯನ್ನು ಪರಭಾರೆ ಮಾಡುವ ಹಾಗಿಲ್ಲ, ನಿಜ. ಆದರೆ, ತಂದೆಗೆ ಅಂತಹ ನಿರ್ಬಂಧ ಯಾವುದೂ ಇಲ್ಲವೇ ಇಲ್ಲ. ತಂದೆ, ತನಗೋಸ್ಕರ ಸಾಲ ತೆಗೆದುಕೊಳ್ಳಬಹುದು, ಕುಟುಂಬಕ್ಕಾಗಿ ಖರ್ಚು ಮಾಡದ ಆ ಹಣವನ್ನು ತೀರಿಸಲು ಆ ಆಸ್ತಿಯನ್ನು ಪರಭಾರೆ ಮಾಡಲು ಹಕ್ಕುಳ್ಳವನಾಗಲೂಬಹುದು. ಮಿತಾಕ್ಷರ ನ್ಯಾಯದಲ್ಲಿ ತಂದೆಯು ಪರಭಾರೆ ಮಾಡುವ ಹಕ್ಕಿನ ಮೇಲೆ ವಿಧಿಸಿರುವ ಒಂದೇ ಒಂದು ನಿರ್ಬಂಧ ಎಂದರೆ, ಸಾಲವನ್ನು ಅಧಾರ್ಮಿಕ ಉದ್ದೇಶಕ್ಕೋ, ಅನೈತಿಕ ಉದ್ದೇಶಕ್ಕೋ ತೆಗೆದುಕೊಂಡಿರಬಾರದು. ಅದನ್ನು ಬಿಟ್ಟರೆ, ಯಾವ ನಿರ್ಬಂಧವೂ ಇಲ್ಲವೆ ಇಲ್ಲ.

ಹಾಗೆಯೇ ಮಗನ ವಿಚಾರ, ಮಿತಾಕ್ಷರ ನ್ಯಾಯದ ಪ್ರಕಾರ ಮಗ, ತಾನು ಯಾವಾಗಬೇಕಾದರೂ ಕುಟುಂಬದ ಆಸ್ತಿಯಲ್ಲಿ ಪಾಲು ಕೇಳಬಹುದು. ಯಾವ ದಾಯಾದಿಗೂ ಆಸ್ತಿಯನ್ನು ಪರಭಾರೆ ಮಾಡುವ ಹಕ್ಕಿರಲಿಲ್ಲ, ಆಸ್ತಿಯು ದಾಯಾದಿಯ ಆಸ್ತಿಯಾಗಿಯೇ ಉಳಿದಿರಬೇಕು ಎನ್ನುವುದೇ ಹಿಂದೂ ನ್ಯಾಯದ ನಿಬಂಧನೆಯಾಗಿದ್ದರೆ, ದಾಯಾದಿ ಆಸ್ತಿಯ ಸಂರಕ್ಷಣೆ ಕುರಿತ ವಾದ ನನಗೆ ಚನ್ನಾಗಿ ಮನವರಿಕೆ ಆಗುತ್ತಿತ್ತೇನೋ. ಆದರೆ, ವಿಷಯ ಅದಲ್ಲ. ಬೇರೆ ಬೇರೆ ಆಗುವುದಕ್ಕೆ ಕಾರಣ ದಾಯಾದಿ ಆಸ್ತಿಯು ಕರಗುವುದಕ್ಕೆ ಕಾರಣ ದಾಯಾದಿಯಲ್ಲೇ ಇರುತ್ತದೆ. ಏಕೆಂದರೆ, ಆಸ್ತಿಯನ್ನು ಭಾಗ ಮಾಡುವಂತೆ ಕೇಳುವ, ಇಡೀ ಸಮಾಜವನ್ನು ಅಸ್ತವ್ಯಸ್ತಗೊಳಿಸುವ ಜನ್ಮಸಿದ್ಧ ಹಕ್ಕನ್ನು ಎಂದರೆ ಅಂತರ್ಗತ ಹಕ್ಕನ್ನು ದಾಯಾದಿ ಕಾನೂನೇ ಕೊಟ್ಟಿದೆ.

ಮೂರನೆಯದಾಗಿ, ಮಗ, ತನ್ನ ಆಸ್ತಿಯನ್ನು ಪರಭಾರೆ ಮಾಡದಿದ್ದರೂ ತನ್ನ ಸ್ವಂತ ಉದ್ದೇಶಕ್ಕಾಗಿ ಆಸ್ತಿಯ ಮೇಲೆ ಸಾಲ ತೆಗೆದುಕೊಳ್ಳಬಹುದು. ಮಿತಾಕ್ಷರ ನ್ಯಾಯದ ಪ್ರಕಾರ, ಹಣ ಸಾಲ ಕೊಟ್ಟವನಿಗೆ, ಸಾಲದ ಮರುಪಾವತಿಗಾಗಿ ದಾಯಾದಿಯು ಬೇರೆ ಆಗುವುದಕ್ಕೆ ದಾವೆ ಹೂಡಲು ಹಕ್ಕು ಇದೆ. ಹೀಗಾಗಿ, ಅಪರಿಚಿತನೊಬ್ಬನಿಗೆ, ಮಿತಾಕ್ಷರ ನ್ಯಾಯದ ಪ್ರಕಾರ, ದಾಯಾದಿಯು ಬೇರೆ ಆಗುವಂತೆ ಮಾಡುವ ಹಕ್ಕಿದೆ. ಸ್ವತ್ತಿನ, ಆಸ್ತಿಪಾಸ್ತಿಗಳ ದೊಡ್ಡ ಭಾಗ ದಾಯಾದಿ ಆಸ್ತಿಯ ಮಿತಿಯ ಹೊರಗೆ ಇದೆಯಲ್ಲ, ದಾಯಾದಿ ಆಸ್ತಿಯನ್ನು, ಅನೈತಿಕ ಉದ್ದೇಶಕ್ಕೆ ತೆಗೆದುಕೊಂಡ ಸಾಲದ ಹೊರತು ಯಾವುದೇ ರೀತಿಯ ನಿರ್ಬಂಧ ಇಲ್ಲದೆ ಪರಭಾರೆ ಮಾಡುವ ಹಕ್ಕು ತಂದೆಗೆ ಇದೆಯಲ್ಲ, ತಾನು ಯಾವಾಗ ಬೇಕಾದರೂ ಆಸ್ತಿ ಭಾಗ ಮಾಡುವಂತೆ ಕೇಳುವ ಹಕ್ಕು ಮಗನಿಗೆ ಇದೆಯಲ್ಲ, ಆಸ್ತಿ ಆಧಾರದ ಮೇಲೆ ಸಾಲ ತೆಗೆದುಕೊಳ್ಳುವ ಹಕ್ಕು ಇದೆಯಲ್ಲ, ಹಣ ಸಾಲ ಕೊಟ್ಟವನು ತನ್ನ ಸಾಲದ ಮರುಪಾವತಿಗಾಗಿ ಆಸ್ತಿ ಭಾಗ ಆಗಲು ದಾವೆ ಹೂಡಲು ಹಕ್ಕು ಇದೆಯಲ್ಲ ಈ ಎಲ್ಲವುಗಳಿಂದ ತಾಪತ್ರಯಪಡುವವರು ಯಾರು, ಇದು, ನೀತಿಸಹಿತವಾದ, ದೋಷರಹಿತವಾದ ಒಂದು ರೀತಿಯ ದೃಢ ವ್ಯವಸ್ಥೆಯೆಂದು ಕರೆಯಬಹುದೇ ಎಂದು ನಾನು ನನ್ನ ಸನ್ಮಾನ್ಯ ಸದಸ್ಯರುಗಳನ್ನು ಕೇಳಬಯಸುತ್ತೇನೆ. ಈಗಿನ ದಾಯಾದಿ ಆಸ್ತಿ ಕಾನೂನಿನಲ್ಲೇ, ಅಸ್ತವ್ಯಸ್ತಗೊಳಿಸುವ ಅಂಶಗಳು ಇವೆ. ಪಾಲನ್ನು ಪ್ರತ್ಯೇಕವಾಗಿ ಹೊಂದಿರತಕ್ಕದ್ದೆಂದು ಹೇಳುವ ಈ ಮಸೂದೆಯು ತೀರಾ ಆಮೂಲಾಗ್ರವಾದುದೇನನ್ನೂ ಮಾಡುತ್ತಿಲ್ಲ. ಇಂದು, ಪ್ರತಿಯೊಬ್ಬರೂ ಪ್ರತ್ಯೇಕವಾಗಿ ಬದುಕಬಯಸುವ ಪರಿಸ್ಥಿತಿ ಇದೆಯೆಂಬುದು ನಮಗೆಲ್ಲರಿಗೂ ಗೊತ್ತಿದೆ. ತಂದೆ ಸತ್ತ ಮರುಕ್ಷಣವೇ, ಆಗ ಅಸ್ತಿತ್ವದಲ್ಲಿರುವ ಸಂಗತಿಗಳಿಗೆ ಕಾನೂನು ಮಾನ್ಯತೆ ಸಿಗಬೇಕೆಂದು ಮಕ್ಕಳು ತಗಾದೆ ಮಾಡುತ್ತಾರೆ. ಮಸೂದೆಯ ಈ ಭಾಗದಲ್ಲಿ ಆಮೂಲಾಗ್ರವಾದುದು ಯಾವುದೂ ಇಲ್ಲವೇ ಇಲ್ಲ.

ಸಾಮಾನ್ಯವಾಗಿ ಗ್ರಹಿಕೆಗೆ ಬಂದಿಲ್ಲವೆಂದು ಭಾವಿಸಿರುವ ಒಂದು ವಿಚಾರವನ್ನು ನಾನು ಹೇಳಲೇಬೇಕಾಗಿದೆ. ದಾಯಾದಿ ಮತ್ತು ಅವಿಭಕ್ತ ಕುಟುಂಬದ ನಡುವೆ ವ್ಯತ್ಯಾಸ ಗುರುತಿಸಬೇಕಾಗಿದೆ ಎಂದು ಹೇಳುತ್ತ ನಾನು ಮಾತು ಪ್ರಾರಂಭಿಸಿದ್ದೆ. ದಾಯಾದಿತ್ವವನ್ನು ರದ್ದುಮಾಡುವ ಈ ಮಸೂದೆಯು ಅವಿಭಕ್ತ ಕುಟುಂಬವನ್ನು ಉಳಿಸಿಕೊಂಡಿದೆ. ಅವಿಭಕ್ತ ಕುಟುಂಬದ ಪಾಲನೆ ಪೋಷಣೆ ಮಾಡುವುದಕ್ಕೆ ಈ ಮಸೂದೆ ಅಡ್ಡ ಬರುವುದಿಲ್ಲ. ಮಿತಾಕ್ಷರ ನ್ಯಾಯದಲ್ಲಿ ಹೇಳಿರುವಂತಹ ಅವಿಭಕ್ತ ಕುಟುಂಬವು ದಾಯಭಾಗ ನ್ಯಾಯದಲ್ಲಿ ಹೇಳಿರುವಂತಹ ಅವಿಭಕ್ತ ಕುಟುಂಬದಂತೆಯೇ ಇದೆ, ಅದೇ ಸ್ವರೂಪದ್ದಾಗಿದೆ. ಬಂಗಾಳದಲ್ಲಿ ಅವಿಭಕ್ತ ಕುಟುಂಬಗಳು ಇಲ್ಲದಿರುವುದರಿಂದ ಅಲ್ಲಿಗೆ ಮಿತಾಕ್ಷರ ನ್ಯಾಯ ಅನ್ವಯವಾಗುವುದಿಲ್ಲವೆಂದು ಭಾವಿಸಲೇಬಾರದು. ಅಲ್ಲೂ ಅವಿಭಕ್ತ ಕುಟುಂಬಗಳು ಇವೆ. ಅಲ್ಲಿ ಇರುವ ಒಂದೇ ಒಂದು ವ್ಯತ್ಯಾಸವೆಂದರೆ, ಅವಿಭಕ್ತ ಕುಟುಂಬದವರು, ಅವಿಭಕ್ತ ಗೇಣಿದಾರರಂತೆ ಹಕ್ಕನ್ನು ಹೊಂದಿರುವ ಬದಲು, ಸಮಾನ ಗೇಣಿದಾರರಂತೆ

ಹಕ್ಕನ್ನು ಹೊಂದಿರುತ್ತಾರೆ. ಮಿತಾಕ್ಷರ ನ್ಯಾಯದಲ್ಲಿರುವ ಈಗಿನ ನ್ಯಾಯನ್ಯಾಯದ ಹಾಗೂ ಮಿತಾಕ್ಷರ ನ್ಯಾಯದಲ್ಲಿನ ಭವಿಷ್ಯತ್ ನ್ಯಾಯದ ನಡುವೆ ಇರುವ ವ್ಯತ್ಯಾಸವೆಂದರೆ ಅದೊಂದೇ.

ನಾನು ಈಗ ಮಹಿಳಾ ಆಸ್ತಿ ಬಗ್ಗೆ ಹೇಳುತ್ತೇನೆ. ಈ ವಿಷಯದ ಸೂಕ್ಷ್ಮಗಳು ಈ ಸದನದ ಎಷ್ಟು ಮಂದಿ ಸದಸ್ಯರಿಗೆ ಚೆನ್ನಾಗಿ ತಿಳಿದಿದೆಯೋ ನನಗೆ ಗೊತ್ತಿಲ್ಲ. ಈ ವಿಷಯವನ್ನು, ನಾನು, ಅಧ್ಯಯನ ಮಾಡಿ ತಿಳಿದುಕೊಂಡಿರುವಷ್ಟರ ಮಟ್ಟಿಗೆ ಹೇಳುವುದಾದರೆ, ಹಿಂದೂ ನ್ಯಾಯದಲ್ಲಿ, ಮಹಿಳಾ ಆಸ್ತಿಯಷ್ಟು ತುಂಬಾ ಸೂಕ್ಷ್ಮವಾದ ತುಂಬಾ ಜಟಿಲವಾದ ವಿಷಯ ಇನ್ನೊಂದಿದೆಯೆಂದು ನನಗೆ ಅನ್ನಿಸುತ್ತಿಲ್ಲ (**ಒಬ್ಬರು ಮಾನ್ಯ ಸದಸ್ಯರು** : ಮಹಿಳೆಯೇ ಸೂಕ್ಷ್ಮ, ಇದೂ ಕೂಡ ಅಷ್ಟೇ ಸೂಕ್ಷ್ಮ ಏನು?) ಹೌದು, ಮಹಿಳೆಯಷ್ಟೇ ಸೂಕ್ಷ್ಮ. ನೀವು, ಒಂದು ವೇಳೆ, "ಸ್ತ್ರೀ ಧನ" ಯಾವುದು ಎಂದು ನೀವೇನಾದರೂ ಕೇಳಿದರೆ, ಆ ಪ್ರಶ್ನೆಗೆ ಉತ್ತರ ಕೊಡುವುದಕ್ಕೂ ಮೊದಲು, ನೀವು ಇನ್ನೊಂದು ಪ್ರಶ್ನೆ ಕೇಳಬೇಕಾಗುತ್ತದೆ. ಅದಕ್ಕೆ ಉತ್ತರ ಕಂಡುಕೊಳ್ಳಬೇಕಾಗುತ್ತದೆ. ಮೊದಲು, ನೀವು "ಆಕೆ ಕನ್ಯೆಯೇ" ಅಥವಾ "ಆಕೆಗೆ ಮದುವೆ ಆಗಿದೆಯೇ" ಎಂದು ಕೇಳಬೇಕಾಗುತ್ತದೆ. ಏಕೆಂದರೆ, ಯಾವ ಆಸ್ತಿ, ಸ್ತ್ರೀಧನ ಹೌದು, ಯಾವ ಆಸ್ತಿ ಸ್ತ್ರೀ ಧನ ಅಲ್ಲ ಎನ್ನುವುದು ಮಹಿಳೆಯ ಸ್ಥಾನಮಾನವನ್ನು ಆಧರಿಸಿರುತ್ತದೆ. ಆಕೆ ಕನ್ಯೆಯಾಗಿದ್ದಾಗ ಪ್ರಾಪ್ತವಾದ ಕೆಲವೊಂದು ಆಸ್ತಿಯು "ಸ್ತ್ರೀಧನ" ಆಗುತ್ತದೆ, ಆಕೆಗೆ ಮದುವೆ ಆದ ಮೇಲೆ ಪ್ರಾಪ್ತವಾದ ಕೆಲವೊಂದು ಆಸ್ತಿಯ "ಸ್ತ್ರೀಧನ" ಆಗುವುದಿಲ್ಲ. ಸ್ತ್ರೀಧನಕ್ಕೆ ಉತ್ತರಾಧಿಕಾರದ ವಂಶಕ್ರಮ ಯಾವುದು ಎಂದು ನೀವೇನಾದರೂ ಕೇಳಿದರೆ, ಮತ್ತೆ ನೀವು, ಸ್ತ್ರೀಧನವು ಕನ್ಯೆಯದೇ ಅಥವಾ ಸ್ತ್ರೀಧನವು ವಿವಾಹಿತ ಮಹಿಳೆಯದೇ ಎಂದು ಕೇಳಬೇಕಾಗುತ್ತದೆ. ಏಕೆಂದರೆ, ಕನ್ಯೆಯ ಸ್ತ್ರೀಧನಕ್ಕೆ ಉತ್ತರಾಧಿಕಾರದ ವಂಶಕ್ರಮವೇ ಬೇರೆ, ವಿವಾಹಿತ ಮಹಿಳೆಯ ಸ್ತ್ರೀಧನಕ್ಕೆ ಉತ್ತರಾಧಿಕಾರದ ವಂಶಕ್ರಮವೇ ಬೇರೆ. ವಿವಾಹಿತ ಮಹಿಳೆಯ ಆಸ್ತಿಗೆ ಉತ್ತರಾಧಿಕಾರದ ವಿಷಯ ಬಂದಾಗ, ನೀವು, ಮತ್ತೆ, ಆಕೆ ಬಂಗಾಳ ಪಂಥದವಳೇ ಅಥವಾ ಮಿತಾಕ್ಷರ ಪಂಥದವಳೇ ಎಂದು ಕೇಳಬೇಕಾಗುತ್ತದೆ. ಆಕೆ ಮಿತಾಕ್ಷರ ಪಂಥದವಳೇ ಎಂದು ನೀವೇನಾದರೂ ಕೇಳಿದರೆ, ಆಕೆ ಮಿಥಿಲಾ ಪಂಥದವಳೇ ಅಥವಾ ಬನಾರಸ್ ಪಂಥದವಳೇ ಅಥವಾ ಇನ್ನೊಂದು ಪಂಥದವಳೇ ಎಂಬುದನ್ನು ಕಂಡುಕೊಳ್ಳುವ ತನಕ ನಿಮಗೆ ಸ್ಪಷ್ಟವಾದ ಉತ್ತರ ಸಿಗುವುದೇ ಇಲ್ಲ. ಇದು, ಅಷ್ಟೊಂದು ತುಂಬಾ ಜಟಿಲವಾದ ವಿಷಯ. ಮಾನ್ಯ ಸದಸ್ಯರುಗಳು ಎರಡು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಒಂದು, ಮಹಿಳಾ ಆಸ್ತಿ ಬಗ್ಗೆ ಹೇಳುವುದಾದರೆ, ಸಾಮಾನ್ಯವಾಗಿ ಎರಡು ವರ್ಗದ ಆಸ್ತಿ ಇರುತ್ತದೆ. ಒಂದನೇ ವರ್ಗದ ಆಸ್ತಿಯನ್ನು ಸ್ತ್ರೀಧನ ಎಂದು ಕರೆಯಲಾಗುತ್ತದೆ, ಎರಡನೇ ವರ್ಗದ ಆಸ್ತಿಯನ್ನು ವಿಧವೆಯ ಆಸ್ತಿ ಎಂದು ಕರೆಯಲಾಗುತ್ತದೆ. ವಿಧವೆ ಆಸ್ತಿಯು ಆಕೆಗೆ, ಆಕೆಯ ಕುಟುಂಬದ ಪುರುಷನಿಂದ ಬಂದಿರುತ್ತದೆ. ಈಗಿನ ಕಾನೂನಿನ ಪ್ರಕಾರ, ಅದು, ಆಕೆ ಬದುಕಿರುವವರೆಗೆ ಮಾತ್ರ ಆಕೆಯಲ್ಲಿರುತ್ತದೆ. ಆ ತರುವಾಯ ಆ ಆಸ್ತಿಯು, ಪುರುಷ ವಾರಸುದಾರನ ಉತ್ತರಾಧಿಕಾರಿಗಳಿಗೆ ಹೋಗುತ್ತದೆ. ಅದೇ ವಸ್ತು ಸ್ಥಿತಿ.

ಆದ್ದರಿಂದ, ಮಹಿಳೆಯ ಆಸ್ತಿ ಬಗ್ಗೆ ಹೇಳುವುದಾದರೆ, ಎರಡು ಬೇರೆ ಬೇರೆ ರೀತಿಯ ಉತ್ತರಾಧಿಕಾರ, ಎರಡು ಬೇರೆ ಬೇರೆ ರೀತಿಯ ಆಸ್ತಿ ಇರುತ್ತವೆ, ಎಂದರೆ ಒಂದು ಸ್ತ್ರೀ ಧನ, ಇನ್ನೊಂದು ವಿಧವೆಯ ಆಸ್ತಿ. ಸ್ತ್ರೀಧನ ಆಸ್ತಿಗೆ ಉತ್ತರಾಧಿಕಾರಿಗಳು ಬೇರೆ, ಪುರುಷನಿಂದ ಆಕೆಗೆ ಬಂದ ಆಸ್ತಿಗೆ ಉತ್ತರಾಧಿಕಾರಿಗಳೇ ಬೇರೆ. ಆದ್ದರಿಂದ, ಹಿಂದೂ ನ್ಯಾಯದ ಈ ನಿರ್ದಿಷ್ಟ ಭಾಗವನ್ನು ಕ್ರೋಡೀಕರಿಸುವಾಗ, ನಾವು ಪರಿಶೀಲಿಸಬೇಕಾದ ವಿಚಾರ ಯಾವುದೆಂದರೆ, ಮೊದಲನೆಯದು, ಈಗ ಅಸ್ತಿತ್ವದಲ್ಲಿರುವ ಸ್ತ್ರೀಧನ ಆಸ್ತಿ,

ವಿಧವೆಯ ಆಸ್ತಿ ಎನ್ನುವ ಈ ಎರಡು ಮುಖ್ಯ ಭಾಗಗಳನ್ನು ಉಳಿಸಿಕೊಳ್ಳಬೇಕೆ? ಎರಡನೆಯದು, ಉತ್ತರಾಧಿಕಾರಕ್ಕೆ ಎರಡೂ ರೀತಿಯ ವಂಶಕ್ರಮವನ್ನು ಇಟ್ಟುಕೊಳ್ಳಬೇಕೇ; ಎಂದರೆ, ಸ್ತ್ರೀಧನ ಆಸ್ತಿಗೆ ಒಂದು ರೀತಿಯ ವಂಶಕ್ರಮ, ವಿಧವೆಯ ಆಸ್ತಿಗೆ ಇನ್ನೊಂದು ರೀತಿಯ ವಂಶಕ್ರಮ. ಈ ಕಾನೂನನ್ನು ಕ್ರೋಡೀಕರಿಸುವಾಗ ಈ ಎರಡು ಪ್ರಮುಖ ವಿಚಾರಗಳು ಉದ್ಭವವಾಗುತ್ತವೆ. ಕ್ರೋಡೀಕರಣದ ಬಗ್ಗೆ ಹೇಳುವುದಾದರೆ, ಈಗಿನ ಅವ್ಯವಸ್ಥೆಯನ್ನು ನಾವು ಉಳಿಯಬಿಟ್ಟರೆ ಅದರ ಉದ್ದೇಶವೇ ವಿಫಲವಾಗುತ್ತದೆಂದು ಸಮಿತಿಯು ತೀರ್ಮಾನಕ್ಕೆ ಬಂದಿದೆ. ಒಂದೋ, ಮಹಿಳೆಗೆ ಅಬಾಧಿತ ಆಸ್ತಿಯನ್ನು ಹೊಂದುವ ಹಕ್ಕು ಇರುವುದಿಲ್ಲ ಎನ್ನುವುದನ್ನು, ಇಲ್ಲವೇ, ಮಹಿಳೆಗೆ ಅಬಾಧಿತ ಆಸ್ತಿ ಇರಬೇಕು ಎನ್ನುವುದನ್ನು ನಾವು ನಿರ್ಧರಿಸಲೇಬೇಕಾಗುತ್ತದೆ. ಹಾಗೆಯೇ, ಮಹಿಳೆಯ ವಾರಸುದಾರರ ವಂಶಕ್ರಮ ಯಾವುದಿರಬೇಕು, ಅದು ಒಂದೇ ರೀತಿಯದಾಗಿರಬೇಕೇ ಅಥವಾ ಬೇರೆ ಬೇರೆಯದಾಗಿರಬೇಕೇ ಎಂಬುದನ್ನು ಸಹ ನಾವು ನಿರ್ಧರಿಸಬೇಕಾಗುತ್ತದೆ. ಆಸ್ತಿ ಹಕ್ಕಿನ ಬಗ್ಗೆ ಹೇಳುವುದಾದರೆ ಏಕರೂಪತೆ ಇರಬೇಕು ಮತ್ತು ಏಕರೂಪತೆಯು, ಮಹಿಳೆಗೆ ಅಬಾಧಿತ ಆಸ್ತಿ ಇದೆ ಎಂಬುದನ್ನು ಮಾನ್ಯ ಮಾಡಿರಬೇಕೆಂದು ಸಮಿತಿಯು ತೀರ್ಮಾನಕ್ಕೆ ಬಂದಿದೆ.

ಮಹಿಳೆಗೆ ಅಬಾಧಿತ ಆಸ್ತಿ ಇರುವುದರ ವಿರುದ್ಧ ಯಾವಾಗಲೂ ತುಂಬಾ ತುಂಬಾನೆ ಚರ್ಚೆ ಆಗುವುದು ನನಗೆ ಗೊತ್ತಿದೆ. ಮಹಿಳೆಯರು, ಮನೋದೌರ್ಬಲ್ಯ ಉಳ್ಳವರೆಂಬುದು ಜನಜನಿತ. ಮಹಿಳೆಯರು ಯಾವಾಗಲೂ ಜನರ ಎಲ್ಲ ರೀತಿಯ ಪ್ರಚೋದನೆಗಳಿಗೆ ಒಳಗಾಗುತ್ತಾರೆಂಬುದೂ ಜನಜನಿತ. ಆದ್ದರಿಂದ, ಕುಟುಂಬದಿಂದ ಬಂದಿರುವ ಆಸ್ತಿಯನ್ನು, ಮಹಿಳೆಯ ಹಾಗೂ ಕುಟುಂಬದ ಹಿತಕ್ಕೆ ವ್ಯತಿರಿಕ್ತವಾಗಿ, ಒಂದಲ್ಲ ಒಂದು ರೀತಿಯಲ್ಲಿ ವಿಲೇ ಮಾಡಲು ಅವರನ್ನು ಪುಸಲಾಯಿಸುವ ಕುಯುಕ್ತಿ ಜನರ ಎಲ್ಲ ರೀತಿಯ ಪ್ರಚೋದನೆ ಇರುವಂತಹ ಈ ಪ್ರಪಂಚದಲ್ಲಿ ಮಹಿಳೆಯನ್ನು ಬಿಡುವುದು ತುಂಬಾ ಅಪಾಯಕರ. ಸಮಿತಿಯು ತೆಗೆದುಕೊಂಡಿರುವ ಕೆಲವೊಂದು ವಿಷಯಗಳಲ್ಲಿ ಅಥವಾ ಸ್ತ್ರೀಧನ ಆಸ್ತಿ ಎಂದು ಕರೆದಿರುವ ಕೆಲವೊಂದು ರೀತಿಯ ಆಸ್ತಿಯಲ್ಲಿ ಸ್ಮೃತಿಗಳು ಮಹಿಳೆಗೆ ಅಬಾಧಿತ ಹಕ್ಕು ಕೊಡಲು ಸಿದ್ಧವಿವೆ. ಮಹಿಳೆಗೆ ತನ್ನ ಸ್ತ್ರೀಧನ ಆಸ್ತಿಯ ಮೇಲೆ ಹಕ್ಕು ಇದೆ ಎನ್ನುವ ಬಗ್ಗೆ ಯಾವ ವಿವಾದವೂ ಇರಲಾರದು. ಆಕೆಯು ತನಗೆ ಇಷ್ಟ ಬಂದ ರೀತಿಯಲ್ಲಿ ಅದನ್ನು ವಿಲೇ ಮಾಡಬಹುದು. ಮಹಿಳೆಯು ತನ್ನ ಸ್ತ್ರೀಧನ ಆಸ್ತಿಯನ್ನು, ತನಗೆ ಇಷ್ಟ ಬಂದ ಹಾಗೆ ಒಳ್ಳೆಯ ರೀತಿಯಲ್ಲಿ ವಿಲೇ ಮಾಡುತ್ತಾಳೆಂಬ ನಂಬಿಕೆ ಇದ್ದರೆ, ಮಿತಾಕ್ಷರ ನ್ಯಾಯದ ಆ ನಿಬಂಧನೆಯನ್ನು ಆಕೆ ಉಲ್ಲಂಘಿಸುತ್ತಿದ್ದಾಳೆಂಬ ಆಕ್ಷೇಪಣೆಯನ್ನು ಯಾರೂ ಎತ್ತದೇ ಹೋಗಿದ್ದರೆ, ಆಕೆಗೆ ಬಂದಿರುವ ಇನ್ನೊಂದು ರೀತಿಯ ಆಸ್ತಿಯಾದ ಎಂದರೆ ವಿಧವೆಯ ಆಸ್ತಿಯು ಆಕೆಯ ಅಬಾಧಿತ ಆಸ್ತಿಯಾಗಕೂಡದು ಎಂಬುದನ್ನು ರುಜುವಾತುಪಡಿಸುವ ಹೊಣೆ ಪ್ರತಿಕಕ್ಷಿಗಳ ಮೇಲಿರುತ್ತದೆ. ತನ್ನ ಬಳಿ ಇರುವ ಆಸ್ತಿಯ ಕೆಲವೊಂದು ಭಾಗವನ್ನು ವಿಲೇ ಮಾಡಲು ಮಹಿಳೆಯರಿಗೆ ಅಧಿಕಾರ ಇದೆಯಾದರೂ, ಆ ಆಸ್ತಿಯ ಇನ್ನೊಂದು ಭಾಗವನ್ನು ವಿಲೇ ಮಾಡಲು ಅವರಿಗೆ ಅಧಿಕಾರ ಇಲ್ಲ ಎನ್ನುವುದನ್ನೂ ಅವರೇ ರುಜುವಾತು ಮಾಡಬೇಕಾಗುತ್ತದೆ. ಸಮಿತಿಯು, ತುಂಬಾ ಜಾಗರೂಕತೆಯಿಂದ ಪರಾಮರ್ಶೆ ಮಾಡಿದರೂ ಕೂಡ ಈ ಸಮಸ್ಯೆಗೆ ಒಂದು ತೃಪ್ತಿಕರವಾದ ಪರಿಹಾರವನ್ನು ಕಂಡುಕೊಳ್ಳಲು ವಿಫಲವಾಗಿದೆ. ಕೆಲವೊಂದು ಸಂದರ್ಭಗಳಲ್ಲಿ, ಮಹಿಳೆಯರು ತಮ್ಮ ಆಸ್ತಿಯನ್ನು ಮಾರಾಟ ಮಾಡಲು ಮತ್ತು ವಿಲೇ ಮಾಡಲು ಸಕ್ಷಮರಾಗಿರುತ್ತಾರೆ, ಬುದ್ಧಿವಂತರಿರುತ್ತಾರೆಂದ ಮೇಲೆ, ಇತರ ಆಸ್ತಿಯನ್ನೂ ವಿಲೇ ಮಾಡಲು ಸಹ ಅವರು ಸಕ್ಷಮರಾಗಿರುತ್ತಾರೆಂದು ಸಮಿತಿಯು ಸರಿಯಾದ ತೀರ್ಮಾನಕ್ಕೆ ಬಂದಿದೆ

ಎಂಬುದು ನನ್ನ ಅಭಿಪ್ರಾಯ. ಮಹಿಳೆಯರಿಗೆ ಈಗ ಅಬಾಧಿತ ಆಸ್ತಿ ಇರಬೇಕೆಂದು ಸಮಿತಿಯು ಈ ನಿಬಂಧನೆ ಮಾಡಿರುವುದಕ್ಕೆ ಅದೇ ಕಾರಣ.

ಈ ವಿಚಾರದಲ್ಲಿ ಇನ್ನೊಂದು ಪ್ರಶ್ನೆ ಏಳುತ್ತದೆ. ಅದೇನೆಂದರೆ, ಮಹಿಳೆಯ ಆಸ್ತಿಯಲ್ಲಿ ಮಗಳಿಗೂ ಪಾಲು ಉಂಟೇ ಎಂಬುದು. ಇದೊಂದು ಜಟಿಲ ವಿಚಾರ ಎಂದು ಹೇಳುವುದೇ, ಆ ವಿಷಯದ ಪ್ರಾಮುಖ್ಯತೆಯನ್ನು ಮಹತ್ವವನ್ನು ತಗ್ಗಿಸಲು ಹೇಳುವ ಮಾತು ಎನ್ನುವುದು ನನಗೆ ಗೊತ್ತಿದೆ. ಇದೊಂದು ತುಂಬಾ ಕುತೂಹಲದ ವಿಚಾರ. ಇಂದು ಈ ಪ್ರಪಂಚದಲ್ಲಿ ಅನೇಕ ಜನರಲ್ಲಿ, ಭಾರತದಲ್ಲೂ ಕೂಡ, ಸಂಪ್ರದಾಯಸ್ಥ ಜನರಲ್ಲಿ, ಸಂಪ್ರದಾಯಸ್ಥರಲ್ಲದ ಜನರಲ್ಲಿ, ಹೆಣ್ಣುಮಕ್ಕಳು ಹುಟ್ಟಲಿ ಎಂದು ಹೇಳದವರು ಅನೇಕ ಜನರಿದ್ದಾರೆ. ಹೆಣ್ಣುಮಕ್ಕಳು ಹುಟ್ಟದೇ ಹೋದರೆ, ಈ ಪ್ರಪಂಚದಲ್ಲಿ ಏನೇನಾಗುತ್ತದೋ ನನಗೆ ಗೊತ್ತಿಲ್ಲ. ತಂದೆತಾಯಿಯು, ಗಂಡು ಮಗು, ಹೆಣ್ಣುಮಗು ಇಬ್ಬರನ್ನೂ ಸಮಾನ ಪ್ರೀತಿ, ವಾತ್ಸಲ್ಯದಿಂದ ನೋಡಿಕೊಳ್ಳಬೇಕು. ಆದರೆ, ಗಂಡುಮಗುವಿಗೆ ತೋರುವಷ್ಟೇ ಪ್ರೀತಿ, ವಾತ್ಸಲ್ಯವನ್ನು ಹೆಣ್ಣುಮಗುವಿಗೆ ತೋರಿಸುವುದಿಲ್ಲ. ಸೆಲೆಕ್ಟ್ ಕಮಿಟಿಯು ನಿರೂಪಿಸಿರುವ ತರ್ಕದ ಪರವಾಗಿ ನಾನು ಯಾವುದೇ ತುಂಬಾ ತೂಕದ ವಾದವನ್ನು ಎತ್ತುತ್ತಿಲ್ಲ. ನಾನು ತುಂಬಾ ಸೌಮ್ಯವಾಗಿಯೇ ಮಾತನಾಡುತ್ತೇನೆ. ನಾನು ಈ ಸದನಕ್ಕೆ ಹೇಳಬಯಸುವ ಮೊದಲನೇ ಅಂಶವೆಂದರೆ, ಈ ಸಮಿತಿಯು, ವಾರಸುದಾರರಲ್ಲಿ ಹೆಣ್ಣುಮಗುವನ್ನು ಸೇರಿಸಿರುವುದು ಹೊಸ ಸುಧಾರಣೆ ಏನಲ್ಲ. ಮಿತಾಕ್ಷರ ಹಾಗೂ ದಾಯಭಾಗ ಎರಡರಲ್ಲೂ ಹೇಳಿರುವ ಉತ್ತರಾಧಿಕಾರ ಪದ್ಧತಿಯನ್ನು ಚೆನ್ನಾಗಿ ತಿಳಿದುಕೊಂಡಿರುವ ಮಾನ್ಯ ಸದಸ್ಯರುಗಳು, ಈ ಎರಡೂ ನ್ಯಾಯಶಾಸ್ತ್ರಗಳು ಮಗಳನ್ನು ನಿಬಿಡ ಶ್ರೇಣಿಗಳಲ್ಲಿ ಸೇರಿಸಿರುವುದನ್ನು ಒಪ್ಪಿಕೊಳ್ಳುತ್ತಾರೆಂಬ ನಂಬಿಕೆ ನನಗಿದೆ. ಹಿಂದೂ ಉತ್ತರಾಧಿಕಾರಿಗಳನ್ನು ಹಲವಾರು ವರ್ಗೀಕರಣದಲ್ಲಿ ವಿಂಗಡಿಸಲಾಗಿದೆ. ಮೊದಲ ವರ್ಗವನ್ನು ನಿಬಿಡ ಶ್ರೇಣಿ ಎಂದು ಕರೆಯಲಾಗುತ್ತದೆ. ಅದರ ನಂತರ, ಸಪಿಂಡ ಶ್ರೇಣಿ ಇದೆ. ಅದರ ನಂತರ ಸಮಾನೋದಕ ಶ್ರೇಣಿ ಇದೆ. ಅದರ ನಂತರ ಬಂಧು ಶ್ರೇಣಿ ಇದೆ. ಬಂಧುಗಳಲ್ಲಿ ಮೂರು ವರ್ಗಗಳಿವೆ : ಆತ್ಮಬಂಧುಗಳು, ಪಿತೃಬಂಧುಗಳು, ಮಾತೃ ಬಂಧುಗಳು. ನಿಬಿಡ ಶ್ರೇಣಿಯು, ವಾಸ್ತವವಾಗಿಯೂ, ಉತ್ತರಾಧಿಕಾರಿಗಳ ಒಂದು ವಿಶೇಷ ವರ್ಗ. ಅದು, ಗೋತ್ರಜ, ಸಮಾನೋದಕ ಹಾಗೂ ಬಂಧುಗಳಿಗೆ ಅನ್ವಯಿಸುವ ಉತ್ತರಾಧಿಕಾರ ತತ್ತ್ವದ ಮೂಲ ನಿಬಂಧನೆಗಳಿಗೆ ಅನುಸಾರವಾಗಿರುವುದಿಲ್ಲ. ಏಕೆಂದರೆ, ಅದೊಂದು ಸಮಿಶ್ರ ವರ್ಗ. ಅದು ಉಭಯ ತತ್ತ್ವದ ಮೇಲೆ ಆಧಾರಿತವಾಗಿರುವ ವರ್ಗ, ಅದಕ್ಕೆ ಹತ್ತಿರದ (ರಕ್ತ) ಸಂಬಂಧವೇ ಆಧಾರ. ಅದಕ್ಕೆ ಧಾರ್ಮಿಕ ಪ್ರಮಾಣವೂ ಸಹ ಆಧಾರ. ಅವುಗಳು, ಸಪಿಂಡ, ಸಮಾನೋದಕ ಮತ್ತು ಬಂಧುಗಳ ವರ್ಗಗಳನ್ನು ನಿರ್ಧರಿಸಲು ಗೊತ್ತುಪಡಿಸಿರುವ ಯಾವುದೇ ಮಾನದಂಡಕ್ಕೆ ಅನುಸಾರವಾಗಿಲ್ಲ.

ನೀವು ಮಿತಾಕ್ಷರ, ದಾಯಭಾಗ ಪದ್ಧತಿ ಎರಡನ್ನು ಗಮನಿಸಿದರೆ, ಮಗಳನ್ನು ನಿಬಿಡ ಶ್ರೇಣಿಯಲ್ಲಿ ಸೇರಿಸಿರುವುದು ನಿಮಗೇ ಗೊತ್ತಾಗುತ್ತದೆ. ಮಿತಾಕ್ಷರ ಹಾಗೂ ದಾಯಭಾಗ ಪದ್ಧತಿ ಇವೆರಡರ ನಡುವೆ ಇರುವ ಒಂದೇ ಒಂದು ವ್ಯತ್ಯಾಸವೆಂದರೆ, ದಾಯಭಾಗದ ಪದ್ಧತಿ ಪ್ರಕಾರ, ಉತ್ತರಾಧಿಕಾರದಲ್ಲಿ ಇರಬೇಕಾದ ಅತ್ಯಗತ್ಯ ಅಂಶವೆಂದರೆ, ಅಪರಕ್ರಿಯೆ ಅರ್ಪಣೆ ಮಾಡುವ ಸಾಮರ್ಥ್ಯ.

*ಮಧ್ಯಾಹ್ನ ೩–೦೦ ಗಂಟೆ*

ಹೀಗಾಗಿ, ದಾಯಭಾಗ ಪದ್ಧತಿಯು, ಮದುವೆ ಆಗಿರದ ಮಗಳ, ಮದುವೆ ಆಗಿರುವ ಮಗಳ, ಮದುವೆ ಆಗಿದ್ದು ಮಗ ಇರುವ ಮಗಳ ಮತ್ತು ವಿಧವೆ ಮಗಳ ನಡುವೆ ವ್ಯತ್ಯಾಸವನ್ನು ಗೊತ್ತುಪಡಿಸಿದೆ.

ಅವು, ಮದುವೆ ಆಗಿದ್ದು, ಮಗ ಇರುವ ಮಗಳಿಗೆ ಪ್ರಾಶಸ್ತ್ಯ ಕೊಟ್ಟಿವೆ. ನಂತರ, ಅವು, ಮದುವೆ ಆಗಿರುವ ಮಗಳಿಗೆ ಪ್ರಾಶಸ್ತ್ಯ ಕೊಟ್ಟಿವೆ. ಮದುವೆ ಆಗಿರದ ಮಗಳು ಮೂರನೇ ಪ್ರಾಶಸ್ತ್ಯದಲ್ಲಿ ಬರುತ್ತಾಳೆ. ಇದು, ಆ ವರ್ಗದಲ್ಲಿ ಇರುವುದಕ್ಕೆ ಕಾರಣವೇನೆಂದರೆ, ಮದುವೆ ಆಗಿದ್ದು ಮಗ ಇರುವ ಮಗಳು, ಅಪರ ಅರ್ಪಣೆ ಮಾಡಲು ಸಿದ್ಧಳಿರುತ್ತಾಳೆ. ಏಕೆಂದರೆ, ಅವಳ ಮಗನೂ ಸಹ, ಅಪರ ಅರ್ಪಣೆ ಮಾಡುತ್ತಾನೆ ಎಂಬುದು. ಮದುವೆ ಆಗಿರದ ಮಗಳಿಗೆ, ಮಗ ಇರುವುದಿಲ್ಲವಾದ್ದರಿಂದ ಅಪರ ಅರ್ಪಣೆ ಅಂಶ ಇರುವ ಸಾಧ್ಯತೆ ಇರುವುದಿಲ್ಲ. ಈ ಕಾರಣದಿಂದ, ಮಗಳನ್ನು ಕೆಳಗಿನ ವರ್ಗದಲ್ಲಿ ಇಡಲಾಗಿದೆ. ಈ ಸದನವು ಗಮನದಲ್ಲಿಟ್ಟಿರಬೇಕೆಂದು ನಾನು ಒತ್ತಿ ಹೇಳಬಯಸುವ ಅಂಶವೇನೆಂದರೆ ಮಗಳನ್ನು ನಿಬಿಡ ಶ್ರೇಣಿಯಲ್ಲಿ ಹಾಗೆ ಸೇರಿಸಿರುವುದು ಸಹ ಹೊಸ ಸುಧಾರಣೆಯೇನಲ್ಲ. ಮಿತಾಕ್ಷರ ಹಾಗೂ ದಾಯಭಾಗ ಎರಡೂ ಪದ್ಧತಿ ಪ್ರಕಾರ, ಮಗಳು ಆ ವರ್ಗದಲ್ಲೇ ಯಾವಾಗಲೂ ಇದ್ದಳು. ಈ ಮಸೂದೆಯಲ್ಲಿ ತರಬಯಸಿರುವ ಒಂದೇ ಒಂದು ಸುಧಾರಣೆಯೆಂದರೆ ಮಗಳ ಸ್ಥಾನಮಾನವನ್ನು ಹೆಚ್ಚಿಸಿರುವುದು. ಈ ಮಸೂದೆ ಪ್ರಕಾರ, ಮಗನ, ವಿಧವೆಯ, ಹಿಂದೆ ಮೃತನಾದ ಮಗನ ವಿಧವೆ ಹೆಂಡತಿಯ, ಹಿಂದೆ ಮೃತನಾದ ಮಗನ ಮೃತ ಮಗನ, ಹಿಂದೆ ಮೃತನಾದ ಮಗನ ಮೃತ ಮಗನ ವಿಧವೆ ಹೆಂಡತಿ ಇವರುಗಳ ಹಾಗೆಯೇ ಮಗಳೂ ಕೂಡ ಏಕಕಾಲದಲ್ಲಿ ಉತ್ತರಾಧಿಕಾರಿಯಾಗುತ್ತಾಳೆ.

ಮೊದಲು, ಅದರಲ್ಲೂ ಮಿತಾಕ್ಷರ ನ್ಯಾಯಪದ್ಧತಿ ಪ್ರಕಾರ ಯಾರೇ ಮಹಿಳೆಗೆ ಯಾವುದೇ ರೀತಿಯ ಪಾಲಿನ ಹಕ್ಕು ಇರಲಿಲ್ಲ. ಈ ನಿಬಂಧನೆಯನ್ನು ೧೯೩೭ರಲ್ಲಿ ಬದಲಾಯಿಸಲಾಯಿತು. ಮೃತನ ವಿಧವೆ ಹೆಂಡತಿ, ಹಿಂದೆ ಮೃತನಾದ ಮಗನ ವಿಧವೆ ಹೆಂಡತಿ, ಅಂಥ ಮೃತನ ಮೃತ ಮೊಮ್ಮಗನ ಮತ್ತು ಮೃತ ಮರಿಮಗನ ವಿಧವೆ ಹೆಂಡತಿ ಇವರೆಲ್ಲರೂ ಮಗನಂತೆಯೇ ಏಕಕಾಲದಲ್ಲಿ ಉತ್ತರಾಧಿಕಾರಿಗಳಾಗುವಂತೆ ಮಾಡಲಾಗಿದೆ. ಆದರೆ, ಮಗಳನ್ನು ಮಾತ್ರ ಬಿಟ್ಟುಬಿಡಲಾಗಿತ್ತು. ಏಕೆಂದರೆ, ಸರ್ಕಾರವು ಆ ಸಮಯದಲ್ಲಿ ಮಗಳನ್ನು ವಿಧವೆಯ, ಹಿಂದೆ ಮೃತನಾದ ಮಗನ ಮತ್ತು ಹಿಂದೆ ಮೃತನಾದ ಮಗನ ಮಗನ ವಿಧವೆಯರ ವರ್ಗದಲ್ಲಿ ಇಡುವುದಕ್ಕೆ ಬೆಂಬಲ ಕೊಡಲು ಸಿದ್ಧವಿರಲಿಲ್ಲ. ಆದ್ದರಿಂದ, ಈ ಮಸೂದೆಯು ಈ ಒಂದು ಸುಧಾರಣೆಯನ್ನು ತರುತ್ತಿದೆ. ಈ ಮಸೂದೆಯು, ಉತ್ತರಾಧಿಕಾರಿಗಳ ವರ್ಗದಲ್ಲಿ ಅದನ್ನು ಮಾತ್ರವೇ ಮೇಲಕ್ಕೆ ತಂದಿದೆ. ಅಂದರೆ, ಆಕೆಯನ್ನು ಮೊಟ್ಟಮೊದಲ ಬಾರಿಗೆ ಉತ್ತರಾಧಿಕಾರಿಯನ್ನಾಗಿ ಮಾಡಿದೆ ಎನ್ನುವ ಹಾಗಿಲ್ಲ.

ನಾನು, ಈಗ, ಆಕೆಯ ಪಾಲಿನ ವಿಚಾರಕ್ಕೆ ಬರುತ್ತೇನೆ. ರಾವ್ ಸಮಿತಿಯೇ ಹೇಳಿರುವಂತೆ ಮತ್ತು ಶಾಸ್ತ್ರಗಳು ಹೇಳಿರುವುದನ್ನು ತಿಳಿದುಕೊಂಡಿರುವ ಹಲವರ ಪ್ರಕಾರ, ಸ್ಮೃತಿಗಳ ಅನುಸಾರ, ಮಗನ ಹಾಗೆಯೇ ಮಗಳೂ ಕೂಡ ಏಕಕಾಲದಲ್ಲಿ ಉತ್ತರಾಧಿಕಾರಿಯಾಗಿದ್ದಳು ಹಾಗೂ ತಂದೆಯ ಆಸ್ತಿಯಲ್ಲಿ ನಾಲ್ಕನೇ ಒಂದು ಭಾಗದ ಪಾಲಿಗೆ ಹಕ್ಕು ಇತ್ತು ಎಂಬ ಸಂಗತಿಯನ್ನು ಅಲ್ಲಗಳೆಯುವುದಕ್ಕೆ ಸಾಧ್ಯವೇ ಇಲ್ಲ. ಅದನ್ನು ಯಾಜ್ಞವಲ್ಕ್ಯ ಮತ್ತು ಮನು ಇಬ್ಬರೂ ಹೇಳಿದ್ದಾರೆ. ನನಗೆ ಗೊತ್ತಿರುವಂತೆ ೧೩೭ ಸ್ಮೃತಿಗಳಿವೆ. ನಮ್ಮ ಪ್ರಾಚೀನ ಕಾಲದ ಬ್ರಾಹ್ಮಣರು ಸದಾಕಾಲವೂ ಸ್ಮೃತಿಗಳನ್ನು ರಚಿಸುವುದರಲ್ಲೇ ಏಕೆ ತೊಡಗಿದ್ದರೋ, ಬೇರೇನನ್ನಾದರೂ ಮಾಡುವುದಕ್ಕೆ ಅವರು ಸಮಯವನ್ನು ಏಕೆ ವಿನಿಯೋಗಿಸಲಿಲ್ಲವೋ ನನಗೆ ಗೊತ್ತಾಗುತ್ತಿಲ್ಲ. ಆ ಕಾಲದಲ್ಲಿ ಸ್ಮೃತಿಗಳ ರಚನೆಯೇ ಪ್ರಧಾನ ವೃತ್ತಿಯಾಗಿತ್ತು ಎಂದು ಭಾವಿಸುವುದಕ್ಕೂ ಸಾಧ್ಯ ಇಲ್ಲ. ಸ್ಮೃತಿಗಳ ರಚನೆಗೆ ಕೈಹಾಕಿದ ಯಾಜ್ಞವಲ್ಕ್ಯ, ಮನು ಇಬ್ಬರೂ ೧೩೭ ಸ್ಮೃತಿಕಾರರ ಪೈಕಿ ಅಗ್ರಗಣ್ಯರು ಎಂಬುದರಲ್ಲಿ ಸಂದೇಹವೇ ಇಲ್ಲ. ಆ ಇಬ್ಬರೂ, ಮಗಳಿಗೆ, ನಾಲ್ಕನೇ ಒಂದು ಭಾಗಕ್ಕೆ ಹಕ್ಕು

ಇದೆ ಎಂದು ಹೇಳಿದ್ದಾರೆ. ಏಕೋ ಏನೋ, ಯಾವ ಕಾರಣಕ್ಕೂ, ರೂಢಿಯು, ಆ ಗ್ರಂಥಗಳ ಸತ್ವವನ್ನೇ ಹಾಳುಮಾಡಿರುವುದು ಶೋಚನೀಯ. ಇಲ್ಲದೆ ಹೋಗಿದ್ದರೆ, ಮಗಳಿಗೂ ಕೂಡ, ನಮ್ಮವೇ ಆ ಸ್ಮೃತಿಗಳ ಆಧಾರದ ಮೇಲೆ, ನಾಲ್ಕನೇ ಒಂದು ಭಾಗಕ್ಕೆ ಹಕ್ಕು ಇರುತ್ತಿತ್ತು. ಪ್ರಿವಿ ಕೌನ್ಸಿಲ್ ರೂಲಿಂಗ್ ಬಗ್ಗೆ ನನಗೆ ತುಂಬಾ ವಿಷಾದ ಇದೆ. ನಮ್ಮ ಕಾನೂನಿನಲ್ಲಿ ಸುಧಾರಣೆ ತರುವುದಕ್ಕೆ ಅದು ಅಡ್ಡಗಾಲು ಹಾಕಿದೆ. ಪ್ರಿವಿ ಕೌನ್ಸಿಲ್, ಮುಂಚಿನ ಒಂದು ಮೊಕದ್ದಮೆಯಲ್ಲಿ, ರೂಢಿಯು, ಕಾನೂನಿಗಿಂತ ಮೇಲುಗೈ ಆಗಿರುತ್ತದೆಂದು ಹೇಳಿದೆ. ಹೀಗಾಗಿ, ನಮ್ಮ ನ್ಯಾಯಾಂಗಕ್ಕೆ, ನಮ್ಮ ಪ್ರಾಚೀನ ಸಂಹಿತೆಗಳನ್ನು ಪರಾಮರ್ಶೆ ಮಾಡಲು ಮತ್ತು ನಮ್ಮವರೇ ಋಷಿಗಳು ಹಾಗೂ ನಮ್ಮವರೇ ಸ್ಮೃತಿಕಾರರು ಯಾವ ಯಾವ ನ್ಯಾಯನಿಬಂಧನೆಗಳನ್ನು ಗೊತ್ತುಪಡಿಸಿದ್ದಾರೆಂಬುದನ್ನು ಕಂಡುಕೊಳ್ಳಲು ಸಾಧ್ಯವೇ ಆಗುತ್ತಿಲ್ಲ. ರೂಢಿಯು, ಆ ಗ್ರಂಥಗಳಲ್ಲಿ ಹೇಳಿರುವ ಸೂತ್ರಗಳಿಗಿಂತಲೂ ಮೇಲುಗೈ ಆಗಿರುತ್ತವೆಂಬ ತೀರ್ಪನ್ನು ಕೊಡದೇ ಹೋಗಿದ್ದಿದ್ದರೆ, ಕೆಲವರು ವಕೀಲರಿಗೆ, ಕೆಲವರು ನ್ಯಾಯಾಧೀಶರಿಗೆ. ಯಾಜ್ಞವಲ್ಕ್ಯ ಗ್ರಂಥದಲ್ಲಿ, ಮನುಸ್ಮೃತಿಯಲ್ಲಿ ಹೇಳಿರುವುದನ್ನು ಕಂಡುಕೊಳ್ಳಲು ಸಾಧ್ಯವಾಗುತ್ತಿತ್ತು ಹಾಗೂ ಮಹಿಳೆಗೆ, ಇದು, ಹೆಚ್ಚಿಗೆ ಅಲ್ಲದಿದ್ದರೂ, ಕೊನೇ ಪಕ್ಷ ಆಸ್ತಿಯಲ್ಲಿ ನಾಲ್ಕನೇ ಒಂದು ಭಾಗಕ್ಕೆ ಹಕ್ಕು ಇರುತ್ತಿತ್ತು ಎನ್ನುವುದರಲ್ಲಿ ನನಗೆ ಸ್ವಲ್ಪವೂ ಅನುಮಾನವೇ ಇಲ್ಲ.

ಮೂಲ ಮಸೂದೆಯು, ಮಗಳ ಪಾಲನ್ನು ಅರ್ಧಕ್ಕೆ ಹೆಚ್ಚಿಸಿತ್ತು. ಸೆಲೆಕ್ಟ್ ಕಮಿಟಿಯು, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಮಗನಿಗೆ ಇರುವಷ್ಟೇ ಎಂದರೆ ಸಮಪಾಲನ್ನು ಗೊತ್ತುಪಡಿಸಿದೆ.

ಸೆಲೆಕ್ಟ್ ಕಮಿಟಿಯಲ್ಲಿ ಏಕೆ ಬದಲಾವಣೆ ಆಯಿತೋ, ಮತ್ತು ಆ ನಿಬಂಧನೆ ಹೇಗೆ ಬಂದಿತೋ ಅದನ್ನು ನಾನು ಇಲ್ಲಿ ಹೇಳುವ ಹಾಗಿಲ್ಲ. ನಾನು ಕರಾರುವಾಕ್ಕಾಗಿ ..................

**ಶ್ರೀಮತಿ ರೇಣುಕಾ ರೇ** (ಪಶ್ಚಿಮ ಬಂಗಾಳ : ಸಾಮಾನ್ಯ): ಬಹುಮತದಿಂದಲೇ;

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್:** ಮಸೂದೆಯಲ್ಲಿ ಹೇಳಿರುವಂತೆ ಮಗನ ಎರಡುಪಟ್ಟು ಪಾಲು ಮತ್ತು ಅರ್ಧದಷ್ಟು ಪಾಲು ಈ ಎರಡರ ನಡುವಣ ಪಾಲಿಗೆ ಸಮ್ಮತಿ ಇತ್ತೇ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಅದು, ರಾಜಿ ಅಲ್ಲ, ನನ್ನ ಉತ್ಸಾಹೀ ಬೆಂಬಲಿಗರ ಮತ್ತು ವಿರೋಧಿಗಳ ಜೊತೆಗೂಡಿದ ನನ್ನ ವಿರೋಧಿಗಳು ಮಸೂದೆಯನ್ನು ಅದು ಮೊದಲಿದ್ದುದಕ್ಕಿಂತಲೂ, ಕೆಟ್ಟದ್ದನ್ನಾಗಿ ಮಾಡುವ ಮೂಲಕ ಅದನ್ನು ಇನ್ನೂ ಕೆಡಿಸಬಹುದೆಂದು ಭಾವಿಸಿದ್ದರು.

**ಶ್ರೀ ಹರಿ ವಿಷ್ಣು ಕಾಮತ :** ನಿಮಗೆ, ಯಾರಾದರೂ ವಿರೋಧಿಗಳಿದ್ದಾರೆಯೇ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಅದೇನೆ ಇರಲಿ, ಮಗಳ ಪಾಲಿನ ಬಗ್ಗೆ ಹೇಳುವುದಾದರೆ, ನಾವು ತರುತ್ತಿರುವ ಒಂದೇ ಒಂದು ಸುಧಾರಣೆಯೆಂದರೆ, ಮಗಳ ಪಾಲನ್ನು ಹೆಚ್ಚಿಸಲಾಗಿದೆ ಮತ್ತು ಅವಳನ್ನು, ಮಗನ ಅಥವಾ ವಿಧವೆಯ ಸ್ಥಾನಮಾನಕ್ಕೆ ತಂದಿದ್ದೇವೆ, ಇದೇ ಈಗಿನ ವಸ್ತುಸ್ಥಿತಿ. ಹೀಗೆ ಮಾಡುತ್ತ ನಾವು, ನೀವೆಲ್ಲರೂ ಗೌರವಿಸುತ್ತಿರುವ ಸ್ಮೃತಿಗಳಲ್ಲಿ ಹೇಳಿರುವ ನಿಬಂಧನೆಗಳಿಗೇ ಮರಳುತ್ತಿದ್ದೇವೆಂಬ ನನ್ನ ಅಭಿಪ್ರಾಯವನ್ನು ಒಪ್ಪಿಕೊಂಡರೆ, ಇದೂ ಕೂಡ ಹೊಸ ಸುಧಾರಣೆ ಅಲ್ಲವೆಂದು ನಾನು ಹೇಳುತ್ತೇನೆ.

ಮಗಳ ಪಾಲಿನ ಈ ವಿಚಾರವನ್ನು ಚರ್ಚೆ ಮಾಡುವಾಗ, ನಾನು ಹಾಗೂ ಕಾನೂನು ಇಲಾಖೆಯ ಸದಸ್ಯರು ಉತ್ತರಾಧಿಕಾರದ ಪ್ರತಿಯೊಂದು ಪದ್ಧತಿಯನ್ನೂ ಪರಾಮರ್ಶೆ ಮಾಡಿದ್ದೇವೆ ಎಂದೂ ಸಹ ಹೇಳುತ್ತಿದ್ದೇನೆ. ನಾವು, ಮುಸ್ಲಿಂ ಉತ್ತರಾಧಿಕಾರ ಪದ್ಧತಿಯನ್ನು ಪರಾಮರ್ಶೆ ಮಾಡಿದ್ದೇವೆ. ನಾವು ಪಾರ್ಸಿ ಉತ್ತರಾಧಿಕಾರ ಪದ್ಧತಿಯನ್ನು ಪರಾಮರ್ಶೆ ಮಾಡಿದ್ದೇವೆ, ನಾವು ಭಾರತೀಯ ಉತ್ತರಾಧಿಕಾರ ಕಾಯ್ದೆಯನ್ನು ಹಾಗೂ ಅದು ಗೊತ್ತುಪಡಿಸಿರುವ ಉತ್ತರಾಧಿಕಾರದ ವಂಶಕ್ರಮವನ್ನು ಸಹಾ ಪರಾಮರ್ಶೆ ಮಾಡಿದ್ದೇವೆ.

ಅಲ್ಲದೆ, ಬ್ರಿಟಿಷ್ ಉತ್ತರಾಧಿಕಾರ ಪದ್ಧತಿಯನ್ನೂ ಸಹಾ ಪರಾಮರ್ಶೆ ಮಾಡಿದ್ದೇವೆ. ಎಲ್ಲೂ ಕೂಡ, ಮಗಳನ್ನು, ಭಾಗದಿಂದ ಬಿಟ್ಟುಬಿಟ್ಟಿರುವ ಯಾವುದೇ ಸಂಗತಿ ನಮಗೆ ಕಂಡಬಂದಿಲ್ಲ. ಪ್ರಪಂಚದಲ್ಲಿ, ಎಲ್ಲೂ ಮಗಳನ್ನು, ಬಿಟ್ಟುಬಿಟ್ಟಿರುವ ಯಾವುದೇ ಪದ್ಧತಿ ಇಲ್ಲ.

ಸರ್, ಈಗ, ಮಗಳಿಗೆ ಭಾಗ ಕೊಡುವುದರಿಂದ ಕುಟುಂಬವನ್ನು ಅಸ್ತವ್ಯಸ್ತಗೊಳಿಸಿದಂತಾಗುತ್ತದೆ ಎನ್ನುವ ಒಂದು ವಿಚಾರವನ್ನು ನಿರಂತರವಾಗಿ ಮುಂದೊಡ್ಡಲಾಗುತ್ತಿದೆ. ಆ ವಾದದಲ್ಲಿ ಹುರುಳು ಇದೆಯೆಂದು ನಾನು ಒಪ್ಪಿಕೊಳ್ಳಲು ಆಗುತ್ತಿಲ್ಲವೆಂದು ಯಾವ ಹಿಂಜರಿಕೆಯೂ ಇಲ್ಲದೆ ಹೇಳಲೇಬೇಕಾಗಿದೆ. ಒಬ್ಬ ಮನುಷ್ಯನಿಗೆ ಹನ್ನೆರಡು ಗಂಡುಮಕ್ಕಳು ಮತ್ತು ಒಬ್ಬಳು ಮಗಳು ಇದ್ದರೆ, ತಂದೆಯು ಸತ್ತ ದಿನದಂದು, ತಕ್ಷಣವೇ ಪಾಲು ಮಾಡಿಕೊಳ್ಳಲು ಮತ್ತು ತಂದೆಯ ಒಟ್ಟು ಆಸ್ತಿಯಲ್ಲಿ ಹನ್ನೆರಡು ಪಾಲುಗಳನ್ನು ಪಡೆಯಲು ಅವರುಗಳು ತೀರ್ಮಾನಿಸಿದ ಪಕ್ಷದಲ್ಲಿ, ಹದಿಮೂರನೆಯವಳಾದ ಮಗಳೂ ಕೂಡ, ತನಗೂ ಪಾಲು ಬೇಕೆಂದು ಕೇಳಿದರೆ, ಹಾಗೆ ಭಾಗ ಮಾಡುವುದರಿಂದ ಪರಿಸ್ಥಿತಿ ತೀರಾ ಕೆಟ್ಟುಹೋಗುತ್ತದೇನು?

ಹನ್ನೆರಡು ಪಾಲು ಅಥವಾ ಹನ್ನೆರಡು ತುಂಡುಗಳು, ಹದಿಮೂರು ತುಂಡು ಆದ ಮಾತ್ರಕ್ಕೆ, ತೀರಾ ಕೆಟ್ಟುಹೋಗುವುದಿಲ್ಲ. ಆಸ್ತಿಯು ತುಂಡುತುಂಡಾಗುವುದನ್ನು ನೀವು ತಡೆಗಟ್ಟಬೇಕಾದರೆ, ನಾವು ಉತ್ತರಾಧಿಕಾರ ಕಾನೂನಿಂದಲ್ಲ. ಇನ್ನೊಂದು ಕಾನೂನಿನಿಂದ ಮತ್ತೇನನ್ನೂ ಮಾಡಬೇಕಾಗುತ್ತದೆ, ಎಂದರೆ, ರಾಷ್ಟ್ರದ ಹಿತದೃಷ್ಟಿಯಿಂದ ರಾಷ್ಟ್ರೀಯ ಉತ್ಪನ್ನದ ಉದ್ದೇಶದ ದೃಷ್ಟಿಯಿಂದ, ಉಪಯುಕ್ತತೆ ಕಡಿಮೆ ಆಗುವಂತಹ ರೀತಿಯಲ್ಲಿ ಆಸ್ತಿಯು ತುಂಡುತುಂಡು ಆಗತಕ್ಕದ್ದಲ್ಲ ಎಂದು ನಿರ್ದಿಷ್ಟಪಡಿಸಬೇಕಾಗುತ್ತದೆ.

**ಶ್ರೀ ಟಿ.ವಿ. ರಾಮಲಿಂಗಂ ಚೆಟ್ಟಿಯಾರ್** (ಮದ್ರಾಸ್: ಸಾಮಾನ್ಯ) : ಹಿಂದೂ ಸಂಹಿತೆಯು ವ್ಯವಸಾಯದ ಜಮೀನಿಗೂ ಅನ್ವಯಿಸುತ್ತದೆಯೇ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಇಲ್ಲ, ನಾನು ಸಾಮಾನ್ಯ ವಿಚಾರಗಳನ್ನು ಹೇಳುತ್ತಿದ್ದೇನೆ.

ಈ ಸದನದ ಹಾಗೂ ಸಾರ್ವಜನಿಕರು ಎತ್ತಿರುವ ವಿವಾದದ ಹಲವಾರು ಅಂಶಗಳ ಮೇಲೆ ನನಗೆ ತಿಳಿದಮಟ್ಟಿಗೆ, ನಾನು ಹೇಳಬೇಕಾದುದು ಎಲ್ಲವನ್ನೂ ಹೇಳಿದ್ದೇನೆ ಎಂದು ಭಾವಿಸಿದ್ದೇನೆ. ಹಲವಾರು ಅಂಶಗಳ ಬಗ್ಗೆ ನಾನು ಕೊಟ್ಟಿರುವ ಸ್ಪಷ್ಟೀಕರಣವು ಈ ಮಸೂದೆ ಬಗ್ಗೆ ಚನ್ನಾಗಿ ತಿಳಿದುಕೊಂಡಿರದಿದ್ದ ಸದಸ್ಯರ ಆತಂಕವನ್ನು ದೂರ ಮಾಡುತ್ತದೆಂಬ ನಂಬಿಕೆ ನನಗಿದೆ. ಈ ಮಸೂದೆಯಲ್ಲಿ ಅಂಥ ತೀವ್ರ ಸುಧಾರಣೆ ಎಂಬುದೇನೂ ಇಲ್ಲವೆಂಬುದು ಅವರಿಗೆ ಗೊತ್ತಾಗುತ್ತದೆ. ಇದು, ಅಂಥ ತೀವ್ರ ಸುಧಾರಣೆಯ ಮಸೂದೆ ಅಲ್ಲ ಎಂದು ನಾನು ಕೂಡ ಹೇಳುತ್ತೇನೆ. ಒಂದು ಮುಖ್ಯ ಸಂಗತಿಯತ್ತ ಎಂದರೆ ರಾವ್ ಸಮಿತಿಯ ಸ್ಥಾಪನೆ ಮತ್ತು ರಚನೆ ಬಗ್ಗೆ ನಾನು ಈ ಸದನದ ಗಮನ ಸೆಳೆಯಬಯಸುತ್ತೇನೆ. ಆ ಸಮಿತಿಯಲ್ಲಿ ನಾಲ್ಕು ಜನ ಸದಸ್ಯರಿದ್ದರು. ಅವರಲ್ಲಿ, ವರದಿಗೆ ಸಹಿ ಹಾಕಿರುವ ಇಬ್ಬರು ಹಿಂದೂ ಸಮುದಾಯದ ತೀವ್ರ ಸುಧಾರಣೆ ಪಕ್ಷದವರಲ್ಲ. ನನಗೆ ಬಹಳ ವರ್ಷಗಳಿಂದಲೂ ಗೊತ್ತಿರುವ. ನನ್ನ ಸ್ನೇಹಿತ ಶ್ರೀ ಘರ್‌ಪುರೆಯವರು, ನನಗೆ ತಿಳಿದ ಮಟ್ಟಿಗೆ ಅತ್ಯಂತ ಸಂಪ್ರದಾಯವಾದಿಗಳಲ್ಲಿ ಒಬ್ಬರು............

**ಶ್ರೀ ಹರಿ ವಿಷ್ಣು ಕಾಮತ್** : ರಾಜಕೀಯವಾಗಿಯೋ ಅಥವಾ ಸಾಮಾಜಿಕವಾಗಿಯೋ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** : ರಾಜಕೀಯವಾಗಿಯೂ ಹೌದು, ಸಾಮಾಜಿಕವಾಗಿಯೂ ಹೌದು. ನಿಜ ಹೇಳಬೇಕೆಂದರೆ, ಅವರು, ಕೆಲವೊಂದು ಸಂದರ್ಭಗಳಲ್ಲಿ ತನ್ನ ಮನಸ್ಸಿಗೆ ನಾಟುವ ಹಾಗೆ ಹೇಳಲು ತುಂಬಾ ಕಷ್ಟಪಡುತ್ತಿದ್ದರೆಂಬುದನ್ನು ಹೇಳಲು ನನಗೆ ಯಾವ ಹಿಂಜರಿಕೆಯೂ ಇಲ್ಲ. ನನ್ನ ಸ್ನೇಹಿತ, ಶ್ರೀ ಟಿ.ಆರ್. ವೆಂಕಟರಮಣ ಶಾಸ್ತ್ರಿಯವರು ಉದಾರವಾದಿ ನಿಜ. ಆದರೆ, ಅವರು ನನಗೆ ತಿಳಿದ

ಮಟ್ಟಿಗೆ ತೀವ್ರ ಸುಧಾರಣಾವಾದಿ ಅಲ್ಲ. ತಮ್ಮ ಪ್ರವೃತ್ತಿಯಲ್ಲಿ ಸಂಪ್ರದಾಯಸ್ಥರಾದ ಈ ಜನರು ವರದಿಗೆ ಸಹಿ ಹಾಕಿದ್ದಾರೆಂದ ಮೇಲೆ, ಅವರುಗಳು ಸಹಿ ಹಾಕಿರುವ ವರದಿಯು ಕ್ರಾಂತಿಕಾರಕ ಆಗಲಾರದು ಮತ್ತು ಹಿಂದೂ ಸಮಾಜದ ತಳಪಾಯವನ್ನು ಖಂಡಿತವಾಗಿಯೂ ಹಾಳುಮಾಡುವಂಥದ್ದೂ ಅಲ್ಲ ಎಂದೇ ನಾವು ಭಾವಿಸಬೇಕಾಗುತ್ತದೆ. ನನ್ನ ಮಟ್ಟಿಗೆ ಹೇಳುವುದಾದರೆ, ನಾನೊಬ್ಬ, ತುಂಬಾ ಸಂಪ್ರದಾಯವಾದಿ. ಕೆಲವರು ಈ ಸಂಗತಿಯನ್ನು ಒಪ್ಪಿಕೊಳ್ಳದಿದ್ದರೂ, ನಾನು ನಿಜವಾಗಿಯೂ ಒಬ್ಬ ತೀರಾ ಸಂಪ್ರದಾಯವಾದಿ. ನಾನು ಒಬ್ಬ ಪ್ರಗತಿಪರ ಸಂಪ್ರದಾಯವಾದಿಯೆಂದು ಮತ್ತು ನಮ್ಮಲ್ಲಿ ಪ್ರತಿಯೊಬ್ಬರೂ, ಅದರಲ್ಲೂ ಈ ಸದನದ ಸಂಪ್ರದಾಯುವಾದಿ ಸದಸ್ಯರಿಗೆ ಇದೇ ಒಂದು ನಿಜ ಸಂಗತಿಯೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಫ್ರೆಂಚ್ ಮಹಾ ಕ್ರಾಂತಿಯ ವಿರುದ್ಧ, ಅದರ, ತೀವ್ರ ಸುಧಾರಣಾ ತತ್ವಗಳ ಹಾಗೂ ಕ್ರಾಂತಿಕಾರಕ ತತ್ವಗಳ ವಿರುದ್ಧ ದೊಡ್ಡ ಗ್ರಂಥವನ್ನೇ ಬರೆದ ಶ್ರೇಷ್ಠ ರಾಜಕೀಯ ತತ್ವ ಶಾಸ್ತ್ರಜ್ಞ ಎಡ್ಮಂಡ್ ಬರ್ಕ್, ತೀರಾ ಸಂಪ್ರದಾಯವಾದಿಗಳಾಗಿದ್ದ ತನ್ನವರೇ ದೇಶಬಾಂಧವರಿಗೆ ಒಂದು ಬಹು ಮುಖ್ಯವಾದ ಸತ್ಯವನ್ನು ಹೇಳಲು ಮರೆಯಲಿಲ್ಲ. ಅದೇನೆಂದರೆ, ಉಳಿಸಿಕೊಳ್ಳಲು ಬಯಸುವವರು ತಪ್ಪನ್ನು ಸರಿಪಡಿಸಿಕೊಳ್ಳಲೂ ಸಿದ್ಧರಿರಬೇಕು. ಈ ಸದನಕ್ಕೆ ನಾನು ಏನು ಕೇಳುತ್ತಿದ್ದೇನೆಂದರೆ, ಹಿಂದೂ ಪದ್ಧತಿಯನ್ನು, ಹಿಂದೂ ಸಂಸ್ಕೃತಿಯನ್ನು, ಹಿಂದೂ ಸಮಾಜವನ್ನು ನೀವು ಉಳಿಸಿಕೊಳ್ಳಬಯಸಿದರೆ, ತಪ್ಪನ್ನು ಅವಶ್ಯಕತೆ ಇರುವ ಕಡೆ, ಸರಿಪಡಿಸಲು ಹಿಂಜರಿಯಬೇಡಿ. ಹಿಂದೂ ಪದ್ಧತಿಯಲ್ಲಿ ಬಹುಮಟ್ಟಿಗೆ ನಶಿಸಿಹೋಗಿರುವಂತಹ ಒಳ್ಳೆಯ ಅಂಶಗಳನ್ನು ಮತ್ತೆ ತರಲು ಈ ಮಸೂದೆಯು ಕೇಳುತ್ತಿದೆಯೇ ಹೊರತು ಅದಕ್ಕಿಂತ ಹೆಚ್ಚಿನದೇನೂ ಅಲ್ಲ.

**ಶ್ರೀ ಹೆಚ್. ವಿ. ಕಾಮತ್ :** ಸರ್ ನನಗೆ ನೆನಪಿರುವಂತೆ, ಸನ್ಮಾನ್ಯ ಡಾ. ಅಂಬೇಡ್ಕರ್‌ರವರು, ಸ್ಮೃತಿಗಳಿಂದ ಕೆಲವೊಂದು ಭಾಗಗಳನ್ನು ಉದಾಹರಿಸುವುದಾಗಿ ಆಶ್ವಾಸನೆ ಕೊಟ್ಟಿದ್ದರು. ಅವರು, ಆಶ್ವಾಸನೆಯನ್ನು ಈಡೇರಿಸುತ್ತಾರೇನು?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಕೊನೆಯಲ್ಲಿ ಹೇಳುತ್ತೇನೆ. ನನ್ನ ಅದೃಷ್ಟವೋ ಏನೋ, ನನಗೆ ಶ್ರೀ ದ್ವಾರಕನಾಥ ಮಿತ್ತರವರದೇ ಪುಸ್ತಕ "ಹಿಂದೂ ಮಹಿಳೆಯರ ಹಕ್ಕುಗಳು" ಸಿಕ್ಕಿದೆ. ಮಹಿಳೆಯರಿಗೆ ವೇದಗಳು ಕೊಟ್ಟಿದ್ದ ಹಕ್ಕನ್ನು ನಡುವೆ ಸ್ಮೃತಿಗಳು ತೆಗೆದುಹಾಕಿದ್ದನ್ನು ಕೆಲವೊಂದು ಬೇರೆ ಸ್ಮೃತಿಗಳು ಆ ಹಕ್ಕುಗಳನ್ನು ಮತ್ತೆ ಯಥಾಸ್ಥಿತಿಗೆ ತರಲು ಪ್ರಯತ್ನಪಟ್ಟಿದ್ದನ್ನು ತೋರಿಸಲು ನಾನು ಆ ಪುಸ್ತಕದಿಂದ ಕೆಲವೊಂದು ವಾಕ್ಯ ಭಾಗವನ್ನು ಉದಾಹರಿಸಿ ಹೇಳುತ್ತೇನೆ. ನಾನು ಮಾತನಾಡುತ್ತಿರುವಾಗ ಮಧ್ಯ, ಮಧ್ಯೆ ಅವುಗಳನ್ನು ಉದಾಹರಿಸಿ ಹೇಳುತ್ತೇನೆ.

**ಶ್ರೀ ದೇಶಬಂಧು ಗುಪ್ತ :** ಸೆಲೆಕ್ಟ್ ಸಮಿತಿ ಮುಂದೆ ಒದಗಿಸಿದ್ದ ದಾಖಲೆ ಬಗ್ಗೆ ಸನ್ಮಾನ್ಯ ಮಂತ್ರಿಯವರು, ಈ ಸದನಕ್ಕೆ ತಿಳಿವಳಿಕೆ ಕೊಡುವರೇ?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಎರಡು ಸಂಸ್ಥೆಗಳು ನಮ್ಮ ಬಳಿಗೆ ಬಂದು ಹೇಳಿಕೆಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿಕೊಂಡಿದ್ದವು ಎಂಬುದು ಮಾನ್ಯ ಸದಸ್ಯರುಗಳಿಗೆ ತಿಳಿದೇ ಇದೆ. ಒಂದು ಸಂಸ್ಥೆಯು, ಖುದ್ದಾಗಿ ಹೇಳಿಕೆ ನೀಡಿತು, ಇನ್ನೊಂದು ಲಿಖಿತ ಹೇಳಿಕೆಯನ್ನು ಕಳುಹಿಸಿತು. ಆ ಸಂಸ್ಥೆ ಹೆಸರು, ಧರ್ಮ ನಿರ್ಣಯ ಮಂಡಲ. ಸಾಮಾನ್ಯವಾಗಿ, ಆ ಸಂಸ್ಥೆಗೆ, ಈ ಮಸೂದೆಯಲ್ಲಿರುವ ನಿಬಂಧನೆಗಳ ಬಗ್ಗೆ ಸಂಪೂರ್ಣ ಸಹಮತ ಇತ್ತು. ಇನ್ನೊಂದು ಸಂಸ್ಥೆಯ ಮಹನೀಯರಿಗೆ ಸಹಮತ ಇರಲಿಲ್ಲ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈ ಸೂಚನೆಯನ್ನು ಮಂಡಿಸಲಾಗಿದೆ.

"ಸೆಲೆಕ್ಟ್ ಕಮಿಟಿಯು ವರದಿ ಮಾಡಿರುವಂತೆ ಹಿಂದೂ ಕಾನೂನಿನ ಕೆಲವೊಂದು ಭಾಗಗಳನ್ನು ತಿದ್ದುಪಡಿ ಮಾಡುವ ಮತ್ತು ಕ್ರೋಡೀಕರಿಸುವ ಮಸೂದೆಯನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕು .........

ಎರಡು ತಿದ್ದುಪಡಿಗಳಿಗೆ ಒತ್ತಾಯ ಇಲ್ಲ. ಮುಂದಿನ ತಿದ್ದುಪಡಿ ಬಗ್ಗೆ ಏನು?

**ಪಂಡಿತ ಠಾಕೂರದಾಸ ಭಾರ್ಗವ** : ಸರ್, ನನ್ನ ತಿದ್ದುಪಡಿಗಳಲ್ಲಿ ಯಾವುದನ್ನೂ ಮಂಡಿಸುವ ಸ್ಥಿತಿಯಲ್ಲಿ ನಾನಿಲ್ಲ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಮಸೂದೆಯ ಸೂಚಕರಾದ ಮಾನ್ಯ ಸದಸ್ಯರು ನೀಡಿದ್ದ ಸಲಹೆಗೆ ಉತ್ತರ ಕೊಡುವಾಗ, ಸೂಚನೆಯನ್ನು ಮಂಡಿಸುವ ಸಮಯದಲ್ಲಿ ಯಾವುದೇ ಭಾಷಣ ಮಾಡದೆಯೇ ಸೂಚನೆಯ ಮಂಡನೆಗೆ ಅನುಮತಿ ಕೊಡುತ್ತೇನೆಂದು ನಾನು ಈಗಾಗಲೇ ಹೇಳಿದ್ದೇನೆ. ಸುಸಂಗತವಾದಂತಹ ತಿದ್ದುಪಡಿಗಳನ್ನು ಮಂಡಿಸಿದ ಮೇಲೆ, ಮಂಡನೆಗೆ ಒಪ್ಪಿಗೆ ಕೊಟ್ಟಾದ ಮೇಲೆ ಮೂಲ ಸೂಚನೆ ಮೇಲೆ ಆಗುವಂತೆಯೇ ಅವುಗಳ ಬಗ್ಗೆಯೂ ಚರ್ಚೆ ಆಗುತ್ತದೆ.

**ಶ್ರೀ ದೇಶಬಂಧು ಗುಪ್ತ :** ಸರ್ ಕ್ರಿಯಾಲೋಪ, ಸರ್, ತನ್ನ ತಿದ್ದುಪಡಿಗಳನ್ನು ಮಂಡಿಸುವ ಸ್ಥಿತಿಯಲ್ಲಿ ತಾನಿಲ್ಲ ಎಂದು ಸದಸ್ಯರಿಗೆ ಹೇಳುವ ಅವಕಾಶ ಇಲ್ಲವೇ?

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಇದೆ.

**ಶ್ರೀ ನಝೀರುದ್ದೀನ್ ಅಹ್ಮದ್ :** ಸರ್ ನನಗೆ ನಿರ್ದೇಶನ ದೊರೆತಿದೆ ..................

**ಒಬ್ಬರು ಮಾನ್ಯ ಸದಸ್ಯರು :** ಯಾರಿಂದ?

**ಶ್ರೀ ನಝೀರುದ್ದೀನ್ ಅಹ್ಮದ್ :** ಪ್ರಾರಂಭದಲ್ಲಿ, ಮಾತನಾಡದೆಯೇ ನನ್ನ ತಿದ್ದುಪಡಿಯನ್ನು ಮಂಡಿಸಲು ನನಗೆ ನಿರ್ದೇಶನ ಇದೆ. (ಒಬ್ಬರು ಮಾನ್ಯ ಸದಸ್ಯರು: "ನಿಮಗೆ ನಿರ್ದೇಶನ ಕೊಟ್ಟವರು ಯಾರು?"). ನನಗೆ ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್‌ರವರಿಂದ ನಿರ್ದೇಶನ ಇದೆ. ಮಾನ್ಯ ಸದಸ್ಯರು ತುಂಬಾ ತಾಳ್ಮೆ ಕಳೆದುಕೊಂಡಿದ್ದಾರೆಂದು ಕಾಣುತ್ತದೆ.

**ಶ್ರೀ ಆರ್.ಕೆ. ಸಿಧ್ವಾ** (ಕೇಂದ್ರೀಯ ಸಂಸ್ಥಾನ ಮತ್ತು ಬೀರಾರ್ : ಸಾಮಾನ್ಯ): ಇಲ್ಲ. ನಾವು ತಾಳ್ಮೆ ಕಳೆದುಕೊಂಡಿಲ್ಲ, ಮುಂದೆ ಹೇಳಿ.

**ಶ್ರೀ ನಝೀರುದ್ದೀನ್ ಅಹ್ಮದ್:** ನಾನು ಮತ್ತೆ ಮತ್ತೆ ಹೇಳುತ್ತಿದ್ದೇನೆ, ಮಾತನಾಡದೆಯೇ ನನ್ನ ತಿದ್ದುಪಡಿಯನ್ನು ಮಂಡಿಸಲು ನನಗೆ ನಿರ್ದೇಶನ ಇದೆ. ನನ್ನ ಗೆಳೆಯರಾದ ಸನ್ಮಾನ್ಯ ಕಾನೂನು ಮಂತ್ರಿಯವರ ನಿರರ್ಗಳ ಅಪಾರವಾದ ಸಂಪತ್ತನ್ನು ಆಲಿಸಿದ ಮೇಲೆ, ಹೇಳಲು ನನ್ನ ಬಳಿ ಏನೂ ಉಳಿದಿಲ್ಲ.........................

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ನಿಮ್ಮ ಮಾತನ್ನು ನೀವೇ ಮುರಿಯುತ್ತಿದ್ದೀರಲ್ಲ.

**ಶ್ರೀ ನಝೀರುದ್ದೀನ್ ಅಹ್ಮದ್:** ಇಲ್ಲಿನ ಬುದ್ಧಿವಂತ ಮಹಿಳೆಯರ ಮಾತುಗಳು ನನ್ನ ಮೇಲೆ ತುಂಬಾ ಪ್ರಭಾವ ಬೀರಿದೆ. ನಾನು ಎದ್ದು ನಿಲ್ಲುವುದಕ್ಕೂ ಸ್ವಲ್ಪ ಮುಂಚೆಯೇ, ತುಂಬಾ ಪ್ರಭಾವಿ ಸದಸ್ಯರಾದ ಪಂಡಿತ ಠಾಕೂರ್ ದಾಸ್ ಭಾರ್ಗವರವರು, ಸೂಚನೆಯನ್ನು ಮಂಡಿಸುವ ಸ್ಥಿತಿಯಲ್ಲಿ ತಾನಿಲ್ಲ ಎಂದು ಹೇಳಿದ್ದರು.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ನಿಮ್ಮ ತಿದ್ದುಪಡಿಯ ಮಂಡನೆಗೆ ಈ ಪೀಠಿಕೆ ಅವಶ್ಯಕವೇ?

**ಶ್ರೀ ನಝೀರುದ್ದೀನ್ ಅಹ್ಮದ್:** ನನ್ನಲ್ಲಿ ಮಾತುಗಳೇ ಇಲ್ಲ. ನಾನು ಯಾವುದೇ

ಮಾತುಗಳನ್ನಾಡಬಾರದೆಂದು ಸಲಹೆ ಕೊಟ್ಟಿರುವುದಕ್ಕಾಗಿ ಕೃತಜ್ಞತೆ ಹೇಳುತ್ತಿದ್ದೇನೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಮಾನ್ಯ ಸದಸ್ಯರು, ತದನಂತರ ಮಾಡನಾಡುತ್ತಾರೆ.

**ಶ್ರೀ ನಝೀರುದ್ದೀನ್ ಅಹ್ಮದ್:** ಸರ್. ತುಂಬಾ ನಡುಕದಿಂದಲೇ, ನಾನು ಈ ಸೂಚನೆಯನ್ನು ಮಂಡಿಸಲು ಅನುಮತಿ ಕೋರುತ್ತಿದ್ದೇನೆ.

"ಮಸೂದೆಯನ್ನು, ಅದರ ಬಗ್ಗೆ ಇನ್ನಷ್ಟು ಅಭಿಪ್ರಾಯವನ್ನು ೧೯೪೯ರ ಅಂತ್ಯದ ಹೊತ್ತಿಗೆ ಸಂಗ್ರಹಿಸುವುದಕ್ಕಾಗಿ ಪರಿಚಲನೆ ಮಾಡಬೇಕು."

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈ ತಿದ್ದುಪಡಿ ಮಂಡನೆ ಆಗಿದೆ:

"ಮಸೂದೆಯನ್ನು, ಅದರ ಬಗ್ಗೆ ಇನ್ನಷ್ಟು ಅಭಿಪ್ರಾಯವನ್ನು ೧೯೪೯ರ ಅಂತ್ಯದ ಹೊತ್ತಿಗೆ ಸಂಗ್ರಹಿಸುವುದಕ್ಕಾಗಿ ಪರಿಚಲನೆ ಮಾಡಬೇಕು."

**ಶ್ರೀ ಬಿ. ದಾಸ್ :** ಸರ್, ಇದು ವಿಳಂಬಕಾರಕ ಸೂಚನೆಯಾದ್ದರಿಂದ ಅದು ಕ್ರಮಬಾಹಿರವೆಂದು ರೂಲಿಂಗ್ ಕೊಡಬಹುದೆಂದು ನಾನು ಸಲಹೆ ಮಾಡುತ್ತಿದ್ದೇನೆ.

**ಶ್ರೀ ಮಹಾವೀರ್ ತ್ಯಾಗಿ :** ಸರ್, ಕ್ರಿಯಾಲೋಪ, ಬೆಳಿಗ್ಗೆ ಕೂಡ, ವಿಳಂಬಕಾರಕ ಸೂಚನೆಗಳ ಬಗ್ಗೆ ಕೆಲವೊಂದು ರೂಲಿಂಗ್ ಆಗಿತ್ತು. ಸರ್, ಅವು ಸದಸ್ಯರ ವಿಶೇಷಾಧಿಕಾರವೆಂದು ನಾನು ಬಿನ್ನವಿಸಿಕೊಳ್ಳುತ್ತಿದ್ದೇನೆ. ಈ ಮಸೂದೆಗೆ ಸಂಬಂಧಿಸಿದಂತೆ ಹಲವಾರು ವಿಷಯಗಳ ಬಗ್ಗೆ ನಾನು ಡಾ. ಅಂಬೇಡ್ಕರ್‌ರವರನ್ನು ಸಮರ್ಥನೆ ಮಾಡುವೆನಾದರೂ, ವಿಳಂಬಕಾರಕ ಸೂಚನೆಗಳು, ಅಧಿಕಾರದಲ್ಲಿ ಇಲ್ಲದಿರುವ ಸದಸ್ಯರುಗಳ, ಪ್ರತಿಯೊಬ್ಬ ಸದಸ್ಯರ, ಹಾಗೆಯೇ ಪ್ರತಿಯೊಂದು ಪಕ್ಷದ ಸದಸ್ಯರ ವಿಶೇಷಾಧಿಕಾರವೆಂದು ನಾನು ಬಿನ್ನವಿಸಿಕೊಳ್ಳುತ್ತಿದ್ದೇನೆ. ಅದನ್ನು ತಪ್ಪಿಸಬಾರದು. ಕಾರ್ಯಕಲಾಪದಲ್ಲಿ ವಿಳಂಬ ಆಗಲು ಯಾರೇ ಸದಸ್ಯರು ಬಯಸಿದರೆ, ಅದು ಸದಸ್ಯರ ಒಂದು ಜನತಂತ್ರೀಯ ಹಕ್ಕು. ಒಂದು ಸೂಚನೆಯು, ವಿಳಂಬಕಾರಕ ಸೂಚನೆ ಎಂದು ಪರಿಗಣಿಸಿದ ಮಾತ್ರಕ್ಕೆ ಅದನ್ನು ತಳ್ಳಿಹಾಕಬಾರದು. ವಿಳಂಬಕಾರಕ ಸೂಚನೆಗಳು ಜನತಂತ್ರ ಸದನದ ವಿಶೇಷಾಧಿಕಾರ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಶ್ರೀಯುತ ತ್ಯಾಗಿಯವರು ಏನು ಹೇಳಿದರೋ ಅದರಲ್ಲಿ ಯಾವುದೇ ಕ್ರಿಯಾಲೋಪ ನನಗೆ ಕಂಡುಬರುತ್ತಿಲ್ಲ. ಇದರ ಮೇಲೆ ಪೂರ್ವ ಚರ್ಚೆ ಆಗಬೇಕೆಂದು ಅವರು ಬಯಸಿದ್ದಾರೆ. ಶ್ರೀ ದಾಸ್ ಅವರು ಎತ್ತಿರುವ ಅಂಶದ ಬಗ್ಗೆ ಹೇಳುವುದಾದರೆ, ಅದನ್ನು ಅರ್ಥ ಮಾಡಿಕೊಳ್ಳಲು ನನಗೆ ಆಗುತ್ತಿಲ್ಲ. ಅಂಥದೊಂದು ಸೂಚನೆಯ ಮಂಡನೆಗೆ ಯಾವ ನಿಯಮಗಳಲ್ಲೂ ಅನುಮತಿ ಇಲ್ಲ ಎಂಬುದು ಅವರು ಹೇಳುತ್ತಿರುವ ಅರ್ಥವೇ? ಹಾಗಿದ್ದ ಪಕ್ಷದಲ್ಲಿ, ವರದಿಯನ್ನು ಸಲ್ಲಿಸಿದಾಗ ವಿಧಾನ ಯಾವುದೆಂದರೆ, (ಒಬ್ಬರು ಮಾನ್ಯ ಸದಸ್ಯರು: "ಯಾವುವು ಆ ನಿಯಮಗಳು") ಹಿಂದಿನ ಅಧಿವೇಶನದಲ್ಲಿ ನಾವು ಅಂಗೀಕರಿಸಿದ ನಿಯಮಗಳು.

ನಿಯಮ ಏನು ಹೇಳಿದೆಯೆಂದರೆ :

"ಸೂಚಕರು, ಮಸೂದೆಯನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ಸೂಚನೆ ಮಂಡಿಸಿದಾಗ, ಆ ಮಸೂದೆಯನ್ನು ಅಭಿಪ್ರಾಯ ಸಂಗ್ರಹಿಸುವ ಅಥವಾ ಅದರ ಬಗ್ಗೆ ಇನ್ನಷ್ಟು ಅಭಿಪ್ರಾಯದ ಉದ್ದೇಶಕ್ಕಾಗಿ ವಾಪಸು ಕಳುಹಿಸಬೇಕೆಂದು ಅಥವಾ ಪರಿಚಲನೆ ಮಾಡಬೇಕೆಂದು ಒಂದು ತಿದ್ದುಪಡಿಯನ್ನು ಯಾರೇ ಸದಸ್ಯರು ಮಂಡಿಸಬಹುದು.

ಆದ್ದರಿಂದ, ನಿಯಮಗಳ ಪ್ರಕಾರವೇ ಈ ಬಗೆಯ ಸೂಚನೆಗೆ ಅನುಮತಿ ನೀಡಲಾಗಿದೆ. ಈ

ಸೂಚನೆಗೆ ನಾನು ಹೇಗೆ ಅನುಮತಿ ನೀಡುವಂತಿಲ್ಲ ಎಂಬುದನ್ನು ನಾನು ತಿಳಿದುಕೊಳ್ಳಬಯಸಿದ್ದೇನೆ.

**ಶ್ರೀ ಬಿ.ಸಿ. ದಾಸ್** : ನನಗೆ ಆ ನಿಯಮ ಗೊತ್ತಿದೆ. ಆದರೆ, ಯಾವ ವಿಳಂಬಕಾರಕ ಸೂಚನೆಗೂ ಅನುಮತಿ ಕೊಡುವುದಿಲ್ಲವೆಂದು ಈ ಬೆಳಿಗ್ಗೆ ಕೊಟ್ಟ ರೂಲಿಂಗೇ ನನಗೆ ಆಧಾರ. ಆದ್ದರಿಂದ, ನಾನು ಕ್ರಿಯಾಲೋಪ ಎತ್ತಿದ್ದೇನೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ನಾನು ಒಂದೆರಡು ಮಾತು ಹೇಳುವುದಕ್ಕೆ ಅವಕಾಶ ಕೊಡಿ. ನನ್ನ ಸ್ನೇಹಿತ ಶ್ರೀ ಬಿ. ದಾಸ್ ಅವರು ಸರಿಯಾದ ಕ್ರಿಯಾಲೋಪ ಎತ್ತಿದ್ದಾರೆಂದು ನನ್ನ ಅನಿಸಿಕೆ.

**ಮಾನ್ಯ ಸದಸ್ಯರುಗಳು** : ಅಲ್ಲ.

**ಪಂಡಿತ ಠಾಕೂರದಾಸ ಭಾರ್ಗವ** : ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್‌ರವರು ರೂಲಿಂಗ್ ಕೊಟ್ಟಿರುವಾಗ ಅದನ್ನು ಪ್ರಶ್ನಿಸುವಂತಿಲ್ಲ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್** : ಮಾನ್ಯ ಸದಸ್ಯರುಗಳು ಎಲ್ಲರೂ ಒಮ್ಮೆಗೆ ಮಾತನಾಡಬಾರದು. ಸದಸ್ಯರು ಎದ್ದು ನಿಂತು, ಒಬ್ಬೊಬ್ಬರಾಗಿ ಮಾತನಾಡಬೇಕು, ಸನ್ಮಾನ್ಯ ಕಾನೂನು ಮಂತ್ರಿಯವರು ಹೇಳಿರಿ. ಅನಂತರ ಈ ಅಂಶದ ಮೇಲೆ ಮಾತನಾಡಲು ನಾನು ಪ್ರತಿಯೊಬ್ಬ ಸದಸ್ಯರಿಗೆ ಅವಕಾಶ ಕೊಡುತ್ತೇನೆ. ಆದರೆ, ಅಂಥವರು ಚರ್ಚೆಗೆ ಪೂರಕವಾಗಿ ಮಾತನಾಡಬೇಕು. ಯಾರೂ ತಾಳ್ಮೆ ಕಳೆದುಕೊಳ್ಳುವ ಅಗತ್ಯ ಇಲ್ಲ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಸರ್, ಕಾರ್ಯಕಲಾಪ ನಿಯಮಗಳ ಪ್ರಕಾರ ಅನುಮತಿ ಕೊಡಬಹುದಾದ ಸೂಚನೆಗಳು ಎರಡು ವರ್ಗಗಳಲ್ಲಿ ಬರುತ್ತವೆ. ಒಂದು : ಸ್ಪೀಕರ್‌ರವರು ಸದನದ ಮುಂದೆ ಇಡಬೇಕಾದಂತಹ ಸೂಚನೆಗಳು. ಎರಡು: ಸದನದಲ್ಲಿ ಮಂಡನೆಯಾಗುವುದಕ್ಕೆ ಮುಂಚೆ, ಅವು ಸೂಕ್ತ ಸೂಚನೆಗಳೆಂದು ಸ್ಪೀಕರ್ ಅವರಿಗೆ ಮನವರಿಕೆ ಆಗಬೇಕಾದಂತಹ ಸೂಚನೆಗಳು. ನಿಲುವಳಿ ಸೂಚನೆಯೊಂದರ ಉದಾಹರಣೆ ಕೊಟ್ಟು ನಾನು ವಿವರಿಸಬಯಸುತ್ತೇನೆ. ನಿಯಮಗಳ ಪ್ರಕಾರ, ಪ್ರತಿಯೊಬ್ಬ ಮಾನ್ಯ ಸದಸ್ಯರಿಗೆ ನಿಲುವಳಿ ಸೂಚನೆಯನ್ನು ಮಂಡಿಸಲು ಅನುಮತಿ ಕೊಡಲಾಗುತ್ತದೆ. ಒಬ್ಬರು ಸದಸ್ಯರು ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದ ಮಾತ್ರಕ್ಕೆ, ಅದನ್ನು ಸ್ಪೀಕರ್‌ರವರು ಸದನದ ಮುಂದೆ ಮಂಡಿಸಲೇಬೇಕು. ಸ್ಪೀಕರ್‌ರವರಿಗೆ ಈ ಅಧಿಕಾರ ಇದೆ ಎಂದೇನಿಲ್ಲ. ಏಕೆಂದರೆ, ಸ್ಪೀಕರ್‌ರವರು ಅದಕ್ಕೆ ಅನುಮತಿ ಕೊಡಬಹುದು ಎಂಬ ನಿರ್ಧಾರಕ್ಕೆ ಬಂದಿದ್ದ ಹೊರತು, ಅದನ್ನು ಮಂಡಿಸುವ ಹಾಗಿಲ್ಲ. ನಾನು ಬೇಕಾದಷ್ಟು ಇತರ ಉದಾಹರಣೆಗಳನ್ನು ಕೊಡಬಲ್ಲೆ. ಈ ಬಗೆಯ ಸೂಚನೆ ಎಂದರೆ ಮಸೂದೆಯ ಪರ್ಯಾಲೋಚನೆಯ ಮುಂದೂಡಿಕೆ ಸೂಚನೆ ಹಾಗೂ ಇನ್ನಷ್ಟು ಅಭಿಪ್ರಾಯಕ್ಕಾಗಿ ಪರಿಚಲನೆ ಮಾಡಲು ಕೋರುವ ಸೂಚನೆ ಬಗ್ಗೆ ಹೇಳುವುದಾದರೆ ಅಂಥದೊಂದು ಸೂಚನೆಯು, ಸ್ಪೀಕರ್‌ರವರು ಅದನ್ನು ಸದನದಲ್ಲಿ ಮಂಡಿಸುವುದಕ್ಕೂ ಮುಂಚೆ, ಅವರಿಗೆ ಆ ಬಗ್ಗೆ ಮನವರಿಕೆ ಆಗಿರಬೇಕಾದುದು ಅಗತ್ಯವಿರುವಂತಹ ಸೂಚನೆಗಳ ವರ್ಗದಲ್ಲಿ ಬರುತ್ತದೆ. ಸೆಲೆಕ್ಟ್ ಕಮಿಟಿಯು ತನ್ನ ವರದಿಯನ್ನು ಸಲ್ಲಿಸಿದ ಮೇಲೆ, ಮಸೂದೆಯ ಪರ್ಯಾಲೋಚನೆಯ ಮುಂದೂಡಿಕೆಗಾಗಿ ಅಥವಾ ಪರಿಚಲನೆ ಮಾಡಲು ಮಂಡಿಸಿದ ಅಂಥದೊಂದು ಸೂಚನೆಯು ಮೇಲ್ನೋಟಕ್ಕೆ ವಿಳಂಬಕಾರಕ ಸೂಚನೆ ಎನ್ನುವುದು ಈ ಸದನದ ಸಾರ್ವಕಾಲಿಕ ಅಭಿಪ್ರಾಯವಾಗಿದೆ. ಅಂಥ ಸೂಚನೆಯನ್ನು ಮಂಡಿಸಿದ ಸದಸ್ಯರು, ಅದರ ಮಂಡನೆಗೆ, ಮುಖ್ಯವಾದ ಕಾರಣಗಳನ್ನು ಹೇಳಿದ್ದ ಹೊರತು ಅದರ ಮಂಡನೆಗೆ ಅನುಮತಿ ಕೊಡುವಂತಿಲ್ಲ. ಈ ಪುಸ್ತಕಗಳಲ್ಲಿ ಆ ಬಗ್ಗೆ ಹಲವಾರು ರೂಲಿಂಗ್‌ಗಳಿವೆ. ಪುಸ್ತಕ ನಂ.೧ ರಲ್ಲಿರುವ ರೂಲಿಂಗ್ ನಂ. ೧ ರತ್ತ ಗಮನ

ಸೆಳೆಯಬಯಸುತ್ತೇನೆ. ಈ ಸೂಚನೆ ಬಗ್ಗೆ, ಯಾವುದೇ ಮುಖ್ಯ ಕಾರಣಗಳನ್ನು ಕೊಟ್ಟಿಲ್ಲ.

**ಒಬ್ಬರು ಮಾನ್ಯ ಸದಸ್ಯರು** : ಆ ಮಾನ್ಯ ಸದಸ್ಯರು ಮಾತನಾಡಿಯೇ ಇಲ್ಲವಲ್ಲ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್** : ಸನ್ಮಾನ್ಯ ಕಾನೂನು ಮಂತ್ರಿಯವರು ಮಾತು ಮುಗಿಸಲಿ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಈ ಪುಸ್ತಕದಲ್ಲಿ ರೂಲಿಂಗ್ ನಂ. ೧ ರತ್ತ ತಮ್ಮ ಗಮನ ಸೆಳೆಯುತ್ತಿದ್ದೇನೆ. ಇನ್ನೂ ಅನೇಕ ರೂಲಿಂಗ್‌ಗಳಿವೆ. ಅವುಗಳಲ್ಲಿ:

"ಹತ್ತಿ ಸೀಮಾ ಶುಲ್ಕ ರದ್ದಿಯಾತಿ ನಿರ್ಣಯದ ಮೇಲೆ ಚರ್ಚೆಯನ್ನು ಮುಂದೂಡಬೇಕೆಂದು ಒಂದು ಸೂಚನೆಯ ಮಂಡನೆ ಆಗಿತ್ತು (ಅಂದರೆ ಅದನ್ನು ಪರಿಚಲನೆಗಾಗಿ ಕಳುಹಿಸಬೇಕು ಅಥವಾ ಕೈಬಿಡಬೇಕು ಎಂಬುದು ಅದರ ತಾತ್ಪರ್ಯ.)

"ಇಂಥ ನಿರ್ದಿಷ್ಟ ಸಂದರ್ಭದಲ್ಲಿ ಸೂಚನೆಯನ್ನು ಒಪ್ಪಿಕೊಳ್ಳುವಾಗ ಸಭಾಧ್ಯಕ್ಷರು ಒಂದು ಪೂರ್ವನಿದರ್ಶನ ಉಂಟಾಗಲು ಅವಕಾಶ ಕೊಡದೆ ಹೀಗೆ ಹೇಳಿದ್ದಾರೆ:

"ಸಭಾಧ್ಯಕ್ಷರು, ಕಾರ್ಯಕಲಾಪದ ಇನ್ನೊಂದು ಬಾಬು ಬರುವಂತಹ ರೀತಿಯಲ್ಲಿ ಒಂದು ಪ್ರಸ್ತಾಪದ ಪರ್ಯಾಲೋಚನೆಯನ್ನು ಮುಂದೂಡುವ ಸೂಚನೆಯ ಮಂಡನೆಗೆ ಅನುಮತಿ ಕೊಡುವಂತಿಲ್ಲ."

**ಪಂಡಿತ ಠಾಕೂರ್ ದಾಸ್ ಭಾರ್ಗವ:** ಅದು ಪೂರ್ವನಿದರ್ಶನ ಅಲ್ಲವೆಂದು ರೂಲಿಂಗ್ ಹೇಳುತ್ತದೆ. ಆದರೆ, ನೀವು ಅದನ್ನು ಒಂದು ಪೂರ್ವನಿದರ್ಶನವನ್ನಾಗಿ ಮಾಡಬಯಸಿದ್ದೀರಿ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಸಭಾಧ್ಯಕ್ಷರು "ನಾನು ರೂಲಿಂಗ್ ಕೊಡುತ್ತಿದ್ದೇನೆಯೇ ಹೊರತು, ಪೂರ್ವನಿದರ್ಶನವನ್ನು ಉಂಟು ಮಾಡುತ್ತಿಲ್ಲ" ಎಂದು ಹೇಳಿದ್ದಾರೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ** : ಈ ವಿಷಯದಲ್ಲಿ "ಸಭಾಧ್ಯಕ್ಷರ ತೀರ್ಮಾನಗಳು" ಪುಸ್ತಕದ ೮೧ನೆಯ ಪುಟದತ್ತ ತಮ್ಮ ಗಮನ ಸೆಳೆಯಬಯಸುತ್ತೇನೆ. ಅದರಲ್ಲಿ, ವಿಳಂಬಕಾರಕ ಸ್ವರೂಪದ ಕೆಲವೊಂದು ಸೂಚನೆಗಳಿರುತ್ತವೆಂದು ಹೇಳಲಾಗಿದೆ. ಪರಿಚಲನೆಯು, ಅಂಥ ಸ್ವರೂಪದಲ್ಲಿ ಖಂಡಿತವಾಗಿಯೂ ಒಂದಲ್ಲ, ಆದರೂ, ವಿಳಂಬಕಾರಕ ಸ್ವರೂಪದ ಸೂಚನೆಗಳಿರುತ್ತವೆ. ಅವುಗಳಿಗೆ ಅನುಮತಿ ಕೊಡುವುದು ಅಥವಾ ಕೊಡದಿರುವುದು ಸಭಾಧ್ಯಕ್ಷರ ವಿವೇಚನೆಗೆ ಮತ್ತು ಅಧಿಕಾರಕ್ಕೆ ಸೇರಿದ್ದು. ಸೂಚನೆಗಳನ್ನು ಮತ್ತೆ ವಾಪಸು ಕಳುಹಿಸುವುದಕ್ಕೆ ಸಂಬಂಧಿಸಿದಂತೆ ಈ ಪುಸ್ತಕದ ೮೧ನೆಯ ಪುಟದಲ್ಲಿ, ಪ್ರಾರಂಭದಲ್ಲಿ ಅದನ್ನು ವಿಳಂಬಕಾರಕ ಸೂಚನೆಯೆಂದು ಪರಿಗಣಿಸಬಹುದೆಂದು ಹೇಳಲಾಗಿದೆ. ಸೆಲೆಕ್ಟ್ ಕಮಿಟಿಯಲ್ಲಿ ಏನಾದರೂ ಆಗಿದ್ದರೆ ಅಥವಾ ಆ ನಂತರ ಕೆಲವೊಂದು ವಿದ್ಯಮಾನಗಳು ಸಂಭವಿಸಿದ್ದರೆ, ಅದು ವಿಳಂಬಕಾರಕ ಸೂಚನೆ ಅಲ್ಲವೆಂದು ಹೇಳುವ ಅಧಿಕಾರ ಇದ್ದೇ ಇರುತ್ತದೆ. ಈಗ, ನನ್ನ ಮಾನ್ಯ ಸದಸ್ಯರಿಗೆ ಕಾರಣಗಳು ಯಾವುವು ಹೇಳಿ ಎಂದು ಕೇಳಿಯೂ ಇಲ್ಲ, ಅದಕ್ಕೂ ಮೊದಲೇ ಅವರು ಎದ್ದು ನಿಂತು ಅದು ವಿಳಂಬಕಾರಕ ಸೂಚನೆಯೆಂದು ಹೇಳುತ್ತಿದ್ದಾರೆ. ಪ್ರಾರಂಭದಲ್ಲೇ ಅದು ವಿಳಂಬಕಾರಕ ಸೂಚನೆಯೆಂದು ಹೇಳುವುದು ತೀರಾ ತಪ್ಪಾಗುತ್ತದೆ. ಪರಿಚಲನಾ ಸೂಚನೆಯು ವಿಳಂಬಕಾರಕ ಸೂಚನೆ ಅಲ್ಲ. ಆ ಸೂಚನೆಯನ್ನು ತಡೆಯುವುದಕ್ಕೆ ಸಮರ್ಥನೆ ಕೊಡುವಂಥದ್ದು ಸೆಲೆಕ್ಟ್ ಕಮಿಟಿಯಲ್ಲಿ ಏನೂ ಆಗಿಲ್ಲ ಅಥವಾ ಆ ನಂತರ ಯಾವುವೇ ವಿದ್ಯಮಾನಗಳು ಸಂಭವಿಸಿಲ್ಲ ಎಂಬ ತೀರ್ಮಾನಕ್ಕೆ ಸ್ಪೀಕರ್‌ರವರು ಬಂದಿದ್ದ ಹೊರತು, ಯಾವುದೇ ಸೂಚನೆಯು ವಿಳಂಬಕಾರಕ ಸೂಚನೆಯೆಂದು ಸ್ಪೀಕರ್‌ರವರಿಗೆ ಹೇಳುವ ಹಕ್ಕು ಇಲ್ಲವೆಂಬುದು ನನ್ನ ಅನಿಸಿಕೆ.

**ಶ್ರೀ ನಝೀರುದ್ದೀನ್ ಅಹ್ಮದ್** : ಸರ್, ವಿಷಯಗಳನ್ನು ಒಂದು ನಿಮಿಷದಲ್ಲೇ ಮುಗಿಸಿಬಿಡಲೂಬಹುದು.

ಸನ್ಮಾನ್ಯ ಕಾನೂನು ಮಂತ್ರಿಯವರು ಆಧಾರವಾಗಿ ತೆಗೆದುಕೊಂಡಿರುವ ಪೂರ್ವನಿದರ್ಶನವು ಈ ಸಂದರ್ಭಕ್ಕೆ ಅನ್ವಯವಾಗುವುದೇ ಇಲ್ಲ. ಅದರ ಹೆಸರು..........ಚರ್ಚೆಯ ಮುಂದೂಡಿಕೆ.........................

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಇದನ್ನು ಅಂಗೀಕರಿಸಿದರೆ ಅದು ಚರ್ಚೆಯ ಮುಂದೂಡಿಕೆ ಸೂಚನೆಯಾಗುತ್ತದೆ.

**ಶ್ರೀ ನಝೀರುದ್ದೀನ್ ಅಹ್ಮದ್ :** ಅಲ್ಲ, ಅದು ತೀರಾ ಬೇರೆಯದು ಎಂದು ನಾನು ತೋರಿಸುತ್ತೇನೆ. ಅದರ ಉಪಶೀರ್ಷಿಕೆ.... ಚರ್ಚೆಯ ಮುಂದೂಡಿಕೆ : ಸೂಚನೆಯ ಮಂಡನೆಗೆ ಯಾವಾಗ ಅನುಮತಿ ಕೊಡಲಾಗುತ್ತದೆ....... ಈ ಚರ್ಚೆಯ ಮುಂದೂಡಿಕೆಗೆ ನಾನು ಸೂಚನೆ ಮಂಡಿಸುತ್ತಿಲ್ಲ. ಅದನ್ನು, ಖಂಡಿತವಾಗಿಯೂ, ತಿದ್ದುಪಡಿ ನಂ. ೨ರ ಪ್ರಕಾರ ಮಾಡುತ್ತಿಲ್ಲ. ಎಂದರೆ :

"ಸೆಲೆಕ್ಟ್ ಕಮಿಟಿಯು ವರದಿ ಮಾಡಿರುವ ಮಸೂದೆಯ ಪರ್ಯಾಲೋಚನೆಯನ್ನು ಮುಂದೂಡಬೇಕು."

ಚರ್ಚೆಯ ಮುಂದುವರಿಕೆಗೆ, ಸೂಚನೆಯ ಪರ್ಯಾಲೋಚನೆಗೆ ನನ್ನ ಆಕ್ಷೇಪಣೆ ಇದೆ. ಪರ್ಯಾಲೋಚನೆಯನ್ನು ನನ್ನ ಸೂಚನೆಯ ಜತೆಗೇ ಎತ್ತಿಕೊಳ್ಳಬೇಕೆಂದು ಬಯಸುತ್ತೇನೆ. ಡಾ. ಅಂಬೇಡ್ಕರ್‌ರವರು ಆಧಾರವಾಗಿ ತೆಗೆದುಕೊಂಡಿರುವ ರೂಲಿಂಗನ್ನು ಇನ್ನೊಮ್ಮೆ ಓದಿದರೆ ಅದು ಸ್ಪಷ್ಟವಾಗುತ್ತದೆ:

"ಹತ್ತಿ ಸೀಮಾ ಶುಲ್ಕ ರದ್ದಿಯಾತಿ ನಿರ್ಣಯದ ಮೇಲೆ ಚರ್ಚೆ ಆಗುತ್ತಿದ್ದಾಗ, ನಿರ್ಣಯದ ಮೇಲಿನ ಚರ್ಚೆಯನ್ನು ಮುಂದೂಡಬೇಕೆಂದು ಒಂದು ಸೂಚನೆಯ ಮಂಡನೆ ಆಗಿತ್ತು".

"ಇಂಥ ನಿರ್ದಿಷ್ಟ ಸಂದರ್ಭದಲ್ಲಿ ಸೂಚನೆಯನ್ನು ಒಪ್ಪಿಕೊಳ್ಳುವಾಗ ಸಭಾಧ್ಯಕ್ಷರು ಒಂದು ಪೂರ್ವನಿದರ್ಶನ ಉಂಟಾಗಲು ಅವಕಾಶ ಕೊಡದೆ ಹೀಗೆ ಹೇಳಿದ್ದಾರೆ:

ಸಭಾಧ್ಯಕ್ಷರು, ಕಾರ್ಯಕಲಾಪದ ಇನ್ನೊಂದು ಬಾಬು ಬರುವಂತಹ ರೀತಿಯಲ್ಲಿ ಒಂದು ಪ್ರಸ್ತಾವದ ಪರ್ಯಾಲೋಚನೆಯನ್ನು ಮುಂದೂಡುವ ಮಂಡನೆಗೆ ಅನುಮತಿ ಕೊಡುವಂತಿಲ್ಲ".

ನನಗೆ ತಿಳಿದಮಟ್ಟಿಗೆ, ಒಂದು ಸಮಯದಲ್ಲಿ ಒಂದು ಸೂಚನೆ ಸದನದ ಮುಂದಿತ್ತು, ಇನ್ನೊಂದು ತುಂಬಾ ಆಸಕ್ತಿಯದು ಅಥವಾ ತುಂಬಾ ಮಹತ್ವದ್ದು ಮೊದಲೇ ಮಂಡನೆ ಆಗಿತ್ತು. ಒಬ್ಬರು ಸದಸ್ಯರು, ನಿರ್ಣಯದ ಚರ್ಚೆಯ ಮುಂದೂಡಿಕೆಗೆ ಪ್ರಸ್ತಾಪ ಮಾಡಿದರು. ಆ ಇನ್ನೊಂದು ಆಸಕ್ತಿಯ ಸೂಚನೆಯನ್ನು ಕೈಗೆತ್ತಿಕೊಳ್ಳಬಹುದೇ ಎಂಬುದನ್ನು ಕಂಡುಕೊಳ್ಳಲು ಅದನ್ನು ಪರಿಶೀಲಿಸಲಾಗುತ್ತಿತ್ತು. ಒಪ್ಪಿಕೊಳ್ಳಲಾಗದೆಂದು ಹೇಳಲಾಗಿದ್ದ ಮೊದಲ ಸೂಚನೆಯನ್ನು ಮುಂದೂಡುವ ಪ್ರಯತ್ನ ಅದಾಗಿತ್ತು. ಇಲ್ಲಿ, ನಾನು, ಚರ್ಚೆಯ ಮುಂದೂಡಿಕೆ ಪ್ರಸ್ತಾಪ ಮಾಡುತ್ತಿಲ್ಲ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಹಾಗೆಂದರೂ ಅದೇ.

**ಶ್ರೀ ನಝೀರುದ್ದೀನ್ ಅಹ್ಮದ್ :** ಇಲ್ಲಿ ನಾವು ೫೨ನೇ ನಿಯಮದ ವ್ಯಾಖ್ಯಾನವನ್ನು ನೋಡಬೇಕು. ಈ ನಿಯಮವನ್ನು ಓದಿದರೆ, ಸೂಚನೆಯು ಕ್ರಮಬದ್ಧವಾಗಿದೆಯೆಂಬುದನ್ನು ತೋರಿಸುತ್ತದೆ. ನಿಯಮದ ಉಲ್ಲಂಘನೆ ಆಗಿರದಿದ್ದರೆ, ಅದು ಕ್ರಮಬದ್ಧವಾಗಿಲ್ಲ ಎಂದು ಹೇಳುವಂತಿಲ್ಲ.

**ಪಂಡಿತ ಹೃದಯನಾಥ ಕುಂಜ್ರು** (ಸಂಯುಕ್ತ ಪ್ರಾಂತ್ಯ : ಸಾಮಾನ್ಯ) : ಈ ಮಸೂದೆಯು ಭಾವನೆಗಳನ್ನು ತುಂಬಾ ಕೆರಳಿಸಿದೆ. ಚರ್ಚೆಯನ್ನು ಯಾವುದೇ ರೀತಿಯಲ್ಲಾದರೂ ತಡೆಯುವುದಕ್ಕಾಗಿ ಇನ್ನಷ್ಟು ಹೇಳುವುದು ತೀರಾ ಸರಿಯಲ್ಲ. ಈ ಬಗ್ಗೆ ಮತ್ತು ಚರ್ಚೆಗೆ ಅವಕಾಶ ಕೊಡುವುದಕ್ಕೆ ಸಂಬಂಧಿಸಿದಂತೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಂಪೂರ್ಣ ಅವಕಾಶ ಕೊಡಲಾಗಿದೆಯೆಂಬ ಭಾವನೆ ಈ ಸದನದ

ಎಲ್ಲ ವರ್ಗದವರಲ್ಲಿ ಉಂಟಾಗುವಂತೆ ಮಾಡುವುದೇ ಉಳಿದಿರುವ ಮಾರ್ಗ ಎಂಬುದು ನನ್ನ ಅನಿಸಿಕೆ. ನಮ್ಮ ಮುಂದಿರುವ ಮಸೂದೆಯ ಗುಣದೋಷಗಳ ಬಗ್ಗೆ ನಮ್ಮ ವೈಯಕ್ತಿಕ ಅಭಿಪ್ರಾಯಗಳೇನೇ ಇರಬಹುದು, ಅವು ನನ್ನ ಗೆಳೆಯ ಮಾನ್ಯ ನಝೀರುದ್ದಿನ್ ಅಹ್ಮದ್‌ರವರ ಸೂಚನೆಯನ್ನು ವಿರೋಧಿಸುವುದಕ್ಕೆ ಯಾವ ಆಧಾರವೂ ಆಗಕೂಡದು.

ಡಾ. ಅಂಬೇಡ್ಕರ್‌ರವರು, ಒಂದು ವಿಷಯಕ್ಕೆ ಸಂಬಂಧಿಸಿದಂತೆ ಸಭಾಧ್ಯಕ್ಷರು ಇತ್ತಿರುವ ರೂಲಿಂಗನ್ನು ಉದಾಹರಿಸಿದ್ದಾರೆ. ಅದು ಈಗ ಪರ್ಯಾಲೋಚನೆಯಲ್ಲಿರುವುದಕ್ಕೂ ಆ ವಿಷಯಗಳಿಗೂ ಸಂಪೂರ್ಣವಾಗಿ ಹೊಂದಿಕೆ ಆಗುವುದೇ ಇಲ್ಲ. ಮೊದಲನೆಯದಾಗಿ, ರೂಲಿಂಗನ್ನು ನಿರ್ಣಯಕ್ಕೆ ಸಂಬಂಧಪಟ್ಟಂತೆ ಕೊಡಲಾಗಿದೆಯೇ ಹೊರತು ಮಸೂದೆ ಮೇಲಲ್ಲ. ಎರಡನೆಯದಾಗಿ, ಮಸೂದೆಗೆ ಸಂಬಂಧಪಟ್ಟಂತೆ, ಹೇಳುವುದಾದರೆ ಆ ಮಸೂದೆಯನ್ನು ಪರಿಚಲನೆ ಮಾಡಬೇಕೆಂಬುದಕ್ಕಷ್ಟೇ ಅಲ್ಲ, ಅದನ್ನು ಪುನಃ ಪರಿಚಲನೆ ಮಾಡಬಹುದೆಂದು, ಅದನ್ನು ಸೆಲೆಕ್ಟ್ ಕಮಿಟಿಗೆ ಉಲ್ಲೇಖ ಮಾಡಬೇಕೆಂಬುದಕ್ಕಷ್ಟೇ ಅಲ್ಲ, ಅದನ್ನು ಸೆಲೆಕ್ಟ್ ಕಮಿಟಿಗೆ ವಾಪಸು ಮಾಡಬೇಕೆಂದು ಸೂಚನೆ ಮಂಡಿಸಬಹುದೆಂದು, ನಿಯಮಗಳಲ್ಲಿ ಗೊತ್ತುಪಡಿಸಲಾಗಿದೆ. ನಿಯಮಗಳಲ್ಲಿ ಬಳಸಿರುವ ಭಾಷೆ ಸುಸ್ಪಷ್ಟವಾಗಿದೆ. ಮಸೂದೆಯನ್ನು ವಾಪಸು ಕಳುಹಿಸಬೇಕೆಂದು ಅಥವಾ ಪುನಃ ಪರಿಚಲನೆಗೆ ಕಳುಹಿಸಬೇಕೆಂದು ಒಂದು ಸೂಚನೆಯು ಮಂಡನೆ ಆದಾಗ ಅದು ವಿಳಂಬಕಾರಕ ಸೂಚನೆಯೆಂಬ ಕಾರಣದ ಮೇಲೆ ಅದನ್ನು ವಿರೋಧಿಸುವುದು, ನಿಯಮಗಳು ಸದಸ್ಯರುಗಳಿಗೆ ಕೊಟ್ಟಿರುವ ಸುಸ್ಪಷ್ಟ ಹಕ್ಕುಗಳನ್ನು ಸಂಪೂರ್ಣವಾಗಿ ಅನೂರ್ಜಿತವನ್ನಾಗಿ ಮಾಡಿಬಿಡುತ್ತದೆ. ಶ್ರೀ ನಝೀರುದ್ದಿನ್ ಅಹ್ಮದ್‌ರವರು ಮಂಡಿಸಿರುವಂತಹ ಸೂಚನೆಯನ್ನು ತಳ್ಳಿಹಾಕಿದರೆ ನಮಗೆ ತಾಳ್ಮೆ ಕೆಡಬಹುದು, ಅದನ್ನು ತಳ್ಳಿಹಾಕಲು ನಾವು ಸಿದ್ಧರಿರಲೂಬಹುದು. ಆದರೆ, ಅದನ್ನು ಮಂಡಿಸಲು ಒಪ್ಪಿಗೆ ಕೊಡದಿರುವುದಕ್ಕೆ ಅದೇ ಕಾರಣ ಆಗಕೂಡದು. ನನ್ನ ಅಭಿಪ್ರಾಯದ ಪ್ರಕಾರ, ಅದು ಕ್ರಮಬದ್ಧವಾಗಿದೆ. ನಮ್ಮೆಲ್ಲರಿಗೂ ಆಸಕ್ತಿ ಇರುವ ಒಂದು ಕಾನೂನನ್ನು ನಾವು ಅಂಗೀಕರಿಸುತ್ತಿರುವ ಸಮಯದಲ್ಲಿ, ನಾವು ಹೀಗೆ ಮಾಡಿದರೆ, ನಾವು ತುಂಬಾ ಅನ್ಯಾಯ ಮಾಡಿದಂತಾಗುತ್ತದೆ, ಅಲ್ಲದೆ ಸದಸ್ಯರ ಹಕ್ಕುಗಳನ್ನು ನಾವು ಚಿವುಟಿ ಹಾಕಿದಂತಾಗುತ್ತದೆ ಮತ್ತು ಯಾವುದೇ ನಿರ್ದಿಷ್ಟ ಸಮಯದಲ್ಲಿ ಬಹುಮತ ಇರಬಹುದಾದವರ ಅನುಕೂಲಕ್ಕೆ ತಕ್ಕಂತೆ ನಿಯಮಗಳನ್ನು ವ್ಯಾಖ್ಯಾನ ಮಾಡಲು ಪ್ರಯತ್ನ ಮಾಡಿದಂತಾಗುತ್ತದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಸರ್, ೫೨(೨)ನೆಯ ನಿಯಮದಲ್ಲಿ ಹೇಳಿರುವ ಒಂದೇ ಒಂದು ಅಂಶವೆಂದರೆ, ಪ್ರತಿಯೊಬ್ಬ ಸದಸ್ಯರಿಗೂ ಹಕ್ಕು ಇದೆ ಎಂಬುದು. ಆದರೆ, ಆ ಹಕ್ಕು, ಅಂಗೀಕರಿಸುವುದಕ್ಕೆ ಒಳಪಟ್ಟಿರುತ್ತದೆ, ಅದು ಸ್ಪೀಕರ್‌ರವರ ವಿವೇಚನೆಗೆ ಸೇರಿದ್ದೆಂಬುದೂ ಕೂಡ ಪ್ರಮುಖ ಅಂಶ. ನಮಗೆ, ಅಡ್ಡ ಪ್ರಶ್ನೆಗಳನ್ನು ಕೇಳುವುದಕ್ಕೆ ಹಕ್ಕು ಇಲ್ಲ, ಅಂದ ಮಾತ್ರಕ್ಕೇ, ಎಲ್ಲಾ ಅಡ್ಡ ಪ್ರಶ್ನೆಗಳನ್ನು ಕಾರ್ಯಸೂಚಿ ಹಾಳೆಯಲ್ಲಿ ಸೇರಿಸಕೂಡದು ಎಂದೇನಲ್ಲ, ಅದು ಒಪ್ಪಿಕೊಳ್ಳುವುದಕ್ಕೆ ಒಳಪಟ್ಟಿರುತ್ತದೆ ಎಂದು ಡಾ. ಅಂಬೇಡ್ಕರ್‌ರವರು ಒಟ್ಟಾರೆ ಹೇಳಿದ್ದಾರೆ. ವಿವೇಚನೆ ಮಾಡಿ, ನೀವು ಈಗ ಅದು, ವಿಳಂಬಕಾರಕ ಮಸೂದೆಯು ಸ್ವರೂಪದ್ದೇ ಎಂಬುದನ್ನು ನಿರ್ಧರಿಸಬೇಕಾಗುತ್ತದೆ. ಈ ಸೂಚನೆಯನ್ನು ಮಂಡಿಸಲು ಅವರು ಒಳ್ಳೆಯ ಕಾರಣವನ್ನು ಕೊಡುತ್ತಾರೆಂದು ತಮಗೆ ಮನವರಿಕೆಯಾದರೆ, ಸರ್, ತಾವು ಅವರನ್ನು ಕೇಳುವುದು, ತಾವು ಮನವರಿಕೆ ಮಾಡಿಕೊಳ್ಳುವುದು ತಮಗೇ ಸೇರಿದ್ದು. ಅವರು ಒಳ್ಳೆಯ ಕಾರಣಗಳನ್ನು ಕೊಡುತ್ತಾರೆಂದು ತಮಗೆ ಮನವರಿಕೆಯಾದರೆ, ಖಂಡಿತವಾಗಿಯೂ ಅವರು ಸೂಚನೆಯನ್ನು ಮಂಡಿಸಬಹುದು– ಅದೇ, ಡಾ. ಅಂಬೇಡ್ಕರ್‌ರವರು ಎತ್ತಿರುವ ಅಂಶ. ಪ್ರತಿಯೊಬ್ಬ ಸದಸ್ಯರಿಗೂ

ಮಾತನಾಡುವ, ಸಂದರ್ಭವನ್ನು ಉಪಯೋಗಿಸಿಕೊಳ್ಳುವ ಹಕ್ಕು ಇದೆ. ತಮ್ಮ ಮುಂದೆ ಈಗ ಏನಿದೆಯೆಂದರೆ, ವಿಧಾನ. ಒಂದು ಸೂಚನೆಯು, ಅದಕ್ಕೆ ಒಪ್ಪಿಗೆ ಕೊಡುವುದಕ್ಕೆ ಒಳಪಟ್ಟಿರುತ್ತದೆಂದು ವಿಧಾನದಲ್ಲಿ ಹೇಳಿರುವಾಗ, ಅದು ತಮ್ಮ ವಿವೇಚನೆಯ ವ್ಯಾಪ್ತಿಗೇ ಒಳಪಡುತ್ತದೆ. ಕಾರಣಗಳನ್ನು ಹೇಳುವಂತೆ ತಾವು ಶ್ರೀ ನಝೀರುದ್ದಿನ್ ಅಹ್ಮದ್‌ರವರನ್ನು ಕೇಳಬಹುದು. ಅದು, ವಿಳಂಬಕಾರಕ ಸ್ವರೂಪದ ಸೂಚನೆಯೇ ಎಂಬುದನ್ನು ತೀರ್ಮಾನಿಸುವುದು ಅಂತಿಮವಾಗಿ ತಮಗೇ ಸೇರಿದ್ದು. ಅದು ಅಂಥ ಸ್ವರೂಪದ್ದಾಗಿದ್ದರೆ, ತಾವು, ಅದು ಕ್ರಮಬಾಹಿರವೆಂದು ತಳ್ಳಿಹಾಕಬೇಕಾಗುತ್ತದೆ, ಕಾರಣಗಳ ಬಗ್ಗೆ ತಮಗೆ ಮನವರಿಕೆ ಆಗಿದ್ದರೆ, ಅದನ್ನು ಮಂಡಿಸಲು ತಾವು ಅನುಮತಿ ಕೊಡಬೇಕಾಗುತ್ತದೆ.

**ಶ್ರೀ ತಜಮುಲ್ ಹುಸೇನ್‌ರವರು** ಎದ್ದು ನಿಲ್ಲುವಷ್ಟರಲ್ಲೇ.................

**ಬಾಬು ರಾಮನಾರಾಯಣ ಸಿಂಗ್ :** ಸರ್, ನಾನು ಮುಖ್ಯವಾದುದೊಂದನ್ನು ಹೇಳಬಯಸುತ್ತೇನೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಕ್ರಿಯಾಲೋಪದ ಮೇಲೇನು?

**ಬಾಬು ರಾಮನಾರಾಯಣ ಸಿಂಗ್ :** ಸರ್, ಹೌದು.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಹೇಳಿ.

**ಶ್ರೀ ತಜಮುಲ್ ಹುಸೇನ್** (ಬಿಹಾರ : ಮುಸ್ಲಿಂ) : ಸರ್, ನಾನು ಮೊದಲೇ ಎದ್ದು ನಿಂತಿದ್ದೆ. ನಾನು ಕೂಡ ಒಂದು ಕ್ರಿಯಾಲೋಪ ಎತ್ತುತ್ತಿದ್ದೇನೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈ ಕ್ರಿಯಾಲೋಪದ ಬಗ್ಗೆ ಇತ್ಯರ್ಥ ಆದ ಮೇಲೆ, ಶ್ರೀ ತಜಮುಲ್ ಹುಸೇನರ ಕ್ರಿಯಾಲೋಪದ ಬಗ್ಗೆ ಪರಿಶೀಲಿಸುತ್ತೇನೆ.

**ಬಾಬು ರಾಮನಾರಾಯಣ ಸಿಂಗ್:** ಸರ್, ತಾವು ಈಗಾಗಲೇ ರೂಲಿಂಗನ್ನು ಉಲ್ಲೇಖಿಸಿದ್ದೀರಿ. ಒಂದು ರೂಲಿಂಗ್ ವಿರುದ್ಧ ಯಾರೇ ಸಭಾಧ್ಯಕ್ಷರು ಯಾವುದೇ ರೂಲಿಂಗ್ ಕೊಡುವಂತಿಲ್ಲ ಎಂದು ನನಗೆ ಚೆನ್ನಾಗಿ ಗೊತ್ತಿದೆ. ಸದನದಲ್ಲಿ ಒಂದು ವಿಷಯದ ಮೇಲೆ ಚರ್ಚೆ ಆಗುತ್ತಿರುತ್ತದೆ, ಬೇರೆ ಬೇರೆ ಅಭಿಪ್ರಾಯಗಳು ವ್ಯಕ್ತವಾಗುತ್ತಿರುತ್ತವೆ, ಅದು ಸಹಜ ತಾನೆ. ಆ ವಿಷಯ, ಒಂದು ವರ್ಗದ ಜನರಿಗೆ 'ಹಿತಕರ'ವಾಗಿ ಕಾಣಬಹುದು. ಇನ್ನೊಂದು ವರ್ಗದ ಜನರಿಗೆ ಆ ವಿಷಯ, ಅಪಾಯಕಾರಿಯಾಗಿ, ಪ್ಲೇಗ್ ತರಹ, ಅನಿಷ್ಟಕರವಾಗಿ ಕಾಣಬಹುದು. ಅನಿಷ್ಟಕರವೆಂದು ಭಾವಿಸಿದಂತಹ ಜನರಿಗೆ, ಸೂಚನೆಯನ್ನು ಮುಂದೂಡುವುದಕ್ಕಷ್ಟೇ ಅಲ್ಲ. ಅದನ್ನು ಇಲ್ಲದಂತೆ ಮಾಡುವುದಕ್ಕೂ ಹಕ್ಕು ಇರುತ್ತದೆ. ಇಲ್ಲೂ ಕೂಡ, ಈ ವರ್ಗದ ಜನರಿಗೆ ಸೂಚನೆ ಮಂಡಿಸುವ ಹಕ್ಕು ಇದೆಯೆಂದು ನನ್ನ ಭಾವನೆ. ಅಲ್ಲದೆ, ಅವರಿಗೆ ಎಲ್ಲ ವಿಶೇಷಾಧಿಕಾರಗಳು ಮತ್ತು ಎಲ್ಲ ಹಕ್ಕುಗಳು ಇರಬೇಕಾಗುತ್ತದೆನ್ನುವುದು ನ್ಯಾಯದ ಅಪೇಕ್ಷೆಯೆಂಬುದು ನನ್ನ ಅನಿಸಿಕೆ.

**ಶ್ರೀ ತಜಮುಲ್ ಹುಸೇನ್‌ರವರು** ಎದ್ದು ನಿಲ್ಲುವಷ್ಟರಲ್ಲೇ......

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಮಾನ್ಯ ಸದಸ್ಯರು ಇನ್ನೊಂದು ಕ್ರಿಯಾಲೊಪವನ್ನು ಎತ್ತುತ್ತಿದ್ದಾರೆ. ಅದರ ಬಗ್ಗೆ ಮುಂದೆ ಹೇಳುತ್ತೇನೆ :

ಮಾನ್ಯ ಸದಸ್ಯರಾದ ಶ್ರೀ ತಜಮುಲ್ ಹುಸೇನರೇ ಸ್ವತಃ ಎಲ್ಲ ಕ್ರಿಯಾಲೋಪಗಳಿಗೆ ಗಮನ ಸೆಳೆದಿದ್ದಾರೆ. ಅವರು ಬೆಳಿಗ್ಗೆ ಒಂದನ್ನು ಹೇಳಿದ್ದಾರೆ. ಶಾಸ್ತ್ರೀಯ ವಿಧಾನಗಳೇನೇ ಇರಬಹುದು, ಅವರ ಉದ್ದೇಶ ಏನಿದೆ, ಪರಿಚಲನೆಗೆ ಕಳುಹಿಸಿಕೊಡಬೇಕೆಂದು ಅವರು ಸೂಚನೆಯನ್ನು ಮಂಡಿಸುತ್ತಿದ್ದಾರಲ್ಲ, ಅವರು ಮನಸ್ಸಿನಲ್ಲಿ ಯಾವ ಮುಖ್ಯ ಅಂಶಗಳಿವೆ ಎಂಬುದನ್ನು ಹೇಳುವಂತೆ ನಾವು ಅವರನ್ನು

ಕೇಳಬೇಕಾಗುತ್ತದೆ.

**ಶ್ರೀ ನಝೀರುದ್ದಿನ್ ಅಹ್ಮದ್ :** ಈ ವಿಚಾರವು....................

**ಪಂಡಿತ ಹೃದಯನಾಥ ಕುಂಜ್ರು :** ಶ್ರೀ ನಝೀರುದ್ದಿನ್ ಅವರು ಉತ್ತರ ಕೊಡುವುದಕ್ಕೂ ಮೊದಲು, ನಾನು, ತಮ್ಮನ್ನು ಮಸೂದೆಯನ್ನು ಪುನಃ ಪರಿಚಲನೆಗೆ ಕಳುಹಿಸಬೇಕೆಂದು ಕೋರುವ ಸದಸ್ಯರ ಹಕ್ಕು, ಸಭಾಧ್ಯಕ್ಷರ ವಿವೇಚನೆ ಅಧಿಕಾರಕ್ಕೆ ಒಳಪಟ್ಟಿದೆಯೇ ಎಂದು ಕೇಳಬಯಸುತ್ತೇನೆ.

**ಮಾನ್ಯ ಸದಸ್ಯರು** ಎದ್ದು ನಿಲ್ಲುವಷ್ಟರಲ್ಲೇ,

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಸಭಾ ನಿಯಮಗಳನ್ನು ಪಾಲಿಸಿ ಸದಸ್ಯರುಗಳು ಪೀಠಕ್ಕೆ ಗೌರವ ಕೊಡಬೇಕು. ನಾನೆದ್ದು ನಿಂತಾಗ, ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು. ಸಾಕಷ್ಟು ಚರ್ಚೆ ಆಗಿದೆಯೆಂದು ನನ್ನ ಅನಿಸಿಕೆ. ಕಾರಣಗಳನ್ನು ಕೇಳುವುದು ಸಭಾಧ್ಯಕ್ಷರಿಗೆ ಸೇರಿದ್ದಲ್ಲ. ಅಂದ ಮಾತ್ರಕ್ಕೇ, ಒಂದಲ್ಲ ಒಂದು ರೀತಿಯ ತೀರ್ಮಾನಕ್ಕೆ ನಾನು ಬಂದಿದ್ದೇನೆ ಎಂದು ಅದರ ಅರ್ಥ ಅಲ್ಲ. ಮನವರಿಕೆ ಮಾಡಿಕೊಳ್ಳಲು ನಾನು ಪ್ರಯತ್ನ ಮಾಡುತ್ತಿದ್ದೇನೆ. ಶ್ರೀ ಭಾರತಿಯವರ ಮಾತನ್ನು ನಾನು ಆಲಿಸಿದ್ದೇನೆ. ನಿಯಮಗಳ ಪ್ರಕಾರ, ಸಭಾಧ್ಯಕ್ಷರಿಗೆ ಒಪ್ಪಿಗೆ ಕೊಡುವ ಅಥವಾ ಕೊಡದಿರುವ ಹಕ್ಕು ಇದೆಯೇ ಎನ್ನುವ ವಿಚಾರವೇ ಅಲ್ಲದೆ, ಈ ಸೂಚನೆಯನ್ನು ಯಾವ ಕಾರಣಗಳ ಮೇಲೆ– ಕಾರಣಗಳೇನಾದರೂ ಇದ್ದರೆ– ಒಪ್ಪಿಕೊಳ್ಳಬೇಕೆಂಬುದನ್ನು ತಿಳಿದುಕೊಳ್ಳಬಯಸಿದ್ದೇನೆ. ಅದನ್ನು ಆಲಿಸಿದ ನಂತರ ನನ್ನ ರೂಲಿಂಗ್ ಕೊಡುತ್ತೇನೆ.

**ಶ್ರೀ ನಝೀರುದ್ದಿನ್ ಅಹ್ಮದ್ :** ನನ್ನ ಉತ್ತರ ಎರಡು ರೀತಿಯದು. ಮೊದಲನೆಯದು, ಕಾನೂನಿನಂತೆ ಸೂಚನೆಗೆ ಅಂಗೀಕಾರ, ಎರಡನೆಯದು ಸೂಚನೆಗೆ ಕಾರಣಗಳು. ಇವು, ಗುಣದೋಷಗಳ ವಿಚಾರಗಳು. ಈಗ ಮಾತನಾಡಬಾರದೆಂದು ಸಭಾಧ್ಯಕ್ಷರು ನನ್ನನ್ನು ಕೇಳಿದ್ದಾರೆ, ಹೀಗಾಗಿ, ಈ ಸೂಚನೆಯನ್ನು ಏಕೆ ಒಪ್ಪಿಕೊಳ್ಳಬೇಕೆಂಬುದರ ಸಾಧಕಬಾಧಕಗಳ ಮೇಲೆ ನನ್ನ ವಾದವನ್ನು ಹೇಳುವ ಸಂಪೂರ್ಣ ಅವಕಾಶವನ್ನು ನನಗೆ ಕೊಟ್ಟಿಲ್ಲ. ಸೂಚನೆಯ ನ್ಯಾಯ ಸಮ್ಮತತೆ ಹಾಗೂ ಅಂಗೀಕಾರಾರ್ಹತೆಯ ಹಾಗೂ ಸದನವು ಅದನ್ನು ಒಪ್ಪಿಕೊಳ್ಳುವುದಕ್ಕೆ ಆಧಾರವಾಗಿ ಕೊಡುವ ಕಾರಣಗಳ ನಡುವೆ ಒಂದು ವ್ಯತ್ಯಾಸವನ್ನು ಗುರುತಿಸಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ. ಈ ಹಂತದಲ್ಲಿ ನಾನು ಮಂಡಿಸಿರುವ ಸೂಚನೆಯನ್ನು ಒಪ್ಪಿಕೊಳ್ಳುವ ವಿಷಯದಲ್ಲಿ, ನಾನು ಏನೂ ಹೇಳಲಾರೆನೆಂದೇ ನನ್ನ ಅನಿಸಿಕೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈ ವಿಷಯದ ಬಗ್ಗೆ ನಾನು ಸಾಕಷ್ಟು ಆಲಿಸಿದ್ದೇನೆ. ಶ್ರೀಯುತ ದಾಸ್‌ರವರು ಈ ಸೂಚನೆಯು ವಿಳಂಬಕಾರಕ ಸ್ವರೂಪದ್ದೆಂದು ಹೇಳಿದ್ದಾರೆ. ಈ ಸೂಚನೆಯು, ಸನ್ಮಾನ್ಯ ಕಾನೂನು ಮಂತ್ರಿಯವರು ಉಲ್ಲೇಖ ಮಾಡಿದ್ದಕ್ಕಿಂತಲೂ ತೀರಾ ಬೇರೆಯದೇ ಆಗಿದೆ. ಅವರು ಸಭಾಧ್ಯಕ್ಷರ ರೂಲಿಂಗ್‌ಗಳನ್ನು ಉದಾಹರಿಸಿದ್ದಾರೆ, ಚರ್ಚೆಯನ್ನು ಮುಂದಕ್ಕೆ ಹಾಕುವ ಅಥವಾ ಮುಂದೂಡುವ ಬಗೆಗಿನ ರೂಲಿಂಗ್ ನಂ.೧ನ್ನು ಉದಾಹರಿಸಿದ್ದಾರೆ. ಸೂಚನೆಗಳನ್ನು ಮುಂದಕ್ಕೆ ಹಾಕುವ ಬಗ್ಗೆ ಯಾವುದೇ ಕಾರ್ಯವಿಧಾನದ ನಿಯಮಗಳು ಇಲ್ಲದಿದ್ದರೆ, ಅವುಗಳನ್ನು ವಿಳಂಬಕಾರಕ ಸೂಚನೆಗಳೆಂದು ಪರಿಗಣಿಸುವುದು ಸಭಾಧ್ಯಕ್ಷರಿಗೆ ಸೇರಿದ್ದು.

ಯಾವ ಮುಖ್ಯವಾದ ಕಾರಣಗಳ ಮೇಲೆ ಚರ್ಚೆಯ ಮುಂದೂಡಿಕೆ ಅವಶ್ಯಕ ಎಂಬುದು ಸಭಾಧ್ಯಕ್ಷರಿಗೆ ಮನವರಿಕೆ ಆಗಲೇಬೇಕಾಗುತ್ತದೆ. ಪರಿಚಲನೆಗೆ ಕಳುಹಿಸಬೇಕೆಂದು ಕೋರುವ ಈ ಸೂಚನೆ ಬಗ್ಗೆ ಹೇಳುವುದಾದರೆ, ನಿಯಮ ೫೨(೨)ರಲ್ಲಿ ಅವಕಾಶ ಇದೆ. ಸನ್ಮಾನ್ಯ ಕಾನೂನು

ಮಂತ್ರಿಯವರು, ನಿಲುವಳಿ ಸೂಚನೆಗಳ ಹೋಲಿಕೆಯನ್ನು ಉಲ್ಲೇಖಿಸಿದ್ದಾರೆ. ಆದರೆ, ನಿಲುವಳಿ ಸೂಚನೆಗಳ ಬಗ್ಗೆ ಇಲ್ಲಿ ನಿರ್ದಿಷ್ಟ ನಿಯಮಗಳನ್ನು ಗೊತ್ತುಪಡಿಸಲಾಗಿದೆ. ಒಂದು ಸೂಚನೆಯು ಮೇಲ್ನೋಟಕ್ಕೆ, ಕ್ರಮಬದ್ಧವಾಗಿದೆಯೇ, ಇಲ್ಲವೇ ಎಂಬ ಬಗ್ಗೆ ತೀರ್ಮಾನಿಸುವುದಕ್ಕೆ ಸ್ಪೀಕರ್‌ರವರಿಗೆ ಅಧಿಕಾರ ಕೊಡಲಾಗಿದೆ. ನಾನು ೩ನೆಯ ನಿಯಮಕ್ಕೆ ಉಲ್ಲೇಖ ಮಾಡುತ್ತಿದ್ದೇನೆ. ನಿಲುವಳಿ ಸೂಚನೆಗಳನ್ನು ಮಂಡಿಸುವ ಹಕ್ಕು, ಪ್ರಶ್ನೆಗಳನ್ನು ಕೇಳುವ ಹಕ್ಕಿನಂತೆ, ಕೆಲವೊಂದು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. ನಿಯಮಗಳಲ್ಲಿ ಹೇಳಿರುವ ಒಂದು ಅಥವಾ ಇನ್ನೊಂದು ವರ್ಗದಲ್ಲಿ ಪ್ರಶ್ನೆ ಇರದಿದ್ದರೆ, ಅದಕ್ಕೆ ಅನುಮತಿ ಕೊಡದಿರುವುದು ಸ್ಪೀಕರ್‌ರವರಿಗೆ ಸೇರಿದ್ದು. ಹಾಗೆಯೇ, ನಿಲುವಳಿ ಸೂಚನೆಗಳ ಬಗ್ಗೆ ಸಹ, ಆರು ನಿಬಂಧನೆಗಳು ಈಡೇರಿರಬೇಕಾಗುತ್ತದೆ. ಅನುಮತಿ ಕೋರಲೂ ಕೂಡ ಅವಕಾಶ ಉಂಟು. ಮೊದಲನೆಯದಾಗಿ, ಸೂಚನೆಯು ಸಾರ್ವಜನಿಕ ಹಿತದೃಷ್ಟಿಯ ಸೂಚನೆ ಅಲ್ಲ, ಅದು ಹಳೆಯದು ಎಂದು ಸಭಾಧ್ಯಕ್ಷರು ಹೇಳಬಯಸಿದರೆ, ಹಾಗೆ ಹೇಳುವುದು ಅವರಿಗೇ ಸೇರಿದ್ದು. ಎರಡನೆಯದಾಗಿ, ಸಭಾಧ್ಯಕ್ಷರು ಅದರ ಮಂಡನೆಗೆ ಅನುಮತಿ ಕೊಡಬಯಸಿದರೆ, ಸೂಚನೆಗೆ, ಕೊನೇಪಕ್ಷ ಸದನದ ಇಪ್ಪತ್ತೈದು ಸದಸ್ಯರ ಬೆಂಬಲ ಇದೆಯೇ ಎಂದು ಕೇಳಲೇಬೇಕಾಗುತ್ತದೆ. ಪರಿಚಲನೆಗಾಗಿ ಕೋರುವ ಸೂಚನೆಯು, ಬೇರೆಯವುಗಳಂತೆ, ಅದೇ ವರ್ಗದ ವ್ಯಾಪ್ತಿಗೆ ಬರುವುದಿಲ್ಲ.

೮೧ನೆಯ ಪುಟದಲ್ಲಿರುವ ರೂಲಿಂಗ್ ೧೨೦ರ ಬಗ್ಗೆ ಹೇಳುವುದಾದರೆ, ಆರು ಸೆಲೆಕ್ಟ್ ಕಮಿಟಿ ಸೂಚನೆಗಳ ಬಗ್ಗೆ ಹೇಳುತ್ತದೆ. "ಸಭಾಧ್ಯಕ್ಷರ ತೀರ್ಮಾನಗಳು" ಈ ಎರಡೂ ಪುಸ್ತಕಗಳಲ್ಲಿ ಯಾವುದರಲ್ಲೂ, ಪರಿಚಲನೆಗಾಗಿ ಕೋರುವ ಸೂಚನೆಯು ವಿಳಂಬಕಾರಕ ಸೂಚನೆಯೆಂದು ಸಭಾಧ್ಯಕ್ಷರು ಕೊಟ್ಟಿರುವ ಯಾವುದೇ ರೂಲಿಂಗ್ ನನಗೆ ಕಂಡುಬಂದಿಲ್ಲ. ವಸ್ತುಸ್ಥಿತಿ ಹೀಗಿರುವಾಗ, ಸದನದ ಹಕ್ಕುಗಳನ್ನು ನಾನು ಮೊಟಕು ಮಾಡಬಯಸುವುದಿಲ್ಲ. ಅದರರ್ಥ, ನಾನು ಸೂಚನೆ ಮಂಡನೆಗೆ ಅನುಮತಿ ಕೊಟ್ಟರೆ, ಈ ಸದನ ಅದನ್ನು ಒಪ್ಪಿಕೊಳ್ಳಲೇಬೇಕು ಅಂತಲ್ಲ. ಅದರ ಮಂಡನೆಯಾದರೂ ಕೂಡ, ಸದನವು, ಚರ್ಚೆ ಮಾಡಿ, ಮನವರಿಕೆ ಆಗದಿದ್ದರೆ, ಅದನ್ನು ತಿರಸ್ಕರಿಸಬಹುದು. ಈ ಅಂಶದ ಮೇಲೆ ಸ್ಪಷ್ಟವಾದ ರೂಲಿಂಗ್‌ಗಳು ಇಲ್ಲದಿರುವುದರಿಂದ, ಈ ಸೂಚನೆಯನ್ನು ತಳ್ಳಿಹಾಕಲಾರೆ. ಮಾನ್ಯ ಸದಸ್ಯರು ಮಾತು ಮುಂದುವರಿಸಬಹುದು. ಮಾನ್ಯ ಸದಸ್ಯರುಗಳು, ತಮ್ಮ ಹೆಸರಿನಲ್ಲಿರುವ ಸೂಚನೆಗಳನ್ನು ಮೊದಲು ಮಂಡಿಸುತ್ತಾರೆ. ನಂತರ ಎಲ್ಲ ಸೂಚನೆಗಳ ಬಗ್ಗೆ ಚರ್ಚೆ ಆಗುತ್ತದೆ ಎಂದು ನಾನು ಮೊದಲೇ ಹೇಳಿದ್ದೇನೆ. ಇನ್ನೆರಡು ಸೂಚನೆಗಳು, ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವರ ಮತ್ತು ಶ್ರೀ ಜುಂಜುನ್‌ವಾಲರ ಹೆಸರಿನಲ್ಲಿವೆ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ನನ್ನ ಸ್ನೇಹಿತ ಮಾನ್ಯ ನಝೀರುದ್ದಿನ್ ಅಹ್ಮದ್‌ರವರು ಮಂಡಿಸಿರುವ ಸೂಚನೆಯು ಬಹುಮಟ್ಟಿಗೆ ಹಾಗೆಯೇ ಇದೆ. ಆದ್ದರಿಂದ, ನಾನು ಅವರ ಸೂಚನೆಗೆ ಬೆಂಬಲ ಕೊಡುವುದಿಲ್ಲ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಒಪ್ಪಿಸದಿರುವುದಕ್ಕೆ ಅವರು ಕಾರಣಗಳನ್ನು ಕೊಡಬೇಕಾಗಿಲ್ಲ. ಶ್ರೀ ಜುಂಜನವಾಲರೇ ತಾವು?

**ಶ್ರೀ ಜುಂಜನವಾಲ** (ಬಿಹಾರ್ : ಸಾಮಾನ್ಯ) : ನನ್ನ ಗೆಳೆಯ ಶ್ರೀ ಭಾರ್ಗವರು ಹೇಳಿದುದಕ್ಕೆ ನನ್ನ ಸಹಮತ ಇದೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಅವರೂ ಕೂಡ, ಒತ್ತಾಯ ಮಾಡುವುದಿಲ್ಲ ಎಂದಂತಾಯಿತು. ನಂ೭ ಮತ್ತು ೮, ಕ್ರಮಬದ್ಧವಾಗಿಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ. ಮಸೂದೆಯ ವ್ಯಾಪ್ತಿ ಸಂಸ್ಥಾನಗಳಿಗೆ ಸೀಮಿತವಾಗಿದೆಯೇ ಹೊರತು ಯಾವುದೇ ಲೀನವಾಗುವ ರಾಜ್ಯಕ್ಕಲ್ಲ.

**ಶ್ರೀ ನಝೀರುದ್ದಿನ್ ಅಹ್ಮದ್ :** ಇಂಡಿಯನ್ ಡೊಮಿನಿಯನ್‌ನಲ್ಲಿ ಸಂಪೂರ್ಣವಾಗಿ ಒಂದುಗೂಡಿದ ರಾಜ್ಯಗಳು ಬಗ್ಗೆ ಹೇಳುವುದಾದರೆ, ಅವುಗಳಿಗೆ ಬೇರೆಯದೇ ಆದ ಸ್ಥಾನಮಾನಗಳಿವೆ. ಪೂರ್ವದ ರಾಜ್ಯಗಳ ಒರಿಸ್ಸಾ ಪ್ರಾಂತ್ಯದಲ್ಲಿ ಸಂಯೋಜನೆಗೊಂಡಿವೆ. ಅವು ಈಗ ಭಾರತದ ಭಾಗಗಳು, ಮಸೂದೆಯು ಅವುಗಳಿಗೂ ಅನ್ವಯವಾಗುತ್ತದೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಸಕರ್ :** ನಾನು ಅರ್ಥಮಾಡಿಕೊಂಡಿರುವುದು ಹೀಗೆ, ಅವು ಪ್ರಾಂತ್ಯದ ಭಾಗ ಆಗಿವೆಯೋ, ಇಲ್ಲವೋ, ಅವು, ಪ್ರಾಂತ್ಯದ ಭಾಗಗಳಾಗಿದ್ದರೆ, ಮಸೂದೆ ಅನ್ವಯವಾಗುತ್ತದೆ. ಗೆಜೆಟ್ ಪ್ರತಿಯನ್ನು ದೇಶದ ಪ್ರತಿಯೊಂದು ಹಳ್ಳಿಗೂ, ಪ್ರತಿಯೊಂದು ಮೂಲೆಗೂ ಕಳುಹಿಸುವ ಅಗತ್ಯವೇನಿಲ್ಲ. ಸಂಸ್ಥಾನವು ಪ್ರಾಂತ್ಯದ ಭಾಗವಾಗಿದ್ದರೆ, ಅದಕ್ಕೆ ಪ್ರಾಂತ್ಯದ ಎಲ್ಲ ಹಕ್ಕುಬಾಧ್ಯತೆಗಳು ಪ್ರಾಪ್ತವಾಗುತ್ತವೆ. ಮಸೂದೆಯನ್ನು ಮತ್ತೆ ಪರಿಚಲನೆಗೆ ಕಳುಹಿಸಬೇಕೆಂಬುದಕ್ಕೆ ನನಗೆ ಯಾವ ಆಧಾರವೂ ಕಂಡುಬರುತ್ತಿಲ್ಲ. ಆದ್ದರಿಂದ, ನಾನು ತಿದ್ದುಪಡಿ ನಂ ೭ ಕ್ರಮಬದ್ಧವಾಗಿಲ್ಲವೆಂದು ರೂಲಿಂಗ್ ಕೊಟ್ಟಿದ್ದೇನೆ. ನಂ. ೮ ಕೂಡ ಕ್ರಮಬದ್ಧವಾಗಿಲ್ಲ. ನಂ. ೯, ಸಶ್ರೀ ಭಾರ್ಗವ, ಮಂಡಿಸುತ್ತೀರೇನು?

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಮಂಡಿಸುವುದಿಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈಗ, ಮುಂದಿನ ತಿದ್ದುಪಡಿ. ಶ್ರೀ ನಝೀರುದ್ದೀನ್ ಅಹ್ಮದ್.

**ಶ್ರೀ ನಝೀರುದ್ದೀನ್ ಅಹ್ಮದ್ :** ಸರ್, ನಾನು ಈಗಾಗಲೇ ಪ್ರಸ್ತಾಪಿಸಿದ್ದ ಸೂಚನೆಯ ಬದಲಿಗೆ ಈ ಸೂಚನೆಯನ್ನು ಮಂಡಿಸಲು ಅನುಮತಿ ಕೋರುತ್ತೇನೆ :

"೧೯೪೮, ಏಪ್ರಿಲ್, ೯ರಂದು ಸೆಲೆಕ್ಟ್ ಕಮಿಟಿಗೆ ಉಲ್ಲೇಖಿಸಿದ್ದ ಮೂಲ ಮಸೂದೆಗೆ ಸಂಬಂಧಪಟ್ಟಂತೆ ಇನ್ನಷ್ಟು ವರದಿಯನ್ನು ಕೊಡಬೇಕೆಂದು ಕಳುಹಿಸಿದ್ದ ಮಸೂದೆಯನ್ನು ಅದೇ ಸೆಲೆಕ್ಟ್ ಕಮಿಟಿಗೆ ಮತ್ತೆ ವಾಪಸು ಕಳುಹಿಸಬೇಕು".

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್:** ಈ ತಿದ್ದುಪಡಿ ಮಂಡಿಸಲಾಗಿದೆ :

"೧೯೪೮, ಏಪ್ರಿಲ್, ೯ರಂದು ಸೆಲೆಕ್ಟ್ ಕಮಿಟಿಗೆ ಉಲ್ಲೇಖಿಸಿದ್ದ ಮೂಲ ಮಸೂದೆಗೆ ಸಂಬಂಧಪಟ್ಟಂತೆ ಇನ್ನಷ್ಟು ವರದಿಯನ್ನು ಕೊಡಬೇಕೆಂದು ಕಳುಹಿಸಿದ್ದ ಮಸೂದೆಯನ್ನು ಅದೇ ಸೆಲೆಕ್ಟ್ ಕಮಿಟಿಗೆ ಮತ್ತೆ ವಾಪಸು ಕಳುಹಿಸಬೇಕು".

**ಶ್ರೀಮತಿ ರೇಣುಕಾ ರೇ :** ಸ್ಪೀಕರ್‌ರವರ ರೂಲಿಂಗ್ ದೃಷ್ಟಿಯಿಂದ ಅದು ಕ್ರಮಬಾಹಿರವಾಗಿದೆ. ಅದು ಸ್ಪೀಕರ್‌ರವರ ರೂಲಿಂಗ್‌ಗೆ ವಿರುದ್ಧವಾಗಿದೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಪುನರ್ ಪರಿಚಲನೆಗಾಗಿ ಕೋರಿರುವ ಸೂಚನೆಯು ಸದನದ ಮುಂದಿದೆ. ಈ ಸೂಚನೆಯನ್ನು ಸದನವು ಏಕೆ ಪರ್ಯಾಲೋಚನೆಗೆ ತೆಗೆದುಕೊಳ್ಳಬಾರದು?

**ಶ್ರೀಮತಿ ರೇಣುಕಾ ರೇ :** ಹಿಂದೆ ಒಂದು ದಿನ, ಸ್ಪೀಕರ್‌ರವರು ಕೊಟ್ಟ ರೂಲಿಂಗ್‌ಗೆ ಅದು ವಿರುದ್ಧವಾಗಿದೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್:** ಮಾನ್ಯ ಮಹಿಳಾ ಸದಸ್ಯರು, ಅದು ಹೇಗೆ ಸ್ಪೀಕರ್‌ರವರ ರೂಲಿಂಗ್‌ಗೆ ವಿರುದ್ಧವಾದುದಾಗಿದೆ ಎಂದು ಹೇಳಬೇಕು.

**ಶ್ರೀಮತಿ ರೇಣುಕಾ ರೇ :** ಈ ಮಸೂದೆಯೇ ಸೆಲೆಕ್ಟ್ ಕಮಿಟಿಗೆ ವಾಪಸ್ಸು ಕಳುಹಿಸಿರುವ ಮಸೂದೆಯಾದ್ದರಿಂದ, ಸೆಲೆಕ್ಟ್ ಕಮಿಟಿಗೆ ಮತ್ತೆ ಕಳುಹಿಸುವ ಸೂಚನೆಗೆ ಅವಕಾಶ ಇಲ್ಲ ಎಂದು ಸ್ಪೀಕರ್‌ರವರು ರೂಲಿಂಗ್ ಇತ್ತಿದ್ದಾರೆ. ಮಸೂದೆಯಲ್ಲಿ ಯಾವ ಮುಖ್ಯ ಬದಲಾವಣೆಯೂ ಆಗಿಲ್ಲ.

**ಶ್ರೀ ನಝೀರುದ್ದಿನ್ ಅಹ್ಮದ್ :** ಹಲವಾರು ಮುಖ್ಯ ಬದಲಾವಣೆಗಳು ಆಗಿವೆ. ಹೇಳಲೇ?

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್:** ಮಧ್ಯೆ, ಮಧ್ಯೆ, ಅಲ್ಲಲ್ಲೇ ಪರಸ್ಪರ ದಯವಿಟ್ಟು ಮಾತನಾಡಬೇಡಿ. ಮಹಿಳಾ ಸದಸ್ಯರು ಮುಂದಿಟ್ಟ ವಾದದ ಬಗ್ಗೆ ಹೇಳುವುದಾದರೆ, ನನ್ನ ಅನಿಸಿಕೆ ಏನೆಂದರೆ, ಸೆಲೆಕ್ಟ್ ಕಮಿಟಿಯು ಪರ್ಯಾಲೋಚಿಸಿದ್ದ ಮಸೂದೆ ಬೇರೆ ಅಲ್ಲ, ಮತ್ತೆ ವಾಪಸು ಕಳುಹಿಸಿದ್ದು ಬೇರೆ ಅಲ್ಲ ಎಂದು ಸ್ಪೀಕರ್‌ರವರು ನಿರ್ದಿಷ್ಟವಾಗಿ ಹೇಳಿದ್ದಾರೆ. ಆದರೆ, ಹಲವಾರು ಇತರ ಕಾರಣಗಳ ಮೇಲೆ ಮತ್ತೆ ವಾಪಸು ಕಳುಹಿಸಲು ಕೋರಿರಬಹುದು. ಆದ್ದರಿಂದ, ಇತರ ಕಾರಣಗಳ ಬಗ್ಗೆ ಯಾವುದೇ ಆಕ್ಷೇಪಣೆ ಇದ್ದ ಹೊರತು.........

**ಶ್ರೀಮತಿ ರೇಣುಕಾ ರೇ :** "ಮೂಲ ಮಸೂದೆ" ಎಂಬ ಶಬ್ದಗಳಿವೆಯಲ್ಲ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಮೂಲ ಮಸೂದೆ ಬೇರೆ ಅಲ್ಲ, ಆ ಮಸೂದೆ ಬೇರೆ ಅಲ್ಲ. ಆದ್ದರಿಂದಲೇ, ಅವರು "ಮೂಲ ಮಸೂದೆ" ಎಂದು ಹೇಳಿದ್ದಾರೆ. "ಮೂಲ" ಶಬ್ದವನ್ನು ನಾವು ಬಿಟ್ಟುಬಿಡಬಹುದು.

**ಶ್ರೀಮತಿ ರೇಣುಕಾ ರೇ :** "ಮೂಲ" ಶಬ್ದ ಅದರಲ್ಲಿದೆ. ಆದ್ದರಿಂದ, ಆ ಶಬ್ದವನ್ನು ಅದರಿಂದ ನಾವು ಬಿಟ್ಟುಬಿಡುವಂತಿಲ್ಲ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್:** ಸೆಲೆಕ್ಟ್ ಕಮಿಟಿಯಿಂದ ಬಂದಿರುವ ಮಸೂದೆಯು ಮೂಲ ಮಸೂದೆಯೆಂದು ಸ್ಪೀಕರ್‌ರವರು ರೂಲಿಂಗ್ ಇತ್ತಿದ್ದಾರೆ. ಆದ್ದರಿಂದ "ಮೂಲ" ಶಬ್ದವನ್ನು ಬಳಸಿದರೆ ಯಾವುದೇ ಹಾನಿ ಇಲ್ಲ. ಮೂಲ ಮಸೂದೆಯನ್ನು ಸೆಲೆಕ್ಟ್ ಕಮಿಟಿಯು ಪರ್ಯಾಲೋಚಿಸಿಲ್ಲ ಎಂದು ಆಕ್ಷೇಪಣೆ ಎತ್ತಲಾಗಿದೆ. ಸನ್ಮಾನ್ಯ ಸ್ಪೀಕರ್‌ರವರು, ಅದೇ ಮೂಲ ಮಸೂದೆಯನ್ನು ಪರ್ಯಾಲೋಚಿಸಿದೆಯೆಂದು ರೂಲಿಂಗ್ ಇತ್ತಿದ್ದಾರೆ. ಆದ್ದರಿಂದ, ಮೂಲ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಮತ್ತೆ ವಾಪಸು ಕಳುಹಿಸಬೇಕೆಂದು ಮಾನ್ಯ ಸದಸ್ಯರು ತಮ್ಮ ತಿದ್ದುಪಡಿಯಲ್ಲಿ ಹೇಳಿದ್ದಾರೆ. ಮಹಿಳಾ ಸದಸ್ಯರು ಮುಂದಿಟ್ಟಿರುವ ವಾದವು ಅವರದೇ ಆಕ್ಷೇಪಣೆಗೆ ವ್ಯತಿರಿಕ್ತವಾದುದಾಗುತ್ತದೆ. ಈ ಸೂಚನೆಯಲ್ಲಿ ತಪ್ಪು ಎನ್ನುವಂಥದು ಯಾವುದೂ ಇಲ್ಲವೆಂದು ನನ್ನ ಅನಿಸಿಕೆ.

**ಶ್ರೀ ಆರ್. ಕೆ. ಸಿಧ್ವಾ :** ಸೂಚಕರ ಆಶಯವೇ ಬೇರೆಯದು. ಅವರು ಈ ಮಸೂದೆಯನ್ನು ಮೂಲ ಮಸೂದೆಯೆಂದು ಪರಿಗಣಿಸಿಲ್ಲ. ಹೀಗಾಗಿ, ಅವರು ಅದನ್ನು ಅದೇ ಸೆಲೆಕ್ಟ್ ಕಮಿಟಿಗೆ ವಾಪಸು ಮಾಡಬೇಕೆಂದು ಕೋರುತ್ತಿದ್ದಾರೆ.

**ಶ್ರೀ ಹೆಚ್. ವಿ. ಕಾಮತ್ :** ಸೂಚಕರ ಆಶಯವು ಸ್ಪಷ್ಟವಾಗಿದ್ದರೂ ನನ್ನ ಗೆಳೆಯ ಮಾನ್ಯ ಪಂಡಿತ ನಸೀರುದ್ದಿನ್ ಅಹ್ಮದ್‌ರವರು, ತಿದ್ದುಪಡಿಯನ್ನು ರಚನೆ ಮಾಡುವಾಗ ಸ್ವಲ್ಪ ಅತಿ ಬುದ್ಧಿವಂತಿಕೆ ತೋರಿದ್ದಾರೆಂದು ನನಗೆ ಅನ್ನಿಸುತ್ತದೆ. ಅವರು ಇಡೀ ವಿಷಯವನ್ನು ಪುನಃ ಪರ್ಯಾಲೋಚಿಸಿ, ಕೆಲವು ಕಾಲದ ನಂತರ ಪುನಃ ತರಬಹುದೆಂದು ನಾನು ಸಲಹೆ ಮಾಡುತ್ತಿದ್ದೇನೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** "ಮೂಲ" ಶಬ್ದವನ್ನು ಬಳಿಸಿರುವುದು ವಸ್ತುಸ್ಥಿತಿಯ ಮೇಲೆ ಪರಿಣಾಮವನ್ನು ಉಂಟುಮಾಡುವುದೇ ಇಲ್ಲ. ಮೂಲ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಉಲ್ಲೇಖಿಸಲಾಗಿತ್ತು. ಆ ಮಸೂದೆಯು ಮಾರ್ಪಾಟು ರೂಪದಲ್ಲಿ ವಾಪಸ್ಸು ಬಂದಿತ್ತೆಂದು ಸ್ಪೀಕರ್ ರೂಲಿಂಗ್ ಇತ್ತಿದ್ದಾರೆ. ಅದನ್ನೇ ಒಂದು ಆಕ್ಷೇಪಣೆ ಎಂದು ನಾನು ಒಪ್ಪಿಕೊಳ್ಳಲಾಗದು. ಈ ವಿಷಯದಲ್ಲಿ ಹೆಚ್ಚು ಸಮಯ ವ್ಯರ್ಥಮಾಡುವುದು ಸರಿಯಲ್ಲ.

ತಿದ್ದುಪಡಿ ೧೩ನ್ನು ಮಂಡಿಸಬಹುದು.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ನನ್ನ ತಿದ್ದುಪಡಿಯು, ಬಹುಮಟ್ಟಿಗೆ, ಶ್ರೀ ನಸೀರುದ್ದಿನ್ ಅಹ್ಮದ್‌ರವರು ಮಂಡಿಸಿದ ತಿದ್ದುಪಡಿಯಂತೆಯೇ ಇದೆ. ನಾನು ಅದನ್ನು ಬೆಂಬಲಿಸಿ ಮಾತನಾಡುತ್ತೇನೆ. ನನ್ನದನ್ನು ಮಂಡಿಸುವುದಿಲ್ಲ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಇತರ ತಿದ್ದುಪಡಿಗಳ ಸೂಚಕರುಗಳು ಮಾತನಾಡಿದ ನಂತರ, ಮಾನ್ಯ ಸದಸ್ಯರು ಮಾತನಾಡಬಹುದು.

**ಶ್ರೀ ನಝೀರುದ್ದಿನ್ ಅಹ್ಮದ್ :** ನನ್ನ ತಿದ್ದುಪಡಿ ೧೦ನ್ನು ಅಂಗೀಕರಿಸಿದರೆ, ನನ್ನ ಮುಂದಿನ ತಿದ್ದುಪಡಿಯನ್ನು ಮಂಡಿಸಲು ಇಚ್ಛಿಸುತ್ತೇನೆ.

**ಶ್ರೀಮತಿ ರೇಣುಕಾ ರೇ :** ನಾನು, ಒಂದು ಕ್ರಿಯಾಲೋಪ ಎತ್ತುತ್ತಿದ್ದೇನೆ. ತಿದ್ದುಪಡಿ ನಂ. ೧೫ ಸ್ಪೀಕರ್‌ರವರ ರೂಲಿಂಗ್‌ಗೆ ವಿರುದ್ಧವಾದುದಾಗಿದೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈ ಅಂಶವು ಸ್ಪೀಕರ್‌ರವರ ರೂಲಿಂಗ್‌ನ ವ್ಯಾಪ್ತಿಗೆ ಒಳಪಡುವುದಿಲ್ಲ. ಸೆಲೆಕ್ಟ್ ಕಮಿಟಿಯು ಮತ್ತೆ ಸಿದ್ಧಪಡಿಸಿರುವುದು ಈ ಸದನಕ್ಕೆ ಸಮಾಧಾನ ಆಗದಿರಬಹುದು. ಆದ್ದರಿಂದ, ಮೂಲ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಉಲ್ಲೇಖಿಸಬೇಕು ಎಂಬುದು ನಿಲ್ಲುತ್ತದೆ. ಈ ವಿಷಯದಲ್ಲಿ ಯಾವ ಕ್ರಿಯಾಲೋಪವೂ ಇಲ್ಲ.

**ಶ್ರೀ ನಝೀರುದ್ದಿನ್ ಅಹ್ಮದ್:** ಸರ್, ನಾನೀಗ ಪ್ರಸ್ತಾವವನ್ನು ಮಂಡಿಸುತ್ತೇನೆ.

"ಪ್ರತ್ಯೇಕವಾಗಿ ಕಾಯ್ದೆ ಮಾಡುವ ಸಲುವಾಗಿ ಸ್ವಯಂಪೂರ್ಣ ಪ್ರತ್ಯೇಕ ಭಾಗಗಳ ಮತ್ತು ಅಧ್ಯಾಯಗಳ ಮೂಲ ರೂಪದಲ್ಲೇ ಇದ್ದ, ಈ ಸದನಕ್ಕೆ ಸಲ್ಲಿಸಿದ್ದ ಮೂಲ ಮಸೂದೆ ಮೇಲೆ ವರದಿ ಕೊಡಬೇಕೆನ್ನುವ ಸೂಚನೆಗಳ ಸಹಿತ ಸೆಲೆಕ್ಟ್ ಕಮಿಟಿಗೆ ಮಸೂದೆಯನ್ನು ವಾಪಸು ಕಳುಹಿಸಬೇಕು."

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈ ತಿದ್ದುಪಡಿಗೆ ಒಪ್ಪಿಗೆ ಕೊಡಲೇಬಾರದೆಂದು ನನಗೆ ಅನಿಸುತ್ತದೆ. ಭಾಗಗಳನ್ನು ಮತ್ತು ಅಧ್ಯಾಯಗಳನ್ನು ಪುನಃ ಅಣಿ ಮಾಡಿರುವುದಕ್ಕೆ ಯಾವ ಆಕ್ಷೇಪಣೆಯೂ ಇರಲು ಸಾಧ್ಯವಿಲ್ಲವಾದ್ದರಿಂದ ಈ ತಿದ್ದುಪಡಿಯು ಕ್ರಮಬಾಹಿರವೆಂದು ರೂಲಿಂಗ್ ನೀಡಿದ್ದೇನೆ.

**ಶ್ರೀ ಬಿ. ದಾಸ್ :** ಸರ್, ಮುಂದಿನ ತಿದ್ದುಪಡಿಯ ಮಂಡನೆಗೆ ಪ್ರಸ್ತಾವಿಸುವುದಕ್ಕೂ, ಮೊದಲು, ಒಬ್ಬರು ಸದಸ್ಯರು ಐದು ತಿದ್ದುಪಡಿಗಳ ಮಂಡನೆಗೆ ಪ್ರಸ್ತಾಪಿಸಬಹದೇ ಎನ್ನುವ ಬಗ್ಗೆ ತಾವು ರೂಲಿಂಗ್ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಬದಲೀ ತಿದ್ದುಪಡಿಗಳ ಬಗ್ಗೆ ಮೊದಲೇ ನೋಟೀಸ್ ಕೊಡಬಹುದು. ಮಾನ್ಯ ಸದಸ್ಯರು ಬಹುಕಾಲದಿಂದಲೂ ಈ ಸದನದಲ್ಲಿ ಇರುವರಾದ್ದರಿಂದ ಅವರಿಗೆ ಇದು ಗೊತ್ತಿರಬೇಕಿತ್ತು.

ಶ್ರೀ ನಝೀರುದ್ದಿನ್‌ರವರ ಮುಂದಿನ ತಿದ್ದುಪಡಿಯಲ್ಲಿ, ಒಂದೇ ಸೇರ್ಪಡೆಯಾವುದೆಂದರೆ "೩೧ ಡಿಸೆಂಬರ್೧೯೪೯" ಅಕ್ಷರಗಳು, ತಿದ್ದುಪಡಿ ೧೬ನ್ನು ಅವರು ಮಂಡಿಸುವ ಅಗತ್ಯವಿಲ್ಲವೆಂದು ಕಾಣುತ್ತದೆ.

**ಶ್ರೀ ನಝೀರುದ್ದಿನ್ ಅಹ್ಮದ್ :** ಅದರಲ್ಲಿ ಹೇಳಿರುವ ಸೆಲೆಕ್ಟ್ ಕಮಿಟಿಯು ಬೇರೊಂದು ಸೆಲೆಕ್ಟ್ ಕಮಿಟಿ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈ ತಿದ್ದುಪಡಿಯನ್ನು ಮಂಡಿಸಲು ನಾನು ಅನುಮತಿ ಕೊಡಬಹುದೆಂದು ನನಗೆ ಅನ್ನಿಸುತ್ತಿಲ್ಲ. ಮಾನ್ಯ ಸದಸ್ಯರು ಸೂಚನೆಯ ನೋಟೀಸು ಕೊಡುವ ಸಮಯದಲ್ಲಿ ಸೆಲೆಕ್ಟ್ ಕಮಿಟಿಯ ಸದಸ್ಯರುಗಳ ಹೆಸರುಗಳನ್ನು ಕೊಡಬೇಕಿತ್ತು.

**ಶ್ರೀ ನಝೀರುದ್ದಿನ್ ಅಹ್ಮದ್ :** ಅದನ್ನು ನಾನು ಎರಡು ಭಾಗಗಳಾಗಿ ವಿಂಗಡಿಸಿದ್ದೇನೆ. ಮೊದಲನೆಯದು, ಸೆಲೆಕ್ಟ್ ಕಮಿಟಿಯ ವಿಚಾರ ಇದೆ. ಅದನ್ನು ಒಪ್ಪಿಕೊಳ್ಳುವುದಾದರೆ..................

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈ ರೀತಿಯ ವಿಷಯದಲ್ಲಿ ಅಭಿಪ್ರಾಯ ಕೊಡಬೇಕೆಂದು ಸದನವನ್ನು ಕೇಳುವಂತಿಲ್ಲ. ಮಾನ್ಯ ಸದಸ್ಯರು ಸೆಲೆಕ್ಟ್ ಕಮಿಟಿಯ ಸದಸ್ಯರುಗಳ ಹೆಸರುಗಳನ್ನು ಮುಂಚೆಯೇ ಸಭಾಧ್ಯಕ್ಷರಿಗೆ ಕೊಟ್ಟಿಲ್ಲವಾದ್ದರಿಂದ, ಅವರ ತಿದ್ದುಪಡಿಯು ಕ್ರಮಬಾಹಿರವೆಂದು ರೂಲಿಂಗ್ ಕೊಟ್ಟಿದ್ದೇನೆ.

ಸಾಮಾನ್ಯ ಸೂಚನೆ ಮೇಲೆ ಈಗ ಚರ್ಚೆ ಪ್ರಾರಂಭ ಆಗಲಿ, ಸೇಠ್ ಗೋವಿಂದ ದಾಸ್‌ರವರೇ ಈಗ ನೀವು ಮಾಡನಾಡಿ.

**ಸೇಠ್ ಗೋವಿಂದ ದಾಸ್ :** ಸಭಾಪತೀಜಿ............

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಸಾಮಾನ್ಯ ಚರ್ಚೆ ಆಗುವಾಗ ತಿದ್ದುಪಡಿಯ ಮಂಡನೆಗೆ ಪ್ರಸ್ತಾವಿಸಿದ ಮಾನ್ಯ ಸದಸ್ಯರಿಗೆ ಮೊದಲು ಮಾತನಾಡುವ ಹಕ್ಕು ಇದೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಮಾನ್ಯ ಸದಸ್ಯರೇ, ಅದನ್ನು ಸಭಾಧ್ಯಕ್ಷರಿಗೆ ಬಿಡಿ, ಸಭಾಧ್ಯಕ್ಷರಿಗೆ ವಿಧಾನ ಗೊತ್ತಿದೆ.

**ಶ್ರೀ ತಜಮುಲ್ ಹುಸೇನ್ :** ಕ್ರಿಯಾಲೋಪ ಎತ್ತಬೇಕೆಂದು ನಾನು ಬಹಳ ಸಮಯದಿಂದಲೂ ಪ್ರಯತ್ನ ಮಾಡುತ್ತಲೇ ಇದ್ದೇನೆ. ಸರ್, ನಾನು ಸಂಕ್ಷಿಪ್ತವಾಗಿ ಹೇಳುತ್ತೇನೆ. ವಿರಾಮ ಚಿಹ್ನೆ, ಅಲ್ಪ ವಿರಾಮ ಚಿಹ್ನೆ ಮತ್ತು ಪೂರ್ಣ ವಿರಾಮ ಚಿಹ್ನೆ ಮುಂತಾದವಕ್ಕೆ ತುಂಬಾ ಗಮನಕೊಡುವ ಮಾನ್ಯ ಸದಸ್ಯರಾದ ಶ್ರೀ ನಝೀರುದ್ದಿನ್ ಅಹ್ಮದ್‌ರವರು, ಈ ಮಸೂದೆಯನ್ನು ಪರಿಚಲನೆ ಮಾಡಬೇಕೆಂದು ಈ ತಿದ್ದುಪಡಿ ನೋಟೀಸನ್ನು ಕೊಟ್ಟಿದ್ದಾರೆ. ಇದು ಸಂಪೂರ್ಣವಾಗಿ ಕ್ರಮಬಾಹಿರ. ಮಾನ್ಯ ಸದಸ್ಯರು, ತನ್ನ ತಿದ್ದುಪಡಿಯಲ್ಲಿ ಈ ಮಸೂದೆಯನ್ನು ಪುನಃ ಪರಿಚಲನೆಗೆ ಕಳುಹಿಸಬೇಕು ಎಂಬ ವಾಕ್ಯಗಳನ್ನು ಹಾಕಬೇಕಿತ್ತು. ಇದೇ ಕ್ರಿಯಾಲೋಪ. "ಸೆಲೆಕ್ಟ್ ಕಮಿಟಿಯು ವರದಿ ಮಾಡಿರುವ ಮಸೂದೆಯನ್ನು, ಅದರ ಮೇಲೆ ಅಭಿಪ್ರಾಯವನ್ನು ಸಂಗ್ರಹಿಸುವ ಅಥವಾ ಇನ್ನಷ್ಟು ಅಭಿಪ್ರಾಯವನ್ನು ಸಂಗ್ರಹಿಸುವ ಉದ್ದೇಶಕ್ಕಾಗಿ ಮಸೂದೆಯನ್ನು ಸಂದರ್ಭಾನುಸಾರ ಮತ್ತೆ ವಾಪಸು ಕಳುಹಿಸಬೇಕು ಅಥವಾ ಪುನಃ ಪರಿಚಲನೆಗೆ ಕಳುಹಿಸಬೇಕು ಎಂದು ಯಾರೇ ಸದಸ್ಯರು ತಿದ್ದುಪಡಿಯನ್ನು ಪ್ರಸ್ತಾವಿಸಬಹುದು" ಎಂದು ಸಂಬಂಧಪಟ್ಟ ನಿಯಮದಲ್ಲಿ ಹೇಳಲಾಗಿದೆ. ಅಲ್ಪ ವಿರಾಮ ಚಿಹ್ನೆ, ಪೂರ್ಣ ವಿರಾಮ ಚಿಹ್ನೆ ಮುಂತಾದವುಗಳಿಗೆ ತುಂಬಾ ಗಮನ ಕೊಡುವ ಮಾನ್ಯ ಸದಸ್ಯರು "ಇನ್ನಷ್ಟು ಅಭಿಪ್ರಾಯಕ್ಕಾಗಿ ಪುನಃ ಪರಿಚಲನೆ" ಎಂಬ ವಾಕ್ಯಗಳನ್ನು ಹಾಕಬೇಕಿತ್ತು. ಆದ್ದರಿಂದ, ಈ ತಿದ್ದುಪಡಿಯಲ್ಲಿರುವ ವಾಕ್ಯ ವಿನ್ಯಾಸ ನಿಯಮಗಳ ಪ್ರಕಾರ ಇಲ್ಲದಿರುವ ಪ್ರಯುಕ್ತ ಅದು ಕ್ರಮಬಾಹಿರವೆಂದು ರೂಲಿಂಗ್ ಕೊಡಬಹುದು.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈ ಸೂಚನೆಯನ್ನು ಮಂಡಿಸಿರುವ, ವಿರಾಮ ಚಿಹ್ನೆಗಳಿಗೆ ತುಂಬಾ ಗಮನ ಕೊಡುವ ಮಾನ್ಯ ಸದಸ್ಯರು "ಪುನಃ" ಅಕ್ಷರ ಹಾಕದೆ ತಪ್ಪು ಮಾಡಿದ್ದಾರೆ, ನಿಜ. ನಾನು, ಇದು, ಅಕ್ಷರ ವಿನ್ಯಾಸದ ವಿಚಾರ ಅಲ್ಲ, ಸಾರಾಂಶದ ವಿಚಾರ ಎಂದು ನಿರ್ಧರಿಸಬೇಕಾಗುತ್ತದೆ. ಸೆಲೆಕ್ಟ್ ಕಮಿಟಿಯ ವರದಿ ಸ್ವೀಕೃತವಾದ ನಂತರ, ಈ ಪರಿಚಲನಾ ಸೂಚನೆ ಬಂದಿದೆ. ಈ ದೃಷ್ಟಿಯಿಂದ, "ಪುನಃ ಪರಿಚಲನೆ" ಎಂದೇ ಅದರ ಅರ್ಥ. ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ಅದೇ ಇಲ್ಲಿಗೂ ಅನ್ವಯವಾಗುತ್ತದೆ. ಸೇಠ್ ಗೋವಿಂದ ದಾಸ್‌ರವರೇ ಮಾತು ಮುಂದುವರಿಸಿ.

*೪–೦೦ಗಂಟೆ*

**ಶ್ರೀ ವಿ.ಎಸ್. ಸರ್ವತೆ :** ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್‌ರವರೇ, ನಾನು ಈಗಾಗಲೇ, ಪುನಃ ಪರಿಚಲನೆಗಾಗಿ ಸೂಚನೆಯನ್ನು ಪ್ರಸ್ತಾವಿಸಿದ್ದೇನೆ, ಅದು ಆ ಎರಡು ಸೂಚನೆಗಳನ್ನು ಆಧರಿಸಿದೆಯೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಅದನ್ನು ಏಕೆ. ಕ್ರೋಡೀಕೃತ ಪಟ್ಟಿಯಿಂದ ಬಿಟ್ಟುಬಿಡಲಾಗಿದೆಯೋ, ನನಗೆ ಗೊತ್ತಿಲ್ಲ. ಈ ಎರಡು ಸೂಚನೆಗಳ ದಿನಾಂಕ ೨೧ ಆಗಸ್ಟ್, ೧೯೪೮. ಸದನದ ಇನ್ನಷ್ಟು ಸಮಯವನ್ನು ನಾನು ತೆಗೆದುಕೊಳ್ಳಬಯಸುವುದಿಲ್ಲ. ಇನ್ನು ಚರ್ಚೆಗಾಗಿ ಅದನ್ನು ಎತ್ತಿಕೊಳ್ಳುವ ಸಲುವಾಗಿ ನಾನು ಸೂಚನೆಯನ್ನು ಓದಿ ಹೇಳುತ್ತೇನೆ. ಸೂಚನೆ ಹೀಗಿದೆ:

**“**ಸೆಲೆಕ್ಟ್ ಕಮಿಟಿಯ ವರದಿ ಮಾಡಿರುವ ಮಸೂದೆಯನ್ನು, ಅದರ ಮೇಲೆ ಇನ್ನಷ್ಟು ಅಭಿಪ್ರಾಯವನ್ನು ಪಡೆಯುವ ಉದ್ದೇಶಕ್ಕಾಗಿ ಪುನಃ ಪರಿಚಲನೆಗೆ ಕಳುಹಿಸಬೇಕು**”**.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ತಿದ್ದುಪಡಿ ಕುರಿತ ನೋಟೀಸನ್ನು ಯಾವಾಗ ಕೊಟ್ಟಿದ್ದಿರಿ?

**ಶ್ರೀ ವಿ. ಎಸ್. ಸರ್ವತೆ :** ನೋಟೀಸನ್ನು ೧೯೪೮ರ ಆಗಸ್ಟ್ ೧ರಂದು ಕೊಟ್ಟಿದ್ದೆ. ತಿದ್ದುಪಡಿಯು ಪೂರಕ ಪಟ್ಟಿ ನಂ. ೨ರ ಭಾಗ ಆಗಿದೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಸೂಚನೆಯನ್ನು ಆಗಸ್ಟ್ ೧ರಂದು ಪ್ರಸ್ತಾವಿಸಲಾಗಿದೆ. ಸೆಲೆಕ್ಟ್ ಕಮಿಟಿಯು ವರದಿಯ ದಿನಾಂಕ ಆಗಸ್ಟ್ ೧೨. ಬಹುಶಃ ಒಂದು ವಾರದ ನಂತರ ಅದನ್ನು ಸದನಕ್ಕೆ ಒಪ್ಪಿಸಿರಬಹುದು.

**ಶ್ರೀ. ಎಲ್. ಕೃಷ್ಣಸ್ವಾಮಿ ಭಾರತಿ :** ಸೂಚನೆಯನ್ನು ಆಗಸ್ಟ್ ೩೧ರಂದು ಪ್ರಸ್ತಾವಿಸಲಾಗಿತ್ತು.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಸೂಚನೆಯನ್ನು ಪ್ರಸ್ತಾವಿಸಬೇಕಾಗಿಲ್ಲ. ವರದಿಯನ್ನು ಒಪ್ಪಿಸಿದ ನಂತರ ಅದು ಬಂದಿದೆ. ಆದರೆ, ಎಲ್ಲ ನೋಟೀಸುಗಳೂ ಅಧಿವೇಶನದ ನಂತರ ಲ್ಯಾಪ್ಸ್ ಆಗುತ್ತವೆ. ಹೊಸ ನೋಟೀಸನ್ನು ಕೊಡಬೇಕಿತ್ತು. ಇದರ ಪ್ರತಿಗಳು ಸನ್ಮಾನ್ಯ ಸದಸ್ಯರುಗಳ ಬಳಿ ಇವೆಯೋ, ನನಗೆ ಗೊತ್ತಿಲ್ಲ.

**ಶ್ರೀ ಜಸ್‌ಪತ್‌ರಾಯ್ ಕಪೂರ್ :** ನನ್ನ ಹತ್ತಿರ ಇದರ ಒಂದು ಪ್ರತಿ ಇದೆ. ಅದು ಕ್ರೋಡೀಕೃತ ಪ್ರತಿ: ತಿದ್ದುಪಡಿಗಳ ನೋಟೀಸ್ ................ಕಾರ್ಯಾಲಯದಿಂದ ಇದನ್ನು ೧೯೪೮ರ ಆಗಸ್ಟ್ ೨೮ರಂದು ಕಳುಹಿಸಲಾಗಿದೆ. ಈ ಪಟ್ಟಿಯಲ್ಲಿ ಇಪ್ಪತ್ನಾಲ್ಕು ತಿದ್ದುಪಡಿಗಳು ಇವೆ. ಸರ್ವತೆಯವರ ತಿದ್ದುಪಡಿಯು ಪಟ್ಟಿಯಲ್ಲಿ ನಾಲ್ಕನೆಯದು.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈ ನೋಟೀಸುಗಳೆಲ್ಲವೂ ಕಳೆದ ಅಧಿವೇಶನದವುಗಳು. ಆ ಅಧಿವೇಶನದ ಕೊನೆಯಲ್ಲಿ ಈ ನೋಟೀಸುಗಳೆಲ್ಲವೂ ಲ್ಯಾಪ್ಸ್ ಆಗಿವೆ. ಈಗ, ಪ್ರತಿಯೊಬ್ಬ ಮಾನ್ಯ ಸದಸ್ಯರ ಟೇಬಲ್ ಮೇಲೆ ಪ್ರತಿಗಳನ್ನು ಇಟ್ಟಿರುವ ತಿದ್ದುಪಡಿಗಳನ್ನು ಮಾತ್ರವೇ ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗುತ್ತದೆ. ಇತರ ನೋಟೀಸುಗಳು ಲ್ಯಾಪ್ಸ್ ಆಗಿವೆ. ಆದ್ದರಿಂದ, ಸೇಠ್ ಗೋವಿಂದ ದಾಸರು ಚರ್ಚೆಯನ್ನು ಮುಂದುವರಿಸುತ್ತಾರೆ.

***ಶ್ರೀ ಸೇಠ್ ಗೋವಿಂದ ದಾಸ್ :** ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್‌ರವರೇ ಈ ಮಸೂದೆಯ ಬೆಂಬಲಿಗರನ್ನು, ವಿರೋಧಿಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು. ಸತಿ ಪದ್ಧತಿಯನ್ನು ರದ್ದು ಮಾಡುವುದಕ್ಕಾಗಿ ಹಾಗೂ ದಿವಂಗತ ಶ್ರೀ ಈಶ್ವರ ವಿದ್ಯಾಚಂದ್ರ ಸಾಗರರು ಪ್ರತಿಪಾದಿಸಿದ್ದ ವಿಧವಾ ಪುನರ್ ವಿವಾಹ ಪದ್ಧತಿಯನ್ನು ತಡೆಯಲು ಶ್ರೀ ಶಾರದಾರವರು ಮಂಡಿಸಿದ್ದ ಮಸೂದೆಯನ್ನು ಶಾಸನ ಪುಸ್ತಕಕ್ಕೆ ಸೇರಿಸುತ್ತಿದ್ದಂತಹ

* ಸಿ.ಎ(ಲೆಜಿ) ಡಿ. ಸಂಪುಟ ೧೧, ಭಾಗ, ೨೪ ಫೆಬ್ರವರಿ ೧೯೪೯. ಪುಟಗಳು ೮೬೧–೭೧

ಸಮಯದಲ್ಲಿ ಕೆಲವರು ಕಡುವಿರೋಧಿಗಳು ಯಾವ ರೀತಿ ತಮ್ಮ ವಿರೋಧವನ್ನು ತೋರಿಸಿದ್ದಾರೋ ಅದೇ ರೀತಿ ಈ ಮಸೂದೆಯನ್ನು ವಿರೋಧಿಸುತ್ತಿರುವ ಜನರೇ, ಈ ವಿರೋಧಿ ಗುಂಪುಗಳ ಪೈಕಿ ಒಂದು ಗುಂಪಿನಲ್ಲಿದ್ದಾರೆ. ಶಾರದಾ ಮಸೂದೆಯ ಸಮಯದಲ್ಲಿ ನಾನು ರಾಜ್ಯ ಮಂತ್ರಾಲೋಚನಾ ಪರಿಷತ್ತಿನ ಸದಸ್ಯನಾಗಿದ್ದೆ. ಆ ಮಸೂದೆಗೆ ಆಗ ಎಷ್ಟೊಂದು ವಿರೋಧ ಇತ್ತೆಂಬುದು ನನಗೆ ವೈಯಕ್ತಿಕವಾಗಿ ಗೊತ್ತು. ನಮ್ಮ ವೇದಗಳಲ್ಲಿ, ಶಾಸ್ತ್ರಗಳಲ್ಲಿ, ಸ್ಮೃತಿಗಳಲ್ಲಿ ಏನು ಕಟ್ಟಳೆ ಮಾಡಲಾಗಿದೆಯೋ ಅದರಲ್ಲಿ ಯಾವ ಬದಲಾವಣೆಯನ್ನು ಮಾಡಲಾಗದೆಂಬುದು ಈ ಗುಂಪಿನ ಅಭಿಪ್ರಾಯ, ನಾನು ಆ ಗುಂಪಿನವನಲ್ಲ. ಒಬ್ಬರು ಋಷಿವರ್ಯರು, ಕಾಲಕಾಲಕ್ಕೆ ಏನನ್ನೋ ಹೇಳಿದ್ದರೆ, ಇನ್ನೊಬ್ಬರು ಋಷಿವರ್ಯರು ಇನ್ನೇನನ್ನೋ ಹೇಳಿದ್ದಾರೆ. ಸಂದರ್ಭ ಇಲ್ಲದೆ ಹೋಗಿದ್ದಿದ್ದರೆ, ನಮ್ಮ ಋಷಿವರ್ಯರು ಬರೆಯುತ್ತಲೇ ಇರಲಿಲ್ಲ. ನೂರಕ್ಕೂ ಹೆಚ್ಚು ಸ್ಮೃತಿಗಳಿವೆ. ನೀವು ಈ ಸ್ಮೃತಿಗಳನ್ನು ಓದಿ ನೋಡಿದರೆ, ಒಂದು ಸ್ಮೃತಿಯಲ್ಲಿ ಹೇಳಿರುವ ಸೂತ್ರಗಳಿಗೂ ಇನ್ನೊಂದು ಸ್ಮೃತಿಯಲ್ಲಿ ಹೇಳಿರುವ ಸೂತ್ರಗಳಿಗೂ ವ್ಯತ್ಯಾಸ ಇರುವುದು ನಿಮಗೆ ಕಂಡುಬರುತ್ತದೆ. ಪ್ರತಿಯೊಂದು ಸ್ಮೃತಿಯೂ ಒಂದು ವಿಭಿನ್ನ ತತ್ವವನ್ನು ನಿರೂಪಿಸುತ್ತದೆ. ಸ್ವಲ್ಪ ಮುಂಚೆ ನಾನು ಹೇಳಿದಂತೆ, ಇಲ್ಲಿಯವರೆಗೆ ತಂದಿರುವ ಬಹುತೇಕ ಎಲ್ಲ ಸುಧಾರಣೆಗಳನ್ನು ವಿರೋಧಿಸಿದ ಗುಂಪುಗಳಲ್ಲಿ ನಾನು ಒಬ್ಬನಲ್ಲ.

ಎರಡನೆಯ ವಿರೋಧಿ ಗುಂಪು ಯಾವುದೆಂದರೆ, ಈ ವಿಷಯಗಳಲ್ಲಿ ಸುಧಾರಣೆಗಳನ್ನು ತರುವ ಅಗತ್ಯ ಇದೆಯೆಂದು ಭಾವಿಸುವ, ಆದರೆ, ಅಂಥದೊಂದು ಶಾಸನವನ್ನು ತರುವುದಕ್ಕೆ ಇದು ಸಕಾಲ ಅಲ್ಲವೆಂದೂ, ಹೊಸ ಚುನಾವಣೆ ಆದಮೇಲೆ ಹೊಸ ಜನಪ್ರತಿನಿಧಿಗಳು ಚುನಾಯಿತರಾದ ಮೇಲೆ ಇದನ್ನು ತರಬೇಕೆಂದೂ ಭಾವಿಸುವ ಗುಂಪು. ಈಗ, ಈ ಹಿಂದೂ ಕಾನೂನಿಗೆ ಯಾವುದೇ ಬದಲಾವಣೆ ಮಾಡದೆ ಹೋದರೆ ಯಾವುದೇ ಹಾನಿ ಆಗುವುದಿಲ್ಲವೆಂದು ನಾನು ಹೇಳಬಯಸುತ್ತೇನೆ. ಮುಂದಿನ ಮೂರು ವರ್ಷಗಳಲ್ಲಿ ನಾವು ಬದಲಾವಣೆ ತರಬಹುದು. ಈ ವಿಚಾರ, ಇಡೀ ದೇಶವೇ ಚಿಂತನಮಂಥನ ಮಾಡಬೇಕಾದ ವಿಚಾರ. ನಾವೆಲ್ಲರೂ ಚಿಂತನಮಂಥನ ಮಾಡಬೇಕಾದ ವಿಚಾರ. ಇಲ್ಲಿ ಕುಳಿತಿರುವ ಎಲ್ಲರೂ ಚಿಂತನಮಂಥನ ಮಾಡಬೇಕಾದ ವಿಚಾರ. ಮುಂದೆ ಈ ಸದನದ ಸ್ಥಾನಗಳಿಗೆ ಬರುವವರೂ ಕೂಡ ಚಿಂತನಮಂಥನ ಮಾಡಬೇಕಾದ ವಿಚಾರ. ಇಂಥದೊಂದು ಮಸೂದೆಯನ್ನು ತರಲು ಇದು ಸಕಾಲವೂ ಅಲ್ಲ. ಸೂಕ್ತ ವೇದಿಕೆಯೂ ಅಲ್ಲವೆಂಬ ವಾದವನ್ನು, ಮುಂದಿಟ್ಟಿರುವ ಎರಡನೆಯ ಗುಂಪಿನ ವಾದದಲ್ಲಿ ತಿರುಳು ಇದೆಯೆಂದು ನನ್ನ ಅನಿಸಿಕೆ. ಈ ಕಾರಣಕ್ಕಾಗಿ, ನಾನು ಈ ಅಂಶವನ್ನು ನಾವು ಪರಿಶೀಲಿಸಬೇಕೆಂದು ಒತ್ತಾಯಿಸುತ್ತೇನೆ.

ಸ್ವಲ್ಪ ಮುಂಚೆ ನಾನು ಹೇಳಿದಂತೆ, ಈ ಮಸೂದೆಯ ಬೆಂಬಲಿಗರನ್ನೂ ಕೂಡ ಎರಡು ಗುಂಪುಗಳಲ್ಲಿ ವಿಂಗಡಿಸಬಹುದು. ನಮ್ಮ ಹಳೆಯ ಪರಂಪರೆಗಳಲ್ಲಿ ಯಾವುದನ್ನೂ ಇಷ್ಟಪಡದ ಹಾಗೂ ಉಜ್ವಲ ಗತಕಾಲ, ವೈಭವದ ಇತಿಹಾಸ. ಶ್ರೇಷ್ಠ ಸಂಸ್ಕೃತಿ, ಭವ್ಯ ಪರಂಪರೆಗಳನ್ನು ಉಳ್ಳ ಪ್ರಾಚೀನ ದೇಶಗಳಲ್ಲಿ ಈ ದೇಶವೂ ಒಂದು ಎಂಬ ಸಂಗತಿಯನ್ನು ಒಪ್ಪದ ಗುಂಪು ಒಂದು. ಅಂಥ ಬಗೆಯ ಸುಧಾರಣಾವಾದಿಗಳು ನಮ್ಮ ಹಿಂದಿನ ಪರಂಪರೆ ಹೇಗಿತ್ತು, ಇಂದು, ನಮ್ಮ ದೇಶವನ್ನು ನಾವು ಹೇಗೆ ಕಟ್ಟಬೇಕು ಎಂಬ ಬಗ್ಗೆ ತಲೆಯನ್ನು ಕೆಡಿಸಿಕೊಳ್ಳವುದೇ ಇಲ್ಲ. ಇಂಥವರಲ್ಲಿ ಪಾಶ್ಚಾತ್ಯ ಶಿಕ್ಷಣದ ಪ್ರಭಾವ ತುಂಬಾ ಜಾಸ್ತಿ. ಇಂಥವರಿಗೆ, ಪ್ರಾಚೀನ ಇತಿಹಾಸ, ಸಂಸ್ಕೃತಿ ಬಗ್ಗೆ ಮತ್ತು ಸಾಮಾಜಿಕ ಸುಧಾರಣೆಗಳ ವಿಚಾರದಲ್ಲಿ ಹಳೆಯ ಸಂಪ್ರದಾಯಗಳ ಬಗ್ಗೆ ಅಷ್ಟೊಂದು ಗೌರವ ಇರುವುದಿಲ್ಲ. ಇಂಥ ರೀತಿಯ ಸುಧಾರಣೆಗಳನ್ನು ಈ ಪ್ರಾಚೀನ ದೇಶದಲ್ಲಿ,

ಭರತ ವರ್ಷದಲ್ಲಿ ತಂದರೆ, ಇದು ಭರತ ವರ್ಷವಾಗಿ ಉಳಿಯದೆ ಇನ್ನೇನೋ ಆಗಿಬಿಡುತ್ತದೆಂದು ನಾನು ಹೇಳಬಯಸುತ್ತೇನೆ. ಸುಧಾರಣಾವಾದಿಗಳ ಇನ್ನೊಂದು ಗುಂಪು ಯಾವುದೆಂದರೆ, ಸುಧಾರಣೆಗಳನ್ನು ತರುವ ಅಗತ್ಯ ಇದೆ, ಆದರೆ, ನಮ್ಮ ಪ್ರಾಚೀನ ಇತಿಹಾಸಕ್ಕೆ, ಸಂಸ್ಕೃತಿಗೆ, ಪರಂಪರೆಗಳಿಗೆ ಸೂಕ್ತ ಸ್ಥಾನಕೊಟ್ಟು ತರಬೇಕು ಎಂದು ಹೇಳುವವರ ಗುಂಪು. ನಾನು ಮೊದಲನೆಯ ಗುಂಪಿನವನಲ್ಲ, ನಾನು ಎರಡನೆಯ ಗುಂಪಿನವನು. ಸುಧಾರಣೆಗಳನ್ನು ತರುವುದು ತೀರಾ ಅಗತ್ಯವೆಂಬುದನ್ನು ನಾನು ಒಪ್ಪುತ್ತೇನೆ. ಆದರೆ, ನಮ್ಮ ಹಳೆಯ ಸಂಪ್ರದಾಯಗಳನ್ನು, ಪ್ರಾಚೀನ ಸಂಸ್ಕೃತಿಯನ್ನು, ನಾಗರೀಕತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಸುಧಾರಣೆಗಳನ್ನು ತರಬೇಕಾಗುತ್ತದೆ.

ನಾವು ರಾಜ್ಯಾಂಗವನ್ನು ರಚಿಸುತ್ತಿದ್ದೇವೆ, ಮೂಲಭೂತ ಹಕ್ಕುಗಳಿಗೆ, ನ್ಯಾಯ ವಿಚಾರಣಾ ಯೋಗ್ಯ ಹಕ್ಕುಗಳಿಗೆ ಸಂಬಂಧಿಸಿದ ಕಲಮುಗಳನ್ನು ನಾವು ಈಗಾಗಲೇ ಅಂಗೀಕರಿಸಿದ್ದೇವೆ. ನಮ್ಮ ರಾಜ್ಯಾಂಗವನ್ನು ನಾವು ಮುಂದಿನ ಮೇ ತಿಂಗಳ ೧೬ ಆಗಸ್ಟ್ ತಿಂಗಳ ೧೫ರ ನಡುವಿನ ಒಂದು ಕಾಲದಲ್ಲಿ ಆತ್ಮಾರ್ಪಿತ ಮಾಡಿಕೊಳ್ಳುವ ನಿರೀಕ್ಷೆಯಲ್ಲಿದ್ದೇವೆ. ಆದ್ದರಿಂದ, ಈ ಮಸೂದೆಯನ್ನು ಹೊಸ ರಾಜ್ಯಾಂಗದ ವಿಧಿಗಳಿಗೆ ಅನುವರ್ತಿಯಾಗಿರುವಂತೆ ತರುವುದು ತುಂಬಾ ಒಳ್ಳೆಯದು. ಇಂದು, ನಾವು ನಮ್ಮ ದೇಶವನ್ನು "ಜಾತ್ಯತೀತ ರಾಷ್ಟ್ರ" ಎಂದು ಕರೆದಿದ್ದೇವೆ. ಈ ದೇಶದ ಎಲ್ಲ ಜನರಿಗೂ, ಅವರು ಯಾವುದೇ ಧರ್ಮದವರಿರಬಹುದು, ಯಾವುದೇ ಸಮುದಾಯದವರಾಗಿರಬಹುದು. ಹಿಂದೂ, ಮುಸ್ಲಿಂ, ಸಿಖ್, ಪಾರ್ಸಿ ಏನೇ ಇರಲಿ, ಪ್ರತಿಯೊಬ್ಬನಿಗೂ ಸಮಾನ ಪೌರತ್ವದ ಹಕ್ಕನ್ನು ಕೊಡಲಾಗುತ್ತದೆಂದು ನಾವು ಹೇಳಿದ್ದೇವೆ. ಆದ್ದರಿಂದ ಹಿಂದೂಗಳಿಗಷ್ಟೇ ಅಲ್ಲ, ಈ ದೇಶದ ಎಲ್ಲ ಪ್ರಜೆಗಳಿಗೆ ಅನ್ವಯವಾಗುವಂತಹ ಮಸೂದೆಯನ್ನು ಸನ್ಮಾನ್ಯ ಡಾ. ಅಂಬೇಡ್ಕರ್‌ರವರು ಮಂಡಿಸಬೇಕಿತ್ತೆಂದು ನಾನು ಹೇಳುತ್ತಿದ್ದೇನೆ. ಈ ದೇಶವು 'ಜಾತ್ಯತೀತ ರಾಷ್ಟ್ರ'ವೆಂದು ಒಪ್ಪಿಕೊಂಡಿರುವಾಗ, ಹಿಂದೂ ಸಂಹಿತೆ ಮಸೂದೆಯೊಂದನ್ನು ತರುವುದೇ, ನನ್ನ ಪ್ರಕಾರ, ತೀರಾ ಅಪ್ರಸ್ತುತ. ನಾವು ಈಗ ಈ ಮಸೂದೆಯನ್ನು ಗಮನಿಸದರೆ ಇದು........................

**ಶ್ರೀ ಆರ್. ಕೆ. ಸಿಧ್ವಾ :** ಸನ್ಮಾನ್ಯ ಡಾ. ಅಂಬೇಡ್ಕರ್‌ರವರು ಪ್ರಾಚೀನ ಶಾಸ್ತ್ರಗಳನ್ನು ಉಲ್ಲೇಖಿಸಿದ್ದಾರೆ. ಶಾಸ್ತ್ರಗಳಲ್ಲಿ ಯಾವುದಕ್ಕೆ ಹಿಂದೂ ಸಂಹಿತೆಯ ವಿಧಗಳು ವ್ಯತಿರಿಕ್ತವಾಗಿವೆ ಎಂಬುದನ್ನೂ ಕೂಡ ನೀವು ಹೇಳಬಹುದಲ್ಲ.

**ಸೇಠ್ ಗೋವಿಂದ ದಾಸ್ :** ನಾವು ಈ ಮಸೂದೆಯನ್ನು ಗಮನಿಸಿದರೆ, ಅದರಲ್ಲಿ, ನಾವು ಒಪ್ಪಿಗೆ ಕೊಟ್ಟರೂ, ಮುಂದೆ ಯಾವುದೇ ಆಕ್ಷೇಪಣೆಗೆ ಆಸ್ಪದ ಕೊಡದಂತಹ ಹಲವಾರು ಕಲಮುಗಳಿರುವುದು ನಮಗೆ ಕಂಡುಬರುತ್ತದೆ. ಈ ಮಸೂದೆಯನ್ನು ಮುಂದೂಡದೆ, ಕಾನೂನಾಗಿ ಅಂಗೀಕರಿಸುವುದಾದರೆ, ಅಂಥ ಕೆಲವೊಂದು ಕಲಮುಗಳನ್ನು, ಯಾವುದೇ ರೀತಿಯ ವಿವಾದಕ್ಕೆ ಹೋಗದೆಯೇ ನಾವು ಅಂಗೀಕರಿಸುತ್ತೇವೆಂಬ ನಂಬಿಕೆ ನನಗಿದೆ. ಆದರೆ ಈ ಮಸೂದೆಯಲ್ಲಿ ನಾವು ಒಪ್ಪಿಗೆ ಕೊಟ್ಟರೂ ಕೂಡ, ಮುಂದೆ ಸಾಕಷ್ಟು ತೊಂದರೆಗಳನ್ನು ಉಂಟುಮಾಡಬಲ್ಲ ಹಲವಾರು ಕಲಮುಗಳು ಇರುವುದೂ ಕೂಡ ನಮಗೆ ಕಂಡುಬರುತ್ತದೆ. ಸನ್ಮಾನ್ಯ ಡಾ. ಅಂಬೇಡ್ಕರ್‌ರವರೂ ಕೂಡ ಅನೇಕ, ವಿವಾದಾಸ್ಪದ ಕಲಮುಗಳು ಇವೆಯೆಂದೂ, ಆ ವಿವಾದಾಸ್ಪದ ಕಲಮುಗಳ ಬಗ್ಗೆ ತಾನು ಸಾಕಷ್ಟು ಬೆಳಕು ಚೆಲ್ಲಿರುವುದಾಗಿಯೂ ಸ್ವತಃ ಹೇಳಿದ್ದಾರೆ. ಮೊದಲನೆಯ ವಿವಾದಾಸ್ಪದ ವಿಷಯವೆಂದರೆ 'ವಿವಾಹ' ಮತ್ತು ವಿಚ್ಛೇದನ'. ಕೊನೇ ಪಕ್ಷ, ಜಾತಿ ಪದ್ಧತಿಯನ್ನು ನಿರ್ನಾಮ ಮಾಡುವಂತಹ ಬದಲಾವಣೆಯನ್ನು ನಮ್ಮ ಶಾಸನದಲ್ಲಿ ನಾವು ತರುವುದಾದರೆ, ನಾನು ಅದನ್ನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ. ಬ್ರಾಹ್ಮಣನು ಶೂದ್ರಳನ್ನು ಮದುವೆಯಾಗಬಯಸಿದರೆ, ಶೂದ್ರಳು

ಬ್ರಾಹ್ಮಣನನ್ನು ಮದುವೆಯಾಗ ಬಯಸಿದರೆ, ಬ್ರಾಹ್ಮಣ ಶೂದ್ರರ ವಿಷಯ ಹಾಗಿರಲಿ, ಹಿಂದೂ, ಮುಸ್ಲಿಮರನ್ನು ಮದುವೆ ಆಗುವುದಾದರೆ, ಮುಸ್ಲಿಂ ಹಿಂದುವನ್ನು ಮದುವೆ ಆಗಬಯಸಿದರೆ, ಅಥವಾ ಯಾವುದೇ ಸಮುದಾಯದವರು ಅಂತರಜಾತಿ ಮದುವೆ ಆಗಬಯಸಿದರೆ ಶಾಸ್ತ್ರೋಕ್ತವಾಗಿ ಹಾಗೆ ಮದುವೆ ಆಗುವುದಕ್ಕೆ ಯಾವ ಅಡ್ಡಿಯೂ ಇರಕೂಡದು. ಈ ಜಾತಿ ಪದ್ಧತಿಯು ನಮ್ಮ ದೇಶವನ್ನು ಹಾಳುಗೆಡವಿದೆ. ಜಾತಿ ಪದ್ಧತಿಯಿಂದ ನಮ್ಮ ದೇಶ ಚೂರುಚೂರಾಗುತ್ತದೆ. ಸಮಾಜವೂ ಸಣ್ಣ ತುಂಡುಗಳಾಗಿ ಒಡೆದುಹೋಗುತ್ತಿದೆ, ಅತಿ ಚಿಕ್ಕ ಸಮುದಾಯಗಳೂ ಕೂಡ ತುಂಡು ತುಂಡಾಗುತ್ತಿವೆ. ಚಿಕ್ಕ ಪುಟ್ಟ ವಿಷಯಗಳಲ್ಲೂ ತೊಡಕುಗಳು, ಸಿಕ್ಕುಗಳು ಕಾಣಿಸಿಕೊಳ್ಳುತ್ತಿವೆ. ಹೀಗಾಗಲು ಜಾತಿ ಪದ್ಧತಿಯೇ ಕಾರಣ. ಹಳೆಯ ಕಾಲದ ಜನರು, ಇಂಥ ಶಾಸ್ತ್ರೋಕ್ತ ಮದುವೆಗಳಾದರೆ ಹೇಸಿಗೆಪಟ್ಟುಕೊಳ್ಳುತ್ತಾರೆ. ತಮ್ಮ ಇಚ್ಛೆಗೆ ವಿರುದ್ಧವಾಗಿ ತಮ್ಮ ಮಗನನ್ನು, ಮಗಳನ್ನು ಮದುವೆ ಮಾಡಬೇಕಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ, ಮದುವೆ ವಿಷಯದಲ್ಲಿ ಮಕ್ಕಳಿಗೆ ಸ್ವಾತಂತ್ರ್ಯ ಕೊಡಬೇಕೆಂಬುದನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ನಾನು 'ವಿಚ್ಛೇದನ'ದ ಬೆಂಬಲಿಗ ಕೂಡ, ಎಲ್ಲ ಕೆಡಕುಗಳನ್ನು ಹೋಗಲಾಡಿಸುವಂತಹ ದಿವ್ಯ ಔಷಧ ಎನ್ನುವಂತಹ ಯಾವುದೇ "ವಿವಾಹ ಸಂಹಿತೆ"ಯನ್ನು ಈ ಪ್ರಪಂಚದಲ್ಲಿ ಈವರೆಗೂ ಕಂಡುಹಿಡಿದೇ ಇಲ್ಲವಾದರೂ, ಗಂಡ ಹೆಂಡತಿ ಚೆನ್ನಾಗಿ ಹೊಂದಿಕೊಂಡು ಜೀವನ ಮಾಡಲು ಸಾಧ್ಯವಾಗದಿದ್ದರೆ ಅವರಿಗೆ ವಿಚ್ಛೇದನದ ಹಕ್ಕನ್ನು ಕೊಡಬೇಕಾಗುತ್ತದೆ. ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್‌ರವರು ವಿಚ್ಛೇದನ ಪದ್ಧತಿಯು ಈ ದೇಶದ ಶೇ. ೯೦ರಷ್ಟು ಜನರಲ್ಲಿ ಈಗಾಗಲೇ ಇದೆಯೆಂದು ಹೇಳಿದ್ದಾರೆ. ಈ ಶೇ. ೯೦ರಷ್ಟು ಜನರು ಶೂದ್ರರೆಂದು ಹೇಳಲಾಗಿದೆ. ನನ್ನ ಮಟ್ಟಿಗೆ ಹೇಳುವುದಾದರೆ, ಬ್ರಾಹ್ಮಣರ ಶೂದ್ರರ ನಡುವೆ ಯಾವುದೇ ವ್ಯತ್ಯಾಸ ಇಲ್ಲ. ಅವರನ್ನು ಶೂದ್ರರೆಂದು ಕರೆಯುವುದೇ ಘೋರ ಅಪರಾಧವೆಂದು ನನ್ನ ಅನಿಸಿಕೆ.............

**ಸನ್ಮಾನ್ಯ ಶ್ರೀ ಜಗಜೀವನ್ ರಾಂ** (ಕಾರ್ಮಿಕ ಮಂತ್ರಿಗಳು) : ಅದು ಹಿಂದೂ ಧರ್ಮದ ಬುಡವನ್ನೇ ಅಲ್ಲಾಡಿಸುತ್ತಿಲ್ಲವೇ?

**ಸೇಠ ಗೋವಿಂದ ದಾಸ :** ವಿಚ್ಛೇದನವು ಶೇ ೯೦ರಷ್ಟು ಶೂದ್ರ ಜನರಲ್ಲಿದೆ. ಈ ವಿಷಯದಲ್ಲೂ ಕೂಡ ನಾವು ಅವರ ರೂಢಿಗಳನ್ನು ಸಂಪ್ರದಾಯಗಳನ್ನು ತೀರಾ ಅಲಕ್ಷಿಸಿ ಈ ಶಾಸನವನ್ನು ತಂದರೆ, ಆಗ ಈ ಶೇ. ೯೦ ರಷ್ಟು ಜನರು ..........

**ಶ್ರೀ ರಾಜ ಬಹಾದ್ದೂರ್** (ಮತ್ಸ್ಯ ಸಂಯುಕ್ತ ಸಂಸ್ಥಾನ) : ಸರ್, ಮಾನ್ಯ ಸದಸ್ಯರು "ತಲಾಖ್" ಶಬ್ದಕ್ಕೆ ಯಾವುದೇ ಹಿಂದಿ ಸಮಾನಾರ್ಥಕ ಶಬ್ದವನ್ನು ಕೊಡಬಲ್ಲರೇ?

**ಸೇಠ ಗೋವಿಂದ ದಾಸ್ :** ಮಾನ್ಯ ಸದಸ್ಯರು ಹಿಂದಿ ಭಾಷೆಯ ಅರ್ಥಾನ್ವಯವನ್ನು ಅರ್ಥ ಮಾಡಿಕೊಳ್ಳಲಾರರು ಎಂದು ನನ್ನ ಅನಿಸಿಕೆ. ಅದು, 'ತಲಾಖ್' ಶಬ್ದವಾಗಿರಬಹುದು, ಮತ್ತಾವುದೋ ಇರಬಹುದು, ಹಿಂದಿಯಲ್ಲಿರುವ ಶಬ್ದಗಳು ಹಿಂದಿ ಭಾಷೆಯವು. 'ತಲಾಖ್' ಶಬ್ದಕ್ಕೆ ಸಮಾನಾರ್ಥಕ ಪದವನ್ನು ಅವರು ಇನ್ನೂ ತಿಳಿದುಕೊಳ್ಳಬಯಸಿದರೆ, ಅದಕ್ಕೆ ಪರ್ಯಾಯ ಶಬ್ದ "ವಿವಾಹ ವಿಚ್ಛೇದ" ಎಂದು ಹೇಳಬಯಸುತ್ತೇನೆ.

ಆ ಶೇ. ೯೦ ರಷ್ಟು ಜನರಲ್ಲಿರುವ ರೂಢಿಗಳನ್ನು ಸಂಪ್ರದಾಯಗಳನ್ನು ಬದಿಗಿಟ್ಟು, ನಾವು ಈ ಶಾಸನವನ್ನು ಅಂಗೀಕರಿಸಿದರೆ, ಅವರು ತಮ್ಮ ಸಂಪ್ರದಾಯದ ರೀತಿಯಲ್ಲಿ ವಿಚ್ಛೇದನ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಅವರಿಗೆ ಹಲವಾರು ಸಮಸ್ಯೆಗಳು ಎದುರಾಗುತ್ತವೆ ಎಂದು ನಾನು ಹೇಳುತ್ತಿದ್ದೆ. ಪ್ರತಿಯೊಬ್ಬರಿಗೂ ಮದುವೆ ಆಗಲು, ವಿಚ್ಛೇದನ ಹೊಂದಲು ಸ್ವಾತಂತ್ರ್ಯ ಕೊಡಬೇಕೆಂದು ಸನ್ಮಾನ್ಯ ಡಾ. ಬಿ.ಆರ್.

ಅಂಬೇಡ್ಕರ್‌ರವರು ವ್ಯಕ್ತಪಡಿಸಿದ ಆಶಯಗಳಿಗೆ ಅದು ತೀರಾ ವಿರುದ್ಧವಾದುದಾಗಿದೆ. ಆದ್ದರಿಂದ, ಹಲವಾರು ತೀರಾ ಗುರುತರ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಆದ್ದರಿಂದ ಎಲ್ಲ ಪುರುಷರಿಗೆ, ಮಹಿಳೆಯರಿಗೆ ಅಂಥ ರೀತಿಯ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಕೊಡಬೇಕೆಂಬುದರ ಪರ ನಾನಿದ್ದೇನೆ.

ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್‌ರವರು, ಶೇ. ೧೦ರಷ್ಟಿರುವ ಸವರ್ಣೀಯ ಹಿಂದೂಗಳು ಎಂದರೆ, ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೇ. ೯೦ರಷ್ಟು ಜನರ ಮೇಲೆ ತಮ್ಮ ಆಚಾರ ವಿಚಾರಗಳನ್ನೇ ಹೇರಬಯಸುತ್ತಾರೆಂದು ಹೇಳಿದ್ದಾರೆ. ಅಂದರೆ, ಬುದ್ಧಿಜೀವಿ ವರ್ಗವೆನಿಸಿಕೊಂಡಿರುವ ನಾವು ಶೇ. ೧೦ರಷ್ಟು ಜನರು – ಶೇ. ೯೦ರಷ್ಟು ಜನರ ಮೇಲೆ ಕೆಲವೊಂದು ಆಚಾರ ವಿಚಾರಗಳನ್ನು ಹೇರುತ್ತೇವೆ ಎಂದಂತಾಯಿತು. ಕೇವಲ ಬ್ರಾಹ್ಮಣರು, ವೈಶ್ಯರಷ್ಟೇ ಅಲ್ಲ, ಈ ಸದನವನ್ನು ಪ್ರವೇಶಿಸುವಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸಫಲರಾಗಿರುವ ಜನರೂ ಕೂಡ ಅದನ್ನೇ ಮಾಡುತ್ತಿದ್ದಾರೆ. ಈ ಸದನಲ್ಲಿ ಕುಳಿತಿರುವ, ನನ್ನ ಸಹೋದರಿ ಸಮಾನರಾದ ಶ್ರೀಮತಿ ದುರ್ಗಾಬಾಯಿ, ಶ್ರೀಮತಿ ರೇಣುಕಾ ರೇ ಹಾಗೂ ಇತರೆ ಮಹಿಳಾ ಸದಸ್ಯರುಗಳು ಮಹಿಳೆಯರನ್ನು ಪ್ರತಿನಿಧಿಸುತ್ತಾರೆ. ಅಲ್ಲಿ, ವಿಸಿಟರ್ಸ್ ಗ್ಯಾಲರಿಯಲ್ಲಿ ಕುಳಿತಿರುವ ಸಹೋದರಿಯರೂ ಕೂಡ ಮಹಿಳೆಯರನ್ನು ಪ್ರತಿನಿಧಿಸುತ್ತಾರೆಂಬುದನ್ನು ಒಪ್ಪಿಕೊಳ್ಳಲು ನಾನು ಸಿದ್ಧನಿಲ್ಲ ಎಂಬುದನ್ನು ನನ್ನ ಸಹೋದರಿ ಸಮಾನರಿಗೆ ಹೇಳಬಯಸುತ್ತೇನೆ. ಸದನದಲ್ಲಿ ಕುಳಿತಿರದಿರುವ, ಪ್ರೇಕ್ಷಕರ ಗ್ಯಾಲರಿಗೆ ಬರದಿರುವ ಮಹಿಳೆಯರೂ ಕೂಡ, ಇಲ್ಲಿ ಕುಳಿತಿರುವವರಿಗಿಂತಲೂ ಈ ದೇಶವನ್ನು ಚೆನ್ನಾಗಿ ಪ್ರತಿನಿಧಿಸುತ್ತಾರೆಂದು ನನ್ನ ಅನಿಸಿಕೆ. ಕೆಲವರು ಮೇಲುಜಾತಿಯ ಜನರು, ತಮ್ಮ ಆಪಾದನೆ ಸರಿಯಲ್ಲ ಎಂಬುದನ್ನು ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ. ವಸ್ತುಸ್ಥಿತಿ ಏನೆಂದರೆ, ಈ ಶೇ.೧೦ರಷ್ಟು ವಿದ್ಯಾವಂತ ಜನರು ತಮ್ಮ ಆಚಾರ ವಿಚಾರಗಳನ್ನು ಶೇ. ೯೦ರಷ್ಟು ಜನರ ಮೇಲೆ ಹೇರಬಯಸುತ್ತಾರೆ. ಈ ದೇಶದ ಜನರ ಇಚ್ಛೆ ಏನೆಂಬ ಬಗ್ಗೆ ಯಾವುದನ್ನೂ ತಿಳಿದುಕೊಳ್ಳದೆಯೇ ಅವರು, ಅವರ ಮೇಲೆ, ತಮ್ಮ ಆಚಾರ ವಿಚಾರಗಳನ್ನು ಹೇರಬಾರದು. ಜನರ ಆಶೋತ್ತರಗಳಿಗೆ ವಿರುದ್ಧವಾದ ಯಾವುದೇ ಶಾಸನವನ್ನು ಈ ಸದನದಲ್ಲಿ ಅಂಗೀಕರಿಸುವುದು ನನಗೆ ಇಷ್ಟವಾಗುವುದಿಲ್ಲ.

**ಶ್ರೀಮತಿ ರೇಣುಕಾ ರೇ :** ನೀವು ಕೂಡ, ರಾಜ್ಯಾಂಗವನ್ನು ರೂಪಿಸುತ್ತಿರುವುದು ಶೇ. ೯೦ರಷ್ಟು ಜನರಿಗೆ ಗೊತ್ತೇ?

**ಸೇಠ ಗೋವಿಂದ ದಾಸ್ :** ಜನರು ನಮ್ಮೊಂದಿಗೆ ಇದ್ದಾರೆನ್ನುವುದು ನನಗೆ ಗೊತ್ತಿದೆ, ನೀವಷ್ಟೇ ಕಳಕಳಿ ತೋರಿಸಿದ್ದೀರೆನ್ನುವುದು ಸರಿಯಲ್ಲ. ಆ ವಿಚಾರದಲ್ಲಿ, ನಾವು ಜನರ ಆಜ್ಞಾಪನೆಯೊಂದಿಗೆ ನಾವು ಇಲ್ಲಿಗೆ ಬಂದಿದ್ದೇವೆ.

ಇನ್ನು "ಉತ್ತರಾಧಿಕಾರ"ದ ವಿಚಾರ. ಉತ್ತರಾಧಿಕಾರದ ಕಾನೂನಿನಲ್ಲಿ ನಾವು ಆಮೂಲಾಗ್ರ ಸುಧಾರಣೆಗಳನ್ನು ತರಬೇಕಾಗಿದೆ ಎಂದು ಕೂಡ ಹೇಳಲಾಗಿದೆ. ಉತ್ತರಾಧಿಕಾರ ಪದ್ಧತಿಯಲ್ಲಿ ಸುಧಾರಣೆಗಳನ್ನು ತರಲು ತುಂಬಾ ಅವಕಾಶಗಳು ಇವೆ ಎಂಬುದನ್ನು ನಾನು ಒಪ್ಪುತ್ತೇನೆ. ಮಹಿಳೆಯರಿಗೆ ಉತ್ತರಾಧಿಕಾರದ ಹಕ್ಕುಗಳನ್ನು ಕೊಡದಿದ್ದರೆ, ಆಸ್ತಿಗೆ ವಾರಸುದಾರರಾಗದಂತೆ ಮಾಡಿದರೆ ನಾವು ತುಂಬಾ ಅನ್ಯಾಯ ಮಾಡಿದಂತಾಗುತ್ತದೆ ಎಂಬುದನ್ನು ಕೂಡ ನಾನು ಒಪ್ಪುತ್ತೇನೆ. ಮಹಿಳೆಯರಿಗೆ, ಉತ್ತರಾಧಿಕಾರದ ಹಕ್ಕನ್ನು ಕೊಡಲೇಬೇಕಾಗುತ್ತದೆ. ಆದರೆ ಮಹಿಳೆಯರಿಗೆ ಎಷ್ಟರ ಮಟ್ಟಿಗೆ ಉತ್ತರಾಧಿಕಾರದ ಹಕ್ಕು ಕೊಡಬೇಕು ಎನ್ನುವ ಪ್ರಶ್ನೆ ಏಳುತ್ತದೆ. ಇದಕ್ಕೆ ಬೆಂಬಲವಾಗಿ, ಡಾ. ಅಂಬೇಡ್ಕರ್‌ರವರು, ಮನು, ಯಾಜ್ಞವಲ್ಕ್ಯ ಸ್ಮೃತಿಗಳನ್ನು ಉದಾಹರಿಸಿ, ಈ ಸ್ಮೃತಿಗಳು, ಮಹಿಳೆಯರಿಗೆ ಆಸ್ತಿಯಲ್ಲಿ, ನಾಲ್ಕನೇ ಒಂದು ಭಾಗಕ್ಕೆ ಉತ್ತರಾಧಿಕಾರದ

ಹಕ್ಕನ್ನು ಕೊಟ್ಟಿದೆ ಎಂದು ಹೇಳಿದ್ದಾರೆ. ಮನು ಹಾಗೂ ಯಾಜ್ಞವಲ್ಕ್ಯರು ಹಾಗೆ ಹೇಳಿದ್ದರೂ ಕೂಡ ಉತ್ತರಾಧಿಕಾರದ ವಿಚಾರದಲ್ಲಿ ನಾವು ಇನ್ನೂ ಕೆಲವೊಂದು ಸುಧಾರಣೆಯನ್ನು ತರುವುದು ಅಗತ್ಯವೆಂಬ ನನ್ನ ಅಭಿಪ್ರಾಯವನ್ನು ಹೇಳಬಯಸುತ್ತೇನೆ. ಈ ದೇಶದಲ್ಲಿ ಪ್ರಪಂಚದಲ್ಲೂ ಕೂಡ ಪಿತೃಪ್ರಧಾನ ಪದ್ಧತಿ ಇದ್ದ ಕಾಲ ಒಂದಿತ್ತು, ಆದರೆ, ಇಂದಿನ ಸಮಾಜದಲ್ಲಿ "ತಾಯಿಯೇ ಯಜಮಾನಿ" ಪದ್ಧತಿ ಹೋಗಿ "ತಂದೆಯೇ ಯಜಮಾನ" ಪದ್ಧತಿ ಬಂದಿದೆ. ಈ ದೇಶದಲ್ಲಿ ಹಾಗೂ ಪ್ರಪಂಚದಲ್ಲೂ ಕೂಡ, 'ತಾಯಿಯೇ ಯಜಮಾನಿ' ಪದ್ಧತಿ ಇದ್ದಾಗ ಮತ್ತು ಮದುವೆ ಆದ ಮೇಲೆ ಗಂಡ, ಹೆಂಡಿತಿಯ ತವರು ಮನೆಗೆ ಬಂದು ಬಾಳಿ ಬದುಕುವ ಪದ್ಧತಿ ಇದ್ದಾಗ, ಮಗಳಿಗೆ ತಂದೆಯ ಆಸ್ತಿಯಲ್ಲಿ ಒಂದು ಭಾಗ ಇರಬೇಕು ಎನ್ನುವುದು ತೀರಾ ಸರಿಯಾಗಿತ್ತು. ಆದರೆ, ಈಗ "ತಂದೆಯೇ ಯಜಮಾನ" ಪದ್ಧತಿ ಇದೆ, ಮಗಳು ತಂದೆಯ ಮನೆಯನ್ನು ಬಿಟ್ಟು ಮಾವನ ಮನೆಗೆ ಹೋಗುತ್ತಾಳೆ.

ಆದ್ದರಿಂದ, ಆಕೆಗೆ, ತಂದೆಯ ಆಸ್ತಿಯಲ್ಲಿ ಯಾವುದೇ ಭಾಗವನ್ನು ಕೊಡುವುದು ಸರಿ ಅಲ್ಲವೆಂದು ನನ್ನ ಅನಿಸಿಕೆ. ಬದಲು, ಸೊಸೆಗೆ ಮಾವನ ಆಸ್ತಿಯಲ್ಲಿ ಒಂದು ಭಾಗಕ್ಕೆ ಹಕ್ಕು ಇರಬೇಕೆನ್ನುವುದು ನನ್ನ ಅಭಿಪ್ರಾಯ. ಮದುವೆ ವಿಧಿವಿಧಾನಗಳು ಮುಗಿದ ಮೇಲೆ, ಸೊಸೆಗೆ, ಮಗನಿಗೆ ಹಕ್ಕಿರುವಷ್ಟೇ ಸಮಾನ ಭಾಗವನ್ನು ಕೊಡಬೇಕು. ಇಂದು, ಮಗ, ಸಂಪೂರ್ಣ ಹಕ್ಕನ್ನು ಅನುಭವಿಸುತ್ತಿದ್ದಾನೆ. ಮಗಳು ವಿಧವೆಯಾದರೆ, ಪಾಲನೆ ಪೋಷಣೆಗೆ ಎಂದರೆ ಊಟ, ಬಟ್ಟೆಗೆ ಮಾತ್ರ ಅರ್ಹಳಾಗುತ್ತಾಳೆ. ಈ ರೀತಿಗೆ, ನನ್ನ ಸಂಪೂರ್ಣ ವಿರೋಧ ಇದೆ. ಆದ್ದರಿಂದ, ಮಹಿಳೆಯರಿಗೆ ಆಸ್ತಿಯಲ್ಲಿ ಹಕ್ಕು ಕೊಡಬೇಕೆಂದು ನಾನು ಒತ್ತಾಯಿಸುತ್ತೇನೆ, ಆದರೆ, ಮಾವನ ಆಸ್ತಿಯಲ್ಲಿ ಹಕ್ಕು ಇರಬೇಕೆ ಹೊರತು ತಂದೆಯ ಆಸ್ತಿಯಲ್ಲಲ್ಲ.

**ಶ್ರೀ ಮೋಹನ್‌ಲಾಲ್ ಗೌತಮ್** (ಸಂಯುಕ್ತ ಪ್ರಾಂತ : ಸಾಮಾನ್ಯ) : ಮಾವ ಇಲ್ಲದಿದ್ದರೆ?

**ಶ್ರೀ ಸೇಠ್ ಗೋವಿಂದ ದಾಸ್** : ಆಗ, ಗಂಡನ ಮನೆಯ ಆಸ್ತಿಯಲ್ಲಿ.

**ಶ್ರೀ ಮೋಹನ್ ಲಾಲ್ ಗೌತಮ್** : ಗಂಡ ಇಲ್ಲದಿದ್ದರೆ?

**ಶ್ರೀ ಸೇಠ್ ಗೋವಿಂದ ದಾಸ್** : ಆಗ ಮಗನ ಆಸ್ತಿಯಲ್ಲಿ.

**ಶ್ರೀ ಮೋಹನ್ ಲಾಲ್ ಗೌತಮ್** : ಮಗನೂ ಇಲ್ಲದಿದ್ದರೆ?

**ಶ್ರೀ ತಜಮುಲ್ ಹುಸೇನ್** : ಮದುವೆಯೇ ಆಗಿರದಿದ್ದರೆ, ಅವಳೇನು ಮಾಡಬೇಕು?

**ಶ್ರೀ ಸೇಠ್ ಗೋವಿಂದ ದಾಸ್** : ಅದು ಬೇರೆ ವಿಚಾರ. ಒಂದಲ್ಲ ಒಂದು ಮೂಲ ಇದ್ದೇ ಇರುತ್ತದೆ, ಹನ್ನೆರಡು ಗಂಡುಮಕ್ಕಳು, ಹದಿಮೂರನೆಯವಳು ಮಗಳು ಇದ್ದು, ಎಲ್ಲ ಹನ್ನೆರಡು ಗಂಡುಮಕ್ಕಳಿಗೂ ತಂದೆಯ ಆಸ್ತಿಯಲ್ಲಿ ಭಾಗಕ್ಕೆ ಹಕ್ಕು ಇರುವಾಗ, ಅದೇ ರೀತಿಯ ಹಕ್ಕನ್ನು ಹದಿಮೂರನೆಯವಳಾದ ಮಗಳಿಗೂ ಏಕೆ ಕೊಡಬಾರದು? ಎಲ್ಲ ಹನ್ನೆರಡು ಮಂದಿ ಗಂಡುಮಕ್ಕಳು ತಂದೆಯ ಮನೆಯಲ್ಲೇ ಇರುತ್ತಾರೆ, ಅದೇ ಮನೆಯನ್ನೇ ಹನ್ನೆರಡು ಜನ ಗಂಡು ಮಕ್ಕಳೂ ಹಂಚಿಕೊಳ್ಳುತ್ತಾರೆ.

**ಶ್ರೀ ಕೃಷ್ಣಚಂದ್ರ ಶರ್ಮ** : ಮಗಳೂ ಕೂಡ, ತಂದೆಯ ಮನೆಯಲ್ಲೇ ಇರಲು ಬಯಸಿದರೆ?

**ಶ್ರೀ ಸೇಠ್ ಗೋವಿಂದ ದಾಸ್** : ಮಗಳು ತಂದೆಯ ಮನೆ ಬಿಟ್ಟು ಇನ್ನೊಂದು ಮನೆಗೆ ಹೋಗುತ್ತಾಳಾದ್ದರಿಂದ, ಇದನ್ನು ಆಕೆಗೆ ಅನ್ವಯ ಮಾಡುವಂತಿಲ್ಲ. ಆಸ್ತಿಯ ಉತ್ತರಾಧಿಕಾರಕ್ಕೆ, ಏನು ಇನ್ನೊಂದನ್ನು ಸೇರಿಸಲಾಗಿದೆಯೆಂದರೆ ಉತ್ತರಾಧಿಕಾರದ ಹಕ್ಕು, ಉಯಿಲಿನ ಒಳಾಂಶಗಳಿಗೆ ಒಳಪಡುವುದಿಲ್ಲ ಎಂಬುದು. ಉಯಿಲುಗಳು ಇರದಂತಹ ಸಂದರ್ಭಗಳಲ್ಲಿ ವಿವಾದಗಳು ಏಳುತ್ತವೆ. ಹೀಗೆ ಅಲ್ಲ, ಬೇರೆ ರೀತಿಯಲ್ಲೂ ವಿವಾದಗಳು ಏಳುತ್ತವೆ. ಅಲ್ಲಿಯವರೆಗೆ, ಎಷ್ಟು ಉಯಿಲುಗಳು ಕೋರ್ಟುಗಳ ಕಟಕಟೆ

ಹತ್ತಿವೆ ಹಾಗೂ ಎಷ್ಟು ಉಯಿಲುಗಳ ಬಗ್ಗೆ ದಾವೆ ಹೂಡಲಾಗಿದೆ? ಎಂಬ ಸಂಗತಿ, ಹೆಸರಾಂತ ವಕೀಲರಾದ ಸನ್ಮಾನ್ಯ ಡಾ. ಅಂಬೇಡ್ಕರವರಿಗೆ ಗೊತ್ತಿದೆ. ಉಯಿಲುಗಳ ಗತಿ ಹೀಗಾದಾಗ, ಉತ್ತರಾಧಿಕಾರದ ಹಕ್ಕನ್ನು ಕೊಡಬಯಸಿರುವ ಈ ಕಾನೂನಿನ ಪ್ರಕಾರ, ಗಂಡು ಮಕ್ಕಳಿಗಾಗಲೀ, ಹೆಣ್ಣು ಮಕ್ಕಳಿಗಾಗಲೀ ಆಸ್ತಿಯಲ್ಲಿ ಭಾಗ ಸಿಗುವುದೇ ಇಲ್ಲ. ಎಲ್ಲ ಆಸ್ತಿಯನ್ನು ವಕೀಲರುಗಳೇ ನುಂಗಿಬಿಡುತ್ತಾರೆ.

ಇನ್ನೊಂದು ಕೂಡ ಆಗುತ್ತದೆ. ಡಾ. ಅಂಬೇಡ್ಕರ್‌ರವರು, ಆಸ್ತಿಯಲ್ಲಿ ಉತ್ತರಾಧಿಕಾರದ ಹಕ್ಕನ್ನು ಸಹಾ ಕೊಡಬೇಕೆಂದು ಹೇಳುತ್ತಿದ್ದಾರೆ. ಈಗ ನಮ್ಮ ಸಮಾಜದಲ್ಲಿ ಅವಿಭಕ್ತ ಕುಟುಂಬ ಪದ್ಧತಿ ಇದೆ. ತಂದೆ, ಗಂಡುಮಕ್ಕಳಿಗೆ ಉಯಿಲು ಬರೆಯುತ್ತಾನೆ. ಹೆಣ್ಣುಮಕ್ಕಳಿಗೆ ಏನೂ ಬರೆಯುವುದಿಲ್ಲ, ಗಂಡುಮಕ್ಕಳಿಗೆ ಎಲ್ಲವೂ ಹೋಗುತ್ತದೆ, ಇದು, ಮಹಿಳೆಯರಿಗೆ ನೀವೇನು ಉತ್ತರಾಧಿಕಾರದ ಹಕ್ಕನ್ನು ಕೊಡಬಯಸಿದ್ದೀರೋ ಅದರ ಉದ್ದೇಶವನ್ನೇ ವಿಫಲಗೊಳಿಸುತ್ತದೆ. ಉತ್ತರಾಧಿಕಾರದ ಬಗ್ಗೆ ಹೇಳುವುದಾದರೆ, ಡಾ. ಅಂಬೇಡ್ಕರ್‌ರವರೇ ಸ್ವತಃ ಇದೊಂದು ತುಂಬಾ ಸೂಕ್ಷ್ಮವಾದ ವಿಷಯವೆಂಬುದನ್ನು ಒಪ್ಪಿಕೊಂಡಿದ್ದಾರೆ. ಈ ದೇಶದಲ್ಲಿ ಕೈಗಾರಿಕೆಗಳನ್ನು ಬೆಳೆಸುತ್ತಿಲ್ಲವೆಂದು, ಆದರೆ, ಉತ್ತರಾಧಿಕಾರದ ಪ್ರಶ್ನೆಯನ್ನು ಎತ್ತಲಾಗುತ್ತಿದೆಯೆಂದು ಕೈಗಾರಿಕೋದ್ಯಮಿಗಳು ದನಿ ಎತ್ತಿರುವುದು ನಮಗೆ–ನಾವು ಸೋಷಿಯಲಿಸ್ಟರುಗಳಾಗಿರಬಹುದು, ಕಮ್ಯುನಿಸ್ಟರುಗಳಾಗಿರಬಹುದು– ಕಂಡುಬರುತ್ತದೆ. ಇದಕ್ಕೆ ಸರಿಯಾದ ಉಪಾಯವೆಂದರೆ, ಖಾಸಗಿ ಆಸ್ತಿ ಪದ್ಧತಿಯನ್ನು ರದ್ದು ಮಾಡಬೇಕು. ಈ ಖಾಸಗಿ ಒಡೆತನವನ್ನು ತೆಗೆದುಹಾಕಿದರೆ, ಒಂದು ಹೊಸ ಸಮಾಜ ರೂಪುಗೊಳ್ಳುತ್ತದೆ– ಅಂಥ ಸಮಾಜಕ್ಕೆ ಸೋಷಿಯಲಿಸಂ ಹಾಗೂ ಕಮ್ಯುನಿಸಂ ತತ್ವಗಳು ಆಧಾರವಾಗಿರಬೇಕು ಎಂದು ನಾನು ಹೇಳುವುದಿಲ್ಲ. ಸ್ವಂತ ಹಿಡುವಳಿಯನ್ನು ತೆಗೆದುಹಾಕಿದರೆ ನಂತರ ಒಂದು ಹೊಸ ಸಮಾಜವನ್ನು ಕಟ್ಟಬೇಕು ಎನ್ನುವ ಇಂಥದೊಂದು ಅಭಿಪ್ರಾಯಕ್ಕೆ ನಾನು ಬಂದಿದ್ದೇನೆ. ನಮ್ಮ ಬಂಡವಾಳಶಾಹಿಗಳು ಇದನ್ನು ಆ ದೃಷ್ಟಿಯಿಂದ ನೋಡಿದರೆ, ಈ ಸಂಪತ್ತು, ಅವರಿಗೆ, ಎಂದಿಗೂ ಕೇಡಿನ ಮೂಲ ಆಗುವುದಿಲ್ಲವೆಂಬುದು ಅವರಿಗೇ ಗೊತ್ತಾಗುತ್ತದೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಆ ಅರ್ಥದಲ್ಲಿ ನಾನೂ ಕೂಡ ಒಬ್ಬ ಬಂಡವಾಳಶಾಹಿ. ಗಳಿಸಿಟ್ಟ ಈ ಸಂಪತ್ತಿನಿಂದ ಯಾರಿಗಾದರೂ ನಿಜವಾದ ನೆಮ್ಮದಿ ಸಿಗುತ್ತದೆಯೆ? ೧೦ ಅಥವಾ ೨೦ ಸೇರು ತಿಂದು ಅರಗಿಸಿಕೊಂಡು ನೆಮ್ಮದಿಯಿಂದ ಇದ್ದೇನೆಂದು ಹೇಳುವ ಒಬ್ಬನೇ ಒಬ್ಬ ಬಂಡವಾಳಶಾಹಿ ನನ್ನ ಕಣ್ಣಿಗೆ ಬಿದ್ದಿಲ್ಲ. ಆದರೆ, ಅದೇ ಬಡವ ಅರ್ಧ ಸೇರು, ಕಾಲು ಸೇರು ತಿಂದು, ಸಮಾಧಾನಪಟ್ಟುಕೊಳ್ಳುತ್ತಾನೆ. ೧೦೦, ೨೦೦ ಅಥವಾ ೪೦೦ ಗಜ ಬಟ್ಟೆಯನ್ನು ಉಡುವ ಯಾವ ಬಂಡವಾಳಶಾಹಿಯೂ ನನ್ನ ಕಣ್ಣಿಗೆ ಬಿದ್ದಿಲ್ಲ. ಅದೇ ಬಡವ, ಕೇವಲ ಐದು ಅಥವಾ ಆರು ಗಜ ಬಟ್ಟೆಯಿಂದ ಮೈ ಮುಚ್ಚಿಕೊಳ್ಳಬಲ್ಲ.

**ಸನ್ಮಾನ್ಯ ಮೌಲಾನ ಅಬ್ದುಲ್ ಕಲಂ ಆಜಾದ್** (ಶಿಕ್ಷಣ ಮಂತ್ರಿ) : ಕೆಲವು ಜನರು ಜಗಳ ಆಡುತ್ತಾರೆ.

**ಶ್ರೀ ಸೇಠ್ ಗೋವಿಂದ ದಾಸ್** : ಬಂಗಲೆಗಳಲ್ಲಿ ವಾಸ ನನಗೆ ಒಗ್ಗಿಹೋಗಿದೆ. ಯಾರೇ ಬಂಡವಾಳಶಾಹಿ, ಅವನ ಬಂಗಲೆಯಲ್ಲಿ, ಒಂದು ದೊಡ್ಡ ಅಂಗಳದಲ್ಲಿ ಮಲಗಲು ಹೋದರೆ, ಅವನಿಗೆ ನಿದ್ದೆಯೇ ಬರುವುದಿಲ್ಲ. ನಿದ್ರೆ ಮಾಡುವುದಕ್ಕೆ ೧೨ ಅಥವಾ ೧೪ ಅಡಿ ಅಳತೆಯ ಒಂದು ಕೋಣೆ ಸಾಕು. ಇಂದಿನ ದಿನಗಳಲ್ಲಿ ಶ್ರೀಮಂತರಿಗೂ ಕೂಡ ಸಂಪತ್ತು ತಲೆನೋವಿನ ಸಂಗತಿಯಾಗಿಬಿಟ್ಟಿದೆ. ಯಾರಿಗೆ ಸಂಪತ್ತು ಇಲ್ಲವೋ ಅವರು ಅದನ್ನು ಗಳಿಸಲು ಪರಿತಪಿಸುತ್ತಾರೆ. ಯಾರಿಗೆ ಅದಿದೆಯೋ ಅವರು ತುಂಬಾ ಯಾತನೆಪಡುತ್ತಿರುತ್ತಾರೆ. ಹೀಗಾಗಿ, ಅವರಿಗೆ ಜೀವನದಲ್ಲಿ ನೆಮ್ಮದಿಯೇ ಇರುವುದಿಲ್ಲ.

ಮೇಲೆ, ಹೊಸ ಚುನಾವಣೆಗಳು ಮುಗಿದ ಕೂಡಲೇ ಈ ಮಸೂದೆಯನ್ನು ತರಬೇಕು.

ಈ ಮಸೂದೆಯನ್ನು ಹಿಂದೂ ಸಂಹಿತೆ ರೂಪದಲ್ಲಿ ಮಂಡಿಸಬಾರದು. ಆದರೆ, ದೇಶದ ಪ್ರತಿಯೊಬ್ಬ ಪ್ರಜೆಗೂ ಹಕ್ಕುಗಳನ್ನು ಕೊಟ್ಟಿರುವ ರಾಜ್ಯಾಂಗವನ್ನು ನಾವು ಹೇಗೆ ಅಂಗೀಕರಿಸಿದೆವೋ, ಅದೇ ರೀತಿಯಲ್ಲಿ ಈ ಮಸೂದೆಯನ್ನು ಸಹ ಅಂಗೀಕರಿಸುವುದು ಸರಿಯಾದ ಕ್ರಮ.

**ಡಾ. ಮೋನೋ ಮೋನನದಾಸ** (ಪಶ್ಚಿಮ ಬಂಗಾಳ : ಸಾಮಾನ್ಯ) : ಕ್ರಿಯಾಲೋಪ, ಸರ್, ಈ ರೀತಿಯ ಚರ್ಚೆಗೆ ಅವಕಾಶ ಕೊಡುವುದಕ್ಕೆ ಸಮಯದ ಮಿತಿ ಯಾವುದೂ ಇಲ್ಲವೇ?

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್** : ಇಲ್ಲ, ಯಾವುದೇ ಸಮಯ ಮಿತಿ ಇಲ್ಲ.

**ಶ್ರೀ ಸೇಠ್ ಗೋವಿಂದದಾಸ್** : ಕೆಲವೊಂದು ಮಾತು ಹೇಳಿ ನಾನು ಮುಗಿಸುತ್ತೇನೆ. ನಮ್ಮ ಸಾಮಾಜಿಕ ಕಾನೂನುಗಳಲ್ಲಿ ಸುಧಾರಣೆಗಳನ್ನು ತರಬೇಕಾದುದು ತೀರಾ ಅಗತ್ಯವೆಂದು ನನ್ನ ಅಭಿಪ್ರಾಯ. ಈ ಮಸೂದೆಯನ್ನು ವಿರೋಧಿಸುತ್ತಿರುವವರು ಸತಿ ಪದ್ಧತಿಯನ್ನು, ವಿಧವಾ ವಿವಾಹಗಳನ್ನು ರದ್ದುಮಾಡುವುದಕ್ಕೆ, ಶಿಶು ವಿವಾಹಗಳನ್ನು ತಡೆಗಟ್ಟುವುದಕ್ಕೆ ಸಂಬಂಧಿಸಿದ ಕಾನೂನುಗಳನ್ನು ಶಾಸನ ಮಾಡುವ ಸಮಯದಲ್ಲಿ ಯಾವ ರೀತಿಯಲ್ಲಿ ವಿರೋಧಿಸುತ್ತಿದ್ದರೋ ಅವರೇ ಈಗ ಸರಿಯಾದ ಮಾರ್ಗವನ್ನು ಅನುಸರಿಸುತ್ತಿಲ್ಲವೆಂದು ಹೇಳಬಯಸುತ್ತೇನೆ. ಆದರೂ ಕೂಡ, ಈ ಮಸೂದೆಯನ್ನು ಅನುಕೂಲಕರ ಕಾಲದಲ್ಲಿ ಪ್ರಸ್ತಾಪಿಸಿಲ್ಲ, ಸದ್ಯಕ್ಕೆ ಅದರ ಪರ್ಯಾಲೋಚನೆಯನ್ನು ನಾವು ಮುಂದೂಡಬೇಕೆಂದು ಸಹ ಹೇಳಬಯಸುತ್ತೇನೆ. ಸಾರ್ವಜನಿಕ ಅಭಿಪ್ರಾಯವನ್ನು ತಿಳಿದುಕೊಂಡಾದ ಮೇಲೆಯೇ ನಾವು ಅದನ್ನು ಮಂಡಿಸಬೇಕಾಗುತ್ತದೆ. ಇಷ್ಟು ಹೇಳುತ್ತಾ, ನಾನು ಇದಕ್ಕೆ ಬೆಂಬಲವನ್ನೂ ಕೊಡಲಾರೆ, ವಿರೋಧಿಸುವುದೂ ಇಲ್ಲ.

**ಶ್ರೀಮತಿ ಸುಚೇತಾ ಕೃಪಲಾನಿ** (ಸಂಯುಕ್ತ ಪ್ರಾಂತ್ಯ : ಸಾಮಾನ್ಯ) : ಸರ್, ಯಾವ ಶಾಸನದ ರಚನೆಯೂ, ಈ ಹಿಂದೂ ಸಂಹಿತೆ ಮಸೂದೆಯಷ್ಟು, ತುಂಬಾ ಭಾವೋದ್ರೇಕಗಳಿಗೆ, ವಿವಾದಕ್ಕೆ ಆಸ್ಪದ ಕೊಟ್ಟಿಲ್ಲ. ಈ ವಿವಾದಕ್ಕೆ ತರ್ಕವೇ ಆಧಾರವಾಗಿದ್ದಿದ್ದರೆ, ಹಿಂದೂ ಕಾನೂನಿಗೆ ತರಲು ಉದ್ದೇಶಿಸಿರುವ ಬದಲಾವಣೆಗಳ ಗುಣದೋಷಗಳೇ ಆಧಾರವಾಗಿದ್ದಿದ್ದರೆ, ಅದು ಸರಿ ಎನಿಸುತ್ತಿತ್ತು. ಆದರೆ, ವಿವಾದದ ಬಹುತೇಕ ಅಂಶ, ಅಸಂಗತ ವಿಷಯಗಳಿಂದ ಮುಚ್ಚಿಹೋಗಿದೆ. ಧರ್ಮವು ಅಪಾಯದಲ್ಲಿದೆ ಎನ್ನುವುದನ್ನೇ ಮುಂದಿಟ್ಟುಕೊಂಡು ಈ ಸಂಹಿತೆ ಬಗ್ಗೆ ತುಂಬಾ ಪ್ರಚಾರ ಮಾಡಲಾಗುತ್ತಿದೆ. ಹಿಂದೂ ಧರ್ಮದ ತಳಪಾಯವನ್ನೇ ಅದು ಅಲುಗಾಡಿಸುತ್ತದೆ ಎಂದು ಹೇಳಲಾಗಿದೆ. ಅಂಥ ವಾದವನ್ನು ಮುಂದಿಡುತ್ತಿರುವವರು ತಮ್ಮದೇ ಧರ್ಮಕ್ಕೆ ತುಂಬಾ ಅನ್ಯಾಯ ಮಾಡುತ್ತಿದ್ದಾರೆ.

ಮಾನವನ ಆಧ್ಯಾತ್ಮಿಕ ಸ್ವಾತಂತ್ರ್ಯ, ಆತ್ಮಸಾಕ್ಷಾತ್ಕಾರದತ್ತ ಮಾನವನ ಮುನ್ನಡೆಯೇ ಹಿಂದೂ ಧರ್ಮದ ಪರಮಧ್ಯೇಯ. ಮಾನವನು ಸ್ವಯಂ ಪರಿಪೂರ್ಣನಾಗಬೇಕಾದರೆ ಸತ್ಯ, ನ್ಯಾಯ ಹಾಗೂ ಅಹಿಂಸೆಯಂತಹ ಕೆಲವೊಂದು ನೈತಿಕ ಮತ್ತು ಆಧ್ಯಾತ್ಮಿಕ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಪಾಲಿಸುವುದು, ಅನುಸರಿಸುವುದು ಅತ್ಯಗತ್ಯ. ಇವುಗಳನ್ನು ನಮ್ಮ ಪವಿತ್ರ ಧರ್ಮಗ್ರಂಥಗಳಲ್ಲಿ ನಿರೂಪಿಸಲಾಗಿದೆ. ಇವುಗಳು ಮೂಲಭೂತ ತತ್ವಗಳು, ಬದಲಾಯಿಸುವಂಥವಲ್ಲ. ಅನಾದಿ ಕಾಲದಿಂದಲೂ ವಿಕಾಸಗೊಂಡ ಸಾಮಾಜಿಕ ವ್ಯವಸ್ಥೆಗಳು, ಪದ್ಧತಿಗಳು, ಸಂವಾದಗಳು ಹಾಗೂ ಸಂಪ್ರದಾಯಗಳೇ ಧರ್ಮವಲ್ಲ. ಹಿಂದೂ ಸಂಹಿತೆಯು ಹಿಂದೂ ಧರ್ಮವನ್ನು ಅಸ್ತವ್ಯಸ್ತಗೊಳಿಸಬಯಸುತ್ತಿಲ್ಲ. ಹಿಂದೂ ಸಿವಿಲ್ ಕಾನೂನನ್ನು ತಿದ್ದುಪಡಿ ಮಾಡಲು, ಮಾರ್ಪಾಟು ಮಾಡಲು ಉದ್ದೇಶಿಸಿದೆ. ನ್ಯಾಯಪದ್ಧತಿಯಲ್ಲಿ ಕಾಲಕಾಲಕ್ಕೆ ಬದಲಾವಣೆಗಳಾಗಿವೆ. ಅದು, ಧರ್ಮಕ್ಕಿಂತಲೂ ಭಿನ್ನವಾದುದು. ಅದು ಬದಲಾವಣೆಗೊಳ್ಳಲಾರದಂಥದಲ್ಲ, ಸ್ಥಿರವಾದುದಲ್ಲ, ಧರ್ಮಶಾಸ್ತ್ರಗಳ ಕರ್ತೃಗಳು ಆ ಕಾಲದ ಜನಾಂಗದ ಮನೋಪ್ರಜ್ಞೆಗನುಗುಣವಾಗಿ ಕಾಲಕಾಲಕ್ಕೆ ನ್ಯಾಯ ಪದ್ಧತಿಯಲ್ಲಿ

ಬದಲಾವಣೆ ತಂದಿದ್ದಾರೆ. ಬದಲಾವಣೆ ತರುವುದನ್ನು ಧರ್ಮಶಾಸ್ತ್ರಗಳೂ ಮಾನ್ಯ ಮಾಡಿವೆ. ಬ್ರಿಟಿಷರು ಕಾಲಿಟ್ಟ ಮೇಲೆ ಮಾತ್ರವೇ ಹಿಂದೂ ಕಾನೂನು ಗಡುಸಾಯಿತು. ಸ್ಥಗಿತವಾಯಿತು.

ಮೂಲಭೂತ ತತ್ವಗಳು ಬದಲಾವಣೆ ಆಗದೆ ಇದ್ದು, ಹಿಂದೂ ಸಾಮಾಜಿಕ ಪದ್ಧತಿಗಳು, ಬದಲಾದ ಸನ್ನಿವೇಶ, ಸಂದರ್ಭಗಳಿಗೆ ತಕ್ಕಂತೆ ಬದಲಾಣೆ ಆಗಿರುವುದೇ ಹಿಂದೂ ಧರ್ಮದ ವೈಶಿಷ್ಟ್ಯ. ನಿರಂತರವಾಗಿ ಹೊಂದಿಕೊಳ್ಳುವುದೇ ಹಿಂದೂ ಧರ್ಮದ ಸಾಮರ್ಥ್ಯ ಹಾಗೂ ವಿಶಿಷ್ಟ ಗುಣ. ಹಿಂದೂ ಸಮಾಜವು ಸ್ಥಿರವಾಗಿ ಉಳಿದ ಹೊರತು, ಜಡವಾದ ಹೊರತು, ಬದಲಾವಣೆಗೊಳ್ಳುತ್ತಿರುವ ಸನ್ನಿವೇಶಗಳಿಗೆ ತಕ್ಕಂತೆ ಕಾನೂನು ಬದಲಾವಣೆಗೊಳ್ಳಬೇಕಾಗುತ್ತದೆ. ಸ್ಮೃತಿಗಳು ಕೂಡಾ ಬದಲಾವಣೆ ಆಗದೆ ಹಾಗೆಯೇ ಉಳಿದಿಲ್ಲ. ಸ್ಮೃತಿಗಳಲ್ಲಿ ಉತ್ತರಾಧಿಕಾರ ಹಾಗೂ ವಿವಾಹ ಪದ್ಧತಿ ಶಾಖೆಗಳೇ ಅಲ್ಲದೆ, ನ್ಯಾಯ ಪದ್ಧತಿಯ ಇತರ ಶಾಖೆಗಳೂ ಇದ್ದವು. ಭಾರತದ ನ್ಯಾಯ ವಿಧಾಯಕ ಸಭೆಯು, ಅವುಗಳನ್ನು ಪರಾಮರ್ಶಿಸಿ, ಅವುಗಳಲ್ಲಿ ಕೆಲವನ್ನು ತೆಗೆದುಹಾಕಿದೆ. ಹಾಗಾದಾಗ, ಹಿಂದೂ ಧರ್ಮ ಅಸ್ತವ್ಯಸ್ತಗೊಳ್ಳಲಿಲ್ಲ. ಆ ಆಘಾತದಿಂದ ಹಿಂದೂ ಧರ್ಮವು ಪಾರಾಗಿ ಉಳಿದುಕೊಂಡಿದೆ. ಆ ಬದಲಾವಣೆಗಳ ಆಘಾತದಿಂದ ಹಿಂದೂ ಧರ್ಮ ಪಾರಾಗಿರುವಾಗ, ಹಿಂದೂ ಸಮಾಜ ಹಾಗೂ ಧರ್ಮವು, ಇನ್ನೂ ಸ್ವಲ್ಪ ಹೆಚ್ಚಿನ ಬದಲಾವಣೆಯ ಆಘಾತವನ್ನು ಸಹಿಸಿಕೊಳ್ಳುತ್ತದೆಂಬ ನಂಬಿಕೆ ನನಗಿದೆ.

ತುಂಬಾ ಮಹತ್ವದ ಸಾಮಾಜಿಕ ಶಾಸನವನ್ನು ನಾವು ತಂದಿದ್ದೇವೆ. ನಾವು ಸತಿ ಪದ್ಧತಿಯನ್ನು ತೆಗೆದುಹಾಕಿದ್ದೇವೆ. ಸಣ್ಣ ಮಕ್ಕಳಿಗೆ ಮದುವೆ ಮಾಡುವುದನ್ನು ರದ್ದುಮಾಡಿದ್ದೇವೆ. ಬಹುಮಟ್ಟಿಗೆ ಅಸ್ಪೃಶ್ಯತೆಯನ್ನು ರದ್ದುಮಾಡಿದ್ದೇವೆ. ಹಿಂದೂ ಧರ್ಮವು ಪರಮತಸಹಿಷ್ಣುತೆಯ ಹಾಗೂ ಉದಾರ ದೃಷ್ಟಿಯ ಧರ್ಮ. ಆದ್ದರಿಂದ ಧರ್ಮವು ಅಪಾಯದಲ್ಲಿದೆಯೆಂಬ ವಾದದ ಅವಶ್ಯಕತೆ ಇದೆಯೆಂದು ನಮಗೆ ಅನಿಸಬೇಕಾಗಿಲ್ಲ. ಈ ಉದಾರ, ವಿಶಾಲ ದೃಷ್ಟಿಯ ಮತ್ತು ಪರಮತ ಸಹಿಷ್ಣುತೆಯ ಧರ್ಮದ ಮಡಿಲಿನಲ್ಲಿ ಹಲವಾರು ದೃಷ್ಟಿಕೋನಗಳ ಜನರು, ಸಂಪ್ರದಾಯಗಳು, ರೀತಿನೀತಿಗಳು ಆಶ್ರಯ ಪಡೆದಿವೆ, ಬದುಕಿವೆ. ಇಂದು ಏನಾಗಿದೆ? ನಾವು ನಮ್ಮದೇ ಧರ್ಮದಲ್ಲಿ ಏಕೆ ನಂಬಿಕೆ ಕಳೆದುಕೊಂಡಿದ್ದೇವೆ? ಧರ್ಮ ಅಪಾಯದಲ್ಲಿದೆಯೆಂಬ ಕೂಗನ್ನು ಎತ್ತಿದ್ದೇವೆ? ವಿರೋಧಿಸುತ್ತಿರುವ ಎಲ್ಲರೂ ಕರ್ಮಠ ಸಂಪ್ರದಾಯವಾದಿಗಳು, ಪ್ರಗತಿವಿರೋಧಿಗಳೆಂದು ನಾನು ಹೇಳುತ್ತಿರುವುದರ ಅರ್ಥ ಅಲ್ಲ. ನಿಮ್ಮ ಅಭಿಪ್ರಾಯವನ್ನು ಹೇರುವುದು, ನಿಮ್ಮ ವಾದವನ್ನೇ ಮುಂದಿಡುವುದು ನಿಮ್ಮದೇ ಧರ್ಮಕ್ಕೆ ಅನ್ಯಾಯ ಮಾಡಿದಂತೆ ಎಂಬುದನ್ನು ನಾನು ಒತ್ತಿ ಹೇಳಬಯಸುತ್ತೇನೆ.

ಈಗ ಈ ಮಸೂದೆಯನ್ನು ಪರ್ಯಾಲೋಚನೆಗೆ ಎತ್ತಿಕೊಳ್ಳಬಾರದು, ಈ ಮಸೂದೆಯ ಕಲಮುಗಳ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳಲು ನಾವು ದೇಶಕ್ಕೆ ಸಾಕಷ್ಟು ಸಮಯ ಕೊಟ್ಟಿಲ್ಲ ಎನ್ನುವುದು ಇನ್ನೊಂದು ವಾದ. ನನಗೆ ತಿಳಿದಮಟ್ಟಿಗೆ ಈ ಮಸೂದೆಯು, ಸುಮಾರು ಕಳೆದ ಹತ್ತು ವರ್ಷಗಳಿಂದಲೂ ಈ ಸದನದ ಮುಂದಿದೆ, ಈ ದೇಶದ ಮುಂದಿದೆ. ಈ ಮಸೂದೆಯಲ್ಲಿ ಉತ್ತರಾಧಿಕಾರದ ಮಸೂದೆ, ವಿವಾಹ ಮಸೂದೆ ಎಂದು ಹೇಳಿರುವ ಕೆಲವೊಂದು ಮಸೂದೆಗಳು ೧೯೪೩ರಲ್ಲೇ ಸದನದ ಮುಂದೆ ಮಂಡನೆ ಆಗಿದ್ದವೆಂಬುದು ನನ್ನ ಅನಿಸಿಕೆ. ೧೯೪೪ರಲ್ಲಿ ಹಿಂದೂ ಕಾನೂನು ಸಮಿತಿಯನ್ನು ನೇಮಿಸಲಾಗಿತ್ತು, ಸಮಿತಿಯ ವರದಿಯನ್ನು ೧೯೪೫ ಅಥವಾ ೧೯೪೬ರಲ್ಲಿ ಪ್ರಕಟಿಸಲಾಗಿತ್ತು ಎಂದು ನನ್ನ ಅನಿಸಿಕೆ. ಕರಡು ಮಸೂದೆಯನ್ನು ಹದಿಮೂರು ಭಾರತೀಯ ಭಾಷೆಗಳಿಗೆ ಭಾಷಾಂತರ ಮಾಡಲಾಗಿತ್ತು. ಈ ಕರಡು ಮಸೂದೆಯ ಸಾವಿರಾರು ಪ್ರತಿಗಳನ್ನು ಹಂಚಲಾಗಿತ್ತು. ಹೀಗೆಲ್ಲಾ ಮಾಡಿರುವಾಗ, ಹಿಂದೂ ಸಂಹಿತೆ ಮಸೂದೆಯ ಕಲಮುಗಳು ನಮಗೆ ಗೊತ್ತಿರದಿದ್ದರೆ ಅದು ನಮ್ಮ ತಪ್ಪೇ ಹೊರತು ಸರ್ಕಾರದ್ದಲ್ಲ. ಅಲ್ಲದೆ, ಮಸೂದೆಯು ಇಲ್ಲಿ ಒಂದೇ

ದಿನದಲ್ಲಿ ಅಂಗೀಕೃತವಾಗುವುದಿಲ್ಲ. ಅದನ್ನು ಪರ್ಯಾಲೋಚಿಸಲು ನಾವು ತುಂಬಾ ಕಾಲ ತೆಗೆದುಕೊಳ್ಳುತ್ತೇವೆ. ಸವಿವರವಾಗಿ ಪರ್ಯಾಲೋಚನೆ ಮಾಡುವುದಕ್ಕೆ ತುಂಬಾ ಸಮಯ ಬೇಕಾಗುತ್ತದೆ, ಆಗ ನಾವು ಜನರ ಬಳಿಗೆ ಹೋಗಲು ಮಸೂದೆಯ ಕಲಮುಗಳನ್ನು ಜನರು ತಿಳಿದುಕೊಳ್ಳಲು, ಜನರ ಅಭಿಪ್ರಾಯಗಳನ್ನು ಕಂಡುಕೊಳ್ಳಲು ಸಾಕಷ್ಟು ಅವಕಾಶ ಇರುತ್ತದೆ. ಈ ಮಸೂದೆಯನ್ನು ಮುಂದಿನ ಸಾರ್ವಜನಿಕ ಚುನಾವಣೆವರೆಗೆ ಮುಂದೂಡಬೇಕೆಂದು ಕಿವಿಮಾತಿನ, ಪಿಸುಮಾತಿನ ಪ್ರಚಾರ ತೀರಾ ವಿಲಕ್ಷಣದ ಪ್ರಚಾರ ಆಗುತ್ತಿದೆ. ಅದನ್ನೇಕೆ ಮುಂದೂಡಬೇಕು, ಇದು ನಮ್ಮ ಪಕ್ಷದ ಜನಪ್ರಿಯತೆಯ ಮೇಲೆ ತುಂಬಾ ಪ್ರತಿಕೂಲ ಪರಿಣಾಮ ಬೀರುತ್ತದೆಂದೇನು? ಅಂಥ ವಾದಗಳನ್ನು ಕಾಂಗ್ರೆಸ್ ಮುಂದಿಡುವುದು ಯೋಗ್ಯವೇ, ಸರಿಯೇ? ನಮ್ಮ ಕರ್ತವ್ಯಕ್ಕಿಂತಲೂ, ನಮಗೆ ಜನಪ್ರಿಯತೆಯೇ ಮುಖ್ಯವೆಂದು ನಾವು ಎಂದಾದರೂ ಅಂದುಕೊಂಡಿದ್ದೇವೇನು? ಮಸೂದೆಯು ನ್ಯಾಯಸಮ್ಮತವಾದುದು ಎಂದು ನಮಗನ್ನಿಸಿದರೆ, ಮಸೂದೆಯಿಂದ ಜನರಿಗೆ ಒಳ್ಳೆದಾಗುತ್ತದೆಂದು ನಮಗನ್ನಿಸಿದರೆ, ಮುಂದುವರಿಯಬೇಕಾದುದು ನಮ್ಮ ಕರ್ತವ್ಯ. ಮುಂದಿನ ಚುನಾವಣೆಯಲ್ಲಿ ವೋಟು ಗಿಟ್ಟಿಸಿಕೊಳ್ಳುವುದಕ್ಕಾಗಿ ಈ ಮಸೂದೆಯನ್ನು ಮೂಲೆಗೆ ತಳ್ಳುವುದು ಸರಿ ಅಲ್ಲ. ಪ್ರಾಮಾಣಿಕವೂ ಅಲ್ಲ ಎಂದು ನನ್ನ ಅನಿಸಿಕೆ. ಜನರಿಗೆ ಒಳ್ಳೆಯಯದಾಗಬೇಕೆಂಬುದೇ ನಮಗೆ ಮುಖ್ಯವಾಗಬೇಕು. ನಮ್ಮಲ್ಲಿ ಆ ಅಭಿಪ್ರಾಯ ಇರದಿದ್ದರೆ, ನಮ್ಮಲ್ಲಿ ಆ ಭಾವನೆ ಇರದಿದ್ದರೆ, ಯಾವುದೇ ಆಮೂಲಾಗ್ರ ಬದಲಾವಣೆಯನ್ನು ಕೊಡುವುದಕ್ಕೆ ನಮಗೆ ಆಗುವುದೇ ಇಲ್ಲ. ನಮ್ಮ ಜೀವನದ ಕ್ಷೇತ್ರ ಯಾವುದೇ ಇರಲಿ, ಒಂದು ಆಮೂಲಾಗ್ರ ಬದಲಾವಣೆ ಮಾಡ ಹೊರಟಾಗ ಕೆಲವೊಂದು ಪಟ್ಟಭದ್ರ ಹಿತಾಸಕ್ತಿಗಳು, ಈಗಾಗಲೇ ನೆಲೆಗೊಂಡಿರುವ ಕೆಲವೊಂದು ಸಂಪ್ರದಾಯಗಳು ಎದುರಾಗುತ್ತವೆ. ಅಂಥ ಬದಲಾವಣೆಗಳ ವಿರುದ್ಧ ಯಾವಾಗಲೂ ಕೂಗು ಇದ್ದೇ ಇರುತ್ತದೆ. ಅದಕ್ಕೆ ಹೆದರಿ, ನಾವು ಸುಧಾರಣೆಯನ್ನು ಬಿಟ್ಟುಬಿಟ್ಟರೆ, ನಮಗೆ ಏನನ್ನೂ ಬದಲಾಯಿಸಲು ಆಗುವುದೇ ಇಲ್ಲ.

ಹಿಂದೂ ಸಂಹಿತೆ ಮಸೂದೆ ವಿರುದ್ಧ ತುಂಬಾ ತುಂಬಾ ಹೇಳಲಾಗಿದೆ. ಈ ಮಸೂದೆಯನ್ನು ಬೆಂಬಲಿಸುತ್ತಿರುವ ಒಂದು ಒಳ್ಳೆಯ ಗುಂಪು ಕೂಡ–ಬುದ್ಧಿವಂತ, ಚಿಂತನಶೀಲ ಗುಂಪು– ಇದೆ. ಆ ಬುದ್ಧಿವಂತ, ಚಿಂತನಶೀಲ ಗುಂಪಿನಲ್ಲಿ ಮಹಿಳೆಯರಷ್ಟೇ ಇಲ್ಲ, ಅನೇಕ ಸಹೋದರರ ಬೆಂಬಲ ನಮಗಿದೆ. ಒಂದು ಆಮೂಲಾಗ್ರ ಬದಲಾವಣೆಯನ್ನು ತಂದಾಗ, ಯಾವುದೇ ಸುಧಾರಣೆಯನ್ನು ತರಬಯಸಿದಾಗ, ಒಂದು ಸಣ್ಣ ಪ್ರಜ್ಞಾವಂತ ಗುಂಪು, ಜನರಿಗೆ ತಿಳಿವಳಿಕೆ ಕೊಡುತ್ತದೆ, ಪ್ರಚಾರ ಮಾಡುತ್ತದೆ, ಅದಾದ ಕೆಲಕಾಲದ ನಂತರ, ಸಾರ್ವಜನಿಕ ಅಭಿಪ್ರಾಯ ವ್ಯಕ್ತವಾಗತೊಡಗುತ್ತದೆ. ಹಿಂದೂ ಸಂಹಿತೆ ವಿರುದ್ಧ ತುಂಬಾ ಅಭಿಪ್ರಾಯ ಇರಬಹುದು, ನಾವು ಏನನ್ನು ಮಾಡುವುದಕ್ಕೆ ಪ್ರಯತ್ನಪಡುತ್ತಿದ್ದೇವೆಯೋ ಅದು ನ್ಯಾಯಸಮ್ಮತವಾದುದಾಗಿದ್ದರೆ, ಸರಿಯಾದುದಾಗಿದ್ದರೆ, ಸಾರ್ವಜನಿಕ ಅಭಿಪ್ರಾಯ ನಮ್ಮ ಪರವಾಗಿರುತ್ತದೆ ಎನ್ನುವುದು ತುಂಬಾ ನಿಶ್ಚಿತ. ಸಾರ್ವಜನಿಕ ಅಭಿಪ್ರಾಯ ನಮ್ಮ ಪರವಾಗಿರುತ್ತದಷ್ಟೇ ಅಲ್ಲ, ಒಳ್ಳೆಯ ಮಸೂದೆಯನ್ನು ತಂದಿದ್ದಕ್ಕಾಗಿ ಕೆಲಕಾಲದ ನಂತರ ನಮಗೆ ಶುಭಹಾರೈಕೆಯೂ ವ್ಯಕ್ತವಾಗುತ್ತದೆ. (**ಒಬ್ಬರು ಮಾನ್ಯ ಸದಸ್ಯರು** : ಆ ಹಾರೈಕೆ ಈಗಾಗಲೇ ನಮ್ಮೊಂದಿಗೆ ಇದೆ) ತಮ್ಮೊಂದಿಗೆ ಬಹುಮತಾಭಿಪ್ರಾಯ ಇದೆಯೆಂದು ಅವರು ಹೇಳುತ್ತಾರೆ. ಇದೇ ನನ್ನ ಉತ್ತರ.

ಚರ್ಚೆಗೆ ಕಾವೇರಿದಾಗ ಅನೇಕ ಸಲ, ನಾವು, ಮಸೂದೆಯಲ್ಲಿ ಕೇವಲ ಉತ್ತರಾಧಿಕಾರದ ಮತ್ತು ವಿವಾಹದ ಕಲಮುಗಳಷ್ಟೇ ಅಲ್ಲ, ಇನ್ನೂ ಬೇರೆ ಇರುವುದನ್ನು ಮರೆತುಬಿಡುತ್ತೇವೆ. ಒಂದು ಏಕರೂಪದ, ಸಕಲ ವ್ಯವಸ್ಥೆಯುಳ್ಳ ಕಾನೂನನ್ನು ತರಲು ನಾವು ಪ್ರಯತ್ನ ಮಾಡಿದ್ದೇವೆ. ಸಕಲ ವ್ಯವಸ್ಥೆಯುಳ್ಳ ಈ

ಕಾನೂನಿನಲ್ಲಿ ಅಥವಾ ಸಂಹಿತೆಯಲ್ಲಿ, ನಾವು ಅನೇಕಾನೇಕ ಲೋಪದೋಷಗಳನ್ನು, ಅಸಮಾನತೆಗಳನ್ನು ಹಾಗೂ ಅನ್ಯಾಯಗಳನ್ನು ಸರಿಪಡಿಸಲು ಪ್ರಯತ್ನ ಮಾಡಿದ್ದೇವೆ. ಉದಾಹರಣೆಗೆ, ಈ ಬೆಳಗ್ಗೆ ಡಾ. ಅಂಬೇಡ್ಕರ್‌ರವರು ಎಲ್ಲರ ಮನಮುಟ್ಟುವಂತೆ ಮಾಡಿದ ತಮ್ಮ ಭಾಷಣದಲ್ಲಿ, ಪಾಲಕತ್ವ, ಪಾಲನೆಪೋಷಣೆ, ದತ್ತು ಮುಂತಾದ ಕಲಮುಗಳು ಸಮಾಜಕ್ಕೆ ಹೇಗೆ ಅನುಕೂಲಕರವಾಗುತ್ತವೆ ಎಂಬುದನ್ನು ಹೇಳಿದ್ದಾರೆ. ಈ ಮಸೂದೆಯನ್ನು ಒಟ್ಟಾರೆ ವಿರೋಧಿಸಿದವರು ಮಸೂದೆಯ ಒಳ್ಳೆಯ ಭಾಗವನ್ನು, ವಿವಾದಾತ್ಮಕ ಅಲ್ಲದ ಭಾಗವನ್ನು ಮರೆತುಬಿಡುತ್ತಿದ್ದಾರೆ, ಬೇರೆಯದಷ್ಟನ್ನೇ ಮನಸ್ಸಿನಲ್ಲಿಟ್ಟುಕೊಂಡು ಇಡೀ ಮಸೂದೆಯ ಮೇಲೆ ದಾಳಿ ಮಾಡುತ್ತಿದ್ದಾರೆ.

**ಶ್ರೀ ತಜಮುಲ್ ಹುಸೇನ್ :** ಪಟ್ಟಭದ್ರ ಹಿತಾಸಕ್ತಿಗಳು ಮಾತ್ರ ವಿರೋಧಿಸುತ್ತಿದ್ದಾರೆ.

**ಶ್ರೀಮತಿ ಸುಚೇತಾ ಕೃಪಲಾನಿ :** ಬಹುತೇಕ ವರ್ಗಗಳು ವಿರೋಧಿಸಿದ್ದಾರೆ. ಸಂಯುಕ್ತ ಕುಟುಂಬವನ್ನು ಒಡೆಯುವುದು, ಮಹಿಳೆಯರಿಗೆ ಸಂಪೂರ್ಣ ಹಕ್ಕನ್ನು ಕೊಡುವುದು ಈ ಎರಡು ವಿಷಯಗಳಿಗೆ ವಿರೋಧ ವ್ಯಕ್ತಮಾಡಿದ್ದಾರೆ. ಮೊದಲು, ನಾನು, ಎರಡನೆಯ ವಿಷಯದ ಬಗ್ಗೆ ಹೇಳುತ್ತೇನೆ. ಗಂಡಸರು, ಹೆಂಗಸರು ಸಮಾನರಾಗಿರುವಂತಹ, ಎಲ್ಲ ಜಾತಿಗಳ ಜನರೂ ಸಮಾನರಾಗಿರುವಂತಹ ಸಮಾಜವನ್ನು ನಾವು ಕಟ್ಟಬಯಸಿದ್ದೇವೆ. ಈ ಎಲ್ಲ ವರ್ಷಗಳಲ್ಲಿ ನಾವು ಕನಸು ಕಾಣುತ್ತಿದ್ದಂತಹ ಪರಿಪೂರ್ಣ ಜನತಂತ್ರವನ್ನು ಸಾಕಾರಗೊಳಿಸಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ಸಮಾಜದಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನ ಕೊಡಲು ನಾವು ವಾಗ್ದಾನ ಮಾಡಿದ್ದೇವೆ. ಗಂಡು ಹೆಣ್ಣಿನ ನಡುವಣ ತಾರತಮ್ಯವನ್ನು ತೆಗೆದುಹಾಕಲು ನಾವು ವಾಗ್ದಾನ ಮಾಡಿದ್ದೇವೆ. ಈ ವಾಗ್ದಾನ, ನಾವು ಹೊಸ ರಾಜ್ಯಾಂಗವನ್ನು ಜಾರಿಗೆ ತರುವ ಕಾಲದಿಂದ ಪ್ರಾರಂಭವಾಗುವುದಿಲ್ಲ. ಈ ವಾಗ್ದಾನಗಳು, ಕರಾಚಿ ನಿರ್ಣಯದಲ್ಲಿ ಸೇರಿದ್ದವು ಎಂಬುದನ್ನು ನಾನು ನಿಮಗೆ ನೆನಪು ಮಾಡಿಕೊಡಬಯಸುತ್ತೇನೆ. ಅದಾದ ಮೇಲೆ ನಾವು ಅಧಿಕಾರಕ್ಕೆ ಬಂದಾಗ, ಆಗಲೂ ಕೂಡ, ನಾವು, ಗಂಡು ಹೆಣ್ಣು ಎಂಬ ಆಧಾರದ ಮೇಲೆ ಯಾವ ತಾರತಮ್ಯವೂ ಇರಕೊಡದೆಂದು ಪುನಃ ಹೇಳಿದ್ದೆವು. ಪುರುಷರು, ಮಹಿಳೆಯರು ಸಮಸಮನಾಗಿ ಕೆಲಸ ಮಾಡಬೇಕಾಗಿರುವಾಗ, ರಾಷ್ಟ್ರದ ಸಮಾನ ಪ್ರಜೆಗಳಿಗಾಗಿ ಕರ್ತವ್ಯ ನೆರವೇರಿಸಬೇಕಾಗಿರುವಾಗ, ರಾಷ್ಟ್ರಕ್ಕೆ ಅವರ ಹೊಣೆಗಾರಿಕೆಗಳನ್ನು ಈಡೇರಿಸಬೇಕಾಗಿರುವಾಗ ಮಹಿಳೆಯರಿಗೆ ಆಸ್ತಿ ಹಕ್ಕಿನ ವಿಷಯದಲ್ಲಿ ಅಂತಹ ತಾರತಮ್ಯದ ನಿಯಮಗಳನ್ನು ನಾವು ಇರಗೊಡುವುದು ಹೇಗೆ ಸಾಧ್ಯ? ಮಹಿಳೆಗೆ ಆಸ್ತಿಯಲ್ಲಿ ಸಮಾನ ಭಾಗ ಇರದಿದ್ದರೆ, ರಾಷ್ಟ್ರಕ್ಕೆ ಆಕೆ ಹೊಣೆಗಾರಿಕೆಗಳನ್ನು ಈಡೇರಿಸಬೇಕೆಂದು ನೀವು ನಿರೀಕ್ಷೆ ಮಾಡಲಾಗದು. ನಾವು, ಯಾವುದೇ ಬದಲಾವಣೆ ಮಾಡಿದಾಗ, ಈಗಾಗಲೇ ನೆಲೆಗೊಂಡಿರುವ ಸಂಪ್ರದಾಯಗಳು, ನಿಯಮಗಳು ಅಸ್ತವ್ಯಸ್ತಗೊಳ್ಳಬಹುದು. ಅದರಿಂದ, ಕೆಲವು ರೀತಿಯಲ್ಲಿ ಮಾರ್ಗಪಲ್ಲಟ, ಅನಾನುಕೂಲಗಳು ಆಗಬಹುದು. ನಾವು ಅವುಗಳನ್ನು ಸಹಿಸಿಕೊಳ್ಳಬೇಕು, ಅವು ಅನಿವಾರ್ಯವೆಂದು ಭಾವಿಸಬೇಕು. ನಮಗಾಗುವ ಅನಾನುಕೂಲಗಳನ್ನೇ ದೊಡ್ಡದು ಮಾಡಿ ಮಹತ್ವ ಕೊಡಹೋಗಬಾರದು. ಸ್ಮೃತಿಗಳು, ಮಹಿಳೆಯರಿಗೆ ಆಸ್ತಿ ಹಕ್ಕನ್ನು ಮಾನ್ಯ ಮಾಡಿವೆಯೆಂದು ಡಾ. ಅಂಬೇಡ್ಕರ್ ಮತ್ತು ಇತರರು ಹೇಳಿದ್ದಾರೆ. ಯಾವುದನ್ನು ಕಾನೂನು ಕೊಟ್ಟಿದೆಯೋ, ರೂಢಿ ಅದನ್ನು ವಂಚಿಸಿದೆ, ರೂಢಿಯಿಂದ ಆ ಹಕ್ಕಿನ ಉಲ್ಲಂಘನೆ ಆಗಿದೆ. ನಾವು ಅದನ್ನು ಮತ್ತೆ ಕೊಡಲು ಪ್ರಯತ್ನ ಮಾಡುತ್ತಿದ್ದೇವೆ. ಹಿಂದೂ ಧರ್ಮದ, ಹಿಂದೂ ಸಂಪ್ರದಾಯದ, ಹಿಂದೂ ನ್ಯಾಯಪದ್ಧತಿಯ ಮೂಲಭೂತ ತತ್ತ್ವಗಳ ವಿರುದ್ಧ ನಾವು ಹೋಗುತ್ತಿಲ್ಲ. ಹಿಂದೂ ನ್ಯಾಯಪದ್ಧತಿಯು ನಮಗೆ ಏನನ್ನು ಕೊಟ್ಟಿತ್ತೋ, ಅದು ನಮಗೆ ಸಿಗದಂತೆ ವಂಚಿಸಲಾಗಿತ್ತೋ ಅದನ್ನು ಮತ್ತೆ ಪಡೆಯಲು ನಾವು ಪ್ರಯತ್ನ

ಮಾಡುತ್ತಿದ್ದೇವೆ. ಅಂದರೆ ಈ ಎಲ್ಲ ವರ್ಷಗಳಲ್ಲಿ ಸಮಾಜವು ಕೊಡದೆ ವಂಚಿಸಿತ್ತೋ ಅದನ್ನೇ ನೀವು ಈಗ ನಮಗೆ ಕೊಡುತ್ತಿದ್ದೀರಿ. ಬಹಳ ಕಾಲದಿಂದ ಕೊಡದಿದ್ದ ನ್ಯಾಯ ಅದು.

ಆಧುನಿಕ ಕಾಲಕ್ಕೆ ಬಂದರೆ, ೧೯೩೭ರ ಕಾಯ್ದೆಯಲ್ಲಿ ನೀವು ಹೆಂಡತಿಗೆ, ಸೊಸೆಗೆ, ಮೊಮ್ಮಗನ ಹೆಂಡಿತಿಗೆ, ಯಾರ‍್ಯಾರಿಗೋ ಆಸ್ತಿ ಹಕ್ಕನ್ನು ಕೊಟ್ಟಿದ್ದೀರಿ. ಅದರಿಂದ, ಬಿಟ್ಟುಬಿಟ್ಟಿದ್ದ ಒಂದೇ ಒಂದು ವ್ಯಕ್ತಿ ಯಾರೆಂದರೆ, ಪಾಪ ಮಗಳು. ಈಗ ಮಗಳನ್ನು ಇಲ್ಲಿ ಸೇರಿಸಬೇಕಾದುದು ಯೋಗ್ಯ. ಆದ್ದರಿಂದ, ಅದರ ಬಗ್ಗೆ ಅಷ್ಟೊಂದು ವಾದ ಮಾಡಬೇಕಾದುದು ಏನಿದೆ ಎನ್ನುವುದೇ ನನಗೆ ಕಂಡುಬರುತ್ತಿಲ್ಲ. ಬೇರೆ ಹೆಂಗಸರಿಗೆ ಈ ಹಕ್ಕನ್ನು ನಾವು ಕೊಟ್ಟಿರುವಾಗ, ಗಂಡನ ಆಸ್ತಿಯಿಂದಲೂ ಹೆಂಡತಿಗೆ ಆಸ್ತಿ ಬರುತ್ತಿರುವಾಗ, ಮಗಳಿಗೆ ತಂದೆಯ ಆಸ್ತಿಯಲ್ಲಿ ಭಾಗ ಬರಲಿ. ಅದು ತೀರಾ ಸಹಜ ಹಾಗೂ ಸರಿಯಾದುದು.

**ಸನ್ಮಾನ್ಯ ಶ್ರೀ ಜಗಜೀವನರಾಂ :** ಆಕೆ, ಬೇರೆಯವರನ್ನು ಅವಲಂಬಿಸಬೇಕೆಂದು ಅವರು ಬಯಸುತ್ತಾರೆ.

**ಶ್ರೀಮತಿ ಸುಚೇತಾ ಕೃಪಲಾನಿ :** ಸಂಯುಕ್ತ ಕುಟುಂಬದ ಬಗ್ಗೆ ತುಂಬಾ ಕಳಕಳಿ ವ್ಯಕ್ತವಾಗಿದೆ. ಅಷ್ಟೊಂದು ಕಳಕಳಿ ಏಕಿದೆಯೆಂಬುದು ನನಗೆ ಗೊತ್ತಾಗುತ್ತಿಲ್ಲ. ನನಗೆ ಗೊತ್ತಿರುವಂತಹ ಬಹುತೇಕ ಜನರು ಸಂಯುಕ್ತ ಕುಟುಂಬದಿಂದ ಹೊರಬರಲು ಕಾತುರದಿಂದಿದ್ದಾರೆ. ಗಂಡುಮಕ್ಕಳು ತಂದೆಯ ಬಳಿ ಇರಲು ಇಷ್ಟಪಡುವುದಿಲ್ಲ. ದೇಶದ ಎಲ್ಲ ಕಡೆಯಲ್ಲಿ ಬಹುತೇಕ ಕುಟುಂಬಗಳು ಅಸ್ತವ್ಯಸ್ತವಾಗಿವೆ. ಹೀಗಾಗಿ, ಸಂಯುಕ್ತ ಕುಟುಂಬ ಪದ್ಧತಿಯು, ನನ್ನ ಪ್ರಕಾರ, ತೀವ್ರಗತಿಯಲ್ಲಿ ನಶಿಸಿಹೋಗುತ್ತಿದೆ. ಬೆಳಗ್ಗೆ ಡಾ. ಅಂಬೇಡ್ಕರ್ ಹೇಳಿದಂತೆ, ಸಂಯುಕ್ತ ಕುಟುಂಬದ ಬಗ್ಗೆ ಕಾನೂನಿನ ನಿಲುವು ದೋಷಪೂರ್ಣವಾದುದಾಗಿದೆ. ಮಿತಾಕ್ಷರ ಪದ್ಧತಿಯಲ್ಲೂ ಕೂಡ, ಸಂಯುಕ್ತ ಕುಟುಂಬದ ಒಬ್ಬ, ತನ್ನ ಇಚ್ಛೆ ವ್ಯಕ್ತಪಡಿಸಿ, ಬೇರೆ ಆಗಬಹುದಿತ್ತು.

ನೀವೆಲ್ಲರೂ, ಅಷ್ಟೊಂದು ಬಲವಾಗಿ ಪ್ರತಿಪಾದಿಸುತ್ತಿರುವ ಸಂಯುಕ್ತ ಕುಟುಂಬ ಎಲ್ಲಿದೆ ಎಂದು ನಾನು ಕೇಳಬಯಸುತ್ತೇನೆ.

ಅರಕ್ಷಿತ ಮಹಿಳೆಗೆ ಸಂಯುಕ್ತ ಕುಟುಂಬವು ಕೊಟ್ಟಿರುವ ರಕ್ಷಣೆ ಬಗ್ಗೆ ತುಂಬಾ ಹೇಳಲಾಗಿದೆ. ಹಿಂದೆ, ಸಂಯುಕ್ತ ಕಟುಂಬದಲ್ಲಿ ಅರಕ್ಷಿತ ಮಹಿಳೆಗೆ ರಕ್ಷಣೆ ಇತ್ತು ಎನ್ನುವುದು ನನಗೆ ಗೊತ್ತು. ಈಗಲೂ ಕೂಡ ಕೆಲವರಿಗೆ ರಕ್ಷಣೆ ಇದೆ. ಆದರೆ, ಸಾವಿರಾರು ಮಹಿಳೆಯರು, ಸಂಯುಕ್ತ ಕುಟುಂಬದಲ್ಲಿ ಯಾವುದೇ ಆಶ್ರಯ ಇಲ್ಲದೆ, ತನ್ನದೇ ಹಣಕಾಸು ಮೂಲ ಇಲ್ಲದೆ, ನಾಚಿಕೆಯಿಂದ, ಅವಮಾನದ ಜೀವನ ಸಾಗಿಸುತ್ತಿದ್ದಾರೆ. ಸಾಮಾಜಿಕ ಕಾರ್ಯಗಳಲ್ಲಿ ತೊಡಗಿರುವ ನಾವು, ಅನೇಕ ಮಹಿಳೆಯರು, ಅಂತಹ ಹಲವಾರು ಸಂದರ್ಭ, ಸನ್ನಿವೇಶಗಳನ್ನು ನೋಡಿದ್ದೇವೆ. ಮಹಿಳೆಗೆ ಆಕೆಯ ಭಾಗವನ್ನು ಕೊಡುವುದು ಸರಿ, ನ್ಯಾಯಸಮ್ಮತವಾದುದಷ್ಟೇ ಅಲ್ಲ, ನೀವು ಅಷ್ಟೊಂದು ಬಲವಾಗಿ ಪ್ರತಿಪಾದಿಸುತ್ತಿರುವ ಹಿಂದೂ ಸಮಾಜವನ್ನು ಸಂರಕ್ಷಿಸಬೇಕೆಂಬ ಆಶಯ ನಿಮಗಿದ್ದರೆ, ಆಕೆಗೆ, ಆಕೆಯ ಭಾಗವನ್ನು ಕೊಡುವುದು ತುಂಬಾ ಅಗತ್ಯ.

**ಸನ್ಮಾನ್ಯ ಶ್ರೀ ಜಗಜೀವನರಾಂ :** ಇನ್ನೂ ಹೆಚ್ಚಿಗೆ ಕೊಡಬೇಕು.

**ಶ್ರೀಮತಿ ಸುಚೇತಾ ಕೃಪಲಾನಿ :** ಕೊಟ್ಟರೆ ಒಳ್ಳೆಯದು, ಸ್ವಲ್ಪ ಹೆಚ್ಚಿಗೆ ಕೊಡಿ. ನೀವು ಹಿಂದೆ, ನಮಗೆ ಕೊಡದೆ ವಂಚಿಸಿದ್ದಿರಿ. ಈಗ ಸರಿದೂಗಿಸಿ.

ಮದುವೆ ಬಗ್ಗೆ ಹೇಳುವುದಾದರೆ, ಮಸೂದೆಯು ಗೊಂದಲ, ಅನಿಶ್ಚಿತತೆಯನ್ನು ಹೋಗಲಾಡಿಸಲು ಏಕರೂಪದ ಪದ್ಧತಿಯನ್ನು ತರಲು ಉದ್ದೇಶಿಸಿದೆ. ಸಾಂಪ್ರದಾಯಿಕ ಪದ್ಧತಿಗಳನ್ನು ಅನುಸರಿಸುತ್ತಿರುವವರಿಗೆ ಇದರಿಂದ ಸ್ವಲ್ಪ ಸಮಸ್ಯೆ ಆಗಬಹುದು. ಇದರಲ್ಲಿ ಹೇಳಿರುವ ಶಾಸ್ತ್ರೋಕ್ತ ಹಾಗೂ ಸಿವಿಲ್ ವಿವಾಹಗಳನ್ನು ಕಡುಬಡವರು ಅತ್ಯಂತ ಹಿಂದುಳಿದ ವರ್ಗಗಳ ಜನರಲ್ಲಿ ಆಚರಣೆಗೆ ತರಬಹುದು. ಅದರಿಂದ, ಯಾವುದೇ

ಭಾರೀ ಸಮಸ್ಯೆ ಹುಟ್ಟಿಕೊಳ್ಳುತ್ತದೆ ಎಂದು ನನಗೆ ಅನಿಸುವುದಿಲ್ಲ. ಶಾಸ್ತ್ರೋಕ್ತ ಮದುವೆಗಳನ್ನು ರಿಜಿಸ್ಟ್ರೇಷನ್ ಮಾಡುವುದಕ್ಕೆ ಕೆಲವೊಂದು ಆಕ್ಷೇಪಣೆ ಇದೆ. ಅದು, ಸಂಪೂರ್ಣವಾಗಿ ಭಾವನಾತ್ಮಕ. ಏಕೆಂದರೆ, ರಿಜಿಸ್ಟ್ರೇಷನ್ ಮಾಡಿಸುವುದಾದರೆ, ಮಾಡಿಸುವುದಕ್ಕೆ ಅನುಮತಿ ಕೊಡಲಾಗುತ್ತದೆ. ರಿಜಿಸ್ಟ್ರೇಷನ್ ಅವಕಾಶವನ್ನು ನೀವು ಬಳಸಿಕೊಳ್ಳಬಯಸದಿದ್ದರೆ, ಬಳಸಿಕೊಳ್ಳದಿರುವುದು ನಿಮಗೇ ಸೇರಿದ್ದು.

**ಒಬ್ಬರು ಮಾನ್ಯ ಸದಸ್ಯರು :** ಅದು ಕಡ್ಡಾಯ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಕಡ್ಡಾಯ ಏನಿಲ್ಲ.

**ಶ್ರೀ ತಜಮುಲ್ ಹುಸೇನ್ :** ಕಡ್ಡಾಯ ಏನಿಲ್ಲ, ಇಬ್ಬರಲ್ಲಿ ಯಾರಾದರೂ ಮಾಡಿಸಬಹುದು.

**ಶ್ರೀಮತಿ ಸುಚೇತಾ ಕೃಪಲಾನಿ :** ನಾನು, ತಪ್ಪಾಗಿ ಹೇಳಿದ್ದರೆ, ಡಾ. ಅಂಬೇಡ್ಕರ್‌ರವರು, ಆ ತಪ್ಪನ್ನು ಸರಿಪಡಿಸಿ ಸರಿಯಾಗಿ ಹೇಳುತ್ತಾರೆ. ಅದನ್ನು ರಕ್ಷಣೆಯಾಗಿ ಸೇರಿಸಲಾಗಿದೆ. ಅಷ್ಟೇ.

ಇನ್ನು ಅಂತರಜಾತೀಯ ಹಾಗೂ ಸಗೋತ್ರ ಮದುವೆಗಳ ಬಗ್ಗೆ ಹೇಳುತ್ತೇನೆ. ನನಗಿಂತ ಮೊದಲು ಮಾತನಾಡಿದ ನನ್ನ ಸ್ನೇಹಿತರ ಮಾತುಗಳನ್ನು ನಾನು ಆಲಿಸುತ್ತಿದ್ದೆ. ಸಗೋತ್ರ ಮತ್ತು ಅಂತರಜಾತೀಯ ಮದುವೆಗಳಿಗೆ ಅವರು ಎತ್ತಿರುವ ಆಕ್ಷೇಪಣೆಯ ವಾಗ್ವೈಖರಿಯನ್ನು ನಾವು ಹೇಗೆ ಒಪ್ಪಿಕೊಳ್ಳಬೇಕೆಂಬುದೇ ನನಗೆ ಗೊತ್ತಾಗುತ್ತಿಲ್ಲ. ಏಕೆಂದರೆ, ಅಂತಹ ಬಹಳಷ್ಟು ಮದುವೆಗಳು ಸಮಾಜದಲ್ಲಿ ಆಗುತ್ತಿವೆ. ಅಂತಹ ಮದುವೆಗಳು ಆಗದೇ ಹೋಗಿದ್ದಿದ್ದರೆ ಸರಿ ಇರುತ್ತಿತ್ತು. ಆದರೆ, ಅಂತಹ ಮದುವೆಗಳು ಬೇಕಾದಷ್ಟು ಆಗುತ್ತಿರುವಾಗ, ನಾವು, ಕ್ರಮಬದ್ಧ ಅಲ್ಲದ ಅಂತಹ ಮದುವೆ ಆಗುವಂತೆ ಅವರಿಗೆ ಹೇಳಬೇಕಾಗುತ್ತದೆ, ಇಲ್ಲವೇ ಹಿಂದೂ ಚೌಕಟ್ಟಿನಿಂದ ಅವರನ್ನು ಹೊರ ಹಾಕಬೇಕಾಗುತ್ತದೆ ಅಥವಾ ಬೇರೆ ಕಡೆ ಹೋಗಿ ಎಂದು ಹೇಳಬೇಕಾಗುತ್ತದೆ ಇಲ್ಲವೇ ಅವರು ಸಿವಿಲ್ ರಿಜಿಸ್ಟ್ರೇಷನ್ ಆಫೀಸಿಗೆ ಹೋಗಬೇಕಾಗುತ್ತದೆ, ಹಾಗೆ ಮದುವೆ ಆಗಬೇಕಾಗುತ್ತದೆ. ಅದಿರುವಾಗ, ವಾಸ್ತವಿಕತೆಯನ್ನು ಏಕೆ ಒಪ್ಪಿಕೊಳ್ಳಬಾರದು? ಅದೇ ಆಚರಣೆಯಲ್ಲಿರುವಾಗ, ಅದನ್ನೇಕೆ ಮಾನ್ಯ ಮಾಡಬಾರದು, ಅದಕ್ಕೆ ಕಾನೂನು ಮಾನ್ಯತೆ ಏಕೆ ಕೊಡಬಾರದು? ಹಿಂದೂ ಚೌಕಟ್ಟಿನಲ್ಲಿ ಅಂತಹ ಜಾತೀಯ ಮತ್ತು ಸಗೋತ್ರ ಮದುವೆಗಳಿಗೆ ಅವಕಾಶ ಕೊಡುವಷ್ಟು ಭಾರತೀಯ ಸಮಾಜ ಬದಲಾವಣೆಗೊಂಡಿರುವಾಗ, ಈ ಸಂದರ್ಭದಲ್ಲಿ, ಅದೇ ಸರಿ.

ಒಬ್ಬಳೇ ಹೆಂಡತಿ, ಒಬ್ಬನೇ ಗಂಡ ಪದ್ಧತಿ ಬಗ್ಗೆ ಹೇಳುವುದಾದರೆ, ಆ ಪದ್ಧತಿಯನ್ನು ಸಮಾಜವು ಸಂಪೂರ್ಣವಾಗಿ ಒಪ್ಪಿಕೊಂಡಿದೆ. ಅನೇಕ ಹೆಂಡತಿಯರನ್ನು ಹೊಂದುವ ಪದ್ಧತಿಯನ್ನು ಕೀಳಾಗಿ ಕಾಣಲಾಗುತ್ತಿದೆ. ಅಲ್ಲೊಂದು, ಇಲ್ಲೊಂದು ಅಂಥ ಪ್ರಕರಣಗಳಿರಬಹುದಾದರೂ, ಅನೇಕ ಹೆಂಡತಿಯನ್ನು ಹೊಂದುವ ಪದ್ಧತಿಗೆ ಸಮಾಜದಲ್ಲಿ ಸ್ಥಾನ ಇಲ್ಲ. ಹಿಂದೂಗಳಲ್ಲಿ ಬಹುಸಂಖ್ಯಾತರಲ್ಲಿ ಆಚರಣೆಯಲ್ಲಿರುವ ಈಗಿನ ಪದ್ಧತಿಯನ್ನು ನಾವು ಮಾನ್ಯ ಮಾಡುತ್ತೇವೆ, ಕಾನೂನು ಮಾನ್ಯತೆ ಸಹ ಕೊಡುತ್ತೇವೆ. ಎಲ್ಲಕ್ಕಿಂತ ಮಿಗಿಲಾಗಿ, ಗಂಡಸರು ಹೆಂಗಸರು ಸಮಾನರಾಗಿರುವಂತಹ ಸಮಾಜವನ್ನು ರೂಪಿಸಲು ನಾವು ಪ್ರಯತ್ನಪಡುತ್ತಿದ್ದೇವೆ. ಗಂಡಸರಿಗೇ ಒಂದು ರೀತಿಯ ಹೆಂಗಸರಿಗೇ ಇನ್ನೊಂದು ರೀತಿಯ ನೈತಿಕ ನಿಬಂಧನೆಗಳಿಗೆ ನಾವು ಆಸ್ಪದ ಕೊಡಬಾರದು. ಈ ಮಸೂದೆಯನ್ನು ತಂದಿರುವುದರಿಂದ ಗಂಡಸರಿಗೆ ಸಂತೋಷ ಆಗಬೇಕು. ಏಕೆಂದರೆ, ಒಬ್ಬನೇ ಗಂಡ, ಒಬ್ಬಳೇ ಹೆಂಡತಿ ಪದ್ಧತಿಯನ್ನು ತರುತ್ತಿರುವುದರಿಂದ, ನಾವು, ಗಂಡಸರ ಗುಣ ಶೀಲ, ಹೆಂಗಸರ ಗುಣ, ಶೀಲ ಸಮಾನವಾಗಿರುವಂತೆ ಮಾಡುತ್ತಿದ್ದೇವೆ. ಇದಕ್ಕಾಗಿ ಗಂಡಸರು ನಮಗೆ ಕೃತಜ್ಞರಾಗಿರಬೇಕೆಂಬುದು ನನ್ನ ಅನಿಸಿಕೆ.

**ಒಬ್ಬರು ಸನ್ಮಾನ್ಯ ಸದಸ್ಯರು :** ತುಂಬಾ ಕೃತಜ್ಞತೆಗಳು. ನಾವು ಬಹು ಸುಲಭವಾಗಿ ವಿಚ್ಛೇದನ

ಪಡೆಯಬಹುದು, ಮತ್ತೆ ಮದುವೆ ಆಗಬಹುದು.

**ಶ್ರೀಮತಿ ಸುಚೇತಾ ಕೃಪಲಾನಿ :** ವಿಚ್ಛೇದನದ ಬಗ್ಗೆ ಹೇಳುವುದಾದರೆ, ಕರ್ಮಠ ಸಂಪ್ರದಾಯಸ್ಥರ, ಗಂಡಸರ, ಹೆಂಗಸರ ಮನೋಭಾವನೆಗಳನ್ನು ನಾವು ಅಲ್ಲಗಳೆಯುವುದಿಲ್ಲವಾದರೂ, ಪರಾಮರ್ಶೆ ಮಾಡಿ ನೋಡಿದರೆ, ವಿಚ್ಛೇದನದ ಬಗ್ಗೆ, ನಮ್ಮ ಪ್ರಾಚೀನ ಗ್ರಂಥಗಳೂ ಹೇಳಿವೆ. ವಿಚ್ಛೇದನಕ್ಕೆ ನಾವು ಅವಕಾಶ ಕೊಟ್ಟಿರುವ ಕಾರಣಗಳು ತುಂಬಾ ಸಮಂಜಸವಾದುವುಗಳು ಹಾಗೂ ನ್ಯಾಯೋಚಿತವಾದವುಗಳು. ಪಾಶ್ಚಿಮಾತ್ಯ ದೇಶಗಳ ಕೆಲವೊಂದು ಭಾಗಗಳಲ್ಲಿರುವಂತೆ, ಕಾಲ್ಪನಿಕ ಆಧಾರಗಳ ಮೇಲೆ ವಿಚ್ಛೇದನಕ್ಕೆ ನಾವು ಅವಕಾಶ ಕೊಟ್ಟಿಲ್ಲ. ತೀರಾ ಗುರುತರ ಸಂದರ್ಭ, ಸನ್ನಿವೇಶಗಳಲ್ಲಿ ಮಾತ್ರವೇ ವಿಚ್ಛೇದನಕ್ಕೆ ಅವಕಾಶ ಕೊಡುವಂತಹ ವಿಧಾನವನ್ನು ರೂಪಿಸಲು ಎಚ್ಚರಿಕೆ ತೆಗೆದುಕೊಳ್ಳಲಾಗಿದೆ. ವಿಚ್ಛೇದನಕ್ಕೆ ಅವಕಾಶ ಇರುವ, ಬರೋಡ, ತಿರುವಾಂಕೂರು, ಕೊಚ್ಚಿನ್, ಮಲಬಾರ್‌ಗಳಲ್ಲಿರುವ ದಾಖಲೆಗಳನ್ನು ನಾವು ನೋಡಿದರೆ, ಕೆಲವೇ ಕೆಲವರು ಜನರು ಕಾನೂನಿನ ಅನುಕೂಲ ಪಡೆದುಕೊಂಡಿದ್ದಾರೆ. ಅಸಾಧಾರಣ ಸನ್ನಿವೇಶಗಳಲ್ಲಿ, ಮಾತ್ರವೇ, ತುಂಬಾ ಕಷ್ಟಕರ ಪರಿಸ್ಥಿತಿಯಿಂದ ಬಿಡಿಸಿಕೊಳ್ಳಲು ಅದು ಜನರ ನೆರವಿಗೆ ಬರುತ್ತದೆ. ಹಿಂದೂ ಸಾಮಾಜಿಕ ಸಂಪ್ರದಾಯ ಎಂಥದ್ದೆಂದರೆ, ನಾವು ಹುರುಳಿಲ್ಲದ ಕಾರಣಗಳನ್ನು ಹಿಡಿದುಕೊಂಡು ನ್ಯಾಯಾಲಕ್ಕೆ ಧಾವಿಸಿ, ಮದುವೆಯನ್ನು ಒಡೆಯಲಾಗದು. ವಿಚ್ಛೇದನದ ಹಕ್ಕನ್ನು ಕೊಡುವುದರಿಂದ ಹಿಂದೂಗಳ ಕುಟುಂಬ ಜೀವನ ಹಾಳಾಗುವುದಕ್ಕೆ ಆಸ್ಪದವಾಗುತ್ತದೆಂದು ಜನರು ಭಯಪಡುತ್ತಿರುವುದಕ್ಕೆ ಏನೇನೂ ಸಮರ್ಥನೆ ಇಲ್ಲ.

ಹಿಂದೂಗಳಲ್ಲಿ ಶೇ. ೯೦ರಷ್ಟು ಜನರಲ್ಲಿ ವಿಚ್ಛೇದನ ಪದ್ಧತಿ ಇದೆ, ಅದನ್ನು ಇತರ ಶೇ. ೧೦ ರಷ್ಟು ಜನರಿಗೆ ಏಕೆ ವಿಸ್ತರಿಸಬಾರದು ಎಂದು ಡಾ. ಅಂಬೇಡ್ಕರ್‌ರವರು ಮಾಡಿದ ವಾದದ ಬಗ್ಗೆ ನಾನು ಈಗ ಹೇಳುತ್ತೇನೆ. ಈ ಶೇ. ೧೦ರಷ್ಟು ಜನರಲ್ಲೂ ವಿಚ್ಛೇದನಗಳು ಆಗುತ್ತಿದ್ದರೆ, ವಿಸ್ತರಿಸುವುದು ಸರಿ ಮತ್ತು ನ್ಯಾಯಸಮ್ಮತ, ವಿಚ್ಛೇದನ ಪ್ರಕರಣಗಳೇ ಇಲ್ಲದಿರುತ್ತಿದ್ದರೆ, ಆಗ ನನಗೆ ಅದು ಅರ್ಥವಾಗುತ್ತಿತ್ತೇನೋ. ಆದರೆ, ನಮ್ಮ ಹೆಂಗಸರಿಗೆ, ಗಂಡಸರಿಗೆ ವಿಚ್ಛೇದನ ಬೇಕಾದಾಗ, ಅವರು ಹಿಂದೂ ಚೌಕಟ್ಟಿನಿಂದ ಹೊರಹೋಗುತ್ತಾರೆ, ಮುಸ್ಲಿಂ ಅಥವಾ ಕ್ರಿಶ್ಚಿಯನ್ ಆಗುತ್ತಾರೆ. ವಿಚ್ಛೇದನಕ್ಕಾಗಿ ಮಾತ್ರವೇ ಆ ಧರ್ಮವನ್ನು ಬಳಸಿಕೊಂಡು ಆ ಧರ್ಮಗಳಿಗೆ ಅವಮಾನ ಮಾಡುತ್ತಾರೆ. ಆದ್ದರಿಂದ, ನಾವು ಈಗಿರುವ ಸನ್ನಿವೇಶಗಳನ್ನು ಅರ್ಥಮಾಡಿಕೊಂಡು ವಿಚ್ಛೇದನಕ್ಕೆ ಅವಕಾಶ ಕೊಡಬೇಕಾಗುತ್ತದೆ.

ಸರ್, ನಾವು ಮಹಿಳೆಯರು, ತಮ್ಮ ಹಕ್ಕುಗಳಿಗಾಗಿ ಒತ್ತಾಯ ಮಾಡುತ್ತಿದ್ದರೂ, ತುಂಬಾ ಒಳ್ಳೆಯದನ್ನು, ತುಂಬಾ ಶ್ರೇಯಸ್ಕರವಾದುದನ್ನು ನಾವು ಎಂದೂ ಮರೆತಿಲ್ಲವೆಂಬುದನ್ನು ಇಲ್ಲಿನ ನನ್ನ ಸ್ನೇಹಿತರಿಗೆ ಹೇಳುವುದನ್ನು ಬಿಟ್ಟರೆ, ಇನ್ನೇನನ್ನೂ ನಾನು ಹೆಚ್ಚಿಗೆ ಹೇಳಲಾರೆ. ಈ ವಿಷಯದಲ್ಲಿ ನಾವು ತುಂಬಾ ಸಂಪ್ರದಾಯವಾದಿಗಳು. ನಮ್ಮ ರಾಜಕೀಯ ಹಕ್ಕುಗಳ ಬಗ್ಗೆ ಕೂಡ, ನಾವು ತಪ್ಪೆಂದು ಭಾವಿಸಿದಂತಹ ವಿಷಯಗಳಿಗೆ ನಾವು ಎಂದೂ ಉತ್ತೇಜನ ಕೊಟ್ಟಿಲ್ಲ ಎಂಬುದು ನಿಮಗೆ ಗೊತ್ತೇ ಇದೆ. ಬ್ರಿಟಿಷರು ಇದ್ದಾಗಲೂ ಕೂಡ, ನಾವು ಯಾವಾಗಲೂ ಸಂಯುಕ್ತ ಚುನಾಯಿತ ಸಮುದಾಯ ವ್ಯವಸ್ಥೆಯ ಪರವಾಗಿದ್ದೆವು. ಹೊಸ ರಾಜ್ಯಾಂಗದಲ್ಲೂ ಕೂಡ ನಮಗೆ ಪ್ರತ್ಯೇಕ ಹಕ್ಕುಗಳಿರಬೇಕೆಂದು ನಾವು ಯಾವಾಗಲೂ ಕೇಳಿದವರೇ ಅಲ್ಲ. ಅವು, ಇಡೀ, ಸಮಾಜದ ಒಳಿತಿಗೆ ಪ್ರತಿಕೂಲಕರವೆಂದು ನಮಗೆ ಅನ್ನಿಸಿದ್ದಿದ್ದರೆ, ನಾವು ಅವುಗಳನ್ನು ಕೇಳುತ್ತಲೇ ಇರಲಿಲ್ಲ. ಹಿಂದೂ ಮಹಿಳೆಗೆ, ಪ್ರಯೋಜನವಾದರೆ, ಹಿಂದೂ ಸಮಾಜಕ್ಕೂ ಪ್ರಯೋಜನವಾಗುತ್ತದೆಂಬುದು ನನ್ನ ನಂಬಿಕೆ. ಇದರಿಂದ ತುಂಬಾ ಒಳ್ಳೆಯದಾಗುತ್ತದೆ. ಅದಕ್ಕೋಸ್ಕರವೇ,

ನಾವು ಈ ವಿಚಾರವನ್ನು ಹೇಳುತ್ತಿದ್ದೇವೆ.

ನಮ್ಮ ಪುರುಷರೂ ಕೂಡ, ನಮಗೆ ಎಲ್ಲ ರೀತಿಯ ಸಹಕಾರ ಕೊಡುತ್ತಿದ್ದಾರೆ, ನೆರವಾಗುತ್ತಿದ್ದಾರೆ, ನಮಗೆ ಒಳ್ಳೆಯದಾಗಬೇಕೆನ್ನುವುದರ ಬಗ್ಗೆ ಅವರ ವಿರೋಧವೇನಿಲ್ಲ. ಮಹಾತ್ಮಗಾಂಧಿಯವರ ದಯಾಪೂರ್ಣ ಪ್ರಭಾವವೇ ಇದಕ್ಕೆ ಕಾರಣವಿರಬಹುದು. ಮಹಾತ್ಮಗಾಂಧಿಯವರು ಮಹಿಳಾ ಹಕ್ಕುಗಳ ಪ್ರಬಲ ಪ್ರತಿಪಾದಕರೆಂಬದು ನಿಮಗೆಲ್ಲರಿಗೂ ಗೊತ್ತಿದೆ. ಅವರು ಹಾಕಿಕೊಟ್ಟ ಪರಂಪರೆಯನ್ನು ನಮ್ಮ ಪುರುಷರು ಅನುಸರಿಸುತ್ತಿದ್ದಾರೆ. ಗಾಂಧೀಜಿಯವರ ಪ್ರಭಾವದಿಂದಾಗಿ, ನಮ್ಮ ನಾಯಕರುಗಳ ಅನುಕಂಪದಿಂದಾಗಿ ಬೇರೆ ದೇಶಗಳ ಮಹಿಳೆಯರು ಹೋರಾಟ ಮಾಡಿದ ಹಾಗೆ, ನಮಗೆ ಹೋರಾಟ ಮಾಡುವ ಪ್ರಮೇಯವೇ ಒದಗಿಬರಲಿಲ್ಲ. ಈಗ, ನಾವು ಒಳ್ಳೆಯ ಪರಂಪರೆಯನ್ನು ಅನುಸರಿಸುತ್ತೇವೆಂಬ, ಈ ಎಲ್ಲ ವರ್ಷಗಳಲ್ಲಿ ನಮಗೆ ಸಿಕ್ಕಿದ ಸಹಕಾರ ಭಾವನೆಯನ್ನೇ ನಾವು ಉಳಿಸಿಕೊಳ್ಳುತ್ತೇವೆಂಬ ಮತ್ತು ಈ ಮಸೂದೆಗೆ ನನ್ನ ಎಲ್ಲ ಸಹೋದರ ಸದಸ್ಯರುಗಳೂ ಬೆಂಬಲ ಕೊಡುತ್ತಾರೆಂಬ ಮತ್ತು ಈ ಮಸೂದೆಯು ಮಹಿಳೆಯರ ಹಕ್ಕಿನ ಮಸೂದೆ ಮಾತ್ರವಲ್ಲ, ಮಹಿಳೆಯರಿಗೆ ನ್ಯಾಯ ಕೊಡುವ ಮಸೂದೆ ಮಾತ್ರವಲ್ಲ, ಸಮಾಜಕ್ಕೆ ನ್ಯಾಯ ಕೊಡುವ ಮಸೂದೆಯೂ ಹೌದೆಂದು ಭಾವಿಸುತ್ತಾರೆಂಬ ನಂಬಿಕೆ ನನಗಿದೆ. ಈ ಮಸೂದೆಯಿಂದ, ಹಿಂದೂ ಸಮಾಜವನ್ನು ಆರೋಗ್ಯಕರ ಸಮಾಜವನ್ನಾಗಿ ಮಾಡಲು, ಸಶಕ್ತವನ್ನಾಗಿ ಮಾಡಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ಹಿಂದೂ ಸಮಾಜದಲ್ಲಿ ತುಂಬಾ ಲೋಪದೋಷಗಳಿವೆ. ನಾವೀಗ ಸ್ವತಂತ್ರರಾಗಿದ್ದೇವೆ. ನಾವು ಪ್ರಪಂಚದಲ್ಲಿ ಸ್ಥಾನಮಾನವನ್ನು ಗಳಿಸಿಕೊಳ್ಳಬೇಕಾದರೆ, ನಮ್ಮ ಮನೆಯನ್ನು ನಾವು ಸರಿಪಡಿಸಿಕೊಳ್ಳಬೇಕು. ಹಾಗೆ ಮಾಡದಿದ್ದರೆ, ಸಮಾಜದಲ್ಲಿ ಸ್ಥಾನಮಾನವನ್ನು ಗಳಿಸಿಕೊಳ್ಳಲಾಗದು. ಆದ್ದರಿಂದ, ನಾವೆಲ್ಲರೂ ಒಂದಾಗೋಣ. ನಮ್ಮ ಮನೆಯಲ್ಲಿರುವ ಲೋಪದೋಷಗಳನ್ನು ಸರಿಪಡಿಸಿಕೊಳ್ಳೋಣ. ಈ ಒಂದು ಒಳ್ಳೆಯ ಮಸೂದೆಗೆ ನೀವೆಲ್ಲರೂ ಬೆಂಬಲ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ನಿಮ್ಮೆಲ್ಲರ ಬೆಂಬಲ ಇದೆಯೆಂಬ ನಂಬಿಕೆ ನನಗಿದೆ.

**ಸಭೆಯನ್ನು, ೧೯೪೯, ಫೆಬ್ರವರಿ ೨೫ ಶುಕ್ರವಾರ ೧೧–೧೫ಕ್ಕೆ ಮುಂದೂಡಲಾಯಿತು.**

** ಹಿಂದೂ ಸಂಹಿತೆ– ಚರ್ಚೆ ಮುಂದುವರಿಯಿತು.*

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ೧೯೪೮ ಆಗಸ್ಟ್ ೩೧ರಂದು ಸನ್ಮಾನ್ಯ ಡಾ. ಅಂಬೇಡ್ಕರ್‌ರವರು ಮಂಡಿಸಿದ ಈ ಸೂಚನೆಯನ್ನು ಇನ್ನಷ್ಟು ಪರ್ಯಾಲೋಚಿಸಲು ಈ ಸದನದಲ್ಲಿ ಚರ್ಚೆ ಮುಂದುವರಿಯುತ್ತದೆ:

> "ಸೆಲೆಕ್ಟ್ ಕಮಿಟಿಯ ವರದಿ ಮಾಡಿರುವಂತೆ ಹಿಂದೂ ನ್ಯಾಯಪದ್ಧತಿಯ ಕೆಲವು ಶಾಖೆಗಳನ್ನು ತಿದ್ದುಪಡಿಮಾಡುವ ಮತ್ತು ಕ್ರೋಡೀಕರಿಸುವ ಮಸೂದೆಯನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕು" ಪಂಡಿತ ಠಾಕೂರ್‌ದಾಸ್ ಭಾರ್ಗವರೇ, ಮಾತನಾಡಿ.

**ಶ್ರೀ ನಝೀರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಂ) : ಸರ್, ನಾನು ತಿದ್ದುಪಡಿಗಳನ್ನು ಪ್ರಸ್ತಾಪಿಸಿದ್ದೇನೆ. ನಾನು ನನ್ನ ವಾದಗಳನ್ನು ಮುಂದಿಡುವುದು, ಆ ನಂತರ ಇತರರು ಮಾತನಾಡುವುದು ಸರಿ ಎಂದು ನನ್ನ ಅನಿಸಿಕೆ. ಅದರ ಬದಲು, ಅವರು ಹೇಳುವುದನ್ನು ನಾನು ಕೇಳಿ ಆ ನಂತರ ಮಾತನಾಡುವುದಾದರೆ, ಅವರಿಗೆ ಉತ್ತರ ಕೊಡುವುದಕ್ಕೆ ಅವಕಾಶ ಎಲ್ಲಿರುತ್ತದೆ?

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಸೂಚನೆಗೆ ತಿದ್ದುಪಡಿಯನ್ನು ಪ್ರಸ್ತಾಪಿಸಿದ ನೀವು, ನಂತರವೇ

---

*ಸಿ.ಎ. (ಲೆಜಿ) ಡಿ. ಸಂಪುಟ II, ೨ ಭಾಗ II, ೨೫, ಫೆಬ್ರವರಿ ೧೯೪೯ ಪುಟಗಳು ೮೭೭–೭೮

ಮಾತನಾಡುವುದು ಒಳ್ಳೆಯದು. ಏಕೆಂದರೆ, ಮೊದಲೇ ಮಾತನಾಡಿದರೆ ನಿಮಗೆ ಉತ್ತರ ಕೊಡುವ ಅವಕಾಶ ಸಿಗಲಾರದು.

**ಶ್ರೀ ನಝೀರುದ್ದೀನ್ ಅಹ್ಮದ್:** ನಾನು ಉತ್ತರ ಕೊಡಬಯಸುವುದಿಲ್ಲ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಹಾಗಂದರೆ, ಮಾನ್ಯ ಸದಸ್ಯರು, ಅವರ ಸೂಚನೆಯ ಪರ, ವಿರೋಧದ ಮಾತುಗಳನ್ನು ಆಲಿಸುವುದೇ ಸರಿ. ಏಕೆಂದರೆ, ಉತ್ತರ ಕೊಡುವುದಕ್ಕೆ, ಮಾತನಾಡುವುದಕ್ಕೆ ಸಾಧ್ಯವಾಗುತ್ತದೆ. ನಾನು ಪಂಡಿತ ಠಾಕೂರ್ ದಾಸ್ ಭಾರ್ಗವರನ್ನು ಕರೆದಿದ್ದೇನೆ (ಮಾತಿಗೆ ಅಡ್ಡಿ). ಅನುಕ್ರಮವಾಗಿ ಮಾತನಾಡುವವರ ಹೆಸರನ್ನು ಗೊತ್ತುಮಾಡುವುದು ಸಭಾಧ್ಯಕ್ಷರ ಕರ್ತವ್ಯ. ಪಂಡಿತ ಠಾಕೂರ್‌ದಾಸ್ ಭಾರ್ಗವರನ್ನು ಕರೆದಿರುವುದು ಸರಿಯೆಂದು ನನ್ನ ಭಾವನೆ.

***ಪಂಡಿತ ಠಾಕೂರ್‌ದಾಸ್ ಭಾರ್ಗವ** (ಪೂರ್ವ ಪಂಜಾಬ್: ಸಾಮಾನ್ಯ) : ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್, ಸರ್, ಹಿಂದೂ ಸಂಹಿತೆ ಮಸೂದೆಯು ಇಡೀ ಭಾರತದಾದ್ಯಂತ (......................ಹಿಂದಿಯಲ್ಲಿ ಮಾತು ಪ್ರಾರಂಭಿಸಿದಾಗ)

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ದಯವಿಟ್ಟು ಇಂಗ್ಲಿಷಿನಲ್ಲಿ ಮಾತನಾಡಿ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಇದೊಂದು ತುಂಬಾ ಮಹತ್ವದ ವಿಷಯ ಆ ಕಾರಣದಿಂದಲೇ ನಾನು ಹಿಂದಿಯಲ್ಲಿ ಮಾತನಾಡಬಯಸುತ್ತೇನೆ.

**ಡಾ. ಮೋನೋ ಮೋಹನ್‌ದಾಸ್** (ಪಶ್ಚಿಮ ಬಂಗಾಳ : ಸಾಮಾನ್ಯ) : ನಾವು, ಸನ್ಮಾನ್ಯ ಶಿಕ್ಷಣ ಮಂತ್ರಿಯವರು ಮಾತನಾಡುವ ಹಿಂದಸ್ತಾನಿಯನ್ನು ಅರ್ಥಮಾಡಿಕೊಳ್ಳುತ್ತೇವೆ. ಅದು, ಸೇಠ್ ಗೋವಿಂದದಾಸ್‌ರವರ ಅಥವಾ ಪಂಡಿತ ಠಾಕೂರ್‌ದಾಸ್ ಭಾರ್ಗವರವರು ಮಾತನಾಡುವ ಹಿಂದಿಗಿಂತಲೂ ಅಥವಾ ಹಿಂದೂಸ್ತಾನಿಗಿಂತಲೂ ತೀರಾ ಬೇರೆಯದೇ ಆಗಿದೆ. ಈಗ ಕಲಿತುಕೊಳ್ಳುತ್ತಿರುವ ನಮಗೆ, ಯಾವುದು ಹಿಂದೂಸ್ತಾನಿಯೆಂಬುದು ಗೊತ್ತಾಗುತ್ತಿಲ್ಲ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಅನುಸರಿಸಬೇಕಾದ ಯಾವ ನಿಬಂಧನೆಗಳೂ ಇಲ್ಲ. ಮಾತನಾಡುವುದೆಲ್ಲವೂ ಹಿಂದೂಸ್ತಾನಿಯೇ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ನನ್ನ ಮಾತು ಪ್ರಾರಂಭಿಸುವುದಕ್ಕೂ ಮೊದಲು, (ಸನ್ಮಾನ್ಯ ಸದಸ್ಯರುಗಳು : "ದಯವಿಟ್ಟು ಇಂಗ್ಲಿಷಿನಲ್ಲಿ ಮಾಡನಾಡಿ") ಮಾನ್ಯ ಸದಸ್ಯರುಗಳಲ್ಲಿ ಅನೇಕರು, ನಾನು ಇಂಗ್ಲಿಷಿನಲ್ಲಿ ಮಾತನಾಡಬೇಕೆಂದು ಹೇಳುತ್ತಿದ್ದಾರೆ. ಅವರುಗಳ ಇಚ್ಛೆಗೆ ವಿರುದ್ಧವಾಗಿ ಮಾತನಾಡಲು ನನಗೆ ಯಾವ ಹಿಂಜರಿಕೆಯೂ ಇಲ್ಲ. ಆದರೆ, ಇಂಗ್ಲಿಷಿಗಿಂತಲೂ, ತನ್ನ ಮಾತೃಭಾಷೆಯಲ್ಲೇ ಮಾತನಾಡುವುದು ತುಂಬಾ ಸುಲಭವೆಂಬುದು ಮಾನ್ಯ ಸದಸ್ಯರುಗಳೆಲ್ಲರಿಗೂ ಗೊತ್ತಿದೆ. ಆದ್ದರಿಂದ, ಅವರುಗಳು ಅವಕಾಶ ಕೊಟ್ಟರೆ, ನಾನು ಹಿಂದಿಯಲ್ಲೇ ಮಾತನಾಡುತ್ತೇನೆ. ಇಂಗ್ಲಿಷಿನಲ್ಲೇ ಮಾತನಾಡಬೇಕೆಂದು ಅವರುಗಳು ಒತ್ತಾಯ ಮಾಡಿದರೆ, ಇಂಗ್ಲಿಷಿನಲ್ಲೇ ಮಾತನಾಡುವುದಕ್ಕೆ ನನಗೆ ಯಾವ ಅಭ್ಯಂತರವೂ ಇಲ್ಲ. (ಮಾನ್ಯ ಸದಸ್ಯರುಗಳು : "ಹಿಂದಿ, ಹಿಂದಿಯಲ್ಲೇ ಮಾತನಾಡಿ") ಹಾಗೇನು, ಬಹುತೇಕ ಸದಸ್ಯರುಗಳು ಇಂಗ್ಲಿಷಿನಲ್ಲಿ ಮಾತನಾಡಲು ಒತ್ತಾಯ ಮಾಡುತ್ತಿಲ್ಲವಾದ್ದರಿಂದ, ನಾನು ಈಗ ಹಿಂದಿಯಲ್ಲೇ ಮಾತನಾಡುತ್ತೇನೆ.

**ಶ್ರೀಮತಿ ಜಿ. ದುರ್ಗಾಬಾಯಿ** (ಮದ್ರಾಸ್ : ಸಾಮಾನ್ಯ) : ದಯವಿಟ್ಟು ಸರಳ ಹಿಂದಿಯಲ್ಲಿ

---

*ಸಿ.ಎ. (ಲೆಜಿ) ಡಿ. ಸಂಪುಟ II, ಭಾಗ II, ೨೫, ಫೆಬ್ರವರಿ ೧೯೪೯ ಪುಟಗಳು ೮೯೫–೯೩೬.

ಮಾತನಾಡಿ, ನಮಗೂ ಅರ್ಥವಾಗಲಿ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ತುಂಬಾ ಸರಳ ಹಿಂದಿಯಲ್ಲಿ ಮಾತನಾಡಲು ಪ್ರಯತ್ನಿಸುತ್ತೇನೆ. ಇಂದು, ನಾನು, ಸದನದಲ್ಲಿ, ಹಿಂದೂ ಮಸೂದೆಯ ಮೇಲೆ ಮಾತನಾಡಲು ಎದ್ದಾಗ, ನನ್ನ ಮನಸ್ಸಿನಲ್ಲಿ ಹಲವಾರು ಪರಸ್ಪರ ವಿರುದ್ಧದ ಚಿಂತನೆಗಳು, ಒಂದಕ್ಕೊಂದು ಹಣಾಹಣಿ ನಡೆಸುತ್ತಿದ್ದವು. ಮೊಟ್ಟಮೊದಲಿಗೆ, ನಾನು, ಈ ಹಿಂದೂ ಸಂಹಿತೆ ಮಸೂದೆಯು, ಹಿಂದೂ ಸಂಸ್ಕೃತಿಯ, ಹಿಂದೂ ನಾಗರೀಕತೆಯ ಚರಮಗೀತೆಯಾಗುತ್ತದೆಂದು ಹೇಳುವವರ ಪೈಕಿ, ನಾನೂ ಒಬ್ಬನಲ್ಲ ಎಂದು ಹೇಳಬಯಸುತ್ತೇನೆ. ಹಿಂದೂ ಸಂಸ್ಕೃತಿ, ಹಿಂದೂ ಸಮಾಜ, ಹಿಂದೂ ನಾಗರಿಕತೆ ಅನಂತಕಾಲದವರೆಗೆ ಉಳಿಯಬೇಕು, ಈ ಪ್ರಪಂಚ ಇರುವವರೆಗೆ ಇರಬೇಕೆಂಬುದು ನನ್ನ ಹಾರೈಕೆ. ಇದಕ್ಕೆ ಯಾವ ರೀತಿಯಲ್ಲೂ ನಾನು ಒಬ್ಬ ವಿರೋಧಿ ಅಲ್ಲ. ಈ ಮಸೂದೆಯ ಅಥವಾ ಇನ್ನಾವುದೇ ಮಸೂದೆಯು ಹಿಂದೂ ಸಂಸ್ಕೃತಿಯನ್ನು, ಹಿಂದೂ ನಾಗರಿಕತೆಯನ್ನು ಹಾಳುಗೆಡುವುತ್ತದೆಂಬ ಕಿಂಚಿತ್ತು ಭಯ ನನಗಿಲ್ಲ. ಬಹಳ ಹಿಂದಿನಿಂದಲೂ ಹಿಂದೂ ಸಮಾಜದ ಒಳಕ್ಕೆ ನುಸುಳಿರುವಂತಹ, ಡಾ.ಅಂಬೇಡ್ಕರ್‌ರವರು, ತಮ್ಮ ಮಾತುಗಳನ್ನು ಮುಗಿಸುತ್ತಿರುವಾಗ ಈ ಸದನದ ಗಮನಕ್ಕೆ ತಂದಿರುವಂತಹ ಕೆಡುಕುಗಳನ್ನು ತೆಗೆದುಹಾಕಬೇಕೆಂಬುದು ನನ್ನ ಅಭಿಲಾಷೆ. ಅವರ ಮಾತುಗಳಲ್ಲಿದ್ದ ಕಳಕಳಿಯನ್ನು ಶಾಂತ ಮನಸ್ಸಿನಿಂದ ತುಂಬಾ ಚಿಂತನೆ ಮಾಡಿ ಗಮನಕ್ಕೆ ತೆಗೆದುಕೊಳ್ಳಬೇಕು. ಆದರೆ, ಹಿಂದೂ ಸಮಾಜವನ್ನು ಸಂರಕ್ಷಿಸಬೇಕಾದರೆ, ಸಮಾಜವನ್ನು ಸರಿಪಡಿಸುವ ಅಗತ್ಯವಿದೆಯೆಂಬುದು ಕಂಡುಬಂದರೆ, ಆಗ, ಸರಿಪಡಿಸಲೇಬೇಕಾಗುತ್ತದೆಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಈ ಮಸೂದೆಯು ಹಿಂದೂ ಸಂಸ್ಕೃತಿಯನ್ನು ಅಂತ್ಯಗೊಳಿಸುತ್ತದೆಂದು ಯಾರು ಭಾವಿಸಿದ್ದರೋ ಅವರನ್ನೇ ನಾನು ಬಲವಾಗಿ ವಿರೋಧಿಸುತ್ತೇನೆ.

*೧೨ ಗಂಟೆ ಮಧ್ಯಾಹ್ನ*

ಪ್ರಾಚೀನ ಸ್ಮೃತಿಕಾರರಿಗಿರುವಷ್ಟೇ ಯೋಗ್ಯತೆ ಇರುವ ಈ ಸದನಕ್ಕೆ, ಈ ಸದನದ ಸನ್ಮಾನ್ಯ ಸದಸ್ಯರುಗಳಿಗೆ, ನಮ್ಮ ಶಾಸ್ತ್ರಗಳಲ್ಲಿ, ಕಾನೂನುಗಳಲ್ಲಿ ಯಾವ ಬದಲಾವಣೆಗಳನ್ನು ಮಾಡಲು ಹಕ್ಕು ಇಲ್ಲ ಎನ್ನುವುದನ್ನು ಒಂದು ಕ್ಷಣಕ್ಕಾದರೂ ಒಪ್ಪಿಕೊಳ್ಳಲು ನಾನು ಸಿದ್ಧನಿಲ್ಲ. ಇಂದು, ಯಾರಾದರೂ, ಇದೊಂದು ಹಳೆಯ ಸಂಪ್ರದಾಯ, ಅದರ ಪ್ರಕಾರವೇ ನಾವು ನಡೆಯಬೇಕು ಎಂದು ಹೇಳಿದರೆ, ಆ ಅಭಿಪ್ರಾಯದ ಬಗ್ಗೆ ನಾನು ಹೇಳುವುದೇನೆಂದರೆ, ಭಾರತದಲ್ಲಿ ಪ್ರಯೋಗವಾಗದೇ ಇರುವ ಒಂದೇ ಒಂದು ಸಂಪ್ರದಾಯ ಯಾವುದೂ ಇಲ್ಲ. ಭಾರತದಲ್ಲಿ ಕೆಲವು ಪ್ರದೇಶಗಳಲ್ಲಿ ಒಂದು ರೀತಿಯ ಉತ್ತರಾಧಿಕಾರದ ಪದ್ಧತಿ ಇದ್ದರೆ ಇತರ ಪ್ರದೇಶಗಳಲ್ಲಿ ಇನ್ನೊಂದು ರೀತಿಯ ಉತ್ತರಾಧಿಕಾರದ ಪದ್ಧತಿ ಇದೆ. ಖಾಸಿ ಬುಡಕಟ್ಟು ಗುಂಪುಗಳಲ್ಲಿ ಮತ್ತು ದಕ್ಷಿಣ ಪಂಜಾಬಿನ ಕೆಲವೊಂದು ಪ್ರದೇಶಗಳಲ್ಲಿ ಇಡೀ ಉತ್ತರಾಧಿಕಾರದ ಪದ್ಧತಿಯು ಬೇರೆಯದೇ ರೀತಿಯಲ್ಲಿದೆ, ಅಲ್ಲಿ, ಗಂಡುಮಕ್ಕಳ ಬದಲು, ಹೆಣ್ಣುಮಕ್ಕಳಿಗೇ ಇಡೀ ಆಸ್ತಿಯನ್ನು ಕೊಡಲಾಗುತ್ತಿದೆ ಎನ್ನುವುದು ನಮಗೆ ಗೊತ್ತಿಲ್ಲವೇನು? ಭಾರತದ ಕೆಲವೊಂದು ಪ್ರದೇಶಗಳಲ್ಲಿ, ಮಗಳು, ಮಾವನ ಮನೆಗೆ ಹೋಗುವುದರ ಬದಲು ಮಗಳ ಗಂಡನನ್ನೇ ತವರಿನ ಕುಟುಂಬಕ್ಕೆ ಕರೆಸಿಕೊಳ್ಳಲಾಗುತ್ತದೆ. ಭಾರತವು ಎಂತಹ ದೇಶವೆಂದರೆ, ಇಲ್ಲಿ ಪ್ರತಿಯೊಂದು ರೀತಿಯ ರೂಢಿ, ಕಾನೂನು ಚಾಲ್ತಿಯಲ್ಲಿದೆ. ನಾವು ಪ್ರಯೋಗಕ್ಕೆ ತರದೇ ಇರುವಂತಹ ಸಾಮಾಜಿಕ ಪದ್ಧತಿ ಯಾವುದಾದರೂ ಇದೆಯೇ? ಗಂಡು ಮಕ್ಕಳಂತೆಯೇ, ಹೆಣ್ಣುಮಕ್ಕಳೂ ಕೂಡ ವಾರಸುದಾರರಾಗಬೇಕೆಂದು ಕೆಲವು ಸ್ಮೃತಿಗಳು ಹೇಳಿವೆಯೆಂದು, ನಿನ್ನೆ ದಿನವಷ್ಟೇ, ಡಾ. ಅಂಬೇಡ್ಕರ್‌ರವರು ಹೇಳಿದ್ದಾರೆ. ಹೀಗೆ, ಈ ಪದ್ಧತಿಯು ಬಹಳ ಹಿಂದಿನ ಕಾಲದಿಂದಲೂ ಇತ್ತು.

ಇದರ ಹೊರತು, ಹೊಸದೆಂದು ಕರೆಯಬಹುದಾದ ಇನ್ನಾವುದೇ ಕಾನೂನು ಇತ್ತೇ ಎಂಬುದು ನನಗೆ ಗೊತ್ತಿಲ್ಲ. ಇಂದೂ ಕೂಡ, ಅನೇಕ ಪ್ರದೇಶಗಳಲ್ಲಿ ವಿಚ್ಛೇದನವು ಒಂದು ಸಂಪ್ರದಾಯ. ಪ್ರಾಚೀನ ಸ್ಮೃತಿಗಳನ್ನು ಓದಿ ನೋಡಿದರೆ, ಅವುಗಳಲ್ಲಿ ಕೂಡ ವಿಚ್ಛೇದನವನ್ನು ಹೇಳಲಾಗಿದೆ. ಹಳೆಯ ಸಂಸ್ಕೃತಿಗಳಲ್ಲಿ ವಿಚ್ಛೇದನವನ್ನು ಹೇಳಲಾಗಿದೆಯೆಂಬ ಕಾರಣದಿಂದಲೇ ಹಳೆಯ ಸೂತ್ರಗಳಿಗೆ ನಾವು ಕಟ್ಟುಬೀಳಬೇಕೆಂಬುದನ್ನು ನಾನು ಒಪ್ಪಲು ಸಿದ್ಧನಿಲ್ಲ. ಆ ಪದ್ಧತಿಗಳು ಇಂದಿನ ಸಮಾಜಕ್ಕೆ ಹೊಂದಿಕೊಳ್ಳುವುದಿಲ್ಲವೆಂದು ನಮಗೆ ಅನ್ನಿಸಿದರೆ, ಅವುಗಳನ್ನೇ ನಾವು ಏಕೆ ಉಳಿಸಿಕೊಳ್ಳಬೇಕು? ಭಾರತದಲ್ಲಿ, ಮದುವೆ ಪದ್ಧತಿಯೇ ಇಲ್ಲದಿದ್ದಂತಹ, ಮದುವೆ ಬಗ್ಗೆ ಏನೊಂದು ಗೊತ್ತಿರದಿದ್ದ ಜನರಿದ್ದಂತಹ ಕಾಲ ಒಂದಿತ್ತು. ಹಿಂದಿನ ದಿನಗಳಲ್ಲಿ, ಭಾರತದಲ್ಲಿ ದೀರ್ಘ ಕಾಲದವರೆಗೆ ನಿಯೋಗ ಪದ್ಧತಿ ಇತ್ತು. ಹಿಂದೂ ನ್ಯಾಯಪದ್ಧತಿಯು ಎಂಟು ರೀತಿಯ ಮದುವೆಗಳನ್ನು ಹೇಳಿದೆ. ಅವುಗಳಲ್ಲಿ ಕೆಲವನ್ನು ಮದುವೆಗಳೆಂದೇ ಕರೆಯುತ್ತಿರಲಿಲ್ಲ. ಅಂಥವುಗಳನ್ನು ಈಗಿನ ಕಾಲದಲ್ಲೂ ಮತ್ತೆ ತರಬೇಕೆಂದು ಯಾರಾದರೂ ಹೇಳುತ್ತಾರೇನು? ಯಾರೂ ಹೇಳಲಾರರೆಂದೇ ನನ್ನ ಅನಿಸಿಕೆ. ಹಳೆಯ ಕಾಲದಲ್ಲಿ, ಯಾವುದು ಪ್ರಚಲಿತದಲ್ಲಿತ್ತು, ನಮ್ಮ ಪೂರ್ವಿಕರು, ತಮ್ಮದೇ ಆದ ನ್ಯಾಯಸೂತ್ರಗಳನ್ನು ರಚಿಸಿ ಸಮಾಜವನ್ನು ನಿಯಂತ್ರಿಸುತ್ತಿದ್ದರು ಎಂಬ ದೃಷ್ಟಿಕೋನದಿಂದ ಇಂದು ನಮ್ಮ ಮುಂದಿರುವ ವಿಷಯವನ್ನು ನಾನು ಪರಾಮರ್ಶೆ ಮಾಡಬಯಸುತ್ತಿಲ್ಲ. ಈ ಕಾಲದಲ್ಲಿ, ನಮ್ಮ ಅಗತ್ಯಗಳನ್ನು, ನಮ್ಮ ಕಾನೂನು ಪರಿಕಲ್ಪನೆಗಳನ್ನು, ನಮ್ಮ ಅವಶ್ಯಕತೆಗಳನ್ನು ಸಂಪೂರ್ಣವಾಗಿ ಗಣನೆಗೆ ತೆಗೆದುಕೊಂಡ ನಂತರ ಯಾವುದು ನಮಗೆ ಅಗತ್ಯ ಎನ್ನುವ ವಿಚಾರ ನಮ್ಮ ಮುಂದಿದೆ. ಈ ಸಂಹಿತೆಯು ಇಡೀ ದೇಶದಾದ್ಯಂತ ತುಂಬಾ ವೈಮನಸ್ಯವನ್ನು, ಕಳವಳವನ್ನು, ಕಿರಿಕಿರಿಯನ್ನು ಉಂಟುಮಾಡಿದೆ. ಕೆಲವರು ಮಹಿಳೆಯರು, ಪುರುಷರಿಗಿರುವಷ್ಟೇ ಸಮಾನವಾದ ಹಕ್ಕುಗಳು ಇರಬೇಕೆಂದು ಹೇಳುತ್ತಿದ್ದಾರೆ. ಈ ಸಂಹಿತೆ, ಮಹಿಳೆಯರ ಪರವಾಗಿದೆಯೆಂದು ಹೇಳುತ್ತಿದ್ದಾರೆ. ಮಹಿಳೆಯರಿಗೆ ಯಾವ ಹಕ್ಕುಗಳೂ ಇಲ್ಲವೆಂದು ಕೆಲವರು ಹೇಳುತ್ತಿದ್ದಾರೆ. ಈ ಮಸೂದೆಯು ಇಲ್ಲಿ ಪರ್ಯಾಲೋಚನೆಯಲ್ಲಿರುವವರೆಗೂ ಈ ಮಸೂದೆಯು, ಮಹಿಳೆಯ ಪರವಾಗಿದೆ ಎನ್ನುವ ಅಥವಾ ಪುರುಷರ ಪರವಾಗಿದೆ ಎನ್ನುವ ಆಪಾದನೆಗಳಂತಹ ಹಲವಾರು ಮಾತುಗಳಿಗೆ ಅಥವಾ ಅಂತಹ ಇನ್ನಾವುದಕ್ಕೂ ನಾವು ಯಾವುದೇ ಗಮನ ಕೊಡಲೇಬಾರದೆಂದು ನಾನು ಈ ಸದನಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಈ ಮಸೂದೆಯು ಸೂಕ್ತವಾದುದೇ, ಅಲ್ಲವೇ ಎಂಬುದನ್ನು ನಾವು ಶಾಂತ ಮನಸ್ಸಿನಿಂದ ಚಿಂತನೆ ಮಾಡಬೇಕು. ತಾನು ಮಹಿಳೆಯ ಹೊಟ್ಟೆಯಲ್ಲಿ ಹುಟ್ಟಿಲ್ಲ ಎಂದು ಯಾವನಾದರೂ ಹೇಳುತ್ತಾನೇನು? ತಾನು, ಮನುಷ್ಯನ ಮಗಳಲ್ಲವೆಂದು ಯಾವಳಾದರೂ ಹೇಳುತ್ತಾಳೇನು? ಇಂತಹ ವಿಷಯದಲ್ಲಿ ನಾವು, ನಮ್ಮ ತಾಯಂದಿರಿಗೆ, ಅಕ್ಕತಂಗಿಯರಿಗೆ, ಮಗಳಿಗೆ ಆದರ ತೋರುವುದಿಲ್ಲವೇನು? ನಮ್ಮ ತಾಯಂದಿರು, ಅಕ್ಕತಂಗಿಯರು ನಮ್ಮ ಮಗಳು, ತನ್ನ ಗಂಡನೊಂದಿಗೆ, ಅಣ್ಣತಮ್ಮಂದಿರೊಂದಿಗೆ ಮಗನೊಂದಿಗೆ ತಾವು ಸರಿಯಾಗಿ ವರ್ತಿಸುವುದಿಲ್ಲವೆಂದು ಹೇಳುತ್ತಾರೇನು? ಈ ವಿಷಯದಲ್ಲಿ ಯಾವುದೇ ಕಟುವಾದ ವಿವಾದವನ್ನು ಹುಟ್ಟುಕಾಕುವ ಅವಶ್ಯಕತೆ ಇಲ್ಲ. ಇದು ತಂಬಾ ಸೂಕ್ಷ್ಮದ ವಿಚಾರವೆಂಬುದು ನನಗೆ ಗೊತ್ತಿದೆ. ಸರಿಯಾದ ರೀತಿಯಲ್ಲಿ ಶಾಂತ ಮನಸ್ಸಿನಿಂದ ನಾವು ಇದನ್ನು ಪರಾಮರ್ಶಿಸಬೇಕಾಗಿದೆ.

ಈ ಅಂಶದ ಬಗ್ಗೆ ಹೇಳುವುದಕ್ಕೂ ಮೊದಲು, ನಾನು ಕೆಲವೊಂದು ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡೇ ಈ ಮಸೂದೆಯನ್ನು ವಿರೋಧಿಸುತ್ತಿದ್ದೇನೆ ಅಥವಾ ಬೆಂಬಲಿಸುತ್ತಿದ್ದೇನೆಂದು ಈ ಸದನದ ಮಾನ್ಯ ಸದಸ್ಯರುಗಳು ಅದರಲ್ಲೂ ನನ್ನ ಸಹೋದರಿ ಸಮಾನ ಸದಸ್ಯೆಯರುಗಳು ಭಾವಿಸಬಾರದೆಂದು ಹೇಳುತ್ತ ಕೆಲವೊಂದು ವಿಷಯಗಳನ್ನು ಹೇಳಲು ನಾನು ಇಷ್ಟಪಡುತ್ತೇನೆ. ಮಹಿಳೆಯರಿಗೆ ಚರ, ಸ್ಥಿರ

ಆಸ್ತಿಗಳೆರಡರಲ್ಲೂ ಸೂಕ್ತ ಹಕ್ಕುಗಳನ್ನು ಕೊಡುವವರೆಗೂ ಅವರ ವ್ಯಕ್ತಿತ್ವ ಸಂಪೂರ್ಣವಾಗಿ ಬೆಳವಣಿಗೆ ಆಗುವುದಿಲ್ಲವೆಂದು ಚಿಂತನೆ ಮಾಡುವ ವರ್ಗಕ್ಕೆ ನಾನು ಸೇರಿದವನೆಂಬುದನ್ನು ಮೊದಲು ಹೇಳಬಯಸುತ್ತೇನೆ. ಮಹಿಳೆಯರು ಆರ್ಥಿಕವಾಗಿ ಪರಾವಲಂಬಿಯಾಗುವುದನ್ನು ನಾನು ಬಲವಾಗಿ ವಿರೋಧಿಸುತ್ತೇನೆ. ಸೀತಾಮಾತೆಯ ಶ್ಲೋಕವನ್ನು ನಾನು ಒಪ್ಪುವುದಿಲ್ಲ :

ಮಿತಂ ದದಾತಿ ಹಿ ಪಿತಾ ಮಿತಂ ಭ್ರಾತಾ ಮಿತಂ ಸುತಃ
ಅಮಿತಸ್ಯತು ದಾತಾರಂ ಭರ್ತಾರನ ಕಾ ನ ಪುಜಯೇತ್

ರಾಮಾಯಣ, ಪರಮಪೂಜ್ಯ ಗ್ರಂಥವೆಂದು ನಾನು ಗೌರವಿಸುತ್ತೇನೆ. ಆದರೆ, ಮಹಿಳೆಯು, ಯಾವಾಗಲೂ ಪರಾವಲಂಬಿಯಾಗಿರಬೇಕೆನ್ನುವ ತತ್ತ್ವವನ್ನು ಒಂದು ಕ್ಷಣಕ್ಕೂ ಒಪ್ಪಿಕೊಳ್ಳಲು ನಾನು ಸಿದ್ಧನಿಲ್ಲ. ಮಹಿಳೆಯು ಮದುವೆ ಆಗುವವರೆಗೆ ತಂದೆಯ ಅಧೀನದಲ್ಲೇ ಇರಬೇಕು, ಮದುವೆ ಆದಮೇಲೆ ಗಂಡನ ಅಧೀನದಲ್ಲೇ ಇರಬೇಕು, ಗಂಡ ಸತ್ತರೆ ಮಗನ ಆಶ್ರಯದಲ್ಲಿರಬೇಕು ಎಂದು ಕೆಲವು ಸ್ಮೃತಿಗಳು ಹೇಳಿರುವ ಮಾತುಗಳನ್ನೂ ಕೂಡ, ಒಂದು ಕ್ಷಣಕ್ಕೂ ಒಪ್ಪಲು ನಾನು ಸಿದ್ಧನಿಲ್ಲ. ಸ್ಮೃತಿಗಳ ಈ ಮಾತುಗಳನ್ನು, ಅವು ಮಹಿಳೆಯರ ಮನಸ್ಸಿಗೆ ನೋವುಂಟುಮಾಡುತ್ತವೆ ಎಂಬ ಕಾರಣಕ್ಕಾಗಿ ನಾನು ವಿರೋಧಿಸುತ್ತಿಲ್ಲ. ಭಾರತದ ಮಹಿಳೆಯರು ದೃಢವಾದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವವರೆಗೆ, ಆರ್ಥಿಕವಾಗಿ ತಮ್ಮ ಸ್ಥಿತಿಗತಿಯನ್ನು ಉತ್ತಮಪಡಿಸಿಕೊಳ್ಳುವವರೆಗೆ, ಅವರ ಸರ್ವಾಂಗೀಣ ಅಭಿವೃದ್ಧಿ ಆಗುವವರೆಗೆ ನಮ್ಮ ಪೀಳಿಗೆ ಸುಧಾರಣೆ ಆಗುವುದಿಲ್ಲವೆಂಬುದು ನನಗೆ ಗೊತ್ತಿದೆ. ಮಹಿಳೆಯರ ಅಭಿವೃದ್ಧಿಗಾಗಿ ಎಲ್ಲ ರೀತಿಯ ಅವಕಾಶಗಳನ್ನು ಕೊಡಬೇಕು. ತೀರಾ ಸಂಕುಚಿತ ದೃಷ್ಟಿಯಿಂದ ಈ ವಿಷಯವನ್ನು ನೋಡುವುದು ನ್ಯಾಯೋಚಿತ ಅಲ್ಲವೇ ಅಲ್ಲ ಎಂಬುದು ನನ್ನ ಭಾವನೆ. ತುಂಬಾ ವಿವೇಕದಿಂದ ನಮ್ಮ ಇಡೀ ದೇಶದ ಕಲ್ಯಾಣ, ಏಳಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಈ ವಿಷಯವನ್ನು ತೀರ್ಮಾನಿಸಬೇಕಾಗುತ್ತದೆ.

"ಸಾವಿರಾರು ವರ್ಷಗಳಿಂದಲೂ ನಾವು ಕೆಲವೊಂದು ಸಂಪ್ರದಾಯಗಳಲ್ಲಿ, ರೂಢಿ, ಆಚರಣೆಗಳಲ್ಲಿ ನಂಬಿಕೆ ಇಟ್ಟಿದ್ದೇವೆ, ಉಳಿಸಿಕೊಂಡು ಬಂದಿದ್ದೇವೆ. ಆದರೆ, ಮಹಿಳೆಯರಿಗೆ ಪುರುಷರಷ್ಟೇ ಸಮಾನ ಹಕ್ಕುಗಳು ಇರಬೇಕು" ಎಂದು ಇಂದು, ಎದ್ದಿರುವ ಮಾತುಗಳ ವಿಷಯದಲ್ಲಿ ನಾವು ಯಾವ ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ನಮ್ಮದೇ ಆದ ಮಾರ್ಗವನ್ನೂ ಸಹ ನಿರ್ಧರಿಸಬೇಕಾಗಿದೆ. ಈ ತತ್ತ್ವವನ್ನು ನಾವು ಇಡಿಯಾಗಿ ಒಪ್ಪಿಕೊಳ್ಳದಿರಬಹುದು, ಆದರೆ, ಕೊನೇಪಕ್ಷ, ನಾವು, ಅವರ ಅಭಿವೃದ್ಧಿಗೆ, ಪುರುಷರಿಗೆ ಕೊಡುವಷ್ಟೇ ಸಮಾನ ಅವಕಾಶಗಳನ್ನು, ಸೌಲಭ್ಯಗಳನ್ನು ಕೊಡಲು ಬದ್ಧರಾಗಬೇಕು; ಈ ತತ್ತ್ವವನ್ನು ನಾವು ದೃಷ್ಟಿಯಲ್ಲಿಟ್ಟುಕೊಳ್ಳಲೇಬೇಕು. ಆದ್ದರಿಂದ, ಮಹಿಳೆಯರು, ಚರ ಮತ್ತು ಸ್ಥಿರ ಆಸ್ತಿಗಳಲ್ಲಿ ಅವರ ನ್ಯಾಯಸಮ್ಮತ ಹಕ್ಕುಗಳನ್ನು ಪಡೆಯಲೇಬೇಕೆಂದು ಯಾವುದೇ ಅಭ್ಯಂತರ ಇಲ್ಲದೆ ಹೇಳ ಬಯಸುತ್ತೇನೆ. ನಾನು ಇದನ್ನು ತುಂಬಾ ಪ್ರಬಲವಾಗಿ ಬೆಂಬಲಿಸುತ್ತೇನೆ. ಮದುವೆಗಳಲ್ಲಿ ಮತ್ತು ದತ್ತು ವಿಷಯಗಳಲ್ಲಿ ಜಾರಿಯನ್ನು ನಿಷೇಧಿಸುವ ತತ್ತ್ವವನ್ನು ಈ ಮಸೂದೆಯಲ್ಲಿ ಡಾ. ಅಂಬೇಡ್ಕರ್‌ರವರು ಒಪ್ಪಿಕೊಂಡಿರುವುದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಈ ವಿಚಾರವನ್ನು ನಾನು ಹೇಗೆ ಚಿಂತನೆ ಮಾಡಿದ್ದೇನೆಂದು ನಿಮಗೆ ಸವಿವರವಾಗಿ ಹೇಳುವಂತಹ ಮಾತುಗಾರಿಕೆ ನನಗಿಲ್ಲ. ಇದು, ರಾಷ್ಟ್ರ ನಿರ್ಮಾಣದ ವಿಚಾರವೆನ್ನುವ ದೃಷ್ಟಿಕೋನದಿಂದ ನಾನು ಈ ವಿಷಯದ ಚಿಂತನೆ ಮಾಡಿದ್ದೇನೆ. ಇದು ನಮ್ಮ ಬದುಕು, ಸಾವಿನ ವಿಚಾರ. ಇದು ಮೂಲಭೂತ ತತ್ತ್ವಗಳಿಗೆ ಸಂಬಂಧಿಸಿದೆ. ಈ ಜಾತಿ ಪದ್ಧತಿಯಿಂದಲೇ. ಭಾರತ ಹಾಳಾಗಿದೆ, ಪ್ರಗತಿಯನ್ನು ಕೆಡಿಸಿದೆ. ಜಾತಿಯೇ, ಪಾಕಿಸ್ತಾನ ಹುಟ್ಟಿಕೊಳ್ಳಲು ಮುಖ್ಯ ಕಾರಣ. ಜಾತಿ ಪದ್ಧತಿಯೇ ನಮ್ಮ

ಸಮಾಜದ ಅಂತಃಸತ್ವನ್ನು ತಿಂದು ಹಾಕುತ್ತಿದೆ, ಬ್ರಾಹ್ಮಣರನ್ನು ಇತರರ ಶತ್ರುಗಳನ್ನಾಗಿ ಮಾಡಿದೆ. ಜಾಟರನ್ನು, ಜಾಟರಲ್ಲದವರ ಶತ್ರುಗಳನ್ನಾಗಿ ಮಾಡಿದೆ. ಕ್ಷತ್ರಿಯರನ್ನು ಇತರೆಲ್ಲ ಜನಾಂಗದ ಶತ್ರುಗಳನ್ನಾಗಿ ಮಾಡಿದೆ. ರಾಷ್ಟ್ರಪಿತ ಮಹಾತ್ಮಗಾಂಧಿಯವರು ಈ ದೇಶಕ್ಕೆ ವರ್ಗ-ರಹಿತ ಸಮಾಜದ ನಿರ್ಮಾಣಕ್ಕಾಗಿ ತೋರಿಸಿಕೊಟ್ಟ ಮಾರ್ಗವನ್ನು ನಾವು ನಿರಾಕರಿಸುವುದಾದರೂ ಹೇಗೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಒಟ್ಟಿಗೇ ಕುಳಿತು ಊಟ ಮಾಡುವುದು, ಅಂತರಜಾತಿಯ ಮದುವೆಗಳು ಇವೆರಡೂ ಈ ದೇಶದ ಜನರನ್ನು ಒಂದುಗೂಡಿಸುವಲ್ಲಿ ಪ್ರಮುಖ ಸಾಧನಗಳು. ಅಂತರಜಾತಿಯ ಮದುವೆಗಳ ಬಗ್ಗೆ ಹೇಳುವುದಾದರೆ, ಈ ವಿಚಾರ ಬಗೆಹರಿಯುವವರೆಗೆ, ರಾಷ್ಟ್ರ ನಿರ್ಮಾಣದ ವಿಚಾರ ಬಗೆಹರಿಯುವುದಿಲ್ಲ. ಆದ್ದರಿಂದ, ನಾನು ಖಂಡಿತವಾಗಿಯೂ, ಅಂತರಜಾತಿಯ ಮದುವೆಗಳ ಪರವಾಗಿದ್ದೇನೆ.

ಒಬ್ಬನೇ ಗಂಡ, ಒಬ್ಬಳೇ ಹೆಂಡತಿ ಪದ್ಧತಿ ಬಗ್ಗೆ ಹೇಳುವುದಾದರೆ, ಅದನ್ನು ಯಾವ ಸದಸ್ಯರೂ ವಿರೋಧಿಸಲಾರರು. ಒಬ್ಬನೇ ಗಂಡ, ಒಬ್ಬಳೇ ಹೆಂಡತಿ ಪದ್ಧತಿಯ ಪರಿಣಾಮಗಳ ಬಗ್ಗೆ ಹೇಳುವುದಾದರೆ, ಅದನ್ನು ಅಂಗೀಕರಿಸಿದರೆ, ನನ್ನ ಪ್ರದೇಶದ ಜನರಿಗೆ ತುಂಬಾ ಅನಾನುಕೂಲ ಆಗುತ್ತದೆ. ಏಕೆಂದರೆ, ಇಂದೂ ಕೂಡ, ಕೆಲವೊಂದು ಸಂದರ್ಭ ಸನ್ನಿವೇಶಗಳಲ್ಲಿ ಸಾಮಾನ್ಯವಾಗಿ ಏನಾಗುತ್ತದೆಂದರೆ, ಗಂಡ, ಸತ್ತಾಗ ವಿಧವೆಯನ್ನು, ಗಂಡನ ಹಿರಿಯ ತಮ್ಮನಿಗೆ ಮದುವೆ ಮಾಡಿಕೊಡಲಾಗುತ್ತದೆ. ರೂಢಿಯಲ್ಲಿಲ್ಲದ ಈ ಸಂಪ್ರದಾಯಗಳನ್ನು ಮುಂಬರುವ ಕಾಲದಲ್ಲೂ ನಾವು ಮುಂದುವರಿಸಬಾರದು ಎಂಬುದು ನನಗೆ ಗೊತ್ತಿದೆ. ಅನಾನುಕೂಲ ಆಗುವಂತಹ ಆ ಜನರಿಗೆ, ರೂಢಿಯಲ್ಲಿಲ್ಲದ ಈ ಪದ್ಧತಿಯ ಲೋಪದೋಷಗಳನ್ನು ತಿಳಿಸಿ ಮನವರಿಕೆ ಮಾಡಿಕೊಟ್ಟರೆ, ಅವರು ಅದನ್ನು ಬಿಟ್ಟುಬಿಡಲು ಒಪ್ಪುತ್ತಾರೆಂದೇ ನನ್ನ ಭಾವನೆ.

ಒಬ್ಬನೇ ಗಂಡ, ಒಬ್ಬಳೇ ಹೆಂಡತಿ ಪದ್ಧತಿ ಬಗ್ಗೆ ಹೇಳುವುದಾದರೆ, ಭಾರತದಲ್ಲಿ ವಿಧವಾ ವಿವಾಹ ಪದ್ಧತಿ ಪ್ರಚಲಿತದಲ್ಲಿ ಇರದಂತಹ ಆ ಕಾಲದಲ್ಲಿ ಆ ಕಾಲದ ಜನರು ತಮ್ಮ ಅಗತ್ಯಗಳಿಗೆ, ಬುದ್ಧಿವಂತಿಕೆಗೆ ಅನುಸಾರವಾಗಿ ಚಿಂತನೆ ಮಾಡಿ ಈ ಪದ್ಧತಿಯನ್ನು ಕಂಡುಕೊಂಡರು, ಅಳವಡಿಸಿಕೊಂಡರು. ಅದೇನೇ ಇರಲಿ, ಒಬ್ಬನೇ ಗಂಡ, ಒಬ್ಬಳೇ ಹೆಂಡತಿ ಪದ್ಧತಿಗೆ ಜಾತಿ ಪದ್ಧತಿ ರದ್ದು, ಮಹಿಳೆಯರಿಗೆ ಸಂಪೂರ್ಣವಾಗಿ ಹಕ್ಕುಗಳ ನೀಡಿಕೆ ಇವೆಲ್ಲಕ್ಕೂ ನನ್ನ ಸಂಪೂರ್ಣ ಬೆಂಬಲ ಇದೆಯೆಂದು ಯಾವುದೇ ಹಿಂಜರಿಕೆ ಇಲ್ಲದೆ ಹೇಳಬಯಸುತ್ತೇನೆ.

ವಿವಾಹ ವಿಚ್ಛೇದನದ ವಿಷಯದ ಬಗ್ಗೆ ಹೇಳುವುದಾದರೆ, ವಿಚ್ಛೇದನ ಪದ್ಧತಿಯು ಭಾರತದ ಬಹು ಭಾಗದಲ್ಲಿ ಪ್ರಚಲಿತದಲ್ಲಿದೆ. ಈ ದಿನಗಳಲ್ಲಿ, ಕೆಲವರಿಗೆ ಈ ಪದ್ಧತಿ ಕೆಟ್ಟದಾಗಿ ಕಾಣಬಹುದು. ನಮ್ಮ ಸಂಪ್ರದಾಯಗಳ ಪ್ರಕಾರ ಮಹಿಳೆಯರು ಸತಿಪದ್ಧತಿಯನ್ನು ಅನುಸರಿಸುತ್ತಿರುವಂತಹ ಈ ದೇಶದಲ್ಲಿ, ವಿವಾಹ ವಿಚ್ಛೇದನವನ್ನು ಅನುಮೋದಿಸುತ್ತಿರುವುದಕ್ಕೆ ಆಶ್ಚರ್ಯಪಡಬೇಕಾಗಿಲ್ಲ. ನಮ್ಮ ನಂಬಿಕೆಗಳ ಪ್ರಕಾರ, ಮದುವೆ, ಒಂದು ಒಡೆಯಲಾಗದ ಸಂಬಂಧ, ಈ ದೃಷ್ಟಿಯಿಂದ, ವಿಚ್ಛೇದನದ ಹಕ್ಕನ್ನು ಕೊಡಬಾರದು. ಆದರೆ, ನಮ್ಮ ದೇಶದಲ್ಲಿ ವಿಚ್ಛೇದನ ಪದ್ಧತಿ, ಮೊದಲಿನಿಂದಲೂ ಇದೆ, ಈಗಲೂ ಇದೆ. ಜನರು ಕಣ್ಣುಮುಚ್ಚಿಕೊಂಡು, ಪ್ರಪಂಚದಲ್ಲಿ ಏನಾಗುತ್ತಿದೆ ಎಂಬುದನ್ನು ನೋಡಬಾರದೆಂದುಕೊಂಡರೆ, ಅದು ಅವರಿಗೆ ಬಿಟ್ಟಿದ್ದು. ಡಾ. ಅಂಬೇಡ್ಕರ್‌ರವರು ಈ ದೇಶದ ಶೇ. ೯೦ರಷ್ಟು ಜನರಲ್ಲಿ ಈ ಪದ್ಧತಿ ಇದೆಯೆಂದು ಹೇಳಿದ್ದಾರೆ. ಈ ಅಂಕಿ ಇನ್ನೂ ಹೆಚ್ಚಿಗೆ ಇದೆಯೆಂದು ನಾನು ಹೇಳಬಯಸುತ್ತೇನೆ. ವಿಚ್ಛೇದನ ಮತ್ತು ಭಾರತದಲ್ಲಿ ಅದರ ಆಚರಣೆಯನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ನನ್ನ ಬೆಂಬಲಕ್ಕೆ, ಅದು, ಇಂದಿನ ಸಮಾಜದಲ್ಲಿ ಪ್ರಚಲಿತದಲ್ಲಿದೆ ಎಂಬುದೇ ಕಾರಣ ಅಲ್ಲ, ನಮ್ಮವೇ ಸಂಪ್ರದಾಯಗಳಲ್ಲಿ

ಅದೂ ಒಂದು ಎನ್ನುವುದೇ ಕಾರಣ. ಆದ್ದರಿಂದ, ನಾನು ವಿಚ್ಛೇದನದ ಪರವಾಗಿದ್ದೇನೆ.

ಸೆಲೆಕ್ಟ್ ಕಮಿಟಿಯಿಂದ ಬಂದಿರುವಂತಹ ರೂಪದಲ್ಲಿರುವ ಈ ಹಿಂದೂ ಸಂಹಿತೆ ಮಸೂದೆಯಲ್ಲಿರುವ ಮುಖ್ಯ ದೋಷವೆಂದರೆ, ಅದು ಸಾಕಷ್ಟು ಕಾಲದವರೆಗೆ ಮುಂದುವರಿಯಲಾರದು ಎಂಬುದು. ವಾಸ್ತವವಾಗಿ, ನಮ್ಮ ದೇಶದಲ್ಲಿ ಈಗಿರುವ ಸಂಪ್ರದಾಯಗಳಿಗೂ ಸೆಲೆಕ್ಟ ಕಮಿಟಿಯು ಸಲಹೆ ಮಾಡಿರುವ ಸುಧಾರಣೆಗಳಿಗೂ ಸರಿಹೊಂದಿಕೆ ಆಗುವುದೇ ಇಲ್ಲ. ಪಂಜಾಬಿನ ಜನರು ಅಷ್ಟೊಂದು ಹಿಂದೆ ಬಿದ್ದಿಲ್ಲ. ಸಾಮಾಜಿಕ ಸುಧಾರಣೆಗಳ ವಿಷಯದಲ್ಲಿ ಪಂಜಾಬಿನ ಜನರು ಭಾರತದ ಇತರ ಪ್ರದೇಶಗಳ ಜನರಿಗಿಂತಲೂ ತುಂಬಾ ಮುಂದಿದ್ದಾರೆ. ಈ ಸಂಹಿತೆಯು ಆ ಮಟ್ಟಕ್ಕೂ ಹೋಗುವುದಿಲ್ಲ. ಈ ಸಂಹಿತೆಯು, ಸಾಮಾಜಿಕ ಸುಧಾರಣೆ ತರುವುದರ ಬದಲು, ಅವರನ್ನು ಹಿಂದಿನ ಕಾಲಕ್ಕೆ ತಳ್ಳುತ್ತದೆ. ಈ ಸಂಹಿತೆಯನ್ನು ಪಂಜಾಬಿನ ಗ್ರಾಮೀಣ ಪ್ರದೇಶಗಳ ಯಾರೇ ಹಿಂದೂಗೆ, ಸಿಖ್ಖನಿಗೆ ತೋರಿಸಿದರೆ, ಆಗ, ಅವನು "ಅಯ್ಯೋ, ಸ್ವಾಮಿ, ನೀವು ಇದೇನು ಮಾಡುತ್ತಿದ್ದೀರಿ? ನೀವು ನಮ್ಮನ್ನು ತುಂಬಾ ತುಂಬಾ ಕೆಳಮಟ್ಟಕ್ಕೆ ಇಳಿಸುತ್ತಿದ್ದೀರಿ. ಈ ವಿಷಯಗಳಲ್ಲಿ ನಾವು ತುಂಬಾ ಮುಂದಿದ್ದೇವೆ. ನೀವು ಈಗ ನಮ್ಮನ್ನು ಇನ್ನೂ ಹಿಂದಕ್ಕೆ ತಳ್ಳುತ್ತೀರೇನು" ಎಂದು ಕೇಳಿಯೇ ಬಿಡುತ್ತಾನೆ. ಪಂಜಾಬಿನ ಜನರಿಗೆ ಈ ಸಂಹಿತೆಯಿಂದ ಪ್ರಯೋಜನ ಆಗುವುದಿಲ್ಲ. ಸೆಲೆಕ್ಟ್ ಕಮಿಟಿಯಿಂದ ಬಂದಿರುವ ಈ ಸಂಹಿತೆಯಲ್ಲಿ, ಪಂಜಾಬಿನ ಜನರ ಅಗತ್ಯತೆಗಳನ್ನು ಅಷ್ಟಾಗಿ ಪರಿಗಣನೆಗೆ ತೆಗೆದುಕೊಂಡಿಲ್ಲ. ಅಗತ್ಯತೆಗಳನ್ನು ಕಡೆಗಣಿಸಿರುವುದಷ್ಟೇ ಅಲ್ಲ, ಈ ಮಸೂದೆಯಲ್ಲಿರುವ ಕೆಲವೊಂದು ವಿಷಯಗಳು, ಅವುಗಳು ಪ್ರಸ್ತುತ ರೂಪದಲ್ಲೇ ಉಳಿದುಕೊಂಡರೆ, ಮಸೂದೆಯನ್ನೇ ನಾವು ಎಸೆದುಬಿಡುವಂತೆ ಮಾಡುವ ವಿಷಯಗಳಾಗಿವೆ. ನಮ್ಮ ಪದ್ಧತಿಗಳು, ಈ ಮಸೂದೆಯಲ್ಲಿ ಹೇಳಿರುವುದನ್ನು ಅನುಸರಿಸಿದರೆ, ಉಳಿಯಲಾರವು. ಆದ್ದರಿಂದ ಈ ಮಸೂದೆ ಕಳವಳ ತಂದಿದೆ.

**ಶ್ರೀ ಮೋಹನಲಾಲ್ ಗೌತಮ** (ಸಂಯಕ್ತ ಪ್ರಾಂತ್ಯ : ಸಾಮಾನ್ಯ) : ಯಾವುದಾದರೂ ಉದಾಹರಣೆ ಹೇಳಿ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಆಗಲೇ ಒಂದು ಉದಾಹರಣೆ ಕೊಟ್ಟೆನಲ್ಲ. ಸರ್, ಈ ಮಾತುಗಳನ್ನು ಹೇಳುತ್ತ ಈ ಮಸೂದೆಯ ಕುರಿತಂತೆ ನಾನು ಎತ್ತಲಿರುವ ಆಕ್ಷೇಪಣೆಗಳನ್ನು ಹೇಳಲು ಮತ್ತು ಎಷ್ಟರಮಟ್ಟಿಗೆ ನಾನು ಈ ಮಸೂದೆಗೆ ಬೆಂಬಲ ಕೊಡುತ್ತೇನೆ ಎಂಬುದನ್ನು ಹೇಳಲು ತಮ್ಮ ಅನುಮತಿ ಕೋರುತ್ತಿದ್ದೇನೆ. ಯಾರಿಗೂ ಯಾವುದೇ ಆಕ್ಷೇಪಣೆ ಇರದಂತಹ ಹಲವಾರು ಕಲಮುಗಳು ಇವೆ. ಮಸೂದೆಯ ಎಲ್ಲ ಕಲಮುಗಳಿಗೂ ತಮ್ಮ ವಿರೋಧವಿದೆಯೆಂದು ಹೇಳಬಹುದಾದ ಕೆಲವು ಮಂದಿ ಜನರಿರಬಹುದು. ಸರ್, ತಾವು ಮಸೂದೆಯನ್ನು ನೋಡಿದ್ದಾದರೆ, ಸೆಲೆಕ್ಟ್ ಕಮಿಟಿಯ ೧೭ ಸದಸ್ಯರ ಪೈಕಿ ೧೧ ಸದಸ್ಯರಿಂದ ಅಸಮ್ಮತಿಸೂಚಕ ಟಿಪ್ಪಣಿಗಳಿರುವುದು ತಮಗೆ ಕಂಡುಬರುತ್ತದೆ. ಅವರುಗಳು ಯಾರು? ಶ್ರೀಮತಿ ಅಮ್ಮು ಸ್ವಾಮಿನಾಥನ್ ಮತ್ತು ಶ್ರೀಮತಿ ರೇಣುಕಾ ರೇ. ಇವರಿಬ್ಬರಿಂದ ಅಸಮ್ಮತಿಸೂಚಕ ಟಿಪ್ಪಣಿಗಳಿವೆ.

**ಶ್ರೀಮತಿ ರೇಣುಕಾ ರೇ** (ಪಶ್ಚಿಮ ಬಂಗಾಳ : ಸಾಮಾನ್ಯ) : ಈ ಟಿಪ್ಪಣಿಗಳು ಮೂಲಭೂತ ತತ್ತ್ವಗಳ ಬಗ್ಗೆ ಅಲ್ಲ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ನಾನು ಆ ಬಗ್ಗೆಯೂ ಹೇಳುತ್ತೇನೆ. ನಿಜ ಹೇಳಬೇಕೆಂದರೆ, ಅಸಮ್ಮತಿಸೂಚಕ ಟಿಪ್ಪಣಿ ಬರೆದಿರುವ ಈ ಸದಸ್ಯರೇ ಸೆಲೆಕ್ಟ್ ಕಮಿಟಿಯಿಂದ ಬಂದಿರುವ ಈ ಮಸೂದೆಯನ್ನು ವಿರೋಧಿಸಿದ್ದಾರೆ. ಯಾರ್‍ಯಾರು ಅಸಮ್ಮತಿಸೂಚಕ ಟಿಪ್ಪಣಿಯನ್ನು ಬರೆದಿದ್ದಾರೆಂಬುದನ್ನು

ಕೂಡ ಹೇಳುತ್ತೇನೆ. ಅಸಮ್ಮತಿಸೂಚಕ ಟಿಪ್ಪಣಿಯನ್ನು ಬರೆದಿರುವವರಲ್ಲಿ ಭಕ್ಷಿ ತೇಕಚಂದ್, ಕೂಡ ಒಬ್ಬರು. ಅವರು, ತಮ್ಮ ಜೀವಮಾನವಿಡೀ ಸಾಮಾಜಿಕ ಉನ್ನತಿಗಾಗಿ ಕೆಲಸ ಮಾಡಿದ್ದಾರೆ. ಸಾಮಾಜಿಕ ಸುಧಾರಣೆಗಳ ಬಗ್ಗೆ ಏನು ಬೇಕಾದರೂ ಮಾಡಲು ಸಿದ್ಧರಾಗಿದ್ದಾರೆ. ಅಂಥವರೇ ಅಸಮ್ಮತಿಸೂಚಕ ಟಿಪ್ಪಣಿ ಬರೆದಿರುವಾಗ, ನಾವು ಎತ್ತ ಸಾಗುತ್ತಿದ್ದೇವೆ ಎಂಬುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಈ ಅಸಮ್ಮತಿಸೂಚಕ ಟಿಪ್ಪಣಿಗಳನ್ನು ಎಚ್ಚರಿಕೆಯಿಂದ ಓದಿದರೆ, ಸೆಲೆಕ್ಟ್ ಕಮಿಟಿಯಿಂದ ಬಂದಿರುವ ಈ ಮಸೂದೆಯನ್ನು ೧೭ ಸದಸ್ಯರ ಪೈಕಿ, ಕೊನೇ ಪಕ್ಷ ೧೧ ಸದಸ್ಯರು ಪ್ರಬಲವಾಗಿ ವಿರೋಧಿಸಿರುವುದು ಸ್ಪಷ್ಟವಾಗುತ್ತದೆ. ಈ ಮಾತುಗಳನ್ನು ಹೇಳುತ್ತ ವಿಳಂಬಕಾರಕವೆಂದು ಭಾವಿಸುವಂತಹ ಸೂಚನೆಗಳನ್ನು ಪ್ರಸ್ತಾಪಿಸಲು ಏಕೆ ಮನಸ್ಸು ಮಾಡಿದೆ ಎಂಬುದನ್ನು ಹೇಳುತ್ತಿದ್ದೇನೆ.

**ಶ್ರೀ ತಜಮುಲ್ ಹುಸೇನ್** (ಬಿಹಾರ್ : ಮುಸ್ಲಿಂ) : ಸರ್, ನಾನು ಒಂದು ಮಾಹಿತಿ ಲೋಪವನ್ನು ಎತ್ತುತ್ತಿದ್ದೇನೆ. ಸೆಲೆಕ್ಟ್ ಕಮಿಟಿಯ ೧೭ ಸದಸ್ಯರ ಪೈಕಿ ೧೧ ಸದಸ್ಯರು ಅಸಮ್ಮತಿ ಸೂಚಕ ಟಿಪ್ಪಣಿ ಬರೆದಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಮಸೂದೆಯನ್ನು ಅವರು ವಿರೋಧಿಸುವುದಾದರೆ, ಈ ಮಸೂದೆಯನ್ನು ನಾವು ಅಂಗೀಕರಿಸಬೇಕೆಂದು ಸೆಲೆಕ್ಟ್ ಕಮಿಟಿಯು ಹೇಗೆ ಶಿಫಾರಸು ಮಾಡಿತು ಎಂಬುದನ್ನು ಮಾನ್ಯ ಸದಸ್ಯರು ಹೇಳಬೇಕೆಂದು ನಾನು ಕೇಳುತ್ತಿದ್ದೇನೆ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ ಸರ್, ಇದು ಮಾಹಿತಿ ಲೋಪವೂ ಅಲ್ಲ, ಕ್ರಿಯಾಲೋಪವೂ ಅಲ್ಲ ಎಂಬುದು ನನ್ನ ಅಭಿಪ್ರಾಯ ತಾವು, ಮಸೂದೆಯನ್ನು ಗಮನಿಸಿದರೆ, ಶ್ರೀ ಭಾರತಿಯರೂ ಕೂಡ ಅಸಮ್ಮತಿಸೂಚಕ ಟಿಪ್ಪಣಿ ಬರೆದಿದ್ದಾರೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದ್ರಾಸ್ : ಜನರಲ್) : ನನ್ನ ಟಿಪ್ಪಣಿಯಲ್ಲಿ ಮಸೂದೆಯಲ್ಲಿರುವುದಕ್ಕಿಂತ ಸ್ವಲ್ಪ ಹೆಚ್ಚಿಗೆ ಹೇಳಿದ್ದೇನೆ. ಮಸೂದೆಯ ವ್ಯಾಪ್ತಿ ಹೆಚ್ಚಾಗಬೇಕೆಂಬುದು ನನ್ನ ಆಶಯ. ಅದೇ ನಾನು ಬರೆದಿರುವ ಟಿಪ್ಪಣಿ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಮಾನ್ಯ ಸದಸ್ಯರು ಪ್ರತಿಯೊಂದು ಮಾತನ್ನೂ, ಪ್ರತಿಯೊಂದು ವಾಕ್ಯವನ್ನೂ ವಿವರಿಸಿ ಹೇಳಬೇಕೇ? ಅಗತ್ಯ ಇಲ್ಲ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಹಾಗಲ್ಲ ಸರ್ ,......

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಮಾನ್ಯ ಸದಸ್ಯರ ಅಸಮ್ಮತಿಸೂಚಕ ಟಿಪ್ಪಣಿಯು ಮುದ್ರಿತವಾಗಿದೆ. ಅವರು ಏನಾದರೂ ವಿವರಣೆ ಕೊಡಬಯಸಿದರೆ, ಅವರ ಸರದಿ ಬಂದಾಗ ಹೇಳುತ್ತಾರೆ. ಸ್ಪೀಕರ್ ಮಾತನಾಡುವಾಗ, ಮಧ್ಯೆ ಮಾತನಾಡುವುದರಿಂದ, ಮಾನ್ಯ ಸದಸ್ಯರುಗಳು ಏಕಕಾಲದಲ್ಲಿ ಎದ್ದುನಿಂತು ಮಾತನಾಡುವುದರಿಂದ ಏನೂ ಪ್ರಯೋಜನವಾಗದು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಸರ್, ನಾನು, ಏನು ಹೇಳುತ್ತಿದ್ದೇನೆಂದರೆ

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ನೀವು ತುಂಬಾ ಹೇಳಿದ್ದೀರಿ, ನಾನೂ ಕೇಳಿಸಿಕೊಂಡಿದ್ದೇನೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಸರ್, ವೈಯಕ್ತಿಕ ವಿವರಣೆಯನ್ನು ಹೇಳಬಾರದೇ?

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಸರ್, ಈ ಸದನದ ಮುಂದೆ ನನ್ನ ಅಭಿಪ್ರಾಯವನ್ನು ವಿವರಿಸುವಂತಹ ತೊಂದರೆಯನ್ನು ಶ್ರೀ ಭಾರತಿಯರಿಗೆ ಕೊಡುವುದಿಲ್ಲ. ನಾನೇ, ಅವರ ಅಭಿಪ್ರಾಯವನ್ನು ಹೇಳುತ್ತೇನೆ. ಈ ಮಸೂದೆಯಲ್ಲಿರುವ ಮೂಲಭೂತ ತತ್ತ್ವಗಳಿಗೆ ತಾನು ಯಾವ ರೀತಿಯಲ್ಲೂ ವಿರೋಧವಾಗಿಲ್ಲ ಎಂಬುದು ಶ್ರೀ ಭಾರತಿಯವರ ಟಿಪ್ಪಣಿ. ಸೀಮಿತ ಆಸ್ತಿಯ ಒಡೆತನವನ್ನು ಹೊಂದಿರುವ

ಎಲ್ಲ ಮಹಿಳೆಯರಿಗೆ, ತರ್ಕದ ಪರಿಣಾಮವಾಗಿ, ಹಕ್ಕುಗಳನ್ನು ಕೊಡಬೇಕು. ಅವರನ್ನು ಕೂಡಲೇ ಸಂಪೂರ್ಣವಾಗಿ ಒಡೆಯರನ್ನಾಗಿ ಮಾಡಬೇಕೆಂಬುದು ಅವರ ಆಶಯ. ನಾನು ಸರಿಯಾಗಿಯೇ ಹೇಳಿದ್ದೇನೆಂದು ನನ್ನ ಅನಿಸಿಕೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಉತ್ತರ ಕೊಡಲು ನನಗೆ ಅನುಮತಿ ಕೊಟ್ಟಿಲ್ಲ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಮಾನ್ಯ ಸದಸ್ಯರಾದ ಪಂಡಿತ ಭಾರ್ಗವರವರೇ ಮಾತು ಮುಂದುವರಿಸಿ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಸೆಲೆಕ್ಟ್ ಕಮಿಟಿಯಿಂದ ಬಂದಿರುವ ಸ್ವರೂಪದ ಮಸೂದೆಯ ಮೇಲೆ ಸೆಲೆಕ್ಟ್ ಕಮಿಟಿಯ ಅನೇಕ ಸದಸ್ಯರುಗಳೇ ಅಸಮ್ಮತಿಸೂಚಕ ಟಿಪ್ಪಣಿಗಳನ್ನು ಬರೆದಿದ್ದಾರೆಂದು, ಸರ್, ಈ ಕಾರಣಕ್ಕಾಗಿಯೇ ನಾನು ಹೇಳುತ್ತಿದ್ದೇನೆ. ಯಾವ ಉದ್ದೇಶಕ್ಕಾಗಿ, ಅಸಮ್ಮತಿಸೂಚಕ ಟಿಪ್ಪಣಿಗಳನ್ನು ಬರೆದಿದ್ದಾರೆಂಬುದನ್ನು ನಾನು ನಂತರ ಹೇಳುತ್ತೇನೆ. ನಾನು ಮಾತನಾಡುವಾಗ ಮಧ್ಯೆಮಧ್ಯೆ ಮಾಡನಾಡಬಾರದು ಎಂದು ನನ್ನ ಕೋರಿಕೆ.

ಸರ್, ಈ ಮಸೂದೆಯು ಯಾವ ಕೆಲವೊಂದು ಮಟ್ಟಕ್ಕೆ ಹೋಗಬೇಕಾಗಿತ್ತೋ ಆ ಮಟ್ಟಕ್ಕೆ ಹೋಗಿರದಿದ್ದರೂ, ಸಾಮಾಜಿಕ ಸುಧಾರಣೆಗಳ ವಿಷಯದಲ್ಲಿ ಇದಕ್ಕಿಂತಲೂ ಹೆಚ್ಚು ಹೇಳಲು ನಾನು ಸಿದ್ಧನಿರುವೆನಾದರೂ ಈ ಮಸೂದೆಗೆ ಸಂಪೂರ್ಣವಾಗಿ ಬೆಂಬಲ ಕೊಡುವ ಸ್ಥಿತಿಯಲ್ಲಿ ನಾನಿಲ್ಲ. ಇದು ಸಹಜವೇ. ಡಾ. ಅಂಬೇಡ್ಕರ್‌ರವರೂ ಕೂಡ, ಅವರ ಕೃಪೆ, ಶ್ರಮದಿಂದ ಈ ಮಸೂದೆಗೆ ಈ ಸ್ವರೂಪ ಬಂದಿದ್ದರೂ, ಪ್ರತಿಯೊಬ್ಬ ಭಾರತೀಯನೂ, ಅದರಲ್ಲೂ ಪ್ರತಿಯೊಬ್ಬ ಹಿಂದೂವು ಹೆಮ್ಮೆಪಡಬೇಕಾದ ಭಾಷಣವನ್ನು ಮಾಡಿದ್ದರೂ, ಈ ಮಸೂದೆಯ ಎಲ್ಲ ಕಲಮುಗಳಿಗೆ ಬೆಂಬಲ ಕೊಟ್ಟಿಲ್ಲ. ಆದ್ದರಿಂದಲೇ ಅವರು ಸೆಲೆಕ್ಟ್ ಕಮಿಟಿಯು ಕೆಲವು ವಿಷಯಗಳಲ್ಲಿ ತರ್ಕ ಬಿಟ್ಟು ಸಾಗಿದೆಯೆಂದು ಹೇಳಿದ್ದಾರೆ. ನಾನು ಕಠಿಣವಾದ ಶಬ್ದಗಳನ್ನು ಬಳಸಬಯಸುವುದಿಲ್ಲ. ಆದರೆ, ಅವರೂ ಕೂಡ, ಈ ಮಸೂದೆಯ ವಿರುದ್ಧವಾಗಿದ್ದಾರೆಂದು ಹೇಳುತ್ತೇನೆ. ಮಸೂದೆ ಕುರಿತು ೧೨ ಅಸಮ್ಮತಿಸೂಚಕ ಟಿಪ್ಪಣಿಗಳಿವೆ. ೧೭ ಸದಸ್ಯರ ಪೈಕಿ ೧೨ ಸದಸ್ಯರು ಈ ಮಸೂದೆಗೆ ವಿರುದ್ಧವಾಗಿರುವಾಗ ಇಂಥ ಪರಿಸ್ಥಿತಿಯಲ್ಲಿ ನಾನು ಶ್ರೀ ನಸೀರುದ್ದೀನ್ ಅಹ್ಮದ್‌ರವರು ಪ್ರಸ್ತಾವಿಸಿರುವ ತಿದ್ದುಪಡಿಗೆ ಬೆಂಬಲ ಕೊಟ್ಟರೆ ಈ ಸದನ ಆಶ್ಚರ್ಯಪಡಬಾರದು. ಕಾರಣ ತುಂಬಾ ಸ್ಪಷ್ಟ. ನೀವು ಯಾರೂ ನನ್ನನ್ನು ತಪ್ಪು ತಿಳಿದುಕೊಳ್ಳಬಾರದು. ಈ ಮಸೂದೆಯಲ್ಲಿ ಒಂದು ನಿಮಿಷ ಕೂಡ ತಡಮಾಡದೆ ಅಂಗೀಕರಿಸುವಂತಹ ಕಲಮುಗಳಿವೆ. ಈ ಸೂಚನೆಯು ವಿಳಂಬಕಾರಕ ಸೂಚನೆಯಾಗಿದ್ದಿದ್ದರೆ, ನಾನು ಬೆಂಬಲಿಸುತ್ತಲೇ ಇರಲಿಲ್ಲ. ನನ್ನ ಅನೇಕ ಸೂಚನೆಗಳೂ ಕೂಡ ವಿಳಂಬಕಾರಕ ಸೂಚನೆಗಳಲ್ಲ. ಈ ಮಸೂದೆಯು ಈ ಸದನದಲ್ಲಿ ಎಂದರೆ ಈ ಸದನದ ಈ ಅಧಿವೇಶನದಲ್ಲಿ ಅಂಗೀಕಾರವಾಗದೆಂಬುದು ನನಗೆ ಗೊತ್ತಿದೆ. ಈ ಮಸೂದೆಯನ್ನು ಅಂಗೀಕರಿಸಲು ಸದನದ ಒಂದು ವಿಶೇಷ ಅಧಿವೇಶನವನ್ನು ಕರೆಯಬೇಕಾಗುತ್ತದೆ. ಸುಮಾರು ಆರು ತಿಂಗಳಾದ ನಂತರ ಮುಂದಿನ ಅಧಿವೇಶನ ಸೇರಲಿದೆ. ನಾನು ಎತ್ತಿರುವ ಆಕ್ಷೇಪಣೆಯನ್ನು ಆ ಆರು ತಿಂಗಳ ಅವಧಿಯಲ್ಲಿ ತುಂಬಾ ಸುಲಭವಾಗಿ ಇತ್ಯರ್ಥ ಮಾಡಬಹುದಾಗಿದೆ. ತಮ್ಮ ಅನುಮತಿ ಕೋರುತ್ತಾ, ಸರ್, ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಮತ್ತೆ ವಾಪಸ್ಸು ಕಳುಹಿಸಬಾರದೆಂಬುದು ನನ್ನ ಅನಿಸಿಕೆಯೆಂದು ಹೇಳುತ್ತಿದ್ದೇನೆ. ಹಾಗೆ ಮಾಡುವುದಕ್ಕೆ ನನ್ನಲ್ಲಿರುವ ಕಾರಣಗಳು ತೀರಾ ಬೇರೆ. ಈ ಮಸೂದೆ ಬಗ್ಗೆ ಏನೋ ಒಂದು ಇತ್ಯರ್ಥಕ್ಕೆ ಬರಬೇಕೆಂದು ನಾನು ಬಯಸುತ್ತಿದ್ದೇನೆಂದು ಕೆಲವರು ಮಾನ್ಯ ಸದಸ್ಯರುಗಳು ಆಲೋಚಿಸುತ್ತಿರಬಹುದು. ಈ ಮಸೂದೆಗೆ ನಾನು ಅಂತ್ಯ ಕಾಣಬಯಸುವುದಿಲ್ಲ. ಈ ಮಸೂದೆ ಅಂಗೀಕಾರವಾಗಬೇಕು ಎಂಬುದು

ನನ್ನ ಬಯಕೆ. ಈ ಮಸೂದೆಯಲ್ಲಿರುವ ಒಳ್ಳೆಯ ಅಂಶಗಳು ಅಂಗೀಕಾರವಾಗಬೇಕು. ಆದ್ದರಿಂದ, ಈ ಮಸೂದೆಯನ್ನು ಶಾಂತ ಮನಸ್ಸಿನಿಂದ ಪರಾಮರ್ಶಿಸುವುದು ಆವಶ್ಯಕ. ಭಾವೋದ್ರೇಕಕ್ಕೆ ಆಸ್ಪದಕೊಡುವುದು ಅನವಶ್ಯಕ. ಆದ್ದರಿಂದ, ನಾನು ಏನನ್ನಾದರೂ ಹೇಳಿದರೆ ಅದನ್ನು ಶಾಂತ ಮನಸ್ಸಿನಿಂದ ಆಲಿಸಬೇಕು. ಡಾ. ಅಂಬೇಡ್ಕರ್‌ರವರು ಅದನ್ನು ತಪ್ಪು ತಿಳಿದುಕೊಳ್ಳುವುದಿಲ್ಲವೆಂದು ನಾನು ಭಾವಿಸುತ್ತೇನೆ. ನಾನು ಇದನ್ನೆಲ್ಲಾ ವಿನಮ್ರವಾಗಿ ಹೇಳುತ್ತಿದ್ದೇನೆಯೇ ಹೊರತು ವಿರೋಧಿಸಲೇಬೇಕೆಂಬ ಸ್ಫೂರ್ತಿಯಿಂದಲ್ಲ. ನಾನು ಏನು ಹೇಳುತ್ತಿದ್ದೇನೆಯೋ ಅದನ್ನು ಧೈರ್ಯದಿಂದಲೇ ಹೇಳುತ್ತೇನೆ ಅದನ್ನು, ಕೊನೆಯ ಪಕ್ಷ, ಇತರರು, ದೊಡ್ಡ ಮನಸ್ಸಿನಿಂದಲ್ಲದಿದ್ದರೂ, ತಕ್ಕಮಟ್ಟಿಗೆ ಅರ್ಥಮಾಡಿಕೊಳ್ಳುತ್ತಾರೆಂದು ಅಂದುಕೊಂಡಿದ್ದೇನೆ. ನಾನು ಗೌರವಪೂರ್ವಕವಾಗಿಯೇ ಹೇಳುತ್ತಿದ್ದೇನೆ. ಅದೇನು ಕಡಿಮೆ ಪ್ರಾಮುಖ್ಯತೆಯದಲ್ಲ. ಹೊಸದಾಗಿ ಚುನಾವಣೆಗಳು ನಡೆಯುತ್ತದೆಂಬ ಸಂಗತಿ ಈ ಸದನದ ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಗೊತ್ತಿದೆ. ಈಗಿನ ಸದಸ್ಯರೆಲ್ಲರೂ ಅಪ್ರತ್ಯಕ್ಷ ಚುನಾವಣೆ ಮೂಲಕ ಇಲ್ಲಿಗೆ ಚುನಾಯಿತರಾಗಿದ್ದಾರೆ. ಮುಂದೆ ಬರಲಿರುವ ಸದಸ್ಯರು ನೇರ ಚುನಾವಣೆ ಮೂಲಕ, ವಯಸ್ಕ ಮತದಾನ ಪದ್ಧತಿಯಿಂದ ಬರಲಿದ್ದಾರೆ. ರಾಜ್ಯಾಂಗ ಸಭೆಯಲ್ಲಿ ನಾವು ಅಂಗೀಕರಿಸಿದ ನಿರ್ಣಯದಂತೆ, ಚುನಾವಣೆಗಳು ೧೯೫೦ರಲ್ಲಿ ನಡೆಯಲಿವೆ. ನಾನು ಈಗಾಗಲೇ ಹೇಳಿರುವಂತೆ ಅದು ಮಾತ್ರವೇ, ಸರ್, ತಾವೂ ಕೂಡ ಅದನ್ನೇ ಹೇಳಿದ್ದೀರಿ, ಅದು ಮಾತ್ರವೇ, ಸಂಪೂರ್ಣ ಪರಮಾಧಿಕಾರವುಳ್ಳ ಸಭೆಯಾಗುತ್ತದೆ. ಔಚಿತ್ಯದ ಬಗ್ಗೆ ಹೇಳುವುದಾದರೆ, ೩೦ಕೋಟಿ ಜನರ ದೈನಂದಿನ ಜೀವನಕ್ಕೆ ಸಂಬಂಧಪಟ್ಟಿರುವ ವಿಷಯವನ್ನು ನಾವು ತೀರ್ಮಾನಿಸುವುದರ ಬದಲು ನೇರ ಚುನಾವಣೆಯಿಂದ, ವಯಸ್ಕ ಮತದಾನ ಪದ್ಧತಿಯಿಂದ ಬರುವ ಆ ಸದಸ್ಯರ ತೀರ್ಮಾನಕ್ಕೇ ಬಿಡುವುದು ಒಳ್ಳೆಯದೆಂದು ಹೇಳಬಯಸುತ್ತೇನೆ. ಅದೇ ಸರಿಯಾದ ಮಾರ್ಗ, ಔಚಿತ್ಯ ಕೂಡ, ಈ ಸಭೆಯು ರಾಜ್ಯಾಂಗವನ್ನು ಮಾತ್ರ ರಚಿಸುತ್ತದೆ ಎಂದು ಕೆಲವರು ಭಾವಿಸಿದ್ದಾರೆ. ಹನ್ನೆರಡು ಗಂಡುಮಕ್ಕಳಿಗೆ ಆಸ್ತಿಯನ್ನು ಹಂಚಿದರೆ, ಆಸ್ತಿಯನ್ನು ತುಂಡುತುಂಡು ಮಾಡಿದಂತಾಗುವುದಿಲ್ಲವೆಂದ ಮೇಲೆ ಮಗಳಿಗೂ ಒಂದು ಭಾಗ ಕೊಡಲು ಇನ್ನೊಂದು ತುಂಡು ಮಾಡಿದರೂ ಕೂಡ ತುಂಡುತುಂಡು ಮಾಡಿದಂತಾಗುವುದಿಲ್ಲವೆನ್ನುವ ಇದೇ ವಾದವನ್ನು ನಿನ್ನೆ ಹೇಳಲಾಗಿತ್ತು. ಆದರೆ, "ಮಾಡಿದ ಒಂದು ತಪ್ಪು ಇನ್ನೊಂದು ತಪ್ಪು ಮಾಡುವುದಕ್ಕೆ ಸಮರ್ಥನೆ ಆಗುವುದಿಲ್ಲ"ವೆಂದು ಹೇಳುತ್ತೇನೆ.

ಶ್ರೀ ಮೋಹನ್‌ಲಾಲ್ ಗೌತಮರವರು ಈ ಸಭೆಯು ರಾಜ್ಯಾಂಗವನ್ನು ರಚಿಸಲೂ ಕೂಡ ಸಕ್ಷಮ ಅಲ್ಲವೆಂದು ಹೇಳಿದ್ದಾರೆ. ನಾನು ಅವರ ಅಭಿಪ್ರಾಯವನ್ನು ಒಪ್ಪುವುದಿಲ್ಲ. ನಿಮಗೆ ಹಾಗನ್ನಿಸಿದ್ದರೆ, ನೀವು ಮತ್ತೇ ಅದೇ ತಪ್ಪನ್ನು ಏಕೆ ಮಾಡುತ್ತಿದ್ದೀರಿ? ಇದು ತೀರಾ ತಪ್ಪು. ನಿಮಗೆ ಅಭಿಪ್ರಾಯ ಇರದಿರುತ್ತಿದ್ದರೆ, ಅದೇ ಬೇರೆ, ನನ್ನ ಪ್ರಕಾರ ಇದು ಸಾರ್ವಭೌಮ ಸಭೆ. ಇಂದು, ತಾನಿಚ್ಛಿಸಿದ ಕಾನೂನುಗಳನ್ನು ಅಂಗೀಕರಿಸಲು ಯಾವ ಸಂಪೂರ್ಣವಾದ ಅಧಿಕಾರ ಈ ಸಭೆಗೆ ಇದೆಯೋ ರಾಜ್ಯಾಂಗವನ್ನು ರಚಿಸಲೂ ಸಹ ಅಷ್ಟೇ ಅಧಿಕಾರ ಇದೆ. ಅದು ಸಂಪೂರ್ಣವಾಗಿ ನ್ಯಾಯಸಮ್ಮತ. ಆದರೂ, ಔಚಿತ್ಯ, ಮಿತಿ ಎನ್ನುವುದು ಒಂದಿರುತ್ತದೆ. ಈ ವಿಚಾರದಲ್ಲಿ ನಾವು ಅವಸರ ಮಾಡಬಾರದೆಂದು ಅವು ನಮ್ಮನ್ನು ನಿರ್ಬಂಧಿಸುತ್ತವೆ. ಸಾವಿರಾರು ವರ್ಷಗಳಿಂದಲೂ ನಾವು ಆ ತತ್ತ್ವಗಳನ್ನು ಅನುಸರಿಸುತ್ತಿದ್ದೇವೆ. ಆದ್ದರಿಂದ, ಮುಂದಿನ ಆರು ತಿಂಗಳಲ್ಲಿ ಆಕಾಶ ನಮ್ಮ ತಲೆಯ ಮೇಲೆ ಬೀಳಲಿದೆ, ಅದಕ್ಕೋಸ್ಕರವೇ ಅವಸರ ಅವರಸರವಾಗಿ ನಾವು ಈ ಮಸೂದೆಯನ್ನು ಅಂಗೀಕರಿಸಬೇಕಾಗುತ್ತದೆ ಎಂದೇನಿಲ್ಲ. ಸರ್, ತಾವೇ ತಮ್ಮ ಅಸಮ್ಮತಿ ಸೂಚಕ ಟಿಪ್ಪಣಿ ಬರೆದಿದ್ದೀರಿ. ಹನ್ನೆರಡು ಸದಸ್ಯರ ಪೈಕಿ ತಾವೂ ಒಬ್ಬರು, ಹನ್ನೆರಡು ರಾಶಿ ಚಕ್ರಗಳಲ್ಲಿ ತಮ್ಮದೂ

ಒಂದು. ತಮ್ಮಂತೆಯೇ, ಬಾಬುರಾಮನಾರಾಯಣಸಿಂಗ್‌ರವರೂ ಕೂಡ, ಪುಟ ೧೧ರಲ್ಲಿ ಹೇಳಿದ್ದಾರೆ.

> "ಸದಸ್ಯರು ಅಪ್ರತ್ಯಕ್ಷವಾಗಿ ಚುನಾಯಿತರಾಗಿದ್ದಾರೆ. ಅವರಿಗೆ ಜನರ ಆಜ್ಞಾಪನೆ ಇಲ್ಲ. ಬಹುತೇಕ ಅಭಿಪ್ರಾಯವು ಮತ್ತು ಬಹುಜನರ ಅಭಿಪ್ರಾಯವು ಮಸೂದೆಯ ಬಹುತೇಕ ಕಲಮುಗಳಿಗೆ ವಿರುದ್ಧವಾದುದಾಗಿದೆ. ಮಸೂದೆಯು ಹಿಂದೂ ಸಮಾಜದ ಮೂಲ ಚೌಕಟ್ಟನ್ನು ಬದಲಾಯಿಸಲು ಉದ್ದೇಶಿಸಿದೆ"

ಈ ಸದನಕ್ಕೆ, ಮುಂದೆ ನೇರ ಚುನಾವಣೆ ಮೂಲಕ ಆಯ್ಕೆಯಾಗಿ ಬರುವ ಜನಪ್ರತಿನಿಧಿಗಳಿಗೆ ಈ ವಿಷಯವನ್ನು ತೀರ್ಮಾನಿಸುವ ಅವಕಾಶ ಕೊಡುವುದು ನ್ಯಾಯೋಚಿತ. ಗೌರವಾನ್ವಿತರಾದ, ದೇಶದ ಸಮರ್ಥ ನಾಯಕರಾದ ಡಾ. ರಾಜೇಂದ್ರಪ್ರಸಾದ್‌ರವರು, ಈ ನೀತಿಯನ್ನು ಒಪ್ಪುತ್ತ, ಈ ಮಸೂದೆಯನ್ನು, ಇಡಿಯಾಗಿ, ಮುಂದಿನ, ಜನಪ್ರತಿನಿಧಿ ಸಭೆಯಲ್ಲಿ ಮಂಡಿಸಬೇಕೆಂದೂ ಕೂಡ ಪತ್ರ ಬರೆದಿದ್ದಾರೆ.

**ಶ್ರೀ ತಜಮುಲ್ ಹುಸೇನ್ :** ಗವರ್ನರ್ ಜನರಲ್‌ರವರು ಏನೆಂದು ಬರೆದಿದ್ದಾರೆ?

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಗವರ್ನರ್ ಜನರಲ್‌ರವರು ಬರೆದಿರುವುದರ ಬಗ್ಗೆ ತಾವು ಏನೇ ಹೇಳಿ, ಸರ್, ಆದರೆ, ನಾನು ಹಿರಿಯರ ಅಭಿಪ್ರಾಯವನ್ನು ತುಂಬಾ ಗೌರವಿಸುತ್ತೇನೆ. ಈ ವಿಷಯ, ಇಂದು, ನನಗೆ ಆತಂಕ ತಂದಿದೆ. ಈ ವಿಷಯ, ಯಾವುದೇ ದೂರದ ಹಳ್ಳಿಯಲ್ಲಿ ಬದುಕುತ್ತಿರುವ ಪ್ರತಿಯೊಬ್ಬ ಮಹಿಳೆಗೂ ಸಂಬಂಧಪಟ್ಟಿದೆ. ಇದರ ಪರಿಣಾಮ ಪ್ರತಿಯೊಬ್ಬರ ಮೇಲೂ ಆಗುತ್ತದೆ. ಹೀಗಾಗಿ, ಪ್ರತಿಯೊಬ್ಬರಿಗೂ ಅವರವರ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು ಇದೆ. ನಾನು ಏಕೆ ಒಪ್ಪುತ್ತಿಲ್ಲವೆಂದರೆ, ನಿನ್ನೆ, ನನ್ನ ಸಹೋದರಿ ಸಮಾನರಾದ ಮಾನ್ಯ ಶ್ರೀಮತಿ ಸುಚೇತಾ ಕೃಪಲಾನಿಯವರು, ಈ ರೀತಿ ತಡ ಆಗುತ್ತಿದ್ದರೆ, ಶತಮಾನಗಳೇ ಬೇಕಾಗುತ್ತವೆಂದು ಹೇಳಿದ್ದರು. ಈ ಮಸೂದೆಯೂ ಕಳೆದ ಹತ್ತು ವರ್ಷಗಳಿಂದಲೂ ಇದೆ. ಅವರ ವಾದ ನನಗೆ ಅರ್ಥವಾಗುತ್ತಿಲ್ಲ. ಈ ದೇಶದಲ್ಲಿ ಎಷ್ಟು ಪ್ರಮಾಣದಲ್ಲಿ ಸಾಕ್ಷರತೆ ಇದೆ? ಈ ದೇಶದಲ್ಲಿ ಎಷ್ಟು ಮಂದಿ ಅಕ್ಷರಸ್ಥ ಮಹಿಳೆಯರಿದ್ದಾರೆ? ಈ ಸದನದ ನನ್ನ ಸಹೋದರಿ ಸಮಾನ ಸದಸ್ಯರಿಗೆ, ನಾನು, ಅವರ ಅಭಿಪ್ರಾಯವನ್ನು ಗೌರವಿಸುತ್ತೇನೆ. ಗ್ರಾಮಗಳಲ್ಲಿ, ಪಟ್ಟಣಗಳಲ್ಲಿ ವಾಸಿಸುತ್ತಿರುವ ಸಾವಿರಾರು ಸಹೋದರಿಯರು, ಈ ವಿಷಯದಲ್ಲಿ, ಅವರವರ ಅಭಿಪ್ರಾಯವನ್ನು ವ್ಯಕ್ತಪಡಿಸಲು ಹಕ್ಕಿಲ್ಲವೇ ಹೇಳಿ ಎಂದು ಕೇಳುತ್ತಿದ್ದೇನೆ. ಈ ಕಾರಣಕ್ಕಾಗಿಯೇ, ನಾನು, ಈ ವಿಷಯದಲ್ಲಿ, ಸಹೋದರಿ ಸಮಾನರಾದ ಸದಸ್ಯೆಯರು ತಾಳ್ಮೆಯಿಂದಿರಬೇಕೆಂದು, ಮನಸ್ಸನ್ನು ಸ್ವಲ್ಪ ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ, ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಂಪೂರ್ಣವಾದ ಹಕ್ಕುಳ್ಳವರ ಅಭಿಪ್ರಾಯವನ್ನೂ ಸಹ ಸೇರಿಸಬೇಕೆಂದು ನಾನು ಹೇಳಿದರೆ ಅದೇನೂ ಅಪರಾಧ ಆಗಲಾರದು. ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ವಾಸಿಸುತ್ತಿರುವ ಜನರಿಗೆ ಈ ಮಸೂದೆ ಯಾವುದು, ಅದರಲ್ಲಿ ಏನೇನಿದೆ ಎನ್ನುವುದು ಗೊತ್ತೇ ಇಲ್ಲ. ಕೆಲವರು ಮಾನ್ಯ ಸದಸ್ಯರು "ಬೇಕು" "ಬೇಕು" ಎನ್ನಬಹುದು. ಆದರೆ, ಈ ಮಸೂದೆಯ ಕಲಮುಗಳನ್ನು ಓದದವರು ಹಾಗೂ ಈ ಸದನದ ಅನೇಕ ಸದಸ್ಯರು ಆ ಸಂಗತಿ ಪ್ರಾಮುಖ್ಯತೆಯನ್ನು ಗ್ರಹಿಸಿಯೇ ಇಲ್ಲ.

**ಶ್ರೀಮತಿ ಜಿ. ದುರ್ಗಾಬಾಯಿ :** ನಿಮ್ಮ ಇತರ ಮಸೂದೆಗಳಲ್ಲಿ ಹೇಳಿರುವ ಸುಧಾರಣೆಗಳನ್ನು ಈ ದೇಶದ ಮಹಿಳೆಯರು ಚೆನ್ನಾಗಿ ಅರ್ಥ ಮಾಡಿಕೊಳ್ಳುವಷ್ಟು ಸಮರ್ಥರಿದ್ದಾರೆಂದು ನೀವೇ ಹೇಳಿರುವಾಗ ಈ ಮಸೂದೆಯ ಕಲಮುಗಳನ್ನು ಕೂಡ ಅವರು ಅರ್ಥ ಮಾಡಿಕೊಳ್ಳಬಲ್ಲರೆಂದು ನಿಮಗೆ ಅನ್ನಿಸುವುದಿಲ್ಲವೇ?

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಈ ಮಾತನ್ನು ನಾನು ಸ್ವಾಗತಿಸುತ್ತೇನೆ. ಏಕೆಂದರೆ, ವಾಸ್ತವಾಂಶವನ್ನು ವಿವರಿಸಲು ನನಗೆ ಅವಕಾಶ ಸಿಕ್ಕಿದಂತಾಯಿತು. ಸರ್, ಹಿಂದೆ, ಸತಿ ಮಸೂದೆ ಅಂಗೀಕಾರವಾದಾಗ,

ವಿಧವಾ ವಿವಾಹ ಮಸೂದೆ ಅಂಗೀಕಾರವಾದಾಗ, ಶಾರದಾ ಕಾಯ್ದೆ ಅಂಗೀಕಾರವಾದಾಗ ಆಕ್ಷೇಪಣೆ ಎತ್ತಲಾಗಿತ್ತು. ಇಂದು, ಈ ಸದನದ ಮುಂದಿರುವ ಈ ಮಸೂದೆ ಕೂಡ ಅದೇ ವರ್ಗಕ್ಕೆ ಸೇರಿದೆ. ಇದು, ಶ್ರೀಮತಿ ದುರ್ಗಾಬಾಯಿಯವರ ಪ್ರಕಾರ, ಅವುಗಳಿಗಿಂತ ಸ್ವಲ್ಪಮಟ್ಟಿಗೆ ಹೆಚ್ಚು ಶ್ರೇಯಸ್ಕರವಾದದ್ದು ಮತ್ತು ಜನಸಾಮಾನ್ಯರ ಅಭಿಪ್ರಾಯವನ್ನು ಪರಿಗಣನೆಗೆ ತೆಗೆದುಕೊಂಡು ಅಂಗೀಕಾರ ಮಾಡುವಂಥದ್ದು.

**ಶ್ರೀ ತಜಮುಲ್ ಹುಸೇನ್ :** ಸರ್, ನಾನೊಂದು ಕ್ರಿಯಾಲೋಪ ಎತ್ತಲೇ?

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಏನದು ಕ್ರಿಯಾಲೋಪ? ಹೇಳಿ.

**ಶ್ರೀ ತಜಮುಲ್ ಹುಸೇನ್ :** ಕ್ರಿಯಾಲೋಪ ಏನೆಂದರೆ, ಸರ್ ನನ್ನ ಮಾನ್ಯ ಗೆಳೆಯರು ಈ ರೀತಿಯಲ್ಲಿ ಇಡೀ ಸದನದ ಸದಸ್ಯರಲ್ಲಿ ಹಿಂದೂ ಸಂಹಿತೆ ಮಸೂದೆಯನ್ನು ಅರ್ಥ ಮಾಡಿಕೊಂಡಿರದವರೂ ಇದ್ದಾರೆಂದು ಅವರು ಹೇಳಿದ್ದಾರೆ. ಇದು, ಈ ಸದನದ ನಿಂದನೆ ಆಗುತ್ತದೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈ ಕ್ರಿಯಾಲೋಪದಲ್ಲಿ ಅಂಥದ್ದೇನೂ ಇಲ್ಲವೆಂದೇ ನನ್ನ ಭಾವನೆ. ಈ ಮಸೂದೆಯಿಂದಾಗುವ ಪರಿಣಾಮಗಳನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅರ್ಥಮಾಡಿಕೊಳ್ಳುತ್ತಾರೆಂಬುದು ಪಂಡಿತ ಭಾರ್ಗವರ ಮಾತಿನ ಅರ್ಥ. ಅಲ್ಲದೆ, ತಾನು ಅರ್ಥಮಾಡಿಕೊಂಡಿರುವ ರೀತಿಯಲ್ಲೇ ಮಾನ್ಯ ಸದಸ್ಯರುಗಳು ಅರ್ಥಮಾಡಿಕೊಂಡಿಲ್ಲವೆಂದು ಅದರರ್ಥ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಸರ್, ಈ ಸದನದ ಇತರ ಮಾನ್ಯ ಸದಸ್ಯರುಗಳಿಗೆ ಅರ್ಥವಾಗಿರುವುದಕ್ಕಿಂತಲೂ ಚೆನ್ನಾಗಿ, ಈ ಮಸೂದೆಯ ಕಲಮುಗಳು ನನಗೆ ಅರ್ಥವಾಗಿವೆ ಎಂದು ನಾನು ಹೇಳುತ್ತಲೂ ಇಲ್ಲ. ಹಾಗೆಂದು ಒಪ್ಪಿಕೊಳ್ಳಲೂ ಸಿದ್ಧನಿಲ್ಲ. ನನ್ನ ಬಗ್ಗೆಯೇ ಹೇಳುವುದಾದರೆ, ಈ ಮಸೂದೆಯ ಎಲ್ಲ ಕಲಮುಗಳನ್ನು, ಎಲ್ಲ ಉಪಕಲಮುಗಳನ್ನು ಎಲ್ಲ ಪರಿಣಾಮಗಳನ್ನು ನಾನು, ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದೇನೆಂದು ಹೇಳಲು ನಾನು ಸಿದ್ಧನಿಲ್ಲ. ಎಲ್ಲ ಮಾನ್ಯ ಸದಸ್ಯರುಗಳ ಬಗ್ಗೆ ಕೂಡ ನಾನು ಇದೇ ಮಾತನ್ನು ಹೇಳಬಲ್ಲೆ, ವಕೀಲರಲ್ಲದ ಇಲ್ಲಿನ ಸನ್ಮಾನ್ಯ ಸದಸ್ಯರುಗಳು ಈ ಮಸೂದೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆಂದು ಹೇಳಬಹುದು, ಆದರೆ, ವಕೀಲರಾದ ಇಲ್ಲಿನ ಸದಸ್ಯರುಗಳು, ಸೆಲೆಕ್ಟ್ ಕಮಿಟಿಯಿಂದ ಬಂದಿರುವ ಈ ಮಸೂದೆಯ ಎಲ್ಲ ಕಲಮುಗಳೂ ಅರ್ಥವಾಗಿದೆಯೆಂದು ಆತ್ಮವಿಶ್ವಾಸದಿಂದ ಹೇಳಲಾರರು. ಅನುಮತಿ ಕೊಟ್ಟರೆ, ಶ್ರೀ ತಜಮುಲ್ ಹುಸೇನರಿಗೆ ನಾನು ಎರಡು ಅಥವಾ ಮೂರು ಪ್ರಶ್ನೆ ಹಾಕುತ್ತೇನೆ, ಅವರಿಗೆ ಅರ್ಥವಾಗುತ್ತದೋ, ಇಲ್ಲವೋ ಎನ್ನುವ ಬಗ್ಗೆ ಅವರು ಉತ್ತರ ಕೊಡಲಿ. ಈ ಸದನದ ನಿಂದನೆ ಮಾಡಬೇಕೆಂಬುದು ನನ್ನ ಉದ್ದೇಶ ಅಲ್ಲ. ಅದು, ನನ್ನ ಉದ್ದೆಶ ಅಲ್ಲವೇ ಅಲ್ಲವೆಂದು ನಾನು ಬಿನ್ನವಿಸಿಕೊಳ್ಳುತ್ತಿದ್ದೇನೆ....................

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಪ್ರತಿಯೊಬ್ಬ ಪ್ರಜೆಗೂ ಕಾನೂನು ಗೊತ್ತಿರುತ್ತದೆ ಎನ್ನುವುದೇ ಪೂರ್ವ ಭಾವನೆ. ಹಾಗೆಯೇ. ಪ್ರತಿಯೊಬ್ಬ ಮಾನ್ಯ ಸದಸ್ಯರೂ ಈ ಮಸೂದೆಯನ್ನು ಓದಿದ್ದಾರೆಂಬುದೂ ಪೂರ್ವಭಾವನೆ. ಮಾನ್ಯ ಸದಸ್ಯರು ಮಾತು ಮುಂದುವರೆಸಿ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಸರ್, ನಾನು ಏನು ಹೇಳುತ್ತಿದ್ದೇನೆಂದರೆ, ನಾನು ಶ್ರೀ ನಝೀರುದ್ದಿನ್ ಅಹ್ಮದ್‌ರವರ ತಿದ್ದುಪಡಿ ಪರ ಏಕಿದ್ದೇನೆಂದು ಹೇಳುತ್ತಿದ್ದೆ. ಸರ್, ಈ ಸದನವು, ಮುಂದೆ ಸೇರಲಿರುವ ಸದನದಂತೆ ಅಷ್ಟೊಂದು ಪ್ರಾತಿನಿಧಿಕ ಸ್ವರೂಪದ್ದಲ್ಲ, ಅದಕ್ಕೆ ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ. ಕೆಲವೇ ತಿಂಗಳಲ್ಲಿ ಹೊಸ ಸದನ ಸೇರಲಿದೆ. ಆದ್ದರಿಂದ ಈ ಮಸೂದೆ ಮೇಲಿನ ಅರ್ಜಿ ಚರ್ಚೆಯನ್ನು ಮುಂದಿನ ಹೊಸ ಸದನ ಸೇರುವವರೆಗೆ ಮುಂದೂಡುವುದು ಒಳ್ಳೆಯದೆಂದು

ಕೆಲವು ಸಂಗತಿಗಳನ್ನು ತಮ್ಮ ಮುಂದೆ ಬಿನ್ನವಸಿಕೊಂಡಿದ್ದೆ.

ನನ್ನ ಹೇಳಿಕೆಯ ಪರವಾಗಿ ಇನ್ನೊಂದು ಬಲವಾದ ವಾದವೂ ಇದೆ. ಸರ್, ತಮಗೇ ಚೆನ್ನಾಗಿ ಗೊತ್ತಿರುವಂತೆ, ಇಂದು, ಆಸ್ತಿಯಲ್ಲಿ ಎರಡು ಬೇರೆ ಬೇರೆ ಬಗೆಗಳಿವೆ. ಒಂದು ಜಮೀನು. ಇನ್ನೊಂದು ಮನೆ. ಜಮೀನು ಆಸ್ತಿಗೆ ಈ ಮಸೂದೆಯಿಂದ ಬಾಧಕ ಆಗುವುದಿಲ್ಲ. ಕೃಷಿ ಪ್ರಧಾನ ದೇಶವಾಗಿರುವ ಹಾಗೂ ಹಳ್ಳಿಗಳಲ್ಲೇ ಶೇ. ೯೦ರಷ್ಟು ಜನರು ವಾಸಿಸುತ್ತಿರುವ ಈ ದೇಶದಲ್ಲಿ ಉತ್ತರಾಧಿಕಾರದ ಮೇಲೆ ಈ ಮಸೂದೆ ಯಾವ ಪರಿಣಾಮ ಬೀರುತ್ತದೆ? ಒಬ್ಬ ವ್ಯಕ್ತಿ ಸತ್ತ ಮೇಲೆ ಅವನ ಜಮೀನಿಗೆ ಒಂದು ಕಾನೂನು ಅನ್ವಯವಾದರೆ, ಹಳ್ಳಿಯಲ್ಲಿರುವ ಅವನ ಮನೆಗೆ ಇನ್ನೊಂದು ಕಾನೂನು ಅನ್ವಯವಾಗುತ್ತದೆ. ದೆಹಲಿಯಲ್ಲಿ ನನಗೆ ಸ್ವಲ್ಪ ಆಸ್ತಿ ಇದ್ದು, ಅದಕ್ಕೆ ಒಂದು ಕಾನೂನು ಅನ್ವಯವಾದರೆ, ಅದೇ, ಬಹುದ್ದೂರ್‌ಘರ್‌ನಲ್ಲಿರುವ ನನ್ನ ಜಮೀನು ಆಸ್ತಿಗೆ ಇನ್ನೊಂದು ಕಾನೂನು ಅನ್ವಯವಾದರೆ ಅಂದರೆ ಬಹುದ್ದೂರ್‌ಘರ್‌ನಲ್ಲಿ ನನ್ನ ಹೊಲದಲ್ಲಿ ಕಟ್ಟಿರುವ ನನ್ನ ಮನೆಗೆ ಒಂದು ಕಾನೂನು ಅನ್ವಯವಾದರೆ, ಅದೇ, ದೆಹಲಿಯಲ್ಲಿರುವ ನನ್ನ ಮನೆಗೆ ಇನ್ನೊಂದು ಕಾನೂನು ಅನ್ವಯವಾದರೆ ನನ್ನ ಗತಿ ಏನು? ಅಂಥದ್ದನ್ನೇ ಉಳಿಸಿಕೊಂಡರೆ, ಏನೇನು ಅವಾಂತರ ಆಗುತ್ತದೆ? ವಾರಸುದಾರನನ್ನು ನಿಯೋಜಿಸುವ ಕಾರ್ಯ ಬಹುದ್ದೂರ್‌ಘರ್‌ನಲ್ಲಾಗುತ್ತದೆ, ಅವನನ್ನು ಹಿಂದೂ ಸಂಹಿತೆ ಮಾನ್ಯ ಮಾಡುವುದಿಲ್ಲ. ಆಗೇನಾಗುತ್ತದೆ. ವಾರಸುದಾರನಾಗಿ ನಿಯೋಜಿತನಾದ ಆ ಹುಡುಗನಿಗೆ ಬಹುದ್ದೂರ್‌ಘರ್‌ನಲ್ಲಿರುವ ಜಮೀನು ಆಸ್ತಿ ಬರುತ್ತದೆಯೇ ಹೊರತು ಮೃತನ ಮನೆ ಆಸ್ತಿಯಲ್ಲ. ಅದನ್ನು ಬೇರೊಬ್ಬ ಕೇಳುತ್ತಾನೆ. ಹುಡುಗನಿಗೆ ಜಮೀನು ಆಸ್ತಿ ಬರುತ್ತದೆ, ಆದರೆ, ಮನೆ ಆಸ್ತಿ ಮೇಲೆ ಹಕ್ಕು ಇರುವುದಿಲ್ಲ. ಅಂದ ಮೇಲೆ, ಪಾಪ, ಆ ಹುಡುಗ ಎಲ್ಲಿಗೆ ಹೋಗಬೇಕು? ಈ ಮಸೂದೆಯಿಂದಾಗುವ ಅವಾಂತರವೆಂದರೆ ಇದೇ. ಅದು ಜಮೀನು ಆಸ್ತಿಗೆ ಅನ್ವಯವಾಗುವುದಿಲ್ಲ. ಆರ್ಥಿಕ ಹಿಡುವಳಿಗಳನ್ನು ರೂಪಿಸುವಂತಹ, ಸಾಧಾರಣ ಮನಷ್ಯನ ಜಮೀನು ಆಸ್ತಿಯನ್ನು ಭಾಗ ಮಾಡಲು ಅವಕಾಶ ಕೊಡದಂತಹ, ಒಂದು ಮಸೂದೆಯನ್ನು ತರಬೇಕೆಂಬುದು ಡಾ. ಅಂಬೇಡ್ಕರ್‌ರವರ ಇಚ್ಛೆಯೆಂದು ಕಾಣುತ್ತದೆ. ಆದರೆ, ಅಂಥ ಕಾಯ್ದೆ ಯಾವಾಗ ಬರುತ್ತದೋ, ಜಮೀನ್ದಾರಿ ಪದ್ಧತಿ ಯಾವಾಗ ರದ್ದಾಗುತ್ತದೋ ನನಗೆ ಗೊತ್ತಿಲ್ಲ.

**ಶ್ರೀಮತಿ ರೇಣುಕಾ ರೇ :** ಕೂಡಲೇ, ನೀವೇ, ಅಂಥದೊಂದು ಮಸೂದೆಯನ್ನು ಮಂಡಿಸಬಹುದಲ್ಲ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಈ ಪ್ರಪಂಚದಲ್ಲಿ ನಾವು ಅಂದುಕೊಂಡಿದ್ದೆಲ್ಲವೂ ಬಹು ಸುಲಭವಾಗಿ ಈಡೇರುವುದಿಲ್ಲ. ಹಾಗೆಯೇ ನೀವು ಹೇಳಿದಂತೆ ಅಂಥದೊಂದು ಮಸೂದೆಯನ್ನು ತಂದಾಕ್ಷಣ ಈ ಉದ್ದೇಶವೂ ಈಡೇರಲಾರದು. ಈ ಮಸೂದೆಯು, ದೇಶದ ಹಿತಕ್ಕಾಗಿ ತಂದಿರುವ ಮಸೂದೆಯೇನೋ ಸರಿ. ಆದರೆ, ಈ ಮಸೂದೆ, ಎಷ್ಟೊಂದು ಅಡ್ಡಿಅಡಚಣೆಗಳನ್ನು ಎದುರಿಸುತ್ತಿದೆ. ಪ್ರತಿಯೊಬ್ಬರ ಹಕ್ಕುಗಳನ್ನು ಕಿತ್ತುಕೊಳ್ಳಲಿರುವ ಭೂ ಮಸೂದೆಯನ್ನು ತರಲು ಎಷ್ಟು ಸಮಯಬೇಕಾಗಬಹುದು, ಇದು ಅಂಗೀಕಾರ ಆಗುವುದು ಯಾವಾಗ? ಈ ಅಧಿಕಾರ, ಪ್ರಾಂತೀಯ ಸರ್ಕಾರಕ್ಕೆ ಇದೆ. ಜಮೀನು ವಿಷಯಗಳ ಬಗ್ಗೆ ನಾವು ನಮ್ಮ ರಾಜ್ಯಾಂಗದಲ್ಲಿ ಅಂತಹ ಬದಲಾವಣೆಗಳನ್ನು ತರಬಹುದಾಗಿದೆ. ಹಾಗೆಯೇ, ಇದು ಕೂಡ ರಾಜ್ಯಾಂಗದ ಅಡಿಯಲ್ಲಿ ಕೇಂದ್ರ ಸರ್ಕಾರದ ಅಧಿಕಾರಕ್ಕೆ ಒಳಪಟ್ಟಿರಬೇಕಾಗುತ್ತದೆ. ಈ ಮಸೂದೆಯನ್ನು ಅಂಗೀಕರಿಸಿದರೆ ನನ್ನ ಪ್ರಕಾರ, ಅದರಿಂದ ಮನೆ ಆಸ್ತಿಗೆ ಬಾಧಕ ಆಗುತ್ತದೆಯೆನ್ನುವ ಹಾಗೂ ಜಮೀನು ಆಸ್ತಿಗೆ ಬಾಧಕ ಆಗುವುದಿಲ್ಲವೆನ್ನುವ ದೋಷ ಉಳಿದುಕೊಳ್ಳುತ್ತದೆ. ಇದು ತೀರಾ ಗೊಂದಲಮಯ. ಈಗ, ಈ ಮಸೂದೆಯು, ಕೇಂದ್ರಾಡಳಿತ ಪ್ರದೇಶಗಳಿಗೆ ಸಹ ಅನ್ವಯವಾಗುತ್ತದೆಂದು, ಎಂದರೆ, ಅಜ್ಮೀರ

ಮೇರ್ವಾರ ಮತ್ತು ದೆಹಲಿಯ ಮನೆ ಆಸ್ತಿ, ಜಮೀನು ಆಸ್ತಿ ಎರಡಕ್ಕೂ ಅನ್ವಯವಾಗುತ್ತದೆಂದು ಮೂಲ ಮಸೂದೆಯಲ್ಲಿ ಒಂದು ಬದಲಾವಣೆ ಮಾಡಲಾಗಿದೆ. ಇತರ ಪ್ರಾಂತಗಳಲ್ಲಿ ಈ ಮಸೂದೆಯು ಜಮೀನುಗಳಿಗೆ ಅನ್ವಯವಾಗುವುದಿಲ್ಲ. ಆದರೆ, ದೆಹಲಿ ಮತ್ತು ಅಜ್ಮೀರ ಮೇರ್ವಾರ್‌ನಲ್ಲಿ ಇದು ಗ್ರಾಮೀಣ ಹಾಗೂ ನಗರ ಎರಡೂ ಆಸ್ತಿಗಳಿಗೆ ಅನ್ವಯವಾಗುತ್ತದೆ. ಇದೇ ಈ ಮಸೂದೆಯಲ್ಲಿರುವ ದೊಡ್ಡ ದೋಷ. ಈ ದೋಷ, ಈ ಮಸೂದೆಯ ಮೂಲ ಉದ್ದೇಶವನ್ನೇ ವಿಫಲಗೊಳಿಸುತ್ತದೆ.

ಈ ಮಸೂದೆಯಿಂದ ತಮಗೆ ಹೇಗೆ ಬಾಧಕ ಆಗಬಹುದು ಎನ್ನುವುದು ಜನರಿಗೆ ಗೊತ್ತಿಲ್ಲ. ಈ ಕಾರಣಕ್ಕಾಗಿಯೇ ನಾನು, ಈ ಮಸೂದೆಗೆ ವ್ಯಾಪಕ ಪ್ರಚಾರ ಕೊಡಬೇಕೆಂದು ಕೇಳಿಕೊಂಡಿದ್ದೆ. ಈ ಮಸೂದೆ ಮೂಲಕ, ಉತ್ತರಾಧಿಕಾರದ ಕಾನೂನಿನಲ್ಲಿ ತುಂಬಾ ಪರಿಣಾಮಕಾರಿಯಾದ ಹಾಗೂ ಮೂಲಭೂತವಾದ ಬದಲಾವಣೆಯನ್ನು ಮಾಡುತ್ತಿರುವಾಗ, ಅಂಥ ಬದಲಾವಣೆಗಳು ಪ್ರತಿಯೊಬ್ಬರ ಮೇಲೆ ಹಾಗೂ ಭಾರತದ ಪ್ರತಿಯೊಂದು ಕುಟುಂಬದ ಮೇಲೆ ಪರಿಣಾಮ ಉಂಟು ಮಾಡುವಾಗ, ಇಡೀ ದೇಶದ ಜನರು, ಈ ಕಾನೂನನ್ನು ಅಂಗೀಕರಿಸಬಾರದೆಂದು ದೆಹಲಿಗೆ ಬಂದು ಮನವಿಗಳನ್ನು ಸಲ್ಲಿಸುವ ಕಾಲ ಬರಬಹುದು. ಅನೇಕ ಜನರಿಗೆ ಇದು ಗೊತ್ತಿಲ್ಲ. ಈ ಸದನದ ಸದಸ್ಯರಿಗೆ, ಬಾರ್ ಅಸೋಸಿಯೇಷನ್‌ಗಳಿಗೆ, ಸುದ್ದಿ ಪತ್ರಿಕೆಗಳನ್ನು ಓದುವ ಕೆಲವರಿಗೆ ಇದು ಗೊತ್ತಾಗಬಹುದು. ಅಂಥವರ ಸಂಖ್ಯೆ ಎಷ್ಟು ಸಣ್ಣದಿರುತ್ತದೆಂಬುದು ನಿಮಗೆ ಗೊತ್ತಿದೆ. ಇಡೀ ಹಿಂದೂ ಸಮಾಜದ ಮೇಲೆ ಪರಿಣಾಮವನ್ನು ಉಂಟುಮಾಡುವ ಇಂಥದೊಂದು ಮಸೂದೆಗೆ ಸಾಕಷ್ಟು ಪ್ರಚಾರ ಕೊಟ್ಟಿಲ್ಲ, ಅಭಿಪ್ರಾಯಗಳನ್ನು ಸಂಗ್ರಹಿಸಿತ್ತು. ಒಂದು ಸಮಿತಿಯನ್ನು ನೇಮಿಸಲಾಗಿತ್ತು ಹಲವಾರು ಸ್ಥಳಗಳಲ್ಲಿ ಅದು ಅಭಿಪ್ರಾಯವನ್ನು ಸಂಗ್ರಹಿಸಿಲ್ಲ. ಅದರ ವರದಿ ನನ್ನ ಬಳಿ ಇದೆ. ಅದನ್ನು ನೀವು ಗಮನಿಸಿದರೆ ಈ ಸಮಿತಿಯ ಸದಸ್ಯರು ಎಲ್ಲೆಲ್ಲಿಗೆ ಹೋಗಿದ್ದರು, ಏನು ಮಾಡಿದರು, ಯಾರ ಅಭಿಪ್ರಾಯಗಳನ್ನು ಸಂಗ್ರಹಿಸಿದರು ಎನ್ನುವುದು ನಿಮಗೇ ಗೊತ್ತಾಗುತ್ತದೆ. ಸಮಿತಿಯು, ಸ್ವಲ್ಪ ಸ್ಥಿತಿವಂತರ, ವಿದ್ಯಾವಂತರ ಅಭಿಪ್ರಾಯಗಳನ್ನು ಕೇಳಿದೆಯೇ ಹೊರತು ದೇಶದ ಬಹುಜನರ ಅಭಿಪ್ರಾಯವನ್ನು ಸಂಗ್ರಹಿಸಿಲ್ಲವೆಂಬುದೂ ಕಂಡುಬರುತ್ತದೆ. ತಮ್ಮ ಹೊಣೆಗಾರಿಕೆಗಳನ್ನು ಸಂಪೂರ್ಣವಾಗಿ ತಿಳಿದುಕೊಂಡಿರುವ ಪ್ರತಿಯೊಬ್ಬ ತಂದೆತಾಯಿಯು ಅಭಿಪ್ರಾಯ ಕೊಡಬಹುದಾಗಿದೆ. ಇದರಿಂದ ಪ್ರತಿಯೊಬ್ಬರಿಗೂ ಬಾಧಕ ಆಗುತ್ತದೆ. ಆದ್ದರಿಂದ ಪ್ರತಿಯೊಬ್ಬನೂ ಅವನ ಅಭಿಪ್ರಾಯವನ್ನು ಕೊಡಲು ಸಕ್ಷಮನಿರುತ್ತಾನೆ. ಸೆಲೆಕ್ಟ್ ಕಮಿಟಿಯು ಯಾವ ಬದಲಾವಣೆಗಳನ್ನು ಮಾಡಿದೆಯೆಂಬುದು ಉಳಿದ ಜನರಿಗೆ ಗೊತ್ತಿಲ್ಲ. ಸೆಲೆಕ್ಟ್ ಕಮಿಟಿಯು ಮೂಲ ಮಸೂದೆಯಲ್ಲಿ ಬದಲಾವಣೆಗಳನ್ನು ಮಾಡಿರುವುದು ಯಾರಿಗೂ ಗೊತ್ತಿಲ್ಲ ಈ ಸಭೆಯ ಸದಸ್ಯರಿಗೆ ಮಾತ್ರವೇ ಗೊತ್ತಿದೆ. ಸೆಲೆಕ್ಟ್ ಕಮಿಟಿಯು ಯಾವ ಬದಲಾವಣೆಗಳನ್ನು ಮಾಡಿದೆ ಎಂಬುದು ಉಳಿದವರಿಗೆ ಗೊತ್ತಿಲ್ಲ. ಸೆಲೆಕ್ಟ ಕಮಿಟಿಯು ಈ ಮಸೂದೆಯಲ್ಲಿ ಬದಲಾವಣೆಗಳನ್ನು ಮಾಡಿರುವುದರಿಂದ ಅದರ ಪರಿಚಲನೆ ಆವಶ್ಯಕ. ಯಾವುದೇ ಕಾನೂನು, ಅದರಿಂದ ಬಾಧಿತರಾಗಬಹುದಾದ ಜನರ ಬಹುಮತಾಭಿಪ್ರಾಯ ವ್ಯಕ್ತವಾಗುವ ತನಕ ಜನರ ಸಂಪ್ರದಾಯಗಳಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ಮಾಡಬಾರದೆಂಬ ಹಳೆಯ ಅಭಿಪ್ರಾಯವನ್ನು ಒಂದು ಪಕ್ಕಕ್ಕೆ ಇಟ್ಟರೂ, ಇಂದು, ನಮ್ಮ ಮುಂದಿರುವ ಈ ಮಸೂದೆಯಲ್ಲಿ ಸೆಲೆಕ್ಟ್ ಕಮಿಟಿಯು ತುಂಬಾ ಪ್ರಾಮುಖ್ಯತೆಯ ಬದಲಾವಣೆಗಳನ್ನು ಮಾಡಿದೆ. ಅವುಗಳ ಬಗ್ಗೆ ಪ್ರತಿಯೊಬ್ಬರಲ್ಲೂ ಸಂಪೂರ್ಣ ಮಾಹಿತಿ ಇರಬೇಕು. ಈ ಕಾರಣದಿಂದಲೇ, ಅದರ ಪರಿಚಲನೆ ತುಂಬಾ ಆವಶ್ಯಕ.

ಈ ಬದಲಾವಣೆಗಳ ಬಗ್ಗೆ ನಾನು ಹೇಳುವುದಕ್ಕೂ ಮೊದಲು ಒಂದು ವಿಚಾರವನ್ನು ಸದನದ

ಗಮನಕ್ಕೆ ತರಬಯಸುತ್ತೇನೆ. ಕಾನೂನಿನ ಮೂರ್ತ ರೂಪವಾದ ಕಾನೂನು ಇಲಾಖೆಯೇ, ಅದರ ಹೆಸರೇ ಕಾನೂನು ಇಲಾಖೆ, ಆ ಜನರೇ ಕಾನೂನನ್ನ ಗೌರವಿಸುತ್ತಿಲ್ಲ. ಈ ಜನರೇ ಅಂಥದೊಂದು ವಿಧಾನವನ್ನು ರೂಪಿಸಿರುವಾಗ, ಅವರೇ ಅದನ್ನು ಊರ್ಜಿತಗೊಳಿಸದಿದ್ದರೆ ನಾನು–

ಗರ್ ಕುಫರ್ ಅಜಿ ಕಾಬ ಫಿಜ್‌ರ್ ಕುಜಾ ಬುವದ್ ಮುಸಲ್ಮಾನೆ

–ಎಂದೇ ಹೇಳಬೇಕಾಗುತ್ತದೆ.

ತಮ್ಮ ಹಿಂದಿನವರು ತೀರ್ಮಾನಿಸಿದ ವಿಚಾರವನ್ನು ನಾನು ಪ್ರಸ್ತಾಪ ಮಾಡಬಯಸುವುದಿಲ್ಲ. ಆ ವಿಷಯವನ್ನು ತೀರ್ಮಾನಿಸಲಾಗಿದೆ. ಆ ರೂಲಿಂಗ್ ಅಂತಿಮವಾದುದು. ನಾನು ಅದನ್ನು ಪ್ರಶ್ನಿಸುವುದಿಲ್ಲ. ನನ್ನ ಅಭಿಪ್ರಾಯದ ಪ್ರಕಾರ ಆ ರೂಲಿಂಗ್ ಸರಿ ಅಲ್ಲ ಎಂಬುದು ನನಗೆ ಗೊತ್ತಿದ್ದರೂ ನಾನು ಅದನ್ನು ತುಂಬಾ ಗೌರವಿಸುತ್ತೇನೆ. ಅದನ್ನು ಪ್ರಶ್ನಿಸುವುದಿಲ್ಲ.

**ಶ್ರೀ ತಜಮುಲ್ ಹುಸೇನ್ :** ಸಭಾಧ್ಯಕ್ಷರ ರೂಲಿಂಗ್ ತಪ್ಪೆಂದು ಈ ಸದನದ ಒಳಗೆ ಯಾರೂ ಹೇಳುವಂತಿಲ್ಲ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಶ್ರೀ ಭಾರ್ಗವರು ಹೇಳಿರುವುದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಂಡೇ ಇಲ್ಲವೆಂದು ಕಾಣುತ್ತದೆ. ರೂಲಿಂಗ್‌ಗೆ ತನ್ನ ಸಹಮತ ಇಲ್ಲವಾದರೂ, ಇಲ್ಲಿ, ರೂಲಿಂಗ್‌ನ್ನು ಪ್ರಶ್ನಿಸಲಾಗದೆಂದು ಅವರು ಹೇಳಿದ್ದಾರೆ. ತನ್ನ ಅಭಿಪ್ರಾಯದ ಪ್ರಕಾರ, ಅದನ್ನು ತಾನು ಒಪ್ಪುವುದಿಲ್ಲವೆಂದು ಸ್ವತಃ ಭಾವಿಸುವುದು ಮತ್ತು ಹಾಗೆಂದು ಹೇಳುವುದು ಸದಸ್ಯರಿಗೆ ಸೇರಿದ್ದು. ಆದರೆ, ಅವರು ರೂಲಿಂಗ್‌ಗೆ ಬದ್ಧರಾಗಲೇಬೇಕಾಗುತ್ತದೆ. ಅವರು ಹೇಳಿರುವುದರಲ್ಲಿ ತಪ್ಪೇನಿಲ್ಲ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ನನ್ನ ಗೆಳೆಯ ಮಾನ್ಯ ಶ್ರೀ ತಜಮುಲ್ ಹುಸೇನರು ಯಾವುದೇ ಕ್ರಿಯಾಲೋಪ ಎತ್ತಿದಾಗಲೆಲ್ಲ ಅದು, ಒಂದು ನಿಮಿಷ ಕೂಡಾ ನಿಲ್ಲುವುದಿಲ್ಲವಲ್ಲ ಎಂದು ನನಗೆ ಅಯ್ಯೋ ಎನ್ನಿಸುತ್ತಿದೆ. ನಾನು ಉತ್ತರ ಕೊಡಲು ಆಸ್ಪದ ಕೊಡುವಂಥ ಕ್ರಿಯಾಲೋಪವನ್ನು ಅವರು ಎತ್ತಲಿ ಎಂಬುದು ನನ್ನ ಆಸೆ. ಈಗ ಸ್ವಲ್ಪ ಮುಂಚೆ ಅವರು, ಈ ಮಸೂದೆಯು ಜಮೀನುಗಳಿಗೆ ಅನ್ವಯವಾಗುತ್ತದೆಯೇ, ಇಲ್ಲವೇ ಎಂಬುದನ್ನು ಇನ್ನೊಬ್ಬರು ಮಾನ್ಯ ಸದಸ್ಯರಿಂದ ಕೇಳಿ ತಿಳಿದುಕೊಳ್ಳುತ್ತಿದ್ದರು. ಆದರೂ, ಈ ಮಸೂದೆಯನ್ನು ಅರ್ಥಮಾಡಿ ಕೊಂಡಿದ್ದೇನೆಂಬ ಸೋಗಿನಿಂದ ಹೇಳುತ್ತಿದ್ದಾರೆ. ರೂಲಿಂಗ್ ಬಗ್ಗೆ ನನ್ನಲ್ಲಿ ಬೇರೆಯದೇ ಅಭಿಪ್ರಾಯವಿದೆಯೆಂದು ಹೇಳುವುದಕ್ಕೆ ನನಗೆ ಸಂಪೂರ್ಣ ಹಕ್ಕಿದೆಯೆಂದು ಹೇಳಬಯಸುತ್ತೇನೆ. ಸನ್ಮಾನ್ಯ ಸ್ಪೀಕರ್‌ರವರ ರೂಲಿಂಗ್‌ನಲ್ಲಿ ಕೆಲವೊಂದು ಇತರ ಮುಖ್ಯಾಂಶಗಳ ಪ್ರಸ್ತಾಪ ಇಲ್ಲವೇ ಇಲ್ಲ. ರಾಜ್ಯಾಂಗ ರಚನಾಸಭೆಯಾಗಿರುವ, ಈ ಸದನವು ತನ್ನದೇ ಕಾನೂನುಗಳ ಅಧಿಪತಿಯೆಂಬ ಸಂಗತಿಯತ್ತ ಮುಖ್ಯವಾಗಿ ಈ ಸದನದ ಗಮನ ಸೆಳೆಯಬಯಸುತ್ತೇನೆ. ನಮ್ಮ ವಿಷಯಗಳು ಯಾವುದನ್ನೂ ದೇಶದ ಯಾವುದೇ ನ್ಯಾಯಾಲಯಕ್ಕೆ ಉಲ್ಲೇಖ ಮಾಡುವಂತಿಲ್ಲ. ಈ ಸದನವು, ಒಂದು ಕಾಯ್ದೆಯನ್ನು ಅಂಗೀಕರಿಸುವುದಕ್ಕೋಸ್ಕರ ತನ್ನ ತತ್ತ್ವಗಳನ್ನೇ ಬಿಟ್ಟುಬಿಟ್ಟರೆ, ಜವಾಬ್ದಾರಿ ವಿಷಯದಲ್ಲಿ ನಮ್ಮನ್ನು ಕ್ಷಮಿಸಲಾಗದಂತಹ ತಪ್ಪು ನಮ್ಮಿಂದಾಗುತ್ತದೆ. ಸೆಲೆಕ್ಟ್ ಕಮಿಟಿಯಿಂದ ಬಂದಿರುವ, ಈ ಪುನರ್‌ರಚಿತ ಮಸೂದೆಯಲ್ಲಿ ನಾವು ಮೂರು ರೀತಿಯ ತಪ್ಪುಗಳನ್ನು ಮಾಡಿದ್ದೇವೆಂದು ಹೇಳಬಯಸುತ್ತೇನೆ. ಮೊದಲನೆಯದು, ಒಂದು ಮಸೂದೆಯನ್ನು ಸದನದ ಮುಂದೆ ತಂದಾಗ, ಮೊದಲು ಅದು ಸದನದ ಸ್ವಾಧೀನಕ್ಕೆ ಒಳಪಡುತ್ತದೆ. ನಂತರ ಮಂಡನೆ ಆಗುತ್ತದೆ. ಮಂಡನೆ ಆದ ಮೇಲೆ, ಸದನದ ಹೊರತು, ಸದನದ ಯಾರೇ ಸದಸ್ಯರು, ಅವರು ಎಷ್ಟೇ ದೊಡ್ಡವರಿರಲಿ, ಅವರೂ ಎಷ್ಟೇ ಒಳ್ಳೆಯವರಿರಲಿ ಸದನದ

ಒಪ್ಪಿಗೆ ಇಲ್ಲದೆಯೇ, ಒಂದೇ ಒಂದು ಅಲ್ಪ ವಿರಾಮ ಚಿಹ್ನೆಯನ್ನೂ ಬದಲಾಯಿಸುವಂತಿಲ್ಲ. ಬರವಣಿಗೆ ತಪ್ಪೇನಾದರೂ ಆಗಿದ್ದರೆ, ಅದು ಬೇರೆ ವಿಚಾರ. ಮುಖ್ಯವಾದ ತಪ್ಪಾಗಿದ್ದರೆ, ಮತ್ತೆ ಮುದ್ರಿಸಬೇಕಾಗುತ್ತದೆ. ಪುನರ್ ಪರಿಚಲನೆ ಮಾಡಬೇಕಾಗುತ್ತದೆ ಮತ್ತೆ ಸದನದ ಮುಂದೆ ತರಬೇಕಾಗುತ್ತದೆ. ಯಾವುದೇ ಸಮಿತಿಗೆ ಉಲ್ಲೇಖ ಮಾಡಬಹುದಾಗಿರುತ್ತದೆ. ಸರ್, ತಮ್ಮ ಪರಿಗಣನೆಗಾಗಿ, ನಾನು, ಎರಡು ಅಥವಾ ಮೂರು ಪಾರಿಭಾಷಿಕ ನಿಬಂಧನೆಗಳನ್ನು ತಮ್ಮ ಮುಂದಿಡುತ್ತಿದ್ದೇನೆ. ಈ ನಿಬಂಧನೆಗಳ ಬಗ್ಗೆ ನಾನು ಇತರ ಸದಸ್ಯರುಗಳಿಗೆ ಹೇಳಬಯಸುತ್ತೇನೆಯೇ ಹೊರತು ಡಾ. ಅಂಬೇಡ್ಕರ್‌ರವರಿಗೆ ಅಲ್ಲ. ಏಕೆಂದರೆ, ಅವರಿಗೆ ಪಾರಿಭಾಷಿಕ ನಿಯಮಗಳು, ವಿಷಯಗಳು ಚೆನ್ನಾಗಿ ಗೊತ್ತಿದೆ. ತಾಂತ್ರಿಕ ನಿಯಮಗಳನ್ನು ಕೈಬಿಟ್ಟರೆ ಎಷ್ಟೊಂದು ಅನ್ಯಾಯ ಆಗಬಹುದು ಎಂಬುದು ಅವರಿಗೆ ಗೊತ್ತಿದೆ. ನಾನು ಏನು ಹೇಳುತ್ತಿದ್ದೇನೆಂದರೆ ಈ ತಾಂತ್ರಿಕ ನಿಯಮಗಳನ್ನು ಕೈಬಿಟ್ಟರೆ ಅನ್ಯಾಯ ಹಾಗೂ ಕಾನೂನುಬಾಹಿರ ಕೆಲಸದ ಹೊರತು ಒಳ್ಳೆಯದೇನೂ ಆಗದು ಎಂದು ಹೇಳುತ್ತಿದ್ದೇನಲ್ಲವೇ. ಮಾನ್ಯ ಓಸ್ಲೋರವರು ಹೌಸ್ ಆಫ್ ಕಾಮನ್ಸ್‌ನ ಸುಪ್ರಸಿದ್ಧ ಸ್ಪೀಕರ್. ತಾಂತ್ರಿಕ ನಿಯಮಗಳನ್ನು ಬಿಟ್ಟು ಯಾವ ಕೆಲಸವನ್ನು ಮಾಡಕೊಡದೆಂದು ಅವರು ಹೇಳಿದ್ದಾರೆ. ಅಲ್ಪಸಂಖ್ಯಾತರ ರಕ್ಷಣೆಗಾಗಿ, ಇಡೀ ಸದನದ ರಕ್ಷಣೆಗಾಗಿ ತಾಂತ್ರಿಕ ನಿಯಮಗಳಿವೆ. ಈ ನಿಯಮಗಳು ಎಷ್ಟೊಂದು ಮೂಲಭೂತ ಸ್ವರೂಪದವೆಂದರೆ, ಮಿತಿಗಳನ್ನು ಉಲ್ಲಂಘಿಸಿದಾಗಲೆಲ್ಲ ತಪ್ಪುಗಳ ಹೊರತು, ಬೇರೇನನ್ನೂ ಸರಿಪಡಿಸಿಕೊಳ್ಳಲಿಕ್ಕಾಗುವುದಿಲ್ಲ. ಈ ತತ್ವವನ್ನು ಮಾನ್ಯ ಮೇ ರವರ ಪಾರ್ಲಿಮೆಂಟರಿ ಪ್ರಾಕ್ಟೀಸ್ ಗ್ರಂಥದಲ್ಲಿ ಹೇಳಲಾಗಿದೆ. ಇದು, ಸಂಸತ್ತುಗಳ ತಾಯಿ ಎನಿಸಿಕೊಂಡಿರುವ ಬ್ರಿಟನ್ ಸಂಸತ್ತಿನ ಒಂದು ಸಂಪ್ರದಾಯ. ಮಸೂದೆಯು ಮಂಡನೆಯಾದ ಕೂಡಲೇ, ಅದು, ಅದನ್ನು ಮಂಡಿಸಿದ ಸದಸ್ಯರ ಕೈಯಿಂದ ದಾಟಿ, ಸದನದ ಅಧೀನಕ್ಕೆ ಬರುತ್ತದೆ. ಮಾನ್ಯ ಮೇ ರವರ ಪಾರ್ಲಿಮೆಂಟರಿ ಪ್ರಾಕ್ಟೀಸ್ ಗ್ರಂಥದ ವಾಕ್ಯಗಳನ್ನು ತರ್ಜುಮೆ ಮಾಡುತ್ತಿದ್ದೇನೆ, ಇಷ್ಟರಲ್ಲೇ ನಾನು ನಿಮಗೆ ಓದಿ ಹೇಳುತ್ತೇನೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಸದನದ ಮುಂದೆ ಮಸೂದೆಯನ್ನು ತಂದಾಗ, ಯಾರೇ ಮಾನ್ಯ ಸದಸ್ಯರಿಗೆ, ಅವರೇ ಸೂಚಕರಾಗಿದ್ದರೂ ಕೂಡ, ಮಸೂದೆಯಲ್ಲಿ ಬದಲಾವಣೆ ಮಾಡುವ ಹಕ್ಕು ಇರುತ್ತದೆ ಎಂಬ ಬಗ್ಗೆ ಈ ಸದನದಲ್ಲಿರುವ ಯಾರಿಗಾದರೂ ಸಂದೇಹ ಇದೆ ಎಂದು ನನಗನ್ನಿಸುತ್ತಿಲ್ಲ. ನನಗೆ ತಿಳಿದ ಮಟ್ಟಿಗೆ, ಸನ್ಮಾನ್ಯ ಸ್ಪೀಕರ್‌ರವರು, ಇದೇ ಮಸೂದೆಯನ್ನು ಸೆಲೆಕ್ಟ್ ಕಮಿಟಿಯಲ್ಲಿ ಪರ್ಯಾಲೋಚಿಸಲಾಗಿದೆಯೆಂದು ರೂಲಿಂಗ್ ಕೊಟ್ಟಿದ್ದಾರೆ. ಆದ್ದರಿಂದ, ಆ ನಿಯಮವನ್ನು ಚರ್ಚಿಸುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಸೆಲೆಕ್ಟ್ ಕಮಿಟಿ ಮುಂದೆ ಮಂಡಿಸಿದ್ದ ಬೇರೊಂದು ಕರಡು ಪ್ರತಿಯ ಪರಿಶೀಲನೆ, ಮೂಲ ಮಸೂದೆ ಜೊತೆ ಆಗಿದ್ದರೂ, ಇನ್ನೊಂದು ಮಸೂದೆಯನ್ನು ಸೆಲೆಕ್ಟ್ ಕಮಿಟಿಯು ಪರಿಶೀಲಿಸಿದೆಯೆಂದು ಸನ್ಮಾನ್ಯ ಕಾನೂನು ಮಂತ್ರಿಯವರು ಹೇಳಿಲ್ಲ. ಬಿಡಿಬಿಡಿಯಾಗಿ ತಿದ್ದುಪಡಿಗಳನ್ನು ಕಳುಹಿಸುವುದರ ಬದಲು ಸೆಲೆಕ್ಟ್ ಕಮಿಟಿ ಮುಂದೆ ತಿದ್ದುಪಡಿಗಳನ್ನು ಒಟ್ಟಿಗೇ ಮಂಡಿಸಲು ಸದಸ್ಯರಿಗೆ ಅವಕಾಶ ಇರುವುದರಿಂದ, ಅವರು ಎಲ್ಲ ತಿದ್ದುಪಡಿಗಳನ್ನು ಮುದ್ರಿಸಿದ್ದಾರೆ, ಸೆಲೆಕ್ಟ್ ಕಮಿಟಿ ಮುಂದೆ ಮಂಡಿಸಿದ್ದಾರೆ. ಅದೇ, ಸನ್ಮಾನ್ಯ ಸ್ಪೀಕರ್‌ರವರ ರೂಲಿಂಗ್, ಅದನ್ನು ಬಿಟ್ಟು ಮಾನ್ಯ ಸದಸ್ಯರು ಬೇರೇನಾದರೂ ಹೇಳುವುದಿದ್ದರೆ ಹೇಳಬಹುದು. ಸದಸ್ಯರಿಗೆ ಅವರೇ ಮಸೂದೆಯ ಸೂಚಕರಾಗಿದ್ದರೂ ಕೂಡ, ಮಸೂದೆಯಲ್ಲಿ, ಅದು ಸದನದ ಸ್ವಾಧೀನದಲ್ಲಿದ್ದಾಗ, ಬದಲಾವಣೆ ಮಾಡುವ ಹಾಗಿಲ್ಲವೆಂದು ಮಾನ್ಯ ಮೇ ರವರ ಪಾರ್ಲಿಮೆಂಟರಿ ಪ್ರಾಕ್ಟೀಸ್‌ನಲ್ಲಿ ಹೇಳಿರುವ ತತ್ವದ ಬಗ್ಗೆ ಯಾರಿಗೂ ಸಂದೇಹ ಇಲ್ಲ. ಇದಾಗಿಲ್ಲವೆಂದು ಸನ್ಮಾನ್ಯ ಸ್ಪೀಕರ್‌ರವರು ಹೇಳಿದ್ದಾರೆ. ನಾವು ಅದಕ್ಕೆ ಬದ್ಧರಾಗಬೇಕು. ಬೇರೇನಾದರೂ

ಇದ್ದರೆ, ಮಾನ್ಯ ಸದಸ್ಯರು ಹೇಳಬಹುದು.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ತಮ್ಮ ಅಭಿಪ್ರಾಯವನ್ನು ಕೇಳಿದ ಮೇಲೆ, ನನ್ನ ಅಭಿಪ್ರಾಯಕ್ಕೆ ಇನ್ನಷ್ಟು ಬಲವಾದ ಪುಷ್ಟಿ ಸಿಕ್ಕಿದೆ. ಈ ವಿವಾದ ಕುರಿತಂತೆ ಯಾವ ತಿದ್ದುಪಡಿಯೂ ಸೆಲೆಕ್ಟ್ ಕಮಿಟಿಯ ಮುಂದೆ ಬಂದಿರಲಿಲ್ಲವೆಂದು ಹೇಗೋ ರುಜುವಾತಾಗಿದ್ದರೆ, ಪುನರ್‌ರಚಿತ ಮಸೂದೆಯನ್ನು ಪರಿಶೀಲಿಸಬಾರದಿತ್ತು ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆಂದು ತಾವು ನಿರ್ಣಯಿಸಿದ್ದೀರಿ. ಈ ಕಾರಣಕ್ಕಾಗಿಯೇ, ನಾನು ತಮ್ಮ ಮುಂದೆ ರೂಲಿಂಗನ್ನು ಉದಾಹರಿಸಿ ಹೇಳುವ ಅವಶ್ಯಕತೆ ಇಲ್ಲವೆಂದು ಹೇಳುತ್ತಿದ್ದೇನೆ. ಸರ್, ೧೮೭೩ರ ಹ್ಯಾನ್ಸರ್ಡ್ ಸಂಪುಟ ೨೧೫ರಲ್ಲಿ ರೂಲಿಂಗ್ ಇದೆ. ಅದರ ಪುಟ ೩೦೨ರಲ್ಲಿ, ಒಬ್ಬ ಸದಸ್ಯರು ಒಂದು ಮಸೂದೆಯನ್ನು ತರುವ ನೋಟೀಸು ಕೊಟ್ಟಿದ್ದರೆ, ಆ ಮಸೂದೆಯು ಮುದ್ರಿತ ರೂಪದಲ್ಲಿದ್ದರೆ, ಆಗ, ಎರಡನೇ ಪಠಣ ಆಗುವುದಕ್ಕೂ ಮುಂಚೆಯೇ, ಆ ಸದಸ್ಯರು ಆ ಮಸೂದೆಯಲ್ಲಿ ಯಾವುದೇ ಬದಲಾವಣೆ ಮಾಡುವಂತಿಲ್ಲವೆಂದು, ಅವರು ಯಾವುದೇ ಬದಲಾವಣೆ ಮಾಡುವುದಾದರೆ, ಆಗ ಸನ್ಮಾನ್ಯ ಸ್ಪೀಕರ್‌ರವರು, ಆ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕೆಂದು, ಆ ಮಸೂದೆ ಬಗ್ಗೆ ಮತ್ತೆ ಚರ್ಚೆ ಆಗುತ್ತಿಲ್ಲವೆಂದು ರೂಲಿಂಗ್ ಕೊಟ್ಟಿದ್ದಾರೆಂದು ಹೇಳಲಾಗಿದೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಕಾನೂನಿನ ನಿಲುವು ಅಂಗೀಕೃತವಾಗಿದೆ. ಅದರ ಬಗ್ಗೆ ಚರ್ಚೆಯ ಅಗತ್ಯ ಇಲ್ಲ. ಅಂಥ ಸದಸ್ಯರಿಗೆ ಬದಲಾವಣೆಗಳನ್ನು ಮಾಡಲು ಅವಕಾಶ ಇಲ್ಲವೆಂಬ ಕಾನೂನಿನ ನಿಲುವನ್ನು ಸನ್ಮಾನ್ಯ ಕಾನೂನು ಮಂತ್ರಿಯವರು ಅಲ್ಲಗಳೆಯುತ್ತಾರೆಂದು ನನಗೆ ಅನ್ನಿಸುವುದಿಲ್ಲ.

**ಸನ್ಮಾನ್ಯ ಡಾ. ಅಂಬೇಡ್ಕರ್** (ಕಾನೂನು ಮಂತ್ರಿಗಳು) : ಇಲ್ಲ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಸೆಲೆಕ್ಟ್ ಕಮಿಟಿಯು ಒಪ್ಪಿಕೊಂಡಿರುವುದರ ಹೊರತು ಯಾವುದೇ ಅಲ್ಪ ವಿರಾಮ ಚಿಹ್ನೆ, ಅರ್ಧ ವಿರಾಮ ಚಿಹ್ನೆ ........... ಆದರೆ, ಸೆಲೆಕ್ಟ್ ಕಮಿಟಿಯ ಮುಂದೆ ವಿಷಯಗಳನ್ನು ಮಂಡಿಸುವುದು ಅವರಿಗೆ ಸೇರಿದ್ದು, ಅದೇ, ಸಭಾಧ್ಯಕ್ಷರ ರೂಲಿಂಗ್ ಎಂದು ನನ್ನ ಅನಿಸಿಕೆ. ಮಾನ್ಯ ಸದಸ್ಯರು ಮಾತು ಮುಂದುವರಿಸಬಹುದು.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಸರ್, ಸದನದ ಮುಂದೆ ಬೇರೆ ಮೂಲ ಮಸೂದೆಯನ್ನು ಮಂಡಿಸಿದ್ದರೆ, ನನ್ನಿಂದ ಯಾವ ಆಕ್ಷೇಪಣೆಯೂ ಇರುತ್ತಿರಲಿಲ್ಲ. ಈ ಮಸೂದೆಯನ್ನು ಈ ರೀತಿಯಲ್ಲಿ ಈ ಸದನದಲ್ಲಿ ಪರಿಶೀಲಿಸಿದ್ದಿದ್ದರೆ, ಯಾರಿಗೂ ಯಾವ ಆಕ್ಷೇಪಣೆಯೂ ಇರುತ್ತಿರಲಿಲ್ಲ. ಈ ರೀತಿಯಲ್ಲಿ ಮಂಡನೆ ಆಗಿರುವಾಗ ಮಸೂದೆಯನ್ನು ತಾಂತ್ರಿಕ ನಿಯಮಗಳಿಗೆ ಅನುಸಾರವಾಗಿ, ಕಲಮು ಕಲಮುಗಳನ್ನೂ ಶಬ್ದ ಶಬ್ದವನ್ನೂ ಪರಿಶೀಲಿಸಬೇಕಾಗಿತ್ತು. ಈ ವಿಧಾನವನ್ನು ಅನುಸರಿಸಿಯೂ ಇಲ್ಲ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿಯೂ ಇಲ್ಲ, ಸೆಲೆಕ್ಟ್ ಕಮಿಟಿಯಲ್ಲಿ ಕಲಮು ಕಲಮುಗಳ, ಶಬ್ದ ಶಬ್ದಗಳ ಪರಿಶೀಲನೆಯೂ ಆಗಿಲ್ಲ, ಅಂದ ಮೇಲೆ ಮೊದಲ ಮಸೂದೆಯು ಎಲ್ಲಿತ್ತು, ಮಾನ್ಯ ಸದಸ್ಯರ ಬಳಿ ಇತ್ತೇ ಅಥವಾ ಅವರ ಜೇಬಿನಲ್ಲಿತ್ತೇ ಅಥವಾ ಅದನ್ನು ಅವರು ಮನೆಯಲ್ಲಿ ಓದಿಕೊಂಡು ಬಂದರೇ ಎಂದು ನಾನು ಕೇಳಬೇಕಾಗುತ್ತದೆ. ಸರ್, ನಾನು ಪಾರ್ಲಿಮೆಂಟರಿ ಪ್ರಾಕ್ಟೀಸ್‌ನತ್ತ ತಮ್ಮ ಗಮನ ಸೆಳೆಯಬಯಸುತ್ತೇನೆ. ಅದರ ಬಗ್ಗೆ ಸೆಲೆಕ್ಟ್ ಕಮಿಟಿಯ ಸದಸ್ಯರು ಯಾರೂ ಚಕಾರ ಎತ್ತಿಲ್ಲ. ನನ್ನಲ್ಲಿ ಬಲವಾದ ಆಧಾರಗಳಿವೆ, ಸರ್ ನಾನು ಅವುಗಳತ್ತ ತಮ್ಮ ಗಮನ ಸೆಳೆಯಬಯಸುತ್ತೇನೆ. ಮೊದಲನೆಯದಾಗಿ, ವರದಿಯಲ್ಲಿ ಬಹುಮತಾಭಿಪ್ರಾಯ ಏನಿದೆ:

"ನಾವು ನಮ್ಮ ಚರ್ಚೆಯನ್ನು ಈ ಪುನರ್ ರಚಿತ ಮಸೂದೆಗಷ್ಟೇ ಸೀಮಿತಗೊಳಿಸಿದ್ದೇವೆ."

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ನಾನೊಂದು ಮಾತು ಹೇಳಲೆ? ಇದು ಸರಿ ಅಲ್ಲ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ವಾಸ್ತವವಾಗಿ ಏನನ್ನು ಅನುಸರಿಸಬೇಕಾಗಿತ್ತೋ, ಆ ರೀತಿ, ಮೂಲ ಮಸೂದೆಯನ್ನು, ಅದರಲ್ಲಿನ ಕಲಮು ಕಲಮುಗಳನ್ನೂ, ಶಬ್ದ ಶಬ್ದವನ್ನೂ ಪರಿಶೀಲಿಸಿಲ್ಲ. ಸ್ವಲ್ಪ ಮುಂಚೆ ಸನ್ಮಾನ್ಯ ಸ್ಪೀಕರ್ ಹೇಳಿದಂತೆ, ಈ ಸದನದ ಮುಂದೆ ಶ್ರೀ ಬಾಲಕೃಷ್ಣ ಶರ್ಮಾ ಅವರು ಹೇಳಿದಂತೆ ಈ ಮಸೂದೆ ನಮ್ಮ ಮುಂದೆ ಬಂದಿದ್ದಿದ್ದರೆ, ಮಸೂದೆ ಬಗ್ಗೆ ನನ್ನ ಆಕ್ಷೇಪಣೆ ಏನೂ ಇರುತ್ತಿರಲಿಲ್ಲ. ಶ್ರೀ ಬಾಲಕೃಷ್ಣ ಶರ್ಮಾ ಅವರು ಹೇಳಿದ್ದನ್ನೆಲ್ಲವನ್ನೂ ಹಾಗೂ ಸನ್ಮಾನ್ಯ ಸ್ಪೀಕರ್‌ರವರು ಹೇಳಿದ್ದನ್ನು ಒಪ್ಪಿಕೊಳ್ಳುತ್ತಿದ್ದೆ.

**ಶ್ರೀಮತಿ ಜಿ. ದುರ್ಗಾಬಾಯಿ :** ಕ್ರಿಯಾಲೋಪ, ಸರ್, ಇವರು ಸ್ಪೀಕರ್ ರೂಲಿಂಗ್‌ನ್ನು ಪ್ರಶ್ನಿಸುತ್ತಿದ್ದಾರೆ.

**ಸನ್ಮಾನ್ಯ ಡೆಪ್ಯೂಟಿ ಸ್ಪಿಕರ್ :** ಮಾನ್ಯ ಸದಸ್ಯರು ಹೇಳುತ್ತಿರುವ ಪ್ರತಿಯೊಂದು ಶಬ್ದವನ್ನು ಅರ್ಥಮಾಡಿಕೊಳ್ಳಲು ನನಗೆ ಆಗುತ್ತಿಲ್ಲವಾದರೂ ಸ್ವಲ್ಪ ಸ್ವಲ್ಪ ಅರ್ಥವಾಗುತ್ತದೆ. ಸ್ಪೀಕರ್‌ರವರ ರೂಲಿಂಗನ್ನು ಕಾಪಾಡಿಕೊಳ್ಳಲು ನಾನು ಬದ್ಧ. ಈ ದಿನ, ನಾನು ಏನು ಹೇಳುವೆನೋ ಅದನ್ನು ನನ್ನ ನಂತರದ ಸಭಾಧ್ಯಕ್ಷರು ಒಪ್ಪದಿರಬಹುದು. ಆದರೆ, ಸ್ಪೀಕರ್ ರೂಲಿಂಗ್ ಇದ್ದೇ ಇದೆ. ಮಾನ್ಯ ಸದಸ್ಯರು ಒಂದೆರಡು ಅಂಶಗಳನ್ನು ಬಲವಾಗಿ ಪ್ರತಿಪಾದಿಸುತ್ತಿರುವರಾದರೂ, ಈ ಮಸೂದೆಯನ್ನು ಪರಿಶೀಲಿಸಲು ದೇಶಕ್ಕೆ ಅವಕಾಶ ಕೊಡಬೇಕೆಂಬುದನ್ನು ಅವರು ಈ ಸದನಕ್ಕೆ ಮನವರಿಕೆ ಮಾಡಿಕೊಡಬಯಸುತ್ತಿದ್ದಾರೆಂದು ನನ್ನ ಅನಿಸಿಕೆ. (ಮಾನ್ಯ ಸದಸ್ಯರು: "ಅಲ್ಲ, ಅಲ್ಲ, ಸ್ಪೀಕರ್ ರೂಲಿಂಗ್ ಬಿಟ್ಟುಹೋಗುವುದು ನನ್ನ ಆಶಯ ಅಲ್ಲ ಎಂದು ಈಗಲೂ ಹೇಳುತ್ತಿದ್ದೇನೆ") ಈ ಸದನ, ಪರಿಶೀಲಿಸಬೇಕೆಂದು, ದೇಶ ಪರೀಶೀಲಿಸಬೇಕೆಂದು ಯಾವುದೇ ವಾದವನ್ನು ಮುಂದಿಡುವುದು ಸ್ವಾಗತಾರ್ಹ, ಆದರೆ, ಸ್ಪೀಕರ್ ರೂಲಿಂಗನ್ನು ಪ್ರಶ್ನಿಸುವ ಮನೋಭಾವನೆಯಿಂದಲ್ಲ.

**ಡಾ. ಮೋನೋ ಮೋಹನದಾಸ್ :** ನನ್ನದೊಂದು ಕೋರಿಕೆ. ಮಾನ್ಯ ಸದಸ್ಯರು, ಮುಂದಿನ ಹತ್ತು ನಿಮಿಷವೂ ಹಿಂದೂಸ್ತಾನಿಯಲ್ಲೇ ಮಾತನಾಡುತ್ತಾರೇನು, ಅವರು ಹಿಂದೂಸ್ತಾನಿಯಲ್ಲೇ ಮಾತನಾಡುವುದಾದರೆ, ಹಿಂದೂಸ್ತಾನಿ ಗೊತ್ತಿರದ ನಾವು ನಮ್ಮ ಹೋಟೆಲುಗಳಿಗೆ ವಾಪಸಾಗುತ್ತೇವೆ. ದಯಮಾಡಿ ಹೇಳಿ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ನನ್ನ ಮಾತುಗಳನ್ನು ಅರ್ಥ ಮಾಡಿಕೊಳ್ಳಲು ನಿಮಗೆ ಆಗುತ್ತಿಲ್ಲವೆಂದು ನೀವು ಹೇಳುತ್ತಿದ್ದೀರಿ, ನಾನಾಡುವ ಮಾತುಗಳು ಸದನಕ್ಕೆ ಅರ್ಥವಾಗಬೇಕಲ್ಲವೇ, ತಮಗೂ ತಿಳಿಯಬೇಕಲ್ಲವೇ, ಈಗ ನಾನು ಹರುಕು ಮುರುಕು ಇಂಗ್ಲಿಷಿನಲ್ಲಿ ಮಾತನಾಡುತ್ತೇನೆ.

**ಶ್ರೀ ಟಿ. ಎ. ರಾಮಲಿಂಗಂ ಚೆಟ್ಟಿಯಾರ** (ಮದ್ರಾಸ್ : ಸಾಮಾನ್ಯ) : ಇಲ್ಲಿವರೆಗೆ, ನಿಮಗೆ, ಹಿಂದಿ ಗೊತ್ತಿರದವರ ಬಗ್ಗೆ ಯಾವ ಕಾಳಜಿಯೂ ಇರಲಿಲ್ಲ, ಅಂಥವರು ಬಹಳಷ್ಟು ಮಂದಿ ಇಲ್ಲಿದ್ದಾರೆ. ಅಂತಹವರ ಬಗ್ಗೆ ನಿಮಗೆ ಅಷ್ಟೊಂದು ತಾತ್ಸಾರ ಇದ್ದರೆ, ಅವರ ಅನಿಸಿಕೆಗಳು ನಿಮಗೆ ಬೇಕಿಲ್ಲವಾದರೆ, ಅದು ನಿಮ್ಮ ಇಷ್ಟಕ್ಕೆ ಬಿಟ್ಟಿದ್ದು.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಇಂಗ್ಲಿಷಿನಲ್ಲಿ ಮಾತನಾಡುತ್ತೇನೆಂದು ಹೇಳುತ್ತಿದ್ದೇನಲ್ಲ. ನನ್ನ ಗೆಳೆಯನ ಮಾತು ಪೂರಕ ಅಷ್ಟೇ. ನೀವು ಹೇಳಿದ್ದೀರಿ, ಮಾತನಾಡುತ್ತೇನೆ, ಇಂಗ್ಲಿಷಿನಲ್ಲಿ ಮುಂದುವರಿಸುತ್ತೇನೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಎಲ್ಲವನ್ನೂ ಹಿಂದೂಸ್ಥಾನಿಯಲ್ಲೇ ಹೇಳಿದ್ದೀರಿ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ನಾನು ಹೇಳಿದ್ದೆಲ್ಲವನ್ನು ಮತ್ತೇ ಹೇಳುವುದಿಲ್ಲ, ಅದಾಗದು.

ಮುಂದೆ ಹೇಳಬೇಕಾದದ್ದನ್ನು ಹೇಳುತ್ತೇನೆ. ಅದಕ್ಕೆ ಪ್ರಯತ್ನ ಮಾಡುತ್ತಿದ್ದೇನೆಂಬ ಆರೋಪ ನನ್ನ ಮೇಲೆ ಬರಬಾರದು...........

**ಶ್ರೀ ತಜಮುಲ್ ಹುಸೇನ್ :** ಮತ್ತೇ ಮತ್ತೇ ಅದನ್ನೇ ಹೇಳಬಾರದು.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ನನಗೆ ಶ್ರೀಯುತ ತಜಮುಲ್ ಹುಸೇನರು ಹುಕುಂ ಮಾಡುವುದು ಬೇಕಿಲ್ಲ. ಅವರಿಗೆ ಇಷ್ಟ ಇರದಿದ್ದರೆ............

**ಶ್ರೀ ತಜಮುಲ್ ಹುಸೇನ್ :** ನಾನು, ಸಭಾಧ್ಯಕ್ಷರಿಗೆ ಬಿನ್ನವಿಸಿಕೊಳ್ಳುತ್ತಿದ್ದೇನೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಶ್ರೀಯುತ ತಜಮುಲ್ ಹುಸೇನರು ಪದೇ ಪದೇ ಮಧ್ಯೆ ಮಧ್ಯೆ ಮಾತನಾಡುತ್ತಿದ್ದಾರೆ. ಇದು ಸರಿಯಲ್ಲ. ಸದನದ ನಿಯಮಗಳ ಪಾಲನೆ ಆಗುವಂತೆ ನೋಡಿಕೊಳ್ಳಲು ನಾನಿಲ್ಲಿದ್ದೇನೆ. ಪುನರಾವರ್ತನೆ ಆಗಕೂಡದು, ನಾವು ಈ ರೀತಿ ಸಮಯ ವ್ಯರ್ಥಮಾಡುತ್ತಿರುವುದು ಸರಿಯಲ್ಲ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ನಾನು ಮತ್ತೆ ಮತ್ತೆ ಹೇಳಬಯಸುತ್ತಿಲ್ಲ, ಸನ್ಮಾನ್ಯ ಸ್ಪೀಕರ್‌ರವರು ಯಾವ ರೀತಿಯಲ್ಲಿ ರೂಲಿಂಗ್ ಕೊಟ್ಟಿದ್ದಾರೋ, ಅದನ್ನು ನಾನು ಗೌರವಿಸುತ್ತೇನೆ. ಅದರ ವಿರುದ್ಧ ಒಂದು ಮಾತೂ ಆಡುವುದಿಲ್ಲ. ಆದರೂ, ಸರ್, ಅದೇ ಕೊನೆಯ ಮಾತಲ್ಲ.

**ಶ್ರೀ ತಜಮುಲ್ ಹುಸೇನ್ :** ಈ ಮಾತುಗಳಿಂದ ನಾನು ವಿಚಲಿತನಾಗುವುದಿಲ್ಲ. ಈ ಸದನವು ತನ್ನದೇ ಆದೇಶವನ್ನು ಪುನರ್ ಪರಿಶೀಲನೆ ಮಾಡಬಹುದೆಂದು ನನ್ನ ಅನಿಸಿಕೆ. ಹಾಗೆ ಮಾಡಲು ಅವಕಾಶವಿದೆಯೆಂಬ ಬಗ್ಗೆ "ಸಭಾಧ್ಯಕ್ಷರ ತೀರ್ಮಾನಗಳು" ಪುಸ್ತಕದಿಂದ ಒಂದು ರೂಲಿಂಗನ್ನು ಉದಾಹರಿಸಬಲ್ಲೆ. ಆದರೆ, ಈ ಹಂತದಲ್ಲಿ ಆ ರೂಲಿಂಗನ್ನು ಪುನರ್ ಪರಿಶೀಲಿಸಬೇಕೆಂದು ನಾನು ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್‌ರವರನ್ನು ಕೇಳುತ್ತಿದ್ದೇನೆಂದು ಈ ಸದನ ಭಾವಿಸಬಾರದು. ನಾನು ಹಾಗೆ ಕೇಳುತ್ತಿಲ್ಲ. ಸದನವು ತಾಳ್ಮೆ ಕಳೆದುಕೊಳ್ಳಬಾರದು. ಒಮ್ಮೆ ಕೊಟ್ಟ ರೂಲಿಂಗನ್ನು ಪುನರ್‌ಪರಿಶೀಲಿಸಬಾರದೆಂಬ ನಿಯಮ ಎಲ್ಲಿದೆ? ಎಂದು ನಾನು ಕೇಳುತ್ತಿದ್ದೇನೆ. ಅಂಥ ನಿಯಮ ಇಲ್ಲವೇ ಇಲ್ಲ. ರೂಲಿಂಗನ್ನು ಪುನರ್‌ಪರಿಶೀಲಿಸಲು ನಾನು ಪ್ರಯತ್ನ ಮಾಡುತ್ತಿಲ್ಲವಾದ್ದರಿಂದ, ಇದು ಉದ್ಭವಿಸುವುದೇ ಇಲ್ಲ. 'ಪರಿಶೀಲನೆ' ವಾಕ್ಯದ ಅರ್ಥದ ಪ್ರಕಾರ, ಈ ಮಸೂದೆಯನ್ನು ಪುನರ್‌ರಚಿಸಿದ ಮಸೂದೆ ಜೊತೆ, ವಾಸ್ತವವಾಗಿ ಇಲ್ಲವೇ ಪಾರಿಭಾಷಿಕ ನಿಯಮಗಳಂತೆ ಪರಿಶೀಲಿಸಲಿಲ್ಲವೆಂದು ಸ್ಪೀಕರ್ ರೂಲಿಂಗ್ ಕೊಟ್ಟಿದ್ದಾರೆಂದು ನಾನು ಹೇಳುತ್ತಿದ್ದೆ. "ಪರಿಶೀಲನೆ" ವಾಕ್ಯದ ಅರ್ಥದಂತೆ, ಪಾರಿಭಾಷಿಕ ನಿಯಮಗಳ ಪ್ರಕಾರ ಈ ಮಸೂದೆಯನ್ನು ಪರಿಶೀಲಿಸಿಯೇ ಇಲ್ಲವೆಂಬುದನ್ನು ಪರಿಗಣನೆಗಾಗಿ ನಾನು ತಮ್ಮ ಮುಂದಿಡುತ್ತಿದ್ದೇನೆ.

**ಶ್ರೀ ಮೋಹನಲಾಲ್ ಗೌತಮ್ :** ಇವರು, ಮೊದಲು ಹಿಂದೂಸ್ತಾನಿಯಲ್ಲಿ ಹೇಳಿದ್ದನ್ನೇ ಮತ್ತೆ ಹೇಳುತ್ತಿದ್ದಾರೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಇಡೀ ಪರಿಣಾಮಗಳು ನನಗೆ ಗೊತ್ತಾಗಲೆಂದು ಹೇಳುತ್ತಿದ್ದಾರೆ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಈ ಮಾತುಗಳನ್ನು ನಾನು ಹೇಳದೇ ಬಿಟ್ಟಿದ್ದರೆ, ಸ್ವತ: ನನಗೇ ಮನವರಿಕೆ ಆಗುತ್ತಿರಲಿಲ್ಲವೇನೋ. ಬೇರೆಯವರಿಗೆ ಇದು ಗೊತ್ತಾಗಿದ್ದ ಪಕ್ಷದಲ್ಲಿ ಇದಕ್ಕಿಂತ ಇನ್ನೇನೂ ಹೇಳಲಾರೆ.

ಪುನರ್‌ರಚಿಸಿದ ಮಸೂದೆಯನ್ನು ಮಾತ್ರವೇ ತಾಂತ್ರಿಕ ನಿಯಮದಂತೆ, ವಾಸ್ತವವಾಗಿ ಪರಿಶೀಲಿಸಲಾಗಿದೆಯೆಂಬ ಸಂಗತಿಯನ್ನು ತಮಗೆ ಮನವರಿಕೆ ಮಾಡಿಕೊಡುವ ದೃಷ್ಟಿಯಿಂದ ಹಾಗೆ

ಹೇಳುತ್ತಿದ್ದೆ. ಕೆಲವೊಂದು ವಾದಗಳನ್ನು ಹೇಳಬಯಸಿದ್ದೇನೆಂದು ನಾನು ಹೇಳಿದ್ದೆ. ಮೊದಲನೆಯದು, "ನಾವು ನಮ್ಮ ಚರ್ಚೆಯನ್ನು ಪುನರ್‌ರಚಿಸಿದ ಮಸೂದೆಗಷ್ಟೆ ಸೀಮಿತಗೊಳಿಸಿದ್ದೇವೆ" ಎಂದು ವರದಿಯಲ್ಲಿ ಹೇಳಿದೆ. ಎರಡನೆಯದು, ಸರ್, ಭಕ್ಷಿ ತೇಕ್‌ಚಂದ್ ಮತ್ತು ಬಾಲಕೃಷ್ಣ ಶರ್ಮಾರವರ ಅಸಮ್ಮತಿಸೂಚಕ ಟಿಪ್ಪಣಿ, ಅದನ್ನೇ ಹೇಳಿದೆ. ನಾನು ಅದನ್ನು ಪುನಃ 'ಓದುವುದಿಲ್ಲ, ಏಕೆಂದರೆ, ಸದಸ್ಯರು ಅದನ್ನು ಓದಿಕೊಂಡಿದ್ದಾರೆ. ಅದನ್ನು ಪುನಃ ಓದುವುದರಿಂದ ಸಮಯ ವ್ಯರ್ಥವಾಗುತ್ತದೆ. ಶ್ರೀ ಬಾಲಕೃಷ್ಣ ಶರ್ಮಾರು ಹೇಳಿದಾಗ, ಸನ್ಮಾನ್ಯ ಸ್ಪೀಕರ್‌ರವರು ಒಪ್ಪಿಕೊಂಡುಬಿಟ್ಟರು. ಅವರು ಮಾತನಾಡುವಾಗ "ನಾವು, ನಮ್ಮ ಚರ್ಚೆಯನ್ನು ಈ ಪುನರ್‌ರಚಿತ ಮಸೂದೆಗಷ್ಟೇ ಸೀಮಿತಗೊಳಿಸಿದ್ದೇವೆ" ಎಂದು ಪುನಃ ಹೇಳಿದರು. ತಾವೊಮ್ಮೆ ವರದಿಯನ್ನು ಗಮನಿಸಿದರೆ, ವರದಿಯಲ್ಲೇ, ಉದಾಹರಣೆಗೆ ಉಪ–ಕಲಮು ೯ರಲ್ಲಿ, ತಾಂತ್ರಿಕ ನಿಯಮಗಳಂತೆ, ಪುನರ್‌ರಚಿತ ಮಸೂದೆಯನ್ನು ಮಾತ್ರವೇ, ಪರಿಶೀಲಿಸಲಾಗಿದೆ ಎಂದಿರುವುದು ತಮಗೇ ಗೊತ್ತಾಗುತ್ತದೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಇದಕ್ಕೆ ಸಂಬಂಧಪಟ್ಟಂತೆ, ಮಾನ್ಯ ಸದಸ್ಯರ ಉದ್ದೇಶವೇನೆಂಬುದು ನನಗೆ ಗೊತ್ತಾಗುತ್ತಿಲ್ಲ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಶ್ರೀಯತ ಕೆ.ಸಿ. ಶರ್ಮಾರಿಂದ ಏನು ಉದುರಿತೋ ನಾನು ಕೇಳಿಸಿಕೊಳ್ಳಲಿಲ್ಲ.

**ಮಾನ್ಯ ಸದಸ್ಯರುಗಳು :** ಸಭಾ ನಿಯಮಗಳನ್ನು ಪಾಲಿಸಿರಿ.

**ಶ್ರೀ ತಜಮುಲ್ ಹುಸೇನ್ :** ಕುಳಿತುಕೊಳ್ಳಿ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಸ್ವಲ್ಪ ತಾಳಿ, ನಾನು ಹೇಳುತ್ತೇನೆ. ಇಲ್ಲಿ ಎರಡು ವಿಚಾರಗಳಿವೆ. ಈ ಮಸೂದೆ ಬಗ್ಗೆ ನಾವು ಚರ್ಚೆ ಮುಂದುವರಿಸಲೇಬಾರದು ಎನ್ನುವುದಾದರೆ, ಆ ವಿಚಾರ ಇತ್ಯರ್ಥವಾಗಿದೆ. ಈ ಮಸೂದೆಯನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗಿದೆ. ಈ ಮಸೂದೆಯು ಸೆಲೆಕ್ಟ್ ಕಮಿಟಿಯ ಮುಂದಿತ್ತು, ಇತರ ತಿದ್ದುಪಡಿಗಳನ್ನು ಮಂಡಿಸಲಾಗಿದೆ ಎಂದು ಸ್ಪೀಕರ್ ಅವರು ಹೇಳಿದ್ದಾರೆ. ಆದ್ದರಿಂದ, ಆ ವಿಷಯವಾಗಿ ಹೇಳುವುದರೆ, ಸ್ಪೀಕರ್‌ರವರ ರೂಲಿಂಗನ್ನು ಮೀರಿ ಹೋಗುವ ಸ್ಥಿತಿಯಲ್ಲಿ ನಾನಿಲ್ಲವೆಂದು ಹೇಳುತ್ತಿದ್ದೇನೆ. ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ಇದೇ ಬಗೆಯ ಒಂದು ವಿಷಯದ ಬಗ್ಗೆ ರೂಲಿಂಗ್ ಕೊಡಲಾಗಿದೆ, ಅದೇ ವಿಷಯ ಬಂದಾಗ, ಆ ರೂಲಿಂಗ್ ಮೀರಿ ಹೋಗುವುದು ಸರಿ ಅಲ್ಲ. ಬೇರೆ ವಿಷಯಗಳಿಗೂ ಅದೇ ಪೂರ್ವ ನಿದರ್ಶನವಾಗಲಾರದು. ಬೇರಾವುದೇ ಸಂದರ್ಭದಲ್ಲಿ ಆ ವಿಷಯ ಬಂದಾಗ, ಹಿಂದಿನ ರೂಲಿಂಗ್‌ನ್ನು ಕೈಬಿಡುವುದು ಸಭಾಧ್ಯಕ್ಷರಿಗೆ ಅಥವಾ ಸದನದ ಸದಸ್ಯರಿಗೆ ಅಥವಾ ಆ ಸಮಯದಲ್ಲಿ ಸಭಾಧ್ಯಕ್ಷ ಪೀಠದಲ್ಲಿ ಯಾರಿರುತ್ತಾರೋ ಅವರಿಗೆ ಸೇರಿದ್ದು. ಈ ಹಂತದಲ್ಲಿ, ಅದೇ ನಡವಳಿಗಳಲ್ಲಿ ನಾನು ಅದನ್ನು ಮೀರಿ ಹೋಗಲು ಸಿದ್ಧನಿಲ್ಲ. ಆದ್ದರಿಂದ, ಯಾವ ಉದ್ದೇಶದಿಂದ, ಈ ವಾದಗಳನ್ನು ಎತ್ತಲಾಗಿದೆ ಎಂಬುದುನ್ನು ಹೇಳಬೇಕೆಂದು ನಾನು ಮಾನ್ಯ ಸದಸ್ಯರನ್ನು ಕೇಳುತ್ತಿದ್ದೇನೆ. ಸ್ವಲ್ಪ ಹೊತ್ತಿಗೆ ಮುಂಚೆ ನನಗೆ ತಿಳಿದುಬಂದಂತೆ, ಸೆಲೆಕ್ಟ್ ಕಮಿಟಿಯು, ಮೂಲ ಮಸೂದೆಯನ್ನು ಪರಿಶೀಲಿಸಿದೆ, ಇನ್ನೊಂದನ್ನು ಪರಿಶೀಲಿಸಿದೆ, ಅವೆರಡೂ ಸದನದ ಮುಂದಿವೆ. ಈ ಕಾರಣದಿಂದ, ಪರಿಚಲನೆಗೆ ಕಳುಹಿಸಬೇಕೆಂದು ಕೋರುವ ಈ ಸೂಚನೆಯನ್ನು ಸದನವು ಒಪ್ಪಿಕೊಳ್ಳಬೇಕೆಂದು ಸದನಕ್ಕೆ ಮನವರಿಕೆ ಮಾಡಿ ಕೊಡುವುದೇ ಉದ್ದೇಶವೆಂದು ಕಾಣುತ್ತದೆ. ಪ್ರಯುಕ್ತ ಅದು ಕ್ರಿಯಾಲೋಪ ಅಲ್ಲ, ಸದನಕ್ಕೆ ಮನವರಿಕೆ ಮಾಡಿಕೊಡುವುದೇ ಉದ್ದೇಶ, ಅದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೇ ಆ ಕಾರಣಕ್ಕಾಗಿ,

ಶ್ರೀಯುತ ಮೇ ರವರ ಪಾರ್ಲಿಮೆಂಟರಿ ಪ್ರಾಕ್ಟೀಸ್ ಗ್ರಂಥವನ್ನು, ಇತರ ರೂಲಿಂಗ್‌ಗಳನ್ನು ಉಲ್ಲೇಖಿಸಬೇಕಾಗಿಲ್ಲ. ಕಾನೂನಿನ ನಿಲುವಿನ ಬಗ್ಗೆ ಸಾಕಷ್ಟು ಹೇಳಲಾಗಿದೆ. ಈಗ, ಮಾನ್ಯ ಸದಸ್ಯರು, ಸಾಧ್ಯವಾದರೆ, ಅವರ ಈ ವಾದ ಕುರಿತ ಮಾತುಗಳನ್ನು ಮುಗಿಸಲು, ಬೇರೆ ಇತರ ವಿಚಾರದ ಮೇಲೆ ಮಾತನಾಡಲು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಆರ್.ಕೆ. ಸಿಧ್ವಾ** (ಕೇಂದ್ರೀಯ ಪ್ರಾಂತ್ಯ ಮತ್ತು ಬೀರಾರ : ಸಾಮಾನ್ಯ) : ಸರ್, ಪಂಡಿತ ಠಾಕೂರದಾಸ್ ಭಾರ್ಗವರು, ಸ್ಪೀಕರ್ ರೂಲಿಂಗ್ ಅಂತಿಮವಾದುದಲ್ಲ ಎಂದು ಹೇಳಿದ್ದಾರೆ, ಸರ್ ತಾವು ಆ ಬಗ್ಗೆ .............

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈ ಬಗ್ಗೆ, ಮತ್ತಷ್ಟು ಚರ್ಚೆ ಬೇಡ. ಈ ನಡವಳಿ ಬಗ್ಗೆ ಸ್ಪೀಕರ್ ರೂಲಿಂಗ್ ಅಂತಿಮವಾದುದೆಂದು ನಾನು ಈಗಾಗಲೇ ಹೇಳಿದ್ದೇನೆ. ಅದನ್ನು ಮತ್ತೆ ಪ್ರಶ್ನಿಸುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ಅದೇ ವಾದವನ್ನು ಪುನಃಹೇಳುವುದು ಅಥವಾ ನನ್ನ ನೆರವಿಗೆ ಬರುವುದು ಅನವಶ್ಯಕ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಸರ್, ಸ್ಪೀಕರ್ ರೂಲಿಂಗ್‌ಗೆ ವ್ಯತಿರಿಕ್ತವಾಗಿ ತಾವು ರೂಲಿಂಗ್ ಕೊಡಬೇಕೆಂದು ನಾನು ತಮ್ಮನ್ನು ಕೇಳುವುದು ನನ್ನ ಮನಸ್ಸಿನಲ್ಲಿ ಇಲ್ಲವೇ ಇಲ್ಲ. ನಾನು ಹಾಗೆ ಕೋರುವುದೂ ಇಲ್ಲ. ಕಾನೂನಿನ ಪ್ರಕಾರ, ಇನ್ನೊಂದು ರೂಲಿಂಗ್ ಕೊಡಲು ತಮಗೆ ಸಂಪೂರ್ಣ ಸಕ್ಷಮತೆ ಇದೆಯೆಂದು ನನಗೆ ಗೊತ್ತಿದ್ದರೂ, ಅದೇ ವಿಷಯದ ಬಗ್ಗೆ ಕೊಟ್ಟಿರುವ ರೂಲಿಂಗ್‌ನ್ನು ಪುನರ್ ಪರಿಶೀಲಿಸುವುದು ಸರಿ ಅಲ್ಲವೆಂಬುದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ ಅನ್ಯಾಯ ನುಸುಳಿರುವಂತಹ ವಿಷಯಗಳ ಬಗ್ಗೆ ಕಾನೂನು, ಹಾಗೆ ಮಾಡುವುದಕ್ಕೆ ಅವಕಾಶ ಕೊಡಲಾರದಷ್ಟು ಸಂಕುಚಿತ ಅಲ್ಲ. ಸಭಾಧ್ಯಕ್ಷರ ರೂಲಿಂಗ್‌ನ್ನು ಪುನರ್‌ಪರಿಶೀಲಿಸಬೇಕೆಂಬ ವಿಷಯದ ಮೇಲೆ ನಾನು ಇನ್ನೇನೂ ಮಾತನಾಡಹೋಗುವುದಿಲ್ಲ ಸದನದ ಮುಂದೆ ಹಲವಾರು ಸೂಚನೆಗಳಿವೆ, ಪರಿಚಲನೆಗಾಗಿ ಕೋರುವ ಸೂಚನೆ ಅದೊಂದೇ ಇಲ್ಲ. ಈ ಮಸೂದೆಯು, ಸೆಲೆಕ್ಟ್ ಕಮಿಟಿಗೆ ಮತ್ತೆ ಹೋಗುವುದಕ್ಕೂ, ೧೫ ದಿನಗಳಲ್ಲಿ ಈ ಸದನಕ್ಕೆ ಪುನಃ ಬರುವುದಕ್ಕೂ ಅವಕಾಶ ಇದೆ. ನಾನು ಈಗಾಗಲೇ ಹೇಳಿರುವಂತೆ, ಇದೇನೂ, ವಿಳಂಬಕಾರಕ ತಂತ್ರ ಏನಲ್ಲ. ಕಾನೂನಿಗೆ ಅನುಗುಣವಾದ, ಮೂಲ ಭೂತವಾಗಿ ಸರಿಯಾದ ಒಂದು ವಿಧಾನವನ್ನು ಸದನವು ಅಳವಡಿಸಿ ಕೊಳ್ಳಬೇಕೆಂದಷ್ಟೇ ನಾನು ಹೇಳುತ್ತಿದ್ದೇನೆ. ನಾನೂ ಕೂಡ. ಈ ಸದನದ ಒಬ್ಬ ಸದಸ್ಯ, ಹೀಗಾಗಿ, ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕು. ಅಲ್ಲಿ, ಕಾನೂನಿಗೆ ಅನುಸಾರವಾದ ರೀತಿಯಲ್ಲಿ ಪರಿಶೀಲನೆ ಆಗಬೇಕು ಎಂದು ಕೋರುವ ಹಕ್ಕು ನನಗಿದೆ. ಅದೇ ಸೆಲೆಕ್ಟ್ ಕಮಿಟಿಗೆ ವಾಪಸು ಕಳುಹಿಸುವುದನ್ನು ತಪ್ಪಿಸಿಕೊಳ್ಳಲಾಗದು. ನಾನು ಈ ವಿಚಾರವನ್ನು ತಮ್ಮ ಮುಂದಿಡುತ್ತಿದ್ದೇನೆ, ಈ ಸದನದ ಪ್ರತಿಯೊಂದು ನಿಮಿಷಕ್ಕೂ ತೆರಿಗೆದಾರನ ಹಣ ಖರ್ಚಾಗುತ್ತದೆ. ವಿಳಂಬಕಾರಕ ಅಥವಾ ಅಡ್ಡಿಪಡಿಸುವ ಪ್ರವೃತ್ತಿ ನನ್ನದಲ್ಲ. ಆದರೂ ಕೂಡ............

**ಶ್ರೀ ತಜಮುಲ್ ಹುಸೇನ್ :** ಆದರೂ ಕೂಡ, ನೀವು ಅದನ್ನೇ ಮಾಡುತ್ತಿದ್ದೀರಿ.

**ಒಬ್ಬರು ಮಾನ್ಯ ಸದಸ್ಯರು :** ಅವರು, ಮತ್ತೆ, ಸ್ಪೀಕರ್ ರೂಲಿಂಗ್ ಬಗ್ಗೆಯೇ ಹೇಳ ಹೊರಟಿದ್ದಾರೆ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ನಾನು, ಇನ್ನಷ್ಟು ಸಮಯ ಮಾತನಾಡಲು ಈ ಸದನ ಅವಕಾಶ ಕೊಡುತ್ತದೆಂದು ಭಾವಿಸಿದ್ದೇನೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಮಾನ್ಯ ಸದಸ್ಯರಿಗೆ ಇನ್ನಷ್ಟು ಸಮಯ ಬೇಕೇನು?

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಬೇಕು, ಸರ್.

*(ಊಟಕ್ಕಾಗಿ ಸದನ ಎದ್ದಿತು)*

*ಊಟವಾದ ಮೇಲೆ ಸದನವು ೨-೩೦ಕ್ಕೆ ಸಭೆ ಸೇರಿತು.*

***ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್** (ಶ್ರೀ ಎಂ. ಅನಂತಶಯನಂ ಅಯ್ಯಂಗಾರ್) ರವರು ಸಭಾಧ್ಯಕ್ಷ ಪೀಠದಲ್ಲಿದರು.*

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಸರ್, ಸದನವು, ಊಟಕ್ಕಾಗಿ ಏಳುವ ಸಮಯದಲ್ಲಿ, ನಾನು, ಮಸೂದೆಯ ಪಾಠವನ್ನು ಎಂದರೆ ಒಂದೂ ಶಬ್ದ ಬಿಡದಂತೆ ಪರಿಶೀಲಿಸುವುದು ಸೆಲೆಕ್ಟ್ ಕಮಿಟಿಯ ಕರ್ತವ್ಯ, ಮಸೂದೆಯು ಕಲಮುಕಲಮನ್ನೂ, ಅವಶ್ಯಕವಾದರೆ, ಶಬ್ದಶಬ್ದವನ್ನೂ ಪರಿಶೀಲಿಸುವುದು ಸೆಲೆಕ್ಟ್ ಕಮಿಟಿಯ ಕರ್ತವ್ಯವೆಂದು ಹೇಳಿದ್ದೆ. ನಾನೀಗ, ಶ್ರೀಯುತ ಮೇ ರವರ ಪಾರ್ಲಿಮೆಂಟರಿ ಪ್ರಾಕ್ಟೀಸ್ ಗ್ರಂಥವನ್ನು ಉಲ್ಲೇಖಿಸುತ್ತೇನೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ, ಮಾನ್ಯ ಸದಸ್ಯರು ದಯಮಾಡಿ, ಬೇರೆ ವಿಚಾರದ ಮೇಲೆ ಮಾತನಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ನಾನು ತಮ್ಮ ರೂಲಿಂಗನ್ನು ಗೌರವಿಸುತ್ತೇನೆ. ಸಭಾಧ್ಯಕ್ಷರು ಕೊಟ್ಟಿರುವ ರೂಲಿಂಗನ್ನು ಪುನರ್‌ಪರೀಶೀಲಿಸುವುದಿಲ್ಲವೆಂದು ತಾವು ಹೇಳಿದ್ದೀರಿ. ಅದರ ಪುನರ್ ಪರಿಶೀಲನೆ ಆಗುವುದು ನನಗೆ ಬೇಕಿಲ್ಲ. ನಿಜಹೇಳಬೇಕೆಂದರೆ, ನನಗೆ ಅದು ಸಂಪೂರ್ಣವಾಗಿ ಮನದಟ್ಟಾಗದಿರುವುದು. ನನ್ನ ದುರಾದೃಷ್ಟ. ಕರಡು ಪ್ರತಿಯ ಪರಿಶೀಲನೆ ಆಗುತ್ತಿದ್ದ ಸಮಯದಲ್ಲಿ ಈ ಮಸೂದೆಯು ಸೆಲೆಕ್ಟ್ ಕಮಿಟಿಯ ಮುಂದಿತ್ತೆಂದು ಸಭಾಧ್ಯಕ್ಷರ ರೂಲಿಂಗ್ ಹೇಳುತ್ತದೆ. ಆ ಬಗ್ಗೆ ನನ್ನ ತಕರಾರೇನೂ ಇಲ್ಲ. ಆದರೆ, ಮೂಲ ಮಸೂದೆಯ ಕಲಮುಕಲಮುಗಳನ್ನೂ, ಶಬ್ದ ಶಬ್ದವನ್ನೂ ಪರಿಶೀಲಿಸುವುದು ಸೆಲೆಕ್ಟ್ ಕಮಿಟಿಯ ಕರ್ತವ್ಯ ಎನ್ನುವುದು ನನ್ನ ವಾದ. ಮಸೂದೆಯ ಕಲಮುಕಲಮುಗಳನ್ನೂ, ಶಬ್ದ ಶಬ್ದವನ್ನೂ ಈ ಸದನ ಪರಿಶೀಲನೆ ಮಾಡಬೇಕಿರುವಾಗ, ಸೆಲೆಕ್ಟ್ ಕಮಿಟಿಯೂ ಹಾಗೆ ಮಾಡಬೇಕಿತ್ತು.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ರೂಲಿಂಗ್‌ನಲ್ಲಿ ಹೇಳಿರುವಂತೆ, ಮೂಲ ಮಸೂದೆ, ತಿದ್ದುಪಡಿ ಕರಡು ಎರಡೂ ಇದ್ದವು. ಅವುಗಳನ್ನು, ಒಂದು ಕಲಮೂ ಬಿಡದಂತೆ ಪರಿಶೀಲಿಸಲಾಗಿದೆ. ಮುಂದಿನ ಹಂತ ಏನು? ನಾವು ಆ ಬಗ್ಗೆ ಪುನಃ ಚರ್ಚೆ ಮಾಡಬೇಕಾಗಿಲ್ಲ ಎನ್ನುವುದು ಒಂದು. ಹಾಗೆ ಮಾಡುವುದು ಸರಿಯಲ್ಲ ಎನ್ನುವುದು ಇನ್ನೊಂದು. ಆ ಬಗ್ಗೆ ಈಗಾಗಲೇ ರೂಲಿಂಗ್ ಕೊಡಲಾಗಿದೆ. ಹಾಗೆಂದು, ರೂಲಿಂಗ್ ಕೊಟ್ಟಿರುವಾಗ, ಮತ್ತೆ ಹಾಗೆ ಮಾಡಬೇಕೆಂದು ಕೇಳುವುದು ಸರಿಯೇ?

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ವಾಸ್ತವಾಂಶ ಕುರಿತಂತೆ, ಸೆಲೆಕ್ಟ್ ಕಮಿಟಿಯ ಸದಸ್ಯರು, ಎರಡೂ ಮಸೂದೆಗಳನ್ನು ಒಟ್ಟಿಗೇ ಪರಿಶೀಲಿಸಲಾಗಿದೆಯೆಂದು ಈ ಸದನಕ್ಕೆ ದಯಮಾಡಿ ತಿಳಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಅದೇ ಸರಿಯೆಂದು ಭಾವಿಸಿದ ಪಕ್ಷದಲ್ಲಿ ಮೂಲ ಮಸೂದೆಯ ಪ್ರತಿಯೊಂದು ಕಲಮಿನ ಬಗ್ಗೆ ಚರ್ಚೆ ಆಗಿರದಿದ್ದರೆ, ಕಲಮುಕಲಮನ್ನೂ, ಶಬ್ದವನ್ನೂ ಪರಿಶೀಲಿಸಿರದಿದ್ದರೆ ಕಾನೂನಿನ ಮತ್ತು ವಿಧಾನದ ನಿಬಂಧನೆಗಳ ಪಾಲನೆ ಆಗಿಲ್ಲವೆಂದೇ ಹೇಳಬೇಕಾಗುತ್ತದೆ.

**ಶ್ರೀ ಹೆಚ್.ವಿ. ಕಾಮತ್** (ಕೇಂದ್ರೀಯ ಪ್ರಾಂತ್ಯ ಮತ್ತು ಬೀರಾರ್ : ಸಾಮಾನ್ಯ): ಸ್ಪೀಕರ್‌ರವರು, ಸೆಲೆಕ್ಟ್ ಕಮಿಟಿಯ ಸಕ್ಷಮತೆ ವಿಚಾರವನ್ನು ಈಗಲೇ ಇತ್ಯರ್ಥ ಮಾಡಬಾರದೇ?

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈ ವಿಚಾರದ ಬಗ್ಗೆ ನಾನೂ ಕೂಡ ಆಲೋಚನೆ ಮಾಡುತ್ತಿದ್ದೇನೆ.

ಕಷ್ಟಕರ ಎಂದು ನನಗೆ ಕಂಡುಬಂದ ಪಕ್ಷದಲ್ಲಿ ನನ್ನ ನೆರವಿಗೆ ಬರಲು ನಾನು ಮಾನ್ಯ ಸದಸ್ಯರಾದ ಶ್ರೀ ಕಾಮತ್‌ರನ್ನು ಕೇಳುತ್ತೇನೆ.

ಮುಂದಿನ ವಿಧಾನ ಯಾವುದೆಂಬುದನ್ನು ತಿಳಿದುಕೊಳ್ಳಲು ನನಗೂ ಕಾತರ ಇದೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ಎರಡೂ ಮಸೂದೆಗಳು ಇದ್ದವು. ಇನ್ನೊಂದು ಕರಡು ಪ್ರತಿಯನ್ನು ಕಲಮುಕಲಮೂ ಬಿಡದಂತೆ ಪರಿಶೀಲಿಸಲಾಗಿತ್ತು ಎಂದು ಭಾವಿಸಿಕೊಂಡರೆ, ಮುಂದೇನು? ಕಾನೂನು ಆಕ್ಷೇಪಣೆ ಏನು?

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ನನ್ನ ನಿಲುವನ್ನು ವಿವರಿಸಿ ಹೇಳಲು ನನಗೆ ಎರಡು ಮೂರು ನಿಮಿಷ ಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ಈ ವಿಷಯದಲ್ಲಿ ಇನ್ನೊಂದು ಅಂಶವೂ ಇದೆ. ಮೂಲ ಮಸೂದೆಯು ಕಲಮುಕಲಮನ್ನೂ, ಶಬ್ದಶಬ್ದವನ್ನೂ ಪರಿಶೀಲಿಸಬೇಕೆನ್ನುವುದು ಮೂಲತತ್ತ್ವವಾಗಿರುವಾಗ, ಮೂಲ ಮಸೂದೆಯನ್ನು, ನಂತರ ಹೊಸ ಕಲಮನ್ನು ನಂತರ ಅನುಸೂಚಿಯನ್ನು, ನಂತರ ಹೊಸ ಅನುಸೂಚಿಯನ್ನು ಪರಿಶೀಲಿಸುವ ಮೂಲಕ ಇಡೀ ಮಸೂದೆಯನ್ನು ಪರಿಶೀಲಿಸಬೇಕಾಗುತ್ತದೆ. ಪಾರ್ಲಿಮೆಂಟರಿ ಪ್ರಾಕ್ಟೀಸ್ ಇದನ್ನೇ ಹೇಳಿದೆ. ಪರಿಣಾಮ ಏನು? ಇದು ಮುಂದಿನ ಪ್ರಶ್ನೆ. ಮುಂದಿನ ಹಂತ ಯಾವುದು? ಇದೇ ತಮ್ಮ ಮುಂದಿರುವ ಪ್ರಶ್ನೆ. ಪದ್ಧತಿ ಮತ್ತು ಕಾನೂನಿನ ಸಾಮಾನ್ಯ ತತ್ತ್ವಗಳತ್ತ ಹಾಗೆಯೇ ಇದರಲ್ಲಿ ಒಳಗೊಂಡಿರುವ ನಿರ್ದಿಷ್ಟ ಅಂಶದತ್ತ ತಮ್ಮ ಗಮನ ಸೆಳೆಯಬಯಸುತ್ತೇನೆ. ಸಾಮಾನ್ಯ ಪದ್ಧತಿ ಬಗ್ಗೆ ರೂಲ್ ಆಫ್ ಲಾ ಸುಸ್ಪಷ್ಟವಾಗಿದೆ. ಕೆಲವೊಂದು ವಿಧಾನವನ್ನು ಅನುಸರಿಸಬೇಕೆಂದು ಯಾವುದೇ ಕಾನೂನು, ಯಾವುದೇ ಪದ್ಧತಿ ಅಥವಾ ಸಾಮಾನ್ಯ ತತ್ತ್ವ ಗೊತ್ತುಪಡಿಸಿದ್ದರೆ, ಆ ವಿಧಾನದ ಪಾಲನೆ ಆಗಿರದಿದ್ದರೆ, ಆಗುವ ತನಕ, ಆ ವಿಷಯವನ್ನು ಕ್ರಮಬದ್ಧವಾಗಿ ಮಾಡಲಾಗಿದೆಯೆಂದು ಪರಿಗಣಿಸುವ ಹಾಗಿಲ್ಲ. ಈ ತತ್ತ್ವ ಇದೆಯೆಂದು ಹೇಳುವುದಕ್ಕಾಗಿ, ನಾನು, ಪ್ರಿವಿ ಕೌನ್ಸಿಲ್‌ನ ಇನ್ನೊಂದು ತೀರ್ಪನ್ನು ಉದಾಹರಿಸುತ್ತೇನೆ. ಅದು ೧೯೩೬ ಪ್ರಿವಿ ಕೌನ್ಸಿಲ್ ಪುಟ ೨೫೩ರಲ್ಲಿದೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಮುಂದಿನ ಹಂತವು ನನಗೆ ಗೊತ್ತಾಗುತ್ತದೆ. ಮಾನ್ಯ ಸದಸ್ಯರ ವಾದವನ್ನು ನಾನು ಎಚ್ಚರಿಕೆಯಿಂದ ಆಲಿಸುತ್ತಿದ್ದೇನೆ. ಸೆಲೆಕ್ಟ್ ಕಮಿಟಿಯು ಇದನ್ನೋ ಅಥವಾ ಇನ್ನೊಂದನ್ನೋ ಪರಿಶೀಲಿಸಿಲ್ಲವೆಂದೇ ಭಾವಿಸಿಕೊಳ್ಳೋಣ. ಒಂದು ವೇಳೆ ಪರಿಶೀಲಿಸಿರದಿದ್ದರೆ, ಆ ಬಗ್ಗೆ ಹೇಳಲು ನನಗೆ ಅಧಿಕಾರ ಇಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಾರೇನು. ಅದಕ್ಕೆ ಸಂಬಂಧಿಸಿದಂತೆ ಸ್ಪೀಕರ್‌ರವರು ಈಗಾಗಲೇ ರೂಲಿಂಗ್ ಕೊಟ್ಟಿದ್ದಾರೆ. ಅವರು ಹೇಳಬಲ್ಲರಾದರೆ, ನಾನು ಕೇಳಲು ಸಿದ್ಧನಿದ್ದೇನೆ. ಆದರೆ, ನನ್ನ ಮಟ್ಟಿಗೆ ನಾನು ಅದನ್ನು ಎಚ್ಚರಿಕೆಯಿಂದ ಪರಿಶೀಲಿಸಿದ್ದೇನೆ, ಅದರಲ್ಲಿ ಆ ಅಂಶವೂ ಇದೆ. ಆದ್ದರಿಂದ, ಮಾನ್ಯ ಸದಸ್ಯರು ಇನ್ನೂ ಹೆಚ್ಚು ಸಮಯ ತೆಗೆದುಕೊಳ್ಳದೆ ಮಾತು ಮುಗಿಸಬೇಕು. ಈಗಾಗಲೇ ಸಾಕಷ್ಟು ಸಮಯ ತೆಗೆದುಕೊಂಡಿದ್ದೀರಿ. ಇತರ ಸದಸ್ಯರುಗಳು ಮಾತನಾಡಲು ಕಾಯುತ್ತಿದ್ದಾರೆ. ಮಾನ್ಯ ಸದಸ್ಯರುಗಳು ಆದಷ್ಟು ಬೇಗ ಈ ಅಂಶದ ಬಗ್ಗೆ ಮಾತು ಮುಗಿಸಬೇಕು, ಇನ್ನಾವುದೇ ಅಂಶದ ಬಗ್ಗೆ ಏನಾದರೂ ಹೇಳುವುದಿದ್ದರೆ, ಹೇಳಬೇಕು.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಸಭಾಧ್ಯಕ್ಷರ ಹಿಂದಿನ ರೂಲಿಂಗ್‌ನಲ್ಲಿ ಈ ಅಂಶದ ಪರಿಗಣನೆ ಆಗಿಲ್ಲ. ಪುನರ್‌ರಚಿತ ಪ್ರತಿಯ ಪರಿಶೀಲನೆ ಮಾತ್ರ ಆಗಿರುವುದರಿಂದ ಸೂಚನೆಯನ್ನು ಪ್ರಸ್ತಾವಿಸಲು ಅವಕಾಶ ಕೊಡುವಂತಿಲ್ಲವೆಂಬ ಒಂದೇ ಅಂಶವನ್ನು ಶ್ರೀ ನಸೀರುದ್ದಿನ್ ಅಹ್ಮದ್ ಹೇಳಿದ್ದರು. ಅದು ಸಾಧಾರಣ ಅಂಶ. ಕಲಮುಕಲಮನ್ನೂ ಪರಿಶೀಲಿಸಬೇಕೆಂದು ನಾನು ಹೇಳುತ್ತಿರುವ ವಿಚಾರದ ಬಗ್ಗೆ ಏನೂ ಚರ್ಚೆ ಆಗಿಲ್ಲ. ಒಂದು ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಟ್ಟಾದ ಮೇಲೆ, ಈ

ಮೂಲ ನಿಯಮವನ್ನು ಅನುಸರಿಸದಿದ್ದರೆ, ಬೇರೊಬ್ಬರು ಮಂತ್ರಿಯವರು, ಇನ್ನೊಂದು ಪುನರ್‌ರಚಿತ ಪ್ರತಿಯನ್ನು ಇಟ್ಟು, ಪರಿಶೀಲಿಸಿಕೊಂಡು ಬಿಟ್ಟರೆ, ಕಲಮುಕಲಮನ್ನೂ ಪರಿಶೀಲಿಸಬೇಕೆಂಬ ಈ ಮೂಲ ನಿಯಮದ ನಿಜವಾದ ಉದ್ದೇಶವೇ ವಿಫಲವಾಗುತ್ತದೆ. ಯಾರಿಗೂ ಕೂಡ, ಮಸೂದೆಯಲ್ಲಿ ಯಾವುದೇ ಬದಲಾವಣೆ ಮಾಡಲು ಹಕ್ಕಿಲ್ಲ ಎನ್ನುವುದಕ್ಕೆ ಇದೇ ಸಾಕಷ್ಟು ಆಧಾರ. ಇದರ ಸಮರ್ಥನೆಗೆ, ಸರ್, ನಾನು ಕಾಮನ್ಸ್‌ನ ಸ್ಪೀಕರ್‌ರವರ ರೂಲಿಂಗನ್ನು ಹೇಳುತ್ತೇನೆ (ಹ್ಯಾನ್ಸರ್ಡ ಸಂಪುಟ ೨೧೫, ಪುಟ ೩೦೧) ಕಮಿಟಿಯು ಕಲಮುಕಲಮನ್ನೂ ಪರಿಶೀಲಿಸುವುದು ಅಗತ್ಯವೆಂಬುದನ್ನು ತಾವು ಒಪ್ಪಿದರೆ, ಮಸೂದೆಯನ್ನು ಅದೇ ಸೆಲೆಕ್ಟ್ ಕಮಿಟಿಗೆ ವಾಪಸು ಮಾಡಲೇಬೇಕಾಗುತ್ತದೆಂಬ ನಿಲುವು ನಿಚ್ಚಳವಾಗಿರುತ್ತದೆ. ಸೆಲೆಕ್ಟ್ ಕಮಿಟಿಯು ಎರಡು ಗಂಟೆಗಳಷ್ಟೇ ನೋಡಲಿ ಸಾಕು– ವರದಿಯು ಈ ಅಧಿವೇಶನದಲ್ಲೇ ಬರಬೇಕೆಂದೇನಿಲ್ಲ – ಅವರು ಎರಡು ಗಂಟೆಗಳನ್ನು ಮೀಸಲಿಟ್ಟು ಮೂಲ ಮಸೂದೆಯನ್ನು, ಒಂದೂ ಕಲಮೂ ಬಿಡದಂತೆ ಪರಿಶೀಲಿಸಲಿ. ನಂತರ ನಾವದನ್ನು ಪರಿಶೀಲಿಸೋಣ. ಈ ಅಂಶವನ್ನು ಸ್ಪೀಕರ್‌ರವರು ಪರಿಗಣಿಸಿಯೇ ಇಲ್ಲ. ದಯಮಾಡಿ, ತಾವು ಈ ಅಂಶವನ್ನು ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಈ ಅಂಶದ ಮೇಲೆ ಹೆಚ್ಚು ಸಮಯ ತೆಗೆದುಕೊಳ್ಳಬಾರದೆಂದು ತಾವು ನನಗೆ ಹೇಳಿದ್ದೀರಿ, ಆಯ್ತು, ಈಗ ಇತರ ವಿಚಾರಗಳ ಬಗ್ಗೆ ಮಾತನಾಡುತ್ತೇನೆ. ಇದರ ಪರಿಣಾಮ ಏನು ಎಂಬುದೇ ಮುಂದಿನ ವಿಚಾರ. ನಾನು ಈಗಾಗಲೇ ಹೇಳಿದಂತೆ, ನಾವು ನಿಯಮಗಳಿಗೆ ಬದ್ಧರಾಗಿರಬೇಕು ಎನ್ನುವುದು ಒಂದು ನಿಬಂಧನೆ. ಈ ಬಗೆಯ ವಿಷಯದಲ್ಲಿ ಈ ನಿಯಮಗಳೇ ಮೂಲ ನಿಯಮಗಳು. ಇವುಗಳನ್ನು ಕಡೆಗಣಿಸುವಂತಿಲ್ಲ. ಹಾಗಾದಾಗ, ಅದರ ನಿಜವಾದ ಪರಿಣಾಮ ಏನು? ನಾನದನ್ನೇ ಹೇಳುತ್ತಿದ್ದೇನೆ. ಮೂಲ ಮಸೂದೆಯ ಕಲಮುಗಳ ಮತ್ತು ಸೆಲೆಕ್ಟ್ ಕಮಿಟಿಯಿಂದ ಬಂದಿರುವ ಮಸೂದೆಯ ನಡುವೆ ಇರುವ ವ್ಯತ್ಯಾಸಗಳು ಅಥವಾ ಲೋಪದೋಷಗಳು ವಿಧಾನಕ್ಕೆ ಸಂಬಂಧಿಸಿದ ವಿಷಯಗಳಿಗಷ್ಟೇ ಅಲ್ಲ ತುಂಬಾ ಪ್ರಾಮುಖ್ಯದ ವಿಷಯಗಳಿಗೂ ಸಂಬಂಧಪಡುತ್ತವೆ. ಭಕ್ಷಿ ತೇಕ್‌ಚಂದ್, ಪಂಡಿತ ಬಾಲಕೃಷ್ಣ ಶರ್ಮಾರು ಕೊಟ್ಟಿರುವ ಅಸಮ್ಮತಿಸೂಚಕ ಟಿಪ್ಪಣಿಯಲ್ಲಿ, ವಾಸ್ತವವಾಗಿ, ಈ ಪುನರ್‌ರಚಿತ ಕರಡು ಮಸೂದೆಯಲ್ಲಿ ತುಂಬಾ ಆಮೂಲಾಗ್ರ ಬದಲಾವಣೆಗಳನ್ನು ಮಾಡಲಾಗಿದೆಯೆಂದು ಹೇಳಲಾಗಿದೆ. ಅವರು ಬದಲಾವಣೆಗಳನ್ನೂ ಉದಾಹರಿಸಿದ್ದಾರೆ. ಎಲ್ಲ ಮುಖ್ಯ ಬದಲಾವಣೆಗಳ ಬಗ್ಗೆ ಅವರುಗಳು ತಮ್ಮ ಟಿಪ್ಪಣಿಯಲ್ಲಿ ಹೇಳಿದ್ದಾರೆಂದು ನನಗೆ ಅನ್ನಿಸುವುದಿಲ್ಲ. ಆ ದೃಷ್ಟಿಯಿಂದ ತಾವು ಇದನ್ನು ಪರಿಶೀಲಿಸಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ನಾನು ಮಾತನಾಡಲು ಪ್ರಾರಂಭಿಸಿದಾಗ, ಪುನರ್ ರಚಿತ ಮಸೂದೆಯನ್ನು ಪರಿಶೀಲಿಸಿದ ನಂತರ, ಸೆಲೆಕ್ಟ್ ಕಮಿಟಿಯಿಂದ ಬಂದ ಈ ಮಸೂದೆಯಲ್ಲಿ ಅನೇಕ ಬದಲಾವಣೆಗಳನ್ನು ಮಾಡಲಾಗಿದೆ. ಅವುಗಳು, ಪದ್ಧತಿಗಳನ್ನು ಖಂಡಿತವಾಗಿಯೂ ಹಾಳುಮಾಡುವಂಥವು, ಅವು ನಮ್ಮ ಪಂಜಾಬಿನಲ್ಲಿ ಪ್ರಚಲಿತದಲ್ಲಿ ಇಲ್ಲ ಎಂದು ನಾನು ತಮ್ಮ ಗಮನ ಸೆಳೆದಿದ್ದೆ. ವಾರಸುದಾರನ ನಿಯೋಜನೆ ಪದ್ಧತಿ ಕುರಿತಂತೆ ತಾವು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ವಾರಸುದಾರನ ನಿಯೋಜನೆ ಬಗ್ಗೆ ಸನ್ಮಾನ್ಯ ಡಾ. ಅಂಬೇಡ್ಕರ್‌ರವರ ಅಭಿಪ್ರಾಯಗಳು ನಮಗೆ ಗೊತ್ತಿವೆ. ವಾರಸುದಾರರನ್ನು ದತ್ತು ತೆಗೆದುಕೊಳ್ಳುವುದು ಒಂದು ಕೃತ್ರಿಮ ವ್ಯವಹಾರವೆಂಬುದು ತನ್ನ ಅಭಿಪ್ರಾಯವೆಂದು ಅವರೇ ಹೇಳಿದ್ದಾರೆ. ನನಗೂ ಹಾಗೆಂದೇ ಕಾಣುತ್ತದೆ. ಸೆಲೆಕ್ಟ್ ಕಮಿಟಿಗೆ ಮಸೂದೆಯನ್ನು ಕಳುಹಿಸಿದ್ದಾಗ ಶ್ರೀಮತಿ ಹನ್ಸಾ ಮೆಹತಾರವರು ಆಡಿದ ಮಾತುಗಳು ನಮ್ಮ ನೆನಪಿನಲ್ಲಿವೆ. ಅವರೂ ಕೂಡ ಕೆಲವೊಂದು ಟೀಕೆ ಮಾಡಿದ್ದಾರೆ. ಈ ಮಸೂದೆ ಪ್ರಕಾರ, ಯಾವ ವ್ಯಕ್ತಿಯೂ, ಡಿಬೇಟ್ ವಿಧದ ಹೊರತು, ಯಾವುದೇ

ವಿಧದಲ್ಲಿ ವಾರಸುದಾರನನ್ನು ದತ್ತು ತೆಗೆದುಕೊಳ್ಳುವ ಹಾಗಿಲ್ಲ. ಆದರೆ, ಮೂಲ ಮಸೂದೆಯಲ್ಲಿ ಕೃತ್ರಿಮ ಮತ್ತು ಗೋದಾ ವಿಧಗಳಿಗೆ ಅವಕಾಶ ಇತ್ತು. ದತ್ತು ಬಗ್ಗೆ ಹೇಳುವುದಾದರೆ, ಮಗ ಎಂದು ದತ್ತು ತೆಗೆದುಕೊಳ್ಳುವುದು ಬರಿಯ ಕಲ್ಪನೆ. ದತ್ತು ಮಗ ನಿಜವಾದ ಮಗನಾಗುತ್ತಾನೆಯೇ? ಆದರೂ, ಹಿಂದೂ ಕಾನೂನು ಅದಕ್ಕೆ ಅವಕಾಶ ಕೊಟ್ಟಿದೆ. ಅದರಲ್ಲಿ ನಂಬಿಕೆ ಉಳ್ಳವರ ಬಗ್ಗೆ ನನ್ನ ತಕರಾರು ಏನೂ ಇಲ್ಲ. ಆಸ್ತಿಗೆ ವಾರಸುದಾರರನ್ನು ನಿಯೋಜಿಸುವ ವಿಷಯದಲ್ಲಿ, ರೋಮನ್ನರು ನೋಮಿನಿಸ್ ಹೆರಿಡಿಷಿಯೊ ವಿಧಾನದ ಮೂಲಕ ಮಾಡುತ್ತಿದ್ದಂತೆ, ಪಂಜಾಬಿನ ಜನರಲ್ಲೂ ಅದೇ ಪದ್ಧತಿಗಳು ಇದ್ದರೆ, ಅವುಗಳನ್ನು ಬದಲಿಸುವುದಕ್ಕೆ ಯಾರಿಗೂ ಅಧಿಕಾರ ಇಲ್ಲ. ನಮ್ಮ ಪದ್ಧತಿಗಳ ಪ್ರಕಾರ, ವಾರಸುದಾರನ ನಿಯೋಜನೆ ವಿಷಯದಲ್ಲಿ, ಅದು ದತ್ತು ವಿಧಾನದಂತೆ ಕಂಡರೂ, ಧಾರ್ಮಿಕ ಪ್ರಭಾವ ಇರುವುದಿಲ್ಲ. ವಿಶೇಷ ಸಮಾರಂಭಗಳು ನಡೆಯುವುದಿಲ್ಲ. ವಯಸ್ಸಿನ ನಿರ್ಬಂಧ ಇಲ್ಲ. ದತ್ತು ಮಗ, ದತ್ತು ತೆಗೆದುಕೊಂಡ ಕುಟುಂಬದಲ್ಲಿ ಇರುವುದಿಲ್ಲ. ಅವನು ಅವನದೇ ಕುಟುಂಬದಲ್ಲಿ ಇರುತ್ತಾನೆ. ಈ ಅಂಶದ ಮೇಲೆ ಹಲವಾರು ನಿಯಮಗಳಿವೆ. ಪಂಜಾಬ್ ಹೈಕೋರ್ಟು ನೂರಾರು ತೀರ್ಪುಗಳನ್ನು ಕೊಟ್ಟಿದೆ. ಈ ಪದ್ಧತಿಗಳು ಜನರ ಮನಸ್ಸಿನಲ್ಲಿ ತುಂಬಾ ಗಟ್ಟಿಯಾಗಿ ನಿಂತುಬಿಟ್ಟಿವೆ. ನೀವು ಈ ಸಂಹಿತೆಯಲ್ಲಿ ಅದಕ್ಕೆ ಅವಕಾಶ ಕಲ್ಪಿಸದಿದ್ದರೆ, ನೀವು ಕೊನೇಪಕ್ಷ ಒಂದು ಕೋಟಿ ಜನರ ಸಂಪ್ರದಾಯವನ್ನು ಹಾಳು ಮಾಡುತ್ತಿದ್ದೀರೆಂದು ಹೇಳಬೇಕಾಗುತ್ತದೆ. ಹಿಂದೂ ಸಂಹಿತೆ ಪ್ರಕಾರ ಇತರ ಯಾವುದೇ ಬಗೆಯ ದತ್ತು ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲ. ಅದೇ ಕಲಮು ಇದರಲ್ಲಿದೆ. ಅದೇನೂ ಅಂಥ ಸುಧಾರಣೆಯೇನಲ್ಲ. ಈ ಸಂಪ್ರದಾಯದ ಬಗ್ಗೆ ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ, ಇದರಲ್ಲಿ ಮಾನ್ಯ ಮಾಡಿರುವುದನ್ನು ಬಿಟ್ಟರೆ ಅದನ್ನು ತೆಗೆದುಹಾಕಲಾಗಿದೆ. ಸೆಲೆಕ್ಟ್ ಕಮಿಟಿಗೆ ಸೂಚನೆಯನ್ನು ಉಲ್ಲೇಖ ಮಾಡಿದ ಸಮಯದಲ್ಲಿ ಅವರೇ ಮಾಡಿದ್ದ ಭಾಷಣವನ್ನು ನಾನು ಓದಿದಾಗ, ಅವರ ಧೋರಣೆ ಸಮಂಜಸವಾದುದಾಗಿತ್ತು. ಅವರು ಕೆಲವೊಂದು ಮಾತುಗಳನ್ನಾಡಿದ್ದರು, ಅವು ಈ ಮಸೂದೆಯ ಕಲಮುಗಳಿಗೆ ತೀರಾ ವಿರುದ್ಧವಾದವುಗಳಾಗಿದ್ದವು ಎಂಬುದು ನನಗೆ ಕಂಡುಬಂತು. ಸರ್, ಈ ಕಾನೂನು ಇಲಾಖೆಯ ಕಮಿಟಿಯಲ್ಲಿ ಅವರೂ ಇದ್ದರೇ ಎನ್ನುವ ಬಗ್ಗೆಯೇ ನನಗೆ ಸಂಶಯ ಬರುತ್ತದೆ. ಈ ಮಸೂದೆಯನ್ನು ತಿರುಚಿದ ವ್ಯಕ್ತಿಗಳು ಯಾರು ಎಂಬುದು ನನಗೆ ಗೊತ್ತಾಗುತ್ತಿಲ್ಲ. ಆ ಕಮಿಟಿಯಲ್ಲಿ ಡಾ. ಅಂಬೇಡ್ಕರ್‌ರವರು ಇಲ್ಲವೇ ಇಲ್ಲವೆಂಬ– ಅದು ನನಗೆ ಗೊತ್ತಿಲ್ಲ – ಬಲವಾದ ಅನುಮಾನ ನನಗಿದೆಯೆಂದು ನಾನು ಖಂಡಿತವಾಗಿಯೂ ಹೇಳುತ್ತಿದ್ದೇನೆ. ಏಕೆಂದರೆ, ಶೇ. ೯೦ರಷ್ಟು ಜನರ ಸಂಪ್ರದಾಯಗಳಿಗೆ ಬಾಧಕ ಆಗಬಾರದೆಂಬುದು–ನನಗೆ ಆ ಅಪೇಕ್ಷೆ ಇರುವಂತೆಯೇ – ಅವರ ಅಪೇಕ್ಷೆ ಆಗಿತ್ತು. ಒಂದೋ ಕಮಿಟಿಯಲ್ಲಿ ಅವರು ಇಲ್ಲವೇ ಇಲ್ಲ – ಇಲ್ಲದಿರುವುದರಿಂದ ಅವರು ಅದನ್ನು ಪರಿಶೀಲಿಸಿಲ್ಲ – ಅಥವಾ ಸೆಲೆಕ್ಟ್ ಕಮಿಟಿಯ ಸದಸ್ಯರಲ್ಲದ ಬೇರೆಯವರು ಕಮಿಟಿಯಲ್ಲಿದ್ದರು. ಅವರುಗಳು ಮಸೂದೆಯ ಸ್ವರೂಪವನ್ನು ಸಂಪೂರ್ಣವಾಗಿ ಬದಲಾಯಿಸಿದ್ದಾರೆ. ಬದಲಾವಣೆ ಮಾಡುವ ಅಧಿಕಾರ ಅವರಿಗಿರಲಿಲ್ಲ; ಅಂದ ಮೇಲೆ, ಬೇರೆ ಮಸೂದೆಯ ಪರಿಶೀಲನೆ ಆಗಿದೆ. ಹೀಗಾಗಿ, ಮೂಲ ಮಸೂದೆ ಅದರ ಮುಂದಿತ್ತು, ಅದನ್ನು ಪರಿಶೀಲಿಸಲಾಗಿದೆಯೆನ್ನುವುದು ಒಂದು ಕಲ್ಪನೆ. ಸರ್, ನಡವಳಿಯ (೯ ಏಪ್ರಿಲ್ ೧೯೪೮) ೩೬೫೭ನೆಯ ಪುಟಕ್ಕೆ ತಮ್ಮ ಗಮನ ಸೆಳೆಯಬಯಸುತ್ತೇನೆ. ಅದರಲ್ಲಿ ಡಾ. ಅಂಬೇಡ್ಕರ್ ಏನು ಹೇಳಿದ್ದಾರೆಂದರೆ :

"ಮಸೂದೆಯು, ಸಾಂಪ್ರದಾಯಿಕ ಪದ್ಧತಿಯನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ ಎನ್ನುವುದು ಅವರ ಎರಡನೇ ಟೀಕೆ. ಪ್ರೀವಿ ಕೌನ್ಸಿಲ್‌ನ ರೂಲಿಂಗನ್ನು ಅವರು ಉದಾಹರಿಸಿದ್ದಾರೆ. ಈ ದಿನ ಈ ಸಮಯದಲ್ಲಿ ಪ್ರೀವಿ ಕೌನ್ಸಿಲ್‌ನ

ತೀರ್ಪನ್ನು ಉದಾಹರಿಸುವ ಅಗತ್ಯವಿರಲಿಲ್ಲವೆಂದು ನಾನು ಭಾವಿಸಬೇಕಾಗಿತ್ತು. ಏಕೆಂದರೆ, ಹಲವಾರು ತೀರ್ಪುಗಳಲ್ಲಿ, ಹಿಂದೂಗಳ ಮಟ್ಟಿಗೆ ಸಂಪ್ರದಾಯದ ಸ್ಮೃತಿಗಳಲ್ಲಿ ಹೇಳಿರುವವುಗಳಿಗಿಂತ ಮೇಲುಗೈ ಆಗಿರುತ್ತದೆಂಬುದು ಸುಸ್ಥಾಪಿತವಾಗಿದೆ. ನಮ್ಮೆಲ್ಲರಿಗೂ ಇದು ಗೊತ್ತಿದೆ. ಆದರೆ, ನಾವೇನು ಮಾಡುತ್ತಿದ್ದೇವೆ? ನಾವೇನು ಮಾಡುತ್ತಿದ್ದೇವೆಂದರೆ, ಹೊಸ ಸಂಪ್ರದಾಯಗಳು ಬೆಳೆಯಲು ಅವಕಾಶ ಕೊಡುತ್ತಿಲ್ಲ. ನಾವು ಈಗಿರುವ ಸಂಪ್ರದಾಯಗಳನ್ನು ಹಾಳುಮಾಡುತ್ತಿಲ್ಲ. ನಾವು ಈಗಿರುವ ಸಂಪ್ರದಾಯಗಳನ್ನು ಮಾನ್ಯ ಮಾಡುತ್ತಿದ್ದೇವೆ. ಏಕೆಂದರೆ, ಹಿಂದೂ ಸಮಾಜದಲ್ಲಿ ಪ್ರಸ್ತುತ ಇರುವ ನಿಯಮಗಳು ಮತ್ತು ಪದ್ಧತಿಗಳು, ಸಂಪ್ರದಾಯಗಳ ಫಲ, ಸಂಪ್ರದಾಯಗಳಿಂದ ಅವು ಬೆಳೆದು ಬಂದಿವೆ. ಅವು ಈಗ ಎಷ್ಟೊಂದು ಬಲವಾಗಿ ಬೆಳೆದಿವೆಯೆಂದರೆ, ನಾವು, ಜನಾಂಗಕ್ಕೋಸ್ಕರ ಒಂದೇ ಒಂದು ಶಾಸನ ರಚನೆಯಿಂದ ಅವುಗಳಿಗೆ ಜೀವ ತುಂಬಬೇಕೆಂಬುದು ನಮ್ಮ ಭಾವನೆ."

ಡಾ. ಅಂಬೇಡ್ಕರ್‌ರವರು, ಸೃಜಿತ ರೋಹಿಣಿ ಕುಮಾರ್‌ರವರ ಭಾಷಣವನ್ನು ಉಲ್ಲೇಖಿಸುತ್ತ ಹೀಗೆ ಹೇಳಿದ್ದಾರೆ :

"ಬಹುಮಟ್ಟಿಗೆ, ಗುಡ್ಡಗಾಡು ಜನರ ಬದುಕು ಸಾಂಪ್ರದಾಯಿಕ ಪದ್ಧತಿಗೆ ಒಳಪಟ್ಟಿರುವ ವಿಚಾರವನ್ನು ತಾವು ಪರಿಗಣನೆಗೆ ತೆಗೆದುಕೊಂಡಿಲ್ಲವೆಂದು ಅವರು ಹೇಳಿದ್ದಾರೆ. ಯಾರು ಹಿಂದೂ, ಯಾರು ಹಿಂದೂ ಅಲ್ಲ. ಈ ಸಂಹಿತೆಯು ಯಾರಿಗೆ ಅನ್ವಯವಾಗುತ್ತೆಂಬ ಬಗ್ಗೆ ನನ್ನ ಗೆಳೆಯ ಈ ಸಂಹಿತೆಯ ಅರ್ಥ ವಿವರಣೆ ಭಾಗವನ್ನು ಓದಿದ್ದಿದ್ದರೆ, ಅವರಿಗೆ, ಯಾರು ಮುಸ್ಲಿಮರಲ್ಲವೋ ಪಾರ್ಸಿಗಳಲ್ಲವೋ ಅಥವಾ ಕ್ರಿಶ್ಚಿಯನ್ನರಲ್ಲವೋ, ಅಂತಹ ವ್ಯಕ್ತಿಗಳನ್ನು ಹಿಂದೂಗಳೆಂದು ಪರಿಭಾವಿಸಲಾಗುತ್ತದೆಂದು ಹೇಳಿರುವ ಒಂದು ಕಲಮು ಅದರಲ್ಲಿ ಇರುವುದು ತಿಳಿಯುತ್ತಿತ್ತು. ಗುಡ್ಡಗಾಡಿನ ವ್ಯಕ್ತಿಯು, ತಾನು ಹಿಂದೂ ಅಲ್ಲ ಎಂದು ಹೇಳಬಯಸಿದರೆ, ತಾನು ಹಿಂದೂ ಅಲ್ಲ ಎನ್ನುವ ತನ್ನ ಹೇಳಿಕೆಗೆ ಸಮರ್ಥನೆಯಾಗಿ ಈ ಸಂಹಿತೆಯಲ್ಲಿ ಹೇಳಿರುವಂತೆ ಪುರಾವೆ ಒದಗಿಸುವುದಕ್ಕೆ ಅವನಿಗೆ ಸಂಪೂರ್ಣ ಅವಕಾಶ ಇರುತ್ತದೆ. ನ್ಯಾಯಾಲಯವು ಅವನ ಪುರಾವೆಯನ್ನು ಒಪ್ಪಿಕೊಂಡರೆ ಅವನು ಈ ಸಂಹಿತೆಯಲ್ಲಿ ಹೇಳಿರುವ ಯಾವುದಕ್ಕೂ ಬದ್ಧನಾಗಿರಬೇಕಾಗಿಲ್ಲ ಎಂಬುದು ಅದರ ತಾತ್ಪರ್ಯ;"

ಅಂದಮೇಲೆ, ನನ್ನ ಪದ್ಧತಿಗಳು ಒಳ್ಳೆಯವು ಎಂದು ನಾನು ಒಪ್ಪಿಕೊಂಡರೆ, ಆ ನನ್ನ ಸಂಪ್ರದಾಯಗಳಿಗೆ ಅನುಗುಣವಾಗಿ ನಾನು ನನ್ನ ವಾರಸುದಾರರನ್ನು ನಿಯಮಿಸಿಕೊಂಡರೆ ಡಾ. ಅಂಬೇಡ್ಕರ್‌ರವರ ಪ್ರಕಾರ ನಾನು ಹಿಂದೂ ಅಲ್ಲ ಎಂದಂತಾಯಿತು. ಇದೇ ನನ್ನ ಸಮಸ್ಯೆ, ಒಂದೋ, ನೀವು ಮಸೂದೆಯಲ್ಲಿ ಈ ಒಂದು ಕೋಟಿ ಜನರಿಗೆ ಅವಕಾಶ ಕಲ್ಪಿಸಲೇಬೇಕು ಮತ್ತು ಅವರ ಸಂಪ್ರದಾಯಗಳನ್ನು ಮಾನ್ಯ ಮಾಡಲೇಬೇಕು.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** (ಕಾನೂನು ಮಂತ್ರಿಗಳು) : ನನ್ನ ಗೆಳೆಯ ಮಾತನಾಡುತ್ತಿರುವಾಗ, ಮಧ್ಯೆ ಮಾತನಾಡುವ ಅಪೇಕ್ಷೆ ನನಗಿಲ್ಲ. ಆದರೂ, ನನ್ನ ಭಾಷಣದ ಆ ಭಾಗಕ್ಕೆ ಅವರು ಮಾಡಿರುವ ವ್ಯಾಖ್ಯಾನವನ್ನು ನಾನು ಒಪ್ಪಿಕೊಳ್ಳುವುದಿಲ್ಲವೆಂದು ಹೇಳಲೇಬೇಕಾಗಿದೆ. ಅದು ಬೇರೊಂದು ವಿಷಯಕ್ಕೆ ಸಂಬಂಧಿಸಿದೆ.

**ಪಂಡಿತ ಠಾಕೂರದಾಸ್ ಭಾರ್ಗವ** : ನನ್ನ ತಪ್ಪನ್ನು ತೋರಿಸಿ ಕೊಟ್ಟಿದ್ದಕ್ಕೆ ಧನ್ಯವಾದಗಳು. ಒಂದು ಕೋಟಿ ಜನರು ಹಿಂದೂ ಕಾನೂನಿನ ಪರಿಧಿಯಿಂದ ಹೊರಹೋಗಬಾರದೆಂದು ಡಾ. ಅಂಬೇಡ್ಕರ್‌ರವರು ಭಾವಿಸಿರುವುದು ನನಗೆ ಸಮಾಧಾನ ತಂದಿದೆ. ಈ ಸಂಪ್ರದಾಯ ಒಳ್ಳೆಯದೆಂದಾದರೆ– ಈ ಸಂಹಿತೆಯಲ್ಲೇ ಅರ್ಥ ವಿವರಣೆ ಭಾಗದಲ್ಲಿ ಸಂಪ್ರದಾಯವು ಪ್ರಾಚೀನವಾದುದು, ಸಮಂಜಸವಾದುದು ಮತ್ತು ಸಾರ್ವಜನಿಕ ನೀತಿಗೆ ಅಥವಾ ನೈತಿಕತೆಗೆ ವ್ಯತಿರಿಕ್ತವಾದುದಲ್ಲ ಎಂದು ಹೇಳಿರುವಾಗ ನಾನು ಕೂಡ ಅದು ಒಳ್ಳೆಯದೆಂದೇ ಹೇಳುತ್ತೇನೆ– ಈ ಸಂಪ್ರದಾಯವನ್ನು ಸಂಹಿತೆಯು ಮಾನ್ಯ ಮಾಡಬೇಕಿತ್ತೆಂದು

ಹೇಳುತ್ತಿದ್ದೇನೆ. ಆದರೆ, ಈ ಸಂಪ್ರದಾಯವನ್ನು ಮಾನ್ಯ ಮಾಡಿಲ್ಲ. ಸ್ವಲ್ಪಮಟ್ಟಿಗೆ ಕೃತ್ರಿಮ ವಿಧವನ್ನು ಒಂದು ಒಳ್ಳೆಯ ವಿಧವೆಂದು ಮೂಲ ಮಸೂದೆಯಲ್ಲಿ ಸೇರಿಸಲಾಗಿತ್ತು. ಆದರೆ, ಪ್ರಸ್ತುತ ಮಸೂದೆಯು, ಈ ವಿಧದ ದತ್ತು ಹೊರತು ಬೇರಾವುದೇ ದತ್ತನ್ನೂ ಮಾನ್ಯ ಮಾಡುವುದಿಲ್ಲವೆಂದು ಹೇಳುತ್ತದೆ. ಡಾ. ಅಂಬೇಡ್ಕರ್‌ರವರ ಪ್ರಕಾರ, ಇದು ಕೆಲವೊಂದು ನಿಯಮಗಳಿಗೆ ಒಳಪಡುತ್ತದೆ. ಯಾವುವು ಆ ನಿಯಮಗಳು? ಅವನ ವಯಸ್ಸು ೧೫ವರ್ಷಕ್ಕಿಂತ ಹೆಚ್ಚಾಗಿರಕೂಡದು. ಬೇರೊಬ್ಬರು ಅವನನ್ನು ದತ್ತು ಕೊಟ್ಟಿರಬೇಕು. ಅವನಿಗೆ ಮದುವೆ ಆಗಿರಬಾರದು. ಈಗಿನ ದತ್ತು ಕಾನೂನಿನ ಪ್ರಕಾರ ಕೂಡ ಈ ನಿಯಮಗಳಿಲ್ಲ. ಒಂದು ವೇಳೆ, ಹಿಂದೂ ಮಗಳು, ಅಳಿಯ ಸತ್ತರೆ ಮಗಳ ಮಗನನ್ನು ದತ್ತು ತೆಗೆದುಕೊಳ್ಳುವಂತಿಲ್ಲ. ಸಹೋದರಿಯ ಮಗನನ್ನು ದತ್ತು ತೆಗೆದುಕೊಳ್ಳುವಂತಿಲ್ಲ, ತಂದೆ ತಾಯಿ ಇಲ್ಲದೆ ಸೋದರಳಿಯನನ್ನೂ ಕೂಡ ದತ್ತು ತೆಗೆದುಕೊಳ್ಳುವಂತಿಲ್ಲ. ಮದುವೆ ಆಗಿರುವ ವ್ಯಕ್ತಿಯನ್ನು ದತ್ತು ತೆಗೆದುಕೊಳ್ಳುವಂತಿಲ್ಲ ಎಂಬ ನಿಯಮ ಇಂದೂ ಕೂಡ ಆಚರಣೆಯಲ್ಲಿಲ್ಲ, ಕಾನೂನಿನಲ್ಲಿ ಇಲ್ಲವೆಂಬುದು ಸಾಮಾನ್ಯ ಪರಿಜ್ಞಾನ. ಒಬ್ಬ ವ್ಯಕ್ತಿಗೆ, ಅವನನ್ನು ದತ್ತು ತೆಗೆದುಕೊಳ್ಳುವ ಹಾಗೆ ಈ ಎಲ್ಲ ವಿಧಾನಗಳನ್ನು ಬದಲಾಯಿಸಲಾಗಿದೆ. ಅವು ಪ್ರಯೋಜನಕಾರಿಯಲ್ಲ. ಅಥವಾ ಅವು ನಮಗೆ ಅನ್ವಯವಾಗುವಂತಿಲ್ಲ.

ನಮಗೆ ಸಿವಿಲ್ ಸಂಹಿತೆ ಬೇಕೆಂದು ನಾವು ರಾಜ್ಯಾಂಗ ಸಭೆಯಲ್ಲಿ ಒಪ್ಪಿಕೊಂಡಿದ್ದೇವೆ. ಇದೇ ಹಿಂದೂ ಸಂಹಿತೆ ಅಲ್ಲದಿದ್ದರೂ ಮತ್ತು ಸಿವಿಲ್ ಸಂಹಿತೆಯನ್ನು ರಚಿಸುವ ಹೊಣೆಯನ್ನು ಡಾ. ಅಂಬೇಡ್ಕರ್‌ರವರಿಗೆ ವಹಿಸಿದರೂ (ರಾಜ್ಯಾಂಗವನ್ನು ಅಂಗೀಕರಿಸಿದ ನಂತರ ಆ ಹೊಣೆಯನ್ನು ಅವರಿಗೇ ವಹಿಸಲಾಗುತ್ತದೆಂದು ನನ್ನ ಭಾವನೆ) ಅವರು, ಜನರ ಈ ಪದ್ಧತಿಯನ್ನು–ವಾರಸುದಾರನ ನಾಮಕರಣ– ಸಿವಿಲ್ ಸಂಹಿತೆಯಲ್ಲೂ ಖಂಡಿತವಾಗಿಯೂ ಸೇರಿಸುತ್ತಾರೆ. ಯಾರು, ವಾರಸುದಾರನನ್ನು ನಿಯಮಿಸಿಕೊಳ್ಳುತ್ತಾರೋ ಅವರಿಗೆ, ಅವನು ಅವರ ವೃದ್ಧಾಪ್ಯದಲ್ಲಿ ನೆರವಾಗುತ್ತಾನೆ. ವಾಸ್ತವವಾಗಿ, ಪುನರ್‌ರಚಿತ ಮಸೂದೆಯು ಮೂಲ ಮಸೂದೆಗಿಂತಲೂ ಕೆಟ್ಟದಾಗಿದೆ. ಮೂಲ ಮಸೂದೆಗೆ ಸಂಪೂರ್ಣ ಗಮನ ಕೊಟ್ಟಿಲ್ಲ ಎಂಬುದಕ್ಕೆ ಈ ಒಂದೇ ಅಂಶ ಸಾಕು ಎಂದು ಹೇಳುತ್ತಿದ್ದೇನೆ. ಸಂಪೂರ್ಣ ಗಮನ ಕೊಟ್ಟಿದ್ದಿದ್ದರೆ, ಈ ವಿಚಾರವೂ ಪರಿಗಣನೆಗೆ ಬರುತ್ತಿತ್ತು. ಅದರ ಕಲಮು ಕಲಮನ್ನೂ ಪರಿಶೀಲಿಸಿದ್ದಿದ್ದರೆ, ನೀವು ಈ ತೀರ್ಮಾನಕ್ಕೆ ಬರುತ್ತಿರಲಿಲ್ಲ.

**ಸನ್ಮಾನ್ಯ ಡಾ. ಬಿ. ಆರ್. ಅಂಬೇಡ್ಕರ್ :** ಮಸೂದೆಯ ಈ ಭಾಗವನ್ನು, ನನಗೆ ತಿಳಿದಮಟ್ಟಿಗೆ, ತೀವ್ರವಾಗಿಯೇ ಪರಿಶೀಲಿಸಲಾಗಿದೆ.

**ಪಂಡಿತ ಠಾಕೂರ್‌ದಾಸ್ ಭಾರ್ಗವ** : ತುಂಬಾ ಸಂತೋಷ. ಸರ್, ಮೂಲ ಮಸೂದೆಯನ್ನು ಪರಿಶೀಲಿಸಲಾಗಿದೆ ಎಂದಂತಾಯಿತು. ಅಂದಮೇಲೆ ಮಸೂದೆಯನ್ನು ಒಂದು ಕಲಮು ಬಿಡದಂತೆ ಪರಿಶೀಲಿಸಿಲ್ಲವೆನ್ನುವ ಒಂದೇ ಒಂದು ತಾಂತ್ರಿಕ ಅಂಶ ಉಳಿದಿದೆ. ಒಂದು ವೇಳೆ, ಕೆಲವು ಕಲಮುಗಳನ್ನು ಬಿಟ್ಟುಬಿಟ್ಟಿದ್ದರೆ, ಪರಿಣಾಮ ಏನು? ಆ ಕಲಮುಗಳನ್ನು ಹೇಗೆ ಪರಿಶೀಲಿಸಲಾಗಿತ್ತು? ಬೇರೊಂದು ಮಸೂದೆಯ ಕರಡು ಪ್ರತಿಗೆ ಸಂಪೂರ್ಣ ಗಮನ ಕೊಟ್ಟಿರುವಾಗ ಆ ಕಲಮುಗಳನ್ನು ಪರಿಶೀಲಿಸಿಲ್ಲವೆಂದೇ ಕಾಣುತ್ತದೆ. ಇದು, ತಾಂತ್ರಿಕ ನಿಯಮಗಳ ಪಾಲನೆ ವಿಚಾರ..........

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್** : ಸೆಲೆಕ್ಟ್ ಕಮಿಟಿಯು ಮಾಡಿರುವುದೆಲ್ಲದಕ್ಕೂ ಸದನವು ಬದ್ಧವಾಗಬೇಕಿಲ್ಲ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಸೆಲೆಕ್ಟ್ ಕಮಿಟಿಯು ಶಿಫಾರಸು ಮಾಡಿದೆ. ಅದನ್ನು ಒಪ್ಪಿಕೊಳ್ಳುವುದು, ಒಪ್ಪಿಕೊಳ್ಳದಿರುವುದು ಮಾನ್ಯ ಸದಸ್ಯರಿಗೆ ಬಿಟ್ಟಿದ್ದು. ಅವರು ಒಪ್ಪಿಕೊಳ್ಳುವುದಿಲ್ಲವಾದರೆ, ಸದನವು ಅದನ್ನು

ಒಪ್ಪಿಕೊಳ್ಳಬಾರದೆಂದು ಅವರು ಸದನಕ್ಕೆ ಮನವರಿಕೆ ಮಾಡಿಕೊಡಬಹುದು. ಅದರ ಬಗ್ಗೆ ಮತ್ತೆ ಚರ್ಚೆ ಮಾಡಬೇಕಾಗಿಲ್ಲ. ಕೆಲವು ಸದಸ್ಯರು ಇದ್ದೇ ಇದ್ದರಲ್ಲ. ಅವರುಗಳು ಯಾವುದನ್ನು ಪರಿಶೀಲಿಸಿದ್ದಾರೆ, ಯಾವುದನ್ನು ಪರಿಶೀಲಿಸಿಲ್ಲ ಎನ್ನುವುದನ್ನು ಚರ್ಚಿಸುವುದು ಸರಿ ಅಲ್ಲ. ಕಲಮವನ್ನು ನಾವೇಕೆ ಒಪ್ಪಿಕೊಳ್ಳಬಾರದು, ಅಥವಾ ನಾವೇಕೆ ಒಪ್ಪಿಕೊಳ್ಳಬೇಕೆಂಬುದನ್ನು ಹೇಳಿದರೆ ಒಳ್ಳೆಯದು.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ನಾನು ತಮ್ಮ ಸಲಹೆಯನ್ನು ಒಪ್ಪಿಕೊಳ್ಳುತ್ತೇನೆ. ಸರ್, ನಾನು ಇನ್ನು ಮುಂದೆ, ಸೆಲೆಕ್ಟ್ ಕಮಿಟಿ ಮುಂದೆ ಏನಾಗಿತ್ತೆಂಬುದನ್ನು ಹೇಳುವುದಿಲ್ಲ. ತಮ್ಮ ಅನುಮತಿ ಕೋರಿ ಒಂದು ಮಾತು ಹೇಳಬಯಸುತ್ತೇನೆ. ಮೂಲ ಮಸೂದೆಯನ್ನು ಪರಿಶೀಲಿಸಬೇಕಾಗಿಲ್ಲವೆಂಬ, ಬದಲೀ ಮಸೂದೆಯನ್ನು ಪರಿಶೀಲಿಸಬೇಕಾಗಿತ್ತೆಂಬ ಈ ಕಪಟ ನಾಟಕಕ್ಕೆ ಸೆಲೆಕ್ಟ್ ಕಮಿಟಿಯ ಮೌನ ಸಮ್ಮತಿ ಇದ್ದರೂ ಕೂಡ, ನಾವು ಅದಕ್ಕೆ ಬದ್ಧರಾಗಬೇಕಾಗಿಲ್ಲ. ಒಬ್ಬ ಆಪಾದಿತನು, ಕ್ರಿಮಿನಲ್ ನ್ಯಾಯಾಲಯದ ಮುಂದೆ, ಕಾನೂನುಬಾಹಿರವಾದ ಕೆಲವೊಂದು ಪ್ರಕ್ರಿಯೆಗೆ ತನ್ನ ಮೌನ ಸಮ್ಮತಿ ಇತ್ತೆಂದು ಹೇಳುತ್ತಾನೆ, ಅದಕ್ಕೆ ಅವನು ಬದ್ಧನಾಗಬೇಕಿಲ್ಲ. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ೧೦೭ನೆಯ ಪ್ರಕರಣದ ಅಡಿಯಲ್ಲಿ ಆಪಾದಿತನನ್ನು ಬದ್ಧನನ್ನಾಗಿ ಮಾಡುವುದಕ್ಕೆ ಸೂಕ್ತ ಪುರಾವೆ ಇದೆಯೇ ಅಥವಾ ದಾಖಲೆ ಇದೆಯೇ ಎನ್ನುವ ಅಂಶದ ಬಗ್ಗೆ ನ್ಯಾಯಾಲಯವು ತಿಳಿದುಕೊಳ್ಳಬೇಕಾಗುತ್ತದೆ ಹಾಗೂ ಅದನ್ನು ಕಂಡುಕೊಳ್ಳಬೇಕಾಗುತ್ತದೆ. ಆಪಾದಿತ ಹೇಳುತ್ತಾನೆ: "ಆ ಪುರಾವೆಗೆ ನಾನು ಬದ್ಧನಾಗಿದ್ದೇನೆ", ನ್ಯಾಯಾಲಯವು, ಹೇಳುತ್ತದೆ "ನೀವು ಬದ್ಧ" : ಆದರೆ ಅಪೀಲು ನ್ಯಾಯಾಲಯವು ಸರಿಯಾದ ವಿಧಾನವನ್ನು ಅನುಸರಿಸಿಲ್ಲ. ತಪ್ಪಾಗಿ ಅನುಸರಿಸಿರುವ ವಿಧಾನದಲ್ಲಿ ಆಪಾದಿತನು ಮೌನ ಸಮ್ಮತಿ ಕೊಟ್ಟಿರುವುದು ಆಜ್ಞೆಯನ್ನು ಕಾನೂನು ಸಮ್ಮತವಾದುದನ್ನಾಗಿ ಮಾಡುವುದಿಲ್ಲವೆಂದು ತೀರ್ಪು ಕೊಡುತ್ತದೆ.

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಮಾನ್ಯ ಸದಸ್ಯರು ಸೆಲೆಕ್ಟ್ ಕಮಿಟಿಯ ವರದಿಯನ್ನು ಚೂರು ಚೂರಾಗಿ ಹರಿದು ಹಾಕಿರುವುದು ಸಮಾಧಾನ ಆಗಿಲ್ಲವೇ? ಅವರೆಲ್ಲಾ 'ಆಪಾದಿತ'ರೆಂದು ಸಹ ಅವರು ಹೇಳುತ್ತಾರೇನು?

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಸೆಲೆಕ್ಟ್ ಕಮಿಟಿಗೆ ಅನ್ವಯವಾಗುವ ಮೂಲಭೂತ ಕಾರ್ಯವಿಧಾನ ನಿಯಮಗಳಿಗೆ ಯಾರು ಅಗೌರವ ತೋರಿದ್ದಾರೋ ಅವರೇ ಇಂದು ಈ ಸದನದ ಮುಂದೆ ಆಪಾದಿತರು. ನನ್ನ ಕೆಲವರು ಸ್ನೇಹಿತರಿಗೆ ಇಷ್ಟವಾಗದ್ದನ್ನೇನನ್ನೋ ಹೇಳಿರುತ್ತಿರುವುದಕ್ಕೆ ಕ್ಷಮಿಸಿ. ತುಂಬಾ ವಿನಯದಿಂದಲೇ, ಈ ಸದನದ ಹಕ್ಕುಗಳನ್ನು, ಗೌರವ ಘನತೆಯನ್ನು ರಕ್ಷಿಸುವ ದೃಷ್ಟಿಯಿಂದಲೇ ಹೇಳುತ್ತಿದ್ದೇನೆ. ಇಷ್ಟು ಹೇಳಿ, ಎರಡನೇ ವಿಚಾರದ ಬಗ್ಗೆ ಮಾತನಾಡುತ್ತಿದ್ದೇನೆ.

ತುಂಬಾ ಮಹತ್ವದ ವಿಚಾರಗಳಾದ ವಿವಾಹ ಮತ್ತು ವಿಚ್ಛೇದನದ ಬಗ್ಗೆ ಈ ಸಂಹಿತೆಯು ಏನು ಹೇಳಿದೆ, ಈಗಿನ ವಾಸ್ತವಿಕ ಸಂಗತಿಗಳು ಯವುವು? ಪಂಜಾಬಿನಲ್ಲಿ ಮದುವೆಗಳು ಆಗುವಾಗ ಯಾವ ನಿರ್ದಿಷ್ಟ ಆಚರಣೆಗಳೂ ಆಗುವುದಿಲ್ಲ. ಅವುಗಳನ್ನು ಕರೇವಾ, ಛಾದರ್, ಅಂದಾಜಿ ಮದುವೆಗಳೆಂದು ಕರೆಯಲಾಗುತ್ತದೆ. ಮದುಮಗ ಕೊಟ್ಟ ಬಳೆಗಳನ್ನು ಮದುಮಗಳಿಗೆ ತೊಡಿಸಲಾಗುತ್ತದೆ ಅಥವಾ ಮದುಮಗ, ಮದುಮಗಳ ಮೇಲೆ ಛಾದರ್ ಹೊದಿಸುತ್ತಾನೆ. ಅಲ್ಲಿಗೆ ಮದುವೆ ಮುಗಿದಂತೆ, (ಶ್ರೀ ಮಹಾವೀರ ತ್ಯಾಗಿ:"ಸುಂದರ ಮದುವೆ"). ಶ್ರೀಯುತ ತ್ಯಾಗಿಯವರೇ, ಅದು ತುಂಬಾ ಸುಲಭವಾದ ವಿಧಾನ, ತಾವೂ ಹಿಗೆಯೇ ಮಾಡಿ. ಅದು ಶಾಸ್ತ್ರೋಕ್ತವಾದ ಅಥವಾ ಸಿವಿಲ್ ಮದುವೆ ಅಲ್ಲ. ಈ ವಿಷಯದಲ್ಲೂ ಕೂಡ, ಮೂಲ ಮಸೂದೆಯಲ್ಲಿ ಒಂದು ದೋಷ ಇತ್ತು. ಅಂಥವರೂ ನ್ಯಾಯಾಲಯಕ್ಕೆ ಬರಬೇಕಿತ್ತು. ರಿಜಿಸ್ಟ್ರೇಷನ್

ಮಾಡಿಸಿಕೊಳ್ಳಬೇಕಿತ್ತು. ಬದಲಾವಣೆಗೊಂಡ ನಿಯಮಗಳ ಪ್ರಕಾರ, ಶಾಸ್ತ್ರೋಕ್ತ ಮದುವೆ ಆಗಿರದಿದ್ದರೆ, ಅದನ್ನು ರಿಜಿಸ್ಟ್ರೇಷನ್ ಮಾಡಿಸುವಂತಿಲ್ಲ. ಇತರ ವಿಚಾರಗಳೂ ಇವೆ. ಅವಕಾಶ ಸಿಕ್ಕಾಗ ತಮ್ಮ ಮುಂದೆ ಹೇಳುತ್ತೇನೆ. ಹಲವು ಜನರಿಗೆ ಸಂಬಂಧಪಟ್ಟಂತೆ ಏನೇನಾಗುತ್ತಿದೆ ಹಾಗೂ ಜನ ಸಾಮಾನ್ಯ ದೃಷ್ಟಿಕೋನದಿಂದ ಯಾವುದನ್ನು ಪರಿಶೀಲಿಸಿಲ್ಲ ಎಂಬ ಬಗ್ಗೆ ಕೆಲವೊಂದು ಸಾಮಾನ್ಯ ಅಭಿಪ್ರಾಯವನ್ನು ಹೇಳುತ್ತಿದ್ದೇನೆ.

ಹಳ್ಳಿಗಳಲ್ಲಿನ ಜನರು ಅನಕ್ಷರಸ್ಥರು, ಬಡವರು. ಕಾನೂನಿನ ಸೂಕ್ಷ್ಮಗಳು ಅವರಿಗೆ ಗೊತ್ತಿಲ್ಲ. ವಿಚ್ಛೇದನದ ವಿಚಾರದ ಬಗ್ಗೆ ಮಾತನಾಡುವಾಗ ಡಾ. ಅಂಬೇಡ್ಕರ್‌ರವರು ಶೇ. ೯೦ರಷ್ಟು ಜನರ ಪರ ಮಾತನಾಡುತ್ತಿದ್ದೇನೆಂದು ಹೇಳಿದರು ಅವರು ನಿಜವನ್ನೇ ಹೇಳಿದ್ದಾರೆ ಎಂದು ನನಗೆ ಗೊತ್ತು. ಈ ಶೇ. ೯೦ರಷ್ಟು ಜನರಲ್ಲಿ, ಇಂದು ವಿಚ್ಛೇದನ ಹೇಗೆ ಆಗುತ್ತಿದೆ? ಅವರು ಅರ್ಜಿ ಬರೆಯುವವನ ಹತ್ತಿರ ಹೋಗುತ್ತಾರೆ, ವಿಚ್ಛೇದನ ಪತ್ರ ಬರೆಸಿಕೊಳ್ಳುತ್ತಾರೆ. ಇನ್ನೊಂದು ರೀತಿ ಏನೆಂದರೆ, ಅವರು ಗುಂಪುಗೂಡುತ್ತಾರೆ, ಮಹಿಳೆಗೆ ಬಿಳಿಯ ಬಟ್ಟೆ ಹೊದಿಸುತ್ತಾರೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಅಲ್ಲಿರುವವರಿಗೆ ಸಾಕಷ್ಟು ಹೆಂಡ, ಸಾರಾಯಿ ಕುಡಿಸುತ್ತಾರೆ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಇರಬಹುದು, ಆದರೆ, ಅದು ಆಚರಣೆಯ ಭಾಗ ಅಲ್ಲ. ಸರ್, ಪ್ರಸ್ತುತ ಕಾನೂನು ಏನು? ನಮಗೆ, ನಮ್ಮ ನಾಯಕರುಗಳು ಏನು ಮಾಡಿದ್ದಾರೆ? ಆ ಬಡಜನರ ಪ್ರತಿನಿಧಿ ನಾನು. ಅವರಲ್ಲಿ ನಾನೂ ಒಬ್ಬ. ಡಾ. ಅಂಬೇಡ್ಕರ್‌ರವರು ಬೆರಳು ತೋರಿಸುತ್ತ ಅವರಲ್ಲಿ ತಾನೂ ಒಬ್ಬ ಎಂದು ಹೇಳಿದರೆ ನಾನು ಒಪ್ಪುವುದಿಲ್ಲ. ಅವರು ನನ್ನನ್ನು ಕ್ಷಮಿಸಬೇಕು. ಡಾ. ಅಂಬೇಡ್ಕರ್‌ರವರು ಇಲ್ಲಿ ಸ್ವರ್ಗದಲ್ಲಿ ವಾಸಿಸುತ್ತಿದ್ದಾರೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** : ನಾನು ಮೂರು ರೂಪಾಯಿ ಬಾಡಿಗೆ ಕೊಟ್ಟು ಹಲವಾರು ವರ್ಷ, ನಗರಾಭಿವೃದ್ಧಿ ಮಂಡಲಿಯ ಕೋಣೆಗಳಲ್ಲಿ ವಾಸ ಮಾಡಿದ್ದೇನೆ.

**ಪಂಡಿತ ಠಾಕೂರ್‌ದಾಸ್ ಭಾರ್ಗವ** : ನೀವು ಅವರನ್ನು ಕಾಲಿನಿಂದ ತುಳಿದು ಹೊಸಕಿ ಹಾಕಿದರೂ ಕೂಡ, ಅವರನ್ನು ಕೈಯಿಂದ ಹೊಸಕಿ ಹಾಕಿದರೂ ಕೂಡ, ಸರ್, ಒಂದು ದಿನಕ್ಕೆ ಒಂದು ರೂಪಾಯಿ ಅಥವಾ ಎಂಟಾಣೆ ಸಂಪಾದಿಸುವ ಬಡಹಳ್ಳಿಗ ವಕೀಲನ ನೆರವಿಲ್ಲದೆಯೇ ಜಿಲ್ಲಾ ನ್ಯಾಯಾಧೀಶರ ಬಳಿಗೆ ಹೋಗಬಲ್ಲ ಎಂದು ತಮಗನ್ನಿಸುತ್ತದೆಯೇ? ಡಾ. ಅಂಬೇಡ್ಕರ್ ವಕೀಲರು. ಈ ಪ್ರಪಂಚವು, ನನ್ನಂತಹ ವಕೀಲರಿಂದಲೇ ತುಂಬಿರಬೇಕೇ ಹೊರತು ಬೇರಾರಿಂದಲೂ ಅಲ್ಲವೆಂದು ಹೇಳುತ್ತಾರೆ. ಪಾಪ, ಈ ಜನರ ಗತಿ ಏನು? ಈ ಜನರು ವಿವಾಹ ವಿಘಟನೆಗೆ ಅಥವಾ ವಿಚ್ಛೇದನಕ್ಕಾಗಿ ಜಿಲ್ಲಾ ನ್ಯಾಯಾಧೀಶರ ಬಳಿಗೆ ಹೋಗಬಲ್ಲರೇ? (ಒಬ್ಬರು ಮಾನ್ಯ ಸದಸ್ಯರು: "ಸಾಧ್ಯವೇ ಇಲ್ಲ") ಇಷ್ಟೇ ಅಲ್ಲ ಇನ್ನೂ ಇದೆ. ಅವನಿಗೆ ಡಿಕ್ರಿ ಸಿಕ್ಕಿದರೂ ಕೂಡ, ಅದನ್ನು ಹೈಕೋರ್ಟು ಸ್ಥಿರೀಕರಿಸಬೇಕಾಗುತ್ತದೆ; ಅದಕ್ಕಾಗಿ, ಪಂಜಾಬಿನ ಜನ ಸಿಮ್ಲಾ ಹೈಕೋರ್ಟಿಗೆ ಹೋಗಬೇಕಾಗುತ್ತದೆ. ಈ ವಿಧಾನ ಜನರಿಗೆ ಗೊತ್ತಿಲ್ಲ. ಅದು ಈ ಜನರ ಮೇಲಿನ ಕ್ರೂರ ದಬ್ಬಾಳಿಕೆ. ಮುಂಬಯಿನ ಮರೀನ್ ಡ್ರೈವ್‌ನಲ್ಲಿ, ಕಲ್ಕತ್ತಾ, ದೆಹಲಿಯ ಬಂಗಲೆಗಳಲ್ಲಿ ವಾಸಿಸುತ್ತಿರುವವರಿಗಾಗಿ ನೀವು ಶಾಸನ ತರುತ್ತಿದ್ದೀರೇ ಹೊರತು ನಿಮ್ಮ ಮನಸ್ಸಿನಲ್ಲಿ ಯಾರ ಬಗ್ಗೆ ಅನುಕಂಪ ಇದೆಯೋ ಅಂಥವರಿಗಲ್ಲ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ಅವರು, ಅದು ಸುಲಭವಾಗಿ ಸಿಗದಂತೆ ಮಾಡುತ್ತಿದ್ದಾರೆ, ನೀವು ಅದು ಸುಲಭವಾಗಿ ಸಿಗುವಂತೆ ಮಾಡುತ್ತೀರೇನು?

**ಪಂಡಿತ ಠಾಕೂರ್‌ದಾಸ್ ಭಾರ್ಗವ** : ಅದು ಸುಲಭವಾಗಿ ಸಿಗದಂತೆ ಮಾಡುತ್ತಿದ್ದಾರೆ ಎಂಬುದು

ಒಂದು ಅಭಿಪ್ರಾಯ. ವಿಚ್ಛೇದನ, ಸುಲಭವಾಗಬಾರದೆಂಬುದು ನನ್ನ ಅಭಿಪ್ರಾಯ ಕೂಡ. ಸುಲಭವಾಗಲೇಬಾರದು. ಒಂದೇ ಒಂದು ನಿಬಂಧನೆ ಮೇಲೆ ನಾನು ವಿಚ್ಛೇದನದ ಪರವಾಗಿರುತ್ತೇನೆ. ವಿಚ್ಛೇದನ, ತುಂಬ ಕಷ್ಟವಾಗುವಂತಹ ಷರತ್ತುಗಳಿರುವ ಕಾನೂನುಗಳನ್ನು ನೀವು ತನ್ನಿ. ಪಾತಿವ್ರತ್ಯ, ನಿರಂತರ ಸಂಸಾರ ಜೀವನ, ನಮ್ಮ ಸಂಸ್ಕೃತಿಯ ಜೀವಾಳ. ವಿಚ್ಛೇದನವನ್ನು ನಾನು ಏಕೆ ಒಪ್ಪಿಕೊಳ್ಳುತ್ತಿದ್ದೇನೆಂದರೆ, ಬಿಟ್ಟು ಹೋದ ಹಲವಾರು ಮಹಿಳೆಯರನ್ನು ನಾನು ನೋಡಿದ್ದೇನೆ. ಈ ಕಾರಣದಿಂದ ನಾನು ಒಪ್ಪುತ್ತಿದ್ದೇನೆ. ತೀರಾ ನಿರಕ್ಷರಕುಕ್ಷಿಯಾದ ಬಡ ಮನುಷ್ಯ ವಕೀಲರನ್ನು ಇಟ್ಟುಕೊಳ್ಳುವುದು, ಜಿಲ್ಲಾ ನ್ಯಾಯಾಲಯ ಅಥವಾ ಹೈಕೋರ್ಟಿಗೆ ಹೋಗುವುದು ಹೇಗೆ ಸಾಧ್ಯ? ಇದನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಈ ಹಳೆಯ ೧೮೬೯ರ ಕಾಯ್ದೆಯನ್ನು ಪಂಜಾಬಿನ ಅಥವಾ ಭಾರತದ ಯಾವುದೇ ಭಾಗದ ಜನರಿಗಾಗಿ ತಂದಿರಲಿಲ್ಲ. ಆಗಿನ ಪ್ರಭುಗಳ ಜಾತಿಯ ಜನರಿಗೋಸ್ಕರ ಎಂದರೆ ಕ್ರಿಶ್ಚಿಯನ್ನರಿಗೋಸ್ಕರ ತರಲಾಗಿತ್ತು. ಆ ಜನರಿಗೂ, ನಮ್ಮ ಜನರಿಗೂ ಅಜಗಜಾಂತರ ವ್ಯತ್ಯಾಸ ಇದೆ. ಮಸೂದೆಯ ೩೮ರಿಂದ ೫೦ರ ವರೆಗಿನ ಕಲಮುಗಳನ್ನು ನೀವು ನೋಡಿದರೆ, ಅನುಸರಿಸಲು ಆಗಲಾರದಷ್ಟು ಜಟಿಲವಾದ, ಸೂಕ್ಷ್ಮವಾದ ವಿಧಾನವನ್ನು ಗೊತ್ತುಪಡಿಸಿರುವುದು ನಿಮಗೇ ಕಂಡುಬರುತ್ತದೆ. ಅವುಗಳನ್ನು ಅನಸರಿಸುವುದು ತೀರಾ ಕಷ್ಟ. ನೀವು ಆ ಕಲಮಗಳನ್ನು ಅಂಗೀಕರಿಸಿದರೆ, ಇಡೀ ಹಿಂದೂ ಸಮಾಜವೇ ನಿಮ್ಮ ಮೇಲೆ ತಿರುಗಿ ಬೀಳುತ್ತದೆಂಬುವುದು, ನೀವು ಆಳವಾಗಿ ಆಲೋಚನೆ ಮಾಡಿದರೆ ನಿಮಗೇ ಗೊತ್ತಾಗುತ್ತದೆ. ನಿಮ್ಮ ಕಾನೂನಿನ ಪ್ರಕಾರ, ಒಬ್ಬ ಮನುಷ್ಯ ಅವನ ಸೋದರತ್ತೆಯ (ತಂದೆಯ ಸಹೋದರಿಯ) ಮಗಳನ್ನು ಮದುವೆಯಾದರೆ, ಆ ಮದುವೆ ಸರಿ. ಅವನು, ಸೋದರ ಮಾವನ ಮಗಳನ್ನು ಮದುವೆಯಾದರೆ – ಬಾಂಬೆಯ ಕೆಲವು ಭಾಗಗಳಲ್ಲಿ ಈ ರೂಢಿ ಇದೆ–ನನಗೆ ತಿಳಿದ ಮಟ್ಟಿಗೆ ............ (ಒಬ್ಬರು ಮಾನ್ಯ ಸದಸ್ಯರು : "ಮದ್ರಾಸಿನಲ್ಲೂ ಆ ರೂಢಿ ಇದೆ") ಆದರೆ, ನಮ್ಮ ಮಟ್ಟಿಗೆ ಹೇಳುವುದಾದರೆ, ನಾವು ಅದನ್ನು ಅಗಮ್ಯಗಮನವೆಂದು ಪರಿಗಣಿಸುತ್ತೇವೆ. ತುಂಬಾ ತುಂಬಾ ವ್ಯತ್ಯಾಸ ಇದೆ. (ಶ್ರೀ ಮಹಾವೀರ ತ್ಯಾಗಿ: "ಅವನನ್ನು ಸಾಯಿಸಿಬಿಡುತ್ತಾರೆ"). ಶ್ರೀಯುತ ತ್ಯಾಗಿಯವರು ಹೇಳುತ್ತಿದ್ದಾರೆ. ಸತ್ಯಕ್ಕೆ ಹತ್ತಿರವಾದುದನ್ನೇ ಹೇಳುತ್ತಿದ್ದಾರೆ. ಪೂರ್ವ ಪಂಜಾಬಿನ ಎಲ್ಲ ಹಳ್ಳಿಗಳಲ್ಲಿ ಅದು ವಾಸ್ತವಿಕ ಸಂಗತಿ. ಈ ಸಂಗತಿಯನ್ನು ಬಲವಾಗಿ ಪ್ರತಿಪಾದಿಸಬೇಕೆಂಬ ಮನೋಭಾವನೆಯಿಂದ ನಾನು ಹೇಳುತ್ತಿಲ್ಲ. ಆದರೆ ಅದು ನಿಜ. ನೀವು ಇದಕ್ಕೆ ಅವಕಾಶ ಕೊಟ್ಟರೆ, ಅಂಥವನನ್ನು ಸಾಯಿಸಿ ಬಿಡುತ್ತಾರೆ, ಇಲ್ಲವೇ ಯಾರೂ ಅಂಥವನೊಂದಿಗೆ ಬೆರೆಯುವುದಿಲ್ಲ. (ಶ್ರೀ ತಜಮುಲ್ ಹುಸೇನ್: "ನಿರ್ಬಂಧ ಏನಾದರೂ ಇದೆಯೇ?") ಒಬ್ಬ ಮನುಷ್ಯ ತನ್ನ ಸಹೋದರಿಯನ್ನು ಅಥವಾ ತಾಯಿಯನ್ನು ಮದುವೆ ಆಗುವುದಕ್ಕೆ ನಿರ್ಬಂಧ ಏನಾದರೂ ಇದೆಯೇ? ಇದು ಅವಕಾಶ ಕೊಡುವ ಮಸೂದೆಯೇ? ಇದು, ಸಮಾಜದ ಜೀವಾಳವನ್ನೇ ಹಾಳು ಮಾಡುತ್ತದೆ. ಇದನ್ನು ಸಹಿಸಿಕೊಳ್ಳಲಾಗದು. ಕೆಲವು ಜನರಲ್ಲಿ ಅಂಥದೊಂದು ರೂಢಿ ಇದೆಯೆಂದ ಮಾತ್ರಕ್ಕೇ, ಅಂಥದೊಂದು ವಿಷಮ ಸನ್ನಿವೇಶವನ್ನು ಒಪ್ಪಿಕೊಳ್ಳುವುದಕ್ಕೆ ನಮಗೆ ಕಷ್ಟವಾಗುತ್ತಿದೆ. ಅಂಥವರಿಗೆ, ರಕ್ಷಣೆ ಕೊಡಬಾರದೆಂದು ನಾನು ಹೇಳುವುದಿಲ್ಲ. ಆದರೆ, ಅಂಥವರಿಗಾಗಿ ಅವಕಾಶ ಕಲ್ಪಿಸಬಹುದಾಗಿದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಕಲಮು ೭(೫)ನ್ನು ನೀವು ಗಮನಿಸಿದರೆ–ಅಂಥವರು ಪರಸ್ಪರ ಸಪಿಂಡರಾಗಿರತಕ್ಕದ್ದಲ್ಲ – ಅಂಥದ್ದಕ್ಕೆ ಅವಕಾಶ ಕಲ್ಪಿಸಲಾಗಿದೆಯಲ್ಲ.

**ಪಂಡಿತ ಠಾಕೂರ್‌ದಾಸ್ ಭಾರ್ಗವ** : ಸೋದರತ್ತೆಯ ಮಗಳನ್ನು ಮದುವೆ ಮಾಡಬಹುದೇ? ಎಂದು ಕೇಳುತ್ತಿದ್ದೇನೆ. ನಾನು ನಿಯಮಗಳನ್ನು ನೋಡಿದ್ದೇನೆ. ಈ ವಿಷಯಗಳಲ್ಲಿ ಕಾನೂನಿನಲ್ಲಿ ಬದಲಾವಣೆ

ಮಾಡಲಾಗಿದೆ. ನಮ್ಮ ಸನ್ನಿವೇಶಗಳಿಗೆ ಹೊಂದಿಕೆ ಆಗುವಂತಹ ಕಾನೂನನ್ನು ತರದಿದ್ದರೆ ಈ ಮಸೂದೆಗೆ ಬೆಂಬಲ ಕೊಡುವುದು ನಮಗೆ ಕಷ್ಟವಾಗುತ್ತದೆ. ತರಬಹುದು. ಸೆಲೆಕ್ಟ್ ಕಮಿಟಿಯಲ್ಲಿ ತಿದ್ದುಪಡಿಗಳನ್ನು ಪ್ರಸ್ತಾವಿಸಬಹುದು. ಮಸೂದೆಯನ್ನು ಹಿಸುಕಿ ಹಾಕಬೇಕೆಂದು ಅಥವಾ ಸಾಯಿಸಬೇಕೆಂದು ನಾನು ಹೇಳುತ್ತಿಲ್ಲ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** : ಈ ಸದನದಲ್ಲಿ ತಿದ್ದುಪಡಿ ತಂದು ಹಾಗೆ ಮಾಡಬಹುದಲ್ಲ.

**ಒಬ್ಬರು ಮಾನ್ಯ ಸದಸ್ಯರು** : ತಾವು ಒಪ್ಪಿಕೊಳ್ಳುತ್ತೀರೇನು?

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** : ಯಾವುದೇ ಸಮಂಜಸ ತಿದ್ದುಪಡಿಯನ್ನು ನಾನು ಒಪ್ಪುತ್ತೇನೆ.

**ಪಂಡಿತ ಠಾಕೂರ್‌ದಾಸ್ ಭಾರ್ಗವ** : ತುಂಬಾ ಸಂತೋಷ, ಆ ಮಟ್ಟಿಗೆ ಈ ಮಸೂದೆಗೆ ಬೆಂಬಲ ಕೊಡಲು ಒಪ್ಪುತ್ತೇನೆ.

**ಶ್ರೀ ತಜಮುಲ್ ಹುಸೇನ್ :** ಮಾನ್ಯ ಸದಸ್ಯರು ಇಂದೇ ಮಾತು ಮುಗಿಸುತ್ತಾರೇನು?

**ಸನ್ಮಾನ್ಯ ಡೆಪ್ಯೂಟಿ ಸ್ಪೀಕರ್ :** ಮಾನ್ಯ ಸದಸ್ಯರಿಗೆ, ಈ ಮಸೂದೆಯಿಂದ ಬಾಧಿತರಾಗುವ ಇತರರಿಗಿಂತಲೂ ಈ ಬಗ್ಗೆಯೇ ಆಸಕ್ತಿ ಇರುವಂತೆ ತೋರುತ್ತದೆ. ನಾನೂ ಗಮನಿಸುತ್ತಿದ್ದೇನೆ. ಮಾನ್ಯ ಸದಸ್ಯರು ಯಾವಾಗ ಮಾತು ಮುಗಿಸುತ್ತಾರೆಂದು ನಾನು ಕೇಳಲಾಗದು. ಹೇಳಿದ್ದನ್ನೇ ಹೇಳದೆ, ಸಮಂಜಸ ಸಮಯ ತೆಗೆದುಕೊಳ್ಳುವುದು ಅವರಿಗೇ ಬಿಟ್ಟಿದ್ದು.

**ಪಂಡಿತ ಠಾಕೂರ್‌ದಾಸ್ ಭಾರ್ಗವ** : ಅಗತ್ಯಕ್ಕಿಂತಲೂ ಒಂದು ನಿಮಿಷ ಹೆಚ್ಚು ತೆಗೆದುಕೊಳ್ಳುವುದು ನನ್ನ ಉದ್ದೇಶ ಅಲ್ಲ. ಹೇಳಿದ್ದನ್ನೇ ಹೇಳಿದರೆ, ತಾವು ನನಗೆ ಎಚ್ಚರಿಕೆ ಕೊಡಬಹುದು. ಮೂವತ್ತು ಕೋಟಿ ಜನರಿಗೆ ಬಾಧಕ ಆಗುವ ಮಸೂದೆ ಮೇಲೆ ಚರ್ಚೆಗೆ ಹಲವಾರು ದಿನಗಳು ಹಿಡಿದರೆ ಅದೇನೂ ದೊಡ್ಡದಲ್ಲ.

ಈಗ, ನಾನು ಸೆಲೆಕ್ಟ್ ಕಮಿಟಿಯು ಮಾಡಿರುವ ನಿಬಂಧನೆಗಳ ಬಗ್ಗೆ ಮತ್ತು ಈ ವಿಚಾರದ ಅತ್ಯಂತ ಸಂದೇಹಾಸ್ಪದ ವಿಚಾರಗಳ ಬಗ್ಗೆ ಹೇಳುತ್ತೇನೆ. ಅವು ಯಾವುವೆಂದರೆ ಉತ್ತರಾಧಿಕಾರ, ಪಾಲನೆ ಪೋಷಣೆ. ಇವುಗಳ ಬಗ್ಗೆ ನಮ್ಮ ಧೋರಣೆ ಯಾವುದಾಗಿರಬೇಕು: ಈ ಬಗ್ಗೆಯೇ ಮಾತನಾಡುತ್ತೇನೆ. ನಾನು, ಮೊದಲೇ ಹೇಳಿದಂತೆ, ಭಾರತದ ಮಹಿಳೆಯರಿಗೆ ಚರ ಸ್ಥಿರ ಎರಡೂ ಆಸ್ತಿಯಲ್ಲಿ ಹಕ್ಕು ಕೊಡಬೇಕೆಂಬುದರ ಪರವಾಗಿದ್ದೇನೆ. ಮಹಿಳೆಯರು ಆರ್ಥಿಕವಾಗಿ ಸ್ವತಂತ್ರರಿರಬೇಕು. ಆದರೆ, ತಂದೆಯ ಆಸ್ತಿಯಲ್ಲಿ ಮಗಳಿಗೆ ಭಾಗ ಕೊಡುವುದನ್ನು ನಾನು ವಿರೋಧಿಸುತ್ತೇನೆ. ಮಗನಿಗೆ ಕೊಡುವಂತೆಯೇ, ಮಗಳಿಗೂ, ಅವಳಿಗೆ ಎಲ್ಲಿಯವರೆಗೆ ಮದುವೆ ಆಗುವುದಿಲ್ಲವೋ ಅವರೆಗೆ, ಸಮಾನ ಭಾಗ ಕೊಡಬಹುದು.

*೩–೦೦ಗಂಟೆ*

ಅವಳಿಗೆ, ಮದುವೆ ಆದ ಕ್ಷಣದಿಂದಲೇ ಸನ್ನಿವೇಶ ಬೇರೆಯದೇ ಆಗುತ್ತದೆ. ಈ ಲೋಪ, ನಮ್ಮ ಕಾನೂನಿನಲ್ಲಿರುವುದು ನನಗೆ ಕಂಡುಬಂದಿದೆ. ಮಹಿಳೆ, ಪುರುಷ ಮದುವೆ ಆಗಿ, ಹೇಗೆ ಪ್ರತಿ ಪ್ರೇಮದಿಂದ ಒಂದಾಗಿರುತ್ತಾರೋ ಹಾಗೆಯೇ ಆಸ್ತಿ ವಿಷಯದಲ್ಲೂ ಒಂದಾಗಿರಬೇಕೆಂದು ಕಾನೂನು ಮಾಡಿ ಈ ಲೋಪವನ್ನು ಸರಿಪಡಿಸಬಹುದು. ಇದರಿಂದ, ಪುರುಷ, ಮಹಿಳೆ ಜಂಟೀ ಒಡೆಯರಾಗುತ್ತಾರೆ, ಗಂಡನ ತಂದೆ ಸತ್ತಾಗ, ಇಬ್ಬರಿಗೂ ಸಮಾನ ಪಾಲು ಸಿಗುತ್ತದೆ. ನಂತರದ ಕಾಲದಲ್ಲಿ ನಿರ್ದಿಷ್ಟ ರೀತಿಯಲ್ಲಿ ಆಸ್ತಿ ಹಸ್ತಾಂತರ ಆಗುತ್ತಿರುತ್ತದೆ. ಸಮಾನತೆ ವಿಚಾರ ಇದರಿಂದ ಸಂಪೂರ್ಣವಾಗಿ ಬಗೆಹರಿಯುವುದಿಲ್ಲವೆಂಬುದು ನನಗೆ ಗೊತ್ತಿದೆ. ಆದರೆ, ಈ ರೀತಿಯ ವಿಚಾರದಲ್ಲಿ, ಪ್ರತಿಯೊಂದು ಅಂಶವನ್ನೂ, ಅತಿ ಹೆಚ್ಚು ಅತಿ ಕಡಿಮೆಯೂ ಆಗದಂತೆ ತೂಗಿ ನೋಡುವ ವಿಷಯದಲ್ಲಿ ನಮ್ಮ ಸಹೋದರಿಯರಿಗೆ, ಸರಿಯಾದ

ತಿಳುವಳಿಕೆ ಕೊಡಲಾಗಿದೆಯೆಂದು ನನಗನ್ನಿಸುತ್ತಿಲ್ಲ. ಅಳವಡಿಸಿಕೊಂಡಿರುವ ಅಳತೆಗೋಲು ಸರಿಯಾದುದಲ್ಲ.

ಸರ್, ಪಾಲನೆ ಪೋಷಣೆ ಬಗ್ಗೆ, ಅವರಲ್ಲಿ ಎಂತಹ ಕಾನೂನುಗಳಿವೆಯೆಂದರೆ, ಎಂತಹ ಕಲಮುಗಳಿವೆಯೆಂದರೆ ಎಲ್ಲೂ ಒಂದಕ್ಕೊಂದು ಸಮಸಮವಾಗಿರುವುದು ಕಂಡುಬರುತ್ತಿಲ್ಲ. ಸರ್, ಉತ್ತರಾಧಿಕಾರ ಹಾಗೂ ಪಾಲನೆ ಪೋಷಣೆ ವಿಚಾರವನ್ನು ಒಟ್ಟೊಟ್ಟಿಗೆ ಪರಿಶೀಲಿಸಬೇಕಾಗುತ್ತದೆ. ಅವುಗಳನ್ನು ಒಟ್ಟೊಟ್ಟಿಗೆ ಪರಿಶೀಲಿಸದಿದ್ದರೆ, ಸಮಸ್ಯೆ ಏನೆಂದರೆ, ಕಲಮುಗಳ ಸಂಪೂರ್ಣ ಪರಿಣಾಮಗಳು ಗೊತ್ತಾಗುವುದೇ ಇಲ್ಲ. ಪಾಲನೆ ಪೋಷಣೆ ಬಗ್ಗೆ ಹೇಳುವುದಾದರೆ, ಗಂಡನ ಅಥವಾ ಮನುಷ್ಯನ ಕರ್ತವ್ಯಗಳಿಗಿಂತಲೂ ಮಹಿಳೆಯ ಕರ್ತವ್ಯ ತೀರಾ ಬೇರೆಯದು. ಪಾಲನೆ ಪೋಷಣೆ ಕುರಿತ ಅಧ್ಯಾಯದ ಪ್ರಕಾರ, ಹೆಂಡತಿಗೆ, ಗಂಡನಿಂದ ಪಾಲಿಸಲ್ಪಡುವ ಪೋಷಿಸಲ್ಪಡುವ ಹಕ್ಕಿದೆ. ಆದರೆ, ಗಂಡನಿಗೆ, ಹೆಂಡತಿಯಿಂದ ಪಾಲಿಸಲ್ಪಡುವ, ಪೋಷಿಸಲ್ಪಡುವ ಹಕ್ಕಿದೆಯೇ? ಹಕ್ಕುಗಳೂ ಸಮಸಮವಾಗಿಲ್ಲವೆಂದು ಹೇಳುತ್ತಿದ್ದೇನೆ. ಹಕ್ಕುಗಳೂ ಸಮಸಮವಾಗಿರಲಾರವೆಂದೂ ಹೇಳುತ್ತಿದ್ದೇನೆ. ಅವು ಬೇರೆ ಬೇರೆ ರೀತಿಯಲ್ಲಿರುತ್ತವೆ. ಮಹಿಳೆಯರು, ಪುರುಷರು ಜೀವನದಲ್ಲಿ ಬೇರೆ ಬೇರೆ ರೀತಿಯ ಕೆಲಸ ಮಾಡುತ್ತಿರುತ್ತಾರೆ. ಈ ಆಧಾರದ ಮೇಲೆ, ಮಹಿಳೆಗೆ ಸಂಪೂರ್ಣ ಹಕ್ಕು ಇರುವಂತೆ ಅದನ್ನು ವ್ಯವಸ್ಥೆ ಮಾಡಬೇಕಾಗುತ್ತದೆಯೇ ಹೊರತು ಅಬಾಧಿತ ಸಮಾನ ಹಕ್ಕು ಇರುವಂತಿಲ್ಲ.

ಸರ್, ತಂದೆಗೆ ಅಪ್ರಾಪ್ತ ವಯಸ್ಕ ಮಗನನ್ನು ಪಾಲನೆ ಪೋಷಣೆ ಮಾಡುವ ಹಕ್ಕಿದೆ. ಆದರೆ ಮಗಳಿಗೆ ಯಾವ ಹಕ್ಕುಗಳಿವೆ? ಸರ್, ಮಗಳು ವಿಧವೆಯಾಗಿದ್ದರೆ, ಅಥವಾ ಮದುವೆ ಆಗಿದ್ದರೆ ಅಥವಾ ಮದುವೆ ಆಗಿರದಿದ್ದರೆ, ಇಂಥ ಪ್ರತಿಯೊಂದು ಸನ್ನಿವೇಶದಲ್ಲೂ, ಮಗಳ ವಯಸ್ಸು ಏನೇ ಇರಲಿ, ಅವಳ ಪಾಲನೆ ಪೋಷಣೆ ಅವಶ್ಯ ಕರ್ತವ್ಯ. ವಾಸ್ತವವಾಗಿ, ಪಾಲನೆ ಪೋಷಣೆ ಕಲಮುಗಳ ಬಗ್ಗೆ ಹೇಳುವುದಾದರೆ, ಮಹಿಳೆಯರನ್ನು ಎಲ್ಲ ರೀತಿಯಲ್ಲೂ ಸಂರಕ್ಷಿಸಬೇಕೆಂದು, ಅವರಿಗೆ ಒಳ್ಳೆಯ ಅವಕಾಶವನ್ನು ಕಲ್ಪಿಸಬೇಕೆಂದು ಡಾ. ಅಂಬೇಡ್ಕರ್‌ರವರು ಪ್ರಸ್ತಾಪಿಸಿರುವುದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಇಂಥ ಪ್ರಯೋಜನಕರ ಕಲಮು ಇರುವಾಗ, ತಂದೆಯ ಆಸ್ತಿಯಲ್ಲಿ ಮಹಿಳೆಯರಿಗೂ ಪಾಲು ಕೊಡಬೇಕೆಂಬ ಇನ್ನೊಂದು ವಿಚಾರವೂ ಇದೆ.

ಡಾ. ಅಂಬೇಡ್ಕರ್‌ರವರು, ನಿನ್ನೆ ದಿನ, ಹಳೆಯ ಕಾಲದಲ್ಲಿ ಏಕಕಾಲದಲ್ಲಿ ಆಸ್ತಿ ಹಸ್ತಾಂತರ ಆಗುತ್ತಿತ್ತು, ನಾರದ ಸ್ಮೃತಿ ಪ್ರಕಾರ, ಮಗಳಿಗೆ ನಾಲ್ಕನೇ ಒಂದು ಭಾಗ ಸಿಗುತ್ತಿತ್ತು ಎಂದು ಹೇಳಿದರು. ಆ ಕಾಲದಲ್ಲಿ, ಸಾಮಾಜಿಕ ಅಸ್ತಿತ್ವಕ್ಕೆ ಯಾವುದು ಆಧಾರವಾಗಿತ್ತು, ಆ ಕಾಲದ ಕುಟುಂಬ ಇಂದಿನ ಕಾಲದ ಕುಟುಂಬದಂತೆಯೇ ಇತ್ತೇ ಎನ್ನುವುದು ನನಗೆ ಗೊತ್ತಿಲ್ಲ, ಹಿಂದೂ ನ್ಯಾಯದ ಕೆಲವೊಂದು ಗ್ರಂಥಗಳಲ್ಲಿ ಈ ಬಗ್ಗೆ ಹೇಳಲಾಗಿದೆಯೇ ಎಂಬುದೂ ನನಗೆ ಗೊತ್ತಿಲ್ಲ. ಅದು ಅಂಗೀಕೃತ ಕಟ್ಟಳೆ ಅಲ್ಲ. ಏಕಕಾಲಿಕ ವಾರಸುದಾರಿಕೆಯ ಈ ನಿಬಂಧನೆ, ಮದುವೆ ಆಗಿರದ ಮಹಿಳೆಯರಿಗೆ ಸಂಬಂಧಿಸಿದೆಯೆಂದು ಕೆಲವರು ಹೇಳುತ್ತಾರೆ. ಆ ವಿಚಾರವನ್ನು ಒಂದು ಪಕ್ಕಕ್ಕೆ ಇಟ್ಟು, ಈ ಕಾಲದಲ್ಲಿ ಅದೊಂದು ಹಕ್ಕು ಎಂದು ಪರಿಗಣಿಸಿದ್ದಾರೆ, ಸಾವಿರಾರು ವರ್ಷಗಳಿಂದಲೂ ಸಗೋತ್ರ ತತ್ತ್ವವನ್ನು ಅನುಸರಿಸಿಕೊಂಡು ಬಂದಿದ್ದೇವಲ್ಲ, ಮಗಳಿಗೂ ಪಾಲು ಸಿಗಬೇಕೆಂಬ ಕಟ್ಟಳೆ ಒಪ್ಪಿಕೊಳ್ಳುವುದಕ್ಕೆ ನಮ್ಮಲ್ಲಿ ಸಮರ್ಥನೆ ಇದೆಯೇ ಎಂಬುದೇ ಇಂದು ತೀರ್ಮಾನ ಆಗಬೇಕಾದ ವಿಷಯವೆಂದು ಹೇಳುತ್ತಿದ್ದೇನೆ. ತಂದೆ ಬದುಕಿರುವವರೆಗೂ ಮಗ ತಂದೆಯ ವ್ಯವಹಾರದಲ್ಲಿ ಅಥವಾ ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತಾನೆ. ಇಬ್ಬರೂ ಒಟ್ಟಿಗೇ ದುಡಿದು ಸಂಪಾದಿಸುತ್ತಾರೆ. ವಯಸ್ಸಾದ ಮೇಲೆ ತಂದೆ ಸತ್ತಾಗ, ತಂದೆಯ ಹೆಸರಿನಲ್ಲಿರುವ ಆಸ್ತಿ, ತಂದೆ ಹಾಗೂ ಗಂಡು ಮಕ್ಕಳ ಸಂಯುಕ್ತ ಪ್ರಯತ್ನದ ಫಲ. ಬೇರೊಂದು

ಮನೆಯಲ್ಲಿ ಮಕ್ಕಳನ್ನು ಹೆರುತ್ತಿರುವುದನ್ನು ಬಿಟ್ಟರೆ, ಇಲ್ಲಿನ ಸಂಪಾದನೆಯಲ್ಲಿ ಯಾವ ಪಾತ್ರವೂ ಇರದ ಮಗಳಿಗೆ ಅಂತಹ ಆಸ್ತಿಯಲ್ಲಿ ಪಾಲು ಸಿಗಬೇಕೆಂದು ಈಗ ಹೇಳುವುದು ನ್ಯಾಯೋಚಿತ ಅಲ್ಲ. ನನ್ನನ್ನು ತಪ್ಪು ತಿಳಿದುಕೊಳ್ಳಬಾರದು. ಮಗಳಿಗೆ ಸಂಪೂರ್ಣ ಹಕ್ಕನ್ನು ಕೊಡಬಾರದೆಂದು ನಾನು ಹೇಳುತ್ತಿಲ್ಲ. ಆಕೆಗೆ ಅವುಗಳಿರಬೇಕು, ಆದರೆ, ನಮ್ಮ ದೇಶದ ಪ್ರತಿಯೊಂದು ಮನೆಯಲ್ಲೂ ಅಲ್ಲೋಲಕಲ್ಲೋಲ ಉಂಟುಮಾಡುವ ಅಂಥದೊಂದು ಮೂಲ ಸ್ವರೂಪದ ನಿಯಮವನ್ನು ತರುವುದು ನನಗೆ ಇಷ್ಟವಿಲ್ಲ. ನನ್ನ ಜನರ ನೀತಿ ಸರಿ ಎಂಬುದು ನನಗೆ ಗೊತ್ತಿದೆ. ಜಾಟರಾದ ಶ್ರೀ ಚೌಧರಿ ರಣಬೀರ್ ಸಿಂಗ್‌ರಿಗೆ, ಕುಟುಂಬದಲ್ಲಿ ಅಳಿಯನನ್ನು ಹೇಗೆ ಬರಮಾಡಿಕೊಳ್ಳುತ್ತಾರೆಂಬುದು ಗೊತ್ತಿದೆ. ನಾನು ನಲವತ್ತು ವರ್ಷಗಳಿಂದ ವಕೀಲಿ ವೃತ್ತಿ ಮಾಡುತ್ತಿದ್ದೇನೆ. ಗಂಡುಮಕ್ಕಳಿಲ್ಲದಿದ್ದರೆ, ಸ್ವಯಾರ್ಜಿತ ಆಸ್ತಿಯಲ್ಲಿ ಮಗಳಿಗೆ ಒಂದು ಪಾಲು ಸಿಗುತ್ತದೆಂಬುದು ನನಗೆ ಗೊತ್ತು. ಇಡೀ ಆಸ್ತಿಗೆ ಸಂಬಂಧಪಟ್ಟಂತೆ, ಹಳ್ಳಿಗಳಲ್ಲಿ, ಈ ನಿಯಮವನ್ನು ತಂದರೆ, ಕೊನೆ ಮೊದಲಿಲ್ಲದ ಸಮಸ್ಯೆಗಳು ಕಾಣಿಸಿಕೊಳ್ಳುತ್ತದೆ. ಪ್ರತಿಯೊಂದು ಮನೆಯಲ್ಲೂ, ಅಳಿಯ, ಬೀಗ, ಬೀಗತಿ ಈ ಮೂವರನ್ನೂ ಭಾವನೊಂದಿಗೆ ಹಾಗೂ ಅವನ ಕುಟುಂಬದಲ್ಲಿ ಇರಗೊಟ್ಟರೆ ಅದರಿಂದ ವಿಷಮ ಪರಿಸ್ಥಿತಿ ಉದ್ಭವವಾಗುತ್ತದೆ. ನಮ್ಮ ಹೆಣ್ಣುಮಕ್ಕಳನ್ನು ನಾವು ಪ್ರೀತಿಸುವುದಿಲ್ಲ ಅಂತಲ್ಲ. ಅವರಿಗಾಗಿ, ನಾವು ಎಲ್ಲವನ್ನೂ ಮಾಡುತ್ತೇವೆ. ನಮ್ಮ ಊರಿನಲ್ಲಿ, ಮಗಳು ತವರಿಗೆ ಬಂದಾಗ, ಪ್ರೀತಿಯ ಉಡುಗೊರೆಯಾಗಿ ಯಾವಾಗಲೂ ಏನನ್ನಾದರೂ ಕೊಡಲಾಗುತ್ತದೆ.

**ಶ್ರೀಮತಿ ರೇಣುಕಾ ರೇ :** ಈ ದೇಶದಲ್ಲಿ ಹೆಣ್ಣುಮಕ್ಕಳೇ ಹುಟ್ಟಬಾರದು.

**ಪಂಡಿತ ಠಾಕೂರ್‌ದಾಸ್ ಭಾರ್ಗವ** : ಆ ಬಗ್ಗೆ ಡಾ. ಅಂಬೇಡ್ಕರ್‌ರವರು ಏನು ಹೇಳುತ್ತಾರೆಂದು ನನಗೆ ಗೊತ್ತು. ಮಗನ ಬದಲು, ಹೆಣ್ಣುಮಕ್ಕಳೇ ಹುಟ್ಟಲಿ ಎಂದೇ ಅವರು ಹೇಳುತ್ತಾರೆ. ಅನೇಕ ರಜಪೂತರಲ್ಲಿ, ಹೆಣ್ಣುಮಕ್ಕಳನ್ನು ಸಾಯಿಸುತ್ತಾರೆಂಬುದು ನಮಗೆ ಗೊತ್ತಿಲ್ಲವೇನು? ಅದಾಗುವುದು ಬೇಕಿಲ್ಲ. ಅದು ತೀರಾ ತಪ್ಪು. ನೂರಾರು ವರ್ಷಗಳಿಂದಲೂ ಅಂಥದೊಂದು ಸಮಾಜದಲ್ಲಿ ನಾವು ಬದುಕುತ್ತಿದ್ದೇವೆ. ಮಗನೇ ಕುಟುಂಬದ ಜೀವಾಳವೆಂದು ನಾವು ಪರಿಗಣಿಸಿದ್ದೇವೆ. ಮಗ ಇಲ್ಲದಿದ್ದರೆ, ಕುಟುಂಬದಲ್ಲಿ ಮಗಳು ಗಣ್ಯಳಲ್ಲ. ತಂದೆ, ನರಕಕ್ಕೆ ಹೋಗದಂತೆ ಮಗ ರಕ್ಷಿಸುತ್ತಾನೆ. ಪತಿತ ತ್ರಾಯತೇ. ನಾವು ಮುಸ್ಲಿಮರಾಗಿದ್ದಿದ್ದರೆ, ಖಂಡಿತ ವಾಗಿಯೂ ಒಪ್ಪಿಕೊಳ್ಳಬಹುದಿತ್ತು. ಆದರೆ, ತುಂಬಾ ಕಷ್ಟ. ಜನರ ಕಲ್ಪನೆಗಳಿಗೆ, ಜನರ ಮನೋಭಾವನೆಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಅಂಥದೊಂದು ನಿಯಮದಿಂದ ಕೇಡು ಉಂಟಾಗುತ್ತದೆಯೇ ಹೊರತು ಇನ್ನೇನೂ ಆಗದೆಂಬ ನನ್ನ ಮಾತಿಗೆ, ಮಧ್ಯೆ, ಶ್ರೀಮತಿ ರೇಣುಕಾ ರೇಯವರು ಮಾತನಾಡಿದ್ದು ಪುಷ್ಟಿ ಸಿಕ್ಕಿದಂತಾಯಿತು. ಇದೇ ನನ್ನ ಕಳಕಳಿಯ ಮನವಿ. ಇದಕ್ಕೆ ಶ್ರೀಮತಿ ರೇಣುಕಾ ರೇ ಮಾತ್ರವೇ ಬೆಂಬಲ ಕೊಡಬಲ್ಲರು.

**ಶ್ರೀ ಕೃಷ್ಣಸ್ವಾಮಿ ಭಾರತಿ** : ಇವರು ದೇಶದ ಯಾವ ಭಾಗದಿಂದ ಬಂದಿದ್ದಾರೋ ನನಗೆ ಗೊತ್ತಿಲ್ಲ. ಪಂಜಾಬಿನಲ್ಲಿ ರೂಢಿಯಲ್ಲಿರುವ ಸಂಪ್ರದಾಯ ಇವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಬೇರೆ ಯಾವ ಪ್ರಾಂತದಲ್ಲೂ ಅಂಥವೇ ಸನ್ನಿವೇಶಗಳಿಲ್ಲವೆಂದು ನಾನು ಹೇಳಬಲ್ಲೆ. ಇಂತಹ ಸನ್ನಿವೇಶಗಳಿಗೆ ಕಾರಣಗಳು ಯಾವುವು? ಕುಟುಂಬದ ಬಗ್ಗೆ ಸಾವಿರಾರು ವರ್ಷಗಳವರೆಗೆ, ನಮ್ಮ ನೀತಿ, ನಮ್ಮ ಸಿದ್ಧಾಂತ, ನಮ್ಮ ಕಲ್ಪನೆಯು, ಪಂಜಾಬಿನಲ್ಲಿ ಯಾವ ರೀತಿ ಇದೆಯೋ ಹಾಗೆಯೇ ಯಥಾವತ್ತಾಗಿ ಇರುವುದೇ ಅಂತಹ ಸನ್ನಿವೇಶಗಳಿಗೆ ಕಾರಣ. ಅಳಿಯಂದಿರೆಲ್ಲರೂ ಕೆಟ್ಟವರಲ್ಲ. ಗಂಡುಮಕ್ಕಳೂ ಅಷ್ಟೇ ಕೆಟ್ಟವರಲ್ಲ.

**ಶ್ರೀ ಮಹಾವೀರ ತ್ಯಾಗಿ** (ಸಂಯುಕ್ತ ಪ್ರಾಂತ : ಸಾಮಾನ್ಯ) : ಭಾವ, ಒಳ್ಳೆಯವನೇ.

**ಪಂಡಿತ ಠಾಕೂರ್‌ದಾಸ್ ಭಾರ್ಗವ** : ಉರ್ದುನಲ್ಲಿ ಒಂದು ಗಾದೆಯಿದೆ.

"ಹಳ್ಳಿ ಕಸವನ್ನು ತಿಪ್ಪೆಗೆ ಹಾಕುವ ಜಾಗದಲ್ಲಿ ಮನೆ ಕಟ್ಟುವುದು, ಹಳ್ಳಿ ಜನರು ತಿರುಗಾಡುವ ಅಕ್ಕಪಕ್ಕದಲ್ಲಿ ಹೊಲ ಇರುವುದು, ಅಳಿಯ ಹಳ್ಳಿಯಲ್ಲಿ ತಳ ಊರುವುದು ಜಗಳಕ್ಕೆ ಮೂಲ" ಇನ್ನೊಂದು ಉರ್ದು ಗಾದೆ ಇದೆ.

"ನಿವೇಷ್ವೇ ಗೋಗರೆದರೂ, ಯಮ, ಅಳಿಯ, ತಾಯಿ ಕಡೆಯ ಸೋದರಳಿಯ, ಚೌಕಿದಾರ, ಅಕ್ಕಸಾಲಿಗ, ನಿಮಗೆ ಸೊಪ್ಪು ಹಾಕುವುದಿಲ್ಲ."

ಇದೇ ನಿಜ, ಪಂಜಾಬಿಗೆ ಹೋಗಿ, ಸಿಖ್ಖರಲ್ಲಿ, ಜಾಟರಲ್ಲಿ ಯಾವ ರೂಢಿಗಳು ಇವೆಯೆಂಬುದನ್ನು ತಿಳಿದುಕೊಂಡು ಬನ್ನಿ ಎಂದು ಯಾರಿಗಾದರೂ ಹೇಳಿ ಎಂದು ನಾನು ಹೇಳುತ್ತಿದ್ದೇನೆ.

ಈ ಮಸೂದೆ ಬಗ್ಗೆ ಹೇಳುವುದಾದರೆ, ಈ ಮಸೂದೆಯಲ್ಲಿ ಯಾವ ಉದ್ದೇಶಗಳನ್ನು, ಕಾರಣಗಳನ್ನು ಹೇಳಲಾಗಿತ್ತು ಎನ್ನುವುದು ನನಗೆ ನೆನಪಿದೆ :

"ಎಲ್ಲ ಪ್ರಾಂತಗಳಿಗಾಗಿ, ಎಲ್ಲ ವರ್ಗಗಳ ಜನರಿಗಾಗಿ ಹಿಂದೂ ನ್ಯಾಯಪದ್ಧತಿಯ ಎಲ್ಲ ಶಾಖೆಗಳಲ್ಲಿ ಏಕರೂಪತೆ ತರುವುದು ಈ ಮಸೂದೆಯ ಉದ್ದೇಶ. ಹಿಂದೂ ನ್ಯಾಯಪದ್ಧತಿಯ ಹಳೆಯ ಜಟಿಲ, ಸೂಕ್ಷ್ಮ ಹಾಗೂ ಬೇರೆ ಬೇರೆ ಕಟ್ಟುಕಟ್ಟಳೆಗಳನ್ನು ಕೂಡ ಸರಳಗೊಳಿಸಲಾಗಿದೆ. ಮಸೂದೆಯ ಬಹುತೇಕ ಕಲಮುಗಳು, ಅನುಮತಿ ಕೊಡುವ ಅಥವಾ ಅವಕಾಶ ಕೊಡುವ ಸ್ವರೂಪದವುಗಳಾಗಿವೆ. ಸಮಾಜದ ಸಂಪ್ರದಾಯಸ್ಥ ಜನರ ಮೇಲೆ ಯಾವ ರೀತಿಯ ಬಲವಂತವೂ ಅಥವಾ ನಿರ್ಬಂಧವೂ ಇಲ್ಲ. ಯಾರು ಹಳೆಯ ರೀತಿನೀತಿಗಳನ್ನೇ ಅನುಸರಿಸಬಯಸುತ್ತಾರೋ ಅಂಥವರ ಸ್ವಾತಂತ್ರ್ಯಕ್ಕೆ ಯಾವುದೇ ರೀತಿಯಲ್ಲೂ ಬಾಧಕ ಉಂಟುಮಾಡದಿರುವುದೇ, ಅಂಥವರ ಸ್ವಾತಂತ್ರ್ಯವನ್ನು ಅತಿಕ್ರಮಿಸದಿರುವುದೇ ಹಾಗೂ ಪ್ರವರ್ಧಮಾನಕ್ಕೆ ಬರುತ್ತಿರುವ ಹಿಂದೂ ಜನಾಂಗದ ಪುರುಷರಿಗೆ, ಮಹಿಳೆಯರಿಗೆ, ತಮ್ಮಿಚ್ಛೆಯಂತೆಯೇ ಬದುಕನ್ನು ನಡೆಸುವ ಸ್ವಾತಂತ್ರ್ಯವನ್ನು ಕೊಡುವುದೇ ಈ ಕಲಮುಗಳ ಆಶಯ."

ಸರ್, ಈ ಹುಮ್ಮಸ್ಸಿನಿಂದಲೇ, ನಿನ್ನೆ, ಡಾ. ಅಂಬೇಡ್ಕರ್‌ರವರು ಮಾತನಾಡಿದರು. ತಿಳಿವಳಿಕೆ ಇರುವ, ತಿಳಿವಳಿಕೆ ಇಲ್ಲದ ಎರಡೂ ವರ್ಗದ ಜನರಿಗೆ ಅವಕಾಶಗಳಿರಬೇಕೆಂಬುದೂ ಕೂಡ ನಮ್ಮ ಆಶಯ. ಅವರಿಗೆ ನನ್ನ ವಿನಯಪೂರ್ವಕ ವಿನಂತಿ ಏನೆಂದರೆ, ಆ ಬಗ್ಗೆ ಅವರು ಹೇಳಿರುವುದೇನೋ ಸರಿ ಆದರೆ, ಸಮಾಜ ಜೀವನದಲ್ಲಿ ತಿಳಿವಳಿಕೆ ಉಳ್ಳವರೆಂದು, ಇಲ್ಲವೇ ತಿಳಿವಳಿಕೆ ಇಲ್ಲದವರೆಂದು ನೀವು ಪರಿಗಣಿಸದೇ ಇರುವಂತಹ ಆ ದೀನ ಜನರಿಗಾಗಿ, ನೀವು ಮಸೂದೆಯಲ್ಲಿ ಸರಿಯಾದ ಕಲಮುಗಳನ್ನು ಕೊಟ್ಟಿಲ್ಲ. ಡಾ. ಅಂಬೇಡ್ಕರ್‌ರವರು ಅಂಥವರಿಗೂ ಈ ಭೂಮಿಯಲ್ಲಿ ಬದುಕುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ.

ಸರ್, ಪ್ರಗತಿಪರವಾದವುಗಳನ್ನು ಅಳವಡಿಕೊಳ್ಳುವುದಕ್ಕೆ ಅವಕಾಶ ಕೊಡುವ ಕೆಲವೊಂದು ಕಲಮುಗಳನ್ನು ಸೇರಿಸುವುದು, ಹಳೆಯ ಗ್ರಂಥಗಳಲ್ಲಿ ಹೇಳಿರುವುದಕ್ಕೆ ವ್ಯತಿರಿಕ್ತವಾಗಿ ಬೆಳೆದ ಸಂಪ್ರದಾಯಗಳನ್ನು ಮಾನ್ಯ ಮಾಡುವುದು ಕ್ರೋಡೀಕರಣದ ಮೂಲ ತತ್ತ್ವ. ಸುಸ್ಥಾಪಿತ ಹಕ್ಕು ಬಾಧ್ಯತೆಗಳನ್ನು ಕಾನೂನಿನ ಕಲಮುಗಳನ್ನು ಈ ರೀತಿ ಕನಿಕರ ಇಲ್ಲದೆಯೇ ಬದಲಾವಣೆ ಮಾಡುವ ಉದ್ದೇಶ ಯಾವಾಗಲೂ ಇರಲಿಲ್ಲ. ಇದು ಇಡೀ ಸಮಾಜದಲ್ಲಿ ಕೆಟ್ಟ ದ್ವೇಷ ವೈಷಮ್ಯವನ್ನು ಹುಟ್ಟು ಹಾಕುತ್ತದೆ. ನಮ್ಮ ಎಲ್ಲ ಸಂಪ್ರದಾಯಗಳನ್ನು ನಮ್ಮ ಎಲ್ಲ ಅಚ್ಚುಮೆಚ್ಚಿನ ಪದ್ಧತಿಗಳನ್ನು ಈ ಮಸೂದೆಯು ನುಚ್ಚುನೂರು ಮಾಡುತ್ತಿದೆ.

ನಾನು ಈಗ ಉತ್ತರಾಧಿಕಾರದ ಬಗೆಗಿನ ಇತರ ಕಲಮುಗಳ ಬಗ್ಗೆ ಹೇಳುತ್ತೇನೆ. ಸ್ಥಿತಿ ಇನ್ನೂ ಚಿಂತಾಜನಕ. ಸರ್, ಮಿತಾಕ್ಷರದ ಪ್ರಕಾರ, ವಾರಸುದಾರಿಕೆಗೆ ರಕ್ತಸಂಬಂಧವೇ ಆಧಾರ, ದಾಯಭಾಗದ ಪ್ರಕಾರ ಧರ್ಮದ ಪ್ರಭಾವವೇ ಆಧಾರ ಎಂಬುದು ನಮಗೆ ಗೊತ್ತಿದೆ. ವಾರಸುದಾರಿಕೆ ಬಗ್ಗೆ ಡಾ.

ಅಂಬೇಡ್ಕರ್‌ರವರು, ದಯೆ ತೋರಿ, ನಮಗೆ ಇನ್ನೊಂದು ಆಧಾರ ಕೊಟ್ಟಿದ್ದಾರೆ. ಅವರೇನು ಮಾಡುತ್ತಿದ್ದಾರೋ ಅದು ಅಂಥಾ ತಪ್ಪೇನೂ ಅಲ್ಲವೆಂದು ನಾನು ಹೇಳಬಯಸುವುದಿಲ್ಲ. ಅವರು ಸರಿಯಾದುದನ್ನೇ ಮಾಡುತ್ತಿದ್ದಾರೆ. ಆದರೆ, ಈ ನಿಜವಾದ ಪ್ರೀತಿ, ಪ್ರೇಮವನ್ನು ತೂಗಿ ನೋಡುವುದಕ್ಕೆ ಅಳತೆಗೋಲು ಯಾವುದು ನನಗೆ ಗೊತ್ತಿಲ್ಲ. ಪ್ರೀತಿ, ಪ್ರೇಮವನ್ನು ಬಹುಶಃ ಅರ್ಥಮಾಡಿಕೊಳ್ಳಬಹುದೇನೋ. ನಿಜವಾದ ಪ್ರೀತಿ ಏನೆಂದರೆ ನನಗೆ ಗೊತ್ತಿಲ್ಲ. ನಮ್ಮ ಕಲ್ಪನೆಗಳ ಪ್ರಕಾರ, ಸಹೋದರ, ನಮಗೆ ತುಂಬಾ ಪ್ರೀತಿಪಾತ್ರನಾದವನು. ಪರಮಪೂಜ್ಯವಾದ ಗ್ರಂಥ ರಾಮಾಯಣದಲ್ಲಿ, ಲಕ್ಷ್ಮಣನಲ್ಲಿ, ಭ್ರಾತೃತ್ವ ಸಾಕಾರಗೊಂಡಿದೆ. ಸರ್, ಚಿಕ್ಕಪ್ಪಂದಿರು ತಂದೆ ತಾಯಿಯಂತೆಯೇ ನಮಗೆ ತುಂಬಾ ಪ್ರೀತಿಪಾತ್ರರು. ಆದರೆ, ಹಿಂದೂ ಸಂಹಿತೆಯಲ್ಲಿ, "ಚಿಕ್ಕಪ್ಪಂದಿರ, ಸಹೋದರರ ಸ್ಥಾನ ಎಲ್ಲಿದೆ?" ವಾರಸುದಾರರ ಪಟ್ಟಿಯಲ್ಲಿ ಅವರುಗಳ ಸ್ಥಾನಕ್ಕೆ ಯಾವ ಚ್ಯುತಿಬಂದಿದೆ, ಅವರುಗಳನ್ನು ಎಲ್ಲಿಗೆ ಇಳಿಸಲಾಗಿದೆ, ಅವರನ್ನು ಎಲ್ಲಿ ಇಡಲಾಗಿದೆ ಎಂಬುದನ್ನು ಹೇಳಿದರೆ ನಿಮಗೆ ಮತ್ತೂ ಆಶ್ಚರ್ಯವಾಗುತ್ತದೆ. ದಯವಿಟ್ಟು ಏಳನೆಯ ಅನುಸೂಚಿಯನ್ನು ನೋಡಿ ಅದನ್ನು ವಾರಸುದಾರಿಕೆ ಬಗ್ಗೆ ಹಿಂದೂಗೆ ಅನ್ವಯಿಸಲು ಉದ್ದೇಶಿಸಲಾಗಿದೆ. ಅದರಲ್ಲಿನ ಮೊದಲನೆಯ ಕಲಮಿನಲ್ಲಿ ಏಳು ಬಗೆಯ ಜನರಿರುವುದು ನಿಮಗೆ ಕಂಡುಬರುತ್ತದೆ. ಸರ್, ನಿಜವಾದ ಪ್ರೀತಿ ಪ್ರೇಮದ ಈ ಹೊಸ ತತ್ತ್ವಕ್ಕೆ ಈ ಕಲಮು ಯಾವ ರೀತಿ ಸಂಬಂಧಪಡುತ್ತದೆಂದು ನಾನು ತಿಳಿದುಕೊಳ್ಳಬಯಸುತ್ತೇನೆ. ಮೊದಲನೆಯ ಪ್ರಾಶಸ್ತ್ಯ : "ಮಗ; ವಿಧವೆ, ಮಗಳು" ಇದೇನೊ ಸರಿ ಎಂದು ಅಂದುಕೊಳ್ಳಬಲ್ಲೆ. ನಂತರ ಪ್ರಾಶಸ್ತ್ಯ; "ಹಿಂದೆ ಮೃತನಾದ ಮಗನ ಮಗ" ಇದೂ ಕೂಡ ಸರಿ ಎಂದು ಒಪ್ಪಿಕೊಳ್ಳುವೆ. ನಂತರದ ಪ್ರಾಶಸ್ತ್ಯ : "ಹಿಂದೆ ಮೃತನಾದ ಮಗನ ಹೆಂಡತಿ." ನಿಜವಾದ ಪ್ರೀತಿ ಪ್ರೇಮದ ತತ್ವದ ಪ್ರಕಾರ, ಮಗಳಿಗಿಂತ, ಮಗನಿಗಿಂತ ಅಥವಾ ಚಿಕ್ಕಪ್ಪನಿಗಿಂತ ವಿಧವೆಗೆ ಹೇಗೆ ಪ್ರಾಶಸ್ತ್ಯ ಕೊಡಲಾಗಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನಿಜವಾದ ಪ್ರೀತಿ ಪ್ರೇಮದ ವಿಚಾರದ ಬಗ್ಗೆ ಹೇಳುವುದಾದರೆ, ಹಿಂದೆ ಮೃತನಾದ ಮಗನ ಹೆಂಡತಿಗೆ ಅಂದರೆ ವಿಧವೆಗೆ, ಹಿಂದೆ ಮೃತನಾದ ಮಗನ ಮೃತ ಮಗನ ಮಗನಿಗೆ ಪ್ರಾಶಸ್ತ್ಯ ಕೊಟ್ಟಿರುವುದನ್ನು ಒಪ್ಪಿಕೊಳ್ಳಬೇಕೆಂದು ನನಗನಿಸುತ್ತಿಲ್ಲ. ಇವರುಗಳಿಗೆ ಮಸೂದೆಯಲ್ಲಿ ಪ್ರಾಶಸ್ತ್ಯ ಕೊಟ್ಟಿರುವುದಕ್ಕೆ ತಪ್ಪು ದೃಷ್ಟಿಕೋನವೇ ಆಧಾರವೆಂಬುದು ನನ್ನ ಅಭಿಪ್ರಾಯ. ಅಂಥ ಮಹಿಳೆಯರಿಗೆ ಬೇರೆಲ್ಲೂ ಪ್ರಾಶಸ್ತ್ಯ ಕೊಟ್ಟಿರದಿದ್ದು, ಇಲ್ಲಿ ಮಾತ್ರವೇ ಅಂಥ ಮಹಿಳೆಯರಿಗೆ ಪ್ರಾಶಸ್ತ್ಯ ಕೊಟ್ಟಿದ್ದರೆ ಅರ್ಥ ಮಾಡಿಕೊಳ್ಳುತ್ತಿದ್ದೆ. ವಿಧವೆಯನ್ನು ಬಿಟ್ಟು, ಹಿಂದೆ ಮೃತನಾದ ಮಗನ ಹೆಂಡತಿಗೆ ಅಥವಾ ಮಗನ ಹೆಂಡತಿಗೆ ಪ್ರಾಶಸ್ತ್ಯ ಕೊಟ್ಟಿದ್ದರೆ ಅರ್ಥ ಮಾಡಿಕೊಳ್ಳುತ್ತಿದ್ದೆ."

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಇದು ಶಾಸನದಿಂದಾಗಿದೆ. ಮಾನ್ಯ ಗೆಳೆಯರು, ೧೯೩೭ ಮಹಿಳೆ ಆಸ್ತಿ ಕಾಯ್ದೆಯನ್ನು ಓದಿದರೆ, ಈ ಜನರನ್ನು ಏಕಕಾಲಿಕವಾಗಿ ಏಕೆ ಅದೇ ವರ್ಗದಲ್ಲಿ ಇಡಲಾಗಿದೆಯೆಂಬುದು ಅವರಿಗೆ ಗೊತ್ತಾಗುತ್ತದೆ.

**ಪಂಡಿತ ಠಾಕೂರ್‌ದಾಸ್ ಭಾರ್ಗವ** : ಗೆಳೆಯ ಡಾ. ಅಂಬೇಡ್ಕರ್‌ರವರಿಗೆ ಅದು ಚೆನ್ನಾಗಿ ಗೊತ್ತಿದೆ ಆದರೆ, ಆ ೧೯೩೭ರ ಕಾಯ್ದೆಯಲ್ಲಿ ಆ ಕಲಮು ಸೇರಿಸುವಾಗ, "ಮಗಳು" ಸೇರಿರಲಿಲ್ಲ.

**ಸನ್ಮಾನ್ಯ ಡಾ. ಅಂಬೇಡ್ಕರ್ :** ನಾನು ಹೇಳಿದ್ದೂ ಅದನ್ನೇ.

**ಪಂಡಿತ ಠಾಕೂರ್‌ದಾಸ್ ಭಾರ್ಗವ** : ಮಗಳು, ತಂದೆಯ ಉತ್ತರಾಧಿಕಾರಿಯಾಗಲು, ಮಾವನ ಉತ್ತರಾಧಿಕಾರಿಯಾಗಲು ಅವಕಾಶ ಕೊಡುವುದಕ್ಕೆ ನೀವು ಇದನ್ನು ಸೇರಿಸ ಬಯಸಿದ್ದೀರಿ. ಇದು, ಸಂಪೂರ್ಣವಾಗಿ ನ್ಯಾಯೋಚಿತ ಅಲ್ಲ. ನೀವು ಹೊಸ ಸಂಹಿತೆಯನ್ನು ರಚಿಸುತ್ತಿರುವಾಗ ಇದಕ್ಕೆ ನೀವು

ಏಕೆ ಅವಕಾಶ ಕಲ್ಪಿಸಿಲ್ಲ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ, ಎಲ್ಲ ಹಕ್ಕುಬಾಧ್ಯತೆಗಳನ್ನು ತೃಪ್ತಿಕರವಾಗಿ ಸರಿದೂಗಿವುದಕ್ಕೆ ನೀವು ಕಾನೂನುಗಳನ್ನು ರಚಿಸುತ್ತೀದ್ದೀರಿ. ೧೯೩೭ರ ಕಾಯ್ದೆ ಇರುವಾಗ, ನೀವು ಈ ಕಲಮುಗಳನ್ನು ಹೇಗೆ ಸೇರಿಸಿದಿರಿ? ಈ ಕಮಿಟಿಯು ಹೀಗೆ ಮಾಡಿರುವುದು ಸಮರ್ಥನೀಯ ಎಂದು ನನಗನ್ನಿಸುತ್ತಿಲ್ಲ. ಪ್ರತಿಯೊಂದು ಹಕ್ಕುಬಾಧ್ಯತೆಯನ್ನು ತೃಪ್ತಿಪಡಿಸುವಂತಹ ಪೂರ್ಣ ಪ್ರಮಾಣದ ಸಂಹಿತೆಯನ್ನು ಕಮಿಟಿಯು ಕೊಡಬೇಕಿತ್ತು. ನೀವು ಅದನ್ನು ಬೇರೇ ರೀತಿಯಲ್ಲಿ ಸಮರ್ಥಿಸಿಕೊಳ್ಳಲು ಆಗುತ್ತಿಲ್ಲ. ಆದ್ದರಿಂದ, ನೀವು ಆ ಕಾಯ್ದೆಯ ಮೊರೆ ಹೋಗುತ್ತಿದ್ದೀರಿ. ಸರ್, ಇದೇ ವಸ್ತುಸ್ಥಿತಿ.

ಮೂಲ ಮಸೂದೆಯ ೨ನೇ ಕಲಮಿನ ಬಗ್ಗೆ ಹೇಳುತ್ತೇನೆ. ಅದು, "ತಾಯಿ"ಯನ್ನು ಯೋಗ್ಯ ವಾರಸುದಾರಳೆಂದು ಪರಿಗಣಿಸಿತ್ತು. ಏಕೆಂದರೆ, ವರ್ಗೀಕರಣದಲ್ಲಿ, "ತಾಯಿ" ತಂತಾನೆ ಪ್ರಧಾನ ವರ್ಗ ಆಗಿತ್ತು. ತಾಯಿ ಒಬ್ಬಳೇ ಉತ್ತರಾಧಿಕಾರಿ ಆಗಿದ್ದಳು. ಇಲ್ಲಿ ನಿಜವಾದ ಪ್ರೀತಿ ಪ್ರೇಮವನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಈಗ 'ತಂದೆ'ಯನ್ನು 'ತಾಯಿ' ಜೊತೆ ಸೇರಿಸಿ, ಒಟ್ಟಿಗೆ ಪ್ರಾಶಸ್ತ್ಯ ಕೊಡಲಾಗಿದೆ. ತಾವು ಇನ್ನೂ ಮುಂದೆ ನೋಡಿದರೆ, ನಾನು ಹೇಳುವುದು ಚೆನ್ನಾಗಿ ಅರ್ಥವಾಗುತ್ತದೆ. ತಾವು ಎರಡನೇ ವರ್ಗವನ್ನು ನೋಡಿದರೆ, ಮಗನ ಮಗಳು, ಮಗಳ ಮಗಳು ಇರುವುದು ಕಂಡುಬರುತ್ತದೆ. ಮಗನ ಮಗಳಿಗೆ ಮಿತಾಕ್ಷರ ನ್ಯಾಯದಲ್ಲಿ ಒಂದು ವಿಶೇಷ ಸ್ಥಾನ ಇದೆ. ಮಿತಾಕ್ಷರ ನ್ಯಾಯದ ಪ್ರಕಾರ, ಮಗಳು ಅಚ್ಚುಮೆಚ್ಚಿನ ವಾರಸುದಾರರಲ್ಲಿ ಒಬ್ಬಳು. ಸರ್, ಈಗೇನಾಗಿದೆಯೆಂದರೆ, ಮೂಲ ಮಸೂದೆಯಲ್ಲಿ ಮೊದಲನೇ ವರ್ಗದಲ್ಲಿ, ಮಗಳ ಮಗ, ತಂದೆ ತಾಯಿಗಿಂತ ಮೊದಲೇ ಇದ್ದ. ಈಗ, ಮಗಳ ಮಗ ಕೆಳಗಡೆಗೆ ಹೋಗಿದ್ದಾನೆ. ಸರ್, ತಾವು ಇನ್ನೂ ಮುಂದೆ ನೋಡಿದರೆ, ನಾಲ್ಕನೇ ವರ್ಗದಲ್ಲಿ ಸಹೋದರ, ಸಹೋದರಿ ಇದ್ದಾರೆ. ಐದನೆಯ ವರ್ಗದಲ್ಲಿ ಸಹೋದರನ ಮಗ, ಸಹೋದರಿಯ ಮಗ, ಸಹೋದರನ ಮಗಳು ಎಲ್ಲರೂ ಇದ್ದಾರೆ. ಸಹೋದರನ ಮಗನನ್ನು, ಸಹೋದರಿಯ ಮಗನಿಗೆ, ಸಹೋದರಿಯ ಮಗಳಿಗೆ ಸಮಾನವನ್ನಾಗಿ ಮಾಡಲಾಗಿದೆ ಎಂದು ಹೇಳುತ್ತಿದ್ದೇನೆ. ಈ ಸಮಾನತೆ ಅವಿವೇಕದ್ದೆಂದು ನಾನು ಹೇಳಲೇಬೇಕಾಗಿದೆ. ನಮ್ಮ ಕುಟುಂಬಗಳಲ್ಲಿ ಸಹೋದರನ ಸ್ಥಾನ ಯಾವುದು, ಸಹೋದರನ ಮಗನ ಸ್ಥಾನ ಯಾವುದು ಎಂಬುದು ನಮಗೆ ಗೊತ್ತಿದೆ. ಇದು, ಕಳೆದ ಸಾವಿರಾರು ವರ್ಷಗಳಿಂದಲೂ ನಾವು ಅನುಸರಿಸಿಕೊಂಡು ಬಂದಿರುವ ಕುಟುಂಬ ವ್ಯವಸ್ಥೆಯ ಅಥವಾ ಪದ್ಧತಿಯ ಫಲ. ಈ ತೀಕ್ಷ್ಣ ಸಂದರ್ಭದಿಂದ ನಾವು ತಪ್ಪಿಸಿಕೊಳ್ಳುವ ಹಾಗಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ನಿಮ್ಮ ಮೇಲೆ ತಿರುಗಿಬೀಳುವಂತಹ ಕಲಮುಗಳನ್ನು ಈ ಮಸೂದೆಯಲ್ಲಿ ನೀವು ತರುತ್ತಿದ್ದೀರಿ. ಏಕೆಂದರೆ, ಈ ಕಲಮುಗಳನ್ನು ಆದೇಶ ಮಾಡುವ ಮೂಲಕ ಆಚರಣೆಗೆ ತರುವುದಕ್ಕಾಗುವುದಿಲ್ಲ. ಈ ಮಸೂದೆಯ ಕಲುಮುಗಳ ಪ್ರಕಾರ, ಪ್ರತಿಯೊಬ್ಬ ಹಿಂದೂಗೆ, ಮಹಿಳೆಗೆ, ಪುರುಷನಿಗೆ ಉಯಿಲು ಬರೆಯುವ ಸಂಪೂರ್ಣ ಹಕ್ಕಿರುತ್ತದೆ. ಇನ್ನು ಮುಂದೆ, ಪ್ರತಿಯೊಬ್ಬ ಪುರುಷ, ಮಹಿಳೆಯು ಈ ವಾರಸುದಾರಿಕೆಗೆ ಸಂಪೂರ್ಣ ಅಧಿಪತಿಗಳಾಗುತ್ತಾರೆ. ಮಹಿಳೆಯರಿಗೆ ಬಾಧಕ ಉಂಟು ಮಾಡುವಂತೆ ಅಧಿಕಾರವನ್ನೇನಾದರೂ ನೀವು ನನ್ನ ಕೈಗೆ ಕೊಟ್ಟರೆ ನಾನು ಆ ಅಧಿಕಾರವನ್ನು ಮಹಿಳೆಯರಿಗೆ ಬಾಧಕ ಉಂಟು ಮಾಡುವುದಕ್ಕಾಗಿ ಬಳಸುವುದಿಲ್ಲ. ಸಾಯುವ ಸಮಯದಲ್ಲಿ ತಂದೆ, ಗಂಡುಮಕ್ಕಳ ಅಧೀನದಲ್ಲಿರುತ್ತಾನೆ. ತಂದೆ ಹೆಣ್ಣುಮಕ್ಕಳಿಗೆ ಉಯಿಲು ಬರೆಯದಂತೆ ನಿಭಾಯಿಸುತ್ತಾರೆ. ಹೀಗೆ ಹೇಳುತ್ತಿರುವ ನಾನು, ನಿಮಗೆ ಒಂದು ಸಂಗತಿ ಹೇಳಬಯಸುತ್ತೇನೆ. ನನಗೂ ಒಬ್ಬಳು ಮಗಳಿದ್ದಾಳೆ, ನನ್ನ ಗಂಡುಮಕ್ಕಳಿಗೆ ಕೊಟ್ಟಂತೆಯೇ ಮಗಳಿಗೂ ಕೊಟ್ಟೆನೆಂದುಕೊಳ್ಳಿ, ನಾನು, ನನ್ನ ಗಂಡುಮಕ್ಕಳು, ಅವರ ಹೆಂಡತಿಯರು ಒಟ್ಟಿಗೆ ಇರುವ ನನ್ನ ಮನೆಯಲ್ಲಿ, ಮಗಳು, ಅಳಿಯ, ಅತ್ತೆ, ಮಾವ, ಹಿರಿಯ

ಮೈದುನ ಎಲ್ಲರೂ ಬಂದು ಕೋಣೆಗಳಲ್ಲಿ ತಳ ಊರುವುದು ನನಗಿಷ್ಟವಾಗುವುದಿಲ್ಲ. ಅದೊಂದು ಸಹಿಸಲಾಗದ ಸನ್ನಿವೇಶ.

**ಸನ್ಮಾನ್ಯ ಡೆಪ್ಯುಟಿ ಸ್ಪೀಕರ್:** ಮಸೂದೆ ಪ್ರಕಾರ, ಮಾವ, ಅತ್ತೆಗೆ ಅಷ್ಟೊಂದು ರಕ್ಷಣೆಗೆ ಅವಕಾಶ ಇಲ್ಲ.

**ಪಂಡಿತ ಠಾಕೂರ್‌ದಾಸ್ ಭಾರ್ಗವ** : ಮಗನ ಜೊತೆ ಅವರೂ ಬಂದು ಬಿಡುತ್ತಾರೆ, ಹಾಗಾಗುವ ಸಾಧ್ಯತೆ ಇದೆಯೆಂಬುದನ್ನು ನಾನು ತೋರಿಸಿಕೊಡುತ್ತೇನೆ. ಮಗಳ ಮನೆಯಲ್ಲಿ ಒಂದು ತೊಟ್ಟು ನೀರು ಮುಟ್ಟದ ತಂದೆಗೆ ಮಗಳ ಆಸ್ತಿ ಬರುತ್ತದೆ, ಇನ್ನು ಅವಳ ಗಂಡನ ಬಗ್ಗೆ ಮುಂದೆ ಹೇಳುತ್ತೇನೆ.

ಈ ರೀತಿಯಲ್ಲಿ ಮಹಿಳೆಯರು ತಮ್ಮ ಹಕ್ಕುಗಳನ್ನು ಕಳೆದುಕೊಳ್ಳುವ ಭಾರಿ ಅಪಾಯಕ್ಕೆ ಸಿಲುಕುತ್ತಾರೆಂದು ಹೇಳುತ್ತಿದ್ದೇನೆ. ತಂದೆ, ಮಗಳನ್ನು ವಾರಸುದಾರಳನ್ನಾಗಿ ಮಾಡುವುದಿಲ್ಲ. ಒಂದನೆಯ ವರ್ಗದ ಪ್ರಕಾರ ಆಕೆ ಒಬ್ಬ ವಾರಸುದಾರಳಲ್ಲ. ಸೊಸೆಯಾಗಿ ಮಾವನ ಆಸ್ತಿಗೆ ಉತ್ತರಾಧಿಕಾರಿಯಾಗುವುದಿಲ್ಲ. ಆದರೆ, ವಿಧವೆ ಆಗಿದ್ದರೆ, ಉತ್ತರಾಧಿಕಾರಿಯಾಗುತ್ತಾಳೆ. ಹಾಗಾದರೆ ಆಕೆಯ ಸ್ಥಾನ ಯಾವುದು? ನನಗೆ ಅರ್ಥವಾಗುತ್ತಿಲ್ಲ. ಆಕೆಗೆ ತುಂಬಾ ಅನ್ಯಾಯವಾಗುತ್ತದೆ. ಸರ್, ಮಹಿಳೆಯರಿಗೆ ಸಂಪೂರ್ಣವಾದ ಹಕ್ಕುಬಾಧ್ಯತೆಗಳಿರಬೇಕೆಂಬುದು ನನ್ನ ಆಶಯ. ನಾನು ಹೇಳುತ್ತಿರುವ ಈ ತತ್ವವು, ಇದರ ಬಗ್ಗೆ ನಾನು ಅಷ್ಟೊಂದು ಗಹನ ಚಿಂತನೆ ಮಾಡಿಲ್ಲವಾದರೂ, ಇದನ್ನು ಇಡೀ ಸದನದ ಹಾಗೂ ಡಾ. ಅಂಬೇಡ್ಕರ್‌ರವರ ಪರ್ಯಾಲೋಚನೆಗೆ ಬಿಟ್ಟಿದ್ದೇನೆ, ಇದು ಹೇಗೆ ಇತರರ ಹಿತದೃಷ್ಟಿಗೆ ಬಾಧಕವಾಗುತ್ತದೆ ಎಂಬುದು ನನಗೆ ಗೊತ್ತಿಲ್ಲ. ಇದರಲ್ಲಿ ಲೋಪದೋಷಗಳಿರಬಹುದು, ಇದನ್ನು ಖಾತ್ರಿಪಡಿಸಿ ಎಂದು ನಾನು ಹೇಳುತ್ತಿಲ್ಲ. ಆದರೆ, ಇದು ಈಗಿನ ವ್ಯವಸ್ಥೆಗಿಂತಲೂ ಯೋಗ್ಯ ವ್ಯವಸ್ಥೆಯಾಗಬಲ್ಲದೆಂದು ನನ್ನ ಭಾವನೆ. ಮದುವೆ ಆಗಿರದ ಮಗಳೂ ಕೂಡ ಮಗನಂತೆಯೇ ಏಕಕಾಲದಲ್ಲಿ ಉತ್ತರಾಧಿಕಾರಿಯಾಗುತ್ತಾಳೆನ್ನುವುದು ತತ್ತ್ವ. ಮಹಿಳೆಗೆ ಮದುವೆ ಆದ ಮೇಲೆ, ಹೇಗೆ ಗಂಡ, ಆಕೆಯ ಆಸ್ತಿಯ ಜಂಟೀ ಒಡೆಯನಾಗುತ್ತಾನೋ ಹಾಗೆಯೇ ಆಕೆಯೂ ಸಹ ಗಂಡನ ಆಸ್ತಿಯ ಜಂಟೀ ಒಡೆಯಳಾಗುತ್ತಾಳೆ. ಅಂದಮೇಲೆ ಇಬ್ಬರೂ ಕುಟುಂಬದಲ್ಲಿ ಉತ್ತರಾಧಿಕಾರಿಗಳಾಗುತ್ತಾರೆ.

ಸರ್, ಇನ್ನು, ಸಹೋದರನ ಮಗನ, ಸಹೋದರಿಯ ಮಗನ ಸ್ಥಾನ ಯಾವುದು? ಇಬ್ಬರೂ ಸಮಾನ ಸ್ಥಾನದಲ್ಲಿದ್ದಾರೆ. ಸಹೋದರನ ಮಗ ಬಹುಶಃ ಅದೇ ಮನೆಯಲ್ಲಿರುತ್ತಾನೆ ಅಥವಾ ಎದುರು ಮನೆಯಲ್ಲಿರುತ್ತಾನೆ, ಪ್ರತಿ ದಿನ ಚಾಕರಿ ಮಾಡಿಕೊಂಡಿರುತ್ತಾನೆ. ಆದರೆ, ಅದೇ ಸಹೋದರಿಯ ಮಗ ಅಲಹಾಬಾದಿನಲ್ಲೋ, ಮದ್ರಾಸಿನಲ್ಲೋ ಅಥವಾ ಇನ್ನೆಲ್ಲೋ ಇರುತ್ತಾನೆ. ಇವರು ಹೇಗೆ ಸಮಾನರಾಗುತ್ತಾರೆ. ಇತರ ಕಲಮುಗಳ ಬಗ್ಗೆ ಸಹ – ನಾನು ಸಂಕ್ಷಿಪ್ತವಾಗಿ ಹೇಳುತ್ತೇನೆ – ಮಾತನಾಡಲು ನನಗೆ ಅವಕಾಶ ಕೊಡುವುದಾದರೆ, ನಾನು ಸಂಪೂರ್ಣವಾಗಿ ಸಿದ್ಧನಾಗಿಯೇ ಬಂದಿದ್ದೇನೆ. ಬದಲಾವಣೆಗಳ ಬಗ್ಗೆ, ಅವು ಹೇಗೆ ಬಾಧಕ ಆಗುತ್ತವೆ ಎಂಬ ಬಗ್ಗೆ ವಿವರವಾದ ಟಿಪ್ಪಣಿ ನನ್ನಲ್ಲಿದೆ – ಆದರೆ, ಇತರ ಸದಸ್ಯರುಗಳು ಮಾತನಾಡುವ ಅವಕಾಶವನ್ನು ತಪ್ಪಿಸುವಂತಹ ರೀತಿಯಲ್ಲಿ ಸದನದ ಸಮಯವನ್ನು ತೆಗೆದುಕೊಳ್ಳುತ್ತಿದ್ದೇನೇನೂ ಎಂದು ಅನ್ನಿಸುತ್ತದೆ.

**ಮಾನ್ಯ ಸದಸ್ಯರುಗಳು** : ತಾವು ಮಾತು ಮುಂದುವರೆಸಿ.

**ಪಂಡಿತ ಠಾಕೂರದಾಸ್ ಭಾರ್ಗವ** : ರಕ್ತಸಂಬಂಧದ ದೃಷ್ಟಿಯಿಂದ ಅಥವಾ ಧಾರ್ಮಿಕ ಪ್ರಭಾವದ ದೃಷ್ಟಿಯಿಂದ ಹಾಗೂ ನಿಜವಾದ ಪ್ರೀತಿ ಪ್ರೇಮದ ದೃಷ್ಟಿಯಿಂದ (೨)ನೆಯ ಕಲಮಿನಲ್ಲಿರುವ ಈ ನಿಬಂಧನೆಗೆ ಸರಿಯಾದ ಆಧಾರವಿಲ್ಲವೆಂಬುದನ್ನು ತೋರಿಸುವಂತಹ ಹಲವಾರು ಇತರ ವಿಚಾರಗಳು ಇವೆ.

ಸರ್, ನಾನೀಗ, ಮಹಿಳಾ ಉತ್ತರಾಧಿಕಾರದ ಬಗ್ಗೆ ಹೇಳುತ್ತೇನೆ. ಹಿಂದೂ ಸಂಹಿತೆ ಮಸೂದೆಯು ಜಾರಿಗೆ ಬಂದಾದ ಮೇಲೆ ಮಹಿಳೆಯು ತಂದೆಯ ಆಸ್ತಿಗೆ, ಹಾಗೆಯೇ, ಗಂಡನ ಆಸ್ತಿಗೆ ಉತ್ತರಾಧಿಕಾರಿಯಾಗುತ್ತಾಳೆ. ಒಂದು ವೇಳೆ ಮಹಿಳೆಯು ಮೃತಪಟ್ಟರೆ, ಗಂಡನಿಗೆ ಹಕ್ಕು ಬರುತ್ತದೆ, ಮಗನೂ ಕೂಡ ಉತ್ತರಾಧಿಕಾರಿಯಾಗುತ್ತಾನೆ. ಅದೇನೋ ಸರಿ. ಆದರೆ, ಗಂಡ ಮತ್ತು ಮಗ ಇಬ್ಬರೂ ಇಲ್ಲದಿದ್ದರೆ, ಉತ್ತರಾಧಿಕಾರಿ ಯಾರು? ಮಹಿಳೆಯ ತಂದೆ, ತಾಯಿಯೇ? ಮಗಳ ಮನೆಯಲ್ಲಿ ಒಂದು ತೊಟ್ಟು ನೀರೂ ಮುಟ್ಟದ ಈ ಜನರಿಗೆ – ಇಂಥವರು ಲಕ್ಷಾಂತರ ಮಂದಿ ಇದ್ದಾರೆ – ಆಸ್ತಿ ಬರುತ್ತದೆ. (ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ: "ಏಕೆ") ನಿಮಗಿದು ಅರ್ಥವಾಗುವುದಿಲ್ಲ, ಇದೇ ತೊಂದರೆ. ನೀವು ಗ್ರಹಿಸುವುದಿಲ್ಲ, ಸರ್, ತಂದೆಯು, ಮಗಳನ್ನು ಅಳಿಯನ ಮನೆಗೆ ಕಳುಹಿಸಿದ ಕ್ಷಣದಿಂದಲೇ, ಮಗಳ ಮನೆಗೆ ಹೋಗುವುದೇ ಇಲ್ಲ, ಆಕೆಯ ಮನೆಯಲ್ಲಿ ಊಟ ಮಾಡುವುದಿಲ್ಲ. ಆಕೆಯ ಮನೆಯ ನೀರು ಕುಡಿಯುವುದಿಲ್ಲ. ಯಾವ ಇತರ ಮುಖ್ಯ ಪ್ರಯೋಜನದ ದೃಷ್ಟಿಯಿಂದ ಮದುವೆ ಮಾಡಿಕೊಡುವುದಿಲ್ಲವಾದ್ದರಿಂದ ಸಂಬಂಧ ಪರಿಶುದ್ಧವಾಗಿರಬೇಕೆನ್ನುವುದೇ ಉದ್ದೇಶ. ಇದೇ ಆಧಾರ, ಮಗಳನ್ನು ಯಾವ ಹಳ್ಳಿಗೆ ಮದುವೆ ಮಾಡಿಕೊಡಲಾಗಿದೆಯೋ ಆ ಹಳ್ಳಿಗೆ ಹೋಗದಂತಹ ಹಲವಾರು ಜನರಿದ್ದಾರೆ. ನಾವು ಅಂಥ ಸಂಗತಿಗಳನ್ನು ಮಾನ್ಯ ಮಾಡಬೇಕು. ಅವು ಗೊತ್ತಿಲ್ಲವೆಂದು ಹೇಳುವುದರಿಂದ ಪ್ರಯೋಜನವಾಗುವುದಿಲ್ಲ. ಗೊತ್ತಿಲ್ಲದಿರುವ ಸಾಧ್ಯತೆಯೂ ಇದೆ. ಮಹಿಳೆಯು, ಅಂತಿಮ ಇಷ್ಟಪತ್ರದ ಮೂಲಕ ಮಾವನಿಗೆ ಆಸ್ತಿಯನ್ನು ಕೊಡುವುದೂ ನಡೆಯುತ್ತದೆ. ಅದೊಂದು ಸಹಿಸಲಸಾಧ್ಯವಾದ ಸನ್ನಿವೇಶ. ಒಂದು ವೇಳೆ ಮಹಿಳೆಗೆ, ಗಂಡ, ಮಕ್ಕಳಿಲ್ಲದಿದ್ದರೆ, ತಂದೆತಾಯಿಯೂ ಇಲ್ಲದಿದ್ದರೆ ಏನಾಗುತ್ತದೆ? ಇದೊಂದು ಸೂಕ್ಷ್ಮ ವಿಚಾರ. ಆಸ್ತಿಯು ತಂದೆಯಿಂದ ಮಗಳಿಗೆ ಬಂದಿರುತ್ತದೆ. ಗಂಡ, ಮಕ್ಕಳು, ತಾಯಿ ತಂದೆ ಯಾರೂ ಇಲ್ಲದಿದ್ದರೆ, ಆಸ್ತಿಯು ಆಕೆಯ ತಂದೆಯ ಮಗನಿಗೆ ಹೋಗುವುದಿಲ್ಲ. ಉದಾಹರಣೆ ಸಹಿತ ಸ್ಪಷ್ಟವಾಗಿ ಹೇಳುತ್ತೇನೆ. ಆಸ್ತಿಯು 'ಎ' ಕುಟುಂಬದ್ದೆಂದುಕೊಳ್ಳೋಣ, ಆಸ್ತಿಯು 'ಎ'ಕುಟುಂಬಕ್ಕೆ ಎಂದರೆ ಮಹಿಳೆಯ ಸಹೋದರನಗೆ ಎಂದರೆ ಅದೇ ರಕ್ತಸಂಬಂಧದ ನಿಜವಾದ ಸಹೋದರನಿಗೆ ಹೋಗುವುದಿಲ್ಲ. ಅದರೆ, ನೀವು ಇಲ್ಲಿ ಕೊಟ್ಟಿರುವ ಪಟ್ಟಿಯಲ್ಲಿ ಹೇಳಿರುವ ಗಂಡನ ಕುಟುಂಬದ ನೂರಾರು ಜನರಿಗೆ ಹೋಗುತ್ತದೆ. ಮಹಿಳೆ ಮೃತಪಟ್ಟಿದ್ದು, ಗಂಡಮಕ್ಕಳು, ತಂದೆತಾಯಿ ಯಾರೂ ಇರದಿದ್ದರೆ, ಆಸ್ತಿಯು ಆಕೆಯ ಸಹೋದರನಿಗಾಗಲಿ ಅಥವಾ ಸಹೋದರನ ಮಗನಿಗಾಗಲಿ ಅಥವಾ ಇತರರಿಗಾಗಲಿ ಹೋಗುವುದಿಲ್ಲ. ಗಂಡನ ಕುಟುಂಬಕ್ಕೆ ಹೋಗುತ್ತದೆ. ಹಾಗೇಕಾಗಿದೆ. ಏಕೆಂದರೆ, ನಿಮ್ಮ ಸೆಲೆಕ್ಟ್ ಕಮಿಟಿಯು ಬಹುಕಾಲದಿಂದಲೂ ಇಡೀ ಸಮಾಜದ ಮೇಲೆ ಪ್ರಭಾವ ಬೀರುತ್ತಿರುವ ಆಚಾರ ವಿಚಾರಗಳಿಗೆ ಗಮನ ಕೊಟ್ಟೇ ಇಲ್ಲ. (ಶ್ರೀ ಎಲ್. ಕೃಷ್ಣಸ್ವಾಮಿಭಾರತಿ : "ಈಗಿನ ವಸ್ತುಸ್ಥಿತಿ ಏನು?") ಅದು ನಮಗೆ ಸಂಬಂಧಪಟ್ಟಿದ್ದಲ್ಲ. ನಿಮಗೆ ಈಗಿನ ವಸ್ತುಸ್ಥಿತಿ ಚೆನ್ನಾಗಿ ಗೊತ್ತಿದೆ. ಅದು ಸ್ತ್ರೀಧನ. ಅದು ಮಗಳಿಂದ ಬಂದಿರುವುದಿಲ್ಲ. ಹಾಗಿದ್ದರೆ, ವಸ್ತುಸ್ಥಿತಿ ಬೇರೆಯದೇ ಇರುತ್ತಿತ್ತು. ಕುಟುಂಬದ ಆಸ್ತಿಪಾಸ್ತಿಯು ಮಹಿಳೆಯ ಸಹೋದರನಗೆ ಬರುವುದಿಲ್ಲ, ಬೇರೆ ಜನರಿಗೆ ಹೋಗುತ್ತದೆ. ಆ ಸನ್ನಿವೇಶ ನನಗೆ ಅರ್ಥವಾಗುತ್ತಿಲ್ಲ. ಆದರೆ, ಇದೇ ವಸ್ತುಸ್ಥಿತಿ ಎಂಬುದನ್ನು ನೀವು ಗ್ರಹಿಸಬೇಕಾಗುತ್ತದೆ. ನೀವು ಇದನ್ನು ಸರಿಪಡಿಸಬಹುದು. ಇದನ್ನು ಸರಿ ಪರಿಪಡಿಸಬೇಕಾಗಿ ನಿಮಗೆ ನಾನು ವಿನಂತಿಸಿಕೊಳ್ಳುತ್ತಿದ್ದೇನೆ. ನೀವು, ವಿವೇಕದಿಂದ ಪುನರಾವಲೋಕನ ಮಾಡಬಹುದಾದ ಪ್ರಶ್ನೆಗಳಲ್ಲಿ ಇದೂ ಒಂದು. ತಾವು ಪರ್ಯಾಲೋಚಿಸಬೇಕೆಂದು ನಾನು ಕೋರುತ್ತಿರುವ ವಿಚಾರಗಳಲ್ಲಿ ಇದೂ ಒಂದು. ಉತ್ತರಾಧಿಕಾರದ ವಿಚಾರವನ್ನು ಇಷ್ಟಕ್ಕೇ ನಿಲ್ಲಿಸುತ್ತೇನೆ. ನಾನು ತಮ್ಮ ಮುಂದೆ ಮಂಡಿಸಬೇಕಾಗಿರುವ

ಇನ್ನೂ ಕೆಲವು ವಿಚಾರಗಳಿವೆ.

ನಾನೀಗ ಹಸ್ತಾಂತರದ ಬಗ್ಗೆ ಹೇಳುತ್ತೇನೆ. ಮಹಿಳಾ ಆಸ್ತಿ ಬಗ್ಗೆ ನಿರ್ಬಂಧಿತ ಹಕ್ಕು ಬಾಧ್ಯತೆಗಳಿದ್ದಾಗ ಎಷ್ಟೊಂದು ತುಂಬಾ ಕಷ್ಟವಾಗುತ್ತಿತ್ತೆಂಬುದನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಸಂಯುಕ್ತ ಕುಟುಂಬ ಪದ್ಧತಿ ಬಗ್ಗೆ ಹೇಳುವುದಾದರೆ, ಅದನ್ನು, ಈ ಮಸೂದೆಯ ಪ್ರಕಾರ, ಚಿಂದಿ ಚಿಂದಿ ಮಾಡಲು ಉದ್ದೇಶಿಸಲಾಗಿದೆ. ಸಂಯುಕ್ತ ಕುಟುಂಬ ಪದ್ಧತಿ ಹಾಳಾಗುತ್ತಿದೆ. ಅದು ಚೂರುಚೂರಾಗುತ್ತಿದೆ. ಬಹಳ ಹಿಂದಿನ ಕಾಲದಿಂದಲೂ ಕೆಲವು ಸಂದರ್ಭ, ಸನ್ನಿವೇಶಗಳು ಸಂಯುಕ್ತ ಹಿಂದೂ ಕುಟುಂಬದ ಗತಿಯನ್ನು ಯಾವ ಮಟ್ಟಕ್ಕೆ ತಂದವೆಂದರೆ, ಅದು ಉಳಿಯಲಾರದ ಸ್ಥಿತಿಗೆ ತಂದಿವೆ. ಸರ್. ಅದು ಕಣ್ಮರೆಯಾಗುತ್ತಿರುವುದಕ್ಕೆ ನಾನೇನು ಕಣ್ಣೀರು ಹಾಕುವುದಿಲ್ಲ. ಆದಾಯ ತೆರಿಗೆ ಕಾಯ್ದೆಯೆಂಬ ಪೆಡಂಭೂತ, ಸಂಯುಕ್ತ ಹಿಂದೂ ಕುಟುಂಬ ಪದ್ಧತಿಯನ್ನು ಧ್ವಂಸಮಾಡುತ್ತಿದೆ. ಸಂಯುಕ್ತ ಹಿಂದೂ ಕುಟುಂಬ ಪದ್ಧತಿಯು ಇನ್ನು ಹೆಚ್ಚುಕಾಲ ಉಳಿಯಲಾರದೆಂಬುದು ನನಗೆ ಗೊತ್ತಿದೆ. ಆದರೆ, ಈ ಮಸೂದೆಯು, ಇನ್ನು ಮುಂದೆ ಅವರುಗಳು ಸಮಾನ ಗೇಣಿದಾರರೆಂದು ಹೇಳಿದರೆ ನನ್ನ ಅಭ್ಯಂತರವೇನಿಲ್ಲ. ಪವಿತ್ರವಾದ, ಪ್ರಾಚೀನವಾದ ಸಂಯುಕ್ತ ಕುಟುಂಬ ಪದ್ಧತಿಯು ಕಣ್ಮರೆಯಾಗುತ್ತಿದೆಯಲ್ಲ ಎಂದು, ಅತಿ ಎನ್ನಿಸುವಷ್ಟು ಗೋಳಾಡುವಂತಹ ವಾಸ್ತವವಾದಿ ನಾನು. ಸಂಯುಕ್ತ ಕುಟುಂಬ ಪದ್ಧತಿಯಿಂದ ತುಂಬಾ ಒಳ್ಳೆಯದಾಗುತ್ತಿದ್ದಂತಹ ಕಾಲ ಒಂದಿತ್ತು. ಸಹಕಾರಿ ಬೇಸಾಯ, ಸಹಕಾರಿ ಆಸ್ತಿ ಹಿಡುವಳಿ ಮುಂತಾದುವುಗಳ ಬಗ್ಗೆ ನಾವು ಚಿಂತನೆ ಮಾಡುತ್ತಿದ್ದೇವೆ. ಸಾಮಾಜಿಕ ವಿಮೆ ಮುಂತಾದವುಗಳಿಗೆ ಅವಕಾಶ ಕಲ್ಪಿಸುತ್ತಿದ್ದೇವೆ. ಹಳೆಯ ಸಂಯುಕ್ತ ಹಿಂದೂ ಕುಟುಂಬದಲ್ಲಿ ಯಾವ ತತ್ವಗಳ ಮೇಲೆ ಕೆಲಸಕಾರ್ಯಗಳಾಗುತ್ತಿದ್ದವೋ ಅವೇ ತತ್ವಗಳಿಗೆ ನಾವೀಗ ವಾಪಸಾಗುವುದಕ್ಕೆ ಆಸ್ಪದವಾಗುವಂತಹ ರೀತಿಯಲ್ಲಿ ನಾವು ಈ ಎಲ್ಲವನ್ನೂ ಮಾಡುತ್ತಿದ್ದೇವೆ. ಈ ವಿಚಾರಗಳು ಇಲ್ಲಿ ಪ್ರಾಸಂಗಿಕ ಅಲ್ಲ. ಆದರೆ, ಕಾನೂನು, ದೇಶದ ಸಾಮಾನ್ಯ ಸನ್ನಿವೇಶಗಳು, ಸಂಯುಕ್ತ ಕುಟುಂಬ ಪದ್ಧತಿ ಬಗ್ಗೆ ಹೇಳುವುದಾದರೆ, ..............

**ಸನ್ಮಾನ್ಯ ಶ್ರೀ ಜಗಜೀವನರಾಂ** (ಕಾರ್ಮಿಕ ಮಂತ್ರಿಗಳು) : ಅದೆಂತುದು ವ್ಯರ್ಥವಾದ.

**ಪಂಡಿತ ಠಾಕೂರದಾಸ್ ಭಾರ್ಗವ :** ತಾವು ಏನೇ ಹೇಳಬಹುದು, ಸರ್, ಇದು ವಾದದ ಪ್ರಶ್ನೆಯೇ ಅಲ್ಲ. ಶಾಸನದಿಂದ ಸಂಯುಕ್ತ ಹಿಂದೂ ಕುಟುಂಬ ಪದ್ಧತಿಯನ್ನು ನಿರ್ನಾಮಮಾಡುವುದು ನನಗೆ ಇಷ್ಟವಾಗುವುದಿಲ್ಲ.

ಸರ್, ಮದುವೆ ಬಗ್ಗೆ, ನಾನು ಇನ್ನೂ ಕೆಲವೊಂದು ವಿಚಾರಗಳನ್ನು ಹೇಳಬೇಕಾಗಿದೆ. ಇದು ತುಂಬಾ ಜಟಿಲವಾದ ವಿಷಯ.

**ಒಬ್ಬರು ಮಾನ್ಯ ಸದಸ್ಯರು :** ಮೊದಲೇ ಹೇಳಿದ್ದೀರಲ್ಲ.

**ಪಂಡಿತ ಠಾಕೂರದಾಸ್ ಭಾರ್ಗವ** : ಮೊದಲು ಕೆಲವು ವಿಚಾರಗಳನ್ನು ಹೇಳಿದ್ದೆ.

**ಒಬ್ಬರು ಮಾನ್ಯ ಸದಸ್ಯರು :** ಇದು, ಎರಡನೇ ಮದುವೆ.

**ಪಂಡಿತ ಠಾಕೂರದಾಸ್ ಭಾರ್ಗವ** : ನನಗೆ ತುಂಬಾ ಒಳ್ಳೆಯ ಜೊತೆಗಾರರಿದ್ದಾರೆ ................

**ಸನ್ಮಾನ್ಯ ಶ್ರೀ ಜಗಜೀವನ ರಾಂ :** ಕಾನೂನು ಮಂತ್ರಿಗಳೇ ನಿಮ್ಮ ಜತೆಗಿದ್ದಾರೆ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಶ್ರೀಮತಿ ಅಮ್ಮು ಸ್ವಾಮಿನಾಥನ್, ಶ್ರೀ ಶಿವರಾವ್ ಮತ್ತು ಶ್ರೀಮತಿ ರೇಣುಕಾ ರೇ ಬರೆದಿದ್ದಾರೆ:

"ಸಂಹಿತೆಯ ಭಾಗ II ರಲ್ಲಿರುವ ೬ನೆಯ ಕಲಮಿನ "ಹಿಂದೂ ವಿವಾಹದ ಬಗೆಗಳು" ಬಗ್ಗೆ ನಾವು ಹೇಳುವುದೇನೆಂದರೆ, ದೇಶದ ಕೆಲವು ಭಾಗಗಳಲ್ಲಿ ಬಹುಕಾಲದಿಂದಲೂ ಪ್ರಚಲಿತದಲ್ಲಿರುವ ಸಂಪ್ರದಾಯಗಳ ಪ್ರಕಾರ ಅಥವಾ ಆಚರಣೆಗಳ ಪ್ರಕಾರ ಆದ ವಿವಾಹಗಳನ್ನು ಸಿಂಧುವಾದ ವಿವಾಹಗಳೆಂದು ಪರಿಗಣಿಸಲಾಗುತ್ತದೆ. ಇದು, ಭಾಗ II ಕಲಮುಗಳಲ್ಲಿ ಹೇಳಿರುವ, ಶಾಸ್ತ್ರೋಕ್ತ ವಿವಾಹ ಅಥವಾ ಸಿವಿಲ್ ವಿವಾಹ ವರ್ಗದಲ್ಲಿ ಬರುವುದಿಲ್ಲ. ಆದ್ದರಿಂದ ೬ನೇ ಕಲಮಿನ ಕೊನೆಯಲ್ಲಿ ಅಂಥ ವಿವಾಹಗಳು ಸಿಂಧು ಎಂದು ಹೇಳುವ ಒಂದು ಕಲಮನ್ನು ಸೇರಿಸಬೇಕೆಂದು ಸಲಹೆ ಮಾಡುತ್ತೇನೆ".

ಏನಿದು? ಶ್ರೀ ಭಾರತಿಯವರು ಭಾರತದ ಯಾವ ಭಾಗದಿಂದ ಬಂದಿದ್ದಾರೋ ಆ ಭಾಗದಲ್ಲೇ ಸಮಸ್ಯೆ ಇದೆಯೆಂದು ಕಾಣುತ್ತದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಅದೃಷ್ಟವೆಂದರೆ, ನಾನು ಆ ಭಾಗದವನಲ್ಲ, ನನ್ನದು ತಮಿಳುನಾಡು. ಅವರು ಮಲಬಾರಿನವರು.

**ಪಂಡಿತ ಠಾಕೂರದಾಸ್ ಭಾರ್ಗವ :** ದತ್ತು ವಿಚಾರದಲ್ಲೂ, ಅಸಮ್ಮತಿಸೂಚಕ ಟಿಪ್ಪಣಿಯಲ್ಲೂ ಅದೇ ಬಗೆಯ ಅಭಿಪ್ರಾಯವಿರುವುದು ನನಗೆ ಕಂಡುಬಂದಿದೆ. ಇದು ಪಂಜಾಬಿನಲ್ಲಷ್ಟೇ ಇಲ್ಲ. ಇತರ ಪ್ರದೇಶಗಳಲ್ಲೂ ಇದೆ. ಅಲ್ಲಿ, ಮದುವೆ, ವಿಚ್ಛೇದನ, ದತ್ತು ಕಟ್ಟುಕಟ್ಟಳೆಗಳು ಸಾಂಪ್ರದಾಯಿಕ ಕಟ್ಟುಕಟ್ಟಳೆಗಳಿಗಿಂತ ಬೇರೆಯೇ ಇವೆ. ಅವೆಲ್ಲವನ್ನೂ ಉಳಿಸಿಕೊಳ್ಳಬೇಕು. ಸಮ್ಮತಿ ಸೂಚಿಸಿರುವ ಈ ಸದಸ್ಯರೆಲ್ಲರೂ, ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ತಮ್ಮ ತಮ್ಮ ಪ್ರದೇಶಗಳ ಸಂಗತಿಗಳನ್ನು ತುಂಬಾ ಚೆನ್ನಾಗಿ ಪ್ರತಿಬಿಂಬಿಸಿರುವುದಕ್ಕೆ ನನಗೆ ತುಂಬಾ ಸಂತೋಷ ಆಗಿದೆ.

ಶಾಸ್ತ್ರೋಕ್ತ ಮದುವೆಗಳ ಬಗ್ಗೆ ನಾನು ಮಾತನಾಡುತ್ತಿದ್ದೆ. ಶಾಸ್ತ್ರೋಕ್ತ ಮದುವೆಗಳ ಬಗ್ಗೆ ನಾನು ಚಕಾರ ಎತ್ತಿಲ್ಲ. ಆ ಪದ್ಧತಿಯನ್ನು ಉಳಿಸಿಕೊಳ್ಳಬೇಕು. ಶಾಸ್ತ್ರೋಕ್ತ ಮದುವೆಗಳ ಬಗ್ಗೆ ಕಮಿಟಿಯಿಂದಾಗುತ್ತಿರುವ ಹಾವಳಿ ಸಹಿಸಲಸಾಧ್ಯವಾದದ್ದು. ಸಿವಿಲ್ ವಿವಾಹವನ್ನು ಈ ಜಾಗದಲ್ಲಿ ಏಕೆ ಸೇರಿಸಿಲ್ಲ ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ಅದು ಸಿವಿಲ್ ವಿವಾಹವೇ ಆಗಿದ್ದರೆ, ಅದು ಸಿವಿಲ್ ವಿವಾಹದ ವಿಷಯವಾಗುತ್ತದೆ. ನಮ್ಮಲ್ಲಿ ೧೮೭೨ರ ಕಾಯ್ದೆ ಇದೆ. ಅದು ತುಂಬಾ ದೋಷ ಪೂರ್ಣವಾದ ಕಾಯ್ದೆ. ಅದರಲ್ಲಿನ ಲೋಪದೋಷಗಳನ್ನು ಸರಿಪಡಿಸಲು ನಾನು ಒಂದು ಮಸೂದೆಯನ್ನು ಒಪ್ಪಿಸಿದ್ದೇನೆ. ಇತರ ಎಲ್ಲ ರೀತಿಯ ಮದುವೆಗಳನ್ನು ಸಿಂಧು ಮಾಡಲು, ಅದನ್ನು ನಾನು ಕೆಲವು ದಿನಗಳ ಹಿಂದೆ ಪ್ರಸ್ತಾಪಿಸಿದ್ದೇನೆ. ಸಿವಿಲ್ ಸಂಹಿತೆಯಲ್ಲಿ ಸೇರಿಸುವುದಕ್ಕಿಂತಲೂ ಅದು ಹೆಚ್ಚಿನ ರಕ್ಷಣೆ ಕೊಡುತ್ತದೆ. ಇಡೀ ಭಾರತಕ್ಕೆ ಒಂದು ಸಿವಿಲ್ ಸಂಹಿತೆ ಇರಬೇಕೆಂದು ನಿಯಮಗಳು ಎಲ್ಲರಿಗೂ ಒಂದೇ ರೀತಿ ಇರಬೇಕೆಂಬುದು ನನ್ನ ಆಶಯ. ಹಾಗೆ ಮಾಡುವುದು ನಮ್ಮ ಕರ್ತವ್ಯ ಕೂಡ. ಆದರೆ, ನಾವು ಇಲ್ಲೇಕೆ ಸಿವಿಲ್ ಮದುವೆಯನ್ನು ಸೇರಿಸಬೇಕು? ಆ ಕಾನೂನಿನ ದುಷ್ಪರಿಣಾಮಗಳನ್ನು ತೆಗೆದುಹಾಕುವುದೇ ಉದ್ದೇಶವಾದರೆ, ಬೇರೆ ಮಾರ್ಗ ಮುಕ್ತವಾಗಿದೆಯಲ್ಲ. ಈ ಸಿವಿಲ್ ಸಂಹಿತೆಯಿಂದ ಏನಾಗುತ್ತೆಂದರೆ, ಇತ್ತ ಶಾಸ್ತ್ರೋಕ್ತವೂ ಅಲ್ಲದ, ಅತ್ತ ಸಿವಿಲ್ಲೂ ಅಲ್ಲದ ಹೊಸ ಬಗೆಯ ಆ ಮದುವೆಯು ಶಾಸ್ತ್ರೋಕ್ತವಾಗಿ ಆಗುವುದಾದರೂ, ಅದು ಮೂಲತಃ ಅಗಮ್ಯ ಗಮನವಾದುದಾಗಿದ್ದರೆ, ಆಗ ನೀವು ರಿಜಿಸ್ಟ್ರೇಷನ್ ಆಫೀಸರ್ ಬಳಿಗೆ ಹೋಗಿ ಅದನ್ನು ಸಿಂಧುವಾಗಿ ಮಾಡಿಕೊಳ್ಳಬೇಕಾಗುತ್ತದೆ.

**ಶ್ರೀಮತಿ ಜಿ ದುರ್ಗಾಬಾಯಿ** : ಅದೂ ಇಚ್ಛೆಪಟ್ಟರೆ ಮಾತ್ರ.

**ಪಂಡಿತ ಠಾಕೂರದಾಸ್ ಭಾರ್ಗವ** : ನಾನು ಉತ್ತರ ಕೊಟ್ಟಿದ್ದೇನೆ, ಇಚ್ಛೆಪಟ್ಟರೆ ಹಾಗೆ ಮಾಡಿಕೊಳ್ಳಬಹುದು, ಆದರೆ, ಅದರಿಂದ ವಿಷಯ ಅಲ್ಲಿಗೇ ಮುಗಿಯುತ್ತದೆಯೇ? ಮದುವೆ ನಡೆಯುವಾಗ

ಐದು ನಿಬಂಧನೆಗಳಿರುತ್ತವೆಂದು, ಅವುಗಳ ಪಾಲನೆ ಆಗಿರದಿದ್ದರೆ, ಮದುವೆಗೆ ಅನುಮತಿ ಕೊಡಲಾಗುತ್ತಿಲ್ಲವೆಂದು ಹಿಂದೂ ಸಂಹಿತೆ ಹೇಳುತ್ತದೆ. "ಶಾಸ್ತ್ರೋಕ್ತ ಮದುವೆ ನಿಬಂಧನೆಗಳು" ವಾಕ್ಯ ಅದರಲ್ಲಿದೆ. ಮೂಲಭೂತ ವಿಷಯಗಳಲ್ಲಿ, ಒಂದು ಕಲಮನ್ನು ಉಲ್ಲಂಘಿಸಿದರೂ, ಆ ಲೋಪದ ಪರಿಣಾಮದಿಂದ ನಿಮಗೆ ಬಾಧಕ ಆಗದಂತಾಗುವುದನ್ನು ನೀವು ಕಾನೂನಿಗೆ ಬಿಟ್ಟುಬಿಡುತ್ತಿರಿ. ಸಪಿಂಡ ಸಂಬಂಧ ನಿಷೇಧದ ಬಗ್ಗೆ ಹೇಳುವುದಾದರೆ, ಸಮಸ್ಯೆ ಏನೆಂದರೆ, ನಾವು ಉದ್ದೇಶಿಸಿರುವ ಕಾನೂನು ಏಕರೂಪತೆ ತರುವುದು ಭಾರತದಂತಹ ದೇಶದಲ್ಲಿ ತುಂಬಾ ಕಷ್ಟ. ಅಂಥದೊಂದು ಏಕರೂಪತೆ ತಂದರೆ ಪವಾಡ ಎಂದೇ ಹೇಳಲಾಗಿದೆ. ಅಂಥ ಪವಾಡಕ್ಕೆ ಶ್ರಮಿಸುತ್ತಿರುವುದಕ್ಕೆ ನಾನು ಡಾ. ಅಂಬೇಡ್ಕರ್‌ರವರನ್ನು ಅಭಿನಂದಿಸುತ್ತೇನೆ. ಇಂಥ ಪವಾಡವನ್ನು ತರುವುದರ ಪರ ನಾನಿದ್ದೇನೆ. ಆದರೆ, ಸ್ಥಳೀಯ ವಿಷಯಗಳಲ್ಲಿ ಕಾನೂನು ತೊಡಕುಗಳಿರುವಾಗ, ಈಗಿನ ಸ್ಥಿತಿಗೂ ಮತ್ತು ನಾವು ಯಾವುದಕ್ಕಾಗಿ ಶಾಸನ ಮಾಡಬಯಸಿದ್ದೇವೆಯೋ ಆ ಸ್ಥಿತಿಗೂ ತುಂಬಾ ಅಸಂಗತತೆ ಇದೆ, ತುಂಬಾ ಹಾನಿ ಆಗುತ್ತದೆ. ಇಂಥ ಹಾನಿ ಆಗದಂತೆ ಸದನವು ವಿಷಯಗಳನ್ನು ಸರಿಹೊಂದಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಸರ್, ನಾನು ಪಂಜಾಬಿನ ಒಂದು ಸ್ಥಳದವನು. ಅಲ್ಲಿ ಹಳ್ಳಿಹಳ್ಳಿಗಳಲ್ಲಿ ಒಂದೇ ಗೋತ್ರದವರಿದ್ದಾರೆ. ಅವರೆಲ್ಲರೂ, ಒಬ್ಬನೇ ಪೂರ್ವಿಕನ ವಂಶಜರೆಂದು ನಂಬಿದ್ದಾರೆ, ಆರೋಹಣ ಮತ್ತು ಅವರೋಹಣ ವಂಶಕ್ರಮವನ್ನು ಮೂರಕ್ಕೆ ಅಥವಾ ಐದಕ್ಕೆ ಸೀಮಿತಗೊಳಿಸುವ ಈ ಸಪಿಂಡ ಸಂಬಂಧತತ್ತ್ವವು ಈ ಜನರಿಗೆ ಸಾಕಾಗದು. ನಾನು ವಂಶಕ್ರಮವನ್ನು ಹೆಚ್ಚಿಸಿ ಎಂದು ಹೇಳುವುದಿಲ್ಲ. ಹಾಗೆ ಹೆಚ್ಚಿಸುವುದು ಅಂಗೀಕಾರಾರ್ಹ ಅಲ್ಲ. ಈ ರೀತಿ ಸಪಿಂಡ ವಿವಾಹಕ್ಕೆ ನಾವು ಒಪ್ಪಿಗೆ ಕೊಡಬೇಕೆಂದು ನೀವು ಕೇಳಿದರೆ, ಅದು ನಮಗೆ ಸಮಾಧಾನ ತರುವಂಥದ್ದು ಅಲ್ಲ. ನಮ್ಮ ಮಟ್ಟಿಗೆ, ಇದು ಸಹಿಸಲ ಸಾಧ್ಯವಾದ ವಿಚಾರ. ಇದಕ್ಕೆ ನೀವು ಅವಕಾಶ ಕೊಟ್ಟರೆ, ಪಂಜಾಬಿನಲ್ಲಿ ಬಹುಕಾಲದಿಂದಲೂ ನಾವು ಅನುಸರಿಸುತ್ತಿರುವ ನಮ್ಮ ಸಮಾಜ ವ್ಯವಸ್ಥೆಯ ಬೇರನ್ನೇ ಕಿತ್ತುಹಾಕುತ್ತಿದ್ದೀರಿ ಎಂದುಕೊಳ್ಳಬೇಕಾಗುತ್ತದೆ. ಇದು ನನ್ನ ಭಾವನೆಯೂ ಹೌದು ಇಡೀ ಭಾರತದ ಭಾವನೆಯೂ ಹೌದು. ಭಾರತದ ಮಿಕ್ಕ ಭಾಗಗಳ ಬಗ್ಗೆ ನಾನು ಮಾತನಾಡುವುದಿಲ್ಲ. ಏಕೆಂದರೆ, ಅದನ್ನು ಪ್ರಶ್ನಿಸುವ ಕೆಲವು ಮಹನೀಯರೂ ಇರಬಹುದು. ನನ್ನ ಅಭಿಪ್ರಾಯವೇನೆಂದರೆ, ಇಡೀ ಭಾರತದಲ್ಲಿ ವಸ್ತುಸ್ಥಿತಿ ಅದೇ ಇದೆ. ಆ ಬಗ್ಗೆ ನನಗೆ ಹಠ ಏನಿಲ್ಲ. ಆದರೆ, ರಿಜಿಸ್ಟರ್ಡ್ ಶಾಸ್ತ್ರೋಕ್ತ ಮದುವೆ ವಿಷಯದಲ್ಲಿ, ಮದುವೆ ಆಗುತ್ತಿರುವ ಗಂಡು ಹೆಣ್ಣು ಸಪಿಂಡರಾಗಿರಬಾರದೆಂಬುದನ್ನು ತೆಗೆದುಹಾಕಬೇಕೆಂದು ೭ನೆಯ ಕಲಮಿನಲ್ಲಿ ನಾವು ನಿರ್ದಿಷ್ಟಪಡಿಸುತ್ತಿರುವುದು ತುಂಬಾ ತಪ್ಪಿನ ನಿಯಮವಾಗುತ್ತದೆ. ಶಾರದಾ ಕಾಯ್ದೆ ಇದ್ದಾಗ, ಹಿಂದೂ ನ್ಯಾಯಪದ್ಧತಿಗೆ ಹಾಗೂ ನಮ್ಮ ಕಲ್ಪನೆಗಳಿಗೆ ಅನುಸಾರವಾಗಿ ಮದುವೆ ನಡೆದಿದ್ದರೆ, ವಿಚ್ಛೇದನವಾಗುವುದಕ್ಕೆ ಅವಕಾಶವೇ ಇರಲಿಲ್ಲ. ಸಂಹಿತೆಗಳಿಗೆ ಅಥವಾ ಸಂಪ್ರದಾಯಗಳಿಗೆ ಅನುಸಾರವಾಗಿ ಆಗಿರುವ ಮದುವೆಯನ್ನು ಅಸ್ತವ್ಯಸ್ತಗೊಳಿಸುವುದಕ್ಕೆ ನಾವು ಅವಕಾಶಕಲ್ಪಿಸುತ್ತಿರುವ ಮಟ್ಟಿಗೆ ಹೇಳುವುದಾದರೆ, ನಾವು ಈ ನಿಯಮವನ್ನು ಬಿಟ್ಟುಹೋಗುತ್ತಿದ್ದೇವೆ. ೩ನೆಯ ನಿಯಮದ ಉಲ್ಲಂಘನೆ ಆದಾಗ, ನೀವು ಅಂಥವನಿಗೆ ಶಿಕ್ಷೆ ವಿಧಿಸಿ ಜೈಲಿಗೆ ಕಳುಹಿಸುವಾಗ, ಪ್ರಾಪ್ತ ವಯಸ್ಕನಲ್ಲದ ಒಬ್ಬ ವ್ಯಕ್ತಿ ಮದುವೆ ಆದಾಗ, ದಂಡ ಹಾಕುವುದರ ಬದಲು ಅವನನ್ನು ಜೈಲಿಗೆ ಕಳುಹಿಸಬೇಕು, ಅವನಿಗೆ ಏನೂ ಆಗದಂತಹ ರೀತಿಯ ವಿವೇಚನೆಗೆ ಕಾನೂನಿನಲ್ಲಿ ಅವಕಾಶ ಇರಬಾರದೆಂದು ನಾನು ಈ ಸದನಕ್ಕೆ ಮನವಿ ಮಾಡಿಕೊಂಡಿದ್ದೆ. ಶಾರದಾ ಕಾಯ್ದೆಗೆ ಇಡೀ ಭಾರತದಲ್ಲಿ ವಿರೋಧ ವ್ಯಕ್ತವಾಗಿತ್ತು ೩ನೇ ನಿಯಮವನ್ನು ಅನುಸರಿಸಿದರೆ, ಮದುವೆಯು, ತಪ್ಪಿಸಿಕೊಳ್ಳಬಹುದಾದಂಥದ್ದಾಗುತ್ತದೆಂಬುದನ್ನು ಈಗಿನ

ಕಲಮು ತೋರಿಸಿಕೊಡುತ್ತದೆ. ಇದು ತತ್ವಗಳಿಗೆ ವಿರುದ್ಧವಾದುದು. ೨೦ ವರ್ಷಗಳಿಂದಲೂ ನಾವಿದನ್ನು ಒಪ್ಪಿಕೊಂಡಿಲ್ಲ.

ಹಿಂದೂ ಸಂಹಿತೆಯ ಮುಖ್ಯ ಕಲಮಿನ ಬಗ್ಗೆ, ಈ ಸದನದ ಗಮನಕ್ಕೆ ತರುವ ದೃಷ್ಟಿಯಿಂದ ಸಂಕ್ಷಿಪ್ತವಾಗಿ ಹೇಳಿದ್ದೇನೆ. ಮಸೂದೆಯನ್ನು ಕೈಬಿಡುವುದಿಲ್ಲವೆಂಬುದು ನನ್ನ ಅನಿಸಿಕೆಯಾದ್ದರಿಂದ, ಕಲಮು ಕಲಮುಗಳನ್ನು ಪರ್ಯಾಲೋಚಿಸುವಾಗ ಆ ವಿಷಯದ ಬಗ್ಗೆ ಹೇಳುತ್ತೇನೆ.

ಒಟ್ಟಾರೆ ಹೇಳುವುದಾದರೆ, ಈ ಮಸೂದೆಯನ್ನು ಪುನಃ ಪರಿಚಲನೆಗೆ ಕಳುಹಿಸುವುದಕ್ಕೆ ಈ ಸದನ ಸಕ್ಷಮವಾಗಿದೆಯೆಂದು ನಾನು ಹೇಳಬಯಸುತ್ತೇನೆ. ಹೀಗೆ ಮಾಡಿದರೆ ಏನೂ ಕಳೆದುಹೋಗುವುದಿಲ್ಲ. ವಾಸ್ತವವಾಗಿ ಅದರಿಂದ, ಇನ್ನೂ ಒಳ್ಳೆಯದೇ ಆಗುತ್ತದೆ: ಜನಾಭಿಪ್ರಾಯಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ನಮ್ಮನ್ನು ಕಡೆಗಾಣಿಸುತ್ತಿಲ್ಲ ಎಂದು ಜನರು ಭಾವಿಸಿದಂತಾಗುತ್ತದೆ. ಅದು, ಸೆಲೆಕ್ಟ್ ಕಮಿಟಿಯಿಂದ ಬಂದ ಮೇಲೂ ಅನೇಕ ತಿದ್ದುಪಡಿ ಮಾಡಲಾಗಿದೆ. ಅದು ಸೆಲೆಕ್ಟ್ ಕಮಿಟಿಯ ಮುಂದೆ ಇದ್ದಾಗಲೂ ಜನರಿಗೆ ಅದರ ಬಗ್ಗೆ ಏನೇನೂ ಗೊತ್ತಿರಲಿಲ್ಲ. ಏನೆಲ್ಲಾ ಹೇಳಿದ್ದರೂ, ಜನರಿಗೆ ಈ ವಿಚಾರ ಗೊತ್ತಾಗಿದೆಯೆಂದು ನನಗೆ ಮನದಟ್ಟಾಗಿದೆ. ಈ ಕರಡು ವರದಿಯನ್ನು ರಚಿಸಿದ ಇಬ್ಬರು ಮಹನೀಯರ ಬಗ್ಗೆ ಡಾ. ಅಂಬೇಡ್ಕರ್‌ರವರು ಹೇಳಿದ್ದಾರೆ. ಈ ಮಹನೀಯರು ತುಂಬಾ ಒಳ್ಳೆಯವರೆಂತಲೂ, ತಮ್ಮ ಅಭಿಪ್ರಾಯಗಳಲ್ಲಿ ಅಷ್ಟೊಂದು ಮುಂದುವರಿದವರೆಂದು ಭಾವಿಸಬಹುದಾದಂಥ ಜನರಲ್ಲವಂತಲೂ ಹೇಳಿದ್ದಾರೆ. ಹೈಕೋರ್ಟ್ ನ್ಯಾಯಾಧೀಶರುಗಳ ಅನೇಕ ಅಭಿಪ್ರಾಯಗಳು ನನ್ನ ಬಳಿ ಇವೆ. ಪ್ರತಿದಿನವೂ ಅಭಿಪ್ರಾಯಗಳು ಬರುತ್ತಿವೆ. ಈ ಎಲ್ಲ ಜನರೂ ಇದಕ್ಕೆ ವಿರೋಧವಾಗಿದ್ದಾರೆ. ಹಿಂದೂ ಲಾ ಕಮಿಟಿಯ ವರದಿಯಲ್ಲಿ ಮುದ್ರಿತವಾಗಿರುವ ಹೇಳಿಕೆಯನ್ನು ನಾನು ಓದಿ ಹೇಳಬಯಸುವುದಿಲ್ಲ. ತಮ್ಮ ಅನುಮತಿ ಇದೆಯೆಂದು ಭಾವಿಸಿ, ಈ ವರದಿಯ ೧೩ನೇ ಪುಟವನ್ನು ಉಲ್ಲೇಖಿಸುತ್ತೇನೆ. ಒಬ್ಬ ಮಹಿಳೆಯ ಹೇಳಿಕೆ ಅದರಲ್ಲಿದೆ. ಶ್ರೀಮತಿ ಸುಬುರುಲ್, ಪ್ರಿನ್ಸಿಪಾಲ್, ಫತೇ ಚಂದ ಮಹಿಳಾ ಕಾಲೇಜ್, ಹೇಳಿದ್ದಾರೆ:

"ಮದುವೆಗೆ ಯೋಗ್ಯವಾಗಿರದ ಅಥವಾ ಮದುವೆಯೇ ಆಗಬಾರದೆಂದು ನಿರ್ಧರಿಸಿರುವ ಮಗಳಿಗೆ, ಮಗನಂತೆಯೇ ಪಾಲು ಸಿಗಬೇಕು. ಮಗಳಿಗೆ, ಮಗನಿಗಿರುವಂಥವೇ ಹಕ್ಕುಭಾಧ್ಯತೆಗಳಿರಬೇಕು. ಮದುವೆ ಆಗಿರುವ ಮಗಳಿಗೆ ಆಸ್ತಿಯಲ್ಲಿ ಯಾವ ಪಾಲು ಇರಕೂಡದು. ಮಗಳಿಗೆ ಮದುವೆ ಆದರೆ ಅವಳ ಪಾಲು ಆಕೆಯ ಸಹೋದರರಿಗೆ ಹೋಗಬೇಕು"

ಹೇಳಿಕೆಯನ್ನು ದಾಖಲು ಮಾಡಿಕೊಳ್ಳುವ ಸಲುವಾಗಿ ಕಮಿಟಿಯು ಲಾಹೋರಿನಲ್ಲಿದ್ದಾಗ, ವರದಿಯಲ್ಲಿ ಹೀಗೆ ಹೇಳಲಾಗಿದೆ:

"ಪಂಜಾಬಿನಲ್ಲಿ ಸೇರಿದ್ದ ಈ ಕಮಿಟಿಯು ಸಭೆಯ ಅಧ್ಯಕ್ಷತೆಯನ್ನು ನಾನು ವಹಿಸಿದ್ದೆ. ಲಾಹೋರಿನ ಕಮರ್ಷಿಯಲ್ ಮ್ಯೂಸಿಯಂ ಹಾಲಿಗೆ ಸುಮಾರು ೫೦೦ ಮಹಿಳೆಯರು ಪ್ರವೇಶಿಸಿ, ಕೈಮುಗಿಯುತ್ತ "ಅಳಿಯನನ್ನು ನಮ್ಮ ಕುಟುಂಬಕ್ಕೆ ತರಬೇಡಿ, ನಮ್ಮ ವ್ಯಾಪಾರವನ್ನು ಹಾಳುಮಾಡಬೇಡಿ."

ವ್ಯಾಪಾರಸ್ಥ ಜನರ ಮೇಲೆ ಇದು ಯಾವ ಪರಿಣಾಮವನ್ನು ಉಂಟು ಮಾಡುತ್ತದೆಂಬುದನ್ನು ನೀವು ಗಮನಿಸಿದರೆ, ನೀವು ಕಕ್ಕಾಬಿಕ್ಕಿಯಾಗುತ್ತೀರಿ. ತಂದೆ, ಗಂಡುಮಕ್ಕಳು ವ್ಯಾಪಾರ ವ್ಯವಹಾರ ನಡೆಸುತ್ತಿರುತ್ತಾರೆ, ವಹಿವಾಟು ಚೆನ್ನಾಗಿ ನಡೆಯುತ್ತಿರುತ್ತದೆ, ತಂದೆ ಮೃತನಾಗುತ್ತಾನೆ, ಎಲ್ಲರ ಸಂಯುಕ್ತ ಪ್ರಯತ್ನದಿಂದ ವ್ಯಾಪಾರ ವ್ಯವಹಾರ ಮುಂದುವರಿಯುತ್ತಿರುತ್ತದೆ. ಅಳಿಯ ನುಸುಳಿಕೊಂಡರೆ ವ್ಯಾಪಾರ ವ್ಯವಹಾರದ ಗತಿಯೇನಾಗುತ್ತದೆ? ಹಾಳಾಗಿ ಹೋಗುತ್ತದೆ. ವರದಿಯ ೧೫೬ನೇ ಪುಟದಲ್ಲಿರುವುದನ್ನು ನಾನು ಸದನಕ್ಕೆ ಹೇಳುತ್ತೇನೆ. ಎಲ್ಲ ಮಹಿಳೆಯರೂ ಪರವಾಗಿದ್ದಾರೆಂದು ಹೇಳುವುದು ತಪ್ಪು. ತಿಳಿವಳಿಕೆ ಉಳ್ಳ ಸಾವಿರಾರು

ಮಹಿಳೆಯರೂ ಇದರ ಪರವಾಗಿಲ್ಲ. ಮಗಳಿಗೆ ಯಾವುದೇ ಹಕ್ಕನ್ನು ಕೊಡಬಾರದು ಎಂಬುದು ಅವರುಗಳ ಅಭಿಪ್ರಾಯ ಅಲ್ಲ. ನನ್ನಮಟ್ಟಿಗೆ, ನಾನು ಇದನ್ನೆ ಮತ್ತೆ ಮತ್ತೆ ಹೇಳುತ್ತಿದ್ದೇನೆ. ನನ್ನಂತೆಯೇ ಭಾವಿಸಿರುವ ಎಷ್ಟೋ ಜನರೂ ಕೂಡ ಇದನ್ನೇ ಹೇಳುತ್ತಾರೆ. ಮಗಳಿಗೆ ಸಂಪೂರ್ಣ ಹಕ್ಕು ಕೊಡಬಾರದು ಅಥವಾ ಮಹಿಳೆಯರಿಗೆ ಸಂಪೂರ್ಣ ಹಕ್ಕು ಕೊಡಬಾರದು ಎಂಬುದು ನಮ್ಮ ಅಭಿಪ್ರಾಯ ಅಲ್ಲ. ಮಹಿಳೆಯರೂ ಕೂಡ ಪುರುಷರ ಸ್ಥಾನಮಾನಕ್ಕೇ ಏರಬೇಕು, ಅದೇ ಹಕ್ಕು ಬಾಧ್ಯತೆಗಳಿರಬೇಕು ಎಂಬುದು ನಮ್ಮ ಅಪೇಕ್ಷೆ. ನಾನು ಕೂಡ ಡಾ. ಅಂಬೇಡ್ಕರ್ ಹಾಗೇನೆ. ಅವರಂತೆ, ನಾನು ಕೂಡ ಒಬ್ಬ ಪ್ರಗತಿಪರ ಸಂಪ್ರದಾಯವಾದಿ. ನನಗೆ ಈ ಮಾತು ತುಂಬಾ ಇಷ್ಟ. ನಾನು, ಪ್ರೌಢ ಚಿಂತನೆಯ ಪಂಥದವನಲ್ಲ. ಡಾ. ಅಂಬೇಡ್ಕರ್‌ರವರು ಹೇಳಿದಂತೆ, ಈ ಮಸೂದೆಯು, ಕ್ರಾಂತಿಕಾರಕವೂ ಅಲ್ಲ, ಆಮೂಲಾಗ್ರವಾದುದೂ ಅಲ್ಲ. ಈ ಮಸೂದೆಯು ಕೆಲವೊಂದು ವಿಚಾರಗಳನ್ನು ನಿರೂಪಿಸುತ್ತದೆ, ಆದರೆ, ಸುಧಾರಣೆ ತರಬೇಕಾಗಿದೆ. ಇಂದು ಹಿಂದೂ ಸಮಾಜದಲ್ಲಿ ಕೆಲವೊಂದು ರೀತಿಯಲ್ಲಿ ಆತ್ಮಾವಲೋಕನ ಆಗುತ್ತಿದೆ, ಶಿಥಿಲವಾಗುತ್ತಿರುವುದು ಹಿಂದೂ ಸಮಾಜಕ್ಕೆ ಗೊತ್ತಾಗುತ್ತಿದೆ. ಡಾ. ಅಂಬೇಡ್ಕರ್‌ರವರು ಹೇಳಿದಂತೆ, ಶಿಥಿಲವಾಗುತ್ತಿರುವುದನ್ನು ತಡೆದು, ಸರಿಪಡಿಸಬೇಕಾಗಿದೆ. ಆದ್ದರಿಂದ, ಈ ದೃಷ್ಟಿಕೋನವು, ನಮ್ಮ ಸಹೋದರಿಯರಿಗೆ, ನಮ್ಮ ಹೆಣ್ಣುಮಕ್ಕಳಿಗೆ ನಾವು ನ್ಯಾಯ ಕೊಡಬಯಸಿಲ್ಲವೆಂಬ ಭಾವನೆಗೆ ಯಾರಲ್ಲೂ ಆಸ್ಪದ ಕೊಡಬಾರದೆಂದು ಹೇಳುತ್ತಿದ್ದೇನೆ. ನಮ್ಮ ಸಹೋದರಿಯರಿಗೆ, ನಮ್ಮ ಹೆಣ್ಣುಮಕ್ಕಳಿಗೆ ಇಂಥದೊಂದು ಭಾವನೆ ಇದ್ದ ಪಕ್ಷದಲ್ಲಿ ಸಂಪೂರ್ಣವಾಗಿ ತಪ್ಪುತಿಳಿದುಕೊಂಡಿದ್ದಾರೆಂದೇ ಹೇಳುತ್ತೇನೆ. ಸರ್, ತಮ್ಮ ಬಗ್ಗೆ ನನಗೆ ಚೆನ್ನಾಗಿ ಗೊತ್ತಿದೆ. ತಾವೂ ಕೂಡ, ಅವರಿಗೆ ಹಕ್ಕುಬಾಧ್ಯತೆಗಳಿರಬೇಕೆಂಬುದರ ಪರವಾಗಿದ್ದೀರಿ. ಇದೊಂದೇ ದೃಷ್ಟಿಕೋನದ ಮೇಲೆ ವಿಚಾರ ಮಾಡಬಾರದು. ಈ ಮಸೂದೆಯನ್ನು ಪರಿಚಲನೆ ಮಾಡಬೇಕು, ಮುಂದಿನ ಚುನಾವಣೆ ನಡೆದ ನಂತರ, ಹೆಚ್ಚು ಪ್ರಾತಿನಿಧಿಕ ಸ್ವರೂಪದ ಸದನದಲ್ಲಿ ಚರ್ಚೆಗೆತ್ತಿಕೊಳ್ಳಬೇಕು ಎಂಬುದು ನನ್ನ ಅಪೇಕ್ಷೆ. ಈ ಸದನ ಸಂಪೂರ್ಣವಾಗಿ ಸಕ್ಷಮ ಅಲ್ಲ ಅಥವಾ ಈ ಸದನಕ್ಕೆ ಸಂಪೂರ್ಣ ಅಧಿಕಾರ ಇಲ್ಲ ಎಂದು ನಾನು ಹೇಳುತ್ತಿಲ್ಲ. ಈ ಮಸೂದೆ ಬಗ್ಗೆ ಸದನವು ಪಟ್ಟುಹಿಡಿದರೆ, ಅದರಲ್ಲಿ ತಪ್ಪೇನೂ ಇಲ್ಲ. ಆದರೆ, ಈ ಮಸೂದೆಯನ್ನು ಪರ್ಯಾಲೋಚಿಸಬೇಕು. ಎಲ್ಲ ಹಿತಾಸಕ್ತಿಗೂ ನ್ಯಾಯ ದೊರೆಯಬೇಕೆಂಬುದು ನನ್ನ ಅಪೇಕ್ಷೆ. ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಯು ಮತ್ತೆ ಪರಿಶೀಲಿಸಬೇಕೆಂದು ವಕೀಲನಾಗಿ, ಈ ಸದನದ ಒಬ್ಬ ಸದಸ್ಯನಾಗಿ ಹೇಳುತ್ತಿದ್ದೇನೆ. ಅದು ಇನ್ನೆರಡು ಗಂಟೆ ಸಮಯ ತೆಗೆದುಕೊಂಡರೂ ಸರಿಯೇ ಈ ಎಲ್ಲ ಲೋಪದೋಷಗಳನ್ನು ತೆಗೆದುಹಾಕಬೇಕು, ಮೂಲ ಮಸೂದೆಗೆ ಕಾನೂನಿನ ರೂಪ ಕೊಡಬೇಕಾದರೆ ಕಲಮು ಕಲಮನ್ನೂ ಪರಿಶೀಲಿಸಬೇಕು. ಸೆಲೆಕ್ಟ್ ಕಮಿಟಿಯು ಇಚ್ಛೆಪಟ್ಟರೆ ಈ ಮಸೂದೆಯನ್ನು, ಕಾನೂನು ಪ್ರಕಾರ ಯಾವ ರೀತಿಯಲ್ಲಿ ಪರಿಶೀಲಿಸಬೇಕಾಗಿತ್ತೋ ಆ ರೀತಿಯಲ್ಲೇ ಪರಿಶೀಲಿಸಲಾಗಿದೆಯೆಂದು ಅಥವಾ ಪ್ರತಿಯೊಂದು ಸೆಲೆಕ್ಟ್ ಕಮಿಟಿಯಲ್ಲಿ, ವಾಡಿಕೆಯಂತೆ ಹೇಗೆ ಮಾಡಲಾಗುತ್ತದೋ ಅದೇ ರೀತಿಯಲ್ಲಿ ತಿದ್ದುಪಡಿಗಳನ್ನು ಮಂಡಿಸಲಾಗಿದೆ ಅಥವಾ ಅಂಗೀಕರಿಸಲಾಗಿದೆ ಎಂದು ಹೇಳುವುದು ತುಂಬಾ ತಪ್ಪಾಗುತ್ತದೆ. ಹಾಗಾಗಿಲ್ಲ. ಮೂಲಭೂತವಾಗಿ ತಪ್ಪು ಆಗುವಂತಹ ರೀತಿಯಲ್ಲಿ ಕಾರ್ಯ ಆಗುವುದಕ್ಕೆ ನಾವು ಅವಕಾಶ ಕೊಡದಂತೆ ಎಚ್ಚರಿಕೆ ವಹಿಸಬೇಕು. ನನ್ನ ಆಕ್ಷೇಪಣೆ ಸರಿ ಎಂದು ಡಾ.ಅಂಬೇಡ್ಕರ್‌ರವರಿಗೆ ಮನವರಿಕೆಯಾದರೆ, ಅವರು ಈ ವಿಚಾರವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಹಿಂದೂ ಲಾ ಕಮಿಟಿಯಲ್ಲಿ ಪ್ರಾತಿನಿಧ್ಯವೇ ಇಲ್ಲದ ಪಂಜಾಬಿನ ಬಡಜನರ ಅಭಿಪ್ರಾಯವನ್ನು ಡಾ. ಅಂಬೇಡ್ಕರ್‌ರವರು ದಯಮಾಡಿ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಮಾನ್ಯ ಸದಸ್ಯರುಗಳು :** ಡಾ. ಬಕ್ಷಿ ತೇಕ್‌ಚಂದರ ಬಗ್ಗೆ ಹೇಳಿ.

**ಪಂಡಿತ ಠಾಕೂರದಾಸ್ ಭಾರ್ಗವ :** ಡಾ. ತೇಕ್‌ಚಂದರ ಬಗ್ಗೆ ಹೇಳುವುದಾದರೆ, ಅವರೂ ಕೂಡ ಸೆಲೆಕ್ಟ್ ಕಮಿಟಿಯಲ್ಲಿದ್ದರು. ನೀವು ಅವರಿಗೆ ಕೃತಜ್ಞತೆ ಸಲ್ಲಿಸಿದರೆ ನನಗೆ ತುಂಬಾ ಸಂತೋಷವಾಗುತ್ತದೆ. ಅವರು ಅಸಮ್ಮತಿಸೂಚಕ ಟಿಪ್ಪಣಿಯನ್ನು ಬರೆಯದೇ ಹೋಗಿದ್ದಿದ್ದರೆ, ನಿಮ್ಮ ಗತಿ ಏನಾಗುತ್ತಿತ್ತು? ಅವರ ಅಭಿಪ್ರಾಯಗಳನ್ನು ಗೌರವಿಸಬೇಕೆಂಬ ಇಚ್ಛೆ ನಿಮಗಿದ್ದರೆ, ಅವರ ಅಭಿಪ್ರಾಯಗಳನ್ನು ಗೌರವಿಸಿರಿ. ಇದೇ ನನ್ನ ಮನವಿ. ಡಾ. ಬಕ್ಷಿ ತೇಕ್‌ಚಂದರು ಏನು ಬರೆದಿದ್ದಾರೋ ನಾನು ಅದರ ವಕ್ತಾರ ಮಾತ್ರ. ವಾರಸುದಾರನನ್ನು ನಾಮಕರಣ ಮಾಡುವುದಕ್ಕೆ ಅವಕಾಶ ಕೊಡಿ, ಇಂದು ಯಾವ ರೀತಿಯಲ್ಲಿ ವಿಚ್ಛೇದನ ಆಗುತ್ತಿದೆಯೋ, ಅದೇ ರೀತಿಯಲ್ಲಾಗುವುದಕ್ಕೆ ಅವಕಾಶ ಕೊಡಿ ಎಂದು ಅವರು ಹೇಳಿದ್ದಾರೆ. ಈ ಎಲ್ಲ ವಿಚಾರಗಳಲ್ಲಿ ನೀವು ಅವರನ್ನು ಹೆಸರಿಸುವುದಾದರೆ ಅಸಮ್ಮತಿಸೂಚಕ ಟಿಪ್ಪಣಿಯಲ್ಲಿ ಅವರೇನು ಬರೆದಿದ್ದಾರೋ ಅದನ್ನೇ ದಯಮಾಡಿ ಅನುಸರಿಸಿ ಎಂದು ಕೇಳಕೊಳ್ಳುತ್ತಿದ್ದೇನೆ.

**ಸನ್ಮಾನ್ಯ ಡೆಪ್ಯುಟಿ ಸ್ಪೀಕರ್** : ಶ್ರೀಮತಿ ರೇಣುಕಾ ರೇ.

**ಶ್ರೀ ನಸೀರುದ್ದಿನ್ ಅಹ್ಮದ್** : ಸರ್, ನನ್ನ ಭಾವನೆಗಳನ್ನು ಹೇಳಬೇಕಾಗಿದೆ.

**ಸನ್ಮಾನ್ಯ ಡೆಪ್ಯುಟಿ ಸ್ಪೀಕರ್** : ತಮ್ಮ ಭಾವನೆಗಳನ್ನು ಹೇಳಲೂ ಅವಕಾಶ ಕೊಡುತ್ತೇನೆ.

**ಶ್ರೀ ನಸೀರುದ್ದಿನ್ ಅಹ್ಮದ್** : ನನ್ನಲ್ಲಿ ಕೆಲವು ವಿಚಾರಗಳಿವೆ. ಅವುಗಳನ್ನು ಹೇಳಿಕೊಳ್ಳಬೇಕಾಗಿದೆ ಹಾಗೂ ಅವುಗಳಿಗೆ ಉತ್ತರ ಪಡೆದುಕೊಳ್ಳಬೇಕಾಗಿದೆ.

**ಸನ್ಮಾನ್ಯ ಡೆಪ್ಯುಟಿ ಸ್ಪೀಕರ್** : ನಿಮ್ಮ ಅಭಿಪ್ರಾಯಗಳನ್ನು ಯಾರೂ ಆಕ್ಷೇಪಿಸಲಾರರು.

**ಶ್ರೀ ನಸೀರುದ್ದಿನ್ ಅಹ್ಮದ್** : ನನಗದು ಇಷ್ಟವಾಗುವುದಿಲ್ಲ. ಸರ್.

**ಸನ್ಮಾನ್ಯ ಡೆಪ್ಯುಟಿ ಸ್ಪೀಕರ್** : ನಿಮ್ಮ ಸರದಿ ಈಗಿಲ್ಲ ಎಂದು ನಾನು ಈಗಾಗಲೇ ಹೇಳಿದ್ದೇನೆ. ಶ್ರೀಮತಿ ರೇಣುಕಾ ರೇಯವರನ್ನು, ಕರೆದಿದ್ದೇನೆ.

**ಶ್ರೀಮತಿ ರೇಣುಕಾ ರೇ** : ಈ ಸದನದ ಮುಂದೆ, ಈಗ ಪರ್ಯಾಲೋಚನೆಯಲ್ಲಿರುವ ಈ ಮಸೂದೆಯು ಅಥವಾ ಇದರಲ್ಲಿ ಒಳಗೊಂಡಿರುವ ತತ್ತ್ವಗಳು ೧೯೪೩ರಿಂದಲೂ ಈ ನ್ಯಾಯ ವಿಧಾಯಕ ಸಭೆಯ ಮುಂದಿದೆ. ಈ ಮಸೂದೆಯಲ್ಲಿ ಒಳಗೊಂಡಿರುವ ಈ ಬದಲಾವಣೆಗಳಿಗಾಗಿ ನಿರಂತರ ಒತ್ತಾಯ ಈ ದೇಶದಲ್ಲಿ ಬಹಳ ಕಾಲದಿಂದಲೂ ಇತ್ತು. ೧೦೦ ವರ್ಷಗಳ ಹಿಂದೆ ರಾಜಾರಾಮ ಮೋಹನರಾಯರು "ಆಸ್ತಿಗೆ ವಾರಸುದಾರರಾಗಲು ಮಹಿಳೆಯರ ಹಕ್ಕುಗಳು ಮತ್ತು ಮಹಿಳೆಯರ ವಿವಾಹ ಹಕ್ಕುಗಳು" ಗ್ರಂಥವನ್ನು ಬರೆದಿದ್ದಾರೆ. ಆಗಿನಿಂದ ಈ ವಿಚಾರಗಳು ಸಾರ್ವಜನಿಕರ ಗಮನ ಸೆಳೆದಿವೆ. ೧೯೩೧–೧೯೩೭ರಿಂದಲೂ ಇಡೀ ದೇಶದಲ್ಲಿ ನಿರಂತರ ಒತ್ತಾಯ ಇತ್ತು. ಮಹಿಳೆಯರಿಗೆ ಅಡ್ಡಿಯಾಗಿದ್ದ ಕಾನೂನು ಲೋಪದೋಷಗಳನ್ನು ತರುವುದು ಅಗತ್ಯವೆಂದು ಈ ದೇಶದ ತುಂಬೆಲ್ಲಾ ಭಾವಿಸಲಾಗಿತ್ತು. ನ್ಯಾಯವಿಧಾಯಕ ಸಭೆಯ ಮುಂದೆ ಹಲವಾರು ಮಸೂದೆಗಳು ಇದ್ದ ಕಾರಣ, ಬಿಡಿಬಿಡಿಯಾಗಿ ಕಾನೂನುಗಳನ್ನು ಮಾಡಿದರೆ ಲೋಪದೋಷಗಳಿಗೆ ದಾರಿಯಾಗುವ ಕಾರಣ, ತುಂಬಾ ಒತ್ತಾಯ ಇದ್ದ ಕಾರಣ, ಅಂದಿನ ಸರ್ಕಾರವು ಹಿಂದೂ ಲಾ ರಾವ್ ಕಮಿಟಿಯೆಂದೇ ಗೊತ್ತಿದ್ದ ಹಿಂದೂ ಲಾ ಕಮಿಟಿಯನ್ನು ನೇಮಕ ಮಾಡಿತು. ಈ ಕಮಿಟಿಯ ವರದಿಯ ಪರಿಣಾಮವಾಗಿ, ೧೯೪೩ರಲ್ಲಿ, ಅಂತಿಮ ಇಷ್ಟಪತ್ರ ದ್ವಾರಾ ಉತ್ತರಾಧಿಕಾರಕ್ಕೆ ಸಂಬಂಧಪಟ್ಟಂತೆ ಒಂದು ಮಸೂದೆ, ವಿವಾಹಗಳ ಬಗ್ಗೆ ಒಂದು ಮಸೂದೆಯನ್ನು ತರಲಾಯಿತು.

ಆ ಸಮಯದಲ್ಲೂ ವಿರೋಧವು ಬಹಳ ಬಿರುಸಾಗಿಯೇ ಇತ್ತು. ಆಗ ವ್ಯಕ್ತವಾಗಿದ್ದ ವಿರೋಧ, ಈಗಿನಂತೆಯೇ ಇದ್ದರೂ ಕೂಡ ಧೋರಣೆ ಬೇರೆಯದೇ ರೀತಿ ಇತ್ತು. ಬೇರೆ ರೀತಿಯ ಧೋರಣೆ ಇದ್ದುದಕ್ಕೆ ಕಾರಣ, ಆ ಮಸೂದೆಗಳನ್ನು ವಿದೇಶಿ ಸರ್ಕಾರ ತಂದಿತ್ತು. ಆ ಧೋರಣೆಗೆ ಆಧಾರಗಳೇನೆಂದರೆ, ಕಾಂಗ್ರೆಸ್ಸಿಗರು ಸರ್ಕಾರದ ಕಟ್ಟಾ ಬೆಂಬಲಿಗರು, ನಿಷ್ಠಾವಂತರು, ಭಾರತದ ಮಹಿಳೆಯರ ಈ ಬೇಡಿಕೆಯ ಹಿಂದೆ ಕಾಂಗ್ರೆಸ್‌ನ ಕೈವಾಡ ಇದೆ, ಆದ್ದರಿಂದ, ಸರ್ಕಾರವು ಅದಕ್ಕೆ ಯಾವುದೇ ಸೊಪ್ಪು ಹಾಕಬಾರದು. ಈ ಮಾತುಗಳನ್ನು ನಾನು ಆಧಾರವಿಲ್ಲದೆಯೇ ಹೇಳುತ್ತಿಲ್ಲ. ಈ ದೇಶದ ರಾಷ್ಟ್ರೀಯ ಸುದ್ದಿಮಾಧ್ಯಮಗಳು ಆ ವಿರೋಧಕ್ಕೆ ಅಷ್ಟೊಂದು ಪ್ರಚಾರ ಕೊಡಲಿಲ್ಲ. ನಿಜ. ಆದರೂ, ವಿರೋಧ ಪಕ್ಷಗಳವರು ಹಲವಾರು ಕರಪತ್ರಗಳನ್ನು ಹೊರತಂದರು, ನಮ್ಮ ರಾಷ್ಟ್ರೀಯ ನಾಯಕರುಗಳನ್ನು ಬಯ್ದಿದ್ದರು. ನಮ್ಮ ಪ್ರೀತಿಯ ನಾಯಕ ಮಹಾತ್ಮ ಗಾಂಧಿಯವರನ್ನೂ ಬಿಡಲಿಲ್ಲ. "ಹಿಂದೂ" ಎನ್ನುವ ವಾರಪತ್ರಿಕೆ ಒಂದಿತ್ತು. ಅದರಲ್ಲಿ ಈ ಮಸೂದೆಗಳನ್ನು ಟೀಕಿಸಲಾಗಿತ್ತು. ಈ ದೇಶದ ರಾಷ್ಟ್ರೀಯ ನಾಯಕರುಗಳ ಕೈವಾಡ ಇದೆ, ಅವರುಗಳ ಸಲಹೆ, ಪ್ರಭಾವದಿಂದ ಹಾಗಾಗುತ್ತಿದೆಯೆಂದು ಟೀಕಿಸಲಾಗಿತ್ತು. ಈ ದೇಶದ ಮಹಿಳೆಯರು, ತಮ್ಮತಮ್ಮಲ್ಲೇ ಬೇಧಭಾವ ತರುವಂತಹ, ದ್ವೇಷ, ವೈಷಮ್ಯ ಹುಟ್ಟಿಸುವಂತಹ ಪರಿಕಲ್ಪನೆಗಳನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಮಹಿಳೆಯರು ಪ್ರತ್ಯೇಕ ಚುನಾಯಕ ಗಣಕ್ಕೆ ವಿರೋಧವಾಗಿದ್ದಾರೆ, ಈ ದೇಶದ ಸ್ವಾತಂತ್ರ್ಯ ಚಳುವಳಿಯ ಮುಂಚೂಣಿಯಲ್ಲಿರುವವರ ಬೆಂಬಲ ಮಹಿಳೆಯರಿಗಿದೆ, ಹೀಗಾಗಿ ಮಹಿಳೆಯರ ಏಳಿಗೆಗಾಗಿ ಮತ್ತು ಅವರಿಗೆ ಹಕ್ಕುಗಳನ್ನು ಕೊಡುವುದಕ್ಕಾಗಿ ತಂದಿರುವ ಈ ಬಗೆಯ ಶಾಸನವನ್ನು, ಅಧಿಕಾರದಲ್ಲಿರುವ ವಿದೇಶಿ ಸರ್ಕಾರ ತರುವ ಸಾಧ್ಯತೆ ಅಷ್ಟೊಂದು ಕಾಣುತ್ತಿಲ್ಲ ಎಂದು ಸರ್ಕಾರಕ್ಕೆ ಗೊತ್ತಾಗಿ ಹೋಗಿತ್ತು. ರಾಷ್ಟ್ರೀಯ ಸರ್ಕಾರ ರಚನೆ ಆಗುವವರೆಗೆ ಕಾಯಬೇಕಾಗುತ್ತದೆ ಎಂದು ನಮಗೂ ಅನ್ನಿಸಿತ್ತು. ನಂತರ, ಸರ್ಕಾರವು ಹಿಂದೂ ಲಾ ಕಮಿಟಿಯನ್ನು ನೇಮಿಸಿತ್ತು. ಮಸೂದೆಗಳನ್ನು ಪುನರ್ ಪರಿಚಲನೆ ಮಾಡಲಾಯಿತು. ಈ ಸಮಿತಿಯು, ದೇಶದ ಸುತ್ತೆಲ್ಲ ಹೋಗಿ, ಸಾವಿರಾರು ಜನರ, ಸಂಸ್ಥೆಗಳ ಅಭಿಪ್ರಾಯಗಳನ್ನು ಸಂಗ್ರಹಿಸಿ, ೧೯೪೬ರಲ್ಲಿ ಮಧ್ಯಂತರ ಸರ್ಕಾರ ರಚನೆಯಾದ ಮೇಲೆ ವರದಿಯನ್ನು ಸಲ್ಲಿಸಿತು. ಇದು ಸದನಕ್ಕೂ ಗೊತ್ತಿದೆ. ೧೯೪೭ರ ತರುವಾಯ ಈಗಿನ ನ್ಯಾಯ ವಿಧಾಯಕ ಸಭೆಯಲ್ಲಿ ಈ ಮಸೂದೆಯನ್ನು ಪುನಃ ಮಂಡಿಸಿದ ನಂತರದ ಹಂತಗಳನ್ನು ನಾನು ಮತ್ತೆ ಹೇಳುವುದಿಲ್ಲ. ಈ ಸದನದ ಸದಸ್ಯರುಗಳಿಗೆ ಅವೆಲ್ಲಾ ಚೆನ್ನಾಗಿ ಗೊತ್ತಿದೆ. ಆದರೆ, ವಿರೋಧದ ಸಾರ ಅದೇ, ಸ್ವರೂಪ ಅದೇ, ಧೋರಣೆ ಹೊಸದು ಎಂಬುದನ್ನಷ್ಟೇ ಒತ್ತಿ ಹೇಳುತ್ತಿದ್ದೇನೆ. ಆ ದಿನಗಳಲ್ಲಿ ಕಾಂಗ್ರೆಸ್ಸನ್ನು ವಿರೋಧಿಸಿ "ಹಿಂದೂ ಸಂಹಿತೆ ಮಸೂದೆಯನ್ನು ತಂದರೆ ನೀವು ಚುನಾವಣೆಗಳಲ್ಲಿ ಸೋತುಹೋಗುತ್ತೀರಿ"ಎಂದಿದ್ದರಲ್ಲ, ಅವರೆಲ್ಲ ಈಗ ಎಲ್ಲಿದ್ದಾರೆ, ಸ್ವಾತಂತ್ರ್ಯ ಚಳುವಳಿಗೆ ಬೇಕೆಂತಲೇ ವಿರುದ್ಧವಾಗಿದ್ದ – ಬೆಂಬಲವನ್ನೂ ಕೊಡಲಿಲ್ಲ, ಅನುಕಂಪವನ್ನಾದರೂ ತೋರಲಿಲ್ಲ – ಅಂಥವರನ್ನು ಎದುರಿಸಿ ಕಾಂಗ್ರೆಸ್ ಚುನಾವಣೆಗಳಲ್ಲಿ ಜಯ ಸಾಧಿಸಿತು, ಸ್ವಾತಂತ್ರ್ಯವನ್ನು ತಂದು ಕೊಟ್ಟಿತ್ತು, ಎಲ್ಲಿದ್ದಾರೆ ಅವರೆಲ್ಲ, ನಾವು ಚುನಾವಣೆಗಳಲ್ಲಿ ಗೆಲುವು ಸಾಧಿಸಲಿಲ್ಲ ಅಂತ ಹೇಳಲಿ ನೋಡೋಣ. ಅಂಥವರಲ್ಲಿ ಯಾರಾದರೂ ಈ ದೇಶದ ನ್ಯಾಯವಿಧಾಯಕ ಸಭೆಗಳಿಗೆ ಚುನಾಯಿತರಾಗಿದ್ದರೆ, ಅದು ಕಾಂಗ್ರೆಸ್‌ನ ಕೃಪೆಯಿಂದ. ಮುಂದೆ ಆಗುವುದೂ ಹೀಗೆಯೇ.

ಈಗ ಎದ್ದಿರುವ ವಿರೋಧ, ಸ್ವರೂಪದಲ್ಲಿ ಹಿಂದಿನಂತೆಯೇ ಇದೆ. ವಿರೋಧ ಪಕ್ಷಗಳವರು ಅನೇಕ ಉಪಾಯಗಳಿಗೆ ಕೈಹಾಕಿದ್ದಾರೆ. ಅನೇಕ ಬಗೆಯ ತಂತ್ರಗಳಿಗೆ ಕೈಹಾಕಿದ್ದಾರೆ. ಗವರ್ನರ್ ಜನರಲ್ಲರ ಹೆಸರನ್ನು ಎಳೆದು ತರಲಾಯಿತು, ಅದು ಮೋಸ ಎಂಬುದು ನಂತರ ತಿಳಿಯಿತು. ಈ ಸಂಗತಿ ಕೂಡ

ಸದನಕ್ಕೆ ಗೊತ್ತಿದೆ. ಕೇವಲ ಎರಡು ಮೂರು ದಿನಗಳ ಹಿಂದೆ, ಕಲ್ಕತ್ತಾದ ಸುದ್ದಿಪತ್ರಿಕೆಯೊಂದರಲ್ಲಿ, ಇಬ್ಬರು ಅಥವಾ ಮೂವರು ಚಿರಪರಿಚಿತ ವಿರೋಧಿಗಳ ಹೆಸರಿನ ನಂತರ ಶ್ಯಾಮಪ್ರಸಾದ ಮುಖರ್ಜಿಯವರ ಹೆಸರನ್ನು ನಾನು ನೋಡಿದ್ದೇನೆ. ಸಣ್ಣ ಬ್ರಾಕೆಟ್‌ಗಳಲ್ಲಿ (ಉತ್ತರಾಪಾರ) ಎಂಬ ವಾಕ್ಯ ಇರುವುದು ಕಂಡು ನನಗೆ ಆಶ್ಚರ್ಯವಾಯಿತು. ಸರ್, ಯಾರಾದರೂ ಪ್ರಶ್ನೆ ಮಾಡಿದರೆ, ಆ 'ಉತ್ತರಾಪಾರ' ವಾಕ್ಯವನ್ನು ತೋರಿಸಿ ಗೊತ್ತಾಗದ ಹಾಗೆ ಮಾಡುವುದೇ ಅದರ ಉದ್ದೇಶ. ವಿರೋಧ ಪಕ್ಷವು ಮಾಡುತ್ತಿರುವ ಉಪಾಯಗಳೆಂದರೆ ಇವೇ, ತಂತ್ರಗಳು ಇವೇ. ತಮಗೆ ಗೊತ್ತಿರುವಂತೆ, ನಾವು ನಿಜವಾದ ಭಿನ್ನಾಭಿಪ್ರಾಯ ಉಳ್ಳವರನ್ನು ಪ್ರಶ್ನಿಸುವುದಿಲ್ಲ. ಆದರೆ, ಇಂದು, ಈ ಬಗೆಯ ತಂತ್ರಗಳನ್ನು ಮಾಡುತ್ತಿರುವುದು .........................

**ಶ್ರೀ ನಝೀರುದ್ದಿನ್ ಅಹ್ಮದ್** : ಸರ್, ಮಾಹಿತಿ ಲೋಪ, ಅದು, ಡಾ. ಶ್ಯಾಮಪ್ರಸಾದ ಮುಖರ್ಜಿ ಅಲ್ಲ.

**ಶ್ರೀಮತಿ ರೇಣುಕಾ ರೇ** : ಅಲ್ಲ. ಅದು, ಕೇಂದ್ರ ಮಂತ್ರಿಮಂಡಲದ ಮಂತ್ರಿ ಅಲ್ಲ. ಅದು ಯಾವ ಶ್ಯಾಮಪ್ರಸಾದ ಮುಖರ್ಜಿಯೋ ನನಗೆ ಗೊತ್ತಿಲ್ಲ.

**ಶ್ರೀ ನಝೀರುದ್ದಿನ್ ಅಹ್ಮದ್** : ಅದು "ಡಾ. ಶ್ಯಾಮಪ್ರಸಾದ ಮುಖರ್ಜಿ, ಅಧ್ಯಕ್ಷರು, ಹಿಂದೂ ಮಹಾಸಭಾ" ಅಂತಾನೋ ಎಂದು ನನ್ನ ಭಾವನೆ.

**ಶ್ರೀಮತಿ ರೇಣುಕಾ ರೇ :** ಅದೂ ಅಲ್ಲ. ಅದು "ಉತ್ತರಾಪಾರ" ಇವರುಗಳು ಅಂಥಾ ತಂತ್ರಗಳನ್ನು ಮಾಡುತ್ತಿದ್ದಾರೆ. ಶ್ರೀ ನಸೀರುದ್ದಿನ್ ಅಹ್ಮದ್‌ರನ್ನೂ ಬಿಟ್ಟಿಲ್ಲ. ಸಂಪ್ರದಾಯಸ್ಥ ವಿರೋಧ ಪಕ್ಷವು, ಮಗಳ ವಾರಸುದಾರಿಕೆ ಹಕ್ಕುಗಳನ್ನು ಮಾನ್ಯ ಮಾಡಿರುವ ಜನರಲ್ಲಿ ತುಂಬಾ ಬೆಂಬಲವನ್ನು ಗಳಿಸಿದೆ. ತನ್ನ ಧರ್ಮದ ಮಹಿಳೆಯರಿಗೆ ಇರುವ ಹಕ್ಕುಗಳನ್ನು ಹಿಂದೂ ಸಹೋದರಿಯರಿಗೆ ಬೇಡ ಎಂದು ಶ್ರೀ ನಝೀರುದ್ದಿನ್ ಅಹ್ಮದ್ ಅಲ್ಲಗಳೆಯುತ್ತಿರುವುದು ತುಂಬಾ ಆಶ್ಚರ್ಯ.

ವಿರೋಧ ಪಕ್ಷವು "ಎಲ್ಲ ಕಡೆಗೂ –ಕೊನೇ ಪಕ್ಷ ದೆಹಲಿಯಲ್ಲಿ– ಟೆಲಿಗ್ರಾಂಗಳನ್ನು, ಸರ್ಕ್ಯುಲರ್‌ಗಳನ್ನು ಪೋಸ್ಟರುಗಳನ್ನು ಹೇಗೆ ಕಳುಹಿಸುತ್ತದೆ, ಎಂ.ಸಿ.ಎ. ಗಳನ್ನು ತಂತಿ ಮೂಲಕ ಹೇಗೆ ಕಳುಹಿಸುತ್ತಿದೆ, ಈ ಮಸೂದೆಯನ್ನು ಬೆಂಬಲಿಸುತ್ತಿರುವವರು ಹಾಗೇಕೆ ಮಾಡುತ್ತಿಲ್ಲ? "ಎಂದು ಕೇಳಿದವರಿದ್ದಾರೆ". ಈ ಸಂಹಿತೆಯನ್ನು ಬೆಂಬಲಿಸುತ್ತಿರುವವರು ಸಮಾಜ ಕಲ್ಯಾಣ ಸಂಘ ಸಂಸ್ಥೆಯ ಪ್ರತಿನಿಧಿಗಳು. ಅವರು ದೇಶದ ಒಳಿತಿಗಾಗಿ ದುಡಿಯುತ್ತಿರುವ ಜನರು. ರಾಷ್ಟ್ರೀಯ ಅನಿರೀಕ್ಷಿತ ಸಂದರ್ಭಗಳಲ್ಲಿ ತಮ್ಮಲ್ಲಿರುವ ಯಾವುದೇ ನಿಧಿಯನ್ನು, ತಂತಿಗಳನ್ನು ಕಳುಹಿಸುವುದಕ್ಕೆ ಬಳಸುವುದು ಸರಿಯೇ, ನಿರಾಶ್ರಿತರ ಪುನರ್‌ವಸತಿಗೆ ಬಳಸಬಹುದಲ್ಲ ಎಂದು ಅವರು ಯೋಚನೆ ಮಾಡುವುದೇ ಇಲ್ಲ. ಈ ಸದನದಲ್ಲಿ ಎಂ.ಸಿ.ಎ.ಗೆ ಒಂದು ತಂತಿ ಕಳುಹಿಸುವುದಕ್ಕೆ ೧೬೫ ರೂಪಾಯಿ ಖರ್ಚಾಗುತ್ತದೆ. ಈ ಹಣದಿಂದ, ಒಬ್ಬಳು ಮಹಿಳಾ ನಿರಾಶ್ರಿತಳಿಗೆ ಮೂರು ತಿಂಗಳು ಯಾವುದಾದರೂ ಕೆಲಸದಲ್ಲಿ ತರಬೇತಿ ಕೊಡಬಹುದು. ಈ ತಂತಿಗಳನ್ನು ಕಳುಹಿಸಬೇಕೆಂದು ನಿಮ್ಮ ಅಪೇಕ್ಷೆಯೇನು? ಅಂಥ ವಿಧಾನವನ್ನು ಅನುಸರಿಸುವುದು ಸಂಪೂರ್ಣವಾಗಿ ತಪ್ಪು. ನಾವು ಪೋಸ್ಟರುಗಳನ್ನು, ಸರ್ಕ್ಯುಲರ್‌ಗಳನ್ನು, ತಂತಿಗಳನ್ನು ಕಳುಹಿಸದಿದ್ದರೆ, ಬದಲಾವಣೆಗಳಿಗೆ ಬೇಡಿಕೆ ಇರುವುದೇ ಇಲ್ಲ ಅಂತಲ್ಲ. ಸನ್ಮಾನ್ಯ ಕಾನೂನು ಮಂತ್ರಿಯವರು ಅತ್ಯುತ್ತಮವಾಗಿ ಹಾಗೂ ನಿಪುಣತೆಯಿಂದ ವಿಶ್ಲೇಷಣೆ ಮಾಡಿದ್ದಾರೆ. ಆದಕಾರಣ, ನಾನು, ಮಸೂದೆಯ ಕಲಮುಗಳ ವಿವರಗಳಿಗೆ ಹೋಗುವುದಿಲ್ಲ. ಅದು ಅನವಶ್ಯಕ. ಈ ದೇಶದಲ್ಲಿ ಏಕತೆ ಇರಬೇಕೆಂದು ನಮ್ಮ ಅಪೇಕ್ಷೆ. ಈ ದೇಶದ ಬಹುಸಂಖ್ಯಾತರಾದ ಹಿಂದೂಗಳಿಗೆ ಒಂದು ಏಕರೂಪದ ಮತ್ತು ವ್ಯಾಪಕವಾದ ಸಂಹಿತೆಯು ನಿಜವಾಗಿಯೂ ಬೇಕಾಗಿದೆ.

ಒಬ್ಬನೇ ಗಂಡ, ಒಬ್ಬಳೇ ಹೆಂಡತಿ ಪದ್ಧತಿ ಬಗ್ಗೆ ಹೇಳುವುದಾದರೆ, ತನ್ನ ಒಡಹುಟ್ಟಿದ ಸಹೋದರಿ

ಅಥವಾ ತನ್ನ ಸ್ವಂತ ಮಗಳು, ಪುನಃ ಮದುವೆ ಆದ ಒಬ್ಬ ಮನುಷ್ಯನ ಮೊದಲ ಹೆಂಡಿತಿಯಾಗಿ ಮುಂದುವರಿದರೆ ಅವಳ ಗತಿ ಏನು ಎನ್ನುವ ಬಗ್ಗೆ ಈ ಸದನದಲ್ಲಿ ಅಥವಾ ಈ ದೇಶದಲ್ಲಿ ಯಾರಾದರೂ ಸರಿಯಾಗಿ ಹೇಳಬಲ್ಲರೇ ಎಂದು ನಾನು ಕೇಳುತ್ತಿದ್ದೇನೆ. ಅನೇಕ ಹೆಂಡಂದಿರ ಪದ್ಧತಿಯು ಸಂಪ್ರದಾಯವೇನಲ್ಲ ಎಂಬುದು ನಿಜ. ಅದು, ದೇಶದಲ್ಲಿ ಒಟ್ಟಾರೆ ವಿರಳ. ಆದರೆ, ಇತ್ತೀಚಿನ ವರ್ಷಗಳಲ್ಲಿ ಅನೇಕ ಹೆಂಡಂದಿರ ಪದ್ಧತಿಯು ಆಗಾಗ್ಗೆ ಕಾಣಿಸಿಕೊಳ್ಳುತ್ತಿದೆ. ಭಾರತೀಯ ಸ್ತ್ರೀತ್ವಕ್ಕೆ ಅದೊಂದು ಕಳಂಕ. ಮಹಿಳೆಯರು ಗೊತ್ತಿದ್ದೋ, ಉದ್ದೇಶ ಪೂರ್ವಕವಾಗಿಯೋ ಅಂಥ ಗಂಡಸರ ಎರಡನೇ ಹೆಂಡತಿಯಾಗಲು ಒಪ್ಪುತ್ತಾರೆ. ಕಾನೂನು ಇಂಥ ಪದ್ಧತಿಯನ್ನು ಮತ್ತು ಅಂಥ ಗಂಡಸರ ಮೊದಲನೆ ಹೆಂಡತಿಯಾಗಿರುವ ಮಹಿಳೆಯ ಹೀನಸ್ಥಿತಿಯನ್ನು ತೊಡೆದುಹಾಕಲು ಮುಂದೆ ಬರಬೇಕು.

ಅಂತರಜಾತೀಯ ಮತ್ತು ಸಗೋತ್ರ ಮದುವೆ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯಾಂಗದ ಮೂಲಭೂತ ಹಕ್ಕುಗಳಲ್ಲಿ ನಾವು ಜಾತಿ, ಗಂಡುಹೆಣ್ಣು ಆಧಾರದ ಮೇಲೆ ಯಾವುದೇ ತಾರತಮ್ಯ ಇರಕೂಡದು ಎಂದು ಹೇಳಿರುವಾಗ, ಅಂತರಜಾತೀಯ ಮದುವೆಗೆ ಅವಕಾಶ ಇರುವಾಗ, ನಿಜವಾಗಿಯೂ ಇದು ಆ ನಿಟ್ಟಿನಲ್ಲಿ ಒಂದು ಮೊದಲ ಹೆಜ್ಜೆ.

**ಸನ್ಮಾನ್ಯ ಡೆಪ್ಯುಟಿ ಸ್ಪೀಕರ್** : ಜಾತಿ ಹೋಗಬಹುದು. ಗಂಡು ಹೆಣ್ಣು ಭೇದ ಹೇಗೆ ಹೋಗುತ್ತದೆ?

**ಶ್ರೀಮತಿ ರೇಣುಕಾ ರೇ** : ಜಾತಿ, ಗಂಡು, ಹೆಣ್ಣು ಆಧಾರದ ಮೇಲೆ ತಾರತಮ್ಯ ಮಾಡಕೂಡದು ಎಂದು ಹೇಳಿದ್ದೇನೆ.

**ಸನ್ಮಾನ್ಯ ಡೆಪ್ಯುಟಿ ಸ್ಪೀಕರ್** : ಆಯ್ತು, ಮುಂದುವರಿಸಿ.

**ಶ್ರೀಮತಿ ರೇಣುಕಾ ರೇ :** ಈ ಸಂಹಿತೆಯಲ್ಲಿರುವ ವಿಚ್ಛೇದನ ಕಲಮಿನ ಬಗ್ಗೆ ಹೇಳುವುದಾದರೆ, ಇವು ಸೀಮಿತ ಷರತ್ತುಗಳೆಂದು ನಾನಂದುಕೊಂಡಿದ್ದೇನೆ. ಮನೆಯೇ ಸಮಾಜದ ಜೀವಾಳ. ಮಕ್ಕಳನ್ನು ಸಾಕಿ ಸಲಹುವುದೇ ಮದುವೆ ಆಗುವುದಕ್ಕೆ ಮುಖ್ಯ ಕಾರಣ. ಆದ್ದರಿಂದ, ಕ್ಷುಲ್ಲಕ ಕಾರಣಗಳ ಮೇಲೆ ವಿಚ್ಛೇದನಕ್ಕೆ ಅವಕಾಶ ಕೊಡಬಾರದು. ನಿಜವಾದ ತೊಂದರೆಗಳಿದ್ದರೆ ಅವಕಾಶ ಕೊಡಬೇಕಾಗುತ್ತದೆ. ವಿವಾಹ ಮಸೂದೆಯನ್ನು ಮೊದಲು ತಂದ ೧೯೪೩ರಿಂದೀಚೆಗೆ ನನಗೆ ನೂರಾರು ಪತ್ರಗಳು ಬರುತ್ತಿವೆ. ನೂರಾರು ಜನ ತಮ್ಮ ಹೆಣ್ಣುಮಕ್ಕಳನ್ನು ನನ್ನ ಬಳಿಗೆ ಕರೆತಂದು ಅವರುಗಳು ಎಂಥೆಂಥಾ ಕಷ್ಟಕಾರ್ಪಣ್ಯಗಳನ್ನು ಅನುಭವಿಸುತ್ತಿದ್ದಾರೆಂದು ತಮ್ಮ ಗೋಳನ್ನು ಹೇಳಿದ್ದಾರೆ. ಗಂಡಸರು ಮತ್ತು ಹೆಂಗಸರು ಇಬ್ಬರಿಗೂ ಅಂಥ ಅವಕಾಶ ಇರದಿದ್ದರೆ, ಅದರಿಂದ ನಿಜವಾದ ಅವಶ್ಯಕತೆ ಈಡೇರುವುದಿಲ್ಲ. ಸರ್, ಈ ವಿಚಾರದಲ್ಲಿ ನಾನು ವಿವರವಾಗಿಯೇ ಹೇಳುತ್ತೇನೆ. ಏಕೆಂದರೆ, ನಾನು ಪ್ರಸ್ತಾವ ಮಾಡಿದ ಪ್ರತಿಪಕ್ಷದವರು, ಕಾನೂನನ್ನು ಅಥವಾ ಸಂಹಿತೆಯ ಕಲಮುಗಳನ್ನು ಅರ್ಥಮಾಡಿಕೊಂಡಿರದ ಹಲವಾರು ಮಹಿಳೆಯರೇ ಕಾನೂನಿನಲ್ಲಿ ವಿಚ್ಛೇದನಕ್ಕೆ ಅವಕಾಶ ಇರಬೇಕೆಂದು ಪ್ರಯತ್ನಪಡುತ್ತಿದ್ದಾರೆಂದು ಹೇಳಿಕೊಂಡು ತಿರುಗಾಡುತ್ತಿದ್ದಾರೆ. ಇದೊಂದು ಅವಕಾಶ ಕೊಡುವ ಕಲಮು ಮಾತ್ರವೆಂದು ಹಾಗೂ ತೊಂದರೆಗೊಳಗಾದ ವ್ಯಕ್ತಿ ಮಾತ್ರವೇ ವಿಚ್ಛೇದನಕ್ಕೆ ಕೋರಬಹುದೆಂದು, ಅಂಥವರಿಗೆ ಜೀವನಾಂಶಕ್ಕೆ ಅವಕಾಶ ಕಲ್ಪಿಸಲಾಗಿದೆಯೆಂಬುದನ್ನು ಅವರು ಗ್ರಹಿಸಿಲ್ಲ. ಈ ವಿಷಯಗಳನ್ನು ಅದರಲ್ಲಿ ಹೇಳಿಲ್ಲ. ನೂರಾರು ಸಾರ್ವಜನಿಕ ಸಭೆಗಳಲ್ಲಿ ಈ ವಿಷಯಗಳನ್ನು ನನಗೆ ಹೇಳಿದರು. ನಾನು ಈ ಅಂಶವನ್ನು ವಿವರಿಸಿ ಹೇಳಬೇಕಾಯಿತು.

*೪.೦೦ಗಂಟೆ*

ಈ ಸದನದ ಮಹಿಳಾ ಸದಸ್ಯರೂ ಕೂಡ ಅದನ್ನೇ ಹೇಳುತ್ತಾರೆಂದು ನನ್ನ ಭಾವನೆ. ಸಂಯುಕ್ತ

ಮಿತಾಕ್ಷರ ಕುಟುಂಬ ಪದ್ಧತಿ ಬಗ್ಗೆ ಹೇಳುವುದಾದರೆ, ಆ ಬಗ್ಗೆ ಕಾನೂನು ಮಂತ್ರಿಯವರು ಏನು ಹೇಳಿದ್ದಾರೋ ಅದಕ್ಕೆ ಒಂದಕ್ಷರವನ್ನು ಸೇರಿಸುವ ಅಗತ್ಯವಿಲ್ಲವೆಂದು ನನಗೆ ಕಾಣುತ್ತದೆ. ಅವರು ತಂಬಾ ವಿವರವಾಗಿಯೇ ಹೇಳಿದ್ದಾರೆ.

ಮಗಳ ವಾರಸುದಾರಿಕೆ ಬಗ್ಗೆ ಹೇಳುವುದಾದರೆ, ಪ್ರತಿಪಕ್ಷದವರೂ ಅದರ ಮೇಲೆಯೇ ತಮ್ಮ ವಾದವನ್ನು ಕೇಂದ್ರೀಕರಿಸಿದ್ದಾರೆ. ಅದು ಸಹಜವೇ. ಏಕೆಂದರೆ ಅದರಲ್ಲಿ ಅಷ್ಟೊಂದು ವಿವೇಚನೆ ರಹಿತವಾದದ್ದೇನೂ ಇಲ್ಲ. ಅದು ಅಷ್ಟೊಂದು ಕುರುಡು ಭಾವನೆಯದಲ್ಲ. ಆದರೆ, ಪಟ್ಟಭದ್ರ ಹಿತಾಸಕ್ತಿಗಳು ಬಿರುಸಾಗಿ ಮಾತನಾಡುತ್ತಿದ್ದಾರೆ. ಸನ್ಮಾನ್ಯ ಕಾನೂನು ಮಂತ್ರಿಯವರು ಈ ಅಂಶದ ಮೇಲೆ ಈಗಾಗಲೇ ಮಾತನಾಡಿದ್ದಾರೆ. ನಾನು ಒಂದು ಅಥವಾ ಎರಡು ವಿಚಾರ ಹೇಳಬಯಸುತ್ತೇನೆ. ಮಗಳ ವಾರಸುದಾರಿಕೆ ಹಕ್ಕನ್ನು ಮಾನ್ಯ ಮಾಡಿದರೆ ಮಾತ್ರವೇ ಮಹಿಳೆಗೆ ಆರ್ಥಿಕ ಸ್ಥಾನಮಾನ ಸಿಗುವುದು ಸಾಧ್ಯ. ನಿನ್ನೆ, ನನ್ನ ಗೆಳೆಯ ಮಾನ್ಯ ಸೇಠ್ ಗೋವಿಂದದಾಸರೂ ಅದನ್ನೇ ಹೇಳಿದರು. ಅವರು ಹೇಳಿದರು– ಅವರು ಎಷ್ಟರಮಟ್ಟಿಗೆ ಅದರಲ್ಲಿ ನಂಬಿಕೆ ಉಳ್ಳವರಾಗಿದ್ದಾರೋ ನನಗೆ ಗೊತ್ತಿಲ್ಲ– "ವಾರಸುದಾರಿಕೆ ಏಕಿರಬೇಕು?"– ಎಲ್ಲರಿಗೂ ಸಮಾನ ಅವಕಾಶಗಳಿರಬೇಕೆಂಬುದು ನಮ್ಮ ಅಪೇಕ್ಷೆ, ಭಾವನೆಯಾದರೆ,–ಸಂಪತ್ತಿನಲ್ಲಿ ಅಸಮಾನತೆ ಹೋಗಬೇಕೆಂಬುದು ನಮ್ಮ ಭಾವನೆಯಾದರೆ– ವಾರಸುದಾರಿಕೆ ಆಸ್ತಿಯೆನ್ನುವುದು ಇರಲೇಕೂಡದೆನ್ನುವ ಒಂದು ಕಾಲ ಬರುತ್ತದೆಂದು, ಬಂದೇ ಬರುತ್ತದೆಂದು ನಾನು ಖಂಡಿತವಾಗಿಯೂ ನಂಬಿದ್ದೇನೆ. ಆದರೆ ಅಂತಹ ಕಾಲ ಬರುವವರೆಗೆ, ಮಗಳ, ಮಗನ ನಡುವೆ ವ್ಯತ್ಯಾಸ ಇದ್ದೇ ಇರುತ್ತದೆ. ವ್ಯತ್ಯಾಸವೆಂದರೆ, ಸ್ಥಾನಮಾನದಲ್ಲಿ ವ್ಯತ್ಯಾಸವೆಂದೇ ಅರ್ಥ. ಮಗಳ ಸ್ಥಾನಮಾನವನ್ನು ಮಾನ್ಯ ಮಾಡಲೇಬೇಕಾಗುತ್ತದೆ. ಮಗಳಾಗಿ, ಮಹಿಳೆಯಾಗಿ ಅವಳೇ ಸಹಜ ವಾರಸುದಾರಳು, ತಾತ್ತ್ವಿಕ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿಲ್ಲ. ನಾವು, ಅಂತಿಮ ಇಷ್ಟಪತ್ರ ದ್ವಾರಾ ಉತ್ತರಾಧಿಕಾರದ ವಿಚಾರ ಮಾಡುತ್ತಿದ್ದೇವೆ. ನನ್ನ ಗೆಳೆಯ ಮಾನ್ಯ ಪಂಡಿತ ಭಾರ್ಗವ ಹೇಳಿದ್ದರೂ ಕೂಡ, ಮಾವ ಮಾಡಿದಂತೆ, ತಂದೆಯ ಮಗಳಿಗೆ ವಾರಸು ತಪ್ಪಿಸುವುದಿಲ್ಲ. ಸಂಯುಕ್ತ ಕುಟುಂಬದಲ್ಲಿ ಮಹಿಳೆಯ ಹಕ್ಕುಗಳಿಂದ ಅವು ಹಿಂದೆಯೇ ಕಣ್ಮರೆಯಾಗಿವೆ. ಒಳ್ಳೆಯ ಉದ್ದೇಶ ಈಡೇರಿರಬಹುದಾದರೂ ಇತ್ತೀಚಿನ ವರ್ಷಗಳಲ್ಲಿ ಅವುಗಳಿಂದ ಅಷ್ಟೊಂದು ಒಳ್ಳೆಯದಾಗಿಲ್ಲ. ನಿನ್ನೆ ನನ್ನ ಗೆಳತಿ ಸುಚೇತಾ ಕೃಪಲಾನಿಯವರು ಒಂದು ಮಾತು ಹೇಳಿದ್ದರು. ನಾನೂ ಕೂಡ ಅದನ್ನು ಅನುಮೋದಿಸುತ್ತೇನೆ. ಈ ದೇಶದಲ್ಲಿರುವ ಮಹಿಳಾ ರಕ್ಷಣಾಲಯಗಳಲ್ಲಿರುವವರ ಸ್ಥಿತಿಗತಿಗಳನ್ನು ವಿಶ್ಲೇಷಣೆ ಮಾಡಿದರೆ, ಈ ಮಹಿಳೆಯರಲ್ಲಿ ಎಷ್ಟು ಮಂದಿ ಸಂಯುಕ್ತ ಕುಟುಂಬವನ್ನು ಬಿಟ್ಟುಬಂದಿದ್ದಾರೆಂಬುದು ಗೊತ್ತಾಗುತ್ತದೆ. ತ್ವರಿತವಾಗಿ ಹೇಗೆ ಬದುಕಬೇಕೆಂಬುದು ಗೊತ್ತಿರದೆ, ಮನೆಗಳನ್ನು ಬಿಟ್ಟು ಬಂದಿರುವ ಈ ಮಹಿಳೆಯರು ಅವಮಾನದ ಬದುಕು ಸಾಗಿಸುತ್ತಿದ್ದಾರೆ. ಪ್ರತಿಯೊಬ್ಬ ಹಿಂದೂ ಎದುರಿಸಬೇಕಾದ ಸಮಸ್ಯೆ ಇದು. ಹಿಂದೂ ಕಾನೂನುಗಳ ಪ್ರತಿಪಾದಕರು ಇಂತದೊಂದು ಪರಿಸ್ಥಿತಿಯನ್ನು ನಿರೀಕ್ಷಿಸಿರಲೇ ಇಲ್ಲ.

ಮಹಿಳೆಯರು ಮಾನವ ಜನಾಂಗದ ಜನನಿರು ಮಹಿಳೆಯರು ಜವಾಬ್ದಾರಿಯುಳ್ಳ ತಾಯಂದಿರಾಗದಿದ್ದರೆ, ಬುದ್ಧಿವಂತ ನಾಗರಿಕರಾಗದಿದ್ದರೆ ಯಾವ ಜನಾಂಗಳೂ ಏಳಿಗೆ ಆಗುವುದಿಲ್ಲ. ವಿದ್ಯಾವಂತ ಮಹಿಳೆಯರ ಬಗ್ಗೆ ಬಹಳಷ್ಟು ಪ್ರಚಾರ ಆಗುತ್ತಿದೆ. ವಿದ್ಯಾವಂತ ಮಹಿಳೆಯರಲ್ಲಿ ಸ್ವಲ್ಪ ಮಂದಿ, ಈ ಹಿಂದೂ ಸಂಹಿತೆಯನ್ನು ಅಥವಾ ಈ ಸಂದೇಹಾಸ್ಪದವಾದ ಮತ್ತು ಸಾಧಾರಣ ಪರಿಣಾಮದ ಸುಧಾರಣೆ ಬೇಕೆನ್ನುತ್ತಿದ್ದಾರೆಂದು ಹೇಳಲಾಗಿದೆ. ಸರ್, ಅಂಥವರು ಸ್ವಲ್ಪ ಮಂದಿ, ಏಕೆಂದರೆ ಈ ದೇಶದಲ್ಲಿ ಶೇ. ೧೫ರಷ್ಟು ಅಕ್ಷರಸ್ಥ ಮಹಿಳೆಯರಿದ್ದಾರೆ. ವಿದ್ಯಾವಂತ ಮಹಿಳೆಯರ ಸಂಖ್ಯೆ ಈಗಲೂ ಕೂಡ ಸುಮಾರು ಶೇ. ೩ ಅಥವಾ

೪ರಷ್ಟಿದೆ. ಅಂಥವರು ಸ್ವಲ್ಪ ಮಂದಿ ಇದ್ದರೂ, ಅಂಥವರ ಹಿಂದೆ, ಇಂದಷ್ಟೇ ಅಲ್ಲ, ಕಳೆದ ದಶಕದಿಂದಲೂ ಬುದ್ಧಿವಂತರಾದ, ಪ್ರಗತಿಪರವಾದ ದೊಡ್ಡ ಪುರುಷ ಸಮುದಾಯವೇ ಇದೆ. ಈ ದೇಶದಲ್ಲಿ ಸ್ತ್ರೀ ಮತಾಧಿಕಾರ ಚಳುವಳಿ ಇಲ್ಲದಿರುವುದಕ್ಕೆ, ಸ್ತ್ರೀ ಸ್ವಾತಂತ್ರ್ಯ ಚಳುವಳಿ ಇಲ್ಲದಿರುವುದಕ್ಕೆ ಈ ದೇಶದ ಮಹಿಳೆಯರಷ್ಟೇ ಕಾರಣರಲ್ಲ. ಕಳೆದ ದಶಕದಿಂದಲೂ ಇದಕ್ಕೆ ಕಾರಣ, ಬುದ್ಧಿವಂತ ಪುರುಷ ಸಮುದಾಯ. ಇಂದೂ ಕೂಡ, ಅದೇ ವಿದ್ಯಮಾನ ಇದೆ. ಈ ಸದನದ ಬಹುಸದಸ್ಯರ ಅಭಿಪ್ರಾಯವು ಅದೇ ಎಂದು ನನ್ನ ನಂಬಿಕೆ. ಅದು, ಈ ದೇಶದ ವಿದ್ಯಾವಂತ ಮಹಿಳೆಯರ ಬೇಡಿಕೆ ಮಾತ್ರವಲ್ಲ, ಭಾರತವು ಮುನ್ನಡೆಯಬೇಕೆಂದು ಅಪೇಕ್ಷಿಸುವ ಎಲ್ಲರ ಬೇಡಿಕೆ. ಸಮಾಜದಲ್ಲಿ ಮಹಿಳೆಯರು ಪ್ರಜ್ಞಾವಂತ ನಾಗರಿಕರಾಗದಿದ್ದರೆ, ಸರಿಯಾದ ಸ್ಥಾನ ಸಿಗದಿದ್ದರೆ, ನಾವು ಪ್ರಗತಿಯತ್ತ ಸಾಗುವುದು ಸಾಧ್ಯವೇ ಇಲ್ಲ.

ಸರ್, ಗುಲಾಮರು, ಗುಲಾಮತನದಿಂದ ಹೊರಬರಲು ಒಪ್ಪಲಿಲ್ಲ ಎಂಬುದು ಜನಜನಿತ. ಜೀತದಾಳುಗಳು ಸ್ವತಂತ್ರರಾಗುವುದಕ್ಕೆ ಆಕ್ಷೇಪಿಸಿದರು ಎಂಬುದೂ ವಾಸ್ತವಿಕ ಸಂಗತಿ. ಅದಕ್ಕಿಂತಲೂ, ನೀಚ ಕಾಂಗ್ರೆಸ್ ಚಳುವಳಿಕಾರರು ಮಾತ್ರವೇ ಸ್ವಾತಂತ್ರ್ಯ ಬಯಸಿದ್ದರೇ ಹೊರ ದೇಶದ ಬಹು ಜನರು ಪರತಂತ್ರದಲ್ಲೇ ಇರಬಯಸಿದ್ದರೆಂದು ಬ್ರಿಟಿಷರೇ ಹೇಳುತ್ತಿದ್ದರು. ಇಂದೂ ಕೂಡ ಮಹಿಳೆಯರ ದೀನಸ್ಥಿತಿಯ ಬಗ್ಗೆ ನೀವು ಹೇಳುತ್ತಿರುವುದನ್ನು ನೋಡಿದರೆ, ಮಹಿಳೆಯರು ಇನ್ನೂ ಜಾಗೃತರಾಗಿಲ್ಲ ಎನ್ನುವುದು ನಿಜಕ್ಕೂ ಸತ್ಯ. ನೀವು ಅವರನ್ನು ಜಾಗೃತರನ್ನಾಗಿ ಮಾಡದಿರುವುದಕ್ಕೆ, ನೀವು ಅವರನ್ನು ಪ್ರಜ್ಞಾವಂತರನ್ನಾಗಿ ಮಾಡದಿರುವುದಕ್ಕೆ, ಸ್ವತಂತ್ರ ಪರಿಸರದಲ್ಲಿ ನವ ಭಾರತ ನಿರ್ಮಾಣದ ಇಂದಿನ ಸಂಯುಕ್ತ ಸಾಹಸದಲ್ಲಿ ಮಹಿಳೆಯರು ಪುರುಷರಿಗೆ ಸಮಾನರಾಗಿರಕೂಡದೆಂಬುದಕ್ಕೆ ಅದೇ ಕಾರಣವೇ? ನಾನು ಕೇಳುತ್ತಿದ್ದೇನೆ. ಈ ದೇಶದ ಮಹಿಳೆಯರ ಸಹಯೋಗ ಇಲ್ಲದೆ ಮುಂದುವರಿಯಬಹುದೆಂದು ಯಾರಾದರೂ ಭಾವಿಸಿದ್ದಾರೇನು?

ನನ್ನ ಮಾತು ಮುಗಿಸುವುದಕ್ಕೆ ಮುಂಚೆ, ನನ್ನ ಗೆಳೆಯ ಮಾನ್ಯ ಪಂಡಿತ ಠಾಕೂರ್‌ದಾಸ್ ಭಾರ್ಗವರು ಹೇಳಿರುವುದರ ಬಗ್ಗೆ ಒಂದೆರಡು ಮಾತು ಹೇಳುತ್ತೇನೆ. ಅವರ ಮಾತುಗಳ ಅರ್ಥವನ್ನು ನಾನು ಗ್ರಹಿಸಲು ಆಗಲಿಲ್ಲ ಎಂದೇ ಹೇಳಬೇಕಾಗಿದೆ. ಈ ಬೆಳಿಗ್ಗೆ ಅವರು ನ್ಯಾಯವಿಧಾಯಕ ಸಭೆಯ ಸಕ್ಷಮತೆಯನ್ನು ಪ್ರಶ್ನಿಸಿದ್ದರು, ಮಧ್ಯಾಹ್ನ ಕುಳಿತುಕೊಳ್ಳುವುದಕ್ಕೂ ಮುಂಚೆ .................

**ಪಂಡಿತ ಠಾಕೂರ್‌ದಾಸ್ ಭಾರ್ಗವ** : ಈ ನ್ಯಾಯವಿಧಾಯಕ ಸಭೆಯ ಸಕ್ಷಮತೆಯನ್ನು ನಾನು ಎಂದೂ ಪ್ರಶ್ನಿಸಿಲ್ಲ.

**ಶ್ರೀಮತಿ ರೇಣುಕಾ ರೇ** : ಅಂದಮೇಲೆ ಅವರು ಕೊನೆಯಲ್ಲಿ ಏನು ಹೇಳಿದ್ದರೋ ಅದೇ ಸರಿ ಎಂದಾಯಿತು. ಹನ್ನೊಂದು ಅಸಮ್ಮತಿಸೂಚಕ ಟಿಪ್ಪಣಿಗಳ ಬಗ್ಗೆ ಅವರು ತುಂಬಾ ವಿವರವಾಗಿ ಮಾತನಾಡಿದರು. ಈ ಟಿಪ್ಪಣಿಗಳು ಚಿಕ್ಕಪುಟ್ಟ ವಿಷಯಗಳಿಗೆ ಸಂಬಂಧಿಸಿವೆ, ವಾಡಿಕೆಯಂತೆ ಅವುಗಳನ್ನು ಎಲ್ಲ ಮಸೂದೆಗಳಿಗೂ ಲಗತ್ತಿಸಲಾಗುತ್ತದೆ, ಅದರರ್ಥ ಮಸೂದೆಯನ್ನು ಪುನರ್ ಪರಿಚಲನೆಗೆ ಕಳುಹಿಸಬೇಕು ಅಂತಲ್ಲ ಎನ್ನುವುದು ಅವರಿಗೂ ಗೊತ್ತಿದೆ. ಈ ಸದನಕ್ಕೂ ಗೊತ್ತಿದೆ. ಈ ಬೆಳಿಗ್ಗೆ, ಪಂಡಿತ ಭಾರ್ಗವರು, ಭಾರತದ ರಾಜ್ಯಾಂಗವನ್ನು ರಚಿಸಲು ಈ ರಾಜ್ಯಾಂಗ ಸಭೆಯು ಸಕ್ಷಮ ಅಲ್ಲವೆಂದು ಹೇಳುತ್ತಿದ್ದಾಗ ಒಂದು ತಪ್ಪು ಮರೆಮಾಡಲು, ಇನ್ನೊಂದು ತಪ್ಪು ಮಾಡುವುದು ಸರಿ ಅಲ್ಲವೆಂದು ಹೇಳಿದರು. ಅದು ತಪ್ಪು ಎಂದಾದರೆ, ಅಂಥ ತಪ್ಪಿನ ಸಭೆಯಲ್ಲಿ ಅವರೇಕೆ ಇನ್ನೂ ಇದ್ದಾರೋ, ನನಗೆ ಆಶ್ಚರ್ಯವಾಗುತ್ತಿದೆ. ಆ ಮಧ್ಯಾಹ್ನ ಅವರೇನು ಹೇಳಿದ್ದರೋ ಅದಕ್ಕೆಲ್ಲಾ ನಾನು ಪ್ರತಿಯಾಗಿ ಮಾತನಾಡುವುದಿಲ್ಲ ಅಥವಾ ಹೇಳುವುದಿಲ್ಲ, ಏಕೆಂದರೆ

ಅವರು ಮಾತನಾಡುವುದಕ್ಕೆ ಮುಂಚೆಯೇ, ಸನ್ಮಾನ್ಯ ಕಾನೂನು ಮಂತ್ರಿಯವರು ಸಮರ್ಥವಾಗಿಯೇ ನಿರೂಪಿಸಿದ್ದಾರೆ. ಪಂಡಿತ ಭಾರ್ಗವರೇ ಕೆಲವು ವಿಚಾರಗಳ ಬಗ್ಗೆ ವಿರೋಧಾಭಾಸದ ಮಾತುಗಳನ್ನಾಡಿದ್ದಾರೆ.

ಕೊನೆಯಲ್ಲಿ ಒಂದು ಮಾತು ಹೇಳಬಯಸುತ್ತೇನೆ. ಈ ದೋಷಪೂರ್ಣವಾದ, ಮೃದುವಾದ ಮಸೂದೆಯಿಂದಾಗಿ ಹಿಂದೂ ಸಮಾಜವು ಅಪಾಯದಲ್ಲಿದೆ ಎಂಬ ಕೂಗು ಎದ್ದಿದೆ. ಹಿಂದೂ ಸಮಾಜವು ಅಪಾಯದಲ್ಲಿದೆ ಎಂಬುದು ನನ್ನ ಭಾವನೆಯೂ ಹೌದು. ಅದು ತುಂಬಾ ಅಪಾಯದಲ್ಲಿದೆ, ಯಾರಿಂದ, ಅಡ್ಡಿ ಅಡಚಣೆ ಮಾಡುತ್ತಿರುವವರಿಂದ; ಆಚರಣೆಯಲ್ಲಿಲ್ಲದ ಸಂಪ್ರದಾಯಗಳನ್ನು ಬದಲಾಯಿಸುವುದಕ್ಕೆ ಅವಕಾಶ ಕೊಡದೆ, ಅವುಗಳೇ ನಮ್ಮ ಸಮಾಜದ ಜೀವಚೈತನ್ಯವನ್ನು ಹಿಸುಗಿ ಹಾಕುವುದಕ್ಕೆ ಅವಕಾಶ ಮಾಡಿಕೊಡುತ್ತಿರುವುದರಿಂದ. ಹಿಂದೂ ಸಮಾಜದ ಬಗ್ಗೆ ತುಂಬಾ ಕಳಕಳಿ ಇದೆಯೆಂದು ತೋರಿಸಿಕೊಳ್ಳುತ್ತಿದ್ದಾರಲ್ಲ, ಅವರು, ಸ್ವಲ್ಪ ಚಿಂತನೆ ಮಾಡಿ ನೋಡಿದರೆ, ನೀವು ಉಳಿಯಬೇಕಾದರೆ, ಸರಿಪಡಿಸಿಕೊಳ್ಳಲೂ ಸಿದ್ಧರಾಗಿರಬೇಕೆಂದು ಸನ್ಮಾನ್ಯ ಕಾನೂನು ಮಂತ್ರಿಗಳು ಹೇಳಿದ ಮಾತನ್ನು ಒಪ್ಪುತ್ತಾರೆ. ಹಿಂದೂ ಸಮಾಜದ ಪರವಾಗಿ ಮಾತನಾಡುವುದಕ್ಕೆ ಕೆಲವೇ ಜನರಿಗೆ ಯಾರು ವಿಶೇಷಾಧಿಕಾರ ಕೊಟ್ಟರೋ ನನಗೆ ಗೊತ್ತಿಲ್ಲ. ಶತಶತಮಾನಗಳಿಂದಲೂ ಕಾಲಕ್ಕೆ ತಕ್ಕಂತೆ ಬದಲಾವಣೆಗೊಳ್ಳುತ್ತಿರುವ ಹಿಂದೂ ಕಾನೂನಿಗೆ ಅಡ್ಡಿ ಅಡಚಣೆ ಮಾಡುತ್ತಿರುವವರು ಹಿಂದೂ ಸಮಾಜದ, ಹಿಂದೂ ಕಾನೂನಿನ ಬೆಂಬಲಿಗರು ಅಥವಾ ಪೂರ್ವಿಕರು ರೂಪಿಸಿದ್ದ ಸಂಸ್ಕೃತಿ, ಪರಂಪರೆಯಂತೆಯೇ ಹಿಂದೂ ಸಮಾಜವನ್ನು ಸುಧಾರಿಸಲು ಮತ್ತು ಅದೇ ವೈಭವವನ್ನು ಮತ್ತೆ ತರಬಯಸುವ ಜನರು ವಿರೋಧಿಗಳು ಎಂದು ನಾನು ಭಾವಿಸುವುದಿಲ್ಲ. ಅಡ್ಡಿ ಅಡಚಣೆ ಮಾಡುವವರು ಹಿಂದೂ ಸಮಾಜದ ಹಿತಚಿಂತಕರಲ್ಲ, ಶತ್ರುಗಳು ಎಂದು ನನ್ನ ಭಾವನೆ. ಹಿಂದೂಗಳು ದಾಸ್ಯದಲ್ಲಿದ್ದಾಗ, ಅನೇಕ ಶತಮಾನಗಳ ಕಾಲದಲ್ಲಿ ಹಾಗೂ ಕಳೆದ ಕೆಲವು ವರ್ಷಗಳಲ್ಲಿ ಹಿಂದೂ ಸಮಾಜವು ಏನನ್ನು ಕಳೆದುಕೊಂಡಿತ್ತೋ ಅದನ್ನು ಪುನಃ ಗಳಿಸಿಕೊಳ್ಳಬೇಕಾದರೆ, ಅದು ಇಂದು, ಈ ದೇಶದಲ್ಲಿ ಇರುವ ಸ್ವತಂತ್ರ್ಯ ಪರಿಸರಕ್ಕೆ ಅನುಗುಣವಾಗಿ ಹೊಂದಿಕೊಂಡು ಹೋಗಬೇಕು. ಪುರುಷರು, ಮಹಿಳೆಯರು ದೇಶಕ್ಕಾಗಿ ದುಡಿಯಲು ಸಮಾನವಾಗಿ ಮುಂದೆ ಬರಬೇಕು. ಈ ದೇಶದ ಸಾಮಾಜಿಕ ಕಾನೂನುಗಳಲ್ಲಿ ಯಾವುದೇ ಸಮಾನತೆ ಇರದಿದ್ದರೆ, ಸಮಾನತೆ ಹೇಗೆ ಬರುತ್ತದೆ. ಆದ್ದರಿಂದ, ಇಂದು ಈ ಸಂಹಿತೆಯನ್ನು ವಿರೋಧಿಸುತ್ತಿರುವವರು ಸ್ವಲ್ಪ ಚಿಂತೆ ಮಾಡಬೇಕು. ಅವರ ಬೆಂಬಲ ಸಿಗದಿರಬಹುದು, ಆದರೆ, ಮುನ್ನಡೆಯಲೇಬೇಕಾಗಿರುವುದರಿಂದ ಭಾರತವು ಇತರರ ದಾಸ್ಯಕ್ಕೆ ಅಥವಾ ಆಧಿಪತ್ಯಕ್ಕೆ ಮತ್ತೆ ಒಳಗಾಗುವುದಿಲ್ಲ.

***ಶ್ರೀ ವಿ.ಎಸ್. ಸರ್ವತೆ** (ಮಧ್ಯ ಭಾರತ) : ಈ ಮಸೂದೆ ಬಗ್ಗೆ ಪಾಂಡಿತ್ಯಪೂರ್ಣವಾಗಿ ಅತ್ಯಂತ ಸ್ವಚ್ಛ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಕ್ಕಾಗಿ ನಾನು ಡಾ. ಅಂಬೇಡ್ಕರ್‌ರವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಅದು, ಪ್ರೊಫೆಸರ್‌ಗೆ, ಅಡ್ವೋಕೇಟಿಗೆ ಪಾಠ ಹೇಳಿದಂತಿತ್ತು.

ಮಸೂದೆಯ ಹಲವಾರು ಕಲಮುಗಳ ಬಗ್ಗೆ ಹೇಳುವುದಾದರೆ, ಯಾರೇ ಆಗಲಿ, ಕೆಲವನ್ನು ಒಪ್ಪಬಹುದು, ಕೆಲವನ್ನು ಒಪ್ಪದಿರಬಹುದು. ಒಪ್ಪಿಕೊಳ್ಳಬಹುದಾದ ಅಥವಾ ಭಿನ್ನಾಭಿಪ್ರಾಯ ವ್ಯಕ್ತಪಡಿಸಬಹುದಾದ ಅಂಶಗಳ ಬಗ್ಗೆ ವಿವರವಾಗಿ ಹೇಳಲು ಇದು ಸಂದರ್ಭ ಅಲ್ಲ. ನಾನು ಮಾತನಾಡುವಾಗ, ಕೆಲವೊಂದು ಸ್ಥೂಲ ತತ್ವಗಳನ್ನಷ್ಟೇ ಹೇಳುತ್ತ, ಈ ತತ್ವಗಳ ಪ್ರಕಾರ, ಮಸೂದೆಯು, ಹಿಂದೂ ನ್ಯಾಯಪದ್ಧತಿಗೆ

* ಸಿ.ಎ. (ರೆಜಿ) ಡಿ. ಸಂಪುಟ II, ಭಾಗ II, ೨೫ ಫೆಬ್ರವರಿ ೧೯೪೯. ಪುಟ ೯೨೯–೩೪

ಮೊದಲಿಂದಲೂ ಆಧಾರಗಳೆಂದು ನಾವು ಭಾವಿಸಿಕೊಂಡು ಬಂದಿರುವ ಕಲ್ಪನೆಗಳಿಗೆ ಬದಲಾಗಿ ಮೂಲಭೂತವಾಗಿ ವ್ಯತಿರಿಕ್ತ ದಿಕ್ಕಿನಲ್ಲಿ ಹೋಗುತ್ತಿರುವುದನ್ನು ತೋರಿಸಿ ಕೊಡಲು ಪ್ರಯತ್ನಪಡುತ್ತೇನೆ.

ಹಿಂದೂ ಸಮಾಜದ ಒಂದು ಭಾಗ ಈ ಮಸೂದೆಗೆ ವಿರುದ್ಧವಾಗಿದೆ. ಅದನ್ನು ಅಲ್ಲಗಳೆಯುವಂತಿಲ್ಲ. ಅದನ್ನು ಮುಚ್ಚಿಟ್ಟುಕೊಳ್ಳುವಂತಿಲ್ಲ. "ಧರ್ಮ ಅಪಾಯ"ದಲ್ಲಿದೆ ಎಂದು ಕೆಲವರು ಹೇಳುತ್ತಾರೆ, ಇದು ಭಾವನಾತ್ಮಕ, ಇದು ಅರ್ಥಹೀನ. ೨೦ ಕೋಟಿಗಿಂತಲೂ ಹೆಚ್ಚು ಜನರಿಗೆ ಬಾಧಕ ಉಂಟುಮಾಡುವ ಈ ಶಾಸನವನ್ನು ರಚಿಸಲು ಪಟ್ಟುಹಿಡಿದಿರುವ ಜನರು, ಅದರ ತಿರುಳಿನ ಬಗ್ಗೆ ತಿಳುವಳಿಕೆ ಕೊಡುವ, ಚಿಂತನೆ ಮಾಡುವ ಮತ್ತು ಪರಿಶೀಲಿಸುವ ಕೆಲಸವನ್ನು ಚೆನ್ನಾಗಿಯೆ ಮಾಡುತ್ತಾರೆ. ಇಷ್ಟೊಂದು ಜನ – ಬುದ್ಧಿವಂತರು, ವಿದ್ಯಾವಂತ ಜನರು – ವಿರೋಧ ಮಾಡುವುದಕ್ಕೆ ಆಸ್ಪದ ಕೊಡುವಂಥದ್ದು ಈ ಮಸೂದೆಯಲ್ಲಿ ಏನಿದೆ ಎಂಬುದನ್ನು ಅವರು ಪರಿಶೀಲಿಸಬೇಕು.

(ಈ ಹಂತದಲ್ಲಿ ಸನ್ಮಾನ್ಯ ಡೆಪ್ಯೂಟಿ ಸ್ಪೀಕರರು ಪೀಠಬಿಟ್ಟು ತೆರಳಿದರು. ಶ್ರೀ ಎಸ್. ವಿ.ಕೃಷ್ಣಮೂರ್ತಿರಾವ್ (ಸಭಾಧ್ಯಕ್ಷ ಪೀಠದಲ್ಲಿ ಕುಳಿತುಕೊಳ್ಳುವವರ ಹೆಸರುಪಟ್ಟಿಯಲ್ಲಿ ಒಬ್ಬರು) ಪೀಠವನ್ನು ಅಲಂಕರಿಸಿದರು)

ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದು ಸಂಯುಕ್ತ ಆಸ್ತಿಯಲ್ಲಿ ಮಾಡಿರುವ ಬದಲಾವಣೆ. ಸಂಯುಕ್ತ ಆಸ್ತಿಯಲ್ಲಿನ ದಾಯಾದಿತ್ವದ ಅಂಶ ಖಂಡಿತವಾಗಿಯೂ ತುಂಬಾ ಒಳ್ಳೆಯ ಕಲ್ಪನೆ. ದಾಯಾದಿತ್ವದಲ್ಲಿ ಮನೆಯ ಒಟ್ಟಾರೆ ಹಿತದೃಷ್ಟಿ ಇರುತ್ತದೆಂಬುದು ಮನೆಯ ಪ್ರತಿಯೊಬ್ಬರಿಗೂ ಗೊತ್ತು. ಪ್ರತಿಯೊಬ್ಬ ವ್ಯಕ್ತಿಗೂ ಆಸ್ತಿಯ ಅನುಭೋಗಕ್ಕೆ ಸಂಪೂರ್ಣ ಹಕ್ಕು ಇರುತ್ತದೆ. ಆದರೆ, ಯಾರಿಗೂ ಯಾವುದೇ ಪಾಲು ಇರುವುದಿಲ್ಲ, ಪರಭಾರೆ ಮಾಡುವ ಹಕ್ಕು ಇರುವುದಿಲ್ಲ. ಆಧುನಿಕ ಸಮಾಜದ ಇಡೀ ಧೋರಣೆ, ಸಮಾಜದ ಪ್ರಗತಿ ಚಿಂತನೆ ಈ ದಿಕ್ಕಿನಲ್ಲಿದೆ. ನಾವು ಕಮ್ಯುನಿಸ್ಟರನ್ನು ಖಂಡಿಸಬಹುದು. ಆದರೆ, ಕಮ್ಯುನಿಸಂ, ಕೆಲವೊಂದು ವಿಚಾರಗಳಲ್ಲಿ ಪರಿಷ್ಕರಣೆ ಮಾಡಿಕೊಂಡು, ಶುದ್ಧರೂಪದಲ್ಲಿ ಬಂದೇ ಬರುತ್ತದೆ, ಬರುತ್ತದೆ. ಈ ವಿಚಾರದಲ್ಲಿ ಕಮ್ಯುನಿಸಂ ಏನು ಹೇಳುತ್ತದೆ? "ಪ್ರತಿಯೊಬ್ಬನೂ ತನ್ನ ಕೈಲಾದ ಮಟ್ಟಿಗೆ ಕೊಡಬೇಕು, ಪ್ರತಿಯೊಬ್ಬನು ತನಗೆ ಎಷ್ಟು ಅವಶ್ಯಕವೋ ಅಷ್ಟನ್ನು ತೆಗೆದುಕೊಳ್ಳಬೇಕು." ಅಂದರೆ, ಮನುಷ್ಯನು ಆಸ್ತಿಯ ಮಿತಿಮೀರಿದ ಅನುಭೋಗಕ್ಕೆ ಕೈಹಾಕಬಾರದು. ವೈಯಕ್ತಿಕ ಹಿತಕ್ಕೆ ಆಸ್ಪದ ಕೊಡಬಾರದು. ಆಸ್ತಿಯಲ್ಲಿ ತನಗೆ ಮಾತ್ರವೇ ಸಂಪೂರ್ಣ ಹಿತಾಸಕ್ತಿ ಇದೆಯೆಂದು ಯಾವಾಗಲೂ ಭಾವಿಸಬಾರದು. ಇದೇ ಮೂಲಭೂತ ತಿಳುವಳಿಕೆಯಾದರೆ, ಈ ನಿಟ್ಟಿನಲ್ಲೇ ಜನರ ಪ್ರಗತಿಪರ ಚಿಂತನೆ ಸಾಗುತ್ತಿದೆಯಾದರೆ, ವ್ಯತಿರಿಕ್ತ ದಿಕ್ಕಿನಲ್ಲಿ ಹೋಗುತ್ತಿರುವುದು ತಪ್ಪು ಎಂಬುದನ್ನು ಒಪ್ಪಿಕೊಳ್ಳಲಾಗುತ್ತದೆಂಬ ನಂಬಿಕೆ ನನಗಿದೆ. ಇಂಥದೊಂದು ಒಳ್ಳೆಯ ಕಲ್ಪನೆಗೆ ಉತ್ತೇಜನ ಕೊಡುವುದಕ್ಕೆ ಮತ್ತು ಈ ಕಲ್ಪನೆಯನ್ನು ಬೆಳೆಸಿ ಪೋಷಿಸುವಂತಹ ಪದ್ಧತಿಗಳಿಗೆ ಉತ್ತೇಜನ ಕೊಡುವುದಕ್ಕೆ ಪ್ರತಿಯೊಂದು ಪ್ರಯತ್ನ ಮಾಡಬೇಕು. ಡಾ. ಅಂಬೇಡ್ಕರ್‌ರವರು ತಾವು ಮಾತನಾಡುತ್ತಿದ್ದಾಗ, ಈ ದಾಯಾದಿತ್ವ ಪದ್ಧತಿಯನ್ನು ತೆಗೆದುಹಾಕಲು ಸ್ಮೃತಿಕಾರರು ಮತ್ತು ಇತರರು ಈವರೆಗೆ ಮಾಡಿದ ಪ್ರಯತ್ನಗಳ ಬಗ್ಗೆ ವಿವರವಾಗಿ ಹೇಳಿದರು. ಹಾಗಿದ್ದ ಪಕ್ಷದಲ್ಲಿ, ಈಗ ಅದಾಗದಂತೆ ಪ್ರಯತ್ನ ಮಾಡಬೇಕಾಗಿದೆ ಅಂದರೆ, ತೆಗೆದುಹಾಕುವ ಪ್ರಕ್ರಿಯೆ ಆಗದಂತೆ ತಡೆದು, ದಾಯಾದಿ ಆಸ್ತಿ ಪದ್ಧತಿಯನ್ನು ಯಥಾಸ್ಥಿತಿಗೆ ತರುವ ಪ್ರಯತ್ನ ಮಾಡಬೇಕಾಗಿದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ಸಾಧ್ಯವೇ ಇಲ್ಲ.

**ಶ್ರೀ ವಿ.ಎಸ್. ಸರ್ವತೆ:** ಸಾಧ್ಯವೇ ಇಲ್ಲವೇ? ಹೌದು, ಯಾವುದಕ್ಕೆ ಪ್ರಯತ್ನ ಮಾಡುವುದಿಲ್ಲವೋ ಅದನ್ನು "ಸಾಧ್ಯವೇ ಇಲ್ಲ"ವೆಂದು ಹೇಳಿ ತಪ್ಪಿಸಿಕೊಳ್ಳುವುದು ಬಹು ಸುಲಭ.

ನೀವು ಪ್ರಯತ್ನ ಮಾಡಿ ನೋಡಿ, ಈ ಪ್ರಪಂಚದಲ್ಲಿ ಅಸಾಧ್ಯವಾದುದು ಯಾವುದೂ ಇಲ್ಲ. ದಾಯಾದಿ ಆಸ್ತಿ ಪದ್ಧತಿಯ ಹಿಂದಿರುವ ಕಲ್ಪನೆ ಹಿಂದಿನಿಂದಲೂ ಇದೆ. ಪ್ರತಿಯೊಬ್ಬ ದಾಯಾದಿಗೂ, ಆಸ್ತಿಯ ಸಮಾನ ಅನುಭೋಗಕ್ಕೆ ಸಂಪೂರ್ಣ ಹಕ್ಕಿರುತ್ತದೆ. ವೈಯಕ್ತಿಕ ಹಿತಾಸಕ್ತಿಗೆ ಅವಕಾಶ ಇರುವುದಿಲ್ಲ. ಆಸ್ತಿಯನ್ನು ಪರಭಾರೆ ಮಾಡುವ ಹಕ್ಕು ಇರುವುದಿಲ್ಲ. ಆದ್ದರಿಂದ, ನೀವು ಆಲೋಚನೆ ಮಾಡುವಾಗ, ಈ ದಾಯಾದಿತ್ವದ ಇಡೀ ಕಲ್ಪನೆಯನ್ನು ವಿಚಾರ ಮಾಡಬೇಕು. ಮಿತಾಕ್ಷರ ನ್ಯಾಯದ ಪ್ರಕಾರ, ಸಂಯುಕ್ತ ಸ್ವತ್ತಿನಲ್ಲಿರುವ ಅಂಶಗಳೆಂದರೆ: ಉತ್ತರಾಧಿಕಾರದ ಹಕ್ಕು ಇರುತ್ತದೆ. ಕುಟುಂಬವೇ ಘಟಕ, ವ್ಯಕ್ತಿ ಅಲ್ಲ. ವ್ಯಕ್ತಿಗಳು ಹುಟ್ಟುತ್ತಾರೆ, ಸಾಯುತ್ತಾರೆ, ಕುಟುಂಬ ಇದ್ದೇ ಇರುತ್ತದೆ, ಗಂಡಸಿಗೆ ಅಥವಾ ಹೆಂಗಸಿಗೆ ಸಮಾನ ಅನುಭೋಗದ ಹಕ್ಕು ಇರುತ್ತದೆ. ಈ ಅರ್ಥದಲ್ಲಿ ಹೆಂಗಸು ಮತ್ತು ಗಂಡಸಿನ ನಡುವೆ ಸಮಾನತೆ ಇರುತ್ತದೆ. ಅಂದರೆ, ಕುಟುಂಬದ ಆಸ್ತಿಯು ಕುಟುಂಬದ ಜನರಿಗೆ ಸೇರಿದ್ದು ಅಂತಾಯಿತು. ಆದ್ದರಿಂದ, ಕುಟುಂಬದಲ್ಲಿ ಮಗಳಿಲ್ಲದಿದ್ದರೆ, ಅವಳು ಇನ್ನೊಂದು ಕುಟುಂಬದವಳಾಗಿದ್ದರೆ, ಅವಳಿಗೆ ಈ ಕುಟುಂಬದ ಆಸ್ತಿಯ ಅನುಭೋಗದ ಹಕ್ಕು ಇರುವುದಿಲ್ಲ. ಮಗಳನ್ನು ಕಡೆಗಣಿಸುತ್ತಾರೆ, ಮಗಳಿಗೆ ಅನ್ಯಾಯ ಮಾಡುತ್ತಾರೆ ಅಥವಾ ಪ್ರೀತಿ ವಾತ್ಸಲ್ಯ ತೋರುವುದಿಲ್ಲ ಅಂತಲ್ಲ. ಸಂಯುಕ್ತ ಕುಟುಂಬದ ಕಲ್ಪನೆ ಏನು? ಕುಟುಂಬದಲ್ಲಿ ಯಾರೇ ಇರಲಿ, ವಿಧವೆ, ಗಂಡು ಅಥವಾ ಹೆಣ್ಣು, ಯಾರೇ ಇರಲಿ, ಅವನು, ಅವಳು ಕುಟುಂಬದಲ್ಲಿ ಇರುವ ತನಕ, ಅವನಿಗೆ/ಅವಳಿಗೆ ಕುಟುಂಬದ ಆಸ್ತಿಯನ್ನು ಅನುಭೋಗಿಸುವ ಹಕ್ಕು ಇರುತ್ತದೆ. ಆಸ್ತಿಯನ್ನು ಪರಭಾರೆ ಮಾಡುವ ಹಕ್ಕು ಯಾರಿಗೂ ಇರುವುದಿಲ್ಲ. ಸಂಯುಕ್ತ ಕುಟುಂಬದ ಆಸ್ತಿಯು ಭಾಗ ಆಗುವುದಕ್ಕೆ ಅವಕಾಶ ಇಲ್ಲವೆಂಬ, ಸಂಯುಕ್ತ ಕುಟುಂಬದ ಯಾರೇ ವ್ಯಕ್ತಿಗೆ ಕುಟುಂಬದ ಆಸ್ತಿಯನ್ನು ಪರಭಾರೆ ಮಾಡುವುದಕ್ಕೆ ಯಾವುದೇ ಹಕ್ಕು ಇರುವುದಿಲ್ಲವೆಂಬ ಒಂದು ಕಲಮು ಇದ್ದಿದ್ದರೆ ನಾನು ಅದನ್ನು ಸ್ವಾಗತಿಸುತ್ತಿದ್ದೆ. ಹಾಗಾಗದಿದ್ದರೆ, ಅದೇ ಸರಿಯಾದ, ಸ್ವಾಗತಾರ್ಹ ವ್ಯವಸ್ಥೆಯಾಗುತ್ತಿತ್ತು. ಅದು, ಸಂಯುಕ್ತ ಕುಟುಂಬ ಪದ್ಧತಿಗೆ ಮೂಲಾಧಾರವಾಗಿದ್ದ ಕಲ್ಪನೆಗೆ ಅನುಸಾರವಾಗಿರುತ್ತಿತ್ತು. ಕುಟುಂಬವೇ ಸಮಾಜದ ಒಂದು ಘಟಕ, ವ್ಯಕ್ತಿಯಲ್ಲ. ಈ ದೃಷ್ಟಿಕೋನದಿಂದ ಅರ್ಥಮಾಡಿಕೊಂಡರೆ, ನನ್ನ ಸಹೋದರಿಯರು ಯಾರೂ, ತನ್ನನ್ನು ಕೆಟ್ಟದಾಗಿ ನೋಡಿಕೊಳ್ಳಲಾಗುತ್ತಿದೆಯೆಂದು ಭಾವಿಸಬೇಕಾಗಿಲ್ಲ. ಏಕೆಂದರೆ, ಆಕೆ ಹಾಗೂ ಆಕೆಯ ಸಹೋದರರು ಈ ವಿಷಯದಲ್ಲಿ ಸಮಾನ ಹಕ್ಕುಗಳನ್ನು ಅನುಭವಿಸುತ್ತಾರೆ. ಆದ್ದರಿಂದ, ವಿಶಾಲವಾದ ಭಾರತದಲ್ಲಿ ಸಾಮಾಜಿಕ ಘಟಕಗಳಲ್ಲಿ ಪ್ರತ್ಯೇಕವಾದ ಪ್ರಯೋಗಗಳು ಆಗುತ್ತಿದ್ದರೆ, ಅದರಿಂದ ನಷ್ಟವೇನೂ ಆಗುವುದಿಲ್ಲವೆಂಬ ವಿಚಾರವನ್ನು ಡಾ. ಅಂಬೇಡ್ಕರ್‌ರವರು ಪರಿಶೀಲಿಸಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. ವ್ಯಕ್ತಿಯೇ ಒಂದು ಘಟಕ ಆಗಿರಬೇಕು ಎನ್ನುವುದಾದರೆ, ಆ ಪ್ರಯೋಗ, ಬೇರೆಲ್ಲೋ ಆಗಲಿ, ಸಂಯುಕ್ತ ಕುಟುಂಬವೇ ಒಂದು ಘಟಕ ಆಗಿರಬೇಕು ಎನ್ನುವುದಾದರೆ ಆ ಪ್ರಯೋಗ ಸಹ ಕೆಲವು ಕಡೆಗಳಲ್ಲಿ ಮುಂದುವರಿಯಲಿ. ಸಮಾಜದಲ್ಲಿ ಬೇರೆ ಬೇರೆ ಕಡೆ ಪ್ರಯೋಗಗಳಾಗುವಷ್ಟು ನಮ್ಮ ದೇಶ ದೊಡ್ಡದಿದೆ. ಎರಡೂ ಪ್ರಯೋಗಗಳು ಮುಂದುವರಿಯಲಿ. ಜನರು ಯಾವ ಕಾನೂನನ್ನು ಅಥವಾ ಪದ್ಧತಿಯನ್ನು ಅನುಸರಿಸಬಯಸುತ್ತಾರೋ ಅದನ್ನೇ ಆಯ್ಕೆ ಮಾಡಿಕೊಳ್ಳಲಿ. ಭಾರತದ ೨೦ ಕೋಟಿ ಜನರಿಗಾಗಿ ಒಂದೇ ಕ್ರೋಡೀಕೃತ ಏಕರೂಪದ ಕಾನೂನನ್ನು ಹೊಂದುವುದರ ಬದಲು, ಈ ದೇಶದಲ್ಲಿ ಆಚರಣೆಯಲ್ಲಿರುವ ಒಂದಕ್ಕಿಂತ ಹೆಚ್ಚು ಪದ್ಧತಿಯನ್ನು ನಾವು ಹೊಂದಿದರೆ ಅದರಿಂದ ಏನೂ ನಷ್ಟವಾಗುವುದಿಲ್ಲ.

ಈ ಸಂದರ್ಭದಲ್ಲಿ ಡಾ. ಅಂಬೇಡ್ಕರ್‌ರವರು ಹೇಳಿದ ಒಂದು ವಿಚಾರದ ಬಗ್ಗೆ ಹೇಳಬಯಸುತ್ತೇನೆ. ಅವರ ಪಾಂಡಿತ್ಯವನ್ನು ನಾನು ಮೆಚ್ಚುತ್ತೇನೆ. ಅವರ ಮಾತುಗಳನ್ನು ನಾನು ಗೌರವಪೂರ್ವಕವಾಗಿಯೇ

ಆಲಿಸಿದ್ದೇನೆ. ಏಕೆಂದರೆ, ಅವರು ಮಾತನಾಡುತ್ತಿದ್ದಾಗ, ಅವರು ಯಾವಾಗಲೂ ಯಾರ ಬಗ್ಗೆಯೂ ಚುಚ್ಚಿ ಮಾತನಾಡುವಂತಹ ಮಟ್ಟಕ್ಕೆ ಇಳಿಯಲಿಲ್ಲ. ಅವರ ಮಾತಿನ ಧಾಟಿ ತುಂಬಾ ಪ್ರಬಲವಾಗಿತ್ತು. ಆದರೆ, ನೇರದ್ದಾಗಿತ್ತು, ಸಮತೂಕದ್ದಾಗಿತ್ತು. ಆದರೆ, ಹಿಂದಿನ ಒಂದು ದಿನ ಅವರು ಮಾತನಾಡುತ್ತಿದ್ದಾಗ, ವಿದ್ವತ್ಪೂರ್ವಕವಾಗಿ ಮಾತನಾಡುತ್ತಿದ್ದಾಗ, ಹಳೆಯ ಕಾಲದ ಬ್ರಾಹ್ಮಣರು, ಹತ್ತಿರ ಹತ್ತಿರ ೧೩೭ ಸ್ಮೃತಿಗಳ ರಚನೆಗೆ ಏಕೆ ತೊಡಗಿದ್ದರು ಎಂಬುದು ನನಗೆ ಗೊತ್ತಾಗಲಿಲ್ಲ, ಆ ಬ್ರಾಹ್ಮಣರಿಗೆ ಬೇರೆ ಕೆಲಸ ಇರಲಿಲ್ಲವೇ ಎಂದು ಹೇಳಿದ್ದರು. ಈ ಮಾತು ಹೇಳುವಾಗ, ಸನ್ಮಾನ್ಯ ಮಂತ್ರಿಯವರಿಗೆ ಐತಿಹಾಸಿಕ ಘಟನಾವಳಿ ಆ ಒಂದು ಕ್ಷಣ ಮರೆತುಹೋಗಿತ್ತೆಂದು ಕಾಣುತ್ತದೆ. ಈ ೧೩೭ ಸ್ಮೃತಿಗಳನ್ನು ಏಕಕಾಲದಲ್ಲಿ ರಚಿಸಲಿಲ್ಲ ಎಂಬುದನ್ನು ನಾನು ಅವರಿಗೆ ನೆನಪು ಮಾಡಿಕೊಡಬಯಸುತ್ತೇನೆ. ಕೊನೆ ಪಕ್ಷ ೨೫೦ ವರ್ಷಗಳಿಗಿಂತಲೂ ಹೆಚ್ಚಿನ ಕಾಲಾವಧಿಯಲ್ಲಿ ಅವು ರಚಿತವಾಗಿವೆ. ಅಂದರೆ, ಒಂದು ಸ್ಮೃತಿಯ ರಚನೆಗೆ ಸರಿ ಸುಮಾರು ೨೦ ವರ್ಷ ಬೇಕಾಗಿದೆ. ಅಂದರೆ ಪ್ರತಿಯೊಂದು ಪೀಳಿಗೆಗೆ ಒಂದರಂತೆ ರಚನೆ ಆಗಿದೆ. ಆದರೆ, ಇಲ್ಲೇನಾಗಿದೆಯೆಂದರೆ, ಒಂದೇ ವರ್ಷದ ಅಂತರದಲ್ಲಿ ಸನ್ಮಾನ್ಯ ಡಾಕ್ಟರವರು ಒಂದಕ್ಕಿಂತ ಹೆಚ್ಚು ಸ್ಮೃತಿಗಳನ್ನು ಸಿದ್ಧಪಡಿಸುತ್ತಾರೆ. ಆದ್ದರಿಂದ, ಅವರು ಅಂಥ ಜ್ಞಾನಪ್ರದವಲ್ಲದ ಮಾತು ಹೇಳಬಾರದಿತ್ತು. ಅವರ ವಾದಕ್ಕೆ ಅದು ಪೂರಕವೂ ಆಗಿರಲಿಲ್ಲ.

ಸರ್, ನಾನು ಸಂಯುಕ್ತ ಕುಟುಂಬ ಆಸ್ತಿ ಬಗ್ಗೆ ಹೇಳುತ್ತಿದ್ದೆ. ಸಂಯುಕ್ತ ಕುಟುಂಬದ ಆಸ್ತಿಯ ಮೂಲತತ್ವವೆಂದರೆ, ನಿರ್ಬಂಧಿತ ಅನುಭೋಗಕ್ಕೆ ಅವಕಾಶ.

ಸರ್, ಈ ಪ್ರಶ್ನೆಗಳನ್ನು ಆಗಾಗ ಕೇಳುತ್ತಿರುತ್ತಾರೆ : ಹಿಂದೂ ಸಂಸ್ಕೃತಿ ಎಂದರೇನು? ಹಿಂದೂ ಧರ್ಮ ಎಂದರೇನು? ಘಟಾನುಘಟಿಗಳೇ ಹಿಂಜರಿಯುವಾಗ ನನ್ನಂಥವರು ವಿವರಣೆ ಕೊಡುವುದು ತುಂಬಾ ಕಷ್ಟ. ಅದೇನೇ ಇರಲಿ, ಯಾರಾದರೂ, ಕೆಲವೊಮ್ಮೆ ಸ್ವಲ್ಪವಾದರೂ ಪ್ರಯತ್ನಮಾಡಲೇಬೇಕಲ್ಲ. ನಾನು ಆ ಪ್ರಯತ್ನಮಾಡುತ್ತೇನೆ. ಪ್ರಸ್ತುತ ವಿಷಯದ ಬಗ್ಗೆ ಹೇಳುವುದಾದರೆ, ಹಿಂದೂಗಳ ಮನಸ್ಸಿನಲ್ಲಿರುವ ಮೂಲಭೂತ ಅಂಶಗಳೆಂದರೆ ಅನುಭೋಗದ ಮೇಲೆ ಕಡಿವಾಣ ಇರಬೇಕು ಎಂಬುದು ನನ್ನ ಅನಿಸಿಕೆ. ಅನುಭೋಗಕ್ಕೆ ಉತ್ತೇಜನ ಅಲ್ಲ. ಅನುಭೋಗದ ಮೇಲೆ ನಿರ್ಬಂಧ, ಹಿಂದೂಗಳ ಕಟ್ಟುಕಟ್ಟಳೆ ಆಗಿತ್ತು. ಹಿಂದೂಗಳ ಪ್ರಕಾರ, ಸಮುದಾಯದ ಹಿತಕ್ಕೋಸ್ಕರ, ವ್ಯಕ್ತಿ ತನ್ನತನವನ್ನು ಬಿಟ್ಟುಬಿಡಬೇಕಿತ್ತು.

ಈ ನಿರ್ಬಂಧ ತತ್ವವನ್ನು ಅನ್ವಯಿಸಿ ಹೇಳುವುದಾದರೆ, ವಿವಾಹದ ಅಧ್ಯಾಯವನ್ನು ಇಡಿಯಾಗಿ ಪುನರ್‌ರೂಪಿಸಬೇಕಾಗುತ್ತದೆ. ಶೇ. ೯೦ರಷ್ಟು ಜನರಿಗೆ ಅವರ ಸಂಪ್ರದಾಯದ ಪ್ರಕಾರ ವಿಚ್ಛೇದನದ ಹಕ್ಕು ಇದೆಯಲ್ಲ. ನೀವೇನು ಮಾಡುತ್ತೀರಿ? ಎಂದು ಹೇಳಿದ್ದಾರೆ. ಶೇ. ೯೦ರಷ್ಟು ಜನರ ಈ ಸಂಪ್ರದಾಯವನ್ನು ಉಳಿದ ಶೇ. ೧೦ರಷ್ಟು ಜನರ ಮೇಲೆ ಹೇರುತ್ತೀರಾ? ಎಂದು ಹೇಳಿದ್ದಾರೆ. ಈ ರೀತಿಯ ವಾದ, ಮಾತು ಆಕರ್ಷಕವಾಗಿ ಕಾಣಬಹುದೇ ಹೊರತು, ತರ್ಕದ್ದಾಗುವುದಿಲ್ಲ. ನಾವೇನನ್ನು ಪರಿಶೀಲಿಸಬೇಕೆಂದರೆ, ಸನ್ಮಾನ್ಯ ಡಾಕ್ಟರ್‌ರವರು ಏನನ್ನು ಪರಿಶೀಲಿಸಬೇಕೆಂದರೆ, ಸಂಪ್ರದಾಯವನ್ನಲ್ಲ, ಯಾವುದು ಒಳ್ಳೆಯದು, ಯಾವುದು ಪ್ರಯೋಜನಕರ ಎಂಬುದನ್ನು ಪರಿಶೀಲಿಸಬೇಕು. ಯಾವುದಿರಬೇಕೆಂಬುದುನ್ನು ನಾವು ಆಲೋಚನೆ ಮಾಡಬೇಕು. ಇದೇ ಮಾನದಂಡ ಆಗಿರಬೇಕು. ಇಲ್ಲದಿದ್ದರೆ ಅಸಂಗತವಾಗುತ್ತದೆ. ಉದಾಹರಣೆಗೆ, ಶೇ. ೯೦ರಷ್ಟು ಜನರಲ್ಲಿ ಕುಡಿತದ ಸಂಪ್ರದಾಯ ಇದೆಯೆಂದಿಟ್ಟುಕೊಳ್ಳಿ. ಕುಡಿಯುವುದನ್ನು ನಿಷೇಧಿಸುವುದಕ್ಕೆ ಹೋಗುತ್ತೇವೆಯೋ ಖಂಡಿತಾ ಇಲ್ಲ. ಕುಡಿತ ಒಂದು ಸಂಪ್ರದಾಯವೆಂಬುದನ್ನು ಅಲ್ಲಗಳೆಯುವಂತಿಲ್ಲ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ಅದು, ಸಂಪ್ರದಾಯ ಅಲ್ಲ.

**ಶ್ರೀ ವಿ.ಎಸ್. ಸರ್ವತೆ :** ಹೌದಾ, ನಿಮಗೆ ಹಾಗನ್ನಿಸಬಹುದು. ಆ ರೀತಿಯಲ್ಲಿ ಆಲೋಚನೆ ಮಾಡಿ ಹೇಳುವ ಸ್ವಾತಂತ್ರ್ಯ ನನಗಿದೆ. (ಒಬ್ಬರು ಮಾನ್ಯ ಸದಸ್ಯರು: "ಶೇ. ೯೦ರಷ್ಟು ಜನರೆಲ್ಲರೂ ಕುಡುಕರಲ್ಲ"). ಆ ಸಮುದಾಯದಲ್ಲಿ ಅದು ಸಂಪ್ರದಾಯವೆಂದು ಒಬ್ಬರೆನ್ನುತ್ತಾರೆ, ಇನ್ನೊಬ್ಬರು ಕುಡುಕರೆನ್ನುತ್ತಾರೆ. ಇದೇ ವ್ಯತ್ಯಾಸ. ಒಂದು ಸಂಪ್ರದಾಯ ಇದೆ. ಅದನ್ನು ಕಾನೂನು ಮುಂದುವರಿಸಬೇಕೆನ್ನುವುದು ತರ್ಕ ಅಲ್ಲ. ಅದು ಪ್ರಯೋಜನಕರವೇ ಎಂಬ ಬಗ್ಗೆ ಆಲೋಚನೆ ಮಾಡಬೇಕು. ನಾವು ಈ ದೃಷ್ಟಿಕೋನದಿಂದ ನೋಡಿದಾಗ, ಹಿಂದೂ ಸಮುದಾಯದ ಕೆಲವೊಂದು ವರ್ಗ, ಮದುವೆ ಬಂಧನ ಒಡೆಯಲಾಗದ್ದು ಆಗಬೇಕೆಂದು ಹೇಳುತ್ತಿರುವಾಗ, ಇಚ್ಛೆಪಟ್ಟರೆ, ಬೇರೆ ಬೇರೆ ಆಗಬೇಕೆಂದು ನೀವೇಕೆ ಹೇಳುತ್ತೀರಿ, ಏಕೆ ಒತ್ತಾಯ ಮಾಡುತ್ತೀರಿ? ಈ ಮಸೂದೆಯಲ್ಲಿ, ಅವಶ್ಯಕತೆ ಇಲ್ಲ. ನಿರ್ಬಂಧ ಇಲ್ಲ. ಇಚ್ಛೆಗೆ ಅವಕಾಶ ಕಲ್ಪಿಸಲಾಗಿದೆಯೆಂದು ವಾದ ಮಾಡಬಹುದು, ಇಚ್ಛೆ ಇದ್ದೇ ಇರುತ್ತದೆ. ಹೆಂಡದ ಅಂಗಡಿಗೆ ಕುಡುಕ ಹೋಗಬಹುದು, ಹೋಗದಿರಲೂಬಹುದು. ಅದು ಅವನ ಇಷ್ಟ. ಆದರೆ, ಅವನು ಕುಡಿಯುವುದಕ್ಕೆ ಹೆಂಡದ ಅಂಗಡಿಗೆ ಹೋಗೇ ಹೋಗುತ್ತಾನೆ. ಆದಕಾರಣ, ಕಾನೂನು ಮೂಲಕ ಆ ಹೆಂಡದ ಅಂಗಡಿಯನ್ನೇ ಮುಚ್ಚಿಬಿಡಬೇಕು ಎಂದರೆ ಹೇಗೆ? ಈ ತತ್ವವನ್ನು ಸಮಾಜದ ಕೆಲವೊಂದು ಭಾಗಕ್ಕೆ ಅನ್ವಯಿಸಿದ್ದರೆ ನಾನು ಸ್ವಾಗತಿಸುತ್ತಿದ್ದೆ. ವಿವಾಹ ಕಾನೂನಿನಲ್ಲಿ ಒಬ್ಬನೇ ಗಂಡ, ಒಬ್ಬಳೇ ಹೆಂಡತಿಗೆ ಅವಕಾಶ ಇರಬೇಕು. ನಾನೂ ಕೂಡ ಒಪ್ಪುತ್ತೇನೆ. ನಾನು ಇನ್ನೂ ಮುಂದೆ ಹೋಗುತ್ತೇನೆ. ನೀವು ನಿರ್ಬಂಧದ ದೃಷ್ಟಿಕೋನದಿಂದ ಆಲೋಚನೆ ಮಾಡಿದರೆ, ಗಂಡಸಿಗೆ, ಹೆಂಗಸಿಗೆ ಎರಡನೇ ಮದುವೆಗೆ ಅವಕಾಶ ಇರಲೇಕೂಡದು, ಅದೇ ಸರಿಯಾದದ್ದು. ಆದರೆ, ಹಾಗೆ ಮಾಡುವುದರ ಬದಲು ನಾವಿಲ್ಲಿ ಅತಿರೇಕಕ್ಕೆ ಹೋಗಿ, ಇಚ್ಛೆಪಟ್ಟರೆ, ಮದುವೆ ಬಂಧನವನ್ನು ಮುರಿದುಕೊಳ್ಳುವುದಕ್ಕೆ ಅವಕಾಶ ಕಲ್ಪಿಸುತ್ತಿದ್ದೇವೆ. ಇದು ನನ್ನ ಮನಸ್ಸಿಗೆ ಹಿಡಿಸುತ್ತಿಲ್ಲ. ಪ್ರಾಚೀನ ಹಿಂದೂಗಳು ಕೆಲವೊಂದು ನಿರ್ದಿಷ್ಟ ಕಾಲದಲ್ಲಿ ವಿಚ್ಛೇದನಕ್ಕೆ ಅವಕಾಶ ಕೊಟ್ಟಿದ್ದರು ನಿಜ. ಐತಿಹಾಸಿಕ ಪರಿಸ್ಥಿತಿ ಏನೇ ಇದ್ದಿರಬಹುದಾಗಿದ್ದರೂ ಆ ನಂತರ ಆ ಅವಕಾಶವನ್ನು ಕೊಟ್ಟಿರಲಿಲ್ಲ. ಕುಟುಂಬದ ಐಕ್ಯತೆಯನ್ನು ಕಾಪಾಡಬೇಕೆಂಬುದೇ ಕಾರಣವೆಂದು ನನ್ನ ಭಾವನೆ. ಒಮ್ಮೆ ಮದುವೆ ಆದರೆ ಆ ಬಂಧನ ಒಡೆಯಕೂಡದು. ಬೇರೆ ಯಾವಳೂ ಬರಕೂಡದು, ಇಂಥ ಸಂದರ್ಭ, ಸನ್ನಿವೇಶ ಆಗುವುದನ್ನು ಸಾಧ್ಯವಾದಷ್ಟು ಮಟ್ಟಿಗೆ ತಡೆಯಬೇಕು, ತಪ್ಪಿಸಬೇಕು ಎನ್ನುವುದೇ ಅವರ ಅಪೇಕ್ಷೆಯಾಗಿತ್ತು. ಮದುವೆ ಬಂಧನವನ್ನು ಒಡೆಯುವುದಕ್ಕೆ ಏಕೆ ಅವಕಾಶ ಕೊಟ್ಟಿರಲಿಲ್ಲವೆಂಬುದಕ್ಕೆ ಇದೂ ಒಂದು ಕಾರಣವೆಂದು ನನ್ನ ಭಾವನೆ. ಆದ್ದರಿಂದ, ನನ್ನ ಸಲಹೆ ಏನೆಂದರೆ, 'ವಿವಾಹ' ಭಾಗದಲ್ಲಿ ಎರಡು ವಿಭಾಗಗಳು ಇರಲಿ. ಮದುವೆ ಬಂಧನವನ್ನು ಒಡೆದುಕೊಳ್ಳಲು ಇಚ್ಛಿಸುವವರು, ಸಿವಿಲ್ ವಿವಾಹ ಕಾನೂನಿನ ಪ್ರಕಾರ ಮದುವೆ ಆಗಲಿ, ನೀವು ಇಲ್ಲಿ ಮಾಡಿರುವ ಕಲಮುಗಳ ಪ್ರಕಾರ, ಮದುವೆ ಬಂಧನವನ್ನು ಒಡೆದುಕೊಳ್ಳುವ ಸ್ವಾತಂತ್ರ್ಯ ಇರಲಿ. ಶಾಸ್ತ್ರೋಕ್ತ ಮದುವೆ ಬಗ್ಗೆ ಇನ್ನೊಂದು ವಿಭಾಗ ಇರಲಿ. ಅದರಲ್ಲಿ, ಮದುವೆ ಬಂಧನವನ್ನು ಮುರಿದುಕೊಳ್ಳುವುದಕ್ಕೆ ಅವಕಾಶ ಇಲ್ಲವೆಂದು ಹೇಳಿರಬೇಕು. ಇದು ಉಭಯತ್ರರಿಗೂ ಸಮ್ಮತವಾಗುತ್ತದೆಂದು ನನ್ನ ಭಾವನೆ. ವಿಚ್ಛೇದನವನ್ನು ಏಕೆ ಬಲವಾಗಿ ಪ್ರತಿಪಾದಿಸಲಾಗುತ್ತಿದೆಯೋ?

**ಶ್ರೀ ಮಹಾವೀರ ತ್ಯಾಗಿ :** ಅಂದ ಮೇಲೆ, ಬೇರೆ ಬೇರೆ ಆಗುವ ಬಗ್ಗೆ ಮದುವೆಗೆ ಮೊದಲೇ ನಿರ್ಧರಿಸಿಕೊಳ್ಳಬೇಕಾಗುತ್ತದೇನು?

**ಶ್ರೀ ವಿ. ಎಸ್. ಸರ್ವತೆ :** ನನ್ನ ಮಾನ್ಯ ಗೆಳೆಯ ನನ್ನನ್ನು ತುಂಬಾ ತಪ್ಪುತಿಳಿದುಕೊಂಡಿದ್ದಾರೆ. ಗಂಡಸರು, ಹೆಂಗಸರು, ಯಾರು ತಮ್ಮ ಮದುವೆ ಬಂಧನವು ಒಡೆಯಬಾರದೆಂದು ಇಚ್ಛೆಪಡುತ್ತಾರೋ

ಅಂಥವರು ಶಾಸ್ತ್ರೋಕ್ತವಾಗಿ ಮದುವೆ ಆಗಬೇಕು, ಮದುವೆ ಬಂಧನವನ್ನು ಮುಂದೆ ಮುರಿದುಕೊಳ್ಳುವುದಕ್ಕೂ ಅವಕಾಶ ಇರಬೇಕೆನ್ನುವವರು ಸಿವಿಲ್ ವಿವಾಹದ ಪ್ರಕಾರ ಮದುವೆ ಆಗಲಿ ಎಂದೇ ನಾನು ಹೇಳಿದ್ದು.

**ಶ್ರೀ ತಜಮುಲ್ ಹುಸೇನ್ :** ನನ್ನ ಮಾನ್ಯ ಗೆಳೆಯನ ಮಾತಿನ ಅರ್ಥ. ಮದುವೆಗೆ ಮುಂಚೆಯೇ ವಿಚ್ಛೇದನವೇ?

**ಶ್ರೀ ವಿ.ಎಸ್. ಸರ್ವತೆ :** ಸಿವಿಲ್ ವಿವಾಹವೆಂದರೆ ವಿಚ್ಛೇದನ ಅಲ್ಲ. ಅದು ಪ್ರತ್ಯೇಕ ವಾಸವೂ ಅಲ್ಲ. ವಿಚ್ಛೇದನವೂ ಅಲ್ಲ. ಸಿವಿಲ್ ವಿವಾಹ ಎಂದು ನಾನು ಹೇಳಿದಾಗ ಅದರರ್ಥ **'ಮದುವೆ'**, ಅದರರ್ಥ ವಿಚ್ಛೇದನ ಅಂತಲ್ಲ.

**ಶ್ರೀ ಮಹಾವೀರ ತ್ಯಾಗಿ :** ಸಭಾ ನಿಯಮ ಪಾಲಿಸಿ, ಮಾನ್ಯ ಸದಸ್ಯರು ಮಾತು ಮುಂದುವರಿಸಲಿ.

**ಶ್ರೀ ವಿ.ಎಸ್. ಸರ್ವತೆ :** ಸರ್, ನನ್ನ ಕಳಕಳಿ ಏನೆಂದರೆ, ಕೆಲವೊಂದು ವರ್ಗದ ಜನರಿಗೆ ಬೇಕಿಲ್ಲದ ಕೆಲವೊಂದು ವಿಚಾರಗಳನ್ನು ನಾವು ಅವರ ಮೇಲೆ ಹೇರಬೇಕೇ ಎಂಬುದನ್ನು ನಾವು ಸ್ಪಷ್ಟಪಡಿಸಿಕೊಳ್ಳಬೇಕು. ಶಾಸ್ತ್ರೋಕ್ತವಾಗಿ ಆದ ಮದುವೆಯೇ ಶಾಸ್ತ್ರೋಕ್ತ ಮದುವೆಯೆಂದು ನೀವು ಅಂಗೀಕರಿಸುವುದಾದರೆ, ಅಂಥ ಮದುವೆಗೆ ಕಟ್ಟುಕಟ್ಟಳೆಗಳನ್ನು ಧರ್ಮವೇ ನಿಗದಿ ಮಾಡಲಿ. ಸಣ್ಣ ಸಣ್ಣ ಮಕ್ಕಳನ್ನು ಮದುವೆ ಮಾಡುವುದಕ್ಕೆ, ವಯಸ್ಸಿಗೆ ಬಂದ ಮಕ್ಕಳಿಗೆ ಮದುವೆ ಮಾಡುವುದಕ್ಕೆ, ಧರ್ಮ ಅವಕಾಶ ಕೊಡುವುದಾದರೆ, ಕೊಡಲಿ. ಮದುವೆಯು ಧರ್ಮದ ಪ್ರಕಾರ ಆಗಿರಬೇಕೆಂದು ಮೊದಲು ಹೇಳುವುದು, ಅನಂತರ, ಮದುವೆಯು ಧರ್ಮದ ಪ್ರಕಾರವೂ ಆಗಿರಬೇಕು, ಹಾಗೆಯೇ ಈ ಮಸೂದೆಯಲ್ಲಿ ಹೇಳಿರುವ ಪ್ರಕಾರವೂ ಆಗಿರಬೇಕೆಂದು ಹೇಳುವುದು ವಿರೋಧಾಭಾಸದ್ದಾಗಿರುತ್ತದೆ. ಇಲ್ಲಾ, ಶಾಸ್ತ್ರೋಕ್ತ ಮದುವೆಗಳಿಗೆ ಅವಕಾಶ ಕೊಡಿ, ಇಲ್ಲಾ, ನಿಮಗೆ ಇಷ್ಟ ಇರದಿದ್ದರೆ ಶಾಸ್ತ್ರೋಕ್ತ ಮದುವೆಗಳಿಗೆ ಅವಕಾಶ ಕೊಡಲೇಬೇಡಿ. ಎಲ್ಲ ಮದುವೆಗಳು ಸಿವಿಲ್ ಮದುವೆಗಳಾಗಿರಬೇಕೆಂದು ಹೇಳಿಬಿಡಿ. ಶಾಸ್ತ್ರೋಕ್ತ ಮದುವೆಗೆ ಅವಕಾಶ ಕೊಡಲಾಗುತ್ತದೆ ಎಂದು ನೀವು ಹೇಳುವುದಾದರೆ, ಶಾಸ್ತ್ರೋಕ್ತವಾಗಿಯೇ ಆಗಬೇಕಾಗುತ್ತದೆ. ಇದನ್ನೇ ನಾನು ಒತ್ತಿ ಹೇಳಿದ್ದು, ಮಸೂದೆಯ ೭ನೆಯ ಕಲಮಿನ ಬಗ್ಗೆ ಹೇಳುವುದಾದರೆ, ಅದರಲ್ಲಿ ಹೇಳಿರುವ ಮದುವೆಗಳು ಶಾಸ್ತ್ರೋಕ್ತ ಅಲ್ಲ. ಶಾಸ್ತ್ರೋಕ್ತ ವಿಧಿವಿಧಾನಗಳಿಗೆ ಕೆಲವೊಂದನ್ನು ಸೇರಿಸಲಾಗಿದೆ. ಧರ್ಮಕ್ಕೆ ಅವಕಾಶ ಕೊಡುವುದಾದರೆ, ಅದು ಕಟ್ಟುನಿಟ್ಟಾಗಿ ಧರ್ಮದ ಪ್ರಕಾರವೇ ಆಗಬೇಕು. ಇದೇ ನಾನು ತಮ್ಮ ಗಮನಕ್ಕೆ ತರುತ್ತಿರುವ ಎರಡನೇ ವಿಚಾರ. ಇದನ್ನು ಸುಲಭವಾಗಿ ಮಾಡಬಹುದು. ಇದರಿಂದ, ಈಗ ವ್ಯಕ್ತವಾಗಿರುವ ಅಸಮಾಧಾನ ಎಷ್ಟೋ ಕಡಿಮೆಯಾಗುತ್ತದೆ. ತತ್ತ್ವಗಳ ಬಗ್ಗೆ ನನ್ನದೊಂದು ಸರಳ ಕೋರಿಕೆ. ಏನೆಂದರೆ, ಈ ಕಾಯ್ದೆಯಲ್ಲೇ ಸಮಾಜದಲ್ಲಿ, ಸಂಯುಕ್ತ ಕುಟುಂಬದಲ್ಲಿ ದಾಯಾದಿ ಪದ್ಧತಿ ಮುಂದುವರಿಯುವುಕ್ಕೆ ಅವಕಾಶ ಕೊಡಬೇಕು. ಇದರಿಂದ ಏನೂ ನಷ್ಟವಾಗುವುದಿಲ್ಲ. ಈ ದೇಶದಲ್ಲಿ ಮುಸ್ಲಿಮರಿದ್ದಾರೆ, ಕ್ರಿಶ್ಚಿಯನ್ನರಿದ್ದಾರೆ, ಪಾರ್ಸಿಗಳಿದ್ದಾರೆ–ಪಾರ್ಸಿಗಳದು ಸಣ್ಣ ಸಮುದಾಯ. ಅವರಲ್ಲಿ ಅವರದೇ ಆದ ಉತ್ತರಾಧಿಕಾರ ಇತ್ಯಾದಿ ಕಾನೂನುಗಳಿವೆ. ಕೆಲವೊಂದು ದೊಡ್ಡ ಜನ ವರ್ಗಕ್ಕೆ, ಇಚ್ಛೆಪಟ್ಟರೆ, ದಾಯಾದಿ ಪದ್ಧತಿಗೆ ಅವಕಾಶ ಕೊಟ್ಟರೆ ಏನು ಮಹಾ ಕಳೆದುಹೋಗುತ್ತದೆ. ಈ ತತ್ತ್ವವನ್ನು ಅಂಗೀಕರಿಸುವುದಾದರೆ, ಇಡೀ ಕರಡು ಮಸೂದೆಯಲ್ಲಿ ಆ ತತ್ತ್ವಕ್ಕನುಸಾರವಾಗಿ ಬದಲಾವಣೆ ಮಾಡಬೇಕಾಗುತ್ತದೆ.

ನನ್ನ ಇನ್ನೊಂದು ಮನವಿ ಏನೆಂದರೆ, ಮಸೂದೆಯನ್ನು ಅಭಿಪ್ರಾಯಕ್ಕಾಗಿ ಪರಿಚಲನೆ ಮಾಡಬೇಕು. ಇಲ್ಲಿ, ಸಭಾಧ್ಯಕ್ಷರು ಈಗಾಗಲೇ ಕೊಟ್ಟಿರುವ ರೂಲಿಂಗ್ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ. ನಿಯಮಗಳಲ್ಲಿ ಹೇಳಿರುವಂತೆ, ಪ್ರಕಟಣೆ ಮಾಡಿದರಷ್ಟೇ ಸಾಕೇ ಎನ್ನುವುದರ ಬಗ್ಗೆ ಮತ್ತು ರೂಲಿಂಗ್‌ನಲ್ಲಿ ಅಷ್ಟು ಸಾಕು

ಎಂದು ಹೇಳಿರುವುದರ ಬಗ್ಗೆ ಪ್ರಶ್ನೆ ಉದ್ಭವವಾಗುತ್ತದೆ. ಇದು, ಮಸೂದೆಯನ್ನು ಪುನರ್‌ಪರಿಚಲನೆಗಾಗಿ ಕಳುಹಿಸುವುದು ಅಪೇಕ್ಷಣೀಯವೇ ಎಂಬ ಅಂಶವನ್ನೆತ್ತಲು ನನ್ನನ್ನು ತಡೆಯುವುದಿಲ್ಲ. ಡಾ. ಅಂಬೇಡ್ಕರ್‌ರವರು ಪ್ರತಿಯಾಗಿ ಏನೇ ಹೇಳಬಹುದಾದರೂ, ಮಸೂದೆಯು ಅಂಗೀಕೃತವಾದರೆ, ಅದು ತಂತಾನೆ ಎಲ್ಲ ಸಂಸ್ಥಾನಗಳಿಗೂ ಅನ್ವಯವಾಗುತ್ತದೆಂಬ ಅಂಶ ಕಣ್ಣಿಗೆ ಬೀಳದಿರುವುದಿಲ್ಲ. ಪ್ರಾಂತಗಳಲ್ಲಿ ವಿಲೀನಗೊಂಡ ಸಂಸ್ಥಾನಗಳ ಎಲ್ಲ ಭಾಗಗಳಿಗೆ ಮತ್ತು ಅವುಗಳಿಗಾಗಿ ಶಾಸನ ರಚನೆ ಮಾಡಲು ಕೇಂದ್ರಕ್ಕೆ ಅಧಿಕಾರವಿದೆಯೆಂದು ಒಪ್ಪಿಕೊಂಡಿರುವಂತಹ ಎಲ್ಲ ಪ್ರದೇಶಗಳಿಗೂ ಅದು ಅನ್ವಯವಾಗುತ್ತದೆಂದು ನನ್ನ ಅನಿಸಿಕೆ.

**ಶ್ರೀ ಸೀತಾರಾಂ ಎಸ್. ಚಾಜೂ** (ಮಧ್ಯ ಭಾರತ) : ಅದು ಭಾರತೀಯ ಸಂಸ್ಥಾನಗಳಿಗೂ ಅನ್ವಯವಾಗುವುದಾದರೆ, ಆಕ್ಷೇಪಣೆ ಏನು?

**ಶ್ರೀ ವಿ.ಎಸ್. ಸರ್ವತೆ** : ಇದು, ಅನ್ವಯವಾಗಬೇಕೆಂದೇ ಹೇಳುತ್ತಿದ್ದೇನೆ. ಅನ್ವಯವಾಗಬೇಕೆಂಬುದರ ಪರವಾಗಿದ್ದೇನೆ. ನಾನು ಮಾತನಾಡುವುದಕ್ಕೆ ಅವಕಾಶ ಕೊಡುವುದರ ಬದಲು, ನಾನು ಏನನ್ನೋ ಹೇಳಲು ಮಾನ್ಯ ಸದಸ್ಯರುಗಳು ಏಕೆ ನಿರೀಕ್ಷೆ ಮಾಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಮಸೂದೆಯು ಭಾರತೀಯ ಸಂಸ್ಥಾನಗಳಿಗೆ ಅನ್ವಯವಾಗಬೇಕೆಂದು ನಾನು ಹೇಳುತ್ತಿದ್ದೆ. ಅದು ಅನ್ವಯವಾಗಬೇಕಾದರೆ, ಅನ್ವಯವಾಗಬೇಕೆಂಬುದು ನನ್ನ ಇಚ್ಛೆ ಕೂಡಾ. ಒಂದು ಮೂಲಭೂತ ಹಕ್ಕು ಉದ್ಭವವಾಗುತ್ತದೆ, ನಿಮ್ಮ ಮಸೂದೆಯ ವ್ಯಾಪ್ತಿಗೊಳಪಡುವ ಪ್ರತಿಯೊಂದು ದೊಡ್ಡ ದೊಡ್ಡ ಪ್ರದೇಶಕ್ಕೂ, ನ್ಯಾಯೋಚಿತವಾಗಿ, ಅದರ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶ ಕೊಡಲೇಬೇಕಾಗುತ್ತದೆಂದು ನಾನು ಹೇಳುತ್ತಿದ್ದೆ. ಈ ಮಸೂದೆಯನ್ನು ಈ ದೊಡ್ಡ ಪ್ರದೇಶಗಳಲ್ಲಿ ಪ್ರಕಟಿಸಿಲ್ಲ. ಹೀಗಾಗಿ, ಈ ಮಸೂದೆಯ ಬಗ್ಗೆ ಜನರು ಗಂಭೀರವಾಗಿ ಆಲೋಚನೆ ಮಾಡಲು ಆಗಿರಲಿಲ್ಲ. ಈ ಮಸೂದೆಯು ನಮಗೂ ಅನ್ವಯವಾಗುತ್ತದೆಂದು ಈಗ ಗೊತ್ತಾದರೆ, ಮಸೂದೆಯನ್ನು ಪ್ರಕಟಿಸಿದರೆ, ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವರಿಗೆ ಸಾಧ್ಯ ಆಗುತ್ತದೆ. ತನಗೆ ಬಾಧಕ ಉಂಟುಮಾಡುವಂತಹ ಯಾವುದೇ ಶಾಸನಕ್ಕೆ ಸಂಬಂಧಪಟ್ಟಂತೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತ ಹಕ್ಕು. ಅವರ ಪ್ರತಿಯೊಬ್ಬ ಪ್ರತಿನಿಧಿಯೂ ಇಲ್ಲಿ ವೋಟು ಮಾಡುವುದಕ್ಕೂ ಮೊದಲು ಅವರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದು ಕರ್ತವ್ಯ. ಆದ್ದರಿಂದ ಸಂಸ್ಥಾನಗಳ ಪ್ರತಿನಿಧಿಗಳ ದೃಷ್ಟಿಯಿಂದ, ಸಂಸ್ಥಾನಗಳ ಜನರ ದೃಷ್ಟಿಯಿಂದ, ಅವರವರ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಕೆಲವೊಂದು ಕಾಲಾವಧಿ ಕೊಡುವುದು ನ್ಯಾಯೋಚಿತ. ನಾನು ಒಂದು ಮಧ್ಯ ಮಾರ್ಗವನ್ನು ಸೂಚಿಸುತ್ತೇನೆ. ಈ ಮಸೂದೆ ಬಗ್ಗೆ ಈ ಅಧಿವೇಶನದಲ್ಲೇ ಇತ್ಯರ್ಥ ಆಗದಿದ್ದರೆ, ಅಂಥ ಸನ್ನಿವೇಶ ಉಂಟಾದರೆ, ಈ ಮಸೂದೆಯ ಮಾನ್ಯ ಸೂಚಕರು, ತರುವಾಯದ ಒಂದು ವಿಶೇಷ ಅಧಿವೇಶನದಲ್ಲಿ ಈ ಮಸೂದೆಯನ್ನು ಕೈಗೆತ್ತಿಕೊಳ್ಳುವುದು ಅಪೇಕ್ಷಣೀಯ ಅಲ್ಲವೇ ಎಂಬುದನ್ನು ಆಲೋಚಿಸಬೇಕು. ಈ ಅಂತರದ ಕಾಲದಲ್ಲಿ ಎಂದರೆ ಎರಡು ಅಥವಾ ಮೂರು ಅಥವಾ ನಾಲ್ಕು ತಿಂಗಳು, ಜನರ ಪ್ರತಿಕ್ರಿಯೆಯನ್ನು ತಿಳಿದುಕೊಳ್ಳಲು ಬೇಕಾದಷ್ಟಾಗುತ್ತದೆ. ಇದು, ನ್ಯಾಯೋಚಿತ ಹಾಗೂ ಪ್ರಕಟಣಾ ಕಲಮುಗಳ ಆಶಯಕ್ಕೆ ಅನುಸಾರವಾಗಿದೆ ಎಂದು ನಾನು ಭಾವಿಸಿದ್ದೇನೆ. ಇದು ನ್ಯಾಯೋಚಿತ ಅಲ್ಲವೇ ಎಂಬುದನ್ನು ಗಮನಿಸಬೇಕೆಂದು ನಾನು ಈ ಸದನಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಸಂಹಿತೆ ಬಗ್ಗೆ ತೀರ್ಮಾನ, ಮಾತು ಬಂದಾಗಿದೆಯೆಂದು ಭಾವಿಸಕೂಡದು. ಸಾಧಾರಣರಲ್ಲಿ ಸಾಧಾರಣರೂ ಅಭಿಪ್ರಾಯ ಕೊಡಲು ಮುಂದೆ ಬರಬಹುದು. ಅದು, ಸನ್ಮಾನ್ಯ ಡಾಕ್ಟರ್‌ರವರಿಗೆ ಉಪಯುಕ್ತವಾಗಬಹುದು. ಅವಕಾಶಕೊಟ್ಟರೆ, ಅದು ನ್ಯಾಯದ ಉದ್ದೇಶವನ್ನು ಈಡೇರಿಸಿದಂತಾಗುತ್ತದೆ, ಉಪಯುಕ್ತವೂ ಆಗುತ್ತದೆ.

ಈ ಮನವಿ ಮಾಡಿಕೊಂಡು, ನನ್ನ ಮಾತನ್ನು ಮುಗಿಸಿದ್ದೇನೆ, ಸರ್.

**ಶ್ರೀ ಹೆಚ್.ವಿ.ಕಾಮತ್** : ಸನ್ಮಾನ್ಯ ಸಭಾಧ್ಯಕ್ಷರೆ ......................

**ಶ್ರೀ ಬಿ. ದಾಸ್ ಒರಿಸ್ಸಾ** (ಸಾಮಾನ್ಯ) : ಸರ್, ಕ್ರಿಯಾಲೋಪ. ಮದುವೆ ಆಗಿರದ, ಪೂರ್ವಿಕರಿಗೆ ಪಿಂಡ ಹಾಕಲು ಮಗನೂ ಇರದ ಬ್ರಹ್ಮಚಾರಿಯೊಬ್ಬರು ಈ ಮಸೂದೆ ಬಗ್ಗೆ ಮಾತನಾಡಬಹುದೇ, ಚರ್ಚೆಗೆ ನೆರವಾಗಬಹುದೆ?

**ಸನ್ಮಾನ್ಯ ಸಭಾಧ್ಯಕ್ಷರು** : ಇದರಲ್ಲಿ ಕ್ರಿಯಾಲೋಪ ಏನಿದೆ, ಅವರೊಬ್ಬ ಹಿಂದೂ, ಅವರು ಮಾತನಾಡಬಹದು.

***ಶ್ರೀ ಹೆಚ್.ವಿ. ಕಾಮತ್** : ಕ್ರಿಯಾಲೋಪಕ್ಕೂ ಉತ್ತರ ಕೊಡುತ್ತೇನೆ. ಸರ್, ಇಬ್ಬರು ವಕೀಲ ಗೆಳೆಯರ ಒಬ್ಬರು ಮಹಿಳಾ ಗೆಳತಿಯ ಮಾತು ಮುಗಿದಾದ ಮೇಲೆ, ನಾನು ಮಾತನಾಡಲು ಎದ್ದಾಗ. ಪ್ರತಿಕೂಲ ಪರಿಸ್ಥಿತಿಯ ಭಯ ನನಗಿತ್ತು. ನನ್ನ ಗೆಳೆಯರಾದ ಮಾನ್ಯ ಪಂಡಿತ ಠಾಕೂರ್‌ದಾಸ್ ಭಾರ್ಗವ, ಮಾನ್ಯ ಸರ್ವತೆ ಕಾನೂನು ತರ್ಕ ಹಿಡಿದು ಮಾತನಾಡಿದ ಹಾಗೆ, ಕಾನೂನು ತರ್ಕ ಹಿಡಿದು ಮಾತನಾಡುವ ಮಾತುಗಾರಿಕೆ ನನ್ನಲಿಲ್ಲ. ನನ್ನ ಗೆಳತಿ ಮಾನ್ಯ ಶ್ರೀಮತಿ ರೇಣುಕಾ ರೇಯವರ ಸೊಗಸಾದ ಸಮಂಜಸ ಮಾತುಗಾರಿಕೆ ನನ್ನಲ್ಲಿಲ್ಲ. ಇಂದು, ಮಾತನಾಡಿದ ವಕೀಲರುಗಳ ವಾದಗಳಿಗೆ ನನ್ನ ಗೆಳೆಯ ಸನ್ಮಾನ್ಯ ಕಾನೂನು ಮಂತ್ರಿಯವರು ಉತ್ತರ ಕೊಡುತ್ತಾರೆಂಬ ನಂಬಿಕೆ ನನಗಿದೆ. ಶ್ರೀಮತಿ ರೇಣುಕಾ ರೇಯವರ ಮಾತುಗಳನ್ನು ನಾನು ಹೆಚ್ಚು ಕಮ್ಮಿ ಒಪ್ಪುತ್ತೇನೆ. ಪ್ರತಿಯಾಗಿ ಹೇಳುವ ಅಗತ್ಯವಿಲ್ಲವೆಂದು ಭಾವಿಸಿದ್ದೇನೆ.

ಮಾತನಾಡಲು ನಾನು ಎದ್ದಾಗ, ನನ್ನ ಗೆಳೆಯ ಮಾನ್ಯ ಬಿ. ದಾಸ್‌ರವರು ಕ್ರಿಯಾಲೋಪ ಎತ್ತಿದ್ದರು. ಆದರೆ, ಆ ಕ್ರಿಯಾಲೋಪವೇ ನನ್ನ ಪರ ಇದೆಯೆಂದು ನನ್ನ ಅನಿಸಿಕೆ. ನನಗೆ ಹೆಂಡತಿಯೂ ಇಲ್ಲ, ಮಕ್ಕಳೂ ಇಲ್ಲ, ಹೇಳಿಕೊಳ್ಳುವಂತಹ ಆಸ್ತಿಯೂ ಇಲ್ಲ. ಈ ಸದನದ ಮುಂದಿರುವ ಈ ಮಸೂದೆ ಬಗ್ಗೆ ಮಾತನಾಡಲು ಇದೇ ನನಗಿರುವ ಅರ್ಹತೆ. ಈ ಮಸೂದೆ ಬಗ್ಗೆ, ಭಾವೋದ್ರೇಕಗಳ ಡೋಲಾಯಮಾನಕ್ಕೆ ಒಳಗಾಗದೆ ನಿಷ್ಪಕ್ಷಪಾತ ಮನಸ್ಸಿನಿಂದ ಮಾತನಾಡುತ್ತೇನೆ. ಈ ಮಸೂದೆಯ ಬಹುತೇಕ ಕಲಮುಗಳು, ವಿವಾಹ, ವಿಚ್ಛೇದನ, ದತ್ತು, ಉತ್ತರಾಧಿಕಾರಕ್ಕೆ ಸಂಬಂಧಿಸಿದೆ. ನಮ್ಮ ಬಹುತೇಕ ತತ್ತ್ವಶಾಸ್ತ್ರಜ್ಞರು ಹೇಳಿರುವ ಹಾಗೆ ಎರಡೇ ಅಕ್ಷರಗಳಲ್ಲಿ ಹೇಳುವುದಾದರೆ ವಿಷಯಗಳಿಗೆ ಸಂಬಂಧಿಸಿದ ಕಲಮುಗಳು ಯಾವುವೆಂದರೆ ಕಾಮಿನಿ, ಕಾಂಚಾಣ. ನನಗೆ ಈವರೆಗೂ ಇವೆರಡೂ ಗೊತ್ತಿಲ್ಲ. ಈ ಮಸೂದೆ ಮೇಲೆ, ಹೆಚ್ಚು ಕಮ್ಮಿ ನಿರ್ಲಿಪ್ತ ರೀತಿಯಲ್ಲಿ, ಆದರೆ ಆಸಕ್ತಿ ಇರುವುದಿಲ್ಲ ಅಂತಲ್ಲ, ಕೆಲವು ಮಾತುಗಳನ್ನು ಹೇಳುತ್ತೇನೆ. ನೀವೆಲ್ಲರೂ ಹಾಗೂ ಈ ಸದನ ತಾಳ್ಮೆಯಿಂದ ಆಲಿಸುತ್ತೀರಿ, ಆಲಿಸುತ್ತದೆಂಬ ನಂಬಿಕೆ ನನಗಿದೆ.

ಈ ಶತಮಾನ, ಕ್ರಿ.ಶ. ೨೦ನೇ ಶತಮಾನ ಏಷ್ಯಾದಲ್ಲಿ, ಯೂರೋಪಿನಲ್ಲಿ, ಅಮೇರಿಕಾದಲ್ಲಿ, ಐತಿಹಾಸಿಕ ರಂಗದಲ್ಲಿ ಮಹಿಳೆಯರು ಪ್ರವರ್ಧಮಾನಕ್ಕೆ ಬಂದಿದ್ದನ್ನು ನೋಡಿದೆ. ವಿಶ್ವದ ವಿದ್ಯಮಾನದಲ್ಲಾದ ಈ ಬೆಳವಣಿಗೆಯಲ್ಲಿ ಭಾರತ ಮತ್ತು ನಮ್ಮ ಹಿಂದೂ ಸಮಾಜ ಹಿಂದೆ ಬಿದ್ದಿಲ್ಲ. ಹತ್ತೊಂಭತ್ತನೆಯ ಶತಮಾನದಿಂದ ಹಾಗೂ ಅದಕ್ಕೂ ಹಿಂದಿನಿಂದ ಸಾಗಿಬಂದ ಹಳೆಯ ಸಮಾಜದ ಓರೆಕೋರೆಗಳನ್ನು ಸೀಳಿ, ನಮ್ಮ ಕಾಲದಲ್ಲೇ ಪರಿವರ್ತನೆ ಕಾಣುವಂತೆ ಮಾಡಿದ ಎಲ್ಲ ಕ್ರಾಂತಿಕಾರಕ ಬದಲಾವಣೆಗಳಲ್ಲಿ ಪುರುಷ, ಮಹಿಳೆಯರ ಸಂಬಂಧವೂ ಒಳಗೊಂಡಿರುವುದು ಮಹತ್ವಪೂರ್ಣ. ನಮ್ಮ ಕಾಲ, ಮಹಿಳಾ ಪ್ರೇರಕ ಶಕ್ತಿಯ ಕಾಲವೆಂದು

---

*ಸಿ.ಎ. (ಲೆಜಿ) ಡಿ. ಸಂಪುಟ II, ಭಾಗ II, ೨೫ ಫೆಬ್ರವರಿ ೧೯೪೯ ಪುಟ ೯೩೪–೩೬

ಪ್ರಸಿದ್ಧಿಯಾಗಿದೆ. ಪುರುಷರ ಜೊತೆಗೂಡಿ, ಮಹಿಳೆಯರು ಪ್ರಪಂಚದಲ್ಲಿ ಅದ್ಭುತವಾದ ಕೆಲಸ ಮಾಡಿದ್ದಾರೆ. (ಒಬ್ಬರು ಮಾನ್ಯ ಸದಸ್ಯರು : "ಆದರೆ, ನೀವೊಂದು ಅಪವಾದ") ಪ್ರಪಂಚದ ಪುನರುತ್ಥಾನಕ್ಕಾಗಿ ವ್ಯವಸ್ಥೆ ರೂಪಿಸುವುದರಲ್ಲಿ ನೆರವಾಗಿದ್ದಾರೆ. ಚೈತನ್ಯ ತುಂಬಾ ಉಡುಗಿಹೋಗಿರುವ, ಹೆಮ್ಮೆಯಿಂದಾಗಲಿ, ಸ್ವಲ್ಪ ಗೆಲುವಿನಿಂದಾಗಲೀ ನೆನಪು ಮಾಡಿಕೊಳ್ಳಲೂ ತ್ರಾಣ ಇರದ ಮನುಷ್ಯ ಕೂಡ, ರಕ್ತಪಾತದ, ಕ್ರೂರವಾದ, ಕಠಿಣವಾದ, ಕಠೋರವಾದ ರಣರಂಗಕ್ಕಿಂತಲೂ ಉತ್ಸಾಹಭರಿತವಾದ ಸತ್ಯಾಗ್ರಹವೆಂಬ ಅಹಿಂಸಾ ಯುದ್ಧದಲ್ಲಿ ನಮ್ಮ ಮಹಿಳೆಯರು–ಸರ್ವದಾ, ಬಡ, ಮುಗ್ಧ, ಅನಕ್ಷರಸ್ಥ ಮಹಿಳೆಯರು –ಮೆರೆದ ಅದ್ಭುತ ಹಾಗೂ ವಿರೋಚಿತ ಸಾಧನೆಗಳನ್ನು ಪಿಸುಗುಟ್ಟುತ್ತಿರುತ್ತಾನೆ. ತೊಟ್ಟಿಲನ್ನು ತೂಗಿದ ಕೈಗಳು, ಸಂದರ್ಭ ಬಂದರೆ ಕತ್ತಿ ಹಿಡಿಯುವಷ್ಟು ಶಕ್ತ, ಶತ್ರುವಿಗೆ ಹಾರೈಸಬೇಕಾದ ಸಂದರ್ಭ ಬಂದರೆ, ಅಷ್ಟೇ ಕೋಮಲ. ಬೇರೆ ದೇಶಗಳಲ್ಲಿ ಏನೇ ಆಗಿರಬಹುದು, ಏನೇ ಹೇಳಿಕೊಳ್ಳಬಹುದು. ನಮ್ಮ ದೇಶದಲ್ಲೇ, ಆಧುನಿಕ ಹೋರಾಟ ಸ್ವಲ್ಪವೂ ಗೊತ್ತಿರದ, ಲಾಠಿದೊಣ್ಣೆ ಏಟಿನ ಪೆಟ್ಟು, ಗುಂಡು, ಜೈಲು ಸ್ವಲ್ಪವೂ ಗೊತ್ತಿರದ ಸಾವಿರಾರುಗಟ್ಟಳೆ ಮಹಿಳೆಯರು, ಪುರುಷರ ಜೊತೆಗೆ ಹೇಗೆ ಮಹಾತ್ಮಗಾಂಧೀಜಿಯವರನ್ನು, ನೇತಾಜಿ ಸುಭಾಷ್ ಚಂದ್ರ ಬೋಸರನ್ನು ಅನುಸರಿಸಿದರು ಎಂಬುದು ನಮಗೆಲ್ಲರಿಗೂ ಗೊತ್ತಿದೆ. ಈ ಯಶೋಗಾಥೆ ಎಲ್ಲರಿಗೂ ಗೊತ್ತಿದೆ. ನಾನು ವಿವರಿಸಿ ಹೇಳಬೇಕಾಗಿಲ್ಲ. ತ್ವರಿತ ಗತಿಯಲ್ಲಿ ಸಾಮಾಜಿಕ, ಆರ್ಥಿಕ ಬದಲಾವಣೆ ಆಗುತ್ತಿರುವ ಈ ಸನ್ನಿವೇಶಕ್ಕೆ ಅನುಗುಣವಾಗಿ, ಸದನದ ಮುಂದೆ ತಂದಿರುವ ಈ ಮಸೂದೆಯನ್ನು ನಾವು ಪರಾಮರ್ಶಿಸಬೇಕಾಗಿದೆ. ಏಕೆಂದರೆ, ಯಾವ ಕಾನೂನೂ, ಶೂನ್ಯತೆಯಲ್ಲಿ ಪ್ರವರ್ತಿಸುವುದಿಲ್ಲ ಅಥವಾ ಶೂನ್ಯ ವಿಷಯಕ್ಕೆ ಕಾನೂನು ರಚಿಸುವುದಿಲ್ಲ. ಯಾವ ಕಾನೂನು ಸಾಮಾಜಿಕ ಪರಿಸ್ಥಿತಿ, ಸನ್ನಿವೇಶಗಳನ್ನು ಬದಿಗಿಡುವುದಿಲ್ಲ ಅಥವಾ ಪರಿಗಣನೆಗೆ ತೆಗೆದುಕೊಳ್ಳದೆ ಬಿಟ್ಟಿರುವುದಿಲ್ಲ. ಏಕೆಂದರೆ, ಕಾನೂನಿಗೆ, ಸಾಮಾಜಿಕ ಪರಿಸ್ಥಿತಿ, ಸನ್ನಿವೇಶಗಳೇ ಮೂಲಗಳು. ಈ ಕಾಲವನ್ನು ಒಬ್ಬ ತಮಾಷೆಯ ಮನುಷ್ಯ ಹೇಳುವ ತಮಾಷೆ ಮಾತಿನಲ್ಲೇ ಹೇಳುವುದಾದರೆ, ಇಂದು, ಮಹಿಳೆ ಸಂಸತ್ತಿನಲ್ಲೂ ಕುಳಿತುಕೊಳ್ಳುತ್ತಾಳೆ, ಬಸ್ಸಿನಲ್ಲೂ ನಿಂತಿರುತ್ತಾಳೆ. ಈ ಕಾಲದಲ್ಲಿ ಆಗಿರುವ ಮಹತ್ತರ ಬದಲಾವಣೆಯೆಂದರೆ ಇದೇ ಸರ್, ನಾನು ಹೆಚ್ಚು ಕಡಿಮೆ ಒಬ್ಬ ರಾಜಕೀಯ ಪರಿವ್ರಾಜಕ. ನಾನೀಗ ಈ ಮಸೂದೆ ಮೇಲೆ ಕೆಲವು ಮಾತುಗಳನ್ನಾಡುತ್ತೇನೆ.

ಈ ಮಸೂದೆಯಿಂದ ತತ್‌ಕ್ಷಣವೇ ಬಾಧಿತರಾಗದ ಈ ಸದನದ ನನ್ನ ಮಾನ್ಯ ಗೆಳೆಯರು ಈ ಮಸೂದೆ ಬಗ್ಗೆ ಅಷ್ಟೊಂದು ಆಸಕ್ತಿ ತೋರಿಸುತ್ತಿರುವುದು ನನಗೆ ಸಂತೋಷ ತಂದಿದೆ. ನನ್ನ ಮಾನ್ಯ ಗೆಳೆಯ, ವಾದ ಚತುರ, ಪಂಡಿತ ನಸೀರುದ್ದಿನ್‌ರವರಿಗೆ ಪಂಡಿತ ಎನ್ನುವ ಅಂಕಿತ, ಸರ್, ನಿಜವಾಗಿಯೂ ಸಲ್ಲಬೇಕಾದದ್ದೇ. ಏಕೆಂದರೆ, ಸರ್, ಮೌಂಟ್ ಬ್ಯಾಟನ್‌ರವರನ್ನು, ೧೯೪೭ ಆಗಸ್ಟ್ ೧೫ರಂದು 'ಪಂಡಿತ' ಎಂದು ಕರೆಯಬಹುದಾದರೆ ಬರ್ಮಾದ ಲಾರ್ಡ್ ಮೌಂಟ್ ಬ್ಯಾಟನ್‌ಗಿಂತಲೂ ಶ್ರೀ ನಝೀರುದ್ದಿನ್‌ರಿಗೆ, ಪಂಡಿತ ಎಂದು ಕರೆಸಿಕೊಳ್ಳುವುದಕ್ಕೆ ಹೆಚ್ಚಿನ ಅರ್ಹತೆ ಇದೆ. ಅಂತಹ ಅನೇಕ ಸ್ನೇಹಿತರು ಈ ಮಸೂದೆ ಬಗ್ಗೆ ಆಸಕ್ತಿ ತೋರುತ್ತಿದ್ದಾರೆ. ಇದು ಕಾಲದ ಶುದ್ಧ ಲಕ್ಷಣ ಹಾಗೂ ಒಳ್ಳೆಯ ಭವಿಷ್ಯತ್ತಿನ ಸೂಚಕ ಎಂದುಕೊಂಡಿದ್ದೇನೆ. ನಾವು ಒಂದೇ ಏಕೀಕೃತ ಸಮಾಜ ನಿರ್ಮಾಣದ ಸರಿಯಾದ ಮಾರ್ಗದತ್ತ ಸಾಗುತ್ತಿದ್ದೇವೆ. ಶೀಘ್ರದಲ್ಲೇ ನಾವು ನಮ್ಮ ಇಡೀ ದೇಶಕ್ಕೆ ಏಕರೂಪದ ಸಿವಿಲ್ ಸಂಹಿತೆಯನ್ನು ಹೊಂದಲಿದ್ದೇವೆ.

ಸಂಪೂರ್ಣವಾಗಿ ಈ ಮಸೂದೆಯ ಪರ ಇರದ ಹಾಗೂ ಈ ವಿಷಯದಲ್ಲಿ ಆದ್ಯಂತವಾಗಿ ಯಾವುದನ್ನೂ ಒಪ್ಪದ ಈ ಸದನದ ಒಳಗಿನ ಹಾಗೂ ಹೊರಗಿನ ಸದಸ್ಯರು–ಕೊನೇ ಪಕ್ಷ ಕೆಲವರು – ತಮ್ಮ ನಿಲುವಿಗೆ ಸ್ಮೃತಿಗಳನ್ನು, ಶಾಸ್ತ್ರಗಳನ್ನು, ನಮ್ಮ ಧರ್ಮವನ್ನು ಆಧಾರವಾಗಿ ತೆಗೆದುಕೊಂಡಿದ್ದಾರೆ.

ಸರಿಯೇ, ಆದರೆ, ಸರ್, ಧರ್ಮ ಎಂದರೇನು? ಈ ಪ್ರಶ್ನೆಯನ್ನು ನಾವು ನಿರ್ಧರಿಸದ ಹೊರತು, ಈ ದೇಶದ ಕೆಲವು ಜನರು ಈ ಮಸೂದೆ ಬಗ್ಗೆ ತಾಳಿರುವ ನಿಲುವನ್ನು ನಾವು ಪರಾಮರ್ಶಿಸುವುದಕ್ಕೆ ಅಥವಾ ತಿರಸ್ಕರಿಸುವುದಕ್ಕೆ ಆಗುವುದಿಲ್ಲ. ಧರ್ಮ ಇದು, ಕೇವಲ ಮತಾಚರಣೆಯ, ಬಾಹ್ಯ ಆಚರಣೆಗಳ, ಸಂಪ್ರದಾಯಗಳ ಸಂಹಿತೆಯೇ ಅಥವಾ ಆತ್ಮ, ಅಂತರಂಗ, ಪ್ರಜ್ಞೆ, ಚೈತನ್ಯಕ್ಕೆ ಸಂಬಂಧಿಸಿದ ಗಹನವಾದ ವಿಚಾರಧಾರೆಯೇ? ಧರ್ಮ ಸಂಸ್ಕೃತ ಭಾಷೆಯಲ್ಲಿ ಈ ಶಬ್ದದ ವ್ಯುತ್ಪತ್ತಿ ಜಗತ್ತಿಗೆ ಉಪಷ್ಟಂಭವಾಗಿರುವುದೇ ಧರ್ಮ, ಯೇನದಂ ಧಾರ್ಯತೇ ಜಗಕೆ, ಅಂದರೆ ಪ್ರಪಂಚಕ್ಕೆ – 'ಜಗತ್' – ಯಾವುದು ಆಧಾರವೋ ಅದೇ ಧರ್ಮ.

ಕೆಲವು ಸಂಪ್ರದಾಯಗಳನ್ನು, ಮತಾಚರಣೆಗಳನ್ನು, ಸಾಂಪ್ರದಾಯಿಕ ಆಚಾರಗಳನ್ನು ಅನುಸರಿಸುವುದೇ ಧರ್ಮ ಆಗುತ್ತದೆಯೇ ಅಥವಾ ಅದು ಅದಕ್ಕಿಂತಲೂ ಗಹನವಾದುದೆ ಎಂದು ನಾವೀಗ ವಿಚಾರ ಮಾಡಬಾರದೇ?

ಧರ್ಮದ ಜೊತೆಗೆ ಸಮ್ಮಿಳನಗೊಂಡಿರುವ ಅಥವಾ ಎರಕಗೊಂಡಿರುವ ಸ್ಮೃತಿಗಳ ಬಗ್ಗೆ, ನನ್ನ ಸನ್ಮಾನ್ಯ ಗೆಳೆಯ ಡಾ. ಅಂಬೇಡ್ಕರ್‌ರವರು ಹಿಂದೊಂದು ದಿನ, ಸರಿ ಸುಮಾರು ೧೩೭ ಸ್ಮೃತಿಗಳಿವೆ ಎಂದು ಹೇಳಿದ್ದರು. ನಾನು ತಪ್ಪಾಗಿ ಹೇಳಿದ್ದರೆ ಅವರು ಸರಿಪಡಿಸುತ್ತಾರೆ. ಅವರು ಅವುಗಳನ್ನು ಲೆಕ್ಕಹಾಕಿದ್ದಾರೆಂದೇ ನನ್ನ ಭಾವನೆ. ೧೦೮ ಉಪನಿಷತ್ತುಗಳಿವೆಯೆಂದು ಹೇಳಲಾಗಿದೆ. ಗೊತ್ತಿರದ, ಬೆಳಕಿಗೆ ಬಾರದ ಎಷ್ಟೋ ಉಪನಿಷತ್ತುಗಳಿವೆ. ಗೊತ್ತಿರದ, ಬೆಳಕಿಗೆ ಬಾರದ ಎಷ್ಟೋ ಸ್ಮೃತಿಗಳಿರಬಹುದು. ಡಾ. ಅಂಬೇಡ್ಕರ್‌ರವರಿಗೆ ಗೊತ್ತಿರುವ ಸ್ಮೃತಿಗಳು ೧೩೭. ಈಗಿನದೂ ಸೇರಿದರೆ, ೧೩೮ ಸ್ಮೃತಿಗಳಿವೆ ಎಂದಂತಾಯಿತು. ಮೃದುವಾದ ಮಾತಿನಲ್ಲೇ ನಾನು ಈಗಿನದನ್ನು ಉಲ್ಲೇಖಿಸಿದರೆ, ಅವರು ನನ್ನನ್ನು ಕ್ಷಮಿಸುತ್ತಾರೆಂದೇ ಭಾವಿಸಿದ್ದೇನೆ. ಏಕೆಂದರೆ, ಇದೂ ಕೂಡ ಕ್ರಾಂತಿಕಾರಕ ಅಲ್ಲದಿದ್ದರೂ, ನಮ್ಮ ಹಿಂದೂ ಸಾಮಾಜಿಕ ಸಂಬಂಧಗಳಲ್ಲಿ ಬದಲಾವಣೆಗಳನ್ನು ತರುವ ಮಸೂದೆಯಾಗಿದೆ. ಹೀಗಾಗಿ, ನಮಗಾಗಿ ಈಗಾಗಲೇ ರಚಿಸಿರುವ ಇತರ ಹಿಂದೂ ಸಾಮಾಜಿಕ ಸಂಹಿತೆಗಳಿಗೆ ಮತ್ತು ಸಾಮಾಜಿಕ ಗ್ರಂಥಗಳಿಗೆ ನಾನು ಅದೇ ಶಬ್ದವನ್ನು ಬಳಸುತ್ತೇನೆ. ಇದನ್ನು, ನಾವು ೧೩೮ನೇ ಸ್ಮೃತಿಯೆಂದು ಕರೆಯಬಹುದು. ಇದನ್ನು ನಾನು ಭೀಮ ಸ್ಮೃತಿಯೆಂದು ಕರೆಯುತ್ತೇನೆ. ಇದನ್ನು ನಾನು ಭೀಮ ಸ್ಮೃತಿಯೆಂದು ಉಲ್ಲೇಖಿಸಿದರೆ ಡಾ. ಅಂಬೇಡ್ಕರ್‌ರವರು ನನ್ನನ್ನು ಕ್ಷಮಿಸುತ್ತಾರೆಂದು ಭಾವಿಸಿದ್ದೇನೆ. ಈ ಮಸೂದೆಯ ರಚನೆ ಮತ್ತು ಮಂಡನೆಯಲ್ಲಿ ಬಹುಮುಖ್ಯ ಪ್ರಯತ್ನ ಮಾಡಿದ ಇನ್ನೊಬ್ಬರು ಮುಂದಾಳುವಿನ ಹೆಸರನ್ನು ಸೇರಿಸಬೇಕಾಗಿ ಬಂದರೆ, ನಾನು ನರಸಿಂಹ ಹೆಸರನ್ನು ಉಲ್ಲೇಖಿಸುತ್ತೇನೆ. ಈ ಮಸೂದೆಯು ಹೊಮ್ಮುವುದಕ್ಕೆ ರಾವ್ ಸಮಿತಿಯೇ ಕಾರಣ. ಆದ್ದರಿಂದ, ನಾನು ಇದನ್ನು ಭೀಮಸ್ಮೃತಿ ಎಂದು ಕರೆಯದೆ, ಭೀಮ ನರಸಿಂಹ ಸ್ಮೃತಿ ಎಂದು ಕರೆಯುತ್ತೇನೆ.

ಈಗ ಮಸೂದೆ ಬಗ್ಗೆ ಮಾತನಾಡುತ್ತೇನೆ. ಸ್ಮೃತಿಗಳ ಬಗ್ಗೆ ಎಲ್ಲರಿಗೂ ಗೊತ್ತಿದ್ದರೂ, ಅವುಗಳಲ್ಲೇ ಪರಸ್ಪರ ವ್ಯತ್ಯಾಸ ಇದೆ. ಅದೇ ಸ್ಮೃತಿಕಾರ, ಆಗಾಗ, ಸ್ಮೃತಿಯ ಬೇರೆ ಬೇರೆ ಶ್ಲೋಕಗಳನ್ನು ಒಪ್ಪುವುದಿಲ್ಲ. ಕವಿಗೂ ಕೂಡ, ತನ್ನ ಕವಿತೆ ಬಗ್ಗೆ ಸ್ಥಿರನಾಗಿರುವುದಿಲ್ಲ. ಒಂದು ನಾಟಕದಲ್ಲಿ ಶೇಕ್ಸ್‌ಪಿಯರ್ "ದೌರ್ಬಲ್ಯ, ಇದರ ಇನ್ನೊಂದು ಹೆಸರೇ ಮಹಿಳೆ" ಎಂದಿದ್ದಾನೆ. ಈ ಮಹಾಶಯ ತನ್ನ ಇನ್ನೊಂದು ನಾಟಕದಲ್ಲಿ ಮಹಿಳೆ, ತನ್ನ ತೊಡೆಗೇ ಗಾಯ ಮಾಡಿಕೊಳ್ಳುವಷ್ಟು ಗಟ್ಟಿಗಳೆಂದು ವರ್ಣಿಸಿದ್ದಾನೆ. ಯಾರೆಂದರೆ, ಪೋರ್ಷಿಯಾ ಆಫ್ ಬ್ರೂಟಸ್: ನಮ್ಮ ದೇಶಕ್ಕೆ ಬಂದರೆ, ಶ್ರೇಷ್ಠ ಕವಿ, ತತ್ತ್ವಶಾಸ್ತ್ರಜ್ಞ ಸಂತ ತುಳಸೀದಾಸರು "ಡೋರ್ ಗವಾರ್ ಶೂದ್ರ ಔರ್ ನಾರಿ ಯೆಹ್ ಸಬ್ ತದನ ಕೆ ಅಧಿಕಾರಿ" ಎಂದಿದಾರೆ. ಹಿಂದಿ ಗೊತ್ತಿಲ್ಲದ ನನ್ನ

ಗೆಳೆಯರೇ, ಹಾಗಂದರೆ, ಒರಟ, ಅನಕ್ಷರಸ್ಥ, ಪ್ರಾಣಿ ಶೂದ್ರ, ಮಹಿಳೆ ಇವರೆಲ್ಲರೂ ದಂಡನೆಗೆ ಪಾತ್ರರು.

**ಶ್ರೀ ರಾಜಬಹಾದ್ದೂರ್** (ಮತ್ಸ್ಯ ಸಂಯುಕ್ತ ಸಂಸ್ಥಾನ) : ಈ ಪ್ರಸಿದ್ಧ ದ್ವಿಪದಿ ಬಗ್ಗೆ ಶ್ರೀ ಕಾಮತರು ಕೊಟ್ಟಿರುವ ವ್ಯಾಖ್ಯಾನ ಸಂಪೂರ್ಣವಾಗಿ ತಪ್ಪು ಎಂದು ನಾನು ಈ ಸದನಕ್ಕೆ ತಿಳಿಸಬಯಸುತ್ತೇನೆ.

**ಶ್ರೀ ಹೆಚ್. ವಿ. ಕಾಮತ್ :** ನೀವು, ಮುಂದೆ ಮಾತನಾಡುವವರಿದ್ದೀರಿ ಆಗ ನಿಮ್ಮ ವ್ಯಾಖ್ಯಾನವನ್ನು ಹೇಳುವಿರಂತೆ.

**ಶ್ರೀ ರಾಜಬಹುದ್ದೂರ್ :** ಅದರರ್ಥ ಏನೆಂದರೆ, ಢೋರ್‌ನಂತಹ ಅಥವಾ ಅಸಭ್ಯನಾದ ಶೂದ್ರ ಮತ್ತು ಪಶುವಿನಂತಹ (ಅನಾಗರಿಕ) **"ನಾರಿ"** (ಅಂದರೆ ಸ್ತ್ರೀ) ವಾಗ್ದಂಡನೆಗೆ ಪಾತ್ರರೂ. ಅಂದರೆ, ಧೋಲ್(ಕಪಟಿ) ಶೂದ್ರ ಪಶು (ಅನಾಗರಿಕ ಸ್ತ್ರೀ) ದಂಡನೆಗೆ ಪಾತ್ರರು.

**ಶ್ರೀ ಹೆಚ್.ವಿ. ಕಾಮತ್ :** ಆದರೆ, ನಮ್ಮ ನ್ಯಾಯಶಾಸ್ತ್ರಜ್ಞ ಮನು"ಯತ್ರನಾರ್ಯಸ್ತು ಪೂಜ್ಯಂತೆ ರಮಂತೇ ತತ್ರ ದೇವತಾ" ಅಂದರೆ ಎಲ್ಲಿ ಸ್ತ್ರೀಯರನ್ನು ಗೌರವಿಸುತ್ತಾರೋ ಅಲ್ಲಿ ದೇವತೆಗಳು ಸುಪ್ರೀತರಾಗಿರುತ್ತಾರೆ ಎಂದಿದ್ದಾನಲ್ಲ.

ಅನೇಕ ಸ್ಮೃತಿಗಳು ಶಾಸ್ತ್ರಗಳು ಹಾಗಿರಲಿ, ನಮ್ಮದೇ ಆದ ಶಾಸ್ತ್ರ–ಹಿಂದೂಗಳಿಗೆ ಪರಮ ಪೂಜ್ಯವಾದ ಶಾಸ್ತ್ರ–ಏನು ಹೇಳಿದೆ? ಶ್ರೀ ಕೃಷ್ಣ ಅರ್ಜುನನಿಗೆ ಗೀತೆಯನ್ನು ಉಪದೇಶಿಸಿದ ಕಾಲದಲ್ಲಿ ಹಿಂದೂಗಳಲ್ಲಿ, ಅನೇಕ ಸಂಪ್ರದಾಯಗಳಿದ್ದವು. ಕೆಲವೊಂದು ಜನರಿಗೆ ಪ್ರತಿಕೂಲಕರವಾದವುಗಳಾಗಿದ್ದವು. ಮಾನವನ ಪರಮಧ್ಯೇಯ ಯಾವುದು ಎಂಬುದನ್ನು ಒಂದು ಪ್ರಸಿದ್ಧ ಶ್ಲೋಕದಲ್ಲಿ ಶ್ರೀ ಕೃಷ್ಣ, ಅರ್ಜುನನಿಗೆ:

**ಸನ್ಮಾನ್ಯ ಸಭಾಧ್ಯಕ್ಷರು** : ಮಾನ್ಯ ಸದಸ್ಯರು ತಮ್ಮ ಮಾತನ್ನು ಸೋಮವಾರ ಮುಂದುವರಿಸಬಹುದು.

*ಸಭೆಯನ್ನು ೧೯೪೯ಫೆಬ್ರವರಿ ೨೮, ಸೋಮವಾರ ೧೧.೩೦ರ ತನಕ ಮುಂದೂಡಲಾಯಿತು.*

**"ಹಿಂದೂ ವಿವಾಹಗಳ ಸಿಂಧುತ್ವ ಮಸೂದೆ*

*ಸೆಲೆಕ್ಟ್ ಕಮಿಟಿಯ ವರದಿಯ ಮಂಡನೆಗಾಗಿ ಅವಧಿ ವಿಸ್ತರಣೆ*

**ಪಂಡಿತ ಠಾಕೂರ್‌ದಾಸ್ ಭಾರ್ಗವ** (ಪೂರ್ವ ಪಂಜಾಬ್ : ಸಾಮಾನ್ಯ) : ನನ್ನ ಸೂಚನೆ ಏನೆಂದರೆ:

"ಹಿಂದೂಗಳ, ಸಿಖ್ಖರ, ಜೈನರಲ್ಲಿ ಮತ್ತು ಅವರ ವಿವಿಧ ಜಾತಿಗಳಲ್ಲಿ ಹಾಗೂ ಉಪಜಾತಿಗಳಲ್ಲಿ ಆದ ಮದುವೆಗಳು ಸಿಂಧು ಆಗುವುದಕ್ಕೆ ಅವಕಾಶ ಕಲ್ಪಿಸುವ ಮಸೂದೆ ಕುರಿತ ಸೆಲೆಕ್ಟ್ ಕಮಿಟಿಯ ವರದಿಯ ಮಂಡನೆಗೆ ಗೊತ್ತುಪಡಿಸಿದ ಅವಧಿಯನ್ನು ೧೯೪೯ರ ಮಾರ್ಚ್ ೨೫ರ ವರೆಗೆ ವಿಸ್ತರಿಸಬೇಕು".

ಆರ್ಡರ್ ಪೇಪರಿನಲ್ಲಿ ದಿನಾಂಕವನ್ನು ಮಾರ್ಚ್ ೧೧ ಎಂದು ಕೊಡಲಾಗಿದೆ. ಆದರೆ, ತಮ್ಮ ಅನುಮತಿ ಕೋರುತ್ತ, ಅದನ್ನು ಮಾರ್ಚ್ ೨೫ ಎಂದು ತಿದ್ದುಪಡಿ ಮಾಡಬಯಸುತ್ತೇನೆ. ಏಕೆಂದರೆ, ಸನ್ಮಾನ್ಯ ಕಾನೂನು ಮಂತ್ರಿಯವರು ದೆಹಲಿಯ ಹೊರಗಡೆ ಇರುತ್ತಾರಾದ್ದರಿಂದ, ಅವರಿಗೆ ಈ ವರದಿ ಬಗ್ಗೆ ಅಧ್ಯಯನ ಮಾಡಲು ಸಾಕಷ್ಟು ಸಮಯಾವಕಾಶ ಬೇಕಾಗುತ್ತದೆ. ಆದ್ದರಿಂದ, ಈ ತಿದ್ದುಪಡಿ ಸೂಚನೆಯನ್ನು ಮಂಡಿಸುತ್ತೇನೆ.

ಈ ಮಸೂದೆಯು ಈ ಅಧಿವೇಶನದಲ್ಲೇ ಈ ಸದನದ ಮುಂದೆ ಬರಬೇಕು ಅಂತ ನಾನು ಕಾತರದಿಂದಿದ್ದೇನೆ. ಆದ್ದರಿಂದ, ಸೆಲೆಕ್ಟ್ ಕಮಿಟಿಯು, ತನ್ನ ವರದಿಯನ್ನು ಮಾರ್ಚ್ ೨೫ರ ಹೊತ್ತಿಗೆ ಸಲ್ಲಿಸುವಂತೆ ನೋಡಿಕೊಳ್ಳಬೇಕೆಂದು ನಾನು ಸನ್ಮಾನ್ಯ ಕಾನೂನು ಮಂತ್ರಿಯವರನ್ನು ಹಾಗೂ ಈ ಮಸೂದೆಯ

* ಸಿ.ಎ. (ಲೆಜಿ) ಡಿ, ಸಂಪುಟ II, ಭಾಗ II, ೨೮ ಫೆಬ್ರವರಿ ೧೯೪೯ ಪುಟ ೯೪೦–೫೬

ಪ್ರಭಾರದಲ್ಲಿರುವ ಅಧಿಕಾರಿ ವರ್ಗದವರನ್ನು ಕೋರುತ್ತೇನೆ. ಈ ಮಸೂದೆಯು ತುಂಬಾ ಪ್ರಾಮುಖ್ಯದ್ದಾಗಿರುವುದರಿಂದ ಇದು ಈ ಅಧಿವೇಶನದಲ್ಲೇ ಅಂಗೀಕೃತವಾಗುವುದಕ್ಕೆ ನಾನು ಅಧಿಕಾರಿ ವರ್ಗದವರಿಗೆ ಮಾಡಿಕೊಂಡಿರುವ ಮನವಿಯನ್ನು ಪುರಸ್ಕರಿಸಬೇಕೆಂದೂ ಸಹ ನಾನು ಸದನವನ್ನು ಕೋರುತ್ತೇನೆ.

**ಶ್ರೀ ಆರ್.ಕೆ. ಸಿಧ್ವಾ** (ಕೇಂದ್ರೀಯ ಪ್ರಾಂತ ಮತ್ತು ಬೀರಾರ್ : ಸಾಮಾನ್ಯ) : ಈ ವಿಷಯ ಇನ್ನೂ ಸೆಲೆಕ್ಟ್ ಕಮಿಟಿಯ ಬಳಿಯೇ ಇದೆ. ಈ ಸದನ, ಏನು ತಾನೇ ಮಾಡಲಿಕ್ಕಾಗುತ್ತದೆ? ವರದಿಯನ್ನು ಬೇಗನೆ ಸಲ್ಲಿಸುವಂತೆ, ನನ್ನ ಮಾನ್ಯ ಗೆಳೆಯ, ಸೆಲೆಕ್ಟ ಕಮಿಟಿಯನ್ನು ಕೋರಬೇಕಾಗುತ್ತದೆ ಸೆಲೆಕ್ಟ್ ಕಮಿಟಿಯು ಬೇಗನೆ ವರದಿ ಸಲ್ಲಿಸುತ್ತದೆಂದು ನನ್ನ ಭಾವನೆ.

**ಪಂಡಿತ ಠಾಕೂರ್‌ದಾಸ್ ಭಾರ್ಗವ** : ದಿನಾಂಕದ ವಿಸ್ತರಣೆ ಆಗಬೇಕಿದೆ. ಸಕಾಲದಲ್ಲಿ ವರದಿ ಸಲ್ಲಿಕೆ ಆಗುವಂತೆ ಕಾನೂನು ಮಂತ್ರಿಯುವರು ನೋಡಿಕೊಳ್ಳಬೇಕು ಮತ್ತು ಸದನವು ಈ ವಿಷಯದಲ್ಲಿ ನನ್ನನ್ನು ಬೆಂಬಲಿಸಬೇಕೆಂಬುದು ನನ್ನ ಅಪೇಕ್ಷೆ.

**ಸನ್ಮಾನ್ಯ ಸಭಾಧ್ಯಕ್ಷರು** : ಸೂಚನೆ ಏನೆಂದರೆ :

"ಹಿಂದೂಗಳ, ಸಿಖ್ಖರ, ಜೈನರಲ್ಲಿ ಮತ್ತು ಅವರ ವಿವಿಧ ಜಾತಿಗಳಲ್ಲಿ ಹಾಗೂ ಉಪಜಾತಿಗಳಲ್ಲಿ ಆದ ಮದುವೆಗಳು ಸಿಂಧು ಆಗುವುದಕ್ಕೆ ಅವಕಾಶ ಕಲ್ಪಿಸುವ ಮಸೂದೆ ಕುರಿತ ಸೆಲೆಕ್ಟ್ ಕಮಿಟಿಯ ವರದಿಯ ಮಂಡನೆಗೆ ಗೊತ್ತುಪಡಿಸಿದ ಅವಧಿಯನ್ನು ೧೯೪೯ ಮಾರ್ಚ್ ೨೫ರ ವರೆಗೆ ವಿಸ್ತರಿಸಬೇಕು." ಸೂಚನೆ ಅಂಗೀಕೃತವಾಯಿತು.

**ಹಿಂದೂ ಸಂಹಿತೆ–ಚರ್ಚೆ ಮುಂದುವರಿಯಿತು.*

**ಸನ್ಮಾನ್ಯ ಸಭಾಧ್ಯಕ್ಷರು** : ಹಿಂದೂ ಸಂಹಿತೆಯ ಪರ್ಯಾಲೋಚನೆ ಈಗ ಮುಂದುವರಿಯುತ್ತದೆ.

**ಶ್ರೀ ಹೆಚ್.ವಿ. ಕಾಮತ್** : (ಕೇಂದ್ರಿಯ ಪ್ರಾಂತ ಮತ್ತು ಬೀರಾರ್: ಸಾಮಾನ್ಯ)

ಸನ್ಮಾನ್ಯ ಸಭಾಧ್ಯಕ್ಷರೇ, ಶುಕ್ರವಾರ ಮಧ್ಯಾಹ್ನ ಈ ಸದನವನ್ನು ಮುಂದೂಡಿದಾಗ ನಾನು ಶ್ರೀ ಕೃಷ್ಣನ ಹೆಸರನ್ನೆತ್ತಿದ್ದೆ. ಮಾನವ ಜನಾಂಗದ ಪರಮಧ್ಯೇಯದ ಬಗ್ಗೆ ಗೀತೆಯಲ್ಲಿ ಶ್ರೀ ಕೃಷ್ಣ, ಪುರುಷ/ಸ್ತ್ರೀ ಇಬ್ಬರೂ ಎಲ್ಲ ರೀತಿಯಲ್ಲೂ ಸಮಾನರೆಂದು ಹೇಳಿದ್ದಾನೆಂದು ಹೇಳುತ್ತಿದೆ.

ಹಿಂದೂಗಳಿಗೆ ಗೀತೆ ಪರಮ ಪವಿತ್ರ ಸ್ಮೃತಿ, ಅತ್ಯಂತ ಶ್ರೇಷ್ಠ ಶಾಸ್ತ್ರ, ಎಲ್ಲ ತತ್ತ್ವಗಳ, ಎಲ್ಲ ಧರ್ಮಗಳ ಸಾರ. ಒಂದು ಪ್ರಸಿದ್ಧ ಶ್ಲೋಕದಲ್ಲಿ ಕೃಷ್ಣ ಹೇಳಿದ್ದಾನೆ:

"ಸ್ತ್ರೀಯೋ ವೈಶಸ್ತಥಾ ಶೂದ್ರಸ್ತೆಪಿ ಯಂತಿ ಪರಮಂಗತಿಂ."

ಆ ಕಾಲದಲ್ಲಿ, ಸ್ತ್ರೀಯರು, ವೈಶ್ಯರು, ಶೂದ್ರರು ಕೀಳುವರ್ಗದವರೆಂದು, ಕೀಳು ಜಾತಿಯವರೆಂದು ಪರಿಗಣಿಸಲ್ಪಟ್ಟಿದ್ದರು. ಇಂಥವರನ್ನೂ ಕೂಡ, ಶ್ರೀಕೃಷ್ಣ ಬ್ರಾಹ್ಮಣರಿಗೆ, ಇತರರಿಗೆ ಸಮಾನರೆಂದು ಹೇಳಿದ್ದಾನೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದ್ರಾಸ್ : ಸಾಮಾನ್ಯ) : ಶ್ರೀ ಕಾಮತರೇ, ಸರಿಯಾಗಿ ಹೇಳಿದಿರಿ.

**ಶ್ರೀ ಹೆಚ್. ವಿ. ಕಾಮತ್** : ಮೋಕ್ಷ ಮತ್ತು ಪ್ರಗತಿ ಬಗ್ಗೆ ಹೇಳುವುದಾದರೆ, ಮಹಿಳೆಯರ ಮೋಕ್ಷ ಪ್ರಾಪ್ತಿಗೆ ಯಾವ ನಿಷೇಧವೂ ಇರಲಿಲ್ಲ. ಈ ದಿನಗಳಲ್ಲಿ, ಕೆಲವರು ಪುರುಷರು, ಕೆಲವರು ಸ್ವಾಮಿಗಳೂ ಕೂಡ–ಧಾರ್ಮಿಕ ಆಧ್ಯಾತ್ಮಿಕ ಗುರುಗಳೆಂದುಕೊಳ್ಳುವವರು –ಸ್ತ್ರೀ/ಪುರುಷ ಇಬ್ಬರೂ ಎಲ್ಲ ಅಂಶಗಳಲ್ಲೂ ಸಮಾನರಲ್ಲವೆಂಬುದನ್ನು ಒಪ್ಪುತ್ತೇನೆ.............

* ಅದೇ ಪುಟ ೯೪೧–೫೦

**ಮೌಲಾನ ಹಸ್ರತ್ ಮೊಹಾನಿ** (ಸಂಯುಕ್ತ ಪ್ರಾಂತ : ಸಾಮಾನ್ಯ) ಅವರು ಹೇಗೆ ಸಮಾನರು?

**ಶ್ರೀ ಹೆಚ್.ವಿ. ಕಾಮತ್ :** ಸಮಾನರಲ್ಲ ಎಂದು ಹೇಳುವುದನ್ನು ಅದಕ್ಕೆ ವಿಲಕ್ಷಣವಾದ ಕಾರಣಗಳನ್ನು ಕೊಡುವುದನ್ನು ನೋಡಿ ನನಗೆ ದಿಗ್ಭ್ರಮೆಯಾಗುತ್ತದೆ. ಹಿಂದೊಂದು ದಿನ, ನನ್ನ ಅದೃಷ್ಟವೋ, ದುರಾದೃಷ್ಟವೋ ಒಬ್ಬ ಸ್ವಾಮಿಯವರು, ಸ್ತ್ರೀ ಪುರುಷರು ಸಮಾನರಲ್ಲವೆಂದು ಒಂದು ಸಭೆಯಲ್ಲಿ ಹೇಳುತ್ತಿದ್ದುದನ್ನು ಕೇಳಿಸಿಕೊಂಡೆ, ಅವರ ಹೇಳಿಕೆಗೆ ಕಾರಣಗಳೇನೆಂಬುದನ್ನು ಹೇಳಬೇಕೆಂದು ಅವರನ್ನು ಪ್ರಾರ್ಥಿಸಿಕೊಂಡೆ, ಅವರು ಏನು ಹೇಳಿದರು ಗೊತ್ತೇ, ಹೇಳಿದರೆ ಸದನವೇ ದಿಗ್ಭ್ರಾಂತವಾಗುತ್ತದೆ. ಗಂಡನಿಗೆ ಮೀಸೆ ಬೆಳೆಯುತ್ತದೆ, ಹೆಂಗಸಿಗೆ ಮೀಸೆ ಬೆಳೆಯುವುದಿಲ್ಲ. ನಾನು ತಮಾಷೆ ಮಾಡುತ್ತಿಲ್ಲ. ಸರ್, ಆ ಸ್ವಾಮಿಯವರು ಮಾತನಾಡುತ್ತಿದ್ದ ಸಭೆಯಲ್ಲಿ ನನ್ನ ಗೆಳೆಯರೂ ಕೆಲವರಿದ್ದರು. ಸ್ವಾಮಿಯವರು ಮನಃಪೂರ್ವಕವಾಗಿ, ಗಂಭೀರವಾಗಿ ಅದನ್ನೇ ಹೇಳುತ್ತಿದ್ದರು: ಗಂಡಸಿಗೆ ಮೀಸೆ ಬೆಳೆಯುತ್ತದೆ, ಹೆಂಗಸಿಗೆ ಮೀಸೆ ಬೇಳೆಯುವುದಿಲ್ಲ. ಹೆಚ್ಚೆಂದರೆ, ಹೆಂಗಸು ಒಂದು ವರ್ಷದಲ್ಲಿ ಮೂರು, ನಾಲ್ಕು ಅಥವಾ ಐದು ಮಕ್ಕಳನ್ನು ಹೆರಬಲ್ಲಳು.

**ಒಬ್ಬರು ಮಾನ್ಯ ಸದಸ್ಯರು** : ಒಂದೇ ವರ್ಷದಲ್ಲೇ?

**ಶ್ರೀ ಹೆಚ್.ವಿ. ಕಾಮತ್** : ಅಂದರೆ, ಒಮ್ಮೆಗೇ ಅವಳಿ, ತ್ರಿವಳಿ, ನಾಲ್ಕು ಅಥವಾ ಐದು ಮಕ್ಕಳು ಅಂತ. ಸರ್, ಸ್ವಾಮಿಯವರು ಇನ್ನು ಮುಂದುವರಿದು ಗಂಡಸು ನೂರಾರು ಮಕ್ಕಳು ತಂದೆ ಆಗಬಲ್ಲ ಎಂದು ಹೇಳಿಬಿಟ್ಟರು. ಸರ್, ಇದು, ನನ್ನ ಮಟ್ಟಿಗೆ ವಿಚಿತ್ರ, ವಿಲಕ್ಷಣ ತರ್ಕ.

ಸ್ತ್ರೀ ಪುರುಷ ಸಮಾನತೆ ಬಗ್ಗೆ ಮಾತನಾಡುವಾಗ, ನಾವು ಅದಕ್ಕೆ ಆಧ್ಯಾತ್ಮವೇ ಆಧಾರವೆಂದು ಭಾವಿಸುತ್ತೇನೆ. ಶ್ರೀ ಕೃಷ್ಣ ಗೀತೆಯಲ್ಲಿ ಹೇಳಿದ್ದಾನೆ.

"ಸರ್ವ ಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ"

ಮಾನವ ಮಾನವರ ಅಥವಾ ಸ್ತ್ರೀ ಪುರುಷರ ನಡುವಣ ಸಮಾನತೆಗೆ ಅದೇ ಆಧಾರ. ಅದೇ ಮಾನದಂಡ, ಅದೇ ಅಳತೆಗೋಲು.

"ಯೋ ಮಾಂ ಪಶ್ಯತಿ ಸರ್ವತ್ರ ಸರ್ವ ಚ ಮ ಯಿ ಪಶ್ಯತಿ"

ಮೇಲು, ಕೀಳು, ಬಡವ, ಬಲ್ಲಿದ, ಗಂಡಸರು, ಹೆಂಗಸು ಏನೇ ಆಗಿರಬಹುದು, ಮಾನವರಲ್ಲಿ, ಸಮಾನತೆಗೆ ಇದೇ ಆಧಾರ, ಇದೇ ಮಾನದಂಡ, ಇದೇ ಪ್ರಮಾಣ, ಇದೇ ಅಳತೆಗೋಲು.

ಸರ್, ಸ್ವಾಮಿಯವರು ಪ್ರತಿಪಾದಿಸಿದ ಅಸಮಾನತೆ ತತ್ತ್ವವನ್ನು ನಾನು ಒಪ್ಪುವುದಿಲ್ಲ. ಹೆಂಗಸರು ಗಂಡಸರು ಜೊತೆಯಲ್ಲಿ ಕುಡಿದರೆ, ಸಿಗರೇಟು ಸೇದಿದರೆ ಕೆಲವರು ಹಾಗೆ ಮಾಡುತ್ತಿದ್ದಾರೆ–ಸಮಾನರಾಗಿ ಬಿಡುತ್ತಾರೆಂಬುದನ್ನು ನಾನು ಒಪ್ಪುವುದಿಲ್ಲ. ಆ ರೀತಿಯಲ್ಲಿ ಹೆಂಗಸರು ಸಮಾನತೆ ಬಯಸುವುದಾದರೆ ಅದನ್ನು ಹತ್ತಿಕ್ಕಬೇಕು. ಪಶ್ಚಿಮದ ರೀತಿ ನೀತಿಗಳನ್ನು ಅನುಕರಣೆ ಮಾಡಿ, ಬಾಲ್ ರೂಂ ಡ್ಯಾನ್ಸಿಂಗ್ ಹಾಗೂ ಇತರ ಪಾಶ್ಚಿಮಾತ್ಯ ಚಾಳಿಗಳಿಗೆ ಮಾರುಹೋಗಿ, ನಾವೂ ಕೂಡ ಪ್ರಗತಿಪರರೆಂದು ತೋರಿಸಿಕೊಳ್ಳುವ ಹೆಂಗಸರ ಅಂಥ ಪ್ರಗತಿಪರ ಕಲ್ಪನೆಯನ್ನು ಕೂಡ–ಪಾಶ್ಚಿಮಾತ್ಯ ಅರ್ಥದ ಪ್ರಗತಿಪರ ಕಲ್ಪನೆ– ನಾನು ಒಪ್ಪುವುದಿಲ್ಲ. ಸರ್, ಇದೂ ಕೂಡ, ನನ್ನ ಪ್ರಕಾರ, ಪುರುಷನ ಜೊತೆ ಸಮಾನತೆ ಗಳಿಸುವ ಮಾರ್ಗ ಅಲ್ಲ.

**ಶ್ರೀಮತಿ ಪೂರ್ಣಿಮಾ ಬ್ಯಾನರ್ಜಿ :** (ಸಂಯುಕ್ತ ಪ್ರಾಂತ್ಯ : ಸಾಮಾನ್ಯ): ಅದನ್ನು ಹಿಂದೂ ಸಂಹಿತೆಯಲ್ಲಿ ಸೇರಿಸಿಲ್ಲ. ಜೊತೆಗಾರ ಇಲ್ಲದೆಯೇ ಅವಳು ಡ್ಯಾನ್ಸ್ ಮಾಡಬಲ್ಲಳೇನು?

**ಶ್ರೀ ಹೆಚ್. ವಿ. ಕಾಮತ್ :** ಅದು ನನಗೆ ಗೊತ್ತಿದೆ. ಆದರೆ, ನಾವು ಸ್ತ್ರೀ ಪುರುಷ ಸಮಾನತೆ ಬಗ್ಗೆ ಮಾತನಾಡುತ್ತಿದ್ದೇವೆ. ಸರ್, ಘನ ವಿದ್ವಾಂಸರೂ, ತತ್ತ್ವಜ್ಞಾನಿಗಳೂ, ಹಿಂದೂ ಧರ್ಮದ ಮೇಲೆ, ಹಿಂದೂ

ಜೀವನವಿಧಾನದ ಮೇಲೆ ಅಧಿಕಾರವಾಣಿಯಿಂದ ಮಾತನಾಡಬಲ್ಲವರೂ ಆದ ಡಾ. ಸರ್ವಪಳ್ಳಿ ರಾಧಾಕೃಷ್ಣನ್ ಏನು ಹೇಳಿದ್ದಾರೆಂದರೆ.

"ಆಧುನಿಕ ಮಹಿಳೆ, ತನ್ನ ಆತ್ಮಗೌರವವನ್ನೇ ಕಳೆದುಕೊಳ್ಳುತ್ತಿದ್ದಾಳೆ. ಅವಳು, ತನ್ನ ವ್ಯಕ್ತಿತ್ವಕ್ಕೇ, ವೈಶಿಷ್ಟ್ಯತೆಗೆ ಗೌರವ ಕೊಡುತ್ತಿಲ್ಲ. ಪುರುಷನನ್ನು ಅನುಕರಣೆ ಮಾಡುವ ಪ್ರಯತ್ನ ಮಾಡಿ ಅವಳು, ಪುರುಷನಿಗೆ ತನಗೇ ತಿಳಿಯದಂತೆ ಪ್ರಾಮುಖ್ಯತೆ ಕೊಡುತ್ತಿದ್ದಾಳೆ. ಅವಳು, ಶೀಘ್ರಗತಿಯಲ್ಲಿ ಗಂಡುಬೀರಿಯಾಗುತ್ತಿದ್ದಾಳೆ, ಯಾಂತ್ರಿಕಳಾಗುತ್ತಿದ್ದಾಳೆ."

**ಶ್ರೀ ಆರ್. ಕೆ. ಸಿಧ್ವಾ** (ಕೇಂದ್ರೀಯ ಪ್ರಾಂತ ಮತ್ತು ಬೀರಾರ್: ಸಾಮಾನ್ಯ) : ಆಧುನಿಕ ಮಾನವ ಏನಾಗುತ್ತಿದ್ದಾನೆ?

**ಶ್ರೀ ಹೆಚ್.ವಿ. ಕಾಮತ್** : ಸರ್, ಮಹಿಳೆಯರು ಈ ಬಗ್ಗೆ ಚಿಂತನೆ ಮಾಡಬೇಕೆಂದು ಮತ್ತು ಪುರಷನ ಜತೆ ಸಮಾನತೆ ಅಂತ, ಅಂಥ ಪ್ರಯತ್ನ ಮಾಡಬಾರದೆಂದು ಹೇಳುತ್ತಿದ್ದೇನೆ.

**ಶ್ರೀಮತಿ ಅನ್ನಿಮಾಯಸ್ಕರೀನಿ** (ತಿರುವಾಂಕೂರು ಸಂಸ್ಥಾನ) : ಆಧುನಿಕ ಮಾನವನು, ಅದಕ್ಕಿಂತಲೂ ಯಾವುದೇ ರೀತಿಯಲ್ಲಿ ಉತ್ತಮನೇ?

**ಶ್ರೀ ಹೆಚ್.ವಿ. ಕಾಮತ್** : ಸರ್, ಸ್ತ್ರೀ ಪುರುಷ ಸಮಾನತೆ ಬಗ್ಗೆ ಮಾತನಾಡುವಾಗ ನನಗೆ, ಸೀತೆ, ಸಾವಿತ್ರಿ, ದಮಯಂತಿ, ಗಾರ್ಗಿ, ಮೈತ್ರೇಯಿ ಮತ್ತು ಉಭಯಭಾರತಿಯರ ಐತಿಹಾಸಿಕ ಉದಾಹರಣೆಗಳು ಜ್ಞಾಪಕಕ್ಕೆ ಬರುತ್ತವೆ. ಈ ಮಹಿಳೆಯರ ಬಗ್ಗೆ ಹಾಗೂ ಪ್ರಾಚೀನ ವೇದಗಳ ಕಾಲದಲ್ಲಿ ಮತ್ತು ಆ ಕಾಲದ ತರುವಾಯವೂ, ಈ ಮಹಿಳೆಯರಿಗೆ ಇದ್ದ ಸ್ಥಾನಮಾನದ ಬಗ್ಗೆ, ಇಂದೂ ಕೂಡ, ಹಿಂದೂ ಸಂಹಿತೆಯನ್ನು ವಿರೋಧಿಸುತ್ತಿರುವ ನಮ್ಮ ಅನೇಕ ವಿರೋಧಿಗಳು ನಂಬಿರುವ, ಈ ಮಹಿಳೆಯರ, ಆದರ್ಶಗಳನ್ನು ನಮ್ಮ ಪ್ರಾಚೀನ ಇತಿಹಾಸದ ಪುಟಗಳಿಂದ ಓದಿ ಹೇಳಲೆ? ವೇದಗಳ ಕಾಲದಲ್ಲಿ ಉಪನಿಷತ್ತುಗಳ ಕಾಲದಲ್ಲಿ ಮಹಿಳೆಯರಿಗೆ ಅತ್ಯಂತ ಉನ್ನತ ಸ್ಥಾನಮಾನ ಇತ್ತು. ಉಪನಿಷತ್ತುಗಳ ಕಾಲದ ಅಸಾಧಾರಣ ಮಹಿಳೆಯರಲ್ಲಿ ಮೈತ್ರೇಯಿ ಹೆಸರು ವೈಶಿಷ್ಟ್ಯಪೂರ್ಣ. ಇಂದೂ ಕೂಡ, ಆಕೆಯ ಆಧ್ಯಾತ್ಮಿಕ ಜ್ಞಾನಪ್ರಭೆ ಪ್ರಪಂಚವನ್ನು ಬೆಳಗುತ್ತಿದೆ. ಉಜ್ವಲ, ಅಪೂರ್ವ, ಅಪಾರ ಬೌದ್ಧಿಕ ಪಾಂಡಿತ್ಯದ ಗಣಿಗಳಾಗಿದ್ದ ಇಬ್ಬರು ಮಹಿಳೆಯರ ಹೆಸರು ಸ್ಪಷ್ಟವಾಗಿ ಎದ್ದುಕಾಣುತ್ತದೆ. ಇತಿಹಾಸಪೂರ್ವ ಕಾಲದಲ್ಲಿ ಮತ್ತು ಬುದ್ಧನ ನಂತರದ ಕಾಲದಲ್ಲಿ ಭಾರತ ವರ್ಷದಲ್ಲಿ ಧಾರ್ಮಿಕ ವಿದ್ವಜ್ಜನ ಸಮ್ಮೇಳನ ಸಮಾವೇಶಗೊಂಡಿದ್ದವು. ಭಾರತ ದೇಶದಲ್ಲಿ ಎಲ್ಲ ರೀತಿಯ ಧಾರ್ಮಿಕ ಸಮ್ಮೇಳನಗಳು ಸಮಾವೇಶಗೊಳ್ಳುವುದು ಹೊಸದೇನಲ್ಲ. ಇಬ್ಬರು ಮಹಿಳೆಯರನ್ನು ಕೇವಲ ಧಾರ್ಮಿಕ ಸಂವಾದಕ್ಕಷ್ಟೇ ಅಲ್ಲ. ಭರತ ವರ್ಷದ ಆಧ್ಯಾತ್ಮಿಕ ಜೀವನದಲ್ಲಿ ಹಾಸುಹೊಕ್ಕಾಗಬೇಕಾದ ತತ್ವಗಳನ್ನು ನಿರೂಪಿಸಲು ಆಮಂತ್ರಿಸಲಾಗಿತ್ತು. ಇತಿಹಾಸಪೂರ್ವ ಕಾಲದಲ್ಲಿ ನಡೆದ ಗೋಷ್ಠಿಯಲ್ಲಿ ಶಂಕರಾಚಾರ್ಯರು ಉಪಸ್ಥಿತರಿದ್ದರು. ಯಾಜ್ಞವಲ್ಕ್ಯರು ಉಪಸ್ಥಿತರಿದ್ದ ಗೋಷ್ಠಿಯನ್ನು ಕರ್ಮಯೋಗಿ ಜನಕ ಮಹಾರಾಜ ಸಮಾವೇಶಗೊಳಿಸಿದ್ದ. ಭರತ ವರ್ಷದ ಮೂಲೆ ಮೂಲೆಗಳಿಂದ, ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯಿಂದ, ಖೈಬರ್‌ನಿಂದ ಹಿಡಿದು ಚಿರಾಪುಂಜಿಯಿಂದ ಋಷಿಮುನಿಗಳು ಬಂದು ಸೇರಿದ್ದರು. ಗಾರ್ಗಿಯು, ಸ್ತ್ರೀಯರ ದೀನಸ್ಥಿತಿಯನ್ನು ಖಂಡಿಸಿ, ಸ್ತ್ರೀಯರ ಪರ ಧೈರ್ಯದಿಂದ ದನಿ ಎತ್ತಿ ಮಾತನಾಡಿದಾಗ ಎಲ್ಲರೂ ಮೂಕ ವಿಸ್ಮಿತರಾಗಿದ್ದರು. ಸರ್, ಅದೇ ನಮ್ಮ ಮಹಿಳೆಯರ ಪ್ರಗತಿಪರ ಕಲ್ಪನೆಗೆ ಆದರ್ಶವಾಗಬೇಕು, ನಮ್ಮ ಮಹಿಳೆಯರು ಆ ಆದರ್ಶವನ್ನು ಸಾಧಿಸಬೇಕು. ಅತ್ಯಂತ ಪ್ರಬಲವಾದ ವಾದ, ತರ್ಕಗಳನ್ನು ಪ್ರತಿಪಾದಿಸಿದರೂ, ಗಾರ್ಗಿ ಚರ್ಚೆಯಲ್ಲಿ ಸೋತಳು.

ಇನ್ನೊಂದರಲ್ಲಿ ಶಂಕರಾಚಾರ್ಯರು ಉಪಸ್ಥಿತರಿದ್ದರು. ಈ ಅಪೂರ್ವ ವಿದ್ವಜ್ಜನ ಗೋಷ್ಠಿಯ

ನ್ಯಾಯಪೀಠವನ್ನು ಅಲಂಕರಿಸುವ ಹೊಣೆ ಮಂಡನಮಿಶ್ರರ ಧರ್ಮಪತ್ನಿ ಉಭಯಭಾರತಿಯ ಮೇಲೆ ಬಿತ್ತು. ಪ್ರಪಂಚದ ಇತಿಹಾಸದಲ್ಲೇ ಒಬ್ಬಳು ಸ್ತ್ರೀ ಅಂಥದೊಂದು ಅಪೂರ್ವ ವಿದ್ವಜನ ಗೋಷ್ಠಿಯ ನ್ಯಾಯಪೀಠವನ್ನು ಅಲಂಕರಿಸಲು ಆಯ್ಕೆಯಾದ ಹಾಗೂ ತನ್ನ ಬೌದ್ಧಿಕ ಪ್ರಜ್ಞೆಯನ್ನು ಮತ್ತು ಋಜುತ್ವವನ್ನು ಅದ್ಭುತವಾಗಿ ಪ್ರತಿಪಾದಿಸಿದ ಒಂದೂ ದೃಷ್ಟಾಂತ ಇಲ್ಲ. ಉಭಯಭಾರತಿ, ಶಂಕರಾಚಾರ್ಯರ ಪರವಾಗಿಯೇ ತೀರ್ಪಿತ್ತಳು. (ಮಾನ್ಯ ಸದಸ್ಯರುಗಳು : ಹೇಳಿ, ಹೇಳಿ). ಪರಿಣಾಮವಾಗಿ, ಆಕೆಯ ಪತಿ, ಮಂಡನಮಿಶ್ರರು ಸನ್ಯಾಸ ಸ್ವೀಕರಿಸಿ ಶಂಕರಚಾರ್ಯರ ಶಿಷ್ಯರಾದರು. ಶಂಕರಾಚಾರ್ಯರ ಮತ ಇಂದು ದೇಶದಲ್ಲಿ ಒಂದು ಶ್ರೇಷ್ಠ ಮತ ಆಗಿದೆ. **"ವಾಸ್ತವವಾಗಿ"**. ಗ್ರಂಥಕರ್ತರು ಹೇಳುತ್ತಾರೆ–ನಾನು ರಾಮಕೃಷ್ಣ ಮಿಶನ್ ಪ್ರಕಟಿಸಿದ **"ಭಾರತದ ಸಾಂಸ್ಕೃತಿಕ ಪರಂಪರೆ"** ಗ್ರಂಥದಿಂದ ಓದಿ ಹೇಳುತ್ತಿದ್ದೇನೆ– "ಸ್ತ್ರೀಹಕ್ಕುಬಾಧ್ಯತೆಗಳ ದಮನಕ್ಕೆ, ಸ್ವತಂತ್ರ ಮನೋಭಾವನೆಯುಳ್ಳ ಸೃಜನಶೀಲ ಚಿಂತಕರಾದ ಮೂಲ ಕೃತಿಕರ್ತರು ಕಾರಣರಲ್ಲ– 'ಮೂಲ ಕೃತಿಕರ್ತರು ಕಾರಣರಲ್ಲ' ಈ ವಾಕ್ಯವನ್ನು ಗಮನಿಸಿ–ಅಂದರೆ, ಸ್ಮೃತಿಕಾರರಲ್ಲ, ಸ್ತ್ರೀಯರು ತಮ್ಮೊಂದಿಗಿದ್ದಾರೆಂಬ ಅವಿವೇಕದ ಭ್ರಮೆಯಲ್ಲಿ ಮುಳುಗಿದ್ದ, ಯಾಂತ್ರಿಕ ಮನೋಭಾವನೆಯುಳ್ಳ ವ್ಯಾಖ್ಯಾನಕಾರರಾದ ಟೀಕೆಗಳ ಕರ್ತರೇ–ಟೀಕೆಗಳನ್ನು ರಚಿಸಿದವರು– ಸ್ತ್ರೀ ಹಕ್ಕು ಬಾಧ್ಯತೆಗಳ ದಮನಕ್ಕೆ ಕಾರಣರು".

ಸರ್, ನಮ್ಮ ಅನೇಕ ಗೆಳೆಯರು ಈ ಮಸೂದೆಯನ್ನು ವಿರೋಧಿಸುತ್ತಿದ್ದಾರೆ. ಈ ಸದನದಲ್ಲಿರುವವರು ಎಂದು ನನ್ನ ಮಾತಿನ ಅರ್ಥ ಅಲ್ಲ. ಸದನದ ಹೊರಗಿನ ಜನರು ಧರ್ಮದ ಬಗ್ಗೆ ಮಾತನಾಡುತ್ತಿದ್ದಾರೆ. ಹಿಂದಿನ ಒಂದು ದಿನ ನಾನು ಧರ್ಮ ಎಂದರೇನು? ಎನ್ನುವ ಪ್ರಶ್ನೆ ಹಾಕಿದ್ದೆ. ಹಿಂದೂ ಸಂಹಿತೆ ವಿರೋಧಿ ಸಮಿತಿಯು ಮುದ್ರಿಸಿರುವ ಒಂದು ಕರಪತ್ರದಲ್ಲಿ ಆ ಬಗ್ಗೆ ಸುಳಿವು ಸಿಗುತ್ತದೆ, ಅದರಲ್ಲೇನಿದೆ? ಅದರಲ್ಲಿ ಒಂದು ಹಳೆಯ ಶ್ಲೋಕ ಇದೆ–ಅದು ಯಾವುದರದು, ನನಗೆ ಜ್ಞಾಪಕಕ್ಕೆ ಬರುತ್ತಿಲ್ಲ– ಆದರೆ, ಪಂಚತಂತ್ರದಲ್ಲಿ ಅದರ ಉಲ್ಲೇಖ ಇದೆ:

"ನ ಸ ಸಭಾಯತ್ರ ನ ಶಾಂತಿ ವೃದ್ಧಾ : ವೃದ್ಧಾನ ತೇ ಯೇನ

"ವದಂತಿ ಧರ್ಮಂ" "ವೃದ್ಧರಿಲ್ಲದ ಸಭೆಯು ಸಭೆಯೇ ಅಲ್ಲ. ಗೋಷ್ಠಿಯೂ ಅಲ್ಲ".

**ಒಬ್ಬರು ಮಾನ್ಯ ಸದಸ್ಯರು** : ಆದರೆ, ಇಲ್ಲಿ ಬಹಳ ಮಂದಿ ಇದ್ದಾರೆ.

**ಶ್ರೀ ಹೆಚ್. ವಿ. ಕಾಮತ್ :** ಧರ್ಮದ ಬಗ್ಗೆ ಮಾತನಾಡದ ಮನುಷ್ಯ, ವೃದ್ಧ ಅಂತಲ್ಲ. ಸರ್, ಈ ಹಿಂದೂ ಸಂಹಿತೆ ವಿರೋಧಿ ಸಮಿತಿಯ ಗೆಳೆಯರಿಗೆ **"ವೃದ್ಧ"** ಶಬ್ದದ–ವೃದ್ಧ ಯಾರು, ಯಾರು ವೃದ್ಧ ಅಲ್ಲ– ಸರಿಯಾದ ಅರ್ಥವೇ ಗೊತ್ತಿಲ್ಲದಿರುವುದು ನನಗೆ ವ್ಯಥೆಯಾಗುತ್ತಿದೆ. ಮಹಾಭಾರತದಲ್ಲಿ ಒಂದು ಕತೆ ಇದೆ. ಒಂದು ಪ್ರಾಂತದಲ್ಲಿ ಘನ ಘೋರವಾದ ಕ್ಷಾಮ ತಲೆದೋರಿದಾಗ ಸರಸ್ವತಿ ನದಿ ತೀರದಲ್ಲಿ ವ್ರತ, ತಪಸ್ಸು ಮಾಡುತ್ತಿದ್ದ ಎಲ್ಲ ಋಷಿ ಮುನಿಗಳು ಜೀವ ಭಯದಿಂದ ತತ್ತರಿಸಿ–ಪ್ರಾಣ ಉಳಿಸಿಕೊಳ್ಳಲು–ನದಿ ತೀರದಿಂದ ಪಲಾಯನ ಮಾಡಿದರು. ಆದರೆ, ಹದಿನಾರು ವರ್ಷದ ಬಾಲಕ ಸಾರಸ್ವತ ಮುನಿ, ನದೀ ತೀರವನ್ನು ಬಿಟ್ಟು ಕದಲಲಿಲ್ಲ. ಬಾಲಕನ ತಾಯಿ ಸರಸ್ವತಿ, ಮಗನಿಗೆ ತಿನ್ನಲು, ಬೆಳಗ್ಗೆ ಮೀನು, ಮಧ್ಯಾಹ್ನ ಮೀನು, ರಾತ್ರಿ ಮೀನು ಬೇಯಿಸಿ ಕೊಡುತ್ತಿದ್ದಳು. ಈ ಕಾರಣದಿಂದಲೇ ಸಾರಸ್ವತ ಬ್ರಾಹ್ಮಣರು ಇಂದು ಕೂಡ ಮೀನು ತಿನ್ನುತ್ತಾರೆ. ಈ ಬ್ರಾಹ್ಮಣ ಬಾಲಕ ಕ್ಷಾಮದ ಪರಿಸ್ಥಿತಿಯಲ್ಲೂ ತನ್ನ ಸ್ಥಳ ಬಿಟ್ಟು ಕದಲಲಿಲ್ಲ. ಆ ಪ್ರಾಂತದಲ್ಲಿ ಅನೇಕ ವರ್ಷಗಳ ಕಾಲ– ಹನ್ನೆರಡು ವರ್ಷ– ಕ್ಷಾಮ ತಾಂಡವ ಆಡಿತು. ಆದರೆ, ಬಾಲಕ, ಸಾರಸ್ವತ ಮುನಿ– ಈ ಭೂಮಿಯಲ್ಲಿರುವ ಎಲ್ಲ ಸಾರಸ್ವತರ ಮೂಲ ಪುರುಷ– ಅಲ್ಲಿಂದ ಕದಲಲಿಲ್ಲ. ಪಲಾಯನ ಮಾಡಿದ್ದ ಋಷಿ ಮುನಿಗಳು, ಕ್ಷಾಮ ಹೋಗಿ ಸುಭಿಕ್ಷ ಕಾಲ ಬಂದಾಗ, ಒಬ್ಬೊಬ್ಬರಾಗಿ,

ಸರಸ್ವತಿ ನದೀ ತೀರಕ್ಕೆ ಬರತೊಡಗಿದರು, ತಪಸ್ಸು ಮಾಡಲಾರಂಭಿಸಿದರು. ೨೪ ವರ್ಷದ ಈ ಯುವ ಬಾಲಕನ ಮೇಲೆ ಯಜಮಾನಿಕೆಗೆ ಪ್ರಯತ್ನ ಮಾಡಿದರು. ಕ್ಷಾಮ ತಲೆದೋರಿದ್ದಾಗ ಅವನ ವಯಸ್ಸು ೧೨. ಕ್ಷಾಮ ಮುಗಿದಾಗ ಅವನ ವಯಸ್ಸು ೨೪. ಋಷಿ ಮುನಿಗಳು, ಬಾಲಕನಿಗೆ "ನಮ್ಮ ಕಾಲ ಬಳಿ ಕುಳಿತುಕೋ, ನಮ್ಮಿಂದ ಉಪದೇಶ ಪಡೆ, ನಮ್ಮಿಂದ ಕಲಿ. ನಮ್ಮ ಶಿಷ್ಯನಾಗು" ಎಂದು ಹೇಳಿದರು. ಆದರೆ, ಆ ಬಾಲಕ, "ಧಿಕ್ಕಾರ, ಮುನಿಗಳೆಂದು, ಋಷಿಗಳೆಂದು, ತಪಸ್ವಿಗಳೆಂದು ಹೇಳಿಕೊಳ್ಳುವುದಕ್ಕೆ ನಿಮಗೆ ನಾಚಿಕೆ ಆಗುವುದಿಲ್ಲವೇ, ಸಾವಿಗೆ ಹೆದರಿ, ಪ್ರಾಣ ಉಳಿಸಿಕೊಳ್ಳಲು ಪಲಾಯನ ಮಾಡಿದಿರಿ, ನಾಚಿಕೆ ಆಗುವುದಿಲ್ಲವೇ?" ೨೪ ವರ್ಷದ ಯುವಕ ೭೦–೮೦ ವಯಸ್ಸಿಗೆ ಹಳಬರಿಗೆ ಹೇಳಿದ ಮಾತುಗಳಿವು. ಮಹಾಭಾರತದಲ್ಲಿ ಏನು ಹೇಳಿದೆಯೆಂದರೆ :

"ನ ತೇನ ವೃದ್ಧೋ ಭವಂತಿ ಯೇನಸ್ಯ ಪಾಲಿತಂ ಶಿರಃ ಯೋ ವೈ ಯುವಪ್ಯಾಧ್ಯಾನಸ್ಥಂ ದೇವಃ ಸ್ಥವಿರಂ ವಿಧುಃ"

(ತಲೆಕೂದಲು ಬೆಳ್ಳಗಿದ್ದ ಮಾತ್ರಕ್ಕೆ ಮನುಷ್ಯನೆ ವೃದ್ಧನಲ್ಲ. ಚೆನ್ನಾಗಿ ಓದಿತಿಳಿದುಕೊಂಡಿರುವ ಯುವಕನನ್ನು ದೇವತೆಗಳು ಜ್ಞಾನಿ ಎಂದು ಕರೆಯುತ್ತಾರೆ). ವೃದ್ಧಿಯನ್ನು ಸಾಕ್ಷಾತ್ಕರಿಸಿಕೊಂಡ ಮನಷ್ಯನೇ ವೃದ್ಧ. ನಿಜ ಹೇಳಬೇಕೆಂದರೆ, "ವೃದ್ಧ" ಶಬ್ದವನ್ನು ಹಳಬ ಎಂದು ತಪ್ಪಾಗಿ ಅನುವಾದ ಮಾಡಲಾಗಿದೆ. ವೃದ್ಧಿಯನ್ನು ನೀವು, ವಿವೇಕ, ಜ್ಞಾನ, ವಿಕಾಸ, ಉನ್ನತಿ ಏನೆಂದೇ ಕರೆಯಿರಿ ಎಲ್ಲವನ್ನು ಗಳಿಸಿಕೊಂಡ ಮನುಷ್ಯನೇ ವೃದ್ಧ ಎಂದರ್ಥ. ಇಲ್ಲಿ ನಮ್ಮ ಗೆಳೆಯರು ಹೇಳುತ್ತಾರೆ.

"ನ ಸ ಸಭಾ ಯತ್ರ ನ ಶಾಂತಿ ವೃದ್ಧಾಃ ವೃದ್ಧಾನ ತೆ ಯೆ ನ ವದಂತಿ ಧರ್ಮಂ"

ಆ 'ವೃದ್ಧಿ' ಅಥವಾ ಜ್ಞಾನದ ಅರ್ಥದ ಪ್ರಕಾರ, ಇಲ್ಲಿ ಕೂಡ ಆ ಗುಣಮಟ್ಟದ ಅನೇಕ ಗೆಳೆಯರಿದ್ದಾರೆ. ಆದರೆ, ಈ ನನ್ನ ಗೆಳೆಯರು ಇಡೀ ಶ್ಲೋಕವನ್ನು ಹೇಳದೆ:

"ನ ಸ ಸಭಾ ಯತ್ರ ನ ಶಾಂತಿ ವೃದ್ಧಾ: ವೃದ್ಧಾನ ತೆ ಯೆ ನ ವದಂತಿ ಧರ್ಮಂ"

ಎಂದಷ್ಟೇ ಹೇಳುತ್ತಾರೆ. ಧರ್ಮ ಎಂದರೇನು? ಧರ್ಮ ಎಂದರೇನು ಎಂಬುದನ್ನು ಶ್ಲೋಕ ಹೇಳಿದೆ. ಈ ಮಹನೀಯರು ಶ್ಲೋಕದ ಆ ಭಾಗವನ್ನೇ ಬಿಟ್ಟು ಬಿಡುತ್ತಾರೆ. ಆ ಭಾಗದಲ್ಲಿ ಏನಿದೆಯೆಂದರೆ:

"ಧರ್ಮಾ ಸ ನ ಯತ್ರ ನ ಸತ್ಯಮಸ್ತಿ"

ಸತ್ಯ ಇಲ್ಲದ್ದು ಧರ್ಮ ಅಲ್ಲ. ಧರ್ಮದ ಬಗ್ಗೆ ಮಾತನಾಡುತ್ತಿರುವವರಿಗೆ ಹಿಂದೂ ಧರ್ಮದ ಬಗ್ಗೆ ಗೊತ್ತಿಲ್ಲವೆಂದೇ ಹೇಳುತ್ತಿದ್ದೇನೆ.

ಈ ವಿಷಯ ಕುರಿತು, ಅದರಲ್ಲೂ ಹಿಂದೂ ಧರ್ಮ ಕುರಿತು ಘನ ವಿದ್ವಾಂಸರೂ, ಶ್ರೇಷ್ಠ ತತ್ತ್ವಜ್ಞಾನಿಗಳೂ ಆದ ಡಾ. ಸರ್ವಪಳ್ಳಿ ರಾಧಾಕೃಷ್ಣನ್ ಹೇಳಿರುವುದನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ:

"ನಂಬಿಕೆ ಅಥವಾ ಆಚರಣೆ ವಿಚಾರದಲ್ಲಿ ಏಕರೂಪದ, ಸ್ಥಿರವಾದ, ಮಾರ್ಪಾಟು ಮಾಡಲಾಗದ ಹಿಂದುತ್ವ ಎನ್ನುವಂಥದ್ದು ಯಾವುದೂ ಇಲ್ಲ. ಹಿಂದುತ್ವ ಒಂದು ಆಂದೋಲನ, ಪ್ರವೃತ್ತಿ ಅಲ್ಲ. ಒಂದು ಪ್ರಕ್ರಿಯೆ, ಪರ್ಯವ ಸ್ಥಾನ ಅಲ್ಲ. ಬೆಳೆಯುತ್ತಿರುವ ಪರಂಪರೆ, ಸ್ಥಾಯಿ ಕೃತಿ ಅಲ್ಲ. ಮುಂದೆ ಬರಲಿರುವ ಯಾವುದೇ ಪರಿಸ್ಥಿತಿಯನ್ನು ಎದುರಿಸುವ ಶಕ್ತಿ ಸಾಮರ್ಥ್ಯ ಅದಕ್ಕಿದೆಯೆಂಬುದು ಅದರ ಹಿಂದಿನ ಇತಿಹಾಸದಿಂದ ನಮಗೆ ಗೊತ್ತಾಗುತ್ತದೆ. ಚಿಂತನೆ ಅಥವಾ ಇತಿಹಾಸ, ಯಾವುದೇ ಕ್ಷೇತ್ರಕ್ಕೆ ಆಗಲಿ.........................................."

ಈ ಭವಿಷ್ಯ ವಾಣಿ, ಇಂದು, ನಿಜವಾಗಿರುವುದಕ್ಕೆ ನಮಗೆ ಸಂತೋಷವಾಗಿದೆ. ಐವತ್ತು ವರ್ಷಗಳ ಹಿಂದೆ, ಸ್ವಾಮಿ ವಿವೇಕಾನಂದರು, ವೇದಾಂತವು ಮಾನವ ಧರ್ಮವಾಗುತ್ತದೆಂದು ಹೇಳಿದರು. ನಮ್ಮ ಸಾಧುಸಂತರು, ಋಷಿ, ಮುನಿಗಳು ಪ್ರಪಂಚಕ್ಕೆ ವೇದಾಂತವನ್ನು ಕೊಟ್ಟಿದ್ದಾರೆ. ಡಾ. ರಾಧಾಕೃಷ್ಣನ್‌ರವರು

ಹೇಳಿದ್ದಾರೆ:

"ನಮ್ಮ ಪ್ರಾಚೀನ ಮತ ತತ್ತ್ವಗಳಲ್ಲಿ ನಮಗಿರುವ ನಂಬಿಕೆಯನ್ನು ನಾವು ಹೊಸ ದೃಷ್ಟಿಕೋನದಿಂದ ನೋಡುತ್ತಿದ್ದೇವೆ. ನಮ್ಮ ಸಮಾಜವು ಅಸ್ಥಿರ ಪರಿಸ್ಥಿತಿಯಲ್ಲಿದೆ ಎಂಬುದು ನಮಗೆ ಕಾಣುತ್ತದೆ. ನಿಸ್ಸತ್ವದ, ಜಡ, ನಿರ್ಜೀವಾದ, ಅಸ್ವಸ್ಥ ವಿಚಾರಗಳು ಎಷ್ಟೋ ಇವೆ. ಅವನ್ನೆಲ್ಲಾ ತೆಗೆದು ಹಾಕಬೇಕಾಗಿದೆ."

ಸರ್, ನಮ್ಮ ಬಹುತೇಕ ಗೆಳೆಯರು, ಅವರದೇ ಆದ ರೀತಿಯಲ್ಲಿ ಹಿಂದೂ ಚಿಂತನೆಯ, ಪದ್ಧತಿಯ ಮಾರ್ಗದರ್ಶಕರಾಗಿದ್ದಾರೆಂದು ನನ್ನ ಭಾವನೆ.

"ಹಿಂದುತ್ವದ ಮೂಲತತ್ತ್ವಗಳನ್ನು ಬಿಟ್ಟು ಬಿಡುವುದರ ಬದಲು, ಅವುಗಳನ್ನು ಅತ್ಯಂತ ಸಂಕೀರ್ಣವಾದ ಮತ್ತು ಜಡ್ಡುಗಟ್ಟಿರುವ ಸಾಮಾಜಿಕ ವ್ಯವಸ್ಥೆಯನ್ನು ಸರಿಪಡಿಸುವ ಅವಶ್ಯಕತೆಗಳನ್ನು ಮನಗಂಡು ಪುನರ್‌ರೂಪಿಸುವುದೇ ಈ ಕಾಲದ ಅಗತ್ಯವೆಂಬುದು ಹಿಂದೂ ಚಿಂತನೆಯ, ಪದ್ಧತಿಯ ಮಾರ್ಗದರ್ಶಕರಿಗೆ ಮನವರಿಕೆ ಆಗಿದೆ"

ಎಂಬ ನಂಬಿಕೆ ನನಗಿದೆ. "ಅಂಥದೊಂದು ಪ್ರಯತ್ನವು" ಅವರು ಮುಂದುವರಿದು ಹೇಳುತ್ತಾ "ಹಿಂದುತ್ವದ ಇತಿಹಾಸದಲ್ಲಿ ಅನೇಕ ಬಾರಿ ಆಗಿಹೋಗಿರುವ ಪ್ರಕ್ರಿಯೆಯ ಪುನರಾವರ್ತನೆಯಲ್ಲದೆ ಮತ್ತೇನೂ ಅಲ್ಲ. ಪುನರ್ ವಿನ್ಯಾಸಕ್ರಿಯೆ ಆಗುತ್ತಿದೆ. ತುಂಬಾ ಆಳದವರೆಗೆ ಬೇರು ಹೋಗಿದ್ದರೆ, ಬೆಳವಣಿಗೆ ನಿಧಾನ. ಆದರೆ, ಅಂಧಕಾರ ಕವಿದಿದ್ದರೂ, ಒಂದು ಸಣ್ಣ ಕಿರಣ, ಸುತ್ತಮುತ್ತಲಿನ ಪರಿಸರವನ್ನು ಬೆಳಗಬಲ್ಲದು".

ಹಿಂದೂಧರ್ಮದ ಮೇಲಿನ ಈ ವಿಚಾರಧಾರೆಯನ್ನು, ನಾನು, ಈ ಮಸೂದೆಯನ್ನು ವಿರೋಧಿಸುತ್ತಿರುವ ನನ್ನ ಸ್ನೇಹಿತರಿಗೆ ಧರ್ಮದ ಆಧಾರದ ಮೇಲೆ ಈ ಮಸೂದೆಯನ್ನು ಪರ್ಯಾಲೋಚಿಸುವಾಗಲೂ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಹಿಂದೆ, ಸಮಾಜ ಸುಧಾರಣೆ ಮಾಡಿದ ಪ್ರತಿಯೊಂದು ಪ್ರಯತ್ನಕ್ಕೆ ಅಡ್ಡಿಮಾಡಿದವರೇ "ಧರ್ಮ ಅಪಾಯದಲ್ಲಿದೆ" ಅಥವಾ "ಸಮಾಜ ಅಪಾಯದಲ್ಲಿದೆ" ಎಂಬ ಕೂಗನ್ನು ಎತ್ತಿದ್ದಾರೆಂಬುದು, ಪಾಪ, ಇವರುಗಳಿಗೆ ಗೊತ್ತಿಲ್ಲ ಅಥವಾ ಜ್ಞಾಪಕಕ್ಕೆ ಬರುತ್ತಿಲ್ಲ. ಇಪ್ಪತ್ತೈದು ವರ್ಷಗಳ ಹಿಂದೆ, ಅಸ್ಪೃಶ್ಯತೆ ವಿರುದ್ಧ ಚಳುವಳಿ ಪ್ರಾರಂಭವಾದಾಗ, ನಮ್ಮವರೇ ಜನರು, ಸವರ್ಣೀಯ ಸಂಪ್ರದಾಯಸ್ಥ ಹಿಂದೂಗಳು, ಹಿಂದುತ್ವ ಅಪಾಯದಲ್ಲಿದೆ, ಸಮಾಜ ವ್ಯವಸ್ಥೆ ಅಪಾಯದಲ್ಲಿದೆ, ಸಮಾಜದಲ್ಲಿ ಏರುಪೇರು ಆಗುತ್ತದೆ ಎಂದು ಹೇಳಿರಲಿಲ್ಲವೆ? ಆದರೂ, ನಾವು ಅವಶ್ಯಕ ಸುಧಾರಣೆಗೆ ಪಟ್ಟುಹಿಡಿಯಲಿಲ್ಲವೇ? ಸರ್ವಧರ್ಮ, ಸರ್ವಜನ ಸಮಭಾವದ ಆಧಾರದ ಮೇಲೆ ಹಿಂದೂ ಸಮಾಜವು ಶೀಘ್ರವಾಗಿ ಬೆಳೆಯುವುದಕ್ಕೆ ನಾವು ನೆರವಾಗಲಿಲ್ಲವೆ? ಈ ಎಲ್ಲ ಪ್ರಯತ್ನಗಳ ಫಲವಾಗಿ, ನಾವು ಕರಡು ರಾಜ್ಯಾಂಗದಲ್ಲಿ, ಅಸ್ಪೃಶ್ಯತೆಯನ್ನು ನಿಷೇಧಿಸುವ, ಅದನ್ನು ಯಾವುದೇ ರೂಪದಲ್ಲಿ ಆಚರಿಸದಂತೆ ನಿರೋಧಿಸುವ ಒಂದು ವಿಧಿಯನ್ನು ನಾವು ಅಳವಡಿಸಿಕೊಂಡಿಲ್ಲವೆ? ಹಿಂದೂಧರ್ಮದ ಬಗ್ಗೆ ಸಂಪ್ರದಾಯಸ್ಥ ಬ್ರಾಹ್ಮಣರು ಏನೇ ಹೇಳಿಕೊಂಡರೂ ನಾವು ಇದನ್ನೆಲ್ಲಾ ಮಾಡಿರುವಾಗ, ಸಾಮಾಜಿಕ ಸಂಬಂಧಗಳನ್ನು ಹಾಗೂ ವೈಯಕ್ತಿಕ ಕಾನೂನನ್ನು ನಿಯಂತ್ರಿಸುವುದಕ್ಕೆ ನಾವು ಶಾಸನವನ್ನು ಏಕೆ ರಚನೆ ಮಾಡಬಾರದು ಅಥವಾ ಅವಕಾಶ ಕಲ್ಪಿಸಬಾರದು ಎಂಬುದಕ್ಕೆ ನನಗೆ ಯಾವ ಕಾರಣಗಳೂ ಕಾಣುತ್ತಿಲ್ಲ.

ಸರ್, ಸಣ್ಣಸಣ್ಣ ಮಕ್ಕಳಿಗೆ ಮದುವೆ ಮಾಡುವುದನ್ನು ತಡೆಯಲು ಶಾರದಾ ಕಾಯ್ದೆ ಬಂದಾಗ, ಹಿಂದೂಧರ್ಮ ಅಪಾಯದಲ್ಲಿದೆ, ಹಿಂದೂಮತ ಅಪಾಯದಲ್ಲಿದೆ, ಹಿಂದೂ ಸಮಾಜ ಅಪಾಯದಲ್ಲಿದೆಯೆಂಬ ಆಧಾರದ ಮೇಲೆ ವಿರೋಧ ವ್ಯಕ್ತವಾದದ್ದು ಮಾನ್ಯ ಸದಸ್ಯರುಗಳಿಗೆ ಜ್ಞಾಪಕವಿರಬಹುದು. ಗಂಡ ಸತ್ತಾಗ, ವಿಧವೆಯನ್ನು, ಹೆಣದ ಜೊತೆ ಸುಡುವ ಸತಿ ಪದ್ಧತಿಯನ್ನು ನಿಷೇಧಿಸಹೊರಟಾಗ, ಇದೇ ಪ್ರಗತಿ ವಿರೋಧಿಗಳು, ಸತಿ ಪದ್ಧತಿಯನ್ನು ಹಿಂದೂಧರ್ಮ ಒಪ್ಪಿಕೊಂಡಿದೆ, ಅದರಿಂದ ಸ್ತ್ರೀಗೆ ಮೋಕ್ಷ ಸಿಗುತ್ತದೆ, ಆದಕಾರಣ

ಅದನ್ನು ಮುಂದುವರೆಸಬೇಕೆಂಬುದು ಹೇಳುತ್ತ, ಸುಧಾರಣೆಯ ಹಾದಿಗೆ ಅಡ್ಡಬಂದಿದ್ದರು. ಚಳುವಳಿ ಮಾಡಿದರೂ, ಅಡ್ಡಿ ಅಡಚಣೆ ಮಾಡಿದರೂ ಅವಶ್ಯಕ ಸುಧಾರಣೆಗಳನ್ನು ತರಲಾಯಿತು.

ಪಂಡಿತ ಠಾಕೂರ್‌ದಾಸ್ ಭಾರ್ಗವರು, ಹಿಂದೊಂದು ದಿನ, ಈ ಮಸೂದೆಯು ಹಳ್ಳಿಗಳ ಜನರಿಗೆ ಗೊತ್ತಿಲ್ಲ, ಹಳ್ಳಿಗಾಡಿನ ಜನರು ಇದನ್ನು ನೋಡಿಲ್ಲ, ಓದಿಲ್ಲ, ಆಲೋಚನೆ ಮಾಡಿಲ್ಲ ಎಂದು ಹೇಳಿದರು. ಈ ಸದನದಲ್ಲಿ ಚರ್ಚೆ ಆಗುವುದಕ್ಕೆ ಮುಂಚೆ, ಈ ಮಸೂದೆಗೆ, ಹಳ್ಳಿಗಾಡಿನ ಜನರ ಪ್ರತಿಕ್ರಿಯೆ ಏನು ಎಂಬುದನ್ನು ತಿಳಿದುಕೊಳ್ಳುವ ಕಾತರ ತನಗಿದೆಯೆಂದು ಹೇಳಿದರು. ಅವರು ಹಾಗೆ ಹೇಳಿದಾಗ, ಅವರೇ ಸ್ವತಃ ಮಂಡಿಸಿದ ಕೆಲವು ಮಸೂದೆಗಳನ್ನು ಅವರದೇ ಸ್ಥಳವಾದ ಹಿಸ್ಸಾರ್ ರೈತರುಗಳು ನೋಡಿಯೇ ಇಲ್ಲವೆಂಬುದನ್ನು ಮರೆತಿದ್ದಾರೆ. ಅವರ ಸಲಹೆ ಸೂಚನೆ ಪ್ರಕಾರ, ಈ ದೇಶದ ಪ್ರತಿಯೊಂದು ಹಳ್ಳಿಗೆ, ಪ್ರತಿಯೊಂದು ತಾಂಡಾಕ್ಕೆ, ಪ್ರತಿಯೊಂದು ಮನೆಮನೆಗೆ ಮಸೂದೆಗಳ ಪ್ರತಿಗಳನ್ನು ಪರಿಚಲನೆ ಮಾಡುವುದಕ್ಕೆ ಆಗುತ್ತದೆಯೇ, ಆಶ್ಚರ್ಯ.

**ಶ್ರೀ ಮಹಾವೀರ ತ್ಯಾಗಿ** (ಸಂಯುಕ್ತ ಪ್ರಾಂತ:ಸಾಮಾನ್ಯ) : ಈ ದಿನಗಳಲ್ಲಿ ರೈತರನ್ನು ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ.

**ಶ್ರೀ ಹೆಚ್.ವಿ. ಕಾಮತ್** : ರೈತರನ್ನು ಗಣನೆಗೆ ತೆಗೆದುಕೊಳ್ಳುವುದೇ ಇಲ್ಲವೆಂದು ಶ್ರೀ ತ್ಯಾಗಿಯವರು ಹೇಳುತ್ತಿರುವುದು ಆಶ್ಚರ್ಯ. ಅವರನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲವೆಂದರೆ, ಯಾರು ತೆಗೆದುಕೊಳ್ಳಬೇಕು?

**ಮಾನ್ಯ ಸದಸ್ಯರುಗಳು** : ನೀವು.

**ಶ್ರೀ ಹೆಚ್.ವಿ. ಕಾಮತ್** : ಹಾಗೋ, ತುಂಬಾ ಧನ್ಯವಾದಗಳು. ಸರ್, ಇನ್ನು ಮುಂದೆ, ನಾನೊಬ್ಬನೇ ಅಲ್ಲ, ಈ ಸದನದ ನನ್ನ ಎಲ್ಲ ಗೆಳೆಯರೂ ಈ ಕಾರ್ಯ ಮಾಡುವರೆಂದು ಭಾವಿಸಿದ್ದೇನೆ.

ಸರ್, ಪಂಡಿತ್ ಠಾಕೂರ್‌ದಾಸ್ ಭಾರ್ಗವರ ಕೆಲವೊಂದು ಅಭಿಪ್ರಾಯಗಳ ಬಗ್ಗೆ ನನಗೆ ಸಹಾನುಭೂತಿ ಇದೆಯಾದರೂ, ಬಾಧಿತರಾಗಬಹುದಾದ ಜನರ ತಿಳಿವಳಿಕೆಗಾಗಿ ಹಿಂದೂ ಸಂಹಿತೆ ಮಸೂದೆಯನ್ನು ಪರಿಚಲನೆ ಮಾಡಿಲ್ಲ ಅಥವಾ ಸರಿಯಾಗಿ ಪರಿಚಲನೆ ಮಾಡಿಲ್ಲವೆಂಬ ಅವರ ಆಕ್ಷೇಪಣೆ ನಿಲ್ಲುವಂಥದ್ದಲ್ಲ. ಅವರ ವಾದ ಸಂಪೂರ್ಣವಾಗಿ ಸಮರ್ಥನೀಯ ಅಲ್ಲ. ಅವರ ವಾದವನ್ನು ಒಪ್ಪಿಕೊಂಡರೆ, ಇಲ್ಲಿ ಅಂಗೀಕಾರಕ್ಕಾಗಿ ಬರುವ ಪ್ರತಿಯೊಂದು ಮಸೂದೆಯನ್ನೂ, ಕೋಟ್ಯಂತರ ಜನರಿಗೆ ಅವರ ಒಪ್ಪಿಗೆಯನ್ನು ಅಥವಾ ಅಸಮ್ಮತಿಯನ್ನು ಸೂಚಿಸಲು ಕಳುಹಿಸಿಕೊಡಬೇಕಾಗುತ್ತದೆ.

ಸರ್, ಸಮಾನತೆ ಕುರಿತ ಈ ಜಟಿಲ ಪ್ರಶ್ನೆಯನ್ನು ನಾನು ಸಮಾಧಾನಕರ ರೀತಿಯಲ್ಲಿ ಹೇಳಿದ್ದೇನೆಂದೂ ಭಾವಿಸಿದ್ದೇನೆ. ಸರ್, ಆಧ್ಯಾತ್ಮಿಕ ಆಧಾರದ ಮೇಲೆ ಸ್ತ್ರೀ, ಪುರುಷರಿಬ್ಬರೂ ಸಮಾನರು, ಗೀತೆ, ಸ್ಮೃತಿಗಳು, ಇದೇ ಸಮಾನತೆ ತತ್ತ್ವವನ್ನು ಪ್ರತಿಪಾದಿಸಿವೆ. ಶ್ರೀ ಕೃಷ್ಣ ಕೂಡ ಈ ತತ್ತ್ವವನ್ನೇ ಪ್ರತಿಪಾದಿಸಿದ್ದಾನೆ.

ಸರ್, ಇನ್ನು ಆಸ್ತಿ ವಿಚಾರದ ಬಗ್ಗೆ ಹೇಳುತ್ತೇನೆ. ಬಹುತೇಕ ತತ್ತ್ವಶಾಸ್ತ್ರಜ್ಞರ ಪ್ರಕಾರ, ಅವರು ರಾಜ್ಯನೀತಿ, ಸಾಮಾಜಿಕ ಅಥವಾ ಬೇರೆ ವಿಷಯದ ತತ್ತ್ವಶಾಸ್ತ್ರಜ್ಞರಿರಬಹುದು, ಪ್ರಪಂಚದ ಎಲ್ಲ ಅನಿಷ್ಟಗಳಿಗೂ ಆಸ್ತಿಯೇ ಮೂಲ. ಈ ವಿಷಯದಲ್ಲಿ ಸೇಠ್ ಗೋವಿಂದ ದಾಸರು –ಅವರು ಈಗ ಇಲ್ಲಿ ಸದನದಲ್ಲಿಲ್ಲ, ಖಾಸಗಿ ಆಸ್ತಿಯನ್ನು ರದ್ದುಮಾಡುವುದು ತುಂಬಾ ಒಳ್ಳೆಯದೆಂದು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ. ಹಾಗೆ ಮಾಡಿದರೆ, ಎಷ್ಟೋ ಜಗಳಗಳು, ವ್ಯಾಜ್ಯಗಳು ಕಡಿಮೆ ಆಗುತ್ತವೆ. ಪ್ರಾಚೀನ ಕಾಲದ ಶ್ರೇಷ್ಠ ನ್ಯಾಯಶಾಸ್ತ್ರ ವಿಶಾರದರಲ್ಲಿ, ರಾಜನೀತಿಜ್ಞರಲ್ಲಿ ಒಬ್ಬರಾದ – ಮನು ಅಲ್ಲ, ಯಾಜ್ಞವಲ್ಕ್ಯ ಅಲ್ಲ – ಅಪ್ರತಿಮ ವೀರಾಗ್ರಣಿ ಭೀಷ್ಮ ಪಿತಾಮಹರೂ ಕೂಡ, ಮಹಾಭಾರತದ ಎರಡು ಪರ್ವಗಳಲ್ಲಿ, ಶಾಂತಿಪರ್ವ, ಅನುಶಾಸನಿಕ

ಪರ್ವಗಳಲ್ಲಿ ಇವೇ ತತ್ತ್ವವನ್ನು ಪ್ರತಿಪಾದಿಸಿದ್ದಾರೆ. ಆಸ್ತಿ ಬಗ್ಗೆ ಯುಧಿಷ್ಠಿರ ಹೇಳುತ್ತಾನೆ:

"ಅಕಿಂಚನಸ್ಯ ಶುದ್ಧಸನ್ಯ ತುಲ್ಯಮಹಿಯೆ ಲಕ್ಷ್ಯಯೆ ಅಕಿಂಚನ್ಯಂಚ ರಾಜ್ಯಾಂಚ ತುಲಯಾ ಸಮಾತೋಲಯಂ ಅತ್ಯರಿಚತ್ಯ ದಾರಿದ್ರ್ಯಂ ರಾಜ್ಯಾದಪಿ ಗುರಾಧಿಕಂ ನಿತ್ಯೂದ್ವಿಗ್ನೂಹಿ ಧನವಾನ್ ಮೃತ್ಯೋ ರಸ್ಯಗತೋ ಯಥಾ"

ಭೀಷ್ಮರು, ಯುಧಿಷ್ಠರಿನಿಗೆ, ಸಾಮ್ರಾಜ್ಯವನ್ನು, ಸ್ವಇಚ್ಛಾ ತ್ಯಾಗವನ್ನು ಒಂದೇ ದೃಷ್ಟಿಯಿಂದ ನೋಡಿದ್ದಾಗಿ ಹೇಳಿದ್ದಾರೆ. ಈ ಅಕಿಂಚನ್ಯ ಸ್ವಇಚ್ಛಾ ತ್ಯಾಗವು ತುಂಬಾ ಒಳ್ಳೆಯದೆಂದು ಭೀಷ್ಮ "ಹೇಳಿದ್ದಾನೆ. ಏಕೆಂದರೆ, ಭೀಷ್ಮರು ಹೇಳುತ್ತಾರೆ:" ನಿತ್ಯೋದ್ವಿಗ್ನೋಹಿ ಧನವಾನ್ ಮೃತ್ಯೋರಸ್ಯಗತೋ ಯಥಾ" ಅಂದರೆ, ರಾಜನಿಗೆ ನೆಮ್ಮದಿ ಇರುವುದೇ ಇಲ್ಲ. ಆಸ್ತಿ ಇದ್ದವನಿಗೆ ಸಾವಿನ ಭಯ ಜಾಸ್ತಿ.

ಗಂಡ ಹೆಂಡತಿ ಇಬ್ಬರೂ ಪ್ರೀತಿ ಪ್ರೇಮದಲ್ಲಷ್ಟೆ ಅಲ್ಲ, ಆಸ್ತಿಯಲ್ಲೂ ಒಂದಾಗಿರಬೇಕೆಂದು ಶ್ರೀ ಪಂಡಿತ ಠಾಕೂರ್ ದಾಸ್ ಭಾರ್ಗವರು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ. ಪ್ರೀತಿ ಪ್ರೇಮ ಒಂದೇ ಅವರಿಬ್ಬರ ಆಸ್ತಿಯೇ ಹೊರತು ಬೇರೆ ಯಾವ ಆಸ್ತಿಯೂ ಇರುವುದಿಲ್ಲ.

ಪರಸ್ಪರ ಪ್ರೀತಿ ಪ್ರೇಮವೇ ಅವರಿಬ್ಬರ ನಿಜವಾದ ಆಸ್ತಿ. ಸರ್, ನಾವು, ಇಂದಿನ, ಕಠೋರ ಸತ್ಯವನ್ನು ಗಮನಿಸಬೇಕು. ಈ ವಿಷಯದಲ್ಲಿ ಪಂಡಿತ ಠಾಕೂರ್‌ದಾಸ್ ಭಾರ್ಗವರ ವೈಯಕ್ತಿಕ ಅನುಭವವನ್ನು ಕೇಳಿ ಆನಂದವಾಯಿತು. ಪಂಡಿತ ಠಾಕೂರ್ ದಾಸ್ ಭಾರ್ಗವರು ಮತ್ತು ಅವರ ಪತ್ನಿ ಹೇಗೆ ಸಂತೋಷದಿಂದ, ನೆಮ್ಮದಿಯಿಂದ ಇದ್ದಾರೊ ಅದೇ ರೀತಿ, ಪುರುಷರು, ಸ್ತ್ರೀಯರು, ಗಂಡಹೆಂಡತಿಯರು ಇದ್ದುಬಿಟ್ಟರೆ ಇಡೀ ಪ್ರಪಂಚ, ಸ್ವರ್ಗವಾಗಿ ಬಿಡುತ್ತದೆ. ಆದರೆ, ಗಂಡ ಹೆಂಡತಿ ಸಂಬಂಧ ಯಾವ ರೀತಿ ಇರಬೇಕಿತ್ತೋ ಆ ರೀತಿ ಇರದೇ ಕೆಟ್ಟುಹೋಗಿರುವ ನೂರಾರು ಉದಾಹರಣೆಗಳಿವೆ. (ಮಾತಿಗೆ ಅಡ್ಡಿ) ಸರ್, ಶ್ರೀ ಬಿ. ದಾಸ್‌ರವರಂತಹ ನನ್ನ ಗೆಳೆಯರು ನನಗೆ ಹೇಳಿರುವ ಸಂಗತಿಗಳ ಆಧಾರದ ಮೇಲೆ, ನನ್ನಲ್ಲಿರುವ ಸಂಗತಿಗಳ ಆಧಾರದ ಮೇಲೆ, ನನ್ನ ಮಾನ್ಯ ಗೆಳೆಯರುಗಳು ಈ ಬಗ್ಗೆ ಆಗಿರುವ ಅನುಭವವನ್ನು ನನ್ನಲ್ಲಿ ಹೇಳಿಕೊಂಡಿರುವುದರ ಆಧಾರದ ಮೇಲೆ ನಾನು ಮಾತನಾಡುತ್ತಿದ್ದೇನೆ.

ನಮ್ಮ ಈ ಹಿಂದೂ ಸಂಹಿತೆ ಮಸೂದೆಯು, ಈ ವಿಷಯದಲ್ಲಿ, ಮಹಿಳೆಗೆ ಆಸ್ತಿಯಲ್ಲಿ ಸಂಪೂರ್ಣವಾದ ಹಕ್ಕುಬಾಧ್ಯತೆ ಇರಬೇಕೆಂಬುದಕ್ಕೆ ಅವಕಾಶ ಕಲ್ಪಿಸುತ್ತದೆ. ಧರ್ಮದ ಬಗ್ಗೆ, ಹಿಂದೂ ಸಂಹಿತೆ ಮಸೂದೆ ಬಗ್ಗೆ ವಿರೋಧ ವ್ಯಕ್ತಪಡಿಸುತ್ತಿರುವವರು ವೇದ ಕಾಲವನ್ನು, ಪ್ರಾಚೀನ ಕಾಲವನ್ನು ಟೀಕಿಸುತ್ತಾರೆ. ಆದರೆ, ಮಧ್ಯ ಕಾಲದಲ್ಲಿ ಹಿಂದುತ್ವ ಅವನತಿಯಾಗುತ್ತಿದ್ದಾಗ, ಮಹಿಳಾ ಆಸ್ತಿ ಹಕ್ಕುಗಳ ಮೇಲೆ ನಿರ್ಬಂಧಗಳನ್ನು ವಿಧಿಸಲಾಯಿತು. ವೇದಗಳ ಕಾಲದಲ್ಲಿ ಸ್ತ್ರೀಯರಿಗೆ ಶ್ರೇಷ್ಠ ಸ್ಥಾನಮಾನ ಇತ್ತು.

**ಸನ್ಮಾನ್ಯ ಸಭಾಧ್ಯಕ್ಷರು :** ಮಾತನಾಡುವವರು ಇನ್ನೂ ಬಹಳ ಜನ ಇದ್ದಾರೆ, ಮಾನ್ಯ ಸದಸ್ಯರು ಆದಷ್ಟು ಸಂಕ್ಷಿಪ್ತವಾಗಿ ಹೇಳಬೇಕು.

**ಶ್ರೀ ಹೆಚ್.ವಿ. ಕಾಮತ್** : ಪ್ರಯತ್ನಮಾಡುತ್ತೇನೆ. ಆದರೆ, ವಿಷಯ ಎಷ್ಟೊಂದು ದೊಡ್ಡದೆಂದರೆ, ಕಡಿಮೆ ಮಾತುಗಳಲ್ಲಿ ಹೇಳುವುದಕ್ಕಾಗುವುದಿಲ್ಲ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್** : (ಕಾನೂನು ಮಂತ್ರಿಗಳು) : ಶ್ರೀ ಕಾಮತರಿಗೆ ಮಾತನಾಡಲು ಬೇಕಾದಷ್ಟು ಅವಕಾಶಗಳಿವೆ, ಕೊನೇಪಕ್ಷ ೧೩೦ ಕಲಮುಗಳಿವೆ.

**ಶ್ರೀ ಹೆಚ್.ವಿ. ಕಾಮತ್ :** ಹೇಳಲೇಬೇಕಾದ ಮಾತುಗಳನ್ನು ಹೇಳದೆ ಸುಮ್ಮನೆ ಇರಲು ನನ್ನ

ಮನಸ್ಸು ಒಪ್ಪುವುದಿಲ್ಲ. ವೇದಗಳ ಕಾಲದಲ್ಲಿ, ಸ್ತ್ರೀಯರಿಗೆ ಶ್ರೇಷ್ಠ ಸ್ಥಾನಮಾನ ಇತ್ತು ಎಂದು ಹೇಳುತ್ತಿದ್ದೆ, ಮದುವೆ ಆಗಿರದ ಮಗಳಿಗೆ ತಂದೆಯ ಆಸ್ತಿಯಲ್ಲಿ ಪಾಲು ಕೊಡುತ್ತಿದ್ದರು. ಮದುವೆ ಆಗಿರುವ ಮಗಳಿಗೆ ಕೊಡುತ್ತಿರಲಿಲ್ಲ. ಆದರೆ, ಮದುವೆ ಸಮಯದಲ್ಲಿ ಅವಳಿಗೆ ಬಳುವಳಿ ಕೊಡುತ್ತಿದ್ದರು. ಆದ್ದರಿಂದ, ಈ ವಿಷಯದಲ್ಲಿ ನನ್ನ ಗೆಳೆಯ ಪಂಡಿತ ಠಾಕೂರದಾಸ್ ಭಾರ್ಗವರ ವಾದವನ್ನು ಈ ಸದನ ಮತ್ತು ಸನ್ಮಾನ್ಯ ಮಂತ್ರಿಯವರು ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ, ನಾನು ಮೂಲತಃ ಆಸ್ತಿವಿರೋಧಿ, ಆಸ್ತಿ ವ್ಯವಸ್ಥೆಯನ್ನು ಈಗಿರುವುದಕ್ಕಿಂತಲೂ ಕೆಡಿಸಿಬಿಟ್ಟರೆ ಅದರಿಂದ ಏನೂ ಒಳ್ಳೆಯದಾಗುವುದಿಲ್ಲ. ಡಾ. ಅಂಬೇಡ್ಕರ್ ೧೨ ಗಂಡುಮಕ್ಕಳು, ಒಬ್ಬಳು ಹೆಣ್ಣು ಮಗಳು ಇರುವ ಕುಟುಂಬದ ಆಸ್ತಿ ದೃಷ್ಟಾಂತವನ್ನು ಹೇಳಿದ್ದರು. ಅದೇನೋ ಸರಿ. ಆದರೆ, ೧೨ ಹೆಣ್ಣುಮಕ್ಕಳು, ಒಬ್ಬನೇ ಗಂಡುಮಗ ಇರುವ ಕುಟುಂಬದ ದೃಷ್ಟಾಂತವವನ್ನು ನಾನು ಹೇಳಲೇನು? ಹಿಂದೂ ಸಂಹಿತೆ ಮಸೂದೆಯು ಇಂಥ ಕುಟುಂಬಕ್ಕೆ ಅನ್ವಯವಾದರೆ ಏನಾಗುತ್ತದೆ? ಕುಟುಂಬದ ಆಸ್ತಿಯನ್ನು ಎಲ್ಲ ಹೆಣ್ಣುಮಕ್ಕಳಿಗೂ, ಒಬ್ಬ ಗಂಡುಮಗನಿಗೂ ಪಾಲು ಮಾಡಿಕೊಡಬೇಕಾಗುತ್ತದೆ. ಮಗನಿಗೆ, ಮನೆಯ ಸಣ್ಣ ಮೂಲೆಯಲ್ಲಿ ಜಾಗ ಸಿಗುತ್ತದೆ. ಹೆಣ್ಣು ಮಕ್ಕಳಿಗೆ ಮದುವೆ ಆಗುತ್ತದೆ, ಅವರುಗಳ ಗಂಡಂದಿರು ಈ ಮನೆಗೇ ಬಂದುಬಿಡುತ್ತಾರೆ. ಯಾರೋ ಒಬ್ಬ ಅಪರಿಚಿತನಿಗೆ ಮನೆಯ ಭಾಗವನ್ನು ವಿಲೇವಾರಿ ಮಾಡುವ ಹಕ್ಕು ಹೆಣ್ಣುಮಕ್ಕಳದಾಗಿ ಬಿಡುತ್ತದೆ, ಪಾಪ, ಗಂಡುಮಗ, ಸಣ್ಣ ಇಲಿಯ ತರಹ ಅಲ್ಲಿ ಇಲ್ಲಿ ಕಾಣಿಸಿಕೊಳ್ಳುತ್ತಿರುತ್ತಾನೆ, ಇರುವುದಕ್ಕೆ ಅನುಕೂಲಕರವಾದ ಒಂದು ಚಿಕ್ಕ ಮೂಲೆಯೂ ಅವನಿಗಿರುವುದಿಲ್ಲ.

ಆದ್ದರಿಂದ, ಸರ್, ಆಸ್ತಿ ಎನ್ನುವುದು ಒಂದು ತುಂಬಾ ಜಟಿಲವಾದ ವಿಚಾರ. ಮಗಳಿಗೆ ಆಸ್ತಿಯನ್ನು ಕೊಡುವುದರ ಬದಲು, ಪ್ರಾಚೀನ ಕಾಲದಲ್ಲಿ, ವೇದಗಳ ಕಾಲದಲ್ಲಿ ಕೊಡುತ್ತಿದ್ದಂತೆ ಆಸ್ತಿಯ ಪಾಲಿಗೆ ಸಮಾನವಾದ ಹಣವನ್ನೋ, ಒಡವೆ ಆಭರಣಗಳನ್ನೋ ಅಥವಾ ಅವಳು ಏನು ಬಯಸುತ್ತಾಳೋ ಅದನ್ನೇ ಕೊಡುವುದನ್ನು ನಾವು ಪರಿಶೀಲಿಸಬಾರದೇ? ಮದುವೆ ಸಮಯದಲ್ಲಿ ಆಸ್ತಿಯಲ್ಲಿ ಪಾಲು ಕೊಡುತ್ತಿರಲಿಲ್ಲ. ಆಸ್ತಿ ಪಾಲಿಗೆ ಬದಲಾಗಿ ತುಂಬಾ ಬಳುವಳಿಯನ್ನು ಕೊಡುತ್ತಿದ್ದರು.

---

*ಸಭೆಯನ್ನು ಊಟಕ್ಕಾಗಿ ಮಧ್ಯಾಹ್ನ ೨.೩೦ತನಕ ಮುಂದೂಡಲಾಯಿತು.*

---

*ಸಭೆಯು ಊಟದ ನಂತರ ಮಧ್ಯಾಹ್ನ ೨.೩೦ಕ್ಕೆ ಸೇರಿತು.*

---

*ಶ್ರೀ ಎಸ್.ವಿ. ಕೃಷ್ಣಮೂರ್ತಿಯವರು ಸಭಾಧ್ಯಕ್ಷ ಪೀಠದಲ್ಲಿದ್ದರು.*

---

**ಸನ್ಮಾನ್ಯ ಸಭಾಧ್ಯಕ್ಷರು :** ಚರ್ಚೆ ಪ್ರಾರಂಭವಾಗುವುದಕ್ಕೂ ಮೊದಲು, ನಾನು ಒಂದು ಸೂಚನೆ ಕೊಡಬಯಸುತ್ತೇನೆ. ಪಟ್ಟಿಯಲ್ಲಿ ೨೫ ಹೆಸರುಗಳಿವೆ. ಇದೊಂದು ತುಂಬಾ ಪ್ರಾಮುಖ್ಯದ ಮಸೂದೆ. ಸಂಹಿತೆ ಕುರಿತು ಹಲವರು ತಮ್ಮ ಅಭಿಪ್ರಾಯಗಳನ್ನು ಹೇರಲು ಅಪೇಕ್ಷೆಪಟ್ಟಿದ್ದಾರೆ. ಆದ್ದರಿಂದ, ಮಾನ್ಯ ಸದಸ್ಯರುಗಳು ಆದಷ್ಟು ಕಡಿಮೆ ಮಾತುಗಳನ್ನಾಡಿ, ಮಸೂದೆಯ ಮುಖ್ಯ ವಿಷಯಗಳ ಪರ ಅಥವಾ ವಿರೋಧವನ್ನು ವ್ಯಕ್ತಪಡಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಬಾಬು ರಾಮನಾರಾಯಣ ಸಿಂಗ್** (ಬಿಹಾರ : ಸಾಮಾನ್ಯ) : ಸರ್, ನನ್ನ ಹೆಸರನ್ನೂ ಪಟ್ಟಿಯಲ್ಲಿ ಸೇರಿಸಿ.

**ಶ್ರೀ ಬಿ. ದಾಸ್** (ಒರಿಸ್ಸಾ : ಸಾಮಾನ್ಯ) : ನಾನೂ ಕೂಡ, ನನ್ನ ಹೆಸರು ಕಳುಹಿಸಬೇಕೇ, ನನಗೆ ಗೊತ್ತಾಗುತ್ತಿಲ್ಲ. ಸನ್ಮಾನ್ಯ ಸ್ಪೀಕರ್‌ರವರು ನನಗೆ ಅವಕಾಶ ಕೊಡುತ್ತಾರೆಂದು ಭಾವಿಸಿದ್ದೇನೆ.

**ಸನ್ಮಾನ್ಯ ಸಭಾಧ್ಯಕ್ಷರು** : ಅದಕ್ಕೇ ನಾನು ಹೇಳುತ್ತಿದ್ದೇನೆ, ಮಾನ್ಯ ಸದಸ್ಯರುಗಳು ಆದಷ್ಟು ಕಡಿಮೆ ಮಾತನಾಡಬೇಕು, ಮಸೂದೆಯ ಮುಖ್ಯ ವಿಷಯ ಪರ ಅಥವಾ ವಿರೋಧ ವ್ಯಕ್ತಪಡಿಸಬೇಕು. ಮಾತನಾಡಬಯಸುವ ಸದಸ್ಯರು ಚೀಟಿ ಕಳುಹಿಸಬಹುದು.

**ಶ್ರೀ ತಜಮುಲ್ ಹುಸೇನ್** (ಬಿಹಾರ್ : ಮುಸ್ಲಿಂ) : ಸರ್, ನನ್ನ ಹೆಸರು ಪಟ್ಟಿಯಲ್ಲಿದೆಯೆ? ನಿನ್ನೆ, ಹೋದ ಶುಕ್ರವಾರ ಸನ್ಮಾನ್ಯ ಡೆಪ್ಯುಟಿ ಸ್ಪೀಕರ್‌ರವರೊಂದಿಗೆ ಮಾತನಾಡಿದ್ದೆ.

**ಸನ್ಮಾನ್ಯ ಸಭಾಧ್ಯಕ್ಷರು** : ಚೀಟಿ ಕಳುಹಿಸಿ, ಪರವಾಗಿಲ್ಲ.

**ಶ್ರೀ ಹೆಚ್.ವಿ. ಕಾಮತ್ :** ಸರ್, ನನ್ನ ಗೆಳೆಯ ಪಂಡಿತ ಠಾಕೂರ್ ದಾಸ್ ಭಾರ್ಗವರು ತೆಗೆದುಕೊಂಡಿದ್ದ ಸಮಯಕ್ಕಿಂತಲೂ ನನಗೆ ಕಡಿಮೆ ಅವಧಿ ಸಾಕು.

**ಸನ್ಮಾನ್ಯ ಸಭಾಧ್ಯಕ್ಷರು** : ನೀವು ಈಗಾಗಲೇ ಒಂದು ಗಂಟೆ ತೆಗೆದುಕೊಂಡಿದ್ದೀರಿ.

**ಶ್ರೀ ಹೆಚ್.ವಿ.ಕಾಮತ್** : ನನ್ನ ಗೆಳೆಯ ಪಂಡಿತ ಠಾಕೂರ್‌ದಾಸ್ ಭಾರ್ಗವರು ತೆಗೆದುಕೊಂಡಿದ್ದಕ್ಕಿಂತಲೂ ಕಡಿಮೆ ಸಮಯ ತೆಗೆದುಕೊಳ್ಳುತ್ತೇನೆಂದು ಹೇಳುತ್ತಿದ್ದೇನೆ.

ನಾನು ಆಸ್ತಿ ಬಗ್ಗೆ ಹೇಳುತ್ತಿದ್ದೆ. ಆಸ್ತಿಯನ್ನು ಪಾಲು ಮಾಡುವುದಕ್ಕೆ ಆಧಾರ, ಕಣ್ವ ಮಹರ್ಷಿಯ ತತ್ವ. ಶಕುಂತಲೆಯನ್ನು ಬೀಳ್ಕೊಡುವಾಗ ಕಣ್ವ ಮಹರ್ಷಿ ಹೇಳುತ್ತಾರೆ.

"ಅರ್ಥೋಽಹಿ ಕನ್ಯಾ ಪರಕೀಯ ಏವ ತಮದ್ಯ ಸಂಪ್ರೇಷ್ಯ ಪರಿಗ್ರಹೀತು: ಜಾತೊ ಮಮಮ್ಯಂ ವಿಸದ : ಪ್ರಕಾಮಂ ಪ್ರತ್ಯರ್ಪಿತರಸ್ಯ ಇವಂತರಾತ್ಮೋ"

ಮೊದಲನೇ ಸಾಲು, "ಅರ್ಥೋ ಹಿ ಕನ್ಯಾ" ಅಂದರೆ, ಕನ್ಯೆ, ಬೇರೊಬ್ಬನ ಸ್ವತ್ತು ಅಂತ ಅರ್ಥವಲ್ಲ. ಅವಳಿಗೆ ಮದುವೆ ಆದಾಗ ತಂದೆಯ ಮನೆಯನ್ನು ಬಿಟ್ಟುಹೋಗುತ್ತಾಳೆ ಎಂದರ್ಥ. ಹಳೆಯ ಕಾಲದಲ್ಲಿ, ಈ ಆಧಾರದ ಮೇಲೆ ಅವಳು ಬೇರೊಂದು ಕುಟುಂಬಕ್ಕೆ ಹೋಗುತ್ತಿದ್ದಳು. ವೇದಗಳ ಕಾಲದಲ್ಲಿ ನಂತರದ ಕಾಲದಲ್ಲಿ ಆಸ್ತಿಯಲ್ಲಿ ಅವಳಿಗೆ ಪಾಲು ಕೊಡುತ್ತಿರಲಿಲ್ಲ. ಬದಲಿಗೆ ತುಂಬಾ ಬಳುವಳಿ ಕೊಡುತ್ತಿದ್ದರು. ವೇದಗಳ ಕಾಲದಲ್ಲಿ, ಸ್ಮೃತಿಗಳ ಕಾಲದಲ್ಲೂ ಕೂಡ, ತಂದೆಗೆ, ಗಂಡುಮಗ ಇರದಿದ್ದರೆ, ಅವನು ತನ್ನ ಮಗಳನ್ನೇ ಪುತ್ರಿಕಾ ಆಗಿ ನಿಯೋಜಿಸಿಕೊಳ್ಳುತ್ತಿದ್ದ. ಅಂಥ ಮಗಳು ಮಗನಿಗೆ ಸಮಾನಳಾಗಿದ್ದಳು. ನಮ್ಮ ಹೊಸ ಕಾನೂನುಕರ್ತರು ಈ ತತ್ತ್ವವನ್ನು ಚೆನ್ನಾಗಿಯೇ ಪರಾಮರ್ಶೆ ಮಾಡಿದ್ದಾರೆ. ಈ ತತ್ತ್ವದ ಸಾರವನ್ನು ಈ ಸಂಹಿತೆಯಲ್ಲಿ ಸೇರಿಸುವ ಪ್ರಯತ್ನ ಮಾಡಿದ್ದಾರೆ.

ಗೌರ್ನರ್ ಪ್ರಾಂತಗಳಿಗೆ ಅನ್ವಯವಾಗದಂತೆ ಬಿಟ್ಟುಬಿಟ್ಟಿರುವ ಹಾಗೆ, ಕೃಷಿ ಆಸ್ತಿಯನ್ನು ಸಂಪೂರ್ಣವಾಗಿ ಬಿಡಬೇಕಿತ್ತು. ನಾನು, ಮೊದಲನೇ ಅಧ್ಯಾಯದ ಏಳನೇ ಭಾಗವನ್ನು ಉಲ್ಲೇಖಿಸುತ್ತೇನೆ. ೯ಳನೇ ಕಲಮು ಹೇಳುತ್ತದೆ: "ಈ ಭಾಗವು, ಗೌರ್ನರ್ ಪ್ರಾಂತಗಳಲ್ಲಿರುವ ಕೃಷಿ ಜಮೀನುಗಳಿಗೂ ಅನ್ವಯವಾಗತಕ್ಕದ್ದಲ್ಲ". ಜಮೀನು ತುಂಡುತುಂಡು ಆಗುತ್ತಿರುವುದರ ವಿರುದ್ಧ ಕೂಗು ಎದ್ದಿದೆ. ನಾವು ಈ ವಿಷಯದಲ್ಲಿ ಅವಸರಪಡಬಾರದು. ಇದರಿಂದ, ಇನ್ನಷ್ಟು ಸಮಸ್ಯೆಗೆ ಆಸ್ಪದ ಕೊಡಬಾರದು. ಭೂಮಿಯನ್ನು ರಾಷ್ಟ್ರೀಕರಣ ಮಾಡಿಬಿಟ್ಟರೆ ಯಾವ ಸಮಸ್ಯೆಯೂ ಇರುವುದಿಲ್ಲ. ಈ ವಿಷಯ ನೆನೆಗುದಿಯಲ್ಲಿರುವವರೆಗೆ, ಇತ್ಯರ್ಥವಾಗುವವರೆಗೆ, ಗೌರ್ನರ್ ಪ್ರಾಂತಗಳಲ್ಲಿರುವ ಕೃಷಿ ಜಮೀನುಗಳಿಗಷ್ಟೇ ಅಲ್ಲ ಕೇಂದ್ರಾಡಳಿತ ಪ್ರದೇಶಗಳ ಕೃಷಿ ಜಮೀನುಗಳಿಗೂ ಈ ಭಾಗ ಅನ್ವಯ ಆಗದಂತೆ ತೀರ್ಮಾನ ತೆಗೆದುಕೊಳ್ಳಬಹುದು.

ಈಗ, ಬಹಳ ಹಿಂದಿನ ಕಾಲದಿಂದಲೂ ಮಾನವ ಜನಾಂಗವನ್ನು ಕಾಡುತ್ತಿರುವ ವಿವಾಹ, ವಿಚ್ಛೇದನದ ಬಗ್ಗೆ ಮಾತನಾಡುತ್ತಿದ್ದೇನೆ. ಈ ವಿಚಾರದಲ್ಲಿ ನಮ್ಮಲ್ಲಿ ಯಾವ ತತ್ತ್ವ ಇರಬೇಕೆಂದರೆ, ಈ ವಿಷಯವಾಗಿ ಶಾಸನ ರಚನೆ ಮಾಡುವಾಗ ಯಾವ ತತ್ತ್ವವನ್ನು ಒಪ್ಪಿಕೊಳ್ಳಬೇಕೆಂದರೆ, ನನ್ನ ಪ್ರಕಾರ "ಮದುವೆ ಸುಲಭ ಆಗಬೇಕು, ವಿಚ್ಛೇಧನ ಕಷ್ಟ ಆಗಬೇಕು". ಕಾನೂನು ಮಾಡುವಾಗ ಈ ನಿಬಂಧನೆಯನ್ನು ಅಳವಡಿಸಿಕೊಂಡರೆ, ನಮ್ಮ ಅನೇಕ ಸಮಸ್ಯೆಗಳು, ತೊಂದರೆಗಳು ಪರಿಹಾರವಾಗುತ್ತವೆ.

**ಸರ್ದಾರ ಭೋಪಿಂದರ್‌ಸಿಂಗ್ ಮಾನ್** (ಪೂರ್ವ ಪಂಜಾಬು : ಸಿಖ್) : ನಿಮ್ಮ ವಿಷಯದಲ್ಲಿ ವಿಚ್ಛೇದನಕ್ಕಿಂತ ಮದುವೆಯೇ ಕಷ್ಟ ಆಗಿದೆಯಲ್ಲ.

**ಶ್ರೀ ಹೆಚ್.ವಿ. ಕಾಮತ್** : ಕೆಲವರ ವಿಷಯದಲ್ಲಿ ವಿನಾಯಿತಿಗಳು ಇದ್ದೇ ಇರುತ್ತದೆ. ಅಂಥವರಲ್ಲಿ ನಾನು ಒಬ್ಬ.

ಇತ್ತೀಚಿನ ಒಂದು ಐತಿಹಾಸಿಕ ದೃಷ್ಟಾಂತವನ್ನು ಹೇಳುತ್ತೇನೆ. ಡೆರೋ ಫಹ್ರೆರ್ ಹಿಟ್ಲರ್, ೧೯೩೨ರಲ್ಲಿ ಚುನಾವಣೆ ಹೋರಾಟದಲ್ಲಿ ಮುಳುಗಿದ್ದ. ಅವನು ಚುನಾವಣಾ ಘೋಷಣೆಗಳಲ್ಲಿ ಒಂದೆಂದರೆ: "ಪ್ರತಿಯೊಬ್ಬ ಜರ್ಮನ್‌ನಿಗೂ ಉದ್ಯೋಗ, ಪ್ರತಿಯೊಬ್ಬ ಜರ್ಮನ್ ಸ್ತ್ರೀಗೆ, ಒಬ್ಬ ಗಂಡ", ಈ ಘೋಷಣೆಯಿಂದಾಗಿ ಹಿಟ್ಲರನಿಗೆ ಲಕ್ಷಾಂತರ ಮಹಿಳೆಯರು ವೋಟು ಹಾಕಿದರೆಂದು ಕಾಣುತ್ತದೆ. ಮದುವೆ ಸುಲಭ ಆಗಬೇಕು. ವಿಚ್ಛೇದನ ಕಷ್ಟ ಆಗಬೇಕು ಎಂದು ನಾನು ನಿಮ್ಮ ಮುಂದಿಟ್ಟಿರುವ ತತ್ತ್ವಕ್ಕೆ ಇದು ಪುರಾವೆ ಒದಗಿಸುತ್ತದೆ. ನನ್ನ ಮಾನ್ಯ ಗೆಳೆಯ ಪಂಡಿತ ಠಾಕೂರ್‌ದಾಸ್ ಭಾರ್ಗವರು ಹಿಂದೊಂದು ದಿನ, ಈ ವಿಷಯದ ಮೇಲೆ ಮಾತನಾಡುವಾಗ, ವಿಚ್ಛೇದನಕ್ಕೆ ಅವಕಾಶ ಕೊಡುವ ರೂಢಿಗಳು, ಸಂಪ್ರದಾಯಗಳು ದೇಶದ ಹಲವು ಭಾಗಗಳಲ್ಲಿ ಇವೆಯೆಂದು ಹೇಳಿದರು. ಇನ್ನೊಂದು ತುಂಬಾ ಸುಲಭದ ಸಂಪ್ರದಾಯವೂ ಇದೆ ಅಂತ ನನಗೆ ಬೇರೆ ಕಡೆಯಿಂದ ತಿಳಿದುಬಂತು. ಒಬ್ಬ ಮನುಷ್ಯ ಮೂರು ಬಾರಿ 'ತಲಾಖ್'ಎಂದು ಹೇಳಿ, ಹೆಂಡತಿಯಿಂದ ವಿಚ್ಛೇದನ ಪಡೆಯಬಹುದಂತೆ, ಅಂಥ ಸಂಪ್ರದಾಯ ಇರಬಹುದು. ನನಗೆ ಗೊತ್ತಿಲ್ಲ. ಆಧುನಿಕ ರಾಷ್ಟ್ರಗಳಲ್ಲಿ ಒಂದಾದ ಸೋವಿಯತ್ ರಷ್ಯಾದಲ್ಲಿ, ಈ ಶತಮಾನದ ಇಪ್ಪತ್ತರ ದಶಕದ ಪ್ರಾರಂಭದಲ್ಲೇ ಅದು ಉದಯವಾಗುತ್ತಿದ್ದಾಗ ಮದುವೆ ವಿಚ್ಛೇದನ ಎರಡಕ್ಕೂ ಅವಕಾಶ ಕಲ್ಪಿಸಲಾಗಿತ್ತು. ಕುಟುಂಬವು ಸಮಾಜದ ಘಟಕ ಎಂಬುದನ್ನು ಕಮ್ಯೂನಿಸ್ಟ್ ದೇಶದಲ್ಲೂ ಕುಟುಂಬವನ್ನು ಸಂರಕ್ಷಿಸಬೇಕೆಂಬುದನ್ನು, ಬಲಪಡಿಸಬೇಕೆಂಬುದನ್ನು ಅನುಭವದಿಂದ ಅವರು ಕಂಡುಕೊಂಡರು. ಈಗ ಅಲ್ಲಿ, ಮದುವೆ ಸುಲಭ, ವಿಚ್ಛೇದನ ಕಷ್ಟ. ಪಂಡಿತ ಠಾಕೂರ್‌ದಾಸ್ ಭಾರ್ಗವರ ಮಾತನ್ನು ನಾನು ಒಪ್ಪುವೆನಾದರೂ, ವಿಚ್ಛೇದನಕ್ಕೆ ಸಂಬಂಧಿಸಿದ ಕೆಲವೊಂದು ರೂಢಿಗಳನ್ನು ಸಂಪ್ರದಾಯಗಳನ್ನು ಉಳಿಸಿಕೊಳ್ಳಬೇಕೆಂಬುದು ನನ್ನ ಭಾವನೆ. ವಿಚ್ಛೇದನದ ವಿಧಾನ ತುಂಬಾ ಕಷ್ಟಕರವಾಗಿರಬೇಕು. ಹಾಗಿದ್ದಾಗ, ಸಾಮಾಜಿಕ ಘಟಕವಾದ ಕುಟುಂಬವನ್ನು ಉಳಿಸಿಕೊಂಡು ಬಲಪಡಿಸಬಹುದು.

ಈ ವಿಷಯದ ಮೇಲೆ ಇನ್ನೊಂದು ಮಾತು ಹೇಳಬಯಸುತ್ತೇನೆ. ಸರ್, ಮದುವೆ ಬಂಧನವನ್ನು ಒಡೆಯುವುದಕ್ಕೆ ಅಪೇಕ್ಷಣೀಯ ಅಲ್ಲದ, ಗಂಡನಾಗಲಿ ಹೆಂಡತಿಯಾಗಲಿ ಪರಸ್ಪರ ಒಪ್ಪಿಕೊಳ್ಳಲಾಗದ ಕೆಲವು ಕಾರಣಗಳೂ ಇರುತ್ತವೆ. ಅಂಥ ಸಂದರ್ಭಗಳಲ್ಲಿ, ಗಂಡ, ಇನ್ನೊಬ್ಬಳನ್ನು ಮದುವೆ ಆಗಲು ಒಪ್ಪುತ್ತಾಳೆ, ಅವಳೂ ಜೊತೆಯಲ್ಲೇ ಇರುತ್ತಾಳೆ ಅಥವಾ ಇನ್ನೊಂದು ಮನೆಯಲ್ಲಿರುತ್ತಾಳೆ. ಇದರಲ್ಲಿ ಹೇಳಿರುವ ಕಾರಣಗಳೇ ಅಲ್ಲದೆ, ಗಂಡ ಮದುವೆ ಆಗುವುದಕ್ಕೆ ಹೆಂಡತಿ, ಹೆಂಡತಿ ಮದುವೆ ಆಗುವುದಕ್ಕೆ ಗಂಡ ಒಪ್ಪಿದರೆ, ಮದುವೆ ಬಂಧನ ಮುರಿದುಕೊಳ್ಳದೆಯೇ ಮದುವೆ ಏಕಾಗಬಾರದೆಂಬುದಕ್ಕೆ ನನಗೆ

ಕಾರಣ ಗೊತ್ತಾಗುತ್ತಿಲ್ಲ. ಒಬ್ಬರು ಗಣ್ಯರಿಗೆ ಅನೇಕ ಹೆಂಡಂದಿರಿರುವುದು, ಅವರುಗಳು ಬೇರೆ ಬೇರೆ ಮನೆಯಲ್ಲಿರುವುದು ನಮಗೆ ಗೊತ್ತಿಲ್ಲವೆ.

**ಒಬ್ಬರು ಮಾನ್ಯ ಸದಸ್ಯರು** : ಯಾರು?

**ಶ್ರೀ ಹೆಚ್.ವಿ. ಕಾಮತ್** : ದಯವಿಟ್ಟು ಹೆಸರು ಕೇಳಬೇಡಿ.

**ಶ್ರೀ ತಜಮುಲ್ ಹುಸೇನ್** : ನನಗೊಂದೂ ಅರ್ಥವಾಗುತ್ತಿಲ್ಲ. ನನ್ನ ಮಾನ್ಯ ಗೆಳೆಯ ಅನೇಕ ಗಂಡಂದಿರ ಪದ್ಧತಿಯನ್ನು ಒಪ್ಪುವರೆ?

**ಶ್ರೀ ಹೆಚ್.ವಿ.ಕಾಮತ್** : ನಾನು ಹೇಳುವುದೇನೆಂದರೆ...........

**ಶ್ರೀ ತಜಮುಲ್ ಹುಸೇನ್** : ಮದುವೆ ಆಗಿರದ ಮನುಷ್ಯ ಹಾಗೆ ಹೇಳಬಲ್ಲ.

**ಶ್ರೀ ಹೆಚ್.ವಿ. ಕಾಮತ್** : ಬಹಳ ಹಿಂದೆ ಮದುವೆಯಾದ ದಂಪತಿಯರ ವಿಷಯದಲ್ಲಿ, ಮದುವೆ ಉದ್ದೇಶ ಹಾಳಾಗುತ್ತಿದ್ದರೂ ಹೆಂಡತಿಯನ್ನು ಮದುವೆ ಬಂಧನದಿಂದ ತಪ್ಪಿಸುವುದಕ್ಕೆ ಹಿಂದೂ ಪ್ರಜ್ಞೆ ಒಪ್ಪುವುದಿಲ್ಲ. ಪ್ರೀತಿ, ಪ್ರೇಮ, ಮಾನವೀಯತೆ ದೃಷ್ಟಿಯಿಂದ, ಹೊಸ ಸಂಹಿತೆಯಲ್ಲಿ, ಗಂಡ, ಇನ್ನೊಬ್ಬಳನ್ನು ಮದುವೆ ಆಗುವುದಕ್ಕೆ ಹೆಂಡತಿ ಒಪ್ಪಿಗೆ ಕೊಟ್ಟರೆ, ಅಂಥ ಸಂದರ್ಭಗಳಿಗೆ ಅವಕಾಶ ಕಲ್ಪಿಸಬೇಕು. ನ್ಯಾಯಾಲಯ ಅದಕ್ಕೆ ಅಡ್ಡ ಬರಬಾರದು. ಆದರೆ, ಪಂಡಿತ ಠಾಕೂರ್‌ದಾಸ್ ಭಾರ್ಗವರು ಪ್ರತಿಪಾದಿಸಿದ ಮದುವೆ ಕಲ್ಪನೆ, ಆಸ್ತಿ ಮತ್ತು ಪ್ರೀತಿ ಪ್ರೇಮದ ವಿಷಯದಲ್ಲೂ ಸಾಕಾರಗೊಳ್ಳಬೇಕು. ಆತ್ಮ ಎರಡಾದರೂ ಭಾವ ಒಂದೇ ಇರಬೇಕು, ಜೀವ ಎರಡಾದರೂ ತುಡಿತ ಒಂದೇ ಇರಬೇಕು.

**ಶ್ರೀಮತಿ ಹನ್ನಾ ಮೆಹತಾ** (ಬಾಂಬೆ : ಸಾಮಾನ್ಯ) : ಬಹುಪತ್ನಿ ಪದ್ಧತಿಯಲ್ಲಿ ಇಬ್ಬರಿಗಿಂತಲೂ ಹೆಚ್ಚು ಜೀವಗಳಿರುತ್ತವಲ್ಲ.

**ಶ್ರೀ ಹೆಚ್.ವಿ. ಕಾಮತ್** : ಗಂಡನಿಗೇ ಅಭ್ಯಂತರ ಇಲ್ಲದಿದ್ದರೆ, ಅನೇಕ ಗಂಡಂದಿರದಿದ್ದರೇನೀಗ.

**ಶ್ರೀಮತಿ ಪೂರ್ಣಿಮಾ ಬ್ಯಾನರ್ಜಿ** : ನೀವು ತುಂಬಾ ಉದಾರಿಗಳು.

**ಶ್ರೀ ಹೆಚ್.ವಿ. ಕಾಮತ್** : ಸಮಾನತೆ ತತ್ತ್ವದ ಮೇಲೆ ನಾನು ಈ ಮಾತು ಹೇಳುತ್ತಿದ್ದೇನೆ. ಸ್ತ್ರೀ, ಪುರಷ ಇಬ್ಬರಿಗೂ ಕಠಿಣ ನಿರ್ಬಂಧ ವಿಧಿಸಬೇಕೆಂದು ಹೇಳುತ್ತೇನೆ. ಆರ್ಯಕಾಲದ ಪ್ರಾರಂಭದಲ್ಲಿ – ವೇದ, ಉಪನಿಷತ್ತು ಮತ್ತು ಸ್ಮೃತಿಗಳ ಕಾಲದಲ್ಲಿ ಮಹಿಳೆಯರಿಗೆ ಯಾವ ಯಾವ ಹಕ್ಕುಬಾಧ್ಯತೆಗಳಿದ್ದವೋ ಅವೆಲ್ಲವುಗಳ ಬಳಕೆ ತಪ್ಪಿದ್ದು ಮತ್ತು ನಂತರದ ಮಧ್ಯ ಯುಗದಲ್ಲಿ ಅವುಗಳನ್ನು ಕೊಡದೇ ಹೋದದ್ದು ನಮ್ಮ ಇತಿಹಾಸದಲ್ಲೊಂದು– ನಮ್ಮ ಪ್ರಾಚೀನ ಹಿಂದೂ ಇತಿಹಾಸದಲ್ಲೊಂದು– ವಿಷಾದಭರಿತ ವಿದ್ಯಮಾನ ಅಥವಾ ಬೆಳವಣಿಗೆ, ಕರಾಳ ಮಧ್ಯ ಯುಗದಲ್ಲಿ ತಾವು ಕಳೆದುಕೊಂಡ ವೈಭವವನ್ನು, ಸ್ತ್ರೀಯರಿಗೆ, ಆ ಆಧುನಿಕ ಯುಗದಲ್ಲಿ ಈ ಸಂಹಿತೆ ತಂದುಕೊಡುತ್ತದೆಂಬ ನಂಬಿಕೆ ನನಗಿದೆ.

ಹೊರಗಡೆಯ ಒಬ್ಬ ಗೆಳೆಯ, ದೇವರಾಣೆ, ರಾಷ್ಟ್ರಪಿತ ಮಹಾತ್ಮಾಗಾಂಧಿಯವರಾಣೆ, ನೇತಾಜಿ ಸುಭಾಷ ಚಂದ್ರ ಬೋಸ್ ರಾಣೆ, ದಯಮಾಡಿ ಈ ಮಸೂದೆಗೆ ಮತನೀಡಬೇಡಿ ಎಂದು ಹೇಳಿದ್ದಾನೆ. ಅದೇ ತರ್ಕ ಈ ಮಸೂದೆ ಪರ ಮತ ನೀಡುವುದಕ್ಕೂ ಅನ್ವಯವಾಗುತ್ತದೆ. ನಾನು ಏನು ಹೇಳುತ್ತೇನೆಂದರೆ....................

**ಶ್ರೀ ಬಿ.ಎಲ್. ಸೊಂಧಿ** (ಪೂರ್ವ ಪಂಜಾಬ್ : ಸಾಮಾನ್ಯ) : ನಿಮ್ಮ ಗೆಳೆಯ ಗಂಡಸೋ, ಹೆಂಗಸೊ?

**ಶ್ರೀ ಹೆಚ್.ವಿ. ಕಾಮತ್** : ಸ್ತ್ರೀ ಪುರುಷರಿಬ್ಬರನ್ನೂ ಸಮಾನವಾಗಿ ಸೃಷ್ಟಿಸಿದ ಭಗವಂತನಾಣೆ, ಸ್ತ್ರೀ

ಪುರುಷರಿಬ್ಬರ ಸರ್ವಸಮಾನತೆಗೆ ಬೆಂಬಲವಾಗಿರುವ ರಾಷ್ಟ್ರಪಿತ ಮಹಾತ್ಮಗಾಂಧಿಯವರಾಣೆ, ಅಗತ್ಯವಿದ್ದರೆ ಯುದ್ಧಕ್ಕೂ ಸಿದ್ಧರಾಗಿರಿ ಎಂದು ಕರೆ ಇತ್ತು.

ಸ್ತ್ರೀ ಪುರುಷರಿಬ್ಬರ ಸಂಪೂರ್ಣ ಉನ್ನತಿ, ಏಳಿಗೆಯನ್ನು ಬಯಸಿದ, ಸಾಧಿಸಿದ ನೇತಾಜಿ ಸುಭಾಷ್ ಚಂದ್ರ ಬೋಸರಾಣೆ, ಈ ಮಸೂದೆಯು ಪ್ರಗತಿಪರ ಮಸೂದೆಯೆಂದು ಮತ್ತು ಇದು ಹಿಂದೂ ಸಮಾಜದ ಪ್ರವರ್ಧಮಾನಕ್ಕೆ ಆಸ್ಪದ ಕೊಡುತ್ತದೆಂದು ದಿಟ್ಟತನದಿಂದ ಹೇಳುತ್ತಿದ್ದೇನೆ.

ಒಂದೇ ಒಂದು ಮಾತು ಹೇಳಬಯಸುತ್ತೇನೆ. ಹಿಂದಿನ ಒಂದು ದಿನ ಡಾ. ಅಂಬೇಡ್ಕರ್‌ರವರು, ತಮ್ಮ ಮಾತುಗಳನ್ನು ಮುಗಿಸುತ್ತಿರುವಾಗ ನಾವು ಸಕಾಲದಲ್ಲಿಯೇ ಸರಿಪಡಿಸಬೇಕು ಅಥವಾ ನಾಶವಾಗಬೇಕು ಎಂದು ಹೇಳಿದ್ದರು. ನಾವು ಸರಿಪಡಿಸಬೇಕು ನಾವೂ ಸರಿಪಡಿಸುತ್ತಿದ್ದೇವೆ. ಕಾಲ ಸನ್ನಿಹಿತವಾಗಿದೆ, ನಾವೀಗ ಸರಿಪಡಿಸದಿದ್ದರೆ, ಸಮಾಜ ಸೀಳುಸೀಳಾಗಿ ಬಿಡುತ್ತದೆ, ಸಕಾಲದಲ್ಲಿ ಮಾಡಿದರೆ ಸಾವಿರ ಶ್ರಮ ಉಳಿದೀತು. ಇಲ್ಲದಿದ್ದರೆ, ಬಿರುಕು ದೊಡ್ಡದಾಗುತ್ತಾ ಹೋಗುತ್ತದೆ, ಸಮಾಜ ಛಿದ್ರಛಿದ್ರವಾಗುತ್ತದೆ.

ಸರ್, ಮಹಾ ಶಿವರಾತ್ರಿಯ ಹಿಂದಿನ ಶುಕ್ರವಾರ, ನಾನು ನನ್ನ ಮಾತು ಪ್ರಾರಂಭಿಸಿದೆ, ಮಹಾ ಶಿವರಾತ್ರಿಯ ನಂತರದ ದಿನ ನನ್ನ ಮಾತು ಮುಗಿಸುತ್ತಿದ್ದೇನೆ. ಈ ದಿನ, ನಮ್ಮ ಕಾಲದ ಒಬ್ಬಳು ಶ್ರೇಷ್ಠ ಮಹಿಳೆ ಮಹಾಸತಿ ಮಾ ಕಸ್ತೂರಬಾರನ್ನು, ಒಬ್ಬ ಶ್ರೇಷ್ಠ ಮಾನವ ಸ್ವಾಮಿ ದಯಾನಂದ ಸರಸ್ವತಿಯವರನ್ನು ಸ್ಮರಿಸಿಕೊಳ್ಳಬೇಕಾದ ಪವಿತ್ರ ದಿನ. ಈ ಇಬ್ಬರ ದಿವ್ಯಾತ್ಮಗಳು– ಮಾ ಕಸ್ತೂರಬಾ ಹಾಗೂ ಸ್ವಾಮಿ ದಯಾನಂದ ಸರಸ್ವತಿಯವರ ಆತ್ಮಗಳು– ನಮ್ಮ ಕಾರ್ಯದಲ್ಲಿ ನಮಗೆ ಧೈರ್ಯ, ಉತ್ಸಾಹವನ್ನು ತುಂಬುತ್ತದೆ, ನಮ್ಮ ಗುರುತರ ಕೈಂಕರ್ಯದಲ್ಲಿ ನೆರವಾಗುತ್ತವೆಂಬ ನಂಬಿಕೆ ನನಗಿದೆ. ಸ್ತ್ರೀ ಪುರುಷರಿಬ್ಬರೂ ಜೀವನ ಯಾತ್ರೆಯಲ್ಲಿ. ಅರ್ಥ, ಕಾಮದ ಸಾಕ್ಷಾತ್ಕಾರಕ್ಕೋಸ್ಕರ ತಮ್ಮ ಬದುಕನ್ನು ಸಮರ್ಪಿಸಿಕೊಳ್ಳಿರಿ ಎಂದು ಭಗವಂತನಲ್ಲಿ ನನ್ನ ಪ್ರಾರ್ಥನೆ. ಅರ್ಥ, ಕಾಮ ಎರಡಕ್ಕೂ ಧರ್ಮವೇ ಮೂಲ, ಧರ್ಮ, ಭವ ಬಂಧನದ ಮುಕ್ತಿಗೆ, ಮೋಕ್ಷಕ್ಕೆ ಸೋಪಾನ, ಪರಮಾತ್ಮದ ದಿವ್ಯ ಸನ್ನಿಧಿಯೇ ಮೋಕ್ಷ. ಅವನ ಪ್ರೇರಣೆಯಿಂದಲೇ ನಾವು ಬದುಕುತ್ತಿದ್ದೇವೆ. ಅವನ ಸನ್ನಿಧಿಯಲ್ಲಿ ಎಲ್ಲ ಪುರುಷರೂ, ಸ್ತ್ರೀಯರೂ, ಎಲ್ಲ ಸೃಷ್ಟಿಗಳೂ ಸಮಾನ, ಸ್ವತಂತ್ರ, ಪವಿತ್ರ.

"ಹರಿ ಓಂ ತತ್ಸ್‌ತ್ ಬ್ರಹ್ಮಾರ್ಪಣಮಸ್ತು"

**ಶ್ರೀ ನಝೀರುದ್ದಿನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಂ): ನಾನು ಹೆಚ್ಚು ಹೆಚ್ಚಾಗಿ ಕಾಲ ವಿರೋಧಿಯಾಗುತ್ತಿದ್ದೇನೇನೋ ಎಂದನಿಸುತ್ತಿದೆ. ಮೂಲ ಸೂಚನೆಯನ್ನು ವಿರೋಧಿಸಬೇಕೆಂದಿದ್ದೆ. ಆದರೆ, ನನಗೆ ಮಾತನಾಡಲು ಈವರೆಗೆ ಸಮಯವೇ ಸಿಕ್ಕಿಲ್ಲ. ಸಮಯ ಬಂದಾಗ ನನ್ನನ್ನು ಬಿಟ್ಟು ಬಿಡಲಾಗುತ್ತದೆಂದು ಕಾಣುತ್ತದೆ. ಬೇಕಾದಷ್ಟು ಜನ ಮಾತನಾಡುವರಿದ್ದಾರೆ. ನಾಳೆ ನಾಲ್ಕು ಗಂಟೆಗೆ ಸೂಚನೆ ಮೇಲಿನ ಚರ್ಚೆಯನ್ನು ಮುಕ್ತಾಯಗೊಳಿಸಲಾಗುತ್ತದೆಂದು ಕಾಣುತ್ತದೆ.

**ಸನ್ಮಾನ್ಯ ಸಭಾಧ್ಯಕ್ಷರು** : ಶ್ರೀ ನಜೀರುದ್ದೀನ್ ಅಹ್ಮದ್‌ರನ್ನು ಬಿಟ್ಟುಬಿಡುವುದಕ್ಕಾಗುತ್ತದೆಯೆ? ನಿಮಗೂ ಅವಕಾಶ ಇದೆ. ಶ್ರೀ ಜುಂಜನ್‌ವಾಲರೇ, ಮಾತಾಡಿ.

**ಶ್ರೀ ಬಿ.ಪಿ. ಜುಂಜನ್‌ವಾಲಾ** (ಬಿಹಾರ : ಸಾಮಾನ್ಯ) : ಮುಂದೊಂದು ಸಮಯದಲ್ಲಿ ಮಾತನಾಡುತ್ತೇನೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ಒಂದೋ, ಈಗ ಅವರು ಮಾತನಾಡಬೇಕು, ಇಲ್ಲವೇ, ಮುಂದೆ ಮಾತನಾಡಬಾರದು, ನಿಯಮಗಳ ಪ್ರಕಾರ, ಸದಸ್ಯರನ್ನು, ಮಾತನಾಡಲು ಕರೆದಾಗ, ಮಾತನಾಡಬೇಕು. ಇಲ್ಲದಿದ್ದರೆ, ವಿಷಯದ ಮೇಲೆ ಮಾತನಾಡುವ ಅವಕಾಶ ಕೈತಪ್ಪುತ್ತದೆ.

**ಸನ್ಮಾನ್ಯ ಸಭಾಧ್ಯಕ್ಷರು :** ಬಾಬು ರಾಮನಾರಾಯಣ ಸಿಂಗ್.

**ಬಾಬು ರಾಮನಾರಾಯಣ ಸಿಂಗ್** : ಈ ಸದನದ ಮುಂದೆ ಚರ್ಚೆಗಾಗಿ ಬಂದಿರುವ ಈ ಅನಿಷ್ಟಕರ ಮಸೂದೆಯನ್ನು ವಿರೋಧಿಸುವ ನನ್ನ ಪಾಲಿನ ಕಾರ್ಯ ಮಾಡಲು ಇಂದು ನನಗೆ, ದಯೆಇಟ್ಟು, ಅವಕಾಶಕೊಟ್ಟಿರುವುದಕ್ಕೆ ಸಭಾಧ್ಯಕ್ಷರಿಗೆ ಧನ್ಯವಾದಗಳು. ಸರ್, ಮೊಟ್ಟಮೊದಲಿಗೆ, ನಾನು ಸಂಪ್ರದಾಯಸ್ಥನಲ್ಲ ಎಂಬುದನ್ನು ಈ ಸದನಕ್ಕೆ ಹೇಳಬಯಸುತ್ತೇನೆ.

**ಸನ್ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ :** ನೀವು ಸಂಪ್ರದಾಯಸ್ಥರಲ್ಲ, ನನಗೆ ಗೊತ್ತಿದೆ.

***ಬಾಬು ರಾಮನಾರಾಯಣ ಸಿಂಗ್** : ತಡಮಾಡದೆ, ಹಳೆಯದೆಲ್ಲವನ್ನೂ ತೆಗೆದುಹಾಕಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ. ಆದರೆ, ಪ್ರತಿಯೊಂದನ್ನೂ ವಿವೇಕದಿಂದ ಮಾಡಬೇಕಾಗುತ್ತದೆ. ಯಾವುದನ್ನಾದರೂ ಮಾಡಬೇಕಾದರೆ, ಯಾವಾಗ ಮಾಡಬೇಕು, ಹೇಗೆ ಮಾಡಬೇಕು ಎಂಬುದನ್ನು ಮೊದಲೇ ನಿರ್ಧರಿಸುವುದು ವಿವೇಕ. ನಾನೂ ಕೂಡ, ಡಾ. ಅಂಬೇಡ್ಕರ್‌ರವರ ಅನುರಾಗಿಗಳಲ್ಲಿ ಒಬ್ಬ. ಅವರು ಈ ದೇಶದ ಹೆಮ್ಮೆ. ಅವರು ನನ್ನ ಹೆಮ್ಮೆ ಕೂಡ. ಆದರೆ, ಅಷ್ಟೊಂದು ಪ್ರತಿಭಾವಂತರಾದ ಇವರು ಇಂಥದೊಂದು ವ್ಯರ್ಥ, ಕೆಡುಕಿನ ಕೆಲಸದಲ್ಲಿ ಏಕೆ ತೊಡಗಿದರೋ ನನಗೆ ಅರ್ಥವಾಗುತ್ತಿಲ್ಲ. ಸರ್, ಇದೊಂದು ಸರ್ಕಾರಿ ಮಸೂದೆ, ಕಾನೂನು ಎಂದರೇನೆಂದು ಇವರುಗಳಿಗೆ ಅರ್ಥವಾಗಿದೆಯೋ ನನಗೆ ಗೊತ್ತಿಲ್ಲ. ಕಾನೂನೆಂದರೆ, ಕಾನೂನಿನ ಪರಿಭಾಷೆಯಲ್ಲಿ ವ್ಯಕ್ತವಾದ ಜನರ ಸಂಕಲ್ಪವಲ್ಲದೆ ಮತ್ತೇನೂ ಅಲ್ಲ. ಕಾನೂನು ಎಂದರೇನೆಂದು ಸರ್ಕಾರವೂ ಅರ್ಥಮಾಡಿಕೊಂಡಿಲ್ಲದಿರುವುದು ಶೋಚನೀಯ. ಈ ಮಸೂದೆಯು, ಈ ಸದನದ ಮುಂದೆ ಬರಬಾರದಿತ್ತು ಎಂಬುದು ಈ ದೇಶದ ಬಹುಜನರ ಅಭಿಪ್ರಾಯವೆಂದು ನಾನು ಹೇಳುತ್ತಿದ್ದೇನೆ..................

**ಒಬ್ಬರು ಮಾನ್ಯ ಸದಸ್ಯರು** : ಹಾಗಲ್ಲ.

**ಶ್ರೀ ಬಾಬು ರಾಮನಾರಾಯಣ ಸಿಂಗ್** : ಜನಮತ ಸಂಗ್ರಹಿಸಿ, ನಿಮಗೇ ಗೊತ್ತಾಗುತ್ತದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ನಾವು ಇಲ್ಲಿ ಜನರ ಪ್ರತಿನಿಧಿಗಳು.

**ಶ್ರೀ ಬಾಬು ರಾಮನಾರಾಯಣ ಸಿಂಗ್** : ಹಿಂದೂ ಸಂಹಿತೆ ಮಸೂದೆಯೆಂದು ಕರೆದಿರುವ ಒಂದು ಮಸೂದೆ ಇಲ್ಲಿದೆ, ಈ ಸದನದಲ್ಲಿ ಅದರ ಬಗ್ಗೆ ಚರ್ಚೆ ಆಗುತ್ತಿದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆಯಾದರೂ ವಾಸ್ತವವಾಗಿ, ಹಿಂದೂ ಸಮಾಜವನ್ನು ಅಸ್ತವ್ಯಸ್ತಗೊಳಿಸುವ ಸಂಚೇ ನಡೆಯುತ್ತಿದೆ. ಇದು ಹಿಂದೂ ಸಮಾಜದ ಮೇಲೆ ದಾಳಿ ಮಾಡುವ ಸನ್ನಾಹವೆಂದು ನಮಗನ್ನಿಸುತ್ತಿದೆ. ಹಿಂದೂ ಸಮಾಜವು ಯಾವ ಕಾಲದಿಂದ ಇದೆ, ಬೆಳೆದು ಬಂದಿದೆ ಎಂಬುದನ್ನು ಯಾರೂ ಹೇಳಲಾರರು. ಪ್ರಪಂಚವು ಸೃಷ್ಟಿಯಾದಂದಿನಿಂದ, ಸೂರ್ಯ, ಚಂದ್ರರು ಸೃಷ್ಟಿಯಾದಂದಿನಿಂದ, ಮಾನವ ಜನಾಂಗದ ಸೃಷ್ಟಿಯಾದಂದಿನಿಂದ ಹಿಂದೂ ಸಮಾಜ ಇದೆ, ಬೆಳೆದು ಬಂದಿದೆ ಎಂಬುದು ನನ್ನ ಭಾವನೆ. ಈ ಎಲ್ಲ ಕಾಲಗಳಲ್ಲಿ ಹಿಂದೂ ಸಮಾಜದ ಮೇಲೆ ಎಲ್ಲ ರೀತಿಯ ಅಸಂಖ್ಯಾತ ದಾಳಿಗಳಾಗಿವೆ. ಮೊದಲು ಬುದ್ಧ ಬಂದ, ಒಂದು ಕಾಲದಲ್ಲಂತೂ ಹಿಂದೂ ಸಮಾಜ ಇನ್ನು ಮುಂದೆ ಇರುವುದೇ ಇಲ್ಲವೇನೋ ಎಂಬಂತೆ ಕಂಡುಬಂತು. ಆದರೆ, ಜಗದ್ಗುರು ಶಂಕರಾಚಾರ್ಯರು ಅವತರಿಸಿದರು, ಬೌದ್ಧ ಧರ್ಮವನ್ನು ಈ ದೇಶದಿಂದ ಹೊರದೂಡಿ ಹಿಂದೂಧರ್ಮವನ್ನು ಪುನರ್ ಸ್ಥಾಪಿಸಿದರು. ನಂತರ ಇಸ್ಲಾಂ ಬಂತು. ಬೌದ್ಧಧರ್ಮದಂತೆಯೇ ಅದೂ ಕೂಡ ದಾಳಿಯೇ ಆಗಿತ್ತು. ಆದರೆ, ಅದು ಸೈನಿಕ ದಾಳಿಯಾಗಿತ್ತು. ಆದರೂ, ಈ ದೇಶದಲ್ಲಿ ಇಸ್ಲಾಂ

---

* ಸಿಎ (ಲೆಜಿ) ಡಿ. ಸಂಪುಟ II ಭಾಗ II ೨೮ ಫೆಬ್ರವರಿ ೧೯೪೯ ಪುಟ ೯೫೦–೫೩

ವಿಫಲ ಆಯಿತು......................

**ಡಾ. ಮೊನೋ ಮೋಹನದಾಸ್** (ಪಶ್ಚಿಮ ಬಂಗಾಳ) : ಇಸ್ಲಾಂ, ಆಪದ್ರಕ್ಷಕ ಆಗಿತ್ತು. ನೀವು ಇಸ್ಲಾಂ ಮೊರೆ ಹೋದಿರಿ.

**ಶ್ರೀ ಬಾಬು ರಾಮನಾರಾಯಣ ಸಿಂಗ್** : ಇಸ್ಲಾಂ ಅಪದ್ರಕ್ಷಕ ಆಗಿರಲಿಲ್ಲ. ಈ ದೇಶದಲ್ಲಿ ಇಸ್ಲಾಂ ಕೂಡ ವಿಫಲ ಆಯಿತು. ಇಸ್ಲಾಂ ಪ್ರಕಾರ, ಕೊರಾನ್‌ನಲ್ಲಿ ಯಾವ ಜಾತಿ ಪದ್ಧತಿಯೂ ಇಲ್ಲ. ಆದರೆ, ಇಸ್ಲಾಂನ್ನು ಅನುಸರಿಸಿದ ಜನರಲ್ಲಿ ಕೆಲವೊಂದು ಬಗೆಯ ಜಾತಿ ಪದ್ಧತಿ ಬೆಳೆಯಿತು. ಅದೇ ರೀತಿ, ಜೈನಧರ್ಮ, ಸಿಖ್‌ಧರ್ಮ ಎಲ್ಲವೂ ಬಂದವು. ಮೂಲತಃ, ಇವೆಲ್ಲಾ ಹಿಂದೂ ಧರ್ಮದ ಮೇಲಿನ ದಾಳಿಗಳು. ಆದರೆ, ಕಾಲಕ್ರಮೇಣ, ಇವೆಲ್ಲಾ ಪರಧರ್ಮ ಸಹನೆಯನ್ನು ರೂಢಿಸಿಕೊಂಡು ಹಿಂದೂ ಸಮಾಜದ ಹಾಗೂ ಧರ್ಮದ ಜೊತೆಜೊತೆಯಲ್ಲಿ ಬೆಳೆಯಲು ಹಾಗೂ ಪ್ರವರ್ಧಮಾನಕ್ಕೆ ಬರಲು ಪ್ರಯತ್ನಿಸಿದವು. ಈ ಕಾಲದಲ್ಲಿ ಇದೂ ಕೂಡ ಒಂದು ರೀತಿಯ ದಾಳಿಯೇ. ಆದರೆ, ಈ ದಾಳಿ ಜನತಂತ್ರದ ಸೋಗಿನದು. ನಿರ್ಬಂಧದ ಅಂಶ ಇದ್ದರೂ, ದಬ್ಬಾಳಿಕೆಯದು.

ನನ್ನ ಕೆಲವರು ಸ್ನೇಹಿತರು, ಈ ಮಸೂದೆಯನ್ನು ಶಾಸನವನ್ನಾಗಿ ಮಾಡುವುದಕ್ಕೆ ಈ ಸದನಕ್ಕೆ ಇರುವ ಅಧಿಕಾರದ ಬಗ್ಗೆ ಈ ಸದನದಲ್ಲಿ ಚರ್ಚೆ ಆಯಿತೆಂದು ಈಗಾಗಲೇ ಹೇಳಿದ್ದಾರೆ. ಈ ಬಗೆಯ ಮಸೂದೆಯನ್ನು ಶಾಸನವನ್ನಾಗಿ ಮಾಡುವುದಕ್ಕೆ ಈ ಸದನ ಸಕ್ಷಮ ಅಲ್ಲ ಎನ್ನುವುದು ನಿಜ. ಅದೇ ನನ್ನ ಭಾವನೆ. ಇದು, ರಾಜ್ಯಾಂಗ ಸಭೆಯೂ ಅಲ್ಲ.............

**ಒಬ್ಬರು ಮಾನ್ಯ ಸದಸ್ಯರು** : ಇದೇನು?

**ಶ್ರೀ ಬಾಬು ರಾಮನಾರಾಯಣ ಸಿಂಗ್** : ಇದು, ರಾಜ್ಯಾಂಗ ಸಭೆಯ ಒಂದು ಭಾಗ. ಈ ಸದನದ ಬಹುತೇಕ ಸದಸ್ಯರಿಗೆ ಆದೇಶದ ಮೂಲಕವೋ ಅಥವಾ ಸಂಪ್ರದಾಯದಂತೆಯೋ ಈ ಸಭೆಗೆ ಹಾಜರಾಗಬಾರದೆಂದು ಹೇಳಲಾಗಿದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ಅದು, ಈ ಸದನಕ್ಕೆ ನೇರವಾಗಿ ಸಂಬಂಧಪಟ್ಟಿದ್ದಲ್ಲ. ಅದು, ಸದನ ಚರ್ಚೆ ಮಾಡುವಂತಹ ವಿಷಯ ಅಲ್ಲವೆಂದು ಸ್ಪೀಕರ್‌ರವರು, ಈಗಾಗಲೇ ಹೇಳಿದ್ದಾರೆ.

**ಶ್ರೀ ಬಾಬು ರಾಮನಾರಾಯಣ ಸಿಂಗ್** : ಸ್ಪೀಕರ್‌ರವರ ರೂಲಿಂಗ್ ಏನೇ ಇರಬಹುದು. ಅದರ ವಿರುದ್ಧ ನಾನು ಮಾತನಾಡುತ್ತಿಲ್ಲ. ನಾನು, ಸ್ಪೀಕರ್‌ರವರ ರೂಲಿಂಗ್‌ಗೆ ತಲೆಬಾಗುತ್ತೇನೆ. ಆದರೆ, ಈ ಮಸೂದೆಯನ್ನು ಶಾಸನವನ್ನಾಗಿ ಮಾಡುವುದಕ್ಕೆ ಈ ಸದನಕ್ಕೆ ಇರುವ ಸಕ್ಷಮತೆ ಅಥವಾ ಅಧಿಕಾರದ ಬಗ್ಗೆ ನಾನು ಮಾತನಾಡಲೇಬೇಕಾಗಿದೆ. ದೇಶಕ್ಕೆ ರಾಜ್ಯಾಂಗವನ್ನು ರಚಿಸಲು ಈ ಸದನಕ್ಕೆ ದೇಶ ಆಜ್ಞಾಪಿಸಿದೆ. ಎಲ್ಲಿಯವರೆಗೆ ರಾಜ್ಯಾಂಗ ರಚನೆ ಕಾರ್ಯ ಪೂರ್ಣಗೊಳ್ಳುವುದಿಲ್ಲವೋ ಅಥವಾ ರಾಜ್ಯಾಂಗ ಕಾರ್ಯರೂಪಕ್ಕೆ ಬರುವುದಿಲ್ಲವೋ ಆ ವರೆಗೆ ಸರ್ಕಾರ ಕೆಲಸ ಮಾಡಲೇಬೇಕಾಗುತ್ತದೆ. ಬಜೆಟ್ಟನ್ನು ಮತ್ತು ದೇಶದ ಆಡಳಿತಕ್ಕೆ ಅವಶ್ಯಕವಾದ ಯಾವುದೇ ಇತರ ಶಾಸನವನ್ನು ಅಂಗೀಕರಿಸುವ ದೃಷ್ಟಿಯಿಂದ ವಿದೇಶಿ ಪ್ರಭುಗಳೊಂದಿಗೆ ಮಾಡಿಕೊಂಡ ಒಂದು ಕಲಸುಮೇಲೋಗರ ಒಡಂಬಡಿಕೆಯಿಂದಾಗಿ ಈ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಆದರೆ, ಇಡೀ ದೇಶದಲ್ಲಿ ತುಂಬಾ ಕೋಲಾಹಲ ಉಂಟು ಮಾಡಿರುವಂತಹ ಈ ಮಸೂದೆಯು, ಚರ್ಚೆಗಾಗಿ ಅಥವಾ ಶಾಸನವಾಗಿ ಅಂಗೀಕಾರಗೊಳ್ಳಲು ಈ ಸದನದ ಮುಂದೆ ಬರಲೇಬಾರದಿತ್ತು.

ಸ್ತ್ರೀ, ಪುರುಷ ಸಮಾನತೆ ಬಗ್ಗೆ ಈ ಸದನದಲ್ಲಿ ಹಾಗೂ ಹೊರಗಡೆ ಎದ್ದಿರುವ ಕೂಗನ್ನು ನಾನು

ಕೇಳಿಸಿಕೊಂಡಾಗ, ಅದು ನನಗೆ ಅರ್ಥವಾಗಲಿಲ್ಲ..............................

**ಶ್ರೀ ತಜಮುಲ್ ಹುಸೇನ್** : ನೀವು ಈ ಗೌರವಾನ್ವಿತ ಸಭೆಯ ರಚನೆಯನ್ನು ವಿರೋಧಿಸುತ್ತೀದ್ದೀರಿ. ಅಂದಮೇಲೆ, ಸಮಿತಿಯ ಸದಸ್ಯತ್ವವನ್ನು ನೀವೇಕೆ ಒಪ್ಪಿಕೊಂಡಿರಿ?

**ಶ್ರೀ ಬಾಬು ರಾಮನಾರಾಯಣ ಸಿಂಗ್** : ಎಷ್ಟೋ ಜನರಿಗೆ ಗೊಂದಲ ಉಂಟಾಗಿದೆ. ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಲಾಗಿತ್ತು. ಅಂದರೆ, ಸದನವು ಮಸೂದೆಯ ತತ್ತ್ವವನ್ನು ಒಪ್ಪಿಕೊಂಡಂತಾಯಿತು. ಆದರೆ, ಅದರರ್ಥ, ಪ್ರತಿಯೊಬ್ಬ ಸದಸ್ಯರೂ, ಮಸೂದೆಯನ್ನು ಒಪ್ಪಿಕೊಂಡಿದ್ದಾರೆ ಅಥವಾ ಮಸೂದೆಯ ತತ್ವವನ್ನು ಒಪ್ಪಿಕೊಂಡಿದ್ದಾರೆ ಅಂತಲ್ಲ. ಸದನವು ಏನೋ ಒಂದನ್ನು, ಎಲ್ಲವನ್ನೂ, ಒಪ್ಪಿಕೊಂಡಿದೆಯೆಂದು ಯಾರೂ ಹೇಳಲಾಗದ ಎಷ್ಟೋ ತತ್ತ್ವಗಳು ಈ ಮಸೂದೆಯಲ್ಲಿದೆ.................

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಲಾಗಿದೆ ಎಂದ ಮೇಲೆ, ಅದು, ತತ್ತ್ವವನ್ನು ಒಪ್ಪಿಕೊಂಡಿದೆ ಎಂದಂತಾಯಿತು.

**ಶ್ರೀ ಬಾಬು ರಾಮನಾರಾಯಣ ಸಿಂಗ್** : ನಾನು, ಸ್ತ್ರೀ, ಪುರುಷ ಸಮಾನತೆ ಬಗ್ಗೆ ಮಾತನಾಡುತ್ತಿದ್ದೆ. ನಮ್ಮ ಶಾಸ್ತ್ರಗಳ ಪ್ರಕಾರ, ಮಾನವ ಪರಿಪೂರ್ಣನಲ್ಲ. ಸ್ತ್ರೀಯೂ ಪರಿಪೂರ್ಣಳಲ್ಲ. ನಮ್ಮ ಶಾಸ್ತ್ರಗಳ ಪ್ರಕಾರ, ಸ್ತ್ರೀ, ಅರ್ಧಾಂಗಿ. ಹೀಗಾಗಿ, ಮಾನವನಂತೂ ಪರಿಪೂರ್ಣ ಅಲ್ಲವೇ ಅಲ್ಲ........................

**ಒಬ್ಬರು ಮಾನ್ಯ ಸದಸ್ಯರು** : ಮತ್ತೆ, ಅವನೇನು?

**ಶ್ರೀ ಬಾಬು ರಾಮನಾರಾಯಣ ಸಿಂಗ್** : ಅವನೂ ಕೂಡ, ಅರ್ಧ.......................

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** (ಪಶ್ಚಿಮ ಬಂಗಾಳ : ಸಾಮಾನ್ಯ) : ಸರ್, ತುಂಬಾ ಪ್ರಾಮುಖ್ಯತೆಯ ಮಸೂದೆ ಮೇಲೆ ಮಾನ್ಯ ಸದಸ್ಯರು ಮಾತನಾಡುತ್ತಿರುವಾಗ, ಏಕಕಾಲದಲ್ಲಿ, ಅನೇಕ ಟೀಕೆಗಳು, ವ್ಯಾಖ್ಯಾನ, ಗೇಲಿ ಎಲ್ಲವೂ ಆಗುತ್ತಿದೆ. ಹೀಗಾದರೆ, ಈ ಸದನದಲ್ಲಿ ಮಾತನಾಡುವುದಕ್ಕೆ ಕಷ್ಟ ಆಗುತ್ತದೆ. ಇದು, ಈ ಸದನದ ಘನತೆಯ ದೃಷ್ಟಿಯಿಂದ ತರವಲ್ಲ. ಮಾತು, ಇಷ್ಟ ಆಗದಿದ್ದರೆ, ಸದಸ್ಯರು ಸುಮ್ಮನೆ ಇರಬೇಕು. ಮಾತು ಕೇಳಿಸಿಕೊಳ್ಳುವವರಾದರೂ ಕೇಳಿಸಿಕೊಳ್ಳಲಿ.

**ಸನ್ಮಾನ್ಯ ಸಭಾಧ್ಯಕ್ಷರು** : ಮಾನ್ಯ ಸದಸ್ಯರೇ, ಅವರು ಮಾತಾಡಲು ಬಿಡಿ.

**ಶ್ರೀ ಬಾಬು ರಾಮನಾರಾಯಣ ಸಿಂಗ್** : ಸರ್, ನನ್ನ ಗೆಳೆಯ ಪಂಡಿತ ಮೈತ್ರಾರವರು ನನ್ನ ಬೆಂಬಲಕ್ಕೆ ನಿಂತಿದ್ದಕ್ಕೆ ಧನ್ಯವಾದಗಳು. ಸಮಾನತೆ ಬಗ್ಗೆ ಮಾತಾಡುತ್ತಿದ್ದೆ. ಪ್ರಾಪಂಚಿಕ ಉದ್ದೇಶಗಳ ಬಗ್ಗೆ ಹೇಳುವುದಾದರೆ, ಮಾನವ ಜನಾಂಗದ ಮುಂದುವರಿಕೆ ಬಗ್ಗೆ ಹೇಳುವುದಾದರೆ, ಸ್ತ್ರೀ, ಪುರುಷರ ನಡುವೆ ಸಮಾನತೆ ಅಥವಾ ಅಸಮಾನತೆ ಎನ್ನುವಂಥಾದ್ದೇ ಇಲ್ಲ.

*೩-೦೦ ಗಂಟೆ*

ಕೈಗೂ, ಕಾಲಿಗೂ ಯಾರೂ ಹೋಲಿಕೆ ಮಾಡಬಾರದು. ಕೈಗಿಂತ ಕಾಲು ಹೆಚ್ಚು ಅಥವಾ ಕಾಲಿಗಿಂತ ಕೈ ಹೆಚ್ಚು. ಈ ಕಣ್ಣಿಗಿಂತ ಆ ಕಣ್ಣು ಮೇಲು, ಆ ಕಣ್ಣಿಗಿಂತ ಈ ಕಣ್ಣು ಮೇಲು ಎಂದು ಯಾರೂ ಹೇಳಲಾರರು. ಸ್ತ್ರೀ, ಪುರುಷ 'ಒಬ್ಬರೇ' ಒಬ್ಬರಿಗಿಂತ ಹೆಚ್ಚೇನಲ್ಲ. ಕಾನೂನು ಬಗ್ಗೆ ಹೇಳುವುದಾದರೆ, ಕಾನೂನು ನಿಮ್ಮ ನೆರವಿಗೆ ಬರಲಾರದೆಂದು ದೇಶದ ಎಲ್ಲ ಸಹೋದರಿಯರಿಗೆ ಹೇಳುತ್ತಿದ್ದೇನೆ. ಪ್ರತಿಯೊಬ್ಬರ ನೆರವಿಗೆ ಹಾಗೂ ಸ್ತ್ರೀ ಜನಾಂಗದ ನೆರವಿಗೆ ಯಾವುದು ಬರುತ್ತದೆಂದರೆ, ಪ್ರೀತಿ, ಪ್ರೇಮ. ಅದನ್ನು ಬಿಟ್ಟರೆ ಬೇರಾವುದೂ ಇಲ್ಲ. ದಂಪತಿಗಳಲ್ಲಿ ಪ್ರೀತಿ, ಪ್ರೇಮ ಇದ್ದರೆ, ಸಂತೋಷದಿಂದಿರುತ್ತಾರೆ, ನೆಮ್ಮದಿಯಿಂದಿರುತ್ತಾರೆ.

ನೀವು, ವಿಚ್ಛೇದನದ ಹಕ್ಕು ಕೊಡುತ್ತೀರಿ. ಅದರಿಂದೇನಾಗುತ್ತದೆ? ಇಂದು, ಒಬ್ಬಳನ್ನು ಬಿಡುತ್ತಾನೆ. ನಾಳೆ, ಇನ್ನೊಬ್ಬಳನ್ನು ಕಟ್ಟಿಕೊಳ್ಳುತ್ತಾನೆ. ಒಮ್ಮದುವೆ ಹೋಗಿ, ಹಲವು ಮದುವೆ ತರಹ ಆಗಿ ಬಿಡುತ್ತದೆ. ನೀವು ಇನ್ನೊಬ್ಬಳನ್ನು ಮದುವೆ ಆಗುವುದಕ್ಕೆ ಅವಕಾಶ ಕೊಡುವುದಿಲ್ಲ. ಗಂಡ, ಹೆಂಡತಿಗೆ ವಿಚ್ಛೇದನ ಕೊಡುತ್ತಾನೆ, ನಾಳೆ ಇನ್ನೊಬ್ಬಳನ್ನು ಮದುವೆ ಆಗುತ್ತಾನೆ. ಇದು ಮುಂದುವರಿದೇ ಇರುತ್ತದೆ. ಪರಿಶುದ್ಧ ಪ್ರೀತಿ ಪ್ರೇಮಕ್ಕೆ ಜನರಲ್ಲಿ ಸಚ್ಚಾರಿತ್ರ್ಯ ಇರಬೇಕಾದುದು ತುಂಬಾ ಮುಖ್ಯವೆಂದು ನನ್ನ ಭಾವನೆ. ಈ ದೇಶದಲ್ಲಿ ಜನರು ಮೊದಲು ಚಾರಿತ್ರ್ಯ ಕಳೆದುಕೊಳ್ಳುತ್ತಾರೆ, ನಂತರ ಎಲ್ಲವನ್ನೂ ಕಳೆದುಕೊಳ್ಳುತ್ತಾರೆ ಎಂಬುದನ್ನು ನಾವು ಗ್ರಹಿಸಲೇಬೇಕಾಗುತ್ತದೆ. ಆದ್ದರಿಂದ, ಈ ವಿಚಾರದಲ್ಲಿ ನಾವು ಏನಾದರೂ ಮಾಡಲೇಬೇಕಿದ್ದರೆ ನಮ್ಮ ಶೀಲ, ನಡತೆಯನ್ನು ಉತ್ತಮಗೊಳಿಸಿಕೊಳ್ಳಬೇಕು. ನಾನು, ಹೇಳಿದ ಹಾಗೆ, ಕೈನ ಪ್ರಾಮುಖ್ಯತೆಗೂ, ಕಾಲಿನ ಪ್ರಾಮುಖ್ಯತೆಗೂ, ಹೇಗೆ ಹೋಲಿಕೆ ಮಾಡಲು ಆಗುವುದಿಲ್ಲವೋ, ಹಾಗೆಯೇ, ಗಂಡಸಿನ ಪ್ರಾಮುಖ್ಯತೆಗೂ, ಹೆಂಗಸಿನ ಪ್ರಾಮುಖ್ಯತೆಗೂ ಪರಸ್ಪರ ಹೋಲಿಕೆ ಮಾಡಲಾಗುವುದಿಲ್ಲ. ನಾನು, ಇನ್ನೂ ಒಂದು ಮಾತು ಹೇಳುತ್ತೇನೆ. ನಮ್ಮ ಶಾಸ್ತ್ರಗಳ ಪ್ರಕಾರ, ಸ್ತ್ರೀಯರು, ದೇವಿ ಲಕ್ಷ್ಮಿಯಿದ್ದಂತೆ. ನಮ್ಮ ಸಮಾಜದಲ್ಲಿ ಸ್ತ್ರೀಯರನ್ನು ಲಕ್ಷ್ಮಿ, ಸರಸ್ವತಿ, ಗೃಹಲಕ್ಷ್ಮಿಯೆಂದು ಕರೆಯುತ್ತಾರೆ. ಅವರೇ ಸರ್ವಸ್ವ. ನನ್ನ ಪ್ರಕಾರ, ಈ ಪ್ರಪಂಚದಲ್ಲಿ, ಪುರುಷನಿಗಿಂತ ಸ್ತ್ರೀಯ ಪ್ರಾಮುಖ್ಯತೆಯೇ ತುಂಬಾ ಹೆಚ್ಚು. ಏಕೆಂದು ಹೇಳುತ್ತೇನೆ. ಈ ಪ್ರಪಂಚದಲ್ಲಿರುವ ಎಲ್ಲ ಗಂಡಸರನ್ನೂ ಸಾಯಿಸಿಬಿಟ್ಟರೂ, ಪ್ರಪಂಚ ಮುಂದುವರಿಯುತ್ತದೆ (ಒಬ್ಬರು ಮಾನ್ಯ ಸದಸ್ಯರು: "ಒಬ್ಬ ಗಂಡಸಂತೂ ಇರಲೇಬೇಕಾಗುತ್ತದಲ್ಲ") ಒಬ್ಬನೂ ಇರಬೇಕಾಗಿಲ್ಲ. ಪ್ರಪಂಚದಲ್ಲಿರುವ ಎಲ್ಲ ಗಂಡಸರನ್ನೂ ಸಾಯಿಸಿಬಿಟ್ಟರೂ, ಪ್ರಪಂಚ ಮುಂದುವರಿಯುತ್ತದೆ, ಮಾನವ ಜನಾಂಗ ಮುಂದುವರಿಯುತ್ತದೆ. (ಮಾನ್ಯ ಸದಸ್ಯರುಗಳು: "ಹೇಗೆ"). ತಾಳಿ, ಹೇಳುತ್ತೇನೆ. ನನ್ನ ಈ ಮಾತನ್ನು ಪ್ರಶ್ನಿಸುವ ಗೆಳೆಯರೂ ಇದ್ದಾರೆ. ಸರ್, ಈ ಪ್ರಪಂಚದಲ್ಲಿರುವ ಗಂಡಸರೆಲ್ಲರನ್ನೂ ಸಾಯಿಸಿಬಿಟ್ಟರೂ ಕೂಡ, ತಾಯಂದಿರ ಹೊಟ್ಟೆಯಲ್ಲಿ ಲಕ್ಷಾಂತರ ಮಕ್ಕಳು ಇರುತ್ತಾರಲ್ಲ. ಆದ್ದರಿಂದ, ಗಂಡಸರಿಗಿಂತಲೂ ಹೆಂಗಸರ ಪ್ರಾಮುಖ್ಯತೆಯೇ ಹೆಚ್ಚು. ಸ್ತ್ರೀ, ಪುರುಷರ ನಡುವೆ ಸಮಾನತೆ ಅಂತ ಯಾರೆಲ್ಲಾ ಏನೆಲ್ಲಾ ಮಾತನಾಡುತ್ತಿದ್ದಾರೋ ನಿಜವಾಗಿಯೂ ಅವರ ಉದ್ದೇಶವೇನೆಂದರೆ ಪುರುಷನಿಂದ ಸ್ತ್ರೀಯನ್ನು ಪ್ರತ್ಯೇಕಿಸುವುದೇ ಆಗಿದೆ. ದಂಪತಿಗಳು, ಸುಖಸಂತೋಷದಿಂದ ಇರಲು ನೆರವಾಗುವುದರ ಬದಲು, ಅವರುಗಳು ಅದನ್ನು ಹಾಳುಮಾಡುತ್ತಿದ್ದಾರೆ. ಸ್ತ್ರೀಯರಿಗೆ ಇರಬೇಕಾದ ಮಹತ್ವ ಇದ್ದೇ ಇದೆ. ಅವರು ಲಕ್ಷ್ಮಿಯರು. ಆದರೂ ಕೂಡ, ಸ್ತ್ರೀ ಜತೆ ಪುರುಷನನ್ನು ಹೋಲಿಕೆ ಮಾಡುವುದು ಕಷ್ಟ. ಪ್ರಕೃತಿ, ಸ್ತ್ರೀ ಪುರುಷ ಇಬ್ಬರನ್ನೂ ಸೃಷ್ಟಿಸಿದೆ. ಅವರವರ ಕೆಲಸ ಕಾರ್ಯಗಳು ಬೇರೆ, ಬೇರೆ ಅವರವರ ಕರ್ತವ್ಯಗಳು ಬೇರೆ ಬೇರೆ, ಅವರವರ ಹೊಣೆಗಾರಿಕೆಗಳು ಬೇರೆ ಬೇರೆ, ಇಬ್ಬರನ್ನೂ ಪರಸ್ಪರ ಹೋಲಿಕೆ ಮಾಡುವುದರಿಂದ ಏನು ಪ್ರಯೋಜನ? ಈ ವಿಷಯದಲ್ಲಿ ಯಾವ ಹೋಲಿಕೆಯೂ ನಿಲ್ಲುವುದಿಲ್ಲ.

ನನ್ನ ಗೆಳೆಯರು, ಈ ಮಸೂದೆಯ ಕಲಮುಗಳ ಬಗ್ಗೆ ಮಾತನಾಡಿದ್ದಾರೆ. ತಂದೆಯ ಆಸ್ತಿಯಲ್ಲಿ ಮಗಳ ಪಾಲಿನ ಬಗ್ಗೆ ನಾನು ಒಂದು ಅಥವಾ ಎರಡು ಅಂಶಗಳನ್ನು ಹೇಳುತ್ತೇನೆ. ನಾನು, ಮೊದಲು ಮಗ, ನಂತರ ಸಹೋದರ, ನಂತರ ಗಂಡ, ನಂತರ ತಂದೆ. ಇದರಲ್ಲಿ ಅನುಮಾನವೇ ಇಲ್ಲ. ಬಹುತೇಕ, ಪ್ರತಿಯೊಬ್ಬ ಹಿಂದೂ ತಂದೆಯೂ–ನಾನೂ ಕೂಡ ಒಬ್ಬ ಹಿಂದೂ ತಂದೆ, ನಾನೂ ಕೂಡ ನನ್ನ ಹೆಣ್ಣುಮಕ್ಕಳಿಗೆ ಮದುವೆ ಮಾಡಿದ್ದೇನೆ– ಪ್ರತಿಯೊಬ್ಬ ಹಿಂದೂ ತಂದೆಯೂ, ತನ್ನ ಮಗಳನ್ನು, ತನ್ನ ಕುಟುಂಬಕ್ಕಿಂತಲೂ ಒಳ್ಳೆಯ ಸ್ಥಾನಮಾನ, ಸಂಪತ್ತು ಇರುವ ಕುಟುಂಬಕ್ಕೆ ಮದುವೆ ಮಾಡಿಕೊಡಬಯಸುತ್ತಾನೆ. ಇಲ್ಲಿ, ತಂದೆಯ

ಆಸ್ತಿಯಲ್ಲಿ ಮಗಳ ಪಾಲಿನ ಮಾತಾಡುತ್ತಿದ್ದಾರೆ, ಗೇಲಿ ಮಾಡುತ್ತಿದ್ದಾರೆ. ಮಗಳಿಗೆ ಎಲ್ಲ ರೀತಿಯ ಗೌರವ ಕೊಡಲಾಗುತ್ತದೆ. ಬಳುವಳಿ ರೂಪದಲ್ಲಿ ಮಗಳಿಗೆ ತಂದೆಯ ಆಸ್ತಿಯಲ್ಲಿ ಪಾಲನ್ನು– ನೀವದನ್ನು ಪಾಲು ಎನ್ನಬಹುದು– ಪಾಲನ್ನೂ ಕೂಡ ಕೊಡುತ್ತಾರೆ. ಪಾಲಿನ ವಿಚಾರ ಬಂದಾಗ ಏನಾಗುತ್ತದೆಂದರೆ, ಅತಿಥಿಯಾಗಿ ನೀವು, ನನ್ನ ಸ್ಥಳಕ್ಕೆ ಬನ್ನಿ, ನನ್ನ ಗೆಳೆಯನೆಂದುಕೊಂಡೋ ಇನ್ನೇನೋ ಅಂದುಕೊಂಡೋ ನಾನು ನಿಮಗೆ ಅತಿಥಿ ಸತ್ಕಾರ ಮಾಡುತ್ತೇನೆ. ಆದರೆ, ಹಕ್ಕು ಅಂತ ಬಂದರೆ, ನಾನು ನಿಮಗೆ ಅತಿಥಿ ಸತ್ಕಾರ ಮಾಡುವುದೇ ಇಲ್ಲ. ಗೆಳೆಯರೇ, ಕಾನೂನು ಯಾರಿಗೂ ನೆರವಾಗುವುದಿಲ್ಲ. ತಂದೆಯ ಆಸ್ತಿಯಲ್ಲಿ ಮಗಳಿಗೆ ಹಕ್ಕು ಸೃಷ್ಟಿಸಿಬಿಟ್ಟರೆ, ಪ್ರೀತಿ ವಾತ್ಸಲ್ಯ ಹೊರಟುಹೋಗಿಬಿಡುತ್ತದೆ. ನನ್ನ ಗೆಳೆಯ ಕಾಮತರು, ಹಲವಾರು ಸಲಹೆ, ಸೂಚನೆಗಳನ್ನು ಕೊಟ್ಟರು. ಅವನ್ನು ನಾನು ಒಪ್ಪುವುದಿಲ್ಲ. ಅವರು ಒಂದು ವಿಚಾರ ಹೇಳಿದರು. ಒಬ್ಬಳೇ ಮಗಳು, ಮೂರು, ನಾಲ್ಕು ಗಂಡು ಮಕ್ಕಳ ಕುಟುಂಬದ ಬಗ್ಗೆ ಹೇಳಿದರು. ಮಗಳನ್ನು ದೂರದ ಊರಿಗೆ ಕೊಟ್ಟು ಮದುವೆ ಮಾಡುತ್ತಾರೆ. ಆಸ್ತಿ ಸಣ್ಣದಿರಬಹುದು, ಮದುವೆ ಆದಮೇಲೆ, ಅಳಿಯ, ಮಾವನ ಮನೆಗೆ ಆಸ್ತಿಪಾಲಿಗೆ ಅಥವಾ ಆಸ್ತಿಧಾರಕನಂತೆ ಬರುತ್ತಾನೆ. ಅವನಿಗೆ ಗೌರವವನ್ನೇ ಕೊಡುವುದಿಲ್ಲ. ಸಹಜವಾಗಿಯೇ ಈ ಬೆಳವಣಿಗೆಗಳೆಲ್ಲಾ ಆಗಿಬಿಡುತ್ತವೆ. ಈ ಮಸೂದೆಯನ್ನು ಶಾಸನ ಮಾಡಿದರೆ, ತುಂಬಾ ಜಟಿಲವಾದ ಸಮಸ್ಯೆಗಳು, ಜಗಳಗಳು ಹುಟ್ಟಿಕೊಳ್ಳುತ್ತವೆ.

ಆದ್ದರಿಂದ, ಶಾಂತ ಮನಸ್ಸಿನಿಂದ ಈ ವಿಷಯವನ್ನು ಪರ್ಯಾಲೋಚನೆ ಮಾಡಬೇಕೆಂದು ಈ ಸದನದ ಪ್ರತಿಯೊಬ್ಬ ಸದಸ್ಯರಿಗೂ ಮನವಿ ಮಾಡಿಕೊಳ್ಳುತ್ತಿದ್ದೇನೆ. ಈ ಸದನದ ನಾನಾ ಸದಸ್ಯರುಗಳು ಸೂಚಿಸಿದಂತೆ, ನಾನು ಕೂಡ ಈಗಾಗಲೇ ಹೇಳಿರುವಂತೆ ಈ ಮಸೂದೆಯನ್ನು ಶಾಸನ ಮಾಡಲು ಈ ಸದನಕ್ಕೆ ಸಕ್ಷಮತೆ ಇಲ್ಲ. ಈ ಮಸೂದೆಯನ್ನು ಅಂಗೀಕರಿಸಬೇಕೆಂದು ಅವರುಗಳು ಏಕೆ ತುಂಬಾ ಆತುರದಿಂದಿದ್ದಾರೋ? ಒಂದು ಅಥವಾ ಎರಡು ವರ್ಷ ಕಾಯುವ ಧೈರ್ಯ ತೋರಬಾರದೇಕೆ? ಇವರುಗಳಿಗೆ ಹೊಸ ಚುನಾವಣೆಗಳ ಭಯವೇ?

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಭಯ, ಇಲ್ಲವೇ ಇಲ್ಲ.

**ಶ್ರೀ ರಾಮನಾರಾಯಣ ಸಿಂಗ್ ಬಾಬು** : ಅವೇ ರೂಢಿಗಳು, ಸಂಪ್ರದಾಯಗಳ ಪ್ರಕಾರ, ಹಿಂದೂ ಸಮಾಜವು ಉಳಿದುಕೊಂಡು ಬಂದಿದೆ. ಪ್ರವರ್ಧಮಾನಕ್ಕೆ ಬಂದಿದೆ. ಹೀಗಿರುವಾಗ, ಈ ಮಸೂದೆಯನ್ನು, ನನ್ನ ಗೆಳೆಯ ಶ್ರೀ ನಸೀರುದ್ದಿನ್ ಹೇಳಿದ ಹಾಗೆ, ಪರಿಚಲನೆಗಾಗಿ ಕಳುಹಿಸಿದರೆ, ಆಕಾಶವೇನೂ ತಲೆಯ ಮೇಲೆ ಬೀಳುವುದಿಲ್ಲ. ಈ ಸದನದ ಸದಸ್ಯರು, ಶಾಂತ ಮನಸ್ಸಿನಿಂದ ಈ ಮಸೂದೆಯನ್ನು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮುಂದಿನ ಚುನಾವಣೆಗಳ ಬಗ್ಗೆ ಜನರಿಗೆ ಭಯ ಇರಬಹುದು. ನಮಗೆ ಕಾಂಗ್ರೆಸ್ಸಿಗರಿಗೆ ವೋಟುಗಳು ಬರದಿರಬಹುದು. ಆ ಪ್ರಶ್ನೆ ಉದ್ಭವಿಸುವದೇ ಇಲ್ಲ. ನಾವು ನಮ್ಮ ಆತ್ಮಸಾಕ್ಷಿಗೆ ಅನುಸಾರವಾಗಿ ನಡೆದುಕೊಳ್ಳಬೇಕು. ನಮ್ಮನ್ನು ಇಲ್ಲಿಗೆ ಕಳುಹಿಸಿರುವ ಮತ ಕ್ಷೇತ್ರಕ್ಕೆ ಜನರಿಗೆ ನಿಷ್ಠೆಯಿಂದಿರಬೇಕು.

ಆದ್ದರಿಂದ, ಈ ಮಸೂದೆಯನ್ನು ನಾನು ಬಲವಾಗಿ ವಿರೋಧಿಸುತ್ತೇನೆ. ಈ ಮಸೂದೆಯನ್ನು, ಸಾರ್ವಜನಿಕ ಅಭಿಪ್ರಾಯಕ್ಕಾಗಿ ಪರಿಚಲನೆ ಮಾಡಬೇಕೆಂದು ನನ್ನ ಗೆಳೆಯ 'ಪಂಡಿತ' ನಸೀರುದ್ದಿನ್ ಅಹ್ಮದ್‌ರ ಸೂಚನೆಗೆ ಬೆಂಬಲ ಕೊಡುತ್ತೇನೆ.

***ಶ್ರೀ ಹೆಚ್. ಸಿದ್ದವೀರಪ್ಪ** (ಮೈಸೂರು ಸಂಸ್ಥಾನ) : ಈ ಸೂಚನೆಯನ್ನು ಮಂಡಿಸುತ್ತ, ಸನ್ಮಾನ್ಯ ಕಾನೂನು ಮಂತ್ರಿಗಳು ತುಂಬಾ ಪ್ರೌಢಿಮೆಯಿಂದ ಆಡಿದ ಮಾತುಗಳಿಗಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಸರ್, ಹಿಂದೂ ಸಮಾಜಕ್ಕೆ ಈ ಮಸೂದೆಯಿಂದ ತುಂಬಾ ಬಾಧಕ ಆಗುತ್ತದೆಂದು, ತುಂಬಾ ಹೇಳಲಾಗಿದೆ.

ನಾನು ಈ ದೇಶದ ಮೈಸೂರು ಸಂಸ್ಥಾನದಿಂದ ಬಂದಿದ್ದೇನೆ. ಈ ಮಸೂದೆಯಲ್ಲಿರುವ ಅನೇಕ ವಿಚಾರಗಳು, ವಿಷಯಗಳಿಗೆ ಸಂಪೂರ್ಣವಾಗಿ ಪರಸ್ಪರ ಹೋಲಿಕೆ ಇರದಿದ್ದರೂ ಈ ಮಸೂದೆಯು ತರಬಯಸಿರುವ ಕೆಲವೊಂದು ಮೂಲಭೂತ ಆಚಾರಗಳು ನಮ್ಮಲ್ಲಿ ಈಗಾಗಲೇ ಆಚರಣೆಯಲ್ಲಿವೆ. ಉದಾಹರಣೆಗೆ, ನಮ್ಮಲ್ಲಿ ದತ್ತು ಪದ್ಧತಿ ಇದೆ, ಮಗಳ ಪಾಲಿಗೆ ಸಂಬಂಧಿಸಿದ ಕಾನೂನು ಇದೆ. ಇನ್ನು ಅನೇಕ ವಿಷಯಗಳು ಆಚರಣೆಯಲ್ಲಿವೆ. ತತ್ತ್ವ, ಆಚರಣೆಯಲ್ಲಿ ಇದ್ದೇ ಇದೆ. ೧೯೩೪ಕ್ಕೆ ಮುಂಚೆಯೆ, ನಾವು ಹಿಂದೂ ಮಹಿಳಾ ಹಕ್ಕುಗಳ ನಿಬಂಧನೆಯನ್ನು ಅಂಗೀಕರಿಸಿದ್ದೇವೆ. ಮೈಸೂರಿನಲ್ಲಿ ಈ ಮಸೂದೆ, ಕಳೆದ ಹದಿನಾಲ್ಕು ವರ್ಷಗಳಿಂದಲೂ ಜಾರಿಯಲ್ಲಿದೆ. ನಮ್ಮಲ್ಲಿ ಯಾವುದೇ ಏರುಪೇರು ಆಗಿಲ್ಲ. ಇಲ್ಲಿನ ಮಾನ್ಯ ಸದಸ್ಯರುಗಳು ಭಯಪಡುತ್ತಿರುವಂತೆ, ನಮ್ಮಲ್ಲಿ ಅಷ್ಟೊಂದು ಜಗಳಗಳು ಇಲ್ಲ, ಹಿಂದೂ ಸಮಾಜ ಅಸ್ತವ್ಯಸ್ತವಾಗಿಲ್ಲ. ವಾಸ್ತವವಾಗಿ, ನಮ್ಮ ಅನುಭವದ ಪ್ರಕಾರ ಹೇಳುವುದಾದರೆ, ಈಗ ಜಾರಿಯಲ್ಲಿರುವ ಮಸೂದೆಯಲ್ಲಿ ಅವಶ್ಯವಾಗಿ ಏನೇನಿರಬೇಕಿತ್ತೋ ಅದೆಲ್ಲಾ ಇಲ್ಲ ಮತ್ತು ಈಗಿರುವ ಮಸೂದೆಯಲ್ಲಿ ಇನ್ನಷ್ಟು ಸುಧಾರಣೆ ತರುವ ದೃಷ್ಟಿಯಿಂದ ಇನ್ನೊಂದು ಸಮಿತಿಯನ್ನು ರಚಿಸಲಾಗಿದೆ ಎಂಬುದು ನಮಗೆ ತಿಳಿದುಬಂದಿದೆ.

ಈ ಸದನದ ಮುಂದಿರುವ ಈ ಮಸೂದೆಯು ಜಾತಿಪದ್ಧತಿಯನ್ನು ಅಥವಾ ಹಿಂದೂ ಸಮಾಜದ ಕೆಲವೊಂದು ಇತರ ನಂಬಿಕೆಗಳನ್ನು ಅಥವಾ ತತ್ತ್ವಗಳನ್ನು ಅಸ್ತವ್ಯಸ್ತಗೊಳಿಸುತ್ತದೆಂದು ಹೇಳಲಾಗಿದೆ. ಸರ್, ನಾನು ಕೆಲವೊಂದು ಹಿಂದೂಗ್ರಂಥಗಳನ್ನು ಓದಿದ್ದೇನೆ. ಕ್ರಿಸ್ತಪೂರ್ವ ೨೦೦೦–೧೪೦೦ವರೆಗಿನ ವೇದಗಳ ಕಾಲವನ್ನು ಅಧ್ಯಯನ ಮಾಡಿದರೆ, ಆಗಿದ್ದಂತಹ ಹಿಂದೂ ಸಮಾಜವನ್ನು ಅಧ್ಯಯನ ಮಾಡಿದರೆ, ಆಗಿನ ಹಿಂದೂ ಸಮಾಜದಲ್ಲಿ ಈ ನಾಲ್ಕು ಜಾತಿಗಳು ಇರಲೇ ಇಲ್ಲವೆಂಬುದು ಕಂಡುಬರುತ್ತದೆ. ಹುಟ್ಟಿದ ಪ್ರತಿಯೊಬ್ಬ ಮನುಷ್ಯನೂ, ಅವನ ಗುಣ ಅಥವಾ ಕರ್ಮಾನುಸಾರ ತನ್ನ ಜೀವಮಾನದಲ್ಲಿ ಎಲ್ಲ ವರ್ಣ ಅಥವಾ ಆಶ್ರಮ ಧರ್ಮವನ್ನು ಪಾಲಿಸಬೇಕಾಗಿತ್ತು. ಒಬ್ಬ ಹುಡುಗ, ಅವನಿಗೆ ಇಪ್ಪತ್ತು ವರ್ಷ ವಯಸ್ಸಾಗುವ ತನಕ, ಮನೆ ಕೆಲಸ ಕಾರ್ಯಗಳನ್ನು ಮಾಡಬೇಕಾಗಿತ್ತು, ಗುರುವಿಗೆ ಅಧೀನನಾಗಿರಬೇಕಿತ್ತು, ಅವನಿಗೆ ವಹಿಸಿದ ಎಲ್ಲ ಇತರ ಕಾರ್ಯಗಳನ್ನು ಮಾಡಬೇಕಿತ್ತು. ಅವನನ್ನು ಶೂದ್ರ ಎಂದು ಕರೆಯುತ್ತಿದ್ದರು. ಇಪ್ಪತ್ತು ವರ್ಷ ವಯಸ್ಸಾದ ನಂತರ ಮದುವೆ ಆಗುತ್ತಿತ್ತು, ಕುಟುಂಬವನ್ನು ಸಾಕಿ, ಸಲಹುವ ಹೊಣೆಗಾರಿಕೆಯನ್ನು ಅವನು ಈಡೇರಿಸಬೇಕಿತ್ತು. ಆ ಕರ್ತವ್ಯದಂತೆ, ಅವನನ್ನು ವೈಶ್ಯ ಎಂದು ಕರೆಯುತ್ತಿದ್ದರು. ಕೆಲವು ಕಾಲ ಜೀವನದಲ್ಲಿ ಸುಖವನ್ನು ಅನುಭವಿಸಿದ ನಂತರ, ಅವನಿಗೆ ನಲವತ್ತು ವರ್ಷ ವಯಸ್ಸಾದಾಗ, ರಾಜ್ಯವನ್ನು ಸಂರಕ್ಷಿಸುವ ಪ್ರತಿಯೊಬ್ಬರ ಕರ್ತವ್ಯದಂತೆ ಅವನೂ ಕ್ಷತ್ರಿಯ ಧರ್ಮದ ಪಾಲನೆ ಮಾಡಬೇಕಾಗಿತ್ತು. ನಂತರ, ಅವನಿಗೆ ಒಂದು ನಿರ್ದಿಷ್ಟ ವಯಸ್ಸಾದಾಗ ಎಂದರೆ ಅರವತ್ತು ವರ್ಷ ವಯಸ್ಸಾದಾಗ, ಅಷ್ಟು ಹೊತ್ತಿಗೆ, ಅನುಭವ, ತಿಳಿವಳಿಕೆಯಿಂದ ಜೀವನದ ಎಲ್ಲ ಒಳ ಹೊರಗನ್ನು ಅರಿತುಕೊಂಡಿದ್ದ, ಅವನು, ಶಿಷ್ಯರಿಗೆ ವಿದ್ಯೆ ಬೋಧಿಸುವ, ಜ್ಞಾನ, ತಿಳುವಳಿಕೆ ಕೊಡುವ ಇತರ ಕರ್ತವ್ಯಗಳನ್ನು ಮಾಡಬೇಕಿತ್ತು, ಬ್ರಾಹ್ಮಣ ಗುಣಗಳನ್ನು ಹೊಂದಿದ್ದ ಅವನನ್ನು ಬ್ರಾಹ್ಮಣ ಎಂದು ಕರೆಯುತ್ತಿದ್ದರು.

ಹೀಗಾಗಿ, ಈ ವರ್ಣಾಶ್ರಮ ಪದ್ಧತಿ, ಈ ದೇಶದಲ್ಲಿ ಬೇರೆ ಬೇರೆ ರೀತಿಯಲ್ಲಿ ಹುಟ್ಟಿಕೊಂಡಿತು, ಬೇರೆ ಬೇರೆ ರೀತಿಯಲ್ಲಿ ಬೆಳೆಯಿತು. ಇಂದು ಈ ದೇಶದಲ್ಲಿ ಸುಮಾರು ಹದಿಮೂರು ಸಾವಿರ ಉಪಜಾತಿಗಳಿವೆ, ಅದಕ್ಕಿಂತಲೂ ಹೆಚ್ಚು ಉಪಜಾತಿಗಳಲ್ಲಿ ವಿಭಿನ್ನ ಸಂಪ್ರದಾಯಗಳು, ವಿಭಿನ್ನ ರೂಢಿಗಳು ಇವೆ, ಏನೇನಿಲ್ಲ.

ರಾಜಕೀಯ ಐಕ್ಯತೆ ದೃಷ್ಟಿಯಿಂದ, ಇಂದು, ನಾವೆಲ್ಲರೂ ಒಂದೇ, ನಮ್ಮಲ್ಲಿ ಯಾವುದೇ ಏಕರೂಪದ ನಿಯಮಗಳು ಅಥವಾ ಯಾವುದೇ ಏಕರೂಪದ ಕಾನೂನುಗಳು ಇರಲೇಬೇಕೆಂದರೆ, ಒಂದು ನಿಶ್ಚಿತ

ಪ್ರಮಾಣದ ಸಂಹಿತೆ ಇರಬೇಕಾದುದು ತುಂಬಾ ಅಗತ್ಯ. ಯಾವ ಕಲಮುಗಳು ಅವಶ್ಯಕ, ಯಾವ ಕಲಮುಗಳು ಅವಶ್ಯಕ ಅಲ್ಲ ಎಂಬುದನ್ನು ಪರ್ಯಾಲೋಚನೆ ಮಾಡಬೇಕಾದ ಅವಶ್ಯಕತೆ ಕಂಡುಬಂದರೆ ಪರ್ಯಾಲೋಚನೆ ಹಂತದಲ್ಲಿ ನಾವು ಪರ್ಯಾಲೋಚನೆ ಮಾಡಬಹುದಾಗಿದೆ, ಸಂಹಿತೆಯ ಅಗತ್ಯವಿಲ್ಲವೆಂದೂ ಕೂಡ ನಾವು ಹೇಳಬಹುದಾಗಿರುತ್ತದೆ. ನಾವು ಸ್ವಲ್ಪ ಪರಿಜ್ಞಾನದಿಂದ ಆಲೋಚನೆ ಮಾಡಿದರೆ, ನಾವು ಯಾರೂ ಆ ನಿಲುವನ್ನು ಒಪ್ಪಿಕೊಳ್ಳಬೇಕೆಂದು ನನಗೆ ಅನ್ನಿಸುತ್ತಿಲ್ಲ. ಈ ದೇಶದಲ್ಲಿ ಜನರು ಬೇರೆ ಬೇರೆ ಮತಗಳನ್ನು – ದ್ವೈತ, ಅದ್ವೈತ – ಅನುಸರಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಜನರು, ಒಬ್ಬಳೇ ಹೆಂಡತಿ, ಒಬ್ಬನೇ ಗಂಡ ಪದ್ಧತಿಯನ್ನು, ಅನೇಕ ಹೆಂಡಂದಿರ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಕೆಲವು ಸ್ಥಳಗಳಲ್ಲಿ ಅನೇಕ ಗಂಡಂದಿರ ಪದ್ಧತಿಯೂ ಆಚರಣೆಯಲ್ಲಿದೆ. ವಸ್ತು–ಸ್ಥಿತಿ ಹೀಗಿರುವಾಗ, ಉತ್ತರಾಧಿಕಾರ, ಮದುವೆ ಬ್ರಿಟಿಷರು, ಹಾಗೂ ಇತರ ಅನೇಕ ವಿಚಾರಗಳಿಗೆ ಸಂಬಂಧಪಟ್ಟಂತೆ, ನಮ್ಮಲ್ಲಿ ಒಂದು ಏಕರೂಪದ ಸಂಹಿತೆಯು ಇರುವ ಅವಶ್ಯಕತೆ ಇಲ್ಲವೇ? ಬ್ರಿಟಿಷರ ಕಾಲದಲ್ಲಿ, ಧಾರ್ಮಿಕ ನಿರ್ಲಿಪ್ತತೆಯ, ಹಸ್ತಕ್ಷೇಪ ಕೂಡದೆನ್ನುವ ಸೋಗಿನಲ್ಲಿ ಬ್ರಿಟಿಷರು, ಹಿಂದೂ ಸಮಾಜದಲ್ಲಿ ಯಾವುದೇ ಅನಿಷ್ಟಕಾರಿ ವಿಚಾರಗಳನ್ನು ತೆಗೆದುಹಾಕಬೇಕೆನ್ನುವ ವಿಷಯದಲ್ಲಿ ಏನೇನೂ ಪ್ರಯತ್ನ ಮಾಡಲಿಲ್ಲ. ವಾಸ್ತವವಾಗಿ, ವಾರನ್ ಹೇಸ್ಟಿಂಗ್ಸ್‌ನನ್ನು ಬರ್ಕ, ರಾಜದ್ರೋಹದ ತಕ್ಸೀರಿಗೆ ಗುರಿಪಡಿಸಿದಾಗ, ವಾರನ್ ಹೇಸ್ಟಿಂಗ್ಸ್‌ನ ಮೇಲೆ ಹೊರಿಸಿದ್ದ ಆಪಾದನೆಗಳಲ್ಲಿ ಒಂದೆಂದರೆ, ವಾರನ್ ಹೇಸ್ಟಿಂಗ್ಸ್, ತನ್ನ ಸ್ವಪ್ರತಿಷ್ಠೆಗಾಗಿ ಆ ಜಾತಿ ಸಂಹಿತೆಯನ್ನು ಬಳಿಸಿಕೊಂಡಿದ್ದ ಎನ್ನುವುದಾಗಿತ್ತು. ವಾರನ್ ಹೇಸ್ಟಿಂಗ್ಸ್‌ನ ಸ್ವಂತ ಅನುಕೂಲಕ್ಕಾಗಿ ಜಾತಿಪದ್ಧತಿಯು ಹೇಳಿಮಾಡಿಸಿದಂತಿತ್ತು. ಅದಕ್ಕೋಸ್ಕರವೇ ವಾರನ್ ಹೇಸ್ಟಿಂಗ್ಸ್ ಸಮಾಜಕ್ಕೆ ಅಗತ್ಯವಾದ ಯಾವುದೇ ಸುಧಾರಣೆಗಳನ್ನು ತರುವುದರಲ್ಲಿ ಹಸ್ತಕ್ಷೇಪ ಮಾಡಲಿಲ್ಲವೆಂಬುದು ಬ್ರಿಟಿಷರಿಗೆ ಕಂಡುಬಂತು. ಆದರೆ, ನಾವು ಸ್ವತಂತ್ರರಾಗಿರುವಾಗ, ಇಂಥಾ ತುಂಬಾ ಅಗತ್ಯವಾದ ಸುಧಾರಣೆಗೆ ನಾವೇಕೆ ಪ್ರಯತ್ನಮಾಡಬಾರದೆಂಬುದಕ್ಕೆ ಯಾವ ಕಾರಣವೂ ಇಲ್ಲ. ನಾವು ಇನ್ನಷ್ಟು ಆಲೋಚನೆ ಮಾಡುತ್ತಿದ್ದೇವೆ. ನಾವು ಈ ಮಸೂದೆಯನ್ನು ಇಷ್ಟೊಂದು ಬೇಗನೆ ಏಕೆ ಕೈಗೆತ್ತಿಕೊಳ್ಳುತ್ತಿದ್ದೇವೆ, ನಾವು ಇನ್ನು ಕೆಲವು ಕಾಲ ಕಾಯಬಾರದೇಕೆ? ಈ ಸುಧಾರಣೆಯನ್ನು ತರಬೇಕೆಂಬ ಆಲೋಚನೆ ಬಹು ಹಿಂದಿನಿಂದಲೂ ಇತ್ತು. ಇದು ಬಹಳ ಮುಂಚೆಯೇ ಬರಬೇಕಿತ್ತು. ಆದರೆ, ನಮ್ಮದು ಪರಾಧೀನದೇಶ ಆಗಿತ್ತು, ನಾವು ನಮ್ಮದೇ ಆದ ಭವಿಷ್ಯತ್ತಿನ ರೂವಾರಿಗಳಾಗಿರಲಿಲ್ಲ. ಅಂಥ ಕಾಲ ಇನ್ನೇನೂ ದೂರ ಇಲ್ಲವೆಂದೇ ನನ್ನ ಅನಿಸಿಕೆ.

ಈ ಸದನದ ಸಕ್ಷಮತೆ ಇತ್ಯಾದಿ ಬಗ್ಗೆ ಅನೇಕ ಆಕ್ಷೇಪಣೆಗಳು ವ್ಯಕ್ತವಾಗಿವೆ. ವಾಸ್ತವವಾಗಿ, ಮಾನ್ಯ ಸೂಚಕರು, ಈ ಅಪೇಕ್ಷಿತ ಫಲವನ್ನು ತರಲು ನಾವು ಹೇಗೆ ಸಕ್ಷಮರಿದ್ದೇವೆಂಬುದನ್ನು ಸ್ಪಷ್ಟ ಮಾತುಗಳಲ್ಲೇ ಹೇಳಿದ್ದಾರೆ. ಇನ್ನೂ ಹಲವು ಜನರು ಮಾತನಾಡುವವರಿದ್ದಾರೆ. ಆದ್ದರಿಂದ, ನಾನು ಈ ಸದನದ ಸಮಯವನ್ನು ತೆಗೆದುಕೊಳ್ಳಬಯಸುವುದಿಲ್ಲ.

ವಿಚ್ಛೇದನ ತತ್ತ್ವದ ಬಗ್ಗೆ ಹೇಳುವುದಾದರೆ, ಅದು ತುಂಬಾ ಚರ್ಚೆಗೆ ಆಸ್ಪದ ಕೊಟ್ಟ ವಿಚಾರವೆಂಬುದು ನನ್ನ ಅಭಿಪ್ರಾಯ. ಇದು, ನಿಜವಾಗಿಯೂ ಹಿಂದೂ ಸಮಾಜದ ಬಹುತೇಕ ಜನರ ತಲೆ ತಿನ್ನುತ್ತಿದೆ. ಶಾಸ್ತ್ರೋಕ್ತ ಮದುವೆ ಇರಬಹುದು ಅಥವಾ ಯಾವುದೇ ಇತರ ರೀತಿಯ ಮದುವೆ ಇರಬಹುದು, ಯಾವುದೇ ಸನ್ನಿವೇಶದಲ್ಲೂ ಮದುವೆ ಬಂಧನ ಮುರಿದುಕೊಳ್ಳಲಾಗದಂಥದ್ದು ಆಗಿರಬೇಕೆಂಬುದನ್ನು ನಾನು ಒಪ್ಪುವುದಿಲ್ಲ. ಜನರಿಗೆ ಅಬಾಧಿತ ವಿವೇಚನೆ ಕೊಡುವುದರ ಬದಲು, ಒಂದು ಕಾಲಮಿತಿಯನ್ನು – ಈ ಸದನ ಅನುಮೋದಿಸುವಂತಹ, ಐದು ವರ್ಷಗಳು ಅಥವಾ ಮೂರು ವರ್ಷಗಳು – ವಿಧಿಸಬೇಕು,

ಈ ಕಾಲದೊಳಗೆ ದಂಪತಿಗಳು, ತಮ್ಮ ನಡುವೆ ಇರಬಹುದಾದ ಜಗಳ, ಕಿತ್ತಾಟಗಳನ್ನು ಸರಿಪಡಿಸಿಕೊಳ್ಳಬೇಕು, ಪರಸ್ಪರ ಅರ್ಥ ಮಾಡಿಕೊಳ್ಳಬೇಕು. ಇಷ್ಟಾದರೂ, ದಂಪತಿಗಳಲ್ಲಿ ಸಾಮರಸ್ಯ ಬರದೇ ಹೋದರೆ, ಆಗ ಮದುವೆ ಬಂಧನವನ್ನು ಮುರಿದುಕೊಳ್ಳಲು ಅವಕಾಶ ಇರಬೇಕು– ಈ ಎಲ್ಲ ಅಂಶಗಳನ್ನು ಪರಿಗಣಿಸಬೇಕೆಂದು ನಾನು ಮಾನ್ಯ ಸೂಚಕರಿಗೆ ಮನವಿ ಮಾಡಿಕೊಳ್ಳುತ್ತೇನೆ.

**ಪಂಡಿತ ಲಕ್ಷ್ಮಿಕಾಂತ ಮೈತ್ರಾ :** ನಿಮ್ಮ ಮಾತಿನ ಅರ್ಥ, ಪರೀಕ್ಷಾರ್ಥ ಮದುವೆ ಅಂತಾನೆ?

**ಶ್ರೀ ಹೆಚ್. ಸಿದ್ದವೀರಪ್ಪ :** ಅಲ್ಲ, ಪರೀಕ್ಷಾರ್ಥ ಮದುವೆ ಅಂತಲ್ಲ, ಯಾರೇ ಆಗಲಿ, ಈ ಅನುಕೂಲವನ್ನು ಅಥವಾ ಪ್ರಯೋಜನವನ್ನು ಪಡೆದುಕೊಳ್ಳುವುದಕ್ಕೆ ಮುಂಚೆ, ನೀವದನ್ನು ವಿಚ್ಛೇದನ ಎಂತಲೇ ಕರಿಯಿರಿ, ಯಾವ ದಂಪತಿಗಳಿಗೂ ಒಂದು ನಿರ್ದಿಷ್ಟ ಕಾಲದೊಳಗೆ ವಿಚ್ಛೇದನಕ್ಕೆ ಅವಕಾಶ ಕೊಡಬಾರದು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಅದು ಇಂಗ್ಲಿಷ್ ಕಾನೂನು. ಅಲ್ಲಿ ಮೂರು ವರ್ಷಗಳ ಕಾಲಮಿತಿ ಇದೆ.

**ಶ್ರೀ ಹೆಚ್ ಸಿದ್ದವೀರಪ್ಪ :** ಪಾಶ್ಚಿಮಾತ್ಯ ದೇಶಗಳ ದೃಷ್ಟಾಂತವನ್ನು ಈಗ ನೋಡೋಣ. ಉದಾಹರಣೆಗೆ ಅಮೇರಿಕಾದಲ್ಲಿ, ವಿಚ್ಛೇದನ ನ್ಯಾಯಾಲಯದ ಸುಪ್ರಸಿದ್ಧ ನ್ಯಾಯಾಧೀಶರಾದ ಲಿಂಡ್ಸೆಯವರ ಅಪಾರ ಅನುಭವ ನಮಗೆ ಗೊತ್ತಿದೆ. ವಿಚ್ಛೇದನಕ್ಕಾಗಿ ಯಾರಾದರೂ ಅವರ ಬಳಿಗೆ ಹೋದಾಗ, ಅವರು ಹೇಳುತ್ತಿದ್ದರಂತೆ: "ನೀವು ದಂಪತಿಗಳು, ಒಂದು ಅಥವಾ ಎರಡು ತಿಂಗಳು ಒಟ್ಟಿಗೆ ಇರಿ, ಆಮೇಲೆ ನನ್ನ ಹತ್ತಿರ ಬನ್ನಿ. ಒಟ್ಟಿಗೆ ಇದ್ದ ಮೇಲೂ, ವಿಚ್ಛೇದನ ಬೇಕೆಬೇಕೆಂದು ನಿಮಗನ್ನಿಸಿದರೆ, ಆಗ ವಿಚ್ಛೇದನಕ್ಕೆ ಅರ್ಜಿ ಹಾಕಿಕೊಳ್ಳಿ". ದಂಪತಿಗಳು ಬೇರೆ ಬೇರೆ ಆಗಲು ಪ್ರಯತ್ನ ಮಾಡಿದಾಗಲೆಲ್ಲ, ನನ್ನ ಅನುಭವಕ್ಕೆ ಬಂದ ಸಂಗತಿಯೆಂದರೆ, ದಂಪತಿಗಳು ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡರೆ, ಈ ಅತಿರೇಕದ ಪ್ರತ್ಯೇಕತೆಗೆ ಅವಕಾಶವೇ ಇರುವುದಿಲ್ಲವೆಂದು ಮಾನ್ಯ ನ್ಯಾಯಾಧೀಶರೇ ಹೇಳಿದ್ದಾರೆ. ಆದ್ದರಿಂದ, ವಿಚ್ಛೇದನಕ್ಕೆ ಅಂಥ ಒಂದು ಕಾಲಮಿತಿಯನ್ನು ನಿಗದಿಪಡಿಸಬೇಕೆಂದು ನಾನು ಸಲಹೆ ಮಾಡುತ್ತಿದ್ದೇನೆ.

ಆಸ್ತಿಯನ್ನು ಭಾಗಮಾಡುವ ತತ್ವದ ಬಗ್ಗೆ ಹೇಳುವುದಾದರೆ, ಈ ಮಸೂದೆಯಿಂದ ವ್ಯವಸಾಯದ ಜಮೀನುಗಳಿಗೆ ಯಾವ ರೀತಿಯ ಬಾಧಕವೂ ಆಗುವುದಿಲ್ಲವೆಂಬುದು ನಮಗೆ ಕಂಡುಬಂದಿದೆ. ಅದರಲ್ಲಿರುವ ಒಳ್ಳೆಯ ಅಂಶ ಎಂದರೆ ಇದೇ.

**ಚಿ. ರಣಬೀರ್ ಸಿಂಗ್ :** (ಪೂರ್ವ ಪಂಜಾಬು : ಸಾಮಾನ್ಯ) : ಕೇಂದ್ರೀಯ ಆಡಳಿತದ ಪ್ರದೇಶಗಳಲ್ಲಿ ಬಾಧಕ ಆಗುತ್ತದೆ.

**ಶ್ರೀ ಹೆಚ್. ಸಿದ್ದವೀರಪ್ಪ :** ಇಲ್ಲ. ಆಗುವುದಿಲ್ಲ. ತುಂಬಾ ಸಣ್ಣ ಪ್ರದೇಶವಾದ ಕೇಂದ್ರೀಯ ಆಡಳಿತ ಪ್ರದೇಶವಾದ ಕೇಂದ್ರೀಯ ಆಡಳಿತ ಪ್ರದೇಶದಲ್ಲಿ ಮಾತ್ರ ಬಾಧಕ ಆಗುತ್ತದೆ. ಈ ವ್ಯವಸಾಯ ಜಮೀನಿನ ಬಗ್ಗೆಯೇ ಹೇಳುವುದಾದರೆ, ನಮ್ಮದೇ ಆದ ಕೃಷಿ ವ್ಯವಸ್ಥೆಯ ಹಿತದೃಷ್ಟಿಯಿಂದ, ನಮ್ಮ ಬದುಕಿಗೆ ಆಧಾರವಾದ ಆಹಾರದ ದೃಷ್ಟಿಯಿಂದ ನಾವು ಕೃಷಿ ಸುಧಾರಣೆಗಳನ್ನು ತರಬೇಕಾದ ಕಾಲ ಬಂದಿದೆ. ಅಷ್ಟೇ ಅಲ್ಲ, ಎಲ್ಲ ಸ್ಥಿರಾಸ್ತಿಗೂ ಹಿರಿಯ ಮಗನ ಹಕ್ಕಿನ ಕಾನೂನಿನಂತಹ ಕಾನೂನು ಇರಬೇಕಾದ ಕಾಲ ಬಂದಿದೆ. ಈ ದೇಶದ ಶೇ. ೯೦ ರಷ್ಟು ಜನರು ಹಳ್ಳಿಗಳಲ್ಲಿ ಬದುಕುತ್ತಿದ್ದಾರೆ, ಅವರುಗಳ, ಆಸ್ತಿಪಾಸ್ತಿಯೆಂದರೆ ಹೊಲಗದ್ದೆಗಳು, ಶೇ. ೯೦ ರಷ್ಟು ಜನರ ಈ ಆಸ್ತಿಪಾಸ್ತಿಯನ್ನು ಈ ಕಾಯ್ದೆಯು ಕಿತ್ತುಕೊಳ್ಳುವುದರಿಂದ ಜಮೀನನ್ನು ಭಾಗ ಮಾಡುವ ತತ್ವವು ತರ್ಕದ ಅಥವಾ ನ್ಯಾಯದ ಪರೀಕ್ಷೆಯಲ್ಲಿ

ನಿಲ್ಲುವುದಿಲ್ಲ.

ಸಂಪ್ರದಾಯದ ಬಗ್ಗೆ ಹೇಳುವುದಾದರೆ ನನ್ನ ಕೆಲವು ಗೆಳೆಯರು, ಕಾನೂನಿಗಿಂತಲೂ ಸಂಪ್ರದಾಯವೇ ಮೇಲುಗೈ ಆಗಿರುತ್ತದೆಂದು, ಆದ್ದರಿಂದ, ಯಾವುದೇ ಸಂಪ್ರದಾಯಕ್ಕೆ ಕಾನೂನಿನ ಬಲ ಇದ್ದರೆ ಅದನ್ನು ಒಪ್ಪಿಕೊಳ್ಳಬೇಕೆಂದು ಹೇಳಿದ್ದಾರೆ. ವಕೀಲರಾಗಿ ಅನುಭವ ಉಳ್ಳ ನಮಗೆ, ಹೇಗೆ ಸಂಪ್ರದಾಯವು, ಯಾವುದೇ ಪ್ರಯೋಜನಕಾರಿ ಕಾನೂನಿನ ಪರಿಣಾಮವನ್ನು ಇಲ್ಲದಂತೆ ಮಾಡಿಬಿಡಲು ಉಪಯೋಗಕ್ಕೆ ಬರುತ್ತದೆ ಎಂಬುದು ಬಹುತೇಕ ನಮ್ಮೆಲ್ಲರಿಗೂ ಬಹು ಸುಲಭವಾಗಿ ಗೊತ್ತಾಗಿಬಿಡುತ್ತದೆ. ಒಂದು ದೃಷ್ಟಾಂತ ಹೇಳುತ್ತೇನೆ. ಯಾರೇ ಹುಡುಗಿಯರನ್ನು ಅನೈತಿಕ ಉದ್ದೇಶಕ್ಕಾಗಿ ಸಮರ್ಪಿಸಿದರೆ, ಅದು ಭಾರತೀಯ ದಂಡ ಸಂಹಿತೆ ಪ್ರಕಾರ ಅಪರಾಧ ಆಗುತ್ತದೆ. ಹುಡುಗಿಯ ಕತ್ತಿಗೆ ಕೆಲವೊಂದು ಮಣಿಸರವನ್ನು ಹಾಕುವುದು ಅಂಥ ಸಮರ್ಪಣೆಯ ಲಕ್ಷಣಗಳು, ವಕೀಲನ ಜಾಣತನ ಎಲ್ಲಿವರೆಗೆ ಹೋಗುತ್ತದೆಂದರೆ, ಮಣಿ ಸರವನ್ನು ಕತ್ತಿಗೆ ಹಾಕುವ ಲಕ್ಷಣ ಒಂದು ಸಂಪ್ರದಾಯ ಎಂದು ಸೃಷ್ಟಿಸುತ್ತದೆ, ಅನೈತಿಕ ಉದ್ದೇಶಕ್ಕಾಗಿ ಸಮರ್ಪಣೆ ಮಾಡಿಸಿದ ಘಟನೆಗಳಿಗೂ ಆ ಕಲ್ಪಿತ ಸಂಪ್ರದಾಯವನ್ನು ಅನ್ವಯಿಸಿಬಿಡುತ್ತಾರೆ. ಇದಲ್ಲದೆ, ಸಂಪ್ರದಾಯದ ಕಾರಣದಿಂದಾಗಿ ಜಗಳ ಹೇಗೆ ಹುಟ್ಟಿಕೊಳ್ಳುತ್ತದೆ, ಎಷ್ಟೊಂದು ಹಣ ಅದಕ್ಕಾಗಿ ಖರ್ಚಾಗುತ್ತದೆ ಎಂಬುದು ಕೂಡ ನಮಗೆ ಗೊತ್ತಿದೆ. ಹಿಂದಿನ ಆಳ್ವಿಕೆಯಲ್ಲಿ ಇದೆಲ್ಲಾ ಆಗುತ್ತಿತ್ತು. ಯಾವುದೇ ನಿರ್ದಿಷ್ಟ ವಿಷಯದ ಮೇಲೆ ತೀರ್ಪು ಪಡೆದುಕೊಳ್ಳಲು ಜನರು ತುಂಬಾ ಹಣ ಖರ್ಚು ಮಾಡುತ್ತಿದ್ದರು. ಎರಡು ಬೇರೆ ಬೇರೆ ತೀರ್ಪುಗಳ ನಡುವೆ ವ್ಯತ್ಯಾಸ ತೋರಿಸಲು ನ್ಯಾಯಾಧೀಶರಿಗೆ ಹಣ ಸುರಿಯುತ್ತಿದ್ದರು. ಈ ಮಸೂದೆ, ಎಷ್ಟೊಂದು ಸರಳವಾಗಿದೆಯೆಂದರೆ, ಎಷ್ಟೊಂದು ಸುಸ್ಪಷ್ಟವಾಗಿದೆಯೆಂದರೆ, ಯಾರೇ ವಕೀಲನ ಸಹಾಯ ಇಲ್ಲದೆಯೇ, ಯಾರೇ ಮನುಷ್ಯ, ನಾಲ್ಕಾಣೆ ಖರ್ಚಿನಲ್ಲಿ, ಕಾನೂನಿನಲ್ಲಿ ತನ್ನ ಸ್ಥಾನ 'ಏನು' ಎಂಬುದನ್ನು ತಿಳಿದುಕೊಂಡು ಬಿಡಬಹುದು.

**ಪಂಡಿತ ಲಕ್ಷ್ಮಿಕಾಂತ ಮೈತ್ರಾ** : ನಾಲ್ಕಾಣೆ ಖರ್ಚಿನಲ್ಲಿ ಎಲ್ಲವನ್ನೂ ನಿಭಾಯಿಸಿಕೊಂಡು ಬಿಡಬಹುದು ಎನ್ನುವುದು ನಿಮ್ಮ ಮಾತಿನ ಅರ್ಥವೇ?

**ಶ್ರೀ ಹೆಚ್. ಸಿದ್ಧವೀರಪ್ಪ** : ಹೌದು, ಸಾಧ್ಯ. ಆ ದಿನವೂ ಬರುತ್ತದೆ. ಅದಕ್ಕೆ ನಾವೂ ಕೂಡ ಪ್ರಯತ್ನಮಾಡಬೇಕು. ವಾಸ್ತವವಾಗಿ, ಈ ನ್ಯಾಯಿಕ ತೀರ್ಮಾನಗಳು, ಹೇಗೆ ಕೆಲವೊಂದು ಆಸ್ತಿ ಹಕ್ಕುಗಳಿಗೆ, ಇತರ ವಿಚಾರಗಳಿಗೆ ಬಾಧಕ ಉಂಟು ಮಾಡಿವೆ ಎಂಬುದನ್ನು ನಾವು ನೋಡುತ್ತಿದ್ದೇವೆ. ನ್ಯಾಯಾಧೀಶರು ತೀರ್ಮಾನ ಕೊಡುತ್ತಾರೆ, ಅದೇ, ಕೆಲವು ಕಾಲ, ಕಾನೂನಾಗುತ್ತದೆ. ನಾಳೆ, ಅವರೇ, ಕೆಲವೊಂದು ಇತರೆ ಕಾನೂನನ್ನು, ಕೆಲವೊಂದು ಗ್ರಂಥವನ್ನು ಅಥವಾ ಸ್ಮೃತಿಯನ್ನು ಅಥವಾ ಹಳೆಯ ಕಾಲದ ದಾಖಲೆಯನ್ನು ಕಂಡುಕೊಳ್ಳುತ್ತಾರೆ, ಈ ಕಾನೂನನ್ನು ತಳ್ಳಿಹಾಕಿದ್ದೇವೆಂದು ಹೇಳುತ್ತಾರೆ. ಹೀಗಾಗಿ, ಹಿಂದೂ ಕಾನೂನಿನಲ್ಲಿ ಯಾವುದೂ ಸ್ಥಿರವಾಗಿ ನಿಂತಿಲ್ಲ. ವಾಸ್ತವವಾಗಿ, ಬ್ರಿಟಿಷರ ಆಳ್ವಿಕೆಯಲ್ಲಿ, ಕಳೆದ ನೂರಾಐವತ್ತು ವರ್ಷಗಳಿಂದ ತೀರ್ಪುಗಳ ಮೇಲೆ ತೀರ್ಪುಗಳು ಬಂದಿವೆ. ಅಷ್ಟೊಂದು ತೀರ್ಪುಗಳು ಬಂದರೂ ಹಿಂದೂ ಕಾನೂನಿನಲ್ಲಿ ಯಾವುದೂ ಸ್ಥಿರವಾಗಿ ನಿಂತಿಲ್ಲ. ತನ್ನ ನಿಶ್ಚಿತ ಸ್ಥಾನ ಯಾವುದೆಂದು ಸಾಮಾನ್ಯ ಮನುಷ್ಯನೂ ತಿಳಿದುಕೊಳ್ಳಬಲ್ಲಂತಹ ಸ್ಥಿರ ಸ್ವರೂಪದ ಕಾನೂನನ್ನು ನಾವು ಯಾವಾಗ ಹೊಂದುತ್ತೇವೆ, ಎಂದು ಕೇಳಬಯಸುತ್ತೇನೆ. ನಿಜ ಹೇಳಬೇಕೆಂದರೆ, ಸಾಲ ಕೊಡುವ ಮನುಷ್ಯ, ತನ್ನ ವಾರಸುದಾರ ಯಾರು ಯಾರು, ಅವರವರ ಭಾಗ ಎಷ್ಟು, ಮುಂತಾಗಿ ಎಲ್ಲವನ್ನು, ಖಾತ್ರಿ ಮಾಡಿಕೊಂಡಿರಬೇಕಾಗುತ್ತದೆ. ಹೀಗಾಗಿ, ವ್ಯವಸಾಯ ಜಮೀನಿನ ಮೇಲೆ ಒಂದು ಸಾವಿರ ರೂಪಾಯಿ ಸಾಲ ಕೊಡಬಹುದಾಗಿದ್ದರೂ, ಕೇವಲ

ಐನೂರು ರೂಪಾಯಿ ಅಥವಾ ಇನ್ನೆಷ್ಟೊ ಕೊಡುತ್ತಾನೆ. ಆದ್ದರಿಂದ, ಯಾವುದೇ ದೃಷ್ಟಿಕೋನದಿಂದ ನೋಡಿದರೂ, ಇದೊಂದು ಹಿತಕರವಾದ ಮಸೂದೆಯಾದ್ದರಿಂದ, ನಾನು ಇದಕ್ಕೆ ಸಂಪೂರ್ಣವಾಗಿ ಬೆಂಬಲಕೊಡುತ್ತೇನೆ.

**ಸನ್ಮಾನ್ಯ ಸಭಾಧ್ಯಕ್ಷರು :** ಚರ್ಚೆಯು, ನಾಳೆ, ಪ್ರಶ್ನೋತ್ತರ ಅವಧಿ ಮುಗಿದ ನಂತರ ಮುಂದುವರಿಯುತ್ತದೆ.

# *ಹಿಂದೂ ಸಂಹಿತೆ – ಮುಂದುವರಿದಿದೆ

****ಶ್ರೀಮತಿ ಜಿ. ದುರ್ಗಾಬಾಯಿ** (ಮದ್ರಾಸ್ : ಸಾಮಾನ್ಯ) : ಸನ್ಮಾನ್ಯ ಕಾನೂನು ಮಂತ್ರಿಗಳು ಮಂಡಿಸಿರುವ ಸೂಚನೆಯನ್ನು ಬೆಂಬಲಿಸಲು ನನಗೆ ತುಂಬಾ ಸಂತೋಷ ಆಗುತ್ತಿದೆ. ಈ ಮಸೂದೆಗೆ ಆಧಾರವಾಗಿರುವ ವರದಿಯನ್ನು ತುಂಬಾ ಶ್ರಮವಹಿಸಿ ಸಿದ್ಧಪಡಿಸಿದ ಕಮಿಟಿಯ ಶ್ರೀ ಬಿ. ಎನ್. ರಾವ್‌ರವರಿಗೆ, ಅವರ ಸಹೋದ್ಯೋಗಿಗಳಿಗೆ ನಾನು ಕೃತಜ್ಞತೆ ಅರ್ಪಿಸುತ್ತೇನೆ.

ಹಿಂದೂ ನ್ಯಾಯ ಪದ್ಧತಿಯನ್ನು ಕ್ರೋಡೀಕರಿಸುವ ಈ ಮಸೂದೆಯು ಶಾಸನ ಪುಸ್ತಕಕ್ಕೆ ಸೇರಿದರೆ, ಅದು ಈ ದೇಶದ ಸಾಮಾಜಿಕ ಇತಿಹಾಸದಲ್ಲೇ ಒಂದು ಹೆಗ್ಗುರುತಾಗುತ್ತದೆ. ಈ ಮಸೂದೆಯ ಮುಖ್ಯ ಕಲಮುಗಳ ಬಗ್ಗೆ ವಿವರವಾಗಿ ಹೇಳುವುದಕ್ಕೂ ಮುಂಚೆ, ನಾನು ಒಂದು ವಿಚಾರವನ್ನು ಒತ್ತಿ ಹೇಳಬಯಸುತ್ತೇನೆ. ಈ ಮಸೂದೆಯ ಕಲಮುಗಳು, ಅನುಮತಿ ಕೊಡುವ ಅಥವಾ ಅವಕಾಶ ಕಲ್ಪಿಸುವ ಸ್ವರೂಪದ ಕಲಮುಗಳು ಎನ್ನುವ ಸಂಗತಿ ಮಾನ್ಯ ಸದಸ್ಯರೆಲ್ಲರಿಗೂ ತಿಳಿದೇ ಇದೆ. ಸಂಪ್ರದಾಯಸ್ಥ ಹಿಂದೂಗಳ ಮೇಲೆ ಇವು ಯಾವ ರೀತಿಯ ನಿರ್ಬಂಧವನ್ನಾಗಲೀ, ಬಲವಂತವನ್ನಾಗಲೀ ವಿಧಿಸುವುದಿಲ್ಲ. ಪ್ರವರ್ಧಮಾನಕ್ಕೆ ಬರುತ್ತಿರುವ ಹಿಂದೂ ಜನಾಂಗದ ಸ್ತ್ರೀ, ಪುರುಷರು ಹಳೆಯ ರೀತಿನೀತಿಗಳನ್ನೇ ಅನುಸರಿಸುವ ತಮ್ಮ ಸ್ವಾತಂತ್ರ್ಯಕ್ಕೆ ಯಾವುದೇ ಬಾಧಕ ಆಗದ ಹಾಗೆ ಅಥವಾ ಅಂಥ ಸ್ವಾತಂತ್ರ್ಯದ ಅತಿಕ್ರಮಣ ಆಗದ ಹಾಗೆ ಬದುಕ ಬಯಸಿದರೆ, ಹಾಗೆ ಬದುಕುವ ಸ್ವಾತಂತ್ರ್ಯವನ್ನು ಕೊಡುವುದೇ ಈ ಕಲಮುಗಳ ಉದ್ದೇಶ.

ಈ ಮಸೂದೆ ವಿರುದ್ಧ ಎತ್ತಿರುವ ಒಂದು ಅಥವಾ ಎರಡು ಆಕ್ಷೇಪಣೆಗಳಿಗೆ ಮಾತ್ರವೇ ನನ್ನ ಅಭಿಪ್ರಾಯವನ್ನು ಹೇಳಬಯಸುತ್ತೇನೆ. ಕ್ರೋಡೀಕರಣ ಮಾಡುತ್ತಿರುವುದರ ವಿರುದ್ಧ ಮೊದಲನೆ ಆಕ್ಷೇಪಣೆ ವ್ಯಕ್ತವಾಗಿದೆ. ಹಿಂದೂ ನ್ಯಾಯದ ಅನೇಕ ತತ್ತ್ವಗಳು ಸುಸ್ಥಾಪಿತವಾಗಿವೆ. ಈ ಮಸೂದೆಯು ಸುಸ್ಥಾಪಿತವಾಗಿರುವ ಕಟ್ಟುಕಟ್ಟಳೆಯನ್ನು, ಅಸ್ತವ್ಯಸ್ತಗೊಳಿಸುತ್ತದೆಯಾದ್ದರಿಂದ, ಸಂಹಿತೆಯ ಅಗತ್ಯವೇ ಇರಲಿಲ್ಲ ಎಂದು ಹೇಳಲಾಗಿದೆ. ಪೀಳಿಗೆಯಿಂದ ಪೀಳಿಗೆಗೆ ಸಾಗಿ ಬಂದಿರುವ ಹಿಂದೂ ನ್ಯಾಯದ ತತ್ತ್ವಗಳನ್ನು ಸಂರಕ್ಷಿಸುವುದರ ಬದಲು, ಹಿಂದೂ ಸಮಾಜಕ್ಕೆ ಇರದ ಅನೇಕ ತತ್ತ್ವಗಳನ್ನು ಸೇರಿಸಲು ಈ ಕ್ರೋಡೀಕರಣದಲ್ಲಿ ಪ್ರಯತ್ನ ಮಾಡಲಾಗುತ್ತಿದೆ ಎಂಬುದು ಇನ್ನೊಂದು ಆಕ್ಷೇಪಣೆ. ಸ್ಮೃತಿಗಳ, ಶ್ರುತಿಗಳ ಹಾಗೂ ಅತ್ಯಂತ ಪ್ರಸಿದ್ಧರಾದ ಋಷಿಮುನಿಗಳ ಕಟ್ಟುಕಟ್ಟಳೆಗಳನ್ನು ಬದಲಾಯಿಸುವ ಹಕ್ಕು ನ್ಯಾಯವಿಧಾಯಕ ಸಭೆಗೆ ಇಲ್ಲವೆಂದು ಹೇಳಲಾಗಿದೆ. ಈ ಹಿಂದೂ ಸಂಹಿತೆ ಮಸೂದೆಯು ಕ್ರಾಂತಿಕಾರಕ ಸ್ವರೂಪದ ಬದಲಾವಣೆಗಳನ್ನು ತರಲು ಬಯಸಿರುವುದರಿಂದ, ಇದು, ಸ್ಮೃತಿಗಳು ಮತ್ತು ಧರ್ಮವು ಗೊತ್ತುಪಡಿಸಿದ ಕಟ್ಟುಕಟ್ಟಳೆಯನ್ನು ಹಾಳು ಮಾಡುತ್ತದೆಯೆಂಬುದು ಇನ್ನೊಂದು ಆಕ್ಷೇಪಣೆ. ಹಿಂದೂ ನ್ಯಾಯದ ಅನೇಕ ತತ್ತ್ವಗಳು ಈಗಾಗಲೇ ಸುಸ್ಥಾಪಿತವಾಗಿರುವುದರಿಂದ, ಈ ಎಲ್ಲ ತತ್ತ್ವಗಳನ್ನು ವ್ಯವಸ್ಥಿತಗೊಳಿಸಿ, ಸುಲಭವಾಗಿ ಅರ್ಥ

---

* ಸಿ.ಎ.(ಲೆಜಿ), ಸಂಪುಟ II, ಭಾಗ II, ಮಾರ್ಚ್ ೧೯೪೯ ಪುಟ ೯೯೧–೧೦೩೦.

** ಅದೇ ಪುಟಗಳು ೯೯೧–೯೫.

ಮಾಡಿಕೊಳ್ಳಬಹುದಾದ ಸಂಹಿತೆಯನ್ನು ರಚಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂಬುದೇ ಈ ಎಲ್ಲ ಆಕ್ಷೇಪಣೆಗಳಿಗೆ ನನ್ನ ಉತ್ತರ.

ಈಗಿರುವ ಹಿಂದೂ ಕಟ್ಟುಕಟ್ಟಳೆಗಳು ಕಬ್ಬಿಣದ ಕಡಲೆ, ನಿಶ್ಚಿತವಾದುವುಗಳಲ್ಲ. ಅವುಗಳ ಉಪಯುಕ್ತತೆಯನ್ನು ಅನೇಕ ನ್ಯಾಯಿಕ ತೀರ್ಪುಗಳು, ಪೂರ್ವ ನಿದರ್ಶನಗಳು ತಳ್ಳಿಹಾಕಿವೆ. ವಿಷಯದ ಮೇಲಿನ ತೀರ್ಪಿನ ನ್ಯಾಯವು, ಸೊಂಪಾಗಿ ಬೆಳೆದಿರುವ ಗಿಡಬಳ್ಳಿಗಳ ಮರೆ ಇದ್ದಂತೆ, ವಿವರಗಳು ವಿಪರೀತ ಇದ್ದು, ಒಟ್ಟು ಸ್ವರೂಪ ಗೊತ್ತೇ ಆಗುವುದಿಲ್ಲವೆಂದು ಒಬ್ಬರು ಇಂಗ್ಲಿಷ್ ಲೇಖಕರು ಹೇಳಿದ್ದಾರೆ. ಕಾಲಕಾಲಕ್ಕೆ ಹಲವಾರು ಹೈಕೋರ್ಟ್‌ಗಳಿಂದ ಪರಸ್ಪರ ಭಿನ್ನಾಭಿಪ್ರಾಯದ ತೀರ್ಪುಗಳು ಬಂದಿವೆ. ಹಿಂದೂ ನ್ಯಾಯದ ಹಲವಾರು ಸೂಕ್ಷ್ಮ ವಿಚಾರಗಳ ಮೇಲೆ ಪ್ರಿವಿ ಕೌನ್ಸಿಲ್ ಇತ್ತಿರುವ ತೀರ್ಪುಗಳು ಕೂಡ, ಪ್ರಾಚೀನ ಪ್ರಮಾಣ ಮತ್ತು ಆಧುನಿಕ ಮನೋಭಾವ ಎರಡೂ ದೃಷ್ಟಿಯಿಂದ ಒಪ್ಪಲಾಗದಂಥವುಗಳೆಂಬ ವ್ಯಾಪಕ ಭಾವನೆ ಎಲ್ಲ ಕಡೆ ಇದೆ. ಒಂದು ಏಕರೂಪದ ಹಾಗೂ ಕ್ರೋಡೀಕೃತ ಸಂಹಿತೆಯು ಹಿಂದೂ ಸಮಾಜಕ್ಕೆ ತುಂಬಾ ಅನುಕೂಲಕರ ಆಗಬಲ್ಲದು. ಏಕೆಂದರೆ, ಕಾನೂನು ವಿದ್ಯಾರ್ಥಿಗಳಿಗೆ ಹಾಗೂ ವಕೀಲರುಗಳಿಗೆ ಹಿಂದೂ ನ್ಯಾಯವನ್ನು ಸಂಪೂರ್ಣವಾಗಿ ಮನನ ಮಾಡಿಕೊಳ್ಳಲು ಅನೇಕ ವರ್ಷಗಳೇ ಹಿಡಿಯುತ್ತಿತ್ತು. ಇದರಿಂದ, ಅವರ ಸಾಕಷ್ಟು ಕಾಲ ಉಳಿಯುತ್ತದೆ; ಜನ ಸಾಮಾನ್ಯನೂ ಸಂಹಿತೆಯನ್ನು ಓದಿಕೊಂಡು "ನನ್ನ ಹಕ್ಕುಗಳಿಗೆ, ವಿಶೇಷ ಸವಲತ್ತುಗಳಿಗೆ, ಬಾಧ್ಯತೆಗಳಿಗೆ ಇದೇ ಆಧಾರ" ಎಂದು ಸ್ವತಃ ಮನವರಿಕೆ ಮಾಡಿಕೊಳ್ಳುತ್ತಾನೆ. ಸಂಹಿತೆಯು, ನ್ಯಾಯಾಧೀಶರುಗಳ ಸಮಯ, ಶ್ರಮವನ್ನು ಕೂಡ ಉಳಿಸುತ್ತದೆ, ನ್ಯಾಯದಾನ ಶೀಘ್ರವಾಗಿ ಆಗುವುದಕ್ಕೆ ಸಹಾಯಕ ಆಗುತ್ತದೆ. ಸಂಹಿತೆ ಬೇಡ ಎಂದರೆ, ನನ್ನ ಪ್ರಕಾರ, ನ್ಯಾಯ ಬೇಡ ಎಂದೇ ಅರ್ಥ.

ಕ್ರಾಂತಿಕಾರಕ ಸ್ವರೂಪದ ಬದಲಾವಣೆಗಳನ್ನು ಸಂಹಿತೆಯು ತರುತ್ತಿದೆಯೆಂದು ಪಟ್ಟಭದ್ರ ಹಿತಾಸಕ್ತಿಗಳು ಮಾತ್ರವೇ ಆಕ್ಷೇಪಣೆ ಎತ್ತಿದ್ದಾರೆ. ದೇಶದ ಭವಿಷ್ಯತ್ತಿನ ಹಿತದೃಷ್ಟಿಯಿಂದ, ಕೆಲವೊಂದು ಪ್ರಸ್ತುತ ಹಿತಾಸಕ್ತಿಗಳನ್ನು ತ್ಯಾಗಮಾಡುವುದು ಯಾವಾಗಲೂ ಸ್ವಾಗತಾರ್ಹವಾದ ಒಂದು ಒಳ್ಳೆಯ ಕೃತ್ಯ. ವಾಸ್ತವವಾಗಿ ಈ ಸಂಹಿತೆಯು, ಆ ನಿಟ್ಟಿನಲ್ಲಿ, ನಿಜವಾಗಿಯೂ ಸಾಕಷ್ಟು ಚಿಂತನೆ ಮಾಡಿಲ್ಲ, ಇದೇ ನನ್ನ ಅಭಿಪ್ರಾಯ.

ವ್ಯವಸಾಯ, ಆಸ್ತಿಪಾಸ್ತಿಯನ್ನು ಈ ಸಂಹಿತೆಯ ವ್ಯಾಪ್ತಿಯಿಂದ ಬಿಟ್ಟುಬಿಡಲಾಗಿದೆ. ಆದ್ದರಿಂದ, ಏಕರೂಪದ ಕಾನೂನನ್ನು ಹೊಂದುವ ನಿಮ್ಮ ಉದ್ದೇಶವೇ ವಿಫಲವಾಗಿದೆಯೆಂದು ಹೇಳಲಾಗಿದೆ. ಈ ಉದ್ದೇಶವೇ ವಿಫಲವಾದ ಮೇಲೆ ಸಂಹಿತೆಯ ರಚನೆಗೆ ಏಕೆ ಈ ಪ್ರಯತ್ನ? ಎಲ್ಲ ಹಿಂದೂಗಳಿಗಾಗಿ, ಒಂದು ಏಕರೂಪದ ಕಾನೂನನ್ನು ಹೊಂದುವುದೇ ಈ ಸಂಹಿತೆಯ ಉದ್ದೇಶವೇ ಹೊರತು ಎಲ್ಲ ಬಗೆಯ ಆಸ್ತಿಪಾಸ್ತಿಗೆ ಒಂದು ಏಕರೂಪದ ಕಾನೂನಲ್ಲ.

ಬೇರೇನೂ ಅಲ್ಲದಿದ್ದರೂ, ಕೃಷಿ ಹಿತದೃಷ್ಟಿಯಿಂದಲೇ, ಪ್ರತ್ಯೇಕ ಕಾನೂನುಗಳನ್ನು ನ್ಯಾಯವಿಧಾಯಕ ಸಭೆಗಳು ರಚಿಸುತ್ತವೆ. ಅವುಗಳಲ್ಲಿ, ಇತರ ಬಗೆಯ ಆಸ್ತಿಪಾಸ್ತಿಗೆ ಅನ್ವಯವಾಗುವ ಉತ್ತರಾಧಿಕಾರದ ಕಾನೂನಿಗಿಂತಲೂ ಬೇರೆಯದೇ ಆದ, ವಿಶೇಷ ಉತ್ತರಾಧಿಕಾರದ ಕಾನೂನು ಇರುತ್ತದೆ.

ಮಗಳಿಗೆ ಪಾಲು ಕೊಡುವ ವಿಚಾರದಲ್ಲಿ ವ್ಯಕ್ತವಾಗಿರುವ ಆಕ್ಷೇಪಣೆ ಬಗ್ಗೆ ನಾನು ಈಗ ಹೇಳುತ್ತೇನೆ. ಮಸೂದೆಯು, ಆಸ್ತಿಯು, ತುಂಡುತುಂಡಾಗುವುದಕ್ಕೆ, ಅಳಿಯನ ರೂಪದಲ್ಲಿ ಅನ್ಯ ಸನ್ನಿವೇಶ ಹುಟ್ಟಿಕೊಳ್ಳುವುದಕ್ಕೆ ಆಸ್ಪದ ಕೊಡುತ್ತದೆ ಎಂದು ಹೇಳಲಾಗಿದೆ. ಏಕಕಾಲದಲ್ಲಿ, ಮಗಳನ್ನು, ಮಗನಂತೆ ವಾರಸುದಾರಳನ್ನಾಗಿ ಮಾಡಿದರೆ ಹಿಂದೂ ಸಮಾಜವು ನುಚ್ಚುನೂರಾಗುತ್ತದೆಂಬ ಆಕ್ಷೇಪಣೆ ವ್ಯಕ್ತವಾಗಿದೆ. ಮಗಳಿಗೂ ಪಾಲು

ಕೊಟ್ಟರೆ, ಅವಳ ಸಹೋದರರಿಗೆ ಅವಳ ಮೇಲಿರುವ ಪ್ರೀತಿವಾತ್ಸಲ್ಯ ಹಾಳಾಗುತ್ತದೆಂದು ಹೇಳಲಾಗಿದೆ. ಅನೇಕ ಕುಟುಂಬಗಳಲ್ಲಿ, ಮಗಳ ಮದುವೆಗೆ ಖರ್ಚು ವೆಚ್ಚವನ್ನೂ ಮಾಡಿ, ಆಸ್ತಿಯಲ್ಲಿ ಪಾಲನ್ನೂ ಕೊಟ್ಟರೆ, ಈ ಎರಡೂ ಹೊರೆಗಳ ಭಾರ ಗಂಡುಮಕ್ಕಳ ಮೇಲೆ ಬಿದ್ದು ಸರ್ವನಾಶ ಆಗುತ್ತಾರೆಂದು ಸಹ ಹೇಳಲಾಗಿದೆ. ಒಡಹುಟ್ಟಿದ ಸಹೋದರಿಯರ ಒಳಿತಿಗಾಗಿ ಸ್ವಲ್ಪ ತ್ಯಾಗ ಮಾಡದ ಸಹೋದರರದು ಅದೆಂಥ ಪ್ರೀತಿವಾತ್ಸಲ್ಯ? ಮಗಳಿಗೆ ಪಾಲು ಕೊಡದೇ ಹೋದರೆ, ಗಂಡುಮಕ್ಕಳಲ್ಲಿ ಪ್ರೀತಿವಾತ್ಸಲ್ಯ ಉಕ್ಕಿ ಹರಿಯುತ್ತದೇನು?

ಈಗಾಗಲೇ ಹೇಳಿರುವ ಹಾಗೆ ಕೃಷಿ ಸ್ವತ್ತನ್ನು ಈ ವಿಧೇಯಕದ ವ್ಯಾಪ್ತಿಯಿಂದ ಹೊರತುಪಡಿಸಿರುವಾಗ, ತುಂಡೀಕರಣಕ್ಕೆ ಸಂಬಂಧಿಸಿದಂತೆ, ಈ ಪ್ರಶ್ನೆಯನ್ನು ಎತ್ತುವುದಾದರೂ ಹೇಗೆ, ನನಗೆ ಅರ್ಥವಾಗುತ್ತಿಲ್ಲ. ಈ ಅಂಶವನ್ನು ಸದನದ ಮಾನ್ಯ ಸದಸ್ಯರೊಬ್ಬರು ಎತ್ತಿದ್ದರು ಮತ್ತು ಕೃಷಿ ಸ್ವತ್ತಿನ ಸಕಲವನ್ನು ಈ ಸಂಹಿತೆಯ ಕಾರ್ಯಾಚರಣೆಯಿಂದ ಹೊರತುಪಡಿಸಲಾಗಿದೆ ಎಂಬ ಸಂಗತಿಯು ನಮಗೆಲ್ಲರಿಗೂ ಗೊತ್ತು. ಅದು ನಗರದ ಸ್ವತ್ತಿಗೆ ಮತ್ತು ಚರ ಸ್ವತ್ತಿಗೆ ಮಾತ್ರ ಅನ್ವಯಿಸುವುದು. ನನಗೆ ಅನಿಸುವ ಮಟ್ಟಿಗೆ ತುಂಡೀಕರಣ ಎಂದರೆ, ಮಗಳಿಗೂ ಒಂದು ಪಾಲನ್ನು ಕೊಟ್ಟ ಪಕ್ಷದಲ್ಲಿ ಅವರ ಪಾಲು ಕಡಿಮೆಯಾಗುವುದು ಎಂದು ಅವರ ಅರ್ಥ. ಮಗಳು ಒಂದೇ ರಕ್ತದ ಸಂತಾನವಾಗಿರುವಾಗ, ಅವಳಿಗೆ ಒಂದು ಪಾಲನ್ನು ಕೊಡುವ ಬಗ್ಗೆ ಪ್ರಸ್ತಾಪಿಸಿದರೆ, ನಾನು ಕೇಳುವುದೆಂದರೆ, ಇಷ್ಟೆಲ್ಲ ಗುಲ್ಲು ಗದ್ದಲ ಯಾಕೆ ಅಂತ?

ಕುಟುಂಬದಲ್ಲಿ ಹೊಸಬರನ್ನು ಸೇರಿಸುವುದಕ್ಕೆ ಸಂಬಂಧಪಟ್ಟ ಹಾಗೆ ನನ್ನ ಉತ್ತರವೆಂದರೆ ಮಗಳು ತನ್ನ ತಂದೆಯ ಕಡೆಯಿಂದ ಅಗತ್ಯವಿದ್ದಲ್ಲಿ ಕಾನೂನುದ್ವಾರಾ ತೆಗೆದುಕೊಳ್ಳುವ ಸ್ವತ್ತನ್ನು ಅವಳ ಪ್ರತ್ಯೇಕ ಸ್ವತ್ತಿನ ಭಾಗವಾಗಿ ಮಾಡಬಹುದು. ಆ ಕಾನೂನು ಉಪಬಂಧನದಿಂದ ಉಂಟಾಗುವ ಒಳಿತು ಅಥವಾ ಕೆಡುಕು ಆ ನಿರ್ದಿಷ್ಟ ವ್ಯಕ್ತಿಯನ್ನು ಅಂದರೆ ಸಂಬಂಧಪಟ್ಟ ಅಳಿಯನ ಮೇಲೆ ಅವಲಂಬಿಸಿರುತ್ತದೆ. ಅದನ್ನು ಕುರಿತು ಹೆಚ್ಚಿಗೆ ಏನನ್ನೂ ಹೇಳಲಾರೆನು.

ಇನ್ನು ಇಲ್ಲಿ ಗಮನಿಸತಕ್ಕ ಅಂಶವೆಂದರೆ, ಮಗಳು ಮಗನ ಹಾಗೆಯೇ, ತಂದೆಯ ಮರಣದ ತರುವಾಯವೇ ಒಂದು ಪಾಲನ್ನು ಕೇಳುತ್ತಾಳೆ. ಮತ್ತು ಝೀವಂತವಿರುವಾಗ, ಅವಳು ವಿಭಜನೆಯನ್ನು ಕೇಳುವ ಪ್ರಶ್ನೆಯು ಸರ್ವಥಾ ಉದ್ಭವಿಸುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರ ಪೈಕಿ ಕೆಲವರು ಈ ಬಗ್ಗೆ ಆಕ್ಷೇಪ ಎತ್ತುವುದೇಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ಈ ವಿಷಯವನ್ನು ಕುರಿತು ಕಾನೂನು ಮಂತ್ರಿಗಳು ಈಗಾಗಲೇ ವ್ಯವಹರಿಸಿರುವ ಕಾರಣ, ಸ್ಮೃತಿಗಳಲ್ಲಿಯೇ ತಂದೆಯ ಸ್ವತ್ತಿನಲ್ಲಿ ಮಗಳ ಪಾಲಿನ ಬಗ್ಗೆ ಮನ್ನಣೆ ನೀಡಿರುವ ಕಾರಣ, ಈ ವಿಷಯದಲ್ಲಿ ಕ್ರಾಂತಿಕಾರಕ ಎಂದು ಹೇಳಬಹುದಾದ ಸಂಗತಿಯೇನೂ ಇಲ್ಲ. ಇನ್ನು ಮಗಳು ತಂದೆಯ ಅಥವಾ ಪಿತೃಗಳ ಆಧ್ಯಾತ್ಮಿಕ ಪ್ರಯೋಜನಗಳಿಗೆ ಯಾವುದೇ ಕೊಡುಗೆ ನೀಡುವುದಿಲ್ಲ ಎಂಬ ಆಧಾರದ ಮೇಲೆ ತಂದೆಯ ಸ್ವತ್ತಿನಿಂದ ಮಗಳನ್ನು ಹೊರತುಪಡಿಸುವುದು, ನನ್ನ ಅಭಿಪ್ರಾಯದಲ್ಲಿ, ಅನ್ಯಾಯಪೂರ್ಣ.

ಈ ಸಂಬಂಧದಲ್ಲಿ ಮುಂದೆ ಇಡಲಾದ ವಾದವೆಂದರೆ ಮಗಳು ತನ್ನ ಗಂಡನ ಸ್ವತ್ತಿನಲ್ಲಿ ಒಂದು ಪಾಲನ್ನು ತೆಗೆದುಕೊಂಡು, ತಂದೆಯ ಸ್ವತ್ತಿನಲ್ಲಿ ಪಾಲು ಕೇಳಲು ಬಾರದೆ ಇರಬಾರದೇಕೆ? ಇದು ಒಂದು ರಾಜಸೂತ್ರವೆಂದು ತೋರುತ್ತದೆ. ಆದರೆ ರಾಜಸೂತ್ರವು ಮಹಿಳೆಯರಿಗೆ ಸ್ವೀಕಾರ್ಯ ಮಾತ್ರವಲ್ಲ ಅಥವಾ ಸ್ವೀಕಾರ್ಯವಾಗುವ ಸೂತ್ರವೂ ಅಲ್ಲ ಎಂದು ನೇರವಾಗಿ ಒಡನೆಯೇ

ಹೇಳುತ್ತೇನೆ. ನಾನು ಹೇಳುವುದೆಂದರೆ ನಮ್ಮ ಸಮಾನತೆಯ ಆಧಾರದ ಮೇಲೆ ನಮಗೆ ಮನ್ನಣೆ ದೊರೆಯಬೇಕು. ಲಿಂಗಭೇದದ ಮೇಲೆ ಆಧಾರಿತವಾದ ತಾರತಮ್ಯವನ್ನು ರದ್ದುಗೊಳಿಸಲು ಈ ಸಂಹಿತೆಯು ಪ್ರಸ್ತಾಪಿಸುತ್ತದೆ ಮತ್ತು ಅದನ್ನು ತೋರಿಸಲೇಬೇಕು. ಮಗಳನ್ನು ಒಬ್ಬ ವಾರಸುದಾರಳನ್ನಾಗಿ ಪರಿಗಣಿಸಬೇಕು ಮತ್ತು ಮಗಳಾಗಿ ಮತ್ತು ತಂದೆಯ ವಾರಸುದಾರಳಾಗಿ ತನ್ನ ಪೂರ್ಣ ಹಕ್ಕನ್ನು ಅಧಿಭೋಗಿಸಬೇಕು. ಇನ್ನು ವಿಘಟನೆಯ ವಿಚಾರಕ್ಕೆ ಸಂಬಂಧಪಟ್ಟ ಹಾಗೆ, ಆ ವಿಚಾರವನ್ನು ಕುರಿತು ನಾನು ಈಗಾಗಲೇ ವ್ಯವಹರಿಸಿದ್ದುಂಟು. ಉಂಟಾಗಬಹುದಾದ ಕೇಡನ್ನು ವಿಭಿನ್ನ ವಿಧಗಳಲ್ಲಿ ಎದುರಿಸಬಹುದು. ತುಂಡೀಕರಣವನ್ನು ನಿಲ್ಲಿಸಬಹುದು ಮತ್ತು ಕ್ರೋಡೀಕರಣವನ್ನು ಕಾನೂನುದ್ವಾರಾ ಭದ್ರಗೊಳಿಸಬಹುದು. ಸ್ವತ್ತು ನಿರ್ದಿಷ್ಟ ಮಟ್ಟಿಗೆ ಇಳಿದುಹೋದರೆ, ಅದನ್ನು ಮಾರಾಟ ಮಾಡಿ ಪಾಲುಗಳನ್ನು ಸರಿಹೊಂದಿಸಿಕೊಳ್ಳಬಹುದು. ಈ ಸಮಸ್ಯೆಯನ್ನು ಬಗೆಹರಿಸುವ ದಿಶೆಯಲ್ಲಿ ವಿಭಿನ್ನ ಮಾರ್ಗಗಳುಂಟು. ಆದ್ದರಿಂದ ಮಗಳಿಗೆ ಪಾಲು ದೊರೆಯಬಾರದು ಎಂಬ ಕಾರಣದ ಮೇಲೆ ವಾದವನ್ನು ಮಂಡಿಸಲಾಗದು. ಆದು ಕಾರಣವೇ ಆಯ್ಕೆ ಸಮಿತಿಯು, ಸಮಾನತೆಯ ಈ ತತ್ತ್ವವನ್ನು ಆಧರಿಸಿ ಮಗಳಿಗೆ ಮಗನ ಹಾಗೆಯೇ ಸಮಪಾಲು ಕೊಡಬೇಕು ಎಂದು ಶಿಫಾರಸು ಮಾಡಿದೆ. ಆಯ್ಕೆ ಸಮಿತಿಯಲ್ಲಿ ಈ ಸಂಬಂಧದಲ್ಲಿ ಸರಿಸುಮಾರು ಒಮ್ಮತದಿಂದ ಸಲ್ಲಿಸಿರುವ ಶಿಫಾರಸುಗಳನ್ನು ಬೆಂಬಲಿಸಬೇಕು ಎಂದು ನಾನು ಮಾನ್ಯ ಸದನಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಚ್.ವಿ. ಕಾಮತ್** (ಸಿ.ಪಿ. ಮತ್ತು ಬಿರಾರ್: ಸಾಮಾನ್ಯ) : ಆದರೆ ಆ ಬಗ್ಗೆ ಡಾ॥ ಅಂಬೇಡ್ಕರ್ ಅವರ ಸಹಾನುಭೂತಿ ಇರಲಿಲ್ಲ.

**ಶ್ರೀಮತಿ ಜಿ. ದುರ್ಗಾಬಾಯಿ :** ಆದ್ದರಿಂದ ಮಗಳು ತಂದೆಯ ಕಡೆಯಿಂದಲೂ ಪಾಲು ತೆಗೆದುಕೊಳ್ಳುತ್ತಾಳೆ, ಗಂಡನ ಕಡೆಯಿಂದಲೂ ಪಾಲು ತೆಗೆದುಕೊಳ್ಳುತ್ತಾಳೆ, ಆದರೆ ಗಂಡನು ಏನೂ ಏನೂ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರೆ ಅದರ ಅರ್ಥವೇನು? ಆಯ್ಕೆ ಸಮಿತಿಯ ಶಿಫಾರಸುಗಳ ಪ್ರಕಾರ ಹೆಂಡತಿಯು ಗಂಡನ ಸ್ವತ್ತನ್ನು ವಾರಸಾದ್ವಾರಾ ಪಡೆಯುವ ಹಾಗೆಯೇ ಗಂಡನು ಸಹ ಹೆಂಡತಿಯ ಸ್ವತ್ತನ್ನು ವಾರಸಾದ್ವಾರ ಪಡೆಯಬಹುದು ಮತ್ತು ಮಗಳು ತಂದೆಯ ಸ್ವತ್ತಿನಲ್ಲಿ ಹಕ್ಕು ಕೇಳುವ ರೀತಿಯಲ್ಲಿಯೇ ಮಗನಿಗೆ ತಾಯಿಯ ಸ್ವತ್ತಿನಲ್ಲಿ ಮಗಳ ಪಾಲಿಗೆ ಸಮವಾದ ಪಾಲನ್ನು ಕೊಡಬೇಕು. ಆದ್ದರಿಂದ ಈ ಆಧಾರಗಳ ಮೇಲೆ ಈ ವಿಧೇಯಕವನ್ನು ವಿರೋಧಿಸುವವರಿಗೂ ಕೂಡ ಯಾವುದೇ ತೊಂದರೆ ಇದಿರಾಗುವುದಿಲ್ಲ. ಇನ್ನು, ಸಮಯವು ಪರಿಮಿತವಾಗಿದ್ದು ಇನ್ನೂ ಅನೇಕ ಸದಸ್ಯರು ಮಾತನಾಡಲು ಆತುರರಾಗಿರುವ ಕಾರಣ, ನಾನು ಯಾವುದೇ ವಿಷಯಗಳನ್ನು ಉದ್ಧರಣ ಮಾಡಲು ಇಷ್ಟಪಡುವುದಿಲ್ಲ. (ಮಾನ್ಯ ಸದಸ್ಯರು: ನಿಮ್ಮ ಮಾತು ಮುಂದುವರಿಸಿ. ಅವಸರವಿಲ್ಲ). ಈ ಸಂಬಂಧದಲ್ಲಿ ಶ್ರೀ ವಿ. ವಿ. ಅಯ್ಯಂಗಾರ್ ಅವರು ಎತ್ತಿ ತೋರಿಸಿದ ಸಂಗತಿಯೆಂದರೆ, ಧಾರ್ಮಿಕ ಆಧಾರಗಳ ಮೇಲೆ ಈ ಕಾನೂನಿಗೆ ವಿರೋಧ ವ್ಯಕ್ತಪಡಿಸುವವರು ಹಿಂದೂ ಧರ್ಮವು ಮನುವಿನ ಕಾಲದಿಂದ ಈವರೆಗೆ ಕಿಂಚಿತ್ತೂ ಬದಲಾವಣೆ ಆಗಿಲ್ಲ ಎಂದು ತಪ್ಪು ತಿಳಿವಳಿಕೆಗೆ ಒಳಗಾಗಿದ್ದಾರೆ.

ಇಲ್ಲಿಂದ ನಾನು ಇನ್ನೊಂದು ವಿಷಯಕ್ಕೆ ಹೋಗುತ್ತೇನೆ. ಮಹಿಳೆಯು ಒಂದು ಎಸ್ಟೇಟ್ ಅನ್ನು ಅನನ್ಯವಾಗಿ ಧಾರಣ ಮಾಡದೆ ಝೀವನಪರ್ಯಂತ ಮಾತ್ರ ಧಾರಣ ಮಾಡುವ ಸಂಬಂಧದಲ್ಲಿ ಮಹಿಳೆಯ

ಸ್ಥಾನಮಾನವನ್ನು ಕುರಿತ ವಿಚಾರ. ಮಹಿಳೆಯ ಎಸ್ಟೇಟ್‌ಗೆ ಸಂಬಂಧಿಸಿದಂತೆ ಜೋಡಿಸಲಾದ ಈ ಅನರ್ಹತೆಯನ್ನು ಹೋಗಲಾಡಿಸಲು ಈ ವಿಧೇಯಕವು ಉದ್ದೇಶಿಸುತ್ತದೆ ಮತ್ತು ಮಹಿಳೆಗೆ ಎಸ್ಟೇಟ್ ಧಾರಣ ಮಾಡುವ ಹಕ್ಕನ್ನು ಝೀವನಪರ್ಯಂತವಷ್ಟೇ ಅಲ್ಲದೆ ಅನನ್ಯವಾಗಿ ಧಾರಣ ಮಾಡುವ ಹಕ್ಕನ್ನು ಒದಗಿಸುತ್ತದೆ. ಮಹಿಳೆಯರ ಸಂದರ್ಭದಲ್ಲಿ ಎಸ್ಟೇಟ್ ಧಾರಣ ಹಕ್ಕನ್ನು ಪರಿಮಿತಗೊಳಿಸಲು ಮುಂದಿಟ್ಟ ಕಾರಣವೆಂದರೆ ಅದರ ನಿರ್ವಹಣೆ ಮಹಿಳೆಗೆ ಸಾಧ್ಯವಿಲ್ಲ, ಮಾತ್ರವಲ್ಲದೆ ಅವಳು ಮೋಸಹೋಗಬಹುದು ಅಥವಾ ಶೋಷಣೆಗೆ ಗುರಿಯಾಗಬಹುದು. ಇದಲ್ಲದೆ ಅವರು ನಿರಕ್ಷರರಾಗಿರುತ್ತಾರೆ ಮತ್ತು ಆ ಕಾರಣ ಎಸ್ಟೇಟ್ ವ್ಯವಸ್ಥಾಪನದ ತತ್ತ್ವಗಳನ್ನು ಅರಿಯದವರಾಗಿರುತ್ತಾರೆ; ಆ ಮೂಲಕ ಹೊಂಚುಹಾಕುವ ಗಂಡಸರಿಗೆ ಅವಳ ಹಕ್ಕನ್ನು ಕಸಿದುಕೊಳ್ಳಲು ಪ್ರಬಲವಾದ ಪ್ರಲೋಭನವುಂಟಾಗುತ್ತದೆ. ಮುಂಬಯಿಯಲ್ಲಿ ಈಗ ಮಹಿಳೆಗೆ (ಮಗಳಿಗೆ) ನಿರುಪಾಧಿಕ ಎಸ್ಟೇಟ್ ಹಕ್ಕು ಇದೆಯೆಂಬ ಸಂಗತಿಯು ಸದನಕ್ಕೆ ಗೊತ್ತು. ಆದ್ದರಿಂದ, ಆ ಕಾರಣ ಅವರು ಯಾವುದೇ ಅಪಾಯಕ್ಕೆ ಗುರಿಯಾಗುವ ಸಂಭವವುಂಟು ಎಂದು ನಾನು ಭಾವಿಸುವುದಿಲ್ಲ. ಇನ್ನೊಂದು ವಾದವೆಂದರೆ, ಮಹಿಳೆಯರು ಪುರುಷರಿಗಿಂತ ಉತ್ತಮ ವ್ಯವಸ್ಥಾಪಕರಾಗಿರುವ ಹತ್ತು ಹಲವು ಉದಾಹರಣೆಗಳುಂಟು. ಹಾಗೆಯೇ ಇನ್ನೂ ಒಂದು ವಾದವುಂಟು. ಮಹಿಳೆಯರು ಅನಕ್ಷರಸ್ಥರು ಎಂಬುದನ್ನು ನಾನು ನಿಸ್ಸಂದೇಹವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ಪುರುಷರ ಪೈಕಿ ಎಷ್ಟು ಜನ ಅಕ್ಷರಸ್ಥರು, ಸಾಕ್ಷರರು ಎಂದು ಕೇಳಬಹುದೇ? ಇಂದು ನಾಲ್ವರು ಗಂಡಸರಲ್ಲಿ ಮೂರು ಮಂದಿ ಅನಕ್ಷರಸ್ಥರು (ಮಾನ್ಯ ಸದಸ್ಯರೊಬ್ಬರು : ಹತ್ತು ಮಂದಿಯಲ್ಲಿ ಒಬ್ಬರು). ಹೀಗಾಗಿ ಹೋಲಿಸಿ ನೋಡಿದರೆ, ಪುರುಷ ಸಂಖ್ಯೆಯಲ್ಲಿ ನಾಲ್ವರ ಪೈಕಿ ಒಬ್ಬರಿಗೆ ಮಾತ್ರ ಈ ಅನುಕೂಲವುಂಟು. (ಒಬ್ಬ ಮಾನ್ಯ ಸದಸ್ಯ : ಅವರು ತಮ್ಮ ತಾಯಂದಿರ ಮಕ್ಕಳಲ್ಲವೆ!). ಇನ್ನು ಇಲ್ಲಿ ಒಂದು ಸಂಗತಿಯನ್ನು ನೆನಪಿಸಬೇಕು. ಈಗಿನ ದಿನಗಳ ಸಾಕ್ಷರತಾ ಶೇಕಡಾವಾರು ಪ್ರಮಾಣ ಗಂಡಸರಿಗಿಂತ ಮಹಿಳೆಯರಲ್ಲಿಯೇ ಹೆಚ್ಚು ವೇಗದಲ್ಲಿ ಅಧಿಕವಾಗುತ್ತಿದೆ. (ಶ್ರೀ ಕಾಮತ್ : ಪ್ರಶ್ನೆ). ಅವಳ ಪಾಲಿನ ಸಂಬಂಧದಲ್ಲಿ, ಆಯ್ಕೆ ಸಮಿತಿಯ ನಿಲುವನ್ನು, ಈಗಾಗಲೇ ನಾನು ನಿರೂಪಿಸಿದ್ದೇನೆ. ನಾವು ಮಗಳಿಗೆ ಸಮಾನ ಪಾಲು ಶಿಫಾರಸು ಮಾಡಿದ್ದೇವೆ. ಆಯ್ಕೆ ಸಮಿತಿಯ ಶಿಫಾರಸುಗಳಿಗೆ ಹಿಂದೆ ಮುಂದೆ ನೋಡದೆ ಔದಾರ್ಯದಿಂದ ನಿಮ್ಮ ಬೆಂಬಲ ನೀಡಬೇಕಾಗಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈಗ ಇನ್ನೊಂದು ವಿಷಯಕ್ಕೆ ಹೋಗುತ್ತೇನೆ. ಆ ವಿಷಯವೆಂದರೆ ಏಕಪತ್ನಿತ್ವ. ಈ ವಿಷಯದ ಬಗ್ಗೆ ನಾನು ಏನೆಲ್ಲ ಹೇಳಬಯಸಿದ್ದರೂ, ನನಗೆ ಗೊತ್ತಾಗಿರುವ ವೇಳೆ ಇನ್ನು ಮುಗಿಯುತ್ತ ಬಂದಿದೆ. ಇಷ್ಟೇ ಅಲ್ಲದೆ ಈ ವಿಷಯದ ಬಗ್ಗೆ ಮಾನ್ಯ ಕಾನೂನು ಮಂತ್ರಿಯವರು ಮತ್ತು ಇತರ ಇನೇಕ ಭಾಷಣಕಾರರು ವಿಪುಲವಾಗಿ ಮಾತನಾಡಿದ್ದಾರೆ. ಆರ್ಥಿಕ, ಸಾಮಾಜಿಕ ಮತ್ತು ಇತರ ಆಧಾರಗಳ ಮೇಲೆ ವಾದಗಳನ್ನು ಮುಂದಿಟ್ಟಿದ್ದಾರೆ. ತಮ್ಮ ವಾದಗಳ ಪುಷ್ಟಿಗಾಗಿ ಧರ್ಮ ಮತ್ತು ಆಧ್ಯಾತ್ಮಗಳಿಗೂ ಶರಣಾಗಿದ್ದಾರೆ. ಆದರೆ ಭಾವನೆಗಳನ್ನು ತುಂಬ ಹಗುರವಾದ ಲಘುವಾದ ರೀತಿಯಲ್ಲಿ ಪ್ರಕಟಿಸಿದರು : ಒಬ್ಬ ಪುರುಷನು ಆರೋಗ್ಯವಂತನಾಗಿದ್ದು ಶ್ರೀಮಂತನೂ ಆಗಿದ್ದರೆ, ಮದುವೆ, ಎರಡನೆ ಮದುವೆ, ಹೀಗೆ ಮಾಡಿಕೊಳ್ಳಬಾರದೇಕೆ! ಅಕಟಾ, ಏಕಪತ್ನಿತ್ವದ ಕಾನೂನನ್ನು ಜಾರಿಗೊಳಿಸಿದ ಪಕ್ಷದಲ್ಲಿ, ಅನೇಕ ಹಿಂದೂ ಪುರುಷರು ಬಹುಪತ್ನಿತ್ವದ ಪ್ರಯೋಜನಗಳನ್ನು ಪಡೆಯಲು ಮುಸಲ್ಮಾನರಾಗಬಹುದು! ನಾನು ಈ ಪ್ರಶ್ನೆಗೆ ಉತ್ತರ ಕೊಡಬೇಕಾಗಿಲ್ಲ. ಈ ಅಂಶವನ್ನು ಸಮರ್ಥವಾಗಿ ಪರಿಣಾಮಕಾರಿಯಾಗಿ ಉತ್ತರಿಸಿದ ಮಹಿಳೆಯನ್ನು ಕಂಡಿದ್ದೇನೆ. ಅವಳ ಪ್ರಕಾರ ಏಕಪತ್ನಿತ್ವದ ಕಾಯ್ದೆಯನ್ನು ಜಾರಿಗೊಳಿಸಿದ ಸಂದರ್ಭದಲ್ಲಿ ಕೆಲವು ಹಿಂದೂ ಮಹಿಳೆಯರು ಏಕಪತ್ನಿತ್ವದ ಪ್ರಯೋಜನಗಳನ್ನು ಪಡೆಯುವ ಸಲುವಾಗಿ ಕ್ರಿಶ್ಚಿಯನ್

ಆಗಲು ಇಷ್ಟಪಡಬಹುದು. ಈ ಎರಡೂ ಅಭಿಪ್ರಾಯಗಳು ಗಂಭೀರವಾಗಿಲ್ಲ ಎಂದು ಭಾವಿಸಿದ್ದೇನೆ.

**ಶ್ರೀ ಬಿ. ದಾಸ್** (ಒರಿಸ್ಸಾ : ಸಾಮಾನ್ಯ) : ಹಿಂದೂ ಮಹಿಳೆಗಿಂತ ಕ್ರಿಶ್ಚಿಯನ್ ಮಹಿಳೆ ಹೆಚ್ಚು ಸುಖಿಯಾಗಿರುತ್ತಾಳೆ ಎಂದು ಭಾವಿಸಿದ್ದೀರ?

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯ ಕಾನೂನು ಮಂತ್ರಿಗಳು ಈಗಾಗಲೇ ಹೇಳಿರುವ ಪ್ರಕಾರ, ವಿಶ್ವವಿಶಾಲ ಅಭಿಪ್ರಾಯದ ಶಕ್ತಿಗಳು ಮತ್ತು ಜಗತ್ತಿನಾದ್ಯಂತ ರೂಢಿರಿವಾಜುಗಳು ಏಕಪತ್ನಿತ್ವವನ್ನು ಸಮರ್ಥಿಸುತ್ತವೆ. ಆದಕಾರಣ, ನಾನು ಈ ವಿಚಾರದಲ್ಲಿ ಇನ್ನೇನನೂ ಹೇಳಬೇಕಾಗಿಲ್ಲ.

ಈಗ ಈ ವಿಧೇಯಕದ ಇತರ ಅಂಶಗಳ ಬಗ್ಗೆ ನಾನು ಮಾತನಾಡುವುದು ಅಪೇಕ್ಷಣೀಯವಲ್ಲ. ನನಗೆ ಸಮಯವೂ ಇಲ್ಲ. ಆ ಇತರ ಅಂಶಗಳನ್ನು ಇನ್ನುಳಿದ ಮಾನ್ಯ ಸದಸ್ಯರು ಚರ್ಚಿಸುತ್ತಾರೆ. ವಿವಾಹ, ವಿವಾಹ ವಿಚ್ಛೇದ ಮುಂತಾದ ವಿಷಯಗಳನ್ನು ಅವರು ಚರ್ಚಿಸುತ್ತಾರೆ. ನಾನು ಇನ್ನೊಂದು ವಿಷಯದ ಬಗ್ಗೆ ಅಂದರೆ ದಾಯಾದಿತ್ವದ ಬಗ್ಗೆ ಚರ್ಚಿಸಬಯಸುತ್ತೇನೆ. ಒಂದಿಷ್ಟು ಮಾತ್ರ ಮಾತನಾಡುತ್ತೇನೆ. *ಮಿತಾಕ್ಷರ* ಮತ್ತು *ದಾಯಾದಿತ್ವ* ಇವುಗಳ ನಡುವಣ ವಿಭಿನ್ನತೆ, ಟೀಕಾಕಾರರು ಮತ್ತು ವ್ಯಾಖ್ಯಾನಕಾರರು ಮುಂದಿಟ್ಟ ವಿಭಿನ್ನ ಅರ್ಥ ವಿವರಣೆಯ ಫಲಿತಾಂಶ. ಮೂಲಭೂತವಾಗಿ ಅವಿಭಕ್ತ ಕುಟುಂಬದ ಬುನಾದಿ ಇವೆರಡಕ್ಕೂ ಸಮಾನ ಆಧಾರ. ಜನ್ಮಜಾತ ಹಕ್ಕು ಮತ್ತು ಉತ್ತರ ಝೀವಿತ್ವದ ತತ್ತ್ವ *ಮಿತಾಕ್ಷರದ* ವಿಭಿನ್ನಕ ಲಕ್ಷಣ. ವಾಸ್ತವ ಅನುಭವದಿಂದ ದಾಯಾದಿತ್ವ ಪದ್ಧತಿಯು ಅತ್ಯಂತ ತೃಪ್ತಿಕರ ಎಂದು ಸಿದ್ಧವಾಗಿದೆ. ಆದ್ದರಿಂದ ಈ ವಿಧೇಯಕವು ವಾರಸಾ ಹಕ್ಕಿನ ಮಿತಾಕ್ಷರ ಪದ್ಧತಿಯ ಸ್ಥಾನದಲ್ಲಿ ದಾಯಭಾಗ ಪದ್ಧತಿಯನ್ನು ಸ್ಥಾಪಿಸಲು ಉದ್ದೇಶಿಸುತ್ತದೆ. ಬಂಗಾಲೀ ಜನ ಸಮುದಾಯದ ಹೆಚ್ಚಿನ ಅಭ್ಯುದಯಕ್ಕೆ ಮತ್ತು ಅಧಿಕಗೊಳ್ಳುತ್ತಿರುವ ವಾಣಿಜ್ಯ ಉದ್ಯಮಕ್ಕೆ ದಾಯಭಾಗ ಪದ್ಧತಿಯೇ ಕಾರಣ ಎಂದು ಹೇಳುತ್ತಾರೆ. ಮದ್ರಾಸಿನ 'ನಟ್ಟುಕೊಟ್ಟೈ ಚೆಟ್ಟಿಯಾರ್'ಗಳ ವಾಣಿಜ್ಯ ಉದ್ಯಮಕ್ಕೆ ಅವರು ತಮ್ಮ ಕುಟುಂಬಗಳ ಕಾನೂನು ಸಂಬಂಧಗಳ ಬಗೆಗಿನ ಅವರ ವಿಚಾರಗಳೇ ಆಧಾರವೆಂದು ನಾನು ಕೇಳಿದ್ದೇನೆ. ಆ ವಿಚಾರಗಳು ಪಾಲುದಾರಿಕೆ ತತ್ತ್ವಗಳಿಗೆ ಸರಿಸುಮಾರು ಸಮಾನವಾಗಿರುತ್ತವೆ. ಬ್ರಾಹ್ಮಣರ ಅವಿಭಕ್ತ ಕುಟುಂಬಗಳಲ್ಲಿ ಹಾಗಿಲ್ಲ.

ಈ ವಿಷಯವನ್ನು ಕುರಿತು ಬಹಳಷ್ಟು ಚರ್ಚೆ ಆಗಿದೆ. ಈ ಅಂಶವನ್ನು ಇನ್ನೂ ವಿವರವಾಗಿ ನಿರೂಪಿಸಲು ಇಷ್ಟಪಡುವುದಿಲ್ಲ. ಈ ಪ್ರಾಚೀನ ಸಂಸ್ಥೆಯ ಮೇಲಣ ಪ್ರೀತಿಯಿಂದಾಗಿ ವಿರೋಧಿಸುತ್ತಾರೆ ಎಂದು ನಾನು ಭಾವಿಸುತ್ತೇನೆ. ಹಾಗೆ ಯಾರು ವಿರೋಧಿಸುತ್ತಾರೆಯೋ ಅವರು ಹಿಂದೂ ಕಾನೂನು ಮತ್ತು ಧರ್ಮ ಈ ವಿಷಯಗಳಲ್ಲಿ ಆಗಿದೆಯೆಂದು ಮತ್ತು ಅದರಲ್ಲಿ ಕಿಂಚಿತ್ತು ಬದಲಾವಣೆ ಆಗಿಲ್ಲ ಎಂದು ಭಾವಿಸಿರುವ ಹಾಗೆ ತೋರುತ್ತದೆ. ಆದರೆ ವಾಸ್ತವ ಸಂಗತಿಯೆಂದರೆ, ವಿವಿಧ ನ್ಯಾಯಿಕ ತೀರ್ಪುಗಳು ಈ ವ್ಯವಸ್ಥೆಗಳಲ್ಲಿ ಕಾಲ ಕಾಲಕ್ಕೆ ಅನೇಕ ಬದಲಾವಣೆಗಳನ್ನು ಮಾಡಿವೆ. ಫಲಿತಾಂಶವಾಗಿ ಸಂಸ್ಥೆಯಲ್ಲಿನ ಅನೇಕ ಲಕ್ಷಣ ವಿಶೇಷಗಳು ಮರೆಯಾಗಿವೆ. ಈ ಅಂಶವನ್ನು ಮಹಾನ್ ಲಾಯರ್ ಆಗಿರುವ ಶ್ರೀ ಎನ್. ಶ್ರೀನಿವಾಸ ಅಯ್ಯಂಗಾರ್ ಅವರು ಸಮರ್ಥವಾಗಿ ವಿವರಿಸಿ ಹೇಳಿದ್ದಾರೆ. ಅವರ ಪ್ರಕಾರ ಹಿಂದೂ ಕಾನೂನಿನ ಅಡಿಯಲ್ಲಿ, ಪ್ರಿವಿ ಕೌನ್ಸಿಲ್‌ನಿಂದ ಅಧಿಕಾರಿಕವಾಗಿ ವ್ಯಾಖ್ಯಾನಿಸಲಾದಂತೆ, ಕುಟುಂಬದ ಯಾರೇ ಸದಸ್ಯರು ಯಾವುದೇ ಕಾಲಕ್ಕೆ ಕುಟುಂಬದಿಂದ ತಾನು ಪ್ರತ್ಯೇಕವಾಗುವ ಉದ್ದೇಶವನ್ನು ಏಕಪಕ್ಷೀಯವಾಗಿ ಘೋಷಿಸಿದರೆ, ಕುಟುಂಬದ ಏಕತೆಯು ವಿಚ್ಛಿನ್ನವಾಗುತ್ತದೆ.

ಅಥವಾ *ಮಿತಾಕ್ಷರದ* ಸ್ಥಳದಲ್ಲಿ ದಾಯಭಾಗವನ್ನು ಸ್ಥಾಪಿಸುವ ವಿರುದ್ಧ ಮಾಡಲಾಗುವ ಆರೋಪಕ್ಕೆ ಸಾಕಷ್ಟು ಉತ್ತರವನ್ನು ಕೊಟ್ಟಂತಾಗುತ್ತದೆ.

ನಾನು ಸದನದ ಹೆಚ್ಚು ಸಮಯವನ್ನು ತೆಗೆದುಕೊಳ್ಳಲು ಇಷ್ಟಪಡುವುದಿಲ್ಲ. ಭಾರತದ ಸ್ವಾತಂತ್ರ್ಯದ ತರುವಾಯ ಅನೇಕ ಘಟನೆಗಳು ಸಂಭವಿಸಿವೆ. ಭಾರತವು ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸುತ್ತಿದೆ ಮತ್ತು ಮಾನವ ಹಕ್ಕುಗಳ ಬಗ್ಗೆ ವಾದಿಸುತ್ತಿದೆ, ಹಾಗೆಯೇ ವಿದೇಶಗಳಲ್ಲಿ ಭಾರತೀಯರಿಗೆ ಸಮಾನ ಗೌರವ ನೀಡಬೇಕೆಂದು ವಾದಿಸುತ್ತಿದೆ. ಇಂಥ ಸಂದರ್ಭದಲ್ಲಿ ನಾವು ನಮ್ಮದೇ ಸರಹದ್ದುಗಳ ಮಧ್ಯದಲ್ಲಿ ಒಂದು ಹಿಂದೂ ಕೋಡ್ ಅನ್ನು ಅಧಿನಿಯಮಿಸಲಾರದೆ ಹೋದರೆ ಅದು ಅತ್ಯಂತ ದುರ್ಭಾಗ್ಯಪೂರ್ಣವಾಗುತ್ತದೆ. ಹಿಂದೂ ಕೋಡ್‌ನ ಗುರಿಯೆಂದರೆ ತಾರತಮ್ಯವಿಲ್ಲದ ವ್ಯವಸ್ಥೆ, ಮಹಿಳೆಯರು ಮತ್ತು ಪುರುಷರಿಗೆ ಸಮಾನ ಅವಕಾಶ ಏರ್ಪಟ್ಟು ತಾವು ವಿಕಾಸ ಹೊಂದುವ ಮೂಲಕ ಭಾರತದ ಪುನರ್‌ನಿರ್ಮಾಣ ಕಾರ್ಯದಲ್ಲಿ ತಮ್ಮ ಕೊಡುಗೆ ನೀಡಲು ಸಮರ್ಥವಾಗುವ ವ್ಯವಸ್ಥೆ. ನಮ್ಮ ಸಂವಿಧಾನವು ರೂಪುಗೊಳ್ಳುತ್ತಿದೆ, ನಾವು ಮೂಲಭೂತ ಹಕ್ಕುಗಳ ಅಧ್ಯಾಯವನ್ನು ತೀರ್ಣಗೊಳಿಸಿದ್ದೇವೆ. ಕಾನೂನಿನ ಸಮ್ಮುಖದಲ್ಲಿ ಸಕಲರಿಗೂ ಸಮಾನತೆ ತತ್ತ್ವಕ್ಕೆ ನಾವು ಮನ್ನಣೆ ನೀಡಿದ್ದೇವೆ. ಏಕರೂಪ ಸಿವಿಲ್ ಕೋಡ್ ಅನ್ನು ರೂಪಿಸಿಕೊಳ್ಳಲು ನಮಗೆ ಸಾಮರ್ಥ್ಯ ಒದಗಿಸುವ ಉಪಬಂಧವನ್ನು ತೀರ್ಣಗೊಳಿಸಿದ್ದೇವೆ. ಆದ್ದರಿಂದ ನಿಮ್ಮಲ್ಲಿ ಈ ಅರಿಕೆ ಮಾಡಿಕೊಳ್ಳುತ್ತೇನೆ. ನಮ್ಮ ಸಲುವಾಗಿ ನಾವು ಹಿಂದೂ ಕೋಡ್ ಅನ್ನು ರೂಪಿಸಿಕೊಳ್ಳುವ ಕಾರ್ಯದಲ್ಲಿ ನಿರಾಸಕ್ತಿಯನ್ನಾಗಲಿ ಆಲಸ್ಯವನ್ನಾಗಲಿ ತೋರಿಸದಿರೋಣ. ಈ ಹಿಂದೂ ಕೋಡ್ ಶಾಸನವು ನಾನು ಈಗಾಗಲೇ ನಿರೂಪಿಸಿರುವಂಥ ನಮ್ಮ ಸಮಾಜಕ್ಕೆ ಬಹು ದೊಡ್ಡ ವರದಾನವಾಗುತ್ತದೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** (ಪಶ್ಚಿಮ ಬಂಗಾಲ : ಸಾಮಾನ್ಯ) : ಸ್ವಾಮಿ, ಸದನದ ಮುಂದಿರುವ ಈ ವಿಷಯವನ್ನು ಹಿಂದೂ ಕೋಡ್ ಅನ್ನು ಪರ್ಯಾಲೋಚಿಸುವ ವಿಷಯವನ್ನು ಕುರಿತು ನನ್ನ ಅನಿಸಿಕೆಗಳನ್ನು ಕೆಲವು ಮಾತುಗಳಲ್ಲಿ ವ್ಯಕ್ತಗೊಳಿಸಲು ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ತಮಗೆ ಕೃತಜ್ಞನಾಗಿದ್ದೇನೆ. ನಾನು ಈ ಸಂಬಂಧದಲ್ಲಿ ತುಂಬಾ ಅನಾನುಕೂಲ ಸ್ಥಿತಿಯಲ್ಲಿ ಇದ್ದೇನೆ. ಅಂದರೆ, ಈ ವಿಷಯದ ಚರ್ಚೆ ನಡೆದಾಗ ಮೊದಲಿನ ಎರಡು ದಿನ ನನಗೆ ಸದನದಲ್ಲಿ ಉಪಸ್ಥಿತನಿರಲು ಸಾಧ್ಯವಾಗಲಿಲ್ಲ. ಬೇರೆಲ್ಲೋ ಹೋಗಬೇಕಾಗಿತ್ತು. ನನ್ನ ಕಾರ್ಯಭಾರದ ನಡುವೆಯೂ, ನಾನು ಉಳಿಸಿಕೊಂಡ ಕೆಲವು ನಿಮಿಷಗಳಲ್ಲಿ, ನನ್ನ ಮಾನ್ಯ ಸ್ನೇಹಿತ ಡಾ॥ ಬಿ. ಆರ್. ಅಂಬೇಡ್ಕರ್ ಅವರು ತಮ್ಮ ಪ್ರಸ್ತಾವವನ್ನು ಸಮರ್ಥಿಸುತ್ತ ಅಮೋಘ ಭಾಷಣ ಮಾಡಿದ ಬಗೆಗಿನ ಪತ್ರಿಕಾ ವರದಿಯನ್ನು ಗಮನಿಸಿದೆನು. ಹಾಗೆಯೇ ಅದರಂತೆಯೇ ಶಕ್ತಿಮಾನ್ ಆಗಿರುವ ಇನ್ನೊಂದು ಭಾಷಣವನ್ನು ಅರ್ಥಾತ್ ನಾನಿಲ್ಲಿ ಹೋಲಿಕೆ ಮಾಡುತ್ತಿಲ್ಲ, ಪತ್ರಿಕಾ ವರದಿಗಳನ್ನು ಆಧರಿಸಿ ಹೇಳುತ್ತಿದ್ದೇನೆ. ಈ ಪತ್ರಿಕಾ ವರದಿಗಾರರಲ್ಲಿ ಅವರವರಲ್ಲಿಯೇ ಅಭಿಪ್ರಾಯ ಸಾಮ್ಯ ಇಲ್ಲದಿದ್ದರೂ, ಇನ್ನೊಂದು ಪಕ್ಷದ ಕಡೆಯಿಂದ ಅಷ್ಟೇ ಶಕ್ತಿ ಸಂಪನ್ನವಾದ ಭಾಷಣವನ್ನು ಪಂಡಿತ ಠಾಕುರದಾಸ್ ಭಾರ್ಗವ ಅವರು ಮಾಡಿದ್ದರು ಎಂಬ ಪತ್ರಿಕಾ ವರದಿಯನ್ನು ಸಹ ಗಮನಿಸಿದೆನು.

ನಾನು ಪ್ರಸ್ತಾವದ ಪರವಾಗಿ ಮಾಡಲಾದ ನಾಲ್ಕು ಭಾಷಣಗಳನ್ನು ಮತ್ತು ವಿರುದ್ಧವಾಗಿ ಮಾಡಲಾದ ಒಂದು ಭಾಷಣವನ್ನು ಸಾಕಷ್ಟು ಲಕ್ಷ್ಯಪೂರ್ವಕವಾಗಿ ಕೇಳಿದ್ದೇನೆ. ನಿನ್ನೆ ದಿನ ಚರ್ಚೆಯು ಮುಂದುವರಿಯುತ್ತಿದ್ದ ಹಾಗೆ ನಾನು ಸದನದ ಭಾವನೆಯನ್ನು ಅವಲೋಕಿಸುತ್ತಿದ್ದೆನು – ಒಮ್ಮೊಮ್ಮೆ ಹಾಸ್ಯಪೂರಿತವಾದ ಭಾವಾವೇಶ. ಆದರೆ ಒಮ್ಮೆ ಒಬ್ಬ ಸದಸ್ಯನು ವಿಧೇಯಕದ ಪ್ರಮುಖ ಉಪಬಂಧಗಳಿಂದ ಭಿನ್ನವಾದ ಅಭಿಪ್ರಾಯವನ್ನು ವ್ಯಕ್ತಗೊಳಿಸಲು ಪ್ರಯತ್ನಿಸುತ್ತಿದ್ದಂತೆ ಎಲ್ಲ ಬಗೆಯ ವ್ಯಂಗ್ಯೋಕ್ತಿಗಳು, ಅವ ಉದ್ಗಾರಗಳು ಅವರನ್ನು ಭಾಷಣದುದ್ದಕ್ಕೂ ಇದಿರಿಸಿದುವು. (ಮಾನ್ಯ ಸದಸ್ಯರು : ಇಲ್ಲ, ಇಲ್ಲ. ಹಾಗಲ್ಲದಿದ್ದರೆ ನನಗೆ ಸಂತೋಷವೇ. ಆ ಮೂಲಕ ನನಗೆ ಒಂದಿಷ್ಟು ಪ್ರೋತ್ಸಾಹ ಸಿಗುತ್ತಿದೆ. ಅನೇಕ ಸದಸ್ಯರಿಗೆ – ನನಗೆ ಅನಿಸುವ ಮಟ್ಟಿಗೆ

ಪ್ರತಿಯೊಬ್ಬ ಸದಸ್ಯನಿಗೆ ನನ್ನ ಮಾತಿನ ಧಾಟಿಯೇನು ಎಂದು ಗೊತ್ತು. ನಾನು ಈ ವಿಧೇಯಕದ ಉಪಬಂಧಗಳನ್ನು ಸಮರ್ಥಿಸುತ್ತಿಲ್ಲವೆಂಬುದಾಗಿ ಅಪಕೀರ್ತಿ – ಅದನ್ನು ಕೀರ್ತಿ ಎನ್ನಲಾಗದು – ಏಕೆ ಬಂತೋ ನಾನರಿಯೆನು. ಆದರೆ ನನ್ನ ನಿಲುವನ್ನು ಬಚ್ಚಿಡಲು ಪ್ರಯತ್ನ ಮಾಡುತ್ತಿಲ್ಲ. (ಮಾನ್ಯ ಸದಸ್ಯ : ನೀವೇಕೆ ಮಾಡಬೇಕು?). ಕಾರಣವೆಂದರೆ ನನಗೆ ಮನವರಿಕೆಯಾದ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುತ್ತೇನೆ. ಇಂತು ಸಂಘಟಿತವಾಗತಕ್ಕ ಮತ್ತು ನಾನು ಇಂದು ನೋಡುತ್ತಿರುವ ಭಾವನಾ ವಾತಾವರಣದಲ್ಲಿ ಇರತಕ್ಕ ಈ ಸದನವನ್ನು ಉದ್ದೇಶಿಸಿ ಭಾಷಣ ಮಾಡುವ ಕಾರ್ಯ ಎಷ್ಟು ನಾಜೂಕು, ಸೂಕ್ಷ್ಮ ಎಂದು ನಾನು ಬಲ್ಲೆನು. ನನ್ನ ಮಾನ್ಯ ಸಹೋದರಿ ಶ್ರೀಮತಿ ದುರ್ಗಾಬಾಯಿ ಅವರ ಭಾಷಣವನ್ನು ಆಲಿಸುವ ಅವಕಾಶ ನನಗೆ ದೊರೆತದ್ದುಂಟು. ಅವರು ಈ ವಿಧೇಯಕವನ್ನು ಸಮರ್ಥಿಸುತ್ತ ಅತ್ಯಂತ ತರ್ಕಸಂಗತವಾದ ಭಾಷಣ ಮಾಡಿದ್ದಾರೆ.

ಪರಂತು ನನ್ನ ಸಹೋದರಿಯ, ಸಕಲರು ಒಪ್ಪಿಕೊಂಡಿರುವುದಾಗಿ ವಿಶ್ವಾಸದಿಂದ ಭಾವಿಸಿರುವಂಥ ಅವರ, ಸಿದ್ಧಾಂತಗಳನ್ನು ನಾನು ಒಪ್ಪಿಕೊಳ್ಳಲಾರೆನು ಎಂಬುದಾಗಿ ಅವರ ಕ್ಷಮಾಪಣೆ ಕೇಳಬೇಕಾಗಿದೆ. ಅವರು, ಕಾನೂನು ದೃಷ್ಟಿಯಲ್ಲಿ ಸಕಲರಿಗೂ ಸಮಾನತೆಯನ್ನು ಒದಗಿಸುವ ಕರಡು ಸಂವಿಧಾನದ ತತ್ತ್ವವನ್ನು ಜಾರಿಗೊಳಿಸಲು ಸದನಕ್ಕೆ ಕಳಕಳಿಯ ಮನವಿಯನ್ನು ಸಲ್ಲಿಸುತ್ತ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು. ನಿಜ, ಅದನ್ನು ನಾವು ಮಾಡಿದ್ದುಂಟು ಮತ್ತು ಸಂವಿಧಾನದ ನಿರ್ದೇಶಕ ತತ್ತ್ವಗಳ ಪೈಕಿ ಒಂದು ತತ್ತ್ವವಾಗಿ ಒಂದು ಏಕರೂಪ ಸಿವಿಲ್ ಕೋಡ್ ಇರಬೇಕೆಂಬ ಬಗ್ಗೆ ನಾವು ತೀರ್ಣಗೊಳಿಸಿರುವೆವೆಂದು ಅವರು ನಮಗೆ ನೆನಪಿಸಿಕೊಟ್ಟರು. ಅವರು ನನಗೆ ನನ್ನ ಭಾಷಣದ ಆರಂಭಿಕ ಅಂಶವನ್ನು ಒದಗಿಸಿರುವ ಬಗ್ಗೆ ನನಗೆ ಸಂಕೋಚವಾಗಿದೆ. ಇನ್ನೊಂದು ಸ್ಥಳದಲ್ಲಿ ಒಂದೆರಡು ತಿಂಗಳ ಹಿಂದೆ ಈ ವಿಷಯವನ್ನು ಚರ್ಚಿಸಿದಾಗ ಮತ್ತು ಅನೌಪಚಾರಿಕವಾಗಿ ಅದನ್ನು ಇನ್ನೊಂದೆಡೆಯಲ್ಲಿ ವಿಶ್ಲೇಷಿಸುತ್ತಿದ್ದಾಗ ಈ ಉಪಬಂಧದ ವಿರುದ್ಧ ನನ್ನ ತೀಕ್ಷ್ಣ ಪ್ರತಿಭಟನೆಯನ್ನು ದಾಖಲಿಸಿದ್ದೆನು (ವ್ಯಕ್ತಗೊಳಿಸಿದ್ದೆನು). ಕಾರಣವೆಂದರೆ, ೩೨ರಿಂದ ೩೪ರಷ್ಟು ಕೋಟಿ ಜನಸಂಖ್ಯೆಯಿರುವ ಮತ್ತು ಹಿಂದೂ, ಸಿಖ್, ಬೌದ್ಧ, ಕ್ರೈಸ್ತ ಮತಾವಲಂಬಿಗಳಿರುವ, ಹಾಗೆಯೇ ಇಸ್ಲಾಂ ಮತಾವಲಂಬಿಗಳೂ ಇರುವ ಒಂದು ದೇಶಕ್ಕೆ ಒಂದು ಏಕರೂಪ ಸಿವಿಲ್ ಕೋಡ್ ಬೇಕು ಎಂದು ಇಚ್ಛೆಪಡುವುದು ಘೋಷಣೆಗಳ ಫಲಿತಾಂಶವೇ ಹೊರತು ಇನ್ನೇನೂ ಅಲ್ಲ ಎಂದು ಭಾವಿಸಿದ್ದೆನು. ಇದು ಒಬ್ಬ ವ್ಯಕ್ತಿಯ ಮತಸಂಬಂಧೀ ಕಾನೂನಿನ ಮೇಲೆ ರಾಜ್ಯ ಶಾಸನ ಮಾಡುವ ಅತಿಕ್ರಮಣವೆಂದೂ ಹಾಗೆ ಮಾಡಲು ರಾಜ್ಯ ಶಾಸನಕ್ಕೆ ಯಾವುದೇ ಹಕ್ಕು ಇಲ್ಲವೆಂದು ನಾನು ತಿದ್ದುಪಡಿಗಳನ್ನು ಮಂಡಿಸಿದ್ದೆನು.

**ಮೌಲಾನಾ ಹಜರತ್ ಮೋಹಾನಿ** (ಯು.ಪಿ. : ಮುಸ್ಲಿಂ) : ಕೇಳಿರಿ, ಕೇಳಿರಿ.

**ಶ್ರೀಮತಿ ರೇಣುಕಾ ರೇ :** (ಪಶ್ಚಿಮ ಬಂಗಾಲ : ಸಾಮಾನ್ಯ) ಆ ಕಾರಣಕ್ಕಾಗಿಯೇ ನೀವು ಹಿಂದೂ ಕೋಡ್ ಅನ್ನು ಸಮರ್ಥಿಸಬೇಕು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ನನ್ನ ಇದಿರಿಗೆ ಇರುವ ಮಾನ್ಯ ಸಹೋದರಿ ಆ ಕಾರಣಕ್ಕಾಗಿಯೇ ನಾನು ಈ ವಿಧೇಯಕವನ್ನು ಸಮರ್ಥಿಸಬೇಕು ಎಂದು ಹೇಳುತ್ತಾರೆ. ಆ ಕಾರಣಕ್ಕಾಗಿಯೇ ನಾನು ಹಿಂದೂ ಕೋಡ್ ಅನ್ನು ವಿರೋಧಿಸುತ್ತೇನೆ – ಅದುವೇ ಪ್ರಮುಖ ಕಾರಣಗಳಲ್ಲಿ ಒಂದು ಎಂದು ಹೇಳಬಹುದೆ? ನಿಮ್ಮ ವಿಚಾರಗಳು ಅಭಿಪ್ರಾಯಗಳು ತರ್ಕಸಂಗತವಾಗಿರಬೇಕು. ನನ್ನ ಸಹೋದರಿಯರ ಭಾವನೆಗಳನ್ನು ನಾನು ತಿಳಿದಿದ್ದೇನೆ. ನಾನು ಸ್ತ್ರೀದ್ವೇಷಿಯೆಂದು ಅಥವಾ ಸ್ತ್ರೀಯರ ಬಗ್ಗೆ ನನ್ನಲ್ಲಿ ಯಾವುದೇ

ಭಾವನೆಗಳು ಇಲ್ಲವೆಂದು ಭಾವಿಸಬೇಡಿ. (ಒಬ್ಬ ಮಾನ್ಯ ಸದಸ್ಯ: 'ಅವರು ವಿವಾಹಿತರು') ಹೌದು, ನಾನು ವಿವಾಹಿತ ಮನುಷ್ಯ. ವಿನಯಶೀಲೆಯಾದ ಹೆಂಡತಿ ಇದ್ದಾಳೆ. ನನ್ನ ವಿವಾಹವು ಹಿಂದೂ ಶಾಸ್ತ್ರಗಳ ವಿಧಿಗಳ ಪ್ರಕಾರವೇ ಆದದ್ದು. ನನ್ನ ಹೆಂಡತಿ ಸುಶೀಲೆ, ನೂತನ ರೀತಿ ನೀತಿಗಳನ್ನು ಅರಿಯದವಳು, ಸರಳ ಸ್ವಭಾವದವಳು, ನಮ್ಮ ಆದರ್ಶ ಹಿಂದೂ ಮನೆಗಳ ಆಚಾರ ವಿಚಾರಗಳಲ್ಲಿ ಬೆಳೆದವಳು. (ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್: ಅಯ್ಯೋ ನಿಮ್ಮ ದುರ್ಭಾಗ್ಯವೇ!) ದುರ್ಭಾಗ್ಯವೇ! ಇರಲೊಲ್ಲದೇಕೆ? ಅದೇಕೋ, ನನಗೆ ಲೆವೆಂಡರ್, ಲಿಪ್‌ಸ್ಟಿಕ್ ಮತ್ತು ವ್ಯಾನಿಟಿ ಬ್ಯಾಗ್ ಇವುಗಳ ಬಗ್ಗೆ ಮೋಹವೂ ಇಲ್ಲ, ಇಷ್ಟವೂ ಇಲ್ಲ. ಅಂದರೆ ಆ ವಿಧದ ಮಹಿಳೆ ನನಗೆ ಇಷ್ಟವಿಲ್ಲ. ನನಗೆ ಸುಖವುಂಟು, ಪ್ರತಿ ನೂರು ಹಿಂದೂ ಮನೆಗಳ ಪೈಕಿ ೯೮ ಮನೆಗಳಲ್ಲಿ ನನ್ನ ಹೆಂಡತಿಯ ತರಹದ ಹೆಂಡಂದಿರು ಇದ್ದಾರೆ ಎಂದು ನನಗೆ ಖಾತ್ರಿಯಿದೆ ಮತ್ತು ಅವರೆಲ್ಲ ಸುಖದಿಂದ ಬಾಳುತ್ತಿದ್ದಾರೆ ಎಂದು ಸಹ ನನಗೆ ಖಾತ್ರಿಯುಂಟು. (ಒಬ್ಬ ಮಾನ್ಯ ಸದಸ್ಯರು : ೯೮ ಯಾಕೆ? ಶೇಕಡ ೯೯.೯ ರಷ್ಟು ಹಾಗೆಯೇ ಇದ್ದಾರೆ.) ಆ ಶೇಕಡಾವಾರು ೯೯.೯ ಎಂದು ನನ್ನ ಮಾನ್ಯ ಸ್ನೇಹಿತರು ಹೇಳುತ್ತಿದ್ದ ಕಾರಣ ನನಗೆ ಬಹಳ ಸಂತೋಷವೇ. ಆ ಮೂಲಕ ನನ್ನ ವಾದಕ್ಕೆ ಬಲ ಸಿಗುತ್ತದೆ. ಆದ್ದರಿಂದ ನನ್ನ ಮಾನ್ಯ ಸ್ನೇಹಿತ ಡಾ॥ ಅಂಬೇಡ್ಕರ್ ಅವರು ಈ ವಿಧೇಯಕದ ಮೂಲಕ ತರಬಯಸುವ ಕ್ರಾಂತಿಕಾರಕ ಬದಲಾವಣೆಗಳು ನನಗೆ ಅಗತ್ಯವೆಂದು ತೋರುತ್ತಿಲ್ಲ ಎಂದು ಅವರಿಗೆ ಹೇಳಬಹುದು. (ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್ : ನನಗೂ ಅಗತ್ಯವೆಂದು ತೋರಲಿಲ್ಲ.) ನನ್ನ ಮಾನ್ಯ ಸ್ನೇಹಿತರೂ ಹೇಳುತ್ತಿದ್ದಾರೆ, ಅವರಿಗೂ ಅಗತ್ಯ ಎಂದು ತೋರಲಿಲ್ಲವಂತೆ. ಹಾಗಾದರೆ ಈ ಆಮೂಲಾಗ್ರ ಬದಲಾವಣೆಗಳು ಅವರಿಗೆ ಅಗತ್ಯ ಎಂದು ನಿಜವಾಗಿಯೂ ಅನಿಸದಿರುವಾಗ, ಅದರ ಕಾರಣವೇ ಈ ಹಿಂದೂ ಕೋಡ್ ವಿಧೇಯಕವು ನಮ್ಮೆದುರಿಗೆ ಬಂದಿದೆ ಎಂದು ಭಾವಿಸಬಹುದೆ? ನನ್ನ ಮಾನ್ಯ ಸ್ನೇಹಿತ ಡಾ॥ ಅಂಬೇಡ್ಕರ್ ಅವರ ಬಗ್ಗೆ ನನಗೆ ವಿಶೇಷ ಗೌರವವುಂಟು. ಈ ಸಭೆಗೆ ಮುನ್ನ ಅನೇಕ ವರ್ಷಗಳ ಕಾಲ ಅವರ ಜತೆ ಕೆಲಸ ಮಾಡುವ ಸುಯೋಗ ನನಗೆ ಒದಗಿತ್ತು. ನಾನು ಅವರನ್ನು ಗೌರವಿಸುತ್ತೇನೆ. ಈ ಸಂವಿಧಾನ ಕಾಯ್ದೆಗೆ ಸಂಬಂಧಿಸಿದಂತೆ ಅವರು ಪ್ರತಿ ದಿನ ನೆರವೇರಿಸುವ ಕಾರ್ಯಭಾರದ ಗರಿಮೆಯನ್ನು ನಾನು ಬಲ್ಲೆನು. (ಮಾನ್ಯ ಸದಸ್ಯರು : ಕೇಳಿರಿ, ಕೇಳಿರಿ.) ಅವರ ಕಾರ್ಯದ ಬಗ್ಗೆ ನನಗೆ ಮೆಚ್ಚುಗೆಯುಂಟು. ಅವರ ಬಗ್ಗೆ ನನಗೆ ಅಭಿಮಾನವುಂಟು. ಆದರೆ ಅವರದು ಸಾಮಾಜಿಕ ಶಾಸನದ ಸಂಬಂಧದಲ್ಲಿ ಅವರು ಏನೆಲ್ಲ ಮಾಡುತ್ತಿದ್ದಾರಲ್ಲ, ಅದು ನನಗೆ ಕಿಂಚಿತ್ತೂ ಹಿಡಿಸುವುದಿಲ್ಲ. ಈ ಸಾಮಾಜಿಕ ಶಾಸನದ್ವಾರಾ, ಆ ಕ್ರಾಂತಿಕಾರೀ ಬದಲಾವಣೆಗಳ ದ್ವಾರಾ ಹಿಂದೂ ಸಮಾಜವು ಖಂಡಿತವಾಗಿಯೂ ವಿಚ್ಛಿನ್ನವಾಗುತ್ತದೆ. ಈಗ ನಮ್ಮಲ್ಲಿ ಕೆಲವೇ ಕೆಲವರಿಗೆ ಮಾತ್ರ ಬರಲಿರುವ ಅಪಾಯದ ಬಗ್ಗೆ ಮನವರಿಕೆಯುಂಟು. (ಮಾನ್ಯ ಸದಸ್ಯರು : ಕ್ರಾಂತಿಯಿಲ್ಲ. ಇಲ್ಲ, ಇಲ್ಲ) ಹೌದು. ಅದು "ಅಲ್ಲ, ಅಲ್ಲ" ಎಂಬ ಕಾರಣ ನನಗೆ ಸಂತೋಷ. ಈ ವಿಧೇಯಕವು ಶಾಸನವಾಗಿ ತೀರ್ಣವಾದ ಪಕ್ಷದಲ್ಲಿ........

**ಬಾಬು ರಾಮನಾರಾಯಣ ಸಿಂಗ್ :** (ಬಿಹಾರ : ಸಾಮಾನ್ಯ) ; ಇಲ್ಲ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಇಲ್ಲ, ಏನು?

**ಬಾಬು ರಾಮನಾರಾಯಣ ಸಿಂಗ್ :** ಅದು ಶಾಸನವಾಗಿ ತೀರ್ಣವಾಗುವುದಿಲ್ಲ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಹಾಗೋ, ಈ ವಿಧೇಯಕವು ಶಾಸನವಾಗಿ ತೀರ್ಣವಾದ ಸಂದರ್ಭದಲ್ಲಿ, ಯಾರು ಉತ್ತಮ ಭವಿಷ್ಯವಾದಿ ಆಗುತ್ತಾರೋ ನೋಡೋಣ – ನಾನೋ ಅಥವಾ 'ಇಲ್ಲ, ಇಲ್ಲ' ಎನ್ನುವವರೋ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದ್ರಾಸು : ಸಾಮಾನ್ಯ) : ನೀವು ಕಾದು ನೋಡಿ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** : ಸರಿ, ಕಾದು ನೋಡಿ. ಮುಂದಿನ ತಲೆಮಾರು ತೀರ್ಮಾನಿಸುತ್ತದೆ. ನನ್ನ ಪ್ರಕಾರ ನೀವು ಮುಂದಿನ ತಲೆಮಾರಿನವರೆಗೆ ಕಾಯಬೇಕಾಗಿಲ್ಲ. ನಿಮ್ಮನ್ನು ಮತ್ತು ನಿಮ್ಮ ಕೆಲಸವನ್ನು ಕುರಿತು ದೇಶವು ಏನು ಹೇಳುತ್ತದೆ ಎಂದು ನೋಡಲು ಬರುವ ಮಹಾಚುನಾವಣೆಗಳ ತನಕ ಮಾತ್ರವೇ ಕಾಯಬೇಕು ಅಷ್ಟೇ.

**ಮೌಲಾನಾ ಹಜರತ್ ಮೋಹಾನಾ : ಕೇಳಿರಿ, ಕೇಳಿರಿ, ಭೇಷ್!**

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** : ನನ್ನ ಸಹೋದರಿ ಶ್ರೀಮತಿ ದುರ್ಗಾಬಾಯಿ ಅವರು ಎತ್ತಿದ ಮೊದಲ ಅಂಶವೆಂದರೆ, ಆ ಮಾರ್ಗದರ್ಶಕ ತತ್ತ್ವವನ್ನು ತೀರ್ಣಗೊಳಿಸಿದ ತರುವಾಯ, ನೀವು ಹಿಂದೂ ಕೋಡ್‌ಗೆ ಆಕ್ಷೇಪಿಸಕೂಡದು. ಈ ಸದನವು ಆ ನಿರ್ದೇಶಕ ತತ್ತ್ವವನ್ನು ತೀರ್ಣಗೊಳಿಸಿದಾಗ, ನಾಗರಹಾವನ್ನು ಅಂದರೆ ಹಿಂದೂ ಕೋಡ್‌ಅನ್ನು ಕೊಂದಿದ್ದಾಯಿತು ಎಂದು ಭಾವಿಸಿದ್ದೆನು. ಆದರೆ ಈಗ ಕೂಡ ಹಾಗೆ, ನಾಗರಹಾವು ಗಾಯಗೊಂಡಿದೆ ಅಷ್ಟೆ. ಈಗ ಮತ್ತೆ ಹೆಡೆಯೆತ್ತಿದೆ ಮತ್ತು ಕಾಲಕ್ರಮೇಣ ತನ್ನ ವಿಷದಂತಗಳನ್ನು ತೆರೆಯಲಿಕ್ಕುಂಟು. ನೀವು ನಿರ್ದೇಶಕ ತತ್ತ್ವಗಳಿಗೆ ನಿಷ್ಠರಾಗಿದ್ದರೆ, ಅವುಗಳ ಅನುಸರಣೆಯಲ್ಲಿ ಕ್ರಮ ಕೈಗೊಳ್ಳಲಿದ್ದರೆ ಈ ಹಿಂದೂ ಕೋಡ್‌ಅನ್ನು ತರುವುದೇಕೆ? ಹಿಂದುಗಳಿಗೆ, ಕ್ರಿಶ್ಚಿಯನ್ನರಿಗೆ, ಪಾರ್ಸಿಗಳಿಗೆ, ಸಿಖ್ಖರಿಗೆ, ಬೌದ್ಧರಿಗೆ ಜೈನರಿಗೆ ಮತ್ತು ಮುಸ್ಲಿಮರಿಗೆ ಹೀಗೆ ಸಕಲರಿಗೆ ಅನ್ವಯವಾಗತಕ್ಕ ಸಾರ್ವತ್ರಿಕ ಸಿವಿಲ್ ಕೋಡ್‌ಅನ್ನು ತನ್ನಿ. (ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ : ನೀವು ಅದನ್ನು ಸಮರ್ಥಿಸುತ್ತೀರ?) ನಿಮಗೆ ಮುಸ್ಲಿಮರ ಗೊಡವೆಗೆ ಹೋಗುವ ಧೈರ್ಯವಿಲ್ಲ. ಆದರೆ ಹಿಂದೂ ಸಮಾಜವು ಅತ್ಯಂತ ಹೀನ ಸ್ಥಿತಿಯಲ್ಲಿ ಇರುವ ನಿಮಿತ್ತ ಅದರ ಬಗ್ಗೆ ಏನೆಲ್ಲ ಮಾಡಲು ಸಾಹಸಕ್ಕೆ ತೊಡಗುತ್ತೀರ. ಆಧುನಿಕರಾಗಿರುವವರು, ಆದರೆ ಬಹುಜನ ಸಮಾಜದ ಬೆಂಬಲ ಇಲ್ಲದ ಆದರೆ ಮುಕ್ತರಾದ ಕೆಲವೇ ಕೆಲವರು ಈ ಕೋಡ್‌ನಲ್ಲಿ ಆಸಕ್ತಿ ಹೊಂದಿದ್ದಾರೆ. (ಚರ್ಚೆಗೆ ತಡೆ)

**ಡೆಪ್ಯುಟಿ ಸ್ಪೀಕರ್** : ಅವರು ಮುಂದುವರಿಸಲಿ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** : ಮಿಲಿಯಗಟ್ಟಲೆ ಮೂಕ ಜನಸಮುದಾಯವು ಅಜ್ಞರಾಗಿದ್ದರೂ ಕಾಲೇಜು ಶಿಕ್ಷಣ ಪಡೆದಿಲ್ಲ ಎಂಬ ಕಾರಣಕ್ಕಾಗಿ ಅಥವಾ ವಿಧಾನ ಮಂಡಲಗಳ ಸದಸ್ಯರಾಗಿಲ್ಲ ಎಂಬ ಕಾರಣಕ್ಕಾಗಿ ಬುದ್ಧಿಮತ್ತೆಯಲ್ಲಾಗಲಿ ತಿಳಿವಳಿಕೆಯಲ್ಲಾಗಲೀ ಕಡಿಮೆಯಲ್ಲದವರು ತಮ್ಮ ಮತ ಸಂಬಂಧೀ ಕಾನೂನಿನಲ್ಲಿ ಪ್ರಸ್ತಾವಿಸಲಾದಂಥ ಆಮೂಲಾಗ್ರ ಬದಲಾವಣೆಗಳು ಅಗತ್ಯವಿಲ್ಲ ಎಂದು ಹೇಳುತ್ತಾರೆ. ಅವರ ನಿಲುವನ್ನು ನಿರ್ಲಕ್ಷಿಸುವಂತಿಲ್ಲ.

**ಶ್ರೀಮತಿ ರೇಣುಕಾ ರೇ** : ಹಾಗಾದರೆ ಸಂವಿಧಾನ ರಚನೆಯೂ ಬೇಡ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** : ಆದ್ದರಿಂದ, ಇಡೀ ದೇಶಕ್ಕಾಗಿ ಒಂದು ಏಕರೂಪ ಕೋಡ್ ಇರಬೇಕು ಎಂಬ ತತ್ತ್ವವನ್ನು ಅಂಗೀಕರಿಸಲು ನಿಷ್ಠೆಯಿಲ್ಲ ಎಂದು ನನ್ನ ಭಾವನೆ. ಇಲ್ಲದಿದ್ದರೆ, ಎರಡು ತಿಂಗಳ ತರುವಾಯ, ಹಿಂದೂಗಳು, ಸಿಖ್ಖರು, ಜೈನರು ಮತ್ತು ಬೌದ್ಧರು– ಇವರಿಗೆ ಮಾತ್ರ ಅನ್ವಯಿಸಲು ಉದ್ದೇಶಿಸಿರುವ ಹಿಂದೂ ಕೋಡ್‌ಅನ್ನು ನೀವು ಪ್ರಸ್ತಾಪಿಸುತ್ತಿರಲಿಲ್ಲ.

**ಶ್ರೀಮತಿ ರೇಣುಕಾ ರೇ** : ಹಿಂದೂ ಕೋಡ್ ಎಷ್ಟೊ ಹಿಂದೆಯೇ ಬಂದದ್ದು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** : ನೀವು ಕ್ರಿಶ್ಚಿಯನ್‌ರನ್ನು, ಮುಸ್ಲಿಮರನ್ನು ಮತ್ತು ಪಾರ್ಸಿಗಳನ್ನು

ಬಿಟ್ಟಿದ್ದೀರಲ್ಲ.

**ಮೌಲಾನಾ ಹಜರತ್ ಮೋಹಾನಾ :** ಮುಸ್ಲಿಮರು ತಮ್ಮ ಮತ ಸಂಬಂಧೀ ಕಾನೂನಿನಲ್ಲಿ ಹಸ್ತಕ್ಷೇಪವನ್ನು ಸರ್ವಥಾ ಒಪ್ಪಿಕೊಳ್ಳುವುದಿಲ್ಲ, ಸಹಿಸುವುದಿಲ್ಲ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಅದನ್ನು ನೀವು ನೆನಪಿಸಬೇಕಾಗಿದ್ದಿಲ್ಲ. ಅದು ನನಗೆ ಗೊತ್ತು. ನಾನು ನನ್ನ ಮಾನ್ಯ ಸ್ನೇಹಿತ ಮೌಲಾನಾ ಹಜರತ್ ಮೋಹಾನಾ ಅವರ ಸಿದ್ಧಾಂತವನ್ನು ಪೂರ್ಣವಾಗಿ ಆದರಿಸುತ್ತೇನೆ. ಆದರೆ ಅದೇನೇ ಇರಲಿ. ಇದು ನಾವು ಸಂವಿಧಾನದಲ್ಲಿ ಅಂಗೀಕರಿಸಿದ ತತ್ತ್ವಗಳಿಂದ ಒಂದು ರೀತಿಯ ಮೂಲಭೂತ ವಿಚಲನ ಆಗಿದೆಯೆಂದು ಭಾವಿಸುತ್ತೇನೆ.

ನಮ್ಮ ಮಾನ್ಯ ಸ್ನೇಹಿತೆ ಶ್ರೀಮತಿ ದುರ್ಗಾಬಾಯಿ ಅವರು ಕ್ರೋಡೀಕರಣವು ಸಮರ್ಥನೀಯ ಎಂದು ಹೇಳಿದಾಗ, ಕ್ರೋಡೀಕರಣದ ಬಗ್ಗೆ ಪ್ರತಿರೋಧ ಸಾಧ್ಯವಿಲ್ಲ; ಪಕ್ಷವಾದವನ್ನು ಮಾಡಿರುವ ಬಗ್ಗೆ ರುಜುವಾತುಪಡಿಸಲು ಪ್ರಯತ್ನಿಸಿದರು. ನನ್ನ ಸೋದರಿ ಶ್ರೀಮತಿ ದುರ್ಗಾಬಾಯಿ ಅವರಿಗೆ ಸಕಲ ಗೌರವ ಸಲ್ಲಿಸುತ್ತ, ಅವರ ನಿಲುವು ನನಗೆ ಮನವರಿಕೆ ಆಗಿಲ್ಲ ಎಂದು ನಿವೇದಿಸುತ್ತೇನೆ. ಕಾನೂನು ನಿರಂತರ ಗತಿಯಲ್ಲಿರುವಾಗ ಅಥವಾ ಅಭಿಪ್ರಾಯದಲ್ಲಿ ವೈವಿಧ್ಯವಿರುವಾಗ ಅಥವಾ ಅದರ ಬಹಳಷ್ಟು ಅಸ್ಪಷ್ಟತೆ ಅಥವಾ ಅನಿಶ್ಚಿತತೆ ಇರುವಾಗ ಕ್ರೋಡೀಕರಣದ ಅಗತ್ಯ ನನಗೆ ಅರ್ಥವಾಗುತ್ತದೆ. ಅಂಥ ಸಂದರ್ಭದಲ್ಲಿ, ದೇಶದ ಅತ್ಯಂತ ಪ್ರತಿಭಾಸಂಪನ್ನ ಕಾನೂನು ಪಂಡಿತರು ಒಂದೆಡೆಯಲ್ಲಿ ಕುಳಿತುಕೊಂಡು, ಹೆಚ್ಚು ಕಡಿಮೆ ಗೊಂದಲಗಳಿಸುವ ಮತ್ತು ಅನಿಶ್ಚಿತ ಸ್ಥಿತಿಯಲ್ಲಿರುವ ಕಾನೂನಿನ ವಿವಿಧ ತತ್ತ್ವಗಳಿಗೆ ರೂಪುಕೊಡುವ ಸಲುವಾಗಿ ಕ್ರೋಡೀಕರಣವನ್ನು ಕೈಗೊಳ್ಳಬೇಕು. ಹಿಂದೂ ಕಾನೂನಿಗೆ ಸಂಬಂಧಿಸಿ ಈ ದೇಶದಲ್ಲಿ ಅಂಥ ಪರಿಸ್ಥಿತಿ ಇದೆಯೆ?

**ಶ್ರೀ ಕೃಷ್ಣಚಂದ್ರ ಶರ್ಮ** (ಯು.ಪಿ. : ಸಾಮಾನ್ಯ) : ಹೌದು, ಇದೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ನಾನು ನಿಮ್ಮ ಹೇಳಿಕೆಯನ್ನು ಒಪ್ಪಿಕೊಳ್ಳುತ್ತೇನೆ. ಆದರೆ ನೀವು ಪ್ರದರ್ಶಿಸಿದ ಅತುಲ ಅಜ್ಞಾನಕ್ಕಾಗಿ ಅತ್ಯಂತ ದುಃಖಿತನಾಗಿದ್ದೇನೆ. ನನ್ನ ಮಾನ್ಯ ಸ್ನೇಹಿತರು ವಕೀಲರಾಗಿದ್ದು ಅಂಥ ಅಭಿಪ್ರಾಯವನ್ನು ತಳೆದಿದ್ದರೆ, ಅವರು ಹಿಂದೂ ಕಾನೂನನ್ನು ತಮ್ಮ ವೃತ್ತಿಯಲ್ಲಿ ವ್ಯವಹರಿಸಿಲ್ಲ. ಅವರು ನನ್ನ ಈ ಸ್ನೇಹಿತನ ಸ್ನೇಹಪೂರ್ಣ ಪ್ರತ್ಯುತ್ತರವನ್ನು ಕ್ಷಮಿಸುವರು ಎಂದು ಭಾವಿಸಿದ್ದೇನೆ. ನಡು ನಡುವೆ ಅಡ್ಡಿಪಡಿಸುವುದನ್ನು ನಾನು ಸಹಿಸಿಕೊಳ್ಳಬಲ್ಲೆ. ನೀವು ಅಡ್ಡಿಪಡಿಸುತ್ತ ಹೋದರೆ ನನ್ನ ಭಾಷಣವು ಇನ್ನಷ್ಟು ಖಾರವಾಗುತ್ತದೆ. ಬ್ರಿಟಿಷರು ಈ ದೇಶಕ್ಕೆ ಆಗಮಿಸಿದ ಅನಂತರ, ಹಿಂದೂ ಕಾನೂನು ಕ್ರಮೇಣ ನಿಶ್ಚಿತ ರೂಪು ತಳೆಯಿತು. ಅವರು ದೇಶದ ಮತ ಸಂಬಂಧೀ ಕಾನೂನನ್ನು ಮುಟ್ಟುವ ಧೈರ್ಯ ತೋರಲಿಲ್ಲ.

**ಬಾಬು ರಾಮ ನಾರಾಯಣ ಸಿಂಗ್ :** ಅವರು ಮಹಿಳೆಯ ಸಲುವಾಗಿ ಪರಿಮಿತ ಎಸ್ಟೇಟ್ ನಿಯಮವನ್ನು ಜಾರಿಗೆ ತಂದರು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ನಾನು ನೇರವಾಗಿ ಆ ವಿಷಯಕ್ಕೇ ಬರುತ್ತಿದ್ದೇನೆ. ಆ ಅಂಶವನ್ನು ನಾನು ಉತ್ತರಿಸಲು ಮರೆತರೆ, ದಯವಿಟ್ಟು ನೆನಪು ಮಾಡಿ. ಹಾಗೂ ಕಾನೂನು ವಿಶಾಲವಾದ ವಿಷಯ. ಅದರ ಬಗ್ಗೆ ನಾನು ಗಂಟೆಗಟ್ಟಲೆ ಮಾತಾಡಬಲ್ಲೆನು, ಅಧ್ಯಕ್ಷರು ಅನುಮತಿ ಕೊಟ್ಟ ಪಕ್ಷದಲ್ಲಿ. ಸ್ವಾಮೀ, ನಾನು ಹಾಗೇನೂ ಮಾಡುವುದಿಲ್ಲ ಎಂದು ತಮಗೆ ಭರವಸೆ ಕೊಡುತ್ತೇನೆ.

ಮಾನ್ಯ ಡೆಪ್ಯುಟಿ ಸ್ಪೀಕರ್ ಅವರೆ, ಪ್ರಥಮತಃ ನಾನು ಈ ವಿಧೇಯಕವನ್ನು ಈ ಸದನಕ್ಕೆ ಮತ್ತು ಈ

ಸದನದ ಮಾರ್ಗವಾಗಿ ಕಳ್ಳಸಾಗಣೆಯಲ್ಲಿ ತಂದ ರೀತಿಯನ್ನು ಕುರಿತು ನಾನು ಪ್ರತಿಭಟಿಸುತ್ತೇನೆ. ಇದೊಂದು ಅಸಾಧಾರಣ ಕಾರ್ಯವಿಧಾನ.

**ಶ್ರೀಮತಿ ರೇಣುಕಾ ರೇ :** ಮಾನ್ಯ ಡೆಪ್ಯುಟಿ ಸ್ಪೀಕರ್ ಅವರೆ, ನಾನು ಇದಕ್ಕೆ ಆಕ್ಷೇಪಣೆ ಸಲ್ಲಿಸುತ್ತೇನೆ. ಇದು ಸದನಕ್ಕೆ ಮಾಡಲಾದ ಅಪಮಾನ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಇದು ಕ್ರಿಯಾಲೋಪವಲ್ಲ.

**ಶ್ರೀಮತಿ ರೇಣುಕಾ ರೇ :** ಸ್ವಾಮಿ, ಇದೊಂದು ಕ್ರಿಯಾಲೋಪ. ಸದನದ ವಿರುದ್ಧ ಮಾಡಲಾದ ಈ ಟಿಪ್ಪಣಿಗೆ ನನ್ನ ಆಕ್ಷೇಪಣೆಯುಂಟು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** "ಕಳ್ಳಸಾಗಣೆ". ಇದು ಸಂಸತ್ ವಿರೋಧೀ ಪದವೆಂದು ನಾನೆಂದೂ ತಿಳಿದಿಲ್ಲ. ಮಾನ್ಯ ಸದಸ್ಯರು ಆ ಪದಕ್ಕೆ ಕಲಂಕ ಅಂಟಿದೆಯೆಂದು ಭಾವಿಸುವುದಾದರೆ, ಅದಕ್ಕೆ ಬದಲಾಗಿ ನಾನು ಬೇರೆ ಪದವನ್ನು ಬಳಸುತ್ತೇನೆ. ಯಾವ ಅವಸರದಿಂದ ಈ ವಿಧೇಯಕವನ್ನು ಈ ಸದನದಲ್ಲಿ ತೀರ್ಣಗೊಳಿಸಿಕೊಳ್ಳಲು ಪ್ರಯತ್ನಿಸಲಾಗುತ್ತಿದೆಯೋ ಅದು ಅಸಾಧಾರಣ ಎಂದು ಹೇಳಬಯಸುತ್ತೇನೆ. ಅದೂ ಸಹ ಅಸಂಸದೀಯ ಪದವೆ? ಹಾಗಾದರೆ, ಅದರ ಬದಲಾಗಿ ಒಂದು ಸಂಸದೀಯ ಪದವನ್ನು ಕೊಡಿ. ಅದರ ಬದಲಾಗಿ ನಿಮಗೆ ಬೇರೆ ಪದ ಸಿಗಲಾರದು. (ಮಾನ್ಯ ಸದಸ್ಯರು : "ಶಿಫಾರಸು ಮಾಡಬಹುದಾದ ವೇಗ".) ಇದು ಈ ಸದನದಲ್ಲಿ ಅಳವಡಿಸಿಕೊಳ್ಳಲಾದ ಅತ್ಯಂತ ಅಸಾಧಾರಣ ಕಾರ್ಯವಿಧಾನ. ನಾನು ಸಂಸತ್ ಕಾರ್ಯಕಲಾಪಗಳ ಬಗ್ಗೆ ಸದನದಲ್ಲಿ ಒಂದಿಷ್ಟು ಅನುಭವ ಪಡೆದಿದ್ದೇನೆ. ಈ ವಿಧೇಯಕದಿಂದ ಮಹತ್ವಪೂರ್ಣವಾದ ಮತ್ತು ವಿಸ್ತಾರದ ವಿಧೇಯಕವನ್ನು ತೀರ್ಣಗೊಳಿಸಲು ಈಗ ಪ್ರಯತ್ನಪಡುತ್ತಿರುವ ರೀತಿಯಲ್ಲಿ, ಪ್ರಯತ್ನಿಸಿದ ಸಂದರ್ಭಗಳು ನನಗೆ ಗೊತ್ತಿಲ್ಲ.

**ಶ್ರೀ ಬ್ರಿಜೇಶ್ವರ ಪ್ರಸಾದ** (ಬಿಹಾರ : ಸಾಮಾನ್ಯ) : ಅದು ಎಂದೂ ತೀರ್ಣಗೊಳ್ಳಲಿಕ್ಕಿಲ್ಲ. (ಚರ್ಚೆಗೆ ಅಡ್ಡಿ)

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಇಂಥ ಅಡ್ಡಿ ಅಡಚಣೆಗಳು ನನಗೆ. ಆದರೆ ಅವರು ಏನು ಹೇಳಿದರು ಎನ್ನುವುದು ನನಗೆ ಕೇಳಿಸಲಿಲ್ಲ. ಹೇಗೆ ಎಡೆಬಿಡದೆ ಅಡ್ಡಿ ಅಡಚಣೆಗಳನ್ನು ಒಡ್ಡಿ ನನ್ನ ಭಾಷಣದ ಪರಿಣಾಮಕಾರಕ ಶಕ್ತಿಯನ್ನು ಕುಂದಿಸಬಹುದು ಎಂದು ಮಾನ್ಯ ಸದಸ್ಯರು ಭಾವಿಸಿದ್ದರೆ ಅದು ಅವರ ತಪ್ಪು ಕಲ್ಪನೆ ಅಷ್ಟೆ.

ಈ ವಿಧೇಯಕವನ್ನು ಕಳೆದ ಬಜೆಟ್ ಅಧಿವೇಶನದ ಕೊನೆಯ ದಿನದಂದು ಮಂಡಿಸಲಾಗಿತ್ತು.

**ಬಾಬು ರಾಮ ನಾರಾಯಣ ಸಿಂಗ್ :** ಕೊನೆಯ ಗಂಟೆಯಲ್ಲಿ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಇನಿತು ಮಹತ್ವದ ಮತ್ತು ವಿಸ್ತಾರದ ಈ ವಿಧೇಯಕವನ್ನು, ಹಿಂದೂ ಸಮಾಜದ ಝೀವನ ಮತ್ತು ನಡತೆಯನ್ನು ವಿನಿಯಮಿಸುವ ಉದ್ದೇಶವುಳ್ಳ ವಿಧೇಯಕವನ್ನು ಕಳೆದ ಅಧಿವೇಶನದ ಕೊನೆಯ ದಿನದಂದು ಹೇಗೆ ಮಂಡಿಸಲಾಯಿತು ಎನ್ನುವುದು ನಿಮಗೆ ತಿಳಿದಿದೆ; ಹಾಗೆಯೇ ದಿನದ ಕೆಲಸವು ಆಖೈರಾದ ತರುವಾಯ ೫ ಗಂಟೆಯ ತರುವಾಯವೂ ನಾವು ಕುಳಿತುಕೊಂಡಿದ್ದು ಮತ್ತು ಮಾನ್ಯ ಕಾನೂನು ಮಂತ್ರಿ ಡಾ॥ ಅಂಬೇಡ್ಕರ್ ಅವರಿಗೆ ಒಂದು ಭಾಷಣ ಮಾಡಿ ಅದನ್ನು ಆಯ್ಕೆ ಸಮಿತಿಗೆ ಉಲ್ಲೇಖಿಸಲು ಅನುಮತಿ ಕೊಟ್ಟಿದ್ದು, ಇಕ್ಕಟ್ಟಾದ ಕಾಲಮಿತಿಯಲ್ಲಿ ಕೇವಲ ಮೂರು ನಾಲ್ಕು ಭಾಷಣಕಾರರಿಗೆ ಭಾಷಣ ಮಾಡಲು ಅನುಮತಿಸಿದ್ದು ಮತ್ತು ೭ ಗಂಟೆಯ ಹೊತ್ತಿಗೆ ಒಂದು ಲಘು ಅಧಿವೇಶನದ ಅನಂತರ ಪ್ರಸ್ತಾಪವನ್ನು ತೀರ್ಣಗೊಳಿಸಿದ್ದು, ಇವೆಲ್ಲವೂ ನಿಮಗೆ ಗೊತ್ತಿದೆಯಲ್ಲವೆ? ಆಮೇಲೆ

ಏನಾಯಿತು? ಅದು ಆಯ್ಕೆ ಸಮಿತಿಗೆ ಹೋಯಿತು. ಆಯ್ಕೆ ಸಮಿತಿಯು ಅದರ ಮೇಲೆ ತನ್ನ ವರದಿ ಸಲ್ಲಿಸಿತು ಮತ್ತು ವರದಿಯ ಪರ್ಯಾಲೋಚನೆ ಕೋರುವ ಪ್ರಸ್ತಾವದ ಬಗ್ಗೆ ಈ ಸದನದಲ್ಲಿ ಕ್ರಿಯಾಲೋಪಗಳನ್ನು ಎತ್ತಲಾಯಿತು. ಝೀವಾಳದ ಮಹತ್ವಪೂರ್ಣವಾದ ಆ ಕ್ರಿಯಾಲೋಪಗಳ ಗುಣಾವಗುಣಗಳ ಬಗ್ಗೆ ನಾನು ಪರೀಕ್ಷೆ ನಡೆಸಲು ಇಷ್ಟಪಡುತ್ತಿಲ್ಲ. ಅವುಗಳನ್ನು ಇತ್ಯರ್ಥಗೊಳಿಸಲಾಯಿತು. ವ್ಯಗ್ರತೆ ಎಷ್ಟು ವಿಪರೀತವಾಗಿತ್ತೆಂದರೆ, ಕಳೆದ ಅಧಿವೇಶನದಲ್ಲಿ ಮಾನ್ಯ ಕಾನೂನು ಮಂತ್ರಿ ಡಾ॥ ಅಂಬೇಡ್ಕರ್ ಅವರು ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕು ಎಂದು ಮಾತ್ರ ಕೇಳಬಯಸಿದರು; ಭಾಷಣ ಆಗಲಿಲ್ಲ. ಅದನ್ನು ಹೇಗೋ ಅಜೆಂಡಾದಲ್ಲಿ ಸೇರಿಸಲಾಯಿತು. ಕ್ರಿಯಾಲೋಪಗಳನ್ನು ತಿರಸ್ಕರಿಸಲಾಯಿತು. ಮತ್ತು ಆಯ್ಕೆ ಸಮಿತಿಯು ವರದಿಯನ್ನು ಅನುಸರಿಸಿ ವಿಧೇಯಕದ ಪರಿಶೀಲನೆಯನ್ನು ಮುಂದುವರಿಸಲು ಸದನವು ಸಕ್ಷಮ ಆಗಿದೆಯೆಂದು ಕಂಡುಬಂದಿತು. ಈಗ ನೋಡಿ, ಅದನ್ನು ಕುರಿತು ನಾವು ಯಾವ ರೀತಿಯಲ್ಲಿ ವ್ಯವಹರಿಸುತ್ತಿದ್ದೇವೆ. ಸಾಮಾನ್ಯ ಬಜೆಟ್ ಮತ್ತು ರೈಲ್ವೆ ಬಜೆಟ್ ಇವುಗಳ ನಡುವೆ ಲಭ್ಯವಿರುವ ಲಘು ಅವಧಿಯಲ್ಲಿ ಇದನ್ನು ಮುಂದಕ್ಕೆ ತಳ್ಳಲು ಪ್ರಯತ್ನ ನಡೆದಿದೆ. ಆ ಬಗ್ಗೆ ಯಾವುದೇ ಗಾಂಭೀರ್ಯವಿಲ್ಲ. ಅದರ ಮಹತ್ವ ಯಾರಿಗೂ ಅರ್ಥವಾಗುತ್ತಿಲ್ಲ. ಇಂತು ದೂರಗಾಮೀ ಪರಿಣಾಮಗಳನ್ನುಳ್ಳ ಈ ಶಾಸನವನ್ನು ಕುರಿತು ನಾವು ಹೇಗೆ ವ್ಯವಹರಿಸುತ್ತಿದ್ದೇವೆ ಎಂಬ ಬಗ್ಗೆ ಇಡೀ ದೇಶವೇ ದಿಗ್‌ಭ್ರಾಂತವಾಗಿದೆ. ನೀವು ವಿಷಯಕ್ಕೆ ಮಹತ್ವ ನೀಡಿ ಗಂಭೀರವಾಗಿ ಆಲೋಚಿಸುತ್ತಿದ್ದರೆ, ಕಾರ್ಯವು ಯಥಾವಿಧಿ ಪೂರೈಸಬೇಕು ಎಂದು ಬಯಸುತ್ತಿದ್ದರೆ, ಈಗಿರತಕ್ಕ ಸ್ಥಿತಿಯಲ್ಲಿರುವ ಹಿಂದೂ ಕಾನೂನನ್ನು ಪರಿಷ್ಕರಿಸುವ ದಿಶೆಯಲ್ಲಿ ಏನಾದರೂ ಮಾಡಬೇಕು ಎಂದು ಇಷ್ಟಪಡುವುದಾದರೆ, ಇದು ನಿಜವಾಗಿಯೂ ಕಾರ್ಯವನ್ನು ನೆರವೇರಿಸುವ ಮಾರ್ಗವಲ್ಲ. ಈ ವಿಧೇಯಕವನ್ನು ವಿಶೇಷ ಅಧಿವೇಶನದಲ್ಲಿ ಪರಿಶೀಲನೆಗೆ ಕಾದಿರಿಸಿ. ಬ್ಯಾಂಕಿಂಗ್ ಮುಂತಾದ ಸಣ್ಣ ವಿಷಯಗಳ ಬಗ್ಗೆ ನೀವು ದಿನಗಟ್ಟಲೆ ತೆಗೆದುಕೊಳ್ಳುತ್ತೀರ. ಪರಿಸ್ಥಿತಿ ಹೀಗಿರುವಾಗ, ಹಿಂದೂ ಸಮಾಜದ ಝೀವನವನ್ನು ಮತ್ತು ಆಚಾರ – ವ್ಯವಹಾರಗಳನ್ನು ವಿನಿಯಮಿಸುವ ಉದ್ದೇಶ ಹೊಂದಿರುವ ಈ ವಿಧೇಯಕವನ್ನು, ಈಗ ಯಾವ ರೀತಿಯಲ್ಲಿ ಪರಿಶೀಲಿಸಲು ಪ್ರಯತ್ನಿಸಲಾಗುತ್ತಿದೆಯೋ ಆ ರೀತಿಯಲ್ಲಿ ಈ ವಿಧೇಯಕದ ಬಗ್ಗೆ ವ್ಯವಹರಿಸಬೇಕು ಎಂದು ಹೇಳಬಯಸುತ್ತೀರ? ಈ ಮಹತ್ವಪೂರ್ಣ ಶಾಸನವನ್ನು ಪರ್ಯಾಲೋಚಿಸಲು ಅನುಸರಿಸಲಾಗುತ್ತಿರುವ ಈ ಕಾರ್ಯವಿಧಾನದ ವಿರುದ್ಧ ನನ್ನ ಸುಸ್ಪಷ್ಟ ಪ್ರತಿಭಟನೆಯನ್ನು ದಾಖಲಿಸಬಯಸುತ್ತೇನೆ. ನಿಮಗೆ ಗೊತ್ತಿರುವ ಹಾಗೆ ೩ ಗಂಟೆಯ ಹೊತ್ತಿಗೆ ರೈಲ್ವೆ ಬಜೆಟ್‌ನ ಪೂರಕ ಬೇಡಿಕೆಗಳು ಬಂದುವು ಮತ್ತು ಸಂಜೆಯ ಹೊತ್ತಿಗೆ ಸಾಮಾನ್ಯ ಬಜೆಟ್ ಬಂತು. ಮಾನ್ಯ ಡೆಪ್ಯುಟಿ ಸ್ಪೀಕರ್ ಅವರೆ, ಇಂಥ ಸ್ವರೂಪದ ವಿಧೇಯಕಗಳ ಸಂಬಂಧದಲ್ಲಿ ಈ ಬಗೆಯ ಕಾರ್ಯವಿಧಾನವು ನನಗೆ ವಾಡಿಕೆಯಾಗಿಲ್ಲ ಎಂದು ನಿವೇದಿಸಬಯಸುತ್ತೇನೆ. ಇಂಥ ಕಾರ್ಯವಿಧಾನದ ಒಂದೇ ಒಂದಾದರೂ ಪೂರ್ವ ನಿದರ್ಶನವನ್ನು ನಮೂದಿಸಬೇಕಾಗಿ ವಿಧಾನ ಮಂಡಲದ ನನ್ನ ಹಿರಿಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

**ಬಾಬು ರಾಮ ನಾರಾಯಣ ಸಿಂಗ್ :** ಒಂದೂ ಇಲ್ಲ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಸ್ವಾಮೀ, ಕ್ರೋಡೀಕರಣದ ಅಗತ್ಯ ಏನಾದರೂ ಇದೆಯ ಎಂಬುದೇ ಪ್ರಶ್ನೆ. ನನಗಂತೂ ಯಾವ ಅಗತ್ಯವೂ ಕಾಣುವುದಿಲ್ಲ. ಯಾಕೆಂದರೆ ನನ್ನ ಸ್ನೇಹಿತೆ ವಿದುಷಿ ಶ್ರೀಮತಿ ದುರ್ಗಾಬಾಯಿ ಅವರು ಹೇಳುವ ಪ್ರಕಾರ ನಮ್ಮ ಹಿಂದೂ ಕಾನೂನು ಸುಭದ್ರವಾಗಿ ನೆಲಸಿದ್ದು ತನ್ನ ಕ್ಷೇತ್ರದಲ್ಲಿ ನೂರಾರು ವರ್ಷಗಳವರೆಗೆ ಸದೃಢವಾಗಿ ಉಳಿದಿದೆ. ಪ್ರಾಚೀನ ಹಿಂದೂ ಕಾನೂನನ್ನು, ಬ್ರಿಟಿಷರು

ಇಲ್ಲಿ ಬಂದ ತರುವಾಯ, ಪಂಡಿತರ ನೆರವಿನಿಂದ ಅರ್ಥ ವಿವರಣೆ ಮಾಡಲಾಯಿತು. ಅವರನ್ನು ನ್ಯಾಯಪಂಡಿತರು ಎಂದು ಕರೆಯಲಾಗುತ್ತಿತ್ತು. ಅವರು ಸ್ಮೃತಿಗಳನ್ನು ಮತ್ತು ಧರ್ಮಶಾಸ್ತ್ರಗಳನ್ನು ಅಧ್ಯಯನ ಮಾಡಿ ಕಾನೂನಿನ ಅರ್ಥ ವಿವರಣೆ ಮಾಡುತ್ತಿದ್ದರು. ಈ ಸಂಶೋಧನೆಯ ಮತ್ತು ಅಧ್ಯಯನ ಪ್ರಕ್ರಿಯೆ ಹಾಗೆಯೇ ಮುಂದುವರಿಯುತ್ತ, ಸ್ಮೃತಿಗಳು, ನಿಬಂಧನೆಗಳು, ರೂಢಿರಿವಾಜುಗಳ ಸಾಹಿತ್ಯ (ಸಾಮಗ್ರಿಯಿಂದ) ಹಿಂದೂ ಕಾನೂನು ಆಗಿ ಸಂರಚಿತವಾಗುವ ನ್ಯಾಯಿಕ ತತ್ತ್ವಗಳ ಪದ್ಧತಿಯು ರೂಪುಗೊಳ್ಳುವವರೆಗೆ ಸಾಗಿತು. ಆ ಕಾನೂನು ಈಗಲೂ ಜಾರಿಯಲ್ಲುಂಟು.

ಸ್ವಾಮೀ, ಇಡೀ ಜಗತ್ತಿನಲ್ಲಿ ವಿದಿತವಾದ ನ್ಯಾಯಶಾಸ್ತ್ರ ಪದ್ಧತಿಗಳ ಹಿಂದೂ ಕಾನೂನು ಅತ್ಯಂತ ಪ್ರಾಚೀನ ವಂಶ ಚರಿತ್ರೆ ಹೊಂದಿರುವ ಕಾನೂನು ಎಂಬುದು ಜನಜನಿತವಾದ ಸಂಗತಿ.

**ಡಾ॥ ಮೋಹನ ದಾಸ್** (ಪಶ್ಚಿಮ ಬಂಗಾಲ : ಸಾಮಾನ್ಯ) : ಅದು ಅನ್ಯಾಯವಂತ ಕಾನೂನು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಹೌದು ಹಿಂದೂ ಕಾನೂನು ಅನ್ಯಾಯ ಪೂರ್ಣ ಕಾನೂನು! ಹಿಂದೂ ಸಮಾಜ ಅನ್ಯಾಯ ಪೂರ್ಣ ಸಮಾಜ! ಹಿಂದೂಗಳು ಅನ್ಯಾಯವಂತರು! ಹಿಂದೂ ಕಾನೂನು ಅನ್ಯಾಯವಂತ ಎಂಬುದಾಗಿ ಅಡ್ಡಿಪಡಿಸುವಲ್ಲಿ, ಅದಕ್ಕೆ ಉತ್ತರ ನೀಡಲು ಯಾರಿಗೂ ಸಾಧ್ಯವಲ್ಲ. ಹಾಗೆ ಅಡ್ಡಿಪಡಿಸಲು ಮೂರೇ ಮೂರು ಪದಗಳು ಸಾಕಾದುವು. ಹಿಂದೂ ಕಾನೂನು "ಅನ್ಯಾಯವಂತ ಕಾನೂನು" ಎಂಬುದಾಗಿ ಉಚ್ಚರಿಸಿದ ಅಂಥ ಬೀಸು ಆರೋಪಕ್ಕೆ ತಕ್ಕ ಉತ್ತರ ನೀಡಲು ನನ್ನಲ್ಲಿ ಸಾಮರ್ಥ್ಯ ಇದೆಯೋ ಇಲ್ಲವೋ ನಾನು ಹೇಳಲಾರೆನು. ಯಾವುದೇ ಒಂದು ಪದ್ಧತಿ ಒಳ್ಳೆಯದೋ ಅಥವಾ ಕೆಟ್ಟದ್ದೋ ಎಂದು ತೀರ್ಪು ನೀಡುವ ಹಕ್ಕು ಸಮಾಜಕ್ಕೆ ಸೇರಿದ್ದು. ನಿರಾಶರಾಗಿ ಅಥವಾ ಹತಾಶರಾಗಿ ಗೊಣಗುಟ್ಟುವ ವ್ಯಕ್ತಿಗಳಿಗೆ ದಕ್ಕುವ ಅಧಿಕಾರವಲ್ಲ. ಆದರೆ ಯಾವುದೇ ಪದ್ಧತಿಯ ಮೌಲ್ಯದ ಬಗೆಗಿನ ಅತ್ಯಂತ ವಿಶ್ವಾಸಾರ್ಹ ಪ್ರಮಾಣವೆಂದರೆ, ಆ ಪದ್ಧತಿ ಶತಮಾನಗಳ ಅಗ್ನಿಪರೀಕ್ಷೆಯಲ್ಲಿ ತೀರ್ಣವಾಗಿ ಇನ್ನೂ ಸುಭದ್ರವಾಗಿ ನೆಲಸಿರುವುದೇ. ಯಾವ ಪದ್ಧತಿಯಾದರೂ ಸರಿಯೆ, ಅಂತರಂಗದಲ್ಲಿ ಅಭದ್ರವಾಗಿದ್ದರೆ, ಅನ್ಯಾಯ ಪೂರ್ಣವಾಗಿದ್ದರೆ, ಬಹುಕಾಲದವರೆಗೆ ಬಾಳಿ ಬದುಕುವಂತಿಲ್ಲ. ಹಿಂದೂ ಕಾನೂನು ಮತ್ತು ಅದರ ಶಾಸನಕ್ಕೆ ಅಧೀನ ಹಿಂದೂ ಸಮಾಜ ಪದ್ಧತಿಯು, ಅನೇಕಾನೇಕ ಶತಮಾನಗಳಿಂದ ದೇಶದಲ್ಲಿ ಉಂಟಾದ ಆಘಾತಗಳನ್ನು ಮತ್ತು ಕ್ರಾಂತಿಗಳನ್ನು ಇದಿರಿಸಿದ್ದುಂಟು, ಇನ್ನೂ ಝೀವಂತವಾಗಿ ವಿಜೃಂಭಿಸುತ್ತಿರುವುದುಂಟು. ಗ್ರೀಸ್, ರೋಮ್, ಅಲ್ಜೀರಿಯಾ, ಬ್ಯಾಬಿಲೋನ್ ಮುಂತಾದ ದೇಶಗಳಲ್ಲಿ ಮೆರೆದ ಪ್ರಾಚೀನ ನಾಗರಿಕತೆಗಳು, ಸಾಮಾಜಿಕ ಕ್ಷೋಭೆಗಳ, ರಾಜಕೀಯ ವಿಪ್ಲವಗಳ ಪ್ರಳಯದ ಆಘಾತಕ್ಕೆ ಸಿಲುಕಿ ಕೊಚ್ಚಿಹೋಗಿವೆ, ವಿವಾದವಾಗಿವೆ. ಆದರೆ, ಹಿಂದೂ ಸಂಸ್ಕೃತಿ ಅಥವಾ ಸಮಾಜವು – ಅದರ ಮೂಲದ ತಾರೀಖು ಇನ್ನು ಖಚಿತವಾಗಿ ನಿರ್ಧಾರಿತವಾಗಿಲ್ಲ – ತನ್ನ ಶಕ್ತಿ ಸಾಮರ್ಥ್ಯಗಳಿಂದ, ಝೀವಂತಿಕೆಯ ಲವಲವಿಕೆಯಿಂದ ಇನ್ನೂ ಪ್ರಕಾಶಿತ ನಿರ್ವಹಣೆಯಲ್ಲಿ ನಿರತವಾಗಿದೆ. ಮತ್ತು ದೇವರ ದಯೆಯಿಂದ ಆವರೆಗೂ – ಅಂದರೆ ನಾವು ಈ ಬಗೆಯ ವಿಚಾರಹೀನವಾದ ರೀತಿಯಲ್ಲಿ ಅಲ್ಪಾತ್ಮ ಮನೋಭೂಮಿಕೆಯಲ್ಲಿ ಅದರ ಬುನಾದಿಯನ್ನೇ ಅಭದ್ರಗೊಳಿಸುವ ಶಾಸನರಚನೆಗೆ ತೊಡಗುವವರೆಗೂ ಸುಸೂತ್ರವಾಗಿ ಸಾಗುತ್ತಿದೆ. ಹಿಂದೂ ಸಮಾಜ ಪದ್ಧತಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುತ್ತ ಹಿಂದೂ ಧರ್ಮದ ಮೂಲಾಧಾರಗಳಲ್ಲಿ ಮೂಲಭೂತವಾದ ಏನಾದರೂ ನ್ಯೂನತೆ ಇದ್ದಿದ್ದರೆ, ತನ್ನ ಸುದೀರ್ಘ ಹಾಗೂ ನಾನಾ ಘಟನೆಗಳಿಂದ ತುಂಬಿದ ಚರಿತ್ರೆಯಲ್ಲಿ ಉದ್ದಕ್ಕೂ ಅದರ ಮೇಲೆ ಎರಗುತ್ತಿದ್ದ ಏಳುಬೀಳುಗಳ, ಸ್ಥಿತ್ಯಂತರಗಳ ಆಘಾತಗಳನ್ನು ಸಹಿಸಿಕೊಂಡು ಇನ್ನೂ ವಿಜೃಂಭಿಸುವುದು ಸರ್ವಥಾ ಸಾಧ್ಯವಾಗುತ್ತಿರಲಿಲ್ಲ. ಈ ದೇಶವು ಸಾವಿರ ವರ್ಷಗಳಿಗೂ

ಮೇಲ್ಪಟ್ಟ ಅವಧಿಯಲ್ಲಿ ಪರಕೀಯರ ಆಳ್ವಿಕೆಗೆ ತುತ್ತಾದದ್ದುಂಟು. ಚರಿತ್ರೆಯನ್ನು ಅಧ್ಯಯನ ಮಾಡಿದವರಿಗೆ ಸ್ಥಿತ್ಯಂತರಗಳಿಗೆ ಸರಿಹೊಂದಿಸಿಕೊಳ್ಳುವ ವಿಸ್ಮಯಕಾರೀ ಸಾಮರ್ಥ್ಯ ಎದ್ದುಕಾಣುತ್ತದೆ.

**ಶ್ರೀಮತಿ ಜಿ. ದುರ್ಗಾಬಾಯಿ :** ಕೇಳಿರಿ, ಕೇಳಿರಿ.

**ಶ್ರೀಮತಿ ರೇಣುಕಾ ರೇ :** ಈಗ ಬದಲಾವಣೆ ಆಗಿದೆ. (ಚರ್ಚೆಗೆ ಅಡ್ಡಿ)

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಮಧ್ಯೆ ಮಧ್ಯೆ ನನಗೆ ಅಡ್ಡಿಗಳನ್ನು ಇದಿರಿಸಬೇಕಾಗುತ್ತದೆ. ಸಂತೋಷವೇ. ನನಗೆ ಉಸಿರಾಡಲು ಒಂದಿಷ್ಟು ಸಮಯ ಸಿಗುತ್ತದೆ. ಒಬ್ಬೊಬ್ಬರಾಗಿ ಮಾಡಿ. ಅಷ್ಟೇ ನನ್ನ ವಿನಂತಿ. ಸ್ಪೀಕರ್ ಮಹಾಶಯರೆ, ನಾನು ಹೇಳಿದ್ದೆಲ್ಲವನ್ನು ಕೇಳಿದವರೆಲ್ಲರು ನಂಬುತ್ತಾರೆ, ಮನದಟ್ಟು ಮಾಡಿಕೊಳ್ಳುತ್ತಾರೆ ಎಂದು ಭಾವಿಸುವಷ್ಟು ದಡ್ಡನಲ್ಲ ನಾನು. ಆದರೆ ನನ್ನ ಪೈಕಿ ಕೆಲವರಾದರೂ ನಾವು ಹೇಳುತ್ತಿರುವುದನ್ನು ಆಲಿಸಿ, ಆ ಬಗ್ಗೆ ಗಮನ ಹರಿಸುತ್ತಾರೆ ಎಂದು ನನ್ನ ಎಣಿಕೆ. ನಾನು ಕಳಕಳಿಯಿಂದ ವಾದಮಾಡುವುದೇನೆಂದರೆ, ಹಿಂದೂ ಧರ್ಮ, ಹಿಂದೂ ಕಾನೂನು ಅವಿಸ್ಮರಣೀಯ ಪರಂಪರೆಗಳನ್ನು ಹೊಂದಿರುವ, ಪ್ರಾಚೀನ ಸ್ರೋತಗಳನ್ನು ಹೊಂದಿರುವ ಸಂಸ್ಕೃತಿ. ಅಂಥ ಮಹಾನ್ ಸಂಸ್ಕೃತಿಯನ್ನು ಕಾನೂನಿನ ಒಂದೇ ಏಟಿನಿಂದ ತೊಡೆದುಹಾಕಲು ಪ್ರಯತ್ನಿಸುವುದು ಖಂಡಿತ ತರವಲ್ಲ ಎಂದು ಹೇಳಬಯಸುತ್ತೇನೆ. ನನ್ನ ಬಲಗಡೆಯ ಸ್ನೇಹಿತರಿಗೂ ಎಡಗಡೆಯ ಸ್ನೇಹಿತರಿಗೂ ನನ್ನೀ ವಿನಂತಿಯನ್ನು ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಹಿಂದೂ ಕೋಡ್ ವಿಧೇಯಕವು ಏನು ಮಾಡಬಯಸುತ್ತಿದೆ ಎಂಬ ಆಶಂಕೆಯುಳ್ಳವನಾಗಿದ್ದೇನೆ. ಇದರಲ್ಲಿ ಹಿಂದೂ ಎಂಬ ಯಾವ ಸಂಗತಿಯೂ ನನಗೆ ಗೋಚರಿಸುತ್ತಿಲ್ಲ. ಇದನ್ನು ಹೆಚ್ಚು ಸಮರ್ಪಕವಾಗಿ, ಯಥೋಚಿತವಾಗಿ 'ಅ-ಹಿಂದೂ' ಅಥವಾ 'ಹಿಂದೂ-ವಿರೋಧಿ' ಕೋಡ್ ಎಂದು ಕರೆಯಬಹುದೇನೋ.

**ಮಿ॥ ನಝೀರುದ್ದೀನ್ ಅಹಮ್ಮದ್** (ಪಶ್ಚಿಮ ಬಂಗಾಲ : ಮುಸ್ಲಿಂ) : ಮುಸ್ಲಿಂ ಕೋಡ್.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಅದು ಏನೇ ಆಗಿದ್ದಿರಬಹುದು. ಆದರೆ ಹಿಂದೂ ಕೋಡ್ ಅಂತೂ ಅಲ್ಲವೇ ಅಲ್ಲ. ಹಿಂದೂ ಸತ್ವದ ಹಿಂದುತ್ವದ ಉಸಿರು ಅದರಲ್ಲಿ ಆಡುತ್ತಿಲ್ಲ. ಅದರಲ್ಲಿ ಹಿಂದೂ ವಿರೋಧದ ಹೊಗೆ ಆಡುತ್ತಿದೆ. ಹಿಂದೂ ಎಂಬ ಸಕಲ ಸಂಗತಿಗಳ ಬಗೆಗಿನ ಪರಮ ಜುಗುಪ್ಸಾ ಭಾವನೆಯು ಈ ವಿಧೇಯಕದಲ್ಲಿ, ಮೊದಲಿನಿಂದ ಕೊನೆಯವರೆಗೂ ತುಂಬಿ ತುಳುಕಾಡುತ್ತಿದೆ.

**ಶ್ರೀ ಎಚ್. ವಿ. ಕಾಮತ್ :** ಹಿಂದೂ ಸತ್ತ್ವ ಎಂದರೇನು?

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಸ್ವಾಮೀ, ಹಾಗಾದರೆ ಅದನ್ನು ಹಿಂದುತ್ವ, ಹಿಂದೂ ಸತ್ತ್ವ ಎನ್ನುತ್ತೀರ? ಹಿಂದೂ ಪದ್ಧತಿಯ ಅಥವಾ ಹಿಂದೂ ಸಮಾಜದ ಕೋನ ಶಿಲೆಗಳಾಗಿರತಕ್ಕ ನಿಮ್ಮ ವಿವಾಹ ಪದ್ಧತಿಯನ್ನು ಮತ್ತು ದಹನ ಪದ್ಧತಿಯನ್ನು ಕುರಿತು ಚಿಂತಿಸಿ. ಅದನ್ನು ಈಗ ಯಾವ ರೀತಿಯಲ್ಲಿ ಮಾಡಹೊರಟಿದ್ದೀರಲ್ಲ, ಆ ರೀತಿಯಲ್ಲಿ ಬುಡಮೇಲು ಮಾಡಬಯಸುತ್ತೀರ? ಈ ಪ್ರಶ್ನೆ ನೀವು ಈ ಸದನದಲ್ಲಿ ನಮಗಷ್ಟೇ ಮಾತ್ರವಲ್ಲದೆ, ಸದನದ ಹೊರಗಿನ ನಮ್ಮ ದೇಶಬಾಂಧವರಿಗೂ ಬರಲಿರುವ ತಲೆಮಾರಿನವರಿಗೂ ಉತ್ತರ ನೀಡಬೇಕಾದ ಪ್ರಶ್ನೆ.

ಸ್ವಾಮೀ, ಈ ಕಾನೂನನ್ನು ನೀವು ಮಾಡಬಯಸುವ ರೀತಿಯಲ್ಲಿ ಕ್ರೋಡೀಕರಣ ಮಾಡಿದ ಪಕ್ಷದಲ್ಲಿ, ಅಂದರೆ ಏನೋ ಬೌದ್ಧಿಕ ಮನರಂಜನೆಯ ಕೆಲಸವಾಗಿ ಅಂದರೆ ಕ್ರೋಡೀಕರಣದ ಸಲುವಾಗಿ ಕ್ರೋಡೀಕರಣ ಮಾಡುವುದಾದರೆ, ನನ್ನ ಮಿತ್ರರಲ್ಲಿ ನನ್ನ ವಿನಂತಿಯೆಂದರೆ, – ಅದು ಜಾಣರ ಕೆಲಸವಲ್ಲ, ವಿಚಾರವಂತರು ಮಾಡತಕ್ಕ ಕೆಲಸವಲ್ಲ ಎಂದು ಹೇಳಬಯಸುತ್ತೇನೆ. ಅದು ಅಗತ್ಯವಲ್ಲ. ಯಾರಿಗೂ ಅದು ಅಗತ್ಯವಾಗಿ

ಆಗಬೇಕು ಎಂದು ಅನಿಸಿದ್ದಿಲ್ಲ. ವಿವಿಧ ಉಚ್ಚ ನ್ಯಾಯಾಲಯಗಳು ಮತ್ತು ಜಿಲ್ಲಾ ನ್ಯಾಯಾಲಯಗಳ ನ್ಯಾಯಾಧೀಶರ ಅಭಿಪ್ರಾಯಗಳನ್ನು ಗಮನಿಸಿ ನೋಡಿ. ಅವರೇ ಹಿಂದೂ ಕಾನೂನನ್ನು ಜಾರಿಗೊಳಿಸಬೇಕಾದ ಮಹನೀಯರು. ಹಿಂದೂ ಕಾನೂನು ಕ್ರೋಡೀಕರಣವಾಗಬೇಕಾದ ಅಗತ್ಯ ಇದೆಯೆಂದು ಮತ್ತು ಅದನ್ನು ಈಗ ಮಾಡಬಯಸುವ ರೀತಿಯಲ್ಲಿ ಮಾಡತಕ್ಕದೆಂದು ಭಾವವಾಗುವ ಅಭಿಪ್ರಾಯಗಳನ್ನು ಒಳಗೊಂಡ ಸಂಪುಟಗಳು ಸರ್ಕಾರದ ಬಳಿಗೆ ಬಂದಿವೆಯೆ? ಇಲ್ಲ. ಯಾರು ಈ ಕಾನೂನಿನ ಉಪಬಂಧಗಳ ಮೂಲಕ ತಮ್ಮನ್ನು, ತಮ್ಮ ಝೀವನ ಮತ್ತು ನಡತೆಯನ್ನು ರೂಪಿಸಿಕೊಳ್ಳತಕ್ಕದ್ದೋ ಆ ಸರ್ವಸಾಧಾರಣ ಜನಸಮುದಾಯದ ಕಡೆಯಿಂದ ಸಾರ್ವತ್ರಿಕ ಕೋರಿಕೆ ಏನಾದರೂ ಬಂದಿದೆಯೆ? ಅವರು ಅದನ್ನು ಕೇಳಿದ್ದಾರೆಯೆ? ಅಂಥ ಏನಾದರೂ ಕೋರಿಕೆ ಬಂದಿದೆಯೆ? ನನ್ನ ಬಲಗಡೆ ಇರುವ ಮಾನ್ಯ ಸ್ನೇಹಿತರು ಹೇಳುತ್ತಾರೆ, ಅದು ಸರಿಯಾಗಿದೆ; ಪರಿಪೂರ್ಣವಾಗಿದೆ ಎಂದು ಹೇಳುತ್ತಾರೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಅವರು ನಿಮ್ಮನ್ನು ಬೆಂಬಲಿಸುತ್ತಾರೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ನನ್ನ ಸ್ನೇಹಿತರು ಹೇಳುತ್ತಾರೆ: ಅವರು ನನ್ನನ್ನು ಬೆಂಬಲಿಸುತ್ತಾರೆ. ಅವರು ಬೆಂಬಲಿಸುವುದು, ಸಮರ್ಥಿಸುವುದು ಸತ್ಯವನ್ನು. ನಾವು ಮಾಡುತ್ತಿರುವುದನ್ನು ತಿಳಿದು ದೇಶಕ್ಕೆ ಅಕಸ್ಮಾತ್ ಆಶ್ಚರ್ಯವಾಗಬಹುದು. ನಾವು ಅದೇನೋ ಜಾಣ್ಮೆಯ ಕೆಲಸವನ್ನು ಮಾಡುತ್ತಿದ್ದೇವೆ ಎಂದು ನಮ್ಮ ಆತ್ಮಗಳಿಗೆ ಪ್ರಶಂಸೆಯ ಲೇಪನವನ್ನು ಹಚ್ಚಿಕೊಳ್ಳುವುದು ಬೇಡ. ನೀವು ಯಾವ ರೀತಿಯಲ್ಲಿ ಆತ್ಮವಂಚನೆ ಮಾಡಿಕೊಳ್ಳುತ್ತ ಇದ್ದೀರೊ ಹಾಗೆ ನಾನು ನನ್ನ ಆತ್ಮವಂಚನೆ ಮಾಡಿಕೊಳ್ಳಲಾರೆನು. ಈ ಕ್ರೋಡೀಕರಣ ಜಾಣ್ಮೆಯ ಕೆಲಸವಾಗಿದ್ದರೂ, ನಾನು ಈಗ ನಮೂದಿಸಿರುವ ಕಾರಣಗಳ ನಿಮಿತ್ತ, ಕ್ರೋಡೀಕರಣಕ್ಕೆ ಕೈ ಹಾಕಲು ಎಂದೂ ಆಲೋಚಿಸುತ್ತಿರಲಿಲ್ಲ. ಅದಕ್ಕೆ ನೀವು ಯಾವುದೇ ಬಗೆಯ ಏಕರೂಪತೆಯನ್ನು ಒದಗಿಸಲು ಸಾಧ್ಯವಿಲ್ಲ. ಹಿಂದೂ ಧರ್ಮ ಹಿಂದೂ ಧರ್ಮವೇ – ಆದರೆ, ವಿವಿಧತೆಯಲ್ಲಿ ಏಕತೆಯ ತನ್ನ ಮೂಲಭೂತ ಸ್ವಭಾವ ವೈಶಿಷ್ಟ್ಯದ ಕಾರಣವೇ. ವಿವಿಧತೆಯಲ್ಲಿ ಏಕತೆ – ಅದೇ ಹಿಂದೂ ಧರ್ಮದ ಅಂತಃಸತ್ವ. ಹಿಂದೂ ಕಾನೂನು ಮತ್ತು ಹಿಂದೂ ಸಂಸ್ಕೃತಿ ಹಾಗೆಯೇ. ಹಿಂದುಸ್ಥಾನದಂಥ ವಿಶಾಲ ದೇಶದಲ್ಲಿ ನಿಸರ್ಗಸಹಜ ವಿವಿಧತೆಯನ್ನು ವರ್ಜಿಸಿ, ನಿರ್ಲಕ್ಷಿಸಿ, ಏಕರೂಪವಾದ ಪ್ರಮಾಣ ನಿಷ್ಠವಾದ ಬಗೆಯ ಏಕರೂಪತೆಯನ್ನು ಅಪೇಕ್ಷಿಸಲು ಸಾಧ್ಯವಿಲ್ಲ. ಹಾಗೆ ಮಾಡಿದ್ದೇ ಆದರೆ ನೀವು ಸಂಕಟವನ್ನು ಇದಿರಿಸಬೇಕಾದೀತು. ಸಂದೇಹವಿಲ್ಲ, ಅಚ್ಚರಿಯಿಲ್ಲ. ಈಗ ನಿಮಗೆ ಅರಿವಾಗಲಿಕ್ಕಿಲ್ಲ, ಮನವರಿಕೆಯಾಗಲಿಕ್ಕಿಲ್ಲ. ಸಮಯವು ಪ್ರಾಪ್ತವಾಗುತ್ತಲೇ ಜ್ಞಾನೋದಯ ಆಗುತ್ತದೆ. ಏನಾದರೂ ಸರಿಯೆ, ಒಟ್ಟಿನಲ್ಲಿ ಈ ಕ್ರೋಡೀಕರಣದ ತರುವಾಯ ನಿಮ್ಮ ಗುರಿ ಈಡೇರುತ್ತದೆಯೆ? ನಾನು ಹೇಳುತ್ತೇನೆ; ಇಲ್ಲ. ನಿಮ್ಮ ಗುರಿ ಈಡೇರುವುದಿಲ್ಲ. ಮೈಸೂರಿನ ಮಾನ್ಯ ಸದಸ್ಯರು ನಿನ್ನೆ ಒಂದು ಭಾಷಣ ಮಾಡಿದರು. ಅವರೆಂದರು: ಈಗ ಕೆಲಸ ಎಷ್ಟೊಂದು ಸುಲಭ ಆಗಿದೆಯಲ್ಲ ಎಂದರೆ, ನಾಲ್ಕಾಣೆ ಅಥವಾ ಆರಾಣೆ ಪ್ರಕಟಣೆಯನ್ನು, ಹೊತ್ತಗೆಯನ್ನು ಖರೀದಿಸಿದರೆ ಸಾಕು; ಹಿಂದೂ ಧರ್ಮದ ಗೊತ್ತುಗುರಿ ಏನು, ಧ್ಯೇಯೋದ್ದೇಶ ಏನು ಎಲ್ಲವೂ ಗೊತ್ತಾಗುತ್ತದೆ. ಅನೇಕ ಮಿತ್ರರು ಕೂಗಿ ಹೇಳುತ್ತಾರೆ. "ಸರಿ, ನಿಜ". "ಸರಿ, ಸರಿ, ನಿಜ, ನಿಜ". ಆದರೆ ಈ ಉತ್ಸಾಹಿಗಳಿಗೆ, ಈ ಹಿಂದೂ ಕೋಡ್ ವಿಧೇಯಕದ ಪ್ರವರ್ತಕರು ಕೂಡ ತಾವು ಇಡೀ ಹಿಂದೂ ಕ್ರೋಡೀಕರಣ ಮಾಡಬಲ್ಲೆವು ಎಂಬುದಾಗಿ ತೋರಿಸಿಕೊಳ್ಳುತ್ತಿಲ್ಲ ಎಂಬ ಸಂಗತಿ ತಿಳಿದಿದೆಯೆ? ಅವರು ವಿಧೇಯಕದ ಪ್ರಸ್ತಾವನೆಯಲ್ಲಿ ವಿನಯಪೂರ್ವಕವಾಗಿ ಹೇಳಿಕೊಳ್ಳುತ್ತಾರೆಯೇ ಹೊರತು, ಏನೆಲ್ಲ ಆಲೋಚನೆ ಉಂಟು ಹೇಳುತ್ತಿಲ್ಲ. ಅವರು ಹೇಳುತ್ತಾರೆ:

"ಭಾರತದ ಪ್ರಾಂತಗಳಲ್ಲಿ ಈಗ ಜಾರಿಯಲ್ಲಿ ಇರುವ ಹಿಂದೂ ಕಾನೂನಿನ ಕೆಲವು ಶಾಖೆಗಳನ್ನು ತಿದ್ದುಪಡಿ ಮಾಡಿ ಕ್ರೋಡೀಕರಿಸುವುದು ಉಚಿತವಾಗಿರುವುದರಿಂದ".

ಆದ್ದರಿಂದ ಮಾಡಬೇಕೆಂದು ಪ್ರಸ್ತಾವಿಸಿರುವುದು, ಕೆಲವು ಶಾಖೆಗಳನ್ನು ಅಂದರೆ ವಿವಾಹ ಕಾನೂನು, ವಾರಸಾ ಕಾನೂನು ಮತ್ತು ದತ್ತು ಸ್ವೀಕಾರ ಕಾನೂನು ಇವುಗಳನ್ನು ಕ್ರೋಡೀಕರಿಸುವುದು. ಸ್ಥೂಲವಾಗಿ ಹೇಳಬೇಕಾದರೆ ಇವು ಮುಖ್ಯ ವಿಷಯಗಳು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ಉಳಿದದ್ದೇನು ಹಾಗಾದರೆ?

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** : ಹಿಂದೂ ಕಾನೂನಿನ ಪೈಕಿ ಇನ್ನು ಉಳಿದಿರುವುದು ಏನು ಎಂದು ಕೇಳುತ್ತಾರೆ ನನ್ನ ಮಾನ್ಯ ಸ್ನೇಹಿತರು. ಇಷ್ಟು ಮಾತ್ರವೇ ಹಿಂದೂ ಕಾನೂನಿನ ಸರ್ವಸ್ವ ಎಂದು ಭಾವಿಸುತ್ತಾರೆಯೆ ನನ್ನ ಮಾನ್ಯ ಸ್ನೇಹಿತರು? ಈ ಮೂರು ಶಾಖೆಗಳು ಮಾತ್ರ ಸಮಗ್ರ ಹಿಂದೂ ಸಮುದಾಯದ ಝೀವನ ಮತ್ತು ಕರ್ತವ್ಯ ಕರ್ಮಗಳ ಸಕಲ ಕ್ಷೇತ್ರವನ್ನು ಒಳಗೊಳ್ಳುತ್ತವೆ ಎಂದು ಭಾವಿಸುತ್ತಾರೆಯೇ? ಅವರ ಅಜ್ಞಾನಕ್ಕಾಗಿ ನನಗೆ ಮರುಕವೆನಿಸುತ್ತಿದೆ. ಅವಿಭಕ್ತ ಕುಟುಂಬದ ಆಸ್ತಿ, ಆಸ್ತಿ ವಿಭಜನೆ, ಅವಿಭಕ್ತ ಕುಟುಂಬದ ಕಾರ್ಯಕಲಾಪ ವ್ಯವಹಾರ, ಧಾರ್ಮಿಕ ಧರ್ಮಾದಾಯ ನ್ಯಾಸಗಳು, ಕೊಡುಗೆಗಳು ಮತ್ತು ಇತರ ಅನೇಕ ಸಂಗತಿಗಳು. ಇವುಗಳ ವಿಚಾರವೇನು? ಅವೆಲ್ಲ ಸೇರಿ ಇನ್ನೂ ವಿಸ್ತಾರವಾದ ಕ್ಷೇತ್ರ. ಅದನ್ನು ಇದು ಪರಿಶೀಲನೆಗೆ ತೆಗೆದುಕೊಂಡಿಲ್ಲ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ಮರಣ ಶಾಸನಗಳಿಗೂ ಉಲ್ಲೇಖ ಮಾಡಲಾಗಿದೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** : ಮರಣ ಶಾಸನಗಳಿಗೆ ಉಲ್ಲೇಖ ಮಾಡಲಾಗಿದೆ ಎಂದ ಮಾತ್ರಕ್ಕೆ ಅದನ್ನು ಕುರಿತು ಸಮಗ್ರ ಪರಿಶೀಲನೆ ನಡೆದಿದೆ ಎಂದು ಅರ್ಥವಲ್ಲ. ಏನಾದರೂ ಸರಿಯೆ, ನಾನು ಡಾ॥ ಅಂಬೇಡ್ಕರ್ ಅವರಿಗೆ ಕೃತಜ್ಞನಾಗಿದ್ದೇನೆ. ಅವರು ವಿನಯಶೀಲರು; ತಾವು ಸಕಲ ವಿಷಯಗಳನ್ನು ಒಳಗೊಂಡ ಸಮಗ್ರ ಕೋಡ್ ಅನ್ನು ತಂದಿರುವೆ ಎಂದು ಎಂದೂ ಹೇಳಿದವರಲ್ಲ. ನನ್ನ ಬಲಗಡೆ ಇರುವ ನನ್ನ ಮಾನ್ಯ ಸ್ನೇಹಿತರು ಇದೆಲ್ಲ, ಇಷ್ಟೇ ಹಿಂದೂ ಕೋಡ್ ಎಂದು ಭಾವಿಸುವ ಪಕ್ಷದಲ್ಲಿ ಅವರೂ ಅಂಬೇಡ್ಕರ್ ಅವರನ್ನು ಮೀರುವ ಅಂಬೇಡ್ಕರ್ ಆಗುತ್ತಾರೆ. ಸ್ವಾಮಿ, ನಿಮ್ಮ ಮುಂದೆ ತರಲಾದ ಈ ಹಿಂದೂ ಕೋಡ್ ಅನ್ನು ಅದು ಇರುವ ರೂಪದಲ್ಲಿಯೇ ಅಂಗೀಕರಿಸುವ ಸಂದರ್ಭದಲ್ಲಿ ಸಹ, ಇನ್ನೊಂದು ಕಾರಣಕ್ಕಾಗಿ ಅದು ತನ್ನ ಗುರಿಯನ್ನು ತಲುಪುವಲ್ಲಿ ವಿಫಲವಾಗುತ್ತದೆ. ನನ್ನ ಮಾನ್ಯ ಸೋದರಿ ಶ್ರೀಮತಿ ದುರ್ಗಾಬಾಯಿ ಮತ್ತು ಮೈಸೂರಿನಿಂದ ಬಂದ ನನ್ನ ಮಾನ್ಯ ಸ್ನೇಹಿತರು ನಿನ್ನೆ ದಿನ ಹೇಳುತ್ತಾರೆ : ನೀವು ಚಿಂತಿಸುವುದಾದರೂ ಏತಕ್ಕೆ? ಇದು ವ್ಯವಸಾಯದ ಆಸ್ತಿಯ ತುಂಡೀಕರಣಕ್ಕೆ ಕಾರಣವಾಗಬಾರದು. ಈ ವಿಧೇಯಕವನ್ನು ತಿರಸ್ಕರಿಸುವ ಸಲುವಾಗಿ ಅವರು ಅತ್ಯಂತ ಪ್ರಬಲ ಕಾರಣಗಳ, ತರ್ಕಗಳ ಪೈಕಿ ಒಂದನ್ನು ಮುಂದಿಡುತ್ತಿಲ್ಲವೆ ಹೇಗೆ ಎಂದು ನನಗೆ ತಿಳಿಯುತ್ತಿಲ್ಲ. ಅವರಿಗೆ ಗೊತ್ತಿಲ್ಲದ ಹಾಗೆಯೇ ನನ್ನ ಸೋದರಿ ಮತ್ತು ಸೋದರ, ಇಬ್ಬರೂ ಮಸೂದೆಯನ್ನು (ವಿಧೇಯಕವನ್ನು) ಸಾರಾಸಗಟಾಗಿ ತಿರಸ್ಕರಿಸಲು ಅತ್ಯಂತ ಪ್ರಬಲ ತರ್ಕವೊಂದನ್ನು ಒದಗಿಸಿದ್ದಾರೆ. ನೀವು ಆಸ್ತಿಯ ವಿಲೇವಾರಿಯನ್ನು ವಿನಿಯಮಿಸಲು, ನಿಯಂತ್ರಿಸಲು ಹೊರಟಿದ್ದೀರ. ಈ ದೇಶದಲ್ಲಿರುವ ಸ್ಥಿರಾಸ್ತಿಯ ಶೇಕಡ ೯೦ ರಷ್ಟು ಕೇಂದ್ರಾಡಳಿತ ಪ್ರದೇಶಗಳನ್ನು ಹೊರತುಪಡಿಸಿ, ಪ್ರಾಂತಗಳಲ್ಲಿನ ಗ್ರಾಮಗಳಲ್ಲಿ ಇದೆ ಎಂದು ಈಗ ಎಲ್ಲರಿಗೂ ಗೊತ್ತಿರುವ ಸಂಗತಿ. ಆದ್ದರಿಂದ ಅವು ಈ ಕೋಡ್‌ನ ವ್ಯಾಪ್ತಿಯ ಆಚೆಗೆ ಉಳಿಯುತ್ತದೆ. ಕೇಂದ್ರಾಡಳಿತ ಪ್ರದೇಶಗಳ ಒಳಗೆ ಬರುವ ಮತ್ತು ನೇರವಾಗಿ ಭಾರತ ಸರ್ಕಾರದ ಅಧೀನದಲ್ಲಿ ಇರುವ ಮನೆ ಅಥವಾ ಇತರ ಸ್ಥಿರಾಸ್ತಿಗೆ ಈ ಕೋಡ್ ಅನ್ವಯವಾಗುತ್ತದೆ.

ಹಾಗಾದರೆ ಈ ಕೋಡ್ ಎಲ್ಲ ಪ್ರಾಂತಗಳಲ್ಲಿರುವ ಎಲ್ಲ ಹಿಂದೂಗಳಿಗೆ ಅನ್ವಯವಾಗುತ್ತದೆ ಎಂಬ ಹೇಳಿಕೆಗೆ ಸಮಾಧಾನ ಹೇಗೆ? ಇದು ಈ ಕೋಡ್ ಅನ್ನು ಬಿಸಾಡಲು ಅತ್ಯಂತ ಪ್ರಬಲ ಕಾರಣ, ಅದು ತನ್ನ ಗುರಿಯನ್ನು ಉದ್ದೇಶವನ್ನು ನೆರವೇರಿಸುವಲ್ಲಿ ಸೋಲುತ್ತದೆ ಎಂಬ ಕಾರಣಕ್ಕಾಗಿ. ನಾನು ನಮೂದಿಸಿರುವ ಮೂರು ಪ್ರವರ್ಗಗಳ ಹೊರತಾಗಿ ಪರಿಶೀಲಿಸಬೇಕಾದ ಇನ್ನೂ ಅನೇಕ ವಿಷಯಗಳಿವೆ. ಈ ಸಂಬಂಧದಲ್ಲಿ ತರ್ಕ ಎಂದರೆ ಸಂವಿಧಾನ ಅಧಿನಿಯಮ ಕಾಯ್ದೆ ಪ್ರಕಾರ ಪ್ರಾಂತೀಯ ಪ್ರೌಢ ಜಮೀನು ಪೂರ್ಣವಾಗಿ ಪ್ರಾಂತೀಯ ವಿಷಯ; ಹಾಗೆಯೇ ಧಾರ್ಮಿಕ ಮತ್ತು ಧರ್ಮಾದಾಯ ನ್ಯಾಸಗಳ ಆಸ್ತಿಗಳು; ಹಾಗೆಯೇ ಅವಿಭಕ್ತ ಕುಟುಂಬದ ಆಸ್ತಿ; ಮತ್ತು ಆಸ್ತಿ ವಿಭಜನೆ, ಸ್ವಯಾರ್ಜನೆ ಮುಂತಾದವುಗಳು ಪ್ರಾಂತೀಯ ವಿಷಯಗಳಾಗಿರುತ್ತವೆ. ಇಂಥ ವಿಶಾಲ ಕ್ಷೇತ್ರವು ನಿಮ್ಮ ಕೋಡ್‌ನ ವ್ಯಾಪ್ತಿಯಲ್ಲಿ ಬಾರದಿರುವಾಗ, ನಾನು ಸದನಕ್ಕೆ ಒಂದು ಪ್ರಶ್ನೆಯನ್ನು ಗಂಭೀರವಾಗಿ ಕೇಳುತ್ತೇನೆ: ಇದು ಸರ್ವಾಂಗಪೂರ್ಣವಾದ ಕೋಡ್ ಅಥವಾ ಸಕಲ ವಿಷಯ ಸಮ್ಮಿಳಿತ ಕೋಡ್ ಆಗಲಿದೆಯೆಂದು ಮತ್ತು ಹಿಂದೂ ಸಮಾಜಕ್ಕೆ ಸಹಜವಾಗಿರತಕ್ಕ ಎಲ್ಲ ಸಾಮಾಜಿಕ ಮತ್ತು ಆರ್ಥಿಕ ರೋಗರುಜಿನಗಳಿಗೆ ಸರ್ವರೋಗಹರ ಮದ್ದು ಒದಗಿಸುವುದೆಂದು ಹೇಳುವವರ ಹೇಳಿಕೆಗಳಿಂದ ಸದನಕ್ಕೆ ಸಮಾಧಾನವಾಗಿದೆಯೆ, ಮನವರಿಕೆಯಾಗಿದೆಯೆ? ಎಂದು ಕೇಳುತ್ತೇನೆ. ಕೋಡ್‌ನಲ್ಲಿರುವ ೧೩೯ ಪ್ರಕರಣಗಳು ಹಿಂದೂ ಸಮಾಜವನ್ನು ಶಕ್ತಿಸಂಪನ್ನಗೊಳಿಸಲಿರುವ ಪೌಷ್ಟಿಕ ಮಾತ್ರೆಗಳಂತಿವೆ ಎಂದು ಸದನದ ಮಾನ್ಯ ಸದಸ್ಯರು ನಂಬುತ್ತಾರೆಯೆ? ನೀವು ಆ ನಿಲುವನ್ನು ತಳೆಯಬಹುದು; ಸದನವು ಆ ನಿಲುವನ್ನು ತಳೆಯಬಹುದು. ಆದರೆ ನಾನು ಆ ನಿಲುವನ್ನು ತಳೆಯುವುದಿಲ್ಲ. ಇದಲ್ಲದೆ ಇದನ್ನು ಇದನ್ನು ಪ್ರಸ್ತಾವಿಸಲು ಸಮಯವು ಪ್ರಾಪ್ತವಾಗಿಲ್ಲ. ಕಿಂಚಿತ್ತೂ ಪ್ರಾಪ್ತವಾಗಿಲ್ಲ. ಹಿಂದೂ ಕೋಡ್ ಅನ್ನು ಕಾನೂನು ಆಗಿ ತೀರ್ಣಗೊಳಿಸಿದರೂ, ಪ್ರಾಂತೀಯ ಸರ್ಕಾರಗಳು ತಮ್ಮ ವಿಧಾನಮಂಡಲಗಳಲ್ಲಿ, ಕೃಷಿಭೂಮಿಯ ಅಂತರಣಕ್ಕಾಗಿ ಸಮಾನ ಶಾಸನವನ್ನು ತೀರ್ಣಗೊಳಿಸುವ ತನಕ, ಅದು ಕಾರ್ಯಗತವಾಗುವುದು (ಜಾರಿಯಾಗುವುದು) ಸಾಧ್ಯವಲ್ಲ. ಈ ಕಾಯ್ದೆಯು ಜಾರಿಯಾಗುವುದಕ್ಕೆ ಮುನ್ನ ಪ್ರತಿಯೊಂದು ಪ್ರಾಂತವೂ ಹಾಗೆ ಮಾಡಬೇಕಾಗುತ್ತದೆ. ನಾನು ಈಗ ರಾಜ್ಯಗಳ ಬಗ್ಗೆ ಮಾತಾಡುತ್ತಿಲ್ಲ. ಪ್ರಾಂತಗಳ ಬಗ್ಗೆ ಮಾತಾಡುತ್ತಿದ್ದೇನೆ. ಮಾತ್ರವಲ್ಲದೆ, ಪ್ರಾಂತಗಳು ವಿಭಿನ್ನ ತೀರ್ಮಾನಗಳನ್ನು ಕೈಗೊಳ್ಳಬಹುದು ಎಂಬ ಸಂಗತಿಯು ಕಲ್ಪಿಸಲಾಗದ ಸಂಗತಿಯೇನೂ ಅಲ್ಲ. ಹಾಗೆಯೇ, ಉತ್ತರಾಧಿಕಾರ ನಿರ್ದಿಷ್ಟ ವಂಶಕ್ರಮ, ಕೃಷಿ ಆಸ್ತಿಯ ಅಂತರಣದ ನಿರ್ದಿಷ್ಟ ವಂಶ ಕ್ರಮ ಇವುಗಳ ಬಗ್ಗೆ ಪ್ರಾಂತೀಯ ಸರ್ಕಾರಗಳನ್ನು ಆಜ್ಞಾನುಸಾರ ಒತ್ತಾಯಿಸುವುದು ಕೇಂದ್ರ ಸರ್ಕಾರಕ್ಕೆ ಸೇರಿದ ಕೆಲಸವಲ್ಲ. ಹಾಗೆ ಮಾಡಿದರೆ ಪ್ರಾಂತೀಯ ಸ್ವಾಯತ್ತತೆಯು ಬಿದ್ದುಹೋಗುತ್ತದೆ. ಇನ್ನು, ಪ್ರಾಂತೀಯ ಸರ್ಕಾರಗಳ ಅಭಿಪ್ರಾಯಗಳಿಗೆ, ನಿಲುವಿಗೆ ಪ್ರತಿಕೂಲವಾದ ನಿರ್ದೇಶನವನ್ನು ಕೇಂದ್ರ ಸರ್ಕಾರವು ನೀಡಿದ್ದೇ ಆದರೆ, ಆಗ ಪ್ರಾಂತೀಯ ಮಂತ್ರಿ ಮಂಡಲಗಳು ಸಂಬಂಧಪಟ್ಟ ಪ್ರಸ್ತಾಪವನ್ನು ಕಣ್ಣೆತ್ತಿಯೂ ನೋಡಲಿಕ್ಕಿಲ್ಲ ಎಂದು ನಾನು ಖಂಡಿತವಾಗಿ ನಂಬಿದ್ದೇನೆ.

**ಮಿ॥ ಡೆಪ್ಯುಟಿ ಸ್ಪೀಕರ್ :** ಸದನದ ಮಾಹಿತಿಗಾಗಿ ಒಂದು ವಿಷಯವನ್ನು ಹೇಳಲೆ? ನನ್ನ ಬಳಿ ಈಗ ೩೦ರಷ್ಟು ಜನ ಸದಸ್ಯರು – ಅವರುಗಳಿಂದ, ಆ ಸದಸ್ಯರ ಕಡೆಯಿಂದ ಚೀಟಿಗಳು, ಪತ್ರಗಳು ಮುಂತಾದವುಗಳು ನನ್ನ ಬಳಿ ಬಂದಿವೆ – ಅವರೆಲ್ಲರೂ – ಅವರ ಪೈಕಿ ಬಹುತೇಕ ಜನ, ಈ ವಿಧೇಯಕವನ್ನು ಕುರಿತಂತೆ ತಮ್ಮ ಅಭಿಪ್ರಾಯಗಳನ್ನು ನಿವೇದಿಸಿಕೊಳ್ಳಲು ಆತುರರಾಗಿದ್ದಾರೆ. ಆದ್ದರಿಂದ, ಮಾನ್ಯ ಸದಸ್ಯರ ಭಾಷಣವು ಎಷ್ಟೇ ಸ್ವಾರಸ್ಯಕರವಾಗಿದ್ದರೂ ಸರಿಯೆ, ವಿಧೇಯಕದ ಪರವಾಗಿ ಒಂದು ಪಕ್ಷದವರು ಎತ್ತಿದ ಪ್ರಶ್ನೆಗಳಿಗೆ, ಇನ್ನೊಂದು ಪಕ್ಷದವರು ಉತ್ತರ ನೀಡಲು ಅವಕಾಶ ಒದಗಿಸಬೇಕಾದದ್ದು ಯಥೋಚಿತ ಎಂದು ಸೂಚಿಸುತ್ತೇನೆ.

ಹೀಗೆ ಎಲ್ಲ ಅಂಶಗಳ ಬಗ್ಗೆ ಸವಿಸ್ತಾರವಾದ ಕೂಲಕಷವಾದ ವಿಚಾರಮಂಥನವಾಗಿ ಚರ್ಚೆಯು ಶ್ರೀಮಂತವಾಗುತ್ತದೆ. ಡಾ॥ ಅಂಬೇಡ್ಕರ್ ಅವರು ತರ್ಕಸಮೇತ ವಿಧೇಯಕವನ್ನು ಕುರಿತಂತೆ ಸ್ಪಷ್ಟ ಚಿತ್ರವನ್ನು, ವಿಶ್ಲೇಷಣೆಯನ್ನು ಒದಗಿಸಿದ್ದಾರೆ. ಅಂದರೆ, ಆ ಅಂಶಗಳು ಹೇಗೆ ಮತ್ತು ಯಾಕೆ ತಪ್ಪಾಗಿವೆ ಮತ್ತು ಇನ್ನೊಂದು ಪಕ್ಷದ ಪ್ರತಿಕ್ರಿಯೆ ಏನು, ಅವುಗಳನ್ನು ಕುರಿತು ಎಂದು ತಿಳಿದುಕೊಳ್ಳಲು ಸದನವು ಇಚ್ಛಿಸುತ್ತದೆ. ಆದ ಕಾರಣ ದಯೆಯಿಟ್ಟು, ಆ ಅಂಶದ ಕಡೆಗೆ ಗಮನ ಕೊಡಬೇಕಾಗಿ ಮತ್ತು ಕಾಯುವವರ ಪಟ್ಟಿಯಲ್ಲಿರುವ ಭಾಷಣಕಾರರ ಸಂಖ್ಯೆಯ ಕಡೆಗೆ ಸಹ ಗಮನ ಕೊಡಬೇಕಾಗಿ ವಿನಂತಿ.

**ಶ್ರೀ ಹೆಚ್. ವಿ. ಕಾಮತ್ :** ಈ ವಿಧೇಯಕದ ಮಹತ್ವದ ದೃಷ್ಟಿಯಿಂದ ಸರ್ವಸಾಧಾರಣ ಚರ್ಚೆಗೆ ಎರಡು ಅಥವಾ ಮೂರು ದಿನ ಸರ್ವಥಾ ಸಾಕಾಗುವುದಿಲ್ಲವೆಂದು ಮತ್ತು ಒಂದು ಅಥವಾ ಎರಡು ವಾರ ಅಗತ್ಯವೆಂದು ಪರ್ಯಾಲೋಚಿಸಬೇಕಾಗಿ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ತಾವು ವ್ಯಕ್ತಗೊಳಿಸಿರುವ ಅಭಿಪ್ರಾಯಗಳಿಗೆ ಅತ್ಯಂತ ಗೌರವ ಸಲ್ಲಿಸುತ್ತ, ನಾನು ತಮ್ಮಲ್ಲಿ ನಿವೇದಿಸಿಕೊಳ್ಳುವುದೇನೆಂದರೆ, ನಾನು ಈವರೆಗೂ ತಡೆಗಾರನ ಕೆಲಸ ಮಾಡುತ್ತಿದ್ದೆನೆಂದು ಭಾಸವಾಗಿದ್ದರೆ, ಆ ಬಗ್ಗೆ ನಾನು ವಿಷಾದಿಸುತ್ತೇನೆ. ಸ್ವಾಮೀ, ಈ ವಿಧೇಯಕವು ಅತ್ಯಂತ ಮಹತ್ವಪೂರ್ಣವಾಗಿರುವ ನಿಮಿತ್ತ, ಅದರ ಮೇಲಣ ಸರ್ವಸಾಧಾರಣ ಚರ್ಚೆಯನ್ನು ಇಂತು ಮುಗಿಸಬೇಕು ಎಂದು ಅಪೇಕ್ಷಿಸಿದರೆ ಸದನಕ್ಕೆ ಅನ್ಯಾಯ ಮಾಡಿದಂತೆ ಆಗುತ್ತದೆ ಎಂದು ತಮ್ಮಲ್ಲಿ ನಿವೇದಿಸಿಕೊಳ್ಳುತ್ತೇನೆ. ಕಾರಣವೆಂದರೆ, ಮೊದಲ ಹಂತದಲ್ಲಿ ಒಂದು ಭಾಷಣ ಕೊಡಲು ನಮಗೆ ಎಳ್ಳಷ್ಟೂ ಅವಕಾಶವಿರಲಿಲ್ಲ. ಈ ಹಂತವು ನಾವು ವಿಧೇಯಕದ ತತ್ತ್ವಗಳಿಗೆ ಪ್ರತಿಬದ್ಧರಾಗಿರುವ ಹಂತ. ನಮ್ಮ ಪರಿಮಿತ ವಲಯದಲ್ಲಿ ಸಹ ನಾವು ನಮ್ಮ ದೇಶಕ್ಕೆ ಯಾವ ರೀತಿಯಲ್ಲಿ ಸೇವೆ ಸಲ್ಲಿಸಬಹುದು ಎಂದು ನಿರ್ಧರಿಸುವ ಅವಕಾಶವಿರುವ ಹಂತ. ಇನ್ನು ೩೬ ಭಾಷಣಕಾರರು ಮಾತನಾಡಲು ಆತುರರಾಗಿದ್ದರೆ, ಅದು ಈ ವಿಧೇಯಕದ ಮಹತ್ವದ ಬಗೆಗೆ ಗಂಭೀರ ಗಮನ ಸೆಳೆದಿದೆ ಎಂಬ ಬಗೆಗಿನ ಅತ್ಯಂತ ಸ್ಪಷ್ಟ ಸಂಕೇತ. ಹಾಗೆಯೇ ಆ ಎಲ್ಲ ಭಾಷಣಕಾರರು ತಮ್ಮ ದೃಷ್ಟಿಕೋನವನ್ನು ಸಾದರಪಡಿಸಲು ಸಿದ್ಧರಾಗಿದ್ದಾರೆ ಎಂಬ ಬಗ್ಗೆ ಸ್ಪಷ್ಟ ಸಂಕೇತ. ಆದ್ದರಿಂದ, ಈ ಬಗೆಯ ಚರ್ಚೆಗಳ ಬಗ್ಗೆ ನಿಗದಿಯಾದ ಸಮಯಾವಕಾಶಕ್ಕೆ ಯಾವುದೇ ಪಾವಿತ್ರ್ಯ ಇದೆ ಎಂದು ಭಾವಿಸಬೇಕಾಗಿಲ್ಲ.

ನಾನು ನಮ್ಮ ಚರ್ಚೆಯನ್ನು ಇವತ್ತಿನ ದಿವಸ ಸಮಾರೋಪಗೊಳಿಸದೆ ಹೋದ ಪ್ರಸಂಗದಲ್ಲಿ, ಇದನ್ನು ಕುರಿತ ಇನ್ನಷ್ಟು ಚರ್ಚೆಗೆ ಹೆಚ್ಚಿನ ದಿವಸಗಳನ್ನು ಖಂಡಿತವಾಗಿಯೂ ನಿಗದಿಪಡಿಸಬೇಕಾಗುತ್ತದೆ. ಮಾನ್ಯ ಕಾನೂನು ಮಂತ್ರಿಗಳು ಈ ವಿಷಯದ ಬಗ್ಗೆ ಅತ್ಯಂತ ಉತ್ಸಾಹಿಗಳಾಗಿದ್ದಾರೆ. ಅವರು ಇದಕ್ಕಾಗಿ ಇನ್ನೊಂದು ಅಧಿವೇಶನವನ್ನು ಒದಗಿಸಬಹುದು. ಇಲ್ಲದಿದ್ದರೆ, ಈ ಅಧಿವೇಶನದಲ್ಲಿಯೇ ಹೆಚ್ಚಿಗೆಯಾಗಿ ಐದಾರು ದಿನಗಳ ಅವಕಾಶ ಮಾಡಿಕೊಡಬಹುದು. ಈ ವಿಷಯವನ್ನು ಆಮೂಲಾಗ್ರವಾಗಿ ಚರ್ಚಿಸಬೇಕು. ಸದನವು ಸಮಾಪ್ತಿಯನ್ನು ಸ್ವೀಕರಿಸಲಿಕ್ಕಿಲ್ಲ ಎಂದು ಆಶಿಸುತ್ತೇನೆ. ಮತ್ತು ಮುಖ್ಯ ಸಚೇತಕರು ಸಮಾಪ್ತಿಯ ಪ್ರಸ್ತಾಪ ಮಂಡಿಸಲಿಕ್ಕಿಲ್ಲ ಎಂದು ಭಾವಿಸುತ್ತೇನೆ ಮತ್ತು ಪೂರ್ಣವಾದ ಮತ್ತು ಪರ್ಯಾಪ್ತವಾದ ಚರ್ಚೆಯು ನಡೆದಿದೆ ಎಂಬುದನ್ನು ಖಚಿತಪಡಿಸಿಕೊಳ್ಳದೆ ಇಂಥ ಪ್ರಸ್ತಾಪಗಳನ್ನು ಚೇತನ ದ್ವಾರಾ ಸಮಾಪ್ತಿಗೊಳಿಸಲು ಸಾಧ್ಯವಿಲ್ಲ ಎಂದು ಭಾವಿಸಿದ್ದೇನೆ.

**ಶ್ರೀ ಎಚ್. ವಿ. ಕಾಮತ್ :** ಇನ್ನೊಂದು ವಿಚಾರ ಸ್ವಾಮಿ. ಈಗ ಇಲ್ಲಿ ಹಾಜರಿಲ್ಲದ ಪ್ರಾಂತೀಯ ಎಂ.ಎಲ್.ಎ. ಅವರುಗಳನ್ನು ಇಲ್ಲಿ ಬಂದು ಚರ್ಚೆಯಲ್ಲಿ ಭಾಗವಹಿಸಲು ಆಮಂತ್ರಿಸಬೇಕು ಎಂದು

ತಮ್ಮನ್ನು ವಿನಂತಿಸಿಕೊಳ್ಳಬಹುದೆ?

**ಮಿ। ಡೆಪ್ಯುಟಿ ಸ್ಪೀಕರ್ :** ಈಗ ನಾವು ಸಭೆಯನ್ನು ಮುಂದಕ್ಕೆ ಹಾಕುತ್ತೇವೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಸ್ವಾಮೀ, ನಾನಿನ್ನೂ ಮುಗಿಸಿಲ್ಲ. ನಾನು ಲಂಚ್ ವಿರಾಮದ ತರುವಾಯ ಮುಂದುವರಿಸಬಹುದು ಎಂದು ಭಾವಿಸುತ್ತೇನೆ.

**ಮಿ। ಡೆಪ್ಯುಟಿ ಸ್ಪೀಕರ್ :** ಆಗಬಹುದು. ಈಗ ನಾವು ಲಂಚ್‌ಗಾಗಿ ಸಭೆಯನ್ನು ಮುಂದಕ್ಕೆ ಹಾಕುತ್ತೇವೆ.

*ಆಗ ಸಭೆಯನ್ನು ಲಂಚ್‌ಗಾಗಿ ಎರಡೂವರೆ ಗಂಟೆಯ ತನಕ ಮುಂದಕ್ಕೆ ಹಾಕಲಾಯಿತು.*

---

*ಭೋಜನ ವಿರಾಮದ ತರುವಾಯ, ಎರಡೂವರೆ ಗಂಟೆಗೆ ಸಭೆಯು ಪುನಃ ಸಭೆ ಸೇರಿತು. (ಸಭಾಧ್ಯಕ್ಷರ ಪಟ್ಟಿಯಲ್ಲಿನ ಒಬ್ಬರಾದ ಶ್ರೀ ಎಸ್. ವಿ. ಕೃಷ್ಣಮೂರ್ತಿರಾವ್ ಅವರು ಸಭಾಧ್ಯಕ್ಷರಾಗಿದ್ದರು.)*

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಸದನವನ್ನು ಭೋಜನ ವಿರಾಮಕ್ಕೆ ಮುಂದೂಡುವ ಮುನ್ನ, ನಾನು ಈ ಕೋಡ್, ತನ್ನ ಉದ್ದೇಶವನ್ನು ಈಡೇರಿಸುವಲ್ಲಿ ಕೆಲವು ಮುಖ್ಯ ವಿವರಗಳಲ್ಲಿ ವಿಫಲವಾಗಿಯೇ ಆಗುತ್ತದೆ ಎಂದು ವಿವರಿಸುತ್ತಿದ್ದೆನಷ್ಟೆ. ಹಿಂದೂ ಕಾನೂನು ಸಕಲ ಅಂಗಗಳಲ್ಲಿ ಸುಸ್ಥಾಪಿತವಾದ ಕಾನೂನು ಮಾತ್ರವಲ್ಲದೆ, ಅದರ ಶಾಸನಕ್ಕೆ ಅಧೀನರಾಗಿರುವ ಜನಸಮುದಾಯವು ಅದನ್ನು ಸರಿಯಾಗಿ ಅರ್ಥಮಾಡಿಕೊಂಡಿದೆಯೆಂದು ಮತ್ತು ಆ ಕಾರಣಕ್ಕಾಗಿ ಹಿಂದೂ ಕಾನೂನಿನ ಕ್ರೋಡೀಕರಣವು ಅಗತ್ಯವಿಲ್ಲ ಎಂದು ವಿವರಿಸಿ ಹೇಳುತ್ತಿದ್ದೆನು. ಈ ಕಾನೂನನ್ನು ಜಾರಿಗೊಳಿಸುವವರು ಅಂದರೆ, ಸರ್ವೋಚ್ಚ ದರ್ಜೆಯವರೂ ಸೇರಿದಂತೆ ನ್ಯಾಯಾಧೀಶರು, ಅರ್ಥಾತ್ ನ್ಯಾಯಾಂಗವು ಈ ಕಾನೂನು ಕ್ರೋಡೀಕರಣ ಆಗಬೇಕಾಗಿದೆ ಎಂದು ಎಂದೂ ಕೋರಿಕೆ ಸಲ್ಲಿಸಿಲ್ಲ, ಎಂಬುದನ್ನು ಸಹ ವಿವರಿಸಿ ಹೇಳಿದೆನು. ಹಾಗೆಯೇ, ಈ ವಿಧೇಯಕದ ವ್ಯಾಪ್ತಿಯು ಅತ್ಯಂತ ಸೀಮಿತವಾಗಿದೆಯೆಂದು, ವಿವಾಹ, ವಾರಸಾ ಮತ್ತು ದತ್ತು ಸ್ವೀಕಾರ, ಈ ವಿಷಯಗಳಿಗೆ ಉಪಬಂಧಿಸುವುದರ ಹೊರತಾಗಿ, ಆ ಕಾನೂನಿನ ಇನ್ನೂ ವಿಶಾಲವಾದ ಕ್ಷೇತ್ರವನ್ನು ಹಾಗೆಯೇ ಇರಗೊಟ್ಟಿದೆಯೆಂದು ವಿವರಿಸಿ ಹೇಳಿದೆನು. ಕೃಷಿ ಭೂಮಿಯನ್ನು ಕುರಿತು ಉಲ್ಲೇಖಿಸುತ್ತ ನಾನು ಸದನಕ್ಕೆ ಒಂದು ಅಂಶವನ್ನು ನಿರೂಪಿಸಬಯಸುತ್ತೇನೆ. ಒಂದು ಅಂಶವನ್ನು ಸಹ ಎತ್ತಿ ತೋರಿಸಬಹುದು: ಈ ದೇಶದಲ್ಲಿ ಆಗಿರುವ ನ್ಯಾಯಿಕ ತೀರ್ಪುಗಳ ಸರಣಿಯ ಪ್ರಕಾರ ಭೂಮಿಯ ಪ್ರಶ್ನೆಯು, ಅತ್ಯಂತ ಎತ್ತರದ ದರ್ಜೆಯ ಜಮೀನುದಾರನಿಂದ ಮೊದಲ್ಗೊಂಡು, ಹೊಲವನ್ನು ಉಳುವವನವರೆಗೆ, ನೇಗಿಲ ಯೋಗಿಯವರೆಗೆ, ವಿಪುಲವಾದ ವಿಭಿನ್ನವಾದ ಹಿತಾಸಕ್ತಿಗಳನ್ನು ಮತ್ತು ವಿಷಯಗಳನ್ನು ಒಳಗೊಂಡಿದೆ; ಮತ್ತು ವಿವಿಧ ಪ್ರಾಂತಗಳ ಪ್ರಾಂತೀಯ ಸರ್ಕಾರಗಳು, ಕೇಂದ್ರೀಯ ಕಾನೂನಿನ ದ್ವಾರಾ ಗೊತ್ತುಪಡಿಸಲಾದ / ಸೂಚಿಸಲಾದ ಮಾರ್ಗಗಳಿಗಿಂತ/ರೀತಿಗಳಿಗಿಂತ ವಿಭಿನ್ನವಾದ ರೀತಿಗಳಲ್ಲಿ ತಮ್ಮ (ಕೃಷಿ ಭೂಮಿಯ) ಆಸ್ತಿಗಳ ವಿತರಣೆಯನ್ನು ವಿನಿಯಮಿಸುವ ಸಂದರ್ಭದಲ್ಲಿ, ಗೋಜಲು ಗೊಂದಲಕ್ಕಿಟ್ಟುಕೊಂಡಂತೆ ಆದೀತು.

ಆದ್ದರಿಂದ, ಸ್ವಾಮೀ, ನಮೂದಿಸ ಬಯಸುವುದೇನೆಂದರೆ, ಈ ಕೋಡ್ ಅಸ್ತಿತ್ವದಲ್ಲಿರುವ ಹಿಂದೂ ಕಾನೂನನ್ನೂ ತನ್ನ ಪರಿಮಿತ ಪರಿಧಿಯೊಳಗೆ ಸಂಗ್ರಹಿಸಲು ಪ್ರಯತ್ನಿಸಿರುವುದಲ್ಲದೆ, ಸಂಗ್ರಹಣದ ಮತ್ತು ಆ ಪ್ರಕ್ರಿಯೆಯಲ್ಲಿ ಅನೇಕ ಹೊಸ ಸಂಗತಿಗಳನ್ನು ಸೇರಿಸಲಾಗಿದೆ; ಮುಖ್ಯವಾಗಿ ವಿವಾಹ ಮತ್ತು ವಾರಸಾ– ಈ ವಿಷಯಗಳಲ್ಲಿ ಅನೇಕ ಹೊಸ ಸಂಗತಿಗಳನ್ನು ಸೇರಿಸಲಾಗಿದ್ದು ಹಿಂದೂ ಸಮಾಜದ ಸುಸ್ಥಾಪಿತ ಸಂಕಲ್ಪನೆಗಳಿಗೆ ಸಂಪೂರ್ಣ ವಿರುದ್ಧವಾಗಿವೆ. ಆದ್ದರಿಂದ ಇದು ಸಂಗ್ರಹಣದ ಪ್ರಕರಣವಲ್ಲ; ತಿದ್ದುಪಡಿಯ ಪ್ರಕರಣವೂ ಅಲ್ಲ – ಕಾರಣ ತಿದ್ದುಪಡಿಯೆನ್ನುವುದು ಸೌಮ್ಯ – ಪದಗುಚ್ಛ, ಇದು ಅದಕ್ಕೂ ಮಿಗಿಲಾದ

ಕೆಲಸವನ್ನು ಮಾಡುತ್ತದೆ. ಇದು ಅನೇಕ ನೂತನ ಬದಲಾವಣೆಗಳನ್ನು, ದೂರಗಾಮಿ ಬದಲಾವಣೆಗಳನ್ನು ವಿವಾಹ ಕಾನೂನಿನಲ್ಲಿ ಅಷ್ಟೇ ಅಲ್ಲ, ವಾರಸಾ ಕಾನೂನಿನಲ್ಲಿ ಸಹ ದೂರಗಾಮಿ ಬದಲಾವಣೆಗಳನ್ನು ಮಾಡುತ್ತದೆ. ಸ್ವಾಮೀ, ನಾನು ಈ ವಿಧೇಯಕದಲ್ಲಿ ಒಳಗೊಂಡ ಬದಲಾವಣೆಗಳ ಮೂಲಕ ಆಗಬಹುದಾದ ಸಂಭಾವ್ಯ ಪರಿಣಾಮಗಳನ್ನು ಕುರಿತು ಸದನಕ್ಕೆ ವಿವರಿಸಿ ಹೇಳಬಲ್ಲೆನು. ಆದರೆ ದೈಹಿಕವಾಗಿ ಈ ಕಾರ್ಯಕ್ಕೆ ತಕ್ಕ ಸಾಮರ್ಥ್ಯ ಹೊಂದಿಲ್ಲ. ನಾನು ಈ ಬದಲಾವಣೆಗಳ ಬಗ್ಗೆ ನನ್ನ ನಿಲುವೇನು ಎಂಬುದನ್ನು ಆದಷ್ಟು ಶೀಘ್ರವಾಗಿ ವಿವರಿಸಿ ಹೇಳುವ ಪ್ರಯತ್ನ ಮಾಡುತ್ತೇನೆ.

ನನ್ನ ದೃಷ್ಟಿಯಲ್ಲಿ, ಹಾಗೆಯೇ ನನ್ನ ದೇಶಬಾಂಧವರಲ್ಲಿ ವಿಶಾಲ ಬಹುಜನ ಸಮುದಾಯದ ದೃಷ್ಟಿಯಲ್ಲಿ ಅತ್ಯಂತ ಆಮೂಲಾಗ್ರವಾದ ಮತ್ತು ಸಾರಾಸಗಟಾದ ಬದಲಾವಣೆಗಳ ಎರಡು ಪ್ರವರ್ಗಗಳೆಂದರೆ, ವಿವಾಹ ಮತ್ತು ವಾರಸಾ; ಇವುಗಳಿಗೆ ಸಂಬಂಧಪಟ್ಟ ಬದಲಾವಣೆಗಳು. ಸ್ವಾಮೀ, ನನ್ನ ಮಾನ್ಯ ಸ್ನೇಹಿತರು ತಮ್ಮ ಕೋಡ್‌ನಲ್ಲಿ ನಿಸ್ಸಂದೇಹವಾಗಿ ಸಾಂಸ್ಕಾರಿಕ ವಿವಾಹದ ಉಪಬಂಧ ಕಲ್ಪಿಸಿದ್ದಾರೆ. ಈ ದೇಶದಲ್ಲಿ, ಈ ವಿಧೇಯಕವನ್ನು ಪ್ರಾರೂಪಣ ಮಾಡಿ ಈಗಿರುವ ಅದರ ರೂಪಕ್ಕೆ ತರುವತನಕ, ಜನಸಮುದಾಯವು ದೇಶದ ಸರ್ಕಾರಕ್ಕೆ, ಈ ದೇಶದಲ್ಲಿ ವಿವಾಹಗಳನ್ನು ನೆರವೇರಿಸತಕ್ಕ ಪ್ರಕ್ರಿಯೆಯನ್ನು ವಿನಿಯಮಿಸುವಂತೆ ನಿಜವಾಗಿಯೂ ಕೋರಿಕೆ ಸಲ್ಲಿಸಿತೋ ಇಲ್ಲವೋ ನನಗೆ ಗೊತ್ತಿಲ್ಲ. ಈ ವಿಧೇಯಕವನ್ನು ಮಂಡಿಸುವ ಮುನ್ನ, ಜನಗಳು ಮದುವೆ ಮಾಡಿಕೊಳ್ಳುತ್ತಿರಲಿಲ್ಲವೆ ಅಥವಾ ಮದುವೆ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಬಹಳಷ್ಟು ತೊಡಕು ತೊಂದರೆಗಳನ್ನು ಇದಿರಿಸಬೇಕಾಗುತ್ತಿತ್ತೆ ಎಂಬ ವಿಚಾರ ಯಾರೂ ಎತ್ತುವ ಪ್ರಸಂಗವಿರಲಿಲ್ಲ. ಆದರೆ ವಿವಾಹದ ಪ್ರಶ್ನೆಯನ್ನು ಹೇಗೆ ಸುಧಾರಿಸಲಾಗುವುದೋ ನನಗೆ ಗೊತ್ತಿಲ್ಲ. ಈ ಮದುವೆಗಳಿಗೆ ನನ್ನ ಮೂಲಭೂತ ಆಕ್ಷೇಪ ಹೀಗೆ: ಒಂದು ಕಡೆ ಒಂದು ಪ್ರಕಾರದ ವಿವಾಹವು ಸಾಂಸ್ಕಾರಿಕ ವಿವಾಹ ಲಕ್ಷಣಗಳನ್ನು ವರ್ಣಿಸುತ್ತದೆ. ಸಾಂಸ್ಕಾರಿಕ ಛತ್ರದಡಿಯಲ್ಲಿ ಅನೇಕ ಸಂಗತಿಗಳನ್ನು ಸೇರಿಸಲಾಗಿದೆ. ಆ ಕಾರಣ ಅವುಗಳನ್ನು ಸಾಂಸ್ಕಾರಿಕ ಅಥವಾ ಪವಿತ್ರ ವಿವಾಹ ಎಂದು ಕರೆಯುವುದು ಕಲ್ಪನೆಗೂ ಮೀರಿದ ವಿಚಾರ. ನಿಷೇಧಿತ ಲಗ್ನದೂರಗಳನ್ನು ಗಮನಿಸಿ. ಪಕ್ಷಕಾರರ ಲಕ್ಷಣ ವಿಶೇಷಗಳನ್ನು ಗಮನಿಸಿ. ಅದು ಅಂತರ್‌ಜಾತಿ ವಿವಾಹವಾಗಬಹುದು, ಅಂದರೆ ಜಾತಿ ಹೊರಗಿನ ವಿವಾಹ *ಆಗಬಹುದು. ಸಗೋತ್ರರ ವಿವಾಹವೂ ಆಗಬಹುದು. ಹಾಗಿದ್ದೂ ಅದು ಸಾಂಸ್ಕಾರಿಕ ವಿವಾಹ* ಆಗುತ್ತದೆ. ಸ್ವಾಮೀ, ಒಂದೆಡೆ ಸಾಂಸ್ಕಾರಿಕ ಸ್ವರೂಪದ ವಿವಾಹವನ್ನು ನಿಯಮಿಸುತ್ತ, ಸಿವಿಲ್ ಸ್ವರೂಪದ ವಿವಾಹವನ್ನು ಅದರ ಜೊತೆಯಲ್ಲಿಯೇ ಸೇರಿಸುವುದೆಂದರೆ ವಿಲಕ್ಷಣವಲ್ಲವೆ? ಹಿಂದೂ ಕೋಡ್‌ನಲ್ಲಿಯೇ ಅದಕ್ಕೆ ಸ್ಥಾನ ಹೇಗೆ ದಕ್ಕಿತು ನನಗೆ ಅರ್ಥವಾಗುತ್ತಿಲ್ಲ. ಆದಾಗ್ಯೂ ಅವರು ಸಂಪೂರ್ಣವಾಗಿ ಹೊಸದಾಗಿರುವ ಸಂಗತಿಯನ್ನು ಸೇರಿಸಿದ್ದಾರೆ. ಆದರೆ ಅದು ಅತ್ಯಂತ ಆಕ್ಷೇಪಾರ್ಹ ಸಂಗತಿಯಾಗಿದೆ. ಏಕೆಂದರೆ ಸಾಂಸ್ಕಾರಿಕ ಸ್ವರೂಪದ ವಿವಾಹದಲ್ಲಿ ಒಂದು ನಿರ್ದಿಷ್ಟ ಲಗ್ನದೂರ ವರ್ಗವನ್ನು ಸೇರಿಸಿದ್ದರೆ, ಸಿವಿಲ್ ವಿವಾಹದಲ್ಲಿ ಸಂಪೂರ್ಣವಾಗಿ ವಿಭಿನ್ನವಾದ ಪ್ರವರ್ಗವನ್ನು (ಲಗ್ನ ದೂರ) ಸೇರಿಸಿದ್ದಾರೆ. ನಿಷೇಧಿತ ಲಗ್ನ ದೂರದ ಪರಿಧಿಯನ್ನು ಕಿರಿಯಗಲಗೊಳಿಸುತ್ತ ಇಷ್ಟು ಮಟ್ಟಿಗೆ ಸಂಕುಚಿತಗೊಳಿಸಲಾಗಿದೆ ಎಂದರೆ ಅನೇಕ ಸಂದರ್ಭಗಳಲ್ಲಿ ವಿವಾಹವು ಅಗಮ್ಯಗಮನ ಸಂಬಂಧಿಗಳ ವಿವಾಹವಾಗುತ್ತದೆ. ನನಗೆ ಇದೆಲ್ಲ ಏನೇನೂ ಅರ್ಥವಾಗುತ್ತಿಲ್ಲ. ಸ್ವಾಮೀ, ಇಂಥ ಕ್ರಮದ ಅಗತ್ಯವಾದರೂ ಏನಿತ್ತು? ಆ ಮೂಲಕ ನೈತಿಕ ಸ್ವೇಚ್ಛಾಚಾರಕ್ಕೂ ಅರಾಜಕತೆಗೂ ಆಹ್ವಾನ ಕೊಡುವ ಉದ್ದೇಶವಿಲ್ಲದೆ ಹೋಗಿದ್ದರೆ, ಹಾಗೆ ದುರದೃಷ್ಟವಶಾತ್ ನಮ್ಮ ಯುವ ಜನಾಂಗದ ಮೇಲೆ ಸ್ವಚ್ಛಂದ ವೃತ್ತಿ ಮತ್ತು ಕಾನೂನು ಉಲ್ಲಂಘಿಸುವ ಮನೋಭಾವನೆ ದಾಳಿ ನಡೆಸಿರುವುದನ್ನು ನಾವು

ನೋಡುತ್ತಿದ್ದೇವೆ. ಇಂಥ ಸನ್ನಿವೇಶಕ್ಕೆ, ಈ ಒಂದು ಬೆಳವಣಿಗೆಗೆ ನಮ್ಮ ಮಂಜೂರಾತಿಯ ಮೊಹರು ಹಾಕುವುದು ನಮ್ಮ ಇಚ್ಛೆಯೆ? ನನ್ನ ಮಾನ್ಯ ಮಿತ್ರರಿಗೆ ಈ ಪ್ರಶ್ನೆಯನ್ನು ಪರಿಶೀಲಿಸಿ ಪ್ರತ್ಯುತ್ತರ ಕೊಡುವಂತೆ ಅತ್ಯಂತ ಗಂಭೀರವಾಗಿ ಕೇಳುತ್ತಿದ್ದೇನೆ. ತಮಾಷೆಯ ಪರಿಹಾಸದ ಭಾವನೆಯಿಂದಲ್ಲ, ಹಗುರವಾದ ಹಾಸ್ಯವನ್ನು ಹೊಮ್ಮಿಸುವ ಉದ್ದೇಶದಿಂದಲ್ಲ. ಅತ್ಯಂತ ಸಂಕಟಕ್ಕೀಡು ಮಾಡಬಹುದಾದ ಕಠಿಣ ಸಾಮಾಜಿಕ ಸಮಸ್ಯೆಗೆ ಪರಿಹಾರ ಬಯಸುವ ಪ್ರಾಮಾಣಿಕ ಆಕಾಂಕ್ಷೆಗೆ ತಕ್ಕುದಾದ ಗಾಂಭೀರ್ಯದಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಹಿಂದೂ ವಿವಾಹದ ಮೂಲಭೂತ ಪರಿಕಲ್ಪನೆ (ಸಂಕಲ್ಪನೆ)ಯಲ್ಲಿ ವಿವಾಹ ವಿಚ್ಛೇದದ ವಿಷಯವನ್ನು ಸೇರಿಸಿರುವ ಕಾರಣ, ಹಿಂದೂ ವಿವಾಹ ಪದ್ಧತಿಗೆ ಕಠೋರ ಆಘಾತವಾಗಿದೆಯೆಂದು ನಾನು ಭಾವಿಸುತ್ತೇನೆ. ಕಾರಣವೆಂದರೆ ವಿವಾಹ ವಿಚ್ಛೇದವು ವಿವಾಹವನ್ನು ಕುರಿತ ಹಿಂದೂಗಳ ಭಾವನೆಗಳಿಗೆ ಅಸಂಗತವಾದ, ಪ್ರತಿಕೂಲವಾದ ಸಂಗತಿ. ತಾನು ಹಿಂದೂ ಎಂದು ಬಹಿರಂಗವಾಗಿ ಘೋಷಿಸುವ, ಹಿಂದೂ ಎಂದು ಹೇಳಿಕೊಳ್ಳಲು ಹೆಮ್ಮೆಪಡುವ, ಪ್ರತಿಯೊಬ್ಬನಿಗೂ, ನಾನು ಹಾಗೆಯೇ ಆದ ಕಾರಣ ನನಗೂ, ಅಗತ್ಯವಾಗಿ ಗೊತ್ತಿರುವ ಪ್ರಕಾರ ಹಿಂದೂ ವಿವಾಹ ಸಂಸ್ಕಾರವೇ ಹೊರತು ಸಿವಿಲ್ ಕರಾರು ಅಲ್ಲ ಮತ್ತು ಆ ಕಾರಣದಿಂದಾಗಿ, ವಿವಾಹ ವಿಚ್ಛೇದನ ಹಿಂದೂ ವಿವಾಹ ಪದ್ಧತಿಗೆ ವಿರೋಧಿಯಾದ, ಬಾಹ್ಯವಾದ ಸಂಗತಿ ಎಂದು ಹೇಳಲು ಕಷ್ಟವಾಗಲಿಕ್ಕಿಲ್ಲ. ಹಿಂದೂ ಶಾಸ್ತ್ರಗಳ ಪ್ರಕಾರ ವಿವಾಹದ ಮೂಲಕ ಸೃಷ್ಟಿಯಾಗುವ ಸಂಯೋಗವು ಪರಮ ಪವಿತ್ರವಾದದ್ದು ಮತ್ತು ಯಾವ ರೀತಿಯಲ್ಲೂ ವಿಸರ್ಜಿಸಲಾಗದ್ದು, ಪವಿತ್ರವಾದದ್ದು ಮತ್ತು ಅವಿಚ್ಛೇದ್ಯವಾದದ್ದು. (ಮಾತಿಗೆ ಅಡ್ಡಿ). ಅಡ್ಡಿಪಡಿಸಲು ಮತ್ತು ನನ್ನ ಭಾಷಣವನ್ನು ಮೊಟಕುಗೊಳಿಸಲು ನೀವು ಇಷ್ಟಪಡಿಸುವುದಾದರೆ, ಮಹತ್ವದ ವಿಷಯಗಳನ್ನು ಉಲ್ಲೇಖಿಸುತ್ತಿರುವಾಗ ಮಾತ್ರ ಅಡ್ಡಿಪಡಿಸಿ. ಅಡ್ಡಿ ಅಡಚಣೆಗಳಿಗೆ ಅಳುಕುವವನಲ್ಲ ನಾನು. ಅವುಗಳಿಗೆ ಹೇಗೆ, ಏನು ಉತ್ತರ ಕೊಡಬೇಕು, ನನಗೆ ಗೊತ್ತು. ನನ್ನದೇ ಆದ ಶೈಲಿಯಲ್ಲಿ ಉತ್ತರಿಸಬಲ್ಲೆನು. ಆದರೆ ನೀವು ಹೀಗೆ ಮೇಲಿಂದ ಮೇಲೆ ಅಡ್ಡಿಪಡಿಸುತ್ತ ಹೋದರೆ, ನನ್ನ ಭಾಷಣವು ಅನಗತ್ಯವಾಗಿ ದೀರ್ಘವಾಗುತ್ತದೆ, ಮಾತ್ರವಲ್ಲದೆ ನಾನು ಕೊಡುವ ಉತ್ತರಗಳಿಂದ ನಿಮಗೆ ಸಂತೋಷವಾಗಲಿಕ್ಕಿಲ್ಲ.

**ಬಾಬು ರಾಮ ನಾರಾಯಣ ಸಿಂಗ್ :** ಅದು ಆಗತಕ್ಕದ್ದು ಹಾಗೆಯೇ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ವಿವಾಹ ವಿಚ್ಛೇದನ ಪದ್ಧತಿ (ಸಂಸ್ಥೆಯು) ಈ ದೇಶದಲ್ಲಿ, ಯಾವ ಸಮುದಾಯದ ಯೋಗಕ್ಷೇಮವು ಅದರ ಗುರಿಯಾಗಿದೆಯೋ ಆ ಸಮುದಾಯದ ಹಿತಸಂವರ್ಧನೆಯ ಕಾರ್ಯದಲ್ಲಿ ವಿಫಲವಾಗಿದೆಯೆಂದು ಕಂಡುಬಂದಿದೆ. ಸಮಾಜಶಾಸ್ತ್ರದ ವಿನಯಶೀಲ ವಿದ್ಯಾರ್ಥಿಯಾಗಿ ನಾನು, ಹಲವಾರು ಬಾರಿ ವಿವಾಹ ಸಂಬಂಧೀ ನ್ಯಾಯಾಲಯಗಳಲ್ಲಿ ವರದಿಗಳನ್ನು ಓದಿದ್ದೇನೆ. ಮಾನ್ಯ ಸದಸ್ಯರೊಬ್ಬರು ನ್ಯಾಯಾಧೀಶ ಲಿಂಡ್ಸೆ ಅವರನ್ನು ಕುರಿತು ಉಲ್ಲೇಖಿಸಿದರು. ಅವರ ಗಮನದಲ್ಲಿಯೂ "ಯುವಪೀಳಿಗೆ ದಂಗೆ" ಇತ್ತೆಂದು ತೋರುತ್ತದೆ. ನಮ್ಮ ಮಾನ್ಯ ಸ್ನೇಹಿತರು ಮಹಾನ್ ನ್ಯಾಯಾಧೀಶರಾದ ಲಿಂಡ್ಸೆ ಅವರನ್ನು ಉಲ್ಲೇಖಿಸಿದಾಗ, ತಮಗೆ ಅರಿವಿಲ್ಲದ ಹಾಗೆಯೆ ಈ ಸ್ವರೂಪದ ವಿವಾಹದ ವಿರುದ್ಧವಾಗಿ ನಮಗೆ ಅತ್ಯಂತ ಪ್ರಬಲವಾದ ತರ್ಕವನ್ನು ತಾವಾಗಿಯೆ ಒದಗಿಸಿದರು ಎಂದು ಅವರಿಗೆ ಅರಿವಾಗಲಿಲ್ಲ ಎಂದು ತೋರುತ್ತದೆ. ಈ ಹಿಂದೂ ಕೋಡ್ ಉಪಸಂಬಂಧಿಸಲಾದ ಪ್ರಕಾರ, ಕುಟುಂಬದ ವಲಯದಲ್ಲಿ ಒಬ್ಬ ವ್ಯಕ್ತಿಯು ತಾಯಿಯ ಸೋದರನ ಮಗಳು ಅಥವ ತಂದೆಯ ಸೋದರಿಯ ಮಗಳು ಇವರ ಜತೆ ವಿವಾಹವಾಗಲು ಅನುಮತಿ ನೀಡಬಹುದೆ ಹೇಗೆ ಎಂಬ ವಿಚಾರವನ್ನು ಮಾನ್ಯ ಸದಸ್ಯರು ಪರಿಶೀಲಿಸಿ ನೋಡಬೇಕಾಗಿ ಕೇಳಿಕೊಳ್ಳುತ್ತೇನೆ.

**ಶ್ರೀ ಎಚ್.ವಿ.ಕಾಮತ್ :** ಅದು ಸರ್ವೇಸಾಮಾನ್ಯ

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ದಕ್ಷಿಣ ಭಾರತದಲ್ಲಿ ಸರ್ವೇಸಾಮಾನ್ಯವಾಗಿರಬಹುದು. ಆದರೆ ದಕ್ಷಿಣ ಭಾರತವು ಇಡೀ ಭಾರತವಲ್ಲ. ನನ್ನ ಮುಖ್ಯ ತರ್ಕ ಎಂದರೆ, ಒಂದು ನಿರ್ದಿಷ್ಟ ರೂಪವು, ದೇಶದ ನಿರ್ದಿಷ್ಟ ಭಾಗದಲ್ಲಿ ಇದ್ದರೆ, ನೀವು ವಿಶೇಷ ಆಸ್ಥೆ ವಹಿಸಿ, ಅದನ್ನು ಇಡೀ ದೇಶಕ್ಕೆ ಅನ್ವಯಿಸಲು ವ್ಯವಸ್ಥೆ ಮಾಡಬಾರದು.

ನಾನು ದಕ್ಷಿಣ ಭಾರತದಲ್ಲಿ ಇಲ್ಲದ ಒಂದು ಪ್ರಾಂತಕ್ಕೆ ಸೇರಿದವನು. ಅದು ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಹಿಂದುಳಿದ ಪ್ರಾಂತ – ನಿಮಗೆ ಹೇಗೆ ಅನಿಸುತ್ತಿದೆಯೊ ಹಾಗೆ ಕರೆಯಿರಿ, ಅಂಧಕಾರಕ್ಕೆ ತುತ್ತಾದ ಆ ಬಂಗಾಲ ಪ್ರಾಂತವನ್ನು ಅಲ್ಲಿಯ ಕುಟುಂಬಗಳ ಪಾರಿವಾರಿಕ ಪರಿಸ್ಥಿತಿಯನ್ನು ನಾನು ಬಲ್ಲೆನು. ಬಂಗಾಲದಲ್ಲಿ ಯಾವುದೇ ಹಿಂದೂ ಕುಟುಂಬಕ್ಕೆ ಹೋಗಿ, ಅಲ್ಲಿನ ಪಾರಿವಾರಿಕ ಸ್ಥಿತಿಗತಿಗಳನ್ನು ವೀಕ್ಷಿಸಿ. ಒಂದು ಮನೆಯಲ್ಲಿ, ಒಂದೇ ಮನೆಯಲ್ಲಿ, ಹುಡುಗಿಯರು, ಹುಡುಗರು ಮತ್ತು ಇತರ ನೈಸರ್ಗಿಕ ವಾರಸುದಾರರ ಹೊರತಾಗಿ ಎಲ್ಲ ಬಗೆಯ ಸಂಬಂಧಿಕರು, ಸೋದರಿಯರ ಹುಡುಗರು, ಸೋದರ ಮಾವನ ಹುಡುಗರು, ಹುಡುಗಿಯರು, ಎಲ್ಲರೂ ಒಂದೆಡೆಯಲ್ಲಿ ವಾಸವಾಗಿರುವರಲ್ಲದೆ, ಆ ಪರಿವಾರ ವ್ಯವಸ್ಥೆಯಲ್ಲಿ ಅವರುಗಳ ಪಾಲನ – ಪೋಷಣವು ನಡೆಯುತ್ತದೆ. ಅವರೆಲ್ಲರನ್ನೂ ನೈತಿಕ ಮತ್ತು ಧಾರ್ಮಿಕ ಪ್ರಭಾವಗಳ ದ್ವಾರಾ ವಿನಿಯಮಿಸಿ ನಿಗ್ರಹಿಸಿ, ಒಂದು ಶಿಸ್ತಿಗೆ ಒಳಪಡಿಸಲಾಗುತ್ತದೆ. ಆ ವ್ಯವಸ್ಥೆಯನ್ನು ನೀವು ಎಲ್ಲಾ ಪರಿವಾರಗಳಲ್ಲಿ ಕಾಣುತ್ತೀರ?

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** (ಕಾನೂನು ಮಂತ್ರಿಗಳು) : ಅದರಲ್ಲಿ ತೊಂದರೆಯೇನು?

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ತೊಂದರೆ ಎಲ್ಲಿ ಎಂದು ನಿಮಗೆ ಹೇಳುತ್ತೇನೆ. ತಮ್ಮದೇ ಆದ ಕುಟುಂಬ (ಸಂಸಾರ) ಇಲ್ಲದವರಿಗೆ ತೊಂದರೆಯೇನೂ ಇಲ್ಲ. ತೊಂದರೆ ತಲೆಹಾಕುವುದು ಹೀಗೆ. ನನ್ನ ಕುಟುಂಬದಲ್ಲಿ ನನ್ನ ಹುಡುಗರು, ಹುಡುಗಿಯರು, ನನ್ನ ತಂದೆಯ ಸೋದರಿಯ ಹುಡುಗರು, ಹುಡುಗಿಯರು, ತಾಯಿಯ ಮಗಳ ಹುಡುಗಿಯರು, ಹುಡುಗರು – ಇವರೆಲ್ಲ ಒಂದೇ ಮನೆಯಲ್ಲಿ ವಾಸವಾಗಿದ್ದಾರೆ ಎಂದು ಭಾವಿಸಿ. ಆಗ ನನ್ನ ಹುಡುಗನು ಅಪ್ರಾಪ್ತ ವಯಸ್ಕನಾಗಿರುವಾಗ ಅಥವಾ ಪ್ರೌಢನಾದಾಗ ತನ್ನ ಜತೆ ಸಲಿಗೆ ಬೆಳೆಸಿದರೆ, ಮನುಷ್ಯ ಸ್ವಭಾವ ಏನು ಎತ್ತ ಎಂದು ಬಲ್ಲವರಾದ ನಾವು ಆ ಸಲಿಗೆಯು ಮುಂದುವರೆಯುತ್ತ ಹೋಗಿ ವಿವಾಹದಲ್ಲಿ ಪರ್ಯವಸಾನ ಹೊಂದುವ ಸಂಭಾವ್ಯತೆಯನ್ನು ನಿವಾರಿಸಲು ಸಾಧ್ಯವೆ? ಸಾಧ್ಯ ಎನ್ನುತ್ತೀರ? ಹಾಗಾದರೆ ನೀವು ಚರಿತ್ರೆಯನ್ನು, ಸಮಾಜಶಾಸ್ತ್ರವನ್ನು, ಮನೋವಿಜ್ಞಾನವನ್ನು ಅಧ್ಯಯನ ಮಾಡಿದ್ದು ಪ್ರಯೋಜನವಿಲ್ಲ. ಕಾರಣವೆಂದರೆ ಮೈಮನಗಳ ಸೆಳೆತಕ್ಕೆ, ಎಂಥ ಸರ್ವಶಕ್ತ ಶಾಸನವಾದರೂ ಸಾಟಿಯಲ್ಲ. ಮನುಷ್ಯ ಜಾತಿಯ ನಿಸರ್ಗ ಸಹಜವಾದ ಮತ್ತು ಪ್ರಬಲವಾದ ಮೂಲಪ್ರವೃತ್ತಿಯ ಮನೋವೇಗವನ್ನು ನಿರ್ಮೂಲನ ಮಾಡಲು ಯಾವ ಕಾನೂನಿಗೂ ಸಾಧ್ಯವಲ್ಲ. ರಕ್ತ ಸಂಬಂಧಿಗಳ – ಅತ್ಯಂತ ನಿಕಟ ರಕ್ತ ಸಂಬಂಧಿಗಳ – ಅತ್ಯಂತ ನಿಕಟ ರಕ್ತ ಸಂಬಂಧಿಗಳ ನಡುವೆ ವೈವಾಹಿಕ ಬಂಧನಕ್ಕೆ ನೀವು ಮಂಜೂರಾತಿಯ ಮೊಹರು ಒತ್ತುವುದಾದರೆ, ನಮ್ಮ ಸಮಾಜದ ಗತಿ ಏನಾದೀತು ಎಂದು ನನೆದು ನೆನಗೆ ದಿಗಿಲಾಗುತ್ತಿದೆ.

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಅಂಥ ಅನಾಹುತವೇನೂ ಆಗಲಾರದು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಸಮಾಜದ ಹಿತಚಿಂತನೆ ಇಲ್ಲದಿದ್ದರೆ ಹಾಗೇನೂ ಆಗುವುದಿಲ್ಲ. ಅನಾಹುತವೂ ಆಗುವುದಿಲ್ಲ. ಒಮ್ಮೆ ಇಲ್ಲಿ, ಒಮ್ಮೆ ಅಲ್ಲಿ ಹೀಗೆ ಜೇನು ಸವಿಯುತ್ತ, ಮಜಾಮಾಡುತ್ತ ಇರುವ

ಸಾಮಾಜಿಕ ಪತಂಗಗಳೇ ಇರುವ ಸಮಾಜದಲ್ಲಿ ನಿಮಗೆ ನಂಬಿಕೆ ಇದ್ದರೆ ಮಾತ್ರ ಹಾಗೇನೂ ಆಗುವುದಿಲ್ಲ. ಆದರೆ ನಾನು ಬಯಸುವ, ನಂಬುವ ಸಮಾಜ ಎಂದರೆ ಯಾವ ಸ್ಥಾನಮಾನದ ನಿಮಿತ್ತ ಇದೇ ಪ್ರಪಂಚದಲ್ಲಿ ಮನ್ನಣೆಗೆ ಪಾತ್ರವಾಗಿದೆಯೋ ಅಂಥ ಸ್ಥಾನಮಾನವನ್ನು ಭಾರತದ ಸಲುವಾಗಿ ತನ್ನದೇ ಸ್ಥಾನಮಾನವನ್ನು ಸಾಧಿಸಿರುವ ಅಥವಾ ಸಾಧಿಸಲಿರುವ ಸಮಾಜ. ಇವೆಲ್ಲ ವಿಚಾರಗಳನ್ನು ಸಂಗತಿಗಳನ್ನು ಬಿಸಾಕಿ, ನೀವು ಒಂದು ಹಿಂದೂ ಕೋಡ್ ಅನ್ನು ಪ್ರಾರೂಪಣ ಮಾಡಿದರೆ, ಎಲ್ಲ ಬಗೆಯ ವಿವಾಹಗಳು, ನಿಕಟ ಸಂಬಂಧಿಗಳ ನಡುವೆ ಏರ್ಪಡುವ ಎಲ್ಲಾ ವಿವಾಹಗಳಿಗೆ, ಅಗಮ್ಯಗಮನದ ನಡುವೆ ಏರ್ಪಡುವ ವಿವಾಹಗಳಿಗೆ ಅವಕಾಶ ಒದಗಿಸುವ ಕಲಸುಮೇಲೋಗರವಾದ ಕೋಡ್‌ಅನ್ನು ಸಾದರಪಡಿಸಿದರೆ, ಸಮಾಜವು ನೈತಿಕ ಅವನತಿಯ ತೊಟ್ಟಿಯಾಗಿಬಿಡುತ್ತದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** 'ಅಗಮ್ಯಗಮನ' ಪದದ ಬಳಕೆಯನ್ನು ನಾವು ಆಕ್ಷೇಪಿಸುತ್ತೇವೆ, ಪ್ರತಿಭಟಿಸುತ್ತೇವೆ. ದೇಶದ ಅನೇಕ ಕಡೆಗಳಲ್ಲಿ ಪ್ರಚಲಿತ ಇರುವ ಪದ್ಧತಿಯನ್ನು ಹೀಗೆ ಬೇಕಾಬಿಟ್ಟಿಯಾಗಿ ನಿಂದಿಸುವುದು, ಖಂಡಿಸುವುದು ಖಂಡಿತವಾಗಿಯೂ ತರವಲ್ಲ.

**ಸಭಾಧ್ಯಕ್ಷರು :** ಆರ್ಡರ್, ಆರ್ಡರ್.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಆ ಕಾರಣಕ್ಕಾಗಿಯೆ ನಾನು ಈ ವಿವಾಹ ವ್ಯವಸ್ಥೆಯ ವಿರುದ್ಧ ಪ್ರತಿಭಟನೆಯ ಧ್ವನಿಯನ್ನು ಏರಿಸದಿರಲಾರೆನು. ಯಾಕೆಂದರೆ ನಡುವಣ ವಿವಾಹಗಳು, ನಿಕಟ ಸಂಬಂಧಿಗಳ ನಡುವೆ ಏರ್ಪಡುವ ವಿವಾಹಗಳು, ವಿಜ್ಞಾನದ ದೃಷ್ಟಿಯಿಂದ ಮತ್ತು ಸತ್‌ಸಂತಾನ ಶಾಸ್ತ್ರದ ದೃಷ್ಟಿಯಿಂದ ಸಮಾಜದ ಹಿತಸಂವರ್ಧನೆಗೆ ಕ್ಷೇಮಕರವಲ್ಲ ಮತ್ತು ಹಿಂದೂ ಕಾನೂನಿನ ಅಭಿಪ್ರಾಯಗಳಿಗೆ/ವಿಚಾರಗಳಿಗೆ ಸುಸಂಗತವಲ್ಲ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ:** ಇಲ್ಲ. ಇಲ್ಲ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಹೀಗೆ, ಸಮಾಜದ ಹಿತದೃಷ್ಟಿಯಿಂದ ಅಷ್ಟೇ ಅಲ್ಲದೆ, ಕುಟುಂಬ ಝೀವನದ ಸುಖ–ಶಾಂತಿ ಮತ್ತು ಪಾವಿತ್ರ್ಯ ಇವುಗಳ ದೃಷ್ಟಿಯಿಂದ ಸಹ ಇದನ್ನು ಖಂಡಿಸಲು ಇಚ್ಛಿಸುತ್ತೇನೆ. ಇದು ನೀತಿಗೆ ವಿರುದ್ಧವಾದದ್ದು ಮತ್ತು ಅನ್ಯಾಯಪೂರ್ಣವಾದದ್ದು.

ಸ್ವಾಮೀ, ನನ್ನ ಮಾನ್ಯ ಸೋದರಿ ಶ್ರೀಮತಿ ದುರ್ಗಾಬಾಯಿ ಅವರು ಏಕಪತ್ನಿ ಪದ್ಧತಿಯನ್ನು ವಿರೋಧಿಸಬಾರದು ಎಂದು ಹೇಳಿದ್ದಾರೆ. ಸರಿಯಾಗಿಯೇ ಹೇಳಿದ್ದಾರೆ. ಈ ಸದನದಲ್ಲಿ ಏಕಪತ್ನಿ ಪದ್ಧತಿಯನ್ನು ನಿಜವಾಗಿಯೂ ಬಯಸದವರು ಯಾರಾದರೂ ಇದ್ದಾರೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಏಕಪತ್ನಿ ಪದ್ಧತಿಯನ್ನು ನಮ್ಮಲ್ಲಿ ಪ್ರತಿಯೊಬ್ಬರೂ ಇಷ್ಟಪಡುತ್ತಾರೆ. ನಮ್ಮ ಸಲುವಾಗಿ ಅಷ್ಟೇ ಅಲ್ಲ, ನಾವು ಬಯಸುತ್ತೇವೆ ಎಂಬ ಕಾರಣಕ್ಕಾಗಿ ಅಷ್ಟೇ ಅಲ್ಲ. ಪರಿಸ್ಥಿತಿಗಳು ಏಕಪತ್ನಿ ವಿವಾಹ ಪದ್ಧತಿಯನ್ನು ಒಪ್ಪಿಕೊಳ್ಳುವಂತೆ ಒತ್ತಾಯಿಸಿದ್ದುಂಟು. ಮೇಲ್ವರ್ಗದ ಕುಟುಂಬಗಳಿಂದ ಬಹುಪತ್ನಿ ಪದ್ಧತಿಯು ಸಂಪೂರ್ಣವಾಗಿ ಮರೆಯಾಗಿ ಹೋದದ್ದು ಶಾಸನದ್ವಾರಾ ಅಲ್ಲ ಎಂಬುದು ಸತ್ಯ ಸಂಗತಿ. ಇದು ನನ್ನ ಪ್ರಧಾನ ತರ್ಕ, ಮುಖ್ಯವಾದ. ನೀವು ಯಾವುದೇ ಸಾಮಾಜಿಕ ಅನಿಷ್ಟವನ್ನು ತೊಡೆದುಹಾಕಲು ಇಚ್ಛಿಸಿದರೆ, ಆ ಸಂಬಂಧದಲ್ಲಿ ಒಳಗಿನಿಂದ ಕೆಲಸ ಮಾಡಬೇಕೇ ಹೊರತು ಮೇಲಿನಿಂದಲ್ಲ. ನನ್ನ ಮಾನ್ಯ ಸ್ನೇಹಿತರು ನಿಮ್ಮ ದೇಶದ ಇತಿಹಾಸವನ್ನು ಅವಲೋಕಿಸಿದರೆ, ನನ್ನ ನಿಲುವಿಗೆ ವಿಪುಲ ರುಜುವಾತು ಲಭ್ಯ ಎಂದು ಅವರು ಮನಗಾಣುತ್ತಾರೆ. ಹಿಂದೂ ವಿಧವೆಯರ ಸಂಕಷ್ಟಗಳನ್ನು ದುಃಖ ದುಮ್ಮಾನಗಳನ್ನು ನಾವೆಲ್ಲರೂ ಬಲ್ಲೆವು. ಬಾಲ ವಿಧವೆಯರ, ಯುವ ವಿಧವೆಯರ ಪ್ರಕರಣಗಳು ಲೆಕ್ಕವಿಲ್ಲದಷ್ಟು. ನಮ್ಮ ಎದೆ ಕರಗಿಸುವ ಸನ್ನಿವೇಶಗಳು. ನಿಜವೆಂದರೆ,

ಕಳೆದ ತಲೆಮಾರಿನಲ್ಲಿ, ದಿವಂಗತ ಪಂಡಿತ ವಿದ್ಯಾಸಾಗರ ಅವರು ಹಿಂದೂ ವಿಧವಾ ಪುನರ್ವಿವಾಹ ಕಾಯ್ದೆಯನ್ನು ಪಾಸು ಮಾಡಿಸಿದರು. ಆದರೆ ಕಾಲ ಪಕ್ವವಾಗಿರಲಿಲ್ಲ. ಫಲಿತಾಂಶ ಏನಾಯಿತು? ಕಾಯ್ದೆಯು ವಾಸ್ತವವಾಗಿ ನಿಷ್ಕ್ರಿಯ, ನಿರ್ಜೀವ ವಸ್ತು ಆಗಿ ಉಳಿಯಿತು. ಇನ್ನೂ ಹಾಗೆಯೇ ಇದೆ. ಸಮಾಜದ ಅಂತರಂಗದಿಂದ ಹೊಮ್ಮಿದ ಕೋರಿಕೆಯ ಮೂಲಕವಲ್ಲದೆ ಏರ್ಪಟ್ಟ ಯಾವುದೇ ಸಾಮಾಜಿಕ ಶಾಸನಕ್ಕೆ ಇದೇ ಗತಿ ಅನಿವಾರ್ಯವಾಗುತ್ತದೆ.

ಬಹುಪತ್ನಿ ಪದ್ಧತಿಯು ಈ ದೇಶದಿಂದ ವಾಸ್ತವವಾಗಿ ಕಣ್ಮರೆಯಾಗಿರುವುದಕ್ಕೆ ಅನೇಕ ಕಾರಣಗಳುಂಟು ಎಂದು ಸದನಕ್ಕೆ ವಿವರಿಸಿ ಹೇಳುತ್ತಿದ್ದೆನಷ್ಟೆ. ಆ ಕಾರಣಗಳಿಂದಾಗಿ ಹೀಗೆ ದಾಂಪತ್ಯ ಜೀವನದಲ್ಲಿ ಜವಾಬ್ದಾರಿ ಭಾವನೆಯು ಅಧಿಕಗೊಳ್ಳುತ್ತಿದೆ. ಮಹಿಳಾ ವರ್ಗದಲ್ಲಿ ಆತ್ಮಪ್ರಜ್ಞೆ ಹೆಚ್ಚಾಗುತ್ತಿದೆ. ಇದಲ್ಲದೆ ನಾನಾ ಒತ್ತಾಯಗಳು ಅತ್ಯಂತ ಪ್ರಮುಖವಾಗಿ ಆರ್ಥಿಕ ಒತ್ತಾಯದ ಕಾರಣ ಒಂದೇ ಕಾಲಕ್ಕೆ ಒಬ್ಬರಿಗಿಂತ ಹೆಚ್ಚು ಜನ ಹೆಂಡಂದಿರನ್ನು ಹೊಂದಿರುವ ವಿಲಾಸವು ಅಸಾಧ್ಯವಾಗುತ್ತಿದೆ. ಅಂಥ ವಿಭಿನ್ನ ಒತ್ತಾಯಗಳ ಅಂತಃ ಪ್ರಭಾವದಿಂದಾಗಿ ಬಹುಪತ್ನಿ ಪದ್ಧತಿಯು ಕಣ್ಮರೆಯಾಗುತ್ತಿದೆ. ಆದ್ದರಿಂದ, ಆ ಬಗ್ಗೆ ಯಾವುದೇ ಶಾಸನ ರಚನೆ ಅಗತ್ಯವಿಲ್ಲ ಎಂದು ಭಾವಿಸುತ್ತೇನೆ. ಅದು ತಾನಾಗಿಯೇ ಅವಸಾನ ಹೊಂದಿದೆ. ಆ ಪದ್ಧತಿಯು ಬಳಕೆಯಲ್ಲಿ ಇಲ್ಲ. ಸಮಾಜದ ಕೆಲವರು ವಾದಿಸಬಹುದು. ಆ ಸಂಬಂಧದಲ್ಲಿ ಸಹ ನಾನು ಎಚ್ಚರಿಕೆಯ ಮಾತನ್ನು ಹೇಳಬೇಕಾಗುತ್ತದೆ. ನೀವು ಅದನ್ನು ಬಲಪ್ರಯೋಗದಿಂದಾಗಲಿ, ಒತ್ತಾಯದಿಂದಾಗಲಿ ತಡೆಯಲು ಸಾಧ್ಯವಿಲ್ಲ. ನೀವು ಆ ಬಗ್ಗೆ ಸಾರ್ವಜನಿಕ ಅಭಿಪ್ರಾಯವನ್ನು ಸೃಷ್ಟಿಸಬೇಕು. ಆಗ ನಮ್ಮ ನಿರ್ಭಾಗ್ಯ ಸಹೋದರರು ಆ ಅನಿಷ್ಟ ಪದ್ಧತಿಯ ಕೇಡುಗಳನ್ನು ತಿಳಿದುಕೊಳ್ಳುತ್ತಾರೆ ಮತ್ತು ಅದನ್ನು ತಾವಾಗಿಯೇ ತೊರೆಯುತ್ತಾರೆ. ಆದರೆ ಇದಕ್ಕೆ ವಿಪರೀತವಾಗಿ, ಅವರ ವಿಚಾರ ಸ್ತರವನ್ನು ಎತ್ತರಿಸಲು ಪ್ರಯತ್ನ ಮಾಡದೆಯೆ ಮತ್ತು ಶಿಕ್ಷಣ ಮತ್ತು ಸಾರ್ವಜನಿಕ ಅಭಿಪ್ರಾಯದ ಮೂಲಕ ಅವರಲ್ಲಿ ಆತ್ಮಪ್ರಜ್ಞೆಯನ್ನು ಒಡಮೂಡಿಸದೆಯೆ ಅವರ ಒಲ್ಲದ ಮನಸ್ಸುಗಳಲ್ಲಿ ನಿಮ್ಮ ಶಾಸನವನ್ನು ತೂರಿಸಲು ಪ್ರಯತ್ನಪಟ್ಟರೆ ಅವರ ಮೇಲೆ ಏನು ಪರಿಣಾಮ ಆಗಬಹುದು ಎಂಬುದನ್ನು ಮನದಟ್ಟು ಮಾಡಿಕೊಳ್ಳಿ ಎಂದು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಮಾನ್ಯ ಸೋದರಿಯು ಹೇಳುತ್ತಿದ್ದ ಹಾಗೆ ಅವರು ಹೇಳಬಹುದು. ಇದು ನಮ್ಮ ಸಮಾಜ. ಇದು ಕಬ್ಬಿಣದ ಎರಕದಲ್ಲಿ ರೂಪುಗೊಂಡ ಸಮಾಜ. ಕಠೋರ ವ್ಯವಸ್ಥೆ. ಅವರು ನಮಗೆ ಇನ್ನೊಬ್ಬಳು ಹೆಂಡತಿಯನ್ನು ಹೊಂದಲು ಅವಕಾಶ ಕೊಡುವುದಿಲ್ಲ. ನಾವು ಇನ್ನೊಂದು ಸ್ವರೂಪದ ಸಮಾಜಕ್ಕೆ ಹೋಗೋಣ. ಇನ್ನೊಂದು ಧರ್ಮವನ್ನು ಅಂಗೀಕರಿಸೋಣ. ಅಲ್ಲಿ ಅವರು ನಮಗೆ ಇನ್ನೊಬ್ಬಳು ಹೆಂಡತಿಯನ್ನು ಹೊಂದಿರಲು ಅನುಮತಿ ನೀಡುತ್ತಾರೆ. ಯಾರೇ ಸಮಾಜಶಾಸ್ತ್ರಿಯು, ಸಮಾಜ ಸುಧಾರಣೆಯಲ್ಲಿ ಆಸಕ್ತಿಯುಳ್ಳ ಯಾರೇ ವ್ಯಕ್ತಿಯು, ಆ ಬಗೆಯ ವಿಚಾರ ಶೈಲಿಗೂ ಗಮನ ಕೊಡಬೇಕು. ಆ ಸಂಬಂಧವಾದ ಭಯ ಬುನಾದಿಯಿಲ್ಲದ ಭಯವಲ್ಲ. ಏನೇ ಆದರೂ ಹಿಂದೂ ಕೋಡ್ ಎಂದು ಹಿಂದೂ ಕಾನೂನನ್ನು ಕ್ರೋಡೀಕರಿಸಿದ ನೀವು ಮಾಡತಕ್ಕ, ಮಾಡಬೇಕಾಗಿದ್ದ ಮುಖ್ಯ ಕೆಲಸವೆಂದರೆ, ವಿವಾಹದ ಪ್ರಮುಖ ಅಂಶಗಳನ್ನು, ವಿವಾಹದ ಕರಾರು ಮಾಡಿಕೊಳ್ಳುವ ಪಕ್ಷಕಾರರ ಪೂರ್ವೈಸತಕ್ಕ ಅಗತ್ಯಗಳನ್ನು, ಅಂದರೆ ಅವರ ವಯಸ್ಸು, ಮಾನಸಿಕ ಮತ್ತು ದೈಹಿಕ ಸಾಮರ್ಥ್ಯ, ನಿಷಿದ್ಧ ಲಗ್ನದೂರಗಳನ್ನು ಮತ್ತು ತತ್‌ಸಮಾನ ಸಂಗತಿಗಳನ್ನು ವಿನಿಯಮಿಸಬೇಕಾಗಿತ್ತು ಎಂದು ನನ್ನ ಭಾವನೆ. ಸಾಮಾಜಿಕ ಸಮಾರಂಭಗಳು ಮತ್ತು ಉತ್ಸವಗಳಲ್ಲಿ ಆಸಕ್ತಿ ಮತ್ತು ನಂಬಿಕೆ ಉಳ್ಳವರು ಸಾಂಸ್ಕೃತಿಕ ಸ್ವರೂಪದ ವಿವಾಹ ವಿಧಿಗಳಿಗೆ ಒಳಗಾಗಬಹುದು. ಆದರೆ ವಿವಾಹದ ಅತಿ ಅಗತ್ಯ ಅಂಶಗಳು, ಸಿವಿಲ್ ವಿವಾಹ ಮತ್ತು ಸಾಂಸ್ಕಾರಿಕ ಇವುಗಳ ಸಂಬಂಧದಲ್ಲಿ

ವಿಭಿನ್ನವಾಗದ ಹಾಗೆ ನೋಡಿಕೊಳ್ಳಬೇಕು. ವ್ಯತ್ಯಾಸಕ್ಕೆ ಅವಕಾಶ ಕೊಡಬಾರದು. ದೇಶದಲ್ಲಿ ಅಂತರಜಾತಿ ವಿವಾಹಕ್ಕೆ ಬೇಡಿಕೆ ಇದ್ದರೆ ನಾನು ಅದನ್ನು ತಡೆಯುವವನಲ್ಲ. ಜನಗಳಿಗೆ ತಮ್ಮ ಜಾತಿಗಳ ಹೊರಗಿನವರನ್ನು ವಿವಾಹ ಆಗುವ ಇಷ್ಟವಿದ್ದರೆ, ಅವರು ಸಿವಿಲ್ ವಿವಾಹಗಳ ಕಾಯ್ದೆ ೧೮೭೪, ಇದರ ಉಪಬಂಧಗಳ ಅಡಿಯಲ್ಲಿ ತಮ್ಮ ಇಷ್ಟಾನುಸಾರ ವಿವಾಹ ಆಗಬಹುದು. ತಮ್ಮ ಜಾತಿಗಳ ಹೊರಗಿನವರನ್ನು ವಿವಾಹ ಆಗಬಯಸುವವರ ಹಾದಿಯಲ್ಲಿ ಸದ್ಯಕ್ಕೆ ಯಾವ ಅಡ್ಡಿ–ಅಡಚಣೆಗಳೂ ಇಲ್ಲ. ಬೇರೆ ಬೇರೆ ಜಾತಿಗೆ ಸೇರಿದ ಹುಡುಗ ಹುಡುಗಿಯರಲ್ಲಿ ಪ್ರಾಮಾಣಿಕವಾದ ಒಲವು ಮೂಡಿದರೆ, ಅದನ್ನು ತಡೆಯಬೇಕು ಅಥವಾ ಪ್ರತಿಬಂಧಿಸಬೇಕು ಎಂದು ಬಯಸುವವರಲ್ಲ ನಾವು. ಈಗ ಅಸ್ತಿತ್ವದಲ್ಲಿರುವ ಕಾನೂನಿನಲ್ಲಿ ಅಂದರೆ ನಾನು ಈಗ ಉಲ್ಲೇಖಿಸಿದ ಕಾನೂನಿನಲ್ಲಿ ಅವರ ವಿವಾಹಕ್ಕೆ ಅನುಕೂಲಕರವಾದ ಸಕಲ ಸೌಲಭ್ಯಗಳುಂಟು. ನೀವು ಆ ಕಾನೂನನ್ನು ಬದಲಾಯಿಸಬಹುದು. ಅದರ ಕೆಲವು ಉಪಬಂಧಗಳನ್ನು ರದ್ದುಗೊಳಿಸಬಹುದು ಅಥವಾ ಮಾರ್ಪಾಟುಗೊಳಿಸಬಹುದು. ಅಂದರೆ ಆ ಅಧಿನಿಯಮದ (ಕಾಯ್ದೆಯ) ಅಡಿಯಲ್ಲಿ ಮದುವೆ ಆಗುವವರ ಮಕ್ಕಳು ಈಗಿರುವಂತೆ ಭಾರತೀಯ ಉತ್ತರಾಧಿಕಾರ ಕಾಯ್ದೆಯ ಶಾಸನಕ್ಕೆ ಅಧೀನರಾಗದೆ, ಹಿಂದೂ ಕಾನೂನಿಗೆ ಅಧೀನರಾಗುವ ಹಾಗೆ ಅಂಥ ರದ್ದತಿ ಅಥವಾ ಮಾರ್ಪಾಟುಗಳನ್ನು ಮಾಡಬಹುದು. ಆ ಬಗ್ಗೆ ನನ್ನ ಆಕ್ಷೇಪವೇನೂ ಇಲ್ಲ. ಆದರೆ, ಹಿಂದೂ ಕೋಡ್‌ನಲ್ಲಿ ಸಾಂಸ್ಕಾರಿಕ ವಿವಾಹದ ಪಕ್ಕದಲ್ಲಿಯೇ ಸಿವಿಲ್ ವಿವಾಹಗಳಿಗೆ ಅವಕಾಶ ಕಲ್ಪಿಸಿರುವುದೇಕೆ – ನನಗೆ ಅರ್ಥವಾಗುತ್ತಿಲ್ಲ. ಅದನ್ನು ಸಂಪೂರ್ಣವಾಗಿ ಹಿಂದೂ ಕೋಡ್‌ನಿಂದ ತೆಗೆದುಹಾಕಬೇಕು. ವಾಸ್ತವವಾಗಿ ಹಿಂದೂ ಕೋಡ್‌ಗೂ ಅದಕ್ಕೂ ಯಾವುದೇ ಸಂಬಂಧ ಇರಬಾರದು. ಸಕಲರಿಗೂ ಅನ್ವಯ ಆಗುವ ಹಾಗೆ ಒಂದು ಪ್ರತ್ಯೇಕ ಸಿವಿಲ್ ವಿವಾಹ ಕೋಡ್ ಇರಬಹುದು.

ಸ್ವಾಮೀ, ವಿವಾಹ ವಿಚ್ಛೇದನದ ಪ್ರಶ್ನೆಯನ್ನು ಅದರಲ್ಲಿ ಸೇರಿಸಬೇಕು ಎಂದು ನೀವು ಆಗ್ರಹಪಡಿಸಿದರೆ, ಆ ಮೂಲಕ ಒದಗುವ ಪರಿಣಾಮವನ್ನು ದೇಶದ ಎಲ್ಲೆಡೆಯಲ್ಲೂ ಇದಿರಿಸಲು ನೀವು ಸಿದ್ಧರಾಗಬೇಕಾಗಿತ್ತು ಎಂದು ಭಾವಿಸುತ್ತೇನೆ. ಮಾತ್ರವಲ್ಲದೆ ನಮ್ಮಲ್ಲಿ ಅನೇಕ ಸಾರ್ವಜನಿಕ ಧುರೀಣರು ಮಾಡುವ ಹಾಗೆ ಸಾರ್ವಜನಿಕ ಧುರೀಣರಾಗಿರುವ ನೀವು ಸಹ, ಕಿವಿಯಲ್ಲಿ ಅರಳೆ ತುರುಕಿಕೊಂಡಿದ್ದರೆ (ಸಾರ್ವಜನಿಕರ ಪ್ರತಿಭಟನೆಯು ಕೇಳಬಾರದು ಎಂಬ ಉದ್ದೇಶದಿಂದ) ನೀವು ಆ ಬಗ್ಗೆ ಅಂಥ ನಿರ್ಲಕ್ಷ್ಯಕ್ಕಾಗಿ ಭಾರಿ ಬೆಲೆ ತೆರಬೇಕಾದಿತು. ಏನೇ ಸಂದರ್ಭವಿರಲಿ, ಹಿಂದೂ ಆಗಿರುವ ನಾನು, ಹಿಂದೂ ವಿವಾಹದ ವ್ಯವಸ್ಥೆಯಲ್ಲಿ ವಿವಾಹ ವಿಚ್ಛೇದದ ಈ ಶಾಸ್ತ್ರವಿರುದ್ಧ ಪರಿಕಲ್ಪನೆಯನ್ನು ಸೇರಿಸಿರುವುದರ ವಿರುದ್ಧ ವೃಥಾ ಪ್ರತಿಭಟಿಸುತ್ತೇನೆ.

ಈಗ ನಾವು ವಾರಸಾ ಪ್ರಶ್ನೆಗೆ ಬರೋಣ. ಈ ಸಂಬಂಧದಲ್ಲಿ ಆಭಾಸದ ಪರಿವರ್ತನೆ ಆಗಿದೆ. ಆದರೆ ಆ ಬಗ್ಗೆ ವಿಸ್ತೃತ ವಿವರಗಳನ್ನು ನಿರೂಪಿಸಬಯಸುವುದಿಲ್ಲ. ಆ ವಿಚಾರದಲ್ಲಿ ನನ್ನ ಸಹೋದರಿ ಶ್ರೀಮತಿ ದುರ್ಗಾಬಾಯಿ ಅವರಿಗೆ ಹೇಳಬಯಸುತ್ತೇನೆ: ನಾವು ಪ್ರಾಚೀನ ಹಿಂದೂ ಶಾಸನಕರ್ತರ ತೀರ್ಮಾನದಲ್ಲಿ ಅಚಲ ನಂಬಿಕೆಯುಳ್ಳವರು, ಲಿಂಗ (ಪುರುಷ–ಮಹಿಳೆ) ಸಮಾನತೆಯಲ್ಲಿ ಅಚಲ ನಂಬಿಕೆಯುಳ್ಳವರು, ಅವರು ಮತ್ತು ಅವರ ಸ್ನೇಹಿತ/ತೆಯರು ನಂಬಿರುವ ಅರ್ಥದಲ್ಲಿ ಅಲ್ಲ. ಸಮಾನತೆ ಅಂದರೆ ಅವಕಾಶಗಳ ಸಮಾನತೆಯ ಅರ್ಥದಲ್ಲಿ ನೀವು ಪುರುಷನನ್ನು ಮತ್ತು ಮಹಿಳೆಯನ್ನು ದೈಹಿಕವಾಗಿ ಸಮಾನರಾಗಿ ಮಾಡುವುದು ಸಾಧ್ಯವಿಲ್ಲ. ಆದ್ದರಿಂದ ಸಮಾನತೆಗೆ ಬೇರೆ ಅರ್ಥವಿವರಣೆ ಬೇಕು. ಮಹಿಳೆಯರ ವಿಷಯದಲ್ಲಿ ಯಾವುದೇ ಹೀನ ಭಾವನೆಗೆ ಅವಕಾಶವಿಲ್ಲ. ಹೆಣ್ಣುಮಕ್ಕಳ ವಿದ್ಯಾಭ್ಯಾಸ ಅಥವಾ ವಿವಾಹ ಇವುಗಳ ವಿಚಾರದಲ್ಲಿ ಯಾವುದೇ ತಾರತಮ್ಯವಿಲ್ಲ. ನಮ್ಮ ಶಾಸ್ತ್ರಗಳು ಈ ರೀತಿ ವ್ಯವಸ್ಥೆ ಮಾಡಿರುತ್ತವೆ:

ಅರ್ಥವೆಂದರೆ, ಗಂಡುಮಕ್ಕಳ ಹಾಗೆಯೇ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಬೇಕು, ಪ್ರಾಪ್ತ ವಯಸ್ಕರಾಗುತ್ತಲೆ ಯೋಗ್ಯ ವರನಿಗೆ ಕೊಟ್ಟು, ವರದಕ್ಷಿಣೆ ಮತ್ತು ಆಭರಣಗಳ ಸಹಿತ ವಿವಾಹ ಮಾಡಬೇಕು ಮತ್ತು ನನ್ನ ಸಮಾಜದಲ್ಲಿ, ಅಂದರೆ ಹಿಂದೂ ಸಮಾಜದಲ್ಲಿ ಹೀಗೆ ಅಪ್ಪಣೆ ಕೊಡಿಸಿದ್ದುಂಟು:

*"ಯತ್ರ ನಾರ್ಯಸ್ತು ಪೂಜ್ಯಂತೇ, ರಮಂತೇ ತತ್ರ ದೇವತಾ"*

ಅಂದರೆ ಸ್ತ್ರೀಯರನ್ನು ಎಲ್ಲಿ ಗೌರವಪೂರ್ವಕವಾಗಿ ನಡೆಸಿಕೊಳ್ಳಲಾಗುವುದೋ ಆ ಪರಿವಾರಗಳನ್ನು ದೇವತೆಗಳು ಹರಸುತ್ತಾರೆ – ಹೀಗೆ ಹಿಂದೂ ಸಮಾಜದಲ್ಲಿ ಮಹಿಳೆಯರಿಗೆ ಅತ್ಯುನ್ನತ ಸ್ಥಾನಮಾನ ಕೊಟ್ಟಿದ್ದಾರೆ. ಕೆಲವು ಕಠಿಣ ಪ್ರಕರಣಗಳು ಇರಬಹುದು, ನಾನು ಒಪ್ಪಿಕೊಳ್ಳುತ್ತೇನೆ. ಕಠಿಣ ಪ್ರಸಂಗಗಳು ಎಂದರೆ ಮಹಿಳೆಯರನ್ನು ಯಾವ ರೀತಿಯಲ್ಲಿ ನಡೆಸಿಕೊಳ್ಳತಕ್ಕದ್ದೋ (ಉಪಚರಿಸತಕ್ಕದ್ದೋ) ಆ ರೀತಿಯಲ್ಲಿ ನಡೆಸಿಕೊಳ್ಳದಿರುವ ಪ್ರಸಂಗಗಳು. ನಮ್ಮ ಯತಿಗಳು, ಸಂತರು, ಶಾಸನಕರ್ತರು, ಧುರೀಣರು ಒದಗಿಸಿದ ಉನ್ನತ ಆದರ್ಶದಿಂದ ನೀವು ಕೆಳಗೆ ಸರಿದಿದ್ದರೆ ಅದಕ್ಕೆ ಆ ಮಹಾನುಭಾವರನ್ನು ದೂಷಿಸಿ ಪ್ರಯೋಜನವಿಲ್ಲ. ಯಾಕೆಂದರೆ ಅದಕ್ಕೆ ಅವರು ಕಾರಣರಲ್ಲ. ತಪ್ಪಿತಸ್ಥರು, ದೂಷಣೆಗೆ ಪಾತ್ರರಾಗಬೇಕಾದವರು ನಾವೇ. ಗಾಂಧೀಜಿಯವರ ಆದರ್ಶಗಳ ಎತ್ತರಕ್ಕೆ ಸರಿಸುಮಾರಾಗಿ ನಾವು ಬೆಳೆಯದೆ ಹೋದರೆ ಅವರ ಆದರ್ಶಗಳನ್ನು ಹಗಲಿರುಳೂ ಬೋಧಿಸುತ್ತ ಹೋದರೆ ಅಥವಾ ಎಲ್ಲ ವಿಷಯಗಳಲ್ಲಿ, ಎಲ್ಲ ಸಂದರ್ಭಗಳಲ್ಲಿ ಅವರ ಹೆಸರನ್ನು ಜಪಿಸುತ್ತ ಹೋದರೆ, ಆದರೆ ಅವರು ತೋರಿದ ಹಾದಿಯಲ್ಲಿ ಹೋಗದಿದ್ದರೆ, ಆ ತಪ್ಪಿಗೆ ಮಹಾತ್ಮರು ಹೊಣೆಗಾರರಲ್ಲ; ನಾವೇ. ಅದೇ ರೀತಿ ನೀವು ಹಿಂದೂ ಶಾಸ್ತ್ರಗಳನ್ನು ಅಥವಾ ಶಾಸನಕರ್ತರನ್ನು ಆರೋಪ ಹೊರಿಸಿ ವಿರೋಧಿಸಲು ಸಾಧ್ಯವಿಲ್ಲ. ಅವರು ಪ್ರಮಾಣಗಳನ್ನು (ಮಾನಕಗಳನ್ನು) ಎತ್ತರದಲ್ಲಿ ವಾದಿಸಿದ್ದುಂಟು. ಅವುಗಳಿಗೆ ಅನುಗುಣವಾಗಿ ವರ್ತಿಸುವುದು, ಕಾರ್ಯ ನಿರ್ವಹಿಸುವುದು ನಿಮ್ಮ ಕರ್ತವ್ಯ. ನಾವು ಎಷ್ಟೆಲ್ಲ ಪ್ರಯತ್ನ ಮಾಡಿದರೂ, ಅನ್ಯಾಯದ ಅಥವಾ ದುಃಖ ದುಮ್ಮಾನದ ಪ್ರತಿಯೊಂದು ಪ್ರಕರಣವನ್ನು ತೊಡೆದುಹಾಕಲು ಸಾಧ್ಯವಿಲ್ಲ. ಮನುಷ್ಯನು ರಚಿಸಿಕೊಂಡ ಸಂಸ್ಥೆಗಳು ಪರಿಪೂರ್ಣವಲ್ಲ. ಮಾನವ ವಿಪಸ್ಥತೆಯು, ಸಾಮಾಜಿಕ ಅನ್ಯಾಯದ ಸಕಲ ಸಾಧ್ಯತೆಗಳನ್ನು ನಿರ್ಮೂಲನ ಮಾಡಲು ಸಮರ್ಥವಾದಂಥ ಯಾವುದೇ ಪ್ರಕ್ರಿಯೆಯನ್ನು, ಯಾವುದೇ ವ್ಯವಸ್ಥೆಯನ್ನು ಅಥವಾ ಯಾವುದೇ ಏಜನ್ಸಿಯನ್ನು ವಿನ್ಯಾಸಗೊಳಿಸಲು ಅಥವಾ ಏರ್ಪಡಿಸಲು ಸಾಧ್ಯವಿಲ್ಲ. ಆ ಬಗ್ಗೆ ಪ್ರಾಮಾಣಿಕರಾಗಿರೋಣ. ಆದರೆ ಆ ಆದರ್ಶಗಳನ್ನು ಈಡೇರಿಸಲು ಪ್ರಯತ್ನಿಸುತ್ತಿರೋಣ.

ನನ್ನ ಸ್ನೇಹಿತರು ಆಸ್ತಿಯ ವ್ಯವಸ್ಥಾಪನಕ್ಕೆ ಸಂಬಂಧಿಸಿದಂತೆ ಹೀಗೆ ಹೇಳಿದರು: ಆಸ್ತಿಯ ವ್ಯವಸ್ಥಾಪನ ಕಾರ್ಯದಲ್ಲಿ ಗಂಡಸರನ್ನು ಮೀರಿಸುವ ಕೆಲವರು ಮಹಿಳೆಯರನ್ನು ನಾನು ಬಲ್ಲೆನು...........

**ಮಾನ್ಯ ಶ್ರೀ ಎನ್. ವಿ. ಗಾಡ್ಗೀಳ್** (ಕಾಮಗಾರಿಗಳು, ಗಣಿಗಳು ಮತ್ತು ಉರ್ಜಾಖಾತೆಯ ಮಂತ್ರಿಗಳು): ಪುರುಷರನ್ನು ಸಹ !

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಅದೇ ಪುರುಷರನ್ನು ಸಹ! ನಮ್ಮ ಈ ಸದನದಲ್ಲಿ ಆ ಸಿದ್ಧಾಂತವನ್ನು ಕುರಿತು ವಿವಾದಿಸುವ ವಿವಾಹಿತ ಪುರುಷ ಯಾರೂ ಇಲ್ಲ ಎಂದು ಭಾವಿಸುತ್ತೇನೆ. ಪರಿವಾರದಲ್ಲಿ ಅವಳೇ ಪ್ರಭು. ಅವಳೇ ಸರ್ವಸ್ವ, ಸರ್ವಾಧಿಕಾರಿ. ಎಲ್ಲರಿಗಿಂತಲೂ ಎತ್ತರ ಅವಳ ಸ್ಥಾನ. ಮಾನ್ಯ ಕಾನೂನು ಮಂತ್ರಿಗಳೇ ಆಗಲಿ ಅವರ ಸಹೋದ್ಯೋಗಿಯೇ ಆಗಲಿ, ಇಲ್ಲಿ, ಈ ಸದನದಲ್ಲಿ ಗುಡುಗಿದರೇನಂತೆ, ಅಲ್ಲಿ ಆ ಸದನದಲ್ಲಿ ಅವಳ ಇದಿರು ತಲೆ ಬಗ್ಗಿಸುತ್ತಾರೆ. ಅಲ್ಲಿ ನಿಮ್ಮನ್ನು ದಂಡದ ಮೂಲಕ ಆಳುವುದಿಲ್ಲ, ಒಂದು ಬಗೆಯ ವಿಲಕ್ಷಣ ಬಾರಕೋಲನ್ನು ಬಳಸಿ ನಿಮ್ಮ ಮೇಲೆ

ಅಧಿಕಾರ ಚಲಾಯಿಸಲಾಗುತ್ತೆ. ನಾಜೂಕಾದ ಸುಕೋಮಲವಾದ ಬಾರಕೋಲು. ಒಲವಿನ ತಂತುಗಳಿಂದ ಹೊಸೆದ ಬಾರಕೋಲು. ಎಲ್ಲ ಕಠೋರತೆಯನ್ನು, ಒರಟುತನವನ್ನು ಹೋಗಲಾಡಿಸುತ್ತಾಳೆ. ಪುರುಷ ಸಮಾಜವು ಉತ್ಸಾಹದಿಂದ, ಉಲ್ಲಾಸದಿಂದ ಅವಳ ಶಾಸನಕ್ಕೆ ತಲೆಬಾಗುತ್ತಾರೆ. ಅವಳೇ ಕುಟುಂಬ ರಾಜ್ಯದ ರಾಣಿ. ಬಹಳಷ್ಟು ವಿವಾಹಿತ ಪುರುಷರು, ಸರಿಸುಮಾರು ಎಲ್ಲ ವಿವಾಹಿತ ಪುರುಷರು ಇದನ್ನು ಒಪ್ಪುತ್ತಾರೆ ಎಂದು ನಾನು ಭಾವಿಸಿದ್ದೇನೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ನಾವು ಮಹಿಳೆಗೆ ಮೋಸಮಾಡಿದ್ದು ಈ ರೀತಿಯಿಂದಲೇ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಈಗ ನಾವು ಈ ಕೋಡ್ ಮೂಲಕ ಅವರಿಗೆ ಮೋಸಮಾಡುತ್ತಿದ್ದೇವೆ. ಅವರಿಗೆ ಹೀಗೆಯೇ ಆಸ್ತಿಯ ಹಕ್ಕನ್ನು ಕೊಟ್ಟರೆ, ಅವರಿಗೆ ಉನ್ನತ ಮಟ್ಟದ ನ್ಯಾಯದಾನ ಮಾಡಿದಂತಾಯಿತು ಎಂದು ಭಾವಿಸಿದಿರಾ? ಸಭಾಧ್ಯಕ್ಷರೆ, ಹಿಂದೂ ಧೋರಣೆಯ (ವಿಚಾರದ) ಪ್ರಕಾರ ಮಗಳಿಗೆ ಒಂದು ವಿಶಿಷ್ಟ ಸ್ಥಾನವುಂಟು. ಮಗನು ನಿರ್ವಹಿಸತಕ್ಕ ಪಾತ್ರಕ್ಕಿಂತ ವಿಭಿನ್ನವಾದದ್ದು. ಸಂಸ್ಕೃತ ಸಾಹಿತ್ಯವನ್ನು ಓದಿರುವ ಅಥವಾ ಆ ಬಗ್ಗೆ ಒಂದಿಷ್ಟು ತಿಳಿದುಕೊಂಡಿರುವ ಸದನದ ಯಾರೇ ಮಾನ್ಯ ಸದಸ್ಯನು ಅಥವಾ ಅವೆರಡೂ, ಬಹುತೇಕರಿಗೆ ಗೊತ್ತಿದೆಯೋ ಅಥವಾ ಯಾರಿಗೂ ಗೊತ್ತಿಲ್ಲವೋ.

**ಒಬ್ಬ ಮಾನ್ಯ ಸದಸ್ಯ:** ನಮ್ಮ ಮಾನ್ಯ ಕಾನೂನು ಮಂತ್ರಿಗಳು ತಿಳಿದುಕೊಂಡಿದ್ದಾರೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಅವರಿಗೆ ಗೊತ್ತಿರಬಹುದು. ಅವರು ವಿದ್ವಾಂಸರು. ನಮ್ಮ ಅಮರಕವಿಯ ಶಾಕುಂತಲದಲ್ಲಿ, ಶಕುಂತಲೆಯ ವಿವಾಹದ ತರುವಾಯ, ಅವಳು ತನ್ನ ಗಂಡನ ಮನೆಗೆ ಹೋದ ಮೇಲೆ, ಒಂದು ಶ್ಲೋಕ ಬರುತ್ತದೆ. ಅದು ಚಿರಸಮ್ಮತ ಶ್ಲೋಕ. ಅದರಲ್ಲಿ ಹಿಂದೂ ಶಾಸನಕರ್ತರು ಮತ್ತು ಹಿಂದೂ ಸಮಾಜವು ತನ್ನ ಹುಡುಗಿಯರಿಗೆ ಯಾವ ಸ್ಥಾನಮಾನ ಕೊಟ್ಟಿದ್ದರು ಎಂಬುದರ ಸಾರ ಸಂಗ್ರಹ ಸಿಗುತ್ತದೆ. ಶಕುಂತಲೆಯು ಆಶ್ರಮವನ್ನು ಬಿಟ್ಟು ತನ್ನ ಗಂಡನ ಮನೆಗೆ ಹೊರಡುತ್ತಿದ್ದ ಹಾಗೆ, ಕಣ್ವ ಋಷಿಯು ಹೇಳುತ್ತಾನೆ: "ಇಂದು ನಾನು ಮುಕ್ತಿ ಪಡೆದೆನು".

**ಶ್ರೀ ಎಚ್. ವಿ. ಕಾಮತ್:** ಆದರೆ ನಾನು ಡಾಕ್ಟರ್ ಅಲ್ಲವಲ್ಲ!

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಡಾಕ್ಟರಿಗೂ ಮಿಗಿಲಾದವರು ನೀವು. ನೀವು ಡಾಕ್ಟರು, ತತ್ತ್ವಜ್ಞಾನಿ, ಲಾಯರು ಮತ್ತು ಶಾಸಕರು. ನಿಮ್ಮ ಬಗ್ಗೆ ನನ್ನಲ್ಲಿ ಬಹಳ ಆದರವುಂಟು. ನೀವು ಒಳ್ಳೆಯ ಮನುಷ್ಯರು, ಎಲ್ಲಕ್ಕೂ ಮಿಗಿಲಾಗಿ ಮಹಾನ್ ದೇಶಭಕ್ತರು.

ಸ್ವಾಮೀ, ಅಧ್ಯಕ್ಷ ಮಹಾಶಯರೆ, ಅದು ಹುಡುಗಿಯರನ್ನು ಕುರಿತ ನಮ್ಮ ಪರಿಕಲ್ಪನೆ (ಸಂಕಲ್ಪನೆ). ಹಿಂದೂ ಶಾಸನಕರ್ತರು ಅವರಿಗೆ ಕುಟುಂಬದ ಆಸ್ತಿಯ ಹಕ್ಕಿನಲ್ಲಿ ಮಗನಿಗೆ ಸರಿಸಮಾನವಾದ ಹಕ್ಕನ್ನು ಕೊಡದಿದ್ದರೆ, ಅದಕ್ಕೆ ಯಾವುದೇ ಅರುಚಿ ಕಾರಣವಲ್ಲ; ಯಾವುದೇ ಜುಗುಪ್ಸೆ ಕಾರಣವಲ್ಲ; ಆದರೆ ಹುಡುಗಿಯು ಗಂಡನ ಕುಟುಂಬದ ಸಲುವಾಗಿ ಸೃಷ್ಟಿಯಾದವಳು ಎಂಬ ಸರಳ ಕಾರಣ. ಅವಳು ಯಾವ ಕುಟುಂಬದಲ್ಲಿ ಹುಟ್ಟಿರುವಳೋ ಅಲ್ಲಿಯೇ ಅವಿಭಾಜ್ಯ ಅಂಗವಾಗಿ ಇರುವಂತಿಲ್ಲ. ಅದೇ ಇಡೀ ವಿಷಯದ ರಹಸ್ಯ. ಆದ್ದರಿಂದ ಅನ್ಯಾಯದ ಅಥವಾ ಅಸಮಾನತೆಯ ಯಾವುದೇ ಪ್ರಶ್ನೆಯು ಉದ್ಭವಿಸುವುದಿಲ್ಲ. ಈ ದೇಶದ ಯಾವುದೇ ಭಾಗದಲ್ಲಿ ಜಾರಿಯಲ್ಲಿರುವ ಹಿಂದೂ ಕಾನೂನಿನ ಯಾವುದೇ ಪಂಥವು ಮಗಳಿಗೆ, ಮಗನಿಗೆ ಸರಿಸಮವಾದ ನಿರ್ದಿಷ್ಟ ಪಾಲನ್ನು ಕೊಟ್ಟಿರುವ ಯಾವುದೇ ಉದಾಹರಣೆ ನನ್ನ ಗಮನಕ್ಕೆ ಬಂದಿರುವುದಿಲ್ಲ.

**ಶ್ರೀ ಎ. ಕರುಣಾಕರನ್ ಮೆನನ್** (ಮದ್ರಾಸು: ಸಾಮಾನ್ಯ) : ಮಲಬಾರಿನಲ್ಲಿ ಇದೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ದಕ್ಷಿಣದಲ್ಲಿ ಏನೆಲ್ಲ ಸಂಗತಿಗಳು ಇವೆಯಲ್ಲ ಎಂದು ನನಗೆ ಸಂತೋಷವಾಗುತ್ತದೆ.

**ಶ್ರೀಮತಿ ಎನ್ನಿ ಮೆಸ್ಕಾರೀನ್** (ಟ್ರಾವಣಕೋರ್ ಸಂಸ್ಥಾನ) : ತಿರುವಾಂಕೂರಿನಲ್ಲಿ ಕೂಡ, ಹುಡುಗರು ಮತ್ತು ಹುಡುಗಿಯರು ಸಮಾನವಾಗಿ ಪಾಲು ಪಡೆಯುತ್ತಾರೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಈ ಮಾಹಿತಿಗಾಗಿ ನಾನು ಕೃತಜ್ಞನಾಗಿದ್ದೇನೆ. ಆದರೆ ಈ ಬಗೆಯ ಎಲ್ಲ ಮಾಹಿತಿ ದಕ್ಷಿಣದಿಂದಲೇ ಬರುತ್ತಿದೆ ಮತ್ತು ದಕ್ಷಿಣದಿಂದ ಬರುವ ನನ್ನ ಸ್ನೇಹಿತರು......

**ಶ್ರೀಮತಿ ಹನ್ಸಾ ಮೆಹತಾ** (ಮುಂಬಯಿ:ಸಾಮಾನ್ಯ): ದಕ್ಷಿಣದಲ್ಲಿ ಇರುವ ಅವರು ಹಿಂದೂಗಳಲ್ಲವೆ?

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಹೌದು, ಆದರೆ ದಕ್ಷಿಣದಲ್ಲಿರುವ ಅವೆಲ್ಲವುಗಳ ಬಗ್ಗೆ ಅವರು ಹೆಮ್ಮೆಪಡುವುದಾದರೆ, ಉತ್ತರದಲ್ಲಿ ಮತ್ತು ಉತ್ತರಪೂರ್ವದಲ್ಲಿ (ಈಶಾನ್ಯ) ಇರುವ ನಮ್ಮ ರೂಢಿ ಮತ್ತು ಆಚರಣೆಗಳ ಬಗ್ಗೆ ನಾವು ಹೆಮ್ಮೆಪಡುವ ನಮ್ಮ ಹಕ್ಕನ್ನು ಅವರು ನಿರಾಕರಿಸುವುದು ಬೇಡ. ಅವರಲ್ಲಿ ಅದು ನನ್ನ ಸವಿನಯ ನಿವೇದನೆ. ಈ ಬಗೆಯ ತರ್ಕ ನನಗೆ ಹಿಡಿಸುವುದಿಲ್ಲ. ಮುಂಬಯಿಯಲ್ಲಿ ಅಥವಾ ಇನ್ನಿತರ ಸ್ಥಳದಲ್ಲಿ ಜಾರಿಯಲ್ಲಿರುವ ಉತ್ತರಾಧಿಕಾರದ ಒಂದು ವ್ಯವಸ್ಥೆಯು ಅಥವಾ ವಾರಸಾ ವ್ಯವಸ್ಥೆಯು ಅಲ್ಲಿ, ಆ ಭಾಗದಲ್ಲಿ, ಸೂಕ್ತವಾಗಿದೆ ಎಂದು ಕಂಡುಬಂದರೆ ಆ ಕಾರಣಕ್ಕಾಗಿ ಅದನ್ನು ಯಥಾವತ್ತಾಗಿ ಬಂಗಾಲಕ್ಕೆ, ಇನ್ನಿತರ ಕಡೆಗಳಿಗೆ ಒಯ್ದು ಆ ಗಿಡವು ಅನಿರ್ದಿಷ್ಟ ಮಣ್ಣಿನಲ್ಲಿ ಬೆಳೆಯಬಹುದೆ ಹೇಗೆ ಎಂಬುದನ್ನು ಪರಿಗಣಿಸದೆ, ಅಲ್ಲಿ ನೆಟ್ಟರೆ ಸರಿಯಲ್ಲ ಎಂದು ನನ್ನ ತರ್ಕ. ಒಂದು ನಿರ್ದಿಷ್ಟ ಸಂಸ್ಥೆಯು ಅತ್ಯಂತ ತೃಪ್ತಿಕರವಾಗಿ ದಕ್ಷಿಣದಲ್ಲಿ ಜಾರಿಯಾಗುತ್ತಿದೆ ಎಂದು ಕಂಡುಬಂದರೆ, ಅದನ್ನು ಅಲ್ಲಿ ಜಾರಿಯಾಗಲು ಬಿಡಬೇಕು. ಆದರೆ ಅದೇ ಸಂಸ್ಥೆಯು ಉತ್ತರದಲ್ಲಿ ಅಥವಾ ಪಶ್ಚಿಮದ ಅಥವಾ ಪೂರ್ವದ ಮಣ್ಣಿನಲ್ಲಿ ಬೆಳೆಸಲು ಸೂಕ್ತವಲ್ಲ ಎಂದು ಕಂಡುಬಂದ ಪಕ್ಷದಲ್ಲಿ, ಅದನ್ನು ಬಲ ಪ್ರಯೋಗ ದ್ವಾರಾ ಅಲ್ಲಿ ಒಯ್ದು ನೆಡುವಲ್ಲಿ (ಸ್ಥಾಪಿಸುವಲ್ಲಿ) ನಾನು ಯಾವ ಕಾರಣವನ್ನೂ ಕಾಣೆನು ಅಥವಾ ಯಾವ ಸಮರ್ಥನೆಯನ್ನೂ ಕಾಣೆನು.

ನಿಜವಾಗಿಯೂ ನಾನು ಹಿಂದೂ ಕೋಡ್ ಅನ್ನು ವಿರೋಧಿಸಲಿಕ್ಕೆ ಇದುವೇ ನನ್ನ ಗಂಭೀರ ಆಕ್ಷೇಪ. ಈ ತಾತ್ತ್ವಿಕ ಏಕರೂಪತೆಯ ವ್ಯಾಮೋಹದ ಸಲುವಾಗಿ ವಿವಿಧತೆಯನ್ನು ನೀವು ಸಂಪೂರ್ಣವಾಗಿ ಕಡೆಗಣಿಸುತ್ತೀರ. ನಿಮಗೆ ಈ ಭಾಗದಲ್ಲಿ ಈ ಸಂಗತಿಗಳುಂಟು; ಆ ಭಾಗದಲ್ಲಿ ಆ ಸಂಗತಿಗಳುಂಟು. ಆ ಮೂಲಕವೇ ಗೊತ್ತಾಗುವುದಿಲ್ಲವೆ, ನಮ್ಮ ಈ ವಿಶಾಲ ದೇಶದಲ್ಲಿ, ನಿರ್ದಿಷ್ಟ ಸ್ಥಳಗಳ ಮತ್ತು ಕ್ಷೇತ್ರಗಳ ಅಗತ್ಯಗಳಿಗನು ಗುಣವಾಗಿ ವಿಶಿಷ್ಟ ರೂಢಿರಿವಾಜುಗಳು, ಸಂಪ್ರದಾಯಗಳು ವಿಕಾಸಗೊಂಡಿವೆ. ಅವುಗಳನ್ನು ಕದಲಿಸಬಾರದು. ಅವುಗಳನ್ನು ಹಾಗೆಯೇ ಇರಗೊಡಬೇಕು. ಆದರೆ ಖಂಡ ೭ರಲ್ಲಿ, ಈ ವಿಧೇಯಕವು, ಕಾನೂನು ಮಾನ್ಯತೆ ಪಡೆದಿರುವ ಎಲ್ಲ ರೂಢಿಗಳನ್ನು, ಪ್ರಾಚೀನ ಆಚರಣೆಗಳನ್ನು ರದ್ದುಗೊಳಿಸುವ ಅಧ್ಯಾರೋಹಿ ಅಧಿಕಾರವನ್ನು ಉಪಬಂಧವನ್ನು ಮಾಡಿದೆ. ಅದು ಖಂಡ ೭ ಎಂದು ತೋರುತ್ತದೆ.

**ಒಬ್ಬ ಮಾನ್ಯ ಸದಸ್ಯರು :** ಅದು ಖಂಡ ೪,

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ನನ್ನ ಸ್ನೇಹಿತರ ಪ್ರಮಾಣದ ಮೇಲೆ ನಾನು ಸರಿ ಎಂದು ಭಾವಿಸುತ್ತೇನೆ. ಸ್ವಾಮಿ, ನನ್ನ ಅಭಿಪ್ರಾಯದಲ್ಲಿ ಆ ಖಂಡವು ಅತ್ಯಂತ ಆಕ್ಷೇಪಾರ್ಹ ರೂಢಿಯ ಸ್ಪಷ್ಟ ರುಜುವಾತು, ಕಾನೂನಿನ ಪಾಠವನ್ನು ಸಹ ಮೀರುತ್ತದೆ. ಇದು ಸುಸ್ಥಾಪಿತವಾದ ಅಭ್ಯುಕ್ತಿ.

ಈ ವಿಶಾಲ ದೇಶದಲ್ಲಿ ಖಂಡದಲ್ಲಿ ವಾಸಿಸುವ ಜನಗಳ ವಿವಿಧ ಅಗತ್ಯಗಳ ಕಾರಣ ವಿಭಿನ್ನ ರೂಢಿರಿವಾಜುಗಳ ರೀತಿನೀತಿಗಳೂ ಇರುತ್ತವೆ. ಆದಕಾರಣವೇ:

*ವೇದಾ ವಿಭಿನ್ನಃ ಸ್ಮೃತಯ ವಿಭಿನ್ನಃ*
*ನೈಕೋ ಋಷಿರ್ಯಸ್ಯ ವಚಃ ಪ್ರಮಾಣಂ*
*ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಂ*
*ಮಹಾಜನೇ ಯೇನ ಗತಃ ಸ ಪಂಥಾಃ*

(ವೇದಗಳು ವಿಭಿನ್ನವಾಗಿವೆ, ಸ್ಮೃತಿಗಳು ವಿಭಿನ್ನವಾಗಿವೆ. ಮಾನವ ಋಷಿಯ ಮಾತನ್ನು ಪ್ರಮಾಣವೆಂದು ಭಾವಿಸಬಹುದೇ, ಅಂಥ ಋಷಿ ಯಾರು ಇಲ್ಲ. ಧರ್ಮದ ತತ್ತ್ವವು ಗುಹೆಯಲ್ಲಿ ಅಡಗಿದೆ. ಹೀಗಿರುತ್ತ ಮಹಾಜನಗಳು ಯಾವ ದಾರಿಯಲ್ಲಿ ಹೋಗುತ್ತಾರೆಯೋ ಅದೇ ಮಾರ್ಗ.)

**ಒಬ್ಬ ಮಾನ್ಯ ಸದಸ್ಯ :** ನಾವೆಲ್ಲರೂ ಮಹಾಜನರಾಗೋಣ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಮಹಾಜನ ಎಂದರೆ ಹಣ ಸಾಲ ಕೊಡುವವನು ಎಂದು ಅರ್ಥವಲ್ಲ.

ಅದೇ ಅತ್ಯಂತ ನಿರ್ಮಮವಾದ ಏಟು–ಸಮಾಜವು ಅವನತಿಯ ಎಂಥ ಆಳಕ್ಕೆ ಇಳಿದಿದೆ ಎಂಬುದರ ಸಂಕೇತ. ನಮಗೆ ರೂಪಾಯಿ, ಅಥವಾ ಡಾಲರು ಅಥವಾ ಪೆನ್ಸ್ ಇವುಗಳ ಹೊರತಾಗಿ ಇನ್ನೇನೂ ಹೊಳೆಯುವುದೇ ಇಲ್ಲವಲ್ಲ. ಮಹಾಜನ ಪದಕ್ಕೆ ವಿಭಿನ್ನ ಅರ್ಥಗಳುಂಟು. ಮಹಾನ್ ಪುರುಷರು ಅಥವಾ ಬಹುಮತದವರು. ಅದನ್ನು ಯಾವ ಅರ್ಥದಲ್ಲಿ ತೆಗೆದುಕೊಳ್ಳುತ್ತೀರೋ ಆ ಅರ್ಥದಲ್ಲಿ ತೆಗೆದುಕೊಳ್ಳಿ.

ನಾನು ಇನ್ನಿತರ ಉದ್ಧರಣಗಳನ್ನು ಹೇಳುತ್ತ ಸದನಕ್ಕೆ ಬೇಸರ ಉಂಟುಮಾಡಲು ಇಷ್ಟಪಡುವುದಿಲ್ಲ. ಆದರೆ ಈ ವಿಷಯವು ಹೀಗಿದೆಯಲ್ಲ, ನಾನು ತಮಗೆ ಮನವರಿಕೆ ಮಾಡಿಕೊಡಬೇಕಾದರೆ, ಅಂಥ ಉದ್ಧರಣಗಳನ್ನು ಹೇಳದೆ ವಿಧಿಯಿಲ್ಲ. ಅಂದರೆ ಮಾನ್ಯ ಸದಸ್ಯರಾದ ನಿಮಗೆ ಹಿಂದೂ ಶಾಸ್ತ್ರಗಳನ್ನು ಆಧರಿಸಿದ ನನ್ನ ವಾದವು ನ್ಯಾಯಪೂರ್ಣ ಎಂದು ಮನವರಿಕೆಯಾಗುತ್ತದೆ. ಇನ್ನು ಸದನದ ಮುಂದೆ ನನ್ನ ನಿಲುವನ್ನು ಸ್ಪಷ್ಟಗೊಳಿಸಬಯಸುತ್ತೇನೆ. ನಾನು ಹೇಳಿದ್ದನ್ನು ತಿರಸ್ಕರಿಸಬಹುದು. ಆ ಕಾರಣ ಅಭ್ಯಂತರವೇನೂ ಇಲ್ಲ. ಆದರೆ ನಾನು ಪ್ರತಿನಿಧಿಸುತ್ತಿರುವುದು ಒಂದು ಚುನಾವಣಾ ಕ್ಷೇತ್ರವನ್ನು–ವಿಶುದ್ಧವಾಗಿ ಪ್ರಾದೇಶಿಕ ಚುನಾವಣಾ ಕ್ಷೇತ್ರವಲ್ಲ–ಆದರೆ ಹಿಂದೂ ಧರ್ಮದಲ್ಲಿ ನಂಬಿಕೆಯಿರುವ ಪುರುಷರು ಮತ್ತು ಮಹಿಳೆಯರ ವಿಶಾಲ ಸಮುದಾಯವನ್ನು ಮತ್ತು ಪುರಾತನ ಹಿಂದೂ ಋಷಿಗಳ ವಿಧಿ–ನಿಷೇಧಗಳಿಂದ ಶಾಸಿತವಾದ ಹಿಂದೂ ಸಮಾಜವನ್ನು. ಸ್ವಾಮಿ, ಆದ್ದರಿಂದ, ನಾನು ತತ್ಕಾಲದಲ್ಲಿ ಪ್ರತಿನಿಧಿಸುತ್ತಿರುವುದು ಆ ಚುನಾವಣಾ ಕ್ಷೇತ್ರದ ಅಭಿಪ್ರಾಯಗಳನ್ನು. ನಾನು ಪರೋಕ್ಷ ಚುನಾವಣೆಯ ಮೂಲಕ ಕೇವಲ ನಾಲ್ಕೈದು ಮತಗಳ ದ್ವಾರಾ ಚುನಾಯಿತನಾದವನು ಎಂಬುದೇನೊ ನಿಜವೇ. ಆದರೆ ನಾನು ದೇಶದ ಮಹತ್ವಪೂರ್ಣ ಚುನಾವಣಾ ಕ್ಷೇತ್ರಗಳ ಪೈಕಿ ಕೆಲವು ಕ್ಷೇತ್ರಗಳ ಅತ್ಯಂತ ಸ್ಪರ್ಧಾಪೂರ್ಣ ಚುನಾವಣೆಗಳಲ್ಲಿ ಹೋರಾಡಿ ಜಯಸಿದ್ದೇನೆ ಎಂಬ ಸಂಗತಿಯನ್ನು ಸದನಕ್ಕೆ ತಿಳಿಸಬಯಸುತ್ತೇನೆ.

ಈ ಸಂವಿಧಾನ ಸಭೆಗೆ ಬರುವುದಕ್ಕೆ ನಿಕಟ ಪೂರ್ವದಲ್ಲಿ ಕೇಂದ್ರೀಯ ವಿಧಾನ ಮಂಡಲದಲ್ಲಿ ನಾನು ಕಲ್ಕತ್ತ ಮಹಾನಗರವನ್ನು ಪ್ರತಿನಿಧಿಸುತ್ತಿದ್ದೆನು. ಅದಕ್ಕೆ ಮುನ್ನ, ಲಕ್ಷಾಂತರ ಜನಸಂಖ್ಯೆಯನ್ನುಳ್ಳ ಅನೇಕ ಜಿಲ್ಲೆಗಳಿಂದ ಕೂಡಿದ ಪ್ರೆಸಿಡೆನ್ಸಿ ಡಿವಿಜನ್ ಅನ್ನು ಪ್ರತಿನಿಧಿಸುತ್ತಿದ್ದೆನು. ಪ್ರೆಸಿಡೆನ್ಸಿ ಡಿವಿಜನ್,

ಇಂಡಿಯಾದಲ್ಲಿನ ಅತ್ಯಂತ ಸುಸಂಸ್ಕೃತ ಡಿವಿಜನ್‌ಗಳ ಪೈಕಿ ಒಂದು ಎಂದು ಪರಿಗಣಿಸಲಾಗಿದೆ (ಮನ್ನಣೆ ಪಡೆದಿದೆ). ನಾನು ಜನಗಳನ್ನು ಬಲ್ಲೆನು. ಅವರ ನಾಡಿ ಮಿಡಿತ ನನಗೆ ಗೊತ್ತು. ನಾನು ಹುಟ್ಟಿದ ಪಟ್ಟಣವು ಪ್ರಾಚೀನ ಸನಾತನ ವಿದ್ಯೆಯ ಸುಪ್ರಸಿದ್ಧ ಪೀಠ. ಬಂಗಾಲದಲ್ಲಿರುವ ನನ್ನ ಜಿಲ್ಲೆ ನಾದಿಯಾ ದೇಶಕ್ಕೆ ಸ್ಮೃತಿಗಳು, ತಂತ್ರಗಳು, ನ್ಯಾಯ, ವೈಷ್ಣವ ದರ್ಶನ ಮುಂತಾದವುಗಳಿಗೆ ನೆಲೆವೀಡು. ನಾನು ವಿಷಯಾಂತರ ಮಾಡುತ್ತಿಲ್ಲ. ಆದರೆ, ಈ ಮಹಾನ್ ಸಂಸ್ಕೃತಿಯ ವಾರಸುದಾರರು ಹಿಂದೂ ಕೋಡ್‌ನ ಈ ವಿಷಯಗಳ ಸಂಬಂಧದಲ್ಲಿ ಹೊಂದಿರುವ ಅಭಿಪ್ರಾಯಗಳನ್ನು ಮತ್ತು ವಿಚಾರಗಳನ್ನು ಸದನದ ಮುಂದೆ ಸಾದರಪಡಿಸಲು ಪ್ರಯತ್ನಿಸದೆ ಹೋದರೆ, ಅವರ ಬಗ್ಗೆ ನಾನು ಮಾಡತಕ್ಕ ಕರ್ತವ್ಯವನ್ನು ನಿರ್ಲಕ್ಷಿಸಿದಂತಾಗುದಿಲ್ಲವೆ? ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ನಾನು ನನಗೂ ನನ್ನ ಸಮುದಾಯಕ್ಕೂ ಕರ್ತವ್ಯಬದ್ಧನಾಗಿದ್ದೇನೆ. ಹಾಗೆ ಅಗತ್ಯ ಕರ್ತವ್ಯವನ್ನು ನಿರ್ವಹಿಸದೆ ಹೋದ ಕಾರಣಕ್ಕಾಗಿ ತೀರ್ಪು ನಮ್ಮ ವಿರುದ್ಧ ಆಗಬಾರದೆಂದೇ ನಾನು ನನ್ನ ಅಭಿಪ್ರಾಯಗಳನ್ನು ಸಾದರಪಡಿಸುತ್ತಿದ್ದೇನೆ. ಅದೇನೇ ಇರಲಿ, ನಾನಿನ್ನು ಅವಸರದಿಂದ ಮಾತು ಮುಂದುವರಿಸುತ್ತೇನೆ.

ನಮ್ಮ ಶಾಸ್ತ್ರಗಳು ಮಹಿಳೆಯರಿಗೆ ಕೊಟ್ಟಿರುವ ಸ್ಥಾನಮಾನವನ್ನೂ ಗೌರವಾದರವನ್ನೂ ಕುರಿತು ತಮಗೆ ವಿವರಿಸಿ ಹೇಳಿರುವೆನಷ್ಟೆ. ವಿಖ್ಯಾತಳಾದ ರಾಣಿ ಇಂದುಮತಿ ನಿಧನ ಹೊಂದಿದಳು. ಆಗ ಅವಳ ಗಂಡ ದೊರೆ ಅಜನು ಇಂತು ವಿಲಾಪಿಸಿದನು:

*"ಗೃಹಿಣೀ ಸಚಿವ ಮಿತಃ ಸಖಿ ಪ್ರಿಯ ಶಿಷ್ಯ ಲಲಿತ ಕಲಾವಿದಾನ್ ಕರುಣ ಬಿಮಲಕೇನ ಮೃತ್ಯುರ್ನ ಹರತಾ ವದೇ ರಾಜ ನಾಮ ಹೃತಮ್"*

"ನಿರ್ದಯನಾದ ಮೃತ್ಯುದೇವತೆಯೆ! ನೀನು ನನ್ನಿಂದ ಏನೆಲ್ಲ ಕಸಿದುಕೊಂಡು ಹೋದೆಯಲ್ಲ! ನನ್ನ ಬಗ್ಗೆ ಏನೆಲ್ಲ ಕಿಡಿಗೇಡಿತನ ಮಾಡಿದೆಯಲ್ಲ! ಒಂದೇ ಒಂದು ಹೊಡೆತಕ್ಕೆ ನನ್ನ ಗೃಹಿಣಿಯನ್ನು ತೆಗೆದುಕೊಂಡು ಹೋದೆಯಲ್ಲ–ಗೃಹಿಣಿ ಎಂದರೆ ಮನೆಯ ರಾಣಿ–ಸಚಿವಾ ಎಂದರೆ ಮಂತ್ರಿ–ಅವಳು ನನ್ನ ಮಂತ್ರಿಯಾಗಿದ್ದವಳು ಮಾತ್ರವಲ್ಲದೆ ಆಪ್ತ ಕಾರ್ಯಗಳಲ್ಲಿ ಝೀವದ ಗೆಳತಿಯಾಗಿದ್ದಳು, ಪ್ರೇಮದಲ್ಲಿ ಸಂಗಾತಿಯಾಗಿದ್ದಳು."

ಸ್ವಾಮಿ, ಇದುವೇ ನಮ್ಮ ಸಮಾಜದಲ್ಲಿ ನಮ್ಮ ಮಹಿಳೆಯರಿಗೆ ದೊರೆಯುತ್ತಿದ್ದ ಸ್ಥಾನಮಾನ, ಗೌರವಾದರ. ಆದ್ದರಿಂದ ಕೇವಲ ದುರಾಸೆ, ಅಥವಾ ಅಸೂಯೆ ಅಥವಾ ನೀವು ಅದೇನು ಹೇಳುತ್ತೀರೋ ಅದು ವ್ಯವಹಾರದ ಮೂಲಕ ಮಹಿಳೆಯರನ್ನು ಕೀಳುಸ್ಥಾನಕ್ಕೆ ತಳ್ಳಲಾಗಿದೆ ಎಂದು ಹೇಳುವುದು ಸಮಂಜಸವಲ್ಲ. ಮಹಿಳೆಗೆ ವಾರಸಾ ಸಂಬಂಧದಲ್ಲಿ ಮಗನಿಗೆ ಸಹ–ಸಮಾನವಾದ ವಿಭಿನ್ನಕ ಸ್ಥಾನಮಾನವನ್ನು ಕೊಡದಿರಲು ಕಾರಣವೆಂದರೆ ಅವಳ ಝೀವನವು ತಂದೆಯ ಕುಟುಂಬಕ್ಕೆ ಸೇರಿಲ್ಲದೆ, ಇನ್ನೊಂದು ಕುಟುಂಬಕ್ಕೆ ಸೇರಿದ್ದು. ಆಸ್ತಿಯನ್ನು ಕುಟುಂಬ ಯೋಗಕ್ಷೇಮವನ್ನು ನೋಡಿಕೊಳ್ಳುವವರ ನಡುವೆ ನಿರ್ಧರಿಸಬೇಕು. ಯಾಕೆಂದರೆ ಅವರೇ ವಂಶವಾಹಿನಿಯನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ಕುಟುಂಬದ ಸಂಪ್ರದಾಯಗಳು, ರೀತಿನೀತಿಗಳನ್ನು ಮತ್ತು ರೂಢಿರಿವಾಜುಗಳನ್ನು, ಪಾವಿತ್ರ್ಯವನ್ನು ಪರೀಕ್ಷಿಸಿಕೊಂಡು ಹೋಗುತ್ತಾರೆ ಮತ್ತು ಅವರೇ ಕುಟುಂಬದ ಪದ್ಧತಿಗಳನ್ನು ಮತ್ತು ಕರ್ಮಾಚರಣೆಗಳನ್ನು ಮುಂದುವರಿಸಿಕೊಂಡು ಹೋಗುತ್ತಾರೆ.

ಒಬ್ಬಳು ಹುಡುಗಿಯನ್ನು ಮದುವೆ ಮಾಡಿಕೊಟ್ಟ ಮೇಲೆ ಅವಳು ಕುಟುಂಬದಲ್ಲಿ ವಿಲೀನಳಾಗಿ ಹೋಗುತ್ತಾಳೆ: ಹಿಂದೂ ಪರಿಕಲ್ಪನೆಯ ಪ್ರಕಾರ, ಗಂಡನ ಕುಟುಂಬದಲ್ಲಿ ಅವಳ ಸ್ಥಾನವು ಅತ್ಯಂತ ಗೌರವಪೂರ್ಣವಾದದ್ದು. ಗಂಡನ ಮನೆಯಲ್ಲಿ ಆ ಹುಡುಗಿಗೆ ತನ್ನ ತಂದೆಯ ಮನೆಯಲ್ಲಿ ಇದ್ದ ಸ್ಥಾನಕ್ಕಿಂತ ಅಧಿಕ ಗೌರವಪೂರ್ಣವಾದದ್ದು. ಪುನಃ ನಾನು ಕಾಲಿದಾಸನ ಶಾಕುಂತಲದಿಂದ ಉದ್ಧರಿಸುತ್ತೇನೆ. ದುಷ್ಯಂತನು

ಶಕುಂತಲೆಗೆ "ನನಗೆ ನಿನ್ನನ್ನು ಮದುವೆಯಾದ ನೆನಪು ಇಲ್ಲ" ಎಂದು ಹೇಳಿದಾಗ ಋಷಿಯು ಶಕುಂತಲೆಗೆ, ತನ್ನ ಗಂಡನ ಮನೆಯಲ್ಲಿ ದಾಸಿಯಂತೆ ಆದರೂ ಉಳಿಯಬೇಕೆಂದೂ ತಂದೆಯ ಮನೆಯಲ್ಲಿರುವದಕ್ಕಿಂತ ಹಾಗೆ ಉಳಿಯುವುದೇ ಹೆಚ್ಚು ಗೌರವಪೂರ್ಣವೆಂದೂ ಉಪದೇಶ ಕೊಡುತ್ತಾನೆ.

**ಮಾನ್ಯ ಶ್ರೀ ಎನ್. ವಿ. ಗಾಡ್ಗೀಳ್ :** ಅದೇ ಗಂಡಸರು ನಡೆದುಕೊಳ್ಳುವ ರೀತಿ.

**ಶ್ರೀ ಎಂ. ತಿರುಮಲರಾವ್** (ಮದ್ರಾಸು: ಸಾಮಾನ್ಯ) : ಅವನು ಸ್ಮರಣ ಶಕ್ತಿಯನ್ನು ಕಳೆದುಕೊಂಡಿದ್ದನು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಇಲ್ಲ, ಅವನು ಸ್ಮರಣಶಕ್ತಿಯನ್ನು ಕಳೆದುಕೊಂಡಿರಲಿಲ್ಲ. ದೊರೆ ದುಷ್ಯಂತನು ಒಂದು ಶಾಪಕ್ಕೆ ಗುರಿಯಾಗಿದ್ದನು. ಆ ಮೂಲಕ ಅವನು ತನ್ನ ಮದುವೆಗೆ ಸಂಬಂಧಪಟ್ಟ ಎಲ್ಲ ಸಂಗತಿಗಳನ್ನು ಮರೆಯಬೇಕಾಗಿತ್ತು. ಉದ್ದೇಶಪೂರ್ಣವಾದ ನೈತಿಕ ಲೋಪದ ತಪ್ಪಿತಸ್ಥನಾಗಿದ್ದನು ಎಂದಲ್ಲ. ವಿಸ್ಮಯಗೊಳಿಸುವ ಅಜ್ಞಾನ.

**ಶ್ರೀ ಬಿ.ಎನ್. ಮುನವಳ್ಳಿ** (ಮುಂಬಯಿ ಸಂಸ್ಥಾನಗಳು): ಎಂಥ (ಅದ್ಭುತ) ನೆವ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ನಾನು ಶಾಕುಂತಲ ನಾಟಕದ ಕರ್ತೃವಲ್ಲ. ಅದನ್ನು ನೆಪ ಎನ್ನಿ, ಅದೇನಾದರೂ ಅನ್ನಿ. ನನಗೆ ಅದರ ಪರಿವೆಯಿಲ್ಲ. ನಾನು ಕಾಲಿದಾಸನ ಶಾಕುಂತಲದಿಂದ ಉದ್ಧರಿಸಲು ಕಾರಣವೆಂದರೆ ಕಾಲಿದಾಸನು ವಿಶ್ವದಾದ್ಯಂತ ಮನ್ನಣೆ ಪಡೆದ ವಿಶ್ವ ಕವಿ. ಶಾಕುಂತಲವನ್ನು ನೀವು ಏನೆಲ್ಲ ಅವಜ್ಞೆಗೆ ಗುರಿಪಡಿಸಿದರೂ ಸರಿಯೆ, ಅದು ವಿಶ್ವ ಸಾಹಿತ್ಯದಲ್ಲಿ ಸಕಲ ಯುಗಗಳಲ್ಲೂ ಉಳಿಯುವ ಆದರ್ಶವಾದ ಮೇರು ಕೃತಿ. ನಮ್ಮ ರಾಷ್ಟ್ರೀಯ ಸಂಸ್ಥೆಗಳ ಸಂಸ್ಕೃತಿ ಹಾಗೂ ಪರಂಪರೆಗಳ ಅವಜ್ಞೆಯನ್ನು ಸಹಿಸಿ ಸುಮ್ಮನುಳಿಯಲಿಕ್ಕು ಒಂದು ಮಿತಿಯುಂಟು, ಇರಬೇಕು. ಅಧ್ಯಕ್ಷರೆ, ನನಗೆ ಪ್ಲೇಟೋವಿನ ಒಂದು ಅತ್ಯಂತ ವಿಖ್ಯಾತ ವಾಕ್ಯವೃಂದವು ನೆನಪಿಗೆ ಬರುತ್ತದೆ. ಅವನ ಶಬ್ದಗಳನ್ನು ಯಥಾವತ್ತಾಗಿ ನೆನಪಿಸಿಕೊಳ್ಳಲಾರೆ. ಆದರೆ ಅವನು ಹೇಳಿದ್ದು ಸರಿಸುಮಾರು ಹೀಗೆ: "ಯಾವ ಮನುಷ್ಯನು ತನ್ನ ರಾಷ್ಟ್ರದ ಸಂಪ್ರದಾಯಗಳಿಗೆ, ವೈಭವ ಸಂಪನ್ನ ಸಂಸ್ಕೃತಿಗೆ ಮತ್ತು ಪರಂಪರೆಗೆ ದ್ರೋಹ ಬಗೆಯುತ್ತಾನೋ ಆ ಮನುಷ್ಯನಿಗೆ ಮರಣದಂಡನೆ ವಿಧಿಸಬೇಕು." ಯಾರು ತಮ್ಮ ಪ್ರಾಚೀನ ಸಂಸ್ಕೃತಿ ಮತ್ತು ಪರಂಪರೆಗೆ ಸಂಬಂಧಪಟ್ಟ ಯಾವುದೇ ಸಂಗತಿಯ ಬಗ್ಗೆ ತಿರಸ್ಕಾರ ಮತ್ತು ಅಪಹಾಸ್ಯದ ಹೊರತಾಗಿ ಇನ್ನೇನೂ ತೋರುವುದಿಲ್ಲವೋ ಅವರ ದೇಶಭಕ್ತಿಯನ್ನು ಅವರ ರಾಷ್ಟ್ರೀಯತೆಯನ್ನು ನಾನು ತಿಳಿದುಕೊಳ್ಳಲು ಸಮರ್ಥನಲ್ಲ.

**ಶ್ರೀ ಎಚ್.ವಿ. ಕಾಮತ್:** ನೀವು ತಪ್ಪಾಗಿ ತಿಳಿದುಕೊಂಡಿದ್ದೀರ. ಯಾರೂ ನಮ್ಮ ಪ್ರಾಚೀನ ಸಂಸ್ಕೃತಿಯ ವಿರೋಧಿಗಳಲ್ಲ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಈ ಕೋಡ್‌ನ ಅನೇಕ ವಿಷಯಗಳ ಸಂಬಂಧದಲ್ಲಿ ನಮ್ಮಲ್ಲಿ ಭಿನ್ನಾಭಿಪ್ರಾಯಗಳಿರಬಹುದು. ಆದರೆ ನಮ್ಮ ಪುರಾತನರೂ ಶ್ರೇಷ್ಠರೂ ಆದ ಮುನಿಗಳನ್ನು ಅಲ್ಪೀಕರಿಸಲು ಪ್ರಯತ್ನಿಸುವ ಮೂಲಕ ನಮ್ಮ ಯಾರ ಉದ್ದೇಶವೂ ಈಡೇರುವುದಿಲ್ಲ. ನನ್ನ ಉದ್ದೇಶವೂ ನೆರವೇರುವುದಿಲ್ಲ, ನಿಮ್ಮ ಉದ್ದೇಶವೂ ನೆರವೇರುವುದಿಲ್ಲ. ಅವರು ಪ್ರಶಂಸೆಯನ್ನು ಅರಸಿ ಇಲ್ಲಿ ಬರುವುದಿಲ್ಲ. ಅವರು ರೇಡಿಯೋ ಪ್ರಚಾರಕ್ಕೂ, ವೃತ್ತಪತ್ರಿಕೆಗಳ ಮಿಂಚುವಾರ್ತೆಗಳಿಗೂ ಮರುಳಾಗುವುದಿಲ್ಲ, ಅತ್ತ ಗಮನ ಕೊಡುವವರಲ್ಲ. ಸಮಾಜದ ಯೋಗಕ್ಷೇಮದಿಂದ ತಾವು ಅಗತ್ಯವೆಂದು ಭಾವಿಸಿರುವ ಕೆಲಸವನ್ನು ಮಾಡಿದ್ದಾರೆ. ನೀವು ಇಂದು ಅವುಗಳನ್ನು ವಾರಸಾ ಹಕ್ಕಿನ ಸಂಬಂಧದಲ್ಲಿ ಮಗನ ಸಹ–ಸಮಾನಳನ್ನಾಗಿ ಮಾಡಿದರೆ, ಆ ಮೂಲಕ ಅನೇಕ ಕ್ಲಿಷ್ಟ ತೊಂದರೆಗಳು ಉದ್ಭವಿಸುತ್ತವೆ ಎಂಬ ಭಯ ನನಗೆ. ಹುಡುಗಿಗೆ ತನ್ನ ತಂದೆಯ ಆಸ್ತಿಯಲ್ಲಿ ಪಾಲು ದೊರೆಯುತ್ತದೆ ಎಂದು ಗೊತ್ತಾದಾಗ, ಹುಡುಗರಿಗೆ ತಮ್ಮ ಸೋದರಿಯರು

ಸಹ–ಪಾಲುದಾರರು ಎಂದು ಗೊತ್ತಾದಾಗ ಮತ್ತು ಮದುವೆಯಾದ ಮೇಲೆ ಆಸ್ತಿಯು ಇನ್ನೊಂದು ಕುಟುಂಬಕ್ಕೆ ಹೋಗುತ್ತದೆಂದು ಗೊತ್ತಾದಾಗ, ಅವಳ ಮದುವೆ ಮಾಡುವ ಜವಾಬ್ದಾರಿಯನ್ನು ಯಾರು ನೋಡಬೇಕು? ಜವಾಬ್ದಾರಿಯನ್ನು ವಹಿಸಿಕೊಳ್ಳುವವರು ಯಾರು ಎಂದು ನಾನು ಕೇಳುತ್ತೇನೆ.

**ಶ್ರೀ ಎಚ್.ವಿ. ಕಾಮತ್:** ಅವಳದೇ ಜವಾಬ್ದಾರಿ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಹುಡುಗಿಯು ಆದಷ್ಟು ಬೇಗನೆ ಮದುವೆ ಮಾಡಿಕೊಂಡು ಹೋಗುವುದೇ ಅವಳಿಗೆ ಕ್ಷೇಮ ಎಂದು ಹೇಳುತ್ತಾರೆ, ನನ್ನ ಮಾನ್ಯ ಮಿತ್ರರು. ಆದರೆ ಅಂಥ ಹುಡುಗಿಗೆ ತನ್ನ ಹಾದಿಯಲ್ಲಿ ಹಲವಾರು ಅಡ್ಡಿ ಅಡಚಣೆಗಳನ್ನು ಇದಿರಿಸಬೇಕಾಗುತ್ತದೆ.

**ಶ್ರೀಮತಿ ಜಿ. ದುರ್ಗಾಬಾಯಿ:** ಅವಳ ಬಗ್ಗೆ ಅವಿಶ್ವಾಸವೆ ನಿಮಗೆ?

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಅವಿಶ್ವಾಸದ ಪ್ರಶ್ನೆಯಲ್ಲ. ಹಿಂದೂ ಮುನಿಗಳ, ವಧುವರರ ಹಿತಾಸಕ್ತಿಯಲ್ಲಿ ಅವರ ಪಾಲಕರು ಮದುವೆಯನ್ನು ಮಾತುಕತೆಗಳ ಮೂಲಕ ನಿರ್ಧರಿಸಬೇಕು ಎಂದು ಹೇಳಿದ್ದಾರೆ.

**ಶ್ರೀಮತಿ ರೇಣುಕಾ ರೇ:** ಶಕುಂತಲೆ ಏನು ಮಾಡಿದಳು?

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಶಕುಂತಲ ಆ ರೀತಿ ಮದುವೆ ಆಗಲಿಲ್ಲ ಎಂದು ಬಲ್ಲೆನು. ನನ್ನ ಸ್ನೇಹಿತೆಯೂ ಸೋದರಿಯೂ ನಡುವೆ ಈ ಪ್ರಶ್ನೆ ಕೇಳಿದ್ದರಿಂದ ನನಗೆ ಒಂದು ಕಥೆ ನೆನಪಿಗೆ ಬರುತ್ತದೆ. ಒಬ್ಬ ಗೃಹಸ್ಥನು ತನ್ನ ಮನೆಯಲ್ಲಿ ಆರು ತಿಂಗಳ ಕಾಲ ರಾಮಾಯಣ ಮತ್ತು ಮಹಾಭಾರತಗಳ ಪಾರಾಯಣ ಮಾಡಿಸಿದನು. ಆಮೇಲೆ ತನ್ನ ಮಗಳಿಗೆ ಪ್ರಶ್ನೆ ಕೇಳಿದನು: "ನೀನು ಕಥೆಯನ್ನು ಕೇಳಿದೆಯಲ್ಲ, ನೀನು ಕಲಿತ ಪಾಠವೇನು?" ಅದಕ್ಕೆ ಅವನ ಮಗಳು ಈ ರೀತಿ ಉತ್ತರ ಕೊಟ್ಟಳಂತೆ: "ಮಹಾಭಾರತದ ಮೂಲಕ ನಾನು ಕಲಿತ ಪಾಠವೆಂದರೆ, ದ್ರೌಪದಿಯು ಐವರು ಗಂಡಂದಿರನ್ನು ಹೊಂದಿದಳು. ನಾನು ಹಾಗೆಯೇ ಐವರು ಗಂಡಂದಿರನ್ನು ಹೊಂದಿರಬಹುದು." ಇಡೀ ಮಹಾಭಾರತ ದ್ವಾರಾ ಅವಳು ಕಲಿತದ್ದು ಅಷ್ಟೇ. ರಾಮಾಯಣದಿಂದ ಕಲಿತದ್ದೇನು ಎಂದು ಸೊಸೆಯನ್ನು ಕೇಳಿದಾಗ ಅವಳು ಇಂತು ನುಡಿದಳಂತೆ: "ಅದು ಸ್ಪಷ್ಟವೇ. ನನ್ನ ಗಂಡನು ನಿಧನಹೊಂದಿದ ಒಡನೆಯೇ ನಾನು ಅವನ ತಮ್ಮನನ್ನು ಮದುವೆ ಆಗಬಹುದು. ರಾವಣನು ಸತ್ತ ಮೇಲೆ ಏನಾಯಿತು ಗೊತ್ತಿದೆಯಲ್ಲ ನಿಮಗೆ. ಅವನ ವಿಧವೆ ಮಂಡೋದರಿ ವಿಭೀಷಣನನ್ನು ಮದುವೆಯಾದಳು" ಸ್ವಾಮೀ, ಹಿಂದೂ ಕಾನೂನಿನ ಪ್ರಕಾರ ಹತ್ತು ಹಲವು ಬಗೆಯ ವಿವಾಹ ಪದ್ಧತಿಗಳು ಆಗಿ ಹೋಗಿವೆ. ಗಾಂಧರ್ವ ವಿವಾಹ ಪದ್ಧತಿಯ ಬಗ್ಗೆ ನಾವು ಇಲ್ಲಿ ಉಪಬಂಧ ಕಲ್ಪಿಸಿಲ್ಲ. ಸಿವಿಲ್ ವಿವಾಹ ಕೋಡ್‌ನ ಉಪಬಂಧಗಳಲ್ಲಿ ಸಿವಿಲ್ ವಿವಾಹದ ಅಂಥ ಎಲ್ಲ ಪ್ರಕಾರಗಳಿಗೆ ಅವಕಾಶ ಕಲ್ಪಿಸಿದ್ದರೂ, ಹಾಗೆ ಮಾಡಲಿಲ್ಲ. ಆದ್ದರಿಂದ, ಒಂದು ಸರ್ವ ಸಾಧಾರಣ ಹಿಂದೂ ಕುಟುಂಬದಲ್ಲಿ, ಕ್ರೋಡೀಕೃತ ಹಿಂದೂ ಕಾನೂನಿನ ಅಡಿಯಲ್ಲಿ ವಿವಿಧ ಸದಸ್ಯರ ನಡುವಣ ಸಂಬಂಧಗಳಲ್ಲಿ ಬದಲಾವಣೆ ತರಬಯಸುತ್ತೀರ. ಆ ಮೂಲಕ ಕುಟುಂಬ ಝೀವನದಲ್ಲಿ ಸುಖಶಾಂತಿ ನೆಲಸಲಿದೆಯೆ ಅಥವಾ ಸಮರಸವು ಸೇರಲಿದೆಯೇ?

**ರಾಮನಾರಾಯಣ ಸಿಂಗ್ :** ಹಾಗೇನೂ ಇಲ್ಲ.

**ಬಾಬು ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಈಗ ಸೋದರ ಸೋದರಿಯರು ಮತ್ತು ಸೋದರಿಯರ ಗಂಡಂದಿರು ಇವರ ನಡುವೆ ಇರುವ ಸುಮಧುರ ಸಂಬಂಧಗಳು ಹಾಗೆಯೇ ಮುಂದುವರಿಯುವಂತಿಲ್ಲ. ಕಾರಣವೆಂದರೆ, ಹುಡುಗಿಯ ಮದುವೆಯಾದ ಮೇಲೆ, ಅವಳ ಗಂಡನಾಗಲಿ ಮಗನಾಗಲಿ ಅಥವಾ ಅವಳ ಮಾವನ ಮನೆಯಲ್ಲಿರುವ ಇನ್ಯಾರೇ ಆಗಲಿ, ತನ್ನ ತಂದೆಯ ಕುಟುಂಬದ ಆಸ್ತಿಯನ್ನು ನಿಯಂತ್ರಿಸುವ

ಕೆಲಸದಲ್ಲಿ ಅವಳಿಗೆ ನೆರವಾಗುತ್ತಾರೆ. ಪರಿಣಾಮವಾಗಿ ಸಂಬಂಧಗಳು ಕಹಿಯಾಗುತ್ತವೆ, ಅಸೂಯೆ, ದ್ವೇಷಗಳು ಮತ್ತು ವ್ಯಾಜ್ಯಗಳಿಗೆಲ್ಲ ಅವಕಾಶವಾಗುತ್ತವೆ. ಆಖೈರಾಗಿ ಕುಟುಂಬ ಛಿನ್ನ ವಿಚ್ಛಿನ್ನವಾಗಿ ಹೋಗುತ್ತದೆ. ಹಿಂದೂ ಕುಟುಂಬದ ವಿಘಟನೆಗೆ ಅನುಕೂಲ ಮಾಡಿಕೊಡುವಂಥ ಹಿಂದೂ ಕೋಡ್‌ನ್ನು ಅಧಿನಿಯಮಿಸಲು ಹೊರಟಿರುವೆವೊ ಹೇಗೆ? ಪ್ರತಿಯೊಂದು ಕುಟುಂಬವೂ ಛಿದ್ರವಾಗಿ ಹೋದ ತರುವಾಯ ಮತ್ತು ಕುಟುಂಬದ ಸುಖ–ಶಾಂತಿಗಳ ಸುಮಧುರ ಸಂಬಂಧಗಳು ಮರೆಯಾಗಿ ಹೋದ ತರುವಾಯ ಸಾಮಾಜಿಕ ಜೀವನ ಪರಮಾರ್ಥವನ್ನು ಸಾಧಿಸಬಹುದೆ? ಇದನ್ನು ಮಾಡಬೇಕೇ ಹೇಗೆ ಎಂದು ಪರ್ಯಾಲೋಚಿಸಬೇಕಾದವರು ನಿರ್ಧರಿಸಬೇಕಾದವರು ನೀವು. ನಾನು ಹೇಳಿದಂಥ ಅನಾಹುತಗಳು ಆಗಿಯೆ ತೀರುತ್ತವೆ ಎಂದು ನನ್ನ ಭಾವನೆ.

ಸ್ವಾಮೀ, ಒಬ್ಬಳು ಹುಡುಗಿ ವಿದ್ಯಾವಂತೆ ಆಗಿರಬಹುದು. ಅವಳು ಮದುವೆ ಆಗಿ ತನ್ನ ಮಾವನ ಮನೆಗೆ ಹೋದ ಮೇಲೆ, ಎಲ್ಲ ವಿಚಾರಗಳಲ್ಲಿ, ಅವಳ ಗಂಡ ಅಥವಾ ಅವನ ಯಾರೇ ಸಂಬಂಧಿಯು ಮಾರ್ಗದರ್ಶನ ಮಾಡುತ್ತಾನೆ ಅಥವಾ ಆಜ್ಞೆ ಮಾಡುತ್ತಾನೆ. ಹೀಗಿರುವಾಗ ಇಲ್ಲಿ ಶಾಸನ ರಚನೆಯ ಮೂಲಕ ತಂದೆಯ ಆಸ್ತಿಯಲ್ಲಿ ಅವಳಿಗೆ ಪಾಲನ್ನು ಪ್ರದಾನ ಮಾಡುವುದು ಅವಳ ಹಿತದೃಷ್ಟಿಯಿಂದ ಸರಿಯಾಗಿರಲಿಕ್ಕಿಲ್ಲ, ತಂದೆಯ ಕಡೆಯಿಂದ ಅವಳಿಗೆ ದೊರೆತ ಆಸ್ತಿಯ ಸಂಬಂಧದಲ್ಲಿ ಆಜ್ಞೆಗೆ ಗುರಿಯಾಗದ ಅವಳನ್ನು ಕಾಪಾಡಲು ನಾವು ಇನ್ನೊಂದು ಶಾಸನ ರಚಿಸಲಿದ್ದೇವೆ ಎಂದು ನೀವು ಹೇಳಬಹುದು. ಹಿಂದೂ ಕೋಡ್ ಅನ್ನು ಹೊಂದಿರುವ ಬೌದ್ಧರ ಸಮಾಧಾನದ ಸಲುವಾಗಿ ನೀವು ಹಾಗೆಲ್ಲ ನಿರಂಯರವಾಗಿ ಶಾಸನ ರಚನೆ ಮಾಡುತ್ತ ಹೋದ ಪಕ್ಷದಲ್ಲಿ, ನಾನು ನಿಮ್ಮ ಜೊತೆ ಬರಲಾರೆನು. ಇದು ನಿಜವಾಗಿಯೂ ಒಂದು ಕ್ರಾಂತಿಕಾರಕ ಬದಲಾವಣೆ, ಆದ್ದರಿಂದ ಅದನ್ನು ಪ್ರಸ್ತಾಪಿಸಕೂಡದು ಎಂದು ನಾನು ಭಾವಿಸುತ್ತೇನೆ. ಅಂದರೆ ಹುಡುಗಿಯರ ಬಗ್ಗೆ ಉಪಬಂಧಗಳನ್ನು ಮಾಡಬಾರದು ಎಂದು ವಿರೋಧಿಸುತ್ತೇನೆ ಎಂದು ಅರ್ಥವಲ್ಲ. ಎಷ್ಟು ಸಾಧ್ಯವೋ ಅವರ ಬಗ್ಗೆ ಅಷ್ಟು ಉಪಬಂಧಗಳನ್ನು ಮಾಡಿ. ಅವರ ಶಿಕ್ಷಣ ಮತ್ತು ವಿವಾಹ ತಂದೆಯ ಆಸ್ತಿಯ ಮೇಲಣ ಪ್ರಥಮ ಭಾರ ಎಂದು ಕಾನೂನು ಮಾಡಿ. ಅದನ್ನು ಆ ಆಸ್ತಿಯ ಮೇಲೆ ನಿರುಪಾಧಿಕ ಭಾರ ಎಂದು ಚನ್ನಾಗಿ ಮಾಡಿ. ಅಂದರೆ ಅವಳ ಮದುವೆ ಆಗಿ ಅವಳು ತನ್ನ ಗಂಡನ ಕುಟುಂಬದಲ್ಲಿ ವಿಲೀನಳಾದ ಮೇಲೆ ಅವಳನ್ನು ತಂದೆಯ ಆಸ್ತಿಯಲ್ಲಿ ಹಿತಾಸಕ್ತಿಯನ್ನು ಪಲ್ಲಟಗೊಳಿಸಲು ಸಾಧ್ಯವಾಗುತ್ತದೆ. ಆದರೆ ನೀವು ಹಾಗೇನೂ ಮಾಡುತ್ತಿಲ್ಲವಲ್ಲ. ನೀವು ಸ್ತ್ರೀ–ಪುರುಷ ಸಮಾನತೆ, ನ್ಯಾಯ ಮತ್ತು ನ್ಯಾಯಸಂಗತ ಎಂದೆಲ್ಲ ಮಾತಾಡುತ್ತೀರ. ಆದರೆ ಅವಳಿಗೆ ತಂದೆಯ ಆಸ್ತಿಯಲ್ಲಿ ವಾರಸುದಾರಳಾಗಿ ಮಗನಿಗೆ ಸಮಾನವಾದ ಪಾಲನ್ನು ಪಡೆಯುವ ಹಕ್ಕನ್ನು ಕೊಡುತ್ತಿದ್ದೀರ. ಮಾತ್ರವಲ್ಲದೆ ಅವಳ ಗಂಡನ ಆಸ್ತಿಯಲ್ಲಿ ಅಥವಾ ಮಾವನ ಆಸ್ತಿಯಲ್ಲಿ ಸಹ ಪಾಲನ್ನು ಒದಗಿಸಲು ವ್ಯವಸ್ಥೆ ಮಾಡುತ್ತಿದ್ದೀರ. ಇದು ಸೇಡಿನ ಬುದ್ಧಿಯಿಂದ ಕೊಟ್ಟ ಸಮಾನತೆ. ಹುಡುಗಿಗೆ ಎರಡೂ ಕಡೆಗಳಿಂದ ಆಸ್ತಿಯು ದೊರೆಯಬಾರದು. ಇದರಿಂದ ಆಸ್ತಿಯ ತುಂಡೀಕರಣಕ್ಕೆ ಇನ್ನಷ್ಟು ಅವಕಾಶವಾಗುತ್ತದೆ.

**ಶ್ರೀಮತಿ ಜಿ. ದುರ್ಗಾಬಾಯಿ:** ಹುಡುಗನಿಗೆ ತಾಯಿಯ ಆಸ್ತಿಯಲ್ಲಿ ಪಾಲು ದೊರೆಯುತ್ತದೆಯಲ್ಲ?

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಮಗಳು ಅವಿವಾಹಿತೆಯಾಗಿರಲಿ, ವಿವಾಹಿತೆಯಾಗಿರಲಿ ಅಥವಾ ವಿಧವೆಯಾಗಿರಲಿ ತಾಯಿಯ ಆಸ್ತಿಯಲ್ಲಿ ಪಾಲು ಪಡೆಯುತ್ತಾಳೆ. ನನ್ನ ಸ್ನೇಹಿತರು ಹಿಂದೂ ಕಾನೂನು ಓದಲಿ. ಆ ಕಾನೂನು ಈಗ ಇರುವಂತೆಯೇ, ಅದರಡಿಯಲ್ಲಿ ಎಲ್ಲಾ ಪ್ರಕಾರದ ಹುಡುಗಿಯರಿಗೆ ಸ್ತ್ರೀಧನದ ಹಕ್ಕು ಇರುತ್ತದೆ.

**ಶ್ರೀಮತಿ ಜಿ. ದುರ್ಗಾಬಾಯಿ:** ಇಲ್ಲ, ಇಲ್ಲ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ನಾನು ಹೇಳುವುದು ಇದೆ; ಈಗಿನ ಹಿಂದೂ ಕಾನೂನು ಅಡಿಯಲ್ಲಿ ಅವಳಿಗೆ ಹಾಗೆ ಅವಕಾಶ ಮಾಡಿಕೊಡಲಾಗಿದೆ. ಇತರರ ತಪ್ಪು ತಿಳಿವಳಿಕೆಗಳನ್ನು ಎಲ್ಲಿಯತನಕ ಸರಿಪಡಿಸುತ್ತ ಹೋಗಲಿ ನಾನು? ಹಿಂದೂ ಕಾನೂನು ಇದೆಯಲ್ಲ. ಇದೆಯೆಂಬ ವಿಚಾರ ಕಾನೂನು ವೃತ್ತಿಯ ಸದಸ್ಯರಿಗೆಲ್ಲ ಗೊತ್ತುಂಟು. ತುಂಡೀಕರಣಕ್ಕೆ ಖಂಡಿತವಾಗಿಯೂ ಇನ್ನಷ್ಟು ಅವಕಾಶವಾಗುವ ಸಂಭವ ಉಂಟು ಎಂಬ ಅಂಶವನ್ನು ನಾನು ವಿಶದೀಕರಿಸಿ ಹೇಳಬೇಕಾಗಿಲ್ಲ ಎಂದು ನಂಬಿದ್ದೇನೆ. ಇದರಿಂದಾಗಿ ಇಚ್ಛಾಪತ್ರ ದ್ವಾರಾ ವಿಲೆಗೆ ಮತ್ತು ವ್ಯಾಜ್ಯಕ್ಕೆ ಹಾಗೂ ಆಖೈರಾಗಿ ವಿನಾಶಕ್ಕೆ ಹಾದಿಯಾಗುವಲ್ಲಿ ಸಂದೇಶವಿಲ್ಲ.

**ಒಬ್ಬ ಮಾನ್ಯ ಸದಸ್ಯರು:** ಈಗಾಗಲೇ ತುಂಡೀಕರಣ ಆಗಿದೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಹೌದು. ಆದರೆ ಎರಡು ತಪ್ಪುಗಳ ಮೂಲಕ ಒಂದು ಸರಿ ಆಗುವುದಿಲ್ಲವಲ್ಲ. ಈಗಾಗಲೇ ತುಂಡೀಕರಣ ಆಗಿರುವ ನಿಮಿತ್ತ, ಆಸ್ತಿಯಲ್ಲಿ ಇನ್ನಷ್ಟು ಪಾಲುಗಳಿಗೆ ಅವಕಾಶ ಮಾಡಿಕೊಟ್ಟು, ಇನ್ನಷ್ಟು ತುಂಡೀಕರಣಕ್ಕೆ ದಾರಿಯಾಗುತ್ತದೆಯೇ ಹೊರತು ಈ ಸಮಸ್ಯೆಗೆ ಪರಿಹಾರವಲ್ಲ. ನಿಮ್ಮ ವಾದವು ತರ್ಕಸಂಗತವಲ್ಲವೆಂದು ಹೇಳಬಯಸುತ್ತೇನೆ.

ಸ್ವಾಮೀ, ಉತ್ತರಾಧಿಕಾರದ ಈ ಕ್ಷೇತ್ರದಲ್ಲಿ ಇನ್ನೊಂದು ನೂತನ ಉಪಕ್ರಮವನ್ನು ಪ್ರಸ್ತಾವಿಸಲಾಗಿದೆ. ಇದು ಸಂದರ್ಭದಲ್ಲಿ ಅತ್ಯಂತ ವಿನಾಶಕಾರಿಯಾದ ಉಪಬಂಧ ಎಂದು ಭಾವಿಸುತ್ತೇನೆ.

**ಶ್ರೀ ಟಿ.ದಾಸ್:** ಅದು ಈ ವಿಧೇಯಕದ ಸಿದ್ಧಾಂತವಲ್ಲ. ಅದನ್ನು ನೀವು ಕೈಬಿಡಬಹುದು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಹಾಗಾದರೆ ವಿಧೇಯಕದ ಸಿದ್ಧಾಂತ ಏನು?

**ಶ್ರೀ ಬಿ. ದಾಸ್:** ನಾನು ಉಲ್ಲೇಖಿಸುತ್ತಿರುವುದು ವಿಭಜನೆಯ ಸಿದ್ಧಾಂತವನ್ನು. ಅದು ಮುಖ್ಯ ಸಿದ್ಧಾಂತವಲ್ಲ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ದಾಯಭಾಗದ ಪದ್ಧತಿಯೇ ಈ ವಿಧೇಯಕದ ಬೆನ್ನೆಲುಬು. ಈ ವಿಧೇಯಕದ ಅಡಿಯಲ್ಲಿ ನೀವು ಮಿತಾಕ್ಷರ ಕಾನೂನನ್ನು ರದ್ದುಗೊಳಿಸಲಿದ್ದೀರ. ಈ ಬಗ್ಗೆ ತಪ್ಪು ತಿಳಿವಳಿಕೆ ಬೇಡ. ಮಿತಾಕ್ಷರದ ಮೂಲಾಧಾರವಾಗಿರುವ ಜನ್ಮ ಮತ್ತು ಉತ್ತರಋಖೀವಿತ್ವ ದ್ವಾರಾ ಆಸ್ತಿಗೆ ಹಕ್ಕು. ಈ ಪದ್ಧತಿಯನ್ನು ತೊಡೆದುಹಾಕುವ ಸನ್ನಾಹ ನಡೆದಿದೆ. ಮಿತಾಕ್ಷರ ಪದ್ಧತಿಯ ಕಾನೂನು ನೂರಾರು ವರ್ಷಗಳವರೆಗೂ, ಬಂಗಾಲದಲ್ಲಿ ಕೊಡಿಸುವವರೆಗೂ ಇಡೀ ದೇಶದಲ್ಲಿ ತನ್ನ ಶಾಸನಮುಂದುವರಿಸಿತ್ತು. ದಾಯಭಾಗ ಪದ್ಧತಿಗೆ ಸಹಜ ನ್ಯಾಯ ಮತ್ತು ವಾತ್ಸಲ್ಯಗಳೇ ಬುನಾದಿ. ಈ ವಿಧೇಯಕವನ್ನು ಬೆಂಬಲಿಸುವ ನನ್ನ ಅನೇಕ ಮಿತ್ರರು, ಈ ವಿಧೇಯಕವು ನನ್ನ ಪ್ರಾಂತ ಬಂಗಾಲದ ದಾಯಭಾಗ ಕಾನೂನಿನಲ್ಲಿ ನಿರೂಪಿಸಲಾದಂಥ ವಾರಸಾ ಸಿದ್ಧಾಂತವನ್ನೇ ಈ ವಿಧೇಯಕದಲ್ಲಿ ಸೇರಿಸಿರುವ ನಿಮಿತ್ತ, ನಾನು ಇದನ್ನು ವಿರೋಧಿಸುವವರಲ್ಲಿ ಕೊಟ್ಟ ಕೊನೆಯವನಾಗಿರಬೇಕು ಎಂದು ಹೇಳುತ್ತಾರೆ. ಅದರಿಂದಾಗಿ ನನಗೆ ಕಿಂಚಿತ್ತೂ ಸಮಾಧಾನವಿಲ್ಲ ಎನ್ನುವುದೇ ಅವರಿಗೆ ನನ್ನ ಉತ್ತರ. ಸದಿಚ್ಛಾಪ್ರೇರಿತರಾದ ಸಮಾಜ ಸುಧಾರಕರೆಲ್ಲರೂ ಅದನ್ನು, ಆ ಪದ್ಧತಿಯನ್ನು, ಅಂಗೀಕರಿಸಬೇಕೆಂದು ನನಗೆ ಹೇಳಿದರು. ಆ ಬಗ್ಗೆ ನನಗೆ ಇಷ್ಟವಿಲ್ಲ. ಇನ್ನು ಅತಿಮಾನವ (ಪುರುಷೋತ್ತಮನು) ಅಥವಾ ಪದಾಧಿಕಾರಿಯು ನನ್ನ ಬಳಿ ಸಾರಿ, "ನೋಡಿ, ಬಂಗಾಲದ ವಾರಸಾ ಕಾನೂನನ್ನು ಇಡೀ ಭಾರತಕ್ಕೆ ಅನ್ವಯಿಸತಕ್ಕದ್ದು" ಎಂದು ಹೇಳಿದರೂ ಅದರ ವಿರುದ್ಧ ಪ್ರತಿಭಟನೆಯ ದನಿ ಎತ್ತುವವರಲ್ಲಿ ನಾನೇ ಮೊದಲಿಗನಾಗುತ್ತೇನೆ. ಹಳೆಯ ಪದ್ಧತಿ ಕಾಲನ ಪರೀಕ್ಷೆಯಲ್ಲಿ ಗೆದ್ದು ಋಖೀವಂತವಾಗಿದೆ. ಈ ಬದಲಾವಣೆಯಿಂದ ನನ್ನ ಪ್ರಾಂತಕ್ಕೆ ಸರಿ ಹೋಗಬಹುದು. ಆದರೆ ಇಡೀ

ಭಾರತಕ್ಕೆ ಸರಿಹೋಗಲಿಕ್ಕಿಲ್ಲ. ಈ ಮಿತಾಕ್ಷರ ಪದ್ಧತಿಯನ್ನು (ಕಾನೂನನ್ನು), ಇತ್ತ ವಾರಸಾ ಮಿತಾಕ್ಷರ ಕಾನೂನು ಅಲ್ಲದ ಅತ್ತ ದಾಯಭಾಗ ಕಾನೂನೂ ಅಲ್ಲದ ಪದ್ಧತಿಯ ಸಲುವಾಗಿ ರದ್ದುಗೊಳಿಸಲು ನಾನು ಇಷ್ಟಪಡುವುದಿಲ್ಲ. ಅದು ಇವೆರಡರ ಮಿಶ್ರತಳಿ. ಯಾರ ಹಿತಕ್ಕೂ ಅನುಕೂಲವಲ್ಲದ ಕಾನೂನು ಮತ್ತು ಸುಸ್ಥಾಪಿತವಾದ ಒಂದು ವ್ಯವಸ್ಥೆಯನ್ನು ಸಂಪೂರ್ಣವಾಗಿ ಅಸ್ಥಿರಗೊಳಿಸುವ ನಿಮಿತ್ತ, ಹಿಂದೂ ಸಮಾಜವನ್ನು ವಿಘಟನೆಗೀಡು ಮಾಡಿ ಅಧಃಪತನಕ್ಕೆ ಒಯ್ಯುವ ಸಂಭವವುಂಟು.

ನಾನು ಸದನದ ಸಹನ ಶಕ್ತಿಯನ್ನು ಮೀರುವಷ್ಟು ಮಾತನಾಡಿದ್ದೇನೆಂದು ತೋರುತ್ತದೆ. ಇನ್ನು ನನ್ನ ಭಾಷಣವನ್ನು ಸ್ವಲ್ಪದರಲ್ಲಿ ಮುಗಿಸಿಬಿಡುತ್ತೇನೆ. (ಮಾನ್ಯ ಸದಸ್ಯರು: ಬೇಡ, ಬೇಡ) ನಾನು ವಾರಸಾ ಹಕ್ಕಿನ ವಿಷಯವನ್ನು ಪರಿಶೀಲಿಸಿದೆನು, ವಿವಾಹ ಪದ್ಧತಿಯ ವಿಚಾರವನ್ನು ಸಹ ಪರಿಶೀಲಿಸಿದೆನು. ಆಮೂಲಾಗ್ರವಾಗಿ ಬದಲಾಯಿಸಬೇಕೆಂದು ಪ್ರಸ್ತಾವಿಸಿರುವ ಹಿಂದೂ ಕಾನೂನಿನ ಪ್ರಮುಖ ಶಾಖೆಗಳಾದ ವಾರಸಾ ಹಕ್ಕು ಮತ್ತು ವಿವಾಹ ಇವುಗಳನ್ನು ಇನ್ನಷ್ಟು ವಿವರವಾಗಿ ಪೂರ್ಣವಾಗಿ ಪರ್ಯಾಲೋಚಿಸುವುದು ಅಗತ್ಯವೆಂದು ನನ್ನ ಅಭಿಪ್ರಾಯ. ನೀವು ಸುಧಾರಣೆಯ ಹೆಸರಿನಲ್ಲಿ, ಶತಶತಮಾನಗಳ ಆಂಧೀ ತುಫಾನುಗಳನ್ನು ಇದಿರಿಸಿ ನಿರ್ಮಮ ಆಕ್ರಮಣದಿಂದ ಹಿಂದೂಗಳನ್ನು ಪರಿರಕ್ಷಿಸುತ್ತ ಬಂದಿರುವ ಪ್ರಾಚೀನವಾದ ಮತ್ತು ಸುಭದ್ರ ಲಂಗರುಗಳಿಂದ ಬೇರ್ಪಡಿಸುವ ಪಕ್ಷದಲ್ಲಿ, ಆ ಸಂದರ್ಭವು ಹಿಂದೂಸ್ಥಾನಕ್ಕೂ, ಹಿಂದೂ ಸಮಾಜಕ್ಕೂ ದುರಂತ ಪ್ರಸಂಗ. ಪುನಃ ನಾನು ಈ ಶಾಸ್ತ್ರಗಳನ್ನು ಕುರಿತು ಹೇಳಬಯಸುತ್ತೇನೆ. ಈ ಶಾಸ್ತ್ರಗಳು ಸಾಮಾಜಿಕ ಝೀವನದ ಎಲ್ಲ ಸಂಗತಿಗಳ ಬಗ್ಗೆ ವಿಸ್ತೃತವಾದ ಉಪಬಂಧಗಳನ್ನು ಏರ್ಪಡಿಸಿರುವುದೇ ಅಲ್ಲದೇ, ಸ್ಥಳೀಯ ರೂಢೀರಿವಾಜುಗಳಿಗೂ ಆವಶ್ಯಕತೆಗಳಿಗೂ ವಿಶಾಲವಾದ ಅವಕಾಶವನ್ನು ಒದಗಿಸಿರುತ್ತವೆ. ಪರಿಣಾಮದಲ್ಲಿ ಅವು ಸ್ಥಿರೀಕರಣ ಶಕ್ತಿಗಳಾಗಿ ಸಮಾಜವನ್ನು ಸುಭದ್ರಗೊಳಿಸುವ ಹಿತಸಂವರ್ಧನೆಗೆ ನೆರವಾಗುತ್ತಿವೆ. ಅವುಗಳನ್ನು ನಾವು ನಿರ್ಲಕ್ಷಿಸಿದರೆ ಮತ್ತು ಈ ಕ್ರೋಡೀಕರಣವನ್ನು ಪೂಜಾವಸ್ತುವನ್ನಾಗಿ ಪರಿಗಣಿಸಿದರೆ ನಾವು ಹಿಂದೂ ಕಾನೂನನ್ನು, ದುರ್ದಮ್ಯವಾದ, ಕಠೋರವಾದ ಗಟ್ಟಿ ಕಬ್ಬಿಣದ ಎರಕದಲ್ಲಿ ರೂಪಿಸಿದಂತಾಗುತ್ತದೆ. ಮಾತ್ರವಲ್ಲದೆ, ಹಿಂದೂ ಶಾಸನದಲ್ಲಿ ಈವರೆಗೂ ಇಲ್ಲದಿದ್ದ ಒಂದು ಲಕ್ಷಣ ವಿಶೇಷವನ್ನು ಸೇರಿಸಿದಂತಾಗುತ್ತದೆ. ಅನಗತ್ಯವಾಗಿ ಈ ಹಿಂದಿನ ಸಂದರ್ಭಗಳಲ್ಲಿ ಕಾಲಕ್ಕೆ ತಕ್ಕಂತೆ ಸರಿಹೊಂದಿಸಿಕೊಳ್ಳುವ ಸ್ವಭಾವವನ್ನು ಕಿತ್ತೊಗೆದು ಸರಿಹೊಂದಿಸಿಕೊಳ್ಳದ ಹಾಗೆ ನಮ್ಮ ಹಿಂದೂ ಶಾಸನವನ್ನು ರೂಪಾಂತರಗೊಳಿಸುತ್ತೇವೆ.

ಸ್ವಾಮೀ, ನಾನು ಸಮಾರೋಪ ಮಾಡುವ ಮುನ್ನ, ಇಲ್ಲಿ ಸಹ ಮಂಡಿಸಲಾದ ಒಂದು ವಾದವನ್ನು ಕುರಿತು ಚರ್ಚಿಸಬಯಸುತ್ತೇನೆ. ಆ ವಾದವನ್ನು ಲಘುವಾಗಿ ಪರಿಗಣಿಸಿ, ಪಕ್ಕಕ್ಕೆ ಸರಿಸಿದ್ದುಂಟು. ಆ ವಾದ ಸರಿಯಾಗಿದೆಯೆಂದೇ ನನ್ನ ಅಭಿಪ್ರಾಯ. ಅದನ್ನು ಕುರಿತು ವ್ಯವಹರಿಸಲು ಈ ವಿಧಾನಮಂಡಲವು ಸಕ್ಷಮವಾಗಿಲ್ಲ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ:** ಕಾನೂನು ರೀತ್ಯಾ ಸಕ್ಷಮವಲ್ಲವೆ?

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಹೌದು, ಸಕ್ಷಮವಲ್ಲವೆಂದೇ ನನ್ನ ಅನಿಸಿಕೆ. ಅದೇನೇ ಇರಲಿ, ನೀವು ಕಾನೂನಿನ ರಚನೆಯ ಅಡಿಯಲ್ಲಿ ನೀವು ಸಕ್ಷಮತೆಯನ್ನು ಸಮರ್ಥಿಸಿಕೊಂಡರೂ, ಈ ಕೋಡ್ ಅನ್ನು ತೀರ್ಣಗೊಳಿಸಲು ನಿಮಗೆ ನೈತಿಕ ಸಾಮರ್ಥ್ಯ ಸರ್ವಥಾ ಇಲ್ಲವೆನ್ನಬೇಕು. ಈ ಆಕ್ಷೇಪವನ್ನು ನಮ್ಮಂಥ ಜನಗಳು ಮಾತ್ರವೇ ಅಲ್ಲದೆ ದೇಶದ ರಾಜಕೀಯ ಝೀವನದಲ್ಲಿ ಉನ್ನತ ಸ್ಥಾನಗಳಲ್ಲಿರುವ ಮಹಾನುಭಾವರೂ ಎತ್ತಿದ ವಿಷಯ ನನಗೆ ಗೊತ್ತು. ಉದಾಹರಣೆಗೆ ಮಹೋನ್ನತ ಸ್ಥಾನಮಾನ ಹೊಂದಿರುವ ಮಾನ್ಯ ಡಾ॥

ಬಾಬು ರಾಜೇಂದ್ರ ಪ್ರಸಾದ್ ಅಂಥವರೇ ಆಕ್ಷೇಪವೆತ್ತಿದ್ದಾರೆ. ಮಾನ್ಯ ಪ್ರಸಾದ್ ಅವರು ಭಾರತೀಯ ಸಂವಿಧಾನ ಸಭೆಯ ಅಧ್ಯಕ್ಷರು ಮತ್ತು ಆ ಸಂವಿಧಾನ ಸಭೆಯ ಹೆಸರಿನಲ್ಲಿಯೇ ನಾವು ಪ್ರಮಾಣ ಮಾಡುತ್ತ ಈ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುತ್ತೇವಲ್ಲವೆ? ಅವರ ಅಭಿಪ್ರಾಯಗಳಿಗೆ ಪರಮ ಪರಿಗಣನೆ ಕೊಡಬೇಕೆ ಅಥವಾ ಕೊಡಬೇಡವೆ, ನೀವು ಹೇಳಿ. ನನಗೆ ವ್ಯಕ್ತಿಗತವಾಗಿ, ಅವರ ಬಗ್ಗೆ ಅಪಾರ ಗೌರವ. ಅವರು ಬಿಹಾರದ ಅನಭಿಷಿಕ್ತ ದೊರೆ ಮಾತ್ರವಲ್ಲದೆ ಭಾರತ ದೇಶದ ವಿವಾದಾತೀತ ಧುರೀಣರ ಪೈಕಿ ಒಬ್ಬರು. ಡಾ॥ ಬಾಬು ರಾಜೇಂದ್ರ ಪ್ರಸಾದ್ ಅವರು ಈ ಸಂಬಂಧದಲ್ಲಿ ಅತ್ಯಂತ ಸ್ಪಷ್ಟವಾದ ಸೂಚನೆ ಕೊಟ್ಟಿದ್ದಾರೆ. ಅವರು ಬಿಹಾರದ ಜನಗಳನ್ನು, ಹಾಗೆಯೇ ಬಂಗಾಲದ ಜನಗಳನ್ನು ಬಲ್ಲವರು. ಇತರ ಪ್ರಾಂತಗಳ ಜನಗಳನ್ನು ಸಹ ಬಲ್ಲವರು. ಅವರು ವಕೀಲಿ ವೃತ್ತಿಯನ್ನು ಕಲ್ಕತ್ತೆಯಲ್ಲಿ ಪ್ರಾರಂಭಿಸಿ, ತಮ್ಮ ನಡುವಯಸ್ಸಿನವರೆಗೆ ಅಲ್ಲಿಯೇ ನೆಲಸಿದ್ದರು. ಇಂದು ಈ ರೀತಿ ರಚಿತವಾಗಿರತಕ್ಕ ಈ ಸಂವಿಧಾನ ಸಭೆಯು, ಇಂಥ ಸ್ವರೂಪದ ಶಾಸನರಚನಾ ವಿಷಯವನ್ನು ಚರ್ಚಿಸಕೂಡದು ಎಂದು ಎಚ್ಚರಿಕೆ ಕೊಟ್ಟಿದ್ದು ವಿನಾಕಾರಣವಾಗಿ ಅಲ್ಲ. ನಾನು ನನ್ನ ಬಗ್ಗೆ ಮಾತ್ರ ಮಾತನಾಡಬಲ್ಲೆ. ಇತರರ ಬಗ್ಗೆ ಮಾತನಾಡಲಾರೆನು. ನನ್ನ ಪ್ರಾಮಾಣಿಕ ಭಾವನೆಯೆಂದರೆ, ಯಾವ ಕ್ರಮ ಅಥವಾ ಕಾನೂನು ನಮ್ಮ ದೈನಂದಿನ ಆಡಳಿತಕ್ಕೆ ಪರಮಾವಶ್ಯಕವಾಗಿಲ್ಲವೋ ಅಂಥ ಯಾವುದೇ ಕ್ರಮದ ಕಾನೂನಿನ ರಚನೆಯಲ್ಲಿ ಭಾಗೀದಾರನಾಗಲು ನನಗೆ ಯಾವುದೇ ಹಕ್ಕು, ನೈತಿಕವಾದ ಕಾನೂನು ಸಮ್ಮತವಾದ ಹಕ್ಕು, ಸರ್ವಥಾ ಇಲ್ಲವೆಂದು ಪ್ರಾಮಾಣಿಕವಾಗಿ ಭಾವಿಸುತ್ತೇನೆ. ನನ್ನನ್ನು ಸಂವಿಧಾನ ಸಭೆಗೆ ಚುನಾಯಿಸಿ ಕಳಿಸಿದ್ದು ಕೇವಲ ನಾಲ್ಕು ಮತಗಳ ದ್ವಾರಾ. ನಾನು ಪಶ್ಚಿಮ ಬಂಗಾಲದ ವಿಧಾನ ಮಂಡಲದ ಸದಸ್ಯರ ಕಡೆಯಿಂದ ಈ ನಾಲ್ಕು ಮತಗಳನ್ನು ಯಾಚಿಸಿದಾಗ, ಅವರಿಗೆ ವಿವಾಹ ವಿಚ್ಛೇದನದ ಹಕ್ಕನ್ನು ಕೊಡುವೆನು ಎಂದು ನಾನೆಂದೂ ಭರವಸೆ ಕೊಟ್ಟಿರಲಿಲ್ಲ ಎಂದು ಈಗಲೇ ಇಲ್ಲಿಯೇ ಪ್ರಾಮಾಣಿಕವಾಗಿ ಘೋಷಿಸುತ್ತೇನೆ. ಹಾಗೆ ಆ ಹಕ್ಕನ್ನು ಕೇಳಲೂ ಇಲ್ಲ. ಇಷ್ಟೇ ಅಲ್ಲದೆ ಅವರಿಗೆ ನಾನು ವಾರಸಾ ಹಕ್ಕನ್ನು ರದ್ದುಗೊಳಿಸುವೆನು ಎಂದು ಎಂದೂ ಮಾತುಕೊಟ್ಟಿರಲಿಲ್ಲ ಎಂದು ಘೋಷಿಸುತ್ತೇನೆ. ನಾನು ಸಂವಿಧಾನ ಸಭೆಗೆ ಹೋಗಿ ಒಂದು ಹೊಸ ಖಾತೆಯನ್ನು ಮತ್ತು ಒಂದು ವಿವಾಹ ಮಂತ್ರಾಲಯವನ್ನು ಸೃಜಿಸುವೆನೆಂದು ಸಹ ಅವರಿಗೆ ಎಂದೂ ಹೇಳಲಿಲ್ಲ–ಅಂದರೆ ಈ ವಿಧೇಯಕವು ತೀರ್ಣವಾದ ಪಕ್ಷದಲ್ಲಿ ಕೇಂದ್ರೀಯ ಸರ್ಕಾರದ ಅಡಿಯಲ್ಲಿ ಅಂಥ ಒಂದು ಖಾತೆಯು ಒಂದು ಸಂಸ್ಥೆಯು ಅಗತ್ಯವಾಗಬಹುದಲ್ಲ ಎಂಬ ಅರ್ಥದಲ್ಲಿ ಎಂದೂ ಹೇಳಲಿಲ್ಲ. ಇಲ್ಲಿ ಉಪಬಂಧಿಸಲಾದ ಔಪಚಾರಿಕತೆಗಳನ್ನು ಗಮನಿಸಿರಿ. ಆದ್ದರಿಂದ, ಈ ಸಂಬಂಧದಲ್ಲಿ ನನ್ನ ಸಮ್ಮತಿಯನ್ನು ಅಥವಾ ಅಸಮ್ಮತಿಯನ್ನು ವ್ಯಕ್ತಗೊಳಿಸಲು ನನಗೆ ಯಾವುದೇ ಹಕ್ಕು ಇಲ್ಲ ಎಂದು ನಾನು ಭಾವಿಸಿದ್ದೇನೆ. ನಾನು ಸಕ್ಷಮನಲ್ಲ ಎಂದಷ್ಟೇ ಸದನಕ್ಕೆ ಹೇಳಬಲ್ಲೆನು. ಕಾರಣವೆಂದರೆ, ಹಾಗೆ ಮಾಡಲು ನನ್ನ ಚುನಾವಣಾ ಕ್ಷೇತ್ರದಿಂದ ನನಗೆ ಯಾವುದೇ ನಿರ್ದಿಷ್ಟ ಜನಾದೇಶವು (ಮ್ಯಾಂಡೇಟ್) ದೊರೆತಿರಲಿಲ್ಲ. ನಾನು ಹಿಂದೆ ಮಹಾಚುನಾವಣೆಗಳ ಮೂಲಕ ಬಂದಾಗ, ದೇಶದ ಮುಂದೆ ಸ್ಪಷ್ಟವಾದ ಪ್ರಶ್ನೆಗಳಿದ್ದುವು. ಉದಾಹರಣೆಗೆ ದೇಶಕ್ಕಾಗಿ ಸ್ವಾತಂತ್ರ್ಯ ಸಾಧನೆ; ಹಾಗೆಯೇ ಇನ್ನಿತರ ಪ್ರಶ್ನೆಗಳಿದ್ದುವು ಮತ್ತು ಕಳೆದ ಸಲ ನಾವು ಇಲ್ಲಿಗೆ ಬಂದಾಗ, ಭಾರತ ಸಂವಿಧಾನವನ್ನು ರಚಿಸುವ ಹೊಣೆಯನ್ನು ಮಾತ್ರ ನಿರ್ವಹಿಸಬೇಕು ಎಂದು ಆಜ್ಞಾಪಿಸಲಾಗಿತ್ತು. ಆದ್ದರಿಂದ, ಸಾರ್ವಭೌಮ ವಿಧಾನ ಮಂಡಲದ ಸದಸ್ಯರಾಗಿರುವ ನಾವು ಇಂಥ ಶಾಸನ ರಚನೆಗೆ ಸಕ್ಷಮರಾಗಿದ್ದೇವೆ ಎಂಬ ಬಗ್ಗೆ ನಮ್ಮ ಅಹಂಕಾರಕ್ಕೆ ಸಂತೋಷವಾಗಬಹುದೇನೋ. ಆದರೆ ಹಾಗೆ ಸಕ್ಷಮತೆ ಇದೆಯೆಂದು ಹೇಳುವ ನಿಲುವಿಗೆ ಯಾವುದೇ ರೀತಿಯಲ್ಲೂ ಯಾವುದೇ ಬಗೆಯ ನೈತಿಕ ಅಂತಸ್ಸತ್ವ ಇಲ್ಲವೆಂದೇ

ಹೇಳಬೇಕಾಗುತ್ತದೆ. ಮುಂಬರುವ ಮಹಾಚುನಾವಣೆಯ ತರುವಾಯದ ಯಾವುದೇ ದಿನಾಂಕಕ್ಕೆ ಈ ಕೋಡ್‌ನ ವಿಚಾರ ವಿಮರ್ಶೆಯನ್ನು, ಪರ್ಯಾಲೊಚನೆಯನ್ನು ಮುಂದೆ ಹಾಕಿದ್ದರೆ ನಷ್ಟವೇನೂ ಆಗುತ್ತಿರಲಿಲ್ಲ. ಈ ಕೋಡ್ ಅನ್ನು ಈ ಸದನದ ಮೂಲಕ ತೀರ್ಣಗೊಳಿಸಲು ಆಯ್ಕೆ ಮಾಡಿದ ಸಮಯವು ಅತ್ಯಂತ ಅಸಮಯ ಎಂದು ನಾನು ದೃಢವಾಗಿ ಹೇಳಬಯಸುತ್ತೇನೆ. ಸ್ವಾತಂತ್ರ್ಯ ಪ್ರಾಪ್ತಿಯ ತರುವಾಯ ರಾಷ್ಟ್ರೀಯ ಸರ್ಕಾರವು ಸಮಸ್ಯೆಯ ಮೇಲೆ ಸಮಸ್ಯೆಯನ್ನು ಇದಿರಿಸಬೇಕಾಯಿತು. ಆ ಸಮಸ್ಯೆಗಳನ್ನು ಪರಿಹರಿಸಲು ನಮಗೆ ಸಾಧ್ಯವಾಗಿದೆಯೇ? ನಮಗೆ ಸಾಧ್ಯವಾಗಿಲ್ಲ. ನಾವು ಈ ದೇಶದಲ್ಲಿ ಬಹಳ ಜನಪ್ರಿಯರೆ? "ನಾವು" ಎಂದಾಗ ಆ ಕಡೆಯ "ಎಲ್ಲರೂ" ಸೇರಿ ಎಂದು ಅರ್ಥ. ಇಲ್ಲ. ಕಾರಣವೆಂದರೆ ಪ್ರಾಮಾಣಿಕವಾಗಿ ನಿರೀಕ್ಷೆಗಳು ಅತಿಶಯವಾಗಿ ನಾವು ಹೊಮ್ಮುವ ಹಾಗೆ ಮಾಡಿದ್ದರಿಂದ, ಅವುಗಳನ್ನು ಪೂರೈಸಲು ನಮಗೆ ಸಾಧ್ಯವಾಗಲಿಲ್ಲ. ನಮ್ಮ ಅಳವಿಗೆ ಮೀರಿದ ವಿಭಿನ್ನ ಕಾರಣಗಳು. ಈ ನಿಮಿತ್ತ ನಾವು ವಿಫಲರಾಗಿರಬಹುದು ಅಥವಾ ನಾವು ಕಿಂಚಿತ್ತೂ ಸಿದ್ಧರಾಗಿಲ್ಲದ ಸಂದರ್ಭಗಳಲ್ಲಿ ಏಕಾಏಕಿ ಎರಗಿದ ಶಕ್ತಿಗಳ ಪಾರಸ್ಪರಿಕ ಪ್ರಭಾವ ಕಾರಣವಾಗಿರಬಹುದು. ಆದರೆ ದೇಶದ ಉದ್ದಗಲಕ್ಕೂ ಕಾಣುತ್ತಿರುವುದು ಒಳಗೊಳಗೇ ಕುದಿಯುತ್ತಿರುವ ಅಸಮಾಧಾನ. ವಾಸ್ತವಿಕ ಸಂಗತಿ ಎಂದರೆ, ನಾನು ರೈಲ್ವೆ ಕಂಪಾರ್ಟ್‌ಮೆಂಟ್‌ನಲ್ಲಿ ಪ್ರಯಾಣಮಾಡುತ್ತಿರುವಾಗ, ವಿಧಾನ ಸಭಾ ಸದಸ್ಯ, ಸಂವಿಧಾನ ಸಭೆಯ ಸದಸ್ಯ ಎಂದು ಮುಂತಾಗಿ ನನ್ನ ಗುರುತನ್ನು ಬಹಿರಂಗಪಡಿಸುವಲ್ಲಿ ರುಚಿಯೆನಿಸುವುದಿಲ್ಲ. ಯಾಕೆಂದರೆ ನಮ್ಮ ಗುರುತು ಬಹಿರಂಗವಾಗುವುದೇ ತಡ, ಅವರು ಟೀಕಾಸ್ತ್ರಗಳನ್ನು ನಿರ್ಮಮವಾಗಿ ಎಸೆಯುತ್ತಾರೆ.

**ಶ್ರೀ ಬಿ. ಎಲ್.ಸೋಂಧಿ** (ಪೂರ್ವ ಪಂಜಾಬು: ಸಾಮಾನ್ಯ) : ಹಾಗಾದರೆ ನೀವು ವಿಮಾನದಲ್ಲಿ ಪ್ರಯಾಣಮಾಡಿ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ನಾನು ವಿಮಾನ ಪ್ರಯಾಣ ಪ್ರಾರಂಭಿಸಿದ್ದೇನೆ. ಆದರೆ ನನ್ನ ಪರಿಸ್ಥಿತಿ ಸುಧಾರಿಸಿಲ್ಲ. ನಾನು ತಮಾಷೆ ಮಾಡುತ್ತಿಲ್ಲ ಶ್ರೀ ಸಾಮಾನ್ಯನ ಸಲುವಾಗಿ ನಾವು ನಿಜವಾಗಿಯೂ ಏನೂ ಮಾಡಿಲ್ಲವಾದ್ದರಿಂದ ದೇಶಕ್ಕೆ ನಮ್ಮ ಬಗ್ಗೆ ಜುಗುಪ್ಸೆ ಉಂಟಾಗಿದೆ, ನಿರಾಸೆ ಆಗಿದೆ ಎಂದು ನನ್ನ ಭಾವನೆ, ಈವರೆಗೆ ಕಾಶ್ಮೀರ್ ಸಮಸ್ಯೆ ಇತ್ತು. ಈಗ ಸರಕುಗಳ ಬೆಲೆಯೇರಿಕೆ ಸಮಸ್ಯೆ, ಪೋಸ್ಟ್ ಕಾರ್ಡ್ ದರ ಮತ್ತು ಬಟ್ಟೆ ಬೆಲೆ ಏರಿಕೆಯ ದೌರ್ಭಾಗ್ಯಪೂರ್ಣ ಸನ್ನಿವೇಶವನ್ನು ನಿನ್ನೆ ಇದಿರಿಸಿ ಪರಿಹರಿಸುವ ಕಾಯಕದಲ್ಲಿ ವಿಶೇಷ ಸಾಧನೆ.

**ಸಭಾಧ್ಯಕ್ಷರು:** ಮಾನ್ಯ ಸದಸ್ಯರು ಈ ವಿಧೇಯಕಕ್ಕೆ ಮಾತ್ರ ಸೀಮಿತರಾಗಿರಬೇಕು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ:** ಸರಕುಗಳ ಬೆಲೆಯೇರಿಕೆ, ಕಾರ್ಮಿಕರ ಮುಷ್ಕರಗಳು, ಕಮ್ಯೂನಿಸ್ಟ್ ಗಂಡಾಂತರ, ನಿರ್ವಾಸಿತರ ಸಮಸ್ಯೆ ಮುಂತಾದವುಗಳೆಲ್ಲ ಸರ್ಕಾರದ ಅಳವಿಗೆ ಮೀರಿದ ಸಮಸ್ಯೆಗಳಾಗಿವೆ ಎಂದು ಮಾತ್ರ ಹೇಳಬಯಸುತ್ತೇನೆ. ಸಾಮಾಜಿಕ ಶಾಸನ ರಚನೆಯ ಅದರಲ್ಲೂ ತೀಕ್ಷ್ಣವಾಗಿ ವಿವಾದಾಸ್ಪದವಾದ ಈ ಶಾಸನ ರಚನೆಯ ವಿವಾದಕ್ಕೆ ಇದು ಸಮಯವೆ? ಅದು ಈಗಾಗಲೇ ಅತ್ಯುಗ್ರವಾದ ವಿವಾದಕ್ಕೆ ಎಡೆಮಾಡಿಕೊಟ್ಟಿದೆ. ಮಾನ್ಯ ಸದಸ್ಯರಿಗೆ ಸಾಹಿತ್ಯದ ಪ್ರವಾಹವೇ ಬಂದಿರಬಹುದು (ಚರ್ಚೆಗೆ ತಡೆ). ಅರ್ಥಾತ್ ಹಿಂದೂ–ವಿರೋಧಿ ಸಾಹಿತ್ಯ, ಹಿಂದೂ–ವಿರೋಧಿ ಸಮಿತಿಯಿಂದ. ಅದೇ ರೀತಿ ಕಲ್ಕತ್ತೆಯಲ್ಲಿ ಮತ್ತು ಇತರೆಡೆಗಳಲ್ಲಿ ಇರುವ ಅದೇ ಬಗೆಯ ಸಂಘ ಸಂಸ್ಥೆಗಳಿಂದ, ಪುಣೆಯ ಮಹಿಳಾ ಸಂಘದಿಂದ ಪ್ರತಿಭಟನೆಗಳು ನನಗೆ ಬಂದಿವೆ. ಬಂಗಾಲದ ಮಹಿಳಾ ಸಂಘದಿಂದಲೂ ನನಗೆ ಪ್ರತಿಭಟನೆ ಬಂದಿದೆ. ಸಂಘದ ಸದಸ್ಯರು ಬಂಗಾಲ ಪ್ರಾಂತದ ಶ್ರೀಮಂತ ವರ್ಗದ ಕುಟುಂಬಗಳಿಗೆ ಸೇರಿದವರು. ಇವರ

ವಿರುದ್ಧ ಪ್ರತಿಭಟಿಸದಿರುವಂಥ ಒಂದು ಬಾರ್ ಅಸೋಸಿಯೇಷನ್ ಸಹ ನನಗೆ ಗೊತ್ತಿಲ್ಲ. ಈ ವಿಧೇಯಕದ ಸಂಬಂಧದಲ್ಲಿ ಪರಿಚಲಿಸಲಾದ ಸಕಲ ಸಾಹಿತ್ಯವು ನನ್ನ ಬಳಿ ಲಭ್ಯವುಂಟು. ನಾನು ಅದನ್ನು ವರ್ಗೀಕರಿಸಿದ್ದೇನೆ. ಅದರ ಒಟ್ಟು ಅಭಿಪ್ರಾಯ ಭಾರವು ಪರಿಮಾಣದಲ್ಲೂ ಗುಣದಲ್ಲೂ ವಿಧೇಯಕಕ್ಕೆ ವಿರೋಧಿಯಾಗಿದೆ. ನಾನು ಪುನಃ ಹೇಳುವುದೇನೆಂದರೆ ಇದು ವಿಧೇಯಕಕ್ಕೆ ಸರಿಯಾದ ಸಮಯವಲ್ಲ. ನಮ್ಮ ಪ್ರಧಾನಿಯವರು ದೇಶವಾಸಿಗಳನ್ನು ಉದ್ದೇಶಿಸಿ ಮಾಡಿದ ಮನವಿಯ ಪ್ರಕಾರ ನಾವೆಲ್ಲರೂ ಈಗ ನಮ್ಮ ಮತಭೇದಗಳನ್ನು ಮರೆತು, ನಮ್ಮ ವಿಚಾರಗಳನ್ನು ಮೇಳವಿಸಿ ನಮ್ಮ ಸಕಲ ಸಮಯವನ್ನು ಮತ್ತು ಸಮಗ್ರ ಶಕ್ತಿಯನ್ನು ವಿನಿಯೋಗಿಸಿ ಪ್ರೀತಿಯಿಂದ ಮತ್ತು ಸೌಹಾರ್ದದಿಂದ ದೇಶದ ಸಮಸ್ಯೆಗಳನ್ನು ಪರಿಹರಿಸುವ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಬೇಕಾದ ಸಮಯ.

ಇಂತಿರುವಾಗ ಈ ದೇಶದಲ್ಲಿ ವಿಚ್ಛೇದನಕ್ಕೆ ಇನ್ನೊಂದು ಕಾರಣವನ್ನು ಅಥವಾ ಮತಭೇದಕ್ಕೆ ಅಥವಾ ದೂರಿಗೆ ಅಥವಾ ಅಸಂತೋಷಕ್ಕೆ ಇನ್ನೊಂದು ಕಾರಣವನ್ನು ಒದಗಿಸಕೂಡದು. ಈ ವಿಧೇಯಕವನ್ನು ತತ್ಕಾಲದಲ್ಲಿ, ಸದ್ಯಕ್ಕೆ ಹಾಗೆಯೇ ಮುಚ್ಚಿಟ್ಟರೆ ನಷ್ಟವೇನೂ ಸಂಭವಿಸಲಿಕ್ಕಿಲ್ಲ ಎಂದು ನಾನು ಭಾವಿಸಿದ್ದೇನೆ. ಹಾಗೆ ಮಾಡದೆ ಹೋದರೆ, ನಾನು ವಿಧೇಯಕವನ್ನು ಅದರ ಪರ್ಯಾಲೋಚನೆಯ ಪ್ರತಿಯೊಂದು ಹಂತದಲ್ಲಿ ವಿರೋಧಿಸಬೇಕಾಗುತ್ತದೆ. ಇದು ಸಾರಾಸಗಟಾಗಿ ಅನಗತ್ಯವಾದ ಕ್ರಮ. ಇದಲ್ಲದೆ ಈ ಬಗೆಯ ಶಾಸನ ರಚನೆಯನ್ನು ಮಾಡುವಂತೆ ಕೋರಿ ಈ ದೇಶದ ಯಾವೆಡೆಯಿಂದಲೂ ಬೇಡಿಕೆ ಬಂದಿಲ್ಲ. ಅದಕ್ಕಾಗಿ ಈ ವಿಧೇಯಕವನ್ನು ನಾನು ವಿರೋಧಿಸುತ್ತೇನೆ. ಎಲ್ಲ ಪ್ರಕಾರದ ಸಾಮಾಜಿಕ ಶಾಸನ ರಚನೆಯಲ್ಲಿ ನಾವು ನಿಧಾನವಾಗಿ ಹೋಗಬೇಕು. ಮಾತ್ರವಲ್ಲದೆ ಕೇವಲ ಕಾನೂನು ಮೂಲಕ ದೊಡ್ಡ ಪ್ರಮಾಣದ ಸಾಮಾಜಿಕ ಸುಧಾರಣೆಗಳನ್ನು ಆಗುಮಾಡಿಸಲಾರೆವು. ಆ ಕಾರಣಕ್ಕಾಗಿ ನಾನು ಈ ವಿಧೇಯಕವನ್ನು ವಿರೋಧಿಸುತ್ತೇನೆ. ಸಾಮಾಜಿಕ ಸುಧಾರಣೆಗಳು, ಸಮಾಜದ ಅಂತರಂಗದಲ್ಲಿ ಒಡಮೂಡುವ ಅಭಿಪ್ರಾಯಗಳ ಒತ್ತಡದ ಮೂಲಕವೇ ರೂಪುಗೊಳ್ಳಬೇಕು. ನನ್ನ ವಿರೋಧಕ್ಕೆ ಮೂರನೆಯ ಕಾರಣ: ಈ ವಿಧೇಯಕವನ್ನು ಈ ಸದನದಲ್ಲಿ ಅತ್ಯಂತ ಕ್ರಮಬದ್ಧವಲ್ಲದ ರೀತಿಯಲ್ಲಿ ತೀರ್ಣಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಇನ್ನು, ಸದ್ಯಕ್ಕೆ ರಚಿತವಾಗಿರತಕ್ಕ ಈ ವಿಧಾನ ಮಂಡಳದಲ್ಲಿ, ಈ ವಿಧೇಯಕವನ್ನು ಚರ್ಚಿಸಲು ಮತ್ತು ತೀರ್ಣಗೊಳಿಸಲು ನಾನು ನೈತಿಕವಾಗಿ ಸಕ್ಷಮನಲ್ಲ, ಸಮರ್ಥನಲ್ಲ. ಅದಕ್ಕಾಗಿ ಈ ವಿಧೇಯಕವನ್ನು ವಿರೋಧಿಸುತ್ತೇನೆ. ಈ ವಿಧೇಯಕ್ಕೆ ಸಿವಿಲ್ ಮೆರೇಜ್ ರಿಜಿಸ್ಟರ್, ಸೆಕ್ರಾಮೆಂಟಲ್ ಮೆರೇಜ್ ರಿಜಿಸ್ಟರ್, ಮೆರೇಜ್ ನೋಟಿಸ್ ಬುಕ್, ಡೈರೆಕ್ಟರ್ ಜನರಲ್ ಆಫ್ ಮೆರೇಜಸ್, ರಿಜಿಸ್ಟ್ರಾರ್ ಜನರಲ್ ಆಫ್ ಮೆರೇಜಸ್, ಮಿನಿಸ್ಟ್ರಿ ಆಫ್ ಮೆರೇಜಸ್ ಇತ್ಯಾದಿ ಇತ್ಯಾದಿ ಸಂಗತಿಗಳೂ ಸೇರಿದಂತೆ ಕೊನೆಮೊದಲಿಲ್ಲ. ಇನಿತೂ ಅಗತ್ಯವಿಲ್ಲದ ಜಟಿಲ ಸಮಸ್ಯೆಗಳನ್ನು ಸೃಜಿಸುತ್ತದೆ ಎಂದು ನನ್ನ ಅನಿಸಿಕೆ. ಆ ಕಾರಣಕ್ಕಾಗಿ ನಾನು ವಿಧೇಯಕವನ್ನು ವಿರೋಧಿಸುತ್ತೇನೆ. ಇದಲ್ಲದೆ, ನಮ್ಮ ಕುಟುಂಬಗಳಲ್ಲಿ ಕಟು ಭಾವನೆಗಳನ್ನು ಏಕತಾಭಂಗವನ್ನು ಮತ್ತು ಕಲಹವನ್ನು ಉಂಟು ಮಾಡಿ ಆಖೈರಾಗಿ ಸಮಾಜದ ವಿಘಟನೆಗೆ ಕಾರಣವಾಗುವುದೆಂಬ ದೃಷ್ಟಿಯಿಂದ ಸಹ ಈ ವಿಧೇಯಕವನ್ನು ವಿರೋಧಿಸುತ್ತೇನೆ. ಈ ದೇಶದ ಬಹುಜನ ಸಮಾಜದ ಅಭಿಪ್ರಾಯವು ಇದಕ್ಕೆ ವಿರೋಧಿಯಾಗಿರುವುದರಿಂದ ಇದು ಪ್ರಜಾತಂತ್ರ ವಿರೋಧಿಯಾದ ಕ್ರಮವಾಗಿದೆ. ಈ ಎಲ್ಲ ಕಾರಣಗಳಿಗಾಗಿ ನಾನು ಈ ವಿಧೇಯಕವನ್ನು ವಿರೋಧಿಸುತ್ತೇನೆ. ನನ್ನಲ್ಲಿರುವ ಸಕಲ ಶಕ್ತಿ ಸಾಮರ್ಥ್ಯಗಳನ್ನು ಉಪಯೋಗಿಸಿ ಈ ವಿಧೇಯಕವನ್ನು ವಿರೋಧಿಸಲು ನಾನು ನೈತಿಕವಾಗಿ ಬದ್ಧನಾಗಿದ್ದೇನೆ.

ಈ ಕೆಲವೇ ಮಾತುಗಳೊಂದಿಗೆ, ಹೌದು, ಇಷ್ಟೊಂದು ವಿಶಾಲವಾದ ಶಾಸನದ ದೃಷ್ಟಿಯಿಂದ ಇವು

ಕೆಲವೇ ಮಾತುಗಳು, ಇದರಲ್ಲಿ ಅಡಕವಾದ ಪ್ರಶ್ನೆಗಳ ದೃಷ್ಟಿಯಿಂದ, ಇದು ಉದ್ರೇಕಿಸಿರತಕ್ಕ ಉಗ್ರ ವಿರೋಧದ ದೃಷ್ಟಿಯಿಂದ, ಆ ಮೂಲಕ ಸಮಾಜದ ಮೇಲೆ ಆಗಬಹುದಾದ ಪ್ರತಿಕ್ರಿಯೆ (ಪ್ರತಿಘಾತದ) ದೃಷ್ಟಿಯಿಂದ ಇವು ಕೆಲವು ಮಾತುಗಳೇ........... ಸಮಾಜವನ್ನು ಈ ಗಂಡಾಂತರದಿಂದ ರಕ್ಷಿಸುವ ಬಗ್ಗೆ ಇಚ್ಛೆಯುಳ್ಳ ಯಾರೇ ಆದರೂ ಸರಿಯೆ, ಸುಸ್ಪಷ್ಟವಾಗಿ ದನಿಯೆತ್ತದೆ, ತರ್ಕದ ಮೂಲಕ ವಾದ ಮಾಡದೆ, ವಿಧಿಯಿಲ್ಲ. ಅವನು ವಿಷಯಗಳ ತಟಸ್ಥ ಮತ್ತು ಆವೇಗರಹಿತ ಚರ್ಚೆಗೆ ತನ್ನ ಸಮಯವನ್ನೆಲ್ಲ ವಿನಿಯೋಗಿಸಬೇಕು ಮತ್ತು ವಿಧಾಯಕರಿಗೆ ತನ್ನ ವಿನಮ್ರ ಸಲಹೆ ಕೊಡಬೇಕು ಅಂದರೆ ಅವರು ನಮ್ಮನ್ನು ತಪ್ಪುದಾರಿಯಲ್ಲಿ ಓಡಿಸುತ್ತ ಸಮಾಜವನ್ನು ಪ್ರಪಾತಕ್ಕೆ ತಳ್ಳಿ ವಿನಾಶಕ್ಕೆ ತಲುಪಿಸಲು ಸಾಧ್ಯವಾಗಲಾರದು.

**ಮಾನ್ಯ ಶ್ರೀ ಎನ್. ವಿ. ಗಾಡ್ಗೀಳ್:** ನಿಸ್ಸಂದೇಹವಾಗಿಯೂ ಕ್ರಾಂತಿಕಾರಕವಾದ ಈ ವಿಧೇಯಕದ ಚರ್ಚೆಯಲ್ಲಿ ಭಾಗವಹಿಸಲು ನಾನು ಒಂದಿಷ್ಟು ಪ್ರಚೋದಿತನಾಗಿದ್ದೇನೆ. ಈ ಸದನದಲ್ಲಿ ಹತ್ತು ವರ್ಷಗಳಿಗೂ ಮಿಗಿಲಾದ ಕಾಲ ನನ್ನ ಮಾನ್ಯ ಸ್ನೇಹಿತರ ಜತೆ ಕೆಲಸ ಮಾಡುವ ಸುಯೋಗ ನನ್ನದಾಗಿತ್ತು. ಅವರ ಭಾಷಣವನ್ನು ಅತ್ಯಂತ ಗೌರವ ಭಾವನೆಯಿಂದ ಕೇಳಿದ್ದೇನೆ. ಅವರನ್ನು ವಿಭಿನ್ನರಾಗಿ ತೋರಿಸತಕ್ಕ ಲಕ್ಷಣವೇನಾದರೂ ಇದ್ದರೆ ಅದು ಅವರ ಗಾಂಭೀರ್ಯ. ಅದಕ್ಕೆ ಸರಿಯಾದುದು ಎಂದರೆ ಅವರ ಅನನ್ಯ ಅಸಾಧಾರಣ ವಾಕ್‌ಪಟುತ್ವ ಒಂದೇ. ಸಮಾಜ ಸುಧಾರಣೆಯ ವಿಷಯಗಳ ಸಂಬಂಧದಲ್ಲಿ ನಾವು ನಿಧಾನವಾಗಿ ಸಾಗಬೇಕು ಎಂದು ಅವರು ಹೇಳುತ್ತಾರೆ. ಆ ಬಗ್ಗೆ ನನ್ನ ಸಂಪೂರ್ಣ ಒಪ್ಪಿಗೆಯುಂಟು. ಆ ವಿಚಾರಾಂಶದ ಬಗ್ಗೆ ನನಗೆ ಎಳ್ಳಷ್ಟೂ ಸಂದೇಹವಿಲ್ಲ. ಆದರೆ ಈ ವಿಧೇಯಕವು ಇಷ್ಟೊಂದು ನಿಧಾನವಾಗಿ ಸಾಗಿದೆಯಲ್ಲ, ಇಷ್ಟು ಹೊತ್ತಿಗಾಗಲೆ ಅದು ತೀರ್ಣವಾಗಬೇಕಾಗಿತ್ತು ಎಂದು ನಮ್ಮಲ್ಲಿ ಕೆಲವರು ದೂರಿದ್ದುಂಟು. ನನಗೆ ತಿಳಿದಿರುವಷ್ಟು ಮಟ್ಟಿಗೆ, ಈ ವಿಧೇಯಕವು ಅಥವಾ ಅದರ ಪ್ರಮುಖ ಉಪಭಾಷೆಗಳು ಈ ಸದನದ ಅಥವಾ ಅದರ ಪೂರ್ವ ಸದನದ ಮುಂದೆ ಮತ್ತು ಇಡೀ ದೇಶದ ಮುಂದೆ ಬಾರ್‌ನ ಸದಸ್ಯರೂ ಸೇರಿದಂತೆ, ಸರಿಸುಮಾರು ಎಂಟು ವರ್ಷಗಳಿಂದಲೂ ಇದೆ. ಆದ್ದರಿಂದ, ಈ ವಿಧೇಯಕವು ಈ ಸದನದ ಮೇಲೆ, ದೇಶದ ಮೇಲೆ, ಏಕಾಏಕಿ ಬಂದು ಎರಗಿದೆಯೆಂದು ಹೇಳುವುದು ಸಾಧ್ಯವಿಲ್ಲ.

ನನಗೆ ಸರಿಯಾಗಿ ನೆನಪಿರುವ ಹಾಗೆ ೧೯೪೫ರಲ್ಲಿ ಮಹಾ ಚುನಾವಣೆಗಳ ಸಮಯಕ್ಕೆ, ನಾನು ಸಾಮಾಜಿಕ ಸುಧಾರಣೆಗಳನ್ನು ಬೆಂಬಲಿಸುತ್ತೇನೆ ಎಂಬ ಕಾರಣಕ್ಕಾಗಿ, ನಾನು ಹಾಗೂ ಶಾಸನದ ಕ್ರೋಡೀಕರಣದ ಸಮರ್ಥಕನು ಎಂಬ ಕಾರಣಕ್ಕಾಗಿ ನನ್ನನ್ನು ವಿರೋಧಿಸಲಾಯಿತು. ನಾನು ಚುನಾಯಿತನಾಗಿ ಬಂದಿರುವ ಮತ್ತು ಇನ್ನೂ ಇಲ್ಲಿಯೇ ಇರುವ ಸಂಗತಿಯೇ ಸಾಕು, ನನ್ನ ಜತೆ ನನ್ನ ಚುನಾವಣಾ ಕ್ಷೇತ್ರದ ಅಭಿಪ್ರಾಯಗಳನ್ನು ತಂದಿರುವೆನೆಂಬುದಕ್ಕೆ ಸ್ಪಷ್ಟ ಸಂಕೇತ.

ನನ್ನ ಸ್ನೇಹಿತ ಪಂಡಿತ ಮೈತ್ರಾ ಅವರು ಈ ಸದನ ಈ ವಿಧೇಯಕವನ್ನು ಚರ್ಚಿಸಲು ಸಕ್ಷಮವಲ್ಲ ಎಂಬ ಅಂಶವನ್ನು ವಾದಿಸಿದ್ದಾರೆ. ಕಳೆದ ಹದಿನೈದು ವರ್ಷಗಳ ಅವಧಿಯಲ್ಲಿ ಈ ಆಕ್ಷೇಪವನ್ನು ನಾನು ಅನೇಕ ಸಲ ಕೇಳಿದ ನೆನಪುಂಟು. ಸದನದ ಮುಂದೆ ಒಂದು ಸಾಮಾಜಿಕ ಸುಧಾರಣೆಯ ವಿಧೇಯಕವನ್ನು ಮಂಡಿಸಿದಾಗಲೆಲ್ಲ ಇದೇ ಆಕ್ಷೇಪವನ್ನು ಎತ್ತಿದ್ದುಂಟು. ಅಂಥ ಆಕ್ಷೇಪಗಳ ಪರಿಣಾಮ ಏನಾಯಿತು, ಪ್ರತಿಯೊಬ್ಬರಿಗೂ ಗೊತ್ತು. ಈ ಸದನವು ಸ್ವತಂತ್ರ ಭಾರತದ ಸಂವಿಧಾನವನ್ನು ತೀರ್ಣಗೊಳಿಸಲು ಸಕ್ಷಮ ಆಗಿದ್ದ ಪಕ್ಷದಲ್ಲಿ, ಈ ಶಾಸನವನ್ನು ತೀರ್ಣಗೊಳಿಸಲು ಅದೇಕೆ ಸಕ್ಷಮವಲ್ಲ ಎಂಬ ವಿಚಾರ ನನಗೆ ಅರ್ಥವಾಗುತ್ತಿಲ್ಲ. ತಮ್ಮ ವಾದಕ್ಕೆ ವ್ಯಕ್ತಿಗತ ವಿನಂತಿಯನ್ನು ಸಹ ಸೇರಿಸುವ ಆಶಯದಿಂದಲೆ ಏನೋ, ನನ್ನ ಮಾನ್ಯ ಸ್ನೇಹಿತ ಪಂಡಿತ ಮೈತ್ರಾ ಅವರು ಡಾ॥ ರಾಜೇಂದ್ರ ಪ್ರಸಾದ್ ಅವರು ವ್ಯಕ್ತಗೊಳಿಸುವ ಅಭಿಪ್ರಾಯಗಳನ್ನು

ಉಲ್ಲೇಖಿಸುತ್ತಾರೆ. ಡಾ. ರಾಜೇಂದ್ರ ಪ್ರಸಾದ್ ಅವರ ಸಂದರ್ಭದಲ್ಲಿ, ನನಗೆ ವಾಸ್ತವವಾಗಿ ಈ ಸದನದಲ್ಲಿರುವ ಸಕಲ ಸದಸ್ಯರಿಗೆ, ವಿಶೇಷ ಗೌರವವಿದೆ. ಆದಾಗ್ಯೂ, ಈ ಸದನದ ಪ್ರತಿಯೊಬ್ಬ ಸದಸ್ಯನು, ತನ್ನ ಅಂತರಾತ್ಮನಿಗೆ, ಮತ್ತು ತನ್ನ ಚುನಾವಣಾ ಕ್ಷೇತ್ರಕ್ಕೆ ಮತ್ತು ಎಲ್ಲಕ್ಕೂ ಮಿಗಿಲಾಗಿ ತಾನು ವಾಸವಾಗಿರುವ ಈ ಮಹಾನ್ ದೇಶಕ್ಕೆ ಕೇವಲ ವಿಧಾಯಕನಾಗಿ ಅಷ್ಟೇ ಅಲ್ಲದೆ, ಹಿಂದೂ ಸಮಾಜದ ಪುನರ್ ನಿರ್ಮಾಣದ ಭವ್ಯ ಕನಸುಗಳನ್ನು ಕಾಣುವ ವ್ಯಕ್ತಿಯಾಗಿ ಸಲ್ಲಿಸಬೇಕಾದ ಒಂದು ಕರ್ತವ್ಯವುಂಟು ಮತ್ತು ಒಬ್ಬ ಪ್ರತಿಷ್ಠಿತ ವ್ಯಕ್ತಿಯ ಅಥವಾ ಇನ್ನೊಬ್ಬ ಪ್ರತಿಷ್ಠಿತ ವ್ಯಕ್ತಿಯ ವ್ಯಕ್ತಿಗತ ಅಭಿಪ್ರಾಯಗಳನ್ನು ಮಾತ್ರ ಪರಿಗಣನೆಗೆ ತೆಗೆದುಕೊಂಡರೆ ಅವನು ತನ್ನ ಕರ್ತವ್ಯದಲ್ಲಿ ವಿಫಲನಾಗುತ್ತಾನೆ. ನಾನು ಇದನ್ನು ಹೇಳುವಾಗ ಯಾವುದೇ ಅಗೌರವ ಭಾವನೆಯಿಂದ ಹೇಳುತ್ತಿಲ್ಲ. ಕಾರಣವೆಂದರೆ ಕರ್ತವ್ಯವು ಯಾರೇ ವ್ಯಕ್ತಿಯ ಬಗ್ಗೆ ಇರತಕ್ಕ ಯಾವುದೇ ಗೌರವ ಭಾವನೆಗಿಂತಲೂ ಮಿಗಿಲಾದುದು ಎಂದು ಭಾವಿಸಿದ್ದೇನೆ.

ಮುಖ್ಯವಾದ ವಿಚಾರಾಂಶವೆಂದರೆ, ಹಿಂದೂ ಶಾಸನದ ಕ್ರೋಡೀಕರಣಕ್ಕೆ ಸಮಯ ಪ್ರಾಪ್ತವಾಗಿಲ್ಲವೆ? ಸಾಮಾನ್ಯವಾಗಿ ಹಿಂದೂ ಶಾಸನ ಎಂದು ಕರೆಯಲಾಗುವ ಶಾಸನದ ಅಂಗಭಾಗಗಳಾಗಿರುವ ವಿವಾಹ ಪದ್ಧತಿ, ಮತ್ತು ಸ್ವೀಕಾರ, ವಾರಸಾ ಹಕ್ಕು ಮತ್ತು ಇತರ ಎಲ್ಲ ಪದ್ಧತಿಗಳಲ್ಲಿ ಸುಧಾರಣೆಗಳನ್ನು ಅಳವಡಿಸಲು ಸಮಯವು ಸನ್ನಿಹಿತವಾಗಿಲ್ಲವೆ? ಹಿಂದೂ ಶಾಸನದ ಸ್ರೋತಗಳು ಲೆಕ್ಕವಿಲ್ಲದಷ್ಟು. ಆ ವಿಷಯದ ಬಗ್ಗೆ ವಿಸ್ತಾರವಾಗಿ ಮಾತಾಡಬಯಸುವುದಿಲ್ಲ. ಸದನದ ಹೆಚ್ಚು ಸಮಯವನ್ನು ತೆಗೆದುಕೊಳ್ಳಲು ಇಷ್ಟಪಡುವುದಿಲ್ಲ. ಆದರೆ ಒಂದಿಷ್ಟು ಏಕರೂಪತೆ ಇರಬೇಕು. ಕಾನೂನಿನ ವ್ಯಾಖ್ಯೆಯ ಬಗ್ಗೆ ಕೆಲವು ಪರಿಭಾಷೆಗಳು ಇರಬೇಕು ಎಂಬ ಸ್ಪಷ್ಟ ಸಿದ್ಧಾಂತವು ಸ್ಥಾಪಿತವಾಗಿರುತ್ತದೆ. ಕಾನೂನು ಸ್ಪಷ್ಟವಾಗಿಲ್ಲದಿದ್ದರೆ, ಕಾನೂನು ಏಕರೂಪವಾಗಿರದಿದ್ದರೆ, ಸಮಾಜದ ಸ್ಥಿರತೆಗೆ ಧಕ್ಕೆಯುಂಟಾಗುತ್ತದೆ. ಒಂದು ನಿರ್ದಿಷ್ಟ ವಾದಕ್ಕೆ ಸಂಬಂಧಪಟ್ಟ ಹಾಗೆ ಐದಾರು ಉಚ್ಚ ನ್ಯಾಯಾಲಯಗಳ ವ್ಯಾಖ್ಯೆಗಳು ವಿಭಿನ್ನವಾಗಿದ್ದರೆ, ಇದೆಲ್ಲವನ್ನು ಕೊನೆಗಾಣಿಸತಕ್ಕ ಸಮಯವು ಸನ್ನಿಹಿತವಾಗಿದೆ ಎಂದು ನಾನು ಭಾವಿಸುತ್ತೇನೆ.

ಇಷ್ಟೇ ಅಲ್ಲದೆ, ನಾವೆಲ್ಲರೂ ಸೇರಿ ಹಿಂದೂ ಸಮಾಜವನ್ನು ವಿನಾಶಗೊಳಿಸಲು ಪ್ರಯತ್ನಿಸುತ್ತಿದ್ದೇವೆ ಎಂದು ಸೂಚ್ಯವಾಗಿ ಹೇಳಿದರು. ನನ್ನ ಸ್ವಂತ ಭಾವನೆ ಇಷ್ಟೆ. ಹಿಂದೂ ಸಮಾಜದೊಡನೆ ನಿಕಟ ಸಂಪರ್ಕವಿರುವ ೨೯೦ ಜನ ನಾವಿಲ್ಲಿ ಇದ್ದೇವೆ. ಇಲ್ಲಿ ನಾವು ಒಂದೆಡೆ ಸೇರಬಹುದು. ನಮ್ಮ ನಮ್ಮ ಅಭಿಪ್ರಾಯಗಳನ್ನು ಬಹಿರಂಗಗೊಳಿಸಬಹುದು, ವ್ಯಕ್ತಗೊಳಿಸಬಹುದು ಮತ್ತು ಒಂದು ಹೊಂದಾಣಿಕೆ ಅಥವಾ ಒಪ್ಪಂದಕ್ಕೆ ಬರಬಹುದು ಮತ್ತು ಫಲಿತಾಂಶವಾಗಿ ಹಿಂದೂ ಸಮಾಜದ ಉತ್ತರೋತ್ತರ ವಿಕಾಸವನ್ನು ಸುಭದ್ರಗೊಳಿಸಲು ನೆರವಾಗತಕ್ಕ ಒಂದು ಶಾಸನವನ್ನು ತೀರ್ಣಗೊಳಿಸಬಹುದು. ಮಹಾನುಭಾವರಾದ ಮನು, ಪರಾಶರ, ಯಾಜ್ಞವಲ್ಕ್ಯ ಇವರುಗಳು ತಮ್ಮ ಸ್ಮೃತಿಗಳನ್ನು ರಚಿಸುವಾಗ ಅವರಿಗೆ ನಮ್ಮಂತೆ, ನನ್ನ ಅಭಿಪ್ರಾಯದಲ್ಲಿ, ಯಾವುದೇ ವಿಧಾನ ಮಂಡಲದ ಸೌಕರ್ಯ ಇರಲಿಲ್ಲ. ಅವರು ನಿಸ್ಸಂದೇಹವಾಗಿಯೂ ಮಹಾನ್ ಮೇಧಾವಿಗಳು. ಆದರೆ ಅವರ ಜೊತೆಗೇ ಮಹಾನುಭಾವರ ವಂಶವೂ ಮರೆಯಾಯಿತು ಎಂದು ನಾನು ಒಪ್ಪಿಕೊಳ್ಳುವುದಿಲ್ಲ. ನನ್ನ ಎಡಗಡೆಗೆ ಕುಳಿತಿರುವ ವ್ಯಕ್ತಿ ಪಾಂಡಿತ್ಯದಲ್ಲೂ ಚಾರಿತ್ರ್ಯದಲ್ಲೂ ಎಷ್ಟು ದೊಡ್ಡವರು ಎಂದರೆ ಅವರನ್ನು ಪ್ರಾಚೀನ ಋಷಿಗಳು ಮತ್ತು ಶಾಸನಕರ್ತರ ಪೈಕಿ ಯಾರೊಬ್ಬರೊಡನೆ ನಾನು ಹೋಲಿಸಿದರೆ ತಪ್ಪಾಗಲಿಕ್ಕಿಲ್ಲ ಎಂದು ಭಾವಿಸುತ್ತೇನೆ. ಇಂದಿನ ದಿನ, ಅವರು ತಮ್ಮ ಜಾಣ್ಮೆಯ ಮತ್ತು ವಿದ್ಯೆಯ ಹೊರತಾಗಿ, ಈ ಎಲ್ಲ ೨೯೦ ವ್ಯಕ್ತಿಗಳ ಸಹಾಯ ಮತ್ತು ಸಹಕಾರ ಪಡೆದುಕೊಂಡರೆ, ನನ್ನ ಅನಿಸಿಕೆಯ ಮೇರೆಗೆ, ಅವರ ಕೈಗಳು ಬಲಗೊಳ್ಳುತ್ತವೆ ಮತ್ತು ಅವರ ಅಭಿಪ್ರಾಯಗಳು ಮೆಚ್ಚುಗೆಯಾಗುತ್ತವೆ,

ಸ್ವೀಕಾರಾರ್ಹವಾಗುತ್ತವೆ.

ನಾನು ಹೇಳಿದ ಹಾಗೆ, ಮುಖ್ಯ ವಿಚಾರಾಂಶ ಎಂದರೆ, ಕೆಲವು ನಿರ್ದಿಷ್ಟ ಶಾಸನದ ಕ್ರೋಡೀಕರಣಕ್ಕೆ ಸಮಯ ಪ್ರಾಪ್ತವಾಗಿದೆಯೆ. ಸಮಯ ಪ್ರಾಪ್ತವಾಗಿದ್ದರೆ, ಒಬ್ಬ ಮನುಷ್ಯನು ಕೋಡ್ ಅನ್ನು ಉದ್ಘೋಷಿಸುತ್ತಾನೆ ಮತ್ತು ದೇಶವು ಅದನ್ನು ಅಂಗೀಕರಿಸುತ್ತದೆ ಅಥವಾ ಪ್ರಜಾತಂತ್ರದ ರೀತ್ಯಾ ಚರ್ಚೆಯ ಪ್ರಕ್ರಿಯೆಯ ಮೂಲಕ ಅಂಗೀಕರಿಸಲಾಗುತ್ತದೆ ಮತ್ತು ಆ ತರುವಾಯ ದೇಶವು ಅದನ್ನು ಅಂಗೀಕರಿಸುತ್ತದೆ. ಇವೆರಡರಲ್ಲಿ ಯಾವುದಾದರೂ ಸರಿಯೆ, ವ್ಯತ್ಯಾಸವೇನೂ ಆಗುವುದಿಲ್ಲ. ಮುಖ್ಯ ವಿಷಯವೆಂದರೆ, ಅದನ್ನು ಆವೇಗರಹಿತವಾಗಿ, ಪೂರ್ವಾಗ್ರಹವಿಲ್ಲದೆಯೆ ಮತ್ತು ಯಾವುದೇ ಉಗ್ರವಾದಿ ವಿಚಾರಗಳಲ್ಲಿ ಗಮನ ಹರಿಯದೆಯೆ ಆ ಶಾಸನವನ್ನು ಕುರಿತು ತೀರ್ಮಾನ ಕೈಗೊಳ್ಳಬೇಕು. ಈ ಸದನದಲ್ಲಿ ನಾವು ಅದನ್ನು ಕೇವಲ ಅದರ ಗುಣಗಳನ್ನು ಆಧರಿಸಿ ನಿರ್ಣಯಿಸಬೇಕೇ ಹೊರತು ಭಾವನೆಗಳನ್ನು ಆಧರಿಸಿ ನಿರ್ಣಯಿಸಕೂಡದು.

ಆಖೈರಿನಲ್ಲಿ, ಈ ಕೋಡ್‌ನಲ್ಲಿ ಇರುವುದಾದರೂ ಏನು? ಉತ್ತರಾಧಿಕಾರದ ವಿಷಯವನ್ನು ಹೊರತುಪಡಿಸಿದರೆ, ನಾವು ಪದೇ ಪದೇ ಆಲಿಸಿಲ್ಲದ ಮತ್ತು ಮುಖ್ಯ ಅಂಶಗಳಲ್ಲಿ ಒಪ್ಪದಿರುವ ಇತರ ಯಾವ ವಿಷಯವೂ ಇಲ್ಲ. ನನ್ನ ಅಭಿಪ್ರಾಯದಲ್ಲಿ ವಿವಾಹಕ್ಕೆ ಕೇಂದ್ರ ಬಿಂದುವಾಗಿರುವ ಎರಡು ಅಂಶಗಳುಂಟು. ಒಂದು ವಿವಾಹ; ಇನ್ನೊಂದು ಹಿಂದೂ ಶಾಸನದಿಂದ ಸಹದಾಯಿಕೆ ಅಥವಾ ದಾಯಾದಿ ಪದ್ಧತಿಯನ್ನು ಕೊನೆಗೊಳಿಸುವುದು. ವಿವಾಹಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಇದರಲ್ಲಿ ಕ್ರಾಂತಿಕಾರಕವಾದುದು ಏನೂ ಇಲ್ಲ. ಈಗಿನ ದಿನಗಳಲ್ಲಿ ಪ್ರತಿಯೊಂದು ಅಧಿಕಾಧಿಕ ರಾಜ್ಯ ನಿಯಂತ್ರಣದತ್ತ ತೋರಿಸುತ್ತಿರುವಾಗ, ಮತ್ತೆ ರಾಷ್ಟ್ರೀಕರಣವನ್ನು ಕುರಿತು ಮಾತಾಡುತ್ತಿರುವಾಗ, ಖಾಸಗೀ ವಲಯಕ್ಕೆ ಉಳಿದಿರುವ ಉದ್ಯಮ ಎಂದರೆ ವಿವಾಹ ಒಂದೇ ಎಂದು ನಾನು ಭಾವಿಸುತ್ತೇನೆ.

**ಮಿ॥ ನಝೀರುದ್ದೀನ್ ಅಹಮ್ಮದ್ :** ಅದೂ ರಾಷ್ಟ್ರೀಕರಣವಾಗಲಿ.

**ಮಾನ್ಯ ಶ್ರೀ ಎನ್. ವಿ. ಗಾಡ್ಗೀಳ್ :** ಇಲ್ಲಿ, ಈ ವಿಧೇಯಕದಲ್ಲಿ ಒಂದು ಸುವರ್ಣ ಮಾಧ್ಯಮವನ್ನು ಗೊತ್ತುಪಡಿಸಲಾಗಿದೆ. ಈ ವಲಯದ ಆಗಮನ ಮತ್ತು ನಿರ್ಗಮನ ಇವುಗಳನ್ನು ಇಂತು ವಿನಿಯಮಗೊಳಿಸಲಾಗಿದೆಯಲ್ಲ, ಎಷ್ಟೆಂದರೆ ಪಶ್ಚಿಮ ದೇಶಗಳಿಂದ ಬರುವ ಯಾರೇ ಆಧುನಿಕ ಮನುಷ್ಯನು ನಮ್ಮ ಹಿಂದುಳಿದಿರುವಿಕೆಯನ್ನು ಕಂಡು ಖಂಡಿತವಾಗಿಯೂ ನಗುತ್ತಾನೆ. ವಿವಾಹ ಉಭಯ ಪಕ್ಷಗಳಿಗೂ ಅತ್ಯುನ್ನತ ಸುಖವನ್ನು ಸುಭದ್ರಗೊಳಿಸುವ ಆಶಯ ಹೊಂದಿರುವ ವಿಷಯವಾಗಿದ್ದರೆ, ಸ್ವಭಾವ– ವಿಸಂಗತಿಯು ವಿವಾಹ ವಿಚ್ಛೇದನದ ಆಧಾರಗಳ ಪೈಕಿ ಒಂದಾಗಿರಬೇಕು ಎಂದು ಅವನು ಹೇಳಬಹುದು. ನೀವು ಆತನಕ ಹೋಗಿದ್ದೀರ? ಈ ವಿಧೇಯಕದಲ್ಲಿ ಇರುವ ಆಧಾರಗಳು ಬಹಳ ಸಂಕೀರ್ಣವಾಗಿವೆ. ವಾಸ್ತವವಾಗಿ, ನನ್ನ ಪ್ರಕಾರ, ಇದೊಂದು ಸಾಧಾರಣ ಕ್ರಮ (ವ್ಯವಸ್ಥೆ). ಒಬ್ಬಳು ಹೆಂಡತಿ ಒಬ್ಬ ಕುಷ್ಠ ರೋಗಿ, ಒಬ್ಬ ಹುಚ್ಚ ಮುಂತಾದವರ ಜತೆ ಬಾಳು ಮುಂದುವರಿಸುತ್ತಾಳೆ ಎಂದು ಅಪೇಕ್ಷಿಸುತ್ತೀರ? ಈ ವಿಧೇಯಕದಲ್ಲಿ ಸ್ಮೃತಿಗಳ ಉಪಬಂಧಗಳಿಗೆ ವಿರುದ್ಧವಾಗಿರುವ ಅಥವಾ ಹಿಂದೂ ಸಮಾಜ ಮತ್ತು ಸಂಸ್ಕೃತಿಯ ಲಕ್ಷಣ ವಿಶೇಷಕ್ಕೆ ಅಸಂಗತವಾಗಿರುವ ಯಾವ ಸಂಗತಿಯೂ ಇಲ್ಲ. ನಮ್ಮಲ್ಲಿ ಅಧಿಕಾಂಶ ಜನರಿಗೆ ಆ ಸ್ಮೃತಿ ಗೊತ್ತುಂಟು:

*ನಷ್ಟೇ ಮೃತೇ ಪ್ರಬಜಿತ್, ಕ್ಲೀಬೇಚ ಪತಿತೋ ಪತೋ. ಪತೀಃ ಅನ್ಯತು ತು ನಾರೀನಾಮ್ ವಿಧೀಯತೋ.*

ಇವು ಪ್ರಾಚೀನ ಹಿಂದೂ ಪಾಠದಲ್ಲಿ ಕೊಟ್ಟಿರುವ ಆಧಾರಗಳು. ಇನ್ನು ಅದಕ್ಕೆ ಸರಿಸುಮಾರು ಸಮವಾಗಿರುವ ಯಾವುದೇ ಅಂಶವು ಇಂದಿನ ಹಿಂದೂ ಸಮಾಜದಲ್ಲಿ ಲಭ್ಯವಿಲ್ಲದಿದ್ದರೆ, ಅದಕ್ಕೆ ಕಾರಣ

ನಮ್ಮ ಬದುಕು ನಿಂತ ನೀರಿನಂತಾಗಿರುವುದು, ಮಾತ್ರವಲ್ಲದೆ ಈ ಎಲ್ಲ ಗತಿಶೀಲ ಪ್ರೇರಣೆಗಳು ತಮ್ಮ ಕಾರ್ಯನಿರ್ವಹಣೆಯನ್ನು ನಿಲ್ಲಿಸಿಬಿಟ್ಟಿವೆ. ಸಾರಾಂಶದಲ್ಲಿ ಈ ವಿಷಯವು ಒಂದು ಸಮಾಜದ ಎಷ್ಟು ಭಾಗದ ಮೇಲೆ ಪರಿಣಾಮ ಬೀರುತ್ತದೆ? ನನ್ನದೇ ಪ್ರಾಂತದ ಬಗ್ಗೆ ಹೇಳುವುದಾದರೆ ಶೇಕಡ ೯೫ರಷ್ಟು ಜನ ಸಮುದಾಯದಲ್ಲಿ ಈಗಾಗಲೇ ಒಂದು ಬಗೆಯ ವಿವಾಹ ವಿಚ್ಛೇದನ ಪದ್ಧತಿ ಇದೆ. ಕಾನೂನು ಉಪಬಂಧ ಮಾತ್ರ ಆಗಿಲ್ಲ, ಆದರೆ ರೂಢಿಯಾಗಿ. ಆದರೆ ಮೇಲ್ವರ್ಗದ ಶೇಕಡ ಎರಡು ಮೂರರಷ್ಟು ಜನ ಮಾತ್ರ ಈ ಉಪಬಂಧವನ್ನು ವಿರೋಧಿಸುತ್ತಾರೆ. ನಿಷ್ಪಕ್ಷ ದೃಷ್ಟಿಯಿಂದ ನೋಡಿದರೆ ಇಡೀ ಸುರಕ್ಷಿತ ವಿಭಾಗವು ಅದನ್ನು ಸಂಪೂರ್ಣವಾಗಿ ಸಮರ್ಥಿಸುತ್ತದೆ.

ಒಂದೆಡೆಯಲ್ಲಿ ವಿವಾಹ ವಿಚ್ಛೇದನವನ್ನು ಅತ್ಯಂತ ಸುಲಭಗೊಳಿಸಬಾರದು ಮತ್ತು ಸ್ವಭಾವ ವಿಸಂಗತಿ ಆಧಾರಗಳಲ್ಲಿ ಒಂದು ಆಧಾರ ಆಗಿರಕೂಡದು ಎಂದು ಒಪ್ಪುತ್ತೇನೆ. ಇನ್ನೊಂದೆಡೆ, ಅದೇ ಸಮಯಕ್ಕೆ ವಿವಾಹವು ಝೀವಾವಧಿ ಶಿಕ್ಷೆಯಂತಾಗುವ ಪರಿಸ್ಥಿತಿಯು ಬರುವುದುಂಟು. ಆದರೆ ಹಾಗೆ ಝೀವಾವಧಿ ಶಿಕ್ಷೆಯೆಂದು ಪರಿಗಣಿಸಕೂಡದು ಎಂದು ನಾನು ಹೇಳುತ್ತೇನೆ. ಸಾರಾಂಶದಲ್ಲಿ, ವಿವಾಹಕ್ಕೆ ಒಂದು ವ್ಯಕ್ತಿಗತ ಅಂಶವು ಇರುವ ಹಾಗೆಯೇ, ಅದಕ್ಕೆ ಸಾಮಾಜಿಕ ಅಂಶವೂ ಇರುತ್ತದೆ. ಗಂಡ ಹೆಂಡಿರಲ್ಲಿ ಕಿರಿಕಿರಿಗಳು, ಕಹಿ ಭಾವನೆಗಳು ಪ್ರಾರಂಭವಾಗಿ, ಸಾಮಂಜಸ್ಯವು ಮರೆಯಾದರೆ, ಅದರ ಪರಿಣಾಮವು ಕುಟುಂಬದ ಎಲ್ಲೆಗಳಿಗೆ ಮಾತ್ರ ಸೀಮಿತವಾಗಿ ಉಳಿಯುವುದಿಲ್ಲ. ಅದಕ್ಕೆ ಇನ್ನಷ್ಟು ವಿಸ್ತೃತವಾದ ಅನ್ವಯವುಂಟು, ಪರಿಣಾಮವುಂಟು. ಸಮಾಜ ಮತ್ತು ಸುತ್ತಮುತ್ತಲ ಪರ್ಯಾವರಣವು ಸಹ ಪ್ರತಿಕೂಲ ಆಘಾತವನ್ನು ಅನುಭವಿಸಬೇಕಾಗುತ್ತದೆ. ಒಂದು ಶಾಸನವನ್ನು ತೀರ್ಣಗೊಳಿಸಲು ಇಚ್ಛಿಸುವ ಶಾಸನಕರ್ತರು, ಆ ಶಾಸನವು ತಾನು ಆಲೋಚಿಸಿದಂಥ ಫಲಿತಾಂಶಗಳನ್ನು ಕೊಡುವ ಸಾಮರ್ಥ್ಯವನ್ನು ಹೊಂದಿರಬೇಕು ಎಂದು ಬಯಸುವುದಾದರೆ, ಆಗ ಈವರೆಗೂ ನಮ್ಮಲ್ಲಿ ಇರುವ ಶಾಸನವು ನಾವು ಕೋರಿದ ಫಲಿತಾಂಶಗಳನ್ನು ನಿಜವಾಗಿಯೂ ಕೊಟ್ಟಿದೆಯೇ ಹೇಗೆ ಎಂದು ಮೊದಲು ತೀರ್ಮಾನಿಸಬೇಕು. ಅದು ಆತ್ಮನಿರೀಕ್ಷಣೆಯ ವಿಷಯ. ಇಂದು, ವಿವಾಹ ಬಂಧನದಿಂದ ಹೊರಬರಲು ಸಂತೋಷದಿಂದ ಸಿದ್ಧರಾಗಿಲ್ಲದಿದ್ದರೆ, ಅವರಿಗೆ ಅಲ್ಲಿಂದ ಹೊರಬರಲು ದಾರಿಯನ್ನು ಉಪಬಂಧಿಸುವುದಾದರೆ, ನಾನು ಮಾಡುತ್ತಿರುವುದು, ನನ್ನ ಪ್ರಕಾರ, ನಮ್ಮ ಸಾಮಾಜಿಕ ಕರ್ತವ್ಯ ನಿರ್ವಹಣೆಯೇ.

ವಿವಾಹಕ್ಕೆ ಸಂಬಂಧ ಬರುವಷ್ಟರ ಮಟ್ಟಿಗೆ, ನಾವು ಬೇರೆ ಬೇರೆ ಜಾತಿಗಳಿಗೆ ಸೇರಿದ ವ್ಯಕ್ತಿಗಳ ವಿವಾಹಕ್ಕೆ ಆಕ್ಷೇಪಿಸುವುದು ಹೇಗೆ ನನಗೆ ಅರ್ಥವಾಗುತ್ತಿಲ್ಲ. ಇಸವಿ ಸನ್ ೧೯೪೯ರಲ್ಲಿ ಒಬ್ಬ ಮನುಷ್ಯನು ಎದ್ದು ನಿಂತು–ನೋಡಿ, ವಿಭಿನ್ನ ಜಾತಿಗಳ ನಡುವಣ ವಿವಾಹಗಳನ್ನು ಕಾನೂನು ಸಮ್ಮತಗೊಳಿಸುವಂತಿಲ್ಲ–ಎಂದು ಹೇಳಿದರೆ, ಅದು ನಮ್ಮ ಪುರೋಗಾಮಿ ನಿಲುವಿನ ಮೇಲೆ ಮಾಡಿದ ವಿವಾದಪೂರ್ಣ ವ್ಯಾಖ್ಯಾನವಾಗುವುದಿಲ್ಲವೆ? ಸ್ವತಂತ್ರ ಭಾರತದಲ್ಲಿ, ನಾನು ಭಾವಿಸುವಂತೆ, ಇರುವುದು ಒಂದೇ ಜಾತಿ, ಸ್ವತಂತ್ರ ಪುರುಷರ ಜಾತಿ; ಮತ್ತು ಒಂದು ಧರ್ಮ, ಮಾನವತಾ ಧರ್ಮ. (ಶ್ರೀ ಹೆಚ್.ವಿ. ಕಾಮತ್: ಮತ್ತು ಸ್ವತಂತ್ರ ಮಹಿಳೆಯರು). ಈ ಸುಧಾರಣೆಯು ಈ ದೇಶದ ಇದಿರು ಬಹುಕಾಲದಿಂದಲೂ ಇರುವಾಗ, ಇದರಿಂದಾಗಿ ಹಿಂದೂ ಸಮಾಜದ ವಿಸರ್ಜನೆ ಆಗುತ್ತದೆಯೆಂದು ಯಾರು ಭಾವಿಸುತ್ತಾರೋ ಅವರು ಪ್ರಗತಿಯ ಶತ್ರುಗಳು. ಅಂಥ ಹಿಂದೂ ಸಮಾಜವನ್ನು ನನ್ನ ಅಭಿಪ್ರಾಯದಲ್ಲಿ ವಿಸರ್ಜನೆ ಮಾಡುವುದೇ ಕ್ಷೇಮ. ಒಂದು ನಿರ್ದಿಷ್ಟ ಜಾತಿಯಲ್ಲಿ ಹುಟ್ಟಿದವನನ್ನು ಅಸ್ಪೃಶ್ಯ ಎಂದು ಕರೆಯಬೇಕು ಎಂದರೆ ಇದು ಯಾವ ಸೀಮೆಯ ನ್ಯಾಯ? ಪೊರಕೆಯನ್ನು ಹಿಡಿದುಕೊಂಡು ಹುಟ್ಟಿದ ಶಿಶುವನ್ನು ನಾನೆಲ್ಲೂ ನೋಡಿಲ್ಲ.

ಬ್ರಾಹ್ಮಣ ಕುಟುಂಬದಲ್ಲಿ ಹಾಗೆಯೇ ಯಜ್ಞೋಪವೀತವನ್ನು ಧಾರಣ ಮಾಡಿ ಹುಟ್ಟಿದ ಶಿಶುವನ್ನು ಸಹ ನಾನು ನೋಡಿಲ್ಲ. ಅಥವಾ ಮಾರವಾಡಿ ಕುಟುಂಬದಲ್ಲಿ ತಕ್ಕಡಿಯನ್ನು ಹಿಡಿದುಕೊಂಡು ಹುಟ್ಟಿದ ಶಿಶುವನ್ನು ನೋಡಿಲ್ಲ.

*ಜನ್ಮನಾ ಜಾಯತೇ ಶೂದ್ರಾ:। ಸಂಸ್ಕಾರಾತ್ ದ್ವಿಜೋಚ್ಯತೇ ವಿದ್ಯಾಯ ಯಾತಿ ವಿಪ್ರತ್ವಂ ತ್ರೋಭಿ: ಶ್ರೀತಯೋಚ್ಯತೋ ಚವೇ।*

ಎಲ್ಲರೂ ಶೂದ್ರರಾಗಿಯೇ ಹುಟ್ಟುತ್ತಾರೆ. ಸಂಸ್ಕಾರದ ತರುವಾಯ ಮನುಷ್ಯನು ಮೇಲಿನ ಸ್ಥಾನವನ್ನು ಪಡೆಯುತ್ತಾನೆ ಮತ್ತು ಅವನು ವಿದ್ಯೆಯ ಮತ್ತು ಸಾಧನೆಗಳ ವಿವಿಧ ಹಂತಗಳನ್ನು ಉತ್ತೀರ್ಣನಾಗಿ ಹೋದ ತರುವಾಯ ಶ್ರೋತ್ರಿಯನು ಆಗುತ್ತಾನೆ. ಇಲ್ಲಿದೆ ಹಿಂದೂ ಧರ್ಮದ ನಿಜವಾದ ಅಂತಃಸತ್ವ. ಇಲ್ಲಿ ಮತ್ತು ಆಚೆಗೂ ಇರುವ ನಮ್ಮ ಪ್ರಾಚೀನ ಸನಾತನಿಗಳು ವ್ಯಕ್ತಗೊಳಿಸುವ ಅಂತಃಸತ್ವವಲ್ಲ. ಈ ಮಹಾನ್ ದೇಶದ ಚರಮ ಧ್ಯೇಯ ಎಂದು ಘೋಷಿಸಲಾದ ವರ್ಗರಹಿತ ಸಮಾಜವು ನಮ್ಮ ಉದ್ದೇಶ ಆಗಿದ್ದರೆ, ನಾವುಗಳೆಲ್ಲರೂ ಸೇರಿ, ಆ ದಿಶೆಯಲ್ಲಿ ಯಥೋಚಿತವಾದ ಸಾಮಾಜಿಕ ಸಂಸ್ಥೆಗಳನ್ನು ಮತ್ತು ರಾಜಕೀಯ ಸಂಸ್ಥೆಗಳನ್ನು ರೂಪಿಸಿ ವಿಕಾಸಗೊಳಿಸಬೇಕಲ್ಲವೆ? ಆದ ಕಾರಣ, ಈ ಕೋಡ್‌ನಲ್ಲಿ ವಿವಾಹಕ್ಕೆ ಸಂಬಂಧಿಸಿದಂತೆ ಅದೇನೇ ಶಿಫಾರಸುಗಳನ್ನು ಮಾಡಿದ್ದರೂ ಅತ್ಯಂತ ಅಗತ್ಯವಾಗಿವೆಯಷ್ಟೇ ಅಲ್ಲದೆ, ಅವು ಸಾಕಷ್ಟು ಪುರೋಗಾಮೀ ಆಗಿಲ್ಲ ಎಂದು ನಾನು ಭಾವಿಸುತ್ತೇನೆ. ಆದರೆ ನನ್ನ ಮಾನ್ಯ ಸ್ನೇಹಿತರಾದ ಶ್ರೀ ಮೈತ್ರಾ ಅವರ ಜತೆ ಒಪ್ಪಿಕೊಳ್ಳುವ ಹಾಗೆ, ಸಾಮಾಜಿಕ ವಿಷಯಗಳಲ್ಲಿ ನಾವು ನಿಧಾನವಾಗಿ ಮುನ್ನಡೆಯಬೇಕು. ಆದ್ದರಿಂದ ಈಗಿನ ಮಟ್ಟಿಗೆ ಈ ಸ್ಥಿತಿಯನ್ನು ಸ್ವೀಕರಿಸುತ್ತೇನೆ.

ಈ ಎಲ್ಲ ಏರ್ಪಾಡಿನ ಪೈಕಿ ಅತ್ಯಂತ ವಿವಾದಾಸ್ಪದ ವಿಷಯ ಎಂದರೆ ಹಿಂದೂ ಸಮಾಜದಿಂದ ದಾಯಾದಿತ್ವದ ನಿರ್ಮೂಲನ. ಸಾರ್ವಜನಿಕ ಅಭಿಪ್ರಾಯವನ್ನು ಕುರಿತು ಏನೇನೋ ಹೇಳಲಾಯಿತು. ಪತ್ರಿಕೆಗಳು ಮತ್ತು ಬಾರ್ ಇವುಗಳ ಬಗ್ಗೆ ಏನೇನೋ ಹೇಳಲಾಯಿತು. ನನ್ನದೇ ಪ್ರಾಂತದಲ್ಲಿ "ಧರ್ಮ ನಿರ್ಣಯ ಮಂಡಲ" ಎಂಬ ಸಂಘವುಂಟು. ಅದರಲ್ಲಿ ಮಹಾಮಹೋಪಾಧ್ಯಾಯರು, ತರ್ಕತೀರ್ಥರು, ವಿದ್ಯಾವಾಚಸ್ಪತಿಗಳು ಎಂಬ ಅಭಿಧಾನಗಳುಳ್ಳ ಪ್ರಕಾಂಡ ಪಂಡಿತರೂ ವಿದ್ಯಾವಿಶಾರದರೂ ಇದ್ದಾರೆ. ಇತ್ತೀಚೆಗೆ ಅವರು ಒಂದು ನಿರ್ಣಯವನ್ನು ಅಂಗೀಕರಿಸಿ ಅದರಲ್ಲಿ ಹಿಂದೂ ಕೋಡ್ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾರೆ:

"ಹಿಂದೂ ಕೋಡ್ ವಿಧೇಯಕವು ಸಭೆಯ ಈ ಅಧಿವೇಶನದಲ್ಲಿ ಪರ್ಯಾಲೋಚನೆಯ ಅವಸ್ಥೆಯಲ್ಲಿರುವಾಗ; ಪ್ರಸ್ತುತ ಕೋಡ್‌ನ ಚೌಕಟ್ಟಿನಲ್ಲಿ ಅಳವಡಿಸಲು ಉದ್ದೇಶಿಸಲಾದ ಸಾರ್ವತ್ರಿಕ ಉದಾರೀಕರಣ ಪ್ರಭಾವದ ಸಂಬಂಧದಲ್ಲಿ, ಧರ್ಮ ನಿರ್ಣಯ ಮಂಡಲವು ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ. ಮಂಡಲವು ಈ ಪ್ರಭಾವವನ್ನು ಕೆಳಕಂಡ ವಿಷಯಗಳ ಸಂಬಂಧದಲ್ಲಿ, ಸ್ಪಷ್ಟವಾಗಿ ಗಮನಿಸುತ್ತದೆ:

(a) ಜಂಟಿ ಪಿತ್ರಾರ್ಜಿತ ಮತ್ತು ಸ್ವಯಾರ್ಜಿತ ಆಸ್ತಿಗೆ ಸಂಬಂಧಿಸಿದ ವಿಭಿನ್ನತೆ.

(b) ಮಗ ಮತ್ತು ಮಗಳ ಬಗ್ಗೆ ವಿಭಿನ್ನ ವ್ಯವಹಾರ.

(c) ಮಹಿಳೆಯ ಸಂಪದದ ಅರ್ಥ ವಿವರಣೆಯಲ್ಲಿನ ತಾಂತ್ರಿಕ ತೊಂದರೆಗಳು.

(d) ವಾರಸುದಾರಿಕೆಯ ಮಿತಾಕ್ಷರ ಮತ್ತು ದಾಯಭಾಗ ನಿಯಮಗಳ ವಿಭಿನ್ನತೆ.

ಈ ಒಂದು ಹಿಂದೂ ಕೋಡ್ ಅನ್ನು ಇಡೀ ಭಾರತಕ್ಕೆ ಅನ್ವಯಿಸುವ ಮೂಲಕ, ಮೇಲ್ಕಂಡ ಸುಧಾರಣೆಗಳು ನ್ಯಾಯಾಲಯದಲ್ಲಿನ ವ್ಯಾಜ್ಯಗಳನ್ನು ಕಡಿಮೆಗೊಳಿಸುವಲ್ಲಿ ಮತ್ತು ರಾಷ್ಟ್ರೀಯ ಭಾವನೆಯನ್ನು

ಪ್ರೋತ್ಸಾಹಿಸುವಲ್ಲಿ ಮತ್ತು ಒಂದು ಬಗೆಯ ಏಕತಾ ಭಾವನೆಯನ್ನು ಸೃಷ್ಟಿಸುವಲ್ಲಿ ಸಾಕಷ್ಟು ಯಶಸ್ವಿಯಾಗುತ್ತವೆಯೆಂದು ಮಂಡಲವು ಭಾವಿಸುತ್ತದೆ. ಚರಿತ್ರೆಯಲ್ಲಿ ಇದೇ ಮೊಟ್ಟಮೊದಲ ಬಾರಿಗೆ ಇದು ಈ ದಿಶೆಯಲ್ಲಿ ಕೈಗೊಂಡ ಪ್ರಪ್ರಥಮ ಕ್ರಮ ಎಂದು ಮಂಡಲವು ತನ್ನ ಅಭಿಪ್ರಾಯವನ್ನು ದಾಖಲಿಸುತ್ತದೆ.

ಈ ಕಾರಣಕ್ಕಾಗಿಯೇ, ಸಣ್ಣ ವಿವರಗಳ ಸಂಬಂಧದಲ್ಲಿ ಅನೇಕ ಭಿನ್ನಾಭಿಪ್ರಾಯಗಳಿದ್ದರೂ ಈ ಕೋಡ್ ಅನ್ನು ಈಗಿರುವ ಸ್ಥಿತಿಯಲ್ಲಿ ಮಂಡಲವು ಹೃತ್ಪೂರ್ವಕವಾಗಿ ಸಮರ್ಥಿಸುತ್ತದೆ".

**ಬಾಬು ರಾಮ ನಾರಾಯಣ ಸಿಂಗ್:** ಅವರು ಯಾವ ಜನಗಳನ್ನು ಪ್ರತಿನಿಧಿಸುತ್ತಾರೆ?

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್:** ಅವರು ಮಹಾನ್ ವಿದ್ವಾಂಸರು ಮತ್ತು ಸಂಪ್ರದಾಯ ಶರಣರು.

**ಮಾನ್ಯ ಶ್ರೀ ಎನ್. ವಿ. ಗಾಡ್ಗೀಳ್:** ಆದರೆ ಸುಜ್ಞಾನ ಸಂಪನ್ನರಾದ ಸಂಪ್ರದಾಯ ಶರಣರು.

ಮಧ್ಯಾಹ್ನ ೪ ಘಂಟೆ: ನಾನು ಈಗ ಹಿಂದೂ ಅವಿಭಕ್ತ ಕುಟುಂಬದ ವಿಷಯಕ್ಕೆ ಬರುತ್ತೇನೆ. ಒಂದು ಪುರೋಗಾಮೀ ಸಮಾಜವು ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದುತ್ತ ಹೋಗಬೇಕೆಂದು ಮತ್ತು ಆಸ್ತಿ ಮತ್ತು ಕಾನೂನು ವಲಯಗಳಲ್ಲಿ ಯಥೋಚಿತ ಸಂಸ್ಥೆಗಳನ್ನು ರೂಪಿಸಿಕೊಳ್ಳಬೇಕೆಂದು ನಾನು ಹೇಳಿದರೆ ಸದನವು ನಿಸ್ಸಂದೇಹವಾಗಿ ಒಪ್ಪುತ್ತದೆಯೆಂದು ಭಾವಿಸುತ್ತೇನೆ. ಅವಿಭಕ್ತ ಕುಟುಂಬ ಪದ್ಧತಿಯ ಗುಣಗಳನ್ನು ಕುಟುಂಬದ ಸುಖಶಾಂತಿಯನ್ನು ಸುಭದ್ರಗೊಳಿಸುವ ಸಂಸ್ಥೆಯಾಗಿ ಮತ್ತು ಆಸ್ತಿಯ ಸಂಸ್ಥೆಯಾಗಿ ಅದರಲ್ಲಿರುವ ಗುಣಗಳನ್ನು ನಿರ್ವಿಕಾರ ಮನಸ್ಸಿನಿಂದ ಮೌಲ್ಯನಿರ್ಧಾರಣ ಮಾಡುವ ಸಮಯ ಪ್ರಾಪ್ತವಾಗಿದೆ. ಇಂದಿಗೂ ಸಹ, ಅವಿಭಕ್ತ ಹಿಂದೂ ಕುಟುಂಬದ ಪ್ರಯೋಜನಗಳ ಬಗ್ಗೆ ಯಾರಾದರೂ ಮನವರಿಕೆಯಾಗುವ ತರ್ಕವನ್ನು ಒದಗಿಸಿದರೆ, ಅವರ ಮಾತನ್ನು ಕೇಳಲು ನಾನು ಸಿದ್ಧನಿದ್ದೇನೆ. ಯಾಕೆಂದರೆ ನಾನು ಸಿದ್ಧಾಂತ ಶರಣನಲ್ಲ – ಸತ್ಯವೇ ಪರಮ ಎಂದು ಭಾವಿಸುವವನು ನಾನು. ಸ್ವಂತದ ಅಭಿಪ್ರಾಯಗಳ ಬಗೆಗಿನ ಪ್ರತಿಷ್ಠೆ ಅಲ್ಲ.

ಈಗ ಮೊದಲನೆಯ ವಿಚಾರಾಂಶವನ್ನು ನೋಡೋಣ. ಅವಿಭಕ್ತ ಕುಟುಂಬ ಪದ್ಧತಿಯು ಕುಟುಂಬದ ಸದಸ್ಯರಿಗೆ ವ್ಯಕ್ತಿಗತವಾಗಿ ಸುಖಶಾಂತಿಯನ್ನು ಖಚಿತಗೊಳಿಸುವಲ್ಲಿ ಯಶಸ್ವಿ ಆಗಿದೆಯೆ? ದೊಡ್ಡ ಕುಟುಂಬದಲ್ಲಿ ವಾಸಿಸಲು ಬಂದಿರುವ ಸೊಸೆಯು ಏನು ಭಾವಿಸುತ್ತಾಳೆ ಎಂಬ ವಿಷಯವನ್ನು ನಮೂದಿಸುತ್ತಿಲ್ಲ. ನಾನು ಕಂಡದ್ದು ಮತ್ತು ಕೇಳಿದ್ದು ಇವೆರಡರ ಮೂಲಕ ಸುಖಶಾಂತಿ ಮತ್ತು ಸ್ನೇಹಭಾವನೆಯ ಮಟ್ಟಿಗೆ ಈ ಸಂಸ್ಥೆಯು (ಅವಿಭಕ್ತ ಕುಟುಂಬವು) ವಿಫಲವಾಗಿದೆಯೆಂದು, ಏನೂ ಪ್ರಯೋಜನವಾಗಿಲ್ಲವೆಂದು ಅಥವಾ ಅದಕ್ಕೆ ಏನೂ ಮೌಲ್ಯ ಇಲ್ಲವೆಂದು ತೋರುತ್ತದೆ. ಇದರಲ್ಲಂತೂ ಹೊಸದೇನೂ ಇಲ್ಲ. ಸುಮಾರು ೩೦ ಕೋಟಿ ಹಿಂದೂಗಳ ಪೈಕಿ ೫ ಕೋಟಿ ಮಾತ್ರ ದಾಯಭಾಗ ಪದ್ಧತಿಯ ಶಾಸನಕ್ಕೆ ಈಗಾಗಲೇ ಅಧೀನರಾಗಿದ್ದ ಪಕ್ಷದಲ್ಲಿ ಮತ್ತು ಆ ಪದ್ಧತಿಯು ಚೆನ್ನಾಗಿ ನಡೆದಿದ್ದ ಪಕ್ಷದಲ್ಲಿ, ಅದು ಖಂಡಿತವಾಗಿಯು ಚೆನ್ನಾಗಿಲ್ಲ ಎಂದು ಯಾರೂ ಹೇಳುವಂತಿಲ್ಲ ಮತ್ತು ಆ ಬಗ್ಗೆ ನಾವು ಯೋಚಿಸಬೇಕು ಎಂದು ಯಾರೂ ಹೇಳುವಂತಿಲ್ಲ. (ಮಾನ್ಯ ಸದಸ್ಯರು: ಇದು ಸಂಪೂರ್ಣವಾಗಿ ಹೊಸದು) ಅದು ಹೊಸದು ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ನಾವು ಭವಿಷ್ಯದ ಬಗ್ಗೆ ಕಲ್ಪಿಸಿಕೊಳ್ಳುತ್ತಿರುವ ಸಮಾಜದ ಸ್ವರೂಪವಾದರೂ ಯಾವುದು? ಅದು ಪಿತೃ ಪ್ರಧಾನ ಕುಟುಂಬವೆ? ನೀವು ಪುನರ್ನಿರ್ಮಾಣ ಮಾಡಬಯಸುವ ಸಮಾಜದ ಸ್ವರೂಪವಾದರೂ ಏನು? ನನಗೆ ತಿಳಿದಮಟ್ಟಿಗೆ, ಆ ಸಮಾಜವು ಸ್ಥಾನಮಾನದ ಸಮಾನತೆ ಮತ್ತು ಅವಕಾಶದ ಸಮಾನತೆ ಇವೆರಡನ್ನು ಒಳಗೊಳ್ಳಲಿರುವ ಸಮಾಜ. ಕಾರಣವೆಂದರೆ ಇವೆರಡೂ ನಾವು ಸಂವಿಧಾನದ ಪ್ರಸ್ತಾವನೆಯಲ್ಲಿ ಸೇರಿಸಿರುವ ಪದಗುಚ್ಛಗಳಾಗಿವೆ. ಆ ಪ್ರಸ್ತಾವನೆಯೊಂದಿಗೆ ಅವಿಭಕ್ತ ಕುಟುಂಬ ಪದ್ಧತಿ ಸುಸಂಗತವಾಗಿಲ್ಲ

ಎಂದು ನನ್ನ ಅನಿಸಿಕೆ.

ವಿಭಿನ್ನ ಸದಸ್ಯರ ಭಾಷಣಗಳನ್ನು ಆಲಿಸಿದ ಅನಂತರ, ಹೆಣ್ಣುಮಕ್ಕಳಿಗೆ ಏನು ಕೊಡಲಾಗುತ್ತಿದೆ ಎನ್ನುವುದೇ ತೊಂದರೆಯ ಕಾರಣ ಎಂದು ನನಗೆ ತೋರುತ್ತದೆ. ಆದರೆ ಆಸ್ತಿಯ ಸಂಸ್ಥೆಯಾಗಿರತಕ್ಕ ಈ ಅವಿಭಕ್ತ ಕುಟುಂಬವು ಹೋಗಲೇಬೇಕು. ಕಾರಣವೆಂದರೆ ಅದು ಸಂಪತ್ತಿನ ಶೇಖರಣೆಗೆ ನೆರವಾಗುತ್ತದೆ. ಜನ ಕೇಳುತ್ತಾರೆ, 'ಸ್ವಾಮಿ, ಅದರಿಂದ ಏನೊಂದೂ ಒಳಿತಾಗಿಲ್ಲವೆ ಅಥವಾ ಒಳಿತಾಗಿದೆಯೆ?' ನಾನು ಒಡನೆಯೇ ಉತ್ತರ ಕೊಡುವುದೆಂದರೆ, ಒಂದಿಷ್ಟು ಒಳಿತನ್ನು ಮಾಡಿದ್ದುದೇ ಆದರೆ ಆಸ್ತಿಯ ಅಂಶಕ್ಕೆ ಸಂಬಂಧ ಬರುವಷ್ಟರ ಮಟ್ಟಿಗೆ, ಸಾಮಾಜಿಕ ಪತ್ತಿಗೆ ಸಂಬಂಧಿಸುವಷ್ಟರ ಮಟ್ಟಿಗೆ ಇತರ ಪರ್ಯಾಯಗಳು ಈಗಾಗಲೇ ಆಸ್ತಿತ್ವಕ್ಕೆ ಬಂದಿವೆ. ಉದಾಹರಣೆಗೆ ಸಹಕಾರ ಸಂಘಗಳು ಮತ್ತು ಜಾಯಿಂಟ್ ಸ್ಟಾಕ್ ಕಂಪೆನಿಗಳು. ಆದ್ದರಿಂದ, ಸಾಮಾಜಿಕ ಪತ್ತಿನ ಸೃಷ್ಟಿಗೆ ಸಂಬಂಧಪಟ್ಟ ಹಾಗೆ, ಈಗ ಈ ಸಂಸ್ಥೆಯು ಅಗತ್ಯವಾಗಿಲ್ಲ. ವ್ಯವಹಾರದ ತಂತ್ರವಾಗಿ ಇತರ ಪರ್ಯಾಯಗಳು ಅಸ್ತಿತ್ವಕ್ಕೆ ಬಂದಿದ್ದು, ಅನುಭವದ್ವಾರಾ ಅವು ಉತ್ತಮ ಫಲಿತಾಂಶಗಳನ್ನು ಕೊಡುತ್ತವೆಯೆಂದು ಕಂಡಿದ್ದೇವೆ. ಆದ್ದರಿಂದ, ನಾವು ಯಾವುದೇ ವಸ್ತುವಿನ ಸ್ಥಳದಲ್ಲಿ ಪರ್ಯಾಯವನ್ನು ಸ್ಥಾಪಿಸದೆ, ಅದನ್ನು ನಾಶಗೊಳಿಸುತ್ತಿಲ್ಲ. ನಾವು ಇಡೀ ಸಮಾಜವನ್ನು ನಿರ್ವಾತದಲ್ಲಿ ಬಿಟ್ಟುಹೋಗುತ್ತಿರುವೆವೊ ಎಂದ ಹಾಗೆ ಅದೇನನ್ನೂ ಮಾಡುತ್ತಿಲ್ಲ. ಯಾವುದು ತನ್ನ ಉಪಯುಕ್ತತೆಯನ್ನು ಕಳೆದುಕೊಂಡ ತರುವಾಯವೂ ಉಳಿದಿದೆಯೋ ಅದನ್ನು ತೊಡೆದುಹಾಕಿದ್ದೇವೆ. ಅಂದರೆ ನವ ಭಾರತವು ಇನ್ನಷ್ಟು ವೇಗದಿಂದ ಮುನ್ನಡೆಯಬಹುದು ಮತ್ತು ಇನ್ನಷ್ಟು ಮಹತ್ತರ ಪ್ರಗತಿಯನ್ನು ಸಾಧಿಸಬಹುದು.

ನಾನು ಈಗಾಗಲೇ ಹೇಳಿರುವ ಹಾಗೆ, ನಿಜವಾದ ತೊಂದರೆ ಮಗಳಿಗೆ ಪಾಲನ್ನು ಕೊಡುವುದಕ್ಕೆ ಸಂಬಂಧಿಸಿದ್ದು. ಅದು ಅರ್ಧ ಆಗಿರಬೇಕೆ ಅಥವಾ ಅದಕ್ಕಿಂತ ಒಂದಷ್ಟು ಕಡಿಮೆ ಆಗಿರಬೇಕೆ ಇವೆಲ್ಲ ವಿವರಗಳನ್ನು ಆ ತರುವಾಯ ಚರ್ಚಿಸಬಹುದು. ಒಂದು ಅಂಶವು ಮಾತ್ರ ನಿಶ್ಚಿತ–ಮಗಳಿಗೆ ಒಂದಷ್ಟು ಪಾಲು ಸಿಗಬೇಕು. ಸಿಗಲೇಬೇಕು. ಸ್ವತಂತ್ರ ಭಾರತದಲ್ಲಿ ನೀವು

*ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾ*

ಎಂದು ಹೇಳುತ್ತ, ಆಮೇಲೆ ಝೀವನಾಂಶಕ್ಕಾಗಿ ನ್ಯಾಯಾಲಯಕ್ಕೆ ಹೋಗು ಅಥವಾ ಝೀವನಾಂಶಕ್ಕಾಗಿ ಕೇಳಿಕೋ ಎಂದು ಹೇಳುವುದಾದರೆ, ನನ್ನ ಅಭಿಪ್ರಾಯದಲ್ಲಿ ಅದು ನ್ಯಾಯವಲ್ಲ.

ನನ್ನ ಎಣಿಕೆಯೆಂದರೆ ಮೊದಲಲ್ಲಿ ಕೆಲವು ತೊಂದರೆಗಳು ತಲೆದೋರಬಹುದು. ಹೊಸ ಸಂಸ್ಥೆಗಳು ತಲೆಯೆತ್ತಿದಾಗ, ಹೊಸ ವಿಚಾರಗಳು ಒಡಮೂಡಿದಾಗ, ಅವುಗಳಿಗೆ ಸರಿಹೊಂದಿಕೊಳ್ಳಲು ಸಮಾಜಕ್ಕೆ ಒಂದಿಷ್ಟು ಸಮಯ ಹಿಡಿಯುತ್ತದೆ. ಈ ತೊಂದರೆಗಳು ದೊಡ್ಡವೊ ಅಥವಾ ಸಣ್ಣವೊ ಎಂಬುದು ಪ್ರಶ್ನೆಯಲ್ಲ. ಸಮಂಜಸ ಪ್ರಶ್ನೆ ಎಂದರೆ ಪ್ರಸ್ತಾವಿಸಲಾದ ವ್ಯವಸ್ಥೆಯು ಒಳ್ಳೆಯದೊ ಅಥವ ಕೆಟ್ಟದ್ದೊ. ಅದು ಒಳ್ಳೆಯದು ಎಂದು ನಿಮಗೆ ಮನವರಿಕೆಯಾದರೆ ಹೊಂದಾಣಿಕೆಗೆ ಸ್ವಲ್ಪ ತೊಂದರೆಯಾಗುವುದು ಸಹಜವೇ. ಆ ತೊಂದರೆಯನ್ನು ಖಂಡಿತವಾಗಿಯೂ ಲೆಕ್ಕಿಸಕೂಡದು.

ವಿವಾಹವು ಸಂಪನ್ನವಾಗುತ್ತಲೆ, ವರನು, ದಾವೆ ಹೂಡುವ ಮೂಲಕ ಅಥವಾ ಅನ್ಯಥಾ ತನ್ನ ಹೆಂಡತಿಗೆ ಅವಳ ತಾಯಿತಂದೆಯವರ ಕಡೆಯಿಂದ ದೊರೆತ ಪಾಲಿನ ಬಗ್ಗೆ ತೊಂದರೆ ಆರಂಭಿಸಬಹುದು ಎಂದು ಸೂಚಿಸಲಾಗಿದೆ. ಈ ವಿಚಾರ ಲಾಯರುಗಳಿಗೆ ಸಂತೋಷಜನಕವಾಗಬಹುದು. ಇನ್ನು ನಾವು ಎಷ್ಟು ಸಾಧ್ಯವೊ ಅಷ್ಟನ್ನು ರಾಷ್ಟ್ರೀಕರಣ ಮಾಡಲು ಪ್ರಯತ್ನಿಸುತ್ತಿರುವಾಗ, ಉಳಿಯಬಹುದಾದದ್ದು ಅಷ್ಟು

ಮಹತ್ವದ್ದಾಗಲಿಕ್ಕಿಲ್ಲ. ಅದರ ಸಣ್ಣ ಪಾಲಿನ ಸಲುವಾಗಿ ಜನಗಳು ನ್ಯಾಯಾಲಯಕ್ಕೆ ಹೋಗುವುದುಂಟೇ? ಬರಲಿರುವ ದಿನಗಳಲ್ಲಿ ಹುಡುಗನಿಗಾಗಲಿ ಹುಡುಗಿಗಾಗಲಿ ಏನೂ ಉಳಿಯಲಿಕ್ಕಿಲ್ಲ. ವ್ಯವಸ್ಥೆಯಿಂದ ವ್ಯಾಜ್ಯಕ್ಕೆ ಎಡೆಯಾಗಬಹುದಾಗಿದ್ದರೂ, ನಾವು ನ್ಯಾಯವಾದುದನ್ನು ಮಾಡಕೂಡದು ಎಂದು ಅರ್ಥವಾಗುತ್ತದೆಯೆ? ಒಂದು ಒಳ್ಳೆಯ ವಸ್ತುವನ್ನು ಕೆಲವೇ ಕೆಲವರು ಹಾಳುಮಾಡಬಹುದು, ಆ ಕಾರಣ ನಾವು ಇತರ ಎಲ್ಲರಿಗೂ ನಿರಾಕರಿಸೋಣವೆ? ಆದ್ದರಿಂದ ಸ್ತ್ರೀ ಪುರುಷ ಸಮಾನತೆಯ ಈ ಸರ್ವಸಾಧಾರಣ ಮಾತಿನ ಸಂಗಡವೇ ಆಸ್ತಿಯ ಒಡೆತನದಲ್ಲಿ ಸಮಾನತೆಯ ವ್ಯವಸ್ಥೆಯನ್ನು ಏರ್ಪಡಿಸಲು ಇದೀಗ ತಕ್ಕ ಸಮಯ. ಇದನ್ನು ಮಾಡದೆ ಹೋದರೆ ನಾವು ಬೂಟಾಟಿಕೆಯ ಆರೋಪಕ್ಕೆ ಗುರಿಯಾಗುತ್ತೇವೆ.

ನನ್ನ ಮಾನ್ಯ ಸ್ನೇಹಿತ ಪಂಡಿತ ಲಕ್ಷ್ಮೀಕಾಂತ ಮೈತ್ರಾ ಅವರು ನಮ್ಮ ಮಹಾನ್ ಹಿಂದೂ ಸಮಾಜಕ್ಕೆ ಏನೆಲ್ಲ ತೊಂದರೆಗಳು ಕಾದಿವೆ ಎಂದು ಭವಿಷ್ಯ ನುಡಿದಿದ್ದಾರೆ. ಅಂತ ಭವಿಷ್ಯವಾದಿಗಳು ಎಲ್ಲ ಕಾಲಗಳಲ್ಲೂ ಇರುತ್ತಾರೆ. ಆದರೆ ಅವು ಯಾವಾಗಲೂ ಸುಳ್ಳೆಂದು ರುಜುವಾತಾಗಿದೆ. ಅಸಾಧಾರಣ ಸ್ಥಿತಿಸ್ಥಾಪಕ ಗುಣವುಳ್ಳ ಹಿಂದೂ ಸಮಾಜವನ್ನು ವಿಭಿನ್ನ ಸಂಸ್ಕೃತಿಗಳನ್ನು ವಿಲಯನಗೊಳಿಸಿಕೊಂಡಿದೆ ಎಂಬ ಬಗ್ಗೆ ನನಗೆ ಕಿಂಚಿತ್ತೂ ಸಂದೇಹವಿಲ್ಲ. ಮತ್ತು ಯುಗ ಯುಗಾಂತರಗಳಲ್ಲಿ ಝೀವಿಸಿರುವುದಕ್ಕೆ ಕಾರಣವೆಂದರೆ ಸಮಾಜದ ವ್ಯವಹಾರಗಳಲ್ಲಿ ಮಾರ್ಗದರ್ಶನ ನೀಡುತ್ತಿದ್ದ ಧುರೀಣರು ಕಾಲಕ್ಕೆ ತಕ್ಕಂಥ ಸೂಕ್ತ ಬದಲಾವಣೆಗಳನ್ನು ಸೂಚಿಸಿದ್ದರು. ಆ ಕಾರಣದಿಂದಲೇ ಅದು ಇನ್ನೂ ಈವರೆಗೂ ಉಳಿದಿದೆ. ಈಗ ಅದನ್ನು ಸಾರ್ವಜನಿಕ ಅಭಿಪ್ರಾಯಕ್ಕೆ ಸರಿಯಾದ ಹಾದಿಯಲ್ಲಿ ತರುವ ಸಲುವಾಗಿ ಈ ಪ್ರಯತ್ನ. ಕಾನೂನು ಸಾರ್ವಜನಿಕ ಅಭಿಪ್ರಾಯಗಳನ್ನು ಕ್ರೋಡೀಕರಿಸುತ್ತದೆ. ಮತ್ತು ಸಾರ್ವಜನಿಕ ಅಭಿಪ್ರಾಯವು ಸ್ವಭಾವತಃ ಗತಿಶೀಲವಾಗಿರುವುದರಿಂದ ಆಗೊಮ್ಮೆ ಈಗೊಮ್ಮೆ ಮುಂದಕ್ಕೆ ಹೋಗುವುದುಂಟು. ಅದು ಕ್ಷಿತಿಜದಂತೆ; ಯಾರಾದರೂ ಅದನ್ನು ಸಮೀಪಿಸುತ್ತ ಹೋದಂತೆ, ಅದು ದೂರ ಸರಿಯುತ್ತದೆ. ಆಧುನಿಕ ಸಮಾಜವು ತನ್ನ ಸ್ವಭಾವ ಸಹಜವಾಗಿ ಬಲು ವೇಗದಿಂದ ಮುನ್ನಡೆಯುತ್ತದೆ. ಆದ್ದರಿಂದ ನಾವು ಸಾರ್ವಜನಿಕ ಅಭಿಪ್ರಾಯಗಳು ಮತ್ತು ನಾಡ ಕಾನೂನು ಇವುಗಳ ನಡುವೆ ಹೊಂದಾಣಿಕೆ ಏರ್ಪಡಿಸಬೇಕು. ಅದನ್ನು ಮಾಡುವ ಇನ್ನಿತರ ಮಾರ್ಗಗಳೂ ಇವೆ. ಕಾನೂನು ಕಲ್ಪನೆ ಅಥವಾ ಸಮನ್ಯಾಯ. ಆದರೆ ಅತ್ಯಂತ ಪ್ರಾಮಾಣಿಕ ಮತ್ತು ಉತ್ತಮ ಮಾರ್ಗ ಎಂದರೆ, ಒಂದು ಶಾಸನ ರಚನೆ. ಆ ದಿಶೆಯಲ್ಲಿ ಇಲ್ಲಿ ಒಂದು ಪ್ರಯತ್ನ ನಡೆದಿದೆ ಎಂದು ನನ್ನ ಅನಿಸಿಕೆ. ಅದು ಕ್ರಾಂತಿಕಾರಕ ಎಂದು ನನಗೆ ಅನಿಸಿದರೂ, ಅದು ಸುಯೋಜಿತವಾದ ಕ್ರಾಂತಿ, ಆದ್ದರಿಂದ ಅದಕ್ಕೆ ಯಶಸ್ಸು ಖಂಡಿತ.

* **ಮಿ॥ ನಝೀರುದ್ದೀನ್ ಅಹಮ್ಮದ್:** ನನಗೆ ನಿಗದಿಯಾಗಿರುವುದು ಸ್ವಲ್ಪ ಸಮಯ ಮಾತ್ರ. (**ಡಾ॥ ಬಿ. ಆರ್. ಅಂಬೇಡ್ಕರ್:** ಯಾಕೆ, ನಿಮ್ಮ ಸಮಯ ಇದ್ದೇ ಇದೆಯಲ್ಲ ನಿಮಗೆ?) ಅಂದರೆ ನಾನು ಪರಿಶೀಲಿಸಬೇಕಾದ ಅಗಾಧ ವಿಷಯಕ್ಕೆ ಹೋಲಿಸಿದಾಗ ಸ್ವಲ್ಪ ಎಂಬ ಅರ್ಥದ ಮಾತು. ನಾನು ಈ ವಿಷಯಕ್ಕೆ ಕೊಟ್ಟಷ್ಟು ಗಮನ ಮತ್ತು ಚಿಂತನವನ್ನು ಸದನದ ಇತರ ಸದಸ್ಯರು ಸಹ ಕೊಡುತ್ತಾರೆ ಎಂದು ನಾನು ಆಶಿಸುತ್ತೇನೆ. (**ಒಬ್ಬ ಮಾನ್ಯ ಸದಸ್ಯ:** ಅದಕ್ಕೂ ನಿಮಗೂ ಏನೂ ಸಂಬಂಧ?) ಆರಂಭದಲ್ಲಿಯೇ ನನಗೆ ಕೇಳಿಬಿಟ್ಟಿದ್ದಾರೆ. ಅದಕ್ಕೂ ನನಗೂ ಏನೂ ಸಂಬಂಧ ಎಂದು. ಅದಕ್ಕೂ ನನಗೂ ಸಕಲ ವಿಧದ ಸಂಬಂಧ ಉಂಟು ಎಂದು ಹೇಳಬಯಸುತ್ತೇನೆ. ಈ ವೇಗದಲ್ಲಿ ಭಾರೀ ಪ್ರಮಾಣದ ಎರಡು ಪರಿವರ್ತನಗಳು

---

* CA(Leg) d, Vol. II, pt II, March 1, 1949 (pp 20-103)

ಸಂಭವಿಸಿವೆ. ಒಂದನೆಯದಾಗಿ, ನಾವು ನಮ್ಮ ಕೋಮುವಾದಿ ಸ್ವಭಾವವನ್ನು ತೊರೆಯಬೇಕು ಎಂದು ನಿರ್ಧರಿಸಿದ್ದೇವೆ. ಎರಡನೆಯದಾಗಿ, ನಾವು ನಮ್ಮ ಮೇಲೆ ಜಂಟಿ ಮತದಾರ ಮಂಡಲಗಳನ್ನು ಪ್ರಯೋಜನಗಳನ್ನು ವಿಧಿಸಬೇಕು ಎಂದು ತೀರ್ಮಾನಿಸಿದ್ದೇವೆ. ಹಿಂದೂ ಸಮಾಜದ ಬಹುಭಾಗವು ಯಾವ ರೀತಿಯಲ್ಲಿ ವಿಚಾರ ಮಾಡುತ್ತದೆಯೊ ಹಾಗೆಯೇ ಚಿಂತನ ಮಾಡಲು ಮುಸ್ಲಿಮನು ಹೊಂದಿರುವ ಹಕ್ಕನ್ನು ಈ ಸದನದ ಯಾರೇ ಸದ್ಗೃಹಸ್ಥನು ನಿರಾಕರಿಸಬಹುದೆ? ಏನಾದರೂ ಸರಿಯೇ, ನಾವು ಹಿಂದೂಗಳ ಜತೆ ಬದುಕಿ ಬಾಳಬೇಕು. ಪಶ್ಚಿಮ ಬಂಗಾಲದಲ್ಲಿ ಶೇಕಡ ೮೦ರಷ್ಟು ಇದ್ದಾರೆ. ನಾವು ಅವರ ಜತೆ ಬದುಕಬೇಕು. ಅವರ ಹಾಗೆಯೇ ಚಿಂತನ ಮಾಡಬೇಕು. ನನ್ನ ಜತೆ ಪಶ್ಚಿಮ ಬಂಗಾಲಕ್ಕೆ ಬನ್ನಿ. ಪಂಡಿತ ಮೈತ್ರಾ ಅವರು ಈ ವಿಧೇಯಕಕ್ಕೆ ಪ್ರಬಲ ವಿರೋಧ ಇದೆಯೆಂದು ಹೇಳುತ್ತ ಬಂಗಾಲದಲ್ಲಿನ ವಿರೋಧಿಗಳ ವಾದವನ್ನು ಸೌಮ್ಯವಾಗಿಯೇ ನಿರೂಪಿಸಿದರು.

**ಶ್ರೀಮತಿ ರೇಣುಕಾ ರೇ:** ಅಷ್ಟೇ ಅಥವಾ ಅದಕ್ಕೂ ಮಿಗಿಲಾಗಿ ಪ್ರಬಲವಾದ ಬೆಂಬಲವೂ ಉಂಟು.

**ಮಿ॥ ನಝೀರುದ್ದೀನ್ ಅಹಮ್ಮದ್:** ನನ್ನ ಪಶ್ಚಿಮ ಬಂಗಾಲಕ್ಕೆ ಬನ್ನಿ. ಸಂಪ್ರದಾಯವಂತ ವಿಭಾಗದ ಪರವಾಗಿ ನಾನು ಮಾತಾಡುತ್ತಿಲ್ಲ. ಈ ಶಾಸನದ ಆ ಮುಖವನ್ನು (ಅಂಶವನ್ನು) ಕುರಿತು ನನಗೆ ಹೇಳಬೇಕಾದುದೇನೂ ಇಲ್ಲ. ನಾನು ಈ ಸದನದ ಮುಂದೆ ಕೆಲವು ಗಂಭೀರ ಪ್ರಶ್ನೆಗಳನ್ನು ಎತ್ತಬೇಕೆಂದಿದ್ದೇನೆ. ಆ ಪ್ರಶ್ನೆಗಳನ್ನು ಈವರೆಗೂ ಯಾರೂ ಎತ್ತಿಲ್ಲ. ಬಂಗಾಲದಲ್ಲಿ ವಿರೋಧವು ಇಷ್ಟೊಂದು ಪ್ರಬಲವಾಗಿದೆಯಲ್ಲ ಎಂದರೆ ಯಾರಾದರೂ ಅಲ್ಲಿ ಸಾರ್ವಜನಿಕ ಅಭಿಪ್ರಾಯ ಏನು ಎಂದು ತಿಳಿದುಕೊಳ್ಳಲು ಪ್ರವಾಸ ಕೈಗೊಂಡರೆ– (ಚರ್ಚೆಗೆ ತಡೆ) ನಾನು ಹೇಳುವುದು ಪ್ರೌಢ ಮತ್ತು ಪ್ರಜ್ಞಾವಂತ ಸಾರ್ವಜನಿಕ ಅಭಿಪ್ರಾಯ– ಹಾಗೆ ಅಭಿಪ್ರಾಯವನ್ನು ಖಚಿತಪಡಿಸಿಕೊಳ್ಳಲು ಪಶ್ಚಿಮ ಬಂಗಾಲದಲ್ಲಿ ಪ್ರವಾಸ ಕೈಗೊಂಡರೆ, ಯಾರೇ ಆಗಲಿ ಪಟ್ಟಣದಿಂದ ಪಟ್ಟಣಕ್ಕೆ ಹೋದರೆ, ಅಲ್ಲಿ ಅವನು ಅತ್ಯಂತ ಬುದ್ಧಿವಂತರ ವರ್ಗದವರು, ಅತ್ಯಂತ ಪ್ರಜ್ಞಾವಂತರು ಈ ವಿಧೇಯಕಕ್ಕೆ ವಿರೋಧ ಪ್ರಕಟಿಸುವ ಪ್ರಸಂಗವನ್ನು ಇದಿರಿಸಬೇಕಾಗುತ್ತದೆ. (ಒಬ್ಬ ಮಾನ್ಯ ಸದಸ್ಯ: ಆ ಕೆಲಸವನ್ನು ಮಾನ್ಯ ಸದಸ್ಯರು ಮಾಡಿಲ್ಲ.) ಈ ವಿಷಯದ ಕೂಲಂಕಷ ಪರ್ಯಾಲೋಚನೆಯಿಂದ ಹೊಮ್ಮಿದ್ದಲ್ಲ. ಈ ಕಾರ್ಯಕ್ಕೆ ಅಡಚಣೆ ಎಂದು ನಾನು ಭಾವಿಸಿದ್ದೇನೆ. ಬಾರ್‌ನ ಸದಸ್ಯರು ಬಹಳ ಸಂಪ್ರದಾಯಸ್ಥರಲ್ಲ ಎಂದು ಹೇಳಿದರೆ ಒಪ್ಪುತ್ತಾರೆ ಎಂದು ನಿವೇದಿಸಿಕೊಳ್ಳುತ್ತೇನೆ.......

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ:** ಹೆಚ್ಚಿನವರು ಸಂಪ್ರದಾಯಸ್ಥರು ಮತ್ತು ಪೂರ್ವಾಭಾರತೀಯರು.

**ಮಿ॥ ನಝೀರುದ್ದೀನ್ ಅಹಮ್ಮದ್:** ಅವರು ಬಹುಶಃ ಸಂಪ್ರದಾಯಸ್ಥ ವರ್ಗವಲ್ಲ......

**ಶ್ರೀಮತಿ ರೇಣುಕಾ ರೇ:** ಶ್ರೀ ಅತುಲ್ ಗುಪ್ತ ಅವರ ಅಭಿಪ್ರಾಯದ ವಿಚಾರವೇನು? ಅವರು ಅತ್ಯಂತ ಸುಪ್ರಸಿದ್ಧ ಲಾಯರುಗಳಲ್ಲಿ ಒಬ್ಬರು ಎಂದು ಮನ್ನಣೆ ಪಡೆದವರು ಮತ್ತು ಕಾಂಗ್ರೆಸ್‌ನಿಂದ ವಿಭಜನಾ ಸಮಿತಿಯ ಸದಸ್ಯರಾಗಿ ಚುನಾಯಿತರಾದವರು ಅವರು.

**ಶ್ರೀ ಕೃಷ್ಣಚಂದ್ರ ಶರ್ಮ:** ವಕೀಲರು ಹಿಂದಿನ ಉದಾಹರಣೆಗಳ ಬಗ್ಗೆ ಹೇಳುತ್ತಾರೆನೋ.

**ಮಿ॥ ನಝೀರುದ್ದೀನ್ ಅಹಮ್ಮದ್:** ಅಡೆತಡೆಗಳಿದ್ದರೂ, ಅವರು ಸಂಪ್ರದಾಯಶರಣ ವರ್ಗಕ್ಕೆ ಸೇರಿದವರಲ್ಲ ಎಂದು ನಿವೇದಿಸುತ್ತೇನೆ. ನೀವು ಯಾವುದೇ ಬಾರ್ ಲೈಬ್ರರಿಗೆ ಹೋಗಿ, ಅಲ್ಲಿ ಎಲ್ಲರೂ ಈ ವಿಧೇಯಕವನ್ನು ಖಡಾಖಂಡಿತವಾಗಿ ವಿರೋಧಿಸುತ್ತಾರೆ.......

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ:** ಯಾಕೆಂದರೆ ಅವರ ಉದ್ಯೋಗಕ್ಕೆ ಅವಕಾಶವಿಲ್ಲದಂತಾಗುತ್ತದೆ.

**ಮಿ॥ ನಝೀರುದ್ದೀನ್ ಅಹಮ್ಮದ್:** ಈ ವಿಧೇಯಕದ ಮೂಲಕ ನೀವು ಬಾರ್ ವೃತ್ತಿಯನ್ನು

ತೊಡೆದುಹಾಕುತ್ತೀರಿ ಎಂದು ನಾನು ಭಾವಿಸುವುದಿಲ್ಲ. ನೀವು ಕಲ್ಪಿಸಲಾರದಂಥ ತೊಡಕುಗಳನ್ನು ಆಹ್ವಾನಿಸುತ್ತಿದ್ದೀರ. ಇದಕ್ಕೆ ವಿರುದ್ಧವಾಗಿ ನಾನು ಹೇಳುವುದೇನೆಂದರೆ ಈ ವಿವಾದಾತ್ಮಕ ವಿಧೇಯಕ ದ್ವಾರಾ ತಮಗೆ ಅನುಕೂಲವಾಗಿದೆ ಎಂದು ಲಾಯರುಗಳು ಇನ್ನೊಂದು ಸಾಮರ್ಥ್ಯದಲ್ಲಿ, ಅಂದರೆ ತಮ್ಮ ಸಾಮರ್ಥ್ಯದಲ್ಲಿ ಸದನಕ್ಕೆ ಧನ್ಯವಾದಗಳನ್ನು ಸಲ್ಲಿಸಬಹುದು. ಕಲ್ಕತ್ತ ಉಚ್ಚ ನ್ಯಾಯಾಲಯದ ನಾಲ್ವರು ಪುರೋಗಾಮಿ ನ್ಯಾಯಾಧೀಶರು...ಅವರ ಪೈಕಿ ಒಬ್ಬರಾದ ಶ್ರೀ ಬಿ.ಕೆ. ಮುಖರ್ಜಿ ಈಗ ಫೆಡರಲ್ ನ್ಯಾಯಾಲಯದ ಅಲಂಕಾರವಾಗಿದ್ದಾರೆ..... ಅವರುಗಳೆಲ್ಲ ಈ ಕಾನೂನು ಸುಸ್ಥಾಪಿತವಾಗಿದೆ ಎಂದು, ಸುಪರಿಚಿತವಾಗಿದೆ ಎಂದು ಹೇಳುತ್ತಾರೆ. ಕಾನೂನು ಅಲ್ಲಿ ಇಲ್ಲಿ ವಿಭಿನ್ನ ಆಗಿರಬಹುದು. ಅದಕ್ಕೆ ಹಲವಾರು ಕಾರಣಗಳು. ಆ ಕುರಿತು ನಾನು ಈಗ ವಿವರಿಸಬಯಸುವುದಿಲ್ಲ. ಕಾನೂನು ಸುಪರಿಚಿತವಾಗಿದೆ.

**ಶ್ರೀ ಕರುಣಾಕರ ಮೆನನ್:** ಕಾನೂನು ಅಷ್ಟು ನಿರ್ಧಾರಿತವಾಗಿದ್ದರೆ, ಪ್ರತಿ ವಾರ ಕಾನೂನು ವರದಿಗಳು ಯಾಕೆ?

**ಮಿ॥ ನಝೀರುದ್ದೀನ್ ಅಹಮ್ಮದ್ :** ನನ್ನ ಮಾನ್ಯ ಸ್ನೇಹಿತರಿಗೆ ಕಾನೂನಿನ ಅಂತರಂಗದಲ್ಲಿ ಅಡಕವಾಗಿರುವ ನಾಜೂಕುಗಳು (ಸೂಕ್ಷ್ಮ ಅಂಶಗಳು) ಮನವರಿಕೆಯಾಗದಿರುವುದೇ ಇದಕ್ಕೆ ಕಾರಣ ಎಂದು ಭಾವಿಸಿದ್ದೇನೆ. ನಿಜವಾಗಿಯೂ ಪೂರ್ಣ ನಿರ್ಣಯಗಳು ಅಗತ್ಯ. ಯಾವುದೇ ಸಂಭಾವ್ಯ ಪ್ರಕರಣವನ್ನು ನೀವು ಕಾನೂನು ರಚನೆಯ ಮೂಲಕ ಮುಂಭಾವಿಸಲು ಸಾಧ್ಯವಲ್ಲ. ಆದ್ದರಿಂದ ಪೂರ್ವನಿದರ್ಶನಗಳು ಅಗತ್ಯವಾಗುತ್ತವೆ. ಅವು ತೊಂದರೆಗಳ ಮೇಲೆ ಬೆಳಕು ಚೆಲ್ಲುತ್ತವೆ ಮತ್ತು ಭವಿಷ್ಯದಲ್ಲಿ ಪ್ರಕರಣಗಳನ್ನು ಇತ್ಯರ್ಥಗೊಳಿಸುವಲ್ಲಿ ನೆರವಾಗುತ್ತವೆ. ಮನುಷ್ಯ ಜಾತಿ ಪೂರ್ವನಿದರ್ಶನಗಳನ್ನು ತೊರೆದರೆ, ಆ ಕ್ಷಣವೇ, ಮುಖ್ಯವಾಗಿ ಕಾನೂನು ಕ್ಷೇತ್ರದಲ್ಲಿ, ಮಾನವರು ಬುದ್ಧಿಶಕ್ತಿಯುಳ್ಳ ಪ್ರಾಣಿಗಳು ಆಗಿ ಉಳಿಯುವುದಿಲ್ಲ. ಆದಕಾರಣ, ನನ್ನ ನಿವೇದನೆಯೆಂದರೆ ಸಂಪ್ರದಾಯಶರಣರಲ್ಲದ ಲಾಯರುಗಳು, ಈ ಶಾಸನವು ತಮ್ಮ ವೃತ್ತಿ ಹೊಟ್ಟೆಪಾಡಿಗೆ ತೊಂದರೆ ಆಗುವ ಭಯದಿಂದ ಅದನ್ನು ವಿರೋಧಿಸುತ್ತಿಲ್ಲ......

**ಶ್ರೀಮತಿ ರೇಣುಕಾ ರೇ:** ಬಂಗಾಲದ ಮಹಿಳೆಯರ ಸಲುವಾಗಿರುವ ಪರಿಮಿತ ಸಂಪದಕ್ಕೆ ಸಂಬಂಧಪಟ್ಟ ವ್ಯಾಜ್ಯವು ಇಲ್ಲದೆ ಹೋದರೆ ಏನಾಗುತ್ತದೆ?

**ಮಿ॥ ನಝೀರುದ್ದೀನ್ ಅಹಮ್ಮದ್:** ನನ್ನ ಮಾನ್ಯ ಸಹೋದರಿ ಶ್ರೀಮತಿ ರೇಣುಕಾ ರೇ ಬಂಗಾಲದ ಮಹಿಳೆಯರನ್ನು ಪ್ರತಿನಿಧಿಸಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. (ಒಬ್ಬ ಮಾನ್ಯ ಸದಸ್ಯ: 'ಪ್ರತಿನಿಧಿಸುತ್ತಿದ್ದಾರೆ'.) ಅವರು ಇಡೀ ಬಂಗಾಲದಲ್ಲಿ ಒಂದೇ ಒಂದು ನಕ್ಷತ್ರ. ಶ್ರೀಮತಿ ರೇಣುಕಾ ಅವರಷ್ಟೇ ಖ್ಯಾತಿ ಹೊಂದಿರುವ ಮತ್ತು ಈ ವಿಧೇಯಕವನ್ನು ವಿರೋಧಿಸುವ ಡಜನ್ ತಾರೆಗಳ ಹೆಸರು ಹೇಳಬಲ್ಲೆನು. ಹಿಂದೂಗಳ ಪರವಾದ ಹೋರಾಟದ ಮುಂಚೂಣಿಯಲ್ಲಿ ಅವರೊಬ್ಬರೇ ಒಬ್ಬರೇ ತಾರೆ.........

**ಶ್ರೀ ಆರ್. ಕೆ. ಸಿಧ್ವ** (ಸಿ. ಪಿ. ಮತ್ತು ಬಿರಾರ್): ಒಂದೇ ತಾರೆ.

**ಶ್ರೀಮತಿ ರೇಣುಕಾ ರೇ:** ನೌಖಾಲಿ ಮತ್ತು ಇತರ ಸ್ಥಳಗಳಿಗೆ ಹೋಗಿರುವ ನೂರಾರು ಮಹಿಳೆಯರಿದ್ದಾರೆ. ಬಂಗಾಲದ ಅನೇಕ ಮಾರ್ಗದರ್ಶಿ ತಾರೆಗಳಿದ್ದಾರೆ. ಈ ಸಮಾಜ ಸೇವಕ ತಾರೆಯರು ಮುಂಚೂಣಿಯಲ್ಲಿದ್ದಾರೆ.

**ಮಿ॥ ನಝೀರುದ್ದೀನ್ ಅಹಮ್ಮದ್ :** ನನ್ನ ಮಾನ್ಯ ಸೋದರಿಗೆ ವ್ಯಾಜ್ಯದ ಅನುಭವವಿಲ್ಲ ಎಂದು ನಿವೇದಿಸುತ್ತೇನೆ. ಅವರು ಕಾನೂನಿನಲ್ಲಿ ಝೀವನ ನಡೆಸಿಲ್ಲ. ಅವರು ಹಾಗೆ ಝೀವಿಸಿದ್ದರೆ, ಅಗಾಧ ಸಂಭಾವ್ಯತೆಗಳು ಅವರಿಗೆ ಗೊತ್ತಾಗಬಹುದಿತ್ತು......

**ಮಾನ್ಯ ಸದಸ್ಯರು:** 'ಅವಳು' ಎಂದು ಹೇಳಿದ್ದಾರೆ.

**ಮಿ॥ ನಝೀರುದ್ದೀನ್ ಅಹಮ್ಮದ್:** ಇವತ್ತಿನ ಅಭಿವೃದ್ಧಿ ವ್ಯಾಪಾರ ಉದ್ದಿಮೆಗಳಲ್ಲಿ 'ಅವನು' ಮತ್ತು 'ಅವಳು' ಎಂಬ ಭೇದ ಭಾವನೆ ಇಲ್ಲದೆ ಅವನು ಎಂದಾಗ ಅವಳು ಎಂದು ಭಾವಿಸಬಹುದು.

ನಾನು ಮಂಡಿಸುವುದೇನೆಂದರೆ ಸ್ತ್ರೀಯರು ತಮ್ಮನ್ನು ಸ್ತ್ರೀಯರೆಂದು ಹೇಳಿಕೊಳ್ಳದೆ ತಾವು ಪುರುಷರಿಗೆ ಸಮಾನರೆಂದು ಭಾವಿಸಬೇಕು.

ಲಾಯರುಗಳು ಈ ಶಾಸನವನ್ನು ವಿರೋಧಿಸುತ್ತಾರೆ. ಅವರ ಕುಟುಂಬ ವ್ಯವಸ್ಥೆಯು ತೀವ್ರ ಕ್ಷೋಭೆಗೆ ಒಳಗಾಗುತ್ತದೆ. ಅವರು ಈ ವಿಧೇಯಕಕ್ಕೆ ಅತ್ಯಂತ ಪ್ರತಿಕೂಲರಾಗಿದ್ದಾರೆ. (**ಒಬ್ಬ ಮಾನ್ಯ ಸದಸ್ಯ:** ಅವರಿಗೆ ತಮ್ಮ ವೃತ್ತಿಯ ಬಗ್ಗೆ ಭಯವೆ?). ಇಲ್ಲ, ಅವರಿಗೆ ಇನ್ನೂ ಹೆಚ್ಚು ಪ್ರಕರಣಗಳು ದೊರೆಯುತ್ತವೆ. ಈ ಗೌರವಯುಕ್ತ ಲಾಯರ್ ವೃತ್ತಿಗೆ ಸೇರಿದ ನಾನು ನನ್ನ ವೃತ್ತಿಬಾಂಧವರಾದ ಲಾಯರುಗಳ ಪರವಾಗಿ ಹೇಳುವುದೇನೆಂದರೆ ಅವರು ತಮ್ಮ ವ್ಯಕ್ತಿಗತ ಹಿತಕ್ಕಾಗಿ ಇದನ್ನು ಸ್ವಾಗತಿಸಬೇಕು. (**ಶ್ರೀ. ಎಲ್. ಕೃಷ್ಣಸ್ವಾಮಿ ಭಾರತಿ:** ನಿಮಗೆ ತಪ್ಪು ಕಲ್ಪನೆ ಆಗಿದೆ.) ನನಗೆ ತಪ್ಪು ಕಲ್ಪನೆ ಆಗಿಲ್ಲ. ನನ್ನ ಮಾನ್ಯ ಸ್ನೇಹಿತರು ಕಾನೂನು ವೃತ್ತಿಯಲ್ಲಿ ಜೀವಿಸಿರುವುದಕ್ಕಿಂತ ಹೆಚ್ಚು ಸಮಯ ನಾನು ಜೀವಿಸಿದ್ದೇನೆ. ನಾನು ವ್ಯಾಜ್ಯದಲ್ಲಿ ಭಾಗವಹಿಸಿದ್ದೇನೆ. ವಿವಾಹ ವಿಚ್ಛೇದನದ ಉಪಬಂಧಗಳು ಕೊನೆಯಿಲ್ಲದ ವ್ಯಾಜ್ಯಕ್ಕೆ ದಾರಿಮಾಡಿಕೊಡುತ್ತವೆ. ಅನೇಕ ಕುಟುಂಬಗಳು ಕೊನೆಯಿಲ್ಲದ ತೊಂದರೆಗಳಿಗೂ ಕೊನೆಯಿಲ್ಲದ ತೊಡಕುಗಳಿಗೂ ಗುರಿಯಾಗುತ್ತವೆ. ಪುರುಷರಿಗಿಂತ ಮಹಿಳೆಯರೇ ಹೆಚ್ಚು ಸಂಕಟವನ್ನು ಅನುಭವಿಸಬೇಕಾಗುತ್ತದೆ.

ನೇರವಾಗಿ ಒಂದು ಮುಖ್ಯ ಅಂಶಕ್ಕೆ ಬರುತ್ತೇನೆ. ಈ ವಿಧೇಯಕಕ್ಕೆ ಸಂಬಂಧಿಸಿದಂತೆ ನಾನು ಒಂದು ಅತ್ಯಂತ ಗಂಭೀರ ವಸ್ತುಸ್ಥಿತಿಯನ್ನು ಸದನಕ್ಕೆ ನಿವೇದಿಸಿಕೊಳ್ಳಬೇಕಾಗಿದೆ. ಇತ್ತೀಚೆಗೆ ಅಂದರೆ ಕಳೆದ ಏಪ್ರಿಲ್ ೯ನೇ ತಾರೀಖಿನಂದು ಸದನವನ್ನು ಅವಸರದಿಂದ ಮುಂದಕ್ಕೆ ಸರಿಸಲಾಯಿತು. ಆ ಹಂತದಲ್ಲಿ ನಮ್ಮ ಭಗಿನಿಯರು ವಿಧೇಯಕವನ್ನು ವಿರೋಧಿಸಕೂಡದು ಎಂದು ಕೇಳಿಕೊಂಡರು. ಅದು ಅತ್ಯಂತ ಮಹತ್ವಪೂರ್ಣ ಶಾಸನ, ಆದಕಾರಣ ಆ ಬಗ್ಗೆ ಸವಿಸ್ತಾರ ಚರ್ಚೆ ಅಗತ್ಯ ಇಲ್ಲ ಎಂದು ಪರಿಗಣಿಸಲಾಯಿತು –ಅಂದರೆ ಅದನ್ನು ಪೂರ್ಣಗತಗೊಳಿಸಬೇಕು ಎಂದು ಕೇಳಿಕೊಳ್ಳಲಾಯಿತು. ಹೀಗಾಗಿ, ಕೊನೆಯ ದಿನದ ಕೊನೆಯ ಗಂಟೆಯಲ್ಲಿ ಅದರ ಪರ್ಯಾಲೋಚನೆಗೆ ನಾವು ಒಪ್ಪಿಗೆ ನೀಡಿದೆವು. ನಾನು ಈ ದೃಷ್ಟಿಕೋನದಿಂದ ನನ್ನ ಕ್ಷೀಣದನಿಯಲ್ಲಿ ಆಕ್ಷೇಪ ಎತ್ತಿದೆನು. ನಾನು ಮುಸ್ಲಿಂ ದೃಷ್ಟಿಕೋನದಿಂದ ನನ್ನ ಆಕ್ಷೇಪ ಎತ್ತುತ್ತಿರುವೆನೆ? ಖಂಡಿತವಾಗಿಯೂ ಅಲ್ಲ. ನಾನು ಮಾತಾಡುತ್ತಿರುವುದು ಹಿಂದೂ ದೃಷ್ಟಿಕೋನದಿಂದ. ಆದ್ದರಿಂದ, ನಾನು ಹಿಂದೂ ದೃಷ್ಟಿಕೋನದಿಂದ ಮಾತಾಡುತ್ತಿರುವೆನು ಎಂದು ಘೋಷಿಸಿದಾಗ ಅದಕ್ಕೆ ಅಚ್ಚರಿ ಆಗಲಿ ಯಾವುದೇ ಬಗೆಯ ನಗು ಆಗಲಿ ಪ್ರತಿಕ್ರಿಯೆ ಆಗಬೇಕಾಗಿರಲಿಲ್ಲ. ಹಿಂದೂ ದೃಷ್ಟಿಕೋನದಿಂದಲೇ ನಾನು ಮಾತಾಡುತ್ತಿದ್ದನೆ. ನನ್ನ ಸೋದರಿ ನನಗೆ ಆ ದಿನ ಕೇಳಿದರು, "ನಿಮ್ಮ ಸಹೋದರಿಯರಿಗೆ ಕೊಡುತ್ತಿರುವ ಪ್ರಯೋಜನಗಳನ್ನು ನೀವು ಹಿಂದೂ ಸಹೋದರಿಯರಿಗೆ ಇಲ್ಲವೆನ್ನುವುದೇಕೆ?" ಅದು ಒಂದು ಮೂಲಭೂತ ಪ್ರಶ್ನೆ. ನಾನು ಉತ್ತರ ಕೊಡಬಹುದೆ? ನನ್ನ ಉತ್ತರ ಇಷ್ಟೆ – ನೀವು ವಿಭಿನ್ನ ವ್ಯಕ್ತಿಗಳಿಗೆ ಒಂದೇ ಬಗೆಯ ಆಹಾರವನ್ನು ಕೊಡಲು ಸಾಧ್ಯವಿಲ್ಲ. ಹಿಂದೂ ಕಾನೂನು ಪರಿಕಲ್ಪಿಸುವ ಹಿಂದೂ ಮಹಿಳೆಯ ಸ್ಥಾನವನ್ನು ನಾವು ಹಿಂದೂ ಮಹಿಳೆಗಾಗಿ ನಿರ್ಣಯಿಸಬೇಕಾಗುತ್ತದೆ. ಹಾಗೆಯೇ ಮುಸ್ಲಿಂ ಕಾನೂನು ಪರಿಕಲ್ಪಿಸುವ ಮುಸ್ಲಿಂ ಮಹಿಳೆಯ ಸ್ಥಾನವನ್ನು ನಾವು ಮುಸ್ಲಿಂ ಮಹಿಳೆಗಾಗಿ ನಿರ್ಣಯಿಸಬೇಕಾಗುತ್ತದೆ. ಒಂದು ಪದ್ಧತಿಯ ಅಥವಾ ಇನ್ನೊಂದು ಪದ್ಧತಿಯ ಗುಣಾವಗುಣಗಳನ್ನು ನಿರ್ಧರಿಸಲು ನಾವಿಲ್ಲಿ ಚರ್ಚಿಸುತ್ತಿಲ್ಲ. ಇಲ್ಲಿ ಎರಡು ಬಗೆಯ ಸದಸ್ಯರಿದ್ದಾರೆಂದು ಕಂಡುಬರುತ್ತದೆ. ಶಾಕಾಹಾರಿಗಳೂ ಕೆಲವರು ಮತ್ತು ಮಾಂಸಾಹಾರಿಗಳು

ಕೆಲವರು. ನೀವು ಶಾಕಾಹಾರಿಗೆ ಮಾಂಸಾಹಾರವನ್ನು ಕೊಡುವುದುಂಟೇ? ಇನ್ನೂ ಯಾರಾದರೂ ಶಾಕಾಹಾರಿಗೆ ಶಾಕಾಹಾರವನ್ನು ಕೊಟ್ಟರೆ ಅದನ್ನು ಪಕ್ಷಪಾತ ಎನ್ನುತ್ತೀರ? (**ಒಬ್ಬ ಮಾನ್ಯ ಸದಸ್ಯ:** 'ಇದು ತರ್ಕವೆ? ವಿಚಿತ್ರ ತರ್ಕ'). ನನ್ನ ಸಹೋದರಿ ಶ್ರೀಮತಿ ರೇಣುಕಾ ರೇ ನನಗೆ ಕೇಳಿದ ಪ್ರಶ್ನೆ ಎಷ್ಟು ತರ್ಕಸಂಗತವೋ ಅಷ್ಟೇ ತರ್ಕಸಂಗತ ನನ್ನ ವಾದ – ಕಾರಣ ಅವರ ಪ್ರಶ್ನೆ ತರ್ಕಸಂಗತವಾಗಿರಲಿಲ್ಲ. ನೀವು ಬೇರೆ ಬೇರೆ ಬಗೆಯ ವ್ಯಕ್ತಿಗಳಿಗೆ ಒಂದೇ ಬಗೆಯ ಆಹಾರ ಕೊಡುವಂತಿಲ್ಲ. ಅವರ ಪಾಲನ–ಪೋಷಣ ವಿಭಿನ್ನವಾದದ್ದು.

ಈ ವಿಧೇಯಕವನ್ನು ಏಪ್ರಿಲ್ ೯ನೆಯ ತಾರೀಖು ಅವಸರದಲ್ಲಿ ಮಂಡಿಸಲಾಯಿತು. ಮಾನ್ಯ ಕಾನೂನು ಮಂತ್ರಿಗಳು ನಮಗೆ ಆಯ್ಕೆ ಸಮಿತಿಯ ವರದಿಯೊಳಗಿಂದ ಒಂದು ಮಾರ್ಮಿಕ ಪರಿಚ್ಛೇದವನ್ನು ಕೊಟ್ಟಿದ್ದಾರೆ. ಈ ವಿಧೇಯಕವನ್ನು ಆಯ್ಕೆ ಸಮಿತಿಗೆ ಒಯ್ಯುವಾಗ ಅದನ್ನು ಅದರ ಗುಣಗಳನ್ನು ಆಧರಿಸಿ ಪರಿಶೀಲಿಸಿರಲಿಲ್ಲ ಎಂದು ಸರಳವಾಗಿ ಹೇಳಿದರು. ಅದೊಂದು ಅಚ್ಚರಿಯ ಹೇಳಿಕೆಯೇ. ಮೂಲತ: ಈ ವಿಧೇಯಕವು ಚೆನ್ನಾಗಿ ಅದು ಪ್ರಾರೂಪಣಗೊಂಡ ವಿಧೇಯಕ ಎಂದು ಹೇಳಲಾಗಿತ್ತು. ಅದು ವಿಧಾನ ಮಂಡಲದ ಪರಿಶೀಲನೆಗೆ ಒಳಪಟ್ಟು, ಆ ತರುವಾಯ ಆಯ್ಕೆ ಸಮಿತಿಗೆ ಹೋಯಿತು. ಆಮೇಲೆ ಜ್ಞಾನೋದಯವಾಗುತ್ತದೆ, ವಿಧೇಯಕವು ತಾಂತ್ರಿಕ ಅಥವಾ ಇಲಾಖಾ ಪರ್ಯಾಲೋಚನೆ ಪಡೆಯಲಿಲ್ಲ ಎಂದು. ಹಾಗಾದರೆ, ವಿಧೇಯಕವು ತಾಂತ್ರಿಕ ಅನುಮೋದನೆ ಪಡೆದಿರದಿದ್ದರೂ ಅಥವಾ ಕಾನೂನು ಮಂತ್ರಾಲಯ ದ್ವಾರಾ ಗಂಭೀರ ಪರಿಶೀಲನೆಗೆ ಒಳಗಾಗದಿದ್ದರೂ ಆ ಹಂತದಲ್ಲಿ ಅದನ್ನು ಅವಸರದಲ್ಲಿ ಜರುಗಿಸಿದ್ದೇಕೆ, ಎಂದು ನಾನು ಕೇಳಬಹುದೆ ? (**ಒಬ್ಬ ಮಾನ್ಯ ಸದಸ್ಯ :** 'ನಾವು ೧ನೇ ಏಪ್ರಿಲ್‌ಗೆ ಬಹಳ ಸಮೀಪದಲ್ಲಿ ಇದ್ದೆವಲ್ಲ'). ಇರಬಹುದು, ೧ನೇ ಏಪ್ರಿಲ್‌ಗೆ ಬಹಳ ಸಮೀಪದಲ್ಲಿತ್ತು. ಬಹುಶ: ಅದೇ ಕಾರಣವಾಗಿರಬೇಕು ಆ ಅವಸರಕ್ಕೆ. ಗಂಭೀರ ಕಾರ್ಯ ಎಂದು ಭಾವಿಸಿದ ಹಾಗೆ ತೋರುವುದಿಲ್ಲ. ಬಹುಶ: ಸೋದರಿಯರನ್ನು ಸಮಾಧಾನಪಡಿಸಲು ಭಾವುಕ ಸಾಹಿತ್ಯ ವಿಷಯವನ್ನು ವಿಧಾನ ಮಂಡಲದಲ್ಲಿ ತೀರ್ಣಗೊಳಿಸಬೇಕಲ್ಲ ಎಂಬ ಉದ್ದೇಶವಿರಬಹುದು. ಈ ವಿಧೇಯಕಕ್ಕೆ ಪ್ರಕರಣದ ಪರಿಗಣನೆಯ ಪ್ರಚೋದನೆಗಿಂತ 'ಮಹಿಳಾ – ಭಾವನೆ'ಯೇ ಪ್ರೇರಕ ಶಕ್ತಿಯಾಗಿದೆ. ಆಮೇಲೆ ಇಲಾಖೆಯು ಈ ಹಿಂದೆಂದೂ ಕೈಗೊಳ್ಳದಿರುವಂಥ ಕಾರ್ಯವನ್ನು ಕೈಗೊಂಡಿತ್ತು. ಈ ವಿಧೇಯಕದ ಕರಡು ಸರಿಯಾದ ರೀತಿಯಲ್ಲಿ ರೂಪಿತವಾಗಿಲ್ಲ. ಅದರಲ್ಲಿ ಕೆಲವು ದೋಷಗಳಿವೆ. ಇದನ್ನು ಹೊಸದಾಗಿ ರೂಪಿಸಬೇಕು ಎಂಬ ತೀರ್ಮಾನಕ್ಕೆ ಬಂದಿತ್ತು. ವಿಧೇಯಕವು ಪ್ರತ್ಯೇಕ ಪರಿಭಾಷೆಗಳನ್ನು ಮತ್ತು ಪ್ರತ್ಯೇಕ ಅನುಕ್ರಮ ಸಂಖ್ಯೆಗಳನ್ನು ಹೊಂದಿರುವ ಅನೇಕ ಪ್ರತ್ಯೇಕ ಅಧ್ಯಾಯಗಳನ್ನು ಒಳಗೊಂಡಿತ್ತು. ಅಧ್ಯಾಯಗಳು ಪೂರ್ಣವಾಗಿ ಒಂದಕ್ಕೊಂದು ವಿಭಿನ್ನವಾಗಿದ್ದುವು – ವಿಧಾನ ಸಭಾ ಇಲಾಖೆಯು ಇದೊಂದು ದೋಷ ಎಂದು ಭಾವಿಸಿತು. ವಿಧೇಯಕಕ್ಕೆ ಅನುಕ್ರಮ ಸಂಖ್ಯೆಗಳ ಅಧ್ಯಾಯಗಳಿರಬೇಕು ಮತ್ತು ಅವು ಒಂದಕ್ಕೊಂದು ಬೆರೆತು ಒಂದು ಸಮಗ್ರ ಪೂರ್ಣವಾಗಿ ಕಾಣಬೇಕು ಎಂದು ಭಾವಿಸಿ ವಿಧೇಯಕದ ಪುನರ್‌ರೂಪಣ ಅಗತ್ಯ ಎಂದು ನಿರ್ಣಯಿಸಿತು.

ವಿಧಾಯೀ ಇಲಾಖೆಯು ಆ ನಿರ್ಣಯಕ್ಕೆ ತಲುಪಿದ್ದೇ ತಡ, ಆಗ ವಿಧೇಯಕವನ್ನು ಹಿಂತೆಗೆದುಕೊಂಡು ಮಂತ್ರಾಲಯವು ಒಡ್ಡಿಕೊಳ್ಳುವಂತ ಹೊಸ ವಿಧೇಯಕವನ್ನು ರಚಿಸಿ ಹೊಸ ವಿಧೇಯಕ ಎಂದು ಸಾದರಪಡಿಸಲು ತಕ್ಕ ಸಮಯ; ಹಾಗೆ ಮಾಡುವುದಕ್ಕೆ ಬದಲಾಗಿ ಇಲಾಖೆಯು ವಿಧಾಯಕದ ಕರಡು ಪ್ರಕ್ರಿಯೆಯನ್ನು ಅನುಸರಿಸಿತು. ಅಂಥ ಪ್ರಕ್ರಿಯೆ ನಾನು ಈವರೆಗೂ ಕಂಡಿರಲಿಲ್ಲ, ಕೇಳಿರಲಿಲ್ಲ. ಒಂದು ವಿಧೇಯಕವನ್ನು ಸಾದರಪಡಿಸಿ ಅದನ್ನು ಆಯ್ಕೆ ಸಮಿತಿಗೆ ಕಳಿಸಿದ ತರುವಾಯ ಆ ಇಲಾಖಾ ವಿಧೇಯಕವನ್ನು ಪುನಃ ಸಿದ್ಧಗೊಳಿಸುವ ಉದಾಹರಣೆಯು ಭಾರತದ ಸಂವೈಧಾನಿಕ ಚರಿತ್ರೆಯಲ್ಲಿ ಅಥವಾ ವಿದೇಶಗಳ

ಸಂವೈಧಾನಿಕ ಚರಿತ್ರೆಯಲ್ಲಿ ಕಾಣಸಿಗುವುದಿಲ್ಲ. ಶ್ರೀ ರಾಮನಾರಾಯಣ ಸಿಂಗ್ ಅವರು ನಿನ್ನೆ ಸಂಪೂರ್ಣವಾಗಿ ಹೊಸ ವಿಧೇಯಕವನ್ನು ರೂಪಿಸಲು ಕರಡು ರಚನಾ ಸಮಿತಿಗೆ ಯಾವ ಅಧಿಕಾರ ಎಂದು ಹೇಳಿದರು. **(ಎಲ್ಲ ಮಾನ್ಯ ಸದಸ್ಯರು :** ಇದು ಹೊಸ ವಿಧೇಯಕವಲ್ಲ.) ಮಹತ್ವಪೂರ್ಣ ಬದಲಾವಣೆಗಳನ್ನು ಮಾಡಲಾಗಿದೆಯೆಂದು ತೋರಿಸುವ ದುರ್ಭಾಗ್ಯಪೂರ್ಣ ಸ್ಥಿತಿ ನನ್ನದಾಗುವುದು ಎಂದು ನಾನು ಭಾವಿಸಿದ್ದೇನೆ. ಮಾನ್ಯ ಕಾನೂನು ಮಂತ್ರಿಗಳು ನಿನ್ನೆ ಈ ಪ್ರಶ್ನೆಗೆ ಉತ್ತರ ನೀಡುವುದನ್ನು ತಪ್ಪಿಸಿಕೊಂಡರೂ, ತಾನು ಯಾವುದೇ ಬದಲಾವಣೆಗಳನ್ನು ಮಾಡಲಿಲ್ಲ ಎಂದೂ, ಮಾಡಿದವರು ಆಯ್ಕೆ ಸಮಿತಿಯವರೇ ಎಂದೂ ಕೊನೆಯಲ್ಲಿ ಒಪ್ಪಿಕೊಳ್ಳಬೇಕಾಯಿತು. ಮಾಡಲಾದ ಆ ಬದಲಾವಣೆಗಳು ಗಂಭೀರ ಸ್ವರೂಪದವುಗಳೆಂದು, ಮೂಲಭೂತವಾದುವುಗಳೆಂದು, ಸರ್ವಸಾಧಾರಣವಲ್ಲವೆಂದು ನಾನು ತೋರಿಸಿಕೊಡಬಲ್ಲೆನು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಸ್ವಾಮೀ, ಕ್ರಿಯಾಲೋಪದ ಪ್ರಶ್ನೆ. ಮಾನ್ಯ ಸದಸ್ಯರು, ಆಯ್ಕೆ ಸಮಿತಿಗೆ ಕಳಿಸಲಾದ ವಿಧೇಯಕದ ಪರಿಶೀಲನೆ ಆಗಿಲ್ಲವೆಂದು ಬೇರೆ ಯಾವುದೇ ವಿಧೇಯಕವನ್ನು ಪರಿಶೀಲಿಸಲಾಗಿದೆಯೆಂಬ ಸಂಗತಿಯು ಈ ವಿಧೇಯಕವನ್ನು ಆಯ್ಕೆ ಸಮಿತಿಗೆ ಪುನಃ ಕಳಿಸಬೇಕಾಗುತ್ತದೆ ಎಂಬ ತಮ್ಮ ವಾದಕ್ಕೆ ಆಧಾರವಾಗಿ ಮಾಡುವುದಾದರೆ, ಆ ವಿಚಾರಾಂಶವು ಸ್ಪೀಕರ್ ಅವರ ರೂಲಿಂಗ್‌ನಲ್ಲಿ ಬಂದಿದೆ. ಅದನ್ನು ಅವರು ಒತ್ತಿಹೇಳುವ ಅಗತ್ಯವಿಲ್ಲ. ಅವರ ಬಳಿ ಬೇರೆ ಕಾರಣಗಳು ಇದ್ದರೆ ಅವುಗಳನ್ನು ಅವರು ಹೇಳಬಹುದು. ಯಾವುದೇ ಅಡ್ಡಿ ಆತಂಕವಿಲ್ಲ; ಅವರು ಆಯ್ಕೆ ಸಮಿತಿಗೆ ವಿಧೇಯಕವನ್ನು ಪುನಃ ಕಳಿಸುವ ಬಗೆಗಿನ ತಮ್ಮ ತಿದ್ದುಪಡಿಯ ಮೇಲೆ ಮಾತಾಡುತ್ತಿದ್ದಾರೆ. ಆದರೆ ಅವರು ತಮ್ಮ ವಾದವನ್ನು ದೃಢವಾಗಿ ಹೇಳಿದರೆ, ಅಂದರೆ, ಆಯ್ಕೆ ಸಮಿತಿಯು ಪರಿಶೀಲಿಸಿದ ವಿಧೇಯಕವು, ಈ ಸದನವು ಅದಕ್ಕೆ ಕಳಿಸಿದ ವಿಧೇಯಕ ಆಗಿರಲಿಲ್ಲ ಎಂದು ವಾದಿಸುವುದಾದರೆ, ಆ ಅಂಶವು ಸಭಾಧ್ಯಕ್ಷರ ರೂಲಿಂಗ್‌ನಲ್ಲಿ ಬಂದಿದ್ದು, ಅದು ಅದೇ ವಿಧೇಯಕ ಎಂದು ಘೋಷಿಸುತ್ತಾರೆ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ** (ಮದ್ರಾಸು : ಸಾಮಾನ್ಯ) : ಅದು ಪರ್ಯಾಲೋಚನೆಯನ್ನು ತಿರಸ್ಕರಿಸುವ ಸಲುವಾಗಿ ಮಾಡಿದ ವಾದವಾಗಿರಬಹುದು.

**ಶ್ರೀ ಎಲ್. ಕೃಷ್ಣಸ್ವಾಮೀ ಭಾರತಿ :** ಹಾಗಾದರೆ, ಆ ಅಂಶವನ್ನು ಬೇಕಾದಷ್ಟು ಬಾರಿ ಚರ್ಚಿಸಿರುವುದರಿಂದ, ಅವರು ಇನ್ನೂ ಆ ವಾದವನ್ನು ಸಾದರಪಡಿಸಿದರೆ ಸುಮ್ಮನೆ ಸದನದ ಸಮಯವನ್ನು ತೆಗೆದುಕೊಳ್ಳುತ್ತಾರೆಯೆ ಹೊರತು ಇನ್ನೇನೂ ಪ್ರಯೋಜನ ಆಗಲಾರದು. ಆ ಅಂಶವನ್ನು ಪರಿಪರಿಯಿಂದ ಪರಿಶೀಲಿಸಲಾಗಿದೆ. ನಾನಾ ವಾದಗಳನ್ನು ಮುಂದೊಡ್ಡಲಾಗಿದೆ. ಅವರು ಅದನ್ನು ಸುಮ್ಮನೆ ಪುನರುಚ್ಚರಿಸುತ್ತಿದ್ದಾರೆ. ಸ್ವಾಮಿ, ನಾವು ಇನ್ನೂ ವಾದಗಳನ್ನು ಕೇಳಲು ಸಿದ್ಧರಿದ್ದೇವೆ. ಆದರೆ ಕೇಳಿದ ವಾದಗಳನ್ನೇ ಪುನಃ ಕೇಳು ಎಂದರೆ ಹೇಗೆ ?

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ನನ್ನ ಸ್ನೇಹಿತ ಶ್ರೀ ಭಾರತಿ ಅವರು ಎತ್ತಿದ ಕ್ರೀಯಾಲೋಪದ ಸಂಬಂಧದಲ್ಲಿ ನಾನು ಕೆಲವು ಮಾತುಗಳನ್ನು ಹೇಳಬಹುದೆ? ಅವರು ಹೇಳುವುದೇನೆಂದರೆ : ಮಾನ್ಯ ಸದಸ್ಯ ಮಿ॥ ನಝೀರುದ್ದೀನ್ ಅಹಮ್ಮದ್ ಅವರು ಆಯ್ಕೆ ಸಮಿತಿಗೆ ವಿಧೇಯಕವನ್ನು ಪುನ: ಕಳಿಸುವ ಬಗೆಗೆ ಸಭಾಧ್ಯಕ್ಷರ ರೂಲಿಂಗ್‌ನಲ್ಲಿ ಬಂದಿರುವ ಆಧಾರಗಳನ್ನು ಎತ್ತಿ ಹೇಳುತ್ತಾರೆ ಎಂದು ಅವರು ಹೇಳುತ್ತಾರೆ. ನಾನು ದೃಢವಾಗಿ ಹೇಳುತ್ತೇನೆ ಮತ್ತು ಈ ಸಂಬಂಧದಲ್ಲಿ ಸದನವು ಒಪ್ಪಬಹುದು ಎಂದು ಭಾವಿಸುತ್ತೇನೆ ; ಏಕೆಂದರೆ ಸಭಾಧ್ಯಕ್ಷರ ರೂಲಿಂಗ್‌ಗೆ ಅಗೌರವ ತೋರಿಸದೆ, ಯಾರೇ, ಮಾನ್ಯ ಸದಸ್ಯರು, ವಿಧೇಯಕವನ್ನು ಆಯ್ಕೆ ಸಮಿತಿಗೆ ಪುನಃ ಒಪ್ಪಿಸಬೇಕೆಂದು ಶಿಫಾರಸು ಮಾಡಲು ತನಗೆ ಹೊಳೆಯುವಂಥ

ಕಾರಣಗಳನ್ನು ಕೊಡಲು ಹಕ್ಕು ಹೊಂದಿರುತ್ತಾನೆ. ಅದರಲ್ಲಿ ಕ್ರಿಯಾಲೋಪದಂಥ ಯಾವುದೇ ಸಂಗತಿ ಇಲ್ಲ.

**ಸಭಾಧ್ಯಕ್ಷರು :** ಇದರಲ್ಲಿ ಕ್ರಿಯಾಲೋಪ ಇಲ್ಲ ಎಂದು ನಾನು ಭಾವಿಸುತ್ತೇನೆ. ಅವರು ತಮ್ಮ ತಿದ್ದುಪಡಿಯ ಬಗ್ಗೆ ಮಾತನಾಡುತ್ತ ವಿಧೇಯಕದ ಮೇಲೆ ಇನ್ನಷ್ಟು ಅಭಿಪ್ರಾಯವನ್ನು ಪಡೆಯುವ ಸಲುವಾಗಿ, ಅದನ್ನು ಪುನಃ ಕಳಿಸುವಂತೆ ಕೇಳುತ್ತಿದ್ದಾರೆ. ಅಲ್ಲದೆ ವಿಧೇಯಕ ಹೇಗೆ ಬದಲಾವಣೆಗೆ ಒಳಗಾಯಿತು ಎಂಬ ವಾದಗಳನ್ನು ನಿರೂಪಿಸುತ್ತಿದ್ದಾರೆ, ಮೂಲ ವಿಧೇಯಕವನ್ನು ಆಯ್ಕೆ ಸಮಿತಿಯಲ್ಲಿ ಹೇಗೆ ಬದಲಾವಣೆ ಮಾಡಲಾಯಿತು ಎಂದು ಕೇಳುತ್ತಿದ್ದಾರೆ.

**ಮಿ। ನಝೀರುದ್ದೀನ್ ಅಹಮ್ಮದ್** : ನನ್ನ ಸ್ನೇಹಿತರ ನಿಜವಾದ ತೊಂದರೆ ಅಲ್ಲಿ ಇಲ್ಲ ಎಂದು ನನ್ನ ಅನಿಸಿಕೆ. ಬುದ್ಧಿವಂತರಾದ ನನ್ನ ಸ್ನೇಹಿತ ಶ್ರೀ ಭಾರತಿ ಅವರೇ, ಸನ್ನಿವೇಶದ ನಿಜವಾದ ತೊಡಕುಗಳು ಏನು ಎಂದು ಬಲ್ಲವರಾಗಿರಬೇಕು. ಅದು ಕಾರಣವೇ, ಅವರು ಅತ್ಯಂತ ಜಾಣ್ಮೆಯಿಂದ, ಸ್ಪೀಕರ್ ಅವರ ರೂಲಿಂಗ್ ಉಲ್ಲೇಖಿಸಿ ನನ್ನ ಮಾತಿಗೆ ತಡೆ ಒಡ್ಡುತ್ತಿದ್ದಾರೆ. ಈ ಸದನದಲ್ಲಿರುವ ಎಲ್ಲ ಸದಸ್ಯರ ಪೈಕಿ ನಾನು ಸಭಾಧ್ಯಕ್ಷರ ತೀರ್ಮಾನದ ವಿಷಯದಲ್ಲಿ ಅತ್ಯಂತ ಗೌರವಭಾವನೆ ಉಳ್ಳ ಸದಸ್ಯ ಎಂದು ಘೋಷಿಸಬೇಕಾಗಿದೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** : ನೀವು ಆ ವಿಷಯದ ಬಗ್ಗೆ ಚಿಂತಿಸುವುದೇಕೆ?

**ಮಿ। ನಝೀರುದ್ದೀನ್ ಅಹಮ್ಮದ್** : ನಾನು ಸಭಾಧ್ಯಕ್ಷರ ತೀರ್ಮಾನವನ್ನು ಒಪ್ಪುತ್ತೇನೆ ಎಂದು ಮಾತ್ರ ಹೇಳುತ್ತಿದ್ದೇನೆ. ಆ ಕುರಿತು ಯೋಚಿಸುತ್ತಿಲ್ಲ.

**ಪಂಡಿತ ಠಾಕುರ್‌ದಾಸ್ ಭಾರ್ಗವ** (ಪೂರ್ವ ಪಂಜಾಬು : ಸಾಮಾನ್ಯ) : ರೂಲಿಂಗ್ ಇತ್ತಲ್ಲ

**ಮಿ। ನಝೀರುದ್ದೀನ್ ಅಹಮ್ಮದ್** : ಆದರೆ ರೂಲಿಂಗ್ ಏನಿತ್ತು ? ವಿಧೇಯಕದ ಪರ್ಯಾಲೋಚನೆಯು ಕ್ರಮಬಾಹಿರವಾಗಿರಲಿಲ್ಲ ಎಂದು ರೂಲಿಂಗ್, ನಿಜವೆಂದರೆ, ಅದೇ ರೂಲಿಂಗ್, ಆಯ್ಕೆ ಸಮಿತಿಯ ಸದಸ್ಯರ ಮುಂದೆ ಮೂಲ ವಿಧೇಯಕವು ಇದ್ದಾಗ್ಯೂ, ಅವರ ಮುಂದೆ ಇಲಾಖಾ ವಿಧೇಯಕವು ಇದ್ದಾಗ್ಯೂ ಅವರು ಮುಂದೆ ಎರಡೂ ವಿಧೇಯಕಗಳನ್ನೂ ಹೋಲಿಸಿ ನೋಡುವ ಮತ್ತು ಎದ್ದುಕಾಣುವಂಥ ಪ್ರಕ್ಷೇಪಗಳನ್ನು ಗಮನಿಸುವ ಅವಕಾಶ ಇದ್ದಾಗ್ಯೂ ಅವರು ಹಾಗೆ ಮಾಡಲಿಲ್ಲ. ನಾನು ಗೌರವ ಪೂರ್ವಕವಾಗಿ ಹೇಳುವುದೇನೆಂದರೆ, ವಿಷಯದ ಮಹತ್ವವನ್ನು ಗಮನಿಸಿ, ಅವರು ಒಂದಿಷ್ಟು ಅವಸರದಲ್ಲಿ, ಅಪರಿಪೂರ್ಣವಾಗಿ ಮತ್ತು ಒಂದಿಷ್ಟು ನಿರ್ಲಕ್ಷ್ಯವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿದರು ಎಂದು ನಾನು ಗೌರವಪೂರ್ವಕವಾಗಿ ಹೇಳಬೇಕು. ನಾನು ಒತ್ತಿಹೇಳುತ್ತ ಇದ್ದದ್ದು ಈ ಅಂಶವನ್ನೇ.

**ಒಬ್ಬ ಮಾನ್ಯ ಸದಸ್ಯ :** ನೀವು ಕಾನೂನು ಮಂತ್ರಿಗಳನ್ನು ಹಿಂಸಾಚಾರಕ್ಕೆ ದುಷ್ಪ್ರೇರಣೆ ನೀಡುತ್ತಿದ್ದೀರ!

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಅಂಥ ಯಾವುದೇ ಕೆಲಸವನ್ನು ಮಾಡಲಾರೆನು. ಮಿ। ಅಹಮ್ಮದ್ ಅವರನ್ನು ಇದಿರಿಸಲು ನನ್ನ ಹತ್ತಿರ ಸಾಕಷ್ಟು ವಾದಗಳಿವೆ.

**ಮಿ। ನಝೀರುದ್ದೀನ್ ಅಹಮ್ಮದ್ :** ಸನ್ನಿವೇಶದ ಸಂಬಂಧದಲ್ಲಿ ಮಾನ್ಯರಿಗೆ ಪೂರ್ಣ ಅರಿವು ಇದೆ ಎಂದು ನಾನು ನಿವೇದಿಸುತ್ತೇನೆ. ಇಲಾಖಾ ವಿಧೇಯಕದಲ್ಲಿ ಎಂಥ ಗಂಭೀರ ಬದಲಾವಣೆಗಳನ್ನು ಮಾಡಲಾಗಿದೆ ಎಂದು ನಿಸ್ಸಂದೇಹವಾಗಿ ಇಷ್ಟು ಹೊತ್ತಿಗೆ ಅವರಿಗೆ ತಿಳಿದಿದೆ ಎಂಬ ಬಗ್ಗೆ ನನಗೆ ಒಂದಿಷ್ಟು ಸಂಶಯವೆನಿಸುತ್ತದೆ.

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ನನಗೆ ಗೊತ್ತಿಲ್ಲ. ಆದರೂ ತಿಳಿದುಕೊಳ್ಳುವ ನಿರೀಕ್ಷೆಯಲ್ಲಿದ್ದೇನೆ.

**ಮಿ| ನಝೀರುದ್ದೀನ್ ಅಹಮ್ಮದ್ :** ಮಾನ್ಯ ಕಾನೂನು ಮಂತ್ರಿಗಳು "ಕೆಲವು ಗಂಭೀರ ಬದಲಾವಣೆಗಳು ಆಗಿವೆ. ನಾನು ಏನೂ ಮಾಡಿಲ್ಲ. ಹಾಗೆ ಮಾಡಿದ್ದು ಆಯ್ಕೆ ಸಮಿತಿ. ಇಲಾಖಾ ಸಮಿತಿಯು ಬದಲಾವಣೆಗಳನ್ನು ಮಾಡಲಿಲ್ಲ. ನಾನು ನಿನ್ನೆ ಒಂದು ತೀಕ್ಷ್ಣ ಪ್ರಶ್ನೆಯನ್ನು ಕೇಳಿದೆನು. ಅದಕ್ಕೆ ಅವರು ಒಡನೆಯೇ ಉತ್ತರ ನೀಡಿದರು. ಏರ್ಪಡಿಸಲಾದ ಸಮಿತಿಗೆ, ಇಲಾಖಾ ಸಮಿತಿಗೆ ಮೂಲಭೂತ ಬದಲಾವಣೆಗಳನ್ನು ಮಾಡಬಾರದು ಎಂದು ಸೂಚಿಸಲಾಗಿತ್ತು ಎಂದು ಹೇಳಿದರು." ಇದಕ್ಕೆ ಕಾರಣವೆಂದರೆ ಆಯ್ಕೆ ಸಮಿತಿಯ ವರದಿಯಲ್ಲಿ ಸಮಿತಿಯ ಬಹುಮತದ ಸದಸ್ಯರು ಒಂದು ಖಚಿತ ಘೋಷಣೆಯನ್ನು ಮಾಡಿದ ಸಂಗತಿ. ಆ ಘೋಷಣೆ ಅಂದರೆ : 'ಈ ಪರಿಷ್ಕೃತ ಕರಡಿನಲ್ಲಿ, ಮೂಲ ವಿಧೇಯಕದ ಪಾಠದಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡಿಲ್ಲ'.

**ಶ್ರೀಮತಿ ರೇಣುಕಾ ರೇ :** ಸಭಾಧ್ಯಕ್ಷರೆ, ಕ್ರಿಯಾಲೋಪವನ್ನೆತ್ತಿ ಕೇಳಬಹುದೆ ? ಆಯ್ಕೆ ಸಮಿತಿಯಲ್ಲಿ ಏನೆಲ್ಲ ನಡೆಯಿತೋ ಅವೆಲ್ಲವನ್ನು, ಆ ವಿವರಗಳನ್ನೆಲ್ಲ, ಈ ರೀತಿಯಲ್ಲಿ ಬಹಿರಂಗಗೊಳಿಸಬಹುದೆ?

**ಮಿ| ನಝೀರುದ್ದೀನ್ ಅಹಮ್ಮದ್** : ಈ ಕ್ರಿಯಾಲೋಪಕ್ಕೆ ಸಂಬಂಧಪಟ್ಟ ಹಾಗೆ ನಾನು ಈಗಾಗಲೇ ನಿವೇದಿಸುವುದೇನೆಂದರೆ.......

**ಶ್ರೀಮತಿ ರೇಣುಕಾ ರೇ** : ಸ್ವಾಮೀ, ಇದು ತಾವು ತೀರ್ಮಾನಿಸಬೇಕು ಎಂದು ನಾನು ಅಪೇಕ್ಷಿಸುವ ಕ್ರಿಯಾಲೋಪ.

**ಸಭಾಧ್ಯಕ್ಷರು** : ನನ್ನ ಪ್ರಕಾರ ಕ್ರಿಯಾಲೋಪವೇ ಇಲ್ಲ. ಇದು ಮಿ| ನಝೀರುದ್ದೀನ್ ಅಹಮ್ಮದರ ಅನುಮಾನ ಅಷ್ಟೆ. ಆಯ್ಕೆ ಸಮಿತಿಯು ಇಂಥಿಂಥ ಕೆಲಸವನ್ನು ಮಾಡಿತೆ ಅಥವಾ ಮಾಡಲಿಲ್ಲವೆ ಎಂಬ ಬಗ್ಗೆ ಅವರ ಅನುಮಾನ. ಮಾನ್ಯ ಸದಸ್ಯರು ಆಯ್ಕೆ ಸಮಿತಿಯ ಸಂಬಂಧದಲ್ಲಿ ಆಗಲಿ ಅಥವಾ ಆಯ್ಕೆ ಸಮಿತಿಯ ಸದಸ್ಯರ ಸಂಬಂಧದಲ್ಲಿ ಆಗಲಿ ದೂಷಣೆಯ ಮಾತುಗಳನ್ನು ಆಡಲಿಕ್ಕಿಲ್ಲ ಎಂದು ಭಾವಿಸಿದ್ದೇನೆ. ಅವರು ತಮ್ಮ ವಾದಗಳನ್ನು ಮುಂದಿಡಬಹುದು.

**ಪಂಡಿತ ಠಾಕುರ್‌ದಾಸ್ ಭಾರ್ಗವ** : ಆಯ್ಕೆ ಸಮಿತಿಯು ನಡೆದುಕೊಂಡ ರೀತಿ ಖಂಡಿತವಾಗಿಯೂ ಸದನದ ಟೀಕೆಗೆ ಗುರಿಯಾಗತಕ್ಕ ರೀತಿ ಆಗಿತ್ತು.

**ಮಿ| ನಝೀರುದ್ದೀನ್ ಅಹಮ್ಮದ್** : ನನ್ನ ನಿವೇದನೆಯೆಂದರೆ....

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ನೀವು ಹೇಳುವುದು ಸರಿ. ಸಭಾಧ್ಯಕ್ಷರೇ, ಅವರು ಯಾರೇ ಸದಸ್ಯರ ಬಗ್ಗೆ ದೂಷಣೆಯ ಮಾತನ್ನಾಡದೆ ತಮ್ಮ ವಾದವನ್ನು ಮುಂದಿಡಬಹುದು.

**ಶ್ರೀಮತಿ ರೇಣುಕಾ ರೇ :** ಆದರೆ ಅವರು ದೂಷಣೆಯ ಮಾತುಗಳನ್ನು ಆಡುತ್ತಿದ್ದಾರೆ.

**ಸಭಾಧ್ಯಕ್ಷರು :** ಹೆಚ್ಚೆಂದರೆ ಅವು ಅನುಮಾನಗಳು, ಅಷ್ಟೆ.

**ಮಿ| ನಝೀರುದ್ದೀನ್ ಅಹಮ್ಮದ್ :** ಸ್ವಾಮೀ ನನ್ನ ಅನುಮಾನ ಎಂದರೆ ಆಯ್ಕೆ ಸಮಿತಿಯ ಸದಸ್ಯರಿಗೆ, ಮಾನ್ಯ ಮಂತ್ರಿಗಳು ಖಂಡಿತವಾಗಿಯೂ ಭರವಸೆ ಕೊಟ್ಟಿದ್ದರು.........

**ಶ್ರೀಮತಿ ರೇಣುಕಾ ರೇ** : ಸ್ವಾಮೀ, ಇದಕ್ಕೆ ನನ್ನ ಆಕ್ಷೇಪಣೆ ಉಂಟು, ಇದೇ ದೂಷಣೆಯ ಮಾತು. ಈ ಅನುಮಾನಗಳು ದೂಷಣೆಯ ಮಾತುಗಳನ್ನು ಆಡಿದಂತೆಯೇ.

**ಸಭಾಧ್ಯಕ್ಷರು** : ಪ್ರತಿಯೊಬ್ಬ ಮಾನ್ಯ ಸದಸ್ಯರಿಗೆ ತನ್ನದೇ ಆದ ಅನುಮಾನಗಳಿಗೆ ತಲುಪಲು ಸ್ವಾತಂತ್ರ್ಯವುಂಟು.

**ಮಿ| ನಝೀರುದ್ದೀನ್ ಅಹಮ್ಮದ್** : ಸ್ವಾಮೀ, ನನ್ನ ನಿವೇದನೆಯೆಂದರೆ ಅದಕ್ಕೆ ಆಯ್ಕೆ ಸಮಿತಿಯ

ಯಾರೇ ಸದಸ್ಯರು ಒಡನೆಯೇ ಮಾರುತ್ತರ ಕೊಡಬಹುದು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಇಲ್ಲ, ಖಂಡಿತವಾಗಿ ನಾವು ಮಾರುತ್ತರ ಕೊಡಲಾರೆವು. ಆದರೆ ನೀವು ಮಾರುತ್ತರವನ್ನು ಅಪೇಕ್ಷಿಸುವ ಕಾರಣ, ಆಯ್ಕೆ ಸಮಿತಿಯ ಸದಸ್ಯನಾಗಿ ನಾನು ಮಾರುತ್ತರ ಕೊಡುತ್ತೇನೆ. ನಾವು ಆ ಇಡೀ ಸಾಮಗ್ರಿಯನ್ನು ಆಮೂಲಾಗ್ರವಾಗಿ ಓದಿದ್ದೇವೆ. ಮತ್ತು ನಮಗೆ ಮನವರಿಕೆಯಾಗಿದೆ. ಏನೆಂದರೆ........

**ಮಿ। ನಝೀರುದ್ದೀನ್ ಅಹಮ್ಮದ್** : ನೀವು ಒಂದು ಹೇಳಿಕೆ ಕೊಡುತ್ತಿದ್ದೀರ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ನಿಮಗೆ ಮಾರುತ್ತರ ಬೇಕಾಗಿತ್ತು. ನಾನು ಮಾರುತ್ತರ ಕೊಟ್ಟಿದ್ದೇನೆ.

**ಶ್ರೀಮತಿ ರೇಣುಕಾ ರೇ** : ಅಧ್ಯಕ್ಷ ಮಹಾಶಯರೆ, ಅನುಮಾನಗಳಿಗೆ ತಲುಪುತ್ತಾರೆ ಮತ್ತು ದೂಷಣೆಯ ನುಡಿಗಳನ್ನು ಆಡುತ್ತಾರೆ. ಆಯ್ಕೆ ಸಮಿತಿ ಸದಸ್ಯರೂ ಒಂದು ಬಗೆಯ ಇಕ್ಕಟ್ಟಿಗೆ ಸಿಲುಕಿಕೊಳ್ಳುತ್ತಾರೆ. ಆಗ ನಾವು ಅಲ್ಲಿ ಏನೆಲ್ಲ ನಡೆಯಿತೋ ಅದನ್ನು ವಿವರಿಸಿ ಹೇಳಬೇಕಾಗುತ್ತದೆ. ಅದನ್ನೆಲ್ಲ ಇಲ್ಲಿ ಹೇಳಬಹುದೆ?

**ಸಭಾಧ್ಯಕ್ಷರು :** ಆರ್ಡರ್, ಆರ್ಡರ್. ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆಯ್ಕೆ ಸಮಿತಿಯ ಯಾರೇ ಸದಸ್ಯರ ಸಂಬಂಧದಲ್ಲಿ ದೂಷಣೆಯ ಮಾತುಗಳನ್ನು ಆಡಬೇಡಿ. ವಿಧೇಯಕವನ್ನು ಹೇಗೆ ಬದಲಾಯಿಸಲಾಯಿತು ಎಂಬ ಬಗ್ಗೆ ತಮ್ಮ ವಾದಗಳನ್ನು ಮುಂದುವರಿಸಬಹುದು.

**ಮಿ। ನಝೀರುದ್ದೀನ್ ಅಹಮ್ಮದ್** : ನನ್ನ ಅಭಿಪ್ರಾಯದ ಅಂಶವನ್ನು ವಿಶದೀಕರಿಸುವ ಪ್ರಕ್ರಿಯೆಯಲ್ಲಿ ಒಳಗೊಂಡಿದ್ದ ಹೊರತು, ನಾನು ಉದ್ದೇಶಪೂರ್ವಕವಾಗಿ ಯಾವುದೇ ದೂಷಣೆಯ ನುಡಿಯನ್ನು ಸೂಚಿಸುವುದೂ ಇಲ್ಲ, ಆಡುವುದೂ ಇಲ್ಲ. ೩೦ ಕೋಟಿ ಜನಗಳ ಭವಿಷ್ಯಕ್ಕೆ ಬಾಧಕವಾಗುವಂಥ ರೀತಿಯಲ್ಲಿ ಏನಾದರೂ ಕೆಟ್ಟದ್ದಾಗಿ ಮಾಡಿದ್ದರೆ, ಮತ್ತು ಆಯ್ಕೆ ಸಮಿತಿಯ ಸದಸ್ಯರು ಯಾರಾದರೂ ಯಾವುದೇ ದೂಷವನ್ನು ಅಥವಾ ತಪ್ಪನ್ನು ಮಾಡಿದ್ದರೆ ನಾನು ಗೌರವಪೂರ್ವಕವಾಗಿ ಮತ್ತು ಪ್ರಾಮಾಣಿಕವಾಗಿ ಅದನ್ನು ಟೀಕಿಸಬೇಕಾಗುತ್ತದೆ. ಇಷ್ಟು ಮಟ್ಟಿಗಿನ ವಿಶೇಷಾಧಿಕಾರ ಈ ಸದನದ ಸದಸ್ಯರಿಗೆ ಇರಬೇಕು. ನಾನು ಹೇಳಿದ್ದು ತಪ್ಪಾಗಿದ್ದರೆ, ನನ್ನನ್ನು ಕ್ಷಮಿಸಿ ಎಂದು ಕೇಳಿಕೊಳ್ಳುತ್ತೇನೆ. ದೊಷಣೆ ನುಡಿಗಳನ್ನು ಆಡುವ ಸಲುವಾಗಿ ಮಾತ್ರವೇ ನಾನು ದೂಷಣೆ ನುಡಿಗಳನ್ನು ಆಡುತ್ತಿಲ್ಲ. ನಾನು ತಪ್ಪು ನಿಲುವು ತಳೆದಿದ್ದರೆ ನನ್ನನ್ನು ತಿದ್ದಬೇಕು ಎಂದು ಕೇಳಿಕೊಳ್ಳುತ್ತೇನೆ. ನಾನು ವಿಧೇಯಕದ ಗುಣಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುವಂಥ ಕೆಲವು ಗಂಭೀರ ಬದಲಾವಣೆಗಳನ್ನು ಮತ್ತು ಪ್ರಕ್ರಿಯಾ ದೋಷಗಳನ್ನು ಎತ್ತಿ ತೋರಿಸುವುದಕ್ಕೆ ಮಾತ್ರ ನನ್ನ ಮಾತುಗಳನ್ನು ಸೀಮಿತಗೊಳಿಸುತ್ತೇನೆ. ಮತ್ತು ಹಾಗೆ ಚರ್ಚೆ ನಡೆಯುವ ಪ್ರಕ್ರಿಯೆಯಲ್ಲಿ ನಾನು ಅನಿವಾರ್ಯವಾಗಿ ಆಯ್ಕೆ ಸಮಿತಿಯ ಸದಸ್ಯರನ್ನು ಟೀಕಿಸುವ ಪ್ರಸಂಗ ಉದ್ಭವಿಸಬಹುದು. ಆಯ್ಕೆ ಸಮಿತಿಯ ಸದಸ್ಯರಿಗೆ ಚರ್ಚೆಯ ಭಯ ಯಾಕೆ?

**ಶ್ರೀಮತಿ ರೇಣುಕಾ ರೇ** : ನಾವು ಚರ್ಚೆಗೆ ಅಂಜುತ್ತಿಲ್ಲ. ಆಗ, ಆಯ್ಕೆ ಸಮಿತಿಯಲ್ಲಿ ನಡೆದದ್ದೇನು ಎಂದು ಹೇಳಲು ನಮಗೆ ಹಕ್ಕಿರಬೇಕು.

**ಮಿ। ನಝೀರುದ್ದೀನ್ ಅಹಮ್ಮದ್** : ಈ ಸಂಬಂಧದಲ್ಲಿ ಆಯ್ಕೆ ಸಮಿತಿಯ ತಥಾಕಥಿತ ಪಾವಿತ್ರ್ಯಕ್ಕೆ ಅನೇಕ ಸಲ ಭಂಗ ಬಂದದ್ದುಂಟು.

**ಶ್ರೀ ಮಹಾವೀರ ತ್ಯಾಗಿ** (ಯು.ಪಿ. : ಜನರಲ್) : ಹಾಗೆ ಪಾವಿತ್ರ್ಯ ಎಂಬುದೇನೂ ಇಲ್ಲ. ನಾವು ಚರ್ಚೆ ಮಾಡಬಹುದು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ನಾವು ಚರ್ಚೆಗೆ ಸಿದ್ಧರಿದ್ದೇವೆ.

**ಶ್ರೀ ಮಿಹಿರಲಾಲ ಚಟ್ಟೋಪಾಧ್ಯಾಯ** (ಪಶ್ಚಿಮ ಬಂಗಾಳ : ಸಾಮಾನ್ಯ) : ಸ್ವಾಮೀ, ಸದಸ್ಯರಿಗೆ ಈ ಪರಿಯ ಸಂಭಾಷಣೆ ಮುಂದುವರಿಸಲು ಅವಕಾಶ ಕೊಡಬಹುದೆ?

**ಸಭಾಧ್ಯಕ್ಷರು :** ಆರ್ಡರ್, ಆರ್ಡರ್.... ! ಹೀಗೇ ನಡೆಯುತ್ತಾ ಇದೆ. ನಾನು ನೋಡುತ್ತಾ ಇದ್ದೇನೆ. ವಾದವನ್ನು ಮುಂದುವರಿಸಲು ಸ್ಪೀಕರ್ ಅವರಿಗೆ ಮಾನ್ಯ ಸದಸ್ಯರು ದಯವಿಟ್ಟು ಅವಕಾಶ ಕೊಡಬೇಕು.

**ಮಿ। ನಝೀರುದ್ದೀನ್ ಅಹಮ್ಮದ್** : ಕೆಲವು ಸಂಗತಿಗಳು ನಡೆದದ್ದೇಕೆ ಎಂದು ಮಾನ್ಯ ಡೆಪ್ಯೂಟಿ ಸ್ಪೀಕರ್ ಅವರು ಆ ದಿನ ಮಾನ್ಯ ಡಾ॥ ಅಂಬೇಡ್ಕರ್ ಅವರನ್ನು ಕೇಳಿದ್ದರು. ತಮ್ಮ ಶತ್ರುಗಳು ತಮ್ಮ ಮಿತ್ರರಿಗಿಂತ ಅಧಿಕ ಶಕ್ತಿವಂತರಾಗಿ ಎಸಗಿದ ಕಾಯಕ ಎಂದು ಡಾ॥ ಅಂಬೇಡ್ಕರ್ ಉತ್ತರ ನೀಡಿದರು. ಅವರ ಶತ್ರುಗಳೆಲ್ಲ ಒಟ್ಟುಗೂಡಿ ಹಾಗೆ ಮಾಡಿದರಂತೆ, ಅಂದರೆ ಆಯ್ಕೆ ಸಮಿತಿಯ ರಹಸ್ಯಗಳನ್ನು ಬಯಲುಗೊಳಿಸಿದಂತೆ ಆಗಲಿಲ್ಲವೆ?

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್** : ಮಾನ್ಯ ಸದಸ್ಯರ ಮಾತಿಗೆ ಅಡ್ಡಿಪಡಿಸಲು ಬಯಸಿರಲಿಲ್ಲ ನಾನು. ಆದರೆ ಈಗ, ಸ್ಪೀಕರ್ ಅವರ ಗಮನ ಸೆಳೆಯುವುದು ನನ್ನ ಕರ್ತವ್ಯ ಎಂದು ಭಾವಿಸಿದ್ದೇನೆ. ಎಂದರೆ ವಿಧೇಯಕದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿರುವ ಕಾರಣ ಮಾನ್ಯ ಸದಸ್ಯರ ಪ್ರಸ್ತಾಪದ ಪ್ರಕಾರ ಅದನ್ನು (ವಿಧೇಯಕವನ್ನು) ಪುನಃ ಸಕಲರಿಗೂ ಕಳಿಸಿಕೊಡಬೇಕು. ಆ ಪ್ರಸ್ತಾವಕ್ಕೆ ಅತ್ಯಂತ ಸಮೀಪ ಆಗಿರುವ ಸಂಗತಿಯೆಂದರೆ, ಯಾವುದೇ ಪ್ರಾಸ್ತಾವಿಕ ಚರ್ಚೆ ಇಲ್ಲದೆಯೆ ಅವರು ನೇರವಾಗಿ ಯಾವ ಬದಲಾವಣೆಗಳನ್ನು ಮಾಡಲಾಗಿದೆ ಎಂದು ಎತ್ತಿ ತೋರಿಸಲು ಪ್ರಾರಂಭಿಸಿದ್ದು. ನಾನು ಅದನ್ನು ಅವರ ಕಡೆಯಿಂದ ತಿಳಿಯಬಯಸಿದ್ದೆನು.

**ಮಿ। ನಝೀರುದ್ದೀನ್ ಅಹಮ್ಮದ್ :** ಸಂಬಂಧಪಟ್ಟ ಇತರ ಪ್ರಶ್ನೆಗಳನ್ನು ಎತ್ತಿದಾಗ ನಾನು ಅದನ್ನೇ ಮಾಡಬೇಕು ಎಂದು ಎಣಿಸಿದ್ದೆನು.

**ಪಂಡಿತ ಠಾಕೂರ್‌ದಾಸ್ ಭಾರ್ಗವ** : ಕ್ರಿಯಾಲೋಪ ಎತ್ತಿ ಮಾತಾಡುತ್ತಿದ್ದೇನೆ. ಈ ಪ್ರಶ್ನೆಯು ಸದನದ ಸದಸ್ಯರ ವಿಶೇಷಾಧಿಕಾರಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ನಿವೇದಿಸಬಯಸುತ್ತೇನೆ. ವಿವಾದದ ಪ್ರಶ್ನೆ ಎಂದರೆ, ಸದನದ ಸದಸ್ಯರು ಪ್ರಕ್ರಿಯೆಗೆ ಸಂಬಂಧಿಸಿದಂತೆ ಆಯ್ಕೆ ಸಮಿತಿಯ ಸದಸ್ಯರ ತಪ್ಪು ವರ್ತನೆಯನ್ನು ಅಥವಾ ತಪ್ಪು ನಡತೆಯನ್ನು ಟೀಕಿಸಲು ಹಕ್ಕು ಹೊಂದಿಲ್ಲವೆ? ಒಂದು ವಿಧೇಯಕವನ್ನು ಆಯ್ಕೆ ಸಮಿತಿಗೆ ಕಳಿಸಲಾಗಿದೆಯೆಂದು ಮತ್ತು ಸಮಿತಿಯು ಪರಿಶೀಲಿಸಿದ ವಿಧೇಯಕವು ಅದಕ್ಕೆ ಉಲ್ಲೇಖಿಸಲಾದ ವಿಧೇಯಕ ಆಗಿರಲಿಲ್ಲ ಎಂದು ಭಾವಿಸಿ. ಅದರ ಸ್ಥಳದಲ್ಲಿ ಇನ್ನೊಂದು ಬೇರೊಂದು ವಿಧೇಯಕವನ್ನು ಇಡಲಾಗಿದೆ ಎಂದು ಭಾವಿಸಿ. ಅದನ್ನು ಸದನಕ್ಕೆ ತಿಳಿಸಲು ಸದಸ್ಯರಿಗೆ ಹಕ್ಕಿಲ್ಲವೆ? ಆಯ್ಕೆ ಸಮಿತಿಯ ಈ ಬಗೆಯ ನಡತೆಯ ಸಂಬಂಧದಲ್ಲಿ ಸದನವು ಟೀಕೆಮಾಡಬಹುದೆ ಇಲ್ಲವೆ ಎಂಬ ಬಗ್ಗೆ ನೀವು ರೂಲಿಂಗ್ ಕೊಡಬಹುದು. ಆಯ್ಕೆ ಸಮಿತಿಯಲ್ಲಿ ಏನೆಲ್ಲ ನಡೆಯಿತೋ ಅದೆಲ್ಲವನ್ನೂ ಬಹಿರಂಗಪಡಿಸಲು ಅವಕಾಶ ಇರಲಿಕ್ಕಿಲ್ಲವೇನೋ. ಆದರೆ ಯಾವ ರೀತಿಯಲ್ಲಿ ವ್ಯವಹರಣೆಗಳನ್ನು ನಡೆಸಲಾಯಿತೋ ಆ ರೀತಿಯು ಟೀಕೆಗೆ ಗುರಿಯಾಗಬೇಕಾಗುತ್ತದೆ. ಇಲ್ಲದಿದ್ದರೆ, ಸದನದ ಸದಸ್ಯರಿಗೆ ವಿಧೇಯಕದ ಮೇಲೆ ಯಾವುದೇ ಬಗೆಯ ನಿಯಂತ್ರಣ ಇಲ್ಲ ಎಂದು ಅರ್ಥವಾಗುತ್ತದೆ. ಒಂದು ವಿಧೇಯಕವನ್ನು ಸದನದಲ್ಲಿ ಮಂಡಿಸಿದರೆ ಅದು ಸದನದ ಸೊತ್ತು ಆಗುತ್ತದೆ. ಮತ್ತು ಆಯ್ಕೆ ಸಮಿತಿಯಲ್ಲಿ ಆಗಿರುವ ಕ್ರಮ ದೋಷಗಳನ್ನು ಕುರಿತು ಟೀಕೆ ಮಾಡಲು ಪ್ರತಿಯೊಬ್ಬ ಸದಸ್ಯನಿಗೂ ಹಕ್ಕು ಇರುತ್ತದೆ.

**ಸಭಾಧ್ಯಕ್ಷರು :** ಇದು ಕ್ರಿಯಾಲೋಪ. ಭಾಷಣಕಾರರು ತಮ್ಮ ಮಾತು ಮುಂದುವರಿಸಬಹುದು.

**ಮಾನ್ಯ ಶ್ರೀ ಕೆ. ಸಂತಾನಂ** (ರೈಲ್ವೆ ಮತ್ತು ಸಾರಿಗೆ ಖಾತೆಯ ರಾಜ್ಯ ಮಂತ್ರಿಗಳು) : ನಾನು ನಿವೇದಿಸಿಕೊಳ್ಳುವುದೇನೆಂದರೆ ಸದನವು ಆಯ್ಕೆ ಸಮಿತಿಯನ್ನು ಟೀಕಿಸಲು, ಅಷ್ಟೇಕೆ ನಿಂದಿಸಲು ಕೂಡ ಹಕ್ಕು ಹೊಂದಿದೆಯಾದರೂ, ಅದರ ಮುಂದೆ ಇರುವ ವಿಧೇಯಕವು ಅದಕ್ಕೆ ಉಲ್ಲೇಖಿಸಲಾದ ವಿಧೇಯಕ ಅಲ್ಲ ಎಂದು ಹೇಳುವ ಹಕ್ಕು ಹೊಂದಿಲ್ಲ. ಆಯ್ಕೆ ಸಮಿತಿಯು ತನ್ನ ಕರ್ತವ್ಯವನ್ನು ನಿರ್ವಹಿಸಿಲ್ಲ ಎಂದು ಸದನವು ಭಾವಿಸಿದರೆ, ಅದು ಆಯ್ಕೆ ಸಮಿತಿಯನ್ನು ಖಂಡಿಸಬಹುದು. ನಮಗೆ ಒಂದು ವಿಧೇಯಕವನ್ನು ಸಾದರಪಡಿಸಿರುವಾಗ ಮತ್ತು ಆ ವಿಧೇಯಕವು ಪರ್ಯಾಲೋಚನೆಯಲ್ಲಿ ಇರುವಾಗ, ಅದು ನಮಗೆ ಸಾದರಪಡಿಸಲಾದ ವಿಧೇಯಕ ಅಲ್ಲ ಎಂದು ಹೇಳಲು ಅವಕಾಶವಿಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್** : ನಾನು ಆಯ್ಕೆ ಸಮಿತಿಯನ್ನು ಖಂಡಿಸಲು ಹೊರಟಿದ್ದೇನೆ, ಹೊರತಾಗಿ ಇನ್ನೇನೂ ಅಲ್ಲ ಎಂದು ನಿವೇದಿಸಿಕೊಳ್ಳುತ್ತೇನೆ.

**ಸಭಾಧ್ಯಕ್ಷರು :** ಮಾನ್ಯ ಸದಸ್ಯರು ಆಯ್ಕೆ ಸಮಿತಿಯಿಂದ ಹೊರಬಂದಂತಿರುವ ವಿಧೇಯಕವನ್ನು ಟೀಕಿಸಿದರೆ ಮತ್ತು ಮಾಡಲಾದ ಬದಲಾವಣೆಗಳನ್ನು ಎತ್ತಿ ತೋರಿಸಿದರೆ, ಅವರು ಸರಿಯಾದದ್ದನ್ನೇ ಮಾಡಿದಂತಾಗುತ್ತದೆ. ಆದರೆ ಅವರು ತಮ್ಮ ಟಿಪ್ಪಣಿಗಳನ್ನು ವಿಧೇಯಕದಲ್ಲಿ ಮಾಡಲಾದ ಬದಲಾವಣೆಗಳಿಗೆ ಮಾತ್ರ ಸೀಮಿತಗೊಳಿಸಿರಬೇಕು.

**ಮಿ। ನಝೀರುದ್ದೀನ್ ಅಹಮ್ಮದ್** : ಕೆಲವು ಬದಲಾವಣೆಗಳನ್ನು ಮಾಡಲಾಗಿದೆ ಎಂದು ಗಂಭೀರವಾದ, ಮಹತ್ವಪೂರ್ಣ ಬದಲಾವಣೆಗಳನ್ನು ಮಾಡಲಾಗಿದೆ ಎಂದು ನಾನು ಸದನಕ್ಕೆ ನಿವೇದಿಸಿಕೊಳ್ಳಲಿದ್ದೇನೆ.

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್ :** ಅವುಗಳನ್ನು ಎತ್ತಿ ತೋರಿಸಿ ನಾನು ಮಾಡಲಾದ ಬದಲಾವಣೆಗಳನ್ನು ನೋಡುವ ನಿರೀಕ್ಷೆಯಲ್ಲಿದ್ದೇನೆ. ಮಾನ್ಯ ಸದಸ್ಯರು ಅವಸರ ಮಾಡಬೇಕಾಗಿಲ್ಲ. ಬದಲಾವಣೆಗಳು ಯಾವುವು ಎಂದು ನಮಗೆ ಹೇಳಲಿ.

**ಮಿ। ನಝೀರುದ್ದೀನ್ ಅಹಮ್ಮದ್** : ನಾನು ನನ್ನ ಶೈಲಿಯಲ್ಲಿಯೇ ಪ್ರಾರಂಭಿಸುತ್ತೇನೆ.

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್ :** ಅವರು ಈ ರೀತಿಯಲ್ಲಿ ಮುಂದುವರಿಯುವಂತಿಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್** : ಮೂಲ ವಿಧೇಯಕವನ್ನು ಶ್ರೀ ಜೋಗೇಂದ್ರನಾಥ ಮಂಡಲ ಅವರು ಮಂಡಿಸಿದ್ದರು. ಅದರ ಮೇಲೆ ೧ನೆಯ ಆಗಸ್ಟ್ ೧೯೪೮ ಎಂದು ಮುದ್ರಣ ದಿನಾಂಕವುಂಟು. ಆಯ್ಕೆ ಸಮಿತಿಗೆ ಕಳಿಸಲಾದ ವಿಧೇಯಕ ಇದೇ. ವರದಿ ಸಮೇತ ಆಯ್ಕೆ ಸಮಿತಿಯಿಂದ ಹೊರಬಂದ ವಿಧೇಯಕದ ಮುದ್ರಣ ದಿನಾಂಕ ೧೬ನೆಯ ಆಗಸ್ಟ್ ೧೯೪೮.

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಅದರಲ್ಲಿ ವಿಚಾರಾಂಶ ಏನು?

**ಮಿ। ನಝೀರುದ್ದೀನ್ ಅಹಮ್ಮದ್** : ನಾನು ಅಲ್ಲಿಗೆ ಬರುತ್ತಿದ್ದೇನೆ. ಈ ಎರಡು ವಿಧೇಯಕಗಳಲ್ಲಿ ಗಂಭೀರವಾದ ವಿಸಂಗತಿಗಳು ಇವೆ.

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಇದನ್ನು ಸ್ವೀಕರಿಸಿದರೆ, ನಾನು ಝೀವಾಳದ ಅಂಶಗಳನ್ನು ಕುರಿತು ಚರ್ಚೆಗೆ ತೊಡಗುತ್ತೇನೆ. ಮೂಲ ವಿಧೇಯಕಕ್ಕೂ ಆಯ್ಕೆ ಸಮಿತಿಯ ವರದಿಗೆ ಲಗತ್ತಿಸಿರುವ ವಿಧೇಯಕಕ್ಕೂ ಮಹತ್ವಪೂರ್ಣ ವ್ಯತ್ಯಾಸಗಳುಂಟು. (ಚರ್ಚೆಗೆ ಅಡ್ಡಿ). ಇದು ನನ್ನ ಶೈಲಿಗೆ ಗತಿ ನೀಡುವ ಉತ್ತಮ ವಿಧಾನವಲ್ಲ. ಇವೆರಡೂ ವಿಧೇಯಕಗಳ ಮಧ್ಯೆ ಒಂದು ಕುತೂಹಲಕಾರಿ ದಸ್ತಾವೇಜು ಸೇರಿಕೊಂಡಿತ್ತು ಎಂದು ನಿವೇದಿಸಿಕೊಳ್ಳಬಯಸುತ್ತೇನೆ. ಆ ದಸ್ತಾವೇಜು ಇಲಾಖಾ ಕರಡು; ೧೭ನೆಯ ಜುಲೈ ೧೯೪೮ನೇ

ತಾರೀಖು ಮುದ್ರಣವಾದದ್ದು. ಇದೇ ಎರಡು ವಿಧೇಯಕಗಳ ನಡುವೆ ತೂರಿ ಬಂದದ್ದು. ಎತ್ತಲಾದ ಎಲ್ಲ ಕ್ರಿಯಾಲೋಪಗಳು ಮತ್ತು ಮಂಡಿಸಲಾದ ತರ್ಕಗಳು, ಎಲ್ಲವೂ ಈ ಇಲಾಖಾ ಕರಡನ್ನು ಕುರಿತೇ. ಈಗ ನಡೆಯುತ್ತಿರುವ ಚರ್ಚೆಯಲ್ಲಿ ಸಹ, ನಾನು ಮಾನ್ಯ ಕಾನೂನು ಮಂತ್ರಿಗಳು, ನಿಲುವನ್ನು ಸರಿಯಾಗಿ ಅರಿತುಕೊಂಡಿದ್ದರೆ, ಅವರು ಈ ಇಲಾಖಾ ವಿಧೇಯಕವನ್ನು ಕುರಿತಂತೆ ಏನನ್ನೂ ನಮೂದಿಸಿಲ್ಲ. ಆದರೆ ಎಲ್ಲ ಬದಲಾವಣೆಗಳನ್ನು ಆಯ್ಕೆ ಸಮಿತಿಯವರು ಮಾಡಿದ್ದೇ ಹೊರತು ತಾನು ಮಾಡಲಿಲ್ಲ ಎಂದು ಹೇಳಿದರು. ನಾನು ಉಲ್ಲೇಖಿಸುತ್ತಿರುವುದು ೧೭ನೇ ಜುಲೈ, ೧೯೪೮ರ ವಿಧೇಯಕವನ್ನು.

**ಶ್ರೀ ಮಹಾವೀರ ತ್ಯಾಗಿ :** ಅದು ಆಯ್ಕೆ ಸಮಿತಿಯ ಸಭೆಯ ದಿನಾಂಕಕ್ಕೆ ಮುಂಚಿನ ದಿನಾಂಕ.

**ಮಿ| ನಝೀರುದ್ದೀನ್ ಅಹಮ್ಮದ್ :** ಮುದ್ರಣ ದಿನಾಂಕ ಅಂದರೆ ೧೭ನೇ ಜುಲೈ, ೧೯೪೮ನೇ ದಿನಾಂಕವು ಆಯ್ಕೆ ಸಮಿತಿಯ ಮೊದಲ ಸಭೆಯನ್ನು ಕರೆದ ದಿನಾಂಕಕ್ಕೆ ಮುಂಚಿನದು ಎಂದು ಎತ್ತಿ ತೋರಿಸಿದ್ದಕ್ಕಾಗಿ ನಾನು ನನ್ನ ಸ್ನೇಹಿತ ಶ್ರೀ ತ್ಯಾಗಿ ಅವರಿಗೆ ಕೃತಜ್ಞನಾಗಿದ್ದೇನೆ. ನಾನು ನಿವೇದಿಸುವುದೇನೆಂದರೆ.........

**ಮಾನ್ಯ ಡಾ|| ಬಿ.ಆರ್. ಅಂಬೇಡ್ಕರ್ :** ಆ ದಿನಾಂಕ ಹಾಗೆ ಆಗಲೇಬೇಕಾದದ್ದು ಎಂದು ಹೇಳುವ ಮೂಲಕ ನನ್ನ ಸ್ನೇಹಿತರ ವಾದವನ್ನು ಮೊಟಕುಗೊಳಿಸಬಯಸುತ್ತೇನೆ. ಮರು – ಕರಡನ್ನು ಆಯ್ಕೆ ಸಮಿತಿಯ ಸಭೆಗೆ ಒಂದು ತಿಂಗಳು ಮುನ್ನ ಕಳಿಸಲಾಗಿತ್ತು.

**ಮಿ| ನಝೀರುದ್ದೀನ್ ಅಹಮ್ಮದ್** : ನಾನು ಅದೇ ಅಂಶವನ್ನು ನಮೂದಿಸುತ್ತಿದ್ದೆನು. ನೀವು ಒಪ್ಪಿಕೊಂಡದ್ದಕ್ಕಾಗಿ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಕರಡನ್ನು ಆಯ್ಕೆ ಸಮಿತಿಯು ಸಭೆ ಸೇರುವ ಮುನ್ನವೇ ಪೂರ್ತಿಗೊಳಿಸಲಾಗಿತ್ತು. ಆ ಬಗ್ಗೆ ಸದನಕ್ಕೆ ತಿಳಿವಳಿಕೆ ಕೊಡಲಿಲ್ಲ ಎಂಬ ಸಂಗತಿಯನ್ನು ಈ ಹಂತದಲ್ಲಿ ಹೇಳಬಯಸುತ್ತೇನೆ. ವಿಧೇಯಕವನ್ನು ಸಂಪೂರ್ಣವಾಗಿ ಬದಲಾಯಿಸುವ ವಿಚಾರದಲ್ಲಿ ಸದನದ್ವಾರಾ ಅಧಿಕಾರ ಪಡೆದುಕೊಳ್ಳಲಿಲ್ಲ.

**ಶ್ರೀ ಮಹಾವೀರ ತ್ಯಾಗಿ** : ನಡುವಿನದು ವರದಿಗೆ ಲಗತ್ತಿಸಿದಂಥದ್ದೇ ಆಗಿದೆಯೇ?

**ಮಿ| ನಝೀರುದ್ದೀನ್ ಅಹಮ್ಮದ್** : ಕೆಲವು ಬದಲಾವಣೆಗಳನ್ನು ಮಾಡಲಾಗಿದೆ. ಆಯ್ಕೆ ಸಮಿತಿಯು ಮಾಡಿದ ಬದಲಾವಣೆಗಳು ಒಂದಿಷ್ಟು, ಅಲ್ಪಸ್ವಲ್ಪ ಮಾತ್ರ. ಇಲಾಖೆಯು ಮಹತ್ವಪೂರ್ಣ ಬದಲಾವಣೆಗಳನ್ನು ಮಾಡಿದ್ದು, ಆ ಬಗ್ಗೆ ಆಯ್ಕೆ ಸಮಿತಿಗೆ ಏನೂ ಗೊತ್ತಿರಲಿಲ್ಲ.

**ಶ್ರೀಮತಿ ಜಿ. ದುರ್ಗಾಬಾಯಿ :** ಆ ಬದಲಾವಣೆಗಳನ್ನು ಮಾಡಿದವರು ಆಯ್ಕೆ ಸಮಿತಿಯವರೇ. ಅದು ಇಲಾಖೆಯ ಕೆಲಸವಲ್ಲ.

**ಮಿ| ನಝೀರುದ್ದೀನ್ ಅಹಮ್ಮದ್** : ಮುಖ್ಯ ವಿಚಾರವೆಂದರೆ ಅವರು ಇಲಾಖಾ ಕರಡನ್ನು ಕೂಲಂಕಷವಾಗಿ ಪರಿಶೀಲಿಸಿ ನೋಡಲಿಲ್ಲ. ವಾಸ್ತವವಾಗಿ ನನ್ನ ವಾದವಿಷ್ಟೆ. ನನ್ನ ಮಾನ್ಯ ಸ್ನೇಹಿತ ಸಂತಾನಂ ಅವರು, ಭಾರತ ದೇಶದ ಚರಿತ್ರೆಯಲ್ಲಿ ಅಥವಾ ಇತರ ದೇಶಗಳ ವಿಧಾನ ಮಂಡಲದ (ಶಾಸನ – ರಚನಾ) ಇಂಥ ಒಂದು ಉದಾಹರಣೆಯನ್ನು ಅಂದರೆ ಆಯ್ಕೆ ಸಮಿತಿಗೆ ಕಳಿಸಲಾದ ವಿಧೇಯಕವನ್ನು, ಇದೇ ಸಾಮಗ್ರಿಯನ್ನು ಪುನಃ ಪೂರ್ಣವಾಗಿ ಪ್ರಾರೂಪಿಸಿ ಅದರ ಜತೆಯಲ್ಲಿಯೆ ಪ್ರತಿ ಸ್ಥಾಪಿಸಿದ ಉದಾಹರಣೆಯನ್ನು ತೋರಿಸಕೊಟ್ಟ ಪಕ್ಷದಲ್ಲಿ ನಾನು ಮಾತಾಡುವುದಿಲ್ಲ. ಮಾತು ನಿಲ್ಲಿಸಿ ಸುಮ್ಮನೆ ಕುಳಿತುಕೊಳ್ಳುತ್ತೇನೆ.

**ಮಾನ್ಯ ಶ್ರೀ. ಕೆ. ಸಂತಾನಂ :** ನಾನು ಅನೇಕ ಆಯ್ಕೆ ಸಮಿತಿಗಳಲ್ಲಿ ಸದಸ್ಯನಾಗಿ ಕೆಲಸ ಮಾಡಿದ್ದೇನೆ.

ಅನೇಕ ಸಂದರ್ಭಗಳಲ್ಲಿ ಮೂಲ ವಿಧೇಯಕವನ್ನು ಆಯ್ಕೆ ಸಮಿತಿಯು ಸಂಪೂರ್ಣವಾಗಿ ಕರಡನ್ನು ಪುನರ್‌ರೂಪಿಸಿದ್ದುಂಟು.

**ಮಿ। ನಝೀರುದ್ದೀನ್ ಅಹಮ್ಮದ್** : ಅದು ಬೇರೆ ವಿಚಾರ.

**ಅಧ್ಯಕ್ಷರು :** ಮಾನ್ಯ ಸ್ಪೀಕರ್ ಅವರು ಈ ಸಂಬಂಧದಲ್ಲಿ ಕೊಟ್ಟಿರುವ ತೀರ್ಮಾನವನ್ನು ಮಾನ್ಯ ಸದಸ್ಯರಿಗೆ ತಿಳಿಸಲೇನು? ಆ ತೀರ್ಮಾನದ, ಆ ರೂಲಿಂಗ್ ಪ್ರಕಾರ, ಆಯ್ಕೆ ಸಮಿತಿಯು ತನಗೆ ಡಾ॥ ಅಂಬೇಡ್ಕರ್ ಅವರು ಕೊಟ್ಟ ಕರಡಿನ ಜತೆಗೆ ಪರಿಶೀಲಿಸಿದ ವಿಧೇಯಕ ಮೂಲ ವಿಧೇಯಕವೇ. ಆ ತೀರ್ಮಾನದ ನಿಮಿತ್ತ, ಮಾನ್ಯ ಸದಸ್ಯರು, ಮೂಲ ವಿಧೇಯಕವು ಆಯ್ಕೆ ಸಮಿತಿಯಲ್ಲಿ ಹೇಗೆ ಬದಲಾವಣೆಗೆ ಒಳಗಾಯಿತು ಎಂಬಷ್ಟಕ್ಕೆ ಮಾತ್ರ ತಮ್ಮ ಟಿಪ್ಪಣಿಗಳನ್ನು ಸೀಮಿತಗೊಳಿಸಬಹುದು. ಇನ್ನು, ಆಯ್ಕೆ ಸಮಿತಿಯಲ್ಲಿ ಏನೆಲ್ಲ ಜರುಗಿತು ಎಂಬುದಕ್ಕೆ ಸಂಬಂಧಿಸಿದ ಎಲ್ಲ ಟಿಪ್ಪಣಿಗಳು ಮಾನ್ಯ ಸದಸ್ಯರ ಅಧಿಕಾರ ವ್ಯಾಪ್ತಿಗೆ ಮೀರಿದ ವಿಷಯವಾಗುತ್ತವೆ.

**ಮಿ। ನಝೀರುದ್ದೀನ್ ಅಹಮ್ಮದ್ :** ನನ್ನ ಪ್ರಶ್ನೆಯೆಂದರೆ ಯಾವುದೇ ಆಯ್ಕೆ ಸಮಿತಿಗೆ ಬಹಳಷ್ಟು ಬದಲಾವಣೆಗಳನ್ನು ಮಾಡುವ ಹಕ್ಕುಂಟು. ಆದರೆ, ಒಂದು ಹೊಸ ವಿಧೇಯಕ ಸಂಪೂರ್ಣ ಬದಲಾವಣೆಯಾಗಿ ಅದನ್ನು ಆಯ್ಕೆ ಸಮಿತಿಯ ಕೈಗೆ ಒಪ್ಪಿಸಲಾಗುತ್ತದೆ. ಆಯ್ಕೆ ಸಮಿತಿಯಲ್ಲಿ ಹೊಸ ವಿಧೇಯಕದ ಪರ್ಯಾಲೋಚನೆಯು ಪ್ರಾರಂಭವಾಗುತ್ತದೆ. ಇಂಥ ಸಂದರ್ಭವು ಯಾವಾಗಲೂ ಸಂಭವಿಸಿಲ್ಲ. ತಾಂತ್ರಿಕವಾಗಿ, ಅದರ ಬಳಿ ಮೂಲ ವಿಧೇಯಕವು ಇದ್ದಿತಾದರೂ ಅವರು ಖಂಡ ಖಂಡವಾಗಿ ಹೊಸ ವಿಧೇಯಕದ ಪರ್ಯಾಲೋಚನೆಗೆ ತೊಡಗಿದರು. ಅದು ಗುಣದ ವಿಚಾರ. ನಾನು ನಿವೇದಿಸುವುದೇನೆಂದರೆ, ಇಲಾಖಾ ವಿಧೇಯಕದ ಮಂಡನೆಯ ಕಾರಣ, ವಿಧೇಯಕದ ನಿಷ್ಪಕ್ಷಪಾತವಾದ ಮತ್ತು ನ್ಯಾಯಸಂಗತವಾದ ಪರ್ಯಾಲೋಚನೆ ಆಗದ ಹಾಗೆ ದುರಾಗ್ರಹ ತಲೆಹಾಕಿದ್ದುಂಟು. ನನ್ನ ನಿವೇದನೆಯೇನೆಂದರೆ, ಮೂಲ ವಿಧೇಯಕದ ಖಂಡಗಳನ್ನು ಒಂದರ ಅನಂತರ ಒಂದಾಗಿ ಪರಿಶೀಲಿಸುತ್ತ, ಮೂಲ ವಿಧೇಯಕದ ಮೇಲೆ ಕ್ರಮಬದ್ಧವಾಗಿ ಬದಲಾವಣೆಗಳನ್ನು ಮಾಡಬೇಕಾಗಿತ್ತು. ಹಾಗೆ ಮಾಡದೆಯೆ ಇಲಾಖಾ ವಿಧೇಯಕವನ್ನು ತೆಗೆದುಕೊಳ್ಳಲಾಯಿತೆಂದು ತೋರುತ್ತದೆ; ಅದರಲ್ಲಿ ಮೂಲ ವಿಧೇಯಕದ ಖಂಡಗಳಿಗೆ ಬದಲುಲ್ಲೇಖಗಳನ್ನು ಗಮನಿಸಿದ ಹಾಗೆ ತೋರುವುದಿಲ್ಲ. ಆದರೂ, ಆಯ್ಕೆ ಸಮಿತಿಯ ಸದಸ್ಯರಿಗೆ ಯಾವುದೇ ಅಗೌರವ ತೋರದೆ, ನಿವೇದಿಸುವುದೇನೆಂದರೆ, ಇಲಾಖಾ ವಿಧೇಯಕದಲ್ಲಿ ಏನೆಲ್ಲ ಭಾರೀ ಬದಲಾವಣೆಗಳನ್ನು ಮಾಡಲಾಗಿದೆಯೆಂದು ವಾಸ್ತವಗಿ ಒಡನೆಯೇ ಗಮನಿಸುವುದು ಸಾಧ್ಯವಾಗಲಿಲ್ಲ. ಮತ್ತು ಅದೇ ವಿಧೇಯಕದ ಗುಣಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡಿರುತ್ತದೆ. ಆಯ್ಕೆ ಸಮಿತಿಗೆ ಯಾವುದೇ ಬದಲಾವಣೆಗಳನ್ನು ಮಾಡಲು ಅಥವಾ ಇಲಾಖಾ ವಿಧೇಯಕವನ್ನು ಅಂಗೀಕರಿಸಲು ಅಥವಾ ಮೂಲ ಪರಿಶೀಲಿಸಲು ಯಾವುದೇ ಹಕ್ಕು ಇಲ್ಲ ಎಂದು ನಾನಿಲ್ಲಿ ಸೂಚ್ಯವಾಗಿ ಹೇಳುವುದಿಲ್ಲ. ಪುನಃ ಗೌರವಪೂರ್ವಕವಾಗಿ ನಾನು ನಿವೇದಿಸುವುದೇನೆಂದರೆ, ಆ ಕೆಲಸವನ್ನು, ಬೇಕೆಂತಲೆ ಬೇಕಾಬಿಟ್ಟಿಯಾಗಿ ಮಾಡಲಾಯಿತು ಮತ್ತು ಆಯ್ಕೆ ಸಮಿತಿಯ ಕೆಲಸದಲ್ಲಿ ಗಣನೀಯ ಜವಾಬ್ದಾರಿಯು ಇಲಾಖಾ ಕರಡಿನ ಮೇಲೆ ಇರುತ್ತದೆ. ಆದ್ದರಿಂದ ಇಲಾಖಾ ಕರಡನ್ನು ಪರಿಶೀಲಿಸಲಾಗಿ, ಆ ತರುವಾಯ ಈ ವಿಧೇಯಕದ ಗುಣಗಳನ್ನು ಪರಿಶೀಲಿಸಬೇಕು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ವಿಭಿನ್ನತೆಯ ಎಲ್ಲ ಅಂಶಗಳನ್ನು ನೋಡೋಣ.

**ಮಿ। ನಝೀರುದ್ದೀನ್ ಅಹಮ್ಮದ್** : ನಾನು ನಿವೇದಿಸುವುದೇನೆಂದರೆ ಇಡೀ ಶಾಸನವು ಶಾಸನರಚನೆಯು

ಪ್ರಮಾದದಿಂದ ಪ್ರಾರಂಭವಾಗಿ ಪ್ರಮಾದದಿಂದ ಪ್ರಮಾದಕ್ಕೆ ಸಾಗುತ್ತ, ಆಖೈರಾಗಿ ಈ ವಿಧೇಯಕದ ರೂಪದಲ್ಲಿ ಭಾರೀ (ಮಹಾನ್) ಪ್ರಮಾದಕ್ಕೆ ಬಂದು ತಲುಪುತ್ತದೆ. ನನ್ನ ನಿವೇದನೆಯೆಂದರೆ ಮೊದಲನೆಯದಾಗಿ ತಪ್ಪು ಪ್ರಾರಂಭವಾದದ್ದು ೧೯೩೭ ರಲ್ಲಿ. ತಪ್ಪು ಅಲ್ಲಿ ಪ್ರಾರಂಭವಾಯಿತು. ಮತ್ತು ನಿಮಗೆ ಒಡನೆಯೇ ತೋರಿಸುವುದೇನೆಂದರೆ, ಒಂದು ತಪ್ಪು ಇನ್ನೊಂದು ತಪ್ಪಿಗೆ ಎಡೆಮಾಡಿಕೊಟ್ಟಿತ್ತು. ಮತ್ತು ಆ ತಪ್ಪು ಇತರ ತಪ್ಪುಗಳಿಗೆ ಮತ್ತು ಕೊನೆಯಲ್ಲಿ ಆ ಎಲ್ಲ ತಪ್ಪುಗಳು ಸೇರಿ ಆಯ್ಕೆ ಸಮಿತಿಗೆ ಮತ್ತು ಕೊಟ್ಟ ಕೊನೆಯಲ್ಲಿ (ಮಾತಿಗೆ ಅಡ್ಡಿ) .... ನಾನು ಶ್ರೀ ಕೃಷ್ಣಸ್ವಾಮಿಯವರನ್ನು ಕೇಳುತ್ತೇನೆ, ಗಂಭೀರವಾಗಿ ಕೇಳುತ್ತೇನೆ – ಈ ರೀತಿ ನನಗೆ ತೊಂದರೆ ಕೊಡುವುದು ಸರಿಯೆ ?

**ಸಭಾಧ್ಯಕ್ಷರು :** ಮಾನ್ಯ ಸದಸ್ಯರು ಸಭಾಧ್ಯಕ್ಷರನ್ನು ಉದ್ದೇಶಿಸಿ ಮಾತನಾಡಿದರೆ ತೊಂದರೆ ಬಹಳಷ್ಟು ಕಡಿಮೆ ಆಗುತ್ತದೆ.

**ಮಿ। ನಝೀರುದ್ದೀನ್ ಅಹಮ್ಮದ್** : ಸ್ವಾಮೀ, ನಾನು ನಿವೇದಿಸುವುದೇನೆಂದರೆ, ೧೯೩೭ನೇ ಸಾಲಿನಲ್ಲಿ, ಒಂದು ವಿಧೇಯಕವನ್ನು ತೀರ್ಣಗೊಳಿಸಲಾಯಿತು. ತಮ್ಮ ಗಮನಕ್ಕೆ ತರುತ್ತೇನೆ. ಆ ಕಾನೂನು ಎಂದರೆ ಹಿಂದೂ ವಿವಾಹಿತ ಮಹಿಳೆಯರ ಆಸ್ತಿ ಹಕ್ಕು ಕಾಯ್ದೆ, ೧೯೩೭. ಅದು ಅವಸರದ ಶಾಸನ ರಚನೆ ಎಂದು ನಿವೇದಿಸುತ್ತೇನೆ. ಅದು ಅರೆಬರೆ ಅರಗಿದ, ಕಿಂಚಿತ್ತೂ ಅರಿವಾಗದ ಕಾನೂನನ್ನು ಒಳಗೊಂಡಿತ್ತು. ಅದೇ ಇಷ್ಟೆಲ್ಲ ತೊಂದರೆಗಳಿಗೆ ಮೂಲ ಕಾರಣ, ವಾಸ್ತವವಾಗಿ ಶಾಸನದ ಕರ್ತ ಡಾ॥ ದೇಶಮುಖ್ ಅವರೇ. ಅವರು ನಮ್ಮ ಈ ಡಾ॥ ದೇಶಮುಖ್ ಅಲ್ಲ. ಆ ಡಾ॥ ದೇಶಮುಖ್ ಅವರು ಹಿಂದೂ ಸಮುದಾಯದ ಹಿತಸಂವರ್ಧನೆ ಮಾಡುವೆನೆಂಬ ಸದ್‌ಭಾವನೆಯ ನಂಬಿಕೆಯಿಂದ, ಆ ವಿಧೇಯಕವನ್ನು ಮಂಡಿಸಿದರು. ಆ ವಿಧೇಯಕದ ಪರಿಣಾಮ ಏನಾಯಿತೆಂದರೆ, ಸುಸಂಬದ್ಧ ಸರಣಿಗಳಲ್ಲಿ ಉತ್ತರಾಧಿಕಾರ ಶಾಸನದಲ್ಲಿ ಕೆಲವು ಬದಲಾವಣೆಗಳು ಉಂಟಾದವು. ಹಿಂದೂ ಕಾನೂನು ಪ್ರಕಾರ, ನಾನು ಅದನ್ನು ತಿಳಿದುಕೊಂಡ ಹಾಗೆ, ಒಬ್ಬ ಮನುಷ್ಯನು ಮೃತನಾದರೆ, ಅವರ ವಾರಸುದಾರರು ಎಂದರೆ, ಮಗ, ಮೊಮ್ಮಗ ಮತ್ತು ಮರಿಮಗ ಇವರು ಮೂರು ತಲೆಮಾರುಗಳಲ್ಲಿ ಆಸ್ತಿಗೆ ವಾರಸುದಾರರು ಆಗುತ್ತಾರೆ. ಮಗನು ಇರುವಾಗ, ಪೂರ್ವ ಮೃತ ಮಗನ ಮೊಮ್ಮಗನು ವಾರಸುದಾರನಾಗುತ್ತಾನೆ, ಮೊಮ್ಮಗನು ತನ್ನ ಮೃತ ತಂದೆಯ ಪ್ರತಿನಿಧಿ ಆಗಿ ತನ್ನ ತಂದೆಯ ಪಾಲನ್ನು ಪಡೆಯುತ್ತಾನೆ. ಹೀಗೆ, ಮಗ, ಮೊಮ್ಮಗ ಮತ್ತು ಮರಿ ಮಗ– ಹೀಗೆ ಮೂರು ತಲೆಮಾರುಗಳ ಆಸ್ತಿಗೆ ವಾರಸುದಾರರು ಆಗುತ್ತಾರೆ. ವಿಧವೆಗೆ ಒಂದು ನಿರ್ದಿಷ್ಟ ಸ್ಥಾನಮಾನವನ್ನು ಮತ್ತು ಒಂದು ನಿರ್ದಿಷ್ಟ ಹಕ್ಕನ್ನು ಕೊಡುವ ಭಾವನೆಯಿಂದ ಪ್ರೇರಿತರಾಗಿದ್ದರು ಡಾ॥ ದೇಶಮುಖ್. ಆದ್ದರಿಂದ ಅವರು ವಿಧವೆಯನ್ನು ಪಾಲುದಾರಳನ್ನಾಗಿ ಮಾಡಿದರು, ಮಾತ್ರವಲ್ಲದೆ ಮೃತ ಮಗನ ವಿಧವೆಯನ್ನು, ಮೃತ ಮೊಮ್ಮಗನ ವಿಧವೆಯನ್ನು ಮತ್ತು ಮೃತ ಮರಿಮಗನ ವಿಧವೆಯನ್ನು ಸಹ ಪಾಲುದಾರಳನ್ನಾಗಿ ಮಾಡಿದರು ಅವರನ್ನು ಸಹ ಪಾಲುದಾರರ. ಪರಿಧಿಯಲ್ಲಿ ಸೇರಿಸಲಾಯಿತು. ಆ ಪ್ರಸ್ತಾವದ ಕರ್ತರು ಅತ್ಯುನ್ನತ ದೇಶಪ್ರೇಮದ ಮತ್ತು ಸಮುದಾಯದ ಹಿತಸಂವರ್ಧನೆಯಿಂದ ಪ್ರೇರಿತರಾಗಿದ್ದರೂ, ನನ್ನ ನಿವೇದನೆಯೆಂದರೆ ಆ ಪ್ರಸ್ತಾವವು ಸುಯೋಜಿತವಾದುದಲ್ಲ. ಇದಲ್ಲದೆ, ಆಗ............

**ಮಾನ್ಯ ಶ್ರೀ ಕೆ. ಸಂತಾನಂ :** ಈ ವಿಧೇಯಕವನ್ನು ಹಿಂದೂ ಶಾಸನದ ಮೇಲಣ ಅತ್ಯುನ್ನತ ವಿಶೇಷಜ್ಞರಾದ ಸರ್ ಎನ್. ಎನ್. ಸರ್ಕಾರ್ ಅವರು ವಾಸ್ತವಿಕವಾಗಿ ಅಂಗೀಕರಿಸಿದ್ದಾರೆ ಎಂಬ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ತಿಳಿಸಬಹುದೆ?

**ಮಿ। ನಝೀರುದ್ದೀನ್ ಅಹಮ್ಮದ್** : ಅವರಷ್ಟೇ ಅಲ್ಲ, ಒಂದು ಕಾಲದಲ್ಲಿ ನಾನು ಸಹ ಅದನ್ನು

ಅಂಗೀಕರಿಸಿದವನೇ. (ಅಡ್ಡಿ). ನಾನು ಸದನದ ಅನುಮತಿಯನ್ನು ಪಡೆದಿರುವೆನು ಎಂದು ನಿವೇದಿಸುತ್ತೇನೆ.

**ಸಭಾಧ್ಯಕ್ಷರು** : ಮಾನ್ಯ ಸದಸ್ಯರು ಹಿಂದೂ ಕಾನೂನಿಗೆ ಮಾಡಲಾದ ತಿದ್ದುಪಡಿಗಳ ಚರಿತ್ರೆಯನ್ನು ನಿರೂಪಿಸುತ್ತಿದ್ದಾರೆ.

**ಮಿ। ನಝೀರುದ್ದೀನ್ ಅಹಮ್ಮದ್** : ನಾನು ನಿವೇದಿಸುವುದೇನೆಂದರೆ ಹಿಂದೂ ವಿವಾಹಿತ ಮಹಿಳೆಯರ ಆಸ್ತಿ ಹಕ್ಕು ಕಾಯ್ದೆ ಮೊದಲನೆಯ ತಪ್ಪು. ಮತ್ತು ಈ ವಿಧೇಯಕದಲ್ಲಿ ಪರ್ಯವಸಾನಗೊಂಡ ಇತರ ಪ್ರಮಾದಗಳ ಬೀಜಗಳು ಆ ಕಾಯ್ದೆಯಲ್ಲಿ ಇದ್ದುವು ಎಂದು ತೋರಿಸಿಕೊಡುತ್ತೇನೆ.

**ಶ್ರೀಮತಿ ಜಿ. ದುರ್ಗಾಬಾಯಿ** : ಅದು ಅಂದು ಅಸ್ತಿತ್ವದಲ್ಲಿದ್ದ ವಿಧಾನ ಮಂಡಲದ ಮೇಲೆ ಮಾಡಲಾದ ಗಂಭೀರ ವಿಮರ್ಶೆ.

**ಮಿ। ನಝೀರುದ್ದೀನ್ ಅಹಮ್ಮದ್** : ಆ ವಿಧಾನ ಮಂಡಲವೇ ತಪ್ಪನ್ನು ಒಪ್ಪಿಕೊಂಡಿತ್ತು ಎಂದು ತಿಳಿಸಬಯಸುತ್ತೇನೆ. ಆ ಬಗ್ಗೆ ನಾನು ವಾಕ್ಯವೃಂದಗಳನ್ನೇ ಉದ್ಧರಿಸಬಲ್ಲೆನು. ಆ ವಿಧಾನ ಮಂಡಲವು ತನ್ನ ತಪ್ಪನ್ನು ಒಪ್ಪಿಕೊಂಡ ವಿಷಯಕ್ಕೆ ಸಂಬಂಧಿಸಿದಂತೆ.

(ಅಡ್ಡಿ)

**ಸಭಾಧ್ಯಕ್ಷರು** : ಆರ್ಡರ್, ಆರ್ಡರ್.

**ಮಿ। ನಝೀರುದ್ದೀನ್ ಅಹಮ್ಮದ್** : ಆ ತಪ್ಪು ಹೇಗೆ ಸಂಭವಿಸಿತು ಎಂದು ತೋರಿಸುತ್ತೇನೆ. ವಾಸ್ತವವಾಗಿ, ಮೃತ ಮಗ, ಮೊಮ್ಮಗ ಮತ್ತು ಮರಿಮಗ ಇವರ ವಿಧವೆಯರ ಬಗ್ಗೆ ವ್ಯವಸ್ಥೆ ಮಾಡುವಲ್ಲಿ, ಮಗಳ ಸ್ಥಾನವು ಅತ್ಯಂತ ಅನಿಶ್ಚಿತವಾಯಿತು. ಆ ಸಮಯದಲ್ಲಿ, ಕಾಯ್ದೆಯ ಅಡಿಯಲ್ಲಿ ಮಗಳ ಸ್ಥಾನವೇನು ಎಂದು ಯಾರಿಗೂ ಗೊತ್ತಿರಲಿಲ್ಲ.

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** : ಸರ್ ಎನ್. ಎನ್. ಸರ್ಕಾರ್ ಅವರು ಡಾ॥ ದೇಶಮುಖ್ ಅವರ ಕಡೆಯಿಂದ ಒಂದು ವಚನ ಬಂಧವನ್ನು ತೆಗೆದುಕೊಂಡಿದ್ದರು. ಡಾ॥ ದೇಶಮುಖ್ ಅವರು ಪ್ರಸ್ತಾವದಿಂದ ಮಗಳು ಎಂಬ ಪದವನ್ನು ಬಿಟ್ಟುಬಿಡುವುದಾಗಿ ಒಪ್ಪಿದರೆ ಮಾತ್ರ ಸರ್ಕಾರವು ಅದಕ್ಕೆ ಬೆಂಬಲ ನೀಡುತ್ತದೆ ಎಂದು ಹೇಳಿದ್ದರು.

**ಮಿ। ನಝೀರುದ್ದೀನ್ ಅಹಮ್ಮದ್** : ಡಾ॥ ಅಂಬೇಡ್ಕರ್ ಅವರಿಗೆ ಆ ಕಾನೂನಿನ ಚರಿತ್ರೆ ಎಷ್ಟು ಗೊತ್ತಿದೆಯೊ ನನಗೂ ಅಷ್ಟೇ ಗೊತ್ತು.

**ಸಭಾಧ್ಯಕ್ಷರು** : ಮಾನ್ಯ ಸದಸ್ಯರು ಇನ್ನೂ ಹೆಚ್ಚು ಸಮಯ ತೆಗೆದುಕೊಳ್ಳುವರೇ?

**ಮಿ। ನಝೀರುದ್ದೀನ್ ಅಹಮ್ಮದ್** : ಹೌದು, ಸ್ವಾಮೀ.

**ಸಭಾಧ್ಯಕ್ಷರು** : ಹಾಗಾದರೆ, ಅವರು ತಮ್ಮ ಭಾಷಣವನ್ನು ಆಮೇಲೆ ಪುನಃ ಪ್ರಾರಂಭಿಸಬಹುದು. ನಾವು ಈಗ ಸಭೆಯನ್ನು ಮುಂದೆ ಹಾಕೋಣ.

ಸಭೆಯು, ಗುರುವಾರ ತಾರೀಖು ೩ನೆಯ ಮಾರ್ಚಿ, ೧೯೪೯ರ ಹತ್ತೂ ಮುಕ್ಕಾಲು ಗಂಟೆವರೆಗೆ ಮುಂದಕ್ಕೆ ಹೋಯಿತು.

ಹಿಂದೂ ಕೋಡ್ ಮುಂದುವರಿದುದು.

**ಡೆಪ್ಯುಟಿ ಸ್ಪೀಕರ್** : ಮಾನ್ಯ ಸದಸ್ಯರಿಗೆ ತಿಳಿಸುವುದೇನೆಂದರೆ, ಕೆಳಕಂಡ ಸಮಿತಿಗಳಿಗೆ ಸಂಬಂಧಿಸಿದಂತೆ, ನಾಮಪತ್ರಗಳನ್ನು ಸಲ್ಲಿಸುವ ಮತ್ತು ಅಗತ್ಯವಾದರೆ ಚುನಾವಣೆಗಳನ್ನು ನಡೆಸುವ ದಿನಾಂಕ ನಿಗದಿಪಡಿಸಲಾಗಿದೆ.

| | ನಾಮಪತ್ರ ಸಲ್ಲಿಕೆಗೆ ದಿನಾಂಕ | ಚುನಾವಣೆ ದಿನಾಂಕ |
|---|---|---|
| ೧. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು. | | |
| ೨. ರೈಲ್ವೆ ಒಡಂಬಡಿಕೆಯನ್ನು ಪರಾಮರ್ಶಿಸುವ ಸಮಿತಿ | ೨–೪–೪೯ | ೫–೪–೪೯ |

ಈ ಸಮಿತಿಗಳ ನಾಮಪತ್ರಗಳನ್ನು ನೋಟೀಸ್ ಆಫೀಸಿನಲ್ಲಿ ಆ ಬಗ್ಗೆ ನಮೂದಿಸಲಾದ ದಿನಾಂಕದಂದು ಮಧ್ಯಾಹ್ನ ೧೨ ಗಂಟೆಯವರೆಗೆ ಸ್ವೀಕರಿಸಲಾಗುವುದು. ಒಂಟಿ ವರ್ಗಣೀಯ ಮತದ್ವಾರಾ ನಡೆಸಲಾಗುವ ಚುನಾವಣೆಗಳನ್ನು ಕೌನ್ಸಿಲ್ ಹೌಸ್‌ನಲ್ಲಿ ಬೆಳಿಗ್ಗೆ ೧೦–೩೦ರಿಂದ ಅಪರಾಹ್ನ ೧–೦೦ ಗಂಟೆವರೆಗೆ ಸಹಾಯಕ ಕಾರ್ಯದರ್ಶಿಯ ಕೊಠಡಿಯಲ್ಲಿ (ಸಂಖ್ಯೆ ೨೧) ನಡೆಸಲಾಗುವುದು.

---

**ಹಿಂದೂ ಕೋಡ್ – ಮುಂದುವರಿದುದು**

**ಡೆಪ್ಯುಟಿ ಸ್ಪೀಕರ್ :** ಸದನವು ಈಗ, ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್ ಅವರು ೩೧ನೇ ಆಗಸ್ಟ್ ೧೯೪೮ರಂದು ಮಂಡಿಸಿದ ಪ್ರಸ್ತಾಪದ ಪರ್ಯಾಲೋಚನೆಯನ್ನು ಪ್ರಾರಂಭಿಸುವುದು, ಎಂದರೆ –

ಆಯ್ಕೆ ಸಮಿತಿಯು ವರದಿ ಮಾಡಿದ್ದಂತೆ, ಹಿಂದೂ ಕಾನೂನಿನ ಕೆಲವು ನಿರ್ದಿಷ್ಟ ಶಾಖೆಗಳನ್ನು ತಿದ್ದುಪಡಿ ಮಾಡಿ ಕ್ರೋಡೀಕರಿಸಲು ಏರ್ಪಟ್ಟ ವಿಧೇಯಕದ ಪರ್ಯಾಲೋಚನೆಯನ್ನು ಕೈಗೆತ್ತಿಕೊಳ್ಳಬೇಕು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** (ಪಶ್ಚಿಮ ಬಂಗಾಲ : ಸಾಮಾನ್ಯ) ಸ್ವಾಮೀ, ತಾವು ನನ್ನ ಸ್ನೇಹಿತ ಮಿ। ನಝೀರುದ್ದೀನ್ ಅಹಮ್ಮದ್ ಅವರನ್ನು ತಮ್ಮ ಭಾಷಣವನ್ನು ಮುಂದುವರಿಸಲು ಕರೆಯುವುದಕ್ಕೆ ಮುನ್ನ ಈ ಪ್ರಸ್ತಾವವನ್ನು ಸದನಕ್ಕೆ ತರಲಾಗುತ್ತಿದೆ ಎಂಬುದನ್ನು ಅನಿವಾರ್ಯವಾಗಿ ತಮ್ಮ ಗಮನಕ್ಕೆ ತರಬೇಕಾಗಿದೆಯೆಂದು ಭಾವಿಸುತ್ತೇನೆ. ಈ ವಿಧೇಯಕವು ಪರ್ಯಾಲೋಚನೆಗೆ ಬರಲಿದೆ. ನಿನ್ನೆಯವರೆಗೆ ನಮ್ಮಲ್ಲಿ ಕೆಲವರೇ ಕೆಲವರಿಗೆ ಮಾತ್ರ ಗೊತ್ತಿತ್ತು – ಎಂದು ನನ್ನ ಅನಿಸಿಕೆ. ನಿಜ ಸಂಗತಿ ತುರ್ತು ಸರ್ಕಾರಿ ಕಲಾಪಗಳ ಹೊರೆ, ಒತ್ತಡ ಇಷ್ಟೊಂದಿತ್ತಲ್ಲ ಎಂದರೆ ಇದರ ಬಗ್ಗೆ ಒಂದು ದಿನ ಆದರೂ ದೊರೆಯಲಿಕ್ಕಿಲ್ಲ ಎಂದು ಸದನವು ಭಾವಿಸಿತ್ತು. ವಾಸ್ತವವಾಗಿ, ಈ ವಿಷಯದ ಮೇಲಿನ ವಿಚಾರ ವಿಮರ್ಶೆಯಲ್ಲಿ ಪಾಲ್ಗೊಳ್ಳುವ ಸಲುವಾಗಿ ಬಂದಿದ್ದ ಅನೇಕ ಸದಸ್ಯರು, ಈ ವಿಷಯವು ಈ ಅಧಿವೇಶನದಲ್ಲಿ ಇನ್ನೊಮ್ಮೆ ಪರಿಶೀಲನೆಗೆ ಬರಲಿಕ್ಕಿಲ್ಲ ಎಂದು ಭಾವಿಸಿ, ಮರಳಿ ಹೋಗಿದ್ದಾರೆ. ನಿರ್ದಿಷ್ಟವಾಗಿ ಒಬ್ಬ ಮಾನ್ಯ ಸದಸ್ಯರ ಹೆಸರನ್ನು ಹೇಳಬಲ್ಲೆ. ಪಂಡಿತ ಗೋವಿಂದ ಮಾಳವೀಯ ಬಂದಿದ್ದರು ಮತ್ತು ಅವರಿಗೆ ಈ ವಿಷಯದ ಮೇಲೆ ಸುದೀರ್ಘ ಭಾಷಣ ಮಾಡುವ ಅಭಿಲಾಷೆ ಇತ್ತು. ಆದರೆ ಈ ವಿಷಯದ ಪ್ರಸ್ತಾಪ ಆಗುವಂತಿಲ್ಲ ಎಂದು ತಿಳಿಯಪಡಿಸಿದ ಕೂಡಲೇ ಅವರು.............

**ಅನೇಕ ಮಾನ್ಯ ಸದಸ್ಯರು :** ಅವರಿಗೆ ಹಾಗೆ ತಿಳಿಯಪಡಿಸಿದವರು ಯಾರು?

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಬಹಳಷ್ಟು ಮಂದಿಗೆ ಗೊತ್ತಿತ್ತು. ಇದು ಈ ಸದನದ ವಾಡಿಕೆಯ ಕಲಾಪದ ವಿಷಯವಲ್ಲ. ಸರ್ಕಾರದ ಯಾರೇ ಒಬ್ಬ ಸದಸ್ಯನು ಎದ್ದುನಿಂತು 'ನೋಡಿ, ಈ ವಿಷಯವನ್ನು ಪರ್ಯಾಲೋಚಿಸಲಿಕ್ಕೆ ಉಂಟು' ಎಂದು ತಿಳಿಯಪಡಿಸುತ್ತಾನೆಯೆ? ಹಾಗೇನೂ ಇಲ್ಲ. ಪಾರ್ಟಿ ಮಾತುಕತೆಗಳಲ್ಲಿ ಮತ್ತು ಇನ್ನಿತರ ಕಡೆಗಳ ಮಾತುಕತೆಗಳ ಮೂಲಕ ಈ ಅಧಿವೇಶನದಲ್ಲಿ ಏನಾದರೂ ಸರಿಯೆ, ಈ

ವಿಷಯ ಪರ್ಯಾಲೋಚನೆಗೆ ಬರಲು ಸಾಧ್ಯವಿಲ್ಲ ಎಂದು ಎಲ್ಲರ ಮನಸ್ಸಿನಲ್ಲಿ ಭಾವನೆ ಆಗಿತ್ತು. ಸ್ವಾಮೀ, ಈ ವಿಧೇಯಕವು ಅತ್ಯಂತ ವಿವಾದಾಸ್ಪದ ವಿಷಯವನ್ನು ಒಳಗೊಂಡ ವಿಧೇಯಕ. ಆದಕಾರಣ, ಅದರ ಪರ್ಯಾಲೋಚನೆ ವಿವಿಧ ಹಂತಗಳಲ್ಲಿ ಮಾಡಿದ ಹಾಗೆ, ಅದೇ ರೀತಿಯಲ್ಲಿ ಪುನಃ ಕೈಗೆತ್ತಿಕೊಳ್ಳಬೇಡಿ. ಅದಕ್ಕೆ ಅವಕಾಶ ಕೊಡುವುದು ಸಮಂಜಸವಲ್ಲ ಎಂದು ಭಾವಿಸುತ್ತೇನೆ. ಈ ನನ್ನ ದೃಷ್ಟಿಕೋನವನ್ನು ಸದನದ ಸಮಕ್ಷಮ ನಾನು ಸಾದರಪಡಿಸುತ್ತಿರುವ ನಿಲುವನ್ನು ಕುರಿತು ನಿರ್ಣಯಿಸುವ ವಿಚಾರ ನಿಮಗೆ ಸೇರಿದ್ದು. ಸದನದ ಸಂಖ್ಯೆ ಕ್ಷೀಣಗೊಂಡಿದೆ. ಮತ್ತು ಬಜೆಟ್ ಚರ್ಚೆಯು ಸಮಾಪ್ತವಾದ ಕಾರಣ ಬಹಳಷ್ಟು ಸದಸ್ಯರು ಅದೇ ಭಾವನೆಯಲ್ಲಿ ಇದ್ದರು. ಬದಲಾವಣೆ ಬಗ್ಗೆ ಅವರಿಗೆ ಒಂದಿನಿತು ಸುಳಿವು ಇಲ್ಲದಿದ್ದಾಗ, ಈ ರೀತಿ, ಈ ಅಧಿವೇಶನದ ಈ ಹಂತದಲ್ಲಿ ಈ ಬಗೆಯ ಪ್ರಸ್ತಾವದ ಮೂಲಕ ಆಶ್ಚರ್ಯಚಕಿತರನ್ನಾಗಿ ಮಾಡುವುದು ನ್ಯಾಯಸಂಗತವಲ್ಲ ಎಂದು ನಾನು ಭಾವಿಸುತ್ತೇನೆ.

**ಒಬ್ಬ ಮಾನ್ಯ ಸದಸ್ಯರು :** ಸ್ವಾಮೀ, ನಮಗೆ ನಿಮ್ಮ ತೀರ್ಮಾನ ಬೇಕು.

**ಡೆಪ್ಯುಟಿ ಸ್ಪೀಕರ್ :** ಆದರೆ ಇಲ್ಲಿ ಯಾವುದೇ ಕ್ರಿಯಾಲೋಪವಿಲ್ಲ.

**ಶ್ರೀ ಮಹಾವೀರ ತ್ಯಾಗಿ :** ಆದರೆ, ಚರ್ಚೆಯನ್ನು ಎಷ್ಟು ಸಮಯದವರೆಗೆ ನಡೆಸಬೇಕೆಂದು ಉದ್ದೇಶಿಸಲಾಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಬೇಕು. ನನ್ನ ಪ್ರಾಂತದಲ್ಲಿನ ನನ್ನ ಕೆಲವರು ಸ್ನೇಹಿತರು ಹಿಂದೂ ಕೋಡ್ ವಿಧೇಯಕ ಯಾವಾಗ ಚರ್ಚೆಗೆ ಬರಲಿದೆ ಎಂದು ತಿಳಿಸುವಂತೆ ಕೇಳಿದ್ದರು. ಅವರಿಗೆ ತಿಳಿಸಲು ಸಾಧ್ಯವಾಗಲಿಲ್ಲ. ಕಾರಣವೆಂದರೆ, ವಿಧೇಯಕವನ್ನು ಇವತ್ತಿನ ದಿನ ಮಾತ್ರ ಅಥವಾ ನಾಳೆ ಮಾತ್ರ ಅಥವಾ ಯಾವುದೇ ಇತರ ದಿನ ಅಥವಾ ಈ ಅಧಿವೇಶನದ ಕೊನೆಯವರೆಗೆ ಈ ವಿಧೇಯಕದ ಪರ್ಯಾಲೋಚನೆ ನಡೆಯುವುದು ಎಂದು ನನಗೆ ಗೊತ್ತಿರಲಿಲ್ಲ. ಆದ್ದರಿಂದ ಈ ವಿಧೇಯಕದ ಮೇಲಣ ಚರ್ಚೆ ಎಷ್ಟು ಸಮಯದವರೆಗೆ ನಡೆಯಬಹುದು ಎಂದು ಸದನಕ್ಕೆ ತಿಳಿಸಿದರೆ, ಸಮಯ ಇದ್ದ ಪಕ್ಷದಲ್ಲಿ ನಾನು ನನ್ನ ಆ ಸ್ನೇಹಿತರಿಗೆ ಬರಬಹುದು ಎಂದು ತಿಳಿಸಬಹುದಲ್ಲವೆ?

**ಡೆಪ್ಯುಟಿ ಸ್ಪೀಕರ್** : ಶ್ರೀ ಮೈತ್ರಾ ಅವರು ಏನು ಹೇಳಿದ್ದಾರಲ್ಲ, ಆ ಬಗ್ಗೆ ನನ್ನ ಪೂರ್ಣ ಸಹಾನುಭೂತಿ ಉಂಟು. ಆದರೆ ಇದರಿಂದ ಪಾರಾಗುವ ದಾರಿ ನಾನು ಕಾಣೆನು. ನನಗೆ ಗೊತ್ತಿರುವ ಹಾಗೆ ನಾನು ಈ ಸಭೆಯಲ್ಲಿ ಬಹಳ ದಿನಗಳಿಂದ, ಅನೇಕ ವರ್ಷಗಳಿಂದ ಇದ್ದೇನೆ. ಅನೇಕ ಜನ ಆಸಕ್ತಿ ಹೊಂದಿರುವ ಈ ಬಗೆಯ ಮಹತ್ವದ ವಿಷಯವು ಸದನಲ್ಲಿ ಚರ್ಚೆಗೆ ಬರಲಿರುವ ಸಂದರ್ಭದಲ್ಲಿ, ಮುಂದಿರುವ ವಾರದ ಅಜೆಂಡಾವನ್ನು ಹಿಂದಿನ ಶುಕ್ರವಾರವಾದರೂ ಸದನದಲ್ಲಿ ಓದಿ ಹೇಳುವ ವಾಡಿಕೆ ಇದೆ. ಒಂದು ರೀತಿಯ ಕಾರ್ಯವಿಧಾನ ನನಗೆ ರೂಢಿಯಾಗಿದೆ. ಈ ವಿಧೇಯಕಕ್ಕೆ ಸಮಯ ಇರಲಿಕ್ಕಿಲ್ಲ, ಎಂದು ಸ್ಪಷ್ಟವಾಗಿಯೇ ಅನಿಸಿತ್ತು. ಆದರೆ, ಒಂದು ದಿನ ಅಧಿವೇಶನವನ್ನು ವಿಸ್ತರಿಸಿದಾಗ ಇವತ್ತು ಒಂದು ದಿನ ಮತ್ತು ನಾಳೆ ಒಂದು ದಿನ–ಹೀಗೆ ಎರಡು ದಿನ ದೊರೆಯುತ್ತದೆ ಎಂದು ಇದನ್ನು ಸೇರಿಸಲಾಯಿತು. ಆದ್ದರಿಂದ ಮುಂಚಿತವಾಗಿ ನೋಟೀಸು ಕೊಡುವುದು ಸಾಧ್ಯವಾಗಿರಲಿಲ್ಲವೆಂದು ತೋರುತ್ತದೆ. ಆದಕಾರಣ ಮಾನ್ಯ ಸದಸ್ಯರು ಈ ಸಂದರ್ಭದ ಸದುಪಯೋಗ ಪಡೆದುಕೊಳ್ಳಲು, ತಂತಿ ಮುಂತಾದವುಗಳ ಮೂಲಕ ಅವರಿಗೆ ತಿಳಿಸಬೇಕು, ಬರುವಂತೆ ಹೇಳಬೇಕು. ಇನ್ನು ತ್ಯಾಗಿಯವರಿಗೆ ಸಂಬಂಧ ಬರುವಷ್ಟರ ಮಟ್ಟಿಗೆ ಸದನದ ಹೊರಗಿನ ಅನೇಕ ಸದಸ್ಯರು ಆಸಕ್ತಿ ಹೊಂದಿದ್ದರೆ, ಸದನದ ಕಾರ್ಯಕಲಾಪಗಳನ್ನು ಇಂದು ಸಂಜೆ ಅಥವಾ ನಾಳೆ ಬೆಳಿಗ್ಗೆ ಆಕಾಶವಾಣಿ ಮೂಲಕ ಪ್ರಸಾರ ಮಾಡಲಾಗುವುದು. ಆಗ ಅವರಿಗೆ ಈ ವಿಚಾರ ಗೊತ್ತಾಗುತ್ತದೆ.

**ಒಬ್ಬ ಮಾನ್ಯ ಸದಸ್ಯರು** : ಅವರು ನಾಳೆ ಬರುವುದು ಹೇಗೆ?

**ಡೆಪ್ಯುಟಿ ಸ್ಪೀಕರ್** : ಅವರು ವಿಮಾನದಲಿ ಬರಬಹುದಲ್ಲ! ಅವರು ಹೇಗೆ ಬರಬಹುದು ಎನ್ನುವುದು ಸಭಾಧ್ಯಕ್ಷರು ನಿರ್ಣಯಿಸುವ ವಿಚಾರವಲ್ಲ. ನಾನು ಏನೆಲ್ಲ ಹೇಳಬಹುದು ಎಂದರೆ, ಸರ್ಕಾರದವರು ಅಗತ್ಯವಾಗಿ ಯಥೋಚಿತ ನೋಟೀಸು ಕೊಡಬೇಕಾಗಿತ್ತು. ಸರ್ಕಾರಕ್ಕೆ ಈ ಮಹತ್ವಪೂರ್ಣ ವಿಷಯವು ಕಣ್ತಪ್ಪಿ ಹೋಯಿತು ಎಂದು ಹೇಳುವಂತಿಲ್ಲ. ಸಾರ್ವಜನಿಕರಿಗೆ ಆಸಕ್ತಿಯುಂಟು. ಅಧಿಕಾಂಶ ಸದಸ್ಯರಿಗೆ ಆಸಕ್ತಿಯುಂಟು ಪ್ರಾಂತಗಳಿಂದ, ಸಂಸ್ಥಾನಗಳಿಂದ ಬರುವವರುಂಟು. ಅವರು ಇಲ್ಲಿ ಇದ್ದರೂ, ಒಂದು ನೋಟೀಸಿನಲ್ಲಿ ಅಗತ್ಯವಿರುವ ಪುಸ್ತಕಗಳನ್ನು ಮತ್ತು ಮಾಹಿತಿಯನ್ನು ಒದಗಿಸಿಕೊಳ್ಳಲು ಪ್ರತಿ ಒಬ್ಬ ಸದಸ್ಯರಿಗೆ ಸಾಧ್ಯವಾಗುತ್ತಿರಲಿಲ್ಲ. ಇಷ್ಟೆಲ್ಲ ಅನಾನುಕೂಲ ಇದ್ದಾಗ್ಯೂ, ಈ ಅವಕಾಶದ ಸದುಪಯೋಗ ಮಾಡಿಕೊಳ್ಳಲು ಪ್ರಯತ್ನಿಸಬಹುದು. ಚರ್ಚೆ ಎಷ್ಟು ಸಮಯ ಮುಂದುವರಿಯಬಹುದು ಎಂಬ ಬಗ್ಗೆ ಯಾರೂ ಗ್ಯಾರಂಟಿ ಕೊಡಲು ಸಾಧ್ಯವಿಲ್ಲ. ಅದು ಇವತ್ತು ಸಾಯಂಕಾಲವೇ ಮುಗಿಯಬಹುದು ಅಥವಾ ನಾಳೆಯತನಕ ಮುಂದುವರಿಯಬಹುದು.

**ಶ್ರೀ ಟಿ. ಪಿ. ರಾಮಲಿಂಗಂ ಚೆಟ್ಟಿಯಾರ್** (ಮದ್ರಾಸು : ಸಾಮಾನ್ಯ) : ಈ ವಿಧೇಯಕದ ಕಾರ್ಯಸೂಚಿ ಏನು?

**ಡೆಪ್ಯುಟಿ ಸ್ಪೀಕರ್** : ಅದು ಸಂಪೂರ್ಣವಾಗಿ ಸದನದ ಕೈಯಲ್ಲಿ ಇದೆ. ನಾವು ಯಾವುದೇ ಕಟ್ಟುನಿಟ್ಟಾದ ಕಾರ್ಯಕ್ರಮ ನಿಗದಿಪಡಿಸಲು ಸಾಧ್ಯವಿಲ್ಲ ಎಂದು ನಾನು ಭಾವಿಸುತ್ತೇನೆ. ಚರ್ಚೆಯನ್ನು ಮುಂದುವರೆಸಬೇಕೆ, ಬೇಡವೆ ಇನ್ನೂ ಚರ್ಚೆ ಅಗತ್ಯವೆ, ಸಾಕಷ್ಟು ಚರ್ಚೆ ಆಗಿದ್ದರೆ ಚರ್ಚೆಯನ್ನು ಆದಷ್ಟು ಬೇಗನೆ ಮುಕ್ತಾಯಗೊಳಿಸಬೇಕು. ಇವೆಲ್ಲ ವಿಷಯಗಳನ್ನು ತೀರ್ಮಾನಿಸತಕ್ಕ ಹಕ್ಕು ಸದನಕ್ಕೆ ಸೇರಿದ್ದು.

**ಶ್ರೀ ಮಹಾವೀರ ತ್ಯಾಗಿ** : ಸ್ವಾಮಿ, ನಾನು ಪ್ರಶ್ನೆಯನ್ನು ತಿರುಗಿಸಿ ಕೇಳುತ್ತೇನೆ. ಸದನದ ಮುಂದೆ ಇನ್ನಾವುದಾದರೂ ಸರ್ಕಾರಿ ಕಲಾಪ ಇದೆಯೇ ಅಥವಾ ನಮ್ಮ ಮುಂದೆ ಇರುವುದು ಈ ವಿಧೇಯಕ ಮಾತ್ರವೇ ಎಂದು ನಮಗೆ ತಿಳಿಸಿದರೆ, ಈ ವಿಧೇಯಕದ ಚರ್ಚೆ ಎಷ್ಟು ಸಮಯದವರೆಗೆ ಹೋಗಬಹುದು ಎಂದು ನಾನು ಅಂದಾಜು ಮಾಡಬಹುದಲ್ಲ.

**ಡೆಪ್ಯುಟಿ ಸ್ಪೀಕರ್** : ಮಾನ್ಯ ಸದಸ್ಯರು ಆದೇಶ ಪತ್ರದಿಂದ ನೋಡಬಹುದಾದ ಹಾಗೆ, ಇತರ ಕೆಲಸ ಬಹಳಷ್ಟು ಇದೆ. ಈ ವಿಧೇಯಕವು ದಿವಸದ ಮೊದಲನೆಯ ವಿಧೇಯಕ ಆಗಿ ಬರುವುದು ನಿಸ್ಸಂದೇಹ. ಆದರೆ ನಾಳೆ ಪಟ್ಟಿಯಲ್ಲಿ ಇರುವ ವಿಧೇಯಕಗಳು ಬರುತ್ತವೆ. ಈ ಪ್ರಶ್ನೆಯ ಮೇಲೆ ನಾವು ಇನ್ನೂ ಹೆಚ್ಚು ಸಮಯ ಕಳೆಯುವುದು ಬೇಡ.

**ಶ್ರೀ ಬಿ. ದಾಸ್** (ಒರಿಸ್ಸಾ : ಸಾಮಾನ್ಯ) : ನೀವು ಭಾಷಣಗಳಿಗೆ ಸಮಯಮಿತಿಯನ್ನು ನಿಗದಿಪಡಿಸಬಹುದಲ್ಲ?

**ಡೆಪ್ಯುಟಿ ಸ್ಪೀಕರ್** : ಈ ಬಗೆಯ ವಿವಾದಾತ್ಮಕ ವಿಷಯದ ಬಗ್ಗೆ ನಾನು ಸಮಯಮಿತಿ ವಿಧಿಸಲಾರೆನು. ನಾನು ಅಧ್ಯಕ್ಷ ಸ್ಥಾನದಲ್ಲಿ ಇರುವವರೆಗೆ ಪುನರುಕ್ತಿಗಳು ಆಗದ ಹಾಗೆ ನೋಡಿಕೊಳ್ಳುತ್ತೇನೆ. ಹೆಚ್ಚೆಂದರೆ ನಾನು ಮಾಡಬಹುದಾದದ್ದು ಅಷ್ಟೇ. ನನ್ನ ಶಕ್ತಿ ಮೀರಿ, ಪ್ರಸ್ತುತವಲ್ಲದ, ಅಸಂಗತವಾದ ವಿಷಯಗಳು ತೂರಿಕೊಳ್ಳದ ಹಾಗೆ ನೋಡಿಕೊಳ್ಳುತ್ತೇನೆ. ಇದಕ್ಕೆ ಒಳಪಟ್ಟು ಎಷ್ಟು ಸ್ವಾತಂತ್ರ್ಯ ಕೊಡಬೇಕು, ಅಷ್ಟನ್ನು ಧಾರಾಳವಾಗಿ ಕೊಡುತ್ತೇನೆ.

**ಮಿ। ನಝೀರುದ್ದೀನ್ ಅಹಮ್ಮದ್** : (ಪಶ್ಚಿಮ ಬಂಗಾಲ : ಮುಸ್ಲಿಂ) : ಡೆಪ್ಯುಟಿ ಸ್ಪೀಕರ್ ಅವರೆ,

ಈ ವಿಧೇಯಕದ ಮೇಲಣ ಅಡ್ಡಿ ಅಡಚಣೆಗಳಿಂದ ತುಂಬಿದ ಚರ್ಚೆಗಳೇ ಅಲ್ಲದೆ, ಏಳುಬೀಳುಗಳುಳ್ಳ ಈ ವಿಧೇಯಕದ ಗತಿಯು, ಮತ್ತು ಬಿಟ್ಟು ಬಿಟ್ಟು ನಡೆಯುವ ಚರ್ಚೆಗಳು, ಆಲ್ ಫೂಲ್ಸ್ ಡೇ ದಿನದಂದು ಪುನಃ ಗಂಭೀರವಾಗಿ ಪ್ರಾರಂಭವಾಗಬೇಕು ಎಂದು ಸರ್ಕಾರವು ತೀರ್ಮಾನಿಸಿರುವುದು ವಿಧಿಯ ವಿಲಕ್ಷಣ ವ್ಯಂಗ್ಯ ಎನ್ನೋಣವೆ? ಕಳೆದ ಏಪ್ರಿಲ್ ೯ನೇ ತಾರೀಖಿನಂದು ಈ ವಿಧೇಯಕವನ್ನು ಆಯ್ಕೆ ಸಮಿತಿಗೆ ಭಾರೀ ಅವಸರದಲ್ಲಿ ಕಳಿಸಿದಾಗ ಹಾಗೇಕೆ ಎಂದು ನಾನು ತೋರಿಸಿಕೊಟ್ಟಾಗ, ಮಾನ್ಯ ಸದಸ್ಯರೊಬ್ಬರು ಏಪ್ರಿಲ್ ೯ ಏಪ್ರಿಲ್ ೧ನೇ ತಾರೀಖಿಗೆ ಬಹಳ ಸಮೀಪ ಎಂದು ನೆನಪಿಸಿದ್ದರು. ಈ ದಿವಸದಂದು, ಪ್ರಾಚೀನ ಕಾಲದಿಂದಲೂ ಪರಸ್ಪರರೊಂದಿಗೆ ಆಟದ ವಾತಾವರಣದಲ್ಲಿ ವರ್ತಿಸುವ ರೂಢಿಯನ್ನು ಬೆಳೆಸಿಕೊಂಡು ಬಂದಿದ್ದೇವೆ. ನಾವು ಸುಳ್ಳು (ಖೋಟಾ) ಆಮಂತ್ರಣ ಪತ್ರಿಕೆಗಳನ್ನು ಕಳಿಸುತ್ತೇವೆ, ಸುಳ್ಳು ಮದುವೆಗಳನ್ನು ಪ್ರಕಟಿಸುತ್ತೇವೆ ಹಾಗೆಯೇ ವಿಭಿನ್ನ ಖೋಟಾ ಸಂಗತಿಗಳನ್ನು ಮಾಡುತ್ತೇವೆ.

**ಶ್ರೀಮತಿ ಅಮ್ಮು ಸ್ವಾಮಿನಾಥನ್** : ಇದಕ್ಕೂ ಹಿಂದೂ ಕೋಡ್ ವಿಧೇಯಕಕ್ಕೂ ಏನಾದರೂ ಸಂಬಂಧ ಇದೆಯೆ? ಯಾವುದೇ ಅಸಂಗತ ವಿಷಯಕ್ಕೆ ಅವಕಾಶ ಕೊಡಲಾರೆ ಎಂದು ನೀವೇ ಹೇಳಿದರಲ್ಲ. ಆಲ್ ಫೂಲ್ಸ್ ಡೇಗೂ ಹಿಂದೂ ಕೋಡ್ ವಿಧೇಯಕಕ್ಕೂ ಏನಾದರೂ ಸಂಬಂಧ ಇದೆಯೇ?

**ಡೆಪ್ಯುಟಿ ಸ್ಪೀಕರ್** : ಪ್ರಸ್ತುತವೊ ಅಪ್ರಸ್ತುತವೊ ಎಂದು ತೀರ್ಮಾನ ಕೈಕೊಳ್ಳಲು ನಾನು ಮಾನ್ಯ ಸದಸ್ಯರ ಮಾತನ್ನು ಸ್ಪಷ್ಟವಾಗಿ ಕೇಳಿಸಿಕೊಂಡಿಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್** : ಸ್ವಾಮೀ, ಕಾಲಕಾಲಕ್ಕೆ ಈ ವಿಧೇಯಕವನ್ನು ಇಂತು ಅಸಮಾಧಾನಕರ ರೀತಿಯಲ್ಲಿ ತರಲಾಗುತ್ತಿದೆ ಎಂಬ ಸಂಗತಿಗೆ ಒತ್ತುಕೊಟ್ಟು ಹೇಳುತ್ತಿದ್ದೆನು, ಅಷ್ಟೆ. ಇಷ್ಟು ಮಹತ್ವದ ಮತ್ತು ಗಾತ್ರದ ವಿಧೇಯಕದ ಬಗ್ಗೆ ಮಾನ್ಯ ಸದಸ್ಯರು ಎಡೆಬಿಡದೆ ಬಹಳ ಸಮಯದವರೆಗೆ ಚರ್ಚೆ ನಡೆಸಬೇಕಾಗುತ್ತದೆ.

**ಮಿ। ನಝೀರುದ್ದೀನ್ ಅಹಮ್ಮದ್** : ಸ್ವಾಮೀ, ನಾನು ಹೇಳುವುದೇನೆಂದರೆ, ಇಷ್ಟೊಂದು ಮಹತ್ವವುಳ್ಳ ವಿಧೇಯಕದ ಚರ್ಚೆಗೆ ಮಾನ್ಯ ಸದಸ್ಯರು ನಿರಂತರವಾಗಿ ಬಹಳ ಸಮಯದವರೆಗೆ ವಿಚಾರ ವಿಮರ್ಶೆ ಮಾಡಬೇಕಾಗುತ್ತದೆ. ವಿಷಯವನ್ನು ದೀರ್ಘ ಅಂತರಗಳಲ್ಲಿ ಚರ್ಚಿಸಿದರೆ, ತರ್ಕದ ಸೂತ್ರ ಮರೆತುಹೋಗುವ ಸಂಭವವಿರುತ್ತದೆ. ಪ್ರತಿಯೊಂದು ಸಂದರ್ಭದಲ್ಲಿ ಏನು ಹೇಳಲಾಯಿತು ಎಂದು ನೆನಪಿಸುತ್ತ, ಆಯಾ ಸಂದರ್ಭದಲ್ಲಿ ಹೇಳುವುದರ ಜತೆ ಸಂಬಂಧ ಕಲ್ಪಿಸಿ ಮುನ್ನಡೆಯುವುದು ಕಷ್ಟವಾಗುತ್ತದೆ. ಆದ್ದರಿಂದ ನನ್ನ ನಿವೇದನೆ ಎಂದರೆ ಇದು ಈ ವಿಧೇಯಕದೊಂದಿಗಿನ ಗಂಭೀರ ಪ್ರಕ್ರಿಯೆಯೂ ಅಲ್ಲ, ಅಥವಾ ಸದನದೊಂದಿಗಿನ ಗಂಭೀರ ವರ್ತನೆಯೂ ಅಲ್ಲ.

ಕಳೆದ ಸಲ ನಾನು ಈ ಮಹತ್ವಪೂರ್ಣ ವಿಧೇಯಕದ ಇತಿಹಾಸಕ್ಕೆ ಸಂಬಂಧಿಸಿದಂತೆ ವಿಷಯ ನಿರೂಪಣೆ ಮಾಡುತ್ತಿದ್ದಾಗ, ಮೊದಲನೆಯ ತಪ್ಪು ನಡೆದದ್ದು ವಿವಾಹಿತ ಹಿಂದೂ ಮಹಿಳೆಯರ ಆಸ್ತಿ ಹಕ್ಕು ಕಾಯ್ದೆ ೧೯೩೭– ಈ ಕಾಯ್ದೆಯನ್ನು ತೀರ್ಣಗೊಳಿಸಿದಾಗ.

ಅಷ್ಟು 'ಸಂದಿಗ್ಧ ಸ್ವರೂಪದ ವಿಧೇಯಕವನ್ನು ಅವಸರದಿಂದ ವಿಧಾನ ಮಂಡಲದಲ್ಲಿ ಸಾದರಪಡಿಸಿದ್ದು, ಮತ್ತು ಪರ್ಯಾಪ್ತ ಪರ್ಯಾಲೋಚನೆ ಇಲ್ಲದೆ ಅದನ್ನು ತೀರ್ಣಗೊಳಿಸಿದ್ದು ತಪ್ಪು. ವಾಸ್ತವವಾಗಿ, ಆ ಸಮಯದಲ್ಲಿ ಆ ಸದನದ ಮಾನ್ಯ ಸದಸ್ಯರೊಬ್ಬರು, ಶ್ರೀ ದೇಶಮುಖ್ ಅವರಿಗೆ ಒಂದು ಒಳ್ಳೆಯ ಯೋಚನೆ ಹೊಳೆಯಿತು ಮತ್ತು ಆ ವಿಷಯಕ್ಕೆ ವಿಶೇಷ ಪರ್ಯಾಲೋಚನೆ ಮಾಡದೆ, ಅವರು ಅದನ್ನು ತೆಗೆದುಕೊಂಡು ವಿಧಾನ ಮಂಡಲದಲ್ಲಿ ಸಾದರಪಡಿಸಿದರು ಮತ್ತು ಸದನವು ಅತ್ಯಂತ ಉದಾರವಾದ

ಮನೋಭಾವನೆಯಲ್ಲಿ ಅದನ್ನು ತೀರ್ಣಗೊಳಿಸಿತು. ಆ ಅಧಿನಿಯಮದ ಮೂಲಕ, ಕೆಲವರು ಮಹಿಳೆಯರಿಗೆ, ಮಗಂದಿರು, ಮೊಮ್ಮಗಂದಿರು ಮತ್ತು ಮರಿಮಗಂದಿರು ಇವರ ಜತೆ ನೇರವಾಗಿ ವಾರಸಾ ಹಕ್ಕನ್ನು ಕೊಡಲಾಯಿತು. ಅವರಿಗೆ ಸ್ವತಂತ್ರ ಹಕ್ಕುಗಳನ್ನು ಕೊಡಲಾಯಿತು. ಅವು ಕೇವಲ ಹಿಂದೂ ಮಹಿಳೆಯರ ಹಕ್ಕುಗಳು ಆಗಿರಲಿಲ್ಲ; ಆದರೆ ಅನನ್ಯ, ವರ್ಗಾವಣೆಯ ಮತ್ತು ವಾರಸಾಯೋಗ್ಯ ಹಕ್ಕುಗಳು ಆಗಿದ್ದುವು. ಆ ತರುವಾಯ ಒಡನೆಯೇ ಬಂಗಾಲದ ಒಬ್ಬ ಪ್ರತಿಷ್ಠಿತ ಲಾಯರು ಶ್ರೀ ಋಷೀಂದ್ರನಾಥ ಸರ್ಕಾರ ಅವರು ಆ ಕಾಯ್ದೆಗೆ ಸಂಬಂಧಿಸಿದಂತೆ ಉಂಟಾಗುವ ಕೆಲವು ತೊಂದರೆಗಳತ್ತ ಗಮನ ಸೆಳೆದರು. ಶ್ರೀ ಋಷೀಂದ್ರನಾಥ ಸರ್ಕಾರ ಅವರು ಪ್ರತಿಷ್ಠಿತ ಲಾಯರು, ಮಾತ್ರವಲ್ಲದೆ ಹಿಂದೂ ಅವಿವಾಹಿತ ಮಹಿಳೆಯರ ಆಸ್ತಿ ಕಾಯ್ದೆ ಮತ್ತು ಇತರ ಸಂಬಂಧಪಟ್ಟ ಕಾಯ್ದೆಗಳ ಮೇಲೆ ಒಂದು ಪಠ್ಯ ಪುಸ್ತಕವನ್ನು ಬರೆದವರು. ಅವರು ಆ ವಿಧೇಯಕಕ್ಕೆ (?) ಸಂಬಂಧಿಸಿದಂತೆ ಉದ್ಭವಿಸಬಹುದಾದ ಕೆಲವು ನಿರ್ದಿಷ್ಟ ತೊಂದರೆಗಳನ್ನು ತೋರಿಸಿಕೊಟ್ಟರು ಮತ್ತು ೧೯೩೮ರಲ್ಲಿ, ೧೯೩೮ರ xvi ಕಾಯ್ದೆ ಮೂಲಕ ಆ ಕಾಯ್ದೆಯನ್ನು ತಿದ್ದುಪಡಿ ಮಾಡಬೇಕಾಯಿತು. ಸಂಕಷ್ಟ ಅಲ್ಲಿಗೆ ಮುಗಿಯಲಿಲ್ಲ. ಹೊಸದಾಗಿ ತೊಂದರೆಗಳು ತಲೆದೋರಿದುವು. ತಿದ್ದುಪಡಿಯಾದ ತರುವಾಯವೂ ಆ ಕಾಯ್ದೆಯ ಪ್ರಕಾರ, ಮೃತನ ವಿಧವೆಗೆ, ಮಗನ ವಿಧವೆಗೆ, ಮೊಮ್ಮಗನ ವಿಧವೆಗೆ, ಮತ್ತು ಮರಿಮಗನ ವಿಧವೆಗೆ ಹಕ್ಕನ್ನು ಕೊಡಲಾಯಿತು ಮತ್ತು ವಾಸ್ತವವಾಗಿ ಮಗಳ ಸ್ಥಾನಕ್ಕೆ ಸಂಬಂಧಪಟ್ಟ ಹಾಗೆ ಅನೇಕ ತೊಂದರೆಗಳು ತಲೆದೋರಿದವು. ವಾಸ್ತವವಾಗಿ, ಬಹಳಷ್ಟು ವಿವಾದವು ಉದ್ಭವಿಸಿತು. ಪುನಃ ಶ್ರೀ ಸರ್ಕಾರ್ ಅವರು, ಮಗಳ ಸ್ಥಾನಕ್ಕೆ ಸಂಬಂಧಿಸಿದ ಹಾಗೆ ಆ ಸನ್ನಿವೇಶದಲ್ಲಿ ತಲೆದೋರಿದ ತೊಂದರೆಗಳನ್ನು ತೋರಿಸಿಕೊಟ್ಟರು. ಈ ಪ್ರಶ್ನೆಯ ಬಗ್ಗೆ ಇಡೀ ದೇಶದಲ್ಲಿ ಚಳವಳಿಯು ಹರಡಿತು ಮತ್ತು ಮಗಳ ಸ್ಥಾನವನ್ನು ಕುರಿತು ಸ್ಪಷ್ಟೀಕರಣ ಕೋರುವ ಸಲುವಾಗಿ ವಿಧಾನಸಭೆಗೆ ಅರ್ಧ ಡಜನ್ ವಿಧೇಯಕಗಳನ್ನು ಸಾದರಪಡಿಸಲಾಯಿತು. ಮಗಳಿಗೆ ಸಹ ಮಗ, ಮೊಮ್ಮಗ ಮತ್ತು ಮರಿಮಗನ ಜತೆ ಮತ್ತು ಆ ವಿವಿಧ ವ್ಯಕ್ತಿಗಳ ವಿಧವೆಯರ ಜತೆ ಆ ಹಕ್ಕನ್ನು ಕೊಡುವಂತೆ ಕೋರಲು ಸುಮಾರು ಐದಾರು ವಿಧೇಯಕಗಳನ್ನು ವಿಧಾನಸಭೆಗೆ ಸಾದರಪಡಿಸಲಾಯಿತು. ಹಾಗೆ ಸಾದರಪಡಿಸಲಾದ ವಿಧೇಯಕಗಳು ಅಜೆಂಡಾದಲ್ಲಿ ಇದ್ದವು. ಶ್ರೀ ಲಕ್ಷ್ಮೀಕಾಂತ ಮೈತ್ರಾ ಅವರ ಹಾಗೆ ಅನುಭವಿಕರಾದ ಈ ಸದನದ ಸದಸ್ಯರು, ಸರ್ಕಾರವು ಸುಮಾರು ಐದಾರು ವಿಧೇಯಕಗಳನ್ನು ಸಾದರಪಡಿಸಿದಾಗ ಇದಿರಿಸಬೇಕಾಗಿ ಬಂದ ಆ ಸನ್ನಿವೇಶವನ್ನು ನೆನಪಿಸಿಕೊಳ್ಳಬಹುದು ಎಂದು ನಾನು ನಂಬಿದ್ದೇನೆ. ಆಗ ಗೃಹ ಮಂತ್ರಿಗಳಾಗಿದ್ದ ಸರ್ ರೆಜಿನಾಲ್ಡ್ ಮೆಕ್ಸ್‌ವೆಲ್ ಅವರು ಸಾಮಾಜಿಕ ವಿಷಯಗಳ ಮೇಲಿನ ಶಾಸನವನ್ನು, ಪರ್ಯಾಪ್ತ ಪರ್ಯಾಲೋಚನೆ ಇಲ್ಲದೆ ಅವಸರದಿಂದ ಸಾಗಿಸುವುದು ತರವಲ್ಲ ಎಂದು ಹೇಳಿದ್ದುಂಟು. ಆ ತೊಂದರೆಯು, ಒಂದರ ಮೇಲೆ ಒಂದರಂತೆ ಶಾಸನಗಳು ಬರುತ್ತ ಹೋದ ಹಾಗೆ, ಇನ್ನೂ ಅಧಿಕವಾಗತೊಡಗಿತು. ಆದ್ದರಿಂದ ಅವರು ಆ ಸದಸ್ಯರು ತೆಗೆದುಕೊಂಡ ನಿಲುವನ್ನು ಪೂರ್ಣ ಸಹಾನುಭೂತಿಯಿಂದ ನೋಡಿ ಶಾಸನ ರಚನೆಯನ್ನು ಕೈಗೊಳ್ಳುವ ಮುನ್ನ ಪ್ರತಿಯೊಂದು ದೃಷ್ಟಿಕೋನದಿಂದ ವಿಷಯವನ್ನು ಯಥಾರೀತಿ ಪರೀಕ್ಷಿಸಲು ಒಪ್ಪಿಕೊಂಡರು.

ಇದು ರಾವ್ ಸಮಿತಿಯ ಜನ್ಮಕ್ಕೆ ಕಾರಣ ಆಯಿತು. ಸಮಿತಿಯು ಒಂದು ಕರಡು ವಿಧೇಯಕವನ್ನು ತಯಾರಿಸಿತು ಮತ್ತು ವಿವಿಧ ಜನಗಳಿಗೆ ಪ್ರಶ್ನಾವಳಿಗಳನ್ನು ಕಳಿಸಿಕೊಟ್ಟಿತು. ಬಂದು ತಲುಪಿದ ಉತ್ತರಗಳನ್ನು ಪರಿಶೀಲಿಸಿ, ವಿಶ್ಲೇಷಿಸಿ ಆಖ್ಯೆರಾಗಿ ಒಂದು ಹೊಸ ವಿಧೇಯಕವನ್ನು ತಯಾರಿಸಿದರು. ಆದರೆ ಅವರಿಗೆ ಆ ವಿಧೇಯಕವನ್ನು ಮುಂದುವರಿಸುವ ಹಾದಿಯಲ್ಲಿ ಪ್ರಾರಂಭಿಕ ತೊಂದರೆ ಯೊಂದು ಇದಿರಾಯಿತು. ಆಗ

ಅವರಿಗೆ ೧೯೩೭ರ ಕಾಯ್ದೆ ಮತ್ತು ೧೯೩೮ರ ಕಾಯ್ದೆ– ಇವುಗಳಿಗೆ ಸಂಬಂಧಿಸಿದ ಹಾಗೆ ಒಂದು ಪ್ರಮಾದವು ಕಂಡುಬಂದಿತು. ೧೯೩೮ರ ಕಾಯ್ದೆಯ ಮೂಲಕ ತಿದ್ದುಪಡಿಯಾದ ೧೯೩೭ರ ಕಾಯ್ದೆಯು ಅವರ ಅಭಿಪ್ರಾಯದಲ್ಲಿ ಕೃಷಿ ಭೂಮಿಗಳಿಗೆ ಅನ್ವಯವಾಗುವಂತಿರಲಿಲ್ಲ. ತೊಂದರೆಯ ಕಾರಣ ಹೀಗೆ ೧೯೩೭ರ ಕಾಯ್ದೆಯನ್ನು ವಿಧಾನ ಸಭೆಯು ತೀರ್ಣಗೊಳಿಸಿದ ಸಮಯದಲ್ಲಿ, ಕೃಷಿ ಭೂಮಿಯು ಕೇಂದ್ರ ಸರ್ಕಾರದ ಸಂಜ್ಞಾನಕ್ಕೆ ಒಳಪಡುವ ವಿಷಯವಾಗಿ ಉಳಿದಿರಲಿಲ್ಲ.

**ಮಿ। ಡೆಪ್ಯುಟಿ ಸ್ಪೀಕರ್ :** ಸದನವನ್ನು ಅಪರಾಹ್ನ ೨–೩೦ಗಂಟೆಯವರೆಗೆ ಮುಂದೂಡಲಾಗಿದೆ.

ಆಗ ಸಭೆಯನ್ನು ಭೋಜನ ವಿರಾಮಕ್ಕಾಗಿ, ಅಪರಾಹ್ನ ೨.೩೦ ಗಂಟೆಯವರೆಗೆ ಮುಂದೂಡಲಾಯಿತು.

ಸಭೆಯ ಭೋಜನ ವಿರಾಮದ ತರುವಾಯ ಅಪರಾಹ್ನ ೨–೩೦ ಗಂಟೆಗೆ ಪುನಃ ಸೇರಿತು. ಸ್ಪೀಕರ್ (ಶ್ರೀ. ಜಿ.ವಿ. ಮಾವಳಂಕರ್ ಅವರು ಸಭಾಧ್ಯಕ್ಷರಾಗಿದ್ದರು).

**ಶ್ರೀ ಮಟ್ಟಿ ಎನ್ನಿ ಮೆಸ್ಕಾರೀನ್** (ತಿರುವಾಂಕೂರು ಸಂಸ್ಥಾನ) : ನಾನು ಒಂದು ಕ್ರಿಯಾಲೋಪವನ್ನು ಎತ್ತಬಯಸುತ್ತೇನೆ. ಈ ಸದನದ ಸದಸ್ಯನು ವಿಧಾನ ಮಂಡಲದ ಅಧಿವೇಶನದಲ್ಲಿ ಉದ್ದಕ್ಕೂ ಹಾಜರಿರುವುದು ಅವನ ಕರ್ತವ್ಯವೆ ಎಂದು ತಿಳಿಯಬಯಸುತ್ತೇನೆ.

**ಸ್ಪೀಕರ್** : ಅದೇನು ಕ್ರಿಯಾಲೋಪವಲ್ಲ. ಯಾರೇ ಸದಸ್ಯನು ಚರ್ಚೆಯಲ್ಲಿ ಭಾಗವಹಿಸಲು ಇಷ್ಟಪಡದಿದ್ದರೆ, ಅವನು ಆ ವೇಳೆಯಲ್ಲಿ ಹಾಜರಿರಬೇಕೆಂಬ ನಿಯಮವಿಲ್ಲ. ಆದರೆ ಒಂದು ಅಭಿಪ್ರಾಯೋಕ್ತಿಯನ್ನು ಹೇಳುತ್ತೇನೆ. ಒಬ್ಬ ಸದಸ್ಯನು ಒಂದು ವಿಧೇಯಕದ ಪರವಾಗಿ ಅಥವಾ ಅದನ್ನು ವಿರೋಧಿಸಿ ಭಾಷಣ ಮಾಡಿರುವಲ್ಲಿ, ಆ ಸಂಬಂಧವಾದ ಉತ್ತರವನ್ನು ಕೇಳಿಸಿಕೊಳ್ಳಲು ಅವನು ಹಾಜರಿರಬೇಕಾಗುತ್ತದೆ.

**ಶ್ರೀ ಮಟ್ಟಿ ಎನ್ನಿ ಮೆಸ್ಕಾರೀನ್** : ಅವನು ಕೆಲವು ದಿವಸ ಗೈರುಹಾಜರಾಗಿದ್ದು ವಾಪಸು ಬರುತ್ತಾನೆ ಮತ್ತು ಸದನದ ಅಜೆಂಡಾ ತನಗೆ ಗೊತ್ತಿರಲಿಲ್ಲ ಎಂದು ದೂರುತ್ತಾನೆ. ಆಗ ಅವನನ್ನು ಮಾಫಿ ಮಾಡಬಹುದೆ?

**ಸ್ಪೀಕರ್ :** ಅವನು ಸದನದ ಮುಂದೆ ಕೊಡುವ ಹೇಳಿಕೆಯನ್ನು ಆಧರಿಸಿ, ಅವನ ಬಗ್ಗೆ ತೀರ್ಪು ನೀಡಲಾಗುವುದು.

**ಮಿ। ನಝೀರುದ್ದೀನ್ ಅಹಮ್ಮದ್** : ಇವತ್ತಿನ ದಿವಸ ನಾವು ಭೋಜನ ವಿರಾಮಕ್ಕೆ ಹೋಗುವ ಮುನ್ನ ನಾನು ಈ ಶಾಸನದ ಇತಿಹಾಸದ ಮೊದಲನೆಯ ಭಾಗವನ್ನು ನಿರೂಪಿಸುತ್ತಿದ್ದೆನಷ್ಟೆ. ೧೯೩೭ರ ಕಾಯ್ದೆ ಮತ್ತು ೧೯೩೮ರ ಕಾಯ್ದೆ ಇವೆರಡೂ ಮಗಳಿಗೆ ಸಂಬಂಧಿಸಿದಂತೆ ತೊಂದರೆಗೆ ದಾರಿ ಮಾಡಿಕೊಟ್ಟವು ಮತ್ತು ಆ ಮೂಲಕ ಬಹಳಷ್ಟು ವಿಧೇಯಕಗಳನ್ನು, ಅವಳ ಸ್ಥಾನದ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಕೋರಿ, ಸಾದರಪಡಿಸಲಾಯಿತು. ಆ ಹಂತದಲ್ಲಿ ಸರ್ಕಾರವು ಆ ವಿಷಯವನ್ನು ಪರೀಕ್ಷಿಸಲು ಒಪ್ಪಿಕೊಂಡಿತು ಮತ್ತು ರಾವ್ ಸಮಿತಿಯನ್ನು ನೇಮಿಸಿತು. ವಿಧಾನ ಮಂಡಲವು ಕೃಷಿಭೂಮಿಗೆ ಸಂಬಂಧಪಟ್ಟ ಹಾಗೆ ಯಾವುದೇ ಶಾಸನವನ್ನು ಯಾವುದೇ ಕಾಯ್ದೆಗಳನ್ನು ತೀರ್ಣಗೊಳಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿಲ್ಲ ಎಂದು ರಾವ್ ಸಮಿತಿಗೆ ಒಡನೆಯೇ ತಿಳಿದುಬಂದಿತು. ಆ ಪ್ರಶ್ನೆ ಹೀಗೆ ಉದ್ಭವಿಸಿತು. ಹಿಂದಿನ ಸಂವಿಧಾನದ ಅಡಿಯಲ್ಲಿ ಕೃಷಿ ವಿಷಯವು ಕೇಂದ್ರ ಸರ್ಕಾರದ ವಿಧಾಯೀ (ಶಾಸನ ರಚನಾ) ಪಟ್ಟಿಯಲ್ಲಿ ಇತ್ತು. ವಿಧಾನ ಮಂಡಲವು ಹಳೆಯ ಸಂವಿಧಾನದ ಅಡಿಯಲ್ಲಿ ಪ್ರಕಾರ್ಯ ನಿರ್ವಹಿಸುತ್ತಿದ್ದಾಗ, ಕೆಳಮನೆಯಲ್ಲಿ ೧೯೩೭ರ ಮಾರ್ಚ್ ತಿಂಗಳಲ್ಲಿ ಆ ವಿಧೇಯಕವು ತೀರ್ಣವಾಯಿತು. ೧೯೩೫ರ ಹೊಸ ಸಂವಿಧಾನವು ಜಾರಿಗೆ ಬಂದ ತರುವಾಯ ಮೇಲ್ಮನೆಯಲ್ಲಿ ಆ ವಿಧೇಯಕವು ಏಪ್ರಿಲ್ ತಿಂಗಳಲ್ಲಿ ತೀರ್ಣವಾಯಿತು. ಹೀಗೆ ಎರಡೂ ಸದನಗಳ ಪೈಕಿ ಯಾವುದಕ್ಕೂ ಅಧಿಕಾರ ವ್ಯಾಪ್ತಿ ಇಲ್ಲದ ಸಮಯದಲ್ಲಿ ೧೯೩೮ರ ತಿದ್ದುಪಡಿ

ಕಾಯ್ದೆಯು ತೀರ್ಣವಾಯಿತು. ಇವು ಆಗಿನ ವಿಧಾನ ಮಂಡಲವು ಎಸಗಿದ ಪ್ರಮುಖ ಪ್ರಮಾದಗಳು. ರಾವ್ ಸಮಿತಿಯು ಆ ವಿಷಯದ ಮೇಲೆ ಅಭಿಪ್ರಾಯ ಕೋರಿ ಫೆಡರಲ್ ಕೋರ್ಟ್‌ಗೆ ಕಳಿಸಿತು. ಫೆಡರಲ್ ಕೋರ್ಟ್ ವಿಧಾನ ಮಂಡಲವು.......

**ಮಾನ್ಯ ಡಾ। ಬಿ.ಆರ್. ಅಂಬೇಡ್ಕರ್** : ಈ ಇತಿಹಾಸ ಸಂಪೂರ್ಣ ಸುಳ್ಳು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದ್ರಾಸು : ಸಾಮಾನ್ಯ) : ರಾವ್ ಸಮಿತಿಯು ಫೆಡರಲ್ ಕೋರ್ಟ್‌ಗೆ ಉಲ್ಲೇಖಿಸಿದ್ದು ಹೇಗೆ?

**ಮಿ। ನಝೀರುದ್ದೀನ್ ಅಹಮ್ಮದ್** : ಅದು ಸಂಪೂರ್ಣ ಸುಳ್ಳೆ?

**ಮಾನ್ಯ ಡಾ। ಬಿ.ಆರ್. ಅಂಬೇಡ್ಕರ್** : ಹೌದು, ಸಂಪೂರ್ಣ ಸುಳ್ಳು.

**ಮಿ। ನಝೀರುದ್ದೀನ್ ಅಹಮ್ಮದ್** : ಯಾವ ಅರ್ಥದಲ್ಲಿ?

**ಮಾನ್ಯ ಡಾ। ಬಿ. ಆರ್. ಅಂಬೇಡ್ಕರ್** : ನನ್ನ ಉತ್ತರದಲ್ಲಿ ಅದನ್ನು ವಿವರಿಸುತ್ತೇನೆ.

**ಶ್ರೀ ಲಕ್ಷ್ಮೀಕಾಂತ ಮೈತ್ರಾ** : ಅವರು ಮೂಲಭೂತವಾಗಿ ಸತ್ಯವನ್ನೇ ಹೇಳಿದ್ದಾರೆ.

**ಮಿ। ನಝೀರುದ್ದೀನ್ ಅಹಮ್ಮದ್** : ರಾವ್ ಸಮಿತಿಯು ಸರ್ಕಾರಕ್ಕೆ ವರದಿ ಮಾಡಿತು ಮತ್ತು ಗವರ್ನರ್ ಜನರಲ್ ಅವರು ಫೆಡರಲ್ ಕೋರ್ಟ್‌ಗೆ ಉಲ್ಲೇಖಿಸಿದರು. ನಾನು ರವಷ್ಟು ತಾಂತ್ರಿಕ ವಿವರದಲ್ಲಿ ಮಾತ್ರ ತಪ್ಪು ಮಾಡಿದೆನು. ನಾನು ಈಗ ಪುನಃ ಹೇಳುತ್ತೇನೆ: ರಾವ್ ಸಮಿತಿಯು ಆ ವಿಷಯವನ್ನು, ಯಥೋಚಿತ ಮಾರ್ಗದಿಂದ ಅಂದರೆ ಗವರ್ನರ್ ಜನರಲ್ ಅವರ ಮುಖಾಂತರ ಫೆಡರಲ್ ಕೋರ್ಟ್‌ಗೆ ಉಲ್ಲೇಖಿಸಿತು. ಅದು ತಪ್ಪೆ? ನಾನು ಸಂಪೂರ್ಣವಾಗಿ ಸತ್ಯವನ್ನೇ ಹೇಳಿದ್ದೇನೆ, ಸಂಪೂರ್ಣ ಸುಳ್ಳನ್ನಲ್ಲ (ಅಡ್ಡಿ).

**ಸ್ಪೀಕರ್** : ಮಾನ್ಯ ಸದಸ್ಯರು ತಮ್ಮ ಮಾತನ್ನು ಮುಂದುವರಿಸಬಹುದು.

**ಮಿ। ನಝೀರುದ್ದೀನ್ ಅಹಮ್ಮದ್** : ರಾವ್ ಸಮಿತಿ ಪ್ರಶ್ನೆಯನ್ನು ಹೀಗೆ ಫೆಡರಲ್ ಕೋರ್ಟ್‌ಗೆ ಉಲ್ಲೇಖಿಸಿತು. ಫೆಡರಲ್ ಕೋರ್ಟ್‌ಗೆ ಕೃಷಿ ಭೂಮಿಗೆ ಸಂಬಂಧಪಡುವಷ್ಟರ ಮಟ್ಟಿಗೆ ವಿಧಾನ ಮಂಡಲದ ಅಧಿಕಾರಾತೀತ ಕ್ರಮ ಕೈಕೊಂಡಿದೆ ಎಂದು ರೂಲಿಂಗ್ ನೀಡಿತು. ಅದು ಆ ಸಮಯದಲ್ಲಿ ಪ್ರಕಟವಾದ ಪ್ರಮುಖ ಪ್ರಮಾದ. ಫೆಡರಲ್ ಕೋರ್ಟ್‌ನ ರೂಲಿಂಗ್ ಗೊತ್ತಾಗುತ್ತಲೆ ನಾನು ಆ ಸನ್ನಿವೇಶದಲ್ಲಿಯೇ ಹಾಜರಾದದ್ದು. ಹಿಂದೂ ಕೋಡ್ ವಿಧೇಯಕದ ಜತೆ ನನ್ನ ಸಂಬಂಧವು ಸಾಂದರ್ಭಿಕವೂ ಅಲ್ಲ, ಇತ್ತೀಚಿನದೂ ಅಲ್ಲ. ನಾನು ಈ ಶಾಸನ ರಚನೆಗೆ ಸಂಬಂಧಪಟ್ಟಂತೆ, ೧೯೪೧ರಷ್ಟು ಹಿಂದೆಯೇ, ಕಾನೂನು ಕ್ರಮ ಕೈಕೊಂಡೆನು ಎಂದು ಸದನಕ್ಕೆ ತೋರಿಸಿಕೊಡುವವನಿದ್ದೇನೆ. ನಾನು ಆಗ ಬಂಗಾಲ ವಿಧಾನ ಮಂಡಲದ ಸದಸ್ಯನಾಗಿದ್ದೆ. ರಾವ್ ಸಮಿತಿಯ ಪ್ರಥಮ ವರದಿ ಹೊರಬೀಳುವುದಕ್ಕೆ ಮುನ್ನವೇ ನಾನು ಒಂದು ವಿಧೇಯಕವನ್ನು ಸಾದರಪಡಿಸಿದೆ. ಫೆಡರಲ್ ಕೋರ್ಟ್‌ನ ತೀರ್ಪು ಗೊತ್ತಾದೊಡನೆಯ ಕೃಷಿ ಭೂಮಿಗೆ ಸಂಬಂಧಪಡುವಷ್ಟು ಮಟ್ಟಿಗೆ ಆ ಕಾಯ್ದೆಯು ಬಂಗಾಲಕ್ಕೆ ಅನ್ವಯವಾಗಬೇಕು ಎಂದು ಕೋರಿ ನಾನು ವಿಧೇಯಕವನ್ನು ಮಂಡಿಸಿದೆ. ಭಾರತದಲ್ಲಿ ಆ ವಿಷಯಕ್ಕೆ ಸಂಬಂಧಿಸಿದಂತೆ ಅದು ಶಾಸನರಚನೆಯ ಪ್ರಥಮ ಪ್ರಯತ್ನ.

**ಮಿ। ತಾಜಾಮುಲ್ ಹುಸೇನ್** (ಬಿಹಾರ್ : ಮುಸ್ಲಿಂ) : ಆ ಸಮಯದಲ್ಲಿ ನನ್ನ ಮಾನ್ಯ ಸ್ನೇಹಿತರು ಹಿಂದೂ ಕೋಡ್ ವಿಧೇಯಕದ ಪರವಾಗಿದ್ದರೋ, ಹಾಗಿದ್ದರೆ ತಮ್ಮ ನಿಲುವನ್ನು ಯಾವತ್ತಿನಿಂದ ಬದಲಾಯಿಸಿದರು ಎಂದು ಕೇಳಬಹುದೆ?

**ಮಿ। ನಝೀರುದ್ದೀನ್ ಅಹಮ್ಮದ್** : ಹಿಂದೂ ಕೋಡ್ ವಿಧೇಯಕ ಆಗ ಹುಟ್ಟಿಯೂ ಇರಲಿಲ್ಲ. ಆ ಸಮಯದಲ್ಲಿ, ಇನ್ನೂ ಅನೇಕರು ಸುಪ್ರಸಿದ್ಧರಾಗಿದ್ದರು. ಹಾಗೆಯೇ, ಆ ವಿಷಯಕ್ಕೆ ಸಂಬಂಧಿಸಿದಂತೆ, ಆ ತರುವಾಯ ತಿಳಿವಳಿಕೆಯುಂಟಾದ ಮೇರೆಗೆ, ನಾನು ತೆಗೆದುಕೊಂಡದ್ದು ತಪ್ಪು ಹೆಜ್ಜೆ ಎಂದಾಯಿತು. ವಾಸ್ತವವಾಗಿ ಆ ಕಾಯ್ದೆಯನ್ನು ಬಂಗಾಲದಲ್ಲಿನ ಕೃಷಿ ಭೂಮಿಗೆ ವಿಸ್ತರಿಸಬೇಕೆಂದು ಯೋಚಿಸಿದ್ದೆ (ಉದ್ದೇಶಿಸಿದ್ದೆ). ಅದು ನಾನು ಬಂಗಾಲ ವಿಧಾನ ಮಂಡಲಕ್ಕೆ ಸಾದರಪಡಿಸಿದ ವಿಧೇಯಕದ ಉದ್ದೇಶವಾಗಿತ್ತು. ಅದನ್ನು ಬಂಗಾಲದಾದ್ಯಂತ ಎಲ್ಲರಿಗೂ, ಅಭಿಪ್ರಾಯ ಕೋರಿ, ಕಳಿಸಲಾಯಿತು. ಸಾರ್ವಜನಿಕ ಅಭಿಪ್ರಾಯದ ಅಧಿಕಾಂಶ ಭಾಗವು ವಿಧೇಯಕದ ಪರವಾಗಿ ಬೆಂಬಲ ಪ್ರಕಟಸಿತ್ತು. ಆಗ ಪ್ರತಿಯೊಬ್ಬರೂ ನನ್ನ ಹಾಗೆಯೇ ಸರಿಯಾದುದು ಎಂದು ಭಾವಿಸಿದ್ದರು.

**ಮಿ। ತಾಜಾಮುಲ್ ಹುಸೇನ್ :** ಸ್ವಾಮೀ, ಮಾನ್ಯ ಸದಸ್ಯರು ತಮ್ಮ ಮನಸ್ಸು ಯಾಕೆ ಬದಲಾಯಿಸಿದರು ಎಂಬ ಬಗ್ಗೆ ಕಾರಣ ಹೇಳಿಲ್ಲ.

**ಸ್ಪೀಕರ್ :** ಅದು ಸುಸಂಗತ ಪ್ರಶ್ನೆಯಲ್ಲ. ಅವರು ಎಷ್ಟು ಸಲ ಬೇಕೋ ಅಷ್ಟು ಸಲ ತಮ್ಮ ಮನಸ್ಸು ಬದಲಾಯಿಸಬಹುದು.

**ಮಿ। ನಝೀರುದ್ದೀನ್ ಅಹಮ್ಮದ್** : ಮಾನ್ಯ ಸದಸ್ಯರು ಕಾಯಲು ಪ್ರಯತ್ನಿಸಬೇಕು. ತಾಳ್ಮೆ ಇರಬೇಕು. ಆ ವಿಧೇಯಕವನ್ನು ನಾನು ೧೪ನೆಯ ಜುಲೈ ೧೯೪೧ರಂದು ಸಾದರಪಡಿಸಿದೆನು ಮತ್ತು ಬಂಗಾಲದ ಸಾರ್ವಜನಿಕ ಅಭಿಪ್ರಾಯದ ಬಹುಭಾಗವು ಅದರ ಪರವಾಗಿ ಇತ್ತು ಎಂದು ತಿಳಿಸಲು ಸಂತೋಷವೆನಿಸುತ್ತದೆ. ಆಗ ಅದನ್ನು ಆಯ್ಕೆ ಸಮಿತಿಯ ಸಲುವಾಗಿ ಅಜೆಂಡಾದಲ್ಲಿ ಇಡಲಾಯಿತು. ನನ್ನ ಹತ್ತಿರ ಅಜೆಂಡಾ ಪತ್ರ ಸೆಪ್ಟೆಂಬರ್ ೧೯೪೨ರ ಒಂದು ಪ್ರತಿ ಉಂಟು. ಆಗ ಬಂಗಾಲದ ವಿಧಾನ ಮಂಡಲದಲ್ಲಿ ಹಿಂದೂ ಮುಸ್ಲಿಂ ಸಮ್ಮಿಶ್ರ ಪಕ್ಷವು ದೊಡ್ಡ ಬಹುಮತದಲ್ಲಿ ಇದ್ದುದರಿಂದ, ಅಲ್ಲಿ ಅದನ್ನು ತೀರ್ಣಗೊಳಿಸಿಕೊಳ್ಳಲು ನನಗೆ ಸಾಧ್ಯವಿತ್ತು. ಪಕ್ಷವು ಬಹುಮತದಿಂದ ವಿಧೇಯಕದ ಪರವಾಗಿ ನಿರ್ಣಯ ಕೊಟ್ಟಿತ್ತು ಮತ್ತು ಅದನ್ನು ಆಯ್ಕೆ ಸಮಿತಿಗೆ ಕಳಿಸುವುದಿತ್ತು. ಆದರೆ ಅಷ್ಟು ಹೊತ್ತಿಗೆ ಹಿಂದೂ ಅಭಿಪ್ರಾಯವು ವಿಧೇಯಕದ ವಿರುದ್ಧವಾಗಿ ಸಾಕಷ್ಟು ನಿಶ್ಚಿತ ರೂಪ ಧಾರಣ ಮಾಡಿತ್ತು. ವಿಧೇಯಕವು ತೀರ್ಣವಾದ ಪಕ್ಷದಲ್ಲಿ ಗಂಭೀರ ಸಮಸ್ಯೆಗಳೂ ಇದಿರಾಗುತ್ತವೆ ಎಂದು ನನಗೆ ಅನೇಕರು ಹೇಳಿದರು. ಹುಡುಗಿಯರು ಮತ್ತು ಇತರರ ಸ್ಥಾನಗಳಲ್ಲಿ ಅಲ್ಲೋಲ್ಲಕಲ್ಲೋಲ ಆಗುತ್ತದೆ ಎಂದು ಹೇಳಿದರು. ಈ ಮಧ್ಯೆ ರಾವ್ ಸಮಿತಿ ವರದಿ ಪ್ರಕಟವಾಗಿತ್ತು. ಮತ್ತು ಪ್ರಾರೂಪಣ ಮಾಡಿದ ವಿಧೇಯಕವು ದೇಶದ ಸಮಕ್ಷ ಇತ್ತು. ಅದಕ್ಕೆ ಸಂಬಂಧಿಸಿದಂತೆ ೧೯೪೧ರಲ್ಲಿ ಮತ್ತು ೧೯೪೨ರಲ್ಲಿ ಬಹು ಸಂಖ್ಯೆಯಲ್ಲಿ ಸಭೆಗಳು ಜರುಗಿದವು. ನನ್ನ ಜನ್ಮಸ್ಥಳ ಬರ್ದ್ವಾನ್‌ನಲ್ಲಿ ಒಂದು ಸಭೆ ಜರುಗಿತು ಮತ್ತು ಅದೇ ಬಗೆಯ ಸಭೆಗಳು ಬಂಗಾಲ ಪ್ರಾಂತದ ಎಲ್ಲೆಡೆಗಳಲ್ಲೂ ನಡೆದವು. ಆ ಎಲ್ಲ ಸಭೆಗಳಲ್ಲಿ ವಿಧೇಯಕವನ್ನು ಖಂಡಿಸಿ ಭಾಷಣಗಳಾದವು, ನಿರ್ಣಯಗಳನ್ನು ಅಂಗೀಕರಿಸಲಾಯಿತು. ಅತ್ಯಗತ್ಯ ಬಹುಮತವು ನನ್ನ ವಿಧೇಯಕದ ಪರವಾಗಿದ್ದರೂ ನಾನು ವಿಧೇಯಕವನ್ನು ತೀರ್ಣಗೊಳಿಸುವ ದಿಶೆಯಲ್ಲಿ ಮುಂದಿನ ಕ್ರಮ ಕೈಗೊಳ್ಳಲಿಲ್ಲ. ಕಾರಣವೆಂದರೆ, ಅದು ಇಡೀ ಹಿಂದೂ ಸಮುದಾಯಕ್ಕೆ ಸಂಬಂಧಪಟ್ಟ ವಿಷಯವಾಗಿದ್ದು, ಆ ಸಮುದಾಯವೇ ಅದನ್ನು ವಿರೋಧಿಸಲು ಅಣಿಯಾಗಿತ್ತು. ಯಾವ ವ್ಯಕ್ತಿಗಳು ಆ ಶಾಸನದ ದ್ವಾರಾ ಬಾಧಿತರಾಗುವುದಿಲ್ಲವೋ ಆ ವ್ಯಕ್ತಿಗಳ ಬಹುಮತದ ದ್ವಾರಾ ತೀರ್ಣಗೊಳಿಸಿಕೊಳ್ಳುವುದು ತರವಲ್ಲ ಎಂದು ಭಾವಿಸಿದೆನು. ನಾನು ಎಂದೂ ಹಿಂದೂ ಕೋಡ್ ವಿಧೇಯಕದ ಪರವಾಗಿ ಇರಲಿಲ್ಲ.

ನಾನು ಒಂದಿಷ್ಟು ಸಮಯದವರೆಗೆ ಅದರ ಪರವಾಗಿ ಇದ್ದುದೇನೋ ನಿಜವೇ. ಇಷ್ಟು ವಿವರಣೆ ನನ್ನ ಸ್ನೇಹಿತ ಮಿ। ತಾಜಾಮುಲ್ ಹುಸೇನ್ ಅವರಿಗೆ ಸಮಾಧಾನ ಕೊಡಬಹುದು ಎಂದು ನಂಬಿದ್ದೇನೆ. ನಾನು ಆಗ ನನ್ನ ಹಿಂದೂ ಸದಸ್ಯರಿಗೆ ಏನು ಮಾಡೋಣ ಎಂದು ಕೇಳಿದೆನು. ಅವರು ಅದಕ್ಕೆ ವಿರೋಧಿಗಳಾಗಿದ್ದರು. ಹಾಗಾಗಿ ನನ್ನ ವಿಧೇಯಕವು ಬಿದ್ದುಹೋಯಿತು.

ನಾನು ಅದೇ ಅಭಿಪ್ರಾಯ ಸೂತ್ರವನ್ನು ಅನುಸರಿಸಿದೆನು. ಆಗ ನನ್ನ ವಿಧೇಯಕದ ವಿರುದ್ಧ ಹಿಂದೂ ಅಭಿಪ್ರಾಯವು ಇಷ್ಟೊಂದು ಪ್ರಮಾಣದಲ್ಲಿ ಇದೆಯೆಂದು ಕಂಡುಬಂದಾಗ ನನ್ನ ಅಭಿಪ್ರಾಯ ಬದಲಾಯಿಸಿದೆನು. ಯಾವ ಪ್ರಾಂತವೂ ೧೯೩೭ರ ಕಾಯ್ದೆಯನ್ನು ಕೃಷಿ ಭೂಮಿಗೆ ಎಂದೂ ಅನ್ವಯಿಸಲಿಲ್ಲ. ಸ್ವಾಮೀ, ಆ ತರುವಾಯ ಬಂಗಾಲದಲ್ಲಿ ಅನೇಕಾನೇಕ ಸಭೆಗಳನ್ನು ಜರುಗಿಸಲಾಯಿತು ಮತ್ತು ಎಲ್ಲ ಸಭೆಗಳಲ್ಲಿ ರಾವ್ ಸಮಿತಿಯನ್ನು ಏಕರೂಪವಾಗಿ ಖಂಡಿಸಲಾಯಿತು.

ಇನ್ನು ರಾವ್ ಸಮಿತಿ ವರದಿಯ ವಿಚಾರ. ಅವರು ಒಂದು ವಿಧೇಯಕವನ್ನು ಸಿದ್ಧಗೊಳಿಸಿದರು. "ಹಿಂದೂ ಕೋಡ್ ವಿಧೇಯಕ – ಭಾಗ ೧ ಮರಣಶಾಸನ ರಹಿತ ಉತ್ತರಾಧಿಕಾರ". ಆಮೇಲೆ ಅದನ್ನು ಕೇಂದ್ರೀಯ ವಿಧಾನ ಮಂಡಲದ ಉಭಯಸದನಗಳ ಆಯ್ಕೆ ಸಮಿತಿಗೆ ಕಳಿಸಲಾಯಿತು. ನನ್ನ ಬಳಿ ಆ ಆಯ್ಕೆ ಸಮಿತಿಯ ವರದಿ ಇದೆ. ಒಂದೆಡೆ ಅದನ್ನು ಪ್ರಬಲವಾಗಿ ಸಮರ್ಥಿಸಲಾಗಿದೆ. ಇನ್ನೊಂದೆಡೆ ಅಷ್ಟೇ ಪ್ರಬಲವಾಗಿ ವಿರೋಧಿಸಲಾಗಿದೆ ಮತ್ತು ಆ ವಿಧೇಯಕವು ಆಯ್ಕೆ ಸಮಿತಿಯು ವರದಿ ಮಾಡಿದ ರೂಪದಲ್ಲಿ ಪುನಃ ವಿಧಾನ ಮಂಡಲಕ್ಕೆ ಬಂದಿತು. ಹಿಂದೂ ಕೋಡ್ ವಿಧೇಯಕವನ್ನು ವಿಭಾಗಗಳಲ್ಲಿ ಪರ್ಯಾಲೋಚಿಸಬೇಕು ಎಂದು ರಾವ್ ಸಮಿತಿ ೧೯೪೧ರಲ್ಲಿ ವರದಿ ಮಾಡಿತ್ತು. ಇದೇ ಪ್ರಮುಖ ಘಟ್ಟ. ರಾವ್ ಸಮಿತಿಯು ಹಿಂದೂ ಕೋಡ್ ವಿಧೇಯಕವನ್ನು ವಿಭಾಗಶ: ಪರ್ಯಾಲೋಚನೆಗೆ ಎತ್ತಿಕೊಳ್ಳಬೇಕು ಎಂದರೆ ಉತ್ತರಾಧಿಕಾರ, ವಿವಾಹ, ಪಾಲಕತ್ವ ಮತ್ತು ಇತರ ವಿಷಯಗಳು ಹೀಗೆ ಕೈಗೆತ್ತಿಕೊಳ್ಳಬೇಕು ಎಂದು ವಾಸ್ತವವಾಗಿ ವರದಿ ಮಾಡಿತ್ತು ಎಂಬ ಸಂಗತಿಯ ಕಡೆಗೆ ವಿಶೇಷ ಗಮನ ಸೆಳೆಯ ಬಯಸುತ್ತೇನೆ. ಅವರು ೧೯೪೧ರ ತಮ್ಮ ವರದಿಯ ೨೩ನೆಯ ಪುಟದಲ್ಲಿ ಹೀಗೆ ಹೇಳಿದ್ದಾರೆ:

ಹೀಗೆ ಸದನವು ಮತ್ತು ದೇಶವು ಸಂಪೂರ್ಣ ಚಿತ್ರವನ್ನು ಗಮನಿಸಬೇಕು ಎಂದು ಅವರು ಶಿಫಾರಸು ಮಾಡಿದರು. ವಿಸರ್ಜನೆ ಮಾಡಲಾಗಿದ್ದ ಹಿಂದೂ ಕಾನೂನು ಸಮಿತಿಯನ್ನು ಪುನರುಜ್ಜೀವಿಸಲಾಯಿತು. ಹಿಂದೂ ಕಾನೂನಿನ ಇತರ ಶಾಖೆಗಳ ಚಿತ್ರವನ್ನು ಪ್ರಸ್ತುತಪಡಿಸಬೇಕಾಗಿ ಅವರನ್ನು ಕೋರಲಾಯಿತು. ಅವರು ಮಾಡಿದ ಮೊದಲನೆಯ ಕೆಲಸ ಎಂದರೆ, ಅವರು ಇನ್ನೊಂದು ವಿಧೇಯಕವನ್ನು ತಯಾರಿಸಿದರು. "ಹಿಂದೂ ಕೋಡ್ ವಿಧೇಯಕ ಭಾಗ II - ವಿವಾಹ" ಎಂಬ ವಿಧೇಯಕವನ್ನು ಅವರು ತಯಾರಿಸಿದರು ಮತ್ತು ಆ ತರುವಾಯ ಇತರ ಭಾಗಗಳನ್ನು ತಯಾರಿಸಿದರು. ನಾನು ಒತ್ತಿ ಹೇಳಲು ಪ್ರಯತ್ನಿಸುತ್ತಿರುವ ಅಂಶವೆಂದರೆ ಇವು ಪ್ರತ್ಯೇಕವಾದ ಸ್ವಯಂಪೂರ್ಣವಾದ ವಿಧೇಯಕಗಳಾಗಿದ್ದುವು. ವಾರಸಾ ಕಾನೂನು ಸ್ವಯಂಪೂರ್ಣವಾದ ಮತ್ತು ಪ್ರತ್ಯೇಕ ವಿಧೇಯಕ ಆಗಿತ್ತು ಮತ್ತು ಪ್ರತ್ಯೇಕವಾಗಿ ಅಧಿನಿಯಮಿಸಲು ಸಾಧ್ಯವಿತ್ತು. ವಿವಾಹ ಕಾನೂನನ್ನು ಸಹ ಪ್ರತ್ಯೇಕವಾಗಿ ಅಧಿನಿಯಮಿಸಲು ಸಾಧ್ಯವಿತ್ತು. ಇದಲ್ಲದೆ ಮೂರು ಇತರ ಭಾಗಗಳಿದ್ದುವು. ಅವು ಪ್ರತ್ಯೇಕವಾಗಿದ್ದರೂ ಒಂದೇ ಸಂಪುಟದಲ್ಲಿ ಮುದ್ರಿಸಿ ಪರಿಚಲಿಸಲಾಗಿತ್ತು. ಅನಂತರ, ಅಭಿಪ್ರಾಯ ಪಡೆದ ತರುವಾಯ, ಪುರವಣಿ ರೂಪದಲ್ಲಿ ಅವರು ಕೆಲವು ಬದಲಾವಣೆಗಳನ್ನು ಸೇರಿಸಿದರು. ಆದ್ದರಿಂದ, ಒಂದೇ ಪುಸ್ತಕದಲ್ಲಿ ಪ್ರತ್ಯೇಕ ಸ್ವಯಂಪೂರ್ಣ ವಿಷಯಗಳಲ್ಲಿ, ಪ್ರತ್ಯೇಕ ಸಂಖ್ಯೆಗಳಿರುವ ಈ ಪ್ರತ್ಯೇಕ ಸ್ವಯಂಪೂರ್ಣ ವಿಧೇಯಕಗಳ ನಿಜವಾದ ಅರ್ಥ ಮತ್ತು ಉದ್ದೇಶವನ್ನು ಸದನವು ಗಮನಿಸುವುದು

ಎಂದು ಭಾವಿಸುತ್ತೇನೆ. ಆದರೆ ಕಾನೂನು ಮಂತ್ರಾಲಯದ ಪ್ರತ್ಯೇಕ ಸಂಖ್ಯೆಗಳುಳ್ಳ ಪ್ರತ್ಯೇಕ ಅಧ್ಯಾಯಗಳ ಉದ್ದೇಶವನ್ನು ತಪ್ಪಾಗಿ ಗ್ರಹಿಸಿತು. ವಾಸ್ತವವಾಗಿ ಈ ವಿಧೇಯಕದ ಮೇಲಣ ವರದಿಯಲ್ಲಿ, ಸದಸ್ಯರು, ಪ್ರತ್ಯೇಕ ಸಂಖ್ಯೆಗಳು ಮತ್ತು ಪ್ರತ್ಯೇಕ ಭಾಗಗಳು ಈವರೆಗೂ ಗೊತ್ತಿಲ್ಲದ ಮತ್ತು ಗೊತ್ತುಗುರಿ ಇಲ್ಲದ ಸಂಗತಿ ಎಂದು ಹೇಳುತ್ತಾರೆ. ಆದ್ದರಿಂದ ಅವರು ಎಲ್ಲ ವಿಭಿನ್ನ ಭಾಗಗಳನ್ನು ಒಂದು ಪೂರ್ಣದಲ್ಲಿ ಅನುಕ್ರಮ ಸಂಖ್ಯೆ ಕೊಟ್ಟು ಸಮ್ಮಿಲನಗೊಳಿಸಲು ಇಚ್ಛಿಸಿದರು. ಅದನ್ನು ವರದಿಯಲ್ಲಿ ಸ್ಪಷ್ಟವಾಗಿ ನಮೂದಿಸಿದ್ದಾರೆ. ಕಾರಣವೇ ಅವರು, ಹೆಚ್ಚು ಸ್ವಯಂಪೂರ್ಣವಾದುದೆಂದು ಮತ್ತು ಹೆಚ್ಚು ತರ್ಕಸಂಗತವಾದುದೆಂದು ತಾವು ಭಾವಿಸುವಂಥ ಒಂದು ಹಿಂದೂ ಕೋಡ್‌ಅನ್ನು ತಯಾರಿಸಿದರು. ರಾವ್ ಸಮಿತಿಯ ಪ್ರತ್ಯೇಕ ಅಧಿನಿಯಮಿಗಳು ಮತ್ತು ಅನಂತರ ಅವುಗಳ ಕ್ರೋಡೀಕರಣದ ಉದ್ದೇಶವನ್ನು ಸಂಪೂರ್ಣವಾಗಿ ಕಡೆಗಣಿಸಿದಂತಾಯಿತು (ತಪ್ಪಿಸಿಕೊಂಡಂತಾಯಿತು).

ಈ ಸಂಬಂಧದಲ್ಲಿ ನಾನು ತೆಗೆದುಕೊಳ್ಳಬಯಸುವ ಮೊದಲನೆಯ ಅಂಶ ಎಂದರೆ, ವಿಧಿಮಂತ್ರಾಲಯವು ನೇಮಿಸಿದ ಇಲಾಖಾ ಸಮಿತಿಯು ಮಾಡಿದ ಬದಲಾವಣೆಗಳು, ಮೂಲ ವಿಧೇಯಕದ ಅಥವಾ ವಿಭಿನ್ನ ವಿಧೇಯಕಗಳ ಉದ್ದೇಶವನ್ನು ಮೀರಿ ಹೋದವು. ವಾಸ್ತವವಾಗಿ, ಮೂಲ ವಿಧೇಯಕದ ವಿಭಿನ್ನ ಭಾಗಗಳನ್ನು ಒಂದು ಪೂರ್ಣದಲ್ಲಿ ಸಮ್ಮಿಲನಗೊಳಿಸುವ ವಿಚಾರವೇ ಅನೇಕ ತೊಂದರೆಗಳಿಗೆ ಎಡೆಮಾಡಿಕೊಟ್ಟಿದೆ, ಮಾತ್ರವಲ್ಲದೆ ಗೊಂದಲವನ್ನು ಇನ್ನಷ್ಟು ಗೋಜಲುಗೊಳಿಸಿದೆ. ರಾವ್ ಸಮಿತಿಯು ಸಲಹೆ ನೀಡಿದ ಪ್ರಕಾರ ಪ್ರತ್ಯೇಕ ಭಾಗಗಳನ್ನು ಪ್ರತ್ಯೇಕವಾಗಿ ತೀರ್ಣಗೊಳಿಸಿಕೊಳ್ಳುವುದು ಉತ್ತಮವಾಗುತ್ತಿತ್ತು. ಯಾಕೆಂದರೆ, ಆ ಮೂಲಕ ಆಕ್ಷೇಪಣೆಯು ಕನಿಷ್ಠತಮ ಆಗುತ್ತಿತ್ತು. ಸದನ ಮತ್ತು ದೇಶದ ಇವೆರಡೂ ಇಡೀ ಹಿಂದೂ ಕಾನೂನಿನ ಸಂಬಂಧದಲ್ಲಿ ಸಮಗ್ರ ದರ್ಶನವನ್ನು ಹೊಂದಿದ್ದಾಗ್ಯೂ, ಆ ಪ್ರತ್ಯೇಕ ವಿಷಯಗಳತ್ತ ಅವುಗಳ ಗಮನವನ್ನು ಕೇಂದ್ರೀಕರಿಸಲು ಅನುಕೂಲ ಆಗುತ್ತಿತ್ತು. ಈಗ ವಿಭಿನ್ನ ಭಾಗಗಳನ್ನು ಅಥವಾ ವಿಧೇಯಕಗಳನ್ನು ಅನುಕ್ರಮ ಸಂಖ್ಯೆಗಳುಳ್ಳ ಒಂದು ಪೂರ್ಣದಲ್ಲಿ ಸಮ್ಮಿಲನಗೊಳಿಸಿದ್ದು ನಮ್ಮನ್ನು ಈ ತೊಂದರೆಗಳಿಗೆ ಗುರಿಪಡಿಸಿದೆ ಮತ್ತು ಆಯ್ಕೆ ಸಮಿತಿಯಿಂದ ಹೊರ ಹೊಮ್ಮಿರುವ ಈ ಕ್ರೋಡೀಕೃತ ವಿಧೇಯಕಕ್ಕೆ ಈವರೆಗೆ ಭಾಷಣ ಮಾಡಿದವರ ಪೈಕಿ ಯಾರೊಬ್ಬ ಸದಸ್ಯನೂ ಸಹ ಪೂರ್ಣವಾಗಿ ತನ್ನ ಬೆಂಬಲವನ್ನು ವ್ಯಕ್ತಪಡಿಸಿಲ್ಲ. ಕೆಲವು ಸದಸ್ಯರು ವಿವಾಹಕ್ಕೆ ಸಂಬಂಧಪಟ್ಟ ಉಪಬಂಧಗಳ ಪರವಾಗಿ ಇದ್ದಾರೆ. ಇತರರು ವಾರಸಾ ಹಕ್ಕಿನ ಪರವಾಗಿ ಇದ್ದಾರೆ. ಪಾಲಕತ್ವ ಮತ್ತು ಇತರ ವಿಷಯಗಳ ಸಂಬಂಧದಲ್ಲಿ ಆಕ್ಷೇಪಣೆ ಕನಿಷ್ಠತಮ (ಅತ್ಯಂತ ಕಡಿಮೆಯ). ಮೂಲದ ವ್ಯವಸ್ಥೆಯಲಿ ಇದ್ದಂತೆ ಪ್ರತ್ಯೇಕ ವಿಧೇಯಕಗಳು ಇದ್ದ ಪಕ್ಷದಲ್ಲಿ ವ್ಯವಹಾರ ಸರಳವಾಗುತ್ತಿತ್ತಲ್ಲದೆ ನಮ್ಮ ತೊಂದರೆಗಳು ಸಹ ಕಡಿಮೆಯಾಗುತ್ತಿದ್ದವು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** : ನಿರ್ವಹಣಾ ಭಾಗ ಅತಿ ಉತ್ತಮ, ಉಳಿದುದೆಲ್ಲ ಗಲೀಜು.

**ಮಿ। ನಝೀರುದ್ದೀನ್ ಅಹಮ್ಮದ್** : ನಿರ್ವಹಣಾ ಭಾಗ, ಪಂಡಿತ ಮೈತ್ರಾ ಅವರು ನಮಗೆ ನೆನಪಿಸುವಂತೆ, ಅತ್ಯಂತ ಕಡಿಮೆ ಆಕ್ಷೇಪಣೆಗೆ ಗುರಿಯಾಗಿದೆ. ಆದ್ದರಿಂದ ಈ ಭಾಗಗಳನ್ನು ಬೇರೆ ಬೇರೆ ಆಗಿ ಇಟ್ಟಿದ್ದರೆ, ಸದನಕ್ಕೆ ಪ್ರತ್ಯೇಕ ವಿಷಯಗಳನ್ನು ಪರ್ಯಾಲೋಚಿಸಲು ಅನುಕೂಲ ಆಗುತ್ತಿತ್ತು. ನಿರ್ವಾಹಕ ಭಾಗ ವಿವಾದಾಸ್ಪದ ಅಲ್ಲ. ಅದು ಸಮಾಜದ ಧಾರ್ಮಿಕ ಸಂರಚನೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವುದಿಲ್ಲ. ಅದು ಹಿಂದೂಗಳ ಧಾರ್ಮಿಕ ಭಾವನೆಗಳನ್ನು ಮತ್ತು ಪುರಾತನ ನಂಬಿಕೆಗಳನ್ನು ನೋಯಿಸುವುದಿಲ್ಲ – ಹಾಗಾಗಿ, ಆ ಭಾಗವನ್ನು ಒಡನೆಯೇ ತೀರ್ಣಗೊಳಿಸಲು ಸಾಧ್ಯವಾಗುತ್ತಿತ್ತು. ಪ್ರತ್ಯೇಕವಾಗಿ ವ್ಯವಹರಿಸಲು ಅದೇ ಕಾರಣ. ಆದರೆ ಇಲಾಖಾ ಸಮಿತಿಯು ಪ್ರತ್ಯೇಕ ವ್ಯವಹಾರದ

ಉದ್ದೇಶವನ್ನು ತಿಳಿದುಕೊಳ್ಳಲಿಲ್ಲ ಮತ್ತು ಇಡೀ ಸಾಮಗ್ರಿಯನ್ನು ಒಂದು ಪೂರ್ಣದಲ್ಲಿ ಸಮ್ಮಿಲನಗೊಳಿಸಿತು.

ಸ್ವಾಮೀ, ಎರಡನೆಯ ರಾವ್ ಸಮಿತಿಯ ವರದಿಯಲ್ಲಿ ಸಹ ವಿಧೇಯಕವನ್ನು ಪ್ರತ್ಯೇಕ ವಿಭಾಗಗಳಲ್ಲಿ ತಯಾರಿಸಲಾಯಿತು ಮತ್ತು ಅವರು ಅವುಗಳನ್ನು ಪ್ರತ್ಯೇಕವಾಗಿ ವ್ಯವಹರಿಸಬೇಕು ಎಂಬ ತಮ್ಮ ಸಲಹೆಯನ್ನು ಪುನಃ ಉಚ್ಚರಿಸಿದರು. ವಿಧೇಯಕವನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳಬೇಕು ಎಂದು ಉದ್ದೇಶಿಸಲಾಗಿತ್ತು ಮತ್ತು ಆಕಾರಣ ಬೇರೆ ಬೇರೆಯಾಗಿ ತೆಗೆದುಕೊಳ್ಳತಕ್ಕದ್ದು.

**ಮಿ। ತಾಜಾಮುಲ್ ಹುಸೇನ್ :** ನೀವು ಹಾಗೆ ಅರ್ಥವಾಗುವ ತಿದ್ದುಪಡಿಗಳನ್ನು ಏಕೆ ತರುತ್ತಿಲ್ಲ?

**ಮಿ। ನಝೀರುದ್ದೀನ್ ಅಹಮ್ಮದ್** : ನನ್ನ ಮಾನ್ಯ ಸ್ನೇಹಿತರು ತಮ್ಮ ಈ ಅಡ್ಡಿಯ ಮೂಲಕ ಹೀಗೆ ಅರ್ಥವಾಗುವ ಹಾಗೆ ನನಗೆ ಹೇಳುವಂತಿದೆ. "ನಾನು ವಸ್ತುಗಳನ್ನು ಹೇಗೆ ಬೇಕಾದರೂ ಮಿಶ್ರಣ ಮಾಡುತ್ತೇನೆ. ಈಗ ಅವುಗಳನ್ನು ಪ್ರತ್ಯೇಕಗೊಳಿಸುವ ಹೊಣೆ ನಿಮಗೆ ಸೇರಿದ್ದು" ಅದು ಅಸಾಧ್ಯ, ನೀವು ಮಾಂಸ, ಮೀನು ಮತ್ತು ತರಕಾರಿ ಇವುಗಳನ್ನು ಒಟ್ಟಿಗೆ ಬೇಯಿಸಿ ಒಬ್ಬ ಶಾಕಾಹಾರಿಗೆ ಅದನ್ನು ಒಂದು ತಿದ್ದುಪಡಿ ಮೂಲಕ ಪ್ರತ್ಯೇಕಿಸುವಂತೆ ಹೇಳಿದರೆ ಮತ್ತು ತರಕಾರಿಗಳನ್ನೇ ಪ್ರತ್ಯೇಕವಾಗಿ ತೆಗೆದುಕೊಳ್ಳುವಂತೆ ಹೇಳಿದರೆ ಮುಂಚೆ ಮಾಡುವ ಕೆಲಸವನ್ನು ಆಮೇಲೆ ಮಾಡಿದಂತೆ ಆಗುತ್ತದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ಇಲ್ಲ ಇಲ್ಲ. ಪ್ರತ್ಯೇಕ ಅಧ್ಯಾಯಗಳು ಇವೆ.

**ಸ್ಪೀಕರ್** : ಮಾನ್ಯ ಸದಸ್ಯರು ತಮ್ಮವೇ ಆದ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುತ್ತಿದ್ದಾರೆ. ಇತರ ಸದಸ್ಯರಿಗೆ ತಮ್ಮವೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ದೊರೆಯುತ್ತದೆ. ಬೇರೆಯವರಿಗೆ ಅಡ್ಡಿ ಮಾಡುವುದೇಕೆ? ಅದರಿಂದ ಮಾತು ಬೆಳೆಯುತ್ತ ಹೋಗುತ್ತದೆ.

**ಮಿ। ನಝೀರುದ್ದೀನ್ ಅಹಮ್ಮದ್** : ಒಂದು ಭಾಗದ ಪ್ರಕರಣಗಳನ್ನು ಅಲ್ಲಿಂದ ಎತ್ತಿ, ಇನ್ನೊಂದು ಭಾಗದಲ್ಲಿ ಇಡಲಾಗಿದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ಕ್ರಿಯಾಲೋಪವನ್ನೆತ್ತಿ ಹೇಳುತ್ತೇನೆ. ನಾನು ನನ್ನ ಸ್ನೇಹಿತರು ವಿಭಿನ್ನ ಅಧ್ಯಾಯಗಳನ್ನು ಮಿಶ್ರ ಮಾಡಲಾಗಿದೆಯೆಂದು ಹೇಳಿರುವಾಗ ಆ ಹೇಳಿಕೆಯು ತಪ್ಪಾಗಿದ್ದರೆ ಅದನ್ನು ಸರಿಪಡಿಸಲು ನನಗೆ ಹಕ್ಕು ಇಲ್ಲವೆ?

**ಸ್ಪೀಕರ್ :** ಹಾಗೆ ಅದನ್ನು ಪುನಃ ಸರಿಪಡಿಸಲು ಹಕ್ಕು ಪಡೆಯಬೇಕಾಗಬಹುದು. ನಡುನಡುವೆ ಅಡ್ಡಿಪಡಿಸಬಾರದು. ನಾವು ಅನಗತ್ಯವಾಗಿ ಸಹನೆ ಕಳೆದುಕೊಳ್ಳುತ್ತಿದ್ದೇವೆಂದು ನನ್ನ ಭಾವನೆ. ವಿಧೇಯಕದ ಬಗೆಗೆ ನಮ್ಮ ಅಭಿಪ್ರಾಯಗಳು ಏನೇ ಇರಲಿ, ಪರವಾಗಿರಲಿ ವಿರೋಧವಾಗಿರಲಿ, ನಾವು ವಿರೋಧಿಯ ಮಾತಿಗೆ ಸಹನಶೀಲರಾಗಿ ಕಿವಿಗೊಡಬೇಕು ಮತ್ತು ಅವನ ಆಭಿಪ್ರಾಯಗಳನ್ನು ಅರಿತುಕೊಳ್ಳಲು ಪ್ರಯತ್ನಿಸಬೇಕು. ನಾನು ಪ್ರತಿಯೊಬ್ಬರಿಗೂ ಪೂರ್ಣ ಅವಕಾಶವನ್ನು ಕೊಡುತ್ತೇನೆ. ಆದ್ದರಿಂದ ನಡುನಡುವೆ ಅಡ್ಡಿ ಆತಂಕಗಳು ಬೇಡ.

**ಮಿ। ನಝೀರುದ್ದೀನ್ ಅಹಮ್ಮದ್** : ಈ ನಿರ್ದೇಶನಕ್ಕಾಗಿ ತುಂಬ ಕೃತಜ್ಞನು. ನನ್ನ ವಾದವೆಂದರೆ, ಪ್ರತಿಯೊಂದು ಭಾಗದಲ್ಲಿರುವ ಪರಿಭಾಷೆಗಳು ಮತ್ತು ಇತರ ವಿಷಯಗಳು ಸಂಪೂರ್ಣವಾಗಿ ಪ್ರತ್ಯೇಕವಾಗಿದ್ದುವು. ಯಾರಿಗಾದರೂ ಸಹನೆ ಇದ್ದರೆ, ಅವರು ಶ್ರೀ ಜೋಗೇಂದ್ರನಾಥ ಮಂಡಲ ಅವರು ಸದನಕ್ಕೆ ಸಾದರಪಡಿಸಿದ ಮೂಲ ವಿಧೇಯಕವನ್ನು ಪರಿಷ್ಕೃತ ವಿಧೇಯಕದೊಡನೆ ಹೋಲಿಸಿ ನೋಡಿದರೆ ಅವರಿಗೆ ವ್ಯತ್ಯಾಸವು ಗೊತ್ತಾಗುತ್ತದೆ.

**ಒಬ್ಬ ಮಾನ್ಯ ಸದಸ್ಯರು** : ಜೋಗೇಂದ್ರನಾಥ ಮಂಡಲ ಯಾರು?

**ಮಿ। ನಝೀರುದ್ದೀನ್ ಅಹಮ್ಮದ್** : ಅವರು ಹಿಂದಿನ ಕಾನೂನು ಮಂತ್ರಿಗಳು. ಅವರು ಮಂಡಿಸಿದ ಹಳೆಯ ವಿಧೇಯಕದೊಡನೆ ಪ್ರಸ್ತುತ ವಿಧೇಯಕವನ್ನು ಯಾರಾದರೂ ಹೋಲಿಸಿ ನೋಡಿದರೆ, ಒಂದು ಭಾಗದ ತುಂಡುಗಳನ್ನು ಇನ್ನೊಂದು ಭಾಗಕ್ಕೆ ಹಾಗೆಯೇ ಸಾಗಿಸಿ ಸೇರಿಸಿರುವುದನ್ನು ಕಾಣಲು ಸುಲಭವಾಗುತ್ತದೆ. ಈ ಕಾಯ್ದೆಯು (ಅಧಿನಿಯಮವು) ಶುದ್ಧ ಸದ್‌ಭಾವನೆಯಿಂದ ಮಂಡಿಸಲಾದ ಕಾಯ್ದೆ ಎಂದು ನನ್ನ ಭಾವನೆ. ಆದರೆ ಅದು ವಿಷಯಗಳ ಪ್ರತ್ಯೇಕ ಉಪಚಾರದ ಉದ್ದೇಶವನ್ನು ಸಂಪೂರ್ಣವಾದ ತಿಳಿವಳಿಕೆಯನ್ನು ಆಧರಿಸಿರಲಿಲ್ಲ ಎಂದು ತೋರುತ್ತದೆ. ವಾಸ್ತವವಾಗಿ ಆಯ್ಕೆ ಸಮಿತಿಗೆ ವಿಧಿಮಂತ್ರಾಲಯವು ಒಂದು ಪುನಃ ಪ್ರಾರೂಪಣ ಮಾಡಿದ ವಿಧೇಯಕವನ್ನು ಒದಗಿಸಿತ್ತು. ಆ ಮೂಲಕ ಆಯ್ಕೆ ಸಮಿತಿಯವರಿಗೆ ಖಂಡಿತವಾಗಿಯೂ ದಾರಿ ತಪ್ಪಿಸುವ ಸಂಭವಕ್ಕೆ ಕಾರಣ ಎಂದು ನಾನು ನಿವೇದಿಸುತ್ತೇನೆ. ಇದೇ ದಸ್ತಾವೇಜನ್ನೇ ೧೯೪೮ರ ಜುಲೈ ೧೭ನೇ ತಾರೀಖಿನಂದು ಮುದ್ರಿಸಿದ್ದು. ಆಯ್ಕೆ ಸಮಿತಿಯು ಸಭೆ ಸೇರುವ ಮುನ್ನವೇ ಅದರ ಸುಲಭ ಬಳಕೆಗಾಗಿ ಅದನ್ನು ರೆಡಿಮೇಡ್ ಆಗಿ ಸಿದ್ಧಗೊಳಿಸಲಾಗಿತ್ತು ಮತ್ತು ಆಯ್ಕೆ ಸಮಿತಿಗೆ ಈ ಇಲಾಖಾ ವಿಧೇಯಕದಲ್ಲಿ ಕ್ರಮಾಂತರವನ್ನು ಮಾಡಲಾಗಿದೆ ಎಂದರೆ ವಿಭಿನ್ನ ಭಾಗಗಳನ್ನು ಒಂದೊಂದು ಪೂರ್ಣವಾಗಿ ಇರುವಂತೆ ಮತ್ತು ಆ ವಿಭಿನ್ನ ಭಾಗಗಳನ್ನು ಪುನಃ ಅದೇ ಮೂಲ ರೂಪದಲ್ಲಿ ಪ್ರತ್ಯೇಕಿಸಲು ಸಾಧ್ಯವಾಗದ ಹಾಗೆ ಒಂದೇ ಪೂರ್ಣವಾಗಿ ಇರುವಂತೆ ಸಮ್ಮಿಲನ ಮಾಡಲಾಗಿದೆ ಎಂದು ತಿಳಿಸಿರುವೆನಷ್ಟೆ. ಪ್ರತ್ಯೇಕೀಕರಣ ಕೆಲಸವನ್ನು ಸಂಶೋಧನ ವಿದ್ಯಾರ್ಥಿಯು ಮಾಡಬಹುದೇ ಹೊರತು, ಅಂಥ ಪ್ರವೃತ್ತಿ ಅಥವಾ ಮನೋವೃತ್ತಿಗಳಿಲ್ಲದ ಈ ಸದನದ ಸದಸ್ಯರು ಮಾಡುವ ಕೆಲಸವಲ್ಲ. ಆದ್ದರಿಂದ ನಾನು ನಿವೇದಿಸುವುದೇನೆಂದರೆ ಸಂಪೂರ್ಣವಾಗಿ ವಿಭಿನ್ನವಾದ ವಿಷಯಗಳನ್ನು ಸಮ್ಮಿಶ್ರಣಗೊಳಿಸಿದ್ದು ಇಲಾಖಾ ಸಮಿತಿಯು ಮಾಡಿದ ಮೊದಲನೆಯ ತಪ್ಪು. ಈ ಮೂಲಕ ಪ್ರಾರಂಭವಾಗುತ್ತದೆ ಗಂಭೀರವಾದ ಮತ್ತು ಈವರೆಗೂ ಇಲ್ಲದ ಒಂದು ವಿನೂತನ ಸಂವೈಧಾನಿಕ ಕ್ರಮ.

ಸ್ವಾಮೀ, ಇಷ್ಟೇ ಅಲ್ಲದೆ ಇಲಾಖಾ ಸಮಿತಿಯು ತನ್ನ ಇಲಾಖಾ ವಿಧೇಯಕದಲ್ಲಿ ಅನೇಕ ಗಂಭೀರ ಬದಲಾವಣೆಗಳನ್ನು ಮಾಡಿದೆ. ಆಯ್ಕೆ ಸಮಿತಿಯ ವ್ಯವಹರಣೆಗಳ ಮೇಲೆ ಈ ಇಲಾಖಾ ವಿಧೇಯಕದ ಮೇಲೆ ಆಗುವ ನಿಲುವು ಮತ್ತು ಪರಿಣಾಮಗಳ ಮೂಲಕ ಈ ಬದಲಾವಣೆಗಳ ಮಹತ್ವವು ಗಮನಕ್ಕೆ ಬರಬಹುದು. ಇಲಾಖಾ ವಿಧೇಯಕವು, ನಾನೀಗ ತೋರಿಸಿಕೊಡಲು ಪ್ರಯತ್ನಿಸುವ ಹಾಗೆ ಅನೇಕ ಮಹತ್ವಪೂರ್ಣ ಬದಲಾವಣೆಗಳನ್ನು ಮಾಡಿದ್ದುಂಟು. ಆದಾಗ್ಯೂ, ಕಾನೂನು ಇಲಾಖೆಯ ಮಾನ್ಯ ಮಂತ್ರಿಗಳಾಗಲಿ, ಆಯ್ಕೆ ಸಮಿತಿಯ ಸದಸ್ಯರುಗಳಾಗಲಿ, ಹೀಗೆ ಮಾಡಲಾದ ಬದಲಾವಣೆಗಳ ಗಾಂಭೀರ್ಯವನ್ನು, ತೀವ್ರತೆಯನ್ನು ಅರಿತುಕೊಂಡ ಹಾಗೆ ತೋರುವುದಿಲ್ಲ. ವಾಸ್ತವವಾಗಿ, ಮಾನ್ಯ ಕಾನೂನು ಮಂತ್ರಿಗಳೂ ಕಳೆದ ಸಂದರ್ಭದಲ್ಲಿ, ಅಂದರೆ ಈ ಅಧಿವೇಶನದ ಕಳೆದ ಸಂದರ್ಭದಲ್ಲಿ ವಿಧೇಯಕದ ಪರ್ಯಾಲೋಚನೆ ಕೋರುವ ಪ್ರಸ್ತಾವದ ಸಮರ್ಥನೆಯಲ್ಲಿ ಮಾತನಾಡುತ್ತಿದ್ದಾಗ, ವಿಧೇಯಕದಲ್ಲಿ ಮಾಡಲಾದ ಮಹತ್ವಪೂರ್ಣ ಬದಲಾವಣೆಗಳನ್ನು ತೋರಿಸಿಕೊಟ್ಟರು. ಆದರೆ ಮಾಡಲಾದ ಎಲ್ಲ ಬದಲಾವಣೆಗಳನ್ನು ಆಯ್ಕೆ ಸಮಿತಿಯವರು ಮಾಡಿದರು ಎಂದು ಹೇಳಲು ಎಚ್ಚರಿಕೆ ವಹಿಸಿದ್ದರು. ನಾನು ಅವರ ಭಾಷಣದ ಬಗ್ಗೆ ಎಚ್ಚರಿಕೆ ವಹಿಸಿ ಟಿಪ್ಪಣಿ ಬರೆದುಕೊಂಡಿದ್ದೇನೆ. ಅವುಗಳನ್ನು ಅಧಿಕಾರಿಕ (ಸರ್ಕಾರ) ವರದಿಗಳಿಗೆ ಹೋಲಿಸಿ ನೋಡಬಹುದು. ಅವರು ಪ್ರಶಂಸನೀಯವಾದ ತಲಸ್ಪರ್ಶಿ ವಿಶ್ಲೇಷಣೆಯ ಮೂಲಕ ಮೂಲ ಜೋಗೇಂದ್ರನಾಥ ಮಂಡಲ ಅವರ ವಿಧೇಯಕಕ್ಕೆ ಭಿನ್ನವಾಗಿ ಅಂತಿಮ ವಿಧೇಯಕದಲ್ಲಿ ಮಾಡಲಾದ ವಿಷಯಾಂತರವನ್ನು ತೋರಿಸಿಕೊಟ್ಟರು. ಇದರಿಂದಾಗಿ, ಆಯ್ಕೆ ಸಮಿತಿಗೆ ಒದಗಿಸಲಾದ ತಥಾಕಥಿತ

ವಿಧೇಯಕದಲ್ಲಿ ತಮ್ಮ ಇಲಾಖೆಯು ಮಾಡಿದ ಗಂಭೀರ ಬದಲಾವಣೆಗಳು ಮಾನ್ಯ ಕಾನೂನು ಮಂತ್ರಿಗಳಿಗೆ ಗೊತ್ತಿರಲಿಲ್ಲ ಎಂದು ಅರ್ಥವಾಗುತ್ತದೆ. ವಾಸ್ತವವಾಗಿ, ಇಲಾಖಾ ಸಮಿತಿಗೆ ಮಹತ್ವಪೂರ್ಣ ಬದಲಾವಣೆಗಳನ್ನು ಮಾಡಲು ಅಧಿಕಾರವನ್ನು ಕೊಡಲಾಗಿತ್ತೆ ಎಂದು ಮಾನ್ಯ ಮಂತ್ರಿಗಳನ್ನು ಸಂಕ್ಷಿಪ್ತ ಸೂಚನಾ ಪ್ರಶ್ನೆಯ ಮೂಲಕ ಕೇಳಿದೆನು. ಅದಕ್ಕೆ ಅವರ ಉತ್ತರವೆಂದರೆ, ಇಲಾಖಾ ಸಮಿತಿಗೆ ಅಂಥ ಆಧಿಕಾರ ಏನೂ ಇಲ್ಲ ಎಂದು. ಇನ್ನೊಂದು ಕಡೆ ಕಾನೂನು ಮಂತ್ರಿಗಳು ಬದಲಾವಣೆಗಳು ಏನಾದರೂ ಮಾಡಿದ್ದರೆ ಆ ಸಂಬಂಧದಲ್ಲಿ ಪೂರ್ಣ ಹೊಣೆಯನ್ನು ತಾವೇ ವಹಿಸಿಕೊಂಡರು. ಪೂರಕ ಪ್ರಶ್ನೆಯನ್ನು ಕೇಳಿದ ಶ್ರೀ ರಾಮನಾರಾಯಣ ಸಿಂಗ್ ಅವರಿಗೆ ಕಾನೂನು ಮಂತ್ರಿಗಳು ಕೊಟ್ಟ ಉತ್ತರ ಹೀಗೆ – ನಾನು ಯಾವುದೇ ಬದಲಾವಣೆಗಳನ್ನು ಸೇರಿಸಲಿಲ್ಲ. ವಾಸ್ತವವಾಗಿ, ಪ್ರಶ್ನೆಯೆಂದರೆ ಇಲಾಖಾ ವಿಧೇಯಕವು ಮಹತ್ವಪೂರ್ಣ ಬದಲಾವಣೆಗಳನ್ನೇನಾದರೂ ಮಾಡಿದೆಯೆ ಹೇಗೆ ಮತ್ತು ಅವರು ಅತ್ಯಂತ ಸ್ಪಷ್ಟವಾಗಿ ಹೇಳಿದ್ದೇನೆಂದರೆ ಆಯ್ಕೆ ಸಮಿತಿಯು ಮಾತ್ರ ಅಂಥ ಬದಲಾವಣೆಗಳನ್ನು ಮಾಡಿದೆ. ಆಯ್ಕೆ ಸಮಿತಿಯೇ ಬದಲಾವಣೆಗಳನ್ನು ಬದಲಾವಣೆಗಳನ್ನು ಮಾಡಿಕೊಂಡು ಮತ್ತು ಇಲಾಖಾ ಸಮಿತಿಯು ಯಾವುದೇ ಮಹತ್ವಪೂರ್ಣ ಬದಲಾವಣೆಗಳನ್ನು ಮಾಡಲಿಲ್ಲ ಎಂಬುದಾಗಿ ಅಭಿಪ್ರಾಯಪಟ್ಟಿರುವ ಹಾಗೆ ತೋರುತ್ತದೆ. ಕಳೆದ ಸಂದರ್ಭದಲ್ಲಿ ನಾನು ಮಾತನಾಡಲು ಎದ್ದು ನಿಂತಾಗ, ಇಲಾಖಾ ಸಮಿತಿಯು ಮಾಡಿದ ಬದಲಾವಣೆಗಳೇನು ಎಂದು ತೋರಿಸಿಕೊಡುವಂತೆ ಪುನಃ ಪುನಃ ನನ್ನನ್ನು ಕೇಳಲಾಯಿತು. ನಾನು ಇದನ್ನು ಉಲ್ಲೇಖಿಸಬೇಕಾದುದು ಅಗತ್ಯ. ಯಾಕೆಂದರೆ ಆಯ್ಕೆ ಸಮಿತಿಯ ಸದಸ್ಯರಿಗೇ ಆಗಲಿ ಅಥವಾ ಈ ಸದನಕ್ಕೇ ಆಗಲಿ ಅಥವಾ ಮಾನ್ಯ ಕಾನೂನು ಮಂತ್ರಿಗಳಿಗೇ ಆಗಲಿ ವಾಸ್ತವವಾಗಿ ಮಾಡಲಾದ ಯಾವುದೇ ಮಹತ್ವಪೂರ್ಣ ಬದಲಾವಣೆಗಳ ಬಗ್ಗೆ ಏನೂ ಗೊತ್ತಿರಲಿಲ್ಲ ಎಂದು ತೋರುತ್ತದೆ. ಆದ್ದರಿಂದ ನಾನು ನಿವೇದಿಸುವುದೇನೆಂದರೆ ಇಲಾಖಾ ಸಮಿತಿಯು ಮಹತ್ವಪೂರ್ಣ ಬದಲಾವಣೆಗಳನ್ನು ಮಾಡಿದೆಯೆಂದು ಮತ್ತು ಆಯ್ಕೆ ಸಮಿತಿಯು ಕ್ವಚಿತ್ತಾಗಿ ಮಾಡಿದೆಯೆಂದು ತೋರಿಸಿಕೊಟ್ಟರೆ ಆ ಮೂಲಕ ಸದನದ ಸಮ್ಮುಖದಲ್ಲಿ ಮಹತ್ವಪೂರ್ಣ ವಿಚಾರಗಳನ್ನು ವಿಶ್ಲೇಷಿಸಲು ಅವಕಾಶ ಮಾಡಿಕೊಡಬಹುದು. ಆಯ್ಕೆ ಸಮಿತಿಯವರಿಗೆ ಹೊಸದೊಂದು ಪೂರ್ಣ ಸಿದ್ಧ ವಿಧೇಯಕವನ್ನು ಒದಗಿಸಲಾಯಿತು ಮತ್ತು ಆಯ್ಕೆ ಸಮಿತಿಯ ವರದಿಯ ಭರವಸೆಯ ಪ್ರಕಾರ ಅದರಲ್ಲಿ ಯಾವುದೇ ಮಹತ್ವಪೂರ್ಣ ಬದಲಾವಣೆಗಳು ಇಲ್ಲ ಮತ್ತು ಮಾಡಲಾದ ಬದಲಾವಣೆಗಳು ಎಂದರೆ ಖಂಡಗಳ ಅನುಕ್ರಮ ವ್ಯವಸ್ಥೆ, ಅವುಗಳಿಗೆ ಹೊಸ ಸಂಖ್ಯೆಗಳನ್ನು ಕೊಡುವುದು ಮತ್ತು ಇತರ ಕರಡು ಸ್ವರೂಪದ ಔಪಚಾರಿಕ ಬದಲಾವಣೆಗಳು ಮಾತ್ರ. ಇದು ಆಯ್ಕೆ ಸಮಿತಿಯ ವರದಿಯಲ್ಲಿ ನಮಗೆ ಸಿಕ್ಕ ಭರವಸೆ. ಆದ್ದರಿಂದ ಆ ಮಹತ್ವಪೂರ್ಣ ಬದಲಾವಣೆಗಳನ್ನು ಇಲಾಖಾ ಸಮಿತಿಯು ಮಾಡಿತು ಎಂದು ತೋರಿಸಿಕೊಡಲು ಇಷ್ಟಪಡುತ್ತೇನೆ. ಬದಲಾವಣೆಗಳನ್ನು ಪತ್ತೆ ಹಚ್ಚುವುದು (ಕಂಡುಹಿಡಿಯುವುದು) ಅಷ್ಟೊಂದು ಸುಲಭದ ಕೆಲಸವಲ್ಲ. ಅವುಗಳನ್ನು ಗಮನಿಸಿ ಗುರುತು ಹಿಡಿಯಲು ತಪ್ಪಿದ್ದಕ್ಕೆ ನಾನು ಯಾರೇ ಮಾನ್ಯ ಮಂತ್ರಿಗಳನ್ನು ದೂಷಿಸಲಾರೆನು. ನಾನು ಮೂರೂ ವಿಧೇಯಕಗಳನ್ನು ಒಂದರ ಪಕ್ಕದಲ್ಲಿ ಒಂದನ್ನು ಇಟ್ಟು ಸಂಖ್ಯೆಗಳದು ಅಷ್ಟೇ ಅಲ್ಲ, ಅವುಗಳ ಖಂಡ ಮತ್ತು ಉಪಖಂಡಗಳ ತುಲನಾತ್ಮಕ ಚಾರ್ಟ್ ಅನ್ನು ತಯಾರಿಸಿಕೊಳ್ಳಬೇಕಾಯಿತು. ನಾನು ಇಲಾಖಾ ವಿಧೇಯಕದ ಒಂದು ಪ್ರತಿ ಕೊಡಬೇಕಾಗಿ ವಿನಂತಿ ಮಾಡಿಕೊಂಡೆ. ಅದನ್ನು ನನಗೆ ಒದಗಿಸಲಿಲ್ಲ. ಸ್ವಾಮಿ, ನನ್ನ ನಿವೇದನೆಯೆಂದರೆ ಈ ಇಲಾಖಾ ವಿಧೇಯಕವು ಮಹತ್ವದ ದಸ್ತಾವೇಜು. ಅದನ್ನು ಎಲ್ಲ ಸದಸ್ಯರಿಗೂ ಸರಬರಾಜು ಮಾಡಬೇಕು. ಆಯ್ಕೆ ಸಮಿತಿಯ ಮುಂದೆ ನೀಡಲಾದ ಸಾಕ್ಷಿದಾರರ ಸಾಕ್ಷ್ಯಗಳ ವರದಿಯನ್ನು ನಮಗೆ ಒದಗಿಸಲಾಗಿದೆ. ಆದರೆ ಅಂತಿಮ

ವಿಧೇಯಕದ ಕರಡು ಪ್ರತಿಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ ಅತ್ಯಂತ ಮಹತ್ವದ ದಸ್ತಾವೇಜನ್ನು ನಮಗೆ ಸರಬರಾಜು ಮಾಡಿಲ್ಲ. ನಾನು ಭಾರೀ ಶ್ರಮವಹಿಸಿ ಒಂದು ಪ್ರತಿಯನ್ನು ದೊರಕಿಸಿಕೊಂಡೆನು. ಇಲಾಖೆಯ ಮೂಲಕವಲ್ಲ, ಮಾನ್ಯ ಸದಸ್ಯರೊಬ್ಬರ ಸೌಜನ್ಯದ ಮೂಲಕ. ಸ್ವಾಮೀ, ನಾನು ಆಮೇಲೆ, ಮೂಲ ವಿಧೇಯಕ ಮತ್ತು ಇಲಾಖಾ ವಿಧೇಯಕ ಹಾಗೂ ಅಂತಿಮ ವಿಧೇಯಕ ಇವುಗಳ ಸಮುಚಿತ ಉಪಬಂಧಗಳ ಸಮಾಂತರ ಅಂಕಣಗಳಲ್ಲಿ ತುಲನಾತ್ಮಕ ವಿವರಣೆಯನ್ನು ತಯಾರಿಸಿದೆನು. ತುಲನಾತ್ಮಕ ಚಾರ್ಟ್‌ನ್ನು ಉಲ್ಲೇಖ ಮಾಡದ ಹೊರತು ಬದಲಾವಣೆಗಳ ನಿಜವಾದ ಮಹತ್ವವನ್ನು ಕುರಿತು ವಿವರಣೆ ಮಾಡುವುದು ಅತ್ಯಂತ ಕಠಿಣವಾದ ಕೆಲಸವೆಂದು ನನ್ನ ಅನಿಸಿಕೆ.

ನಾನು ವಿಧೇಯಕಗಳನ್ನು ಸಮಾಂತರ ಅಂಕಣಗಳಲ್ಲಿ ಮುದ್ರಿಸಿಕೊಳ್ಳಲು ಪ್ರಯತ್ನ ನಡೆಸಿದ್ದೇನೆ. ಕೆಲಸ ಇನ್ನು ಪೂರೈಸಿಲ್ಲ, ಹೀಗಾಗಿ ಮಾನ್ಯ ಸದಸ್ಯರ ಅನುಕೂಲಕ್ಕಾಗಿ ಅವರ ಕೈಯಲ್ಲಿ ಒಂದೊಂದು ಪ್ರತಿಯನ್ನು ಇಡಬೇಕೆಂಬ ಅಭಿಲಾಷೆ ಈಡೇರಲಿಲ್ಲ. ಮಾಡಲಾದ ಮಹತ್ವಪೂರ್ಣ ಬದಲಾವಣೆಗಳನ್ನು ಒಂದರ ನಂತರ ಒಂದಾಗಿ ಉಲ್ಲೇಖಿಸುತ್ತ ಹೋಗುತ್ತೇನೆ. ಹಾಗೆ ಮಾಡುವಲ್ಲಿ, ನಾನು ಇಲಾಖಾ ಸಮಿತಿಯು ಮಾಡಿದ ಅತ್ಯಂತ ಮಹತ್ವಪೂರ್ಣ ಬದಲಾವಣೆಗಳನ್ನು ಉಲ್ಲೇಖಿಸುತ್ತೇನೆ. ಇಲಾಖಾ ಸಮಿತಿಯು ಮಾಡಿದ ಬದಲಾವಣೆಗಳ ಪರಿಶೀಲನೆಯ ತರುವಾಯವೇ ಈ ಪ್ರಶ್ನೆ ತೀರ್ಮಾನ ಆಗುತ್ತದೆ. ಇಲಾಖೆಯು ತಾನು ಮಾಡಿಲ್ಲ ಎಂದು ಹೇಳುವ ಮತ್ತು ಸದನದ ಸದಸ್ಯರಿಗೆ ಗೊತ್ತಿಲ್ಲದ, ಇಲಾಖಾ ಸಮಿತಿಯು ಮಾಡಿದ ಬದಲಾವಣೆಗಳನ್ನು ಉಲ್ಲೇಖಿಸುತ್ತೇನೆ. ಸದನವು ಮೂಲ ವಿಧೇಯಕದ ಕೆಲವು ಖಂಡಗಳನ್ನು ದಯೆಯಿಟ್ಟು ಪರಿಶೀಲಿಸಬೇಕಾಗಿ ಕೋರುತ್ತೇನೆ.

ಭಾಗ I, ಖಂಡ ೨, ಉಪಖಂಡ (೩) (ಎ)– ಈ ಖಂಡಕ್ಕೆ ಸಂವಾದಿಯಾಗಿರುವ ಖಂಡ ಇಲಾಖಾ ವಿಧೇಯಕದ ೨ನೇ ಖಂಡ; ಮೂಲ ವಿಧೇಯಕ ಹೀಗೆ ಹೇಳುತ್ತದೆ:

"ತದ್ವಿರುದ್ಧವಾದುದು ರುಜುವಾತು ಆಗುವವರೆಗೆ, ಈ ಸಮಗ್ರ ಕೋಡ್ ಧರ್ಮದಿಂದ ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಜ್ಯೂ ಆಗಿರುವ ಪ್ರತಿಯೊಬ್ಬ ವ್ಯಕ್ತಿಗೆ ಅನ್ವಯವಾಗುವುದೆಂದು ಪೂರ್ವಭಾವನೆ ಮಾಡಿಕೊಳ್ಳತಕ್ಕದ್ದು."

ಮೂಲ ವಿಧೇಯಕದಲ್ಲಿ ನಿಯಮವು ಪೂರ್ವಭಾವನೆಯ ನಿಯಮ ಆಗಿತ್ತು. ಆದರೆ ಇಲಾಖಾ ವಿಧೇಯಕದಲ್ಲಿ ಅದು ಕಾನೂನಿನ ಸಕಾರಾತ್ಮಕ ನಿಯಮ ಆಗಿದೆ. ಮೂಲ ವಿಧೇಯಕದಲ್ಲಿ ಒಬ್ಬ ಮನುಷ್ಯನು ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಜ್ಯೂ ಅಲ್ಲದಿದ್ದರೆ, ಅವರನ್ನು "ಹಿಂದೂ" ಎಂದು "ಪೂರ್ವಭಾವನೆ" ಮಾಡಬಹುದಾಗಿತ್ತು. ಹೀಗೆ ಅದು ಕಾನೂನು ನಿಯಮ ಆಗುತ್ತಿರಲಿಲ್ಲ. ಪೂರ್ವಭಾವನೆ ನಿಯಮ ಆಗುತ್ತಿತ್ತು. ಇಲಾಖಾ ವಿಧೇಯಕದಲ್ಲಿ ಅದನ್ನು ಹೀಗೆ ಇರುವಂತೆ ಬದಲಾಯಿಸಲಾಗಿದೆ :

"ಈ ಕೋಡ್ ಧರ್ಮದಿಂದ ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಜ್ಯೂ ಆಗಿಲ್ಲದ ಯಾರೇ ಇತರ ವ್ಯಕ್ತಿಗೆ ಅನ್ವಯವಾಗುತ್ತದೆ".

ಇವೆರಡರ ನಡುವಣ ವ್ಯತ್ಯಾಸ ಎಂದರೆ, ಮೂಲ ವಿಧೇಯಕದ ಅಡಿಯಲ್ಲಿ ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಜ್ಯೂ ಆಗಿಲ್ಲದ ಮನುಷ್ಯನು ಹಿಂದೂ ಎಂದು ಪೂರ್ವಭಾವನೆ ಮಾಡಿಕೊಳ್ಳಲಾಗುತ್ತಿತ್ತು ಮತ್ತು ಅವನು ಈ ವಿಧೇಯಕದ ಶಾಸನಕ್ಕೆ ಅಧೀನನಾಗುವನು ಎಂದು ಪೂರ್ವಭಾವನೆ ಮಾಡಿಕೊಳ್ಳಲಾಗುತ್ತಿತ್ತು ಅಷ್ಟೆ. ಆದರೆ ಇಲಾಖಾ ವಿಧೇಯಕದಲ್ಲಿ ಹೀಗೆ ಹೇಳಿದೆ:

"ಕೋಡ್ ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಲಭ್ಯ ಅಲ್ಲದ ಯಾರೇ ಇತರ ವ್ಯಕ್ತಿಗೆ ಅನ್ವಯವಾಗುತ್ತದೆ".

'ಸ್ವಾಮಿ, ಇದು ಮಹತ್ವಪೂರ್ಣ ಬದಲಾವಣೆಯನ್ನು ಸೇರಿಸಿದಂತೆ ಆಗುತ್ತದೆ ಎಂದು ನಿವೇದಿಸಿಕೊಳ್ಳುತ್ತೇನೆ.' ಅದು ಮೂಲ ವಿಧೇಯಕದಲ್ಲಿ ಪೂರ್ವಭಾವನೆ ನಿಯಮ ಆಗಿದ್ದರೆ ಈಗ ಅದು ಪೂರ್ವಭಾವನೆ ನಿಯಮ ಅಲ್ಲ, ಸಕಾರಾತ್ಮಕ ನಿಯಮ. ಅದರ ಅಡಿಯಲ್ಲಿ ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಮತ್ತು ಜ್ಯೂ ಅಲ್ಲದ ಯಾರೇ ವ್ಯಕ್ತಿಗೆ ಹಿಂದೂ ಕಾನೂನು ಅನ್ವಯವಾಗುತ್ತದೆ. ಪರಂತುಕದಲ್ಲಿ ಹೀಗೆ ಹೇಳಿದೆ:

"ಹಿಂದೂ ಕಾನೂನು ಯಾರಿಗೂ ಅನ್ವಯವಾಗುವುದಿಲ್ಲ ಎಂದು ರುಜುವಾತಾದರೆ, ಹಿಂದೂ ಕಾನೂನು ಅನ್ವಯವಾಗಕೂಡದು."

ಇದು ವಿಷಯವನ್ನು ನಿರೂಪಿಸತಕ್ಕ ಅತ್ಯಂತ ಅಸಮಾಧಾನಕಾರಕ ರೀತಿ ಎಂದು ನಾನು ಭಾವಿಸುತ್ತೇನೆ. ಅಂತಿಮ ವಿಧೇಯಕವು ಅದನ್ನು ಅವರಿಗೆ ಅನ್ವಯಿಸುತ್ತದೆ ಮತ್ತು ಇದು ಈ ಪರಂತುಕದ ಮೂಲಕ ಕಾನೂನನ್ನು ಬದಲಾಯಿಸಿಬಿಟ್ಟಿದೆ.

ಸ್ವಾಮೀ, ಇದು ಗಂಭೀರ ಸ್ವರೂಪದ ಬದಲಾವಣೆಯನ್ನು ಸೇರಿಸಿದೆ ಎಂದು ನಿವೇದಿಸುತ್ತೇನೆ. ನನಗೆ ಕಾನೂನಿನ ಕಾರ್ಯ ನೀತಿಯ ಬಗ್ಗೆ ಕಾಳಜಿ ಇಲ್ಲ. ಇಲಾಖಾ ವಿಧೇಯಕದಲ್ಲಿ ಮಾಡಲಾಗಿರುವ ಮತ್ತು ಆಯ್ಕೆ ಸಮಿತಿಗೆ ಆ ಸಂಬಂಧದಲಿ ಅರಿವು ಇಲ್ಲ ಎಂದು ತೋರುವ ಬದಲಾವಣೆಗಳ ಬಗ್ಗೆ ನನ್ನ ಕಾಳಜಿ.

ಆಮೇಲೆ ವಿಧೇಯಕದ ಇನ್ನೊಂದು ಭಾಗಕ್ಕೆ ಬರೋಣ. ಇಲಾಖಾ ವಿಧೇಯಕದಲ್ಲಿ.........

**ಮಿ। ತಾಜಾಮುಲ್ ಹುಸೇನ್** : ನನ್ನ ವಿದ್ವಾಂಸ ಮಿತ್ರರಾದ ಮಿ। ನಝೀರುದ್ದೀನ್ ಅಹಮ್ಮದ್ ಅವರು 'ಆಯ್ಕೆ ಸಮಿತಿಯು ಪರಿಶೀಲಿಸಿದ್ದು ಇಲಾಖಾ ವಿಧೇಯಕವನ್ನೇ ಹೊರತು ಮೂಲ ವಿಧೇಯಕವನ್ನಲ್ಲ' ಎಂದು ಸದನದ ಮುಂದೆ ತೋರಿಸಲು ಪ್ರಯತ್ನಿಸುತ್ತಿದ್ದಾರೆ. ಮಾತ್ರವಲ್ಲದೆ ಆಯ್ಕೆ ಸಮಿತಿಯು ಮೂಲ ವಿಧೇಯಕವನ್ನು ಪರಿಶೀಲಿಸಿದೆ ಎಂಬ ಬಗೆಗಿನ ತಮ್ಮ ನಿರ್ಣಯ ಮತ್ತು ರೂಲಿಂಗ್ ಇದ್ದಾಗ್ಯೂ, ಹೀಗೆ ಹೇಳುತ್ತಿದ್ದಾರಲ್ಲ. ಈ ಬಗ್ಗೆ ತಮ್ಮ ರೂಲಿಂಗ್ ಕೋರುತ್ತೇನೆ.

**ಸ್ಪೀಕರ್ :** ನಾನು ಅವರ ವಾದವನ್ನು ಆಲಿಸುತ್ತ ಬಂದಿದ್ದೇನೆ. ಈ ವಿಧೇಯಕವನ್ನು ಅಭಿಪ್ರಾಯ ಕೋರಿ ಪರಿಚಲಿಸಬೇಕೆಂದು ಕೋರುವ ತಮ್ಮ ತಿದ್ದುಪಡಿಯನ್ನು ಬೆಂಬಲಿಸಿ ಮಾತನಾಡುತ್ತಿದ್ದಾರೆ. ಇನ್ನೊಂದು ತಿದ್ದುಪಡಿಯ ಪ್ರಕಾರ ಅದೇ ಆಯ್ಕೆ ಸಮಿತಿಗೆ ಪರಿಶೀಲನೆ ಕೋರಿ ವಾಪಸು ಕಳಿಸುವುದಕ್ಕಾಗಿ – ಆದ್ದರಿಂದ ನನ್ನ ರೂಲಿಂಗ್ ಇದ್ದಾಗ್ಯೂ, ಶ್ರೀ ಜೋಗೇಂದ್ರನಾಥ ಅವರು ಮಂಡಿಸಿದ ಮೂಲ ವಿಧೇಯಕದಿಂದ ಸಂಯೋಜನ ವ್ಯವಸ್ಥೆಯಲ್ಲಿ ಮತ್ತು ಒಳಾಂಶಗಳಲ್ಲಿ ವಿಶೇಷ ವಿಷಯಾಂತರವಾಗಿರುವ ಕಾರಣ, ಅದನ್ನು ಪುನಃ ಪರಿಚಲಿಸುವುದು ಅಥವಾ ಆಯ್ಕೆ ಸಮಿತಿಗೆ ಪರಿಶೀಲನೆ ಕೋರಿ ವಾಪಸು ಕಳಿಸುವುದು ಅಗತ್ಯವಾಗಿದೆ ಎಂದು ಅವರು ಪಾಠವನ್ನು ಮಂಡಿಸುತ್ತಿದ್ದಾರೆ ಎಂದು ನಾನು ಭಾವಿಸುತ್ತೇನೆ. ನಾನು ತಿಳಿದುಕೊಂಡ ಪ್ರಕಾರ ಅವರ ವಾದ ಎಂದರೆ, ಮೊದಲನೆಯ ವಿಧೇಯಕದ ರಾವ್ ಸಮಿತಿ ವ್ಯವಸ್ಥೆಯಲ್ಲಿ ವಿಭಿನ್ನ ಭಾಗಗಳನ್ನು ವಿಭಿನ್ನ ವಿಭಾಗಗಳಲ್ಲಿ ತೆಗೆದುಕೊಳ್ಳಬೇಕು. ಹಾಗಾಗಿದ್ದರೆ, ಅವುಗಳಲ್ಲಿ ಒಂದನ್ನು ಇನ್ನೊಂದರಿಂದ ಪ್ರತ್ಯೇಕಿಸಲು ಸುಲಭವಾಗುತ್ತಿತ್ತು. ಆದರೆ ಪ್ರಸ್ತುತ ವ್ಯವಸ್ಥೆಯಲ್ಲಿ, ಇಡೀ ಪೂರ್ಣವನ್ನು ಒಂದು ಜೈವಿಕ ಪೂರ್ಣವನ್ನಾಗಿ ಮಾಡಲಾಗಿರುವ ನಿಮಿತ್ತ, ಈಗ ಜನಸಮುದಾಯವು ಒಪ್ಪಿಕೊಳ್ಳುವ ಕೆಲವು ಭಾಗಗಳನ್ನು ತೆಗೆದುಕೊಳ್ಳಲು ಅಥವಾ ಜನ ಸಮುದಾಯಕ್ಕೆ ಒಪ್ಪಿಗೆಯಾಗದಿರುವ ಕೆಲವು ಭಾಗಗಳನ್ನು ಬಿಟ್ಟುಬಿಡಲು ಸುಲಭ ಸಾಧ್ಯವಲ್ಲ. ಈ ಸಂಬಂಧದಲ್ಲಿ ಅವರು ಹೇಳುವುದು ಎಷ್ಟರಮಟ್ಟಿಗೆ ಸರಿ ಎನ್ನುವ ಪ್ರಶ್ನೆ ಬೇರೆ.

ಅದಕ್ಕಾಗಿಯೇ ಅವರು ವಿಧೇಯಕವನ್ನು ಪುನಃ ಪರಿಚಲಿಸಬೇಕು ಎಂದು ಹೇಳುತ್ತಾರೆ. ಈವರೆಗೆ ಅವರ ತರ್ಕವನ್ನು ನಾನು ತಿಳಿದುಕೊಂಡಿದ್ದು ಇಷ್ಟುಮಟ್ಟಿಗೆ. ಅವರು ನನ್ನ ರೂಲಿಂಗ್ ಅನ್ನು ವಿರೋಧಿಸುತ್ತಿದ್ದಾರೆ ಎಂದು ನಾನು ಭಾವಿಸುವುದಿಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್** : ಖಂಡಿತವಾಗಿಯೂ ಸ್ವಾಮೀ, ನಿಮ್ಮ ರೂಲಿಂಗ್ ಅನ್ನು ವಿರೋಧಿಸುತ್ತಿಲ್ಲ. ಹಾಗೆ ಸಂದೇಹಪಡುವುದೂ ನಾನು ನಿಮ್ಮ ರೂಲಿಂಗ್ ವಿರೋಧಿಸುತ್ತಿರುವೆನು ಎಂದು ಸಂದೇಹಪಡುವುದಕ್ಕೂ ಸಮಯ ಮೀರಿ ಹೋಯಿತು. ರೂಲಿಂಗ್ ಕಾನೂನು ಪ್ರಶ್ನೆ ಮೇಲೆ. ಒಂದು ಅತ್ಯಂತ ತಾಂತ್ರಿಕ ಸ್ವರೂಪದ ಪ್ರಶ್ನೆ. ನನ್ನ ಕ್ರಿಯಾಲೋಪವು ಸ್ಪಷ್ಟವಾಗಿ ರುಜುವಾತು ಮಾಡಲಾಗದ ಕೆಲವು ಪೂರ್ವಭಾವನೆಗಳನ್ನು ಆಧರಿಸಿತ್ತು.

**ಸ್ಪೀಕರ್ :** ಮಾನ್ಯ ಸದಸ್ಯರು ತಮ್ಮ ವಾದವನ್ನು ಮುಂದುವರಿಸಬಹುದು.

**ಮಿ। ನಝೀರುದ್ದೀನ್ ಅಹಮ್ಮದ್** : ಅದೇ ನನ್ನ ನಿಲುವು ಎಂದು ಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಅಷ್ಟೇ ಅಲ್ಲ, ಅದಕ್ಕೂ ಮಿಗಿಲಾಗಿ ಉಂಟು; ಇಲಾಖಾ ವಿಧೇಯಕದ ಬಗ್ಗೆ ಹೊಣೆಗಾರರಾದ ಮಾನ್ಯ ಕಾನೂನು ಮಂತ್ರಿಗಳು ಮತ್ತು ಆಯ್ಕೆ ಸಮಿತಿಯ ಸದಸ್ಯರು. ಇವರಿಗೆ ಇಲಾಖಾ ವಿಧೇಯಕದಲ್ಲಿ ಮಾಡಲಾದ ಮಹತ್ವಪೂರ್ಣ ಬದಲಾವಣೆಗಳ ಬಗ್ಗೆ ನಿಷ್ಕೃಷ್ಟವಾಗಿ ಏನೂ ಗೊತ್ತಿರಲಿಲ್ಲ ಎಂದರೆ, ಅವರಿಬ್ಬರು ಕಾನೂನು ಸಂಗತವಾಗಿ ಮತ್ತು ವಾಸ್ತವವಾಗಿ ಎರಡು ವಿಧೇಯಕಗಳನ್ನು ಪರಿಶೀಲಿಸಿದರು ಎಂದು ಹೇಳಬಹುದೆ? ತಾಂತ್ರಿಕವಾಗಿ ಅವರು ಅವೆರಡನ್ನೂ ಪರಿಶೀಲಿಸಿರಬೇಕು. ತಮ್ಮ ರೂಲಿಂಗ್ ನಿಮಿತ್ತ, ಕಾನೂನು ವಿಷಯ ಆಗಿ ಪ್ರಶ್ನೆ ಉದ್ಭವಿಸುವುದಿಲ್ಲ. ತಮ್ಮ ರೂಲಿಂಗ್‌ಅನ್ನು ನಾನು ಗೌರವಪೂರ್ವಕವಾಗಿ ಅಂಗೀಕರಿಸುತ್ತೇನೆ. ನಾನು ಒತ್ತಿಹೇಳುತ್ತಿರುವ ಅಂಶ ಎಂದರೆ, ಅವರು ಎರಡೂ ವಿಧೇಯಕಗಳನ್ನು ಪರಿಶೀಲಿಸಿದ್ದರೆ, ಸ್ಪಷ್ಟವಾದ ತೊಂದರೆಯನ್ನು ಅವರು ಇದಿರಿಸಿದ್ದಿರಬೇಕು. ಒಂದು ಕಡೆ, ಮೂಲ ವಿಧೇಯಕದ ಕೇವಲ ಪುನರ್ ಪ್ರಾರೂಪಣವಾಗಿರತಕ್ಕ, ಅಂದರೆ ಖಂಡಗಳ ಸಂಖ್ಯೆ ಇತ್ಯಾದಿಗಳ ಅನುಕ್ರಮ ವ್ಯತ್ಯಾಸವನ್ನು ಒಳಗೊಂಡ, ಆದರೆ ಮಹತ್ವಪೂರ್ಣ ಬದಲಾವಣೆಗಳನ್ನು ಮಾಡಲಾಗಿಲ್ಲ ಎಂಬ ಭರವಸೆಯನ್ನು ಲಗತ್ತಿಸಿರುವ, ಆದರೆ ವಾಸ್ತವವಾಗಿ ಮಹತ್ವಪೂರ್ಣ ಬದಲಾವಣೆಗಳನ್ನು ಮಾಡಲಾಗಿರುವ ಒಂದು ವಿಧೇಯಕ. ನನ್ನ ತರ್ಕವೆಂದರೆ ಇಷ್ಟೆ: ಅವರು (ಆಯ್ಕೆ ಸಮಿತಿಯ) ಎರಡೂ ವಿಧೇಯಕಗಳನ್ನು, –ಮೂಲ ವಿಧೇಯಕವನ್ನು ಮತ್ತು ಇಲಾಖಾ ವಿಧೇಯಕವನ್ನು– ತಾಂತ್ರಿಕವಾಗಿ ಪರಿಶೀಲಿಸಿದ್ದರೂ, ಅವರಿಗೆ ಬಹಿರಂಗಗೊಳ್ಳದ ಈ ಬದಲಾವಣೆಗಳನ್ನು ವಾಸ್ತವವಾಗಿ ಪರ್ಯಾಪ್ತವಾದ ಮತ್ತು ಯಥೋಚಿತವಾದ ಪರ್ಯಾಲೋಚನೆಗೆ ಒಳಪಡಿಸಲಿಲ್ಲ, ಅಥವಾ ಹಾಗೆ ಮಾಡಲು ಅವರಿಗೆ ಸಾಧ್ಯವಾಗಲಿಲ್ಲ ಎಂದು ನನ್ನ ಎಣಿಕೆ. ನನ್ನ ವಾದದ ಉದ್ದೇಶವೆಂದರೆ, ಒಂದೇ ಈ ವಿಧೇಯಕವನ್ನು ಪುನರ್‌ಪರಿಶೀಲನೆ ಕೋರಿ ಆಯ್ಕೆ ಸಮಿತಿಗೆ ವಾಪಸು ಕಳಿಸಬೇಕು, ಅಥವಾ ಅಭಿಪ್ರಾಯ ಕೋರಿ ಎಲ್ಲರಿಗೂ ಪರಿಚಲಿಸಬೇಕು.

ಇಲಾಖಾ ಸಮಿತಿಯು ಮಾಡಿದ ಇನ್ನೊಂದು ಮಹತ್ವಪೂರ್ಣ ಸ್ವರೂಪದ ಬದಲಾವಣೆ ಖಂಡ ೨ರ ಉಪಖಂಡ (೪) ಇದರಲ್ಲಿ. ಇಲ್ಲಿ ಸೇರಿಸಿದ ಬದಲಾವಣೆಯನ್ನು ಮಾಡಿದವರು ಇಲಾಖಾ ಸಮಿತಿಯವರು. ಇದು ಅತ್ಯಂತ ನೂತನ ಬದಲಾವಣೆ. ಮೂಲ ವಿಧೇಯಕದಲ್ಲಿ ಇರಲಿಲ್ಲ. ಮಹತ್ವಪೂರ್ಣ ಬದಲಾವಣೆ ವಿಧೇಯಕದಲ್ಲಿ. ಇದನ್ನು ಸೇರಿಸಿದವರ ಇಲಾಖಾ ಸಮಿತಿಯವರು ಆಯ್ಕೆ ಸಮಿತಿಯವರಲ್ಲ. ಇದು ಅತ್ಯಂತ ಮಹತ್ವದ ಅಂಶ. ಇಲಾಖಾ ವಿಧೇಯಕದಲ್ಲಿ ಹೀಗೆ ಉಪಬಂಧಿಸಲಾಗಿದೆ:

"೨ (೪) ವಿಶೇಷ ವಿವಾಹಗಳ ಕಾಯ್ದೆ ೧೮೭೨ (೧೮೭೨ರ III)–ಇದರಲ್ಲಿ ಏನೇ ಒಳಗೊಂಡಿದ್ದರೂ

ಸರಿಯೆ, ಈ ಕೋಡ್‌ನ ಪ್ರಾರಂಭಕ್ಕೆ ಮುನ್ನ, ಆ ಕಾಯ್ದೆಯ ಉಪಬಂಧಗಳ ಅಡಿಯಲ್ಲಿ ಯಾವ ಹಿಂದೂಗಳ ವಿವಾಹಗಳು ವಿಧಿಪೂರ್ವಕವಾಗಿ ನೆರವೇರಿಸಲಾಗಿದೆಯೋ ಅವರಿಗೆ, ಅದು ಅನ್ವಯವಾಗತಕ್ಕದ್ದು".

ಮೂಲ ವಿಧೇಯಕದಲ್ಲಿ ಅಂಥದೇನೂ ಇರಲಿಲ್ಲ ಮತ್ತು ಮೂಲ ವಿಧೇಯಕದ ಪ್ರಕಾರ, ವಿಶೇಷ ವಿವಾಹ ಕಾಯ್ದೆ, ೧೮೭೨ರ ಅಡಿಯಲ್ಲಿ ವಿವಾಹ ಆದವರು ಆ ಕಾಯ್ದೆಯ ಶಾಸನಕ್ಕೆ ಅಧೀನರಾಗಿರಲು ಅವಕಾಶ ಇದ್ದಿತು. ಅಂದರೆ–

ನಾನು ನಿವೇದಿಸುವುದೇನೆಂದರೆ ಇದು ಇಲಾಖಾ ವಿಧೇಯಕದಲ್ಲಿ ಮಾಡಲಾದ ಮಹತ್ವಪೂರ್ಣ ಅಂತರ ಅಥವಾ ಬದಲಾವಣೆ; ಅದನ್ನು ಇಲಾಖಾ, ಸಮಿತಿಯವರು ಸೇರಿಸಿದ್ದರು ಮತ್ತು ಆಯ್ಕೆ ಸಮಿತಿಯವರು ಯಥಾರೀತಿಯಾಗಿ ಅದನ್ನು ಹಾಗೆಯೇ ಸ್ವೀಕರಿಸಿದ್ದರು. ಇದು ಒಂದು ಮಹತ್ವಪೂರ್ಣ ಬದಲಾವಣೆ; ಒಳ್ಳೆಯದಾಗಿರಲಿ, ಕೆಟ್ಟದ್ದಾಗಿರಲಿ, ಅದು ಪ್ರಾಮಾಣಿಕ ಬದಲಾವಣೆಯೇ ಅಲ್ಲವೆ ಎಂಬುದು ಪ್ರಶ್ನೆಯಲ್ಲ. ಆದರೆ ಮಹತ್ವಪೂರ್ಣ ಬದಲಾವಣೆಯನ್ನು ಇಲಾಖಾ ಸಮಿತಿಯವರು ಮಾಡಿದ್ದಾರೆ. ಆ ಬದಲಾವಣೆಯ ಬಗ್ಗೆ ಆಯ್ಕೆ ಸಮಿತಿಯವರಿಗೆ ನಿರ್ದಿಷ್ಟವಾಗಿ ಮಾಹಿತಿ ನೀಡಲಾಗಿಲ್ಲ ಎಂಬುದೇ ಪ್ರಶ್ನೆ. ಬದಿಯಂಚಿನಲ್ಲಿ ಕೊಟ್ಟಿರುವ ಮೂಲ ವಿಧೇಯಕದ ಖಂಡಗಳಿಗೆ ಮಾಡಲಾದ ಉಲ್ಲೇಖಗಳೇ ಮುಂತಾದವುಗಳು ಇದ್ದರೂ, ಈ ಉಪಖಂಡವು ಪೂರ್ಣವಾಗಿ ಹೊಸ ಉಪಖಂಡ, ಮಾತ್ರವಲ್ಲದೆ ಹೊಸ ಖಂಡ ಎಂಬ ಬಗ್ಗೆ ಯಾವುದೇ ಸೂಚನೆ ಇಲ್ಲದೆ ಸೇರಿಸಲಾದ ಉಪಖಂಡ; ಉಪಖಂಡಗಳಲ್ಲಿ ಮಾಡಲಾದ ಬದಲಾವಣೆಗಳ ಬಗ್ಗೆ ಯಾವುದೇ ಸೂಚನೆ ಇಲ್ಲ. ವಾಸ್ತವವಾಗಿ, ಆಯ್ಕೆ ಸಮಿತಿಯಿಂದ ಹೊರಬರುವ ಸಾಮಾನ್ಯ ವಿಧೇಯಕಗಳಲ್ಲಿ ಎಲ್ಲ ಬದಲಾವಣೆಗಳಿಗೆ ಅಡಿಗೆರೆಗಳನ್ನು ಅಥವಾ ಬದಿಗೆರೆಗಳನ್ನು ಹಾಕಲಾಗುತ್ತದೆ. ಬದಿ ಉಲ್ಲೇಖಗಳನ್ನು ಕೊಟ್ಟಿರುವ ಕಾರಣ ಈ ರೂಢಿಯು ಅಗತ್ಯವಿಲ್ಲ ಎಂದು ಆಯ್ಕೆ ಸಮಿತಿಯು ಹೇಳುತ್ತದೆ. ನನ್ನ ನಿವೇದನೆಯಿಷ್ಟೆ : ಬದಿ ಉಲ್ಲೇಖಗಳನ್ನು ಖಂಡಗಳಿಗೆ ಕೊಟ್ಟಿದೆ. ಆದರೆ ಈ ೪ ಉಪಖಂಡವು ಸಂಪೂರ್ಣವಾಗಿ ಹೊಸ ಉಪಖಂಡ. ಈ ಉಪಖಂಡದ ಉಲ್ಲೇಖ ಭಾಗ I ಪ್ರಕರಣ ೬, ಪುಟ ೨ ಮತ್ತು ಅನುಸೂಚಿ I, ಪುಟ ೩೦. ಹಾಗೆ ಮಾಡಲಾದ ಬದಲಾವಣೆಯನ್ನು, ಉಲ್ಲೇಖದ ಮೂಲಕವಾಗಲಿ ಸೂಕ್ತವಾದ ಗುರುತು ವ್ಯವಸ್ಥೆಯ ಮೂಲಕವಾಗಲಿ ಸೂಚಿಸಿದ್ದಿಲ್ಲ. ಕನಿಷ್ಠಪಕ್ಷ ಅದು ಮಹತ್ವಪೂರ್ಣ ಸ್ವರೂಪದ ಬದಲಾವಣೆಯಾಗಿರುವ ನಿಮಿತ್ತ, ಆಯ್ಕೆ ಸಮಿತಿಯ ಗಮನವನ್ನು ಅದರತ್ತ ಯಾವ ರೀತಿಯಲ್ಲಾದರೂ ಸರಿಯೆ ಸೆಳೆಯಬೇಕಾಗಿತ್ತು, ಹಾಗೆ ಮಾಡಲಿಲ್ಲ; ಬದಲಾವಣೆಯ ಸ್ವರೂಪವನ್ನು ಸೂಚಿಸಲಾಗಿಲ್ಲ. ಅದು ಬದಲಾವಣೆ ಸಂಖ್ಯೆ ೨. ನಾನು ಹೆಚ್ಚು ಮೂಲಭೂತವಾದ ಮತ್ತು ಮಹತ್ವಪೂರ್ಣವಾದ ಬದಲಾವಣೆಗಳನ್ನು ಕುರಿತು ಮಾತ್ರ ಹೇಳುತ್ತಿದ್ದೇನೆ. ಬದಲಾವಣೆಗಳು ಬಹಳಷ್ಟು ಭವಿಷ್ಯದಲ್ಲಿ ಒಂದು ಸಮಯ, ಸದಸ್ಯರಿಗಾಗಿ ಮತ್ತು ಸಾರ್ವಜನಿಕರಿಗಾಗಿ ಒಂದು ಪ್ರಕಟಣೆಯನ್ನು, ಇಲಾಖೆಯವರು ನಿಜವಾಗಿ ಸೇರಿಸಿದ ಬದಲಾವಣೆಗಳು ಮತ್ತು ಆಯ್ಕೆ ಸಮಿತಿಯವರು ನಿಜವಾಗಿ ಸೇರಿಸಿದ ಬದಲಾವಣೆಗಳನ್ನು ತೋರಿಸುವಂಥ ಪ್ರಕಟಣೆಯನ್ನು ಲಭ್ಯವಾಗುವ ವ್ಯವಸ್ಥೆ ಮಾಡುವ ಆಸೆಯಿಟ್ಟುಕೊಂಡಿದ್ದೇನೆ. ನಾನು ಪುನಃ ಒತ್ತಿ ಹೇಳುವುದೇನೆಂದರೆ ಆಯ್ಕೆ ಸಮಿತಿಯು ಮಾಡಿದ ಬದಲಾವಣೆಗಳು ಕೆಲವೇ ಕೆಲವು ಮಾತ್ರ. ಮಾಡಲಾದ ಬಹುತೇಕ ಮೂಲಭೂತ ಬದಲಾವಣೆಗಳನ್ನು ಮಾಡಿದವರು ಕರಡು ರಚನಾ ಸಮಿತಿಯವರೇ.

ಇನ್ನು ಈ ವಿಧೇಯಕದ ಇನ್ನೊಂದು ವಿಚಾರಾಂಶಕ್ಕೆ ಬರುತ್ತೇನೆ. ಹಿಂದಿನ ರೂಢಿ ಮತ್ತು ಆಚರಣೆಗೆ

ಸಂಬಂಧಿಸಿದಂತೆ ಈ ಕೋಡ್‌ನ ಜಾರಿಗೆ ಸಂಬಂಧಿಸಿದಂತೆ ವ್ಯವಹರಿಸುವ ಮೂಲ ವಿಧೇಯಕದ ಭಾಗ I, ಖಂಡ ೩ ರಲ್ಲಿ ಹೀಗೆ ಉಪಬಂಧಿಸಲಾಗಿದೆ:

"ಈ ಕೋಡ್‌ನಲ್ಲಿ ವ್ಯವಹರಿಸಲಾದ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ, ಅದರ ಉಪಬಂಧಗಳು ಇಲ್ಲಿ ಸ್ಪಷ್ಟವಾಗಿ ಉಳಿಸಿಲ್ಲದ ರೂಢಿ ಮತ್ತು ಆಚರಣೆಗಳನ್ನು ಅಧಿಕ್ರಮಿಸುತ್ತವೆ."

ಮೂಲ ವಿಧೇಯಕವು ಆ ಮೂಲಕ ಸ್ಪಷ್ಟವಾಗಿ ವ್ಯಕ್ತವಾಗಿ ಉಳಿಸಿಲ್ಲದ "ರೂಢಿಗಳನ್ನು ಮತ್ತು ಆಚರಣೆಗಳನ್ನು ಮಾತ್ರ ಮೂಲ ವಿಧೇಯಕದಿಂದ ನಿರ್ದಿಷ್ಟವಾಗಿ ಮನ್ನಣೆ ಪಡೆಯದಿರುವ ಎಲ್ಲ ರೂಢಿಗಳನ್ನು ಅಧಿಕ್ರಮಿಸುತ್ತಿತ್ತು." ಆಯ್ಕೆ ಸಮಿತಿಯು ಯಾವುದೇ ಒಪ್ಪಿಕೊಂಡಂಥ ಇಲಾಖಾ ವಿಧೇಯಕದ ಸಂವಾದಿ ಉಪಬಂಧಗಳನ್ನು ನಾವೀಗ ಪರಿಶೀಲಿಸೋಣ. ಬದಲಾವಣೆಯನ್ನು ಮಾಡಿದವರು ಇಲಾಖಾ ಸಮಿತಿಯವರೇ ಹೊರತು ಆಯ್ಕೆ ಸಮಿತಿಯವರಲ್ಲ ಎಂದು ಇಲ್ಲಿ ಎತ್ತಿ ತೋರಿಸಬಯಸುತ್ತೇನೆ. ಇಲಾಖಾ ವಿಧೇಯಕದಲ್ಲಿ ಅದು ಖಂಡ ೪ ಅಂತಿಮ ವಿಧೇಯಕದ ಖಂಡ, ೪ಕ್ಕೆ ಸಂವಾದಿ. ಬದಿಯಂಚಿನ ಟಿಪ್ಪಣಿಯಲ್ಲಿ "ಕೋಡ್‌ನ ಅಧ್ಯಾರೋಹೀ ಪರಿಣಾಮ" ಎಂದು ಬರೆದಿರುವುದು ಬಹಳಷ್ಟು ಭಿನ್ನವಾಗಿದೆ. ಆದರೆ ಟಿಪ್ಪಣಿಯು ವಿಧೇಯಕ ಭಾಗವಲ್ಲ, ಆದ ಕಾರಣ ಆ ಬಗ್ಗೆ ವಿಶೇಷ ಒತ್ತು ಕೊಡುವುದಿಲ್ಲ. ಇಲಾಖಾ ವಿಧೇಯಕವು ಹೀಗೆ ಹೇಳುತ್ತದೆ:

"ಕೋಡ್‌ನಲ್ಲಿ ಸ್ಪಷ್ಟವಾಗಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಜಾರಿಯಲ್ಲಿರುವ ಹಿಂದೂ ಕಾನೂನಿನ ಯಾವುದೇ ಪಾಠ ಅಥವಾ ನಿಯಮ ಅಥವಾ ಅರ್ಥವಿವರಣೆ ಅಥವಾ ರೂಢಿ ಅಥವಾ ಆಚರಣೆ ಈ ಕೋಡ್‌ನಿಂದ ವ್ಯವಹರಿಸಲಾಗುವ ಯಾವುದೇ ವಿಷಯಗಳ ಪರಿಣಾಮ ಹೊಂದಿರುವುದು ಸಮಾಪ್ತವಾಗತಕ್ಕದ್ದು."

ಶಾಬ್ದಿಕ ಬದಲಾವಣೆಗಳು ಮಹತ್ವಪೂರ್ಣ ಆಗಿಲ್ಲ. ಆದರೆ ಇಲಾಖಾ ಸಮಿತಿಯು ಅನೇಕ ಹೊಸ ವಿಷಯಗಳನ್ನು ಸೇರಿಸಿದೆಯೆಂಬುದನ್ನು ನೀವು ದಯೆಯಿಟ್ಟು ಪರಿಶೀಲಿಸಬೇಕು. "ಹಿಂದೂ ಕಾನೂನಿನ ಯಾವುದೇ ಪಾಠ, ನಿಯಮ ಅಥವಾ ಅರ್ಥವಿವರಣೆ" ಮತ್ತು ಆ ತರುವಾಯ "ಈ ಕೋಡ್‌ನ ಪ್ರಾರಂಭಕ್ಕೆ ಮುಂಚೆ ನಿಕಟಪೂರ್ವದಲ್ಲಿ ಜಾರಿಯಲ್ಲಿ ಇರುವ" –ಇವೆಲ್ಲ ಸಂಪೂರ್ಣವಾಗಿ ಹೊಸ ವಿಷಯಗಳು. ಸದನವು ಒಂದು ನಿಮಿಷ ಇತ್ತ ಗಮನಿಸಲಿ ಮತ್ತು ಬದಲಾವಣೆಯ ಮಹತ್ವವನ್ನು ಪರ್ಯಾಲೋಚಿಸಲಿ. ಮೂಲ ವಿಧೇಯಕದಿಂದ ನಿರ್ದಿಷ್ಟವಾಗಿ ಮನ್ನಣೆ ಪಡೆಯದಿರುವ ಎಲ್ಲ ರೂಢಿಗಳು ಮತ್ತು ಆಚರಣೆಗಳು ಸಂಪೂರ್ಣವಾಗಿ ಹೊರಟುಹೋಗುತ್ತವೆ. ಆದರೆ ಇಲಾಖಾ ವಿಧೇಯಕವು ತನ್ನ ಪಠ್ಯದಲ್ಲಿ ಸಹ ಹಿಂದೂ ಕಾನೂನಿನ ಯಾವುದೇ ಮೂಲಪಾಠ ನಿಯಮ ಅಥವಾ ಅರ್ಥವಿವರಣೆ ಇವುಗಳನ್ನು ಸೇರಿಸುತ್ತದೆ. ಇದು ಆಚರಣೆ ಮತ್ತು ರೂಢಿ ಇವುಗಳಿಂದ ಸಂಪೂರ್ಣವಾಗಿ ಭಿನ್ನವಾಗಿದೆ. ವಾಸ್ತವವಾಗಿ, ಪವಿತ್ರ ಗ್ರಂಥಗಳ ಯಾವುದೇ ಮೂಲಪಾಠ, ವೇದಗಳು ಮತ್ತು ಸ್ಮೃತಿಗಳು, ಹಿಂದೂ ಕಾನೂನಿನ ಯಾವುದೇ ನಿಯಮ ಅಥವಾ ಅರ್ಥ ವಿವರಣೆಯು ಅಂದರೆ ಉಚ್ಚ ನ್ಯಾಯಾಲಯದ, ಫೆಡರಲ್ ನ್ಯಾಯಾಲಯದ ಮತ್ತು ಪ್ರಿವಿಕೌನ್ಸಿಲ್‌ನ ಎಲ್ಲ ರೂಲಿಂಗ್ ಮೂಲ ಸಂಸ್ಕೃತ ಗ್ರಂಥಗಳ ಎಲ್ಲ ಆಧಿಕಾರಕ ವಿವರಣೆಗಳು ಅಥವಾ ಸರ್ವೋಚ್ಚ ನ್ಯಾಯಿಕ ಪ್ರಾಧಿಕಾರಗಳ ಎಲ್ಲ ಅರ್ಥಕ್ಕೆ ವಿವರಣೆಗಳೂ ನಾಶವಾಗತಕ್ಕದ್ದು ಮತ್ತು ಈ ಕೋಡ್‌ನ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಯಾವುದೇ ಇತರ ಕಾನೂನು ಸಹ ನಾಶವಾಗತಕ್ಕದ್ದು. ಪವಿತ್ರ ಗ್ರಂಥಗಳು ಮತ್ತು ಒಂದೂವರೆ ಶತಮಾನಕ್ಕೆ ಮಿಗಿಲಾದ ಅವಧಿಯ ಸಮೃದ್ಧ ತೀರ್ಪುಜನ್ಯ ನ್ಯಾಯ ಇವೆಲ್ಲ ಒಂದೇ ಬಾರಿಗೆ ಲೆಕ್ಕಣಿಕೆಯ ಒಂದೇ ಕೊರೆತಕ್ಕೆ ಸಿಕ್ಕು

ರದ್ದಾಗಿ ಹೋಗಲಿವೆ. ಹಿಂದೂ ಕಾನೂನಿನ ಯಾವುದೇ ಮೂಲಪಾಠ ನಿಯಮ ಅಥವಾ ಅರ್ಥವಿವರಣೆಯು ಬಹುಶ: ಎಲ್ಲ ಸಂಗತಿಗಳನ್ನು ಒಳಗೊಳ್ಳುತ್ತದೆಯೋ ಏನೋ. "ಈ ಕೋಡ್‌ನ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ" ಇವೆಲ್ಲ ಬಹುಶ: ಅಂಗೀಕಾರದಲ್ಲಿ ಒಳಗೊಳ್ಳಬಹುದೇನೋ. ಆದರೆ ನಾನು ನಿವೇದಿಸುವುದೇನೆಂದರೆ, 'ಕಾನೂನುಬಾಹಿರಗೊಳಿಸು' ಎಂಬ ಪದಪ್ರಯೋಗಕ್ಕೆ ನನಗೆ ಅನುಮತಿ ಕೊಡುವುದಾದರೆ, ಈ ಇಲಾಖಾ ವಿಧೇಯಕವು ನಿರ್ದಿಷ್ಟವಾಗಿ ಮನ್ನಣೆ ನೀಡದಿರುವಂಥ ಹಿಂದೂ ಕಾನೂನಿನ ಎಲ್ಲ ಮೂಲ ಪಾಠಗಳನ್ನು ಅಥವಾ ಅರ್ಥ ವಿವರಣೆಗಳನ್ನು ಅಥವಾ ನಿಯಮಗಳನ್ನು ಕಾನೂನುಬಾಹಿರಗೊಳಿಸುತ್ತದೆ ಮತ್ತು ಅವೆಲ್ಲದೆ ಹೊರಟುಹೋಗುತ್ತವೆ. ಇದು ಮೂಲಭೂತವಾದ, ಮಹತ್ವಪೂರ್ಣವಾದ ಬದಲಾವಣೆ ಎಂದು ನಿವೇದಿಸುತ್ತೇನೆ.

**ಶ್ರೀಮತಿ ಜಿ. ದುರ್ಗಾಬಾಯಿ** (ಮದರಾಸು : ಸಾಮಾನ್ಯ) : ಕ್ರಿಯಾಲೋಪವನ್ನೆತ್ತಿ ನಿವೇದಿಸುತ್ತೇನೆ. ಮಾನ್ಯ ಸದಸ್ಯರು ತಾವು ನೀಡಿದ ರೂಲಿಂಗ್ ಸಕ್ಷಮತೆಯನ್ನು ಪ್ರಶ್ನಿಸಲು ಹಕ್ಕು ಹೊಂದಿರುತ್ತಾರೆಯೇ? ಅವರು ಇದನ್ನು 'ಇಲಾಖಾ ವಿಧೇಯಕ' ಎಂದು ಕರೆಯುವಾಗ ಅವರು ಆಯ್ಕೆ ಸಮಿತಿಯ ಸದಸ್ಯರ ವಿರುದ್ಧ ಗಂಭೀರ ವ್ಯಂಗ್ಯೋಕ್ತಿಯನ್ನೂ ಸೂಚಿಸುತ್ತಾರೆ. ಆಯ್ಕೆ ಸಮಿತಿಯ ಸದಸ್ಯರು ಮಸೂದೆಯನ್ನು ಕೂಲಂಕಷವಾಗಿ ನೋಡಿದ್ದಾರೆ ಮತ್ತು ಬದಲಾವಣೆಗಳನ್ನು ಗಮನಿಸಿದ್ದಾರೆ. ವಿಧೇಯಕವನ್ನು ಇಲಾಖಾ ವಿಧೇಯಕ ಎಂದು ಉಲ್ಲೇಖಿಸುತ್ತ, ಅವರು ಆ ಅಂಶವನ್ನು ಕುರಿತು ಇನ್ನೂ ವಾದಮಾಡುತ್ತ ಹೋಗುವಂತಿಲ್ಲ. ಅವರ ಮಾತು ಕ್ರಮಬದ್ಧವೆ ಹೇಗೆ ಎಂಬ ಬಗ್ಗೆ ನಾವು ತಮ್ಮ ರೂಲಿಂಗ್ ಕೋರುತ್ತೇವೆ.

**ಸ್ಪೀಕರ್ :** ಇದು ರೂಲಿಂಗ್‌ಗೆ ತಕ್ಕ ವಿಷಯವೋ ಅಲ್ಲವೋ ಎಂದು ನನಗೆ ಸಂದೇಹ. ಇಂಥ ಕೆಲವು ಅಭಿಪ್ರಾಯೋಕ್ತಿಗಳಿಂದ ಕೆಲವು ಸದಸ್ಯರಿಗೆ ಕಿರಿಕಿರಿಯುಂಟಾಗುತ್ತದೆ ಎಂದು ನಾನು ಬಲ್ಲೆನು. ಆದರೆ ಮಾನ್ಯ ಸದಸ್ಯರು ವಿಧೇಯಕವನ್ನು ಇಲಾಖಾ ವಿಧೇಯಕ ಎಂದು ಉಲ್ಲೇಖಿಸುವ ಮೂಲಕ ಆಯ್ಕೆ ಸಮಿತಿಯ ಸದಸ್ಯರು ವಿಚಾರಾಂಶಗಳನ್ನು ಪರಿಶೀಲಿಸಲಿಲ್ಲ ಎಂದು ಸೂಚಿಸುತ್ತಾರೆ ಎಂದು ನನಗನಿಸುವುದಿಲ್ಲ. ನಾನು ಗಮನಿಸುತ್ತಿರುವ ಸಂಕ್ಷೇಪದ ದೃಷ್ಟಿಯಿಂದ ಅಂದರೆ "ಆಯ್ಕೆ ಸಮಿತಿಯವರ ಪ್ರಯೋಜನಕ್ಕಾಗಿ ಇಲಾಖೆಯವರು ಪ್ರಾರೂಪಣ ಮಾಡಿದ ವಿಧೇಯಕ" ಎಂದು ಹೇಳುವುದಕ್ಕೆ ಬದಲಾಗಿ ಹಾಗೆ ಹೇಳುತ್ತಾರೆ. ಅದಕ್ಕಿಂತ ಆಚೆ ಅದು ಹೋಗುವುದಿಲ್ಲ ಮತ್ತು ನಾವು ಅದರಲ್ಲಿ ಹೆಚ್ಚಿನ ಅರ್ಥವನ್ನು ಕಾಣಬೇಕಾಗಿಲ್ಲ. ಇಲಾಖಾ ವಿಧೇಯಕ ಎಂದರೆ ಅದಕ್ಕೆ ಒಂದು ಚಿಕ್ಕ ಹೆಸರು. ನಾನು ಹಿಂದೆ ಒಂದು ಸಲ ತೋರಿಸಿಕೊಟ್ಟ ಹಾಗೆ ಇನ್ನೊಬ್ಬ ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಅಂದರೆ ಮಾಡಲಾದ ಎಲ್ಲ ಬದಲಾವಣೆಗಳು ಆಯ್ಕೆ ಸಮಿತಿ ಮಾಡಿದವುಗಳು ಎಂಬ ಅಂಶವನ್ನು ಎತ್ತಿದಾಗ ಮಾನ್ಯ ಸದಸ್ಯರು ಹಾಜರಿದ್ದರೋ ಇಲ್ಲವೋ ನನಗೆ ನೆನಪಿಲ್ಲ ಮತ್ತು ಈ ಬದಲಾವಣೆಗಳು ಮಹತ್ವಪೂರ್ಣ ಆಗಿದ್ದರೆ, ಆ ಕಾರಣ ವಿಧೇಯಕವನ್ನು ಮರಳಿ ಕಳಿಸಿಕೊಡಬೇಕು ಅಥವಾ ಮರಳಿ ಒಪ್ಪಿಸಬೇಕು ಎಂದು ಹೇಳಲು ಅವರಿಗೆ ಹಕ್ಕು ಇರುತ್ತದೆ. ಅದೇ ಅವರು ಎತ್ತಿದ ಪ್ರಶ್ನೆಯೆಂದು ತೋರುತ್ತದೆ. ಆದರೆ ಅವರು ಅದನ್ನು ತಮ್ಮದೇ ಆದ ಶೈಲಿಯಲ್ಲಿ ವಿವರಿಸುತ್ತ ಹೋಗಿದ್ದಾರೆ. ಸಂಕ್ಷೇಪದಲ್ಲಿ ಹೇಳಬಹುದಾಗಿರುವುದನ್ನು ವಿಸ್ತಾರವಾಗಿ ಹೇಳುತ್ತಿದ್ದಾರೆ.

**ಶ್ರೀಮತಿ ಜಿ. ದುರ್ಗಾಬಾಯಿ** : ನನ್ನ ಪ್ರಶ್ನೆಯೆಂದರೆ, ಅವರು ಆಯ್ಕೆ ಸಮಿತಿಯ ಸದಸ್ಯರು ಅಜ್ಞರು, ಅಪ್ರಬುದ್ಧರು ಎಂದು ಆರೋಪ ಮಾಡುತ್ತಾರೆ.

**ಮಿ। ನಝೀರುದ್ದೀನ್ ಅಹಮ್ಮದ್** : ಛೇ, ಹಾಗೇನೂ ಇಲ್ಲ. ನಾನು ಅಜ್ಞಾನವನ್ನು ಆರೋಪಿಸುತ್ತಿಲ್ಲ,

ಅಲಕ್ಷ್ಯವನ್ನು ಆರೋಪಿಸುತ್ತೇನೆ. ಇಲಾಖಾ ವಿಧೇಯಕವು ಅವರಿಗೆ ಏನೂ ಕೊಡಲಿಲ್ಲವಲ್ಲ ಎಂಬುದರಿಂದ ಸಹಜ ಅನುಮಾನ ಅಲಕ್ಷ್ಯದ ಸಂಬಂಧದಲ್ಲಿ. (ಚರ್ಚೆಗೆ ಅಡ್ಡಿ).

**ಮಿ। ಸ್ಪೀಕರ್ :** ಆರ್ಡರ್, ಆರ್ಡರ್.

**ಮಿ। ನಝೀರುದ್ದೀನ್ ಅಹಮ್ಮದ್** : ನಾನು **"ಅಜ್ಞಾನ"** ಎಂಬ ಪದಪ್ರಯೋಗವನ್ನು ಹಿಂತೆಗೆದುಕೊಳ್ಳುತ್ತೇನೆ. ಅದಕ್ಕೆ ಕಾರಣ ಇಲಾಖಾ ವಿಧೇಯಕದಲ್ಲಿ ಇಟ್ಟ ತಪ್ಪು ನಂಬಿಕೆ (ಚರ್ಚೆಗೆ ಅಡ್ಡಿ). ಈಗಲಾದರೂ ಅದು ಅವರಿಗೆ ಸ್ಪಷ್ಟವಾಗದಿದ್ದರೆ, ಮಾನ್ಯ ಸದಸ್ಯರು ಆ ಕುರಿತು ಇನ್ನೂ ಪೀಡಿತರಾಗಿದ್ದಾರಲ್ಲ ಎಂದು ಖೇದವೆನಿಸುತ್ತದೆ.

**ಮಿ। ಸ್ಪೀಕರ್** : ಮಾನ್ಯ ಸದಸ್ಯರು ಇನ್ನೊಂದು ರೀತಿಯಲ್ಲಿ ಮುಂದುವರಿಸಲಿ. ಅವರು ಈ ವಿಷಯಕ್ಕೆ ಹೆಚ್ಚು ಗಮನ ಕೊಡಬೇಕಾಗಿತ್ತು ಎಂದು ಹೇಳಲಿ.

**ಮಿ। ನಝೀರುದ್ದೀನ್ ಅಹಮ್ಮದ್** : ನಾನು ಹೇಳುವುದೂ ಅದನ್ನೇ. ವಾಸ್ತವವಾಗಿ ನನ್ನ ತರ್ಕದ ಬಗ್ಗೆ ನನಗೆ ಕಠೋರ ನುಡಿಗಟ್ಟು ಅಗತ್ಯವಿಲ್ಲ. ನಾನು ಪದಪ್ರಯೋಗಕ್ಕಿಂತ ಅನುಮಾನದ ಮೇಲೆ ಹೆಚ್ಚು ಅವಲಂಬಿಸುತ್ತೇನೆ. ನಾನು ಕಠೋರವಾದ ಪದಪ್ರಯೋಗ ಮಾಡಿದ್ದರೆ, ಅಸಂಸದೀಯ ಪದ ಅಲ್ಲದಿದ್ದಾಗ್ಯೂ, ನಾನು ಆ ಬಗ್ಗೆ ಕ್ಷಮೆ ಕೇಳುತ್ತೇನೆ. ಪ್ರಶ್ನೆಯೆಂದರೆ, ನಾವು ಪುನಃ.........

**ಮಿ। ಸ್ಪೀಕರ್** : ಅವರು ಅದನ್ನು ಪುನಃ ಉಚ್ಚರಿಸಬೇಕಾಗಿಲ್ಲ. ತಮ್ಮ ವಾದವನ್ನು ಮುಂದುವರಿಸಬಹುದು.

**ಮಿ। ನಝೀರುದ್ದೀನ್ ಅಹಮ್ಮದ್** : ಇನ್ನೊಂದು ಅಂಶವೆಂದರೆ, ಆಯ್ಕೆ ಸಮಿತಿಯವರಿಗೆ ಸಾಕಷ್ಟು ಅಥವಾ ಯಾವುದೇ ಸ್ಪಷ್ಟ ಸೂಚನೆ ಕೊಡದೆಯೆ ಮಹತ್ವಪೂರ್ಣ ಬದಲಾವಣೆಗಳನ್ನು ಮಾಡಲಾಗಿದೆಯಷ್ಟೇ ಅಲ್ಲದೆ........

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಅದನ್ನೇ ನಾವು ಆಕ್ಷೇಪಿಸ ಬಯಸುತ್ತೇವೆ. ಅವರು ಹಾಗೆ ಹೇಳುವಂತಿಲ್ಲ. ಅದನ್ನು ನಾವು ಪೂರ್ಣವಾಗಿ ಬಲ್ಲವರಾಗಿದ್ದೆವು.

**ಮಿ। ನಝೀರುದ್ದೀನ್ ಅಹಮ್ಮದ್** : ಮಾನ್ಯ ಕಾನೂನು ಮಂತ್ರಿಗಳಿಗೆ ಬದಲಾವಣೆಗಳ ಬಗ್ಗೆ ಅರಿವು ಇಲ್ಲದಿದ್ದರೆ ಮತ್ತು ಆಯ್ಕೆ ಸಮಿತಿಯ ಸದಸ್ಯರು ಯಾವುವು ಆ ಮಹತ್ವಪೂರ್ಣ ಬದಲಾವಣೆಗಳು ಎಂದು ಪುನಃ ಪುನಃ ನನ್ನ ಕೇಳುತ್ತಿದ್ದರೆ ಅದರ ಅರ್ಥವಿಷ್ಟೆ. ಅವರಿಗೆ ಆ ಬಗ್ಗೆ ಏನೂ ಗೊತ್ತಾಗಿಲ್ಲ. ಮತ್ತು ಅವರು ಆ ಬದಲಾವಣೆಗಳು ಏನೆಂದು ತಿಳಿಯದೆಯೆ ಅವುಗಳನ್ನು ಒಪ್ಪಿಕೊಂಡಿದ್ದಾರೆ. ನನಗೆ ಅನಿಸುವುದೇನೆಂದರೆ, ವಿಧೇಯಕವನ್ನು ಸುಧಾರಿಸುತ್ತಿದ್ದೇನೆ ಎಂದು ಆಲೋಚಿಸುವ ಯಾರೋ ಅತ್ಯುತ್ಸಾಹೀ ಪ್ರಾರೂಪಕಾರನು ಕರಡು ರೂಪಕನು ಈ ಬದಲಾವಣೆಗಳನ್ನು ಸೇರಿಸಿದ್ದಾನೆ ಮತ್ತು ತಾನು ಆ ಮೂಲಕ ಒಟ್ಟಾಗಿ ಹೊಸ ವಿಧೇಯಕವನ್ನೇ ರಚಿಸುತ್ತಿರುವೆನು ಎಂಬ ಅರಿವಿಲ್ಲದೆಯೆ ಬದಲಾವಣೆಗಳನ್ನು ಮಾಡಿದ್ದುಂಟು. ಈ ಪ್ರಕ್ರಿಯೆಯ ರಹಸ್ಯ ಯಾರಿಗೂ ಗೊತ್ತಾದಂತಿಲ್ಲ.

**ಮಾನ್ಯ ಡಾ। ಬಿ.ಆರ್. ಅಂಬೇಡ್ಕರ್ :** ನಾನು ನಿಜವಾಗಿಯೂ ಇದನ್ನು ಕುರಿತು ಪ್ರತಿಭಟಿಸಲೇಬೇಕು. ಇದು ಪ್ರಾರೂಪಕಾರನ ಬಗ್ಗೆ ಗಂಭೀರವಾದ ಮಿಥ್ಯಾರೋಪ. ನನ್ನ ಸ್ನೇಹಿತರು ಸರಿಸುಮಾರಾಗಿ ಸೂಚಿಸುವುದೆಂದರೆ, ಆಯ್ಕೆ ಸಮಿತಿಯು ಪ್ರತಿಯೊಂದು ಬಾಬನ್ನು ಪರಿಶೀಲಿಸಿದ ತರುವಾಯ ಪ್ರಾರೂಪಕಾರನು ವಿಧೇಯಕವನ್ನು ತನ್ನ ಕೈಗೆ ತೆಗೆದುಕೊಂಡು ತನಗೆ ತೋಚಿದ ಹಾಗೆ ಬದಲಾವಣೆಗಳನ್ನು ಮಾಡಿದ್ದಾನೆ. ನಾನು ಅದರ ವಿರುದ್ಧ ಪ್ರಬಲ ವಿರೋಧವನ್ನು ವ್ಯಕ್ತಪಡಿಸುತ್ತೇನೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ಮಾತ್ರವಲ್ಲದೆ ಅವರು ಆಯ್ಕೆ ಸಮಿತಿಯ ಸದಸ್ಯರ ವಿರುದ್ಧ ವ್ಯಂಗ್ಯ

ವ್ಯಕ್ತಗೊಳಿಸುವುದನ್ನು ನಾವು ಪ್ರತಿಭಟಿಸುತ್ತೇವೆ.

**ಮಿ। ಸ್ಪೀಕರ್ :** ಆಯ್ಕೆ ಸಮಿತಿಯ ವರದಿಯ ಅನಂತರ ಮಾಡಲಾದ ಬದಲಾವಣೆಗಳೆ?

**ಮಾನ್ಯ ಡಾ। ಬಿ.ಆರ್. ಅಂಬೇಡ್ಕರ್** : ಅವರು ಸೂಚಿಸುತ್ತಿರುವುದು ಅದನ್ನೇ.

**ಮಿ। ಸ್ಪೀಕರ್** : 'ಮುಂಚೆ' ಎಂದು ಅವರ ಅರ್ಥ.

**ಮಿ। ನಝೀರುದ್ದೀನ್ ಅಹಮ್ಮದ್** : ಹೌದು ಸ್ವಾಮಿ, ನನಗೆ ಖಂಡಿತವಾಗಿ ಗೊತ್ತು. ಆಯ್ಕೆ ಸಮಿತಿ ಸಭೆ ಸೇರುವ ಮುನ್ನವೇ ಮಾಡಲಾದ ಬದಲಾವಣೆ ಎಂದು ನಾನು ಹೇಳಿದ ಹಾಗೆ ನೆನಪುಂಟು.

**ಮಿ। ಸ್ಪೀಕರ್** : ಒಂದಿಷ್ಟು ತಪ್ಪು ತಿಳಿವಳಿಕೆ ಆದ ಹಾಗೆ ತೋರುತ್ತದೆಯಲ್ಲ.

**ಮಾನ್ಯ ಡಾ। ಬಿ.ಆರ್. ಅಂಬೇಡ್ಕರ್** : ನನಗೇನೂ ಕಲ್ಪನೆ ಇಲ್ಲ. ನನ್ನ ಸ್ನೇಹಿತರ ಭಾಷಣದ ಅರ್ಥ ನಾನು ತಿಳಿದುಕೊಂಡ ಹಾಗೆ, ಅದರ ಸರಳ ಅರ್ಥ ಇಷ್ಟೆ; ಆಯ್ಕೆ ಸಮಿತಿಯು ಯಾವುದೇ ಬಾಬನ್ನು ಪರಿಶೀಲಿಸದೆಯೆ ಕಣ್ಮುಚ್ಚಿ ವರದಿಗೆ ಸಹಿ ಮಾಡಿದೆ ಅಥವಾ ಆಯ್ಕೆ ಸಮಿತಿಯು ಅದರ ಕೆಲಸವನ್ನು ಪೂರೈಸಿದ ಅನಂತರ ಪ್ರಾರೂಪಕಾರನು ವಿಧೇಯಕವನ್ನು ತನ್ನ ಕೈಗೆ ತೆಗೆದುಕೊಂಡು ತನಗೆ ತೋಚಿದ ಬದಲಾವಣೆಗಳನ್ನು ಸೇರಿಸಿದ್ದಾನೆ.

**ಮಿ। ನಝೀರುದ್ದೀನ್ ಅಹಮ್ಮದ್** : ಆ ಬದಲಾವಣೆಗಳನ್ನು ಸದ್‌ಭಾವನೆಯಿಂದ (ಸದಾಶಯದಿಂದ) ಮಾಡಲಾಯಿತೆ ಅಥವಾ ದುರ್‌ಭಾವನೆಯಿಂದ ಮಾಡಲಾಯಿತೆ ಎಂಬ ಸಂಗತಿ ನಾವು ಪರಿಶೀಲಿಸಬೇಕಾದಷ್ಟು ಮುಖ್ಯ ಸಂಗತಿಯಲ್ಲ.

**ಮಿ। ಸ್ಪೀಕರ್:** ಮಾನ್ಯ ಸದಸ್ಯರ ಪ್ರಶ್ನೆಯೆಂದರೆ ಅವರು ಮಹತ್ವಪೂರ್ಣವೆಂದು ಭಾವಿಸುವಂಥ ಬದಲಾವಣೆಗಳನ್ನು ಮಾಡಲಾಗಿದೆ. ಅದೇ ಅವರ ಪ್ರಶ್ನೆ.

**ಮಾನ್ಯ ಡಾ। ಬಿ.ಆರ್. ಅಂಬೇಡ್ಕರ್** : ಯಾರೇ ಸ್ನೇಹಿತರು ಆಯ್ಕೆ ಸಮಿತಿಯವರಿಂದ ಮಾಡಲಾಗಿದೆ ಎಂದು ಅವರು ಭಾವಿಸುವಂಥ ಬದಲಾವಣೆಗಳನ್ನು ಕ್ರಮಶಃ ಒಂದೊಂದಾಗಿ ಹೇಳುತ್ತ ಹೋದರೆ ನಾನು ಕೇಳಲು ಸಿದ್ಧನಿದ್ದೇನೆ. ಕೆಲವು ನಿರ್ದಿಷ್ಟ ಬದಲಾವಣೆಗಳನ್ನು ಮಾಡಲಾಗಿದೆ ಎಂದು ಭಾವನೆ ಮಾಡಿಕೊಂಡರೆ, ವಿಧೇಯಕವನ್ನು ಇನ್ನೊಮ್ಮೆ ಪರಿಚಲಿಸಲು ಅದು ಸಾಕಷ್ಟು ಕಾರಣವಾಗುವುದೆ ಹೇಗೆ ಎಂದು ತಿಳಿಯಬಯಸುತ್ತೇನೆ.

**ಮಿ। ನಝೀರುದ್ದೀನ್ ಅಹಮ್ಮದ್** : ಹಾಗೇನೂ ಇಲ್ಲ. ಬದಲಾವಣೆಗಳನ್ನು ಆಯ್ಕೆ ಸಮಿತಿಯವರು ಮಾಡಿದ್ದು ಎಂದು ನಾನು ಎಂದೂ ಹೇಳಲಿಲ್ಲ.

**ಮಿ। ಸ್ಪೀಕರ್ :** ಮಾನ್ಯ ಸದಸ್ಯರಿಗೆ ನಾನು ಸೂಚಿಸಬಯಸುವುದು ಇಷ್ಟೆ: ಅವರ ಅಭಿಪ್ರಾಯದಲ್ಲಿ ಕೆಲವು ಮಹತ್ವಪೂರ್ಣ ಸ್ವಭಾವದ ಬದಲಾವಣೆಗಳನ್ನು ಮಾಡಲಾಗಿದೆ ಎಂದು ಭಾವನೆ ಮಾಡಿಕೊಂಡರೆ, ಅವರಿಗೆ ವಾದಮಾಡಲು ಪ್ರಬಲ ಆಧಾರವುಂಟು ಮತ್ತು ಅವರು ಬದಲಾವಣೆಗಳನ್ನು ಅಜ್ಞಾನದಿಂದ ಮಾಡಲಾಯಿತೆ ಅಥವಾ ದುರ್ಭಾವನೆಯಿಂದ ಮಾಡಲಾಯಿತೆ ಎಂದು ಹೇಳುವ ಕಾರಣವಿಲ್ಲ. ಆಯ್ಕೆ ಸಮಿತಿಯು ತೆರೆದ ಮನಸ್ಸಿನಿಂದ ಸಕಲ ವಿಷಯಗಳನ್ನು ಪರ್ಯಾಲೋಚಿಸಿ ಬದಲಾವಣೆಗಳನ್ನು ಮಾಡಬಹುದಾಗಿತ್ತು. ಆದರೂ, ಅವರು ಅವು ಮಹತ್ವಪೂರ್ಣ ಸ್ವರೂಪದ ಬದಲಾವಣೆಗಳು ಎಂದು ಭಾವಿಸುತ್ತಾರೆ ಮತ್ತು ಆ ಕಾರಣ ಅದನ್ನು ಪುನಃ ಪರಿಚಲಿಸಬೇಕು ಎಂದು ಹೇಳುತ್ತಾರೆ. ಅವರು ಮಹತ್ವಪೂರ್ಣ ಎಂದು ನಂಬುವಂಥ ಈ ಬದಲಾವಣೆಗಳು, ಮಹತ್ವಪೂರ್ಣ ಎಂದು ಎಲ್ಲರೂ ಅಗತ್ಯವಾಗಿ, ಅನಿವಾರ್ಯವಾಗಿ ಭಾವಿಸಬೇಕಾಗಿಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್ :** ಆಯ್ಕೆ ಸಮಿತಿಯು ಮಾಡಿದ ಬದಲಾವಣೆಗಳು ಯಾವುವು ಎಂದು ತೋರಿಸಿಕೊಡುವುದು ನನ್ನ ಕೆಲಸ ಎಂದು ಮಾನ್ಯ ಕಾನೂನು ಮಂತ್ರಿಗಳು ಹೇಳುತ್ತಾರೆ. ಆಯ್ಕೆ ಸಮಿತಿಯು ಮಾಡಿದ ಬದಲಾವಣೆಗಳತ್ತ ಸದನದ ಗಮನವನ್ನು ಸೆಳೆಯುತ್ತಲೇ ಇಲ್ಲ ಎಂಬುದನ್ನು ತೋರಿಸಿಕೊಡಲು ಹೆಣಗಾಡುತ್ತಿದ್ದೇನೆ. ನಾನು ಗಮನ ಸೆಳೆಯುತ್ತಿರುವೆನು ಎಂಬ ಅಂಶವು ಮಾನ್ಯ ಮಂತ್ರಿಗಳನ್ನು ಕಾಡುತ್ತಿದೆ ಎಂದು ನನ್ನ ಅನಿಸಿಕೆಯಾಗಿದೆ.

**ಮಾನ್ಯ ಡಾ। ಬಿ.ಆರ್. ಅಂಬೇಡ್ಕರ್** : ಹಾಗೇನೂ ಇಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್** : ಅಂಥ ಬದಲಾವಣೆಗಳನ್ನು ಆಯ್ಕೆ ಸಮಿತಿಯವರು ಮಾಡಿದ್ದು ಎಂದು ಅವರೇ ವಾಸ್ತವವಾಗಿ ಹೇಳುತ್ತಿದ್ದಾರೆ. ನಾನು ಈವರೆಗೆ ನಮೂದಿಸುತ್ತಿರುವ ಬದಲಾವಣೆಗಳು ಆಯ್ಕೆ ಸಮಿತಿಯು ಮಾಡಿದ ಬದಲಾವಣೆಗಳು.

**ಮಿ। ಸ್ಪೀಕರ್ :** ಆರ್ಡರ್, ಆರ್ಡರ್, ಅಲ್ಲಿದೆ ಘರ್ಷಣೆಯ ಕಾರಣ. ಆ ಬದಲಾವಣೆಗಳನ್ನು ಯಾರು ಮಾಡಿದರೇನು, ಅವುಗಳನ್ನು ಆಯ್ಕೆ ಸಮಿತಿಯು ಅಂಗೀಕರಿಸುವವರೆಗೆ ತದನಂತರ ಅವು ಆಯ್ಕೆ ಸಮಿತಿಯು ಮಾಡಿದ ಬದಲಾವಣೆಗಳು ಆಗುತ್ತವೆಯೇ ಹೊರತು ಆಯ್ಕೆ ಸಮಿತಿಗೆ ಗೊತ್ತಿಲ್ಲದ ಹಾಗೆ ಇನ್ನಾರೋ ಮಾಡಿದ ಬದಲಾವಣೆಗಳು ಆಗುವುದಿಲ್ಲ. ಆದಕಾರಣ ಅವರು ಪರೋಕ್ಷ ಸಂಕೇತವನ್ನು ಮಾಡುವ ಅಥವಾ ದೃಢ ಹೇಳಿಕೆ ನೀಡುವ ಅಗತ್ಯವಿಲ್ಲ. ಅವುಗಳನ್ನು ಯಾರು ಮಾಡಿದ್ದರೂ ಸರಿಯೆ ಒಂಟಿ ಸದಸ್ಯರ ಅಥವಾ ಕಾನೂನು ಮಂತ್ರಿಗಳು ಅಥವಾ ಕರಡು ರಚನಾ ಸಮಿತಿಯ ಅಥವಾ ಯಾರೇ ಇತರರ ಕೋರಿಕೆಯ ಮೇರೆಗೆ ಮಾಡಿದ್ದರೂ ಸರಿಯೆ, ಈ ಬದಲಾವಣೆಗಳನ್ನು ಮಾಡಿದವರು ಆಯ್ಕೆ ಸಮಿತಿಯವರು ಎಂದು ಭಾವನೆ ಮಾಡಿಕೊಂಡು, ತಮ್ಮ ಮಾತನ್ನು ಮುಂದುವರಿಸಬೇಕು ಮತ್ತು ಅವು ಮಹತ್ವಪೂರ್ಣ ಬದಲಾವಣೆಗಳು ಎಂದು ತೋರಿಸಲು ಮುಂದಾಗಬೇಕು.

**ಮಿ। ನಝೀರುದ್ದೀನ್ ಅಹಮ್ಮದ್** : ನನ್ನ ಕಷ್ಟ ಎಂದರೆ, ನಾನು ಅಲ್ಲಿಗೇ ನಿಲ್ಲಲಾರೆನು. ಬದಲಾವಣೆಗಳನ್ನು ಕರಡು ರಚನಾ ಸಮಿತಿಯು ಮಾಡಲಿಲ್ಲವೆಂದು, ಅವುಗಳನ್ನು ಸೇರಿಸಿದವರು ಆಯ್ಕೆ ಸಮಿತಿಯವರು ಎಂದು ಮಾನ್ಯ ಕಾನೂನು ಮಂತ್ರಿಗಳು ಅಗ್ರಹಪಡಿಸುತ್ತಾರೆ. ಅಂದ ಮೇಲೆ, ಕರಡು ರಚನಾ ಸಮಿತಿಯು ಸೇರಿಸಿದ ಬದಲಾವಣೆಗಳನ್ನು ಆಯ್ಕೆ ಸಮಿತಿಯು ನಿಷ್ಠೆಯಿಂದ ಮತ್ತು ಸದ್‌ಭಾವನೆಯಿಂದ ಅಂಗೀಕರಿಸಿತು ಎಂದು ಅತ್ಯಂತ ಸ್ಪಷ್ಟವಾಗುತ್ತದೆ. ಹಾಗಿದ್ದರೆ, ಆಯ್ಕೆ ಸಮಿತಿಯು ಬದಲಾವಣೆಗಳನ್ನು ಅಂಗೀಕರಿಸುವಾಗ, ಅವು ಬದಲಾವಣೆಗಳು ಎಂದು ಗೊತ್ತಿದ್ದೂ, ಅತ್ತ ಲಕ್ಷ್ಯ ಪೂರೈಸಲಿಲ್ಲ ಎಂದಾಯಿತು. ಈ ಬದಲಾವಣೆಗಳನ್ನು ಇಲಾಖಾ ಸಮಿತಿಯು ಸೇರಿಸಿದೆ ಎಂದು; ಮಾನ್ಯ ಕಾನೂನು ಮಂತ್ರಿಗಳಿಗೆ ಗೊತ್ತಿಲ್ಲದಿರುವ ಹಾಗೆ, ಆಯ್ಕೆ ಸಮಿತಿಗೆ ಗೊತ್ತಿಲ್ಲದಿದ್ದರೆ, ಹಾಗೆ ಮಾಡಲಾದ ಬದಲಾವಣೆಗಳನ್ನು ಅವರು ಪೂರ್ಣವಾಗಿ ಒಪ್ಪಿಗೆಯಿಲ್ಲದೆಯೆ, ತಾಂತ್ರಿಕವಾಗಿ ಅಂಗೀಕರಿಸಿದರು. ಆ ಮೂಲಕವೇ ನನ್ನ ಪ್ರಕರಣವು ಇನ್ನಷ್ಟು ಬಲಗೊಂಡಿತು. ಆಯ್ಕೆ ಸಮಿತಿಯು ಸ್ವಂತ ಇಚ್ಛೆಯಿಂದಲೇ ಮಾಡಿದ ಬದಲಾವಣೆಗಳು ಮಾತ್ರವೇ ಅಲ್ಲ, ಆದರೆ, ತಾವು ಮಹತ್ವಪೂರ್ಣ ಬದಲಾವಣೆಗಳನ್ನು ಮಾಡುತ್ತಿದ್ದೇವೆ ಎಂಬುದರ ಮನವರಿಕೆಯಿಲ್ಲದೆಯೆ ಅವರು ಮಾಡಿದ ಮಹತ್ವಪೂರ್ಣ ಸ್ವರೂಪದ ಬದಲಾವಣೆಗಳು ನನ್ನ ವಾದವನ್ನು ಇನ್ನಷ್ಟು ಪ್ರಬಲಗೊಳಿಸಿದೆ. ನಿಜವೆಂದರೆ, ಇಲಾಖಾ ವಿಧೇಯಕವು ಯಾವುದೇ ಮಹತ್ವಪೂರ್ಣ ಬದಲಾವಣೆ ಇಲ್ಲದ ಕೇವಲ ಕರಡಿನ ಪುನರ್ ನಿರೂಪಣೆಯಾಗಿತ್ತು ಎಂದು ಅವರು ಭಾವಿಸಿದಂತೆ ತೋರುತ್ತದೆ. ಇದಕ್ಕೆ ಪುಷ್ಟಿಯಾಗುವ, ಸಮರ್ಥನೆಯಾಗುವ ಸಂಗತಿ ಎಂದರೆ, ಕಾನೂನು ಮಂತ್ರಿಗಳು ಸಹ ನಾನು

ಆಯ್ಕೆ ಸಮಿತಿಯವರು ಮಾಡಿದ ಬದಲಾವಣೆಗಳನ್ನು ತೋರಿಸಿ ಕೊಡುತ್ತಿದ್ದೇನೆ ಎಂದು ಭಾವಿಸಿದ್ದಾರೆ. ಅದಕ್ಕಾಗಿಯೇ ನಾನು, ಆಯ್ಕೆ ಸಮಿತಿಯವರ ಗಮನವನ್ನು ನಿರ್ದಿಷ್ಟವಾಗಿ ಬದಲಾವಣೆಗಳತ್ತ ಸೆಳೆಯಲಾಗಿಲ್ಲ ಎಂಬುದಾಗಿ ತರ್ಕಮಾಡಲು ಅನಿವಾರ್ಯವಾಗಿ ಪ್ರಯತ್ನಿಸುತ್ತಿದ್ದೇನೆ. ಯಾವುದೇ ಆರೋಪವನ್ನು ಹೊರಿಸದೆಯೆ, ನಾವು ತಪ್ಪುಗಳನ್ನು, ಕಣ್ತಪ್ಪುಗಳನ್ನು ಅಥವಾ ಸದ್‌ಭಾವನಾ ದೋಷಗಳನ್ನು ಕುರಿತು ವಾದಮಾಡಬಹುದು. ನನ್ನ ಈ ನಿಲುವನ್ನು ಇದಕ್ಕಿಂತ ನಿಚ್ಚಳವಾದ ರೀತಿಯಲ್ಲಿ ನಿರೂಪಿಸಲಾರೆನು.

ಸ್ವಾಮೀ, ಆಯ್ಕೆ ಸಮಿತಿಯ ಸದಸ್ಯರಾಗಲಿ ಅಥವಾ ಕಾನೂನು ಇಲಾಖೆಯ ಮಂತ್ರಿಗಳಾಗಲಿ ಈ ಬಗ್ಗೆ ವಿಶೇಷ ಸಂವೇದನಶೀಲರಾಗಬೇಕಾಗಿಲ್ಲ. ನಿಜವೆಂದರೆ ಮಾನ್ಯ ಕಾನೂನು ಮಂತ್ರಿಗಳು ಸಹ ತಾವು ಯಾವುದೇ ಬದಲಾವಣೆ ಮಾಡಿಲ್ಲ ಎಂದು ಒಪ್ಪಿಕೊಳ್ಳುತ್ತಾರೆ ಮತ್ತು ಆಯ್ಕೆ ಸಮಿತಿಯವರು ಮಾಡಿದ ಬದಲಾವಣೆಗಳನ್ನು ನಾನು ತೋರಿಸಿಕೊಡುವೆನು ಎಂದು ಭಾವಿಸುತ್ತಾರೆ. ಅವುಗಳನ್ನು ಅಂಗೀಕರಿಸಲಾಗಿದೆ. ನಿಮ್ಮ ರೂಲಿಂಗ್ ಅನ್ನು ಅನಿವಾರ್ಯವಾಗಿ ಅಂಗೀಕರಿಸಬೇಕಲ್ಲವೆ? ಅವರು ಈ ಬದಲಾವಣೆಗಳನ್ನು ಅಂಗೀಕರಿಸಿರಬೆಕು. ಆದರೆ ನಾನು ಎತ್ತಿ ತೋರಿಸುವ ಪ್ರಶ್ನೆ ಎಂದರೆ, ಅವರಿಗೆ ಈ ಬಗ್ಗೆ ಅರಿವು ಇಲ್ಲದಿರುವ ಕಾರಣ, ಪ್ರಜ್ಞೆಯನ್ನಾಗಲಿ ಅಥವಾ ಕಾನೂನು ಚಿತ್ತವನ್ನಾಗಲಿ ಅತ್ತ ನಿರ್ದೇಶಿಸಿರಲಿಲ್ಲ. ಆ ದಿನ ಕಾನೂನು ಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರ ನೀಡುತ್ತ ಇಲಾಖಾ ಸಮಿತಿಯು ಯಾವುದೇ ಮಹತ್ವಪೂರ್ಣ ಬದಲಾವಣೆ ಸೇರಿಸಿಲ್ಲ ಎಂದು ಒತ್ತಿ ಹೇಳಿದರು. ಮಹತ್ವಪೂರ್ಣ ಬದಲಾವಣೆಗಳಂತೂ ಇವೆ. ಆದರೆ ಇಲಾಖಾ ವಿಧೇಯಕದಲ್ಲಿ ಆ ಬಗ್ಗೆ ಸೂಚನೆ ಇಲ್ಲ. ಆದ್ದರಿಂದ ಪರೋಕ್ಷ ವ್ಯಂಗ್ಯದ ಪ್ರಶ್ನೆ ಉದ್ಭವಿಸುವುದಿಲ್ಲ.

**ಮಿ। ಸ್ಪೀಕರ್ :** ಆ ಪ್ರಶ್ನೆಯನ್ನು ನಾವು ಪುನಃ ಪರಿಶೀಲಿಸುವುದು ಬೇಡ.

**ಮಿ। ನಝೀರುದ್ದೀನ್ ಅಹಮ್ಮದ್ :** ಇದು ಒಂದು ಮಹತ್ವಪೂರ್ಣ ಬದಲಾವಣೆ ಸ್ವಾಮೀ, ನಾನು ಗಟ್ಟಿ ನೆಲದ ಮೇಲೆ ನಡೆಯುತ್ತಿದ್ದೇನೆಂದು ಭಾವಿಸಿದ್ದೆನು. ಸ್ವಯಂ ಸ್ಪಷ್ಟವಾಗಿರುವ ವಿಷಯಗಳನ್ನು ಎತ್ತಿ ತೋರಿಸಿದ ಕಾರಣ ಆಯ್ಕೆ ಸಮಿತಿಯ ಸದಸ್ಯರ ಮನಸ್ಸಿಗೆ ನೋವಾಗಿದ್ದರೆ, ನಾನು ಆ ಬಗ್ಗೆ ವಿಷಾದಿಸುತ್ತೇನೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ನೀವು ಸದಸ್ಯರ ಬಗ್ಗೆ ಪರೋಕ್ಷ ವ್ಯಂಗ್ಯವನ್ನು ವ್ಯಕ್ತಪಡಿಸುವಂತಿಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್ :** ಪರೋಕ್ಷ ವ್ಯಂಗ್ಯ ಎಂದರೇನು? ಅವರು ತಪ್ಪು ಮಾಡಿದ ಬಗ್ಗೆ? ತಪ್ಪು ಮಾಡುವುದು ಮನುಷ್ಯ ಸಹಜ. ಆಯ್ಕೆ ಸಮಿತಿಯ ಸದಸ್ಯರು ಮನುಷ್ಯ ಜಾತಿಗೆ ಸೇರಿದವರೇ ಎಂದು ಅದು ಸೂಚಿಸುತ್ತಿದೆ.

**ಶ್ರೀ. ಬಿ. ದಾಸ್** : ಕ್ರಿಯಾಲೋಪವನ್ನು ಎತ್ತಿ ಮಾತಾಡುತ್ತೇನೆ. ಸ್ವಾಮೀ, ಮಾನ್ಯ ಸದಸ್ಯರು ಮೂರು ತಿಂಗಳಿಂದ ಎಡೆಬಿಡದೆ ಆಯ್ಕೆ ಸಮಿತಿಯ ದೋಷಗಳನ್ನು ಎತ್ತಿತೋರಿಸುತ್ತ ಇರಬಹುದೇ ಎಂಬ ಪ್ರಶ್ನೆಯನ್ನು ಎತ್ತಲಾಯಿತು. ಅದು ಇತ್ಯರ್ಥವೂ ಆಯಿತು. ಅವರ ಮಾತುಗಳನ್ನು ನಾನು ಒಪ್ಪುತ್ತೇನೆಯೋ ಇಲ್ಲವೊ ಆ ಪ್ರಶ್ನೆ ಬೇರೆ. ಆದರೆ ಮಾನ್ಯ ಸದಸ್ಯರು ದೀರ್ಘಸೂತ್ರೀ ಶೈಲಿಯಲ್ಲಿ ಮಾತನಾಡುತ್ತ ಹೋಗುವಂತಿಲ್ಲ. ನನ್ನ ಸ್ನೇಹಿತ ಬೈಜನಾಥ ಬಜೋರಿಯಾ ಅವರು ಕೆಲವು ವರ್ಷಗಳ ಹಿಂದೆ ಬಾಲವಿವಾಹ ಕಾಯ್ದೆ ತಿದ್ದುಪಡಿ ವಿಧೇಯಕದ ಮೇಲೆ ಮಾತನಾಡುವಾಗ ಇದೇ ಬಗೆಯ ಕಾಲಹರಣ ಶೈಲಿಯನ್ನು ಅನುಸರಿಸಿದ್ದರು. ಅವರು ಶಾಸ್ತ್ರಗ್ರಂಥಗಳಿಂದ ಉದ್ಧರಿಸುತ್ತಿದ್ದರು ಮತ್ತು ಮಹಾಭಾರತ ಮತ್ತು ಇತರ ಕೃತಿಗಳಿಂದ ಓದಿ ಹೇಳುತ್ತಿದ್ದರು. ಇಲ್ಲಿ ನನ್ನ ಸ್ನೇಹಿತ ಮಿ। ನಝೀರುದ್ದೀನ್ ಅಹಮ್ಮದ್ ಅವರು ಕಳೆದ ಮೂರು ತಿಂಗಳಿಂದ ಪಾಪದ ಆಯ್ಕೆ ಸಮಿತಿಯ ಮೇಲೆ ಸುತ್ತಿಗೆ ಬಡಿತ ಹಾಕುತ್ತಿದ್ದಾರೆ. ಸ್ವಾಮಿ, ಇದೇನು ಕಾನೂನು ನ್ಯಾಯಾಲಯವಲ್ಲ. ಹಿಂದೂ ಕೋಡ್ ವಿಧೇಯಕವನ್ನು ಅವರು ಯಾಕೆ ವಿರೋಧಿಸುತ್ತಾರೆ, ಯಾಕೆ

ಅದನ್ನು ತೀರ್ಣಗೊಳಿಸಕೂಡದು ಎಂಬ ಬಗ್ಗೆ ಅವರ ಅಭಿಪ್ರಾಯಗಳನ್ನು ಸಾದರಪಡಿಸುವಂತೆ ಅವರನ್ನು ನೀವು ಕೇಳಬೇಕು. ಆಯ್ಕೆ ಸಮಿತಿಯ ವಿರುದ್ಧವಾಗಿ ಆಗೊಮ್ಮೆ ಈಗೊಮ್ಮೆ ಮಾತಾಡುತ್ತ ಹೋಗುವುದೇಕೆ? ಈ ಸದನದ ಅತ್ಯಂತ ಹಿರಿಯ ಸದಸ್ಯನಾಗಿರತಕ್ಕ ನನಗೂ ಇದು ಅರ್ಥವಾಗುತ್ತಿಲ್ಲ.

**ಮಿ। ಸ್ಪೀಕರ್** : ಮಾನ್ಯ ಸದಸ್ಯರು ಮಹತ್ವಪೂರ್ಣ ಬದಲಾವಣೆಗಳನ್ನು ಮಾತ್ರ ಸೂಚಿಸಬಹುದು.

**ಮಿ। ನಝೀರುದ್ದೀನ್ ಅಹಮ್ಮದ್** : ಸರಿ, ಸ್ವಾಮೀ.

ಸ್ವಾಮೀ, ನನ್ನ ಭಾಷಣವನ್ನು ದೀರ್ಘಸೂತ್ರಿ ಭಾಷಣ, ಕಾಲಹರಣಕಾರೀ ಭಾಷಣ ಎಂದು ಕರೆದಿದ್ದಕ್ಕೆ ನಾನು ಆಕ್ಷೇಪಿಸುತ್ತೇನೆ. ಮಾನ್ಯ ಸದಸ್ಯರು ಮಿತಿಮೀರಿ ಒಂದಿಷ್ಟು ಮುಂದೆ ಹೋಗುತ್ತಿದ್ದಾರೆ ಎಂದು ನನ್ನ ಭಾವನೆ. ಅವರು ತಮ್ಮ ಚಿತ್ತಕ್ಕೆ ಬೀಗ ಬಡಿದಿದ್ದಾರೆ ಮತ್ತು ಯಾರನ್ನೂ ಏನನ್ನೂ ಕೇಳುವ ಮನೋಭಾವನೆಯಲ್ಲಿ ಇಲ್ಲ ಎಂದು ನನ್ನ ಅನಿಸಿಕೆ.

ಸ್ವಾಮೀ, ತಾವು ಇದನ್ನು ಪರ್ಯಾಲೋಚಿಸಿ ನೋಡಿ. ಆಮೇಲೆ ನಿರ್ಧರಿಸಿ. ನಾನು ಒಂದಿಷ್ಟಾದರೂ ಅಪ್ರಸ್ತುತವಾದ ಅಥವಾ ತಪ್ಪಾದ ಮಾತುಗಳನ್ನು ಆಡುತ್ತಿರುವೆನೆ, ನೀವೇ ನಿರ್ಧರಿಸಿ. ಬದಲಾವಣೆಯು ಪ್ರಕಟವಾಗಿ ಮಹತ್ವಪೂರ್ಣ ಆಗಿದ್ದ ಹೊರತು, ಅದು ಹಿಂದೂ ಶಾಸನದ ಮೂಲ ಪಾಠಗಳನ್ನು ಮತ್ತು ನಿಯಮಗಳನ್ನು ಮತ್ತು ಸರ್ವೋಚ್ಚ ನ್ಯಾಯಾಲಯವು ನೀಡುವ ಆ ಸಂಬಂಧವಾದ ಅರ್ಥವಿವರಣೆಗಳನ್ನು ವರ್ಜಿತಗೊಳಿಸುವುದು ಸುಸ್ಪಷ್ಟವೇ. ಮೂಲ ವಿಧೇಯಕವು ಅಂಥ ಏನನ್ನೂ ಒಳಗೊಂಡಿರಲಿಲ್ಲ. ಅದು, ಸಕಲ ನ್ಯಾಯದೃಷ್ಟಿಯಿಂದ ನೋಡಲಾಗಿ, ಒಂದು ಮಹತ್ವಪೂರ್ಣ ಬದಲಾವಣೆ ಅಲ್ಲವೆ? ಮಿ। ದಾಸ್ ಅವರು ಕಾನೂನು ವಿಷಯಗಳಿಗೆ ಕಿವಿಗೊಡುವುದಿಲ್ಲ. ಅವರು ಹಣಕಾಸು ವಿಷಯಗಳಲ್ಲಿ ಬಲ್ಲವರು. ಆದರೆ ಕಾನೂನು ವಿಷಯಗಳಲ್ಲಿ ಅರುಳೋ ಮರುಳೋ ಅವಸ್ಥೆಯನ್ನು ಸಮೀಪಿಸುತ್ತಿದ್ದಾರೆ.

**ಶ್ರೀ ಬಿ. ದಾಸ್** : ನಾವಿಲ್ಲಿ ಶಾಸನ ರಚನೆ ಮಾಡಲು ಬಂದಿದ್ದೇವೆ. ನಾವು ಇಲ್ಲಿ ಲಾಯರುಗಳು ಅಥವಾ ಉಚ್ಚನ್ಯಾಯಾಲಯದ ನ್ಯಾಯಾಧೀಶರ ಅರ್ಥವಿವರಣೆಗಳನ್ನು ಅರಿತುಕೊಳ್ಳಲು ಇಲ್ಲಿ ಬಂದವರಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್** : ಸ್ವಾಮಿ, ಬಹಳಷ್ಟು ಮಹತ್ವಪೂರ್ಣ ಬದಲಾವಣೆಗಳ ಮೇಲೆ ಅವಲಂಬಿಸಿದೆ. ಇವುಗಳನ್ನು ಇಲಾಖಾ ಸಮಿತಿಯವರು ಸೇರಿಸಿಲ್ಲವೆ? ಆ ಪ್ರಶ್ನೆಯ ಮೇಲೆ ಇಡೀ ಪ್ರಕರಣ ಅವಲಂಬಿಸಿರುತ್ತದೆ. ಅದನ್ನು ಇಲಾಖಾ ಸಮಿತಿಯವರು ಸೇರಿಸಿದ್ದರೆ, ಮತ್ತು ಅದು ಮಹತ್ವಪೂರ್ಣ ಬದಲಾವಣೆ ಆಗಿದ್ದರೆ, ಆಯ್ಕೆ ಸಮಿತಿಯವರಿಗೆ ಆ ಬಗ್ಗೆ ಮಾಹಿತಿ ಕೊಟ್ಟಿರಲಿಲ್ಲ. ಆಯ್ಕೆ ಸಮಿತಿಯು ಇಲಾಖಾ ವಿಧೇಯಕವನ್ನು ಪರಿಶೀಲಿಸಿತೇ ಹೊರತು ಮೂಲ ವಿಧೇಯಕವನ್ನಲ್ಲ ಎಂದು ಪುನಃ ಪುನಃ ಹೇಳಲಾಗುತ್ತಿದೆ. ಇದು ಪರೋಕ್ಷ ವ್ಯಂಗ್ಯ. ಆದರೆ, ಆ ಬಗ್ಗೆ ನಾನು ವಿಷಾದಿಸುತ್ತೇನೆ. ನನ್ನ ಕರ್ತವ್ಯವನ್ನು ನಾನು ಗೌರವಪೂರ್ಣವಾಗಿ ನಿರ್ವಹಿಸುವೆನು, ನಿಷ್ಠೆಯಿಂದಲೂ ಸಂಪೂರ್ಣ ನಿರ್ಭಯವಾಗಿಯೂ ನಿರ್ವಹಿಸುವೆನು. ನನ್ನ ನಿವೇದನೆಯೆಂದರೆ, ಆಯ್ಕೆ ಸಮಿತಿಯವರಿಗೆ, ಇಲಾಖಾ ವಿಧೇಯಕವೂ ಮೂಲ ವಿಧೇಯಕದ ಯಥಾವತ್ ಆವೃತ್ತಿ ಎಂಬ ಬಗ್ಗೆ ಚೆನ್ನಾಗಿ ಪುಸಲಾವಣೆ ಮಾಡಲಾಯಿತು. ಮಾನ್ಯ ಕಾನೂನು ಮಂತ್ರಿಗಳು ಕೂಡ ಯಾವುದೇ ಬದಲಾವಣೆ ಆಗಿಲ್ಲ ಎಂದು ನಂಬುವ ಹಾಗೆ ಅವರ ಮನವೊಲಿಸಲಾಯಿತು. ಇದು ಪರೋಕ್ಷ ವ್ಯಂಗ್ಯವಲ್ಲ. ಇದು ಸಂಗತಿ. ಬದಲಾವಣೆಗಳನ್ನು ಮಾಡಿದವರು ಯಾರು? ಕಾನೂನು ಮಂತ್ರಿಗಳು ಮಾಡಿದ್ದರೆ, ಅದು ಅವರಿಗೆ ಗೊತ್ತಿರುತ್ತಿತ್ತು. ಹಾಗಾದರೆ, ಇನ್ನು ಯಾರಾದರೂ ಮಾಡಿದರೆ? ಹಾಗಾದರೆ ಆ ಇನ್ನಾರೋ ಯಾರು ಎಂದು ನಾನು ಎತ್ತಿ ತೋರಿಸಿದರೆ, ಅದು ಅಪ್ರಸ್ತುತವಾಗುತ್ತದೆಯೆ? ಅನುಚಿತವಾಗುತ್ತದೆಯೆ? ಅವರು ಯಾರೋ ಅದನ್ನು ತಪ್ಪಿನಿಂದಲೋ

ಅಥವಾ ಸದ್‌ಭಾವನೆಯಿಂದಲೊ ಮಾಡಿದ್ದಾರೆ ಎಂದು ನಾನು ಹೇಳುತ್ತೇನೆ. ಈ ಬದಲಾವಣೆಗಳನ್ನು ಮೋಸದಿಂದ ಮಾಡಲಾಯಿತು ಎಂದು ನಾನು ಸೂಚ್ಯವಾಗಿ ಹೇಳುವುದು ಯಥೋಚಿತವಾಗುವುದೆ? ಆ ರೀತಿ ನಾನು ಏನನ್ನೂ ಸೂಚ್ಯವಾಗಿ ಹೇಳುತ್ತಿಲ್ಲ. ನಾನು ಮಾಡಬಹುದಾಗಿದ್ದ ಒಂದೇ ಸಂಗತಿ ಎಂದರೆ ಇವುಗಳನ್ನು ಸದ್‌ಭಾವನೆಯಿಂದಲೇ ಮಾಡಲಾಯಿತು ಎಂದು ಭಾವಿಸಿಕೊಂಡೆನು – ಅದನ್ನು ಸುಧಾರಿಸುವ ಅಭಿಲಾಷೆಯಿಂದ ಲೆಕ್ಕಣಿಕೆ ಒಂದಿಷ್ಟು ಬಿಮ್ಮನೆ ಬರೆದಿರಬೇಕು, ಅಷ್ಟೆ. "ರೂಢಿಜನ್ಯ ಕಾನೂನನ್ನು ರದ್ದುಗೊಳಿಸುವುದೇಕೆ? ಪ್ರಿವಿಕೌನ್ಸಿಲ್ ನೀಡಿದ ಎಲ್ಲ ರೂಲಿಂಗ್‌ಗಳನ್ನು ರದ್ದುಗೊಳಿಸೋಣ."

ಸ್ವಾಮೀ, ಟೀಕೆಟಿಪ್ಪಣಿ ಯಥೋಚಿತವೇ. ನಾನು ಬಳಸಿದ ಭಾಷೆ ಅನುಚಿತವಾಗಿದ್ದರೆ, ನಾನು ಅದನ್ನು ಹಿಂತೆಗೆದುಕೊಳ್ಳುತ್ತೇನೆ. ಆದರೆ ಟೀಕೆಟಿಪ್ಪಣಿಯ ಗತಿ ಏನು?

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ:** ನಾವು ಇತರ ಅಂಶಗಳನ್ನು ಆಲಿಸುವ.

**ಮಿ। ನಝೀರುದ್ದೀನ್ ಅಹಮ್ಮದ್** : ಕಾತರ ಯಾಕೆ? ಇದನ್ನು ಯಾಕೆ ಆಲಿಸುತ್ತಿಲ್ಲ?

**ಮಿ। ಸ್ಪೀಕರ್** : ಆರ್ಡರ್ ಆರ್ಡರ್. ನಾವು ವಿಧೇಯಕದ ಚರ್ಚೆಯನ್ನು ಈ ರೀತಿ ಪೂರೈಸಲು ಸಾಧ್ಯವಿಲ್ಲ. ವಿಧೇಯಕವನ್ನು ವಿರೋಧಿಸುವ ಸದಸ್ಯರಿದ್ದಾರೆ, ವಿಧೇಯಕವನ್ನು ಸಮರ್ಥಿಸುವ, ಬೆಂಬಲಿಸುವ ಸದಸ್ಯರಿದ್ದಾರೆ. ಪ್ರತಿಯೊಬ್ಬರೂ ತಮ್ಮದೇ ಆದ ರೀತಿಯಲ್ಲಿ ಮಾತನಾಡಲಿ, ರೇಗಿಸುವ ಭಾಷೆಯನ್ನು, ಅಸಂಸದೀಯ ಭಾಷೆಯನ್ನು ಬಳಸದಿದ್ದರೆ ಸಾಕು. ಅದೊಂದೇ ಆಕ್ಷೇಪಾರ್ಹ. ಇಲ್ಲದಿದ್ದರೆ ಹೆಜ್ಜೆಹೆಜ್ಜೆಗೂ, ಚರ್ಚೆಯ ಪ್ರತಿಯೊಂದು ಹಂತದಲ್ಲೂ ಅಡ್ಡಿ ಅಡಚಣೆಗೆ ಅವಕಾಶವಾಗುತ್ತದೆ. ಆಖ್ಯೆರಾಗಿ ಸಂಕಷ್ಟಕ್ಕೀಡಾಗುವವರು ವಿಧೇಯಕದ ಸಮರ್ಥಕರೇ. ಯಾಕೆಂದರೆ ಈ ಬಗೆಯ ಚರ್ಚೆಗಳನ್ನು ಮುಂದುವರಿಸುತ್ತ ಹೋದ ಹಾಗೆ ಸಮಯವು ಕಳೆದುಹೋಗುತ್ತದೆ. ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಹೇಳಿಯೇ ಹೇಳುತ್ತಾರೆ ಮತ್ತು ಅವರು ಆಯ್ಕೆ ಸಮಿತಿಯು ಇದಕ್ಕೆ ಗಮನ ಕೊಡಲಿಲ್ಲ ಅಥವಾ ಅದಕ್ಕೆ ಗಮನ ಕೊಡಲಿಲ್ಲ ಅಥವಾ ಈ ಅಂಶಗಳನ್ನು ಆಯ್ಕೆ ಸಮಿತಿಯು ಪರಿಶೀಲಿಸಲಿಲ್ಲ ಎಂದು ಮುಂತಾಗಿ ಹೇಳಿದರೆ ಅದರಲ್ಲಿ ಅಪಮಾನಕಾರಕ ವಿಷಯ ಎಲ್ಲಿಂದ ಬಂತು? ಹಾಗೆ ಹೇಳಲು ಅವರು ಸಂಪೂರ್ಣ ಹಕ್ಕುದಾರರಾಗಿರುತ್ತಾರೆ. ಆದರೆ ಅವರು ಇನ್ನೇನನ್ನೋ ಪರೋಕ್ಷ ವ್ಯಂಗ್ಯದ ಮೂಲಕ ಹೇಳಕೂಡದು. ಅಂಥ ಪ್ರಸಂಗದ ಬಗ್ಗೆ ನಾನು ಎಚ್ಚರಿಕೆ ವಹಿಸಬೇಕು. ಆದರೆ ಅವರು ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಹಕ್ಕುದಾರರು ಎಂದು ನಾನು ನಂಬಿದ್ದೇನೆ.

ಇನ್ನೂ ಒಂದು ಪ್ರಶ್ನೆಯುಂಟು. ಅದರತ್ತ ಮಾನ್ಯ ಸದಸ್ಯರ ಗಮನ ಸೆಳೆಯುವುದರಲ್ಲಿದ್ದೆ. ಕಾನೂನು ಮಂತ್ರಿಗಳಿಗೆ ಮಹತ್ವಪೂರ್ಣ ಬದಲಾವಣೆಯ ಬಗ್ಗೆ ಅರಿವಿಲ್ಲ, ಆದಕಾರಣ ಅದನ್ನು ಇನ್ನಾರೋ ಸೇರಿಸಿರಬೇಕು ಎಂದು ಅವರು ಹೇಳುತ್ತಾರೆ. ಅದಕ್ಕೆ ಇನ್ನೊಂದು ಮುಖವುಂಟು. ಅವರು ಮಹತ್ವಪೂರ್ಣ ಎಂದು ಭಾವಿಸುವಂಥ ಪ್ರಶ್ನೆಯು ಮಾನ್ಯ ಕಾನೂನು ಮಂತ್ರಿಗಳು ಮಹತ್ವಪೂರ್ಣ ಅಲ್ಲ ಎಂದು ಪರಿಗಣಿಸಿದರೆ ಯಾವುದೇ ಮಹತ್ವಪೂರ್ಣ ಬದಲಾವಣೆಯ ಬಗ್ಗೆ ತನಗೆ ಗೊತ್ತಿಲ್ಲ ಎಂದು ಕಾನೂನು ಮಂತ್ರಿಗಳು ಹೇಳುವಲ್ಲಿ ಅವರು ಪೂರ್ಣ ಹಕ್ಕುದಾರರಾಗಿದ್ದಾರೆ. ಆದ್ದರಿಂದ, ಇನ್ನು ಯಾರೋ ಅದನ್ನು ಅಜ್ಞಾನದಿಂದ ಅಥವಾ ಕಾನೂನು ಮಂತ್ರಿಗಳಿಗೆ ಗೊತ್ತಿಲ್ಲದ ರೀತಿಯಲ್ಲಿ ಆಯ್ಕೆ ಸಮಿತಿಯಲ್ಲಿ ಸೇರಿಸಿದ್ದಾರೆ ಎಂದು ಅಗತ್ಯವಾಗಿ ಅರ್ಥವಾಗುವುದಿಲ್ಲ. ಪ್ರಶ್ನೆಗಳು ಮಹತ್ವಪೂರ್ಣ ಆಗಿರಲಿ ಮತ್ತು ವಿವಾದವು ಪ್ರಶ್ನೆಗಳು ಮಹತ್ವಪೂರ್ಣ ಆಗಿವೆಯೆ ಅಥವಾ ಇಲ್ಲವೆ ಎಂಬುದಕ್ಕೆ ಸೀಮಿತವಾಗಿರಲಿ. ಅದೇ ವಿವಾದದಲ್ಲಿ ಇರುವ ಮುಖ್ಯ ಪ್ರಶ್ನೆ ಎಂದು ಭಾವಿಸುತ್ತೇನೆ.

**ಮಿ। ನಝೀರುದ್ದೀನ್ ಅಹಮ್ಮದ್** : ನಾನು ಮಾಡಿದ ತಪ್ಪೇನಾದರೂ ಇದ್ದರೆ ಅದನ್ನು ತಿದ್ದಲು ಅಡ್ಡಿಯಿಲ್ಲ. ಅದನ್ನು ಮಾನ್ಯ ಕಾನೂನು ಮಂತ್ರಿಗಳೇ, ಅದು ಮಹತ್ವಪೂರ್ಣ ಸಂಗತಿ ಎಂದು ತಿಳಿವಿಲ್ಲದೆಯೆ ಅಥವಾ ನಂಬದೆಯೆ, ಮಾಡಿರಲೂ ಬಹುದು. ಆದರೆ ವಿಷಯ ಎಲ್ಲಿತ್ತೋ ಅಲ್ಲೇ ಇದೆ. ಇವು ಮಹತ್ವಪೂರ್ಣ ವಿಷಯಗಳು. ಕಾನೂನು ಮಂತ್ರಿಗಳಿಗೆ ಗೊತ್ತಿದ್ದೋ ಅಥವಾ ಇನ್ನಾರೋ ಗೊತ್ತಿಲ್ಲದೆಯೋ, ಯಾವುದೇ ರೀತಿಯಲ್ಲಿ ಸೇರಿಸಿರಬಹುದು. ಆ ಬಗ್ಗೆ ನಾವು ತರ್ಕ ಮಾಡುವುದು ತರವಲ್ಲ. ಆದರೆ ಲೆಕ್ಕಣಿಕೆಯ ಒಂದೇ ಒಂದು ಹೊಡೆತದಿಂದ ಹಿಂದೂ ಶಾಸನದ ಮೂಲ ಪಾಠಗಳನ್ನು, ನಿಯಮಗಳನ್ನು ಮತ್ತು ಅರ್ಥ ವಿವರಣೆಗಳನ್ನು ರದ್ದುಗೊಳಿಸಲಾಗಿದೆ. ಇದೆಲ್ಲದರ ಒಟ್ಟು ಪರಿಣಾಮ ಏನಾಗುವುದೆಂದರೆ, ಪ್ರಿವಿ ಕೌನ್ಸಿಲ್ ಫೆಡರಲ್ ಕೋರ್ಟ್ ಮತ್ತು ಹೈಕೋರ್ಟ್‌ಗಳು ನೀಡಿದ ಎಲ್ಲ ವಿದ್ವತ್‌ಪೂರ್ಣ ರೂಲಿಂಗ್‌ಗಳು ಹೊರಟುಹೋಗುತ್ತವೆ, ಹೋಗಿವೆ ಲೆಕ್ಕಣಿಕೆಯ ಒಂದೇ ಕೊರೆತಕ್ಕೆ. ವಾಸ್ತವವಾಗಿ, ಇದು ಮೂಲ ವಿಧೇಯಕದಲ್ಲಿ ಮಧ್ಯ ಪ್ರವೇಶ ಅಲ್ಲವಾದರೆ, ಯಾವುದಕ್ಕೆ ಮಧ್ಯ ಪ್ರವೇಶ ಅನ್ನುತ್ತಾರೆ? ಭಿನ್ನಾಭಿಪ್ರಾಯಗಳಿರಬಹುದು. ಆದರೆ ಈ ಪ್ರಶ್ನೆಯನ್ನು ಅತ್ಯಂತ ನಿಷ್ಪಕ್ಷಪಾತವಾದ ದೃಷ್ಟಿಯಿಂದ ಮತ್ತು ನಿರ್ಮಲ ಚಿತ್ತದಿಂದ ನೋಡುವವರಿಗೆ, ಇದು ಮೂಲ ವಿಧೇಯಕದಲ್ಲಿ ಅತ್ಯಂತ ಗಂಭೀರ ಮಧ್ಯ ಪ್ರವೇಶ ಎಂದು ಒಪ್ಪಿಕೊಳ್ಳಲು ಯಾವುದೇ ತೊಂದರೆ ಆಗಲಿಕ್ಕಿಲ್ಲ.

**ಶ್ರೀಮತಿ ಜಿ. ದುರ್ಗಾಬಾಯಿ** : ದಯೆಯಿಟ್ಟು ಇತರ ಮಹತ್ವಪೂರ್ಣ ಬದಲಾವಣೆಗಳ ಬಗ್ಗೆ ಮಾತಾಡಿ.

**ಮಿ। ನಝೀರುದ್ದೀನ್ ಅಹಮ್ಮದ್** : ಇದು ಅತ್ಯಂತ ಗಂಭೀರ ವಿಷಯದ ಬಗ್ಗೆ ಅತ್ಯಂತ ಹಗುರವಾಗಿ ವ್ಯವಹರಿಸುವ ರೀತಿ. ಇವು ಅತ್ಯಂತ ಗಂಭೀರ ವಿಷಯಗಳು, ಸರಿಸುಮಾರು ಪ್ರಕ್ಷೇಪಗಳೇ – ಸದ್‌ಭಾವನೆಯಿಂದ ಸೇರಿಸಿರಲಿ, ಅಥವಾ ದುರ್‌ಭಾವನೆಯಿಂದ ಸೇರಿಸಿರಲಿ, ಅದು ಮುಖ್ಯವಲ್ಲ.

ಸ್ವಾಮೀ, ಆ ತರುವಾಯ, ಇಲಾಖಾ ಸಮಿತಿಯು ಮಾಡಿದ ಆನಂತರದ ಬದಲಾವಣೆ, ಭಾಗ I, ಖಂಡ ೫ರ ಉಪಖಂಡ (b) ದಲ್ಲಿ ಇರುವ **'ಜಾತಿ'** ಪದದ ಪರಿಭಾಷೆಯನ್ನು ತೆಗೆದುಹಾಕಿದ್ದು. ಆ ಉಪಖಂಡದಲ್ಲಿ ಜಾತಿಯ ಪರಿಭಾಷೆ ಬರುತ್ತದೆ. ಅದನ್ನು ಸಂಪೂರ್ಣವಾಗಿ ಬಿಟ್ಟುಬಿಡಲಾಗಿದೆ.

**ಮಿ। ಸ್ಪೀಕರ್** : ಮಾನ್ಯ ಸದಸ್ಯರು ಯಾವ ಖಂಡವನ್ನು ಉಲ್ಲೇಖಿಸುತ್ತಿದ್ದಾರೆ?

**ಮಿ। ನಝೀರುದ್ದೀನ್ ಅಹಮ್ಮದ್** : ನಾನು ಉಲ್ಲೇಖಿಸುತ್ತಿರುವುದು ಜಾತಿ ಪದ ಪರಿಭಾಷೆ ಇರುವ ಭಾಗ I, ಖಂಡ ೫ರ ಉಪಖಂಡ (b), ಇದನ್ನು.

**ಮಿ। ಸ್ಪೀಕರ್** : ಅವರು ಮೂಲ ವಿಧೇಯಕವನ್ನು ಉಲ್ಲೇಖಿಸುತ್ತಿದ್ದಾರೆಯೆ?

**ಮಿ। ನಝೀರುದ್ದೀನ್ ಅಹಮ್ಮದ್** : ಹೌದು, ಆ ಪರಿಭಾಷೆಯನ್ನು ಇಲಾಖಾ ವಿಧೇಯಕದಿಂದ ಸಂಪೂರ್ಣವಾಗಿ ಬಿಟ್ಟುಬಿಡಲಾಗಿದೆ. ಹಾಗೆ ಬಿಟ್ಟು ಬಿಡಲಾಗಿದೆ ಎಂಬ ಬಗ್ಗೆ ಎಲ್ಲಿಯೂ ಯಾವುದೇ ಸೂಚನೆ ಕೊಟ್ಟಿಲ್ಲ. ಬದಿಯಂಚಿನಲ್ಲಿ ಮೂಲ ಖಂಡಕ್ಕೆ ಒಂದು ಉಲ್ಲೇಖ ಮಾತ್ರ ಉಂಟು. ಈ ಉಪಖಂಡವನ್ನು ಬಿಟ್ಟುಬಿಡಲಾಗಿದೆ. ಆ ಬಗ್ಗೆ ಎಲ್ಲಿಯೂ ಯಾವುದೇ ಸೂಚನೆ ಇಲ್ಲ. ಸ್ವಾಮೀ, ಈ ವಿಲೋಪದ ಕಡೆಗೆ ಆಯ್ಕೆ ಸಮಿತಿಯ ಗಮನವನ್ನು ಸೆಳೆಯಲಾಗಿಲ್ಲ ಎಂದು ನಾನು ನಿವೇದಿಸುತ್ತೇನೆ ಮತ್ತು ಇವು ಮಹತ್ವಪೂರ್ಣ ವಿಷಯಗಳೊ ಅಲ್ಲವೊ ಎಂಬ ಬಗ್ಗೆ ಮತಭೇದಕ್ಕೆ ಅವಕಾಶವಿಲ್ಲ. ಏನಾದರೂ ಸರಿಯೆ, ಮಾಡಲಾದ ಬದಲಾವಣೆಗಳ ಬಗ್ಗೆ ತಿಳಿವಳಿಕೆ ಪಡೆಯಲು ಆಯ್ಕೆ ಸಮಿತಿಯು ಹಕ್ಕು ಹೊಂದಿತ್ತು. ಇವು ಮಹತ್ವಪೂರ್ಣ ಬದಲಾವಣೆಗಳೊ ಅಲ್ಲವೊ ಎಂಬ ಬಗ್ಗೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನಾಭಿಪ್ರಾಯ

ಇರಬಹುದು. ಆದರೆ ಈ ಬದಲಾವಣೆಗಳನ್ನು ಮಾಡಲಾಗಿದೆ ಎಂದು ತಿಳಿದುಕೊಳ್ಳಲು ಆಯ್ಕೆ ಸಮಿತಿಗೆ ಹಕ್ಕು ಇತ್ತು. ಆದರೆ ಅದನ್ನು ಆ ಸಮಿತಿಯವರಿಗೆ ಹೇಳಲಾಗಿಲ್ಲ.

ಅನಂತರ ನಾವು ಅದೇ ಖಂಡದ ಉಪಖಂಡ (f)ಗೆ ಬರುತ್ತೇವೆ. ಇಲ್ಲಿ ಗೋತ್ರ ಮತ್ತು ಪ್ರವರ ಈ ಪದಗಳ ಪರಿಭಾಷೆಗಳನ್ನು ಬಿಟ್ಟುಬಿಡಲಾಗಿದೆಯೆಂದು ಕಾಣುತ್ತದೆ. ಆಮೇಲೆ ಉಪಖಂಡ (j) ನಲ್ಲಿರುವ ಸ್ತ್ರೀಧನ ಪದದ ಪರಿಭಾಷೆಯನ್ನು ಸಹ ಬಿಟ್ಟುಬಿಡಲಾಗಿದೆ. ಆದ್ದರಿಂದ, ಜಾತಿಯ ಪರಿಭಾಷೆ, ಗೋತ್ರದ ಪರಿಭಾಷೆ, ಪ್ರವರದ ಪರಿಭಾಷೆ, ಸ್ತ್ರೀಧನದ ಪರಿಭಾಷೆ– ಇವುಗಳನ್ನು ಪೂರ್ಣವಾಗಿ ಬಿಟ್ಟುಬಿಡಲಾಗಿದೆ. ವಿಧೇಯಕದ ಮೇಲೆ ಇದರ ಪರಿಣಾಮ ಏನಾಗಬಹುದು ಎನ್ನುವುದನ್ನು ಸಂಕ್ಷಿಪ್ತವಾಗಿ ಹೇಳಲು ಸಾಧ್ಯವಿಲ್ಲ.

**ಶ್ರೀ ಎ. ಥಾನು ಪಿಳ್ಳೆ** (ತಿರುವಾಂಕೂರು ಸಂಸ್ಥಾನ) : ಕಾನೂನಿನಲ್ಲಿ ಒಂದು ಪದದ ಪರಿಭಾಷೆ ಇಲ್ಲದಿದ್ದರೂ ಆ ಬಗ್ಗೆ ಪರಿಭಾಷೆ ಒದಗಿಸುವುದು ಅಗತ್ಯವೆ ಎಂದು ನಾನು ಮಾನ್ಯ ಸದಸ್ಯರನ್ನು ಕೇಳಬಹುದೆ?

**ಮಿ। ನಝೀರುದ್ದೀನ್ ಅಹಮ್ಮದ್** : ಮಾನ್ಯ ಸದಸ್ಯರು ಎಷ್ಟು ಸಾವಧಾನದಿಂದ ಮುಂದುವರಿಯಬೇಕೋ ಅಷ್ಟು ಸಾವಧಾನದಿಂದ ಮುಂದುವರಿಯುತ್ತಿಲ್ಲ. ವಾಸ್ತವವಾಗಿ, ಪರಿಭಾಷೆಯು ಬೇಕೋ ಅಥವಾ ಬೇಡವೋ ಅನ್ನುವುದು ಪ್ರಶ್ನೆಯಲ್ಲ. ಒಂದು ಪರಿಭಾಷೆ ಇದ್ದಿತು. ಅದನ್ನು ಯಾರೋ ಅಧಿಕಾರ ಇಲ್ಲದೆ ತೆಗೆದು ಹಾಕಿರುತ್ತಾರೆ. ಇಲಾಖಾ ಸಮಿತಿಯು ಅದನ್ನು ತೆಗೆದುಹಾಕಿತು. ಮತ್ತು ಯಾವ ಸಮಿತಿಯು ಮಾತ್ರವೇ ಅದನ್ನು ತೆಗೆದುಹಾಕಲು ಸಕ್ಷಮವಾಗಿತ್ತೋ ಆ ಆಯ್ಕೆ ಸಮಿತಿಯ ಗಮನವನ್ನು ಆ ಸಂಗತಿಯತ್ತ ಸೆಳೆಯಲಾಗಿಲ್ಲ.

**ಶ್ರೀಮತಿ ಜಿ. ದುರ್ಗಾಬಾಯಿ :** ಆಯ್ಕೆ ಸಮಿತಿಯು ಆ ಬಗ್ಗೆ ಪೂರ್ಣ ಜವಾಬ್ದಾರಿ ವಹಿಸಿಕೊಳ್ಳುತ್ತದೆ.

**ಮಿ। ನಝೀರುದ್ದೀನ್ ಅಹಮ್ಮದ್** : ಇದನ್ನು ಆಯ್ಕೆ ಸಮಿತಿಯು ಪರಿಶೀಲಿಸಿರಲಿಲ್ಲ.

**ಶ್ರೀ ಎಂ. ತಿರುಮಲ ರಾವ್** (ಮದ್ರಾಸು : ಸಾಮಾನ್ಯ): ಮೊಳೆ ಜೋಡಿಸುವವನು ಅದನ್ನು ಬಿಟ್ಟುಬಿಟ್ಟಿಲ್ಲ ಎಂಬ ಬಗ್ಗೆ ನಿಮಗೆ ಖಾತ್ರಿ ಇದೆಯೇ?

**ಮಿ। ಸ್ಪೀಕರ್** : ನಡುವೆ ಅಡ್ಡಿಪಡಿಸುವವರನ್ನು ಅಡಚಣೆಕಾರರು ಎಂದು ಕರೆಯುತ್ತಾರೆ. ನಡುನಡುವೆ ಹೀಗೆ ಅಡ್ಡಿಪಡಿಸಿದರೆ ಆ ಬಗ್ಗೆ ಅವರು ಇನ್ನೂ ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಆಯ್ಕೆ ಸಮಿತಿಯ ಗಮನವನ್ನು ಈ ಎಲ್ಲ ಸಂಗತಿಗಳತ್ತ ವಾಸ್ತವವಾಗಿ ಸೆಳೆಯಲಾಗಿತ್ತು ಎಂದು ಹೇಳುತ್ತ ಇನ್ನು ಮುಂದಿನ ತರ್ಕಗಳನ್ನು ಇಲ್ಲಿಗೆ ನಿಲ್ಲಿಸುತ್ತೇನೆ. ಮಾನ್ಯ ಸದಸ್ಯರು ಒಂದೇ ಸಂಗತಿಯನ್ನು ಅನಗತ್ಯವಾಗಿ ಪುನಃ ಪುನಃ ಹೇಳುತ್ತಿದ್ದಾರೆ. ಆಯ್ಕೆ ಸಮಿತಿಯ ಗಮನ ಸೆಳೆಯಲಾಗಿಲ್ಲ ಎಂದು ಪದೇ ಪದೇ ಹೇಳುತ್ತಿದ್ದಾರೆ. ಆಯ್ಕೆ ಸಮಿತಿಯು ಈ ಎಲ್ಲ ಅಂಶಗಳನ್ನು ಪೂರ್ಣವಾಗಿ ಪರಿಶೀಲಿಸಿತ್ತು, ವಿಷಯದ ಎಲ್ಲ ಮುಖಗಳನ್ನು ಪರಿಶೀಲಿಸಿತ್ತು ಎಂದು ಹೇಳಬಯಸುತ್ತೇನೆ. ಆದ್ದರಿಂದ ಮಾನ್ಯ ಸದಸ್ಯರು ಈ ವಿಷಯದ ಸಂಬಂಧದಲ್ಲಿ ಪುನಃ ಪುನಃ ಹೇಳಿದ್ದನ್ನೇ ಹೇಳುವ ಅಗತ್ಯವಿಲ್ಲ.

**ಮಿ। ಸ್ಪೀಕರ್** : ಪ್ರಶ್ನೆಯನ್ನು ಪೂರ್ಣವಾಗಿ ಪರಿಶೀಲಿಸಲಾಗಿದ್ದರೂ ಪ್ರತಿಯೊಬ್ಬ ಸದಸ್ಯನು ತನ್ನ ಅಭಿಪ್ರಾಯಗಳನ್ನು ಪ್ರಕಟಿಸಲು ಪರಿಪೂರ್ಣ ಹಕ್ಕುದಾರನಾಗಿರುತ್ತಾನೆ ಎಂದು ಹೇಳಬಯಸುತ್ತೇನೆ. ವಿಧೇಯಕವನ್ನು ಆಯ್ಕೆ ಸಮಿತಿಗೆ ಪುನಃ ಕಳಿಸಿಕೊಡುವ ಬಗ್ಗೆ ಮಾನ್ಯ ಸದಸ್ಯರು ಪ್ರಕರಣ ಕೇಸನ್ನು ರೂಪಿಸುತ್ತಿದ್ದಾರೆ ಮತ್ತು ಆ ಬಗ್ಗೆ ತಮ್ಮ ತರ್ಕಗಳನ್ನು, ಮುಂದಿಡುತ್ತಿದ್ದಾರೆ. ಆಯ್ಕೆ ಸಮಿತಿಯು ಪೂರ್ಣವಾದ, ಪರ್ಯಾಪ್ತವಾದ, ಯಥೋಚಿತವಾದ, ಸಮಂಜಸವಾದ ಗಮನವನ್ನು ಕೊಟ್ಟಿರಬಹುದು. ಆದರೆ ಅವರ

ಅಭಿಪ್ರಾಯದಲ್ಲಿ ಅದು ಪರ್ಯಾಪ್ತ ಆಗಿಲ್ಲ. ಆದ್ದರಿಂದ ಪರಿಶೀಲನೆಗೆ ಕೊಟ್ಟ ಗಮನವು ಸಾಕಷ್ಟು ಆಗಿಲ್ಲವೆಂದೂ, ವಿಧೇಯಕವನ್ನು ಮರಳಿ ಆಯ್ಕೆ ಸಮಿತಿಗೆ ಕಳಿಸಬೇಕೆಂದೂ ಅಗ್ರಹಪಡಿಸುತ್ತಿದ್ದಾರೆ. ಅವರು ತರ್ಕದ ಆ ಸೂತ್ರವನ್ನು ಅನುಸರಿಸುತ್ತಿದ್ದರೆ, ಆ ನಿಲುವಿಗೆ ಅವರು ಅಂಟಿಕೊಂಡಿರಬೇಕು. ಇನ್ನು ಪರ್ಯಾಪ್ತತೆಯ ಸಂಗತಿಯ ವಿಚಾರ – ವಿಧೇಯಕಕ್ಕೆ ಪರ್ಯಾಪ್ತ ಗಮನವನ್ನು ಕೊಡಲಾಯಿತೆ ಇಲ್ಲವೆ ಎಂಬ ಸಂಗತಿಯ ಬಗ್ಗೆ ಆಯ್ಕೆ ಸಮಿತಿಯ ಸದಸ್ಯರ ತೀರ್ಪು ಹೇಗೆ ಆಖೈರು, ಅಂತಿಮವಾದುದು ಎಂದು ಭಾವಿಸಲಾಗುವುದಿಲ್ಲವೋ ಹಾಗೆಯೇ ಅವರ ತೀರ್ಪು ಸಹ ಅಂತಿಮ ಅಲ್ಲ. ಆದರೆ ಅವರು ತಮ್ಮ ಅಭಿಪ್ರಾಯವನ್ನು ಸಾದರಪಡಿಸುತ್ತಿದ್ದಾರೆ. ನಾವು ಅದನ್ನು ಆಧರಿಸಿ ಮುಂದುವರಿಯೋಣ. ಇಲ್ಲದೆ ಹೋದರೆ ಈ ಚರ್ಚೆಯು ಕೊನೆ ಮುಟ್ಟಲಿಕ್ಕಿಲ್ಲ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ನಾನು ಸಂಗತಿಯ ಪ್ರಶ್ನೆಗೆ ಮಾತ್ರ ಉಲ್ಲೇಖಿಸುತ್ತಿದ್ದೆ.

**ಮಿ। ಸ್ಪೀಕರ್ :** ಅದು ಅಭಿಪ್ರಾಯದ ಪ್ರಶ್ನೆ. ಮಾನ್ಯ ಸದಸ್ಯರು ಯಾವುದನ್ನು ಸಂಗತಿಯ ಪ್ರಶ್ನೆ ಎಂದು ಭಾವಿಸಿರುವರೋ ಅದು ವಾಸ್ತವವಾಗಿ ಅಭಿಪ್ರಾಯದ ಪ್ರಶ್ನೆ. ಗಮನದ ಪರ್ಯಾಪ್ತತೆ ಅಭಿಪ್ರಾಯದ ಪ್ರಶ್ನೆಯೇ ಹೊರತು ಸಂಗತಿಯ ಪ್ರಶ್ನೆಯಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್** : ಪ್ರಶ್ನೆ ಪರಿಶೀಲನೆಯ ಪಯಾಪ್ತತೆಯನ್ನು ಕುರಿತದ್ದು.

(ಈ ಹಂತದಲ್ಲಿ ಮಿ। ಸ್ಪೀಕರ್ ಅವರು ಖುರ್ಚಿ ತೆರವು ಮಾಡಿದರು. ಆಗ ತೆರವಾದ ಸ್ಥಳದಲ್ಲಿ ಡೆಪ್ಯುಟಿ ಸ್ಪೀಕರ್ ಶ್ರೀ ಅನಂತಶಯನಂ ಅಯ್ಯಂಗಾರ್ ಅವರು ಕುಳಿತುಕೊಂಡರು)

**ಮಿ। ನಝೀರುದ್ದೀನ್ ಅಹಮ್ಮದ್** : ಸ್ವಾಮಿ, ಆ ದಿನ ನನ್ನ ಭಾಷಣಕ್ಕೆ ಎಡೆಬಿಡದೆ ಅಡ್ಡಿಪಡಿಸಲಾಯಿತು. ಮತ್ತೆ ಇವತ್ತಿನ ದಿವಸವೂ ಅಡ್ಡಿಪಡಿಸುತ್ತಿದ್ದಾರೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** : ನಾನು ಉದ್ದಕ್ಕೂ ನಿಮಗೆ ಬೆಂಬಲ ನೀಡುತ್ತ ಬಂದಿದ್ದೇನೆ.

**ಮಿ। ನಝೀರುದ್ದೀನ್ ಅಹಮ್ಮದ್** : ಅಗೋ ನಮ್ಮ ಸ್ನೇಹಿತರು ಮಿ। ಭಾರತಿ. ಆಯ್ಕೆ ಸಮಿತಿಯಲ್ಲಿ ಏನು ನಡೆಯಿತು ಎಂದು ಅವರು ಸದನಕ್ಕೆ ಹೇಳುವುದು ಸರಿಯೆ? ಹಾಗಿದ್ದರೆ, ನನಗೂ ಪ್ರಬಲ ಅಧಿಕಾರ ಉಂಟು – ಅದಕ್ಕೆ ವಿರೋಧವಾಗಿ ಆಯ್ಕೆ ಸಮಿತಿಯ ಸದಸ್ಯರು ನನ್ನ ನಿಲುವನ್ನು ಬೆಂಬಲಿಸುತ್ತಾರೆ. ಒಬ್ಬ ಸದಸ್ಯನ ಹೇಳಿಕೆಯನ್ನು ಇನ್ನೊಬ್ಬ ಸದಸ್ಯನ ಹೇಳಿಕೆಯೊಂದಿಗೆ ಹೋಲಿಸುವುದು ಸರಿಯಾಗಲಿಕ್ಕಿಲ್ಲ. ನಾನಾದರೋ ಆಯ್ಕೆ ಸಮಿತಿಯಲ್ಲಿ ಏನು ನಡೆಯಿತೋ ಅದರ ಮೇಲೆ ಪರದೆ ಎಳೆಯುತ್ತಿದ್ದೆ. ಆಯ್ಕೆ ಸಮಿತಿಯು ಪ್ರತಿಯೊಂದು ಸಂಗತಿಯನ್ನು ಪರಿಶೀಲಿಸಿದೆ ಎಂದು ನಮಗೆ ಭರವಸೆ ಕೊಡುವ ಅಗತ್ಯವಿಲ್ಲ, ಅವರಿಗೆ ಅಷ್ಟೊಂದು ಖಾತ್ರಿ ಇದ್ದರೆ. ನನಗೆ ಸಹ ಅಷ್ಟೇ ಖಾತ್ರಿ ಉಂಟು. ಏನೆಂದರೆ ಅನೇಕ ಕಾರಣಗಳಿಂದಾಗಿ ಪರ್ಯಾಪ್ತ ಪರಿಶೀಲನೆ ಸಾಧ್ಯವಾಗಲಿಲ್ಲ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ನಾನು ನನ್ನ ಬಗ್ಗೆ ಮಾತ್ರ ಹೇಳುತ್ತಿದ್ದೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** : ನಿಮಗೆ ವಿಷಯಗಳು ಅರ್ಥವಾಗಲಿಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್** : ಇದು ಒಬ್ಬ ವ್ಯಕ್ತಿಯ ಪ್ರಕರಣ ಅಲ್ಲ. ಇದು ಇಡೀ ಆಯ್ಕೆ ಸಮಿತಿ ವಿಚಾರ, ಒಬ್ಬ ವ್ಯಕ್ತಿಯ ವ್ಯವಹಾರವಲ್ಲ. ಒಬ್ಬರು ಅನುಸರಿಸಿದ್ದರೆ, ಉಳಿದೆಲ್ಲರೂ ಅನುಸರಿಸಿದ್ದಾರೆ ಎಂದು ಅರ್ಥವಲ್ಲ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** : ನಿಜ. ಒಂದು ಕೋಗಿಲೆ ಹಾಡಿದರೆ ವಸಂತಮಾಸ ಆಗುವುದಿಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್** : 'ಒಂದು ಕೋಗಿಲೆ ಹಾಡಿದರೆ ವಸಂತಮಾಸ ಆಗುವುದಿಲ್ಲ.'

ಸಮಿತಿಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ ಎಂದು ನಂಬುವ ಒಬ್ಬ ಮನುಷ್ಯ ಇದ್ದರೆ, ವಿಧೇಯಕವನ್ನು ಆಯ್ಕೆ ಸಮಿತಿಗೆ ವಾಪಸು ಕಳಿಸುವ ಪ್ರಕರಣ ಆಗುತ್ತಿತ್ತು. ಪುನಃ ನಾನು ನಿವೇದಿಸುವುದೇನೆಂದರೆ ಇವೆಲ್ಲ ಅತ್ಯಂತ ಗಂಭೀರ ಸ್ವರೂಪದ ಬದಲಾವಣೆಗಳು. ಹಾಗಾದರೆ ಅವು ಎಷ್ಟಿಲ್ಲ.? ನಮ್ಮ ಸ್ನೇಹಿತರು ಎಷ್ಟು ಬದಲಾವಣೆಗಳು ಇವೆ ಎಂದು ಆಶ್ಚರ್ಯಪಡುತ್ತಾರೆ. ನಾನು ಅನೇಕ, ಅನೇಕಾನೇಕ ಬದಲಾವಣೆಗಳನ್ನು ತೋರಿಸಬಲ್ಲೆನು. ಉದಾಹರಣೆಗೆ......

**ಶ್ರೀಮತಿ ಜಿ. ದುರ್ಗಾಬಾಯಿ** : ಈ ಮಧ್ಯೆ ಮಾಹಿತಿ ಕೊಡುತ್ತ ಆಯ್ಕೆ ಸಮಿತಿಯವರು ಮಾಡಿದ ಬದಲಾವಣೆಗಳು ಸದನದ ಮೇಲೆ ಕಟ್ಟುನಿಟ್ಟಾಗಿ ಬಂಧನಕಾರಿ ಆಗಿವೆಯೆ ಹೇಗೆ ಎಂದು ಕೇಳಬಹುದೆ? ಸದನವು ಅವುಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಸ್ವಾತಂತ್ರ್ಯ ಹೊಂದಿಲ್ಲವೆ?

**ಮಿ| ನಝೀರುದ್ದೀನ್ ಅಹಮ್ಮದ್** : ಅತ್ಯಂತ ಗೌರವಪೂರ್ವಕವಾಗಿ ನಿವೇದಿಸುತ್ತೇನೆ: ಆಯ್ಕೆ ಸಮಿತಿಯವರ ಬದಲಾವಣೆಗಳನ್ನು ಸ್ವೀಕರಿಸಬಹುದೆ ಅಥವಾ ತಿರಸ್ಕರಿಸಬಹುದೆ ಎಂದು ಕೇಳುವುದು ಅಸಂಗತವಲ್ಲವೆ? ಆಯ್ಕೆ ಸಮಿತಿಯು ಯಾವುದೇ ಬದಲಾವಣೆ ಮಾಡಬಹುದು, ಸದನವು ಸಹ ಇನ್ನಷ್ಟು ಬದಲಾವಣೆಗಳನ್ನು ಮಾಡಬಹುದು. ಆ ಸಂಬಂಧದಲ್ಲಿ ಸಂದೇಹಕ್ಕೆಡೆಯಿಲ್ಲ. ಆದರೆ ಪ್ರಶ್ನೆ ಎಂದರೆ ಆಯ್ಕೆ ಸಮಿತಿಯು ಯಾವುದೋ ಕಾರಣಕ್ಕಾಗಿ ತನ್ನ ಕರ್ತವ್ಯಗಳನ್ನು ಪೂರ್ಣವಾಗಿ ನಿರ್ವಹಿಸಲಿಲ್ಲ ಅಥವಾ ನಿರ್ವಹಿಸಲು ಸಾಧ್ಯವಾಗಲಿಲ್ಲ ಅಥವಾ ನಿರ್ವಹಿಸಲು ತಪ್ಪಿತು ಅಥವಾ ನಿರ್ವಹಿಸುವುದನ್ನು ಲೋಪಿಸಿತು. ಹಾಗಿದ್ದ ಪಕ್ಷದಲ್ಲಿ, ಈ ಪ್ರಶ್ನೆಯನ್ನು ಪೂರ್ಣವಾಗಿ ಪರಿಶೀಲಿಸುವ ಹಕ್ಕು ಸದನಕ್ಕೆ ಸೇರುತ್ತದೆ, ಮತ್ತು ಆ ಕಾರಣಕ್ಕಾಗಿ ನಾನು ಆಯ್ಕೆ ಸಮಿತಿಯ ವಿರುದ್ಧ ಸದನಕ್ಕೆ ಅಪೀಲು ಸಲ್ಲಿಸುತ್ತಿರುವುದು. ನಿಜವೆಂದರೆ ಅದಕ್ಕೂ ಮಿಗಿಲಾದ, ವಿಸ್ತಾರವಾದ ಸದನ ಉಂಟು : ಭಾರತದ ಸಮಗ್ರ ಮತದಾರ ಸಮುದಾಯ. ನಾನೀಗ ಮೂಲ ವಿಧೇಯಕದ ಖಂಡ ೭ಕ್ಕೆ ಬರುತ್ತೇನೆ. (ಅಡ್ಡಿ), ಕೆಲವು ಸದಸ್ಯರ ತಲೆ ತಿರುಗಿದೆ ಎಂದು ತೋರುತ್ತದೆ.

**ಮಿ| ತಾಜಾಮುಲ್ ಹುಸೇನ್** : ಸದಸ್ಯರ ತಲೆ ತಿರುಗಿದೆ ಎಂಬ ಹೇಳಿಕೆಯ ವಿರುದ್ಧ ನಾನು ಪ್ರಬಲವಾಗಿ ಪ್ರತಿಭಟಿಸಬೇಕಾಗಿದೆ. ನಾನು ಈ ಕ್ರಿಯಾಲೋಪವನ್ನು ಗಂಭೀರವಾಗಿ ಎತ್ತುತ್ತಿದ್ದೇನೆ. ಅವರು ತಮ್ಮ ಹೇಳಿಕೆಯನ್ನು ಬೇಷರತ್ತಾಗಿ ಹಿಂತೆಗೆದುಕೊಳ್ಳಬೇಕು.

**ಮಿ| ಡೆಪ್ಯುಟಿ ಸ್ಪೀಕರ್** : ಮಾನ್ಯ ಸದಸ್ಯರು ಅಷ್ಟೆಲ್ಲ ಮಾತನಾಡುವ ಅಗತ್ಯವಿರಲಿಲ್ಲ ಎಂದು ನನ್ನ ಅನಿಸಿಕೆ.

**ಮಿ| ತಾಜಾಮುಲ್ ಹುಸೇನ್** : ಅವರು ಅದನ್ನು ಹಿಂತೆಗೆದುಕೊಳ್ಳಲಿ. ಆ ಹೇಳಿಕೆಯನ್ನು ಮಾಡುವಾಗ ಅವರು ಕ್ರಮಬದ್ಧವಾಗಿ ವರ್ತಿಸಿದರೆ? ಅವರು ಉದ್ದಕ್ಕೂ ಮಾನ್ಯ ಸದಸ್ಯರ ವಿರುದ್ಧ ಮಾತಾಡುತ್ತಿದ್ದಾರೆ.

**ಮಿ| ಡೆಪ್ಯುಟಿ ಸ್ಪೀಕರ್** : ಮಾನ್ಯ ಸದಸ್ಯರ ತಲೆ ಕೆಟ್ಟಿದೆಯೆಂದು ಯಾರೊಬ್ಬ ಸದಸ್ಯರೂ ಹೇಳುವುದು ಉಚಿತವಲ್ಲ ಎಂದು ನಾನು ಭಾವಿಸುತ್ತೇನೆ. ಅದು ಸದನದ ಘನತೆಯನ್ನು ಕುಗ್ಗಿಸುತ್ತದೆ. ಅದೇ ಕಾಲಕ್ಕೆ ನಾನು ಒಂದು ಮಾತನ್ನು ಹೇಳಲೇಬೇಕು; ಒಬ್ಬ ಸದಸ್ಯನು ಅಥವಾ ಇನ್ನೊಬ್ಬ ಸದಸ್ಯನು ತಾನು ಯಾರನ್ನು ಉದ್ದೇಶಿಸಿ ಮಾತಾಡುತ್ತಿರುವನೋ ಆತ ಅಪ್ರಿಯವಾದ ಭಾಷೆಯನ್ನು ಬಳಸಿ ಮಾತಾಡುತ್ತಿರುವುದನ್ನು ನಾನು ಗಮನಿಸುತ್ತ ಬಂದಿದ್ದೇನೆ. ಒಂದಿಷ್ಟು ಸಹನೆಯನ್ನು ತೋರಿಸಬೇಕು. ಆಡಿದ ಮಾತುಗಳಿಂದಾಗಲಿ ಸಂಕೇತಗಳ ಮೂಲಕವಾಗಲಿ ಮಾತನಾಡುವಾಗ ಅಡ್ಡಿ ಮಾಡಬಾರದು. ಆದ್ದರಿಂದ ಒಬ್ಬ ಮಾನ್ಯ ಸದಸ್ಯನು ತನ್ನ ಕಾಗದಗಳ ಪುಟಗಳನ್ನು ತಿರುವಿ ಹಾಕುತ್ತಿರುವಾಗ ಅವನಿಗೆ ಅಡ್ಡಿ ಮಾಡಿದರೆ, ಅವು ತಪ್ಪುತ್ತವೆ.

ಹೀಗಾಗಿ ಆ ಅಡ್ಡಿಗಳ ಮೂಲಕ ಅವನು ರೇಗುವ ಸಂಭವ.

**ಮಿ। ನಝೀರುದ್ದೀನ್ ಅಹಮ್ಮದ್** : ಆಚೆಯಿಂದ ನನಗೆ ಯಾರೋ ಹೇಳಿದರು ನನ್ನ ತಲೆ ಕೆಟ್ಟಿದೆ ಎಂದು.

**ಮಿ। ಡೆಪ್ಯುಟಿ ಸ್ಪೀಕರ್ :** ಮಾನ್ಯ ಸದಸ್ಯರ ತರ್ಕದ ಸೂತ್ರವು ತಪ್ಪಿದೆ.

**ಮಿ। ತಾಜಾಮುಲ್ ಹುಸೇನ್ :** ಅವರು ತಮ್ಮ ಪವಿತ್ರ ದಾರವನ್ನು ಕಳೆದುಕೊಂಡಿದ್ದಾರೊ, ತಿಳಿಯಬಯಸುತ್ತೇನೆ.

**ಮಿ। ನಝೀರುದ್ದೀನ್ ಅಹಮ್ಮದ್** : ನಾನು ನನ್ನ ತರ್ಕವನ್ನು ಮುಂದುವರಿಸುತ್ತೇನೆ. ಸನ್ಮಾನ್ಯರೆ ಮೂಲ ವಿಧೇಯಕ ಖಂಡ ೨ ರಲ್ಲಿ 'ಪುತ್ರ' ಪದದ ಪರಿಭಾಷೆ ಹೀಗೆ ಕೊಟ್ಟಿದೆ: 'ಪುತ್ರ' ಎಂದರೆ ಒಬ್ಬ *ದತ್ತಕ, ಕೃತ್ರಿಮ* ಅಥವಾ *ಗೋಧಾ ಪುತ್ರ.* ಆದರೆ ಅದರಲ್ಲಿ ದಾಸಿ ಪುತ್ರ ಮತ್ತು ಇತರರು ಸೇರುವುದಿಲ್ಲ. ಇದನ್ನು ಇಲಾಖಾ ವಿಧೇಯಕದಲ್ಲಿ ಸಂಪೂರ್ಣವಾಗಿ ಬಿಟ್ಟುಬಿಡಲಾಗಿದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಯಾರೇ ಮಾನ್ಯ ಸದಸ್ಯರು ಏನನ್ನಾದರೂ ಓದಿ ಹೇಳುವಾಗ, ಅದನ್ನು ಸರಿಯಾಗಿ ಓದಬಾರದೆ?

**ಮಿ। ನಝೀರುದ್ದೀನ್ ಅಹಮ್ಮದ್ :** ಅದನ್ನು ಬಿಟ್ಟುಬಿಡಲಾಗಿದೆ ಎಂದು ಕಂಡುಬರುತ್ತದೆ. ಆ ಪರಿಭಾಷೆಯು ವಿಧೇಯಕದ ಯಾವ ಭಾಗದಲ್ಲಾದರೂ ಇದ್ದರೆ, ದಯೆಯಿಟ್ಟು ನನ್ನ ಗಮನವನ್ನು ಅತ್ತ ಸೆಳೆಯಬೇಕು.

**ಮಿ। ಡೆಪ್ಯುಟಿ ಸ್ಪೀಕರ್ :** ಈಗ ಸ್ಪೀಕರ್ ಅವರಿಗೆ ಅಡ್ಡಿಪಡಿಸಿದ ಮಾನ್ಯ ಸದಸ್ಯರು ಪುನಃ ಪುನಃ ಉಪದೇಶ ಮಾಡುತ್ತಿದ್ದಾರೆ. ಮಿ। ನಝೀರುದ್ದೀನ್ ಅವರು ಮಾಡಬಯಸುವ ಉಲ್ಲೇಖ ಮಾಡುವಲ್ಲಿ ಒಂದಿಷ್ಟು ನಿಧಾನವಾಗಿರಬಹುದು. ಆ ಕಾರಣ ಅವರಿಗೆ ಅಡ್ಡಿಪಡಿಸಬೇಕಾಗಿಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್ : '**ಪುತ್ರ' ಪದದ ಪರಿಭಾಷೆಯನ್ನು ಬಿಟ್ಟುಬಿಡಲಾಗಿದೆ ಎಂದು ನಿವೇದಿಸಬಯಸುತ್ತೇನೆ. ನಾನು ತಪ್ಪು ಮಾಡಿದ್ದರೆ, ನನ್ನ ತಪ್ಪನ್ನು ದಯಮಾಡಿ ಎತ್ತಿ ತೋರಿಸಬೇಕು.

**ಡಾ॥ ಪಿ. ಎಸ್. ದೇಶಮುಖ್** (ಸಿ.ಪಿ. ಮತ್ತು ಬಿರಾರ್ : ಸಾಮಾನ್ಯ) : ಮಾನ್ಯ ಸದಸ್ಯರು ತಪ್ಪು ಮಾಡಿದ್ದಾರೆ ಎಂದು ನನಗೆ ಅನಿಸುತ್ತದೆ.

**ಮಿ। ಡೆಪ್ಯುಟಿ ಸ್ಪೀಕರ್ :** ಮಾನ್ಯ ಸದಸ್ಯರು ಈ ರೀತಿ ಅಡ್ಡಿಪಡಿಸುತ್ತ ಹೋದರೆ ಸದನದ ಕಾರ್ಯಕಲಾಪಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ನಡೆಸಲು ಸಾಧ್ಯವಿಲ್ಲ. ಮಿ। ನಝೀರುದ್ದೀನ್ ಅಹಮ್ಮದ್ ಅವರು ಇತರ ಸದಸ್ಯರಿಗೆ ಪ್ರಶ್ನೆಗಳನ್ನು ಹಾಕದೆ ತಮ್ಮ ಮಾತನ್ನು ಮುಂದುವರಿಸಬಹುದು.

**ಮಿ। ನಝೀರುದ್ದೀನ್ ಅಹಮ್ಮದ್** : ನಾನು ಹೇಳಿದ ಹಾಗೆ, ಭಾಗ II, ಖಂಡ ೨ರ ಉಪಖಂಡ (೩). ಇದರಲ್ಲಿ ಮರಣಶಾಸನರಹಿತ ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ಕಂಡುಬರುವ ಪುತ್ರ ಪದ ಪರಿಭಾಷೆಯನ್ನು ಮತ್ತು ದೃಷ್ಟಾಂತಗಳನ್ನು ಸಹ ಬಿಟ್ಟುಬಿಡಲಾಗಿದೆ. ನಾಲ್ಕು ದೃಷ್ಟಾಂತಗಳನ್ನು ಬಿಟ್ಟುಬಿಡಲಾಗಿದೆ. ನಾನು ಮಾಡಲಾದ ಬದಲಾವಣೆಗಳ ಸ್ವರೂಪದ ಕಡೆಗೆ ಮಾತ್ರ ಗಮನ ಸೆಳೆಯಲು ಪ್ರಯತ್ನಿಸುತ್ತಿದ್ದೇನೆ. ನನ್ನ ಪ್ರಕಾರ ಇವು ಗಂಭೀರ ಸ್ವರೂಪದ ಲೋಪಗಳು. ಅವು ಕರಡು ರೂಪದಲ್ಲಿನ ಲೋಪಗಳಲ್ಲ. ವಿಧೇಯಕವನ್ನು ಸುಧಾರಿಸಲು ಅಥವಾ ಈ ಲೋಪಗಳನ್ನು ಮಾಡಲು ಆಯ್ಕೆ ಸಮಿತಿಗೆ ಇರುವ ಹಕ್ಕನ್ನು ನಾನು ಪ್ರಶ್ನಿಸುತ್ತಿಲ್ಲ. ಆದರೆ, ಈ ಬದಲಾವಣೆಗಳನ್ನು ಮಾಡಿದವರು ಆಯ್ಕೆ ಸಮಿತಿಯವರಲ್ಲ, ಕರಡು ರಚನಾ ಸಮಿತಿಯವರು. ಮತ್ತು ಆಯ್ಕೆ ಸಮಿತಿಯವರ ಗಮನವನ್ನು ನಿರ್ದಿಷ್ಟವಾಗಿ ಈ ಲೋಪಗಳ

ಕಡೆಗೆ ಸೆಳೆಯಲಾಗಿರುವುದಿಲ್ಲ.

ಅನಂತರ ನಾನು ವಿಧೇಯಕದ ಇನ್ನೊಂದು ಪ್ರಮುಖ ಭಾಗದ ಕಡೆಗೆ ಬರುತ್ತೇನೆ. ಇಲ್ಲಿ ಕರಡು ರಚನಾ ಸಮಿತಿಯವರು ಸೇರಿಸಿದ ಅತ್ಯಂತ ಗಂಭೀರ ಸ್ವರೂಪದ ಬದಲಾವಣೆಗಳನ್ನು ತೋರಿಸುತ್ತೇನೆ. ಮೂಲ ವಿಧೇಯಕದ ಭಾಗ II ಖಂಡ ೪– ಇದರಲ್ಲಿ ವಾರಸುದಾರರ ಪಟ್ಟಿಗಳನ್ನು ಕೊಡಲಾಗಿದೆ. ಅದರ ಪ್ರಕಾರ, ಮರಣಶಾಸನವಿಲ್ಲದ ಪುರುಷನ ಆಸ್ತಿಯು ಈ ಭಾಗದಲ್ಲಿ ನಿಯಮಿಸಿದ ನಿಯಮಗಳಿಗನುಸಾರ ಪ್ರಾಪ್ತವಾಗತಕ್ಕದ್ದು : (a) ಪ್ರಕರಣ ೫ರಲ್ಲಿ ಪಟ್ಟಿಮಾಡಲಾದ ವಾರಸುದಾರರು ಯಾರಾದರೂ ಇದ್ದರೆ, ಅವರಿಗೆ; (b) ಪಟ್ಟಿಮಾಡಲಾದ ವಾರಸುದಾರರು ಯಾರೂ ಇಲ್ಲದಿದ್ದರೆ, ಅವನ ಸಪಿಂಡರು ಯಾರಾದರೂ ಇದ್ದರೆ, ಅವರಿಗೆ; (c) ಸಪಿಂಡರು ಯಾರೂ ಇಲ್ಲದಿದ್ದರೆ, ಅವನ ಸಜಾತರು ಯಾರಾದರೂ ಇದ್ದರೆ, ಅವರಿಗೆ; ಮತ್ತು (d) ಸಜಾತರು ಯಾರೂ ಇಲ್ಲದಿದ್ದರೆ, ಪ್ರಕರಣ ೧೦ರಲ್ಲಿ ನಮೂದಿಸಲಾದ ವಾರಸುದಾರರು ಯಾರಾದರೂ ಇದ್ದರೆ, ಅವರಿಗೆ.

**ಮಿ। ಡೆಪ್ಯುಟಿ ಸ್ಪೀಕರ್ :** ಮಾನ್ಯ ಸದಸ್ಯರ ಹತ್ತಿರ ಹಿಂದೂ ಕೋಡ್ ವಿಧೇಯಕದ ತುಲನಾತ್ಮಕ ಕೋಷ್ಟಕಗಳ ಒಂದು ಪ್ರತಿ ಇದೆಯೊ ಇಲ್ಲವೊ ನನಗೆ ಗೊತ್ತಿಲ್ಲ. ಅದನ್ನು ಎಲ್ಲ ಸದಸ್ಯರಿಗೂ ವಿತರಿಸಲಾಗಿತ್ತಷ್ಟೆ. ರಾವ್ ಸಮಿತಿಯವರು ಕರಡು ಮಾಡಿದಂಥ ಮೂಲ ಹಿಂದೂ ಕೋಡ್‌ಅನ್ನು ಕಾನೂನು ಚರ್ಚಿಸಲು ಅಗತ್ಯವಿಲ್ಲ ಎಂದು ನನ್ನ ಸಲಹೆ. ಅವರು ಮೊದಲನೆಯ ಅಂಶದ ಬಗ್ಗೆ ಸಾಕಷ್ಟು ಸಮಯ ತೆಗೆದುಕೊಂಡಿದ್ದಾರೆ ಎಂದು ನನ್ನ ಅನಿಸಿಕೆ. ಅ ಅಂಶವನು ಸಾಕಷ್ಟು ಸ್ಪಷ್ಟಗೊಳಿಸಲಾಗಿದೆಯೆಂದು ನಾನು ಭಾವಿಸುತ್ತೇನೆ. ಹಾಗೆ ಕೇಳಿದರೆ ದೃಷ್ಟಾಂತಗಳನ್ನು ಕೊಡುತ್ತ ಹೋಗಬಹುದು. ಅಲ್ಲೊಂದು ಅಂಶ, ಇಲ್ಲೊಂದು ಅಂಶ, ಹೀಗಾದರೆ, ಸದನವು ಆ ಕುರಿತು ಗಮನ ನೀಡುತ್ತದೆ. ಕೆಲವು ನಿರ್ದಿಷ್ಟ ಅಂಶಗಳನ್ನು ರೂಪಿಸಿದಾಗ, ಅವು, ಸಾಕಷ್ಟು ಸಂಖ್ಯೆಯಾಗಿಬಿಡುತ್ತವೆ. ಅವುಗಳನ್ನು ಸ್ಪಷ್ಟಗೊಳಿಸಬಹುದು ಎಂದು ನಾನು ಒಪ್ಪುತ್ತೇನೆ. ಆದರೆ, ಕೋಷ್ಟಕಗಳಲ್ಲಿ ಮಾಡಲಾದ ಬದಲಾವಣೆಗಳು ಸಾಕಷ್ಟಾಗಿವೆ.

**ಮಿ। ನಝೀರುದ್ದೀನ್ ಅಹಮ್ಮದ್** : ಸ್ವಾಮೀ, ಪಟ್ಟಿ ಸಂಪೂರ್ಣವಾಗಿಯೂ ಇಲ್ಲ. ಕರಾರುವಾಕ್ಕಾಗಿಯೂ ಇಲ್ಲ, ಮತ್ತು ಅದರಲ್ಲಿ ಬದಲಾವಣೆಗಳನ್ನು ಸೂಚಿಸಿಲ್ಲ. ನಿಜಸಂಗತಿಯೆಂದರೆ, ಮೂಲ ವಿಧೇಯಕದ ಮೂಲ ಖಂಡಗಳ ಬಗೆಗಿನ ಮತ್ತು ಮಾಡಲಾದ ಬದಲಾವಣೆಗಳ ಬಗೆಗಿನ ಷರಾಗಳು ಅತ್ಯಂತ ಸ್ವಲ್ಪ. ನಾನು ಈಗ ಒಂದು ಪ್ರಮುಖ ಬದಲಾವಣೆಗೆ ಬರುತ್ತೇನೆ. ಅದೆಂದರೆ ವಾರಸಾಕ್ಕೆ ಸಂಬಂಧಿಸಿದ್ದು. ಹೊಸ ವಿಧೇಯಕದೊಂದಿಗೆ ಅಥವಾ ಇಲಾಖಾ ಕರಡಿನೊಂದಿಗೇ ಅದರ ಗುರುತು ಹಿಡಿಯಲಾಗದಷ್ಟು ಅದನ್ನು ಬದಲಾಯಿಸಲಾಗಿದೆ. ಅಲ್ಲದೆ, ಅದು ಮೂಲ ವಿಧೇಯಕಕ್ಕೆ ಬದಲಿ ಆಗಿರುವ ವಿಧೇಯಕವಂತೂ ಅಲ್ಲವೇ ಅಲ್ಲ. ನಾನು ನಿವೇದಿಸುವುದೇನೆಂದರೆ, ವಾರಸಾಕ್ಕೆ ಸಂಬಂಧಿಸದಂತೆ ಇನ್ನೂ ಹೆಚ್ಚಿನ ಬದಲಾವಣೆಗಳನ್ನು ಮಾಡಲಾಗಿದೆ.

ಮೊಟ್ಟಮೊದಲಿಗೆ ನಾನು ಪಟ್ಟಿ ಮಾಡಲಾದ ವಾರಸುದಾರರಿಗೆ ಸಂಬಂಧಿಸಿದಂತೆ ಭಾಗ II ರಲ್ಲಿ ವಿಧೇಯಕದ ಖಂಡ ೪ ರಲ್ಲಿ, ಮಾಡಲಾದ ಬದಲಾವಣೆಗಳನ್ನು ಕುರಿತು ಹೇಳುತ್ತೇನೆ. ಪಟ್ಟಿ ಮಾಡಲಾದ ವಾರಸುದಾರರ ಪಟ್ಟಿಯಲ್ಲಿ ತೀವ್ರ ಎಂದು ನಾನು ಹೇಳಬಲ್ಲೆನು. ಮೂಲ ವಿಧೇಯಕದಲ್ಲಿ ಇರುವ ವಾರಸುದಾರರೇ ಬೇರೆ ಮತ್ತು ಇಲಾಖಾ ಸಮಿತಿಯು ಪರಿಷ್ಕರಿಸಿದ ಕರಡಿನಲ್ಲಿ ಇರುವವರ ಹೆಸರುಗಳೇ ಬೇರೆ. ಮೂಲದಲ್ಲಿರುವ ವ್ಯವಸ್ಥೆಯನ್ನು ಪೂರ್ಣವಾಗಿ ಉಲ್ಟಾ–ಪಲ್ಟಾ ಮಾಡಲಾಗಿದೆ ಮತ್ತು ಪಟ್ಟಿಮಾಡಲಾದ ವಾರಸುದಾರರು ಇಲ್ಲದೆ ಹೋದರೆ, ಆಸ್ತಿಯು ಸಪಿಂಡರಿಗೆ ಹೋಗುತ್ತದೆ ಎಂದು ಹೇಳಲಾಗಿದೆ. ಸಪಿಂಡರ

ಪರಿಭಾಷೆ ಸರ್ವವಿದಿತ. ಅದು ಮೂಲ ವಿಧೇಯಕದಲ್ಲಿ ಇದ್ದಿತು. ಆದರೆ ಇಲಾಖಾ ಸಮಿತಿಯು ತಿರಸ್ಕರಿಸಿದ ವಿಧೇಯಕದಲ್ಲಿ 'ಸಪಿಂಡ' ಎಂಬ ಪದದ ಪರಿಭಾಷೆಯನ್ನು ಬಹಳಷ್ಟು ಪರಿಬಂಧಿಸಲಾಗಿದೆ (ನಿರ್ಬಂಧಿಸಲಾಗಿದೆ). ಹೀಗಾಗಿ, ಪಟ್ಟಿಮಾಡಲಾದ ವಾರಸುದಾರರು ಇಲ್ಲದೆ ಹೋದರೆ, ಸಪಿಂಡರು (ಗೋತ್ರಜರು), ದೂರದ ಗೋತ್ರಜರು ಕೂಡ, ಹಿಂದೂ ಕಾನೂನಿಗೆ ಅನುಸಾರವಾಗಿ, ಮುಸ್ಲಿಂ ಕಾನೂನಿಗೆ ಅನುಸಾರವಾಗಿ ಮತ್ತು ಪ್ರತಿಯೊಂದು ಕಾನೂನಿಗೆ ಅನುಸಾರವಾಗಿ ವಾರಸುದಾರರಾಗಲೂ ಹಕ್ಕುಳ್ಳವರಾಗುತ್ತಾರೆ ಮತ್ತು ಅದೆಲ್ಲವೂ ಮೂಲದ ವಿಧೇಯಕದ ಪ್ರಕಾರ. ಆದರೆ ಇಲಾಖಾ ಸಮಿತಿಯ ಪರಿಷತ್ ಕರಡಿನಲ್ಲಿ 'ಸಪಿಂಡ' ಎಂಬ ಪದಕ್ಕೆ, ಕೆಲವು ಶ್ರೇಣಿಗಳ ತನಕ ಇರುವ ಹಾಗೆ ತೀವ್ರವಾಗಿ ಮಾರ್ಪಾಟಾದ ಪರಿಭಾಷೆ ಗೊತ್ತುಪಡಿಸಲಾಗಿದೆ. ಅಂದರೆ, ಹಳೆಯ ವಿಧೇಯಕದ ಪ್ರಕಾರ ಆ ಶ್ರೇಣಿಗಳ ಆಚೆಗಿನ ಗೋತ್ರಜರು ಸಹ ವಾರಸುದಾರಿಕೆ ಹಕ್ಕುಳ್ಳವರಾಗಬಹುದಾಗಿತ್ತು. ಆದರೆ ಇಲಾಖಾ ವಿಧೇಯಕದ ಅಡಿಯಲ್ಲಿ, ಅವರಿಗೆ ಅವಕಾಶವನ್ನು ಒದಗಿಸಲಾಗುವುದಿಲ್ಲ. ಅದೇ ರೀತಿ, ಇಲಾಖಾ ವಿಧೇಯಕದಲ್ಲಿ ಸಜಾತರನ್ನು ಕೂಡ ನಿರ್ಬಂಧಕ್ಕೆ ಗುರಿಪಡಿಸಲಾಗಿದೆ. ಆದಕಾರಣ, ದೂರದ ಗೋತ್ರಜರನ್ನು ಮತ್ತು ದೂರದ ಸಜಾತರನ್ನು ಹೊರತುಪಡಿಸುವ ನಿಮಿತ್ತ ಇದು ಮಹತ್ವಪೂರ್ಣ ಬದಲಾವಣೆಯಾಗಿದೆ. ಆಮೇಲೆ, ಖಂಡ (d) ನಲ್ಲಿ ಆಜ್ಞಾಪತ್ರಧಾರಕರು ಮತ್ತು ಇತರರು ಎಂಬ ಪದಗಳನ್ನು ಪೂರ್ಣವಾಗಿ ತೆಗೆದುಹಾಕಲಾಗಿದೆ. ಮೂಲ ವಿಧೇಯಕದ ಭಾಗ II ಖಂಡ ೪ ರಲ್ಲಿ ಇರುವ ವಾರಸಾ ಯೋಜನೆಯನ್ನು ಪ್ರತಿ ಹಂತದಲ್ಲೂ ಬದಲಾಯಿಸಲಾಗಿದೆ ಮತ್ತು ತೀವ್ರ ಬದಲಾವಣೆಗಳನ್ನು ಮಾಡಲಾಗಿದೆ ಮತ್ತು ಪಟ್ಟಿ ಮಾಡಲಾದ ವಾರಸುದಾರರನ್ನು ಬದಲಾಯಿಸಲಾಗಿದೆ; ಗೋತ್ರಜರನ್ನು ನಿರ್ಬಂಧಿಸಲಾಗಿದೆ; ಸಜಾತರನು ನಿರ್ಬಂಧಿಸಲಾಗಿದೆ ಮತ್ತು ಇತರ ಖಂಡಗಳನ್ನು ಪೂರ್ಣವಾಗಿ ತೆಗೆದುಹಾಕಲಾಗಿದೆ. ಈ ಬದಲಾವಣೆಗಳನ್ನು ಆಯ್ಕೆ ಸಮಿತಿಯು ಪೂರ್ಣ ಪರ್ಯಾಲೋಚನೆಯ ತರುವಾಯ ಕಾನೂನು ಸಂಗತವಾಗಿ ಮಾಡಬಹುದಾಗಿತ್ತು ಎಂಬುದನ್ನು ನಾನು ಚೆನ್ನಾಗಿ ಬಲ್ಲೆನು. ಆದರೆ ಬದಲಾವಣೆಗಳನ್ನು ಮಾಡಿದವರು ಆಯ್ಕೆ ಸಮಿತಿಯವರಲ್ಲ. ಮಾಡಿದವರು ಇಲಾಖಾ ಸಮಿತಿಯವರು ಮತ್ತು ಸದಸ್ಯರು ನನ್ನನ್ನು ಕೇಳುತ್ತಾರೆ. – 'ಮಾಡಲಾದ ಬದಲಾವಣೆಗಳು ಯಾವುವು?' ಎಂದು.

**ಮಿ। ಡೆಪ್ಯುಟಿ ಸ್ಪೀಕರ್ :** ಆಯ್ಕೆ ಸಮಿತಿಯ ಎಲ್ಲ ಸದಸ್ಯರು ಎದ್ದು ನಿಂತು ಆ ವಿಷಯಕ್ಕೆ ಗಮನ ನೀಡಿದರೆ ಆಯ್ಕೆ ಸಮಿತಿಯು ಏನೆಲ್ಲ ಮಾಡಿದೆಯೋ ಆ ಬಗ್ಗೆ ಮಾನ್ಯ ಸದಸ್ಯರು ಸಮಾಧಾನ ಹೊಂದುತ್ತಾರೆ ಎಂದು ನಾನು ತಿಳಿಯಬಹುದೆ?

**ಮಿ। ನಝೀರುದ್ದೀನ್ ಅಹಮ್ಮದ್** : ಪ್ರಶ್ನೆ ಎಂದರೆ ಮಾಡಲಾದ ಬದಲಾವಣೆಗಳನ್ನು ಆಯ್ಕೆ ಸಮಿತಿಯ ಗಮನಕ್ಕೆ ತರಲಿಲ್ಲ.

**ಮಿ। ಡೆಪ್ಯುಟಿ ಸ್ಪೀಕರ್** : ಆ ಮೂಲಕ ಯಾವ ಸದುದ್ದೇಶವೂ ಈಡೇರುವಂತಿಲ್ಲ. ಆಯ್ಕೆ ಸಮಿತಿಯು ನೆರವೇರಿಸಿದ ಕೆಲಸದ ಸಂಬಂಧದಲ್ಲಿ ಸದನವು ಯಾವುದೇ ಬಗೆಯ ಕಾನೂನು ಅಧಿಕಾರ ವ್ಯಾಪ್ತಿ ಹೊಂದಿದೆಯೆ ಇಲ್ಲವೆ ಎನ್ನುವುದು ಕಾನೂನು ವಿಚಾರ ಅಲ್ಲ. ಆಯ್ಕೆ ಸಮಿತಿಯು ಒಂದು ನಿರ್ಣಯಕ್ಕೆ ಬರುವುದಕ್ಕೆ ಮುಂಚೆ ಖಂಡಗಳ ಪೈಕಿ ಪ್ರತಿಯೊಂದನ್ನೂ ಕೂಲಂಕಷವಾಗಿ ಪರಿಶೀಲಿಸಿದೆ ಎಂಬುದನ್ನು ತೋರಿಸಲು ಸಾಕಷ್ಟು ಚರ್ಚೆ ಆದದ್ದುಂಟು; ತೀರ್ಮಾನವೂ ಆದದ್ದುಂಟು. ಆದರೆ ಕೆಲವು ಸತ್ವಾಂಶವುಳ್ಳ ವಿಷಯಗಳಲ್ಲಿ ಹಳೆಯ ಕಾನೂನು ವಿಪುಲ ಬದಲಾವಣೆಗೆ ಗುರಿಯಾಗಿದೆ. ಆ ಅಭಿಪ್ರಾಯದಲ್ಲಿ ಒಂದಿಷ್ಟು ಸತ್ವವುಂಟು. ಆ ವಿಷಯಗಳನ್ನು ಕುರಿತು ಮಾನ್ಯ ಸದಸ್ಯರು ಸದನವನ್ನು ಉದ್ದೇಶಿಸಿ ಭಾಷಣ ಮಾಡಬೇಕು.

ಈವರೆಗೆ ಹೇಳಲಾಗಿರುವುದೆಲ್ಲವೂ ಅಪ್ರಸ್ತುತ, ಅಸಂಗತ ಎಂದು ನಾನು ಹೇಳಲಾರೆನು. ಸಾಕಷ್ಟನ್ನು ಹೇಳಲಾಗಿದೆ.

**ಮಿ। ನಝೀರುದ್ದೀನ್ ಅಹಮ್ಮದ್** : ಕೆಲವು ಸದಸ್ಯರ ಮಟ್ಟಿಗೆ ಸಾಕಷ್ಟನ್ನು ಹೇಳಲಾಗಿಲ್ಲ. ಇವು ಮಹತ್ವಪೂರ್ಣ ಬದಲಾವಣೆಗಳಲ್ಲ ಎಂದು ಹೇಳಲಾಗುತ್ತದೆ. ಆದರೆ ಅವುಗಳನ್ನು ಎತ್ತಿ ತೋರಿಸುವ ಕೆಲಸ ನಾನು ಮಾಡುತ್ತೇನೆ. ತೊಂದರೆಯೆಂದರೆ, ಬದಲಾವಣೆಗಳು ಅಗಣಿತವಾಗಿರುವುದರಿಂದ ಅವೆಲ್ಲವುಗಳ ಬಗ್ಗೆ ಸದನದ ಖಚಿತ ಗಮನ ಸೆಳೆಯುವುದು ಸಾಧ್ಯವಿಲ್ಲ. ನಿಜವೆಂದರೆ, ಈ ಬದಲಾವಣೆಗಳೆಲ್ಲ ಗಂಭೀರ ಸ್ವರೂಪದವುಗಳು, ವಿವಿಧವಾದವುಗಳು, ಮತ್ತು ಅತ್ಯಂತ ಮಹತ್ವಪೂರ್ಣವಾದವುಗಳು ಮತ್ತು ನನ್ನ ವಾದವೆಂದರೆ ಇವೆಲ್ಲವುಗಳನ್ನು ಆಯ್ಕೆ ಸಮಿತಿಯವರು ಸೇರಿಸಲಿಲ್ಲ. ಅವುಗಳನ್ನು ಅವರು ಅಂಗೀಕರಿಸಿದರೋ ಇಲ್ಲವೋ ಅದು ಬೇರೆ ವಿಚಾರ. ನನ್ನ ಸಿದ್ಧಾಂತ ಎಂದರೆ, ಪ್ರಮೇಯ ಎಂದರೆ ಕರಡುಸಿದ್ಧವಾಗಿದ್ದ ವಿಧೇಯಕದ ಜತೆ, ಅವೇನೊ ಮಹತ್ವಪೂರ್ಣ ಬದಲಾವಣೆಗಳಲ್ಲ ಎಂಬುದಾಗಿ ಆಶ್ವಾಸನೆ ನೀಡುತ್ತ ಸಾದರ ಪಡಿಸಲಾಯಿತು. ಆದ್ದರಿಂದ ಅವುಗಳತ್ತ ಆಯ್ಕೆ ಸಮಿತಿಯ ಗಮನವು ಸಾಕಷ್ಟು ಪ್ರಮಾಣದಲ್ಲಿ ಸೆಳೆಯಲ್ಪಡಲಿಲ್ಲ. ನಾವು ಈಗ ವಾರಸಾ ಪಟ್ಟಿಯಲ್ಲಿ ಮಾಡಲಾದ ವಾಸ್ತವಿಕ ಬದಲಾವಣೆಗಳನ್ನು ಪರಿಶೀಲಿಸೋಣ. ವಾಸ್ತವಿಕವಾಗಿ, ಮೂಲ ವಿಧೇಯಕದಲ್ಲಿ, ಅದರ ಪ್ರಮುಖ ಭಾಗದಲ್ಲಿ ೪, ೫ ಮತ್ತು ೬ನೆಯ ಪುಟಗಳಲ್ಲಿ ಕಂಡುಬರುತ್ತದೆ. ಈ ಪಟ್ಟಿಯನ್ನು ಇಲಾಖಾ ವಿಧೇಯಕದಲ್ಲಿ ಈ ಸ್ಥಳದಿಂದ ಅನಾಮತ್ತಾಗಿ ಎತ್ತಲಾಗಿದ್ದು ಅದನ್ನು ಏಳನೆಯ ಅನುಸೂಚಿಗೆ ರವಾನಿಸಲಾಗಿದೆ. ಮೂಲ ಪಾಠದಲ್ಲಿ ಇತರ ಭಾಗಗಳು ಇರುತ್ತವೆಯಾದರೂ ವಾರಸಾ ಪಟ್ಟಿಯನ್ನು ವಿಲಕ್ಷಣವಾಗಿ ಮತ್ತು ಆಧಾರವಿಲ್ಲದ ಕಾರಣಗಳಿಗಾಗಿ ತೆಗೆದುಹಾಕಲಾಗಿದೆ. ಮೂಲದ ಪಟ್ಟಿಯನ್ನು ಏಳನೆಯ ಅನುಸೂಚಿಯಲ್ಲಿ ಇರುವಂಥ ಹೊಸ ಪಟ್ಟಿಯೊಂದಿಗೆ ಹೋಲಿಸುವುದು ಸಾಧ್ಯವಿಲ್ಲ. ಮಹತ್ವಪೂರ್ಣವಾದ ಮತ್ತು ಮೂಲಭೂತವಾದ ಬದಲಾವಣೆಗಳು ಆಗಿವೆ. ಮಾನ್ಯ ಮಂತ್ರಿಗಳು ಮಾಡಲಾದ ಬದಲಾವಣೆಗಳೇನು ಎಂದು ತಿಳಿಯಬಯಸಿದ್ದರು.

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** : ಅವೆಲ್ಲವುಗಳನ್ನು ನಾನು ಚೆನ್ನಾಗಿ ಬಲ್ಲೆನು. ನನಗೆ ಸಂಬಂಧಿಸುವಷ್ಟು ಮಟ್ಟಿಗೆ, ನೀವು ನನಗೆ ತಿಳಿವಳಿಕೆ ಕೊಡುವ ಬಗ್ಗೆ ಶ್ರಮ ವಹಿಸಬೇಕಾಗಿಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್** : ಇವು ಉದ್ದೇಶಪೂರ್ವಕವಾಗಿ ಮಾಡಲಾದ ಬದಲಾವಣೆಗಳಾಗಿದ್ದರೆ, ಕರಡು ರಚನಾ ಸಮಿತಿಯು ಯಾವುವೇ ಬದಲಾವಣೆಗಳನ್ನು ಮಾಡಿಲ್ಲವೆಂದೂ ಮತ್ತು ಆ ಎಲ್ಲ ಬದಲಾವಣೆಗಳನ್ನೂ ಇಲಾಖಾ ಸಮಿತಿಯು ಮಾಡಿತೆಂದೂ ಮತ್ತು ಆಯ್ಕೆ ಸಮಿತಿಯು "ನಾವು ಇಲಾಖಾ ವಿಧೇಯಕಕ್ಕೆ ನಮ್ಮ ಗಮನವನ್ನು ಸೀಮಿತಗೊಳಿಸಿದೆವು" ಎಂದು ಹೇಳುವುದೂ– ಇವೆಲ್ಲವುಗಳಿಂದ ಏನೂ ಪ್ರಯೋಜನ ಇಲ್ಲ. ಆದ್ದರಿಂದ, ಇದರ ಕಡೆಗೆ ಅವರ ಗಮನ ಹರಿಯಲಿಲ್ಲ. ಇದೇ ಈ ಬಗ್ಗೆ ಸರಳ ನಿರ್ಣಯ, ನಿಷ್ಕರ್ಷೆ.

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** : ಅದನ್ನು ನಿಮ್ಮ ಶೈಲಿಯಲ್ಲಿ ಹೇಳಿ.

**ಮಿ। ನಝೀರುದ್ದೀನ್ ಅಹಮ್ಮದ್** : ಮಾನ್ಯ ಕಾನೂನು ಮಂತ್ರಿಗಳೇ ಒಂದು ಬಗೆಯ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡ ಹಾಗೆ ತೋರುತ್ತದೆ ಮತ್ತು ಹಾಗೋ ಹೀಗೋ ತಪ್ಪನ್ನು ಒಪ್ಪಿಕೊಂಡರೂ, ಸ್ಪಷ್ಟವಾದ ನೇರವಾದ ರೀತಿಯಲ್ಲಿ ಒಪ್ಪಿಕೊಳ್ಳಲಿಲ್ಲ. ವಾಸ್ತವಿಕವಾಗಿ ಮಹತ್ವಪೂರ್ಣ ಸ್ವರೂಪದ ಬದಲಾವಣೆಗಳನ್ನು ಮಾಡಲಾಗಿದೆ. ಕಾನೂನು ಮಂತ್ರಿಗಳೇ ಕೊನೆಯ ದಿವಸದಂದು ನನ್ನನ್ನು ಕೇಳಿದರು. "ಕರಡು ರಚನಾ ಸಮಿತಿಯು ಮಾಡಿದ ಬದಲಾವಣೆಗಳೇನು ತಿಳಿದುಕೊಳ್ಳೋಣ". ಅವರು ಈಗ

ಹೇಳುತ್ತಾರೆ: "ನನಗೆ ಎಲ್ಲ ಗೊತ್ತುಂಟು," ಅಂದರೆ ಆಮೇಲೆ ಅವರು ಅದನ್ನು ಅಧ್ಯಯನ ಮಾಡಿದಂತೆ ತೋರುತ್ತದೆ. ಆದರೆ ಈ ಬದಲಾವಣೆಗಳು ಮಹತ್ವಪೂರ್ಣ, ಗಂಭೀರ ಸ್ವರೂಪದ ಬದಲಾವಣೆಗಳು. ಅವುಗಳನ್ನು ಸೇರಿಸಿದವರು ಇಲಾಖಾ ಸಮಿತಿಯವರು, ಆಯ್ಕೆ ಸಮಿತಿಯವರಲ್ಲ ಮತ್ತು ಎಷ್ಟು ಮಟ್ಟಿಗೆ ಆಯ್ಕೆ ಸಮಿತಿಯು ಅವುಗಳನ್ನು ಗಮನಿಸಿತ್ತು ಎನ್ನುವುದೇ ಪ್ರಶ್ನೆ. ಭಿನ್ನಾಭಿಪ್ರಾಯ ಟಿಪ್ಪಣಿಯಲ್ಲಿ ಆದರೂ ಡಾ॥ ಭಕ್ಷಿ ತೇಕ್ ಸಿಂಗ್ ಹೇಳುತ್ತಾರೆ: 'ನಾವು ನಮ್ಮ ಗಮನವನ್ನು ಇಲಾಖಾ ಸಮಿತಿಯ ವಿಧೇಯಕಕ್ಕೆ ಮಾತ್ರ ಸೀಮಿತಗೊಳಿಸಿದೆವು. ಮೂಲ ವಿಧೇಯಕಕ್ಕೆ ಅಲ್ಲ.' ಯಾಕೆಂದರೆ ಇಲಾಖಾ ವಿಧೇಯಕದಲ್ಲಿ ಯಾವುದೇ ಮಹತ್ವಪೂರ್ಣ ಬದಲಾವಣೆಗಳನ್ನು ಮಾಡಿಯೇ ಇಲ್ಲ ಎಂದು ಅವರಿಗೆ ಭರವಸೆ ಕೊಡಲಾಗಿತ್ತು. ಆದ್ದರಿಂದ, ಇದನ್ನೆಲ್ಲ ಗಣನೆಗೆ ತೆಗೆದುಕೊಂಡ ತರುವಾಯ ಹೋಗುವುದು ಎಲ್ಲಿಗೆ ನನಗೆ ಅರ್ಥವಾಗುತ್ತಿಲ್ಲ. ಅದು ಗಂಭೀರ ಸ್ವರೂಪದ ಅಕ್ರಮ ಅಲ್ಲದಿದ್ದರೆ ಮತ್ತು ಸದನದ ಗಮನವನ್ನು ಅಗತ್ಯಪಡಿಸತಕ್ಕ ವಿಷಯ ಅಲ್ಲದಿದ್ದರೆ, ಇನ್ನಾವುದು ನನಗೆ ಅರ್ಥವಾಗುತ್ತಿಲ್ಲ. ಇಲಾಖೆಯು ಒಂದು ತೀರ್ಪು –ಪ್ರಮಾದವನ್ನು ಮಾಡಿರುವ ಪಕ್ಷದಲ್ಲಿ, ಅದನ್ನು ಒಪ್ಪಿಕೊಳ್ಳುವುದೇ ಯಥೋಚಿತವಾದದ್ದು. ಹೊರತು 'ಇವೆಲ್ಲ ನನಗೆ ಗೊತ್ತು, ಆದರೆ ಯಾವುದೇ ಬದಲಾವಣೆಗಳನ್ನು ಮಾಡಿಲ್ಲ; ಪ್ರತಿಯೊಂದು ಬದಲಾವಣೆ ಆಯ್ಕೆ ಸಮಿತಿ ಮಾಡಿದ್ದು' ಎಂದು ಹೇಳುವುದು ಸರಿಯಲ್ಲ. ಮತ್ತು ಅವುಗಳನ್ನು, ಆ ಬದಲಾವಣೆಗಳನ್ನು ಆಯ್ಕೆ ಸಮಿತಿಯು ಮಾಡಲಿಲ್ಲ; ಅವುಗಳನ್ನು ಮಾಡಿದವರು ಇಲಾಖಾ ಸಮಿತಿಯವರು ಎಂದು ನಾನು ಹೇಳಿದರೆ, ಆಗ ಅವರು ಹೇಳುತ್ತಾರೆ: "ಅದು ನನಗೆ ಗೊತ್ತು". ಹಾಗಾದರೆ, ಇಲಾಖೆಯ ಸ್ಥಾನಮಾನ ಏನು ಎಂದು ನಮಗೆ ಗೊತ್ತಾಗಬೇಡವೆ? ಇಲಾಖೆಯು ಒಂದು ಬದಲಾವಣೆಯನ್ನು ಮಾಡಿದರೆ,............

**ಶ್ರೀ ಬಿ. ದಾಸ್** : ವಾದ ವಿಷಯಗಳನ್ನು ಒಂದೊಂದಾಗಿ ಕೇಳುತ್ತ ಹೋಗಲು ಇದು ನಿಮಗೆ ಕಾನೂನು ನ್ಯಾಯಾಲಯ ಅಲ್ಲ. ಮಾನ್ಯ ಸದಸ್ಯರು ಭಾಷಣ ಮಾಡಬೇಕು ಮತ್ತು ಕುಳಿತುಕೊಳ್ಳಬೇಕು.

**ಮಿ। ಡೆಪ್ಯುಟಿ ಸ್ಪೀಕರ್ :** ಮಾನ್ಯ ಸದಸ್ಯರು, ಸ್ಪೀಕರ್ ಅವರು ಅಧ್ಯಕ್ಷ ಸ್ಥಾನದಲ್ಲಿ ಇದ್ದಾಗ ಈ ಹೇಳಿಕೆ ಕೊಟ್ಟಿದ್ದಾರೆ. ಒಂದು ಅರ್ಥದಲ್ಲಿ ಇದು ಕಾನೂನು ನ್ಯಾಯಾಲಯ ಮತ್ತು ಮಾನ್ಯ ಸದಸ್ಯರು ತಾನು ಕಾನೂನು ನ್ಯಾಯಾಲಯದಲ್ಲಿ ಒಂದು ಮೊಕದ್ದಮೆಯಲ್ಲಿ ವಾದಮಾಡುತ್ತಿರುವೆನೋ ಹೇಗೆ ಎಂಬಂತೆ ಮಾತಾಡುತ್ತಿದ್ದರೆ ಆಗ ಒಂದು ಕಾನೂನು ನ್ಯಾಯಾಲಯ. ಅದೇನೇ ಇರಲಿ, ಅವರ ಮಾತಿಗೆ ಅಡ್ಡಿ ಮಾಡಬಾರದು. ಆ ಬಗೆಯ ಮಾತನ್ನು ಸಾಧ್ಯವಾದಷ್ಟು ಮಟ್ಟಿಗೆ ತಪ್ಪಿಸಬೇಕು.

**ಶ್ರೀ ಬಿ. ದಾಸ್ :** ನಾವು ನಮ್ಮ ನಮ್ಮಲ್ಲಿ ಮಾತಾಡಿಕೊಳ್ಳುತ್ತಿದ್ದೇವೆ.

**ಮಿ। ಡೆಪ್ಯುಟಿ ಸ್ಪೀಕರ್ :** ಒಬ್ಬ ಮಾನ್ಯ ಸದಸ್ಯರು ಮಾತಾಡಲು ಪ್ರಾರಂಭಿಸಿರುವಾಗ ಅವರನ್ನು ಅಡ್ಡಿಪಡಿಸುವ ಹಾಗೆ ಮಾತಾಡಲು ಇನ್ನೊಬ್ಬ ಸದಸ್ಯರಿಗೆ ಹಕ್ಕು ಇರುವುದಿಲ್ಲ.

**ಶ್ರೀ ಬಿ. ದಾಸ್** : ಅವರು ನಮ್ಮನ್ನು ಕುರಿತು ಮಾತಾಡುತ್ತಿದ್ದಾರೆ.

**ಮಿ। ಡೆಪ್ಯುಟಿ ಸ್ಪೀಕರ್ :** ನೀವು ಮಾತಾಡಕೂಡದು. ಇನ್ನೊಬ್ಬ ಸದಸ್ಯರು ಮಾತಾಡುತ್ತಿರುವಾಗ ಯಾರೇ ಸದಸ್ಯರಿಗೆ ಮಾತಾಡುವ ಹಕ್ಕು ಇರುವುದಿಲ್ಲ. ಅವರು ಕೇಳಬೇಕು, ಹೊರತು ಸದನದಲ್ಲಿ ಗದ್ದಲ ಮಾಡಬಾರದು.

**ಶ್ರೀ ಬಿ. ದಾಸ್ :** ಅವರ ಮಾತಿನಿಂದ ಉಂಟಾಗುವ ಕ್ಷೋಭೆಯನ್ನು ನೀವು ತಿಳಿದುಕೊಳ್ಳಬೇಕು. ನಾನು ಹೊರಗೆ ಹೋಗಲು ಸಿದ್ಧನಿದ್ದೇನೆ. ಆದರೆ ಮಾನ್ಯ ಸದಸ್ಯರು ಸದನದ ಸದಸ್ಯರಿಗೆ ಕ್ಷೋಭೆ ಉಂಟುಮಾಡಬಾರದು.

**ಮಿ। ಡೆಪ್ಯುಟಿ ಸ್ಪೀಕರ್ :** ನೀವು ಹೇಳುವುದು ತಪ್ಪು. ಯಾವ ಸದಸ್ಯರ ಭಾಷಣವನ್ನೂ ಕ್ಷೋಭೆಕಾರಕ ಭಾಷಣ ಎಂದು ಹೇಳಕೂಡದು. ಅವರು ಕೆಟ್ಟ ಮಾತುಗಳನ್ನಾಡಿದರೆ ಅಥವಾ ಅಸಂಸದೀಯ ಭಾಷೆಯನ್ನು ಬಳಸಿದರೆ ಮಾತ್ರ ಹಾಗೆ ಹೇಳಬಹುದು. ನಮಗೆ ಒಪ್ಪಿಗೆ ಆಗಬಹುದು ಅಥವಾ ಆಗದಿರಬಹುದು. ಆದರೆ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಸಾದರ ಪಡಿಸುತ್ತಿರುವಾಗ ನಾವು ಕೇಳುತ್ತಿರಬೇಕು. ಯಾರೇ ಸದಸ್ಯರ ಭಾಷಣ ಕ್ಷೋಭೆಕಾರಕ ಎಂದು ಹೆಸರಿಡುವ ಹಕ್ಕು ಯಾರಿಗೂ ಇಲ್ಲ.

**ಶ್ರೀ ಬಿ. ದಾಸ್ :** ತಮ್ಮ ನಿರ್ಣಯವನ್ನು ನಾನು ಅಂಗೀಕರಿಸಿದ್ದೇನೆ. ಆದರೆ ಅವರು ಕಾನೂನು ಮಂತ್ರಿಗಳ ಸಂಬಂಧದಲ್ಲಿ 'ಮೋಸದ' ಎಂಬ ಮಾತುಗಳನ್ನು ಬಳಸಿದರಲ್ಲ.

**ಮಿ। ಡೆಪ್ಯುಟಿ ಸ್ಪೀಕರ್ :** ಕಾನೂನು ಮಂತ್ರಿಗಳು ತಮ್ಮನ್ನು ತಾವೇ ಪ್ರತಿರಕ್ಷಿಸಿಕೊಳ್ಳುವಷ್ಟು ಶಕ್ತಿಮಾನ್ ಆಗಿದ್ದಾರೆ.

**ಮಿ। ನಝೀರುದ್ದೀನ್ ಅಹಮ್ಮದ್ :** ನನ್ನ ನಿವೇದನೆಯೆಂದರೆ, ಮಾನ್ಯ ಸದಸ್ಯರು ಆ ಖಂಡವನ್ನು ಹೋಲಿಸಿ ನೋಡಬೇಕು.

**ಮಿ। ಡೆಪ್ಯುಟಿ ಸ್ಪೀಕರ್** : ಮಾನ್ಯ ಸದಸ್ಯರು ಸದನದ ಪರಸ್ಪರರ ಮನಸ್ಸನ್ನು ಬದಲಾಯಿಸುವ ಸಾಮರ್ಥ್ಯವಿರುವಂಥ ಯಾವುದೇ ಗಟ್ಟಿ ವಿಷಯಗಳು ಇವೆಯೆ?

**ಮಿ। ನಝೀರುದ್ದೀನ್ ಅಹಮ್ಮದ್ :** ಮಹತ್ವಪೂರ್ಣ ಬದಲಾವಣೆಗಳಿವೆ. ಅವುಗಳನ್ನು ನಾನು ಎತ್ತಿ ತೋರಿಸಬೇಕು. ಬಹಳಷ್ಟು ಬದಲಾವಣೆಗಳನ್ನು ಪಟ್ಟಿಮಾಡುತ್ತ ಹೋಗಬೇಕಾದೀತು. ಉತ್ತಮ ಸಂಗತಿ ಎಂದರೆ ತಪ್ಪುಗಳನ್ನು ಒಪ್ಪಿಕೊಳ್ಳಬೇಕು ಇಲ್ಲವೆ ಸಹನೆಯಿಂದ ಆಲಿಸಬೇಕು. ನಾನು ಎಲ್ಲ ಅಂಶಗಳನ್ನು ಪಟ್ಟಿಮಾಡಿ ಹೇಳುತ್ತೇನೆ. ನನ್ನ ತರ್ಕಗಳನ್ನು, ವಾದಗಳನ್ನು ಪದೇ ಪದೇ ಹೇಳಿದರೆ, ನನ್ನನ್ನು ಸರಿ ದಾರಿಗೆ ತರಲಡ್ಡಿಯಿಲ್ಲ. ಭಾಗ II, ಖಂಡ ೫ ರಲ್ಲಿ ವರ್ಗ I ಇದೆ. ಪುತ್ರರು, ವಿಧವೆಯರು, ಪುತ್ರಿಯರು ಮತ್ತು ಇತರರು. ಇದರಲ್ಲಿ ಇಲಾಖಾ ಸಮಿತಿಯು ಒಂದು ಬದಲಾವಣೆ ಮಾಡಿದೆ. ಪೂರ್ವಮೃತ ಪುತ್ರನ ಪುತ್ರ ಈ ಬಾಬಿಗೆ, ಇಲಾಖಾ ವಿಧೇಯಕದ ೭ನೆಯ ಅನುಸೂಚಿಯ ಸಂವಾದಿ ವರ್ಗ I ರ ಭಾಗದಲ್ಲಿ ಹೊಸದಾಗಿ ಅವಕಾಶ ಕಲ್ಪಿಸಲಾಗಿದೆ. ವಾಸ್ತವವಾಗಿ, ಈ ಅನುಸೂಚಿಯನ್ನು, ಮೂಲ ವಿಧೇಯಕದಲ್ಲಿನ ಅದರ ಸ್ಥಾನದಿಂದ ಇಷ್ಟೊಂದು ದೂರಕ್ಕೆ ಸರಿಸಲಾಗಿದೆಯಲ್ಲ; ಎಷ್ಟೆಂದರೆ ಆ ಕಾರಣ ಆ ಎರಡು ವರ್ಗಗಳನ್ನು ಒಂದರ ಪಕ್ಕದಲ್ಲಿ ಒಂದನ್ನು ಇಟ್ಟ ಹೊರತು ಅದನ್ನು ಗಮನಿಸಲು ಸಾಧ್ಯವಿಲ್ಲ. ವಾಸ್ತವವಾಗಿ ಪೂರ್ವಮೃತ ಪುತ್ರನ ಪೂರ್ವಮೃತ ಪುತ್ರನ ಪುತ್ರ ಈ ಬಾಬಿಗೆ ಮೂಲ ವಿಧೇಯಕದಲ್ಲಿ ಅವಕಾಶ ಇರಲಿಲ್ಲ. ಆದರೆ ಅದನ್ನು ಇಲಾಖಾ ಸಮಿತಿಯು ಪರಿಷ್ಕರಿಸಿದ ವಿಧೇಯಕದಲ್ಲಿ ಹೊಸದಾಗಿ ಸೇರಿಸಿದ್ದುಂಟು.

ನಾವು, ಅನಂತರ ಇತರ ಪಟ್ಟಿಗಳಿಗೆ ಬರುತ್ತೇವೆ. ಮೂಲ ವಿಧೇಯಕದ ಪಟ್ಟಿಯಲ್ಲಿ, ಬಾಬು ಸಂ. ೨ ರಲ್ಲಿ ಪಟ್ಟಿ ಮಾಡಲಾದ ವಾರಸುದಾರರ ತರುವಾಯ ಮೊದಲನೆಯವನೆಂದರೆ ಮಗಳ ಮಗ. ಇಲಾಖಾ ವಿಧೇಯಕದಲ್ಲಿ ಮಗಳ ಮಗನನ್ನು ಇನ್ನೂ ಕೆಳಗೆ ಸೇರಿಸಲಾಗಿದೆ. ಆ ತರುವಾಯ ತಂದೆ ಮತ್ತು ತಾಯಿ ಬರುತ್ತಾರೆ. ಮೂಲ ವಿಧೇಯಕದ ಪ್ರಕಾರ, ತಂದೆಗಿಂತ ಮುಂಚೆ ಪ್ರಾಶಸ್ತ್ಯ ಪಡೆದು ತಾಯಿಯು ವಾರಸಾ ಹಕ್ಕುದಾರಳಾಗುತ್ತಾಳೆ. ಇಲ್ಲಿ ಇಲಾಖಾ ವಿಧೇಯಕದಲ್ಲಿ ತಾಯಿ ಮತ್ತು ತಂದೆ ಇಬ್ಬರನ್ನೂ ಒಂದೆಡೆಯಲ್ಲಿ ಇಟ್ಟಿದ್ದಾರೆ, ಮತ್ತು ಅವರ ಅನುಕ್ರಮವನ್ನು ಬದಲಾಯಿಸಿದ್ದಾರೆ ಮತ್ತು ಇಲಾಖಾ ವಿಧೇಯಕದಲ್ಲಿ ಅವರು ಜತೆಯಲ್ಲಿ ವಾರಸುದಾರರಾಗುತ್ತಿದ್ದರೆ, ಮೂಲ ವಿಧೇಯಕದಲ್ಲಿ, ತಂದೆಯನ್ನು ಹೊರತುಪಡಿಸಿ, ತಾಯಿಯು ಮೊದಲು ವಾರಸುದಾರಳಾಗುತ್ತಿದ್ದಳು ಮತ್ತು ತಾಯಿಯು ಇಲ್ಲದಿದ್ದರೆ

ತಂದೆಯು ವಾರಸುದಾರನಾಗುತ್ತಿದ್ದನು. ಮಗಳ ಮಗನನ್ನು, ಈಗಾಗಲೇ ತೋರಿಸಿಕೊಟ್ಟಿರುವ ಹಾಗೆ ಇಲಾಖಾ ವಿಧೇಯಕದಲ್ಲಿ ಇನ್ನೂ ಕೆಳಗೆ ಸರಿಸಲಾಗಿದೆ. ಈ ವಿಷಯದ ಕಡೆಗೆ ಒಂದಷ್ಟು ಗಮನ ಕೊಡುವ. ಯಾರಿಗಾದರೂ ಇವೆಲ್ಲ ಮಹತ್ವಪೂರ್ಣ ಬದಲಾವಣೆಗಳು ಎಂದು ಸ್ಪಷ್ಟವಾಗುತ್ತದೆ.

ಆ ಮೇಲೆ ನಾವು ಮೂಲ ವಿಧೇಯಕದ III ನೇ ವರ್ಗಕ್ಕೆ ಬರುತ್ತೇವೆ. ಮೂಲ ವಿಧೇಯಕದ III ನೇ ವರ್ಗದಲ್ಲಿ ಇದ್ದ ಸೋದರರನ ಮಗನ ಮಗನನ್ನು ಇಲಾಖಾ ವಿಧೇಯಕದಲ್ಲಿ ಸಂಪೂರ್ಣವಾಗಿ ಕಣ್ಮರೆ ಮಾಡಲಾಗಿದೆ. ಇದನ್ನು ತಿಳಿದೂ ತಿಳಿದೂ ಅಥವಾ ಇರಾದೆಯಿಂದ ಮಾಡಿದ್ದ ಪಕ್ಷದಲ್ಲಿ, ಆ ಬಗ್ಗೆ ಆಯ್ಕೆ ಸಮಿತಿಯ ವರದಿಯಲ್ಲಿ ಅಥವಾ ಭಾಷಣಗಳಲ್ಲಿ ಒಂದಿಷ್ಟು ಸೂಚನೆ ಇರುತ್ತಿತ್ತು. ಸೋದರರನ ಮಗನ ಮಗನು ಆಗಿಲ್ಲದವನಿಗೆ ಇದು ಮಹತ್ವಪೂರ್ಣ ಬದಲಾವಣೆ ಎಂದು ಅನಿಸಲಿಕ್ಕಿಲ್ಲ. ಆದರೆ ಸೋದರರನ ಮಗನ ಮಗನಿಗೆ ಇದು ಮಹತ್ವಪೂರ್ಣ ಬದಲಾವಣೆ; ಯಾಕೆಂದರೆ ಇತರ ವಾರಸುದಾರರು ಇಲ್ಲದಿದ್ದರೆ, ಅವನು ಆಸ್ತಿಗೆ ಹಕ್ಕುದಾರನಾಗುತ್ತಿದ್ದನು.

ಪಟ್ಟಿಯಲ್ಲಿ ಆ ತರುವಾಯದವರು ಎಂದರೆ ಸೋದರಿ. ಇಲಾಖಾ ವಿಧೇಯಕದಲ್ಲಿ, ಸೋದರ ಮತ್ತು ಸೋದರಿ ಒಟ್ಟಾಗಿ ವಾರಸುದಾರರಾಗುತ್ತಾರೆ. ಹೀಗೆ ಮೂಲ ವಿಧೇಯಕದ ಪಟ್ಟಿಯಲ್ಲಿ ಬಹಳ ಮೇಲ್ಗಡೆ ಇದ್ದ ಸೋದರನು ಅಲ್ಲಿಂದ ವರ್ಗಾವಣೆಯಾಗಿದ್ದಾನೆ ಮತ್ತು ಕೆಳಗಡೆ ವರ್ಗ III ಕ್ಕೆ ತಲುಪಿದ್ದಾನೆ ಮತ್ತು ಸೋದರಿಯ ಜತೆ ವಾರಸುದಾರನಾಗುತ್ತಾನೆ.

(ಅಡ್ಡಿ)

ನಾನು ನನ್ನ ವಾದವನ್ನು ನಿಲ್ಲಿಸಬೇಕೆ ?

**ಮಿ| ತಾಜಾಮುಲ್ ಹುಸೇನ್** : ಮಾನ್ಯ ಸದಸ್ಯರು ಮಾತನಾಡುವಾಗ ಇನ್ನೊಬ್ಬ ಮಾನ್ಯ ಸದಸ್ಯರಿಗೆ ಮಾತನಾಡುವ ಹಕ್ಕಿಲ್ಲ. ನಾನು ಅದನ್ನು ತೀವ್ರವಾಗಿ ವಿರೋಧಿಸುತ್ತೇನೆ.

**ಶ್ರೀ ಲಕ್ಷ್ಮೀನಾರಾಯಣ ಸಾಹು** (ಒರಿಸ್ಸಾ : ಸಾಮಾನ್ಯ) : ಕೋರಂ ಇಲ್ಲ ಎಂದು ತೋರುತ್ತದೆ.

**ಡೆಪ್ಯುಟಿ ಸ್ಪೀಕರ್** : ಕೋರಂ ಇದೆ.

**ಮಿ| ನಝೀರುದ್ದೀನ್ ಅಹಮ್ಮದ್** : ಒಬ್ಬ ಮನುಷ್ಯನು ಸೋದರ ಮತ್ತು ಸೋದರಿ ಅಗಲಿ ಮೃತಪಟ್ಟಿದ್ದಾನೆ ಎಂದು ಭಾವಿಸಿ. ಮೂಲ ಅಧಿನಿಯುಮದ ಅಡಿಯಲ್ಲಿ ಸೋದರನು ವಾರಸುದಾರನಾಗಬಹುದಾಗಿತ್ತು. ಸೋದರಿಯ ಹಕ್ಕನ್ನು ಮುಂದೆ ಹಾಕಲಾಗುತ್ತಿತ್ತು. ಆದರೆ ಇಲಾಖಾ ವಿಧೇಯಕದ ಸೋದರಿ ಮತ್ತು ಸೋದರ ಸಮಸಮನಾಗಿ ವಾರಸುದಾರರಾಗುತ್ತಾರೆ. ಸೋದರನು, ಪಟ್ಟಿಯಲ್ಲಿರುವ ಇತರ “ಮಂದಿಯಿಂದ ಪ್ರತಿಸ್ಥಾಪಿತವಾಗಿ,” ಸೋದರಿಯ ಜತೆ ಒಂದೇ ಸಾಲಿನಲ್ಲಿ ಬರುತ್ತಾನೆ.

ಆಮೇಲೆ ನಾವು ಸೋದರರನ ಮಗನ ಕಡೆಗೆ ಬರುತ್ತೇವೆ. ಅವನು ಎತ್ತರದಲ್ಲಿ ವರ್ಗ Iರಲ್ಲಿ ಇದ್ದನು. ಅವನು ಈಗ ಇಲಾಖಾ ವಿಧೇಯಕ ದ್ವಾರಾ ಸೋದರಿಯ ಮಗನ ಜತೆ ಕೆಳಗೆ ಬಂದಿದ್ದಾನೆ. ಒಬ್ಬ ಮನುಷ್ಯನು ಸೋದರರನ ಮಗ ಮತ್ತು ಸೋದರಿಯ ಮಗ– ಇವರುಗಳನ್ನು ಅಗಲಿ ಮೃತನಾದರೆ, ಮೂಲ ವಿಧೇಯಕದ ಅಡಿಯಲ್ಲಿ ಸೋದರರನ ಮಗ ವಾರಸುದಾರನಾಗಬಹುದಾಗಿತ್ತು. ಆದರೆ ಇಲಾಖಾ ವಿಧೇಯಕದ ಅಡಿಯಲ್ಲಿ ಸೋದರರನ ಮಗ ಮತ್ತು ಸೋದರಿಯ ಮಗ ಇಬ್ಬರೂ ಒಟ್ಟಿಗೆ ವಾರಸುದಾರರಾಗುತ್ತಾರೆ. ನಾನು ನಿವೇದಿಸುವುದೇನೆಂದರೆ ಇವು ಮಹತ್ವಪೂರ್ಣ ಬದಲಾವಣೆಗಳು.

ತರುವಾಯ ನಾನು ಮೂಲ ವಿಧೇಯಕದ ವರ್ಗ IVಕ್ಕೆ ಬರುತ್ತೇನೆ. ಮೂಲ ವಿಧೇಯಕದ ವರ್ಗ

IVರಲ್ಲಿ ಒಬ್ಬ ಮನುಷ್ಯನು ತಂದೆಯ ತಾಯಿ ಮತ್ತು ತಂದೆಯ ತಂದೆ ಇವರುಗಳನ್ನು ಅಗಲಿ ಮೃತನಾದರೆ, (ಅನುಸರಿಸಬೇಕಾದ ವಾರಸಾ ವಿಧಾನವನ್ನು) ಮೂಲ ವಿಧೇಯಕದಲ್ಲಿ ಮತ್ತು ಇಲಾಖಾ ವಿಧೇಯಕದಲ್ಲಿ ವಿಭಿನ್ನವಾಗಿ ಹೇಳಲಾಗಿದೆ. ಮೂಲ ವಿಧೇಯಕದಲ್ಲಿ, ವಾರಸುದಾರರಾಗುವ ತಂದೆಯ ತಾಯಿ ಮತ್ತು ತಂದೆಯ ತಂದೆ ಇವರ ನಡುವೆ, ತಂದೆಯ ತಾಯಿಗೆ ಪ್ರಾಶಸ್ತ್ಯ ಕೊಡಲಾಗುತ್ತಿತ್ತು. ತಂದೆಯ ತಂದೆಯ ವಾರಸುದಾರಿಕೆ ಹಕ್ಕೊತ್ತಾಯವನ್ನು (ಕ್ಲೇಮನ್ನು) ಮುಂದೆ ಹಾಕಲಾಗುತ್ತಿತ್ತು. ಆದರೆ ಇಲಾಖಾ ವಿಧೇಯಕದ ಅಡಿಯಲ್ಲಿ ಇಬ್ಬರನ್ನೂ ಒಂದೆಡೆ ಸೇರಿಸಲಾಗಿದೆ ಮತ್ತು ಇಬ್ಬರೂ ಒಟ್ಟಿಗೆ ವಾರಸುದಾರರಾಗುತ್ತಾರೆ.

ಸ್ವಾಮೀ, ಆ ಮೇಲೆ ನಮ್ಮಲ್ಲಿ ವರ್ಗ IV ರ ಬಾಬುಗಳು (IA), (IB) ಮತ್ತು (ID) ಇವುಗಳಲ್ಲಿ ಕೆಲವು ನಿರ್ದಿಷ್ಟ ವಾರಸುದಾರರು ಇದ್ದಾರೆ. ರಾವ್ ಸಮಿತಿಯು ಸಲ್ಲಿಸಿದ ಮೂಲ ವರದಿಯನ್ನು ತಿದ್ದುಪಡಿ ಮಾಡಿ ಇವುಗಳನ್ನು ಸೇರಿಸಲಾಗಿದೆ. ಮೂಲ ವಿಧೇಯಕದಲ್ಲಿ, ತಂದೆಯ ವಿಧವೆ ಮತ್ತು ಸೋದರನ ವಿಧವೆ ಇದ್ದರೆ, ಸೋದರನ ವಿಧವೆಯನ್ನು ಹೊರತುಪಡಿಸಿ, ತಂದೆಯ ವಿಧವೆಗೆ ಪ್ರಾಶಸ್ತ್ಯ ದೊರೆಯುತ್ತಿತ್ತು. ಇಲಾಖಾ ವಿಧೇಯಕದಲ್ಲಿ ತಂದೆಯ ವಿಧವೆ ಮತ್ತು ಸೋದರನ ವಿಧವೆ– ಒಟ್ಟಿಗೆ ವಾರಸುದಾರರಾಗುತ್ತಾರೆ. ಇದು ಒಳೆಯದೋ ಅಥವಾ ಕೆಟ್ಟದ್ದೋ ಎಂಬುದು ಪ್ರಶ್ನೆಯಲ್ಲ. ನನ್ನ ನಿವೇದನೆಯೇನೆಂದರೆ ಇದು ಒಂದು ಮಹತ್ವಪೂರ್ಣ ಬದಲಾವಣೆ. ಆಮೇಲೆ, ರಾವ್ ಸಮಿತಿ ವರದಿಯ ತಿದ್ದುಪಡಿ ರೂಪದಲ್ಲಿ ಸೇರಿಸಲಾದ ಪೂರಕ ಪಟ್ಟಿಯಲ್ಲಿರುವ ಇನ್ನಿತರ ಇಬ್ಬರು ವಾರಸುದಾರರ ಕಡೆಗೆ ಬರೋಣ. ಅವರಿಬ್ಬರನ್ನು ಅಂದರೆ ಸೋದರ ಮಗನ ವಿಧವೆ ಮತ್ತು ಮಗನ ಮಗನ ವಿಧವೆ ಇವರನ್ನು ಇಲಾಖಾ ವಿಧೇಯಕದಿಂದ ಸಂಪೂರ್ಣವಾಗಿ ಬಿಟ್ಟುಬಿಡಲಾಗಿದೆ. ಮೂಲ ವಿಧೇಯಕದಲ್ಲಿ ಅವರು ಒಬ್ಬರ ಅನಂತರ ಒಬ್ಬರಾಗಿ ವಾರಸುದಾರರಾಗಬಹುದಿತ್ತು. ಇಲಾಖಾ ವಿಧೇಯಕದಲ್ಲಿ ಅವರನ್ನು ಬಿಟ್ಟುಬಿಡಲಾಗಿದೆ. ಇಲಾಖಾ ವಿಧೇಯಕದಲ್ಲಿ ಇದಕ್ಕೆ ಸಂವಾದಿಯಾಗಿ ಏನೂ ಇಲ್ಲ.

ತರುವಾಯ ವರ್ಗ IV ರ ಬಾಬು ೨ಕ್ಕೆ ಬರೋಣ. ಮೂಲ ವಿಧೇಯಕದಲ್ಲಿ ತಂದೆಯ ತಂದೆ ಬಹಳ ಕೆಳಗಡೆ ಇದ್ದಾನೆ. ಆದರೆ, ಇಲಾಖೆಯು ತಯಾರಿಸಿದ ಪಟ್ಟಿಯಲ್ಲಿ ಅವನನ್ನು ಬಹಳಷ್ಟು ಮೇಲಕ್ಕೆ ತರಲಾಗಿದೆ.

ಸ್ವಾಮೀ, ಆ ತರುವಾಯ ನಾವು ತಂದೆಯ ಸಹೋದರ ಮತ್ತು ತಂದೆಯ ಸೋದರಿ ಇವರ ಕಡೆ ಬರೋಣ. ಪಟ್ಟಿಯಲ್ಲಿ ತಂದೆಯ ಸಂಖ್ಯೆ ೩. ತಂದೆಯ ಸೋದರಿ ಪಟ್ಟಿಯಲ್ಲಿ ಆರನೆಯವಳು. ಹೀಗೆ, ಮೂಲ ವಿಧೇಯಕದಲ್ಲಿ, ತಂದೆಯ ತಂದೆ ಮತ್ತು ಇತರರು ಇದ್ದರೆ, ಇತರರನ್ನು ಹೊರತುಪಡಿಸಿ, ತಂದೆಯ ತಂದೆಗೆ ಪ್ರಾಶಸ್ತ್ಯ ನೀಡಲಾಗುತ್ತಿತ್ತು. ಆಮೇಲೆ, ತಂದೆಯ ಸೋದರ, ತಂದೆಯ ಸೋದರನ ಮಗ, ತಂದೆಯ ಸೋದರನ ಮಗನ ಮಗ ಮತ್ತು ಆ ತರುವಾಯ ತಂದೆಯ ಸೋದರಿ ಹೀಗೆ ಬರುತ್ತಾರೆ. ಇಲಾಖಾ ವಿಧೇಯಕದಲ್ಲಿ, ತಂದೆಯ ತಂದೆ ಮತ್ತು ತಂದೆಯ ಸೋದರಿ ಇವರನ್ನು ಒಂದೆಡೆ ತರಲಾಗಿದೆ. ಎರಡನೆಯವಳನ್ನು ಮೇಲ್ಗಡೆ ತರಲಾಗಿದೆ.

ಆ ತರುವಾಯ ವಾರಸುದಾರರ ದೊಡ್ಡ ಪಟ್ಟಿಯುಂಟು. ಅದನ್ನು ಸಂಪೂರ್ಣವಾಗಿ ಬಿಟ್ಟುಬಿಡಲಾಗಿದೆ. ಸಂಖ್ಯೆಗಳು (೪), (೫), (೭), (೮) ಮತ್ತು (೯)– ಈ ಸಂಖ್ಯೆಯವರು ಮೂಲ ವಿಧೇಯಕದಲ್ಲಿ ವಾರಸುದಾರರು. ಆದರೆ ಇಲಾಖಾ ವಿಧೇಯಕದಲ್ಲಿ ಅವರು ಎಲ್ಲೂ ಕಾಣಸಿಗರು.

ಸ್ವಾಮಿ, ಇದಕ್ಕೆಲ್ಲ ಉಲ್ಲೇಖಮಾಡುತ್ತ ಹೋಗುವುದೆಂದರೆ ಬಲು ಬೇಸರದ ಕೆಲಸ ಎಂದು ನನಗೆ ಗೊತ್ತು. ನಾನು ನನ್ನ ಕರ್ತವ್ಯವನ್ನು ನೆರವೇರಿಸುತ್ತಿದ್ದೇನೆ. ಪ್ರತಿ ಒಬ್ಬ ಸದಸ್ಯರಿಗೆ ೮ ತುಲನಾತ್ಮಕ ವಿವರಣೆಯ

ಒಂದು ಪ್ರತಿ ಒದಗಿಸುವುದಾಗಿ ಮಾತು ಕೊಟ್ಟಿದ್ದೆ. ವಿವರಣೆ ತಯಾರಿಯ ಪ್ರಕ್ರಿಯೆಯಲ್ಲಿ ಇದೆ. ಪ್ರತಿ ಒಂದು ಬದಲಾವಣೆಯನ್ನು ತಾಳೆ ಮಾಡಿದೆನೆಂದು ನೀವು ರುಜುವಾತುಪಡಿಸಿದರೆ ನನಗೆ ಸಂತೋಷವೇ.

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್** : ಅದನ್ನು ಪುಕ್ಕಟೆಯಾಗಿ ಹಂಚುತ್ತೀರೆಂದು ಆಶಿಸೋಣವೆ?

**ಮಿ। ನಝೀರುದ್ದೀನ್ ಅಹಮ್ಮದ್ :** ಸರ್ಕಾರ ನನ್ನನ್ನು ಒಂದು ಧರ್ಮಾರ್ಥ ಸಂಸ್ಥೆಯೆಂದು ಭಾವಿಸಿದರೆ, ನಾನು ತಮ್ಮ ಆಸೆಗೆ ಅರ್ಹನಾಗಲು ಸಂತೋಷಪಡುತ್ತೇನೆ.

**ಡೆಪ್ಯುಟಿ ಸ್ಪೀಕರ್ :** ಅದನ್ನು ಈಗಾಗಲೇ, ಮುಂಚಿತವಾಗಿಯೇ ಸರಬರಾಜು ಮಾಡಿದ್ದರೆ, ಇದೆಲ್ಲ ಸಮಯ ಉಳಿತಾಯ ಆಗುತ್ತಿತ್ತಲ್ಲ !

**ಮಿ। ನಝೀರುದ್ದೀನ್ ಅಹಮ್ಮದ್ :** ದುಃಖದ ಸಂಗತಿ ಎಂದರೆ ನನ್ನ ಮುದ್ರಣಾಲಯ ಸರ್ಕಾರಿ ಮುದ್ರಣಾಲಯಕ್ಕೂ ಕಡೆ.

**ಡೆಪ್ಯುಟಿ ಸ್ಪೀಕರ್ :** ಸಲಹೆಯನ್ನು ಮಾನ್ಯ ಕಾನೂನು ಮಂತ್ರಿಗಳಿಗೆ ತಿಳಿಸಿದ್ದರೆ, ಅವರು ಅದನ್ನು ಮುದ್ರಿಸುವ ವ್ಯವಸ್ಥೆ ಮಾಡುತ್ತಿದ್ದರೇನೋ.

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್** : ಖಂಡಿತವಾಗಿಯೂ ನಾನು ಮುದ್ರಿಸಿಕೊಡುತ್ತಿದ್ದೆ.

**ಮಿ। ನಝೀರುದ್ದೀನ್ ಅಹಮ್ಮದ್ :** ನನ್ನ ಹತ್ತಿರ ಹತ್ತು ಪ್ರತಿ ಸಿದ್ಧವಾಗಿದೆ. ಮಾನ್ಯ ಕಾನೂನು ಮಂತ್ರಿಗಳು ಅದನ್ನು ಪ್ರಕಟಿಸುವುದಾದರೆ ನನಗೆ ಬಹಳ ಸಂತೋಷ.

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್** : ಈಗ ಅದರಿಂದ ಏನೂ ಪ್ರಯೋಜನವಾಗಲಾರದು. ಅದರಲ್ಲಿ ಇರುವುದನ್ನೆಲ್ಲ ನೀವು ಸದನದಲ್ಲಿ ಹೇಳಿ ಆಯಿತಲ್ಲ !

**ಮಿ। ನಝೀರುದ್ದೀನ್ ಅಹಮ್ಮದ್ :** ನಾವು ಮೂಲ ವಿಧೇಯಕದ ವರ್ಗಕ್ಕೆ ಬರುತ್ತೇವೆ. ವಿಲಕ್ಷಣ ಆಕಸ್ಮಿಕದ ಮೂಲಕ – ಅರ್ಥಾತ್ ನಾನಿಲ್ಲಿ ಪರೋಕ್ಷ ವ್ಯಂಗ್ಯಮಾಡುತ್ತಿಲ್ಲ – ಅದರಲ್ಲಿ ಒಂಬತ್ತು ವರ್ಗದ ವಾರಸುದಾರರಿದ್ದಾರೆ ; ಪೂರಕವಾಗಿ ಇತರ ನಾಲ್ಕು ವರ್ಗದ ವಾರಸುದಾರಿದ್ದಾರೆ. ಹೀಗೆ ಮೂಲ ವಿಧೇಯಕದಲ್ಲಿರುವ ಹದಿಮೂರು ವರ್ಗಗಳ ವಾರಸುದಾರರನ್ನು ಸಂಪೂರ್ಣವಾಗಿ ಬಿಟ್ಟುಬಿಡಲಾಗಿದೆ. ಅದೇನು ತಪ್ಪಿನಿಂದಾಗಿಯೋ..........

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್ :** ತಿಳಿದೂ ತಿಳಿದೂ ! ಬೇಕೆಂತಲೇ !

**ಮಿ। ನಝೀರುದ್ದೀನ್ ಅಹಮ್ಮದ್ :** ಹಾಗಾದರೆ, ಮಹತ್ವಪೂರ್ಣ ಬದಲಾವಣೆಗಳನ್ನೇನೂ ಮಾಡಿಲ್ಲ ಎಂದು ಆಯ್ಕೆ ಸಮಿತಿಯ ವರದಿಯಲ್ಲಿ ಹೇಳಲು ಕಾರಣವೇನು ? ಇವುಗಳನ್ನು ಬೇಕೆಂತಲೇ ಬಿಟ್ಟುಬಿಡಲಾಗಿದ್ದರೆ, ಉಳಿದ ಒಂದೇ ಪ್ರಶ್ನೆ ಎಂದರೆ ಇವು ಮಹತ್ವಪೂರ್ಣ ಬದಲಾವಣೆಗಳೇ, ಅಲ್ಲವೆ ? ಮಾನ್ಯ ಕಾನೂನು ಮಂತ್ರಿಗಳು ಇವು ಮಹತ್ವಪೂರ್ಣ ಬದಲಾವಣೆಗಳು ಅಲ್ಲ ಎಂದು ಸದನಕ್ಕೆ ಭರವಸೆ ಕೊಟ್ಟಿದ್ದಾರೆ. ಈ ಬದಲಾವಣೆಗಳನ್ನು ಬೇಕೆಂತಲೇ ಮಾಡಿದ್ದು ಎಂದು ಈಗ ಒಪ್ಪಿಕೊಳ್ಳಲಾಗಿದೆ. ಆದ್ದರಿಂದ, ಈಗಿನ ಪ್ರಶ್ನೆ ಎಂದರೆ ಇವು ಮಹತ್ವಪೂರ್ಣ ಬದಲಾವಣೆಗಳೆ, ಅಲ್ಲವೇ? ಆದರೆ ಮಹತ್ವಪೂರ್ಣ ಬದಲಾವಣೆಗಳು ಆಗಿಲ್ಲ ಎಂದು ನಮಗೆ ಭರವಸೆ ಕೊಟ್ಟಿದ್ದುಂಟು.

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್** : ಅದು ಅವರವರ ಅಭಿಪ್ರಾಯದ ಪ್ರಶ್ನೆ.

**ಮಿ। ನಝೀರುದ್ದೀನ್ ಅಹಮ್ಮದ್ :** ಆ ಪ್ರಶ್ನೆಯು ಪುನಃ ಬದಲಾವಣೆಗಳು ಮಹತ್ವಪೂರ್ಣವೆ ಅಲ್ಲವೆ, ಎಂಬತ್ತ ತಿರುಗುತ್ತದೆ. ಶಾಸನಕರ್ತನ ದೃಷ್ಟಿಯಲ್ಲಿ ಅದು ಮಹತ್ವಪೂರ್ಣ ಆಗಿರಲಿಕ್ಕಿಲ್ಲ. ಆದರೆ ವಾರಸುದಾರನ ದೃಷ್ಟಿಯಲ್ಲಿ ಮಹತ್ವಪೂರ್ಣವೇ. ನೀವು ವಾರಸುದಾರಿಕೆಯ ಅನುಕ್ರಮ ವ್ಯವಸ್ಥೆಯನ್ನು

ಕಿಂಚಿತ್ತು ಕದಲಿಸಿದರೂ ಸಾಕು, ಅದು ಮಹತ್ವಪೂರ್ಣ ಬದಲಾವಣೆ ಆಗುತ್ತದೆ. ಮಾಡಲಾದ ಬದಲಾವಣೆಗಳು ಕೇವಲ ಕರಡು ರೂಪದಲ್ಲಿನ (ಪ್ರಾರೂಪಣ ಸ್ವಭಾವದ) ಬದಲಾವಣೆಗಳು ಎಂದು ಈವರೆಗೆ ನಮಗೆ ಭರವಸೆ ಕೊಡಲಾಗಿತ್ತು. ಆಯ್ಕೆ ಸಮಿತಿಯ ವರದಿಯ ಪ್ರಕಾರ ಇಲಾಖೆಯು ಯಾವುದೇ ಮಹತ್ವಪೂರ್ಣ ಬದಲಾವಣೆಗಳನ್ನು ಮಾಡಿರುವುದಿಲ್ಲ. ವರದಿಯು ಅಷ್ಟೊಂದು ಸ್ಪಷ್ಟವಾಗಿದೆ, ದೃಢವಾಗಿದೆ. ಅವರು ಅಂಶಗಳನ್ನು ದೃಢವಾಗಿ ಹೇಳುತ್ತಾರೆ ಎಂದರೆ ಯಾವುದೇ ಮಹತ್ವಪೂರ್ಣ ಬದಲಾವಣೆಗಳು ಆಗಿಲ್ಲ ಎಂದು ಸ್ಪಷ್ಟಗೊಳಿಸುತ್ತಾರೆ – ಕೇವಲ ಮರು ಸಂಖ್ಯೆಗಳನ್ನು ಕೊಟ್ಟಿರುವುದು, ಮತ್ತು ಬರಿಯ ಕೆಲವು ಶಾಬ್ದಿಕ ಬದಲಾವಣೆಗಳನ್ನು ಮಾಡಿರುವುದು ಮತ್ತು ಆ ಕಾರಣಕ್ಕಾಗಿ ಬದಲಾವಣೆಗಳನ್ನು ಸೂಚಿಸಲು ಬಳಸುವ ಅಡ್ಡಗೆರೆ ಅಥವಾ ಬದಿಗೆರೆ ಪದ್ಧತಿಗಳನ್ನು ಇಲಾಖಾ ವಿಧೇಯಕದಲ್ಲಿ ಅಥವಾ ಅಂತಿಮ ವಿಧೇಯಕದಲ್ಲಿ ಅನುಸರಿಸಲಾಗಿಲ್ಲ ಎಂದು ಹೇಳುತ್ತಾರೆ. ವಿಧೇಯಕದ ಇತರ ಭಾಗಗಳಲ್ಲಿ ಸಹ ಬದಲಾವಣೆಗಳುಂಟು. ಆದರೆ ಅವುಗಳನ್ನು ಕಂಡುಹಿಡಿಯಲು ಭಗೀರಥ ಪ್ರಯತ್ನ ಮಾಡಬೇಕಾದೀತು.

ಇಲಾಖಾ ಸಮಿತಿಯವರು ಮಾಡಿದ ಬದಲಾವಣೆಗಳ ನಿಮಿತ್ತ ಮತ್ತು ಆ ಬದಲಾವಣೆಗಳು ಅತ್ಯಂತ ಮಹತ್ವಪೂರ್ಣ ಬದಲಾವಣೆಗಳು ಎಂದು ಡಾ। ತೇಕ್‌ಚಂದ್ ಅವರು ಮಾಡಿದ ಪ್ರಬಲ ಟೀಕೆ ಟಿಪ್ಪಣಿಗಳ ನಿಮಿತ್ತ ಈ ವಿಧೇಯಕವನ್ನು ಪುನಃ ಪ್ರಚಲಿಸಲು ಆಯ್ಕೆ ಸಮಿತಿಗೆ ವಾಪಸು ಕಳಿಸಿಕೊಡಬೇಕು ಎಂಬ ಸಲಹೆಯ ವಿಚಾರದಲ್ಲಿ ಯಾವುದೇ ಸಂದೇಹಕ್ಕೆ ಎಡೆಯಿರಕೂಡದು ಎಂದು ನಾನು ಭಾವಿಸುತ್ತೇನೆ.

**ಒಬ್ಬ ಮಾನ್ಯ ಸದಸ್ಯರು** : ಅದೇ ಆಯ್ಕೆ ಸಮಿತಿಗೆ?

**ಮಿ। ನಝೀರುದ್ದೀನ್ ಅಹಮ್ಮದ್ :** ಹೌದು, ಅದೇ ಆಯ್ಕೆ ಸಮಿತಿಯ ಬಗ್ಗೆ ನನ್ನ ಆಕ್ಷೇಪಣೆಯೇನೂ ಇಲ್ಲ. ಸಮಿತಿಯು ಸಭ್ಯರೂ ಸತ್ಯವಂತರೂ, ನ್ಯಾಯಾಂಗದಲ್ಲಿ ಕಾನೂನು ವಿಚಾರಗಳಲ್ಲಿ ಅನುಭವವುಳ್ಳವರೂ ಹಾಗೆಯೇ ವೃತ್ತಿಯ ವ್ಯಾವಹಾರಿಕ ಅನುಭವದ್ವಾರಾ ಕಾನೂನಿನ ಆ ಶಾಖೆಗಳಲ್ಲಿ ಅಧಿಕೃತರೂ ಆದ ಜನಗಳನ್ನು ಒಳಗೊಂಡಿತ್ತು. ವಾಸ್ತವವಾಗಿ ಆ ಆಯ್ಕೆ ಸಮಿತಿಯಲ್ಲಿ ಎಲ್ಲ ಬಗೆಯ ಪ್ರತಿಭೆಗಳನ್ನು ಪ್ರತಿನಿಧಿಸತಕ್ಕ ವ್ಯಕ್ತಿಗಳು ಇದ್ದರು. ಆಯ್ಕೆ ಸಮಿತಿಯ ಬಗ್ಗೆ ನನಗೆ ಪೂರ್ಣ ವಿಶ್ವಾಸವುಂಟು, ಈವರೆಗೂ ಆ ನಂಬಿಕೆಯನ್ನೂ ಕಳೆದುಕೊಂಡಿಲ್ಲ. ನನ್ನ ವಾದವೆಂದರೆ, ವಿಧೇಯಕಕ್ಕೆ ಸಂಬಂಧಪಟ್ಟ ಈ ಎಲ್ಲ ವಿಷಯಗಳನ್ನು ಎಚ್ಚರಿಕೆ ವಹಿಸಿ ವಿಮರ್ಶಿಸಬೇಕು ಮತ್ತು ಪ್ರತಿಯೊಂದು ಬದಲಾವಣೆಯನ್ನು ಎಚ್ಚರಿಕೆ ವಹಿಸಿ ಮೌಲ್ಯ ನಿರ್ಣಯ ಮಾಡಬೇಕು ಮತ್ತು ವಿಚಾರಪೂರ್ವಕವಾಗಿ ಅಂಗೀಕರಿಸಬೇಕು. ಮಹತ್ವಪೂರ್ಣ ಬದಲಾವಣೆಗಳನ್ನು ಸಾವಧಾನವಾಗಿ, ಉದ್ದೇಶಪೂರ್ವಕವಾಗಿ ಸೇರಿಸಿದ್ದುಂಟು. ನಮಗೆ ಕಾನೂನು ಮಂತ್ರಿಗಳು ಮತ್ತು ಪುನಃ ಆಯ್ಕೆ ಸಮಿತಿಯವರು ಯಾವುದೇ ಮಹತ್ವಪೂರ್ಣ ಬದಲಾವಣೆಗಳನ್ನು ಮಾಡಿಲ್ಲ ಎಂಬುದಾಗಿ ಭರವಸೆಕೊಡುತ್ತಾರೆ. ಒಂದೆಡೆ, ಈ ಸದನದಲ್ಲಿರುವ ಕಾನೂನು ಕ್ಷೇತ್ರದಲ್ಲಿ ಅತ್ಯುನ್ನತ ಪ್ರತಿಭಾವಂತರಾದವರ ಭರವಸೆ, ಎಂದರೆ ಇವು ಮಹತ್ವಪೂರ್ಣ ಬದಲಾವಣೆಗಳು ಎಂಬುದಾಗಿ, ಇನ್ನೊಂದೆಡೆ ಇನ್ನೊಬ್ಬ ಕಾನೂನು ವಿಶಾರದರು ಹೇಳುವ ಪ್ರಕಾರ, ಅವರು ಉದ್ದೇಶ ಪೂರ್ವಕವಾಗಿಯೇ ಈ ಬದಲಾವಣೆಗಳನ್ನು ಸೇರಿಸಿದ್ದಾರೆ; ಆದರೆ ಅದೇ ಸಮಯದಲ್ಲಿ ಈ ಬದಲಾವಣೆಗಳು ಮಹತ್ವಪೂರ್ಣ ಬದಲಾವಣೆಗಳಲ್ಲ. ಅದು ಡಾ॥ ಅಂಬೇಡ್ಕರ್ ಅವರದೇ ಅಂಕಿತದಲ್ಲಿ ನಮಗೆ ದೊರೆತ ಭರವಸೆ. ಹೀಗೆ, ಇಬ್ಬರು ವಿಖ್ಯಾತ ಅಧಿಕೃತರು ಹಾಗೂ ಆಯ್ಕೆ ಸಮಿತಿಯು ತನ್ನಲ್ಲಿಯೇ ವಿಭಜನೆಗೊಂಡಿದೆ. ಈ ಬಗೆಯ ಸ್ಥೂಲ ವಿಷಯದ ಬಗ್ಗೆ ಇಬ್ಬರು ಸುವಿಖ್ಯಾತ ತಜ್ಞರು ಭಿನ್ನಾಭಿಪ್ರಾಯ ತಳೆದಿರುವಾಗ, ವಿಷಯದ ಪುನಃ ಪರಿಶೀಲನೆಯು ಅಗತ್ಯವಾಗುತ್ತದೆ. ನಾನು ಕೋರುತ್ತಿರುವುದು ಅದನ್ನೇ. ಕಾನೂನು ಮಂತ್ರಿಗಳು ಇವು

ಮಹತ್ವಪೂರ್ಣ ಬದಲಾವಣೆಗಳಲ್ಲ ಎಂದು ಹೇಳಿದರೂ, ಸದನವು ಮಾತ್ರ ಅವರ ಮಾತುಗಳನ್ನು ಒಪ್ಪಬಹುದು. ಮನುಷ್ಯನ ವಾರಸಾ ಹಕ್ಕು ಮಹತ್ವಪೂರ್ಣ ಹಕ್ಕು. ಆ ಸಂಬಂಧವಾದ ಬದಲಾವಣೆಗಳು ಮಹತ್ವಪೂರ್ಣ ಬದಲಾವಣೆಗಳು ಅಲ್ಲ ಎಂದು ಹೇಳುವುದೆಂದರೆ ಜಳಜಳ ಕಾಣುವ ತಪ್ಪು ಸಂಗತಿಯನ್ನು ಹೇಳುವಂತೆಯೇ. ಆದ್ದರಿಂದ ನನ್ನ ನಿವೇದನೆಯೆಂದರೆ, ಮಾಡಲಾದ ಬದಲಾವಣೆಗಳು ಮಹತ್ವಪೂರ್ಣ ಬದಲಾವಣೆಗಳೆ ಆಗಿರುವಾಗ ಮತ್ತು ಆ ಬದಲಾವಣೆಗಳು ಮಹತ್ವಪೂರ್ಣ ಅಲ್ಲ ಎಂದು ನಮಗೆ ಗ್ಯಾರಂಟಿ ದೊರೆತಿರುವಾಗ, ಆ ಕಾರಣಕ್ಕಾಗಿಯೇ ವಿಧೇಯಕವನ್ನು ಆಯ್ಕೆ ಸಮಿತಿಗೆ ವಾಪಸು ಕಳಿಸಬೇಕು ಅಥವಾ ಈ ಬದಲಾವಣೆಗಳ ಕಡೆಗೆ ಗಮನ ಕೊಡಬೇಕು ಮತ್ತು ಅವರು ಅವುಗಳನ್ನು ಪ್ರಜ್ಞಾಪೂರ್ವಕವಾಗಿ, ಬುದ್ಧಿಪೂರ್ವಕವಾಗಿ, ಉದ್ದೇಶಪೂರ್ವಕವಾಗಿ ತಿರಸ್ಕರಿಸಬೇಕು ಅಥವಾ ಅಂಗೀಕರಿಸಬೇಕು ಎಂಬ ಸ್ಪಷ್ಟ ಸಕಾರಾತ್ಮಕ ನಿರ್ದೇಶನದ ಸಮೇತ ಪ್ರಚಲನಕ್ಕಾಗಿ ವಾಪಸು ಕಳಿಸಬೇಕು. ಇವುಗಳ ಹೊರತಾಗಿ ಮಹತ್ವಪೂರ್ಣ ಬದಲಾವಣೆಗಳು ಇನ್ನೂ ಇವೆ.

**ಶ್ರೀ ಬಿ. ಎಸ್. ಮುನವಳ್ಳಿ** (ಮುಂಬಯಿ ರಾಜ್ಯ) : ಅವರು ಅದೇ ವಾದಗಳನ್ನು ಪುನಃ ಪುನಃ ಹೇಳುತ್ತಿದ್ದಾರೆ.

**ಡೆಪ್ಯುಟಿ ಸ್ಪೀಕರ್** : ಅವರು ಆ ವಿಷಯವನ್ನು ಸಮಾರೋಪಗೊಳಿಸಿರಬೇಕು ಎಂದು ಭಾವಿಸಿದ್ದೆ. ಇತರ ಯಾವುದೇ ವಿಷಯ ಇಲ್ಲದಿದ್ದರೆ ಅವರು ಕುಳಿತುಕೊಳ್ಳಬಹುದು.

**ಮಿ। ನಝೀರುದ್ದೀನ್ ಅಹಮ್ಮದ್** : ನನ್ನ ಬಳಿ ಇನ್ನೂ ಕೆಲವು ಮಹತ್ವಪೂರ್ಣ ಬದಲಾವಣೆಗಳು ಉಂಟು. ನಾನು ತಿಳಿಯಬಯಸುವ ಒಂದೇ ಒಂದು ಸಂಗತಿ ಎಂದರೆ, ಯಾವುದೇ ಮಹತ್ವಪೂರ್ಣ ಬದಲಾವಣೆಗಳು ಆಗಿಲ್ಲ ಎಂದು ಮಾನ್ಯ ಕಾನೂನು ಮಂತ್ರಿಗಳೂ ಎಷ್ಟು ಸಮಯದವರೆಗೆ ಹೇಳುತ್ತ ಹೋಗುವರು.

**ಶ್ರೀ ಖುರ್ಷಿದ್ ಲಾಲ್** (ಉಪಮಂತ್ರಿಗಳು, ಸಂಪರ್ಕ ಖಾತೆ) : ತಾವು ಮುಗಿಸುವವರೆಗೆ.

**ಡೆಪ್ಯುಟಿ ಸ್ಪೀಕರ್** : ಲಾಯರ್ ಆಗಿ ಅನುಭವ ಪಡೆದಿರುವ ನಮ್ಮ ಮಾನ್ಯ ಸದಸ್ಯರು ವಿಧೇಯಕವನ್ನು ಮಂಡಿಸಿದ ಯಾರಾದರೂ, ತಾವು ಮಾಡಿದ್ದು ತಪ್ಪು ಎಂದು ಎಂದಾದರೂ ಒಪ್ಪಿಕೊಳ್ಳುತ್ತಾರೆ ಎಂದು ಅಪೇಕ್ಷಿಸುವದುಂಟೆ ?

**ಮಿ। ನಝೀರುದ್ದೀನ್ ಅಹಮ್ಮದ್** : ಸ್ವಾಮೀ, ತಮ್ಮ ಈ ಘನ ತರ್ಕಕ್ಕೆ ನಾನು ತಲೆಬಾಗುತ್ತೇನೆ. ಆದರೆ ನಾವು ಯಾವುದೇ ಪಕ್ಷವನ್ನು ವಹಿಸಿಕೊಂಡು ವಾದಮಾಡಲು ಇದು ಕಾನೂನು ನ್ಯಾಯಾಲಯವಲ್ಲ. ಇದು ವಿಧಾನಸಭೆ. ನಾವು ಯಾವ ಪಕ್ಷಕ್ಕೂ ಸೇರಿದವರಲ್ಲ. ನಾವು ನಮ್ಮ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಬಹುದು. ಆ ಫೀ ಸಂದಾಯದ ಸಲುವಾಗಿ ಯಾವುದೇ ಪಕ್ಷವನ್ನು ವಹಿಸಿ ಮಾತನಾಡುವುದಿಲ್ಲ. ನಮಗೆ ಆ ಪಕ್ಷ ಈ ಪಕ್ಷ ಎಂಬ ಭೇದಭಾವನೆ ಇಲ್ಲ. ನಾನು ನಿವೇದಿಸುವುದೇನೆಂದರೆ ಒಂದು ವಿಧಾನ ಸಭೆಯಲ್ಲಿ, ವಿಧಾನ ಮಂಡಲಕ್ಕೆ ಹೊಣೆಗಾರರಾಗಿರತಕ್ಕ ಕಾನೂನು ಮಂತ್ರಿಗಳು, ತಪ್ಪು ಮಾಡಿದ ಪಕ್ಷದಲ್ಲಿ, ಅದನ್ನು ಒಪ್ಪಿಕೊಳ್ಳುವುದು ತಮ್ಮ ಕರ್ತವ್ಯ ಎಂದು ಭಾವಿಸುತ್ತ, ಹಾಗೆ ಒಪ್ಪಿಕೊಳ್ಳಬೇಕು. ಆದ್ದರಿಂದ ಮಾನ್ಯ ಕಾನೂನು ಮಂತ್ರಿಗಳು, ಈ ತಪ್ಪುಗಳ, ಬದಲಾವಣೆಗಳ ಶೇಖರಣೆಯ ಪರಿಣಾಮವಾಗಿ, ತಾವು ಮೂಲಭೂತವಾದ, ಮಹತ್ವಪೂರ್ಣ ಬದಲಾವಣೆಗಳನ್ನು ಮಾಡಿರುವುದಾಗಿ ಒಪ್ಪಿಕೊಳ್ಳಲು ಪ್ರಚೋದಿತರಾಗಬಹುದೆಂದು ಮತ್ತು ಈ ದಿಶೆಯಲ್ಲಿ ನನ್ನ ಇನ್ನು ಮುಂದಿನ ವಾದಸರಣಿಯ ಪ್ರಗತಿಯನ್ನು ಪೂರ್ಣವಾಗಿ ಅನಗತ್ಯಗೊಳಿಸುವರೆಂದು ನನಗೆ ಕ್ಷೀಣವಾದ ಆಸೆ ಉಂಟು. ಆದರೆ ನಮ್ಮ ಮಾನ್ಯ

ಕಾನೂನು ಮಂತ್ರಿಗಳು ಸೋಲನ್ನು ಒಪ್ಪಿಕೊಳ್ಳದ ಛಲಗಾರರು, ಹಿಮ್ಮೆಟ್ಟದ ಹೋರಾಟಗಾರರು, – ಅವರು ತಮ್ಮ ಜೀವನದುದ್ದಕ್ಕೂ ಹೋರಾಟಗಾರರೇ ಮತ್ತು ತಮ್ಮ ದೃಢ ನಿಲುವಿಗೆ ಮತ್ತು ನೈತಿಕ ಸ್ಥೈರ್ಯಕ್ಕೆ ಹೆಸರಾದವರು – ಹೀಗಾಗಿ ಅವರು ತಮ್ಮ ನಿಲುವನ್ನು ಬದಲಾಯಿಸುವವರಲ್ಲ; ವಿಚಲಿತರಾಗದೆ ನಿಂತಿದ್ದಾರೆ. ಹೀಗಿರುತ್ತ, ನಾನು ಅವರ ಸಮ್ಮುಖದಲ್ಲಿ ಹೆಚ್ಚು ಹೆಚ್ಚು ಬದಲಾವಣೆಗಳನ್ನು ಸಾದರಪಡಿಸುತ್ತಿರಬೇಕು, ಆಖೈರಾಗಿ ಅವರು ಒಪ್ಪಿಕೊಳ್ಳುತ್ತಾರೆ ಎಂಬ ಕ್ಷೀಣ ಆಸೆಯಿಂದ.

**ಶ್ರೀ ಖುರ್ಷಿದ್ ಲಾಲ್** : ನಾನು ಅಡ್ಡಿಪಡಿಸಲು ಇಷ್ಟಪಡುವುದಿಲ್ಲ. ಆದರೆ ಮಾನ್ಯ ಕಾನೂನು ಮಂತ್ರಿಗಳು ತಾನು ತಪ್ಪು ಮಾಡಿರುವೆನು ಎಂದು ಒಪ್ಪಿಕೊಳ್ಳುವತನಕ ಇದೇ ರೀತಿಯಲ್ಲಿ ಮುಂದುವರಿಯಲು ಮಾನ್ಯ ಸದಸ್ಯರು ಬಯಸುತ್ತಾರೆಯೆ?

**ಡೆಪ್ಯುಟಿ ಸ್ಪೀಕರ್** : ಕಾನೂನು ಮಂತ್ರಿಗಳು ಒಬ್ಬರೇ ಏಕೆ?

**ಶ್ರೀ ಬಿ. ದಾಸ್** : ಸ್ವಾಮೀ, ಹಾಗೆ ಹೇಗೆ ಹೇಳುತ್ತೀರ? ನಾವು ಬೊಬ್ಬೆಹೊಡೆದು ಅವರ ಬಾಯಿ ಮುಚ್ಚಿಸಬಹುದು.

**ಮಿ। ನಝೀರುದ್ದೀನ್ ಅಹಮ್ಮದ್** : ಅದು ಅಷ್ಟೊಂದು ಸುಲಭ ಸಾಧ್ಯ ಕೆಲಸವಲ್ಲ. ಹುಯಿಲೆಬ್ಬಿಸಿ ನನ್ನ ಬಾಯಿ ಮುಚ್ಚಿಸುವ ಬೆದರಿಕೆ ಹಾಕುತ್ತಿದ್ದಾರೆ. ನನ್ನನ್ನು ಮಾತಾಡದ ಹಾಗೆ ಮಾಡುವಷ್ಟು ಹುಯಿಲೆಬ್ಬಿಸುವ ತಾಕತ್ತಿನ ಮಾನ್ಯ ಸದಸ್ಯರನ್ನು ನಾನಿನ್ನೂ ನೋಡಬೇಕಾಗಿದೆ. ಗೌರವಪೂರ್ವಕವಾಗಿ ಆಹ್ವಾನಿಸುತ್ತೇನೆ. ಬನ್ನಿ, ಯಾರಾದರೂ, ಹುಯಿಲಿನ ನಡುವೆ, ಕಿರಿಚಾಟಗಳ ಮಧ್ಯೆ ಅವುಗಳನ್ನು ಮೀರಿಸಿ ನನ್ನ ಧ್ವನಿ ಕೇಳುವಂತೆ ಮಾಡಲು ನನಗೆ ಧ್ವನಿವರ್ಧಕವೂ ಬೇಕಾಗಿಲ್ಲ ಎಂದು ಅವರಿಗೆ ಗೊತ್ತಾದೀತು.

**ಡೆಪ್ಯುಟಿ ಸ್ಪೀಕರ್** : ಸದನದಲ್ಲಿ ಸವಾಲನ್ನು ಸ್ವೀಕರಿಸುವುದು ತರವಲ್ಲ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಮಿ। ನಝೀರುದ್ದೀನ್ ಅಹಮ್ಮದ್** : ಸದನದ ಹೊರಗೆ ನನಗೆ ಸವಾಲು ಒಡ್ಡುವುದು ಸುರಕ್ಷಿತ ಅಲ್ಲ ಎಂದು ಅವರಿಗೆ ಗೊತ್ತಾಗಬಹುದು.

**ಮಿ। ತಾಜಾಮುಲ್ ಹುಸೇನ್** :ನಾವು ಅಡ್ಡಿ ಮಾಡಕೂಡದು ಎಂದು ನೀವು ಅಪೇಕ್ಷಿಸಿದ್ದೀರ. ಅದಕ್ಕಾಗಿ ತಮ್ಮ ಅನುಮತಿ ಪಡೆದು ಒಂದು ಮಾಹಿತಿಯನ್ನು ಕೋರುತ್ತೇನೆ. ನನ್ನ ಮಾನ್ಯ ಸ್ನೇಹಿತರ ಕಡೆಯಿಂದ ನನಗೆ ಬೇಕಾದ ಮಾಹಿತಿ ಎಂದರೆ, ಇವತ್ತು ಏಪ್ರಿಲ್ ೧ನೇ ತಾರೀಖು; ಆ ಕಾರಣವೇ ಅವರು ಇಡೀ ದಿವಸವನ್ನು ಈ ವಿಧೇಯಕದ ಪರಿಶೀಲನೆಗಾಗಿ ತೆಗೆದುಕೊಳ್ಳುತ್ತಿದ್ದಾರೆಯೆ?

**ಮಿ। ನಝೀರುದ್ದೀನ್ ಅಹಮ್ಮದ್** : ಈ ವಿಧೇಯಕವನ್ನು ಸರ್ವಮೂರ್ಖರ ದಿವಸದಂದು ಮಂಡಿಸಿದವರು ಮಾನ್ಯ ಕಾನೂನು ಮಂತ್ರಿಗಳು, ಆದ್ದರಿಂದ ಈ ಪ್ರಶ್ನೆಯನ್ನು ಅವರಿಗೇ ಕೇಳಬೇಕಲ್ಲವೆ?

**ಡೆಪ್ಯುಟಿ ಸ್ಪೀಕರ್** : ಪ್ರಶ್ನೆ ಯಾರಿಗೇ ಅನ್ವಯಿಸಲಿ ಅಥವಾ ಅನ್ವಯಿಸದಿರಲಿ, ಮಾನ್ಯ ಸದಸ್ಯರು ತಮ್ಮ ಮಾತನ್ನು ಮುಂದುವರಿಸಬಹುದು.

**ಮಿ। ನಝೀರುದ್ದೀನ್ ಅಹಮ್ಮದ್** : ನಾವು ಆಮೇಲೆ ಮೂಲ ವಿಧೇಯಕದ ಭಾಗ IIರ ಮುಂದಿನ ಖಂಡಕ್ಕೆ ಬರುತ್ತೇವೆ.

**ಡಾ॥ ಮೋನೋ ಮೋಹನದಾಸ್** (ಪಶ್ಚಿಮ ಬಂಗಾಲ : ಸಾಮಾನ್ಯ) : ಸ್ವಾಮೀ, ಮಾನ್ಯ ಸದಸ್ಯರು ಸಿದ್ಧರಾಗಿಲ್ಲ ಎಂದು ತೋರುತ್ತದೆ.

**ಮಿ। ನಝೀರುದ್ದೀನ್ ಅಹಮ್ಮದ್** : ಮಾನ್ಯ ಡಾಕ್ಟರ್ ಅವರು ಏನು ಹೇಳುತ್ತಾರೆ, ನನಗೆ ಅರ್ಥವಾಗಲಿಲ್ಲ.

**ಡೆಪ್ಯುಟಿ ಸ್ಪೀಕರ್ :** ಅವರು ಮುಂದುವರಿಸಲಿ. ಇವತ್ತಿನ ದಿವಸವಾದರೂ ಅವರು ತಮ್ಮ ಭಾಷಣ ಮುಗಿಸುತ್ತಾರೆ ಎಂದು ಆಶಿಸುತ್ತೇನೆ.

**ಮಿ। ನಝೀರುದ್ದೀನ್ ಅಹಮ್ಮದ್ :** ನನಗೆ ಗೊತ್ತಿಲ್ಲ.

**ಡೆಪ್ಯುಟಿ ಸ್ಪೀಕರ್ :** ಮಹತ್ವಪೂರ್ಣ ಬದಲಾವಣೆಗಳನ್ನು ಕುರಿತಂತೆ ಈವರೆಗೆ ಸಾಕಷ್ಟು ಚರ್ಚೆ ಆಗಿದೆಯೆಂದಷ್ಟೇ ಹೇಳಬಯಸುತ್ತೇನೆ. ಏನೆಂದರೂ, ವಿಧೇಯಕದ ಪ್ರಭಾರ ಹೊಂದಿರುವ ಕಾನೂನು ಮಂತ್ರಿಗಳಿಗೆ ಮಾತ್ರ ಸಮಾಧಾನ ಆದರೆ ಸಾಲದು. ಇಡೀ ಸದನಕ್ಕೆ ಸಮಾಧಾನ ಆಗಬೇಕಲ್ಲವೆ?

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್ :** ಸದನವು ತೀರ್ಮಾನ ಮಾಡುವುದು.

**ಡೆಪ್ಯುಟಿ ಸ್ಪೀಕರ್ :** ಹೌದು, ಐಕ್ಯರಾಗಿ ಸದನವೇ ತೀರ್ಮಾನಿಸುವುದು. ಆದ್ದರಿಂದ ಒಬ್ಬ ಸದಸ್ಯರು ಎಷ್ಟು ಘನತೆವೆತ್ತವರಾದರೂ ಸರಿಯೆ, ಅವರನ್ನು ಸಮಾಧಾನಪಡಿಸುವ ಸಲುವಾಗಿ ಮಾನ್ಯ ಸದಸ್ಯರು ಇನ್ನು ಸಮಯವನ್ನು ತೆಗೆದುಕೊಳ್ಳಬೇಕಾಗಿಲ್ಲ. ಅವರು ಇಡೀ ಸದನವು ತನ್ನ ಅಭಿಪ್ರಾಯವನ್ನು ಒಡ್ಡಿಕೊಳ್ಳುವ ಹಾಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಬಹುದು. ನಾನು ಈಗಾಗಲೇ ಹೇಳಿರುವಂತೆ ಮಹತ್ವಪೂರ್ಣ ಬದಲಾವಣೆಗಳ ಸಂಬಂಧದಲ್ಲಿ ಸಾಕಷ್ಟು ಹೇಳಲಾಗಿದೆ, ಸಾಕಷ್ಟು ಚರ್ಚೆ ಆಗಿದೆ. ಅವರು ವಿವಾಹ, ವಿವಾಹ ವಿಚ್ಛೇದನ, ಮತ್ತು ಸ್ವೀಕಾರ ಮುಂತಾದ ಇತರ ಮಹತ್ವದ ವಿಷಯಗಳನ್ನು ಕುರಿತು ಮಾತನಾಡುತ್ತಾರೆ ಎಂದು ಎಣಿಸಿದ್ದೆ.

**ಮಿ। ನಝೀರುದ್ದೀನ್ ಅಹಮ್ಮದ್ :** ಮಾನ್ಯ ಕಾನೂನು ಮಂತ್ರಿಗಳು ಈವರೆಗೆ ನನ್ನ ಮಾತುಗಳನ್ನು ಅತ್ಯಂತ ಸಹನೆಯಿಂದ ಕೇಳಿದ್ದಕ್ಕಾಗಿ ನಾನು ಅವರಿಗೆ ಆಭಾರಿ ಆಗಿದ್ದೇನೆ. ನನ್ನ ಹತ್ತಿರ ಬದಲಾವಣೆಗಳನ್ನು ಸೂಚಿಸುವ ಇನ್ನೂ ಅನೇಕ ವಿಷಯಗಳಿವೆ. ಅವುಗಳನ್ನು ಸಂಕ್ಷಿಪ್ತವಾಗಿ ನಿರೂಪಿಸುತ್ತೇನೆ.

**ಡೆಪ್ಯುಟಿ ಸ್ಪೀಕರ್ :** ಆ ಬದಲಾವಣೆಗಳ ವಿಚಾರ ಬಿಟ್ಟು ಬನ್ನಿ. ಬದಲಾವಣೆಗಳು ಆಗಿವೆ. ನಾನು ಆ ಬಗ್ಗೆ ಈ ರೀತಿ ಹೇಳಬಹುದೇನೊ. ನಾನು ಯಾವುದೇ ಗುಟ್ಟು ರಟ್ಟುಮಾಡುತ್ತಿಲ್ಲ. ನಾನು ಊಹಿಸುವಷ್ಟು ಮಟ್ಟಿಗೆ ಸದನದ ಕಡೆಯಿಂದ ಯಾವುದೇ ಗುಟ್ಟಿನ ವಿಷಯ ಇಲ್ಲ. ಒಂದು ವಿಷಯವು ಆಯ್ಕೆ ಸಮಿತಿಗೆ ಉಲ್ಲೇಖಿಸಿದ ತರುವಾಯ ಸದನಕ್ಕೆ ಬಂದಾಗ, ಆಯ್ಕೆ ಸಮಿತಿಯು ಮಾಡಿದ ತಪ್ಪು ಬೆಳಕಿಗೆ ಬರಬಹುದು. ಅದು ತಪ್ಪು ಎಂದು ಹೇಳಲು ಮಾನ್ಯ ಸದಸ್ಯರಿಗೆ ಹಕ್ಕು ಇರುತ್ತದೆ. ಮತ್ತು ಆ ತಪ್ಪನ್ನು ಸರಿಪಡಿಸುವುದು ಅಗತ್ಯವಾಗುತ್ತದೆ. ಇದು ಎರಡು ವಿಷಯಗಳನ್ನು ಹೊರತುಪಡಿಸಿ, ಇತರ ಎಲ್ಲ ವಿಷಯಗಳ ಸಂಬಂಧದಲ್ಲಿ ಸರಿಯಾದ ಕ್ರಮ. ಇನ್ನು ಹೊರತುಪಡಿಸತಕ್ಕ ಆ ವಿಷಯಗಳ ಪ್ರತಿ ಒಬ್ಬ ಸದಸ್ಯರು ಆಯ್ಕೆ ಸಮಿತಿ ಸಭೆಯಲ್ಲಿ ಮಾತಾಡಿದ್ದನ್ನು ಸದನದ ಮುಂದೆ ಇಡುವುದು ಸಮಂಜಸವಾಗುವುದಿಲ್ಲ. ಕಾರಣವೆಂದರೆ ಸಂಗತಿಗಳು ಇನ್ನೂ ಅನಿಶ್ಚಿತ ಸ್ಥಿತಿಯಲ್ಲಿ ಇವೆ. ಆ ಕಾರಣ ಅವುಗಳನ್ನು ಬಹಿರಂಗಪಡಿಸಿದರೆ, ಅಂದರೆ ಸದಸ್ಯರು ಆಯ್ಕೆ ಸಮಿತಿಯ ಸಭೆಯಲ್ಲಿ ಏನೆಲ್ಲ ಹೇಳಿದರೋ ಆ ಮಾತುಗಳನ್ನು ಬಹಿರಂಗಪಡಿಸಿದರೆ, ಉಪದ್ರವಕ್ಕೆ ಮತ್ತು ದ್ವೇಷಕ್ಕೆ ಕಾರಣವಾಗುತ್ತದೆ. ನಾನು ಇಷ್ಟು ಮಾತ್ರ ಹೇಳಬಲ್ಲೆನು. ಆಯ್ಕೆ ಸಮಿತಿಗೆ ಸಂಬಂಧ ಬರುವಷ್ಟರ ಮಟ್ಟಿಗೆ, ಸಮಿತಿಯು ಯಾವುದೇ ಕರಡನ್ನು ಪರಿಶೀಲಿಸಬಹುದು. ಇಲ್ಲಿ ಪರಿಶೀಲಿಸಿದ್ದು ಮಂತ್ರಾಲಯವು ಒಪ್ಪಿಸಿದ ಕರಡು. ಆಯ್ಕೆ ಸಮಿತಿಯ ವರದಿಯಲ್ಲಿ ಪ್ರಾರಂಭದಲ್ಲಿಯೇ ಕೆಳಕಂಡಂತೆ ಪ್ಯಾರಾ ೨ರಲ್ಲಿ ಹೇಳಲಾಗಿದೆ, ಎಂದರೆ :–

"ವಿಧಾನ ಮಂಡಲದಲ್ಲಿ ಮಂಡಿಸಲಾದಂಥ ಕರಡು ಹಿಂದೂ ಕೋಡ್. ಅದನ್ನು ಮಂಡಿಸುವುದಕ್ಕೆ ಮುನ್ನ ಇಲಾಖೆಯ ಯಾವುದೇ ವಿಮರ್ಶೆಗೆ ಒಳಗಾಗಿರಲಿಲ್ಲ. ಮತ್ತು ಕಾನೂನು ಮಂತ್ರಾಲಯ (ಯಾವುದು

ಅದರ ಮುಖ್ಯಸ್ಥನಾಗಿರತಕ್ಕ ಮಂತ್ರಿಯವರನ್ನು ಅಗತ್ಯವಾಗಿ ಒಳಗೊಳ್ಳುವುದೋ) ವಿಧಾನ ಮಂಡಲದ ಹಿಂದಿನ ಅಧಿವೇಶನದ ಸಮಾಪ್ತಿ ಮತ್ತು ಈಗಿನ ಅಧಿವೇಶನದ ಪ್ರಾರಂಭ ಇವುಗಳ ನಡುವಿನ ಅವಧಿಯಲ್ಲಿ ಅವಕಾಶವನ್ನು ಪಡೆದವರಾಗಿ, ಈಗ ಈ ಪರಿಷ್ಕೃತ ಕರಡನ್ನು ತಯಾರಿಸಿದ್ದಾರೆ."

ಕರಡನ್ನು ಆಯ್ಕೆ ಸಮಿತಿಯ ಮುಂದೆ ಇಡಲಾಯಿತು. ಮತ್ತು ಈ ಸಂಬಂಧದಲ್ಲಿ ಸ್ಪೀಕರ್ ಅವರ ರೂಲಿಂಗ್ ಹೀಗೆ : ಕರಡಿನ ಜತೆ ಆಯ್ಕೆ ಸಮಿತಿಗೆ ಕಳಿಸಲಾದ ಮೂಲ ವಿಧೇಯಕವನ್ನು ಆ ಕರಡಿನಲ್ಲಿ ಕಾನೂನು ಮಂತ್ರಿಗಳು ಮಂಡಿಸಬೇಕೆಂದು ಪ್ರಸ್ತಾವಿಸಿದ ಎಲ್ಲ ತಿದ್ದುಪಡಿಗಳೂ ಸೇರ್ಪಡೆ ಆಗಿದ್ದವು ಎಂದು ನಾವು ಭಾವಿಸೋಣ. ಹಾಗೆ ಆ ಕರಡು ಮತ್ತು ಮೂಲ ವಿಧೇಯಕ ಇವೆರಡನ್ನು ಪೂರ್ಣವಾಗಿ ಆಯ್ಕೆ ಸಮಿತಿಯು ಪರಿಶೀಲಿಸಿದ್ದುಂಟು. ಆ ವಿಧೇಯಕ ಮತ್ತು ಅದರಲ್ಲಿನ ಖಂಡಗಳು ತಪ್ಪಾಗಿವೆಯೆಂದು ಅವು ಸಮಾಜವನ್ನು ಅಲ್ಲೋಲ್ಲಕಲ್ಲೋಲಗೊಳಿಸುತ್ತವೆಯೆಂದು ಮತ್ತು ಮೂಲ ವಿಧೇಯಕಕ್ಕೆ ಆಯ್ಕೆ ಸಮಿತಿಯಲ್ಲಿ ಮಾಡಲಾದ ಬದಲಾವಣೆಗಳನ್ನೂ ಕಡೆಗೆ ಸಾಕಷ್ಟು ಗಮನ ಹರಿಸಲಾಗಿಲ್ಲವೆಂದು ಮುಂತಾಗಿ ಹೇಳಲು ಮಾನ್ಯ ಸದಸ್ಯರಿಗೆ ಅವಕಾಶ ಉಂಟು. ಆ ಮೂಲಕ ಮಹತ್ವದ ವಿಷಯಗಳ ಸಂಬಂಧದಲ್ಲಿ ಇಡೀ ವಿಧೇಯಕವನ್ನು ಅಥವಾ ಅದರಲ್ಲಿ ಪ್ರತ್ಯೇಕ ಖಂಡಗಳನ್ನು ಕುರಿತು ಒಂದು ನಿರ್ಣಯಕ್ಕೆ ತಲುಪಲು ಸದನಕ್ಕೆ ಅನುಕೂಲ ಆಗುತ್ತದೆ ಎಂದು ನನ್ನ ಎಣಿಕೆ. ನಾವು ಈ ವಿಷಯದ ಬಗ್ಗೆ ಸಾಕಷ್ಟು ಸಮಯ ಕಳೆದಿದ್ದೇವೆ. ವಿಚಾರದಲ್ಲಿ ಸ್ಪಷ್ಟೀಕರಣವೂ ಇರುವುದು ಅಗತ್ಯ. ಮತ್ತು ಇಲ್ಲಿ ಯಾರೇ ಆಗಲಿ, ನಿರ್ದಿಷ್ಟ ವಿಷಯದ ಬಗ್ಗೆ ಸಿದ್ಧಾಂತಕ್ಕೆ ಅಂಟಿಕೊಳ್ಳಲು ಬಯಸುವುದಿಲ್ಲ ಎಂದು ನಾನು ಭಾವಿಸುತ್ತೇನೆ.

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್** : ನನ್ನ ಮನಸ್ಸು ಖಾಲಿಯಲ್ಲ. ತೆರೆದ ಮನಸ್ಸು ಎಂದು ನಾನು ಬಹಿರಂಗವಾಗಿ ಹೇಳುತ್ತೇನೆ. ಹೇಳಬಹುದೇನೋ.

**ಡೆಪ್ಯುಟಿ ಸ್ಪೀಕರ್** : ನಾವು ಅಪೇಕ್ಷಿಸುವುದು ಅದನ್ನೇ, ತೆರೆದ ಮನಸ್ಸನ್ನೇ.

**ಮಿ। ನಝೀರುದ್ದೀನ್ ಅಹಮ್ಮದ್** : ನಾನು ಅವರಿಗೆ ಬಹಳ ಆಭಾರಿಯಾಗಿದ್ದೇನೆ. ಸ್ವಾಮೀ, ನಾನು ವಿಧೇಯಕದ ಇನ್ನೊಂದು ಶಾಖೆಗೆ ಬರುತ್ತಿದ್ದೇನೆ. ನಾನು ಇಲಾಖಾ ವಿಧೇಯಕದ ೧೦೨ನೆಯ ಖಂಡದ ಕಡೆಗೆ ಸದನದ ಗಮನ ಸೆಳೆಯಬಯಸುತ್ತೇನೆ. ಈ ಖಂಡವು ಅಂತಿಮ ವಿಧೇಯಕದ ಖಂಡ ೧೦೧ಕ್ಕೆ ಸಂವಾದಿ. ಇದನ್ನು ಮೊಟ್ಟಮೊದಲಿಗೆ ಇಲಾಖಾ ವಿಧೇಯಕವು ಸೇರಿಸಿದೆ. ಆಯ್ಕೆ ಸಮಿತಿಯು ಕೆಲವು ಬದಲಾವಣೆಗಳನ್ನು ಮಾಡಿತು. ಆದರೆ ಇಲಾಖಾ ಸಮಿತಿಯು ಸೇರಿಸಿದ್ದು ಗಂಭೀರವಾದ ಬದಲಾವಣೆಯನ್ನು ಅಂದರೆ ಒಂದೇ ವಂಶಕ್ರಮದಲ್ಲಿ ಗಂಡಸು ಮತ್ತು ಹೆಂಗಸು ಇಬ್ಬರೂ ಇದ್ದರೆ, ಗಂಡಸು ಹೆಂಗಸಿನ ಇಮ್ಮಡಿ ತೆಗೆದುಕೊಳ್ಳುತ್ತಾನೆ. ಅಂತಿಮ ವಿಧೇಯಕದಲ್ಲಿ ಅವರ ಪಾಲುಗಳನ್ನು ಸಮಸಮ ಮಾಡಲಾಗಿದೆ. ಇನ್ನು, ಅಂತಿಮ ವಿಧೇಯಕದ ನ್ಯಾಯ ಸಂಗತತೆಯನ್ನು ಕುರಿತು ಹೇಳುವುದಾದರೆ ಅದೇನೂ ಆಕ್ಷೇಪಾರ್ಹವಲ್ಲ. ಆದರೆ ಈ ಹೊಸ ಸೇರ್ಪಡೆ ವಿಷಯಾಂತರ ಎಂದು ನಾನು ನಿವೇದಿಸುತ್ತೇನೆ.

**ಡೆಪ್ಯುಟಿ ಸ್ಪೀಕರ್** : ಅಂತರಗಳು ೧೦೦ ರಷ್ಟು ಇದ್ದರೂ ಸರಿಯೆ, ಆ ಎಲ್ಲ ೧೦೦ ಅಂತರಗಳ ಪರಿಶೀಲನೆಯು ಅಗತ್ಯವಾಗಿ ಆಗಲೇಬೇಕೆ? ಹತ್ತು ಅಥವಾ ಹದಿನೈದು – ಅವೂ ಹೆಚ್ಚೇ–ದೃಷ್ಟಾಂತದ ಸಲುವಾಗಿ ಹತ್ತೋ ಹದಿನೈದೋ ಅಂತರಗಳ ಪರಿಶೀಲನೆ ಸಾಕು. ಅವರು ಅಂಥ ಕೆಲವು ಅಂತರಗಳನ್ನು ತೆಗೆದುಕೊಂಡು, ಆ ಕಾರಣಕ್ಕಾಗಿ ವಿಷಯವನ್ನು ಆಯ್ಕೆ ಸಮಿತಿಗೆ ವಾಪಸು ಕಳಿಸಬೇಕು ಅಥವಾ ಸಾರ್ವಜನಿಕ ಅಭಿಪ್ರಾಯ ಕೋರಿ ಪುನಃ ಪ್ರಚಲಿಸಬೇಕು ಎಂದು ಹೇಳಬಹುದು. ಅಂತರ ಇರುವ ವಿವಿಧ ಬಾಬುಗಳನ್ನು ಉಲ್ಲೇಖಿಸಿ ಅವರು (ಮಾನ್ಯ ಸದಸ್ಯರು) ಆ ಭಾಗವನ್ನು ಸಮಾಪ್ತಗೊಳಿಸಿರಬೇಕು ಎಂದು

ನಾನು ಭಾವಿಸಿದ್ದೆನು. ಅಂತರಗಳು ಇವೆ, ಮತ್ತು ಪ್ರಚಲಿಸಲಾದ ಪಟ್ಟಿಯು ಹದಿಮೂರು ಪುಟಗಳವರೆಗೂ ವಿಸ್ತರಿಸುವಷ್ಟು ಅಂತರಗಳನ್ನು ಒಳಗೊಂಡಿದೆ. ಆದರೆ ಆ ಅಂತರಗಳು ಹೇಗೆ ಆದವು ಎಂದು ಅದರಲ್ಲಿ ಹೇಳಿಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್ :** ಅಂತರಗಳನ್ನು ಟಿಪ್ಪಣಿ ಮಾಡಿಕೊಂಡಿಲ್ಲ. ಅಂತರಗಳನ್ನು ಟಿಪ್ಪಣಿ ಮಾಡುವ ಸ್ಥಳದಲ್ಲಿ ಅವುಗಳನ್ನು ನಮೂದಿಸಿಲ್ಲ. ಅಂತರಗಳು ಇವೆ ಎಂದು ಒಪ್ಪಿಕೊಳ್ಳಲಾಗಿದೆ. ನಿರ್ದಿಷ್ಟ ಅಂತರಗಳ ನಿಮಿತ್ತ ವಿಧೇಯಕವನ್ನು ಪುನಃ ಆಯ್ಕೆ ಸಮಿತಿಗೆ ಕಳಿಸಬೇಕು ಅಥವಾ ಇನ್ನೊಂದು ಆಯ್ಕೆ ಸಮಿತಿಗೆ ಕಳಿಸಬೇಕು ಅಥವಾ ಅಭಿಪ್ರಾಯಗಳನ್ನು ಸಂಗ್ರಹಿಸಲು ಅದನ್ನು ದೇಶದ ಉದ್ದಗಲಕ್ಕೂ ಪ್ರಚಲಿಸಬೇಕು ಎಂದು ತೋರಿಸುವ ಉದ್ದೇಶಕ್ಕಾಗಿ ಕೆಲವು ಪ್ರಮುಖ ಬಾಬುಗಳನ್ನು ಮಾತ್ರ ತೆಗೆದುಕೊಳ್ಳಬಹುದು. ನಾವು ಇದರ ಬಗ್ಗೆ ಅತಿಯಾದ (ವಿಪರೀತ) ಸಮಯ ತೆಗೆದುಕೊಳ್ಳುತ್ತಿದ್ದೇವೆ ಎಂದು ನನಗೆ ಅನಿಸುತ್ತಿದೆ.

**ಶ್ರೀ ಡಿ. ದಾಸ್.** : ನಾನು ಮೊದಲಿನಿಂದಲೂ ಅದನ್ನೇ ಹೇಳುತ್ತಿದ್ದೇನೆ.

**ಮಿ। ನಝೀರುದ್ದೀನ್ ಅಹಮ್ಮದ್ :** ಒಬ್ಬಿಬ್ಬರು ಮಾನ್ಯ ಸದಸ್ಯರಲ್ಲಿ ಉಂಟಾದ ಕ್ಷೋಭೆಯನ್ನು ನಾನು ಚೆನ್ನಾಗಿ ಅರಿಯಬಲ್ಲೆನು.

**ಶ್ರೀ ಬಿ. ದಾಸ್** : ಸ್ವಾಮಿ, ಅವರು ಪುನಃ ಅದೇ ಪದವನ್ನು ಬಳಸುತ್ತಿದ್ದಾರೆ!

**ಮಿ। ನಝೀರುದ್ದೀನ್ ಅಹಮ್ಮದ್ :** ಸ್ವಾಮಿ, ನಾನು ಇಲಾಖಾ ವಿಧೇಯಕದ ಖಂಡ ೧೦೩ರ ಕಡೆಗೆ ಸದನದ ಗಮನ ಸೆಳೆಯಬಯಸುತ್ತೇನೆ. ಈ ಖಂಡ ೧೦೩ ಮೂಲ ವಿಧೇಯಕದ ಖಂಡ ೧೦೨ಕ್ಕೆ ಸಂವಾದಿ..........

**ಡೆಪ್ಯುಟಿ ಸ್ಪೀಕರ್ :** ನಾನು ಇದಕ್ಕೆ ಸಂಬಂಧಿಸಿದಂತೆ ಉಲ್ಲೇಖಿಸಿ ಈಗಾಗಲೇ ತೋರಿಸಿಕೊಟ್ಟಿದ್ದೇನೆ.

**ಮಿ। ನಝೀರುದ್ದೀನ್ ಅಹಮ್ಮದ್ :** ಇದು ಒಂದು ಮಹತ್ವದ ವಿಷಯ.

**ಡೆಪ್ಯುಟಿ ಸ್ಪೀಕರ್ :** ಮಾನ್ಯ ಸದಸ್ಯರಿಗೆ ಅವರ ಪರವಾಗಿ ನಾನು ವಾದ ಮಾಡಲಾರೆನು ಎಂದಷ್ಟೇ ಹೇಳಬಲ್ಲೆನು. ಉದಾಹರಣೆಗಳನ್ನು ಗುಣಿಸುತ್ತ ಹೋಗುವ ಅಗತ್ಯವಿಲ್ಲ ಎಂದು ಮಾತ್ರ ನಾನು ಅವರಿಗೆ ಹೇಳಬಲ್ಲೆನು. ಅವರ ಪ್ರಕಾರ, ಸಾಕಷ್ಟು ಸಂಖ್ಯೆಯಲ್ಲಿ ಉದಾಹರಣೆಗಳು ಇವೆ. ಈಗಾಗಲೇ ತೋರಿಸಿರುವ ಅಂಶಕ್ಕಿಂತ ಅಧಿಕ ಮಹತ್ವದ ಅಂಶವನ್ನು ನಾನು ಮರೆತೆನು ಎಂದು ಅವರಿಗೆ ಅನಿಸಿದ್ದೇ ಆದರೆ ಅವರು ಆ ಅಂಶವನ್ನು ತೋರಿಸಿಕೊಡಬಹುದು.

**ಮಿ। ನಝೀರುದ್ದೀನ್ ಅಹಮ್ಮದ್ :** ಅಂತಿಮ ವಿಧೇಯಕದ ಖಂಡ ೧೦೨ಕ್ಕೆ ಸಂವಾದಿಯಾದ ಇಲಾಖಾ ವಿಧೇಯಕದ ಖಂಡ ೧೦೩ ಸಪಿಂಡರನ್ನು (ಗೋತ್ರಜರನ್ನು) ಐದು ಶ್ರೇಣಿಗಳವರೆಗೆ ನಿರ್ಬಂಧಿಸುತ್ತದೆ. ಈ ಬದಲಾವಣೆಯು ವಾರಸುದಾರಿಕೆಯನ್ನು ಐದು ಶ್ರೇಣಿಗಳವರೆಗೆ ಮಾತ್ರ ನಿರ್ಬಂಧಿಸುತ್ತದೆ. ಪಟ್ಟಿ ಮಾಡಲಾದ ವಾರಸುದಾರರು ಇಲ್ಲದ ಪಕ್ಷದಲ್ಲಿ, ಹಿಂದೂ ಕಾನೂನಿನ ಪ್ರಕಾರ ಆಸ್ತಿಯು ಸಪಿಂಡರಿಗೆ ಹೋಗುತ್ತದೆ. ಅನಂತರದ ಖಂಡದಲ್ಲಿ ಅಂದರೆ ಅಂತಿಮ ವಿಧೇಯಕದ ೧೦೩ನೇ ಖಂಡಕ್ಕೆ ಸಂವಾದಿಯಾದ ಇಲಾಖಾ ವಿಧೇಯಕದ ೧೦೪ನೇ ಖಂಡದಲ್ಲಿ ಸಜಾತರನ್ನು ಸಹ ಅದೇ ರೀತಿ ಐದು ಶ್ರೇಣಿಗಳಿಗೆ ನಿರ್ಬಂಧಿಸಲಾಗಿದೆ. ಇದು ಹಿಂದೂ ಕಾನೂನಿನ ಪರಿಕಲ್ಪನೆಯಿಂದ ಮತ್ತು ಮೂಲ ವಿಧೇಯಕದಿಂದ ಒಂದು ಗಂಭೀರ ಅಂತರ. ಯಾರೇ ಗೋತ್ರಜರು, ಎಷ್ಟೇ ದೂರದ ಸಂಬಂಧಿಕರಾದರೂ ಪ್ರಾಶಸ್ತ್ಯ ಕ್ರಮದ ವಾರಸುದಾರರು ಇಲ್ಲದ ಪಕ್ಷದಲ್ಲಿ, ವಾರಸುದಾರರು ಆಗುತ್ತಾರೆ. ಹೀಗೆ ಸಜಾತರಿಗೆ ಸಂಬಂಧಿಸಿದಂತೆ

ಈ ಬದಲಾವಣೆಯು ಪೂರ್ಣವಾಗಿ ಹೊಸತು. ಗೋತ್ರಜರಿಗೆ ಸಂಬಂಧಿಸಿದಂತೆ ಇದು, ಈ ಬದಲಾವಣೆ, ಮೂಲ ವಿಧೇಯಕದ ಖಂಡಗಳಿಂದ ಗಂಭೀರ ಅಂತರ. ಪಟ್ಟಿಮಾಡಲಾದ ವಾರಸುದಾರರು ಇಲ್ಲದಿರುವ ಪಕ್ಷದಲ್ಲಿ, ಅವು ಗೋತ್ರಜರಿಗೆ ಹೋಗುತ್ತವೆ ಮತ್ತು ಗೋತ್ರಜರು ಇಲ್ಲದಿರುವ ಪಕ್ಷದಲ್ಲಿ, ಸಜಾತರಿಗೆ ಹೋಗುತ್ತವೆ ಎಂದು ಮಾತ್ರ ಆ ಖಂಡಗಳು ಹೇಳುತ್ತವೆ.

**ಮಾನ್ಯ ಡಾ। ಬಿ. ಆರ್. ಅಂಬೇಡ್ಕರ್ :** ಸಜಾತರೋ ಅಥವಾ ಗೋತ್ರಜರೋ?

**ಮಿ। ನಝೀರುದ್ದೀನ್ ಅಹಮ್ಮದ್ :** ಸಜಾತರು.

ಇವು ಗಂಭೀರ ಸ್ವರೂಪದ ಬದಲಾವಣೆಗಳು ಎಂದು ನಾನು ನಿವೇದಿಸುತ್ತೇನೆ. ಡಾ। ಅಂಬೇಡ್ಕರ್ ಅವರ ಪ್ರಕಾರ ಅವು ಗಂಭೀರ ಸ್ವರೂಪದ ಬದಲಾವಣೆಗಳು ಅಲ್ಲ. ಯಾಕೆಂದರೆ ಅವುಗಳನ್ನು ಮಾಡಿದವರು ಅವರೇ.

**ಶ್ರೀಮತಿ ಜಿ. ದುರ್ಗಾಬಾಯಿ :** ಗಂಭೀರ ಸ್ವರೂಪದ ಮತ್ತು ಮಹತ್ವಪೂರ್ಣ ಬದಲಾವಣೆಗಳನ್ನು!

**ಮಿ। ನಝೀರುದ್ದೀನ್ ಅಹಮ್ಮದ್ :** ನಿಮಗೆ ಇಷ್ಟವೆನಿಸಿದರೆ ಮಹತ್ವಪೂರ್ಣ ಎನ್ನಿ. ನನ್ನ ಪ್ರಕಾರ ಅವು ಮಹತ್ವಪೂರ್ಣ ಅಷ್ಟೇ ಅಲ್ಲ, ಗಂಭೀರಸ್ವರೂಪ. ಇದು ಕೆಲವರ ವಾರಸಾ ಹಕ್ಕನ್ನು ನಿರ್ಬಂಧಿಸುತ್ತದೆ.

**ಡೆಪ್ಯುಟಿ ಸ್ಪೀಕರ್ :** ಮಾನ್ಯ ಸದಸ್ಯರು ಐದು ಗಂಟೆಯ ಹೊತ್ತಿಗೆ ಸಮಾರೋಪ ಮಾಡುವುದಿಲ್ಲವೆ? ಈ ವಿಷಯವನ್ನು ಕುರಿತಂತೆ ಸಾಕಷ್ಟು ಹೇಳಲಾಗಿದೆ.

**ಮಿ। ನಝೀರುದ್ದೀನ್ ಅಹಮ್ಮದ್ :** ಇಲ್ಲ ಸ್ವಾಮೀ. ಕೆಲವು ಸದಸ್ಯರಿಗೆ ಮನವರಿಕೆ ಆಗುವ ಮಟ್ಟಿಗೆ ಸಾಕಷ್ಟು ಆಗಿಲ್ಲ. ಅವರಿಗೆ ಸಂಪೂರ್ಣವಾಗಿ ಮನವರಿಕೆ ಮಾಡಿಕೊಡಬಯಸುತ್ತೇನೆ.

**ಡೆಪ್ಯುಟಿ ಸ್ಪೀಕರ್ :** ಈಗ ಐದು ತಾಸುಗಳಿಂದ ಮನವರಿಕೆ ಮಾಡಿಕೊಡಲು ಸಾಧ್ಯವಾಗದೆ ಹೋದ ಮೇಲೆ, ಇನ್ನೂ ಐದು ತಾಸುಗಳಾದರೂ ಮನವರಿಕೆ ಮಾಡಿಕೊಡಲು ಸಾಧ್ಯವಾಗುವುದುಂಟೆ?

**ಮಿ। ನಝೀರುದ್ದೀನ್ ಅಹಮ್ಮದ್ :** ಮಾನ್ಯ ಕಾನೂನು ಮಂತ್ರಿಗಳ ತಲೆ (ಮನಸ್ಸು) ಖಾಲಿ ಅಲ್ಲದಿದ್ದರೂ, ಮನಸ್ಸು ತೆರೆದಿದೆಯಂತೆ. ಕಾಲಾಂತರದಲ್ಲಿ ಅವರಿಗೆ ಮನವರಿಕೆ ಆಗಿಯೇ ಆಗುತ್ತದೆ.

**ಒಬ್ಬ ಮಾನ್ಯ ಸದಸ್ಯರು :** ಅವರು ನಿಮ್ಮ ಭಾಷಣದ ಬಗ್ಗೆ ಇಂದು ರಾತ್ರಿ ಮನನ ಮಾಡುತ್ತಾರೆ.

**ಮಿ। ನಝೀರುದ್ದೀನ್ ಅಹಮ್ಮದ್ :** ಮೂಲ ವಿಧೇಯಕದ ಖಂಡ ೧೦ ಅನ್ನು ಇಲಾಖಾ ವಿಧೇಯಕದಲ್ಲಿ ಸಂಪೂರ್ಣವಾಗಿ ಬಿಟ್ಟುಬಿಡಲಾಗಿದೆ. ಸಾರಾಸಗಟು ಮರೆತುಬಿಡಲಾಗಿದೆ. ವಾಸ್ತವವಾಗಿ, ಹಿಂದೂ ಕಾನೂನಿನಲ್ಲಿ, ಮುಸ್ಲಿಂ ಕಾನೂನಿನಲ್ಲಿ ಕೂಡ, ಪಟ್ಟಿ ಮಾಡಲಾದ ವಾರಸುದಾರರು ಇಲ್ಲದಿರುವಾಗ, ಗೋತ್ರಜರು, ಸಜಾತರು ಇಲ್ಲದಿರುವಾಗ, ಸಂಬಂಧಪಟ್ಟಿಲ್ಲದ ಇತರ ವಾರಸುದಾರರು ಉತ್ತರಾಧಿಕಾರಿಗಳಾಗುತ್ತಾರೆ. ಅವರೆಂದರೆ ಗುರುಗಳು, ಆಚಾರ್ಯರು, ಶಿಷ್ಯರು ಮತ್ತು ಸಹ ಬ್ರಹ್ಮಚಾರಿಗಳು ಮತ್ತು ಒಬ್ಬರೇ ಶಿಕ್ಷಕರ ಅಧೀನದಲ್ಲಿರುವ ವಿದ್ಯಾರ್ಥಿಗಳು ವಾರಸುದಾರರು ಆಗುತ್ತಾರೆ. ಇಲಾಖಾ ವಿಧೇಯಕದ ಪ್ರಕಾರ, ಗುರುಗಳ ಬಗ್ಗೆ ಇರತಕ್ಕ ಗೌರವ, ಆಚಾರ್ಯರ ಬಗ್ಗೆ ಇರತಕ್ಕ ಗೌರವ ಮತ್ತು ಸಹಬ್ರಹ್ಮಚಾರಿಗಳ ಬಗ್ಗೆ ಇರತಕ್ಕ ಗೌರವ ಮತ್ತು ಸಹಾನುಭೂತಿ– ಇವುಗಳನ್ನು ಸಾರಾಸಗಟಾಗಿ ಆಚೆ ಬಿಸಾಡಲಾಗಿದೆ. ಇದು ಸಹ ಗಂಭೀರ ಸ್ವರೂಪದ ಬದಲಾವಣೆ. ಈ ಬದಲಾವಣೆಗಳ ಮತ್ತು ಇತರ ಅಗಣಿತ ಬದಲಾವಣೆಗಳ ಒಟ್ಟು ಪರಿಣಾಮವೇನಾಗುವುದೆಂದರೆ, ಮಾನ್ಯ ಕಾನೂನು ಮಂತ್ರಿಗಳನ್ನು ನನ್ನ ಪಕ್ಷಕ್ಕೆ ಗೆದ್ದುಕೊಳ್ಳಲು ಅನುಕೂಲವಾಗುತ್ತದೆ.

ಅನಂತರ ನಾವು ವಿಧೇಯಕದ ಖಂಡ ೧೯ಕ್ಕೆ ಮತ್ತು ಅಂತಿಮ ವಿಧೇಯಕದ ಖಂಡ ೧೦೮ಕ್ಕೆ

ಬರುತ್ತೇವೆ ಈ ವ್ಯವಸ್ಥೆಯ (ಎಡಬಂಧವು) ಅತ್ಯಂತ ಹೊಸದು. ಆ ಖಂಡದಲ್ಲಿ ಮೂಲ ವಿಧೇಯಕದಲ್ಲಿ ಇಲ್ಲದಂಥ ಕೆಲವರು ಹೊಸ ವಾರಸುದಾರರನ್ನು ಸೇರಿಸಲಾಗಿದೆ.

ಸ್ತ್ರೀಧನದ ಉತ್ತರಾಧಿಕಾರದ ಸಂಬಂಧದಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ. ಮತ್ತು ಆ ತರುವಾಯ, ಭಾಗ II, ಖಂಡ ೧೪ರಲ್ಲಿ, ವಾರಸುದಾರರು ಒಂದೆಡೆ ಇರುವಲ್ಲಿ...........

೫ ಗಂಟೆ.

**ಡೆಪ್ಯುಟಿ ಸ್ಪೀಕರ್** : ಮಾನ್ಯ ಸದಸ್ಯರು ಬೇಗನೆ ಸಮಾಪ್ತಿಗೊಳಿಸುವುದಾದರೆ, ನಾವು ಇನ್ನೈದು ನಿಮಿಷ ಹೆಚ್ಚಿಗೆ ಕುಳಿತುಕೊಳ್ಳಬಹುದು.

**ಮಿ। ನಝೀರುದ್ದೀನ್ ಅಹಮ್ಮದ್ :** ಇಲ್ಲ. ಸಾಧ್ಯವಿಲ್ಲ ಸ್ವಾಮಿ.

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯ ಸದಸ್ಯರು ಸಮಾರೋಪ ಮಾಡುವುದಾದರೆ ನಾವು ಐದು ನಿಮಿಷ ಹೆಚ್ಚಿಗೆ ಇರುತ್ತೇವೆ.

**ಡೆಪ್ಯುಟಿ ಸ್ಪೀಕರ್ :** ತೀರ್ಮಾನವನ್ನು ಸ್ಪೀಕರ್ ಅವರಿಗೆ ಬಿಡುತ್ತೇನೆ. ಈಗ ಸದನವನ್ನು ನಾಳೆ ಪೂವಾಹ್ನ ೧೦.೪೫ರವರೆಗೆ ಮುಂದೂಡಲಾಗಿದೆ.

ತರುವಾಯ ಸದನವು, ಶನಿವಾರ ೭ನೇ ಏಪ್ರಿಲ್ ೧೯೪೯ರಂದು ಪೂರ್ವಾಹ್ನ ೧೦.೪೫ ರವರೆಗೆ ಮುಂದಕ್ಕೆ ಹೋಯಿತು.

**ಹಿಂದೂ ಕೋಡ್ ಮುಂದುವರಿದುದು.**

**ಸ್ಪೀಕರ್** : ಸದನವು, ಆಯ್ಕೆ ಸಮಿತಿಯು ವರದಿ ಮಾಡಿದಂತೆ, ಹಿಂದೂ ಕಾನೂನಿನ ಕೆಲವು ನಿರ್ದಿಷ್ಟ ಶಾಖೆಗಳನ್ನು ತಿದ್ದುಪಡಿ ಮಾಡುವ ಮತ್ತು ಕ್ರೋಡೀಕರಿಸುವ ವಿಧೇಯಕವನ್ನು ಪರಿಶೀಲಿಸಬೇಕು ಎಂಬ ಪ್ರಸ್ತಾವವನ್ನು ಪರಿಶೀಲಿಸಲು ಪ್ರಾರಂಭಿಸುತ್ತದೆ.

**ಶ್ರೀ ಮಹಾವೀರ ತ್ಯಾಗಿ** (ಯು.ಪಿ. ಜನರಲ್): ಸ್ವಾಮಿ, ಈ ವಿಧೇಯಕದ ಚರ್ಚೆಯು ಎಷ್ಟು ಸಮಯದವರೆಗೆ ನಡೆಯಬಹದು ಎಂದು ತಿಳಿಯಬಹುದೆ? ಕಾರಣವೆಂದರೆ ಸರ್ಕಾರಿ ಕಲಾಪವು ಇರುವ ನಿಮಿತ್ತ, ಈ ವಿಧೇಯಕದ ಮೇಲಿನ ಪರ್ಯಾಲೋಚನೆ ಎಷ್ಟು ಹೊತ್ತು ಮುಂದುವರಿಯುತ್ತದೆ ಎಂಬ ಬಗ್ಗೆ ನಮಗೆ ಖಚಿತವಾದ ಮಾಹಿತಿ ಬೇಕು. ಈಗ ಈ ಹಂತದಲ್ಲಿ ದೀರ್ಘಸೂತ್ರೀ ಕೆಲಸ ನಡೆಯುತ್ತಿದೆ ಮತ್ತು ಪ್ರತಿಯೊಬ್ಬ ಸದಸ್ಯರು ಮಾತಾಡಲು ತವಕಿಸುತ್ತಿದ್ದಾರೆ. ಹಾಗಾಗಿ ಅವರಿಗೆ ಎರಡು ಮೂರು ದಿನಗಳವರೆಗೂ ಮಾತಾಡಲು ಅವಕಾಶ ದೊರೆಯುಲಿಕ್ಕಿಲ್ಲ. ಸದ್ಯಕ್ಕೆ ಈ ವಿಧೇಯಕವನ್ನು ಎಷ್ಟು ಸಮಯದವರೆಗೆ ಚರ್ಚೆ ಮಾಡಲಿದ್ದಾರೆ ಎಂಬುದನ್ನು ನಮಗೆ ತಿಳಿಸಬಹುದೆ ಸ್ವಾಮೀ?

**ಸ್ಪೀಕರ್** : ಒಂದು ನಿರ್ದಿಷ್ಟ ವಿಧೇಯಕದ ಚರ್ಚೆಗೆ ಎಷ್ಟು ಸಮಯ ಹಿಡಿಯಬಹುದು ಎಂದು ನಾನು ಖಚಿತವಾಗಿ ಹೇಳಲಾರೆನು. ನಿಜವಾಗಿಯೂ ಅದು ಸದಸ್ಯರನ್ನೇ ಅಧಿಕವಾಗಿ ಅವಲಂಬಿಸಿದೆ. ಇಷ್ಟನ್ನು ಮಾತ್ರ ನಾನು ಹೇಳಬಲ್ಲೆ. ಒಂದು ದಿನ ಅಂದರೆ ೪ನೇ ತಾರೀಖನ್ನು ಹೊರತುಪಡಿಸಿ, ಮುಂದಿನ ವಾರದ ಎಲ್ಲ ದಿನಗಳು ಸರ್ಕಾರಿ ಕಲಾಪಕ್ಕೆ ಮೀಸಲಾಗಿವೆ. ಇನ್ನು ಯಾವ ವಿಧೇಯಕಗಳನ್ನು ಸದನದ ಮುಂದೆ ಇಡಬೇಕು ಅಥವಾ ಇಡಬಾರದು ಎಂಬ ಪ್ರಶ್ನೆಯನ್ನು ತೀರ್ಮಾನಿಸುವುದು ಸರ್ಕಾರಕ್ಕೆ ಸೇರಿದ ವಿಚಾರ. ಮಾತ್ರವಲ್ಲದೆ ವಿಭಿನ್ನ ಕಾನೂನುಗಳಿಗೆ ಅವರು ನೀಡುವ ಪ್ರಾಶಸ್ತ್ಯ ಕ್ರಮವನ್ನು ಅವಲಂಬಿಸಿರುತ್ತದೆ. ಅದು ಅವರ ನಿರ್ಧಾರ.

**ಶ್ರೀ ಮಹಾವೀರ ತ್ಯಾಗಿ :** ಸ್ವಾಮೀ, ನಿಮ್ಮ ಮುಖಾಂತರ ಸರ್ಕಾರಕ್ಕೆ ನಾನು ಮುಂದಿನಂತೆ ವಿನಂತಿ

ಸಲ್ಲಿಸಲೆ? ಸರ್ಕಾರವು ದಯೆಯಿಟ್ಟು ತುರ್ತು (ಜರೂರು) ಕಲಾಪಗಳನ್ನು ಮೊದಲು ಎತ್ತಿಕೊಂಡು, ಈ ವಿಧೇಯಕದ ಪರಿಶೀಲನೆಯನ್ನು ಮುಂದಕ್ಕೆ ಹಾಕಬಹುದಲ್ಲ. ಅಥವಾ ಖಚಿತವಾಗಿ ಯಾವ ವಿಧೇಯಕಗಳನ್ನು ಚರ್ಚೆಗೆ ತೆಗೆದುಕೊಳ್ಳುತ್ತಾರೆ ಎಂದು ತಿಳಿಸಬಹುದಲ್ಲ. ಅಂದರೆ ನಾವು ಮುಂದಿನ ವಿಧೇಯಕಗಳ ಚರ್ಚೆಗೆ ಸಿದ್ಧತೆ ಮಾಡಿಕೊಂಡು ಬರಲು ಅನುಕೂಲವಾಗುತ್ತದೆ. ನಾವು ಇತರ ವಿಧೇಯಕಗಳ ಚರ್ಚೆಗಳಲ್ಲಿ ಭಾಗವಹಿಸಲು ಆತುರರಾಗಿದ್ದೇವೆ.

**ಪಂಡಿತ ಲಕ್ಷ್ಮೀಕಾಮತ ಮೈತ್ರಾ** (ಪಶ್ಚಿಮ ಬಂಗಾಲ : ಸಾಮಾನ್ಯ) : ಸ್ವಾಮೀ, ನನ್ನ ಸ್ನೇಹಿತ ಮಹಾವೀರ ತ್ಯಾಗಿ ಅವರು ಎತ್ತಿದ ಪ್ರಶ್ನೆ ಮಹತ್ವದ ಪ್ರಶ್ನೆ. ಈ ಸಂಬಂಧದಲ್ಲಿ ನೀವು ಇದೀಗ ಮಾಡಿದ ಟಿಪ್ಪಣಿಯನ್ನು ನಾನು ಒಪ್ಪುತ್ತೇನೆ. ಅಂದರೆ, ಅಂಥ ವಿಚಾರದಲ್ಲಿ ಒಂದು ವಿಧೇಯಕ ಎಷ್ಟು ಸಮಯದವರೆಗೆ ಹೋಗಬೇಕು ಎನ್ನುವುದನ್ನು ಸದನವೇ ನಿರ್ಧರಿಸುತ್ತದೆ. ಅರ್ಥಾತ್ ಒಂದು ಹಂತದಲ್ಲಿ ಸಾಕಷ್ಟು ಜನ ಭಾಷಣಕಾರರು ಇದ್ದರೆ, ಮತ್ತು ಅವರು ಸಾಕಷ್ಟು ಸಮಯ ಮಾತನಾಡಲು ಬಯಸಿದರೆ, ಅವರು ಹಾಗೆ ಮಾಡಬಹುದು ಅಲ್ಲವೆ? ಇದು ನಾನು ತಿಳಿದುಕೊಂಡ ಹಾಗೆ ನಿಮ್ಮ ಟಿಪ್ಪಣಿಯ ಅರ್ಥ. ಎಷ್ಟು ದಿನಗಳನ್ನು ನಿಗದಿಪಡಿಸಬೇಕು ಎಂಬ ವಿಷಯ, ಹಾಗೆ ನೋಡಿದರೆ, ಸಭಾಧ್ಯಕ್ಷರು ನಿರ್ಧರಿಸುವುದು ಒಂದಿಷ್ಟು ಕಷ್ಟವೇ. ಈ ವಿಧೇಯಕದ ಮೇಲೆ ಮಾತನಾಡಬಯಸುವ ಮತ್ತು ಸಂಪೂರ್ಣವಾಗಿ ಚರ್ಚಿಸುವ ಆತುರದಲ್ಲಿ ಇರುವ ಸದಸ್ಯರಿಗೆ, ಈ ಅಧಿವೇಶನದಲ್ಲಿ ಇತರ ಇನ್ನೂ ಎಷ್ಟು ವಿಧೇಯಕಗಳು ಬರಲಿವೆ ಎಂದು ತಿಳಿದುಕೊಳ್ಳಲು ಎಷ್ಟು ಕಷ್ಟ ಎಂದು ತಮಗೆ ತಿಳಿದಿರಬಹುದಷ್ಟೆ. ನಿನ್ನೆ ಈ ಪ್ರಸ್ತಾವವನ್ನು ಎತ್ತಿಕೊಂಡಾಗ, ನಾನು ಮೊದಲಿನಿಂದಲೇ ನಿವೇದಿಸುತ್ತಿದ್ದ ಸಂಗತಿ ಎಂದರೆ, ಈ ವಿಧೇಯಕವನ್ನು ಈ ಅಧಿವೇಶನದಲ್ಲಿ ಪುನಃ ಎತ್ತಿಕೊಳ್ಳಲಿಕ್ಕಿಲ್ಲ ಎಂದು ಸದಸ್ಯರ ಪೈಕಿ ಬಹುತೇಕರು ಭಾವಿಸಿದ್ದಾರೆ. ವಾಸ್ತವವಾಗಿ, ಇಷ್ಟೊಂದು ಪ್ರಾಮುಖ್ಯ ಮತ್ತು ವೈಶಾಲ್ಯವನ್ನು ಹೊಂದಿರುವ ಈ ವಿಧೇಯಕವನ್ನು ಪುನಃ ಚರ್ಚೆಗೆ ತರುವುದಿದ್ದರೆ, ಆ ಬಗ್ಗೆ ಸದಸ್ಯರಿಗೆ ಸಾಕಷ್ಟು ನೋಟೀಸು ಕೊಡಬಹುದು ಎಂದು ನಿರೀಕ್ಷಿಸಿದ್ದೆವು. ಆದರೆ ಹಾಗೇನೂ ಮಾಡಲಿಲ್ಲ. ನನ್ನ ವಾದದ ಒಟ್ಟು ಸಾರಾಂಶವೆಂದರೆ, ಈ ವಿಧೇಯಕವನ್ನು ಚರ್ಚಿಸಲಾಗುವುದು ಮತ್ತು ಚರ್ಚೆಯು ಈ ದಿನ ಮಾತ್ರ ಮುಂದುವರಿಯುವುದು ಎಂದು ಹೇಳಿದರೆ ನಮಗೆ ಅರ್ಥವಾಗುತ್ತದೆ. ಆದರೆ ಇದಕ್ಕೆ ವಿಪರೀತವಾಗಿ ಈ ಅಧಿವೇಶನದಲ್ಲಿ ಹೆಚ್ಚಿನ ದಿನಗಳಿಗೆ ಏರ್ಪಾಟು ಮಾಡಲಾಗುವುದು ಎಂದು ತಿಳಿಸಿದರೆ, ಆ ಸನ್ನಿವೇಶವೇ ಬೇರೆಯಾಗುತ್ತದೆ. ಈ ವಿಧೇಯಕದ ಪರವಾಗಿ ಅಥವಾ ವಿರುದ್ಧವಾಗಿ ಮಾತನಾಡಲು ಉತ್ಸುಕರಾದ ಮಾನ್ಯ ಸದಸ್ಯರಿಗೆ, ಸದನಕ್ಕೆ ಬರಲು ಮತ್ತು ಚರ್ಚೆಯಲ್ಲಿ ಭಾಗವಹಿಸಲು ಸಾಧ್ಯವಾಗಲಿಕ್ಕಿಲ್ಲ. ನಾವು ನಿನ್ನೆ ಪ್ರಾರಂಭಿಸಿದೆವು. ನಮ್ಮ ಪೈಕಿ ಅನೇಕ ಸದಸ್ಯರು ಆಗಲೇ ಹೊರಟುಹೋಗಿದ್ದಾರೆ. ಉದಾಹರಣೆಗೆ ಶ್ರೀ ಕೆ. ಎಂ. ಮುನ್ಷಿ ಅವರು ನಿನ್ನೆ ಈ ಪ್ರಸ್ತಾವದ ಮೇಲೆ ಮಾತನಾಡಲು ಬಂದಿದ್ದರು. ಹಾಗೆಯೇ ಅನೇಕರು ಈ ವಿಧೇಯಕದ ಪರವಾಗಿ ಅಥವಾ ವಿರುದ್ಧವಾಗಿ ಮಾತಾಡಲು ಬಂದಿದ್ದರು. ಆದರೂ ಹೊರಟುಹೋಗಿದ್ದಾರೆ. ಇನ್ನು ನಿಮ್ಮ ಮುಖಾಂತರ – ನೀವೇ ಆ ಕುರಿತು ಹೇಳಬೇಕು. ಅದು ನಿಮಗೆ ಸಾಧ್ಯವುಂಟು – ಇನ್ನೂ ಕೆಲವು ಹೆಚ್ಚಿನ ದಿನಗಳ ಏರ್ಪಾಟು ಮಾಡಲಾಗುವುದು ಎಂದು ತಿಳಿಸಿದರೆ, ಖಂಡಿತವಾಗಿಯೂ ಅನುಕೂಲ ಆಗುತ್ತಿತ್ತು. ಇಲ್ಲದೆ ಹೋದರೆ, ಈ ಮಹತ್ವದ ವಿಧೇಯಕಕ್ಕೆ ಸಂಬಂಧಿಸಿದಂತೆ ನಾವು ಏನು ಎತ್ತ ಎಂದು ನಮಗೇನೂ ಗೊತ್ತಾಗುತ್ತಿಲ್ಲ.

**ಸ್ಪೀಕರ್** : ಮಾನ್ಯ ಕಾನೂನು ಮಂತ್ರಿಗಳು ನಮಗೆ ಈ ಬಗ್ಗೆ ಏನಾದರೂ ತಿಳಿವಳಿಕೆ ಕೊಡಬಹುದು ಎಂದು ಭಾವಿಸಿದ್ದೇನೆ.

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್** (ಕಾನೂನು ಮಂತ್ರಿಗಳು) : ಈ ವಿಧೇಯಕದ ಬಗ್ಗೆ ಚರ್ಚೆ ನಡೆಯುತ್ತದೆ ಎಂಬ ಒಂದೇ ಒಂದು ವಿಷಯವನ್ನು ನಾನು ಹೇಳಬಲ್ಲೆ. ಮುಂದಿನ ಹಂತವೇನು, ನಾನು ಖಚಿತವಾಗಿ ಹೇಳುವಂತಿಲ್ಲ; ಕಾರಣವೆಂದರೆ ಸರ್ಕಾರಿ ಕಲಾಪಗಳ (ವೇಳಾಪಟ್ಟಿಯ) ವ್ಯವಸ್ಥೆಯನ್ನು ಸರ್ಕಾರಿ ಸಮಿತಿಗೆ ವಹಿಸಲಾಗಿರುತ್ತದೆ. ಅದಕ್ಕೆ 'ಪ್ರಾಥಮಿಕತಾ ಸಮಿತಿ' ಎಂದು ಹೆಸರು. ಆ ಸಮಿತಿಯು ಈ ವಿಧೇಯಕಕ್ಕೆ ಈ ದಿನಗಳನ್ನು ನಿಗದಿಪಡಿಸಿದೆ.ಈ ಸಮಿತಿ ಇಂದು ಅಪರಾಹ್ನ ಸಭೆ ಸೇರುವುದಿದೆ. ಮತ್ತು ಅದು ತೀರ್ಮಾನ ಕೈಗೊಳ್ಳಲಿದೆ. ಇದಕ್ಕಿಂತ ಹೆಚ್ಚಾಗಿ ನಾನು ಏನನ್ನೂ ಹೇಳಲಾರೆನು.

**ಪಂಡಿತ ಲಕ್ಷ್ಮೀಕಾಂತಾ ಮೈತ್ರಾ** : ಇವೆಲ್ಲವುಗಳ ಕಾರಣ, ಸಭಾಧ್ಯಕ್ಷರಿಗೆ ನಾನು ನಿವೇದಿಸುವುದೇನೆಂದರೆ, ಈ ವಿಧೇಯಕಕ್ಕೆ ಸಂಬಂಧಿಸಿದಂತೆ ಈ ಕಾರ್ಯವಿಧಾನವನ್ನು ಅಂಗೀಕರಿಸದಂತೆ ನೋಡಿಕೊಳ್ಳಲು ತಮ್ಮಲ್ಲಿ ಸಾಕಷ್ಟು ಅಂತರ್ನಿಹಿತ ಅಧಿಕಾರಗಳಿರುತ್ತವೆ. ಮಾನ್ಯ ಸದಸ್ಯರಿಗೆ ಇನ್ನೊಮ್ಮೆ ಸಾಕಷ್ಟು ನೋಟಿಸು ಕೊಟ್ಟ ಹೊರತು – ಈ ಕಾರ್ಯ ವಿಧಾನವನ್ನು ಅಂಗೀಕರಿಸಕೂಡದು. ಮತ್ತು ಈ ವಿಧೇಯಕವು ಚರ್ಚೆಗೆ ಬಂದಾಗ, "ನಾನು ಈ ವಿಧೇಯಕದ ಚರ್ಚೆಯಲ್ಲಿ ಭಾಗವಹಿಸುವ ಮಾನ್ಯ ಸದಸ್ಯರ ಹಕ್ಕಿಗೆ ಬಾಧಕವುಂಟಾಗುತ್ತದೆ" ಎಂದು ಹೇಳಲು ತಾವು ಸಕ್ಷಮರಾಗಿರುತ್ತೀರ ಮಾನ್ಯ ಸಭಾಧ್ಯಕ್ಷರೆ. ಈ ಅಧಿವೇಶನದಲ್ಲಿ ಕಾಲಕಾಲಕ್ಕೆ ಈ ವಿಧೇಯಕದ ಪರ್ಯಾಲೋಚನೆಯನ್ನು ಕೈಗೆತ್ತಿಕೊಂಡ ರೀತಿಯಿಂದಾಗಿ, ಮಾನ್ಯ ಕಾನೂನು ಮಂತ್ರಿಗಳು ಈ ಬಗ್ಗೆ ಯಾವುದೇ ನಿರ್ಧಾರ ಕೈಗೊಳ್ಳುತ್ತಿಲ್ಲ ಎಂಬುದಾಗಿ ಮೊದಲಿನಿಂದಲೂ ನಾನು ದೂರು ಸಲ್ಲಿಸುತ್ತ ಬಂದಿದ್ದೇನೆ. ಇದೇ ನನ್ನ ಕಡೆಯಿಂದ ಮತ್ತು ಇತರ ಮಾನ್ಯ ಸದಸ್ಯರ ಕಡೆಯಿಂದ ಭಾರೀ ಪ್ರತಿಕೂಲ ಟಿಪ್ಪಣಿಗೆ ವಿಷಯವಾಗಿದೆ. ಇವತ್ತಿನ ದಿವಸವೂ ಕೂಡ ಮಾನ್ಯ ಕಾನೂನು ಮಂತ್ರಿಗಳು, ಮಹತ್ವದ ಈ ವಿಧೇಯಕದ ಬಗ್ಗೆ ಇನ್ನೊಂದು ದಿನವನ್ನು ಗೊತ್ತುಪಡಿಸಬಹುದೊ ಅಥವಾ ಗೊತ್ತುಪಡಿಸಲಿಕ್ಕಿಲ್ಲವೊ ಎಂದು ಹೇಳುವಂಥ ಸ್ಥಿತಿಯಲ್ಲಿ ಇಲ್ಲ. ಹಾಗಿದ್ದ ಪಕ್ಷದಲ್ಲಿ, ಈ ವಾರದ ಕೊನೆಯಲ್ಲಿ ಈ ವಿಧೇಯಕದ ಪರಿಶೀಲನೆಗಾಗಿ ಬಹಳ ಕಡಿಮೆ ಸಮಯದ ನೋಟಿಸು ಕೊಟ್ಟು ಪ್ರಸ್ತಾವ ಬಂದರೆ, ಅಂಥ ಯಾವುದೇ ಪ್ರಸ್ತಾವವನ್ನು ಕಟ್ಟುನಿಟ್ಟಾಗಿ ತಿರಸ್ಕರಿಸುತ್ತೀರೆಂದು ಆಶಿಸುತ್ತೇನೆ.

**ಸ್ಪೀಕರ್ :** ಅದೇನಿದ್ದರೂ ಆ ಪ್ರಶ್ನೆ ಸದ್ಯಕ್ಕೆ ಊಹೆಗೆ ಸೇರಿದ್ದು.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ** (ಅಜಮೀರ : ಮೇವಾಡ) : ಸರ್ಕಾರ ಇವತ್ತಿಗೂ ಯಾವುದೇ ನಿರ್ಧಾರಕ್ಕೆ ಬರಲು ಸಾಧ್ಯವಾಗುತ್ತಿಲ್ಲ ಎಂದರೆ ಸ್ಪಷ್ಟವಾಗಿಯೂ ಅತ್ಯಂತ ಅನ್ಯಾಯದ ಸನ್ನಿವೇಶ. ಮಾರ್ಚ್ ೩೦ನೇ ತಾರೀಖಿನಂದು ಪರಿಸ್ಥಿತಿ ಏನು ಎತ್ತ ಎಂದು ನೀವು ಸದನದ ಧುರೀಣರನ್ನು ಕೇಳಿದ್ದೀರ. ಹಿಂದೂ ಕೋಡ್ ವಿಧೇಯಕವನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಗುವುದೋ ಇಲ್ಲವೋ ಎಂದು ಶ್ರೀ ಮೈತ್ರಾ ಅವರು ನಿರ್ದಿಷ್ಟವಾದ ಪ್ರಶ್ನೆಯನ್ನು ಕೇಳಿದ್ದರು. ಆ ಪ್ರಶ್ನೆಗೆ ಸರ್ಕಾರದ ಕಡೆಯಿಂದ ಯಾವ ಉತ್ತರವೂ ಬರಲಿಲ್ಲ. ಫಲಿತಾಂಶವಾಗಿ ೩೧ನೇ ತಾರೀಖಿನಂದು, ಮೊಟ್ಟಮೊದಲಿಗೆ ನಮಗೆ ಗೊತ್ತಾದದ್ದು ವಿಧೇಯಕವನ್ನು ಕೈಗೆತ್ತಿಕೊಳ್ಳಲಾಗುವುದು ಎಂದು. ಚರ್ಚೆಯಲ್ಲಿ ಭಾಗವಹಿಸಬೇಕೆಂದು ಬಯಸಿದ್ದ ಶ್ರೀ ಚೌಧರಿ ಅವರು ಈ ವಿಧೇಯಕವು ಸದನದ ಮುಂದೆ ಬರಲಿಕ್ಕಿಲ್ಲ ಎಂಬ ಪೂರ್ವ ಭಾವನೆಯಲ್ಲಿ, ಅಸ್ಸಾಂಗೆ ತೆರಳಿದರು. ಆದ್ದರಿಂದ ಅದನ್ನು (ವಿಧೇಯಕವನ್ನು) ಈ ರೀತಿಯಲ್ಲಿ ಸದನದ ಮುಂದೆ ತರುವುದು ಮಾನ್ಯ ಸದಸ್ಯರ ಬಗ್ಗೆ ಸ್ಪಷ್ಟವಾಗಿಯೂ ನ್ಯಾಯವಾದ ಮಾರ್ಗವಲ್ಲ. ಸಭಾಧ್ಯಕ್ಷರು ಸದಸ್ಯರ ಹಕ್ಕನ್ನು ರಕ್ಷಿಸಲು ವಿಪುಲ ಅಧಿಕಾರವನ್ನು ಹೊಂದಿರುತ್ತಾರೆ.

**ಸೇಠ್ ಗೋವಿಂದ ದಾಸ್** (ಸಿ.ಪಿ. ಮತ್ತು ಬೆರಾರ್) : ಆ ತಾರೀಖು ಸದನದ ಧುರೀಣರು ನಾವು

ಬಹುಶಃ ೭ನೆಯ ಏಪ್ರಿಲ್ ತಾರೀಖು ಸದನವನ್ನು ಮುಂದೂಡುವ ಸಂಭವ ಇದೆಯೆಂದು ಘೋಷಿಸಿರುವುದು ನಿಮಗೆ ನೆನಪಿರಬಹುದು. ಹಿಂದೂ ಕೋಡ್ ವಿಧೇಯಕವನ್ನು ಈ ಅಧಿವೇಶನದಲ್ಲಿ ಪರಿಶೀಲನೆಗೆ ಎತ್ತಿಕೊಳ್ಳಲಾಗುವುದೋ ಅಥವಾ ಇಲ್ಲವೋ ಎಂಬ ಪ್ರಶ್ನೆಯನ್ನು ಕೇಳಿದೆನು. ಅದಕ್ಕೆ, ತಮ್ಮ ಉತ್ತರ, ಆ ಸಂಬಂಧದಲ್ಲಿ ಏನನ್ನಾದರೂ ಹೇಳುವುದು ತಮ್ಮ ಕೆಲಸ ಅಲ್ಲವೆಂದೂ ಸದನದ ಕಾರ್ಯಕಲಾಪಗಳನ್ನು ವ್ಯವಸ್ಥೆಗೊಳಿಸುವುದು ಸರ್ಕಾರಕ್ಕೆ ಸೇರಿದ ಕೆಲಸ ಎಂದು. ಈಗ ಅಧಿವೇಶನದ ಸರಿಸುಮಾರು ಕೊನೆಯ ಗಳಿಗೆಯಲ್ಲಿ, ಅನೇಕ ಸದಸ್ಯರು ಗೈರು ಹಾಜರಾಗಿರುವಾಗ, ಇಂಥ ಸ್ವರೂಪದ ವಿಧೇಯಕದ ಪರಿಶೀಲನೆಯನ್ನು ಎತ್ತಿಕೊಳ್ಳುವುದು ಯಥೋಚಿತವಲ್ಲ. ಈಗಾಗಲೇ ಮಾತನಾಡುವ ಸದಸ್ಯರ ಜತೆ ನನ್ನ ದನಿಯನ್ನು ಕೂಡಿಸುತ್ತೇನೆ ಮತ್ತು ಈ ಸದನದ ಸದಸ್ಯರ ಹಕ್ಕುಗಳು ಮತ್ತು ವಿಶೇಷಾಧಿಕಾರಗಳ ರಕ್ಷಣೆಯ ಹೊಣೆಯು ತಮಗೆ ಸೇರಿದ್ದು ಎಂದು ಮತ್ತು ತಮ್ಮಲ್ಲಿ ಆ ಅಧಿಕಾರವು ನಿಹಿತವಾಗಿರುವುದೆಂದು ನಿವೇದಿಸಿಕೊಳ್ಳುತ್ತೇನೆ. ಆದ್ದರಿಂದ ಈ ಅಧಿವೇಶನದ ಕೊನೆಯ ಗಳಿಗೆಯಲ್ಲಿ ಮತ್ತು ಸದಸ್ಯರಿಗೆ ಸಾಕಷ್ಟು ನೋಟಿಸು ಕೊಡದೆ ಈ ವಿಧೇಯಕದ ಪರಿಶೀಲನೆ ಕೈಗೆತ್ತಿಕೊಳ್ಳುವುದು ಯಥೋಚಿತವಲ್ಲ. ಈ ಸಂಜೆ ಪರಿಶೀಲನೆ ಹಂತದಲ್ಲಿ ಇರುವ ಈ ವಿಧೇಯಕದ ಮೇಲಿನ ಚರ್ಚೆಯನ್ನಾದರೂ ಕನಿಷ್ಠಪಕ್ಷ ಮುಂದೂಡಬೇಕಾಗಿ ನಾನು ವಿನಂತಿಕೊಳ್ಳುತ್ತೇನೆ. ಹಾಗಾದರೆ ಈ ವಿಧೇಯಕದ ಕಲಾಪವನ್ನು, ನಾವು ಚಳಿಗಾಲದಲ್ಲಿ ಪುನಃ ಸೇರುವಾಗ ಅಂದರೆ ಮುಂದಿನ ಅಧಿವೇಶನದಲ್ಲಿ ಕೈಗೆತ್ತಿಕೊಳ್ಳಬಹುದು.

**ಸ್ಪೀಕರ್** : ಸದ್ಯಕ್ಕೆ ಈ ಪ್ರಶ್ನೆಗೆ ಅನುಮಾನ ಸಂಬಂಧಿಯಾದ ಪ್ರಶ್ನೆ. ಯಾಕೆಂದರೆ ಕಾನೂನು ಮಂತ್ರಿಗಳು ಚರ್ಚೆಯನ್ನು ಮುಂದುವರಿಸಲು ಪ್ರಸ್ತಾಪಿಸುತ್ತೇನೆ ಎಂದು ಹೇಳುತ್ತಿಲ್ಲ. ಅವರು ಹೇಳುವ ಪ್ರಕಾರ ವಿಧೇಯಕದ ಪರಿಶೀಲನಾ ಪ್ರಸ್ತಾವವನ್ನು ಚರ್ಚಿಸುವುದೇ ಆದರೆ ಯಾವಾಗ ಎಂಬ ಪ್ರಶ್ನೆಯನ್ನು ನಿರ್ಧರಿಸುವುದು ಪ್ರಾಥಮಿಕತಾ ಸಮಿತಿಯನ್ನು ಅವಲಂಬಿಸಿರುತ್ತದೆ. (ಅಡ್ಡಿ) ಚರ್ಚೆಗೆ ಸಂಬಂಧಿಸಿದಂತೆ, ಸದಸ್ಯರು ನ್ಯಾಯಸಮ್ಮತವಾದ ಮತ್ತು ಸಮಂಜಸವಾದ ಎಲ್ಲ ಬೇಡಿಕೆಗಳನ್ನು, ಸದನದಲ್ಲಿ ನನ್ನ ಅಧಿಕಾರದಲ್ಲಿ ಇರುವಷ್ಟರಮಟ್ಟಿಗೆ, ನಾನು ಒಪ್ಪಿಕೊಳ್ಳಲು ಪ್ರಯತ್ನಿಸುತ್ತೇನೆ. ಸರ್ಕಾರಿ ಕಲಾಪಗಳ ವ್ಯವಸ್ಥೆಗೆ ಸಂಬಂಧಿಸಿದ ಪ್ರಶ್ನೆಯ ಮೇಲೆ ಮಧ್ಯ ಪ್ರವೇಶ ಮಾಡಲು, ನನ್ನನ್ನು ಅಪೇಕ್ಷಿಸುವುದು ದೂರದ ಮಾತು ಎಂದು ಭಾವಿಸಿದ್ದೇನೆ. ಸರ್ಕಾರದವರೇ ತಮ್ಮ ಪ್ರಾಥಮಿಕತಾ ಕಲಾಪಗಳ ಬಗ್ಗೆ ಉತ್ತಮ ತೀರ್ಪುಗಾರರು; ಅದನ್ನು ಅವರೇ ತೀರ್ಮಾನಿಸುತ್ತಾರೆ. ಈ ನಿರ್ದಿಷ್ಟ ವಿಧೇಯಕಕ್ಕೆ ಸಂಬಂಧಪಟ್ಟ ಹಾಗೆ, ಸದನದಲ್ಲಿ ಹೇಳಿರುವುದರ ಹಿನ್ನೆಲೆಯಲ್ಲಿ, ಅವರಿಂದ ಇನ್ನೇನೂ ಬರಬೇಕಾಗಿಲ್ಲ ಎಂದು ನಾನು ಭಾವಿಸುತ್ತೇನೆ. ಅವರು ಸದಸ್ಯರ ಭಾವನೆಗಳಿಗೆ ಸ್ಪಂದಿಸುತ್ತಾರೆ ಎಂದು ನಂಬಿದ್ದೇನೆ. ಈ ವಿಷಯದ ಬಗ್ಗೆ ಇನ್ನು ಚರ್ಚೆ ಬೇಡ ಎಂದು ಭಾವಿಸುತ್ತೇನೆ. ನಾವು ಪರ್ಯಾಲೋಚನೆಯಲ್ಲಿರುವ ಪ್ರಸ್ತಾವದ ಬಗ್ಗೆ ಚರ್ಚೆ ಮುಂದುವರಿಸೋಣ.

**ಶ್ರೀ ಎಚ್. ವಿ. ಕಾಮತ್** (ಸಿ.ಪಿ. ಮತ್ತು ಬೆರಾರ್ : ಸಾಮಾನ್ಯ) : ಸ್ವಾಮೀ, ಇಲ್ಲಿ ಕಲಾಪಗಳ ವ್ಯವಸ್ಥೆಯ ಯಾವ ತೀರ್ಮಾನವು ಆಖೈರಾದುದು ಎಂದು ತಿಳಿಯಬಹುದೆ?

**ಸ್ಪೀಕರ್ :** ಸರ್ಕಾರಿ ಕಲಾಪಗಳಿಗೆ ಸಂಬಂಧಪಡುವಷ್ಟು ಮಟ್ಟಿಗೆ ಆಖೈರು ತೀರ್ಮಾನ ಸರ್ಕಾರದ್ದು. ಪ್ರಾಥಮಿಕತೆಗೆ ಸಂಬಂಧಿಸಿದಂತೆ ಕಲಾಪಗಳ ವ್ಯವಸ್ಥೆಗೂ ನನಗೂ ಯಾವುದೇ ಸಂಬಂಧವಿಲ್ಲ.

**ಸೇಠ್ ಗೋವಿಂದ ದಾಸ್ :** ಆಖೈರು ಅಧಿಕಾರ ನಿಮ್ಮಲ್ಲೇ ಇರುತ್ತದೆ. ಸದನದ ಮುಂದೆ ಮಂಡಿಸಲು ಅವರು ಏನೆಲ್ಲ ಬಗೆಯ ಕಲಾಪಗಳನ್ನು ತರಬಹುದು. ಆದರೆ ಅಂತಿಮ ಅಧಿಕಾರ ತಮ್ಮದೇ.

**ಸ್ಪೀಕರ್ :** ಸದ್ಯಕ್ಕೆ ಆ ಹೊಣೆಯನ್ನು ನನ್ನಲ್ಲಿ ನಿಹಿತಗೊಳಿಸುವುದು ಮಾನ್ಯ ಸದಸ್ಯರಿಗೆ ಅನುಕೂಲವೇ.

ಆದರೆ ಆ ಹೊಣೆ ನನ್ನ ಅಳವಿಗೆ ಮೀರಿದ ಭಾರ. ನಾನು ಸರ್ಕಾರಿ ಆಡಳಿತದ ವಿವರಗಳನ್ನು ಮತ್ತು ಅಗತ್ಯಗಳನ್ನು ಪೂರ್ತಿಯಾಗಿ ತಿಳಿದವನಲ್ಲ. ಈ ಬಗೆಯ ವಿಷಯಗಳಲ್ಲಿ ತಮ್ಮ ಕಲಾಪಗಳನ್ನು ಹೊಂದಿಸಿಕೊಳ್ಳಲು ಅವರು ಹೊಂದಿರುವ ವಿವೇಚನಾಧಿಕಾರದಲ್ಲಿ ನಾನು ಹಸ್ತಕ್ಷೇಪ ಮಾಡಬಹುದೇ ಹೇಗೆ ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯದ ಒತ್ತಡವನ್ನು ಸರ್ಕಾರವು ಅರಿತುಕೊಳ್ಳುವ ಹಾಗೆ ಮಾಡುವುದೇ ಉತ್ತಮ ಮಾರ್ಗ. ಆಗ ವಿಷಯಗಳು ಹೊಂದಾಣಿಕೆ ಆಗುತ್ತವೆ. ನಾನು ಏನೆಲ್ಲ ಮಾಡಬಹುದೆಂದರೆ, ಸಮಂಜಸವಾದ, ಸುಸೂತ್ರವಾದ ಚರ್ಚೆಗೆ ಏರ್ಪಾಟು ಮಾಡುವುದು. ಆ ದೃಷ್ಟಿಯಿಂದ ನನ್ನಿಂದ ಸಾಧ್ಯವಿರುವುದೆಲ್ಲವನ್ನೂ ಮಾಡುತ್ತೇನೆ.

**ಸೇಠ್ ಗೋವಿಂದ ದಾಸ್** : ನಿಮ್ಮ ಮುಖಾಂತರ ನಾವು ಸರ್ಕಾರಕ್ಕೆ ವಿನಂತಿ ಸಲ್ಲಿಸುತ್ತೇವೆ.

**ಸ್ಪೀಕರ್ :** ಹಾಗೆ ಮಾಡಲು ಮಾನ್ಯ ಸದಸ್ಯರಿಗೆ ಅನೇಕ ಮಾರ್ಗಗಳುಂಟು.

**ಶ್ರೀ ಅರುಣ ಚಂದ್ರ ಗುಹಾ** (ಪಶ್ಚಿಮ ಬಂಗಾಲ : ಸಾಮಾನ್ಯ) : ಈಗ ಸದನವನ್ನು ಯಾವಾಗ ಮುಂದೂಡಲಾಗುವುದು ಎಂದು ನಮಗೆ ತಿಳಿಸಬೇಕಾಗಿ ಅಪೇಕ್ಷಿಸುತ್ತೇವೆ. ಹಾಗೆ ತಿಳಿಸದೆಹೋದರೆ, ನಮಗೆ ನಿಮ್ಮ ಕಲಾಪಗಳನ್ನು ವ್ಯವಸ್ಥೆಗೊಳಿಸಿಕೊಳ್ಳುವುದು ಕಷ್ಟಸಾಧ್ಯವಾಗುತ್ತದೆ.

**ಸ್ಪೀಕರ್** : ಆ ವಿಷಯಕ್ಕೆ ಸಂಬಂಧಪಟ್ಟ ಹಾಗೆ : ನಾನು ವಸ್ತುಸ್ಥಿತಿಯನ್ನು ಆ ದಿನವೇ ಸ್ಪಷ್ಟಗೊಳಿಸಿದ್ದೇನೆ. ನಾನು ಮಾನ್ಯ ಪ್ರಧಾನಿಯವರಿಗೆ ಮಾಹಿತಿ ಕೊಡುವಂತೆ ಕೇಳಿಕೊಂಡೆನು. ಆಗ ಅವರು ಇದು ಒಂದು ಅಥವಾ ಎರಡು ದಿನ ಹೋಗಬಹುದು ಎಂದು ಹೇಳಿದರು. ಅವರಿಗೂ ಸಹ ಅದನ್ನು ಖಚಿತವಾಗಿ ಹೇಳುವುದು ಸಾಧ್ಯವಿಲ್ಲ.

ಪೂರ್ವಾಹ್ನ ೧೧ ಗಂಟೆಗೆ. ಯಾಕೆಂದರೆ ಏನಾದರೂ ಜರೂರು ವಿಷಯ ಬರುವ ಸಂಭವವಿರುತ್ತದೆ. ಅದನ್ನು ಚರ್ಚೆಗೆ ತೊಂದರೆ ಆಗದ ಹಾಗೆ ಕಲಾಪದಲ್ಲಿ ಸೇರಿಸಲು ಇಚ್ಛಿಸಬಹುದು. ಹಾಗೆ, ಆ ವಿಷಯ ಕೂಡ ಸದಸ್ಯರನ್ನು ಅವಲಂಬಿಸಿರುತ್ತದೆ. ಆದರೆ ನಾವು ಮಾತ್ರ ೯ನೇ ಏಪ್ರಿಲ್ ತರುವಾಯ ಕುಳಿತುಕೊಳ್ಳುವುದಿಲ್ಲ ಎಂದು ಹೇಳುತ್ತೇನೆ.

**ಶ್ರೀ ಅರುಣಚಂದ್ರ ಗುಹಾ :** ಅಂಥ ಪ್ರಸಂಗಗಳಲ್ಲಿ ಜರೂರು ವಿಷಯಗಳನ್ನು ಕೈಗೆತ್ತಿಕೊಳ್ಳಬಹುದು.

**ಸ್ಪೀಕರ್ :** ಜರೂರಿಗೆ ಸಂಬಂಧಪಟ್ಟ ಹಾಗೆ ಅದು ಅವರವರ ಅಭಿಪ್ರಾಯದ ಪ್ರಶ್ನೆ.

**ಮೌಲಾನಾ ಹಜರತ್ ಮೋಹಾನಿ** (ಯು.ಪಿ.: ಮುಸ್ಲಿಂ) : ಡಾ॥ ಅಂಬೇಡ್ಕರ್ ಅವರ ಈ ತೊಂದರೆಯನ್ನು ನಿವಾರಿಸಲು ನಾನು ಒಂದು ಸಲಹೆ ಮಾಡುತ್ತೇನೆ. ಸಾಮಾಜಿಕ ಸುಧಾರಣೆಯನ್ನು ಒಳಗೊಳ್ಳುವ ಯಾವುದೇ ಶಾಸನ ರಚನೆಯನ್ನು ಸರ್ಕಾರಿ ಕಲಾಪಗಳ ಭಾಗವನ್ನಾಗಿ ಮಾಡಬಾರದು. ಸಾಮಾಜಿಕ ಸುಧಾರಣೆಯನ್ನು ಒಳಗೊಂಡ ಈ ಬಗೆಯ ವಿಧೇಯಕವನ್ನು ಶ್ರೀಮತಿ ದುರ್ಗಾಬಾಯಿ ಅಥವಾ ಶ್ರೀಮತಿ ರೇಣುಕಾ ರೇ ಇವರು ಮಂಡಿಸುವುದನ್ನು ನಾನು ತಿಳಿಯಬಲ್ಲೆ. ಒಂದು ಸರ್ಕಾರಿ ವಿಧೇಯಕವನ್ನು ಒಲ್ಲದ ಸಾರ್ವಜನಿಕರ ಮೇಲೆ ಹೇರುವುದು ಖಂಡಿತವಾಗಿಯೂ ತರ್ಕಸಂಗತವಲ್ಲ, ವಿವೇಕಪೂರ್ಣವಲ್ಲ. ಆದ್ದರಿಂದ ನಾನು ನನ್ನ ಮಾನ್ಯ ಸ್ನೇಹಿತರಿಗೆ ಹೇಳುವುದಿಷ್ಟು: ನೀವು ನಿಮ್ಮಲ್ಲಿರುವ ಸಕಲ ಧೈರ್ಯವನ್ನು ತೆಗೆದುಕೊಂಡು ಮತ್ತು ವಿವೇಕವು ಶೌರ್ಯದ ಒಂದು ಭಾಗ ಎಂದು ಮನಗಾಣುತ್ತ ಈ ವಿಧೇಯಕದ ಪರಿಶೀಲನೆಯನ್ನು ಮುಂದೆ ಹಾಕಬೇಕು ಮತ್ತು ಸರ್ಕಾರಿ ವಿಧೇಯಕವನ್ನು ಹಿಂತೆಗೆದುಕೊಳ್ಳಬೇಕು. ಮತ್ತು ಸಾರ್ವಜನಿಕರ ಜತೆ ಸಮಾಲೋಚನೆ ನಡೆಸಿ, ಸಾಮಾಜಿಕ ಸುಧಾರಣೆಯನ್ನು ಒಳಗೊಂಡ ಇಂಥ ಕ್ರಮಗಳನ್ನು ದಿನಾ ತರುವ ಹಾಗೆ, ಸಾಮಾನ್ಯ ಸದಸ್ಯರು ಮುಂದೆ ಎಂದಾದರೊಂದು

ದಿನ ತರಲು ಅವಕಾಶ ಮಾಡಿಕೊಡಬೇಕು.

**ಸ್ಪೀಕರ್ :** ಮಾನ್ಯ ಸದಸ್ಯರು ಈ ಬಗ್ಗೆ ಇನ್ನೂ ತರ್ಕ ಮಾಡುವುದು ಬೇಡ. ಅವರು ಸಲಹೆ ಕೊಟ್ಟಿದ್ದಾರೆ. ಅಷ್ಟು ಸಾಕು.

**ಮಿ। ಮಹಮ್ಮದ್ ಇಸ್ಮಾಯಿಲ್ ಖಾನ್** (ಯು.ಪಿ. : ಮುಸ್ಲಿಂ) : ಮಾನ್ಯ ಮಂತ್ರಿಗಳು ಸದನಕ್ಕೆ ಹೇಳಿದ ಹಾಗೆ, ಈ ವಿಧೇಯಕದ ಬಗೆಗಿನ ಪ್ರಾಥಮಿಕತೆಯನ್ನು ಪ್ರಾಥಮಿಕತಾ ಸಮಿತಿಯು ನಿರ್ಧರಿಸುತ್ತದೆ. ಅವರು ಈ ವಿಧೇಯಕಕ್ಕೆ ಪ್ರಾಥಮಿಕತೆ ಬೇಕು ಎಂದು ಅಗ್ರಹಪಡಿಸುವರೋ ಇಲ್ಲವೊ ಎಂದು ತಿಳಿದುಕೊಳ್ಳುವ ಹಕ್ಕು ನಮಗೆ ಇದೆ; ಖಂಡಿತಾ ಇದೆಯಲ್ಲವೆ?

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್ :** ಇದಕ್ಕಿಂತ ಹೆಚ್ಚಿಗೆ ನಾನು ಇನ್ನೇನೂ ಹೇಳಲಾರೆ. ಸರ್ಕಾರಕ್ಕೆ ಈ ವಿಧೇಯಕವನ್ನು ದಿಢೀರ್ ವೋಟ್ ದ್ವಾರಾ ತೀರ್ಣಗೊಳಿಸಿಕೊಳ್ಳಬೇಕು ಎಂಬ ಉದ್ದೇಶವಿಲ್ಲ ಎಂದಷ್ಟೇ ಹೇಳಬಯಸುತ್ತೇನೆ.

**ಸ್ಪೀಕರ್ :** ಮಿ। ನಝೀರುದ್ದೀನ್ ಅಹಮ್ಮದ್ ಈಗ ತಮ್ಮ ಭಾಷಣ ಮುಗಿಸುತ್ತಾರೆ. ನಾನು ಭಾಷಣಗಳ ಮೇಲೆ ಸಮಯ ಮಿತಿ ಹೇರಲು ಬಯಸುವುದಿಲ್ಲ. ಅವರು ನಿನ್ನೆ ಇಡೀ ದಿವಸ ಮಾತನಾಡಿದ್ದಾರೆ ಮತ್ತು ಹಿಂದಿನ ಸಂದರ್ಭದಲ್ಲಿ ೪೮ ನಿಮಿಷ ಮಾತನಾಡಿದರೆಂದು ತೋರುತ್ತದೆ. ಒಟ್ಟು ತೆಗೆದುಕೊಂಡ ಸಮಯ ಕರಾರುವಾಕ್ಕಾಗಿ ಹೇಳುವುದಾದರೆ ೩ ಗಂಟೆ ೨೮ ನಿಮಿಷ ಆಗುತ್ತದೆ. ತೆಗೆದುಕೊಂಡ ಸಮಯವನ್ನು ಆಧರಿಸಿ ನಾನು ಅವರ ಭಾಷಣದ ಬೆಲೆ ಕಟ್ಟುತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ ಅವರು ಮಾಡಬೇಕಾದ ಕೆಲಸವೆಂದರೆ ಇಷ್ಟು: ಈ ಪ್ರಸ್ತಾವ ವಿಧೇಯಕವನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಕೋರುವ ಸಾಮಾನ್ಯ ಪ್ರಸ್ತಾವ ಮಾತ್ರ ಎಂಬ ಸಂಗತಿಯನ್ನು ತಮ್ಮ ಗಮನದಲ್ಲಿ ಇಟ್ಟುಕೊಳ್ಳಬೇಕು. ಆದರೆ ಪ್ರತಿಯೊಂದು ಖಂಡ ವಿವರಗಳ ವಿಶ್ಲೇಷಣೆ ಮಾಡುತ್ತ ಹೋದರೆ ಕ್ರಮಬದ್ಧವೂ ಅಲ್ಲ, ಯಥೋಚಿತವೂ ಅಲ್ಲ. ಮಾನ್ಯ ಸದಸ್ಯರ ತರ್ಕ, ನಾನು ನಿನ್ನೆ ತಿಳಿದುಕೊಂಡ ಪ್ರಕಾರ, ವಿಧೇಯಕದಲ್ಲಿ ಕೆಲವು ಮಹತ್ವಪೂರ್ಣ ಬದಲಾವಣೆಗಳನ್ನು ಮಾಡಲಾಗಿದೆ. ಮತ್ತು ಆ ಕಾರಣಕ್ಕಾಗಿ ಈ ವ್ಯವಹರಣೆಯನ್ನು ಹೊಸದಾಗಿ ಪರಿಶೀಲಿಸಬೇಕು ಅಥವಾ ಈ ವಿಷಯದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ಕೋರಬೇಕು. ಆ ಒಂದು ತರ್ಕವನ್ನು ವಿಕಾಸಗೊಳಿಸಿ, ವಿವರಿಸಿ ಹೇಳುವ ಸಲುವಾಗಿ ಅವರು ಪ್ರತಿಯೊಂದು ಖಂಡವನ್ನು ವಿಶ್ಲೇಷಿಸುತ್ತ, ಮಾಡಲಾದ ಪ್ರತಿ ಒಂದು ಬದಲಾವಣೆಯು ಮಹತ್ವಪೂರ್ಣ ಬದಲಾವಣೆ ಎಂದು ಸೂಚಿಸಬೇಕಾಗಿಲ್ಲ. ಅವರು ದೃಷ್ಟಾಂತ ರೂಪದಲ್ಲಿ, ನಿಜವಾಗಿಯೂ ಮಹತ್ವಪೂರ್ಣ ಬದಲಾವಣೆಗಳಾಗಿರತಕ್ಕ ಕೆಲವು ಉದಾಹರಣೆಗಳನ್ನು ತೋರಿಸಿಕೊಟ್ಟರೆ ಸಾಕು. ಸದ್ಯದ ಹಂತದಲ್ಲಿ ಅವರ ವಾದದ ಉದ್ದೇಶಕ್ಕಾಗಿ ಅಷ್ಟು ಮಾಡಿದರೆ ಸಾಕು ಎಂದು ನಾನು ಭಾವಿಸುತ್ತೇನೆ. ವಿಧೇಯಕವು ಖಂಡ ಖಂಡವಾಗಿ ಚರ್ಚೆಗೆ ಬಂದಾಗ, ಅವರು ತಾವು ಇಷ್ಟಪಡುವಂಥ ಯಾವುದೇ ತಿದ್ದುಪಡಿಯನ್ನು ಮುಂದಿಡಲು ಅವಕಾಶ ಇದ್ದೇ ಇರುತ್ತದೆ.

**ಮಿ। ನಝೀರುದ್ದೀನ್ ಅಹಮ್ಮದ್** (ಪಶ್ಚಿಮ ಬಂಗಾಲ : ಮುಸ್ಲಿಂ) : ಸ್ವಾಮೀ, ಆ ಸಲಹೆಗಾಗಿ ನಾನು ತಮಗೆ ಆಭಾರಿ ಆಗಿದ್ದೇನೆ. ನಾನು ನಿನ್ನೆ ಮಹತ್ವಪೂರ್ಣ ಬದಲಾವಣೆಗಳನ್ನು ಕುರಿತು ವಿವರಿಸಿದೆನು. ಮತ್ತು ಈ ದಿನ ಇನ್ನು ಕೆಲವೇ ಕೆಲವು ಮಹತ್ವಪೂರ್ಣ ಬದಲಾವಣೆಗಳನ್ನು ಕುರಿತು ವಿವರಿಸುತ್ತೇನೆ. (ಅಡ್ಡಿ)

**ಸ್ಪೀಕರ್ : ಈ** ತರಹದ ಅಡ್ಡಿಗಳು ಒಂದು ತೊಂದರೆಯನ್ನು ಉಂಟು ಮಾಡುತ್ತವೆ ಎಂದು ನಾನು ಭಾವಿಸುತ್ತೇನೆ. ಅವು ಮೂಲ ಪ್ರಶ್ನೆಯ ಅಂಶದಿಂದ ಲಕ್ಷ್ಯವನ್ನು ಬೇರೆಡೆಗೆ ಒಯ್ಯುತ್ತದೆ. ಆಮೇಲೆ

ಸಂಬಂಧಪಟ್ಟ ಭಾಷಣಕಾರನಿಗೆ ಎಚ್ಚರಿಕೆ ಕೊಟ್ಟು, ಚರ್ಚೆಯ ಸಾಂಗತ್ಯದ ಯಥೋಚಿತ ಸಂದರ್ಭಕ್ಕೆ ಕರೆತರಲು ನನಗೆ ಕಷ್ಟವಾಗುತ್ತದೆ. ಆದ್ದರಿಂದ ಯಾವುದೇ ಅಡ್ಡಿಗಳು ತರವಲ್ಲ. ಅಥವಾ ಅಡ್ಡ ಷರಾಗಳೂ ತರವಲ್ಲ. ಯಾಕೆಂದರೆ ಆ ಮೂಲಕ ವಿಷಯವನ್ನು ದಿಕ್ಕು ತಪ್ಪಿಸಿದಂತೆ ಆಗುತ್ತದೆ.

**ಮಿ। ನಝೀರುದ್ದೀನ್ ಅಹಮ್ಮದ್ :** ಸ್ವಾಮೀ, ನಾನು, ಇಲಾಖಾ ಕರಡಿನ ದ್ವಾರಾ ಸೇರಿಸಲಾದ ಇನ್ನೂ ಕೆಲವು ಮಹತ್ವಪೂರ್ಣ ಬದಲಾವಣೆಗಳ ಬಗ್ಗೆ ಮಾತನಾಡುತ್ತೇನೆ. ನಾನು ಮೂಲ ಅಧಿನಿಯಮದ ಭಾಗ IIIಕ್ಕೆ ಹೊರಳುತ್ತೇನೆ ಮತ್ತು ಇಲಾಖಾ ವಿಧೇಯಕದ ೧೨೬ನೇ ಖಂಡದ (೨)ನೇ ಉಪಖಂಡದತ್ತ ಗಮನ ಸೆಳೆಯುತ್ತೇನೆ. ಇದು ಅಂತಿಮ ವಿಧೇಯಕದ ೧೨೪ನೇ ಖಂಡದ (೨)ನೇ ಉಪಖಂಡಕ್ಕೆ ಸಂವಾದಿ. ಇನ್ನು, ಈ ಹೊಸ ಉಪಖಂಡದ ಮೂಲಕ ಒಂದು ಹೊಸ ತತ್ತ್ವವನ್ನು, ಎಂದರೆ ಆಸ್ತಿಯ ಯಾವುದೇ ವರ್ಗಾವಣೆಯು, ಅದರಿಂದ ಸಂದಾಯವಾಗತಕ್ಕ, ಯಾವುದೇ ಝೀವನಾಂಶದ ಹಕ್ಕನ್ನು ವಿಫಲಗೊಳಿಸುವಂತಿಲ್ಲ. ವಾಸ್ತವವಾಗಿ, ಝೀವನಾಂಶವನ್ನು ಆಸ್ತಿಯ ಮೇಲೆ ಒಂದು ಶಾಸನಬದ್ಧ ಚಾರ್ಜ್ ಆಗಿ ಮಾಡಲಾಗಿದೆ. ಒಳ್ಳೆಯದೋ ಅಥವಾ ಕೆಟ್ಟದ್ದೋ. ಇದು ಹೊಸ ವಿಷಯ. ಆಯ್ಕೆ ಸಮಿತಿಯು ಸೇರಿಸಿದ್ದಲ್ಲ. ಇಲಾಖಾ ಸಮಿತಿಯು ಸೇರಿಸಿದ್ದು.

ಆಮೇಲೆ ಮೂಲ ವಿಧೇಯಕದ ಭಾಗ III-A. ಉತ್ತರಾಧಿಕಾರಕ್ಕೆ ಸಂಬಂಧಿಸಿದ್ದು, ಇದರಲ್ಲಿನ ಖಂಡ ೧ ಮತ್ತು ೨ ಅತ್ಯಂತ ಮಹತ್ವಪೂರ್ಣ ಉಪಬಂಧಗಳು. ಇಲಾಖಾ ವಿಧೇಯಕದಲ್ಲಿ ಇವುಗಳನ್ನು ಸಂಪೂರ್ಣವಾಗಿ ಬಿಟ್ಟುಬಿಡಲಾಗಿದೆ. ಹಾಗೆಯೇ, ಅಂತಿಮ ವಿಧೇಯಕದಲ್ಲಿ ಕೂಡ. ಅವುಗಳನ್ನು ಕುರಿತು ಸವಿಸ್ತಾರವಾಗಿ ಹೇಳುವುದಿಲ್ಲ. ಅವುಗಳನ್ನು ಮಾನ್ಯ ಕಾನೂನು ಮಂತ್ರಿಗಳ ಪರ್ಯಾಲೋಚನೆಗೆ ಬಿಡುತ್ತೇನೆ.

ಆಮೇಲೆ ಇಲಾಖಾ ವಿಧೇಯಕದ ಒಂದು ೧೩೧ಕ್ಕೆ (ಅಂತಿಮ ವಿಧೇಯಕದ ಖಂಡ ೧೩೦ಕ್ಕೆ) ಬರುತ್ತೇನೆ. ಅದರ ಉಪಖಂಡ (೧) ಝೀವನಾಂಶಕ್ಕೆ ಸಂಬಂಧಿಸಿದ್ದು. ಹೊಸ ಸಾಮಗ್ರಿ. ಇದು ಅತ್ಯಂತ ಮಹತ್ವಪೂರ್ಣ ಬದಲಾವಣೆಯನ್ನು ಸೇರಿಸುತ್ತದೆ. ಪುನಃ ಇಲಾಖಾ ವಿಧೇಯಕದ ಖಂಡ ೧೩೩ (ಅಂತಿಮ ವಿಧೇಯಕದ ಖಂಡ ೧೩೨) ಕೆಲವು ಪರೀಕ್ಷಣಗಳನ್ನು ಗೊತ್ತುಪಡಿಸುತ್ತದೆ. ಆ ಮೂಲಕ ಅತ್ಯಂತ ಮಹತ್ವಪೂರ್ಣ ಸ್ವರೂಪದ ಹೊಸ ಬದಲಾವಣೆಯನ್ನು ಸೇರಿಸಲಾಗಿದೆ. ಈ ಖಂಡ ಉಪಖಂಡ (೨) ರ ಭಾಗ ಹೊಸ ಬದಲಾವಣೆ. ಇದು ಮೂಲ ವಿಧೇಯಕದ ಭಾಗ III-A ಇದರ ೬(೧) ಖಂಡಕ್ಕೆ ಸಂವಾದಿ.

ಆಮೇಲೆ, ಮೂಲ ವಿಧೇಯಕದ ಭಾಗ III-A, ಉಪಖಂಡ (g) ಮತ್ತು (h) ಭಾಗಗಳು ಸಹ ಪ್ರಮುಖ ಉಪಬಂಧಗಳು. ಅವುಗಳನ್ನು ಇಲಾಖಾ ವಿಧೇಯಕದಲ್ಲೂ ಅಂತಿಮ ವಿಧೇಯಕದಲ್ಲೂ ಸಂಪೂರ್ಣವಾಗಿ ಬಿಟ್ಟುಬಿಡಲಾಗಿದೆ. ಪುನಃ ಇಲಾಖಾ ವಿಧೇಯಕದ (೧೩೩(೨) ಖಂಡದ ಭಾಗಗಳು (g), (h) ಮತ್ತು (i) ಇವು ಬಹಳ ಮಹತ್ವದವು; ಸಂಪೂರ್ಣವಾಗಿ ಹೊಸತಾದವುಗಳು.

ಮೂಲ ವಿಧೇಯಕದ ಭಾಗ III-A ನಲ್ಲಿ ೬ನೇ ಖಂಡದ (೧)ನೇ ಉಪಖಂಡದ ಪರಂತುಕವನ್ನು ಇಲಾಖಾ ವಿಧೇಯಕದಲ್ಲಿ ಒಂದಿಷ್ಟು ತೆರಪು ಬಿಟ್ಟು ಬಿಡಲಾಗಿದೆ. ಹೀಗೆ ಲೋಪವಾದದ್ದು ಮಹತ್ವಪೂರ್ಣ ವಿಷಯ.

ಇಲಾಖಾ ವಿಧೇಯಕದ ೧೩೪ನೇ ಖಂಡದ (ಅಂತಿಮ ವಿಧೇಯಕದ ಖಂಡ ೧೩೩) ಉಪಖಂಡ (೨) ಅವಿವಾಹಿತ ಮಗಳ ವಿವಾಹ ವೆಚ್ಚಗಳಿಗೆ ಸಂಬಂಧಿಸಿದ್ದು. ಇದು ಹೊಸ ಉಪಬಂಧ ಮೂಲ ವಿಧೇಯಕದಲ್ಲಿ ಇದ್ದಿರಲಿಲ್ಲ.

ಆ ತರುವಾಯ ನಾನು ಮೂಲ ವಿಧೇಯಕದ ಭಾಗ III-A ಇದರ ಖಂಡ ೭ಕ್ಕೆ ಬರುತ್ತೇನೆ. ಇದು ಕುಟುಂಬದ ಮನೆಯ ಹೊರಗೆ ವಾಸ ಮಾಡುವ ವಿಧವೆಯ ಝೀವನಾಂಶಕ್ಕೆ ಸಂಬಂಧಿಸಿದ್ದು. ಇದನ್ನು ಇಲಾಖಾ ವಿಧೇಯಕದಲ್ಲೂ ಅಂತಿಮ ವಿಧೇಯಕದಲ್ಲೂ ಬಿಟ್ಟುಬಿಡಲಾಗಿದೆ.

ಆದ್ದರಿಂದ ಮೂಲ ವಿಧೇಯಕದ ಭಾಗ III-A ನಲ್ಲಿ ಮಹತ್ವಪೂರ್ಣ ಸ್ವಭಾವದ ಲೋಪ–ದೋಷಗಳು ಇವೆ. ನಾನು ಅವುಗಳನ್ನು ಕುರಿತು ಹೇಳುವ ಕಾರಣವೆಂದರೆ, ನಾನು ಮಾಡಲಾದ ಬೇರೆ ಬೇರೆ ಬದಲಾವಣೆಗಳನ್ನು ಮಾತ್ರ ಅವಲಂಬಿಸುತ್ತಿಲ್ಲ; ಆದರೆ ಆ ಬದಲಾವಣೆಗಳ ಒಟ್ಟು ಪರಿಣಾಮವನ್ನು ಅವಲಂಬಿಸುತ್ತೇನೆ.

ಆ ತರುವಾಯ, ನಾನು ಮೂಲ ವಿಧೇಯಕದ ಭಾಗ ೪ಕ್ಕೆ ಬರುತ್ತೇನೆ. ಅದು ವಿವಾಹ ಮತ್ತು ವಿವಾಹ–ವಿಚ್ಛೇದನ ಇವುಗಳಿಗೆ ಸಂಬಂಧಿಸಿದ್ದು. ಇಲಾಖಾ ಮತ್ತು ಅಂತಿಮ ವಿಧೇಯಕಗಳ ಭಾಗ ೨ಕ್ಕೆ ಸಂವಾದಿ. ನಾನು ಮುಖ್ಯ ಅಂಶಗಳನ್ನು ಮಾತ್ರ ಪರಿಶೀಲಿಸುತ್ತೇನೆ. ವಿವಾಹಕ್ಕೆ ಸಂಬಂಧಿಸಿದ ಉಪಬಂಧಗಳನ್ನು ಸಂಪೂರ್ಣವಾಗಿ ಮತ್ತು ಆಮೂಲಾಗ್ರವಾಗಿ ಬದಲಾಯಿಸಲಾಗಿದೆ. ಆದ ಕಾರಣ ಅವುಗಳನ್ನು ಸವಿಸ್ತಾರ ಪರ್ಯಾಲೋಚನೆಗೆ ಗುರಿಪಡಿಸುವ ಅಗತ್ಯವುಂಟು. ಸಾಂಸ್ಕಾರಿಕ ವಿವಾಹಗಳ ಸಂಬಂಧದಲ್ಲಿ, ಹಿಂದೂ ಸಮಾಜದಲ್ಲಿ ಪ್ರಚಲಿತವಿರುವ ಆ ವಿಧೇಯಕದಲ್ಲಿ, ಆ ವಿಧಿವಿಧಾನ ಪ್ರಕಾರಗಳು ಕೂಡಿ ಮತ್ತು ಆಚರಣೆಗಳಿಗೆ ಅನುಸಾರವಾಗಿ ಅನ್ವಯವಾಗಬೇಕೆಂದು ಗೊತ್ತುಪಡಿಸಲಾಗಿದೆ. ವಿವಾಹದ ಸಿಂಧುತ್ವಕ್ಕೆ ಸಂಬಂಧಪಟ್ಟಂತೆ, ಸಾಂಸ್ಕಾರಿಕ ವಿವಾಹವನ್ನು ನೋಂದಣಿ ಮಾಡಬೇಕು ಎಂಬ ಷರತ್ತಿನ ಬಗ್ಗೆ ಮೂಲ ವಿಧೇಯಕದಲ್ಲಿ ಉಪಬಂಧ ಇರಲಿಲ್ಲ. ಇಲಾಖಾ ವಿಧೇಯಕ ಅಂಥ ಬದಲಾವಣೆಗಳನ್ನು ಸೇರಿಸಿದೆ ಎಂದು ತೋರಿಸಿಕೊಡಲು ಪ್ರಯತ್ನಿಸುತ್ತೇನೆ. ಅದು ಅವರಿಗೆ ತಿಳಿದಿರಲಿಕ್ಕಿಲ್ಲ. ಆದರೆ ನನ್ನ ಪ್ರಕಾರ ಯಾವುದೇ ವಿವಾಹವನ್ನು ನೋಂದಣಿ ಮಾಡದಿದ್ದರೆ, ಅದು ಸಿಂಧು ಆಗುವುದಿಲ್ಲ ಎಂದು ಬದಲಾವಣೆಯ ಅರ್ಥ. ಮುಸ್ಲಿಂ ಸಮುದಾಯದ ಸಂದರ್ಭದಲ್ಲಿ ಮಾಡಲಾದ ಹಾಗೆ ನೋಂದಣಿಯನ್ನು ಐಚ್ಛಿಕ ಆಗಿ ಮಾಡಿಲ್ಲ. ಆದರೆ ಈ ಸಂದರ್ಭದಲ್ಲಿ ಇಲಾಖಾ ವಿಧೇಯಕದ ಮೂಲಕ ಹಿಂದಿನ ವಿಧಿ ವಿಧಾನಗಳ ಐಚ್ಛಿಕ ಸ್ವರೂಪದಲ್ಲಿ ಹಸ್ತಕ್ಷೇಪ ಮಾಡಲಾಗಿದೆ ಮತ್ತು ವಿವಾಹದ ಸಿಂಧುತ್ವವನ್ನು ನೋಂದಣಿ ಷರತ್ತಿಗೆ ಒಳಪಡಿಸಲಾಗಿದೆ. ನೋಂದಣಿ ಮಾಡದಿದ್ದರೆ, ನಾನೀಗ ತೋರಿಸಿಕೊಡಲು ಪ್ರಯತ್ನಿಸುವಂತೆ, ವಿವಾಹವು ಅಸಿಂಧು ಆಗುತ್ತದೆ.

ಮೂಲ ವಿಧೇಯಕದ ಭಾಗ IV ಈ ವಿಷಯವನ್ನು ಕುರಿತು ಹೇಳುತ್ತದೆ. ಖಂಡ ೨ರಲ್ಲಿ ಹಿಂದೂ ವಿವಾಹದ ಎರಡು ಪ್ರಕಾರಗಳು, ಎಂದರೆ ಸಾಂಸ್ಕಾರಿಕ ವಿವಾಹ ಮತ್ತು ಸಿವಿಲ್ ವಿವಾಹ ಹೀಗೆ ಇರತಕ್ಕದ್ದು ಎಂದು ನಿಯಮಿಸಿದ್ದುಂಟು. ಸಿವಿಲ್ ವಿವಾಹವನ್ನು ಹೊರತುಪಡಿಸಿ, ಸದ್ಯ ನಾನು ಆ ಬಗ್ಗೆ ವಿವರಿಸುತ್ತಿಲ್ಲ "ಹಿಂದೂ ವಿವಾಹದ ಎರಡು ಪ್ರಕಾರಗಳು ಎಂದರೆ – ಸಾಂಸ್ಕಾರಿಕ ವಿವಾಹ ಮತ್ತು ಸಿವಿಲ್ ವಿವಾಹ ಹೀಗೆ ಇರತಕ್ಕದ್ದು". ಮೂಲ ವಿಧೇಯಕದಲ್ಲಿ ಉಪಬಂಧಿಸಿದ್ದು ಹಾಗೆ. ಪ್ರಕಾರಗಳನ್ನು ಹಿಂದೂ ವಿವಾಹದ ಸುಪರಿಚಿತ ರೂಢಿ ಮತ್ತು ಆಚರಣೆಗಳು ಮತ್ತು ಸುಪರಿಚಿತ ಅತ್ಯಗತ್ಯಗಳು– ಇವುಗಳಿಗೆ ಬಿಡಲಾಗಿತ್ತು. ಆದರೆ ನೋಂದಣಿ ಬಗ್ಗೆ ಏನನ್ನೂ ಉಪಬಂಧಿಸಿರಲಿಲ್ಲ. ಸದನವು ಇಲಾಖಾ ವಿಧೇಯಕದಲ್ಲಿ ಸಂವಾದಿ ಉಪಬಂಧಗಳನ್ನು ದಯೆಯಿಟ್ಟು ಪರಿಶೀಲಿಸಬೇಕು. ಸಾಂಸ್ಕಾರಿಕ ಸ್ವರೂಪದ (ನಮೂನೆಯ) ವಿವಾಹವು, ವಿವಾಹದ ಒಂದು ಪ್ರಕಾರ ಎಂದಷ್ಟೇ ಹೇಳಿತ್ತು ಮತ್ತು ಉಳಿದ ವಿವರಗಳನ್ನು ಪಕ್ಷಕಾರರ ವಿವೇಚನೆಗೆ ಬಿಡಲಾಗಿತ್ತು.

ಇಲಾಖಾ ವಿಧೇಯಕದ ೬ನೇ ಖಂಡದಲ್ಲಿ, ಅಂದರೆ ಅಂತಿಮ ವಿಧೇಯಕದ ೬ನೇ ಖಂಡಕ್ಕೆ

ಸಂವಾದಿಯಾದ ಖಂಡದಲ್ಲಿ ಕೆಳಕಂಡ ಹಾಗೆ ಉಪಬಂಧಿಸಿದ್ದುಂಟು:

"ಇಲ್ಲಿ ಸ್ಪಷ್ಟವಾಗಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಹಿಂದೂಗಳ ನಡುವಣ ಯಾವುದೇ ವಿವಾಹವು, ಅದನ್ನು ಈ ಭಾಗದ ಉಪಬಂಧಗಳಿಗನುಸಾರ ಸಾಂಸ್ಕಾರಿಕ ವಿವಾಹ ಆಗಿ ಅಥವಾ ಸಿವಿಲ್ ವಿವಾಹ ಆಗಿ, ವಿಧಿವತ್ತಾಗಿ ನೆರವೇರಿಸಿದ ಹೊರತು ಸಿಂಧುವಾದ ವಿವಾಹ ಎಂದು ಮಾನ್ಯತೆ ಪಡೆಯತಕ್ಕದ್ದಲ್ಲ". ಮೂಲ ಉಪಬಂಧದ ಪ್ರಕಾರ, ವಿವಾಹವನ್ನು ಹಿಂದೂ ಸಮಾಜದಲ್ಲಿ ಸುಪರಿಚಿತವಾದ ವಾಡಿಕೆಯ ಸಾಂಸ್ಕಾರಿಕ ವಿಧಾನದಲ್ಲಿ ನೆರವೇರಿಸಬಹುದು. ಆದರೆ ಇಲಾಖಾ ವಿಧೇಯಕದಲ್ಲಿ, ಈ ಭಾಗಕ್ಕೆ ಅನುಸಾರವಾಗಿ ನೆರವೇರಿಸಿದ ಹೊರತು ಯಾವುದೇ ವಿವಾಹವು ಸಿಂಧು ಆಗತಕ್ಕದ್ದಲ್ಲ ಎಂದು ಹೇಳಲಾಗಿದೆ.

ನಾವು ಈ ಭಾಗದ ಉಪಬಂಧಗಳನ್ನು ಪರಿಶೀಲಿಸೋಣ. ನಾವು ಒಡನೆಯೇ ವಿಧೇಯಕದ ಇನ್ನೊಂದು ಭಾಗಕ್ಕೆ ಎಂದರೆ ಇಲಾಖಾ ವಿಧೇಯಕದ ಮತ್ತು ಅಂತಿಮ ವಿಧೇಯಕದ ೯ನೇ ಖಂಡಕ್ಕೆ ಸಂವಾದಿಯಾದ ಮೂಲ ವಿಧೇಯಕದ ಭಾಗ IV ರ ಖಂಡಕ್ಕೆ ಬರುತ್ತೇವೆ. (ಮಾನ್ಯ ಸದಸ್ಯರೊಬ್ಬರು : ಡಾ॥ ಅಂಬೇಡ್ಕರ್ ಆಚೆಗೆ ಹೋಗಿದ್ದಾರೆ ಎಂಬುದನ್ನು ಗಮನಿಸಿ) ಖಂಡ ೯ ಸಾಂಸ್ಕಾರಿಕ ವಿವಾಹಗಳ ನೋಂದಣಿಗೆ ಸಂಬಂಧಿಸಿದ್ದು. ಮೂಲ ವಿಧೇಯಕದಲ್ಲಿ ಹೀಗೆ ಹೇಳಲಾಗಿತ್ತು: "ಸಾಂಸ್ಕಾರಿಕ ವಿವಾಹಗಳ ರುಜುವಾತನ್ನು ಸುಗಮಗೊಳಿಸಲೋಸುಗ ಅಂಥ ವಿವಾಹಕ್ಕೆ ಸಂಬಂಧಿಸಿದಂಥ ವಿವರಗಳನ್ನು ಈ ಅಧ್ಯಾಯದ ಪ್ರಕರಣ ೬ರ ಅಡಿಯಲ್ಲಿ ಇಡತಕ್ಕ ಹಿಂದೂ ಸಿವಿಲ್ ವಿವಾಹ ಪ್ರಮಾಣ ಪತ್ರ ಪುಸ್ತಕದಲ್ಲಿ ನಿಯಮಿಸಲಾದ ರೀತಿಯಲ್ಲಿ ದಾಖಲಿಸಲು ನಿಯಮಗಳನ್ನು ಗೊತ್ತುಪಡಿಸಬಹುದು."

**ಬಾಬು ರಾಮನಾರಾಯಣ ಸಿಂಗ್** (ಬಿಹಾರ : ಸಾಮಾನ್ಯ) : ಮಾಹಿತಿಯ ಪ್ರಶ್ನೆಯನ್ನು ಎತ್ತಿ, ಸರ್ಕಾರದ ಪರವಾಗಿ ಚರ್ಚೆಯನ್ನು ಯಾರು ಆಲಿಸುತ್ತಿದ್ದಾರೆ ಎಂದು ಕೇಳಬಹುದೆ?

**ಸ್ಪೀಕರ್ :** ಯಾರಾದರೂ ಇದ್ದಿರಬೇಕಲ್ಲ!

**ಮಿ। ನಝೀರುದ್ದೀನ್ ಅಹಮ್ಮದ್ :** ಮಾನ್ಯ ಮಂತ್ರಿಗಳು, ಸೌಜನ್ಯದಿಂದ ಉಪಸ್ಥಿತರಿರಬೇಕು.

**ಶ್ರೀ ಬಿ.ಎಲ್. ಸೋಂಧಿ:** ಕಾನೂನು ಮಂತ್ರಿಗಳು – ಅದೋ ಬರುತ್ತಿದ್ದಾರೆ.

**ಮಿ। ನಝೀರುದ್ದೀನ್ ಅಹಮ್ಮದ್ :** ಮೂಲ ಖಂಡವು ರುಜುವಾತನ್ನು ಸುಗಮಗೊಳಿಸುವ ಉದ್ದೇಶಕ್ಕಾಗಿ ವಿವಾಹದ ವಿವರಗಳನ್ನು ರಿಜಿಸ್ಟರಿನಲ್ಲಿ ದಾಖಲಿಸುವ ಬಗ್ಗೆ ಸರ್ಕಾರವು ನಿಯಮಗಳನ್ನು ರಚಿಸಲು ಉಪಬಂಧ ಕಲ್ಪಿಸಿತ್ತು. ಅಂದರೆ ವಿವಾಹದ ಸಿಂಧುತ್ವದ ಪ್ರಶ್ನೆಯನ್ನು ಇದ್ದ ಹಾಗೆಯೇ ಇರಗೊಟ್ಟಿತ್ತು. ವಿವಾಹದ ವಿವರಗಳನ್ನು ಹಿಂದೂ ಸಿವಿಲ್ ವಿವಾಹ ಪ್ರಮಾಣ ಪತ್ರ ಪುಸ್ತಕದಲ್ಲಿ ದಾಖಲಿಸಬಹುದೆಂದು ಹೆಚ್ಚಿನ ಸೌಲಭ್ಯವನ್ನು ಒದಗಿಸಿತು. ಮತ್ತು ಆ ಬಗ್ಗೆ ನಿಯಮಗಳ ಮೂಲಕ ವ್ಯವಸ್ಥೆ ಮಾಡಬಹುದಾಗಿತ್ತು. ಇದು ರುಜುವಾತನ್ನು ಸುಗಮಗೊಳಿಸುವ ಸಲುವಾಗಿ ಮಾತ್ರ. ಇದು ಕಡ್ಡಾಯ ಷರತ್ತು ಆಗಿರಲಿಲ್ಲ. ಒಟ್ಟಾರೆ ಗೊತ್ತುಪಡಿಸಿದ್ದು ಒಂದು ವಾಡಿಕೆಯ ನಿಯಮವನ್ನು, ಅತ್ಯಂತ ಹಿತಕಾರಿಯಾದ ನಿಯಮವನ್ನು. ಏನೆಂದರೆ ವಿವರಗಳನ್ನು ರಿಜಿಸ್ಟರಿನಲ್ಲಿ ದಾಖಲಿಸಬಹುದು ಮತ್ತು ಆ ಬಗ್ಗೆ ನಿಯಮಗಳನ್ನು ಗೊತ್ತುಪಡಿಸಬಹುದು. ಅದು ರುಜುವಾತನ್ನು ಸುಗಮಗೊಳಿಸುವ ಸಲುವಾಗಿ ಮಾತ್ರ. ಅದು ವಿವಾಹದ ಸಿಂಧುತ್ವವನ್ನು ಬಾಧಿಸುವಂತೆಯೇ ಇಲ್ಲ. ವಾಸ್ತವವಾಗಿ ಯಾವ ವಿವಾಹದ ವಿವರಗಳನ್ನು ಈ ರಿಜಿಸ್ಟರಿನಲ್ಲಿ ದಾಖಲಿಸಿಲ್ಲವೋ ಆ ವಿವಾಹವು ಪರಿಪೂರ್ಣ ರೀತ್ಯಾ ಸಿಂಧುವೇ. ಆದರೆ ನೋಂದಣಿ ಮಾಡಿದ್ದರೆ, ಆ ಮೂಲಕ ವಿವಾಹದ ರುಜುವಾತಿನ ಬಗ್ಗೆ ಒಂದು ರೆಡಿಮೇಡ್ ಪದ್ಧತಿಯನ್ನು ಒದಗಿಸುತ್ತದೆ, ಮತ್ತು ಕಾನೂನು ನ್ಯಾಯಾಲಯವು ಅಂಥ ನಮೂದಿತ ಪ್ರಮಾಣಿತ ಪ್ರತಿಯನ್ನು ನ್ಯಾಯಿಕ ಗಮನಕ್ಕೆ

ತೆಗೆದುಕೊಳ್ಳಬಹುದು, ಮತ್ತು ಆ ಕಾರಣ ಬಹಳಷ್ಟು ಸಾಕ್ಷ್ಯವನ್ನು ಒತ್ತಾಯಿಸುವ ಅಗತ್ಯ ಇರಲಾರದು. ಆದರೆ ಇಲಾಖಾ ವಿಧೇಯಕದ ಸಂವಾದಿ ಖಂಡದಲ್ಲಿ ಅದು ಹೀಗೆ ಇದೆ: "ಯಾವುದೇ ಸಾಂಸ್ಕಾರಿಕ ವಿವಾಹದ ರುಜುವಾತನ್ನು ಸುಗಮಗೊಳಿಸುವ ಉದ್ದೇಶಕ್ಕಾಗಿ ಪ್ರಾಂತೀಯ ಸರ್ಕಾರಗಳು ನಿಯಮಗಳ ದ್ವಾರಾ ಕೆಳಕಂಡಂತೆ ಉಪಬಂಧಿಸಬಹುದು" (ಬಾಲದ ಕೊನೆಯಲ್ಲಿ ಬರುತ್ತೆ ನಂಜಿನ ಕಡಿತ)

"ಅಂಥ ವಿವಾಹಗಳಿಗೆ ಸಂಬಂಧಿಸಿದ ವಿವರಗಳನ್ನು ಹಿಂದೂ ವಿವಾಹ ಪ್ರಮಾಣ ಪತ್ರ ಪುಸ್ತಕದಲ್ಲಿ ದಾಖಲಿಸತಕ್ಕದ್ದು ......"

ವಾಸ್ತವವಾಗಿ ಕಡ್ಡಾಯವು ಅಲ್ಲಿಗೆ ಪೂರ್ತಿ ಆಗಲಿಲ್ಲ. ಇಲ್ಲಿಂದ ಅದೇ ಪ್ರಾರಂಭ ಆಗುತ್ತದೆ.

ಸ್ವಾಮೀ, ನಾವು ಆಮೇಲೆ ಇಲಾಖಾ ವಿಧೇಯಕದ ಖಂಡ (b) ಗೆ ಬರುತ್ತೇವೆ. ಮೂಲ ವಿಧೇಯಕದ ೬ನೇ ಖಂಡದ (೩)ನೇ ಉಪಖಂಡವು ಹೀಗೆ ಹೇಳುತ್ತದೆ:

"ಅಂಥ ನಮೂದು ಮಾಡುವುದು ಕಡ್ಡಾಯವಾಗತಕ್ಕದ್ದಲ್ಲ".

ಸ್ವಾಮೀ, ಇಲಾಖಾ ವಿಧೇಯಕದ ಸಂವಾದಿ ಭಾಷೆಯನ್ನು ಪರಿಶೀಲಿಸಬೇಕಾಗಿ ಕೇಳುತ್ತೇನೆ. ಮೂಲ ವಿಧೇಯಕದಲ್ಲಿ – ತಮ್ಮ ಅನುಮತಿ ಇದ್ದರೆ ಇನ್ನೊಮ್ಮೆ ಓದಿ ಹೇಳುತ್ತೇನೆ – ಹೀಗೆ ಹೇಳಿದೆ :

"ಅಂಥ ನಮೂದು ಮಾಡುವುದು ಕಡ್ಡಾಯವಾಗತಕ್ಕದ್ದಲ್ಲ".

**ಶ್ರೀ ಮಹಾವೀರ ತ್ಯಾಗಿ :** ವಿವಾಹದ ಪಕ್ಷಕಾರರು ರಿಜಿಸ್ಟ್ರಾರ್ ಅವರ ಕಚೇರಿಗೆ ಹೋಗುತ್ತಾರೆ ಎಂದು ಅರ್ಥವೆ?

**ಮಿ। ನಝೀರುದ್ದೀನ್ ಅಹಮ್ಮದ್ :** ಮೂಲ ವಿಧೇಯಕದ ಪ್ರಕಾರ ಅಂಥ ನಮೂದುಗಳನ್ನು ಮಾಡುವುದು ಕಡ್ಡಾಯವಲ್ಲ. ಅದು ಅತ್ಯಂತ ಸ್ಪಷ್ಟವಾಗಿದೆ. ಆದರೆ ನಾವು ಇಲಾಖಾ ವಿಧೇಯಕದ ಸಂವಾದಿ ಉಪಬಂಧವನ್ನು ಪರಿಶೀಲಿಸೋಣ.

"ಅಂಥ ನಮೂದುಗಳನ್ನು ಮಾಡುವುದು ಕಡ್ಡಾಯವಾಗತಕ್ಕದ್ದು".

**ಶ್ರೀ ಜಸ್ ಪತ್ ರಾಯ್ ಕಪೂರ್** (ಯು.ಪಿ. ಸಾಮಾನ್ಯ) : ಯಾವಸ್ಥಳದಲ್ಲಿ?

**ಮಿ। ನಝೀರುದ್ದೀನ್ ಅಹಮ್ಮದ್ :** ಆ ಬಗ್ಗೆ ಆಮೇಲೆ. "ಯಾವ ಸ್ಥಳ" ಎಂಬುದನ್ನು ಸಹ ನಮೂದಿಸಲಾಗಿದೆ. ಅದು ಅತ್ಯಂತ ಅನಾನುಕೂಲ ಸ್ಥಳಗಳಲ್ಲಿ!

ಅಂದರೆ, ಮೂಲ ಕಾನೂನು ಹೀಗಿತ್ತು : ನಿಯಮಗಳ ಮೂಲಕ ವಿವಾಹದ ವಿವರಗಳನ್ನು, ಆ ಕುರಿತು ರುಜುವಾತನ್ನು ಸುಗಮಗೊಳಿಸುವ ಉದ್ದೇಶಕ್ಕಾಗಿ ಪುಸ್ತಕದಲ್ಲಿ ದಾಖಲಿಸಬಹುದು, "ಆದರೆ ಹಾಗೆ ದಾಖಲಿಸುವುದು ಅಂಥ ನಮೂದು ಮಾಡುವುದು ಕಡ್ಡಾಯವಾಗತಕ್ಕದ್ದಲ್ಲ". ಆದರೆ ಇಲಾಖಾ ವಿಧೇಯಕದ ಪರಿಷ್ಕೃತ ಖಂಡದಲ್ಲಿ, "ವಿವರಗಳನ್ನು ದಾಖಲಿಸತಕ್ಕದ್ದು ಮತ್ತು ಅಂಥ ಪ್ರಕರಣಗಳಲ್ಲಿ ಹಾಗೆ ನಮೂದು ಮಾಡುವುದು ಕಡ್ಡಾಯವಾಗತಕ್ಕದ್ದು".

ಮತ್ತು ಆಮೇಲೆ, ಅದಕ್ಕು ಮಿಗಿಲಾಗಿ, ಇಲಾಖಾ ವಿಧೇಯಕದ ಖಂಡ ೯ರ ಉಪಖಂಡ (೨) ರಲ್ಲಿ ಕೆಳಕಂಡಂತೆ ಹೇಳಲಾಗಿದೆ:

"ಉಪ ಪ್ರಕರಣ ೪ರ ಅಡಿಯಲ್ಲಿ ನಿಯಮಗಳನ್ನು ರಚಿಸುವಾಗ ಪ್ರಾಂತೀಯ ಸರ್ಕಾರವು, ಅವುಗಳ ಉಲ್ಲಂಘನೆಯು ೧೦೦ ರೂಪಾಯಿವರೆಗೆ ಹೋಗುವ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದು."

ಆದರೆ ಕಡ್ಡಾಯದ ಅರ್ಥವು ನೋಂದಣಿ ಅಧಿಕಾರಿಗೆ ಅನ್ವಯವಾಗುವುದೋ ಅಥವಾ ಪಕ್ಷಕಾರರಿಗೆ

ಸಂಬೋಧಿಸಲಾದುದೋ ಎಂಬ ವಸ್ತುಸ್ಥಿತಿ ಸ್ಪಷ್ಟವಾಗಿಲ್ಲ. ಈ ಬಗ್ಗೆ ಇನ್ನು ಅಷ್ಟು ಆಮೇಲೆ.

**ಶ್ರೀ ಮಹಾವೀರ ತ್ಯಾಗಿ :** ನೀವು ಯಾವ ಖಂಡವನ್ನು ಉಲ್ಲೇಖಿಸುತ್ತಿದ್ದೀರ?

**ಮಿ। ನಝೀರುದ್ದೀನ್ ಅಹಮ್ಮದ್ :** ಇಲಾಖಾ ವಿಧೇಯಕದ ಖಂಡ ೯(೨) ಅನ್ನು. ಹಾಗೆಯೇ ಅಂತಿಮ ವಿಧೇಯಕ ಖಂಡ ೯(೨) ಅನ್ನು. ವಾಸ್ತವವಾಗಿ ಅದನ್ನು ಪಾಲಿಸಲು ತಪ್ಪುವವರಿಗೆ ಜುಲ್ಮಾನೆಯನ್ನು ವಿಧಿಸಲು ಪ್ರಾಂತೀಯ ಸರ್ಕಾರಗಳಿಗೆ ಅಧಿಕಾರ ಕೊಡುತ್ತದೆ. ಅಥವಾ ನೋಂದಣಿ ಮಾಡಲು ಅಥವಾ ದಾಖಲಿಸಲು ತಪ್ಪುವ ಪಕ್ಷಕಾರರು ಕೂಡ ಈ ಉಪಬಂಧದಲ್ಲಿ ಬರುತ್ತಾರೆ ಎಂಬ ಅಸ್ಪಷ್ಟ ಸಂದೇಹ. ಹಾಗೆ ಆ ವಿಷಯವನ್ನು ಅಸ್ಪಷ್ಟವಾಗಿ ಬಿಟ್ಟಿಲ್ಲ. ಅದನ್ನು ಆಮೇಲೆ ಸ್ಪಷ್ಟಗೊಳಿಸಿದ್ದುಂಟು.

**ಸ್ಪೀಕರ್ :** ವಿವಾಹದ ಸಿಂಧುತ್ವಕ್ಕೆ ಬಾಧಕವಿಲ್ಲ. ಹಾಗಾದರೆ, ಅಂಥ ಸಂದರ್ಭದಲ್ಲಿ ಮಹತ್ವಪೂರ್ಣ ಬದಲಾವಣೆ ಹೇಗೆ? ಅದು ವಿವರಗಳ ವಿಚಾರ ಅಷ್ಟೆ. ನಾವು ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವ ಸಂದರ್ಭದಲ್ಲಿ ಆ ಕುರಿತು ಮಾನ್ಯ ಸದಸ್ಯರು ಮಾತನಾಡುವುದೇ ಉಚಿತ.

**ಶ್ರೀ ಮಹಾವೀರ ತ್ಯಾಗಿ :** ಇದು ಮಹತ್ವದ ವಿಷಯ. ಸ್ವಾಮೀ, ಹಾಗಾದರೆ ಅದು ಭಾರೀ ಬದಲಾವಣೆ, ಪಕ್ಷಕಾರರಿಗೆ, ಮಾವನ ಮನೆಗೆ ಹೋಗುವುದಕ್ಕೆ ಬದಲಾಗಿ ರಿಜಿಸ್ಟ್ರಾರ್ ಅವರ ಮನೆಗೆ ಹೋಗುವಂತೆ ನಿರ್ದೇಶಿಸಬೇಕಾಗಬಹುದು.

**ಸ್ಪೀಕರ್ :** ಸದ್ಯದ ಚರ್ಚೆಯ ಅವಕಾಶ, ರಾವ್ ಸಮಿತಿಯು ಪ್ರಸ್ತಾಪಿಸಿದ ಮತ್ತು ಆಯ್ಕೆ ಸಮಿತಿಯು ಅಂಗೀಕರಿಸುವ ಶಾಸನದಲ್ಲಿ ಮಾಡಲಾದ ಬದಲಾವಣೆಗಳನ್ನು ಉಲ್ಲೇಖಿಸಿ. ನೋಂದಣಿಯ ಬಗೆಗಿನ ಒಂದು ಸಣ್ಣ ವಿವರವನ್ನು ಕಡ್ಡಾಯಗೊಳಿಸಲಾಗಿದೆ. ವಿವಾಹದ ಸಿಂಧುತ್ವಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಅದಕ್ಕೆ ಎಳ್ಳಷ್ಟೂ ಬಾಧಕವಾಗಿಲ್ಲ. ಆ ಬಗ್ಗೆ ನನಗೆ ಯಾವುದೇ ಚರ್ಚೆ ಬೇಡ. ಬದಲಾವಣೆಯು ಅಪೇಕ್ಷಣೀಯವೋ ಅಲ್ಲವೋ ಎಂದು ನಾನು ಹೇಳಲಾರೆನು. ಈಗಿನ ಚರ್ಚೆಯ ದೃಷ್ಟಿಯಿಂದ ಆ ಕುರಿತು ಮಾತಾಡುವುದು, ಪರಿಧಿಯ ಆಚೆಗಿನ ವಿಷಯವಾಗುತ್ತದೆ.

**ಮಿ। ನಝೀರುದ್ದೀನ್ ಅಹಮ್ಮದ್ :** ಆ ಸಂಬಂಧದಲ್ಲಿ ೮ ಮತ್ತು ಅಂತಿಮ ವಿಧೇಯಕದ ಮೇಲೆ ಒಂದೆರಡು ವಾಕ್ಯಗಳನ್ನು ಉಲ್ಲೇಖಿಸಲು ಇಷ್ಟಪಡುತ್ತೇನೆ. ಖಂಡ ೧೩೮ – ನಿಯಮಗಳನ್ನು ರಚಿಸಲು ಅಧಿಕಾರ – (೨) ಉಪಖಂಡ (ii) ಹೀಗೆ ಹೇಳುತ್ತದೆ:

**"**ಸಾಂಸ್ಕಾರಿಕ ವಿವಾಹಗಳನ್ನು ದಾಖಲಿಸತಕ್ಕ ಸಂದರ್ಭಗಳು ಮತ್ತು ಸ್ಥಳಗಳು ಮತ್ತು ಅದರ ಯಾವುದೇ ಉಲ್ಲಂಘನೆಗಾಗಿ ದಂಡನೆ**"**.

ಇದು ಕಡ್ಡಾಯ ನೋಂದಣಿಗಾಗಿ ಉಪಬಂಧಿಸುತ್ತದೆ. ಅದು ವಿವಾಹಕ್ಕೆ ಹೇಗೆ ಬಾಧಕ ಆಗುತ್ತದೆ ಎಂಬ ಪ್ರಶ್ನೆಗೆ ಬರುತ್ತೇನೆ.

**(ಮಾನ್ಯ ಸದಸ್ಯರೊಬ್ಬರು :** ಅದು ಪ್ರಾಂತೀಯ ಸರ್ಕಾರದ ವಿವೇಚನಾಧಿಕಾರಕ್ಕೆ ಸೇರಿದ್ದು.) ನಿಸ್ಸಂದೇಹವಾಗಿಯೂ ಅದು ಪ್ರಾಂತೀಯ ಸರ್ಕಾರಗಳ ವಿವೇಚನಾಧಿಕಾರಕ್ಕೆ ಸೇರಿದ್ದು. ಆದರೆ ಅದನ್ನು ಜಾರಿಗೊಳಿಸಲು ಸರ್ಕಾರಕ್ಕೆ ಇನ್ನೊಂದು ಅಧಿಕಾರವನ್ನು ಕೊಡಲಾಗಿದೆ.

ನಾನು ಪುನ: ಇಲಾಖಾ ವಿಧೇಯಕದ ೬ನೇ ಖಂಡಕ್ಕೆ ಬರುತ್ತೇನೆ. ಅದು ಅಂತಿಮ ವಿಧೇಯಕದ ೬ನೇ ಖಂಡಕ್ಕೆ ಸಂವಾದಿ.

**"**ಹಿಂದೂಗಳ ನಡುವಣ ಯಾವುದೇ ವಿವಾಹವನ್ನು, ಈ ಭಾಗದ ಉಪಬಂಧಗಳಿಗನುಸಾರ ಸಾಂಸ್ಕಾರಿಕ ವಿವಾಹ ಅಥವಾ ಸಿವಿಲ್ ವಿವಾಹ ಆಗಿ ವಿಧಿವತ್ತಾಗಿ ನೆರವೇರಿಸಿದ ಹೊರತು, ಅದನ್ನು

ಸಿಂಧುವಾದ ವಿವಾಹ ಎಂದು ಮನ್ನಣೆ ಪಡೆಯತಕ್ಕದ್ದಲ್ಲ."

ಮೂಲ ವಿಧೇಯಕವಲ್ಲದ ಖಂಡದ ಪ್ರಕಾರ ಈ ಔಪಚಾರಿಕತೆಗಳು ಅಗತ್ಯವಾಗಿರಲಿಲ್ಲ. ಇಲಾಖಾ ವಿಧೇಯಕದಲ್ಲಿನ "ಈ ಭಾಗದ ಉಪಬಂಧಗಳು ವಿವಾಹದ ಕಡ್ಡಾಯ ನೋಂದಣಿಯನ್ನು ಅಗತ್ಯಪಡಿಸುತ್ತವೆ. ವಾಸ್ತವವಾಗಿ ಸಾಂಸ್ಕಾರಿಕ ವಿವಾಹ ಮತ್ತು ಸಿವಿಲ್ ವಿವಾಹ ಇವೆರಡನ್ನು ಒಂದು ಪಾತಳಿಯ ಮೇಲೆ ತರಲಾಗಿದೆ. ಸಿವಿಲ್ ವಿವಾಹದಲ್ಲಿ ನೋಂದಣಿ ಕಡ್ಡಾಯವೇ. ಇಲಾಖಾ ವಿಧೇಯಕದ ೬ನೇ ಖಂಡದ ಪದ ಪ್ರಯೋಗದಲ್ಲಿ ಆದ ಬದಲಾವಣೆ ಮತ್ತು ಕಡ್ಡಾಯ ನೋಂದಣಿಯ ಅಗತ್ಯತೆ ಇವೆರಡರ ಒಟ್ಟು ಪರಿಣಾಮವೆಂದರೆ, ನೋಂದಣಿಯಾಗಿಲ್ಲದ ಯಾವುದೇ ವಿವಾಹವು – ಈ ಖಂಡದಲ್ಲಿ ಕಡ್ಡಾಯಗೊಳಿಸಲಾದಂತೆ ಯಾವುದರ ವಿವರಗಳನ್ನು ದಾಖಲಿಸಿಲ್ಲವೋ ಆ ವಿವಾಹವು – ಸಿಂಧುವಾದ ವಿವಾಹ ಅಲ್ಲ ಎಂದು ತೋರುವ ಹಾಗೆ ಮಾಡುತ್ತದೆ. ಈ ಭಾಗಕ್ಕೆ ಅನುಸಾರವಾಗಿ ನೆರವೇರಿಸಿದ ಹೊರತು ಯಾವುದೇ ವಿವಾಹವು ಸಿಂಧುವಾದ ವಿವಾಹ ಆಗತಕ್ಕದ್ದಲ್ಲ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಹಾಗೆಂತ ಎಲ್ಲಿದೆ?

**ಮಿ| ನಝೀರುದ್ದೀನ್ ಅಹಮ್ಮದ್** : ಅದು ನನ್ನ ಅರ್ಥವಿವರಣೆ. ಅದನ್ನು ನಾನು ಸದನದ ಪರ್ಯಾಲೋಚನೆಗಾಗಿ ನಿವೇದಿಸಿದ್ದೇನೆ. ವಾಸ್ತವವಾಗಿ ಈ ಪರಿಣಾಮವನ್ನು ತರುವಲ್ಲಿ ಅದು ಮಾನ್ಯ ಕಾನೂನು ಮಂತ್ರಿಗಳ ಮನಸ್ಸಿನಿಂದ ಅತ್ಯಂತ ದೂರದಲ್ಲಿ ಇರಬಹುದು. ವಿವಾಹಕ್ಕೆ ಸಂಬಂಧಿಸಿದ ಉಪಬಂಧಗಳು ಕಡ್ಡಾಯವಲ್ಲ, ಆದರೆ ಒಂದಿಷ್ಟು ಐಚ್ಛಿಕ ಎಂದು ತಮ್ಮ ಭಾಷಣದಲ್ಲಿ ಸ್ಪಷ್ಟಗೊಳಿಸಿದ್ದಾರೆ. ಬಹುಶ: ಪರಿಣಾಮವು ಉದ್ದೇಶಿತ ಆಗಿರಲಿಲ್ಲವೇನೋ. ಆದರೆ ಉದ್ದೇಶಿತ ಆಗಿರಲಿ ಅಥವಾ ಇಲ್ಲದಿರಲಿ, ಪರಿಣಾಮ ಒಂದೇ. ಈ ಭಾಗಕ್ಕೆ ಅನುಸಾರ ನೆರವೇರಿಸಿಲ್ಲದ ಯಾವ ವಿವಾಹವೂ ಸಿಂಧುವಾದ ವಿವಾಹ ಆಗತಕ್ಕದ್ದಲ್ಲ. ಇದಲ್ಲದೆ ಆ ಭಾಗದಲ್ಲಿ ಲೋಪದ ಬಗ್ಗೆ ಜುಲ್ಮಾನೆಯನ್ನು ವಿಧಿಸಲು ಉಪಬಂಧಿಸಲಾಗಿದೆ. ಸದನಕ್ಕೇ ಆಗಲಿ ಅಥವಾ ಅದರ ಕರ್ತೃವಿಗೇ ಆಗಲಿ ಈ ಅರ್ಥ ವಿವರಣೆಯನ್ನು ಒಪ್ಪಿಕೊಳ್ಳಲು ಎಷ್ಟೇ ಮನಸ್ಸಿಲ್ಲದಿದ್ದರೂ, ಅದು......, ಅದು ಅರ್ಥ ವಿವರಣೆಯ ಪ್ರಶ್ನೆ, ಮತ್ತು ಅದು ಭಾವನೆಗಳ ಪ್ರಶ್ನೆಯಲ್ಲ. ಪ್ರಶ್ನೆ ಎಂದರೆ ಈ ಅರ್ಥ ವಿವರಣೆ ಸಿಂಧುವೊ ಅಲ್ಲವೋ. ಸಿಂಧು ಆಗಿದ್ದರೆ, ಅದು ಮಹತ್ವಪೂರ್ಣ ಬದಲಾವಣೆಯನ್ನು ಸೇರಿಸುತ್ತದೆ. ಯಾವುದೇ ವಿವಾಹವು ಅದನ್ನು ನೋಂದಣಿ ಮಾಡದಿದ್ದರೆ ಅಸಿಂಧುವಾಗುತ್ತದೆ ಎಂದು ಪರೋಕ್ಷವಾಗಿಯಾದರೂ ಉಪಬಂಧಿಸುವುದೆಂದರೆ ಅದು ಅಪಾಯಕಾರೀ ಪ್ರಸ್ತಾವ ಆಗುತ್ತದೆ. ಮತ್ತು ಆ ಮೂಲಕ ಕಾನೂನಿನ ಉಲ್ಲಂಘನೆಗೆ ದಾರಿಯಾಗುತ್ತದೆ. ನೋಂದಣಿ ಅಧಿಕಾರಿಯು, ವಿವಾಹವಾಗುವ ಪಕ್ಷಕಾರರು ವಾಸಿಸುವ ಪ್ರದೇಶದಿಂದ, ಸುದೂರದಲ್ಲಿ, ತಲುಪಲು ಸಾಧ್ಯವಿಲ್ಲದ ಸ್ಥಳದಲ್ಲಿ ವಾಸಿಸಬಹುದು, ಮತ್ತು ನಮ್ಮ ದೇಶದ ನಾಗರಿಕತೆಯ ಈ ಹಂತದಲ್ಲಿ, ವಿಶೇಷವಾಗಿ ಹಿಂದುಳಿದ ಜನಸಮುದಾಯದವರಿಗೆ ಈ ಉಪಬಂಧವು ಅತ್ಯಂತ ಉತ್ಪೀಡನಕಾರಿಯೂ ಅರ್ಥಶೂನ್ಯವೂ ಆಗಬಹುದು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ಸ್ವಾಮೀ, ನನಗೆ ಅನುಮತಿ ಕೊಟ್ಟರೆ

**ಸ್ಪೀಕರ್ :** ವಾದದ ಗುಣಾವಗುಣದ ಬಗ್ಗೆ ಚರ್ಚೆ ಬೇಡ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಸ್ಪಷ್ಟೀಕರಣದ ಸಲುವಾಗಿ ಮಾತ್ರವೇ ಎದ್ದು ನಿಂತದ್ದು.

**ಸ್ಪೀಕರ್** : ಸ್ಪಷ್ಟೀಕರಣ ಮತ್ತು ಇನ್ನಷ್ಟು ಚರ್ಚೆ ಹೀಗೆ ಮಾಡುತ್ತ ಹೋದರೆ, ಭಾಷಣಕ್ಕೆ ಕೊನೆ ಇರಲಾರದು. ಪ್ರಶ್ನೆ ಎಂದರೆ ಮಾನ್ಯ ಸದಸ್ಯರು ತಮ್ಮ ಅರ್ಥ ವಿವರಣೆಯನ್ನು ಸಾದರಪಡಿಸುತ್ತಿದ್ದಾರೆ.

ಅದು ವಿವಾಹದ ಸಿಂಧುತ್ವವನ್ನು ಬಾಧಿಸುವುದಿಲ್ಲ ಎಂಬ ಸಂಗತಿಯತ್ತ ಅವರ ಗಮನ ಸೆಳೆದಿದ್ದೇನೆ. ಅವರು ಆ ವಾದ ಸೂತ್ರವನ್ನೇ ಹಿಡಿದು ಚರ್ಚೆಯನ್ನು ಮುಂದುವರಿಸಲು ಆಗ್ರಹಪಡಿಸಿದರೆ, ಅವರು ಹಾಗೆಯೇ ಮಾಡಬಹುದು. ಆ ಮೂಲಕ ಅವರ ಭಾಷಣವು ಮೊಟಕುಗೊಳ್ಳುತ್ತದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ಸ್ವಾಮೀ ನೀವು ನನಗೆ ಅನುಮತಿ ಕೊಟ್ಟರೆ, ಅವರು ಸ್ಪಷ್ಟೀಕರಿಸಬಹುದಾದ ಒಂದೇ ಒಂದು ಅಂಶವುಂಟು. ಖಂಡವು ಹೀಗೆ ಪ್ರಾರಂಭವಾಗುತ್ತದೆ "ಯಾವುದೇ ಸಾಂಸ್ಕಾರಿಕ ವಿವಾಹದ ರುಜುವಾತನ್ನು ಸುಗಮಗೊಳಿಸುವ ಉದ್ದೇಶಕ್ಕಾಗಿ ...."

**ಸ್ಪೀಕರ್** : ಆ ಪ್ರಶ್ನೆ ನನ್ನ ಮನಸ್ಸಿಗೆ ಸ್ಪಷ್ಟವಾಗಿದೆ. ಆದರೆ ಅವರಿಗೆ ಅದನ್ನು ನಾನು ಆ ರೂಪದಲ್ಲಿ ಕೇಳುತ್ತಿಲ್ಲ. ಅದು ವಿವಾಹದ ಸಿಂಧುತ್ವಕ್ಕೆ ಬಾಧಕ ಆಗುವುದೇ ಇಲ್ಲ ಎಂದು ಅವರಿಗೆ ತೋರಿಸಿಕೊಟ್ಟೆನು. ಆದರೂ ಬಾಧಿಸುತ್ತದೆ ಎಂದು ಅವರು ಇನ್ನೂ ಭಾವಿಸುತ್ತಾರೆ. ಅವರಿಗೆ ಮನವರಿಕೆ ಮಾಡಿಕೊಡುತ್ತ ಎಲ್ಲಿಯತನಕ ಹೋಗೋಣ. ಅವರು ಈಗ ಮುಂದುವರಿಸಲಿ. ಅಂದರೆ ಅವರ ನಿಲುವನ್ನು ತಿಳಿದುಕೊಳ್ಳಲು ನಮಗೆ ಅತ್ಯಂತ ಸಮೀಪದ ಮಾರ್ಗ. ಇಲ್ಲದೆ ಹೋದರೆ, ಅವರ ಸಂಗಡ ಪ್ರತಿ ಒಂದು ಉಪಬಂಧವನ್ನು ಚರ್ಚಿಸುತ್ತ ಹೋಗಬೇಕಾದೀತು. ಅವರು ಪ್ರತಿ ಒಂದು ಉಪಬಂಧದ ಸಂಬಂಧದಲ್ಲಿ ತಮ್ಮ ಅನುಮಾನವನ್ನು ನೀಡುತ್ತಾರೆ. ಮಾನ್ಯ ಸದಸ್ಯರು ಅವರ ಭಾಷಣವನ್ನು ಮೌನವಾಗಿ ಕೇಳುತ್ತಿರುವಾಗ ಅವರು ಅದರ ಅರ್ಥ ವಿವರಣೆಯನ್ನು ಅಂಗೀಕರಿಸುತ್ತಾರೆ ಎಂದು ಅರ್ಥವಲ್ಲ. ಅವರು ಈಗ ಮುಂದಿನ ಅಂಶವನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

**ಮಿ। ನಝೀರುದ್ದೀನ್ ಅಹಮ್ಮದ್** : ನಾನೀಗ ಇಲಾಖಾ ವಿಧೇಯಕದ ಖಂಡ ೮ಕ್ಕೆ ಬರುತ್ತೇನೆ.

**ಸ್ಪೀಕರ್** : ಮಾನ್ಯ ಸದಸ್ಯರು ಅಂತಿಮ ವಿಧೇಯಕಕ್ಕೆ ಉಲ್ಲೇಖ ಕೊಟ್ಟರೆ ಚೆನ್ನಾಗಿರುತ್ತಿತ್ತು. ಯಾಕೆಂದರೆ ಅಂತಿಮ ವಿಧೇಯಕ ಸದನದ ಮುಂದೆ ಇದೆ. ಉಲ್ಲೇಖ ಮಾಡಿದ ತರುವಾಯ ಮಾನ್ಯ ಸದಸ್ಯರು ಬದಲಾವಣೆಯನ್ನು ತೋರಿಸಿ ಕೊಡಬಹುದು. ನನಗೆ ಅವರ ವಾದವನ್ನು ಅನುಸರಿಸಲು ಸಾಧ್ಯವಾಗುತ್ತಿಲ್ಲ. ಅವರು ಒಂದೇ ಸಲಕ್ಕೆ ಮೂರೋ ನಾಲ್ಕೋ ವಿಧೇಯಕಗಳನ್ನು ಉಲ್ಲೇಖಿಸುತ್ತಿದ್ದಾರೆ.

**ಮಿ। ನಝೀರುದ್ದೀನ್ ಅಹಮ್ಮದ್** : ನಾನು ಮೂಲ ಅಧಿನಿಯಮದಿಂದ ಪ್ರಾರಂಭಿಸುತ್ತಿದ್ದೇನೆ. ಇದೇನೋ ಅಂತಿಮ ವಿಧೇಯಕದಲ್ಲೂ ೮ನೇ ಖಂಡವೇ. ಮೂಲ ವಿಧೇಯಕದ IVನೇ ಭಾಗದ ೪ನೇ ಖಂಡದಲ್ಲಿ ಹೀಗೆ ಹೇಳಿದೆ:

"ಒಂದು ಸಾಂಸ್ಕಾರಿಕ ವಿವಾಹವನ್ನು, ಅದಕ್ಕೆ ಪಕ್ಷಕಾರರು ಆಗಿರುವವರಲ್ಲಿ ಒಬ್ಬರ ವಾಡಿಕೆಯ ಧರ್ಮವಿಧಿಗಳ ಅಥವಾ ಧರ್ಮಾಚರಣೆಗಳಿಗೆ ಅನುಸಾರ ವಿಧಿವತ್ತಾಗಿ ನೆರವೇರಿಸಬಹುದು".

ಪರಿಷ್ಕೃತ ಕರಡಿನಲ್ಲಿ ಖಂಡ ೮, ಉಪಖಂಡ (೧) ಹೀಗೆ ಹೇಳುತ್ತದೆ:

"ಯಾವುದೇ ಸಾಂಸ್ಕಾರಿಕ ವಿವಾಹವನ್ನು ಅಂಥ ವಿವಾಹಕ್ಕೆ ಅಗತ್ಯವಾಗಿರತಕ್ಕ, ಆ ವಿವಾಹದ ಪಕ್ಷಕಾರರಲ್ಲಿ ಯಾರೇ ಪಕ್ಷಕಾರರ ವಾಡಿಕೆಯ ಧರ್ಮವಿಧಿಗಳ ಅಥವಾ ಧರ್ಮಾಚರಣೆಗಳಿಗೆ ಅನುಸಾರ ವಿಧಿವತ್ತಾಗಿ ನೆರವೇರಿಸಿದ್ದ ಹೊರತು, ಆ ವಿವಾಹವು ಪೂರ್ಣವಾಗತಕ್ಕದ್ದಲ್ಲ ಅಥವಾ ಆ ಪಕ್ಷಕಾರರಿಗೆ ಬಂಧನಕಾರಿ ಆಗತಕ್ಕದ್ದಲ್ಲ."

ಸ್ವಾಮೀ, ಇದು ತರ್ಕದ ಒಂದು ಅಂಶ ಎಂದು ನಾನು ಭಾವಿಸುವುದಿಲ್ಲ. ಹಾಗೆ ಭಾವಿಸಿದರೆ ಅದು ನನ್ನ ತಪ್ಪು. ಆದರೆ ನಾನು ನಿವೇದಿಸಬಯಸುವ ಅಂಶ ಎಂದರೆ ಅರ್ಥ ವಿವರಣೆಯು ಅಗತ್ಯ ತಾರ್ಕಿಕ ಪರಿಣಾಮ ಎಂದು ನಾನು ಒತ್ತಾಯಿಸುತ್ತಿಲ್ಲ. ಆದರೆ ಅದನ್ನು ಅರಿವಿಲ್ಲದೆಯೆ ಸೇರಿಸಲಾಗಿದೆಯೆಂದೂ

ಮತ್ತು ವಿವಾಹದ ಸಿಂಧುತ್ವದ ಮೇಲೆ ಸಂದೇಹದ ಒಂದಿಷ್ಟು ನೆರಳು ಬೀಳುವಂತಾಗಿದೆ ಎಂದೂ ನನಗನ್ನಿಸುತ್ತದೆ. ನೋಂದಣಿಯ ಆಧಾರದ ಮೇಲೆ ವಿವಾಹದ ಅಸಿಂಧುತ್ವದ ವಿರುದ್ಧ ಪ್ರತಿ ಒಬ್ಬ ಲಾಯರು, ನ್ಯಾಯಾಧೀಶ ಮತ್ತು ಮುತ್ಸದ್ದಿ ಇವರುಗಳ ಮನಸ್ಸಿನಲ್ಲಿ ಭಾವನೆ ಉಂಟಾಗಬಹುದು ಎಂದು ನನಗೆ ಗೊತ್ತು. ಆದರೆ ಅದೆಲ್ಲ ರಾಜಕೀಯ ಸಂಬಂಧಿ– ನಮ್ಮ ನೀತಿಯು (ಧೋರಣೆಯು) ಸಂಪೂರ್ಣವಾಗಿ ಕಾನೂನು ಸಂಬಂಧಿ ಮತ್ತು ಸಂವೈಧಾನಿಕ ಆಗಿರಬೇಕು. ಅರ್ಥ ವಿವರಣೆ ಏನು? ವಿವಾಹವನ್ನು ಈ ಹೊಸ ಉಪಬಂಧಗಳಿಗನುಸಾರ ನೆರವೇರಿಸದಿದ್ದರೆ, ವಿವಾಹವು ಅಸಿಂಧುವಾಗುತ್ತದೆ. ಆದ್ದರಿಂದ, ಈ ಉಪಬಂಧದ ನ್ಯಾಯಸಂಗತತೆಯ ಬಗ್ಗೆ ನಾವು ಒಪ್ಪಲಿ ಅಥವಾ ಒಪ್ಪದಿರಲಿ, ನನ್ನ ಅಲ್ಪಮತಿಯಿಂದ ಹೊಮ್ಮುವ ನಿರ್ಣಯ ಎಂದರೆ ವಿವಾಹದ ವಿವರಗಳನ್ನು ರಿಜಿಸ್ಟರಿನಲ್ಲಿ ದಾಖಲಿಸದಿದ್ದರೆ, ವಿವಾಹವೇ ಅಸಿಂಧು ಆಗುತ್ತದೆ. ಇದನ್ನು ನಾನು ಸದನದ ಪರ್ಯಾಲೋಚನೆಗಾಗಿ ನಿವೇದಿಸುತ್ತಿದ್ದೇನೆ.

ನಮೂದುಗಳನ್ನು ದಾಖಲಿಸುವುದಕ್ಕೆ ಸಂಬಂಧಿಸಿದ ನಮೂದುಗಳನ್ನು ದಾಖಲಿಸುವುದನ್ನು ಕಡ್ಡಾಯಗೊಳಿಸುವ ಉಪಬಂಧಗಳನ್ನು ನಾನು ಈಗಾಗಲೇ ಉಲ್ಲೇಖಿಸಿದ್ದೇನೆ.

**ಸ್ಪೀಕರ್** : ಅದನ್ನು ಅವರು ಹೇಳಿದ್ದಾರೆ ; ಪುನ: ಹೇಳಬೇಕಾಗಿಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್** : ಅದು ಪಕ್ಷಕಾರರಿಗೆ ಕಡ್ಡಾಯವೆ ಅಥವಾ ನೊಂದಣಿ ಅಧಿಕಾರಿಗೆ ಕಡ್ಡಾಯವೆ?

**ಸ್ಪೀಕರ್** : ಅದು ವಿವರಗಳಿಗೆ ಸಂಬಂಧಿಸಿದ ವಿಚಾರ – ಸದ್ಯಕ್ಕೆ ಅದನ್ನು ನೋಡಬೇಕಾಗಿಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್** : ಸರಿ, ಸ್ವಾಮಿ. (ಅಡ್ಡಿ)

**ಸ್ಪೀಕರ್** : ಆರ್ಡರ್, ಆರ್ಡರ್.

**ಮಿ। ನಝೀರುದ್ದೀನ್ ಅಹಮ್ಮದ್** : ನನ್ನ ಕಿವಿ ಚುರುಕು. ನನಗೆ ಕೇಳಿಸುತ್ತೆ. ಇದು ಒಳ್ಳೆಯ ಚರ್ಚೆಗೆ ಅನುಕೂಲವಲ್ಲ. ನನ್ನ ವಿದ್ವಾಂಸ ಸ್ನೇಹಿತರು ಸ್ವತ: ಉತ್ತಮ ಸಂಸದರು, ಹೀಗೆ ಇತರರ ಭಾಷಣಗಳನ್ನು ನಿರುತ್ಸಾಹಗೊಳಿಸಲು ಪ್ರಯತ್ನಿಸಬಾರದು. ಬ್ರಿಟಿಷರು ಇದ್ದಾಗ, ಅವರು ಹಿಂದಿನ ಪರಿಷತ್ತನ್ನು ಸಂಬೋಧಿಸಿ ಭಾಷಣ ಮಾಡುತ್ತಿದ್ದರು ಎನ್ನುವುದನ್ನು ಅವರು ಮರೆಯಬೇಕು. ಅವರು ಈ ಅಧಿಕಾರಾರೂಢವಾಗಿರುವ ಪಕ್ಷಕ್ಕೆ ಸೇರಿದವರು ಎಂಬುದನ್ನು ನೆನಪಿಡಬೇಕು. ಆದರೆ ನಾನು ಯಾವ ಪಕ್ಕಕ್ಕೂ ಸೇರಿದವನಲ್ಲ; ವಿರೋಧಿಸುತ್ತಿರುವ ಸ್ವತಂತ್ರ ವ್ಯಕ್ತಿ ಎಂಬುದನ್ನು ಸಹ ನೆನಪಿಡಬೇಕು.

**ಸ್ಪೀಕರ್** : ಈ ಚರ್ಚೆಯನ್ನು ಮುಂದುವರಿಸುವುದು ಬೇಡ.

**ಶ್ರೀ ಬಿ.ದಾಸ್** : ನಾವು ಬಾಯಿಮುಚ್ಚಿಕೊಂಡು ಇರಬೇಕು ಎಂದು ಅಪೇಕ್ಷಿಸುತ್ತೀರ?

**ಸ್ಪೀಕರ್** : ಶ್ರೀ ದಾಸ್ ಅವರೆ. ಅಂಥ ಸಂದರ್ಭಗಳಲ್ಲಿ ನಾವು ಕಿವುಡರಾಗಿರಬಹುದಲ್ಲ ಮತ್ತು ಮುಂದೆ ಸಾಗಬಹುದಲ್ಲ. ಚರ್ಚೆ ನಡೆಯುತ್ತಿರುವಾಗ ನಾನೂ ಅನೇಕ ಪಿಸುಮಾತುಗಳನ್ನು ಕೇಳುತ್ತಿರುತ್ತೇನೆ. ಆದರೆ ನಾನು ಆ ಕಡೆಗೆ ಗಮನ ಕೊಡುವುದಿಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್** : ಸ್ವಾಮೀ, ನೀವು ನಮಗಿಂತ ಹೆಚ್ಚು ನಿಜವಾಗಿಯೂ ಭಾಗ್ಯವಂತರು.

**ಸ್ಪೀಕರ್** : ನಾವು ಮುಂದೆ ಹೋಗೋಣ. ಮುಂದಿನ ಮಹತ್ವದ ಅಂಶ ಯಾವುದು?

**ಮಿ। ನಝೀರುದ್ದೀನ್ ಅಹಮ್ಮದ್** : ಈಗ ನಾನು ಇನ್ನೊಂದು ಭಾಗಕ್ಕೆ ಬರುತ್ತೇನೆ. ಅಪ್ರಾಪ್ತವಯಸ್ಕತೆ ಮತ್ತು ಪಾಲಕತ್ವ ಇವುಗಳಿಗೆ ಸಂಬಂಧಿಸಿದ ಮೂಲ ಅಧಿನಿಯಮದಲ್ಲಿರುವ ಭಾಗ ೫. ಅದರ ಖಂಡ ೩ ಅನ್ನು ಇಲಾಖಾ ವಿಧೇಯಕದಲ್ಲಿ ಮತ್ತು ಅಂತಿಮ ವಿಧೇಯಕದಲ್ಲಿ ಸಂಪೂರ್ಣವಾಗಿ ಬಿಟ್ಟು ಬಿಡಲಾಗಿದೆ.

ಆ ಖಂಡದ ವಿವರಗಳನ್ನು ಕುರಿತು ನಾನೀಗ ಹೇಳಬೇಕಾಗಿಲ್ಲ. ಅದು ಮಹತ್ವಪೂರ್ಣ ಖಂಡ; ಅದನ್ನು ಬಿಟ್ಟುಬಿಡಲಾಗಿದೆ. ಅರ್ಥಾತ್ ಮಹತ್ವಪೂರ್ಣ ಬದಲಾವಣೆ ಮಾಡಲಾಗಿದೆ. ಇದಲ್ಲದೆ ಇನ್ನು ಕೆಲವು ಮಹತ್ವದ ಬದಲಾವಣೆಗಳುಂಟು; ಅವುಗಳ ಬಗ್ಗೆ ಈಗ ವಿವರಿಸುವುದಿಲ್ಲ.

ಆಮೇಲೆ ನಾನು ದತ್ತು ಸ್ವೀಕಾರಕ್ಕೆ ಸಂಬಂಧಿಸಿದಂತೆ ಮೂಲ ವಿಧೇಯಕದಲ್ಲಿರುವ ಭಾಗ VIಕ್ಕೆ ಬರುತ್ತೇನೆ. ಆ ಭಾಗದ ಖಂಡಗಳು ೧ ಮತ್ತು ೨ ಇವುಗಳನ್ನು ಬಿಟ್ಟುಬಿಡಲಾಗಿದೆ. ಇಲಾಖಾ ವಿಧೇಯಕದ ಖಂಡ ೫೫ ರಲ್ಲಿ ಅಂತಿಮ ವಿಧೇಯಕದ ೫೫(೧) ಖಂಡದಲ್ಲಿ ಸಹ ಒಂದು ಉಪಖಂಡ (೩) ಇದೆ. ಇದು ಹೊಸ ಸೇರ್ಪಡೆ. ಹಾಗೆಯೇ, ಮೂಲ ವಿಧೇಯಕದ ಭಾಗ VI ಇದರಲ್ಲಿ ೧೯ನೇ ಖಂಡದ (೧)ನೇ ಉಪಖಂಡವನ್ನು ಬಿಟ್ಟುಬಿಡಲಾಗಿದೆ. ಸಂಪೂರ್ಣವಾಗಿ ಹೊಸತಾದ ವಿಭಿನ್ನವಾದ ಷರತ್ತುಗಳನ್ನು ಒಳಗೊಂಡ ಖಂಡವನ್ನು ಸೇರಿಸಲಾಗಿದೆ. ಇಲಾಖಾ ವಿಧೇಯಕದ ೬೮ನೇ ಖಂಡದಲ್ಲಿ, ಅಂದರೆ ಅಂತಿಮ ವಿಧೇಯಕದ ೬೮ನೇ ಖಂಡಕ್ಕೆ ಸಂವಾದಿ ಆದ ಖಂಡದಲ್ಲಿ, ಉಪಖಂಡ (೧) ಹೊಸ ಸೇರ್ಪಡೆ. ಎರಡೂ ವಿಧೇಯಕಗಳ ೬೮ನೇ ಖಂಡಕ್ಕೆ ಲಗತ್ತಿಸಿದ ಪರಂತುಕವೂ ಹೊಸತೇ. ಇಷ್ಟೇ ಅಲ್ಲದೆ, ಮೂಲ ವಿಧೇಯಕದ ೧೯ನೇ ಖಂಡದ (೩)ನೇ ಉಪಖಂಡವನ್ನು ಅಂತಿಮ ವಿಧೇಯಕದಲ್ಲಿ ಸಂಪೂರ್ಣವಾಗಿ ಬಿಟ್ಟುಬಿಡಲಾಗಿದೆ. ಹಾಗೆಯೇ ಮೂಲ ವಿಧೇಯಕದ ೨೧ನೇ ಖಂಡವನ್ನು – ಭಾಗ VI ಬಿಟ್ಟುಬಿಡಲಾಗಿದೆ. ಮತ್ತು ಹಾಗೆಯೇ, ಮೂಲ ವಿಧೇಯಕದ ಭಾಗ VI – ಇದರಲ್ಲಿರುವ ೨೫ನೇ ಖಂಡವನ್ನು ಎರಡು ಖಂಡಗಳು ಮತ್ತು ಇತರ ಎರಡು ಭಾಗಗಳೂ ಸೇರಿದಂತೆ, ಸಂಪೂರ್ಣವಾಗಿ ಬಿಟ್ಟುಬಿಡಲಾಗಿದೆ.

ಇವು ಇಲಾಖಾ ವಿಧೇಯಕದ ಮೂಲಕ ಮಾಡಲಾದ ಮಹತ್ವಪೂರ್ಣ ಬದಲಾವಣೆಗಳು ಎಂದು ನಿವೇದಿಸುತ್ತೇನೆ. ಕೆಲವರು ಮಾನ್ಯ ಸದಸ್ಯರಿಗೆ, ಇಲಾಖಾ ವಿಧೇಯಕದಲ್ಲಿ ಮಹತ್ವಪೂರ್ಣ ಬದಲಾವಣೆಗಳನ್ನು ಮಾಡಲಾಗಿದೆ ಎಂಬ ಬಗ್ಗೆ ಅರಿವುಂಟಾದರೂ ಹಾಗೆ ಆಗಲಿಕ್ಕೆ, ಆ ತರುವಾಯ, ಮಹತ್ವಪೂರ್ಣ ಬದಲಾವಣೆಗಳು ಆಗಿಲ್ಲ ಎಂಬುದಾಗಿ ಕೊಟ್ಟ ಗ್ಯಾರಂಟಿಯು ಅದಕ್ಕೆ ಕಾರಣವಾಗಿರಬಹುದೇನೋ. ವಾಸ್ತವವಾಗಿ, ಅವರ ಗಮನವನ್ನು ಅದರತ್ತ ನಿರ್ದಿಷ್ಟವಾಗಿ ಸೆಳೆದಿರಲಿಲ್ಲವೇನೋ. ಅದು ಅವರು ಈ ಎಲ್ಲ ವಿವರಗಳನ್ನು ಪೂರ್ಣವಾಗಿ ಪರ್ಯಾಲೋಚಿಸಿರಲಾರರು ಎಂಬ ಬಗೆಗಿನ ಅಪಾಯವೂ ಇಲ್ಲದಿಲ್ಲ. ಅವರು ಮೂಲ ವಿಧೇಯಕಕ್ಕೆ ತಮ್ಮ ಗಮನವನ್ನು (ಲಕ್ಷ್ಯವನ್ನು) ಸೀಮಿತಗೊಳಿಸಿ, ಖಂಡ ಖಂಡವಾಗಿ ಮುಂದುವರಿದಿದ್ದರೆ ಪರಿಶೀಲಿಸುತ್ತ ಹೋಗಿದ್ದರೆ ಅಥವಾ ಮೊದಲು ಸಭೆ ಸೇರಿ ಇಲಾಖೆಗೆ ವಿಧೇಯಕವನ್ನು ತಯಾರಿಸಬೇಕೆಂದು ನಿರ್ದೇಶನ ಕೊಟ್ಟಿದ್ದರೆ ಅಂಥ ಸನ್ನಿವೇಶ ಒದಗುತ್ತಿರಲಿಲ್ಲ.

**ಸ್ಪೀಕರ್ :** ಮಾನ್ಯ ಸದಸ್ಯರು ಈಗಾಗಲೇ ಹೇಳಿರುವ ವಿಷಯವನ್ನು ಮತ್ತೆ ಹೇಳುತ್ತಿದ್ದಾರೆ. ನಿನ್ನೆ ಇದೆಲ್ಲವನ್ನೂ ಅವರು ನಿರೂಪಿಸಿದ್ದುಂಟು.

**ಮಿ। ನಝೀರುದ್ದೀನ್ ಅಹಮ್ಮದ್** : ನಾನು ವಿಷಯಗಳನ್ನು, ಆಧಾರವಾದ ವಿಷಯಗಳನ್ನು ಪುನಃ ಹೇಳಲು ಇಷ್ಟಪಡುವುದಿಲ್ಲ. ಈ ಪರಿಸ್ಥಿತಿಗಳಲ್ಲಿ ನನ್ನ ನಿವೇದನೆಯೇನೆಂದರೆ: ಸರಳ ಅಂಶವೆಂದರೆ, ಇದು ಅತ್ಯಂತ ಮಹತ್ವಪೂರ್ಣ ವಿಷಯ. ಈ ಮೂಲಕವೇ ವಿಧೇಯಕದ, ಆಯ್ಕೆ ಸಮಿತಿದ್ವಾರಾ ವಿಧೇಯಕದ ನ್ಯಾಯಸಂಗತವಾದ ಮತ್ತು ಸಂಪೂರ್ಣವಾದ ಪರ್ಯಾಲೋಚನೆ ಆಗುವಲ್ಲಿ ಪ್ರತಿಕೂಲ ಪರಿಣಾಮ ಉಂಟಾಗಿದೆ.

ನಾನು ಆಯ್ಕೆ ಸಮಿತಿಯ ಸದಸ್ಯರನ್ನು ಕುರಿತು ಯಾವುದೇ ದೂಷಣೆ ಮಾಡುತ್ತಿಲ್ಲ. ಆದರೆ ಖಂಡಗಳ ಯಥೋಚಿತ ತುಲನೆಮಾಡದೆ ಆಗಿರುವ ಎಲ್ಲ ಬದಲಾವಣೆಗಳನ್ನು ಅರಸುತ್ತ ಹೋಗಲು

ಆಯ್ಕೆ ಸಮಿತಿಗೆ ಅತ್ಯಂತ ಕಷ್ಟ ಆಗುತ್ತದೆ ಎಂದು ಹೇಳಬಯಸುತ್ತೇನೆ.

ಆಮೇಲೆ ನಾವು ಈ ವಿಧೇಯಕಕ್ಕೆ ಸಂಬಂಧಿಸಿದ ಇತರ ವಿಷಯಗಳಿಗೆ ಬರುತ್ತೇವೆ. ವಾರಸಾ ಪ್ರಶ್ನೆಯು ಬಹುಕಾಲದಿಂದಲೂ ದೇಶದ ಜನಸಮುದಾಯದ ಮನಸ್ಸನ್ನು ಪ್ರಕ್ಷುಬ್ಧಗೊಳಿಸುತ್ತಿದೆ. ನನಗೆ ಅನಿಸುವ ಹಾಗೆ, ಮಗಳ ಸ್ಥಾನದ ವಿಷಯವು ವಿಧೇಯಕದಲ್ಲಿನ ಅತ್ಯಂತ ವಿವಾದಾತ್ಮಕ ಉಪಬಂಧ. ವಾಸ್ತವವಾಗಿ, ನಾನು ಯಾವುದನ್ನು ನನ್ನ ಮುಸ್ಲಿಂ ಸೋದರಿಯರಿಗೆ ಕೊಟ್ಟಿರುವೆನೋ ಅದನ್ನು ನನ್ನ ಹಿಂದೂ ಸೋದರಿಯರಿಗೆ ಯಾಕೆ ನಿರಾಕರಿಸುತ್ತೇನೆ ಎಂದು ನನ್ನನ್ನು ಕೇಳುತ್ತಿದ್ದಾರೆ. ಅದಕ್ಕೆ ಉತ್ತರ ಸರಳ. ಮುಸ್ಲಿಂ ಕಾನೂನಿನ ಅಡಿಯಲ್ಲಿ ಮಗಳಿಗೆ ಒಂದು ಪಾಲು ಕೊಡಲಾಗಿದೆ. ಆ ಕಾನೂನಿನ ತಿಳಿವಳಿಕೆಯ ವಿಚಾರವನ್ನು ನಾವು ಪ್ರಶ್ನಿಸುವಂತಿಲ್ಲ. ಆ ಕಾನೂನನ್ನು, ಅದನ್ನು ಸಮರ್ಥಿಸುವಂಥ, ಚಾರಿತ್ರಿಕ, ಸಾಮಾಜಿಕ ಮತ್ತು ಇತರ ಪರಿಸ್ಥಿತಿಗಳ ಜೊತೆಗೆ ನಾವು ಪರಿಭಾವಿಸಬೇಕಾಗುತ್ತದೆ. ಮುಸ್ಲಿಂ ಸಮುದಾಯ ಕಳೆದ ೧೩೫೦ ವರ್ಷಗಳಿಂದಲೂ ಸಹಿಸಿಕೊಂಡು ಬಂದ ಮತ್ತು ಅಂಗೀಕರಿಸಿರತಕ್ಕ ಒಂದು ಬಗೆಯ ನ್ಯಾಯ. ಆದರೆ ನಮ್ಮ ಹಿಂದೂ ಸೋದರಿಯರು ವಿಭಿನ್ನ ಪದ್ಧತಿಯ ಅಡಿಯಲ್ಲಿ ತಮ್ಮ ದೈವವನ್ನು ಸುಮಾರು ಮೂರು ನಾಲ್ಕು ಸಾವಿರ ವರ್ಷಗಳಿಂದಲೂ ಸಹಿಸುತ್ತ ಬಂದಿದ್ದಾರೆ. ವಾಸ್ತವವಾಗಿ ಎರಡು ವಿಭಿನ್ನ ಕಾನೂನು ಪದ್ಧತಿಗಳು ವಿಷಯವನ್ನು ವಿಭಿನ್ನ ದೃಷ್ಟಿಕೋನಗಳಿಂದ ನೋಡುತ್ತವೆ. ಮುಸ್ಲಿಂ ಕಾನೂನಿನ ಅಡಿಯಲ್ಲಿ ವಾರಸಾ ಪದ್ಧತಿಯನ್ನು ಹಳೆಯ ಅರಬ್ಬಿ ರೂಢಿಗಳಿಂದ ತೆಗೆದುಕೊಳ್ಳಲಾಯಿತು. ಅದು ಉಂಟಾದದ್ದು ಸ್ಪಷ್ಟವಾದ ಮತ್ತು ಅನಿವಾರ್ಯ ಪರಿಸ್ಥಿತಿಗಳ ನಿಮಿತ್ತ. ಅರೇಬಿಯದಲ್ಲಿ ಸ್ಥಿರಾಸ್ತಿಗಳು ಇರಲಿಲ್ಲ; ಎಲ್ಲೆಲ್ಲೂ ಮರುಭೂಮಿಯೇ. ಆಸ್ತಿಯು ಚರಸೋತ್ತುಗಳನ್ನು ಮಾತ್ರ ಒಳಗೊಂಡಿತ್ತು. ಒಬ್ಬ ಮನುಷ್ಯನು ಮೃತನುದರೆ.........

**ಮಿ। ತಾಜಾಮುಲ್ ಹುಸೇನ್** (ಬಿಹಾರ : ಮುಸ್ಲಿಂ) : ವಾರ್ತಾ ಪ್ರಶ್ನೆಯ ಮೇಲೆ ಕೇಳಬಹುದೆ? ಮಾನ್ಯ ಸದಸ್ಯರು ಅರೇಬಿಯದಲ್ಲಿ ಸ್ಥಿರಾಸ್ತಿ ಇರಲಿಲ್ಲ ಎಂದು ಹೇಳುತ್ತಾರೆ. ಮನೆಗಳ ವಿಚಾರ ಏನು?

**ಮಿ। ನಝೀರುದ್ದೀನ್ ಅಹಮ್ಮದ್** : ಪ್ರಶ್ನೆ ಅನಗತ್ಯ. ನಾನು ಮಾನ್ಯ ಸದಸ್ಯರಿಗೆ ಜರ್ಮನ್ ವಿಶೇಷಜ್ಞರಾದ ವಾನ್. ಕ್ರೆಮರ್ ಅವರ "Orient Under Califs" ಎಂಬ ಅತ್ಯಂತ ವಿದ್ವತ್‌ಪೂರ್ಣ ಪುಸ್ತಕವನ್ನು ಓದುವಂತೆ ಕೇಳಿಕೊಳ್ಳುತ್ತೇನೆ. ಆಗ ಗ್ರಂಥದಲ್ಲಿ ಅಗತ್ಯ ಮಾಹಿತಿ ದೊರೆಯುತ್ತದೆ. ಮಿ। ಖುದಾಭಕ್ಷ್ ಅವರು ಮಾಡಿದ ಭಾಷಾಂತರವುಂಟು. ಆ ವಿಷಯವನ್ನು ಕುರಿತಂತೆ ಅದು ಒಂದೇ ಒಂದು ಪುಸ್ತಕ. ಅದರಲ್ಲಿ ತಜ್ಞರ, ವಿಶೇಷಜ್ಞರ ದೃಷ್ಟಿಕೋನದಿಂದ ವಿಷಯ ವಿವೇಚನೆ ಮಾಡಲಾಗಿದೆ. ಆ ಕುರಿತು ಇನ್ನಷ್ಟು ವಿವರಣೆಗಾಗಿ ಆ ಗ್ರಂಥವನ್ನು ಓದಬೇಕು ಎಂದು ವಿನಯಪೂರ್ವಕವಾಗಿ ನನ್ನ ಮಾನ್ಯ ಸ್ನೇಹಿತರನ್ನು ಕೇಳಿಕೊಳ್ಳುತ್ತೇನೆ. ಆದರೆ ಅದರ ವಿವರಗಳನ್ನೆಲ್ಲ ಸದನದಲ್ಲಿ ನಿರೂಪಿಸುವುದು ನನ್ನ ಉದ್ದೇಶವಲ್ಲ. ಕಾರಣವೆಂದರೆ ಅದೆಲ್ಲ ಇಲ್ಲಿ ಸುಸಂಗತವಲ್ಲ.

ನನ್ನ ವಿದ್ವಾಂಸ ಸ್ನೇಹಿತರು ಅರೇಬಿಯದಲ್ಲಿ ಸ್ಥಿರಾಸ್ತಿಯು ಇಲ್ಲದಿರುವ ಸಂಬಂಧದಲ್ಲಿ ಎತ್ತಿದ ಪ್ರಶ್ನೆಯು ಉದ್ಭವಿಸುವುದಿಲ್ಲ ಎಂಬುದಾಗಿ ನಾನು ವಿವರಿಸುತ್ತಿದ್ದೆ. ಅರೇಬಿಯದಲ್ಲಿ, ಖಂಡಿತವಾಗಿಯೂ, ಸ್ಥಿರಾಸ್ತಿ ಸಹ ಇದ್ದಿತ್ತ. ಆದರೆ ಬಹಳಷ್ಟು ಜನಗಳ ಬಳಿ ಸ್ಥಿರಾಸ್ತಿ ಇರಲಿಲ್ಲ. (ಅಡ್ಡಿ). ಇನ್ನೂ ಅಡ್ಡಿ ಮಾಡಬೇಡಿ. ಅಡ್ಡಿಗಳಿಗೆ ಕಿವಿಗೊಡಬೇಡಿ ಎಂದು ನನಗೆ ಸ್ಪೀಕರ್ ಅವರು ಹೇಳಿದ್ದಾರೆ. ಆದರೆ ಏನೆಲ್ಲ ನಡೆಯುತ್ತದೆಯೋ ಅದನ್ನು ನೋಡದೆ ಕಣ್ಮುಚ್ಚಿ ಕುಳಿತಿರುವುದು ಕಷ್ಟ ಸಾಧ್ಯ.

**ಒಬ್ಬ ಮಾನ್ಯ ಸದಸ್ಯ :** ಬಾಯಿ ಮುಚ್ಚಿಕೊಳ್ಳಿ.

**ಮಿ। ನಝೀರುದ್ದೀನ್ ಅಹಮ್ಮದ್** : ನನ್ನ ಕರ್ತವ್ಯವನ್ನು ಪೂರೈಸಿದೆನು ಎಂದು ನನಗೆ ಅನಿಸಿದೊಡನೆಯೇ ಮತ್ತು ಅಧಿಕಾಂಶ ಸದಸ್ಯರು ನನ್ನ ಮಾತನ್ನು ಕೇಳಲು ಇಷ್ಟಪಡುವುದಿಲ್ಲ ಎಂದು ಅನಿಸಿದೊಡನೆಯೇ ಹಾಗೆಯೇ ಮಾಡುತ್ತೇನೆ. ಖಂಡಿತವಾಗಿ ಹಾಗೆಯೇ ಮಾಡುತ್ತೇನೆ.

ಸ್ವಾಮೀ, ಆ ಗ್ರಂಥದಲ್ಲಿ ಸಮಗ್ರ ಇತಿಹಾಸವನ್ನು ನಿರೂಪಿಸಲಾಗಿದೆ. ಒಬ್ಬ ಮನುಷ್ಯನು ಮೃತಪಟ್ಟಾಗ, ಅವನು ಒಂದು ಹಾಸಿಗೆ ಅಥವಾ ಕೋವು ಬಟ್ಟೆಬರೆ ಅಥವಾ ಕುದುರೆ ಅಥವಾ ಒಂಟೆ ಮತ್ತು ಅದೇ ಬಗೆಯ ವಸ್ತುಗಳನ್ನು ಬಿಟ್ಟುಹೋಗುತ್ತಿದ್ದ. ಆಗ ಅರಬ್ಬೀ ರೂಢಿರಿವಾಜುಗಳ ಪ್ರಕಾರ, ಅವುಗಳನ್ನು ಸಮೀಪದ ಸಂಬಂಧಿಕರಲ್ಲಿ ಹಂಚಿಹಾಕಲಾಗುತ್ತಿತ್ತು. ಯಾವುದೇ ತೊಂದರೆ ಆಗುತ್ತಿರಲಿಲ್ಲ. ಕುರಾನ್‌ನಲ್ಲಿ ಪ್ರತಿಯೊಬ್ಬನಿಗೂ ಯಾವುದೇ ನಿರ್ದಿಷ್ಟ ಪಾಲನ್ನು ಕೊಟ್ಟಿಲ್ಲ. ಈಗಿರುವ ವಾರಸಾ ಪದ್ಧತಿ ಹಳೆಯ ಅರಬ್ಬೀ ರೂಢಿರಿವಾಜುಗಳಿಂದ ಉಂಟಾದ ಬೆಳವಣಿಗೆ. ಅದನ್ನು ಮುಸ್ಲಿಂ ತಜ್ಞರು, ಮುಖ್ಯವಾಗಿ ಮುಸ್ಲಿಂ ಕಾನೂನಿನ ಪ್ರಕಾಂಡ ಪಂಡಿತರಾದ ಅಬು ಹನೀಫಾ ಮತ್ತು ಇತರರು ತಿದ್ದುಪಡಿ ಮಾಡಿ ಬದಲಾಯಿಸಿದ್ದುಂಟು. ನಾನು ಅದೆಲ್ಲವನ್ನು ವಿವರಿಸಬೇಕಾಗಿಲ್ಲ. ನನಗೆ ಮುಖ್ಯವಾಗಿ ಆಸಕ್ತಿ ಇದ್ದ ಸಂಗತಿ ಎಂದರೆ ಮುಸ್ಲಿಂ ಧೋರಣೆಗೆ ಇತಿಹಾಸ, ಆಧಾರ ಎಂದು ಹೇಳುವುದು. ಒಳ್ಳೆಯದೋ ಅಥವಾ ಕೆಟ್ಟದ್ದೋ ಎಂಬುದು ಪ್ರಶ್ನೆಯಲ್ಲ, ಮತ್ತು ಹಿಂದೂ ಮಗಳ ಪಾಲಿಗೆ ನಾನು ವಿರೋಧ ವ್ಯಕ್ತಪಡಿಸಲು ಕಾರಣ ನನ್ನ ಮುಸ್ಲಿಂ ಸೋದರಿಯರಿಗೆ ಕೊಡುತ್ತಿರುವುದನ್ನು ಹಿಂದೂ ಸೋದರಿಯರಿಗೆ ಕೊಡಲು ಸಿದ್ಧವಿಲ್ಲ ಎಂಬುದಲ್ಲ. ಒಬ್ಬ ಮುಸ್ಲಿಂಗೆ ಹಿತವಾದದ್ದು ಪ್ರಾಚೀನ ರೂಢಿಗಳು ಮತ್ತು ಭಾವನೆಗಳನ್ನು ಅವಲಂಬಿಸಿದ್ದರೆ, ಹಿಂದೂಗೆ ಹಿತವಾದದ್ದು ಕೂಡ ಪ್ರಾಚೀನ ಹಿಂದೂ ರೂಢಿಗಳು ಮತ್ತು ಭಾವನೆಗಳ ಮೇಲೆ ಅವಲಂಬಿಸಿರಬೇಕು. ಅರಬರು ಮೆಡಿಟರೇನಿಯನ್ನಿನ ಸುತ್ತಮುತ್ತಲ ಪ್ರದೇಶಗಳನ್ನು ಗೆದ್ದುಕೊಂಡ ಒಡನೆಯೇ ತೊಂದರೆಗಳು ತಲೆದೋರಿದವು. ಯಾಕೆಂದರೆ ಅವರು ಸ್ಥಿರಾಸ್ತಿಯನ್ನು ಅರ್ಜಿಸಿದರು. ಆಗ ಬಹು ಸಂಖ್ಯೆಯಲ್ಲಿ ಆಸ್ತಿಗೆ ಪಾಲುದಾರರಾದವರನ್ನು ಇದಿರಿಸಬೇಕಾದ ತೊಂದರೆಯು ಆ ಸಮಾಜಕ್ಕೆ ಅನುಭವ ಆದದ್ದು ಇತಿಹಾಸದ ಸಂಗತಿ. ಆ ತೊಂದರೆಗಳು ಸಮಾಜವನ್ನು ವಿಘಟನಗೊಳಿಸುವ ಅಪಾಯ; ಆಗಲೇ, ಈಗ ನಮ್ಮಲ್ಲಿ ಇರುವ ವಕ್ಫ್ ಎಂಬ ಪದ್ಧತಿಯನ್ನು ಸೃಜಿಸುವ ಆಲೋಚನೆ ಉಂಟಾದದ್ದು. ಮುಸ್ಲಿಂ ಧರ್ಮದ ತತ್ತ್ವಜ್ಞರು ಪವಿತ್ರ ಗ್ರಂಥದ ಕೆಲವು ಪರಿಚ್ಛೇದಗಳನ್ನು ವಿಕಾಸಗೊಳಿಸಿ, ವಕ್ಫ್ ಕಾನೂನನ್ನು ವಿಕಾಸಗೊಳಿಸಲು ಪ್ರಯತ್ನಿಸಿದರು. ಆಗ ಅದರ ವಿಭಜನೆಯ ದುಷ್ಪರಿಣಾಮಗಳನ್ನು ಇದಿರಿಸಲು ತಕ್ಕ ಉಪಾಯವಾಗಿ ಬಳಸಿಕೊಂಡರು. ಭಾರತದಲ್ಲಿ ವಕ್ಫ್ ಕಾನೂನನ್ನು ಭಾರತೀಯ ನ್ಯಾಯಾಲಯಗಳು ಮತ್ತು ವಿಶೇಷವಾಗಿ ಪ್ರಿವಿ ಕೌನ್ಸಿಲ್ ಇನ್ನಷ್ಟು ವಿಕಾಸಗೊಳಿಸಿದವು. ಮತ್ತು ಆ ಕಾರಣ ಅದನ್ನು ಗೃಹ ಸಂಬಂಧವಾದ ಉದ್ದೇಶಗಳಿಗೆ ಅನ್ವಯಿಸುವಂತೆ ಮಾಡುವಲ್ಲಿ ವಿಫಲವಾದವು. ಮಿ। ಜಿನ್ನಾ ಅವರು ೧೯೧೩ರಲ್ಲಿ ಒಂದು ವಿಧೇಯಕವನ್ನು ಸದನದಲ್ಲಿ ಮಂಡಿಸಿ ಅದನ್ನು ಕಾಯ್ದೆಯಾಗಿ ತೀರ್ಣಗೊಳಿಸಿಕೊಂಡಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿ. ಅದೇ ವಕ್ಫ್ ಕಾಯ್ದೆ. ಆ ಮೂಲಕ ಮುಸ್ಲಿಂ ಸಮುದಾಯದಲ್ಲಿ ಕ್ರಮಬದ್ಧವಾಗಿ ಕೆಲಸಮಾಡುತ್ತಿದ್ದ ಕೆಲವು ವಕ್ಫ್‌ಗಳ ಸಿಂಧುತ್ವಕ್ಕೆ ಮಾನ್ಯತೆ ದೊರೆಯಿತು. ಅತ್ಯಲ್ಪ ಪ್ರಮಾಣದ ಆಸ್ತಿ ವಿಭಜನೆಗಳ ದುಷ್ಪರಿಣಾಮಗಳ ಪ್ರತಿರೋಧಕ್ಕೆ ಇದೊಂದು ಪ್ರಯತ್ನಕ್ಕೆ ವಿಭಜನೆಗೆ ಸಂಬಂಧಿಸಿದಂತೆ ಮುಸ್ಲಿಮರ ಧೋರಣೆಯು ಸಂಪೂರ್ಣವಾಗಿ ವಿಭಿನ್ನವಾದದ್ದು – ಮುಸ್ಲಿಂನ ದೃಷ್ಟಿಕೋನ ವ್ಯಕ್ತಿ ನಿಷ್ಠವಾದದ್ದು. ವಾಸ್ತವವಾಗಿ, ಅತ್ಯಲ್ಪ ಪ್ರಮಾಣದ ವಿಭಜನೆಗಳು ಅವರಲ್ಲಿ ಪ್ರತ್ಯೇಕತಾ ಭಾವನೆಗಳನ್ನು ಮೂಡಿಸುತ್ತವೆ. ಸೋದರರು ಅವಿಭಕ್ತ ಕುಟುಂಬದಲ್ಲಿ ಬಹುಸಮಯದವರೆಗೆ ಉಳಿಯುವುದಿಲ್ಲ, ಶೀಘ್ರವಾಗಿ ವಿಭಜನೆ ಮಾಡಿಕೊಂಡು ಹೋಗುತ್ತಾರೆ.

ಭಾರತದ ಇತೀಚಿನ ಇತಿಹಾಸದಲ್ಲಿ ಈ ಪ್ರತ್ಯೇಕತಾ ಭಾವನೆಯನ್ನು ದೊಡ್ಡ ಪ್ರಮಾಣದಲ್ಲಿ ಕಂಡಿದ್ದೇನೆ. ಹೀಗೆ, ಮುಸ್ಲಿಮನ ಧೋರಣೆ ವ್ಯಕ್ತಿನಿಷ್ಠವಾಗಿದ್ದರೆ, ಹಿಂದೂವಿನದು ಕುಟುಂಬನಿಷ್ಠವಾದ ದೃಷ್ಟಿಕೋನ. ಹಿಂದೂ ಕುಟುಂಬದಲ್ಲಿ ಝೀವಿಸುತ್ತಾನೆ. ಅಲ್ಲಿ ಕುಟುಂಬವೇ ಘಟಕ. ಅವರು ಮಹಿಳೆಯರ ಹಕ್ಕುಗಳಿಗೆ ಸಂಬಂಧಪಟ್ಟಹಾಗೆ ಕುಟುಂಬನಿಷ್ಠವಾದ ನಿಲುವು ತಳೆಯುತ್ತಾರೆ. ಕುಟುಂಬದ ದೃಷ್ಟಿಕೋನದಿಂದ ನೋಡುತ್ತಾರೆ. ಮುಸ್ಲಿಂ ನಿಲುವು ಇದಕ್ಕೆ ವಿಭಿನ್ನವಾದದ್ದು. ವಾಸ್ತವವಾಗಿ ಪುರಿಷರಿಗೆ ಅಸಮಾನರಲ್ಲ. ಈಗ ತೋರಿಸಿಕೊಟ್ಟಂತೆ, ಅಸಮಾನತೆಯ ಪ್ರಶ್ನೆ ನಿಜವಾಗಿಯೂ ಉದ್ಭವಿಸುವುದಿಲ್ಲ. ಅವರು ಪ್ರತಿಯೊಂದು ವಿಧದಲ್ಲೂ ಪುರುಷರಿಗೆ ಸಮಾನರು. ಆದರೆ ಪ್ರತಿ ಒಬ್ಬರಿಗೂ ಹಿಂದೂ ಕುಟುಂಬದ ಅರ್ಥವ್ಯವಸ್ಥೆಯಲ್ಲಿ ಮನ್ನಣೆ ಪಡೆದ ಒಂದು ಪಾತ್ರವುಂಟು. ಈ ಪ್ರಶ್ನೆಯನ್ನು ಆ ದೃಷ್ಟಿಕೋನದಿಂದ, ಆ ನಿಲುವಿನಿಂದ ನೋಡಬೇಕು. ಯಾವುದೇ ವಿಷಯದ ಬಗ್ಗೆ ಶಾಸನರಚನೆ ಮಾಡಲು ಈ ಸದನವು ಹೊಂದಿರತಕ್ಕ ಅಧಿಕಾರವನ್ನು ನಾನು ಪ್ರಶ್ನಿಸುತ್ತಿಲ್ಲ. ಆದರೂ, ಹಿಂದೂ ನಾಗರಿಕತೆಯು ಯಾವುದರ ಅಡಿಯಲ್ಲಿ ಝೀವಿಸುತ್ತಿದೆಯೋ ಆ ಪದ್ಧತಿಯ ವಿವರಗಳನ್ನು ಕುರಿತು ಚರ್ಚೆ ಮಾಡದೆ ಮತ್ತು ಅವುಗಳಿಗೆ ಕೂಲಂಕಷವಾಗಿ ಅಧ್ಯಯನ ಮಾಡದೆ ಈ ಶಾಸನರಚನೆಯ ಕಾರ್ಯದಲ್ಲಿ ತೊಡಗುವುದರ ಔಚಿತ್ಯವನ್ನು ನಾನು ಪ್ರಶ್ನಿಸುತ್ತೇನೆ. ಹಿಂದೂ ವಿಧವೆಯ ಸ್ಥಾನವನ್ನು ಆ ದೃಷ್ಟಿಕೋನದಿಂದ ವೀಕ್ಷಿಸಬೇಕು, ಮತ್ತು ಪರ್ಯಾಪ್ತ ಪರ್ಯಾಲೋಚನೆಯ ತರುವಾಯ ಆ ವ್ಯವಸ್ಥೆಯು ಆಗದು ಎಂದು ಕಂಡುಬಂದಲ್ಲಿ ಬದಲಾಯಿಸುವ ಅದನ್ನು ಹೊಣೆ ಹಿಂದೂ ಸಮುದಾಯಕ್ಕೆ ಸೇರಿದ್ದು. ಅದು ನನ್ನ ಕೆಲಸವಲ್ಲ. ವಿಧಾನ ಮಂಡಲದ ಸದಸ್ಯರಾಗಿ ನನ್ನ ಮನಸ್ಸಿಗೆ ಹೊಳೆಯುವ ಸಂಗತಿಗಳನ್ನು ತೋರಿಸಿಕೊಡುವುದು ಮಾತ್ರ ನನ್ನ ಹೊಣೆ. ನನ್ನ ವೋಟಿಗೆ ಜಯವಾಗುವುದಿಲ್ಲ. ಬಹುಮತದ ವೋಟಿಗೆ ಜಯವಾಗುತ್ತದೆ. ನನಗೆ ಕಾಣುವಂಥ ಕೆಲವು ಅಂಶಗಳನ್ನು ತೋರಿಸಿಕೊಡುವುದು ನನ್ನ ಕರ್ತವ್ಯ. ಆದ್ದರಿಂದ, ಹಿಂದೂ ಕಾನೂನು ಮಹಿಳೆಯರಿಗೆ ಅನ್ಯಾಯಕಾರಿ ಆಗಿಲ್ಲ ಎಂದು ನಿವೇದಿಸುತ್ತೇನೆ. ಕುಟುಂಬ ಪದ್ಧತಿಯ (ವ್ಯವಸ್ಥೆಯ) ಒಂದು ಭಾಗವಾಗಿ, ಅಲ್ಲಿ ಒಂದು ಪಾತ್ರ ವಹಿಸತಕ್ಕವಳಾಗಿ ಪರಿಗಣಿಸಿ ಹಿಂದೂ ಕಾನೂನು ಅವಳಿಗೆ ಪೂರ್ಣ ನ್ಯಾಯವನ್ನು ಒದಗಿಸಿದ್ದುಂಟು. ವಾಸ್ತವವಾಗಿ, ನಾವು ಈ ವಿಧಾನ ಮಂಡಲದಲ್ಲಿ ವಿಭಿನ್ನ ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಇಲ್ಲಿ ಯಾವುದೇ ಬಗೆಯ ಅಸಮಾನತೆ ಅಥವಾ ತಾರತಮ್ಯದ ಪ್ರಶ್ನೆಯಿಲ್ಲ. ನಾವೆಲ್ಲರೂ ಪಾತ್ರ ವಹಿಸತಕ್ಕವರೇ. ಈ ಪರಿಸ್ಥಿತಿಗಳಲ್ಲಿ ಸ್ಥಾನವನ್ನು ನಾವು ಈ ದೃಷ್ಟಿಕೋನದಿಂದ ವೀಕ್ಷಿಸಬೇಕು (ಪರಿಶೀಲಿಸಬೇಕು) ಎಂದು ನಿವೇದಿಸುತ್ತೇನೆ. ಮುಸ್ಲಿಮರಲ್ಲಿನ ಆಸ್ತಿ ವಿಭಜನೆಯು ಅತಿದೂರ ಮುಟ್ಟಿದೆ. ಮಗಳಿಗೆ ಕೊಡುವ ಪಾಲು ಯಾವ ರೀತಿಯಲ್ಲಿ ಕುಟುಂಬವನ್ನು ವಿಘಟನಗೊಳಿಸುತ್ತದೆ ಎಂಬ ಸಂಗತಿಯು ಪರಿಶೀಲನಾರ್ಹವಾಗಿದೆ. ಒಬ್ಬ ಮನುಷ್ಯ ಪುತ್ರರನ್ನು ಮತ್ತು ಪುತ್ರಿಯರನ್ನು ಆಗಲಿ ಮೃತನಾದ ಕೂಡಲೇ, ಅವನ ಪುತ್ರಿಯರು ತಮ್ಮ ಪಾಲುಗಳನ್ನು ಪಡೆಯುತ್ತಾರೆ. ಅವರ ಮದುವೆ ಆಗುತ್ತದೆ ಮತ್ತು ಅಧಿಕಾಂಶ ಪ್ರಕರಣಗಳಲ್ಲಿ ಅವರು ವಿಭಿನ್ನ ಕುಟುಂಬಗಳಿಗೆ ರವಾನೆ ಆಗುತ್ತಾರೆ. ವಾಸ್ತವವಾಗಿ, ಮುಸ್ಲಿಮರಲ್ಲಿನ ಅಂತರ ವಿವಾಹ ಪದ್ಧತಿಯು ಅತ್ಯಲ್ಪ ಪ್ರಮಾಣದ ವಿಭಜನೆಯನ್ನು ಪ್ರತಿರೋಧಿಸುವ ಒಂದು ತಂತ್ರ. ಇದಲ್ಲದೆ ಇನ್ನೊಂದು ಉಪಬಂಧವಿದೆ. ಪಾಲನ್ನು ಹೊಂದಿರುವ ಒಬ್ಬ ವ್ಯಕ್ತಿಯು, ಹೊರಗಿನವನಿಗೆ ತನ್ನ ಆಸ್ತಿಯನ್ನು ವರ್ಗಾಯಿಸಿದರೆ, ಮೂಲ ಸಹ-ಪಾಲುದಾರರು; ಬೆಲೆ ತೆತ್ತು ಆ ಪಾಲನ್ನು ಮರು-ಖರೀದಿ ಮಾಡಲು ಹಕ್ಕು ಹೊಂದಿರುತ್ತಾರೆ. ಆದರೆ ಪ್ರತಿಯೊಬ್ಬ ಲಾಯರಿಗೂ ಗೊತ್ತಿರುವ ಹಾಗೆ, ಪನರ್‌ಗ್ರಹಣದ ಮೊಕದ್ದಮೆಗೆ ಹಲವಾರು ಕಾನೂನು ತೊಂದರೆಗಳ ಗ್ರಹಣ ಹಿಡಿಯುತ್ತದೆ; ಆ ಮೊಕದ್ದಮೆಯಲ್ಲಿ ಯಶಸ್ಸು ದುರ್ಲಭವೇ. ಈ ಪ್ರವೃತ್ತಿಯ ಪ್ರತೀಕಾರಕ್ಕೆ ವಕ್ಫ್ ಇನ್ನೊಂದು ಪ್ರಯತ್ನ, ತಂತ್ರ; ಮುಸ್ಲಿಂ ಪುತ್ರಿಗೆ ಕೊಟ್ಟ

ಪಾಲು ಆಸ್ತಿಯ ಏಕತೆಗೆ ಅನುಕೂಲವಲ್ಲ.

**ಮಿ। ತಾಜಾಮುಲ್ ಹುಸೇನ್ :** ನಾನು ಅಡ್ಡಿಪಡಿಸಲು ಇಷ್ಟಪಡುವುದಿಲ್ಲ. ಈ ಪ್ರಕರಣವು ಮುಸ್ಲಿಂ ಕಾನೂನಿಗೆ ಸಂಬಂಧಿಸಿರುವ ಕಾರಣ. ಮುಸ್ಲಿಂ ಕಾನೂನಿನಲ್ಲಿ ಪ್ರತಿಪಾದಿಸಲಾದ ವಾರಸಾ ಹಕ್ಕನ್ನು ಅನುಮೋದಿಸುವುದಿಲ್ಲವೆ ಎಂದು ನನ್ನ ಮಾನ್ಯ ಸ್ನೇಹಿತರಿಗೆ ಕೇಳಬಯಸುತ್ತೇನೆ.

**ಮಿ। ನಝೀರುದ್ದೀನ್ ಅಹಮ್ಮದ್ :** ನನ್ನ ನಿವೇದನೆಯೆಂದರೆ ಆ ಪ್ರಶ್ನೆಯು ಉದ್ಭವಿಸುವುದಿಲ್ಲ.

**ಮಿ। ತಾಜಾಮುಲ್ ಹುಸೇನ್ :** ಉದ್ಭವಿಸುತ್ತದೆಯೆ ಇಲ್ಲವೆ ಎಂಬ ಬಗ್ಗೆ ಸ್ಪೀಕರ್ ಅವರು ನಿರ್ಣಯಿಸಬೇಕು.

**ಮಿ। ನಝೀರುದ್ದೀನ್ ಅಹಮ್ಮದ್ :** ಉದ್ಭವಿಸುತ್ತದೆ ಎಂದು ಹೇಳಿದರೂ, ಆ ಸಂಬಂಧವಾದ ವಿವಾದದಲ್ಲಿ ಸಿಲುಕಿಕೊಳ್ಳಲಾರೆನು. ಮುಸ್ಲಿಂ ಕುಟುಂಬವು ಯಾವ ರೀತಿ ಅವನತಿಯಾಗುತ್ತಿದೆ ಮತ್ತು ವಿಘಟನೆಯಾಗುತ್ತಿದೆ ಎಂಬುದು ನಮಗೆಲ್ಲ ಸುದೀರ್ಘ ಅನುಭವದ ಸಂಗತಿ. ನಿಮ್ಮಂಥ ಅನೇಕ ಲಾಯರುಗಳಿಗೂ ಕೂಡ. ಒಬ್ಬ ಮಗಳನ್ನು ಮದುವೆಮಾಡಿ ಕೊಟ್ಟ ಮೇಲೆ, ಕುಟುಂಬದ ಅನ್ಯೋನ್ಯ ಪ್ರೀತಿ ಅವರನ್ನು ಒಟ್ಟಾಗಿ ಇಡುತ್ತದೆ. ಆ ತರುವಾಯ ಮಗಳು ತಂದೆಯ ಮನೆಗೆ ಬರುವ ಪ್ರಸಂಗ ಬರುತ್ತದೆ. ಆಗ ಮಗಳು ಮತ್ತು ಅವಳ ಸೋದರನ ಹೆಂಡತಿಯ ಸಂಗಡ ತಪ್ಪು ತಿಳಿವಳಿಕೆ ಉಂಟಾಗುತ್ತದೆ. ಪುರುಷರಿಗಿಂತ ಮಹಿಳೆಯರು ಮಹತ್ವಪೂರ್ಣ ಅಲ್ಲದ ವಿಷಯಗಳ ಸಂಬಂಧದಲ್ಲಿ ಮತಭೇದ ಹೊಂದುವುದು ಹೆಚ್ಚು. ಹೆಚ್ಚು ಸೂಕ್ಷ್ಮ ಸಂವೇದನೆ ಉಳ್ಳವರಾದ ಕಾರಣ ಭಿನ್ನಾಭಿಪ್ರಾಯ ತಳೆಯುತ್ತಾರೆ.

**ಶ್ರೀ ಮಹಾವೀರ ತ್ಯಾಗಿ :** ನೀವು ಮಹಿಳೆಯರ ಬಗ್ಗೆ ದೂಷಣೆಯ ಮಾತುಗಳನ್ನು ಆಡುತ್ತಿದ್ದೀರ.

**ಮಿ। ನಝೀರುದ್ದೀನ್ ಅಹಮ್ಮದ್ :** ದೂಷಣೆಯ ಮಾತುಗಳನ್ನು ಆಡುವ ಸಂಗತಿಯಲ್ಲ. ಮಹಿಳೆಯರು ಭಾವುಕ ಸ್ವಭಾವದವರಾಗಿರುವ ಕಾರಣ, ಮಹಿಳೆಯರು ಹೆಚ್ಚು ಆಕರ್ಷಕರೂ, ಹೆಚ್ಚು ಮೋಹಕರೂ, ಹೆಚ್ಚು ಪ್ರೇಮಶೀಲರೂ ಆಗಿರುತ್ತಾರೆ. ಮಹಿಳೆಯರು ನಮ್ಮ ಹಾಗೆ ಕಠಿಣ ಹೃದಯಿಗಳೂ, ಒರಡು ಸ್ವಭಾವದರೂ ಆಗಿದ್ದರೆ, ಝೀವನವು ಅಸಾಧ್ಯವಾಗುತ್ತಿತ್ತು. ವಾಸ್ತವವಾಗಿ, ಸ್ತ್ರೀಸ್ವಭಾವದ ಸೌಂದರ್ಯವೇ ಮಹಿಳೆಯರನ್ನು ನಮಗಿಂತ ವಿಭಿನ್ನರನ್ನಾಗಿ ಮಾಡಿದೆ. ಹೀಗೆ ಎರಡು ವಿಭಿನ್ನ ಪ್ರಕಾರಗಳ ಸಮ್ಮಿಲನವು ಝೀವನವನ್ನು ಸಹ್ಯವನ್ನಾಗಿಯೂ ಸಂತೋಷಮಯವನ್ನಾಗಿಯೂ ಮಾಡಿದೆ. ಆದ್ದರಿಂದ ನಾನು ಈ ಮಾತನ್ನು ಆಡಿದ್ದು ಬೀಳುಗಳೆಯುವ ರೀತಿಯಲ್ಲಿ ಹೇಳಿದ್ದಲ್ಲ.

ತನ್ನ ನಾದಿನಿಯ ಬಗ್ಗೆ ಬೇಸರಗೊಂಡ ತರುವಾಯ ಮಗಳು ತನ್ನ ಮನೆಗೆ ಹೋಗಿ ಗಂಡನಿಗೆ ಹೇಳುತ್ತಾಳೆ, 'ನಿನಗೆ ನನ್ನ ಪಾಲು ಬೇಕು' ಆಮೇಲೆ, ಒಡನೆಯೇ ಅಥವಾ ಕಾಲಾಂತರದಲ್ಲಿ ತೊಂದರೆ ಆರಂಭವಾಗುತ್ತದೆ. ಈ ಪ್ರಸಂಗವು ಪ್ರತಿಯೊಬ್ಬರ ಮನೆಯಲ್ಲಿ ಆದದ್ದೇ. ಸೋದರಿಯ ಗಂಡನು ತನ್ನ ಭಾವನ ಮನೆಗೆ ಬರುತ್ತಾನೆ ಮತ್ತು ಪಾಲನ್ನು ಕೇಳುತ್ತಾನೆ. ಅವನು ಕೊಡುವುದಿಲ್ಲ ಎಂದು ಹೇಳುತ್ತಾನೆ. ತನ್ನ ಸೋದರನಿಗೆ ಮಾರಾಟಮಾಡಲು ಇಚ್ಛಿಸುತ್ತಾನೆ. ಆದರೆ ಅವನು (ಸೋದರನು) ಕೋರಿದ ಪೂರ್ಣ ಬೆಲೆಯನ್ನು ಕೊಡಲು ಸಿದ್ಧನಿರುವುದಿಲ್ಲ ಅಥವಾ ಅವನಲ್ಲಿ ಅಷ್ಟು ಹಣ ಕೊಡುವ ತಾಕತ್ತು ಇರುವುದಿಲ್ಲ. ಆಗ ಈ ಮನುಷ್ಯನು ಗ್ರಾಮದಲ್ಲಿರುವ ಇನ್ನೊಬ್ಬ ಮನುಷ್ಯನ ಬಳಿಗೆ ಹೋಗುತ್ತಾನೆ. ಅವನಿಗೆ ಒಂದಿಷ್ಟು ನಗದು ಹಣಕ್ಕೆ ಮಾರಾಟ ಮಾಡುತ್ತಾನೆ. ಉಳಿದ ಮೊತ್ತವನ್ನು ಈ ತೊಂದರೆ ನಿವಾರಣೆ ಆದ ಮೇಲೆ ಕೊಡುವ ಭರವಸೆ ಪಡೆಯುತ್ತಾನೆ. ಆಗ ಹೊಸ ಹಕ್ಕಿನ ದೈಹಿಕ ಪ್ರದರ್ಶನ ಪ್ರಾರಂಭವಾಗುತ್ತದೆ. ಅದನ್ನು ಹಿಂಬಾಲಿಸಿ ಬರುತ್ತದೆ ಕ್ರಿಮಿನಲ್ ಅಥವಾ ಸಿವಿಲ್ ಮೊಕದ್ದಮೆ. ಸಾಮಾನ್ಯ ಕ್ಷತಿಯಿಂದ ಹತ್ಯೆಯವರೆಗೆ,

ನೋಂದಣಿ ವ್ಯವಹರಣೆಗಳಿಂದ ವಿಭಜನಾ ವ್ಯವಹರಣೆಗಳವರೆಗೆ ಮುಂತಾಗಿ, ಈ ವಿಧೇಯಕ ತೀರ್ಣವಾದರೆ, ಲಾಯರುಗಳು ಧನ್ಯವಾದಗಳನ್ನು ಸಲ್ಲಿಸುತ್ತಾರೆ. ಯಾಕೆಂದರೆ ಆ ಮೂಲಕ ಅವರಿಗೆ ಗಣನೀಯ ಪ್ರಮಾಣದ ವ್ಯವಹಾರ ಪ್ರಾಪ್ತವಾಗುತ್ತದೆ. ವ್ಯಾಜ್ಯವು ಪ್ರಾರಂಭವಾಗುತ್ತದೆ, ಮತ್ತು ಐದು ಅಥವಾ ಹತ್ತು ಅಥವಾ ಇಪ್ಪತ್ತು ವರ್ಷಗಳಾದರೂ ಕೊನೆಗಾಣುವುದಿಲ್ಲ. ದಿಗ್‌ಭ್ರಮೆಗೊಳಿಸುವ ಪರಂಪರೆಯಲ್ಲಿ ಒಂದು ವ್ಯಾಜ್ಯವನ್ನು ಇನ್ನೊಂದು ವ್ಯಾಜ್ಯವು ಹಿಂಬಾಲಿಸುತ್ತ ಹೋಗುತ್ತದೆ, ಮತ್ತು ಗುಂಪುಗಳ ಕಚ್ಚಾಟದಲ್ಲಿ ಇಡೀ ಗ್ರಾಮವು ವಿಚ್ಛೇದಗೊಳ್ಳುತ್ತದೆ. ಅನೇಕ ಸಹೋದರರು ಮಾತ್ರ ಇದ್ದರೆ, ಅವರು ಒಟ್ಟಾಗಿ ಬಾಳಬಹುದು, ಮತ್ತು ಒಟ್ಟಾಗಿ ಆಸ್ತಿಯ ವ್ಯವಸ್ಥಾಪನ ಮಾಡಬಹುದು, ಅವರ ಹೆಂಡಂದಿರು ಜಗಳವಾಡುತ್ತಿದ್ದರೂ. ಸೋದರರು ಕಚ್ಚಾಡುವುದು, ಜಗಳವಾಡುವುದು ಕ್ವಚಿತ್ತಾಗಿ, ಅಪರೂಪವಾಗಿ. ಈ ಹಿಂದೂ ಅವಿಭಕ್ತ ಕುಟುಂಬ ಪದ್ಧತಿಯು ಮುಂದುವರಿಯುತ್ತದೆ. ಇದರ ಹೊರತಾಗಿ, ಮುಸ್ಲಿಂ ಕುಟುಂಬ ಮತ್ತು ಹಿಂದೂ ಕುಟುಂಬ ಇವುಗಳ ನಡುವೆ ವಿಶೇಷ ವ್ಯತ್ಯಾಸವಿಲ್ಲ. ಮುಸ್ಲಿಮರಿಗೆ ವಿಭಜನೆ ಮತ್ತು ಪ್ರತ್ಯೇಕ ವ್ಯಕ್ತಿನಿಷ್ಠ ಜೀವನ– ಇವು ರೂಢಿಯಾಗಿಬಿಟ್ಟಿವೆ. ಹಿಂದೂವಿಗೆ ಜಂಟಿ (ಅವಿಭಕ್ತ) ಮತ್ತು ಸಾಮೂಹಿಕ (ಕುಟುಂಬನಿಷ್ಠ) ಜೀವನ ರೂಢಿಯಾಗಿಬಿಟ್ಟಿದೆ. ನನ್ನ ಸನ್ಮಾನ್ಯ ಹಿಂದೂ ಸ್ನೇಹಿತರ ಪೈಕಿ ಬಹುಶ: ಕೆಲವೇ ಕೆಲವರು ಮಗಳಿಗೆ ಪಾಲು ಕೊಡುವ ಮೂಲಕ ಉಂಟಾಗಬಹುದಾದ ನಿಜವಾದ ತೊಂದರೆಗಳನ್ನು ಕಲ್ಪಿಸಿಕೊಳ್ಳಬಲ್ಲರು. ಈ ಪಾಲು ಮಗಳ ಪಾಲಿಗೆ ಎಂದೂ ಲಾಭವಲ್ಲ. ಅವಳು ತನ್ನ ಗಂಡನ ಮನೆಗೆ ಹೋಗುತ್ತಾಳೆ. ಅಲ್ಲಿ ಅವಳು ತನ್ನ ಪುತ್ರರಿಗೂ ಪುತ್ರಿಯರಿಗೂ ಜನ್ಮ ಕೊಡುತ್ತಾಳೆ. ಅವಳು ತನ್ನ ಸೋದರನಿಂದ ತೆಗೆದುಕೊಂಡಿದ್ದನ್ನೆಲ್ಲ ಅವಳ ಮಗಳು ಅವಳ ಪುತ್ರರ ಕಡೆಯಿಂದ ತೆಗೆದುಕೊಳ್ಳುತ್ತಾಳೆ. ಮಹಿಳೆಯರನ್ನು ವ್ಯಕ್ತಿಗತವಾಗಿ ಮತ್ತು ಪ್ರತ್ಯೇಕವಾಗಿ ಪರಿಗಣಿಸುವುದಕ್ಕೆ ಬದಲಾಗಿ, ನಾವು ಅವರನ್ನು ಕುಟುಂಬ ಜೀವನದ ಭಾಗವಾಗಿ ಪರಿಗಣಿಸಿದ ಪಕ್ಷದಲ್ಲಿ, ಲಾಭವು ನಷ್ಟದ ದ್ವಾರಾ ಪ್ರತಿ ತೂಕವಾಗುವುದಿಲ್ಲ. ನಾನು ನಿವೇದಿಸುವುದೇನೆಂದರೆ ಮಗಳ ಪಾಲು ಎಣೆಯಿಲ್ಲದ ತೊಂದರೆಗಳಿಗೆ ಮತ್ತು ವ್ಯಾಜ್ಯಕ್ಕೆ, ಜಗಳಕ್ಕೆ ಮತ್ತು ತಪ್ಪು ತಿಳಿವಳಿಕೆಗೆ ಮತ್ತು ಏನೇನಕ್ಕೆಲ್ಲ ದಾರಿಮಾಡಿಕೊಡುತ್ತದೆ. ವಾಸ್ತವವಾಗಿ, ಯಾವುದೇ ಸಮೃದ್ಧ ಮುಸ್ಲಿಂ ಕುಟುಂಬಗಳು ಮೂರು ತಲೆಮಾರುಗಳನ್ನು ಮೀರಿ ಬಾಳಲಿಲ್ಲ ಎಂಬುದು ನನ್ನ ದುಃಖದಾಯಕ ಅನುಭವ. ಇದು (ಮಗಳ ಪಾಲು) ಮತ್ತು ಇತರ ಸಂಗತಿಗಳು ಆ ಕುಟುಂಬಗಳನ್ನು ದರಿದ್ರರನ್ನಾಗಿಸಿಬಿಟ್ಟವು. ಈ ಪದ್ಧತಿ ಒಳ್ಳೆಯದೋ ಅಥವಾ ಕೆಟ್ಟದ್ದೋ ಎಂಬುದು ಪ್ರಶ್ನೆಯಲ್ಲ. ಮುಸ್ಲಿಮರು ತಮ್ಮ ಧರ್ಮದ ಭಾಗವಾಗಿ ಅದನ್ನು ಸ್ವೀಕರಿಸಿದ್ದಾರೆ. ಮತ್ತು ಬಹುಮತವು ಅದು ಕೆಟ್ಟದಲ್ಲ ಎಂದು ಪರಿಗಣಿಸುವವರೆಗೆ ಅವರು ಅದನ್ನು ಅಂಗೀಕರಿಸುತ್ತಾರೆ. ಇನ್ನು ಹಿಂದೂಗಳಿಗೆ ಸಂಬಂಧಿಸಿ ಹೇಳುವುದಾದರೆ, ಯಾವ ಪದ್ಧತಿಯ ಅಡಿಯಲ್ಲಿ ಅವರು ಸಂಪನ್ನರಾಗುತ್ತಿರುವರೋ ಮತ್ತು ಉತ್ಕರ್ಷ ಹೊಂದುತ್ತಿರುವರೋ ಮತ್ತು ಯಾವ ಪದ್ಧತಿಯು ವಿದೇಶೀ ಆಕ್ರಮಣಗಳ ವಿವಾದಗಳನ್ನು ಮೆಟ್ಟಿ ಇನ್ನೂ ಜೀವಂತವಾಗಿದೆಯೋ ಆ ಪದ್ಧತಿಯನ್ನು ಅವರು ಸ್ವೀಕರಿಸಿದ್ದಾರೆ, ಮತ್ತು ಬಹುಮತವು ಆ ಪದ್ಧತಿಯು ಕೆಟ್ಟದ್ದಲ್ಲ ಎಂದು ಪರಿಗಣಿಸುವವರೆಗೆ ಅದನ್ನು ಸ್ವೀಕರಿಸುತ್ತಾರೆ, ಮತ್ತು ಆ ಪದ್ಧತಿಯು ಕೆಟ್ಟದ್ದು ಎಂದು ಅವರಿಗೆ ಮನವರಿಕೆ ಆಗುವವರೆಗೆ ಯಾವುದೇ ಬಗೆಯ ಹಸ್ತಕ್ಷೇಪವು ಉಚಿತವಲ್ಲ. ನನ್ನ ವಾದವೆಂದರೆ, ಹಿಂದೂ ಸೋದರಿ ಮತ್ತು ಮುಸ್ಲಿಂ ಸೋದರಿ ಇವರ ನಡುವೆ ಹೋಲಿಕೆ ಮಾಡುವುದು ಅತ್ಯಂತ ಅಪಾಯಕಾರಿ ಯಾಕೆಂದರೆ ಸ್ಥಾನಗಳುತುಲ್ಯರೂಪವಲ್ಲ. ಮತ್ತು ಯಥಾರ್ಥವಾಗಿ ವಿಭಿನ್ನ ಇತಿಹಾಸಗಳು, ವಿಚಾರಗಳು ಮತ್ತು ಪರ್ಯಾವರಣಗಳು ಇವುಗಳಿಂದ ಉದ್ಭವಿಸುವ ಅನೇಕ ವಿಭಿನ್ನ ಅಂಶಗಳಿರುತ್ತವೆ. ಆದ್ದರಿಂದ, ಹಿಂದೂ ಸೋದರಿ ಮತ್ತು ಮುಸ್ಲಿಂ ಸೋದರಿ ಇವರ

ಸ್ಥಾನಗಳ ನಡುವೆ ಯಾವುದೇ ಸರಳ ಅನುರೂಪವಿಲ್ಲ. ಮಗಳ ಪಾಲಿನ ಪರಿಣಾಮವನ್ನು ಕುರಿತಂತೆ, ನಿರ್ವಿಕಾರ ಚಿತ್ತದಿಂದ, ನಿಷ್ಪಕ್ಷವಾಗಿ, ಕಲ್ಪಿಸಲು ಸಾಧ್ಯವಿರುವ ಎಲ್ಲ ದೃಷ್ಟಿಕೋನಗಳಿಂದ ಪರ್ಯಾಲೋಚನೆ ನಡೆಸಬೇಕೆಂದು ನನ್ನ ಅನಿಸಿಕೆ. ಅದು (ಪಾಲು) ಮಗಳಿಗೇ ನಿವ್ವಳ ಲಾಭವಲ್ಲ. ಅದು ತುಂಡೀಕರಣಕ್ಕೆ, ವಿಘಟನೆಗೆ ದಾರಿಮಾಡಿಕೊಡುತ್ತದೆ. ಈ ಬಗ್ಗೆ ನಾನು ಸವಿಸ್ತಾರವಾಗಿ ಉಲ್ಲೇಖ ಮಾಡುತ್ತಿರಲಿಲ್ಲ. ಆದರೆ ಏಪ್ರಿಲ್ ೯ನೇ ತಾರೀಖು ಈ ವಿಧೇಯಕವನ್ನು ಆಯ್ಕೆ ಸಮಿತಿಗೆ ಕಳಿಸಿದಾಗ, ನಾನು ಅನಿಷ್ಟ ಪ್ರವೃತ್ತಿಗೆ ಉಲ್ಲೇಖ ಮಾಡಿದ್ದೆ; ಆಗ ಶ್ರೀಮತಿ ಹಂಸಾ ಮೆಹ್ತಾ. ಅವರು ಮಗಳ ಪಾಲು ವ್ಯಾಜ್ಯಕ್ಕೆ ಅಥವಾ ಆಸ್ತಿಯ ತುಂಡೀಕರಣಕ್ಕೆ ಕಾರಣವಾಗುತ್ತದೆ ಎಂಬ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದ್ದರು. ಆ ಕಾರಣಕ್ಕಾಗಿಯೇ ನಾನು ಸವಿಸ್ತಾರ ಉಲ್ಲೇಖ ಮಾಡಬೇಕಾಯಿತು. ನಾವು ಅನುಭವಿಸಿರುವ ಅನಿಷ್ಟವನ್ನು ಸುದೈವದಿಂದ ಹಿಂದೂ ಕುಟುಂಬದಲ್ಲಿ, ಸಮಾಜದಲ್ಲಿ ಅನುಭವಿಸಿಲ್ಲದಿರುವ ಸಂಗತಿಯೇ ಬಹುಶಃ ಅವರ ಅಚ್ಚರಿಗೆ ಕಾರಣವಾಗಿರಬಹುದು. ಇದರ ಮೂಲಕ ತಪ್ಪು ತಿಳಿವಳಿಕೆಗೆ ಎಡೆಯಾಗುವ ಸಂಭವವಿತ್ತು. ಅದಕ್ಕಾಗಿಯೇ, ಸ್ವಾಮೀ, ನಾನು ಈ ವಿಷಯವನ್ನು ಉಲ್ಲೇಖಿಸಿದ್ದು. ಹಿಂದೂ ಪುತ್ರಿಯ ಸ್ಥಾನವು ಹಿಂದೂ ವಿಚಾರಗಳ ಮತ್ತು ಹಿಂದೂ ಕುಟುಂಬಗಳ ಸಂದರ್ಭದಲ್ಲಿ ಪರಿಶೀಲಿಸಬೇಕು ಎಂದು ನಾನು ನಿವೇದಿಸುತ್ತೇನೆ. ಅವಳ ಬಗ್ಗೆ ಪ್ರತಿ ಒಬ್ಬರಲ್ಲೂ ವಾತ್ಸಲ್ಯ ಪೂರ್ಣವಾದ ಒಲವು ಇರುತ್ತದೆ. ಅವಳ ಮದುವೆಯನ್ನು ಸಂಭ್ರಮದಿಂದ ನೆರವೇರಿಸುತ್ತಾರೆ. ಮದುವೆಯ ಸಮಯದಲ್ಲಿ ವಿವಿಧ ಉಡುಗೊರೆಗಳನ್ನು ಕೊಡುತ್ತಾರೆ. ವರದಕ್ಷಿಣೆಯನ್ನು ಮತ್ತು ಒಮ್ಮೊಮ್ಮೆ ದೊಡ್ಡ ಆಸ್ತಿಗಳನ್ನು ಸಹ ಕೊಡುತ್ತಾರೆ. ಅವಳು ತನ್ನ ತಂದೆಯ ಮನೆಯಲ್ಲಿ ಆದರದ ಅತಿಥಿಯಾಗಿ ಬರುತ್ತಾಳೆ. ಆದರೆ ನೀವು ಅವಳಿಗೆ ಒಂದು ಪಾಲು ಕೊಟ್ಟರೆ, ಆಗ ಸೋದರರು ಮತ್ತು ಸೋದರಿಯರು ಇವರ ನಡುವಣ ಸಂಬಂಧಗಳು ವಾತ್ಸಲ್ಯದ ಸಂಬಂಧಗಳಾಗಿ ಉಳಿಯುವುದಿಲ್ಲ. ಆದರೆ ವ್ಯವಹಾರದ, ವಿದ್ವೇಷದ ಮತ್ತು ಸಂಘರ್ಷದ ಹಿತಾಸಕ್ತಿಗಳ ಸಂಬಂಧಗಳಾಗುತ್ತವೆ. ವಾಸ್ತವವಾಗಿ ಪ್ರೀತಿಯು ನಾಶವಾಗುತ್ತದೆ. ವಾಸ್ತವವಾಗಿ ಹಿಂದೂ ಸಮಾಜದಲ್ಲಿ ಮಗಳ ಪಾಲಿಗೆ ಅವಕಾಶ ಮಾಡಿಕೊಟ್ಟರೆ, ವಾತ್ಸಲ್ಯ ಭಾವನೆಗೆ ವಿನಾಶ, ಖಂಡಿತ. ಸ್ವಾಮೀ, ಈ ಕೆಲವು ವಿಚಾರಗಳನ್ನು ಅತ್ಯಂತ ನಿರ್ವಿಕಾರ ಚಿತ್ತದಿಂದ ಪರ್ಯಾಲೋಚಿಸಬೇಕು ಎಂದು ಕೋರುತ್ತೇನೆ.

**ಶ್ರೀ ಮಹಾವೀರ ತ್ಯಾಗಿ :** ನಿಮ್ಮ ಅನುಭವ ಏನು?

**ಸ್ಪೀಕರ್ :** ಆರ್ಡರ್, ಆರ್ಡರ್

**ಮಿ। ನಝೀರುದ್ದೀನ್ ಅಹಮ್ಮದ್ :** ನನ್ನ ಅನುಭವವೆಂದರೆ ನಾವು ದರಿದ್ರರಾಗಿದ್ದೇವೆ. ದಾರಿದ್ರ್ಯ ಒಂದು ಸದ್ಗುಣ ಎಂದು ಹಿಂದೂ ಸಮಾಜವು ಭಾವಿಸುವುದಾದರೆ, ಆ ವ್ಯವಸ್ಥೆಯನ್ನು ಅವರು ಧಾರಾಳವಾಗಿ ಅಂಗೀಕರಿಸಬಹುದು. ನಾವೆಲ್ಲ ಪರಿಪೂರ್ಣ ಸಮಾನತೆಯ ವರ್ಗರಹಿತ ಸಮಾಜವನ್ನು ಸೃಷ್ಟಿಸುವ ಮಾತುಗಳನ್ನು ಆಡುತ್ತಿರುವೆವಷ್ಟೆ. ಆದರೆ ಅದು ದಾರಿದ್ರ್ಯದ ಸಮಾನತೆ ಆಗುತ್ತದೆ. ಆದರೆ ನಾನು ನನ್ನ ಪದ್ಧತಿಯ ಬಗ್ಗೆ ದೂರು ಸಲ್ಲಿಸುತ್ತಿಲ್ಲ. ಇಷ್ಟೇ ಅಲ್ಲದೆ, ಅದನ್ನು ಕುರಿತು ಚರ್ಚೆಮಾಡಲು ಇದು ಸೂಕ್ತ ಸ್ಥಳವಲ್ಲ. ಆದ್ದರಿಂದ, ಈ ಇಡೀ ವಿಷಯವನ್ನು ಹಿಂದೂ ಸಮಾಜ ವಿವೇಕಪೂರ್ಣವಾಗಿ ಪರಿಶೀಲಿಸಬೇಕೆಂದು ಮತ್ತು ಕೇವಲ ಸೋದರ ಮತ್ತು ಸೋದರಿಯರ ನಡುವಣ ಸಮಾನತೆಯನ್ನು ಲೇಖದಲ್ಲಿ ಮಾತ್ರವೇ ನೋಡಕೂಡದೆಂದು ನಾನು ನಿವೇದಿಸುತ್ತೇನೆ. ಸೋದರಿ ಸೋದರ ಸಮಾನತೆ ಎನ್ನುವುದು ಅತಿಯಾದ ಘೋಷಣೆಯಾಗಿದೆ. ಸದನದಲ್ಲಿ ಗಂಭೀರವಾಗಿ ಯೋಚಿಸುವ ಶಾಸಕರಾಗಿರುವ ನಾವು ಇಂಥ ಘೋಷಣೆಗಳ ಗಾಳಿಗೆ ಗಮನ ಕೊಡಬಾರದು. ಇಲ್ಲಿ ನಾನು ಕೆಲವು ಅಂಶಗಳನ್ನು ಕುರಿತು ಮಾತ್ರ ಸಂಕೇತಿಸಿದ್ದೇನೆ.

ಇನ್ನೂ ಅನೇಕ ವಿಷಯಗಳಿವೆ. ಆದರೆ ನಾನು ಆ ಎಲ್ಲ ಅಂಶಗಳನ್ನು ಕುರಿತು ಉಲ್ಲೇಖಮಾಡುವುದು ಸಾಧ್ಯವಿಲ್ಲ. ನಾನು ಕೆಲವು ಸಣ್ಣ ಅಂಶಗಳಿಗೆ ಹೆಚ್ಚು ಒತ್ತು ಕೊಟ್ಟಿರಬಹುದು ಮತ್ತು ಕೆಲವನ್ನು ಬಿಟ್ಟಿರಬಹುದು. ಇವು ಕೇವಲ ಕೆಲವು ಅಭಿಪ್ರಾಯೋಕ್ತಿಗಳು ಮಾತ್ರ. ಆ ಮೂಲಕ ಜನಗಳು ವಿಚಾರ ಮಾಡುವಂತಾಗಬೇಕು ಮತ್ತು ಸೋದರರು ಮತ್ತು ಸೋದರಿಯರಿಗೆ ಸಂಬಂಧಿಸಿದಂತೆ ಅವಸರದ ಕ್ರಮ ಕೈಗೊಳ್ಳಕೂಡದು.

ಈಗ ಬರುತ್ತದೆ ಸಮಾನತೆಯ ಪ್ರಶ್ನೆ. ಕೆಲವು ವಿಚಾರಗಳಲ್ಲಿ ಮಹಿಳೆಯರು ಪುರುಷರಿಗಿಂತ ಶ್ರೇಷ್ಠರಾಗಿಲ್ಲವೆ ? ನನ್ನ ಪ್ರಕಾರ ಅವಳು ಅನೇಕ ಕ್ಷೇತ್ರಗಳಲ್ಲಿ ಶ್ರೇಷ್ಠಳಾಗಿದ್ದಾಳೆ. ಅವಳು ಗೃಹಸ್ವಾಮಿನಿ. ಅವಳು ತನ್ನ ಪತಿಯ ಆತ್ಮದ ಸ್ವಾಮಿನಿ, ಅವನ ಆತ್ಮದ ಸ್ವಾಮಿನಿ. ಅವನ ಧನವನ್ನು, ಅವನ ಆಸ್ತಿಯನ್ನು, ಅವನ ಪ್ರವೃತ್ತಿಗಳನ್ನು, ಅವನ ವಿಲಕ್ಷಣಗಳನ್ನು ಅವಳೇ ನಿಯಂತ್ರಿಸುತ್ತಾಳೆ. ಆದ್ದರಿಂದ, ಮಹಿಳೆಯು ಒಂದು ಪಾಲನ್ನು ಕೊಡಲಿಲ್ಲವೆಂಬ ಕಾರಣಕ್ಕಾಗಿ ತನ್ನನ್ನು ಕಡೆಗಣಿಸಲಾಗುತ್ತಿದೆ, ಎಂದು ಭಾವಿಸಕೂಡದು ಎಂದು ನಿವೇದಿಸುತ್ತೇನೆ. ವಾಸ್ತವವಾಗಿ ಕುಟುಂಬದಲ್ಲಿ ಅವಳ ಸ್ಥಾನ ನಿರ್ವಿವಾದದ್ದು. ಕುಟುಂಬದಲ್ಲಿ ಗೌರವಕ್ಕೂ ಪ್ರೀತಿಗೂ ಪಾತ್ರಳಾಗದಿರುವ ಮಹಿಳೆ ಯಾರಾದರೂ ಇದ್ದಾರೆಯೆ ? ಅವಳಿಗೆ ವೈಯಕ್ತಿಕವಾಗಿ ಏನಾದರೂ ಅಗತ್ಯಗಳು ಇವೆಯೆ ? ತನ್ನ ಗಂಡನ, ಅವನ ಸಹೋದರರ, ಮತ್ತು ತನ್ನ ಮಕ್ಕಳ ಮತ್ತು ತನ್ನ ಸೋದರರ ಮಕ್ಕಳ ಕಲ್ಯಾಣದ ಹೊರತಾಗಿ, ಸ್ವಂತಕ್ಕಾಗಿ ಅವಳು ಏನಾದರೂ ಅಪೇಕ್ಷಿಸುತ್ತಾಳೆಯೆ ? ಅದು ಹಿಂದೂ ಪದ್ಧತಿ. ಅದು ಒಳ್ಳೆಯದೋ ಅಥವಾ ಕೆಟ್ಟದ್ದೋ, ಅದನ್ನ ಚರ್ಚಿಸಬೇಕಾದವನು ನಾನಲ್ಲ.

**ಒಬ್ಬ ಮಾನ್ಯ ಸದಸ್ಯ :** ಸರಿ, ಖಂಡಿತವಾಗಿಯೂ ಸರಿ.

**ಮಿ। ನಝೀರುದ್ದೀನ್ ಅಹಮ್ಮದ್ :** ಅದು ಹಿಂದೂ ಸಮಾಜಕ್ಕೆ ಸೇರಿದ ವಿಚಾರ. ನಾಲ್ಕು ಸಾವಿರ ವರ್ಷಗಳಿಗೂ ಮೀರಿ ನೆಲೆಯೂರಿರುವ, ಬಾಳಿರುವ ಪದ್ಧತಿಯು........

**ಬಾಬು ರಾಮನಾರಾಯಣ ಸಿಂಗ್ :** ಅದಕ್ಕೂ ಮೀರಿದ ಅವಧಿ.

**ಮಿ। ನಝೀರುದ್ದೀನ್ ಅಹಮ್ಮದ್ :** ಅದು ಆ ಸಮಾಜಕ್ಕೆ ಸೇರಿದ ವಿಚಾರ. ಆ ಪದ್ಧತಿಯು ನಿಜವಾಗಿಯೂ – ಡಾ॥ ಅಂಬೇಡ್ಕರ್ ಅವರ ಮಾತುಗಳನ್ನು ಉದ್ಧರಣ ಮಾಡುವುದಾದರೆ – ಝೀರ್ಣ – ಶೀರ್ಣ ಮತ್ತು ಜರ್ಝರಿತವಾಗಿದೆಯೆ ಮತ್ತು ಆ ಕಾರಣ ಸಂಪೂರ್ಣ ಉದ್ಧಾರ ಅಗತ್ಯವಾಗಿದೆಯೆ, ಅಂದರೆ ವಿಘಟನೆ ಮಾಡಿ, ಪುನರ್ ಸಂಘಟನೆ ಮಾಡಬೇಕಾಗಿದೆಯೆ, ವಾಸ್ತವವಾಗಿ ಪರಿಹಾರ ಮತ್ತು ಪುನರ್ವಸತಿ ಎಂಬರ್ಥದ ಪರಿಸ್ಥಿತಿ ಹಿಂದೂ ಸಮಾಜದಲ್ಲಿ ಸಂಭವಿಸಿದೆಯೆ? ಸಮಸ್ಯೆ ಕೇವಲ ಒಂದು ವೈಚಾರಿಕ ವಿಪ್ಲವ. ಅದು ಕಾನೂನು ಸಿದ್ಧಾಂತದ ಕಪೋಲ–ಕಲ್ಪನೆ. ಈ ವಿಭಜನೆಗೆ, ಈ ಎಲ್ಲ ಚರ್ಚೆಗೆ ಮತ್ತು ಇಷ್ಟೆಲ್ಲ ವಿದ್ವೇಷಕ್ಕೆ ಮೂಲ ಯಾವುದೆಂದರೆ ಸಮಾನತೆಗೆ ಸಂಬಂಧಿಸಿ ಹೊಮ್ಮುವ ಅನಗತ್ಯವಾದ ನಾಜೂಕು ಪ್ರಶ್ನೆ. ಈ ಇಡೀ ಸಂಗತಿ ಒಂದು ಸರಳ ವ್ಯವಹಾರ, ಬೇರೇನೂ ಅಲ್ಲ. ಸಮಯದ ವಿನಾಶಗಳಿಂದ ಈ ಪದ್ಧತಿ ನಿಮ್ಮನ್ನು ರಕ್ಷಿಸಿದೆಯೆ?

**ಡಾ॥ ಮೊನೋ ಮೋಹನದಾಸ್** (ಪಶ್ಚಿಮ ಬಂಗಾಲ : ಸಾಮಾನ್ಯ) : ಆ ಮೂಲಕ ಈ ದೇಶದಲ್ಲಿ ಮುಸ್ಲಿಮರ ಸಂಖ್ಯೆ ಹೆಚ್ಚಾಗಿದೆ.

**ಸ್ಪೀಕರ್ :** ಆರ್ಡರ್, ಆರ್ಡರ್.

ನಮ್ಮೆದುರಿಗೆ ಇರುವ ಪ್ರಶ್ನೆ ಸಮಾಜದ ಸಂರಚನೆ ಅಲ್ಲ. ನಾವು ಹಿಂದೂ ಕೋಡ್‌ನಲ್ಲಿರುವ ಉಪಬಂಧಗಳನ್ನು ಮಾತ್ರ ಚರ್ಚಿಸುತ್ತಿದ್ದೇವೆ. ಆದ್ದರಿಂದ ನಾವು ವಿವರಗಳನ್ನು ಕೆದಕಿ ಪರಿಶೀಲಿಸಬೇಕಾಗಿಲ್ಲ ಅಥವಾ ಇತರ ವಿಷಯಗಳನ್ನು ಪರಿಶೀಲಿಸಬೇಕಾಗಿಲ್ಲ ಅಥವಾ ಇತರ ವಿಷಯಗಳನ್ನು ಪರಿಶೀಲಿಸುವುದೂ

ಅಗತ್ಯವಲ್ಲ. ಇಲ್ಲದಿದ್ದರೆ, ನಾನು ಮಾನ್ಯ ಸದಸ್ಯರಿಗೆ ತಮ್ಮ ಮಾತನ್ನು ನಿಲ್ಲಿಸುವಂತೆ ಕೇಳಿಕೊಳ್ಳಬೇಕಾಗುತ್ತದೆ.

**ಮಿ| ನಝೀರುದ್ದೀನ್ ಅಹಮ್ಮದ್** : ನೀವು ಮಗಳಿಗೆ ಆಸ್ತಿಯಲ್ಲಿ ಪಾಲು ಕೊಟ್ಟರೆ, ಅದನ್ನು ತಪ್ಪಿಸಲು ಪ್ರಯತ್ನಗಳು ನಡೆಯುತ್ತವೆ. ಮರಣ ಶಾಸನಕ್ಕೆ ಸಂಬಂಧಿಸಿದಂತೆ ಬಹಳಷ್ಟು ಪ್ರಕರಣಗಳು ಹುಟ್ಟಿಕೊಳ್ಳುತ್ತವೆ. ತಂದೆಯು ಮೃತನಾಗುತ್ತಲೇ, ಮರಣಶಾಸನಗಳು ಪ್ರಕಟವಾಗುತ್ತವೆ. ವಾಸ್ತವವಾಗಿ ಆ ಮೂಲಕ ಹಲವಾರು ವ್ಯಾಜ್ಯಗಳು ತಲೆದೋರುತ್ತವೆ. ಪುತ್ರರು ಆಸ್ತಿಯನ್ನು ತಮ್ಮ ಕೈಯಲ್ಲಿಯೇ ಇಟ್ಟುಕೊಳ್ಳಲು ಪ್ರಯತ್ನಿಸುತ್ತಾರೆ. ಸಾಯುತ್ತಿರುವ ತಂದೆಯ ಮೇಲೆ ಬಲಪ್ರಯೋಗದ್ವಾರಾ ನಿರ್ದಿಷ್ಟ ಮರಣಶಾಸನ ಬರೆಸುವಂತೆ ಪ್ರಭಾವ ಬೀರಬಹುದು ಅಥವಾ ಖೋಟಾ ಮರಣಶಾಸನಗಳನ್ನು ತಯಾರಿಸಿಕೊಳ್ಳಬಹುದು. ಅಂಥ ಘಟನೆಗಳು ನಡೆದೇ ನಡೆಯುತ್ತವೆ. ವಾಸ್ತವವಾಗಿ, ಈ ಕೆಲವು ವಿಷಯಗಳು ಪರಿಶೀಲನೆಗೆ ತಕ್ಕವುಗಳಾಗಿವೆ.

ಸ್ವಾಮೀ, ಆಮೇಲೆ ವಾರಸಾದ ಸಾಮಾನ್ಯ ಅಂಶ ವಾಸ್ತವವಾಗಿ ಅತ್ಯಂತ ಎಚ್ಚರಿಕೆಯಿಂದ ಪರಿಶೀಲಿಸಬೇಕಾದ ಅಂಶ. ನಾನು ನಿವೇದಿಸುವುದೇನೆಂದರೆ ಏಕಪತ್ನಿ ಪದ್ಧತಿ ತಾತ್ತ್ವಿಕವಾಗಿ ಉತ್ತಮ ಪದ್ಧತಿ. ಆಚರಣೆಯಲ್ಲೂ ಉತ್ತಮವೇ. ಬಹುಸಂಖ್ಯೆಯಲ್ಲಿ ಜನ ಇಬ್ಬರು ಹೆಂಡಂದಿರನ್ನು ಹೊಂದಿರಲು ಇಷ್ಟಪಡುವುದಿಲ್ಲ ಎಂದು ನಾನು ಸಹ ನಂಬಿದ್ದೇನೆ. ಒಬ್ಬಳು ಹೆಂಡತಿಯೇ ದುಬಾರಿ ಮತ್ತು ಸಾಕಷ್ಟು ತೊಂದರೆಗೆ ಮೂಲ. ನಿಜವೆಂದರೆ, ಇಬ್ಬರು ಹೆಂಡಂದಿರು ವಿರಳವೇ. ಅದು ಅಪರೂಪವೇ. ಇಬ್ಬರು ಹೆಂಡಿರು ಬಹಳ ಸಾಮಾನ್ಯವಾಗಿ ಕಂಡುಬರುವುದಿಲ್ಲ. ಆ ಸಂಗತಿ ಅತ್ಯಂತ ವಿರಳ. ಅದು ಕೇವಲ ಕೆಲವು ಅಪವಾದಾತ್ಮಕ ಪ್ರಕರಣಗಳಿಗೆ ಮಾತ್ರ ಸಿಮಿತವಾಗಿದೆ. ಯಾರಿಗೇ ಆಗಲಿ, ರಾಜಕೀಯ ಅಥವಾ ಆರ್ಥಿಕ ಕಾರಣಗಳ ನಿಮಿತ್ತ ಇಬ್ಬರು ಹೆಂಡಂದಿರನ್ನು ಹೊಂದಿರುವುದು ಕಷ್ಟಸಾಧ್ಯ. ಆದರೆ ಇಲ್ಲಿ ನಮ್ಮ ಮುಂದಿರುವ ಪ್ರಶ್ನೆ ಎಂದರೆ ಏಕಪತ್ನೀ ಪದ್ಧತಿಯನ್ನು ನಾವು ಶಾಸನದ ಮೂಲಕ ಜಾರಿಗೊಳಿಸಬೇಕೆ ಅಥವಾ ಸಾರ್ವಜನಿಕ ಅಭಿಪ್ರಾಯದ ಮೂಲಕ ಜಾರಿಗೊಳಿಸಬೇಕೆ? ಕೆಲವು ಪುರುಷರಲ್ಲಿ ಇಬ್ಬರು ಹೆಂಡಂದಿರನ್ನು ಮಾಡಿಕೊಳ್ಳುವ ಪ್ರವೃತ್ತಿ ಇರಬಹುದು; ಕೇವಲ ಸ್ವೇಚ್ಛಾಚಾರಕ್ಕಾಗಿ ಅಲ್ಲ; ಆದರೆ ಪುತ್ರನನ್ನು ಪಡೆಯುವ ಸಲುವಾಗಿ. ಹಿಂದೂಗಳ ಪ್ರಕಾರ ಪುತ್ರನು ತಂದೆಯನ್ನು *ಪುತ್* ಎಂಬ ನಿಶ್ಚಿತ ನರಕದಿಂದ ರಕ್ಷಿಸಲು ಬೇಕಾಗುತ್ತಾನೆ. ಯಾವ ವ್ಯಕ್ತಿಯು ನಿಮ್ಮನ್ನು *ಪುತ್* ಎಂಬ ನರಕದಿಂದ ರಕ್ಷಿಸುತ್ತಾನೋ ಅವನು ಪುತ್ರ. ಇಲ್ಲದಿದ್ದರೆ, ಪುತ್ರನಲ್ಲದ ಆ ಮನುಷ್ಯನು ಖಂಡಿತವಾಗಿಯೂ ನರಕಕ್ಕೆ ಹೋಗುತ್ತಾನೆ. ಹಿಂದೂಗಳ ಪ್ರಕಾರ ಪುತ್ರನನ್ನು ಪಡೆಯುವುದು ಒಂದು ಧಾರ್ಮಿಕ ಅಗತ್ಯ, ಮತ್ತು ಪುತ್ರನನ್ನು ಪಡೆಯಬೇಕಾದಾಗ, ಹೆಂಡತಿಯು ಬಂಜೆ ಆಗಿದ್ದರೆ, ಆ ಮನುಷ್ಯನು ಇನ್ನೊಂದು ಮದುವೆ ಮಾಡಿಕೊಳ್ಳಲು ಯತ್ನಿಸುತ್ತಾನೆ. ಇದು ನನ್ನ ಅನುಭವದಲ್ಲಿ ಜರುಗಿದ ಸಂಗತಿ. ಇದು ಇತರ ಅನೇಕರ ಅನುಭವಕ್ಕೂ ಬಂದಿರಬಹುದು. ಮೊದಲನೆಯ ಹೆಂಡತಿಯು ಬಂಜೆ ಆಗಿದ್ದ ಕಾರಣ ಎರಡನೆಯ ಮದುವೆ ಮಾಡಿಕೊಂಡ ಸಂದರ್ಭಗಳು. ಹಿರಿಯ ಹೆಂಡತಿಯು ತಾನು ಬಂಜೆಯೆಂಬ ಕಾರಣದಿಂದ ವಾಸ್ತವವಾಗಿ ಅವಳೇ ಇನ್ನೊಬ್ಬಳನ್ನು ಮದುವೆ ಆಗುವಂತೆ ಗಂಡನ ಮನಸ್ಸು ಒಲಿಸಿದ್ದು ಅಥವಾ ಒತ್ತಾಯಿಸಿದ್ದು ಮತ್ತು ಹಿರಿಯ ಹೆಂಡತಿಯು ಆ ತರುವಾಯವೂ ಕುಟುಂಬದಲ್ಲಿ ಪಡುತ್ತಿರುವ ಸುಖ–ಶಾಂತಿಯ ಅನೇಕ ಕುಟುಂಬಗಳನ್ನು ನಾನು ಕಂಡಿದ್ದೇನೆ. ಭಾರತದ ಬಂಗಾಲೀ ಮುಸ್ಲಿಮರಲ್ಲಿ ಪುತ್ರನ ಬಗ್ಗೆ ಇದೇ ರೀತಿಯ ಭಾವನೆಯು ಪ್ರಚಲಿತವಾಗಿದೆ.

**ಮಿ| ತಾಜಾಮುಲ್ ಹುಸೇನ್ :** ನನ್ನ ಮಾಹಿತಿಗಾಗಿ ಮತ್ತು ಸದನದ ಸದಸ್ಯರ ಮಾಹಿತಿಗಾಗಿ ನಾನು ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ. ಒಬ್ಬ ಹಿಂದೂ ತಂದೆಗೆ ತನ್ನ ಮೋಕ್ಷದ ಸಲುವಾಗಿ ಒಬ್ಬ

ಪುತ್ರನು ಬೇಕೇ ಬೇಕು. ಹಿಂದೂ ತಾಯಿಗೂ ಅವಳ ಮೋಕ್ಷದ ಸಲುವಾಗಿ ಒಬ್ಬ ಪುತ್ರನು ಬೇಡವೆ? ಬೇಕಾಗಿದ್ದರೆ, ಅವಳಿಗೆ ಬಹುಪತಿತ್ವದ ಹಕ್ಕು ಇರಲೇಬೇಕು.

**ಸ್ಪೀಕರ್ :** ನಮಗೆ ಸದನದ ಹೊರಗೆ ಮಾಹಿತಿಯ ಭಂಡಾರವೇ ಸಿಗುತ್ತದೆ. ಇಲ್ಲಿ, ಸದನದಲ್ಲಿ ನಾವು ಹಿಂದೂ ಕೋಡ್‌ಗೆ ಅಷ್ಟೇ ಸೀಮಿತರಾಗಿ ಇರೋಣ, ಆ ಕುರಿತ ಚರ್ಚೆ ಮುಂದುವರಿಸೋಣ.

**ಮಿ। ನಝೀರುದ್ದೀನ್ ಅಹಮ್ಮದ್ :** ಆದ್ದರಿಂದ, ನಾವು ನಿವೇದಿಸುವುದೇನೆಂದರೆ, ಬಹುಪತ್ನಿ ಪದ್ಧತಿಯು ಭಾವವಾಚಕ ತರ್ಕದ ಅಥವಾ ಭಾವವಾಚಕ ಶಾಸನರಚನೆಯ ದೃಷ್ಟಿಕೋನದಿಂದ ತಿಳಿದುಕೊಂಡಷ್ಟು ಅಪಾಯಕಾರಿಯಲ್ಲ. ಅದನ್ನು ಒಂದು ನಿರ್ದಿಷ್ಟ ಸಂದರ್ಭದಲ್ಲಿ ಪರಿಶೀಲಿಸಬೇಕಾಗುತ್ತದೆ. ಒಬ್ಬ ಹಿಂದೂ ಗಂಡನಿಗೆ ಮಗು ಬೇಕೆಂಬ ಆಸೆಯಿದ್ದರೆ, ಮತ್ತು ಆ ಉದ್ದೇಶಕ್ಕಾಗಿ ಅವನು ಇನ್ನೊಮ್ಮೆ ಮದುವೆ ಮಾಡಿಕೊಳ್ಳಬಯಸಿದರೆ, ಮತ್ತು ಮೊದಲನೆಯ ಹೆಂಡತಿಯು ಝೀವಂತಳಿರುವ ನಿಮಿತ್ತ ಅವನಿಗೆ ಎರಡನೆ ಮದುವೆ ಮಾಡಿಕೊಳ್ಳಲು ಸಾಧ್ಯವಿಲ್ಲದಿರುವಾಗ, ಆ ಮೂಲಕ ವಿವಾಹವಿಚ್ಛೇದನ ವ್ಯವಹರಣೆಗಳಿಗೆ ದಾರಿಯಾಗುವ ಸಂಭವವಿರುತ್ತದೆ. ಏಕಪತ್ನಿ ಪದ್ಧತಿಯ ಉಪಬಂಧ ಮತ್ತು ಮೊದಲನೆಯ ಹೆಂಡತಿಯು ಝೀವಂತಳಿರುವಾಗ ಎರಡನೆಯ ಮದುವೆಗೆ ಪ್ರತಿಬಂಧ, ಅಥವಾ ಮೊದಲನೆಯ ಹೆಂಡತಿಯ ಜತೆಗಿನ ವಿವಾಹವು ಇನ್ನೂ ಅಸ್ತಿತ್ವದಲ್ಲಿರುವ ಕಾರಣ ವಿವಾಹ ವಿಚ್ಛೇದನಕ್ಕೆ ದಾರಿಯಾಗಬಹುದು. ಈ ಸನ್ನಿವೇಶ ಬರಿಯ ಕಪೋಲ ಕಲ್ಪಿತ ಎಂದು ನಾವು ಭಾವಿಸಕೂಡದು. ಇತಿಹಾಸದಲ್ಲಿ ನಿರೂಪಿಸಿರುವ ಪ್ರಕಾರ ಇಂಥ ಸನ್ನಿವೇಶ ಯೂರೋಪ್‌ನಲ್ಲಿ ಘಟಿಸಿದ್ದುಂಟು. ನೆಪೋಲಿಯನ್‌ಗೆ ಜೊಸೆಫೈನ್ ಪ್ರೀತಿಯ ಮಡದಿ. ನೆಪೋಲಿಯನ್‌ಗೆ ಮಕ್ಕಳಿರಲಿಲ್ಲ. ಮತ್ತು ತನ್ನ ಪರಾಕ್ರಮದಿಂದ ಸೃಷ್ಟಿಸಿಕೊಂಡ ವಿಶಾಲ ಸಾಮ್ರಾಜ್ಯದ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗತಕ್ಕವನು ಬೇಕಾಗಿತ್ತು. ವಿವಾಹ ವಿಚ್ಛೇದನ ಮಾಡಿದನು. ಅವನು ಅವಳನ್ನು ಅತಿಯಾಗಿ ಪ್ರೀತಿಸುತ್ತಿದ್ದರೂ ಪುತ್ರನಿಗಾಗಿ ಅಭಿಲಾಷೆ ಮತ್ತು ಕುಟುಂಬದ ವಂಶವೃಕ್ಷವನ್ನು ಶಾಶ್ವತಗೊಳಿಸುವ ಆಕಾಂಕ್ಷೆ – ಇವೆರಡೂ ಆ ಪ್ರೀತಿಯನ್ನು ಹಿಮ್ಮೆಟ್ಟಿಸಿದವು ಮತ್ತು ಅವನು ಒಬ್ಬಳು ರಾಜಕುಮಾರಿಯನ್ನು ವಿವಾಹವಾದನು, ಮತ್ತು ಆಸ್ಟ್ರಿಯಾದ ರಾಜವಂಶದ ಜತೆಗಿನ ನೆಂಟಸ್ತಿಕೆಯ ಮೂಲಕ ತನ್ನ ರಾಜಸತ್ತೆಯನ್ನು ದೃಢಗೊಳಿಸಿಕೊಳ್ಳಲು ಸಾಧ್ಯವಾದೀತೆಂದು ಮತ್ತು ಇಬ್ಬರ ಜತೆಗೆ ಸುಖದಿಂದ ಇರಬಹುದೆಂದು ಭಾವಿಸಿದನು. ಇದು ಒಂದು ಐತಿಹಾಸಿಕ ಉದಾಹರಣೆ.

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್ :** ನೆಪೋಲಿಯನ್‌ಗೆ ಏನಾಯಿತು ?

**ಮಿ। ನಝೀರುದ್ದೀನ್ ಅಹಮ್ಮದ್ :** ಅವನು ಸೇಂಟ್ ಹೆಲೆನಾದಲ್ಲಿ ಅಸುನೀಗಿದನು ಸುಖ – ಶಾಂತಿಯ ಹಂಬಲದಲ್ಲಿ ಸೋತವನಾಗಿ.

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್ :** ಮಹಾಸಾಮ್ರಾಜ್ಯವನ್ನು ಸ್ಥಾಪಿಸುವ ಮಹತ್ವಕಾಂಕ್ಷೆಯನ್ನು ತೊರೆದಿದ್ದರೆ ಸುಖ–ಶಾಂತಿಯನ್ನು ಗೆಲ್ಲುತ್ತಿದ್ದನು.

**ಮಿ। ನಝೀರುದ್ದೀನ್ ಅಹಮ್ಮದ್ :** ಸ್ವಾಮೀ, ಇದು ಇತಿಹಾಸದಲ್ಲಿ ಸಿಗುವ ಒಂದು ಉದಾಹರಣೆ. ಒಬ್ಬ ಹಿಂದೂವನ್ನು ಪುತ್ರನ ಸಲುವಾಗಿ ವಿವಾಹ ಆಗದಂತೆ ತಡೆದರೆ, ಮತ್ತು ಒಬ್ಬ ಪುತ್ರನು ಬೇಕೇ ಬೇಕು ಎಂದು ಅವನಿಗೆ ಅನಿಸಿದರೆ, ಮತ್ತು ತನ್ನ ಹೆಂಡತಿಯು ಪುತ್ರನಿಗೆ ಜನ್ಮ ಕೊಡಲಾರಳು ಎಂದು ನಂಬಿದರೆ, ಆಗ ಅವನು ನುಸುಳುದಾರಿಯನ್ನು ಹಿಡಿಯುತ್ತಾನೆ. ಅನೇಕ ಸಂದರ್ಭಗಳಲ್ಲಿ ಅವನು ಅನುಲೋಮ ಪದ್ಧತಿಯನ್ನು ಅಂಗೀಕರಿಸುವುದುಂಟು. ಯಾವುದೇ ಮನುಷ್ಯನು ಅನುಲೋಮ ವಿವಾಹ ಮಾಡಿಕೊಳ್ಳದ ಹಾಗೆ ಅಥವಾ ತಾಂತ್ರಿಕ ಅಪರಾಧ ಎಸಗದ ಹಾಗೆ ಪ್ರತಿಬಂಧಿಸಬಹುದೆ? – ತಾನು ಮಾಡುತ್ತಿರುವುದು

ತನ್ನ ಆತ್ಮಸಾಕ್ಷಿಯಾಗಿ ನ್ಯಾಯಸಂಗತವೂ ಯಥೋಚಿತವೂ ಆಗಿದೆಯೆಂಬ ಪೂರ್ಣ ಧಾರ್ಮಿಕ ನಂಬುಗೆಯಿಂದ ಹಾಗೆ ಮಾಡುತ್ತಿರುವಾಗ? ಪ್ರತಿಬಂಧಿಸಿದ್ದೇ ಆದರೆ, ಧಾರ್ಮಿಕ ವಿಚಾರಗಳಲ್ಲಿ ಮತ್ತು ಧಾರ್ಮಿಕ ನಂಬುಗೆಗಳಲ್ಲಿ ಆಳವಾಗಿ ಮುಳುಗಿರತಕ್ಕ ಜನಸಮುದಾಯದ ಭಾವನೆಗಳಲ್ಲಿ ಹಸ್ತಕ್ಷೇಪಮಾಡಿದ ಹಾಗೆ ಆಗುತ್ತದೆ. ಇಂಥ ಅಪವಾದಾತ್ಮಕ ಪ್ರಕರಣಗಳಲ್ಲಿ ಈ ವಿಧೇಯಕದ ಬಗ್ಗೆ ಶಾಸನದ್ವಾರಾ ವ್ಯವಹರಿಸುವಂತಿಲ್ಲ, ಜನಾಭಿಪ್ರಾಯವನ್ನು ಆಧರಿಸಿ ವ್ಯವಹರಿಸಬೇಕು. ಬಹುಪತ್ನಿ ಪದ್ಧತಿಯು ಒಳಗಿಂದೊಳಗೇ ಕ್ಷೀಣಿಸುತ್ತ ಹೋಗುತ್ತಿದೆ ಮತ್ತು ನುಸುಳುದಾರಿಗಳನ್ನು ಸೃಷ್ಟಿಸುವ ಸಲುವಾಗಿ ಆ ಪ್ರಕ್ರಿಯೆಯನ್ನು ತ್ವರೆಗೊಳಿಸಬೇಕಾಗಿಲ್ಲ. ಬಹುಪತ್ನಿ ಪದ್ಧತಿಯ ಸಂಪೂರ್ಣ ನಿಷೇಧವು ಒಂದು ದೋಷ ಮತ್ತು ಈ ವಿಧೇಯಕದ ಹಾದಿಯಲ್ಲಿನ ಒಂದು ತೊಡಕು. ಒಬ್ಬ ಮನುಷ್ಯನಿಗೆ ಎರಡನೇ ಹೆಂಡತಿಯು ಬೇಕಾಗಿದ್ದರೆ, ಗಡಿ ದಾಟಿ ಪಾಕಿಸ್ತಾನಕೆ ಹೋಗದಂತೆ ಅವನನ್ನು ಯಾರು ತಡೆಯುತ್ತಾರೆ? (**ಶ್ರೀ ಮಹಾವೀರ ತ್ಯಾಗಿ** : ಎರಡನೆಯ ಗಂಡನ ವಿಚಾರ ಏನು?) ಕೆಲವು ಸ್ಥಳಗಳಲ್ಲಿ ಎರಡನೇ ಗಂಡನ ಪದ್ಧತಿಯು ಸಹ ಪ್ರಚಲಿತವುಂಟು. ಶ್ರೀಮಾನ್ ತ್ಯಾಗಿಯವರಿಗೆ ಇದು ಚೆನ್ನಾಗಿ ಗೊತ್ತು. ಬಹುಪತ್ನಿ ಪದ್ಧತಿಯನ್ನು ಭಾರತದಲ್ಲಿ ನಿಷೇಧಿಸಲಾಗುವುದು. ಆದರೆ ನೀವು ಅದಕ್ಕೆ ಮನ್ನಣೆ ನೀಡಲು ನಿರಾಕರಿಸಬಹುದು. ಆದರೆ ಆ ಮನುಷ್ಯನಿಗೆ ಒಬ್ಬ ಪುತ್ರನು ಅಗತ್ಯವಾಗಿ ಬೇಕು. ಮತ್ತು ಅವನು ತನ್ನ ವಿವಾಹಿತ ಹೆಂಡತಿಯನ್ನು – ಪಾಕಿಸ್ತಾನದಲ್ಲಿ ಮದುವೆಯಾದ ಎರಡನೆಯ ಹೆಂಡತಿಯನ್ನು – ತನ್ನ ಮನೆಗೆ ತಾರದಂತೆ ಪ್ರತಿಬಂಧಿಸುವವರು ಯಾರು? ಅವನ ಮೊದಲನೆಯ ಹೆಂಡತಿಯು ಸಮ್ಮತಿ ಕೊಡಲೂಬಹುದು. ಆಗ ನೀವು ಆಳವಾಗಿ ಬೇರೂರಿರತಕ್ಕ ಹಿಂದೂಗಳ ನಂಬಿಕೆಗಳು ಮತ್ತು ಭಾವನೆಗಳಿಗೆ ವಿರುದ್ಧವಾದ ಒಂದು ಕಾನೂನನ್ನು ತೀರ್ಣಗೊಳಿಸುತ್ತೀರ? ಇವೆಲ್ಲ ವಿಚಾರ ಮಾಡತಕ್ಕ ಗಂಭೀರ ವಿಷಯಗಳು. ಹಿಂದೂಗಳ ಯಥಾರ್ಥವಾದ ತತ್ವಗಳ ಮತ್ತು ಮೂಲಭೂತವಾದ ವಿಚಾರಗಳ ವಿರುದ್ಧ ಹೋಗುವಂಥ ಉಗ್ರ ಶಾಸನಕ್ಕೆ ಇದು ವಿಷಯವೇನೂ ಅಲ್ಲ. ಇಂಥ ಉಗ್ರ ಕಾನೂನನ್ನು ಓಲೈಸುವ ಮುನ್ನ ಈ ವಿಷಯವನ್ನು ಬಹು ಎಚ್ಚರಿಕೆಯಿಂದ ಪರಾಂಬರಿಸಿ ನೋಡಬೇಕು. ಇದಲ್ಲದೆ, ಎರಡನೆಯ ವಿವಾಹದ ಪ್ರಕರಣದಲ್ಲಿ, ದಂಡನೆಗೆ, ಕಾನೂನು ರೀತ್ಯಾ ಶಿಕ್ಷೆಗೆ ಉಪಬಂಧವುಂಟು. ನನ್ನ ನಿವೇದನೆಯೇನೆಂದರೆ, ನಮ್ಮ ಸಾಮಾನ್ಯ ಜನಸಮುದಾಯದಲ್ಲಿ, ಜನಪ್ರಿಯವಾಗಲಾರದಂಥ, ಮತ್ತು ಅನಿವಾರ್ಯವಾಗಿ ನುಸುಳುದಾರಿಗಳಿಗೆ ಮತ್ತು ಉಲ್ಲಂಘನೆಗಳಿಗೆ ದಾರಿಮಾಡಿಕೊಡುವಂಥ ಕಾನೂನನ್ನು ತೀರ್ಣಗೊಳಿಸಕೂಡದು. ಕಾಯ್ದೆಯ (ವಿಧಿನಿಯಮದ)ಗತಿ ಏನಾಯಿತು ನಮಗೆಲ್ಲರಿಗೂ ಗೊತ್ತು. ಶಾರದಾ ಕಾಯ್ದೆಯ ಪ್ರಥಮ ಪರಿಣಾಮ ಏನೆಂದರೆ, ಕಾನೂನು ಜಾರಿಗೆ ಬರುವ ಮುನ್ನವೇ ಅನೇಕ ಬಾಲವಿವಾಹಗಳನ್ನು ನೆರವೇರಿಸಲಾಯಿತು. ಯಾವ ಅನಿಷ್ಟವನ್ನು ತೊಲಗಿಸಲು ಈ ಕಾನೂನು ತರಲಾಯಿತೋ, ಅದರ ಪ್ರಥಮ ಪರಿಣಾಮ ಆ ಅನಿಷ್ಟಕ್ಕೆ ಆಮಂತ್ರಣ ನೀಡುವಲ್ಲಿ ನೆರವಾಯಿತು. ಮತ್ತು ಈ ಸಂಬಂಧದಲ್ಲಿ ಇಂದಿನ ಪರಿಸ್ಥಿತಿಯಾದರೂ ಏನು? ಒಬ್ಬ ಮನುಷ್ಯನಿಗೂ ಮದುವೆ ಮಾಡಬಹುದಾದ ವಯಸ್ಸಿನ – ಶಾರದಾ ಕಾಯ್ದೆ ಮೂಲಕ ಪ್ರಮಾಣಗೊಳಿಸಲಾದ ವಯಸ್ಸಲ್ಲ – ಮತ್ತು ಯೋಗ್ಯ ವರನು ಲಭ್ಯವಿದ್ದರೆ, ಮತ್ತು ಆ ಅಪ್ರಾಪ್ತ ವಯಸ್ಕಳ ವಿವಾಹದ ಕರಾರು ಮಾಡಿಕೊಂಡ ಪಕ್ಷದಲ್ಲಿ, ನೀವು ಆ ತಂದೆಯನ್ನು ಅಥವಾ ಪಾಲಕನನ್ನು ನೈತಿಕವಾಗಿ ದೂಷಿಸಬಹುದೆ? ಆ ಮನುಷ್ಯನ ತಾತ್ತ್ವಿಕ ಕಾನೂನು ಅರ್ಥವನ್ನು ಅಥವಾ ರಾಜಕೀಯ ಅರ್ಥವನ್ನು ಉಲ್ಲಂಘಿಸುತ್ತದೆ ಆ ಕರಾರು ಎಂಬ ಏಕಮಾತ್ರ ನಿಮಿತ್ತ ಅದು ಅಸಮರ್ಥನೀಯವೆ? ಪ್ರಚಲಿತ ಆಚರಣೆಗಳನ್ನು ಕಾನೂನು ದ್ವಾರಾ ಏಕಾಏಕಿ ಅಸಾಧ್ಯಗೊಳಿಸಕೂಡದು. ಹಳೆಯ ಆಚರಣೆಗಳು ಆಯಾ ಜನಸಮುದಾಯದ ನಂಬಿಕೆಗಳಿಗೆ ಮತ್ತು ಪ್ರವೃತ್ತಿಗಳಿಗೆ ಸುಸಂಗತ

ಆಗಿರುತ್ತವೆ. ಸಾರ್ದಾ ಕಾಯ್ದೆಯು ಬಹುಮಟ್ಟಿಗೆ ವಿಫಲಗೊಂಡಿದೆ ಮತ್ತು ಸಾರ್ವಜನಿಕ ಅಭಿಪ್ರಾಯ ಇಷ್ಟೊಂದು ಪ್ರಬಲ ಆಗಿದೆಯಲ್ಲ ಎಂದರೆ ಇಂದು ಶಾರದಾ ಕಾಯ್ದೆ ಉಲ್ಲಂಘನೆ ಆಗಿದೆ ಎಂದು ಆಪಾದಿಸಲಾಗುವ ಸಂದರ್ಭಗಳ ಸಂಬಂಧದಲ್ಲಿ ಯಾವುದೇ ಕಾನೂನು ವ್ಯವಹರಣೆಯು ಆಗುವುದೇ ಅಪರೂಪವಾಗಿದೆ. ವಾಸ್ತವವಾಗಿ ಆ ಶಾಸನವನ್ನು ತಿದ್ದುಪಡಿ ಮೂಲಕ ವಿಧಿಸಲಾಗಿತ್ತು. ಮತ್ತು ಫಿರ್ಯಾದಿದಾರನ ಪ್ರಕ್ರಿಯೆಯ ಹಾದಿಯಲ್ಲಿ ಕೆಲವು ತೊಂದರೆಗಳಿವೆ. ಮೊದಲನೆಯತೊಂದರೆ ಅವನು ವೆಚ್ಚವನ್ನು ಠೇವಣಿ ಇಡಬೇಕು. ಅವನು ಮೊಕದ್ದಮೆಯಲ್ಲಿ ಸೋತರೆ ಆ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು, ಮಾತ್ರವಲ್ಲದೆ ಇನ್ನೂ ಇನ್ನೂ ಇತರ ತೊಂದರೆಗಳುಂಟು. ಪರಿಣಾಮ ಏನಾಯಿತು? ಬಾಲವಿವಾಹಗಳು ಇನ್ನೂ ಪ್ರಚಲಿತವಾಗಿವೆ. ಬಾಲವಿವಾಹಗಳಿಗೆ ಯಾರ ಬೆಂಬಲವೂ ಇಲ್ಲ. ಆದರೆ ಕ್ರಿಮಿನಲ್ ಕಾನೂನು ವ್ಯವಹರಣೆಗಳ ಮೂಲಕವಾಗಲಿ ಬಲಪ್ರಯೋಗದ ಮೂಲಕವಾಗಲಿ ಅವುಗಳನ್ನು ತಡೆಯಲು ಸಾಧ್ಯವಿಲ್ಲ. ಅದಕ್ಕೆ ಜನಸಮುದಾಯದ ಭಾವನೆಗಳ ಸಮರ್ಥನೆ ಬೇಕು. ಸುರಕ್ಷಿತ ಮೇಲ್‌ವರ್ಗದವರಲ್ಲಿ ಬಾಲವಿವಾಹದ ಪ್ರಶ್ನೆಯೇ ಇಲ್ಲ. ಆದರೆ ಬಡವರ ಕಡೆಗೆ ಒಂದಿಷ್ಟು ಗಮನ ಹರಿಸಿ ನೋಡಿ. ಅತ್ಯಂತ ಬಡವರ್ಗದ ವಿವಾಹಯೋಗ್ಯ ವಯಸ್ಸಿಗೆ ತಲುಪಿಲ್ಲದ ಅವಿವಾಹಿತ ಹುಡುಗಿಯರನ್ನು ಮದುವೆ ಮಾಡದೆ ಮತ್ತು ಗಂಡನ ರಕ್ಷಣೆಗೆ ಒಪ್ಪಿಸಿಕೊಡದೆ ಹಾಗೆಯೇ ಬಿಟ್ಟ ಪಕ್ಷದಲ್ಲಿ, ಹಾಗೆಯೇ ಬಿಡುವುದು ಸುರಕ್ಷಿತವಲ್ಲ ಮತ್ತು ಆ ಮೂಲಕ ದುರ್‌ವ್ಯವಹಾರಗಳಿಗೂ ತೊಂದರೆಗಳಿಗೂ ದಾರಿಯಾಗುತ್ತದೆ. ಅವಳು ಶಾಸನ ಸಮ್ಮತ ವಯಸ್ಸಿನವಳು ಆಗುವವರೆಗೆ ಅವಳನ್ನು ಕಾಯುವಂತೆ ಒತ್ತಾಯಕ್ಕೆ ಒಳಪಡಿಸಿದ ಸಂದರ್ಭದಲ್ಲಿ, ಆ ವಯಸ್ಸಿಗೆ ಮದುವೆಯಾಗಲು ಸಿದ್ಧನಾದ ಯಾರೇ ಗಂಡು ಸಿಗಲಿಕ್ಕಿಲ್ಲ ಮತ್ತು ಅವಳ ಮದುವೆಯನ್ನು ಆ ಕೂಡಲೇ ಮಾಡಲಿಕ್ಕೂ ಸಾಧ್ಯವಾಗಲಿಕ್ಕಿಲ್ಲ, ಆ ಮೂಲಕ ಏನೆಲ್ಲ ದುರ್‌ವ್ಯವಹಾರಗಳಿಗೆ ಆಸ್ಪದವಾಗುತ್ತದೆ. ಸ್ವಾಮೀ, ಆದ್ದರಿಂದ ನಾನು ನಿವೇದಿಸುವುದೇನೆಂದರೆ, ಶಾರದಾ ಕಾಯ್ದೆಯ ಗತಿಯನ್ನು ನೆನೆಯುತ್ತ ಕಡ್ಡಾಯ ಏಕಪತ್ನೀ ಪದ್ಧತಿಯ ಕಲ್ಪನೆಯನ್ನು (ವಿಚಾರವನ್ನು) ಸಹ ಎಲ್ಲ ಪರಿಸ್ಥಿತಿಗಳಲ್ಲಿ, ಅದರ ಎಲ್ಲ ಕಠೋರತೆಯಲ್ಲಿ ಮತ್ತು ಯಾವುದೇ ಸಮಂಜಸ ಅಪವಾದಗಳು ಇಲ್ಲದೆಯೆ ಪರಿಶೀಲಿಸಬೇಕು, ಪರ್ಯಾಲೋಚಿಸಬೇಕು. ಸ್ವಾಮೀ, ಈ ವಿಷಯವು ಗಂಭೀರವಾದ ವಾಸ್ತವಿಕವಾದ ಪರಿಗಣನೆಯ ವಿಷಯವೇ ಹೊರತು, ತತ್ತ್ವಗಳು ಮತ್ತು ಘೋಷಣೆಗಳ ಕಾಲ್ಪನಿಕ ವಿಷಯವಲ್ಲ ಎಂದು ಭಾವಿಸಿದ್ದೇನೆ. ಈಗ ನಾನು ವಿವಾಹ ವಿಚ್ಛೇದನದ ಪ್ರಶ್ನೆಗೆ ಬರುತ್ತೇನೆ. ಕುಟುಂಬದಲ್ಲಿನ ಎಲ್ಲ ಅಸಮಾಧಾನ, ಅಶಾಂತಿಗಳಿಗೆ ವಿವಾಹವಿಚ್ಛೇದ ಸರ್ವರೋಗಹರವಲ್ಲ; ಸಕಲ ರೋಗಗಳ ರಾಮಬಾಣವಲ್ಲ. ತನ್ನ ಹೆಂಡತಿ ಜತೆ ತಪ್ಪು ತಿಳಿವಳಿಕೆಯುಂಟಾಗಿಲ್ಲದ ಮನುಷ್ಯನು ಕ್ವಚಿತ್ತಾಗಿಯೇ ಸಿಗುತ್ತಾನೆ. ಅದೇ ರೀತಿ ಆ ಕಾರಣ ಅಸಮಾಧಾನ ತುಂಬಿಲ್ಲದ ಕುಟುಂಬವನ್ನು ಕ್ವಚಿತ್ತಾಗಿಯೇ ಕಾಣಬಹುದು. ಗಂಡ ಹೆಂಡತಿಯ ನಡುವಣ ಸಂಬಂಧವು ಕೇವಲ ಸುಖವೇ ಆಗಿದ್ದರೆ, ಅದು ಸುಖವೇ ಅಲ್ಲ. ಸುಖದಲ್ಲಿ ನಡುನಡುವೆ ದುಃಖದ ಮತ್ತು ಜಗಳಗಳ ಪ್ರಸಂಗಗಳು ತುಂಬಿರದಿದ್ದರೆ, ಅದು ನಿಜವಾದ ಸುಖ ಆಗುವುದಿಲ್ಲ. ವಾಸ್ತವವಾಗಿ, ಈ ತಪ್ಪು ತಿಳಿವಳಿಕೆಗಳು, ಆ ತರುವಾಯ ಅವುಗಳನ್ನು ಹಿಂಬಾಲಿಸಿ ಬರುವ ಪುನರ್ – ಮಿಲನ – ವಿರಹ ಮತ್ತು ಮಿಲನ, ಇವುಗಳೇ ನಮ್ಮ ಸಮಾಜದಲ್ಲಿ ಸುಖಕ್ಕೆ ಸಹಾಯಕವಾಗುತ್ತವೆ. ಆದ್ದರಿಂದ ತಪ್ಪು ತಿಳಿವಳಿಕೆಗಳು ಕೆಲವೊಮ್ಮೆ ಅತ್ಯಗತ್ಯವಾಗಿರುತ್ತವೆ. ನಾನು ಈ ಟಿಪ್ಪಣಿಗಳನ್ನು ಅನುಭವಿಕರಾದ ಪುರುಷರನ್ನು ಸಂಬೋಧಿಸಿ ಹೇಳುತ್ತಿದ್ದೇನೆ. ಹುಚ್ಚರು ಮಾತ್ರ ಇಡೀ ಜೀವನ ಸುಖವಾಗಿರುತ್ತಾರೆ. ಅವನು ಬುದ್ಧಿವಂತನಾಗಿದ್ದರೆ, ಅವನು ಒಂದು ವ್ಯಕ್ತಿತ್ವವನ್ನು ಹೊಂದಿದ್ದರೆ, ಅಭಿಪ್ರಾಯ ಭೇದಗಳು ಉಂಟಾಗುವುದು ಅನಿವಾರ್ಯ. ಆದರೂ ಆಖೈರಾಗಿ ಹೆಂಡತಿಯ ಅಭಿಪ್ರಾಯವೇ

ಮೇಲೆ ಆಗುತ್ತದೆ. ಆದ್ದರಿಂದ ನೀವು ದಂಪತಿಗಳನ್ನು ಕೆಲಕಾಲ ಒಂದೆಡೆ ಜೀವಿಸಲು ಬಿಟ್ಟರೆ ತಪ್ಪುತಿಳಿವಳಿಕೆಗಳು ಶರದೃತುವಿನ ಮೋಡಗಳಂತೆ ತಾವಾಗಿಯೇ ತೊಲಗಿಹೋಗುತ್ತವೆ. ಆದ್ದರಿಂದ, ನಾವು ಅತ್ಯವಸರ ಮಾಡಿ ವಿವಾಹ ವಿಚ್ಛೇದನದ ಬಗ್ಗೆ ಉಪಬಂಧ ಕಲ್ಪಿಸಬಾರದು ಎಂದು ನಿವೇದಿಸಿಕೊಳ್ಳುತ್ತೇನೆ. ಈಗ ಮುಸ್ಲಿಂ ಆಚರಣೆಯ ಸಾದೃಶ್ಯವನ್ನು ಪ್ರಸ್ತಾಪಿಸಲಾಗುತ್ತದೆ. ಮುಸ್ಲಿಮನು ತನ್ನ ಹೆಂಡತಿಯನ್ನು ವಿಚ್ಛೇದನ ಮಾಡಬಹುದು. ಹಾಗಾದರೆ ಆ ಹಕ್ಕು ಹಿಂದೂಗೆ ಯಾಕೆ ಇರಬಾರದು? ಒಬ್ಬ ಕ್ರೈಸ್ತನು ತನ್ನ ಹೆಂಡತಿಯನ್ನು ವಿವಾಹ ವಿಚ್ಛೇದನ ಮಾಡಬಹುದು. ಆದರೆ ಹಿಂದೂಗೆ ಹಾಗೆ ಮಾಡಲು ಅವಕಾಶ ಏಕಿಲ್ಲ? ಈ ಮೂರು ಪದ್ಧತಿಗಳು ಸಂಪೂರ್ಣ ವಿಭಿನ್ನ ಆಗಿವೆ ಮತ್ತು ಈ ವಿಷಯಗಳ ಸಂಬಂಧದಲ್ಲಿ ಆಮೂಲಾಗ್ರವಾಗಿ ವಿಭಿನ್ನವಾಗಿವೆ. ಒಬ್ಬ ಮುಸ್ಲಿಮನು ವ್ಯಾವಹಾರಿಕ ಕಾರಣಗಳಿಗಾಗಿ ತನ್ನ ಹೆಂಡತಿ ವಿವಾಹವಿಚ್ಛೇದನ ಮಾಡಲು ಸ್ವತಂತ್ರನಲ್ಲ. ಅವನು ವಿಚ್ಛೇದನ ಮಾಡಲು ಅನಿರ್ಬಂಧ ಹಕ್ಕು ಹೊಂದಿರುತ್ತಾನೆ, ಆದರೆ ಅವನು ಅಗತ್ಯ ಹಣವನ್ನು ದೊರಕಿಸಿಕೊಳ್ಳಬೇಕಾಗುತ್ತದೆ ಮತ್ತು ಅದು ಸಾಮಾನ್ಯವಾಗಿ ಅವನ ಶಕ್ತಿಗೆ (ಆದಾಯಕ್ಕೆ) ಮೀರಿದ್ದು ಇರುತ್ತದೆ. ಅವನ ಆದಾಯ ರೂ ೧೦,೦೦೦/– ಆಗಿದ್ದರೆ, ಹಣವು ೫೦,೦೦೦/– ರೂಪಾಯಿ ಅಥವಾ ೧ ಲಕ್ಷ ರೂಪಾಯಿ ಆಗುತ್ತದೆ. ಹಣವು ಮುಸ್ಲಿಂ ಗಂಡನ ವಿವಾಹ ವಿಚ್ಛೇದನದ ಅನಿರ್ಬಂಧ ಹಕ್ಕಿನ ಮೇಲೆ ಪರಿಣಾಮಕಾರೀ ವ್ಯಾವಹಾರಿಕ 'ತಡೆ' ಉಂಟು ಎಂದು ಮುಸ್ಲಿಂ ವಿವಾಹ ಕಾನೂನಿನಲ್ಲಿ ಸ್ಪಷ್ಟವಾಗಿ ಉಪಬಂಧಿಸಿದ್ದುಂಟು. ಹೀಗೆ, ಪ್ರತಿ ಮುಸ್ಲಿಂ ಗಂಡನ ಮೇಲೆ ಒಂದು ಪರಿಣಾಮಕಾರೀ ವ್ಯಾವಹಾರಿಕ ತಡೆ ಇರುತ್ತದೆ, ತನ್ನ ಹೆಂಡತಿಯನ್ನು ವಿಚ್ಛೇದನ ಮಾಡಲು ಅವಳ ಮೇಲೆ ಎಷ್ಟೇ ಅಸಮಾಧಾನ ಹೊಂದಿದ್ದರೂ. ಅನೇಕ ಧೈರ್ಯಶಾಲಿ ಗಂಡಂದಿರು ವಿಚ್ಛೇದನಕ್ಕೆ ಪ್ರಯತ್ನಿಸದಂತೆ ಪ್ರತಿಬಂಧಿಸಲು ಇದು ಪರ್ಯಾಪ್ತ ನಿವಾರಕ ಆಗಿದೆ ಎಂದು ಪರಿಗಣಿಸಲಾಗಿದೆ. ಹಿಂದೂ ಗಂಡನಿಗೆ ತನ್ನ ಹೆಂಡತಿಯ ಬಗ್ಗೆ ಅಸಮಾಧಾನ ಆದರೆ, ನಾವು ಆ ಅಸಮಾಧಾನವು ನಿವಾರಣೆಯಾಗಲು ಒಂದಿಷ್ಟು ಸಮಯಾವಕಾಶ ಕೊಡಬೇಕು. ನೀವು ಬಾಗಿಲನು ತೆಗೆದು, ವಿವಾಹವಿಚ್ಛೇದನವನ್ನು ಸುಲಭಗೊಳಿಸಿದರೆ, ಪರಿಣಾಮ ಏನಾಗುವುದೆಂದರೆ, ಪಕ್ಷಕಾರರು ನ್ಯಾಯಾಲಯಗಳಿಗೆ ನುಗ್ಗುತ್ತಾರೆ ಮತ್ತು ಸದಸನದ ಒಂದು ವಿಭಾಗಕ್ಕೆ ಅಭಿಶಾಪ ಆಗಿರುವ ಲಾಯರುಗಳಿಗೆ ಪ್ರಯೋಜನ (ಲಾಭ) ಮಾಡಿಕೊಡುತ್ತಾರೆ. ನ್ಯಾಯಾಲಯಗಳಲ್ಲಿ ವಿವಾಹ ವಿಚ್ಛೇದನ ವ್ಯವಹರಣೆಗಳ ಅನುಭವ ಉಳ್ಳವರು ಎಂಥ ಅಸಹ್ಯವಾದ ಗಲೀಜಾದ ವಿವರಗಳನ್ನು ನಿರೂಪಿಸಲಾಗುತ್ತಿದೆ ಎಂದು ಬಲ್ಲರು; ಯಾರೇ ಸಭ್ಯ ಮನುಷ್ಯನು ಕೇಳಬಾರದ ಮಾತುಗಳು. ವ್ಯಭಿಚಾರವನ್ನು ಅತ್ಯಂತ ಸೂಕ್ಷ್ಮ ಅಂಶಗಳ ಸಮೇತ ರುಜುವಾತುಪಡಿಸಬೇಕಾಗುತ್ತದೆ. ಇಲ್ಲದಿದ್ದರೆ, ವಿವಾಹ ವಿಚ್ಛೇದಕ್ಕೆ ಅನುಮತಿ ದೊರೆಯುವುದಿಲ್ಲ. ವಿವಾಹವಿಚ್ಛೇದಿತ ಕುಟುಂಬಗಳಲ್ಲಿ ಅಸಂತೋಷವು ಇನ್ನಷ್ಟು ಹೆಚ್ಚುತ್ತದೆ. ಕುಟುಂಬದಲ್ಲಿನ ಅಸಂತೋಷಕ್ಕೆ ವಿವಾಹ ವಿಚ್ಛೇದ ರಾಮಬಾಣವಲ್ಲ, ಸರ್ವರೋಗಹರ ಔಷಧವಲ್ಲ. ಹಿಂದೂ ಗಂಡನಿಗೆ ಅಥವಾ ಹೆಂಡತಿಗೆ ನ್ಯಾಯಾಲಯಕ್ಕೆ ಧಾವಿಸುವ ಹಕ್ಕು ಕೊಟ್ಟರೆ ಪರಿಣಾಮ ಏನಾಗುವುದೆಂದರೆ ಕಾಲಾಂತರದಲ್ಲಿ ಮಾಯವಾಗಬಹುದಾಗಿದ್ದ ತಾತ್ಕಾಲಿಕ ತಪ್ಪು ತಿಳಿವಳಿಕೆಗಳು ಆಜೀವನ ಅಸಂತೋಷವಾಗಿ ಪರಿವರ್ತನಗೊಳ್ಳುತ್ತವೆ. ಆಸ್ತಿತ್ವದಲ್ಲಿರುವ ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನದಲ್ಲಿ ನೀವು ಅನೇಕ ಸಮಸ್ಯೆಗಳನ್ನು ಸೃಷ್ಟಿಸಿಕೊಳ್ಳುತ್ತೀರ. ಈಗ ಸ್ಪೀಕರ್ ಅವರು ಅಧ್ಯಕ್ಷ ಸ್ಥಾನವನ್ನು ತೆರವು ಮಾಡಿದರು. ಆಗ ಡೆಪ್ಯುಟಿ ಸ್ಪೀಕರ್ (ಶ್ರೀ ಅನಂತಶಯನಂ ಅಯ್ಯಂಗಾರ್) ಸ್ಥಾನವನ್ನು ವಹಿಸಿಕೊಂಡರು.

ನ್ಯಾಯಾಲಯಕ್ಕೆ ಮೊರೆಹೋಗುವ ಅವಕಾಶವನ್ನು ಒದಗಿಸಿದರೆ, ಈ ಉಪಬಂಧದ ಪ್ರಯೋಜನವನ್ನು

ಹೆಣ್ಣಿಗಿಂತ ಗಂಡು ಹೆಚ್ಚಾಗಿ ಪಡೆಯುತ್ತಾನೆ. ಸಂಕಷ್ಟಕ್ಕೆ ಒಳಗಾದ ಹೆಣ್ಣಿಗೆ, ವಿವಾಹವಿಚ್ಛೇದನ ವ್ಯವಹರಣೆಗಳಲ್ಲಿ ಪರಿಹಾರ ದೊರೆಯುತ್ತದೆ ಎಂದು ಹೇಳುವುದು ವ್ಯರ್ಥ ಪ್ರವಾದ, ಯಾಕೆಂದರೆ ಬಹುತೇಕ ಪ್ರಸಂಗಗಳಲ್ಲಿ ಅವಳೇ ಉತ್ಪೀಡನಕ್ಕೆ ಬಲಿಯಾದವಳು ಆಗಿರುತ್ತಾಳೆ. ಗಂಡನೇ ಈ ವಿಧೇಯಕದಲ್ಲಿ ನಮೂದಿಸಲಾದ ಆ ತಪ್ಪು ಈ ತಪ್ಪು ಎಂದು ಆಪಾದಿಸುತ್ತ ಹೆಚ್ಚು ಸಲ ನ್ಯಾಯಾಲಯಕ್ಕೆ ಹೋಗುತ್ತಾನೆ, ಮತ್ತು ಏಕಪಕ್ಷೀಯ ವಿವಾಹವಿಚ್ಛೇದನ ಪಡೆಯುತ್ತಾನೆ. ನಮ್ಮ ಸಮಾಜವನ್ನು ಬಲ್ಲ ಯಾರೇ ಆದರೂ ಹೆಂಗಸಿಗೆ ನ್ಯಾಯಾಲಯಕ್ಕೆ ಹೋಗಲು ಮತ್ತು ಅಲ್ಲಿ ತನ್ನ ವಿರುದ್ಧ ಮಾಡಲಾದ ಆಪಾದನೆಗಳನ್ನು ಸುಳ್ಳೆಂದು ರುಜುವಾತುಪಡಿಸಲು ಏನು ಅವಕಾಶ ಇದೆ ಎಂದು ಕಲ್ಪಿಸಿಕೊಳ್ಳಬಹುದು. ಗಂಡನು ತೊರೆಯಲು ಮನಸ್ಸು ಮಾಡಿದ ಹೆಣ್ಣಿನ ಮೊಕದ್ದಮೆಯಲ್ಲಿ ಪ್ರತಿವಾದ ಮಾಡಲು ಯಾರು ತಾನೆ ಮುಂದೆ ಬರುತ್ತಾರೆ? ನ್ಯಾಯಾಲಯಕ್ಕೆ ಹೆಚ್ಚು ಸಲ ಧಾವಿಸುವವನು ಪುರುಷನೇ. ಇಷ್ಟೇ ಅಲ್ಲದೆ, ಹೆಂಡತಿಯು ಬಂಜೆಯಾಗಿದ್ದರೆ ಮತ್ತು ಇನ್ನೊಂದು ಮದುವೆಯಾಗಿ ಪುತ್ರನನ್ನು ಪಡೆಯುವ ಹಂಬಲವಿದ್ದರೆ, ನ್ಯಾಯಾಲಯಕ್ಕೆ ಧಾವಿಸುವ ಪ್ರವೃತ್ತಿಯು ಉಲ್ಬಣಗೊಳ್ಳುತ್ತದೆ. ಒಬ್ಬ ಮನುಷ್ಯನಿಗೆ ಅವನ ಹೆಂಡತಿಯ ವಿರುದ್ಧ ವಿವಾಹವಿಚ್ಛೇದನ ದೊರೆತರೆ, ಆ ಹೆಣ್ಣಿನ ಅವಸ್ಥೆ ಏನು? ವಿವಾಹವಿಚ್ಛೇದಿತಳಾದ ಬಳಿಕ ಅವಳು ಗಂಡ ಇಲ್ಲದ ಹೆಣ್ಣು ಆಗುತ್ತಾಳೆ. ಬದುಕಿನ ನೈತಿಕ ಅಥವಾ ದೈಹಿಕ ಝೀವನದ ಆಧಾರವಿಲ್ಲದವಳಾಗುತ್ತಾಳೆ. ಅವಳಿಗೆ ಯಾರು ಸ್ನೇಹಿತರಾಗುತ್ತಾರೆ? ಈ ವಿಧೇಯಕವನ್ನು ಪ್ರಸ್ತಾವಿಸಿದ ಮಹಾನುಭಾವರೆ? ಅವರು ಮುಂದೆ ಬರುತ್ತಾರೆ ಎಂದು ನಾನು ಎಣಿಸುವುದಿಲ್ಲ. ಅವಳು ಎಲ್ಲಿ, ತನ್ನ ಸೋದರನ ಮನೆಗೆ ಹೋಗುತ್ತಾಳೆಯೇ? ಅವರು ಮುಂದೆ ಬರುತ್ತಾರೆ ಎಂದು ನಾನು ಎಣಿಸುವುದಿಲ್ಲ. ಅವಳು ಎಲ್ಲಿ, ತನ್ನ ಸೋದರನ ಮನೆಗೆ ಹೋಗುತ್ತಾಳೆಯೆ? ಇಲ್ಲ, ಅವಳ ಕುಟುಂಬದ ಆಸ್ತಿಯಲ್ಲಿ ತನ್ನ ಪಾಲನ್ನು, ಈಗ ಅವಳನ್ನು ತೊರೆದಿರುವ ಗಂಡನ ಪ್ರಯೋಜನಾರ್ಥ ಪಡೆದವಳಾಗಿ, ತನ್ನ ಸೋದರನ ಹಗೆತನವನ್ನು ಕಟ್ಟಿಕೊಂಡಿಲ್ಲವೆ? ಪರಿಣಾಮವೆಂದರೆ ಅವಳ ತಂದೆಯ ಕಡೆಯ ಸಂಬಂಧಿಕರು ಅವಳ ಈ ಸಂಕಷ್ಟದ ಸಮಯದಲ್ಲಿ ಅವಳತ್ತ ಸಂಪೂರ್ಣ ಅನಾಸಕ್ತಿ ತೋರುತ್ತಾರೆ. ಆಗ ಅವಳು ತನ್ನ ಉಪಝೀವನದ ಬಗ್ಗೆ, ಝೀವನ ನಿರ್ವಹಣೆಯ ಬಗ್ಗೆ ಏನು ಮಾಡುತ್ತಾಳೆ?

**ಮಾನ್ಯ ಡಾ|| ಬಿ. ಆರ್. ಅಂಬೇಡ್ಕರ್ :** ಅವಳು ಮಿ| ನಝೀರುದ್ದೀನ್ ಅಹಮ್ಮದ್ ಅವರನ್ನು ಮದುವೆ ಆಗುತ್ತಾಳೆ.

**ಮಿ| ನಝೀರುದ್ದೀನ್ ಅಹಮ್ಮದ್ :** ನಾನೇನು ಹಾಗೆ ಭಾವಿಸುವುದಿಲ್ಲ. ಸ್ವಾಮೀ, ವಿವಾಹವಿಚ್ಛೇದಿತಳಾದ ಯಾರೇ ಹೆಣ್ಣುಮಗಳು, ಅವಳಲ್ಲಿ ಏನಾದರೂ ಅಭಿರುಚಿಯ ಭಾವನೆಯು ಇದ್ದರೆ, ನನ್ನನ್ನು ಆಯ್ಕೆ ಮಾಡುತ್ತಾಳೆ ಎಂದು ಭಾವಿಸುವುದಿಲ್ಲ. ನನ್ನ ಅನಿಸಿಕೆಯೆಂದರೆ ಮಾನ್ಯ ಮಂತ್ರಿಗಳು ನನಗಿಂತ ಉತ್ತಮ ಆಯ್ಕೆ ಆಗುತ್ತಾರೆ.

**ಡೆಪ್ಯುಟಿ ಸ್ಪೀಕರ್ :** ದೇವರೆ, ಹಾಗೇನೂ ಘಟಿಸದಿರಲಿ. ನಾವೀಗ ವ್ಯಕ್ತಿಗತ ಉಲ್ಲೇಖಗಳನ್ನು ಮಾಡುವುದು ಬೇಡ.

**ಮಿ| ನಝೀರುದ್ದೀನ್ ಅಹಮ್ಮದ್ :** ಅಧ್ಯಕ್ಷರು ಅದನ್ನು ಗಂಭೀರವಾಗಿ ಆಲಿಸಬೇಕು ಎಂಬ ಉದ್ದೇಶದಿಂದ ಮಾಡಿದ್ದ ಆ ಉಲ್ಲೇಖಗಳು.

**ಡೆಪ್ಯುಟಿ ಸ್ಪೀಕರ್ :** ಆದರೆ ನಾನು ಗಂಭೀರವಾಗಿ ಕೇಳುತ್ತಿದ್ದೇನೆ. ಮಾನ್ಯ ಸದಸ್ಯರು 'ಆ ಹೆಣ್ಣು ಎಲ್ಲಿ ಹೋಗುತ್ತಾಳೆ' ಎಂದು ಪ್ರಶ್ನೆ ಕೇಳಿದಾಗ, ಮಾನ್ಯ ಮಂತ್ರಿಗಳಿಂದ ಆ ಟಿಪ್ಪಣಿಯನ್ನು ಆಮಂತ್ರಿಸಿದ್ದುಂಟು.

**ಮಾನ್ಯ ಡಾ|| ಬಿ. ಆರ್. ಅಂಬೇಡ್ಕರ್ :** ಅವರು ಅಷ್ಟೊಂದು ಕಳಕಳಿಯನ್ನು ವ್ಯಕ್ತಗೊಳಿಸುತ್ತಿದ್ದ

ನಿಮಿತ್ತ, ಅವರ ಮನಸ್ಸಿನ ಪ್ರಯೋಜನಕ್ಕಾಗಿ ಹಾಗೆ ಹೇಳಬೇಕಾಯಿತು.

**ಮಿ। ನಝೀರುದ್ದೀನ್ ಅಹಮ್ಮದ್ :** ಅದನ್ನು ನಾನು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಬೇಸರ ಆಗಲಿಲ್ಲ. ತಮಾಷೆಯಿಂದ ನನಗೆ ಖುಷಿ ಆಯಿತು. ತಮಾಷೆ ಒತ್ತಟ್ಟಿಗಿರಲಿ. ನಾನೀಗ ಗಂಭೀರವಾಗಿ ಇನ್ನೊಮ್ಮೆ ಕೇಳುತ್ತಿದ್ದೇನೆ. ಅವಳು ಎಲ್ಲಿಗೆ ಹೋಗುತ್ತಾಳೆ? ವಿವಾಹವಿಚ್ಛೇದಿತಳಾದ ಯುರೋಪಿಯನ್ ಮಹಿಳೆಯ ದೃಷ್ಟಾಂತ ತೆಗೆದುಕೊಳ್ಳಿ. ಅವಳ ಹತ್ತಿರ ಸಂಪನ್ಮೂಲಗಳು ಇರುತ್ತವೆ. ಅವಳು ಶಿಕ್ಷಣ ಪಡೆದಿರುತ್ತಾಳೆ. ಅವಳು ನೌಕರಿ ದೊರಕಿಸಿಕೊಳ್ಳಬಲ್ಲಳು. ಅವಳು ಶಾರ್ಟ್‌ಹ್ಯಾಂಡ್ ಟೈಪಿಸ್ಟ್ ಆಗಬಹುದು. ಅವಳಿಗೆ ನಮ್ಮ ರಾಯಭಾರ ಕಛೇರಿಗಳ ಪೈಕಿ ಯಾವುದೇ ಕಚೇರಿಯಲ್ಲಿ ನೌಕರಿ ಸಿಗುತ್ತದೆ. ಪ್ಲೇನ್‌ನಲ್ಲಿ ಫ್ರೀ ಲಿಫ್ಟ್ ಸಿಗುತ್ತದೆ. ಹಾಗೆಯೇ ಸಂಬಳ ಮತ್ತು ಭತ್ಯೆಗಳೂ ದೊರೆಯುತ್ತವೆ. ಅಂಥ ಮಹಿಳೆಯರು ಸಂಪೂರ್ಣ ಸ್ವತಂತ್ರರು. ಅವರು ಅಪರಿಚಿತರ ಜತೆ ಸ್ನೇಹ ಬೆಳೆಸಬಹುದು. ಅವರಿಗೆ ತಮ್ಮ ಮೇಲೆಯೇ ಅವಲಂಬಿಸಲು ತರಬೇತಿ ಕೊಡಲಾಗುತ್ತದೆ, ಮತ್ತು ಹಾಗೆ ತಮ್ಮ ಕಾಲ ಮೇಲೆ ನಿಲ್ಲುವುದು ಅವರಿಗೆ ರೂಢಿಯಾಗಿ ಹೋಗಿರುತ್ತದೆ.

ಹೀಗೆ, ನಾಗರಿಕಳಾದ ಯುರೋಪು ಮಹಿಳೆಯು ತನ್ನ ಕಾಲ ಮೇಲೆ ನಿಲ್ಲುವ ತಾಕತ್ತು ಹೊಂದಿರುತ್ತಾಳೆ. ಆದ್ದರಿಂದ ಅವಳ ಸ್ಥಾನವು, ನಮ್ಮ ಮಹಿಳೆಯರಿಗೆ, – ಅಂದರೆ ಮುಂದುವರಿದ ಬಣ್ಣದ ಬೀಸಣಿಗೆಗಳಲ್ಲ, ತಂದೆಯ ಮತ್ತು ಗಂಡನ ಸಂಬಂಧಿಕರಿಂದ ಕಡೆಗಣಿಸಲಾದ ಮತ್ತು ಯಾರೂ ಸ್ನೇಹಿತರು ಇಲ್ಲದ ಬಡ ಮಹಿಳೆಯ ಸ್ಥಾನಕ್ಕಿಂತ ವಿಭಿನ್ನವಾದುದು. ವಿವಾಹ ವಿಚ್ಛೇದಿತಳಾದ ಮಹಿಳೆಗೆ, ಮಾನ್ಯ ಕಾನೂನು ಮಂತ್ರಿಗಳು ಹಾಸ್ಯಮಯವಾಗಿ ಹೇಳಿದ ಹಾಗೆ, ಒಬ್ಬ ಗಂಡನನ್ನು ದೊರಕಿಸಿಕೊಳ್ಳುವುದು ಸುಲಭಸಾಧ್ಯವಲ್ಲ. ಅವಳು ಎರಡನೆಯ ವಿವಾಹಕ್ಕೆ ಸಿದ್ಧಳಿದ್ದರೂ ಸರಿಯಾದ ಗಂಡನು ಒಡನೆಯೇ ಸಿಗುವುದು ಕಷ್ಟವೇ. ಹೀಗೆ, ಅವಳ ಸ್ಥಿತಿಯು ಅತ್ಯಂತ ಸಂಕಷ್ಟಮಯ ಆಗುತ್ತದೆ. ಮತ್ತು ಅಂಥ ಮಹಿಳೆಯರು ವಿವಾಹವಿಚ್ಛೇದನಕ್ಕೆ ಅತ್ಯಂತ ನಿಕೃಷ್ಟ ಬಲಿಗಳಾಗುತ್ತಾರೆ. ಆದ್ದರಿಂದ ನ್ಯಾಯಾಲಯದಲ್ಲಿ ಆಪಾದನೆಗಳನ್ನು ವ್ಯವಹರಿಸುವ ವಿಚಾರವು ಯೋಚಿಸಲಾರದಷ್ಟು ಅತಿಗಂಭೀರ ಆಗುತ್ತದೆ. ಅಂಥ ಪ್ರಕರಣಗಳಲ್ಲಿ ನ್ಯಾಯಾಲಯಗಳಲ್ಲಿನ ವ್ಯವಹರಣೆಗಳು ಅತ್ಯಂತ ಕೀಳು ಮಟ್ಟದ್ದಾಗಿರಿರುವ ನಿಮಿತ್ತ, ನಮ್ಮ ಸಮಾಜದ ಇಂದಿನ ಪರಿಸ್ಥಿತಿಯಲ್ಲಿ, ಗಂಡನಿಗೆ ಮತ್ತು ಹೆಂಡತಿಗೆ ನ್ಯಾಯಾಲಯಕ್ಕೆ ಧಾವಿಸಲು ಅವಕಾಶ ಒದಗಿಸುವುದು ನಮಗೆ ಖಂಡಿತವಾಗಿಯೂ ಅಸಾಧ್ಯ ವಿಷಯ ಆಗುತ್ತದೆ.

ಈ ಸಮಸ್ಯೆಗೆ ಇನ್ನೂ ಒಂದು ಮುಖವುಂಟು; ಬುಡಕಟ್ಟು ಮತ್ತು ಇತರ ಜನಗಳಲ್ಲಿ ಒಂದು ಬಗೆಯ ವಾಡಿಕೆಯ ವಿವಾಹವಿಚ್ಛೇದ ಪದ್ಧತಿ ಉಂಟು. ಅದು ಸರಳ ಔಪಚಾರಿಕತೆಗಳನ್ನು ಒಳಗೊಂಡಿರುತ್ತದೆ. ಅವರಿಗೆ ವಿವಾಹ ವಿಚ್ಛೇದನವು ಅಗ್ಗವಾಗಿ ಮತ್ತು ತ್ವರಿತವಾಗಿ ದೊರೆಯುತ್ತದೆ. ಆದರೆ ನ್ಯಾಯಾಲಯಕ್ಕೆ ಹೋಗುವುದನ್ನು ಅವರಿಗೆ ಕಡ್ಡಾಯಗೊಳಿಸಿದರೆ, ಅವರಿಗೆ ಹಣಕಾಸು ಮತ್ತು ಇತರ ಕಾರಣಗಳಿಂದಾಗಿ ಹಾಗೆ ನ್ಯಾಯಾಲಯಕ್ಕೆ ಹೋಗಲು ಸಾಧ್ಯವಾಗಲಿಕ್ಕಿಲ್ಲ. ಮತ್ತು ಯಾವ ವಿವಾಹವಿಚ್ಛೇದನವು ಅವರಿಗೆ ಆತನಕ ಸುಲಭವೂ ಅಗ್ಗವೂ ಆಗಿರುತ್ತಿತ್ತೋ ಅದು ದುಬಾರಿಯಾಗುತ್ತದೆ, ದುಸ್ಸಾಧ್ಯವಾಗುತ್ತದೆ. ಹೀಗೆ ಏಕರೂಪತೆಯನ್ನು ಸಾಧಿಸಲು ಹೊರಟಿರುವ ತಾವು ವಿಷಯಗಳನ್ನು ಜಟಿಲಗೊಳಿಸುತ್ತಿದ್ದೀರ. ಕಾನೂನು ಸೈದ್ಧಾಂತಿಕವಾಗಿ ಏಕರೂಪ ಆಗದಿರಬಹುದು. ಆದರೆ ಬಡಜನರ ವಿರುದ್ಧ ಕಠೋರವಾಗಿ ವ್ಯವಹರಿಸುತ್ತದೆ. ಸರಳ ವಿವಾಹವಿಚ್ಛೇದನದ ಹೆಸರಿನಲ್ಲಿ ಜನಗಳೂ ನ್ಯಾಯಾಲಯಗಳಿಗೆ ಧಾವಿಸುತ್ತಾರೆ. ಆದರೆ ನಿಜಸಂಗತಿ ಎಂದರೆ, ಸಮಯವು ಪುನರ್ಮಿಲನವನ್ನು ಸಾಧಿಸುವ ಸಂದರ್ಭಗಳಲ್ಲಿ, ಪರಿವಾರದ ಸುಖಶಾಂತಿ

ವಿಚ್ಛಿನ್ನವಾಗುತ್ತದೆ ಮತ್ತು ಆ ಪಕ್ಷಕಾರರು ಮತ್ತು ಸಮಾಜವು ಆಮೇಲೆ ಪಶ್ಚಾತ್ತಾಪ ಪಡುತ್ತದೆ. ಅಂಥ ಬಡಜನರ ಸರಳ ಝೀವನ ವಿಧಾನಗಳ ಮೇಲೆ ಈ ಕೃತಕ ಕಾನೂನನ್ನು ಹೇರುವುದೆಂದರೆ ಬಹಳ ಕಠೋರ ಕ್ರಮವಾಗುತ್ತದೆ. ಆದ್ದರಿಂದ ವೆಚ್ಚವು ಅಧಿಕವಾಗುತ್ತದೆ; ಪ್ರತಿಯೊಂದು ಡಿಕ್ರಿಗೂ ನ್ಯಾಯಾಲಯದ ತೀರ್ಮಾನದ ಸಮರ್ಥನೆ ಬೇಕಾಗುತ್ತದೆ, ಮತ್ತು ಅದೆಲ್ಲ ದುಬಾರಿ ವ್ಯವಹಾರ ಆಗುತ್ತದೆ. ನನ್ನ ನಿವೇದನೆಯೇನೆಂದರೆ, ಇವೆಲ್ಲವುಗಳಿಗೆ ಬದಲಾಗಿ ಈ ಪಕ್ಷಕಾರರನ್ನು ಅವರೇ ನಿರ್ಣಯ ತೆಗೆದುಕೊಳ್ಳಲು ಬಿಡಬೇಕು. ಈ ರೀತಿ ವಿವಾಹ ವಿಚ್ಛೇದನವನ್ನು ಪ್ರಸ್ತಾಪಿಸುವುದೆಂದರೆ, ನಾಗರಿಕತೆಯ ಮತ್ತು ತರಬೇತಿಯ ವಿಭಿನ್ನ ಹಂತಗಳಲ್ಲಿರುವ ಎಲ್ಲ ವರ್ಗದ ಜನಸಮುದಾಯಗಳಿಗೂ ಒಂದೇ ನಿಯಮವು ಅನ್ವಯವಾಗುವ ಹಾಗೆ ಮಾಡುವುದೆಂದರೆ ಅತ್ಯಂತ ಅಪಾಯಕಾರಿ. ತಮ್ಮ ವಾದಗಳನ್ನು ಉದ್ಧರಣ ಮಾಡುವುದು ಇಲ್ಲಿಯ ಜನರಿಗೆ ರೂಢಿ. ನಾನೂ ಒಂದು ಶ್ಲೋಕವನ್ನು ಹೇಳಲು ಪ್ರಯತ್ನ ಮಾಡುತ್ತೇನೆ. ಅದರ ಅರ್ಥ ಹೀಗಿದೆ: ಎರಡು ಆಡುಗಳು ಕಾದಾಡುವಾಗ, ಅವು ತಮ್ಮ ಹಿಂಗಾಲುಗಳ ಮೇಲೆ ನಿಲ್ಲುತ್ತವೆ. ಇನ್ನೇನು ಕೋಡುಗಳ ಘೋರ ಸಂಘರ್ಷ ಸನ್ನಿಹಿತ ಎಂಬ ಹಾಗೆ ತೋರುತ್ತದೆ; ಆದರೆ ವಾಸ್ತವಿಕ ಸಂಘರ್ಷ ಅತ್ಯಲ್ಪವಾಗಿರುತ್ತದೆ. ಸಹಸ್ರಾರು ಋಷಿಗಳು ಶ್ರಾದ್ಧಕ್ಕಾಗಿ ಸಂಭ್ರಮದಿಂದ ಸೇರುತ್ತಾರೆ. ಆದರೆ ಆಹಾರದ ಅತ್ಯಂತ ಸೂಕ್ಷ್ಮರಾಶಿಯು ಪರ್ಯಾಪ್ತವಾಗುತ್ತದೆ. ಪ್ರಭಾತಕಾಲದ ಮೇಘದ ಗರ್ಜನೆಯು ಭಾರೀ ಮಳೆಯ ಸನ್ನಾಹವಾಗಿ ತೋರುತ್ತದೆ. ಆದರೆ ಅತ್ಯಲ್ಪ ಮಳೆಯಲ್ಲಿ ಕೊನೆಗಾಣುತ್ತದೆ; ದಾಂಪತ್ಯ ಕಲಹಗಳೂ ಹಾಗೆಯೇ; ಗಂಭೀರವಿಲ್ಲದೆ ಕೊನೆಗಾಣುತ್ತವೆ.

ಸಂಸಾರದಲ್ಲಿ ಕಲಹಗಳು ಸ್ವಾಭಾವಿಕ, ಸಾಮಾಜಿಕ ಶಕ್ತಿಗಳು ಪುನರ್ಮಿಲನವನ್ನು ಸಾಧಿಸಲು ಅವಕಾಶ ಕೊಡಬೇಕು.

ವಿವಾಹ ವಿಚ್ಛೇದನಕ್ಕೆ ಬದಲಾಗಿ ನೀವು ಅವರಿಗೆ ಸಮಯವನ್ನು ಒದಗಿಸಬೇಕು. ವಿವಾಹವಿಚ್ಛೇದನದ ಪ್ರಶ್ನೆಯು ಹಾಗೇನು ಒಂದೇ ದಿಕ್ಕಿನ ಸಂಚಾರವಲ್ಲ. ಅದನ್ನು ಪ್ರತಿಯೊಂದು ದೃಷ್ಟಿಕೋನದಿಂದಲೂ ಪರಿಶೀಲಿಸಬೇಕು. ಮಾನ್ಯ ಕಾನೂನು ಮಂತ್ರಿಗಳು ಒಂದು ವಿನೂತನ ವಾದವನ್ನು ಮಂಡಿಸಿದ್ದಾರೆ. ಅವರ ಪ್ರಕಾರ, ಜನಸಮುದಾಯದ ಪೈಕಿ ಹಲವು ಜನರಲ್ಲಿ ವಿವಾಹ ವಿಚ್ಛೇದನದ ರೂಢಿಯುಂಟು. ಆದಕಾರಣ ಶೇಕಡ ೯೦ರಷ್ಟು ಜನಸಮುದಾಯದ ಕಾನೂನನ್ನು ಉಳಿದ ಶೇಕಡ ೧೦ರಷ್ಟು ಜನಸಮುದಾಯಕ್ಕೆ ಅನ್ವಯವಾಗುವಂತೆ ಮಾಡುವುದು ಯಥಾಯೋಗ್ಯವೂ ಯಥೋಚಿತವೂ ಆಗುತ್ತದೆ.

ನ್ಯಾಯಾಲಯಗಳಿಗೆ ಹೋಗಬಹುದಾದ ಸುಲಭ ಮಾರ್ಗಗಳನ್ನು ಪಡೆದಿರುವ ಈಚಿನ ದಿನಗಳಲ್ಲಿ ಈ ವಿಧಾನಗಳ ಲಾಭವನ್ನು ಧನಿಕವರ್ಗದವರು ಪಡೆಯುವರೇ ಹೊರತು ಬಡವರಲ್ಲ. ಆದುದರಿಂದ ವಿವಾಹ ವಿಚ್ಛೇದನದ ವಿಷಯವನ್ನು ಜನತೆಯ ಸಮ್ಮತಿ ಪಡೆದು ನೀಡುವುದು ಸೂಕ್ತ. ವಿಶೇಷ ಸಂದರ್ಭಗಳಲ್ಲಿ ಪತ್ನಿಯ ಸಮ್ಮತಿಯನ್ನು ಪಡೆದ ನಂತರವೇ ಎರಡನೆಯ ಮದುವೆಗೆ ಅವಕಾಶ ನೀಡಬಹುದು. ಏಕೆಂದರೆ ಬಹುಪತ್ನಿ ಪದ್ಧತಿಯು ಅವಸಾನ ಹೊಂದುತ್ತಿರುವ ಸಮಯದಲ್ಲಿ ಅದನ್ನು ಕಾನೂನು ಬೆಂಬಲದಿಂದ ಪ್ರೋತ್ಸಾಹಿಸುವುದು ಸರಿಯಲ್ಲ. ಅಲ್ಲದೆ ವಿವಾಹ ವಿಚ್ಛೇದನ ಪದ್ಧತಿಯು ವ್ಯಕ್ತಿಯನ್ನು ಪಾಕಿಸ್ತಾನ, ಬರ್ಮಾ ಅಥವಾ ಮಲೇಶಿಯಾ ದೇಶಗಳಿಗೆ ತೆರಳಿ ಅಲ್ಲಿ ಮತ್ತೊಂದು ವಿವಾಹ ಮಾಡಿಕೊಂಡು ಮರಳಿ ಬರುವುದಕ್ಕೆ ಅವಕಾಶ ನೀಡಬಹುದು. ಆದುದರಿಂದ ಸಮಾಜವು ಏಕಪತ್ನಿ ವ್ಯವಸ್ಥೆ ಹಾಗೂ ವಿವಾಹ ವಿಚ್ಛೇದನಗಳ ಸ್ವರೂಪಗಳ ಬಗೆಗೆ ಸಮಂಜಸವಾಗಿ ಅರಿವನ್ನು ಪಡೆಯುವ ಅವಧಿಯವರೆಗೂ ಈ ಕ್ರಮವನ್ನು ಕೈಗೆತ್ತಿಕೊಳ್ಳದಿರುವುದು ಸೂಕ್ತ. ಹೀಗಾಗಿ ಈ ದಿಶೆಯಲ್ಲಿ ನ್ಯಾಯಾಲಯದ ವಿಚಾರಣೆಗೆ ಪ್ರೋತ್ಸಾಹ

ನೀಡದೇ ಇರುವುದು ಸಮಂಜಸ, ಏಕೆಂದರೆ ಈ ವಿಧಾನಗಳಿಂದ ಸಮಾಜದ ಸುಖಶಾಂತಿಗೆ ಭಂಗ ಒದಗಬಹುದು.

**ಶ್ರೀ ಖುರ್ಷಿದ್ ಲಾಲ್** (ಸಂಪರ್ಕ ಮಾಧ್ಯಮಗಳ ಉಪಮಂತ್ರಿ) : ವಿವಾಹ ವಿಚ್ಛೇದನ ಅಷ್ಟು ಕೆಟ್ಟದ್ದೇ ಆಗಿದ್ದಲ್ಲಿ ಮಾನ್ಯ ಸದಸ್ಯರು ಅದನ್ನು ಮುಸ್ಲಿಂ ಕಾನೂನಿನಿಂದ ತೊಡೆದುಹಾಕುವರೇ?

**ಮಿ। ನಝೀರುದ್ದೀನ್ ಅಹಮ್ಮದ್ :** ಮಾನ್ಯ ಸದಸ್ಯರು, ಸಲಹಾ ಸಮಿತಿಯ ಆಯ್ಕೆಗೊಂಡ ಸದಸ್ಯರಾಗಿದ್ದರೂ, ಈ ವಿಷಯ ಸಭೆಯ ಮುಂದೆ ಚರ್ಚೆಗೆ ಬಂದಾಗ ಹಾಜರಿರಲಿಲ್ಲ. ಆದುದರಿಂದ ಮಾನ್ಯ ಸದಸ್ಯರು, ಪೋಸ್ಟ್‌ಕಾರ್ಡಿನ ಬೆಲೆ ಏರಿಸುವ ಬಗೆಗೆ ಯೋಚನೆ ಮಾಡಬಹುದೇ ಹೊರತು, ಈ ವಿಷಯದ ಬಗೆಗೆ ಕಾಟಾಚಾರಕ್ಕೆ ಮಾತನಾಡಬಾರದು. ಏಕೆಂದರೆ ಸದನವು ಈ ಬಗ್ಗೆ ತುಂಬಾ ಚರ್ಚೆ ನಡೆಸಿದೆ.

**ಶ್ರೀ ಖುರ್ಷಿದ್ ಲಾಲ್** : ಪೋಸ್ಟ್‌ಕಾರ್ಡಿನ ಬಗ್ಗೆ ಮಾತನಾಡುವುದು ಸಮಂಜಸವೇ?

**ಉಪಸಭಾಪತಿ** : ನಾವು ಪೋಸ್ಟ್‌ಕಾರ್ಡಿಗೆ ವಿವಾಹ ವಿಚ್ಛೇದನ ನೀಡಬಹುದಲ್ಲವೆ!

**ಶ್ರೀ ರಾಮನಾಥ ಗೋಯಂಕಾ** (ಮದ್ರಾಸ್–ಸಾ) : ತಾವು ಷರೀಯತ್ ಶಾಸನ ಬದಲಾಯಿಸುವ ಬಗೆಗೆ ಯೋಚಿಸಬಹುದಲ್ಲವೇ !!

**ಉಪಸಭಾಪತಿ :** ದಯಮಾಡಿ ವೈಯಕ್ತಿಕ ವಿಷಯಗಳ ಬಗೆಗೆ ಟೀಕೆ ಸರಿಯಲ್ಲ. ಏಕೆಂದರೆ ಅವು ವಿಪರೀತ ದಿಶೆಗೆ ಕೊಂಡುಹೋಗಬಲ್ಲವು.

**ಮಿ। ನಝೀರುದ್ದೀನ್ ಅಹಮ್ಮದ್ :** ಷರೀಯತ್ ಶಾಸನವನ್ನು ರದ್ದುಪಡಿಸುವ ಕ್ರಮ, ಜಾರಿಯಲ್ಲಿರುವ ಕಾನೂನಿಗೆ ಹಸ್ತಕ್ಷೇಪ ಮಾಡಿದಂತಾಗುತ್ತದೆ. ಏಕೆಂದರೆ ಹಿಂದೂಗಳ ಶಾಸ್ತ್ರದಲ್ಲಿ ಏಕಪತ್ನಿ ಹಾಗೂ ವಿವಾಹ ವಿಚ್ಛೇದನದ ಬಗೆಗೆ ಜಾರಿಯಲ್ಲಿರುವ ಕಾನೂನುಗಳ ಬಗೆಗೆ ಒಮ್ಮತವಿಲ್ಲದೇ ಇರುವಾಗ ಬೇರೆಯವರ ಬಗೆಗೆ ಹಸ್ತಕ್ಷೇಪ ಮಾಡಲಾಗದು. ಅದರಲ್ಲಿಯೂ ಮುಸ್ಲಿಂ ಶಾಸನವನ್ನು ಉದಾಹರಿಸುವುದು ಸೂಕ್ತವಲ್ಲ.

**ಶ್ರೀ ಹೆಚ್. ವಿ. ಕಾಮತ್** : ಅವರು ಸದ್ಯ ಇದ್ದದ್ದನ್ನು ಒಪ್ಪುವರೇ ಅಥವಾ ಇದ್ದದ್ದನ್ನೆಲ್ಲಾ ಬದಲಾಯಿಸಬೇಕೆಂದಿರುವರೋ?

**ಉಪಸಭಾಪತಿ :** ಈ ಮಸೂದೆಯನ್ನು ಬಿಟ್ಟು ಬೇರೆ ಬದಲಾವಣೆಗಳು ಈ ಸದನಕ್ಕೆ ಸಂಬಂಧಿಸಿಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್ :** ಬದಲಾವಣೆ ವಿಷಯ ಸಂಶಯದ ಪ್ರಶ್ನೆಯಾಗಿದ್ದರೆ, ಶಾಸನ ಬದಲಾಯಿಸುವ ಪ್ರಶ್ನೆ ಪುರಾತನ ಚರಿತ್ರೆ. ಏಕೆಂದರೆ ಹಲವರ ಅಭಿಪ್ರಾಯದಲ್ಲಿ ಬದಲಾವಣೆ ಕೇವಲ ಬದಲಾವಣೆಗಾಗಿ ; ಏಕೆಂದರೆ ಅವರು ಬದಲಾವಣೆಯನ್ನೆ ಆಧಾರವೆಂದು ಪರಿಗಣಿಸುವರು. ಆದರೆ ಹಲವರು ಬದಲಾವಣೆಗಳನ್ನೇ ಬಯಸರು. ಅವರಿಗೆ ಬದಲಾವಣೆ ಎಂದರೆ ಪರಿಶೋಧನೆ. ಇದನ್ನು ಮೆಕಾಲೇ ಅವರು ಶಾಸ್ತ್ರೋಕ್ತವಾಗಿ ಚರ್ಚಿಸಿದ್ದಾರೆ. ಅವರು ಹೇಳುವಂತೆ ಈ ಎರಡೂ ವಿಷಯಗಳ ಗಡಿ ಅಂಚಿನಲ್ಲಿ ಉತ್ತಮರ ಬುದ್ಧಿ ಅಡಗಿದೆ.

ಆದುದರಿಂದ ಶಾಸನದಲ್ಲಿ ಬದಲಾವಣೆಯನ್ನು ಕೇವಲ ಬದಲಾವಣೆಗೆಂದು ಬದಲಾಯಿಸಕೂಡದು. ಅದರಂತೆಯೇ, ಪುರಾತನ ಶಾಸನಗಳಿಗೆ ಕಟಿಬದ್ಧರಾಗುವುದು ಸಮಂಜಸವಲ್ಲ. ಕಾಲಕಾಲಕ್ಕೆ ಜನರ ಸಹಮತದಿಂದ ಮುಂದುವರಿಯುವುದು ಸೂಕ್ತ. ಇಲ್ಲಿ ನಾನು ನೈತಿಕ ಹಕ್ಕನ್ನೇ ಉದಾಹರಿಸುವೆ; ಏಕೆಂದರೆ ಕಾನೂನುಬದ್ಧ ಹಕ್ಕನ್ನು ಹೊಂದಿರುವೆವು. ನಾವು ಇದ್ದ ಕಾನೂನಿಗೆ ಭಂಗ ತಂದು, ನೂತನ ಕಾನೂನು ರಚಿಸಲು ಸಮರ್ಥರಿದ್ದೇವೆ. ಕಾನೂನುಬದ್ಧ ಹಕ್ಕನ್ನು ಭಾವಿಸಿಕೊಂಡಿರುವ ನಮಗೆ, ಬದಲಾವಣೆ ತರುವ

ನೈತಿಕ ಹಕ್ಕಿದೆಯೇ.........

**ಬಾಬು ರಾಮನಾರಾಯಣ ಸಿಂಗ್ :** ಇಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್ :** .........ಸುಮಾರು ೩೦ ಕೋಟಿ ಜನತೆಗೆ ಸಂಬಂಧಿಸಿದ ವಿಷಯ. ಅವರ ಸಮ್ಮತಿ ಪಡೆಯದೆ? ನಾನು ಇಲ್ಲಿ ಸಮಸ್ತ ಬದಲಾವಣೆಗಳನ್ನು ವಿರೋಧಿಸುತ್ತಿಲ್ಲ. ಆದರೆ ಸಾರ್ವಜನಿಕ ಅಭಿಪ್ರಾಯದ ಬೆಂಬಲ ಪಡೆಯದಿರುವ ಬದಲಾವಣೆ ವಿರೋಧಿಸುವೆ. ಅವರ ಸಮ್ಮತಿಯನ್ನು ಪಡೆಯದೆ ತೀವ್ರ ಬದಲಾವಣೆಗಳನ್ನು ತರುವ ನೈತಿಕ ಹಕ್ಕು ನಿಮಗೆ ಇಲ್ಲ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ನಾವು ಅವರ ಪ್ರತಿನಿಧಿಗಳು. ಆದುದರಿಂದ ಅವರ ಬೆಂಬಲ ಇದೆ.

**ಮಿ। ನಝೀರುದ್ದೀನ್ ಅಹಮ್ಮದ್ :** ನೀವು ಪ್ರಮುಖವಾದ ಸಂವಿಧಾನಾತ್ಮಕ ವಿಷಯವನ್ನೇ ಪ್ರಶ್ನಿಸಿದ್ದೀರಿ, ಏಕೆಂದರೆ ಈ ಸದನವನ್ನು ಸಂವಿಧಾನ ರಚನೆಗೆಂದೇ ಆಯ್ಕೆ ಮಾಡಲಾಗಿದೆ..............

**ಉಪಸಭಾಪತಿ :** ಸಂವಿಧಾನತ್ಮಕ ವಿಷಯದ ಬಗೆಗೆ ಈ ಪೀಠವು ಈಗಾಗಲೇ ತನ್ನ ನಿರ್ಣಯ ನೀಡಿದೆ. ಇದೊಂದು ಸಾರ್ವಭೌಮ ಸಂಸ್ಥೆ. ಯಾವ ಶಾಸನವನ್ನೇ ಮಾಡುವ ಅಧಿಕಾರ ಹೊಂದಿದೆ. ಆದುದರಿಂದ ಬೇರೆ ಏನಾದರೂ ಇದ್ದಲ್ಲಿ ಮಾನ್ಯ ಸದಸ್ಯರು ಮುಂದುವರಿಯಬಹುದು.

**ಮಿ। ನಝೀರುದ್ದೀನ್ ಅಹಮ್ಮದ್ :** ನಾನು ಸದನದ ಅಧಿಕಾರವನ್ನು ಪ್ರಶ್ನಿಸಿಲ್ಲ. ಏಕೆಂದರೆ ನಮಗೆ ಹಿಂದೂ ಹಾಗೂ ಮುಸ್ಲಿಂ ಸಮಾಜಗಳನ್ನು ನಾಶ ಮಾಡಿ, ಅವೆರಡನ್ನೂ ಮತೀಯ ಭಾವನೆಗಳಿಂದ ಮುಕ್ತಗೊಳಿಸಿ ನೂತನ ಸಮಾಜವನ್ನು ನಿರ್ಮಿಸಬಲ್ಲ ಹಕ್ಕಿದೆ. ಇದರ ಬಗೆಗೆ ಸಂಶಯ ಇಲ್ಲ. ಆದರೆ ಈ ಬಗೆಗೆ ಜನ ಬೆಂಬಲವಿದೆಯೇ?

**ಹಲವಾರು ಸದಸ್ಯರು :** ಇಲ್ಲ...ಇಲ್ಲ...

**ಹಲವರು :** ಇದೆ...ಇದೆ...

**ಮಿ। ನಝೀರುದ್ದೀನ್ ಅಹಮ್ಮದ್ :** ನನಗೆ ಹೊಳೆಯುವಂತೆ ಜನರು ಈ ಶಾಸನದ ಹಿಂದಿಲ್ಲ ವಿರೋಧವಾಗಿದ್ದಾರೆ. (ಓರ್ವ ಸದಸ್ಯ : ಇಲ್ಲ ಬೆಂಬಲಿಸಿದ್ದಾರೆ) ಜನತೆ ಬೆಂಬಲ ನೀಡಿದ್ದಾರೆ ಎಂಬುದನ್ನು ಹೇಗೆ ಹೇಳುವಿರಿ? ಈ ವಿಧವಾದ ಬೃಹತ್ ಸಮಸ್ಯೆಯನ್ನು ಮತದಾರ ಕ್ಷೇತ್ರದ ಮುಂದೆ ಮಂಡಿಸಲೇಬೇಕು. ಇದೊಂದು ಸಂವಿಧಾನಬದ್ಧ ವಿಧಾನ. ಈ ಎರಡು ದಿನಗಳ ಹಿಂದೆ ಶ್ರೀ ಓಸ್‌ಬಾರನ್ ಅವರು ಈ ಮಹತ್ವಪೂರ್ಣ ವಿಷಯವನ್ನು ಮತದಾರ ಕ್ಷೇತ್ರದ ಮುಂದೆ ಮಂಡಿಸಿ ಅವರ ಸಮ್ಮತಿ ಪಡೆಯದೆ ಒಪ್ಪಿಗೆ ನೀಡಲಾರೆ ಎಂದರು. ವಾಸ್ತವಿಕವಾಗಿ ಈ ವಿಷಯವನ್ನು, ಮತದಾರರ ಸಮ್ಮತಿ ಪಡೆಯದೇ ಮಾಡಕೂಡದು, ಹಾಗೆ ಮಾಡಿದಲ್ಲಿ ಅದು ಸಂವಿಧಾನ ವಿಧಾನಕ್ಕೆ ವಿರೋಧ. ಆದರೆ ನಾವು ಈ ವಿಷಯದ ಬಗೆಗೆ ಎಷ್ಟು ಮುಂದುವರಿದಿದ್ದೇವೆ ಎಂದರೆ, ಮತದಾರರ ಅಭಿಪ್ರಾಯವನ್ನೇ ಕಡೆಗಣಿಸುವ ಹಂತ ತಲುಪಿದ್ದೇವೆ. ಒಂದು ಸಮಯದಲ್ಲಿ ಈ ವಿಧವಾದ ವಿಧಾನವನ್ನು ಸಡಿಲು ಉದ್ದೇಶ ಭಂಗಕ್ಕೆ ಬಳಸಲಾಗುತ್ತದೆ ಎಂದಿದ್ದರೆ ಚುನಾವಣೆಗಳೇನಾದರೂ ಇದ್ದಲ್ಲಿ ಈ 'ಹಿಂದೂ–ಕೋಡ್' ಮಸೂದೆಗೆ ಅಂಗೀಕಾರ ದೊರೆಯುತ್ತಿರಲಿಲ್ಲ.

ಆದರೆ ಇಂದಿನ ಅಧಿವೇಶನದಲ್ಲಿ ತದ್ವಿರುದ್ಧ ಸಂಗತಿ ಜರುಗುತ್ತಿದೆ. ಏಕೆಂದರೆ ಅವರು ಈ ಮಸೂದೆಯನ್ನು ಜನತೆಗೆ ತಿಳಿಸಲಾಗಿದೆ ಎಂದೇ ಹೇಳುತ್ತಿದ್ದಾರೆ, ಜನತೆ ಬೆಂಬಲ ಸೂಚಿಸದೆ. ಆದುದರಿಂದಲೇ ನಾವು ಈ ಮಸೂದೆಯನ್ನು ತಂದಿರುವೆವು ಎಂದಿದ್ದಾರೆ. ಆದರೆ ವಾಸ್ತವಿಕವಾಗಿ ಇದನ್ನು ಜನತೆಯ ಮುಂದೆ ಮಂಡಿಸಿಲ್ಲ, ಹಾಗೂ ಅವರು ಇದಕ್ಕೆ ತಮ್ಮ ಅನುಮತಿಯನ್ನೂ ನೀಡಿಲ್ಲ; ಏಕೆಂದರೆ:

ಈ ಶಾಸಕ ಸದನ ಹೇಗೆ ನಿರ್ಮಾಣಗೊಂಡಿತು? ನಮ್ಮನ್ನು ಆಳುತ್ತಿದ್ದ ವಿದೇಶೀ ಸರಕಾರವು

ಹತಾಶವಾದ ಹೋರಾಟದಲ್ಲಿದ್ದಾಗ, ಆಂಗ್ಲರ ಅಧಿಕಾರ ಸಂಪೂರ್ಣ ನಾಶಹೊಂದುವ ಪರಿಸ್ಥಿತಿಯಲ್ಲಿ, ಗೃಹಶಾಖೆಯ ಸದಸ್ಯರಾದ ಸರ್ ರೆನಾಲ್ಡ ಮ್ಯಾಕ್ಸ್‌ವೆಲ್ಲರು ರಾವ್ ಅವರ ಸಮಿತಿಯನ್ನು ನೇಮಿಸಿದರು. ಭಾರತದ ಆಳರಸರ ದೇಶವು ಸಮರಸಂಕಟ ಸಮಯದಲ್ಲಿ ಈ ಸೂತ್ರವನ್ನು ಕಲ್ಪಿಸಲಾಯಿತು. ಮಸೂದೆ ಸಿದ್ಧವಾದ ಮೇಲೆ ಅದನ್ನು ಮಧ್ಯಕಾಲೀನ ಮಂತ್ರಿಮಂಡಲದಲ್ಲಿ ಕಾನೂನು ಮಂತ್ರಿಯಾಗಿದ್ದ ಜೋಗೇಂದ್ರನಾಥ ಮಂಡಲ್ ಅವರು ಮಂಡಿಸಿದರು. ಆ ಸಮಯದಲ್ಲಿ ದೇಶದ ಪರಿಸ್ಥಿತಿ ರಗಳೆ – ಜಗಳಗಳಿಂದ ಅಲ್ಲೋಲಕಲ್ಲೋಲವಾಗಿದ್ದು, ಅಶಾಂತವಾಗಿದ್ದು ಈ ಬಗೆಗೆ ಯೋಚನೆ ಮಾಡುವಂತೇ ಇರಲಿಲ್ಲ. ಈ ಮಸೂದೆಯನ್ನು ಮಂಡಿಸಿದಾಗ ಪಾಕಿಸ್ತಾನದ ಕಲ್ಪನೆಯು, ಪೂರ್ಣ ಸ್ವರೂಪವನ್ನೇ ಪಡೆದಿತ್ತು. ಈ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಶಾಸನ ನಿರ್ಮಾಣ........

**ಉಪಸಭಾಪತಿ** : ಮಾನ್ಯ ಸದಸ್ಯರು, ಈಗಾಗಲೇ ಒಂದುವರೆ ದಿನ ತೆಗೆದುಕೊಂಡಿದ್ದಾರೆ. ಬೇರೆಯವರೂ ತಮ್ಮ ಅಭಿಪ್ರಾಯಗಳನ್ನು ಸೂಚಿಸಲು ಬಯಸಿದ್ದಾರೆ. ಆದುದರಿಂದ ಮಾನ್ಯ ಸದಸ್ಯರು ಆದಷ್ಟೂ ಬೇಗನೆ ತಮ್ಮ ಹೇಳಿಕೆ ಮುಗಿಸಬೇಕು. ಅವರಿಗೆ ತಮ್ಮದೇ ಆದ ಯೋಚನೆ ಇದೆಯೆ?

**ಮಾನ್ಯ ಸದಸ್ಯ** : ಈ ಸದನದಲ್ಲಿ ಯಾರಿಗೂ ಅವರದೇ ಆದ ಯೋಚನೆಗಳೇ ಇಲ್ಲ.

**ಮಿ। ನಝೀರುದ್ದೀನ್ ಅಹಮ್ಮದ್** : ಕಾನೂನು ಮಂತ್ರಿಗೆ ಆಲೋಚನೆ ಇಲ್ಲ. ನನಗೆ ಇನ್ನೂ ಕಾಲಾವಕಾಶ ಬೇಕು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ಎಷ್ಟು ಅವಧಿ ಬೇಕು? ಸದನ ಕುತೂಹಲದಿಂದಿದೆ.

**ಮಿ। ನಝೀರುದ್ದೀನ್ ಅಹಮ್ಮದ್** : ಸದನ ಈ ಮಸೂದೆಯ ಬಗೆಗೆ ಎಷ್ಟು ಅವಧಿಯನ್ನು ನಿರ್ಣಯಿಸಿದೆಯೋ ಅದೇ ನನಗೆ ತಿಳಿಯದಾಗಿದೆ; ಅದೇ ನನ್ನ ಫಝೀತಿ.

ಮಧ್ಯಾಹ್ನ ೨–೩೦ರ ಸಮಯವಾದುದರಿಂದ ಭೋಜನ ವಿರಾಮಕ್ಕೆಂದು ಸಭೆಯನ್ನು ಮುಂದೂಡಲಾಯಿತು.

ಭೋಜನ ವಿರಾಮದ ನಂತರದ ಸಭೆಯ ಅಧ್ಯಕ್ಷತೆಯನ್ನು ಶ್ರೀ ಜಿ.ವಿ. ಮಾಳವಂಕರರು ವಹಿಸಿದ್ದರು.

**ಶ್ರೀ ಹೆಚ್. ವಿ. ಕಾಮತ್** : ಸರ್, ಸಭೆಯಲ್ಲಿ ಕೋರಂ ಇಲ್ಲವೆಂದು ತೋರುತ್ತದೆ.

**ಅಧ್ಯಕ್ಷರು** : ನನಗೆ ತೋರಿದಂತೆ ಕೋರಂ ಇದೆ.

**ಶ್ರೀ ನಝೀರುದ್ದೀನ್ ಅಹಮ್ಮದ್** : ನಾನು ಭೋಜನ ವಿರಾಮದ ಮುಂಚೆ ಈ ಸದನಕ್ಕೆ ಈ ಬಗೆಯ ಶಾಸನವನ್ನು ರಚಿಸುವ ಅಧಿಕಾರವಿದೆಯೆ? ಎಂಬ ಸಂಗತಿಯನ್ನು ಪ್ರಸ್ತಾಪಿಸಿದ್ದೆ. ಸಂವಿಧಾನಾತ್ಮಕ ಅಧಿಕಾರದಂತೆ ಈ ಸ್ವರೂಪದ ಕಾನೂನನ್ನು ರಚಿಸಲು ಸದನ ಸಮರ್ಥವಾಗಿದೆ. ಆದರೆ ನಮ್ಮ ಮುಂದಿರುವ ಪ್ರಶ್ನೆ ಎಂದರೆ ನೈತಿಕ ಹಕ್ಕಿನದು. ಹೀಗಾಗಿ ನಾವು ನೈತಿಕ ದೃಷ್ಟಿಯಿಂದ ಈ ಸ್ವರೂಪದ ಶಾಸನ ರಚಿಸಬಹುದೇ? ಪ್ರತ್ಯಕ್ಷವಾಗಲೀ ಅಥವಾ ಪರೋಕ್ಷವಾಗಲೀ ನಮಗೆ ಈ ಅಧಿಕಾರವನ್ನು ವಹಿಸಲಾಗಿದೆಯೇ? ನಮ್ಮ ಮತದಾರರು ಈ ಕಾನೂನಿಗೆ ಅನುಮತಿಸಿದ್ದಾರೆಯೇ?

ಹಲವಾರು ಸದಸ್ಯರು ಹೇಳುವಂತೆ, ಜನತೆಯು ಈ ಮಸೂದೆಯ ಪರವಾಗಿದ್ದಾರೆ ಎಂಬುದಕ್ಕೆ ನಾನು ಸಮ್ಮತಿಸಲಾರೆ; ಹೀಗಾಗಿ ಶಾಸನ ಸದನದ ಇಲಾಖೆಯು ಅವುಗಳನ್ನು ಕ್ರಮಬದ್ಧವಾಗಿ ಕ್ರೋಢೀಕರಿಸಲಾರದೆ ಹೋಗಿದೆ. ಅವುಗಳ ಪ್ರವಾಹ ಬೃಹದಾಕಾರದಲ್ಲಿ ಹರಿದುಬರುತ್ತಿದೆ. ಇದು ಸಾರ್ವಜನಿಕರ ವಿರೋಧದ ಪ್ರತೀಕವಾಗಿದೆ. ಆದುದರಿಂದ, ನಮ್ಮ ಮುಂದಿರಬಹುದಾದ ಸಮಸ್ಯೆ ಎಂದರೆ ಪ್ರಜಾಸತ್ತಾತ್ಮಕ ಸಮಾಜದಲ್ಲಿಯ ಶಾಸನ ಸಭೆಯು, ಅವರ ಸಮ್ಮತಿಯಿಲ್ಲದೇ ಈ ಸ್ವರೂಪದ ಕಾನೂನನ್ನು ರಚಿಸಬಹುದೇ

? ನಾನು ಈಗಾಗಲೇ ಹೇಳಿದಂತೆ, ಈ ಶಾಸನವು ಪರಕೀಯ ಸರಕಾರ ತನ್ನ ಅಳಿವಿನಂಚಿನ ಪರಿಸ್ಥಿತಿಯಲ್ಲಿದ್ದಾಗ ತನ್ನ ಉಳಿವಿಗಾಗಿ ಸದನದ ಮುಂದೆ ತರಲಾದುದು. ಅಲ್ಲದೆ ಈ ಮಸೂದೆಯನ್ನು ಸದನದ ಮುಂದೆ ತಂದ ಅಂದಿನ ಮಾನ್ಯ ಮಂತ್ರಿಯವರು, ತಾವು ಪಾಕಿಸ್ತಾನಕ್ಕೆ ತೆರಳುವ ಸನ್ನಾಹದಲ್ಲಿದ್ದರು. ಅವರಿಗೆ ಈ ಮಸೂದೆಯ ಬಗೆಗೆ ಯಾವ ಆಸಕ್ತಿ ಇರಲಿಲ್ಲ.

**ಶ್ರೀ ಹೆಚ್. ವಿ. ಕಾಮತ್ :** ಅವರು ಬೆಳಿಗ್ಗೆ ಹೇಳಿದ್ದನ್ನೇ ಪುನರುಚ್ಚರಿಸುತ್ತಿದ್ದಾರೆ.

**ಶ್ರೀ ನಝೀರುದ್ದೀನ್ ಅಹಮ್ಮದ್ :** ಭಾರತವು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿರುವ ಸಮಯದಲ್ಲಿ, ಈಗ ಅದೇ ಮಸೂದೆಯನ್ನು ಡಾ॥ ಅಂಬೇಡ್ಕರರು ಮುಂದಿರಿಸಿದ್ದಾರೆ. ಅಲ್ಲದೆ ಕಾನೂನು ಮಂತ್ರಿಗಳ ಹೇಳಿಕೆಯಂತೆ, ಹಿಂದಿನ ಮಸೂದೆಯನ್ನೇ ಯಾವ ಬದಲಾವಣೆ ಇಲ್ಲದೇ ಮುಂದುವರಿಸಿಕೊಂಡು ಬಂದಿರುವುದರಿಂದ, ಅವರ ಬಗೆಗೆ ಹೆಚ್ಚು ವಿಚಾರ ಮಾಡಿಲ್ಲ. ಆದರೆ ಆ ಮಸೂದೆ ಸೆಲೆಕ್ಟ್ ಸಮಿತಿಯ ಅವಗಾಹನೆಗೆ ಬಂದಾಗ, ಮಸೂದೆಯ ಪ್ರತಿಯನ್ನೇ ಸೂಕ್ತವಾಗಿ ಬರೆಯಲಾಗಿಲ್ಲವೆಂಬ ಸಂಗತಿ ಬಯಲಾಗಿದೆ. ಅಲ್ಲದೆ ಅದಕ್ಕೆ ವಿವಿಧ ತಿದ್ದುಪಡಿಗಳ ಆವಶ್ಯಕತೆಯ ಅರಿವು ಈಗ ಮೂಡಿದೆ. ಹೀಗಾಗಿ ಅವರೇ ಈ ಕಾರ್ಯಕ್ಕೆ ಕೈಹಾಕಿದರು. ಆದರೆ ಆ ಸಮಿತಿಯು, ಈಗ ಮರುಪರಿಶೀಲಿಸಿ ಸಭೆಯ ಮುಂದೆ ಇಟ್ಟಿರುವುದು 'ಹಿಂದೂ ಕೋಡ್ ಬಿಲ್'ನ ಒಂದು ಪುಸ್ತಕದ ಪ್ರತಿಯೆಂದು ಹೇಳಬಹುದು. ಹಾಗೂ ಅದರ ಹಲವು ಶಾಖೆಗಳನ್ನು ಕಾನೂನಿನ ಮಂತ್ರಿಯಾದ ಡಾ॥ ಅಂಬೇಡ್ಕರರು ಕ್ರೋಡೀಕರಿಸಬಹುದು. ಆದುದರಿಂದ ಸಚಿವ ಮಂಡಲ ಅವರು ಅಂದು ಮಂಡಿಸಿದ್ದ ಮಸೂದೆಯನ್ನೇ ಇಂದು ಡಾ॥ ಅಂಬೇಡ್ಕರರು ಪರಿವರ್ತಿತ ಮಾದರಿಯಲ್ಲಿ ಮಂಡಿಸಿದ್ದಾರೆ. ನಾನು ಆಗ್ರಹಿಸುವುದೇನೆಂದರೆ ಈ ಮಸೂದೆಯನ್ನು ಮಂಡಿಸುವಲ್ಲಿ ಸರಕಾರ ಯಾವ ವಿವೇಚನೆ ಮತ್ತು ತಯಾರಿಯನ್ನೇ ಮಾಡಿಲ್ಲ. ಇದು ಅದರ ರಚನೆಯನ್ನು ಗಮನಿಸಿದರೆ ಸಾಕು, ಈ ಮಸೂದೆಯನ್ನು ಎಷ್ಟು ಅಲಕ್ಷ್ಯತೆಯಿಂದ ಮಂಡಿಸಿದೆ. ಏಕೆಂದರೆ ಇದು ಸಂಪೂರ್ಣ ಪುನರ್ವಿಮರ್ಶೆಯಾಗಬೇಕು. ಅದರ ಬರಹವೇ ಸ್ಪಷ್ಟವಾಗಿಲ್ಲ ಇದರಿಂದಾಗಿ, ಸರಕಾರಕ್ಕೆ ಈ ಮಸೂದೆಯ ಬಗೆಗೆ ಹೆಚ್ಚು ಕಾಳಜಿ ಇರಲಿಲ್ಲ ಎಂಬ ಅಂಶ ಸ್ಪಷ್ಟವಾಗುತ್ತದೆ. ಒಂದು ವೇಳೆ ಸರಕಾರವು ತನ್ನಲ್ಲಿಯ ಅಪಾರ ಸಂಪನ್ಮೂಲಗಳಿದ್ದಾಗಲೂ ಇದನ್ನು ಒಪ್ಪದೇ ಹೋದ ಪರಿಸ್ಥಿತಿಯಲ್ಲಿ ದೇಶ ಹೇಗೆ ಒಪ್ಪಬಹುದು? ಏಕೆಂದರೆ ಪ್ರಸ್ತುತ ಸಂವಿಧಾನ ಸಭೆಗೆ ತನ್ನದೇ ಆದ ಗೊತ್ತು ಗುರಿಗಳಿವೆ.

**ಶ್ರೀ ತಾಜಾಮುಲ್ ಹುಸೇನ್ :** ನನಗೆ ತೋರಿದಂತೆ, ಮಾನ್ಯ ಸದಸ್ಯರು ಹೇಳಿದ್ದನ್ನೇ ಹೇಳುತ್ತಿದ್ದಾರೆ.

**ಅಧ್ಯಕ್ಷರು :** ಅವರು ಇದನ್ನೇ ಹೇಳಿರುವರೆಂಬ ವಿಷಯ ನನಗೆ ತಿಳಿಯದು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಅವರು ಬೆಳಗಿನ ಸಭೆಯಲ್ಲಿ ಇದನ್ನೇ ಹೇಳಿದ್ದಾರೆ.

**ಶ್ರೀ ನಝೀರುದ್ದೀನ್ ಅಹಮ್ಮದ್ :** ಈ ಸದನವು ಈ ವಿಧವಾದ ಶಾಸನ ಮಂಜೂರಿಗಾಗಿ ರಚನೆಯಾಗಿಲ್ಲ ಎಂದು ಆರಂಭಿಸುವ ಮುನ್ನವೇ.

**ಶ್ರೀ ತಾಜಾಮುಲ್ ಹುಸೇನ್ :** ಸರ್, ನಿಮ್ಮ ಗೈರು ಹಾಜರಿಯಲ್ಲಿ ಅವರು ಇದನ್ನೇ ಹೇಳಿದ್ದರು.

**ಶ್ರೀ ನಝೀರುದ್ದೀನ್ ಅಹಮ್ಮದ್ :** ನನ್ನ ವಿಚಾರವನ್ನು ಅರುಹಲು ಬಿಡಿ. ಈಗ ಪ್ರಶ್ನೆ ಎಂದರೆ ನಮಗೆ ಈ ಬಗೆಗೆ ಅಧಿಕಾರವಿದೆಯೇ? ಏಕೆಂದರೆ ಈ ಸದನಕ್ಕೆ ನೀಡಿರಬಹುದಾದ ಅಧಿಕಾರ ನಮಗೆ ನೇರ ಚುನಾವಣೆಯಿಂದ ದೊರಕಿರದೆ, ಅಪ್ರತ್ಯಕ್ಷ ಅಥವಾ ಪರೋಕ್ಷ ವಿಧಾನದಿಂದ ದೊರೆತಿದೆ.

**ಶ್ರೀ ಹೆಚ್.ವಿ. ಕಾಮತ್ :** ಅವರು ಇದೇ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಿಸಿದಾಗ ಉಪಾಧ್ಯಕ್ಷರು ತಮ್ಮ ರೂಲಿಂಗ್ ನೀಡಿದ್ದಾರೆ.

**ಅಧ್ಯಕ್ಷರು** : ಇದನ್ನು ನಾನು ಮಾನನೀಯ ಸದಸ್ಯರ ವಿವೇಚನೆಗೆ ಬಿಡುವೆ. ಅವರು ಈ ಹೇಳಿಕೆಯನ್ನು ನೀಡಿರುವುದು ನನಗೆ ತಿಳಿದಿಲ್ಲ.

**ಶ್ರೀ ನಝೀರುದ್ದೀನ್ ಅಹಮ್ಮದ್** : ಸರ್, ನನ್ನ ಹೇಳಿಕೆಯನ್ನು, ವಿವರಿಸಬಯಸುವೆ.

**ಅಧ್ಯಕ್ಷರು** : ಹೇಳಿಕೆಯನ್ನು ವಿವರಿಸುವ ಅಗತ್ಯವಿಲ್ಲ. ಅವರು ಮುಂದುವರಿಯಬಹುದು.

**ಶ್ರೀ ನಝೀರುದ್ದೀನ್ ಅಹಮ್ಮದ್** : ನಾವು ಭೋಜನಕ್ಕೆದ್ದೆವು.

**ಅಧ್ಯಕ್ಷರು** : ಸದನವು ಈ ಉದ್ದೇಶಕ್ಕಾಗಿ ಆಯ್ಕೆಹೊಂದಿಲ್ಲ ಎಂಬ ವಿಷಯ ಸ್ಪಷ್ಟವಾಗಿದೆ. ಹೀಗಾಗಿ ನೇರ ಹಾಗೂ ಅಪರೋಕ್ಷಗಳ ವಿವರಣೆ ಅನಗತ್ಯ. ಇದನ್ನು ಸದಸ್ಯರು ಹೇಳಬಯಸಿದರೆ, ನಾನು ಅವರಿಗೆ ಬೆಂಬಲ ನೀಡಲು ಅಸಮರ್ಥನಾಗಿದ್ದೇನೆ.

**ಶ್ರೀ ನಝೀರುದ್ದೀನ್ ಅಹಮ್ಮದ್** : ನಾನು ಹೇಳಬಯಸುವುದೇನೆಂದರೆ, ನನ್ನ ಹೇಳಿಕೆಯನ್ನು ಶ್ರೀ ಕೃಷ್ಣಸ್ವಾಮಿಯವರು ಒಪ್ಪದೇ ಹೋದರು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ವೈಯಕ್ತಿಕವಾಗಿ ಹೇಳಬೇಕೆಂದರೆ ನಾನು ಬಾಯಿ ತೆರೆಯಲೇ ಇಲ್ಲ.

**ಅಧ್ಯಕ್ಷರು** : ಯಾವುದೇ ಓರ್ವ ವ್ಯಕ್ತಿ ಒಂದು ವಿಷಯ ಒಪ್ಪುವುದೂ ಬಿಡುವುದೂ ಮಹತ್ವದ್ದಲ್ಲ. ಏಕೆಂದರೆ ಸದನದ ಅಭಿಪ್ರಾಯ ಪ್ರಮುಖವೇ ಹೊರತು ಓರ್ವ ವ್ಯಕ್ತಿಯದಲ್ಲ. ಆದುದರಿಂದ ಅದು ಮುಖ್ಯವಲ್ಲದ ವಿಷಯವಾಗಿರುವುದರಿಂದ ಸದಸ್ಯರು ವಿವರಣೆ ನೀಡದೇ ಮುಂದಿನ ವಿಷಯ ಹೇಳಲಿ.

**ಶ್ರೀ ನಝೀರುದ್ದೀನ್ ಅಹಮ್ಮದ್** : ಪ್ರಮುಖ ಪ್ರಶ್ನೆಯ ಉದ್ದೇಶವೆಂದರೆ

**ಅಧ್ಯಕ್ಷರು** : ಉದ್ದೇಶ ತಿಳಿದಿದೆ.

**ಶ್ರೀ ನಝೀರುದ್ದೀನ್ ಅಹಮ್ಮದ್** : ಸರ್ ಅದು ಹಾಗಿಲ್ಲ. ಏಕೆಂದರೆ ಭಾರತಿಯವರ ಉದ್ದೇಶ

**ಅಧ್ಯಕ್ಷರು** : ಮಾನನೀಯ ಸದಸ್ಯರು ಓರ್ವ ಸದಸ್ಯರನ್ನು ಓಲೈಸಬೇಕಾಗಿಲ್ಲ. ಏಕೆಂದರೆ ನೀವು ಸದನಕ್ಕೆ ಹೇಳಿಕೆ ನೀಡುತ್ತಿದ್ದೀರಿ ಹಾಗೂ ಸದನವು ತಮ್ಮ ಹೇಳಿಕೆಯನ್ನು ಅರಿಯಲಾರದ ಮೂಢರಿಂದ ಒಡಗೂಡಿಲ್ಲ.

**ಶ್ರೀ ನಝೀರುದ್ದೀನ್ ಅಹಮ್ಮದ್** : ಸದನದ ಅರಿವಿನ ಬಗೆಗೆ ನನಗೆ ಸಂದೇಹವಿಲ್ಲ. ಆದರೆ ಕೆಲವರು ತಿಳಿದುಕೊಳ್ಳಲು ನಿರಾಕರಿಸುತ್ತಾರೆ. ಅದು ನನಗೆ ತೊಂದರೆಯಾಗಿದೆ. ಏಕೆಂದರೆ ಅವರು ಮುಕ್ತ ಮನೋಭಾವನೆಯನ್ನೇ ಹೊಂದಿಲ್ಲ.

**ಅಧ್ಯಕ್ಷರು** : ಅವರಿಗೆ ತಿಳಿವಳಿಕೆಯಾಗಬೇಕೆಂದು ನಾವು ಸದನದ ಸಮಯವನ್ನು ಹಾಳು ಮಾಡಬೇಕಾಗಿಲ್ಲ. ಆದುದರಿಂದ ಮಾನ್ಯ ಸದಸ್ಯರು ಬೇರೆ ವಿಷಯ ಹೇಳಲಿ.

**ಶ್ರೀ ನಝೀರುದ್ದೀನ್ ಅಹಮ್ಮದ್** : ಆದುದರಿಂದ ತಮಗೆ ಹೇಳುವುದೇನೆಂದರೆ ಈ ಶಾಸನವನ್ನು ಜಾರಿಗೊಳಿಸುವ ನೈತಿಕ ಅಧಿಕಾರ ನಮಗೆ ಇಲ್ಲ. ವಾಸ್ತವವಾಗಿ ಹೇಳಬೇಕೆಂದರೆ ಸರಕಾರ ಅಂದು ಈ ಬಗೆಗೆ ಒಂದು ಮಸೂದೆಯನ್ನೇ ರಚಿಸಿ, ಅದನ್ನು ಸುತ್ತೋಲೆಯಂತೆ ಕಳಿಸಿಕೊಟ್ಟಿತು. ಅನುಬಂಧ II ಪೇಜ್ ೪೧ ಎರಡನೆಯ ಹಿಂದೂ ಲಾ ಕಮಿಟಿಯ ವರದಿಗೆ ನಿಮ್ಮ ಗಮನ ಸೆಳೆಯಬಯಸುವೆ.

ರಾವ್ ಸಮಿತಿಯಿಂದ ರಚಿಸಲಾದ ಮಸೂದೆಯನ್ನು ಅನೇಕ ಸಾರ್ವಜನಿಕ ಸಂಘ ಸಂಸ್ಥೆಗಳ ಪರಿಶೀಲನೆಗೆ ಕಳಿಸಿಕೊಡಲಾಯಿತು ಹಾಗೂ ವಿವಿಧ ಅಧಿಕಾರಿಗಳ ಮತ್ತು ಘನವೇತ್ತರ ಸಾರ್ವಜನಿಕ ವ್ಯಕ್ತಿಗಳ ಅಭಿಪ್ರಾಯವನ್ನೂ ಸಂಗ್ರಹಿಸಲಾಯಿತು. ಹೀಗಾಗಿ ೫ ಆಗಸ್ಟ್, ೧೯೪೪ ರ ಪ್ರಕಟಣೆಯಿಂದ ನಮಗೆ ಸ್ಪಷ್ಟವಾಗಿ ತಿಳಿದುಬರುವ ವಿಷಯವೆಂದರೆ, ಹಿಂದೂ ಲಾ ಕಮಿಟಿಯು, ಈ ಸಾರ್ವಜನಿಕ

ಅಭಿಪ್ರಾಯದಂತೆ ಮಸೂದೆಯನ್ನು ಮರು ಪರಿಶೀಲಿಸಬೇಕೆಂದಿತ್ತು. ಇದೊಂದೇ ಉದಾಹರಣೆಯಿಂದ ಇಂದಿನ ಮಸೂದೆಯ ಬಗೆಗೆ ಇರಬಹುದಾದ ಅಭಿಪ್ರಾಯ ಗ್ರಹಿಸಲು ಸಾಧ್ಯವಾಗಬಹುದು. ಸಾರ್ವಜನಿಕ ಅಭಿಪ್ರಾಯಕ್ಕೆ ಮಂಡಿಸಿದ್ದ ಈ ಮಸೂದೆಯನ್ನು ಸಾರ್ವಜನಿಕ ಅಭಿಪ್ರಾಯದಂತೆ ಪರಿಷ್ಕೃತಗೊಳಿಸಬೇಕೆಂದೇ ಅಭಿಪ್ರಾಯ ಹೊಂದಿತ್ತು. ಈ ಮಸೂದೆಯ ಬಗೆಗೆ ಸಾರ್ವಜನಿಕ ಅಭಿಪ್ರಾಯವೇನಿತ್ತು ಎಂಬುದನ್ನು ನಾವು ಹಿಂದೂ ಲಾ ಕಮಿಟಿಯ ಸಂಪುಟ I & II ರಲ್ಲಿಯ ಹೇಳಿಕೆಗಳು ಹಾಗೂ ಮೌಖಿಕವಾಗಿ ಹೇಳಲಾದ ಅಭಿಪ್ರಾಯಗಳನ್ನು ಹಿಂದೂ ಲಾ ಕಮಿಟಿಯ ೧೯೪೫ ರಲ್ಲಿನ ಪ್ರಕಟಣೆಗಳಲ್ಲಿ ಕಾಣಬಹುದು. ಆದರೆ ಈ ವಿಧವಾದ ಸಾರ್ವಜನಿಕ ಅಭಿಪ್ರಾಯವನ್ನು ಈ ಸದನದ ಸದಸ್ಯರಾಗಲೀ ಅಥವಾ ಬೇರೆ ಯಾರೇ ಆಗಲಿ ಗಮನಕ್ಕೆ ತೆಗೆದುಕೊಳ್ಳಲೇ ಇಲ್ಲ. ಈ ಸಂಪುಟಗಳನ್ನು ಎಚ್ಚರದಿಂದ ಪರಾಂಬರಿಸಿದಾಗ ನಮಗೆ ಹಿಂದೂ ಕೋಡ್ ಬಿಲ್‌ನ ಬಗೆಗೆ ಸಾರ್ವಜನಿಕರಿಂದ ಯಾವ ಬಗೆಯ ವಿರೋಧವಿತ್ತೆಂಬುದು ಅರಿವಾಗುವುದು. ಆದುದರಿಂದ ಹಿಂದೂ ಲಾ ಕಮಿಟಿಯವರು ಸಿದ್ಧಪಡಿಸಿದ ಮಸೂದೆಯು ಕೇವಲ ಅವರ ಅಭಿಪ್ರಾಯಗಳಿಂದ ಒಡಗೂಡಿತ್ತೇ ಹೊರತು ಅದು ಸಾರ್ವಜನಿಕ ಅಭಿಪ್ರಾಯವಾಗಿದ್ದಿಲ್ಲ. ಆದರೂ ಈ ಅಭಿಪ್ರಾಯಗಳನ್ನು ಡಿ. ಎನ್. ಮಿಟ್ಟರ್ ನಿವೃತ್ತ ನ್ಯಾಯಾಧೀಶ ಅವರು ಜಾಗರೂಕತೆಯಿಂದ ಪರಿಶೀಲಿಸಿ ಮಸೂದೆಗೆ ತಮ್ಮ ಭಿನ್ನಾಭಿಪ್ರಾಯ ಸೂಚಿಸಿದರು. ಅವರು ತಮ್ಮ ಭಿನ್ನಾಭಿಪ್ರಾಯವನ್ನು ದೀರ್ಘವಾಗಿ ವಿವರಿಸಿದ್ದಾರೆ. ಅದನ್ನು ನಾನು ಇಲ್ಲಿ ವಿವರಿಸಲಾರೆ. ಆದರೆ ಅವರು ಹಿಂದು ಲಾ ಕೋಡನ್ನು ವಿವಿಧ ಶೀರ್ಷಿಕೆಗಳಲ್ಲಿ ಕ್ರೋಡೀಕರಿಸಿ, ಹಿಂದೂ ವಿವಾಹ ಪದ್ಧತಿಯನ್ನು ಬದಲಾಯಿಸಬಹುದೇ ಎಂಬುದನ್ನು ವಿವರಿಸಿದ್ದಾರೆ; ಹಾಗೂ ವಿವಾಹ ವಿಚ್ಛೇದನ ಇರಬೇಕೆ ಎಂಬುದನ್ನೂ ಪರಿಶೀಲಿಸಿದ್ದಾರೆ. ಅವರು ಪರ ಹಾಗೂ ವಿರೋಧ ಸಾಕ್ಷಿಗಳ ಆಧಾರದ ಮೇಲೆ ತಮ್ಮ ಭಿನ್ನಾಭಿಪ್ರಾಯವನ್ನು ನೀಡಿದರೂ ಅವರ ಹೇಳಿಕೆಗೆ ಈ ಸದನ ಪ್ರತಿಕ್ರಿಯಿಸದೇ ಹೋಗಿದೆ. ಮುಂದುವರಿದು ಡಿ. ಎನ್. ಮಿಟ್ಟರರು ಪ್ರಾಂತವಾರು ಅಭಿಪ್ರಾಯಗಳನ್ನು ಹೆಕ್ಕಿ ತೆಗೆದಿದ್ದು, ವಿಶೇಷವಾಗಿ ಎಲ್ಲಾ ಪ್ರಾಂತಗಳಲ್ಲಿಯೂ ಹಿಂದೂ ಕೋಡ್ ಬಿಲ್ಲಿನ ವಿವಾಹ ವಿಚ್ಛೇದನದ ವಿಧಾನಗಳ ಬಗೆಗೆ ವಿರೋಧವನ್ನೇ ಕಾಣುತ್ತೇವೆ. ಅಭಿಪ್ರಾಯಗಳು ಹಾಗೂ ಸಾಕ್ಷಿಗಳು ಹಿಂದೂ ಕೋಡ್ ಬಿಲ್ಲನ್ನು ಪ್ರಬಲವಾಗಿ ವಿರೋಧಿಸಿವೆ. ಹಿಂದೂ ಕೋಡ್ ಬಿಲ್ ಮಸೂದೆಯು ಕೇವಲ ಬಹುಮತದ ಮಸೂದೆಯಾಗಿದೆ. ಏಕೆಂದರೆ ಅದು ಸದಸ್ಯರ ಮುಂದಿದ್ದ ಮೂಲ ಮಸೂದೆಗೆ ಅನುಕೂಲವಾಗಿತ್ತೇ ಹೊರತು ಸಾರ್ವಜನಿಕರ ಅಭಿಪ್ರಾಯದ್ದಾಗಿರಲಿಲ್ಲ. ಆದುದರಿಂದ ನನ್ನ ಅಭಿಪ್ರಾಯದಲ್ಲಿ ಅದು ಸಾರ್ವಜನಿಕ ಅಭಿಪ್ರಾಯವನ್ನೇ ತಿರಸ್ಕರಿಸಿದೆ. ಆದುದರಿಂದ ಕೃಷ್ಣಸ್ವಾಮಿ ಭಾರತಿಯವರ ಹೇಳಿಕೆಯಂತೆ ಈ ಮಸೂದೆಯ ಗುರಿ, ಸಾರ್ವಜನಿಕ ಅಭಿಪ್ರಾಯ ಈ ಮಸೂದೆಗೆ ವಿರೋಧವಾಗಿತ್ತೆಂದೇ ಸಾಹಸದಿಂದ ಹೇಳಬಯಸುವೆ.

**ಒಬ್ಬ ಮಾನನೀಯ ಸದಸ್ಯ** : ಒಂದು ಪ್ರಶ್ನೆ.

**ಶ್ರೀ ತಾಜಾಮುಲ್ ಹುಸೇನ್** : ಲಿಖಿತ ಅಭಿಪ್ರಾಯಗಳು ಖಚಿತವಾಗಿ ಬಿಲ್‌ನ ವಿರೋಧವಾಗಿದ್ದವು. ಹೀಗಾಗಿ ನಾನು ಮಂಡಿಸಬೇಕೆಂದಿರುವ ಸಂಗತಿ ಎಂದರೆ, ಪ್ರಜಾಸತ್ತಾತ್ಮಕ ಸರಕಾರವು ಸಾರ್ವಜನಿಕ ಅಭಿಪ್ರಾಯವನ್ನು ಸ್ವೀಕರಿಸಿಲ್ಲ. ಆದುದರಿಂದ ಅದರ ಕ್ರಮಗಳು ಪ್ರಜಾಪ್ರತಿನಿಧಿಗಳ ವಿರೋಧವಾಗಿವೆ. ಆದರೆ ಈಗ ಸಂಪೂರ್ಣ ಪ್ರಜಾಪ್ರಭುತ್ವ ಜಾರಿಯಲ್ಲಿರುವುದರಿಂದ ಪ್ರಜಾಭಿಪ್ರಾಯವನ್ನು ಪಡೆದು ಶಾಸನ ಮಾಡಬೇಕು.

ನಿಮ್ಮ ಕಾರ್ಯಾಲಯದಲ್ಲಿ, ಪ್ರತಿಭಟನೆಯ ಅರ್ಜಿಗಳು ವಿಶೇಷ ಸಂಖ್ಯೆಯಲ್ಲಿವೆ. ಅಲ್ಲದೆ ಅನೇಕ ಎಡೆಗಳಲ್ಲಿ ಈ ಮಸೂದೆಯ ಬಗೆಗೆ ಪ್ರತಿಭಟನಾ ಸಭೆಗಳು ಜರುಗಿವೆ. ವಾಸ್ತವಿಕವಾಗಿ ಪ್ರತಿಯೊಂದು

ಮಹಾನಗರದಲ್ಲಿ ಸಭೆಗಳು ನಡೆದಿವೆ. ಈ ಸಭೆಗಳಿಗೆ ಬಹುಸಂಖ್ಯೆಯಲ್ಲಿ ಜನರು ಬಂದುದಲ್ಲದೆ, ಮಾನ್ಯ ಮಂತ್ರಿಗಳು ಹಾಗೂ ಸದನದ ಸದಸ್ಯರನ್ನೂ ಆಹ್ವಾನಿಸಲಾಗಿತ್ತು. ಹಲವು ಸದಸ್ಯರು ಸಭೆಗೆ ಹೋಗಿದ್ದರು. ಆದರೆ ಕಾನೂನು ಮಂತ್ರಿವರ್ಯರು ಮಾತ್ರ ಹೋಗಿರಲಿಲ್ಲ.

**ಬಾಬು ರಾಮನಾರಾಯಣ ಸಿಂಗ್ :** ಅವರಿಗೆ ಧೈರ್ಯವಿರಲಿಲ್ಲ.

**ಶ್ರೀ ನಝೀರುದ್ದೀನ್ ಅಹಮ್ಮದ್ :** ಸಭೆಗೆ ಹೋಗುವುದು ಅವರಿಗೆ ಸರಿ ಎಂದು ತೋರಿಲ್ಲ. ಏಕೆಂದರೆ, ಈ ಮಸೂದೆ ಮಂಡನೆ ಬಗೆಗೆ ಸಾರ್ವಜನಿಕ ಅಭಿಪ್ರಾಯ ಪ್ರಮುಖವಲ್ಲವೆಂದೇ ಅವರ ಭಾವನೆಯಾಗಿರಬಹುದು. ಆದರೆ ಡಾ॥ ಡಿ. ಎನ್. ಮಿಟ್ಟರ್ ಅವರು ತಮ್ಮ ಅಭಿಪ್ರಾಯವನ್ನು ನೀಡಿದಾಗ, ಮಾನ್ಯ ಕಾನೂನು ಸಚಿವರು, ಈ ಹಿಂದೆ ಮಿಟ್ಟರರ ಅಭಿಪ್ರಾಯವನ್ನು ಬಹಿರಂಗಪಡಿಸಿದಲ್ಲಿ ಅದು ಇಂದಿನ ಅಭಿಪ್ರಾಯವನ್ನು ಖಂಡಿಸಿದಂತಾಗುತ್ತದೆ ಎಂದೇ ಸೂಚಿಸಿದರು.

**ಡಾ॥ ಬಿ. ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಎಂಬುದೇ ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ನಝೀರುದ್ದೀನ್ ಅಹಮ್ಮದ್ :** ಅವರು ಹೇಳುವಂತೆ ಡಾ॥ ಮಿಟ್ಟರರ ಈ ಹಿಂದಿನ ಪತ್ರ ಅವರ ಇಂದಿನ ನಿಲುವನ್ನೇ ಖಂಡಿಸುತ್ತದೆ. ಆದರೆ ಅವರು ಹೇಳಿದ ಮತ್ತು ಇಂದು ಹೇಳಿರುವ ಎರಡೂ ಹೇಳಿಕೆಗಳನ್ನು ನಾನು ಗಮನಿಸಿರುವೆ.

**ಡಾ॥ ಬಿ. ಆರ್. ಅಂಬೇಡ್ಕರ್ :** ಅವರ ನಂತರದ ಹೇಳಿಕೆ ನನ್ನಲ್ಲಿಲ್ಲ, ನಾನು ನೋಡಿಯೂ ಇಲ್ಲ. ಅದೇನೆಂಬುದನ್ನು ಹೇಳಿರಿ.

**ಶ್ರೀ ನಝೀರುದ್ದೀನ್ ಅಹಮ್ಮದ್ :** ಅವರ ನಂತರದ ಹೇಳಿಕೆಯು ವರದಿಯಲ್ಲಿಯೇ ಇದೆ.

**ಡಾ॥ ಬಿ. ಆರ್. ಅಂಬೇಡ್ಕರ್ :** ಅದನ್ನೇ ನೀವು ನಂತರದ ಹೇಳಿಕೆ ಎಂದು ಹೇಳುವಿರೋ, ನಾನು ಅದಕ್ಕಿಂತ ನಂತರ ಏನಾದರೂ ಇದೆಯೋ ಎಂದು ಭಾವಿಸಿದ್ದೆ.

**ಶ್ರೀ ನಝೀರುದ್ದೀನ್ ಅಹಮ್ಮದ್** : ಇಲ್ಲಿಯ ಪ್ರಶ್ನೆ ಎಂದರೆ ಅವರ ಮುಂಚಿನ ಹಾಗೂ ನಂತರದ ಬರಹಗಳಲ್ಲಿ ಏನಾದರೂ ಭೇದಗಳಿವೆಯೇ, ಹಾಗಿದ್ದರೆ ಅವರು ಬಹು ಹಿಂದೆಯೇ ಕರಪತ್ರ ಬರೆದಿರುವರೇ?

**ಡಾ॥ ಬಿ. ಆರ್. ಅಂಬೇಡ್ಕರ್ :** ಕರಪತ್ರ?

**ಶ್ರೀ ನಝೀರುದ್ದೀನ್ ಅಹಮ್ಮದ್ :** ಒಂದು ಪುಸ್ತಕ

**ಡಾ॥ ಬಿ. ಆರ್. ಅಂಬೇಡ್ಕರ್ :** ಆದರೆ ಈಗ ತಾನೇ ಕರಪತ್ರ ಎಂದೇ ತಾವು ಹೇಳಿದಿರಿ.

**ಶ್ರೀ ನಝೀರುದ್ದೀನ್ ಅಹಮ್ಮದ್ :** ತಾವು ಏನೇ ಹೆಸರಿನಿಂದ ಕರೆಯಿರಿ, ಅದರ ಬಗೆಗೆ ನನಗೆ ಯಾವ ತಕರಾರೂ ಇಲ್ಲ.

**ಡಾ॥ ಬಿ. ಆರ್. ಅಂಬೇಡ್ಕರ್ :** ಆ ಪುಸ್ತಕದ ಗಾತ್ರದ ಬಗೆಗೆ ತಮ್ಮ ವಿಚಾರವೇನು?

**ಶ್ರೀ ನಝೀರುದ್ದೀನ್ ಅಹಮ್ಮದ್ :** ಅದನ್ನು ತಾವು ಗ್ರಂಥ ಭಂಡಾರದಲ್ಲಿ ನೋಡಬಹುದು.

**ಡಾ॥ ಬಿ. ಆರ್. ಅಂಬೇಡ್ಕರ್:** ತಾವು ಕರಪತ್ರ ಎಂದಿದ್ದೀರಿ, ಅದರ ಗಾತ್ರವೇನು?

**ಶ್ರೀ ನಝೀರುದ್ದೀನ್ :** ಈ ವಿಧವಾಗಿ ಕೇಳಬೇಕೆಂದಿದ್ದರೆ ನನ್ನನ್ನು ಕಟಕಟೆಯಲ್ಲಿ ನಿಲ್ಲಿಸಿ, ಆಗ ನಾನು ಸಾಕ್ಷಿ ನುಡಿಯುವೆ.

**ಡಾ॥ ಬಿ. ಆರ್. ಅಂಬೇಡ್ಕರ್ :** ನನ್ನ ಸನ್ಮಾನ್ಯ ಮಿತ್ರರು ಹೇಳಿಕೆ ನೀಡುವ ಮುನ್ನ ವಿಷಯವೇನೆಂದು ಅರಿಯುವುದು ಸೂಕ್ತ. ಏಕೆಂದರೆ ಅವರು ಹೇಳಿದಂತೆ ಕರಪತ್ರವಾಗಿದ್ದರೆ ಅದು ಸೋಜಿಗದ ಸಂಗತಿ.

ಅದು ಪುಸ್ತಕವೇ ಆಗಿದ್ದಲ್ಲಿ ಅದು ಏಳುನೂರು ಪುಟಗಳದ್ದಾಗಿದೆ.

**ಶ್ರೀ ನಝೀರುದ್ದೀನ್ ಅಹಮ್ಮದ್ :** ಇದು ಗಾತ್ರದ ಪ್ರಶ್ನೆ ಅಲ್ಲ, ಅದರಲ್ಲಿರುವ ವಿಷಯದ ಪ್ರಶ್ನೆಯಾಗಿದೆ.

**ಡಾ॥ ಬಿ. ಆರ್. ಅಂಬೇಡ್ಕರ್ :** ಹೌದು. ಆದರೆ ಅದರಲ್ಲಿಯ ಅಭಿಪ್ರಾಯವೇನು?

**ಶ್ರೀ ನಝೀರುದ್ದೀನ್ ಅಹಮ್ಮದ್ :** ಅದರಲ್ಲಿಯ ಅಭಿಪ್ರಾಯವೆಂದರೆ : ಹಿಂದೂ ಸ್ತ್ರೀಯರ ಹಕ್ಕುಗಳನ್ನು ಸುಧಾರಿಸಬೇಕು ಹಾಗೂ ಸೂಕ್ತ ರಕ್ಷಣೆಯನ್ನೂ ಒದಗಿಸಬೇಕು. ನಾನು ಎಲ್ಲ ವಿವರಗಳನ್ನು ಹೇಳಲಾರೆ. ಅದರಿಂದ ಸದನದ ಸಮಯವನ್ನೂ ಹಾಳು ಮಾಡಲಾರೆ. ಅಲ್ಲದೆ ನನಗೆ ಗಟ್ಟಿಯಾಗಿ ಮಾತನಾಡಲೂ ಸಾಧ್ಯವಿಲ್ಲ. ಸದನದ ಮುಂದೆ ಇರುವ ಮಸೂದೆಯ ಅಭಿಪ್ರಾಯವನ್ನು ಅವರು ಖಂಡಿತವಾಗಿಯೂ ವಿರೋಧಿಸಿದ್ದಾರೆ. ಹೀಗಾಗಿ ಮಾನ್ಯ ಮಂತ್ರಿವರ್ಯರು ಅವರ ಹಿಂದಿನ ಹೇಳಿಕೆಯನ್ನೇ ದುರುಪಯೋಗಪಡಿಸಿಕೊಂಡಿದ್ದಾರೆ. ನಾನು ಹೇಳಬಯಸುವುದೇನೆಂದರೆ ಡಾ॥ ಮಿಟ್ಟರ್ ಅವರೇ ತಮ್ಮ ಬದಲಾಯಿಸಿದ ಅಭಿಪ್ರಾಯಕ್ಕೆ ವಿವರಣೆ ನೀಡಿದ್ದಾರೆ. ಅಭಿಪ್ರಾಯ ಬದಲಾಯಿಸುವುದು ಅಪರಾಧವೆ? ಡಾ॥ ಮಿಟ್ಟರ್ ಅವರು ಹಿಂದೂ ಸ್ತ್ರೀಯರಿಗೆ ಹೆಚ್ಚು ಹಕ್ಕುಗಳನ್ನು ನೀಡುವಂತೆ ಆಗ್ರಹಿಸಿದ್ದಾರೆ. ನಾನು ಇದನ್ನು ಅನುಬಂಧ IIರಲ್ಲಿ ಓದಿರುವೆ; ಅಲ್ಲದೆ ಸರಕಾರವು ಮಸೂದೆಯನ್ನು ಮಂಡಿಸುವ ಮುನ್ನ, ಸಾರ್ವಜನಿಕ ಅಭಿಪ್ರಾಯದಂತೆ ಮಸೂದೆಯಲ್ಲಿ ಮಾರ್ಪಾಟುಗಳನ್ನು ಮಾಡುವ ಭರವಸೆಯನ್ನೂ ನೀಡಿದೆ. ಡಾ॥ ಮಿಟ್ಟರರ ತೊಂದರೆ ಎಂದರೆ, ಸಾಕಷ್ಟು ಮುನ್ನವೇ ಅವರು ತಮ್ಮ ಅಭಿಪ್ರಾಯವನ್ನು ವಿವರಿಸಿದ್ದು. ಅಲ್ಲದೆ ಅವರು ಸರಕಾರದ ಅಭಿಪ್ರಾಯ ಎಂದರೆ ಸಾರ್ವಜನಿಕ ಅಭಿಪ್ರಾಯದಂತೆ, ಮಸೂದೆಯಲ್ಲಿ ಬದಲಾವಣೆ ಮಾಡುವ ಭರವಸೆಯನ್ನು ಸೂಚಿಸಿದ್ದು. ಈ ಹಿನ್ನೆಲೆಯಲ್ಲಿ ಅಭಿಪ್ರಾಯ ಬದಲಿಸುವುದು ಅಸಮಂಜಸವಾಗಲಾರದು. ಏಕೆಂದರೆ ಅದು ಸಾರ್ವಜನಿಕ ಅಭಿಪ್ರಾಯಕ್ಕೆ ಪರಿಪೂರಕವಾಗಿದೆ. ಹೀಗಾಗಿ ಮಾನ್ಯ ಮಂತ್ರಿವರ್ಯರು ಹಾಗೂ ಇತರ ಸನ್ಮಾನ್ಯ ಸದಸ್ಯರು ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ತೊರೆದು, ಸಾರ್ವಜನಿಕ ಅಭಿಪ್ರಾಯಕ್ಕೆ ಮನ್ನಣೆ ನೀಡಬೇಕು. ಏಕೆಂದರೆ ಅನೇಕ ಬಾರಿ ತಮ್ಮ ವೈಯಕ್ತಿಕ ಅನಿಸಿಕೆಗಳ ವಿರುದ್ಧ ಮಂತ್ರಿಗಳು ಹೇಳಿಕೆ ನೀಡಿದ್ದಾರೆ. ಅದುದರಿಂದ ಡಾ॥ ಮಿಟ್ಟರರ ಅಭಿಪ್ರಾಯವನ್ನು ಮನ್ನಿಸಿ, ಸಾರ್ವಜನಿಕ ಹಿತಾಸಕ್ತಿಯ ಹಿನ್ನೆಲೆಯಲ್ಲಿ, ಮಸೂದೆಯನ್ನು ಪುನರ್‌ಪರಿಶೀಲಿಸುವುದರಲ್ಲಿ ಏನೂ ಅಪರಾಧವಿಲ್ಲ. ಡಾ॥ ಮಿಟ್ಟರ್ ಅವರು ತಮ್ಮ ಅಭಿಪ್ರಾಯವನ್ನು ಬದಲಾಯಸಿರಬಾರದೆ? ಅವರೇ ಲಾಹೋರಿನ ಸಾಕ್ಷ್ಯ ಸಂಗ್ರಹಿಸಿದ ಸಮಯದಲ್ಲಿ ಹಾಜರಿದ್ದು, ಸಾರ್ವಜನಿಕ ವಿರೋಧವನ್ನು ಗಮನಿಸಿರುವುದರಿಂದ........

**ಡಾ॥ ಬಿ. ಆರ್. ಅಂಬೇಡ್ಕರ್ :** ಅವರನ್ನು ಕಪ್ಪು ಧ್ವಜಗಳಿಂದ ಸ್ವಾಗತಿಸಲಾಯಿತು.

**ಶ್ರೀ ನಝೀರುದ್ದೀನ್ ಅಹಮ್ಮದ್ :** ಕೇವಲ ಕಪ್ಪು ಧ್ವಜಗಳೇ ಅಲ್ಲ, ಅದಕ್ಕೂ ಮಿಗಿಲಾಗಿ ಸಹಸ್ರಾರು ಮಹಿಳೆಯರು. ಹೆಚ್ಚಿನ ವಿವರಗಳನ್ನು ನೀಡಿ ಸದನಕ್ಕೆ ತೊಂದರೆ ನೀಡಲಾರೆ.

**ಅಧ್ಯಕ್ಷರು :** ಯಾವ ವರ್ಷದಲ್ಲಿ ?

**ಶ್ರೀ ನಝೀರುದ್ದೀನ್ ಅಹಮ್ಮದ್ :** ಈ ವಿಚಾರಣೆ ಕುರಿತಂತೆ ೧೯೪೫ ರಲ್ಲಿ ಲಾಹೋರಿಗೆ ತೆರಳಿದಾಗ ಸಹಸ್ರಾರು ಮಹಿಳೆಯರು ವಿಚಾರಣೆ ವಿರುದ್ಧ ಆಕ್ರೋಶ ಹೊಂದಿ ಈ ಮಸೂದೆಯಿಂದ ನಮಗೆ ಉಪಯೋಗವಿಲ್ಲವೆಂದೇ ಪ್ರತಿಭಟಿಸಿದರು.

**ಬಾಬು ರಾಮನಾರಾಯಣ ಸಿಂಗ್ :** ಶಬ್ಬಾಸ್, ಶಬ್ಬಾಸ್.

**ಶ್ರೀ ನಝೀರುದ್ದೀನ್ ಅಹಮ್ಮದ್ :** ಈಗ ಭೀಕರ ಪರಿಸ್ಥಿತಿಯನ್ನು ನಿಯಂತ್ರಿಸದೇ ಹೋದಾಗ,

ಮಾನ್ಯ ಸದಸ್ಯರು ವಿಚಾರಣೆಯನ್ನೇ ಮುಂದೂಡಬೇಕಾಯಿತು. ಇದನ್ನೇ ಅವರು ಅಸಂಗತ ಎಂದೇ ವರ್ಣಿಸಿದ್ದಾರೆ.

**ಬಾಬು ರಾಮನಾರಾಯಣ ಸಿಂಗ್ : ಡಾ॥ ಬಿ. ಆರ್. ಅಂಬೇಡ್ಕರ್ :** ಶಬ್ಬಾಸ್, ಶಬ್ಬಾಸ್

**ಶ್ರೀ ನಝೀರುದ್ದೀನ್ ಅಹಮ್ಮದ್ :** ಅಭಿಪ್ರಾಯವು ತಪ್ಪೆಂದು ತೋರಿದಾಗಲೂ ಅದಕ್ಕೇ ಅಂಟಿಕೊಂಡಿರುವುದೇ ದೃಢತೆಯೇ? ಇದನ್ನು ಅದೃಢತೆ ಅಥವಾ ಮೌಢ್ಯತೆ ಎನ್ನಬಹುದೇ?

ಓರ್ವ ಸದ್‌ಗೃಹಸ್ಥ ಕೇವಲ ಪುರುಷರಲ್ಲದೆ, ಸ್ತ್ರೀವರ್ಗದ ಅಭಿಪ್ರಾಯವೂ ವಿರೋಧವಿದ್ದುದನ್ನು ಮನಗಾಣಿಸಿದರೆ ಅದನ್ನು ಮಾನ್ಯ ಮಂತ್ರಿಗಳು ಅವರ ವಿರುದ್ಧವೇ ಅದನ್ನು ತಿರುಚಬಹುದೇ? ಇದು ಸಮಂಜಸವೆನಿಸಲಾರದು. ಯಾವುದೇ ಬರಹ ಅಥವಾ ಭಾಷಣವನ್ನು ಅದರ ಹಿನ್ನೆಲೆಯಲ್ಲಿಯೇ ಪರಾಂಬರಿಸಬೇಕು. ಅಲ್ಲದೆ ಸಾರ್ವಜನಿಕ ಅಭಿಪ್ರಾಯದ ಮುಂದೆ ನಮ್ಮ ಅಭಿಪ್ರಾಯಗಳನ್ನು ಮರೆಯಬೇಕು. ಆದುದರಿಂದ ಡಾ॥ ಮಿಟ್ಟರ್‌ರವರು, ಸಾರ್ವಜನಿಕ ಅಭಿಪ್ರಾಯಕ್ಕೆ ಮನ್ನಣೆ ನೀಡಿ ತಮ್ಮ ದೇಶಭಕ್ತಿಯನ್ನು ಮೆರೆದಿದ್ದಾರೆ. ಹೀಗಾಗಿ ಅವರನ್ನು ಯಾವ ಕಾರಣಕ್ಕೂ ದೂರುವಂತಿಲ್ಲ. ಆದರೆ ಮಿಕ್ಕ ಸನ್ಮಾನ್ಯ ಸದಸ್ಯರು ಮಾಡಿದುದೇನು? ಅವರ ಬಗೆಗೆ ನಾನು ಕಟುವಾಗಿ ಹೇಳಲಾರೆ. ಏಕೆಂದರೆ ಸಾರ್ವಜನಿಕ ಅಭಿಪ್ರಾಯದಂತೆ ಮಸೂದೆಯಲ್ಲಿ ಸೂಕ್ತ ಮಾರ್ಪಾಟನ್ನು ಮಾಡುತ್ತೇವೆ ಎಂದರೂ ತಮ್ಮ ಅಭಿಪ್ರಾಯಗಳಿಗೆ ಅಂಟಿಕೊಂಡರು. ಸರ್, ನಾವು ನಿಜವಾಗಿಯೂ ಚಿಂತನಶೀಲ ಮಾನವರಾಗಿದ್ದರೆ, ಡಾ॥ ಮಿಟ್ಟರ್ ಅವರಂತೆ ನಾವೂ ನಮ್ಮ ಅಭಿಪ್ರಾಯವನ್ನು ಬದಲಾಯಿಸಬೇಕು.

**ಅಧ್ಯಕ್ಷರು :** ಸದ್ದು–ಸದ್ದು, ನಾನು ಸನ್ಮಾನ್ಯ ಸದಸ್ಯರಿಗೆ ಹೇಳಬಯಸುವುದೇನೆಂದರೆ ಅವರು ತಮ್ಮ ಅಭಿಪ್ರಾಯವನ್ನು ನೇರವಾಗಿ ತಿಳಿಸಲಿ, ಅದಕ್ಕೆ ವಿವರಣೆ ನೀಡಬೇಕಾಗಿಲ್ಲ. ಏಕೆಂದರೆ ಅವರು ಈಗಾಗಲೇ ಎರಡು ದಿನ ತೆಗೆದು ಕೊಂಡಿರುವುದರಿಂದ ಅವರು ತಮ್ಮ ಹೇಳಿಕೆಯನ್ನು ಮುಕ್ತಾಯಗೊಳಿಸಲಿ, ನಾನು ಬಹುಶಃ ಇನ್ನು ಹದಿನೈದು ನಿಮಿಷಗಳ ಅವಕಾಶ ನೀಡುವೆ.

**ಶ್ರೀ ನಝೀರುದ್ದೀನ್ ಅಹಮ್ಮದ್ :** ನಾನು ತಮ್ಮ ಆದೇಶವನ್ನು ಶಿರಸಾವಹಿಸಿ ಮನ್ನಿಸುವೆ. ಈ ಹದಿನೈದು ನಿಮಿಷಗಳು ನನಗೆ ಸಾಕು.

**ಅಧ್ಯಕ್ಷರು :** ಸರಿಯಾಗಿ ೩–೧೫ಕ್ಕೆ ತಮ್ಮ ಹೇಳಿಕೆ ಮುಗಿಯಲಿ.

**ಶ್ರೀ ನಝೀರುದ್ದೀನ್ ಅಹಮ್ಮದ್ :** ಮುಂದೆ ನಾನು ಆಗ್ರಹಿಸುವುದೇನೆಂದರೆ, ನಾವು ಪ್ರಜಾಪ್ರಭುತ್ವವಾದಿಗಳು; ಪ್ರಜಾಪ್ರಭುತ್ವವನ್ನೇ ಕಾರ್ಯಾಚರಣೆಯನ್ನಾಗಿಸಿಕೊಂಡವರು, ಅಲ್ಲದೆ ನಮ್ಮ ಸಮಾಜಕ್ಕೆ ಪ್ರಜಾಪ್ರಭುತ್ವವೇ ಸೂಕ್ತ ಎಂದೇ ಹೇಳುವವರು. ಈ ಪ್ರಜಾಪ್ರಭುತ್ವವೇ ನಮಗೆ ಅಸ್ತಿತ್ವ ನೀಡಿದೆ ಹಾಗೂ ಇದರಿಂದಾಗಿಯೇ ನಾವು ಬ್ರಿಟಿಷ್ ಮಹಾನ್ ಸಾಮ್ರಾಜ್ಯದ ವಿರುದ್ಧ ಹೋರಾಡಿ ಜಯಶೀಲರಾಗಿದ್ದೇವೆ. ಹೀಗಾಗಿ ಪ್ರಜಾಪ್ರಭುತ್ವವು ಹಿಂದೂ ಲಾ ದ ಬಗೆಗೆ ಸೂಕ್ತವಾಗಿ ಅರಿಯಲು ಸಾಮರ್ಥ್ಯವನ್ನು ಹೊಂದಿರಬೇಕಾದುದು ಸಮಂಜಸ. ಆದರೆ ಸಾರ್ವಜನಿಕ ಅಭಿಪ್ರಾಯವನ್ನೇ ಗಾಳಿಗೆ ತೂರಿರುವುದು ಸರಿಯೇ? ನಿಜಹೇಳಬಹುದಾದರೆ, ನಾನು ಮಂಡಿಸಿದ ಮಸೂದೆಯನ್ನು ಹಿಗ್ಗಾಮುಗ್ಗ ಮಾಡಿ ಅದನ್ನು ವಿದ್ರೂಪಗೊಳಿಸಲಾಗಿದೆ. ಮಧ್ಯಮಧ್ಯೆ ತಿದ್ದುವುದು ತಪ್ಪು ಎಂದೇ ನಾನು ಹೇಳಲಾರೆ. ಏಕೆಂದರೆ ಬೈಬಲ್ ಗ್ರಂಥಕ್ಕೂ ತಿದ್ದುಪಡಿಗಳನ್ನು ತರಲಾಗಿದೆ ಆದರೆ ಅವು ಪ್ರಾಮಾಣಿಕವಾಗಿರಬೇಕು. ಈ ವಿಷಯವನ್ನು ಅಧಿಕಾರಯುಕ್ತವಾಗಿಯೇ ಹೇಳಬಹುದಾದರೆ ಮಸೂದೆಯಲ್ಲಿ ಮಹಾ ಬದಲಾವಣೆಗಳನ್ನು ಮಾಡಲಾಗಿದೆ. ಅಲ್ಲದೆ ಮಸೂದೆಯನ್ನು ಆಯ್ಕೆ ಸಮಿತಿಯ ಮುಂದೆ ಮಂಡಿಸಿದಾಗ, ಸೂಕ್ತ ಮಾರ್ಪಾಟುಗಳನ್ನು

ಸಾರ್ವಜನಿಕ ಅಭಿಪ್ರಾಯದಂತೆ ಮಾಡಲಾಗುವುದೆಂದೂ ಹೇಳಲಾಗಿತ್ತು; ಆದರೂ ಅದನ್ನು ಕೈಗೊಡಿಸದೇ ಹೋದಾಗ, ಸದಸ್ಯರು ಗಮನಕ್ಕೇ ತೆಗೆದುಕೊಳ್ಳದೇ ಹೋದುದು ಸರಿಯೇ? ಇಲಾಖೆಯಿಂದ ಕಳಿಸಿದ ಎರಡು ಮಸೂದೆಯ ಬಗೆಗೆ ಆಯ್ಕೆ ಸಮಿತಿಯು ಸೂಕ್ತ ಬದಲಾವಣೆಗಳನ್ನು ಮಾಡಿ ಸದನದ ಮುಂದೆ ಮಸೂದೆ ಬಂದಿದೆಯೇ ? ಹಾಗಿದ್ದರೆ ಅದು ಮಾಡಿದ ಬದಲಾವಣೆಗಳೇನು? ಬದಲಾವಣೆ ಮಾಡಿದ್ದಲ್ಲಿ ಅದನ್ನು ೪೧ (೫) ಸ್ಥಾಯಿ ಆಜ್ಞೆಯಂತೆ ಸಾರ್ವಜನಿಕರ ಅವಗಾಹನೆಗೆಂದು ಪ್ರಕಟಿಸಿದೆಯೇ? ಹಾಗೂ ಅದರ ಬಗ್ಗೆ ಪ್ರಮಾಣ ಪತ್ರವನ್ನು ಪಡೆದಿದೆಯೇ ಎಂದು ಗಂಭೀರವಾಗಿ ಕೇಳಬಯಸುವೆ.

ಮೂಲ ಮಸೂದೆಯ ಬಗೆಗೆ ಬಂದಿರುವ ಸಾರ್ವಜನಿಕ ಅಭಿಪ್ರಾಯ ಅದಕ್ಕೆ ವಿರೋಧವಾಗಿದೆ. ಅಲ್ಲದೆ ಮಸೂದೆಯನ್ನು ವಿವಿಧ ಪ್ರಾಂತಗಳ ಅವಗಾಹನೆಗೆಂದು ಕಳಿಸಿದ್ದು, ಅವುಗಳಿಂದಲೂ ವಿರೋಧ ಅಭಿಪ್ರಾಯಗಳೇ ಬಂದಿವೆ. ಅದನ್ನೂ ಹಾಗೂ ಸಾರ್ವಜನಿಕ ವಿರೋಧಾಭಿಪ್ರಾಯವನ್ನೂ ಸದನದ ಗಮನಕ್ಕೆ ತಂದಿಲ್ಲ. ಆದರೆ ಅದನ್ನು ಸಂಗ್ರಹಿಸಿ ಸದಸ್ಯರಿಗೆ ನೀಡಲಾಗಿದೆ. ಈ ದಿಶೆಯಲ್ಲಿ ನಾನು ಬಂಗಾಲದ ಒಂದೇ ಉದಾಹರಣೆಗೆ ಸೀಮಿತವಾಗಿ ಹೇಳಬಯಸುವೆ. ಯಾವ ಅಂಜಿಕೆಗೂ ತಲೆಬಾಗದೆ ನಾನು ಹೇಳುವೆ. ಬಂಗಾಲವು ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದೆ. ನೀವು ಮಿತಾಕ್ಷರ ಸಂಪ್ರದಾಯವನ್ನೇ ಕಡೆಗಣಿಸಿ, ವಾರಸುದಾರಿಕೆಯನ್ನು ನೀಡಲು ಹೊರಟಿರುವಿರಿ. ಇದು ಬಂಗಾಲಕ್ಕೆ ಗೌರವ ನೀಡುವುದೇ?

**ಓರ್ವ ಸದಸ್ಯ :** ಎಲ್ಲ ಕಡೆಗಳಿಂದಲೂ ವಿರೋಧ ವ್ಯಕ್ತಪಡಿಸಲಾಗಿದೆ.

**ಶ್ರೀ ನಝೀರುದ್ದೀನ್ ಅಹಮ್ಮದ್ :** ನಿಜ, ಎಲ್ಲಾ ಕಡೆಗಳಿಂದಲೂ ವಿರೋಧ ವ್ಯಕ್ತವಾಗಿದೆ. ಆದರೆ ಬಂಗಾಲದಿಂದ ಅಧಿಕ ವಿರೋಧ ವ್ಯಕ್ತವಾಗಿದೆ. ಅದು ಸಮರ್ಥನೀಯ ಹಾಗೂ ಅಧಿಕಾರಯುಕ್ತ ಸೂಕ್ತ ವಿರೋಧವಾಗಿದೆ. ಸಂಪೂರ್ಣ ಬಂಗಾಲ ಅದರಲ್ಲಿಯೂ ವಿದ್ಯಾವಂತ ಪ್ರಮುಖ ಮಹಿಳೆಯರೂ ಅದನ್ನು ಪ್ರಬಲವಾಗಿ ವಿರೋಧಿಸಿದ್ದಾರೆ. ನಿಜ ಹೇಳಬೇಕಾದರೆ ಆಶುತೋಷ ಮುಖರ್ಜಿಯವರ ಪತ್ನಿ, ಡಾ॥ ಮುಖರ್ಜಿಯವರ ಮಾತೆ, ಲೇಡಿ ರಾನು ಮುಖರ್ಜಿ ಬಿ. ಎನ್. ಮುಖರ್ಜಿಯವರ ಪತ್ನಿ ಮಿಕ್ಕ ಹಲವಾರು ಮಹಿಳೆಯರು ಪ್ರತಿಭಟಿಸಿದ್ದಾರೆ.

**ಡಾ॥ ಮೋನೋ ಮೋಹನ್‌ದಾಸ್ :** ಬೇರೆ ಯಾವ ಮಹಿಳೆಯರು? ಅವರನ್ನು ಹೆಸರಿಸುವಿರಾ?

ಅಪರಾಹ್ನ ೩ ಗಂಟೆ **ಶ್ರೀ ನಝೀರುದ್ದೀನ್ ಅಹಮ್ಮದ್ :** ನನಗೆ ಅಧ್ಯಕ್ಷ ಪೀಠದ ಆದೇಶಕ್ಕೇ ಗೌರವವಿದೆ. ಹೀಗಾಗಿ ಅವರು ಬೇಗನೆ ಹೇಳಿಕೆಯನ್ನು ಕೊನೆಗೊಳಿಸುವಂತೆ ಕೋರಿರುವುದರಿಂದ ತಮ್ಮ ಅಭಿಲಾಷೆ ಪೂರೈಸಲಾರೆ. ವರದಿಯಲ್ಲಿ ಹೆಸರುಗಳಿವೆ. ತಾವು ನೋಡಬಹುದು. ನಿಮ್ಮ ಅಭಿಲಾಷೆಯನ್ನು ಗಮನಿಸಿದರೆ ತಾವು ವರದಿಯನ್ನು ಗಮನಿಸದೇ ಇರುವುದು ಕರುಣಾಜನಕ ವಿಷಯವಾಗಿದೆ. ಏಕೆಂದರೆ ಇಲಾಖೆಯು ಆ ಭಾಗದ ವರದಿಯನ್ನು ಸದನದ ಅವಗಾಹನೆಗೆ ನೀಡಿಲ್ಲ. ಹೀಗಾಗಿ ಖಾಸಗಿ ಸದಸ್ಯರು ತಮ್ಮ ಹಣ ವ್ಯಯಮಾಡಿ, ಮಸೂದೆಯ ನಿಜಾಂಶಗಳನ್ನು ಸಂಗ್ರಹಿಸಿಕೊಳ್ಳಬೇಕಾಗಿದೆ. ಇದು ದಯನೀಯ ಹಾಗೂ ಕರುಣಾಜನಕ ಪರಿಸ್ಥಿತಿ. ಆದರೆ ನಾನು ಅದನ್ನೇ ಕೈಗೆತ್ತಿಕೊಂಡಿದ್ದೇನೆ.

ಸರ್, ನಾನು ಹೇಳುತ್ತಿದ್ದ ವಿಷಯವೆಂದರೆ ಬಂಗಾಲದಿಂದ ಪ್ರಬಲ ವಿರೋಧ, ಕಲಕತ್ತಾ ಶ್ರೇಷ್ಠ ನ್ಯಾಯಾಲಯದ ಐದು ನ್ಯಾಯಾಧೀಶರು, ಈಗ ಅವರಲ್ಲಿ ಓರ್ವರು ಫೆಡರಲ್ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿದ್ದಾರೆ ಈ ಐವರೂ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೆ ಅವರ ವಿರೋಧವನ್ನು ವರದಿಯಲ್ಲಿಯೂ ಸೂಚಿಸಿದೆ (ಡಾ॥ ಮಿಟ್ಟರ್)– ಅದಲ್ಲದೆ ಕಲಕತ್ತಾ ಶ್ರೇಷ್ಠ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಶ್ರೀ ಎನ್. ಸಿ. ಚಟರ್ಜಿ ಅವರೂ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಡಾ॥

ಶ್ಯಾಮಪ್ರಸಾದ್ ಮುಖರ್ಜಿ ಹಿಂದೂ ಮಹಾಸಭೆಯ ಅಧ್ಯಕ್ಷರು. ಅಧ್ಯಕ್ಷರ ಅಪ್ಪಣೆ ಪಡೆದು ಮಸೂದೆಯನ್ನು ಪ್ರಬಲವಾಗಿ ಪ್ರತಿಭಟಿಸಿದ್ದಾರೆ. ಸುಪ್ರಸಿದ್ಧ ನ್ಯಾಯಪರಿಣತರಾದ ಡಾ॥ ಆರ್. ಬಿ. ಪಾಲರೂ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಬಂಗಾಲದ ಓರ್ವ ಸದಸ್ಯ ಹೆಸರುಗಳನ್ನು ಹೇಳುವಂತೆ ಕೋರಿದ್ದು ಸೋಜಿಗವೇ ಸರಿ.

ನಾನು ಬಯಸುವುದೇನೆಂದರೆ ಮಸೂದೆಯನ್ನು ಸಾರ್ವಜನಿಕ ಅಭಿಪ್ರಾಯಕ್ಕೆ ಮಂಡಿಸಬೇಕು. ಹಿಂದೂ ಅಭಿಪ್ರಾಯವೇ ಅಧಿಕವಾಗಿ ಅದಕ್ಕೆ ಪ್ರತಿಭಟನೆ ಸೂಚಿಸಿರುವಾಗ ಅದನ್ನು ಕಡ್ಡಾಯವಾಗಿ ಅವರ ಮೇಲೆ ಹೇರಿ, ಶಾಸನ ಮಾಡುವುದು ಸಮರ್ಥನೀಯವಲ್ಲ.

**ಓರ್ವ ಸದಸ್ಯ :** ಇದು ಸರ್ವಾಧಿಕಾರ.

**ಶ್ರೀ ನಝೀರುದ್ದೀನ್ ಅಹಮ್ಮದ್ :** ಹೌದು, ಇದು ಸರ್ವಾಧಿಕಾರವೇ ಆಗಿದೆ. ಚುನಾವಣೆಗಳ ಮುನ್ನ ಅದನ್ನು ಸಾರ್ವಜನಿಕರ ಮುಂದೆ ಮಂಡಿಸಿದರೆ, ಧಕ್ಕೆ ಉಂಟಾಗಬಹುದೆಂಬ ಬೆದರಿಕೆ ಉಂಟು. ಆದರೆ ಚುನಾವಣೆಯ ಮುನ್ನವೇ ಈ ಬಗೆಯ ಶಾಸನ ರಚಿಸಿದಲ್ಲಿ ಬರುವ ತೊಂದರೆಗಳ ಅರಿವಿದೆಯೇ? ಅನಕ್ಷರಸ್ಥರು ಕೋಪಿಸಿಕೊಳ್ಳುತ್ತಾರೆ. ಏಕೆಂದರೆ ಈ ಮಸೂದೆಯಿಂದ ಅವರ ಝೀವನಕ್ಕೆ ಧಕ್ಕೆ ತಗಲುತ್ತದೆ. ಅವರು ಈ ಸರ್ವಾಧಿಕಾರಿ ಕಾನೂನಿನಂತೆ ಅಲ್ಪ ಸಮಯದಲ್ಲಿ ತಮ್ಮ ಝೀವನ ಶೈಲಿ ಬದಲಾಯಿಸಿಕೊಳ್ಳಲಾರರು. ರಷ್ಯಾ ದೇಶದಲ್ಲಿ ಲೆನಿನ್ ಕೂಡಾ ನಮ್ಮಂತೆ ಕ್ರೂರವಾಗಿ ನಡೆದುಕೊಳ್ಳಲಿಲ್ಲ. ಏಕೆಂದರೆ ರಷ್ಯಾದಲ್ಲಿ ಸಾರ್ವಜನಿಕ ಅಭಿಪ್ರಾಯಕ್ಕೆ ಮನ್ನಣೆ ನೀಡಿದಂತೆ, ಅಣಕು ಕ್ರಮವಿದೆ. ಸಾರ್ವಜನಿಕರ ಮುಂದೆ ಹೋದಲ್ಲಿ, ಈ ಮಸೂದೆಯನ್ನು ಸಾರಾಸಗಟಾಗಿ ತಿರಸ್ಕರಿಸಲಾಗುವುದು ಎಂಬ ಏಕೈಕ ಬೆದರಿಕೆಯ ಕಾರಣದಿಂದ ಇದನ್ನು ಶಾಸನ ಮಾಡಲು ಹಾತೊರೆಯಲಾಗಿದೆ. ನೀವೇ ಊಹಿಸಿದಂತೆ ಸಾರ್ವಜನಿಕರು ನಿಮ್ಮ ಪರವಾಗಿದ್ದರೆ ಅಂಜಬೇಕೆ? ಇದು ಕೇವಲ ಕಾನೂನು ಮಂತ್ರಿಗಳ ವೈಯಕ್ತಿಕ ಅಭಿಪ್ರಾಯದಿಂದಾಗಿ ಸುತ್ತುಬಳಕೆಯ ಮಾರ್ಗವನ್ನು ಪ್ರಜಾಸತ್ತಾತ್ಮಕ ವಿಧಾನಗಳಿಗೆ ವಿರೋಧವಾಗಿ ಜಾರಿಯಲ್ಲಿ ತರಲಾಗಿದೆ. ಏಕೆಂದರೆ ಈ ದೇಶದ ಜನತೆ ನೀವು ಭಾವಿಸಿದಂತೆ ಮೂರ್ಖರಲ್ಲ. ಅವರಿಗೆ ತಮ್ಮ ಹಿತ ಏನು ಎಂಬುದರ ಅರಿವಿದೆ. ಯಾರಿಗೆ ಯಾವುದು ಹಿತವೆಂಬುದು ಸ್ಥಳೀಯ ಪರಿಸ್ಥಿತಿಯನ್ನೇ ಅವಲಂಬಿಸಿದೆ. ಭಾರತ ಒಂದು ಮಹಾನ್ ರಾಷ್ಟ್ರ. ವಿವಿಧ ವ್ಯವಸ್ಥೆಯನ್ನು ಹೊಂದಿದೆ. ಆದರೆ ಈ ವಿವಿಧತೆಯಲ್ಲಿ ಏಕತೆ ಹೊಂದಿರುವಾಗ, ಕೇವಲ ಒಂದು ಕಾನೂನು ರಚನೆ ಮಾತ್ರದಿಂದ ರಾಷ್ಟ್ರದ ವಿವಿಧತೆಯನ್ನು ಏಕೆ ಮುಚ್ಚಿಹಾಕಲು ಪ್ರಯತ್ನಮಾಡುವಿರಿ– ಅಸಮಾನತೆ ಅಸಮಂಜಸವಲ್ಲ. ಏಕೆಂದರೆ ಪ್ರತಿಯೊಂದು ರಾಷ್ಟ್ರವು ತನ್ನದೇ ಆದ ವಿಶೇಷ ಸಂಸ್ಕೃತಿಯನ್ನು ಹೊಂದಿದೆ. ಈ ದಿಕ್ಕಿನಲ್ಲಿ ಹಿಂದೂ ಕಾನೂನು ವಿಶಾರದರು...........

**ಡಾ॥ ಬಿ. ಆರ್. ಅಂಬೇಡ್ಕರ್ :** ಇದು ಕೇವಲ ಭಾಷಣವೇ ಹೊರತು ವಾದವಾಗಲಾರದು.

**ಶ್ರೀ ನಝೀರುದ್ದೀನ್ ಅಹಮ್ಮದ್ :** ಅವರಿಗೆ ತಾಳ್ಮೆ ಇದ್ದುದರಿಂದಲೇ, ಅವರು ಬಲಾತ್ಕಾರದಿಂದ ತಮ್ಮ ಶಾಸನವನ್ನು ಹೇರಲಿಲ್ಲ. ಒಂದು ಬಾರಿ ಮನುಸ್ಮೃತಿಯನ್ನು ಅಧ್ಯಯನ ಮಾಡಿದಾಗ ನಮಗೆ ಗೋಚರವಾಗುವ ವಿಷಯ ಎಂದರೆ, ಅವರು ಕಾನೂನನ್ನು ಹೇರಲಿಲ್ಲ. ಆದರೆ ಸ್ಥಳೀಯ ಸಂಪ್ರದಾಯಗಳಂತೆ ಅದನ್ನು ಜಾರಿಗೊಳಿಸಬೇಕೆಂದೇ ಹೇಳಿದರು. ಈ ವಿಷಯವನ್ನು ಮನಗಂಡಿದ್ದುದರಿಂದಲೇ ಹಿಂದೂ ಲಾ ನೀಡಿದವರು, ಅದು ಎಲ್ಲೆಡೆಯಲ್ಲಿಯೂ ಒಂದೇ ತೆರನಾಗಿರಬೇಕೆಂದು ಒತ್ತಾಯಿಸಲಿಲ್ಲ. ಅಲ್ಲದೆ ಅವರು ತಮ್ಮ ನಾಗರಿಕತೆಯನ್ನಾಗಲಿ ಅಥವಾ ಶಾಸನಗಳನ್ನಾಗಲಿ ಒತ್ತಾಯದಿಂದ ಹೇರಲಿಲ್ಲ. ಅದನ್ನು ಅವರು ಮುಕ್ತವಾಗಿಯೇ ಪ್ರಸಾರ ಮಾಡಿದರು. ನಾನು ಅಧ್ಯಯನ ಮಾಡಿರುವೆ, ಅಧಿಕಾರಯುಕ್ತವಾಗಿ ಹೇಳಬಯಸುವೆ.

ಅವರು ಒತ್ತಾಯಿಸದೇ ಶಾಸನವನ್ನು ಪ್ರಚುರಪಡಿಸಿದರು. ಸ್ಥಳೀಯ ಸಂಪ್ರದಾಯಗಳ ಪಾತ್ರ ಅಂದಿನ ಯುಗದಲ್ಲಿಯೂ ಜಾರಿಯಲ್ಲಿದ್ದುದರಿಂದ ಶಾಸನದ ಬಗೆಗೆ ಭಿನ್ನಾಭಿಪ್ರಾಯಗಳು, ಇಂದಿನಂತೆ ಅಂದೂ ಜಾರಿಯಲ್ಲಿದ್ದವು. ಆದರೆ ಅಂದು ಒತ್ತಾಯಕ್ಕೆ ಆಸ್ಪದವಿರಲಿಲ್ಲ, ಭಿನ್ನತೆಗೆ ಆಸ್ಪದವಿತ್ತು. ಆದರೆ ಇಂದಿನ ಶಾಸನದ ಪರಿಸ್ಥಿತಿ ಬೇರೆ. ಈ ದೇಶ ತುಂಬಾ ವಿಶಾಲ ಮತ್ತು ವಿಭಿನ್ನ ಅಭಿಪ್ರಾಯಗಳಿಂದ ಕೂಡಿದೆ. ಆದುದರಿಂದಲೇ ತುಂಬಾ ಜಾಗರೂಕತೆ ಹಾಗೂ ದೀರ್ಘಾಲೋಚನೆಯಿಂದ ಮುಂದುವರಿಯಬೇಕು.

ಸರ್, ಶ್ರೀ ಕಾಮತ್ ಅವರು ಈ ಮಸೂದೆಯನ್ನು ಡಾ॥ ಬಿ. ಆರ್. ಅಂಬೇಡ್ಕರ್‌ರ ೧೩೮ನೆಯ ನೂತನ ಸ್ಮೃತಿ ಎಂದೇ ಕರೆದಿದ್ದಾರೆ. ಆದರೆ ಸ್ಮೃತಿಯು ಶ್ರುತಿಯಿಂದ ಆರಂಭವಾಗುವುದು. ಹೀಗಾಗಿ ಈ ಶ್ರುತಿಯ ನೂತನ ಸೂತ್ರಗಳಿಗೆ ಅಣಕು ಒಪ್ಪಿಗೆಯ ಲೇಪನ ಮಾಡಲಾಗಿದೆ. ಈ ಮಸೂದೆಯು ಕೇವಲ ಸ್ಮೃತಿಯಾಗಿರದೆ ನೂತನ ವೇದವಾಗಿದೆ.

(ಪಂಡಿತ ಲಕ್ಷ್ಮಿಕಾಂತ ಮಿಶ್ರ : ಅಲ್ಲ, ಅದೊಂದು ವಿಸ್ಮೃತಿಯಾಗಿದೆ) ಅಹುದು. ಅದೊಂದು, ಬಗೆಯ ವಿಸ್ಮೃತಿ ಅಂದರೆ ಹಿಂದಿನದನ್ನು ಮರೆಯುವುದು. ಏಕೆಂದರೆ ಡಾ॥ ಅಂಬೇಡ್ಕರರ ಲೇಖನಿಯಿಂದ, ಹಿಂದಿನ ಪವಿತ್ರ ಕಾನೂನುಗಳು, ಸಂಪ್ರದಾಯಗಳು, ಶಾಸನಗಳು, ಪ್ರಿವಿ ಕೌನ್ಸಿಲ್‌ನ ನಿರ್ಣಯಗಳನ್ನೆಲ್ಲಾ ತೊಡೆದುಹಾಕಲಾಗಿದೆ. ರಾವ್ ಸಮಿತಿಯ ವರದಿಯನ್ನು ತೊಡೆದುಹಾಕಲಾಗಿದೆ. ಎಲ್ಲವನ್ನು ಕೈಬಿಡಲಾಗಿದೆ. ಆದುದರಿಂದ ಪಂಡಿತ ಮಿಶ್ರರು ಹೇಳಿದಂತೆ ಇದೊಂದು ವಿಸ್ಮೃತಿಯೇ ನಿಜ.

ಇದು ವಿಸ್ಮೃತಿಯೇ ಸರಿ. ಏಕೆಂದರೆ ಎಲ್ಲವನ್ನು ಮರೆಯಲಾಗಿದೆ. ಇದೊಂದು ನೂತನ ವೇದ. ಸಾಮ, ಋಗ್, ಯಜುರ್ ಹಾಗೂ ಅಥರ್ವಗಳೆಂಬ ನಾಲ್ಕು ವೇದಗಳೊಂದಿಗೆ ಡಾ॥ ಅಂಬಾವೇದ ಎಂಬ ಐದನೆಯ ವೇದ. ಅಂದರೆ ಹಿಂದಿನವನ್ನೆಲ್ಲಾ ಸಾರಾಸಗಟಾಗಿ ತಿರಸ್ಕರಿಸಿದ ವೇದ. ಸರ್ ವಂದನೆಗಳು.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ಅಧ್ಯಕ್ಷರೇ, ನಿನ್ನೆಯಿಂದ ನಾವು ಹಿಂದೂ ಕೋಡ್ ಬಿಲ್ ಬಗೆಗೆ ಚರ್ಚಿಸುತ್ತಿದ್ದೇವೆ. ಈ ಮಸೂದೆಯನ್ನು ಫೆಬ್ರವರಿ ತಿಂಗಳಿನಲ್ಲಿಯೂ ಚರ್ಚಿಸಿದ್ದೇವೆ. ನಾನು ಈ ವಿವಾದಾತ್ಮಕ ಮಸೂದೆಯ ಗುಣದೋಷಗಳನ್ನು ಚರ್ಚಿಸುವ ಮುನ್ನ ಈ ಮಸೂದೆಯು ಹಿಂದೂ ಸಮಾಜವನ್ನೇ ಧ್ವಂಸಗೊಳಿಸಲು ಹೊರಟಿದ್ದು ಇಂತಹ ಮಸೂದೆಯನ್ನು ಮಂಡಿಸಿರುವ ವಿಧಾನದ ಬಗೆಗೆ ನಾನು ಪ್ರತಿಭಟಿಸುವೆ ; ಏಕೆಂದರೆ, ಹಿಂದೂ ಸಮಾಜದ ಅಳಿವು–ಉಳಿವು ಇದನ್ನೇ ಅವಲಂಬಿಸಿದೆ. ಎಲ್ಲರಿಗೂ ತಿಳಿದಂತೆ ಈ ಮಸೂದೆಯನ್ನು ಕೊನೆಯ ದಿನದಂದು ಅಂದರೆ ಏಪ್ರಿಲ್ ೯, ೧೯೪೮ರಂದು ತುರಾತುರಿಯಲ್ಲಿ ಸದನದಲ್ಲಿ ಮಂಡಿಸಲಾಯಿತು. ಅಲ್ಲದೆ ಈ ವಿಧೇಯಕದ ಬಗೆಗೆ ಸಾಮಾನ್ಯ ಚರ್ಚೆಯೂ ಇಲ್ಲದೆ ಮಂಡಿಸಿದ್ದು ಸೂಕ್ತವಾಗಿರಲಿಲ್ಲ. ಮುಂದುವರಿದು ಈ ಅಧಿವೇಶನದಲ್ಲಿಯೂ, ಮುಂಗಡಪತ್ರದ ನೆಪದಲ್ಲಿ, ಈ ವಿವಾದಾತ್ಮಕ ವಿಧೇಯಕದ ಬಗೆಗೆ ಚರ್ಚೆಗೆ ಸಮಯವೇ ಇಲ್ಲ ಎಂದು ಹೇಳುತ್ತಿರುವುದು ವಿಷಾದನೀಯ. ನಾನು ಸವಿನಯವಾಗಿ ಕೇಳುವುದೇನೆಂದರೆ ಈ ವಿಧವಾದ ಅತಿ ಮಹತ್ವದ ವಿಧೇಯಕ ಸದನದ ಮುಂದೆ ಮೊದಲ ಬಾರಿಗೆ ಚರ್ಚೆಗೆಂದೇ ಬಂದಿರುವಾಗ, ತುರಾತುರಿಯಾಗಿ ಅದನ್ನು ವಿವರವಾಗಿ ಚರ್ಚಿಸದೇ, ಮುಕ್ತಾಯಗೊಳಿಸುವುದು ಸೂಕ್ತವೇ? ಈ ವಿಷಯ ಸರಕಾರಕ್ಕೆ ಸಂಬಂಧಿಸಿದ್ದಾದರೂ, ನಾನು ಎಚ್ಚರಿಸುವುದೇನೆಂದರೆ ಈ ವಿಧೇಯಕ ಮಹತ್ವಪೂರ್ಣವಾದುದು, ಆದುದರಿಂದ ಇದನ್ನು ಸಾಕಷ್ಟು ಎಚ್ಚರಿಕೆಯಿಂದ ಪರಿಶೀಲಿಸಿ, ಪರಿಗ್ರಹಿಸಬೇಕು. ಆತುರ ಸಲ್ಲದು. ನಾನು ಕೇಳಬಯಸುವ ವಿಷಯವೆಂದರೆ, ಅನೇಕ ಶತಮಾನಗಳಿಂದ, ಹಿಂದೂ ಸಮಾಜವು ವಿದೇಶೀಯರ ಒತ್ತಡ ಹಾಗೂ ದಬ್ಬಾಳಿಕೆಗಳನ್ನು

ಸಹಿಸಿಕೊಂಡು, ತನ್ನ ಉಳಿವನ್ನು ಕಂಡುಕೊಂಡಿರುವಾಗ, ಈ ವಿಧೇಯಕದಿಂದ ಅದು ತನ್ನ ಅಳಿವನ್ನು ಹೊಂದಬಲ್ಲದೇ? ಹೀಗಾಗಿ ನಿನ್ನೆ ಸನ್ಮಾನ್ಯ ಮಿತ್ರರಾದ ನಝೀರುದ್ದೀನ್ ಅವರು ಹೇಳುವಂತೆ, ಈ ವಿಧೇಯಕದ ಬಗೆಗೆ ಸರಕಾರ ಏಕೆ ಆತುರ ಹೊಂದಿದೆ. ಅದೂ ಕಾನೂನು ಮಂತ್ರಿಗಳ ಹೇಳಿಕೆಯಂತೆ ಸಾರ್ವಜನಿಕರ ಅಭಿಪ್ರಾಯ ಈ ಮಸೂದೆಯನ್ನು ಬೆಂಬಲಿಸಿದೆ; ಆದರೆ ಖಚಿತವಾಗಿ ಸಾರ್ವಜನಿಕ ಬೆಂಬಲ ಈ ಮಸೂದೆಗೆ ಇಲ್ಲ. ಸರ್, ಮಸೂದೆಗೆ ಸಾರ್ವಜನಿಕ ಬೆಂಬಲವಿದೆ ಎಂದು ಅರಿಯುವ ವಿಧಾನವೇನು? ಇದರ ದಾಖಲಾತಿಗಳೇನಾದರೂ ಲಭ್ಯವೇ? ವಿನಮ್ರಪೂರಕವಾಗಿ, ಹೇಳುವುದೇನೆಂದರೆ, ರಾವ್ ಸಮಿತಿಯ ವರದಿಯು ಈ ವಿಧೇಯಕದ ಪ್ರತಿಯೊಂದು ಪ್ರಕರಣವನ್ನೂ ವಿರೋಧಿಸಿದೆ. ಆದುದರಿಂದ ಮತ್ತೊಂದು ಬಾರಿ, ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸದೆ, ಈ ಮಸೂದೆಯನ್ನು ಮಂಡಿಸಿರುವುದು ಸೂಕ್ತವಲ್ಲ. ಅಲ್ಲದೆ ಸಾರ್ವಜನಿಕರ ಬೆಂಬಲವಿದೆ ಎಂದು ಕಾನೂನು ಮಂತ್ರಿಯಾಗಲಿ ಅಥವಾ ಸದಸ್ಯರು ಹೇಳಿದರೆ ಅದು ಅಗ್ರಾಹ್ಯ ವಿಷಯ.

ನಮ್ಮ ಮುಂದೆ ಇರುವ ಪ್ರಶ್ನೆ ಎಂದರೆ ಹಿಂದೂ ಲಾ ದ ಕ್ರೋಡೀಕರಣ ಅನಿವಾರ್ಯವೇ? ಈ ಕ್ರೋಡೀಕರಣವನ್ನು ಯಾರು ಬಯಸಿದ್ದಾರೆ ? ನನಗೆ ತಿಳಿದಂತೆ ಕೇವಲ ಎರಡು ಸಂದರ್ಭಗಳಲ್ಲಿ ಅದು ಅನಿವಾರ್ಯ. ಮೊದಲನೆಯದಾಗಿ ಯಾವುದಾದರೂ ಶಾಸನದ ಬಗೆಗೆ ನ್ಯಾಯಾಂಗದ ಅಭಿಪ್ರಾಯ ವಿರೋಧವಾಗಿದ್ದಾಗ ಶಾಸಕಾಂಗ ಮಧ್ಯೆ ಪ್ರವೇಶಿಸಿ, ಸಂದೇಹ ನಿವಾರಿಸಬಹುದು.

ಎರಡನೆಯದಾಗಿ ಶಾಸಕಾಂಗದ ಶಾಸನದಲ್ಲಿ, ಸಾರ್ವಜನಿಕರು ಏನಾದರೂ ಬದಲಾವಣೆಗಳನ್ನು ಬಯಸಿದಾಗ. ಈ ಎರಡು ಸಂದರ್ಭದಲ್ಲಿ ಕ್ರೋಡೀಕರಣದ ಆವಶ್ಯಕತೆ ಇದೆ. ಆದರೆ ಈಗ ಅಂತಹ ಸಂದರ್ಭಗಳೇ ಬಂದಿಲ್ಲ ಏಕೆಂದರೆ ಹಿಂದೂ ಲಾ ಸುವ್ಯವಸ್ಥಿತವಾಗಿ ನೆಲೆಸಿದೆ. ಅಲ್ಲದೆ, ಸ್ಮೃತಿ ಮತ್ತು ಶ್ರುತಿಗಳ ಹೊತ್ತಿಗೆಗಳಲ್ಲಿ ಅಲ್ಲದೇ ಈ ಕಾನೂನು ಸಮರ್ಥನೀಯವಾಗಿ ಸಮಾಜದಲ್ಲಿ ಬೇರು ಬಿಟ್ಟಿದೆ.

ಸ್ಮೃತಿ ಮತ್ತು ನಿಬಂಧನೆಗಳ ಆಧಾರದ ಮೇಲೆ ನ್ಯಾಯಾಲಯಗಳು ನೀಡಿದ ಲೆಕ್ಕಗಳನ್ನೂ ಮುದ್ರಿಸಲಾಗಿದೆ. ಅಲ್ಲದೆ ಹಿಂದೂ ಲಾ ದ ಪ್ರತಿಯೊಂದು ಸಂದಿಗ್ಧ ವಿಷಯದ ಬಗೆಗೆ ಅರ್ಥೈಸಲಾಗಿದೆ. ಈ ಮಸೂದೆಯನ್ನು ಮಂಡಿಸುವಾಗ, ಕಾನೂನು ಮಂತ್ರಿಗಳು ಹೇಳಿದಂತೆ, ನ್ಯಾಯಾಲಯಗಳ ಅಭಿಪ್ರಾಯದಂತೆ, ಹಿಂದೂ ಸಮಾಜದ ಜಂಟಿಕುಟುಂಬ ವ್ಯವಸ್ಥೆಯು ಅಸಂಬದ್ಧವೆಂದೇ ಹೇಳಲಾಗಿದೆ. ಆದರೆ ಅದು ಈ ಹಿಂದೂ ಕೋಡ್ ಬಿಲ್ಲನ್ನು ಮಂಡಿಸಲು ಸಮರ್ಥ ವಾದವಾಗಬಹುದೇ? ಏಕೆಂದರೆ ಈ ವಿಷಯದಲ್ಲಿ ಪ್ರಿವಿ ಕೌನ್ಸಿಲ್ ಹಾಗೂ ನ್ಯಾಯಾಲಯಗಳು ಸೂಕ್ತ ಸೂತ್ರಗಳನ್ನು ನಿರೂಪಿಸಿದ್ದು ಅವು ಸ್ಥಾಯಿರೂಪದಲ್ಲಿ ಸಮಾಜದಲ್ಲಿವೆ. ಅದು ತಂದೆಯದೇ ಆಗಿರಲಿ ಅಥವಾ ಕರ್ತನ ಅಧಿಕಾರಗಳೇ ಇರಲಿ ಹಿಂದೂ ಜಂಟಿಕುಟುಂಬ ವ್ಯವಸ್ಥೆ ಸೇರಿದಂತೆ ಸುಭದ್ರವಾಗಿವೆ. ಅಲ್ಲದೆ, ವಿವಿಧ ವಿವಾದಾತ್ಮಕ ಅಭಿಪ್ರಾಯಗಳೂ, ಪ್ರಿವಿ ಕೌನ್ಸಿಲ್ ಹಾಗೂ ನ್ಯಾಯಾಲಯಗಳಿಂದ ನಿರ್ಣಯಿಸಲ್ಪಟ್ಟಿವೆ. ವಿವಾಹದ ಬಗೆಗೂ ನಿರ್ದಿಷ್ಟ ವ್ಯವಸ್ಥೆಯನ್ನು ಸೂಚಿಸಿರುವಾಗ ಸರಕಾರ, ಸಾರ್ವಜನಿಕ ಅಭಿಪ್ರಾಯವನ್ನು ಮೂಲೆಗುಂಪುಮಾಡಿ ಹಿಂದೂ ಕೋಡ್ ವಿಧೇಯಕವನ್ನು ಮಂಡಿಸುವುದು ಯಾವ ನ್ಯಾಯ?

ಈ ಕ್ರೋಡೀಕರಣದ ಚರಿತ್ರೆ ಇದೇ ಮೊದಲ ಬಾರಿ ಅಲ್ಲ. ಏಕೆಂದರೆ ಈ ಹಿಂದೆ ಅನೇಕ ಬಾರಿ ಈ ಪ್ರಯತ್ನ ನಡೆದು ಕೈ ಬಿಟ್ಟಿರುವುದುಂಟು. ನಾನು ಗೌರವದಿಂದ ಸದನದ ಗಮನಕ್ಕೆ ಬ್ರಿಟಿಷರ ಆಳ್ವಿಕೆಯ ಸಮಯದಲ್ಲಿಯೇ ಕೈಗೆತ್ತಿಕೊಂಡ ಪ್ರಯತ್ನಗಳನ್ನು ವಿವರಿಸಲು ಬಯಸುವೆ. ಪ್ರತಿಯೊಂದು ಬಾರಿ ಈ ವಿಧವಾದ ಪ್ರಯತ್ನ ಕೈಗೆತ್ತಿಕೊಂಡು ನಂತರ ಕೈ ಬಿಡಲಾಗಿದೆ. ೧೮೫೩ ರ ಸಮಯದಲ್ಲಿ ರಾಯಲ್

ಕಮಿಷನ್ ಒಂದನ್ನು ರಚಿಸಲಾಯಿತು. ನಂತರ ೧೮೫೩ರಲ್ಲಿ ಒಂದು ಕಾನೂನು ಆಯೋಗವನ್ನೇ ನೇಮಿಸಲಾಯಿತು. ಈ ಆಯೋಗದ ವರದಿಯನ್ನು ಕ್ರಿ. ಶ. ೧೮೫೬ರಲ್ಲಿ ಪ್ರಕಟಿಸಿ, ಹಿಂದೂ ಲಾ ವನ್ನು ಕ್ರೋಡೀಕರಿಸುವ ವಿಷಯವನ್ನು ತಳ್ಳಿ ಹಾಕಲಾಯಿತು. ಏಕೆಂದರೆ ಈ ಬಗೆಯ ಕ್ರೋಡೀಕರಣವು ಹಿಂದೂ ಸಮಾಜದ ವಿಕಾಸಕ್ಕೆ ಅಡಚಣೆಯಾಗಬಲ್ಲದು. ಅದರಂತೆಯೇ ೧೮೬೧ ಹಾಗೂ ೧೯೨೧ ರಲ್ಲಿ ಕ್ರಮವಾಗಿ ಭಾರತ ರಾಜ್ಯದ ಕಾರ್ಯದರ್ಶಿ ಹಾಗೂ ಗವರ್ನರ್ ಜನರಲ್ಲರಿಂದ ಕಾನೂನು ಆಯೋಗವನ್ನು ರಚಿಸಲಾಯಿತು. ಈ ಎರಡರ ನಿರ್ಣಯಗಳೂ, ಕ್ರೋಡೀಕರಣಕ್ಕೇ ಸಂಬಂಧಿಸಿದಂತೆ ಮಾರ್ಚ್ ೨೩, ೧೯೨೧ರ ವರದಿಯಂತೆ ಏಕರೂಪ ಹೊಂದಿದ್ದವು. ಈ ಸದನದ ಸನ್ಮಾನ್ಯ ಸದಸ್ಯರು, ಕ್ರೋಡೀಕರಣಕ್ಕೆ ಸಂಬಂಧಿಸಿದಂತೆ, ಒಂದು ಆಯೋಗವನ್ನೇ ನೇಮಿಸಬೇಕೆಂಬ ಸಲಹೆ ನೀಡಿದ್ದರು. ಈ ಸಲಹೆಯ ಬಗೆಗೆ ಸದನದಲ್ಲಿ ಚರ್ಚೆ ನಡೆದಾಗ, ಕಾನೂನು ಇಲಾಖೆಯು, ಸುಪ್ರಸಿದ್ಧ ಹಿಂದೂ ಲಾ ದ ಪಂಡಿತರಾಗಿದ್ದ ಡಾ॥ ತೇಜಬಹದ್ದೂರ್ ಸಪ್ರು ಅವರ ವಶದಲ್ಲಿತ್ತು. ಆಗ ಕ್ರೋಡೀಕರಣ ಬಗೆಗೆ ಕೂಲಂಕಷವಾಗಿ ಚರ್ಚೆ ನಡೆದು, ಹಿಂದೂ ಲಾ ದ ವಿದ್ವಾಂಸರಾದ ಸಪ್ರು ಅವರೇ ಉತ್ತರ ನೀಡಿದ್ದರು. ಅವರ ಹೇಳಿಕೆಯಂತೆ ವೈಯಕ್ತಿಕ ಕಾನೂನುಗಳ ಬಗೆಗೆ ಕ್ರೋಡೀಕರಣವು ಅಷ್ಟು ಸಾಧುವಲ್ಲ ಮತ್ತು ಸರಳವೂ ಅಲ್ಲವೆಂದು ಏಕೆಂದರೆ ಶತಮಾನಗಳಿಂದ ನ್ಯಾಯವೇತ್ತರು ನಿರ್ಣಯಿಸುತ್ತಾ ಬಂದಿದ್ದು ಅದನ್ನು ತಿದ್ದುವುದು ಕಷ್ಟಸಾಧ್ಯ. ಅಲ್ಲದೆ ಜರ್ಮನಿ ದೇಶದಲ್ಲಿ ಜರ್ಮನ್ ಕೋಡ್ ನಿರ್ಮಾಣಕ್ಕೆ ೧೮೩೪ ರಿಂದ ೧೮೯೬ರ ಅವಧಿಯವರೆಗೂ ಶ್ರಮವಹಿಸಿ ಸುಮಾರು ೧೯೦೦ರಲ್ಲಿ ಈ ಕಾರ್ಯವನ್ನು ಪೂರೈಸಲಾಯಿತು. ಅಂದರೆ ಈ ಕಾರ್ಯಕ್ಕೆ ೫೦ ವರ್ಷ ಕಾಲಾವಧಿ ಹಿಡಿಯಿತು. ಹೀಗೆ ಸಾಮ್ರಾಜ್ಯಶಾಹೀ ಜರ್ಮನ್ ದೇಶಕ್ಕೆ ಈ ಮಾದರಿಯ ನೀತಿ ಸಂಹಿತೆಯನ್ನು ನೀಡಲು ಅರ್ಧ ಶತಮಾನದ ಕಾಲಾವಕಾಶ ಬೇಕಾಯಿತು. ಸ್ವಿಸ್ ನೀತಿ ಸಂಹಿತೆಯನ್ನು ನಿರ್ಮಿಸಲು ಅನೇಕ ಸಂವತ್ಸರಗಳ ಅವಧಿ ಹಿಡಿಯಿತು. ಈ ಎರಡೂ ದೇಶಗಳ ಸ್ಥಿತಿಗತಿಯನ್ನು ಗಮನಿಸಿದಾಗ, ಭಾರತದಂತಹ ಪುರಾತನ ದೇಶದಲ್ಲಿ ಸಹಸ್ರಾರು ಸಂವತ್ಸರಗಳಿಂದ ಪರಂಪರಾನುಗತವಾಗಿ ಹರಿದು ಬಂದಿರುವ ಶಾಸನಗಳನ್ನು ಕ್ರೋಡೀಕರಿಸುವುದೆಂದರೆ ಸಾಮಾನ್ಯ ಸಂಗತಿಯಲ್ಲ. ಇದೊಂದು ವೃಥಾ ಕಾರ್ಯ ಹಾಗೂ ಹುಚ್ಚು ಸಾಹಸವೆಂದೇ ಹೇಳಬೇಕಾಗುತ್ತದೆ. ವಿನಮ್ರವಾಗಿ ಕೇಳ ಬಯಸುವುದೇನೆಂದರೆ ಈ ಕಾನೂನಿನ ಮೂಲ ಎಲ್ಲಿದೆ? ಏಕೆಂದರೆ ಈ ಕಾನೂನಿನ ಹಿಂದೆ ಸಾರ್ವಭೌಮ ಅಧಿಕಾರವಿರದೆ, ನೈತಿಕ ಅಭಿಪ್ರಾಯ ಅಡಗಿದೆ.

ಈ ನೈತಿಕಾಧಿಕಾರದ ಮೂಲ, ಈಗಾಗಲೇ ಓರ್ವರು ಹೇಳಿದಂತೆ ೧೩೮ ಸ್ಮೃತಿಕಾರರ ತಪಸ್ಸಿನ ಹಾಗೂ ಸಾಧನೆಯಲ್ಲಿದೆ, ಆದರೆ ಯಾರೂ ಅದನ್ನು ಕಾನೂನೆಂದು ಸಾರದೇ ವೇದ ಮತ್ತು ಸ್ಮೃತಿಗಳ ಪರಂಪರೆ ಎಂದೇ ನಡೆಸಿಕೊಂಡು ಬಂದರು. ವಿಜ್ಞಾನೇಶ್ವರ ಹಾಗೂ ಝೀಮೂತವಾಹನರು ಎರಡು ಪ್ರಮುಖ ಪ್ರವಾಹಗಳಾಗಿ ನಮ್ಮ ಪರಂಪರೆ ಮೇಲೆ ಅಪಾರ ಪ್ರಭಾವ ಬೀರಿದವರೂ ಹಿಂದೂ ಕಾನೂನುಗಳನ್ನು ಕ್ರೋಡೀಕರಿಸುವ ಸಾಹಸಕ್ಕೆ ಕೈ ಹಾಕಲಿಲ್ಲ. ಅವರು ಕೇವಲ ಸ್ಮೃತಿಯನ್ನೇ ಆಧಾರವಾಗಿರಿಸಿಕೊಂಡರು. ಮುಂದೆ ಮೊಗಲರೂ ಮತ್ತು ಬ್ರಿಟಿಷ್ ಆಡಳಿತದವರೂ ಈ ಸಾಹಸಕ್ಕೆ ಕೈ ಹಾಕದೆ ಇದ್ದ ಸಂಪ್ರದಾಯಗಳನ್ನೇ ಅರ್ಥೈಸಿಕೊಂಡು ಮುಂದುವರಿದರು. ಆದರೆ ಈಗ ಹಿಂದು ಲಾ ದ ಕ್ರೋಡೀಕರಣಕ್ಕೆ ಏನು ಕಾರಣ ಒದಗಿ ಬಂದಿದೆ? ಜರ್ಮನಿ ಹಾಗೂ ಸ್ವಿಸ್ ದೇಶಗಳೇ ತಮ್ಮ ಅಲ್ಪ ಪರಂಪರೆಯಿದ್ದಾಗಲೂ ೫೦ ವರ್ಷದ ದೀರ್ಘಾವಧಿಯ ಪರಿಶ್ರಮದ ನಂತರ ನೀತಿ ಸಂಹಿತಿಯನ್ನು ರಚಿಸಿಕೊಂಡಿರುವಾಗ, ಸಹಸ್ರಾರು ಸಂವತ್ಸರಗಳ ಪರಂಪರೆಯನ್ನು ಹೊಂದಿರುವ ಭಾರತದಲ್ಲಿ ಕ್ರೋಡೀಕರಣಕ್ಕೇಕೆ ಆತುರ? ವಿವಿಧತೆಯಲ್ಲಿ ಏಕತೆರೂಪ

ಹಾಗೂ ಭಾರತೀಯ ಸ್ತ್ರೀವರ್ಗದ ಮೇಲಿನ ದಬ್ಬಾಳಿಕೆಯನ್ನು ನಿವಾರಿಸುವಲ್ಲಿ ಈ ಕ್ರೋಢೀಕರಣವನ್ನು ಕೈಕೊಳ್ಳಲಾಗಿದೆ. ಆದರೆ ಏಕರೂಪದ ಬಗೆಗೆ ಈ ಮಸೂದೆಯಲ್ಲಿ ಯಾವ ಸಾಧನೆಯೂ ಆಗಿಲ್ಲವೆಂದೇ ಹೇಳಬಹುದು.

(ಈ ಹಂತದಲ್ಲಿ ಅಧ್ಯಕ್ಷರು ಎದ್ದುಹೋದುದರಿಂದ, ಉಪಾಧ್ಯಕ್ಷರಾದ ಅನಂತಶಯನಂ ಅಯ್ಯಂಗಾರರು ಅಧ್ಯಕ್ಷ ಸ್ಥಾನ ಅಲಂಕರಿಸಿದರು.)

ಹಿರಿಯ ಮಗನಿಗೇ ವಾರಸುದಾರರ ಹಕ್ಕು ನೀಡುವ ಪ್ರಕರಣಗಳಲ್ಲಿಯಾಗಲೀ ಅಥವಾ ಇನಾಂ ಭೂಮಿಯ ವಾರಸುದಾರಿಕೆಯ ಪದ್ಧತಿಯಲ್ಲಾಗಲೀ ಹೆಚ್ಚು ಬದಲಾವಣೆ ಮಾಡಿಲ್ಲ. ಅದರಂತೆಯೇ ವಿವಾಹಗಳಿಗೆ ಸಂಬಂಧಿಸಿದ ಶಾಸನದ ೭ನೆ ಉಪನಿಬಂಧನೆಯಲ್ಲಿ ಸಪಿಂಡ ವಿವಾಹ ಪದ್ಧತಿಯನ್ನು ನಿಷೇಧಿಸಿದ್ದರೂ, ಸ್ಥಳೀಯ ಸಂಪ್ರದಾಯಗಳಂತೆ ಜಾರಿಯಲ್ಲಿದ್ದರೆ ಅದಕ್ಕೆ ಅನುಮತಿ ನೀಡಲಾಗಿದೆ. ಆದುದರಿಂದ ಏಕರೂಪ ವ್ಯವಸ್ಥೆಯ ಭೂತದಿಂದ ರಚನೆಕಾರರು ವಿಮೋಚನೆಯನ್ನು ಹೊಂದಿಲ್ಲ ಎಂದು ಕಾಣುತ್ತದೆ. ದಾಸ್ಯದಿಂದ ಸ್ತ್ರೀ ವಿಮೋಚನೆಯ ಮಾತು ದೂರವೇ ಉಳಿದಿದೆ. ನಾನು ಹೇಳುವುದೇನೆಂದರೆ, ಹಿಂದೂ ಲಾ ಹಾಗೂ ಹಿಂದೂ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನದ ಬಗೆಗೆ ಮಾತನಾಡುವವರು, ಈ ವಿಷಯವನ್ನು ಹಿಂದೂ ದೃಷ್ಟಿಕೋನದಿಂದಲೇ ನೋಡಬೇಕೇ ಹೊರತು ಪಾಶ್ಚಿಮಾತ್ಯರ ನಾಗರಿಕತೆಯ ದೃಷ್ಟಿಯಿಂದಲ್ಲ. ಈ ಸಮಸ್ಯೆಗಳಿಗೆ, ನಮ್ಮ ಶಾಸನ ರಚನಕಾರರು ಏನು ಪರಿಹಾರೋಪಾಯಗಳನ್ನು ಸೂಚಿಸಿದ್ದಾರೆ ಎಂಬುದನ್ನು ಗಮನಿಸಬೇಕು. ಏಕೆಂದರೆ ಈ ವಿವಾದಾತ್ಮಕ ಸಮಸ್ಯೆಗಳ ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ದೃಷ್ಟಿಯಲ್ಲಿ ಅಜಗಜಾಂತರ ವ್ಯತ್ಯಾಸಗಳಿವೆ; ಅಲ್ಲದೆ ಪರಸ್ಪರ ವಿರೋಧದಿಂದ ಕೂಡಿದೆ. ನಮ್ಮ ಝೀವನವು ಭೂತ ಹಾಗೂ ಭವಿಷ್ಯ ಝೀವನದೊಂದಿಗೆ ಅಂದರೆ ಹಿಂದಿನ ಜನ್ಮ – ಮುಂದಿನ ಜನ್ಮಗಳ ಕಲ್ಪನೆಯೊಂದಿಗೆ ಕೂಡಿದ್ದುದರಿಂದ, ನಮ್ಮ ಶಾಸನಗಳ ನೆಲೆಯೇ ಬೇರೆಯಾಗಿದೆ. ಆದುದರಿಂದಲೇ ನಮ್ಮ ಮಹರ್ಷಿಗಳು ಈ ಸಮಸ್ಯೆಯನ್ನು, ಸಮಗ್ರ ಹಿಂದೂ ಸಮಾಜದ ಹಿತದೃಷ್ಟಿಯಿಂದ ಕಂಡುಕೊಂಡಿದ್ದರು. ಹೀಗಾಗಿ ನಮ್ಮ ಆದರ್ಶಗಳೇ ಬೇರೆ. ಅದನ್ನು ಗಮನಿಸದೇ ಹೋದರೆ ನಮ್ಮ ಶಾಸನಗಳಿಗೆ ಯಾವ ಬೆಲೆಯೂ ಬರಲಾರದು.

ಸರ್, ಕಾನೂನು ಮಂತ್ರಿಗಳು, ಇಂದು ಜಾರಿಯಲ್ಲಿರುವ ವಿಚಾರ ಮೌಲ್ಯಗಳ ಹಿನ್ನೆಲೆಯಲ್ಲಿ ಈ ಮಸೂದೆಯನ್ನು ಮಂಡಿಸಿದ್ದೇನೆ ಎಂದು ಹೇಳಿದ್ದರೆ, ಅದಕ್ಕೆ ನನ್ನ ಅಭ್ಯಂತರವೇ ಇರುತ್ತಿರಲಿಲ್ಲ. ಆದರೆ ನನಗೆ, ಹಿಂದೂ ಕಾನೂನಿನ ಅಂಗೀಕೃತ ಅಂಶಗಳಿಗೆ ಸಂಬಂಧಿಸಿದಂತೆ ಎಂದೇ ಹೇಳಿದಾಗ, ಅಪಾರ ನೋವುಂಟಾಗಿದೆ. ಏಕೆಂದರೆ ಎಲ್ಲರಿಗೂ ತಿಳಿದಂತೆ, ಇದು ಸೈತಾನನು ಬೈಬಲ್ ಬಗೆಗೆ ಹೇಳಿದಂತಾಗುತ್ತದೆ. ನನ್ನ ದೃಷ್ಟಿಯಲ್ಲಿ, ಈ ವಿಧೇಯಕದಡಿಯಲ್ಲಿ ವಿವಾಹ ವಿಚ್ಛೇದನ, ದತ್ತು ಸ್ವೀಕಾರ ಅಥವಾ ವಾರಸುದಾರಿಕೆ ಎಲ್ಲ ವಿಷಯಗಳಲ್ಲಿಯೂ ಅದು ಹಿಂದೂ ಲಾದ ಅಂಗೀಕೃತ ಅಂಶಗಳಿಗೆ ವಿರೋಧವಾಗಿದೆ. ಹೀಗಾಗಿ ಪರಿಣಾಮವು ಫಲಪ್ರದವಾಗಲಾರದು. ಇದರಿಂದಾಗಿ ನರಕಯಾತ ಸಂಭವಿಸುತ್ತದೆ.

ಈ ವಿಧೇಯಕದಿಂದ ಹಿಂದೂ ಸಮಾಜದ ಮೂಲಗಳಿಗೆ ಕೊಡಲಿಪೆಟ್ಟು ಬೀಳುತ್ತದೆ. ಆದುದರಿಂದ ಈ ಮಸೂದೆಯ ಬಗೆಗೆ ಸಾರ್ವಜನಿಕ ಅಭಿಪ್ರಾಯ ಸಂಗ್ರಹಣೆಗೆ ಒತ್ತಾಯಿಸಬೇಕಾಗಬಹುದೇನೋ.

ನಾನು ಹೇಳಿದಂತೆ, ಈ ವಿಧವಾದ ಕ್ರೋಡೀಕರಣ ಅನಿವಾರ್ಯವೆ? ಇದರಿಂದಾಗಿ ಹಿಂದೂ ಸಮಾಜದಲ್ಲಿ ಏಕರೂಪತೆಯನ್ನು ಸಾಧಿಸಲು ಸಾಧ್ಯವೆ? ಅಥವಾ ಈ ಶಾಸನದ ಬಲಾತ್ಕಾರದ ಆವಶ್ಯಕತೆ ಉಂಟೇ? ಈ ದಿಶೆಯಲ್ಲಿ ನಮ್ಮ ಶಾಸನಾತ್ಮಕ ಅನುಭವಗಳೇನು? ಈ ದಿಶೆಯಲ್ಲಿ ಭಾರತ ಸರಕಾರವು

೧೯೨೩ ರಲ್ಲಿ ಒಂದು ನಾಗರಿಕ ನ್ಯಾಯ ಸಮಿತಿಯನ್ನು ರಚಿಸಿತು. ಈ ಸಮಿತಿಯು, ದೀರ್ಘ ಅಧ್ಯಯನದ ನಂತರ ಆಸ್ತಿ ವರ್ಗಾಯಿಸುವ, ಗುತ್ತಿಗೆ ನೀಡುವ, ಸಾಕ್ಷಿ ನುಡಿಯುವ ವಿಧೇಯಕಗಳ ಬಗೆಗೆ ಶಾಸಕಾಂಗವು ಸೂಕ್ತ ಬದಲಾವಣೆಗಳನ್ನು ತರಬಹುದೆಂದೇ ಶಿಫಾರಸು ಮಾಡಿತು. ಶಾಸಕಾಂಗವು ಸೂಕ್ತ ಬದಲಾವಣೆಗಳನ್ನು ತರಲು ಸಮಯವೇ ಇರಲಿಲ್ಲ. ಹೀಗಾಗಿ ಸಮಿತಿಯ ಪರಿಣಾಮವೇನು? ಒಟ್ಟಾರೆ ಈ ದಿಶೆಯಲ್ಲಿಯ ಪರಿಣಾಮವೆಂದರೆ, ಓಬೀರಾಯನ ಶಾಸನಗಳೇ ಜಾರಿಯಲ್ಲಿದ್ದವು. ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಆದರೆ ನಿರುಪಯೋಗ ಶಾಸನಗಳ ಅಧಿಕಾರ ಮಾತ್ರ ಮುಂದುವರಿಯಿತು. ಹಿಂದೂ ಕೋಡ್ ಬಿಲ್ಲಿನ ಹಣೆಬರಹವೂ ಹೀಗೆ. ಕಾನೂನು ಕಡತದಲ್ಲಿ ಮಾತ್ರ ಇರಬಲ್ಲದೇ ಹೊರತು ಅದರ ಹಕ್ಕುಗಳು ಪ್ರಜೆಗಳಿಗೆ ದೊರೆಯುವುದು ದೂರದ ಮಾತೇ ಸರಿ. ಹಿಂದೂ ಲಾ ತನ್ನ ಅಸ್ತಿತ್ವವನ್ನೇ ಕಳೆದುಕೊಂಡು, ಜಾರಿಯಲ್ಲಿರಬಹುದಾದ ವಿಷಯಗಳೊಡನೆ ಸ್ಪಂದಿಸದೇ ಹೋಗುವುದು. ಆದುದರಿಂದ ಹೀಗೆ 'ಹಿಂದೂ ಲಾ' ವನ್ನು ಕ್ರೋಡೀಕರಿಸುವುದರಿಂದ ಯಾವ ಲಾಭವೂ ದೊರೆಯದು ಮತ್ತು ನಾವು ಎಣಿಸಿದಂತೆ ಏಕರೂಪತೆಯೂ ಮೂಡದು.

ಉದಾರಹರಣೆಗೆ ೧೮೭೧ ರಲ್ಲಿಯ ಹಿಂದೂ ಪುನರ್ವಿವಾಹ ವಿಧೇಯಕವನ್ನೇ ನೋಡಿ. ಸರ್, ಇಂದು ಅದರ ಬಗೆಗೆ ನಮ್ಮಲ್ಲಿ ಒಮ್ಮತವಿದೆಯೇ? ಅದೊಂದು ಶಾಸನವಾಗಿ ಕೇವಲ ಪುಸ್ತಕದಲ್ಲಿದೆ. ಆದರೆ ಆ ವಿಧೇಯಕದಿಂದ ಆದ ಪ್ರಯೋಜನವೇನು?

**ಶ್ರೀಮತಿ ಜಿ. ದುರ್ಗಾಬಾಯಿ :** (ಮದ್ರಾಸ್, ಸಾಮಾನ್ಯ) : ಅಂದರೆ ತಾವು ವಿಧವಾ ವಿವಾಹ ಮಸೂದೆಯನ್ನು ವಿರೋಧಿಸುವಿರೋ?

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ನನ್ನ ಸ್ನೇಹಿತರು ಶಾಂತರೀತಿಯಿಂದ ನಾನು ಹೇಳುವುದನ್ನು ಕೇಳಲಿ, ಏಕೆಂದರೆ ವಿರೋಧಿ ಅಭಿಪ್ರಾಯಗಳನ್ನು ಸಹಿಸುವ ಮತ್ತು ಶಾಂತಿಯಿಂದ ಕೇಳುವುದನ್ನು ಅಳವಡಿಸಿಕೊಳ್ಳಬೇಕು. ನನ್ನ ಅಭಿಮತದಂತೆ ಕೇವಲ ವಿಧೇಯಕ ತಂದ ಮಾತ್ರಕ್ಕೆ ಏಕರೂಪತೆ ಅಥವಾ ಭಿನ್ನಾಭಿಪ್ರಾಯಗಳು ದೂರವಾಗಬಲ್ಲವೆ? ೧೮೭೨ರ ವಿಧವಾ ವಿವಾಹ ವಿಧೇಯಕದಲ್ಲಿ ಕೂಡಾ ಅಸಂಗತಗಳಿದ್ದು, ವಿವಿಧ ಶ್ರೇಷ್ಠ ನ್ಯಾಯಾಲಯಗಳು ಭಿನ್ನಾಭಿಪ್ರಾಯ ಹೊಂದಿವೆ. ಸೆಕ್ಷನ್ (೨) ಬಗೆಗೆ ಕಾಣಬಹುದಾದ ಪ್ರಶ್ನೆ ಎಂದರೆ ಪುನರ್‌ವಿವಾಹ ಹೊಂದಿದ ಮಹಿಳೆಗೆ ಸಾಂಪ್ರದಾಯಿಕವಾಗಿ ತನ್ನ ಹಿಂದಿನ ಪತಿಯ ಆಸ್ತಿಯನ್ನು ಹೊಂದುವ ಹಕ್ಕಿದೆಯೇ? ಔಧ್ ಶ್ರೇಷ್ಠ ನ್ಯಾಯಾಲಯದ ಅಭಿಪ್ರಾಯದಲ್ಲಿ ಮರು ಮದುವೆಯಿಂದ ಅವಳು ಹಕ್ಕು ಕಳೆದುಕೊಳ್ಳಲಾರಳು. ಎಂದರೆ ಬೇರೆ ನ್ಯಾಯಾಲಯಗಳು ಇದಕ್ಕೆ ವಿರೋಧವಾದ ಅಭಿಪ್ರಾಯ ತಳೆದಿವೆ. ಅಲ್ಲದೆ. ಈ ವಿಧೇಯಕದಲ್ಲಿ ಸರಳ, ಪದವಾದ 'ಸಹೋದರಿ' ಬಗೆಗೇನೇ ಒಮ್ಮತವಿಲ್ಲ. ನಾಗಪುರದ ನ್ಯಾಯಾಲಯದಂತೆ 'ಸಹ–ಸಹೋದರಿ' ಯನ್ನೂ ಸೇರಿಸಲಾಗಿದೆ (ಮಲ–ಸಹೋದರಿ) ಹೀಗಾಗಿ ನಾನು ಹೇಳಬೇಕಾದುದೇನೆಂದರೆ, ಕೇವಲ ಹಿಂದೂ ಕೋಡ್ ವಿಧೇಯಕದಿಂದ ಈ ಭಿನ್ನಾಭಿಪ್ರಾಯಗಳನ್ನು ತೊಡೆದುಹಾಕಲು ಸಾಧ್ಯವಿಲ್ಲ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ತಮ್ಮ ಅಭಿಪ್ರಾಯ, ಕಲಹಗಳು ಮುಂದುವರಿಯಬೇಕೆಂದಿದೆಯೇ?

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ನಾನು ಹೇಳುವುದೇನೆಂದರೆ, ಈ ವಿಧೇಯಕವು ಶಾಸನವಾದರೂ ಕಲಹಗಳು ಮುಂದುವರಿಯುತ್ತವೆ. ಆಗ ಈ ವಿಧೇಯಕದ ಅಂಶಗಳನ್ನು ಶ್ರೇಷ್ಠ ನ್ಯಾಯಾಲಯವು ಬೇರೆ ವಿಧವಾಗಿ ಅರ್ಥೈಸಲೂಬಹುದು. ಹಿಂದಿನ ನಮ್ಮ ಶಾಸನಾತ್ಮಕ ಅನುಭವದಿಂದ, ಹಿಂದೂ ಲಾ ದ ಬಗೆಗೆ ಇರಬಹುದಾದ ಭಿನ್ನ ಅಭಿಪ್ರಾಯಗಳು, ಭಿನ್ನ ವಿಷಯಗಳನ್ನು ಕೇವಲ ಶ್ರೇಷ್ಠ

ಹಾಗೂ ಸರ್ವೋಚ್ಚ ನ್ಯಾಯಾಲಯಗಳು ಮಾತ್ರ ಪರಿಹಾರ ನೀಡಬಲ್ಲವು. ಆದುದರಿಂದ ನಾನು ಗೌರವದಿಂದ ಹೇಳುವುದೇನೆಂದರೆ, ಈ ಬಗೆಯ ಕ್ರೋಡೀಕರಣ ಫಲಪ್ರದವಾಗದು. ಅಲ್ಲದೆ ಈಗಿನ ಪರಿಸ್ಥಿತಿಯಲ್ಲಿ ಈ ಕಾರ್ಯಕ್ಕೆ ಹಾಕುವುದರಿಂದ ಹಿಂದೂ ಲಾ ದ ಬಗೆಗೆ ಆಗಲಿ ಅದನ್ನು ಹಿಗ್ಗಿಸುವುದರಿಂದ ಏನೂ ಸಾಧನೆಯಾಗದು.

ನಾನು ಮುಂದೆ ಹೇಳುವ ವಿಷಯ ಅತಿ ಮಹತ್ವದ್ದಾಗಿದೆ. ಈ ವಿಧೇಯಕವು ಹೇಗೆ ಹಾಗೂ ಯಾವ ಪರಿಸ್ಥಿತಿಗಳಲ್ಲಿ ಉದ್ಭವಿಸಿತು? ಹಾಗೂ ಅದನ್ನು ಮುಂದುವರಿಸಿಕೊಂಡು ಹೋಗುವುದರಿಂದ ಆಗುವ ಲಾಭವೇನು? ನಾನು ತಮ್ಮ ಗಮನಕ್ಕೆ ತರಬಹುದಾದ ಸಂಗತಿ ಎಂದರೆ, ೧೯೪೧ರಲ್ಲಿ ಹಿಂದೂ ಲಾ ಸಮಿತಿಯನ್ನು ನೇಮಿಸಲಾಯಿತು. ಅದು ಕ್ರೋಡೀಕರಣವನ್ನು ಕೈಗೆತ್ತಿಕೊಂಡು ಎರಡು ಭಾಗಗಳ ಎರಡು ವಿಧೇಯಕಗಳನ್ನು ರಚಿಸಿತು. ಒಂದು ಹಿಂದೂಗಳ ವಾರಸುದಾರಿಕೆಯ ಬಗೆಗೆ; ಎರಡನೆಯದು ವಿವಾಹಗಳ ಬಗೆಗೆ. ಈ ಎರಡೂ ವಿಧೇಯಕಗಳು ಸದನದ ಮುಂದೆ ಬಂದಾಗ ಜಂಟೀ ಅಧಿವೇಶನವನ್ನು ಕರೆದು, ಈ ವಿಧೇಯಕದ ಎರಡೂ ಭಾಗಗಳನ್ನು ಒಂದುಗೂಡಿಸಿ ಸಮಗ್ರವಾದ ಶಾಸನ ರಚಿಸುವುದು ಉತ್ತಮವೆಂದೇ ಭಾವಿಸಿದುದರಿಂದ, ಆ ಕಾರ್ಯಕ್ಕೆ ರಾವ್ ಸಮಿತಿಯು ಜಾರಿಯಲ್ಲಿ ಬಂದಿತು.

ಸರ್, ಈಗ ಸದನದ ಸನ್ಮಾನ್ಯ ಮಹಿಳಾ ಸದಸ್ಯರೊಬ್ಬರು ಈ ಮಸೂದೆಯ ಬಗೆಗೆ ತೀವ್ರ ಉತ್ಸಾಹದಿಂದ ಮಾತನಾಡಿ ಈ ವಿಧೇಯಕವು ಕಳೆದ ಹತ್ತು ವರ್ಷಗಳಿಂದಲೂ ದೇಶದಲ್ಲಿ ಚರ್ಚೆಯಾಗುತ್ತಲೇ ಇದೆ, ಅಲ್ಲದೆ ರಾವ್ ಸಮಿತಿಯು ದೇಶದಲ್ಲಿ ವ್ಯಾಪಕವಾಗಿ ಸಂಚಾರ ಮಾಡಿ, ಸಾವಿರಾರು ಸಾಕ್ಷ್ಯಗಳನ್ನು ಸಂಗ್ರಹಿಸಿದೆ ಎಂದು ಹೇಳಿದ್ದಾರೆ. ಆದರೆ, ವಿನಯಪೂರ್ವಕವಾಗಿ ಅವರು ಹೇಳಿದ ವಿಷಯ ಸತ್ಯಕ್ಕೆ ದೂರ ಎಂದೇ ಹೇಳುವೆ. ಏಕೆಂದರೆ ಸಮಿತಿಯ ಮುಂದೆ ನೀಡಿದ ಸಾಕ್ಷ್ಯಗಳ ಗಾತ್ರವನ್ನು ಪರಿಶೀಲಿಸಿದಾಗ ಅದಕ್ಕಿದ್ದ ಬೆಂಬಲದ ಪರಿಚಯವಾಗುತ್ತದೆ. ರಾವ್ ಸಮಿತಿ ಜನವರಿ ೨೦, ೧೯೪೪ರಲ್ಲಿ ಅಸ್ತಿತ್ವಕ್ಕೆ ಬಂದಿತು. ಅದು ಒಂದು ವಿಧೇಯಕವನ್ನು ರಚಿಸಿ ಹಲವು ಆಯ್ಕೆಗೊಂಡ ಮತ್ತು ಪ್ರಸಿದ್ಧಿ ಪಡೆದ ನ್ಯಾಯವೇತ್ತರ ಅಭಿಪ್ರಾಯಕ್ಕೆಂದೇ ವಿಧೇಯಕವನ್ನು ಕಳಿಸಿಕೊಟ್ಟಿತು. ಅವರ ಅಭಿಪ್ರಾಯ ಪಡೆದ ನಂತರ ಮೂಲ ವಿಧೇಯಕವನ್ನು ಅವರ ಸಲಹೆಯಂತೆ ಮರುರಚಿಸಿ ದೇಶಾದ್ಯಂತ ಪ್ರಕಟಿಸಬೇಕೆಂದು ನಿರ್ಧರಿಸಿತು. ಅದರಂತೆಯೆ ಈ ವಿಧೇಯಕವನ್ನು ಭಾರತೀಯ ಭಾಷೆಗಳಿಗೆ ತರ್ಜುಮೆ ಮಾಡಿ ಸುಮಾರು ೬೦೦೦ ಪ್ರತಿಗಳನ್ನು ಹಂಚಲಾಯಿತು. ಅಲ್ಲದೆ ೫ ಆಗಸ್ಟ್ ೧೯೪೪ ರೊಳಗೆ ಅಭಿಪ್ರಾಯಗಳನ್ನು ಕಳಿಸಿಕೊಡಲು ಕೋರಿ, ಆ ಅಭಿಪ್ರಾಯಗಳನ್ನು ३೧, ಡಿಸೆಂಬರ್ ೧೯೪೪ ರೊಳಗೆ ಸಲ್ಲಿಸಲಾಯಿತು. ಈ ವಿಧವಾಗಿ ಅಭಿಪ್ರಾಯ ಸಂಘಟನೆಯ ನಂತರ ಸಮಿತಿಯು ದೇಶದಲ್ಲಿ ಸಂಚಾರ ಕೈಗೊಂಡಿತು. ಈ ಸಮಿತಿಯು ಕೈಗೊಂಡ ಸಂಚಾರವನ್ನು ಗಮನಿಸುವಂತೆ ಸದನಕ್ಕೆ ಅರಿಕೆ ಮಾಡುವೆ. ಏಕೆಂದರೆ ಈ ಸಮಿತಿಯು ಕೇವಲ ಒಂದು ಡಜನ್ ಪ್ರಮುಖ ನಗರಗಳಾದ ಅಲಹಾಬಾದ್, ಬೊಂಬಾಯಿ, ಕಲಕತ್ತಾ, ಪೂನಾ, ಪಾಟ್ನಾ, ಲಾಹೋರ್ ಮುಂತಾದ ನಗರಗಳಿಗೆ ಮಾತ್ರ ಭೇಟಿ ನೀಡಿತು. ಇದನ್ನು ನಾವು ವಿಶಾಲ ಸಂಚಾರವೆಂದು ಪರಿಗಣಿಸಬಹುದೆ? ಏಕೆಂದರೆ ಈ ದೇಶದ ಗಾತ್ರವನ್ನು ಜನಸಂಖ್ಯೆಯನ್ನು ಗಮನಿಸಿದರೆ ಇದರ ಅರಿವಾಗುತ್ತದೆ. ಈ ವಿಧವಾದ ಸಮಿತಿಯ ಸಂಚಾರ ದೇಶದ ಸಾರ್ವಜನಿಕ ಅಭಿಪ್ರಾಯವೆಂದು ಪರಿಗಣಿಸಬಹುದೇ? ಸಾಕ್ಷಿಗಳ ಸಂಗ್ರಹಣೆಯನ್ನು ಪರಿಶೀಲಿಸಿದಾಗ, ಕೇವಲ ೧೨೧ ಸಾಕ್ಷಿಗಳು ಹಾಗೂ ೨೦೧ ಸಂಸ್ಥೆಗಳ ಪ್ರತಿನಿಧಿಗಳಾದ ೨೫೧ ವ್ಯಕ್ತಿಗಳಿಂದ ಸಾಕ್ಷಿ ಸಂಗ್ರಹಿಸಲಾಗಿದೆ. ಇದು ಒಟ್ಟಾರೆ ಪಡೆದ ಸಾಕ್ಷಿಗಳ ಮೊತ್ತ.

ಇದು ಯಾವ ವಿಧವಾದ ಕಲ್ಪನೆಯಿಂದ ಸಮಸ್ತ ದೇಶದ ಅಭಿಪ್ರಾಯವನ್ನು ಸೂಚಿಸಬಹುದೆಂಬ

ಪ್ರಶ್ನೆ ಕೇಳಬಹುದಲ್ಲವೆ? ಭಾರತದ ಅಧಿಕ ಜನರು ರೈತರಿದ್ದು, ಶೇಕಡಾ ೯೦ ರಷ್ಟು ಹಳ್ಳಿಗಳಲ್ಲಿಯೇ ನೆಲಸಿದ್ದಾರೆ ಈ ಹಿನ್ನೆಲೆಯಲ್ಲಿ ಸಮಿತಿಯು ಕೆಲವೇ ನಗರಗಳಿಂದ ಕೂಡಿಹಾಕಿದ ಸಾಕ್ಷಿಯು ದೇಶದ ಒಟ್ಟಾಭಿಪ್ರಾಯವನ್ನು ಸೂಚಿಸುವುದೇ? ಇಲ್ಲ ಎಂದೇ ಹೇಳಬಯಸುವೆ.

ಮುಂದೆ, ಕಲೆಹಾಕಿರಬಹುದಾದ ಸಾಕ್ಷಿಗಳ ಹೇಳಿಕೆಯನ್ನೇ ಗಮನಕ್ಕೆ ತೆಗೆದುಕೊಂಡಲ್ಲಿ, ಅಧಿಕ ವಿರೋಧಾಭಿಪ್ರಾಯವೇ ಕಂಡುಬಂದು, ಯಾವ ಬದಲಾವಣೆ ಬೇಡವೆಂದೇ ತಿಳಿಸಿದ್ದಾರೆ. ಅಲ್ಲದೆ ಈ ವಿಧೇಯಕದಲ್ಲಿ ಸೂಚಿಸಿದ ಪುತ್ರ ಪುತ್ರಿಯರಿಗೆ ಆಸ್ತಿಯ ಪಾಲಿನ ಒಂದೇ ಉದಾಹರಣೆಗೆ ವ್ಯಕ್ತವಾದ ಅಭಿಪ್ರಾಯವನ್ನೆ ನಾವು ನೋಡಬಹುದಾಗಿದೆ.

**ಉಪಾಧ್ಯಕ್ಷರು :** ಇಂದಿನ ಕಾನೂನಿನಂತೆ ವಿಧವೆ ಕೂಡಾ ಆಸ್ತಿಗೆ ಹಕ್ಕುದಾರಳಾಗಿದ್ದಾಳೆ.

**ಶ್ರೀ ಕೃಷ್ಣಸ್ವಾಮಿ ಭಾರತಿ :** ಬಹುಶಃ ಅವರು ಅದನ್ನೂ ವಿರೋಧಿಸಿ, ಅದನ್ನು ತೆಗೆದು ಹಾಕಬೇಕೆಂದಿರಬಹುದು.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ಈ ವಿಧವಾಗಿ ಮಗ ಹಾಗೂ ಮಗಳಿಗೆ ಆಸ್ತಿ ನೀಡುವ ಬಗ್ಗೆ ಬಂದಿರುವ ಸಾಕ್ಷಿಗಳನ್ನು ಗಮನಿಸಿರಿ. ಪರ ೭೮ ವಿರೋಧ ೨೧೫. ಅಲ್ಲದೆ ವಿಧವೆಯರಿಗೆ ಆಸ್ತಿಯಲ್ಲಿ ನಿಗದಿತ ಪ್ರಮಾಣ ನೀಡುವ ಬಗೆಗೆ ಬಂದಿರುವ ಸಾಕ್ಷಿಗಳು. ೪೯ ಪರ, ೧೦೭ ವಿರುದ್ಧ, ವಿವಾಹ ವಿಚ್ಛೇದನದ ಬಗೆಗೆ ೧೧೨ ಪರ, ೧೮೯ ವಿರೋಧ, ದತ್ತು ಸ್ವೀಕರಿಸುವ ಬಗೆಗೆ ೩೭ ಪರ, ೩೮ ವಿರೋಧ. ಇನ್ನು ಮಿಗಿಲಾದ ವಿಷಯಗಳ ಬಗೆಗೆ ಅಧಿಕ ಪ್ರತಿಭಟನೆಯನ್ನೇ ವ್ಯಕ್ತಪಡಿಸಲಾಗಿದ್ದರೂ ಈ ವಿಧೇಯಕವನ್ನು ಮುಂದುವರಿಸಬೇಕೆಂಬ ಕ್ರಮ ಸೂಕ್ತವೇ?

**ಹಲವಾರು ಸದಸ್ಯರು :** ಸೂಕ್ತವಾಗಲಾರದು.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ಆದರೆ ಈ ಸದನದ ಹಲವು ಸದಸ್ಯರು ಈ ವಿಧೇಯಕಕ್ಕೆ ಜನ ಬೆಂಬಲಿಸಿದ್ದಾರೆ ಎಂದೇ ಹೇಳುತ್ತಿದ್ದಾರೆ!

**ಶ್ರೀಮತಿ ಜಿ. ದುರ್ಗಾಬಾಯಿ :** ಹಾಗಾದರೆ ಏಕಪತ್ನಿ ವಿವಾಹದ ಬಗೆಗೆ ಏನಂತೀರಿ?

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ಅದನ್ನೂ ಸೂಕ್ತ ಸಮಯದಲ್ಲಿ ವಿವರಿಸುವೆ. ನಾನು ಹೇಳಬಯಸುವುದೇನೆಂದರೆ, ಈ ಸದನವು ನಿಜವಾಗಿಯೂ ಪ್ರಜಾಸತ್ತಾತ್ಮಕವಾಗಿದ್ದು ಪ್ರಜೆಗಳ ಬಹುಮತಕ್ಕೆ ಬೆಂಬಲ ನೀಡುವುದಾದರೆ, ಈ ವಿಧೇಯಕವನ್ನು ಕೈ ಬಿಡಬೇಕು. ಏಕೆಂದರೆ ಸೂಚಿಸಿದ ಸಾರ್ವಜನಿಕ ಅಭಿಪ್ರಾಯಕ್ಕೆ ಅದು ವಿರೋಧವಾಗಿದೆ. ಕಾನೂನು ಮಂತ್ರಿಗಳು ಮಂಡಿಸಿದ ಪತ್ರ ನನ್ನಲ್ಲಿ ಈಗ ಇರದೇ ಹೋದರೂ ಅವರು ಸಾರ್ವಜನಿಕರು ತಮಗೆ ಸೂಚಿಸಿರಬಹುದಾದ ಬೆಂಬಲವನ್ನು ಪರಿಗಣಿಸದೇ ಕೇವಲ ತಮ್ಮ ಪರಿಣತ ಅಭಿಪ್ರಾಯವನ್ನೇ ವ್ಯಕ್ತಪಡಿಸಿದ್ದಾರೆ. ಇದು ಅವರದೇ ಹೇಳಿಕೆಯಾಗಿದ್ದು, ಅವರು ತಮ್ಮ ಅಭಿಪ್ರಾಯವನ್ನು ಸದನದ ಮೇಲೆ ಹೇರಿರುವುದರಿಂದ ಅದನ್ನು ಒಪ್ಪಲಾಗದು. ಇಲ್ಲಿ ಪರಿಗಣಿಸಬೇಕಾದ ಅಭಿಪ್ರಾಯ ಎಂದರೆ ರಾವ್ ಸಮಿತಿಯ ಅಭಿಪ್ರಾಯ ಮಾತ್ರ. ಅದು ಸಾರ್ವಜನಿಕ ವಿರೋಧಾಭಿಪ್ರಾಯವಾಗಿದೆ; ಅಲ್ಲದೆ ನಮಗೆ ವಿಧೇಯಕವನ್ನು ವಿರೋಧಿಸಿ, ಸಂಸ್ಥೆಗಳು ಇನ್ನೂ ಮನವಿ ನೀಡುತ್ತಲಿವೆ..........

**ಬಾಬು ರಾಮನಾರಾಯಣ ಸಿಂಗ್ :** ಪ್ರತಿದಿನ......ಪ್ರತಿಷ್ಠಿತ ಶ್ರೇಷ್ಠ ನ್ಯಾಯಾಲಯಗಳಿಂದ, ಹಾಗೂ ನ್ಯಾಯಾಧೀಶರಿಂದ ಮತ್ತು ವಕೀಲರ ಸಂಘಗಳಿಂದ ಹಾಗೂ ದೇಶದ ವಿವಿಧ ಭಾಗಗಳಿಂದ ಪ್ರತಿಭಟನೆಗಳು ಬರುತ್ತಲೇ ಇವೆ. ನಾನು ಗಮನಿಸಿದಂತೆ ವಿಧೇಯಕಕ್ಕೆ ಅಧಿಕ ವಿರೋಧವನ್ನು ವ್ಯಕ್ತಪಡಿಸಿರುವ ಅಭಿಪ್ರಾಯಗಳೇ ಬಂದಿವೆ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ನನ್ನ ಮುಂದಿನ ವಿಷಯವೆಂದರೆ, ಸಾರ್ವಜನಿಕ ಅಭಿಪ್ರಾಯ. ಅದು ನಿರ್ದಿಷ್ಟವಾಗಿಲ್ಲ ಎಂದೇ ಭಾವಿಸಿದರೂ, ಈ ವಿಧೇಯಕದ ಬಗೆಗೆ ಏಕೆ ಈ ಬಗೆಯ ಆತುರ? ಅಲ್ಲದೆ, ಈಗಾಗಲೇ ವ್ಯಕ್ತಪಡಿಸಿದಂತೆ, ಈ ಸದನ ಕೇವಲ ಸಂವಿಧಾನ ರಚನೆ ಹಾಗೂ ಶೀಘ್ರ ಮಸೂದೆಗಳನ್ನು ಅಂದರೆ ಅನಿವಾರ್ಯವಾದವನ್ನು ಕೈಗೆತ್ತಿಕೊಳ್ಳಬಹುದು. ಆದರೆ ನಮ್ಮೆಲ್ಲರ ಭಾವನೆಗಳಿಗೆ ಮೀರಿ, ಈ ಹಿಂದೂ ಕೋಡ್ ಬಿಲ್ಲನ್ನು ಕ್ರೋಡೀಕರಿಸಿ, ಸಾರ್ವಜನಿಕರ ಪ್ರತಿಭಟನೆಯ ಮಧ್ಯದಲ್ಲಿ ಮಂಡಿಸುವ ಆತುರದ ಉದ್ದೇಶವೇನು? ಹಿಂದೂಗಳ ಆದರ್ಶವನ್ನು ಮಣ್ಣುಗೂಡಿಸುವ ಈ ವಿಧೇಯಕವನ್ನು ಹಿಂದೂ ಎಂದು ಕರೆಯದೇ ಇಸ್ಲಾಮಿಕ್ ಕೋಡ್ ಎಂದೂ ಕರೆಯಬಹುದಲ್ಲವೇ?

**ಶ್ರೀ ಕರುಣಾಕರ ಮೆನನ್** (ಮದ್ರಾಸ್ : ಸಾಮಾನ್ಯ) : ಅದೇ ಕಾರಣಕ್ಕಾಗಿ ನಮ್ಮ ಮಿತ್ರರಾದ ನಝೀರುದ್ದೀನ್ ಅಹಮದ್ ಅವರು ಅದನ್ನು ವಿರೋಧಿಸುತ್ತಿದ್ದಾರೆ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ಆದರೆ ಈ ಅಭಿಪ್ರಾಯ ನನಗೆ ಅನ್ವಯಿಸಲಾಗದು. ನನಗೂ ಇದರ ಬಗೆಗೆ ಮಾನ್ಯ ಸದಸ್ಯರಂತೆ ಆಸಕ್ತಿ ಇದೆ. ಸರ್, ಈ ವಿಧೇಯಕದ ಎರಡನೆಯ ಭಾಗವಾದ ವಿವಾಹ ಹಾಗೂ ವಿಚ್ಛೇದನದ ಬಗೆಗೆ ಪ್ರಮುಖವಾದ ಪ್ರಶ್ನೆಗಳೆಂದರೆ ಉಪನಿಬಂಧನೆ ೫ ರಿಂದ ೫೧ರಲ್ಲಿ ಅಡಕವಾಗಿರುವ ಅಂಶಗಳು. ಈ ಉಪನಿಬಂಧನೆಗಳಲ್ಲಿ ಸೂಚಿಸಲಾದ ವಿವಾಹ ಪದ್ಧತಿಗಳು ಎಷ್ಟರಮಟ್ಟಿಗೆ ಹಿಂದೂ ವಿವಾಹ ಸಂಸ್ಕಾರಗಳಂತೆ ಇವೆ ಎಂಬುದನ್ನು ಪರಿಶೀಲಿಸೋಣ. ಈ ವಿಧೇಯಕದ ೭ನೆಯ ಕಲಮಿನಲ್ಲಿ ತೋರಿಸಿದ ವಿವಾಹ ಪದ್ಧತಿಯು, ಆದರ್ಶ ಹಾಗೂ ಪವಿತ್ರ ಹಿಂದೂ ವಿವಾಹ ವಿಧಾನಕ್ಕಿಂತ ಭಿನ್ನವಾಗಿದೆ. ಅದು ನಿಜವಾದ ವಿವಾಹ ವಿಧಾನವನ್ನು ಅಡಗಿಸಲು ಮಾಡಿರಬಹುದಾದ ಸಾಮೂಹಿಕ ದಾಳಿ. ಏಕೆಂದರೆ ೧೦ ರಿಂದ ೨೦ ಕಲಮಿನ ವಿವರಗಳೇ ಇದನ್ನು ಎತ್ತಿ ತೋರಿಸುತ್ತದೆ.

ಹಿಂದೂಗಳು ಈ ಬಗೆಗೆ ಎರಡನೆಯ ಅಭಿಪ್ರಾಯವನ್ನೇ ಹೊಂದಿರಲಾರರು ಎಂಬುದು ನಿಸ್ಸಂದೇಹ. ಹಿಂದೂಗಳು ತಮ್ಮ ಆದರ್ಶಗಳಿಗೆ ತಿಲಾರ್ಪಣೆ ನೀಡಬೇಕೆಂದಿದ್ದರೆ ಅದು ಬೇರೆ ಮಾತು. ಏಕೆಂದರೆ ಹಿಂದೂಗಳಿಗೆ ವಿವಾಹ ಒಂದು ಪವಿತ್ರ ಹಾಗೂ ಅಭೇದ್ಯಬಂಧನ. ಅದೊಂದು, ದಂಪತಿಗಳ ಮಧ್ಯೆ ಇರುವ ಧಾರ್ಮಿಕ ಬಂಧನ; ಹೀಗಾಗಿ ಅದನ್ನು ಯಾವ ಕಾರಣಕ್ಕೆಂದು ಮನಸ್ಸು ಬಂದಾಗ ಮುರಿಯಲಾಗದ ಹಾಗೂ ಮರೆಯಲಾಗದ ಪವಿತ್ರ ಬಂಧನ; ಅದು ಒಪ್ಪಂದವಲ್ಲ. ಅದೊಂದು ಆಧ್ಯಾತ್ಮಿಕದಿಂದ ಒಡಗೂಡಿದ ಸಂಬಂಧ. ಹೀಗಾಗಿ ಅದನ್ನು ಯಾವುದೇ ಕಾರಣಕ್ಕಾಗಿ ಕಡಿದುಹಾಕಲಾರದ ಬಂಧನ. ಇದು ಹಿಂದೂ ಸಂಸ್ಕಾರ. ಇದನ್ನು ಯಾವ ಸ್ಮೃತಿಯೂ ಅಲ್ಲಗಳೆಯುವುದಿಲ್ಲ. ಆದುದರಿಂದ ವಿವಾಹ ಹಾಗೂ ವಿಚ್ಛೇದನ ಅಧ್ಯಾಯದಲ್ಲಿನ ೧೦ನೆಯ ಕಲಂ ಸಂಪೂರ್ಣವಾಗಿ ವಿದೇಶೀಯ. ಅದಕ್ಕೆ ಹಿಂದೂ ವಿಧಾನಗಳಲ್ಲಿ ಸ್ಥಾನವೇ ಇಲ್ಲ. ಅಲ್ಲದೆ ಈ ವಿಧವಾದ ನಾಗರಿಕ ವಿವಾಹ ಪದ್ಧತಿಯು ಈ ದೇಶದಲ್ಲಿ ಕೇವಲ ೧೮೭೨ ರಿಂದ, ೧೮೭೨ III ರಂತೆ ಜಾರಿಯಲ್ಲಿ ಬಂದಿದೆ. ಅದನ್ನು ೧೯೨೩ ರಲ್ಲಿ ತಿದ್ದಲಾಯಿತು. ನಾಗರಿಕ ವಿವಾಹ ವಿಧಾನಗಳು ಅದರಂತೆಯೇ ಮುಂದುವರಿಯಬೇಕು. ಆದರೂ ಅದು ಹಿಂದೂ ಕೋಡಿನಲ್ಲಿ ಯಾವ ಸ್ಥಾನವನ್ನೂ ಪಡೆಯಕೂಡದು. ನಾನು ಕೇಳುವುದೇನೆಂದರೆ ಸ್ಮೃತಿಗೆ ವಿರೋಧವಾದ ಈ ನಾಗರಿಕ ವಿವಾಹ ವಿಧಾನವು ಹಿಂದೂ ಕೋಡಿನಲ್ಲಿ ಏಕೆ ಅಳವಡಿಸಲಾಗಿದೆ? ನನ್ನ ಪ್ರಶ್ನೆ ಇಷ್ಟೇ. ಕಲಂ ೧೦ ರಲ್ಲಿಯ ವಿಧಾನವೇ ಹಿಂದೂ ವಿವಾಹ ಸಂಸ್ಕಾರಗಳಲ್ಲಿ ಇಲ್ಲ. ಹೀಗಾಗಿ ಅದನ್ನು ವಿಧೇಯಕದಲ್ಲಿ ಸೇರಿಸುವುದು ಅಸಮಂಜಸ ಮತ್ತು ಅಸಮರ್ಥನೀಯ. ೭, ೧೦ ಮತ್ತು ೨೧ ನೆಯ ಕಲಂಗಳು ಹಿಂದೂ ಪವಿತ್ರ ವಿವಾಹ ವಿಧಾನಗಳಿಗೆ ವ್ಯತಿರಿಕ್ತವಾಗಿವೆ; ಇದೊಂದು ಸಾಮೂಹಿಕ ದಾಳಿ.

೭ನೆಯ ಉಪನಿಬಂಧನೆಯ ಬಗೆಗೆ ಹೇಳಬೇಕಾದರೆ ಅದು ಪವಿತ್ರ ವಿವಾಹ ಸಂಬಂಧದ ಬಗ್ಗೆ ಹಲವಾರು ನಿಯಮಗಳನ್ನು ಹೇರಿದೆ. ಈ ಬಗ್ಗೆ ನಾನು ಸದನದ ಗಮನವನ್ನು ೬ನೆಯ ಉಪನಿಬಂಧನೆ ಕುರಿತಂತೆ ಸೆಳೆಯಬಯಸುವೆ. ಅದು ಸಪಿಂಡದವರಿಗೆ ಈ ಬಗೆಯ ವಿವಾಹವನ್ನು ನಿಷೇಧಿಸಿದೆ ಎಂದೇ ಹೇಳುತ್ತದೆ. ಆದರೆ ನಾವು ಉಪನಿಬಂಧನೆ ೧೦ನ್ನು ನೋಡಿದಾಗ ಅದು ೬ನೆಯ ಉಪನಿಬಂಧನೆಯಲ್ಲಿ ಹೇಳಲಾದ ನಿಷೇಧವನ್ನೇ ಲಕ್ಷಿಸದೆ ನಾಗರಿಕ ವಿವಾಹದ ಬಗೆಗೆ ಪ್ರಸ್ತಾವಿಸುತ್ತದೆ. ಮತ್ತು ಇತರ ಉಪನಿಬಂಧನೆಗಳಲ್ಲಿ ಸಪಿಂಡದವರೊಂದಿಗಿನ ವಿವಾಹವನ್ನು ೧೦ರಂತೆ ಎತ್ತಿ ಹಿಡಿಯುತ್ತದೆ. ಇದು ನಾಗರಿಕ ಮತ್ತು ಪವಿತ್ರ ವಿವಾಹಗಳಲ್ಲಿರಬಹುದಾದ ತಾರತಮ್ಯ. ೨೧ನೆಯ ಉಪನಿಬಂಧನೆ ಏನು? ಅದರಲ್ಲಿ ಹೇಳಲಾದ ಸಂಗತಿ ಎಂದರೆ, ಪವಿತ್ರ ವಿವಾಹ ವಿಧಾನಗಳನಂತರ, ಸಂಬಂಧಪಟ್ಟವರು, ನೋಂದಣಾಧಿಕಾರಿಗಳ ಬಳಿಗೆ ಹೋಗಿ ವಿವಾಹವನ್ನು ನಾಗರಿಕ ವಿವಾಹ ವಿಧಾನದಂತೆ ನೋಂದಾಯಿಸಬೇಕಂತೆ, ಪಾಪ ನೋಂದಣಾಧಿಕಾರಿಗೆ ಯಾವ ಅಭಿಪ್ರಾಯವೂ ಇಲ್ಲ.

ಹೀಗಾಗಿ ಈ ಮೂರು ಉಪನಿಬಂಧನೆಗಳಲ್ಲಿ ವಿವರಿಸಿದ ಅಂಶಗಳ ಕಾನೂನು ಬದ್ಧತೆ ಏನು? ಹೀಗಾಗಿ ವಿವಾಹದ ಬಗೆಗೆ ಇರಬಹುದಾದ ಪವಿತ್ರ ಭಾವನೆಗಳೇ ನಶಿಸಿ ಹೋದಂತಾಗುವುದಿಲ್ಲವೆ? ದಯವಿಟ್ಟು ಗಮನಿಸಿ, ಪವಿತ್ರ ವಿವಾಹ ವಿಧಾನದ ಮೂಲ ಸಂಗತಿ ಎಂದರೆ ಸಪಿಂಡೀಯರಲ್ಲಿ ವಿವಾಹ ನಿಷೇಧ. ಆದರೆ ಪ್ರಕರಣ ೧೦ರಲ್ಲಿ ಇದರ ಸೂಚನೆಯೇ ಇಲ್ಲ, ಹೀಗಾಗಿ ರಿಜಿಸ್ಟ್ರಾರ್ ಅಂದರೆ ನೋಂದಣಾಧಿಕಾರಿ, ಪವಿತ್ರ ವಿವಾಹ ಪದ್ಧತಿ ಅನೂರ್ಜಿತವೆಂದು ತಿಳಿದಿದ್ದರೂ. ನಾಗರಿಕ ವಿವಾಹ ವಿಧಿಯಂತೆ ನಿರುಪಾಯನಾಗಿ ನೋಂದಾಯಿಸಲೇ ಬೇಕು. ಹೀಗೆ ಕಣ್ಣಿಗೆ ಮಣ್ಣೆರಚುವ ಅಥವಾ ಮೋಸದ ವಿಧಿವಿಧಾನಗಳಿಂದ ಪವಿತ್ರ ವಿವಾಹ ವಿಧಾನಗಳನ್ನೇ ತಿರುಚಿಹಾಕುವುದರಿಂದ, ಒಂದು ವಿಧಾನದಲ್ಲಿ ಎಸಗಿದ ಅಪರಾಧಗಳನ್ನು ಮುಚ್ಚಿಹಾಕಲುವ ಆಸ್ಪದ ನೀಡಿದಂತಾಗುವುದಿಲ್ಲವೆ?

ಈಗ ನಾವು ಪ್ರಕರಣ ೯ಕ್ಕೆ ಬರುವ. ಇದರಲ್ಲಿ ವಿವಾಹವು ಪವಿತ್ರ ವಿಧಾನದಿಂದ ನಡೆದಿದ್ದರೂ, ಈ ವಿವಾಹದ ಬಗೆಗೆ ಪ್ರಮಾಣ ಪತ್ರ ಪಡೆಯಲೇ ಬೇಕು. ಇಲ್ಲವಾದಲ್ಲಿ ಅದು ಅಪರಾಧವಾಗುವುದು ಹಾಗೂ ಶಿಕ್ಷೆಗೆ ಗುರಿಮಾಡಬಹುದು. ಇದು ಎಷ್ಟರಮಟ್ಟಿಗೆ ಸಮರ್ಥನೀಯ ಎಂಬುದೇ ಸಂದೇಹಾಸ್ಪದವಾಗಿದೆ. ಆದರೆ ರಾವ್ ಸಮಿತಿ ಈ ಬಗೆಗೆ ಏನನ್ನೂ ಸೂಚಿಸಿಲ್ಲ ಹಾಗೂ ಪ್ರಮಾಣ ಪತ್ರ ಮತ್ತು ನೋಂದಾಯಿಸುವ ವಿಷಯಗಳನ್ನು ಸಂಬಂಧಿಸಿದವರಿಗೇ ಬಿಟ್ಟು ಕೊಡಲಾಗಿದೆ. ರಾವ್ ಸಮಿತಿಯ ಗುರಿ ಎಂದರೆ, ವಿವಾಹದ ಬಗೆಗೆ ಸಾಕ್ಷಿ ಇರಲಿ ಎಂಬ ಒಂದೇ ಉದ್ದೇಶ. ಆದರೆ ಪ್ರಸ್ತುತ ವಿಧೇಯಕದಲ್ಲಿ ಆ ಉದ್ದೇಶವನ್ನೇ ಕೈ ಬಿಡಲಾಗಿದೆ. ಪವಿತ್ರ ವಿಧಾನ ವಿವಾಹಗಳನ್ನು ಕಡ್ಡಾಯವಾಗಿ ನೋಂದಾಯಿಸುವ ಕ್ರಮವನ್ನು ರಾಜ್ಯ ಸರಕಾರಗಳ ವಿವೇಚನೆಗೆ ಬಿಡಲಾಗಿದೆ. ಆದರೆ ೬ನೆಯ ಸೆಕ್ಷನ್‌ನಲ್ಲಿ ತಿಳಿಸಿದಂತೆ ಯಾವುದೇ ಮದುವೆ ಸಕ್ರಮವಾಗಬೇಕಾದರೆ, ಈ ವಿಧೇಯಕದಲ್ಲಿ ಸೂಚಿಸಿದ ಅಂಶಗಳಂತೆ ಇರಬೇಕು. ಇಲ್ಲದೇ ಹೋದಲ್ಲಿ ವಿವಾಹ ಅಕ್ರಮವೆಂದೇ ಸಾರಲಾಗುತ್ತದೆ.

ಹೀಗಾಗಿ ೬, ೭, ೧೦ ಮತ್ತು ೨೧ ಉಪನಿಬಂಧನೆಗಳನ್ನು ಓದಿದ ನಂತರ ಬರಬಹುದಾದ ನಿರ್ಣಯವೆಂದರೆ, ಯಾವ ದಂಪತಿಗಳೆ ಆಗಲಿ ವಿವಾಹ ಪ್ರಮಾಣಪತ್ರ ಪಡೆಯದೇ ಹೋದಲ್ಲಿ ಅವರ ವಿವಾಹ ಅಸಿಂಧು, ಈ ವಿಧವಾದ ಅಂಶಗಳಿಂದ ಕೂಡಿದ್ದರೆ. ಕಾನೂನಿನ ಪರಿಣಾಮ ಏನು? ಎಂಬುದನ್ನು ಯಾರಾದರೂ ಊಹಿಸಬಲ್ಲರೆ? ಇದು ಹಿಂದೂ ಆದರ್ಶಗಳಿಗೆ ಪ್ರತಿಯಾಗಿಲ್ಲವೇ? ಶಾಸ್ತ್ರ ವಿರೋಧವಲ್ಲವೆ? ವಿವಾಹದ ಗಂಭೀರ ಮತ್ತು ಪವಿತ್ರ ಭಾವನೆಗಳಿಗೆ ಅಡಚಣೆಯಲ್ಲವೆ? ಒಂದು ವೇಳೆ ಮೂರ್ಖತನದಿಂದ,

ವಿವಾಹವನ್ನು ನೋಂದಾಯಿಸದೇ ಹೋದಲ್ಲಿ ವಿವಾಹವೇ ಅಕ್ರಮವಾಗುವುದಿಲ್ಲವೆ?

ಈ ವಿಧೇಯಕದ ಮತ್ತೊಂದು ಪ್ರಮುಖ ಅಂಶವೆಂದರೆ ವಿಚ್ಛೇದನ. ಮಾನ್ಯ ಕಾನೂನು ಮಂತ್ರಿಗಳು ಭೂತಕಾಲದ ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ವಿವಾಹ ವಿಚ್ಛೇದನ ಜಾರಿಯಲ್ಲಿತ್ತು ಎಂದು, ಎತ್ತಿತೋರಿಸಲಿಕ್ಕೆ ನಾರದ ಹಾಗೂ ಪರಾಶರ ಸ್ಮೃತಿಗಳಿಂದ ಉದಾಹರಿಸಿದ್ದಾರೆ. ಆದರೆ, ರಾವ್ ಸಮಿತಿಯ ಭಿನ್ನಾಭಿಪ್ರಾಯ ಹೊಂದಿದ್ದ ಸದಸ್ಯರಾದ ಡಾ॥ ದ್ವಾರಕನಾಥ ಮಿಟ್ಟರ್ ಅವರ ಆಳ ಸಂಸ್ಕೃತ ಅಧ್ಯಯನದಂತೆ ಈ ವಿಧವಾದ ವಿಚ್ಛೇದನಗಳು, ವಿವಾಹ ನಿಶ್ಚಯ ಅಥವಾ ನಿಶ್ಚಿತಾರ್ಥ ಹಂತಗಳಲ್ಲಿ ಮಾತ್ರ ಜಾರಿಯಲ್ಲಿದ್ದವೆ ಹೊರತು ವಿವಾಹದ ನಂತರವಲ್ಲ. ಆದುದರಿಂದ ನಾರದ, ಪರಾಶರರ ಹೇಳಿಕೆಗಳನ್ನು ಕಾನೂನು ಮಂತ್ರಿಗಳು ಹೇಳುವಂತೆ ಆಧಾರವೆಂದು ಪರಿಗಣಿಸಲಾಗದು. ಮಾನ್ಯ ಕಾನೂನು ಮಂತ್ರಿ ಮತ್ತು ಪಂಡಿತ ಠಾಕೂರ್‌ದಾಸ ಅವರ ಹೇಳಿಕೆಯಂತೆ ಹಿಂದೂ ಸಮಾಜದಲ್ಲಿ ಶೇಕಡಾ ೯೦ ವಿವಾಹ ವಿಚ್ಛೇದನ ಜಾರಿಯಲ್ಲಿದೆ. ಪಂಡಿತ ಠಾಕೂರ್ ದಾಸರ ಅಭಿಪ್ರಾಯದಲ್ಲಿ ಶೇಕಡಾ ೯೫ ಎಂದೇ ಹೇಳುತ್ತಾರೆ. ನಾನು ಗೌರವದಿಂದ ಕೇಳಬಯಸುವುದೇನೆಂದರೆ ಸಮಾಜದಲ್ಲಿ ಅಧಿಕವಾಗಿ ಜಾರಿಯಲ್ಲಿರುವ, ವಿಷಯದ ಬಗೆಗೆ ಶಾಸನ ಏಕೆ? ಬಹುಮತದ ವಿಕಾಸಕ್ಕೆ ಶಾಸನ ರಚಿಸಬೇಕೇ ಹೊರತು ಅತಿ ಅಲ್ಪಸಂಖ್ಯಾತರಿಗಾಗಿ ಅಲ್ಲ.

ಆದರೆ ಈ ವಿಧೇಯಕದಲ್ಲಿ ಸೂಚಿಸಿದ ವಿವಾಹ ವಿಚ್ಛೇದನವು, ಅಧಿಕಾಂಶ ಜನರನ್ನು ದುಃಖಕ್ಕೆ ಗುರಿ ಮಾಡುತ್ತದೆ. ಏಕೆಂದರೆ ವಿವಾಹವಾದ ದಂಪತಿಗಳು, ವಿಚ್ಛೇದನಕ್ಕೆ ನ್ಯಾಯಾಲಯದ ಅನುಮತಿಯನ್ನು ಕಡ್ಡಾಯವಾಗಿ ಪಡೆಯಬೇಕು. ಆದರೆ ಭಿನ್ನಾಭಿಪ್ರಾಯವನ್ನು ಸೂಚಿಸಿದ, ಸಮಿತಿಯ ಸದಸ್ಯರೊಬ್ಬರು ಹೇಳುವಂತೆ ದೇಶದ ಬಹುಸಂಖ್ಯಾತ ಜನರು ಒಕ್ಕಲಿಗರಿದ್ದು ಹಳ್ಳಿವಾಸಿಗಳಾದ ಇವರಿಗೆ, ಹಳ್ಳಿಯ ಪಂಚಾಯಿತಿಗಳೇ ಸರಳವಾಗಿ ಈ ಸೌಕರ್ಯ ಒದಗಿಸುತ್ತವೆ. ಪರಿಸ್ಥಿತಿ ಹೀಗಿರುವಾಗ ಕೇವಲ ಶೇಕಡಾ ೩-೪ ಮಂದಿಗಾಗಿ ಈ ಶಾಸನವನ್ನು ರಚಿಸುವ ರಹಸ್ಯವೇನು? ಈ ಶಾಸನದ ಪರಿಣಾಮವಾಗಿ ವಿವಾಹವಾದ ಪ್ರತಿಯೋರ್ವ ದಂಪತಿಗಳು ಒಂದಲ್ಲ ಒಂದು ವಿಧಾನಕ್ಕೆಂದೇ ಕೋರ್ಟ್‌ಕಟ್ಟೆ ಏರಲೇ ಬೇಕಾದ ಪರಿಸ್ಥಿತಿ ಉಂಟಾಗುವುದು. ಆದುದರಿಂದ ನಾನು ಹೇಳುವುದೇನೆಂದರೆ ಈ ವಿಧೇಯಕದಿಂದ ಅಧಿಕಾಂಶ ಜನರಿಗೆ ಅಧಿಕ ತೊಂದರೆ ನೀಡಿದಂತಾಗುತ್ತದೆ. ಹೀಗಾಗಿ ಈ ವಿಧೇಯಕದಿಂದ ಕೇವಲ ಕನಿಷ್ಠ ಅಲ್ಪಮತದ ಶೇಕಡಾ ೫ ರಷ್ಟು ಜನತೆಗೆ ಅನುಕೂಲವಾದಲ್ಲಿ, ಶೇಕಡಾ ೯೫ ಜನರಿಗೆ ಅಧಿಕ ತೊಂದರೆಯೇ ಉಂಟಾಗುತ್ತದೆ. ಆದುದರಿಂದ ವಿಧೇಯಕವನ್ನು ಸಂಪೂರ್ಣ ಬದಲಾಯಿಸಬೇಕೆಂದೇ ಆಗ್ರಹಿಸುವೆ. ಈಗ ದತ್ತು ತೆಗೆದುಕೊಳ್ಳುವ ಅಂಶದ ಬಗೆಗೆ ವಿಚಾರಿಸಿದರೆ, ಈ ದಿಶೆಯಲ್ಲಿಯೂ ಮೇಧಾವಿ ರಚನಾಕಾರರೂ ಈ ವಿಧೇಯಕದಲ್ಲಿ ಎಡವಿದ್ದಾರೆ. ಏಕೆಂದರೆ ಅವರು ಹಿಂದೂ ಸಮಾಜದಲ್ಲಿ ಈ ಬಗೆಗೆ ಇರುವ ಮೂಲಭೂತ ಸಂಗತಿಯನ್ನೇ ಗಮನಿಸಿಲ್ಲ. ತನಗೆ ತೋರಿದಂತೆ ದತ್ತು ತೆಗೆದುಕೊಳ್ಳುವುದನ್ನು ಯಾವ ಧರ್ಮದಲ್ಲಿಯ ಕಾನೂನೂ ಒಪ್ಪಿಲ್ಲ. ಮುಸ್ಲಿಂ ಲಾ ದಲ್ಲಿ ಪದ್ಧತಿಯಂತೆ ಇದ್ದಿರಬಹುದಾದ ಒಪ್ಪಿಗೆಯನ್ನು ಕಾನೂನಿನಿಂದ ಬಹಿಷ್ಕರಿಸಲಾಗಿದೆ. ಹಿಂದೂ ಜೀವನವು ಧಾರ್ಮಿಕ ಸಂಪ್ರದಾಯಗಳಿಂದ ದಟ್ಟವಾಗಿರುವುದರಿಂದ, ಅವರ ಜೀವನವನ್ನು ಧರ್ಮದಿಂದ ಪ್ರತ್ಯೇಕಿಸುವುದೇ ಅಸಂಭವನೀಯ.

**ಶ್ರೀ ಹೆಚ್. ವಿ. ಕಾಮತ್ :** ಮಾನ್ಯ ಕಾನೂನು ಮಂತ್ರಿಗಳು ಏನು ಧ್ಯಾನಮಗ್ನರಾಗಿದ್ದಾರೆಯೋ ಅಥವಾ ನಿದ್ರೆ ಮಾಡುತ್ತಿರುವರೋ?

**ಡಾ॥ ಬಿ.ಆರ್. ಅಂಬೇಡ್ಕರ್ :** ಇಲ್ಲ, ಮಾನ್ಯ ಸದಸ್ಯರ ಹೇಳಿಕೆ ಗಮನಿಸುತ್ತಿರುವೆ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ನಾನು ಹಿಂದೂ ಲಾ ದಲ್ಲಿಯ ದತ್ತು ಸ್ವೀಕಾರದ

ಬಗೆಗೆ ಹೇಳುತ್ತಿದ್ದೆ. ಹಿಂದೂಗಳ ಸಂಸ್ಕಾರಗಳಂತೆ ಈ ದತ್ತು ಸ್ವೀಕರಿಸುವ ವಿಧಾನವು ಕೇವಲ ಧರ್ಮದಲ್ಲಿಯ ನಂಬಿಕೆಯಿಂದ ಕೂಡಿದ ಸಂಗತಿಯಾಗಿದೆ. ಏಕೆಂದರೆ ಹಿಂದೂ ಸಂಸ್ಕೃತಿಯಂತೆ ಮರಣಹೊಂದಿದ ವ್ಯಕ್ತಿಗೆ ಮೋಕ್ಷ ದೊರೆಯಬೇಕಾದರೆ ಮಕ್ಕಳು ಅವನ ಶ್ರಾದ್ಧಕರ್ಮಗಳನ್ನು ಮಾಡಲೇಬೇಕು. ಹೀಗಾಗಿ ಈಗ ನೀವು ಈ ಬಗೆಗೆ ಶಾಸನ ತರಬೇಕೆಂದಿರುವಾಗ ಈ ವಿಷಯವನ್ನು ಅನಿವಾರ್ಯವಾಗಿ ಗಮನಿಸಲೇಬೇಕು. ತಾವು ದತ್ತು ಸ್ವೀಕರಿಸುವ ಬಗೆಗೆ ಹೊಂದಿರುವ ನಿಲುವು ಹಾಗೂ ಸ್ಫೂರ್ತಿಗಳೇನು? ಒಂದು ವೇಳೆ ಹಿಂದೂ ಸಂಸ್ಕೃತಿಯನ್ನೇ ಕಡೆಗಣಿಸುವಂತಿದ್ದರೆ ತಾವು ಈ ವಿಧೇಯಕವನ್ನೇ ಕೈ ಬಿಡುವುದು ಉತ್ತಮ. (ಓರ್ವ ಸದಸ್ಯ : ತಮ್ಮ ನಿಲುವೇನು) ಹಿಂದೂ ಲಾ ದಲ್ಲಿ ಹೇಳುವಂತೆ ಕೇವಲ ಹಿರಿಯ ಮಗನಿಗೆ ಮಾತ್ರ ಈ ಅಧಿಕಾರವಿದೆ, ಹೀಗಿದ್ದಾಗ ಏಕಮಾತ್ರ ಪುತ್ರನನ್ನು ದತ್ತು ಕೊಡುವಂತಿಲ್ಲ, ಪಡೆಯುವಂತಿಲ್ಲ. ಆದರೆ ತಾವು ಈ ಮೂಲಭೂತ ವಿಷಯಕ್ಕೆ ತಿಲಾಂಜಲಿ ನೀಡಿ ಅದನ್ನು ತಿರುಚಿದ್ದೀರಿ. ಏಕೆಂದರೆ ಹಿರಿಯ ಮಗನನ್ನೂ ದತ್ತು ಪಡೆಯಬಹುದೆಂದೇ ವಿಧೇಯಕ ಹೇಳುತ್ತದೆ. (ನಾಚಿಕೆಗೇಡು, ಅದು ಸರಿಯಲ್ಲ)

**ಬಾಬು ರಾಮನಾರಾಯಣ ಸಿಂಗ್ :** ಅದು ಮೌಢ್ಯದಿಂದಾಗಿದೆ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ತಮ್ಮ ಈ ನಿಲುವು ಹಿಂದೂ ಸಂಸ್ಕಾರದ ಬುಡವನ್ನೇ ಕತ್ತರಿಸಿದೆ. ಏಕೆಂದರೆ, ಹಿಂದೂ ಸಂಸ್ಕಾರದಂತೆ, ಕೇವಲ ಹಿರಿಯ ಮಗನಿಗೆ ಮಾತ್ರ, ಮೃತಪಟ್ಟ ಪಿತೃಕಾರ್ಯಗಳನ್ನು ಮಾಡಬಲ್ಲ ಅಧಿಕಾರವಿದೆ.

ಹೀಗಾಗಿ, ತಾವು ಈ ವಿಧೇಯಕದಲ್ಲಿ, ದತ್ತು ಸ್ವೀಕರಿಸುವ ಬಾಲಕನಿಗೆ ಇರಬೇಕಾದ ಅರ್ಹತೆಗಳೇನು ಎಂದು ನಿರ್ಣಯಿಸಿದ್ದೀರಿ? ತಾವು ವಿಧಿಸಿರುವ ಮೂರು ಸಂಗತಿಗಳು, ಬಾಲಕನು ೧೫ ವರ್ಷಗಳಿಗಿಂತ ಚಿಕ್ಕವನಾಗಿರಬೇಕು, ಅವನಿಗೆ ವಿವಾಹವಾಗಿರಬಾರದು, ಅವನು ಹಿಂದೂ ಆಗಿರಲೇ ಬೇಕು. ಆದರೆ ನನಗೆ ತಿಳಿದಿರಬಹುದಾದ ಹಿಂದೂ ಸಂಸ್ಕಾರದಂತೆ, ವಿವಾಹ ಯಾವ ಬಗೆಯ ಅಡಚಣೆಯಾಗಲಾರದು. ಮತ್ತು ವಯಸ್ಸೂ ಅಡ್ಡಿಬಾರದು. ಹೀಗಿರುವಾಗ ತಾವು ಈ ವಿಧೇಯಕದಲ್ಲಿ ಈ ಅರ್ಹತೆಗಳನ್ನು ಏಕೆ ಅಳವಡಿಸಿದ್ದೀರಿ? ಅಥವಾ ತಮ್ಮ ಶಾಸನದ ಆಡಳಿತದ ಅನುಭವ ಈ ಅರ್ಹತೆಗಳಿರಬೇಕೆಂದು ಸೂಚಿಸಿದೆಯೇ? ನನಗೆ ಆಡಳಿತದ ಅಲ್ಪ ಜ್ಞಾನವಿದ್ದು ನನಗೆ ತಿಳಿದಂತೆ ಈ ಬಗ್ಗೆ ಯಾವ ತೊಂದರೆಗಳೂ ಉದ್ಭವಿಸಿಲ್ಲ. ಪರಿಸ್ಥಿತಿ ಹೀಗಿರುವಾಗ ಈ ನಿರ್ಬಂಧಗಳೇಕೆ? ತಾವು ವಿಧೇಯಕವನ್ನು ಸಕಾರಣದಿಂದ ರಚಿಸಬೇಕು. ಇಲ್ಲದೇ ಹೋದಲ್ಲಿ ಜಾರಿಯಲ್ಲಿದ್ದ ಶಾಸನವನ್ನೇ ಅನುಸರಿಸಬೇಕು.

ನಂತರ ದತ್ತು ಸ್ವೀಕಾರದ ಪರಿಣಾಮದ ಬಗೆಗೆ ಹೇಳಬೇಕೆಂದರೆ, ನೀವು ಈ ವಿಧೇಯಕದಲ್ಲಿ ಹಿಂದೂ ಲಾದ ಪರಂಪರಾನುಗತವಾಗಿ ಜಾರಿಯಲ್ಲಿದ್ದ ವಿಷಯಗಳನ್ನೇ ಕೈ ಬಿಟ್ಟಿದ್ದೀರಿ. ರಾವ್ ಸಮಿತಿಯು, ದತ್ತು ಸ್ವೀಕರಿಸಿದ ಮೂರು ವರ್ಷಗಳ ಅವಧಿಯಲ್ಲಿ ಆಸ್ತಿಯ ಹಕ್ಕನ್ನು ವಿಲೇವಾರಿ ಮಾಡಬೇಕೆಂದು ಸಲಹೆಮಾಡಿತ್ತು. ಆದರೆ ಸದ್ಯದಲ್ಲಿಯ ವಿಧೇಯಕದಲ್ಲಿ ಅದಕ್ಕೆ ವಿರೋಧವಾದ ಅಂಶವನ್ನು ಅಳವಡಿಸಿ, ದತ್ತು ಸ್ವೀಕರಿಸಿದನಂತರ, ಆಸ್ತಿಯ ವಿಲೇವಾರಿ ಪ್ರಶ್ನೆಯೇ ಉದ್ಭವಿಸದು. ಏಕೆಂದರೆ ದತ್ತು ಸ್ವೀಕರಿಸಿದ ದಿನದಿಂದಲೇ ಆಸ್ತಿಯ ಅರ್ಧಭಾಗ ದತ್ತುಪುತ್ರನಿಗೂ ಮಿಕ್ಕ ಅರ್ಧಭಾಗ ಪೋಷಕರಿಗೂ ಸೇರುತ್ತದೆ. ಈ ದಿಶೆಯಲ್ಲಿ ಹಿಂದೆ ಯಾವ ಸಮಸ್ಯೆಯೂ ಉದ್ಭವಿಸಿಲ್ಲ. ಹೀಗಿದ್ದಾಗ ಈ ಮಾದರಿಯ ನೂತನ ವಿಧಾನವನ್ನು ಯಾವ ಕಾರಣಗಳಿಗಾಗಿ ಅಳವಡಿಸಲಾಯಿತು?

ನನಗೆ ತೋಚಿದಂತೆ, ಹಿಂದೂ ಅವಿಭಾಜ್ಯ ಕುಟುಂಬ ವ್ಯವಸ್ಥೆಯನ್ನು ನಾಶಪಡಿಸುವ ಏಕೈಕ ಗುರಿಯನ್ನು ಮಾತ್ರ ಈ ವಿಧೇಯಕ ಹೊಂದಿದೆ. ಏಕೆಂದರೆ ಅದು ಹಲವರಿಗೆ ಕಣ್ಣು ಕಿಸಿರಾಗಿದೆ. ಹಿಂದೂ

ಅವಿಭಾಜ್ಯ ಕುಟುಂಬ ವ್ಯವಸ್ಥೆಯ ಮೂಲ ಲಕ್ಷಣಗಳನ್ನು ಹಲವಾರು ಶಾಸನಗಳನ್ನು ರಚಿಸುವ ಮುಖಾಂತರ ಬೀದಿಪಾಲು ಮಾಡಲಾಗಿದೆ. ನಾನು ಒಪ್ಪುವೆ. ಹಿಂದೂ ಅವಿಭಾಜ್ಯ ಕುಟುಂಬ ವ್ಯವಸ್ಥೆಯು, ಬ್ರಿಟಿಷರ ಆಡಳಿತದಲ್ಲಿಯೇ ತನ್ನ ಮೂಲವನ್ನೇ ಕಳೆದುಕೊಂಡಿರುವಾಗ ಅದನ್ನು ಮರುಸ್ಥಾಪನೆ ಮಾಡಬೇಕಾದಾಗ, ತಾವು ಇಂದು ಅದರ ಅಳಿವಿಗೆ ಸಹಕರಿಸುತ್ತಿದ್ದೀರಿ. ನಾನು ಮಾನ್ಯ ಕಾನೂನು ಮಂತ್ರಿವರ್ಯರಿಂದ ಈ ವ್ಯವಸ್ಥೆಯಲ್ಲಿಯ ಲೋಪದೋಷಗಳ ಬಗೆಗೆ ಚಕಾರ ಶಬ್ದವನ್ನೂ ಕೇಳಿಲ್ಲ. ಅವರ ಹೇಳಿಕೆಯಂತೆ ಹಲವಾರು ಪ್ರಕರಣಗಳ ತೀರ್ಪಿನಂತೆ, ಈ ಸಂಸ್ಥೆಯನ್ನೇ ಕೊನೆಗಾಣಿಸುವಂತಿದೆ. ಇದೊಂದು ಹತಾಶೆಯ ಸಲಹೆಯಾಗಿದೆ. ಆದುದರಿಂದ ಈ ಮಟ್ಟಿಗೆ ನಾನು ಈ ವಿಧೇಯಕವನ್ನು ಒಪ್ಪಲಾರೆ. ನನ್ನ ಅಭಿಮತದಂತೆ, ಹಿಂದೂ ಅವಿಭಾಜ್ಯ ಕುಟುಂಬವ್ಯವಸ್ಥೆಯು ಬಗೆಗೆ ವಿಶ್ವದ ಯಾವ ದೇಶವೇ ಹೆಮ್ಮೆ ಪಡಬಹುದಾದ ಸಂಸ್ಥೆಯಾಗಿದೆ. ಅದು ಶತಮಾನಗಳ ಹಿಂದೆಯೇ ಸಮಾಜವಾದದ ಮತ್ತು ಸಮತಾವಾದದ ತತ್ತ್ವಗಳಂತೆ ತನ್ನ ಸಮಾಜವನ್ನು ನಿರ್ಮಿಸಿಕೊಂಡು ಬಂದಿದ್ದು, ಅಂಗವಿಕಲರಿಗೆ, ಅಶಕ್ತರಿಗೆ, ಮಹಿಳೆಯರಿಗೆ ಸಮಾನ ಸ್ಥಾನಮಾನ ನೀಡಿದ ಒಂದು ಸಮುದಾಯ ಸಂಘದಂತೆ........

**ಶ್ರೀ ಕುಲಧರ ಛಾಲಿಯಾ** (ಅಸ್ಸಾಂ: ಸಾಮಾನ್ಯ) : ಅದು ಬಂಗಾಲದಲ್ಲಿಲ್ಲ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ನನ್ನ ಅಲ್ಪಮತಿಯಂತೆ, ಬಂಗಾಲದಲ್ಲಿ ಮಿತಾಕ್ಷರ ಹಾಗೂ ದಾಯಭಾಗ ಎರಡೂ ಪದ್ಧತಿಗಳು ಜಾರಿಯಲ್ಲಿವೆ.

**ಓರ್ವ ಸದಸ್ಯ :** ಅಲ್ಲ, ಕೇವಲ ದಾಯಭಾಗ ಒಂದೇ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ** : ಆದುದರಿಂದ, ಈ ಪುರಾತನ ವೃಕ್ಷದಂತೆ ಇರುವ ಹಿಂದೂ ಅವಿಭಾಜ್ಯ ಕುಟುಂಬ ವ್ಯವಸ್ಥೆಗೆ, ವಿದ್ಯಾಸಂಪನ್ನರಾದ ಕಾನೂನು ಮಂತ್ರಿಯವರಿಂದ ಕೊಡಲಿಪೆಟ್ಟು ಬೀಳದಿರಲಿ ಎಂದೇ ಕೋರುವೆ. ಅದನ್ನು ರಕ್ಷಿಸುವ ಬಗೆಗೆ ವಿಧೇಯಕವನ್ನು ಮಂಡಿಸಬೇಕು, ಏಕೆಂದರೆ ಬ್ರಿಟಿಷರು ಅದಕ್ಕೆ ಸಾಕಷ್ಟು ಹಾನಿ ಮಾಡಿದ್ದಾರೆ.

ಬ್ರಿಟಿಷರಿಗೆ ನಮ್ಮ ಪರಂಪರೆಯ ಬಗೆಗೆ ಅಸೂಯೆ ಇದ್ದಿತು. ಆದರೆ ಇಂದು ನಾವು ನಮ್ಮದೇ ಆದ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದೇವೆ. ಹೀಗಾಗಿ ಅದನ್ನು ತನ್ನ ಪೂರ್ವ ವೈಭವಕ್ಕೆ ಒಯ್ಯುವುದನ್ನು ಬಿಟ್ಟು ಅದರ ನಾಶಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಸರ್, ರಾವ್ ಸಮಿತಿಯ ಸಲಹೆಗಳಿಗಿಂತ, ಈ ವಿಧೇಯಕದಲ್ಲಿ ಸೂಚಿಸಿದ ಸಲಹೆಗಳು ಮಾರಕವಾಗಿವೆ. ರಾವ್ ಸಮಿತಿಯು, ಭಾಗ III–A೧–೨ ಉಪನಿಬಂಧನೆಗಳಲ್ಲಿ ಕುಟುಂಬದ ದಾಯಾದಿತ್ವ ಹಾಗೂ ವಾರಸುದಾರಿಕೆ ಬಗೆಗೆ ಪ್ರಸ್ತಾಪಿಸಿದ್ದರೆ, ಈ ವಿಧೇಯಕದ ೮೬–೮೭ ಉಪನಿಬಂಧನೆಗಳನ್ನು ಗಮನಿಸಿದರಿಕೆ, ಮುಂದೆ ಒಂದು ತಲೆಮಾರಿನವರೆಗೂ ದಾಯಾದಿ ವಿಷಯವನ್ನು ಖಾಯಂ ಆಗಿ ಮುಂದುವರಿಯಲು ಅವಕಾಶ ಮಾಡಲಾಗಿದೆ. ಇದನ್ನೂ ಸಹಿಸದೆ ಕಾನೂನು ಮಂತ್ರಿ ಹಾಗೂ ಇತರ ಸದಸ್ಯರು ಅದರ ನಾಶಕ್ಕೇ ಹೊರಟಿದ್ದಾರೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಜಂಟೀ ಕುಟುಂಬ ಮತ್ತು ಜಂಟೀ ಆಸ್ತಿಯಲ್ಲಿ ವ್ಯತ್ಯಾಸವಿದೆ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ** : ಆ ವಿಷಯಕ್ಕೆ ಬರುವೆ.

**ಪಂಡಿತ ಲಕ್ಷ್ಮಿಕಾಂತ ಮೈತ್ರಾ :** ಅವರು ನಿಮ್ಮನ್ನು ತಪ್ಪುದಾರಿಗೆ ಎಳೆಯಲು ಪ್ರಯತ್ನಿಸುತ್ತಿದ್ದಾರೆ. ತಾವು ದಯವಿಟ್ಟು ಮುಂದುವರಿಸಿ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ** : ಈ ವಿಧೇಯಕವು ೮೬–೮೭ನೆಯ ಉಪನಿಬಂಧನೆಗಳಲ್ಲಿ ಹುಟ್ಟಿನ ಆಧಾರವನ್ನು ಯಾವ ನ್ಯಾಯಾಲಯವೂ ಒಪ್ಪಲಾರದು. ಈ ವಿಧೇಯಕ ಜಾರಿಗೆ ಬಂದ

ದಿನದಿಂದಲೇ ಪ್ರತಿಯೊಂದು ಅವಿಭಕ್ತ ಕುಟುಂಬದಲ್ಲಿ ಅಸ್ತಿತ್ವ ಅಳಿಸಿ ಹೋಗುವುದರಿಂದ ಜಂಟಿಗೇಣಿದಾರ ಪದ್ಧತಿಯು, ಸಾಮಾನ್ಯವಾಗಿ ಪರಿವರ್ತನೆ ಹೊಂದುತ್ತದೆ. ಆದರೆ ಇದು ನಿಮಗೇಕೆ? ಈಗ ಜಾರಿಯಲ್ಲಿರುವ ಅವಿಭಕ್ತ ಹಿಂದೂ ಕುಟುಂಬದ ಕಾನೂನುಗಳಲ್ಲಿರುವ ಅನಿಶ್ಚಿತತೆ ಏನು? ನನಗೆ ತಿಳಿದಂತೆ ಅಂಥದೇನೂ ಇಲ್ಲ. ಪ್ರತಿಯೊಬ್ಬರಿಗೂ ದಾಯಾದಿ ಸಂಗತಿಯ ಬಗೆಗೆ ಮಾಹಿತಿ ಇರುವಾಗ ನೀವೇಕೆ ಅವರ ವಿಭಜನೆಗೆ ಪ್ರಯತ್ನ ಮಾಡುವಿರಿ? ಈ ನಿಮ್ಮ ಕಾಯಕ, ರಾವ್ ಸಮಿತಿಯ ಸಲಹೆಗೆ ವಿರೋಧವಾಗಿದೆ. ಅಲ್ಲದೆ, ಸಾರ್ವಜನಿಕ ಅಭಿಪ್ರಾಯವೂ ಸ್ಪಷ್ಟವಾಗಿಲ್ಲ. ಹೀಗಿರುವಾಗ ರಾವ್ ಸಮಿತಿಯ ಕರಡಿನ ಬದಲು ಈ ವಿಧೇಯಕವೇಕೆ? ಆದುದರಿಂದ ವಿನಾಕಾರಣ ಈ ವಿಧೇಯಕವನ್ನು ಏಕೆ ಮಂಡಿಸುವಿರಿ? ಅವಿಭಕ್ತ ಹಿಂದೂ ಕುಟುಂಬದ ಅನುಕೂಲತೆಗಳೇನು? ಹಾಗೂ ದಾಯಾದಿ ವಿಧಾನಗಳ ಅನುಕೂಲತೆಗಳೇನು? ನಾನು ಹೇಳಬಯಸುವುದೇನೆಂದರೆ.....

**ಶ್ರೀ ಬಿ.ಎನ್. ಮುನವಳ್ಳಿ :** (ಬೊಂಬಾಯಿ ರಾಜ್ಯ) ಅನಾನುಕೂಲತೆಗಳೇನೂ ಇಲ್ಲವೆ?

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ** : ಪ್ರತಿಯೋರ್ವರೂ, ಕೇವಲ ತಮ್ಮ ಸ್ವಾರ್ಥಕ್ಕಾಗಿಯೇ ಝೀವಿಸಬೇಕೆಂದಿದ್ದಲ್ಲಿ ಅನಾನುಕೂಲತೆಗಳಿವೆ. ಆದರೆ ಸ್ಮೃತಿಯಲ್ಲಿ ಹೇಳಿದ ಸಮಾಜದಂತೆ ಇತರರಿಗೆ, ಅಲ್ಪಸ್ವಲ್ಪ ತ್ಯಾಗ ಮಾಡಿದರೆ ಅನಾನುಕೂಲತೆಗಳಿರಲಾರವು. ಹೀಗಾಗಿ ಅನುಕೂಲಗಳೇ ಅಧಿಕ, ಅನಾನುಕೂಲತೆಗಳೇ ಇರಲಾರವು. ಈ ಅಭಿಪ್ರಾಯ, ನನಗೆ ತಿಳಿದಂತೆ ಪ್ರತಿಯೊಂದು ಅವಿಭಕ್ತ ಹಿಂದೂ ಕುಟುಂಬ ಒಪ್ಪುತ್ತದೆ.

ನನ್ನ ಮಿತ್ರರೊಬ್ಬರು, ಬಂಗಾಲದಲ್ಲಿ ಮತ್ತು ಆಸ್ಸಾಂನಲ್ಲಿ ಮಿತಾಕ್ಷರ ವ್ಯವಸ್ಥೆ ಇಲ್ಲ ಎಂದು ಹೇಳಿದರು ಆದರೆ ನಾವು ಸಮಸ್ತದೇಶವನ್ನು ನಮ್ಮ ಮುಂದಿಟ್ಟುಕೊಳ್ಳಬೇಕು...

**ಪಂಡಿತ ಲಕ್ಷ್ಮಿಕಾಂತ ಮೈತ್ರಾ :** ಅವಿಭಕ್ತ ಕುಟುಂಬದ ವ್ಯವಸ್ಥೆಯೂ ಇದೆ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ** : ನಾವು ೩೦೦ ಮಿಲಿಯನ್ ಅಥವಾ ೩೦ ಕೋಟಿ ಜನ ಸಂಖ್ಯೆಯೊಂದಿಗೆ ವ್ಯವಹರಿಸುತ್ತಿದ್ದು, ಈ ಜನತೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ, ಗುಜರಾತಿನಿಂದ ಮತ್ತೊಂದು ಬದಿಯವರೆಗೂ ಹಬ್ಬಿದೆ. ಈಗ ನೀವು ಅವಿಭಕ್ತ ಕುಟುಂಬ ವ್ಯವಸ್ಥೆಯನ್ನು ರದ್ದುಪಡಿಸಿ ಅಧಿಕ ಜನರಿಗೆ ತೊಂದರೆ ಮಾಡಬೇಕೆಂದಿರುವಿರಿ. ಆದುದರಿಂದ ಈ ವಿಧವಾದ ವಿನಾಶಕಾರಿ ಕಾರ್ಯವನ್ನು ಕೈಗೆತ್ತಿಕೊಳ್ಳುವ ಮುನ್ನ, ಮೂರು ಬಾರಿ ಆಲೋಚಿಸಿ. ಈ ವಿಧೇಯಕದಿಂದ ಕುಟುಂಬ ವ್ಯವಸ್ಥೆಯನ್ನೇ ನಾಶ ಮಾಡಲು ಹೊರಟಿರುವಿರಿ. ಸ್ವಸ್ಥ ಸಾಮಾಜಿಕ ವ್ಯವಸ್ಥೆಯ ಮೇಲೆ ಏಕೆ ಈ ಗದಾಪ್ರಹಾರ?

ಸರ್, ಈಗ ನಾನು ವಾರಸುದಾರಿಕೆಯ ಪ್ರಶ್ನೆಗೆ ಮುಂದುವರಿಯುವೆ. ಇದರ ಬಗೆಗೆ ನನ್ನ ದೂರು ಏನೆಂದರೆ, ರಾವ್ ಸಮಿತಿಯ ವಿಧೇಯಕವನ್ನು ಬದಿಗೆ ತಳ್ಳಿ, ನನ್ನ ಮಿತ್ರ ನಝೀರುದ್ದೀನ್ ಅವರು ಹೇಳಿದಂತೆ, ಇಲಾಖೆಯ ವಿಧೇಯಕವನ್ನು ಸದನದಲ್ಲಿ ಮಂಡಿಸಿದ್ದೀರಿ. ಈ ಇಲಾಖೆಯ ವಿಧೇಯಕದಲ್ಲಿ ನವೀನ ವಿಧಾನಗಳನ್ನು ಅಳವಡಿಸಿದ್ದೀರಿ. ಉಪನಿಬಂಧನೆ ೯೪ರಲ್ಲಿ ಹೇಳುವಂತೆ ವಿಧೇಯಕದಿಂದ ವಾರಸುದಾರಿಕೆಯ ನಿಯಮವನ್ನೇ ರದ್ದುಗೊಳಿಸಲಾಗುವುದು. ಆದರೆ ರಾವ್ ಅವರ ಮೂಲ ವಿಧೇಯಕದಂತೆ, ವ್ಯವಸಾಯ ಹಿಡುವಳಿಗೆ ವಾರಸುದಾರಿಕೆ ಅನ್ವಯಿಸಲಾಗದು ಎಂದೇ ಹೇಳಿದೆ; ಏಕೆಂದರೆ ಭಾರತ ಸರಕಾರದ ಮಸೂದೆಯಂತೆ, ಈ ವಿಷಯ ಕೇಂದ್ರ ಸರಕಾರದಡಿಯಲ್ಲಿಲ್ಲ. ಅಲ್ಲದೆ ರಾವ್ ಸಮಿತಿಯು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೂಡಾ ಇದರ ಬಗೆಗೆ ಯಾವ ಸ್ಪಷ್ಟೀಕರಣ ನೀಡಿಲ್ಲ.

ಸರ್, ಈಗ, ಇಲಾಖೆಯ ವಿಧೇಯಕದಲ್ಲಿರುವ ಪದಗಳನ್ನು "ರಾಜ್ಯಪಾಲರ ಪ್ರಾಂತಗಳಲ್ಲಿ"

ಸೇರ್ಪಡಿಸಿರುವುದರಿಂದ ನನ್ನ ಪ್ರಾಂತವಾದ ಅಜಮೀರ್–ಮೇರವಾರ, ದೆಹಲಿ ಮತ್ತು ಕೊಡಗು ಪ್ರಾಂತಗಳಲ್ಲಿರುವ ಪ್ರತಿಯೋರ್ವ ರೈತನ ವ್ಯವಸಾಯ ಭೂಮಿಗಳು ಈ ವಿಧೇಯಕದ ಅಂಶಗಳಿಗೆ ಒಳಪಡುತ್ತವೆ. ಇದು ಈ ವಿಧೇಯಕದಲ್ಲಿಯ ಅಸಂಬದ್ಧತೆಯನ್ನು ತೋರಿಸುತ್ತದೆ. ಏಕೆಂದರೆ ರಾಜ್ಯಪಾಲರ ಪ್ರಾಂತಗಳ ಕಾನೂನಿಗೆ ತದ್ವಿರುದ್ಧವಾಗಿ ಕೇಂದ್ರಾಡಳಿತ ಪ್ರದೇಶದಲ್ಲಿ ಕಾನೂನು ಜಾರಿಯಲ್ಲಿ ಬರುವುದು. ಈ ವಿಧೇಯಕದಿಂದ ಸಾಧಿಸಬಹುದಾದ ಏಕರೂಪತೆಯೇ? ಇದು ಸಾರ್ವಜನಿಕ ಸಹಮತವೋ ಅಥವಾ ಅದಕ್ಕೆ ವಿರೋಧವೋ ಎಂದು ಕೇಳಬಹುದಲ್ಲವೇ? ತಾವು ವ್ಯವಸಾಯ ಭೂಮಿಗೆ ಅನ್ವಯಿಸುವಂತೆ ಮಾಡಿರಬಹುದಾದ, ವಾರಸುದಾರರ ಕಾನೂನನ್ನು ನನಗೆ ತಿಳಿದಂತೆ, ನನ್ನ ಪ್ರಾಂತದ ಜನರು ಎಷ್ಟರಮಟ್ಟಿಗೆ ವಿಧೇಯತೆಯಿಂದ ಒಪ್ಪಬಲ್ಲರೋ ನಾನು ಹೇಳಲಾರೆ; ಏಕೆಂದರೆ ನೀವು ಈ ವಿಧೇಯಕದಲ್ಲಿ ನಿರ್ಮಿಸಿರುವ ವಾರಸುದಾರಿಕೆಯ ನಿಯಮಗಳು ಸಂಪ್ರದಾಯಕ್ಕೆ ಬದ್ಧವಿರೋಧವಾಗಿವೆ; ಆದುದರಿಂದ ತಮ್ಮ ಝೀವ ಹೋದರೂ ಜನ ಈ ನಿಯಮಗಳನ್ನು ಒಪ್ಪಲಾರರು. ನೀವು ಅನುಬಂಧ VII ಪ್ರಕರಣ II ಭಾಗ VII ಅಳವಡಿಸಿರುವ ಕಾನೂನುಗಳೇನು? ಅಲ್ಲದೆ ಅವು ಒಪ್ಪಿಗೆ ಹೊಂದಿರುವ ಹಿಂದೂ ಲಾದ ಮಿತಾಕ್ಷರ ಹಾಗೂ ದಾಯಭಾಗದಲ್ಲಿ ಪ್ರತಿಪಾದಿಸಿದ ಸೂತ್ರಗಳ ಹೋಲಿಕೆಯನ್ನಾದರೂ ಹೊಂದಿವೆಯೇ? ವಾರಸುದಾರಿಕೆಗೆ ಏನು ಆಧಾರ? ನೀವು ಹೇಳುವುದು ಸ್ವಾಭಾವಿಕ ಪ್ರೀತಿ ಮತ್ತು ಸಂತೋಷ" ವಾರಸುದಾರಿಕೆಯ ಬಗೆಗೆ ಇರಬಹುದಾದ ರಕ್ತಸಂಬಂಧ ಮುಂತಾದ ಮೂಲ ತತ್ತ್ವಗಳಿಗೆ ತಿಲಾಂಜಲಿ ನೀಡಿದ್ದೀರಿ. ಹಿಂದೂ ಶಾಸ್ತ್ರದ ಒಂದು ಮೂಲ ಸೂತ್ರವೆಂದರೆ, ಸಂಬಂಧಿಕರು, ಮರಣ ಹೊಂದಿರುವರ ಶ್ರಾದ್ಧಕರ್ಮ ಮಾಡುವ ಯೋಗ್ಯತೆ ಹಾಗೂ ಅರ್ಹತೆ. ಆದರೆ ಈ ಮೂಲಭೂತವಾದ ಸೂತ್ರವನ್ನೇ ತಾವು ತೆಗೆದುಹಾಕಿದ್ದೀರಿ. ನಾವು ಹಿಂದೂ ಲಾವನ್ನೇ ಲಕ್ಷಿಸುವುದಿಲ್ಲ ಎಂದಿದ್ದರೆ, ಹಿಂದೂ ಪದವನ್ನೇಕೆ ಇರಿಸಿಕೊಂಡಿದ್ದೀರಿ? ದಾಯಾಭಾಗದ ಮೂಲ ಆಧಾರವೇ ಶ್ರಾದ್ಧವನ್ನು ಆಚರಿಸುವುದು. ಆದರೆ ಅದನ್ನೆ ತೆಗೆದುಹಾಕಿದರೆ, ಪೂರ್ವಜರಿಗೆ ಅಂದರೆ ಪಿತೃಗಳಿಗೆ ಸಲ್ಲಿಸುವ ಗೌರವವನ್ನೇ ಕಡೆಗಣಿಸಿದಂತೆ.

**ಡಾ॥ ಬಿ.ಆರ್. ಅಂಬೇಡ್ಕರ್** : ಯಾರೇ ಶ್ರಾದ್ಧವನ್ನು ಮಾಡಿ ಆಸ್ತಿಯನ್ನು ಪಡೆಯಬಹುದಲ್ಲ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ** : ಹಾಗಾದರೆ ಈ ಬಗೆಯ ವಾರಸುದಾರ ಕಾನೂನನ್ನು ಜಾರಿಗೊಳಿಸುವ ಉದ್ದೇಶವಾದರೂ ಏನು? ಸಹೋದರ ಮತ್ತು ಸಹೋದರರ ಪುತ್ರರನ್ನು ಹಿಂದಕ್ಕೆ ತಳ್ಳಿ, ಪುತ್ರಿ ಹಾಗೂ ಪುತ್ರಿಯರ ಮಗ ಹಾಗೂ ಮಗಳಿಗೆ ದಾಯಾದಿ ಹಕ್ಕುಗಳನ್ನು ನೀಡುವುದು ಯಾವ ನ್ಯಾಯ? ಇದು ಅನೂಚಾನವಾಗಿ ಒಪ್ಪಿಕೊಂಡು ಬಂದಿರುವ ಹಿಂದೂ ಸಂಸ್ಕಾರಕ್ಕೆ ಸಮ್ಮತವಾಗಿದೆಯೇ? ಇದರಿಂದ ಕುಟುಂಬದಲ್ಲಿ ಶಾಂತಿ ನೆಲೆಸುವುದೇ? (ಇಲ್ಲ ಇಲ್ಲ, ಅನೇಕರು). ಅದು ಕುಟುಂಬವನ್ನು ಹಾಳುಗೆಡವುದಿಲ್ಲವೇ? ಅಲ್ಲದೆ ಚಿರಕಾಲ ಅಶಾಂತಿಗೆ ಆಹ್ವಾನ ನೀಡಿದಂತಾಗದೆ? ಇದು ವಿಚಾರಕ್ಕೆ ಗೋಚರವಾಗದ ವಿಷಯ. ಇಂದಿಗೂ ಸಹೋದರರ ಮಧ್ಯೆ ಪ್ರೀತಿ ಪ್ರೇಮದ ವಾತಾವರಣವಿದೆ. ಈ ಸಂಗತಿ ನಾವು ವ್ಯವಸಾಯ ಕುಟುಂಬಗಳಲ್ಲಿ ಇಂದೂ ಕಾಣಬಹುದು. ನೀವು ಎಲ್ಲಿಯೇ ಹೋಗಿ ನೋಡಿ ೧೦ ರಲ್ಲಿ ೯ ಕುಟುಂಬಗಳು ಅವಿಭಕ್ತ ಕುಟುಂಬಗಳಾಗಿವೆ.

ಸಹೋದರರು ಒಟ್ಟಿಗೆ ವಾಸವಾಗಿದ್ದಾರೆ. ಅವರು ಬೇರೆಯಾಗಿಲ್ಲ. ಆದರೆ ನೀವು ಮಗಳ ಮಗಳಿಗೆ ಹಾಗೂ ಮಗನಿಗೆ ವಾರಸುದಾರಿಕೆಯ ಹಕ್ಕನ್ನು ಸಹೋದರ ಅಥವಾ ಅವನ ಮಗನ ಬದಲಾಗಿ ನೀಡಿದಲ್ಲಿ ಸಮಾಜ ಅದನ್ನು ಸಹಿಸಲಾರದು ಹಾಗೂ ಸಮಾಜದ ಸುಖ ಶಾಂತಿಗೆ ಧಕ್ಕೆ ಉಂಟಾಗುವುದು. ಆದುದರಿಂದ ಈ ಕ್ರಮವನ್ನು ಕೈ ಬಿಡಬೇಕೆಂದೇ ಸೂಚಿಸುವೆ.

ಸರ್, ಈಗ ನಾನು ಮಗ ಹಾಗೂ ಮಗಳನ್ನು ಆಸ್ತಿಯ ಪಾಲಿನಲ್ಲಿ ಸಮದೃಷ್ಟಿಯಿಂದ ನೋಡಬೇಕೆಂಬ ವಿಷಯದ ಬಗೆಗೆ ಪ್ರಸ್ತಾವಿಸುವೆ.

**ಡಾ|| ಬಿ.ಆರ್. ಅಂಬೇಡ್ಕರ್ :** ಈ ವಿಷಯ ಆಗಲೇ ಪ್ರಸ್ತಾವಿಸಿರುವುದರಿಂದ ಹೆಚ್ಚಿನ ವಿವರಣೆ ಅಗತ್ಯವಿಲ್ಲ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ಸರ್, ಹಲವರ ವಾದದಂತೆ, ಮಗಳಿಗೆ ನಿರ್ದಿಷ್ಟ ಆನುವಂಶಿಕ ಹಕ್ಕುಗಳಿವೆ. ತಂದೆಯಿಂದ ಮಗಳ ಬಗೆಗೆ ಇರಬಹುದಾದ ಹಕ್ಕುಗಳಿಗೆ ಸಂಬಂಧಿಸಿದಂತೆ, ಯಾಜ್ಞವಲ್ಕ್ಯ ಮತ್ತು ಮನು ಅವರನ್ನು ಉದಾಹರಿಸಲಾಗಿದೆ. ಆದರೆ ನನಗಿರಬಹುದಾದ, ಹಿಂದೂ ಶಾಸನದ ತಿಳಿವಳಿಕೆಯಂತೆ, ಆಸ್ತಿಯಲ್ಲಿಯ ಭಾಗವನ್ನು ನೀಡುವ ಬಗೆಗೆ, ಕೇವಲ ಅವಿವಾಹಿತ ಮಗಳಿಗೆ ಮಾತ್ರ ಇದೆ ಎಂದು ನನ್ನ ಭಾವನೆ. ಈ ಬಗೆಗೆ ಅವಿವಾಹಿತ ಮಗಳಿಗೆ ಪಾಲು ನೀಡುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ ನಮ್ಮ ಮುಂದಿರುವ ಪ್ರಶ್ನೆ ಎಂದರೆ ಸ್ಥಾನಮಾನದ್ದು. ಅದನ್ನು ಯಾರೂ ಅಲ್ಲಗಳೆಯಲಾರರು. ಏಕೆಂದರೆ ವಿವಾಹವಾಗದೇ ಉಳಿಯುವವರು ಎಂದರೆ ಸಾವಿರದಲ್ಲೊಬ್ಬರು. ಸಾಮಾನ್ಯವಾಗಿ ಕುಟುಂಬದ ಸ್ಥಾನ–ಮಾನಗಳಂತೆ ಮಗಳಿಗೆ ಕೂಡ ಉತ್ತಮ ಸ್ಥಾನಮಾನ ಹಾಗೂ ಶಿಕ್ಷಣವನ್ನು ನೀಡಲಾಗುತ್ತದೆ. ವಿವಾಹದಲ್ಲಿ ಅವಳ ಸ್ಥಾನಮಾನಕ್ಕೆ ತಕ್ಕ ವರದಕ್ಷಿಣೆ ನೀಡಿ ಮದುವೆ ಕೂಡ ಮಾಡಿಕೊಡಲಾಗುತ್ತದೆ. ವಿವಾಹವಾದ ನಂತರ, ಅವಳ ಸಹೋದರರೊಂದಿಗಿನ ಸಂಬಂಧ ಕಡಿದುಹೋಗುವುದಿಲ್ಲ. ಏಕೆಂದರೆ ನಮ್ಮ ಅನುಭವದಂತೆ ಕುಟುಂಬದ ಪ್ರತಿಯೊಂದು ಶುಭ ಸಮಾರಂಭಗಳಲ್ಲಿ ಅವಳದೊಂದು ಪಾತ್ರವಿದ್ದೇ ಇರುತ್ತದೆ. ಹೀಗಾಗಿ ಅವಳನ್ನು ಆಹ್ವಾನಿಸಲಾಗುತ್ತದೆ. ಪರಿಸ್ಥಿತಿ ಹೀಗಿರುವಾಗ, ನ್ಯಾಯಾಲಯದಿಂದ ಕುಟುಂಬದ ಶಾಂತಿಯನ್ನು ಕಾಪಾಡಲಾಗುವುದು ಎಂಬುದು ಕೇವಲ ಭ್ರಾಂತಿ. ಆ ವಿಧವಾದ ಕಾರ್ಯದಿಂದ ಕುಟುಂಬದ ಶಾಂತಿ ಸುಖ ಕದಡಿಹೋಗುತ್ತದೆ. ಏಕೆಂದರೆ ಯಾರ ಮಗಳೂ ತನ್ನ ಹಿತ ಕಾಪಾಡಿಕೊಳ್ಳಲು ಕೋರ್ಟಿಗೆ ಹೋಗಲು ಇಷ್ಟಪಡುವುದಿಲ್ಲ. ಇದನ್ನು ನಮ್ಮ ಋಷಿಗಳು ಊಹಿಸಿರಲಿಲ್ಲ. ನಾವು ನಮ್ಮ ಮಗಳಿಗೆ, ಕುಟುಂಬದಲ್ಲಿ ನೀಡಿರುವ ಸ್ಥಾನ ತನ್ನದೇ ಆದ ಘನತೆ ಹಾಗೂ ಗೌರವಗಳಿಂದ ಕೂಡಿದೆ. ಮಗಳಿಗೆ ಕುಟುಂಬದ ಆದಾಯದಲ್ಲಿ ನಿರ್ದಿಷ್ಟ ಸ್ಥಾನವಿದೆ. ಹೀಗಾಗಿ ನಮ್ಮ ಸಮಾಜದಲ್ಲಿ ಕಾಣುವ ಸ್ಥಾನಮಾನಕ್ಕೆ ಸಮಾನಾಂತರವಾಗಿ ವಿಶ್ವದ ಯಾವ ಕುಟುಂಬದಲ್ಲಿ ನಮ್ಮಂತಹ ವ್ಯವಸ್ಥೆ ಕಾಣಸಿಗದು. ಸರ್, ಅವಳು ತನ್ನ ಹಕ್ಕುಗಳನ್ನು ಪಡೆಯಲು ಯಾವ ನ್ಯಾಯಾಲಯಕ್ಕೂ ಮೊರೆ ಹೋಗಬೇಕಾಗಿಲ್ಲ. ಏಕೆಂದರೆ ನಮ್ಮ ಸಂಪ್ರದಾಯದಂತೆ ಸಹೋದರರ ಮದುವೆಯಲ್ಲಿ ಅವಳಿಗೆ ನಿರ್ದಿಷ್ಟ ಪಾತ್ರವಿದೆ. ನನಗೆ ತಿಳಿದಂತೆ ವಧು ಗಂಡನ ಮನೆ ತುಂಬುವಾಗ ಅವಳಿಗೆ ನಿರ್ದಿಷ್ಟಪಾತ್ರವಿದೆ. ಕಾಲಾಂತರದಿಂದ ಬಂದ ಈ ಪರಂಪರೆಯನ್ನು ಯಾರೂ ಧಿಕ್ಕರಿಸಲಾರರು. ಇದೆಲ್ಲ ಬದಿಗಿರಿಸಿ, ಕೇವಲ ಕುಟುಂಬದ ಆಸ್ತಿಯಲ್ಲಿಯ ಭಾಗಕ್ಕೆ ಹೋರಾಡುವುದು ಮೂರ್ಖತನ. ಈ ವಿಧೇಯಕದಲ್ಲಿ ಸಮಾನ ಹಕ್ಕು ಎಂದೇ ಹೇಳುವುದು ಹಾಸ್ಯಾಸ್ಪದ. ಸಮಾನತೆಗಿಂತ ಮಿಗಿಲಾದ ವಾತಾವರಣ ಅನೇಕ ಕುಟುಂಬಗಳಲ್ಲಿದೆ. ಅಲ್ಲದೆ ಮಗಳು ಮದುವೆಯಾದ ಮೇಲೆ ಬೇರೆಯವರ ಮನೆಗೆ ಹೋಗುತ್ತಾಳೆ. ಆದರೆ ಮಗನ ವಿಷಯ ಹಾಗಲ್ಲ. ಇದು ಸಮಾಜದಲ್ಲಿಯ ನಿಜ ಪರಿಸ್ಥಿತಿ. ಇದನ್ನು ತೆಗೆದು ಹಾಕುವುದರಿಂದ ಸಮಾಜವು ಛಿದ್ರವಾಗುತ್ತದೆ.

ನಮ್ಮ ಸಮಾಜದಲ್ಲಿ ಆಸ್ತಿ ಹೊಂದಿದವರೆಷ್ಟಿದ್ದಾರೆ? ನಮ್ಮಲ್ಲಿಯ ಸಂಪ್ರದಾಯದಂತೆ ತಂದೆ ಇಲ್ಲದೇ ಹೋದಲ್ಲಿ ಹಿರಿಯ ಮಗ ಮದುವೆ ಮಾಡಬೇಕು. ಇದು ನೈತಿಕ ಕರ್ತವ್ಯ. ಮಗನಿಗೆ ತಂದೆಯ ಆಸ್ತಿ ಬರಲಿ–ಬಿಡಲಿ ಅವನು ತನ್ನ ನೈತಿಕ ಕರ್ತವ್ಯದಂತೆ ತಂಗಿಯ ಮದುವೆ ಮಾಡಲೇಬೇಕು.

**ಶ್ರೀಮತಿ ದುರ್ಗಾಬಾಯಿ :** ಹಾಗಾದರೆ ಪಾಲು ದೊರೆಯದಿದ್ದರೆ ಅವನು ತಂಗಿಯ ಮದುವೆ ಮಾಡಲಾರನೇ?

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ಮಾನ್ಯ ಸದಸ್ಯರು, ಆಸ್ತಿಯ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ ನಾನು ಆಸ್ತಿ ಇಲ್ಲದ ಕುಟುಂಬಗಳ ಬಗೆಗೆ ಹೇಳುತ್ತಿರುವೆ. ಈ ವಿಧವಾದ ಕುಟುಂಬಗಳಲ್ಲಿ ಸಹೋದರಿಯರ ಗತಿ ಏನು? ನೀವು ಯಾವುದೇ ಹಳ್ಳಿಗೆ ಹೋಗಿ ನೋಡಿದರೂ, ತಂದೆ ತೀರಿಹೋದ ಕುಟುಂಬದಲ್ಲಿ, ಅಣ್ಣನೊಂದಿಗೆ, ತಂಗಿ ಅಥವಾ ಅಕ್ಕ ಇರುವುದನ್ನೇ ನಾವು ಕಾಣುತ್ತೇವೆ. ಅಲ್ಲದೆ, ಸಾಲ ಮಾಡಿಯಾದರೂ ತಂಗಿಯ ಮದುವೆ ಮಾಡಬೇಕೆಂಬ ನೈತಿಕ ಹೊಣೆಗಾರಿಕೆಯನ್ನು ಹೊತ್ತಿರುತ್ತಾರೆ. ಅವಳ ಮದುವೆಯಾಗುವರೆಗೂ ಅವರು ತಮ್ಮ ಬಗ್ಗೆ ಏನೂ ಯೋಚನೆ ಕೂಡ ಮಾಡುವುದಿಲ್ಲ.

**ಉಪಾಧ್ಯಕ್ಷರು :** ಮಾನ್ಯ ಸದಸ್ಯರು ತಮ್ಮ ಹೇಳಿಕೆಯನ್ನು ಮುಗಿಸಬಲ್ಲರೆ?

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ನನಗೆ ಇನ್ನೂ ಒಂದು ಗಂಟೆಯ ಕಾಲಾವಕಾಶ ಬೇಕು.

**ಉಪಾಧ್ಯಕ್ಷರು :** ಹಾಗಾದರೆ ಸದನವನ್ನು ಮುಂದೂಡುವೆ.

(ಸೋಮವಾರ ೪, ಏಪ್ರಿಲ್ ೧೯೪೯ ೧೦-೪೫ಕ್ಕೆ ಸದನವನ್ನು ಮುಂದೂಡಲಾಯಿತು).

## ಹಿಂದೂ ಕೋಡ್ ಮುಂದುವರಿಕೆ

**ಉಪಾಧ್ಯಕ್ಷರು :** ಹಿಂದೂ ಲಾದ ಬಗೆಗೆ ಆಯ್ಕೆ ಸಮಿತಿಯು ನೀಡಿದ ವಿಧೇಯಕದಲ್ಲಿ ಸೂಕ್ತ ತಿದ್ದುಪಡಿ ಹಾಗೂ ಕ್ರೋಡೀಕರಣಕ್ಕೆ ಸಂಬಂಧಿಸಿದ ಚರ್ಚೆಯನ್ನು ಮುಂದುವರಿಸೋಣ. ಶ್ರೀ ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ ಅವರು ತಮ್ಮ ಹೇಳಿಕೆ ಮುಂದುವರಿಸಲಿ.

**ಶ್ರೀ ಆರ್.ಕೆ. ಸಿದ್ವಾ** (ಸಿ.ಪಿ. ಬಿರಾರ. ಸಾ.) ಈ ಮಸೂದೆಯ ಬಗ್ಗೆ ಚರ್ಚೆ ಮುಂದುವರಿಸುವ ಮುನ್ನ ನಾವು ಈ ಮಸೂದೆಯ ಬಗೆಗೆ ಚರ್ಚೆ ಹೀಗೆಯೇ ಮುಂದುವರಿಯುವುದೇ ಅಥವಾ ಚರ್ಚೆಯ ಅವಧಿಯನ್ನು ನಿಗದಿಪಡಿಸಿ, ಅನೇಕರಿಗೆ ಅವಕಾಶ ಒದಗಿಸಬಹುದೇ? ಎಂಬುದನ್ನು ಅರಿಯಲು ಬಯಸುವೆ.

**ಉಪಾಧ್ಯಕ್ಷರು :** ನಾವು ಸದನಕ್ಕೆ ತಿಳಿಸುವುದೇನೆಂದರೆ, ಈ ಮಸೂದೆ ಸರಕಾರದ್ದು ಹಾಗೂ ಇದರ ಚರ್ಚೆಗೆಂದು ಎರಡು ದಿನಗಳನ್ನು ನಿಗದಿ ಮಾಡಿರುವುದರಿಂದ ಇದರ ಬಗೆಗೆ ನನಗೆ ಹೆಚ್ಚಿನ ಅಧಿಕಾರವಿಲ್ಲ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ** (ಅಜಮೀರ್-ಮೇರ್‌ವಾರ) : ನಾನು ಹಿಂದೂ ಕೋಡ್ ಬಗೆಗೆ ಚರ್ಚೆ ಮುಂದುವರಿಸುವ ಮುನ್ನ, ತಮ್ಮ ಅವಗಾಹನೆಗೆ ಸನ್ಮಾನ್ಯ ಪ್ರಧಾನ ಮಂತ್ರಿಯವರು ಸದನದ ಆರಂಭ ದಿನ ಹೇಳಿದ್ದನ್ನು ತಿಳಿಸಬಯಸುವೆ. ಸನ್ಮಾನ್ಯ ಪ್ರಧಾನಿಯವರು ಈ ವಿಧೇಯಕ ತುಂಬಾ ಸರಳ ಮತ್ತು ಆವಶ್ಯಕವಾದ ಮಸೂದೆ ಎಂದೇ ಬಣ್ಣಿಸಿದರು. ಆದರೆ ಸದನದ ಮುಂದೆ ಪರಿಶೀಲನೆಗೆ ಬಂದಿರುವ ಈ ವಿಧೇಯಕವು ಸುಲಭವೂ ಅಲ್ಲ, ಸರಳವೂ ಅಲ್ಲವೆಂದೇ ಹೇಳಬಯಸುವೆ. ಅಲ್ಲದೆ, ಈ ವಿಧೇಯಕದ ಬಗೆಗೆ ವಿರೋಧಾಭಿಪ್ರಾಯವನ್ನು ಸೂಚಿಸಿದ ಸದಸ್ಯರು ಕೇವಲ ಕಾಲಹರಣ ವಿಧಾನವನ್ನು ಅನುಸರಿಸುತ್ತಿದ್ದಾರೆ ಎಂದೂ ಪ್ರಧಾನಿಯವರು ಆಪಾದಿಸಿದ್ದಾರೆ. ಆದರೆ ಈ ಸದನದ ಚರ್ಚೆಯಲ್ಲಿ ಭಾಗಿಗಳಾದವರೆಲ್ಲರಿಗೂ ತಿಳಿದಂತೆ ಹಿಂದೂ ಸಮಾಜದ ಉಳಿವು ಅಳಿವಿನ ಸಮಸ್ಯೆಯನ್ನೊಳಗೊಂಡಿರುವ ಈ ವಿಧೇಯಕದ ಬಗೆಗೆ ಸಾಕಷ್ಟು ಚರ್ಚೆಯಾಗಲೇಬೇಕು. ತಾವು ಈ ಹಿಂದೆ, ಸದನದ ಮುಂದೆ ಬಂದಿದ್ದ ಸಾಮಾಜಿಕ ವಿಧೇಯಕಗಳಾದ ಶಾರದಾ ಕಾಯ್ದೆ ಮತ್ತು ಹಿಂದೂ ಮಹಿಳೆಯರ ಹಕ್ಕುಗಳ ಬಗೆಗೆ ಜರುಗಿದ ವಿವಾದಗಳ ಬಗೆಗೆ ತಮಗೆ ತಿಳಿದಿರಲೇ ಬೇಕು. ಅವುಗಳಿಗೆ ಹೋಲಿಸಿದಾಗ, ಅವಕ್ಕಿಂತಲೂ

ಅಧಿಕ ಮಹತ್ವವನ್ನು ಹೊಂದಿರುವ ಈ ಮಸೂದೆಯ ಚರ್ಚೆಯನ್ನು ಮೊಟಕುಗೊಳಿಸಲಾಗದು. ಏಕೆಂದರೆ ಇದು ಸಂಪೂರ್ಣ ಹಿಂದೂ ಸಮಾಜದ ಸಮಸ್ಯೆ. ಇದನ್ನು ಕಾನೂನುಗೊಳಿಸುವ ಮುನ್ನ – ಜನರು ನನ್ನೊಡನೆ ಭಿನ್ನಾಭಿಪ್ರಾಯ ತಳೆಯಬಹುದು, ಪ್ರಧಾನಿಗಳೂ ತಳೆಯಬಹುದು. ಆದರೆ ಮೂವತ್ತು ಕೋಟಿ ಹಿಂದೂ ಜನಾಂಗ ಹಾಗೂ ಅವರ ಸಾಮಾಜಿಕ ಲಕ್ಷಣಗಳು ನಶಿಸಿಹೋಗುತ್ತವೆ. ಆದುದರಿಂದ ಇದು ಸುಲಭ ಹಾಗೂ ಸರಳ ವಿಷಯವಾಗಿಲ್ಲ.

ಈ ವಿಧೇಯಕವು ಹಿಂದೂ ಸಮಾಜದ ರಚನೆಯನ್ನು ನಾಶಮಾಡಲು ಹೊರಟಿದೆ. ಏಕೆಂದರೆ ಅದು ವಿವಾಹ ಕಾನೂನು, ವಿಚ್ಛೇದನ, ದತ್ತು ಸ್ವೀಕರಿಸುವ, ಅಪ್ರಬುದ್ಧರ, ಪೋಷಕರ ಅವಿಭಕ್ತ ಕುಟುಂಬ, ವಾರಸುದಾರ ಮುಂತಾದ ಅನೇಕ ಕಾನೂನುಗಳಿಂದ ಹಿಂದೂ ಸಮಾಜದ ಮೂಲ ಸ್ತಂಭಗಳನ್ನೇ ಮುರಿದುಹಾಕುತ್ತದೆ. ಈ ಬಗೆಯ ವಿಧೇಯಕದ ಬಗೆಗೆ, ಜನ ಪ್ರತಿನಿಧಿಗಳಾದ ನಾವು ಆಸಕ್ತಿವಹಿಸಿ ನಮ್ಮ ಜನಗಳ ಹಿತಾಸಕ್ತಿಯನ್ನು ರಕ್ಷಿಸುವ ಪಾತ್ರ ಅತಿ ಮಹತ್ವವಾಗಿರುವುದರಿಂದ, ಈ ವಿಧೇಯಕವು ಅನಿವಾರ್ಯ ಎಂಬ ಪ್ರಧಾನಿಯವರ ಹೇಳಿಕೆ ಸಮಂಜಸವಲ್ಲ. ಈ ವಿಧೇಯಕದ ಆವಶ್ಯಕತೆ ಇದೆಯೇ? ಈ ವಿಧೇಯಕವನ್ನು ಈಗ ಸ್ಥಗಿತಗೊಳಿಸಿ, ಮುಂದೆ ಬರುವ ಚುನಾಯಿತ, ಸಾರ್ವಭೌಮ ಸದನದಲ್ಲಿ ಇದನ್ನು ನಾವೇಕೆ ಚರ್ಚಿಸಬಾರದು? ಅಂತಹ ರೋಗ ಚಿಹ್ನೆಗಳೇನು? ನಾವು ಇನ್ನು ಕೇವಲ ಕೆಲವೇ ದಿನ ಕಾಯಲಾರದಂತಹ ಪರಿಸ್ಥಿತಿ ಇದೆಯೇ? ಹೀಗಾಗಿ ಈ ವಿಧೇಯಕದ ಅನಿವಾರ್ಯತೆಯು ತಿಳಿಯದ ವಿಷಯವಾಗಿದೆ. ಆದುದರಿಂದ ನಾವು ಕೆಲವು ಕಾಲದವರೆಗೆ ಕಾಯುವುದು ಸೂಕ್ತ, ಏಕೆಂದರೆ ಹಿಂದೂ ಸಮಾಜವು ಶತಮಾನಗಳ ಕಾಲಾವಧಿಯನ್ನೇ ಪರರ ಆಳ್ವಿಕೆಯಲ್ಲಿ ಸಹಿಸಿಕೊಂಡು ಬಂದಿದೆ. ಹೀಗಾಗಿ ಒಂದೆರಡು ವರ್ಷ ಕಾಯಲು ಏನೂ ಅಡಚಣೆ ಇಲ್ಲ. ಸರ್, ಕಾಯೋಣ........

**ಶ್ರೀ ಎಸ್. ನಾಗಪ್ಪ** (ಮದ್ರಾಸ್ : ಸಾ.) : ಪಾಯಿಂಟ್ ಆಫ್ ಆರ್ಡರ್. ಮಾನ್ಯ ಸದಸ್ಯರು ಸದನದ ಮೇಲೆ ಆರೋಪವೆಸಗಿದ್ದಾರೆ. ಅವರು ಈ ಸದನಕ್ಕೆ ಅಧಿಕಾರವಿಲ್ಲವೆಂದು ಆಪಾದಿಸಿದ್ದಾರೆ. ಚುನಾಯಿತ ನೂತನ ಸದನಕ್ಕೆ ಈ ದಿಶೆಯಲ್ಲಿ ಅಧಿಕಾರವಿದೆಯೆಂದೂ ಹೇಳಿದ್ದಾರೆ.

**ಉಪಾಧ್ಯಕ್ಷರು :** ನಾಗಪ್ಪನವರ ಹೇಳಿಕೆಯಲ್ಲಿ ಹುರುಳಿಲ್ಲ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ** : ಸರ್, ಈ ನನ್ನ ಸನ್ಮಾನ್ಯ ಸದಸ್ಯರ ತಾತ್ಕಾಲಿಕ ಹೇಳಿಕೆಯ ನಂತರ ನಾನು ಮತ್ತೊಮ್ಮೆ, ಸದ್ಯ ರಚನೆ ಹೊಂದಿದ ಸದನಕ್ಕೆ ಈ ವಿಧವಾದ ಅಧಿಕಾರವಿಲ್ಲವೆಂದೇ ಹೇಳುವೆ....

**ಶ್ರೀ ತಾಜಾಮುಲ್ ಹುಸೇನ್** (ಬಿಹಾರ: ಮುಸ್ಲಿಂ) : ಗಮನ ಸೆಳೆಯುವುದೇನೆಂದರೆ ಈ ಬಗೆಗೆ ಸದನದ ಪೀಠಾಧೀಶರು, ಈ ಸದನಕ್ಕೆ ಅಧಿಕಾರವಿದೆ ಎಂದೇ ಅಪ್ಪಣೆ ಮಾಡಿದ ಮೇಲೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ಉಪಾಧ್ಯಕ್ಷರು :** ಪ್ರಶ್ನೆ ಕೇಳುವುದರಿಂದ ಅಪಾಯವೇನೂ ಇಲ್ಲ. ಸಭಾಧ್ಯಕ್ಷರು ನೀಡಿದ ಆಜ್ಞೆಯಂತೆಯೇ ಚರ್ಚೆ ನಡೆಯುತ್ತದೆ. ಅದಕ್ಕೆ, ಸದಸ್ಯರು ಬೇರೆ ಯಾವ ಕಾರಣಗಳಿಂದಾಗಲೀ ಹಾಗೂ ನ್ಯಾಯಬದ್ಧ ತಾಂತ್ರಿಕ ವಿಷಯದ ಬಗೆಗಾಗಲೀ ಚರ್ಚೆ ಬೇಡ. ಏಕೆಂದರೆ ಈ ಬಗೆಗೆ ಸಾಕಷ್ಟು ಚರ್ಚೆಯಾಗಿದೆ. ಅದೇ ವಿಷಯವನ್ನು ಚರ್ಚಿಸುವುದು ಬೇಜಾರಿನ ಕ್ರಮ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ** : ಸರ್, ನನ್ನ ಸ್ನೇಹಿತರ, ಮಧ್ಯಪ್ರವೇಶದಿಂದಾಗಿ ನಾನು ಆ ರೀತಿ ಹೇಳಬೇಕಾಯಿತು. ನಾನು ಸದನದ ಸಂವಿಧಾನಬದ್ಧತೆಯನ್ನು ಹಾಗೂ ಅಧಿಕಾರವನ್ನು ಉಪೇಕ್ಷಣೆ

ಮಾಡಿಲ್ಲ. ಆದರೆ ಅಧಿಕಾರದಬದ್ಧತೆಯನ್ನು ಕಡೆಗಣಿಸುವಂತಿಲ್ಲ. ಏಕೆಂದರೆ ಈ ಸದನವು ಚುನಾಯಿತ ಸದನದ ಅಧಿಕಾರವನ್ನು ಹೊಂದಿರದೇ ಹೋದುದರಿಂದ, ಅಲ್ಲದೇ ಕೇವಲ ಸಂವಿಧಾನ ರಚನೆಗೆಂದೇ ಜಾರಿಯಲ್ಲಿರುವ ಈ ಸದನಕ್ಕೆ ಈ ಬಗೆಯ ಮಹತ್ವದ ವಿಧೇಯಕದ ಮೂಲಕ ಶಾಸನ ರಚಿಸುವ ಅಧಿಕಾರವಿದೆಯೇ? ಆದುದರಿಂದಲೇ ನಾನು ಈ ಮಹತ್ವದ ಪ್ರಶ್ನೆ ಎತ್ತಿದೆ. ನನ್ನ ಮಿತ್ರರ ಹಾಗೂ ಅವರಂತೆ ಅಭಿಪ್ರಾಯ ಹೊಂದಿದವರು ಈ ಬಗೆಗೆ ಮೂರು ಬಾರಿ ಯೋಚಿಸಬೇಕೆಂದೇ ಆಗ್ರಹಿಸುವೆ. ಏಕೆಂದರೆ ಈ ವಿಧವಾದ ವಿಧೇಯಕವು ಸಮಸ್ತ ಹಿಂದೂ ಸಮಾಜದ ರಚನೆಗೇ ಮಾರಕವಾಗಿದೆ.

ನನ್ನ ಚರ್ಚೆಯ ವಿಷಯವಾಗಿದ್ದ, ಮಗ–ಮಗಳಿಗೆ ಸಮಾನಾಧಿಕಾರ ನೀಡುವ ಬಗೆಗೆ ಮುಂದುವರಿದು ನಾನು ಹೇಳುವುದೇನೆಂದರೆ, ಈ ನೂತನ ಆವಿಷ್ಕಾರ ಹಿಂದೂ ಸಮಾಜಕ್ಕೆ ಮಾರಕವಾಗಿದೆ. ಆದುದರಿಂದ ಹಿಂದೂ ಸಮಾಜದ ನಿಜಸ್ವರೂಪದ ಪರಿಸ್ಥಿತಿ ಏನು? ಎಂದೇ ಕೇಳಬೇಕಾಗಿದೆ. ಸ್ತ್ರೀ ಹಾಗೂ ಪುರುಷರಲ್ಲಿರಬಹುದಾದ ಅಂತರವೇ ಅಥವಾ ಮಗ ಮತ್ತು ಮಗಳ ಮಧ್ಯೆ ಇರುವ ವ್ಯತ್ಯಾಸವೇ? ಇವು ಎಲ್ಲ ಸಂದರ್ಭಗಳಲ್ಲಿರುವ ವ್ಯತ್ಯಾಸಗಳೇ. ಮಗನು ಝೀವನಾವಧಿ ಕುಟುಂಬದೊಡನೆಯೇ ಇರುತ್ತಾನೆ. ಆದರೆ ಮಗಳು ಮದುವೆಯ ನಂತರ, ಬೇರೆ ಕುಟುಂಬದ ಸದಸ್ಯಳಾಗುತ್ತಾಳೆ. ಈ ಬಗೆಯ ಸಂದರ್ಭದಲ್ಲಿ ಪರಿಹಾರೋಪಾಯಗಳೇನು? ನಮಗೆ ಕಾನೂನು ನಿರ್ಮಿಸಿದ ನಮ್ಮ ಪೂರ್ವಿಕರು ಸ್ತ್ರೀ ವಿರೋಧಿಗಳೇ? ಅಥವಾ ಕೀಳು ಮಟ್ಟದವರೇ? ಎಂದೆಲ್ಲಾ ಯೋಚಿಸಬೇಕಾಗುತ್ತದೆ. ಏಕೆಂದರೆ ಅವರು ಅಸಮಾನತೆ ಅಥವಾ ಅನ್ಯಾಯವನ್ನು ಹೇಳಿಲ್ಲ.

ಈ ಬಗೆಗೆ ಹಿಂದೂ ಲಾ ಗೆ ಸಂಬಂಧಿಸಿದಂತೆ ತಪ್ಪು ಕಲ್ಪನೆ ಮೂಡಿಸಲಾಗಿದೆ. ಮಾನ್ಯ ಕಾನೂನು ಮಂತ್ರಿಯವರು, ಒಬ್ಬನಿಗೆ ಹನ್ನೆರಡು ಮಂದಿ ಗಂಡು ಮಕ್ಕಳು ಹಾಗೂ ಓರ್ವ ಹೆಣ್ಣು ಮಗುವಿದ್ದಾಗ, ಆಸ್ತಿಯನ್ನು ಹನ್ನೆರಡು ಭಾಗ ಮಾಡುತ್ತಿರುವಾಗ ೧೩ನೇ ಭಾಗ ಮಾಡುವುದರಿಂದ ಆಗುವ ಹಾನಿ ಏನು ಎಂದು ಸದನಕ್ಕೆ ಸೂಚಿಸಿದರು. ಆದರೆ ನಾನು ಅದರ ವಿರುದ್ಧವಾದ ಪರಿಸ್ಥಿತಿಯನ್ನೂ ಏಕೆ ಆಲೋಚಿಸಬಾರದು ಎಂದೇ ಕೇಳುವೆ.

**ಶ್ರೀ ಜಗಝೀವನರಾಮ** (ಕಾರ್ಮಿಕ ಮಂತ್ರಿ) : ೧೩ ಭಾಗಗಳು

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ** : ಕುಟುಂಬದ ಗೃಹವನ್ನು ಹದಿಮೂರು ಭಾಗಗಳಾಗಿ ಒಡೆಯಬೇಕೆಂದೇ ಬಯಸುವಿರಾ? ಸರ್, ಗ್ರಾಮಾಂತರ ಭಾರತದ ಪರಿಸ್ಥಿತಿಯ ಬಗ್ಗೆ ಆಲೋಚನೆ ಮಾಡಿರಿ, ಕೇವಲ ನಗರ ಭಾರತವಲ್ಲ. ಏಕೆಂದರೆ ಗ್ರಾಮಾಂತರ ಭಾರತದಲ್ಲಿ ಚಿಕ್ಕ ಮನೆಗಳಿವೆ. ತಂದೆಯ ಮರಣದ ನಂತರ ಓರ್ವ ಮಗ ಹಾಗೂ ಹನ್ನೆರಡು ಮಂದಿ ಅಳಿಯಂದಿರಲ್ಲಿ ಮನೆ ಭಾಗವಾದರೆ ಪರಿಣಾಮವೇನು ಎಂದು ಯೋಚಿಸಿ. ಸರ್, ಸದ್ಯದ ವಿಧೇಯಕದಲ್ಲಿ ಮಗಳು ತನ್ನ ಇಚ್ಛೆಯಂತೆ ಯಾರನ್ನಾದರೂ ಮದುವೆ ಆಗುವ ಅವಕಾಶ ಕಲ್ಪಿಸಿದೆ. ಅವಳು ಅನ್ಯಜಾತಿಯವನೊಡನೆ ಮದುವೆಯಾಗುವ ಧೈರ್ಯ ತೋರಿದರೆ ಅದಕ್ಕೆ ಈ ವಿಧೇಯಕ ಅಡ್ಡಿಬಾರದು. ಆದರೆ ಅದು ಆಸ್ತಿಯ ಪಾಲುದಾರಿಕೆಗೂ ಅನರ್ಹವಾಗಲಾರದು. ಆಗ ಆಗಬಹುದಾದ ಪರಿಣಾಮಗಳೇನು? ಪರಿಣಾಮವೆಂದರೆ ಪ್ರತಿಯೊಂದು ಕುಟುಂಬದಲ್ಲಿ ಕೇವಲ ಕಲಹಗಳಾಗಿ ಖೂನಿಯಾಗಬಲ್ಲವು. ಆದುದರಿಂದ ಈ ಬಗೆಯ ಶಾಸನ ರಚಿಸುವಾಗ ಕೇವಲ ಕಾನೂನು ಮಂತ್ರಿಯ ಅಭಿಪ್ರಾಯ ಒಂದನ್ನೇ ಗ್ರಹಿಸದೆ, ವಿವಿಧ ಅಭಿಪ್ರಾಯ ಗ್ರಹಿಸಿ ಹೆಜ್ಜೆ ಇಡುವುದು ಸೂಕ್ತ. ಮಗಳ ಬಗೆಗೆ ಈ ವಿಧವಾದ ಕೀಳರಿಮೆಯ ಭಾವನೆಗೆ ಹಿಂದೂ ಸಮಾಜದಲ್ಲಿ ಅವಕಾಶವೇ ಇಲ್ಲ. ಏಕೆಂದರೆ ಸಮಾಜದಲ್ಲಿ ಅವರಿಗೆ ಉನ್ನತ ಸ್ಥಾನವನ್ನೇ ನೀಡಲಾಗಿದೆ. ಅಲ್ಲದೆ ಅವಳ

ಮದುವೆಯಾದ ನಂತರವೂ ಅವಳ ಸಂಪರ್ಕ ಹೆತ್ತ ತಂದೆ ತಾಯಯೊಂದಿಗೆ ಮುಂದುವರಿದಿರುತ್ತದೆ. ಹುಟ್ಟು, ಸಾವು, ಮದುವೆ, ನಾಮಕರಣ ಮುಂತಾದ ಎಲ್ಲಾ ಸಂದರ್ಭಗಳಲ್ಲಿಯೂ ಅವಳ ಪಾತ್ರ ಅನಿವಾರ್ಯ. ಏಕೆಂದರೆ ಈ ಎಲ್ಲಾ ಸಂದರ್ಭಗಳಲ್ಲಿಯೂ ಮಗಳಿಗೆ ಉಡುಗೊರೆ ನೀಡುವ ಸಂಪ್ರದಾಯವಿದೆ. ಅವಳ ಸಂಬಂಧ ತವರಿನೊಂದಿಗೆ ನಿಕಟವಾಗಿರುತ್ತದೆ. ಏಕೆಂದರೆ ಅವಳು ಹೆತ್ತಾಗ ಅಣ್ಣ ತಮ್ಮಂದಿರು ಅವಳಿಗೆ ಉಡುಗೊರೆ ನೀಡುವರು. ಅಲ್ಲದೆ, ತಂಗಿಯ ಮನೆಯಲ್ಲಿ ಅವಳ ಮಗಳ ಮದುವೆಯ ಸಮಯದಲ್ಲಿ, ಅಣ್ಣ ಅನಿವಾರ್ಯವಾಗಿ ಇರಲೇಬೇಕು. ಈ ಎಲ್ಲಾ ಸಂಬಂಧಗಳು ಜಾರಿಯಲ್ಲಿರುವಾಗ ಪಾಲುದಾರಿಕೆಯೊಂದೇ ಎಂದು ಭಾವಿಸುವುದು ಸರಿಯೆ? ಹೀಗಾಗಿ ಈ ವಿಧೇಯಕದಲ್ಲಿ ಅನುಸರಿಸಿರುವ ಮಾರ್ಗ ಅಸಮಂಜಸವೆಂದೇ ಹೇಳುವೆ. ಅದು ಭಾರತೀಯ ಪರಂಪರೆಗೆ ವ್ಯತಿರಿಕ್ತ ಹಾಗೂ ವಿದೇಶೀ; ಹಾಗೂ ಭಾರತೀಯ ಸಂಪ್ರದಾಯಕ್ಕೆ ವಿರೋಧವಾದ ಈ ವಿಧೇಯಕದ ಮರು ಪರಿಶೀಲನೆ ಅನಿವಾರ್ಯ.

ಈ ಪಿತ್ರಾರ್ಜಿತ ಆಸ್ತಿಯಲ್ಲಿ ಮಗಳಿಗೆ ಕೊಡಬಹುದಾದ ಭಾಗದ ಬಗೆಗೆ ವಿಚಾರಿಸುವಾ. ಮುಸ್ಲಿಂ ಕುಟುಂಬದಲ್ಲಿ ದಾಯಾದಿಗಳನ್ನೇ ಮದುವೆ ಮಾಡಿಕೊಳ್ಳುವುದು ಸರ್ವಸಾಮಾನ್ಯವಾದುದು. ಆದರೆ ಕಾಲಾನಂತರ ಹಲವು ವಿಧಾನದ ಮದುವೆಗಳು ನಿಷೇಧವಾಗಬಹುದು. ಇದು ನಮಗೆ ಸಮ್ಮತವಾಗದೇ ಇರಬಹುದು. ಆದರೆ ಅದರ ಪರಿಣಾಮಗಳನ್ನು ತಡೆಗಟ್ಟಲು ಸಾಧ್ಯವಾಗದೇ ಹೋಗಬಹುದು.

ನಾವು ಪಿತ್ರಾರ್ಜಿತ ಆಸ್ತಿಯಲ್ಲಿ ಮಗಳಿಗೆ ಭಾಗ ಕೊಡುವ ಪದ್ಧತಿಯನ್ನು ವಿವಿಧ ದೇಶಗಳಾದ ಈಜಿಪ್ತ್, ಗ್ರೀಸ್, ರೋಮ್ ಅಥವಾ ಮುಸಲ್ಮಾನರ ಕಾನೂನುಗಳನ್ನು ಪರಿಶೀಲಿಸಿದಾಗ ಬರುವ ನಿರ್ಣಯವೆಂದರೆ, ಆಸ್ತಿಯಲ್ಲಿ ಭಾಗ ನೀಡಲೇಬೇಕಾದಲ್ಲಿ, ನೀವು ಮೊದಲನೆಯ ದಾಯಾದಿಗಳೊಂದಿಗೆ ಮದುವೆ ಮಾಡಿಕೊಳ್ಳುವ ವಿಧಾನಗಳನ್ನು ವಿಸ್ತರಿಸಲೇಬೇಕಾಗುತ್ತದೆ. ಆದರೆ ಹಿಂದೂ ಸಂಸ್ಕಾರದಲ್ಲಿ ಈ ವಿಧಾನವನ್ನು ಯಾರೂ ತಾಳ್ಮೆಯಿಂದ ಸ್ವೀಕರಿಸಲಾರರು.

ಈಗ ಮತ್ತೊಂದು ವಿಷಯ ಅಂದರೆ, ಈ ವಿಧೇಯಕದಲ್ಲಿ ಮಗನಂತೆ ಮಗಳಿಗೂ ಆಸ್ತಿಯಲ್ಲಿ ಸಮನಾಗಿ ಪಾಲು ನೀಡುವುದರಿಂದ ಮಗಳಿಗೆ ಆಸ್ತಿಯಲ್ಲಿ ಹಕ್ಕು ನೀಡಿದಂತಾಗುತ್ತದೆಯೇ? ಆದರೆ ಅದು ಸಾಧ್ಯವಲ್ಲ. ಏಕೆಂದರೆ ಅದು ಅನೇಕ ಅನಿಷ್ಟಗಳಿಗೆ ಕಾರಣವಾಗುತ್ತದೆ. ಈಗ ಸದ್ಯ ಹಿಂದೂ ಕೋಡಿನಲ್ಲಿ ಅಡಕವಾಗಿರುವಂತೆ, ಯಾವ ತಂದೆಯೇ ಆಗಲಿ ತನ್ನ ಆಸ್ತಿಯನ್ನು ತನ್ನ ಮಗನ ಹೆಸರಿಗೆ ದಾನ ಮಾಡಲೂಬಹುದು ಅಥವಾ ತನ್ನ ಅನುಶಾಸನದಂತೆ ಯಾರಿಗಾದರೂ ಮಾರಾಟ ಮಾಡಬಹುದು. ಇದನ್ನು ತಡೆ ಹಿಡಿಯಲು ಸಾಧ್ಯವೇ? ಇದನ್ನು ತಡೆಗಟ್ಟದೇ ಹೋದಾಗ ಸಮನಾದ ಪಾಲಿನ ಸಮಸ್ಯೆ ಉದ್ಭವಿಸುವುದಿಲ್ಲ. ಹೀಗಾಗಿ ಈ ವಿಧೇಯಕದ ಉದ್ದೇಶ ಫಲಿಸಲಾರದು. ನ್ಯಾಯವಾದಿಯಾಗಿ ನನಗೆ ನ್ಯಾಯಾಲಯಗಳ ಅನುಭವ ಇದೆ. ನನ್ನಂತೆ ನನ್ನ ಅನೇಕ ನ್ಯಾಯವಾದಿ ಮಿತ್ರರಿಗೂ ಈ ಅನುಭವ ಇರಲೇಬೇಕು. ಏಕೆಂದವೆ, ಹತ್ತರಲ್ಲಿ ಒಂಬತ್ತು ವಿಲ್ ಅಥವಾ ಉಯಿಲು ಬರೆದ ಪ್ರಕರಣಗಳು ನ್ಯಾಯಾಲಯದ ಮೆಟ್ಟಲೇರಿದೆ. ಹೀಗಾಗಿ ಇದನ್ನು ತಡೆಗಟ್ಟಲಾಗದೇ ಕೇವಲ ಕಲಹಗಳಿಗೆ ಅವಕಾಶ ನೀಡಿದಂತಾಗುತ್ತದೆ. ಈ ಕಲಹಗಳು ಪ್ರಿವಿ ಕೌನ್ಸಿಲ್ ಮಟ್ಟದವರೆಗೂ ಹೋದ ಉದಾಹರಣೆಗೆ ಕೊರತೆ ಇಲ್ಲ. ಇದು ಮಗಳ ಹಿತಾಸಕ್ತಿಯನ್ನು ಕಾಪಾಡಿದಂತಾಗಬಲ್ಲದೇ?

ಹೀಗಾಗಿ ನಾವು ಅವಳನ್ನು ರಕ್ಷಿಸುವ ಬದಲಾಗಿ ಅನಾಹುತದ ಅಂಚಿಗೆ ತಳ್ಳುತ್ತೇವೆ. ಆದುದರಿಂದ ಆದಷ್ಟು ಬೇಗನೆ ಹಿಂದೂ ಮನೋಭಾವನೆಗಳಿಗೆ ಅನುಗುಣವಾಗಿ ವಿಧೇಯಕವನ್ನು ಬದಲಾಯಿಸುವುದೇ ಸೂಕ್ತ. ಕಾನೂನಿನಲ್ಲಿ ಮಗಳಿಗೆ ಆಸ್ತಿಯಲ್ಲಿ ಹಕ್ಕು ನೀಡಲಾಗುವುದೆಂದು ತಿಳಿದೊಡನೆ, ಸಹೋದರರು

ತಮ್ಮ ಕಾರ್ಯದಿಂದ ವಿಮುಕ್ತಿ ಹೊಂದಿದೆವೆಂದೇ ಭಾವಿಸುತ್ತಾರೆ. ಆಗ ಹಿಂದೂ ಕುಟುಂಬದ ಗತಿ ಏನು? ಅಲ್ಲದೆ ಎಷ್ಟು ಕುಟುಂಬಗಳಿಗೆ ಸ್ಥಿರಾಸ್ತಿ ಇದೆ? ನನ್ನ ತಿಳಿವಳಿಕೆಯಂತೆ ಶೇಕಡ ೪೦ ಜನರು ಮಾತ್ರ ಆಸ್ತಿ ಹೊಂದಿರಬಹುದು. ಮಿಕ್ಕ ಶೇಕಡ ೬೦ ಜನರ ಗತಿ ಏನಾಗಬಹುದು? ಯೋಚಿಸಿದರೆ ಮೈಯಲ್ಲಿ ನಡುಕ. ಶೇಕಡ ೬೦ ಜನರ ಕುಟುಂಬಗಳು ಆಸ್ತಿಯಲ್ಲದೇ ಮಿತಾಕ್ಷರ ವಿಧಾನಕ್ಕೆ ವಿನಯರಾಗಿರಬೇಕೆ? ಕೇವಲ ಕಾನೂನಲ್ಲಿ ಸಮಪಾಲು ಘೋಷಿಸುವುದರಿಂದ ಆಗಬಹುದಾದ ನೈತಿಕ ಮೌಲ್ಯಹಾನಿಯನ್ನು ಯೋಚಿಸಿರುವಿರಾ? ಮಗಳಿಗೆ ತನ್ನ ಗಂಡನ ಆಸ್ತಿಯಲ್ಲಿ ಪಾಲು ತೆಗೆದುಕೊಳ್ಳುವ ಅಧಿಕಾರವಿದೆ; ಅಲ್ಲದೆ ಮಾವನಿಂದಲೂ ಆಸ್ತಿ ಪಡೆಯಬಹುದಾಗಿದೆ.

**ಶ್ರೀ ಕೃಷ್ಣಸ್ವಾಮಿ ಭಾರತಿ** (ಮದ್ರಾಸ್. ಸಾ) : ಅದನ್ನು ನಾವು ಈಗಾಗಲೇ ನೀಡಿದ್ದೇವೆ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ** : ಅದನ್ನು ಈಗಾಗಲೇ ನೀಡಿದ್ದರೆ, ಪಿತ್ರಾರ್ಜಿತ ಆಸ್ತಿಯಲ್ಲಿ ಈ ಪಾಲು ನೀಡುವ ಪ್ರಶ್ನೆಯ ಆವಶ್ಯಕತೆಯೇ ಇಲ್ಲ. ನಾನು ಕಾನೂನನ್ನು ತಿಳಿದುಕೊಂಡಂತೆ ನಿಯಮಿತವಾದ ಹಕ್ಕನ್ನು ನೀಡಲಾಗಿದೆ, ಇದನ್ನು ವಿಸ್ತರಿಸಿ, ಮಗಳಿಗೆ ಅವರನ್ನು ಮಾವನ ಆಸ್ತಿಯಲ್ಲಿ ಅವಳ ಗಂಡನಿಗೆ ಬರಬಹುದಾದ ಪಾಲಿನಷ್ಟು ಭಾಗವನ್ನು ನೀಡಬಹುದು. ಇದೊಂದು ಉತ್ತಮ ಸೂಚನೆಯಾಗಿರುವುದರಿಂದ ನಾವು ಪರಿಶೀಲಿಸಬಹುದು.

ಸರ್, ಈಗ ನಾನು ಈ ವಿಧೇಯಕದ ಕ್ರಾಂತಿಕಾರಿ ಬದಲಾವಣೆಯ ಬಗೆಗೆ ಹೇಳಬಯಸುವೆ. ಅದೇನೆಂದರೆ; ಅವಿಭಕ್ತ ಕುಟುಂಬವನ್ನೇ ನಾಶಮಾಡುವುದು. ಈ ವಿಧೇಯಕದ ಪ್ರಕರಣ ೮೬ ರಲ್ಲಿ ಪ್ರಮುಖ ಲಕ್ಷಣದಂತೆ, ಯಾವ ನ್ಯಾಯಾಲಯವೂ ಹುಟ್ಟನ್ನೇ ಹಕ್ಕೆಂದು ಪರಿಗಣಿಸುವಂತಿಲ್ಲ. ಈ ಅಂಶದಿಂದಾಗಬಹುದಾದ ಪರಿಣಾಮ ನೆನೆಸಿಕೊಂಡರೆ ಮೈಯಲ್ಲಿ ನಡುಕ ಉಂಟಾಗುತ್ತದೆ. ಈಗಾಗಲೇ ಹೇಳಿದಂತೆ ಬಂಗಾಲ ಹಾಗೂ ಅಸ್ಸಾಂಗಳಲ್ಲಿ ದಾಯಭಾಗ ವ್ಯವಸ್ಥೆ ಜಾರಿಯಲ್ಲಿದೆ; ಅದು ಅವಿಭಕ್ತ ಕುಟುಂಬದ ವ್ಯವಸ್ಥೆಯನ್ನು ಮನ್ನಿಸುವುದಿಲ್ಲ; ಏಕೆಂದರೆ ಕುಟುಂಬದ ಪ್ರತಿಯೊಬ್ಬ ಸದಸ್ಯನೂ ಸಮನಾದ ಹಕ್ಕನ್ನೇ ಪಡೆದಿರುವುದರಿಂದ ಎಲ್ಲರೂ ಸರಿಸಮಾನರು.

ಈ ವ್ಯವಸ್ಥೆಯನ್ನೇ ಭಾರತಾದ್ಯಂತ ವಿಸ್ತರಿಸಬೇಕೆಂಬ ಉದ್ದೇಶವಿದೆಯೇ? ಐದು ಕೋಟಿಯಷ್ಟು ಜನತೆ ಈ ವ್ಯವಸ್ಥೆಯಡಿಯಲ್ಲಿ, ಮಿಕ್ಕ ೨೦ ಕೋಟಿ ಜನತೆ ಬೇರೆ ವ್ಯವಸ್ಥೆಯ ಅಡಿಯಲ್ಲಿದ್ದಾರೆ. ಆದಾಗ್ಯೂ ಐದು ಕೋಟಿಯ ವ್ಯವಸ್ಥೆಯನ್ನು ೨೦ ಕೋಟಿಗೆ ವಿಸ್ತರಿಸುವುದು ಯಾವ ನ್ಯಾಯ? ಇದು ಖಂಡಿತವಾಗಿಯೂ ತಪ್ಪು. ನನ್ನ ಅಭಿಪ್ರಾಯದಲ್ಲಿ ಪಾಲು ಪಡೆಯುವ ಹಕ್ಕು ಪ್ರತಿಯೋರ್ವ ಹಿಂದೂ ಪುತ್ರನಿಗೆ ಅವನ ಜನನದಿಂದಲೇ ಬಂದಿದೆ. ಅದು ತಂದೆಯ ದುಂದುವೆಚ್ಚವನ್ನು ನಿಯಂತ್ರಿಸಲು ಸಹಕಾರಿಯಾಗಿದೆ. ಈ ಅಮೂಲ್ಯ ಹಕ್ಕು ಸಾವಿರಾರು ಹಿಂದೂ ಕುಟುಂಬಗಳನ್ನು ರಕ್ಷಿಸಿದೆ. ಈ ವಿಧವಾದ ಹಕ್ಕನ್ನು ಈ ವಿಧೇಯಕದ ೮೬ನೇ ಪ್ರಕರಣ ತೆಗೆದುಹಾಕಲು ಪ್ರಯತ್ನಿಸುತ್ತಿದೆ. ಇದಕ್ಕಿಂತಲೂ ಭಯಾನಕ ಅಂಶವೆಂದರೆ, ೮೭ನೇ ಪ್ರಕರಣ. ಏಕೆಂದರೆ ಅದರಲ್ಲಿ ಹೇಳಲಾದಂತೆ, ಈ ವಿಧೇಯಕ ಜಾರಿಗೆ ಬಂದ ದಿನಾಂಕದಿಂದಲೇ, ಅವಿಭಕ್ತ ಕುಟುಂಬವು, ಕಡ್ಡಾಯವಾಗಿ ಜಾರಿಯಲ್ಲಿರುವುದಿಲ್ಲ. ಈ ವಿಧವಾದ ಕಡ್ಡಾಯ ವಿಭಜನೆ ಏತಕ್ಕಾಗಿ? ನನ್ನ ಅಭಿಪ್ರಾಯದಲ್ಲಿ ಈ ಅಂಶಗಳು ಸರಳ ಲಕ್ಷಣದಿಂದ ಕೂಡಿರದೇ ಕ್ರಾಂತಿಕಾರಿ ಲಕ್ಷಣಗಳಿಂದ ಒಡಗೂಡಿರುವುದರಿಂದ ಅನಿರೀಕ್ಷಿತ ಬದಲಾವಣೆಗೆ ಆಸ್ಪದ ನೀಡಬಲ್ಲವು.

ನಾನು ಈ ವಿಧೇಯಕದ ಅತಿ ಪ್ರಮುಖವಾದ ಮತ್ತೊಂದು ವಿಷಯದ ಬಗೆಗೆ ಹೇಳಬಯಸುವೆ. ಅದೇ ವಿವಾಹದ ಅಸಿಂಧುತ್ವ, ೩೦ನೆಯ ಉಪನಿಬಂಧನೆ ಇದನ್ನು ಪ್ರಸ್ತಾಪಿಸಿದೆ. ಮತ್ತೊಂದು ಉಪನಿಬಂಧನೆ

೩೩ ನ್ಯಾಯಾಂಗ ಮೂಲಕವಾಗಿ ದಂಪತಿಗಳು ವಿವಾಹವಿಚ್ಛೇದನೆ ಪಡೆಯಬಹುದು ಎಂಬುದನ್ನು ಸೂಚಿಸುತ್ತದೆ. ನಂತರ ವಿವಾಹವು ಸಿಂಧುವೋ ಅಥವಾ ಅಸಿಂಧುವೋ ಎಂಬ ಸಂಗತಿಯನ್ನು ಹೇಳಲಾಗಿದೆ. ಹಿಂದೂ ಸಮಾಜ ಮತ್ತು ಹಿಂದೂ ಲಾಗೆ ಸಂಬಂಧಿಸಿದಂತೆ ಈ ಅಂಶಗಳೆಲ್ಲಾ ನವೀನ ಆವಿಷ್ಕಾರಗಳೇ. ಈ ಎಲ್ಲಾ ಅಂಶಗಳಿಂದ ಒಡಗೂಡಿದ ಈ ನೂತನ ಶಾಸನವು ನ್ಯಾಯವಾದಿಗಳಿಗೆ ಸ್ವರ್ಗ ಸಮಾನವಾಗಿದೆ. ಮದುವೆ ಅಸಿಂಧು ಎಂದು ನಿರ್ಣಯಿಸಿಲು, ವಿವಾಹ ವಿಚ್ಛೇದನ ಪಡೆಯಲು, ದಂಪತಿಗಳು ಬೇರೆಯಾಗಿ ಝೀವಿಸಲು, ಈ ಎಲ್ಲಕ್ಕೂ ನ್ಯಾಯಾಲಯಕ್ಕೆ ಧಾವಿಸಬಹುದು. ಈ ದಿಶೆಯಲ್ಲಿ ಯುರೋಪಿಯನ್ ಹಾಗೂ ಅಮೆರಿಕನ್ ರಾಷ್ಟ್ರಗಳ ಅನುಭವದಿಂದ ಪಾಠ ಕಲಿಯದೇ ಹೋಗಿರುವುದು ತುಂಬಾ ಶೋಚನೀಯ ಹಾಗೂ ಆಶ್ಚರ್ಯಕರವಾದ ಸಂಗತಿ. ಏಕೆಂದರೆ ಅಲ್ಲಿಯ ಪ್ರತಿ ಆರು ವಿವಾಹಗಳಲ್ಲಿ ಒಂದು ವಿವಾಹ ಅಸಿಂಧುವಾಗಿದೆ. ಈ ಪರಿಸ್ಥಿತಿ ನಮ್ಮ ಸಮಾಜದಲ್ಲಿ ಇಲ್ಲ. ಆದುದರಿಂದ ಕುಟುಂಬ ವಿಷಯದಲ್ಲಿ ಕಡ್ಡಾಯವಾಗಿ ಕೋರ್ಟಿನ ಪ್ರವೇಶವೇಕೆ? ಏಕೆಂದರೆ ೩೪ನೆಯ ಉಪನಿಬಂಧನೆಯಂತೆ, ಕೇವಲ ಕೋರ್ಟಿನಿಂದ ಮಾತ್ರ ವಿವಾಹವನ್ನು ವಿಸರ್ಜಿಸಲಾಗುವುದು. ಅಲ್ಲದೇ ಈ ವಿಧವಾದ ವಿಸರ್ಜನೆಯು ೪೪.೧ರಲ್ಲಿ ಹೇಳಿದಂತೆ ಶ್ರೇಷ್ಠನ್ಯಾಯಾಲಯದಿಂದ ದೃಢಿಕರಿಸಬೇಕೆಂದಾಗ, ನ್ಯಾಯವಾದಿಗಳಿಗೆ ಮುಕ್ತ ಮಾರ್ಗ ತೆರೆದಂತಾಗುವುದಿಲ್ಲವೇ? ಇದು ಸಾಮಾಜಿಕ ಶಾಂತಿ ಕದಡುವಲ್ಲಿ ಸಹಕಾರಿಯಾಗಲಾರದೆ? ಆದುದರಿಂದ ೩೦–೩೩ರಲ್ಲಿ ಸೂಚಿಸಲಾದ ವಿಷಯಗಳೆಲ್ಲಾ ಹಿಂದೂ ಸಾಮಾಜಿಕ ಸಂಸ್ಕಾರಗಳಿಗೆ ವಿರೋಧವಾಗಿವೆ. ಅಲ್ಲದೆ ಪವಿತ್ರ ವಿವಾಹ ಆದರ್ಶಕ್ಕೆ ವಿರೋಧವಾಗಿದೆ. ಪವಿತ್ರ ಸಂಬಂಧಗಳಿಗೆ ಮಾರಕವಾಗಿವೆ. ಭವಿಷ್ಯಕ್ಕೆ ಅಪಾಯ. ಆದುದರಿಂದ ಅವನ್ನು ಕೈಬಿಡುವುದು ಸೂಕ್ತ. ಪಾಶ್ಚಿಮಾತ್ಯರೇ ಈ ವ್ಯವಸ್ಥೆಯ ಬಗೆಗೆ ಸಂಶಯವನ್ನು ವ್ಯಕ್ತಪಡಿಸಿರುವಾಗ, ನಾವೇಕೆ ಆತುರದ ಕ್ರಮ ಕೈಗೆತ್ತಿಕೊಂಡಿದ್ದೇವೆ? ವಿವಾಹ ವಿಸರ್ಜನೆಯ ಕಾರಣಗಳಾದರೂ ಏನು? ಅನೈತಿಕ ಸಂಬಂಧವೇ? ಅಥವಾ ಕುಟುಂಬದಲ್ಲಿಯ ಕಲಹಗಳೇ? ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಈ ಕಾರಣಗಳ ಕ್ಷುಲ್ಲಕತೆ ತಿಳಿಯದೇ ಹೋಗಲಾರದು. ಸಂಶಯ–ಕಲಹಗಳು ಸಾಮಾನ್ಯ ಸಂಗತಿಗಳು. ಅನೈತಿಕ ಸಂಬಂಧದ ಬಗೆಗೆ ಹೇಳಬಹುದಾದರೆ ಸ್ತ್ರೀಯು ತನ್ನ ಪತಿಯ ವಿರುದ್ಧವೂ ಈ ಆರೋಪಗಳನ್ನು ಹೊರಿಸಬಹುದಾಗಿದೆ. ಸ್ತ್ರೀಯರ ಬಗೆಗಂತೂ ವಿಪುಲ ಅವಕಾಶವಿದೆ; ಪರಿಣಾಮ ಎಂದರೆ ಅಸಂತೋಷ, ಕಲಹ, ವಿರಸ ಮುಂತಾದವು. ಈ ಅಂಶಗಳು ಹಿಂದೂ ಸಮಾಜದ ಅಸ್ತಿತ್ವಕ್ಕೆ ಮಾರಕವಾಗಿವೆ. ನಮ್ಮ ಸಮಾಜ ಪತಿವ್ರತೆ, ಏಕಪತ್ನೀ. ಆದರ್ಶಗಳಿಂದ ಕೂಡಿದ್ದು, ಅನೇಕ ಶತಮಾನಗಳಿಂದ, ವಿವಿಧ ವಿದೇಶೀ ದಬ್ಬಾಳಿಕೆಗಳನ್ನು ಶಾಂತ ರೀತಿಯಂದಲೇ ಸಹಿಸಿಕೊಂಡು ಬಂದಿದೆ. ಹೀಗಾಗಿ ಈ ವಿಧೇಯಕದಲ್ಲಿ ಕ್ರಾಂತಿಕಾರಿಯಾದುದೇನೂ ಇರದೆ ಕೇವಲ ಕಳವಳಕಾರಿ ಅಂಶಗಳಿರುವುದರಿಂದ ೫ ರಿಂದ ೫೧ ಉಪ ನಿಬಂಧನೆಗಳನ್ನು ಕಿತ್ತುಹಾಕಿ, ಸರಳ ವಿಧಾನವನ್ನೇಕೆ ಮಾಡಬಾರದು?

ಈ ವಿಧವಾದ ಭಿನ್ನಾಭಿಪ್ರಾಯಗಳಿಂದ ಒಡಗೂಡಿದ ವಿಧೇಯಕದ ಬದಲಾಗಿ ಸಮಗ್ರ ಮತ್ತು ಸರಳ ಸುಲಭ ಉಪಾಯಗಳಿಂದ ಕೂಡಿದ ವಿಧೇಯಕವನ್ನೇಕೆ ಜಾರಿಗೊಳಿಸಬಾರದು? ನಾನು ಈಗ ಈ ವಿಧೇಯಕದ ೯೧ನೆಯ ಉಪನಿಬಂಧನೆಯ ಬಗೆಗೆ ಹೇಳಬಯಸುವೆ: ಸ್ತ್ರೀಯರ ಭಾಗಕ್ಕೆ ಬರಬಹುದಾದ ಆಸ್ತಿ, ತಂದೆಯಿಂದಾಗಲೀ ಅಥವಾ ಮಾವನಿಂದಾಗಲೀ, ಅವಳಿಗೆ ಸಂಪೂರ್ಣವಾಗಿ ಸೇರಿದ್ದು ಎಂದೇ ೧೦೬ – ೧೦೯ ಉಪನಿಬಂಧನೆಗಳಲ್ಲಿ ಸೂಚಿಸಲಾಗಿದೆ. ಈ ಅಂಶಗಳೂ ಕುಟುಂಬದ ಶಾಂತಿಝೀವನಕ್ಕೆ ಸಹಕರಿಸದೆ, ಅನಾಹುತ ಲಕ್ಷಣಗಳಿಂದ ಕೂಡಿವೆ; ಏಕೆಂದರೆ ಇದರಲ್ಲಿಯ ಪ್ರತಿಯೊಂದು ಅಂಶವೂ ಹಿಂದೂ ಆದರ್ಶಗಳಿಗೆ ವ್ಯತಿರಿಕ್ತವಾಗಿದೆ. ೯೧ನೆಯ ಉಪನಿಬಂಧನೆಯಂತೆ ಸ್ತ್ರೀಯರ ಭಾಗಕ್ಕೆ ಬಂದ

ಆಸ್ತಿ, ೧೦೬ – ೧೧೯ ರಂತೆ ಅವರಿಗೇ ಮುಂದುವರಿಯುವುದೇ? ಏಕೆಂದರೆ ಮೊದಲು ಉಪಭೋಗಿಸುವವರೆಂದರೆ ಪತಿ ಹಾಗೂ ಮಕ್ಕಳು. ಒಂದು ವೇಳೆ ಪತಿ ಹಾಗೂ ಮಕ್ಕಳಿಲ್ಲದೇ ಹೋದಲ್ಲಿ ಯಾರ ಭಾಗಕ್ಕೆ ಈ ಆಸ್ತಿಯನ್ನು ನೀಡಬೇಕು? ಗಂಡನ, ತಂದೆ, ತಾಯಿ ಹಾಗೂ ಇತರ ಬಂಧುಗಳಿದ್ದರೆ, ಇಲ್ಲಿ ನಾನು ವಿನಯಪೂರ್ವಕವಾಗಿ ಕೇಳುವುದೇನೆಂದರೆ, ಹಿಂದೂ ಸಮಾಜದಲ್ಲಿ ಯಾವ ತಂದೆ ಹಾಗೂ ತಾಯಿ ತಮ್ಮ ಮಗಳಿಂದ ಆಸ್ತಿ ಪಡೆಯಲು ಬಯಸುವರು?

**ಶ್ರೀ ಕೃಷ್ಣಸ್ವಾಮಿ ಭಾರತಿ :** ಏಕೆ? ಅದರಲ್ಲಿ ಅಪಾಯವೇನು?

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ಬಹುಶಃ ನನ್ನ ಮಿತ್ರರು ಬೇರೆ ದೇಶದಿಂದ ಬಂದಿರುವಂತೆ ಭಾಸವಾಗುತ್ತದೆ.

**ಶ್ರೀ ಕೃಷ್ಣಸ್ವಾಮಿ ಭಾರತಿ :** ನಾನು ದಕ್ಷಿಣ ಭಾರತದಿಂದ ಬಂದಿರುವೆ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ದಕ್ಷಿಣ ಭಾರತದಲ್ಲಿ ಯಾವ ತಂದೆ ತಾಯಿಯೂ ತಮ್ಮ ಮಗಳಿಂದ ಆಸ್ತಿಯನ್ನು ಪಡೆಯಲೂ ಇಚ್ಛಿಸಲಾರರು.

**ಶ್ರೀ ಕೃಷ್ಣಸ್ವಾಮಿ ಭಾರತಿ :** ಅದು ಪಂಜಾಬಿನಲ್ಲಿರಬಹುದು.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ಉತ್ತರ ಭಾರತದಲ್ಲಿ ಈ ವ್ಯವಸ್ಥೆ ಇದೆ. ನಾನು ದಕ್ಷಿಣ ಭಾರತದ ಬಗೆಗೆ ಭರವಸೆಯಿಂದ ಹೇಳಲಾರೆ. ಆದರೆ ಉತ್ತರ ಭಾರತದ ಭಾವನೆಗೆ ಇದು ವಿರೋಧವಾಗಿದೆ. ಆದರೆ ಕೆಲವರು ಕೇವಲ ಹಣದಾಸೆಗೆ ಧರ್ಮ ಕೈಬಿಟ್ಟಿರಬಹುದು. ಆದರೆ ನಾನು ಅವರ ಬಗೆಗೆ ಪ್ರಸ್ತಾಪಿಸಿಲ್ಲ. ಸಾಮಾನ್ಯವಾಗಿ ಉತ್ತರ ಭಾರತದಲ್ಲಿ ತಂದೆ–ತಾಯಿ ಕನ್ಯಾದಾನದ ಸಮಯದಲ್ಲಿ ಉಡುಗೊರೆ ವರದಕ್ಷಿಣೆ ವಧುವನ್ನು ವರನಿಗೆ ಒಪ್ಪಿಸಿದ ನಂತರ ಅವರ ಮನೆಯಲ್ಲಿ ನೀರನ್ನೂ ಕುಡಿಯುವುದಿಲ್ಲ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಇದನ್ನು ನಮ್ಮ ಪ್ರದೇಶದಲ್ಲಿ ಅನಿಷ್ಟ ಎಂದು ಭಾವಿಸುವುದಿಲ್ಲ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ಅದು ನಿಮ್ಮ ಭಾಗದಲ್ಲಿ ಜಾರಿಯಲ್ಲಿರಬಹುದು. ಆದರೆ ನಮ್ಮ ಭಾಗದಲ್ಲಿ ಅಧಿಕ ಜನರು ಈ ಅಭಿಪ್ರಾಯಕ್ಕೆ ವಿರೋಧವಾಗಿದ್ದಾರೆ. ಅವರು ಮಗಳಿಂದ ಆಸ್ತಿಯನ್ನು ಪಡೆಯುವ ವಿಚಾರವನ್ನು ಕನಸಿನಲ್ಲೂ ಕಾಣಲಾರರು. ಒಟ್ಟಾರೆ ಹೇಳಬೇಕೆಂದರೆ ಈ ವಿಧೇಯಕದಲ್ಲಿಯ ಆಸ್ತಿಪಾಸ್ತಿ ಪಡೆಯುವ ವಿಧಾನಗಳು ಹಿಂದೂ ಆದರ್ಶಗಳಿಗೆ ವಿರೋಧವಾಗಿವೆ. ಶ್ರೀ ಭಾರತಿಯವರು ನಮ್ಮ ಭಾಗದ ಯಾವುದಾದರೂ ಹಳ್ಳಿಗೆ ಹೋಗಿ ನೋಡಿದರೆ ತಂದೆ – ತಾಯಿ ತಮ್ಮ ಮಗಳ ಮನೆಯಲ್ಲಿ ಮಾತ್ರವಲ್ಲ, ಮಗಳನ್ನು ಮದುವೆ ಮಾಡಿ ಕೊಟ್ಟಿರುವ ಹಳ್ಳಿಯಲ್ಲಿಯೂ ನೀರು ಕುಡಿಯುವುದಿಲ್ಲ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ನನಗೆ ಹಲವರು ಹೇಳಿದಂತೆ ಅವರು ಆ ಹಳ್ಳಿಯ ಮೂಲಕ ಹಾದು ಹೋಗುವುದಿಲ್ಲವಂತೆ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ಈ ವಿಧೇಯಕದಡಿಯಲ್ಲಿ ತಂದೆ ಅಥವಾ ತಾಯಿಯ ನಂತರ ಮಹಿಳಾ ಆಸ್ತಿಯನ್ನು ಯಾರು ಪಡೆಯಬೇಕು ಎಂಬುದನ್ನು ಸೂಕ್ತವಾಗಿ ವಿವರಿಸಿಲ್ಲ. ಒಂದು ವೇಳೆ ಅದು ಗಂಡನ ಸಂಬಂಧಿಗಳಿಗೆ ಸೇರಬೇಕೆಂದರೆ ಅದು ಇಲ್ಲದ ರಗಳೆ ರಾದ್ಧಾಂತಗಳಿಗೆ ಅವಕಾಶ ನೀಡುತ್ತದೆ. ಏಕೆಂದರೆ ಮಗಳಿಗೆ ಅವಳ ತಂದೆಯಿಂದ ಬಂದಿರಬಹುದಾದ ಆಸ್ತಿ ಅವಳ ಗಂಡನ ಸಂಬಂಧಿಗಳಿಗೆ ಏಕೆ ಹೋಗಬೇಕು? ಆದುದರಿಂದಲೇ ನಮ್ಮ ಪೂರ್ವಿಕರು ಸ್ತ್ರೀಧನದ ಬಗೆಗೆ ಹಲವಾರು ವಿಧಾನಗಳನ್ನು ರಚಿಸಿದ್ದರು. ನೀವು ಅವರು ರಚಿಸಿದ ವಿಧಾನಗಳನ್ನು ಅರ್ಥಮಾಡಿಕೊಳ್ಳದೆ ಕೇವಲ ಸರಳತೆಯ ನೆಪದಲ್ಲಿ

ಅವನ್ನು ಕೈಬಿಡುತ್ತಿರುವಿರಿ. ನಮ್ಮ ಹಿರಿಯರು ಸೂಚಿಸಿದ ಸ್ತ್ರೀಧನ ವಿಧಾನದಂತೆ, ಆಸ್ತಿಯು ತಂದೆಯ ಕಡೆಯಿಂದ ಪ್ರಾಪ್ತವಾಗಿದ್ದರೆ ಅದು ತಂದೆಯವರ ಸಂಬಂಧಿಗಳಿಗೇ ಹೋಗಬೇಕು. ಆದುದರಿಂದ ಈ ಮಾದರಿಯನ್ನು ಪ್ರಕರಣ ೧೦೬ರಿಂದ ೧೧೯ರಲ್ಲಿ ಏಕೆ ಅಳವಡಿಸಬಾರದು? ಈ ಕ್ರಮ ಹಿಂದೂ ಆದರ್ಶಗಳಿಗೆ ಅನುಗುಣವಾಗಿದೆ; ಅಲ್ಲದೆ ಇದನ್ನು ಅನೇಕರು ಸ್ವಾಗತಿಸುವರು.

ನಾನು ಈಗ ವಿಧೇಯಕದ ಮತ್ತೊಂದು ಅಂಶಕ್ಕೆ ಬರುತ್ತೇನೆ. ಈ ವಿಧೇಯಕ ಜಾರಿಗೆ ಬಂದ ದಿನದಿಂದ ಜಂಟಿ ಹಿಡುವಳಿ ತಾನೇ ತಾನಾಗಿ ರದ್ದಾಗಿ ಅದು ಸಾಮಾನ್ಯ ಹಿಡುವಳಿಯಾಗಿ ಪರಿವರ್ತನೆಗೊಳ್ಳುತ್ತದೆ. ಅಲ್ಲದೆ ಈ ಮಸೂದೆಯ ಸೆಕ್ಷನ್ ೧೧೫ರಂತೆ ಪ್ರತಿಯೊಬ್ಬ ಹಿಡುವಳಿದಾರನೂ ನ್ಯಾಯಾಲಯಕ್ಕೆ ಹೋದ ಕುಟುಂಬದ ಆಸ್ತಿಯಲ್ಲಿ ತನಗೆ ಬರಬೇಕಾದ ಭಾಗವನ್ನು ವಿಭಜಿಸಿ ನೀಡುವಂತೆ ಕೋರಬೇಕೆಂದು ತಿಳಿಸಲಾಗಿದೆ. ಈ ಸೂಚನೆಯು ಕುಟುಂಬದ ಶಾಂತಿಗೆ ಸಹಾಯ ಮಾಡಬಲ್ಲದೇ? ತಂದೆಯ ಮರಣದಿಂದ, ಅವನ ವಿಧವೆ, ಮಗ ಹಾಗೂ ಮಗಳು ತಮ್ಮ ಪಾಲಿನ ಆಸ್ತಿಯನ್ನು ಪಡೆಯಲು ೧೧೫ರಲ್ಲಿ ತಿಳಿಸಿದಂತೆ ನ್ಯಾಯಾಲಯಕ್ಕೆ ಹೋಗುವರೇ? ಇದೊಂದು ಇಸ್ಲಾಂ ಕಾನೂನಾಗಿದ್ದು ಹಿಂದೂ ಆದರ್ಶಗಳಿಗೆ ವಿರೋಧವಾಗಿದೆ. ಆದುದರಿಂದ ಇದನ್ನು ಸಹಿಸಲಾಗದು. ಈ ಹಿಂದೂ ಕೋಡ್ ಜಾರಿಗೊಳಿಸುವುದರಿಂದ ಹಿಂದೂಧರ್ಮದಲ್ಲಿರುವ ಅಸಮಾನತೆಗಳೆಲ್ಲಾ ತೊಲಗಿಹೋಗಬಲ್ಲವು ಎಂದೇ ಹೇಳಿಕೊಳ್ಳಲಾಗಿದೆ. ಹೀಗೆಂದಾಗ ಈ ವಿಧೇಯಕದಲ್ಲಿ ಯಾವ ಲೋಪದೋಷಗಳೂ ಇಲ್ಲವೇ? ಅವು ಹಿಂದೂ ಆದರ್ಶಗಳನ್ನು ಕೊಚ್ಚಿಹಾಕುವುದಿಲ್ಲವೇ? ಈ ವಿಧೇಯಕದ ೮೮ ಹಾಗೂ ೮೯ನೆಯ ಉಪನಿಬಂಧನೆಗಳಲ್ಲಿ ಪವಿತ್ರ ಕಾರ್ಯಗಳ ಬಗೆಗೆ ಏನನ್ನೂ ಪ್ರಸ್ತಾವಿಸಲಾಗಿಲ್ಲ. ೮೯ರಲ್ಲಿ ಜಂಟಿ ಹಿಡುವಳಿಯ ಆಸ್ತಿಯ ಮೇಲಿರಬಹುದಾದ ಕರದ ಬಗೆಗೆ ಹೇಳಲಾಗಿದೆ. ಅದನ್ನು ಸಲ್ಲಿಸುವಂತೆಯೂ ತಿಳಿಸಿದ್ದೀರಿ. ಆದರೆ ಪವಿತ್ರ ಕಾರ್ಯವಾದ ಶ್ರಾದ್ಧದ ಬಗೆಗೆ ಏನನ್ನೂ ಹೇಳಲಾಗಿಲ್ಲ. ಈ ಹಿನ್ನೆಲೆಯಲ್ಲಿ ಈ ವಿಧೇಯಕ ಜಾರಿಗೆ ಬಂದು ಶಾಸನವೇ ಆದಲ್ಲಿ ಆಸ್ತಿಯ ಹಕ್ಕಿಗಾಗಿ ಕಲಹವೇ ಉಂಟಾಗುತ್ತದೆ. ಇದರಿಂದಾಗಿ ಮಗ, ಮಗಳೂ ಶ್ರಾದ್ಧ ಹಾಗೂ ಇತರ ದಾನ ಧರ್ಮ ಪವಿತ್ರ ಆಚರಣೆಯನ್ನು ಬದಿಗೊತ್ತಿ ಕೇವಲ ಆಸ್ತಿಯಲ್ಲಿಯ ಭಾಗಕ್ಕಾಗಿ ಹೋರಾಡುತ್ತಾರೆ. ಅಲ್ಲದೆ ಈ ವಿಧೇಯಕದಲ್ಲಿ ಪವಿತ್ರ ಕಾರ್ಯಗಳ ಖರ್ಚು–ವೆಚ್ಚದ ಬಗೆಗೆ ಪ್ರಸ್ತಾಪಿಸಿಯೇ ಇಲ್ಲ.

ಈ ವಿಧೇಯಕದಲ್ಲಿ ಅವಿಭಕ್ತ ಕುಟುಂಬ ಹಾಗೂ ದಾಯಾದಿ ಅಂಶಗಳಲ್ಲಿರಬಹುದಾದ ಅಂತರವನ್ನೇ ಅರಿಯದೇ ಹೋಗಲಾಗಿದೆ. ಹೀಗಾಗಿ ವ್ಯವಹಾರದಲ್ಲಿಯ ಭಾಗಿತ್ವದ ಬಗೆಗೆ ಏನು ಕ್ರಮ ತೆಗೆದುಕೊಳ್ಳಬೇಕು?

ನೀವು ಈ ವಿಧೇಯಕವನ್ನು ಹೊಗಳಿದ್ದೀರಿ! ಆದರೆ ನೀವು ಈ ವಿಧೇಯಕದಲ್ಲಿ ದತ್ತು ಪುತ್ರನ ಬಗೆಗೆ ಏನು ಕ್ರಮ ಕೈಕೊಂಡಿದ್ದೀರಿ? ಉಪನಿಬಂಧನೆ ೫೨ ರಿಂದ ೫೪ರಲ್ಲಿ ಪ್ರತಿಯೋರ್ವ ಹಿಂದೂ ಪುರುಷನು ೧೮ನೇ ವಯಸ್ಸಿಗೆ ಬಂದ ಮೇಲೆ ದತ್ತು ಸ್ವೀಕಾರವನ್ನು ಪತ್ನಿಯ ಸಹಮತದೊಂದಿಗೆ ಮಾಡಬಹುದೆಂದಿದ್ದೀರಿ. ದತ್ತು ಪಡೆದ ಮೇಲೆ ತಂದೆಗೆ ಮಗು ಜನಿಸಿದರೆ ಅದಕ್ಕೆ ಆಸ್ತಿಯಲ್ಲಿ ನೀಡಬೇಕಾದ ಭಾಗವೇನು? ಇದಕ್ಕೆ ನಿಮ್ಮ ವಿಧೇಯಕದಲ್ಲಿ ಏನು ಪರಿಹಾರ ಸೂಚಿಸಿದ್ದೀರಿ? ಆದರೆ ಈ ದಿಶೆಯಲ್ಲಿ ನಮ್ಮ ಸ್ಮೃತಿಕಾರರು ಹಾಗೂ ಪೂರ್ವಜರು ಪರಿಹಾರ ಮಾರ್ಗಗಳನ್ನು ಸೂಚಿಸಿದ್ದಾರೆ.

ದಾಯಭಾಗದಲ್ಲಿ ಅರ್ಧ ಭಾಗ, ಮಿತಾಕ್ಷರದಲ್ಲಿ ಒಂದೂ ಮೂರಾಂಶ, ಬೊಂಬಾಯಿ ಪ್ರಾಂತದಲ್ಲಿ ಒಂದೂ ನಾಲ್ಕಂಶ– ಹೀಗೆ ನೀವೇನಾದರೂ ಮಾಡಿರುವಿರಾ? ಅನಿವಾರ್ಯವಾದ ಪಾಲುದಾರಿಕೆ, ಅವಿಭಕ್ತ ಕುಟುಂಬಕ್ಕೆ ಸಂಬಂಧಿಸಿದಂತೆ ತಾವು ಕೈಕೊಂಡಿರುವ ಕ್ರಮಗಳೇನು? ಈ ಎಲ್ಲಾ ಸಮಸ್ಯೆಗಳಿರುವುದರಿಂದ

ಇದೊಂದು ಕಠಿಣ ಕಾರ್ಯವಾಗಿದೆ.

ಈಗ ಉದ್ಭವಿಸಬಹುದಾದ ಪ್ರಶ್ನೆ ಎಂದರೆ, ಅವಿಭಕ್ತ ಕುಟುಂಬದಲ್ಲಿ ಭಾಗ ದೊರೆಯದಿರುವ ಸಮಯದಲ್ಲಿ ಮಗನ ಹಕ್ಕು ಹಾಗೂ ಕರ್ತವ್ಯಗಳೇನು? ಏಕೆಂದರೆ ಈಗ ಜಾರಿಯಲ್ಲಿರುವ ಪದ್ಧತಿಯಂತೆ, ಮಗನಿಗೆ ತನ್ನ ಹುಟ್ಟಿನಿಂದಾಗಿ ಕುಟುಂಬದ ಆಸ್ತಿಯಲ್ಲಿ ಹಕ್ಕು ಇದ್ದುದರಿಂದ, ಅದರ ಆಧಾರದ ಮೇಲೆ ಅವನು ತನ್ನ ಜೀವನಾಧಾರ, ಶಿಕ್ಷಣ ಮುಂತಾದ ವಿಷಯಗಳಿಗೆ ಕುರಿತಂತೆ ಅವಲಂಬಿಸಬಹುದಾಗಿತ್ತು. ಆದರೆ ನೀವು ಹೇಳಬಹುದಾದ ಪರಿಹಾರವೆಂದರೆ ೧೨೬ – ೧೨೮ರಲ್ಲಿ ಪತ್ನಿಯ ಜೀವನಾಧಾರಕ್ಕೆ ಪತಿ ಪಡೆಯಬಹುದಾದ ಸೌಲಭ್ಯಗಳು, ಪತ್ನಿ ತನ್ನ ಅನಾರೋಗ್ಯ ಹಾಗೂ ಕುಷ್ಟರೋಗದಿಂದ ಪೀಡಿತಳಾದಾಗ ಪತಿಯಿಂದ ಪಡೆಯಬೇಕಾದ ವಿಶೇಷ ಸೌಲಭ್ಯ. ಇದು ಕೇವಲ ವ್ಯಾಜ್ಯ ಹಾಗೂ ನ್ಯಾಯವಾದಿಗಳಿಗೆ ಉತ್ತಮ ಅವಕಾಶವನ್ನು ಮಾತ್ರ ನೀಡುತ್ತದೆ. ಮುಂದುವರಿದು ೧೨೮ರಲ್ಲಿ ಮಕ್ಕಳ ಹಾಗೂ ಮುದುಕರ ಪಾಲನೆ ಪೋಷಣೆ ಅಂಶಗಳನ್ನು ಹೇಳಿದ್ದೀರಿ. ಆದರೆ ಈ ಎರಡೂ ಉಪನಿಬಂಧನೆಗಳ ವಿಷಯವನ್ನು ಜಾರಿಗೊಳಿಸಬಹುದಾದ ಹಕ್ಕುಗಳ ಬಗೆಗೆ ವಿಧೇಯಕ ಮೌನವಾಗಿದೆ. ಹೀಗಾಗಿ ನಾನು ಅನಿವಾರ್ಯವಾಗಿ ಹೇಳಬೇಕೆಂದ ವಿಷಯವೇನೆಂದರೆ, ಈಗ ಜಾರಿಯಲ್ಲಿರುವ ಕಾನೂನಿಗಿಂತ, ಅಹಿತಕರವಾದ ಪರಿಸ್ಥಿತಿಗೆ ಆಸ್ಪದ ನೀಡುತ್ತಿರುವಿರಿ. ಏಕೆಂದರೆ ಜಾರಿಯಲ್ಲಿ ಹಿಂದೂ ಲಾದಲ್ಲಿ ಕುಟುಂಬದ ಆಸ್ತಿ ರಕ್ಷಣೆಗೆ ಕರ್ತವ್ಯ ವ್ಯವಸ್ಥೆ ಇದೆ. ಅವನು ತನ್ನ ಕರ್ತವ್ಯ ಕಡೆಗಣಿಸಿದರೆ, ನ್ಯಾಯಾಲಯವು ರಕ್ಷಣೆ ನೀಡಬಹುದಾಗಿದೆ. ಅಲ್ಲದೆ ಆಸ್ತಿಯು ಹಂಚಿಕೆಗೆ ಅವಕಾಶವಿದೆ. ಹೀಗಾಗಿ ಕಾನೂನುಬದ್ಧ ಕ್ರಮಕ್ಕೆ ಆಸ್ಪದಗಳಿವೆ. ಈ ಬಗೆಯ ಮಹತ್ವಪೂರ್ಣ ಅಂಶವನ್ನೇ ಅಂತ್ಯಗೊಳಿಸುತ್ತಿದ್ದೀರಿ.

ಅದರಂತೆಯೇ ತಾವು ೧೨೬ರಲ್ಲಿ ಪತ್ನಿಯ ಹಾಗೂ ೧೨೮ರಲ್ಲಿ ಮಕ್ಕಳ ಹಾಗೂ ಮುದುಕರ ಪೋಷಣೆಗಾಗಿ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳುತ್ತೀರಿ. ಆದರೆ ಪೋಷಕನು ದರಿದ್ರದಾಮೋದರನಾಗಿದ್ದರೆ ಅವನು ಹೇಗೆ ಈ ಕಾರ್ಯವನ್ನು ಪೂರೈಸಬಲ್ಲ? ಆದುದರಿಂದ ಈ ಮಾದರಿಯ ಕಪಟ ಹಕ್ಕುಗಳ ಭರವಸೆಯನ್ನು ನೀಡುವ ಈ ಢೋಂಗಿ ವ್ಯವಹಾರ ಮಾಡದೆ ಇರಕೂಡದೇ? ಏಕೆಂದರೆ ಈಗ ಜಾರಿಯಲ್ಲಿರುವ ಹಿಂದೂ ಲಾದಲ್ಲಿ ಕನಿಷ್ಠ ನ್ಯಾಯಾಲಯಕ್ಕೆ ಮೊರೆಹೋಗುವ ಅವಕಾಶಗಳಾದರೂ ಇವೆ. ಅದನ್ನು ಹಾಳು ಮಾಡಬೇಡಿರಿ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಅವಳ ಗಂಡ ಧನವಿಲ್ಲದ ದರಿದ್ರನಾಗಿದ್ದರೂ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ನಾನು ಅವಿಭಕ್ತ ಕುಟುಂಬದ ಆಸ್ತಿಯ ಬಗೆಗೆ ಮಾತನಾಡುತ್ತಿರುವೆ. ತಾವು ಬೇರೆ ಮಸೂದೆಯ ದ್ವಾರಾ ಈ ತುಂಡು ಆಸ್ತಿಯನ್ನೇ ಸಮತಾ ಅಥವಾ ಸಮಾಜವಾದ ಸಿದ್ಧಾಂತಗಳಂತೆ ರಾಷ್ಟ್ರೀಕರಣಗೊಳಿಸಿದರೆ ಆ ಮಾತು ಬೇರೆ. ಆದರೆ, ಅವಿಭಕ್ತ ಕುಟುಂಬ ಸಂಘಟನೆಯನ್ನು ಹಾಗೆಯೇ ಇರಿಸಿ ಅಪ್ರಾಪ್ತ ವಯಸ್ಕರಿಗೆ, ವಿಧವೆಯರ ಹಾಗೂ ಸ್ತ್ರೀಯರ ಅಮೂಲ್ಯ ಹಕ್ಕುಗಳನ್ನು ವಂಚನೆ ಮಾಡಿದ್ದೀರಿ. ಸಮಾನತೆಯನ್ನು ಕೇವಲ ಕಾಗದದಲ್ಲಿ ಮಾತ್ರ ನೀಡಿದ್ದು ವಂಚನೆ ಮಾಡಿದ್ದೀರಿ. ಆದುದರಿಂದ ಎಲ್ಲ ವಿಧಗಳಲ್ಲಿಯೂ ಈ ವಿಧೇಯಕವನ್ನು ವಿರೋಧಿಸಲಾಗಿದೆ. ಅಲ್ಲದೆ ಪರಂಪರಾನುಗತವಾಗಿ ಜಾರಿಯಲ್ಲಿದ್ದ ಹಿಂದೂ ಸಂಪ್ರದಾಯಗಳಿಗೆ ವಿರೋಧವಾದ ಈ ವಿಧೇಯಕವು ಹಿಂದೂ ಸಮಾಜವನ್ನು ಸುಧಾರಿಸುವ ಬದಲಾಗಿ ಸಂದೇಹ ಹಾಗೂ ಸಂಶಯಗಳಿಗೆ ಆಸ್ಪದ ನೀಡಿದೆ. ಇದನ್ನು ಸುಧಾರಿಸಲಾಗದೇ ಹೋಗಬಹುದು.

ಸರ್, ನಾನು ನನ್ನ ಹೇಳಿಕೆಯನ್ನು ಮುಕ್ತಾಯಗೊಳಿಸುವ ಮುನ್ನ ಏಪ್ರಿಲ್ ೨ ರಂದು ಹಾಗೂ

ಇಂದು ಹೇಳಿರುವ ಹೇಳಿಕೆಗಳ ಸಾರಾಂಶವನ್ನು ಹೇಳುವೆ. ನನ್ನ ಹೇಳಿಕೆಯಂತೆ ಈ ವಿಧೇಯಕದ ಆವಶ್ಯಕತೆಯೇ ಇಲ್ಲ. ಅಲ್ಲದೆ ಈ ಕ್ರೋಡೀಕರಣವು ಅನುಚಿತ ಹಾಗೂ ಅನಾವಶ್ಯಕ. ಈ ವಿಧೇಯಕ ಈ ದೇಶದ ನ್ಯಾಯಾಂಗ ಅಭಿಪ್ರಾಯಕ್ಕೆ ವಿರೋಧವಾಗಿದೆ. ಅಧಿಕಾರದಲ್ಲಿದ್ದ ಶಾಸಕಾಂಗಗಳಿಗೂ ಬೇಕಾಗಿರದೇ ಹೋದಾಗ ಹಸ್ತಕ್ಷೇಪಕ್ಕೆ ಆಸ್ಪದ ನೀಡುವ ಈ ವಿಧೇಯಕ ಬೇಕಾಗಿಲ್ಲ. ಇದಕ್ಕೆ ಸಾರ್ವಜನಿಕರಿಂದ ಯಾವ ಕೋರಿಕೆಯೂ ಇಲ್ಲ. ರಾವ್ ಸಮಿತಿಯ ಅಭಿಪ್ರಾಯದಲ್ಲಿಯೂ ಈ ಮಸೂದೆಗೆ ಜನಬೆಂಬಲ ದೊರೆತಿಲ್ಲ. ಈ ವಿಧೇಯಕವು ರಾವ್ ಸಮಿತಿಯ ಸೂಚನೆಗಳನ್ನು ತಳ್ಳಿಹಾಕಿ ಕೇವಲ ಆಯ್ಕೆ ಸಮಿತಿಯ ಕೈಗೊಂಬೆಯಾಗಿದೆ.

ಈ ವಿಧೇಯಕದ ೨೧ನೆಯ ಉಪನಿಬಂಧನೆಯಂತೆ, ವಿವಾಹವಿಚ್ಛೇದನ, ಪವಿತ್ರ ವಿವಾಹವನ್ನು ನಾಗರಿಕ ವಿವಾಹಕ್ಕೆ ಗುರಿಪಡಿಸುವ ಕ್ರಮಗಳನ್ನು ಎಲ್ಲೆಡೆಯಿಂದಲೂ ವಿರೋಧಿಸಲಾಗಿದೆ. ಅಲ್ಲದೆ ಅವಿಭಕ್ತಕುಟುಂಬವನ್ನು ಒಂದೇ ಏಟಿನಿಂದ ಮುಕ್ತಾಯಗೊಳಿಸುವುದನ್ನು ವಿರೋಧಿಸಲಾಗಿದೆ. ರಾವ್ ಸಮಿತಿಯ ಹೇಳಿಕೆಯನ್ನು ತಿರುಚಿರುವುದನ್ನು ವಿರೋಧಿಸಿದೆ. ಈಗಲೂ ದೇಶದ ವಿವಿಧ ಭಾಗಗಳಿಂದ ಪ್ರತಿಭಟನೆಗಳು ಅವ್ಯಾಹತವಾಗಿ ಬರುತ್ತಲೇ ಇವೆ. ಈ ವಿಧೇಯಕವು ವಿಧ್ವಂಸಕಕಾರಿಯಾಗಿದೆ. ಆದುದರಿಂದ ಹಿಂದೂ ಕಾನೂನಿನ ಕ್ರೋಡೀಕರಣದ ಆವಶ್ಯಕತೆಯೂ ಇಲ್ಲ ಹಾಗೂ ಅನಿವಾರ್ಯವೂ ಅಲ್ಲ.

ನಾನು ಈ ಮಸೂದೆಯಲ್ಲಿ ವಿವಾಹದ ಬಗೆಗೆ ಹೇಳಿರುವೆ. ವಿವಾಹದ ಹೆಸರಿಗೆ ಮಸಿ ಬಳಿಯುವ ಕ್ರಮವಾಗಿದೆ. ಈ ವಿಧೇಯಕವು ಹಿಂದೂ ವಿವಾಹದ ಹೆಸರಿನಲ್ಲಿ ಕ್ರಿಶ್ಚಿಯನ್ ಹಾಗೂ ಮುಸ್ಲಿಂ ವಿವಾಹಗಳ ಕಾನೂನುಗಳನ್ನು ಜಾರಿಗೊಳಿಸುತ್ತದೆ. ಇದು ನಾಚಿಕೆಗೇಡಿತನ. ಇದನ್ನು ಸಹಿಸಲಾಗದು.

**ಶ್ರೀ ಎಸ್. ನಾಗಪ್ಪ :** ಈ ವಿಧೇಯಕವು ಪವಿತ್ರ ವಿವಾಹ ವಿಧಾನಗಳಿಗೆ ಅಡಚಣೆ ಮಾಡಿಲ್ಲ.

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ನಾನು ನಿಮ್ಮ ಹೇಳಿಕೆಯನ್ನು ಈಗಾಗಲೇ ವಿವರಿಸಿರುವೆ. ಈ ಬಗ್ಗೆ ಸದನದಲ್ಲಿ ಹಾಗೂ ಸದನದ ಹೊರಗೆ ಅನೇಕ ಬಾರಿ ಚರ್ಚೆ ಮಾಡಲಾಗಿದೆ. ಹೀಗಾಗಿ ಅದರ ಬಗ್ಗೆ ಮಾತನಾಡುವುದು ಪುನರುಕ್ತಿಯಾಗುತ್ತದೆ. ಒಂದು ವೇಳೆ ನೀವು ಭಾವಿಸಿದಂತೆಯೇ ಆದರೆ, ಪ್ರತಿಯೊಂದನ್ನು ರದ್ದುಗೊಳಿಸಿ, ಒಂದು ಸಾರ್ವತ್ರಿಕ ಉಪನಿಬಂಧನೆ ರಚಿಸಿ, ಅದರಲ್ಲಿ ಯಾರು ಯಾರನ್ನಾದರೂ ಮದುವೆಯಾಗಬಹುದು ಎಂದೇ ಸೂಚಿಸಿ. ಅದು ಎಲ್ಲಾ ವಿಷಯಗಳಿಗೂ ಪರಿಹಾರ ಸೂಚಿಸಬಹುದು. ಅದನ್ನು ಕೈಬಿಟ್ಟು ಕೇವಲ ಪವಿತ್ರ ವಿವಾಹದ ಬಗೆಗೆ ಏಕೆ ಪ್ರಲಾಪನೆ ಮಾಡುತ್ತಿರುವಿರಿ: ನೀವು ಈ ವಿಧೇಯಕದಲ್ಲಿ ಪವಿತ್ರ ವಿವಾಹದ ಬಗೆಗೆ ಕೇವಲ ಅಣಕ ಮಾಡಿದ್ದೀರಿ; ಅದು ಕಾಲಾಂತರದಿಂದ ಜಾರಿಯಲ್ಲಿರುವ ಹಿಂದೂ ವಿವಾಹ ಪದ್ಧತಿಗೆ ಅವಮಾನಕರವಾಗಿದೆ. ಅದೊಂದು ಕುತಂತ್ರ. ಅದರಿಂದ ನೀವು ಜನತೆಗೆ ಮೋಸ ಮಾಡಿದ್ದೀರಿ. ಅದೊಂದು ಕೃತ್ರಿಮ ಕ್ರಮ. ಏಕೆಂದರೆ ನೀವು ಜನತೆಗೆ ಹಿಂದಿನ ಪದ್ಧತಿಯನ್ನೇ ಅನುಸರಿಸಿದ್ದೇವೆ ಎಂಬ ಭ್ರಮೆ ಹುಟ್ಟಿಸಿದ್ದೀರಿ. ಆದರೆ ಯಾವ ಸ್ವಾಭಿಮಾನಿ ಹಿಂದೂ ಅದನ್ನು ಸಹಿಸಲಾರ.

ಆದುದರಿಂದ ೫ ರಿಂದ ೫೨ರ ಉಪನಿಬಂಧನೆಗಳನ್ನು ಕೈಬಿಡಿರಿ; ಏಕೆಂದರೆ ಅವೆಲ್ಲವೂ ಹಿಂದೂ ಆದರ್ಶಗಳಿಗೆ, ಹಿಂದೂ ಸಂಸ್ಕೃತಿಗೆ, ಹಿಂದೂ ನಾಗರಿಕತೆಗೆ ವಿರೋಧವಾಗಿವೆ. ವಿವಾಹ ವಿಚಾರಗಳ ಬಗೆಗೆ ಇದು ನನ್ನ ಹೇಳಿಕೆ. ವಿವಾಹ ವಿಚ್ಛೇದನದ ಬಗೆಗೆ ನಾನು ಈಗಾಗಲೇ ವಿವರಿಸಿರುವೆ. ಇನ್ನು ದತ್ತು ಸ್ವೀಕರಿಸುವ ಬಗೆಗೆ ಮತ್ತೊಂದು ಬಾರಿ ನಾನು ಹೇಳಬಯಸುವುದೇನೆಂದರೆ ದತ್ತು ಸ್ವೀಕಾರ ಹಿಂದೂ ಲಾದ ಒಂದು ಅಂಶ. ಅದನ್ನು ತಾವು ಇಂದಿನ ಆಧುನಿಕ ಯುಗಕ್ಕೆ ಅಪ್ರಸ್ತುತ ಎಂದು ಭಾವಿಸಿದ್ದರೆ,

ಅದನ್ನು ಸಂಪೂರ್ಣವಾಗಿ ತೊಡೆದುಹಾಕಿ ಈ ಬಗೆಯ ಅಸಮಂಜಸ ರೀತಿಯಲ್ಲಿ ಇಡುವುದು ಸೂಕ್ತವಲ್ಲ. ವಿಧೇಯಕದಲ್ಲಿ ಸೂಚಿಸಿದಂತೆ ಪ್ರತಿಯೋರ್ವ ವ್ಯಕ್ತಿ ಪ್ರತಿಯೋರ್ವ ಹಿಂದೂ ಮಗನಿಗೆಂದೇ ದತ್ತು ಸ್ವೀಕರಿಸಬಹುದು. ಅಂದರೆ ಗೋತ್ರದ ಬಗೆಗಾಗಲೀ ಜಾತಿಯ ಬಗೆಗಾಗಲೀ ಸ್ಥಾನದ ಬಗೆಗಾಗಲೀ ಯಾವ ನಿರ್ಬಂಧಗಳೂ ಇಲ್ಲ. ಎಲ್ಲವೂ ದತ್ತು ಪಡೆಯುವವನ ಇಚ್ಛೆಗೆ ಸೇರಿದ್ದು ಎಂದು ಸೂಚಿಸಿದ್ದೀರಿ. ಆದರೆ ನಡೆದು ಬಂದ ಸಂಪ್ರದಾಯ ಹಾಗೂ ರೀತಿರಿವಾಜುಗಳಂತೆ ಸಗೋತ್ರದವರನ್ನೇ ದತ್ತು ಸ್ವೀಕರಿಸಬೇಕೆಂದಿರುವಾಗ ಯಾರನ್ನೋ ದತ್ತು ಸ್ವೀಕರಿಸಿದಲ್ಲಿ ಕುಟುಂಬದಲ್ಲಿ ಅದು ಕಲಹಕ್ಕೆ ನಾಂದಿಯಾಗುತ್ತದೆ. ಈ ಎಲ್ಲಾ ಪದ್ಧತಿಗಳನ್ನು ಕೈಬಿಟ್ಟು ಅನಾಹುತಕಾರಿ ಕ್ರಮಕ್ಕೆ ಕೈಹಾಕಿರುವಿರಿ. ಇದನ್ನು ನೆನಸಿಕೊಂಡರೆ ಭಯದಿಂದ ನಡುಕ ಉಂಟಾಗುತ್ತದೆ. ಆದುದರಿಂದ ದತ್ತಕ ವಿಧಾನವನ್ನೇ ಕೈಬಿಡುವುದು ಉತ್ತಮ. ಈ ಮಸೂದೆಯನ್ನು ಮಂಡಿಸಿದವರಿಗೆ, ಹಿಂದೂ ಸಂಪ್ರದಾಯಗಳ ಬಗೆಗೆ ಅಸಡ್ಡೆಯ ಮನೋಭಾವನೆ ಇರುವುದರಿಂದಲೇ ಈ ವಿಧವಾದ ವಿಧೇಯಕವನ್ನು ತಂದಿದ್ದಾರೆ. ಆದರೆ ಹಿಂದೂ ಶಾಸನದಲ್ಲಿ ದತ್ತು ಪಡೆಯುವ ಏಕೈಕ ಉದ್ದೇಶವೆಂದರೆ, ಮರಣಾನಂತರದ ಶಾಸ್ತ್ರೋಕ್ತ ವಿಧಿ ವಿಧಾನಗಳನ್ನು ಮಾಡಲೆಂದೇ ಹೊರತು ಯಾರನ್ನೋ ದತ್ತು ತೆಗೆದುಕೊಳ್ಳುವುದಲ್ಲ. ಇದು ಮೂಲಕ್ಕೆ ಮಾರಕವಾಗಿದೆ.

ದಯಮಾಡಿ ದತ್ತಕ ವಿಚಾರವನ್ನೇ ಕೈಬಿಡಿರಿ. ಅನೇಕ ಸಮಾಜಗಳಲ್ಲಿ ಈ ವ್ಯವಸ್ಥೆ ಇಲ್ಲ. ಹಾಗಾಗಿ ಅದನ್ನು ಮುಂದುವರಿಸಲೇಬೇಕೆಂಬ ಕಡ್ಡಾಯವೇನೂ ಇಲ್ಲ. ಆದರೆ ಅದನ್ನು ಅಣಕವಾಡದಿರಿ.

ಸರ್, ಈ ವಿಧೇಯಕವೇ ಒಂದು ಕಪ್ಪು ಕಲೆಯಂತಿದೆ. ಅದು ಹಿಂದೂ ಭಾವನೆಗಳಿಗೆ ವಿರೋಧವಾಗಿರುವುದರಿಂದ, ಯಾವ ಹಿಂದೂ ಅದನ್ನು ಒಪ್ಪಿಕೊಳ್ಳಲಾರ. ಇದು ಪ್ರಚೋದನಕಾರಿಯಾಗಿದೆ, ಅದು ವಿದೇಶೀಯಾದ ಅರೇಬಿಯ ಹಾಗು ಜೆರೂಸಲಂ ಜಲಮಾರ್ಗಗಳಿಂದ ಭಾರತದ ಗಡಿಯಲ್ಲಿ ಬಂದಿದೆ. ಇಂತಹ ಹಿಂದೂ ಕೋಡ್ ಅನಿವಾರ್ಯವೇ? ಅದರ ಬದಲಾಗಿ ಒಂದೇ ಪೆಟ್ಟಿನಲ್ಲಿ ನೀವು ೧೯೨೫ರ ಭಾರತೀಯ ವಾರಸುದಾರಿ ಕಾನೂನನ್ನೇ ಏಕೆ ವಿಸ್ತರಿಸಬಾರದು? ಅದೊಂದು ಸುಲಭ ಹಾಗೂ ಸರಳ ವಿಧಾನ. ನಮಗೂ ಸರಳ ವಿಧಾನವೇ ಸಮ್ಮತ. ಅದೊಂದು ಸುಲಭ ವಿಧಾನ ಹಿಂದೂ ಸಮಾಜಕ್ಕೆ.

ನಾನು ಮುಕ್ತಾಯ ಮಾಡುವ ಮುನ್ನ ಎಚ್ಚರಿಕೆಯನ್ನು ನೀಡುವುದು ನನ್ನ ಕರ್ತವ್ಯವೆಂದೇ ಭಾವಿಸಿರುವೆ. ಆದುದರಿಂದ ಹಿಂದೂ ಲಾ ಹೊರಗಡೆಯಿಂದ ಬಂದಿಲ್ಲ. ಯಾವ ಸಾರ್ವಭೌಮನ ಆಜ್ಞೆಯಿಂದ ಹೊರಹೊಮ್ಮಿಲ್ಲ, ಅಥವಾ ಆಕಾಶದಿಂದ ಉದುರಿ ಬಿದ್ದಿಲ್ಲ ಅಥವಾ ಶಾಸಕಾಂಗ ರಚಿಸಿಲ್ಲ. ಅದರ ವಿಶಿಷ್ಟ ಹಾಗೂ ವಿಶೇಷ ಮಹತ್ವ ಎಂದರೆ ಅದು ಅನೇಕ ಶತಮಾನಗಳಿಂದ ವಿಕಾಸಗೊಳ್ಳುತ್ತಲೇ ಬಂದಿರುವುದು. ಸ್ಮೃತಿಗಳು ಹಾಗೂ ನಿಬಂಧಕಗಳು ಈ ಕಾನೂನನ್ನು ರಚಿಸಿರದೆ ಕೇವಲ ವಿವರಣೆಗಳನ್ನು ಒದಗಿಸಿವೆ. ಹೀಗಾಗಿ ಹಿಂದೂ ಸಮಾಜದ ಹಿಂದಿರುವ ಚೇತನವೆಂದರೆ ಅದರ ಸಂಪ್ರದಾಯಗಳೇ ಹೊರತು ಶಾಸನಗಳಲ್ಲ. ಇದೊಂದು ಸ್ವಯಂಸ್ಫೂರ್ತಿಯಿಂದ ಹೊರಹೊಮ್ಮಿದ ಸಂಪ್ರದಾಯಗಳ ಸಮೂಹ. ಹೀಗಾಗಿ ಇದು ಯಾವ ಶಾಸಕಾಂಗದಿಂದಾಗಲೀ ಅಥವಾ ಕಾನೂನುಗಳಿಂದಾಗಲೀ ವಿಕಾಸ ಹೊಂದಿರದಿರುವುದೇ ಇದರ ಸರ್ವಶ್ರೇಷ್ಠ ಲಕ್ಷಣವಾಗಿದೆ. ಇದೊಂದು ಸರ್ವ ಸುಂದರವಾದ ಹಿಂದೂ ಲಾ. ಅದನ್ನು ಈಗ ನೀವು ಧ್ವಂಸ ಮಾಡಲು ಹೊರಟಿದ್ದೀರಿ. ನಾನು ಸಾಮಾನ್ಯ ಸದಸ್ಯನಾಗಿ ಎಚ್ಚರಿಸುವೆ. ದಯಮಾಡಿ ಅದನ್ನು ಹಾಳು ಮಾಡದಿರಿ. ಏಕೆಂದರೆ ನಿಜವಾದ ಭಾರತವೆಂದರೆ ಹಳ್ಳಿಗಳೇ ಹೊರತು ಕೆಲವೇ ಪ್ರಮುಖ ನಗರಗಳೆಂದು ಪರಿಗಣಿಸದಿರಿ. ದಯಮಾಡಿ ದುರಂತಗಳಿಗೆ ಆಹ್ವಾನ ನೀಡದಿರಿ.

**ಡಾ॥ ಮೋನೊ ಮೋಹನದಾಸ್** (ಪ. ಬಂಗಾಲ) : ಅವರು ಸದನವನ್ನು ಆಪಾದಿಸುತ್ತಿದ್ದಾರೆ. ಅದನ್ನೇ ಅವರು ಪುನರುಚ್ಚರಿಸುತ್ತಿದ್ದಾರೆಯಲ್ಲವೇ?

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ನಾನು ಸದನದ ಸದಸ್ಯನ ಹೆಸರನ್ನು ಹೇಳಿಲ್ಲ. ನನ್ನ ಮಾನ್ಯ ಸ್ನೇಹಿತರು ವಿರೋಧಿಗಳ ಹೇಳಿಕೆಯನ್ನು ಶಾಂತ ರೀತಿಯಿಂದ ಕೇಳುವುದನ್ನು ಕಲಿಯಲಿ. ನನ್ನ ಹೇಳಿಕೆಯ ಸಾರಾಂಶವೆಂದರೆ ಹಿಂದೂ ಸಮಾಜದ ಸ್ವಯಂ ಸ್ಫೂರ್ತ ವಿಕಾಸಕ್ಕೆ ಆಡಚಣೆ ಉಂಟುಮಾಡದಿರಿ. ನೀವು ಈ ವಿಧೇಯಕದಿಂದ ಸುಂದರವಾಗಿರುವ ಹಿಂದೂ ಸಮಾಜದ ರಚನೆಗೆ ಆತಂಕಕಾರಿ ನೆಲ ನಿರ್ಮಿಸಲು ಹೊರಟಿರುವಿರಿ. ಈ ವಿಧೇಯಕ ಮಾರಕ ಹಾಗೂ ಧ್ವಂಸಕಾರಿಯಾಗಿದೆ. ಅದನ್ನು ಊಹಿಸುವ ಶಕ್ತಿಯೇ ನಿಮ್ಮಲ್ಲಿಲ್ಲ. ಮಾನ್ಯ ಪ್ರಧಾನಿಯವರು ಹೇಳಿದಂತೆ ನಾವೆಲ್ಲರೂ ಕೂಡಿ ಯಾವುದೇ ಒಪ್ಪಂದದ ಮೂಲಕ ನಮ್ಮಲ್ಲಿಯ ವಾದವಿವಾದಗಳನ್ನು ಬದಗಿರಿಸಿ ಏನಾದರೊಂದು ರಾಷ್ಟ್ರೀ ಸೂತ್ರಕ್ಕೆ ಬರುವುದು ಉತ್ತಮವೆಂದು ಅವರೇ ಸೂಚಿಸಿದ್ದಾರೆ. ಅದಕ್ಕೆ ನನ್ನ ಸಹಮತವಿದೆ. ಆದರೆ ಈ ವಿಧೇಯಕವು ಹಿಂದೂ ಮನೋಭಾವನೆಗಳಿಗೆ ವಿರೋಧವಾಗಿದೆ. ಆದುದರಿಂದ ಯಾವ ಹಿಂದೂ ಇದನ್ನು ಪ್ರತಿಭಟಿಸದೇ ಇರಲಾರ ಎಂದೇ ಹೇಳುವೆ. ಸರಕಾರಕ್ಕೆ ಉಳಿದಿರುವ ಸುರಕ್ಷಿತ ಮಾರ್ಗವೆಂದರೆ ಈ ವಿಧೇಯಕವನ್ನು ಸದ್ಯ ತಡೆಹಿಡಿದು, ಮುಂದೆ ಚುನಾವಣೆಯ ಮುಖಾಂತರ ಸಂಘಟಿಸಲಾದ ಸದನದ ಮುಂದೆ ಮಂಡಿಸಬೇಕು. ಸದನದ ಅನುಮತಿಯಂತೆ ನಡೆದುಕೊಳ್ಳುವುದೇ ಹಿತಕರ. ಈ ಸದನ ಇಂತಹ ಮಹತ್ವದ ವಿಷಯವನ್ನು ಕೈಗೆತ್ತಿಕೊಳ್ಳದಿರುವುದೇ ಸೂಕ್ತ. ಏಕೆಂದರೆ ಹಿಂದೂ ಸಮಾಜಕ್ಕೆ ಇದೊಂದು ಅತಿ ಮಹತ್ವಪೂರ್ಣ ವಿಷಯ.

ಈ ಹೇಳಿಕೆಯೊಂದಿಗೆ, ನಾನು ಸ್ಥಾನದಲ್ಲಿ ಕುಳಿತುಕೊಳ್ಳುವೆ.

**ಶ್ರೀ ಲೋಕನಾಥ ಮಿಶ್ರ** (ಒರಿಸ್ಸಾ,ಸಾ) : ಅಪ್ಪಣೆಯ ಮೇರೆಗೆ. ನಾನು ಈ ವಿಧೇಯಕದ ಚರ್ಚೆಯನ್ನು ವಿರೋಧಿಸದೇ ಹೋದರೂ, ಈ ವಿಧೇಯಕದ ಚರ್ಚೆಯು ನಾವು ರಚಿಸಿದ ಸಂವಿಧಾನ ಇನ್ನೂ ಜಾರಿಗೆ ಬಾರದೇ ಹೋದರೂ, ಅದರನ್ವಯವಾಗಿ ಈ ಚರ್ಚೆ ಸೂಕ್ತವಾಗಲಾರದು. ಆದರೆ ಒಂದು ವಿಷಯ ನಾವು ಅರಿಯಲೇಬೇಕು. ಅದೇನೆಂದರೆ ಸಂವಿಧಾನ ಜಾರಿಗೆ ಬಾರದೇ ಹೋದರೂ, ನಾವು ಈ ವಿಧೇಯಕವನ್ನು ಈ ಸದನದಲ್ಲಿ ಸ್ವೀಕರಿಸುವಂತಿಲ್ಲ. ಏಕೆಂದರೆ ಈ ವಿಧೇಯಕ ಸ್ವೀಕಾರದ ಹೊತ್ತಿಗೆ ಸಂವಿಧಾನ ಜಾರಿಯಲ್ಲಿ ಬರಬಹುದು, ಅಲ್ಲದೆ, ಆಗ ಇದು ಸಂವಿಧಾನಕ್ಕೆ ವಿರೋಧವಾದ ಕ್ರಮವಾಗಲೂ ಬಹುದು. ತಾವು ಅನುಮತಿ ನೀಡಿದರೆ ಈ ವಿಷಯವನ್ನು ವಿವರಿಸುವೆ.

**ಉಪಾಧ್ಯಕ್ಷರು :** ಈ ವಿಷಯವನ್ನು ನಾನು ಈಗಾಗಲೇ ಸಾಕಷ್ಟು ಬಾರಿ ಕೇಳಿರುವೆ. ನೂತನ ಸಂವಿಧಾನವನ್ನು ಇನ್ನೂ ಜಾರಿಗೊಳಿಸಿಲ್ಲ. ಹೀಗಾಗಿ ಈ ವಿಧೇಯಕವು ಅದಕ್ಕೆ ಪರಿಪೂರಕವೇ ಎಂಬ ಸಂಗತಿಯ ಬಗೆಗೆ ನಾನು ಯಾವುದೇ ನಿರ್ಣಯ ನೀಡಲಾರೆ. ಸದ್ಯದ ಸಂವಿಧಾನದಂತೆ ಈ ವಿಧೇಯಕವನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಯಾವ ಆತಂಕವಿಲ್ಲ.

**ಟಿ.ಟಿ. ಕೃಷ್ಣಮಾಚಾರಿ** (ಮದ್ರಾಸ್, ಸಾ.) : ಈ ಪ್ರಮುಖವಾದ ನಿಲುವಳಿಯ ಬಗೆಗೆ ಅನೇಕರು ಮಾತನಾಡಬಯಸುತ್ತಾರೆ. ಅಲ್ಲದೆ ಇದರಲ್ಲಿ ಮಹತ್ವವಾದ ವಿಷಯ ಅಡಕವಾಗಿರುವುದರಿಂದ, ಪೀಠವು ಈ ವಿಷಯದ ಬಗೆಗೆ ಸೂಕ್ತ ಸಮಯವನ್ನು ನಿರ್ಣಯಿಸುವಂತೆ ಸೂಚಿಸುವೆ.

**ಹಲವರು :** ಬೇಡ ಬೇಡ.

**ಹಲವರು** : ಸರಿ ಸರಿ.

**ಉಪಾಧ್ಯಕ್ಷರು :** ಸದ್ದು, ಸದ್ದು.

**ಶ್ರೀ ಎಂ. ತಿರುಮಲರಾವ್** (ಮದ್ರಾಸ್, ಸಾ.) : ಈ ವಿಷಯವನ್ನು ಸಿಧ್ವಾ ಅವರು ಪ್ರಸ್ತಾಪಿಸಿದ್ದು ಅದನ್ನು ಪರಿಹರಿಸಿದ್ದೀರಿ.

**ಉಪಾಧ್ಯಕ್ಷರು :** ಸಿಧ್ವಾ ಅವರು ಬೇರೆ ವಿಷಯವನ್ನು ಪ್ರಸ್ತಾಪಿಸಿದ್ದರು. ಅವರು ನಾಳೆಯ ದಿನದಂದೂ ಸದನವು ಈ ವಿಷಯವನ್ನೇ ಚರ್ಚಿಸುವುದೇ ಆಗಿದ್ದಲ್ಲಿ ಅದಕ್ಕೆ ಸಮಯವನ್ನು ನಿಗದಿಪಡಿಸಲಾಗಿದೆಯೇ? ಇದೊಂದು ಅಧಿಕಾರ ವರ್ಗದ ವಿಧೇಯಕವಾದುದರಿಂದ ಸರಕಾರದವರು ಸಮಯ ನಿರ್ಣಯಿಸಬೇಕು ಎಂದೇ ನಾನು ಅವರಿಗೆ ಸೂಚಿಸಿದೆ. ಸದನದ ಅಧ್ಯಕ್ಷರೇ ಚರ್ಚೆಯ ಪೂರ್ಣತೆಯ ಬಗೆಗೆ ನಿರ್ಣಯಿಸಬೇಕು. ಈ ವಿಧೇಯಕಕ್ಕೆ ಸಂಬಂಧಿಸಿದಂತೆ ಯಾವ ಸಮಯಾವಕಾಶವನ್ನೂ ನಿರ್ಬಂಧಿಸುವಂತಿಲ್ಲ (ಹಿಯರ್ ಹಿಯರ್).

ಮಾನ್ಯ ಸದಸ್ಯರು ದಯಮಾಡಿ ಗಮನಿಸಿ : ಈ ವಿಧೇಯಕದ ಸಾಮಾನ್ಯ ಚರ್ಚೆ ೨೪ ಫೆಬ್ರವರಿ ೧೯೪೯ ರಂದು ಆರಂಭವಾಗಿದೆ. ಅದು ೨೫, ೨೬, ೨೮ ಹಾಗೂ ಮಾರ್ಚ್ ೧ ರಂದು ಮತ್ತು ಏಪ್ರಿಲ್ ೧ ಹಾಗೂ ೨ ರಂದು ಮುಂದುವರಿಯಿತು. ಓರ್ವ ಸದಸ್ಯರು ೬ ಗಂಟೆ ೮ ನಿಮಿಷ ತೆಗೆದುಕೊಂಡರು. ಒಟ್ಟಾರೆ ೬ ದಿನ ೯ ಗಂಟೆ ೨೪ ನಿಮಿಷ ಅವಧಿ ಹಿಡಿದಿದೆ. ಹೀಗಾದರೂ ಕೇವಲ ೧೪ ಸದಸ್ಯರು ಮಾತ್ರ ಮಾತನಾಡಿದ್ದಾರೆ. ಕೊನೆಯಲ್ಲಿ ಮಾತನಾಡಿದ ಶ್ರೀ ಮುಕುಟ ಬಿಹಾರಿಲಾಲ್ ಭಾರ್ಗವರು ೨-೪-೪೯ರ ೩-೧೫ ರಿಂದ ೫ರವರೆಗೂ ಮಾತನಾಡಿರುವುದಲ್ಲದೇ ಈ ದಿನ ೧೧-೫೦ ರಿಂದ ೧೨-೫೭ರವರೆಗೂ ಮಾತನಾಡಿದ್ದಾರೆ. ಅಲ್ಲದೇ ಈ ಬಗೆಗೆ ಅನೇಕರು ಮಾತನಾಡಲು ಬಯಸಿದ್ದಾರೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ನಾವು ಗಾಢಾಂಧಕಾರದಲ್ಲಿ ಮುಳುಗಿರುವೆವು. ನಮಗೆ ಸಮಸ್ತ ದಿಕ್ಕುಗಳಿಂದ ಬೆಳಕು ಬೇಕಾಗಿದೆ.

**ಉಪಾಧ್ಯಕ್ಷರು,** : ಸರ್ವದಿಶೆಗಳಿಂದ ಬೆಳಕು, ಈ ರೀತಿ ಚರ್ಚೆ ನಡೆದಲ್ಲಿ, ಬಾರದೇ ಹೋಗಲೂಬಹುದು. ಆದುದರಿಂದ ನಾನು ಪ್ರತಿಯೋರ್ವ ಮಾತನಾಡಲು ಬಯಸುವ ಸದಸ್ಯನಿಗೆ ಅರ್ಧ ಗಂಟೆ ಸಮಯಾವಕಾಶ ನೀಡಲು ಬಯಸುವೆ. ನಿಲುವಳಿಗಳಿಗೆ ೧೫ ನಿಮಿಷಗಳ ಅವಕಾಶ. ಇದು ನನ್ನ ಸಲಹೆ, ನಿಬಂಧನೆಯಲ್ಲ. ಆದರೆ ನಾಳೆಯೇ ವಿಧೇಯಕದ ಚರ್ಚೆಯನ್ನು ಮುಕ್ತಾಯಗೊಳಿಸಬೇಕೆಂಬ ನಿರ್ಣಯ ಸದನ ಸ್ವೀಕರಿಸಿದರೆ, ಅದನ್ನು ಒಪ್ಪಲೇಬೇಕು. ಇದನ್ನು ಮುಂಚೆಯೇ ಎಚ್ಚರಿಸುವೆ.

**ಶ್ರೀ ಕೆ. ಸಂತಾನಂ** (ಸಾರಿಗೆ ರೈಲ್ವೆ ರಾಜ್ಯ ಸಚಿವರು) : ನಾನು ತಾವು ಹೇಳಿದ ಅವಧಿಯಲ್ಲಿಯೇ ಮುಕ್ತಾಯಗೊಳಿಸುವೆ. ನನಗೆ ಮಧ್ಯಾಹ್ನದಂದು ಮಾತನಾಡಲು ಅಪ್ಪಣೆ ಕೊಡುವಿರಾ?

**ಉಪಾಧ್ಯಕ್ಷರು :** ಅದನ್ನು ಮುಂಗಡವಾಗಿ ಹೇಗೆ ಹೇಳಲು ಸಾಧ್ಯ? ಆದರೆ ಪ್ರತಿಯೊಬ್ಬರಿಗೂ ಅರ್ಧ ಗಂಟೆ ಸಮಾನ ಕಾಲಾವಕಾಶ ನೀಡಲಾಗುವುದು.

**ಹಲವರು :** ಒಪ್ಪಿದ್ದೇವೆ.

**ಹಲವರು :** ಇಲ್ಲ-ಇಲ್ಲ.

**ಉಪಾಧ್ಯಕ್ಷರು :** ಸದ್ದು ಸದ್ದು. ಸಾಹು ಅವರು ಏನೋ ಹೇಳಬೇಕೆಂದಿದಾರೆ.

**ಶ್ರೀ ಲಕ್ಷ್ಮಿಕಾಂತ ಸಾಹು** (ಒರಿಸ್ಸಾ,ಸಾ.) : ಯಾರಾದರೂ ಸದಸ್ಯರು ಕೇವಲ ೫ ಹಾಗೂ ೧೦ ನಿಮಿಷಗಳಲ್ಲಿಯೇ ತಮ್ಮ ಹೇಳಿಕೆಯನ್ನು ಸಂಪೂರ್ಣ ಮಾಡುವವರಿಗೆ ಮೊದಲು ಅವಕಾಶವನ್ನು ಕಲ್ಪಿಸಲಾಗುವುದೇ?

**ಉಪಾಧ್ಯಕ್ಷರು :** ಹಾಗಾದರೆ, ನಾನು ಈ ಸಲಹೆಯನ್ನು ಒಪ್ಪಿಕೊಂಡಲ್ಲಿ, ಸದಸ್ಯರು ತಾವು ಎಷ್ಟು ನಿಮಿಷಗಳಲ್ಲಿ ತಮ್ಮ ಹೇಳಿಕೆಯನ್ನು ಸಂಪೂರ್ಣಗೊಳಿಸುವುದನ್ನು ಪತ್ರಮುಖೇನ ತಿಳಿಸಿದಲ್ಲಿ, ಆ ಅವಧಿ ಮುಗಿದ ಕೊಡಲೇ ನಾನು ಗಂಟೆ ಬಾರಿಸುವೆ. ಆಗ ಅವರ ಹೇಳಿಕೆ ಮುಕ್ತಾಯವಾದಂತೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** : ತಾವು ಸಭೆ ಮುಂದೂಡುವ ಮುನ್ನ ನಾನು ಒಂದು ವಿಷಯ ಕೇಳಬಯಸುವೆ. ಈಗ ತಾನೇ ತಾವು ಹೇಳಿದಿರಿ – ಅದೇನೆಂದರೆ ವಿಷಯದ ಮೇಲಿನ ಚರ್ಚೆಯನ್ನು ಸದಸ್ಯರು ತಮಗೆ ಬೇಕೆಂದಾಗ ಸದನದಲ್ಲಿ ಮುಕ್ತಾಯಗೊಳಿಸಬಹುದು. ಆದರೆ ಸಂಸದೀಯ ಸಂಪ್ರದಾಯದಲ್ಲಿ ಚರ್ಚೆಯನ್ನು ಅಂತಿಮಗೊಳಿಸುವ ಅಧಿಕಾರ ಕೇವಲ ಸಭೆಯ ಅಧ್ಯಕ್ಷರಾದ ಸ್ಪೀಕರರಿಗೆ ಮಾತ್ರ ಸೇರಿದೆ. ಏಕೆಂದರೆ ವಿಷಯದ ಬಗೆಗೆ ಸಾಕಷ್ಟು ಚರ್ಚೆಯಾಗಿದೆಯೇ ಎಂದು ಅವರೇ ನಿರ್ಣಯಿಸಬಲ್ಲರು. ಅದು ತಮಗೆ ತಿಳಿದ ವಿಷಯವಾಗಿದ್ದರೂ, ತಾವು ನಾಳೆಯ ಸದಸ್ಯರು ಚರ್ಚೆ ಮುಕ್ತಾಯಗೊಳಿಸಲಿ ಎಂದರೆ ಹಾಗೆ ಮಾಡಲಾಗುವುದು ಎಂದು ಹೇಗೆ ಹೇಳಿದಿರಿ?

**ಉಪಾಧ್ಯಕ್ಷರು :** ಪೀಠಕ್ಕೆ ಮುಂಗಡವಾಗಿಯೇ ನಿರ್ಧಾರ ಕೈಕೊಳ್ಳುವ ಅಧಿಕಾರವಿಲ್ಲ. ಈಗ ೧ ಗಂಟೆಯಾಗಿದೆ ೨–೩೦ವರೆಗೂ ಸಭೆಯನ್ನು ಮುಂದೂಡಲಾಗಿದೆ.

ಭೋಜನ ವಿರಾಮಕ್ಕೆಂದೇ ೨–೩೦ ಗಂಟೆಯವರೆಗೂ ಸಭೆ ಮುಂದೂಡಲಾಯಿತು.

೨–೩೦ ಗಂಟೆಗೆ ಸಭೆ ಸೇರಿದಾಗ ಉಪಾಧ್ಯಕ್ಷರಾದ ಅನಂತಶಯನಂ ಅಯ್ಯಂಗಾರ್ ಅವರು ಪೀಠದಲ್ಲಿರುವರು.

## ಹಿಂದೂ ಕೋಡ್ ಮುಂದುವರಿಕೆ

**ಶ್ರೀ ಕೆ. ಸಂತಾನಂ** : ಸರ್, ನಾನು ಈ ವಿಧೇಯಕವನ್ನು ಸಂಪೂರ್ಣವಾಗಿ ಅನುಮೋದಿಸುವೆ. ಏಕೆಂದರೆ ಇದು ಆಯ್ಕೆ ಸಮಿತಿಯಿಂದ ಮಂಡಿಸಲ್ಪಟ್ಟಿದೆ. ನಾನು ಈ ಕಾನೂನಿನ ಬಗೆಗೆ ಆಗಿರಬಹುದಾದ ಚರ್ಚೆಯನ್ನು ಬಹು ಹಿಂದಿನಿಂದಲೂ ಅನುಸರಿಸುತ್ತಾ ಬಂದಿರುವೆ. ಅಲ್ಲದೆ ರಾವ್ ಸಮಿತಿಯ ಮುಂದೆ ಸಾಕ್ಷಿ ನೀಡುವ ಆಸ್ಪದವೂ ನನಗೆ ದೊರೆತಿದ್ದು, ಅಂದಿನಿಂದ ಇಂದಿನವರೆಗೂ ಈ ವಿಧೇಯಕದಲ್ಲಿ ಬಹು ಬದಲಾವಣೆಗಳಾಗಿ ನನ್ನ ದೃಷ್ಟಿಯಲ್ಲಿ ವಿಧೇಯಕವು ಸುಸಂಬದ್ಧವಾಗಿ ವಿಕಾಸ ಹೊಂದುತ್ತಲೇ ಬಂದಿದೆ.

ಸರ್, ನನ್ನ ಅಭಿಪ್ರಾಯದಂತೆ ಹಿಂದೂ ಕೋಡ್ ಸಾಮಾಜಿಕ ವಲಯದಲ್ಲಿ ಮುಂದುವರಿಯುತ್ತಲೇ ಇದೆ. ಅದನ್ನೇ ನಾವು ಈ ಮಹಾ ಸಂವಿಧಾನದಲ್ಲಿಯೂ ಮುಂದುವರಿಸಿಕೊಂಡು ಬಂದಿದ್ದೇವೆ.

ಸರ್, ಸಂವಿಧಾನದ ಮೂಲ ಲಕ್ಷಣಗಳೇನು? ಅದು ಭಾರತವನ್ನು ಒಂದುಗೂಡಿಸುವ ಸಮಗ್ರ, ಸಶಕ್ತ ರಾಜಕೀಯ ಏಕತೆಯನ್ನು ಒಡಮೂಡಿಸುವುದಾಗಿದೆ. ಅದರಂತೆಯೇ ಈ ವಿಧೇಯಕವೂ ಹಿಂದೂ ಸಮುದಾಯದ ಏಕತೆ, ಸಮಗ್ರತೆಯನ್ನು ಭದ್ರಪಡಿಸುವ ತತ್ತ್ವಗಳನ್ನೇ ಆಧರಿಸಿದೆ. ಸರ್, ಹಿಂದೂ ಸಮುದಾಯವು ಸಶಕ್ತ ಏಕತೆಯೊಂದನ್ನು ಪಡೆಯದೇ ಹೋದಲ್ಲಿ ನಮ್ಮ ಮಹಾನ್ ಸಂವಿಧಾನವು ಫಲಕಾರಿಯಾಗಿ ಕಾರ್ಯಾಚರಣೆ ಮಾಡಲಾಗುವುದೇ?

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ವಿವಿಧತೆಯಲ್ಲಿ ಏಕತೆ?

**ಶ್ರೀ ಕೆ. ಸಂತಾನಂ :** ರಾಜಕೀಯ ವಿಚಾರಗಳಲ್ಲಿ ಮುಂದುವರೆದಿರಬಹುದು. ಆರ್ಥಿಕ ರಂಗದಲ್ಲಿ ಸಮಾಜವಾದವನ್ನು ಭೇದಿಸುತ್ತಿರಬಹುದು. ಆದರೆ ಸಾಮಾಜಿಕವಾಗಿ ಹಿಂದೆ ಬಿದ್ದಿರುವ ಭಾರತವು ಸಮಸ್ತ ರಂಗಗಳಲ್ಲಿ ಮುಂದೆ ಬರಬೇಕು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ವಿವಾಹದಲ್ಲಿಯೂ ಪ್ರಜಾಪ್ರಭುತ್ವವೇ?

**ಶ್ರೀ ಕೆ. ಸಂತಾನಂ :** ನನ್ನ ಮಾನ್ಯ ಮಿತ್ರರು ಸಮಸ್ತ ಭಾರತಕ್ಕೆ ಒಂದು ಕೋಡನ್ನು ರಚಿಸಬಾರದೇಕೆ ಎಂದು ಕೇಳದೆ ಕೇವಲ ಹಿಂದೂ ಸಮಾಜದ ಕೋಡನ್ನು ಪ್ರಶ್ನಿಸುತ್ತಿದ್ದಾರೆ. ಸರ್, ನಾವು ಈಗ ನೂತನ ಸಂವಿಧಾನ ಜಾರಿಯಲ್ಲಿರುವ ಪ್ರಾಂತ, ರಾಜ್ಯಪಾಲರು ಮುಂತಾದ ಸಂಸ್ಥೆಗಳ ಆಧಾರದ ಮೇಲೆಯೇ ನೂತನವಾದ ಒಂದು ಸಂವಿಧಾನವನ್ನು ರಚಿಸಿರುವೆವು. ನಮ್ಮ ಉದ್ದೇಶವೆಂದರೆ ಜಾರಿಯಲ್ಲಿರುವ ವ್ಯವಸ್ಥೆಯೊಂದಿಗೆ ನೂತನ ವಿಕಾಸಶೀಲ ತತ್ತ್ವಗಳನ್ನು ಅಳವಡಿಸಿಕೊಂಡು ಹೋಗುವುದೇ ಆಗಿದೆ. ಈ ವಿಧೇಯಕವೂ ಅದೇ ಸೂತ್ರಗಳನ್ನೇ ಆಧರಿಸಿವೆ. ಏಕೆಂದರೆ ಸಾಧ್ಯವಾದಲ್ಲೆಲ್ಲಾ ಹಿಂದಿನ ಹಿಂದೂ ಲಾದ ತತ್ತ್ವಗಳನ್ನು ಅನುಸರಿಸಿಕೊಂಡು ಬಂದು ಆಧುನಿಕ ಅಭಿಪ್ರಾಯಗಳೊಂದಿಗೆ ಹಾಗೂ ಅವಶ್ಯಕತೆಗಳೊಂದಿಗೆ ಜೋಡಣೆ ಮಾಡಲು ಮುಂದುವರಿದು ಬಂದ ಅನಿವಾರ್ಯ ಪ್ರಸಂಗವಾಗಿದೆ. ನನಗೆ ತಿಳಿದಂತೆ ಹಿಂದೂ ಸಮೂಹದ ವಿಕಾಸಕ್ಕೆ ಈ ಮಾರ್ಗ ಬಿಟ್ಟರೆ ಬೇರೆ ಮಾರ್ಗವೇ ಇಲ್ಲ. ಯಾವುದಾದರೊಂದು ವಿಕಾಸದ ಬದಲಾವಣೆ ಕೇವಲ ಕ್ರಾಂತಿ ಹಾಗೂ ವಿಧ್ವಂಸಕತೆಯಿಂದಲೇ ಆಗಬೇಕೇ? ನಮ್ಮ ವಿಧಾನವು ಶಾಂತಿಯುತ ಮತ್ತು ಸ್ವಯಂಪ್ರೇರಣೆಯಿಂದ ಒಡಗೂಡಿದೆ. ಇದೊಂದು ಗಮನಾರ್ಹ ವಿಧೇಯಕ. ಏಕೆಂದರೆ ಇದರ ಮೂಲಕ ಸಾಮಾಜಿಕ ವಲಯದಲ್ಲಿ ಶಾಂತಿಯುತ ಬದಲಾವಣೆಗೆ ಅವಕಾಶ ದೊರೆಯಬಲ್ಲದು.

ಸರ್, ನಾನು ವಿಧೇಯಕದ ವಿವಿಧ ಅಂಶಗಳನ್ನು ಚರ್ಚಿಸುವುದಿಲ್ಲ. ಏಕೆಂದರೆ ಅದಕ್ಕೆ ಇನ್ನೂ ಪರಿಪಕ್ವವಾದ ಸಮಯಾಸ್ಪದ ದೊರಕಿಲ್ಲ. ಅದನ್ನು ಸಮಯ ದೊರೆತಾಗ ಕೈಗೆತ್ತಿಕೊಳ್ಳೋಣ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಆ ಹಂತ ಬರಲಾರದು.

**ಕೆ. ಸಂತಾನಂ :** ಕಾದು ನೋಡೋಣ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಬಹುಶಃ ದೀರ್ಘ ಪ್ರಮಾಣದ ಲಾಠಿ ಚಾರ್ಜ್ ಸದನದ ಹೊರಗೆ ನಡೆದಾಗ ಮಾತ್ರವೇ.

**ಕೆ. ಸಂತಾನಂ :** ಅನೇಕರು ನಾವು ಸಂವಿಧಾನವನ್ನೇ ಜಾರಿಗೊಳಿಸುವುದಿಲ್ಲ ಎಂದೇ ಸಂಶಯ ವ್ಯಕ್ತಪಡಿಸಿದ್ದರು. ಆದರೆ ನಾವು ಈಗ ಸಂವಿಧಾನವನ್ನು ಅಂಗೀಕರಿಸಿದ್ದೇವೆ. ಅದರಂತೆಯೇ ಈ ವಿಧೇಯಕವನ್ನೂ ಕಾನೂನು ಮಾಡುತ್ತೇವೆ.

ಸರ್, ವಿಧೇಯಕದಲ್ಲಿಯ ಹಲವಾರು ವಿಷಯಗಳಿಗೆ ಬದಲಾವಣೆ ತರುವುದನ್ನು ನಾನು ವಿರೋಧಿಸಲಾರೆ. ಅಲ್ಪ ಸ್ವಲ್ಪ ಹೊಂದಾಣಿಕೆಯನ್ನು ಒಪ್ಪಿಕೊಳ್ಳೋಣ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಅಲ್ಪ?

**ಕೆ. ಸಂತಾನಂ :** ನಾನು ವಿಧೇಯಕದ ವಿಶಾಲ ತತ್ತ್ವಗಳ ಬಗೆಗೆ ಪ್ರಸ್ತಾಪಿಸಿ, ಮಿಕ್ಕ ವಿಷಯಗಳನ್ನು ಮುಂದಿನ ಸಂದರ್ಭದಲ್ಲಿ ಕೈಗೆತ್ತಿಕೊಳ್ಳುವೆ.

ಸರ್, ಈ ಮಸೂದೆ ನಾಲ್ಕು ಪ್ರಮುಖ ಅಂಗಗಳಿಂದ ಕೂಡಿದೆ. ಅವು ಯಾವುವೆಂದರೆ ಕ್ರೋಡೀಕರಣ, ಏಕೀಕರಣ, ಸುಧಾರೀಕರಣ ಹಾಗೂ ಸಮನ್ವಯೀಕರಣ.

**ಶ್ರೀ ರೋಹಿಣಿಕುಮಾರ ಚೌಧರಿ** (ಅಸ್ಸಾಂ.ಸಾ.) : ಮತ್ತು ಸುಳ್ಳಿನಿಂದಲೂ.

**ಶ್ರೀ ಕೆ. ಸಂತಾನಂ :** ಅದನ್ನು ನಾನು ನಿಮಗೆ ಬಿಟ್ಟುಕೊಟ್ಟಿರುವೆ. ಮತ್ತು ಸ್ವೀಕೃತಿ ಅಲ್ಪಸಂಖ್ಯಾತರ, ಪೋಷಕರ ಪರಿಪಾಲನೆಯ ವಿಷಯಗಳ ಬಗೆಗೆ, ಜಾರಿಯಲ್ಲಿದ್ದ ಹಿಂದೂ ಲಾದ ಅಂಶಗಳನ್ನೇ ಸರಳೀಕರಿಸಿ ಕ್ರೋಡೀಕರಣಗೊಳಿಸಲಾಗಿದೆ. (ಓರ್ವ ಸದಸ್ಯರ ಪ್ರಶ್ನೆ) ನೀವು ಏನಾದರೂ ಪ್ರಶ್ನೆ ಕೇಳಿರಿ. ಆದರೆ ನನ್ನ

ಅಭಿಪ್ರಾಯದಲ್ಲಿ ನೀವು ಬಿ.ಎನ್. ರಾವ್‌ರಂತೆ ಕಾನೂನು ಪರಿಣತರಲ್ಲ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಅದು ಖಂಡಿತವಾಗಿ ವಾದದ ವಿಷಯವಲ್ಲ. ಅವರು ಏನಾದರೂ ಇರಬಹುದು ಅಥವಾ ಬಿಡಬಹುದು. ಆದರೆ ವಿಷಯವನ್ನು ಗ್ರಹಿಸಬಲ್ಲೆವು. ಆದುದರಿಂದ ಈ ಬಗೆಯ ಹೇಳಿಕೆಯನ್ನು ಸಹಿಸಲಾರೆ.

**ಉಪಾಧ್ಯಕ್ಷ :** ಸದ್ದು ಸದ್ದು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಈ ಬಗೆಯಾಗಿ ಓರ್ವ ಸದಸ್ಯನಿಗಿಂತ ಉತ್ತಮ ಎಂದು ಹೇಳುವುದರ ಅರ್ಥವಾದರೂ ಏನು? ಅದೊಂದು ವಾದವೇ?

**ಉಪಾಧ್ಯಕ್ಷರು :** ಎಲ್ಲಾ ಸದಸ್ಯರೂ ಒಟ್ಟಿಗೆ ಮಾತನಾಡುವುದು ಸರಿಯಲ್ಲ. ಪ್ರತಿಯೊಬ್ಬ ಸದಸ್ಯನಿಗೂ ಕಾಲಾವಕಾಶ ನೀಡಿದೆ–ಆಗ ಮಾತನಾಡಬಹುದು. ಸದನ ಎಲ್ಲಿಯವರೆಗೆ ಚರ್ಚೆ ನಡೆಸುವುದೋ ಅಲ್ಲಿಯವರೆಗೂ ನಾನು ಸದನದಲ್ಲಿಯೇ ಇರುವೆ. ಬಿ.ಎನ್.ರಾವ್ ಅವರು ಕಲಕತ್ತಾದ ಶ್ರೇಷ್ಠ ನ್ಯಾಯಾಲಯದ ನ್ಯಾಯಮೂರ್ತಿಯಾಗಿದ್ದು ಅವರ ಅಭಿಪ್ರಾಯ ಸೂಕ್ತ ಎಂದು ಮಾನ್ಯ ಸದಸ್ಯರು ಹೇಳಿರುವುದರಲ್ಲಿ ಅಸಂಸದೀಯವಾದ ವಿಷಯವೇನೂ ಇಲ್ಲ. ಬಹುಶಃ ಮಾನ್ಯ ಸದಸ್ಯರು ಅವರನ್ನು ತುಂಬಾ ಬಲ್ಲವರಾಗಿರುವುದರಿಂದ ಆ ವಿಧವಾದ ಹೇಳಿಕೆಯನ್ನು ನೀಡಿರಲೂಬಹುದು.

**ಶ್ರೀ ಕೆ. ಸಂತಾನಂ :** ಸರ್, ಶ್ರೀ ಬಿ.ಎನ್. ರಾವ್ ಅವರು ಮಾನ್ಯ ಸದಸ್ಯರಿಗಿಂತಲೂ ಉತ್ತಮವಾಗಿ ನ್ಯಾಯವನ್ನು ಬಲ್ಲವರೆಂದೇ ನಾನು ಹೇಳಿರುವೆ.

**ಶ್ರೀ ರೋಹಿಣಿಕುಮಾರ ಚೌಧರಿ :** ಅಪ್ಪಣೆಯ ಮೇರೆಗೆ – ಸರ್, ಹಿಂದೂ ಲಾ ತುಂಬಾ ಸನಿಹದಿಂದ ಹಿಂದೂ ಧರ್ಮಕ್ಕೆ ಹೊಂದಿರುವ ವಿಷಯವಾಗಿದೆ. ಹೀಗಿದ್ದು ಹಿಂದೂವಲ್ಲದೇ ಇರುವ ವ್ಯಕ್ತಿಯು ಹಿಂದೂ ಲಾದ ಬಗೆಗೆ ಅಧಿಕಾರಯುಕ್ತ ಅಭಿಪ್ರಾಯವನ್ನು ಹೊಂದಿದ್ದಾನೆ ಎಂದರೆ ಯಾರೂ ಸಹಿಸಲಾರರು.

**ಉಪಾಧ್ಯಕ್ಷರು :** ನಾನು ಮಾನ್ಯ ಸದಸ್ಯರ ಭಾವನೆಗಳನ್ನೂ ಅರ್ಥಮಾಡಿಕೊಳ್ಳಬಲ್ಲೆ. ಆದರೆ ಸದಸ್ಯರು ಭಾವನಾತ್ಮಕರಾಗದೆ ಚರ್ಚೆಯಲ್ಲಿ ಭಾಗವಹಿಸಿ ಚರ್ಚೆಯನ್ನು ಶಾಂತಿಯುತವಾದ ವಾತಾವರಣದಲ್ಲಿ ಮುಂದುವರಿಸಿ.

**ಶ್ರೀ ಕೃಷ್ಣಸ್ವಾಮಿ ಭಾರತಿ :** ಈಗ ಮಧ್ಯೆ ಹೇಳಿಕೆ ನೀಡಿದ ಸನ್ಮಾನ್ಯ ಸದಸ್ಯರು, ಶ್ರೀ ಬಿ.ಎನ್. ರಾವ್ ಅವರು ಹಿಂದೂಗಳಲ್ಲವೆಂದು ಹೇಳಿದ್ದಾರೆ. ಅದು ಆಪಾದನೀಯವಾಗಿದೆ. ಶ್ರೀ ರಾವ್ ಅವರು ಸದನದಲ್ಲಿ ಇಲ್ಲದಾಗ ಈ ಹೇಳಿಕೆ ನೀಡದಂತೆ ತಡೆಯುವುದು ತಮ್ಮ ಕರ್ತವ್ಯ.

**ಉಪಾಧ್ಯಕ್ಷರು :** ಯಾವ ಸದಸ್ಯ ಯಾವ ಧರ್ಮಕ್ಕೆ ಸೇರಿದವನು ಎಂದು ಹೇಳುವ ಪರಿಸ್ಥಿತಿಯಲ್ಲಿ ನಾನಿಲ್ಲ. ಏಕೆಂದರೆ ನನಗೆ ಅವರ ಧರ್ಮಗಳ ಬಗ್ಗೆ ಅರಿವಿಲ್ಲ. ಆದರೆ ಸನ್ಮಾನ್ಯ ಸದಸ್ಯರು ಇತಿ ಮಿತಿಗಳನ್ನು ಅರಿತು ನಡೆದುಕೊಳ್ಳಬೇಕು. ಅವರಿಗೆ ಹಕ್ಕುಗಳಿರಬಹುದು; ಆದರೆ ಅವನ್ನು ದುರುಪಯೋಗಪಡಿಸಿಕೊಂಡು, ಬೇರೆಯವರ ಮೇಲೆ ಆಪಾದನೆ ಮಾಡುವುದು ಸರಿಯಲ್ಲ. ಅದು ತಪ್ಪು.

**ಶ್ರೀ ಕೆ. ಸಂತಾನಂ :** ಅವರು ಮಧ್ಯೆ ಪ್ರವೇಶ ಮಾಡಿರುವುದನ್ನು ನಾನು ಸಹಿಸಬಲ್ಲೆ. ಆದರೆ ಈ ವಿಧೇಯಕದ ವಿರೋಧಿಗಳು, ಈ ಬಗೆಯ ತಂತ್ರಗಳನ್ನು ಅಳವಡಿಸಿ ತಾವೇ ಹಿಂದೂ ಧರ್ಮದ ಏಕ ಸ್ವಾಮ್ಯವನ್ನು ಹೊಂದಿದ್ದೇವೆ ಎಂದರೆ ಅದು ಅವರ ತಪ್ಪು ಗ್ರಹಿಕೆಯಾಗಿದೆ. ನಾನು ಖಚಿತವಾಗಿ ಹೇಳಿರುವೆ. ಶ್ರೀ ಬಿ.ಎನ್.ರಾವ್ ಅವರು ಉತ್ತಮ ಹಿಂದೂಗಳೇ ಆಗಿದ್ದಾರೆ. ಹಾಗೂ ಅವರು ಈ ಸದನದಲ್ಲಿಯ ಯಾವ ಹಿಂದೂವಿಗಿಂತ ಕಡಿಮೆ ಇಲ್ಲ. ಆದರೆ ನನ್ನ ಮಟ್ಟಿಗೆ ಹೇಳಬಹುದಾದರೆ ನಮ್ಮ ಪೂರ್ವಜರು

ಸಂಪ್ರದಾಯಬದ್ಧ ಹಿಂದೂ ಕುಟುಂಬದ ಸದಸ್ಯರಾಗಿದ್ದರು. ಇಂದಿಗೂ ನಾವು ನಮ್ಮ ಮನೆಯಲ್ಲಿ ಮೀನು ತಿನ್ನುವುದಿಲ್ಲ. ಆದುದರಿಂದ ನಾನು ಸಂಪ್ರದಾಯಸ್ಥ.............

**ಶ್ರೀ ಹೆಚ್.ವಿ.ಕಾಮತ್** (ಸಿ.ಪಿ. ಬಿರಾರ್ ಸಾ.) ಮೀನು ತಿನ್ನುವ ಹಾಗೂ ತಿನ್ನದೇ ಇರುವುದರ ಮೇಲೆ ಸಂಪ್ರದಾಯಸ್ಥನೆಂದು ಹೇಳಲಾಗುವುದೇ?

**ಶ್ರೀ ಕೆ. ಸಂತಾನಂ :** ದೇಶದ, ನಮ್ಮ ಭಾಗದಲ್ಲಿ ಮೀನನ್ನು ತಿನ್ನುವುದು ಸಂಪ್ರದಾಯ ವಿರೋಧವೆಂದೇ ಪರಿಗಣಿಸಲಾಗುತ್ತದೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ದೇಶದ, ನಮ್ಮ ಭಾಗದಲ್ಲಿ ಇಡ್ಲಿ ಭಕ್ಷಣೆಯನ್ನು ಸಂಪ್ರದಾಯ ವಿರೋಧವೆಂದೇ ಪರಿಗಣಿಸಲಾಗುತ್ತದೆ.

**ಉಪಾಧ್ಯಕ್ಷರು :** ಸನ್ಮಾನ್ಯ ಸದಸ್ಯರು, ಇಡ್ಲಿ ಮತ್ತು ಮೀನುಗಳನ್ನು ಮರೆತು, ಮದುವೆ, ಮತ್ತು ವಿಚ್ಛೇದನ ವಿಷಯಗಳಿಗೆ ಮರಳಲಿ.

**ಶ್ರೀ ಆರ್.ಕೆ.ಸಿಧ್ವಾ :** ಸದನವನ್ನು ಮೀನು ಮಾರ್ಕೆಟ್ ಮಾಡುವುದು ಬೇಡ.

**ಶ್ರೀ ಕೆ. ಸಂತಾನಂ :** ನಾನು ಮತ್ತೊಂದು ಬಾರಿ ಹೇಳುವೆ, ದತ್ತು ಪಡೆಯುವ, ಪೋಷಕರ, ಅಲ್ಪ ಸಂಖ್ಯಾತರ ಮುಂತಾದ ವಿಷಯಗಳ ಬಗೆಗೆ ಹೇಳುವುದಾದರೆ, ಅವು ಜಾರಿಯಲ್ಲಿರುವ ಶಾಸನಗಳ ಕೇವಲ ಕ್ರೋಡೀಕರಣವೆಂದೇ ತಿಳಿಸುವೆ. ಏಕೆಂದರೆ ಬ್ರಿಟಿಷ್ ನ್ಯಾಯಾಲಯಗಳ ತೀರ್ಪುಗಳ ಮುಂದೆ, ಮನು ಮತ್ತು ಯಾಜ್ಞವಲ್ಕ್ಯರು ಏನೇ ಹೇಳಿದರೂ, ಅದನ್ನು ಜಾರಿಯಲ್ಲಿರುವ ಹಿಂದೂ ಲಾದ ಬಗೆಗೆ ಬ್ರಿಟಿಷ್ ನ್ಯಾಯಾಲಯಗಳು ಅರ್ಥೈಸಿದಂತೆ ಕಳೆದ ಒಂದೂವರೆ ಶತಮಾನದಿಂದ ನಡೆದುಕೊಂಡು ಬಂದಿರುವುದರಿಂದ ಮನು ಹಾಗೂ ಯಾಜ್ಞವಲ್ಕ್ಯರು ಅಸಹಾಯಕರಾಗಿದ್ದಾರೆ. ಆದುದರಿಂದ, ಹಿಂದೂ ಲಾ ಎಂದರೆ, ದೇಶದಲ್ಲಿಯ ಬ್ರಿಟಿಷ್ ನ್ಯಾಯಾಧೀಶರು ಅರ್ಥೈಸುವಂತೆ ಎಂದು ಭಾವಿಸಬೇಕು.

**ಓರ್ವ ಸದಸ್ಯ :** ಬ್ರಿಟಿಷ್ ನ್ಯಾಯಾಧೀಶರೆ?

**ಶ್ರೀ ಕೆ. ಸಂತಾನಂ :** ಬ್ರಿಟಿಷರು ಅಥವಾ ಬ್ರಿಟಿಷರಂತೆ ನೇಮಕ ಹೊಂದಿದ ನ್ಯಾಯಾಧೀಶರು. ಆದುದರಿಂದ ನಾವು ಈ ಹಿಂದೇ ಬ್ರಿಟಿಷರು ಹೇಗೆ ಹಿಂದೂ ಲಾದಲ್ಲಿ ಬದಲಾವಣೆ ತರಲು ಸಮರ್ಥರಾದರೋ ಹಿಂದೂ ಲಾದ ಬಗೆಗೆ ಬದಲಾವಣೆ ತರುವ ಅಷ್ಟೇ ಸಾಮರ್ಥ್ಯ ನಮಗೂ ಇದೆ.

ಸರ್, ಈಗ ನಾನು ಹಿಂದೂ ಕೋಡ್‌ನ ಮತ್ತೊಂದು ಪ್ರಮುಖ ಅಂಶವಾದ ಏಕೀಕರಣದ ಭಾಗಕ್ಕೆ ಬರುವೆ. ಯಾವ ಹಿಂದೂವೇ ಆಗಲಿ ಭವಿಷತ್‌ನ ಬಗೆಗೆ ಆಲೋಚಿಸಿದಾಗ ಕೇವಲ ಕಾನೂನಿಗೆ ಸಂಬಂಧಿಸಿದಂತೆ ಏಕೀಕರಣ ಬೇಕಾಗಿಲ್ಲವೆಂದೇ ಹೇಳಬಹುದೇ? ಏಕೆಂದರೆ ಬಂಗಾಲದಲ್ಲಿ ದಾಯಭಾಗ ಮಲಬಾರಿನಲ್ಲಿ ಮರುಮಕ್ಕತ್ತಾಯಂ ಇತರ ಭಾಗಗಳಲ್ಲಿ ಮಿತಾಕ್ಷರ ಈ ವಿಧದ ಕಾನೂನುಗಳು ಜಾರಿಯಲ್ಲಿವೆ. ಅವು ಪುರಾತನ ಕಾಲದಿಂದಲೂ ಜಾರಿಯಲ್ಲಿವೆ. ಆದರೆ ನಮಗೆ ಅರ್ಥವಾಗದೇ ಇರುವ ವಿಷಯ ಎಂದರೆ, ರಾಜಕೀಯ ಹಾಗೂ ಆರ್ಥಿಕ ರಂಗದಲ್ಲಿ ನಾವು ೧೯೫೦ನೇ ಸಂವತ್ಸರವಾಗಿ ಕಾನೂನು ಪ್ರಪಂಚದಲ್ಲಿ ಕ್ರಿ. ಪೂರ್ವ ೧೯೫೦ರಲ್ಲಿ ಇರಬೇಕೆ? ಹಿಂದೂ ಸಮಾಜವು ಸತ್ವಯುತ ಸಮಾಜವಾಗಿ ಮುಂದುವರಿಯಬೇಕಾದರೆ ನಾವೆಲ್ಲರೂ ಒಂದೇ ಕಾನೂನಿನಡಿಯಲ್ಲಿ ಅದು ಮಿತಾಕ್ಷರವಾಗಲೀ ದಾಯಭಾಗವಾಗಲೀ ಏನೆ ಆದರೂ ಒಂದರಡಿಯಲ್ಲಿರಲೇ ಬೇಕು. ಆದರೆ ಮಿತಾಕ್ಷರದಡಿಯಲ್ಲಿ ಬಂಗಾಲದ ದಾಯಭಾಗದವರು ಏಕೆ ಬರಕೂಡದು ಎಂಬುದನ್ನು ಒಪ್ಪುವೆ. ಆದರೆ ನಾವು ಹಿಂದೂಗಳು ಕೇವಲ ಕಾನೂನಿಗೆಂದೇ ಈ ವಿಧವಾದ ವಿಭಜನೆಗೆ ಗುರಿಯಾಗುವುದು ಸೂಕ್ತವೇ? ಹೀಗೆ ವಿವಿಧ ಪ್ರಾಂತಗಳಲ್ಲಿ

ಜಾರಿಯಲ್ಲಿರುವ ನ್ಯಾಯ ನಿರ್ಣಯ ಮಾಡಬಹುದಾದರೆ ಮಲಬಾರಿನಲ್ಲಿ ನೆಲಸಿರುವ ಬಂಗಾಲಿಯ ಹಾಗೂ ಬಂಗಾಲದಲ್ಲಿ ನೆಲೆಸಿರುವ ಮಲಬಾರಿಗೆ ಅವರವರ ಪದ್ಧತಿಯಂತೆ ನ್ಯಾಯಾಲಯಗಳು ನ್ಯಾಯದಾನ ಮಾಡಲು ಸಾಧ್ಯವೆ? ಇದು ಹಿಂದೂ ಸಮಾಜಕ್ಕೆ ಮರಣಪ್ರಾಯ ವಿಷಯುವೇ ಆಗಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಹಿಂದೂಗಳನ್ನು ಒಟ್ಟುಗೂಡಿಸುವಲ್ಲಿ ಈ ವಿಧೇಯಕವು ಸಹಕಾರಿಯಾಗಬಲ್ಲದು. ಆದುದರಿಂದ ಸಮಸ್ತ ಹಿಂದೂಗಳಿಗೆ ಒಂದೇ ಕಾನೂನು ಇರುವುದು........

**ಶ್ರೀ ರೋಹಿಣಿ ಕುಮಾರ ಚೌಧರಿ :** ಅಪ್ಪಣೆಯ ಮೇರೆಗೆ. ಮಾನ್ಯ ಸದಸ್ಯರು ಸದನದಲ್ಲಿ ಜಾತೀಯತೆಯ ಬಗೆಗೆ ಮಾತನಾಡುತ್ತಿದ್ದಾರೆ. ಅವರು ಹಿಂದೂಗಳನ್ನು ಸಂಘಟಿಸುವ ಬಗ್ಗೆ ಮಾತನಾಡುತ್ತಿರುವುದು, ಮುಸ್ಲಿಂ ಹಾಗೂ ಇತರರ ವಿರುದ್ಧವೇ? ಏಕೆಂದರೆ ಅವರು ಹಿಂದೂಗಳಿಗೆಂದೇ ಒಂದು ಶಾಸನವನ್ನು ಪ್ರತಿಪಾದಿಸುತ್ತಿರುವುದರಿಂದ ಅದು ಜಾತೀಯತೆಯ ಪ್ರಚಾರವಾಗಿದೆ.

**ಉಪಾಧ್ಯಕ್ಷರು :** ಅಪ್ಪಣೆಯ ಪ್ರಶ್ನೆಯೇ ಇಲ್ಲ. ಚರ್ಚೆ ಉಲ್ಲಾಸಭರಿತವಾಗಿದೆ.

**ಶ್ರೀ ಕೆ. ಸಂತಾನಂ :** ಈ ವಿಧೇಯಕವು ಕಾನೂನಾಗಿ ಮಾರ್ಪಟ್ಟ ದಿನದಿಂದಲೇ ಒಂದುಗೂಡುವ ಕಾರ್ಯ ಆರಂಭವಾಗುತ್ತದೆ. ಇದರಿಂದಾಗಿ ಸಮಸ್ತ ದೇಶವೂ ಒಂದೇ ಕಾನೂನಿನಡಿಯಲ್ಲಿ ಬರಲು ಸಹಕಾರಿಯಾಗುತ್ತದೆ. ಬೇಕಾದಲ್ಲಿ ನಾವು ಅಲ್ಪ ಸ್ವಲ್ಪ ಬದಲಾವಣೆಗಳಿಗೆ ಆಸ್ಪದ ನೀಡಿದಲ್ಲಿ, ದೇಶಾದ್ಯಂತ ಒಂದೇ ನಾಗರಿಕ ಸಂಹಿತೆ ಬರಲೂ ಬಹುದು. ಆದುದರಿಂದ ಈ ವಿಧಾನವು, ಬಾಂಧವ್ಯಕಾರಿಯಾಗಿದೆಯೇ ಹೊರತು ಅಸಮಗ್ರತೆಯನ್ನು ಹೊಂದಿಲ್ಲ. ಹೀಗಾಗಿ ಈ ಪ್ರಕ್ರಿಯೆ ಮುಂದುವರಿಯಲಿ.

**ಪಂಡಿತ ಲಕ್ಷ್ಮೀಕಾತ ಮೈತ್ರಾ :** ಅದು ಹೊರಗಡೆ ಮುಂದುವರಿದೆ.

**ಶ್ರೀಮತಿ ಜಿ. ದುರ್ಗಾಬಾಯಿ** (ಮದ್ರಾಸ್.ಸಾ.) : ಒಳಗಡೆಯೂ ಅದು ಮುಂದುವರಿದಿದೆ.

**ಪಂಡಿತ ಲಕ್ಷ್ಮೀಕಾತ ಮೈತ್ರಾ :** ನಿಮ್ಮ ಪ್ರೋತ್ಸಾಹದಿಂದ.

**ಶ್ರೀ ಕೆ. ಸಂತಾನಂ** : ನಾನು ಈ ವಿಧವಾದ ಕೀಟಲೆಗಳನ್ನು ತುಂಬಾ ನೋಡಿರುವೆ. ಏಕೆಂದರೆ ನಾನು ಈ ಸದನದ ಸದಸ್ಯನಾಗಿ ಬಹು ದಿನಗಳಿಂದ ಇದ್ದೇನೆ. ಸರ್, ಈಗ ನಮ್ಮ ಮುಂದೆ ಇರಬಹುದಾದ ಪ್ರಶ್ನೆ ಎಂದರೆ, ನಾವು ದಾಯಭಾಗ ಅಥವಾ ಮಿತಾಕ್ಷರ ಪದ್ಧತಿಯನ್ನು ಆಯ್ಕೆ ಮಾಡುವುದು. ಪಂಡಿತ ಮುಕುಟ ಬಿಹಾರಿಲಾಲ್ ಅವರು ಹೇಳಿರುವಂತೆ ೨೦ ಕೋಟಿ ಜನರು ಮಿತಾಕ್ಷರವನ್ನು ಹಾಗೂ ಕೇವಲ ೫ ಕೋಟಿ ಜನರು ದಾಯಭಾಗವನ್ನು ಅನುಸರಿಸುತ್ತಿದ್ದಾರೆ. ಹೀಗಾಗಿ ನಾವು ೫ ಕೋಟಿ ಜನರ ಬದಲಾಗಿ ೨೦ ಕೋಟಿ ಜನರ ಕಾನೂನನ್ನು ಏಕೆ ಅಳವಡಿಸಬಾರದು? ನನಗೆ ತಿಳಿದಂತೆ ಮಿತಾಕ್ಷರ ಕಾನೂನು, ಪುರಾತನ ಹಳ್ಳಿಗಳಲ್ಲಿಯ ಜನರ ಆವಶ್ಯಕತೆಗಳನ್ನು ಪೂರೈಸಬಲ್ಲದು. ಏಕೆಂದರೆ ಅವರ ಆಸ್ತಿ ಎಂದರೆ ಉಳುವ ಭೂಮಿಯಾಗಿದೆ. ಈ ಒಂದು ಸಾಮಾಜಿಕ ಕಲ್ಪನೆಯಿಂದಲೇ ಜನನ ಹಾಗೂ ಹಕ್ಕುದಾರಿಕೆ ವಿಧಾನಗಳು ಹೊರ ಹೊಮ್ಮಿವೆ. ಆದರೆ ನಾವು ನಮ್ಮ ಪುರಾತನ ಸಮಾಜದಿಂದ, ಆಧುನಿಕ ಸಮಾಜದತ್ತ ಹೊರಟಿದ್ದೇವೆ. ಈ ದಿಶೆಯಲ್ಲಿ ಆಸ್ತಿಯ ಕಲ್ಪನೆಯು ಕೇವಲ ಸ್ಥಿರಾಸ್ತಿಯ ಬಗೆಗೆ ಅಲ್ಲದೆ ಚರಾಸ್ತಿಯ ದಿಶೆಯಲ್ಲಿ ಮುಂದುವರಿಯುತ್ತದೆ. ಏಕೆಂದರೆ ಇಂದು ಸ್ಥಿರಾಸ್ತಿಯನ್ನು ಚರಾಸ್ತಿಯಾಗಿ ಮಾರ್ಪಾಟು ಮಾಡಲಾಗುತ್ತಿದೆ. ಷೇರುಗಳು, ನಗದು ಹಣ, ಹಾಗು ಸರಕಾರಿ ಬಾಂಡುಗಳ ರೂಪದಲ್ಲಿ ಪರಿವರ್ತನೆಯಾಗುತ್ತಲಿವೆ. ಆದುದರಿಂದ ನಾವು ಸ್ಥಿರಾಸ್ತಿಗೆ ಬದಲಾಗಿ ಚರಾಸ್ತಿಗೆ ಅನ್ವಯವಾಗಬಲ್ಲ ವಿಧಾನಗಳಿಗೆ ಹೆಚ್ಚು ಸಮಂಜಸವಾಗದೇ ಹೋಗಬಹುದು, ಏಕೆಂದರೆ ಆಸ್ತಿಯ ಕಲ್ಪನೆಯೇ ಅಗೋಚರ ಸ್ವರೂಪ ಪಡೆಯತೊಡಗಿದೆ.

ನಾವು ಜನನದ ಹಕ್ಕನ್ನು ಸಮರ್ಥನೀಯ ಎಂದು ಹೇಳಲಾರೆವು. ಏಕೆಂದರೆ ತಂದೆಯಾದವನು

ತನ್ನ ಸ್ಥಿರಾಸ್ತಿಯನ್ನು ಚರಾಸ್ತಿಯ ಸ್ವರೂಪ ಹೊಂದಿರುವ ಷೇರು ಮುಂತಾದುವುಗಳಲ್ಲಿ ತೊಡಗಿಸಬಹುದು. ಇದನ್ನು ತಡೆಯಲಾಗದು. ಏಕೆಂದರೆ ಮಗನಿಗೆ ತಂದೆಯ ಷೇರುಗಳಲ್ಲಿ ಜನನದಿಂದ ಯಾವ ಹಕ್ಕೂ ದೊರೆಯಲಾರದು; ಆದರೆ ಸ್ಥಿರಾಸ್ತಿಯಲ್ಲಿಯ ಮಾತು ಬೇರೆ. ಆದುದರಿಂದ ಈ ವಿಧೇಯಕವು ಮಿತಾಕ್ಷರ ವಿಧಾನಕ್ಕಿಂತ ದಾಯಭಾಗ ವ್ಯವಸ್ಥೆಗೆ ಆದ್ಯತೆ ನೀಡಿದೆ; ಇದನ್ನು ಮಿತಾಕ್ಷರಕ್ಕೆ ಅಗೌರವ ಎಂದು ತಿಳಿಯಬಾರದು. ಏಕೆಂದರೆ ಇಂದಿನ ಪರಿಸ್ಥಿತಿಯಲ್ಲಿ ಜನನ ಮತ್ತು ಹಕ್ಕುದಾರಿಕೆಯ ವಿಧಾನಗಳು ಸೂಕ್ತವಾಗಿಲ್ಲ.

**ಪಂಡಿತ ಲಕ್ಷ್ಮೀಕಾತ ಮೈತ್ರಾ :** ಪುರಾತನ.

**ಶ್ರೀ ಕೆ. ಸಂತಾನಂ :** ಅವನ್ನು ನಾವು ಶಾಸನಾತ್ಮಕವಾಗಿ ಕೈಬಿಡಬೇಕು. ಇಲ್ಲವೇ ಅದು ತಾನೇ ತಾನಾಗಿ ನಶಿಸಲು ಬಿಡಬೇಕು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಬೇರೆ ವಿಷಯಗಳಲ್ಲಿಯೂ ಬಂಗಾಲವನ್ನೇ ಅನುಸರಿಸಿರಿ.

**ಹಲವು ಸದಸ್ಯರು :** ಸದ್ದು ಸದ್ದು.

**ಶ್ರೀ ರೋಹಿಣಿ ಕುಮಾರ ಚೌಧರಿ :** ಸರ್, ಸದಸ್ಯರಿಗೆ ಆಜ್ಞೆ ನೀಡಲು ಅಧಿಕಾರವಿದೆಯೆ? ನಾನು ಶ್ರೀಮತಿ ದುರ್ಗಾಬಾಯಿ ಸದ್ದು ಸದ್ದು ಎಂದು ಹೇಳಿದ್ದನ್ನು ಕೇಳಿರುವೆ.

**ಶ್ರೀಮತಿ ರೇಣುಕಾ ರೇ** (ಪ. ಬಂಗಾಲ, ಸಾ.) : ಇದೊಂದು ಅಪ್ಪಣೆ ಕೋರುವ. ವಿಷಯವೇ?

**ಉಪಾಧ್ಯಕ್ಷರು :** ಅಧ್ಯಕ್ಷರ ಅಧಿಕಾರವನ್ನು ನನ್ನೊಂದಿಗೆ ಹೊಂದಿರುವುದನ್ನು ಕಂಡು ನನಗೆ ಹರ್ಷ ಉಂಟಾಗಿದೆ.

**ಶ್ರೀ ರೋಹಿಣಿ ಕುಮಾರ ಚೌಧರಿ :** (ಎದ್ದು ನಿಂತರು)

**ಶ್ರೀ ಕೆ. ಸಂತಾನಂ :** ನಾನು ನನ್ನ ಅಸ್ಸಾಂ ಮಿತ್ರರಿಗೆ ಅವಕಾಶ ನೀಡಲಾರೆ.

**ಶ್ರೀ ರೋಹಿಣಿ ಕುಮಾರ ಚೌಧರಿ :** ಸರಿ, ಹಾಗೆಯೇ ಆಗಲಿ. ನಾನು ಮೌನದಿಂದ ಇರುವೆ. ಆಗ ನೀವು ಸ್ತ್ರೀಯರ ದಬ್ಬಾಳಿಕೆಗೆ ಗುರಿಯಾದಂತೆ.

**ಉಪಾಧ್ಯಕ್ಷರು :** ಸದ್ದು ಸದ್ದು.

**ಶ್ರೀ ಕೆ. ಸಂತಾನಂ :** ಸರ್, ಅವಿಭಕ್ತ ಕುಟುಂಬ ಪದ್ಧತಿಯ ಬಗೆಗೆ ಸಾಕಷ್ಟು ಹೇಳಲಾಗಿದೆ. ಪುರಾತನ ಹಾಗೂ ಮಧ್ಯಕಾಲೀನ ಯುಗಗಳಲ್ಲಿ ಈ ಸಂಸ್ಥೆಯು ಅಪಾರ ಸೇವೆ ಸಲ್ಲಿಸಿರಬಹುದು. ಅದನ್ನು ಅಲ್ಲಗಳೆಯುವುದೇ ನನ್ನ ಕಾರ್ಯವಲ್ಲ. ಆದರೆ ಇಂದಿನ ದಿನಗಳಲ್ಲಿ ಈ ಅವಿಭಕ್ತ ಕುಟುಂಬದ ವ್ಯವಸ್ಥೆ ಗೊಂದಲದಲ್ಲಿದೆ. ನನಗೆ ರೈತರ ವಿಷಯ ಗೊತ್ತು. ಏಕೆಂದರೆ ಸದನದ ಯಾವ ಸದಸ್ಯನಿಗಿಂತಲೂ ನಾನು ಹೆಚ್ಚು ಅವಧಿಯನ್ನು ಗ್ರಾಮಾಂತರ ಪ್ರದೇಶದಲ್ಲಿಯೇ ಕಳೆದಿರುವೆ. ನಾನು ಹತ್ತು ವರ್ಷ ಕೇವಲ ಗ್ರಾಮಾಂತರ ಪ್ರದೇಶದಲ್ಲಿಯೇ ಕಾರ್ಯ ಮಾಡಿರುವೆ. ನನಗೆ ತಿಳಿದಂತೆ ರೈತನ ಮಗನು ಮದುವೆಯಾದೊಡನೆಯೇ ಬೇರೆ ಮನೆ ಮಾಡುವನು. ಅಲ್ಲದೆ ಮಗನಿಗೆ ತನ್ನ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲನ್ನೂ ನೀಡುವನು. ಹೀಗೆ ಅವನು ತನ್ನ ಮಗನ ಬೇರೆ ಕುಟುಂಬವನ್ನೇ ಜಾರಿಗೊಳಿಸುತ್ತಾನೆ. ಹೀಗೆ ಮಾಡದೇ ಹೋದರೆ ತನ್ನ ಕುಟುಂಬ ಕಲಹಕ್ಕೆ ಈಡಾಗುತ್ತದೆ ಎಂಬುದನ್ನು ರೈತನು ಚೆನ್ನಾಗಿ ಅರಿತವನಾಗಿದ್ದಾನೆ. ಆದರೆ ಕೇವಲ ಕೆಲವು ಶ್ರೀಮಂತ ಕುಟುಂಬಗಳಲ್ಲಿ ಮಾತ್ರ ಅವಿಭಕ್ತ ಕುಟುಂಬ ಪದ್ಧತಿ ಜಾರಿಯಲ್ಲಿದ್ದು ಎರಡು ಬಗೆಯ ಲೆಕ್ಕಗಳನ್ನು ಕೇವಲ ಆದಾಯ ತೆರಿಗೆಗೆಂದೇ ತೋರಿಸಲಾಗಿದೆ. ಇದು ಕಣ್ಣಿಗೆ ಮಣ್ಣೆರಚುವ ಕ್ರಮ. ಇಂದಿಗೂ ಮಧ್ಯಮ ವರ್ಗದ ಕುಟುಂಬಗಳಲ್ಲಿ ಏನು ನಡೆಯುತ್ತಿದೆ?

ಒಬ್ಬ ಮಗ ಹಳ್ಳಿಯಲ್ಲಿ, ಮತ್ತೊಬ್ಬ ದಿಲ್ಲಿಯಲ್ಲಿ ಸರಕಾರಿ ನೌಕರಿ, ಮತ್ತೊಬ್ಬ ಮದ್ರಾಸಿನಲ್ಲಿ,

ಮತ್ತೊಬ್ಬ ವ್ಯಾಪಾರ ಮಾಡುತ್ತ ಅವಿಭಕ್ತ ಕುಟುಂಬದ ಹೆಸರಿನಲ್ಲಿ ಹಿರಿಯರ ಆಸ್ತಿಯನ್ನು ಮುಂದುವರಿಸುವುದೇ? ಅದರ ಬದಲಾಗಿ ಅವರಲ್ಲಿ ಭಾಗ ಹಂಚಬಾರದೇಕೆ? ಅವರು ಹಳ್ಳಿಗೆ ಮರಳಿ ಬರಲು ಬಯಸಿದರೆ, ಸಹಕಾರ ವ್ಯವಸ್ಥೆಯಲ್ಲಿ ಮುಂದುವರಿಯಲಿ. ಇದರಿಂದ ಅವರು ನೂತನ ವ್ಯವಸ್ಥೆಯಲ್ಲಿ ಕಾನೂನು ಬದ್ಧ ಅಧಿಕಾರವನ್ನು ಪಡೆದಂತಾಗುವುದಿಲ್ಲವೇ? ನನಗೆ ತಿಳಿದಂತೆ ಇದು ಮೌಢ್ಯವಲ್ಲದೆ ಬೇರೆ ಏನು?

**ಶ್ರೀ ಬ್ರಿಜೇಶ್ವರ ಪ್ರಸಾದ** (ಬಿಹಾರ, ಸಾ.) : ಡೇನಿಯಲ್ ನ್ಯಾಯ ನಿರ್ಣಯಕ್ಕೆ ಬಂದಂತೆ.

**ಶ್ರೀ. ಕೆ. ಸಂತಾನಂ :** ನನ್ನ ಬಿಹಾರಿನ ಮಾನ್ಯ ಮಿತ್ರರೇ, ಡೇನಿಯಲ್‌ಗೆ ಉತ್ತಮ ಮಾದರಿಯಾಗಿ ಈ ಸಂವಿಧಾನದ ರಚನೆಯಲ್ಲಿ ಸಾಮರ್ಥ್ಯ ತೋರಿದ್ದಾರೆ. ಅದರಂತೆಯೇ ಇಲ್ಲಿಯೂ ತಮ್ಮ ಕಾರ್ಯ ಕೈಗೊಳ್ಳಲಿ.

**ಶ್ರೀ ಬ್ರಿಜೇಶ್ವರ ಪ್ರಸಾದ :** ತಾವು ಕೂಡ.

**ಶ್ರೀ ಕೆ. ಸಂತಾನಂ :** ನಾನು ಅದನ್ನು ತಮಗೆ ಬಿಟ್ಟುಕೊಡಲಾರೆ.

**ಉಪಾಧ್ಯಕ್ಷರು :** ಸದಸ್ಯರು ತಮ್ಮ ತಮ್ಮಲ್ಲಿಯೇ ಮಾತನಾಡಬಾರದು. ಇದು ಖೇದನೀಯ. ನಾನು ಅಲ್ಪ ಉದಾಸೀನತೆಯನ್ನು ತೋರಿದೆ ಎಂದು ಕ್ಷುಲ್ಲಕ ವಿವಾದವನ್ನು ಮುಂದುವರಿಸಬಾರದು. ಚರ್ಚೆಯಲ್ಲಿ ಹಾಸ್ಯವಿದ್ದಲ್ಲಿ ಯಾವ ಅಪಾಯವೂ ಇಲ್ಲ. ಆದುದರಿಂದ ಮಾನ್ಯ ಸದಸ್ಯರಿಗೆ ಹಾಗೂ ಅವರ ಯೋಚನಾಲಹರಿಗೆ ಅಡಚಣೆಯಾಗದಂತೆ ಮುಂದುವರಿಯಲು ಆಸ್ಪದ ನೀಡಿ. ತೊಂದರೆ ಹಾಗೂ ಹಿಂಸೆ ಮಾಡದಿರಿ.

**ಶ್ರೀ ರೋಹಿಣಿ ಕುಮಾರ ಚೌಧರಿ :** ಸಂತಾನಂ ಅವರು ಒಳ್ಳೆಯ ಹುರುಪಿನ ಮನೋಭಾವನೆಯಲ್ಲಿದ್ದಾರೆ.

**ಶ್ರೀ ಕೆ. ಸಂತಾನಂ :** ನಾನು ಪ್ರತಿಪಾದಿಸುತ್ತಿರುವ ವಿಷಯ ಸರಳ ಮತ್ತು ನೇರವಾಗಿದೆ. ಹೀಗಾಗಿ ನಾನು ಯಾವ ಭಯಾನಕ ವಿಧಾನ ಹಾಗೂ ಕೋಪಕ್ಕೆ ಈಡಾಗುವ ಆಸ್ಪದವೇ ಇಲ್ಲ.

ನಾನು ಮುಂದಿನ ವಿಷಯಕ್ಕೆ ಬರುವೆ. ಅದು ಸಮನ್ವಯತೆಗೆ ಸಂಬಂಧಿಸಿದ್ದು. ಇದಕ್ಕೆ ಸಂಬಂಧಿಸಿದಂತೆ ತುಂಬಾ ವಿವಾದಕ್ಕೆ ಆಸ್ಪದ ನೀಡಿರುವ ವಿಷಯ ಎಂದರೆ ತಂದೆಯ ಆಸ್ತಿಯಲ್ಲಿ ಮಗಳಿಗೆ ನೀಡಬಹುದಾದ ಪಾಲು. ಇದು ಕೇವಲ ಹಳೆಯ ವಿಧಾನದ ವ್ಯವಸಾಯ ಭೂಮಿಯೊಂದೇ ಆಸ್ತಿಯಾದ ಕಾಲದಲ್ಲಿ. ಹಲವರು ಹೇಳಿದಂತೆ, ಪರಕೀಯನಿಗೆ ಕುಟುಂಬದಲ್ಲೇಕೆ ಆಸ್ಪದ ನೀಡಬೇಕು ಎಂಬುದನ್ನು ಒಪ್ಪುವೆ. ಆದರೆ ನಾನು ಈಗಾಗಲೇ ಹೇಳಿದಂತೆ ಆಸ್ತಿಯ ಕಲ್ಪನೆಯೇ ಬದಲಾಗುತ್ತಿರುವಾಗ ಸ್ಥಿರದಿಂದ ಚರಾಸ್ತಿಗೆ.

**ಡಾ॥ ಪಿ. ಎಸ್. ದೇಶಮುಖ್** (ಸಿ.ಪಿ.ಬಿರಾರ್, ಸಾ.) : ಅದು ಹೇಗೆ ಸಾಧ್ಯ? ಭೂ ಆಸ್ತಿಯನ್ನು ಕಡೆಗಣಿಸಲಾಗದು. ಏಕೆಂದರೆ ಹಿಂದೂ ಕೋಡ್ ಅದನ್ನು ಆವಿಯಾಗಿಸಲು ಸಾಧ್ಯವೇ ಇಲ್ಲ.

**ಶ್ರೀ ಕೆ. ಸಂತಾನಂ :** ರೈತಾಪಿ ವರ್ಗದ ಬಗೆಗೆ ಹೇಳುವುದಾದರೆ ಜಮೀನನ್ನು ಪಾಲು ಮಾಡಲಾಗುವುದು. ಆಗ ಅಳಿಯನಿರಬಹುದು, ಹಳ್ಳಿಯಲ್ಲಿಯೇ ನೆಲಸಿದರೆ ಅವನಿಗೂ ಜಮೀನನ್ನು ಹಂಚಲಾಗುವುದು.

**ಡಾ॥ ಪಿ. ಎಸ್. ದೇಶಮುಖ್ :** ಅಂದರೆ ಇನ್ನು ಮುಂದೆ ಒಡೆದು ಆಳುವ ನೀತಿಯೇ ಶಾಸನವೇ!

**ಶ್ರೀ ಕೆ. ಸಂತಾನಂ :** ಪುತ್ರರು ಪಾಲು ಮಾಡಿಕೊಳ್ಳುವಂತೆ, ಪುತ್ರಿಯರೂ ಹಂಚಿಕೊಳ್ಳಬಹುದು. ಏಕೆಂದರೆ ಇನ್ನು ಮುಂದೆ ಆಸ್ತಿ ಎಂದರೆ ನಗದು ಹಣ ಮುಂತಾದವೇ. ಆದುದರಿಂದ ಮಗನಿಗೆ ಇದ್ದಷ್ಟು ಹಕ್ಕು ಮಗಳಿಗೇಕಿರಬಾರದು? ನಾನು ಹೊಂದಾಣಿಕೆಗೆಂದೇ ಒಂದೆರಡು ಅಭಿಪ್ರಾಯಗಳನ್ನೂ ಸೂಚಿಸುವೆ. ಒಂದು ಕುಟುಂಬದಲ್ಲಿ ಮದುವೆಯಾದ ಮಗಳ ಪಾಲನ್ನು ನಿರ್ಧರಿಸುವಾಗ ಅವರ ಮದುವೆಗೆ ಖರ್ಚು ಮಾಡಲಾದ ಹಣವನ್ನು ಲೆಕ್ಕಕ್ಕೆ ಸೇರಿಸುವುದು ಸರಿ. ಏಕೆಂದರೆ ಮಧ್ಯಮ ವರ್ಗದ ಕುಟುಂಬಗಳ

ವಿವಾಹಕ್ಕೆ ಖರ್ಚು ಮಾಡಿದ ಮೊತ್ತ ಪಾಲಿಗಿಂತಲೂ ಅಧಿಕವಾಗಿರುತ್ತದೆ. ಅದರಂತೆಯೇ ಒಂದೇ ಮನೆ, ಅಥವಾ ವ್ಯವಸಾಯ ಭೂಮಿ ಇದ್ದಲ್ಲಿ ಅದರಲ್ಲಿಯ ಪಾಲಿನ ಮೊತ್ತವನ್ನು ನಗದು ಹಣ ರೂಪದಲ್ಲಿ ಸ್ವೀಕರಿಸುವುದು ಸೂಕ್ತ.

**ಶ್ರೀ ಛ. ರಣಬೀರ್ ಸಿಂಗ್** (ಪೂ. ಪಂಜಾಬ್, ಸಾ.) : ನಗದು ಹಣವನ್ನು ಎಲ್ಲಿಂದ ತರುವುದು?

**ಶ್ರೀ ಕೆ. ಸಂತಾನಂ :** ಒಂದು ವೇಳೆ ನೀವು ಸಾಲಗಾರರಾಗಿದ್ದರೆ ಆಗ ಹಣವನ್ನು ಹೇಗೆ ಒದಗಿಸುವಿರಿ? ಅವರ ಪಾಲಿನ ಹಣವನ್ನು ಸುಲಭ ವಾರ್ಷಿಕ ಕಂತುಗಳ ಮೂಲಕ ನೀಡಬಹುದಲ್ಲವೇ? ಸಮರಸ ಕುಟುಂಬಗಳಲ್ಲಿ ಹೊಂದಾಣಿಕೆ ಸರಳ. ವಿರಸ ಕುಟುಂಬಗಳಿಗೆ ಕೋರ್ಟು ಪರಿಹಾರ ಮಾರ್ಗವನ್ನು ಸೂಚಿಸುತ್ತದೆ. ಆದುದರಿಂದ ಮಗನಂತೆಯೇ ಮಗಳನ್ನು ಪರಿಗಣಿಸಬೇಕೆಂದೇ ನನ್ನ ಸೂಚನೆ. ಇದರಲ್ಲಿ ಯಾವ ತೊಂದರೆಗಳೂ ಇಲ್ಲ. ಏಕೆಂದರೆ ಮಗಳು ಸೊಸೆಯೂ ಆಗಿರುವಳು. ಆದುದರಿಂದ ಈ ದಿಶೆಯಲ್ಲಿ ಕಾಲ್ಪನಿಕ ತೊಂದರೆಗಳಿಗೆ ಆಸ್ಪದ ನೀಡಬಾರದು. ಮಗಳಿಗೆ ತಂದೆಯ ಮನೆಯಂತೆ, ಬೇರೆ ಮನೆ ಅಂದರೆ ಮಾವನ ಮನೆಯಲ್ಲಿಯೂ ಭಾಗ ದೊರೆಯುವುದರಿಂದ ಇದೊಂದು ಸ್ತ್ರೀ ಪುರುಷರಲ್ಲಿಯ ರಾಜಿ ವಿಷಯವಾಗಿದೆ. ಆದುದರಿಂದ ಆಸ್ತಿ ಹಂಚುವಲ್ಲಿ ಈಗಿರುವ ವ್ಯವಸ್ಥೆಯೇ ಮುಂದುವರೆದಂತೆ, ಅವಳಿಗೆ ತಂದೆಯ ಮನೆಗಿಂತಲೂ ಮಾವನ ಮನೆಯಲ್ಲಿಯೇ ಅಧಿಕಾಂಶ ಪಾಲು ದೊರೆಯುತ್ತದೆ. ಆದರೆ ಹಂಚಿಕೆಯ ವಿಧಾನದಿಂದ, ಮಗಳು ನಾನೂ ಮಗನಂತೇ ಎಂದು ಭಾವಿಸಬಹುದು. ಈ ಒಂದು ಭಾವನೆಯನ್ನು ಈ ದೇಶದಲ್ಲಿ ಬೆಳೆಸಬೇಕು. ಏಕೆಂದರೆ ನಾವು ಪುರುಷರಂತೆ ಸ್ತ್ರೀಯರಿಗೂ ಮತದಾನದ ಹಕ್ಕನ್ನು ನೀಡಿದ್ದೇವೆ. ಆದುದರಿಂದ ಪಾಲುದಾರಿಕೆಯಲ್ಲಿ ಕೂಡ ಲಿಂಗಭೇದವನ್ನು ಕೈಬಿಡಬೇಕು. ಇಂದಲ್ಲ ನಾಳೆ ಈ ಭಾವನೆ ಬೆಳೆದು ಬಂದು ಸಮನ್ವಯತೆ ಉಂಟಾಗುವುದರಲ್ಲಿ ಸಂಶಯವಿಲ್ಲ. ಅಲ್ಲದೆ ಮುಂಗಡವಾಗಿ ಈಗಲೇ ಮಾಡುವುದು ಉತ್ತಮವಲ್ಲವೇ? ಇದರಿಂದಾಗಿ ಚುನಾವಣೆಗೆ ಮುನ್ನವೇ ಅಂದರೆ ೫ ಅಥವಾ ೬ ಕೋಟಿ ಸ್ತ್ರೀ ಮತದಾರರಿಗೆ ನಾವು ಹೇಳಬಹುದು. "ನೋಡಿ, ನೀವು ಕೇಳುವ ಮುನ್ನವೇ ನಾವು ಅಧಿಕಾರ ನೀಡಿರುವೆವು" "ನಿಮಗೆ ಆಸ್ತಿಯಲ್ಲಿ ಭಾಗವನ್ನು ನೀಡಿರುವೆವು", "ನೀವು ಪುರುಷರಿಗೆ ಸಮಾನರು", "ಇನ್ನು ಮುಂದೆ ಲಿಂಗಭೇದದ ಬಗ್ಗೆ ಕಲಹವಿಲ್ಲ." ಕೊನೆಯದಾಗಿ ಸುಧಾರಣೆಯ ಬಗೆಗೆ ಹೇಳಬಯಸುವುದೇನೆಂದರೆ ಅದು ವಿವಾಹ ರಂಗದಲ್ಲಿ ಕಡ್ಡಾಯ ಹಾಗೂ ಸ್ವಯಂ ಪ್ರೇರಣೆಯಿಂದ ಏಕಪತ್ನೀ ವಿವಾಹ ವ್ಯವಸ್ಥೆಯನ್ನು ಜಾರಿಗೊಳಿಸಬೇಕು. ಈ ಒಂದು ಸುಧಾರಣೆಗೆ ಸದನ ಸದಸ್ಯರೆಲ್ಲರೂ ಸಮ್ಮತಿಸಬೇಕೆಂದೇ ನನ್ನ ಕೋರಿಕೆ. ಅವರು ಈ ಬಗೆಗೆ ಜಾಣ್ಮೆಯ ಮೌನ ಮುರಿದು ಏಕಪತ್ನೀ ವ್ಯವಸ್ಥೆಗೆ ಬೆಂಬಲಿಸಲೇಬೇಕು ಎಂದು ಹೇಳುವೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಈ ಪದ್ಧತಿ ಆಗಲೆ ಜಾರಿಯಲ್ಲಿದೆ.

**ಶ್ರೀ ಕೆ. ಸಂತಾನಂ :** ಹಲವರು ಬಹುಪತ್ನೀ ಸುಖದಲ್ಲಿಯೇ ಇದ್ದರೆ ಹಲವರು ಮಾನಸಿಕವಾಗಿ ಹೆಚ್ಚು ಪತ್ನಿಯರನ್ನು ಹೊಂದುವ ಹಂಬಲದಲ್ಲಿದ್ದಾರೆ!

**ಶ್ರೀ ಹೆಚ್.ವಿ. ಕಾಮತ್ :** ಬಹುಪತಿಯ ಬಗೆಗೆ ಏನು?

**ಶ್ರೀ ಕೆ. ಸಂತಾನಂ :** ಆದುದರಿಂದಲೇ ಈ ದಿಶೆಯಲ್ಲಿ ಪುರಾತನ ಆರ್ಯ ಸಂಪ್ರದಾಯಿಗಳು ಒಂದು ಅಗಾಧವಾದ ತಪ್ಪನ್ನೆಸಗಿದ್ದಾರೆ. ಆದುದರಿಂದ ಈ ಮಹಾನ್ ಆರ್ಯನ್ನರ ಸಂತತಿಗೆ ಸೇರಿದ ನಾವು ಈ ಅಪರಾಧವನ್ನು ತಪ್ಪು ಎಂದು ಒಪ್ಪಿಕೊಂಡೇ ಅದನ್ನು ಸ್ವಯಂ ಪ್ರೇರಣೆ ಹಾಗೂ ಸಾಮೂಹಿಕ ಸರ್ವ ಸಮ್ಮತಿಯಿಂದ ಒಪ್ಪಿಕೊಳ್ಳಬೇಕು. ಹಾಗೂ ಬಹುಪತ್ನಿ ಪದ್ಧತಿಯು ಹೋಗಬೇಕು. ಆಗ ಏಕಪತ್ನಿ ವ್ಯವಸ್ಥೆ

ತಾನೇ ತಾನಾಗಿ ಸುಗಮವಾಗುತ್ತದೆ. ಆದರೆ ಸೂಕ್ತ ಪ್ರಕರಣಗಳಲ್ಲಿ ವಿಚ್ಛೇದನಕ್ಕೆ ಅವಕಾಶವಿರಲೇ ಬೇಕು, ಇಲ್ಲದೇ ಹೋದಲ್ಲಿ ಅದು ವಿವಿಧ ಹಾನಿಗೆ ಎಡೆ ಮಾಡಬಹುದು.

**ಶ್ರೀ ರೋಹಿಣಿ ಕುಮಾರ ಚೌಧರಿ :** ಅನೈತಿಕ ಸಂಬಂಧಗಳಿಗಾಗಿ ಸ್ತ್ರೀಯರಿಗೆ ಶಿಕ್ಷೆಯನ್ನು ನೀಡಲು ನೀವು ಒಪ್ಪುವಿರಾ?

**ಶ್ರೀ ಕೆ. ಸಂತಾನಂ :** ನಾನು ಸ್ತ್ರೀಯರಿಗೂ ಅಪರಾಧದ ಆಧಾರದ ಮೇಲೆ ಶಿಕ್ಷೆ ನೀಡಲು ಸಮ್ಮತಿಸುವೆ. ಆದರೆ ನನ್ನ ಅಸ್ವಾಮಿ ಮಿತ್ರರು ಈ ವಿಷಯದ ಬಗೆಗೆ ಮೃದು ಧೋರಣೆ ತಳೆಯಬಹುದು. ಏಕಪತ್ನಿ ವ್ಯವಸ್ಥೆ ಮತ್ತು ವಿವಾಹ ವಿಚ್ಛೇದನಗಳಿಗೆ ಒಪ್ಪಿಗೆ ಇರಬೇಕು. ಅವನ್ನು ಒಂದೇ ಶಾಸನದ ಹೊಂದಾಣಿಕೆ ಎಂದೇ ಭಾವಿಸುವುದಕ್ಕೆ ಶಾಸ್ತ್ರಗಳು ಸಮ್ಮತಿಸುವುವೇ?........

**ಪಂಡಿತ ಗೋವಿಂದ ಮಾಳವೀಯ** (ಉ.ಪ್ರ, ಸಾ.) : ಅಂದರೆ ವಿವಾಹ ವಿಚ್ಛೇದನಕ್ಕೆ ಸಮ್ಮತಿಸದೇ ಹೋದರೆ ಮಾನ್ಯ ಸದಸ್ಯರು ಏಕಪತ್ನಿ ವ್ಯವಸ್ಥೆಯನ್ನೇ ಒಪ್ಪಲಾರರೋ?

**ಶ್ರೀ ಕೆ. ಸಂತಾನಂ :** ನಾನು ವಿವೇಚಿತ, ಏಕಪತ್ನೀ ವ್ಯವಸ್ಥೆಯನ್ನು ಅನುಮೋದಿಸುವೆ. ಆದರೆ ನನ್ನ ಸ್ನೇಹಿತರು ಹೇಳಿದಂತೆ ಪತಿ ಷಂಡನಾಗಿದ್ದಲ್ಲಿ, ಅಪರಾಧಿಯಾದಲ್ಲಿ ವಿಚ್ಛೇದನಕ್ಕೆ ಪರಸ್ಪರ ಅವಕಾಶವಿರಬೇಕು. ಆದುದರಿಂದ ನನ್ನ ಮಿತ್ರರು ವಿವೇಚನಾರಹಿತ ಏಕಪತ್ನಿ ವ್ಯವಸ್ಥೆಯನ್ನು ಬಯಸಲಾರರು ಎಂದೇ ನಂಬುವೆ. ಈ ವ್ಯತ್ಯಾಸವನ್ನು ಅವರು ಅರಿಯುವರೆಂದೇ ಆಶಿಸುವೆ. ಈ ವಿಧೇಯಕದ ಮತ್ತೊಂದು ಪ್ರಮುಖ ಲಕ್ಷಣವೆಂದರೆ ಜಾತಿ ವ್ಯವಸ್ಥೆಗೆ ಕಾನೂನುಬದ್ಧ ಯಾವ ಅಧಿಕಾರವನ್ನೂ ನೀಡದೇ ಇರುವುದು. ಏಕೆಂದರೆ ಅಸ್ಪೃಶ್ಯತೆಯನ್ನೇ ಸಂವಿಧಾನದಲ್ಲಿ ತೊಡೆದು ಹಾಕಲಾಗಿದೆ. ಈ ಕ್ರಮದಿಂದಾಗಿ ಜಾತಿವ್ಯವಸ್ಥೆಗೆ ಕಾನೂನುಬದ್ಧ ಅಧಿಕಾರಗಳನ್ನು ನೀಡದೇ ಹೋದುದರಿಂದ ಸಾಮಾಜಿಕ ಸುಧಾರಣೆಗೆ ಪ್ರೋತ್ಸಾಹ ದೊರೆಯುತ್ತದೆ. ಈ ವಿಧೇಯಕದಿಂದಾಗಿ ವಿವಾಹ ಹಾಗೂ ಇತರ ಉದ್ದೇಶಗಳಿಗಾಗಿ, ಹರಿಜನರಿಂದ, ಆಚಾರ್ಯ ಬ್ರಾಹ್ಮಣ ಮೊದಲುಗೊಂಡು ಎಲ್ಲರೂ ಸರಿ ಸಮಾನರು.

**ಹಲವಾರು ಸದಸ್ಯರು :** ಜಾತಿಯಿಲ್ಲದ ಹಿಂದೂಗಳ್ಯಾರು?

**ಶ್ರೀ ಕೆ. ಸಂತಾನಂ :** ನನ್ನ ಸ್ನೇಹಿತರು ಜಾತಿ ಇಲ್ಲದ ಹಿಂದೂಗಳು ಯಾರು? ಎಂದೇ ಕೇಳಿದ್ದಾರೆ. ಆದರೆ ಜಾತಿವಾದಿ ಹಿಂದೂ ಓರ್ವ ರಾಕ್ಷಸನೆಂದೇ ನನ್ನ ಅಭಿಪ್ರಾಯ (ಹಿಯರ್ ಹಿಯರ್). ಈ ದೇಶದಲ್ಲಿ ನಾವು ಜಾತಿರಹಿತ ಹಿಂದೂ ಸಮಾಜವನ್ನು ಸೃಷ್ಟಿ ಮಾಡಬಯಸುವೆವು. ಅಥವಾ ಜಾತಿರಹಿತ ಹಿಂದುತ್ವ ಬಿಟ್ಟರೆ ಬೇರೆ ಏನೂ ಇರಲಾರದು.

**ಶ್ರೀ ಲಕ್ಷ್ಮೀನಾರಾಯಣ ಸಾಹು :** ಮಹಮ್ಮದೀಯರನ್ನೂ ಹಿಂದೂ ಎಂದು ಕರೆಯಬಹುದೇ?

**ಶ್ರೀ ಕೆ. ಸಂತಾನಂ :** ಎಂದು ಮಹಮ್ಮದೀಯರು ಗೀತಾ ಹಾಗೂ ವೇದಾಂತವನ್ನು ಒಪ್ಪಿಕೊಳ್ಳುವರೋ ಅಂದು, ನಾನು ಅವರನ್ನು ಹಿಂದೂಗಳೆಂದೇ ಅಪ್ಪಿಕೊಳ್ಳುವೆ.

**ಶ್ರೀ ಎಂ. ತಿರುಮಲರಾವ್ :** ಗೀತೆಯೂ ಜಾತಿಯ ಬಗೆಗೆ ಹೇಳಿದೆ.

**ಉಪಾಧ್ಯಕ್ಷರು :** ಈ ಅಡ್ಡ ಮಾತುಗಳಿಗೆ ಮಿತಿ ಇರಲಿ. ಈ ವಿಧವಾಗಿ ಮಾತು ಮುಂದುವರಿದರೆ ಮಾನ್ಯ ಸದಸ್ಯರ ಹೇಳಿಕೆಗೆ ಅಡಚಣೆಯಾಗುತ್ತದೆ.

**ಶ್ರೀ. ಕೆ. ಸಂತಾನಂ :** ಈ ವಿಧವಾದ ಅಡ್ಡ ಪ್ರವೇಶಗಳಿದ್ದರೂ, ನಾನು ಸದಸ್ಯರಿಗೆ ಮನವರಿಕೆ ಮಾಡಬಲ್ಲೆ. ನನ್ನ ಮಿತ್ರರಾದ ಶ್ರೀ ತಿರುಮಲರಾವ್ ಅವರು ಹೇಳುವಂತೆ ನಾನು ಗೀತೆಯ ಮೇಲೆ ಪ್ರಮಾಣವಚನ ಸ್ವೀಕರಿಸಬೇಕಂತೆ. ಆದರೆ ನಾನು ಹೇಳುವುದೇನೆಂದರೆ ಅದು ನಂಬಿಕೆಯ ಕನಿಷ್ಠ ವಿಧಾನ.

ಆದರೆ ಈ ವಿಧೇಯಕ ಜಾರಿಗೆ ಬಂದ ಮೇಲೆ ನಾವೆಲ್ಲರು ಭಾರತೀಯರು, ಆದುದರಿಂದ ಹಿಂದೂ, ಮುಸಲ್ಮಾನ, ಕ್ರಿಶ್ಚಿಯನ್ ಮುಂತಾದ ಮತಭೇದಗಳೇ ಇರಲಾರವು; ಏಕೆಂದರೆ ಈ ವಿಧವಾದ ವಿವೇಚನಾರಹಿತವಾದ ಭೇದ ಭಾವನೆಗಳನ್ನು ಹೊಂದುವುದರಲ್ಲಿ ಏನೂ ಹೆಮ್ಮೆ ಇರಲಾರದು. ಈ ಬಗೆಯ ವಿವೇಚನಾರಹಿತ ಭೇದ ಭಾವನೆಗಳನ್ನು ಮುಸಲ್ಮಾನರೂ, ಕ್ರಿಶ್ಚಿಯನ್ನರೂ ಕಿತ್ತು ಹಾಕಿದರೆ ನಾವೆಲ್ಲರೂ ಒಂದೇ ಎಂಬ ಸಮನ್ವಯತೆ ತಾನೇ ತಾನಾಗಿ ಉದ್ಭವಿಸುವುದು. ಆದುದರಿಂದಲೇ ಈ ವಿಧೇಯಕ ಹಾಗೂ ನಮ್ಮ ಸಂವಿಧಾನದಲ್ಲಿಯ ಉದ್ದೇಶವೆಂದರೆ ಈ ದೇಶದ ಅಧಿಕ ಧರ್ಮದವರು ಈ ವಿಷಯಕ್ಕೆ ಬೆಂಬಲ ನೀಡಿದಲ್ಲಿ ಸಮನ್ವಯತೆಯನ್ನು ಸರಳವಾಗಿ ಸಾಧಿಸಬಹುದು. ಇದರಿಂದ ಭಾರತದ ಭವಿಷ್ಯ ಭವ್ಯವಾಗಿ ಬೆಳಗಬಹುದು. ಈ ಒಂದು ನಂಬಿಕೆಯಿಂದಲೇ ಸಂವಿಧಾನ ರಚಿಸಿದ ಸದನವೇ ಹಿಂದೂ ಕೋಡ್ ವಿಧೇಯಕವನ್ನು ರಚಿಸಿ ಅದನ್ನು ಕಾನೂನುಬದ್ಧ ಮಾಡಿ ಮುಂದಿನ ಪೀಳಿಗೆಗೆ ನೀಡಲು ನಿರ್ಧರಿಸಿರುವುದು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಸಂವಿಧಾನವನ್ನು ಹಾಳುಗೆಡವಿದಿರಿ!

**ಶ್ರೀ ಕೆ. ಸಂತಾನಂ :** ನಂಬಿಕೆಯಂತೆ, ನಮ್ಮ ಹಿರಿಯರು ನಮ್ಮ ಈ ಕಾರ್ಯ ನೋಡಿ ನಲಿದು ನಮ್ಮನ್ನು ಮೇಲಿಂದ ಆಶೀರ್ವಾದ ಮಾಡುವರು.

**ಶ್ರೀ ಲೋಕನಾಥ ಮಿಶ್ರ :** ಮಾಹಿತಿಗಾಗಿ, ನನ್ನ ಮಿತ್ರರು ಈಗ ತಾನೆ ಗೀತೆ ಹಾಗೂ ವೇದಾಂತಗಳಂತೆ ಪ್ರಮಾಣ ಸ್ವೀಕರಿಸಲು ಸಿದ್ಧರೆಂದು ಹೇಳಿದ್ದಾರೆ. ಹೀಗೆಯೇ ಅವುಗಳಿಗೆ ವಿರೋಧವಾಗಿರುವ ವಿಷಯಗಳನ್ನು ಒಪ್ಪುವರೇ?

**ಶ್ರೀ ಕೆ. ಸಂತಾನಂ :** ಅವು ತಪ್ಪು ಕಲ್ಪನೆಗಳ ಮೇಲೆ ಆಧರಿಸಿದ್ದರೆ ಅವನ್ನು ತಿರಸ್ಕರಿಸುವೆ.

**ಉಪಾಧ್ಯಕ್ಷರು :** ಈ ವಿಷಯಗಳ ಬಗೆಗೆ ಚರ್ಚೆ ಅನಾವಶ್ಯಕ.

**ಶ್ರೀ ಕೆ. ಸಂತಾನಂ :** ಸರ್, ನಾನು ಸದನಕ್ಕೆ ಬೇಜಾರು ಮಾಡಲಾರೆ. ನಾನು ಪ್ರಮುಖ ವಿಷಯಗಳನ್ನು ನನಗೆ ತಿಳಿದಂತೆ ಮಂಡಿಸಿರುವೆ. ಈ ವಿಧೇಯಕದ ಬಗೆಗೆ ಕೇವಲ ಪುರಾತನ ನಂಬಿಕೆಗಳಿಂದಲೇ ವಿರೋಧಿಸಬೇಕೆಂದಿರುವವರು, ತಮ್ಮ ನಿಲುವನ್ನು ಬದಲಾಯಿಸಿ, ಇದರ ಬಗೆಗೆ ಮತ್ತೊಂದು ಬಾರಿ ದೀರ್ಘಾಲೋಚನೆ ಮಾಡಿದರೆ ನನ್ನ ಶ್ರಮ ಸಾರ್ಥಕವಾಯಿತೆಂದೇ ನಾನು ಭಾವಿಸುವೆ. ಇದರಿಂದಾಗಿ ಸಾವಿರಾರು ಸಂವತ್ಸರಗಳಿಂದ ದಾಸ್ಯದಲ್ಲಿರುವ ಜನಾಂಗಕ್ಕೆ ಮುಕ್ತಿ ದೊರೆತು ನೂತನ ಸಮಾಜ ನಿರ್ಮಿಸಲು ಸಾಧ್ಯ. ಇದನ್ನು ನಮ್ಮ ಮೊಮ್ಮಕ್ಕಳು ಕೊಂಡಾಡುವರು.

**ಶ್ರೀ ಹೆಚ್. ವಿ. ಪಾಟಸ್ಕರ್** (ಬೊಂಬಾಯಿ ಸಾ.) : ಸರ್, ಹಿಂದೂ ಸಮಾಜದಲ್ಲಿ ಸಂಪೂರ್ಣ ಬದಲಾವಣೆ ತರಬಲ್ಲ ಕ್ರಾಂತಿಕಾರಿ ವಿಧೇಯಕವನ್ನು ನಾವು ಈಗ ಪರಿಶೀಲಿಸುತ್ತಿದ್ದೇವೆ. ಈ ಸಮಯದಲ್ಲಿ ಅಂದಾಜು ೨೫ ಕೋಟಿ ಜನರು ನಮ್ಮಲ್ಲಿದ್ದಾರೆ. ನಾವು ಹಿಂದೂ ಸಮಾಜದಲ್ಲಿಯೇ ಅಗಾಧವಾದ ಬದಲಾವಣೆಗಳನ್ನು ತರಲಿರುವ ಈ ವಿಧೇಯಕದಲ್ಲಿ ಶ್ರೀಸಾಮಾನ್ಯನೂ ಅಪಾರ ಆಸಕ್ತಿ ಹೊಂದಿರುವನು. ಆದುದರಿಂದ ನಾವು ಅವರ ಆಸಕ್ತಿಯ ಮೇಲೆ ನೀರೆರಚಬಾರದು. ಏಕೆಂದರೆ:

ಸದ್ಯದಲ್ಲಿ ಶ್ರೀಸಾಮಾನ್ಯನು, ವಿದ್ಯಾವಂತನಾಗಿಲ್ಲ. ಅಲ್ಲದೇ ಅವನು ತನ್ನದೇ ಆದ ಅನ್ನ ವಸತಿ ಮುಂತಾದ ಸಮಸ್ಯೆಗಳಿಂದ ತೊಳಲಾಡುತ್ತಿದ್ದಾನೆ. ಅವನು ತನ್ನ ಜೀವನಾಧಾರ ವಸ್ತುಗಳ ಕೊರತೆಯಿಂದ ತನ್ನ ಸಂಸಾರವನ್ನು ಹೇಗೆ ರಕ್ಷಿಸಬೇಕೆಂದೇ ಆಲೋಚಿಸುತ್ತಿದ್ದಾನೆ. ಆದುದರಿಂದ ನಾವು ಮೊದಲು ಮಾಡಬೇಕೆಂದಿರುವ ಸಂಗತಿ ಎಂದರೆ ಅವನಿಗೆ ಈ ಬಗೆಯ ಗಂಭೀರ ವಿಷಯಗಳನ್ನು ಅರಿಯುವಂತೆ

ಮಾಡಬೇಕು. ನಾನು ಸ್ಪಷ್ಟಪಡಿಸುವುದೇನೆಂದರೆ, ನಾನು ಮೂಲಭೂತವಾಗಿ ಈ ವಿಧೇಯಕದ ವಿರೋಧಿಯಲ್ಲ. ನಾನು ಕೇವಲ ೨೦ ನಿಮಿಷಗಳಲ್ಲಿ, ಯಾರು ಅಡಚಣೆ ಮಾಡದೇ ಹೋದರೆ, ನನ್ನ ಹೇಳಿಕೆಯನ್ನು ಪೂರೈಸುವೆ. ಏಕೆಂದರೆ ಇನ್ನೂ ಹಲವಾರು ಸದಸ್ಯರು ಮಾತನಾಡಲು ಬಯಸಿದ ಸಂಗತಿ ನನಗೆ ಗೊತ್ತು.

ನನಗೆ ತೋಚಿದಂತೆ, ಈ ವಿಧೇಯಕದ ಬಗೆಗೆ ಶ್ರೀಸಾಮಾನ್ಯನ ಪ್ರತಿಕ್ರಿಯೆ ಎಂದರೆ, ಸರಕಾರದವರು ಮೂಲಭೂತ ಸಮಸ್ಯೆಗಳಾದ ಅನ್ನ, ಬಟ್ಟೆ, ವಸತಿಗಳ ಅಭಾವದಿಂದ ದೇಶ ನರಳುತ್ತಿರುವಾಗ, ಮದುವೆ, ವಿಚ್ಛೇದನ, ಪಾಲು, ದತ್ತು ಮುಂತಾದ ಅನಾವಶ್ಯಕ ವಿಷಯಗಳ ಬಗೆಗೆ ಏಕೆ ತಲೆ ಕೆಡಿಸಿಕೊಳ್ಳುತ್ತಿದೆ. ಅವನು ಈಗ ಸರಕಾರದಿಂದ ಬಯಸುವುದೆಂದರೆ ಝೀವನ ಸಾಗಿಸಲಿಕ್ಕೆ ಅನಿವಾರ್ಯವಾದ ಆವಶ್ಯಕತೆಗಳ ಪೂರೈಕೆಯೇ ಹೊರತು ಮಿಕ್ಕ ವಿಷಯಗಳಲ್ಲಿ ನಾನು ಸುಧಾರಣಾ ವಿರೋಧಿಯಲ್ಲ. ನಮ್ಮ ಹಿರಿಯರು ಹೇಳಿದಂತೆ ನಾವೀಗ ಸಂದಿಗ್ಧ ಪರಿಸ್ಥಿತಿಯಲ್ಲಿದ್ದೇವೆ. ಆದರೆ ಜನರ ಸುಖ ದುಃಖಗಳನ್ನೂ ನಾವು ಗಮನಿಸಬೇಕು ಆದುದರಿಂದ ಅನಿವಾರ್ಯವಾದ ವಿಷಯಗಳ ಬಗೆಗೆ ಗಮನ ಹರಿಸದೇ ಅನಾವಶ್ಯಕವಾದ ವಿಷಯಕ್ಕೆ ಏಕೆ ಆತುರ? ಈ ಸಮಸ್ಯೆಗಳು ಸಹಸ್ರಾರು ಸಂವತ್ಸರಗಳಿಂದ ನಮ್ಮನ್ನು ಕಾಡುತ್ತಲಿವೆ. ಅದನ್ನು ಇನ್ನೂ ಕೆಲ ಕಾಲದ ನಂತರ ಕೈಗೆತ್ತಿಕೊಳ್ಳಬಹುದಲ್ಲವೇ?

ನಮ್ಮ ಬಂಧು ಭಗಿನಿಯರು, ಈ ವಿಧೇಯಕದ ಬಗೆಗೆ ಉತ್ಸುಕರಾಗಿರುವರು. ಅವರು ಹಳ್ಳಿಗಾಡಿಗೆ ಹೋಗಿ ನೋಡಿದರೆ, ದೇಶದ ವಿಭಜನೆಯಿಂದಾಗಿ ಕಠಿಣ ಸಮಸ್ಯೆಗಳನ್ನು ನಮ್ಮ ಜನರು ಎದುರಿಸುತ್ತಿರುವುದನ್ನು ಕಾಣಬಹುದು. ಪರಿಸ್ಥಿತಿ ಹದಗೆಟ್ಟಿರುವಾಗ ನಮ್ಮ ಈ ಆತುರ ಸರಿಯೇ? ಈ ವಿಧೇಯಕದ ಮಂಡನೆಗೆ ಇದು ಸೂಕ್ತ ಸಮಯ ಅಲ್ಲ. ಇಂದಿನ ಪರಿಸ್ಥಿತಿಯಿಂದ ಈ ವಿಧೇಯಕಕ್ಕೆ ತೊಂದರೆಯುಂಟಾಗಲೂ ಬಹುದು. ಏಕೆಂದರೆ ಈ ವಿಧೇಯಕದಲ್ಲಿ ಅಡಕವಾಗಿರುವ ವಿಷಯಗಳಾದರೂ ಏನು? ಮದುವೆ, ಮತ್ತು ವಾರಸುದಾರಿಕೆ. ಝೀವನಕ್ಕೆ ಆತಂಕಕಾರಿಯಾದ ಈ ಸಮಯದಲ್ಲಿ ಇವನ್ನು ಕೈಗೆತ್ತಿಕೊಳ್ಳಬಹುದೇ? ಮದುವೆಯ ಬಗೆಗೆ ಈಗಾಗಲೇ ನಾಗರಿಕ ವಿವಾಹ ಮಸೂದೆ ಜಾರಿಯಲ್ಲಿದೆ. ಹೀಗಾಗಿ ಸಂಪ್ರದಾಯ ವಿರೋಧವಾಗಿ ಮದುವೆ ಮಾಡಿಕೊಳ್ಳುವವರಿಗೆ ಅವಕಾಶ ನೀಡಲಾಗಿದೆ. ಅದರಂತೆ ಅನೇಕರು ಆಚರಿಸುತ್ತಿರುವಾಗ ಈ ವಿಧೇಯಕಕ್ಕೆ ಏಕೆ ಇಷ್ಟು ಆತುರ?

**ಓರ್ವ ಸದಸ್ಯ :** ಆ ಕಾನೂನಿನಲ್ಲಿ ನೀವು ಯಾವ ಧರ್ಮದವರೆಂದು ಹೇಳಲು ಆಸ್ಪದವಿಲ್ಲವೇ?

**ಶ್ರೀ ಹೆಚ್.ವಿ. ಪಾಟಸ್ಕರ್ :** ನನ್ನ ಮಿತ್ರರೇ, ಅದು ಎಂದೋ ಮೃತಪಟ್ಟು ಹೋಗಿದೆ. ನಾಗರಿಕ ವಿವಾಹದಡಿಯಲ್ಲಿ ಯಾರೇ ಹಿಂದೂಗಳು, ಯಾವ ಜಾತಿಗೆ ಸೇರಿದ್ದರೂ ಮದುವೆಯಾಗುವ ಅವಕಾಶವನ್ನು ನೀಡಲಾಗಿದೆ. ಅವರು ತಮ್ಮ ಜಾತಿಯನ್ನು ಹೇಳದೇ ಮದುವೆಯಾಗಲೂಬಹುದು. ಇನ್ನು ನಾವು ನಮ್ಮ ಸಂವಿಧಾನದಲ್ಲಿ ಎಲ್ಲರೂ ಸಮಾನರೆಂದೇ ಸಾರಿರುವಾಗ ವಾರಸುದಾರಿಕೆಯ ಬಗೆಗೆ ಏಕೆ ತಲೆ ಕೆಡಿಸಕೊಳ್ಳಬೇಕು? ಎಲ್ಲರೂ ಸಮಾನರೆಂದ ಮೇಲೆ ಸಮನ್ವಯತೆಗೆ ಕುಂದು ಎಲ್ಲಿದೆ? ಹೀಗಾಗಿ ಸಮಾನತೆಯಿಂದ ಹಿಂತೆಗೆಯುವ ಪ್ರಶ್ನೆಯೇ ಇಲ್ಲ. ಅಲ್ಲದೆ ಲಿಂಗಭೇದದ ಪ್ರಶ್ನೆಯೇ ಇಲ್ಲ. ಏಕೆಂದರೆ ತಂದೆಯಾದವನು ಮಗ–ಮಗಳನ್ನು ಒಂದೇ ವಿಧವಾಗಿ ಪ್ರೀತಿಸುತ್ತಾನೆ. ಆದುದರಿಂದ ವಾರಸುದಾರಿಕೆಯನ್ನು ಬೇರೆ ದೃಷ್ಟಿಯಿಂದ ನೋಡಬೇಕು. ಇದು ಎಲ್ಲಾ ಧರ್ಮಗಳಾದ, ಕ್ರಿಶ್ಚಿಯನ್, ಜೊರಾಷ್ಟ್ರಿಯನ್ ಅವರಿಗೂ ಸಂಬಂಧಿಸಿದ ಸಂಗತಿಯಾಗಿದೆ.... ಇಸ್ಲಾಂ ಧರ್ಮಕ್ಕು........

**ಓರ್ವ ಸದಸ್ಯ :** ಆಗ ಧರ್ಮದ ಗತಿ ಏನು?

**ಶ್ರೀ ಹೆಚ್. ವಿ. ಪಾಟಸ್ಕರ್ :** ಕ್ರಿಶ್ಚಿಯನ್ ಧರ್ಮ ಎಂದರೆ ಕ್ರಿಸ್ತನಲ್ಲಿ ನಂಬಿಕೆಯುಳ್ಳವರು, ಜೊರಾಷ್ಟ್ರನಲ್ಲಿ

ನಂಬಿಕೆ ಹೊಂದಿದವರು ಜೊರಾಷ್ಟ್ರಿಯನ್ನರು, ಮಹಮದ್ ಪೈಗಂಬರ ಹಾಗೂ ಕುರಾನನ್ನು ನಂಬಿದವರು ಮಹಮ್ಮದೀಯರು. ಆದರೆ ಹಿಂದೂಗಳ ಬಗೆಗೆ ಏನು? ಹಿಂದೂತ್ವವು ವಿವಿಧ ದೇವರುಗಳಾದ ರಾಮ, ಕೃಷ್ಣ, ವೇದ, ಮುಂತಾದವು ಅಲ್ಲದೇ ಅವರು ದೇವನನ್ನು ನಂಬದೇ ಇರುವ ತತ್ತ್ವಗಳಿಂದಲೂ ಕೂಡಿರುವಾಗ ಯಾರು ಹಿಂದೂಗಳು. ಅಲ್ಲದೆ ಹಿಂದುತ್ವವು ಅನೇಕ ಶತಮಾನಗಳ ಸಾಮಾಜಿಕ, ಧಾರ್ಮಿಕ ವಿವಿಧ ಪ್ರವಾಹಗಳನ್ನು ಅರಗಿಸಿಕೊಂಡಿರುವ ಒಂದು ಮಹಾನ್ ಧರ್ಮ. ಅದು ವಿವಿಧ ಆದರ್ಶಗಳನ್ನು ಅಳವಡಿಸಿಕೊಂಡಿರುವ ವಿಶ್ವಕುಟುಂಬ ಧರ್ಮ. ಆದರೆ ಈ ವಿಧವಾದ ವಿಶಾಲ ಮನೋಭಾವನೆಗಳಿಂದ ಕೂಡಿದ ಧರ್ಮವು ಇಂದು ಜಾತಿಗಳ ಸಂಕೋಲೆಗಳಿಗೆ ಈಡಾಗಿದೆ. ಮತ್ತೊಂದು ವಿಷಯ ನಮ್ಮ ಧರ್ಮ ಕೇವಲ ಓರ್ವ ವ್ಯಕ್ತಿ ಅಥವಾ ಯಾವುದೋ ಒಂದು ಕೃತಿಗೆ ಸೀಮಿತವಾಗಿರದೇ ವಿಶ್ವ ಧರ್ಮವನ್ನೇ ಆಚರಿಸುತ್ತದೆ; ಏಕೆಂದರೆ ಧರ್ಮ ಎಂದರೆ, "ಧಾರಯತೇ ಅನೇನ ಇತಿ ಧರ್ಮಃ" ಅಥವಾ "ಧಾರಣಾತ್ ಧರ್ಮಂ ಇತ್ಯಾಹುಃ" ಅಂದರೆ ಸಮಾಜವನ್ನು ಒಳಗೊಂಡಿರುವುದೇ ಧರ್ಮ. ಹೀಗಾಗಿ ಸಮಾಜದ ವಿಕಾಸಕ್ಕೆಂದೇ ಹುಟ್ಟಿರುವ ಧರ್ಮವನ್ನು ಇಂದು ನಾವು ಯಾವ ಮಟ್ಟಕ್ಕೆ ತಂದಿದ್ದೇವೆ? ಇಂದು ನಮ್ಮ ಸಮಾಜ ನಾರುತ್ತಿರಬಹುದು. ಆದರೆ ಅದು ನಿಜಕ್ಕೂ ನಮ್ಮ ಸಮಾಜದ ಸ್ಥಿತಿಯಾಗಿರಲಾರದು. ಏಕೆಂದರೆ ನಮ್ಮ ಹಿಂದೂ ಸಮಾಜವು ಅನೇಕ ಬದಲಾವಣೆಗಳನ್ನು ಎದುರಿಸಿದೆ. ಒಂದು ಕಾಲದಲ್ಲಿ ಬೌದ್ಧಮತ ದೇಶದಲ್ಲಿ ಮಾತ್ರವಲ್ಲ ವಿದೇಶಗಳಲ್ಲಿಯೂ ಹಬ್ಬಿತ್ತು. ಆದರೆ ಇಂದು ಈ ದೇಶದಲ್ಲಿಯ ಬೌದ್ಧರ ಸಂಖ್ಯೆ ಏನು? ಅವರಿಗೇನಾಯಿತು? ಅವರನ್ನೆಲ್ಲಾ ಹಿಂದೂ ಧರ್ಮದಲ್ಲಿ ಅಳವಡಿಸಿಕೊಂಡಿತು. ಇದರಿಂದ ನಮ್ಮ ಸಮಾಜ ಯಾವಾಗಲೂ ಮುಂದುವರಿಯುತ್ತಿರುವ ಸಮಾಜ ಎಂದೇ ಸಿದ್ಧವಾಗಿದೆ. ಹೀಗಾಗಿ ನಮ್ಮ ಹಿಂದೂ ಲಾಗಳು ಕಾಲ ಕಾಲಕ್ಕೆ ಬದಲಾವಣೆ ಹೊಂದುತ್ತಲೇ ಬಂದಿವೆ. ಇದು ಬ್ರಿಟಿಷ್ ಆಡಳಿತಕ್ಕೂ ಅನ್ವಯಿಸುತ್ತದೆ.

ಈ ಹಿಂದೆ ಮಾತನಾಡಿದ ಮಾನ್ಯ ಸಂತಾನಂ ಅವರು ಸೂಕ್ತವಾಗಿಯೇ ನ್ಯಾಯಾಲಯಗಳು ಅರ್ಥಯಿಸಿದುದನ್ನು ವ್ಯಕ್ತಪಡಿಸಿದ್ದಾರೆ. ಏಕೆಂದರೆ ಅವುಗಳಿಗೆ ಹಿಂದಿನ ಶಾಸನಗಳ ಮಾಹಿತಿ, ವಾರಸುದಾರಿಕೆ, ದತ್ತು ಮುಂತಾದವಕ್ಕೆ ಸಂಬಂಧಿಸಿದಂತೆ, ಇರದೇ ಹೋದರೂ, ಅವರು ನಮ್ಮ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗೆಂದೇ ಹಲವಾರು ಬದಲಾವಣೆಗಳನ್ನು ಜಾರಿಗೊಳಿಸಿದ್ದಾರೆ. ಅದು ಬದಲಾಗುತ್ತಿರುವ ನಮ್ಮ ಸಮಾಜಕ್ಕೆ ಸೂಕ್ತ ಎಂದೇ ಹೇಳಬಹುದಾಗಿದೆ. ಏಕೆಂದರೆ ಜಗತ್ತು ಬದಲಾಗುತ್ತಲೇ ಇದೆ. ಈ ಬದಲಾವಣೆಗಳಿಂದ ನಾವು ವಂಚಿತರಾಗಕೂಡದು. ಆದರೆ ಕಾನೂನುಗಳನ್ನು ಕ್ರೋಡೀಕರಿಸುವುದು, ಅಂತೆಯೇ ತಿದ್ದುಪಡಿಗೆ ಗುರಿ ಮಾಡುವುದು ಎರಡೂ ಕ್ರಮಗಳು ಬೇರೆ. ಆದರೆ ಈ ವಿಧೇಯಕವು ಅವೆರಡನ್ನು ಒಟ್ಟಿಗೆ ಕೈಗೆತ್ತಿಕೊಂಡಿದೆ. ನನಗೆ ತಿಳಿದಂತೆ ಕ್ರೋಡೀಕರಣವೆಂದರೆ, ಅಸಂಗತ ವಿಷಯಗಳ ನಿರ್ಮೂಲನೆ. ಸದ್ಯ ನಮ್ಮಲ್ಲಿ ವಿವಿಧ ಕಾನೂನುಗಳು ಜಾರಿಯಲ್ಲಿವೆ. ಒಂದು ಭಾಗದಲ್ಲಿ ದಾಯಭಾಗವಿದ್ದರೆ ಮತ್ತೊಂದೆಡೆ ಮಿತಾಕ್ಷರ, ಹಾಗೂ ಬೊಂಬಾಯಿಯಲ್ಲಿ ತನ್ನದೇ ಆದ ಹಲವಾರು ವಿಧಾನಗಳೂ ಜಾರಿಯಲ್ಲಿವೆ. ದಕ್ಷಿಣ ಭಾರತದ ಕೆಲವೆಡೆಯಲ್ಲಿ ಮರುಮಕ್ಕತ್ತಾಯಂ ಜಾರಿಯಲ್ಲಿದೆ. ಈ ಎಲ್ಲವನ್ನೂ ನಿವಾರಿಸಬೇಕಾದರೆ ನಾವು ಈಗ ಜಾರಿಯಲ್ಲಿರುವ ಕಾನೂನುಗಳನ್ನು ಕ್ರೋಢೀಕರಿಸುವುದರಿಂದ ಮುಂದೆ ಅವನ್ನು ತಿದ್ದುಪಡಿಗೆ ಗುರಿ ಮಾಡಲು ಅನುಕೂಲವಾಗುತ್ತದೆ. ಕೇವಲ ಕ್ರೋಡೀಕರಣ ವಿವಾದಾಸ್ಪದವಾಗಿರದು, ಏಕೆಂದರೆ ಅದು ಜಾರಿಯಲ್ಲಿರುವ ಕಾನೂನುಗಳೇ ಅಲ್ಲವೇ? ಅಲ್ಲದೆ ಈಗಾಗಲೇ ಈ ಕಾನೂನುಗಳನ್ನು ಬ್ರಿಟಿಷ್ ನ್ಯಾಯಾಧೀಶರು ಸಾಕಷ್ಟು ಬದಲಾಯಿಸಿದ್ದಾರೆ. ಆದುದರಿಂದ ಕ್ರೋಡೀಕರಣವೊಂದನ್ನೇ ಕೈಗೆತ್ತಿಕೊಂಡಲ್ಲಿ ವಿರೋಧವೇನೂ

ಇರಲಾರದೆಂದೇ ನನ್ನ ಭಾವನೆ. ಅಲ್ಲದೆ ಈಗ ನಾವು ಕೇವಲ ಕ್ರೋಡೀಕರಣ ಒಂದನ್ನೇ ಕೈಗೆತ್ತಿಕೊಂಡಲ್ಲಿ ನಾವು ಜನರ ಸದ್ಭಾವನೆ ಪಡೆಯಬಹದು. ಹಾಗೂ ಮುಂದೆ ತಿದ್ದುಪಡಿ ಮಾಡಲು ಸಹಕಾರಿಯೂ ಆಗಬಹುದು. ಆದರೆ ಈಗಲೇ ತಿದ್ದುಪಡಿಯನ್ನು ಕೈಗೆತ್ತಿಕೊಂಡಿರುವುದು ಬೇರೆ ವಿಷಯ. ಈ ಎರಡೂ ವಿಷಯಗಳನ್ನು ಒಟ್ಟಿಗೆ ಎತ್ತಿಕೊಂಡಿರುವುದು ಕಳೆದೆರಡು ವರ್ಷಗಳಿಂದ ಬೆಂಕಿ ಹತ್ತಿದಂತಾಗಿದೆ. ಒಂದಾದ ನಂತರ ಎರಡನ್ನೂ ಕೈಗೆತ್ತಿಕೊಂಡಿರುವುದರಿಂದ ಅನೇಕ ಮಸೂದೆಗಳನ್ನು ಮಂಡಿಸಲೇ ಬೇಕಾಯಿತು. ಆದರೆ ಎರಡನ್ನೂ ಒಂದೇ ಬಾರಿಗೆ ಕೈಗೆತ್ತಿಕೊಂಡಿದ್ದುದರಿಂದ ಎರಡೂ ಕೈಗೂಡದೇ ಹೋಗಿವೆ. ಅವರು ಕೇವಲ ಕ್ರೋಡೀಕರಣ ಒಂದನ್ನೇ ಎತ್ತಿಕೊಂಡಿದ್ದರೆ ಆ ಕಾರ್ಯ ಈ ಹೊತ್ತಿಗೆ ಪೂರೈಸಬಹುದಾಗಿತ್ತು. ಇದು ನನ್ನ ಅಭಿಪ್ರಾಯ.

ಇಂದಿನ ವಿಧೇಯಕವು ಮೂರು ಪ್ರಮುಖ ವಿಷಯಗಳಿಂದ ಕೂಡಿದೆ. ಮದುವೆ, ಉತ್ತರಾಧಿಕಾರ, ಹಾಗೂ ಹಕ್ಕುದಾರಿಕೆ. ಈ ವಿಷಯವನ್ನು ಕುರಿತು ಆಧುನಿಕ ಶಿಕ್ಷಣ ವ್ಯವಸ್ಥೆ ಏನು ಪರಿಣಾಮ ಬೀರಿದೆ ಎಂಬುದನ್ನು ನೋಡೋಣ. ಆಧುನಿಕ ಝೀವನ ಹಾಗೂ ಶಿಕ್ಷಣದಿಂದ ಲಿಂಗಭೇದ ಕ್ರಮವಾಗಿ ಹಿಂದೆ ಬಿದ್ದಿದೆ. ಅದರಲ್ಲಿಯೂ ಶಿಕ್ಷಾವಂತ ಮಹಿಳೆಯರು ಇದನ್ನು ಪ್ರತಿಪಾದಿಸುತ್ತಲೇ ಬಂದಿದ್ದಾರೆ. ಅಲ್ಲದೆ ನಾವು ಸಂವಿಧಾನದಲ್ಲಿ ಸಮಾನತೆಯನ್ನೂ ಸಾರಿದ್ದೇವೆ. ಹೀಗಾಗಿ ಮೇಲುನೋಟಕ್ಕೆ ಮಗ ಹಾಗೂ ಮಗಳಲ್ಲಿ ಯಾವ ಭೇದವೂ ಇಲ್ಲ. ಆದರೆ ಆಸ್ತಿಯ ಬಗೆಗೆ ನಾವು ಎಣಿಸಿದಂತೆ ವಿಷಯ ಅಷ್ಟು ಸರಳವಾಗಿಲ್ಲ. ತಂದೆಯ ದೃಷ್ಟಿಯಲ್ಲಿ ಇಬ್ಬರೂ ಸಮಾನರೆ; ಏಕೆಂದರೆ ಯಾವ ತಂದೆಯೂ ತನ್ನ ಎಲ್ಲಾ ಆಸ್ತಿ ಕೇವಲ ಮಗನಿಗೆ ಮಾತ್ರವೇ ಸೇರಬೇಕೆಂದು ಬಯಸಲಾರ. ಮಧ್ಯಮ ಕುಟುಂಬದಲ್ಲಿಯ ಮದುವೆ ವೆಚ್ಚದ ಬಗೆಗೆ ಪ್ರಸ್ತಾಪ ಮಾಡಲಾಗಿದೆ. ಏಕೆಂದರೆ ಮಗನ ಶಿಕ್ಷಣವನ್ನೂ ಕಡೆಗಣಿಸಿ ಹಲವು ಪ್ರಕರಣಗಳಲ್ಲಿ ಹಣ ವೆಚ್ಚಮಾಡಲಾಗುತ್ತಿದೆ. ನಾನು ಹೆಚ್ಚು ಪ್ರಕರಣ ಎಂದೇ ಹೇಳಬಯಸುವೆ.

ಪರಿಸ್ಥಿತಿ ಹೀಗಿರುವಾಗ, ಸನಾತನಿಗಳೂ ಮಗ ಹಾಗೂ ಮಗಳನ್ನು ಏಕ ರೀತಿಯಲ್ಲಿಯೇ ಕಾಣುತ್ತಿರುವಾಗ ಈ ವಿಧೇಯಕದ ಬಗೆಗೆ ಭಿನ್ನಾಭಿಪ್ರಾಯ ಏಕೋ ನನಗೆ ಅರಿಯದಾಗಿದೆ. ಬಹುಶಃ ವಿರೋಧವು ಹಿಂದೂ ಸಮೂಹದ ಒಂದು ಅಂಶವೇನೋ.

ಈ ಬಗೆಗೆ ಪಂಡಿತ ಮುಕುಟ ಬಿಹಾರಿಲಾಲ್ ಅವರು ಪ್ರಸ್ತಾಪಿಸಿದರು. ಅದನ್ನೇ ನಾನು ವಿಸ್ತಾರವಾಗಿ ಸೂಚಿಸಲು ಬಯಸುವೆ. ನಮ್ಮ ಸಮಾಜ ಶತ ಶತಮಾನಗಳಿಂದ ಜಾರಿಯಲ್ಲಿದೆ. ನಮ್ಮ ಸಮಾಜದ ಮೂಲ ಸಂಘಟನೆ ಕುಟುಂಬ. ಇದರ ಆಧಾರದ ಮೇಲೆಯೇ ನಮ್ಮ ಸಮಾಜ ಮುಂದುವರಿಯುತ್ತಾ ಬಂದಿದೆ; ಅದು ವ್ಯಕ್ತಿಯಾಧಾರದ ಮೇಲಲ್ಲ. ಕುಟುಂಬವನ್ನೇ ಆಧರಿಸಿ ಅದರ ವಿಕಾಸಕ್ಕೆಂದೇ ಕಾನೂನುಗಳು ಜಾರಿಗೆ ಬಂದವು. ಹೀಗಾಗಿ ಕುಟುಂಬವೇ ನಮ್ಮ ಮೂಲಾಧಾರವಾಗಿ ಕಾಲಕಾಲಕ್ಕೂ ಬೆಳೆದುಬಂದಿತು. ಮಗಳು ಮದುವೆಯಾಗಿ ಬೇರೆ ಕುಟುಂಬಕ್ಕೆ ಸೇರಿದರೂ, ಮಗನು ಕುಟುಂಬದಲ್ಲಿಯೇ ಉಳಿದುಕೊಂಡು ಬಂದ. ಕುಟುಂಬ ಹಾಳಾಗಿ ಹೋಗಬಾರದೆಂದೇ ಅವಿಭಕ್ತ ಕುಟುಂಬ ವ್ಯವಸ್ಥೆ ಜಾರಿಯಲ್ಲಿ ಬಂದಿತು. ಅವಿಭಕ್ತ ಕುಟುಂಬದ ವಿಚಿತ್ರ ವಿಧಾನವು ಕೇವಲ ಹಿಂದೂ ಸಮಾಜದ ಪ್ರಮುಖ ಲಕ್ಷಣವಾಗಿರುವುದು. ಕುಟುಂಬವನ್ನೇ ಮುಂದುವರಿಸಿಕೊಂಡು ಹೋಗಬೇಕಾದ ಕಾರಣಕ್ಕೆಂದು; ಬೇರೆ ಹೇಳಲೇ ಬೇಕಾಗಿಲ್ಲ. ಹೀಗಾಗಿ ಹಿಂದೂ ಲಾ ಕೇವಲ ಕುಟುಂಬದ ರಕ್ಷಣೆಗಾಗಿ ಬೆಳೆದು ಬಂದುದು ಸಹಜ. ಆದರೆ ಈ ವ್ಯವಸ್ಥೆ ನಾವು ಬೇರೆ ಯಾವ ಸಮಾಜದಲ್ಲಿಯೂ ಕಾಣಲಾರೆವು. ಕಳೆದ ಎರಡು ತಲೆಮಾರಿನ ಅವಧಿಯವರೆಗೂ ಅವಿಭಕ್ತ ಕುಟುಂಬ ವ್ಯವಸ್ಥೆ ತುಂಬಾ ಉತ್ತಮ ವ್ಯವಸ್ಥೆಯಾಗಿಯೇ ಮುಂದುವರಿದುಕೊಂಡು ಬಂದು,

ಶತಮಾನಗಳಿಂದ ಜಾರಿಯಲ್ಲಿದ್ದ ಸಾಮಾಜಿಕ ರಚನೆಯನ್ನು ಭದ್ರಗೊಳಿಸಿತ್ತು. ಆದುದರಿಂದಲೇ ಆಸ್ತಿಯಲ್ಲಿ ಮಗಳಿಗೆ ಪಾಲು ನೀಡುವುದರ ಬಗೆಗೆ ವಿರೋಧವಿದೆ. ಈ ವಿರೋಧಕ್ಕೆ ರಾಜಕೀಯ ಅಥವಾ ಸಾಮಾಜಿಕ ವಿಚಾರಗಳು ಕಾರಣವಾಗಿರದೆ, ಆಸ್ತಿಯಲ್ಲಿ ಮಗಳಿಗೆ ಪಾಲು ನೀಡಿದರೆ, ಅವಿಭಕ್ತ ಕುಟುಂಬದ ವ್ಯವಸ್ಥೆಯೇ ಕುಸಿದುಬೀಳುತ್ತದೆ.

ಆಧುನಿಕ ಜಗತ್ತಿನ ಬಲವು ವ್ಯಕ್ತಿವಾದದ ಪರವಾಗಿದೆ. ಆದುದರಿಂದ ಅವಿಭಕ್ತ ಕುಟುಂಬ ವ್ಯವಸ್ಥೆ ಅನೇಕ ಎಡೆಗಳಲ್ಲಿ ಬಿರುಕು ಬಿಡಲಾರಂಭಿಸಿದೆ. ಹೀಗಾಗಿ ಆಧುನಿಕ ವ್ಯವಸ್ಥೆಯಲ್ಲಿ, ಅವಿಭಕ್ತ ಕುಟುಂಬ ವ್ಯವಸ್ಥೆಯು ಬಹುದಿನ ಬದುಕಲಾರದೆಂದೇ ನನ್ನ ಅಭಿಪ್ರಾಯವಾಗಿದೆ. ಆದರೆ ಈಗ ನಮ್ಮ ಮುಂದೆ ಇರುವ ಪ್ರಶ್ನೆ ಎಂದರೆ ಈ ಅವಿಭಕ್ತ ಕುಟುಂಬ ವ್ಯವಸ್ಥೆಯನ್ನು ಹೇಗೆ ಬದಲಾಯಿಸಿ, ವ್ಯಕ್ತಿಗತ ಮಾಡಬೇಕು. ಇದನ್ನು ಕಾನೂನಿನಿಂದ, ಈ ವಿಧೇಯಕದಲ್ಲಿ ಸೂಚಿಸಿದಂತೆ, ಒಡೆದುಹಾಕಿದಲ್ಲಿ ಆಗಬಹುದಾದ ಪರಿಣಾಮಗಳನ್ನು ಊಹಿಸಲು ಅಸಾಧ್ಯ. ಏಕೆಂದರೆ ಅದು ಹಿಂದೂ ಸಮಾಜದ ಅಡಿಪಾಯಕ್ಕೆ ಅಪಾಯಕಾರಿ ಆಗಿ ಸಾಮಾಜಿಕ ವ್ಯವಸ್ಥೆಗೆ ಧಕ್ಕೆ ತರಬಹುದು. ಇಲ್ಲಿ ಕೇವಲ ಮಗಳಿಗೆ ಪಾಲು ನೀಡುವುದೊಂದೇ ಸೂತ್ರ ಅಡಕವಾಗಿಲ್ಲ. ಸಾಮಾಜಿಕ ಭದ್ರತಾ ವ್ಯವಸ್ಥೆಯೇ ಅಪಾಯಕ್ಕೆ ಗುರಿಯಾಗುವ ಭಯವಿದೆ. ಆದುದರಿಂದ ನಾವು ಸಮಾಧಾನದಿಂದ ಕ್ರಾಂತಿಕಾರಿ ವಿಧಾನ ಬಿಟ್ಟು, ಶಾಂತಿ ಅಥವಾ ಉತ್ಕ್ರಾಂತಿ ವಿಧಾನದಿಂದ ಈ ವ್ಯವಸ್ಥೆಯನ್ನು ಬದಲಾಯಿಸುವುದೇ ಉತ್ತಮ. ಈಗಾಗಲೇ ಆಧುನಿಕ ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿಂದ ಈ ವ್ಯವಸ್ಥೆಯಲ್ಲಿ ಮಾರ್ಪಾಟುಗಳು ತಲೆದೋರಿವೆ. ಈ ವಿಧೇಯಕದಲ್ಲಿ ತಿಳಿಸಿದಂತೆ, ಈ ಮಸೂದೆ ಜಾರಿಗೆ ಬಂದ ದಿನದಿಂದ ಅವಿಭಕ್ತ ಕುಟುಂಬ ಜಾರಿಯಲ್ಲಿರದು ಎಂಬುದು ಆತುರದ ಕ್ರಮವಾಗಿದೆ. ಇದರಿಂದ, ಶತಮಾನಗಳಿಂದ ಜಾರಿಯಲ್ಲಿರುವ ಸಾಮಾಜಿಕ ವ್ಯವಸ್ಥೆಗೆ ಧಕ್ಕೆ ಉಂಟಾಗುವುದಲ್ಲದೆ ಅಲ್ಲೋಲ ಕಲ್ಲೋಲದ ಪರಿಸ್ಥಿತಿಯನ್ನು ಎದುರಿಸಬೇಕಾಗಬಹುದು. ಆದುದರಿಂದ, ನನ್ನ ಉತ್ಸಾಹಿ ಮಿತ್ರರಲ್ಲಿ ಅರಿಕೆ ಏನೆಂದರೆ, ಈ ವ್ಯವಸ್ಥೆಯು ಹೇಗಾದರೂ ಬೀಳಲಿದೆ. ಆದುದರಿಂದ ಈ ಆತುರ ಬೇಡ. ನಾನು ನಿಮ್ಮ ಅಭಿಪ್ರಾಯಕ್ಕೆ ವಿರೋಧವಾಗಿಲ್ಲ. ಜನರನ್ನು ನಮ್ಮೊಂದಿಗೆ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೂ ತೆಗೆದುಕೊಂಡು ಹೋಗುವುದು ಸರಿ. ಇಲ್ಲದೇ ಹೋದಲ್ಲಿ ವಿಧೇಯಕದಲ್ಲಿ ತಿಳಿಸಿದಂತೆ, ಕಾನೂನಿನಿಂದ ಒಂದೇ ಬಾರಿ ತೆಗೆದುಹಾಕಲೂಬಹುದು. ಆದರೆ ಈ ಒಂದು ಸಮಯದಲ್ಲಿ, ಜನರು ಅನುಭವಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಬಗೆಹರಿಸದೇ ಈ ಕಾರ್ಯಕ್ಕೆ ದುಡುಕುವುದು ಸರಿಯೇ – ಹೀಗೆಂದ ಮಾತ್ರಕ್ಕೆ ಹಿಂದೂ ಸಮಾಜವನ್ನು ಬದಲಾಯಿಸಬಾರದೆಂದಲ್ಲ. ಆದರೆ ಅನುಸರಿಸಬೇಕಾದ ಮಾರ್ಗ ಯಾವುದು? ಹಿಂದೂ ಸಮಾಜವು ಈ ಹಿಂದೆ ಬದಲಾವಣೆಗೆ ಗುರಿಯಾಗಿದೆ. ಆದರೆ ಆ ವಿಧಾನಗಳು ಬೇರೆ ವಿಧದವಾಗಿದ್ದವು. ಬದಲಾವಣೆ ಸಾವಧಾನದಿಂದ ನಡೆಯಬಹುದು. ಈಗ ನಾವು ಅನುಸರಿಸುತ್ತಿರುವ ವಿಧಾನದಿಂದ ಯಾವ ಬಗೆಯ ಸಂತೋಷ ದೊರೆಯಲಾರದೆಂದೇ ನನ್ನ ಗ್ರಹಿಕೆ.

ಸರ್, ನನಗೆ ಒಂದು ವಿಷಯದ ಬಗೆಗೆ ಅಚ್ಚರಿ. ಅದೇ ದತ್ತು ತೆಗೆದುಕೊಳ್ಳುವ ವಿಷಯ. ಹಿಂದೂ ಲಾದಲ್ಲಿ ಇದೊಂದು ವಿಚಿತ್ರ ವಿಷಯವೇ ಆಗಿದೆ. ಬೇರೆ ಸಮಾಜಗಳಲ್ಲಿಯೂ ದತ್ತು ತೆಗೆದುಕೊಳ್ಳುವ ಪದ್ಧತಿ ಜಾರಿಯಲ್ಲಿದೆ. ಆದರೆ ಅಲ್ಲಿಯ ಉದ್ದೇಶಗಳು ಬೇರೆ. ಪಾಶ್ಚಿಮಾತ್ಯ ಸಮಾಜಗಳಲ್ಲಿ ಕೇವಲ ಮಕ್ಕಳನ್ನು ಪಾಲನೆ ಮಾಡುವ ಉದ್ದೇಶದಿಂದ ದತ್ತು ತೆಗೆದುಕೊಳ್ಳಲಾಗುವುದು. ಆದರೆ ಹಿಂದೂ ಸಮಾಜದಲ್ಲಿ ಕೇವಲ ಅವಿಭಕ್ತ ಕುಟುಂಬದ ಮುಂದುವರಿಕೆಗೆಂದೇ ದತ್ತು ಪಡೆಯಲಾಗುವುದು. ಆದರೆ ನೀವು ಯೋಚಿಸಿದಂತೆ, ಈ ವಿಧೇಯಕ ಜಾರಿಗೆ ಬಂದ ಮೇಲೆ ಅವಿಭಕ್ತ ಕುಟುಂಬ ಅಳಿದುಹೋಗುವುದರಿಂದ ಈ ದತ್ತಕ

ವಿಷಯಕ್ಕೆ ಏಕೆ ತಲೆಕೆಡಿಸಿಕೊಳ್ಳಬೇಕು? ನಾನೋರ್ವ ನುರಿತ ನ್ಯಾಯವಾದಿ. ನನ್ನ ಅಭಿಪ್ರಾಯದಲ್ಲಿ ನೂರರಲ್ಲಿ ೯೯ ಪ್ರಕರಣಗಳಲ್ಲಿ ದತ್ತಕ ವಿಷಯವು ಕಲಹಕ್ಕೆ ಗುರಿಯಾಗಿ ನ್ಯಾಯಾಲಯದ ಕಟ್ಟೆ ಏರಿದೆ. ಏಕೆಂದರೆ ದತ್ತು ತೆಗೆದುಕೊಂಡ ವಿಧವೆ, ದತ್ತು ಪುತ್ರನು ತನ್ನ ಆಸ್ತಿಯ ಮೇಲ್ವಿಚಾರಣೆಯಲ್ಲಿ ಸಹಕರಿಸುವನು ಎಂದೇ ಭಾವಿಸಿದರೆ, ದತ್ತುಪುತ್ರ ಆಸ್ತಿಯಲ್ಲಿ ತನ್ನ ಪಾಲಿನ ಬಗೆಗೇ ಆಲೋಚಿಸುತ್ತಾನೆ. ಹೀಗಾಗಿ ಕಲಹವು ಆರಂಭವಾಗುತ್ತದೆ. ಈ ಎಲ್ಲವನ್ನೂ ವಿಚಾರಿಸಿದಲ್ಲಿ ಈ ಪ್ರಸಂಗವನ್ನು ವಿಧೇಯಕದಿಂದ ಕೈಬಿಡುವುದೇ ಸರಿ ಎನಿಸುತ್ತದೆ.

ಈಗ ನಾನು ವಿವಾಹ ಹಾಗೂ ವಿಚ್ಛೇದನದ ಬಗೆಗೆ ಪ್ರಸ್ತಾಪಿಸುವೆ. ನನ್ನ ಮಿತ್ರರಾದ ಶ್ರೀ ಸಂತಾನಂ ಅವರು ಏಕಪತ್ನಿ ವ್ಯವಸ್ಥೆಯ ಬಗೆಗೆ ಪ್ರಸ್ತಾಪಿಸಿ ಸದನವು ಪರವಾಗಿದೆಯೇ ಅಥವಾ ವಿರೋಧವಾಗಿದೆಯೇ ಎಂದು ಕೇಳಿದರು. ನನ್ನ ಅಭಿಪ್ರಾಯದಂತೆ ಇಂದಿನ ದಿನಗಳಲ್ಲಿ ಅದು ಕಡ್ಡಾಯವಾಗಿರಬೇಕು. ನನಗೆ ತಿಳಿದಂತೆ ಸದನದ ಸದಸ್ಯರೆಲ್ಲರೂ ಇದನ್ನು ಒಪ್ಪಿಕೊಳ್ಳಬೇಕು. ಆದರೆ ಈ ಕಾರಣಕ್ಕೆ ಹಿಂದೂ ಕೋಡ್ ಮಸೂದೆಯು ಅನಿವಾರ್ಯವೇ? ಬೊಂಬಾಯಿ ಪ್ರಾಂತದಲ್ಲಿ ಕೈಕೊಂಡ ಕ್ರಮಗಳಿಂದಾಗಿ ಅಲ್ಲಿ ಏಕಪತ್ನಿ ವ್ಯವಸ್ಥೆ, –ಕೆಲವು ವಿಚ್ಛೇದನಗಳಿಂದ ಕೂಡಿದೆ ಹಾಗೂ ಸುವ್ಯವಸ್ಥಿತ ರೀತಿಯಲ್ಲಿದೆ. ಈ ದಿನಗಳಲ್ಲಿ ಯಾರೂ ಇಬ್ಬರು ಹೆಂಡಂದಿರನ್ನು ಬಯಸುವ ಪರಿಸ್ಥಿತಿಯಲಿಲ್ಲ ಹೀಗೆಂದಾಗ ಕೇವಲ ಕಾನೂನಿಗೆಂದೇ ನಾವು ಈ ವಿಧೇಯಕದಲ್ಲಿ ಅದಕ್ಕೆ ಆಸ್ಪದ ನೀಡಿರುವುದು ಸರಿಯೇ? ಕೆಲವು ಶ್ರೀಮಂತರು ಸುಖಭೋಗಕ್ಕೆಂದೇ ಹಲವು ಹೆಂಡಂದಿರನ್ನು ಹೊಂದಿದರೂ ಮಾನಸಿಕ ಅಶಾಂತಿಗೆ ಗುರಿಯಾಗುತ್ತಾರೆ. ಹೀಗಾಗಿ ಸಂತಾನಂ ಅವರು ಹೇಳಿದ ಮಾನಸಿಕ ಸುಖವನ್ನು ಕಾಣಲಾಗದು. ಒಂದು ಸಂಸಾರ ನಡೆಸುವುದೇ ಕಷ್ಟ ಸಾಧ್ಯವಾಗಿರುವ ಈ ದಿನಗಳಲ್ಲಿ, ಬಹುಪತ್ನೀ ಸಂಸಾರ ಹೇಗೆ ನಡೆಸಬಲ್ಲರು? ಹೀಗಾಗಿ ಏಕಪತ್ನಿ ವ್ಯವಸ್ಥೆಗೆ ಎಲ್ಲರೂ ಅನುಮತಿಸುವರೆಂದೇ ಭಾವಿಸುತ್ತೇನೆ.

ಆದರೆ ಇದನ್ನು ವಿವಾಹ ವಿಚ್ಛೇದನದೊಂದಿಗೆ ತಪ್ಪು ತಳಿಕೆ ಹಾಕಲಾಗದು. ಏಕೆಂದರೆ ದಂಪತಿಗಳಲ್ಲಿ ಒಬ್ಬರು ಕುಷ್ಠ ನಪುಂಸಕತೆ, ದುಶ್ಚಟ ಮತ್ತು ಅಪರಾಧಿಯಾಗಿದ್ದಲ್ಲಿ ಸಂಸಾರ ನಡೆಸುವುದು ಸಾಧ್ಯವಿಲ್ಲ. ಆದುದರಿಂದ ವಿಚ್ಛೇದನಕ್ಕೆ ಅವಕಾಶವಿರಲೇ ಬೇಕು. ಇಲ್ಲದೇ ಹೋದಲ್ಲಿ ದಾಂಪತ್ಯ ಝೀವನಕ್ಕೆ ಅಡಚಣೆ ಉಂಟಾಗುತ್ತದೆ. ಇದನ್ನು ಮನು ಕೂಡಾ ಎತ್ತಿ ಹಿಡಿದಿದ್ದಾನೆ.

ನೀವು ಏಕಪತ್ನಿ ವ್ಯವಸ್ಥೆಯನ್ನು ಎತ್ತಿ ಹಿಡಿಯದೇ ಹೋದರೂ ೧೦೦೦೦ ದಲ್ಲಿ ೯,೯೯ ಮಂದಿ ಅದನ್ನೇ ನಂಬಿದ್ದಾರೆ. ಹೀಗಾಗಿ ಈ ಪ್ರಶ್ನೆ ನಮ್ಮನ್ನು ಕಾಡಬೇಕಾಗಿಲ್ಲ. ಆದುದರಿಂದ ನಮ್ಮ ಸಂವಿಧಾನದ ೪೪ನೇ ವಿಧಿಯಲ್ಲಿ ತಿಳಿಸಿದಂತೆ, ಸಾಮಾನ್ಯ ನಾಗರಿಕ ಸಂಹಿತೆಯೇ ನಮ್ಮ ಗುರಿಯಾಗಬೇಕು. ಅಲ್ಲದೆ ನಾವು ನಮ್ಮ ಸಂವಿಧಾನದಲ್ಲಿಯ ರಾಜ್ಯ ನಿರ್ದೇಶಕ ತತ್ತ್ವಗಳ ಮೂಲಕ ಸಾಮಾನ್ಯ ನಾಗರಿಕ ಸಂಹಿತೆಯನ್ನು ಜಾರಿಗೊಳಿಸುವ ಪ್ರಯತ್ನ ಮಾಡಬೇಕು. ಹೀಗಾಗಿ ಈ ವಿಧೇಯಕದಿಂದ ನಾವು ಜನತೆಯನ್ನು ಒಗ್ಗೂಡಿಸುವುದು ಸಂಶಯಾತ್ಮಕವಾಗಿದೆ. ಭಾರತ ನಿವಾಸಿಗಳೆಲ್ಲರೂ ಒಂದು ಎಂಬ ಹಾಗೂ ಒಂದೇ ಬಗೆಯ ವಿವಾಹ, ವಾರಸುದಾರಿಕೆ ಮುಂತಾದ ಹಕ್ಕುಗಳನ್ನೊಳಗೊಂಡ ನಾಗರಿಕ ಸಂಹಿತೆ ಜಾರಿಗೆ ಬರಬೇಕು. ಬೇರೆ ದೇಶಗಳಂತೆ ಭಾರತದಲ್ಲಿಯೂ ಹಿಂದೂ, ಮುಸ್ಲಿಂ, ಕ್ರೈಸ್ತ ಮನೋಭಾವನೆಗಳನ್ನು ಹೋಗಲಾಡಿಸಬೇಕು. ಆದರೆ ಶೋಚನೀಯ ಸಂಗತಿ ಎಂದರೆ ನಾವು ವಿರುದ್ಧ ದಿಕ್ಕಿನಲ್ಲಿ ಮುಂದುವರಿದಿದ್ದೇವೆ. ನಾವು ಧರ್ಮದ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಬಾರದು ಎಂಬ ಕೂಗು ಕೇವಲ ಪರದೇಶೀಯರ ಕಹಳೆಯಾಗಿತ್ತು. ಆದರೆ ಇದರಲ್ಲಿ ನಮ್ಮ ಹಿತಾಸಕ್ತಿಯು ಅಡಗಿರುವುದರಿಂದ ಅದನ್ನು ಕಡೆಗಣಿಸಬೇಕು.

ಸಾಮಾನ್ಯ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಿದರೆ ಯಾರು ಅಡ್ಡಿ ಮಾಡುವರು? ಅದರಲ್ಲಿಯೂ ವಿಶೇಷವಾಗಿ ಪಾಕಿಸ್ತಾನ ಜಾರಿಗೆ ಬಂದಿರುವುದರಿಂದ, ನಮ್ಮಲ್ಲಿಯ ವಿಭಿನ್ನ ಹಿಂದೂ, ಮುಸ್ಲಿಂ, ಸಿಖ್, ಪಾರ್ಸಿ, ಕ್ರಿಶ್ಚಿಯನ್ ಭಾವನೆಗಳಿಗೆ ತಿಲಾಂಜಲಿ ನೀಡಲೇಬೇಕು. ಆದುದರಿಂದ ಕೇವಲ ಹಿಂದೂಗಳಿಗೆಂದೇ ಏನನ್ನೂ ಮಾಡಬಾರದೆಂದೇ ಆಗ್ರಹಿಸುವೆ. ನಾವು ಈ ದಿಶೆಯಲ್ಲಿ ಜಂಟಿ ಮತದಾರ ಕ್ಷೇತ್ರಗಳನ್ನು ನಿರ್ಮಿಸಿದ್ದೇವೆ. ಸಾಮಾನ್ಯ ನಾಗರಿಕ ಸಂಹಿತೆಯ ಮೂಲಕ ಈ ಭೇದಭಾವನೆಗಳನ್ನು ನಿರ್ಮೂಲ ಮಾಡಬೇಕು. ಈಗ ನಾವು ಈ ಬಗೆಯ ವಿಧೇಯಕದ ಬದಲಾಗಿ ಆ ಕ್ರಮವನ್ನು ಕೈಗೆತ್ತಿಕೊಳ್ಳಬೇಕು. ನಾವು ಈ ಸಮಯದಲ್ಲಿ ಸಮಗ್ರ-ಸಮಾಜದ ಸೃಷ್ಟಿಗೆ ಬುನಾದಿ ಹಾಕಬೇಕೇ ಹೊರತು ಪುರಾತನ ವಿಭಿನ್ನ ಸಾಮಾಜಿಕ ವ್ಯವಸ್ಥೆಯನ್ನು ಮುಂದುವರಿಸಬೇಕಾಗಿಲ್ಲ. ದೇಶದ ಸುಭದ್ರತೆ ಹಾಗೂ ಶಾಂತಿಗಾಗಿ ಇಂದು ನಮಗೆ ಸಾಮಾನ್ಯ ನಾಗರಿಕ ಸಂಹಿತೆ ಅನಿವಾರ್ಯವಾಗಿದೆ. ಆದುದರಿಂದ ನನ್ನ ಸನಾತನ ಮಿತ್ರರು ಈ ಬಗೆಗೆ ಸಹಕರಿಸಬೇಕೆಂದೇ ಕೋರಿಕೆ. ಈ ದಿಶೆಯಲ್ಲಿ ಗೋವಾದಲ್ಲಿಯ ಸಾಮಾನ್ಯ ಸಂಹಿತೆಯ ಬಗೆಗೆ ಗಮನ ಸೆಳೆಯಬಯಸುವೆ. ಕಾನೂನು ಮಂತ್ರಿಗಳಿಗೆ ಈ ವಿಷಯ ತಿಳಿದಿರಬಹುದು. ಪೋರ್ಚುಗೀಸರು ಅಲ್ಲಿ ಎಲ್ಲಾ ವರ್ಗಗಳಿಗೂ ಸಮಾನ ಹಕ್ಕು ನೀಡಿದ್ದನ್ನು ನಾವು ಸ್ಮರಿಸಬಹುದು. ಇದನ್ನು ಜಾರಿಗೆ ತರಲು ನಾವೇಕೆ ಅಂಜಬೇಕು? ಆದರೆ ಬ್ರಿಟಿಷರು ತಮ್ಮ ಹಿತಕ್ಕಾಗಿ ಧರ್ಮದಲ್ಲಿ ಕೈಹಾಕುವುದಿಲ್ಲ ಎಂದೇ ಸೋಗು ಹಾಕಿ ನಮ್ಮನ್ನು ಬೇರೆ ಬೇರೆ ಇರಿಸಿದರು. ಆದರೆ ಈಗ ನಮ್ಮ ರಾಷ್ಟ್ರದ ಗುರಿ ಏಕತೆಯಾಗಿದೆ; ಹೀಗಾಗಿ ನಾವು ಈ ವಿಧವಾದ ವಿಧೇಯಕ್ಕಿಂತ ಸಮಗ್ರ ಏಕತೆಗೆ ಎಡೆ ಮಾಡುವ ಕಾರ್ಯವನ್ನು ಕಾನೂನು ಸಚಿವರು ೨೬, ೧೯೫೦ರ ನಂತರ ಶೀಘ್ರವಾಗಿ ಕೈಗೆತ್ತಿಕೊಳ್ಳಬೇಕೆಂದು ಆಗ್ರಹಿಸುವೆ. ಈ ಕಾರ್ಯ ಸಾಮಾನ್ಯ ನಾಗರಿಕ ಸಂಹಿತೆಯ ಮೂಲಕವೇ ಸಾಧ್ಯವಾದುದರಿಂದ ನನ್ನ ಸಹೋದರಿಯರು ಈ ದಿಶೆಯಲ್ಲಿ ಸಹಕರಿಸಬೇಕೆಂದು ಕೇಳುವೆ. ನಾನು ಶೀಘ್ರವಾಗಿ ತಿಳಿಸುವುದೇನೆಂದರೆ, ನಾವು ಗುಣಗ್ರಾಹಿ ಕಾರ್ಯಗಳನ್ನು ಮಾಡೋಣ; ಆದರೆ ಈ ಬಗೆಯ ಅರೆಬರೆ ಕಾರ್ಯ ಮಾಡಿದರೆ ಫಲ ದೊರೆಯದು. ಸಾಮಾನ್ಯ ನಾಗರಿಕ ಸಂಹಿತೆಗೆ ಸಂಬಂಧಿಸಿದಂತೆ ನಾವು ನಮ್ಮ ಹಿಂದೂವಾದಿ ಮಿತ್ರರನ್ನು ಅವಿಭಕ್ತ ಕುಟುಂಬ ವ್ಯವಸ್ಥೆಯನ್ನು ಸಮಸ್ತ ರಾಷ್ಟ್ರದ ಹಿತದೃಷ್ಟಿಯಿಂದ ಕೈಬಿಡುವಂತೆ ಮನ ಒಲಿಸೋಣ. ಆದರೆ ನಾವು ಅದರ ವಿರುದ್ಧ ಮುಂದುವರಿಯುತ್ತಿರುವುದು ಶೋಚನೀಯ. ಈ ಕ್ರಮದಿಂದ ನಾವು ಸಂಕಷ್ಟಗಳಿಗೆ ಗುರಿಯಾಗುತ್ತೇವೆ. ಇದಕ್ಕೆ ಉದಾಹರಿಸಬಹುದಾದರೆ ಬೊಂಬಾಯಿ ಪ್ರಾಂತದ ಅಹಮದ್ ನಗರದ ಓರ್ವ ವಿಧವೆ, ಮುಸ್ಲಿಂ ಯುವಕನನ್ನು ಮದುವೆಯಾಗಬೇಕೆಂದಾಗ ಉಂಟಾದ ಉದ್ವೇಗ ಹೇಳಲಾಗದು. ಲೂಟಿ, ದಂಗೆ ಪ್ರಕರಣಗಳನ್ನೇ ಎದುರಿಸಬೇಕಾಗಿ ಬಂದಿದ್ದು ದುರದೃಷ್ಟಕರ. ಆಗ ಮುಸ್ಲಿಂ ಸಜ್ಜನ ತನ್ನ ಭದ್ರತೆಗೆ ಅಲ್ಲದೇ ಹೋದರೂ ತನ್ನ ಸಮೂಹದ ಭದ್ರತೆಗೆಂದೇ ತಾನು ಆ ಬಗೆಯ ವಿವಾಹಕ್ಕೆ ತಯಾರಿಲ್ಲವೆಂದೂ, ತನಗೆ ಮದುವೆಯಾಗಿ ಮಕ್ಕಳಿದ್ದಾರೆಂದೂ ಹೇಳಿಕೆ ನೀಡಿದ. ಆದರೆ ವಿಧವೆ ಮತಾಂತರಗೊಂಡರೆ ಸಿದ್ಧ ಎಂದೂ ಹೇಳಿದ. ಬೊಂಬಾಯಿ ಪ್ರಾಂತದಲ್ಲಿ ಹಿಂದೂಗಳು ಎರಡನೆಯ ಪತ್ನಿಯನ್ನು ಪಡೆಯುವುದನ್ನು ಕಾನೂನಿನಿಂದ ಪ್ರತಿಬಂಧಿಸಲಾಗಿದೆ. ಆದರೆ ಈ ಕಾನೂನು ಮುಸಲ್ಮಾನರಿಗೆ ಅನ್ವಯಿಸುವುದಿಲ್ಲ. ಅದೇ ಅಪರಾಧವನ್ನು ನಾವು ಈ ವಿಧೇಯಕದ ಅಡಿಯಲ್ಲಿ ಮಾಡುತ್ತಿದ್ದೇವೆ. ಇದರ ಪರಿಣಾಮವೇನೆಂದರೆ ಶ್ರೀಮಂತರಾದವರು ಇಸ್ಲಾಂ ಮತಕ್ಕೆ ಮತಾಂತರ ಹೊಂದಿ ತಮ್ಮ ಇಚ್ಛೆ ಪೂರೈಸಿಕೊಳ್ಳಲು ಉತ್ತೇಜಿಸಿದಂತಾಗುತ್ತದೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ರಾಷ್ಟ್ರಕ್ಕೆಲ್ಲಾ ಒಂದೇ ನಾಗರಿಕ ಸಂಹಿತೆಯನ್ನು ಜಾರಿಗೊಳಿಸುವುದು ಕ್ಷೇಮವಲ್ಲವೇ? ಈ ವಿಧಾನ ಪೋರ್ಚುಗೀಸರು

ಗೋವಾದಲ್ಲಿ ಜಾರಿಗೊಳಿಸಿದ್ದನ್ನು ನಾನು ಸ್ಮರಿಸಿರುವೆ. ಹೀಗಾಗಿ ಈಗ ಸದನದ ಮುಂದೆ ಕೃತ್ರಿಮವಾಗಿ ತಂದಿರುವ ಈ ವಿಧೇಯಕವು ಆಡಳಿತ ಅಥವಾ ಅಧಿಕಾರಾರೂಢರ ತಂತ್ರವಾಗಿದೆ. ಇದು ಬಹುಶಃ ಬ್ರಿಟಿಷರ 'ಒಡೆದು ಆಳುವ' ನೀತಿಯನ್ನೇ ಮುಂದುವರಿಸುವ ಚಿತಾವಣೆ ಎಂದೇ ಹೇಳಬೇಕಾಗಿದೆ. ಆದುದರಿಂದ ನನ್ನ ಸನ್ಮಾನ್ಯ ಮಿತ್ರರಾದ ಕಾನೂನು ಮಂತ್ರಿಗಳೂ ಈ ವಿಧೇಯಕವನ್ನು ಹಿಂದೆ ಪಡೆದು ಅದರ ಬದಲಾಗಿ ಏಕರೂಪದ ನಾಗರಿಕ ಸಂಹಿತೆಯನ್ನು ಎಲ್ಲರಿಗೂ ಅಂದರೆ ಹಿಂದೂ, ಮುಸ್ಲಿಂ, ಪಾರಸಿ ಜ್ಯೂ ಮುಂತಾದವರಿಗೆ ಅನ್ವಯಿಸುವ ವಿಧೇಯಕ ಒಂದನ್ನು ತರಲಿ.

**ಶ್ರೀರಾಮ ಸಹಾಯಿ** (ಮಧ್ಯಭಾರತ) : (ಅವರ ಹಿಂದಿ ಭಾಷಣದ ಇಂಗ್ಲಿಷ್ ಭಾಷಾಂತರ).

ಸರ್, ಈ ವಿಧೇಯಕವನ್ನು ಆಯ್ಕೆ ಸಮಿತಿಯ ಪರಿಶೀಲನೆಗೆ ಸಲ್ಲಿಸಿದ ಸಮಯದಲ್ಲಿ ನಾನು ಆಯ್ಕೆ ಸಮಿತಿಯ ಸದಸ್ಯರು, ನಾವು ಇಂದು ಆಚರಿಸುತ್ತಿರುವ ಆಧುನಿಕ ಹಲವಾರು ಲಕ್ಷಣಗಳಲ್ಲಿರುವ ವ್ಯತ್ಯಾಸಗಳನ್ನು ಗಮನದಲ್ಲಿರಿಸಿಕೊಳ್ಳಬೇಕೆಂಬ, ಸಲಹೆ ನೀಡಿದ್ದೆ. ಆದರೆ ನನ್ನ ಸಲಹೆಗಳನ್ನು ಅವರು ಗಮನಕ್ಕೆ ತೆಗೆದುಕೊಂಡಿಲ್ಲವೆಂದೇ ನನ್ನ ಭಾವನೆ. ಕೇವಲ ನಿನ್ನೆಯ ದಿನವೇ ತಿಳಿದುಬಂದಂತೆ, ಮತ್ತೊಂದು ಸಮಿತಿಯನ್ನು ಈ ದಿಶೆಯಲ್ಲಿ ನೇಮಿಸಲಾಗುತ್ತಿದೆ ಎಂದು. ಅದಕ್ಕಾಗಿಯೇ ನಾನು ಈ ದಿನ ತಮ್ಮ ಮುಂದೆ ನಿಂತಿರುವೆ ಹಾಗೂ ಸದನದ ಸಮಯವನ್ನು ಪಡೆಯುವೆ. ನಾನು ಈ ವಿಧೇಯಕಕ್ಕೆ ವಿರೋಧಿಯಲ್ಲ. ಆದರೆ ನಾನು ಕೆಲವು ತಿದ್ದುಪಡಿಗಳನ್ನು ತರುವ ಮೂಲಕ, ವಿರೋಧಿಗಳ ಹಲವಾರು ವಿಷಯಗಳನ್ನು ಹೊಂದಾಣಿಕೆ ಮಾಡಲೆಂದೇ, ಸದನದ ಅಲ್ಪ ಸಮಯವನ್ನೇ ಉಪಯೋಗಿಸಿಕೊಳ್ಳುವೆ.

ಮಾನ್ಯ ಸಂತಾನಂ ಅವರು, ಈ ವಿಧೇಯಕವನ್ನು ಜಾರಿಗೊಳಿಸುವುದರಿಂದ ಎಲ್ಲ ಜಾತಿ ಭೇದಗಳನ್ನು ತೊಡೆದುಹಾಕಿ ನೂತನ ಭಾವೈಕ್ಯದ ಎಡೆಗೆ ಧಾವಿಸುತ್ತೇವೆ ಎಂದಿದ್ದಾರೆ. ನಾನು ಅವರ ಅಭಿಪ್ರಾಯಕ್ಕೆ ಸಹಮತಿಸಿ, ಈ ಮಾದರಿಯ ವಿಧೇಯಕವನ್ನು ಸ್ವಾಗತಿಸುವೆ. ನನ್ನ ಅಭಿಪ್ರಾಯದಲ್ಲಿ ಅಂತರಜಾತಿ ವಿವಾಹಕ್ಕೆ ಆಸ್ಪದ ದೊರೆತರೆ ಯಾರೂ ಅದನ್ನು ವಿರೋಧಿಸಬಾರದು. ದತ್ತಕ ಪದ್ಧತಿಯಿಂದ ಕುಟುಂಬ ಸಂಬಂಧಗಳು ಬೆಳೆದಲ್ಲಿ ಸ್ವಾಗತ. ಆದರೆ ಇದರಲ್ಲಿಯ ತೊಂದರೆಯನ್ನು ಅಲ್ಪಮಟ್ಟಿಗೆ ಸದನದ ಅವಗಾಹನೆಗೆ ಹೇಗೆ ತರಬೇಕು ಎಂಬುದೇ ತಿಳಿಯದಾಗಿದೆ. ಅದೇನೆಂದರೆ, ವಾರಸುದಾರಿಕೆಯ ವಿಷಯ. ವಾರಸುದಾರಿಕೆಯ ವಿಧಾನವು ವಿವಿಧ ಪ್ರದೇಶಗಳಲ್ಲಿ ವಿವಿಧ ರೀತಿಯಲ್ಲಿ ಹಿಂದೂ ಸಮಾಜದಲ್ಲಿ ಜಾರಿಯಲ್ಲಿದೆ. ಆದರೆ ಅದರ ಸಾಮಾನ್ಯ ಹಿನ್ನೆಲೆಯಲ್ಲಿ ಈ ವಿಧೇಯಕದ ಯಶಸ್ಸು ಫಲಪ್ರದವಾಗಲಾರದು. ಹೀಗೆಂದಾಗ ಮಗಳ ಪಾಲಿನ ಬಗೆಗೆ ನಿರಾಕರಿಸುವ, ಅಥವಾ ಸ್ತ್ರೀಯರಿಗೆ ಸಮಾನ ಹಕ್ಕುಗಳನ್ನು ನೀಡುವುದನ್ನು ನಾನು ವಿರೋಧಿಸುವುದಿಲ್ಲ. ಅಂತಹ ಅಭಿಪ್ರಾಯಗಳನ್ನು ಖಚಿತವಾಗಿ ವಿರೋಧಿಸುವೆ. ಆದರೆ ನನಗೆ ಇರುವ ಸಂದೇಹವೇನೆಂದರೆ ಅದನ್ನು ಸಾಮಾನ್ಯವಾಗಿ ಎಲ್ಲರಿಗೂ ಒಪ್ಪಿಗೆಯಾಗುವಂತೆ ಜಾರಿಗೊಳಿಸಬಲ್ಲೆವೇ? ಏಕೆಂದರೆ ನಾವು ಅನೇಕ ಶತಮಾನಗಳಿಂದ ಹಲವು ವಿಧಾನಗಳನ್ನೆ ಅನುಸರಿಸುತ್ತಾ ಬಂದಿದ್ದೇವೆ. ನಾನು ಒಂದು ಉದಾಹರಣೆ ನೀಡುವುದಾದರೆ, ಈ ವಿಧೇಯಕದಲ್ಲಿ ಮಗಳಿಗೆ ಸಮಾನ ಹಕ್ಕು ಪಾಲುದಾರಿಕೆಯಲ್ಲಿ ನೀಡಿದೆ. ಅವರಿಗೆ ಇನ್ನು ಹೆಚ್ಚು ನೀಡಿದರೂ ನನಗೆ ಆತಂಕವಿಲ್ಲ. ಆದರೆ ಈ ದಿಶೆಯಲ್ಲಿ ಉದ್ಭವಿಸುವ ತೊಂದರೆಗಳನ್ನು ತಮ್ಮ ಗಮನಕ್ಕೆ ತರಬಯಸುವೆ. ಸದ್ಯ ಹಿಂದೂ ಸಮಾಜದಲ್ಲಿ, ಬೇರೆ ಸಮಾಜದಲ್ಲಿರದ ಸ್ಥಾನಮಾನವನ್ನು ಬಾಲಕಿಯರು ಉಪಭೋಗಿಸುತ್ತಿದ್ದಾರೆ. ತಿಳಿದೋ ಅಥವಾ ತಿಳಿಯದೆಯೋ ನಾವು ಈ ಸಾಮಾಜಿಕ ಕ್ರಮಗಳನ್ನು ಬದಲಾಯಿಸುವ ಕ್ರಮಕ್ಕೆ ಕೈಹಾಕಿರುವುದು ಒಂದು ದುರಂತ. ಇದು ನಮ್ಮೆಲ್ಲರ ದುರ್ದೈವ. ನಾವು ಈಗ ಪಶ್ಚಾತ್ತಾಪದಿಂದ ಅದನ್ನು ಹೇಗೆ ತಿದ್ದಬಹುದೋ ತಿಳಿಯದ ಸಂಗತಿ. ಹೀಗಿದ್ದರೂ

ನಾನು ಹೇಳುವುದೇನೆಂದರೆ ಸುಧಾರಣೆಗೆ ಸಾಕಷ್ಟು ಅವಕಾಶಗಳಿವೆ. ನನ್ನ ಅಭಿಪ್ರಾಯದಲ್ಲಿ ಯಾವ ಹಿಂದೂ ತಂದೆಯೂ ತನ್ನ ಮಗಳ ಬಗೆಗೆ ತಿರಸ್ಕಾರ ಮನೋಭಾವನೆಯನ್ನು ತಳೆಯಲಾರ. ಅವನು ಅವಳ ಶ್ರೇಯಸ್ಸಿಗೆಂದೇ ಏನನ್ನಾದರೂ ಮಾಡಲು ಸಿದ್ಧ.

**ಶ್ರೀ ಬಾಬು ರಾಮನಾರಾಯಣ ಸಿಂಗ್** (ಬಿಹಾರ) : ಬಹುಮಟ್ಟಿಗೆ ನೀವು ಹೇಳಿದ್ದು ಸರಿ.

**ಶ್ರೀರಾಮ ಸಹಾಯಿ :** ಅವನು ತನ್ನ ಮಗಳನ್ನು ತನಗಿಂತಲೂ ಉತ್ತಮ ಸ್ಥಿತಿಯ ಮನೆತನದೊಂದಿಗೆ ಮದುವೆ ಮಾಡಕೊಡಲು ಬಯಸುತ್ತಾನೆ. ಇದು ತಂದೆಗೆ ಮಾತ್ರವಲ್ಲ, ಯಾವ ಹಿಂದೂ ಸಹೋದರರಿನಿಗೂ ಅನ್ವಯಿಸಬಲ್ಲ ಸಂಗತಿಯಾಗಿದೆ. ಎಲ್ಲೋ ಲಕ್ಷಕ್ಕೋ ಅಥವಾ ಸಾವಿರಕ್ಕೋ ಒಂದು ಅಪವಾದವಿರಬಹುದು. ಆದರೆ ಆ ಬಗೆಯ ಪ್ರಕರಣಗಳು ವಿರಳ. ಪರಿಸ್ಥಿತಿ ಹೀಗಿರುವಾಗ ಮಗ–ಮಗಳ ಸಮಾನತೆಯ ಪ್ರಶ್ನೆ ಏಕೆ ನಮ್ಮನ್ನು ಕಾಡುತ್ತಿದೆ ಎಂಬುದೇ ನನಗೆ ಅರ್ಥವಾಗದ ವಿಷಯವಾಗಿದೆ. ಮಧ್ಯವರ್ಗದ ಕುಟುಂಬಗಳಲ್ಲಿಯ ಕಲಹಗಳನ್ನು ಕಂಡಾಗ ನಾನು ಹೇಳಲೇಬೇಕಾದ ಅನಿಸಿಕೆ ಏನೆಂದರೆ, ಮಗಳಿಗೆ ತಾನು ಹೋದ ಕುಟುಂಬದಲ್ಲಿಯೂ ಪಾಲು ಸಿಗುತ್ತಿರುವಾಗ ಪಿತ್ರಾರ್ಜಿತ ಆಸ್ತಿಯಲ್ಲಿಯೂ ಪಾಲು ಬೇಡುವುದು ಸೂಕ್ತವೇ? ಇದು ನಮ್ಮ ಹಿಂದೂ ಸಮಾಜದ ರಚನೆಗೆ ಹಾನಿಯುಂಟು ಮಾಡುತ್ತದೆ. ಈ ಬಗೆಗೆ ಹಲವಾರು ಅನಿಸಿಕೆಗಳನ್ನು ಸದನದ ಎದುರಿಗೆ ಇಡಲೆಂದೇ ನಾನು ನಿಮ್ಮ ಮುಂದೆ ಬಂದಿರುವೆ. ಈ ಮೇಲಿನ ಕ್ರಮದಿಂದಾಗಿ ಅಪಾಯಗಳು ಉದ್ಭವಿಸುವುದು ಸಹಜ. ಏಕೆಂದರೆ ಅಣ್ಣ ತಮ್ಮಂದಿರಲ್ಲಿಯೇ ಆಸ್ತಿಯ ಬಗೆಗೆ ವಿಶ್ವಾಸ ಭಾವನೆಗಳಿದ್ದಾಗ, ಬೇರೆಯ ಕುಟುಂಬದ ಸದಸ್ಯಳಾದ ಅಕ್ಕ ತಂಗಿಯರು ಸೇರಿದರೆ ಸಮಸ್ಯೆ ಕಠಿಣವಾಗುವುದರಲ್ಲಿ ಸಂದೇಹವಿಲ್ಲ. ಇದು ಅವರಲ್ಲಿಯ ಪ್ರೇಮ ಪ್ರೀತಿಯ ಬಾಂಧವ್ಯಕ್ಕೆ ಚ್ಯುತಿ ಉಂಟುಮಾಡುತ್ತದೆ. ಅಲ್ಲದೇ ಮತ್ತೊಂದು ವಿಷಯವೆಂದರೆ ಈ ಕ್ರಮ ಕಲಹಕ್ಕೆ ಪ್ರಚೋದನೆ ನೀಡಲು ಸಹಕಾರಿಯಾಗಿದೆ. ಆದುದರಿಂದ ಆತಂತಕಾರಿಯಿಂದ ತುಂಬಿ ತುಳುಕುತ್ತಿರುವ ಈ ವಿಧೇಯಕವನ್ನು ಏಕೆ ಜಾರಿಗೊಳಿಸಬೇಕೆಂಬುದೇ ನನಗೆ ತಿಳಿಯದಾಗಿದೆ.

ಇದರಂತೆಯೇ ಹಿಂದೂ ಅವಿಭಕ್ತ ಕುಟುಂಬದ ಬಗೆಗೆ ಅಲ್ಪ ಸ್ವಲ್ಪ ವಿಷಯವನ್ನು ಹೇಳಬಯಸುವೆ. ನಾವು ಸಹಕಾರ ಸಂಘಗಳನ್ನು ಸ್ಥಾಪಿಸಿದ್ದೇವೆ. ಅವುಗಳ ತತ್ತ್ವವನ್ನು ಅಳವಡಿಸಿಕೊಳ್ಳಬೇಕೆಂದು ಜನತೆಯಲ್ಲಿ ಪ್ರಚಾರವನ್ನೂ ಮಾಡುತ್ತೇವೆ. ಆದರೆ ಅದೇ ತತ್ತ್ವಕ್ಕೆಂದೇ ಜಾರಿಯಲ್ಲಿರುವ ಅವಿಭಕ್ತ ಕುಟುಂಬ ವ್ಯವಸ್ಥೆಯನ್ನು ನಾಶಪಡಿಸಲು ಹೊರಟಿರುವುದು ಸೋಜಿಗವಲ್ಲವೇ? ಈ ಎರಡನ್ನೂ ನೆನೆದಾಗ, ಈ ವಿಧೇಯಕದ ಬಗೆಗೆ ಇರುವ ಅಸಂತೃಪ್ತಿ ಭಾವನೆ ಎಂದರೆ ವಾರಸುದಾರಿಕೆಯ ಹಕ್ಕು. ಇದರ ಬಗೆಗೆ ನಾವು ಒಂದು ಒಮ್ಮತವನ್ನು ಮೂಡಿಸಿದ್ದೇ ಆದರೆ ಈ ಹಿಂದೂ ಕೋಡ್ ಮಸೂದೆಯನ್ನು ಸರ್ವಾನುಮತದಿಂದ ಅಂಗೀಕರಿಸಬಹುದು. ಸದನದ ಹೆಚ್ಚು ಸಮಯವನ್ನು ತೆಗೆದುಕೊಳ್ಳದೆ, ಆಯ್ಕೆ ಸಮಿತಿಗೆ ಯಾರೇ ಆಯ್ಕೆಯಾದರೂ ಈ ಎಲ್ಲ ಸಮಸ್ಯೆಗಳನ್ನು ಗಮನದಲ್ಲಿರಿಸಿಕೊಂಡು ಪರಿಹಾರ ಸೂಚಿಸಲಿ.

ನನಗೆ ಇನ್ನೊಂದು ವಿವಾದಾತ್ಮಕ ವಿಷಯ ಹೊಳೆದಿದೆ. ಅದೇನೆಂದರೆ ಈ ವಿಧೇಯಕದಲ್ಲಿ ಪಿತ್ರಾರ್ಜಿತ ಆಸ್ತಿಯಲ್ಲಿ ಮಗಳಿಗೆ ಪಾಲು ನೀಡಬೇಕೆಂಬ ಅಂಶವನ್ನು ಸ್ಪಷ್ಟಪಡಿಸಲಾಗಿದೆ. ಆದರೆ ಅವಳಿಗೆ ಬೇರೆ ಕುಟುಂಬದಲ್ಲಿಯೂ ಪಾಲು ಸಿಗುತ್ತದೆ. ಆದರೆ ಮಗನಾದವನನ್ನು ಈ ಸೌಲಭ್ಯದಿಂದ ಏಕೆ ವಂಚಿಸಲಾಗಿದೆ ಎಂಬುದರ ಬಗೆಗೆ ಮಾನ್ಯ ಕಾನೂನು ಸಚಿವರು ಗಮನ ಹರಿಸಬೇಕೆಂದೇ ಸೂಚಿಸುವೆ. ಹೆಚ್ಚಿಗೆ ಸಮಯ ತೆಗೆದುಕೊಳ್ಳದೇ ನನ್ನ ಹೇಳಿಕೆ ಮುಗಿಸುವೆ.

**ಶ್ರೀ ಕೃಷ್ಣಚಂದ್ರ ಶರ್ಮ** (ಯು.ಪಿ. ಸಾ) : ನಾನು ಚರ್ಚೆಯನ್ನು ಶ್ರದ್ಧೆಯಿಂದ ಕೇಳಿರುವೆ. ಪಂಡಿತ

ಠಾಕೂರದಾಸ್ ಭಾರ್ಗವ, ಹಾಗೂ ಪಂಡಿತ ಲಕ್ಷ್ಮೀಕಾಂತ ಮೈತ್ರಾ ಅವರು ನಮ್ಮ ಹಿರಿಯರು, ಅವರ ಹೇಳಿಕೆಗಳಿಗೆ ಗೌರವ ಸೂಚಿಸುವೆ. ಅವರು ಹೇಳಿದಂತೆ ಈ ವಿಧೇಯಕವನ್ನು ಕಾನೂನುಗೊಳಿಸಿದರೆ, ಹಿಂದೂ ಸಂಸ್ಕೃತಿಗೆ ಧಕ್ಕೆ ತಗಲುವುದು, ಹಾಗೂ ಹಿಂದೂ ಸಮಾಜದ ರಚನೆಗೆ ಅಪಾರ ಹಾನಿ ಉಂಟಾಗುವುದು, ಎಂಬುದಕ್ಕೆ ನಾನು ಕಾರಣಗಳನ್ನು ಹುಡುಕುತ್ತಿರುವೆ. ಆದರೆ ನನ್ನ ದುರದೃಷ್ಟ, ನನಗೆ ಆ ವಿಧವಾದ ಕಾರಣಗಳೇ ಕಂಡುಬಂದಿಲ್ಲ. ಈ ವಿಧೇಯಕದಲ್ಲಿ ನಮ್ಮ ಧರ್ಮದಲ್ಲಿ ಹಸ್ತಕ್ಷೇಪ ಮಾಡುವ ಪ್ರಶ್ನೆಯೇ ಇಲ್ಲ. ವಿಧೇಯಕವು ಸರಿಯೇ ಅಥವಾ ತಪ್ಪೇ? ಅದು ಬೇರೆ ಪ್ರಶ್ನೆ. ಸದನದಲ್ಲಿ ಮಂಡಿಸಿದ ಈ ವಿಧೇಯಕವು ಸಂಬಂಧಿಸಿರುವುದೇ, ಹಿಂದೂ ಧರ್ಮಕ್ಕೆ; ಇದರಿಂದ ಯಾವ ಬಾಧೆಯೂ ಇಲ್ಲ. ಹಿಂದೂ ಧರ್ಮ ಇದ್ದಂತೆಯೇ ಮುಂದುವರೆಯಲು ಈ ವಿಧೇಯಕ ಯಾವ ಅಡಚಣೆ ಒಡ್ಡಲಾರದು. ಎರಡನೆಯ ಪ್ರಶ್ನೆ ಎಂದರೆ ಸಂಸ್ಕೃತಿಯದು. ಪ್ರಶ್ನೆ ಎಂದರೆ ಯಾವ ಗೃಹವೇ ಆಗಲಿ 'ಎ'ಗೆ ಅಥವಾ 'ಬಿ'ಗೆ ಸೇರಿದೆಯೋ ಅಥವಾ ರಾಮಕುಮಾರ ಅಥವಾ ಕೃಷ್ಣಕುಮಾರನದೋ ಎಂದಿರುವಾಗ ವಿಮಲಕುಮಾರಿಯ ಹೆಸರನ್ನು ಅದರೊಂದಿಗೆ ಸೇರ್ಪಡಿಸಿದರೆ, ಅದರಿಂದ ಹಿಂದೂ ಸಂಸ್ಕೃತಿಗೆ ಯಾವ ಬಗೆಯ ಅಡಚಣೆ ಅಥವಾ ಅಪಾಯವಾಗಲಾರದು.

ನನ್ನ ಮಿತ್ರರು ನನ್ನ ಹೇಳಿಕೆಗೆ ಮಧ್ಯೆ ಪ್ರವೇಶಿಸದಂತೆ, ಮೊದಲು ಸಂಸ್ಕೃತಿ ಎಂದರೇನು ಎಂಬುದನ್ನು ಅರಿಯುವುದು ಸೂಕ್ತ. ಯಾವ ಸಂಸ್ಕೃತಿಯೇ ಇರಲಿ, ಅದು ಸಾಮಾಜಿಕ ವಿಕಾಸ, ಹಾಗೂ ಉತ್ಕ್ರಾಂತಿ ವಿಧಾನಗಳಿಗೆ ಅಡ್ಡಿ ಮಾಡಿದರೆ ಅದು ಸಂಸ್ಕೃತಿಯಾಗಲಾರದು. ಏಕೆಂದರೆ ಸಂಸ್ಕೃತಿಯ ಪ್ರಮುಖ ಲಕ್ಷಣ ಕ್ರಿಯಾಶೀಲತೆ. ಇದನ್ನು ಕೈಬಿಟ್ಟರೆ ಸಮಾಜವು ಜಡವಾಗುತ್ತದೆ. ಇದರಿಂದಾಗಿ ವಿಕಾಸಕ್ಕೆ ಅಡ್ಡಿಯಾಗುತ್ತದೆ. ಆ ಬಗೆಯ ಸಮಾಜವು ಸ್ಪಂದಿಸದೆ ಬಹುದಿನ ಬಾಳದೇ ಅವಸಾನ ಹೊಂದುತ್ತದೆ. ಸಂಸ್ಕೃತಿ ಎಂಬುದು ಸಮಾಜದ ಬದಲಾವಣೆಗಳಿಗೆ ಸ್ಪಂದಿಸಿ ಕ್ರಿಯಾಶೀಲತೆಯಿಂದ ಒಡಗೂಡಿರಬೇಕೇ ಹೊರತು ಜಡವಾಗಿರಬಾರದು. ಸಂಸ್ಕೃತಿ ಅಪಾಯದಲ್ಲಿದೆ ಎಂದು ಬೊಬ್ಬೆ ಹೊಡೆಯುವ ಮುನ್ನ ನಾವು ಇದನ್ನು ಅರ್ಥಮಾಡಿಕೊಳ್ಳುವುದು ಸೂಕ್ತ. ಸಂಸ್ಕೃತಿ, ಧರ್ಮ ಹಾಗೂ ಹಿಂದೂ ಸಮಾಜವು ವೇದಕಾಲದಲ್ಲಿದ್ದಂತೆ ಇಂದು ಇಲ್ಲ. ಗ್ರೀಕರು, ರೋಮನ್ನರು ಈ ದೇಶಕ್ಕೆ ಬಂದಿದ್ದರು ಹಾಗೂ ಅವರಿಂದ ಯಾವ ಪ್ರಭಾವಕ್ಕೂ ಗುರಿಯಾಗದೇ ನಮ್ಮ ಸಮಾಜ ಜಡವಾಗಿತ್ತೆಂದು ನಾವು ನಂಬಬೇಕೆ? ನಮ್ಮ ಸಮಾಜದ ಪ್ರಮುಖ ವಿಶೇಷ ಗುಣ ಎಂದರೆ ಬಂದುದ್ದೆಲ್ಲವನ್ನೂ ಅರಗಿಸಿಕೊಳ್ಳುವುದು. ಆದುದರಿಂದಲೇ ಹಿಂದೂ ಸಮಾಜ ಬೇರೆ ಯಾವ ಸಮಾಜದ ಪ್ರಭಾವಗಳಿಗೂ ಗುರಿಯಾಗದೆ ತನ್ನತನವನ್ನು ಮುಂದುವರಿಸಿಕೊಂಡೇ ಬಂದಿದೆ. ಇದು ನನ್ನ ಉತ್ತರ. ನಾವು ನಮ್ಮ ಸಮಾಜವನ್ನು ವಿವೇಚನೆ ಹಾಗೂ ವೈಜ್ಞಾನಿಕ ವಿಧಾನಗಳಿಂದ ನೋಡಿದಾಗ ನಮಗೆ ಗೋಚರವಾಗುವ ವಿಷಯ ಎಂದರೆ ನಮ್ಮ ಸ್ಮೃತಿಗಳು. ಈ ಸ್ಮೃತಿ ಬೇರೆ ಏನೂ ಆಗಿರದೆ ನಮ್ಮ ಸಂಸ್ಕೃತಿಯ ಆಚಾರ – ವಿಚಾರ, ಸಂಪ್ರದಾಯಗಳ ಕ್ರೋಢೀಕರಣ ಎಂದೇ ಹೇಳಬೇಕು. ನಮ್ಮಲ್ಲಿ ವಿವಿಧ ಸ್ಮೃತಿಗಳಿವೆ. ಒಂದೇ ವಿಷಯದ ಬಗೆಗೂ ಭಿನ್ನಾಭಿಪ್ರಾಯ ಸೂಚಿಸಿದ ವಿವಿಧ ಸ್ಮೃತಿಕಾರರೂ ಇದ್ದಾರೆ. ಆದುದರಿಂದ ಪ್ರಿವಿ ಕೌನ್ಸಿಲ್ ಹೇಳಿದಂತೆ, ಭಿನ್ನಾಭಿಪ್ರಾಯಗಳಿದ್ದರೂ ಅದನ್ನು ಒಪ್ಪಬೇಕು. ಏಕೆಂದರೆ ಅದು ವೇದದಿಂದ ಬಂದ ಸತ್ಯವೆಂದಲ್ಲ. ಆದರೆ ಆಚರಣೆಯಲ್ಲಿದ್ದ ಧರ್ಮವನ್ನೇ ಅದು ದಾಖಲಿಸಿದೆ. ಹೀಗಾಗಿ ಸ್ಮೃತಿಯನ್ನು ಅಂಗೀಕರಿಸಬೇಕು. ಅಲ್ಲದೆ ಹಿಂದೂ ಲಾದಡಿಯಲ್ಲಿ ಶಾಸನಕ್ಕಿಂತ ಸಂಪ್ರದಾಯಕ್ಕೆ ಅಧಿಕ ಮಹತ್ವವನ್ನು ನೀಡಲಾಗಿದೆ ಎಂಬುದನ್ನು ಮರೆಯಬಾರದು. ಈಗ ನಾನು ನಿಮ್ಮನ್ನು ಗಂಭೀರವಾಗಿ ಪ್ರಶ್ನಿಸುವ ವಿಷಯವೆಂದರೆ, ಧರ್ಮ ಹಾಗೂ ಹಿಂದೂ ಸಮಾಜ ಹಾಗೂ ಸಮಾಜ ನಶಿಸಿ

ಹೋಗುವ ಹಾಗೂ ಸಂಸ್ಕೃತಿಗೆ ಧಕ್ಕೆ ತಗಲುವ ಪ್ರಶ್ನೆಯೂ ಇಲ್ಲ. ಹೀಗಿರುವಾಗ ಆ ವಿಷಯಗಳನ್ನು ಪ್ರಸ್ತಾವಿಸಿ ವಿಧೇಯಕಕ್ಕೆ ಅಡಚಣೆ ಉಂಟುಮಾಡಬೇಡಿರಿ.

ಮತ್ತೊಂದು ವಿಷಯವೆಂದರೆ, ನಾವೇ ಭಗವಂತನ ಔರಸಪುತ್ರರು ಎಂದು ಕೊಚ್ಚಿಕೊಳ್ಳುವುದು ಬೇಡ. ಏಕೆಂದರೆ ಜಗತ್ತಿನಲ್ಲಿ ನಮ್ಮಂತೆಯೇ ಬೇರೆ ಆರು ಮಹತ್ವದ ನಾಗರಿಕತೆಯ ಜನಾಂಗದವರಿದ್ದಾರೆ. ಅವರೂ ಭಗವಂತನಿಂದಲೇ ಪ್ರೇರಣೆ ಪಡೆದಿದ್ದಾರೆ. ಅದನ್ನು ಮುಸ್ಲಿಮರು, ಕ್ರಿಶ್ಚಿಯನ್ನರೂ ಹೇಳಬಹುದು. ಅಷ್ಟೇ ಏಕೆ, ಜಪಾನೀಯ ರಾಜನೋರ್ವನು 'ನಾನೇ ದೇವರ ಮಗ' ಎಂದೂ ಹೇಳಿದ. ಕ್ರಿ.ಶ. ೧೫೫೫ರಲ್ಲಿ ಚೈನಾದ ಚಕ್ರವರ್ತಿ ಜಾರ್ಜ್ III ಅವರಿಗೆ ಒಂದು ಸಂದೇಶ ಕಳಿಸಿ ಚೈನಾದ ಅರಸು ದೇವಾಂಶ ಸಂಭೂತನು, ಆದುದರಿಂದ ಅವನ ಪ್ರದೇಶವು, ಪರಕೀಯರ ಪದಾನುಕ್ರಮಣದಿಂದ ಅಪವಿತ್ರವಾಗಬಾರದು; ಆದುದರಿಂದಲೇ ನಾನು ನಿಮಗೆ ವ್ಯಾಪಾರಕ್ಕೆ ಅನುಮತಿ ನೀಡಲಾರೆನೆಂದೇ ಸಾರಿದ. ಆದರೆ ವಿಧಿಯ ವೈಚಿತ್ರವೇ ಬೇರೆ. ಈ ಘಟನೆ ನಡೆದು ೪೯ ವರ್ಷಗಳ ನಂತರ ಆಂಗ್ಲೇಯರು, ಚೈನಾದ ಮೇಲೆ ದಾಳಿ ಮಾಡಿ ಜಯಗಳಿಸಿದರು. ಇದರಿಂದಾಗಿ ಚೈನಾ ದೇಶವು ಓಪಿಯಮ್ ವ್ಯಾಪಾರಕ್ಕೆ ಸಮ್ಮತಿಸಲೇ ಬೇಕಾಗಿ ಬಂತು. ಆಗ ದೇವಪುತ್ರನ ನಾಡೇನಾಯಿತು?

ಆಂಗ್ಲೇಯರ ಫಿರಂಗಿಗಳ ಮುಂದೆ ದೇವಪುತ್ರನ ಗತಿ ಏನಾಯಿತು? ಆಂಗ್ಲೇಯರೂ ಈ ಬಗೆಯ ಡಂಭಾಚಾರ ಕೊಚ್ಚಿಕೊಳ್ಳುತ್ತಾರೆ. ಅವರೇ ಹೇಳುವಂತೆ ಬಿಳಿಮಾನವರಿಗೆ ಭಾರದಾಯಕ ಕಾರ್ಯ ಎಂದರೆ ಆಫ್ರಿಕನ್ನರನ್ನು ಮತ್ತು ಭಾರತೀಯರನ್ನೂ ನಾಗರಿಕರನ್ನಾಗಿ ಮಾಡುವ ಕಾರ್ಯ. ಇದು ಕೇವಲ ಡಂಭಾಚಾರ ಅಥವಾ ಕಣ್ಣೊರೆಸುವ ಕುತಂತ್ರ. ಇದೊಂದು ಬಗೆಯ ದೇವನಿಗೇ ಅಪಚಾರ ಎಸಗುವ ಕೃತಿ. ಏಕೆಂದರೆ ದೇವನು ಬುದ್ಧಿಯನ್ನು ಎಲ್ಲರಿಗೂ ಸಮಾನವಾಗಿಯೇ ನೀಡಿರುವನು. ಆದುದರಿಂದ ನಾನು ವಿನಯಪೂರ್ವಕವಾಗಿ ಕೋರುವುದೇನೆಂದರೆ ಈ ಬಗೆಯ ಧಾರ್ಮಿಕ, ಸಾಂಸ್ಕೃತಿಕ ಅಪಚಾರಗಳಿಗೆ ಆಸ್ಪದ ನೀಡಬೇಡಿರಿ.

ಈ ವಿಧೇಯಕದಿಂದ ಹಿಂದೂ ಸಮಾಜ ಹಾಳಾಗುವುದೆಂದು ಹೇಳಿದೆ. ವಿವೇಚನೆ ಹಾಗೂ ವೈಜ್ಞಾನಿಕ ವಿಧಾನದಿಂದ ಪರಿಶೀಲಿಸಿರಿ. ಏಕೆಂದರೆ ಯಾವ ದೇಶದ ಕಾನೂನುಗಳೇ ಇರಲಿ ಅವು ಆಯಾ ದೇಶದ ಆರ್ಥಿಕ ಹಾಗೂ ಸಾಮಾಜಿಕ ಹಿನ್ನೆಲೆಯನ್ನು ಹೊಂದಿರುತ್ತವೆ. ನಾವು ವಿಶ್ವದಿಂದ ಬೇರ್ಪಡೆಗೆ ಗುರಿಯಾಗಿದ್ದೇವೆ. ನಾನು ಈಗಾಗಲೇ ಹೇಳಿದಂತೆ ವಿಶ್ವದಲ್ಲಿ ಆರು ಮಹಾನ್ ನಾಗರಿಕತೆಗಳಿವೆ ಎಂದು ಸ್ಮರಿಸಲೇಬೇಕು. ಪ್ರತಿಯೊಬ್ಬರು ತಾನು ದೇವಸಂಜಾತ........

**ಪಂಡಿತ ಲಕ್ಷ್ಮೀಕಾತ ಮೈತ್ರಾ :** ನನ್ನ ಮಿತ್ರರು, ಹಿಂದೂ ಕೋಡಿನ ಯಾವ ಉಪನಿಬಂಧನೆಯ ಬಗೆಗೆ ಮಾತನಾಡುತ್ತಿದ್ದಾರೆ ?

**ಶ್ರೀ ಕೃಷ್ಣಚಂದ್ರ ಶರ್ಮ :** ನೀವು ಕೇಳಿದ ವಿಷಯವನ್ನೇ ಹೇಳುತ್ತಿರುವೆ. ನಾನು ಏನು ಹೇಳುತ್ತಿರುವೆನೆಂದರೆ, ಅವರು ತಾವು ಹೇಳಿದ್ದೇ ಸರ್ವಶ್ರೇಷ್ಠ ಎಂದೇ ಭಾವಿಸಿದ್ದರು. ಏಕೆಂದರೆ ಅವರಿಗೆ ಪರಕೀಯರ ಬಗೆಗೆ ಯಾವ ಜ್ಞಾನವೂ ಇರಲಿಲ್ಲ. ಆದುದರಿಂದಲೇ ಅವರ ಧರ್ಮವೇ ಸರ್ವಶ್ರೇಷ್ಠವೆಂದು ಭಾವಿಸಿದರು. ಆದರೆ ಇಂದು ಹವಾಮಾನ, ಹಡಗುಗಳಿಂದಲೂ ಹಾಗೂ ಮುದ್ರಣ, ಪ್ರಸಾರ, ಪ್ರಕಟಣೆಯಿಂದಾಗಿ ವಿಶ್ವದ ಇತರ ಜನತೆಯೊಂದಿಗೆ ಸಂಪರ್ಕ ಬೆಳೆದಿದೆ. ಬೇರೆಯ ಜನಾಂಗದವರು ನಿಮ್ಮನ್ನು ಅರಿಯಬಲ್ಲರು ಹಾಗೂ ಅವರನ್ನು ನೀವೂ ಅರಿಯಬಹುದು. ಅಲ್ಲದೆ ಅವರಿಂದ ನೀವು ಪ್ರಭಾವ ಹೊಂದಿರುವಿರಿ. ನೀವು ನಿಮ್ಮ ಮಗುವಿನ ಮೇಜಿನ ಮೇಲೆ ಬರ್ನಾಟ್ ಷಾ, ಷೇಕ್ಸ್‌ಪಿಯರರ ಕೃತಿ ಕಾಣುವಿರೇ ಹೊರತು 'ಗಂಗಾಲಹರಿ'

ಯನ್ನಲ್ಲ. ಆದರೆ ನೀವು ನಿಮ್ಮ ಮಗುವನ್ನು ಹಿಂದೂ ಅಲ್ಲವೆಂದು ಹೇಳುವಿರಾ? ಆದುದರಿಂದ ಇಂದು ನಮ್ಮ ಭಾವನೆಗಳೂ, ವಿಶ್ವದ ವಿವಿಧ ದೇಶಗಳಲ್ಲಿಯ ಆಗುಹೋಗುಗಳಿಂದ ಪ್ರಭಾವಕ್ಕೆ ಗುರಿಯಾಗಿವೆ. ಹೀಗಾಗಿ ನಿಮ್ಮ ಕಾನೂನುಗಳನ್ನು ಅವುಗಳಿಂದ ವಿಚ್ಛೇದಗೊಳಿಸಲಾಗದು. ಇದು ಪ್ರಗತಿಯ ಸಂದೇಶ. ಆದುದರಿಂದ ಕಾನೂನುಗಳನ್ನು ವೈಜ್ಞಾನಿಕ ವಿವೇಚನೆಯಂತೆ ರಚಿಸುವುದು ಉತ್ತಮ. ಹಿಂದೆ ಧರ್ಮಗಳ ಬಗೆಗೆ ಅಸಹನೆ, ಆಕ್ರೋಶಗಳಿದ್ದರಬಹುದು. ಆದರೆ ಇಂದು ಅವು ವೈಜ್ಞಾನಿಕವಾಗಿರಲೇ ಬೇಕು. ಇಲ್ಲದೇ ಹೋದರೆ ಅವನ್ನು ಯಾರೂ ಒಪ್ಪಲಾರರು. ಅಲ್ಲದೆ ಇಂದು ಧರ್ಮ ಎಂದರೆ ಮಾನವನನ್ನು ದೇವಮಾನವನ ಮಟ್ಟಕ್ಕೆ ಕೊಂಡುಹೋಗುವ ಸಾಧನೆ. ಹೀಗಾಗಿ ನಾವು ಹಲವು ಸೂತ್ರಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಆದುದರಿಂದ ಇಂದಿನ ಯುಗದಲ್ಲಿ ಎಲ್ಲವೂ ಧರ್ಮವಲ್ಲ, ಹಾಗೂ ಸಂಸ್ಕೃತಿಯಲ್ಲ ಹಾಗೂ ಸಮಾಜವನ್ನೇ ಆಧರಿಸಿಲ್ಲ. ಏಕೆಂದರೆ ಜಗತ್ತು ವಿಶಾಲವಾಗಿದೆ. ಅಲ್ಲದೆ ಹಲವಾರು ಸೂತ್ರಗಳು ವಿಶ್ವಮಾನ್ಯವಾಗಿದ್ದು ಅವುಗಳಿಂದ ಯಾವ ನ್ಯಾಯಾಧಿಪತಿ ಅಥವಾ ಧರ್ಮಗುರುಗಳೇ ಆಗಲಿ ತಪ್ಪಿಸಿಕೊಳ್ಳಲಾರರು. ನೀವು ಭಾವಿಸಿರುವುದೇ ಧರ್ಮ, ಸಂಸ್ಕೃತಿ, ಸಮಾಜ ಎಂದು ಭಾವಿಸದಿರಿ.

ನನ್ನ ಸ್ನೇಹಿತರು ಕೇಳಿದರು, ನಾನು ಯಾವುದರ ಬಗೆಗೆ ಮಾತನಾಡುತ್ತಿರುವೆ ಎಂದು. ಮುಲ್ಲಾರವರ ಹಿಂದೂ ಲಾ ದ ಮೊದಲನೆಯ ಪುಟದಲ್ಲಿ ಜಾತಿಗಳ ಬಗ್ಗೆ ಹೇಳಿದೆ. ಅದರಂತೆ ಹಿಂದೂ ಸಮಾಜದಲ್ಲಿ ನಾಲ್ಕು ಜಾತಿಗಳಿವೆ. ಅದೇ ಪುಟದ ಎರಡನೆಯ ಪ್ಯಾರಾದಲ್ಲಿ ಕ್ಷತ್ರಿಯರು, ಶೂದ್ರರೇ ಎಂಬುದರ ಬಗೆಗೆ ಬರೆಯಲಾಗಿದೆ.

ಮೂರನೆಯ ಪ್ಯಾರಾದಲ್ಲಿ ಮರಾಠರು ಶೂದ್ರರೇ ಅಥವಾ ರಾಜಪುತ್ರರೇ? ನಾನು ವಿನಯಪೂರ್ಣವಾಗಿ ಕೇಳುವುದೇನೆಂದರೆ, ಇದೇ ಸಂಸ್ಕೃತಿಯೇ? ಅಥವಾ ಧರ್ಮವೇ? ಏಕೆಂದರೆ ಧರ್ಮ ವಿಶ್ವ ಪ್ರೇಮದ ಪವಿತ್ರ ಭಾವನೆ, ಸಂಸ್ಕೃತಿಯು ಅದರ ಬೆಳಕು ಹಾಗೂ ಮಧುರ ಭಾವನೆಗಳ ಸಂಗಮ. ಜನರನ್ನು ಕೇವಲ ವರ್ಗಗಳಾಗಿ ವಿಭಜಿಸುವುದು ಸಂಸ್ಕೃತಿಯಾಗಲಾರದು.

**ಓರ್ವ ಸದಸ್ಯ :** ಅದು ಅಗ್ರಿಕಲ್ಚರ್ ಅಂದರೆ ವ್ಯವಸಾಯ.

**ಶ್ರೀ ಕೃಷ್ಣಚಂದ್ರ ಶರ್ಮ :** ವ್ಯವಸಾಯ ನಮಗೆ ಅನ್ನವನ್ನಾದರೂ ನೀಡುತ್ತದೆ. ಆದುದರಿಂದ ಅದನ್ನು ಹಳಿಯುವುದರಿಂದ ನಾವೇ ಅಲ್ಪರಾಗುತ್ತೇವೆ. ಈಗ, ನಾನು ಹಿಂದೂ ಲಾ ದ ಮೂಲಗಳೇನು ಎಂಬುದನ್ನು ಹೇಳಬಯಸುವೆ. ನನ್ನ ಮಿತ್ರರು, ವಕೀಲರಾಗಿದ್ದರೆ, ಅವರು ಅದನ್ನು ಗ್ರಹಿಸಬಹುದು. ಹಿಂದೂ ಲಾ ದ ಮೂಲಗಳೆಂದರೆ, ಶ್ರುತಿ ಹಾಗೂ ಸ್ಮೃತಿಗಳು. ಸ್ಮೃತಿಗಳೆಂದರೆ, ಕಾನೂನು ಬೆಂಬಲ ಪಡೆದಿರುವ ಸಂಪ್ರದಾಯಗಳು, ಟೀಕೆ ವ್ಯಾಖ್ಯೆಗಳೂ, ಪ್ರಿವಿ ಕೌನ್ಸಿಲಿನ ನ್ಯಾಯಪೀಠದ ನಿರ್ಣಯ, ಹಾಗೂ ಶ್ರೇಷ್ಠ ನ್ಯಾಯಾಲಯದ ತೀರ್ಪುಗಳು. ಆದರೆ ಶ್ರುತಿಗಳು ಎಂದರೆ ಅದರ ಬಗೆಗೆ ಏನೂ ಹೇಳಲಾಗದು ಎಂದೇ ಜಯಸ್ವಾಲ್ ಅವರು ಹೇಳಿದ್ದಾರೆ. ಜಯಸ್ವಾಲರು ಹಿಂದೂ ಪಾಲಿಟಿಯ ಬಗೆಗೆ ಅಧಿಕಾರಯುಕ್ತವಾಗಿ ಹೇಳಬಲ್ಲವರು. ಅವರೇ ಹೇಳುವಂತೆ, ಕ್ರೋಡೀಕರಿಸಿದ ಸಂಪ್ರದಾಯಗಳೇ ಸ್ಮೃತಿಗಳು. ಅವೇ ಜಾರಿಯಲ್ಲಿ ಬಂದವು. ವಿದ್ವಾಂಸರು ಅವನ್ನೇ ಅಂಗೀಕರಿಸಿದರು. ಏಕೆಂದರೆ ಅವುಗಳಿಗೆ ಕಾನೂನಿನ ಸ್ಥಾನಮಾನ ನೀಡಲಾಗಿತ್ತು. ಅಲ್ಲದೆ ಹಿಂದೂ ಲಾ ದಲ್ಲಿ ಕಾನೂನುಗಳಿಗಿಂತ ಸಂಪ್ರದಾಯಗಳಿಗೆ ಹೆಚ್ಚಿನ ಮನ್ನಣೆ, ಅದಕ್ಕೆ ಕಾನೂನಿಗಿಂತ ಹೆಚ್ಚಿನ ಗೌರವ. ನಂತರ ಬರುವ ವಿಷಯ ಎಂದರೆ, ಪ್ರಿವಿ ಕೌನ್ಸಿಲ್ ಹಾಗೂ ಶ್ರೇಷ್ಠ ನ್ಯಾಯಾಲಯಗಳ ಕೇಸ್ ಲಾ. ಇದರ ಸೃಷ್ಟಿ ಹೇಗೆ ಆಯಿತು. ೧೮೬೮ರ ಅವಧಿಯವರೆಗೆ ಹಿಂದೂ ಲಾ ದ ಪ್ರಕರಣಗಳಲ್ಲಿ ಬ್ರಿಟಿಷ್ ನ್ಯಾಯಾಧೀಶರು ಹಿಂದೂ ಪಂಡಿತರ ಸಹಕಾರದಿಂದ ನ್ಯಾಯಗಳನ್ನು

ತೀರ್ಮಾನಿಸುತ್ತಿದ್ದರು. ಆದರೆ ೧೮೬೪ರಲ್ಲಿ ಈ ವ್ಯವಸ್ಥೆಗೆ ಮಂಗಳ ಹಾಡಲಾಯಿತು. ಆದುದರಿಂದ ಈ ಕೇಸ್ ಲಾ ಬೇರೆ ಏನೂ ಆಗಿರದೇ ಹಿಂದೂ ಪಂಡಿತರ ಸಹಕಾರದಿಂದ ನ್ಯಾಯ ನೀಡಿದ ತೀರ್ಮಾನಗಳೇ ಅಗಿದ್ದವು. ಈಗ ನಾನು ಹೇಳುವುದೇನೆಂದರೆ, ದೇಶವು ಪರಾಕ್ರಮಣಕ್ಕೆ ಗುರಿಯಾದಾಗ, ವೈರಿಯೊಡನೆ ಕುಳಿತು ವಿದ್ಯಾವಂತರೆ ಸಹಕರಿಸದುದು ಅಗೌರವವಲ್ಲವೇ ? ಹೀಗಾಗಿ ಈ ಪಂಡಿತ ವರ್ಗದವರೆಲ್ಲರೂ ಆತ್ಮಗೌರವವಿಲ್ಲದ ಪ್ರಾಣಿಗಳು; ಅವರು ಹಿಂದೂಗಳ ಪ್ರತಿನಿಧಿಗಳೆ ಆಗಿರಲಿಲ್ಲ. ಹೀಗಿರುವಾಗ ಈ ಬಗೆಯ ಹಿಂದೂ ಲಾ ವನ್ನು ಬದಲಿಸಿದರೆ ಅಪಮಾನವೇ? ಇದೇ ಏನು ನಿಮ್ಮ ಹಿಂದೂ ಲಾ? ಇದರ ಪವಿತ್ರತೆ ಏನು? ಆದರೆ ಇಂದು ನಾವು ಸ್ವತಂತ್ರರು. ನ್ಯಾಯಾಂಗ ಬಲದಿಂದ ನಾವೇ ನಮ್ಮ ಶಾಸನ ರಚಿಸುವುದು ಅಪರಾಧವೇ? ಯೋಚಿಸಿ.

ಇನ್ನು ಹಿಂದೂ ಕೋಡ್ ಬಗ್ಗೆ : ಅದು ಮೊದಲಿಗೆ ವಿವಾಹ ಹಾಗೂ ವಿಚ್ಛೇದನದ ಬಗೆಗೆ ತಿಳಿಸುತ್ತದೆ. ನಾವು ಕಳೆದ ಎರಡು ಮೂರು ವರ್ಷಗಳಿಂದ ರಚಿಸಿರುವ ತುಂಡು ಕಾನೂನುಗಳನ್ನೆಲ್ಲಾ ಒಂದೆಡೆಯಲ್ಲಿ ಕ್ರೋಡೀಕರಿಸಲಾಗಿದೆ. ನೀವು ಪವಿತ್ರ ವಿವಾಹದ ವ್ಯವಸ್ಥೆಯನ್ನೂ ಮುಂದುವರಿಸಬಹುದು; ಅದರಂತೆ ನಾಗರಿಕ ವಿವಾಹವನ್ನು ಮಾಡಿಕೊಳ್ಳಬಹುದು. ನಮಗೆಲ್ಲಾ ತಿಳಿದಂತೆ, ಹಿಂದೂಗಳು, ಹಿಂದೂಗಳಲ್ಲದವರನ್ನೂ ವಿವಾಹವಾಗಿ ಹಿಂದೂ ಧರ್ಮದಲ್ಲಿ ಉಳಿದುಕೊಳ್ಳಬಹುದು. ಅವರನ್ನು ಜಾತಿಭ್ರಷ್ಟರೆಂದು ಸಾರಲಾಗದು. ಆದುದರಿಂದ ಇದ್ದ ವ್ಯವಸ್ಥೆಯನ್ನೇ ಕ್ರೋಡೀಕರಿಸಿ ಕಾನೂನು ಮಾಡಿದರೂ ಅಪರಾಧವೇ? ನಾವೇನೂ ಬೇರೆಯದಾದುದನ್ನು ಮಾಡಿಲ್ಲ. ನ್ಯಾಯಾಂಗದಿಂದ ವಿಚ್ಛೇದನ, ವಿವಾಹವನ್ನು ಅಸಿಂಧು ಎಂದು ಸಾರುವ ವಿಚಾರಗಳೂ ಸಕಾರಣವಾಗಿವೆ. ನಪುಂಸಕತ್ವ ಅಥವಾ ಪತಿಯು ಬೇರೊಬ್ಬಳೊಂದಿಗೆ ದೇಹ ಸಂಪರ್ಕ ಇರಿಸಿಕೊಂಡಾಗ, ಅಥವಾ ಹುಚ್ಚು ಇದ್ದಾಗ ಅಥವಾ ಕುಷ್ಠರೋಗದಿಂದ ನರಳುತ್ತಿದ್ದರೆ ವಿಚ್ಛೇದನ ಅಪರಾಧವೇ? ಈ ಬಗ್ಗೆ ನನ್ನದೊಂದು ಪುಟ್ಟ ಪ್ರಶ್ನೆ. ಈ ಬಗೆಗೆ ಸ್ಮೃತಿ ಹಾಗೂ ಶ್ರುತಿಗಳೂ ಏನು ಹೇಳಿವೆ; ನಾನು ಮನಗಂಡಂತೆ ಯಾವ ಸ್ಮೃತಿಕಾರನೂ ಇದನ್ನು ವಿರೋಧಿಸಿಲ್ಲ. ಹೀಗಾಗಿ ನಮ್ಮ ಸ್ನೇಹಿತರು ತಿದ್ದುಪಡಿ ತರಬಹುದು. ನನಗೆ ಸ್ಮೃತಿಗಳ ಬಗ್ಗೆ ಹೆಮ್ಮೆ ಇದೆ. ಹೀಗಿದ್ದಾಗ ಅದನ್ನು ಏಕೆ ಒಪ್ಪಬಾರದು? ನೀವು ಸ್ತ್ರೀ ವಿರೋಧಿಗಳೆ? ನೀವು ನಿಮ್ಮ ಮಗಳು ಹಾಗೂ ತಾಯಂದಿರನ್ನು ದ್ವೇಷಿಸುವಿರೋ? ನಮ್ಮ ಮಾತೆ ಗೌರವಾನ್ವಿತೆ ಅವಳ ಕುಡಿಯೇ ಮಗಳು, ನಮ್ಮ ರಕ್ತವನ್ನು ಹಂಚಿಕೊಂಡು ಹುಟ್ಟಿದವಳು. ಅವಳ ಹಿತಕ್ಕೆಂದೇ ರಚಿಸಿದ ಈ ಹಿಂದೂ ಕೋಡ್ ಅದು ಹೇಗೆ ಹಿಂದೂ ಕುಟುಂಬ ಹಾಗೂ ಸಮಾಜಕ್ಕೆ ಮಾರಕವಾಗಬಲ್ಲದು. ಈ ವಿಧೇಯಕದಲ್ಲಿ ಹಿಂದೂ ಧರ್ಮ ಸಂಸ್ಕೃತಿಯ ಬಗೆಗೆ ಯಾವ ವಿರೋಧವೂ ಇಲ್ಲ.

ಇನ್ನು ದತ್ತು ಪ್ರಕರಣ. ನನ್ನ ವಿಚಾರದಲ್ಲಿ ಈ ಸಂದಿಗ್ಧ ಸಮಯದಲ್ಲಿ ನಮ್ಮ ಸಮಾಜವು ಅನೇಕ ಬದಲಾವಣೆಗಳನ್ನು ಎದುರಿಸುತ್ತಿರುವಾಗ ಈ ವಿಷಯ ಅಪ್ರಸ್ತುತ ಹಾಗೂ ಅದಕ್ಕೆ ಯಾವ ಅರ್ಥವೂ ಇಲ್ಲ. ಮನುಸ್ಮೃತಿಯಲ್ಲಿ ತಿಳಿಸಿದಂತೆ ಅಪುತ್ರನಿಗೆ ಸ್ವರ್ಗದಲ್ಲಿ ಸ್ಥಾನ ದೊರೆಯಲಾರದು. ಆರ್ಯರು ಭೀತಿಗೊಳಗಾದಾಗ ಈ ಬಗೆಯ ಒಂದು ವಿಧಾನದಿಂದ ತಮ್ಮ ಸಂತಾನವನ್ನು ರಕ್ಷಿಸಲೆಂದೇ ಇದನ್ನು ಜಾರಿಗೆ ತಂದಂತೆ ತೋರುತ್ತದೆ. ಹಿಂದೂ ಸಂಪ್ರದಾಯದಲ್ಲಿ ಮೂರು ಋಣಗಳಿವೆ. ಅವೆಂದರೆ ದೇವಋಣ, ಋಷಿಋಣ, ಪಿತೃಋಣ. ಇದೊಂದು ಜನಾಂಗೀಯ ವಿಚಾರ. ಜನಾಂಗವನ್ನು ಮುಂದುವರಿಸಿಕೊಂಡು ಹೋಗುವ ಮಾರ್ಗ. ಇದು ಮನುಸ್ಮೃತಿಯ ಕಾಲದಲ್ಲಿ ಅನಿವಾರ್ಯವಾಗಿರಬಹುದು. ಆದರೆ ಇಂದು ಅದು ಅನಿವಾರ್ಯವಲ್ಲ. ಇಂದು ನಮಗೆ ಸಂತಾನದ ಚಿಂತೆಯಿಲ್ಲ. ಸಂತಾನ ನಿಯಂತ್ರಣದ ಸಮಸ್ಯೆ,

ಹಾಗೂ ಅನ್ನ, ಬಟ್ಟೆಯ ಚಿಂತೆಗಳಿಂದ ತೊಳಲುತ್ತಿರುವಾಗ, ದತ್ತಕದ ಪ್ರಶ್ನೆ ಮಹತ್ವದ್ದಲ್ಲ. ನಾನು ಇದು ಅನಿವಾರ್ಯ ಎಂದೇ ಭಾವಿಸುವುದಿಲ್ಲ. ಇನ್ನು ಇದರ ಹಿಂದೆ ಅಡಗಿರುವ ಸ್ವರ್ಗಕ್ಕೆ ಹೋಗುವ ಧರ್ಮಕಾರ್ಯ ಹಾಗೂ ದಾನಧರ್ಮಗಳ ಬಗೆಗೆ ಹೇಳಬಹುದಾದರೆ ದಾನ ನೀಡಲಿಕ್ಕೆ ನಮ್ಮ ಸಮಾಜದ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕು. ಅಲ್ಲದೆ ಮೃತರ ಬಗೆಗಿಂತ ಜೀವಂತ ಇದ್ದವರ ಬಗೆಗೆ ಹೆಚ್ಚು ಗಮನ ನೀಡಬೇಕೆಂದೇ ಸೂಚಿಸುವೆ. ಆದುದರಿಂದ ಈ ಪದ್ಧತಿಗೆ ಯಾವ ಬೆಲೆಯೂ ಇಲ್ಲ. ಇನ್ನು ಸಾಮಾಜಿಕ ದೃಷ್ಟಿಯಿಂದ ವಿಚಾರಿಸಿದಾಗ, ದತ್ತು ತೆಗೆದುಕೊಳ್ಳುವುದರಿಂದ ವೃದ್ಧಾಪ್ಯದಲ್ಲಿ ಪಾಲನೆ ಪೋಷಣೆಗೆ ಸಹಕಾರಿಯಾಗಬಲ್ಲದು ಎಂಬ ವಾದದಲ್ಲಿಯೂ ಹುರುಳಿಲ್ಲ. ಏಕೆಂದರೆ ಇಂದು ವೃದ್ಧಾಶ್ರಮ, ಆರೋಗ್ಯಧಾಮ ಹಾಗೂ ಆಸ್ಪತ್ರೆಗಳು ಈ ಕಾರ್ಯಕ್ಕೆಂದೇ ಜಾರಿಯಲ್ಲಿವೆ. ಹೀಗಾಗಿ ಆಸ್ತಿ ಇದೆ ಎಂದೇ ನೀವು ದತ್ತನ್ನು ಪಡೆಯಬೇಕೆಂದರೆ, ಈ ವಿವಿಧ ಸಂಸ್ಥೆಗಳ ಮೊರೆ ಹೋಗಬಹುದು. ಆಸ್ತಿ ಇಲ್ಲದೇ ದತ್ತು ಸ್ವೀಕರಿಸಿದರೆ, ದತ್ತು ಪುತ್ರ ನಿಮ್ಮನ್ನು ಪೋಷಿಸುತ್ತಾನೆ ಎಂಬುದು ಪೊಳ್ಳುಭಾವನೆ. ಆದುದರಿಂದ ಇಂದಿನ ಸಾಮಾಜಿಕ ಹಿನ್ನೆಲೆಯಲ್ಲಿ ದತ್ತು ಪದ್ಧತಿಯನ್ನು ಕೈಬಿಡುವುದೇ ಸೂಕ್ತ.

ಇನ್ನು ಅಲ್ಪ ವಯಸ್ಸಿನ ಹಾಗೂ ಪೋಷಕರ ಬಗೆಗೆ ಹಿಂದೂ ಲಾ ದ ವಿರುದ್ಧವಾದ ಸಂಗತಿ ಏನೂ ಇಲ್ಲ. ವಾರಸುದಾರಿಕೆಯ ಹಕ್ಕಿನ ಬಗೆಗೆ ನನಗೆ ಹೆಚ್ಚು ವಿವರಗಳು ತಿಳಿದಿಲ್ಲ. ಹೀಗಾಗಿ ನಾನು ಅದರ ಬಗೆಗೆ ಏನೂ ಹೇಳಲಾರೆ. ಆದರೆ ಒಂದು ವಿಷಯ ಮಾತ್ರ ನಾನು ಹೇಳಬಲ್ಲೆ. ೧೯೩೭ ರ ಸ್ತ್ರೀ ಆಸ್ತಿ ಕಾನೂನಿನ ಅಡಿಯಲ್ಲಿ ತಾಯಿಗೆ ಪಾಲು ನೀಡಬೇಕೆಂದಿರುವಾಗ, ಸಹೋದರನೊಂದಿಗೆ, ಸಹೋದರಿಗೂ ಸಮಪಾಲು ನೀಡುವುದರಲ್ಲಿ ತಪ್ಪೇನು? ಪಂಡಿತ ಭಾರ್ಗವರು, ಅಳಿಯನು ಬಂದು ಗಲಾಟೆಮಾಡುವ ವಿಷಯ ಪ್ರಸ್ತಾಪಿಸಿದ್ದಾರೆ. ಇಬ್ಬರು ಮಕ್ಕಳು ಗಲಾಟೆ ಮಾಡದಿರುವಾಗ, ಅಳಿಯ ಏಕೆ ಗಲಾಟೆ ಮಾಡುವನು? ಕನ್ನಾಟ್ ಪ್ಲೇಸಿಗೆ ಹೋಗಿ ನೋಡಿರಿ. ಗಂಡನಾದವನು ಹೇಗೆ ಹೆಂಡತಿಯ ಕೋಟನ್ನು ಹಿಡಿದುಕೊಂಡು ಅವಳ ಹಿಂದೆಯೇ ತಿರುಗಾಡುತ್ತಿರುತ್ತಾನೆ. ಹೆಂಡತಿಯ ವಿರುದ್ಧ ಹೋಗಲಾರದವ, ಮಾವನ ಮನೆಯಲ್ಲಿ ಬಂದು ಏನು ಗಲಾಟೆ ಮಾಡಬಹುದು? ಈ ಪ್ರಶ್ನೆ ಮಡದಿಯ ಕುಮ್ಮಕ್ಕು ಇದ್ದಾಗ ಮಾತ್ರ.

**ಓರ್ವ ಸದಸ್ಯ :** ಅದು ಕೇವಲ ಉತ್ತರ ಭಾರತದಲ್ಲಿ.

**ಶ್ರೀ ಕೃಷ್ಣಚಂದ್ರ ಶರ್ಮ :** ಇದು ಪುರುಷರಲ್ಲಿಯ ಬದಲಾವಣೆ. ಮಾನವರ ಬದಲಾವಣೆ. ನಿಮ್ಮ ಮೀಸೆಗಳೇನಾದವು? ಮಾನವ ಜೀವನದ ಉತ್ಕ್ರಾಂತಿಯಲ್ಲಿ ಸ್ತ್ರೀಯರ ವಿಕಾಸವು ಸುಸಂಬದ್ಧವಾಗಿ ಜರುಗಿದೆ. ಅವಳು ತುಂಬಾ ಮೃದು ಹಾಗೂ ಮನೋಹರಿ. ಇದು ಜೀವನ ವಿಕಾಸ ಪದ್ದತಿ. ಅದು ಕ್ರೂರತೆಯಿಂದ ಕೋಮಲತೆಗೆ ಮುಂದುವರಿದಿದೆ. ನೀವೇನಾದರೂ ಇದರ ವಿರೋಧಿಯಾಗಿದ್ದರೆ, ನಿಮ್ಮಲ್ಲಿ ಮಾನವೀಯತೆಯ ಕೊರತೆ.

ಇನ್ನು ಅವಿಭಕ್ತ ಕುಟುಂಬದ ಬಗೆಗೆ ಹೇಳಬಹುದಾದರೆ, ಹಿಂದೂ ಸಮಾಜವು, ದನಗಾಹಿ ಅವಸ್ಥೆಯಲ್ಲಿ ಅಂದರೆ ಬೇಸಾಯವೇ ಜೀವನಾಧಾರವಾಗಿದ್ದ ಅವಧಿಯಲ್ಲಿ ಈ ವ್ಯವಸ್ಥೆ ಜಾರಿಯಲ್ಲಿ ಬಂದಿತು. ಆಗ ಅದು ಅನಿವಾರ್ಯವೂ ಆಗಿತ್ತು. ಆದರೆ ಈಗ ಕುಟುಂಬದ ಕಲ್ಪನೆಯೇ ಬದಲಾಗಿರುವಾಗ ಹಾಗೂ ಜೀವನೋಪಾಯಕ್ಕೆ ಬೇರೆ ಮಾರ್ಗಗಳಿರುವಾಗ ಈ ಅವಿಭಕ್ತ ಕುಟುಂಬದ ವ್ಯವಸ್ಥೆಯಾದರೂ ಏಕೆ?

ರೈತನು ಹಸುವನ್ನು ಬೆಲೆಯ ರೂಪದಿಂದ ನೋಡದೆ ಪವಿತ್ರ ಭಾವನೆಯಿಂದ ಕಾಣುತ್ತಾನೆ. ಹೀಗಾಗಿ ಇಂದು ಆ ಭಾವನೆಗಳಿಗೆ ಬೆಲೆ ಇಲ್ಲದಿರುವಾಗ, ಕುಟುಂಬದ ಭಾವನೆಗಳೂ ತಮ್ಮ ನೆಲೆ ಕಳೆದುಕೊಂಡಿವೆ. ಏಕೆಂದರೆ ನಾವು ಇಂದು ಗೋವನ್ನು ಗೋಮಾತೆ ಎಂದು ಭಾವಿಸಲಾರೆವು.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** : ಗಂಡು ಗೋವು ಎಲ್ಲಿಯಾದರೂ ಇದೆಯೇ?

**ಶ್ರೀ ಕೃಷ್ಣಚಂದ್ರ ಶರ್ಮ** : ಕಾಲ ಬದಲಾಗಿದೆ. ಆದುದರಿಂದ ಅವಿಭಕ್ತ ಕುಟುಂಬವೂ ಬದಲಾಗಿದೆ. ಆದುದರಿಂದ ಆರ್ಯನ್ನರ ಕಾಲದ ವ್ಯವಸ್ಥೆಯೇ ಮುಂದುವರಿಯಲು ಆಸ್ಪದವಿಲ್ಲ. ಎರಡನೆಯ ವಿಷಯ ವ್ಯವಸಾಯದ ಭೂಮಿ. ಅದರ ಬಗೆಗೆ ಸಾಕಷ್ಟು ಶಾಸನಗಳಾಗಿವೆ. ಅದರಂತೆಯೇ ಹಕ್ಕುಗಳನ್ನೂ ನಿರ್ಧರಿಸಲಾಗುವುದು. ಈ ನನ್ನ ಹೇಳಿಕೆಯಿಂದ, ಸದನ ಈ ವಿಧೇಯಕಕ್ಕೆ ಅಂಗೀಕಾರ ನೀಡಬೇಕೆಂದು ಕೋರಿಕೆ.

**ಶ್ರೀ. ಬಿ.ಎಮ್. ಗುಪ್ತ** (ಬೊಂಬಾಯಿ ಸಾ) : ನಾನು ವಿಧೇಯಕಕ್ಕೆ ಮೌಲ್ಯಾಧಾರಿತವಾಗಿ ಬೆಂಬಲ ನೀಡಲೆಂದೇ ನಿಂತಿರುವೆ. ಇದರ ಅರ್ಥವೆಂದರೆ, ನಾನು ಈ ಸುಧಾರಣೆಗಳನ್ನು ವಿರೋಧಿಸುವೆ ಎಂದು ಭಾವಿಸಬಾರದು. ಈ ವಿಧೇಯಕವು ಸರಿಯಾದ ದಿಕ್ಕಿನಲ್ಲಿ ಮುಂದುವರಿದಿದೆ. ಆದರೆ ಅಲ್ಪ ಸ್ವಲ್ಪ ಬದಲಾವಣೆಗಳಾಗಬೇಕು. ಹೊಂದಾಣಿಕೆ ಅನಿವಾರ್ಯ. ಅದಕ್ಕೆಂದೇ ಒಂದು ಉದಾಹರಣೆ ನೀಡುವೆ. ಬೊಂಬಾಯಿ ಪ್ರಾಂತದ ಹಳ್ಳಿಗಳ ಪ್ರದೇಶದಲ್ಲಿ ಈಗ ಜಾರಿಯಲ್ಲಿರುವ ಪರಂಪಾರಾನುಗತ ವಿವಾಹ ವಿಚ್ಛೇದನ ಪದ್ಧತಿಯಿಂದಾಗಿ ವಿಚ್ಛೇದನ ಪಡೆಯುವುದು ಸುಲಭದ ಕಾರ್ಯವಾಗಿಲ್ಲ. ಬೊಂಬಾಯಿ ಪ್ರಾಂತದಲ್ಲಿ ವಿವಾಹವಿಚ್ಛೇದನದ ಶಾಸನ ಜಾರಿಯಲ್ಲಿದ್ದರೂ, ಅದು ಹಲವಾರು ಸಾಂಪ್ರದಾಯಿಕ ವಿಚ್ಛೇದನದ ವಿಧಾನಕ್ಕೆ ಅಪವಾದವಾಗಿದೆ. ಆದುದರಿಂದ ಹಲವಾರು ಬದಲಾವಣೆಗಳು ಅನಿವಾರ್ಯ ಎಂದು ಹೇಳಬೇಕಾಗಿದೆ. ವಿವಾಹ ವಿಚ್ಛೇದನೆ ಪಾಲನೆ ಪೋಷಣೆ ಹಾಗೂ ಅಲ್ಪಸಂಖ್ಯಾತರ ಅಂಶಗಳ ಬಗೆಗೆ ಶಾಸನ ರಚನೆಯನ್ನು ಮುಂದುವರಿಸಬಹುದು. ಅದರ ಬಗೆಗೆ ಯಾವ ಉಪೇಕ್ಷೆ ಮಾಡಲಾರೆ. ಆದರೆ ಈ ವಿಧೇಯಕದ ೫–೬ ಹಾಗೂ ೭ರಲ್ಲಿ ಸೂಚಿಸಿದ ವಿಷಯಗಳಿಗೆ ನಾನು ಸಮ್ಮತಿಸಲಾರೆ. ಅವು ಮೂಲಭೂತ ಬದಲಾವಣೆ ತರಬಲ್ಲವಾಗಿವೆ. ಇದರಿಂದಾಗಿ ಹಿಂದೂ ಸಮಾಜದ ವಾರಸುದಾರಿಕೆಯ ಹಕ್ಕಿನಲ್ಲಿ ಅಗಾಧ ಬದಲಾವಣೆಗೆ ಆಸ್ಪದ ನೀಡಿದಂತಾಗುತ್ತದೆ. ಇದಕ್ಕೆ ಈಗ ಸಮಯ ಸರಿಯಾಗಿಲ್ಲ. ಏಕೆಂದರೆ ಈಗ ಸಮಾಜವು ಸಾಕಷ್ಟು ಗೊಂದಲಗಳ ಮಧ್ಯೆ ಇದೆ. ಈ ಗೊಂದಲಕ್ಕೆ ಮತ್ತೊಂದು ಗೊಂದಲಮಯ ಹಾಗೂ ವಿವಾದಾತ್ಮಕ ವಿಷಯವನ್ನು ಸೇರಿಸುವುದು ಬೇಡ. ಈಗ ನಾವು ಸಂಕಟ ಮತ್ತು ಗೊಂದಲಗಳನ್ನು ಎದುರಿಸುತ್ತಿರುವುದರಿಂದ, ಈ ಬಗ್ಗೆ ಆತುರಬೇಡ. ಅಲ್ಲದೆ ನಮ್ಮ ಪ್ರಧಾನಿಯವರು ಅನೇಕ ಬಾರಿ ಹೇಳಿದಂತೆ, ಆದ್ಯತೆ ಯಾವ ವಿಷಯಗಳಿಗೆ ಇದೆಯೋ ಅದನ್ನು ಕೈಗೆತ್ತಿಕೊಂಡು ಅನಿವಾರ್ಯವಾದವುಗಳನ್ನು ಪರಿಹರಿಸಿಕೊಳ್ಳುವುದು ಸೂಕ್ತ. ಅದನ್ನು ಬಿಟ್ಟು ಗೊಂದಲದ ಗೂಡಿಗೆ ಕೈಹಾಕುವುದು ಸೂಕ್ತವೇ? ಅಲ್ಲದೆ ಈ ವಿಧೇಯಕವು ಅಷ್ಟು ಅನಿವಾರ್ಯವೇ? ಹಿಂದೂ ಲಾ ಅನೇಕ ಸಂವತ್ಸರಗಳಿಂದಲೂ ಜಾರಿಯಲ್ಲಿದ್ದು, ಅದರ ಪರಿಷ್ಕರಣೆ ಅಥವಾ ಕ್ರೋಡೀಕರಣ ಕಾರ್ಯವನ್ನು ಸದ್ಯದಲ್ಲಿ ಕೈಗೆತ್ತಿಕೊಳ್ಳದೇ ಹೋದರೆ ಏನೂ ಅಪಾಯವಿಲ್ಲ. ಆದುದರಿಂದ ಸಮಾಜದಲ್ಲಿಯ ಅಶಾಂತಿ ವಾತಾವರಣ ನಿವಾರಣೆಯಾದ ಮೇಲೆ ಇದನ್ನು ಕೈಗೆತ್ತಿಕೊಳ್ಳಬಹುದಲ್ಲವೇ? ಅಲ್ಲದೆ ನಮ್ಮ ಅನುಭವದಂತೆ ಕಾಲಕ್ಕಿಂತ ಮುನ್ನ ಕೈಗೆತ್ತಿಕೊಳ್ಳುವ ಸಮಾಜ ಸುಧಾರಣೆಗಳು ಫಲಪ್ರದವಾಗಲಾರವು. ಏಕೆಂದರೆ ಅವು ಜನತೆಗೆ ತಿಳಿಯಲಾರವು. ಈ ದಿಶೆಯಲ್ಲಿ ನಾವು ಶಾರ ಕಾಯ್ದೆಯನ್ನು ಸ್ಮರಿಸಬಹುದು. ಅದು ಕೇವಲ ಪುಸ್ತಕದ ಶಾಸನವಾಗಿ, ಪ್ರತ್ಯಕ್ಷವಾಗಿ ಜಾರಿಗೆ ಬರಲೇ ಇಲ್ಲ. ಆದುದರಿಂದ ಈ ವಿಧೇಯಕದ V, VI ಮತ್ತು VIIರಲ್ಲಿ ಸೂಚಿಸಿದ ಸಂಗತಿಗಳ ಹಣೆಬರಹ ಶಾರದ ಕಾಯ್ದೆಯಂತೆ ಆಗಬಹುದು.

ಹಳ್ಳಿಗಳಲ್ಲಿಯ ಗೂಂಡಾಜನರು ಈ ಕಾನೂನಿನ ಅಂಶಗಳನ್ನು ದುರುಪಯೋಗ ಪಡಿಸಿಕೊಂಡು,

ಅನಕ್ಷರಸ್ಥ ಹಾಗೂ ಮುಗ್ಧಜನರಿಗೆ ಹಿಂಸೆ ನೀಡುತ್ತಾರೆ. ಈ ಬಗೆಯ ವ್ಯವಹಾರಕ್ಕೆ ಈ ವಿಧೇಯಕ ಆಸ್ಪದ ನೀಡುತ್ತದೆ. ಹೀಗಾಗಿ ನಾನು ಈ ವಿಧೇಯಕದ ವಿರೋಧಿಯಲ್ಲದಿದ್ದರೂ, ಈಗಿನ ಸಮಯ ಇದರ ಮಂಡನೆಗೆ ಸೂಕ್ತವಲ್ಲವೆಂದೇ ಹೇಳುವೆ. ನಾವು ಈ ಬಗೆಗೆ ಇಲ್ಲಿ ಹಾಗೂ ವಿವಿಧ ಪ್ರಾಂತಗಳ ಮುಖ್ಯ ಪಟ್ಟಣಗಳಲ್ಲಿ ಸ್ವೀಕರಿಸಬಹುದಾದ ನಿರ್ಣಯದಿಂದ, ಇಂದಿನ ಹಳ್ಳಿಯ ವಾತಾವರಣಕ್ಕೆ ಲಾಭವಾಗದು. ಇದು ನಮ್ಮ 'ಅಧಿಕ ಆಹಾರ ಉತ್ಪಾದಿಸಿರಿ' ಕಾರ್ಯ ಯೋಜನೆಯ ಕಟು ಅನುಭವದಿಂದ ಹೇಳುತ್ತಿರುವೆ. ಹಳ್ಳಿಯ ಗೂಂಡಾಗಳು ಅದನ್ನೇ ದುರುಪಯೋಗ ಮಾಡಿಕೊಂಡು ಹಳ್ಳಿಗಳಿಗೆ ಹಿಂಸೆ ನೀಡಿದರು.

ಈ ಬಗೆಗೆ ನಗರ ಪ್ರದೇಶಗಳಿಗಿಂತ, ಹಳ್ಳಿ ಪ್ರದೇಶಗಳ ಪರಿಸರವು ವಿಭಿನ್ನ ಹಾಗೂ ಅನೇಕ ತೊಂದರೆಗಳಿಂದ ಕೂಡಿದೆ ಎಂಬುದನ್ನು ನಾವು ಅರಿಯಬೇಕು. ಅಲ್ಲದೆ ನಾವು ರಚಿಸಿರುವ ಸಂವಿಧಾನದಲ್ಲಿ ಬೇಸಾಯದ ಭೂಮಿಯ ಪಾಲುದಾರಿಕೆಯ ವಿಷಯದಲ್ಲಿ ಎರಡು ಬಗೆಯ ವಿಧಾನಗಳಿವೆ. ಒಬ್ಬ ವಾರಸುದಾರನಿಗೆ ಭೂಮಿ ನೀಡಿದಲ್ಲಿ ಇನ್ನೊಬ್ಬನಿಗೆ ಆಸ್ತಿಯ ವಿವಿಧ ಬಗೆಯ ವಸ್ತುಗಳನ್ನು ನೀಡುವಂತೆ ಸೂಚಿಸಲಾಗಿದೆ. ಇದು ಸಾಕಷ್ಟು ಗೊಂದಲಕ್ಕೆ ಆಸ್ಪದ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಮತ್ತೊಂದು ಗೊಂದಲಮಯ ವಿಧೇಯಕವನ್ನು ಅಂಗೀಕರಿಸುವುದು ಸೂಕ್ತವಾಗಲಾರದು. ಆದುದರಿಂದ ಆತುರ ಬೇಡ. ಒಂದೆರಡು ಸಾರ್ವಜನಿಕ ಚುನಾವಣೆಗಳ ನಂತರ, ಈ ವಿಧೇಯಕದ ಮಹತ್ವವನ್ನು ಜನತೆ ಅರಿಯಬಲ್ಲರು. ಏಕೆಂದರೆ ಸಾರ್ವತ್ರಿಕ ಚುನಾವಣೆಗಳಿಂದಾಗಿ ಜನಜಾಗ್ರತೆ ಮೂಡಿರುತ್ತದೆ. ಆದುದರಿಂದ ಆ ಅವಧಿಯವರೆಗೂ ಇದನ್ನು ತಡೆ ಹಿಡಿಯುವುದು ಸೂಕ್ತವಾದುದರಿಂದ, ಈ ವಿಧೇಯಕದ ಉತ್ಸುಕವಾದಿಗಳಿಗೆ ಹೆಚ್ಚಿನ ಆತುರ ತೋರಬಾರದೆಂದೇ ಅರಿಕೆಮಾಡುವೆ. ಅತಿ ಆತುರ ಫಲಪ್ರದವಾಗದು.

**ಶ್ರೀ ಎ. ಕರುಣಾಕರನ್** (ಮದ್ರಾಸ್.ಸಾ) : ನಾನು ಹೃದಯಪೂರ್ವಕವಾಗಿ ಈ ಮಸೂದೆಯನ್ನು ಬೆಂಬಲಿಸುವೆ. ಏಕೆಂದರೆ ಅದು ಹಿಂದೂ ಸಮಾಜವನ್ನು ಸಮಗ್ರವಾಗಿ ಒಂದುಗೂಡಿಸುವ ಕ್ರಮವಾಗಿದೆ. ಇಂದು ಜಾರಿಯಲ್ಲಿರುವ ಹಿಂದೂ ಲಾ ಅನೇಕ ಶಾಸನಗಳ ಗೊಂದಲಗಳ ಸಮೂಹವೇ ಆಗಿದೆ. ಹೀಗಾಗಿ ನಾವು ನಮ್ಮ ಸಂವಿಧಾನದಲ್ಲಿ ಹೇಳಿರುವಂತೆ ದೇಶಾದ್ಯಂತ ಸಾಮಾನ್ಯ ನಾಗರಿಕ ಸಂಹಿತೆಯೊಂದನ್ನು ರಚಿಸಲೇ ಬೇಕು. ಆದುದರಿಂದ ಈ ಹಿಂದೂ ಕೋಡ್ ಈ ದಿಶೆಯಲ್ಲಿ ತುಂಬಾ ಸಹಕಾರಿಯಾಗಬಲ್ಲದು. ಈಗಾಗಲೇ ನಮಗೆ ತಿಳಿದಂತೆ ಮುಸ್ಲಿಮರು ತಮ್ಮ ಕಾನೂನನ್ನು ಕ್ರೋಡೀಕರಿಸಲು ಸಿದ್ಧರಾಗಿದ್ದಾರೆ. ಕ್ರಿಶ್ಚಿಯನ್ನರು ಈಗಾಗಲೇ ಕ್ರೋಡೀಕರಣ ಹೊಂದಿದ್ದಾರೆ. ಈ ವಿಧವಾಗಿ ಈ ಮೂರು ಬಗೆಯ ಕ್ರೋಡೀಕರಣದ ಆಧಾರದ ಮೇಲೆ ಭಾರತಾದ್ಯಂತ ಒಂದು ಸಾಮಾನ್ಯ ನಾಗರಿಕ ಸಂಹಿತೆಯನ್ನು ರಚಿಸಲು ಸಾಧ್ಯವಾದೀತು. ಅದರಂತೆಯೇ ಈ ವಿಧೇಯಕದಲ್ಲಿ ಸೂಚಿಸಿದ ಮಹಿಳಾ ಹಕ್ಕುಗಳನ್ನು ಅಂಗೀಕರಿಸಬಹುದು. ಆದರೆ ನನ್ನ ಕೆಲವು ದೂರುಗಳಿವೆ. ಈ ವಿಧೇಯಕವು ನಾವು ಬಯಸಿದಂತೆ ಪ್ರತಿಗಾಮಿ ವಿಧೇಯಕವಾಗಿಲ್ಲ. ಇದು ಅನೇಕ ವಿಧಗಳಲ್ಲಿ ಹಿಂದುಳಿದಿದೆ. ಅದರಲ್ಲಿಯೂ ನಮ್ಮ ಭಾಗದಲ್ಲಿಯ ಮರುಮಕ್ಕತ್ತಾಯಂ ಜಾರಿಯಲ್ಲಿರುವ ಬಗೆಗೆ. ಈಗ ನಾವಿರುವ ಪರಿಸ್ಥಿತಿಗಿಂತ ಕೀಳುಮಟ್ಟಕ್ಕೆ ನಮ್ಮನ್ನು ಎಳೆಯಬಾರದು. ಯಾವುದೇ ತಿದ್ದುಪಡಿಗಳನ್ನು ತಂದರೂ ನನಗೆ ಸಂತೋಷವೇ ಆದರೆ ಅದರ ಪ್ರಯೋಜನ ನಮಗೂ ದೊರೆಯಬೇಕು.

ಈಗ ಈ ವಿಧೇಯಕವನ್ನು ಕೇವಲ ಪಿತೃ ಪ್ರಧಾನ ರೂಪದಿಂದ ಮಾತ್ರ ನೋಡಲಾಗಿದ್ದು. ಇದರಲ್ಲಿ ಮಾತೃ ಪ್ರಧಾನ ಕುಟುಂಬಗಳ ಬಗೆಗೆ ಪ್ರಸ್ತಾಪಿಸಿಲ್ಲ. ಈ ದಿಶೆಯಲ್ಲಿ ಹೇಳಬಹುದಾದರೆ ೧೯೪೭ರಲ್ಲಿಯ ಈ ಮೂಲ ವಿಧೇಯಕದಲ್ಲಿ ಮರುಮಕ್ಕತ್ತಾಯಂ ಹಾಗೂ ಅಳಿಯ ಸಂತಾನ ಶಾಸನದ ಹಲವು ಪ್ರಗತಿಪರ ಅಂಶಗಳನ್ನೂ ಪ್ರಸ್ತಾಪಿಸಲಾಗಿತ್ತು. ಆದುದರಿಂದಲೇ ಈ ವಿಧೇಯಕ ಪ್ರತಿಗಾಮಿಯಲ್ಲ ಎಂದೇ

ಹೇಳಿರುವೆ. ಅದನ್ನು ಹೇಗೆ ಸುಧಾರಿಸಬಹುದು?

ಮರುಮಕ್ಕತ್ತಾಯಂ ಶಾಸನದಲ್ಲಿ ವಿವಾಹವು ಒಂದು ಸಾಮಾನ್ಯ ಸಂಗತಿ ಅಥವಾ ಪ್ರಕರಣ. ಅದರಲ್ಲಿ ಧಾರ್ಮಿಕವಾದುದೇನೂ ಇಲ್ಲ. ಸಪಿಂಡ ಹಾಗೂ ಪವಿತ್ರತೆಯ ಪ್ರಸ್ತಾಪವೂ ಇಲ್ಲ. ಈ ಹಿಂದೂ ಕೋಡ್ ಶಾಸನವು ಕೇವಲ ಎರಡು ಬಗೆಯ ವಿವಾಹ ವಿಧಾನಗಳನ್ನು ಮಾತ್ರ ಗುರುತಿಸಿದೆ. ಒಂದು ಪವಿತ್ರ ಮತ್ತೊಂದು ನಾಗರಿಕ ವಿವಾಹ ವಿಧಾನ. ನಾಗರಿಕ ವಿವಾಹ ಸಾಮಾನ್ಯ. ಅದರ ಬಗೆಗೆ ನಮ್ಮ ವಿರೋಧವಿಲ್ಲ.

ಆದರೆ ಈ ವಿಧೇಯಕದ ರಚನಾಕಾರರು ಮರುಮಕ್ಕಾತ್ತಾಯಂದಲ್ಲಿಯ ವಿವಾಹ ವಿಧಾನವು ಪವಿತ್ರವೆಂದು ಭಾವಿಸಿರುವುದು, ೫೧ನೆಯ ಉಪನಿಬಂಧನೆಯಿಂದ ತಿಳಿದುಬರುತ್ತದೆ. ಆದರೆ ಅದು ತಪ್ಪು ಗ್ರಹಿಕೆ. ಅಲ್ಲದೆ ಮಲಬಾರಿನಲ್ಲಿಯ ವಿವಾಹಗಳೂ ಪವಿತ್ರ ಎಂಬುದೂ ಸೂಕ್ತವಾಗಲಾರದು. ಈ ಆಧಾರದ ಮೇಲೆಯೇ ಅವರು ೫೧ನೆಯ ಉಪನಿಬಂಧನೆಯನ್ನು ಈ ಕೆಳಕಂಡಂತೆ ರಚಿಸಿದ್ದಾರೆ. ಅದು ಹೀಗಿದೆ:

ಈ ಭಾಗದಲ್ಲಿ ಹೇಳಿರುವ ಯಾವ ವಿಷಯವೂ ೧೯೩೨ರ (ಮದ್ರಾಸ್ ವಿಧೇಯಕ XXII) ಮದ್ರಾಸ್ ಮರುಮಕ್ಕತ್ತಾಯಂ ವಿವಾಹಕ್ಕೆ ಸೂಚಿಸಿದ ಹಕ್ಕಿನಂತೆ. ಪವಿತ್ರ ವಿವಾಹ ರದ್ದತಿಗೆ ಬಂಧನಕಾರಿಯಲ್ಲ. ವಿವಾಹವು ಜರುಗಿದ ನಂತರ ಅಥವಾ ಈ ವಿಧೇಯಕ ಜಾರಿಗೆ ಬಂದಾಗಲೂ, ನಮಗೆ ಸಂಬಂಧಿಸಿದಂತೆ, ಈ ಮಸೂದೆಯಲ್ಲಿ ಮತ್ತೊಂದು ತಿದ್ದುಪಡಿ ಸೂಚಿಸಬೇಕೆಂದಿರುವೆ. ನಮ್ಮ ಕಾನೂನುಗಳು ನಮ್ಮ ತಂದೆಯ ಸಹೋದರನ ಮಗಳನ್ನು ಹಾಗೂ ಸೋದರಮಾವನ ಮಗಳನ್ನು ವಿವಾಹವಾಗಲು ಅಪ್ಪಣೆ ನೀಡುತ್ತದೆ. ಆದರೆ ಇದು ಸಪಿಂಡೀಯ ವಿಧಾನದಿಂದ ಖಂಡನೀಯ ಹಾಗೂ ನಿಷೇಧಿತ. ಈ ಬಗೆಯ ನಮ್ಮ ಶಾಸನಗಳ ಬಗೆಗೆ ಹಸ್ತಕ್ಷೇಪ ಕ್ರಮವನ್ನು ನಮ್ಮ ಜನಾಂಗ ಅಂಗೀಕರಿಸುವುದು ಸಂದೇಹಾಸ್ಪದ.

ನಮ್ಮ ಶಾಸನಗಳಲ್ಲಿ ರಕ್ತಸಂಬಂಧಗಳ ಆಧಾರದ ಮೇಲೆ ಆಸ್ತಿಯಲ್ಲಿಯ ಹಕ್ಕಿನ ಪ್ರಶ್ನೆಯೇ ಜಾರಿಯಲ್ಲಿಲ್ಲ. ಏಕೆಂದರೆ ಮದುವೆ ಜಾರಿಯಲ್ಲಿರುವುದು ಅಥವಾ ವಿಚ್ಛೇದನದಿಂದ ರದ್ದಾಗುವುದು. ಬೇರೆ ಮಧ್ಯಮಮಾರ್ಗಕ್ಕೆ ಅವಕಾಶವೇ ಇಲ್ಲ. ವಿವಾಹ ವಿಚ್ಛೇದನ ತುಂಬಾ ಸರಳ. ಹತ್ತಿರದಲ್ಲಿಯ ಯಾವುದೇ ನಾಗರಿಕ ನ್ಯಾಯಾಲಯಕ್ಕೆ ತೆರಳಿ, ೧೨ ಆಣೆ ಸ್ಟ್ಯಾಂಪ್ ಪತ್ರದ ಮೇಲೆ ಕಾರಣ ವಿವರಿಸಿ ಕೋರಿದರೆ ವಿಚ್ಛೇದನಕ್ಕೆ ಅನುಮತಿ ದೊರೆಯುತ್ತದೆ. ಅರ್ಜಿಯನ್ನು ಆರು ತಿಂಗಳು ಕಾದಿರಿಸಲಾಗುತ್ತದೆ. ಬಹುಶಃ ಈ ಆರುತಿಂಗಳ ಅವಧಿಯಲ್ಲಿ ರಾಜಿಗೆ ಆಸ್ಪದ ನೀಡಲೆಂಬ ಉದ್ದೇಶವಿರಬಹುದು. ಈ ಅವಧಿ ಮುಗಿದ ನಂತರ ವಿಚ್ಛೇದನ ಅಂಗೀಕಾರವಾಗುವುದು. ಬಹುಶಃ ಈ ಸಂಗತಿಯು ಈ ವಿಧೇಯಕದ ರಚನಾಕಾರರ ಗಮನಕ್ಕೆ ಬಂದಿರಲೂ ಸಾಕು. ಆದುದರಿಂದ ಈ ಸರಳ ವಿಧಾನದ ಸೌಲಭ್ಯವನ್ನು ಈ ವಿಧೇಯಕದಲ್ಲಿ ಏಕೆ ಅಳವಡಿಸಬಾರದು?

ವಿವಾಹವನ್ನು ಅಸಿಂಧುಗೊಳಿಸುವ ಅಂಶ ಅನೇಕರ ಕೋಪಕ್ಕೆ ಕಾರಣವಾಗಿದೆ. ಆದರೆ ೧೯೩೨ರಿಂದಲೂ ಮಲಬಾರಿನಲ್ಲಿ ವಿವಾಹ ವಿಚ್ಛೇದನಕ್ಕೆ ಅವಕಾಶ ನೀಡಲಾಗಿದೆ. ಆದರೆ ನನಗೆ ತಿಳಿದಂತೆ ಒಂದು ಡಜನ್ ವಿಚ್ಛೇದನಗಳೂ ಸಂಭವಿಸಿರಲಾರವು. ಇದು ಬರ್ಟ್ರಾಂಡ್ ರಸೆಲ್ ಅವರ ಹೇಳಿಕೆಯ ಸತ್ಯಾಂಶವನ್ನು ಅರುಹುತ್ತದೆ. "ವಿವಾಹ ವಿಚ್ಛೇದನದ ಸೂತ್ರಗಳು ಸರಳವಾಗಿದ್ದಲ್ಲಿ ಹೆಚ್ಚು ವಿವಾಹ ವಿಚ್ಛೇದನ ಆಗಲಾರವು; ಎಲ್ಲಿ ವಿವಾಹ ವಿಚ್ಛೇದನಕ್ಕೆ ಅವಕಾಶ ನೀಡಿದೆಯೋ ಅಲ್ಲಿ ಅನೈತಿಕ ಸಂಬಂಧ ಅಥವಾ ಹಾದರಕ್ಕೆ ಅವಕಾಶ ಕಡಿಮೆ ಇದ್ದು ನೈತಿಕತೆ ಅಧಿಕವಾಗಿರುತ್ತದೆ." ಇನ್ನು ದತ್ತು ಸ್ವೀಕಾರದ ಬಗೆಗೆ ಹೇಳಬಹುದಾದರೆ, ನಮ್ಮಲ್ಲಿಯೇ ಅದು ಸಮರ್ಪಕವಾಗಿದ್ದು, ಈ ವಿಧೇಯಕರಲ್ಲಿ ಅಸಮರ್ಪಕ ಎಂದೇ ಹೇಳಬಹುದು.

ಈ ವಿಧೇಯಕದಲ್ಲಿ ದತ್ತು ಪಡೆಯುವುದು ಒಂದು ಧಾರ್ಮಿಕ ಕಾರ್ಯ. ಆದರೆ ಮರುಮಕ್ಕತ್ತಾಯಂದಲ್ಲಿ ಅದು ಧಾರ್ಮಿಕವಲ್ಲ. ಅದೊಂದು ಧರ್ಮನಿರಪೇಕ್ಷಕ ಕಾರ್ಯ. ಹಿಂದೂ ಕೋಡ್‌ನಲ್ಲಿ ಕೇವಲ ಪುರುಷ ಅಥವಾ ಅವನ ವಿಧವೆ ಮಾತ್ರ ದತ್ತು ಪಡೆಯಬಹುದು. ಆದರೆ ನಮ್ಮಲ್ಲಿ ಪುರುಷ ಮತ್ತು ಸ್ತ್ರೀಯರಿಬ್ಬರೂ ದತ್ತು ಪಡೆಯಬಹುದು. ಅಲ್ಲದೆ ಹಿಂದೂ ಲಾದಲ್ಲಿ ಕೇವಲ ಬಾಲಕನನ್ನು ಮಾತ್ರ ದತ್ತು ಪಡೆಯಬಹುದು. ಆದರೆ ನಮ್ಮಲ್ಲಿ ಬಾಲಕ ಹಾಗೂ ಬಾಲಕಿಯರನ್ನೂ ದತ್ತು ಪಡೆಯಬಹುದು. ಹಿಂದೂ ಲಾದಲ್ಲಿ ಕೇವಲ ಒಬ್ಬನನ್ನೇ ದತ್ತು ಸ್ವೀಕರಿಸಬಹುದು. ಆದರೆ ನಮ್ಮಲ್ಲಿ ಒಬ್ಬರಲ್ಲಿ, ಇಬ್ಬರು, ಅಥವಾ ಆಸ್ತಿಗೆ ಹಕ್ಕುದಾರರಿಲ್ಲದೇ ಹೋದಲ್ಲಿ ಒಂದು ಕುಟುಂಬವನ್ನೇ ದತ್ತು ಪಡೆಯಬಹುದು. ಆದುದರಿಂದ ಹಿಂದೂ ಲಾಗೂ ಮರುಮಕ್ಕತ್ತಾಯಂಗೂ ಬಹು ವಿಧವಾದ ವ್ಯತ್ಯಾಸಗಳಿವೆ. ಈ ಎಲ್ಲ ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳದೇ ಇರುವುದಿರಿಂದಲೇ ನಾನು ಹೇಳಿದಂತೆ ಪಿತೃಪ್ರಧಾನ ಕುಟುಂಬಕ್ಕೆ ಆದ್ಯತೆ ನೀಡಲಾಗಿದ್ದು ಮಾತೃಪ್ರಧಾನ ವ್ಯವಸ್ಥೆಯನ್ನು ಅಲಕ್ಷಿಸಲಾಗಿದೆ. ಈ ಅಂಶಗಳನ್ನೂ ಗಮನಿಸಿದ್ದರೆ ಅನೇಕ ವ್ಯತ್ಯಾಸಗಳನ್ನು ಕಡಿಮೆ ಮಾಡಬಹುದಾಗಿತ್ತು.

ಅವಿಭಕ್ತ ಕುಟುಂಬದ ಭೂಗೇಣಿಯನ್ನು ಸಾಮಾನ್ಯ ಭೂಗೇಣಿಯಾಗಿ ಪರಿವರ್ತಿಸಿರುವುದು ಈ ವಿಧೇಯುಕದ ಪ್ರಮುಖ ಲಕ್ಷಣವಾಗಿದೆ. ಆ ಅಂಶವನ್ನು ನಾನು ಸ್ವಾಗತಿಸುವೆ. ಆದರೆ ಈ ಅಂಶವೂ ಕೇವಲ ಪಿತೃಪ್ರಧಾನತೆಯನ್ನೇ ಅವಲಂಬಿಸಿದೆ. ಏಕೆಂದರೆ V ಭಾಗದ ಯಾವ ಉಪನಿಬಂಧನೆಗಳನ್ನು ಓದಿದರೂ ಅದು ಮರುಮಕ್ಕತ್ತಾಯಂದವರಿಗೆ ಅನ್ವಯವಾಗಲಾರದು. ಆದರೆ ಹಿಂದೂ ಕೋಡಿನಂತೆ ಅದು ಎಲ್ಲರಿಗೂ ಅನ್ವಯಿಸಬೇಕು. ಆದರೆ ೮೬, ೮೭ ಮತ್ತು ೮೮ನೆಯ ಉಪನಿಬಂಧನೆಗಳನ್ನು ಗಮನಿಸಿದಾಗ ಸಾಮಾನ್ಯ ಗೇಣಿದಾರ ವ್ಯವಸ್ಥೆಯನ್ನು ಮಲಬಾರಿನ ಅವಿಭಕ್ತ ಕುಟುಂಬಗಳಿಗೆ ಅನ್ವಯಿಸಲಾಗದು.

ಇನ್ನು ಆಸ್ತಿಯ ವಾರಸುದಾರಿಕೆಯ ಹಕ್ಕುಗಳ ಬಗೆಗೆ ಹೇಳಬೇಕೆಂದರೆ, ತಾಯಿಯನ್ನೂ ಮಗ ಹಾಗೂ ಮಗಳೊಂದಿಗೆ ಏಕೆ ಹಕ್ಕುದಾರಳನ್ನಾಗಿ ಮಾಡಬಾರದು? ಈ ದಿಶೆಯಲ್ಲಿ ನಾನು ತೀರಿ ಹೋದಲ್ಲಿ ನನ್ನನ್ನು ಹೆತ್ತು ಸಾಕಿ ಸಲಹಿದ ತಾಯಿಗೆ ಏಕೆ ನನ್ನ ಆಸ್ತಿಯನ್ನು ಪಡೆಯಲು ಹಕ್ಕು ನೀಡಬಾರದು? ಇದನ್ನು ಉಪನಿಬಂಧನೆ I ರಲ್ಲಿ ಮರೆಯಲಾಗಿದೆ.

ನನ್ನ ಎರಡನೆಯ ದೂರು ಎಂದರೆ, ಸತ್ತವನ ಮಗನನ್ನೇ ಏಕೆ ಅಥವಾ ಮಗನ ಮಗನನ್ನೇಕೆ ಮೊದಲನೆಯ ವರ್ಗದಲ್ಲಿ ಸೇರ್ಪಡಿಸಲಾಗಿದೆ. ಅವರನ್ನು ಎರಡನೆಯ ವರ್ಗದಲ್ಲಿ ಸೇರಿಸಬಹುದಾಗಿತ್ತಲ್ಲ. ಅವರನ್ನು ಮೊದಲನೆಯ ದರ್ಜೆಯ ವಾರಸುದಾರನ್ನಾಗಿಸಿದ್ದು ನಮ್ಮ ಮನಸ್ಸಿಗೆ ಸರಿ ಎಂದು ತೋರದು. ನೀವು ಮಲಬಾರಿನಲ್ಲಿಯ ಯಾರನ್ನೇ ಕೇಳಿದರೂ ಅವರು ತಮ್ಮ ಮರಣದ ನಂತರ ಆಸ್ತಿಯು ಸತ್ತವನ ಮಗ ಹಾಗೂ ಅವನ ಮಗನಿಗಿಂತಲೂ ಅವನ ಸಹೋದರಿಯ ಮಗಳ ಮಕ್ಕಳಿಗೆಂದೇ ಹೇಳುವನು. ಅವನ ತಮ್ಮನಿಗಿಂತಲೂ ತಂಗಿಯ ಮಕ್ಕಳಿಗೆ ಸೇರುವುದು ಉತ್ತಮವೆಂದೇ ಹೇಳುತ್ತಾರೆ. ಆದುದರಿಂದ ಅನುಬಂಧ VII ರಲ್ಲಿ ಸಹೋದರಿಯರಿಗೆ ನೀಡಿದ II ದರ್ಜೆಯನ್ನು ಏರಿಸಬೇಕು. ಏಕೆಂದರೆ ಅವರು ಮಗನ ಮಗಳ ಮಗನ, ಮಗನ ಮಗಳ ಮಗಳು, ಮಗನ ಮಗಳ ಮಗಳು ಇವರ ನಂತರ ಬಾಧ್ಯಸ್ಥರಾಗಿದ್ದಾರೆ. ನಾನು ಹೇಳಬೇಕೆಂದರೆ, ಬೆನ್ನಿಗೆ ಬಿದ್ದ ತಮ್ಮ ತಂಗಿಯರು ಒಂದೇ ತಾಯಿಯ ಹೊಟ್ಟೆಯಲ್ಲಿ ಜನಿಸಿದವರಾದುದರಿಂದ ಅವರನ್ನೇಕೆ ಭಾಗೀದಾರರನ್ನಾಗಿ ಮಾಡಬಾರದು? ಅವರಿಗೆ ಉತ್ತಮ ದರ್ಜೆಯನ್ನೂ ನೀಡಬಹುದು.

(ಈ ಹಂತದಲ್ಲಿ ಉಪಾಧ್ಯಕ್ಷರು ಸ್ಥಾನ ತೆರವು ಮಾಡಿದುದರಿಂದ ಪಟ್ಟಿಯಲ್ಲಿದ್ದ ಶ್ರೀಮತಿ ದುರ್ಗಾಬಾಯಿ ಅವರು ಸಭೆಯ ಅಧ್ಯಕ್ಷತೆ ವಹಿಸಿದರು.)

ಈ ಪ್ರಶ್ನೆಯನ್ನು, ಎಲ್ಲಾ ದೃಷ್ಟಿಗಳಿಂದ ವಿಚಾರಿಸಿದಾಗ, ಈ ವಿಧೇಯಕ ದೇಶದ ವಿವಿಧ ಭಾಗಗಳಲ್ಲಿಯ ವಿಚಾರಗಳನ್ನು ಗಮನಕ್ಕೆ ತೆಗೆದುಕೊಂಡಿದೆಯಾದರೂ, ಮಲಬಾರನ್ನು ಸಂಪೂರ್ಣವಾಗಿ ಮರೆತಿದೆ. ಆದರೆ ನಾವೆಲ್ಲರೂ ಸ್ತ್ರೀಯರ ಹಕ್ಕುಗಳಿಗೆಂದೇ ಹಂಬಲಿಸುತ್ತಿದ್ದರೂ ಅದನ್ನು ಅಧಿಕವಾಗಿ ಆಚರಿಸುತ್ತಿರುವ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಕಡೆಗಣಿಸಿರುವುದು ಈ ವಿಧೇಯಕದಲ್ಲಿ ಎದ್ದು ತೋರುತ್ತದೆ. ಆದುದರಿಂದ ಈ ವಿಧೇಯಕವು ಪ್ರತಿಗಾಮಿಯಾಗಿರದೆ ಇದ್ದರೂ ಸ್ತ್ರೀಯರ ಹಕ್ಕುಗಳಿಗೆ ಸಂಪೂರ್ಣ ಪರವಾಗಿಯೂ ಇಲ್ಲ.

ನಾವೂ ಈ ವಿಧೇಯಕದಡಿಯಲ್ಲಿ ಬರಲು ಉತ್ಸುಕರಾಗಿದ್ದೇವೆ. ನಮಗೂ ಏಕರೂಪತೆ ಬೇಕು. ನಾನೂ, ನಮ್ಮ ಭಾಗವು ಒಳಗೊಂಡಂತೆ ಹಿಂದೂಗಳಿಗೆಲ್ಲಾ ಏಕರೂಪ ಕಾನೂನು ಇರಬೇಕೆಂದು ಬಯಸುತ್ತೇವೆ. ಆದರೆ ಅದು ನನ್ನ ಭಾಗದ ಜನರಿಗೂ ವಿರೋಧವಾಗದಂತೆ ರಚಿಸಬೇಕು. ಅದನ್ನು ಆಕರ್ಷಕವಾಗಿ ರಚಿಸಬೇಕು. ನಾನು ಹೇಳುವುದೇನೆಂದರೆ ಈ ವಿಧೇಯಕದಲ್ಲಿ ಮಾತೃಪ್ರಧಾನ ಕುಟುಂಬದ ವ್ಯವಸ್ಥೆಯನ್ನೂ ಪರಿಗಣಿಸಬೇಕು. ಹೀಗಾಗಿ ಹಲವಾರು ತಿದ್ದುಪಡಿಗಳಿಂದ ಈ ಮಸೂದೆಯು ನಮ್ಮನ್ನೂ ಆಕರ್ಷಿಸುವಂತಾಗಬೇಕು. ಒಂದು ವೇಳೆ ಯಾವುದೇ ಕಾರಣಗಳಿಂದಾಗಿ, ಈ ಎರಡೂ ವ್ಯವಸ್ಥೆಗಳನ್ನು ಹೊಂದಿಸಲು ತ್ರಾಸದಾಯಕವಿದ್ದಲ್ಲಿ ನಮ್ಮನ್ನು ನಮ್ಮ ಪಾಡಿಗೆ ಬಿಡಿ. ನಾವು ಈ ವಿಧೇಯಕಕ್ಕಿಂತ ಅಧಿಕ ಸೌಕರ್ಯ ಹೊಂದಿರುವ ನಮ್ಮ ವಿಧಾನವನ್ನೇ ಅನುಸರಿಸಿಕೊಂಡು ಹೋಗುತ್ತೇವೆ. ನನ್ನ ಅಭಿಪ್ರಾಯದಲ್ಲಿ ಈ ವಿಧೇಯಕವು ಧರ್ಮನಿರಪೇಕ್ಷತೆಯಿಂದ ಕೂಡಿಲ್ಲ. ಹಾಗೂ ವಿವೇಚನಾಯುಕ್ತವೂ ಆಗಿಲ್ಲ. ಏಕೆಂದರೆ, ವಿಧೇಯಕವು ಇನ್ನೂ ಧಾರ್ಮಿಕ ಭಾವನೆಗಳಿಂದಲೇ ತುಂಬಿ ತುಳುಕಿದೆ. ನಾನು ಈ ವಿಧೇಯಕವನ್ನು ಸಹಜವಾದ ವಿಧಾನದಲ್ಲಿ ರಚಿಸಿದ್ದರೆ ಸ್ವಾಗತಿಸುತ್ತಿದ್ದೆ. ಆದರೆ ಇದು ಧರ್ಮಾತೀತವಾಗಿಲ್ಲ. ಈಗ ನಾವು ಕಂಡಿರುವುದೇನೆಂದರೆ, ಈ ವಿಧೇಯಕವು ಅಧಿಕವಾಗಿ ಧರ್ಮದ ವಿಚಾರಗಳಿಂದಲೇ ಕೂಡಿದೆ. ಅದನ್ನು ಕಡಿಮೆ ಮಾಡುವ ಪ್ರಯತ್ನವಿದ್ದರೂ ಇದು ಧರ್ಮನಿರಪೇಕ್ಷತೆ ಅಥವಾ ಸಮನ್ವಯತೆಯಿಂದ ಕೂಡಿಲ್ಲ. ನನಗೆ ತಿಳಿಯಲಾರದ ವಿಷಯವೆಂದರೆ ಮದುವೆ, ಹಕ್ಕುದಾರಿಕೆ ಮುಂತಾದ ವಿಷಯಗಳಲ್ಲಿ ಧಾರ್ಮಿಕ ಹಸ್ತಕ್ಷೇಪವೇಕೆ? ಆದುದರಿಂದ ನಾವು ಏಕೆ ಈ ಸಾಮಾನ್ಯ ಕಾಯಿದೆ ಅಡಿಯಲ್ಲಿ ಬರಬೇಕು?

**ಅಧ್ಯಕ್ಷರು :** ಕೇವಲ ಹತ್ತು ನಿಮಿಷಗಳ ಅವಧಿ ಉಳಿದಿದೆ. ಯಾರಾದರೂ ಅಷ್ಟರಲ್ಲಿ ಮಾತನಾಡುವುದಿದ್ದರೆ ತಿಳಿಸಿ.

ಹಲವು ಸದಸ್ಯರು ಎದ್ದು ನಿಂತರು.

**ಶ್ರೀ ಸೀತಾರಾಮ ಎಸ್. ಜಾಜೂ** (ಮಧ್ಯ ಭಾರತ) : ಮ್ಯಾಡಂ ನಾನು ಹತ್ತು ನಿಮಿಷಗಳಲ್ಲಿಯೇ ಹೇಳಿಕೆ ಮುಗಿಸುವೆ. ನಾನು ಮೊದಲಿಗೆ ಹೇಳಬೇಕಾದುದೆಂದರೆ, ನಾನು ಹೃತ್ಪೂರ್ವಕವಾಗಿ ವಿಧೇಯಕವನ್ನು ಅನುಮೋದಿಸುತ್ತೇನೆ. ನಾನು ಅನುಮಾನದಿಂದಲೆ ಈ ಸದನದ ಮುಂದೆ ನಿಂತಿರುವೆ. ನನಗೆ ತಿಳಿದಂತೆ ಹಳೆಯ ತಲೆಮಾರಿನ ಜನ ಮಾತ್ರ ಈ ಹಿಂದೂ ಕೋಡನ್ನು ಉಪೇಕ್ಷಿಸಿದ್ದಾರೆ. ನಾನು ಅದನ್ನು ವಿರೋಧಿಸಲಾರೆ. ಏಕೆಂದರೆ ಅವರ ಅಭಿಪ್ರಾಯಗಳು ಹೃದಯಾಂತರದಿಂದ ಹೊರಹೊಮ್ಮಿವೆ. ಆದರೆ ಹಿಂದೂ ಕೋಡಿಗೆ ಸಂಬಂಧಿಸಿದಂತೆ ಅವರ ಹೃದಯಗಳು ಹಳೆಯದಾಗಿರದೆ ಸಪ್ಪೆಯಾಗಿವೆ ಎಂದೇ ಹೇಳುವೆ.

**ಶ್ರೀ ಎಂ. ತಿರುಮಲರಾವ್ :** ಹಾಗೆಂದರೆ, ಹಳೆಯ ತಲೆಮಾರಿನ ಸ್ತ್ರೀಯರ ಬೆಂಬಲ ನಿಮಗಿದೆಯೇ?

**ಶ್ರೀ ಸೀತಾರಾಮ ಎಸ್. ಜಾಜೂ :** ನಿಜವಾಗಿಯೂ ಇದೆ. ಏಕೆಂದರೆ ಅವರು ಪುರೋಗಾಮಿಗಳು. ಅವರಿಗೆ ವಿಕಾಸ ಬೇಕಾಗಿದೆ. ನನ್ನ ಸ್ನೇಹಿತರಾದ ಕೃಷ್ಣಚಂದ್ರ ಶರ್ಮ ಅವರು ಹೇಳಿದಂತೆ ಪ್ರಗತಿಯಲ್ಲಿ ಸ್ತ್ರೀಯರು ಮುನ್ನಡೆದಿದ್ದರೆ. ಪುರುಷರು ಹಿಂದೆ ಬಿದ್ದಿದ್ದಾರೆ. ಏನೇ ಇರಲಿ, ನಾನು ಹಿಂದೂ ಕೋಡ್ ಬಿಲ್‌ನ ಬಗೆಗೆ ಹೇಳಬಯಸುವೆ.

ಮ್ಯಾಡಂ, ನಾನು ಮಾತನಾಡಬಾರದೆಂದೇ ಇದ್ದೆ. ಆದರೆ ಯುವಜನಾಂಗದ ಅಭಿಪ್ರಾಯವನ್ನು ತಿಳಿಸಲೆಂದೇ ಸದನದ ಮುಂದೆ ನಿಂತಿರುವೆ. ನನ್ನ ಅಭಿಪ್ರಾಯದಲ್ಲಿ ಸಮಸ್ತ ಯುವಜನಾಂಗ ಈ ಮಸೂದೆಯನ್ನು ಬೆಂಬಲಿಸುತ್ತದೆ. ಈ ವಿಧೇಯಕವನ್ನು ಭಾರತದ ಸಂಸ್ಥಾನಗಳಲ್ಲಿ ಪ್ರಸ್ತಾಪ ಮಾಡಿಲ್ಲವೆಂದೇ ಅತಿರೇಕವಾಗಿ ಹೇಳಲಾಗಿದೆ. ಈ ಸದನದಲ್ಲಿ ಅನೇಕ ಮಸೂದೆಗಳನ್ನು ಅಂಗೀಕರಿಸಲಾಗಿದೆ. ಆದರೆ ಯಾರೊಬ್ಬರೂ ಈ ಬಗೆಯ ಆಕ್ಷೇಪಣೆ ಎತ್ತಿರಲಿಲ್ಲ.

**ಹಲವು ಸದಸ್ಯರು :** ಆದರೆ ಇದು ವಿವಾದಾತ್ಮಕ ವಿಧೇಯಕವಾಗಿದೆ.

**ಶ್ರೀ ಸೀತಾರಾಮ ಎಸ್. ಜಾಜೂ :** ಅನೇಕ ವಿವಾದಾತ್ಮಕ ಮಸೂದೆಗಳನ್ನು ಸದನದಲ್ಲಿ ಮಂಡಿಸಿದೆ. ಸಿರೋಹಿ ಪ್ರಶ್ನೆ ತುಂಬಾ ವಿವಾದಾತ್ಮಕವಾಗಿದ್ದರೂ ಸಂಸ್ಥಾನಗಳ ಪ್ರಜೆಗಳ ಸಲಹೆ ಕೇಳಲಿಲ್ಲ.

**ಶ್ರೀ ಗೋಕುಲ್‌ಬಾಯಿ ದೌಲತ್‌ರಾಮ್ ಭಟ್** (ಬೊಂಬಾಯಿ ರಾಜ್ಯ) : ಮ್ಯಾಡಂ, ಸಿರೋಹಿಗೆ ಸಂಬಂಧಿಸಿದಂತೆ ಯಾವ ವಿಧೇಯಕವೂ ಇರಲೇ ಇಲ್ಲ.

**ಅಧ್ಯಕ್ಷರು :** ಮಾನ್ಯ ಸದಸ್ಯರಿಗೆ ಅಡ್ಡಿಬಾರದಂತೆ ಮಾತನಾಡಲು ಆಸ್ಪದ ನೀಡಿರಿ.

**ಸರದಾರ್ ಹುಕುಮ್ ಸಿಂಗ್ :** ಯುವಕರು ದಾರಿ ತಪ್ಪಿದಾಗ ಅವರನ್ನು ತಿದ್ದುವುದು ಹಿರಿಯರ ಕರ್ತವ್ಯವಲ್ಲವೇ?

**ಶ್ರೀ ಸೀತಾರಾಮ ಎಸ್. ಜಾಜೂ :** ಸಂದೇಹವೇ ಇಲ್ಲ. ಹಿರಿಯರಿಗೆ ತಿದ್ದುವ ಅಧಿಕಾರವಿದೆ. ಆದರೆ ಅದು ವಿಕಾಸದ್ದಾಗಿರಬೇಕು. ಹಿನ್ನಡೆಯದ್ದಾಗಿರಬಾರದು.

**ಓರ್ವ ಸದಸ್ಯ :** ನಮ್ಮ ಅನುಭವ ೮೦ ವರ್ಷದ್ದು.

**ಶ್ರೀ ಸೀತಾರಾಮ ಎಸ್. ಜಾಜೂ :** ಅನುಭವ ೮೦ ವರ್ಷದ್ದಾಗಿರಬಹುದು. ಆದರೆ ರಾಷ್ಟ್ರಪಿತ ಮಹಾತ್ಮರ ಅನುಭವವೂ ಇದೆಯಲ್ಲವೇ? ಹಿಂದೂ ಸ್ತ್ರೀಯರನ್ನು ಮೇಲೆತ್ತುವ ಬಗೆಗೆ ಸಹಸ್ರಾರು ಲೇಖನಗಳನ್ನೂ ಅವರು ಬರೆದಿರುವರು. ನಾನು ಹಿಂದೂ ಕೋಡ್ ಬಗೆಗೆ ಅನೇಕರನ್ನು ಕೇಳಿರುವಂತೆ, ಮಗಳಿಗೆ ಪಾಲು ನೀಡುವುದನ್ನು ಬಿಟ್ಟು ಮಿಕ್ಕಿದ್ದನ್ನು ಸ್ವಾಗತಿಸಿದ್ದಾರೆ. ಇದನ್ನು ಕೇವಲ ಮಾರವಾಡಿ ಸಮೂಹದಿಂದ ಮಾತ್ರ ವಿರೋಧಿಸಲಾಗಿದೆ. ಆದರೂ ಯುವಕರು ಈ ವಿಧೇಯಕದ ಪರವಾಗಿದ್ದಾರೆ. ಹಳೆಯ ತಲೆಮಾರಿನ ಜನ ಹಾಗೂ ಅವರ ಅನುಭವಗಳಿದ್ದರೂ ಮಹಾತ್ಮ ಅವರು ತಮ್ಮ ಆತ್ಮಚರಿತ್ರೆಯಲ್ಲಿ ಹಿಂದೂ ಪತ್ನಿಯರ ಗೋಳಿನ ಬಗ್ಗೆ........

**ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ :** ಮಹಾತ್ಮ ಗಾಂಧಿಯವರ ಹೆಸರನ್ನು ದುರುಪಯೋಗ ಮಾಡದಿರಿ.

**ಶ್ರೀ ಸೀತಾರಾಮ ಎಸ್. ಜಾಜೂ :** ನಾನು ದುರುಪಯೋಗಪಡಿಸಿರುವುದಕ್ಕಿಂತ ಅಧಿಕವಾಗಿ ನೀವು ಅವರ ಹೆಸರನ್ನು ದುರುಪಯೋಗ ಮಾಡಿರಬಹುದು. ನಾನು ಈಗ ತಾನೇ ನನ್ನ ಝೀವನವನ್ನು ಆರಂಭಿಸಿರುವೆ. ಬಹುಶಃ ಬಿಳಿಯ ಕೂದಲಿನ ಜನಾಂಗಕ್ಕೆ ಇದ್ದಿರಬಹುದಾದ ಅವಕಾಶಗಳನ್ನು ನಾನು ಪಡೆಯಲಿಲ್ಲ. ಏಕೆಂದರೆ ಅವರು ನೂರಾರು ಬಾರಿ ಅವರ ಹೆಸರನ್ನು ಉಪಯೋಗಿಸಿ ಕೊಂಡಿದ್ದಾರೆ.

ಮ್ಯಾಡಂ, ಮಹಾತ್ಮರು ಹಿಂದೂ ಪತ್ನಿಯರ ವಿಷಯ ಶೋಚನೀಯವಾಗಿದೆ ಎಂದೇ ಬರೆದಿರುವರು. ಅವರು ಹೇಳಿರುವಂತೆ, ನೌಕರನು ಮಾಲಿಕನೊಂದಿಗೆ ಮನಸ್ತಾಪ ಹೊಂದಿದ್ದರೆ ಅವನು ನೌಕರಿಯನ್ನು ಬಿಡಬಹುದು. ಮಾಲಿಕನಿಗೆ ಬೇಡವಾಗಿದ್ದರೆ ನೌಕರನನ್ನು ಕಿತ್ತು ಹಾಕಬಹುದು. ತಂದೆ-ಮಗನಲ್ಲಿ ಮನಸ್ತಾಪವಿದ್ದರೆ ಪರಸ್ಪರ ಬಿಡುಗಡೆ ಹೊಂದಬಹುದು. ಆದರೆ ಪತ್ನಿಯ ಬಗೆಗೆ ಇದು ಸಾಧ್ಯವೇ ಇಲ್ಲ. ಗಾಂಧಿಯವರೊಂದಿಗೆ ಕಸ್ತೂರಿ ಬಾ ಅವರ ಗತಿಯೇ ಹೀಗಿದ್ದಾಗ, ಸಾಮಾನ್ಯ ಸ್ತ್ರೀಯರ ಗತಿ ಏನು ? ಇದು ಪರಿಸ್ಥಿತಿ.

ಈ ವಿಧೇಯಕವು ಹಿಂದೂ ಧರ್ಮದ ಮೇಲಿನ ದಾಳಿ ಎಂದೇ ಅಪಪ್ರಚಾರ ಅಬ್ಬರದಿಂದ ನಡೆದಿದೆ. ಆದರೆ ನಾನು ನನ್ನ ಸ್ನೇಹಿತರನ್ನು ಕೇಳಬಯಸುವುದೇನೆಂದರೆ ಹಿಂದೂಧರ್ಮವು ವಿವಿಧ ಸಂದರ್ಭಗಳನ್ನು ಎದುರಿಸಿಕೊಂಡು ಬಂದು ಅದರೊಂದಿಗೆ ಹೊಂದಾಣಿಕೆಯನ್ನೇ ಮಾಡಿಕೊಂಡು ಮುಂದುವರಿದುಕೊಂಡೇ ಬಂದಿದೆ. ಆದುದರಿಂದಲೇ ನಮ್ಮಲ್ಲಿ ೧೩೮ ಸ್ಮೃತಿಗಳು ಜಾರಿಯಲ್ಲಿವೆ. ಇದೇ ಅದರ ಹಿರಿಮೆಗೆ ಸಾಕ್ಷಿ. ಅದರಂತೆಯೇ ಮತ್ತೊಂದು ನೂತನ ಹಿಂದೂ ಕೋಡ್ ರಚಿಸಿದರೆ ಯಾವ ಅನಾಹುತವೂ ಇಲ್ಲ. ಸ್ಮೃತಿ ಎಂದರೆ ಜ್ಞಾಪಕದಲ್ಲಿದ್ದ ವಿಷಯ, ಸ್ಮೃತಿ ಎಂದರೆ ಕೇಳಲಾದ ವಿಷಯ. ಆದರೆ ಇದನ್ನು ಯಾವ ಋಷಿ ಅಥವಾ ಮುನಿಗಳು ಹೇಳಿದರು ಎಂಬ ಬಗೆಗೆ ಏನೂ ತಿಳಿದಿಲ್ಲ. ಆದರೆ ಹಿಂದೂ ಕೋಡ್ ಬಿಲ್‌ನಿಂದ ಹಿಂದೂ ಮನೋಭಾವಗಳಿಗೆ ಧಕ್ಕೆ ತಗಲುತ್ತದೆ ಎಂದು ಹೇಳುವುದು ಸರಿಯಲ್ಲ. ನಾವು ರಾಜಕೀಯ ಸ್ವಾತಂತ್ರ್ಯದ ಬಗೆಗೆ ಭಾಷಣ ಬಿಗಿಯುತ್ತೇವೆ. ಆದರೆ ಸಾಮಾಜಿಕ ವಿಕಾಸವನ್ನು ಮರೆತಿರುವೆವು. ಸಾಮಾಜಿಕ ವಿಕಾಸವೇನಾದರೂ ಆಗಬೇಕಾಗಿದ್ದರೆ, ಇದೇ ಸೂಕ್ತ ಸಮಯ. ವಿರೋಧಗಳು ಸಾಮಾನ್ಯ. ರಾಜಾರಾಮ್ ಮೋಹನರಾಯರು ವಿರೋಧವನ್ನು ಎದುರಿಸಿದ್ದಾರೆ. ಅನೇಕರು ವಿರೋಧಿಗಳಿಂದ ಮರಣವನ್ನೂ ಅಪ್ಪಿದ್ದಾರೆ. ಆದರೆ ಇಂದು ನಮ್ಮ ನಾಯಕರು ನಮ್ಮೊಂದಿಗಿದ್ದಾರೆ. ಈ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿಯವರು, ಸರ್ವಸಮ್ಮತಿಯಿಂದ ಬರಲಾದ ಯಾವ ಒಪ್ಪಂದಕ್ಕೂ ಸಿದ್ಧ ಎಂದೇ ಹೇಳಿದ್ದಾರೆ. ಅವರಲ್ಲಿ ನನಗೆ ನಂಬಿಕೆ ಇದೆ. ಹಾಗೂ ಹಿರಿಯರಲ್ಲಿಯೂ ನಂಬಿಕೆ ಇದೆ. ಅವರು ನಮಗಿಂತಲೂ ಹೆಚ್ಚು ವಿವೇಕ ಹೊಂದಿದ್ದಾರೆ. ಅವರ ಆದೇಶ ಪಾಲಿಸಲು ನಾವು ಸಿದ್ಧ. ಅವರು ಒಪ್ಪಂದ ಬೇಕೆಂದರೂ ಸಿದ್ದ. ಆದರೆ ನಮ್ಮ ಮಟ್ಟದಲ್ಲಿ ಹೇಳಬಹುದಾದರೆ ನಮಗೆ ಯಾವ ಒಪ್ಪಂದವೂ ಬೇಡ. ಆದರೆ ನಾವು ನಮ್ಮ ನಾಯಕರ ಆಜ್ಞೆಯನ್ನೂ ಪರಿಪಾಲಿಸುತ್ತೇವೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ಆದರೆ ಅವರಾರೂ ಇಲ್ಲವೇ.

**ಶ್ರೀ ಸೀತಾರಾಮ ಎಸ್. ಜಾಜೂ :** ಅವರಿಲ್ಲದೇ ಹೋದರೂ, ಈ ವಿಧೇಯಕವನ್ನು ಸರಕಾರದ ಪರವಾಗಿ ಮಂಡಿಸಿದ ಡಾ॥ ಅಂಬೇಡ್ಕರರು ಇದ್ದಾರೆ. ಸರಕಾರವನ್ನು ದೂಷಿಸುವುದರಿಂದ ಏನೂ ಲಾಭವಿಲ್ಲ. ಈ ವಿಧೇಯಕದ ಮಂಡನೆಯಿಂದಾಗಿ ನಾವು ಚರಿತ್ರೆಯನ್ನೇ ನಿರ್ಮಿಸಿದ್ದೇವೆ. ಇದನ್ನು ನಮ್ಮ ಹಿಂದಿನ ಸರಕಾರ ಜಾರಿಗೊಳಿಸಿದೆ..............(ಅಡಚಣೆ)

ಮ್ಯಾಡಂ, ನನಗೆ ಇನ್ನೂ ಹತ್ತು ನಿಮಿಷ ನೀಡಿರಿ. ತಾವು ಒಪ್ಪುವುದಾದರೆ ನಾನು ನನ್ನ ಹೇಳಿಕೆಯನ್ನು ನಾಳೆ ಮುಂದುವರಿಸುವೆ.

**ಅಧ್ಯಕ್ಷರು :** ಮಾನ್ಯ ಸದಸ್ಯರು ತಮ್ಮ ಹೇಳಿಕೆಯನ್ನು ಮುಕ್ತಾಯ ಮಾಡಲಿ. ಏಕೆಂದರೆ ಅವರು ಹತ್ತೇ ನಿಮಿಷದಲ್ಲಿ ಮುಗಿಸುವಂತೆ ಭರವಸೆ ನೀಡಿದ್ದರು.

**ಶ್ರೀ ಸೀತಾರಾಮ ಎಸ್. ಜಾಜೂ :** ನನ್ನ ತೊಂದರೆ ತಿಳಿಯಿರಿ, ನನಗೆ ಅಡೆತಡೆಯಿಂದಾಗಿ ಮುಗಿಸದೇ

ಹೋದುದರಿಂದ ಅವಕಾಶ ಕೋರುವೆ. ತಮಗೆ ತೊಂದರೆಯಾಗದಿದ್ದಲ್ಲಿ ೧೦ ನಿಮಿಷ ನೀಡಿ.

**ಅಧ್ಯಕ್ಷರು :** ಮಾನ್ಯ ಸದಸ್ಯರು ೩ ನಿಮಿಷದಲ್ಲಿ ಮುಗಿಸುವುದಾದರೆ, ನೀಡುವೆ.

**ಶ್ರೀ ಸೀತಾರಾಮ ಎಸ್. ಜಾಜೂ :** ನಾನು ಭರವಸೆ ನೀಡದಿರುವುದರಿಂದ ಕುಳಿತುಕೊಳ್ಳುವೆ. ಆದರೆ ತಾವು ನೀಡಿದ ೩ ನಿಮಿಷಗಳಿಗಾಗಿ ವಂದನೆ.

ಈಗ ನಾನು ಹೇಳುತ್ತಿದ್ದಂತೆ ಡಾ॥ ಅಂಬೇಡ್ಕರರು ಇಲ್ಲಿದ್ದಾರೆ. ಅವರು ತಮ್ಮ ಅನಿಸಿಕೆಗಳನ್ನು ಹೇಳುತ್ತಾರೆ. ಸರಕಾರವನ್ನು ದೂಷಿಸುವುದರಿಂದ ಯಾವ ಲಾಭವಿಲ್ಲ. ಈ ವಿಧೇಯಕವನ್ನು ನಮ್ಮ ಹಿಂದಿನ ಸರಕಾರದವರು ಮಂಡಿಸಿದ್ದಾರೆ. ಆಗ ನಮಗೆ ಇದನ್ನು ವಿರೋಧಿಸುವ ಸಾಮರ್ಥ್ಯವಿರಲಿಲ್ಲ. ವಿದೇಶೀ ಸರಕಾರವು ತಂದ ಎಲ್ಲಾ ಸಾಮಾಜಿಕ ಗೊತ್ತುವಳಿ.......

**ಓರ್ವ ಸದಸ್ಯ :** ಚರಿತ್ರೆಯ ಬಗೆಗೆ ವ್ಯಥೆಪಡಬೇಡಿ.

**ಶ್ರೀ ಸೀತಾರಾಮ ಎಸ್. ಜಾಜೂ :** ನಾನು ಚರಿತ್ರೆ ಪ್ರಸ್ತಾವಿಸಲೇ ಬೇಕು. ಹಿಂದೂ ಲಾಗೆ ಧಕ್ಕೆಯಾದ ರೀತಿಯಲ್ಲಿ ಬ್ರಿಟಿಷರು ಈ ವಿಧೇಯಕವನ್ನು ಜಾರಿಗೆ ತಂದಾಗ ನಾವು ಒಪ್ಪಿಕೊಂಡಿದ್ದೆವು. ಏಕೆಂದರೆ ಅದು ಧನಿಕವರ್ಗದವರಿಗೆ ಸಂಬಂಧಿಸಿರಲಿಲ್ಲ. ಈಗ ಇದು ನಮ್ಮನ್ನು ಕಾಡುತ್ತದೆ. ಏಕೆಂದರೆ ಅದು ನಮ್ಮ ಬೊಕ್ಕಣಕ್ಕೆ ಕೈ ಹಾಕಿದೆ. ಅಲ್ಲದೆ ಸದನದ ಬಹುಸಂಖ್ಯಾತರು ಪುರುಷರು. ಬಹುಮತವನ್ನು, ಅಲ್ಪ ಮತ ಸ್ತ್ರೀಯರ ಮೇಲೆ ಒತ್ತಾಯ ಮಾಡುವುದು ಬೇಡ. ಈ ದೇಶದ ಸ್ತ್ರೀಯರು ಅನಕ್ಷರಸ್ಥರು, ಅದನ್ನು ದುರುಪಯೋಗ ಮಾಡಬಾರದು. ಈ ವಿಧೇಯಕದ ವಿರುದ್ಧ ಅಪಾರ ಅಪಪ್ರಚಾರ ಮಾಡಲಾಗುತ್ತಿದೆ. ಅದೂ ವಿಚ್ಛೇದನದ ವಿರೋಧವಾಗಿ. ಸ್ತ್ರೀ ಸಮುದಾಯದಲ್ಲಿ ಈ ಮಸೂದೆ ಅಂಗೀಕಾರವಾದ ಕೂಡಲೇ ಗಂಡಂದಿರು, ಪತ್ನಿಯರನ್ನು ತೊರೆದುಬಿಡುತ್ತಾರೆಂದು ಅಬ್ಬರದ ಪ್ರಚಾರ ನಡೆದಿದೆ. ಅಲ್ಲದೆ ಯಾವ ಹಿಂದೂ ಸ್ತ್ರೀಯೂ ವಿನಾಕಾರಣ ವಿಚ್ಛೇದನ ಕೋರುವುದಿಲ್ಲ. ಅಲ್ಲದೆ ಈ ದಿಶೆಯಲ್ಲಿ ನ್ಯಾಯಾಲಯಗಳು ವಿವೇಚನೆಯಿಂದಲೇ ವರ್ತಿಸುತ್ತವೆ. ಹೀಗಾಗಿ ಯಾರಿಗೂ ಅನ್ಯಾಯವಾಗಲಾರದು.

೧೩ ಡಿಸೆಂಬರ್, ೧೯೪೯ ಬೆಳಿಗ್ಗೆ ೧೦–೪೫ ಕ್ಕೆ ಮಂಗಳವಾರಕ್ಕೆ ಮುಂದೂಡಲಾಯಿತು.

## ಹಿಂದೂ ಕೋಡ್ – ಮುಂದುವರಿಕೆ

**ಉಪಾಧ್ಯಕ್ಷರು :** ಈಗ, ಸದನ ಮುಂದುವರಿದು ಹಿಂದೂ ಲಾದ ಬಗೆಗೆ, ಕ್ರೋಡೀಕರಣ ಹಾಗೂ ಹಲವು ತಿದ್ದುಪಡಿಗಳ ಬಗೆಗೆ ಪರಿಶೀಲಿಸುವುದು.

**ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ :** ಸರ್, ನಾನು ವಿಧೇಯಕದ ವಿವಿಧ ಅಂಶಗಳ ಬಗೆಗೆ, ಆಯ್ಕೆ ಸಮಿತಿ ಬಗೆಗೆ ಸಲಹೆಗಳ ಬಗೆಗೆ ಮಾತನಾಡುವ ಮುನ್ನ, ನಿಮ್ಮ ಅನುಮತಿ ಪಡೆದು, ಹಲವು ಸಾಮಾನ್ಯ ವಿಚಾರಗಳನ್ನು ಪ್ರಸ್ತಾಪಿಸಲು ಬಯಸುವೆ. ನಾನು ಮೊದಲಿಗೆ ಹೇಳಬಯಸುವುದೇನೆಂದರೆ ನಾನು ಹಿಂದೂ ಲಾದ ಬಗೆಗೆ, ಶಾಸನದ ಹಸ್ತಕ್ಷೇಪವೇ ಇರಬಾರದು ಎಂಬ ಪಂಥಕ್ಕೆ ಸೇರಿದವನಲ್ಲ. ಏಕೆಂದರೆ ಕಾನೂನು ಸ್ಥಾಯಿರೂಪವಾಗಿರದೇ ಸರ್ವದಾ ಚಲನಶಕ್ತಿಯನ್ನು ಹೊಂದಿರಬೇಕು. ಅದು ಸಮಾಜದಲ್ಲಿಯ ಆಗುಹೋಗುಗಳೊಂದಿಗೆ ಹಾಗೂ ವಿಕಾಸಕ್ಕೆ ಸ್ಪಂದಿಸಬೇಕು. ಅದು ಸಾಮಾಜಿಕ ವಿಕಾಸದ ಸಾಧನೆಯಾಗಿರಬೇಕು. ಕಾನೂನಿನ ಈ ಲಕ್ಷಣವನ್ನು ನಮ್ಮ ಪೂರ್ವಿಕರು ಗ್ರಹಿಸಿದ್ದರು. ಸ್ಮೃತಿ ಹಾಗೂ ಅವುಗಳಿಗೆ ರಚಿಸಿದ್ದ ಟೀಕೆಗಳು ಇದಕ್ಕೆ ಸಾಕ್ಷಿಯಾಗಿವೆ. ಕಾನೂನು ಕಾಲಕಾಲಕ್ಕೆ ಸಮಾಜದ ಅಗತ್ಯಗಳಿಗನುಗುಣವಾಗಿ ಬದಲಾಗುತ್ತಲೇ ಇರಬೇಕು. ಕಾನೂನಿನ ಬಗೆಗೆ ನೀಡಿರುವ ವ್ಯಾಖ್ಯಾನಗಳು, ಸಮಾಜದಲ್ಲಿಯ ಪರಿಸ್ಥಿತಿಯನ್ನು ಗಮನಿಸಿಯೇ ಕಾಲಕಾಲಕ್ಕೆ ಪರಿಣತರಿಂದ ನೀಡಿದ ಹೇಳಿಕೆಗಳು.

ಆದರೆ ಆಧುನಿಕ ಯುಗದಲ್ಲಿ ಈ ಕಾರ್ಯವನ್ನು ಶಾಸಕಾಂಗ ಕೈಗೆತ್ತಿಕೊಂಡಿರುವುದರಿಂದ ನ್ಯಾಯವೇತ್ತರು, ತಮ್ಮ ಕಾರ್ಯವನ್ನು ಕೇವಲ ಅರ್ಥೈಸುವ ಹಂತಕ್ಕೆ ಸೀಮಿತಗೊಳಿಸಿದ್ದಾರೆ. ಈ ಕಾರ್ಯವನ್ನು ಅಲ್ಪಮಟ್ಟಿಗೆ ನ್ಯಾಯಾಲಯಗಳು ಪೂರೈಸುತ್ತಲಿವೆ, ಕಳೆದ ಒಂದು ಶತಮಾನದಿಂದ. ಪ್ರಿವಿ ಕೌನ್ಸಿಲ್, ನ್ಯಾಯಾಂಗ ಸಮಿತಿಗಳು ಈ ಕಾರ್ಯವನ್ನು ನಡೆಸಿವೆ.

ಆದರೆ, ಸಾಮಾನ್ಯವಾಗಿ, ಕಾನೂನುಗಳನ್ನು ಬದಲಾಯಿಸುವ ಕ್ರಮ ಕೋರ್ಟುಗಳಿಗೆ ಸೇರಿದ್ದಲ್ಲ. ಅದು ಕೇವಲ ಕಾನೂನನ್ನು ಅರ್ಥೈಸಬಲ್ಲದು; ಈ ಹಂತದಲ್ಲಿ ಕಾನೂನಿನಲ್ಲಿ ಬದಲಾವಣೆ ಬರಲೂಬಹುದು; ಇದನ್ನೂ ಹಿಂದೂ ಲಾದ ಹೊತ್ತಿಗೆಗಳ ಆಧಾರದಿಂದಲೇ ಮಾಡಲಾಗುವುದು. ಆದುದರಿಂದ, ನ್ಯಾಯಾಂಗಕಾರ್ಯ, ಕಾನೂನಿನ ಕಾರ್ಯಾಚರಣೆಗೆ ಮಾತ್ರ ಸೀಮಿತವಾಗಿದೆ. ಆದರೆ ಕೆಲವೊಂದು ಬಾರಿ ತಿಳಿದೋ, ತಿಳಿಯದೆಯೋ ಶಾಸಕಾಂಗದ ಕಾರ್ಯವನ್ನು ಮಾಡುವ ಅಪಾಯವೂ ಸಂಭವನೀಯ. ಏಕೆಂದರೆ ಹಲವು ಬಾರಿ ಹಲವಾರು ನ್ಯಾಯಾಧೀಶರು ತಮಗೆ ದೊರೆತಿರುವ ಆಸ್ಪದವನ್ನು ತಮಗೆ ಪ್ರಿಯವಾದ ಸಾಮಾಜಿಕ ಸುಧಾರಣೆಗೆ ಉಪಯೋಗಿಸಲೂ ಬಹುದು. ಈ ವಿಧವಾದ ನ್ಯಾಯ ತೀರ್ಮಾನಗಳನ್ನು ನಾವು ಪ್ರಿವಿ ಕೌನ್ಸಿಲ್ ಹಾಗೂ ನ್ಯಾಯಾಂಗ ಸಮಿತಿಗಳ ಬಗೆಗೆ ಕಾಣಬಹುದಾಗಿದೆ. ಅಲ್ಲದೆ ನ್ಯಾಯಾಲಯಗಳು ನೀಡಿದ ತೀರ್ಪಿನಂತೆ ಶಾಸಕಾಂಗವೂ ಕಾನೂನನ್ನು ಬದಲಾಯಸಿದ್ದನ್ನೂ ಕಾಣಬಹುದು. ಒಟ್ಟಾರೆ ಶಾಸಕಾಂಗದ ಹಸ್ತಕ್ಷೇಪವನ್ನು ನಾವು ಗುರುತಿಸಬಹುದು. ಆದುದರಿಂದ ಈ ಸದನವು, ವಿವಾಹ, ಕುಟುಂಬ ಕಾನೂನು ಹಾಗೂ ಹಕ್ಕುಗಳ ಬಗೆಗೆ ಇರಬಹುದಾದ ಮೂಲ ಕಲ್ಪನೆಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ಅಲಕ್ಷಿಸಲಾಗದು. ಯಾವುದೇ ಝೀವಂತ ಶಾಸನದ ಸ್ವರೂಪ ಎಂದರೆ ಬದಲಾವಣೆ. ಆದರೆ ಬದಲಾವಣೆ ಎಂದರೆ ಸಮಾಜದ ಬೇರುಗಳಿಗೆ ಧಕ್ಕೆ ಮಾಡುವುದು ಎಂದಲ್ಲ.

ಈ ಎಲ್ಲಾ ಅಂಶಗಳನ್ನು ಸುಧಾರಣೆಯ ಬಗೆಗೆ ಗಮನದಲ್ಲಿರಿಸಿಕೊಂಡು ನಾನು ಈ ವಿಧೇಯಕವನ್ನು ಪರಿಶೀಲಿಸುವಂತೆ ಸದನದ ಗಮನ ಸೆಳೆಯುವೆ. ಏಕೆಂದರೆ ಈ ದೇಶದ ಪ್ರತಿಯೊಬ್ಬ ಪುರುಷ ಮತ್ತು ಸ್ತ್ರೀಯರ ಗಮನ ಸೆಳೆದಿರುವ ಏಕೈಕ ವಿಧೇಯಕವೆಂದರೆ, ಈಗ ಸದನದ ಮುಂದಿರುವ ಹಿಂದೂ ಕೋಡ್ ಮಸೂದೆ. ಆದುದರಿಂದ ನಾವೆಲ್ಲರೂ ನಮ್ಮ ಸ್ಥಾನಮಾನಗಳನ್ನು ಮರೆತು, ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿ, ಉದ್ವೇಗಕ್ಕೆ ಒಳಗಾಗದೇ, ಶಾಂತಿ ಸಮಾಧಾನದಿಂದ, ಈ ದೇಶದ ಸಮಸ್ತ ಜನತೆಗೆ ಅನುಕೂಲವಾಗುವಂತೆ, ಈ ವಿಧೇಯಕವನ್ನು ಪರಿಶೀಲಿಸಬೇಕು. ಇದು ಪಕ್ಷಾತೀತ ಪ್ರಶ್ನೆಯೇ ಹೊರತು ಯಾವ ನಂಬಿಕೆಯದ್ದಾಗಿಲ್ಲ.

ನಾನು ಮೊದಲು ತಮ್ಮ ಅಪ್ಪಣೆ ಪಡೆದು, ವಿವಾಹ ಹಾಗೂ ವಿಚ್ಛೇದನದ ಪ್ರಕರಣ ಕೈಗೆತ್ತಿಕೊಳ್ಳುವೆ. ಈ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುವ ಮುನ್ನ ಈ ಬಗೆಗೆ ಶಾಸಕಾಂಗವು ಅನೇಕ ಶಾಸನಗಳ ಮೂಲಕ ಒಳ ಮಾರ್ಗವನ್ನು ಸೃಷ್ಟಿಸಿದೆ ಎಂಬುದನ್ನು ಸ್ಮರಿಸಬಹುದು. ಅದರಲ್ಲಿ ಇತ್ತೀಚಿನದು ಎಂದರೆ ಹಿಂದೂ ವಿವಾಹ ಮಸೂದೆ ೧೯೪೬ರ (ಅಡಚಣೆ ನಿವಾರಿಸುವ) ಮಸೂದೆ XXVIII ೧೯೪೬) ವಿಧೇಯಕವು ಸಗೋತ್ರ ಅಥವಾ ಪ್ರವರ, ಹಾಗೂ ಯಾವುದೇ ಜಾತಿಯವರಲ್ಲಿ ನಡೆದ ವಿವಾಹಗಳನ್ನು ಅಸಿಂಧುವೆಂದು ಪರಿಗಣಿಸಿಲ್ಲ. ಈಚೆಗಷ್ಟೇ ಮದ್ರಾಸ್ ಶಾಸಕಾಂಗವು ಏಕಪತ್ನಿ ವಿವಾಹವನ್ನು ಕಡ್ಡಾಯಗೊಳಿಸಿದೆ. ಇತರ ಶಾಸನಸಭೆಗಳು ವಿವಾಹ ವಿಚ್ಛೇದನವನ್ನು ಅಂಗೀಕರಿಸಿವೆ. ವಿವಾಹದ ವಯಸ್ಸಿನ ಮಿತಿಯಲ್ಲಿಯೂ ಬದಲಾವಣೆಗಳನ್ನು ತರಲಾಗಿದೆ. ಈ ಎಲ್ಲಾ ಅಂಶಗಳನ್ನು ನೋಡಿದ ನಂತರ, ಈ ವಿಧೇಯಕದಲ್ಲಿ ಸೂಚಿಸಿರುವ ವಿಷಯಗಳು ಪುರೋಗಾಮಿ ಎನಿಸಕೊಳ್ಳಲಾರವು. ಆಯ್ಕೆ ಸಮಿತಿಯ ಹಲವರು ಹೇಳಿದಂತೆ ಈ ಮಸೂದೆಯಲ್ಲಿ

ತಂದಿರುವ ಪ್ರಮುಖ ಬದಲಾವಣೆಗಳೆಂದರೆ, ದಾಂಪತ್ಯ ಹಕ್ಕಿನ ಪುನರ್ನಿೀಡಿಕೆ, ನ್ಯಾಯಾಂಗದಿಂದ ವಿಚ್ಛೇದನ, ಮಕ್ಕಳ ಪೋಷಣೆ ಸ್ತ್ರೀಧನ ಮುಂತಾದವು.

ಈ ವಿಧೇಯಕದ ಒಂದು ಮಹತ್ವದ ವಿಷಯ ಎಂದರೆ ಪವಿತ್ರ ಹಾಗೂ ನಾಗರಿಕ ವಿವಾಹ ವಿಧಾನಗಳಲ್ಲಿಯ ಅಂತರ ನಿಜವಾಗಿರದೇ ಹೋದರೂ ಮೇಲುನೋಟಕ್ಕೆ ಎದ್ದುಕಾಣುತ್ತಿದೆ. ಈ ಬಗೆಗೆ ಇದರಲ್ಲಿಯ ಅಂಶಗಳನ್ನು ಅನುಸರಿಸುವುದು ಕಷ್ಟ ಸಾಧ್ಯ. ಏಕೆಂದರೆ ಎರಡೂ ವಿಧಾನಗಳಲ್ಲಿ ನಾವು ಅದನ್ನು ಕಾಣುತ್ತೇವೆ. ಕೆಲವು ಭೇದಗಳೆಂದರೆ ಪವಿತ್ರವಿವಾಹದಲ್ಲಿಯ ಕೆಲವು ನಿಷೇಧಗಳು ಹಾಗೂ ಸಪಿಂಡ ವಿವಾಹ ನಿಷೇಧ. ಆದರೆ ನಾಗರಿಕ ವಿವಾಹದಲ್ಲಿ ಯಾವ ನಿಷೇಧಗಳೂ ಇಲ್ಲ.

ಈ ವಿಧೇಯಕದಲ್ಲಿ ಪವಿತ್ರ ಮದುವೆಯನ್ನು ನಾಗರಿಕ ಮದುವೆಯಾಗಿ ಬದಲಾಯಿಸುವ ಕ್ರಮ ಏನೂ ಸೂಕ್ತವಾಗಿಲ್ಲವೆಂದೇ ಅನಿಸುತ್ತದೆ. ಇದು ಏನು ಉದ್ದೇಶವನ್ನು ಪೂರೈಸಬಲ್ಲದೋ ತಿಳಿಯದು. ಹೀಗಾಗಿ ಕಾನೂನು ಸಚಿವರು ಈ ಮಸೂದೆಗೆ ಅಂತಿಮ ರೂಪ ನೀಡುವಾಗ ಇದರ ಬಗೆಗೆ ವಿಚಾರಿಸುವುದು ಸೂಕ್ತ.

ಸಂತಾನದ ಹಕ್ಕುಗಳು, ವಾರಸುದಾರಿಕೆ, ದಂಪತಿಗಳ ಮಧ್ಯೆ ಇರಬಹುದಾದ ಜವಾಬ್ದಾರಿ ಹಾಗೂ ಇತರ ವಿಷಯಗಳ ಮಧ್ಯೆ ಇರಬಹುದಾದ ಭೇದಗಳೂ ತಿಳಿಯದಂತಿವೆ. ಏಕೆಂದರೆ, ಪವಿತ್ರ ವಿವಾಹದ ಹಾಗೂ ನಾಗರಿಕ ವಿವಾಹದ ಅಂಶಗಳೆರಡೂ ಒಂದೇ ಬಗೆಯಾಗಿವೆ. ಬಹುಶಃ ಪವಿತ್ರ ವಿವಾಹದ ವರ್ಗವನ್ನು ಸಂತೈಸಲೆಂದೇ ಈ ಮಾರ್ಗವನ್ನು ಅನುಸರಿಸಿರಬಹುದು. ಇದೇ ಗುರಿಯಾಗಿದ್ದಲ್ಲಿ ಪವಿತ್ರ ವಿವಾಹವನ್ನು, ನಾಗರಿಕ ವಿವಾಹಕ್ಕೆ ಪರಿವರ್ತಿಸುವ ಆಸ್ಪದಗಳನ್ನು ಕಠಣಗೊಳಿಸಬಹುದಾಗಿತ್ತು. ಎರಡರಲ್ಲಿಯೂ ಒಂದಲ್ಲ ಒಂದು ರೀತಿಯು ಇದ್ದೇ ಇರುತ್ತದೆ. ಏಕೆಂದರೆ ಪವಿತ್ರ ವಿವಾಹದಲ್ಲಿ ಅನೇಕ ಆಚರಣೆಗಳು ಕಡ್ಡಾಯ. ಹೀಗಾಗಿ ನ್ಯಾಯವಾದಿಯಾದ ನನ್ನ ದೃಷ್ಟಿಯಲ್ಲಿ ಎರಡು ಬಗೆಯ ವಿವಾಹಗಳಲ್ಲಿಯ ವ್ಯತ್ಯಾಸವೇನು ಎಂಬುದೇ ತಿಳಿಯದಾಗಿದೆ. ಆದರೆ ಈ ಸಂಗತಿಯನ್ನು ನಾನು ಕಾನೂನು ಸಚಿವರ ಗಮನಕ್ಕೆ ತರಲು ಬಯಸುವೆ.

ಆಧುನಿಕ ಸಂತಾನ ಶಾಸ್ತ್ರವು, ಒಂದೇ ವಂಶದಲ್ಲಿಯ ವಿವಾಹಕ್ಕೆ ವಿರೋಧವಾಗಿದೆ. ಆದರೆ ಈ ಬಗೆಯ ಬಾಂಧವ್ಯದ ಬಗೆಗೆ ಅನೇಕರು ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಈ ಸಂದರ್ಭದಲ್ಲಿ ನಾವು ಯೋಚಿಸಬೇಕಾದುದೆಂದರೆ, ನಾವು ಈ ಬಗೆಯ ವಿಷಯದಲ್ಲಿ ಮುಂದುವರೆದಿದ್ದೇವೆಯೇ ಅಥವಾ ಹಿಂದೆ ಬಿದ್ದಿದ್ದೀವೆಯೆ? ಈ ದಿಶೆಯಲ್ಲಿ ನಮ್ಮ ಪೂರ್ವಿಕರು, ಆಧುನಿಕ ಬಲವನ್ನು ಅಂದೇ ಮನಗಂಡಿದ್ದರೆಂದು ತೋರುತ್ತದೆ. ಏಕೆಂದರೆ ಅವರು ಹಲವು ಬಗೆಯ ವಿವಾಹಗಳನ್ನು ನಿಷೇಧಿಸಿದ್ದರು. ಆದುದರಿಂದ ನೂತನ ವಿಚಾರ, ಹಾಗೂ ವಿಕಾಸದ ಹೆಸರಿನಲ್ಲಿ ಹಿಂಚಲನೆಯ ಮಾರ್ಗವೇಕೆ? ದೂರದ ಸಪಿಂಡಿಗಳು, ಏಕ ಪ್ರವರ ಹಾಗೂ ಗೋತ್ರಗಳ ಬಗ್ಗೆ ನನಗೆ ಯಾವ ಆಕ್ಷೇಪಣೆ ಇಲ್ಲ. ಆದರೆ ತೀರಾ ಹತ್ತಿರದ ಸಂಬಂಧದಲ್ಲಿ ವಿವಾಹ ಸೂಕ್ತವಲ್ಲ. ನಾನು ಈಚೆಗೆ ತೀರಾ ಹತ್ತಿರದ ಸಂಬಂಧಿಗಳಲ್ಲಿಯ ವಿವಾಹದ ಬಗೆಗೆ ಪತ್ರಿಕೆಯಲ್ಲಿ ಬಂದಿರುವ ವಿಷಯ ಓದಿರುವೆ. ಆದರೆ ಈ ವಿಷಯದ ಬಗೆಗೆ ಚರಿತ್ರೆ ಹಾಗೂ ವಿಜ್ಞಾನದ ವಿದ್ಯಾರ್ಥಿಯಾದ ಕಾನೂನು ಮಂತ್ರಿಯು ಸೂಕ್ತ ನಿರ್ಣಯ ತೆಗೆದುಕೊಳ್ಳಬಹುದು. ಈ ವಿಧವಾಗಿ ಜನತೆಯ ಧಾರ್ಮಿಕ ಮನೋಭಾವನೆ, ವೈಜ್ಞಾನಿಕ ಮನೋಭಾವನೆಗಳಿಗೆ ಬೆಲೆ ನೀಡುವುದಾದರೆ, ಸಾಮಾಜಿಕ ಹಿತದೃಷ್ಟಿಯಿಂದ ಈ ಬಗೆಯ ಕಾನೂನಿನಲ್ಲಿ ಯಾವ ಬದಲಾವಣೆಗೂ ಆಸ್ಪದವಿರಬಾರದು. ಜನಾಂಗದ ವಿಕಾಸಕ್ಕೆ ಹೆಚ್ಚು ಗಮನ ನೀಡಬೇಕೇ ಹೊರತು, ಭಾವನೆಗಳಿಗಲ್ಲ. ಆದರೆ ಏನೇ ಕ್ರಮ ಕೈಗೆತ್ತಿಕೊಂಡರೂ ಅದನ್ನು

ಧೈರ್ಯದಿಂದ ಕೈಗೆತ್ತಿಕೊಳ್ಳೋಣ. ಈ ಬಗೆಗೆ ಚಂಚಲ ಕ್ರಮ ಬೇಡ. ಒಂದು ಪುರಾತನ ಪದ್ಧತಿ ಇಲ್ಲವೇ ಆಧುನಿಕ, ವಿವೇಚಿತ ವೈಜ್ಞಾನಿಕ ಪದ್ಧತಿವೇ ಎರಡರಲ್ಲಿ ಒಂದನ್ನು ಅನುಸರಿಸೋಣ. ಆದರೆ ವೈಯಕ್ತಿಕವಾಗಿ ನಾನು ಪುರಾತನ ಪದ್ಧತಿಯನ್ನು ಬೆಂಬಲಿಸುವೆ. ಬೇರೆ ಜನಾಂಗದ ಬಗೆಗೆ ಏರ್ಪಾಡು ಮಾಡಿದ್ದರೂ ಸಾಮಾನ್ಯವಾಗಿ ಸಪಿಂಡಿಗಳಲ್ಲಿ ವಿವಾಹ ನಿಷೇಧಕ್ಕೆ ಹೆಚ್ಚು ಒತ್ತು ನೀಡಿರುವಿರಿ. ಇದು ಸರಿಯಾದುದಲ್ಲ.

ಇನ್ನೂ ವಿವಾಹ ವಿಚ್ಛೇದನದ ಬಗೆಗೆ ದೇಶಾದ್ಯಂತ ಏಕರೂಪ ಶಾಸನವಿರಬೇಕೆಂದೇ ಬಯಸಿದ್ದೀರಿ. ಇದರಲ್ಲಿ ಏನೂ ಹುರುಳಿಲ್ಲ. ಸರ್ ತೇಕ್‌ಚಂದ್ ಅವರು ಈ ಬಗೆಗೆ ವಿವರವಾದ ಟಿಪ್ಪಣಿಯನ್ನೇ ನೀಡಿದ್ದಾರೆ. ಈಗ ದೇಶದ ವಿವಿಧ ಭಾಗಗಳಲ್ಲಿ ಈ ವಿಧಾನವು ಸುಲಭ ಹಾಗೂ ಸರಳವಾಗಿಯೇ ಇದೆ. ಇದನ್ನು ಜಟಿಲಗೊಳಿಸಿ ನ್ಯಾಯವಾದಿಗಳಿಗೆ ಏಕೆ ಅವಕಾಶ ನಿರ್ಮಿಸುವಿರಿ?

ವಿವಾಹಕ್ಕಿಂತ ವಿಚ್ಛೇದನಕ್ಕೆ ಅಧಿಕ ಆದ್ಯತೆ ನೀಡುವುದೇ ನಿಮ್ಮ ಗುರಿಯಾಗಿದ್ದರೆ ವೃತ್ತಿಯಿಂದ ನ್ಯಾಯವಾದಿಯಾದ ನನಗೆ ಲಾಭ. ಆದುದರಿಂದ ಅದನ್ನು ವಿಚಾರಿಸಿರಿ. ಜನಾಂಗವು ಹೊಟ್ಟೆಗೆ ಹಿಟ್ಟಿಲ್ಲದೆ ಗೋಳಾಡುತ್ತಿದೆ. ಈ ಸಮಯದಲ್ಲಿ ವಿಚ್ಛೇದನದ ಬಗೆಗೆ ಶಾಸನ ರಚಿಸುವುದು ಎಷ್ಟು ಸೂಕ್ತ? ಅಲ್ಲದೆ ಏಕರೂಪತೆಯ ನೆಪದಲ್ಲಿ ವಿಚ್ಛೇದನವನ್ನು ದುಬಾರಿಗೊಳಿಸದಿರಿ. ನಾನು ಈ ವಿಧೇಯಕದ ವಿರೋಧಿಯಲ್ಲ. ಆದರೂ ನನ್ನ ಮಿತ್ರರಾದ ಡಾ॥ ಅಂಬೇಡ್ಕರರು ಈ ದಿಶೆಯಲ್ಲಿ ಸೂಕ್ತವಾದ ನಿರ್ಣಯ ತೆಗೆದುಕೊಳ್ಳಲಿ.

ಇನ್ನು ನ್ಯಾಯಾಂಗ, ವಿವಾಹ ವಿಚ್ಛೇದನದ ಬಗೆಗೆ ಕೆಲವು ವರ್ಷಗಳ ಹಿಂದೆ ಇಂಗ್ಲೆಂಡಿನ ಮೇಲ್ಮನೆಯಲ್ಲಿ, ಲಾರ್ಡ್ ಬಿರ್ಕೆನ್ ಹೆಡ್ ಭಾಗವಹಿಸಿದ್ದ ಚರ್ಚೆಯನ್ನು ಸ್ಮರಿಸಬಹುದು. ಈ ಚರ್ಚೆಯಲ್ಲಿ ಮೇಧಾವಿಗಳು ಮತ್ತು ನ್ಯಾಯವೇತ್ತರು ಭಾಗವಹಿಸಿದ್ದರು. ನ್ಯಾಯಾಂಗ ವಿಚ್ಛೇದನವು, ಸೂಳೆಗಾರಿಕೆಗೆ ಆಸ್ಪದ ನೀಡಬಹುದು ಎಂದು ಹಲವರು ಅಭಿಪ್ರಾಯ ವ್ಯಕ್ತಪಡಿಸಿದರು. ಆದುದರಿಂದ ನಾನು ಸರಳ ವಿಚ್ಛೇದನವು, ನ್ಯಾಯಾಂಗದ ನಿರ್ಣಯಕ್ಕೆ ಬದಲಾಗಿ, ಮುಂದುವರಿಸಿಕೊಂಡು ಹೋಗುವುದೇ ಸರಿ ಎಂದೇ ಹೇಳುವೆ. ಜೀವನಾಂಶ ಧನ, ದಾಂಪತ್ಯ ಜೀವನದ ಹೊಣೆಗಾರಿಕೆ, ಹೆಂಡತಿಯನ್ನು ಉಪವಾಸದಲ್ಲಿಡುವುದು ಮುಂತಾದ ಅನೇಕ ಅಂಶಗಳಿಗೆ ಈ ವಿಧೇಯಕದಲ್ಲಿ ಅವಕಾಶ ಮಾಡಲಾಗಿದೆ.

ಹೀಗಿದ್ದಾಗ ಜೀವನಾಂಶ, ನ್ಯಾಯಾಲಯದಿಂದ ವಿಚ್ಛೇದನ ಮುಂತಾದ ವಿಷಯಗಳ ಬಗ್ಗೆ, ಆಂಗ್ಲೇಯರ ಕ್ಲಿಷ್ಟ ವಿಧಾನಗಳಿಗೆ ಮೊರೆ ಹೋಗುವುದು ಸರಿಯಲ್ಲ. ಆದುದರಿಂದ ಈ ಎಲ್ಲಾ ಸಂಗತಿಗಳ ಪರಿಶೀಲನೆ ಅಗತ್ಯವಿದೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** (ಪ.ಬಂ.ಸಾ) ಇವೆಲ್ಲವೂ ದೇಶದ ಪ್ರಗತಿಗೆ ಆವಶ್ಯಕ.

**ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ :** ನಾನು ಯಾವುದೇ ಒಂದು ಅಭಿಪ್ರಾಯವನ್ನು ಬೆಂಬಲಿಸಿಲ್ಲ. ವಿವಿಧ ಅಭಿಪ್ರಾಯಗಳಿದ್ದು ನಿಮಗೆ ಯಾವುದು ಬೇಕೋ ಅದನ್ನು ಆಯ್ಕೆ ಮಾಡಬಹುದು. ಆದರೆ ನನಗೆ ನನ್ನದೇ ಆದ ಅಭಿಪ್ರಾಯಗಳಿವೆ.

ಆದುದರಿಂದ ನಾವು ಆಧುನಿಕ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕೇ ಹೊರತು, ಅದನ್ನು ಬಿಟ್ಟು ಇಂಗ್ಲೆಂಡಿನ, ಪುರಾತನ ಅಭಿಪ್ರಾಯಗಳಲ್ಲ. ಇಂಗ್ಲೆಂಡಿನಲ್ಲಿಯೂ ಈಚೆಗೆ ಅನೇಕ ಸುಧಾರಣೆಗಳಾಗಿವೆ. ಹೀಗಾಗಿ ಇಂಗ್ಲೆಂಡಿನ ಮಾದರಿಯ ನಕಲನ್ನು ಅವಲಂಬಿಸಿದೇ, ಏನು ಬದಲಾವಣೆ ಸಾಧ್ಯ ಎಂಬುದನ್ನು ಆಲೋಚಿಸೋಣ.

ಸಾಮಾನ್ಯವಾಗಿ, ಈ ವಿಧೇಯಕವು ನಾವು ಭಾವಿಸಿದಂತೆ ಪುರೋಗಾಮಿಯಾಗಿಲ್ಲ. ಆದರೆ ಇದರಲ್ಲಿಯ ಸಂಕೀರ್ಣತೆಗೆ ಕಾರಣವೆಂದರೆ, ವಿವಾಹದ ಬಗೆಗೆ ಇರುವ ಪುರಾತನ ಹಾಗೂ ನವೀನ ವಿಧಾನಗಳ

ಸಮೀಕರಣದ ಗೊಂದಲ. ಈ ವಿಷಯವನ್ನು ಶಾಂತಶೀಲರಾಗಿ ನೋಡೋಣ. ಒಂದಂತೂ ಖಂಡಿತ. ನಾವು ಜಾರಿಯಲ್ಲಿದ್ದ ಸಂಗತಿಯನ್ನು ವಿರೋಧಿಸಲಾಗದು. ನಾನು ಸಂಪ್ರದಾಯಸ್ಥ ಸನಾತನಿ; ನನಗೆ ಶ್ರಾದ್ಧದಲ್ಲಿ ನಂಬಿಕೆ. ಆದರೆ ನನ್ನ ಮಕ್ಕಳು ಹಾಗೂ ಮೊಮ್ಮಕ್ಕಳು ಹಾಗೆಯೇ ಇರಬೇಕೆಂಬ ಛಲವಾದಿಯಲ್ಲ. ನಾನು ಹಳೆಯ ಕಾಲದವನಾದರೂ, ನನ್ನಂತೆ ಇತರರು ಇರಬೇಕೆಂದು ಹೇಳಲಾರೆ. ಈ ಎಲ್ಲಾ ವಿವರಗಳ ಹಿನ್ನೆಲೆಯಲ್ಲಿ ನಾನು ಸೂಚಿಸುವುದೇನೆಂದರೆ ನಾವು ಪವಿತ್ರ ವಿವಾಹ ವಿಧಾನ ಅಥವಾ ನಾಗರಿಕ ವಿವಾಹ ವಿಧಾನಗಳಲ್ಲಿ ಒಂದನ್ನು ಆಯ್ಕೆಮಾಡಿ ಅದರಡಿಯಲ್ಲಿ ವಿಚ್ಛೇದನದ ಅಂಶಗಳನ್ನು ನಿರ್ಣಯಿಸುವುದು ಸರಿ. ಒಂದನ್ನೊಂದು ಕಲಬೆರಕೆ ಮಾಡುವುದನ್ನು ಒಪ್ಪಲಾರೆ.

ಇನ್ನು ದತ್ತು ಸ್ವೀಕಾರದ ಬಗೆಗೆ. ಅದನ್ನು ನಾವು ದೀರ್ಘವಾಗಿ ಚರ್ಚಿಸಲೇ ಬೇಕಾಗಿಲ್ಲ. ಏಕೆಂದರೆ ದತ್ತು ಸ್ವೀಕಾರ ಹಾಗೂ ಅದರಡಿಯಲ್ಲಿಯ ಪಾಲು ಹಂಚಿಕೆಯ ಬಗೆಗೆ ಸಾಕಷ್ಟು ಶಾಸನಗಳಿವೆ, ಅದರಲ್ಲಿ ಪರಿವರ್ತನೆ ಮಾಡಿದರೆ ಸಾಕು.

ವಿವಿಧ ಜಾತಿಗಳಲ್ಲಿ ವಿವಾಹ ಮಾಡಿಕೊಳ್ಳುವ ವ್ಯವಸ್ಥೆಯನ್ನು ಒಪ್ಪಿದ ಮೇಲೆ, ಪುರಾತನ ವಿವಾಹ ವ್ಯವಸ್ಥೆಯಂತೆ, ದತ್ತು ಸ್ವೀಕರಿಸಿದವರಿಗೆ ಅಥವಾ ಅವರ ಸಂತಾನಕ್ಕೆ ಆಸ್ತಿಯ ಹಕ್ಕುಗಳನ್ನು ನೀಡುವ ಪ್ರಶ್ನೆ ಸದ್ಯದ ಪರಿಸ್ಥಿತಿಯಲ್ಲಿ ಉದ್ಭವಿಸಲಾರದು. ಏಕೆಂದರೆ ಜಾತಿ ಪದ್ಧತಿಯನ್ನೇ ಗಮನಕ್ಕೆ ತೆಗೆದುಕೊಂಡಿರದಾದಾಗ ಅದರ ಸಂಪ್ರದಾಯಕ್ಕೆ ಬೆಲೆ ಇಲ್ಲ. ಇನ್ನು ದತ್ತು ಸ್ವೀಕರಿಸಿದ ತಾಯಿ ಹಾಗೂ ದತ್ತುಪುತ್ರನ ಹಕ್ಕುಗಳನ್ನು ನಿರ್ಣಯಿಸಲಾಗಿದೆ. ಭೂಬಾನ್ ಮಾಯೀಸ್ ಪ್ರಕರಣದಿಂದ ಈ ಕಾನೂನನ್ನು ಸರಳೀಕರಿಸಿದೆ. ದತ್ತು ಸ್ವೀಕರಿಸುವ ಅಧಿಕಾರವನ್ನು ಮಯೂಖ ಸೂತ್ರಗಳಂತೆ ನಿರ್ಣಯಿಸಿದೆ. ಆದುದರಿಂದ ಈ ಬಗೆಯ ಸಮಗ್ರ ಅಂಶಗಳನ್ನು ಅಡಕಗೊಂಡಿರುವ ವಿಧೇಯಕ ಸದನದ ಮುಂದೆ ಇದೆ. ದತ್ತು ಸ್ವೀಕರಿಸುವಲ್ಲಿ ಪತಿಯ ಸಮ್ಮತಿ, ಸಪಿಂಡ ದಾಯಾದಿಗಳ ಒಪ್ಪಿಗೆ, ಹಿರಿಯ ಹಾಗೂ ಕಿರಿಯ ವಿಧವೆಯರ ವಿವಿಧ ವಿಚಾರಗಳ ಬಗೆಗೆನ ಕೇಸುಗಳು ಬ್ರಿಟಿಷ್ ಭಾರತೀಯ ಕೋರ್ಟುಗಳಲ್ಲಿ ಸಾಕಷ್ಟು ಜರುಗಿವೆ. ಒಟ್ಟಾರೆ ಈ ಎಲ್ಲಾ ಅಂಶಗಳಿಂದ ಒಡಗೊಡಿರುವ ವಿಧೇಯಕ ಸದನದ ಮುಂದೆ ಇದೆ. ವಿವಿಧ ಸಮೂಹಗಳ ಮಧ್ಯೆ ವಿವಾಹ ಜರುಗಲು ಅವಕಾಶ ದೊರೆತ ಮೇಲೆ ಜಾತಿ, ಗೋತ್ರ, ಸಗೋತ್ರಗಳ ಪ್ರಶ್ನೆಯೇ ಇರಲಾರದು. ಮೊದಲನೆಯ ಕ್ರಮ ಕೈಗೊಂಡಾಗಿದೆ. ಆದುದರಿಂದ ಎರಡನೆಯ ಕ್ರಮಕ್ಕೆ ಕಲಹವೇಕೆ ? ಈ ಪರಿಸ್ಥಿತಿಯಲ್ಲಿ ವಿಧೇಯಕಕ್ಕೆ ಸಹಕಾರ ನೀಡುವುದೇ ಸರಿಯಾದ ಕ್ರಮ.

ಈ ವಿಧೇಯಕದ ಇತರ ಅಂಶಗಳಿಗೆ ಸೇರಿದಂತೆ, ಆಯ್ಕೆ ಸಮಿತಿಯ ಸಲಹೆಗಳೊಂದಿಗೆ ನಾನು ಸಹಮತ ಹೊಂದಿಲ್ಲ. ಅವಿಭಕ್ತ ಕುಟುಂಬ, ಭಾರತದ ವ್ಯವಸಾಯ ಭೂಮಿಗಳ ಹಾಗೂ ಅದರ ಭವಿಷ್ಯ, ವಾಣಿಜ್ಯ ಹಾಗೂ ವ್ಯಾಪಾರಗಳ ವೃತ್ತಿಯನ್ನೇ ಅವಲಂಬಿಸಿರುವುದು ಮುಂತಾದ ವಿಷಯಗಳು. ಇದನ್ನು ನಾವು ಭಾರತೀಯ ಹಳ್ಳಿಗಳ ಹಿನ್ನೆಲೆಯಿಂದಾಗಿ ಪರಿಶೀಲಿಸಿದಾಗ ನಮಗೆ ಗೋಚರವಾಗುವುದೇನೆಂದರೆ ಶತಮಾನಗಳಿಂದಲೂ ಭೂಮಿಯನ್ನು ಉಳುತ್ತಲೇ ಬಂದಿರುವ ರೈತಾಪಿ ಜನರ ಆಸ್ತಿಯ ಹಕ್ಕುಗಳನ್ನು ಬದಲಾಯಿಸುವ ಕ್ರಮದ ಬಗೆಗೆ ನಾನು ನನ್ನ ಸ್ನೇಹಿತರ ಸಲಹೆಯನ್ನು ವಿರೋಧಿಸುವೆ. ಏಕೆಂದರೆ ಸಂತಾನಂ ಅವರ ಹೇಳಿಕೆಯಂತೆ, ಅವಿಭಕ್ತ ಕುಟುಂಬವ್ಯವಸ್ಥೆ ಅಳಿವಿನ ಅಂಚಿನಲ್ಲಿದೆ ಎಂಬುದು ಸರಿಯಲ್ಲ. ನಾನೂ ಹಳ್ಳಿಯ ಝೀವನವನ್ನು ಕಂಡಿದ್ದೇನೆ. ನಾನೇ ಹಳ್ಳಿಯವನು. ನಾನು ಮದ್ರಾಸಿನಲ್ಲಿ ೪೦ ವರ್ಷದಿಂದ ನೆಲೆಸಿರುವೆ. ಈ ಅವಧಿಯಲ್ಲಿಯೂ ನಾನು ಪ್ರತಿವರ್ಷ ಒಂದು ತಿಂಗಳ ಅವಧಿಯನ್ನು ಹಳ್ಳಿಯಲ್ಲಿಯೇ ಕಳೆಯುತ್ತಿರುವೆ. ನಾನು ಕ್ರಿಸ್‌ಮಸ್ ಹಾಗೂ ಬೇಸಿಗೆಯ ರಜೆ ದಿನಗಳನ್ನು ಹಳ್ಳಿಯಲ್ಲಿಯೇ ಕಳೆಯುವೆ.

ನಾನು ದೇಶದ ಬೇರೆ ಹಳ್ಳಿ ಝೀವನ ಅರಿಯದೇ ಹೋದರೂ ಮದ್ರಾಸ್ ಭಾಗದ ಹಳ್ಳಿಯ ಝೀವನ ಬಲ್ಲೆ. ಆದುದರಿಂದ, ಹಳ್ಳಿಗಳಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆ ಕುಸಿಯಲಾರಂಭಿಸಿದೆ ಎಂಬ ಹೇಳಿಕೆಯನ್ನು ಒಪ್ಪಲಾರೆ. ಆದರೆ ನನ್ನ ಮಿತ್ರ ಸಂತಾನಂ ಅವರು ಹೇಳಿದಂತೆ ಎರಡನೆಯ ತಲೆಮಾರಿನ ಸಂತಾನದಲ್ಲಿ ಈ ಬಗೆಗೆ ಸಹಮತದ ಅಭಿಪ್ರಾಯದ ಕೊರತೆ ಇರುವುದನ್ನು ಅಂಗೀಕರಿಸುವೆ. ಆದರೆ ಇದು ತಂದೆಯ ಮರಣದ ನಂತರ ಹಾಗೂ ಅವರ ಮಕ್ಕಳ ಮರಣಾಂತರದಲ್ಲಿ ಸಂಭವಿಸಬಹುದು. ಹೀಗಾಗಿ ನಾನು ಸಿದ್ಧಾಂತದ ವಿಷಯ ಕೈಬಿಟ್ಟು ಸದ್ಯದ ಪರಿಸ್ಥಿತಿಯನ್ನು ಗಮನಿಸಬೇಕು. ನಾನೂ ಅವಿಭಕ್ತ ಕುಟುಂಬಕ್ಕೆ ಸೇರಿದವನು. ಇದರಿಂದಾಗಿ, ಅದರ ಆದರ್ಶಗಳಲ್ಲಿ ಇನ್ನೂ ನನಗೆ ನಂಬಿಕೆಯಿದೆ. ಆದುದರಿಂದ ಅವಿಭಕ್ತ ಕುಟುಂಬವು ಒಂದು ಉತ್ತಮ ಶಿಕ್ಷಣವನ್ನೇ ನೀಡಬಲ್ಲ ಸಂಘಟನೆಯಾಗಿದೆ; ಸಹೋದರರು, ಸಹೋದರರ ವಿದ್ಯಾಭ್ಯಾಸ, ಅಕ್ಕಂದಿರ ತ್ಯಾಗ, ಮುಂತಾದ ಅನೇಕ ಸಮಾಜವಾದದ ಕಲ್ಪನೆಗೆ ಪೋಷಕವಾಗಿತ್ತು. ಆದರೆ ಅದೇ ಸಂಸ್ಥೆ ಅಥವಾ ಸಂಘಟನೆಯು ಸರ್ವಕಾಲದಲ್ಲಿ ಮುಂದುವರಿಯಲೇ ಬೇಕೆಂದು ಹೇಳಲಾರೆ. ಏಕೆಂದರೆ ಸಾಮಾಜಿಕ ವಿಕಾಸಕ್ಕೆ ಯಾವ ಸಂಘಟನೆಯೂ ಅಡ್ಡಿಯಾಗಬಾರದು. ಆದುದರಿಂದ ಈಗ ನಾನು ಹೇಳುವುದೇನೆಂದರೆ, ಭಾರತವು ಹಳ್ಳಿಗಳ ದೇಶ; ಈ ಹಳ್ಳಿಗಳಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆ ಶಿಥಿಲ ಹೊಂದುತ್ತದೆ ಎಂದೇ ಭಾವಿಸಿ ಯಾವುದೇ ನೂತನ ಕ್ರಮವನ್ನು ಹೇರುವುದು ಸರಿಯಲ್ಲ. ನಮಗೆಲ್ಲರಿಗೂ ತಿಳಿದಂತೆ ವಿಧವೆಯರಿಗೆ, ಹಾಗೂ ಸೊಸೆಯಂದಿರಿಗೆ ಈಚೆಗೆ ನೀಡಿದ ಹಕ್ಕುಗಳು ಕುಟುಂಬ ವ್ಯವಸ್ಥೆಯ ಮೇಲೆ ಅಧಿಕ ಪರಿಣಾಮ ಬೀರಿಲ್ಲವೆಂಬುದನ್ನು ಗಮನಿಸಬೇಕು. ಇದು ವ್ಯವಸಾಯೇತರ, ವಾಣಿಜ್ಯ ಹಾಗೂ ವ್ಯಾಪಾರಿ ಕುಟುಂಬಗಳಿಗೂ ಅನ್ವಯಿಸುತ್ತದೆ.

ನನಗೆ ಸುಪ್ರಸಿದ್ಧ ನಾಟಕೋಟಿ ಚೆಟ್ಟಿಯಾರ ಮನೆತನದೊಂದಿಗೆ ಕಳೆದ ನಲವತ್ತು ವರ್ಷಗಳ ನಿಕಟ ಸಂಬಂಧವಿದೆ. ಅವರು ವ್ಯವಹಾರದಲ್ಲಿ ಅವಿಭಕ್ತ ಸೂತ್ರ ಪಾಲಿಸಲೆಂದೇ ಈಚಿನ ದಿನಗಳಲ್ಲಿ ಕಂಪನಿಗಳನ್ನು ಸ್ಥಾಪಿಸಿದ್ದಾರೆ. ಇದು ಆದಾಯ ತೆರಿಗೆಯನ್ನು ಕಡಿಮೆ ಮಾಡುವ ಕ್ರಮ ಆಗಿದೆಯೇ ಹೊರತು ಅವಿಭಕ್ತ ಕುಟುಂಬದ ವಿರೋಧವಲ್ಲ.

ಆದುದರಿಂದ ನಾವು ವೈಶ್ಯರ, ಮಾರವಾಡಿಗಳ, ಚೆಟ್ಟಿಯಾರರ ಬಗೆಗೆ ಚಿಂತಿಸದೇ ಈ ವ್ಯವಸ್ಥೆಯಿಂದ ಸಾಮಾಜಿಕ ವಿಕಾಸಕ್ಕೆ ಒದಗಬಹುದಾದ ಅಡಚಣೆಗಳೇನೆಂದು ಈ ಸದನದಲ್ಲಿ ವಿಚಾರಿಸಬೇಕು. ಈಗಾಗಲೇ ಅವಿಭಕ್ತ ಕುಟುಂಬ ವಿಧಾನದಲ್ಲಿ ಬದಲಾವಣೆಗಳು ಬಂದಿದ್ದು, ಮೊದಲ ಕಠಿಣ ಪರಿಸ್ಥಿತಿಗಳು ಮಾಯವಾಗಿವೆ. ಯಾವುದೇ ನ್ಯಾಯಾಲಯಕ್ಕೆ ಹೋಗದೇ ಓರ್ವ ಅವಿಭಕ್ತ ಕುಟುಂಬದ ಸದಸ್ಯನು ತನ್ನ ಬಾಂಧವ್ಯವನ್ನು ಮುರಿದುಕೊಳ್ಳಬಹುದು ಹಾಗೂ ಆಸ್ತಿಯ ಭಾಗವನ್ನು ಕೇಳಬಹುದಾಗಿದೆ. ಅಲ್ಲದೆ ತಂದೆಯ ಸಾಲಕ್ಕೂ ಮಗನು ಬಾಧ್ಯಸ್ಥನಾಗಿದ್ದಾನೆ. ಸ್ವಯಾರ್ಜಿತ ಆಸ್ತಿಯ ಬಗೆಗೂ ಸರಳ ವಿಧಾನಗಳಿವೆ. ಈ ದಿಶೆಯಲ್ಲಿ ಪ್ರಿವಿ ಕೌನ್ಸಿಲ್ ತೀರ್ಪು ನೀಡಿದೆ. ಇದರಿಂದಾಗಿ ಸ್ವಯಾರ್ಜಿತ ಗಳಿಕೆಯ ಮೇಲೆ ಬೇರೆ ಯಾರೊಬ್ಬರ ಅಧಿಕಾರವೂ ಇಲ್ಲ. ಆದುದರಿಂದ, ನನ್ನ ಮಿತ್ರರಾದ ಕಾನೂನು ಸಚಿವರಲ್ಲಿ ನನ್ನ ವಿನಂತಿ ಏನೆಂದರೆ ಈ ಅವಿಭಕ್ತ ಕುಟುಂಬ ಇನ್ನೂ ಜಾರಿಯಲ್ಲಿದೆ. ಅದು ಇನ್ನೂ ೧೦ ಹಾಗೂ ೨೦ ವರ್ಷಗಳ ನಂತರ ಬಿದ್ದು ಹೋಗಬಹುದೆಂಬ ಭಾವನೆಯ ಮೇಲೆ ಅದನ್ನು ನಾಶಗೊಳಿಸುವ ಕ್ರಮಕ್ಕೆ ಕೈ ಹಾಕಬಾರದು; ಹಾಗೂ ಶಾಸನರಚನೆ ಮಾಡಲೂ ಬಾರದು. ನೀವು ನನ್ನನ್ನು ಸನಾತನಿ ಹಾಗೂ ಇಂದಿನ ವಿಚಾರಗಳು ಇವನಿಗೆ ಅರ್ಥವಾಗದು ಎಂದರೂ ಸರಿ, ಈ ವಿಧೇಯಕ ಜಾರಿಗೊಳಿಸುವ ಮುನ್ನ ಈ ದೇಶದ ಜನರ ಅಭಿಪ್ರಾಯವನ್ನು ಸಂಗ್ರಹಿಸುವುದು ಸೂಕ್ತ. ನಾವು ಬೇಸಾಯದ ಭೂಮಿಯ ವಿಷಯ

ಕೈಬಿಟ್ಟು ಮಿಕ್ಕ ಆಸ್ತಿಯ ಬಗೆಗೆ ಕ್ರಮವನ್ನು ತೆಗೆದು ಕೊಳ್ಳಬಹುದಲ್ಲವೆ? ಎಂದು ವಾದ ಮಾಡಬಹುದು. ಅದನ್ನು ಹಾಗೆ ಭೇದಭಾವದ ದೃಷ್ಟಿಯಿಂದ ನೋಡಲಾಗದು. ಏಕೆಂದರೆ ಒಂದು ಬಾರಿ ವ್ಯವಸಾಯೇತರ ಆಸ್ತಿಯ ಬಗೆಗೆ ಕ್ರಮ ತೆಗೆದುಕೊಂಡರೆ, ವ್ಯವಸಾಯ ಆಸ್ತಿಗೂ ಅದನ್ನೇ ಅನುಸರಿಸಬೇಕಾಗುತ್ತದೆ. ಕೇವಲ ಶಾಸನೀಯ ಅಧಿಕಾರಗಳನ್ನು ಕೇಂದ್ರ ಹಾಗೂ ರಾಜ್ಯ ಸರಕಾರಗಳಲ್ಲಿ ಹಂಚುವುದಷ್ಟೇ ನಿರ್ಣಾಯಕವಲ್ಲ. ಆದರೆ ಹಿಂದೂ ಲಾದಲ್ಲಿ ಪಾಲುದಾರಿಕೆಯ ಹಕ್ಕುಗಳನ್ನು ನಿರ್ಣಯಿಸುವುದು ಗೊಂದಲವಾಗಬಾರದು. ಅದು ಅಷ್ಟು ಸುಲಭದ ಕಾರ್ಯವೂ ಅಲ್ಲ. ಆದುದರಿಂದ ಈ ದಿಶೆಯಲ್ಲಿ ನಿರ್ಣಯ ತೆಗೆದುಕೊಳ್ಳುವ ಮುಂಚೆ ಕಾನೂನು ಸಚಿವರು ಈ ಸಮಸ್ಯೆಯ ಇಹ–ಪರಗಳನ್ನು ಸೂಕ್ತವಾಗಿ ವಿಚಾರಿಸಿ ನಿರ್ಧರಿಸಲಿ; ಹಾಗೂ ಈ ವಿಧೇಯಕದ ಹಲವು ಪ್ರಕರಣಗಳನ್ನು ಮುಂದೂಡಲಿ ಎಂದೇ ಕೋರುವೆ.

ಸರ್, ಈ ವಿಧೇಯಕದ ಇನ್ನೊಂದು ಪ್ರಮುಖ ಅಂಶವಾದ, ಮಗ–ಮಗಳಿಗೆ ನೀಡುವ ವಾರಸುದಾರಿಕೆಯ ಹಕ್ಕಿನ ಬಗೆಗೆ ಪ್ರಸ್ತಾವಿಸುವೆ. ಈ ಬಗ್ಗೆ ಮಾತನಾಡಲು ನಾನು ಬಾಧ್ಯತೆ ಹೊಂದಿರುವೆ. ಏಕೆಂದರೆ, ನನಗೆ ಪುತ್ರ ಹಾಗೂ ಪುತ್ರಿಯರಿದ್ದಾರೆ. ಆದರೆ ಬಹುಶಃ ಸ್ತ್ರೀಯರ ಪರಇರಲು ಕಾರಣವೆಂದರೆ ನಾಲ್ವರು ಪುತ್ರಿಯರು ಮತ್ತು ಮೂವರು ಪುತ್ರರು. ಆದುದರಿಂದ ನನಗೆ ವಿಶೇಷ ಹಕ್ಕು (ಹಿಯರ್ ಹಿಯರ್). ನಾನು ವೃತ್ತಿಯಿಂದ ವಕೀಲನಾಗಿದ್ದರೂ, ಪುತ್ರ– ಪುತ್ರಿಯರ ತಂದೆಯಾಗಿ ಮಾತನಾಡುವ ಅಧಿಕಾರ ಹೆಚ್ಚು ಎಂದು ನನ್ನ ಭಾವನೆ. ಸಾಮಾನ್ಯವಾಗಿ ಹಿಂದೂ ಅವಿಭಕ್ತ ಕುಟುಂಬ ಈ ಸಮಸ್ಯೆಯನ್ನು ಹೇಗೆ ನೋಡುತ್ತದೆ? ಮೂರು ಮಕ್ಕಳಿಗೆ ತೊಂದರೆಯಾದಾಗ ನೀವು ಅವರನ್ನು ಒಟ್ಟಿಗೇ ಇರುವಂತೆ ಒತ್ತಾಯಿಸಬಹುದು. ಆದರೆ ಮಗಳ ಬಗೆಗೆ ಏನು ಮಾಡಬಹುದು. ಅದರಲ್ಲಿಯೂ ಹಳ್ಳಿ ಪ್ರದೇಶಗಳಲ್ಲಿ ಆಸ್ತಿ ಎಂದರೆ ಕೇವಲ ಭೂಮಿ ಮಾತ್ರ. ಈ ಹಿನ್ನೆಲೆಯಲ್ಲಿ ಹಳ್ಳಿಯ ಭೂಮಿಯನ್ನು ಮಗ–ಮಗಳಿಗೆ ಸಮನಾಗಿ ಹಂಚಿಬಿಡುವುದು. ಇದು ಮೇಲುನೋಟಕ್ಕೆ ಸರಿ ಎಂದಾದರೂ ವಾಸ್ತವಿಕದಲ್ಲಿ ಅನಾಹುತಗಳಿಗೆ ಆಸ್ಪದ ನೀಡಬಲ್ಲದು. ಸಂತಾನಂ ಅವರು ಈ ವಿಷಯವನ್ನು ದೆಹಲಿಯಲ್ಲಿ ಕುಳಿತು ನೋಡುವರು. ಆದರೆ ಇದು ಅವರು ಭಾವಿಸಿದಷ್ಟು ಸುಲಭವಲ್ಲ.

ಆದುದರಿಂದ ಈಗಿನ ಹಿಂದೂ ಕುಟುಂಬದಲ್ಲಿ ಆಗುತ್ತಿರುವ ವಿಚಾರ ನೋಡೋಣ. ಸಹೋದರನ ಮನೆಯಲ್ಲಿ ಯಾವುದೇ ವಿವಾಹ ಜರುಗಿದಾಗ ಸಹೋದರಿ ಹಾಗೂ ಮಗಳ ಪಾತ್ರ ಅತಿ ಪ್ರಮುಖವಾದವು. ಏಕೆಂದರೆ ಅದು ತಂದೆಯ ಮನೆ ಎಂದೇ ಭಾವಿಸಲಾಗುವುದು. ಹೀಗಾಗಿ ಮಗಳು ಹಾಗೂ ಸಹೋದರಿಯರ ಪಾತ್ರ ಎಷ್ಟು ಪ್ರಮುಖ ಎಂಬುದು ನಮಗೆಲ್ಲರಿಗೂ ತಿಳಿದ ವಿಷಯವೇ ಆಗಿದೆ. (ಹಿಯರ್ ಹಿಯರ್). ಏಕೆಂದರೆ ತಂದೆ ತಾಯಿ ಆರತಿಗೆಂದು ಕುಳಿತರೆ ತಂಗಿ ಹಾಗೂ ಮಗಳೇ ಆರತಿ ಬೆಳಗಬೇಕು. ನಾವೆಲ್ಲರೂ ಹಿಂದೂಗಳು. ನಾವು ಇವನೆಲ್ಲಾ ಮರೆಯಲಾಗುವುದೇ? ಸಂಸಾರದಲ್ಲಿ ಮೊದಲು ಉಡುಗೊರೆ ಪಡೆಯುವವರೆಂದರೆ ಮಗಳು ಹಾಗೂ ಸಹೋದರಿಯವರಲ್ಲವೇ? ಎರಡನೆಯ ಪ್ರಮುಖ ವಿಷಯವೆಂದರೆ ಯಾವುದೇ ಹಿಂದೂ ವಿವಾಹದಲ್ಲಿ ತಂಗಿ ಹಾಗೂ ಮಗಳಿಗೆ ಉಡುಗೊರೆ ನೀಡದೇ ಜರುಗುವುದೇ ಇಲ್ಲ. ಸಂತಾನವಿಲ್ಲದೇ ಹೋದ ಸ್ತ್ರೀಯನ್ನು ಕೊಂಡಾಡದೇ ಹೋದರೂ, ಮನೆಯ ಮಗಳ ಸ್ಥಾನವು ಸೀಮಂತ, ಹೆರಿಗೆ ಮುಂತಾದ ಸಂದರ್ಭದಲ್ಲಿ ವಿಶೇಷದ್ದಾಗಿರುತ್ತದೆ. ಮಗಳು ತನಗೆ ಮೂರು ನಾಲ್ಕು ಮಕ್ಕಳಾಗುವವರೆಗೂ ತನ್ನ ತಂದೆಯ ಅಥವಾ ಅಣ್ಣನ ಮನೆಗೆ ಹೋಗುತ್ತಲೇ ಇರುತ್ತಾಳೆ. ಇದು ಹಿಂದೂ ಜನಾಂಗದ ಝೀವನ. ಇದು ದೆಹಲಿ, ಕಲಕತ್ತಾ, ಬೊಂಬಾಯಿಗಳ ಝೀವನವಲ್ಲ, ಸಮಸ್ತ ಜನಾಂಗದ

ಝೀವನ. ಇದು ಸಮಸ್ತ ಭಾರತದ ಹಳ್ಳಿಗಳ ಝೀವನ. (ಹಿಯರ್ ಹಿಯರ್). ಆದುದರಿಂದ ಉಪಾಧ್ಯಕ್ಷರ ಮೂಲಕ ಸದನವು ಈ ವಿಷಯಗಳನ್ನು ಪರಿಶೀಲಿಸುವಂತೆ ಕೋರುವೆ. ಬೈಬಲ್ಲಿನಲ್ಲಿ ಹೇಳಿದೆಯಂತೆ: "ತಂದೆಯ ವಿರುದ್ಧ ತಂದೆಯನ್ನು, ಮಗನ ವಿರುದ್ಧ ಮಗನನ್ನು, ಸಹೋದರನ ವಿರುದ್ಧ ಸಹೋದರನನ್ನು ನಿಲ್ಲಿಸುವೆ." ಅದರಂತೆ ವಿಧೇಯಕವು ಕಲಹಕ್ಕೆ ನಾಂದಿಯಾಗಬಾರದು. ಆದರೆ ಕಲಹ ಅಲ್ಪಮಟ್ಟಿಗೆ ಅನಿವಾರ್ಯ ಎಂಬುದನ್ನೂ ಮರೆಯಲಾಗದು. ಆದರೆ ಅದು ಆಸ್ತಿಯ ಬಗೆಗೆ ಮಾತ್ರ.

ಶಂಕರರು ಹೇಳಿದಂತೆ ಆಸ್ತಿಯೇ ಈ ದೇಶದ ಎಲ್ಲ ಕಲಹಗಳಿಗೂ ಮೂಲ; ಆದರೆ ಅದನ್ನೇ ಮಾದರಿಯಾಗಿರಿಸಿಕೊಂಡು ಸಹೋದರ ಸಹೋದರಿಯರಲ್ಲಿ ಕಲಹಕ್ಕೆ ಆಸ್ಪದ ನೀಡುವುದು ಬೇಡ. ಸಮಯ ಬಂದೇ ಬರುತ್ತದೆ. ಮಗಳು ತನ್ನ ಮಗಳ ಮದುವೆಯ ಹೊತ್ತಿಗೆ ಸಾಕಷ್ಟು ವಿವೇಚನೆ ಹೊಂದಿರುತ್ತಾಳೆ. ತಂದೆಯ ಬದಲಾಗಿ ಸಹೋದರನನ್ನೇ, ತಮ್ಮ ಮದುವೆಗೆಂದೇ ಆಶ್ರಯಿಸಿರುವ ಹುಡುಗಿಯರೂ ಇದ್ದಾರೆ. ತಂದೆಯೂ ಮಗಳ ಮದುವೆಯ ಸಮಯದಲ್ಲಿ ಮಗನ ಸಹಾಯ ಬಯಸುವುದೂ ಸಹಜ. ಆದರೆ ಇದು ಹಿಂದೂ ಝೀವನದ ಶೈಲಿ. ಕೇವಲ ನಮ್ಮಂಥ ಆಂಗ್ಲ ಶಿಕ್ಷಣ ಪಡೆದವರ ಮನೋಭಾವನೆಗಳನ್ನು ಗಣನೆಗೆ ತೆಗೆದುಕೊಳ್ಳದೆ, ಸಮಸ್ತ ದೇಶದ ಮನೋಭಾವನೆಯನ್ನು ಅರಿತು ಅನುಸರಿಸುವುದು ಸೂಕ್ತ. ನಾನು ಮುಂದುವರಿದವನಾಗಿರಬಹುದು. ಆದರೆ ನನ್ನ ಭಾವನೆಗಳು ಅಭಿಪ್ರಾಯಗಳು ಭಾರತೀಯ ಮೂಲದವು. ಆದುದರಿಂದ ಈ ಹಿಂದೂ ಆದರ್ಶಗಳನ್ನು ಆದರದಿಂದ ಪರಿಶೀಲಿಸುವುದು ಸೂಕ್ತ. (ಹಿಯರ್ ಹಿಯರ್). ಆದರೆ ನಾನು ನೂತನ ವಿಚಾರಗಳ ವಿರೋಧಿಯಲ್ಲ. ಸದನದಲ್ಲಿ ಅನೇಕ ಪ್ರಜ್ಞಾವಂತ ಮಹಿಳೆಯರೂ ಇದ್ದಾರೆ. ಆದುದರಿಂದ ಆಗ್ರಹಿಸುವೆ.

**ಶ್ರೀಮತಿ ರೇಣುಕಾ ರೇ** (ಪ.ಬಂ.ಸಾ) : ನಮ್ಮ ಕುಟುಂಬಗಳು ಆದರಣೀಯವಲ್ಲವೆ?

**ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ :** ಅವು ಆದರಣೀಯ; ನೀವು ಮಧ್ಯೆ ಕೇಳಿದ್ದಕ್ಕೆ ನನಗೆ ಸಂತೋಷ. ನನಗೆ ತೋರಿದಂತೆ, ಅಲ್ಪ ಸನಾತನಿಗಳಾದರೂ ಅವು ಆದರಣೀಯ; ಆದರೆ ಅವರಲ್ಲಿ ಹಲವರು ಮುಂದುವರಿದ ಅಭಿಪ್ರಾಯಗಳನ್ನು ಹೊಂದಿದ್ದಾರೆ. ಆದುದರಿಂದ ಅವರು ಹೆಚ್ಚು ಆದರಣೀಯ, ಗೌರವಾನ್ವಿತರೆಂದೇ ನಾನು ಹೇಳುವೆ. ಆದರೆ ನನ್ನ ಅಭಿಪ್ರಾಯ. ಅವರಂತೆ ಇಲ್ಲ ಏಕೆಂದರೆ ನನ್ನ ಹಿನ್ನೆಲೆಯೇ ಬೇರೆ. ನನಗೆ ನಮ್ಮ ಪ್ರಧಾನಿಯ ಬಗೆಗೆ ಅಧಿಕ ಗೌರವವಿದೆ. ನಾನು ಅವರನ್ನು ನಮ್ಮ ಸ್ನೇಹಿತರ ದೃಷ್ಟಿಯಿಂದ ನೋಡುವುದಿಲ್ಲ. ಇದು ನನ್ನ ವಿಧಾನ.

**ಕೆ. ಸಂತಾನಂ** (ರಾಜ್ಯ ಮಂತ್ರಿ–ಸಾರಿಗೆ–ರೈಲು) : ತಾವು ಏನನ್ನು ಸೂಚಿಸಬಯಸುವಿರಿ?

**ಪಂಡಿತ ಲಕ್ಷ್ಮಿಕಾಂತ ಮೈತ್ರಾ :** ಅವರು ತಮ್ಮ ಸಲಹೆಗಳನ್ನು ಉತ್ತಮವಾಗಿಯೇ ನೀಡುತ್ತಿದ್ದಾರೆ.

**ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ :** ಅವರು ಕೇಳಿದ ಪ್ರಶ್ನೆಯ ಬಗ್ಗೆ ನನಗೆ ಸಂದೇಹವಿಲ್ಲ. ನನಗೆ ಅವರು ಕೇಳಬೇಕೆಂದಿರುವ ವಿಷಯ ಅವಿವಾಹಿತ ಮಗಳ ಬಗ್ಗೆ ಏನು ನನ್ನ ಸಲಹೆ ಎಂದಿದೆ. ಈ ಬಗೆಗೆ ಅವಿವಾಹಿತ ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಮೊತ್ತವನ್ನು ತೆಗೆದಿಡಬೇಕೇ? ನಿಜವಾಗಿಯೂ ಅದರ ಬಗೆಗೆ ನನ್ನ ಸಮ್ಮತಿ ಇದೆ. ಅವಿವಾಹಿತ ಪುತ್ರಿಯರ ಬಗೆಗೆ ಉದಾರ ಹಾಗೂ ಜವಾಬ್ದಾರಿ ದೃಷ್ಟಿಯಿಂದ ಮೊತ್ತವನ್ನು ಪಾಲಿನಲ್ಲಿ ತೆಗೆದಿಡಲು ಯಾವ ಸಂಕೋಚವಿರಬಾರದು. ಇದು ನನ್ನ ಸಲಹೆ. ಅದು ನೀವು ಒಪ್ಪಬಹುದು ಅಥವಾ ಬಿಡಲೂಬಹುದು, ಆದರೆ ಅದು ನನ್ನ

ಸಲಹೆ.

**ಓರ್ವ ಸದಸ್ಯ :** ಆದರೆ ತಾಯಿಯ ಕಡೆಯ ಹಣವೇನು?

**ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ :** ಅದರ ಬಗೆಗೆ ಮಾತನಾಡಿದರೆ ಏನೂ ಪ್ರಯೋಜನವಾಗದು. ಬೇಕೆಂದರೆ, ಆದಾಯ ತೆರಿಗೆ ನೀಡುವವರ ಖಾನೆಷುಮಾರಿ ನೋಡಿರಿ. ಹೆಚ್ಚು ಜನವಿಲ್ಲ. ನಮ್ಮದು ಬಡದೇಶ. ಹೀಗಾಗಿ ತಾಯಿಯ ಬಗೆಗೆ ಮಾತನಾಡಿದರೆ ಪ್ರಯೋಜನವಿಲ್ಲ. ಏಕೆಂದರೆ ಅದರಲ್ಲಿ ಬಡವರೇ ಅಧಿಕ. ಆದುದರಿಂದ ಅವರು ಸಾಮಾಜಿಕ ಆದ್ಯತೆಗಳನ್ನು ಎದುರಿಸಿದರೆ ಸಾಕು. ಆಸ್ತಿ ಇದ್ದವರು ಬೇಕಾದಲ್ಲಿ ಹಂಚಬಹುದು. ಆದರೆ ಅದು ಆಸ್ತಿಹೀನರ ಮೇಲೆ ಪ್ರಭಾವ ಬೀರುತ್ತದೆ. ಆಗ ಅವರಿಗೆ ಸಾಮಾಜಿಕ ಆದ್ಯತೆಗಳನ್ನೇ ಎದುರಿಸಲು ತೊಂದರೆಯಾಗಬಹುದು. ಆದುದರಿಂದ ನೀವು ಏನೇ ಕ್ರಮ ತೆಗೆದುಕೊಳ್ಳುವ ಮುನ್ನ ವಿಚಾರಿಸುವುದು ಸರಿ. ಆದರೆ ನನ್ನ ಮಿತ್ರರು ಅವಿಭಕ್ತ ಕುಟುಂಬದ ಬಗೆಗೆ ಹೇಳಿರುವ ಅಭಿಪಾಯವನ್ನು ಒಪ್ಪಲಾರೆ. ಅವರಿಂದ ಪ್ರಭಾವಿತನಾದುದರಿಂದ ಅವರ ಅಭಿಪ್ರಾಯಗಳ ಬಗೆಗೆ ಗೌರವ ಇದೆ. ಅವರು ಮೇಲುನೋಟಕ್ಕೆ ಮೊಂಡು ಎಂದು ತೋರಿದರೂ ವಿವೇಚನೆ ಉಳ್ಳವರು. ಅವರು ಇದರ ಬಗೆಗೆ ಖಂಡಿತವಾಗಿ ಯೋಚಿಸುತ್ತಾರೆ. ಇದು ಅವಿಭಕ್ತ ಕುಟುಂಬ ಹಾಗೂ ಮಗ–ಮಗಳಿಗೆ ಸಮಪಾಲು ನೀಡುವಲ್ಲಿ, ನನ್ನ ಅಭಿಪ್ರಾಯ.

ಮುಂದಿನ ವಿಷಯ ಎಂದರೆ ಸ್ತ್ರೀಧನ. ಅದರ ಬಗೆಗೆ ಇರಬಹುದಾದ ನಿರ್ಬಂಧಗಳೆಲ್ಲವನ್ನೂ ತೆಗೆದುಹಾಕಿರಿ. ನಾನು ಈ ಬಗ್ಗೆ ಸದನದೊಂದಿಗೆ ಇರದೆ ಬೇರೆ ಸದಸ್ಯರೊಂದಿಗಿದ್ದೇನೆ. ಇದು ಅನಾವಶ್ಯಕ ಕಲಹಗಳಿಗೆ ಕಾರಣವಾಗಿದೆ. ಆದುದರಿಂದ ನಾನು ಅಸಹಾಯಕ ವಿಧವೆಯರೊಂದಿಗಿದ್ದೇನೆ. ಆದರೆ ಪಾಲುದಾರಿಕೆಯ ವಿಧಾನಗಳು ಒಂದೇ ಎಂದು ನಾನು ಹೇಳಲಾರೆ. ಅದನ್ನು ಸ್ತ್ರೀಧನದ ಆಸ್ತಿ ಎಂದೇ ಸಂಬೋಧಿಸಿದಾಗ ವಾರಸುದಾರಿಕೆಯನ್ನು ನಿರ್ಣಯಸಬಹುದಲ್ಲವೇ? ನಾನು ಇದರ ಬಗೆಗೆ ಕೇಳುವ ಪ್ರಶ್ನೆ ಇಷ್ಟೇ. ವಿಧವೆಗೆ ಗಂಡನಿಂದ ಬಂದ ಆಸ್ತಿ ಅವಳ ಮರಣದ ನಂತರ ಅವಳ ತಂದೆ ತಾಯಿಗೆ ಹೋಗುವುದು ಸರಿ. ಅದು ಆಸ್ತಿ ನೀಡಿದವನ ತಂದೆ ತಾಯಿಗೆ ಹೋಗುವುದರಲ್ಲಿ ಏನು ನ್ಯಾಯವಿದೆ? ನಾನು ನ್ಯಾಯವಾದಿಯಾಗಿ ಕೇಳುವುದೊಂದೇ. ಎರಡು ಆಸ್ತಿಗಳೆಂದು ಸಾರಿದ ನಂತರ ಮೊದಲನೆಯ ಆಸ್ತಿಗೆ ಮರಳಿ, ವಿಭಜನೆಯಾದ ಆಸ್ತಿ ಹೋಗುವುದು ತರ್ಕ ಸಮ್ಮತವಲ್ಲ, ತರ್ಕ ಕಾನೂನಿನ ತಿರುಳಲ್ಲ.

**ಕೆ. ಸಂತಾನಂ :** ಹಾಗಾದರೆ ಸಾಮಾನ್ಯವಾಗಿ ಕಾನೂನು ತರ್ಕಬದ್ಧವಾಗಿರಕೂಡದೇ?

**ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ :** ನನ್ನ ಸ್ನೇಹಿತರಿಗೆ ನನ್ನ ಉತ್ತರವೆಂದರೆ, ಸಂತಾನಂ ಅವರೆ, ಕಾನೂನು ಕೇವಲ ತರ್ಕಬದ್ಧವಾಗಿರಬೇಕಾಗಿಲ್ಲ. ಏಕೆಂದರೆ ಕಾನೂನು ಸಾಮಾಜಿಕ ಬದಲಾವಣೆ ಹಾಗೂ ಸಾಮಾಜಿಕ ಹೊಂದಾಣಿಕೆಯ ಕುರುಹು; ಹೀಗಾಗಿ ಅದು ತರ್ಕಕ್ಕೆ ಮೀರಿದ್ದು. ಏಕೆಂದರೆ ಸಮಾಜವು ಯಾವುದೇ ನಿಗದಿತ ಯೋಜನೆಯಂತೆ ಮುಂದುವರಿಯುವುದಿಲ್ಲ. ಆದರೆ ಸಮತಾವಾದ ಮತ್ತು ಸಮಾಜದ ವಿಚಾರ ಬೇರೆ ಬೇರೆ. ಆದುದರಿಂದ ಈ ಸಂದರ್ಭದಲ್ಲಿ ಸಾಮಾನ್ಯವಾಗಿ ಹಿಂದೂಗಳ ಸರಾಸರಿ ಅಭಿಪ್ರಾಯವನ್ನು ಗಮನಿಸುವುದು ಸೂಕ್ತ. ಆದುದರಿಂದ ಒಂದು ಬಗೆಯ ಸ್ತ್ರೀಧನ ತರ್ಕಬದ್ಧವಾಗಿಲ್ಲ ಎಂದು ಹಿಂದಕ್ಕೆ ತೆಗೆದುಕೊಳ್ಳುವುದು ಸರಿಯಾಗಲಾರದು. ಗಂಡನಿಂದ ಬಂದ ಈ ಹಣ ಮತ್ತೆ ಅವನಿಗೇ ಮರಳಬೇಕೆಂಬುದರಲ್ಲಿಯ ತರ್ಕವೇನು? ಅದನ್ನು ಅವಳ ಸಂಬಂಧಿಗಳಿಗೇಕೆ ನೀಡಬಾರದು? ಇದು ಪ್ರತಿಯೊಂದು ಶಾಸನದಲ್ಲಿ ಗಮನಿಸಬೇಕಾದ ಅಂಶ. ಆದುದರಿಂದ ಈ ಭಾವನೆಗಳನ್ನು ಪರಿಶೀಲಿಸಬೇಕೆಂದೇ ನಾನು ಕಾನೂನು ಮಂತ್ರಿಯವರಿಗೆ ಸೂಚಿಸುವೆ. ಇತ್ತೀಚೆಗೆ ದಿನಗಳವರೆಗೂ ವಿಧವೆಯರಿಗೆ ಯಾವ

ಅವಕಾಶವನ್ನೂ ಒದಗಿಸಿರಲಿಲ್ಲ. ಹೀಗಾಗಿ ಈ ಆಸ್ಪದ ನೀಡಿರುವಾಗ ಅದರಿಂದ ಅವಳನ್ನು ವಂಚಿಸಬೇಡಿ.

ಕೊನೆಯದಾಗಿ ನಾನು ಹೇಳಬಯಸುವುದೇನೆಂದರೆ: ದೂರ ಸಂಬಂಧಿಗಳ ಬಗೆಗೆ ಈ ದಿಶೆಯಲ್ಲಿ ಈ ವಿಧೇಯಕವು ತುಂಬಾ ಸುಧಾರಿಸಿದೆ; ಏಕೆಂದರೆ ಅದು ದಾಯಭಾಗದ ಹಾಗೂ ಇತರ ಕೆಲವು ಸೂತ್ರಗಳನ್ನು ನಿರ್ಮಿಸಿದೆ. ಇದು ಮೂಲವಿಧೇಯಕದ ಕುಂದುಕೊರತೆಗಳನ್ನು ನಿವಾರಿಸಿದೆ.

ಪಾಲಕರು, ಝೀವನಾಂಶ ಮುಂತಾದ ಪ್ರಕರಣಗಳನ್ನು ತುಂಬಾ ಉದಾರ ಹಾಗೂ ಪ್ರಗತಿಪರ ದೃಷ್ಟಿಯಿಂದಲೇ ನೋಡಿರುವುದರಿಂದ ಸದನ ಅದನ್ನು ತುಂಬು ಹೃದಯದಿಂದ ಸಮರ್ಥಿಸಬೇಕು. ಆದರೂ ಅಲ್ಲಲ್ಲಿ ಹಲವಾರು ಮಾರ್ಪಾಟುಗಳು ಬೇಕಾಗಿವೆ. ಅದನ್ನು ಕ್ರಮವಾಗಿ ಕೈಗೆತ್ತಿಕೊಳ್ಳಬಹುದು. ನನಗೆ ಈ ಬಗೆಗೆ ಕಾನೂನು ಸಚಿವ ಹಾಗೂ ಪ್ರಧಾನಿಯವರ ಮೇಲೆ ಭರವಸೆ ಇದೆ. ನಾನು ಈ ವಿಧೇಯಕವನ್ನು ಎರಡನೆಯ ವರದಿ ವಾಚನಕ್ಕೆ ಮಂಡಿಸುತ್ತಾ ಇದನ್ನು ಸಂಪೂರ್ಣವಾಗಿ ಬೆಂಬಲಿಸುವೆ.

**ಡಾ॥ ಪಿ.ಕೆ ಸೇನ್** (ಬಿಹಾರ.ಸಾ) : ನನಗೆ ಸದನದ ಸಮಯದ ಬಗೆಗೆ ಅರಿವಿದೆ. ಆದುದರಿಂದ ನಾನು ಸಂಕ್ಷಿಪ್ತವಾಗಿಯೇ ಹೇಳುವೆ. ನನಗೆ ಒಂದು ವಿಷಯ ತಿಳಿಯದೇ ಹೋಗಿದೆ. ನನ್ನ ಮಾನ್ಯ ಮಿತ್ರರಾದ ಅಲ್ಲಾಡಿಯವರು, ವಿವಾಹ ಶಾಸನಗಳ ಬಗ್ಗೆ ತಮ್ಮ ಅಭಿಪ್ರಾಯ ಏನು ಎಂಬುದನ್ನು ಸ್ಪಷ್ಟಪಡಿಸಲೇ ಇಲ್ಲ. ಅವರು ಒಂದೆಡೆ ಈ ವಿಷಯದ ಬಗೆಗೆ ತಮ್ಮ ನಿರ್ದಿಷ್ಟ ಅಭಿಪ್ರಾಯವೇನೂ ಇಲ್ಲವೆಂದೇ ಹೇಳಿದರು. ಆದರೆ ನನಗೆ ತಿಳಿದಂತೆ ನಿರ್ದಿಷ್ಟ ಅಭಿಪ್ರಾಯ ವ್ಯಕ್ತ ಪಡಿಸಬಹುದಾಗಿತ್ತು. ಏಕೆಂದರೆ ವಿವಾಹ ಕೇವಲ ದಂಪತಿಗಳಿಗಲ್ಲದೆ ಸಮಾಜದ ಮೇಲೆ ಅಗಾಧ ಪರಿಣಾಮ ಬೀರುವ........

**ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ :** ನಾನು ಸ್ಪಷ್ಟವಾಗಿಯೇ ತಿಳಿಸಿರುವೆ. ನಾನು ಹೇಳಿದಂತೆ ನಾವು ನೂತನವಾಗಿ ಏನಾದರೂ ಮಾಡುವಂತಿದ್ದರೆ ಅದರ ಸಂಗತಿ ಬೇರೆ. ಆದುದರಿಂದ ಈಗ ನಾವು ಮೊದಲನೆಯ ಕ್ರಮ ಆಗಲೇ ಕೈಗೊಂಡಿರುವುದರಿಂದ ಈ ಎರಡನೆಯ ಕ್ರಮದಲ್ಲಿ ವಿವಾಹ ವಿಷಯಕ್ಕೆ ಸಂಬಂಧಿಸಿದಂತೆ ಅಲ್ಪ ಸ್ವಲ್ಪ ಬದಲಾವಣೆಗಿಂತ ಹೆಚ್ಚು ವಿರೋಧವಿಲ್ಲದೆ ಸದನ ಮಸೂದೆಯನ್ನು ಬೆಂಬಲಿಸಬಹುದೆಂದೇ ಹೇಳೀರುವೆ.

**ಡಾ॥ ಪಿ.ಕೆ.ಸೇನ್ :** ನನಗೆ ತಿಳಿದಂತೆ ಕೇವಲ ಪವಿತ್ರ ವಿವಾಹಕ್ಕೆ ಸಂಬಂಧಿಸಿದಂತೆ. ನನ್ನ ಅಭಿಪ್ರಾಯದಂತೆ ವಿವಾಹದ ಎಲ್ಲ ವಿಧಗಳು ಸ್ಪಷ್ಟ ಹಾಗೂ ನಿರ್ದಿಷ್ಟವಾಗಿರಬೇಕು. ಅದರ ಬಗೆಗೆ ಯಾವ ವಿಧವಾದ ಸಂದೇಹಗಳಿಗೂ ಅವಕಾಶವಿರಬಾರದು. ಏಕೆಂದರೆ ಈ ವಿಧೇಯಕದಲ್ಲಿ ಪವಿತ್ರ ವಿವಾಹ ಸಂಪ್ರದಾಯದಂತೆ ಜರುಗಿದಾಗಲೂ ಅದನ್ನು ನೊಂದಾಯಿಸಲೇ ಬೇಕೆಂದಿದೆ. ಇಲ್ಲದೇ ಹೋದರೆ ಅದು ಅಸಿಂಧುವೇ. ಒಂದು ವೇಳೆ ಸಂಪ್ರದಾಯಗಳೇ ಪ್ರಮುಖ ಎಂದಾದಾಗ ಆ ಸಂಪ್ರದಾಯಗಳಾವುವು ಎಂಬುದನ್ನು ಸ್ಪಷ್ಟಪಡಿಸಬೇಕು. ಉದಾಹರಣೆಗೆ ಸಪ್ತಪದಿ ಒಂದು ಪ್ರಮುಖ ಸಂಪ್ರದಾಯ. ಸಪ್ತಪದಿ ಮುಗಿಯದೇ ವಿವಾಹ ಸಂಪೂರ್ಣಗೊಳ್ಳದು. ಈ ಬಗೆಯ ವಿವಿಧ ಸಂಪ್ರದಾಯಗಳೇನೇ ಇರಲಿ ಅದರ ಬಗೆಗೆ ಆಕ್ಷೇಪಣೆಗಳೇನೇ ಇದ್ದರೂ ನೋಂದಣಿಯಿಂದ ವಿವಾಹ ಸಿಂಧುತ್ವವನ್ನು ಪಡೆಯುವುದು. ಇದು ಸಮರ್ಥನೀಯ. ಏಕೆಂದರೆ ವಿವಾಹ ಕೇವಲ ಈರ್ವರಿಗೆ ಸಂಬಂಧಿಸಿರದೆ ಮುಂದಿನ ಸಂತಾನಕ್ಕೆಲ್ಲಾ ಆಧಾರವಾಗಿದೆ. ಆಸ್ತಿ, ಪಾಲುದಾರಿಕೆ ಮುಂತಾದ ಅನೇಕ ಜಟಿಲ ಸಮಸ್ಯೆಗಳಿಗೆ ವಿವಾಹವೇ ಮೂಲಾಧಾರ. ಆದುದರಿಂದಲೇ ನಾವು ಈ ಬಗೆಗೆ ಕೂಲಂಕಷವಾಗಿ ವಿವೇಚಿಸಿ ನಿರ್ಣಯ ತೆಗೆದುಕೊಳ್ಳಬೇಕು. ಇಲ್ಲಿ ಸಂಪ್ರದಾಯಗಳ ಹಾಗೂ ಕಾನೂನಿನ ಎರಡೂ ಪ್ರಶ್ನೆಗಳು ಅಡಕವಾಗಿವೆ. ಆದುದರಿಂದ ಪವಿತ್ರ ವಿವಾಹದೊಡನೆ ನೋಂದಾಯಿಸುವುದು, ವಿವಾಹವನ್ನು ಕ್ರಮಬದ್ಧಗೊಳಿಸುತ್ತದೆ. ಆದರೆ ಈ ಬಗೆಗೆ ಸಾರ್ವಜನಿಕ

ಅಭಿಪ್ರಾಯವನ್ನು ಸಂಘಟಿಸಿದ್ದೇವೆಯೇ? ಈ ಪ್ರಶ್ನೆ ಹಲವಾರು ಬಾರಿ ಈ ಸದನದಲ್ಲಿ ಕೇಳಲಾಗಿದೆ. ಏಕೆ ಆತುರ? ಇನ್ನು ಒಂದೆರಡು ವರ್ಷ ಕಾಯುವುದರಲ್ಲಿ ಏನು ಅಭ್ಯಂತರವಿದೆ?

ನಾವು ಸಾಕಷ್ಟು ಕಾಲ ಕಾದಿರುವಾಗ ಇನ್ನು ಒಂದೆರಡು ವರ್ಷ ಕಾಯಲು ಏನೂ ತೊಂದರೆ ಇಲ್ಲ. ಹಿಂದೂ ಕೋಡ್ ಬಿಲ್ ರಚನೆಗೆ ಹನ್ನೊಂದು ವರ್ಷ ಹಿಡಿದಿರಬಹುದು. ಕಳೆದ ಎರಡು ವರ್ಷಗಳಿಂದ ಈ ವಿಧೇಯಕ ಚರ್ಚೆಯಾಗುತ್ತಲೇ ಬಂದಿರಬಹುದು. ಆದರೆ ಹಲವಾರು ಶತಮಾನಗಳಿಂದ ಬದಲಾವಣೆಗೆ ಚರ್ಚೆಯಾಗಿದೆ ಎಂಬುದನ್ನು ನಾವು ಮರೆಯಬಾರದು.

ಸದನಕ್ಕೆ ತಿಳಿದಂತೆ ೧೮೭೨ರಲ್ಲಿಯ ಆಕ್ಟ್ III ವಿಶೇಷ ವಿವಾಹದ ವಿಧೇಯಕವನ್ನು ೧೮೬೮ರಲ್ಲಿ ಹೆನ್ರಿ ಮೇನ್‌ರು, ಕೇಶವಚಂದ್ರಸೇನ್ ಅವರ ಪ್ರೋತ್ಸಾಹದಿಂದ ಮಂಡಿಸಿದ್ದರು. ಅದಕ್ಕೂ ಹಿಂದೆ ಅಂದರೆ ೫೦ರ ದಶಕದಲ್ಲಿ ವಿಧವಾ ವಿವಾಹ ಬಿಲ್ಲು ಸದನದ ಮುಂದೆ ಇತ್ತು. ಅದು ಸಮಾಜ ಸುಧಾರಕ ಈಶ್ವರಚಂದ್ರ ವಿದ್ಯಾಸಾಗರ ಅವರ ಬೆಂಬಲ ಹೊಂದಿತ್ತು. ಆಗ ಒಂದು ಅದ್ಭುತ ಸಂಗತಿ ನಡೆಯಿತು. ಅದೇನೆಂದರೆ ನಾಲ್ಕು ನೂರು ಮಂದಿ ಕಟ್ಟಾ ಸಂಪ್ರದಾಯಿಗಳು ಸಹಿ ಮೂಲಕ ಒಂದು ಮನವಿ ಸಲ್ಲಿಸಿ ಅವರು ಅಂತರಜಾತಿ ವಿವಾಹಕ್ಕೂ ತಮ್ಮ ಬೆಂಬಲ ಸೂಚಿಸಿದರು. ಅಲ್ಲದೆ ಏಕಪತ್ನಿ ವಿವಾಹ ಪದ್ಧತಿಯನ್ನು ಸಮರ್ಥಿಸಿದರು. ಇದು ಜರುಗಿದ್ದು ೧೮೫೬ರ ಆಸುಪಾಸಿನಲ್ಲಿ. ಇದನ್ನು ಬೆಂಬಲಿಸಿದವರಲ್ಲಿ ಪ್ರಮುಖವೆಂದರೆ ಹೀರಾಚಂದಮಿತ್ರ, ರಾಧಾನಾಥ ಸಿಖಧರ, ಅಭಯಚರಣ ಮಲ್ಲಿಕ್, ರನಿಶಕಿಷನ್ ಮಲ್ಲಿಕ್ ಅವರು. ಇವರಿಗೆ ಬ್ರಹ್ಮ ಸಮಾಜದ ಸಂಪರ್ಕ ಇರಲಿಲ್ಲ. ಅವರೆಲ್ಲರೂ ಸನಾತನ ಹಿಂದೂಗಳು. ಬ್ರಹ್ಮ ಸಮಾಜ ಈ ಹೊತ್ತಿಗಾಗಲೇ ಅಂತರಜಾತಿ ವಿವಾಹವನ್ನು ಎತ್ತಿ ಹಿಡಿದಿತ್ತು. ಅವರು ಕಾನೂನಿಗೆ ಲಕ್ಷ್ಯಕೊಡದೆ "ಸರಿಯಾದದ್ದು ಸರಿ" ಎಂದೇ ಬೆಂಬಲಿಸಿದರು. ಅವರು ಅದರ ಸಿಂಧುತ್ವದ ಬಗೆಗೆ ಕಾಳಜಿ ಮಾಡಲೇ ಇಲ್ಲ. ಮುಂದಿನ ಪೀಳಿಗೆಗೆ ಅನುಕೂಲವಾಗಲೆಂದೇ ಹೆನ್ರಿಮೇನ್ ಈ ವಿಧೇಯಕವನ್ನು ೧೮೭೨ರಲ್ಲಿ ಜಾರಿಗೆ ತಂದರು. ಈ ವಿಧೇಯಕವು ಕೇವಲ ಬ್ರಹ್ಮ ಸಮಾಜದ ಆಸಕ್ತಿಯನ್ನು ಮಾತ್ರ ಪೂರೈಸದೆ ಸಮಸ್ತ ಸಮಾಜದ ಆಶೋತ್ತರಗಳಿಗೆ ಸ್ಪಂದಿಸಿತ್ತು. ಹೀಗಾಗಿ ಅದನ್ನು ಸ್ವೀಕರಿಸಲಾಯಿತು. ಇದು ಅಂದಿನ ಅಲ್ಪಮತ ಅಥವಾ ಬಹುಮತ ಸಮಾಜದ ಸದಸ್ಯರ ಅಭಿಮತವೆಂದು ಹೇಳಲಾಗದು. ಆದರೆ ಇಂದಿನ ಆಧುನಿಕ ಪ್ರಜಾಸತ್ತಾತ್ಮಕ ಸಮಾಜವು ಸರಕಾರದಲ್ಲಿ ಬಿಂಬಿತಗೊಳ್ಳುವುದರಿಂದ ಸಮಾಜದಲ್ಲಿಯ ಅಲ್ಪಮತ ಹಾಗೂ ಬಹುಮತಗಳೇನೇ ಇದ್ದರೂ ಅವು ಸದನದಲ್ಲಿ ಪ್ರಕಟವಾಗಲೇಬೇಕು. ಹೀಗಿದ್ದಾಗ ಈ ಮಸೂದೆಯನ್ನು ಯಾರ ಮೇಲೆ ಹೇರಲಾಗಿದೆ? (ಬಾಬು ರಾಮಪ್ರಸಾದ್ ಸಿಂಗ್!: ಹೌದು). ಆದುದರಿಂದ ನಾವು ಮಸೂದೆಯ ಮೊದಲನೆಯ ಭಾಗದಲ್ಲಿ ಮದುವೆ, ವಿಚ್ಛೇದನ, ನ್ಯಾಯಾಂಗದಿಂದ ವಿಚ್ಛೇದನ, ಸ್ತ್ರೀಧನ, ಪಾಲನೆ, ಮಕ್ಕಳ ಜವಾಬ್ದಾರಿ– ಈ ವಿಷಯಗಳನ್ನು ಯಾರ ಮೇಲೆಯೂ ಹೇರಲಾಗಿದೆ ಎಂಬ ಭಾವನೆ ನನಗಿಲ್ಲ. ಏಕೆಂದರೆ ಈ ಎಲ್ಲಾ ಕಾರಣಗಳಿಗಾಗಿಯೇ ವಿವಾಹ ವಿಚ್ಛೇದನ ಅನಿವಾರ್ಯವಾಗಿದೆ. ಆದರೆ ಕೆಲವು ಪ್ರಕರಣಗಳಲ್ಲಿ ಇವು ಬೇಕಾಗದೆ ಇರಬಹುದು. ಆದರೆ ಮದುವೆಯ ಬಂಧನದಿಂದ ಈ ಸಮಸ್ಯೆಗಳು ಉದ್ಭವಿಸಿದ ಪ್ರಸಂಗಗಳಲ್ಲಿ ಇದು ಅನಿವಾರ್ಯವೆಂದೇ ಹೇಳಬಹುದು. ಇಲ್ಲದೇ ಹೋದಲ್ಲಿ ಅಪಾಯ ಒದಗಬಹುದು.

**ಶ್ರೀ ರೋಹಿಣಿ ಕುಮಾರ ಚೌಧರಿ :** ಇದರಿಂದ ಮುಂದೆ ಆಗುವ ವಿವಾಹಗಳೂ ಸಂತೋಷದಿಂದ ಕೂಡಿರುತ್ತವೆಯೆ? ಅವು ಇನ್ನೂ ಅಧ್ವಾನವಾಗಬಲ್ಲವು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದ್ರಾಸು.ಸಾ) : ಅದು ನೀವು ಮದುವೆಯಾಗುವ ಸ್ತ್ರೀಯನ್ನು ಅವಲಂಬಿಸಿದೆ.

**ಡಾ॥ ಪಿ.ಕೆ. ಸೇನ್ :** ಆ ಪ್ರಶ್ನೆಗೆ ನಾನು ಹೋಗಲಾರೆ. ಅದು ಅಂಕಿ ಸಂಖ್ಯೆಗಳ ಪ್ರಕರಣ. ಏಕೆಂದರೆ ಎಷ್ಟು ಸುಖದಾಯಕ, ಎಷ್ಟು ಕಷ್ಟದಾಯಕ ಎಂಬುದು ಪ್ರಶ್ನೆ ಅಲ್ಲ. ಅದನ್ನು ಹೇಗೆ ನಿವಾರಿಸಬಹುದು ಎಂಬುದನ್ನು ಯೋಚಿಸಬೇಕು. ಈ ಹಿನ್ನೆಲೆಯಲ್ಲಿ ವಿಚ್ಛೇದನವೇ ಬೇಡ ಎಂಬುದು ಸರಿಯೇ? ಆದುದರಿಂದ ನಾವೆಲ್ಲರೂ ಸೇರಿ ಚರ್ಚಿಸಿ ಒಂದು ಸೂಕ್ತ ನಿರ್ಣಯಕ್ಕೆ ಬರಬೇಕು. ಇದು ಐಚ್ಛಿಕವೇ ಹೊರತು ಕಡ್ಡಾಯವಲ್ಲ. ನಮ್ಮಿಂದ ಸಾಧ್ಯವಾಗದಿದ್ದಲ್ಲಿ ನ್ಯಾಯಾಲಯವು ಇದ್ದೇ ಇದೆ. ಇದು ಜನತೆಯನ್ನು ಅವಲಂಬಿಸಿದೆ. ಏಕೆಂದರೆ ಅಮೆರಿಕ, ಇಂಗ್ಲೆಂಡ್ ಹಾಗೂ ಇತರ ದೇಶಗಳು ಈ ವಿಧಾನವನ್ನೇ ಅನುಸರಿಸಿವೆ. ಅದರಂತೆಯೇ ಭಾರತವೂ ಮಾಡಬಹುದು. (ಪಂ.ಲಕ್ಷ್ಮಿಕಾಂತ ಮೈತ್ರಾ : ಒಂದೇ ಸಂಘಟನೆಯೇ?) ಆದರೆ ಭಾರತದಲ್ಲಿ ಅದೇ ಪರಿಣಾಮ ದೊರೆಯಬಲ್ಲದೆ? ಸಂದೇಹವಿದೆ.

**ಪ. ಲಕ್ಷ್ಮಿಕಾಂತ ಮೈತ್ರಾ :** ದುಷ್ಪರಿಣಾಮ.

**ಓರ್ವ ಸದಸ್ಯ :** ಈಗ ಭೋಜನಕ್ಕೆ ಸಮಯವಾಗಿದೆ.

**ಉಪಾಧ್ಯಕ್ಷರು :** ಮಾನ್ಯ ಸದಸ್ಯರು ಶೀಘ್ರ ಮುಗಿಸುವರು.

**ಡಾ॥ ಪಿ.ಕೆ. ಸೇನ್ :** ನಾನು ಆದಷ್ಟು ಬೇಗನೆ ಮುಗಿಸುವೆ. ಆದರೆ ನಾನು ಆರಂಭಿಸಿದ್ದು ಈಗ ತಾನೆ?

ಭೋಜನ ವಿರಾಮಕ್ಕೆ ಸದನವನ್ನು ಮುಂದೂಡಲಾಯಿತು. ೨.೩೦ ರವರೆಗೆ

ಭೋಜನ ವಿರಾಮದ ನಂತರ ಸಭೆ ೨.೩೦ಕ್ಕೆ ಸೇರಿತು. ಉಪಾಧ್ಯಕ್ಷರಾದ ಶ್ರೀ ಅನಂತಶಯನಂ ಅಯ್ಯಂಗಾರರು ಪೀಠದಲ್ಲಿದ್ದರು.

**ಡಾ॥ ಪಿ.ಕೆ. ಸೇನ್ :** ಸರ್, ಸದನ ಭೋಜನ ವಿರಾಮಕ್ಕೆ ಹೋದಾಗ ನಾನು ವಿಚ್ಛೇದನ ಮುಂತಾದ ವಿಷಯಗಳನ್ನು ಪ್ರಸ್ತಾಪಿಸುತ್ತಿದ್ದೆ. ಆಗ ನನಗೆ, ಬೇರೆ ದೇಶಗಳಲ್ಲಿ ಏಕೆ ಹೆಚ್ಚು ವಿಚ್ಛೇದನಗಳು ಜರುಗುತ್ತವೆ ಎಂದು ಕೇಳಲಾಯಿತು.

**ಡಾ॥ ಮಹಾವೀರ ತ್ಯಾಗಿ** (ಯು.ಪಿ.ಸಾ) : ಅಪ್ಪಣೆಯ ಮೇರೆಗೆ ಸರಕಾರದ ಸಾಲಿನಲ್ಲಿ ಕೇವಲ ಸಾರಿಗೆ ಮತ್ತು ರೈಲ್ವೆ ರಾಜ್ಯ ಮಂತ್ರಿ ಕೆ. ಸಂತಾನಂ ಒಬ್ಬರೇ ಕುಳಿತಿದ್ದಾರೆ. ದಯಮಾಡಿ ಕಾನೂನು ಮಂತ್ರಿಯವರನ್ನು ಸದನಕ್ಕೆ ಬರುವಂತೆ ಮಾಡುವಿರಾ?

**ಉಪಾಧ್ಯಕ್ಷರು :** ನನಗೆ ತಿಳಿದಂತೆ ಶೀಘ್ರದಲ್ಲಿಯೇ ಅವರು ಬರಲಿದ್ದಾರೆ. ಅಲ್ಲಿಯವರೆಗೆ ಬೇರೆ ಮಂತ್ರಿಯು ಟಿಪ್ಪಣಿ ಮಾಡುತ್ತಾರೆ.

**ಅಜಿತ ಪ್ರಸಾದ ಜೈನ್** (ಯು.ಪಿ.ಸಾ) : ಇದು ಸದನಕ್ಕೆ ಅಗೌರವ.

**ಉಪಾಧ್ಯಕ್ಷರು :** ನನ್ನ ಅಪ್ಪಣೆ ಕೋರಿ ೩೬ ಸದಸ್ಯರ ಚೀಟಿಗಳು ನನ್ನ ಬಳಿ ಇವೆ.

**ಶ್ರೀ ಎಂ. ತಿರುಮಲರಾವ್** (ಮದ್ರಾಸ್) : ಕೆಲವರು ನಮ್ಮ ಹೆಸರುಗಳನ್ನೇ ಕಳಿಸಿಲ್ಲ. ಅವರ ಚೀಟಿಗಳು ನಮ್ಮಲ್ಲಿ ಬಿದ್ದಿವೆ.

**ಡಾ॥ ಮಹಾವೀರ ತ್ಯಾಗಿ :** ಆದರೆ ಚೀಟಿ ಕಳಿಸದಿರುವ ಅನೇಕ ಸದಸ್ಯರು ತಮ್ಮ ಕೃಪಾದೃಷ್ಟಿಗಾಗಿಯೇ ಕಾಯುತ್ತಿದ್ದಾರೆ.

**ಉಪಾಧ್ಯಕ್ಷರು :** ಹಾಗಾದರೆ, ಈ ೩೬ ಸದಸ್ಯರಲ್ಲದೇ ಇನ್ನೂ ಅನೇಕರು ಮಾತನಾಡಲು ಬಯಸಿದ್ದಾರೆ ಎಂದಂತಾಯಿತು. ಆದರೆ ಸರಕಾರವು ಕೇವಲ ನಿನ್ನೆ ಮತ್ತು ಈ ದಿನವನ್ನು ಮಾತ್ರ ಈ ಚರ್ಚೆಗೆ ನಿಗದಿಪಡಿಸಿದೆ. ನನಗೆ ಸರಕಾರದ ಕಾರ್ಯದ ಬಗೆಗೆ ತಿಳಿಯದು. ಆದರೆ ನಾನು ಚರ್ಚೆಯನ್ನು ಮೊಟಕುಗೊಳಿಸಲಾರೆ. ಆದರೆ ಈ ಸ್ಥಿತಿಯಲ್ಲಿ ನಾವು ಮುಂದುವರಿಯುವುದು ನನಗೆ ಸಂದೇಹಾಸ್ಪದ.

ಆದುದರಿಂದ ಸದಸ್ಯರು ತಮಗೆ ನೀಡಿದ ಅವಧಿಯಲ್ಲಿಯೇ ಮಾತನಾಡಬೇಕು.

**ಓರ್ವ ಸದಸ್ಯ :** ಅದು ಸಾಧ್ಯವಿಲ್ಲ. ತಾವು ಸರಕಾರಕ್ಕೆ ಸಮಯ ವಿಸ್ತರಿಸುವಂತೆ ಸಲಹೆ ಮಾಡಿ.

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ.ಬಿರಾರ) : ಯಾರು ಕೇವಲ ಐದು–ಹತ್ತು ನಿಮಿಷಗಳಲ್ಲಿಯೇ ಹೇಳಿಕೆಯನ್ನು ಮುಗಿಸುವರೋ ಅವರಿಗೆ ಮೊದಲು ಅವಕಾಶ ನೀಡಿ. ನನಗೆ ತಿಳಿದಂತೆ ಅಂತಹವರು ಅನೇಕರಿದ್ದಾರೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಅವರು ತಾವು ಹೇಳಿದ್ದನ್ನು ಪಾಲಿಸುವರೇ?

**ಶ್ರೀ ಆರ್. ಕೆ. ಸಿಧ್ವಾ :** ನಾನು ಅದರ ಬಗ್ಗೆ ಭರವಸೆ ನೀಡುವೆ.

**ಶ್ರೀ ಬಿಸ್ವನಾಥ ದಾಸ್** (ಒರಿಸ್ಸಾ ಸಾಮಾನ್ಯ) : ಉಪಾಧ್ಯಕ್ಷರೇ, ಅಧ್ಯಕ್ಷರು ಈ ಬಗೆಗೆ ಸಂಪೂರ್ಣ ಚರ್ಚೆಗೆ ಅವಕಾಶ ನೀಡುವುದಾಗಿ ಹೇಳಿದ್ದರು. ಆದರೆ ತಾವು ಕೇವಲ ಹತ್ತು ನಿಮಿಷ ಎಂದರೆ ಈ ಅತಿ ಮಹತ್ವದ ವಿಷಯದ ಬಗೆಗೆ ಚರ್ಚೆಯಾಗದೆ ಹೋದರೆ ಅದು ದುರದೃಷ್ಟಕರ. ಏಕೆಂದರೆ ಇದು ಸಾಮಾನ್ಯ ಮಸೂದೆಯಲ್ಲ. ಇದು ಸಾಮಾಜಿಕ ಹಾಗೂ ಆರ್ಥಿಕ ಜೀವನದ ಮೇಲೆ ಅಗಾಧ ಪರಿಣಾಮ ಬೀರುವುದು. ಆದುದರಿಂದ ತಾವು ಈ ದಿಶೆಯಲ್ಲಿ ಅಧ್ಯಕ್ಷರು ನೀಡಿದ ಭರವಸೆಯಂತೆ ನಡೆಯಿರಿ, ಏಕೆಂದರೆ ಇದು ಜನಕೋಟಿಯ ಪ್ರಶ್ನೆಯಾಗಿದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಅವರು ಈಗ ಅಧ್ಯಕ್ಷ ಸ್ಥಾನದಲ್ಲಿದ್ದಾರೆ. ಅವರೇ ನಿರ್ಣಯಿಸಲಿ.

**ಉಪಾಧ್ಯಕ್ಷರು :** ಅಧ್ಯಕ್ಷರೇ ಸ್ಥಾನದಲ್ಲಿರದಿರುವುದು ಶೋಚನೀಯ. ನಾನು ಚರ್ಚೆಯನ್ನು ಮೊಟಕುಗೊಳಿಸುವ ಉದ್ದೇಶ ಹೊಂದಿಲ್ಲ. ಆದರೆ ಸಮಯದ ಅಭಾವದಿಂದ ಅದನ್ನು ನಿಗದಿ ಪಡಿಸಲು ಯತ್ನ ಮಾಡಿದೆ. ನಾನು ಈ ವಿಷಯವನ್ನು ಸದನದ ಸದಸ್ಯರ ಸದ್ವಿವೇಕಕ್ಕೆ ಬಿಡುವೆ. ಹದಿನೈದು ನಿಮಿಷ ಎಂದರೆ ಒಂದು ನಿಮಿಷ ಆಚೆ ಈಚೆ ಎಂದು ಭಾವಿಸಿರಿ. ನನಗೆ ಸರಕಾರ ಅವಧಿಯನ್ನು ವಿಸ್ತರಿಸುವ ಬಗೆಗೆ ಸಂಶಯ. ಆದರೆ ಸದಸ್ಯರ ಚರ್ಚೆಯ ಬಗೆಗೆ ಎಲ್ಲರಿಗೂ ಆಸ್ಪದ ದೊರೆಯಬೇಕು.

**ಶ್ರೀ ಪಂಡಿತ ಬಾಲಕೃಷ್ಣ ಶರ್ಮ** (ಯು.ಪಿ.ಸಾ) : ಹಾಗಾದರೆ ಮುಂದಿನ ಅಧಿವೇಶನದಲ್ಲಿ ಅವಕಾಶ ನೀಡಿ.

**ಉಪಾಧ್ಯಕ್ಷರು :** ಅದು ನನ್ನ ಕೈಯಲ್ಲಿ ಇಲ್ಲ.

**ಎಸ್. ನಾಗಪ್ಪ :** ಒಂದೆರಡು ಗಂಟೆಗಳ ಹೆಚ್ಚು ಅವಧಿಯವರೆಗೆ ನಾವು ಕಲಾಪ ನಡೆಸಬಹುದಲ್ಲವೇ?

**ಉಪಾಧ್ಯಕ್ಷರು :** ಸದ್ಯ ಹದಿನೈದು ನಿಮಿಷ ಅವಧಿಯಲ್ಲಿ ಮುಗಿಸುವವರು ಮಾತನಾಡಲಿ. ಬೇರೆಯವರು ತಮಗೆ ಅವಶ್ಯಕವೆನಿಸಿದ ಅವಧಿ ಪಡೆಯಲಿ.

**ಶ್ರೀ ಎಂ. ತಿರುಮಲರಾವ್ :** ತಮಗೆ ಪುನರುಕ್ತಿ ಎಂದು ಕಂಡುಬಂದಲ್ಲಿ ತಾವು ಸದಸ್ಯರಿಗೆ ಸೂಚಿಸಿರಿ.

**ಉಪಾಧ್ಯಕ್ಷರು :** ಸರಿ ಡಾ॥ ಸೇನ್.

**ಶ್ರೀ ಹೆಚ್.ಜೆ. ಖಾಡೇಕರ್** (ಸಿ.ಪಿ.–ಬಿರಾರ್) : ಕೇವಲ ೨೧/೨ ಗಂಟೆ ಉಳಿದಿದ್ದು, ಅನೇಕರು ಚರ್ಚೆಯಲ್ಲಿ ಭಾಗವಹಿಸಬೇಕೆಂದಿದ್ದಾರೆ. ಇದು ಸಾಮಾನ್ಯ ವಿಷಯವಲ್ಲ. ಅತಿ ಮಹತ್ವವಾದದ್ದು. ಚರ್ಚೆಯಾಗದೆ ಅಂಗೀಕರಿಸುವಂತಿಲ್ಲ. ಆದುದರಿಂದ ಸರಕಾರದವರಿಗೆ ತಿಳಿಸಿ ಎರಡೂ ಮೂರು ದಿನಗಳ ಅವಧಿ ಪಡೆಯಿರಿ.

**ಉಪಾಧ್ಯಕ್ಷರು :** ತಮ್ಮ ಸಲಹೆಗಳನ್ನು ಸರಕಾರದ ಗಮನಕ್ಕೆ ತರುವೆ. ಡಾ॥ ಸೇನ್ ಮುಂದುವರಿಯಲಿ.

**ಡಾ॥ ಪಿ.ಕೆ. ಸೇನ್ :** ಮಾತು ಸಂಕ್ಷಿಪ್ತವಾಗಿರಬೇಕು ಎಂಬುದು ಸರಿ. ಆದರೆ ಕೆಲವು ಬಾರಿ ಸಂಕ್ಷಿಪ್ತವು ಮಾರಕವಾಗಲೂಬಹುದು. ತಾವು ಹೇಳಿದಂತೆ ಸಂಕ್ಷಿಪ್ತಾವಧಿಯಲ್ಲಿ ನಾನು ಏನೂ ಹೇಳಲಾರೆ. ಅದು

ಸದನಕ್ಕೆ ಉಪಯುಕ್ತವೂ ಆಗದು. ಆದುದರಿಂದ ನಾನು ವಿಧೇಯಕದ ಪ್ರಮುಖ ಅಂಶಗಳ ಬಗೆಗೆ ಮಾತ್ರ ಮಾತನಾಡುವೆ. ನಾನು ಸದನದಲ್ಲಿ ವಿವಾಹ ವಿಚ್ಛೇದನಕ್ಕೆ ಆಸ್ಪದ ನೀಡಿದಲ್ಲಿ, ಬೇರೆ ದೇಶಗಳಲ್ಲಿಯಂತೆ ನಮ್ಮಲ್ಲಿಯೂ ಅವು ಹೆಚ್ಚಬಹುದೆ? ಎಂದು ಕೇಳಿದ್ದೆ. ಆದರೆ ನನಗೆ ತಿಳಿದಂತೆ ನಮ್ಮ ದೇಶದ ಪರಿಸ್ಥಿತಿಯು ವಿಭಿನ್ನವಾಗಿದೆ. ಏಕೆಂದರೆ ಬಡೋದ ಹಾಗೂ ದಕ್ಷಿಣ ಭಾರತದಲ್ಲಿ ಈ ಪದ್ಧತಿಯು ಜಾರಿಗೆ ಬಂದು ಅನೇಕ ವರ್ಷಗಳಾದರೂ ಅಲ್ಲಿ ವಿಚ್ಛೇದನದ ಪ್ರಕರಣಗಳು ಅತಿ ಕಡಿಮೆ. ಅಂದರೆ ಇದು ನಮ್ಮ ಜನತೆಯ ಮನೋಭಾವನೆಯನ್ನು ಎತ್ತಿ ತೋರಿಸುತ್ತದೆ. ಬಡೋದೆಯಲ್ಲಿ ಕೇವಲ ಮೂರೇ ಮಾತಿನ. ಪ್ರಕರಣಗಳು ಎಂದರೆ, ನಮ್ಮಲ್ಲಿಯ ಸಾಮಾಜಿಕ ಪರಿಸ್ಥಿತಿಯ ಅರಿವು ನಮಗಾಗಬಹುದು. ೧೮೭೨ ರಿಂದಲೇ ಜಾರಿಗೊಂಡಿರುವ ಈ ವಿಧಾನವು ಕೇವಲ ಹಿಂದೂ ಕೋಡಿನಿಂದ ಮೊದಲ ಬಾರಿಗೆ ಜಾರಿಗೊಂಡಿದೆ ಎಂದು ಭಾವಿಸಬಾರದು. ಇದು ಕಳೆದ ಶತಮಾನದ ೫೦ರ ದಶಕದಲ್ಲಿಯೇ ಜಾರಿಗೊಂಡಿದೆ.

ಈ ಹೋರಾಟ, ಜಾತಿ ನಿರ್ಮೂಲನೆಗೆ ನಡೆದ ಹೋರಾಟ; ಅದನ್ನು ಆರಂಭಿಸಿದವರು ಬ್ರಹ್ಮ ಸಮಾಜದ ಕೇಶವಚಂದ್ರ ಸೇನ್. ಇದರಿಂದಾಗಿ ಬ್ರಹ್ಮ ಸಮಾಜದವರು ತುಂಬಾ ಕಷ್ಟನಷ್ಟಗಳನ್ನೂ ಬಹಿಷ್ಕಾರಗಳನ್ನೂ ಎದುರಿಸಬೇಕಾಯಿತು. ಈಗ ನಾವು ಜಾತಿ ಹೋಗಲೇ ಬೇಕೆಂಬುದನ್ನು ಮನಗಂಡಿದ್ದೇವೆ. ಆದುದರಿಂದ ಈ ವಿಧೇಯಕದಲ್ಲಿ ವಿವಾಹಕ್ಕೆಂದೇ ಸೂಚಿಸಲಾದ ಅಂಶಗಳನ್ನು ಯಾರೂ ವಿರೋಧಿಸುವ ಹಾಗೆ ಇಲ್ಲ. ಅದು ಬಹುಮತ ಅಲ್ಪಮತದ ಪ್ರಶ್ನೆಯಲ್ಲ. ನಾವು ನಮ್ಮ ಸಂವಿಧಾನದಲ್ಲಿ ಸೂಚಿಸಿದ ಸಮಾನತೆಯದಾಗಿದೆ. ಜಾತಿ ಹೋಗಲೇಬೇಕು. ಆದುದರಿಂದ ಅಂತರ್‌ಜಾತಿ ವಿವಾಹದ ಬಗೆಗೆ ತಕರಾರು ಬೇಡ. ಇದೇ ಅಭಿಪ್ರಾಯ ಏಕಪತ್ನಿ ವ್ಯವಸ್ಥೆಗೆ ಅನ್ವಯಿಸುತ್ತದೆ. ಏಕೆಂದರೆ ಇಂದು ಯಾರೂ ಬಹುಪತ್ನಿ ಅಥವಾ ಪತಿಯ ವ್ಯವಸ್ಥೆಗೆ ಬೆಂಬಲ ನೀಡುವುದಿಲ್ಲ. ಆದುದರಿಂದ ಈ ಬಗೆಗೆ ಈ ವಿಧೇಯಕದಲ್ಲಿಯ ಅಂಶಗಳಿಗೆ ಯಾರೂ ವಿರೋಧಿಸುವಂತಿಲ್ಲ. ಆದರೆ ವಿಶಿಷ್ಟ ಪರಿಸ್ಥಿತಿಯಲ್ಲಿ ವಿಚ್ಛೇದನ ಅನಿವಾರ್ಯ.

ಅಲ್ಲಿಂದ ಮುಂದಿನ ವಿಷಯ ಎಂದರೆ ಶಾಸ್ತ್ರೋಕ್ತ ವಿವಾಹವನ್ನು ಅನುಸರಿಸುವ ಬಗ್ಗೆ. ಇದರ ಬಗೆಗೆ ದೀರ್ಘ ಚರ್ಚೆಯಾಗಿದೆ. ಆದರೆ ಶಾಸ್ತ್ರೋಕ್ತ ವಿವಾಹ ಎಂದರೇನು? ಏಕೆಂದರೆ ವಾಸ್ತವಿಕದಲ್ಲಿ ಬದಲಾವಣೆಗೆ ಶಾಸ್ತ್ರಗಳಲ್ಲಿ ವಿಪುಲ ಅವಕಾಶ ಒದಗಿದೆ; ಆದುದರಿಂದಲೇ ನಮ್ಮಲ್ಲಿ ಅನೇಕ ಸ್ಮೃತಿಗಳು ಜಾರಿಯಲ್ಲಿವೆ. ಮನುಸ್ಮೃತಿಯಲ್ಲಿ ನಾಲ್ಕು ವಿಷಯಗಳನ್ನು ಇದರ ಬಗೆಗೆ ಸೂಚಿಸಿದೆ. ಅವು ಅಂದಿನ ಜನತೆಯ ಹಾಗೂ ಸಾಮಾಜಿಕ ಮನೋಭಾವನೆ, ಆಚಾರ ವಿಚಾರಗಳನ್ನು ಎತ್ತಿತೋರಿಸುತ್ತದೆ. ಅದೇ ಆಚಾರವಿಚಾರಗಳೇ ನಮ್ಮ ಧರ್ಮದ ತಿರುಳು. ಮಾನ್ಯ ಮಿತ್ರರಾದ ಅಂಬೇಡ್ಕರರು ತಮ್ಮ ಭಾಷಣದಲ್ಲಿ ಹೇಳಿದಂತೆ ಪರಾಶರ ಹಾಗೂ ನಾರದ ಸ್ಮೃತಿಗಳಲ್ಲಿ ವಿಧವಾ ವಿವಾಹದ ಬಗೆಗೆ ಸೂಚಿಸಲಾಗಿದೆ. ಅವರು ಈ ನಿರ್ಧಾರಕ್ಕೆ ಹೇಗೆ ಬಂದರು. ಶಾಸ್ತ್ರಗಳನ್ನು ಮೀರಿದರೇ? ಇಲ್ಲ. ಹೀಗೆಂದಾಗ ಶಾಸ್ತ್ರ ಎಂದರೆ ನಿಂತ ನೀರಲ್ಲ ಹರಿಯುವ ಜಲ–ಅಂದರೆ ಕಾಲ ಕಾಲಕ್ಕೆ ಸಾಮಾಜಿಕ ಭಾವನೆಗಳಿಗೆ ಸ್ಪಂದಿಸುವ ನಿರಂತರ ಕ್ರಮ. ಆದುದರಿಂದ ಯಾರೂ ಸದನದ ಮುಂದೆ ಬಂದಿರುವ ವಿಧೇಯಕವನ್ನು ಅಶಾಸ್ತ್ರೀಯವೆಂದು ಭಾವಿಸದೆ ಸಮ್ಮತಿ ನೀಡುವರೆಂದೇ ನಾನು ಭಾವಿಸುವೆ.

ಮುಂದಿನ ಕೆಲವು ಮೂಲ ವಿಷಯದ ಬಗೆಗೆ ಬಂದಿರುವ ವಿರೋಧ ಎಂದರೆ ಆಸ್ತಿಯ ಬಗ್ಗೆ. ಅದು ಮಿತಾಕ್ಷರ ಹಾಗೂ ದಾಯಭಾಗ ವಿಧಾನಗಳನ್ನು ಕುರಿತು. ಈ ಸಂದರ್ಭದಲ್ಲಿ ಇದರ ಬಗೆಗೆ ನಾವು ಗಂಭೀರವಾಗಿ ಯೋಚಿಸಬಹುದೇ? ಏಕೆಂದರೆ ಅವಿಭಕ್ತ ಕುಟುಂಬ ಒಂದು ಕಾಲದಲ್ಲಿ ಹಲವಾರು ಉತ್ತಮ ಅಂಶಗಳಿಂದ ಕೂಡಿತ್ತು. ಅದನ್ನು ಯಾರೂ ಅಲ್ಲಗಳೆಯಲಾರರು. ಆದರೆ ನನ್ನ ಭಾವನೆಯಂತೆ

ಈಚಿನ ದಿನಗಳಲ್ಲಿ ಅದು ಸರ್ವಾಧಿಕಾರದ ಮನೋಭಾವನೆಯಿಂದಾಗಿ ಅನೇಕರು ಅದರ ಬಗೆಗೆ ಜುಗುಪ್ಸೆ ಹೊಂದಿದ್ದಾರೆ. ಏಕೆಂದರೆ ದುಡಿಯುವ ಸದಸ್ಯರ ಗಳಿಕೆಯನ್ನು, ಇತರ ಸದಸ್ಯರು ಹೀರಿ ಹಿಂಡುತ್ತಿದ್ದಾರೆ. ಅಲ್ಲದೆ ಕುಟುಂಬದ ಹಲವು ಸದಸ್ಯರು ಹೊರಗಡೆ ಹೋಗಿ ಉದ್ಯೋಗವನ್ನೇ ಮಾಡುತ್ತಿಲ್ಲ. ಇದರಿಂದಾಗಿ ಕುಟುಂಬದಲ್ಲಿ ಕಲಹಕ್ಕೆ ಆಸ್ಪದ ದೊರಕಿದೆ. ಇದು ದುಂದುವೆಚ್ಚ, ಆಲಸ್ಯ, –ಹಲವಾರು ವಿವಾದಗಳ ಗೂಡಾಗಿದೆ.

**ಡಾ॥ ಪಿ.ಎಸ್. ದೇಶಮುಖ್** (ಸಿ.ಪಿ. ಬಿರಾರ್) : ಸರ್ ಅವರೇನಾದರೂ ದೂರು ಸಲ್ಲಿಸಿರುವರೇ?

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಹೌದು, ಇಂಥ ಸಂದರ್ಭದಲ್ಲಿ ದೂರುಗಳಿರುವುದು ಸಹಜವೇ.

**ಡಾ॥ ಪಿ.ಕೆ. ಸೇನ್ :** ಅವರ ದೂರುಗಳನ್ನು ಕೇಳಬಹುದು. ಆದರೆ ಕುಟುಂಬದ ಇತರ ಸದಸ್ಯರು ಅವಕಾಶ ನೀಡಿದರಲ್ಲವೇ? ಆದರೆ ಈಗ ಅದನ್ನು ಕೇಳುವ ಅವಕಾಶವನ್ನು ಈ ವಿಧೇಯಕದಲ್ಲಿ ನೀಡಲಾಗಿದೆ. ಅದೇ ಭಾಗ ಕೇಳುವ ಅಧಿಕಾರ. ಆದರೆ ಅದರ ಸ್ಥಿತಿ ಏನು? ಕುಟುಂಬ ಎಷ್ಟೇ ಸಮಗ್ರವಾಗಿದ್ದರೂ, ಅದರ ಯಾವ ಸದಸ್ಯನೂ ತನಗೆ ಬೇಕೆಂದಾಗ ಭಾಗ ಬೇಡಿ ಕುಟುಂಬದಿಂದ ಹೊರಬೀಳಬಹುದು. ಪರಿಸ್ಥಿತಿ ಹೀಗಿರುವಾಗ ಮಿತಾಕ್ಷರ ವಿಧಾನದ ಕುಟುಂಬವೇನು ಮಾಡಬಲ್ಲದು? ಆದುದರಿಂದ ನ್ಯಾಯಾಂಗ ನಿರ್ಣಯಗಳು ಈ ದಿಶೆಯಲ್ಲಿ ಹೊರಹೊಮ್ಮಿವೆ ಹಾಗೂ ಕುಟುಂಬದ ಯಾವುದೇ ಸದಸ್ಯ ಹೊರವೇಳಬೇಕೆಂದಿದ್ದರೆ ಅದಕ್ಕಾಗಿ ಯಾವ ಅಡಚಣೆಯೂ ಇರಕೂಡದು ಎಂದೇ ಹೇಳಿವೆ. ಈ ಪರಿಸ್ಥಿತಿಯಲ್ಲಿ ಅವಿಭಕ್ತ ಕುಟುಂಬ ಇನ್ನೂ ದೃಢವಾಗಿದೆಯೆಂದು ನಂಬಬೇಕೆ? ಜನರು ಇಂದು ವೈಯಕ್ತಿಕ ಸ್ವಾತಂತ್ರ್ಯವನ್ನೇ ಬಯಸುತ್ತಿದ್ದಾರೆ. ಅಲ್ಲದೆ ಪ್ರತಿಯೊಬ್ಬ ವ್ಯಕ್ತಿ ತಾನು ದುಡಿದು ತನ್ನದೇ ಆದ ವಿಧಾನದಲ್ಲಿ ಝೀವನ ನಡೆಸಬೇಕೆಂದು ಬಯಸುತ್ತಾನೆ ಹೊರತು, ಅವಿಭಕ್ತ ಕುಟುಂಬದಲ್ಲಿ ಇರಲು ಬಯಸಲಾರ. ಇಂದಿನ ಗುರಿ ವ್ಯಕ್ತಿ ಸ್ವಾತಂತ್ರ್ಯ. ಇದು ಇಂದಲ್ಲ ಅನೇಕ ದಿನಗಳಿಂದ ನಡೆದು ಬಂದ ಪರಿಪಾಟು, ವ್ಯಕ್ತಿ ಉದುರಿ ಹೋಗುವ, ಆದರೆ ರಾಜ್ಯ ರಾಜ್ಯವಾಗಿಯೇ ಬಲಿಷ್ಠಗೊಳ್ಳುತ್ತದೆ ಎಂಬ ಹೇಳಿಕೆ ಇದರಿಂದಲೇ ಬಂದಿರಬಹುದೇನೋ! ಸಮಾಜದಲ್ಲಿ ಈ ಬಗೆಯ ಒತ್ತಾಯ ಬಹು ಹಿಂದಿನಿಂದಲೂ ಬಂದಿದೆ. ಆದರೆ ಇಂದು ಯಾರೂ ಯಾವುದೇ ಬಗೆಯ, ಬಹುಮತ ಅಲ್ಪಮತಗಳದ್ದಾಗಿದ್ದರೂ, ಒತ್ತಾಯವನ್ನು ಸಹಿಸಲಾರರು. ಆದುದರಿಂದ ಇಂದು ವ್ಯಕ್ತಿಯು ಕುಟುಂಬದ ಆಗುಹೋಗುಗಳ ಬಗೆಗೆ ಲಕ್ಷ್ಯ ನೀಡದೇ ತನ್ನ ಇಷ್ಟದಂತೆಯೇ ಇರಬಯಸುತ್ತಾನೆ. ಹೀಗಾಗಿ ನಾನು ಈ ಸದನದ ಪ್ರತಿಯೊಬ್ಬ ಸದಸ್ಯರನ್ನು ಕೇಳುವುದೇನೆಂದರೆ ಆಧುನಿಕ ಹವ್ಯಾಸ ಹೀಗಿರುವಾಗ ನಾವು ಅದನ್ನು ತಿರಸ್ಕರಿಸಬಹುದೇ? ಹೀಗಾಗಿ ಅವಿಭಕ್ತ ಕುಟುಂಬ ತಾನೇ ತಾನಾಗಿ ಕುಸಿದು ಬೀಳುತ್ತಿರುವಾಗ ನಾವು ಅದನ್ನು ನಾಶ ಮಾಡುತ್ತೇವೆ ಎಂಬ ಪ್ರಶ್ನೆ ಎಲ್ಲಿದೆ? ಆದುದರಿಂದ ಮಿತಾಕ್ಷರ ಮತ್ತು ದಾಯಭಾಗಗಳ ವ್ಯತ್ಯಾಸದ ಪ್ರಶ್ನೆಯೇ ಇಲ್ಲ. ಅದೆಲ್ಲಾ ಹೊರಟುಹೋಗಿದೆ. ಈಗ ನಾವು ದುಂಡು ಮೇಜಿನ ಸುತ್ತ ಕುಳಿತವರಾಗಿದ್ದೇವೆ. ನಮ್ಮಲ್ಲಿರುವ ವ್ಯತ್ಯಾಸಗಳನ್ನು ಬಗೆಹರಿಸಿಕೊಂಡು ಸುಖಮಯ ಝೀವನ ನಡೆಸೋಣ. ಈ ದಿಶೆಯಲ್ಲಿ ನಮ್ಮ ಚರ್ಚೆ ನಡೆಯಲಿ ಎಂದೇ ಹಾರೈಸುವೆ.

ಸರ್, ಮಿಕ್ಕ ಅಗತ್ಯ ವಿವರಗಳಲ್ಲಿ ಭಿನ್ನಾಭಿಪ್ರಾಯ ಇರುವುದು ಮಗಳಿಗೆ ಆಸ್ತಿಯಲ್ಲಿ ಪಾಲು ನೀಡುವ ಬಗ್ಗೆ. ಕುಟುಂಬದ ಆಸ್ತಿ ವಿಭಜನೆಗೆ ಕುರಿತಂತೆ ಅನೇಕ ವಿಧಾನಗಳು ಈಗಾಗಲೇ ಜಾರಿಯಲ್ಲಿವೆ. ಆದರೆ ಮಗಳಿಗೆ ಆಸ್ತಿಯಲ್ಲಿ ಮಗನಂತೆ ಸಮಪಾಲು ನೀಡುವುದರ ಬಗೆಗೆ ಭಿನ್ನಾಭಿಪ್ರಾಯಗಳಿವೆ. ನಾನು ಹೇಳುವುದಿಷ್ಟೇ ನಾವು ನಮ್ಮ ಭಿನ್ನಾಭಿಪ್ರಾಯಗಳನ್ನು ಚರ್ಚೆಯ ಮೂಲಕ ಬಗೆ ಹರಿಸಿಕೊಳ್ಳಬಹುದಲ್ಲವೇ?

ಒಂದು ವೇಳೆ ಮಗಳಿಗೆ ಪಾಲನ್ನು ನೀಡಬಾರದೆಂದೇ ಅಭಿಪ್ರಾಯವಿದ್ದಲ್ಲಿ ಅದು ಶುದ್ಧ ಅಸೂಯೆಯ ಕ್ರಮ ಎಂದೇ ಹೇಳುವೆ. ನಾನಂತೂ ಅದರ ವಿರೋಧಿ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ:** ಅದೂ ಸರಿಯೇ. ಅದೇ ನಿಜ.

**ಡಾ॥ ಪಿ.ಕೆ. ಸೇನ್ :** ನಾವು ನಮ್ಮ ಸ್ತ್ರೀಯರನ್ನು ದೇವತೆಗಳಂತೆ ಗೌರವಿಸುತ್ತೇವೆ. ಆದರೆ ಅವರ ಆಸೆ ಆಕಾಂಕ್ಷೆಗಳಿಗೆ ನೆರವು ನೀಡುತ್ತಿದ್ದೇವೆಯೇ? ಸ್ಪಷ್ಟವಾಗಿ ನಮ್ಮನ್ನು ನಾವೇ ಕೇಳಿಕೊಳ್ಳೋಣ? ಪುರುಷರು ಸ್ತ್ರೀಯರ ಬಗೆಗೆ ನಿಜವಾದ ಕಾಳಜಿ ಹೊಂದಿದ್ದರೆ ಅವರಿಗೆ ಸಲ್ಲಬೇಕಾದ ಸ್ಥಾನವನ್ನು ಸಮಾಜದಲ್ಲಿ ನಾವು ನೀಡಿರುವೆವೆ? ಕೇವಲ ಕುಟುಂಬಕ್ಕೆ ಮಾತ್ರ ಅವರ ಸೇವೆ ಮೀಸಲಾದರೆ ಸ್ವತಂತ್ರ ಭಾರತದ ಸಮಾಜದಲ್ಲಿ ಸ್ತ್ರೀಯರ ಪಾತ್ರವೇನು? ಕುಟುಂಬವಲ್ಲದೆ ಇತರ ಅನೇಕ ಸಂಘ ಸಂಸ್ಥೆಗಳಲ್ಲಿಯೂ ಸ್ತ್ರೀಯರ ಪಾತ್ರವಿದೆ. ಆಧುನಿಕ ಮಹಿಳೆ ಕುಟುಂಬದ ದೇವತೆಯಾಗಿ ಸಮಾಜದ ಆಗುಹೋಗುಗಳಲ್ಲಿಯೂ ಪಾತ್ರವಹಿಸಲು ಬಯಸುತ್ತಿದ್ದಾಳೆ. ಆದುದರಿಂದ ಅವಳು ಕೇವಲ ಕುಟುಂಬದ ಸೊತ್ತಾಗಿರದೆ ಸಮಾಜಕ್ಕೂ ಅವಳ ಸೇವೆಯ ಮೇಲೆ ಅಧಿಕಾರವಿದೆ. ಇದಕ್ಕೆ ಅವಳಿಗೆ ಆರ್ಥಿಕ ಸ್ವಾತಂತ್ರ್ಯ ಲಭಿಸಬೇಕು. ಆದುದರಿಂದ ನಾವೆಲ್ಲರೂ ಸೇರಿ ನಮ್ಮಲ್ಲಿರಬಹುದಾದ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಂಡು ಮುಂದುವರಿಯೋಣ.

೩ ಗಂಟೆ.

ಒಂದು ವಿಷಯ ಸ್ಪಷ್ಟಪಡಿಸುವೆ, ನಾವು ಸ್ತ್ರೀಯರಿಗೆ ಆರ್ಥಿಕ ಸ್ವಾತಂತ್ರ್ಯ ನೀಡುವುದೇ ಆದರೆ ಆಸ್ತಿಯಲ್ಲಿ ಹಕ್ಕು ಏಕೆ ನಿರಾಕರಿಸಬೇಕು? ಮಗಳನ್ನು ಮನೆದೇವತೆ ಎಂದು ಕರೆದು ಅವಳನ್ನು ಪರಾವಲಂಬಿ ಸ್ಥಿತಿಯಲ್ಲೇಕೆ ಇಡಬೇಕು? ಈ ಎಲ್ಲಾ ವಿಷಯ ಹೇಳಬಹುದು. ಆದರೆ ನಾನು ಹೆಚ್ಚು ಸಮಯ ತೆಗೆದುಕೊಳ್ಳದೇ ನಮ್ಮಲ್ಲಿಯ ಚಿಕ್ಕಪುಟ್ಟ ಭಿನ್ನಾಭಿಪ್ರಾಯಗಳನ್ನು ಚರ್ಚೆಯ ಮೂಲಕ ಬಗೆ ಹರಿಸಿಕೊಂಡು ಈ ವಿಧೇಯಕದ ಮಾರ್ಗವನ್ನು ಸುಗಮಗೊಳಿಸೋಣ.

**ಶ್ರೀಮತಿ ಕಮಲಾ ಚೌಧರಿ** (ಯು.ಪಿ.ಸಾ) : (ಅವರ ಹಿಂದಿ ಭಾಷಣದ ಆಂಗ್ಲ ಅನುವಾದ)

ಸರ್, ನಾನು ಹಿಂದೂ ಕೋಡ್ ಬಿಲ್ಲಿನ ಬಗೆಗೆ ಮಾತನಾಡುವ ಮುನ್ನ ಡಾ॥ ಅಂಬೇಡ್ಕರರನ್ನು ಈ ಮಸೂದೆ ಮಂಡಿಸಿದ್ದಕ್ಕಾಗಿ ಅಭಿನಂದಿಸುವೆ. ನನ್ನ ಅಭಿಪ್ರಾಯದಲ್ಲಿ ಈ ಮಸೂದೆಯು ಇಂದಿನ ಸಮಯಕ್ಕೆ ಸೂಕ್ತವಾಗಿದೆ. ಇದು ಕಾಲಕ್ಕೆ ತಕ್ಕಂತೆ ಇದೆ ಹಾಗೂ ಇಂದಿನ ಆವಶ್ಯಕತೆಗಳನ್ನು ಪೂರೈಸುತ್ತದೆ. ಆದರೂ ಈ ವಿಧೇಯಕವನ್ನು ಹಲವಾರು ಕಾರಣಗಳಿಗಾಗಿ, ಸನಾತನ ಧರ್ಮದ ಹೆಸರಿನಲ್ಲಿ ಹಲವರು ಕೇವಲ ಪ್ರಚಾರಕ್ಕೋಸ್ಕರ ವಿರೋಧಿಸಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಈ ಮಸೂದೆಯು ಸ್ತ್ರೀಯರ ವಿಕಾಸಕ್ಕೆ ಅನೇಕ ಪರಿಹಾರೋಪಾಯಗಳಿಂದ ಕೂಡಿದೆ. ಇದಕ್ಕಾಗಿ ನಾವೆಲ್ಲ ನಮ್ಮ ಮುಂದಿನ ಸ್ತ್ರೀಜನಾಂಗದವರೆಲ್ಲಾ ಮಾನ್ಯ ಮಂತ್ರಿಗಳಿಗೆ ಋಣಿಯಾಗಿರುತ್ತೇವೆ.

ಈ ಮಸೂದೆಗೆ ವಿರೋಧವನ್ನು ಸೂಚಿಸಿದವರು ಹೇಳುವಂತೆ ಇದರಿಂದ ಧರ್ಮ ಹಾಗೂ ಸಂಸ್ಕೃತಿಗೆ ಚ್ಯುತಿ ಉಂಟಾಗುತ್ತದೆ. ಅದನ್ನು ನಾನು ಒಪ್ಪಲಾರೆ. ಏಕೆಂದರೆ ನಮ್ಮ ದೇಶದಲ್ಲಿ ಧರ್ಮದ ಹೆಸರಲ್ಲಿ ಏನೇ ಹೇಳಿದರೂ ಅದು ನಮ್ಮ ಜನರ ಹೃದಯ ಹಾಗೂ ಬುದ್ಧಿಗೆ ಬೇಗನೆ ಅರ್ಥವಾಗುತ್ತದೆ. ಇದು ನಮ್ಮ ಜನಾಂಗೀಯ ಮನೋಭಾವನೆ. ಈ ಧರ್ಮದ ಮನೋಭಾವನೆಯಿಂದಲ್ಲವೇ ನಾವು ಮಹಾತ್ಮರ ಹತ್ಯೆಯನ್ನು ಕಂಡದ್ದು. ಆದುದರಿಂದ ಅದೇ ಧಾರ್ಮಿಕ ಮನೋಭಾವನೆಯಿಂದಲೇ ಹಲವಾರು ವಿರೋಧಗಳ ಕೂಗನ್ನು ಕೇಳುತ್ತಿದ್ದೇವೆ. ಆದರೆ ಆ ವ್ಯಕ್ತಿಗಳು ಈ ಸದನದ ರಚನೆ, ಮತದಾನದ ಹಕ್ಕು, ಭಗಿನಿಯರ ಆತಂಕಗಳನ್ನು ಅರಿಯದೇ ಈ ವಿಧೇಯಕವನ್ನು ವಿರೋಧಿಸಿರುವುದಲ್ಲದೆ, ಮಹಿಳೆಯರು

ಈ ವಿಧೇಯಕದ ವಿರೋಧವಿದ್ದಾರೆ ಎಂದೇ ಅಪಪ್ರಚಾರ ಮಾಡುತ್ತಿದ್ದಾರೆ. ಆದರೆ ನಾನು ಕಂಡಂತೆ ಈ ವಿಧೇಯಕದಲ್ಲಿ ಧರ್ಮ ಹಾಗೂ ಸಂಸ್ಕೃತಿಗೆ ವಿರೋಧವಾದ ಅಂಶಗಳೇನೂ ಇಲ್ಲ.

ಈ ವಿಧೇಯಕದಲ್ಲಿ ಬಹುಪತ್ನಿ ವಿವಾಹ ವ್ಯವಸ್ಥೆಗೆ ಅವಕಾಶ ನಿರಾಕರಿಸಲಾಗಿದೆ. ಅದನ್ನು ಕೆಲವು ಹಿಂದೂ ಮನೋಭಾವನೆಯುಳ್ಳವರು ವಿರೋಧಿಸಲೂಬಹುದು. ನನ್ನ ಮನಸ್ಸಿಗೆ ತೋರಿದಂತೆ ನಮ್ಮ ಹಲವು ಸಹೋದರರು ಈ ವಿಧವಾದ ನಿರ್ಬಂಧವನ್ನು ಅಂಗೀಕರಿಸದೆ ಇರಬಹುದು. ಆದರೆ ನನಗೆ ತಿಳಿದಂತೆ ಬಹು ಪತ್ನಿ ವಿವಾಹವನ್ನು ನಮ್ಮ ಧರ್ಮದಲ್ಲಿ ಎಲ್ಲಿಯೂ ಸಮರ್ಥಿಸಿಲ್ಲ. ಕೇವಲ ರಾಜಕುಮಾರರು ಮಾತ್ರ ಈ ಪದ್ಧತಿಗೆ ವಿರೋಧವಾಗಿಯೇ ಅನೇಕ ಪತ್ನಿಯರನ್ನು ಹೊಂದಿದ್ದರು ಎಂಬುದು ಶೋಚನೀಯ. ತಮಗೆ ಉದಾಹರಿಸಬಹುದಾದರೆ ನಮ್ಮ ದೇಶದ ಸಂಸ್ಕೃತಿಯನ್ನು ಎತ್ತಿ ಹಿಡಿದಿರುವ ರಾಮಾಯಣದ ನಾಯಕನಾದ ರಾಮನು ಏಕಪತ್ನಿ ವ್ರತಸ್ಥನಾಗಿದ್ದ. ಶೂರ್ಪಣಿಕೆಯು ರಾಮನನ್ನು ವಿವಾಹವಾಗಬೇಕೆಂದು ಕಾಡಿದಾಗ ಕೂಡ ರಾಮನು ತನಗೆ ಮದುವೆಯಾಗಿದೆ, ಆದುದರಿಂದ ಎರಡನೆಯ ಮದುವೆ ಸಲ್ಲದು ಎಂದೇ ಹೇಳಿದ. ರಾಮಾಯಣದಲ್ಲಿ ಅಶ್ವಮೇಧಯಾಗದ ಸಮಯದಲ್ಲಿ ಪತ್ನಿ ಸಮೇತನಾಗಿ ಯಜ್ಞ ಮಾಡಿದರೆ ಫಲಪ್ರದ ಎಂದು ಋಷಿಗಳು ಹೇಳಿದಾಗ ಕೂಡ ರಾಮನು ಅದಕ್ಕೆ ಒಪ್ಪದೇ ಕೇವಲ ಬಂಗಾರದ ಒಂದು ಮೂರ್ತಿಯೊಂದಿಗೆ ಯಜ್ಞ ಮಾಡಿದ. ಹೀಗೆ ರಾಮನು ಬಹುಪತ್ನಿ ವಿವಾಹಕ್ಕೆ ವಿರೋಧಿಯಾಗಿದ್ದ. ಹೀಗಿರುವಾಗ ಈ ವಿಧೇಯಕವು ಧರ್ಮ ವಿರೋಧಿಯಾಗಿದೆ ಎಂದು ಹೇಳುವುದು ಸರಿಯಲ್ಲ. ಇದಕ್ಕೆ ವಿರೋಧವಾಗಿ ನಡೆದುಕೊಂಡಲ್ಲಿ ಅಧಿಕ ನಾಶಕ್ಕೆ ಗುರಿಯಾಗುತ್ತೇವೆ. ಏಕೆಂದರೆ ಒಂದು ವೇಳೆ ಬಹುಪತ್ನಿ ವ್ಯವಸ್ಥೆ ಮುಂದುವರಿಸಿದರೆ, ಅದು ಹಿಂದೂ ಸ್ತ್ರೀಯರಿಗೆ ಅನ್ಯಾಯ ಎಸಗಿದಂತಾಗುತ್ತದೆ. ಇದು ಸ್ತ್ರೀಯರಿಗೆ ಹಿಂಸಾದಾಯಕವಾಗಿದೆ. ಹಲವಾರು ಶತಮಾನಗಳಿಂದ ಹಿಂದೂ ಸ್ತ್ರೀಯರು ದಬ್ಬಾಳಿಕೆಗೆ ಗುರಿಯಾಗಿ ನಾಲ್ಕು ಗೋಡೆಗಳ ಮಧ್ಯೆ ಬಂಧನದಿಂದಾಗಿ ಆರ್ಥಿಕ, ಸಾಮಾಜಿಕ, ಮೂಲಭೂತ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಅವರ ಕಣ್ಣೀರನ್ನು ನಿವಾರಿಸುವವರೇ ಇಲ್ಲ. ಅವರು ಸವತಿಯರಿಂದಾಗಿ ಅಪಾರ ನೋವು ಅನುಭವಿಸಬೇಕಾಗಬಹುದು.

ಈಗ ನವೋದಯದ ಯುಗ ಆರಂಭವಾಗಿ, ಹಲವಾರು ಪ್ರಮುಖರು ಸ್ತ್ರೀಯರಿಗಾದ ಅನ್ಯಾಯವನ್ನು ಅರಿತಿದ್ದಾರೆ, ಅವರ ಮೇಲಣ ಅಂತ:ಕರಣದಿಂದ ಈ ಕ್ರಾಂತಿಕಾರಿ ಮಸೂದೆ ತರಲಾಗಿದೆ.

ಈ ಒಂದು ಸಂದಿಗ್ಧ ಸಮಯದಲ್ಲಿ ಮಹಾತ್ಮ ಗಾಂಧಿ ಅವರು ರಂಗಪ್ರವೇಶ ಮಾಡಿ, ಸ್ತ್ರೀಯರ ಸ್ಥಾನಮಾನವನ್ನು ಉನ್ನತಗೊಳಿಸಿ ಅವರನ್ನು ಸ್ವಾವಲಂಬಿಗಳಾಗುವಂತೆ ಮಾಡಿದರು. ಇಂದು ಇದರ ಬಗೆಗೆ ಸ್ತ್ರೀಯರೇ ಉತ್ಸುಕರಾಗಿದ್ದಾರೆ. ಆದುದರಿಂದ ಮುಂದಿನ ಸ್ತ್ರೀಜನಾಂಗದವರು ಈ ವಿಧವಾದ ದಬ್ಬಾಳಿಕೆಯನ್ನು ಸಹಿಸರು. ಈ ವಿಧವಾದ ಅಪಮಾನವನ್ನು ಸಹಿಸರು. ಆದುದರಿಂದ ಸದನದ ಮುಂದಿರುವ ವಿಧೇಯಕವನ್ನು ಹರ್ಷದಿಂದ ಅಂಗೀಕರಿಸಬೇಕು. ಈ ವಿಧೇಯಕದ ಬಗ್ಗೆ ಇಲ್ಲ ಸಲ್ಲದ ಆರೋಪಗಳನ್ನು ಪ್ರಚಾರ ಮಾಡಲಾಗುತ್ತಿದೆ. ಒಂದು ಹೇಳಿಕೆಯಂತೆ ವಿವಾಹ ವಿಚ್ಛೇದನದಿಂದ ನಮ್ಮ ಸಂಸ್ಕೃತಿ ನಾಶವಾಗುತ್ತದೆ; ಅಲ್ಲದೆ ಸ್ತ್ರೀವರ್ಗಕ್ಕೆ ಅಪಾರ ಹಾನಿಯಾಗುತ್ತದೆ ಎಂದೇ ಅಪಪ್ರಚಾರ ನಡೆದಿದೆ. ನನಗೆ ತಿಳಿದಂತೆ ವಿಚ್ಛೇದನದಿಂದಾಗಿ ಏನೂ ಅಪಾಯವೇ ಇಲ್ಲ. ಹಾಗೆಯೆ ಅದು ಧರ್ಮ ಮತ್ತು ಶಾಸ್ತ್ರವಿರೋಧವೂ ಆಗಿಲ್ಲ. ನಾನೂ ಹಿಂದೂ ಸ್ತ್ರೀ. ನಮ್ಮ ಪೂರ್ವಿಕರು ಸ್ತ್ರೀಗೆ ಉನ್ನತ ಸ್ಥಾನಮಾನ ನೀಡಿ ಹೊಗಳಿದ್ದಾರೆ. ಆದರೆ ಅದು ಹಿಂದಿನ ಯುಗದ ಮಾತು. ಇಂದು ಅದು ಚರಿತ್ರೆ.

ಆದರ್ಶಗಳು ಆದರ್ಶಗಳೇ, ಅವನ್ನು ಎಲ್ಲರಿಂದ ಪರಿಪಾಲಿಸಲು ಆಗದು. ಗಾಂಧಿಯವರನ್ನೇ

ತೆಗೆದುಕೊಂಡಾಗ ಅವರ ಆದರ್ಶಗಳನ್ನು ಅವರ ಅನುಯಾಯಿಗಳಾದ ನಾವು ಎಷ್ಟು ಪಾಲಿಸುತ್ತಿದ್ದೇವೆ? ಆದುದರಿಂದ ನಾವು ಭಾರತದ ಆದರ್ಶಗಳನ್ನೇ ಪಾಲಿಸುವುದಾದರೆ ಭೂಮಿಯೇ ಸ್ವರ್ಗವಾಗಬಲ್ಲದು.

ಯಾವುದೇ ಒಂದು ಆದರ್ಶವನ್ನು ಜನತೆಯ ಮುಂದೆ ಇರಿಸಿದಾಗ ಅದಕ್ಕೆ ಅನುಗುಣವಾದ ವಾತಾವರಣವು ಸಮಾಜದಲ್ಲಿರಲೇಬೇಕು. ಉದಾಹರಣೆಗೆ ಹಿಂದೂ ವಿವಾಹವನ್ನೇ ನೋಡಿರಿ. ವಿವಾಹ ಸಮಯದಲ್ಲಿ ಪುರೋಹಿತರು ಹೇಳುವ ಮಂತ್ರದಿಂದ ವಿವಾಹ ಏಳು ಜನ್ಮಗಳ ಬಂಧನ. ಅದನ್ನು ಯಾರೂ ಅಸಿಂಧು ಎಂದು ಹೇಳಲಾಗದು. ಆದರೆ ಪುರುಷರಿಗೆ ಮರು ಮದುವೆಯ ಆಸ್ಪದ ಎಲ್ಲಿದೆ? ಸೋಜಿಗವೆಂದರೆ ನಮ್ಮ ಕರ್ಮಸಿದ್ಧಾಂತ. ಏಳು ಜನ್ಮ ಎಂದರೆ ಹಿಂದಿನ ಜನ್ಮದಲ್ಲಿ ದಂಪತಿಗಳು ಮಾನವರಾಗಿದ್ದರೆ? ಏಕೆಂದರೆ ಕರ್ಮಸಿದ್ಧಾಂತದಂತೆ ಮಾನವ ಜನ್ಮ ದೊರೆಯುವುದೇ ದುರ್ಲಭ. ಆದರೆ ನನ್ನ ಅಭಿಮತದಂತೆ ಮದುವೆ ಕೇವಲ ಒಂದು ಒಪ್ಪಂದ. ಆದುದರಿಂದ ಅದು ದಾಂಪತ್ಯ ಸುಖಜೀವನಕ್ಕೆ ಮಾರಕವಾದಲ್ಲಿ ಅದರಿಂದ ಬಿಡುಗಡೆ ಹೊಂದುವ ಹಕ್ಕಿದೆ. ಅದು ಸ್ತ್ರೀಯರಿಗೂ ಅನಿವಾರ್ಯ. ಪುರುಷನು ಮದುವೆ ವಯಸ್ಸನ್ನು ಮೀರಿದಾಗಲೂ ಅವನಿಗೆ ಮರುಮದುವೆಯ ಆಸ್ಪದವಿದೆ. ಆದರೆ ಕೇವಲ ೧೬–೧೮ರ ಸ್ತ್ರೀಗೆ ಈ ವಿಧವಾದ ಮರುಮದುವೆಯ ಆಸ್ಪದ ನಿರಾಕರಿಸುವುದು ನ್ಯಾಯ ಸಮ್ಮತವೇ? ನಾನು ಹೆಚ್ಚು ವಿವರಗಳಿಗೆ ಹೋಗಲಾರೆ. ಕಾನೂನು ಬದ್ಧವಾಗಿ, ಪತಿಯ ಸಂಬಂಧಿಗಳೆಲ್ಲರೂ ಅವಳೊಂದಿಗೆ ಸಂಬಂಧವನ್ನು ಕಳಚಿಕೊಂಡಾಗ ಅವಳು ಮರುವಿವಾಹ ಏಕೆ ಆಗಬಾರದು? ಅವಳಿಗೆ ಉತ್ತಮ ಜೀವನ ನಡೆಸಲು, ಮಕ್ಕಳು ಮರಿಯೊಂದಿಗೆ ಗೌರವಯುಕ್ತ ಜೀವನ ನಡೆಸಲು ಅಧಿಕಾರವಿಲ್ಲವೇ? ಈ ಪರಿಸ್ಥಿತಿಗಳಲ್ಲಿ ಅವಳಿಗೆ ಮರು ವಿವಾಹದ ಹಕ್ಕು ಇರಲೇಬೇಕು. ನಾವು ಎಣಿಸಿದಂತೆ ಈ ವಿಧೇಯಕವೂ ಅಪೂರ್ಣ. ಏಕೆಂದರೆ ಪಂಚಾಯಿತಿಗಳೇ ಸೇರದೇ ಹೋದಲ್ಲಿ ವಿಚ್ಛೇದನ ಪಡೆಯುವುದೆಂತು? ಈ ವಿಧೇಯಕದಿಂದ ನಮ್ಮ ಹಳ್ಳಿಯ ಜನಾಂಗ ಮುಂದುವರಿದ ಜನಾಂಗವಾಗುವುದರಲ್ಲಿ ಸಂಶಯವಿಲ್ಲ. ಏಕೆಂದರೆ ಈ ವಿಧೇಯಕವು ಅನೇಕ ಅನಿಷ್ಟ ಸಂಪ್ರದಾಯಗಳಿಗೆ ಮಂಗಳ ಹಾಡಿದೆ.

ಈ ವಿಧೇಯಕ್ಕಕ್ಕೆ ವಿರೋಧವಾದ ಅಂಶ ಎಂದರೆ ಆಸ್ತಿಯಲ್ಲಿ ಮಗಳಿಗೆ ಸಮಾನ ಪಾಲು ನೀಡುವ ಬಗ್ಗೆ. ಹಲವರು ಹೇಳುವಂತೆ ಇದರಿಂದಾಗಿ ಕುಟುಂಬದಲ್ಲಿಯ ಪ್ರೀತಿಯ ಬಾಂಧವ್ಯಕ್ಕೆ ಅಡಚಣೆಯಾಗುತ್ತದೆ. ಆದರೆ ಅದು ಹೇಗೆ ಎಂಬುದು ನನಗೆ ಹೊಳೆಯದು. ವಿಧೇಯಕದಿಂದ ವೈರತ್ವ ಎಂಬುದು ನಂಬಲಾಗದ ವಿಷಯ. ಈ ವಿಧೇಯಕವಿಲ್ಲದೆ ಹೋದರೂ ಆಸ್ತಿಯ ಬಗೆಗೆ ಕಲಹಗಳಿರಲಾರವೇ? ಪ್ರೀತಿ ಪ್ರೇಮ ವಿಶ್ವಾಸಗಳೇ ಬೇರೆ. ಅವು ಕಾನೂನಿನಿಂದ ಮುರಿದುಹೋಗುತ್ತವೆ ಎಂದರೆ ಸಹೋದರ ಸಹೋದರಿಯರ ಪ್ರೀತಿಗೆ ಬೆಲೆ ಇಲ್ಲ ಎಂದು ಹೇಳಬಹುದು. ಆದರೆ ಇದು ನಮ್ಮ ಸಂಸ್ಕೃತಿಯ ಲಕ್ಷಣವಲ್ಲ. ಸಂಸ್ಕೃತಿ ಕಾನೂನಿನಿಂದ ಬೇರೆ ಎಂಬುದನ್ನು ನಾವು ಮರೆಯಬಾರದು. ಇಂದು ನಮ್ಮ ಕಾನೂನಿನಂತೆ ತಾಯಿಯ ಸ್ತ್ರೀಧನ ಮಗಳಿಗೇ ಸಲ್ಲುತ್ತದೆ. ಆದರೂ ಸಹೋದರಿಯರು ಅದನ್ನು ತಮ್ಮ ಅಣ್ಣತಮ್ಮರೊಂದಿಗೆ ಹಂಚಿಕೊಳ್ಳುತ್ತಾರೆ. ಇದು ಪ್ರೀತಿಯ ಸಂಕೇತ, ಕಾನೂನು ಅಲ್ಲ.

ಪರಿಸ್ಥಿತಿ ಹೀಗಿದ್ದರೂ, ಸ್ತ್ರೀಯರ ಬಗೆಗೆ ಸುಧಾರಣೆ ಆಗಿದೆ ಎಂದು ಹೇಳಲಾಗದು. ಏಕೆಂದರೆ ಅನೇಕ ತಾಲೂಕುಗಳಲ್ಲಿ ಅಪ್ಪನ ಆಸ್ತಿಯಿಂದಲೇ ಸುಖಭೋಗ ಹೊಂದುತ್ತಿರುವ ಸಹೋದರರು ತಂಗಿ ಅಥವಾ ಅವರ ಮಕ್ಕಳನ್ನು ಹೀನ ದೃಷ್ಟಿಯಿಂದಲೇ ಕಾಣುವರು. ತಂಗಿ ಒಂದು ವೇಳೆ ವಿಧವೆಯಾಗಿದ್ದರೆ ಅವಳ ಪಾಡನ್ನು ಹೇಳಲಾಗದು. ಆದುದರಿಂದ ತಂದೆಯ ಆಸ್ತಿಯಲ್ಲಿ ಮಗಳಿಗೆ ಸಮಪಾಲು ನೀಡುವುದು ಇಂದಿನ ಸಮಯಕ್ಕೆ ಸೂಕ್ತವಾಗಿದೆ.

ಈ ದಿಶೆಯಲ್ಲಿ ವಿಧೇಯಕವನ್ನು ವಿರೋಧಿಸುವವರು ಹೇಳುವುದೇನೆಂದರೆ ಈ ವಿಧೇಯಕ ಪಾಶ್ಚಿಮಾತ್ಯ ಶಿಕ್ಷಣದ ಪ್ರಭಾವದಿಂದಾಗಿದೆ ಹಾಗೂ ಈ ವಿಧೇಯಕ ಮಂಡಿಸಿದವರಿಗೆ ಭಾರತೀಯ ಶಿಕ್ಷಣದ ಗಂಧವೇ ಇಲ್ಲ. ಆದರೆ ನಾನು ಅವರ ಗಮನವನ್ನು ತಲತಲಾತರದಿಂದ ಜಾರಿಯಲ್ಲಿರುವ ಜಾನಪದ ಗೀತೆಗಳ ಬಗ್ಗೆ ಸೆಳೆಯುವೆ. ನಮ್ಮ ಭಾಗದಲ್ಲಿಯ ಜನಪದಗಳಲ್ಲಿ ಅಣ್ಣ ತಂಗಿಯರ ಸಂವಾದವಿದೆ. ತಂಗಿ ತನಗೆ ಉಡುಗೊರೆಯ ಮೂಲಕ ಅಷ್ಟೈಶ್ವರ್ಯ ದೊರೆತರೂ ತಂದೆಯ ಆಸ್ತಿಯಲ್ಲಿ ಪಾಲು ಬೇಕೆಂದೇ ಹೇಳಿದಾಗ, ಅವಳಲ್ಲಿ ನಾವು ಆಸ್ತಿಯ ಮೋಹವನ್ನು ಕಾಣದೇ ತನ್ನ ತವರಿನ ಬಗ್ಗೆ ಇರುವ ಹಂಬಲವನ್ನೇ ಕಾಣುತ್ತೇವೆ. ಇದು ಶ್ರೀಮಂತ ಬಡವರ ಅಥವಾ ಆಸ್ತಿ ಪಾಸ್ತಿಯ ವಿಷಯವಾಗಿರದೆ ಹುಟ್ಟಿದ ಮನೆಯ ಮೇಲಿರುವ ಮೋಹವನ್ನು ಸಿದ್ಧಪಡಿಸುತ್ತದೆ.

ಪ್ರಕೃತಿಯು ತಂದೆ ತಾಯಿಗಳ ದೃಷ್ಟಿಯಲ್ಲಿ ಮಗ–ಮಗಳನ್ನು ಒಂದೇ ರೀತಿಯಲ್ಲಿ ಕಾಣುತ್ತದೆ. ಹೀಗಿರುವಾಗ ಮಗಳಿಗೆ ಏಕೆ ಆಸ್ತಿಯಲ್ಲಿ ಹಕ್ಕಿರಬಾರದು? ಇದೊಂದು ಅನ್ಯಾಯ. ಮತ್ತೊಂದು ಸಂಗತಿ ಎಂದರೆ ಮಗಳಿಗೆ ಪಾಲು ನೀಡುವುದರಿಂದ ಅವಳ ಪತಿಯನ್ನು ಮನೆಯ ಅಳಿಯನೆಂದು ಭಾವಿಸದೆ ಅವನೂ ಕುಟುಂಬದ ಮಗನಂತೆ ಇನ್ನೊಬ್ಬ ಮಗ ಎಂಬ ಭಾವನೆಗೆ ಪುಷ್ಟಿ ನೀಡಿದಂತಾಗುತ್ತದೆ. ಈ ನನ್ನ ಹೇಳಿಕೆಯಂತೆ ನಾವು ರಚಿಸಿದ ನೂತನ ಸಂವಿಧಾನದಲ್ಲಿ ಸಮಾನತೆಯ ಆಧಾರದ ಮೇಲೆ ನೂತನ ಸಮಾಜವನ್ನು ನಿರ್ಮಿಸುವಲ್ಲಿ ಸಹಕರಿಸಿ, ಗಾಂಧಿಗಿಯವರ ಕನಸನ್ನು ನನಸಾಗಿಸೋಣ.

ಈ ಕಾಯಿದೆಯನ್ನು ಅರ್ಥ ಮಾಡಕೊಳ್ಳಬಲ್ಲ ಈ ದೇಶದ ಸ್ತ್ರೀಯರೆಲ್ಲ ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರಲ್ಲದೆ, ಮುಂದಿನ ಪೀಳಿಗೆಯ ಸ್ತ್ರೀಯರೂ ಅದನ್ನು ಠರಾವು ಮಾಡಿದುದಕ್ಕಾಗಿ ಅವರಿಗೆ ಋಣಿಗಳಾಗಿರುತ್ತಾರೆ, ಎಂದು ಎಲ್ಲ ಸ್ತ್ರೀಯರ ಪರವಾಗಿ, ನಾನು ಕೊನೆಯಲ್ಲಿ ಮತ್ತೊಮ್ಮೆ ಮಂತ್ರಿಗಳಿಗೆ ಭರವಸೆ ನೀಡುತ್ತೇನೆ.*

**ದರ್ಭಾಂಗದ ಶ್ರೀ ಕಾಮೇಶ್ವರ್ ಸಿಂಗ್** (ಬಿಹಾರ : ಸಾಮಾನ್ಯ) : ಮಾನ್ಯರೆ, ಈ ಅಧಿವೇಶನದ ಪ್ರಾರಂಭದ ದಿನ ಸದನದಲ್ಲಿ ಪ್ರಧಾನ ಮಂತ್ರಿಗಳು ನಮ್ಮ ಮುಂದಿರುವ ಈ ಕಾಯಿದೆಯ ವಿಷಯದಲ್ಲಿ ಹೇಳಿಕೆ ನೀಡಿದ ಮೇಲೆ ಸರ್ಕಾರದ ಪರವಾಗಿ ಮಂಡಿಸಿರುವ ಈ ಗೊತ್ತುವಳಿಯನ್ನು ವಿರೋಧಿಸುವ ನಮ್ಮಂಥವರಿಗೆ ಈ ಚರ್ಚೆಯಲ್ಲಿ ಭಾಗವಹಿಸುವುದು ಬಹಳ ಕಷ್ಟವಾಗಿದೆ. ಅವರು ಆ ಹೇಳಿಕೆ ನೀಡಿದ ದಿನ ನಾನು ಸದನದಲ್ಲಿ ಹಾಜರಿರಲಿಲ್ಲ. ಆದರೆ ವರದಿಯಾಗಿರುವ ಸುದ್ದಿಯು ನಿಜವಾಗಿದ್ದರೆ, ಅವರು ಮಸೂದೆ ಠರಾವಾಗುವುದನ್ನು ತಮ್ಮ ಸರ್ಕಾರದಲ್ಲಿನ ವಿಶ್ವಾಸದ ವಿಷಯವನ್ನಾಗಿ ಮಾಡಿದ್ದಾರೆ. ನಾನು ಈ ಕಾಯಿದೆಯನ್ನು ತೀವ್ರವಾಗಿ ವಿರೋಧಿಸುತ್ತೇನೆ. (ಅಡ್ಡಿ)

**ಮಾನ್ಯ ಉಪಸಭಾಪತಿಗಳು** : ಸದ್ದು, ಸದ್ದು. ಹೀಗೆ ಅಡ್ಡಿ ಉಂಟು ಮಾಡಿದರೆ, ನಾವು ಮುಂದುವರಿಯಲು ಸಾಧ್ಯವೇ ಇಲ್ಲ. ಈ ಅಡ್ಡಿಗಳಿಂದಾಗಿ ಸದಸ್ಯರು ತೆಗೆದುಕೊಳ್ಳುವ ಸಮಯವು ಇನ್ನೂ ಹೆಚ್ಚಾಗುತ್ತದೆಯಷ್ಟೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ** : ಮಾನ್ಯ ಸದಸ್ಯರು ಒಂದು ಬಹಳ ಒಳ್ಳೆಯ ಭಾಷಣ ಮಾಡುತ್ತಿರುವಂತೆ ಕಾಣುತ್ತದೆ.

**ದರ್ಭಾಂಗದ ಶ್ರೀ ಕಾಮೇಶ್ವರ್ ಸಿಂಗ್** : ಆದರೆ ನಮ್ಮ ದೇಶದ ಈಗಿನ ಪರಿಸ್ಥಿತಿಯಲ್ಲಿ ನಮ್ಮ

---

* C.A. (Leg) D, Vol. VI, pt ii, ೧೩ನೇ ಡಿಸೆಂಬರ್, ೧೯೪೯ ಪುಟ ೫೪೧–೪೩

ಪ್ರಧಾನ ಮಂತ್ರಿಗಳ ಸರ್ಕಾರವೇ ನಮಗೆ ಸಿಕ್ಕಬಲ್ಲ ಸರ್ಕಾರಗಳಲ್ಲಿ ಅತ್ಯುತ್ತಮ ಸರ್ಕಾರ ಎಂಬ ನನ್ನ ನಿಲವೂ ಅಷ್ಟೇ ದೃಢವಾಗಿದೆ. ಆದರೆ ಈ ಸರ್ಕಾರ ಎಷ್ಟೇ ಅಪರಿಪೂರ್ಣವಾಗಿದ್ದರೂ ಅದಕ್ಕೆ ಪರ್ಯಾಯವಾದ ಉತ್ತಮ ಸರ್ಕಾರ ನಮಗೆ ಈಗ ಲಭ್ಯವಿಲ್ಲ. ಪ್ರಾಯಶಃ, ಯಾವ ರಾಜಕೀಯ ಪಕ್ಷಕ್ಕೂ ಸೇರದ ಜನರಲ್ಲಿ ಅನೇಕರ ಅಭಿಪ್ರಾಯವೂ ಇದೇ ಆಗಿದೆ, ಎಂದು ನಾನು ನಂಬುತ್ತೇನೆ. ಹೀಗೆ, ನಮ್ಮ ಪ್ರಧಾನ ಮಂತ್ರಿಯವರು ತಳೆದಿರುವ ನಿಲುವಿಗೆ "ಬಲಾತ್ಕಾರ"ದ ರೂಪವಲ್ಲದಿದ್ದರೂ "ಅಪ್ರಾಪ್ತ ಪ್ರಭಾವ"ದ ರೂಪ ಬಂದಿದೆ. ಎಂದು ನನ್ನ ಹಾಗೆಯೇ ಚಿಂತಿಸುವವರಿಗನಿಸುತ್ತದೆ. ಆದುದರಿಂದ ಈ ವಿಷಯುವನ್ನು ಪುನರ್ವಿಮರ್ಶಿಸಬೇಕೆಂದೂ ಈ ಕಾಯಿದೆಯ ಪರಿಶೀಲನೆಯಿಂದ ತಮ್ಮ ಸರ್ಕಾರದಲ್ಲಿ ವಿಶ್ವಾಸದ ಪ್ರಶ್ನೆಯನ್ನು ಬೇರ್ಪಡಿಸಬೇಕೆಂದೂ ನಾನು ಪ್ರಧಾನ ಮಂತ್ರಿಯವರನ್ನು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ.

ಸನ್ಮಾನ್ಯ ಡಾ॥ ರಾಜೇಂದ್ರ ಪ್ರಸಾದರು, ತಮ್ಮ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಅಧ್ಯಕ್ಷರ ಸ್ಥಾನದಿಂದ ನಮ್ಮ ಪ್ರಧಾನ ಮಂತ್ರಿಗಳಿಗೆ ಹೋದವರ್ಷ ಬರೆದ ಪತ್ರದಲ್ಲಿ ತಿಳಿಸಿರುವ ಕಾರಣಗಳಿಗನುಗುಣವಾಗಿ, ಮುಂಬರುವ ಸಾಮಾನ್ಯ ಚುನಾವಣೆಯ ಮೂಲಕ ಮತದಾರರ ಒಲವನ್ನು ಖಚಿತಪಡಿಸಿಕೊಳ್ಳುವವರೆಗೆ ಈ ಮಸೂದೆಯ ಮೇಲಿನ ಮುಂದಿನ ಚರ್ಚೆಯನ್ನು ಸದನವೂ ಸರ್ಕಾರವೂ ಮುಂದೂಡಬೇಕೆಂದು ನಾನು ಇಚ್ಛಿಸುತ್ತೇನೆ.

ಈ ಮುಖ್ಯವಾದ–ಕ್ರಾಂತಿಕಾರಿ ಸ್ವರೂಪದ ಎಂದು ಹೇಳಬಹುದಾದ–ಕಾಯಿದೆಯನ್ನು ಕುರಿತು ತೀವ್ರತರ ಭಿನ್ನಾಭಿಪ್ರಾಯಗಳಿವೆ ಎಂಬುದು ಸದನದ ಸನ್ಮಾನ್ಯರಿಗೆ ಗೊತ್ತು. ಅದು ಅನೇಕಾನೇಕ ಜನರ ವೈಯಕ್ತಿಕ ಕಾನೂನಿನ ಮೇಲೆ ಪರಿಣಾಮ ಬೀರುತ್ತದೆ. ಅದು ಅವರ ಸಾಮಾಜಿಕ ಮತ್ತು ಆರ್ಥಿಕ ಝೀವನದ ಮೇಲೂ, ಅನೇಕ ಶತಮಾನಗಳ ಅವಧಿಯಲ್ಲಿ ವಿವಿಧ ಹಿಂದೂ ಧರ್ಮಶಾಸ್ತ್ರಗಳ ಜೊತೆಜೊತೆಗೆ ಬೆಳದ ಅವರ ರೀತಿ ನೀತಿ ಮತ್ತು ಪದ್ಧತಿಗಳ ಮೇಲೂ ಪರಿಣಾಮ ಬೀರುತ್ತದೆ. ನಿಯಮಗಳ ಏಕರೂಪತೆ ಮತ್ತು ಕಾನೂನು ರಚನೆಯ ಹೆಸರಿನಲ್ಲಿ ಮಾಡಿದ ಅದು, ಮುಸ್ಲಿಮರು, ಕ್ರೈಸ್ತರು, ಪಾರಸಿಗಳು ಮತ್ತು ಯಹೂದಿಗಳನ್ನು ಬಿಟ್ಟು ಉಳಿದವರನ್ನೊಳಗೊಂಡ ಹಿಂದೂ ಸಮಾಜದ ಮೂಲಭೂತ ಸಾಮಾಜಿಕ ಮತ್ತು ಆರ್ಥಿಕ ಸಂರಚನೆಯನ್ನೇ ನಿರ್ವಿಚಾರಕವಾಗಿ ಛಿದ್ರಗೊಳಿಸುತ್ತದೆ. ಮಾನ್ಯರೆ, ಈ ಮಸೂದೆಯ ಬಗೆಗೆ ಮಾಡಿರುವ ಆಯ್ಕೆ ಸಮಿತಿಯ ವರದಿಯನ್ನು ವಿರೋಧಿಸುವ ತಮ್ಮ ಹಾಗೂ ಶ್ರೀ ರಾಮನಾರಾಯಣ ಸಿಂಗ್‌ರ ಅಭಿಪ್ರಾಯಗಳನ್ನೊಳಗೊಂಡ ಪತ್ರವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಈ ಮಸೂದೆಗೆ ಸಂಬಂಧಿಸಿದ ಮುಖ್ಯ ಸಮಸ್ಯೆಗಳ ಬಗೆಗೂ ಸಹ ಈಗಿನ ವಿಧಾನಸಭೆಯ ಸದಸ್ಯರು ಮತದಾರರಿಂದ ಯಾವ ಅಪ್ಪಣೆಯನ್ನೂ ಪಡೆದಿಲ್ಲ.

(ಆದುದರಿಂದ), ಈ ಕಾಯಿದೆಯಲ್ಲಿ ಸೂಚಿಸಲಾಗಿರುವಂಥ ಮುಖ್ಯ ಬದಲಾವಣೆಗಳನ್ನು ಈ ರೀತಿ ಮಾಡಬಾರದು ಎಂಬುದು ನನ್ನ ಖಚಿತ ಅಭಿಪ್ರಾಯ: ಹಿಂದೂ ಕಾನೂನು ಸಮಿತಿ (Hindu Law Committee)ಯ ಎದುರು ಜನರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಯಾರಾದರೂ ಜಾಗರೂಕತೆಯಿಂದ ಪರಿಶೀಲಿಸಿದರೆ, ಈ ಮಸೂದೆಗೆ ಅವರ ಪ್ರಬಲ ವಿರೋಧವಿರುವುದನ್ನು ನೋಡಲು ಅವರು ವಿಫಲರಾಗುವುದಿಲ್ಲ. ಸ್ಮೃತಿಯನ್ನೂ ತಾವು ಅನುಸರಿಸುವ ಪಂಥವನ್ನೂ ಪವಿತ್ರವೆಂದು ಪರಿಗಣಿಸುವವರ ವರ್ಗಕ್ಕೆ ನಾನು ಸೇರುತ್ತೇನೆ. ನಾನು ಸೇರುವ ಅಂಥ ವರ್ಗವು ನಮ್ಮ ದೇಶದ ಒಟ್ಟು ಜನಸಂಖ್ಯೆಯ ಒಂದು ಬಹಳ ದೊಡ್ಡ ಭಾಗವಾಗಿದೆ. ನಾವು ವಿವಾಹ, ಉತ್ತರಾಧಿಕಾರಗಳಂಥ ವಿಷಯಗಳನ್ನು ನಮ್ಮ ಧಾರ್ಮಿಕ ಕರ್ತವ್ಯ ಮತ್ತು ಹೊಣೆಗಳೆಂದು ಪರಿಗಣಿಸುತ್ತೇವೆ. ಇವು ನಮ್ಮ ಪಾಲಿಗೆ ಜಾತ್ಯತೀತ ಅಥವಾ

ಸಾಮಾಜಿಕ ಘಟನೆಗಳಿಗಿಂತ ಬಹಳ ಹೆಚ್ಚು.

ಪರಿಸ್ಥಿತಿಗಳಿಗನುಗುಣವಾಗಿ ಸಾಮಾಜಿಕ ವ್ಯವಸ್ಥೆಯು ಹಂತ ಹಂತವಾಗಿ ಬದಲಾಗಿದೆ ಹಾಗೂ ಬದಲಾಗುತ್ತಲೇ ಇದೆ, ಎಂಬುದೇನೋ ನಿಜ. ಆದರೆ ಅಂಥ ಬದಲಾವಣೆಗಳು (ಒಳಗಿನಿಂದಲೇ) ವಿಕಾಸವಾಗಿದೆಯೇ ಹೊರತು, ಮೇಲಿನಿಂದ ಯಾರೋ ಹೇರಿದುದಲ್ಲ. ಅಲ್ಲದೆ, ಯಾವ ತತ್ತ್ವಗಳ ಮೇಲೆ ವಿವಿಧ ಹಿಂದೂ ಕೋಮುಗಳಿಗೆ ಅನ್ವಯಿಸುವ ಕಾನೂನುಗಳು ನಿಂತಿವೆಯೋ ಆ ತತ್ತ್ವಗಳಿಗೆ ಈ ಬದಲಾವಣೆಗಳು ಯಾವ ಧಕ್ಕೆಯನ್ನೂ ಉಂಟುಮಾಡುವುದಿಲ್ಲ. ಈಗ ನಮ್ಮೆದುರಿಗಿರುವ ಪ್ರಶ್ನೆಯೆಂದರೆ ಮಸೂದೆಯಲ್ಲಿ ಸೂಚಿಸಲಾಗಿರುವ ಬದಲಾವಣೆಗಳು ಸಾಮಾನ್ಯ ಜನರೆಲ್ಲರಿಗೆ ಒಪ್ಪಿಗೆಯಾಗಿದ್ದು, ಅದಕ್ಕೆ ಕೇವಲ ಕಾನೂನಿನ ಮನ್ನಣೆಯಷ್ಟೇ ಬೇಕಾಗಿದೆಯೆ, ಎಂಬುದು. ಇದಕ್ಕೆ "ಇಲ್ಲ" ಎಂಬುದು ನನ್ನ ಖಚಿತ ಉತ್ತರ. ಸ್ಮೃತಿಕಾರರೂ ಭಾಷ್ಯಕಾರರೂ ಆಗಿಂದಾಗ್ಗೆ ಬದಲಾವಣೆಗಳನ್ನು ಮಾಡಿದರು ಎಂಬುದು ನಿಸ್ಸಂದೇಹ; ಆದರೆ ಅವರು ಹಾಗೆ ಮಾಡಿದುದು ಅವರಿಗಿದ್ದ ಜನ ಬೆಂಬಲದ ಮೂಲಕ, ಆ ಬದಲಾವಣೆಗಳನ್ನು ಅವರು ಅನುಷ್ಠಾನಕ್ಕೆ ತರಬಲ್ಲವರಾದುದರಿಂದ. ಬಹಳಷ್ಟು ಜನರಿಗೆ ಅವರ ಪಾಂಡಿತ್ಯದಲ್ಲಿ, ಅವರ ಮುನ್ನೋಟದಲ್ಲಿ, ಅವರ ಉದ್ದೇಶದ ಶುದ್ಧತೆಯಲ್ಲಿ, ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ, ಅವರ ಚಾರಿತ್ರ್ಯದಲ್ಲಿ ಅಪಾರ ವಿಶ್ವಾಸವಿತ್ತು. ಇಪ್ಪತ್ತನೇ ಶತಮಾನದಲ್ಲಿ ಸೂಚಿಸಲ್ಪಟಿರುವ ಈ ಸ್ಮೃತಿಯ ಕರ್ತೃಗಳಿಗೆ ಅಂಥ ಹಿನ್ನೆಲೆಯೇನೂ ಇಲ್ಲ. ಪ್ರಾಚೀನ ಸ್ಮೃತಿಕಾರರ ಕಟ್ಟಳೆಗಳು ಇಂದಿಗೂ ಅನೇಕ ಜನರ ಬಾಳನ್ನು ನಿಯಂತ್ರಿಸುತ್ತಿವೆ; ಜನರು ಅವರಿಗೆ ತಮ್ಮ ಹೃದಯದಲ್ಲಿ ಕೊಟ್ಟಿರುವ ಸ್ಥಾನವನ್ನು ಇಂದಿನ ಸ್ಮೃತಿಕಾರರಿಗೆ ಕೊಡುವುದಿಲ್ಲ. ಹಿಂದೂ ವೈಯಕ್ತಿಕ ಕಾನೂನಿಗೆ (Hindu Personal Law) ಇರುವ ಮನ್ನಣೆಗೆ ಕಾರಣ ಜನರ ಸಮ್ಮತಿಯೇ ಹೊರತು. ಕೇಂದ್ರದ ಯಾವುದೋ ರಾಜಕೀಯ ಪಕ್ಷ ಅದನ್ನು ಹೇರಿದುದರಿಂದಲ್ಲ, ಎಂಬ ಸತ್ಯವನ್ನು ದೇಶದ ವಿವಿಧ ಭಾಗಗಳಲ್ಲಿ ಕಾಣುವ ವಿವಿಧತೆಯು ಸುಲಭವಾಗಿ ತೋರಿಸಿಕೊಟ್ಟಿದೆ. ವಿವಿಧತೆಯಲ್ಲಿ ಏಕತೆ ಎಂಬುದೇ ಹಿಂದೂ ಝೀವನದ ಹಾಗೂ ಧರ್ಮದ ಪ್ರಮುಖ ಲಕ್ಷಣವಾಗಿದೆ. ಆದರೆ ಮೇಲ್ನೋಟಕ್ಕೆ ಮಾತ್ರ ಕಾಣುವ ಏಕತೆಯನ್ನು ನಾವು ಒಂದು ಅನಿಷ್ಟವೆಂದೂ, ಅದನ್ನು ತಕ್ಷಣವೇ ನಿರ್ಮೂಲನ ಮಾಡಬೇಕೆಂದೂ ಬಗೆಯಬಾರದು.

ನಮ್ಮ ಪ್ರಾಚೀನ ಸ್ಮೃತಿಕಾರ (ಕಾನೂನು ರಚಿಸುವವ)ರಿಗೂ ಇಂದಿನ ಸ್ಮೃತಿಕಾರರಿಗೂ ಉದ್ದೇಶದಲ್ಲಿ ಒಂದು ಮೂಲಭೂತ ವ್ಯತ್ಯಾಸವಿದೆ: ಪ್ರಾಚೀನ ಸ್ಮೃತಿಕಾರರ ಪರಿಶೀಲನೆಗೆ ಆಧಾರವಾದುದು ಶುದ್ಧ ಆಧ್ಯಾತ್ಮವಾದರೆ, ಇಂದಿನ ಸ್ಮೃತಿಕಾರರ ಪರಿಶೀಲನೆಗೆ ಸ್ಥೂಲ (ಇಂದ್ರಿಯ) ವಿಷಯಗಳೇ ಆಧಾರ; ಇಂದಿನ ಸ್ಮೃತಿಕಾರರ ಪರಿಶೀಲನೆಯನ್ನು ಒಪ್ಪಿಕೊಳ್ಳುವುದೆಂದರೆ, ನಮ್ಮ ಝೀವನ ದರ್ಶನವನ್ನು, ನಮ್ಮ ಸಂಪ್ರದಾಯದ ಸಾತತ್ಯವನ್ನು, ನಮ್ಮ ಸಂಸ್ಕೃತಿಯ ತಳಹದಿಯನ್ನು, ನಿರಾಕರಿಸಿದಂತೆ. ನಾನಂತೂ ಇದನ್ನು ಒಪ್ಪಿಕೊಳ್ಳಲು ಸಿದ್ಧನಿಲ್ಲ.

ಇದೂ ಅಲ್ಲದೆ, ಈ ಮಸೂದೆಯನ್ನು ಜಾರಿಗೆ ತರುವಲ್ಲಿ ಅನುಷ್ಠಾನಕ್ಕೆ ಸಂಬಂಧಿಸಿದ ಕೆಲವು ತೊಂದರೆಗಳುಂಟಾಗುತ್ತವೆ ಎಂಬ ಭಯ ನನಗಿದೆ. ಜನರು ತಮ್ಮ ವಿವಾಹವನ್ನು ನೋಂದಾಯಿಸಲು ನ್ಯಾಯಾಲಯಕ್ಕೆ ಹೋಗಬೇಕೆಂಬುದನ್ನು ಅವರಿಗೆ ಕಲಿಸಲು ಸರ್ಕಾರಕ್ಕೆ ಎಷ್ಟು ಸಮಯ ಬೇಕಾಗಬಹುದು ಎಂಬುದನ್ನು ಸ್ವಲ್ಪ ಊಹಿಸಿಕೊಳ್ಳಿ. ಈ ನಿಬಂಧನೆಗಳಿಂದ ವಿಫಲವಾದ ಮತ್ತು ವಿಫಲವಾಗಬಹುದಾದ ವಿವಾಹಗಳು ಯಾವ ಜಟಿಲತೆ ಮತ್ತು ಗೊಂದಲಗಳನ್ನು ಸೃಷ್ಟಿಸಬಹುದೆಂಬುದನ್ನು ಸ್ವಲ್ಪ ಊಹಿಸಕೊಳ್ಳಿ. ಈ ನಿಬಂಧನೆಗಳ ಆಧಾರದ ಮೇಲೆ ನಿಂತಿರುವ

ಸಮಾಜದ ಪರಿಕಲ್ಪನೆಗಿಂತ ತೀರಾ ಭಿನ್ನವಾದ ಸಮಾಜದ ಪರಿಕಲ್ಪನೆಯನ್ನೇ ಇದುವರೆಗೂ ಇಟ್ಟುಕೊಂಡಿರುವ ಜನರ ಕೌಟುಂಬಿಕ ಝೀವನದಲ್ಲಿ ವಿವಾಹಗಳ ಪದ್ಧತಿ ಮತ್ತು ವಿಚ್ಛೇದನಗಳಿಗೆ ಸಂಬಂಧಿಸಿದ ಈ ನಿಬಂಧನೆಗಳು ಎಂಥ ಅನಾಹುತಗಳನ್ನುಂಟುಮಾಡಬಹುದೆಂಬುದನ್ನು ಸ್ವಲ್ಪ ಊಹಿಸಿಕೊಳ್ಳಿ. ಕೇವಲ ಜಟಿಲವಾದ ಪ್ರಕರಣಗಳಷ್ಟೇ ಪರಿಹಾರಕ್ಕಾಗಿ ಬರುತ್ತವೆ ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ಅನೇಕ ಜನರು ತಮ್ಮ ಸ್ವಾರ್ಥ ಉದ್ದೇಶಕ್ಕಾಗಿ ತಮ್ಮ ನೆರೆಹೊರೆಯವರ ಹಾಗೂ ಬಂಧುಗಳ ಕೌಟುಂಬಿಕ ಝೀವನದಲ್ಲಿ ಹಸ್ತಕ್ಷೇಪ ಮಾಡಲೋಸ್ಕರ ತಲೆಯೆತ್ತುತ್ತಾರೆಂಬ ಭಯ ನನಗಿದೆ. ಅದೇ ರೀತಿ, ಉತ್ತರಾಧಿಕಾರಕ್ಕೆ ಸಂಬಂಧಿಸಿದ ನಿಬಂಧನೆಗಳು ಆಸ್ತಿಯ ವಹಿವಾಟನ್ನು ಕಷ್ಟದ ಕೆಲಸವನ್ನಾಗಿ ಮಾಡುತ್ತವೆಯಲ್ಲದೆ, ಅವು ಸಮಾಜದಲ್ಲಿರುವ ಕುಯುಕ್ತಿಯ ಜನರು ಮೋಸದಲ್ಲಿ ತೊಡಗಲು ಫಲವತ್ತಾದ ಕ್ಷೇತ್ರಗಳಾಗುತ್ತವೆ. ವಕೀಲರು ಮತ್ತು ನ್ಯಾಯಾಲಯಗಳು ಇದರಿಂದ ಅಭಿವೃದ್ಧಿ ಹೊಂದಬಹುದು. ಆದರೆ ಸಂಸಾರಗಳು ಒಡೆಯುತ್ತವೆ ಹಾಗೂ ಕೌಟುಂಬಿಕ ಶಾಂತಿ ಹಾಳಾಗುತ್ತದೆ.

ಹಿಂದೂ ಕಾನೂನು ಸಮಿತಿಯ ಸದಸ್ಯರಲ್ಲೊಬ್ಬರಾದ ಡಾ॥ ದ್ವಾರಕನಾಥ್ ಮಿಟ್ಟರ್ ಅವರ ವರದಿಯಲ್ಲಿ ಅನೇಕಾನೇಕ ಹಿಂದೂಗಳ ಅಭಿಪ್ರಾಯಗಳು ಅಡಕವಾಗಿವೆ. ಆ ಸಮಿತಿಯ ಉಳಿದ ಸದಸ್ಯರ ವರದಿಯು, ಡಾ॥ ಮಿಟ್ಟರ್ ತಮ್ಮ ವಾದಕ್ಕೆ ಪೂರಕವಾಗಿ ಉದ್ಧರಿಸಲಾಗಿರುವ ಅಬಾಧಿತ ಸಂಗತಿಗಳಿಗೆ ಕೇವಲ ವಿವರಣೆ ನೀಡುವ ಒಂದು ಪ್ರಯತ್ನವಾಗಿದೆ. ಸಮಿತಿಯ ಸದಸ್ಯರಲ್ಲಿ ಹೆಚ್ಚು ಜನರು ಮುಖ್ಯ ಸಮಸ್ಯೆಗಳ ಬಗ್ಗೆ ಆಗಲೇ ತೀರ್ಮಾನ ತೆಗೆದುಕೊಂಡಿದ್ದರು ಹಾಗೂ ಅನೇಕ ರೀತಿಗಳಲ್ಲಿ ತಮ್ಮೆದುರಿಗೆ ವ್ಯಕ್ತಪಡಿಸಲಾದ ಜನಾಭಿಪ್ರಾಯಗಳನ್ನು ಅವರು ಗಣನೆಗೆ ತೆಗೆದುಕೊಳ್ಳಲಿಲ್ಲವೆಂದು ಕಾಣುತ್ತದೆ. ಜನಾಭಿಪ್ರಾಯವೆಂದ ಕೂಡಲೇ ಸೂಕ್ಷ್ಮ ಸಂವೇದಿಯಾಗುವ ಈಗಿನ ಭಾರತ ಸರ್ಕಾರವು ಸದನದ ಮುಂದೆ ಇಂಥ ಕಾಯಿದೆಯನ್ನು ತರುವುದು ಸೂಕ್ತವೆಂದು ಹೇಗೆ ಪರಿಗಣಿಸಿದೆ ಎನ್ನುವುದು ನನಗೆ ಆಶ್ಚರ್ಯವನ್ನುಂಟುಮಾಡಿದೆ. "ಪ್ರಗತಿಶೀಲ" ರೆಂದು ಕರೆದುಕೊಳ್ಳುವ ಹಿಂದೂ ಕೋಮಿನ ಕೆಲವೇ ಜನರನ್ನು ಸಂತುಷ್ಟಿಗೊಳಿಸಲು ಅಸಂಖ್ಯಾತ ಹಿಂದೂಗಳು ವಿರೋಧಿಸುತ್ತಿರುವ ಈ ಕಾಯಿದೆಯ ಬಗ್ಗೆ, ಅದು ಹೀಗೆ ಮುಂದುವರಿಯಬಾರದಿತ್ತು. ಈ ಕಾಯಿದೆಯನ್ನು ಅನುಷ್ಠಾನಕ್ಕೆ ತರಲಿಚ್ಛಿಸುವವರು ಹಳ್ಳಿಹಳ್ಳಿಗೆ ಹೋಗಿ ಈ ಮಸೂದೆಗೆ ಸಂಬಂಧಿಸಿದ ಕಾಯಿದೆಗಳನ್ನು ಕುರಿತಾದ ಪ್ರತಿಕ್ರಿಯೆಗಳನ್ನು ಸಂಗ್ರಹಿಸುವುದಾದರೆ, ಅದಕ್ಕೆ ಕೇವಲ ಅತ್ಯಲ್ಪ ತೃಪ್ತಿಕರ ಬೆಂಬಲ ಸಿಕ್ಕೀತು ಎಂಬುದು ನನ್ನ ಖಚಿತ ನಿಲವು. ನನ್ನ ಪ್ರಾಂತದಲ್ಲಂತೂ ಜನಾಭಿಪ್ರಾಯ ಈ ಮಸೂದೆಗೆ ತೀರಾ ವಿರುದ್ಧವಾಗಿದೆ.

***ಡಾ॥ ಬಿ. ಪಟ್ಟಾಭಿ ಸೀತಾರಾಮಯ್ಯ** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ತಮ್ಮ ಮುಂದೆ ನಾನು ಎದ್ದು ನಿಂತ ತಕ್ಷಣ ಸ್ನೇಹಿತರ ಕಡೆಯಿಂದ ಹಲವಾರು ಮಾತುಗಳು ಕೇಳಿ ಬರುತ್ತಿವೆ. ಕೆಲವರು "ಬೆಂಬಲಿಸು" ಎಂದರೆ, ಮತ್ತೆ ಕೆಲವರು "ವಿರೋಧಿಸು" ಎನ್ನುತ್ತಿದ್ದಾರೆ.

**ಶ್ರೀ ಬಿ.ಎಲ್. ಸೋಂಧಿ** (ಪೂರ್ವ ಪಂಜಾಬ್:ಸಾಮಾನ್ಯ) : ನೀವು ಎರಡನ್ನೂ ಮಾಡಿ.

**ಡಾ॥ ಬಿ. ಪಟ್ಟಾಭಿ ಸೀತಾರಾಮಯ್ಯ** : ಪ್ರಾಯಶಃ ನಾನು ಎರಡನ್ನೂ ಮಾಡುತ್ತೇನೆ, ಏಕೆಂದರೆ, ಇಂಥ ವಿಷಯಗಳಲ್ಲಿ ನಾವು ಹಠ ಮಾಡಬಾರದು. ಮಹಾಪುರುಷರು ಮತ್ತು ಮೂರ್ಖರು ಮಾತ್ರ ಹಠ

---

* C.A. (Leg) D, Vol. VI, pt ii, ೧೩ನೇ ಡಿಸೆಂಬರ್, ೧೯೪೯ ಪುಟ ೫೪೩–೫೭

ಮಾಡುತ್ತಾರೆ. ಆದರೆ ನಾನು ಈ ಎರಡರಲ್ಲಿ ಯಾವೊಂದು ಗುಂಪಿಗೂ ಸೇರುವುದಿಲ್ಲ. ನಮ್ಮ ಆಲೋಚನೆಗಳನ್ನು ಇತರರ ಆಲೋಚನೆಗಳೊಂದಿಗೆ ಪೋಣಿಸಿ ನಾವು ಚಿಕ್ಕಂದಿನಲ್ಲಿ ಅಂಕಗಣಿತದಲ್ಲಿ ಕಲಿತ ಒಂದು ಮ.ಸಾ.ಅ. ತಲುಪುವುದು ಹೆಚ್ಚು ಲೇಸು; ಸಮಾಜವು ಒಂದು ಝೀವಂತ ಪ್ರಾಣಿಯೇ ಹೊರತು, ತನ್ನದೇ ಆದ ಜ್ಞಾಪನ ಪತ್ರಗಳನ್ನೂ ರಿಜಿಸ್ಟ್ರಾರರಿಗೆ ಮೂರು ರೂಪಾಯಿ ಕೊಟ್ಟು ಯಾವತ್ತು ಬೇಕಾದರೂ ಬದಲಾಯಿಸಬಹುದಾದರೆ ನಿಯಮಾವಳಿಗಳನ್ನುಳ್ಳ ಒಂದು ಸತ್ತ ಕೂಡ ಬಂಡವಾಳದ ಕಂಪೆನಿ ಅಲ್ಲ. ಅಂದರೆ ಅಂಥ ಸಮಾಜದ ಸಂರಚನೆ ಮತ್ತು ಕಾರ್ಯ ವಿಧಾನಗಳಂಥ ಮುಖ್ಯ ಪ್ರಶ್ನೆಗಳ ಬಗೆಗೆ ನಾವು ಒಂದು ಒಮ್ಮತದ ಮಹತ್ತಮ ಸಾಮಾನ್ಯ ಅಪವರ್ತನ ತಲುಪಬೇಕಾಗಿದೆ. ಪರಂಪರಾಗತವಾಗಿ ನಮಗೆ ಬಂದಿರುವ ಹಾಗೂ ಯಾವ ಸಮಾಜದ ಸದಸ್ಯರೆಂದು ನಾವು ಹೆಮ್ಮೆ ಪಟ್ಟುಕೊಳ್ಳುತ್ತೇವೆಯೋ ಆ ಸಮಾಜವು ಪ್ರಾಯಶಃ ಅನೇಕ ಸಹಸ್ರ ವರ್ಷಗಳಿಂದ ಅಸ್ತಿತ್ವದಲ್ಲಿದೆ.

**ಬಾಬು ರಾಮನಾರಾಯಣ್ ಸಿಂಗ್** (ಬಿಹಾರ : ಸಾಮಾನ್ಯ) : ಸೃಷ್ಟಿಯಾದಾಗಿನಿಂದ.

**ಡಾ॥ ಬಿ. ಪಟ್ಟಾಭಿ ಸೀತಾರಾಮಯ್ಯ** : ಅದು ಯಾವಾಗ ಹುಟ್ಟಿತೆಂಬುದು ಯಾರಿಗೂ ಗೊತ್ತಿಲ್ಲ. ಆದರೆ ನಮ್ಮ ಮುಂದಿರುವ ಕೌಟಿಲ್ಯನ ಅರ್ಥಶಾಸ್ತ್ರದ ಆಧಾರದ ಮೇಲೆ ಕೊನೆಯ ಪಕ್ಷ ನಾನು ಇಷ್ಟನ್ನಾದರೂ ಹೇಳಬಲ್ಲೆ. ಈ ಸಮಾಜವು ೨೩೦೦ ವರ್ಷಗಳ ಹಿಂದೆ ಪರಿಪೂರ್ಣತೆಯನ್ನು ಪಡೆದಿತ್ತು. ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಪ್ರಸ್ತಾಪಿಸಿರುವ ವಿವಾಹದ ಸಮಸ್ಯೆ, ಅಪರಾಧದ ಸಮಸ್ಯೆ, ದಂಡನೆಯ ಸಮಸ್ಯೆ, ಮಾನಸಿಕ ಜಟಿಲತೆ, ರಾಜಕೀಯ ಒಗಟುಗಳೇ ಇಂದು ನನ್ನೆದುರಿಗಿವೆ. ಅವುಗಳಲ್ಲಿ ಒಂದು ರವೆಯಷ್ಟೂ ಬದಲಾಗಿಲ್ಲ. ಆ ಪುಸ್ತಕವನ್ನು ಓದದ ನನ್ನ ಮಿತ್ರರನ್ನು ಅದನ್ನು ಓದಿರೆಂದು ಕೇಳಿಕೊಳ್ಳುತ್ತೇನೆ. ಶುಕ್ರನೀತಿಸಾರವನ್ನೂ ಓದಿ. ನಮ್ಮ ಪುರಾತನ ಸ್ಮೃತಿಕಾರರ ಇತರ ರಾಜ್ಯನೀತಿ ಗ್ರಂಥಗಳನ್ನೂ ಓದಿ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ದುರದೃಷ್ಟವಶಾತ್, ಕೌಟಿಲ್ಯನ ಅರ್ಥಶಾಸ್ತ್ರ ಸಿಕ್ಕುತ್ತಿಲ್ಲ.

**ಡಾ॥ ಬಿ. ಪಟ್ಟಾಭಿ ಸೀತಾರಾಮಯ್ಯ** : ಪಡೆಯಲೇಬೇಕೆಂಬ ಮನಸ್ಸಿದ್ದವರಿಗೆ ಅದು ಖಂಡಿತ ಸಿಕ್ಕುತ್ತದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** : ಆದರೆ, ನಾನು ನನಗೆ ಸಾಧ್ಯವಾದ ಪ್ರಯತ್ನವನ್ನೆಲ್ಲಾ ಮಾಡಿದ್ದೇನೆ.

**ಡಾ॥ ಬಿ. ಪಟ್ಟಾಭಿ ಸೀತಾರಾಮಯ್ಯ** : ಆದುದರಿಂದ, ಪ್ರಗತಿಯ ಹಿನ್ನೆಲೆಯನ್ನೂ ಅದರ ಉಪಾಧಿಗಳನ್ನೂ, ನಾವು ಯಾವುದನ್ನು "ಹಿಂದೂ ಸಮಾಜ" ಎಂದು ಕರೆಯುತ್ತೇವೆಯೋ ಅದರ ವಿಕಾಸದ ಉಪಾಧಿಗಳನ್ನೂ ಸದನವು ತಿಳಿದುಕೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ. ಹಿಂದೂ ಸಮಾಜ ಮತ್ತು ಹಿಂದೂ ಸಂಸ್ಕೃತಿಗಳ ಬಗೆಗೆ ನಾವು ಹೆಮ್ಮೆಪಟ್ಟುಕೊಳ್ಳಬೇಕು ಎಂದು ನಾನು ಹೇಳುತ್ತಿಲ್ಲ. ಏಕೆಂದರೆ ಯಾವುದನ್ನು ಹಿಂದೂ ಸಂಸ್ಕೃತಿ ಎನ್ನಲಾಗುತ್ತಿದೆಯೋ ಅದು ಹೆಚ್ಚಾಗಿ ಭಾರತೀಯ ಸಂಸ್ಕೃತಿಯೇ ಆಗಿದೆ ಹಾಗೂ ಯಾವುದನ್ನು ಹಿಂದೂ ಸಮಾಜ ಎಂದು ಕರೆಯಲಾಗುತ್ತಿದೆಯೋ ಅದು ಹೆಚ್ಚಾಗಿ ಭಾರತೀಯ ಸಮಾಜವೇ ಆಗಿದೆ; ಜಾಟರು, ಮೊಗಲರು, ತುರ್ಕರು, ಇಂಗ್ಲಿಷರು, ಮತ್ತಿತರರು ಇಲ್ಲಿಗೆ ಬಂದು ನಮ್ಮೊಂದಿಗೆ ಬೆರೆತು, ನಮ್ಮಲ್ಲಿದ್ದ ಅನೇಕ ಒಳ್ಳೆಯ ಅಂಶಗಳನ್ನು ತಮ್ಮದಾಗಿಸಿಕೊಂಡಿದ್ದಾರೆ ಹಾಗೂ ತಮ್ಮಲ್ಲಿದ್ದ ಅನೇಕ ಒಳ್ಳೆಯ ಅಂಶಗಳನ್ನು ನಮ್ಮದಾಗಿಸಿಕೊಳ್ಳಲು ಅನುವು ಮಾಡಿಕೊಟ್ಟಿದ್ದಾರೆ. ಹೀಗಾಗಿ, ಈ ಸಂಸ್ಕೃತಿಗಳ ಸಂಗಮವು ನಮ್ಮ ರಾಷ್ಟ್ರೀಯ ಸಂಸ್ಕೃತಿಯನ್ನು ಸಾವಿರಾರು ವರ್ಷಗಳಿಂದ, ಗಾತ್ರದಲ್ಲೂ ಗುಣದಲ್ಲೂ, ಶ್ರೀಮಂತವನ್ನಾಗಿ ಮಾಡಿದೆ. ಈಗ ನಾವು ಆ ಹೆಮ್ಮೆಯ ಪರಂಪರೆಯ ಉತ್ತರಾಧಿಕಾರಿಗಳಾಗಿದ್ದೇವೆ. ಅದರ ಬಗ್ಗೆ ನಾವು ಏನು ಹೇಳೋಣ? ಅದರ ಹಿಂದೆ ಯಾವುದಾದರೊಂದು ತತ್ತ್ವವಿದೆಯೋ ಅಥವಾ ಅದೊಂದು ಆಕಸ್ಮಿಕ

ಬೆಳವಣಿಗೆಯೋ? ಪರಸ್ಪರ ಜೈವಿಕವಾಗಿ ಹೊಂದಿಕೊಳ್ಳದೆ, ಸಮಾನಾಂತರವಾಗಿ ಪರಸ್ಪರ ವಿರೋಧಿಸುವ ಶಕ್ತಿಗಳಿಂದ ಕೂಡಿದ ಕಾರಣಗಳ ಕೂಟವೊ ಅಥವಾ ಸ್ಪಷ್ಟ ರೂಪವಿಲ್ಲದ ಒಂದು ಸಂಘಟನೆಯೋ ಅಥವಾ ಅದು ಎಲ್ಲ ಅಂಶಗಳನ್ನೂ ಜೀರ್ಣಿಸಿಕೊಂಡು ದೋಷಗಳನ್ನು ಮೇಲೇ ಉಳಿಯಲು ಬಿಟ್ಟು ಒಳ್ಳೆಯ ಗುಣಗಳಷ್ಟನ್ನೇ ತನ್ನಲ್ಲಿ ಕರಗಿಸಿಕೊಳ್ಳುವ ಒಂದು ದ್ರಾವಣವೋ? ನಾವು ಪರಿಶೀಲಿಸಬೇಕಾಗಿರುವ ಅಂಶಗಳಿವು. ನಾವು ಈ ದೊಡ್ಡ ಸುಧಾರಣೆಯನ್ನು ಕೈಗೊಳ್ಳುವ ಮೊದಲು ಈ ಎಲ್ಲ ಅಂಶಗಳನ್ನೂ ಪರಿಶೀಲಿಸಿದ್ದೇವೆಯೇ? ಆ ಪರಿಶೀಲನೆ ಯಾವಾಗ ಪ್ರಾರಂಭವಾಯಿತು? ಯಾರ ಕಾಲದಲ್ಲಿ ಪ್ರಾರಂಭವಾಯಿತು? ರಾಷ್ಟ್ರೀಯ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಅದನ್ನು ಕೈಗೆತ್ತಿಕೊಳ್ಳಲಾಯಿತೋ ಅಥವಾ ಕಾರ್ಯದರ್ಶಿಯ ಕಛೇರಿಯ ಮೂಲಕ ಹಿಂದಿನ ಸರ್ಕಾರದಿಂದ ನಮ್ಮ ಕೈಗೆ ಬಂದ ಕೇವಲ ಒಂದು ಬಳುವಳಿಯೋ? ಇದರಲ್ಲಿ ನಮ್ಮ ಪ್ರಾರಂಭಿಕ ಅಧಿಕಾರವೇನು? ಅದರೊಡನೆ ವ್ಯವಹರಿಸುವಲ್ಲಿ ನಮ್ಮ ಪಾತ್ರವೇನು? ನಾನು ಹೇಳಿದಂತೆ, ಸಮಾಜವು ಒಂದು ಜೀವಂತ ಪ್ರಾಣಿ. ಅದರ ಹಿಂದೆ ಕೆಲವು ವಿಶಿಷ್ಟ ದಾರ್ಶನಿಕ ಸತ್ಯಗಳಿವೆ. ಅದರ ಮುಂದೆ ಕೆಲವು ಆರ್ಥಿಕ ಯೋಜನೆಗಳಿವೆ. ಹಿಂದೂ ಸಮಾಜವನ್ನೇ ತೆಗೆದುಕೊಳ್ಳಿ. ಹಿಂದೂ ಸಮಾಜಕ್ಕಿಂತ, ಸ್ವಾಭಾವಿಕವಾಗಿಯೂ ಆಂತರಿಕವಾಗಿಯೂ ಹೆಚ್ಚು ಸಮಾಜವಾದೀಯವಾದ ಮತ್ತೊಂದು ಸಮಾಜವು ಪ್ರಪಂಚದಲ್ಲಿ ನಿಮ್ಮ ಕಣ್ಣಿಗೆ ಬಿದ್ದಿದೆಯೆ?

ನನಗೆ ಐವತ್ತು ಎಕರೆ ಭೂಮಿಯಿದೆ. ನನಗೆ ಇಬ್ಬರು ಗಂಡುಮಕ್ಕಳಿದ್ದಾರೆ. ಅವರಲ್ಲಿ ಪ್ರತಿಯೊಬ್ಬನಿಗೂ ಆರು ಎಕರೆ ಸಿಕ್ಕುತ್ತದೆ. ನಮ್ಮ ಉತ್ತರಾಧಿಕಾರ ಪದ್ಧತಿಯಲ್ಲಿ ಆಸ್ತಿಯು ಒಬ್ಬನ ಹತ್ತಿರ ಮಾತ್ರ ಸೇರಿಕೊಳ್ಳಲು ಬಿಡಲಾಗುತ್ತದೆಯೇ? ಇಲ್ಲವೇ ಇಲ್ಲ. ಅದೊಂದು ಅತ್ಯಂತ ಹೆಚ್ಚಿನ ಸಮಾಜವಾದೀಯ ವ್ಯವಸ್ಥೆ. ಈ ಸಮಾಜವಾದೀಯ ವ್ಯವಸ್ಥೆಯನ್ನು ನೀವು ನಾಶ ಮಾಡಲಿಚ್ಛಿಸುತ್ತಿದ್ದೀರಿ ಹಾಗೂ ಅದರ ಜಾಗದಲ್ಲಿ ವ್ಯಕ್ತಿ ಕೇಂದ್ರಿತ ವ್ಯವಸ್ಥೆಯನ್ನು ಬೆಳೆಸಿ, ಅದರಲ್ಲಿ ಪ್ರತಿಯೊಬ್ಬನೂ ತನ್ನ ಆಸ್ತಿಗೆ ಮಾಲಿಕನಾಗುತ್ತಾನೆ. ಆದರೆ ಅಂಥ ವ್ಯವಸ್ಥೆಯಲ್ಲಿ ಅವನಿಗೆ ಆಸ್ತಿ ಬರುವುದು ಅವನ ಹುಟ್ಟಿನಿಂದಲ್ಲ, ಎಲ್ಲ ಹಕ್ಕುದಾರರೂ ತೀರಿಕೊಂಡ ನಂತರ ಅವನು ಉಳಿದುಕೊಂಡದ್ದಕ್ಕೆ. ಆಗೇನಾಗುತ್ತದೆ? ವ್ಯಕ್ತಿ ಕೇಂದ್ರಿತ ಆಸ್ತಿ ಅಸ್ತಿತ್ವಕ್ಕೆ ಬರುತ್ತದೆ. ಅಲ್ಲಿಂದ ಮುಂದಿನ ಹೆಜ್ಜೆಯೆಂದರೆ ಜನಸಾಮಾನ್ಯರಿಗಾಗಿ ಸಂತಾನೋತ್ಪತ್ತಿ ಕಾಯಿದೆ ಎಂಬ ಡಾ॥ ಅಂಬೇಡ್ಕರರ ಮಸೂದೆಯನ್ನು ತರುವುದು. ಆಗ ನೀವು ಶ್ರೀಮಂತ ಪ್ರಭುತ್ವವನ್ನು ಸೃಷ್ಟಿಸಿ ಬೆಳೆಸುತ್ತೀರಿ. ಆಗ ನೀವು ವರ್ಗರಹಿತ ಸಮಾಜದ ಬದಲು ವರ್ಗಸಹಿತ ಸಮಾಜವನ್ನು ಅಸ್ತಿತ್ವಕ್ಕೆ ತರುತ್ತೀರಿ. ವರ್ಗರಹಿತ ಸಮಾಜದಲ್ಲಿ ವಿದ್ಯೆ ಮತ್ತು ಆಸ್ತಿ, ವಿದ್ಯೆ ಮತ್ತು ಸಂಪತ್ತು ಸಮತೋಲನದಲ್ಲಿರುತ್ತದೆ. ಅಂಥ ಸಮಾಜವು ಸಂಪತ್ತೇ ರಾಜನಾಗಿರುವಂಥ ಸಮಾಜಕ್ಕೆ ತನ್ನ ಸ್ಥಾನ ಬಿಟ್ಟುಕೊಡುತ್ತದೆ. ಪಶ್ಚಿಮದಲ್ಲಿ ಆಗುತ್ತಿರುವುದು ಅದೇ. ಪೂರ್ವದಲ್ಲಿ ಅದು ಖಂಡಿತ ಆಗಲಾರದು. ಇಲ್ಲಿ, ಸಾಮಾಜಿಕ ಸಂಸ್ಥೆಯೆಂಬ ಒಂದು ವ್ಯವಸ್ಥೆಯ ಮೂಲಕ ನಾವು ಸಂಪತ್ತು ಮತ್ತು ಸಂಸ್ಕೃತಿಯನ್ನು ಒಂದು ಸಮತೋಲನದಲ್ಲಿಟ್ಟಿದ್ದೇವೆ; ಹಾಗೂ ಅವುಗಳನ್ನು ಸೃಷ್ಟಿಸಿದ ನಂತರ ಸಂಪತ್ತಿಗಿಂತ ಸಂಸ್ಕೃತಿಗೇ ಹೆಚ್ಚು ಮೌಲ್ಯ ನೀಡುತ್ತಿದ್ದೇವೆ. ಸಂಪತ್ತು ಅಧೀನ (ಕೆಳಗಿನ) ಸ್ಥಾನ ಪಡೆದಿದೆ. ಆದುದರಿಂದ, ಈಗ ನೀವೇನು ಮಾಡಲು ಹೊರಟಿರುವಿರಿ? ನೀವು ಒಬ್ಬ ವಕೀಲನನ್ನು ಹತ್ತು ಲಕ್ಷ ರೂಪಾಯಿ ಕೂಡಿಸಿಡಲು ಬಿಡುತ್ತೀರಿ. ಅವನೇ ಅದಕ್ಕೆ ನಿರಂಕುಶ ಪ್ರಭು. ಅವನನ್ನು ಇಂಗ್ಲೆಂಡಿಗೆ ಕಳಿಸಿ, ಬ್ಯಾರಿಸ್ಟರ್–ಅಟ್–ಲಾ ಮಾಡುವ ಮೂಲಕ. ಅವನ ಸೋದರರು ಕೊಡಬಹುದಾದ ಎಲ್ಲ ಸಂಪತ್ತನ್ನೂ ಅವನು ಗಳಿಸಿದ್ದಾನೆ. ಆದರೆ ಬ್ರಿಟಿಷರು ತಂದಿರುವ ಕಾನೂನಿನ ಪ್ರಕಾರ, ಅವನು ತನ್ನ ವಿದ್ಯೆಯಿಂದ ಗಳಿಸಿದ ಲಾಭವೆಲ್ಲವೂ ಅವನಿಗೆ ಮಾತ್ರ (ಪ್ರತ್ಯೇಕವಾಗಿ) ಸೇರಿದ ಆಸ್ತಿ. ಇದಕ್ಕೆ ಬ್ರಿಟಿಷರ ಆದರ್ಶಗಳೇ

ಕಾರಣ. ಈಗ ನೋಡಿ ಅವನ ಜನರು, ಅವನ ಸೋದರರು, ಅಂದರೆ, ಅವನಂತೆಯೇ ನೈತಿಕ ಕರ್ತವ್ಯಗಳಲ್ಲಿ ನಿರತರಾಗಿದ್ದ ರೈತರು ಮತ್ತು ವರ್ತಕರು ತಮ್ಮ ಆಸ್ತಿಯನ್ನು ವಿದ್ಯಾವಂತನಾದ ಬ್ಯಾರಿಸ್ಟರ್–ಅಟ್–ಲಾ ನೊಂದಿಗೆ ಹಂಚಿಕೊಳ್ಳಬೇಕು. ಆದರೆ ಆ ಬ್ಯಾರಿಸ್ಟರ್–ಅಟ್–ಲಾ ತನ್ನ ಆ ಇಬ್ಬರು ಸೋದರರೊಡನೆ ತನ್ನ ಆಸ್ತಿಯನ್ನು ಹಂಚಿಕೊಳ್ಳದಿರಲು ವಿನಾಯ್ತಿ ಇದೆ. ಇದು ನ್ಯಾಯವೇ? ನಮ್ಮ ಸಮಾಜದಲ್ಲಿ ರೂಢಿಸಿಕೊಂಡಿರುವ ಉನ್ನತ ಆದರ್ಶಗಳಿಗೆ ಹೋಲಿಸಿದರೆ, ಇದೊಂದು ಕ್ರೂರ ಮೂರ್ಖತನವೆನಿಸುತ್ತದೆ.

ಈಗ ಈ ಮಾತನ್ನು ನಿಲ್ಲಿಸಿ ಒಂದು ಪ್ರಶ್ನೆಯನ್ನು ಕೇಳೋಣ : ಈ ಸಮಾಜದ ರಚನೆ ಮತ್ತು ಕಾರ್ಯಗಳ ಹಿಂದಿರುವ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ನೈತಿಕ ನಿಹಿತಾರ್ಥಗಳನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೀವು ನೇಮಿಸಿದ್ದೀರೇನು? ಈ ಸಂರಚನೆಯ ಹಿಂದಿರುವ ಮನೋವಿಜ್ಞಾನದ ಅಧ್ಯಯನದ ಆಧಾರದ ಮೇಲೆ ಮಾಡಿರುವ ವರದಿಯು ನಿಮ್ಮಲ್ಲಿದೆಯೇನು? ಈ ಸಂರಚನೆಯು ಕಾಲದ ಹಾಗೂ ಪರಿಸ್ಥಿತಿಗಳ ಹೊಡೆತಗಳನ್ನು ಐದು ಸಾವಿರ ವರ್ಷಗಳವರೆಗೆ ತಾಳಿಕೊಂಡಿದೆ ಎಂದು ಸುಲಭವಾಗಿ ಹಾಗೂ ಎಲ್ಲರೂ ಒಪ್ಪುವಂತೆ ಹೇಳಬಹುದು. ಪ್ರಾಯಶಃ ಈ ಕಾಲ ಹದಿಮೂರು ಸಾವಿರ ವರ್ಷಗಳಷ್ಟು ಹಿಂದಕ್ಕೆ, ಸಾಧ್ಯವಾದರೆ ಮೂವತ್ತು ಸಾವಿರ ವರ್ಷಗಳ ಹಿಂದಕ್ಕೂ, ಹೋಗಬಹುದು. ಏಕೆಂದರೆ, ಮಹಾಭಾರತ ಮತ್ತು ವೇದಗಳ ಕಾಲದ ಬಗ್ಗೆಯೂ, ನಮ್ಮ ಸಮಾಜ ಮತ್ತು ಪುರಾತನ ನಾಗರಿಕತೆಯ ಕಾಲದ ಬಗ್ಗೆಯೂ ಈ ಮೂರು ರೀತಿಯ ಕಥನಗಳೂ ಇವೆ. ಹಾಗಾದರೆ, ನೀವೇಕೆ ಅದನ್ನು ಮಾಡಿಲ್ಲ? ಆಂಟ್‌ವರ್ಪ್‌ನಿಂದ ಆಮದು ಮಾಡಿಕೊಳ್ಳುವ ಅಲ್ಪ ಪ್ರಮಾಣದ ಕಬ್ಬಿಣದ ಮೇಲೆ ಹಾಕುವ ಸುಂಕಕ್ಕೆ ನೀವು ರಿಯಾಯ್ತಿ ತೋರಿಸುವುದಾದರೆ, ತಲಾ ರೂ. ೩೦೦೦/– ಸಂಬಳ ಪಡೆಯುತ್ತಿರುವ ಮೂರು ಜನರನ್ನು ನೇಮಿಸುತ್ತೀರಿ, ಅವರನ್ನೊಳಗೊಂಡ ಒಂದು ಸುಂಕದ ಸಮಿತಿ ರಚಿಸುತ್ತೀರಿ, ನಮ್ಮ ದೇಶದ ಎಲ್ಲ ಬಂಡವಾಳಶಾಹಿಗಳಿಂದ ಪಡೆದ ಸಾಕ್ಷಿಯ ಆಧಾರದ ಮೇಲೆ ರಚಿತವಾದ ಒಂದು ವರದಿಯನ್ನು ಅವರಿಂದ ಪಡೆಯುತ್ತೀರಿ, ಅದನ್ನು ವಿತ್ತ ಇಲಾಖೆಯಲ್ಲಿ ಪರಿಶೀಲಿಸುತ್ತೀರಿ, ಅದನ್ನು ವಿಧಾನ ಸಭೆಯ ಮುಂದಿಡುತ್ತೀರಿ, ಮತ್ತು ಆ ಸುಂಕಕ್ಕೆ ಮಹತ್ವ ಕೊಡುತ್ತೀರಿ. ನಮ್ಮ ಸಮಾಜಕ್ಕೆ ಸಂಬಂಧಿಸಿದಂತೆ ನೀವೇನು ಮಾಡಿದ್ದೀರಿ? ಈ ಪುರಾತನ ಸಮಾಜ, ಪುರಾತನ ಅಸಂಸ್ಕೃತತೆಯ ಪಳೆಯುಳಿಕೆ, ಹಳೆಯ ಕಂದಾಚಾರದ ಹೆಜ್ಜೆಗುರುತಿನ ಸಮಾಜದ ಬಗ್ಗೆ ಚಿಟಿಕೆ ಹಾರಿಸಿ ಆಲಕ್ಷ್ಯ ತೋರಿಸುತ್ತಿದ್ದೀರಿ! ಬೇಡ! 'ನಿಮ್ಮ ಕೆಲಸವನ್ನು ಪೂರ್ತಿಗೊಳಿಸೋಣ' ಎನ್ನಿ.

ನಾವು ಲಂಡನ್ನಿನ ವಿಶ್ವವಿದ್ಯಾಲಯಗಳ ಅಚ್ಚಿನಲ್ಲೇ ನಮ್ಮ ವಿಶ್ವವಿದ್ಯಾಲಯಗಳನ್ನು ಎರಕ ಹೊಯ್ದಿದ್ದೇವೆ; ಲಂಡನ್ನಿನ ಉಚ್ಚ ನ್ಯಾಯಾಲಯಗಳ ಮಾದರಿಯಲ್ಲೇ ನಮ್ಮ ಕಾನೂನು ವ್ಯವಸ್ಥೆಯನ್ನು ರೂಪಿಸಿದ್ದೇವೆ; ನಾವು ನಮ್ಮ ವಿಧಾನಪರಿಷತ್ತುಗಳನ್ನೂ ವಿಧಾನಸಭೆಗಳನ್ನೂ ಪಾಶ್ಚಾತ್ಯ ಸಂಸತ್ತಿನ ಮಾದರಿಯಲ್ಲಿ ಕೆತ್ತಿದ್ದೇವೆ; ಈಗ ನಮಗೆ ಉಳಿದಿರುವುದು ಪಾಶ್ಚಾತ್ಯ ಸಮಾಜವನ್ನೂ ಪಾಶ್ಚಾತ್ಯ ರೀತಿನೀತಿಗಳನ್ನೂ. ಪಾಶ್ಚಾತ್ಯ ಸಾಮಾಜಿಕ ಸಂಸ್ಥೆಗಳನ್ನೂ ಪಾಶ್ಚಾತ್ಯ ನಾಗರಿಕ ಕಾನೂನುಗಳನ್ನೂ ಅನುಕರಿಸುವುದು ಮಾತ್ರ. ದಯವಿಟ್ಟು ನನ್ನನ್ನು ಅಪಾರ್ಥಮಾಡಿಕೊಳ್ಳಬೇಡಿ. ವಿವಾಹ ವಿಚ್ಛೇದನದ ಬಗ್ಗೆ ನನಗೆ ಬಹಳ ದಿನಗಳಿಂದಲೂ ಸಹಾನುಭೂತಿಯಿದೆ. ನಾನು ನನ್ನ ಹೆಂಡತಿಯಿಂದ ವಿಚ್ಛೇದನ ಪಡೆಯಬೇಕೆಂದು ಯೋಚಿಸುತ್ತಿದ್ದೇನೆ ಹಾಗೂ ನನ್ನ ಹೆಂಡತಿಗೂ ಅದೇ ಗೌರವವನ್ನು ನನಗೆ ಹಿಂತಿರುಗಿಸುವ ಇಚ್ಛೆ ಇದೆ ಎಂದು ಕೇಳಿದ್ದೇನೆ. ಇದು ಪ್ರಸ್ತುತದ ವಿಷಯವಲ್ಲ. ಈ ಕಾಯಿದೆಯ ಅನೇಕ ಅಂಶಗಳ ಬಗ್ಗೆ ನನಗೆ ಸಹಾನುಭೂತಿ ಇದೆ. ಆದರೆ, ನೀವು ಸ್ವರಾಜ್ಯವನ್ನು ಗಳಿಸಿದ ನಂತರ ಭಾರತೀಯ ಸಂಸ್ಥೆಗಳನ್ನು ನೀವು ಯಾವ ದೃಷ್ಟಿಕೋನ ಹಾಗೂ ಧೋರಣೆಯಿಂದ

ನೋಡುತ್ತಿದ್ದೀರೆಂದು ನಾನು ತಿಳಿಸಬೇಕಾಗಿದೆ. ಈ ರೀತಿ ಕ್ಷಿಪ್ರಗತಿಯಲ್ಲಿ ಏನೂ ಪೂರ್ವಸಿದ್ಧತೆಯಿಲ್ಲದೆ ಈ ಸಮಸ್ಯೆಯನ್ನು ಕುರಿತು ವ್ಯವಹರಿಸುವ ವಿಧಾನವು ನನ್ನ ಬುದ್ಧಿಗೆ ಒಪ್ಪಿಗೆಯಾಗುವುದಿಲ್ಲ; ನನ್ನ ಅಭಿಪ್ರಾಯಗಳಿಗಂತೂ ಇನ್ನೂ ಹೆಚ್ಚು ವಿರುದ್ಧವಾಗಿದೆ. ಆದರೆ, ನನಗೆ ಗೊತ್ತು, ನೀವು "ಓ, ಕಾಂಗ್ರೆಸ್ ವಿಧಾನಸಭೆಯಿಂದ ಹೊರಗೆ ಹೋದಾಗಿನಿಂದ ಈ ಮಸೂದೆಯು ಅನಿರ್ಣೀತವಾಗೇ ಇದೆ" ಎಂದು ಹೇಳುತ್ತೀರೆಂದು. ಹೌದು, ಅದು ಅನಿರ್ಣೀತವಾಗೇ ಇದೆ! ಆದರೆ, ೧೯೩೮ರ ಜುಲೈನಲ್ಲಿ ಕಾಂಗ್ರೆಸ್ ವಿಧಾನಸಭೆಯಿಂದ ಸಭಾತ್ಯಾಗ ಮಾಡಿ ಹೊರಬರಬೇಕೆಂದು ಒಂದು ಗೊತ್ತುವಳಿ ಠರಾವು ಮಾಡಿತು; ಏಕೆಂದರೆ, ಆಗ ಈಜಿಪ್ಟ್ ಮತ್ತು ಸಿಂಗಪುರಗಳನ್ನು ಭಾರತದ ಗಡಿನಾಡುಗಳೆಂದು ಪರಿಗಣಿಸಿ, ಅಲ್ಲಿಗೆ ಸೈನ್ಯವನ್ನು ಕಳಿಸಲಾಗಿತ್ತು. ಇದನ್ನು ಸ್ಮರಿಸಿಕೊಳ್ಳಿ. ಆದುದರಿಂದ, ಆ ಕ್ರಿಯೆಗೆ ವಿರೋಧ ತೋರಿಸಲು ಹಾಗೂ ವಿಧಾನಸಭೆಯಿಂದ ಸ್ಪಷ್ಟ ಅನುಮತಿ ಪಡೆಯದೆ ತಾನು ಯಾವ ಹೊರದೇಶಕ್ಕೂ ಸೈನ್ಯವನ್ನು ಕಳಿಸುವುದಿಲ್ಲ ಎಂದು ಹೇಳಿದ ಸರ್ಕಾರವು ತಾನು ನೀಡಿದ ಪ್ರಮಾಣವಚನದ ಉಲ್ಲಂಘನೆಗೆ ವಿರೋಧ ತೋರಿಸಲು, ನಾವು ಅಂದು ಸಭಾತ್ಯಾಗ ಮಾಡಿದೆವು ಮತ್ತು ೧೯೪೬ ರವರೆಗೆ ನಾವು ಒಳಗೆ ಬರಲೇ ಇಲ್ಲ. ಈ ಅವಧಿಯಲ್ಲಿ ದೇಶಭಕ್ತಿಯಿಲ್ಲದವರು, ಪಾಶ್ಚಾತ್ಯ ನಾಗರಿಕತೆಯನ್ನು ಆಶ್ರಯಿಸುತ್ತಿದ್ದವರು. ಹೊರ ದೇಶದಲ್ಲಿ ಕಳೆದವರು ಒಂದು ಸಮಿತಿಯಲ್ಲಿ ಸೇರಿಸಲ್ಪಟ್ಟರು, ಮತ್ತು ಅವರು ನಮಗಾಗಿ ಈ ಸೂತ್ರವನ್ನು ತಯಾರಿಸಿದರು. ನಾವು ಅಹಮದ್‌ನಗರದ ಜೈಲಿನಲ್ಲಿರುವಾಗ, ೧೯೪೪ರ ಅಕ್ಟೋಬರಿನಲ್ಲಿ ಹಿಂದೂ ಕಾನೂನು ಸುಧಾರಣಾ ಸಮಿತಿಯ ಮೊದಲ ವರದಿ ನನಗೆ ಸಿಕ್ಕಿತು. ಈ ಹೊಸ ಸಂವಿಧಾನದಲ್ಲಿ ನಾವು ಸಾಧಿಸಿರುವುದಕ್ಕೆಲ್ಲ, ಈ ಕಾಯಿದೆಯ ಮುಖ್ಯ ಸ್ಫೂರ್ತಿಯೂ ಕರ್ತೃವೂ ಆದ ಶ್ರೀ ಬಿ.ಎನ್. ರಾವ್ ಅವರಿಗೆ ನಾವು ಋಣಿಯಾಗಿದ್ದೇವೆ. ಅವರು ಸಂವಿಧಾನಾತ್ಮಕ ಕಾನೂನು, ಪ್ರಕರಣ ಕಾನೂನು, ಕ್ರೋಡೀಕರಿಸಿದ ಕಾನೂನು ಮತ್ತು ರೂಢಾತ್ಮಕ ಕಾನೂನು– ಇವುಗಳ ಜ್ಞಾನಕ್ಕೆ ಹೆಸರಾದವರು; ಹಾಗೂ ಅವರು ನಮಗೆ ಪ್ರಾಮಾಣಿಕ ಸೇವೆ ಮಾಡಿದ್ದಾರೆ. ದಾಯಭಾಗ ಪದ್ಧತಿಯಿರುವ ಬಂಗಾಳದಲ್ಲಿ ಅವರು ಕಲ್ಕತ್ತಾದ ಹೈಕೋರ್ಟಿಗೆ ನ್ಯಾಯಾಧೀಶರಾಗಿದ್ದರು. ಮದ್ರಾಸ್ ಮತ್ತು ಇನ್ನೂ ಒಂದೆರಡು ಪ್ರಾಂತಗಳಲ್ಲಿ ಮಿತಾಕ್ಷರ ಪದ್ಧತಿಯೂ, ಮುಂಬಯಿಯಲ್ಲಿ ಮಯೂಖ ಪದ್ಧತಿಯೂ ಇವೆ ಎಂಬುದು ನಿಮಗೆ ಗೊತ್ತಿದೆಯೆಂದು ನಂಬುತ್ತೇನೆ. ಎಂದೂ ಮಿತಾಕ್ಷರ ಪದ್ಧತಿಯ ಅನುಭವವನ್ನು ಪಡೆಯದ, ಕಲ್ಕತ್ತಾ ಹೈಕೋರ್ಟಿನ ನ್ಯಾಯಾಧೀಶರಾಗಿದ್ದ ಹಾಗೂ ಕಾನೂನಿನ ಬಗ್ಗೆ ಇನ್ನಿಲ್ಲ ಎಂಬಂತೆ ಜ್ಞಾನ ಪಡೆದಿದ್ದ ಈ ಮಹನೀಯರು ಇದನ್ನು ಪ್ರಾರಂಭ ಮಾಡಿಸಿದ್ದಾರೆ. ಆಮೇಲೆ, ಕಾಂಗ್ರೆಸ್ ಪಕ್ಷವು ಅಥವಾ ಜನಪ್ರಿಯ ಪಕ್ಷವು ಈ ಸಮಸ್ಯೆಯನ್ನು ಕೇಂದ್ರೀಯ ವಿಧಾನಸಭೆಯಲ್ಲಿ ಚರ್ಚಿಸುವ ಅವಕಾಶವನ್ನು ಪಡೆಯಲೇ ಇಲ್ಲ. ಅನಂತರ ಕಾನೂನು ಸದಸ್ಯರೆಂದು ಬಂದ ಶ್ರೀ ಅಶೋಕ ರಾಯ್ ಅವರು ತಾವು ಈ ಮಸೂದೆಯನ್ನು ಒಂದು ಹರಿಗೋಲಿನಿಂದಲೂ ಮುಟ್ಟುವುದಿಲ್ಲ ಎಂದರು (ಶ್ರೀ ಮಹಾವೀರ್ ತ್ಯಾಗಿ : ಹರಿಗೋಲು ಎಂದರೇನು?). ಹರಿಗೋಲು (barge pole) ಎಂದರೆ ಚಪ್ಪಟೆ ತಳದ ದೋಣಿಯಲ್ಲಿ ಸಾಗಲು ಉಪಯೋಗಿಸುವ ಉದ್ದನೆಯ ಕೋಲು.

ಅಂತೂ ಈ ವಿಷಯ ಚರ್ಚೆಗೆ ಬಂದಿದೆ, ಕುತೂಹಲದಿಂದಲೂ ಆಸೆಯಿಂದಲೂ ನಾವು ಇದಕ್ಕಾಗಿಯೇ ಕಾಯುತ್ತಿದ್ದೆವೇನೋ ಎಂಬಂತೆ, ನಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಇದರ ಬಗ್ಗೆ ಚಕಾರವೆತ್ತದೆ ಇದನ್ನು ಕೈಗೆತ್ತಿಕೊಂಡಿದ್ದೇವೆ. ಚೈನಾದಿಂದ ಪೆರುವರೆಗಿನ ಎಲ್ಲ ಸಮಸ್ಯೆಗಳನ್ನೂ ಪ್ರಮುಖ ಕೈಗಾರಿಕೆಗಳ ರಾಷ್ಟ್ರೀಕರಣ ವಿಚಾರವನ್ನೂ, ಮದ್ಯಪಾನ ಮತ್ತು ಜಮೀನ್ದಾರಿ ಪದ್ಧತಿ ಮತ್ತು ಇತರ ವಿಷಯಗಳ ನಿಷೇಧವನ್ನು ಒಳಗೊಂಡ ಸವಿಸ್ತಾರವಾದ ಚುನಾವಣಾ ಪ್ರಣಾಳಿಯನ್ನೂ ರಚಿಸಿ, ಭಾರತಕ್ಕೆ ಸಂಬಂಧಿಸಿದಂತೆ ಕೇಂದ್ರ

ವಿಷಯವಾಗಿರುವ ಸಮಾಜ ಸುಧಾರಣೆಯ ಬಗ್ಗೆ ಮಾತ್ರ ಚಕಾರವೆತ್ತದಿರುವ ಪಕ್ಷವನ್ನು ನೀವೆಲ್ಲಾದರೂ ನೋಡಿದ್ದೀರಾ?

ಇದು ಸಮಾಜ ಸುಧಾರಣೆಗೆ ಸಂಬಂಧಿಸಿದ ಕೇವಲ ಒಂದು ಸಣ್ಣ ವಿಷಯವಲ್ಲ. ಭಾರತದಲ್ಲಿ ಸಮಾಜವು ಧರ್ಮದೊಂದಿಗೆ ಹಾಸುಹೊಕ್ಕಾಗಿ ಕೂಡಿಕೊಂಡಿದೆ. ಪ್ರತಿಯೊಂದಕ್ಕೂ ಧರ್ಮವೇ ಪ್ರಮಾಣ. ನಾನೇನೋ ಪರಮ ನಾಸ್ತಿಕನಿರಬಹುದು; ಆದರೆ ನನ್ನ ನೆರೆಹೊರೆಯವರ ಭಾವನೆಗಳಲ್ಲಿ ಈ ಬಗ್ಗೆ ನನಗೆ ಬಹಳ ಆದರವಿದೆ. ಅಲ್ಲದಿದ್ದರೆ, ನಾನೊಬ್ಬ ಅಸಂಸ್ಕೃತ ಗಮಾರನಾದೇನು. ಪರರಿಗೆ ಸಂಬಂಧಿಸಿದಂತೆ ನಾನು ನನ್ನ ನಾಸ್ತಿಕ್ಯವನ್ನು ಪಾಲಿಸಿದರೆ, ನಾನು ತಿನ್ನುತ್ತಿರುವ ಉಪ್ಪಿಗೂ ಯೋಗ್ಯನಲ್ಲ. ಆದುದರಿಂದ, ಧರ್ಮವೊಂದೇ ಅಲ್ಲ, ಆರ್ಥಿಕ ಅಂಶಗಳು, ಸಾಮಾಜಿಕ ಅಂಶಗಳು, ಮತ್ತಿತರ ಅಂಶಗಳು ಸಹ ಹಾಸುಹೊಕ್ಕಾಗಿ ಸೇರಿಕೊಂಡಿವೆ. ಅವಿಭಕ್ತ ಕುಟುಂಬ ಪದ್ಧತಿ ಯುಗಾಂತರ ಸೃಷ್ಟಿ. ಈ ಅವಿಭಕ್ತ ಕುಟುಂಬ ಪದ್ಧತಿ ಎಂದರೇನು? ಅದೊಂದು ವಿಮಾ ಪದ್ಧತಿ; ಅದೊಂದು ಸಹಕಾರಿ ಸಂಘ; ಅದೊಂದು ಕಾರ್ಮಿಕ ಸಮಾಜ.

ಸಂಜೆ ೫ ಗಂಟೆಯಲ್ಲಿ :

ಅದೊಂದು ಕಾರ್ಮಿಕ ಸಮಾಜ, ಏಕೆಂದರೆ ಅದರಲ್ಲಿ ಎಲ್ಲ ಬಡ ಸೋದರರೂ ಬೆವರು ಸುರಿಸಿ ದುಡಿಯುತ್ತಾರೆ; ಅದೊಂದು ಸಹಕಾರಿ ಸಮಾಜವೇಕೆಂದರೆ, ಎಲ್ಲರಿಗೂ ಪ್ರತಿಯೊಬ್ಬ, ಪ್ರತಿಯೊಬ್ಬನಿಗೂ ಎಲ್ಲರು ಎಂಬ ತತ್ತ್ವದ ಮೇಲೆ ಅಲ್ಲಿ ಎಲ್ಲ ಸೋದರರೂ ಒಟ್ಟಿಗೆ ಕೂಡಿ ಬಾಳುತ್ತಾರೆ; ಅದೊಂದು ವಿಮಾ ಸಂಘವೇಕೆಂದರೆ, ಮೃತ ಸೋದರನ ಪತ್ನಿಯನ್ನು ಉಳಿದಿರುವ ಸೋದರರು ತಮ್ಮ ವಾರಸಿನಲ್ಲಿಟ್ಟುಕೊಂಡು ಆಕೆಗೆ ರಕ್ಷಣೆ ನೀಡುತ್ತಾರೆ. ಮಹಾತ್ಮ ಗಾಂಧಿ ವಿಮೆಯನ್ನು ವಿರೋಧಿಸಿದಾಗ, ಅವರ ಅರ್ಥ ಇದೇ ಆಗಿತ್ತು. ಆದರೆ ಪ್ರತಿಯೊಬ್ಬರೂ ಮಹಾತ್ಮಾಜಿಯವರಲ್ಲವೆಂದು ನನಗೆ ಗೊತ್ತು. ಹಿಂದೂ ಅವಿಭಕ್ತ ಕುಟುಂಬವು ಧಾರ್ಮಿಕ ಹಿನ್ನೆಲೆಯುಳ್ಳ ಹಾಗೂ ಸಾಮಾಜಿಕ ಬಂಧನದಿಂದ ಹಿಡಿದಿಟ್ಟುಕೊಂಡಿರುವ– ಈ ಮೂರು ಅಂಶಗಳನ್ನುಳ್ಳ ಒಂದು ಉನ್ನತ ರೀತಿಯ ಸಂಘಟನೆ. ನಿಮ್ಮ ಎಲ್ಲ ಪ್ರಯತ್ನಗಳ ಮೂಲಕ, ಎಲ್ಲ ಶಾಸನಗಳ ಮೂಲಕ, ಹ್ಯಾಲಿಸ್‌ಬರಿಯ ಇಂಗ್ಲೆಂಡ್ ಕಾನೂನುಗಳ (Laws of England) ಮೂಲಕ ಅದಕ್ಕೆ ಸಮನಾದ ಮತ್ತೊಂದು ವ್ಯವಸ್ಥೆಯನ್ನು ನೀವು ಸೃಷ್ಟಿಸಬಲ್ಲಿರೇನು? ರಾಷ್ಟ್ರಪಿತ ಮರುಸಂಶೋಧಿಸಿದ ಕೈನೂಲು–ಆರ್ಥಿಕ ವ್ಯವಸ್ಥೆಗೆ ಸರಿಸಮನಾದ ಆರ್ಥಿಕ ವ್ಯವಸ್ಥೆಯನ್ನು ಹೇಗೆ ಸೃಷ್ಟಿಸಲಾಗುವುದಿಲ್ಲವೋ ಹಾಗೆಯೇ ಹಿಂದೂ ಅವಿಭಕ್ತ ಕುಟುಂಬಕ್ಕೆ ಸಮನಾದುದನ್ನು ಸೃಷ್ಟಿಸಲಾಗುವುದಿಲ್ಲ. ನಾನು ಎಂದಿನಂತೆ ಅಸಭ್ಯತೆಯಿಂದ ಹೇಳಲು ನನಗೆ ಅಪ್ಪಣೆ ಕೊಡಿ – ನಾನು ೧೯೩೮ ರಲ್ಲಿ "The Hindu Home Rediscovered" ("ಹಿಂದೂ ಕುಟುಂಬ – ಮರು ಸಂಶೋಧಿತ") ಎಂಬ ಪುಸ್ತಕ ಬರೆದೆ. ನಾನು ಒಬ್ಬ ನಾಸ್ತಿಕನಂತೆ ಝೀವನವನ್ನು ಪ್ರವೇಶಿಸಿ, ಕ್ರೈಸ್ತ ಸಂಪ್ರದಾಯ ಹಾಗೂ ಪಾಶ್ಚಾತ್ಯ ನಾಸ್ತಿಕ್ಯದಲ್ಲಿ ಬೆಳೆದಂತೆಲ್ಲ, ಪ್ರತಿಯೊಂದು ಹಿಂದೂ ಹಬ್ಬದಲ್ಲಿಯೂ, ಪ್ರತಿಯೊಂದು ಸಮಾರಂಭದಲ್ಲಿಯೂ, ಹಿಂದೂ ಸಮಾಜದ ಪ್ರತಿಯೊಂದು ಧಾರ್ಮಿಕ ಆಚರಣೆಯಲ್ಲಿಯೂ, ಗಾಢ ಧಾರ್ಮಿಕ, ಉತ್ತೇಜಕ, ಸ್ಫೂರ್ತಿದಾಯಕ, ಆರ್ಯತೆ ಕೊಡುವಂಥದೇನೋ ಇದೆ ಎಂಬುದನ್ನು ಕಂಡುಕೊಂಡೆ. ನಾನು ನನ್ನ ಸೋದರ–ಸೋದರಿಯರೊಡನೆ ಕೂಡಿ ಬಾಳಿದಾಗ ಕುಟುಂಬವೆಂದರೇನೆಂಬುದನ್ನು ಮರು ಸಂಶೋಧಿಸಿದೆ. ಮತ್ತು ಇಪ್ಪತ್ತೈದು ವರ್ಷಗಳ ನಂತರ ಈ ಸಣ್ಣ ಪುಸ್ತಕವನ್ನು ಬರೆಯುವ ಸಾಹಸ ಮಾಡಿ, ಅದರಲ್ಲಿ ಇವುಗಳನ್ನು ಆದರ್ಶೀಕರಿಸಲು ಪ್ರಯತ್ನಿಸಿದ್ದೇನೆ. ಈ ಆದರ್ಶಗಳು ನಮ್ಮ ಝೀವನದಲ್ಲಿ ಖಂಡಿತ ಇವೆ ಎಂದೇನೂ ನಾನು ಹೇಳುತ್ತಿಲ್ಲ.

ಆದರೆ ನೀವು ಯಾವುದೇ ಸಂಸ್ಥೆಯ ಯೋಗ್ಯತೆಯನ್ನು ಅಳೆಯುವಾಗ ಅದರ ಮೂಲ ಸ್ಥಿತಿಯಲ್ಲಿದ್ದ ಶುದ್ಧತೆಯನ್ನು ಅಳೆಯಬೇಕೇ ಹೊರತು, ಅವನ ಸ್ಥಿತಿಯಲ್ಲಿರುವ ಅನುಕರಣೆಯನ್ನಲ್ಲ. ಯಾವುದೇ ಪರಿಕಲ್ಪನೆಯನ್ನು ನೀವು ಆದರ್ಶೀಕರಿಸಲಿಚ್ಛಿಸಿದರೆ, ಮೊದಲು ಯಾವುದಾದರೊಂದು ಸಂಸ್ಥೆಯನ್ನು ಜನಪ್ರಿಯಗೊಳಿಸಿ. ಅದಕ್ಕೆ ಮತ್ತೆ ಝೀವ ತುಂಬಿ; ಆಮೇಲೆ ಅದನ್ನು ಹೇಗೆ ಕಲ್ಪಿಸಿಕೊಳ್ಳಲಾಗಿತ್ತೋ ಹಾಗೆಯೇ ಅದನ್ನು ರಾಷ್ಟ್ರದ ಮುಂದಿಟ್ಟು, ರಾಷ್ಟ್ರದ ಅನುಮತಿ ಪಡೆಯಿರಿ. ನಾನು ಹೋದ ಕಡೆಯೆಲ್ಲ ಈ ಮಸೂದೆಗೆ ಸಂಬಂಧಿಸಿದ ಪ್ರತಿಯೊಂದು ವಿಷಯದಲ್ಲೂ ಸಾಧಕ–ಬಾಧಕಗಳ ಬಗ್ಗೆ ತಿಳಿಸುತ್ತೇನೆಂದು ನಿಮಗೆ ಭರವಸೆ ನೀಡುತ್ತೇನೆ. ಈ ಮಸೂದೆಯು ಪಾರ್ಸನ್ನನ ತತ್ತಿಯಂತೆ ಭಾಗಶಃ ಒಳ್ಳೆಯದಿರಬಹುದು ಮತ್ತು ಭಾಗಶಃ ಕೆಟ್ಟದೂ ಇರಬಹುದು. ಇದನ್ನು ಸ್ತ್ರೀಯರಿಗಾಗಿ ಮಾಡಬೇಕು, ಏಕೆಂದರೆ ಅವರಿಗೆ ಹಕ್ಕು ಸಿಕ್ಕಿದೆ ಎಂದು ನೀವು ಹೇಳುವಿರಾದರೆ, ಮಾಡಿ, ಅದಕ್ಕೆ ಯಾವ ಅಡ್ಡಿಯೂ ಇಲ್ಲ; ಆದರೆ ಹೀಗೆ ಸಿಟ್ಟಿನಿಂದ ಏಕೆ ಮಾಡುತ್ತೀರಿ? ಅವರಿಗೆ ಹಕ್ಕು ಸಿಕ್ಕಬೇಕೆಂಬುದೇ ನನ್ನ ಇಚ್ಛೆ; ಅವರಿಗೆ ಹಕ್ಕು ಸಿಕ್ಕಿದೆ, ಮತ್ತು ಮುಂದಿನ ವಿಧಾನಸಭೆಯಲ್ಲಿ ಅವರು ಅರ್ಧ ಸೀಟುಗಳನ್ನು ಆಕ್ರಮಿಸಿಕೊಳ್ಳುವರೆಂಬ ಭರವಸೆ ನನಗಿದೆ; ಸ್ತ್ರೀಯರು ಮನಸ್ಸು ಮಾಡಿದ್ದೇ ಆದರೆ, ಐನೂರರಲ್ಲಿ ಖಂಡಿತ ಇನ್ನೂರಾ ಐವತ್ತರಷ್ಟು ಸ್ತ್ರೀಯರಿರಬಹುದು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ನೀವು ಅದಕ್ಕೆ ಎಡೆ ಮಾಡಿಕೊಡುತ್ತೀರಾ?

**ಡಾ॥ ಬಿ. ಪಟ್ಟಾಭಿ ಸೀತಾರಾಮಯ್ಯ :** ರಾಜಕುಮಾರಿಯವರು ಪ್ರಾಂತೀಯ ಮಾದರಿ ಸಂವಿಧಾನ ಸಮಿತಿ (Provincial Model Constitution Committee)ಯ ಮುಂದೆ ಸ್ತ್ರೀಯರಿಗೆ ಯಾವ ಮೀಸಲಾತಿಯೂ ಬೇಡ ಎಂದು ಹೇಳಿದಾಗ, ನಾನು ಅದನ್ನು ಮೆಚ್ಚಿದೆ. ಆಗ ಅದೊಂದು ಉದ್ಧಟತನದ ಮಾತೆಂದು ಅವರು ತುಂಬಾ ಹೊಣೆಯನ್ನು ಹೊರಬೇಕೆಂದೂ ಅನ್ನಿಸಿತು; ಆದರೆ ಸ್ತ್ರೀಯರು ತಮ್ಮನ್ನು ತಾವೇ ರಕ್ಷಿಸಿಕೊಳ್ಳಲು ಸಾಕಷ್ಟು ಸಮರ್ಥರಾಗಿದ್ದಾರೆಂದು ಈಗ ನನಗೆ ಗೊತ್ತಾಗಿದೆ. ಈ ಸದನದ ಅರ್ಧ ಡಜನ್ ಸ್ತ್ರೀ ಸದಸ್ಯರು ನಮ್ಮ ಕಾಲು ಹಿಡಿದು ಎಳೆದು, ನಮ್ಮನ್ನು ಈ ಮಸೂದೆಯನ್ನು ಕೈಗೆತ್ತಿಕೊಳ್ಳುವಂತೆ ಮಾಡಬಲ್ಲವರಾಗಿದ್ದರೆ, ಇಲ್ಲಿ ಅವರು ಇನ್ನೂರಾ ಐವತ್ತು ಜನರಿದ್ದಿದ್ದರೆ ನಮ್ಮ ಪರಿಸ್ಥಿತಿ ಏನಾಗಬಹುದೆಂದು ನನಗೆ ಸೋಜಿಗವಾಗುತ್ತದೆ. ನಾನು ತಮಾಷೆ ಮಾಡುತ್ತಿಲ್ಲ. ಆಯ್ಕೆ ಮಾಡುವ ಸಮಯದಲ್ಲಿ ನನ್ನ ಮಾತಿಗೆ ಬೆಲೆ ಕೊಟ್ಟರೆ, ನಾನು ಖಂಡಿತ ಆಯ್ಕೆ ಮಾಡುತ್ತೇನೆ – ಶ್ರೀ ರೋಹಿಣಿ ಕುಮಾರ್ ಚೌಧರಿಯವರು ವಿರೋಧಿಸಿದರೂ.

(ಆ ವೇಳೆಗೆ ಮಾನ್ಯ ಉಪ ಸಭಾಪತಿಗಳು ತಮ್ಮ ಆಸನವನ್ನು ಬಿಟ್ಟಿದ್ದಾಗ, ಅಧ್ಯಕ್ಷರುಗಳ ಪಟ್ಟಿಯಲ್ಲಿ ಒಬ್ಬರಾದ ಶ್ರೀ ಎಸ್. ವಿ ಕೃಷ್ಣಮೂರ್ತಿ ರಾವ್ ಅದರಲ್ಲಿ ಕುಳಿತರು)

ಈ ಸಂದರ್ಭದಲ್ಲಿ ಮಾರ್ಚ್ ೧೨, ೧೯೪೯ ರ ಪಿಕ್ಚರ್ ಪೋಸ್ಟ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿರುವ ಒಂದು ಸಣ್ಣ ಹೇಳಿಕೆಯನ್ನು ನನಗೆ ಓದುವ ತವಕವಾಗುತ್ತಿದೆ.

"ಸಮಾನತೆ ಬೇಕು ಎಂದು ಸ್ತ್ರೀಯರಿಂದ ನಿರಂತರ ಕೂಗು ಕೇಳಿಸುತ್ತಿದೆ. ಸಮಾನತೆಯೆಂದರೆ ಆಕೆ ಏನೆಂದು ತಿಳಿದುಕೊಂಡಿದ್ದಾಳೆ? ವಸ್ತುಗಳ ಮಟ್ಟಿಗಂತೂ ಅವಳದು ಸಿಂಹಪಾಲು. ಪ್ರಾಯಶಃ ಶೇಕಡಾ ತೊಂಬತ್ತರಷ್ಟು ಜಾಹೀರಾತುಗಳು ಅವಳ ಅಭಿರುಚಿಗೆ ತಕ್ಕುದಾಗಿವೆ. ಚಿತ್ರ ನಿರ್ಮಾಪಕರು ಶೇಕಡಾ ಎಂಬತ್ತರಷ್ಟು ಚಿತ್ರಗಳನ್ನು ಸ್ತ್ರೀಯರಿಗೋಸ್ಕರವೇ ಮಾಡುವುದಾಗಿ ಹೇಳುತ್ತಾರೆ. ಕಥೆ ಕಾದಂಬರಿಗಳ ಪ್ರಕಾಶಕರು ಹೆಂಗಸರನ್ನು ದೃಷ್ಟಿಯಲ್ಲಿಟ್ಟುಕೊಂಡೇ ಚಿಂತಿಸುತ್ತಾರೆ. ಬಟ್ಟೆಗಳ ವಿಷಯದಲ್ಲಿ ಹೇಳಬೇಕೆಂದರೆ : ವಿವಿಧ ಶ್ರೇಣಿಯ ಬೆಲೆಗಳಲ್ಲಿ ವಿವಿಧ ರೀತಿಯ ಸ್ತ್ರೀಯರ ಉಡುಪುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ;

ಆದರೆ ಜೀರ್ಣವಾದ ಬಟ್ಟೆ ತೊಟ್ಟಿರುವ ಬಡ ಗಂಡಸು ಕೆಲವೇ ತುಚ್ಛ ಸೂಟಿಂಗ್‌ಗಳನ್ನು ಮಬ್ಬು ಮಬ್ಬಾದ ಪ್ರದರ್ಶನ ಖಾನೆಗಳಲ್ಲಿ ಬಹಳ ಹೊತ್ತು ನೋಡಿ, ಕಲ್ಪನೆಗೆ ಮಾತ್ರ ಎಟಕುವ ಅವುಗಳ ಬೆಲೆಗಳನ್ನು ಕುರಿತು ಚಿಂತಿಸುತ್ತಾನೆ. ಭವಿಷ್ಯದೊಳಗೇನಿದೆ ಎಂಬುದನ್ನು ನಾವು ನಮ್ಮ ದ್ರಷ್ಟಾರರ ಕಣ್ಣುಗಳ ಮೂಲಕ ನೋಡೋಣ. ಸ್ತ್ರೀಗೆ ಸಿಕ್ಕಿರುವುದು ಸಮಾನತೆಗಿಂತ ಹೆಚ್ಚಾಗಿದೆ; ಹಾಗೂ ಗಂಡಸು ಅವಿವಾಹಿತ ಸ್ತ್ರೀ ಎಸೆದ ಚೂರುಪಾರುಗಳನ್ನು ತಿಂದು ಬದುಕಿಕೊಂಡಿರುವ ಸಾಕಿದ ನಾಯಿಯಾಗಿದ್ದಾನೆ; ಪ್ರತಿಯೊಂದು ಸುಂದರವಾದ, ಔದಾಸೀನ್ಯ."

ತಾಳ್ಮೆಯಿಂದಿದ್ದರೆ ಏನನ್ನೂ ಕಳೆದುಕೊಳ್ಳುವುದಿಲ್ಲ ಎಂದು ನನ್ನ ಸೋದರಿಯರಿಗೆ ನಾನು ಭರವಸೆ ನೀಡುತ್ತೇನೆ. ಕೆಲವು ದಿನಗಳ ಹಿಂದೆ ಬನಾರಸಿನ ಸ್ವಾಮೀಜಿಯೊಬ್ಬರ ಜೊತೆ ನಾನು ಒಂದು ಸಾಂಪ್ರದಾಯಿಕ ವೇದಿಕೆಯ ಮೇಲೆ ಕಾಣಿಸಿಕೊಂಡಾಗ, ನನ್ನನ್ನು ಪ್ರಶ್ನಿಸಲಾಯಿತು. ಪ್ರಭಾವತಿ ರಾಜೆಯವರು (ಅವರೊಬ್ಬ ಅದ್ಭುತ ಕಾರ್ಯದರ್ಶಿ) ಹಿಂದಿನ ಕಾಲದ ಜೋನ್ ಆಫ್ ಆರ್ಕ್‌ಳಂತೆ ಶ್ರೋತೃಗಳನ್ನು ಸಂಪೂರ್ಣವಾಗಿ ಮಂತ್ರಮುಗ್ಧರನ್ನಾಗಿ ಮಾಡುವುದನ್ನು ನಾನು ನೋಡಿದಾಗ, ಸಾಂಪ್ರದಾಯಿಕತೆ ಮಾಡುತ್ತಿರುವ ಅಪಾಯವನ್ನು ಕಂಡೆ. ಆಮಂತ್ರಣದ ಮೇರೆಗೆ ನಾನು ಅಲ್ಲಿಗೆ ಹೋಗಿ ಒಂದು ಗಂಟೆ ತನಕ ಮಾತಾಡಿದೆ. ಆಗ, ನಾನು ಎದುರಾಳಿಯ ವೇದಿಕೆಯ ಮೇಲೆ ಕಾಣಿಸಿಕೊಂಡುದುದಕ್ಕೆ ನನ್ನನ್ನು ತರಾಟೆಗೆ ತೆಗೆದುಕೊಳ್ಳಲಾಯಿತು. ನಾನು 'ಈಗಾಗಲೇ ಪರಿವರ್ತನೆಗೊಂಡಿರುವವರೊಡನೆ ಮಾತನಾಡಿ ಏನು ಪ್ರಯೋಜನ? ಪರಿವರ್ತನೆಗೊಂಡಿಲ್ಲದವರನ್ನು ನಾನು ಮತಾಂತರಗೊಳಿಸಬೇಕಾಗಿದೆ' ಎಂದು ಹೇಳಿದೆ. ಹಿಂದೂ ಕಾನೂನು ಮಸೂದೆಯ ಬಗ್ಗೆ ಜನರಿಗೆ ತಿಳಿವಳಿಕೆ ನೀಡಬೇಕಾಗಿದೆ ಎಂದು ನಾನು ನಂಬುತ್ತೇನೆ. ನೀವು ಈ ವಿಷಯದಲ್ಲಿ ದುಡುಕಿ, ಮೆಜಾರಿಟಿಯ ಆಧಾರದ ಮೇಲೆ ನಿರ್ಣಯ ತೆಗೆದುಕೊಳ್ಳಬಾರದು. ಆದರೆ ಇದು ಯಾವಾಗಲೇ ಘಟಿಸಲಿ, ಜನರಿಗೆ ತಿಳಿವಳಿಕೆ ನೀಡುವುದು ನಮ್ಮ ಕರ್ತವ್ಯ. ಜನರಿಗೆ ತಿಳುವಳಿಕೆ ನೀಡಿ ಪ್ರಚಾರಮಾಡುವ ಮೂಲಕ, ನಾವು ಫಲವನ್ನು ಕಾಣೋಣ. ಅಂತೂ ನೀವು ಪ್ರಮುಖ ಉದ್ದಿಮೆಗಳನ್ನು ಇನ್ನೂ ರಾಷ್ಟ್ರೀಕರಣ ಮಾಡಿಲ್ಲ. ಈ ವಿಷಯ ಆಮೇಲೆ ಎಲ್ಲಿ ಹೋಯಿತು? ಬಂಡವಾಳಶಾಹಿಗಳು ಹಠ ಹಿಡಿದರು, ನಾವು ನಮ್ಮ ಮಾತುಗಳನ್ನು ಹಿಂತೆಗೆದುಕೊಳ್ಳಬೇಕಾಯಿತು–ನನಗೆ ತಾಳ್ಮೆಯಲ್ಲಿ ವಿಶ್ವಾಸವಿದೆ. ಸದ್ಯದಲ್ಲೇ ಒಳ್ಳೆಯದಾದೀತು. ಈಗ ಯಾವ ರಾಷ್ಟ್ರೀಕರಣ ಮಾಡಲೂ ನಮಗೆ ಭಯವಾಗುತ್ತದೆ. ಜಮೀಂದಾರಿ ಪದ್ಧತಿಯನ್ನು ರದ್ದು ಮಾಡಲು ನಾವು ಹಿಂದೆ ಮುಂದೆ ನೋಡುತ್ತಿದ್ದೇವೆ. ಗೃಹ ಕೈಗಾರಿಕೆಗಳ ಅಭಿವೃದ್ಧಿಯ ವಿಷಯದಲ್ಲಿ ಮುಂದುವರಿಯಲು ನಾವು ಹಿಂದೆ ಮುಂದೆ ನೋಡುತ್ತಿದ್ದೇವೆ – ಏಕೆಂದರೆ, ಹಣದುಬ್ಬರ ನಮ್ಮನ್ನು ದುರುಗುಟ್ಟಿಕೊಂಡು ನೋಡುತ್ತಿದೆ. ಹೀಗಾಗಿ, ಈ ಅಗತ್ಯವಾದ ಅಭಿವೃದ್ಧಿ ಕಾರ್ಯಗಳನ್ನು ನಮಗೆ ಮಾಡಲು ಸಾಧ್ಯವಾಗುತ್ತಿಲ್ಲ. ನಮಗೆ ಘರ್ಷಣೆಗಳು ಎದುರಾಗುತ್ತಿವೆ. ಸುತ್ತಮುತ್ತ ವಿರೋಧಾಭಾಸಗಳಿವೆ. ರೈಲಿನಲ್ಲಿ ಮಾಡುವ ಸುಖಪ್ರಯಾಣದಂತೆ ಜೀವನದ ಪಥವು ಸುಖಮಯವಾಗಿಲ್ಲ. ಅದು ಕೆಟ್ಟ ರಸ್ತೆಯಲ್ಲಿ ಕಿಕ್ಕಿರಿದ ವಾಹನ ಸಂಚಾರದ ಮಧ್ಯೆ ಕಾರಿನಲ್ಲಿ ಮಾಡುವ ಪ್ರಯಾಣದಂತಿದೆ. ನಮ್ಮ ಮಾಲಿಕರಿಗೆ (ಮತದಾರರಿಗೆ) ಪ್ರಯೋಜನಕಾರಿಯೂ ಫಲದಾಯಕವೂ ಆದ ತಿಳಿವಳಿಕೆ ನೀಡಬೇಕು. ಅಂಥ ತಿಳಿವಳಿಕೆ ನೀಡುವ ಕೆಲಸವನ್ನು ಕೈಗೆತ್ತಿಕೊಳ್ಳುವುದು ಈ ಮಹಾನ್ ಸದನದ ಸದಸ್ಯರ ಕರ್ತವ್ಯವಲ್ಲವೇನು ಎಂದು ನಾನು ಕೇಳುತ್ತಿದ್ದೇನೆ. ೧೮೭೭ನೇ ಸಾಲಿನಲ್ಲಿ ರಾಬರ್ಟ್ ಲೋ, ಮತದಾನದ ಹಕ್ಕನ್ನು ವಿಸ್ತರಿಸಿದ ಮೇಲೆ "ನಾವು ಹೋಗಿ ನಮ್ಮ ಮಾಲಿಕರಿಗೆ ತಿಳಿವಳಿಕೆ ನೀಡೋಣ' ಎಂದು ಹೇಳಿದಾಗ ಏನಾಯಿತು? ನಮ್ಮ ಮಾಲಿಕರು ಹೊರಗಿದ್ದಾರೆ. ನಾವು ಮಾಲಿಕರಲ್ಲ, ಮಂತ್ರಿಗಳು ನಮ್ಮ ಮಾಲಿಕರಲ್ಲ. ಅವರೊಡನೆ ನಮಗೆ ಬೇಕಾದಂತೆ

ವ್ಯವಹರಿಸಬಹುದು. ನಮಗೆ ಅವರು ಬೇಡದಿದ್ದರೆ, ಅವರನ್ನು ಬಿಡಲೂಬಹುದು. ಅದು ನಮ್ಮ ಹಕ್ಕು, ಅದು ನಮ್ಮ ಗೌರವ, ಹಾಗೂ ಅದು ನಮ್ಮ ಸುರಕ್ಷೆಯೂ ಹೌದು. ಆದುದರಿಂದಲೇ ಇದೊಂದು ಸಾವಧಾನದಿಂದ ಮುಂದುವರೆಯಬೇಕಾದ ವಿಚಾರ ಎಂದು ನಾನು ಹೇಳುತ್ತಿರುವುದು. ಸಮಾಜ ಸುಧಾರಣೆಯ ಒಲವಿನಲ್ಲಿ ನಾನು ಅದ್ವಿತೀಯ. ೧೮೮೮ರಲ್ಲಿ ನಾನು ಬಿ. ಎ. ಓದುತ್ತಿರುವಾಗಲೇ, ಅಂದರೆ, ೫೧ ವರ್ಷಗಳಷ್ಟು ಹಿಂದೆಯೆ, ಅಥವಾ ಇಲ್ಲಿರುವ ಶ್ರೋತೃಗಳಲ್ಲಿ ಅರ್ಧದಷ್ಟು ಜನ ಹುಟ್ಟುವ ಮೊದಲೇ, ನಾನು ಸಮಾಜ ಸುಧಾರಕನಾಗಿದ್ದೆ, ಮತ್ತು ಆಗಿನಿಂದಲೂ ನಾನು ಆ ಒಲವನ್ನು ಉಳಿಸಿಕೊಂಡಿದ್ದೇನೆ. ನಾನು ಬಹಳ ಹಿಂದೆಯೇ ಬ್ರಹ್ಮ ಸಮಾಜದ ಸಮಾಜ ಸುಧಾರಕರ ಪ್ರಭಾವಕ್ಕೆ ಒಳಗಾದೆ, ಹಾಗೂ ನಾಲ್ಕನೆಯ ತರಗತಿಯಿಂದ ಬಿ. ಎ. ವರೆಗೆ ಯಾವ ಕ್ರೈಸ್ತ ಧರ್ಮ ಪ್ರಚಾರಕರ ಮಾರ್ಗದರ್ಶನದಲ್ಲಿ ವ್ಯಾಸಂಗ ಮಾಡಿದೆನೋ, ಅವರ ಸುಧಾರಣಾಶೀಲತೆಯನ್ನು ಸಂಪೂರ್ಣವಾಗಿ ಹೀರಿಕೊಂಡೆ.

ಆದುದರಿಂದ ಇಂಥ ವಿಷಯಗಳಲ್ಲಿ ನಾವು ಏನು ಮಾಡಬೇಕು ಎಂಬುದು ಮುಖ್ಯವಲ್ಲ, ಹೇಗೆ ಮಾಡಬೇಕೆಂಬುದು ಮುಖ್ಯ. ಇದು ರಾಜಕೀಯಕ್ಕೂ ಸಂಬಂಧಿಸಿದೆ ಎಂಬುದನ್ನು ನೀವು ನೆನಪಿನಲ್ಲಿಡಬೇಕು. ನಾಳೆ ನೀವು ಮತದಾರರ ಮುಂದೆ ನಿಲ್ಲಲಿದ್ದೀರಿ. ನಾವು ನಿನ್ನೆ ಎಂಥ ಚಿಂತಾಜನಕ ಸ್ಥಿತಿಯಲ್ಲಿದ್ದೆವು ! ನಾನು ನಿನ್ನೆ ಇಲ್ಲಿರಲಿಲ್ಲ; ಇದ್ದಿದ್ದರೆ, ಆ ದೃಶ್ಯಗಳನ್ನು ನಾನೇ ಸ್ವತಃ ನನ್ನ ಕಣ್ಣುಗಳಿಂದ ನೋಡುತ್ತಿದ್ದೆ. ನಾನು ನಿನ್ನೆ ಆಳ್ವಾರಿಗೆ ಹೋಗಿದ್ದೆ, ಹಾಗೂ ನಿನ್ನೆ ರಾತ್ರಿ ಹನ್ನೊಂದು ಗಂಟೆಗಷ್ಟೇ ಹಿಂತಿರುಗಿದೆ. ಆಗ ನನ್ನ ಹೆಂಡತಿ ಹೇಳಿದ ಮೊದಲನೆ ಸುದ್ದಿಯೆಂದರೆ – ಲಾಠಿ ಪ್ರಹಾರವಾಯಿತು, ಅನೇಕರಿಗೆ ಅಪಾಯಕರ ರೀತಿಯಲ್ಲಿ ಗಾಯಗಳಾಗಿವೆ, ಇತ್ಯಾದಿ. ಅಂಥ ಸುದ್ದಿ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಹೋಗುವಾಗ, ಉತ್ಪ್ರೇಕ್ಷೆಯಾಗುವುದು ಸಹಜ. ನನ್ನೆದುರಿಗೆ ಕಾಣುತ್ತಿರುವುದು ಚಿಂತಾಜನಕ ದೃಶ್ಯ. ಸಾಮಾನ್ಯವಾಗಿ ನಾನು ಮಾತನಾಡುವುದು ಮನಸ್ಸಿನ ಆವೇಗದಿಂದ ಅಥವಾ ಸ್ಫೂರ್ತಿಯಿಂದ; ಆದರೆ ನಾನು ಈ ದಿನ ಮಾತನಾಡುವುದು ಕಿರಿಕಿರಿಯಿಂದ – ಸಭಾಂಗಣದಲ್ಲಿ ನನ್ನ ಎದುರಿಗೆ ಮೂವರು ಸ್ತ್ರೀ ಪೋಲೀಸರು ಕುಳಿತಿರುವ ದೃಶ್ಯವು ನನಗೆ ಕಿರಿಕಿರಿ ಉಂಟುಮಾಡಿದೆ. ಸ್ತ್ರೀ ಪೋಲೀಸರ ದಂಡದ ರಕ್ಷಣೆಯಲ್ಲಲ್ಲದೆ, ಉಳಿದಂತೆ ಈ ಸದನ ತನ್ನ ಕಾರ್ಯಕಲಾಪ ಮಾಡಲಾರದು, ಸಭೆಯಲ್ಲಿ ಹಾಗೂ ಕೆಳಗಡೆ ಹಾಜರಿರುವ ಹೆಂಗಸರನ್ನು ನಂಬಬಾರದು ಎಂಬ ಪರಿಸ್ಥಿತಿ ಉಂಟಾಗಿದೆಯೇನು ಈಗ? ನಮ್ಮ ಸೋದರಿಯರ ಮೇಲೆ ಇನ್ನು ಮೇಲೆ ಈ ಸ್ತ್ರೀ ಪೋಲೀಸರು ದೋಷಾರೋಪಣೆ ಮಾಡುವುದು ನಮಗೆ ನಿಜವಾಗಿಯೂ ಹೆಮ್ಮೆಯ ವಿಷಯವಾಗುತ್ತದೆಯೇನು? ನಮ್ಮಲ್ಲಿ ಸಾಕಷ್ಟು ಪುರುಷ ಪೋಲೀಸರಿದ್ದಾರೆ. ಈ ಮಸೂದೆಗೆ ಸಂಬಂಧಿಸಿದಂತೆ ಇದು ಒಂದು ಅತ್ಯಂತ ದಾರುಣ ಬೆಳೆವಣಿಗೆ. ಡಾಕ್ಟರ್ ಅವರು (ಡಾ॥ ಅಂಬೇಡ್ಕರ್) ದಯವಿಟ್ಟು ಇದನ್ನು ಗಮನಿಸಬೇಕು. ನೀವು ಪೋಲೀಸರ ರಕ್ಷಣೆಯಿಲ್ಲದೆ ಸದನಕ್ಕೆ ಬರಲಾಗದಿದ್ದರೆ, ಆಗ ಸ್ತ್ರೀ ಸದಸ್ಯರಿಗೆ ಸ್ತ್ರೀ ಪೋಲೀಸರು, ಪುರುಷ ಸದಸ್ಯರಿಗೆ ಪುರುಷ ಪೋಲೀಸರು ರಕ್ಷಣೆ ನೀಡುತ್ತಾರೆ – ನಮ್ಮ ಪ್ರಗತಿ ಹಾಳಾಗ! ನಮ್ಮ ವಿಧಾನ ಸಭೆ ಹಾಳಾಗ! ನನಗೆ ನಿಜವಾಗಿಯೂ ದುಃಖವಾಗುತ್ತದೆ. ಈ ನನ್ನ ಸಾಮಾನ್ಯ ಪರಿಶೀಲನೆಯನ್ನು ಇಲ್ಲಿಗೇ ಬಿಟ್ಟು, ಈ ದಿನ ಇಲ್ಲಿ ನಾವು ವ್ಯವಹರಿಸಬೇಕಾದ ಒಂದೆರಡು ಮುಖ್ಯ ಅಂಶಗಳಿಗೆ ಬರುತ್ತೇನೆ. ಅದಕ್ಕೂ ಮೊದಲು ಈ ಶಾಸನದ ಮೂಲ ಪುರುಷರ ವಿಷಯದಲ್ಲಿ ಒಂದೆರಡು ಮಾತನ್ನು ತಮ್ಮ ಮುಂದಿಡ ಬಯಸುತ್ತೇನೆ. ಈ ಮಸೂದೆಯ ಪರಿಶೀಲನೆಯನ್ನು ಮುಂದುವರಿಸಿಕೊಂಡು ಹೋಗುವುದು ಡಾ॥ ಅಂಬೇಡ್ಕರರ ಪಾಲಿಗೆ ಬಂದಿರುವುದು ನನಗೆ ಬಹಳ ದುಃಖವುಂಟುಮಾಡಿದೆ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** (ಕಾನೂನು ಮಂತ್ರಿ) : ಆದರೆ ನನಗೇನೂ ದುಃಖವಾಗುತ್ತಿಲ್ಲ.

**ಡಾ॥ ಬಿ. ಪಟ್ಟಾಭಿ ಸೀತಾರಾಮಯ್ಯ :** ನನಗೂ ಗೊತ್ತು; ಇಲ್ಲದಿದ್ದರೆ, ನೀವು ನಿಮ್ಮ ಆಸನದಲ್ಲಿ ಅಷ್ಟೊಂದು ಹೆಮ್ಮೆಯಿಂದ ಕುಳಿತುಕೊಂಡಿರುತ್ತಿರಲಿಲ್ಲ. ಡಾ॥ ರವರ ಬಗ್ಗೆ ನಾನು. ಏನು ಹೇಳಿದೆ ಎಂಬುದು ಅವರಿಗೆ ಗೊತ್ತು. ನಾನು ಡಾ॥ ಅಂಬೇಡ್ಕರರ ಅದಮ್ಯ, ಪ್ರತಿರೋಧಕ್ಕೆ ಸಿಕ್ಕದ ಅಜೇಯ ಉತ್ಸಾಹದ ಬಗ್ಗೆ ಹೇಳುತ್ತಿದ್ದೆ – ಆ ಉತ್ಸಾಹ ಒಳ್ಳೆಯದಕ್ಕೋ, ಕೆಟ್ಟದಕ್ಕೋ ಯಾವುದಕ್ಕಾದರೂ ಇರಲಿ, ನಾನು ಯಾವಾಗಲೂ ಹೇಳಬಯಸುವುದಿಷ್ಟೆ – ಉತ್ಸಾಹವಂತೂ ಇದೆ ಹಾಗೂ ನಾವು ಆ ಕಾರಣಕ್ಕಾಗಿಯೇ ಅವರನ್ನು ಮೆಚ್ಚುತ್ತೇವೆ. ಆದರೆ, ಅದೇ ವೇಳೆ, ಅವರ ಉದ್ದೇಶ ಸಮಾಜಕ್ಕೆ ಹೊಂದಿಕೊಳ್ಳುವುದಿಲ್ಲ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಅವರ ಉದ್ದೇಶ ಸಮಾಜಕ್ಕೆ ಪೂರ್ಣವಾಗಿ ಹೊಂದಿಕೊಳ್ಳುತ್ತದೆ, ಸರಿಯಾಗಿ ಹೊಂದಿಕೊಳ್ಳುತ್ತದೆ.

**ಡಾ॥ ಬಿ. ಪಟ್ಟಾಭಿ ಸೀತಾರಾಮಯ್ಯ :** ನಾನು ಅವರನ್ನು ಮಾನವ ದ್ವೇಷಿ ಎಂದು ಕರೆಯುತ್ತಿಲ್ಲ, ಆದರೆ ಅವರು ಸಾಮಾನ್ಯ ಮನುಷ್ಯರಲ್ಲ. ಇಷ್ಟಂತೂ ಹೇಳಬಲ್ಲೆ; ಅವರ ಪ್ರಶಿಕ್ಷಣ, ಅವರಿರುವ ಪರಿಸ್ಥಿತಿ, ಅವರ ಪರಿಸರ, ಅವರ ಸಂಸ್ಕೃತಿ, ಇವೆಲ್ಲವೂ ನಮ್ಮ ರಾಷ್ಟ್ರದ ಆತ್ಮದೊಂದಿಗೆ ಹೊಂದಿಕೊಳ್ಳುವುದಿಲ್ಲ. ನಮ್ಮ ಅತ್ಯುತ್ತಮ ಪ್ರಜ್ಞಾವಂತರಲ್ಲಿ ಅವರು ಒಬ್ಬರು. ಆ ವಿಷಯದಲ್ಲಿ ಸಂದೇಹವೇ ಇಲ್ಲ, ಮತ್ತು ದೀರ್ಘಕಾಲದವರೆಗೆ, ಅವರಿಗೆ ಆರೋಗ್ಯ ಮತ್ತು ಶ್ರೇಯಸ್ಸು ಇರಲಿ ಎಂದು ಆಶಿಸುತ್ತೇನೆ. ಆದರೆ, ಅವರ ದೃಷ್ಟಿಕೋನವನ್ನು ನಾವು ಒಪ್ಪಿಕೊಳ್ಳುತ್ತೇವೆ ಎಂಬುದು ಇದರ ಅರ್ಥವಲ್ಲ. ಸರ್ವಸಾಧಾರಣ ನಾಗರಿಕ ಕಾನೂನು (Common Civil Law) ಎಂಬ ಉರುಳುಗಲ್ಲಿನಂಥ ಕಾನೂನು ಠರಾವು ಮಾಡುವಾಗಲೇ ಅವರ ದೃಷ್ಟಿಕೋನದೊಂದಿಗೆ ನಮ್ಮ ಘರ್ಷಣೆಯಾಗಿತ್ತು. ನಮ್ಮಲ್ಲಿ ಕೆಲವರು ಅದನ್ನು ನಮ್ಮ ಅತ್ಯುತ್ತಮ, ಸರ್ವಶಕ್ತಿಯಿಂದ ವಿರೋಧಿಸಿದೆವು, ಆದರೂ ಪ್ರಯೋಜನವಾಗಲಿಲ್ಲ. ಈ ಮಸೂದೆಯನ್ನು ಸದನದಲ್ಲಿ ಮಂಡಿಸಿದಾಗ ನಾನು ಮೊದಲನೆಯ ದಿನ ಏನು ಹೇಳಿದೆ ಎಂಬುದನ್ನು ನಿಮ್ಮ ನೆನಪಿಗೆ ತರಬಯಸುತ್ತೇನೆ. ಬಹಳಷ್ಟು ಜನ ಅದನ್ನು ಮರೆತಿದ್ದಾರೆಂದು ಆಶಿಸುತ್ತೇನೆ. ಆಗ ಮಾತ್ರ ಅಂದು ನಾನು ಹೇಳಿದ್ದನ್ನೆ ಇಂದು ಮತ್ತೊಮ್ಮೆ ಹೇಳಿದ್ದಕ್ಕಾಗಿ ಅವರು ನನ್ನನ್ನು ನಿಂದಿಸುವುದಿಲ್ಲ. ವಾಸ್ತವವಾಗಿ, ನಾನೇ ಅಂದಿನ ಮುಖ್ಯ ಅಂಶವನ್ನು ಮರೆತಿದ್ದೇನೆ. ಆದರೆ, ಒಂದು ಸಮಾಜ ಪರಿಷತ್ತನ್ನು ನಾವು ಮೊದಲು ಅಸ್ತಿತ್ವಕ್ಕೆ ತಂದು, ಅದರ ಮಧ್ಯಸ್ಥಿಕೆ, ಅದರ ಸಲಹೆ – ಸೂಚನೆ, ಮತ್ತು ಅದರ ಸ್ಫೂರ್ತಿಯ ಮೂಲಕ ನಾವು ಈ ದೇಶದಲ್ಲಿ ಸಮಾಜ ಸುಧಾರಣೆ ಮಾಡಬೇಕು, ಎಂಬುದೇ ಪ್ರಾಯಶಃ ಅಂದಿನ ವಿಷಯವಾಗಿತ್ತು ಎಂದುಕೊಂಡಿದ್ದೇನೆ. ಆಗ ನಾನು ಇಂಗ್ಲೆಂಡಿನ ಚರ್ಚ್ ಪರಿಷತ್ತಿನ ಉದಾಹರಣೆ ಕೊಟ್ಟು, ಅದರ ಪ್ರಾಬಲ್ಯದಲ್ಲಿ ಧರ್ಮಾಧಿಕಾರಿಗಳು ಹೇಗೆ ಮುಖ್ಯ ಅಂಗಗಳಾಗುತ್ತಾರೆ, ಅವರು ಝೀವನದಲ್ಲಾಗಲಿ ಕಾನೂನಿನಲ್ಲಾಗಲಿ ಮಾಡಿದ ಬದಲಾವಣೆಗಳನ್ನು ಒಂದು ಅಲ್ಪವಿರಾಮ ಅಥವಾ ಪೂರ್ಣವಿರಾಮವನ್ನೂ ಬದಲಾಯಿಸದೆ–ಅಂದರೆ, ಧಾರ್ಮಿಕ ಮತ್ತು ಸಾಮಾಜಿಕ ನಿಬಂಧನೆಗಳು ಹೇಗಿರಬೇಕೋ, ಹಾಗೆಯೇ–ಅದು ಹೇಗೆ ಒಪ್ಪಿಕೊಳ್ಳುತ್ತದೆ ಎಂದು ಹೇಳಿದೆ. ನಾವೂ ಅಂಥ ಪದ್ಧತಿಯನ್ನೆ ಅನುಸರಿಸೋಣ. ಜರ್ಮನಿಯಲ್ಲಿ ಆರ್ಥಿಕ ವಿಷಯಗಳನ್ನು ನೋಡಿಕೊಳ್ಳಲು ಒಂದು ಆರ್ಥಿಕ ಪರಿಷತ್ತು ಇತ್ತು ಹಾಗೂ ಅದಕ್ಕೆ ನೈಪುಣ್ಯ ಅಗತ್ಯವಾಗಿತ್ತು. ಜರ್ಮನಿಯ ಶಾಸನಸಭೆಯು (Reichstagg) ಆ ಪರಿಷತ್ತಿನ ಶಿಫಾರಸುಗಳನ್ನು ಅಂಗೀಕರಿಸುತ್ತಿತ್ತು. ಆದುದರಿಂದ, ನಾವು ಉದ್ದೇಶಪೂರ್ವಕವಾಗಿ ನಿಧಾನಕ್ಕೆ ಚಲಿಸೋಣ, ಹಾಗೂ ಆ ಮೂಲಕ ನಾವು ಎಲ್ಲಿ ನಿಂತಿದ್ದೇವೆ ಎಂಬುದನ್ನು ನಿಖರವಾಗಿ ತಿಳಿದುಕೊಳ್ಳೋಣ.

ಈಗ ನಾನು ಮಸೂದೆಗೆ ಸಂಬಂಧಿಸಿದ ಕೆಲವು ಅಂಶಗಳಿಗೆ ಬರುತ್ತೇನೆ. ಹಾಗೂ ನಾನು ಬಹಳ ಹೊತ್ತು ತೆಗೆದುಕೊಳ್ಳುವುದಿಲ್ಲ. ಮಸೂದೆಯಲ್ಲಿ ಕೆಲವು ಬಹಳ ಒಳ್ಳೆಯ ಅಂಶಗಳಿವೆ. ವಿವಾಹವನ್ನು ಒಂದು ಧಾರ್ಮಿಕ ಕಾರ್ಯದಂತೆ ನಡೆಸುವುದಕ್ಕಿಂತ ಮತಸಂಸ್ಕಾರವಿಲ್ಲದೆ ನಡೆಸುವುದು ನನಗೆ ಹೆಚ್ಚು ಮೆಚ್ಚುಗೆ. ಶಾಸನಿಕ ಮದುವೆ (Civil Marriage) ಇಬ್ಬರ ನಡುವಿನ ವ್ಯವಹಾರವನ್ನು ನೋಂದಣಿ ಮಾಡಲೋಸ್ಕರ ಒಂದು ದಾಖಲೆ ಪತ್ರವನ್ನು ಸೃಷ್ಟಿಸಿ, ಅದರಂತೆ ನಡೆದುಕೊಂಡಂತೆ. ಅದೊಂದು ಒಡಂಬಡಿಕೆ. ಒಂದು ದಾಖಲೆಯನ್ನು ಬರೆದಾಕ್ಷಣ, ಅದರ ಉದ್ದೇಶ ಸರಿಯಾಗಿದೆಯೆ, ಅದರ ಸಾಧಕ–ಬಾಧಕಗಳನ್ನು ಒಪ್ಪಿಕೊಳ್ಳಲಾಗಿದೆಯೆ, ಅದು ಕಾನೂನಿಗನುಗುಣವಾಗಿದೆಯೆ ಮುಂತಾದ ಚರ್ಚೆಗಳಿಗೆ ಎಡೆಮಾಡಿಕೊಡುತ್ತದೆ. ಆದರೆ ವಿವಾಹವು ಧಾರ್ಮಿಕ ಕಾರ್ಯವಾದರೆ, ಅದರ ವಿರುದ್ಧ ಯಾರೂ ಚಕಾರ ಎತ್ತುವಂತಿಲ್ಲ. ವಯಸ್ಸಾದ ಪುರೋಹಿತನನ್ನು ತಾನು ಮಾಡಿದ ವಿವಾಹದ ಸಿಂಧುತ್ವದ ಬಗೆಗಾಗಲಿ ಅದರ ಸದುದ್ದೇಶದ ಬಗೆಗಾಗಲಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ಯಾರೂ ಅವನ ಝೀವನಪರ್ಯಂತ ಕರೆಯುವುದಿಲ್ಲ. ಮದುವೆಯಾಗಿದೆ, ಅದನ್ನು ಯಾರೂ ಪ್ರಶ್ನಿಸುವುದಿಲ್ಲ. ಆಡಿದ ಮಾತಿನಲ್ಲಿರುವ ಪ್ರಾಮಾಣಿಕತೆಯಂತೆ, ಅದು. ನಮ್ಮ ರಾಷ್ಟ್ರವು ಬ್ರಿಟಿಷರ ಕಾಲದಲ್ಲಿ ಹಾಗೂ ನ್ಯಾಯಲಯದ ಪ್ರಭಾವದಿಂದಾಗಿ ಆಡು ಮಾತಿನಲ್ಲಿರುವ ಪ್ರಾಮಾಣಿಕತೆಯನ್ನು ಕಳೆದುಕೊಂಡಿತು. ಆ ಪ್ರಾಮಾಣಿಕತೆಯನ್ನು ಅದು ಎಂದು ರಕ್ಷಿಸುತ್ತದೆಯೋ ಅಂದು ನಾವು ನಮ್ಮ ಸಚ್ಚಾರಿತ್ರ್ಯವನ್ನು ಮತ್ತೆ ಗಳಿಸುತ್ತೇವೆ. ಎಂದು ನಾನು ಹೇಳಬಲ್ಲೆ. ನನ್ನ ಸ್ನೇಹಿತನೊಬ್ಬ ಮದುವೆ ಮಂಟಪದಲ್ಲಿ ತನ್ನ ಮಗಳೂ ಭಾವೀ ಅಳಿಯನೂ ಒಂದೇ ಗೋತ್ರಕ್ಕೆ ಸೇರಿದವರೆಂಬುದನ್ನು ಕಂಡುಹಿಡಿದ–ಅಂಥ ಪರಿಸ್ಥಿತಿಗಳೂ ಅನೇಕ ಇವೆ. ಆದರೆ ಧಾರ್ಮಿಕ ಕಾರಣಗಳಿಗಲ್ಲದಿದ್ದರೂ, ಆರ್ಥಿಕ ಕಾರಣಗಳಿಂದಾಗಿ, ಆ ವಿವಾಹವನ್ನು ಕೈಬಿಡುವ ಸಾಧ್ಯತೆಯಿರಲಿಲ್ಲ. ಆಗ, ಅವರು ಆ ಧಾರ್ಮಿಕ ವಿಧಿಯನ್ನು ಬೇಗಬೇಗ ಮುಗಿಸಿ, ವಿವಾಹಗಳ ರಿಜಿಸ್ಟ್ರಾರ್‌ರ ಬಳಿ ಹೋಗಿ, ವಿವಾಹವನ್ನು ನೋಂದಾಯಿಸಿದರು. ನಮ್ಮ ವಿವಾಹಗಳನ್ನು ನೋಂದಾಯಿಸುವ ಅವಕಾಶವಿರುವುದು ನಮಗೊಂದು ಗೌರವದ ಮಾತು; ಅಲ್ಲದೆ, ಹೆಣ್ಣು ಮಕ್ಕಳಿಗೆ ಆಸ್ತಿಯನ್ನು ಹಂಚುವ ಪ್ರಶ್ನೆಯನ್ನು ಸಂಪೂರ್ಣ ಇತ್ಯರ್ಥ ಮಾಡಬೇಕೆಂಬುದು ನನ್ನ ಆಶಯ. ತಂದೆಯ ಆಸ್ತಿಗೆ ಗಂಡುಮಕ್ಕಳಂತೆ ಹೆಣ್ಣುಮಕ್ಕಳೂ ಸಮಾನ ಹಕ್ಕುದಾರರಾಗಬೇಕು ಎಂದು ಬಹಳ ದಿನಗಳಿಂದ ನನಗನಿಸುತ್ತಿದೆ. ಆದರೆ ಅದು ನಮ್ಮ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ನಿರಂತರ ಸಮಸ್ಯೆಗಳನ್ನುಂಟುಮಾಡುವಂತಿದೆ. ನನ್ನ ಸ್ನೇಹಿತನೊಬ್ಬನಿಗೆ ಆರು ಪುತ್ರಿಯರೂ ಒಬ್ಬ ಪುತ್ರನೂ ಇದ್ದಾರೆ. ನಾನು ಪುತ್ರ ಪುತ್ರಿಯನ್ನೂ ಪ್ರತ್ಯೇಕವಾಗಿ ಹಾಗೂ ವೈಯಕ್ತಿಕವಾಗಿ ಕರೆದು ನೀನು ನಿಮ್ಮ ತಂದೆಯ ಆಸ್ತಿಯಲ್ಲಿ ಪಾಲುಪಡೆಯಲು ಇಚ್ಛಿಸುತ್ತೀಯಾ? ಎಂದು ಕೇಳಿದೆ. ಅವರೆಲ್ಲ "ಇಲ್ಲ, ಇದು ನಮ್ಮ ಸೋದರನೊಂದಿಗೆ ಕಲಹಕ್ಕೆ ದಾರಿ ಮಾಡಿಕೊಡುತ್ತದೆ. ನಮಗೆ ಇದು ಬೇಕಿಲ್ಲ. ಅಲ್ಲದೆ, ನಮ್ಮ ಗಂಡಂದಿರ ಆಸ್ತಿಯಂತೂ ಇದ್ದೇ ಇರುತ್ತದೆ. ಅದು ಯಾವಾಗಲೂ ನಮ್ಮಲ್ಲೇ ಇರುತ್ತದೆ" ಎಂದರು. ಆದರೆ, ಅವರಿಗೆ ಸ್ತ್ರೀಧನ ಸಿಕ್ಕುವ ರೀತಿಯಲ್ಲಿ ಆಸ್ತಿ ಸಿಕ್ಕುವುದಿಲ್ಲ. ಸ್ತ್ರೀಧನ ಒಂದು ಅದ್ಭುತ ಪದ್ಧತಿ. ಪ್ರಪಂಚದಲ್ಲಿ ಅದಕ್ಕೆ ಸಮನಾದುದು ಮತ್ತೊಂದಿದೆಯೆ? ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಸ್ತ್ರೀಧನವೆಂಬ ಪದ್ಧತಿಯ ಮೂಲಕ ಹುಡುಗಿಯು ತನ್ನ ಮದುವೆಯ ಸಮಯದಲ್ಲಿ ಪಡೆದ ಸ್ತ್ರೀಧನವು ಸಂಪೂರ್ಣವಾಗಿ ಅವಳದೇ ಆದ ಆಸ್ತಿಯಾಗುತ್ತದೆ. ಅದನ್ನು ಆಕೆಯ ಗಂಡನಾಗಲಿ ತಂದೆಯಾಗಲಿ ಮತ್ತಾವ ನರಪಿಳ್ಳೆಯಾಗಲಿ ಮುಟ್ಟುವಂತಿಲ್ಲ. ಅದು ಕುಟುಂಬದ ಆಪದ್ಧನ, ಅದರಲ್ಲಿ ಅವಳಿಗೆ ದೃಢವಾದ ನಂಬಿಕೆಯಿದೆ, ತನ್ನ ಗಂಡನು ತೀರ ಆಸ್ವಸ್ಥನಾದಾಗ ಪೇಟೆಗೆ ಹೋಗಿ, ತನ್ನ

ಆಭರಣಗಳನ್ನು ಮಾರಿ ವೈದ್ಯರ ಶುಲ್ಕವನ್ನು ಕೊಡುತ್ತಾಳೆ. ಅವಳ ಗಂಡ ಬದುಕಿ ಉಳಿದರೆ ಒಳ್ಳೆಯದಾಯಿತು, ಅವನು ಸತ್ತರೆ, ಗಂಡನಿಗೆ ಅದು ಕೊನೆಯ ಸೇವೆ ಎಂದು ತಿಳಿದುಕೊಳ್ಳುತ್ತಾಳೆ. ಹದಿನೈದು ವರ್ಷಗಳ ಹಿಂದೆ ಪಾಸಾದ ಟಿ.ವಿ. ಶೇಷಗಿರಿ ಅಯ್ಯರ್ ಅವರ ಮಸೂದೆಯಡಿಯಲ್ಲಿ ಅಂಥ ಅಪದ್ಧನದ ವಿಚಾರವನ್ನು ಕೈಬಿಡಲಾಗಿದೆ. ಅದರ ಸ್ಥಾನದಲ್ಲಿ ಗಂಡನ ಆಸ್ತಿಯಲ್ಲಿ ಹೆಂಡತಿಗೆ ಸಿಗಬೇಕಾದ ಪಾಲಿನ ವಿಚಾರವನ್ನು ಒಪ್ಪಿಕೊಳ್ಳಲಾಗಿದೆ. ಆದರೆ ಅವಳ ಪಾಲು ಪ್ರತಿಯೊಬ್ಬ ಮಗ ಪಡೆಯುವ ಪಾಲಿಗೆ ಸಮನಾಗಿದ್ದರೂ, ಅದು ಅವಳ ಪಾಲಿಗೆ ಬರುವುದು ತನ್ನ ಗಂಡನ ಮರಣಾನಂತರ, ಅದೂ ಜೀವನಾಂಶವೆಂಬಂತೆ. ನಮ್ಮ ದೇಶದ ಮತೀಯ ಪದ್ಧತಿಗಳ ವ್ಯವಹಾರಗಳ ಮಧ್ಯೆ ಪ್ರವೇಶಿಸಲು ಬ್ರಿಟಿಷರು ಇಚ್ಛಿಸಲಿಲ್ಲ. ಏಕೆಂದರೆ, ಅದರಿಂದಾಗಿ ತಮ್ಮ ರಾಜಕೀಯ ಸ್ಥಿರತೆಗೆ ಎಲ್ಲಿ ಧಕ್ಕೆಯುಂಟಾಗುತ್ತದೆಯೋ ಎಂಬ ಭಯ ಅವರಿಗಿತ್ತು. ಇಷ್ಟಾದರೂ (ಮೊದಲಿನ ಭಾಷಣಕಾರರೊಬ್ಬರು ಸೂಚಿಸಿದಂತೆ) ನಮ್ಮ ಕಾನೂನನ್ನು ಒಂದು ಸಣ್ಣ ಅಂಶದಲ್ಲಿ ಬದಲಾಯಿಸಲಾಗಿದೆ–ಆದರೆ ಸಾಕಷ್ಟು ಬದಲಾಯಿಸಲಿಲ್ಲ. ಬ್ರಿಟಿಷರು ರಾಜಕೀಯ ಕಾರಣಗಳಿಂದಾಗಿ ನಮ್ಮ ದೇಶದ ಸಾಮಾಜಿಕ ಪದ್ಧತಿಗಳಲ್ಲಿ ಹಸ್ತಕ್ಷೇಪ ಮಾಡಲು ಇಷ್ಟಪಡದಿದ್ದುದು ಒಂದು ದುರದೃಷ್ಟಕರ ಸಂಗತಿ. ಹೀಗಾಗಿ ಆ ಕಾನೂನು ಕಲ್ಲಿನಂತೆ ಘನೀಭೂತವಾಗಿದೆ. ಪ್ರತಿಯೊಂದು ದೇಶದಲ್ಲಿ ಪದ್ಧತಿಗಳು ಬದಲಾಗುತ್ತಿವೆ. ಅಲ್ಲದೆ ರಾಜನು ಸಾಮಾಜಿಕ ಪದ್ಧತಿಗಳಲ್ಲಿ ಬದಲಾವಣೆಯನ್ನು ಜಾರಿಗೆ ತಂದರೆ, ತಕ್ಷಣವೇ ಅದೊಂದು ಕಾನೂನಾಗುತ್ತದೆ. ಹಾಗೂ ಅದೇ ಇಡೀ ಸಮಾಜಕ್ಕೆ ಒಂದು ಧ್ವನಿಯೂ ಗತಿಯೂ ಆಗುತ್ತದೆ. ಆದರೆ ದುರದೃಷ್ಟದಿಂದ ನಮ್ಮ ದೇಶದಲ್ಲಿ ಸಾವಿರ ವರ್ಷಗಳವರೆಗೆ ಒಬ್ಬ ರಾಜನೂ ಹೀಗೆ ಮಾಡಲಿಲ್ಲ; ಅಲ್ಲದೆ ಬ್ರಿಟಿಷರು ಬಂದನಂತರ ಅವರು ಸಾಮಾಜಿಕ ವ್ಯವಸ್ಥೆಯಲ್ಲಿ ಸಾಮಾಜಿಕ ಬದಲಾವಣೆ ಮಾಡುವ ಎಲ್ಲ ಪ್ರೇರಣೆಯನ್ನು ಹತ್ತಿಕ್ಕಿದರು. ಹೀಗಾಗಿ, ಪದ್ಧತಿಗಳು ಕಲ್ಲಾಗಿವೆ. ಈ ಪದ್ಧತಿಯನ್ನೇ, ಈ ಕಲ್ಲಾಗಿರುವ ಪದ್ಧತಿಯನ್ನೇ, ನಾವು ಮೃದುಗೊಳಿಸಬೇಕು. ಸ್ಥಿತಿಸ್ಥಾಪಕಗೊಳಿಸಬೇಕು, ಅದರಲ್ಲಿ ಅಚ್ಚು ಮೂಡುವಂತೆ ಮಾಡಬೇಕು ಹಾಗೂ ಮಾರ್ಪಾಡಾಗುವಂತೆ ಮಾಡಬೇಕು. ಹಾಗೆ ಮಾಡದೆ, ಪದ್ಧತಿಯೆಂಬ ಒಂದು ಕಲ್ಲಿನ ಎದುರಾಗಿ ಕಾನೂನೆಂಬ ಮತ್ತೊಂದು ಕಲ್ಲು ಎಸೆದರೆ, ಎರಡೂ ಕಲ್ಲುಗಳು ಒಡೆಯುತ್ತವೆ. ಸುಧಾರಣೆಯನ್ನು ಸಾಧಿಸುವುದು ಈ ರೀತಿ ಅಲ್ಲ. ಸಮಾಜ ಸುಧಾರಣೆಗೆ ನಾವು ಚಾಲನೆ ಕೊಡಬೇಕಾದರೆ, ರೂಢಿಯಿಂದ ಬಂದ ಈ ಕಾನೂನನ್ನು ನಾವು ಬದಲಾಯಿಸಬೇಕು.

ಈಗ, ಹೆಣ್ಣು ಮಕ್ಕಳ ಪಾಲಿನ ವಿಷಯದಲ್ಲಿ ಹೇಳಬೇಕಾದರೆ–ನಾನು ಆ ಪಾಲಿನ ವಿಷಯವನ್ನು ಸಂಪೂರ್ಣವಾಗಿ ಒಪ್ಪುತ್ತೇನೆ; ಆದರೆ ಅದಕ್ಕೆ ಒಂದು ತಿದ್ದುಪಡಿಯನ್ನು ಸೂಚಿಸಬಯಸುತ್ತೇನೆ. ಅದೆಂದರೆ: ಅವಳು ಮದುವೆಯಾದ ತಕ್ಷಣ ಆಕೆ ತನ್ನ ಗಂಡನ ಆಸ್ತಿಗೂ ಪಾಲುದಾರಳಾಗುತ್ತಾಳೆ. ಆದರೆ ಇದು ಗಂಡನಿಗೆ ಅಡ್ಡದಾರಿ ಹಿಡಿಯುವ ಅವಕಾಶ ಕೊಡಬಾರದು–ದುರದೃಷ್ಟವಶಾತ್ ಕೆಲವು ಸಾರಿ ಹಾಗಾಗಿದೆ. ಅನಂತರ, ನಾವು ವಿಚ್ಛೇದನದ ಪ್ರಶ್ನೆಗೆ ಬರೋಣ. ಈ ವಿಷಯವಾಗಿ ಹೆಂಗಸರೊಂದಿಗೆ ಮಾತಾಡಿದ್ದೇನೆ. ಈ ಬೆಳಿಗ್ಗೆ ನಾಲ್ಕು ಜನ ಹೆಂಗಸರು ನನ್ನ ಬಳಿ ಬಂದರು. ಅವರು ಸುಶೀಲರೂ ಉಚ್ಚ ಮಟ್ಟದ ಸಂಸ್ಕೃತಿಯುಳ್ಳವರೂ ಆಗಿದ್ದರು; ಅವರಲ್ಲೊಬ್ಬರನ್ನು ಆಕೆಯ ಗಂಡ ಬಿಟ್ಟಿದ್ದಾರೆಂದು ಪರಿಚಯ ಮಾಡಿಕೊಟ್ಟರು. ಕೇವಲ ಸುಖವಾಗಿದ್ದವರಷ್ಟೇ ಅಲ್ಲ, ಗಂಡಸಿನ ಕೋಪಕ್ಕೂ ದಬ್ಬಾಳಿಕೆಗೂ ದುರದೃಷ್ಟಕರವಾಗಿ ಬಲಿಯಾಗಿ ಅಸಂತುಷ್ಟಗೊಂಡವರು ಸಹ ಈ ಕಾಯಿದೆಗೆ ಬೆಂಬಲ ನೀಡುವುದನ್ನು ತಡೆಹಿಡಿದರು, ಎಂದೂ ಅವರು ಹೇಳಿದರು. ಮುಖ್ಯ ವಿಷಯ ಇದಲ್ಲ ಎಂದು ನಾನು ಅವರಿಗೆ ಹೇಳಿದೆ. ಮುಖ್ಯ ವಿಷಯ ಯಾವುದೆಂದರೆ: ನಮ್ಮ ವಿವಾಹಗಳಲ್ಲಿ ಶೇಕಡಾ ತೊಂಬತ್ತು ಅತ್ಯುತ್ಕೃಷ್ಟ. ಹಾಗಾದರೆ ಉಳಿದ ಶೇಕಡಾ ಹತ್ತರ ವಿಷಯ

ಏನು? ಅವುಗಳಿಗೆ ಪರಿಹಾರ ಅಗತ್ಯ. ಭಾರತದಲ್ಲಿ ನಾವು ಮೊದಲು ಮದುವೆಯಾಗಿ, ಅನಂತರ ಪ್ರೀತಿಸುತ್ತೇವೆ; ಆದರೆ ಇಂಗ್ಲಿಷರು ಮೊದಲು ಪ್ರೀತಿಸಿ ಅನಂತರ ಪ್ರೀತಿಯನ್ನು ಕೈ ಬಿಡುತ್ತಾರೆ, ಏಕೆಂದರೆ ಸುಲಭವಾಗಿ ಪ್ರೇರಣೆಗೊಳಗಾಗುವ ವಯಸ್ಸಿನಲ್ಲಿ ಉಂಟಾಗುವ ಪ್ರೀತಿಯು ಚಂಚಲ ಚಿತ್ತದ ಒಂದು ಘಟನೆ. ಅದೇನೆಂಬುದು ಯಾರಿಗೂ ಗೊತ್ತಿಲ್ಲ. ಹಿಂದೂ ಸಮಾಜದಲ್ಲಿ ವಿವಾಹಕ್ಕೆ ಸಂಬಂಧಿಸಿದಂತೆ ಶ್ರೀ, ಕುಲ, ರೂಪ, ಬಂಧು ಶ್ರೇಣಿ, ಸಂಪ್ರದಾಯ ಇಂಥವುಗಳನ್ನು ಪರಿಗಣಿಸಬೇಕು ಎಂಬ ನಿಯಮ ಅಥವಾ ನಿಬಂಧನೆ ಇದೆ. ಯಾವುದೇ ಮದುವೆ ನಿಶ್ಚಯವಾಗುವ ಮೊದಲು ಈ ಎಲ್ಲವುಗಳನ್ನು ಪರಿಗಣಿಸಬೇಕು. ಶ್ರೀ ಎಂದರೆ ಸಂಪತ್ತು; ಅನಂತರ ಬರುವುದು ಕುಲ ಅಥವಾ ಜಾತಿ ಮತ್ತು ಅಂತಸ್ತು; ಅನಂತರ ರೂಪ ಅಥವಾ ಸೌಂದರ್ಯ; ಆಮೇಲೆ ಬರುವುದು ಬಂಧು ಶ್ರೇಣಿ ಅಥವಾ ಬಂಧು–ಬಳಗ; ಆಮೇಲೆ ಸಂಪ್ರದಾಯ ಅಥವಾ ರೀತಿನೀತಿಗಳು. ಈ ಐದನ್ನು ಬಹಳ ಎಚ್ಚರಿಕೆಯಿಂದ ಪರಿಗಣಿಸಬೇಕು. ಒಬ್ಬ ಹದಿನೆಂಟು ವರ್ಷದ ಹುಡುಗಿ ವಿವಾಹಕ್ಕೆ ಯೋಗ್ಯ ವಯಸ್ಕಳಾಗಿದ್ದರೂ ಇವುಗಳನ್ನು ಪರಿಶೀಲಿಸಿ, (ವರನನ್ನು) ಆಯ್ಕೆ ಮಾಡಿಕೊಳ್ಳಲು ಸಾಧ್ಯವೆ? ಇವುಗಳಲ್ಲಿ ಒಳ್ಳೆಯದು ಕೆಟ್ಟದು ಎಂಬುದನ್ನು ಅವಳು ವ್ಯತ್ಯಾಸ ಮಾಡಬಲ್ಲಳೆ? ಸಾಧ್ಯವಿಲ್ಲ. ಕೆಲವು ದಿನಗಳ ಹಿಂದೆ ನನ್ನ ಹೆಂಡತಿಯ ತಂಗಿಯ ಗಂಡನ ತಂಗಿಯನ್ನು ವಿಚಾರಿಸಿದೆ. ಅಲ್ಲ, ಇದು ದೂರದ ಸಂಬಂಧವಲ್ಲ. ಏಕೆಂದರೆ, ನನ್ನ ಹೆಂಡತಿಯ ತಂಗಿಯ ಗಂಡ ನನಗೆ ಷಡ್ಡಕನಾಗುತ್ತಾನೆ ಮತ್ತು ಅವನ ತಂಗಿಯು ವಿವಾಹಿತಳಿದ್ದಾಳೆ. ಅವಳು ತನ್ನ ಮದುವೆಗಿಂತ ಮುಂಚೆ ತನ್ನ ತಂದೆಗೆ ಏನೋ ಹೇಳಿದ್ದಳೆಂದು ನನಗೆ ತಿಳಿಯಿತು. ಆಕೆಯ ಗಂಡನ ಮನೆಗೆ ಹೋಗಿ, ಅವಳ ಗಂಡನನ್ನು ಜೊತೆಗೆ ಕರೆದುಕೊಂಡು, ಅವರ ಕೋಣೆಗೆ ಹೋಗಿ, ಅಲ್ಲಿ ಅವನಿಗೆ ಹೀಗೆ ಹೇಳಿದೆ : 'ಈ ಹುಡುಗಿ ನಿನ್ನನ್ನು ಮದುವೆಯಾಗಲಿಲ್ಲ ಎಂಬುದು ನಿನಗೆ ಗೊತ್ತೆ?' ಅವನು ಅರ್ಧ ಕೋಪಗೊಂಡು, ಅರ್ಧ ಆಶ್ಚರ್ಯಗೊಂಡು, ಒಂದು ರೀತಿಯಲ್ಲಿ ಗರಬಡಿದವನಂತೆ ನಿಂತುಕೊಂಡು, ಕೊನೆಗೆ 'ನೀವು ಏನು ಹೇಳುತ್ತಿದ್ದೀರಿ?' ಎಂದ. ನಾನು ಹೇಳಿದೆ : 'ನನ್ನ ಮನಸ್ಸಿನಲ್ಲಿ ಏನಿದೆಯೋ, ಅದನ್ನೇ ನಾನು ಹೇಳುತ್ತಿದ್ದೇನೆ. ಅವಳು ನಿಮ್ಮನ್ನು ಎಂದೂ ಮದುವೆಯಾಗಲಿಲ್ಲ'. ಏಕೆ? ಅವಳು ಮದುವೆಯಾಗಿರುವುದು ಈ ಮನೆಯಲ್ಲಿರುವ ವಿದ್ಯುತ್ತನ್ನು, ಮೋಟಾರ್‌ಕಾರನ್ನು'. ವಿಷಯ ಏನೆಂದರೆ, ಹುಡುಗಿ ತಾನು ಮದುವೆಯಾಗುವ ಮೊದಲು ತಂದೆಗೆ 'ನೀನು ನನ್ನನ್ನು ಯಾರಿಗೆ ಮದುವೆ ಮಾಡಿಕೊಡುತ್ತೀಯೋ ಅದು ನನಗೆ ಲೆಕ್ಕಕ್ಕಿಲ್ಲ–ಅವರ ಮನೆಯಲ್ಲಿ ಮಾತ್ರ ವಿದ್ಯುತ್ತು ಮೋಟಾರ್ ಕಾರೂ ಇರಬೇಕಷ್ಟೆ' ಎಂದು ಹೇಳಿದ್ದಳು. ಹದಿನಾರು ಅಥವಾ ಹದಿನೆಂಟು ವರ್ಷದ ಹುಡುಗಿ ವಸ್ತುಗಳನ್ನು ಪರಿಸ್ಥಿತಿಗಳನ್ನು ಪರಿಶೀಲಿಸಬಲ್ಲಳೆ? 'ನನ್ನ ತಂದೆ ಈ ಮನೆಯಲ್ಲಿ ನನ್ನನ್ನು ಬೆಳೆಸಿದ್ದಾರೆ, ಅವರಿಗೆ ವರ್ಷಕ್ಕೆ ಇಪ್ಪತ್ತು ಸಾವಿರ ರೂಪಾಯಿ ಬರುತ್ತದೆ. ಇಲ್ಲಿ ವಿದ್ಯುತ್ತಿದೆ, ಕಾರಿದೆ, ಅರಮನೆಯಂಥ ಮನೆಯಿದೆ; ಇಂಥದೇ ಪರಿಸ್ಥಿತಿಯು ಗಂಡನ ಮನೆಯಲ್ಲೂ ಇರಬೇಕು' ಎಂದಷ್ಟೇ ಅವಳು ಯೋಚಿಸುತ್ತಾಳೆ ಅಷ್ಟೇ. ಆದರೆ ಇಂಗ್ಲಿಷ್ ತಾಯಿ 'ನನ್ನ ಮಗಳು ಇದನ್ನೆಲ್ಲಾ ತಡೆದುಕೊಳ್ಳುವುದಿಲ್ಲ' ಎಂದು ದೂರುತ್ತಾಳೆ. 'ನನ್ನ ಮಗಳಿಗೆ ತನ್ನ ಸುತ್ತ ಯುವಕರ ಗುಂಪು ಇಟ್ಟುಕೊಳ್ಳಲಾಗಲಿ, ಅವರು ತನ್ನನ್ನು ಓಲೈಸುವಂತೆ ಮಾಡುವುದಕ್ಕಾಗಲಿ, ತನ್ನ ಸಿನಿಮಾ ಮತ್ತು ಹೋಟೆಲು ಖರ್ಚನ್ನು ನೋಡಿಕೊಳ್ಳುವಂತೆ ಮಾಡುವುದಕ್ಕಾಗಲಿ ಸಾಧ್ಯವಿಲ್ಲ' ಎಂಬುದು ಅವಳ ಅರ್ಥ. ಆ ಇಂಗ್ಲಿಷ್ ತಾಯಿಗೆ ಅದು ಇಷ್ಟ. ನೀವು ದಯವಿಟ್ಟು ಆ ರೀತಿ ಗೋಣು ಹಾಕಬೇಡಿ. ನಾನು ಹೇಳುತ್ತಿರುವುದು ಸತ್ಯ.

**ಪಂಡಿತ ಲಕ್ಷ್ಮೀಕಾಂತ ಮೈತ್ರಾ :** ನಾನು ನಿಮ್ಮನ್ನು ಬೆಂಬಲಿಸುತ್ತಿದ್ದೇನೆ.

**ಡಾ॥ ಬಿ. ಪಟ್ಟಾಭಿ ಸೀತಾರಾಮಯ್ಯ :** ನೀವಲ್ಲ. ನಿಮ್ಮ ಹಿಂದಿರುವ ಮಿತ್ರರು.

**ಶ್ರೀ ಆರ್.ಕೆ. ಸಿಧ್ವಾ :** ನೀವು ನನಗೆ ಅನ್ವಯಿಸುತ್ತಿದ್ದೀರೇನು?

**ಡಾ॥ ಬಿ. ಪಟ್ಟಾಭಿ ಸೀತಾರಾಮಯ್ಯ :** ಅಲ್ಲ, ನಿಮ್ಮ ಪಕ್ಕದವರಿಗೆ. ಇಂಗ್ಲೆಂಡಿನಲ್ಲಿ ಏನಾಗುತ್ತದೆ? ಅಲ್ಲಿ ತಾಯಿಯು ತನ್ನ ಮಗಳು ಐದಾರು ಕನ್ಯಾರ್ಥಿ ಯುವಕರ ಗಮನವನ್ನು ಸೆಳೆಯಬೇಕೆಂದು ಕಾತರದಿಂದಿರುತ್ತಾಳೆ; ಆಗ ಅವರಲ್ಲಿ ಒಬ್ಬ ಯೋಗ್ಯನಾದವನನ್ನು ತಮ್ಮ ಅಳಿಯನನ್ನಾಗಿ ಆರಿಸಿಕೊಳ್ಳಲು ಹುಡುಗಿಯ ತಂದೆ ತಾಯಿಗಳಿಗೆ ಸಾಧ್ಯವಾಗುತ್ತದೆ. ಆದರೆ ಆ ತಾಯಿಗೆ ತನ್ನ ಹೆಣ್ಣಾಳಿನ ಬಗೆಗೆ ಹೊಟ್ಟೆಕಿಚ್ಚು ಪಡುತ್ತಾಳೆ. ಏಕೆಂದರೆ ಆ ಹೆಣ್ಣಾಳು ಅಂಥ ಕೆಲಸಗಳಲ್ಲಿ ವಿಜಯಿಯಾಗುತ್ತಾಳೆ. ತನ್ನ ಮಗಳು ಆಗುತ್ತಿಲ್ಲ. ಇದೇ ದುರಂತ. ಹೆಣ್ಣಾಳು ಮಾಡುವುದೇನು? ಹೆಣ್ಣಾಳು ಸಂಜೆ ಎಂಟು ಗಂಟೆಯಾದೊಡನೆ ತನ್ನ ಕೆಲಸದ ಬಟ್ಟೆ ಬಿಚ್ಚಿ, ಶುಭ್ರವಾದ, ಆಕರ್ಷಕವಾದ ಬಟ್ಟೆ ತೊಟ್ಟು ಹೊರಗೆ ಹೋಗುತ್ತಾಳೆ. ಆಗ ಹುಡುಗಿಯ ತಾಯಿ ಕೇಳುತ್ತಾಳೆ: 'ಎಲ್ಲಿ ಹೋಗುತ್ತಿದ್ದೀಯಾ?' 'ನನ್ನ ಪ್ರಿಯಕರ ಕಾಯುತ್ತಿದ್ದಾನೆ, ನಾನು ಹೋಗಲೇ ಬೇಕು.' 'ಬೇಡ, ಬೇಡ, ಈಗ ನನ್ನ ಅಳಿಯ ಬರುವವನಿದ್ದಾನೆ.' 'ನೀನೂ ನಿನ್ನ ಅಳಿಯನೂ ಹತ್ತಿರದ ಮರವೊಂದಕ್ಕೇ ನೇಣು ಹಾಕಿಕೊಳ್ಳಿರಿ. ನನ್ನ ಪ್ರಿಯಕರ ಕಾಯುತ್ತಿದ್ದಾನೆ. ನಾನು ಹೋಗುತ್ತೇನೆ.'

**ಶ್ರೀಮತಿ ರೇಣುಕಾ ರೇ :** ನಿಮಗೆ ಸ್ತ್ರೀಯರ ಬಗ್ಗೆ ಕಡಿಮೆ ಜ್ಞಾನವಿದೆ. ಅವರು ಭಾರತೀಯರಿರಬಹುದು ಅಥವಾ ವಿದೇಶೀಯರಿರಬಹುದು.

**ಡಾ॥ ಬಿ. ಪಟ್ಟಾಭಿ ಸೀತಾರಾಮಯ್ಯ :** ಆದರೆ ನನ್ನ ಹೆಂಡತಿಯ ಬಗ್ಗೆ ನನಗೆ ಉತ್ತಮ ಅಭಿಪ್ರಾಯವಿದೆ. ಇರಲಿ, ಆಗ ಹುಡುಗಿಯ ತಾಯಿ 'ಆ ಹೆಂಗಸಿಗೆ ಇದು ಸಾಧ್ಯವಾಗಿದೆ. ಅವಳು ಅನೇಕ ಗಂಡಸರನ್ನು ಆಕರ್ಷಿಸುತ್ತಾಳೆ, ಆದರೆ ಈ ನನ್ನ ಮಗಳು ಅವರನ್ನು ಆಕರ್ಷಿಸಲು ಶಕ್ತಳಾಗಿಲ್ಲ' ಎಂದು ದೂರುತ್ತಾಳೆ. ಹೀಗಾಗಿ ತಾಯಿಗೆ ದುಃಖವಾಗುತ್ತದೆ. ಅದೇ ಪ್ರಚಲಿತ ರೀತಿ, ಅದೇ ಆ ದೇಶದ ರೂಢಿ. ಈ ದಿನಕ್ಕೆ ಅದೇ ಸರ್ವಸಮ್ಮತ. ಅದರಲ್ಲಿ ತಪ್ಪೇನೂ ಇಲ್ಲ. ಅಂಥ ವ್ಯವಸ್ಥೆ ಈಗ ಅಸ್ತಿತ್ವಕ್ಕೆ ಬಂದಿದೆ. ಮಲಬಾರಿಗೆ ಹೋಗಿ ಅಲ್ಲಿಯ ಮರಮಕ್ಕತ್ತಾಯಂ ಪದ್ಧತಿಯನ್ನು ಗಮನಿಸಿ. ಅದೊಂದು ತೀರಾ ಬೇರೆಯೇ ಆದ ಪದ್ಧತಿ. ಅದನ್ನು ನೀವು ಮೂರು ವರ್ಷ ಅಧ್ಯಯನ ಮಾಡಿ. ಆದರೆ ಅದರ ರಹಸ್ಯ ನಿಮಗೆ ಅರ್ಥವಾಗುವುದೇ ಇಲ್ಲ. ಅದು ಬಹಳ ಸುಂದರವಾದ ಪದ್ಧತಿ. ಆದರೆ ನಿಮ್ಮ ಸ್ನೇಹಿತ ಶ್ರೀ ಥಾನು ಪಿಳ್ಳೆಯವರು ಅದನ್ನು ಬದಲಾಯಿಸಲು ವಿರೋಧಿಸಿದರು.

ಮಾನ್ಯರೇ, ನಿಮ್ಮ ಆಸನದಲ್ಲಿ ಹಿಂದಿದ್ದವರು ನನಗಿಂತ ಮೊದಲು ಮಾತನಾಡಿದವರಿಗೆ ಗಂಟೆ ಬಾರಿಸಿದ ಮೇಲೆ ಇಪ್ಪತ್ತು ನಿಮಿಷ ಕೊಟ್ಟಿದ್ದರು, ಆದರೆ ನಾನು ಕೇವಲ ಎರಡೇ ನಿಮಿಷ ತೆಗೆದುಕೊಳ್ಳುತ್ತೇನೆ.

ಆದರೆ ತಿದ್ದಿಕೊಳ್ಳಲು ತಡವಾಗಿಲ್ಲ. ನಾವು ಬಹಳ ಮುಂದೇನೂ ಹೋಗಿಲ್ಲ. ನಾವು ಇದನ್ನು ಕುರಿತು ಗಂಭೀರವಾಗಿ ಅಷ್ಟೊಂದು ಕೂಲಂಕಷವಾಗಿ ಅಷ್ಟೊಂದು ನಿರುತ್ಸಾಹಕರವಾಗಿ ಚರ್ಚಿಸಿದ್ದೇವೆ. ಚರ್ಚಿಸಿದ್ದು ಒಳ್ಳೆಯದೇ ಆಗಿದೆ. ಈ ವಿಷಯಕ್ಕೆ ನಾವು ಅಷ್ಟೊಂದು ಗಮನ ಕೊಟ್ಟಿದ್ದೇವೆ. ಈಗ ನಾವೇನು ಮಾಡೋಣ? ಈ ಕಾಯಿದೆಯ ವಿಚಾರದಲ್ಲಿ ಮುಂದುವರಿಯೋಣವೆ? ನಾನು ಸನ್ಮಾನ್ಯ ಕಾನೂನು ಮಂತ್ರಿಗಳಿಗೆ ಈ ಕಾಯಿದೆಯನ್ನು ಹಿಂತೆಗೆದುಕೊಳ್ಳಲು ಹಾಗೂ, ಮತದಾರರಿಂದ ಸಾಕಷ್ಟು ಅಧಿಕಾರವನ್ನೂ ಅನುಮತಿಯನ್ನೂ ಪಡೆದು, ಮುಂದಿನ ಸಾರಿ ಇದಕ್ಕಿಂತ ಹೆಚ್ಚು ಕಠಿಣವಾದ ಕಾಯಿದೆಯನ್ನು ಸದನದ ಮುಂದೆ ಇಡಲು ವಿನಂತಿಸಿಕೊಳ್ಳುತ್ತಿದ್ದೇನೆ. ಆಗ ನಮ್ಮ ಮೇಲೆ ಆಕ್ರಮಣ ಮಾಡಲು ಯಾರಿಗೂ ಧೈರ್ಯವಾಗುವುದಿಲ್ಲ ಎಂದು ಘೋಷಿಸುತ್ತೇನೆ. ಅವನನ್ನು ತಕ್ಷಣವೇ ಗುಂಡಿಟ್ಟು ಕೊಲ್ಲಲಾಗುವುದು.

ಏಕೆಂದರೆ ಹಾಗೆ ಮಾಡಲು ನನಗೇ ದೇಶವು ಅನುಮತಿ ನೀಡುತ್ತದೆ. ನನ್ನ ಬಳಿ ಚುನಾವಣಾ ಪ್ರಣಾಳಿ ಇರುತ್ತದೆ. ಆಗ ನಾನು ಈ ಶಕ್ತಿ ಎಂಬ ಶಸ್ತ್ರ ತೊಟ್ಟು, ಸಬಲನಾಗಿ ಬರುತ್ತೇನೆ. ಹಾಗೆ ಮಾಡಲು ನನಗೆ ಅಧಿಕಾರವಿರುತ್ತದೆ. ಈಗ ನೀವು ಆ ಅಧಿಕಾರವಿಲ್ಲದೆ ಬಂದಿದ್ದೀರಿ. ಅದನ್ನು ನೋಡುವ ಯಾರಿಗಾದರೂ, ಯಾವ ಪ್ರಗತಿಶೀಲ ಕಾಂಗ್ರೆಸ್ಸಿಗನಿಗಾದರೂ, ಅದೊಂದು ಕರುಣಾಜನಕ ದೃಶ್ಯವಾಗುತ್ತದೆ.

ಅಲ್ಲದೆ, ಇಲ್ಲಿ ಮತ್ತೊಂದು ವಿಷಯವಿದೆ. ಏನೇ ಆಗಲಿ, ಈ ಮಸೂದೆಯ ವಿಷಯದಲ್ಲಿ ನಾವು ಮುಂದುವರಿಯುವುದಿಲ್ಲ ಎಂದು ನಾನು ಆಶಿಸುತ್ತೇನೆ. ಹಾಗೇನಾದರೂ ಮುಂದುವರಿದರೆ, ಈ ಸಭೆಯ ಪ್ರತಿ ಸದಸ್ಯರಿಗೂ ತಮಗೆ ಇಷ್ಟವಾದಂತೆ ಮತ ಚಲಾಯಿಸಲು ಪೂರ್ಣಸ್ವಾತಂತ್ರ್ಯ ನೀಡಬೇಕು, ಎಂದು ನನಗನಿಸುತ್ತದೆ. ಹಾಗೆ ಸ್ವಾತಂತ್ರ್ಯ ಕೊಟ್ಟರೆ, ಹಗ್ಗ ತುಂಡಾದಂತೆ. ಆದರೆ ಇದನ್ನು ಮುಂದುವರಿಸುವ ಬಗೆಗೆ ನಾವು ಈಗಾಗಲೇ ಬಿದ್ದಿದ್ದೇವೆ. ಸ್ನೇಹಿತರೆ, ನಾನು ನಿಮಗೆ ಎಚ್ಚರಿಕೆ ನೀಡುತ್ತಿದ್ದೇನೆ: ಇದು ನಮ್ಮ ಮುಂಬರುವ ಚುನಾವಣೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಅಂತೂ....

**ಶ್ರೀ ಮಹಾವೀರ ತ್ಯಾಗಿ :** ಇನ್ನೂ ಐದು ವರ್ಷಗಳವರೆಗೆ ಚುನಾವಣೆಯನ್ನು ಮುಂದೂಡಿ.

**ಡಾ॥ ಬಿ. ಪಟ್ಟಾಭಿ ಸೀತಾರಾಮಯ್ಯ :** ನಾವು ಜನರ ಪ್ರತಿನಿಧಿಗಳೆಂಬಂತೆ ಇಲ್ಲಿದ್ದೇವೆ ಎಂಬುದನ್ನು ನೆನಪಿಸಿಕೊಳ್ಳಿ, ಶೇಕಡಾ ಎಂಬತ್ತರಷ್ಟು ಜನರು ಒಂದೇ ಕೋಮಿಗೆ ಸೇರಿದ್ದಾರೆ, ಒಂದೇ ಪ್ರಜಾಧರ್ಮದಿಂದ, ಒಂದೇ ಪಿತೃಧರ್ಮದಿಂದ, ಒಂದೇ ಪಿತೃಪ್ರಧಾನ ವ್ಯವಸ್ಥೆಯಿಂದ ಒಂದುಗೂಡಿದ್ದಾರೆ, ಎಂಬುದನ್ನು ನೆನಪಿಸಿಕೊಳ್ಳಿ. ಇದೆಲ್ಲಾ ಇದೆ. ಆದರೆ ಜನರು ಹಿತಾಹಿತಗಳ ಮಧ್ಯೆ ವ್ಯತ್ಯಾಸ ಮಾಡುವಷ್ಟು ಬುದ್ಧಿವಂತರಾಗಿಲ್ಲ. ಈ ಕಾಯಿದೆ ಅವರನ್ನು ರೊಚ್ಚಿಗೇಳಿಸುತ್ತದೆ, ಅಷ್ಟೇ. ಅವರು ಈಗಾಗಲೇ ಒಂದಕ್ಕಿಂತ ಹೆಚ್ಚು ಕಾರಣಗಳಿಂದ ರೊಚ್ಚಿಗೆದ್ದಿದ್ದಾರೆ. ನಿನ್ನೆಯ ಪ್ರದರ್ಶನವು ಹಿಂದೂ ಕಾನೂನು ಮಸೂದೆಯ ವಿರುದ್ಧ ಜರುಗಿದ ಒಂದು ಪ್ರತಿಭಟನೆಗಿಂತ ಹೆಚ್ಚಾಗಿ, ಕಾಂಗ್ರೆಸ್ ಮತ್ತು ಕಾಂಗ್ರೆಸ್ ಸಂಸ್ಥೆಗಳ ವಿರುದ್ಧ ಜನರು ವ್ಯಕ್ತಪಡಿಸಿದ ಅಸಮಾಧಾನ ಮತ್ತು ಕೋಪವಾಗಿತ್ತು. ಅದನ್ನು ಮುಚ್ಚಿಡುವುದರಲ್ಲಿ ಏನೂ ಪ್ರಯೋಜನವಿಲ್ಲ. ನಾನು ಹೋದ ಕಡೆಯಲ್ಲೆಲ್ಲಾ ಜನರು ಮುತ್ತಿಗೆ ಹಾಕಿ ನನ್ನ ಮೇಲೆ ದಾಳಿ ಮಾಡುತ್ತಾರೇನೋ ಎಂದು ಅನಿಸುತ್ತದೆ. ಆದರೆ ನಾನು ನನ್ನ ಹರಟುವ ಗುಣದಿಂದಾಗಿ, ಒಂದೇ ಸಮನೆ ಮಾತಾಡುವುದರಿಂದಾಗಿ ಹಾಗೂ ವಾಚಾಳಿತನದಿಂದಾಗಿ ಇಂಥ ಪರಿಸ್ಥಿತಿಯಿಂದ ನುಣುಚಿಕೊಂಡಿದ್ದೇನೆ. ಆದರೆ, ಅದೇ ಸಮಯದಲ್ಲಿ ನಾನು ಎಂಥ ಸೂಕ್ಷ್ಮ ನೆಲೆಗಟ್ಟಿನ ಮೇಲೆ ಹೋಗುತ್ತಿದ್ದೇನೆ ಎಂಬ ಅರಿವು ನನಗಿದೆ. ನಾನು ಕೇವಲ ಸರ್ಕಾರದ ಟೀಕೆ ಮಾಡುವವನಂತೆ ಮಾತಾಡುತ್ತಿಲ್ಲ; ನಾನು ಎಲ್ಲ ಸಂದರ್ಭಗಳಲ್ಲಿಯೂ ಸರ್ಕಾರಕ್ಕೆ ಶೇಕಡಾ ನೂರರಷ್ಟು ಬೆಂಬಲ ನೀಡಿರುವ ಒಬ್ಬ ಜವಾಬುದಾರಿಯುತ ಕಾಂಗ್ರೆಸ್ಸಿಗನಂತೆ ಮಾತನಾಡುತ್ತಿದ್ದೇನೆ. ಆದರೆ ಯಾರು ಕೇವಲ ಹೊಗಳುತ್ತಾರೆ ಅಥವಾ ಸರ್ಕಾರದಿಂದ ಸತ್ಯವನ್ನು ಮುಚ್ಚಿಡುತ್ತಾರೋ ಅವರು ಹಿತೈಷಿಗಳಲ್ಲ ಎಂಬುದು ನನ್ನ ಅಭಿಮತ. ನಿಮಗೆ ಒಂದು ದೃಶ್ಯ–ಹ್ಯಾಮ್ಲೆಟ್ ನಾಟಕದ ದೃಶ್ಯವಲ್ಲ –ಜ್ಞಾಪಕವಿರಬಹುದು. ಜರ್ಮನಿಯ ನಾಟಕದ ಆ ದೃಶ್ಯದಲ್ಲಿ ಕೈಸರನು ೯ನೇ ನವೆಂಬರ್ ೧೯೧೮ ರಂದು ತನ್ನ ಎಲ್ಲ ದಂಡನಾಯಕರನ್ನೂ ಆಮಂತ್ರಿಸಿ, ಅವರಿಗೆ ಮಾತನಾಡಲು ಸೂಚಿಸುತ್ತಾನೆ. ಅದರಲ್ಲಿ ಯಾರೊಬ್ಬರೂ ಮಾತಾಡಲೊಲ್ಲರು, ಎಲ್ಲರೂ ಮೌನವಹಿಸುತ್ತಾರೆ. ಆಗ ಅವರು ಕೈಸರ್ ನೀವು ಮಾತಾಡಬೇಕೆಂದು ಆಜ್ಞಾಪಿಸುತ್ತೇನೆ ಎಂದು ಹೇಳುತ್ತಾನೆ. ಆಗ ಜನರಲ್ ಲ್ಯೂಡೆನ್‌ಡ್ರೋಫ್ ಮಾತನಾಡುತ್ತಾನೆ. ಏಕೆಂದರೆ ಕೈಸರ್ ಆಜ್ಞಾನಿಪಿಸಿದಾಗ ಅವನು ಮಾತನಾಡದಿದ್ದರೆ ಅವನನ್ನು ಗುಂಡಿಟ್ಟು ಕೊಲ್ಲಲಾಗುವುದು. ವಿಕ್ಟೋರಿಯಾ ರಾಣಿ ರಾಜಕುಮಾರ ಆಲ್ಬರ್ಟ್‌ನಿಗೆ ಬಾಗಿಲು ತೆಗೆಯಲು ಹೇಳಿದಂತೆ ಆಯಿತು. ಇದು ಅವಳು 'ಪ್ರಿಯಾ, ಬಾಗಿಲನ್ನು ತೆಗೆ' ಎಂದಳು; ಬಾಗಿಲು

ತೆಗೆಯಲಿಲ್ಲ. ಆಗ ಅವಳು 'ಬಾಗಿಲು ತೆಗೆಯಬೇಕೆಂದು ಇಂಗ್ಲೆಂಡಿನ ರಾಣಿ ಆಜ್ಞಾಪಿಸುತ್ತಾಳೆ' ಎಂದಳು. ಆಗ ಆ ಬಡಪಾಯಿ ಎದ್ದು ಬಂದು ಬಾಗಿಲು ತೆರೆದ. ಕೈಸರ್ ವಿಚಾರದಲ್ಲೂ ಹಾಗೇ ಆಯಿತು. ಲ್ಯೂಡೆನ್‌ಡ್ರೋಫ್ 'ಮಹಾರಾಜರೆ, ನೀವು ಹಾಲೆಂಡಿಗೆ ತಪ್ಪಿಸಿಕೊಂಡು ಹೋಗಲು ಕೇವಲ ಇಪ್ಪತ್ನಾಲ್ಕು ಗಂಟೆಗಳಿವೆ' ಎಂದ. ಆಗ ಕೈಸರ್ 'ಏಕೆ' ಎಂದು ಕೇಳಿದ 'ಏಕೆ?' ಏಕೆಂದರೆ ಸೈನ್ಯ ಹೋರಾಡುವುದಿಲ್ಲ. ಆಗ ಕೈಸರ್ 'ಹಾಗಾದರೆ ಸೈನ್ಯವನ್ನು ನಾನೇ ನಡೆಸುತ್ತೇನೆ' ಎನ್ನುತ್ತಾನೆ. ಆದರೆ ಸೈನ್ಯವು ಹೋರಾಡಲೊಲ್ಲದು. ಆದರೆ ಈ ಮನುಷ್ಯನನ್ನು ಇಪ್ಪತ್ನಾಲ್ಕು ಗಂಟೆಗಳಲ್ಲಿ ವರ್ಗ ಮಾಡಲಾಯಿತು, ಅಪ್ರಿಯ ಸತ್ಯವನ್ನು ಹೇಳಿದಾಗ. ದಯವಿಟ್ಟು ಗಮನವಿಟ್ಟು ಕೇಳಿ. ಏಕೆಂದರೆ, ಅದರಲ್ಲಿ ನಮ್ಮೆಲ್ಲರ ಅಭ್ಯುದಯ ಮತ್ತು ಯಶಸ್ಸಿಗೆ ಸಂಬಂಧಿಸಿದ ಶುಭಾಶಯಗಳಲ್ಲದೆ ಮತ್ತೇನೂ ಇರುವುದಿಲ್ಲ. ತತ್ತ್ವದ ಆಧಾರದ ಮೇಲಲ್ಲದಿದ್ದರೂ, ದೃಢವಾದ ನೈತಿಕತೆಯ ಆಧಾರದ ಮೇಲಲ್ಲದಿದ್ದರೂ ಕೊನೆಯ ಪಕ್ಷ ಔಚಿತ್ಯದ ದೃಷ್ಟಿಯಿಂದಲಾದರೂ ದಯವಿಟ್ಟು ಈ ನಿಲುವನ್ನು ಪುನರ್‌ಪರಿಶೀಲಿಸಿ, ಸಾಧ್ಯವಾದರೆ ಜನರು ನಿಮ್ಮೊಂದಿಗೆ ಸಹಕರಿಸುವಂತೆ ಮಾಡಿ.

*__ಆಚಾರ್ಯ ಜೆ.ಬಿ. ಕೃಪಲಾನಿ__ (ಉ.ಪ್ರ.: ಸಾಮಾನ್ಯ) : ಮಾನ್ಯರೆ, ಇಲ್ಲಿನ ಕೆಲವು ವಲಯಗಳಲ್ಲಿ ನಾನು ಸರ್ಕಾರದ ಕಾರ್ಯನೀತಿಯ ವಿರುದ್ಧ ಮಾತಾಡುತ್ತೇನೆಂಬ ಭಯವಿದೆ. ಈ ಸದನದಲ್ಲಿ ನಾನು ಒಂದೇ ಒಂದು ಸಾರಿ ಮಾತಾಡಿದ್ದರೂ, ಕೆಲವು ವಲಯಗಳಲ್ಲಿ ಈ ಭಯವಿದೆ. ಹಾಗೂ ನಾನು ಈ ಭಯವನ್ನು ಅಡಗಿಸಲು ಇಚ್ಛಿಸುತ್ತೇನೆ. ನಾನು ಈ ಮಸೂದೆಯ ಮುಖ್ಯತತ್ತ್ವಗಳನ್ನು ಬೆಂಬಲಿಸುವ ಉದ್ದೇಶದಿಂದ ನಿಂತಿದ್ದೇನೆ. ನಾನು ಹಾಗೆ ಮಾಡುವುದೇಕೆಂದರೆ, ಸರ್ಕಾರವು ಒಂದು ಅಮುಖ್ಯ ವಿಷಯಕ್ಕೋಸ್ಕರ ಸಾಮಾಜಿಕ ವಿಷಯಕ್ಕೋಸ್ಕರ ರಾಜೀನಾಮೆ ಕೊಡುವುದು ನನಗೆ ಇಷ್ಟವಿಲ್ಲ. ಅದು ಹೆಚ್ಚು ಗಣನೀಯ ರಾಜಕೀಯ ಮತ್ತು ಆರ್ಥಿಕ ವಿಷಯಕ್ಕೋಸ್ಕರ ರಾಜೀನಾಮೆ ಕೊಡಲಿ. ಪ್ರಜಾಪ್ರಭುತ್ವವಿರುವ ಯಾವುದೇ ದೇಶದಲ್ಲಿ ಒಂದು ಸರ್ಕಾರ ಹೇಗೆ ರಾಜೀನಾಮೆ ಕೊಡುತ್ತದೆಯೋ, ಹಾಗೆಯೇ ಈ ಸರ್ಕಾರ, ಉದಾಹರಣೆಗೆ, ಸಕ್ಕರೆ ಗೋಟಾಳೆಗೆ ಸಂಬಂಧಿಸಿದಂತೆ ಬೇಕಾದರೆ ರಾಜೀನಾಮೆ ನೀಡಲಿ, ಏಕೆಂದರೆ, ಈ ಗೋಟಾಳೆಯಿಂದಾಗಿ ಬಡಮಕ್ಕಳಿಗೆ ಸಕ್ಕರೆ ಸಿಕ್ಕುತ್ತಿಲ್ಲ. ಆದರೆ ಸಿಕ್ಕಾಬಟ್ಟೆ ದುಡ್ಡು ಕೊಡಲು ಸಿದ್ಧವಿರುವವರಿಗೆ ಟನ್ನುಗಟ್ಟಲೆ ಸಿಕ್ಕುತ್ತದೆ. ಇಂಥ ವಿಷಯಕ್ಕಾಗಿ ಈ ಸರ್ಕಾರ ಹೋದರೆ ಯಾರೂ ವಿಷಾದಿಸುವುದಿಲ್ಲ. ಆದರೆ ಸಾಮಾಜಿಕ, ಅಮುಖ್ಯ ವಿಷಯಕ್ಕಾಗಿ ಅದು ರಾಜೀನಾಮೆ ನೀಡುವುದು ನನಗೆ ಇಷ್ಟವಿಲ್ಲ.

**ಒಬ್ಬ ಸನ್ಮಾನ್ಯ ಸದಸ್ಯರು :** ಈ ಕಾಯಿದೆಗಿಂತ ಸಕ್ಕರೆ ಮುಖ್ಯವಲ್ಲ.

**ಆಚಾರ್ಯ ಜೆ.ಬಿ. ಕೃಪಲಾನಿ :** ಆದರೂ, ಅಷ್ಟು ಸಿಹಿಯಲ್ಲ.

ಆದರೂ ನಾನು ಈ ಮಸೂದೆಯನ್ನು ಸಮರ್ಥಿಸಲು ಬರುತ್ತಿರಲಿಲ್ಲ; ಆದರೆ ಕೆಲವು ವಲಯಗಳಿಂದ ಬರುತ್ತಿರುವ ಒತ್ತಡವನ್ನು ತಡೆದುಕೊಳ್ಳಲಾಗದೆ, ಇಲ್ಲಿಗೆ ಬಂದಿದ್ದೇನೆ. ನಾನು ಈ ಮಸೂದೆಗೆ ಬೆಂಬಲ ನೀಡಬೇಕೆಂದು ನನಗೆ ಮನೆಯಲ್ಲಿ ತಿಳಿಸಲಾಯಿತು. ಆಗ ಹಿಂದೂ ಕಾನೂನಿನ ಬಗ್ಗೆ ನಾನು ಅಜ್ಞಾನಿಯೆಂದೂ, ಹಿಂದೂ ಕಾನೂನುಗಳ ಬಗ್ಗೆ ಅನೇಕ ಸಂಪುಟಗಳಿವೆಯೆಂದೂ, ಅವುಗಳ ಮೇಲಿನ ವ್ಯಾಖ್ಯಾನವೂ ಸಹ ಅನೇಕ ಸಂಪುಟಗಳಲ್ಲಿವೆಯೆಂದೂ. ಹೀಗಿರುವಾಗ ನನಗೆ ತಿಳಿಯದಂಥ

---

* C.A. (Leg) D, Vol. VI, pt ii, ೧೩ನೇ ಡಿಸೆಂಬರ್, ೧೯೪೯ ಪುಟ ೫೫೨–೫೮

ವಿಷಯವನ್ನು ನಾನು ಬೆಂಬಲಿಸಲಾಗಲಿ ವಿರೋಧಿಸಲಾಗಲಿ ಹೇಗೆ ಸಾಧ್ಯ? ಎಂದು ಕೇಳಿದೆನು. 'ನಾನು ನಿಮಗೆ ತಿಳಿಯುವಂತೆ ಮಾಡಬಲ್ಲೆ' ಎಂಬ ಉತ್ತರ ತಕ್ಷಣವೇ ಬಂತು.

**ಒಬ್ಬ ಸನ್ಮಾನ್ಯ ಸದಸ್ಯರು :** ನಿಮ್ಮ ಗುರುಗಳಾರು ?

**ಆಚಾರ್ಯ ಜೆ.ಬಿ. ಕೃಪಲಾನಿ :** ಕೊನೆಗೆ ನಾನು ಕೆಲವು ಉಪನ್ಯಾಸಗಳನ್ನು ಹಾಸಿಗೆಯಲ್ಲೇ ಪಡೆಯಲು ಶರಣಾದೆ. ಈ ವಿಧಾನಸಭೆಯಲ್ಲಿ ಅತ್ಯಂತ ಅಧಿಕಾರವಾಣಿಯಿಂದ ಮಾತನಾಡಬಲ್ಲ ಮಹಾನ್ ಡಾ॥ ಅಂಬೇಡ್ಕರರೆ ನನ್ನ ಗುರುಗಳಿಗೆ ಬೋಧಿಸಿದ್ದರು ಎಂಬುದನ್ನು ಆಮೇಲೆ ನಾನು ಖಾತರಿಪಡಿಸಿಕೊಂಡೆ. ಸ್ಕೂಲು ಅಥವಾ ಕಾಲೇಜುಗಳಲ್ಲಿ ನನ್ನ ಉಪಾಧ್ಯಾಯರು ಬೋಧಿಸಿದ ನಂತರ ನಾನು ಎಷ್ಟು ಬುದ್ಧಿವಂತ ಅಥವಾ ಮೂರ್ಖನಾಗಿದ್ದೆನೋ, ಈ ಶಯ್ಯೋಪನ್ಯಾಸಗಳು ಮುಗಿದ ನಂತರವೂ ನಾನು ಅಷ್ಟೇ ಬುದ್ಧಿವಂತ ಅಥವಾ ಮೂರ್ಖನಾಗಿದ್ದೆ. ನನ್ನ ಗುರುಗಳು ನನಗಿಂತ ಹೆಚ್ಚು ಮೂರ್ಖರಿದ್ದಾರೆಂಬ ತೀರ್ಮಾನಕ್ಕೆ ಬಂದೆ.

ನಾನು ಪ್ರಾಧ್ಯಾಪಕನಾಗಿದ್ದಾಗ ನನ್ನ ವಿದ್ಯಾರ್ಥಿಗಳು ಸಹ ನನ್ನ ಬಗ್ಗೆ ಅದೇ ಮೆಚ್ಚಿಗೆಯ ಮಾತಾಡುತ್ತಿದ್ದರೆಂದು ನನಗೆ ಅನಿಸುತ್ತಿತ್ತು. ಇದನ್ನು ತಿಳಿದ ನಾನು, ತರಗತಿಯನ್ನು ಪ್ರವೇಶಿಸಿದ ಕೂಡಲೇ, "ಸಭ್ಯರೆ, ನಿಮ್ಮ ಹಾಜರಿ ಖಾತರಿಯಾಗಿದೆ; ನಿಮ್ಮ ಹಾಜರಿಯನ್ನು ಹಾಕಿದ ಕೂಡಲೇ ನೀವು ಹೊರಹೋಗಲು ಸ್ವತಂತ್ರರಿದ್ದೀರಿ; ಏಕೆಂದರೆ, ನಾನು ನನ್ನ ಗುರುಗಳ ವಿದ್ಯೆಗೆ ಕೊಡುತ್ತಿದ್ದ ಗೌರವಕ್ಕಿಂತ ಹೆಚ್ಚಿನ ಗೌರವವನ್ನೇನೂ ನೀವು ನನ್ನ ವಿದ್ಯೆಗೆ ಕೊಡುವುದಿಲ್ಲವೆಂದು ನನಗೆ ಗೊತ್ತು" ಎಂದು ಪ್ರತಿದಿನ ಹೇಳುತ್ತಿದ್ದೆ.

ಮಾನ್ಯರೆ, ನಾನು ಈ ಮಸೂದೆಗೆ ಬೆಂಬಲ ನೀಡಲು ಪ್ರಮಾಣವಚನ ಸ್ವೀಕರಿಸಿದ್ದೇನೆ; ಅಲ್ಲದೆ, ನಾನದನ್ನು ಬೆಂಬಲಿಸಲೇ ಬೇಕು. ಏಕೆಂದರೆ, ನನ್ನ ಹೆಂಡತಿ ಇಲ್ಲಿ ಹಾಜರಿಲ್ಲದಿದ್ದರೂ, ಆಕೆ ಹಿಂದಿರುಗಿದ ನಂತರ ನಾನು ಆಕೆಗೆ ಕೇವಲ ವಿವರಣೆಯನ್ನಷ್ಟೇ ಅಲ್ಲ, ನೈತಿಕ ಮತ್ತು ಬೌದ್ಧಿಕ ವಿವರಣೆಯನ್ನೂ ನೀಡಬೇಕಾಗುವುದು, ಎಂದು ನನಗೆ ಗೊತ್ತು.

ಮಾನ್ಯರೆ, ಇದು ನನ್ನ ಪಾಲಿಗೆ ಒಂದು ಅಪಾಯದಲ್ಲಿರುವ ಧರ್ಮದ ಪ್ರಶ್ನೆಯಲ್ಲ. ಅದು ಅಪಾಯದಲ್ಲಿರುವ ನನ್ನ ಕುಟುಂಬದ ಪ್ರಶ್ನೆ. ಹಿಂದೂಧರ್ಮ ಅಪಾಯದಲ್ಲಿದೆ ಎಂದು ಸಾಕಷ್ಟು ಸಾರಿ ಹೇಳಲಾಗಿದೆ. ಆದರೆ, ನನಗೆ ಇದು ಹೇಗೆ ಎಂದು ಅರ್ಥವಾಗುತ್ತಿಲ್ಲ. ಹಿಂದೂಗಳೇ ಕಳ್ಳರೂ, ಠಕ್ಕರೂ, ವ್ಯಭಿಚಾರಿಗಳೂ, ಕಾಳಸಂತೆಕೋರರೂ, ಲಂಚಕೋರರೂ ಆಗಿರುವಾಗ, ಹಿಂದೂಧರ್ಮ ಅಪಾಯದಲ್ಲಿರಲಾರದು! ಹಿಂದೂ ಧರ್ಮಕ್ಕೆ ಈ ಜನರಿಂದ ಅಪಾಯವಿಲ್ಲ. ಹಿಂದೂ ಧರ್ಮಕ್ಕೆ ಅಪಾಯವಿರುವುದು ಯಾವುದೋ ಒಂದು ಕಾನೂನಿಗೆ ತಿದ್ದುಪಡಿ ಮಾಡುವುವರಿಂದ! ಪ್ರಾಯಶಃ ಅವರು ಅಗತ್ಯಕ್ಕಿಂತ ಹೆಚ್ಚು ಉತ್ಸಾಹಿಗಳಾಗಿದ್ದಾರೇನೋ! ಆದರೆ ಇಂದ್ರಿಯ ವಿಷಯಗಳಲ್ಲಿ ಭ್ರಷ್ಟನಾಗಿರುವುದಕ್ಕಿಂತ, ಆದರ್ಶ ವಿಷಯಗಳಲ್ಲಿ, ಅತ್ಯುತ್ಸಾಹಿಗಳಾಗಿರುವುದು ಲೇಸು. ನಮ್ಮ ರಾಷ್ಟ್ರಪಿತನ ಸಾವಿಗೆ ಇಂಥ ಪ್ರವೃತ್ತಿಯೇ ಕಾರಣ. ಗೀತೆ ಮತ್ತು ಉಪನಿಷತ್ತುಗಳು ಬೋಧಿಸಿದ ಉನ್ನತ ಆದರ್ಶಗಳಿಗೆ ತಕ್ಕಂತೆ ಹಾಗೂ ನಮ್ಮ ಧರ್ಮ ಗ್ರಂಥಗಳ ಬೋಧನೆಯ ಬೆಳಕಿನಲ್ಲಿ ಬಾಳಿದ ವ್ಯಕ್ತಿಗಿಂತ, ಆ ಕೊಲೆಗಾರನೇ ಹೆಚ್ಚಿನ ಹಿಂದೂ ಎಂದು ನಂಬಲಾಗಿತ್ತು. ಹಿಂದೂ ಕೋಮಿನವರು ತಮ್ಮ ಧರ್ಮದ ಬಗೆಗಿರುವ ಇಂಥ ಸುಳ್ಳು ಅಭಿಪ್ರಾಯಗಳನ್ನು ತೊಡೆದುಹಾಕಬೇಕೆಂದು ನಾನು ಆಶಿಸುತ್ತೇನೆ. ನಮ್ಮ ಧರ್ಮವನ್ನು ಕೊಲೆಗಾರರೂ ಕಳ್ಳರೂ ಮಾಡಲಿಲ್ಲ; ಅದನ್ನು ಮಾಡಿದವರು ಸಾಧುಗಳು, ಸನ್ಯಾಸಿಗಳು ಮತ್ತು ಮಹಾತ್ಮರು.

ಆದರೂ ಈ ಪ್ರಶ್ನೆಗೆ ಮತ್ತೊಂದು ಮಗ್ಗುಲಿದೆ. ಒಂದು ಪಕ್ಷ, ಧರ್ಮವು ಅಪಾಯದಲ್ಲಿದೆ ಎನ್ನುತ್ತದೆ;

ಮತ್ತೊಂದು ಪಕ್ಷ, ಪ್ರಗತಿಯ ನೂತನ ಧರ್ಮ ಅಪಾಯದಲ್ಲಿದೆ ಎನ್ನುತ್ತದೆ. ಇದರಿಂದಾಗಿ ಹೆಚ್ಚಿನ ಗೊಂದಲವುಂಟಾಗಿದೆ; ಈ ಮಸೂದೆಗೆ ನೀವು ಬೆಂಬಲ ನೀಡದಿದ್ದರೆ, ನಿಮ್ಮನ್ನು ಪ್ರಗತಿವಿರೋಧಿ ಎನ್ನಲಾಗುತ್ತದೆ.

ಈ ಮಸೂದೆಗೆ ಬೆಂಬಲ ನೀಡುವಂತೆ ನನ್ನನ್ನು ಹೇಗೆ ಒಪ್ಪಿಸಲಾಯಿತು, ಎಂಬುದರ ಬಗ್ಗೆ ಹೇಳುತ್ತೇನೆ. ಅದರಲ್ಲಿ ಒಂದು ಕಾರಣವನ್ನು ನಾನಾಗಲೇ ತಿಳಿಸಿದ್ದೇನೆ. ಮತ್ತೊಂದು ಕಾರಣವನ್ನು ಈಗ ತಿಳಿಸುತ್ತೇನೆ.

ಒಬ್ಬ ಹೆಂಗಸಿದ್ದಳು, ಆಕೆ ಮತ್ತೊಬ್ಬಳ ಹತ್ತಿರ "ಕೃಪಲಾನಿ ಈ ಮಸೂದೆಯನ್ನು ಬೆಂಬಲಿಸುವುದಿಲ್ಲ, ಅವನೊಬ್ಬ ಪ್ರಗತಿವಿರೋಧಿ" ಎಂದು ಪಿಸುಗುಟ್ಟಿದಳು.

**ಶ್ರೀ ಬಿ.ಎಲ್. ಸೋಂಧಿ :** ಅವರಿಬ್ಬರೂ ಈ ಸದನದ ಸದಸ್ಯರೇನು?

**ಆಚಾರ್ಯ ಜೆ.ಬಿ. ಕೃಪಲಾನಿ :** ಅವರು ಸದಸ್ಯರಲ್ಲ, ಸನ್ಮಾನ್ಯ ಸದಸ್ಯರು. ಆ ಮತ್ತೊಬ್ಬಳು ಗುಟ್ಟಾಗಿ "ನಾನು ಪ್ರತಿಭಟಿಸಿದೆ. ಹಾಗೂ ಕೃಪಲಾನಿ ಪ್ರಗತಿಪರ ಎಂದೆ" ಎಂದು ನನಗೆ ಹೇಳಿದಳು. ಹೀಗೆ ನನ್ನ ಮರ್ಯಾದೆ ಉಳಿಯಿತು. ನೋಡಿ, ಹೇಗೆ ಸೂಕ್ಷ್ಮ ರೀತಿಯ ಪ್ರಚಾರ ನಡೆಸಲಾಗುತ್ತಿದೆ! ಒಬ್ಬಳು ಮತ್ತೊಬ್ಬಳಿಗೆ ಏನನ್ನೋ ಗುಟ್ಟಾಗಿ ಹೇಳುತ್ತಾಳೆ, ಅದನ್ನು ಕೇಳಿಸಿಕೊಂಡವಳು ನನಗೆ ತಿಳಿಸುತ್ತಾಳೆ. ಈಗ ಹೇಳಿ, ನಾನು ಏನು ಮಾಡಬೇಕು? ನನ್ನನ್ನು ನಾನು ಪ್ರಗತಿ ವಿರೋಧಿ, ಪ್ರಗತಿ ಪರವಲ್ಲ ಎಂದು ಪರಿಗಣಿಸಲಾರೆ. ನನ್ನನ್ನು ಹಿಂದ್ವೇತರನೆಂದು ಜನರು ಕರೆಯಬಹುದು. ಆದರೆ ಆಧುನಿಕ ಮನುಷ್ಯನಿಗೆ ಯಾವುದೇ ಧರ್ಮವಿಲ್ಲದಿರುವುದಕ್ಕಿಂತ ಆಧುನಿಕನಾಗದಿರುವುದೇ ಹೆಚ್ಚಿನ ಕಳಂಕ. ನಾನು ದೇವರನ್ನು ನಂಬದಿರಬಹುದು, ಆದರೆ, ಪಶ್ಚಿಮ ದೇಶಗಳಲ್ಲಿ ಆಗುತ್ತಿರುವ ಪ್ರಗತಿ ಎಂಬ ದೈವವನ್ನು ನಾನು ಹೇಗೆ ನಂಬದಿರಲಿ?

ನಾನೊಬ್ಬ ಪ್ರತಿಗಾಮಿ (reactionary) ಎಂದು ಮೊದಲಿನ ಹೆಂಗಸು ಏಕೆ ಹೇಳಿದಳು. ಎಂಬುದನ್ನು ನಿಮಗೆ ತಿಳಿಸುತ್ತೇನೆ–ಅದೊಂದು ಕುತೂಹಲಕಾರಿ ಕತೆ. ಅದನ್ನು ನಾನು ಹೇಳುತ್ತೇನೆ–ನೀವು ನಗುವ ಮೂಲಕ ನನಗೆ ಅಡ್ಡಿ ಮಾಡುವುದಿಲ್ಲ ಎಂದು ಭರವಸೆ ನೀಡಿದರೆ. ನಾನು ಮೂಲಭೂತ ಹಕ್ಕುಗಳ ಸಮಿತಿಗೆ ಅಧ್ಯಕ್ಷನಾಗಿದ್ದೆ. ಆ ಮೂಲಭೂತ ಹಕ್ಕುಗಳ ಸಮಿತಿಯ ಮುಂದೆ, ಪರ್ದಾ ಪದ್ಧತಿಯನ್ನು ತ್ಯಜಿಸುವುದು ಸ್ತ್ರೀಯರ ಮೂಲಭೂತ ಹಕ್ಕಾಗಬೇಕು ಎಂಬ ಒಂದು ಸೂಚನೆ ಬಂದಿತು. ನಾನಂತೂ, ಸ್ತ್ರೀಯರು ಪರ್ದೆಯಿಲ್ಲದೆ ಓಡಾಡಬೇಕೆಂಬುದನ್ನು ಬೆಂಬಲಿಸುತ್ತೇನೆ; ಯಾವ ಗಂಡಸು ತಾನೆ ಅದನ್ನು ಬೆಂಬಲಿಸುವುದಿಲ್ಲ? ಹಾಗೆ ಬೆಂಬಲಿಸದವರನ್ನು ನಾನು ಮೆಚ್ಚಿಕೊಳ್ಳಬಹುದು. ಆದರೆ ಅಂಥ ಶ್ಲಾಘನೀಯ ಜನರಲ್ಲಿ ನಾನೊಬ್ಬನಲ್ಲ. ಆಗ ನಾನು, ಎಲ್ಲ ಪರ್ದೆಗಳೂ–ಪ್ರಾಚೀನ ಪರ್ದೆ ಮತ್ತು ಆಧುನಿಕ ಪರ್ದೆ–ಕಾಣೆಯಾಗುವುದಾರೆ, ಮೂಲಭೂತ ಹಕ್ಕುಗಳಿಗೆ ಈ ಉಪವಿಭಾಗವನ್ನು ಸೇರಿಸಲು ನನ್ನದೇನೂ ತಕರಾರು ಇಲ್ಲ ಎಂದೆ. ದೆಹಲಿಯಲ್ಲಿ ಒಂದು ಸುತ್ತು ತಿರುಗಾಡಿ. ಹೆಂಗಸಿನ ಮುಖವನ್ನು ನೋಡುವುದು ಬಹಳ ದುರ್ಲಭ. ಆಕೆಯ ಮುಖದ ಮೇಲೆ ಯಾವಾಗಲೂ ಒಂದು ಮುಖವಾಡ ಇರುತ್ತದೆ. (**ಒಬ್ಬ ಸನ್ಮಾನ್ಯ ಸದಸ್ಯರು :** ಅದು ಪೌಡರು). ಹಳೆಯ ತೆರೆಯನ್ನು ತೆಗೆದುಹಾಕಲು ಸಾಧ್ಯವಾದರೆ, ಆಧುನಿಕ ಮುಖವಾಡವನ್ನೂ ಕಿತ್ತುಹಾಕಬಹುದು. ಏಕೆಂದರೆ, ಆಧುನಿಕ ಮುಖವಾಡವು ಹಳೆಯ ಪರ್ದೆಗಿಂತ ಹೆಚ್ಚು ಸಾಂಗವಾಗಿದೆ. ಪರ್ದೆಯನ್ನು ಬೇಕೆನಿಸಿದಾಗ ತೆಗೆಯಬಹುದು, ಆದರೆ ಮುಖವಾಡವನ್ನು ಮನೆಯಲ್ಲಿ ಮಾತ್ರ ತೆಗೆಯಬೇಕು, ಅದೂ ಒಂದು ರಾಸಾಯನಿಕ ಪ್ರಕ್ರಿಯೆಯ ಮೂಲಕ.

ನೀವು ನನ್ನನ್ನು ತಪ್ಪು ತಿಳಿಯಬಾರದೆಂದು ಮೊದಲೇ ಹೇಳುತ್ತಿದ್ದೇನೆ–ಮನುಕುಲದ ಸಮಾನತೆಯಲ್ಲಿ ನನಗೆ ಅಪಾರ ನಂಬಿಕೆಯಿದೆ. ಮನುಕುಲದಲ್ಲಿ ಸ್ತ್ರೀಕುಲವೂ ಸೇರಿದೆ. ಈ ಮಸೂದೆಯ ಠರಾವಾಗಬೇಕೆಂಬುದು

ನನ್ನ ಇಚ್ಛೆ. ಏಕೆಂದರೆ, ಅದರಿಂದಾಗಿ ನಮಗೆ ಸ್ತ್ರೀಯರೊಂದಿಗೆ ಸಮಾನತೆ ಸಿಕ್ಕುತ್ತದೆ. ನಮ್ಮ ಸಮಾನತೆಯ ದೃಷ್ಟಿಯಿಂದ ಈ ಮಸೂದೆ ಬಹಳ ಮುಖ್ಯವೆಂದು ತಿಳಿದಿದ್ದೇನೆ. ಸ್ತ್ರೀಯರೊಂದಿಗೆ ಹೋಲಿಸಿಕೊಂಡರೆ ನಾವು ಪ್ರತಿಕೂಲ ಸ್ಥಿತಿಯಲ್ಲಿದ್ದೇವೆ ಎಂದು ನನಗೆ ಯಾವಾಗಲೂ ಅನಿಸುತ್ತದೆ. ಮೊದಲನೆಯದಾಗಿ ಪ್ರಕೃತಿಯೇ ನಮ್ಮನ್ನು ಪ್ರತಿಕೂಲಸ್ಥಿತಿಯಲ್ಲಿಟ್ಟಿದೆ. ಏಕೆಂದರೆ, ಗಂಡಸು ಏನೇನನ್ನು ಮಾಡಬಲ್ಲನೋ ಅದೆಲ್ಲವನ್ನೂ ಹೆಂಗಸೂ ಮಾಡಬಲ್ಲಳು. ಆದರೆ ಕೆಲವು ವಿಷಯಗಳಲ್ಲಿ ಸ್ತ್ರೀ ಮಾತ್ರ ಮಾಡಬಲ್ಲದ್ದನ್ನು ಪುರುಷ ಮಾಡಲಾರ – ಕಲ್ಪನೆಯಲ್ಲೂ ಮಾಡಲಾರ, ಕನಸಿನಲ್ಲೂ ಮಾಡಲಾರ, ದುಃಸ್ವಪ್ನದಲ್ಲೂ ಮಾಡಲಾರ. I cannot conceive*.

**ಕೆಲವು ಸನ್ಮಾನ್ಯ ಸದಸ್ಯರು** : ಇಲ್ಲ, ನಿಮಗೆ ಸಾಧ್ಯವಿಲ್ಲ!

**ಆಚಾರ್ಯ ಜೆ.ಬಿ. ಕೃಪಲಾನಿ** : ನಾನು conceive ಎಂಬ ಪದವನ್ನು ಬೌದ್ಧಿಕ ಅರ್ಥದಲ್ಲಿ ಬಳಸುತ್ತಿದ್ದೇನೆ. ನನ್ನ ಅರ್ಥದ ಪರಿಚಯ ನಿಮಗಾಗಲೇ ಆಗಿರುವುದರಿಂದ, ಅದನ್ನು ನಾನು ವಿಸ್ತರಿಸಬೇಕಾಗಿಲ್ಲ. (**ಒಬ್ಬ ಸನ್ಮಾನ್ಯ ಸದಸ್ಯರು** : ಓ ಬೇಡ). ಆದರೆ ನನಗೆ ಅನೇಕ ಬಾರಿ ಕುತೂಹಲವುಂಟಾಗಿದೆ. ಹಾಗೂ ಕೆಲವು ಸ್ತ್ರೀಯರನ್ನು "ಗರ್ಭಧರಿಸಿರುವಾಗ ಈ ಯಾತನಾಮಯವಾದ ನೋವು, ಏನಿದು? ಅತ್ಯಂತ ಸುಖಮಯವಾದ ಸಂತೋಷ, ಏನಿದು?" ಎಂದು ಕೇಳಿದ್ದೇನೆ. ಅವರು ನನ್ನ ಅಜ್ಞಾನದ ಬಗ್ಗೆ ಮಂದಹಾಸ ಬೀರುತ್ತಾರೆ, ಆದರೆ ಯಾವ ಉತ್ತರವನ್ನು ಕೊಡುವುದಿಲ್ಲ: ಮಗುವಿಗೆ ಎದೆ ಹಾಲುಣಿಸುವಾಗ ಅದೇನು ಸುಖ, ಎಂದೂ ಕೆಲವು ಸ್ತ್ರೀಯರನ್ನು ಕೇಳಿದ್ದೇನೆ. ಆಗಲೂ ನನ್ನ ಅಜ್ಞಾನದ, ಬಗ್ಗೆ ಮಂದಹಾಸ ಬೀರುತ್ತಾರೆ. ಆದರೆ ಯಾವ ಉತ್ತರವನ್ನೂ ಕೊಡುವುದಿಲ್ಲ. ಈ ವಿಚಾರದಲ್ಲಿ ನಾವು ಪ್ರತಿಕೂಲ ಸ್ಥಿತಿಯಲ್ಲಿದ್ದೇವೆ. ಅವರು ಮಹಾನ್ ಸೃಷ್ಟಿಕಾರರು. ಕಲಾಕಾರರು ನಿರ್ಜೀವ ವಸ್ತುಗಳನ್ನು ಸೃಷ್ಟಿಸಿದರೆ, ಸ್ತ್ರೀಯರು ದೇವರ ಪ್ರತಿಮೆಗಳನ್ನು ಸೃಷ್ಟಿಸುತ್ತಾರೆ. ಆದರೆ ಇವು ಕೆಲವು ವೇಳೆ ಸೈತಾನನ ಪ್ರತಿಮೆಗಳ ಮಟ್ಟಕ್ಕೆ ಇಳಿಯುತ್ತವೆ. ಈ ವಿಚಾರದಲ್ಲಿ ಪ್ರಕೃತಿಯು ನಮ್ಮ ಹಾದಿಯಲ್ಲಿ ಒಂದು ತಡೆಯನ್ನು ಒಡ್ಡಿದೆ; ಹೀಗಾಗಿ ನಾವು ಸ್ತ್ರೀಯರೊಂದಿಗೆ ಸಮಾನತೆ ಸಾಧಿಸಲು ನಮಗೆ ಸಾಧ್ಯವಾಗುತ್ತಿಲ್ಲ. ಆದರೆ ಉಳಿದ ಅನೇಕ ವಿಷಯಗಳಲ್ಲಿ ನಾವು ಸ್ತ್ರೀಯರೊಂದಿಗೆ ಸಮಾನತೆ ಸಾಧಿಸಬಹುದು.

ಸ್ತ್ರೀಯರು ಪುರುಷರೊಂದಿಗೆ ಸಮಾನತೆಯನ್ನು ಸಾಧಿಸುವ ವಿಷಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಭಾರತದಲ್ಲಿ ಅವರಾಗಲೇ ಅದನ್ನು ಸಾಧಿಸಿದ್ದಾರೆಂದು ಹೇಳಬಹುದು. ನಾವು ಸ್ವರಾಜ್ಯವನ್ನು ಪಡೆದ ಕೂಡಲೆ ಒಬ್ಬ ಸ್ತ್ರೀ ರಾಜ್ಯಪಾಲರನ್ನು ಪಡೆದೆವು, ಎಂಬುದು ನಿಮಗೆ ಗೊತ್ತು. ಅಮೆರಿಕಾದ ಸಂಯುಕ್ತ ಸಂಸ್ಥಾನಗಳಿಗೆ ಸ್ವಾತಂತ್ರ್ಯ ಸಿಕ್ಕಿ ಎರಡು ಶತಮಾನಗಳೇ ಕಳೆದಿವೆ ಮತ್ತು ಅದರಲ್ಲಿ ನಲವತ್ತೆಂಟು ರಾಜ್ಯಗಳಿವೆ, ಆದರೆ ಒಂದು ಸಾರಿಯಾದರೂ ಒಬ್ಬ ಮಹಿಳೆಯನ್ನು ರಾಜ್ಯಪಾಲರನ್ನಾಗಿ ನೇಮಿಸಿದುದು ನನಗೆ ತಿಳಿದಿಲ್ಲ. ನನ್ನ ಇತಿಹಾಸಜ್ಞಾನ ಮಸಕಾಗಿರಬಹುದು, ಹಾಗೂ ನನ್ನ ಮಾತಿಗೆ ತಿದ್ದುಪಡಿ ಸೂಚಿಸುವ ಅವಕಾಶವಿದೆ. ಆದರೆ ಒಬ್ಬ ಸ್ತ್ರೀಯನ್ನೂ ಕೇಂದ್ರದ ಮಂತ್ರಿಯೆಂದು ನೇಮಿಸಿಲ್ಲವೆಂದು ನಂಬುತ್ತೇನೆ. ಇಂಗ್ಲೆಂಡಿನಂಥ ರಾಷ್ಟ್ರಗಳಲ್ಲಿ ಅಧಿಕ ಸಂಖ್ಯೆ ಸ್ತ್ರೀಯರು ವಿದ್ಯಾಭ್ಯಾಸ ಮಾಡಿದ್ದರೂ, ಒಬ್ಬ ಸ್ತ್ರೀಯನ್ನೂ ಅಲ್ಲಿ ಕ್ಯಾಬಿನೆಟ್ ಮಂತ್ರಿಯೆಂದು ಇದುವರೆಗೂ ನೇಮಿಸಿಲ್ಲವೆನಿಸುತ್ತದೆ. ನಾನು ಇಲ್ಲಿಯೂ ಇರುವಂಥ ಸಹಾಯಕ ಮಂತ್ರಿಗಳ ಬಗ್ಗೆ ಹೇಳುತ್ತಿಲ್ಲ–ಅವರನ್ನೂ 'ಮಂತ್ರಿ'ಗಳೆಂದು ಕರೆಯಲಾಗುತ್ತದೆ–ನಾನು

---

* ಈ ಇಂಗ್ಲಿಷ್ ವಾಕ್ಯಕ್ಕೆ (೧) ನಾನು ಕಲ್ಪಿಸಿಕೊಳ್ಳಲಾರೆ, (೨) ನಾನು ಗರ್ಭಧರಿಸಲಾರೆ ಎರಡು ಅರ್ಥಗಳುಂಟು.

ಹೇಳುತ್ತಿರುವುದು ಕ್ಯಾಬಿನೆಟ್ ಮಂತ್ರಿಗಳ ಬಗ್ಗೆ. ನನಗೆ ತಿಳಿದಮಟ್ಟಿಗೆ, ಇಂಗ್ಲೆಂಡಿನಲ್ಲಿ ಒಬ್ಬರೂ ಆಗಿಲ್ಲ. ಅದೇ ರೀತಿ, ಇಂಗ್ಲೆಂಡ್ ಮತ್ತು ಅಮೆರಿಕಾಗಳಲ್ಲಿ ಸ್ತ್ರೀ ರಾಯಭಾರಿಗಳಿದ್ದಾರೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಆದರೂ ನಮ್ಮ ಉತ್ತಮ ರಾಯಭಾರಿಗಳಲ್ಲಿ ಒಬ್ಬರು ಸ್ತ್ರೀಯರೆಂಬುದನ್ನು ನೆನಪಿನಲ್ಲಿಡಿ.

**ಶ್ರೀ ಆರ್.ಕೆ. ಸಿಧ್ವಾ :** ಮಾನ್ಯರೆ, ನಮ್ಮ ಸ್ತ್ರೀಯರ ಬಗ್ಗೆ ನಮಗೆ ಹೆಮ್ಮೆಯಿದೆ.

**ಆಚಾರ್ಯ ಜೆ.ಬಿ. ಕೃಪಲಾನಿ :** ನೋಡಿ – ಶ್ರೀ ಸಿಧ್ವಾ ಅವರು ನನಗೆ ಆ ಬಗ್ಗೆ ಹೆಮ್ಮೆಯಿಲ್ಲವೆಂದು ನಂಬುತ್ತಾರೆ. ನನಗೂ ಹೆಮ್ಮೆ ಇದೆ. ಆದರೆ ನಾನು ಮಾತಾಡುತ್ತಿರುವುದು ಹೆಮ್ಮೆಯ ಬಗ್ಗೆಯಲ್ಲ, ಸಮಾನತೆಯ ಬಗ್ಗೆ. ನಾನು "ನಾವು ಸ್ತ್ರೀಯರಿಗೆ ಸಮಾನತೆಯನ್ನು ನೀಡಿದ್ದೇವೆ, ಆದರೆ ಸ್ತ್ರೀಯರೊಂದಿಗೆ ನಮಗೆ ಸಮಾನತೆ ನೀಡಲಾಗುತ್ತದೆಯೇ?" ಎಂದು ಕೇಳುತ್ತಿದ್ದೇನೆ. ನನಗೆ ಬಹಳ ಖೇದವೆನಿಸುತ್ತದೆ, ಏಕೆಂದರೆ ಹೇಳಿಕೇಳಿ ನಾನೊಬ್ಬ ವಯಸ್ಸಾದ ಗಂಡಸು, ವಯಸ್ಸಿಗೆ ಮರ್ಯಾದೆ ಕೊಡಬೇಕೆಂದು ಕೇಳಿದ್ದೇನೆ. ಒಂದು ಸಣ್ಣ ಹುಡುಗಿ ನಮ್ಮ ಡ್ರಾಯಿಂಗ್ ರೂಮಿಗೆ ಬಂದ ಕೂಡಲೆ ನಾನು ಗೊಂಬೆಯಂತೆ ಚಂಗನೆ ನೆಗೆದು ಎದ್ದು ನಿಂತುಕೊಳ್ಳಬೇಕು.

(ಈ ಸಮಯಕ್ಕೆ ಸರಿಯಾಗಿ ಉಪಸಭಾಪತಿಗಳಾದ ಶ್ರೀ ಅನಂತಶಯನಂ ಅಯ್ಯಂಗಾರರು ಬಂಧು ಸಭಾಪತಿಗಳ ಸ್ಥಾನದಲ್ಲಿ ಆಸೀನರಾದರು.)

ಹಿಂದಿನ ದಿನಗಳಲ್ಲಿ ನಾನು ಹೀಗೆ ಮಾಡುತ್ತಿರಲಿಲ್ಲ. ಅಷ್ಟೇ ಅಲ್ಲ – ಮಾನ್ಯರೆ, ಇನ್ನೊಂದು ವಿಚಾರವನ್ನೂ ಹೇಳಬೇಕು–ನನ್ನ ಹೆಂಡತಿ ಡ್ರಾಯಿಂಗ್ ರೂಮಿಗೆ ಬಂದಾಗಲೂ ನಾನು ಎದ್ದು ನಿಲ್ಲುತ್ತೇನೆ. ಏಕೆ ಗೊತ್ತೆ ? ಅಲ್ಲೊಬ್ಬ ಅಸಂಸ್ಕೃತ ಹುಡುಗ ಕುಳಿತಿದ್ದರೆ, ಹಾಗೂ ಅವನಿಗೆ ಈ ಆಧುನಿಕ ನಡವಳಿಕೆ ಗೊತ್ತಿಲ್ಲದಿದ್ದರೆ, ಅವನು ಆಗ ಎದ್ದು ನಿಲ್ಲುವುದಿಲ್ಲ. ಅವನು ಅದನ್ನು ಕಲಿಯಲು ನಾನು ಉದಾಹರಣೆಗಾಗಿ ಎದ್ದು ನಿಲ್ಲುತ್ತೇನೆ. ನಮಗೆ ಸಮಾನತೆ ಬೇಕು ಎಂದು ನಾನು ಹೇಳುತ್ತಿರುವುದು ಏಕೆಂದರೆ, ಒಬ್ಬ ಹೆಂಗಸು ಒಳಗೆ ಬಂದಾಗ ಗಂಡಸು ಎದ್ದು ನಿಲ್ಲಬೇಕು, ಆದರೆ ನಮ್ಮ ಪ್ರಧಾನ ಮಂತ್ರಿಗಳಾಗಲಿ ಕಾಂಗ್ರೆಸ್ ಅಧ್ಯಕ್ಷರಾಗಲಿ ಕೋಣೆಯನ್ನು ಪ್ರವೇಶಿಸಿದರೂ ಸಹ, ಯುವತಿಯರು ತಮ್ಮ ಆಸನಗಳಲ್ಲಿ ಕುಳಿತೇ ಇರುವುದನ್ನು ನಾನು ನೋಡಿದ್ದೇನೆ. ಹೀಗಿದೆ ನೋಡಿ. ಗಂಡಸಿಗೆ ಮಾತ್ರ ಇದೊಂದು ಬಹಳ ದೊಡ್ಡ ಅನ್ಯಾಯ. ನನ್ನ ಅನುಭವಕ್ಕೆ ಬಂದಿರುವಂತೆ, ಸಂತೆಯಲ್ಲಾಗಲಿ ಮಾರ್ಕೆಟ್ಟಿನಲ್ಲಾಗಲಿ ಹೆಂಗಸಿಗೂ ಗಂಡಸಿಗೂ ಜಗಳವಾದರೆ–ಗುಟ್ಟಾಗಿ ನಡೆಯುವ ಜಗಳಗಳ ಬಗ್ಗೆ ನನಗೆ ಗೊತ್ತಿಲ್ಲ–ಅಥವಾ ಕ್ಲಬ್ಬಿನಲ್ಲಿ ಜಗಳವಾದರೆ, ಹಾಗೂ ಗಂಡಸು ಹೆಂಗಸಿಗೆ ಹೊಡೆದರೆ, ಏನಾಗುತ್ತದೆ ಗೊತ್ತೇನು? ಅಲ್ಲಿ ತಕ್ಷಣ ಒಂದು ದೊಡ್ಡ ಗಲಾಟೆಯೇ ಆಗಿಬಿಡುತ್ತದೆ. ಆಗ ಅಲ್ಲಿದ್ದ ಜನರೆಲ್ಲ ಅವನನ್ನು ಹೇಡಿಯೆಂದು ಕರೆಯುತ್ತಾರೆ. ಅವರು ಹಾಗೆ ಕರೆಯುವುದು ಸರಿಯೂ ಇರಬಹುದು. ಆದರೆ ಒಬ್ಬ ಗಂಡಸನ್ನು ಹೆಂಗಸೇ ಹೊಡೆದಳು ಎಂದು ಊಹಿಸಿಕೊಳ್ಳಿ. ಆಗೇನಾಗುತ್ತದೆ, ಗೊತ್ತೇನು? ಅವನು ಎಲ್ಲರ ಕಣ್ಣಲ್ಲೂ ನಗೆಪಾಟಲಿನ ವ್ಯಕ್ತಿಯಾಗುತ್ತಾನೆ ಹಾಗೂ ಅವನಿಗೆ ಜನರು ಅನುಕಂಪ ತೋರಿಸುವುದಿರಲಿ, ಅವನು ಎಲ್ಲರ ಗೇಲಿಗೆ ಗುರಿಯಾಗುತ್ತಾನೆ; ಹಾಗೆ ಗುರಿಯಾಗುವುದೂ ಸರಿ ಇರಬಹುದು. ಹೀಗೆ ನಾವು ಹೊಡೆಯಲಿ, ಹೊಡೆಸಿಕೊಳ್ಳಲಿ, ಎರಡೂ ಕಡೆಯಿಂದ ನಮಗೆ ನಷ್ಟ. ಇಲ್ಲಿ ಸಮತೋಲನ ಕಾಯ್ದುಕೊಳ್ಳಬೇಕು, ಗಂಡಸರನ್ನು ರಕ್ಷಿಸಲು ಸ್ವಲ್ಪವಾದರೂ ಅವರಿಗೆ ಸಮಾನತೆ ಬೇಕು ಎನ್ನುವುದು ನನ್ನ ಅಪೇಕ್ಷೆ.

ಆಮೇಲೆ, ಇನ್ನೂ ಒಂದು ವಿಷಯವಿದೆ. ನಮಗೆ ನಷ್ಟವಾಗುತ್ತಿರುವುದು ಸಮಾಜದಲ್ಲಿ ಮಾತ್ರವಲ್ಲ. ಕಾನೂನು ಸಹ ನಮಗೆ ವಿರುದ್ಧವಾಗಿದೆ. ಇದನ್ನು ನಮ್ಮ ಕಾನೂನು ಮಂತ್ರಿಗಳೂ ಒಪ್ಪುತ್ತಾರೆ. ಒಬ್ಬ

ಗಂಡಸು ಒಬ್ಬ ಹೆಂಗಸಿನೊಡನೆ ಓಡಿಹೋಗುತ್ತಾನೆ ಎನ್ನೋಣ. ಆಗ ಕಾನೂನಿನ ಪ್ರಕಾರ, ಅದಕ್ಕೆ ಅವನೇ ಹೊಣೆ. ಒಂದು ವೇಳೆ ಒಬ್ಬ ಹೆಂಗಸು ಒಬ್ಬ ಗಂಡಸಿನ ಜೊತೆ ಓಡಿ ಹೋಗುತ್ತಾಳೆ ಎನ್ನೋಣ. ಆಗಲೂ ಗಂಡಸೇ ಹೊಣೆ. ನಾನು ಅತ್ಯಂತ ವಿಶ್ವಾಸಾರ್ಹ ಆಧಾರಗಳ ಮೇಲೆ, ಅತ್ಯಂತ ಆಧುನಿಕ ಆಧಾರಗಳ ಮೇಲೆ, ಹೇಳಬಲ್ಲೆ–ಬಹಳಷ್ಟು ವೇಳೆ, ಹೆಂಗಸರೇ ಫಿರ್ಯಾದು ಮಾಡುವವರು. ಆಕ್ರಮಣಕಾರರು ನಾವಾಗಿರಬಹುದು; ಅಥವಾ ಅವರಾಗಿರಬಹುದು. ಆಕ್ರಮಣ ಯಾರದ್ದಾಗಿದ್ದರೂ ಕಾನೂನು ನಮ್ಮ ಮೇಲೆ ಎರಗುತ್ತದೆ. ಎರಡೂ ಕಡೆಯಿಂದ ಕಷ್ಟಕ್ಕೊಳಗಾಗುವವರು ನಾವೇ. ಆದುದರಿಂದ ನಾನು ಗಂಡಸರಿಗೆ ಸಮಾನತೆಯನ್ನು ಕೊಡಿಸಬೇಕೆಂದು ಸದನವನ್ನು ಬೇಡಿಕೊಳ್ಳುತ್ತೇನೆ. ಈ ಮೂಲಕವಾದರೂ ನಾವು ಗಂಡಸರು ಸ್ವಲ್ಪ ಸ್ವತಂತ್ರವಾಗಿ ಉಸಿರಾಡಲು ಸಾಧ್ಯವಾದೀತು; ನಾವು ಒದೆಸಿಕೊಂಡಾಗ–ನಾವು ಹಾಸ್ಯಾಸ್ಪದಕ್ಕೊಳಗಾಗದಂತೆ, ಹಾಗೂ ಕಾನೂನು ಕೇವಲ ಪ್ರಬಲರ, ಅಂದರೆ ಹೆಂಗಸರ ನೆರವಿಗೆ ಹೋಗದಂತೆ–ಅಷ್ಟೇ ಸ್ವತಂತ್ರವಾಗಿ ಹಿಂತಿರುಗಿ ಒದೆಯಲು ಸಾಧ್ಯವಾದೀತು. ನಾನು ಈ ಮಸೂದೆಯನ್ನು ಏಕೆ ಅನುಮೋದಿಸುತ್ತಿದ್ದೇವೆಂದು ಈಗ ನಿಮಗೆ ತಿಳಿಯುತ್ತಿರಬಹುದು.

ಈಗ ನಾವು ವಿವರಗಳನ್ನು ಪರಿಶೀಲಿಸೋಣ. ಎಲ್ಲಕ್ಕಿಂತ ಮೊದಲು ಆಸ್ತಿಯ ಪ್ರಶ್ನೆ ತೆಗೆದುಕೊಳ್ಳೋಣ. ಆದರೆ ಖಾಸಗಿ ಆಸ್ತಿಯನ್ನೇ ರದ್ದುಪಡಿಸಬೇಕೆಂದು ಪ್ರತಿಜ್ಞೆ ಮಾಡಿರುವ ಕಾಂಗ್ರೆಸ್ಸಿಗರಾದ ನಾವು, ಆಸ್ತಿಯ ಪಾಲು ಯಾರ್ಯಾರಿಗೆ ಹೋಗಬೇಕೆಂದು ಚರ್ಚಿಸುತ್ತಿರುವುದು, ಏಕೆಂಬುದು ನನಗೆ ನಿಜವಾಗಿಯೂ ಅರ್ಥವಾಗದ ವಿಷಯ. ಇಂಥ ವಿಚಿತ್ರ ಪ್ರಸಂಗವನ್ನು ಈ ದೇಶದಲ್ಲಿ ಕಾಣುತ್ತಿದ್ದೇನೆ. ಅಂಥದನ್ನು ನಾನು ಬೇರೆ ದೇಶದಲ್ಲಿ ಕಾಣೆ.

**ಶ್ರೀ ಲಕ್ಷ್ಮೀನಾರಾಯಣ ಸಾಹು** (ಒಡಿಸ್ಸ : ಸಾಮಾನ್ಯ) : ನಾನು ಒಂದು ವಿಷಯವನ್ನು ತಿಳಿದುಕೊಳ್ಳಬಯಸುತ್ತೇನೆ. ಖಾಸಗಿ ಆಸ್ತಿಯನ್ನು ವರ್ಜಿಸಬೇಕೆಂದು ಕಾಂಗ್ರೆಸ್ ಪ್ರಮಾಣ ವಚನ ಸ್ವೀಕರಿಸಿದೆಯೆ?

ಸಂಜೆ ಐದು ಗಂಟೆಯ ನಂತರ

**ಮಾನ್ಯ ಉಪಸಭಾಪತಿ :** ಅದು ಸನ್ಮಾನ್ಯ ಸದಸ್ಯರ ಅಭಿಪ್ರಾಯ.

**ಆಚಾರ್ಯ ಜೆ.ಬಿ. ಕೃಪಲಾನಿ :** ಕಾಂಗ್ರೆಸ್ ಗೊತ್ತುವಳಿಗಳನ್ನು ಸ್ವಲ್ಪ ಎಚ್ಚರಿಕೆಯಿಂದ ಓದಿದರೆ, ಖಾಸಗಿ ಆಸ್ತಿಯನ್ನು–ಅಂದರೆ ಈಗಾಗಲೇ ಅನುಭವಿಸುತ್ತಿರುವ ಖಾಸಗಿ ಆಸ್ತಿಯನ್ನಲ್ಲ, ಹೊಸದಾಗಿ ಗಳಿಸಿಕೊಂಡ ಖಾಸಗಿ ಆಸ್ತಿಯನ್ನು– ವರ್ಜಿಸಬೇಕೆಂದು ಹೇಳುವುದು ಸ್ಪಷ್ಟವಾಗೇ ಇದೆ. ಎಂಬುದು ನನ್ನ ಅಭಿಪ್ರಾಯ. ಆದರೆ, ಉಪಸಭಾಪತಿಗಳು ಸರಿಯಾಗೇ ಹೇಳಿದಂತೆ, ಇದೊಂದು ಅಭಿಪ್ರಾಯ. ಇಲ್ಲಿರುವ ಜನರು ಈಗಾಗಲೇ ಅಸ್ತಿತ್ವದಲ್ಲಿರುವ ಸಂಪತ್ತನ್ನು ಮರುಹಂಚಿಕೆ ಮಾಡುವ ವಿಚಾರದಲ್ಲಿ ನಿರತರಾಗಿದ್ದಾರೆಂದು ನನಗನಿಸುತ್ತದೆ. ಈ ದೇಶದಲ್ಲಿ ಹೊಸ ಸಂಪತ್ತನ್ನು ಸೃಷ್ಟಿಸುವ ಪ್ರಯತ್ನ ನಡೆದಿಲ್ಲ. ನಮ್ಮ ಸಮಾಜವಾದಿ ಗೆಳೆಯರು ಸಹ ಸಂಪತ್ತನ್ನು ಸೃಷ್ಟಿಸುವ ದಿಕ್ಕಿನಲ್ಲಿ ಚಿಂತಿಸದೆ, ಈಗ ನಮ್ಮಲ್ಲಿರುವ ಸ್ವಲ್ಪ ಸಂಪತ್ತನ್ನು ಮರು ಹಂಚಿಕೆ ಮಾಡುವ ದಿಕ್ಕಿನಲ್ಲಿ ಚಿಂತಿಸುತ್ತಿದ್ದಾರೆ. ಈಗಿರುವ ಆ ಚೂರು ಸಂಪತ್ತು ಎಲ್ಲಿಯವರೆಗೆ ನಮ್ಮ ದೇಶದಲ್ಲೇ ಇರುತ್ತದೆಯೋ ಅಲ್ಲಿಯವರೆಗೆ, ಅದು ಹೆಂಗಸಿಗೆ ಹೋಗುತ್ತದೆಯೋ, ಗಂಡಸಿಗೆ ಹೋಗುತ್ತದೆಯೋ ಎಂಬುದರ ಬಗ್ಗೆ ನಾನು ನಿರ್ಲಕ್ಷ್ಯದಿಂದ ಇರುತ್ತೇನೆ. ಆದರೆ ಇದರಿಂದಾಗಿ ನಮ್ಮ ದೇಶ ಇನ್ನೂ ಹೆಚ್ಚು ಬಡವಾಗಬಾರದು. ಜನರು ಲಂಚ ಪಡೆದರೆ ಅಥವಾ ಕಾಳಸಂತೆಗೆ ಹೋದರೆ ನನಗೇನೂ ಚಿಂತೆಯಿಲ್ಲ–ಇದು ನಿಮಗೆ ಆಶ್ಚರ್ಯವುಂಟುಮಾಡಬಹುದು. ಹೇಗಾದರೂ ನಮ್ಮ ಸಂಪತ್ತು

ಭಾರತ ಬಿಟ್ಟು ಹೊರಗೇನೂ ಹೋಗುವುದಿಲ್ಲ. ಅದು ಭಾರತದಲ್ಲೇ ಎಲ್ಲೋ ಒಂದು ಕಡೆ ಭಾರತೀಯರಲ್ಲೇ ಇರುತ್ತದೆ. ಆದರೆ ನಮ್ಮ ಸಾರ್ವಜನಿಕ ಜೀವನವನ್ನೂ ನಮ್ಮ ಖಾಸಗಿ ಜೀವನವನ್ನೂ ಹಾಳುಮಾಡುತ್ತಿರುವ ಅನೈತಿಕತೆ ಮಾತ್ರ ನನಗೆ ವ್ಯಥೆಯುಂಟುಮಾಡುತ್ತಿದೆ. ಸಂಪತ್ತು ಅಷ್ಟೇನೂ ಚಿಂತೆಯ ವಿಷಯವಲ್ಲ. ಏನೇ ಆದರೂ ಈ ಲಂಚಕೋರರೂ ಕಾಳಸಂತೆಕೋರರೂ ನಮ್ಮ ಸಂಪತ್ತನ್ನು ಪರದೇಶಕ್ಕೆ ಒಯ್ಯುತ್ತಿಲ್ಲ. ಅವನು ನನ್ನ ಭಾವನಲ್ಲದಿದ್ದರೆ, ಮತ್ತೊಬ್ಬರ ಭಾವನಿರಬಹುದು. ಅಂತೂ ಅದು ಇಲ್ಲೇ ಇರುತ್ತದೆ. ಆದುದರಿಂದ ಈಗಿರುವ ಸಂಪತ್ತು ಎಲ್ಲಿ ಹೋಗುತ್ತಿದೆ ಎಂಬ ಸಂಕುಚಿತ ದೃಷ್ಟಿಯನ್ನು ನಾನು ಒಂದು ಕ್ಷಣವೂ ಚಿಂತಿಸುವುದಿಲ್ಲ. ನಾನು ರಾಷ್ಟ್ರದ ದೃಷ್ಟಿಯಿಂದ ಚಿಂತಿಸುತ್ತೇನೆ. ಇಂಗ್ಲೆಂಡ್ ಮತ್ತಿತರ ಸ್ವತಂತ್ರ ರಾಷ್ಟ್ರಗಳಲ್ಲಿ ಈಗಿರುವ ಅಲ್ಪಸ್ವಲ್ಪ ಸಂಪತ್ತನ್ನು ಹೇಗೆ ಹಂಚಿಕೊಳ್ಳುವುದು ಎಂಬುದರ ಕಡೆಗೆ ಗಮನ ಕೊಡದೆ, ಹೆಚ್ಚು ಸಂಪತ್ತನ್ನು ಹೇಗೆ ಸೃಷ್ಟಿಸುವುದು ಎಂಬುದರ ಕಡೆಗೆ ಗಮನ ಕೊಡಲಾಗುತ್ತದೆ. ಆದುದರಿಂದ ನಾನು ಸ್ತ್ರೀಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಕೊಡಬೇಕೆಂಬುದನ್ನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ. ಅವರಿಗೆ ತಮ್ಮದೇ ಆದ ಪಾಲಿದ್ದರೆ, ಹಣದ ಬಗ್ಗೆ ಅವರು ಹೆಚ್ಚು ಎಚ್ಚರಿಕೆಯಿಂದಿರುತ್ತಾರೆ. ಗಂಡ ತಮಗಾಗಿ ಮಾಡುವ ಖರ್ಚಿಗಿಂತ ಹೆಂಗಸು ತಮಗಾಗಿ ಹೆಚ್ಚು ಖರ್ಚು ಮಾಡುತ್ತಾರೆಂಬುದು ನನ್ನ ಅನುಭವಕ್ಕೆ ಬಂದಿದೆ. ಹುಡುಗಿಯರು ಕಾಲೇಜು ಮತ್ತು ಸ್ಕೂಲುಗಳಿಗೆ ಹೋದರೆ, ಅವರ ತಾಯಿಯು ಹುಡುಗರ ಬಟ್ಟೆಗಿಂತ ಹುಡುಗಿಯರ ಬಟ್ಟೆಗಳ ಬಗೆಗೆ ಹೆಚ್ಚು ಜಾಗರೂಕತೆಯಿಂದಿರುತ್ತಾಳೆ. ಸಣ್ಣ ಹುಡುಗರು ಸ್ಕೂಲಿಗೆ ಪೂರಾ ನಡೆದುಕೊಂಡೇ ಹೋಗಬಹುದು, ಆದರೆ ಹುಡುಗಿಯರು ಮಾತ್ರ ಟಾಂಗಾದಲ್ಲೇ ಅಥವಾ ಬಸ್ಸಿನಲ್ಲೇ ಹೋಗಬೇಕು–ಬಸ್ ಚಾರ್ಜು ತಿಂಗಳಿಗೆ ರೂ.೧೫ ಬಂದರೂ ಪರವಾಗಿಲ್ಲ. ಹೀಗೆ, ಬಟ್ಟೆ ಹಾಗೂ ಪ್ರಯಾಣಗಳ ಖರ್ಚನ್ನೂ ಇತರ ವಿಷಯಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಹೆಂಗಸರ ವಿದ್ಯಾಭ್ಯಾಸ ಹೆಚ್ಚು ತುಟ್ಟಿಯದು. ಇದು ಆಕೆ ಇನ್ನೂ ಮದುವೆಯಾಗದಿದ್ದಾಗ. ಆಕೆ ಮದುವೆಯಾದ ಮೇಲೆ, ಆಕೆಯ ಬಟ್ಟೆಗಳನ್ನೂ ನಮ್ಮ ಬಟ್ಟೆಗಳನ್ನೂ ನೀವು ನೋಡಬಹುದು. ಮದುವೆ ಸಮಾರಂಭಗಳಲ್ಲಿ ನಾನು ಬಹಳಷ್ಟು ಸಾರಿ ನೋಡಿದ್ದೇನೆ–ಹುಡುಗ ಮೂರ್ಖನಂತೆ ಕಾಣುತ್ತಾನೆ, ಹುಡುಗಿ ರಾಣಿಯಂತೆ ಕಾಣುತ್ತಾಳೆ. ನಾನು ಅದನ್ನು ಗಮನಿಸಿದ್ದೇನೆ, ಮತ್ತು ಯಾರು ಅದನ್ನು ಗಮನವಿಟ್ಟು ನೋಡಿದ್ದಾರೋ ಅವರು ನಾನು ಹೇಳಿದುದನ್ನು ದೃಢೀಕರಿಸುತ್ತಾರೆ. ರಸ್ತೆಯ ಮೇಲೆ ಆಧುನಿಕ ಹೆಂಗಸರೂ ಆಧುನಿಕ ಗಂಡಸರೂ ಒಟ್ಟಿಗೆ ಹೋಗುವುದನ್ನು ನಾನು ನೋಡಿದ್ದೇನೆ. ಆಧುನಿಕ ಗಂಡಸು ಸಾಮಾನ್ಯವಾಗಿ ಇಂಗ್ಲಿಷ್ ಉಡುಪು ಧರಿಸಿರುತ್ತಾನೆ, ಆದರೆ ಇಂಗ್ಲಿಷ್ ಉಡುಪು ಎಲ್ಲರಿಗೂ ಚೆನ್ನಾಗಿ ಕಾಣುವುದಿಲ್ಲ. ಇದಕ್ಕೆ ಕೆಲವಷ್ಟೇ ವಿನಾಯಿತಿಗಳಿವೆ. ಬಹಳಷ್ಟು ಜನರಿಗೆ ಅದು ವಿಕಾರವಾಗಿ ಕಾಣುತ್ತದೆ. ಆದರೆ ಹೆಂಗಸು ತನ್ನ ದೇಶೀ ಸೀರೆಯನ್ನು ಉಟ್ಟಿರುತ್ತಾಳೆ. ಅದರ ತುಂಬಾ ಬಣ್ಣವಿರುತ್ತದೆ; ಆಕೆ ಆಭರಣಗಳನ್ನು ತೊಟ್ಟಿಲ್ಲದಿದ್ದರೂ, ಆಕೆ ತನ್ನ ಪಕ್ಕದಲ್ಲಿನ ಗಂಡಸಿಗಿಂತ ಹೆಚ್ಚು ಚೆನ್ನಾಗಿ ಕಾಣುತ್ತಾಳೆ, ಹೆಚ್ಚು ಗೌರವಯುತ ಬಟ್ಟೆ ತೊಟ್ಟಂತೆ ಕಾಣುತ್ತಾಳೆ. ಇತ್ತೀಚೆಗೆ ಕೆಲವರು ಆಕೆಯ ಹಿಂದೆ ಹೋಗುತ್ತಾರೆ. ಅದೂ ಎಡವಟ್ಟಾಗಿ ಕಾಣುತ್ತದೆ. ಇಂದಿನ ಭಾರತೀಯ ಮಧ್ಯಮ ವರ್ಗದ ಸಮಾಜದ ಪರಿಚಯವಿಲ್ಲದವರು ಅಥವಾ ವಿದೇಶೀಯರು ಹಿಂದೆ ಹೋಗುತ್ತಿರುವವನು ಚಪರಾಸಿ ಇರಬಹುದು ಎಂದು ತಿಳಿದುಕೊಳ್ಳುತ್ತಾರೆ. ಮಾನ್ಯರೆ, ಆದುದರಿಂದ ಅವರಿಗೆ (ಸ್ತ್ರೀಯರಿಗೆ) ಅವರದೇ ಆದ ಸಂಪತ್ತಿದೆ. ಅದರ ಬಗ್ಗೆ ನಾವು ಕಾಳಜಿ ಮಾಡಬೇಕಾಗಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಅದನ್ನು ಅವರು ತಮಗೆ ಬೇಕಾದಂತೆ ಖರ್ಚು ಮಾಡಿಕೊಳ್ಳಲಿ. ಆದರೆ, ಹಣ ನಾವು ಪಾವತಿ ಮಾಡಬೇಕಾದಾಗ ಅವರು ಎಷ್ಟು ಖರ್ಚು ಮಾಡುತ್ತಾರೋ, ಸಂಪತ್ತು ಅವರದೇ ಆದಾಗ

ಅವರು ಅದಕ್ಕಿಂತ ಕಡಿಮೆ ಖರ್ಚು ಮಾಡುತ್ತಾರೆಂಬ ಭರವಸೆ ನನಗಿದೆ. ಆದುದರಿಂದ ಹೆಂಗಸರಿಗೂ ಆಸ್ತಿಯಲ್ಲಿ ಪಾಲು ಸಿಕ್ಕಬೇಕೆಂದು ನಾನು ಪ್ರಬಲವಾಗಿ ಅನುಮೋದಿಸುತ್ತೇನೆ.

ನಾನು ಇನ್ನೊಂದು ವಿಷಯದಲ್ಲೂ ವಿಶೇಷ ಜಾಗರೂಕನಾಗಿದ್ದೇನೆ. ಹುಡುಗಿಯರನ್ನು ದತ್ತು ತೆಗೆದುಕೊಳ್ಳಲಾಗುವುದಿಲ್ಲವೆಂದು ಕೇಳಿದ್ದೇನೆ. ನಾನು ಮಕ್ಕಳಿಲ್ಲದ ಒಂದು ದುರದೃಷ್ಟಕರ ಸ್ಥಿತಿಯಲ್ಲಿದ್ದೇನೆ.

**ಶ್ರೀ ಬಿ.ಎಲ್. ಸೋಂಧಿ :** ಅಯ್ಯೋ ಪಾಪ!

**ಆಚಾರ್ಯ ಜೆ.ಬಿ. ಕೃಪಲಾನಿ :** ಇದು ಬಹಳ ಶೋಚನೀಯ ಸ್ಥಿತಿ. ನಾನೊಬ್ಬ ಹಿಂದೂ ಆಗಿ ಮಗುವೊಂದನ್ನು ದತ್ತು ತೆಗೆದುಕೊಳ್ಳಬೇಕೆಂದಿದ್ದೆ. ಆದರೆ ಹೆಣ್ಣು ಮಗುವಿನ ಕಡೆಗೇ ನನಗೆ ಒಲವಿತ್ತು. ನಾನು ಒಂದೆರಡು ಹೆಣ್ಣು ಮಕ್ಕಳನ್ನು ದತ್ತು ತೆಗೆದುಕೊಂಡೆ, ಆದರೆ ಅವರು ತಮ್ಮ ಗಂಡಂದಿರೊಂದಿಗೆ ಓಡಿಹೋದರು. ಆದರೂ ನನಗೆ ದತ್ತು ಪುತ್ರಿ ಬೇಕು. ಹೆಣ್ಣು ಮಗುವನ್ನು ದತ್ತು ಸ್ವೀಕರಿಸಬಾರದೆಂಬ ಕಾಯಿದೆ ಏಕಿದೆ ಎಂಬುದು ನನಗೆ ಗೊತ್ತಿಲ್ಲ. ತಂದೆಯ ದೃಷ್ಟಿಯಲ್ಲಿ ಹೇಳುವುದಾದರೆ, ಹುಡುಗರಿಗಿಂತ ಹುಡುಗಿಯರೇ ಹೆಚ್ಚು ಮೆಚ್ಚುಗೆಯಾಗುತ್ತಾರೆ; ಅಲ್ಲದೆ, ಹುಡುಗಿಯರು ಹೆಚ್ಚು ಉದ್ಧಟ ಹಾಗೂ ದುಡುಕುತನ ತೋರಿಸಿದಂತೆಲ್ಲ ತಂದೆ ಅವಳನ್ನು ಹೆಚ್ಚು ಮೆಚ್ಚುತ್ತಾನೆ. ಆದುದರಿಂದ ಈಗಿನ ಮಸೂದೆಯಲ್ಲಿ ಏನಾದರೂ ದೋಷವಿದ್ದರೆ, ಅದನ್ನು ತಿದ್ದಿಕೊಂಡು, ಹೆಣ್ಣು ಮಕ್ಕಳನ್ನೂ ದತ್ತು ಪಡೆಯುವ ಅವಕಾಶ ಮಾಡಿಕೊಡಬೇಕೆಂದು ನಾನು ಬೇಡಿಕೊಳ್ಳುತ್ತೇನೆ.

ಮಾನ್ಯರೆ, ವಿಚ್ಛೇದನದ ಬಗ್ಗೆ ನನಗೆ ವೈಯಕ್ತಿಕ ಕಾಳಜಿಯೇನಿಲ್ಲ. ಏಕೆಂದರೆ ನನ್ನದು ಶಾಸನಿಕ (civil) ವಿವಾಹವೇ ಹೊರತು, ಅಪರಾಧದ ವಿವಾಹವಲ್ಲ. ನಾನು ಯೋಗ್ಯ ರೀತಿಯಲ್ಲಿ ವರ್ತಿಸುತ್ತಿಲ್ಲವೆಂದು ನನ್ನ ಹೆಂಡತಿಗನಿಸಿದರೆ, ಆಕೆ ತನಗೆ ಬೇಕಾದಾಗ ನನ್ನಿಂದ ವಿಚ್ಛೇದನ ಪಡೆಯುವ ಅವಕಾಶ ಖಂಡಿತ ಉಂಟು; ಆದರೆ ನನಗೆ ಆ ಅವಕಾಶ ಇಲ್ಲ. ಆದರೆ ವಿಚ್ಛೇದನಕ್ಕೆ ಸಂಬಂಧಿಸಿದಂತೆ ಈ ಮಸೂದೆಯ ನಿಬಂಧನೆಗಳು ನಮ್ಮ ಹಳೆಯ ಪದ್ಧತಿಗಳಿಗಿಂತ ಹೆಚ್ಚು ತಿರೋಗಾಮಿಯಾಗಿವೆ ಎಂದು ನನಗನಿಸುತ್ತದೆ. ಆದರೆ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಮತ್ತು ಒಬ್ಬ ಸದಸ್ಯೆ ನಮಗೆ ತಿಳಿಸಿರುವಂತೆ, ಹಳ್ಳಿಯ ಜನರಲ್ಲಿ ಒಂದು ಸರಳ ರೀತಿಯ ವಿಚ್ಛೇದನ ವ್ಯವಸ್ಥೆ ರೂಢಿಯಲ್ಲಿದೆ. ಅಲ್ಲಿ ಈ ಹೆಚ್ಚು ಖರ್ಚಿನ ಕಾನೂನಿನ ಕಾರ್ಯಕ್ರಮಗಳಿಲ್ಲ, ಅಪಮಾನಕರ ನಿಂದೆಗಳಿಲ್ಲ, ಪತ್ರಿಕೆಗಳಲ್ಲಿ ಲೇಖನಗಳಿಲ್ಲ. ಅಲ್ಲಿ ಇವೆಲ್ಲವನ್ನೂ ಬಿಡುತ್ತಾರೆ. ಮಾನ್ಯರೆ, ವಿಚ್ಛೇದನಕ್ಕೆ ಸಂಬಂಧಿಸಿದಂತೆ, ಹೆಚ್ಚು ಸೂಕ್ತವಾದ, ಹೆಚ್ಚು ವೈಜ್ಞಾನಿಕವಾದ, ಹೆಚ್ಚು ಆಧುನಿಕವಾದ ಧೋರಣೆಯನ್ನು ತಳೆಯಬೇಕೆಂದು ನಾನು ಸೂಚಿಸುತ್ತೇನೆ.

ಮಾನ್ಯರೆ, ಕಾನೂನು ಮಂತ್ರಿಗಳ ಪರಿಶೀಲನೆಗೆ, ನಾನೊಂದು ಸಲಹೆ ನೀಡಬಯಸುತ್ತೇನೆ, ಆ ಸಲಹೆ ಯೋಗ್ಯವೆಂದು ಕಂಡರೆ. ಈ ಸಲಹೆಯು ಖರ್ಚು, ಕಾನೂನು ಕ್ರಿಯೆ, ಅಪಮಾನಕರ ನಿಂದೆ, ವೃತ್ತ ಪತ್ರಿಕೆಗಳ ಲೇಖನ –ಇದಾವುದನ್ನೂ ಒಳಗೊಳ್ಳುವುದಿಲ್ಲ. ಎಲ್ಲ ದಾಂಪತ್ಯವೂ ಐದು ವರ್ಷದವರೆಗೆ ಮಾತ್ರ ಇರಬೇಕು, ಹಾಗೂ ಐದು ವರ್ಷವಾದನಂತರ ಅದನ್ನು ನವೀಕರಿಸಬಹುದು. ನವೀಕರಣವನ್ನು ಯಾವುದೇ ಗ್ರಾಮಾಧಿಕಾರಿಯ ಎದುರು, ಅಥವಾ ಪಟ್ಟಣಗಳಲ್ಲಿ ಅಥವಾ ವರ್ಗಗಳಲ್ಲಾದರೆ, ಅವನಿಗೆ ಸಮನಾದ ಅಧಿಕಾರಿಯ ಎದುರು ಒಂದು ಹೇಳಿಕೆ ಕೊಡುವ ಮೂಲಕ ನವೀಕರಿಸಬಹುದು. ಐದು ವರ್ಷವಾದ ಮೇಲೆ, ಆ ಅಧಿಕಾರಿಯ ಬಳಿ ಹೋಗಿ ನಾವು ಬೇರೆಯಾಗಲು ಇಚ್ಛಿಸುವುದಿಲ್ಲ ಎಂದರೆ ಸಾಕು, ದಾಂಪತ್ಯ ಮುಂದುವರಿಯುತ್ತದೆ. ಇದು ವಿಚ್ಛೇದನವನ್ನು ಸುಲಭಗೊಳಿಸುತ್ತದೆ, ಹಾಗು ಹೆಚ್ಚು ವೈಜ್ಞಾನಿಕವಾಗಿದೆ. ಇಲ್ಲಿ ಯಾವ ಅಪನಿಂದೆಗಳೂ ಇಲ್ಲ, ಯಾವ ಕಾನೂನು ಕ್ರಮಗಳೂ ಇಲ್ಲ. ಇದು ಖಂಡಿತ ಅತ್ಯಂತ

ಆಧುನಿಕ. ಇದು ನನ್ನ ಸೂಚನೆ. ಇದಕ್ಕೆ ಯೋಗ್ಯತೆ ಇರಬಹುದು. ಪ್ರಗತಿ ಮತ್ತು ಅಭಿವೃದ್ಧಿ ಎಂಬ ಹೊಸ ಧರ್ಮದ ಎಲ್ಲ ಅಗತ್ಯಗಳನ್ನೂ ಇದು ಪೂರೈಸುತ್ತದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಮಾನ್ಯರೆ, ಈ ಮಸೂದೆಯನ್ನು ಚರ್ಚಿಸಲು ಇನ್ನೂ ಒಂದು ದಿನ ಮೀಸಲಾಗಿಡಬೇಕೆಂದು ವಿನಂತಿಕೊಳ್ಳುತ್ತೇನೆ. ಏಕೆಂದರೆ ಅನೇಕ ಸನ್ಮಾನ್ಯ ಸದಸ್ಯರು ಆ ಮಸೂದೆಯನ್ನು ಕುರಿತು ಮಾತನಾಡಲು ಇಚ್ಛಿಸುತ್ತಾರೆ. ಪ್ರಧಾನ ಮಂತ್ರಿಗಳೂ ಸಹ ಇಲ್ಲೇ ಇದ್ದಾರೆ ಹಾಗೂ ನಾಳೆಯನ್ನೂ ಈ ಚರ್ಚೆಗೆ ಮೀಸಲಾಗಿಡಲು ಸರ್ಕಾರ ಸಿದ್ಧವಿದೆಯೋ ಇಲ್ಲವೋ ಎಂಬುದನ್ನು ತಿಳಿಸಲು ಅವರಿಗೆ ಸಾಧ್ಯವಿದೆ.

**ಸನ್ಮಾನ್ಯ ಶ್ರೀ ಜವಾಹರ್‌ಲಾಲ್ ನೆಹರು** (ಪ್ರಧಾನ ಮಂತ್ರಿಗಳು) : ಮಾನ್ಯರೆ, ಸದನದ ಪ್ರತಿಯೊಂದು ದಿನ, ಪ್ರತಿಯೊಂದು ಗಂಟೆಗಿಂತ ಯಾವುದೂ ಹೆಚ್ಚಲ್ಲ ಎಂಬುದು ಸದನಕ್ಕೆ ತಿಳಿದೇ ಇದೆ. ಇದೇ ಅಧಿವೇಶನದಲ್ಲಿ ನಾವು ಅನೇಕ ಮುಖ್ಯ ವಿಷಯಗಳನ್ನು ಪರಿಶೀಲಿಸಬೇಕಾಗಿದೆ ಹಾಗೂ ಇನ್ನೂ ಬಹಳ ದಿನಗಳು ಉಳಿದಿಲ್ಲ. ಆದರೂ, ನಾನು ಈ ಚರ್ಚೆಯ ಪ್ರಾರಂಭದ ಹಂತದಲ್ಲೇ ಸ್ಪಷ್ಟಪಡಿಸಿದಂತೆ, ಈ ಚರ್ಚೆಯು ಮುಂದುವರಿಯಲು ಹಾಗೂ ಅದನ್ನು ಕುರಿತು ಮಾತನಾಡುವ ಸದಸ್ಯರಿಗೆ ನಾನು ಪೂರ್ಣ ಅವಕಾಶ ಮಾಡಿಕೊಡಬಯಸುತ್ತೇನೆ. ಆದರೆ, ಈ ಚರ್ಚೆಯೇ ಆಗಲಿ, ಮತ್ತಾವ ಚರ್ಚೆಯೇ ಆಗಲಿ, ನಿರಂತರವಾಗಿ ಮುಂದುವರಿದು ಇತರ ಸಾರ್ವಜನಿಕ ಸಮಸ್ಯೆಗಳನ್ನು ಕೈಬಿಡಲು ಸಾಧ್ಯವಿಲ್ಲ. ಆದುದರಿಂದ ಸರ್ಕಾರವು ಸಾಧ್ಯವಾದಷ್ಟು ಸಮಯ ಕೊಡುತ್ತದೆ. ಆದರೆ ಅಷ್ಟರೊಳಗಾಗಿ ಚರ್ಚೆ ಮುಗಿಯಬೇಕು ಮತ್ತು ನಿರ್ಣಾಯಕವಾಗಿರಬೇಕು. ಸರ್ಕಾರದ ಪರವಾಗಿ ನಾನು ಇನ್ನೂ ಒಂದು ದಿನ, ಅಂದರೆ ನಾಳೆಯನ್ನು ಮೀಸಲಾಗಿಡಲು ಸಿದ್ಧನಿದ್ದೇನೆ; ಆದರೆ ಎರಡು ಷರತ್ತುಗಳ ಮೇಲೆ. ಮೊದಲನೆಯದು, ಚರ್ಚೆ ನಾಳೆ ಕೊನೆಗೊಳ್ಳಬೇಕು, ಎರಡನೆಯದು, ಶನಿವಾರ ನಾವು ಸದನದ ಇತರ ಕಲಾಪಗಳನ್ನು ನಿರ್ವಹಿಸಬೇಕು.

**ಶ್ರೀ ಮಹಾವೀರ ತ್ಯಾಗಿ :** ಮಾನ್ಯರೆ, ಶನಿವಾರ ಭಾಗವಹಿಸುವುದು ಬಹಳ ಕಠಿಣ, ಎಂದು ನಾನು ಸೂಚಿಸುತ್ತೇನೆ. ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ಸಮಯ ಸಿಕ್ಕಬಹುದು, ಏಕೆಂದರೆ ಅವರು ಸದನಕ್ಕೆ ಹೆಚ್ಚು ವೇಳೆಯನ್ನು ಮೀಸಲಾಗಿಡುವುದಿಲ್ಲ. ಆದರೆ ನಾವು ಬೆಳಿಗ್ಗೆಯಿಂದ ಸಂಜೆಯವರೆಗೆ ಕುಳಿತಿರಬೇಕು, ಹಾಗೂ ಸಂಜೆಯಾದ ಕೂಡಲೇ ವಿಶೇಷ ಸಮಿತಿಯ ಸಭೆಗೆ ಹಾಜರಾಗಬೇಕು. ಜೊತೆಗೆ ನಮ್ಮ ಇತರ ಕೆಲಸಗಳಿಗೂ ಗಮನ ಕೊಡಬೇಕು. ಅಲ್ಲದೆ, ನಮಗೆ ಬಂದಿರುವ ಅನೇಕ ಪತ್ರಗಳನ್ನು ಪರಿಶೀಲಿಸಬೇಕು, ಅವುಗಳನ್ನು ತಿದ್ದಿ, ಕಳಿಸಬೇಕು. ಆ ಕೆಲಸಗಳನ್ನೆಲ್ಲಾ ಮಾಡಲು ಉಳಿದಿರುವುದು ಶನಿವಾರ ಮತ್ತು ಭಾನುವಾರ ಎರಡೇ ದಿನಗಳು. ಆದುದರಿಂದ ಮಾನ್ಯರೆ, ಶನಿವಾರವನ್ನು ನಮ್ಮಿಂದ ಕಿತ್ತುಕೊಳ್ಳಬೇಡಿರೆಂದು ವಿನಂತಿ.

**ಪಂಡಿತ್ ಗೋವಿಂದ ಮಾಳವೀಯ** (ಉ.ಪ್ರ : ಸಾಮಾನ್ಯ) : ಮಾನ್ಯರೆ, ಇಡೀ ದೇಶವು ಉಳಿದ ವಿಷಯಗಳಿಗಿಂತ ಹೆಚ್ಚಾಗಿ ಈ ಕಾಯಿದೆಯಲ್ಲಿಯೇ ಹೆಚ್ಚು ಆಸಕ್ತವಾಗಿರುವಂತೆ ಕಾಣುತ್ತದೆ, ಎಂಬ ಅಂಶವನ್ನು ತಮ್ಮ ಮುಂದಿಡಬಯಸುತ್ತೇನೆ. ಸದಸ್ಯರಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಪೂರ್ಣ ಅವಕಾಶ ಬೇಕು. ಜನರ ಪ್ರತಿನಿಧಿಯಾಗಿ ಬಂದಿರುವ ಒಬ್ಬನೇ ಒಬ್ಬ ಸದಸ್ಯ ಕೊನೆಯಲ್ಲಿ ಉಳಿದು ಅವನಿಗೆ ಮಸೂದೆಯ ಮೇಲಿನ ತನ್ನ ಅಭಿಪ್ರಾಯವನ್ನು– ಅಭಿಪ್ರಾಯವು ಗೊತ್ತುವಳಿಯ ಪರವಾಗಿರಬಹುದು ಅಥವಾ ವಿರುದ್ಧವಾಗಿರಬಹುದು– ವ್ಯಕ್ತಪಡಿಸುವ ಆಸೆಯಿದ್ದರೆ, ನಾವು ಅವನಿಗೂ ಕಾಲಾವಕಾಶ ಕೊಡಬೇಕು. ನಾಳೆ ಅದಕ್ಕೆ ಸಮಯ ಸಿಕ್ಕದಿದ್ದರೆ, ಸರ್ಕಾರವು ಆ ಮಸೂದೆಯ ಚರ್ಚೆಗೆ ಹೆಚ್ಚು ದಿನಗಳನ್ನು ಕೊಡಬೇಕು.

ಇಲ್ಲಿರುವ ಯಾವುದೇ ಸದಸ್ಯನಿಗೆ ಈ ಮಸೂದೆಯ ಬಗೆಗೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಕಾಲಾವಕಾಶವಿಲ್ಲವೆಂದರೆ, ಈ ದೇಶದ ಜನರಿಗಾಗಲಿ ಇಲ್ಲಿರುವ ಸದಸ್ಯರಿಗಾಗಲಿ ನ್ಯಾಯ ಸಿಕ್ಕಂತಲ್ಲ, ಎಂಬುದನ್ನು ನಾನು ನಿಮ್ಮ ಮುಂದಿಡುತ್ತಿದ್ದೇನೆ.

**ಮಾನ್ಯ ಉಪಸಭಾಪತಿ :** ಮಾನ್ಯ ಪ್ರಧಾನ ಮಂತ್ರಿಗಳು ಈ ಮಸೂದೆಯ ಚರ್ಚೆಗಾಗಿ ಇನ್ನೂ ಒಂದು ದಿನ ಕೊಟ್ಟಿರುವುದಾಗಿ ಆಗಲೇ ಹೇಳಿದ್ದಾರೆ. ವಿಶಿಷ್ಟ ಸಮಿತಿಯ ಗಮನಕ್ಕೆ ಇತರ ಅನೇಕ ಮಸೂದೆಗಳನ್ನು ಕಳಿಸಲಾಗಿದೆ. ಹಾಗೂ ಇತರ ವಿಷಯಗಳ ಮೇಲೆ ವಿಶಿಷ್ಟ ಸಮಿತಿಗಳು ಸದನಕ್ಕೆ ಕಳಿಸಿರುವ ವರದಿಗಳೂ ಇವೆ. ಸದನದಲ್ಲಿ ಇನ್ನೂ ನಡೆಯಬೇಕಾಗಿರುವ ಕಾರ್ಯ ಕಲಾಪಗಳನ್ನು ಗಮನದಲ್ಲಿಟ್ಟುಕೊಂಡು ಸನ್ಮಾನ್ಯ ಪ್ರಧಾನ ಮಂತ್ರಿಗಳು ಹಿಂದೂ ಕ್ರೋಡೀಕರಣ ಮಸೂದೆಗೆ ಒಂದು ದಿನಕ್ಕಿಂತ ಹೆಚ್ಚು ಸಮಯ ಕೊಡಬಾರದೆಂದು ತೀರ್ಮಾನಿಸಿರುವುದು ಸಮಂಜಸವಾಗೇ ಇದೇ. ಆ ದಿನಕ್ಕೆ ಸಂಬಂಧಿಸಿದಂತೆ ಹೇಳಬೇಕಾದರೆ ಅದು (ಶನಿವಾರ) ಕೆಲಸದ ದಿನ ಮತ್ತು ಈ ವಿಚಾರದಲ್ಲಿ ನಾನು ಸಂಪೂರ್ಣವಾಗಿ ಸರ್ಕಾರದ ಅಧೀನದಲ್ಲಿದ್ದೇನೆ. ಅದನ್ನು ಒಪ್ಪುವುದು ಬಿಡುವುದು ಸದನಕ್ಕೇ ಬಿಟ್ಟಿದ್ದು. ಈ ವಿಷಯವಾಗಿ ನಾನು ಮತ್ತೇನನ್ನೂ ಹೇಳುವುದಿಲ್ಲ. ಈ ವಿಷಯವನ್ನು ಕುರಿತು ಸುಮಾರು ಇಪ್ಪತ್ತೇಳು ಜನ ಸದಸ್ಯರು ಮಾತಾಡಿದ್ದಾರೆ ಹಾಗೂ ನಾವು ಏಳು ದಿನಗಳನ್ನು ತೆಗೆದುಕೊಂಡಿದ್ದೇವೆ; ಹತ್ತೊಂಬತ್ತು ಪ್ಲಸ್ ಐದು, ಇಪ್ಪತ್ನಾಲ್ಕು ಗಂಟೆ ತೆಗೆದುಕೊಂಡಿದ್ದೇವೆ.

**ಡಾ॥ ಪಿ.ಎಸ್. ದೇಶಮುಖ್ :** ಇನ್ನೂ ಎಷ್ಟು ಜನ ಮಾತಾಡಲು ಕಾಯುತ್ತಿದ್ದಾರೆ?

**ಮೌಲಾನಾ ಹಜರತ್ ಮೊಹಾನಿ** (ಉ.ಪ್ರ. ಮುಸ್ಲಿಂ) : ನಾಳೆಯಾದರೂ ನಾವು ಚರ್ಚೆಯನ್ನು ಮುಗಿಸುತ್ತೇವೆಂದು ಏನು ಖಾತ್ರಿ ಇದೆ?

**ಮಾನ್ಯ ಉಪಸಭಾಪತಿಗಳು :** ಇನ್ನೂ ಮಾತನಾಡಬೇಕೆಂದು ಬಯಸುವ ಮೂವತ್ನಾಲ್ಕು ಜನರ ಹೆಸರುಗಳು ನನಗೆ ಬಂದಿವೆ. ಈ ಕಾರ್ಯಕಲಾಪವನ್ನು ನಡೆಸಲು ನಾಳೆ ಒಂದೇ ಕೆಲಸದ ದಿನ ನಿಗದಿಯಾಗಿದೆ. ಇದನ್ನು ಪರಿಶೀಲಿಸುವುದು ನಾಳೆ ಸದನಕ್ಕೇ ಬಿಟ್ಟಿದೆ. ಶನಿವಾರದ ವಿಚಾರದಲ್ಲಿ ಹೇಳಬೇಕೆಂದರೆ, ಅದನ್ನು ಕೆಲಸದ ದಿನ ಎಂದು ಪರಿಗಣಿಸಲಾಗುವುದು. ಏಕೆಂದರೆ ಈ ಚರ್ಚೆ ನಾಳೆಗೆ ಮೀಸಲಾಗಿದೆ. ಸೆಲೆಕ್ಟ್ ಸಮಿತಿಗಳು ಸಭೆ ಸೇರಲು ನೀವು ಬೇರೆ ದಿನ ಏರ್ಪಾಟು ಮಾಡಿಕೊಳ್ಳಬಹುದು.

ಈಗ ಸಭೆಯನ್ನು ನಾಳೆ ಬೆಳಿಗ್ಗೆ ೧೦–೪೫ ರವರೆಗೆ ಮುಂದೂಡಲಾಗಿದೆ.

ವಿಧಾನ ಸಭೆಯು ಡಿಸೆಂಬರ್ ೧೪, ೧೯೪೯ರ ಬುಧವಾರ ಬೆಳಿಗ್ಗೆ ಹತ್ತೂ ಮುಕ್ಕಾಲು ಗಂಟೆಯವರೆಗೆ ಮುಂದೂಡಲ್ಪಟ್ಟಿತು.

***ಹಿಂದೂ ಕಾನೂನು ಮಸೂದೆ** (ಮುಂದುವರೆದುದು)

**ಸನ್ಮಾನ್ಯ ಉಪಸಭಾಪತಿಗಳು :** ನನಗೆ ಶ್ರೀ ಕೃಪಲಾನಿಯವರಿಂದ ಒಂದು ಪತ್ರ ಬಂದಿದೆ. ಅದರಲ್ಲಿ ತಾವು ನಿನ್ನೆ ತಪ್ಪು ಗ್ರಹಿಕೆಯಿಂದಾಗಿ (ಮಾತಾಡುತ್ತಿದ್ದವರು) ಕುಳಿತುಕೊಂಡರೆಂದು ತಿಳಿಸಿದ್ದಾರೆ. ಅವರು ತಮ್ಮ ಭಾಷಣವನ್ನು ಮುಗಿಸಿದರೆಂದು ನಾನು ತಿಳಿದಿದ್ದೆ. ಆದರೆ ನಾನು ಎದ್ದ ತಕ್ಷಣ ಆಸನಕ್ಕೆ ಗೌರವ ಸೂಚಿಸುವ ಸಲುವಾಗಿ ತಾವು ಕುಳಿತುಕೊಂಡಿದುದಾಗಿ ಅವರು ತಿಳಿಸುತ್ತಾರೆ. ಹಾಗೇನಾದರೂ ಆಗಿದ್ದರೆ, ಅವರು ತಮ್ಮ ಭಾಷಣ ಮುಂದುವರಿಸುವ ಅವಕಾಶ ಕೊಡಬಯಸುತ್ತೇನೆ; ಆದರೆ ಅವರು ತಮ್ಮ

* C.A. (Leg) D, Vol. VI, pt ii, ೧೪ನೇ ಡಿಸೆಂಬರ್, ೧೯೪೯ ಪುಟ ೫೬೦–೬೨೧ ಅದರಲ್ಲೇ ಪುಟ ೫೬೦–೬೨

ಭಾಷಣವನ್ನು ಬಹುಬೇಗ ಮುಗಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

***ಆಚಾರ್ಯ ಜೆ.ಬಿ. ಕೃಪಲಾನಿ** (ಉ.ಪ್ರ : ಸಾಮಾನ್ಯ) : ಮಾನ್ಯರೆ, ನನ್ನ ಭಾಷಣವನ್ನು ಮುಗಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ನಿಮ್ಮನ್ನು ವಂದಿಸುತ್ತೇನೆ. ಅದನ್ನು ಒಂದು ಗಂಭೀರ ರೀತಿಯಲ್ಲಿ ಮುಗಿಸಬೇಕೆಂದು ಇಚ್ಛಿಸಿದ್ದೆ. ನಾವು ಹಾಸ್ಯ ಪ್ರಜ್ಞೆಯಿಲ್ಲದ ರಾಷ್ಟ್ರ; ಹಾಗೂ ಆ ಹಾಸ್ಯದ ಹಿಂದಿರುವ ಆ ಗಂಭೀರತರ ಉದ್ದೇಶವನ್ನು ಹೊಕ್ಕು ನೋಡುವ ಶಕ್ತಿ ನಮಗಿಲ್ಲ, ಎಂದೆನಿಸುತ್ತದೆ ನನಗೆ.

ಮಸೂದೆಗೆ ನಾನು ನೀಡುತ್ತಿರುವ ಬೆಂಬಲ ಹೃತ್ಪೂರ್ವಕವಾದದ್ದು ಹಾಗೂ ಅದು ಪ್ರಬಲ ಆಧಾರಗಳ ಮೇಲೆ ನಿಂತಿದೆ. ಭಾರತೀಯ ನಾರಿಯ ಚಾರಿತ್ರ್ಯ ಮತ್ತು ಸಂಪ್ರದಾಯ ಎಂಬ ಆಧಾರಗಳ ಮೇಲೆ ಅದು ನಿಂತಿದೆ. ನಮ್ಮ ಇತಿಹಾಸದುದ್ದಕ್ಕೂ ಅವರು ನಮ್ಮ ಜೀವನದಲ್ಲೂ ನಮ್ಮ ಸಂಸ್ಕೃತಿಯಲ್ಲೂ ವಿಶಿಷ್ಟ ಪಾತ್ರವಹಿಸಿದ್ದಾರೆ. ಪ್ರಾಚೀನ ಕಾಲದಲ್ಲಿ ಆಗಿನ ಕಾಲದ ವಿದ್ಯಾಭ್ಯಾಸಕ್ಕೆ ಕಾಣಿಕೆ ನೀಡಿದ ಅನೇಕ ಪ್ರಸಿದ್ಧರ ಹೆಸರುಗಳು ಕಂಡುಬರುತ್ತವೆ. ಅದರಲ್ಲಿ ಕೆಲವರು ಮಹಾನ್ ಲೇಖಕರೂ ತತ್ತ್ವಜ್ಞಾನಿಗಳೂ ಕವಿಗಳೂ ಆಗಿದ್ದರು. ಮಧ್ಯಯುಗದಲ್ಲಿ ವಿದೇಶೀ ಆಕ್ರಮಣ ಅಲೆಅಲೆಯಾಗಿ ಬಂದು ನಾವು ಸೋತು ಸುಣ್ಣವಾಗಿದ್ದಾಗ, ನಮ್ಮ ಸ್ತ್ರೀಯರು ಮನೆಯಲ್ಲೇ ಉಳಿದುಕೊಂಡರು, ಹಾಗೂ ನಾವು ನಿರಾಶೆಯಿಂದ ಗಾಯಗೊಂಡು ಮನೆಗೆ ಹೋದಾಗ ನಮ್ಮ ಗಾಯಗಳಿಗೆ ಉಪಶಮನ ನೀಡಿ ಮನೆಗಳನ್ನು ರಕ್ಷಿಸಿಕೊಳ್ಳುತ್ತಿದ್ದರು. ಅವರು ನಮಗೆ ಸಮಾಧಾನದ ಸೆಲೆಯಾಗಿದ್ದರು. ಇಷ್ಟೇ ಅಲ್ಲ, ಅವರು ನಮ್ಮ ಧರ್ಮವನ್ನು ರಕ್ಷಿಸಿಕೊಂಡು ಬಂದರು. ನಮ್ಮ ಸಂಪ್ರದಾಯವನ್ನು ಉಳಿಸಿಕೊಂಡು ಬಂದರು; ನಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದರು. ಉತ್ತಮ ಸಂಸ್ಕೃತಿ ಮತ್ತು ಉತ್ತಮ ಧರ್ಮಗಳನ್ನು ನಾವು ಇಂದು ನೋಡಬೇಕಾದರೆ ಹಿಂದೂ ಮನೆಗಳಲ್ಲಿ ಹಿಂದೂ ಸ್ತ್ರೀಯರನ್ನು ನೋಡಬೇಕು. ಇಂದಿಗೂ ಸಹ ಗಂಡಸರು ತಮ್ಮ ವೇಷಭೂಷಣಗಳನ್ನು ಬದಲಾಯಿಸಿದರೂ ಹೆಂಗಸರು ತಮ್ಮ ವೇಷಭೂಷಣಗಳನ್ನು ಬದಲಾಯಿಸಿಲ್ಲ. ರಾಷ್ಟ್ರಪಿತರು ಗುರುತಿಸಿ, ಪರಿಣಾಮಕಾರಿಯಾಗಿ ಬಳಸಿಕೊಂಡಿದುದು ಭಾರತೀಯ ಸ್ತ್ರೀತ್ವದ ಈ ವಿಲಕ್ಷಣವನ್ನೇ.

ಸ್ವಾತಂತ್ರ್ಯಕ್ಕೆ ಮಾಡಿದ ನಮ್ಮ ಹೋರಾಟದಲ್ಲಿ ಅವರು ನಮ್ಮೊಂದಿಗೆ ಭುಜಕ್ಕೆ ಭುಜ ಕೊಟ್ಟು ಸಹಕರಿಸಿದರು. ನನಗೆ ತಿಳಿದಿರುವಂತೆ, ಅವರು ನಮಗಿಂತ ಹೆಚ್ಚು ನೋವನ್ನನ್ನುಭವಿಸಬೇಕಾಯಿತು. ಅದರಲ್ಲಿ ಕೆಲವರು ಲಾಠಿ ಪ್ರಹಾರವನ್ನು ಸಹಿಸಿಕೊಳ್ಳದೆ, ಜೈಲಿಗೆ ಹೋಗದಿದ್ದಾಗಲೂ ಸಹ, ಅವರು ಎಷ್ಟು ಕಷ್ಟನಷ್ಟಗಳನ್ನು ಸಹಿಸಕೊಳ್ಳಬೇಕಾಯಿತು ಎಂಬುದು ನನಗೆ ಗೊತ್ತಿದೆ; ಆದರೆ ಅವರು ಆ ನೋವನ್ನು ಸಂತೋಷದಿಂದಲೇ ಅನುಭವಿಸಿದರು. ಪ್ರತಿಯೊಂದರಲ್ಲಿಯೂ ಅವರು ನಮಗೆ ಸಹಾಯ ನೀಡಿದ್ದಾರೆ. ಹೀಗಿರುವಾಗ ಅವರು ತಮ್ಮದನ್ನಷ್ಟೇ ಚಿಂತಿಸುತ್ತಾರೆ ಎಂದರೆ, ನಮ್ಮ ಮಾತು ಅಸಮಂಜಸವಾದೀತು. ಬೂಟು ಎಲ್ಲಿ ಕಚ್ಚುತ್ತದೆ ಎಂಬುದು ಅದನ್ನು ತೊಟ್ಟವನಿಗೆ ಗೊತ್ತು. ಅವರಿಗೆ ಮಾತ್ರ ತಾವು ಅನುಭವಿಸುತ್ತಿರುವ ಕುಂದುಕೊರತೆಗಳು ಗೊತ್ತು. ಬಂಗಾಳದಿಂದ ಬಂದಿರುವ ಸದಸ್ಯರೊಬ್ಬರು ಈ ಮಸೂದೆಯ ವಿರುದ್ಧ ಬಹಳ ಉತ್ಸಾಹ ತೋರಿಸುತ್ತಿದ್ದಾರೆ; ಬಂಗಾಳದಲ್ಲಿನ ವಿಧವೆಯರ ಪರಿಸ್ಥಿತಿಯನ್ನು ತಿಳಿದುಕೊಳ್ಳದೆ ಅವರು ಈ ಉತ್ಸಾಹ ತೋರಿಸುತ್ತಿರುವುದು ನನಗೆ ವಿಷಾದನೀಯವೆನಿಸುತ್ತದೆ. ಅವರನ್ನು ನಾನೇ ಕಣ್ಣಾರೆ ಕಂಡಿದ್ದೇನೆ.

**ಶ್ರೀ ಸುರೇಶ್ ಚಂದ್ರ ಮಜುಂದಾರ್** (ಪಶ್ಚಿಮ ಬಂಗಾಳ : ಸಾಮಾನ್ಯ) : ಬಂಗಾಳದ ಎಲ್ಲ ಸದಸ್ಯರೂ ಆ ರೀತಿ ಇಲ್ಲ.

**ಆಚಾರ್ಯ ಜೆ.ಬಿ. ಕೃಪಲಾನಿ :** ಮಸೂದೆಯ ವಿರುದ್ಧ ಉತ್ಸಾಹ ತೋರಿಸುತ್ತಿರುವ ಆ ಒಬ್ಬ ಸದಸ್ಯರ ಬಗ್ಗೆ ಮಾತ್ರ ನಾನು ಹೇಳುತ್ತಿದ್ದೆ. ನಾನು ಹೇಳಿದ ಹಾಗೆ ಬೂಟು ಎಲ್ಲಿ ಕಚ್ಚುತ್ತದೆ ಎಂಬುದು ಅದನ್ನು ಧರಿಸಿದವನಿಗೇ ಗೊತ್ತು. ಹೆಂಗಸರು ಬಯಸಿದ್ದೆಲ್ಲ ಅವರಿಗೆ ಸಿಕ್ಕಿದರೂ ಮನೆಗಾಗಿ ಹಾಗೂ ಗಂಡಸರಿಗಾಗಿ ಮಾಡುವ ಸಾಂಪ್ರದಾಯಿಕವಾಗಿ ಬಂದಿರುವ ಅವರ ಶ್ರದ್ಧೆ ಸ್ವಲ್ಪವೂ ಕಡಿಮೆಯಾಗುವುದಿಲ್ಲ. ಇದರಲ್ಲಿ ಯಾವ ಅನುಮಾನವೂ ಇಲ್ಲ. ಹೀಗೆ ನಂಬಲು ನನಗೆ ಸಾಕಷ್ಟು ಕಾರಣಗಳಿವೆ. ಮಾನ್ಯರೆ, ಜನರು ಆಧುನಿಕವೆನ್ನುವ ಮಹಿಳೆಯರೊಡನೆ ನನಗೆ ಸಂಪರ್ಕವಿದೆ. ನಾನು ನನ್ನ ಗೃಹ ಜೀವನದ ಒಂದು ಇಣುಕು ನೋಟವನ್ನು ಕೊಡುವವನಿದ್ದೇನೆ–ಅದಕ್ಕಾಗಿ ಕ್ಷಮೆಯಿರಲಿ. ನಿಮಗೂ, ಸದನಕ್ಕೂ, ಶ್ರೀಮತಿ ಕೃಪಲಾನಿ ಗೊತ್ತು, ಆದರೆ ನಿಮಗೆ ಆಕೆಯ ಸಾರ್ವಜನಿಕ ಚಟುವಟಿಕೆಗಳಷ್ಟೇ ಗೊತ್ತು.

**ಶ್ರೀ ರೋಹಿಣಿ ಕುಮಾರ್ ಚೌಧರಿ** (ಅಸ್ಸಾಂ : ಸಾಮಾನ್ಯ) : ಮಾನ್ಯರೆ, ಶ್ರೀಮತಿ ಕೃಪಲಾನಿಯವರು ಸದನದಲ್ಲಿ ಇಲ್ಲದಿರುವಾಗ ನಾವು ಅವರನ್ನು ಕುರಿತು ಚರ್ಚಿಸಲು ಸಾಧ್ಯವೆ?

**ಆಚಾರ್ಯ ಜೆ.ಬಿ ಕೃಪಲಾನಿ :** ಬೇರೆ ಸದಸ್ಯರು ಆಕೆಯನ್ನು ಕುರಿತು ಚರ್ಚಿಸಿದರೆ, ನಾನು ಗಂಭೀರವಾದ ಆಕ್ಷೇಪಣೆ ಮಾಡುತ್ತೇನೆ. ಆದರೆ ನನಗೆ ಆ ಚರ್ಚೆ ಮಾಡುವ ಅಧಿಕಾರ ಸ್ವಲ್ಪ ಇದೆ ಎಂದುಕೊಂಡಿದ್ದೇನೆ. ನಾನು ಹೇಳುತ್ತಿದ್ದಂತೆ, ಸಾರ್ವಜನಿಕ ಜೀವನದಲ್ಲಿ ಆಕೆ ಪೂರ್ಣ ಪಾತ್ರ ವಹಿಸುತ್ತಾಳೆ. ಆದರೆ ಮನೆಗೆ ಬಂದ ಕೂಡಲೇ, ಯಾವುದೇ ಪ್ರಾಚೀನ ಕಾಲದ ಹೆಂಗಸಿನಂತೆ, ಆಕೆ ಒಳ್ಳೆಯ ಗೃಹಿಣಿಯಾಗುತ್ತಾಳೆ.

ನನ್ನ ಹೊರಗಿನ ಕೆಲಸಗಳನ್ನು ಬೇರೆಯವರು ಮಾಡುವುದು ನನಗೆ ಇಷ್ಟವಿಲ್ಲವಾದರೂ, ನಾನು ನೋಡದೆ ಇದ್ದಾಗ ಆಕೆ ನನ್ನ ಎಲ್ಲ ಕೆಲಸಗಳನ್ನೂ ಮಾಡುತ್ತಾಳೆ–ನನ್ನ ಚಪ್ಪಲಿಗಳನ್ನು ಬ್ರಷ್ ಮಾಡುವುದು, ನನ್ನ ಬಟ್ಟೆ ತೊಳೆಯುವುದು, ಇವೂ ಸೇರಿದಂತೆ. ಆಧುನಿಕರೆನಿಸಿಕೊಳ್ಳುವ ಹೆಂಗಸರನ್ನು ನೋಡುವ ಗೌರವವೂ ನನಗೆ ಸಿಕ್ಕಿದೆ. ಸದನದಲ್ಲಿ ಮಾತ್ರ ನೀವು ಕಾಣಬಹುದಾದ ಸದಸ್ಯರೊಂದಿಗೆ ನಾನು ಸ್ವಲ್ಪ ಹೆಚ್ಚು ನಿಕಟ ಸಂಪರ್ಕ ಪಡೆದಿದ್ದೇನೆ ಹಾಗೂ ಅವರನ್ನು ಅವರವರ ಮನೆಯ ವಾತಾವರಣದಲ್ಲಿ ತಂತಮ್ಮ ಮಕ್ಕಳ ಜೊತೆ, ತಂತಮ್ಮ ಗಂಡಂದಿರ ಜೊತೆ, ತಂತಮ್ಮ ಸೋದರರ ಜೊತೆಯಲ್ಲಿಯೂ ನೋಡಿದ್ದೇನೆ; ಆದರೆ ಅವರಾರೂ ಪುರಾತನ ಸ್ತ್ರೀಯರ ಸದ್ಗುಣಗಳನ್ನು ಕಳೆದುಕೊಂಡಿಲ್ಲ. ಆದರೆ ಸಾರ್ವಜನಿಕ ಚಟುವಟಿಕೆ ಮತ್ತು ಸಾರ್ವಜನಿಕ ಕೆಲಸ, ಎಂಬ ಸದ್ಗುಣವನ್ನು ಬೆಳೆಸಿಕೊಂಡಿದ್ದಾರೆ. ಮಾನ್ಯರೆ, ನಾನು ಸಿಂಧ್ ಪ್ರಾಂತ್ಯದ ಕೋಮುವೊಂದಕ್ಕೆ ಸೇರಿದವನು; ಆ ಕೋಮಿನಲ್ಲಿ ಬಹುತೇಕ ಸ್ತ್ರೀಯರು ವಿದ್ಯಾವಂತರು; ಆಧುನಿಕ ವಿಚಾರಗಳ ಪ್ರಕಾರ, ಅವರನ್ನು ಫ್ಯಾಷನಬಲ್ ಎಂದೂ ಪರಿಗಣಿಸಬಹುದು; ಆದರೆ ಅವರ ಮನೆಗೆ ಹೋಗಿ ನೋಡಿದಾಗ ಅವರು ತಮ್ಮ ಗಂಡ, ಮಕ್ಕಳು, ಸೋದರರನ್ನು ಪ್ರೀತಿಸುವುದನ್ನು ನೋಡಿದರೆ ನನಗೆ ಅಲ್ಲಿ ಶೋಚನೀಯತೆ ಕಾಣುತ್ತದೆ.

**ಒಬ್ಬ ಸನ್ಮಾನ್ಯ ಸದಸ್ಯರು : ಶೋಚನೀಯವೇಕೆ?**

**ಆಚಾರ್ಯ ಜೆ.ಬಿ. ಕೃಪಲಾನಿ** : ನಾನು ತಿಳಿದೇ ಆ ಪದವನ್ನು ಉಪಯೋಗಿಸುತ್ತಿದ್ದೇನೆ. ಏಕೆಂದರೆ ಅವರ ಪ್ರೀತಿ ಗಂಡಸರಿಗೆ ಒಂದು ರೀತಿಯ ಮುಜುಗರವನ್ನುಂಟುಮಾಡುತ್ತದೆ. ನಾವೆಷ್ಟೇ ಅಧಿಕಾರ ಸ್ಥಾಪಿಸಲು ಹಾಗೂ ನಮ್ಮ ಮಾತೇ ನಡೆಯುವಂತೆ ಮಾಡಲು ಪ್ರಯತ್ನಪಟ್ಟರೂ ಅವರು ನಮ್ಮನ್ನು ಎಷ್ಟೊಂದು ಅರ್ಪಣಾಭಾವದಿಂದ, ಸೇವೆಯಿಂದ, ಎಷ್ಟೊಂದು ಭಕ್ತಿಭಾವದ ಮನಸ್ಸಿನಿಂದ, ಎಷ್ಟೊಂದು ಅಚಲ ಭಾವದಿಂದ, ಎಷ್ಟೊಂದು ಸಹನೆಯಿಂದ ಸುತ್ತುವರಿಯುತ್ತಾರೆಂದರೆ ಪ್ರಪಂಚದಲ್ಲಿ ಭಾರತೀಯ ಗಂಡಂದಿರಿಗಿಂತ ಹೆಚ್ಚಿನ ಪತ್ನೀದಾಸರನ್ನು ನಾನಿನ್ನೂ ನೋಡಬೇಕಾಗಿದೆ. ನಮ್ಮನ್ನು ನಿಯಂತ್ರಿಸಲು

ಅವರು ಏನು ಬೇಕಾದರೂ ಮಾಡಬಲ್ಲರು. ನಾನು ಈ ಆಧುನಿಕ, ನಮ್ಮಷ್ಟೇ ವಿದ್ಯಾವಂತರಾದ ಸ್ತ್ರೀಯರನ್ನೂ ನೋಡಿದ್ದೇನೆ, ಆದರೆ ಅವರೂ. ಅವರ ಅಂತರಾಳದಲ್ಲಿ ಪುರಾತನ ಸ್ತ್ರೀಯರಷ್ಟೇ ಸಾಂಪ್ರದಾಯಿಕವಾಗಿದ್ದಾರೆ. ಹಳೆಯ ಸಂಪ್ರದಾಯದ ಸ್ತ್ರೀಯರನ್ನು ಮದುವೆಯಾಗಿರುವವರು ಅವರ ಶ್ರದ್ಧೆಯನ್ನು, ಆಧುನಿಕ ಸ್ತ್ರೀಯರ ಶ್ರದ್ಧೆಯನ್ನು ಗಮನಿಸಿದರೆ, ಅವರಿಗೆ ಅದರಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂಬುದನ್ನು ಕಂಡು ಆಶ್ಚರ್ಯವಾದೀತು. ಈ ಸ್ತ್ರೀಯರೇ ತಮ್ಮ ಕೆಲವು ಕುಂದುಗಳನ್ನು ನಿವಾರಿಸಿಕೊಳ್ಳಲು ಇಚ್ಛಿಸುತ್ತಿದ್ದಾರೆ. ಸ್ತ್ರೀಯರಿಗೆ ಉತ್ತರಾಧಿಕಾರದಲ್ಲಿ ಹಕ್ಕು ಕೊಟ್ಟರೆ, ಸೋದರ-ಸೋದರಿಯರಲ್ಲಿ ಪ್ರೀತಿ ಕಡಿಮೆಯಾಗುತ್ತದೆ ಎಂದು ಹೇಳಲಾಗುತ್ತಿದೆ. ನಮ್ಮ ಸೋದರಿಯರ ಪ್ರೀತಿ ಅಷ್ಟೊಂದು ಹಗುರವಾಗುವುದು ಎಂದು ನನಗನಿಸುವುದಿಲ್ಲ. ಅದರೆ ಹಿಂದೆ ಅನೇಕ ಶತಮಾನಗಳ ಸಂಪ್ರದಾಯವಿದೆ. ಅನೇಕ ಸೋದರಿಯರು ತಮ್ಮ ಸೋದರರು ವಿದ್ಯಾವಂತರಾಗಿ ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳಲಿ ಎಂದು ಗುಲಾಮರಂತೆ ದುಡಿಯುತ್ತಿರುವುದನ್ನು ನೋಡಿದ್ದೇನೆ. ಕುಟುಂಬಕ್ಕಾಗಿ ತ್ಯಾಗ ಮಾಡುವ ಅನೇಕ ಸೋದರಿಯರನ್ನು ನಾನು ನೋಡಿದ್ದೇನೆ. ನಾನು ಅವಿಭಕ್ತ ಕುಟುಂಬವಿಲ್ಲದ ಕೋಮಿಗೆ ಸೇರಿದ್ದೇನೆ; ಅಲ್ಲಿ ಗಂಡು ಮದುವೆಯಾದ ತಕ್ಷಣ ಪ್ರತ್ಯೇಕವಾಗಿ, ಒಬ್ಬನೇ (ತನ್ನ ಕುಟುಂಬದೊಂದಿಗೆ) ಬಾಳುತ್ತಾನೆ. ಆದರೆ ಅವಿಭಕ್ತ ಕುಟುಂಬವಿಲ್ಲದ್ದರಿಂದ ಕುಟುಂಬದ ಸದಸ್ಯರ ನಡುವೆ ಅತೀವ ಪ್ರೀತಿಯಿರುತ್ತದೆ, ಎಂಬುದು ನನಗೆ ಗೊತ್ತು. ಈ ವಿಚಾರ ಬೆಳಕಿಗೆ ಬಂದುದು ಇತ್ತೀಚೆಗೆ-ಸಿಂಧಿಗಳು ಸಿಂಧ್‌ನಿಂದ ಭಾರತಕ್ಕೆ ವಲಸೆ ಬಂದಾಗ. ಒಂದೇ ಮನೆಯಲ್ಲಿ ಮೂರು-ನಾಲ್ಕು ಕುಟುಂಬಗಳು ಒಟ್ಟಿಗೇ ವಾಸವಾಗಿರುವುದನ್ನು ನಾನು ನೋಡಿದ್ದೇನೆ. ಯಾರಿಗಾಗಲಿ ಹೊರಗಡೆ ಮನೆಯಿದ್ದರೆ, ಯಾರಾದರೂ ಸಿಂಧ್ ಪ್ರಾಂತ್ಯದ ಹೊರಗೆ ನೆಲೆಸಿದ್ದರೆ, ಅವನು ಭಾರತದಲ್ಲಿ ವಾಸಿಸುತ್ತಿದ್ದರೆ, ಆ ಮನೆಯಲ್ಲಿ ಸೋದರ-ಸೋದರಿಯರ ಮಕ್ಕಳು, ದಾಯಾದಿಗಳು, ಭಾವ-ಮೈದುನರು ಎಲ್ಲರೂ ಸಮಾನರಾಗಿ ಇರುತ್ತಾರೆ; ಇಷ್ಟಾದರೂ ಅವರೆಲ್ಲರೂ ಈ ಹಿಂಸೆಯನ್ನುಂಟುಮಾಡುವ ಇಕ್ಕಟ್ಟನ್ನು ಸಂತೋಷದಿಂದ ಸಹಿಸಿಕೊಳ್ಳುತ್ತಾರೆ. ಅವರಲ್ಲಿ ಕೆಲವರು ಬಹಳ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಆದುದರಿಂದ, ಹಿಂದೂ ಕಾನೂನಿನಲ್ಲಿ ಆಗುವ ಒಂದು ಸಣ್ಣ ಬದಲಾವಣೆಯಿಂದಾಗಿ, ಅನೇಕ ಶತಮಾನಗಳಿಂದ ಅವ್ಯಾಹತವಾಗಿ ಬಂದಿರುವ ಈ ಕೌಟುಂಬಿಕ ಪ್ರೀತಿಯು ನಾಶವಾಗುವುದಿಲ್ಲ.

ಮಧ್ಯಾಹ್ನ ೧೨ ಗಂಟೆಯ ಅಧಿವೇಶನದಲ್ಲಿ :

ಸರ್, ಅಲ್ಲಾಡಿ. ಕೃಷ್ಣಸ್ವಾಮಿ ಅಯ್ಯರ್ ಹೇಳಿರುವಂತೆ, ಈ ಕಾನೂನು ಸದಾ ಬದಲಾಗುತ್ತಲೇ ಇರುತ್ತದೆ. ಹಿಂದೂ ಧರ್ಮವು ಈ ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿಕೊಳ್ಳುವುದು ಅದರ ಘನತೆಯನ್ನು ತೋರಿಸುತ್ತದೆ. ಅದರ ಸಂಪ್ರದಾಯಕ್ಕೆ ನಿಷ್ಠೆಯನ್ನು ತೋರಿಸುತ್ತದೆ; ಆದರೂ ಸ್ವಸ್ಥ ಸಮಾಜ ಝೀವನಕ್ಕೆ ಅಗತ್ಯವಾಗುವಷ್ಟು ಹೊಸತನ್ನೂ ಪಡೆದುಕೊಳ್ಳುತ್ತದೆ. ಕಾಲ ಬದಲಾಗಿದೆ. ಇಲ್ಲಿ ವಿದೇಶೀ ಆಳ್ವಿಕೆ ಬರದಿದ್ದರೆ. ಶಾಸ್ತ್ರಗಳು ಬದಲಾಗುತ್ತಿದ್ದವೇನೋ; ನಮ್ಮ ಕಾನೂನುಗಳು ಬದಲಾಗುತ್ತಿದ್ದವೇನೋ. ವಿಶೇಷ ಆಳ್ವಿಕೆಯು ಈ ಕಾನೂನುಗಳನ್ನು (ಬದಲಾಗದಷ್ಟು) ಗಟ್ಟಿ ಮಾಡಿವೆ. ಆದುದರಿಂದ ಆ ಕಾನೂನುಗಳಿಗೆ ಹೊಸ ಝೀವವನ್ನೂ ಹೊಸ ಬೆಳಕನ್ನೂ ತುಂಬುವ ಸಮಯ ಬಂದಿದೆ; ಈ ಮಸೂದೆ ಮಾಡುತ್ತಿರುವುದು ಆ ಪ್ರಯತ್ನವನ್ನೇ. ಸಮಿತಿಯಲ್ಲಿ ಈ ಮಸೂದೆಗೆ ಒಂದು ಆಕಾರ ಮತ್ತು ರೂಪ ಕೊಡಲಾಗುವುದು, ಹಾಗೂ ಆ ಬಗ್ಗೆ ಏನೂ ತಕರಾರುಗಳು ಇರುವುದಿಲ್ಲ ಎಂಬುದು ಖಂಡಿತ. ಇದರಿಂದಾಗಿ ನಮ್ಮ ಗೃಹಝೀವನಕ್ಕೆ ಭಂಗ ಬರುವುದಿಲ್ಲ ಎಂಬುದು ನನ್ನ ಭರವಸೆ; ನಮ್ಮ ಹೆಂಗಸರ ಪ್ರೀತಿ ಮತ್ತು ನಿಷ್ಠೆ- ಇದರಿಂದಾಗಿ ಕಮ್ಮಿಯಾಗುವುದಿಲ್ಲವೆಂದೂ ನನಗೆ ಭರವಸೆ ಇದೆ. ಗಂಡಸರಿಗೆ ಅವರು ತೋರಿಸುವ ಭಕ್ತಿ ಯಾವ

ರೀತಿಯಲ್ಲೂ ಕಡಿಮೆಯಾಗುವುದಿಲ್ಲವೆಂದೂ ನನಗೆ ಭರವಸೆ ಇದೆ. ಗಂಡಸರಿಗೆ ಅವರು ತೋರಿಸುವ ಭಕ್ತಿ ಯಾವ ರೀತಿಯಲ್ಲೂ ಕಡಿಮೆಯಾಗುವುದಿಲ್ಲ ಹಾಗೂ ಭವಿಷ್ಯತ್ತಿನ ಭಾರತೀಯ ನಾರಿಯರು ತಮ್ಮ ಕುಟುಂಬಕ್ಕೂ ರಾಷ್ಟ್ರಕ್ಕೂ ನಿಷ್ಠರಾಗಿರುತ್ತಾರೆಂಬ ಭರವಸೆ ನನಗಿದೆ. ಮಾನ್ಯರೆ, ನನ್ನ ಮಾತು ಮುಗಿಯಿತು.

*ಶ್ರೀ **ಗೋಕುಲಭಾಯ್ ದೌಲತ್‌ರಾಮ್ ಭಟ್** (ಮುಂಬಯಿ ರಾಜ್ಯ) : (ಇವರು ಹಿಂದಿಯಲ್ಲಿ ಭಾಷಣ ಮಾಡಿದರು) ಮಾನ್ಯರೆ, ಹಿಂದೂ ಕಾನೂನು ಮಸೂದೆಯು ಸದನದ ಮುಂದೆ ಬಂದಾಗಿನಿಂದ, ಅದು ಭಾರತೀಯ ಜನರ ಮನಸ್ಸಿನಲ್ಲಿ ಕ್ಷೋಭೆಯನ್ನುಂಟುಮಾಡಿದೆ. ಕಳೆದ ಐವತ್ತು-ಅರುವತ್ತು ವರ್ಷಗಳಿಂದ ಮಸೂದೆಯು ಆಗಲೇ ನಮ್ಮ ಮುಂದೆ ಬಂದಿದೆ ಎಂದು ಡಾ॥ ಸೇನ್ ವಾದಿಸುತ್ತಾರೆ. ಆದರೆ ಇದಕ್ಕೆ ಸಂಬಂಧಿಸಿದಂತೆ ನಾನು ಓದಿರುವ ಯಾವುದೇ ಪುಸ್ತಕದಲ್ಲಿ ಎಲ್ಲಿಯೂ ಈ ಮಸೂದೆ ಮೊದಲೇ ಇತ್ತು ಎಂಬುದಕ್ಕೆ ಆಧಾರ ಸಿಕ್ಕಿಲ್ಲ. ಆದರೆ ಹಿಂದೂ ಕಾನೂನು ಎಂಬುದೇನೋ ಇತ್ತು ಹಾಗೂ ಅದರಲ್ಲಾದ ಬದಲಾವಣೆ ಆಗಾಗ್ಗೆ ಹಿಂದೂ ಸಮಾಜದ ಗಮನ ಸೆಳೆಯುತ್ತಿತ್ತು ಎಂಬುದೂ ನಿಸ್ಸಂದೇಹ.

೧೯೩೯ರ ನಂತರವೇ ಹಿಂದೂ ಕಾನೂನು ಮಸೂದೆಯು ಈಗಿರುವ ರೂಪದಲ್ಲಿ ನಮಗೆ ಗೊತ್ತಾಗಿರುವುದು. ಆ ಸಂದರ್ಭದಲ್ಲಿ ಅದರ ಬಗ್ಗೆ ಚರ್ಚೆಯಾಗಿರಬಹುದು. ಡಾ॥ ದೇಶಮುಖರು ೧೯೩೮ರಲ್ಲಿ ಹಿಂದೂ ವಿವಾಹ ಮಸೂದೆಯನ್ನು ಸದನದ ಮುಂದೆ ತಂದಿದ್ದರು.

**ಡಾ॥ ಪಿ.ಕೆ. ಸೇನ್** (ಬಿಹಾರ: ಸಾಮಾನ್ಯ) : ನಾನದನ್ನು ಸ್ವಲ್ಪ ವಿವರಿಸಲೆ? ಈ ವಿಚಾರ ವಿಧಾನ ಸಭೆಯ ಮುಂದೆ ಅರವತ್ತು ವರ್ಷಗಳಿಗಿಂತ ಹೆಚ್ಚಾಗಿ, ಅಂದರೆ ೧೮೫೬ ಅಥವಾ ೧೮೫೫ ರಿಂದಲೂ, ಇತ್ತು; ಆದರೆ ಅದು ವಿವಾಹ ಕಾನೂನಿಗೆ ಸಂಬಂಧಿಸಿದ್ದೇ ಹೊರತು, ಬೇರೆ ವಿಷಯಗಳಿಗೆ ಖಂಡಿತ ಸಂಬಂಧಿಸಿದ್ದಲ್ಲ. ಇದೇ ನಾನು ಹೇಳಿದುದು.

**ಶ್ರೀ ಗೋಕುಲ್‌ಭಾಯ್ ದೌಲತ್‌ರಾಮ್ ಭಟ್** : ನಾನು ಹೇಳುತ್ತಿರುವುದೂ ಸಹ, ಅದರ ಕೆಲವು ಅಂಶಗಳಷ್ಟೇ ನಮ್ಮ ಮುಂದೆ ಮತ್ತು ಹಿಂದೂ ಸಮಾಜದ ಮುಂದೆ ಬಂದಿದ್ದವು, ಎಂದೇ. ವಾಸ್ತವವಾಗಿ ಅಂಥ ಸಮಸ್ಯೆಗಳು ಕೆಣಕಿದುದು ಕೇವಲ ಹಿಂದೂಗಳನ್ನೇ ಅಲ್ಲ. ಅವು ಅದೇ ರೀತಿ ಮುಸ್ಲಿಮರನ್ನೂ, ಪಾರ್ಸಿಗಳನ್ನೂ ಕೆಣಕಿದವು. ಹಿಂದೂ ಕಾನೂನು ಮಸೂದೆಯನ್ನು ಸದನದ ಮುಂದೆ ತಂದ ರೀತಿಯ ಇತಿಹಾಸದ ಕೆಲವು ಇಣುಕು ನೋಟಗಳನ್ನು ಹಾಗೂ ಯಾವ ಪರಿಸ್ಥಿತಿಯಲ್ಲಿ ರಾವ್ ಸಮಿತಿ ಎಂಬ ಸಮಿತಿಯನ್ನು ರಚಿಸಲಾಯಿತು ಎಂಬುದನ್ನು ತಮಗೆ ಪರಿಚಯಿಸಬೇಕೆಂದು ನಾನು ಇಚ್ಛಿಸುತ್ತೇನೆ. ಅಲ್ಲದೆ, ೩೦ ಕೋಟಿ ಜನ ಸಂಖ್ಯೆಯುಳ್ಳ ಹಿಂದೂ ಸಮಾಜ ರಚನೆಗೆ ಸಂಬಂಧಿಸಿದ ನೀತಿನಿಯಮಾವಳಿಗಳನ್ನು ರೂಪಿಸಲು ಹೇಗೆ ಕಾಲಾವಧಿಯನ್ನು ನಿಗದಿಪಡಿಸಲಾಯಿತು ಎಂಬುದನ್ನೂ, ಅದನ್ನು ಪ್ರಚುರಪಡಿಸಲು, ಅದರ ಬಗೆಗಿನ ಸಾರ್ವಜನಿಕರ ಅಭಿಪ್ರಾಯಗಳನ್ನೂ, ಅವರ ಮತ್ತಾವುದೇ ಪ್ರತಿಕ್ರಿಯೆಗಳನ್ನೂ ತಿಳಿದುಕೊಳ್ಳಲು ಯಾವ ವಿಧಾನಗಳನ್ನು ಬಳಸಲಾಯಿತು ಎಂಬುದನ್ನೂ ನಾನು ನಿಮಗೆ ತಿಳಿಸಬೇಕಾಗಿದೆ. ಹಿಂದೂ ಕಾನೂನು ಮಸೂದೆಯನ್ನು ಜಾರಿಗೊಳಿಸಬೇಕೋ ಬೇಡವೋ, ಹಿಂದೂ ಸಮಾಜವು ಅಖಂಡವಾಗಿರಬೇಕೋ ಬೇಡವೋ, ಹಿಂದೂ ಕಾನೂನಿನ ವಿವಿಧ ಬಿಡಿಬಿಡಿ ಶಾಸನಗಳಲ್ಲಿ ಸಮನ್ವಯ ಇರಬೇಕೋ ಬೇಡವೋ ಮುಂತಾದವು ನಿಜವಾದ ಸಮಸ್ಯೆಗಳಲ್ಲ. ನಿಮ್ಮ ಗಮನಕ್ಕೆ ರಾವ್ ಸಮಿತಿಯು ೧೯೪೪ರ ಜನವರಿ ೨೦ ರಂದು ರಚಿತವಾಯಿತು ಎಂಬುದನ್ನು ತರಬಯಸುತ್ತೇನೆ; ಅವರು ತಮ್ಮ ಕೆಲಸವನ್ನು ಪ್ರಾರಂಭಿಸಿ, ಒಂದು

---

* C.A. (Leg) D, Vol. VI, pt ii, ೧೪ನೇ ಡಿಸೆಂಬರ್, ೧೯೪೯ ಪುಟ ೫೭೬-೮೫

ಕರಡು ಮಸೂದೆಯನ್ನು ತಯಾರಿಸಿದರು. ಸಾರ್ವಜನಕರಿಗೆ ಮಸೂದೆಯ ಬಗ್ಗೆ ತಿಳಿದುದು ೧೯೪೪ರ ಆಗಸ್ಟ್ ೫ ರಂದು. ಅವರು ಅಲ್ಲಿಂದ ಎರಡು ತಿಂಗಳ ಅವಧಿಯೊಳಗಾಗಿ, ಅಂದರೆ ೧೯೪೪ರ ಅಕ್ಟೋಬರ್ ೫ರ ಒಳಗಾಗಿ ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕಾಗಿತ್ತು. ಮಾನ್ಯರೆ, ಭಾರತ ಸರ್ಕಾರವು ಮೂವತ್ತು ಕೋಟಿ ಜನಸಂಖ್ಯೆಗೆ ಕೇವಲ ೧೦೦೦ ಪ್ರತಿಗಳಲ್ಲಿ ಮಸೂದೆಯನ್ನು ಮುದ್ರಿಸಿತೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅನಂತರ ಜನರ ಒತ್ತಾಯಪೂರ್ವಕ ಬೇಡಿಕೆಯ ಮೇರೆಗೆ ಇನ್ನೂ ೩,೦೦೦ ಪ್ರತಿಗಳನ್ನು ಮುದ್ರಿಸಲಾಯಿತು.

**ಶ್ರೀ ಮಹಾವೀರ ತ್ಯಾಗಿ** (ಉ.ಪ್ರ. ಸಾಮಾನ್ಯ) : ಅವುಗಳನ್ನು ಅಚ್ಚು ಹಾಕಿಸಿದ್ದು ಇಂಗ್ಲಿಷಿನಲ್ಲೊ, ಹಿಂದಿಯಲ್ಲೊ?

**ಶ್ರೀ ಗೋಕುಲ್‌ಭಾಯ್ ದೌಲತ್‌ರಾಮ್ ಭಟ್ :** ಎಲ್ಲ ೪,೦೦೦ ಪ್ರತಿಗಳನ್ನು ಇಂಗ್ಲಿಷಿನಲ್ಲೇ ಮುದ್ರಿಸಲಾಗಿತ್ತು. ಅನಂತರ ಶ್ರೀ ರಾವ್ ಮಸೂದೆಯನ್ನು (ತಂತಮ್ಮ ಮಾತೃಭಾಷೆಗಳಿಗೆ) ಅನುವಾದಿಸಿ ಪ್ರತಿಗಳನ್ನು ಹಂಚಬೇಕೆಂದು ಪ್ರಾಂತೀಯ ಸರ್ಕಾರಗಳನ್ನು ಕೇಳಿದ್ದರು. ಆದರೆ ಇಷ್ಟೆಲ್ಲ ಅನುವಾದಗಳ ನಂತರವೂ ೩೦ ಕೋಟಿ ಜನಸಂಖ್ಯೆಗೆ ೫೦–೬೦ ಸಾವಿರ ಪ್ರತಿಗಳಿಗಿಂತ ಹೆಚ್ಚು ಪ್ರತಿಗಳನ್ನು ಹಂಚಲಿಲ್ಲವೆಂಬುದು ನನ್ನ ಅನಿಸಿಕೆ.

ಇದೊಂದು ಬಹಳ ಮುಖ್ಯವಾದ ಮಸೂದೆ; ಹಿಂದೂ ಸಮಾಜವನ್ನು ಅಖಂಡವಾಗಿಟ್ಟುಕೊಂಡಿರುವ ಉದ್ದೇಶವಿರುವ, ಹೊಸ ಝೀವನ ಶೈಲಿಯನ್ನು ಅನುಷ್ಠಾನಕ್ಕೆ ತರುವ ಉದ್ದೇಶವಿರುವ, ಸುಧಾರಣೆಯನ್ನು ಗುರಿಯಾಗಿಟ್ಟುಕೊಂಡಿರುವ ಇಂಥ ಮುಖ್ಯ ಮಸೂದೆಗೆ ಜನರು ಯಾವ ರೀತಿಯ ಪ್ರತಿಕ್ರಿಯೆಗಳನ್ನು ತೋರಿಸುತ್ತಾರೆಂಬುದನ್ನು ಖಚಿತಪಡಿಸಿಕೊಳ್ಳಲು ಸಮಿತಿಯು ಜನರಲ್ಲಿ ಯಾವ ರೀತಿಯ ಪ್ರಚಾರ ಮಾಡಿತು, ಪ್ರತಿಗಳನ್ನು ಹೇಗೆ ಹಂಚಿತು, ಎಂಬುದರ ಬಗ್ಗೆ ಮಾತಾಡುತ್ತೇನೆ. ಇದಕ್ಕಾಗಿ ಎರಡು ತಿಂಗಳ ಗಡುವನ್ನು ನಿಗದಿ ಮಾಡಲಾಯಿತು, ಇದಾದ ನಂತರ ಸಮಿತಿಯು ದೇಶದ ಪ್ರವಾಸ ಕೈಕೊಂಡಿತು. ಆದರೆ ಆ ಪ್ರವಾಸ ೩೮ ದಿನಗಳು ಮಾತ್ರ ನಡೆಯಿತು. ಸಮಿತಿಯವರು ಎಲ್ಲ ನಗರಗಳಿಗೂ ಹೋಗಲಿಲ್ಲ: ಎಲ್ಲ ಪಟ್ಟಣ ಮತ್ತು ಹಳ್ಳಿಗಳನ್ನೂ ಪೂರ್ತಿಯಾಗಿ ಕೈ ಬಿಟ್ಟರು. ಈ ಪ್ರವಾಸದ ಯಾವುದೇ ಅವಧಿಯಲ್ಲಿ ಅವರು ಜನರ ನಡುವೆ ಪ್ರವೇಶಿಸುವ ತೊಂದರೆಯನ್ನು ತೆಗೆದುಕೊಳ್ಳಲೇ ಇಲ್ಲ; ವಿಧವೆಯರು ಬಂಗಾಳದ ದಾಯಭಾಗ ಪದ್ಧತಿಯ ಪ್ರಕಾರ ಆಸ್ತಿಯ ಪಾಲನ್ನು ಪಡೆದಿದ್ದರೂ, ಅವರು ಯಾವುದೇ ವಿಧವೆಯನ್ನು ಭೇಟಿ ಮಾಡಿ ಅವರ ಕಷ್ಟಕಾರ್ಪಣ್ಯಗಳಿಗೆ ಕಾರಣವೇನೆಂದು ಕೇಳಲಿಲ್ಲ. ಮದ್ರಾಸ್ ರಾಜ್ಯದಲ್ಲಿ ಮಾತೃಪ್ರಧಾನ ಪದ್ಧತಿಯ ಪ್ರಕಾರ ಹೆಣ್ಣು ಮಕ್ಕಳಿಗೆ ಆಸ್ತಿ ಸಿಕ್ಕಿದರೂ, ಅವರೇಕೆ ದುಃಖಿಗಳಾಗಿದ್ದಾರೆಂಬುದನ್ನು ವಿಚಾರಿಸಲು ಸದಸ್ಯರು ಮದ್ರಾಸ್ ರಾಜ್ಯಕ್ಕೆ ಹೋಗಲೇ ಇಲ್ಲ. ಬಂಗಾಳ ಮತ್ತು ಮದ್ರಾಸ್ ರಾಜ್ಯಗಳಲ್ಲಿ ಮಾತ್ರ ವಿಧವೆಯರು ಸಂಕಷ್ಟಕ್ಕೊಳಗಾಗಿದ್ದಾರೋ ಅಥವಾ ಅವರ ಪಾಡು ಎಲ್ಲ ಕಡೆಯೂ ಒಂದೆಯೋ ಎಂಬುದನ್ನಾಗಲಿ, ಹಾಗೇನಾದರೂ ಅದು ಒಂದೇ ತೆರನಾಗಿದ್ದರೆ ಅಂಥ ಕಷ್ಟಕ್ಕೆ ಸಂಭವನೀಯ ಕಾರಣಗಳೇನಿರಬಹುದು ಎಂಬುದನ್ನಾಗಲಿ ಅವರು ತಿಳಿದುಕೊಳ್ಳಲಿಲ್ಲ. ವಿಧವೆಯರಿಗೆ ಆಸ್ತಿಯಲ್ಲಿ ಪಾಲು ಇಲ್ಲದ್ದರಿಂದ ಅವರು ದುಸ್ಥಿತಿಗೊಳಗಾಗಿದ್ದಾರೆ ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ವಸ್ತುಸ್ಥಿತಿ ಹಾಗಿಲ್ಲ. ಅವರಿಗೆ ಆಸ್ತಿಯಲ್ಲಿ ಪಾಲಿಲ್ಲ ಎಂಬ ಒಂದೇ ಕಾರಣಕ್ಕೆ ಅವರು ದುಸ್ಥಿತಿಗೊಳಗಾಗಿಲ್ಲ. ಹಿಂದೆ, ಬಾಲ್ಯದಲ್ಲಿ ವಿಧವೆಯಾದವರು ಪ್ರಾಪಂಚಿಕ ಸುಖ ಪಡೆಯಬಾರದೆಂಬ ತಡೆಯಿತ್ತು; ಅಂಥ ವಿಧವೆಯರಿಗೆ ಎರಡನೆ ಸಾರಿ ಮದುವೆ ಮಾಡಿಕೊಳ್ಳುವ ಅವಕಾಶವನ್ನು ಕೊಡದೆ ಇರುವುದಕ್ಕೆಲ್ಲ ಯಾವುದೇ ಸಮರ್ಥನೆ ಇರಲಿಲ್ಲ. ಈಶ್ವರಚಂದ್ರ

ವಿದ್ಯಾಸಾಗರ್ ಮತ್ತು ಮಲಬಾರಿ ಸಾಹೇಬ್ ಈ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನ ಮಾಡಿ, ಪ್ರಾಯಶಃ ೧೮೫೬ರಲ್ಲಿ (ನನಗೆ ಸ್ಪಷ್ಟವಾಗಿ ಜ್ಞಾಪಕವಿಲ್ಲ) ವಿಧವಾ ಪುನರ್ವಿವಾಹ ಶಾಸನ (Widow Remarriage Act)ವನ್ನು ಜಾರಿಗೆ ಬರುವಂತೆ ಮಾಡಿದರು. ಆ ಶಾಸನ ಇನ್ನೂ ಜಾರಿಯಲ್ಲಿದೆ. ಆದರೆ, ಈ ಶಾಸನದ ಲಾಭವನ್ನು ಎಷ್ಟು ಜನ ಪಡೆದರು, ಯಾವ ರೀತಿಯ ಸುಖ ಸಂಪತ್ತಿಗೆ ಈ ಶಾಸನ ಸಹಾಯಕವಾಗಿದೆ ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಕೇವಲ ಶಾಸನ ಮಾಡುವುದರಿಂದ ಸಮಾಜದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ; ಅಥವಾ ಜನರ ಗಂಟಲಿನೊಳಕ್ಕೆ ಹೊರಗಿನಿಂದ ಏನನ್ನಾದರು ತುರುಕುವುದರಿಂದ ಯಾವ ಗಣನೀಯ ಪರಿಣಾಮವೂ ಉಂಟಾಗುವುದಿಲ್ಲ. ಇಲ್ಲಿ ನಾನು ಪಾರಸಿ ವಿವಾಹ ಮತ್ತು ವಿಚ್ಛೇದನ ಶಾಸನವನ್ನು ಉದಾಹರಣೆಗೆ ತೆಗೆದುಕೊಳ್ಳುತ್ತೇನೆ. ಈ ಶಾಸನವನ್ನು ಮೊದಲು ೧೮೬೫ರಲ್ಲಿ ಜಾರಿಗೆ ತರಲಾಯಿತು. ಈ ಮೂಲ ಶಾಸನವನ್ನು ತಿದ್ದುವ ಸಲುವಾಗಿ ಸರ್ ಕೊವಾಸ್‌ಜಿ ಜೆಹಾಂಗೀರರು ಈ ಸದನದಲ್ಲಿ ೧೯೩೬ರಲ್ಲಿ ಒಂದು ಶಾಸನವನ್ನು ಮಂಡಿಸಿದರು. ಆ ಶಾಸನದ ತಿದ್ದುಪಡಿಯ ಇತಿಹಾಸವನ್ನು ನಾನು ವಿಶದಪಡಿಸಬೇಕಾಗಿದೆ. ನಾವೀಗ ಹೇಗೆ ತಿದ್ದುಪಡಿ ಬಯಸುತ್ತಿದ್ದೇವೆಯೋ ಹಾಗೆ, ಪಾರಸಿ ಸಮಾಜದ ಕೆಲ ಮಿತ್ರರು ತಿದ್ದುಪಡಿಯ ಅಗತ್ಯವನ್ನು ಮನಗಂಡರು. ತಮ್ಮ ಕುಟುಂಬ ಅಪಾಯಕ್ಕೊಳಗಾಗಬಾರದು ಎಂಬ ದೃಷ್ಟಿಯಿಂದ ಕೃಪಲಾನಿಯವರು ಮಸೂದೆಗೆ ಬೆಂಬಲ ನೀಡಲೇಬೇಕಾಗಿದೆ. ಅದೇ ರೀತಿ ನನ್ನ ಕುಟುಂಬವೂ ಅಪಾಯಕ್ಕೊಳಗಾಗಬಾರದೆಂಬ ಆಸೆ ನನಗಿದೆ. ಹಾಗಾದರೆ ಆ ಕಾರಣಕ್ಕಾಗಿ ನಾನೂ ಮಸೂದೆಗೆ ಬೆಂಬಲ ನೀಡಬೇಕೇನು?

**ಶ್ರೀ ಕೃಷ್ಣಚಂದ್ರ ಶರ್ಮ** (ಉ.ಪ್ರ : ಸಾಮಾನ್ಯ) : ಈ ವಿಷಯದಲ್ಲಿ ಎಲ್ಲ ವಯಸ್ಸಾದವರೂ ಒಂದೇ ರೀತಿ ವರ್ತಿಸುತ್ತಾರೆ.

**ಶ್ರೀ ಗೋಕುಲ್‌ಭಾಯ್ ದೌಲತ್‌ರಾಮ್ ಭಟ್ :** ಖಂಡಿತ, ಶರ್ಮಾಜಿಯವರಿಗೆ ಈಗ ಸದ್ಯಕ್ಕೆ ನಾನು ಉತ್ತರ ಕೊಡಬಯಸುವುದಿಲ್ಲ. ಅವರು ತಮ್ಮ ಹೆಂಡತಿ ಹೋದ ಕಡೆಯಲ್ಲೆಲ್ಲಾ ಅವರ ಹಿಂದೆ ಅವರ ಕೋಟನ್ನು ಹೊತ್ತುಕೊಂಡು ಹೋಗಲಿ.

**ಶ್ರೀ ಕೃಷ್ಣಚಂದ್ರ ಶರ್ಮ :** ಆದರೆ ಆಕೆ ಎಂದೂ ಕೋಟು ತೊಡುವುದಿಲ್ಲ.

**ಶ್ರೀ ಗೋಕುಲ್‌ಭಾಯ್ ದೌಲತ್‌ರಾಮ್ ಭಟ್ :** ನಮ್ಮ ಪಾರಸಿ ಸ್ನೇಹಿತರು ೧೮೬೫ರ ಮಸೂದೆಯನ್ನು ತಿದ್ದಬೇಕೆಂದು ತೀರ್ಮಾನಿಸಿಕೊಂಡಾಗ ಅವರು ಯಾವ ಕಾರ್ಯಕ್ರಮ ಕೈಗೊಂಡರು ಎಂಬುದನ್ನು ವಿವರಿಸುವುದಷ್ಟೇ ನನ್ನ ಉದ್ದೇಶವಾಗಿದೆ. ಅವರೇನು ಮಾಡಿದರು? ತಮ್ಮದೇ ಒಂದು ಪಂಚಾಯಿತಿ ಮಾಡಿ ಅವರಲ್ಲಿನ ಕೆಲವರನ್ನು ಸೇರಿಸಿ ಒಂದು ಕಾನೂನು ಸಮಿತಿಯನ್ನು ರಚಿಸಿದರು. ಈ ಸಮಿತಿ ಏನು ಮಾಡಿತು? ಅದು ತಿದ್ದುಪಡಿ ಮಸೂದೆಯನ್ನು ಮಾಡಲಿಲ್ಲ: ಸಾರ್ವಜನಿಕರ ಅಭಿಪ್ರಾಯ ಪಡೆಯಲು ಎರಡು ತಿಂಗಳ ಅವಧಿಯನ್ನೂ ನಿಗದಿಪಡಿಸಿ ಅನಂತರ ಯಾವ ತೀರ್ಮಾನಕ್ಕೂ ಬರಲಿಲ್ಲ. ಅವರ ಬಳಿ ನಾಲ್ಕು ವರ್ಷದಿಂದಲೂ ಒಂದು ಪ್ರಶ್ನಾವಳಿ ಇತ್ತು. ಆ ಪ್ರಶ್ನಾವಳಿಯಲ್ಲಿ ಅನೇಕ ವಿಷಯಗಳ ಜೊತೆಗೆ ಪಾರ್ಸಿಗಳ ಜನಸಂಖ್ಯೆಗೆ ಸಂಬಂಧಿಸಿದ ಪ್ರಶ್ನೆಯೂ ಇತ್ತು. (೧೯೨೧ ರ ಜನಗಣತಿಯಲ್ಲಿ ಅವರ ಜನಸಂಖ್ಯೆ ಒಂದು ಲಕ್ಷ, ಅಥವಾ ಬಹಳ ಹೆಚ್ಚೆಂದರೆ ಒಂದೂವರೆ ಲಕ್ಷವಿದ್ದೀತು). ವರದಿಯೂ ಸಹ ಅವರ ಮುಂದೆ ನಾಲ್ಕು ವರ್ಷದಿಂದ ಇತ್ತು. ಅನಂತರವೇ ಅವರು ಆ ಸಲಹೆಯನ್ನು ಒಪ್ಪಿಕೊಂಡುದುದು. ಆ ವರದಿಯನ್ನು ಪಾರಸಿ ಸಮಾಜದಲ್ಲಿ ಮತ್ತೆ ಪ್ರಚಾರ ಮಾಡಿ ಆ ಬಗ್ಗೆ ಅಭಿಪ್ರಾಯಗಳನ್ನು ಕೇಳಲಾಯಿತು.

ಆ ಅಭಿಪ್ರಾಯಗಳನ್ನು ಕೇವಲ ಮುಂಬಯಿ, ಅಹಮದಾಬಾದ್ ಅಥವಾ ಮದ್ರಾಸಿನ ಜನರಿಂದ ಕೇಳಿರಲಿಲ್ಲ. ಈ ವರದಿಯ ಬಗ್ಗೆ ಪರ್ಷಿಯಾ ಮತ್ತು ಚೀನಾಗಳಲ್ಲಿರುವ ಪಾರಸಿಗಳ–ಅಲ್ಲಿ ಅವರ ಕುಟುಂಬಗಳು ಸ್ವಲ್ಪವೇ ಇದ್ದರೂ ಸಹ–ಸಲಹೆ ಸೂಚನೆಗಳನ್ನೂ ಅವರ ಆಸೆ ಆಕಾಂಕ್ಷೆಗಳನ್ನೂ ತಿಳಿದುಕೊಳ್ಳಲಾಯಿತು. ವಿದ್ಯಾವಂತರೂ ವಕೀಲರೂ ಯಾವುದೇ ವಿಷಯವನ್ನಾದರೂ ವಿಕೃತಗೊಳಿಸಿ ತೋರಿಸುತ್ತಾರೆ. ಹಾಗೂ ಜನರು ಹೇಗೋ ಅದನ್ನು ಒಪ್ಪಿಕೊಂಡು ಬಿಡುತ್ತಾರೆ. ಅವರಿಗೆ ದೈವದತ್ತವಾದ ವಾದಶಕ್ತಿ ಇರುವುದರಿಂದ ಅವರು ಬೇರೆಯವರ ಮೇಲೆ ತಮಗಿಷ್ಟ ಬಂದಂತೆ ಪ್ರಭಾವ ಬೀರಬಲ್ಲವರಾಗಿದ್ದಾರೆ. ಆದರೆ ಆ ವರದಿಯನ್ನು ಅಂಥ ವಾದಶಕ್ತಿ ಇಲ್ಲದವರಿಗೂ ಹಂಚಲಾಗಿತ್ತು. ಎಲ್ಲ ಕೋಮುಗಳಿಂದಲೂ ಅದು ಬಹು ಸಂಖ್ಯಾತರದ್ದಿರಲಿ ಅಲ್ಪಸಂಖ್ಯಾತರದ್ದಿರಲಿ–ಅಭಿಪ್ರಾಯಗಳನ್ನು ಕರೆಯಲಾಗಿದೆ. ಹೀಗೆ ಎಲ್ಲರ ಸಲಹೆ ಸೂಚನೆಗಳನ್ನು ಪಡೆದ ನಂತರವೇ ಆ ಸುಧಾರಿತ ರೂಪದ ಮಸೂದೆಯನ್ನು ೧೯೩೬ರಲ್ಲಿ ಕಳಿಸಲಾಯಿತು. ಅಂದರೆ, ಈ ಮಸೂದೆಯಲ್ಲಿರುವ ಸಮಸ್ಯೆಯು ೧೯೨೩ ರಿಂದ ೧೯೩೬ ರವರೆಗೆ ಜನರ ಗಮನ ಸೆಳೆದಿತ್ತು ಹಾಗೂ ಕೊನೆಗೆ ಅದನ್ನು ಸುಧಾರಿತ ರೂಪದಲ್ಲೇ ಠರಾವು ಮಾಡಲಾಯಿತು.

ಶ್ರೀ ರಾವ್ ಅವರ ಬಗ್ಗೆ ನನಗೆ ಬಹಳ ಗೌರವವಿದೆ. ಅವರು ಬಹಳ ಕಷ್ಟಪಟ್ಟು ದುಡಿದಿದ್ದಾರಲ್ಲದೆ, ಸಂವಿಧಾನದ ರಚನೆಯಲ್ಲಿ ಬಹಳ ಸಹಾಯ ಮಾಡಿದ್ದಾರೆ. ಆದರೆ ತಮ್ಮ ವರದಿಯಲ್ಲೇ ಅವರು ಕೇವಲ ಕೆಲವೇ ಜನರ ಸಲಹೆ ಸೂಚನೆಗಳನ್ನು ಕೇಳಲಾಯಿತು ಎಂಬುದನ್ನೂ ಹಾಗೆ ಮಾಡಿದ್ದರಲ್ಲಿ ಏನೂ ದೋಷವಿಲ್ಲವೆಂದೂ ತಿಳಿಸಿದ್ದಾರೆ. ಈ ಬಗ್ಗೆ ಸಮಾಜದ ಜನರಲ್ಲಿ ಒಂದೇ ಅಭಿಪ್ರಾಯವಿಲ್ಲ ಎಂಬುದನ್ನೂ ಅವರು ಒಪ್ಪಿಕೊಂಡಿದ್ದಾರೆ. ಸೋದರಿ ರೇಣುಕಾ ಅವರು ಈಗ ಇಲ್ಲಿಲ್ಲ. ಆದರೆ ಅವರ ಬಗ್ಗೆಯೂ ನಾನು ಅದನ್ನೇ ಹೇಳುತ್ತೇನೆ. ವಿವಾಹ ಮಸೂದೆಯ ಬಗ್ಗೆ ೧೯೪೩–೪೪ ರಲ್ಲಿ ಅವರು ಮಾತಾಡಿದ್ದರು. ಆ ಸಂದರ್ಭದಲ್ಲಿ ಮಾತಾಡಿದ್ದ ಅವರು, ಒಂದು ವೇಳೆ ಜನರ ಮತಗಳನ್ನು ಪಡೆದು ಎಣಿಸಿದರೆ, ಅತ್ಯುತ್ಸಾಹಿ ತರುಣರೆಲ್ಲಾ ಆ ಮಸೂದೆಗೇ ಬೆಂಬಲ ನೀಡುತ್ತಿದ್ದರೆಂಬುದು ಖಚಿತವಾಗುತ್ತಿತ್ತು, ಎಂದಿದ್ದರು. ಅವರು "ಜೋಷಿಲಾ ಜವಾನರು" ("ಉತ್ಸಾಹಿ ತರುಣರು") ಎಂಬ ಪದವನ್ನು ಬಳಸಿರಲಿಲ್ಲ. ನಾನು ಕೇವಲ ಅವರು ಮೂಲದಲ್ಲಿ ಉಪಯೋಗಿಸಿದ್ದ 'ತರುಣ' ('ಜವಾನ್') ಎಂಬ ಪದವನ್ನಷ್ಟೇ ಸ್ಪಷ್ಟಪಡಿಸುತ್ತಿದ್ದೇನೆ. ಈ ನನ್ನ ಸೋದರಿಗೂ ಸದನದಲ್ಲಿರುವ ಆರು ಅಥವಾ ಎಂಟು ಸದಸ್ಯೆಯರಿಗೂ ನಾನು ಹೇಳಬಯಸುವುದೇನೆಂದರೆ. ಆಚಾರ್ಯ ಕೃಪಲಾನಿಯವರು ಹೇಗೆ ಈ ಮಸೂದೆಯಲ್ಲಿ ಸ್ತ್ರೀ ಸ್ವಾತಂತ್ರ್ಯವನ್ನು ಕಂಡರೋ ಹಾಗೆ ನೀವು ನಿಜವಾಗಿಯೂ ಈ ಮಸೂದೆಯು ಸ್ತ್ರೀಯರ ಹಿತದೃಷ್ಟಿಯಿಂದ ಬಹಳ ಆವಶ್ಯಕವೆಂದು ತಿಳಿದಿದ್ದರೆ, ಅದಕ್ಕೆ ದಯವಿಟ್ಟು ಹಿಂದೂ ಕಾನೂನು ಮಸೂದೆಯೆಂಬ ಹೆಸರು ಕೊಡಬೇಡಿ. ಅದರ ಬದಲು ಅದಕ್ಕೆ ಹಿಂದೂ ಸ್ತ್ರೀಯರ ಸ್ವಾತಂತ್ರ್ಯೋತ್ತರ ನಾಗರಿಕ ಹಕ್ಕು ಮಸೂದೆ ಎಂಬ ಹೆಸರನ್ನೋ ಅಥವಾ ಅಂಥದೇ ಮತ್ತಾವ ಹೆಸರನ್ನೋ ಕೊಡಿ. ಇದಾದ ನಂತರ ನೀವು ಸ್ತ್ರೀಯರಿಗೆ ನಿಮಗೆ ಬೇಕಾದಷ್ಟು ಹಕ್ಕುಗಳನ್ನು ಕೊಡುತ್ತಾ ಹೋಗಬಹುದು. ಹೇಗಿದ್ದರೂ ನಾವು ಸ್ತ್ರೀಯರಿಗೆ ಗೌರವಾದರಗಳನ್ನು ಕೊಡುತ್ತಲೇ ಬಂದಿದ್ದೇವೆ. ನಮ್ಮ ಸ್ತ್ರೀಯರು ಮದುವೆಯಾದ ಮೇಲೆ ಗಂಡನ ಮನೆಯನ್ನೇ ತಮ್ಮ ಮನೆಯೆಂದು ಒಪ್ಪಿಕೊಳ್ಳುತ್ತಾರೆ. ಅಂತೆಯೇ ಸುಚೇತಾ ಸೋದರಿಯವರು ಒಂದು ಮನೆ ಮಾಡಿದ್ದಾರೆ. ಒಮ್ಮೆ ಸ್ತ್ರೀ ಗಂಡನ ಮನೆಗೆ ಹೋದಳೆಂದರೆ, ಆ ಮನೆ ಅವಳದೂ ಆಗುತ್ತದೆ; ಆಮೇಲೆ ತನ್ನ ತಂದೆಯ ಮನೆಯನ್ನೆಂದೂ ತನ್ನದೆಂದು ಹೇಳಿಕೊಳ್ಳುವುದಿಲ್ಲ. ಮದುವೆಯಾದಂದಿನಿಂದ ಅದು ಕೇವಲ ತಂದೆಯ ಮನೆಯಾಗುತ್ತದೆ. ಮದುವೆಯಾಗಿ ಅವಳು ಯಾವ ಮನೆಗೆ ಹೋಗುತ್ತಾಳೋ

ಅದೇ ಅವಳ ಮನೆ. ಇಲ್ಲಿ ನಾನು ಹೆಚ್ಚಿನ ವಿವರಗಳನ್ನು ಹೇಳಬೇಕಾಗಿಲ್ಲ. ಆದರೆ ನಮ್ಮ ಸೋದರಿಯರು ಈ ಮಸೂದೆಯು ಕೇವಲ ತಮ್ಮದೆಂದು ಕೇವಲ ತಮಗಾಗಿ ಎಂದೂ ತಿಳಿದರೆ ಅದು ತಪ್ಪು. ಅದರಲ್ಲಿ ಸ್ತ್ರೀಯರಿಗಿರುವಷ್ಟೇ ಹಕ್ಕು ಪುರುಷರಿಗೂ ಇದೆ. ಈ ಕಾರಣಕ್ಕಾಗಿ ನಾನು ಅವರಲ್ಲಿ ತಾರತಮ್ಯ ಮಾಡಲು ಇಚ್ಛಿಸುವುದಿಲ್ಲ. ಆದುದರಿಂದ ಯಾವ ಗಂಡಸೇ ಆಗಲಿ ಯಾವ ಹೆಂಗಸೇ ಆಗಲಿ ಈ ಮಸೂದೆ ಸಮಾಜದ ಯಾವುದೋ ಒಂದು ವಿಶಿಷ್ಟ ಭಾಗಕ್ಕೆ ಸಂಬಂಧಿಸಿದ್ದು ಎಂದು ತಿಳಿಯಬಾರದು. ನಾನು ಬಹಳ ಸಮಯ ತೆಗೆದುಕೊಂಡಿದ್ದರೆ ದಯವಿಟ್ಟು ಕ್ಷಮಿಸಬೇಕು.

ಒಂದು ವೇಳೆ ಮಸೂದೆಯ ವಿಷಯದಲ್ಲಿ ಜನಾಭಿಪ್ರಾಯ ಪಡೆದರೆ, ಉತ್ಸಾಹಿ ಯುವಕರೆಲ್ಲರೂ ಅದಕ್ಕೆ ಬೆಂಬಲ ನೀಡುತ್ತಾರೆಂದು ಸೋದರಿ ರೇಣುಕಾ ಹೇಗೆ ವಾದಿಸುತ್ತಿದ್ದರೆಂಬುದನ್ನು ಕುರಿತು ನಾನು ಮಾತಾಡುತ್ತಿದ್ದೆ. ಶ್ರೀ ರಾವ್ ಅವರು ೧೯೪೭ರಲ್ಲಿ ಸಲ್ಲಿಸಿದ ವರದಿಯಲ್ಲಿ 'ಕೆಲವರು ಎಡಕ್ಕೂ ಕೆಲವರೂ ಬಲಕ್ಕೂ ಮತನೀಡಿ ತೀವ್ರ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಮೆದುಳುಳ್ಳ ಹಾಗೂ ಅಂತಸ್ತುಳ್ಳವರೆಲ್ಲರೂ ಮಸೂದೆಯ ಪರವಾಗಿದ್ದರೆ, ಅದನ್ನು ವಿರೋಧಿಸಿದವರೆಲ್ಲ ಮೂರ್ಖರು, ಮೆದುಳಿಲ್ಲದವರು, ಸಾಮಾಜಿಕ ಝೀವನದಲ್ಲಿ ಅಂತಸ್ತಿಲ್ಲದವರು, ಸಮಾಜವನ್ನು ಅದರ ಸಂಕೀರ್ಣತೆಯನ್ನೂ ಅರ್ಥಮಾಡಿಕೊಳ್ಳಲಾಗದವರು ಆಗಿದ್ದರು' ಎಂದಿದ್ದಾರೆ. ಹಾಗಾದರೆ, ಸವಾಜವನ್ನು ಅದರ ಸಂಕೀರ್ಣತೆಯುನ್ನೂ ಅರ್ಥಮಾಡಿಕೊಳ್ಳಬಲ್ಲವರಾರು ಎಂಬುದನ್ನು ನಾನು ಕೇಳಿ ತಿಳಿದುಕೊಳ್ಳಬಹುದೆ? ಶ್ರೀ ರಾವ್ ಅವರು ಅರ್ಥ ಮಾಡಿಕೊಂಡಿದ್ದಾರೆಯೆ? ದ್ವಾರಕನಾಥ್ ಮಿಟ್ಟರ್ ಅವರಿಗೆ ಅರ್ಥವಾಗಿಲ್ಲವೆ? ಆ ಜನರ ವಿಚಾರವಾಗಿ ನಾನೇನೂ ಹೇಳಲಾರೆ. ಆದರೆ ಈ ಕ್ಷೇತ್ರದಲ್ಲಿ ಮಾಳವೀಯರಿಗಿಂತ ಹೆಚ್ಚಿನ ಕೆಲಸ ಮಾಡಿದ್ದೇವೆಂದು ಯಾರೂ ಹೇಳಿಕೊಳ್ಳಲಾರರು; ನಿನ್ನೆ ತಾನೇ ಅವರ ಜನ್ಮದಿನವನ್ನು ಆಚರಿಸಿದ್ದೇವೆ ಹಾಗೂ ಅವರು ಅನುಪಮ ಸುಸಂಸ್ಕೃತ ಮನುಷ್ಯರೆಂದು ಒಪ್ಪಿಕೊಂಡಿದ್ದೇವೆ. ಅವರು ಸಂಪ್ರದಾಯಸ್ಥರಾದರೂ ಸಮಾಜ ಸುಧಾರಣೆ ಮತ್ತು ಜನರ ಹಕ್ಕು ಪ್ರತಿಪಾದನೆಗಳ ವಿಷಯದಲ್ಲಿ ಮಾತ್ರ ಅವರು ಎಲ್ಲರಿಗಿಂತ ಮುಂದಿರುತ್ತಿದ್ದರು. ಆದರೆ ಅದೇ ಪೂಜ್ಯ ಮಾಳವೀಯರಿಗೆ ಹಿಂದೂ ಕಾನೂನು ಮಸೂದೆಯನ್ನು ಮಂಡಿಸಿದ ರೀತಿ ಮಾತ್ರ ಸೂಕ್ತವೆನಿಸಿರಲಿಲ್ಲ. ನಾವು ಅವರನ್ನು ಗಣನೆಗೆ ತೆಗೆದುಕೊಳ್ಳದಿರಬಹುದು. ನಿಮಗೆ ಸರ್ ತೇಜ್ ಬಹದ್ದೂರ್ ಸಪ್ರು ಚೆನ್ನಾಗಿ ಗೊತ್ತು. ಅವರೂ ಸಹ ಬುದ್ಧಿವಂತಿಕೆ ಮತ್ತು ವಿವೇಕದಲ್ಲಿ ಅದ್ವಿತೀಯರು. ಅವರೂ ಸಹ ತಾವು ಮಸೂದೆಯನ್ನು ಬೆಂಬಲಿಸುವುದಾಗಿ ಹೇಳುತ್ತಿದ್ದರು. ಆದರೆ, ಈ ರೀತಿಯ ಮಸೂದೆಯನ್ನು ರೂಪಿಸುವುದಕ್ಕೆ ಇದು ಸೂಕ್ತ ಸಮಯವಲ್ಲ ಎಂಬುದನ್ನು ಅವರೂ ಒಪ್ಪಿಕೊಂಡಿದ್ದರು. ನಾನು ಇನ್ನೂ ಮುಂದೆ ಹೋಗಿ ಸರ್ ಚಿಮಣ್‌ಲಾಲ್ ಸೆಟಲ್‌ವಾಡ್ ಅವರ ವಿಷಯ ಹೇಳುತ್ತೇನೆ. ಸೆಟಲ್‌ವಾಡರು ಯಾರಿಗಿಂತಲೂ ಕಡಿಮೆ ರೀತಿಯ ಝೀವನ ನಡೆಸಿದವರಲ್ಲ ಹಾಗೂ ಸಮಾಜ ಸುಧಾರಣೆ ವಿಷಯದಲ್ಲಿ ಅವರು ಮುಂದಾಳತ್ವ ವಹಿಸಿದ್ದರು. ಸಿದ್ಧಾಂತದ ಆಧಾರದ ಮೇಲೆ ಅವರು ಎಂದೂ ಕಾನೂನು ರಚಿಸುವುದನ್ನು ಒಪ್ಪಿಕೊಂಡಿರಲಿಲ್ಲ; ಆದರೆ ಅವರು ವಿಧವೆಯರಿಗೂ ಹೆಣ್ಣುಮಕ್ಕಳಿಗೂ ಯಾವ ನಿಬಂಧನೆಯಿಲ್ಲದಿದ್ದರೂ ಪಾಲು ಕೊಡಬೇಕೆಂಬುದರ ಪರವಾಗಿದ್ದರು. ಆದುದರಿಂದ, ನಿಮ್ಮಂತೆ ಮಾತಾಡುವವರೆಲ್ಲರೂ ಬುದ್ಧಿವಂತರೆಂದು ಹೊಗಳುವುದಾಗಲಿ, ನಿಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳದವರನ್ನು ಮೂರ್ಖರೆಂದು ತೆಗಳುವುದಾಗಲಿ ಖಂಡಿತ ಸರಿಯಲ್ಲ. ಆದುದರಿಂದ, ಸೋದರ–ಸೋದರಿಯರೆ ಹಾಗೂ ಮಾನ್ಯ ಉಪಸಭಾಪತಿಗಳೇ, ನಿಮ್ಮೆಲ್ಲರ ಮೂಲಕ ಮಸೂದೆಯನ್ನು ಈ ರೀತಿಯಾಗಿ ಪರಾಮರ್ಶಿಸಬಾರದೆಂದು ಸದನವನ್ನು ಕೇಳಿಕೊಳ್ಳುತ್ತೇನೆ. ಅಲ್ಲದೆ, ನಮ್ಮ ಸನ್ಮಾನ್ಯ ನೇತಾರರೂ, ಪ್ರಧಾನ ಮಂತ್ರಿಗಳೂ

ಹೇಳಬಯಸುವುದೇನೆಂದರೆ: ಹಿಂದೂ ಸಮಾಜಕ್ಕೆ ಸಮಾನವಾಗಿ ಅನ್ವಯಿಸಲಾಗುವ ನಿಯಮಾವಳಿಗಳನ್ನು ರೂಪಿಸುವಲ್ಲಿ ಮತ್ತು ಕಾನೂನಿನ ವಿವಿಧ ನಿಬಂಧನೆಗಳನ್ನು ಒಟ್ಟುಗೂಡಿಸಿ ಅವುಗಳಲ್ಲಿ ಒಂದು ವ್ಯವಸ್ಥೆಯನ್ನು ಅಥವಾ ಕ್ರೋಡೀಕರಣವನ್ನು ಉಂಟು ಮಾಡಬೇಕೆಂಬ ಅವರ ಪ್ರಯತ್ನದಲ್ಲಿ ನಾನು ಅವರ ಜೊತೆಯಲ್ಲಿರಬೇಕಾಗಿತ್ತು–ವಾಸ್ತವವಾಗಿ, ನಾನು ಅವರ ಜೊತೆಯಲ್ಲೇ ಇದ್ದೇನೆ. ಆದರೆ ಸಾರ್ವಜನಿಕರಿಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಲು ಅವಕಾಶ ಕೊಡಲಾಗಿದೆಯೆ? ಎಂದು ನಾನು ಕೇಳುತ್ತೇನೆ. ಪಾರಸಿ ಎಂಬ ಸಣ್ಣ ಕೋಮಿನ ವಿಷಯವನ್ನೇ ತೆಗೆದುಕೊಳ್ಳಿ. ಅವರು ತಮ್ಮ ಕೋಮಿನ ಪ್ರತಿಯೊಂದು ಭಾಗವನ್ನೂ ತಮ್ಮೊಂದಿಗೇ ಇರುವಂತೆ ಮಾಡಿಕೊಂಡರು. ಪ್ರತಿಯೊಬ್ಬ ವ್ಯಕ್ತಿಯ ಅಭಿಪ್ರಾಯವನ್ನು ಪ್ರತ್ಯೇಕವಾಗಿ ಪಡೆದರು; ಅನಂತರವೇ ಮಸೂದೆಯನ್ನು ಮಂಡಿಸಿದರು. ಈ ರೀತಿಯಾಗಿಯೇ ಅವರು ಯಶಸ್ಸು ಪಡೆದರು; ಅಲ್ಲದಿದ್ದರೆ ಅವರು ತಮ್ಮ ಉದ್ದೇಶವನ್ನು ಕೈಗೂಡಿಸಿಕೊಳ್ಳುತ್ತಿರಲಿಲ್ಲ. ಈಗ ಹೇಗೋ ಹಾಗೆ ೧೯೨೧ ರಲ್ಲೂ ನಾಗರಿಕ ವಿವಾಹ ಶಾಸನದ ತಿದ್ದುಪಡಿಯನ್ನು ಮಂಡಿಸಲಾಗಿತ್ತು. ಹಿಂದೂ ನಿಯಮಾವಳಿಗಳನ್ನೇಕೆ ರೂಪಿಸುತ್ತಿದ್ದೀರಿ? ಭಾರತೀಯ ನಿಯಮಾವಳಿಗಳನ್ನೇಕೆ ರೂಪಿಸುತ್ತಿಲ್ಲ? ನಾವೆಲ್ಲ ವಾಸ ಮಾಡುತ್ತಿರುವುದು ಒಂದೇ ದೇಶದಲ್ಲಿ, ಭಾರತದಲ್ಲಿ. ನಮಗೆಲ್ಲರಿಗೂ ಒಂದೇ ರೀತಿಯ ರೂಢಿಗಳು, ಪದ್ಧತಿಗಳು ಇರಬೇಕು, ನಮ್ಮೆಲ್ಲರಿಗೂ ಒಂದೇ ಭಾಷೆಯಿರಬೇಕು ಎಂದು ತೀರ್ಮಾನಿಸಿದ ಮೇಲೆ, ಭಾರತೀಯರೆಲ್ಲರಿಗೂ ಒಂದೇ ನಿಯಾಮಾವಳಿ ಇರಬೇಕು; ಹೀಗಿದ್ದರೆ ಮಾತ್ರ ಐಕಮತ್ಯವಿರುತ್ತದೆ, ಆಗ ಮಾತ್ರ ಏಕೀಕೃತ ಭಾರತವಿರುತ್ತದೆ. ಆ ಸಮಯದ ಬಗ್ಗೆ ನಾನು ನಿಮಗೆ ಹೇಳಬಯಸುತ್ತೇನೆ. ಈ ಮಸೂದೆಯ ವಿರುದ್ಧ ಕ್ರಿಶ್ಚಿಯನ್ನರೂ ಮುಸ್ಲಿಮರೂ ಎಂಥ ಕೂಗೆಬ್ಬಿಸಿದರೆಂದರೆ ಡಾ॥ ಗೌರ್ ಅವರು ಕೊನೆಗೆ "ಅದು ಭಾರತದ ಎಲ್ಲ ಕಡೆ ಮಹಮ್ಮದೀಯ ಮತ್ತು ಪಾರಸಿ ಕೋಮುಗಳಿಂದ ಪ್ರಕ್ಷುಬ್ಧ ಸ್ಥಿತಿಯನ್ನುಂಟುಮಾಡುವಂಥ ವಿರೋಧವನ್ನು ಎದುರಿಸಬೇಕಾಯಿತು. ನನಗೆ ಬೇರೇನೂ ತೋಚದೆ, ಕೊನೆಗೆ ಆ ಮಸೂದೆಯನ್ನು ಹಿಂತೆಗೆದುಕೊಂಡು, ೧೯೨೩ರಲ್ಲಿ ಹೊಸ ಮಸೂದೆಯನ್ನು ಮಂಡಿಸಿದೆ" ಎನ್ನಬೇಕಾಯಿತು.

ಅವರು ಆ ದಾರಿಯನ್ನೇ ಹಿಡಿದರು. ಹಿಂದೂ ಸಮಾಜಕ್ಕೇನೂ ಗೌರವವೇ ಇಲ್ಲವೆಂಬಂತೆ ಕಾಣಲಾಯಿತು. ಅಷ್ಟೊಂದು ಜನಸಂಖ್ಯೆಯಿರುವ ಕೋಮಿಗೆ ಯಾವ ದಾಕ್ಷಿಣ್ಯವನ್ನೂ ತೋರಿಸಿಲ್ಲ. ಪಟ್ಟಾಭಿ ಸಾಹೇಬರ, ಸರ್ ಅಲ್ಲಾಡಿ ಮತ್ತು ಲಕ್ಷ್ಮಿಕಾಂತ ಮೈತ್ರಾರ ಮಾತಿರಲಿ, ಮಾಳವೀಯರ ಹಿತನುಡಿಗೂ ಮರ್ಯಾದೆ ತೋರಿಸಿಲ್ಲ. ಅವರೇನು ಹೇಳುತ್ತಾರೆಂಬುದು ಗಣನೀಯವೇ ಅಲ್ಲ. ಬೇರೆಯವರ ಮಾತಿರಲಿ, ಅಜಾತ ಶತ್ರು ಎಂಬ ಹೆಸರು ಪಡೆದಿರುವ ರಾಜೇಂದ್ರ ಬಾಬುರವರ ಸಂಗತಿಯನ್ನೇ ತೆಗೆದುಕೊಳ್ಳಿ, ಅವರು ವಿವೇಕ ಮತ್ತು ಬುದ್ಧಿವಂತಿಕೆಯ ಒಂದು ಝೀವಂತ ಭಂಡಾರ, ಈ ದೇಶದ ಒಂದು ರತ್ನ. ಅವರು ಗಾಂಧೀಜಿಯ ವಿಚಾರಗಳನ್ನು ಆಚರಣೆಗೆ ತಂದವರು; ಅವರು ಆ ವಿಚಾರಗಳನ್ನು ನಮ್ಮ ದೇಶವೊಂದಕ್ಕೆ ಅಲ್ಲ, ಜಗತ್ತಿನ ಇತರ ದೇಶಗಳಿಗೂ ತಿಳಿಸಿಕೊಡಬಲ್ಲರು. ಅವರೂ 'ಇದು ಸರಿಯಾದ ಸಮಯವಲ್ಲ" ಎಂದರು. ಅದರಲ್ಲಿ ಅನೇಕ ವಿವಾದಾಸ್ಪದ ವಿಚಾರಗಳಿವೆ. ಅವುಗಳನ್ನು ಬೇರ್ಪಡಿಸಿ, ಹಾಗೂ ಅವುಗಳನ್ನು ಮುಚ್ಚಬೇಡಿ. ಅದರೇನು ಮಾಡುವುದು? "ಇಲ್ಲ, ಇದನ್ನು ತ್ವರಿತಗೊಳಿಸಬೇಕು" ಎಂದರು, ನಮ್ಮ ನೇತಾರರು. ತ್ವರಿತಗೊಳಿಸಲಿ, ಆದರೆ ಕೊನೆ ಪಕ್ಷ ಎಲ್ಲ ಜನರ ಅಭಿಪ್ರಾಯಗಳನ್ನೂ ಒಪ್ಪಿಗೆಯನ್ನೂ ಪಡೆಯಬೇಕು. ಡಾ॥ ಅಂಬೇಡ್ಕರ್ ಒಂದು ಲಾಭವನ್ನಂತೂ ವಿಶೇಷವಾಗಿ ಕಂಡಿದ್ದರು. ಅದಾವ ಲಾಭ ಎಂಬುದನ್ನು ಹೇಳುತ್ತೇನೆ. ೧೯೪೮ರಲ್ಲಿ ಈ ಮಸೂದೆಯನ್ನು ಮಂಡಿಸಿದಾಗ ನಾವೆಲ್ಲಾ ಕುಳಿತುಕೊಂಡು, ಸದ್ಯಕ್ಕೆ ಅದರ ಮೇಲೆ ಯಾರೂ ಭಾಷಣ ಮಾಡಬಾರದೆಂದು ತೀರ್ಮಾನಿಸಿದೆವು. ಡಾ॥ ಅಂಬೇಡ್ಕರರಾಗಲಿ

ಇತರರಾಗಲಿ ವಿಶೇಷವಾದದ್ದೇನನ್ನೂ ಹೇಳಲಿಲ್ಲ. ಆ ವೇಳೆಯಲ್ಲಿ, ಆ ಮಸೂದೆಯನ್ನು ಮಂಡಿಸಿದರೆ ಅದು ನಮ್ಮ ಸೋದರಿಯರಿಗೂ, ಸುಧಾರಕರಿಗೂ, ಏಕೀಕರಣ ಮತ್ತು ಕ್ರೋಡೀಕರಣವನ್ನು ಬಯಸಿದವರಿಗೂ, ವಿಚಾರಶೀಲರಿಗೂ ತೃಪ್ತಿಯನ್ನುಂಟುಮಾಡೀತೆಂದು ಭಾವಿಸಲಾಗಿತ್ತು. ಅವರು ತೃಪ್ತಿಪಡಲಿ ಎಂದು ಎಲ್ಲರೂ ಒಪ್ಪಿದರು. ಆದರೆ, ಇದರ ಸದುಪಯೋಗ ಪಡೆದ ಡಾ॥ ಅಂಬೇಡ್ಕರ್ಕರು ಇದು ಎಲ್ಲರಿಗೂ ಒಪ್ಪಿಗೆಯಾಗಿದೆ ಹಾಗೂ ಸಮಂಜಸವಾಗಿದೆ ಎಂದು ಭಾವಿಸಿದರು. ಮಾನ್ಯರೆ, ನಾವು ಅವರ ಕೆಲವು ಉಪ ನಿಬಂಧನೆಗಳನ್ನೂ, ಕೆಲವು ನಿಯಮಗಳನ್ನೂ ಸರಿಯಾಗಿ ಅಭ್ಯಸಿಸಿರಲಿಲ್ಲ. ಆದರೆ ನಮ್ಮ ಮುಖಂಡರು 'ಅದು ಸ್ವಲ್ಪ ಮುಂದೆ ಸಾಗಲಿ' ಎಂದಾಗ, ನಾವೂ 'ಆಗಲಿ, ಮುಂದಕ್ಕೆ ಸಾಗಿಸಿರಿ; ಅದನ್ನು ಸಂತೆಗೂ ತನ್ನಿರಿ' ಎಂದೆವು. ಹೀಗೆ ಅದು ಸಂತೆಗೆ ಬಂದಿದೆ, ಅದನ್ನು ಮೆರವಣಿಗೆಯಲ್ಲಿ ಪ್ರದರ್ಶಿಸಲಾಗುತ್ತಿದೆ. ಅದನ್ನು ನಾವು ನೋಡುತ್ತಿದ್ದೇವೆ. ಇಲ್ಲಿ ಒಂದು ವಿಚಾರವನ್ನು ಹೇಳಬಯಸುತ್ತೇನೆ: ಸೆಲೆಕ್ಟ್ ಸಮಿತಿಗೆ ಮಸೂದೆಯನ್ನು ಕಳಿಸುವ ಮೊದಲೇ ಈ ಎಲ್ಲ ನಮ್ಮ ಚರ್ಚೆ ನಡೆದಿದ್ದರೆ, ಡಾ॥ ಅಂಬೇಡ್ಕರ್ ಅವರಿಗೂ ಸೆಲೆಕ್ಟ್ ಸಮಿತಿಯ ನಮ್ಮ ಗೆಳೆಯರಿಗೂ ಸಾಕಷ್ಟು ಉಪಯೋಗವಾಗುತ್ತಿತ್ತು. ಆಗ ಅವರಿಗೆ ಅದರಲ್ಲಿರುವ ಅನೇಕ ವಿಷಯಗಳಿಗೆ ಯಾವ ರೂಪ ಕೊಡಬೇಕೆಂಬುದು ಗೊತ್ತಾಗುತ್ತಿತ್ತೇನೊ. ಈಗ ನಾವು ಒಂದು ರೀತಿಯ ಒಗಟನ್ನು ಎದುರಿಸುತ್ತಿದ್ದೇವೆ. ಈ ಸಮಸ್ಯೆಗೆ ಕಾರಣ ಹೀಗಿದೆ: ನಾವು ಮತ್ತೆ ಇದನ್ನು ಸೆಲೆಕ್ಟ್ ಸಮಿತಿಗೆ ಕಳಿಸಬೇಕೆಂದು ಹೇಳಿದರೆ, ಮತ್ತೆ ನಾವು ಯಾವ ನಿಯಮ–ನಿಬಂಧನೆಗಳ ತೊಡಕಿಗೆ ಸಿಕ್ಕಿ ಹಾಕಿಕೊಳ್ಳುತ್ತೇವೆಯೋ ಗೊತ್ತಿಲ್ಲ. ಅದರ ಬದಲು, ಒಂದು ವೇಳೆ, ಸದ್ಯಕ್ಕೆ ಅದನ್ನು ತಡೆ ಹಿಡಯಬೇಕೆಂದು ಹೇಳಿದರೆ, ನಮ್ಮ ತಲೆಯ ಮೇಲೆ ಮತ್ತೊಂದು ಕತ್ತಿ ತೂಗಾಡುತ್ತಿರುತ್ತದೆ. ಈಗ ನಾವೇನು ಮಾಡಬೇಕು? ಹೀಗೆ ನಾವು ಒಂದು ಕಗ್ಗಂಟಿನಲ್ಲಿ ಸಿಕ್ಕಿ ಹಾಕಿಕೊಂಡಿದ್ದೇವೆ; ಅದರಿಂದ ನಮ್ಮನ್ನು ಬಿಡಿಸುವುದು ನಮ್ಮ ಮುಖಂಡರಿಗೂ ಪರಮಾತ್ಮನಿಗೂ ಬಿಟ್ಟಿದೆ.

ನಾನು ಹೇಳುತ್ತಿದ್ದುದೇನೆಂದರೆ, ಈ ಕಾಯಿದೆಯನ್ನು ಈ ಪರಿಸ್ಥಿತಿಯಲ್ಲಿ ಮಂಡಿಸಲು ನಮ್ಮನ್ನು ಕರೆಸಲಿಲ್ಲ, ಏಕೆಂದರೆ, ಹಿಂದೂ ಸಮಾಜದ ಅಭಿಪ್ರಾಯಗಳನ್ನು ನಾವಿನ್ನೂ ಪಡೆದಿಲ್ಲ. ಆಗ ಸಂಪರ್ಕಿಸಿದ ಹಿಂದೂ ಸಮಾಜವೆಂದರೆ ಪಟ್ಟಣಗಳದ್ದಷ್ಟೆ. ಅಲ್ಲದೆ, ಎಷ್ಟು ಜನರನ್ನು ಸಂಪರ್ಕಿಸಲಾಯಿತು? ಕೇವಲ ೧೨೧ ವ್ಯಕ್ತಿಗಳು ಮತ್ತು ೧೦೨ ಸಂಸ್ಥೆಗಳು ಲಿಖಿತ ಹೇಳಿಕೆಗಳನ್ನು ಅಥವಾ ಸಾಕ್ಷ್ಯಗಳನ್ನು ನೀಡಿದ್ದಾರೆ. ಈಗ, ನಾವು ಇದೇ ಹಿಂದೂ ಸಮಾಜದ ಅಭಿಪ್ರಾಯ ಎನ್ನೋಣವೇ? ಒಂದು ವೇಳೆ ಶ್ರೀ ಮಿಟ್ಟರ್ ವ್ಯಕ್ತಪಡಿಸಿದ ಅಭಿಪ್ರಾಯವನ್ನು ಅದರಲ್ಲೂ, ಆ ಕಾಯಿದೆಯ ವಿವಿಧ ಭಾಗಗಳ ಬಗ್ಗೆ ಪ್ರತ್ಯೇಕವಾಗಿ– ತಿಳಿಯಲಿಚ್ಛಿಸಿದರೆ, ಅದನ್ನು ತಿಳಿಸಲು ನಾನು ಸಿದ್ಧನಿದ್ದೇನೆ– ಮದ್ರಾಸ್ ಒಂದನ್ನು ಬಿಟ್ಟು ಎಲ್ಲ ಕಡೆಯಿಂದಲೂ ಅದಕ್ಕೆ ವಿರೋಧ ಬಂದಿದೆ. ದಾಯಭಾಗ ಪದ್ಧತಿಯಿರುವ ಬಂಗಾಳದಿಂದ ಅದಕ್ಕೆ ವಿರೋಧ ಬಂದಿದೆ. ಮುಂಬಯಿ ಕಡೆಯಿಂದ ವಿರೋಧ ಬಂದಿದೆ. ಈ ವೈಮನಸ್ಯದಿಂದಾಗಿಯೂ ಇತರ ಕಾರಣಗಳಿಂದಾಗಿಯೂ ಅದು ವಿರೋಧವನ್ನು ಎದುರಿಸುತ್ತಿದೆ. ಇಷ್ಟೆಲ್ಲ ವಿರೋಧವಿದ್ದರೂ ನಾವು 'ಬೇಡ' ಎಂದರೆ, ಆಗ ಅಲ್ಪ ಸಂಖ್ಯಾತರು ಹೇಳಿದ್ದೇ ಸತ್ಯವೆಂದಾಗುತ್ತದೆ. ಆಗ ನಾವು ಅದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಅದು ಸ್ವಲ್ಪ ಕಷ್ಟ. ಹಿಂದೂ ಸಮಾಜ ಒಂದಾಗಿರಬೇಕು. ಅದನ್ನು ಒಂದು ವ್ಯವಸ್ಥೆಯ ಮೂಲಕ ಸಾಧಿಸಬಹುದು. ಸ್ತ್ರೀಯರಿಗೆ, ನಮ್ಮ ಸೋದರಿಯರಿಗೆ, ಪಾಲು ಕೊಡಬಾರದೆಂದು ಹೇಗೆ ಹೇಳಲು ಸಾಧ್ಯ? ನಮ್ಮ ಸೋದರಿಯರು ಪಾಲು ಪಡೆದ ಮೇಲೂ ತವರು ಮನೆಯನ್ನು ಅವರು ಪ್ರೀತಿಸುತ್ತಾರೋ ಇಲ್ಲವೋ ಎಂಬುದನ್ನು ಅವರೇ ಹೇಳಲಿ. ತವರುಮನೆಯ ಕಡೆಗೆ ಅವರ ಒಲವು ಇನ್ನೂ ಎಷ್ಟು ಉಳಿದಿರುತ್ತದೆ?

ಯಾರಾದರೂ ಒಬ್ಬ ಇಂದಿನ ಸುಧಾರಿತ ಸ್ತ್ರೀಯನ್ನು ಸ್ವಲ್ಪ ಕೇಳಿ, 'ನಿಮ್ಮ ತಂದೆ ಎಲ್ಲಿದ್ದಾರೆ, ನಿಮ್ಮ ಸೋದರ ಎಲ್ಲಿದ್ದಾನೆ?' ಎಂದು. ಅವರು ತಮ್ಮ ಕುಟೀರಕ್ಕೋ ಮನೆಗೋ ಬಂಗಲೆಗೋ ಅಂಟಿಕೊಂಡಿರುತ್ತಾರೆ. ತಮ್ಮ ಬಂಧುಗಳನ್ನು ನೋಡಿದಾಗ ಅವರ ಕುಶಲ ಪ್ರಶ್ನೆ ಸಹ ಮಾಡುವುದಿಲ್ಲ. ಹೀಗಿದ್ದಾರೆ, ನಮ್ಮ ಆಧುನಿಕ ಸುಧಾರಿತ ಜನ. ಆದುದರಿಂದ, ಪಾಲಿನ ವಿಚಾರ ಬಂದಾಗ, ನಮ್ಮ ಪಾಡೇನಾಗುತ್ತದೆ ಎಂಬುದು ಸಮಸ್ಯೆ. ಇಷ್ಟೆಲ್ಲ ಆಕ್ಷೇಪಗಳಿದ್ದಾಗ, ನಾವು ಅಲ್ಪಸಂಖ್ಯಾತರ ಸಮಸ್ಯೆಯನ್ನೂ ಎದುರಿಸುತ್ತಿದ್ದೇವೆ. ನಮಗೆ ಪ್ರತಿಯೊಬ್ಬರ ಅಭಿಪ್ರಾಯ ಸಿಕ್ಕಿಲ್ಲದಿದ್ದರೂ, ಈ ಒತ್ತಡಕ್ಕೆ ನಾವು ಸಿಕ್ಕಿಕೊಂಡಿದ್ದೇವೆ. ನಾವು ಇದನ್ನು ಬಲಾತ್ಕಾರವಾಗಿ ಒಪ್ಪಿಕೊಳ್ಳಲೇಬೇಕಾಗಿದೆ. ಆದರೆ ಇದು ಮುಂದೆ ಯಾವ ಗೊಂದಲವನ್ನುಂಟುಮಾಡುತ್ತದೆ ಎಂಬುದನ್ನು ಮುಂಗಾಣಲು ನಾವು ಸೋತಿದ್ದೇವೆ.

ಆದುದರಿಂದ ಒಂದು ಮಧ್ಯಮ ಮಾರ್ಗವನ್ನು ಹುಡುಕಿರಿ ಎಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಕೇವಲ ಮಧ್ಯಮ ಮಾರ್ಗವೊಂದೇ ನಮಗೆ, ನಮ್ಮ ಸಮಾಜಕ್ಕೆ ತೃಪ್ತಿ ನೀಡಬಲ್ಲದು. ಹಾಗೂ ದೇಶದಲ್ಲಿನ ಗಲಭೆಯನ್ನು ಕಡಿಮೆ ಮಾಡಬಲ್ಲುದು. ಪಾಟಸ್ಕರ್ ಅವರು ಹೇಳಿದಂತೆ, ನಾವು ಈಗಾಗಲೇ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಇಂಥ ಪರಿಸ್ಥಿತಿಯಲ್ಲಿ ಮತ್ತೊಂದು ದೊಡ್ಡ ಸಮಸ್ಯೆಯನ್ನ ಏಕೆ ಸೃಷ್ಟಿಸಬೇಕು? ದಾರಿಯಲ್ಲಿ ಮತ್ತೊಂದು ಮುಳ್ಳು ಗಿಡವನ್ನು ಬೆಳೆಸಿ, ಆಮೇಲೆ ಅದನ್ನು ಕೀಳುವ ಪ್ರಯತ್ನ ಏಕೆ ಮಾಡಬೇಕು? ಹಾಗೇಕೆ ಮಾಡಬೇಕು ನಾವು? ದಯವಿಟ್ಟು ಇದರ ಬದಲು ಮತ್ತಾವ ಕೆಲಸದಲ್ಲಾದರೂ ನಿರತರಾಗಿ; ಇದನ್ನು ಒಂದು ಅಥವಾ ಎರಡು ವರ್ಷದವರೆಗೆ ಮುಂದೂಡಿ. ದೇವತೆಯರಿಗೆ ಸಮಾನರಾದ ನನ್ನ ಸೋದರಿಯರಿಗೆ–ಅದರಲ್ಲೂ ಈ ಮಸೂದೆಯನ್ನು ಸ್ವಾಗತಿಸುತ್ತಿರುವವರಿಗೆ–ನಾನು ಒಂದು ಸಲಹೆ ನೀಡುತ್ತಿದ್ದೇನೆ: ದೇಶದ ಹಿತದೃಷ್ಟಿಯಿಂದ, ಅವರು ತಾವೇ ಜವಹರ್‌ಲಾಲ್‌ರನ್ನು ಭೇಟಿ ಮಾಡಿ ಈ ಮಸೂದೆಯನ್ನು ಒಂದು ಅಥವಾ ಎರಡು ವರ್ಷ ತಡೆಹಿಡಿಯಬೇಕೆಂದು ಕೇಳಿಕೊಳ್ಳಬೇಕು. ಇದು ಅನೇಕ ರೀತಿಗಳಲ್ಲಿ ಸಹಾಯಕವಾಗುತ್ತದೆ. ಆದರೆ ಈ ಮಸೂದೆ ಈಗ ಅಥವಾ ೧೯೫೦ರಲ್ಲಿ ಠರಾವಾಗದಿದ್ದರೆ, ಅದಿನ್ನೆಂದೂ ಠರಾವಾಗುವುದಿಲ್ಲ ಎಂದು ಅವರು ಯೋಚಿಸುತ್ತಿರುವಂತಿದೆ. ಏಕೆಂದರೆ, ಇದಾದ ನಂತರ ಬರುವವರು ಈ ಮಸೂದೆಯನ್ನು ಠರಾವಾಗಲು ಬಿಡುವುದಿಲ್ಲ. ಆದರೆ ನಾನೊಂದು ಮಾತು ಹೇಳುತ್ತೇನೆ: ಒಂದು ವೇಳೆ ಈ ಮಸೂದೆಯನ್ನು ನೀವು ಇಂದೇ ಠರಾವು ಮಾಡಿದರೂ. ಅದರಿಂದ ಮುಂದೇನಾಗುತ್ತದೆ ಎಂಬುದು ನಿಮಗೆ ಗೊತ್ತಿರಬೇಕು. ನಾವು ಹೋದಮೇಲೆ ನಮ್ಮ ಆಸನಗಳಲ್ಲಿ ಕುಳಿತುಕೊಳ್ಳುವವರು "ಈಗ ಜಾರಿಯಲ್ಲಿರುವ ಹಿಂದೂ ಕಾನೂನನ್ನು ತಿದ್ದುವ ಕರ್ತವ್ಯವನ್ನು ಮೊದಲು ಮಾಡೋಣ" ಎನ್ನುತ್ತಾರೆ. ಆದುದರಿಂದ ದಯವಿಟ್ಟು ಇದನ್ನು ಸಾಧ್ಯವಾದರೆ ತಪ್ಪಿಸಿರಿ ಎಂದು ದೈನ್ಯದಿಂದ ಬೇಡಿಕೊಳ್ಳುತ್ತೇನೆ. ಒಂದು ವೇಳೆ ಇದು ನಿಮಗೆ ಸಾಧ್ಯವಾಗದಿದ್ದರೆ, ನನ್ನ ಹಿತನುಡಿ ಹೀಗಿದೆ : "ಎಡಕ್ಕೂ ವಾಲಬೇಡಿ, ಬಲಕ್ಕೂ ವಾಲಬೇಡಿ; ಮಧ್ಯಮ ಮಾರ್ಗದಲ್ಲಿ ನಡೆಯಿರಿ. ಆ ಸುವರ್ಣ ಮಾಧ್ಯಮವನ್ನು ಹುಡುಕಿ; ಇದೊಂದೇ ಸಮಾಜವನ್ನು ಸಮಾಧಾನಪಡಿಸಬಲ್ಲುದು."

ಎರಡನೆಯದಾಗಿ, ಶ್ರೀ ಸರ್ವತೆಯವರು ಸಭಾ ನಿಯಮದ ವಿಚಾರವನ್ನು ಪ್ರಸ್ತಾವಿಸಿದಾಗ, ಮಾನ್ಯ ಸಭಾಪತಿಗಳೇ, ತಾವೂ ಅದನ್ನು ಸಮರ್ಥಿಸಿದಿರಿ. ನಿಮ್ಮ ಸಮರ್ಥನೆ ಹೀಗಿತ್ತು: ಈ ಮಸೂದೆಯು ಪ್ರಾಂತ್ಯಗಳಿಗೆ ಮಾತ್ರ ಅನ್ವಯವಾಗುತ್ತದೆ; ಒಂದು ವೇಳೆ ಅದನ್ನು ರಾಜ್ಯಗಳಿಗೂ ಅನ್ವಯಿಸುವುದಾದರೆ, ಅದನ್ನು ಆ ರಾಜ್ಯಗಳಿಗೆ ಕಳಿಸಿಕೊಡಲಾಗುವುದು. ಅದನ್ನು ಸುತ್ತೋಲೆಯಂತೆ ಪ್ರಚಾರ ಮಾಡಲಾಗುವುದು. ಅನಂತರವೇ ಏನು ಮಾಡಬೇಕೆಂಬ ತೀರ್ಮಾನ ತೆಗೆದುಕೊಳ್ಳಲಾಗುವುದು.

ಆಗ ಡಾ॥ ಅಂಬೇಡ್ಕರರು ಇದಕ್ಕೆ ಉತ್ತರವಾಗಿ ಈ ಕೆಳಗಿನಂತೆ ನುಡಿದರು:

"ಭಾರತೀಯ ರಾಜ್ಯಗಳಿಗೆ ಈ ಮಸೂದೆಯನ್ನು ವಿಸ್ತರಿಸುವ ಸಂದರ್ಭ ಬಂದಾಗ ಅದನ್ನು ಈ ವಿಧಾನ ಸಭೆಯ ಮುಂದೆ ಮಂಡಿಸಿದರೆ, ಅದು ಅಥವಾ ಅಂದಿನ ಸರ್ಕಾರವು ಆ ರಾಜ್ಯಗಳ ಆಶೋತ್ತರಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು; ಅಲ್ಲದೆ, ಭಾರತೀಯ ಒಕ್ಕೂಟಕ್ಕೆ ಸೇರಿಕೊಂಡಿರುವ ರಾಜ್ಯಗಳ ಸಲಹೆ ಸೂಚನೆಗಳನ್ನು ಕೇಳಲಾಗುವುದು."

ಇದೇ ನಿಮ್ಮ ಧೋರಣೆಯಾದರೆ, ಇಂದು ಠರಾವಾದುದನ್ನು ರಾಜ್ಯಗಳಿಗೆ ಆರು ತಿಂಗಳ ನಂತರ ಕಳಿಸುತ್ತೀರಿ, ರಾಜ್ಯಗಳು ಅದನ್ನು ಜಾರಿಗೊಳಿಸುವುದರೊಳಗಾಗಿ ನೀವಿನ್ನೂ ಮುಂದೆ ಹೋಗಿರುತ್ತೀರಿ. ಈಗಾಗಲೇ ಹಿಂದುಳಿದಿರುವ ರಾಜ್ಯಗಳ ಜನರು ಮತ್ತಷ್ಟು ಹಿಂದುಳಿಯುತ್ತಾರೆ. ಆದುದರಿಂದ ನೀವು ಈ ಅಂಶವನ್ನು ಗಮನದಲ್ಲಿಟ್ಟುಕೊಂಡು, ಆ ಬಗ್ಗೆ ಏನು ಮಾಡಬೇಕೆಂಬುದನ್ನು ಯೋಚಿಸಿ.

ಸಾರ್ವಜನಿಕ ಅಭಿಪ್ರಾಯವನ್ನು ಪಡೆದ ವಿಧಾನ ಪರಿಪೂರ್ಣವಾಗೇನಿರಲಿಲ್ಲ. ಇದನ್ನು ನಾನಾಗಲೇ ಹೇಳಿದ್ದೇನೆ. ನಮ್ಮ ಸಂವಿಧಾನವನ್ನು ರಚಿಸಲು ನಾವು ಎರಡೂವರೆ ವರ್ಷದಿಂದ ಮೂರು ವರ್ಷ ತೆಗೆದುಕೊಂಡಿದ್ದೇವೆ. ನಾವು ಎಷ್ಟೇ ಜಾಗರೂಕತೆಯಿಂದ ಮುಂದುವರೆದಿದ್ದರೂ, ಅದು ಸರಿಯಾಗಿಲ್ಲ ಎಂದು ಹೇಳುವ ಅನೇಕರಿದ್ದಾರೆ. ನಾವು ಪ್ರಾಂತೀಯ ಸರ್ಕಾರಗಳ ಸಲಹೆಗಳನ್ನು ಕೇಳಿದ್ದೆವು; ಸಂವಿಧಾನದ ಕರಡು ಪ್ರತಿಗಳನ್ನೂ ಕಳಿಸಿಕೊಟ್ಟಿದ್ದೆವು; ಅವರು ನಮಗೆ ತಮ್ಮ ಅಭಿಪ್ರಾಯಗಳನ್ನು ಕಳಿಸಿಕೊಡುವ ಮೊದಲು ತಮ್ಮ ವಿಧಾನಸಭೆಗಳಲ್ಲೂ ಸಚಿವ ಸಂಪುಟಗಳಲ್ಲೂ ಚರ್ಚಿಸಿದ್ದರು. ಆದರೆ ನಿಮಗಾಗಲೇ ತಿಳಿದಿರುವಂತೆ, ರಾವ್ ಸಮಿತಿಯು ತನ್ನ ವರದಿಯ ಕರಡು ಪ್ರತಿಯನ್ನು ಯಾವ ಪ್ರಾಂತೀಯ ಸರ್ಕಾರಕ್ಕೂ ಕಳಿಸಿಕೊಡಲಿಲ್ಲ. ಹೀಗಾಗಿ, ಅದು ನಮ್ಮ ಮುಂದೆ ಬಂದಿದೆ. ಈ ಕಾರಣಕ್ಕಾಗಿಯೇ ನಾನು ಸಾರ್ವಜನಿಕ ಅಭಿಪ್ರಾಯವನ್ನು ಪೂರ್ಣವಾಗಿ ಹಾಗೂ ಸರಿಯಾಗಿ ಸಂಗ್ರಹಿಸಲಿಲ್ಲ ಎಂಬುದನ್ನು ಎತ್ತಿ ತೋರಿಸುತ್ತಿರುವುದು. ನಿಮ್ಮ ವಾದದ ಆಧಾರವೂ ಸಹ ದೃಢವಾಗಿಲ್ಲ. ಆ ವಿಚಾರದಲ್ಲಿ ನನಗೆ ಯಾವ ಸಂದೇಹವೂ ಇಲ್ಲ. ರೇಣುಕಾ ಸೋದರಿಯವರು "ದೇಶದ ಅರ್ಧ ಜನತೆ ಈ ಮಸೂದೆಯನ್ನು ಬೆಂಬಲಿಸುತ್ತದೆ" ಎಂದಿದ್ದರು. ಆದರೆ ರಾವ್ ಸಮಿತಿ "ಈ ವಿಚಾರದಲ್ಲಿ ಸಮಾಜ ಎರಡು ಹೋಳಾಗಿದೆ" ಎಂದಿತು. ಹೀಗಾದರೆ, ನಾವು ಯಾರನ್ನೂ ನಂಬಬೇಕು? ವಿಚಾರಣೆ ಮಾಡಿದ ನಂತರ ೧೯೪೭ರಲ್ಲಿ ತಮ್ಮ ವರದಿಯನ್ನು ಸಲ್ಲಿಸಿದವರನ್ನು ನಂಬಬೇಕೋ ಅಥವಾ ರೇಣುಕಾ ಸೋದರಿಯವರ ೧೯೪೪ರ ಹೇಳಿಕೆಯನ್ನೊ?

**ಮಾನ್ಯ ಉಪಸಭಾಪತಿಗಳು :** ಇನ್ನೂ ಅನೇಕ ಸದಸ್ಯರು ಮಾತಾಡುವವರಿದ್ದಾರೆ. ದಯವಿಟ್ಟು ನಿಮ್ಮ ಮಾತನ್ನು ಮುಗಿಸಿ.

**ಶ್ರೀ ಗೋಕುಲ್‌ಭಾಯ್ ದೌಲತ್ ರಾಮ್ ಭಟ್ :** ಇನ್ನು ಐದು ಅಥವಾ ಏಳು ನಿಮಿಷಗಳಲ್ಲಿ ಮುಗಿಸುತ್ತೇನೆ. ನೀವು ಅನುಮತಿ ಕೊಟ್ಟರೆ, ಇನ್ನೂ ಕೆಲವು ವಿಷಯಗಳನ್ನು ನಾನು ಹೇಳಬೇಕಾಗಿದೆ.

**ಮಾನ್ಯ ಉಪಸಭಾಪತಿಗಳು :** ನೀವು ಹೇಳಿದಂತೆಯೇ ಆಗಲಿ. ನೀವಾಗಲೆ ಮೂವತ್ತು ನಿಮಿಷಗಳನ್ನು ತೆಗೆದುಕೊಂಡಿದ್ದೀರಿ.

**ಶ್ರೀ ಗೋಕುಲ್‌ಭಾಯ್ ದೌಲತ್ ರಾಮ್ ಭಟ್ :** ನಾನು ಇನ್ನು ಸ್ವಲ್ಪ ಮಾತಾಡಿ ಬೇಗನೇ ಮುಗಿಸುತ್ತೇನೆ. ನೀವು ಎಷ್ಟು ಹೊಡೆದರೂ ಅದೆಲ್ಲವನ್ನೂ ಸುಮ್ಮನೆ ಸಹಿಸಿಕೊಳ್ಳುವುದು ಹಿಂದೂ ಸಮಾಜ ಮಾತ್ರ. ಮುಸ್ಲಿಂ ಸಮಾಜವನ್ನು ನೋಡಿ. ಅದರಿಂದಾಗಿ ಒಂದು ಕಾನೂನನ್ನು ರಚಿಸುವ ಧೈರ್ಯ ಯಾರಿಗಾದರೂ ಇತ್ತೇನು? ಷಿಯಾ ಮತ್ತು ಸುನ್ನಿಗಳನ್ನೇಕೆ ಒಂದುಗೂಡಿಸಬಾರದು? ಕ್ರಿಶ್ಚಿಯನ್ನರ

ಕಾಯಿದೆಗಳಲ್ಲಿ ಕೈಯಾಡಿಸುವ ಎದೆಗಾರಿಕೆ ಯಾರಿಗಾದರೂ ಇದೆಯೇನು? ಅಥವಾ ಪಾರಸಿಗಳನ್ನು ಮುಟ್ಟುವ ಧೈರ್ಯವಿದೆಯೇನು? ಈ ಬಡಪಾಯಿ (ಹಿಂದೂ) ಸಮಾಜ ಮಾತ್ರ ಎಲ್ಲವನ್ನೂ ಸಹಿಸಿಕೊಳ್ಳಬೇಕು. ಅದಾಗಲೇ ಸತ್ತು ಹೋಗಿದೆ ಎಂದು ನೀವು ತಿಳಿದುಕೊಂಡಿರುವುದರಿಂದ ಹೀಗಾಗುತ್ತಿದೆಯೇನು? ಡಾ॥ ಅಂಬೇಡ್ಕರ್ ತಾವು ಶೂದ್ರ ಜಾತಿಯವರೆಂದು ಹೇಳಿಕೊಳ್ಳುತ್ತಾರೆ. ಆದರೆ ನಾನು ಅವರಿಗೆ ಉಚ್ಚ ಸ್ಥಾನವನ್ನು ಕೊಡುತ್ತೇನೆ. ಕೆಲವರು ಅವರಿಗೆ ಮುನಿ ಎಂಬ ಬಿರುದು ಕೊಟ್ಟಿದ್ದಾರೆ. ಮತ್ತೆ ಕೆಲವರು ಅವರನ್ನು ಋಷಿಯ ಸ್ಥಾನಕ್ಕೇರಿಸಿದ್ದಾರೆ; ಆದರೆ ಅವರು ಮಾತ್ರ ತಾವು ಶೂದ್ರರೆಂದುಕೊಳ್ಳುತ್ತಾರೆ. ಹಾಗಾದರೆ ಅವರು ವಿಶ್ವಾಮಿತ್ರರಾಗಲಿ. ನೀವೇನೇ ಆಗಿದ್ದರೂ, ವಿವೇಕಿಗಳಂತೂ ಹೌದು. ಅಂಥ ಕೀಳರಿಮೆಯನ್ನೇಕೆ ಬೆಳೆಸಿಕೊಳ್ಳುತ್ತಿದ್ದೀರಿ? ಅವರ ಪ್ರಕಾರ, ಸ್ಮೃತಿಗಳು ಯಾವಾಗಲೂ ಸಿದ್ಧವಾಗೇ ಇರುತ್ತಿದ್ದವು. ಬ್ರಾಹ್ಮಣರು ಬರೆದೇ ಬರೆದರು. ಅಲ್ಲದೆ, ಅವರು ಮತ್ತೇನನ್ನು ಮಾಡಬೇಕಿತ್ತು? ನಿಮ್ಮ ಇಲಾಖೆ ಮಾಡುತ್ತಿರುವ ಕೆಲಸವಾದರೂ ಏನು? ಸ್ಮೃತಿಕಾರರು ಮಾಡಿದುದೂ ಅದನ್ನೇ. ಆಗಾಗ್ಗೆ ನಿಯಮ–ನಿಬಂಧನೆಗಳನ್ನು ತಿದ್ದುವ ಇಲಾಖೆ ಅದಾಗಿತ್ತು. ನೀವು ಹೇಗೆ ಕಾನೂನುಗಳಿಗೆ ತಿದ್ದುಪಡಿಗಳನ್ನು ರೂಪಿಸಿ ಮಂಡಿಸುತ್ತೀರೋ ಹಾಗೆಯೇ ಅವರೂ ಮಾಡಿದರು. ಆದರೆ ಈ ಸಮಸ್ಯೆಯನ್ನು ನಾನು ಹೆಚ್ಚು ಪ್ರಸ್ತಾಪಿಸುವುದಿಲ್ಲ. ಇದನ್ನು ಬಿಟ್ಟು ಬೇರೆ ವಿಚಾರಗಳನ್ನೂ ನಾನು ಪ್ರಸ್ತಾಪಿಸುವುದಿಲ್ಲ. ಇದನ್ನು ಮೂಲಭೂತ ಹಕ್ಕುಗಳಲ್ಲಿ ಸೇರಿಸಲಾಗಿದೆ ಹಾಗೂ ಅದನ್ನು ವಿರೋಧಿಸುತ್ತಿರುವವರಿಗೆ ಮೂಲಭೂತ ಹಕ್ಕುಗಳೆಂದರೇನೆಂಬುದೇ ಗೊತ್ತಿಲ್ಲ ಎಂದು ಸೋದರಿಯರು ಹೇಳುತ್ತಿದ್ದಾರೆ. ಅವರು "ನಿಮಗೆ ಮೂಲಭೂತ ಹಕ್ಕುಗಳ ಬಗ್ಗೆ ಏನೂ ಗೊತ್ತಿಲ್ಲ" ಎನ್ನುತ್ತಾರೆ. ಅದು ನಿಜವಾಗಿಯೂ ಮೂಲಭೂತ ಹಕ್ಕೋ ಅಥವಾ ಒಂದು ರಾಷ್ಟ್ರದ ಕಾನೂನೋ? ಹಿಂದೂ ಕಾನೂನು ರಾಷ್ಟ್ರೀಯ ಕಾನೂನು ಎನ್ನಿಸಿಕೊಳ್ಳುತ್ತದೆಯೋ ಅಥವಾ ಅದೊಂದು ವೈಯಕ್ತಿಕ ಮತ್ತು ಖಾಸಗಿ ಕಾನೂನೋ? ನೀವು ಭಾರತೀಯ ಕಾನೂನಿನ ಬಗ್ಗೆ ಒಂದು ಮಸೂದೆಯನ್ನು ಮಂಡಿಸುವುದಾದರೆ, ಅದನ್ನು ಯಾರೂ ವಿರೋಧಿಸುವುದಿಲ್ಲ ಎಂದು ಅಧಿಕಾರ ವಾಣಿಯಿಂದ ಹೇಳುತ್ತೇನೆ. ಆದರೆ ಇಂದು ನೀವು ಹೊರಟಿರುವುದು ಹಿಂದೂ ಕಾನೂನನ್ನು ರೂಪಿಸಿ, ಹಿಂದೂ ಕಾನೂನನ್ನು ತಿದ್ದಲು. ಆದರೆ ವೈಯಕ್ತಿಕ ಕಾನೂನು ರಾಷ್ಟ್ರದ ಕಾನೂನಲ್ಲ. ಆದುದರಿಂದ ಅದು ಅನ್ವಯವಾಗುವುದಿಲ್ಲ. ಶ್ರೀ ಗೌರ್ ಅವರು 'ಈ ಮಸೂದೆಯನ್ನು ಜಾರಿಗೆ ತರಲು ಒಂದು ಅವತಾರವೇ ಬರಬೇಕು' ಎಂದು ನುಡಿದಿದ್ದರು. ಈಗ ಶ್ರೀ ಗೌರ್ ಅವರು ನಾಗಪುರದಲ್ಲಿ ಕುಳಿತುಕೊಂಡಿದ್ದಾರು; ಅಂತೂ ಆ ಕೊನೆಗೂ ಒಬ್ಬ ಅವತಾರ ಪುರುಷ ಬಂದು ಹಿಂದೂ ಕಾನೂನು ಮಸೂದೆಯನ್ನು ತಂದಿದ್ದಾರೆ ಎಂಬುದು ಅವರಿಗೆ ತಿಳಿದು ಸಮಾಧಾನವಾದೀತು.

**ಶ್ರೀ ಮಹಾವೀರ ತ್ಯಾಗಿ :** ನಾಚಿಕೆಯಿಲ್ಲದವರು.

***ಶ್ರೀ ಗೋಕುಲ್‌ಭಾಯ್ ದೌಲತ್ ರಾಮ್ ಭಟ್* :** ಇನ್ನು ಕೆಲವೇ ಮಾತುಗಳನ್ನಾಡಿ ನಾನು ಬೇಗನೇ ನನ್ನ ಮಾತನ್ನು ಮುಗಿಸುತ್ತೇನೆ. ಸೊದರ–ಸೋದರಿಯರನ್ನು ಸಮಾನವಾಗಿ ಕಾಣಬೇಕು, ಎನ್ನುತ್ತಾರೆ. ಶ್ರೀ ಕೃಪಲಾನಿಯವರು ಆಗಲೇ ಹೋಗಿದ್ದಾರೆ. ಬೇರೆಯವರು ಹೇಳಿದ್ದನ್ನು ಅವರೇಕೆ ಕೇಳಬೇಕು? ನಮ್ಮ ಸೋದರಿಯರಿಗೆ ಈ ಎರಡು ಹಕ್ಕುಗಳನ್ನೇಕೆ ಕೊಡಬೇಕು ಎಂದು ನಾನು ಕೇಳಬಯಸುತ್ತೇನೆ. ಆಕೆ ತವರು ಮನೆಯಿಂದ ಸ್ತ್ರೀ ಧನವನ್ನು ತೆಗೆದುಕೊಂಡು ಹೋಗುತ್ತಾಳೆ. ತಂದೆ ಕೊಟ್ಟ (ವರ) ದಕ್ಷಿಣೆಯನ್ನೂ ತೆಗೆದುಕೊಂಡು ಹೋಗುತ್ತಾಳೆ; ತನ್ನ ವೈಯಕ್ತಿಕ ಪಾಲನ್ನೂ ತೆಗೆದುಕೊಂಡು ಹೋಗುತ್ತಾಳೆ: ಇಷ್ಟೆಲ್ಲಾ ಅಲ್ಲದೆ, ಗಂಡನ ಆಸ್ತಿಯಲ್ಲೂ ಅವಳಿಗೆ ಪಾಲು ಸಿಕ್ಕುತ್ತದೆ. ನಮ್ಮ ಸೋದರಿಯರು ಹೀಗೇಕೆ ಸ್ವಾರ್ಥಿಗಳಾಗಿದ್ದಾರೆ?

ನಮ್ಮ ಸ್ತ್ರೀಯರೇ ಸಮೃದ್ಧಿಯ ಅವತಾರ: ಹೀಗಿರುವಾಗ, ಅವರಿಗೆ ಹೆಚ್ಚು ಲೌಕಿಕ ಸಂಪತ್ತೇಕೆ ಬೇಕು? ಶ್ರೀಮತಿ ಕಮಲಾ ಚೌಧರಿಯವರು ಹೇಳುವುದೇನೆಂದರೆ, ಸಂಪತ್ತು ಮತ್ತು ಸಮೃದ್ಧಿ ಸಂಪತ್ತಿರುವವರ ಹಾಗೂ ಸಮೃದ್ಧಿಯಿರುವವರ ಕಡೆಗೇ ಹಿಂದಿರುಗಿ ಹರಿಯುತ್ತದೆ. ಇದರಲ್ಲಿ ಸಂದೇಹವೇ ಇಲ್ಲ. ಸ್ತ್ರೀಯರೇ ಸಂಪತ್ತು ಮತ್ತು ಸಮೃದ್ಧಿಯ ಸಾಕಾರ ಮೂರ್ತಿಗಳಾಗಿರುವಾಗ ಮತ್ತಷ್ಟು ಸಮೃದ್ಧಿ ಪಡೆಯಬೇಕೆಂದು ಅವರಿಗೇಕೆ ಇಚ್ಛೆ? ಅವರಿಗಿರುವ ಸ್ವಲ್ಪ ಭ್ರಮೆ ಮತ್ತು ಮೋಹಗಳಿಂದಾಗಿಯೇ ತಮಗೆ ಸಿಕ್ಕಿದ್ದನೆಲ್ಲಾ ಇಟ್ಟುಕೊಂಡಿದ್ದಾರಲ್ಲದೆ, ಇಡೀ ಪ್ರಪಂಚವನ್ನೇ ತಮ್ಮ ಅಧೀನದಲ್ಲಿಟ್ಟುಕೊಂಡಿದ್ದಾರೆ. ಈ ಭ್ರಮೆ ಮತ್ತು ಮೋಹಗಳು ಇನ್ನೂ ಹೆಚ್ಚಾದರೆ, ಏನೇನಾಗಲಾರದು ಎಂದೂ ಯಾರೂ ಹೇಳಲಾರರು. ಸಂಪತ್ತೆಂಬ ಮಾಯೆಯು ಖಂಡಿತವಾಗಿಯೂ ಸಂಪತ್ತಿರುವವರ ಕಡೆಗೇ ಹಿಮ್ಮುಖವಾಗಿ ಹರಿದರೆ, ಆಗ ಪ್ರಕೃತಿಯನ್ನು ಮಾತ್ರ ಬೆಳೆಸಿರಿ, ಮತ್ತು ಪುರುಷನನ್ನು ಅಲ್ಲಿಂದ ಬೇರ್ಪಡಿಸಿ. ಪುರುಷನಿಂದ ಪ್ರತ್ಯೇಕಗೊಂಡ ಮಾಯೆ ಬದುಕಿರಲು ಸಾಧ್ಯವಾದರೆ, ಹಾಗೆ ಬದುಕಲು ಬಿಡಿ.

ತಿರುವಾಂಕೂರು ಮತ್ತು ಕೊಚ್ಚಿಯಿಂದ ಬಂದಿರುವ ನಮ್ಮ ಗೆಳೆಯರು ನಮಗಿಂತ ಬಹಳ ಮುಂದುವರಿದಿದ್ದಾರೆ. ಆದರೆ ಒಂದೇ ಕೋಗಿಲೆ ಕೂಗಿದಾಕ್ಷಣ ವಸಂತ ಬರುವುದಿಲ್ಲ ಎಂಬ ಮಾತನ್ನು ಅವರು ನೆನಪಿನಲ್ಲಿಡಬೇಕು. ಹಳ್ಳಿಗರನ್ನೂ ತಮ್ಮ ಜೊತೆ ವೇಗವಾಗಿ ನಡೆಯುವಂತೆ ಮಾಡಬೇಕು. ಅವರನ್ನೂ ನಿಮ್ಮ ಜೊತೆಗೆ ಸೇರಿಸಿಕೊಳ್ಳುವಿರಾದರೆ, ಈ ಮಸೂದೆಗೆ ಇನ್ನೂ ಹೆಚ್ಚು ಪ್ರಚಾರ ನೀಡಿರಿ; ಅವರಿಗೆ ಅದರ ವಿವಿಧ ಒಳಾರ್ಥಗಳನ್ನು ಬಿಡಿಸಿ ಹೇಳಿರಿ; ಆಗ ಮಸೂದೆಯ ಉದ್ದೇಶ ಖಂಡಿತ ನೆರವೇರಿದಂತಾಗುತ್ತದೆ. ಅದರಲ್ಲಿ ಎಳ್ಳಷ್ಟು ಅನುಮಾನವೂ ಇಲ್ಲ. ಈ ಮಸೂದೆಯನ್ನು ಠರಾವು ಮಾಡುವ ಮೂಲಕ ನಾವು ಹಿಂದಕ್ಕೆ ಹೋಗಬೇಕಾದ ಪರಿಸ್ಥಿತಿ ಉಂಟಾಗುತ್ತದೆ ಎಂದು ಕೆಲವು ಕಡೆಗಳಲ್ಲಿ ಹೇಳಲಾಗುತ್ತದೆ. ಕೆಲವೊಂದು ಅಂಶದಲ್ಲಿ ಈ ಆಕ್ಷೇಪ ಸತ್ಯವೂ ಹೌದು. ನೀರು ಸ್ವಾಭಾವಿಕವಾಗಿ ಕೆಳಕ್ಕೆ ಹರಿಯಲು ಬಿಡಿ. ನೀವು ಅಲ್ಪಸಂಖ್ಯಾತರ ಅಭಿಪ್ರಾಯಗಳನ್ನು ತಿರಸ್ಕರಿಸಿ ಹಿಮ್ಮುಖವಾಗಿ ನಡೆಯುವಿರಾದರೆ, ಅದು ಇಂದು ಸಾಧ್ಯವಾಗಬಹುದು; ಆದರೆ ಮುಂದೆ ಎಂಥ ಕಾಲ – ಬರುತ್ತದೆಂದರೆ, ಮಸೂದೆಯಲ್ಲಿ ಆಗ ಮಾಡಲಾಗುವ ತೀವ್ರತರ ಬದಲಾವಣೆಗಳು ನಿಮ್ಮನ್ನು ದಿಙ್ಮೂಢರನ್ನಾಗಿ ಮಾಡುತ್ತವೆ. ಆಗುವುದು ಆಗಲೇ ಬೇಕು. ಇದರ ವಿವರಗಳನ್ನು ನನಗೆ ಪ್ರಸ್ತಾಪಿಸಲು ಇಷ್ಟವಿಲ್ಲ.

ಇನ್ನೂ ಒಂದು ವಿಷಯ ನಾನು ಹೇಳಲಿಚ್ಛಿಸುತ್ತೇನೆ. ನಮ್ಮ ಸ್ಮೃತಿಕಾರ ಯಾಜ್ಞವಲ್ಕ್ಯ ಮನುಸ್ಮೃತಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದ್ದಾನೆ. ಮನು ಎಂಬ ಹೆಸರಿನವರು ಅನೇಕರಿರುವಾಗ ಯಾವ ಮನು ಮನುಸ್ಮೃತಿಯ ಕರ್ತೃ ಎಂಬ ವಿವಾದವನ್ನೂ ನಾನು ಪ್ರಸ್ತಾಪಿಸುವುದಿಲ್ಲ. ಆದರೆ ಯಾಜ್ಞವಲ್ಕ್ಯ ಸ್ಮೃತಿಯ ಸುಪ್ರಸಿದ್ಧ ಟೀಕಾಕಾರನಾದ ಹಾಗೂ ಮಿತಾಕ್ಷರ ಟೀಕೆಯನ್ನು ಬರೆದಿರುವ ಶ್ರೀ ವಿಜ್ಞಾನೇಶ್ವರ ಮತ್ತು ದಾಯಭಾಗ ಮತ್ತು ಮಯೂಖ ಟೀಕೆಗಳನ್ನು ಬರೆದಿರುವ ಇತರ ಟೀಕಾಕಾರರು ಬೇರೆ ರೀತಿಯ, ತಮ್ಮದೇ ಆದ, ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ನಾನು ಎಲ್ಲ ಉದಾಹರಣೆಗಳನ್ನೂ ತೆಗೆದುಕೊಳ್ಳುವುದಿಲ್ಲ. ಅವರು ಹೇಳುವುದೇನೆಂದರೆ, ಹೆಂಗಸಿಗೆ ಸ್ತ್ರೀಧನ ಕೊಡದಿದ್ದರೆ, ಆಸ್ತಿಯಲ್ಲಿ ಮಗನಿಗೆ ಸಿಕ್ಕಿದಷ್ಟೇ ಪಾಲು ಆಕೆಗೂ ಸಿಕ್ಕಬೇಕು. ಇದನ್ನು ಸ್ಪಷ್ಟವಾಗಿ ಅವರು ತಿಳಿಸಿದ್ದಾರೆ. ನಮ್ಮ ಸ್ಮೃತಿಗಳಲ್ಲಿ ಸ್ತ್ರೀಧನದ ಪ್ರಸ್ತಾಪ ಬಂದಿದೆ ಎಂಬ ಮಾತನ್ನು ನಾನು ಒತ್ತಿ ಹೇಳುತ್ತಿದ್ದೇನೆ. ಇಂಗ್ಲೆಂಡಿನ ಜನರು ತಮ್ಮ ಕಾನೂನುಗಳನ್ನು ಇನ್ನೂ ಕ್ರೋಡೀಕರಿಸಿಲ್ಲ. ಇಂಗ್ಲಿಷರ ಸ್ತೋತ್ರ ಪುಸ್ತಕದ ಪ್ರಕಾರ, ಕೆಲವೊಂದು ರೀತಿಯ ವಿವಾಹಗಳನ್ನು ಕ್ರಿ.ಶ. ೧೫೬೩ರಲ್ಲಿ ನಿಷೇಧಿಸಲಾಯಿತು. ಆ ನಿಷೇಧ ೧೯೧೩ರವರೆಗೂ ಜಾರಿಯಲ್ಲಿತ್ತು. ೧೯೧೩ರಲ್ಲಿ

ಒಂದು ನಿಷಿದ್ಧ ರೂಪದ ವಿವಾಹ ಪದ್ಧತಿಯಲ್ಲಿ ಒಂದು ಸಣ್ಣ ಬದಲಾವಣೆ ಮಾಡಲಾಯಿತು; ಅಂದರೆ, ಅಲ್ಲಿಯವರೆಗೂ ಯಾರೂ ಹೆಂಡತಿಯ ಸೋದರಿಯೊಡನೆ ವಿವಾಹವಾಗುವಂತಿರಲಿಲ್ಲ. ಇದಕ್ಕೆ ಹೋಲಿಸಿದರೆ ನಾವು ಬಹಳ ಮುಂದೆ ಹೋಗಿದ್ದೇವೆ ಎಂದು ನಾನು ತಿಳಿಸಬಯಸುತ್ತೇನೆ. ಅಲ್ಲಿ ಒಂದು ರೀತಿಯ ನಿಷಿದ್ಧ ವಿವಾಹ ಪದ್ಧತಿಯಲ್ಲಿ ಬದಲಾವಣೆ ಮಾಡಲು ಅಷ್ಟೊಂದು ವರ್ಷಗಳನ್ನು ತೆಗೆದುಕೊಳ್ಳಲಾಯಿತು; ಆದರೆ ಇಲ್ಲಿ ನಾಗರಿಕ ವಿವಾಹ ಶಾಸನದ ಪ್ರಕಾರ, ಹೆಂಡತಿಯ ಸೋದರಿಯನ್ನು (ಅಥವಾ ಹೆಂಡತಿಗೆ ಗಂಡನ ಸೋದರನನ್ನು) ವಿವಾಹ ಸಂಬಂಧ ಬೆಳೆಸುವ ಅವಕಾಶವಿದೆ. ಬೇಕಾದವರು ಅಸಾಂಪ್ರದಾಯಿಕ ವಿವಾಹವನ್ನು ಆರಿಸಿಕೊಳ್ಳಬಹುದು; ಆದರೆ ಆ ಮಿತಿಯನ್ನೇ ಉಳಿದ ಎಲ್ಲರ ಮೇಲೂ ಏಕೆ ಹೇರಬೇಕು? ನಾಗರಿಕ ವಿವಾಹ ಶಾಸನವು ಗಂಡನಿಗೆ ಹೆಂಡತಿಯ ದಾಯಾದಿಯನ್ನು (ಹಾಗೂ ಹೆಂಡತಿಗೆ ಗಂಡನ ದಾಯಾದಿಯನ್ನು) ಮದುವೆ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ. ಅದನ್ನು ಅನುಸರಿಸಲಿಚ್ಛಿಸುವವರು ಅದನ್ನು ಅನುಸರಿಸಬಹುದು. ಈ ಮಸೂದೆಯನ್ನು ರೂಪಿಸುವಾಗ ನಾವು ಉತ್ತಮ ಸಂತಾನ ಸಿದ್ಧಾಂತವನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ನಮ್ಮ ಸ್ಮೃತಿಕಾರರು ತಮಗೆ ತಿಳಿದಿದ್ದೇನನ್ನೊ ಬರೆದಿದ್ದಾರೆ ಎಂದು ಬಗೆಯುವುದು ತಪ್ಪು. ನಮ್ಮ ಸ್ಮೃತಿಕಾರರು ಉತ್ತಮ ಸಂತಾನ ಶಾಸ್ತ್ರದಲ್ಲಿ ಪರಿಣತರಾಗಿದ್ದರು. ಅವರೇನೂ ಸಾಧಾರಣ ಜನರಾಗಿರಲಿಲ್ಲ. ಅವರು ಉತ್ತಮ ಜ್ಞಾನಿಗಳೂ ವಿದ್ಯಾವಂತರೂ ಆಗಿದ್ದರು. ಅವರು ಯಾವುದೇ ಸಿದ್ಧಾಂತವನ್ನು ಮಂಡಿಸಿದರೂ, ಅವು ಎಲ್ಲ ರೀತಿಯಲ್ಲಿಯೂ ಪರಿಪೂರ್ಣವಾಗಿರುತ್ತಿದ್ದವು ಮತ್ತು ಅವುಗಳನ್ನು ಮಂಡಿಸುವ ಮೊದಲು ಅವುಗಳನ್ನು ಪ್ರೌಢ ಜಿಜ್ಞಾಸೆಗೆ ಒಳಪಡಿಸಲಾಗುತ್ತಿತ್ತು. ಅವರು ರೂಪಿಸಿದ ನಿಯಮಗಳು ಎಷ್ಟು ಪರಿಪೂರ್ಣವಾಗಿರುತ್ತಿದ್ದವೆಂದರೆ, ಅವುಗಳನ್ನು ೬, ೮, ೧೦ ಅಥವಾ ೧೨ ತಿಂಗಳನಂತರ ಬದಲಾಯಿಸುವ ಆವಶ್ಯಕತೆ ಇದೆ ಎಂದು ಯಾರಿಗೂ ಅನ್ನಿಸುತ್ತಿರಲಿಲ್ಲ. ನಮ್ಮ ಸ್ಮೃತಿಕಾರರು ವಿವೇಕಿಗಳೂ ಬುದ್ಧಿವಂತರೂ ಇದ್ದರು. ಅವರು ಬರೆದಿರುವುದಕ್ಕೆ ಯಾವುದೇ ಬದಲಾವಣೆ ಸೂಚಿಸಲು ನಾವು ನೂರು ವರ್ಷ ಅದರ ಬಗ್ಗೆ ಧ್ಯಾನ ಮಾಡಬೇಕಾಗುತ್ತದೆ. ಅವುಗಳಲ್ಲಿ ಬೇಕಾದರೆ ನಾವು ಖಂಡಿತವಾಗಿಯೂ ಸೂಕ್ತ ಬದಲಾವಣೆಗಳನ್ನು ಮಾಡಬಹುದು. ಏಕೆಂದರೆ, ಸ್ಮೃತಿಗಳಲ್ಲಿ ಕಾಲಕಾಲಕ್ಕೆ ಸೂಕ್ತ ತಿದ್ದುಪಡಿಗಳನ್ನು ಮಾಡಲಾಗಿದೆ. ಆದರೆ ನಾವು ತಿದ್ದುಪಡಿಮಾಡುವುದು ಸಮಾಜಕ್ಕೆ ಲಾಭವಾಗುತ್ತದೆಯೊ ನಷ್ಟವಾಗುತ್ತದೆಯೋ ಎಂಬುದನ್ನು ನಾವು ಕೂಲಂಕಷವಾಗಿ ಪರಿಶೀಲಿಸಬೇಕು.

**ಶ್ರೀ ಎಚ್. ವಿ. ಕಾಮತ್** (ಮ. ಪ್ರಾಂ. ಮತ್ತು ಬೆರಾರ್ : ಸಾಮಾನ್ಯ) : ಸದನದ ಸನ್ಮಾನ್ಯ ಸದಸ್ಯರು ಬುದ್ಧಿವಂತರಲ್ಲವೇನು?

**ಮಾನ್ಯ ಉಪಸಭಾಪತಿಗಳು :** ದಯವಿಟ್ಟು ಮುಂದುವರಿಸಿ.

**ಶ್ರೀ ಗೋಕುಲ್‌ಭಾಯ್ ದೌಲತ್ ರಾಮ್ ಭಟ್ :** ನಾನು ಶ್ರೀ ಕಾಮತ್ ರಷ್ಟು ಬುದ್ಧಿವಂತನೂ ಅಲ್ಲ. ವಿದ್ಯಾವಂತನೂ ಅಲ್ಲ. ಸನ್ಮಾನ್ಯ ಸದಸ್ಯರು ಬುದ್ಧಿವಂತರಲ್ಲ. ಎಂದು ನಾನು ದೂರುತ್ತಿಲ್ಲ. ಪ್ರತಿಯೊಬ್ಬರಿಗೂ ತಮ್ಮದೇ ಆದ ಬುದ್ಧಿವಂತಿಕೆ ಇರುತ್ತದೆ. ಪ್ರತಿಯೊಬ್ಬರೂ ಯೋಚಿಸಬಲ್ಲರು. ಆದರೆ ನಾನು ಹೇಳುತ್ತಿರುವುದೇನೆಂದರೆ, ದೊಡ್ಡ ಮನುಷ್ಯರಿಗೆ ದೊಡ್ಡ ದೃಷ್ಟಿಯಿರುತ್ತದೆ ಎಂದಂತೆ, ಡಾ॥ ಅಂಬೇಡ್ಕರ್ ಹೇಳಿದ್ದನ್ನೆಲ್ಲಾ ನಾನು ಸುಮ್ಮನೆ ಒಪ್ಪಿಕೊಳ್ಳಲು ತಯಾರಿಲ್ಲ. ಅದೇ ರೀತಿ ಯಾರೋ ಒಬ್ಬ ಪಂಡಿತ ಬಂದು ಅಸ್ಪೃಶ್ಯರಿಗೆ ಮಾಡಿರುವುದೆಲ್ಲಾ ಅಸಮರ್ಥನೀಯ ಎಂದು ವಾದಿಸಿದರೆ, ಆಗಲೂ ನಾನು ಅವನ ಮಾತನ್ನು ಒಪ್ಪುವುದಿಲ್ಲ. ಏಕೆಂದರೆ, ದೊಡ್ಡ ಮನುಷ್ಯರಿಗೆ ದೊಡ್ಡ ದೃಷ್ಟಿ ಇರುತ್ತದೆ ಎಂಬ ಸೂಕ್ತಿಯಲ್ಲಿ ನನಗೆ ವಿಶ್ವಾಸವಿಲ್ಲ. ನಾನು ತಮಗೆ ಅರಿಕೆ ಮಾಡಿ ಕೊಳ್ಳುತ್ತಿದ್ದುದೇನೆಂದರೆ, ನಮ್ಮ ಸ್ಮೃತಿಕಾರರು ಏನೇ ಮಾಡಿದ್ದರೂ,

ಅದನ್ನು ಸಮಾಜದ ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡೇ ಮಾಡಿರುತ್ತಾರೆ. ಸಮಾಜದ ಆಗಿನ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡೇ ಸ್ಮೃತಿಗಳನ್ನು ಕ್ರೋಡೀಕರಿಸಲಾಯಿತು ಎಂಬುದು ಸತ್ಯ. ಆದರೆ ನಮ್ಮ ಇಂದಿನ ಸಮಾಜದಲ್ಲಿ ಅನೇಕ ಜಾತಿ, ಉಪಜಾತಿಗಳಿವೆ; ಬೇರೆ ಬೇರೆ ಪಂಥಗಳಿಗೆ ಸೇರಿದ ಜನರಿದ್ದಾರೆ; ಬೇರೆ ಬೇರೆ ಸಿದ್ಧಾಂತಗಳನ್ನು ನಂಬುತ್ತಾರೆ; ಸಿಖ್ಖರಿದ್ದಾರೆ, ಜೈನರಿದ್ದಾರೆ, ಬೌದ್ಧರಿದ್ದಾರೆ; ಬೇರೆ ದರ್ಶನಗಳನ್ನು ಅನುಸರಿಸುವವರೂ ಇದ್ದಾರೆ. ಅವರು ಅನೇಕ ಮತೀಯ ಪಂಥಗಳಲ್ಲಿ ಹಂಚಿಹೋಗಿದ್ದಾರೆ. ಅವರನ್ನು ಒಂದೇ ವ್ಯವಸ್ಥೆಯಲ್ಲಿ ಸಮನ್ವಯಗೊಳಿಸುವುದು ಸುಲಭದ ಕೆಲಸವೇನಲ್ಲ.

ನಾನೀಗ ಇನ್ನೂ ಸ್ವಲ್ಪ ಸಮಯ ತೆಗೆದುಕೊಳ್ಳುತ್ತೇನೆ. ನಾನು ಈಗ ತಾನೆ ಡಾ॥ ಅಂಬೇಡ್ಕರ್ 'ರೂಢಿಯು ಕಾನೂನನ್ನು ಹಾಳು ಮಾಡುತ್ತದೆ. ಆದುದರಿಂದ ರೂಢಿಯು ಬಳಕೆಯಲ್ಲಿರಬಾರದು' ಎಂದು ಹೇಳಿದ್ದಾರೆಂದು ಹೇಳಿದೆ. ಆದರೆ ಅವರು ಯಾವ ರಾಜರ ಮತ್ತು ಜಾಗೀರುದಾರರ ಉತ್ತರಾಧಿಕಾರದ ಹಕ್ಕು ಇರಬಾರದೋ ಅದು ಮುಂದುವರಿಯಬೇಕೆಂದು ಇನ್ನೊಂದು ಕಡೆ ಹೇಳುತ್ತಾರೆ; ರೂಢಿ ಮತ್ತು ಸಾಂಪ್ರದಾಯಿಕ ಹಕ್ಕುಗಳ ಪ್ರಶ್ನೆ ಬಂದಾಗ, ಅವರು ಅದು ಇರಬಾರದು ಎನ್ನುತ್ತಾರೆ.

ಉತ್ತರಾಧಿಕಾರದ ವಿಷಯವನ್ನು ನಾವು ಪರಿಶೀಲಿಸಬೇಕು, ಅಲ್ಲದೆ, ದತ್ತು ತೆಗೆದುಕೊಳ್ಳುವ ಪ್ರಶ್ನೆಯೂ ಇದೆ. ಈ ವಿಚಾರವಾಗಿ ಅವರು ಸಂಪ್ರದಾಯ ಮತ್ತು ರೂಢಿಗಳು ಮುಂದುವರಿಯಲು ಬಿಡಬಾರದು ಎನ್ನುತ್ತಾರೆ. ಆದರೆ ಇವೆರಡೂ ವಿಷಯಗಳು ಅಸಮರ್ಥನೀಯ. ಆದುದರಿಂದ, ಅದನ್ನು ಪೂರ್ಣವಾಗಿ ರದ್ದುಗೊಳಿಸಬೇಕು. ಮಾನ್ಯರೆ, ಈ ವಿಷಯವಾಗಿ ಅಲ್ಲಲ್ಲಿ ಸಣ್ಣ ಸಮ್ಮೇಳನಗಳು ನಡೆಯುತ್ತಿವೆ ಎಂಬುದನ್ನೂ, ಅದರಿಂದಾಗಿ ನನಗೆ ಮಾತಾಡಲು ಸ್ವಲ್ಪ ಕಷ್ಟವಾಗುತ್ತಿದೆ ಎಂಬುದನ್ನೂ ನಾನು ತಮ್ಮ ಗಮನಕ್ಕೆ ತರುತ್ತೇನೆ.

**ಒಬ್ಬ ಮಾನ್ಯ ಸದಸ್ಯರು** : ಅವರು ಅದೇ ವಾದಗಳನ್ನು ಮತ್ತೆ ಮತ್ತೆ ಮಂಡಿಸುತ್ತಿದ್ದಾರೆ.

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** (ಕಾನೂನು ಮಂತ್ರಿಗಳು) : ಶ್ರೀಯುತರು ಒಂದು ಗಂಟೆಯಿಂದ ಮಾತಾಡುತ್ತಿದ್ದಾರೆ.

**ಮಾನ್ಯ ಉಪಸಭಾಪತಿಗಳು** : ನಿಯಮಾವಳಿಗಳನ್ನು ಪಾಲಿಸಿ! ಅವರಿಗೆ ಹೆಚ್ಚು ಹೊತ್ತು ಮಾತಾಡಬೇಡಿರೆಂದು ತಿಳಿಸುವ ಉತ್ತಮ ವಿಧಾನ, ಅವರ ಪಾಡಿಗೆ ಅವರನ್ನು ಮಾತಾಡಲು ಬಿಟ್ಟು, ನಾನೇ 'ಬೇಗ ಮುಗಿಸಿರಿ' ಎಂದು ಕೇಳುವುದೇ ಹೊರತು, ನೀವು ಗಲಾಟೆ ಮಾಡುವುದಲ್ಲ. ಇನ್ನೂ ಅನೇಕ ಸದಸ್ಯರು ಮಾತಾಡಲು ಕಾತರರಾಗಿದ್ದಾರೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಅವರಾಗಲೇ ೪೫ ನಿಮಿಷಗಳಿಗಿಂತ ಹೆಚ್ಚಿನ ಸಮಯ ತೆಗೆದುಕೊಂಡಿದ್ದಾರೆ.

**ಶ್ರೀ ಗೋಕುಲ್‌ಭಾಯ್ ದೌಲತ್‌ರಾಮ್ ಭಟ್** : ಮಾನ್ಯರೆ, ನಾನು ನಿಮಗೆ ಋಣಿಯಾಗಿದ್ದೇನೆ. ನಾನು ಹೇಳುತಿದ್ದುದ್ದೇನೆಂದರೆ, ನೀವು ಒಂದು ಕಡೆ ರೂಢಿ ಒಂದು ಸಮಸ್ಯೆಯೇ ಅಲ್ಲ, ರೂಢಿ ಮತ್ತು ವಾಡಿಕೆಗಳು ಮುಂದುವರಿಯಬೇಕು ಎನ್ನುತ್ತೀರಿ; ಇನ್ನೊಂದು ಕಡೆ, ಇದರ ಪ್ರಕಾರ ನಡೆದರೆ, ಹಿಂದೂ ಕಾನೂನನ್ನು ಕೊಂದಂತೆಯೇ ಎನ್ನುತ್ತೀರಿ. ನೀವು ಎರಡನ್ನೂ ಹೇಳಬಾರದೆನ್ನುತ್ತೇನೆ. ನೀವು ಹೆಚ್ಚು ಆಹಾರವನ್ನು ಬೆಳೆಯಿರಿ ಎನ್ನುತ್ತೀರಿ. ನಮ್ಮಲ್ಲಿರುವ ಭೂಮಿಯಲ್ಲಿ ಅದು ತೋಟವಿರಲಿ, ಸುಂದರವಾದ ಹುಲ್ಲು ಹಾಸಿಗೆಯಿರಲಿ–ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಬೇಕಾದರೆ, ನಾವು ನಮ್ಮ ಎಲ್ಲ ಭೂಮಿಯನ್ನು ಉಳಬೇಕು. ಒಂದು ಕಡೆ ಹುಲ್ಲುಹಾಸಿಗೆ ಹಾಗೇ ಇರಬೇಕು, ಎನ್ನುತ್ತೀರಿ; ಇನ್ನೊಂದು ಕಡೆ, ಹೆಚ್ಚು ಆಹಾರಧಾನ್ಯಗಳನ್ನು ಬೆಳೆಯಬೇಕು ಎನ್ನುತ್ತೀರಿ. ಈ ವಿಧಾನ ನನಗೆ ಹಿಡಿಸುವುದಿಲ್ಲ.

ಪದ್ಧತಿ (ರೂಢಿ) ಎಂದರೇನು ನಿಮಗೆ ಗೊತ್ತೆ? ನಾವು ಮನೆತನದ ರೂಢಿಗಳನ್ನೂ, ಹಳ್ಳಿಗಳ

ರೂಢಿಗಳನ್ನೂ, ರಾಷ್ಟ್ರೀಯ ರೂಢಿಗಳನ್ನೂ ತಿಳಿದುಕೊಳ್ಳಬೇಕು. 'ಶಾಸ್ತ್ರಾದ್ ರೂಢಿ ಬಲಾಸಿ' (ಶಾಸ್ತ್ರಕ್ಕಿಂತ ರೂಢಿ ಬಲವಾದುದು). ಇಲ್ಲಿ 'ಶಾಸ್ತ್ರ' ಎಂದರೇನು? ನಾನು ಪದೇ ಪದೇ ಶಾಸ್ತ್ರವನ್ನು ಪ್ರಸ್ತಾಪಿಸುತ್ತಿರುವುದನ್ನು ನೋಡಿ ನೀವು 'ಇವನು ಹುಚ್ಚನಂತೆ ಪ್ರಲಾಪಿಸುತ್ತಿದ್ದಾನೆ' ಎಂದುಕೊಳ್ಳುತ್ತೀರಿ. ಶಾಸ್ತ್ರವೆಂದರೆ, ಅದೊಂದು ವಿಜ್ಞಾನ, ಒಂದು ಗ್ರಂಥ, ಒಂದು ನಿಯಮ. ಅದು ಸ್ಮೃತಿಯೂ ಹೌದು. ಅಂದ ಮೇಲೆ ನೀವು ಅದನ್ನು ಮೆಚ್ಚುವುದಿಲ್ಲ. ವಿಚ್ಛೇದನದ ಸಮಸ್ಯೆ ಯಾವ ವಿವಾದವನ್ನುಂಟು ಮಾಡಿತೋ ಅದರಲ್ಲಿ ಅವರು ಸಿಕ್ಕಿಹಾಕಿಕೊಳ್ಳಲು ಅವರು ಇಚ್ಛಿಸುವುದಿಲ್ಲ. ಗಂಡ ಹೆಂಡತಿ ಪಂಚಾಯಿತಿಯಲ್ಲಿ ಕುಳಿತುಕೊಂಡು ತಾವು ಪರಸ್ಪರರಿಂದ ಬಿಡುಗಡೆ ಹೊಂದಬೇಕೆಂದು ಘೋಷಿಸುತ್ತಾರೆ. ಅವರು ತಾವು ಪ್ರಾಪಂಚಿಕ ಸುಖವನ್ನಾಗಲೇ ಅನುಭವಿಸಿರುವುದಾಗಿಯೂ ಬೇರೆ ಮತ್ತೆಲ್ಲಿಗಾದರೂ ಹೋಗಬೇಕೆಂದಿರುವುದಾಗಿಯೂ ಹೇಳುತ್ತಾರೆ. ಈ ಉದ್ದೇಶಕ್ಕಾಗಿ ಅವರು ಜಿಲ್ಲಾ ನ್ಯಾಯಾಲಯಕ್ಕೋ ಉಚ್ಚ ನ್ಯಾಯಾಲಯಕ್ಕೂ ಹೋಗುವ ತೊಂದರೆ ತೆಗೆದುಕೊಳ್ಳಬೇಕಾಗಿಲ್ಲ. ಅವರು ಆ ರೀತಿ ವರ್ತಿಸಿದರೆ ಅದರ ವಿರುದ್ಧವಾದುದು ನಡೆಯುತ್ತದೆ.

ನಾನು ಹಳ್ಳಿಗೆ ಹೋದಾಗ, ಹಿಂದೂ ಕಾನೂನು ಮಸೂದೆಯನ್ನು ಈ ರೀತಿ ರೂಪಿಸಲಾಗಿದೆ. ಅದು ಇಂಥ ಪ್ರಸಂಗಗಳಿಗೆ ಎಡೆ ಮಾಡಿಕೊಡುತ್ತದೆ ಎಂದು ಜನರಿಗೆ ತಿಳಿಸುತ್ತೇನೆ. ಆಗ ಅವರು ಈ ಮಸೂದೆ ಈ ರೂಪದಲ್ಲಿರುವುದು ಬೇಡ ಎನ್ನುತ್ತಾರೆ. ಈಗಿರುವ ಪಂಚಾಯಿತಿಗಳು ಮುಂದುವರಿಯಲು ಬಿಡಬೇಕು; ಈ ಜಟಿಲ ಕಾನೂನುಗಳಿಂದಾಗಿ ವಕೀಲರು ಏಳ್ಗೆ ಹೊಂದುವುದು, ಬಡವರು ಇನ್ನೂ ಹೆಚ್ಚು ಬಡವರಾಗುವುದು–ಇದು ಅವರಿಗೆ ಬೇಕಿಲ್ಲ. ನಿಮ್ಮ ಆಶೀರ್ವಾದದಿಂದಾಗಿ, ಹಿಂದೂ ಕಾನೂನಿನಲ್ಲಿ ಇಂಥವು ಬೇಕಾದಷ್ಟಿವೆ.

ಮಾನ್ಯರೆ, ಇವೆಲ್ಲದರಿಂದ ಆಗುವ ಅಂತಿಮ ಲಾಭವೇನು? ಇಲ್ಲಿ ನಾನು ಎಲ್ಲ ಅಂಶಗಳನ್ನು ಪ್ರಸ್ತಾಪಿಸಲಾರೆ. ಏಕೆಂದರೆ, ನನಗೆ ಸಾಕಷ್ಟು ಸಮಯವಿಲ್ಲ; ಅಲ್ಲದೆ ನನ್ನ ಸೋದರರು ಅವುಗಳನ್ನು ಪ್ರಸ್ತಾಪಿಸಲು ಇಚ್ಛಿಸುತ್ತಾರೆ.

ಆದುದರಿಂದ, ಮಾನ್ಯರೆ, ಇದೊಂದು ಅತ್ಯಂತ ಮುಖ್ಯವಾದ ಸಮಸ್ಯೆಯೆಂದು ನಾನು ಹೇಳುತ್ತಿದ್ದೆ. ಈ ಮಸೂದೆಯನ್ನು ಠರಾವು ಮಾಡಲು ಒಪ್ಪಿರುವ ನನ್ನ ಗೆಳೆಯರಿಗೆ ನಾನು ನೀಡುವ ಹಿತವಚನವೇನೆಂದರೆ, ಮತ್ತೊಮ್ಮೆ ಎಚ್ಚರಿಕೆಯಿಂದ ಇದನ್ನು ಪರಿಶೀಲಿಸಬೇಕು. ಆತುರಾತುರದಿಂದ ಮಾಡುವ ಸಮಯ ಇದಲ್ಲ. ಹಾಗೇನಾದರೂ ನೀವು ಮಾಡಿದರೆ ಮುಂದೆ ನೀವು ಜನರಿಗೆ ಸಮಜಾಯಿಷಿ ನೀಡಬೇಕಾಗುತ್ತದೆ. ನಮ್ಮ ಗೌರವಾನ್ವಿತ ಮುಖಂಡರಾದ ಮಾನ್ಯ ಪಂಡಿತ್ ಜವಾಹರ್‌ಲಾಲ್ ನೆಹರೂರವರನ್ನು ಸಕಲ ಮರ್ಯಾದೆಗಳೊಂದಿಗೆ ನಾನು ಬೇಡಿಕೊಳ್ಳುವುದೇನೆಂದರೆ, ನಮ್ಮ ಮುಂದೆ ಮಂಡಿಸಲಾಗಿರುವ ಈ ವಿಷಯವು ಎಷ್ಟು ಝೀವಂತ ಹಾಗೂ ಮೂಲಭೂತವಾಗಿ ಮುಖ್ಯವಾದುದೆಂದರೆ, ನಾವು ಅದನ್ನು ಎಚ್ಚರಿಕೆಯಿಂದ ಮತ್ತೊಮ್ಮೆ ಪರಿಶೀಲಿಸಬೇಕಾಗಿದೆ. ಈ ವಿಷಯವಾಗಿ ಸಾರ್ವಜನಿಕ ಅಭಿಪ್ರಾಯವನ್ನು ಸಂಗ್ರಹಿಸಬೇಕಾಗಿರುವುದು ಇನ್ನೂ ಹೆಚ್ಚು ಆವಶ್ಯಕ. ನನ್ನ ಸೋದರಿ ಶ್ರೀಮತಿ ರೇಣುಕಾ ರೇ ಜನಮತ ಸಂಗ್ರಹದ ಬಗ್ಗೆ ಪ್ರಸ್ತಾಪಿಸಿದ್ದರು. ಇದಕ್ಕೆ ಸಂಬಂಧಿಸಿದಂತೆ ನಾನು ಹೇಳುವುದೇನೆಂದರೆ, ಸದ್ಯದಲ್ಲೆ ಚುನಾವಣೆಗಳು ನಡೆಯಲಿರುವುದರಿಂದ, ಜನರಿಗೆ ಈ ಹಿಂದೂ ಕಾನೂನು ಬೇಕೋ ಬೇಡವೋ ಎಂಬುದರ ಬಗೆಗಿನ ಅವರ ಅಭಿಪ್ರಾಯವನ್ನೂ ಆಗಲೇ ಸಂಗ್ರಹಿಸಬಹುದು. ಆಗ ಜನರ ಮುಂದೆ ಹೋಗಿ ನಾವು ಇಂಥ ಹಿಂದೂ ಕಾನೂನು ಮಸೂದೆಯನ್ನು ರೂಪಿಸಿದ್ದೇವೆ. ನೀವು ಒಪ್ಪುತ್ತೀರೋ ಇಲ್ಲವೋ ತಿಳಿಸಿ, ಎಂದು ಅವರನ್ನು ಕೇಳಬಹುದು. ಈ ವಿಷಯದಲ್ಲಿ ಪಡೆದ ಜನರ ಅಭಿಪ್ರಾಯವನ್ನು ನೀವು ಸಂಗ್ರಹಿಸಿ

ಪಟ್ಟಿಮಾಡಲು ಸಾಧ್ಯವಾದರೆ, ಆಗ ಅದನ್ನು ನೀವು ಸದನದಲ್ಲಿ ಠರಾವು ಮಾಡಬಹುದು. ಇದು ಜನಮತ ಸಂಗ್ರಹಣೆಯ ತಳಪಾಯವೆಂಬುದನ್ನು ಒಪ್ಪಿಕೊಳ್ಳಬೇಕು. ವೃತ್ತಪತ್ರಿಕೆಗಳ ವರದಿಯಿಂದ ಸ್ವಾಧೀನ ಕಳೆದುಕೊಳ್ಳುವ ಮನುಷ್ಯ ನಾನಲ್ಲ. ವೃತ್ತಪತ್ರಿಕೆಗಳಿಗೆ ತಮ್ಮ ಪ್ರತಿಗಳು ಹೆಚ್ಚು ಮಾರಾಟವಾಗಲಿ ಎಂಬ ದೃಷ್ಟಿಯಿಂದ ಇಂಥ ವಿಷಯಗಳಿಗೆ ಉತ್ಪ್ರೇಕ್ಷೆಯ ರೂಪ ಕೊಡುವ ಅಭ್ಯಾಸವುಂಟು. ನನಗೇನೂ ವೃತ್ತಪತ್ರಿಕೆಯವರ ವಿರುದ್ಧ ವೈಯಕ್ತಿಕ ದ್ವೇಷವೇನೂ ಇಲ್ಲ. ಅವರಿಗೆ ಒಳ್ಳೆಯದನ್ನೇ ಬಯಸುತ್ತೇನೆ ಹಾಗೂ ಅವರಿಗೆ ಸಹಾನುಭೂತಿ ತೋರಿಸುತ್ತೇನೆ. ಆದರೆ ಜನಾಭಿಪ್ರಾಯಕ್ಕೆ ಸಂಬಂಧಪಟ್ಟಂತೆ ಹೇಳುವುದಾರೆ, ಮಾನ್ಯ ಸೋದರಿ ಶ್ರೀಮತಿ ರೇಣುಕಾ ರೇ (ಅವರು ಈಗ ಸದನದಲ್ಲಿಲ್ಲ) ಮತ್ತು ಇತರ ಸೋದರಿಯರಿಗೆ ಹೇಳುವುದಿಷ್ಟೆ. ಕೆಲವು ತಿಂಗಳ ನಂತರ ಚುನಾವಣೆಗಳು ನಡೆಯಲಿವೆ. ಈ ಸಮಸ್ಯೆಯನ್ನು ಆಗ ಜನರ ಮುಂದಿಡಿ. ಜನರಿಗೆ, ನಾವಿಂಥ ಹಿಂದೂ ಕಾನೂನು ಮಸೂದೆಯನ್ನು ರೂಪಿಸಿದ್ದೇವೆ ಹಾಗೂ ಅದನ್ನು ಠರಾವು ಮಾಡಬಯಸುತ್ತೇವೆ, ಎಂದು ಹೇಳಿ. ಒಂದು ವೇಳೆ ಜನರು ಈ ವಿಷಯದ ಪರವಾಗಿ ನಿಮಗೆ ಮತನೀಡಿದರೆ, ಅದನ್ನು ನಾವು ಇಲ್ಲಿ ಖಂಡಿತ ಅಂಗೀಕರಿಸಬಹುದು.

ಆದುದರಿಂದ, ವಿಷಯವನ್ನು ಪುನರ್ವಿಮರ್ಶಿಸಬೇಕೆಂದೂ, ಸದ್ಯಕ್ಕೆ ಅದನ್ನು ತಡೆಹಿಡಿಯಬೇಕೆಂದೂ ಸರ್ಕಾರವನ್ನು ವಿನಂತಿಸಿಕೊಳ್ಳಬಯಸುತ್ತೇನೆ. ನನ್ನ ಮಾತನ್ನು ಮುಗಿಸುತ್ತಾ 'ಎಡಕ್ಕೂ ಬೇಡ, ಬಲಕ್ಕೂ ಬೇಡ, ಮಧ್ಯದಲ್ಲಿ ಒಂದು ಸುವರ್ಣ ಮಾಧ್ಯಮವನ್ನು ಹುಡುಕಿ' ಎಂದಷ್ಟೇ ಹೇಳುತ್ತೇನೆ.

**ಶ್ರೀ ಆರ್.ಕೆ. ಸಿಧ್ವಾ** (ಮ. ಪ್ರಾಂ. ಮತ್ತು ಬೆರಾರ್ : ಸಾಮಾನ್ಯ) : ಮಾನ್ಯರೆ, ನಮ್ಮ ಗೆಳೆಯರು ಪಾರಸಿ ವಿವಾಹಶಾಸನವನ್ನು ಪ್ರಸ್ತಾಪಿಸಿದರು. ಅದನ್ನು ವಿವರಿಸಲು ನನಗೆ ಐದು ನಿಮಿಷ ಕೊಡುತ್ತೀರಾ?

**ಮಾನ್ಯ ಉಪ ಸಭಾಪತಿಗಳು** : ನಾನು ಕೊಡುವುದಿಲ್ಲ, ಏಕೆಂದರೆ ಅವರು ಅದನ್ನು ಯಾವ ರೀತಿಯಲ್ಲೂ ಟೀಕೆ ಮಾಡಲಿಲ್ಲ. ಅವರು ಹೇಳಿದುದು, ಪಾರಸಿ ವಿವಾಹ ಮಸೂದೆಯನ್ನು ಪ್ರಪಂಚದ ಬೇರೆ ಬೇರೆ ಜನರಿಗೆ ಕಳಿಸಿಕೊಡಲಾಗಿತ್ತು ಎಂದಷ್ಟೇ. ಮೂವತ್ತು ಕೋಟಿ ಹಿಂದೂಗಳಿಗೆ ಅನ್ವಯವಾಗುವ ಹಿಂದೂ ಮಸೂದೆಯ ಸಂದರ್ಭದಲ್ಲಿ ಅದನ್ನು ತಮ್ಮ ವಾದದಲ್ಲಿ ಬಳಸಿಕೊಂಡಿದ್ದರು. ಆದುದರಿಂದ, ಈ ಆಧಾರದ ಮೇಲೆ ಸನ್ಮಾನ್ಯ ಸದಸ್ಯರು ಮಾತನಾಡುವ ಹಕ್ಕನ್ನು ಜಾರಿಗೊಳಿಸಬಾರದು.

**ಶ್ರೀ ಆರ್. ಕೆ. ಸಿಧ್ವಾ** : ಮಾನ್ಯರೆ, ಹಾಗಲ್ಲ, ಅವರು ಕೆಲವು ತಪ್ಪು ಹೇಳಿಕೆಗಳನ್ನು ನೀಡಿದ್ದಾರೆ.

**ಮಾನ್ಯ ಉಪ ಸಭಾಪತಿಗಳು** : ಹಾಗಾದರೆ ಸನ್ಮಾನ್ಯ ಸದಸ್ಯರು ಅದನ್ನು ನನ್ನ ಗಮನಕ್ಕೆ ಆಗಲೇ ತರಬೇಕಾಗಿತ್ತು. ಪ್ರತಿಯೊಂದು ವಿಷಯದ ಬಗ್ಗೆಯೂ ನಾವು ಚರ್ಚೆಯನ್ನು ಪುನರಾರಂಭಿಸಬೇಕಾಗಿಲ್ಲ.

**ಶ್ರೀ ಆರ್.ಕೆ. ಸಿಧ್ವಾ** : ಹಾಗಾದರೆ, ಈ ಮಸೂದೆಯ ಮೇಲೆ ಮಾತಾಡಲು ನನಗೆ ಹಕ್ಕಿಲ್ಲವೆ?

**ಮಾನ್ಯ ಉಪಸಭಾಪತಿಗಳು** : ಪ್ರತಿಯೊಬ್ಬ ಸದಸ್ಯರಿಗೂ ಮಾತಾಡುವ ಹಕ್ಕಿದೆ. ಅದರಲ್ಲಿ ಏನೇನೂ ಸಂದೇಹವಿಲ್ಲ. ಆದರೆ ಸಮಯ ನಮಗೆ ಅನುಮತಿ ಕೊಡುವಂತೆ ಕಾಣುತ್ತಿಲ್ಲ.

***ಡಾ॥ ಭಕ್ಷಿ ತೇಕ್‌ಚಂದ್** (ಪೂರ್ವ ಪಂಜಾಬ್ : ಸಾಮಾನ್ಯ) : ಮಾನ್ಯರೇ, ಮಸೂದೆಯ ಮೇಲಿನ ಚರ್ಚೆಯು ಬಹಳ ದಿನಗಳಿಂದ ಮುಂದುವರಿಯುತ್ತಿದೆ. ತಮ್ಮ ಮುಂದೆ ವಿಷಯದ ಮೇಲಿನ ಎರಡು ಪಕ್ಷಗಳೂ ತಮ್ಮ ವಾದಗಳನ್ನು ಮುಂದಿಟ್ಟಿವೆ. ವಿಷಯದ ಪರವಾಗಿ ಅಥವಾ ವಿರುದ್ಧವಾಗಿ ಮಂಡಿಸಿರುವ ಯಾವ ವಾದವನ್ನೂ ನಾನು ಮತ್ತೆ ಮಂಡಿಸುವುದಿಲ್ಲ. ನಾನು ಎರಡು ವಿಷಯಗಳನ್ನಷ್ಟೇ ನಿವೇದಿಸಿಕೊಳ್ಳುತ್ತೇನೆ:

---

* C.A. (Leg) D, Voel. VI, pt ii, ೧೪ನೇ ಡಿಸೆಂಬರ್ ೧೯೪೯, ಪುಟ ೫೮೫–೯೯.

ಒಂದು, ಮಸೂದೆಯನ್ನು ಬೆಂಬಲಿಸುವವರಿಗೆ, ಮತ್ತೊಂದು ಅದನ್ನು ವಿರೋಧಿಸುವವರಿಗೆ. ಅನಂತರ, ನನ್ನ ಪ್ರಕಾರ ಮಸೂದೆಯಲ್ಲಿ ಯಾವ ಬದಲಾವಣೆಯನ್ನು ಮಾಡಲೇ ಬೇಕೋ, ಆ ಬದಲಾವಣೆಯ ಪರಿಶೀಲನೆಗಾಗಿ ಒಂದು ಸಲಹೆಯನ್ನು ಸದನದ ಮುಂದಿಡುತ್ತೇನೆ. ಈ ಸಲಹೆಯ ಪರಿಶೀಲನೆಯಿಂದಾಗಿ, ಮಸೂದೆಯು ಎಲ್ಲರಿಗೂ, ಕೊನೆಯ ಪಕ್ಷ, ಸದನದ ಬಹಳಷ್ಟು ಸದಸ್ಯರಿಗೆ ಹಾಗೂ ದೇಶದ ಬಹುತೇಕ ಜನರಿಗೆ, ಒಪ್ಪಿಗೆಯಾಗಲಿ ಎಂಬುದು ನನ್ನ ಉದ್ದೇಶ. ಆದುದರಿಂದ, ನನ್ನ ಅಭಿಪ್ರಾಯಗಳನ್ನು ಕೆಲವು ನಿಮಿಷಗಳವರೆಗೆ ಸದನದ ಮುಂದಿಡಲು ಸದನದ ಅಪ್ಪಣೆ ಕೇಳುತ್ತಿದ್ದೇನೆ.

ಮಸೂದೆಯ ವಿರುದ್ಧವಾಗಿರುವವರಿಗೆ ನೀಡುವ ನನ್ನ ಮೊದಲನೆಯ ಸಲಹೆ ಹೀಗಿದೆ : ಹಿಂದೂ ಕಾನೂನನ್ನು ಮುಟ್ಟುವ ಅಧಿಕಾರ ಈ ಸದನಕ್ಕಿಲ್ಲ ಎಂದು ಕೆಲವರು ಹೇಳುತ್ತಿದ್ದಾರೆ, ಅದಕ್ಕೆ 'ಅದೊಂದು ಅನೇಕ ಶತಮಾನಗಳಿಂದ ಬಂದಿರುವ ಧರ್ಮ, ಅದರಲ್ಲಿ ಏನಾದರೂ ಬದಲಾವಣೆ ಮಾಡುವ ಅಧಿಕಾರ ಯಾರಿಗಾದರೂ ಇದ್ದರೆ, ಅದು ಪಂಡಿತರ ಪರಿಷತ್ತಿಗೆ ಮಾತ್ರ' ಎಂಬ ಕಾರಣವನ್ನು ಅವರು ಕೊಡುತ್ತಾರೆ. ಆದರೆ ನಾನು ವಿನಯಪೂರ್ವಕವಾಗಿ ತಮ್ಮಲ್ಲಿ ನಿವೇದಿಸಿಕೊಳ್ಳುವುದೇನೆಂದರೆ, ಇಂಥ ಒಂದು ವಾದವನ್ನು ನಾವು ಒಂದು ಕ್ಷಣವೂ ಸಹಿಸಬಾರದು. ಹಿಂದೂ ಕಾನೂನು, ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಮತ್ತಿತರರು ಹೇಳಿರುವಂತೆ, ಎಂದೂ ನಿಶ್ಚಲವಾಗಿ ನಿಂತಿಲ್ಲ. ಅದು ಕಾಲಕಾಲಕ್ಕೆ ಬದಲಾಗುತ್ತಲೇ ಬಂದಿದೆ. ಪ್ರತಿಸಾರಿ ಸಮಾಜದ ವ್ಯವಸ್ಥೆಯಲ್ಲಿ ಬದಲಾವಣೆಯಾದಾಗಲೂ ಒಬ್ಬ ಸ್ಮೃತಿಕಾರ ಕಾಣಿಸಿಕೊಳ್ಳುತ್ತಿದ್ದ, ಅವನು ದಾರ್ಶನಿಕ, ಋಷಿ ಅಥವಾ ಮುನಿಯಿರಬಹುದು. ಅವನು ಆ ಕಾಲಕ್ಕೆ ತಕ್ಕಂತಹ ಬದಲಾವಣೆಗಳನ್ನು ಮಾಡುತ್ತಿದ್ದ. ಈ ಪ್ರಕ್ರಿಯೆಯು ನಮ್ಮ ದೇಶ ಬ್ರಿಟಿಷರ ಆಳ್ವಿಕೆಗೆ ಒಳಪಡುವವರೆಗೂ, ಅನೇಕ ಶತಮಾನಗಳಿಂದ ನಡೆದುಕೊಂಡು ಬಂದಿತು. ಈ ಅವಧಿಯಲ್ಲಿ ಯಾವುದೇ ಬದಲಾವಣೆ ಮಾಡಲು ಕಾನೂನನ್ನು ಅರ್ಥೈಸುವ ನ್ಯಾಯಾಧೀಶರಿಗೆ ಅಥವಾ ವಿಧಾನಸಭೆಗೆ ಮಾತ್ರ ಸಾಧ್ಯವಿತ್ತು. ಇದನ್ನು ಮಾಡಲು ಮನು, ಯಾಜ್ಞವಲ್ಕ್ಯ ಅಥವಾ ವಿಶ್ವಾಮಿತ್ರನ ಅಧಿಕಾರವುಳ್ಳ ಯಾವ ಋಷಿಯೂ ಕಾಣಿಸಕೊಳ್ಳಲಿಲ್ಲ. ಆ ಕಾನೂನನ್ನು ಸ್ಮೃತಿ ಮತ್ತು ನಿಬಂಧಗಳ ಬೆಳಕಿನಲ್ಲಿ ಅರ್ಥೈಸಲು ಕರ್ತವ್ಯಬದ್ಧರಾದ ನ್ಯಾಯಾಧೀಶರಿಗೆ ಸಾಧ್ಯವಿತ್ತು; ಅಥವಾ ಇದು ಸಾಧ್ಯವಾಗದಿದ್ದರೆ, ವಿಧಾನಸಭೆ ಮಧ್ಯೆ ಪ್ರವೇಶಿಸಬೇಕಿತ್ತು. ಆದುದರಿಂದ, ೧೯೪೯ನೇ ಇಸವಿಯಲ್ಲಿ, 'ವಿಧಾನ ಸಭೆಗೆ ಇದನ್ನು ಚರ್ಚಿಸುವ ಸಾಮರ್ಥ್ಯವಿಲ್ಲ. ಏಕೆಂದರೆ, ಅದರಲ್ಲಿ ಸ್ಮೃತಿಗಳು ಗೊತ್ತಿಲ್ಲದ ಅನೇಕ ಜನರಿದ್ದಾರೆ' ಎಂದು ವಾದಿಸಿದರೆ ಕೇವಲ ಕಾಲಹರಣವಾಗುತ್ತದೆಯಷ್ಟೆ. ನನ್ನ ಪ್ರಕಾರ, ಇಂಥ ವಾದವನ್ನು ಈ ಕ್ಷಣವೇ ತಿರಸ್ಕರಿಸಬೇಕು. ಈ ದೇಶದ ವಿಧಾನ ಸಭೆಗಳು ಒಂದು ಶತಮಾನಕ್ಕಿಂತ ಹೆಚ್ಚಾಗಿ ಅನುಸರಿಸುತ್ತಿರುವ ಘಟನಾವಳಿಗಳನ್ನು ನೋಡಿದರೋ, ಹಿಂದೂ ಕಾನೂನು ಅಥವಾ ಅದರ ಒಂದು ಭಾಗ ದೋಷಪೂರಿತವಾಗಿದೆ ಎಂದು ಕಂಡುಬಂದಾಗಲೆಲ್ಲಾ ಶಾಸನವನ್ನು ಮಾಡುತ್ತಿದ್ದುದು ಕಂಡುಬರುತ್ತದೆ. ಇದು ದಿವಂಗತ ರಾಮ್ ಮೋಹನರಾಯ್‌ರ ಮಾರ್ಗದರ್ಶನದಲ್ಲಿ ೧೮೩೨ರಲ್ಲಿ ಠರಾವಾದ ಸಹಗಮನ (ಸತಿ) ನಿಷೇಧಶಾಸನ (Removal of Sati Act)ದ ಮೂಲಕ ಪ್ರಾರಂಭವಾಯಿತು. ಸತಿಪದ್ಧತಿಯನ್ನು ಹಿಂದೂಧರ್ಮದ ಭಾಗವೆಂದು ಪರಿಗಣಿಸಲಾಗಿತ್ತು. ಆದರೆ ಅದು ನಿಜವಾಗಿಯೂ ಹಿಂದೂಧರ್ಮದ ಭಾಗವೇನಲ್ಲ. ವಾಸ್ತವವಾಗಿ, ಅದು ಧಾರ್ಮಿಕ ತತ್ತ್ವಗಳ ದುರುಪಯೋಗ ಎಂದು ಹೇಳಬಹುದು. ಆದುದರಿಂದ, ಅದನ್ನು ನಿಷೇಧಿಸಲೇ ಬೇಕಿತ್ತು ಹಾಗೂ ಆ ಉದ್ದೇಶದಿಂದ ೧೮೩೨ ರಷ್ಟು ಹಿಂದೆಯೇ ಒಂದು ಶಾಸನವನ್ನೂ ಮಾಡಲಾಗಿತ್ತು.

**ಮಾನ್ಯ ಉಪಸಭಾಪತಿಗಳು :** ಬಹಳ ಜನ ಸದಸ್ಯರು ಪಿಸುಪಿಸು ಮಾತನಾಡುತ್ತಿದ್ದಾರೆ. ವರದಿಗಾರರಿಗೆ

ಬರೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಅಲ್ಲದೆ. ಭಾಷಣಕಾರರು ಮಾತಾಡುತ್ತಿರುವುದು ನನಗೂ ಕೇಳಿಸುತ್ತಿಲ್ಲ.

**ಶ್ರೀಯುತ ರೋಹಿಣಿ ಕುಮಾರ್ ಚೌಧರಿ :** ಭಾಷಣಕಾರರ ದನಿ ಅಸ್ಪಷ್ಟವಾಗಿದೆ. ಅವರ ಎದುರಿಗೆ ಪರಿಸ್ಪರ ಹತ್ತಿರವಿರುವ ಎರಡು ಧ್ವನಿವರ್ಧಕಗಳಿವೆ. ನಮಗೂ ಸಹ ಅವರು ಮಾತಾಡುತ್ತಿರುವುದು ಕೇಳಿಸುತ್ತಿಲ್ಲ.

**ಮಾನ್ಯ ಉಪಸಭಾಪತಿಗಳು :** ಅವರು ಧ್ವನಿವರ್ಧಕಗಳ ಎದುರಿಗೇ ಮಾತಾಡುತ್ತಿದ್ದಾರೆ. ಪ್ರತಿಯೊಂದು ಆಸನಕ್ಕೂ ಒಂದು ಸಣ್ಣ ಧ್ವನಿವರ್ಧಕವನ್ನು ಜೋಡಿಸಲಾಗಿದೆ. ಅದಕ್ಕೆ ನಾನೇನು ಮಾಡಲು ಸಾಧ್ಯ?

ಮಾನ್ಯ ಸದಸ್ಯರು ದಯವಿಟ್ಟು ಮಧ್ಯಾಹ್ನದ ಭೋಜನದ ನಂತರ ತಮ್ಮ ಮಾತನ್ನು ಮುಂದುವರಿಸಬಹುದು. ಸದನದ ಕಾರ್ಯರೂಪಗಳನ್ನು ಮಧ್ಯಾಹ್ನದ ೨–೩೦ ರವರೆಗೆ ಮುಂದೂಡಲಾಗಿದೆ.

**ಶ್ರೀ ಎ. ಥಾನು ಪಿಳ್ಳೆ** (ತಿರುವಾಂಕೂರು ಮತ್ತು ಕೊಚ್ಚಿ ಸಂಯುಕ್ತ ರಾಜ್ಯ) : ನಾನೊಂದು ಸಲಹೆ ನೀಡಲೆ? (ಅಡ್ಡಿ) ನನ್ನ ಸಲಹೆ ಹೀಗಿದೆ:

**ಕೆಲವು ಮಾನ್ಯ ಸದಸ್ಯರು :** ಕಾರ್ಯಕಲಾಪಗಳನ್ನಾಗಲೇ ಮುಂದೂಡಲಾಗಿದೆ.

**ಮಾನ್ಯ ಉಪಸಭಾಪತಿಗಳು :** ನಿಮ್ಮದು ಸ್ವಲ್ಪ ತಡವಾಯಿತು. ಕಾರ್ಯಕಲಾಪಗಳನ್ನಾಗಲೇ ಮುಂದೂಡಲಾಗಿದೆ.

**ಶ್ರೀ ಎ. ಥಾನು ಪಿಳ್ಳೆ :** ನನಗೆ ವಿಷಾದವಾಗುತ್ತಿದೆ. ಇದು ನನಗೆ ಗೊತ್ತಿರಲಿಲ್ಲ.

ಆಗ ಸದನದ ಕಾರ್ಯಕಲಾಪಗಳನ್ನು ಊಟದ ಸಲುವಾಗಿ ಮಧ್ಯಾಹ್ನ ೨.೩೦ ಗಂಟೆಯವರೆಗೂ ಮುಂದೂಡಲಾಯಿತು.

ವಿಧಾನ ಸಭೆಯು, ಭೋಜನದ ನಂತರ ಮಧ್ಯಾಹ್ನ ಎರಡೂವರೆ ಗಂಟೆಗೆ ಮತ್ತೆ ಪ್ರಾರಂಭವಾಯಿತು. ಆಗ ಮಾನ್ಯ ಉಪಸಭಾಪತಿಗಳು (ಶ್ರೀ ಅನಂತಶಯನಂ ಅಯ್ಯಂಗಾರ್) ಅಧ್ಯಕ್ಷರ ಸ್ಥಾನದಲ್ಲಿದ್ದರು.

**ಡಾ॥ ಭಕ್ಷಿ ತೇಕ್‌ಚಂದ್ :** ಮಾನ್ಯರೆ, ಸತಿ ಪದ್ಧತಿಯನ್ನು ನಿಷೇಧಿಸುವ ಉದ್ದೇಶದಿಂದ ಶ್ರೀ ರಾಮ್ ಮೋಹನರಾಯ್‌ರ ಸ್ಫೂರ್ತಿದಾಯಕ ಪ್ರಯತ್ನದಿಂದಾಗಿ ೧೮೨೯ ರಲ್ಲಿ ಶಾಸನಗಳನ್ನು ಮಾಡಲಾಯಿತು. ಸದನವು ಊಟಕ್ಕೆಂದು ಎದ್ದಾಗ ನಾನು ಆ ಶಾಸನಗಳ ಬಗ್ಗೆ ಮಾತಾಡುತ್ತಿದ್ದೆ. ನಮಗೆಲ್ಲರಿಗೂ ಗೊತ್ತಿರುವಂತೆ, ಆಗಿನ ಕಾಲದಲ್ಲಿ ಸತಿಪದ್ಧತಿ ಹಿಂದೂ ಧರ್ಮದ ಒಂದು ಭಾಗವೆಂದು ತಿಳಿಯಲಾಗಿತ್ತು. ಸತಿಪದ್ಧತಿಯು ನಮ್ಮ ಧರ್ಮದ ಅತ್ಯಂತ ಮುಖ್ಯವಾದ ಭಾಗಗಳಲ್ಲೊಂದು. ಅದರಲ್ಲಿ ಹಸ್ತಕ್ಷೇಪ ಮಾಡುವುದೆಂದರೆ ಹಿಂದೂ ಧರ್ಮದ ಮೇಲೆ ಅತಿಕ್ರಮಣ ಮಾಡಿದಂತೆ ಎಂದು ಕೆಲವರು ವಾದಿಸಿದ್ದೂ ಉಂಟು. ಆದರೆ ನಮ್ಮ ಕೋಮಿನವರ ವಿವೇಕವೇ ಗೆದ್ದಿತು. ಶಾಸನವನ್ನು ಠರಾವು ಮಾಡಲಾಯಿತು ಹಾಗೂ ಸತಿಪದ್ಧತಿಯು ರದ್ದಾಯಿತು. ಈ ಪದ್ಧತಿಯು ನಾನಾಗಲೇ ಹೇಳಿದಂತೆ, ಹಿಂದೂ ಕಾನೂನಿನ ಒಂದು ಭಾಗವಲ್ಲ. ಅದೊಂದು ತಂತ್ರ ಅಷ್ಟೇ. ಅದನ್ನು ಅಂಧಕಾರವೆಂದು ಕರೆಯಬಹುದಾದ ಯುಗದಲ್ಲಿ ಅಥವಾ ಮಧ್ಯಯುಗದಲ್ಲಿ ಸೇರಿಸಲಾಯಿತು. ಸುದೈವದಿಂದ, ಅದನ್ನು ಶಾಸನ ಕ್ರಮದ ಮೂಲಕ ರದ್ದುಪಡಿಸಲಾಯಿತು.

ಇದಾದ ನಂತರ, ೧೮೫೦ರಲ್ಲಿ ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ, ವರ್ಗ ಅಶಕ್ತತೆಯನ್ನು ನಿಷೇಧಿಸಲು ಒಂದು ಶಾಸನ ಮಾಡಲಾಯಿತು. ಅಂದರೆ, ಒಬ್ಬ ವ್ಯಕ್ತಿಯು ಅಥವಾ ಉತ್ತರಾಧಿಕಾರಿಯು ತನ್ನ ಧರ್ಮವನ್ನು ಬದಲಾಯಿಸಿಕೊಂಡರೆ, ಅವನು ತನ್ನ ಉತ್ತರಾಧಿಕಾರದ ಹಕ್ಕನ್ನು ಕಳೆದುಕೊಳ್ಳುವುದಿಲ್ಲ. ಹಿಂದೂ ಕಾನೂನಿನಲ್ಲಿ ಮಾಡಿದ ಎರಡನೆಯ ದೊಡ್ಡ ಬದಲಾವಣೆ ಇದು. ಅನಂತರ ೧೮೫೬ರಲ್ಲಿ ಒಂದು ದೊಡ್ಡ ಸುಧಾರಣೆ

ಮಾಡಲಾಯಿತು. ಆಗ ವಿಧವಾ ಪುನರ್ವಿವಾಹ ಶಾಸನವನ್ನು ಜಾರಿಗೊಳಿಸಲಾಯಿತು. ಹಿಂದೂ ಕಾನೂನು ವಿಧವೆಯರಿಗೆ ಮತ್ತೆ ಮದುವೆ ಮಾಡಕೊಳ್ಳಲು ಅನುಮತಿ ಕೊಡುವುದಿಲ್ಲವೆಂದು ಅನೇಕ ಶತಮಾನಗಳವರೆಗೆ ನಂಬಲಾಗಿತ್ತು.

**ಶ್ರೀ ಮಹಾವೀರ ತ್ಯಾಗಿ :** ಮಾನ್ಯರೆ, ಮಂತ್ರಿಮಂಡಲದ ಪ್ರತಿನಿಧಿಗಳು ಬಂದಿದ್ದಾರೆಯೇ ಎಂಬುದನ್ನು ನಾನು ತಿಳಿದುಕೊಳ್ಳಬಯಸುತ್ತೇನೆ.

**ಸನ್ಮಾನ್ಯ ಶ್ರೀ ಕೆ.ಸಿ. ನಿಯೋಗಿ** (ವಾಣಿಜ್ಯ ಮಂತ್ರಿ) : ಸರ್ಕಾರವು ಒಂದು ಮತ್ತು ಅಖಂಡವಾಗಿರುವುದರಿಂದ, ಒಬ್ಬ ಮಂತ್ರಿ ಹಾಜರಿದ್ದರೆ, ಅವರು ಇಡೀ ಸರ್ಕಾರವನ್ನೇ ಪ್ರತಿನಿಧಿಸಲು ಸಮರ್ಥರಿದ್ದಾರೆಂದೇ ಅರ್ಥ.

**ಮಾನ್ಯ ಉಪಸಭಾಪತಿಗಳು :** ಆ ಕಡೆಯಲ್ಲಿರುವ ಸದಸ್ಯರು ಈ ಕಡೆಗೆ ಬಂದು ಕುಳಿತುಕೊಳ್ಳುವುದು ಯಾವಾಗಲೂ ಸದಾಶಯ ಎಂಬುದು ನನ್ನ ನಂಬಿಕೆ.

**ಡಾ॥ ಭಕ್ಷಿ ತೇಕ್‌ಚಂದ್ :** ವಿಧವೆಯರು ಮತ್ತೆ ಮದುವೆಯಾಗುವುದು ಹಿಂದೂ ಧರ್ಮಕ್ಕೆ ವಿರುದ್ಧವಾದುದೆಂದು ಪರಿಗಣಿಸಲಾಗಿತ್ತು; ಅಲ್ಲದೆ, ಈ ಹಳೆಯ ನಿಯಮವನ್ನು ರದ್ದುಗೊಳಿಸುವ ಸಲಹೆಯನ್ನು ಯಾರಾದರೂ ನೀಡಿದರೆ, ಅಥವಾ ವಿಧವೆಯರು ಮತ್ತೆ ಮದುವೆಯಾಗಲು ಸಹಾಯಕವಾಗುವಂಥ ಶಾಸನವನ್ನೇನಾದರೂ ಮಾಡಿದರೆ, ಅದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಲಾಗುತ್ತಿತ್ತು. ಆದರೆ ಶ್ರೀ ಈಶ್ವರಚಂದ್ರ ವಿದ್ಯಾಸಾಗರ್ ಮತ್ತು ಆ ಕಾಲದ ಇತರ ಮುಖಂಡರ ಮುಖಂಡತ್ವದಲ್ಲಿ ಸಾರ್ವಜನಿಕ ಅಭಿಪ್ರಾಯಕ್ಕೆ ಜಯವಾಯಿತು ಹಾಗೂ ಯಾವ ದೊಡ್ಡ ಅಡ್ಡಿಯಿಂದಾಗಿ ಹಿಂದೂ ವಿಧವೆಯವರು ನರಳುತ್ತಿದ್ದರೋ ಆ ಅಡ್ಡಿಯನ್ನು ಒಂದು ಶಾಸನದ ಮೂಲಕ ನಿವಾರಿಸಲಾಯಿತು. ಈ ಶಾಸನ ಮಾಡಿದ್ದರಿಂದಾಗಿ ಹಿಂದೂ ಧರ್ಮ ಅಂತ್ಯಗೊಳ್ಳಲಿಲ್ಲವಲ್ಲ.

ಇದಾದನಂತರ ಅಂದಿನ ಕಾಲದ ಸಂಪತ್ತು ಮತ್ತು ವಿಧಾನಸಭೆಗಳು ಹಿಂದೂ ಕಾನೂನನ್ನು ಅನೇಕ ಶಾಸನಗಳ ಮೂಲಕ ತಿದ್ದುತ್ತಾ ಬಂದಿದೆ. ಒಪ್ಪಿಗೆ ವಯಸ್ಸು ಮಸೂದೆಯನ್ನು ಮಾಡಿದಾಗ, ೧೮೯೦ ಮತ್ತು ೧೮೯೧ ರಲ್ಲಿ ಆದ ದೊಡ್ಡ ಗಲಭೆಯನ್ನು ನಿಮ್ಮಲ್ಲಿ ಬಹಳಷ್ಟು ಜನ ನೆನಪಿನಲ್ಲಿಟ್ಟುಕೊಂಡಿದ್ದೀರಿ. ಹಿಂದೂಗಳೂ ಮುಸ್ಲಿಮರೂ ಕ್ರೈಸ್ತರೂ ಇರುವ ಹಾಗೂ ಆಡಳಿತಗಾರರ ಅಧೀನದಲ್ಲಿರುವ ವಿಧಾನಸಭೆಯು, ಹನ್ನೆರಡು ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಂಡತಿಯೊಡನೆ ಸಂಭೋಗ ಮಾಡಲು ಅನುಮತಿ ಕೊಡುವ ಪದ್ಧತಿಗೆ ಸಂಬಂಧಿಸಿದಂತೆ ಒಂದು ಶಾಸನವನ್ನೇನಾದರೂ ಮಾಡಿದರೆ, ಅದು ಹಿಂದೂ ಧರ್ಮದಲ್ಲಿ ಮಾಡಿದ ದೊಡ್ಡ ಹಸ್ತಕ್ಷೇಪವಾಗುತ್ತದೆ ಎಂಬ ದೊಡ್ಡ ಕೂಗನ್ನು ಆಗ ಎಬ್ಬಿಸಲಾಯಿತು. ಆಗಿನ ವೃತ್ತಪತ್ರಿಕೆಗಳಲ್ಲಿ, ಅಮೃತ್ ಬಜಾರ್ ಪತ್ರಿಕಾದಂಥ ಮುಂದುವರಿದ ಪತ್ರಿಕೆಗಳಲ್ಲಿಯೂ ಸಹ, ಅಚ್ಚಾದುದು ನಿಮ್ಮ ನೆನಪಿನಲ್ಲಿದ್ದರೆ, ಹಿಂದೂ ಸಮಾಜವು ಆಗಿನ ಸಮಯದಲ್ಲಿ ಎಂಥ ಕ್ಷೋಭೆಗೊಳಗಾಗಿತ್ತು ಎಂಬುದು ನಮಗೆ ತಿಳಿದೀತು. ಆದರೆ ಶಾಸಕರು ಮತ್ತೆ ಹಠ ಹಿಡಿದು, ಆ ಮಸೂದೆಗೆ ಅಂಗೀಕಾರ ನೀಡಿದರು. ಸದನದ ಹೆಚ್ಚೂ ಕಡಿಮೆ ಅವಿರೋಧ ಒಪ್ಪಿಗೆ ಪಡೆದ ಆ ಮಸೂದೆಯನ್ನೇ ತಿದ್ದುಪಡಿ ಮಾಡಿ ಅದನ್ನು ನಮ್ಮ ಗೆಳೆಯರಾದ ಪಂಡಿತ್ ಠಾಕೂರ್‌ದಾಸ್ ಭಾರ್ಗವರು ಸದನದ ಮುಂದೆ ಮಂಡಿಸಿ, ಸದನದ ಎಲ್ಲ ಪಕ್ಷಗಳ ಆ ವಿರೋಧ ಒಪ್ಪಿಗೆ ಪಡೆದರು. ಹಿಂದೂ ಧರ್ಮದ ಬಹಳ ಮುಖ್ಯ ಭಾಗವೆಂದು ಪರಿಗಣಿಸಲಾಗಿದ್ದ ವಿಷಯಗಳ ಸಂಬಂಧವಾಗಿ ಯಾವುದೇ ಶಾಸನ ಮಾಡಲು ವಿಧಾನಸಭೆಗೆ ಸಾಮರ್ಥ್ಯವಿಲ್ಲವೆಂದು ಅಂದು ನಮ್ಮ ಗೆಳೆಯರಾರೂ ಎಂದುಕೊಳ್ಳಲಿಲ್ಲ. ಈಗ, ಇತ್ತೀಚಿನ ನಿದರ್ಶನ ತೆಗೆದುಕೊಳ್ಳೋಣ. ೧೯೧೬ರಲ್ಲಿ

ಭಾರತೀಯ ವಿಧಾನ ಸಭೆಯು ಆಸ್ತಿ ವಿನಾಯಿತಿ ಶಾಸನ (Dispensation of Property Act) ಎಂಬ ಶಾಸನವನ್ನು ಜಾರಿಗೊಳಿಸಿತು, ಟ್ಯಾಗೋರ್ v/s ಟ್ಯಾಗೋರ್ ಎಂದು ಪ್ರಸಿದ್ಧವಾಗಿರುವ ಮೊಕದ್ದಮೆಯಲ್ಲಿ ಕಂಡುಬರುವ ಆ ಶಾಸನವು ಪ್ರಿವಿ ಕೌನ್ಸಿಲ್ ಮಾಡಿದ ಕಾನೂನನ್ನು ರದ್ದುಗೊಳಿಸುವ ಪರಿಣಾಮವನ್ನುಂಟುಮಾಡಿತು. ಆ ಕಾನೂನಿನಲ್ಲಿ ಸ್ಮೃತಿಯ ಕೆಲವು ಭಾಗಗಳ ಆಧಾರದ ಮೇಲೆ ಆಪ್ತಮಂಡಲಿಯು ಈ ನಿಯಮವನ್ನು ಮಾಡಿತು: ಯಾವ ದಿನ ದಾನ ಅಥವಾ ಭಕ್ಷೀಸು ಮಾಡಲಾಗುವುದೋ ಆ ದಿನ ದಾನ ಅಥವಾ ಭಕ್ಷೀಸು ಪಡೆಯುವ ಕೆಲವೊಂದು ವರ್ಗದ ಜನರು ಇನ್ನೂ ಹುಟ್ಟಿರದಿದ್ದರೆ, ಆ ದಾನ ಅಥವಾ ಭಕ್ಷೀಸು ಹಿಂದೂ ಕಾನೂನಿನ ಪ್ರಕಾರ ರದ್ದಾಗುತ್ತದೆ. ಈ ಕಾನೂನು ಅರವತ್ತು ಅಥವಾ ಎಪ್ಪತ್ತು ವರ್ಷ ಜಾರಿಯಲ್ಲಿತ್ತು. ಆದರೆ ಸ್ಮೃತಿಯನ್ನು ಹೀಗೆ ಅರ್ಥೈಸುವುದು ತಪ್ಪು ಎಂದು ಆಗಲೇ ಸೂಚಿಸಲಾಗಿತ್ತು. ಈ ವಿಷಯವನ್ನು ಪರಿಶೀಲಿಸಲಾಗಿ ಸ್ಮೃತಿಯ ಕೆಲವೊಂದು ಭಾಗಗಳನ್ನು ಪದಶಃ ಅರ್ಥ ಮಾಡಿದಾಗ ಪ್ರಿವಿ ಕೌನ್ಸಿಲ್ ತಲುಪಿದ ತೀರ್ಮಾನಗಳು ಸರಿ ಎನ್ನಿಸಿತು. ಆದರೆ ಇದೊಂದು ದೊಡ್ಡ ಅಡ್ಡಿ ಹಾಗೂ ದೊಡ್ಡ ಅನ್ಯಾಯ ಎಂಬುದೂ ಕಂಡುಬಂದಿತು. ಆಗಲೂ ವಿಧಾನ ಸಭೆ ಮತ್ತೆ ಮಧ್ಯೆ ಪ್ರವೇಶಿಸಿ, ಸದನದ ಸರ್ವಾನುಮತದಿಂದ ೧೯೧೬ರಲ್ಲಿ ಆ ಮಸೂದೆಯನ್ನು ಠರಾವು ಮಾಡಿತು.

ಇದಾದನಂತರ ಅಶಕ್ತತಾ ನಿಷೇಧದ ಮಸೂದೆ ಬಂದಿತು. ಕೆಲವು ಸ್ಮೃತಿಗಳಲ್ಲಿ ಉಕ್ತವಾಗಿರುವ ಹಿಂದೂ ಕಾನೂನಿನ ಪ್ರಕಾರ, ಒಬ್ಬ ವ್ಯಕ್ತಿಗೆ ದೈಹಿಕವಾಗಿ ನ್ಯೂನತೆ ಇದ್ದರೆ – ಕುರುಡನಾಗಿದ್ದರೆ, ಕಿವುಡನಾಗಿದ್ದರೆ ಅಥವಾ ಮೂಕನಾಗಿದ್ದರೆ, ಅವನಿಗೆ ಉತ್ತರಾಧಿಕಾರದ ಅರ್ಹತೆಯಿಲ್ಲ. ಅಂಥ ಸ್ಮೃತಿಗಳ ಅರ್ಥವೇನಾದರೂ ಇರಲಿ. ಇದು ಜನರಿಗೆ ಕಠೋರವೆನಿಸದು. ಒಂದು ವೇಳೆ ಐವರು ಗಂಡು ಮಕ್ಕಳಲ್ಲಿ ಒಬ್ಬ ಕಿವುಡ ಅಥವಾ ಕುರುಡನಾಗಿದ್ದರೆ ಅಥವಾ ಅವನಿಗೆ ಮತ್ತಾವುದೋ ನ್ಯೂನತೆಯಿದ್ದರೆ, ದೈಹಿಕವಾಗಿ ಯೋಗ್ಯರೂ ದುಡಿಯಲು ಸಮರ್ಥರೂ ಆದ ವ್ಯಕ್ತಿಗಳಿಗಿಂತ, ಅವನಿಗೆ ತಂದೆಯ ಆಸ್ತಿಯಲ್ಲಿ ಪಾಲು ಸಿಕ್ಕಬೇಕಾದುದು ಹೆಚ್ಚು ಆವಶ್ಯಕ. ಪೂರ್ವಕಾಲದಲ್ಲಿ ಸಮಾಜದ ರಚನೆ ಹೇಗಿತ್ತೆಂದರೆ, ಒಂದು ಕುಟುಂಬದ ಸಂಪತ್ತನ್ನು ಹೆಚ್ಚಿಸಬೇಕಾದರೆ, ಪ್ರತಿಯೊಬ್ಬರೂ ಕೆಲಸ ಮಾಡಲೇ ಬೇಕಾಗಿತ್ತು; ಸ್ಮೃತಿಯ ಈ ವಾಕ್ಯ ಅಂಥ ಕಾಲಕ್ಕೆ ಸರಿಯಾಗಿತ್ತು ಅಥವಾ ಪ್ರಯೋಜನಕಾರಿಯಾಗಿತ್ತು. ಆದರೆ ಇದು ಇತ್ತೀಚೆಗೆ ನಿರುಪಯೋಗಿಯಾಗಿತ್ತು; ಆದುದರಿಂದ ಹಿಂದೂ ಸಮಾಜವು ಅದನ್ನು ತೀವ್ರವಾಗಿ ಪ್ರತಿಭಟಿಸಿತು, ಇದರಿಂದ ಕ್ಷೋಭೆ ಎಷ್ಟು ಹೆಚ್ಚಾಯಿತೆಂದರೆ, ಭಾರತೀಯ ವಿಧಾನಸಭೆಯು ಈ ಮಸೂದೆಯನ್ನು ೧೯೨೮ರಲ್ಲಿ ಮಾಡಬೇಕಾಯಿತು. ಈ ಮಸೂದೆಯ ಪ್ರಕಾರ, ದೈಹಿಕವಾಗಿ ಸದೃಢವಾಗಿದ್ದವರಿಗೆ ಹೇಗೋ ಹಾಗೆ ದೈಹಿಕ ನ್ಯೂನತೆಗಳಿದ್ದವರಿಗೂ ಸಹ ಆಸ್ತಿಗೆ ಹಕ್ಕುದಾರರಾಗುವ ಅವಕಾಶ ಸಿಕ್ಕಿತು. ಇದು ಹಿಂದೂ ಕಾನೂನಿಗೆ ಸೇರಿಕೊಂಡ ಮತ್ತೊಂದು ಹೊಸ ಅಂಶ.

ಅನಂತರ, ೧೯೨೯ರ ಎರಡನೇ ಶಾಸನ ಎಂಬ ಮತ್ತೊಂದು, ಬಹಳ ಮುಖ್ಯವಾದ, ಶಾಸನ ಬಂತು. ಅಲ್ಲಿಯವರೆಗೂ ಆಸ್ತಿಗೆ ಹಕ್ಕುದಾರರಾಗಲು ಅರ್ಹರಲ್ಲವೆಂದು ನ್ಯಾಯಾಲಯಗಳಿಂದ ತೀರ್ಮಾನಿಸಲ್ಪಟ್ಟ ಕೆಲವು ವರ್ಗದ ಜನರಿಗೆ, ಈ ಶಾಸನದಿಂದಾಗಿ, ಉತ್ತರಾಧಿಕಾರಿಗಳಾಗಲು ಸಾಧ್ಯವಾಯಿತು. ಕೇವಲ ಐದು ವರ್ಗದ ಸ್ತ್ರೀಯರಿಗೆ ಅರ್ಹತೆಯಿದೆ ಎಂದು ಭಾರತೀಯ ನ್ಯಾಯಾಲಯಗಳಲ್ಲಿಯೂ ಮತ್ತು ಅಂತಿಮವಾಗಿ, ಆಪ್ತಮಂಡಲಿ (ಪ್ರಿವಿ ಕೌನ್ಸಿಲ್)ಯಲ್ಲಿಯೂ ತೀರ್ಮಾನಿಸಲ್ಪಟ್ಟಿತ್ತು. ಮಿತಾಕ್ಷರ ಗ್ರಂಥದಲ್ಲಿ ಕೇವಲ ಈ ಐದು ವರ್ಗದ ಸ್ತ್ರೀಯರು ಪ್ರಸ್ತಾಪಿಸಲ್ಪಟ್ಟಿರುವುದೇ ಈ ತೀರ್ಮಾನಕ್ಕೆ ಆಧಾರ, ಮುಂಬಯಿ ಸಿದ್ಧಾಂತದ ಪ್ರಕಾರ, ಈ ಐದು ವರ್ಗದ ಸ್ತ್ರೀಯರ ಪಟ್ಟಿಯು ಸಂಪೂರ್ಣವಾಗಿರದೆ, ಕೇವಲ

ಐದು ನಿದರ್ಶನಗಳಾಗಿವೆ; ನೀಲಕಂಠ ಎಂಬ ಭಾಷ್ಯಕಾರ ಮತ್ತು ಅವನ ಅನುಯಾಯಿಗಳು ಉತ್ತರ ಭಾರತದಲ್ಲಿ ಈ ಪದ್ಧತಿಯಿರುವುದಕ್ಕೆ ಮಿತಾಕ್ಷರವನ್ನು ತಪ್ಪಾಗಿ ಅರ್ಥೈಸಿರುವುದೇ ಕಾರಣ ಎನ್ನುತ್ತಾರೆ. ಇದೇ ವಿಧಾನಸಭೆಯಲ್ಲಿ ಒಂದು ಮಸೂದೆಯನ್ನು ಮಂಡಿಸಲಾಯಿತು. ಹಾಗೂ, ದೀರ್ಘ ಪರಿಶೀಲನೆಯ ನಂತರ ಆ ಮಸೂದೆಯು ಅಂಗೀಕಾರವಾಯಿತು. ಇದರಿಂದಾಗಿ, ಉತ್ತರಾಧಿಕಾರಿಗಳ ಪಟ್ಟಿಯಲ್ಲಿ ಮಗಳು, ಸೋದರಿ, ಸೋದರಿಯ ಮಗ, ಮುಂತಾದವರನ್ನೆಲ್ಲಾ ಸೇರಿಸಲಾಯಿತು. ಇದೂ ಸಹ, ಹಿಂದೂ ಕಾನೂನು ವ್ಯವಸ್ಥೆಯಲ್ಲಿ – ಅದರಲ್ಲೂ ಉತ್ತರ ಭಾರತಕ್ಕೆ ಸಂಬಂಧಿಸಿದಂತೆ – ಒಂದು ದೊಡ್ಡ ಬದಲಾವಣೆಯೇ.

ನಿಮಗೆಲ್ಲಾ ಶಾರದಾ ಶಾಸನ ಗೊತ್ತು. ಅದನ್ನೇನೂ ನಾನು ಇಲ್ಲಿ ಮತ್ತೆ ಪ್ರಸ್ತಾಪಿಸುವುದಿಲ್ಲ. ಮದುವೆಗೆ ಕನಿಷ್ಠ ವಯೋಮಿತಿಯನ್ನು ವಿಧಿಸುವುದು ಹಿಂದೂಧರ್ಮದಲ್ಲಿ ಹಸ್ತಕ್ಷೇಪ ಮಾಡಿದಂತೆ, ಎಂದೂ ಆಗಲೂ ಚರ್ಚೆ – ಈ ಸದನದಲ್ಲೂ– ಗಂಭೀರ ಚರ್ಚೆ ನಡೆಯಿತು. ಆದರೆ ವಿರೋಧಿಗಳಿಗೆ ಜಯ ಸಿಗಲಿಲ್ಲ. ವಿಧಾನಸಭೆ ಪಟ್ಟು ಹಿಡಿದು ಕೊನೆಗೆ ಆ ಮಸೂದೆಯನ್ನು ಠರಾವು ಮಾಡಿತು.

ಇದಾದನಂತರ ನಾವು ನೋಡಿದುದು ದೇಶಮುಖ್ ಮಸೂದೆಯೆಂದು ಪ್ರಸಿದ್ಧವಾದ ಮಸೂದೆಯನ್ನು. ೧೯೩೭ನೆಯ ಆ ಮಸೂದೆ ಬಹಳ ಪರಿಣಾಮವನ್ನುಂಟುಮಾಡಿತು. ಉತ್ತರಾಧಿಕಾರಕ್ಕೆ ಸಂಬಂಧಿಸಿದ ಹಿಂದೂ ಕಾನೂನಿನಲ್ಲಿ ಅದರ ಪರಿಣಾಮ ಬಹಳ ಗಾಢವಾಗಿತ್ತು. ಮಿತಾಕ್ಷರ ಪದ್ಧತಿ ಚಾಲ್ತಿಯಲ್ಲಿದ್ದ ಪ್ರದೇಶಗಳಲ್ಲಿ ಹಿಂದೂ ಅವಿಭಕ್ತ ಕುಟುಂಬದಲ್ಲಿದ್ದ ಒಬ್ಬ ಪಾಲುದಾರ ಸತ್ತರೆ, ಹಾಗೂ ಅವನಿಗೆ ಗಂಡು ಸಂತಾನವಿಲ್ಲದಿದ್ದರೆ, ಅವನ ವಿಧವೆಗೆ ಅವನ ಆಸ್ತಿಯ ಹಕ್ಕಿರುತ್ತಿರಲಿಲ್ಲ. ಆಗ ಅವಳು ಗಂಡನ ಸೋದರರನ್ನು ಅಥವಾ ಅವನ ತಂದೆಯನ್ನೂ ಉಳಿದ ಪಾಲುದಾರರನ್ನೂ ಅವಲಂಬಿಸಬೇಕಾಗಿತ್ತು. ತನ್ನ ಝೀವಿತಕ್ಕಾಗಿ ಆಕೆಯು ಅವರ ದಾಕ್ಷಿಣ್ಯವನ್ನೇ ಅವಲಂಬಿಸಬೇಕಾಗಿತ್ತು. ಅವರಿಂದ ಅವಳಿಗೆ ಆಹಾರ ಮತ್ತು ವಸ್ತ್ರದ ವಿನಾ ಮತ್ತೇನೂ ಸಿಕ್ಕುತ್ತಿರಲಿಲ್ಲ. ಆದರೆ ದೇಶಮುಖ್ ಮಸೂದೆಯಿಂದಾಗಿ, ಒಂದು ವೇಳೆ ಗಂಡ ಬದುಕಿದ್ದರೆ, ಅವನಿಗೆ ಆಸ್ತಿಯಲ್ಲಿ ಎಷ್ಟು ಪಾಲಿನ ಹಕ್ಕಿರುತ್ತಿತ್ತೋ, ಮಕ್ಕಳಿಲ್ಲದ ವಿಧವೆಗೂ ಆಸ್ತಿಯಲ್ಲಿ ಅಷ್ಟೇ ಹಕ್ಕು ಸಿಗುವಂತಾಯಿತು. ಆಗಿನ ಕಾಲದಲ್ಲಿ, ಅವಿಭಕ್ತ ಹಿಂದೂ ಕುಟುಂಬದಲ್ಲಿರುವ ಸ್ತ್ರೀಯರು ಆಸ್ತಿಯನ್ನು ಪಾಲು ಮಾಡಬೇಕೆಂದು ದಾವೆ ಹೂಡುವುದು ಹಿಂದೂ ಕಾನೂನಿನ ಮೂಲಭೂತ ತತ್ತ್ವಗಳಿಗೆ ವಿರುದ್ಧವಾದುದೆಂದು ಬಗೆಯಲಾಗಿತ್ತು. ಆದರೆ ವಿಧಾನ ಸಭೆಯು ಮತ್ತೆ ಈ ಬದಲಾವಣೆ ಮಾಡಿತು. ಬದಲಾಗುತ್ತಿದ್ದ ಕಾಲಕ್ಕೆ ತಕ್ಕಂತೆ, ಈ ದೇಶದ ಸ್ತ್ರೀಯರದಷ್ಟೇ ಅಲ್ಲ, ಪುರುಷರ ಜಾಗೃತಿಯ ದೆಸೆಯಿಂದಲೂ ಆಗಿ, ಈ ಬದಲಾವಣೆ ಆವಶ್ಯಕವಾಯಿತು. ಅನೇಕ ಹಿಂದೂಗಳು ತಮ್ಮ ಸೋದರಿಯರಿಗೂ ತಾಯಂದಿರಿಗೂ ಈ ಬದಲಾವಣೆ ಬೇಕೆಂದು ಅಪೇಕ್ಷಿಸಿದ್ದರು. ಆಗಲೂ ಸಹ ದೇಶದಲ್ಲಿ ದೊಡ್ಡ ಕ್ಷೋಭೆಯುಂಟಾಯಿತು. ಆದರೆ ಕೊನೆಗೆ, ಆ ಕ್ಷೋಭೆಯ ಸೊಲ್ಲಡಗಿತು. ಇದು ಕಳೆದು ಹನ್ನೆರಡು ವರ್ಷಗಳಾಗಿವೆ. ಆದರೆ, ಹಿಂದೂ ಸಮಾಜ ಒಡೆದು ಹೋಳಾಗಿದೆ ಎಂದಾಗಲಿ, ಹಿಂದೂ ಧರ್ಮದ ಮೇಲೆ ಆಕ್ರಮಣ ನಡೆದಿದೆ, ಅದರಿಂದಾಗಿ, ಅದು ಒಡೆದು ಚೂರಾಗಿದೆ, ಎಂದಾಗಲಿ ಹೇಳಲು ಯಾರಿಗೂ ಸಾಧ್ಯವಿಲ್ಲ.

ಈಗ, ಇತ್ತೀಚಿನ ವಿಷಯಗಳಿಗೆ ಬರೋಣ. ೧೯೪೬ರಲ್ಲಿ, ಈಗಿನ ವಿಧಾನಸಭೆ ಅಸ್ತಿತ್ವಕ್ಕೆ ಬರುವ ಸ್ವಲ್ಪ ಮುಂಚೆ, ವಿಧಾನಸಭೆಯು ಸಗೋತ್ರ ಮದುವೆಗಳಿಗೆ ಅನುಮತಿ ಕೊಡುವ ಒಂದು ಮಸೂದೆಯನ್ನು ಅಂಗೀಕರಿಸಿತು. ಆ ಮಸೂದೆಯು ನಿಷಿದ್ಧವಾದ ವಿವಿಧ ಸ್ತರಗಳಲ್ಲಿ ಹಸ್ತಕ್ಷೇಪ ಮಾಡಲಿಲ್ಲ. ಒಂದೇ ಜಾತಿಗೆ ಸೇರಿದ ದೇಶದ ವಿವಿಧ ಭಾಗಗಲ್ಲಿ ವಾಸಿಸುತ್ತಿರುವವರಿದ್ದಾರೆ. ಆದರೂ ಅವರು ಕೆಲವು ಗ್ರಂಥಗಳ ಪಾರಿಭಾಷಿಕ ಅರ್ಥಗಳಲ್ಲಿ ಒಂದೇ ಗೋತ್ರಕ್ಕೆ ಸೇರಿದವರಾದುದರಿಂದ ಅಂಥವರ ವಿವಾಹಗಳು ಅಸಿಂಧುವೆಂದು

ಪರಿಗಣಿಸಲು ಸಾಧ್ಯವಿತ್ತು. ೧೯೪೬ರಲ್ಲಿ ಠರಾವಾದ ಶಾಸನವು ಇದನ್ನು ಸಕ್ರಮಗೊಳಿಸಿತು. ಆದರೆ ಈ ಶಾಸನದ ವಿರುದ್ಧ ಇದುವರೆಗೂ ಯಾವ ಗಂಭೀರ ಆಕ್ಷೇಪವೂ ಬಂದಿಲ್ಲ.

ಈ ವಿಧಾನಸಭೆಯ ಕಳೆದ ಏಪ್ರಿಲ್ ಅಧಿವೇಶನದಲ್ಲಿ ನಾವೇನು ಮಾಡಿದೆವು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾನು ಮಾನ್ಯ ಸದಸ್ಯರನ್ನು ವಿನಂತಿಸಿಕೊಳ್ಳುತ್ತಿದ್ದೇನೆ. ನನ್ನ ಗೌರವಾನ್ವಿತ ಮಿತ್ರರಾದ ಪಂಡಿತ ಠಾಕೂರ್‌ದಾಸ್ ಭಾರ್ಗವರು ಒಂದು ಸರಳ ಮಸೂದೆಯನ್ನು ಮಂಡಿಸಿದರು. ಆ ಮಸೂದೆಗೆ ಕೇವಲ ಒಂದೇ ಭಾಗವಿದ್ದರೂ, ಅದಕ್ಕೆ ವಿಶಾಲ ಪರಿಣಾಮ ಬೀರುವ ಹಾಗೂ ಮುಖ್ಯವಾದ ಶಕ್ತಿಯಿತ್ತು. ಆ ಮಸೂದೆಯ ಮೂಲಕ, ಹಿಂದೂ ಸ್ಮೃತಿಗಳು ಏನೇ ಹೇಳಿದರೂ, ಹಾಗೂ ಅದನ್ನು ವಿರೋಧಿಸುವ ಪದ್ಧತಿ ಮತ್ತು ವಾಡಿಕೆಗಳಿಗೆ ಕಾನೂನಿನ ಶಕ್ತಿಯಿದ್ದರೂ, ವಿವಿಧ ಹಿಂದೂ ಜಾತಿಗಳ ನಡುವೆ ನಡೆಯುವ ವಿವಾಹಗಳು ಸಕ್ರಮವೆಂಬುದನ್ನು ಜಾರಿಗೊಳಿಸಲಾಯಿತು. ಇದು ಬಹಳ ದೊಡ್ಡ ಹೆಜ್ಜೆ, ಇದರಿಂದಾಗಿ, ಅಂತರ್ಜಾತೀಯ ವಿವಾಹಗಳಿಗೆ ಅವಕಾಶ ಸಿಕ್ಕಿತಲ್ಲದೆ, ಪ್ರತಿಯೊಬ್ಬನೂ ತನ್ನ ಉಪಜಾತಿಯವರನ್ನೇ, ಕೊನೆಯ ಪಕ್ಷ, ತನ್ನ ಜಾತಿಯವರನ್ನೇ ಮದುವೆಯಾಗಬೇಕು ಎಂಬ ನಿರ್ಬಂಧವನ್ನು ಕಿತ್ತುಹಾಕಲಾಯಿತು. ಈ ಕಾಯಿದೆ ಕ್ರಮವನ್ನು ಇದೇ ಸದನದಲ್ಲಿ ಸರ್ವಾನುಮತದಿಂದ ಠರಾವು ಮಾಡಲಾಯಿತು. ಚರ್ಚೆಯ ಸಮಯದಲ್ಲಿ ನನಗೆ ಜ್ಞಾಪಕವಿರುವಂತೆ ಇದರ ವಿರುದ್ಧ ಮಾತಾಡಿದ ಒಬ್ಬರೇ ಒಬ್ಬರೆಂದರೆ ಡಾ॥ ಅಂಬೇಡ್ಕರ್. ಇನ್ನುಳಿದ ಎಲ್ಲರೂ, ಸಂಪ್ರದಾಯಸ್ಥರಿರಲಿ ಅಥವಾ ಸಂಪ್ರದಾಯ ವಿರೋಧಿಗಳಿರಲಿ, ದಾಯಭಾಗ, ಮಿತಾಕ್ಷರ ಅಥವಾ ಮಯೂಖ ಪದ್ಧತಿಗೆ ಸೇರಿದವರಿರಲಿ, ಅಥವಾ ಬಣಧರ್ಮದ ಪದ್ಧತಿಗಳನ್ನು ಪಾಲಿಸುವವರಿರಲಿ, ಎಲ್ಲರೂ ಮಸೂದೆಯನ್ನು ಬೆಂಬಲಿಸಿದರು. ಡಾ॥ ಅಂಬೇಡ್ಕರ್ ಸಹ ಅದನ್ನು ಒಪ್ಪಿಕೊಂಡರು – ಆದರೆ ಒಂದು ಸಣ್ಣ ಆಧಾರದ ಮೇಲೆ. ಅವರಿಗೆ ಈ ಮಸೂದೆಯ ತತ್ತ್ವದ ಕಡೆಗೆ ಪೂರ್ಣ ಒಲವಿತ್ತು. ಆದರೆ ಅವರು, ವಿಶಾಲ ಅನ್ವಯವುಳ್ಳ ಹಿಂದೂ ಕಾನೂನು ವಿಧಾನ ಸಭೆಯ ಮುಂದೆ ಈಗ ಇರುವುದರಿಂದ, ಇನ್ನೂ ಹೆಚ್ಚು ವಿಶಾಲವಾದ ಮಸೂದೆಯನ್ನು ನಾವು ಮಾಡಬೇಕಾಗುತ್ತದೆ ಎಂದು ಆಕ್ಷೇಪಿಸಿದರು. ಅದು ಕೇವಲ ತಾಂತ್ರಿಕ ಆಕ್ಷೇಪವಾಗಿತ್ತಷ್ಟೆ. ಇಷ್ಟು ಬಿಟ್ಟರೆ, ಆ ಮಸೂದೆಯನ್ನು ಸರ್ವಾನುಮತದಿಂದ ಬೆಂಬಲಿಸಲಾಯಿತಲ್ಲದೆ, ಅದು ಸುಮಾರು ಏಪ್ರಿಲ್ ಕೊನೆಯ ಭಾಗದಲ್ಲಿ ಜಾರಿಗೆ ಬಂತು. ಈಗ, ಹಿಂದೂ ಧರ್ಮ ಅಪಾಯದಲ್ಲಿದೆ ಎಂದು ಕೂಗಾಡಿದ ನನ್ನ ಸಂಪ್ರದಾಯಸ್ಥ ಗೆಳೆಯರನ್ನು, ಅದಕ್ಕೇನಾಗಿದೆ ಎಂದು ಕೇಳುತ್ತೇನೆ. ನಾವು ಸಂವಿಧಾನವನ್ನು ಕುರಿತು ಪರಿಶೀಲಿಸುತ್ತಿದ್ದಾಗ, ನಮಗೆ ವರ್ಗರಹಿತ, ಜಾತಿರಹಿತ ಸಮಾಜ ಬೇಕು ಎಂದು ಹೇಳುತ್ತಿದ್ದೆವು. ಆದರೆ ಈ ನಮ್ಮ ಹೇಳಿಕೆಯು, ಅನೇಕ ಶತಮಾನಗಳಿಂದ ದೇಶದ ಅನೇಕ ಭಾಗಗಳಲ್ಲಿ ರೂಢಿಯಲ್ಲಿರುವ ಸ್ಮೃತಿ ಕಾನೂನುಗಳಿಗೆ ವಿರುದ್ಧವಾದುದು. ಆದರೂ ನಾವು ಆ ಮಸೂದೆಯನ್ನು ಜಾರಿಗೊಳಿಸಿದೆವು. ಈಗ ಅದು ನಮ್ಮ ದೇಶದ ಕಾನೂನಿನ ಒಂದು ಭಾಗವಾಗಿದೆ. ಆದರೆ, ಆಗಿನ ಸಮಯದಲ್ಲಿ "ಈ ಸದನಕ್ಕೆ ಅಂಥ ಕಾನೂನನ್ನು ರೂಪಿಸುವ ಅಧಿಕಾರವಿಲ್ಲ. ಏಕೆಂದರೆ ಅದನ್ನು ಚುನಾಯಿಸುವುದು ಸಂವಿಧಾನವನ್ನು ರೂಪಿಸಲು ಮಾತ್ರ," ಅಥವಾ ದೈನಂದಿನ ಆಡಳಿತವನ್ನು ನಡೆಸಲು ಮಾತ್ರ, ಎಂದು ಯಾರೂ ಆಕ್ಷೇಪಿಸಲಿಲ್ಲ. ವಿವಾಹದ ವಿಷಯದಲ್ಲಿ ಜಾತಿಪದ್ಧತಿ ನಿರ್ಮೂಲನೆ ಮಾಡುವುದು ದೇಶದ ದೈನಂದಿನ ಆಡಳಿತದ ಭಾಗವಲ್ಲವೇನೋ ಹೌದು. ಆದರೂ ಇದೊಂದು ಬಹಳ ಮುಖ್ಯವಾದ, ಎದ್ದು ಕಾಣುವಂಥ, ಮೂಲಭೂತ ಬದಲಾವಣೆ. ಹಿಂದೂ ವಿವಾಹಕ್ಕೆ ಸಂಬಂಧಿಸಿದ ಈ ಕಾನೂನು ಒಂದಲ್ಲ ಒಂದು ರೂಪದಲ್ಲಿ ಎಲ್ಲ ಸಿದ್ಧಾಂತಗಳಲ್ಲಿಯೂ – ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಬಂಗಾಳದಿಂದ ಗುಜರಾತಿನವರೆಗೆ – ಇದೆ. ಆದರೆ ನಾವು ಅದನ್ನು

ಪ್ರಜ್ಞಾಪೂರ್ವಕವಾಗಿ ಜಾರಿಗೊಳಿಸಿದ್ದೇವೆ. ಆಗ ಸದನದಲ್ಲಿದ್ದ ಶ್ರೀ ಮುನ್ಷಿಯವರು ಮಸೂದೆಯು ಸಣ್ಣದಾಗಿದ್ದರೂ, ಅದಕ್ಕೆ ವಿಶಾಲಾನ್ವಯವಿದೆ, ಇದೊಂದು ಬಹಳ ದೊಡ್ಡ ಬದಲಾವಣೆ, ಬಹಳ ಮುಖ್ಯವಾದ ಬದಲಾವಣೆ, ಎಂದಿದ್ದರು. ಆಗ ಇಡೀ ಸದನವೇ ಅವರನ್ನು ಶ್ಲಾಘಿಸಿತ್ತು. ನಮ್ಮ ಸಂಪ್ರದಾಯಸ್ಥ ಗೆಳೆಯರೆ, ಮಸೂದೆಯ ವಿರೋಧಿಗಳೇ, ಹಿಂದೂ ಕಾನೂನಿಗೂ ಹಿಂದೂ ಧರ್ಮಕ್ಕೂ ತೋರಿಸುವ ನಿಮ್ಮ ಗೌರವ ಆಗೆಲ್ಲಿತ್ತು? ಎಂದು ಕೇಳುತ್ತೇನೆ. ಆದುದರಿಂದ, ನನ್ನ ಸಂಪ್ರದಾಯಸ್ಥ ಗೆಳೆಯರಿಗೆ ಗೌರವ ತೋರಿಸುತ್ತಾ ಹೇಳುವುದೇನೆಂದರೆ, 'ಈ ಮಸೂದೆಯು ಹಿಂದೂ ಧರ್ಮದ ಮೇಲಿನ ಆಕ್ರಮಣ, ಹಿಂದೂ ಧರ್ಮದ ಅಡಿಪಾಯ ಇದರಿಂದಾಗಿ ಸಡಿಲವಾಗುತ್ತದೆ, ಇಡೀ ಹಿಂದೂ ಸಮಾಜ ಮತ್ತು ಹಿಂದೂ ಸಂಸ್ಕೃತಿಯ ವ್ಯವಸ್ಥೆಯೇ ಒಡೆದು ಚೂರುಚೂರಾಗುತ್ತದೆ, ಈ ಸದನಕ್ಕೆ ಇಂಥ ಮಸೂದೆಯನ್ನು ಮಾಡುವ ಅರ್ಹತೆಯಿಲ್ಲ, ಏಕೆಂದರೆ ಅದರಲ್ಲಿ ಬಹಳ ಕಲಿತ ಪಂಡಿತರಿಲ್ಲ, ಅಥವಾ ಇಲ್ಲಿರುವ ಸದಸ್ಯರು ಆ ಉದ್ದೇಶಕ್ಕಾಗಿ ಚುನಾಯಿತರಾದವರಲ್ಲ' ಎಂಬ ಕೂಗಿಗೆ ಅರ್ಥವಿಲ್ಲ. ನನ್ನ ಗೆಳೆಯರಿಗೆ ಗೌರವ ತೋರಿಸುತ್ತಾ ಮತ್ತೂ ಹೇಳುವುದೇನೆಂದರೆ, ಇಂಥ ಆಕ್ಷೇಪದಲ್ಲಿ ಹುರುಳಿಲ್ಲ; ನನ್ನ ಸಂಪ್ರದಾಯಸ್ಥ ಗೆಳೆಯರಿಗೆ ಸಕಲ ಮರ್ಯಾದೆಗಳೊಂದಿಗೆ ನಾನು ಕೇಳುವುದೇನೆಂದರೆ, ನಾನಾಗಲೇ ಅವರ ಮುಂದಿಟ್ಟಿರುವ ಶಾಸನ ಸಭೆಯ ಇತಿಹಾಸವನ್ನು ಅವರು ಪರಿಶೀಲಿಸಲಿ; ಸ್ವತಃ ನಾವೇ ಇತ್ತೀಚೆಗೆ ಎಷ್ಟು ಶಾಸನಗಳನ್ನು ಜಾರಿಗೊಳಿಸಿದ್ದೇವೆಂಬುದನ್ನು ಅವರು ಪರಿಶೀಲಿಸಲಿ; ಈ ಮಸೂದೆಯನ್ನು ಬೇಕಾದರೆ ಬೇರೆ ಆಧಾರಗಳ ಮೇಲೆ ಖಂಡಿಸಲಿ; ಆದರೆ 'ಈ ಸದನಕ್ಕೆ ಅರ್ಹತೆಯಿಲ್ಲ, ಏಕೆಂದರೆ ಇದೊಂದು ಕೇವಲ ವಿಧಾನ ಸಭೆ, ಅಥವಾ ಈ ಶಾಸನವನ್ನು ಮಂಡಿಸಿ, ಪರಿಶೀಲಿಸಿ, ಠರಾವು ಮಾಡುವ ಅಧಿಕಾರವನ್ನು ದೇಶದ ಜನತೆ ನಮಗೆ ನೀಡಿಲ್ಲ', ಎಂದರೆ, ನನ್ನ ಗೆಳೆಯರಿಗೆ ಸಲ್ಲಬೇಕಾದ ಗೌರವ ಸಲ್ಲಿಸಿ, ಅವರ ವಾದ ಸಮಂಜಸವಲ್ಲ ಎಂದು ತಮ್ಮ ಮುಂದೆ ನಿವೇದಿಸಿಕೊಳ್ಳುತ್ತಿದ್ದೇನೆ. ಮಸೂದೆಯನ್ನು ಸ್ವೀಕರಿಸಲು ಅಥವಾ ತಿರಸ್ಕರಿಸಲು ಅದರ ಗುಣಾವಗುಣಗಳನ್ನು ಪರೀಕ್ಷಿಸಿರೆಂದು ಅವರನ್ನು ನಾನು ಕೇಳಿಕೊಳ್ಳುತ್ತಿದ್ದೇನೆ. ಈ ಮಸೂದೆಯನ್ನು ಸಾಕಷ್ಟು ಪರಾಮರ್ಶೆಗೆ ಒಳಪಡಿಸಿಲ್ಲ. ಎನ್ನುವುದೊಂದು ಮಾತು; ಈ ಮಸೂದೆಗೆ ಸಂಬಂಧಿಸಿದ ಅನೇಕ ನಿಯಮಗಳಿದ್ದು, ಅವುಗಳನ್ನು ಇನ್ನೂ ಚರ್ಚಿಸಬೇಕಾಗಿದೆ, ಪರೀಕ್ಷಿಸಬೇಕಾಗಿದೆ, ಎಂಬುದೊಂದು ಮಾತು; ಈ ಮಸೂದೆಯ ಕೆಲವು ವಿಷಯಗಳನ್ನು ಪುನರೂಪಿಸಬೇಕೆನ್ನುವುದು ಮತ್ತೊಂದು ಮಾತು. ನಾನಾಗಲೇ ಹೇಳಿದಂತೆ, ಹಾಗೂ ಸರ್, ಬಿ.ಎನ್. ರಾವ್ ಅವರು ಸಮಿತಿಯ ಮೂಲ ವರದಿಯಲ್ಲಿ ಹೇಳಿರುವಂತೆ, ಹಿಂದೂ ಕಾನೂನಿನ ಸುಧಾರಣೆಯನ್ನು ಆಂಶಿಕವಾಗಿ ತೆಗೆದುಕೊಳ್ಳುವುದೇ ಲೇಸು. ಇದು ನನಗೂ ಅರ್ಥವಾಗುತ್ತದೆ. ಆದರೆ – ದಯವಿಟ್ಟು ಇದನ್ನು ಹೇಳಿದ್ದಕ್ಕೆ ನೀವು ನನ್ನನ್ನು ಕ್ಷಮಿಸುತ್ತೀರೆಂದು ಆಶಿಸುತ್ತೇನೆ – ಪ್ರತಿ ಬೆಳಿಗ್ಗೆ ಟಪಾಲು ಬಂದಾಗಲೆಲ್ಲ ಅದರಲ್ಲಿ ಅನೇಕ ವ್ಯಕ್ತಿಗಳು ಮಾಡಿದ ಭಾಷಣಗಳ ಭಾಗಗಳು, ಧರ್ಮಸಂಘಗಳು, ಆ ಸಂಘ, ಈ ಸಂಘ ಅಂಗೀಕರಿಸಿದ ಗೊತ್ತುವಳಿಗಳು, ಆ ದೊಡ್ಡ ಮನುಷ್ಯನ ಅಭಿಪ್ರಾಯ, ಈ ದೊಡ್ಡ ಮನುಷ್ಯನ ಅಭಿಪ್ರಾಯಗಳ ಬಗೆಗಿನ ಪತ್ರಗಳೂ, ಪ್ರತಿಗಳೂ ಇರುತ್ತವೆ. ಅವುಗಳಲ್ಲೆಲ್ಲಾ ಈ ವಿಧಾನಸಭೆಗೆ ಈ ಮಸೂದೆಯನ್ನು ಮುಟ್ಟುವ ಅರ್ಹತೆ ಇಲ್ಲ, ಎಂದೇ ಇರುತ್ತದೆ. ಆದರೆ, ನನ್ನ ಸ್ನೇಹಿತರಿಗೆ ಗೌರವ ಸೂಚಿಸುತ್ತಾ, ವಿನಯಪೂರ್ವಕವಾಗಿ ತಮ್ಮ ಮುಂದೆ ನಿವೇದಿಸಿಕೊಳ್ಳುವುದೇನೆಂದರೆ, ಇದು ಸರಿಯೂ ಅಲ್ಲ, ತರ್ಕಬದ್ಧವೂ ಅಲ್ಲ, ವಿಚಾರಯೋಗ್ಯವೂ ಅಲ್ಲ; ಆದುದರಿಂದ ಮಸೂದೆಯನ್ನು ವಿರೋಧಿಸುವ ನನ್ನ ಮಿತ್ರರಿಗೆ, ಅಂಥ ವಾದಗಳಿಗೆ ಬೆಂಬಲ ನೀಡಬಾರದೆಂದೂ, ಮಸೂದೆಯನ್ನು ವೈಚಾರಿಕವಾಗಿ, ತರ್ಕಬದ್ಧವಾಗಿ, ಮತ್ತು ಸರಿಯಾದ ದೃಷ್ಟಿಕೋನದಿಂದ ಪರಿಶೀಲಿಸಬೇಕೆಂದೂ

ಕೇಳಿಕೊಳ್ಳುತ್ತಿದ್ದೇನೆ.

ಇದುವರೆಗೂ ನಾನು ಹೇಳಿದುದು ನಮ್ಮ ಸಂಪ್ರದಾಯಸ್ಥ ಗೆಳೆಯರಿಗೆ, ಈಗ ಮಸೂದೆಯನ್ನು ಬೆಂಬಲಿಸುವ ನಮ್ಮ ಮಿತ್ರರಿಗೆ ಒಂದು ಮಾತನ್ನು ಹೇಳಲು ಅಪ್ಪಣೆ ಕೊಡಿ.

**ಶ್ರೀ ಎಚ್.ವಿ. ಕಾಮತ್ :** ಅವರು ಸಂಪ್ರದಾಯವಾದಿಗಳೋ ಅಥವಾ ಸಂಪ್ರದಾಯ ವಿರೋಧಿಗಳೋ?

**ಡಾ॥ ಭಕ್ಷಿ ತೇಕ್‌ಚಂದ್ :** ಹಾಗಾದರೆ, ಅದನ್ನು ಪ್ರತಿಯೊಬ್ಬರೂ ತಾವೇ ನಿರ್ಧರಿಸಲಿ. ಅಂತೂ ಸ್ಥಿತಿ ಹೀಗಿದೆ. ಮಸೂದೆಯನ್ನು ಮಂಡಿಸಲಾಯಿತು. ಹಾಗೂ ನಮಗೆ ಗೊತ್ತಿರುವಂತೆ, ಮೊದಲ ಹಂತದಲ್ಲಿ ಬಹಳ ಸಂಕ್ಷಿಪ್ತ ಚರ್ಚೆಯಾಯಿತು. ವಿಶೇಷ ಸಭೆಯಲ್ಲಿ ನಾವು ಸೇರಿದಾಗ, ಇಂಥ ಮುಖ್ಯವಾದ ಮಸೂದೆಯನ್ನು ಪರಿಶೀಲಿಸಲು ಕೇವಲ ಆರು ದಿನಗಳನ್ನು ಕೊಡಲಾಯಿತು. ಮಸೂದೆಯ ಕೆಲಭಾಗಗಳ ವಿಚಾರದಲ್ಲಿ ನಮ್ಮ ಸಮಿತಿಯ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದಾಗ, ಅವರ ನಿಲುವು, ಮಸೂದೆಯನ್ನು ಮೊದಲ ಸಾರಿ ಓದಿದಾಗ ಸದನವು ಯಾವ ಮೂಲ ತತ್ತ್ವಗಳನ್ನು ಅಂಗೀಕರಿಸಿತೋ, ಆ ತತ್ತ್ವಗಳಿಗೆ ವಿರುದ್ಧವಾಗಿದೆ ಎಂದು ನಮಗೆ ತಿಳಿಸಲಾಯಿತು. ಆದುದರಿಂದ, ಅಂಥ ಮುಖ್ಯ ಭಾಗಗಳಿಗೆ ತಿದ್ದುಪಡಿ ಸೂಚಿಸಿದ ನಮ್ಮಂಥ ಸೆಲೆಕ್ಟ್ ಸಮಿತಿಯ ಸದಸ್ಯರು ಈಗ ನ್ಯಾಯಾಲಯದ ಹೊರಗಿದ್ದೇವೆ, ನಾವು 'ಅಕ್ರಮ'ವಾಗಿದ್ದೇವೆ. ಸಮಿತಿಯ ನಿಬಂಧನೆಗನುಗುಣವಾಗಿ, ಜುಲೈ ತಿಂಗಳ ಧಗೆಯಲ್ಲಿ ಆರು ದಿನ ಮಾತ್ರ ಚರ್ಚಿಸಲು ಅವಕಾಶವಿತ್ತು. ಅಂಥ ಪರಿಸ್ಥಿತಿಯಲ್ಲಿ ನಮಗೆ ಕೊಟ್ಟಿದ್ದ ಅಷ್ಟು ಕಡಿಮೆ ಸಮಯದಲ್ಲಿ ಹಾಗೂ ಸನ್ಮಾನ್ಯ ಕಾನೂನು ಮಂತ್ರಿಗಳು ಆಗಿನ ಸಮಯದಲ್ಲಿ ವಿಧಿಸಿದ ಮಿತಿಗಳ ಚೌಕಟ್ಟಿನಲ್ಲಿ ನಮಗೆ ಸಾಧ್ಯವಾದಷ್ಟು ಉತ್ತಮವಾದುದನ್ನೇ ಮಾಡಿದೆವು. ಕಾನೂನು ಮಂತ್ರಿಗಳೊಬ್ಬರೇ ಅಲ್ಲ ವಿಶೇಷ ಸಮಿತಿಯ ಕೆಲ ಉತ್ಸಾಹಿ ಸದಸ್ಯರೂ ಸಹ "ಮಸೂದೆಯು ಸರಿಯಾದ ಸಮಯಕ್ಕೇ ಬಂದಿದೆ; ಅದನ್ನು ನಾವು ಈ ಅಧಿವೇಶನದಲ್ಲಿಯೇ ತೂರಿಸಿ ಬಿಡೋಣ; ಅಕ್ಟೋಬರ್ ಅಥವಾ ನವೆಂಬರ್ ತಿಂಗಳು ಬರುವುದರೊಳಗಾಗಿ, ಅದು ನಿಯಮಾವಳಿ ಪುಸ್ತಕದಲ್ಲಿ ಸೇರ್ಪಡೆಯಾಗಿರಬೇಕು" ಎಂದು ಯೋಚಿಸಿದರು. ಕೆಲವು ತಿಂಗಳವರೆಗಾದರೂ ತಡೆಯೋಣ, ಎಂದು ಕೆಲವರು ಆಕ್ಷೇಪಗಳನ್ನು, ವಾದಗಳನ್ನು ಮುಂದಿಟ್ಟರು. ಆದರೆ ಕೊನೆಗೆ ಸೆಲೆಕ್ಟ್ ಸಮಿತಿಯ ಎರಡು ಬಹುಮತದ ಆಧಾರದ ಮೇಲೆ ಮುಂದುವರಿಯಲು ತೀರ್ಮಾನಿಸಿತು.

ಮಧ್ಯಾಹ್ನ ೩ ಗಂಟೆ

ಆದರೆ ಎಂಥ ಪರಿಸ್ಥಿತಿ ಉಂಟಾಯಿತೆಂದರೆ, ಈ ಮಸೂದೆಯನ್ನು ಒಂದೇ ತಿಂಗಳೊಳಗಾಗಿ ನಿಯಮಾವಳಿ ಪುಸ್ತಕದಲ್ಲಿ ಸೇರಿಸಲು ಸಾಧ್ಯವಾಗಲಿಲ್ಲ. ನಮ್ಮ ಹತೋಟಿ ಮೀರಿದ ಪರಿಸ್ಥಿತಿಗಳಿಂದಾಗಿ, ವಿಶೇಷ ಸಭೆಯ ಬಹುಮತದ ಹತೋಟಿ ಮೀರಿದ ಪರಿಸ್ಥಿತಿಗಳಿಂದಾಗಿ, ಚರ್ಚೆ ನಡೆಯುತ್ತಲೇ ಇದೆ. ವಿಶೇಷ ಸಮಿತಿಯ ಸಭೆಯಲ್ಲಿ ನಾನು ಎತ್ತಿದ ಒಂದು ವಿಷಯವನ್ನು ಸ್ವಲ್ಪ ವಿಸ್ತಾರವಾಗಿ ನನ್ನ ಅಸಮ್ಮತಿ ಸೂಚನೆಯಲ್ಲಿ (Note of dissent) ತಿಳಿಸಿದ್ದೇನೆ. ಅದನ್ನೇ ಮತ್ತೆ ಹೇಳಲು ಸದನದ ಅನುಮತಿ ಕೇಳುತ್ತಿದ್ದೇನೆ. ಅದೇನೆಂದರೆ, ಈ ಮಸೂದೆಯನ್ನು ಅರೆಮನಸ್ಸಿನಿಂದ ಮಂಡಿಸಲಾಗಿದೆ. ಅಲ್ಲದೆ ಅದೊಂದು ತುಂಡು (ಅಪೂರ್ಣ) ಮಸೂದೆಯೆಂದು ಹೇಳಬಹುದು. ನಮ್ಮ ಸೋದರಿಯರಿಗೂ ನಮ್ಮ ಹೆಣ್ಣು ಮಕ್ಕಳಿಗೂ ಪೂರ್ಣ ಹಕ್ಕು ಕೊಡಬೇಕಾದ ಕಾಲ ಬಂದಿದೆ. ಈ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ; ಅದನ್ನು ಮತ್ತೆ ಮತ್ತೆ ಹೇಳುವುದಕ್ಕೆ ನನಗೇನೂ ಸಂಕೋಚವಿಲ್ಲ; ಅಂದರೆ, ಹಳೆಯ ಕಾನೂನು ಗ್ರಂಥಗಳನ್ನು ಮುಂದುವರಿಯಲು ಬಿಡಬಾರದಂಥ, ಅಥವಾ ಸ್ತ್ರೀಗೆ ಆಸ್ತಿಯ ಮೇಲೆ ಪೂರ್ಣ ಹಕ್ಕಿಲ್ಲ, ಇಂಥ ಆಸ್ತಿ ಅಂಥ ಆಸ್ತಿ ಪಡೆಯಲು ಸ್ತ್ರೀಗೆ ಹಕ್ಕಿಲ್ಲ, ಮುಂತಾದ ಬ್ರಿಟಿಷ್ ನ್ಯಾಯಾಲಯಗಳು

ಮಾಡಿದ ಸ್ವಕಪೋಲ ಕಲ್ಪಿತ ಸಿದ್ಧಾಂತ ಎಂಬುದನ್ನು ತೋರಿಸಿಕೊಡುತ್ತೇನೆ. ಅದಕ್ಕೆ ಮಿತಾಕ್ಷರ ಕಾನೂನಿನ ಬೆಂಬಲವಿಲ್ಲ; ಮಯೂಖ ಕಾನೂನಿನ ಬೆಂಬಲವಾಗಲಿ, ಸ್ಮೃತಿಗಳ ಬೆಂಬಲವಾಗಲಿ ಇಲ್ಲ. ಇಂಥ ಅಪಾರ್ಥದ ಕಾನೂನುಗಳನ್ನು ಎಸೆಯಬೇಕು. ಹಾಗೆ ಮಾಡಬೇಕಾದರೆ ನಾವೇನು ಮಾಡಬೇಕು? ನಾನು ಸೂಚಿಸುವುದೇನೆಂದರೆ, ಮಸೂದೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕು. ನಾನು ಅದನ್ನು ಮತ್ತೊಂದು ದೃಷ್ಟಿಕೋನದಿಂದ ನೋಡಿದೆ, ಸ್ತ್ರೀಗೆ, ಮಸೂದೆಯಲ್ಲಿ ಕೊಟ್ಟಿರುವ ಸ್ಥಾನಕ್ಕಿಂತ ಹೆಚ್ಚಿನ ಸ್ಥಾನವನ್ನು ಪಡೆಯಲು ಆಕೆಗೆ ಅನುವು ಮಾಡಿಕೊಡಬೇಕು. ಆಗ ಕೆಲವರು "ಸಾಧ್ಯವಿಲ್ಲ; ಈ ಮಸೂದೆಗೆ ಶ್ರೀ ಬಿ.ಎನ್. ರಾವ್ ಒಪ್ಪಿಗೆಯಿದೆ, ಡಾ. ಅಂಬೇಡ್ಕರರ ಅಧಿಕಾರವಾಣಿಯಿದೆ. ಅದರಲ್ಲಿ ಸಾರಭೂತವಾದ ಬದಲಾವಣೆಯನ್ನು ಮಾಡಲು ಸಾಧ್ಯವಿಲ್ಲ" ಎಂದು ವಾದಿಸಿದರು ಮಸೂದೆಯನ್ನು ಬೆಂಬಲಿಸುತ್ತಿದ್ದವರ ಧೋರಣೆ ಹೀಗಿತ್ತು. ಸೆಲೆಕ್ಟ್ ಸಮಿತಿಯಲ್ಲಿದ್ದಾಗಲೇ ಆಗಲಿ, ಅನಂತರವೇ ಆಗಲಿ ಅವರು ಮಸೂದೆಯ ವಿರೋಧಿಗಳಿಗಿಂತ ಕಡಿಮೆ ಅಂಧಾಭಿಮಾನಿಗಳಾಗಿರಲಿಲ್ಲ. ಇದನ್ನು ಹೇಳುವಾಗ ದಯವಿಟ್ಟು ನನ್ನನ್ನು ಕ್ಷಮಿಸಿ. ಅವರದು ಒಂದೇ ವಾದ: "ಮಸೂದೆ ನಮ್ಮೆದುರಿಗಿದೆ; ಬೇಕಾದರೆ ಸ್ವೀಕರಿಸಿ, ಇಲ್ಲದಿದ್ದರೆ ಬಿಡಿ; ನಿಮಗೆ ಶಕ್ತಿಯಿದ್ದರೆ ಅದನ್ನು ತಿರಸ್ಕರಿಸಿ". ಪ್ರಧಾನ ಮಂತ್ರಿಗಳು ಕೆಲ ದಿನಗಳ ಹಿಂದೆ ಇದನ್ನು ಘೋಷಿಸಿದ ನಂತರ, ಇವರು ಮತ್ತೆ ಇಲ್ಲಿ ಅದನ್ನು ಪುನರುಚ್ಚರಿಸುತ್ತಿದ್ದಾರೆ; ಅಲ್ಲದೆ, ಸದನದ ಅನೇಕ ಸದಸ್ಯರು ಅದರ ಪರವಾಗಿ ಮತ ನೀಡುವ ವಿಚಾರದಲ್ಲಿ ಸ್ವಾಭಾವಿಕವಾಗೇ ಬದ್ಧರಾಗಿದ್ದಾರೆ.

**ಕೆಲ ಸನ್ಮಾನ್ಯ ಸದಸ್ಯರು** : ಇಲ್ಲ, ಇಲ್ಲ.

**ಡಾ॥ ಭಕ್ಷಿ ತೇಕ್‌ಚಂದ್** : ಪ್ರತಿಯೊಬ್ಬರಿಗೆ ತಮಗೆ ತಿಳಿದಂತೆ ಮತ ನೀಡಲು ಅನುಮತಿ ಕೊಟ್ಟರೆ, ಅದು ಪ್ರಜ್ಞಾಪೂರ್ವಕವಲ್ಲದ ಪರಿಣಾಮ ಬೀರಿಯೇ ಬೀರುತ್ತದೆ. ನಾನು ಈ ಮಸೂದೆಯನ್ನು ಬೆಂಬಲಿಸುತ್ತಿರುವ ಸ್ನೇಹಿತರನ್ನೂ, ನಮ್ಮ ಸೋದರಿಯನ್ನೂ ಈ ಮಸೂದೆಯು "ನಿಮಗೆ ಪೂರ್ಣ ನ್ಯಾಯ ಒದಗಿಸುತ್ತದೆಯೇ? ನಿಮಗೆ ಬೇಕಿದ್ದುದು ಇಷ್ಟೇ ಏನು? ನಿಮಗೆ ಬೇಕಾಗಿರುವ ಹಕ್ಕುಗಳನ್ನು ಅದು ನೀಡುತ್ತದೆಯೆ?" ಎಂದು ಕೇಳುತ್ತೇನೆ. ಇಲ್ಲ, ಎಂಬುದೇ ನನ್ನ ಉತ್ತರ. "ಅದು ಕೊಡುವುದಿಲ್ಲ" ಎಂದು ಒತ್ತಿಹೇಳುತ್ತೇನೆ. ಇದು ನಿಜವಾಗಿಯೂ ಒಂದು ಅಪೂರ್ಣ ಕ್ರಮ, ಅರೆಮನಸ್ಸಿನ ಕ್ರಮ. ಇದು ಹಿಂದೂ ಸಮಾಜಕ್ಕೆ ಗರಿಷ್ಠ ಹಾನಿ ಮಾಡುತ್ತದೆ, ಸ್ತ್ರೀಕುಲಕ್ಕೆ ಕನಿಷ್ಠ ಒಳ್ಳೆಯದನ್ನು ಮಾಡುತ್ತದೆ.

**ಒಬ್ಬ ಮಾನ್ಯ ಸದಸ್ಯರು** : ಅವರು ನಿಮ್ಮ ಪರಿಹಾರವನ್ನು ಒಪ್ಪಿಕೊಳ್ಳುತ್ತಾರೆಯೇ?

**ಡಾ॥ ಭಕ್ಷಿ ತೇಕ್‌ಚಂದ್** : ನನಗೆ ಗೊತ್ತಿಲ್ಲ. ಈಗ ಮಸೂದೆಯ ಕೆಲವು ನಿಯಮಗಳನ್ನು ಪ್ರಸ್ತಾಪಿಸುತ್ತೇನೆ. ಮಸೂದೆಯ ನಿಯಮಗಳಲ್ಲೊಂದು "ಉತ್ತರಾಧಿಕಾರ, ಇತ್ಯಾದಿಗಳಿಗೆ ಸಂಬಂಧಿಸಿದ ಅಧ್ಯಾಯಗಳು ವ್ಯವಸಾಯದ ಭೂಮಿಯ ಉತ್ತರಾಧಿಕಾರಕ್ಕೆ ಅನ್ವಯಿಸುವುದಿಲ್ಲ" ಎನ್ನುತ್ತದೆ, ಏಕೆ? ಏಕೆಂದರೆ, ಈ ಮಸೂದೆಯನ್ನು ಮಂಡಿಸುವ ಸಮಯದಲ್ಲಿ ಸ್ಥಿತಿ ಏನಿತ್ತೆಂದರೆ, ೧೯೩೫ರ ಭಾರತ ಸರ್ಕಾರ ಶಾಸನದ ನಿಯಮ ಏಳು, ಉಪನಿಯಮ ೭ರ ಪ್ರಕಾರ, ಇದೇ ಭಾರತೀಯ ವಿಧಾನ ಸಭೆಗೆ ವ್ಯವಸಾಯದ ಭೂಮಿಗೆ ಸಂಬಂಧಿಸಿದಂತೆ, ಯಾವುದೇ ಕಾನೂನನ್ನು ಮಾಡಲು ಅಧಿಕಾರವಿರಲಿಲ್ಲ. ಏಕೆಂದರೆ, ಆ ವಿಷಯವನ್ನು ಪ್ರಾಂತೀಯ ಸರ್ಕಾರಗಳಿಗೆ ಬಿಡಲಾಗಿತ್ತು. ಇದು ಆಗಿನ ಪರಿಸ್ಥಿತಿಯಾಗಿತ್ತು. ೧೯೩೮ರಲ್ಲಿ ಠರಾವಾದ ದೇಶಮುಖ್ ಮಸೂದೆಯನ್ನು ವಿಸ್ತರಿಸಿ, ಅದು ವ್ಯವಸಾಯದ ಭೂಮಿಯನ್ನೂ ಒಳಗೊಳ್ಳುವಂತೆ ಮಾಡಲಾಯಿತು. ಆಗ ಈ ವಿಷಯವನ್ನು ಫೆಡರಲ್ ನ್ಯಾಯಾಲಯಕ್ಕೆ ಒಯ್ಯಲಾಗಿ, ಅಲ್ಲಿ ಇದು ಭಾರತೀಯ ವಿಧಾನ ಸಭೆಯ ಅಧಿಕಾರ ವ್ಯಾಪ್ತಿಗೆ ಮೀರಿದುದು ಎಂದು ತೀರ್ಮಾನವಾಯಿತು. ಅದೇ ನ್ಯಾಯಾಲಯದ

ತೀರ್ಪೂ ಆಗಿತ್ತು, ಅದೇ ೧೯೩೫ರ ಭಾರತ ಸರ್ಕಾರದ ನಿಬಂಧನೆಯೂ ಆಗಿತ್ತು. ಆದುದರಿಂದಲೇ, ಸರ್ ಬಿ.ಎನ್.ರಾವ್ ಮತ್ತು ಅವರ ಸಮಿತಿಯೂ, ಡಾ॥ ಅಂಬೇಡ್ಕರ್ ಮತ್ತು ಅವರ ಕಾನೂನು ಇಲಾಖೆಯೂ ಕೈಬಿಟ್ಟರಲ್ಲದೆ, ಇದರ ವ್ಯವಹಾರವನ್ನು ಪ್ರಾಂತೀಯ ವಿಧಾನ ಸಭೆಗಳಿಗೆ ಬಿಡಲಾಗಿದೆ ಎಂದು ಹೇಳಿದರು. ಆದರೆ, ಅದೃಷ್ಟವಶಾತ್, ಅಷ್ಟರೊಳಗಾಗಿ, ಸಂವಿಧಾನ ರಚನಾಸಭೆ (Constituent Assembly) ಕರಡು ಸಮಿತಿ (Drafting Committee) ತನ್ನ ಕರಡು ಸಂವಿಧಾನವನ್ನಾಗಲೇ ಪ್ರಕಟಿಸಿತ್ತು.

ಏಳನೇ ನಿಯಮ ೭ನೇ ಉಪನಿಯಮವನ್ನು ತಿದ್ದಬೇಕು. ಅಂದರೆ, ವ್ಯವಸಾಯದ ಭೂಮಿಯೂ ಸೇರಿದಂತೆ ಸ್ಥಿರಾಸ್ತಿಯ ಹಾಗೂ ಚರಾಸ್ತಿಯ ಉತ್ತರಾಧಿಕಾರಕ್ಕೆ ಸಂಬಂಧಿಸಿದ ವಿಷಯವನ್ನು ಅದರ ಜೊತೆಯಲ್ಲಿಯೇ ಚರ್ಚಿಸಲು ಅನುವಾಗುವಂತೆ ತಿದ್ದಬೇಕು, ಎಂದು ಕರಡು ಸಂವಿಧಾನದಲ್ಲೇ ಹೇಳಲಾಗಿದೆ. ನಿಯಮ ಹಾಗಿತ್ತು. ಆಗ ನಾನು ಇದಕ್ಕೆ ಸಂಬಂಧಿಸಿದಂತೆ ಒಂದು ಸಲಹೆಯನ್ನಿತ್ತೆ. ಅದನ್ನು ವಿಶೇಷ ಸಭೆಯಲ್ಲೂ, ನನ್ನ ಅಸಮ್ಮತಿ ಸೂಚನೆಯಲ್ಲೂ ತಿಳಿಸಿದ್ದೇನೆ. ಅದೇನೆಂದರೆ: ನಾವು ಇನ್ನೂ ಕೆಲವು ತಿಂಗಳು ತಡೆಯಬಹುದು. ಆ ಮೂಲಕ, ತಮ್ಮ ತಂದೆ ಅಥವಾ ಗಂಡನ ಆಸ್ತಿಯ ಹಂಚಿಕೆಯಲ್ಲಿ ಸ್ತ್ರೀಯರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ತೆಗೆದುಕೊಂಡ ಕ್ರಮವನ್ನೇ ಎಲ್ಲ ಆಸ್ತಿಗಳ ಹಂಚಿಕೆಗೂ ಅನ್ವಯವಾಗುವಂತೆ ಮಾಡೋಣ. ನಿಮಗೆ ಬೇಕಾಗಿರುವುದು ಕಾನೂನಿನ ಏಕರೂಪತೆ. ಆದರೆ ನಾನು ಧೈರ್ಯದಿಂದ ಹೇಳುವುದೇನೆಂದರೆ, ನಿಮಗೆ ಸಿಕ್ಕುವುದು ವಿವಿಧತೆಯೇ ಹೊರತು, ಏಕರೂಪತೆಯಲ್ಲ, ನಿಮಗೆ ಸಿಕ್ಕುವುದು ಐಕಮತ್ಯವಲ್ಲ, ಗೊಂದಲ. ಒಂದು ವೇಳೆ ನಾವು ಈ ಕಾನೂನನ್ನ ಒಪ್ಪಿಕೊಂಡರೆ, ಪರಿಸ್ಥಿತಿ ಹೇಗಿರುತ್ತದೆಯೆಂದರೆ, ಒಬ್ಬ ವ್ಯಕ್ತಿಗೆ ಪೇಟೆಯಲ್ಲಿ ಸ್ಥಿರಾಸ್ತಿಯಿದ್ದರೆ, ಅದಕ್ಕೆ ಅನ್ವಯವಾಗುವುದು ಒಂದು ಕಾನೂನು, ಅಂದರೆ ಡಾ॥ ಅಂಬೇಡ್ಕರ್‌ರ ನ್ಯಾಯಾಲಯದ ಕಾನೂನು; ಅದೇ ಪೇಟೆಯ ಮೂರು ಮೈಲಿ ದೂರದಲ್ಲಿ ಅವನಿಗೆ ವ್ಯವಸಾಯದ ಭೂಮಿಯಿದ್ದರೆ, ಹಳೆಯ ಕಾನೂನೇ ಅನ್ವಯವಾಗುತ್ತದೆ. ಗಂಡುಮಕ್ಕಳಿಗೆ, ಅವರು ಹುಟ್ಟಿದಂದಿನಿಂದಲೇ, ಎಲ್ಲ ಹಕ್ಕುಗಳೂ ಸಿಕ್ಕುತ್ತವೆ, ಹಾಗೂ ವಾರಸುದಾರತ್ವದ ನಿಯಮ ಅವರಿಗೆ ಅನ್ವಯವಾಗುತ್ತದೆ. ಆಸ್ತಿಗೆ ಸಂಬಂಧಿಸಿದಂತೆ ಪರಿಸ್ಥಿತಿ ಏನಿದೆಯೆಂಬುದು ಯಾರಿಗೂ ಗೊತ್ತಾಗುವುದಿಲ್ಲ. ನೋಡಿ, ನೀವು ಎಷ್ಟೊಂದು ದೋಷಗಳನ್ನು ಹಾಗೆ ಬಿಟ್ಟಿದ್ದೀರಿ! ನಿಮ್ಮ ಮಗಳಿಗೆ ಆಸ್ತಿಯನ್ನು ಕೊಡಲು ನಿಮಗಿಷ್ಟವಿಲ್ಲದಿದ್ದರೆ, ಅವಳ ಪಾಲನ್ನು ಪುಣೆಯಲ್ಲಿ ಮಾರಿ ಅಲ್ಲಿಂದ ಐದು ಮೈಲಿ ದೂರದಲ್ಲಿರುವ ವ್ಯವಸಾಯ ಭೂಮಿಯನ್ನು ಖರೀದಿಸುತ್ತೀರಿ; ಹೀಗೆ ಮಾಡುವ ಮೂಲಕ ನೀವು ನಿಮ್ಮ ಮಗಳಿಗೆ ಆಸ್ತಿಯ ಪಾಲು ಸಿಗದಂತೆ ಮಾಡಬಹುದು ಹಾಗೂ ಮಸೂದೆಯ ನಿಯಮಗಳ ಹಿಡಿತದಿಂದಲೂ ತಪ್ಪಿಸಿಕೊಳ್ಳಬಹುದು. ಆದರೆ, ಅದೃಷ್ಟವಶಾತ್ ಈಗ ಏನಾಗಿದೆ? ಎರಡರಲ್ಲಿ ಮೊದಲನೆಯ ಸಾರಿ ಕರಡು ಮಸೂದೆಯನ್ನು ಓದುವಾಗ ಕೊನೆಯ ಭಾಗಕ್ಕೆ ಬಂದಿದ್ದೇವೆ. ಈಗಿನ ಪರಿಸ್ಥಿತಿ ಹೇಗಿದೆಯೆಂದರೆ, ಸಂಘಟಿತ ವಿಧಾನಸಭೆಯು ಡಾ॥ ಅಂಬೇಡ್ಕರ್ ಮತ್ತು ಕರಡುಪ್ರತಿ ಸಮಿತಿಯು ಮಾಡಿದ ಸಲಹೆಯನ್ನು ಸರ್ವಾನುಮತದಿಂದ ಅಂಗೀಕರಿಸಿದೆ; ಹಾಗೂ ದೈವೇಚ್ಛೆಯಂತೆ, ಅದು ಜನವರಿ ೨೬ರಂದು ಜಾರಿಗೂ ಬರಬಹುದು; ಅಂದರೆ, ಮಸೂದೆಯನ್ನು ಮೂರನೆಯ ಸಾರಿ ಓದುವುದಕ್ಕಿಂತ ಬಹಳ ಮುಂಚೆಯೇ ಜಾರಿಗೆ ಬರಬಹುದು. ವ್ಯವಸಾಯದ ಭೂಮಿಯನ್ನು ಹೊರತುಪಡಿಸುವ, ಮಸೂದೆಯಲ್ಲಿನ ಈ ನಿಯಮವನ್ನು ತೆಗೆದುಹಾಕಲು ಸಹಾಯಕವಾಗುವಂತೆ ಹಾಗೂ ಆ ಮೂಲಕ ಕಾಲುಭಾಗ ಅಥವಾ ಅರ್ಧ ಅಥವಾ ಪೂರ್ಣ ಭಾಗ ಪಾಲನ್ನು ಹೆಣ್ಣು ಮಕ್ಕಳಿಗೆ ಕೊಡಲು, ಅಥವಾ ಯಾವ ಪಾಲನ್ನೂ ಕೊಡದಿರಲು ಸಹಾಯಕವಾಗುವಂತೆ, ತಿದ್ದುಪಡಿಯೊಂದನ್ನು ಈಗ ಸೇರಿಸುತ್ತೀರಾ ಎಂದು ನಾನು ಕೆಲದಿನಗಳ ಹಿಂದೆ

ಕೇಳಿದಾಗ, ಅವರು "ಇಲ್ಲ"ಎಂದರು.

**ಮಾನ್ಯ ಡಾ॥ ಅಂಬೇಡ್ಕರ್ :** ಸಂಭಾಷಣೆಯನ್ನು ಪ್ರಕಟಿಸುವ ಅಧಿಕಾರ ಮಾನ್ಯ ಸದಸ್ಯರಿಗಿದೆ ಎಂದು ನನಗನ್ನಿಸುತ್ತಿಲ್ಲ. ಆಗ ನಾನು ಹೇಳಿದುದು "ಅದು ನನ್ನ ಈಗಿನ ಸ್ವಂತ ಅಭಿಪ್ರಾಯ" ಎಂದಷ್ಟೆ. ಅನಂತರ ನಮ್ಮ ಅಭಿಪ್ರಾಯಗಳನ್ನು ಪುನರ್‌ವಿಮರ್ಶಿಸಬಹುದು. ಈಗ ಅಧಿಕಾರ ನಮ್ಮ ಕೈಗೇ ಬಂದಿರುವುದರಿಂದ, ನಮ್ಮ ದಾರಿಯಲ್ಲಿರುವ ಅನೇಕ ಅಡೆತಡೆಗಳಲ್ಲೊಂದು ನಿವಾರಣೆಯಾಗಿದೆ.

**ಡಾ॥ ಭಕ್ಷಿ ತೇಕ್‌ಚಂದ್ :** ನನ್ನ ವಿದ್ಯಾವಂತ ಸ್ನೇಹಿತರು ನನ್ನನ್ನು ತಿದ್ದಿದ್ದಕ್ಕೆ ನನಗೆ ಬಹಳ ಸಂತೋಷವಾಗಿದೆ. ಆ ಉಪನಿಯಮವನ್ನು ಹಿಂತೆಗದುಕೊಳ್ಳುವುದು ತಮ್ಮ ಉದ್ದೇಶವಲ್ಲ, ಆದರೆ ಅವುಗಳಲ್ಲಿರುವ ವ್ಯತ್ಯಾಸವನ್ನು ಹಾಗೆ ಇಟ್ಟುಕೊಳ್ಳುವುದಷ್ಟೇ ತಮ್ಮ ಉದ್ದೇಶ, ಎಂದು ನನ್ನ ಮಿತ್ರರು ತಿದ್ದಿದ್ದಾರೆ. ನನ್ನನ್ನು ಅವರು ತಿದ್ದಿದ್ದಕ್ಕೆ ನಾನು ಅವರಿಗೆ ಅನೇಕ ವಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಅನಂತರ....

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಆ ತರಹದ್ದೇನನ್ನೂ ಹೇಳಿಯೇ ಇಲ್ಲ. ಸಂಭಾಷಣೆಯನ್ನು ಇಲ್ಲಿ ಉಪಯೋಗಿಸುವ ಅಧಿಕಾರ ನನ್ನ ಸ್ನೇಹಿತರಿಗಿಲ್ಲ ಎಂಬುದು ನನ್ನ ಅನಿಸಿಕೆ.

**ಡಾ॥ ಭಕ್ಷಿ ತೇಕ್‌ಚಂದ್ :** ನಾನು ಸಂಭಾಷಣೆಯನ್ನಲ್ಲ ಉಪಯೋಗಿಸಿಕೊಳ್ಳುತ್ತಿರುವುದು, ಸದನದಲ್ಲಿ ಈಗ ತಾನೇ ತಾವು ಹೇಳಿದ ಮಾತನ್ನು.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಇಂಥ ವಿಷಯಗಳನ್ನು ನಾನೊಬ್ಬನೇ ತೀರ್ಮಾನಿಸಲು ಬರುವುದಿಲ್ಲ. ನನ್ನ ಸಹೋದ್ಯೋಗಿಗಳ ಒಪ್ಪಿಗೆಯನ್ನೂ ಪಡೆಯಬೇಕಾಗುತ್ತದೆ.

**ಮಾನ್ಯ ಉಪಸಭಾಪತಿಗಳು :** ಮಸೂದೆಯು ತನ್ನ ಈಗಿನ ರೂಪದಲ್ಲಿ ವ್ಯವಸಾಯ ಭೂಮಿಯನ್ನು ಒಳಗೊಳ್ಳುವುದಿಲ್ಲ. ಸನ್ಮಾನ್ಯ ಸದಸ್ಯರು ಮಸೂದೆಯ ಈಗಿನ ರೂಪದ ಬಗ್ಗೆ ಮುಂದುವರಿಯಬಹುದು, ಆದರೆ ಅವರು ಖಾಸಗಿ ಸಂಭಾಷಣೆಯನ್ನು ಪ್ರಸ್ತಾಪಿಸಬಾರದು.

**ಡಾ॥ ಭಕ್ಷಿ ತೇಕ್‌ಚಂದ್ :** ಮಸೂದೆಯನ್ನು ಈಗಿರುವಂತೆಯೇ ತೆಗೆದುಕೊಳ್ಳೋಣ. ತಿದ್ದುಪಡಿಯನ್ನು ಈಗಲೇ ಮಾಡುತ್ತೀರೋ ಅನಂತರ ಮಾಡುತ್ತೀರೊ ಎನ್ನುವುದಾಗಲಿ, ಕ್ಯಾಬಿನೆಟ್ ಒಪ್ಪಿಗೆಯ ಮೂಲಕ ಮಾಡುತ್ತೀರೋ, ಅಥವಾ ಬೇರೆ ಪಕ್ಷಗಳ ಒಪ್ಪಿಗೆ ಪಡೆದು ಮಾಡುತ್ತೀರೋ, ಎನ್ನುವುದು ಇಲ್ಲಿ ಅಪ್ರಸ್ತುತ. ಹಾಗಾದರೆ ಈಗಿನ ನಿಲುವು ಏನು? ವ್ಯವಸಾಯ ಭೂಮಿಯನ್ನು ಕೈಬಿಡಲಾಗಿದೆ. ನಮ್ಮ ದೇಶದ ಯಾವುದೇ ಭಾಗವನ್ನು ತೆಗೆದುಕೊಂಡರೂ, ಅಲ್ಲಿ ಹಿಂದೂಗಳ ಆಸ್ತಿಯಲ್ಲಿ ಶೇಕಡಾ ೮೦ಕ್ಕಿಂತ ಹೆಚ್ಚು ವ್ಯವಸಾಯ ಭೂಮಿಯೇ ಇರುತ್ತದೆ. ಆದುದರಿಂದ, ಈ ಮಸೂದೆಯ ದೆಸೆಯಿಂದಾಗಿ, ನಮ್ಮ ಸೋದರಿಯರು, ನಮ್ಮ ಪುತ್ರಿಯರು ಹಾಗೂ ಇತರ ಸ್ತ್ರೀ ಬಂಧುಗಳು ಆಸ್ತಿಯ ಇಷ್ಟು ದೊಡ್ಡ ಪಾಲಿಗೆ ಉತ್ತರಾಧಿಕಾರಿಗಳಾಗುವುದರಿಂದ ವಂಚಿತರಾಗುತ್ತಾರೆ. ಮಸೂದೆಯನ್ನು ಈಗಿರುವ ರೂಪದಲ್ಲೇ ಮುಂದುವರಿಯಲು ಬಿಡದೆ, ಅದನ್ನು ಮತ್ತೆ ಪರಾಮರ್ಶಿಸುವುದು ಆವಶ್ಯಕ ಎಂದು ಹೇಳಲು ಇದೂ ಒಂದು ಕಾರಣ, ನೀವು ಯಾವುದೇ ಕಾನೂನನ್ನು ಮಾಡಿ, ಆದರೆ ಅದು ಎಲ್ಲ ತರದ ಆಸ್ತಿಗಳಿಗೂ ಅನ್ವಯವಾಗುವಂತಿರಬೇಕು. ಅದು ವ್ಯವಸಾಯ ಭೂಮಿಯಿರಬಹುದು, ಪಟ್ಟಣದಲ್ಲಿನ ಆಸ್ತಿಯಿರಬಹುದು, ಚರಾಸ್ತಿಯಿರಬಹುದು, ಸ್ಥಿರಾಸ್ತಿಯಿರಬಹುದು.

**ಪಂಡಿತ ಬಾಲಕೃಷ್ಣ ಶರ್ಮ** (ಉ. ಪ್ರ : ಸಾಮಾನ್ಯ) **:** ನನ್ನ ಸನ್ಮಾನ್ಯ ಮಿತ್ರರು ಒಂದು ನಿಮಿಷ ಅವಕಾಶ ಕೊಟ್ಟರೆ, ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಈ ಮಸೂದೆ ವ್ಯವಸಾಯ ಭೂಮಿಗೂ

ಅನ್ವಯವಾಗುವುದಾದರೆ, ಭೂಮಿಯು ತುಂಡು ತುಂಡಾಗಲು ಅವಕಾಶ ನೀಡಿದಂತಾಗುವುದಿಲ್ಲವೆ? (ಈಗ ಕೆಲವರು ಅಡ್ಡಿ ಮಾಡುತ್ತಾರೆ).

**ಮಾನ್ಯ ಉಪಸಭಾಪತಿಗಳು :** ದಯವಿಟ್ಟು ಯಾವುದೇ ಅಡ್ಡಿ ಮಾಡಬೇಡಿ. ಈ ಚರ್ಚೆಯು ಯಾವಾಗಬೇಕಾದರೂ ಕೊನೆಗೊಳ್ಳಬಹುದು. ಈ ಎಚ್ಚರಿಕೆಯನ್ನು ಸದನಕ್ಕೆ ಮುಂಚೆಯೇ ಕೊಡುತ್ತಿದ್ದೇನೆ. ಅಡ್ಡಿಗಳು ಕಡಿಮೆಯಾದಂತೆಲ್ಲ ಹೆಚ್ಚಿನ ಸಂಖ್ಯೆಯ ಭಾಷಣಕಾರರಿಗೆ ಇದರಲ್ಲಿ ಭಾಗವಹಿಸುವ ಅವಕಾಶ ಹೆಚ್ಚುತ್ತದೆ.

**ಡಾ॥ ಭಕ್ಷಿ ತೇಕ್‌ಚಂದ್ :** ಭೂಮಿ ತುಂಡಾಗುವ ವಿಷಯದಲ್ಲಿ ನನಗೇನೂ ಭಯವಿಲ್ಲ. ಉತ್ತರಾಧಿಕಾರಿಗಳ ಸಂಖ್ಯೆ ದೊಡ್ಡದಿದ್ದರೆ ಅದು ಆಗಲೇ ಬೇಕು. ಒಬ್ಬನಿಗೆ ಐವರು ಪುತ್ರರಿದ್ದರೆ ಭೂಮಿಯ ವಿಭಜನೆ ಅನಿವಾರ್ಯ; ಜೊತೆಗೆ ಇಬ್ಬರು ಪುತ್ರಿಯರೂ ಇದ್ದರೆ, ಆಗ ಹೆಚ್ಚು ಭಾಗಗಳಾಗುತ್ತದೆ. ಸ್ಥಿರಾಸ್ತಿಯೇ ಆಗಲಿ ಪೇಟೆಯ ಆಸ್ತಿಯೆ ಆಗಲಿ ಅದರ ವಿಭಜನೆಯ ಬಗ್ಗೆ ನನಗೆ ಏನೂ ಹೆದರಿಕೆ ಇಲ್ಲ. ನಿಮಗೆ ಒಂದೋ ಎರಡೋ ಮನೆಗಳಿದ್ದು ಇಬ್ಬರು ಪುತ್ರರು, ಐವರು ಪುತ್ರಿಯರು ಇದ್ದರೆ, ಅವರು ಆಸ್ತಿಯನ್ನು ವಿಭಜನೆ ಮಾಡಲು ತೀರ್ಮಾನಿಸುತ್ತಾರೆ; ಹೀಗೆ ವಿಭಜನೆ ಅನಿವಾರ್ಯ. ಆದುದರಿಂದ ನಾನು ಎರಡೂ ಪಕ್ಷಗಳಿಗೆ ಗೌರವ ಸಲ್ಲಿಸುತ್ತಾ, ಈ ವಾದವು ಅಪ್ರಸ್ತುತವಾದುದರಿಂದ ಅದನ್ನು ಪರಿಶೀಲಿಸಬೇಕಾಗಿಲ್ಲವೆಂದು ಹೇಳುತ್ತೇನೆ.

ಈ ಮಸೂದೆಯಡಿಯಲ್ಲಿ ಆಸ್ತಿಯ ಶೇಕಡಾ ೮೦ರಷ್ಟು ಹೊರತುಪಡಿಸಲಾಗಿದೆ. ಸುಧಾರಣಾ ದೃಷ್ಟಿಯಿಂದ ಇದೊಂದು ಗಂಭೀರ ದೋಷ.

ಕೆಲವರು ಮಾಡಿರುವ ಆಕ್ಷೇಪಗಳಲ್ಲಿ ಒಂದು ಹೀಗಿದೆ; ಒಬ್ಬನಿಗೆ ಒಂದು ಮನೆ, ಒಂದು ತುಂಡು ಭೂಮಿ ಇರಬಹುದು. ಕೆಲವು ಹಳ್ಳಿಗರಿಗೆ ಒಂದು ಕಚ್ಚಾ ಅಂಗಡಿ ಸಹ ಇರುತ್ತದೆ. ಆಗ ಅವುಗಳಲ್ಲಿ ಅನೇಕ ಭಾಗಗಳಾಗುತ್ತವೆ; ಜೊತೆಗೆ, ಒಬ್ಬ ಅಳಿಯ ಆ ಕುಟುಂಬಕ್ಕೆ ಬಂದು ಸೇರಿಕೊಳ್ಳುತ್ತಾನೆ. ಈ ಮಸೂದೆಯನ್ನು ಬೆಂಬಲಿಸುವ ಕೆಲವರು ಅದೊಂದು ಸಮಂಜಸವಾದ ಆಕ್ಷೇಪವೆಂದೂ ಆದುದರಿಂದ ಆ ಕುಟುಂಬಕ್ಕೆ ಸೇರಿದ ವಾಸದ ಮನೆಯನ್ನು ಹೊರತುಪಡಿಸಲು ಅನುವು ಮಾಡಿಕೊಡುವಂಥ ಒಂದು ಉಪನಿಯಮವನ್ನು– ಮಸೂದೆಯನ್ನು ಮೂರನೆ ಸಾರಿ ಓದುವಾಗ– ಸೇರಿಸಬೇಕು ಎಂದೂ ವಾದಿಸುತ್ತಾರೆ. ಅಂದರೆ, ಮಗಳಿಗೆ ಉತ್ತರಾಧಿಕಾರದ ಹಕ್ಕಿದ್ದರೂ, ಆಕೆಗೆ ವಾಸದ ಮನೆಯಲ್ಲಿ ಪಾಲು ಸಿಕ್ಕುವುದಿಲ್ಲ. ಇದೇ ಹಾಗಾದರೆ, ಪೇಟೆಯ ಆಸ್ತಿಯಲ್ಲಿ ಆಕೆಯ ಪಾಲು ಇನ್ನೂ ಕಡಿಮೆ ಇರುತ್ತದೆ. ೩೦ ಕೋಟಿ ಹಿಂದೂಗಳಲ್ಲಿ ಕೆಲವು ಶ್ರೀಮಂತರನ್ನು ಬಿಟ್ಟರೆ, ಇಡೀ ಕುಟುಂಬವೇ ವಾಸ ಮಾಡುವ ಒಂದು ಮನೆಗಿಂತ ಹೆಚ್ಚು ಮನೆಗಳು ಯಾರಿಗೆ ಇರುತ್ತದೆ? ಸಾಮಾನ್ಯವಾಗಿ ಹಳ್ಳಿಯಲ್ಲಿ ಒಂದು ಕುಟುಂಬಕ್ಕೆ ಒಂದು ಮನೆ, ಒಂದು ತುಂಡು ಭೂಮಿ ಇರುತ್ತದೆ. ಅವನು ವ್ಯಾಪಾರಿಯಾಗಿದ್ದರೆ, ಅವನಿಗೊಂದು ಕಚ್ಚಾ ಅಂಗಡಿಯೂ ಇರುತ್ತದೆ. ಮಗಳಿಗೆ ವಾಸದ ಮನೆಯಲ್ಲಿ ಪಾಲಿಲ್ಲವೆಂದು ಹೇಳಿದರೆ, ಆಸ್ತಿಯಲ್ಲಿ ಒಂದು ಪಾಲು ಇಲ್ಲ ಎಂದಂತೆಯೇ.

ಮತ್ತೊಂದು ಆಕ್ಷೇಪ ಹೀಗಿದೆ : ಅಳಿಯನೂ ಆ ಕುಟುಂಬದ ಆಸ್ತಿಗೆ ಪಾಲುದಾರನಾದರೆ, ಬಹಳಷ್ಟು ಸಂದರ್ಭಗಳಲ್ಲಿ ಏನಾಗುತ್ತದೆಯೆಂದರೆ, ಅವನು ತನ್ನ ಹಳ್ಳಿಯಿಂದ ಹೆಂಡತಿಯ ಹಳ್ಳಿಗೆ ಬಂದು ಅಲ್ಲಿರುವ ಜಮೀನನ್ನು ನಿರ್ವಹಿಸಲು ಸಾಧ್ಯವಿಲ್ಲದ್ದರಿಂದ, ಆ ಜಮೀನನ್ನು ಅದೇ ಹಳ್ಳಿಯ ಯಾರೋ ಒಬ್ಬನಿಗೆ ಮಾರುತ್ತಾನೆ. ಇದು ಆ ಕುಟುಂಬ ಒಡೆಯಲು ಅವಕಾಶ ಮಾಡಿಕೊಡುತ್ತದೆ. ಇದನ್ನು ತಪ್ಪಿಸಲು "ಮಗಳಿಗೆ ಖಂಡಿತ ಆಸ್ತಿಯಲ್ಲಿ ಪಾಲು ಸಿಗಬೇಕು, ಆದರೆ ಆ ಆಸ್ತಿಗೆ ಸಮಾನಾದ ಹಣದ ರೂಪದಲ್ಲಿ"

ಎಂಬ ಸೂಚನೆಯನ್ನು ಕೆಲವರು ಕೊಟ್ಟಿದ್ದಾರೆ. ಅಂಥ ಸಂದರ್ಭದಲ್ಲಿ ಆಕೆಯ ಸೋದರರಿಗೆ ಆ ಆಸ್ತಿಯನ್ನು ಆಕೆಯ ಮದುವೆಯಾದ ಒಂದೆರಡು ವರ್ಷದೊಳಗಾಗಿ ಕೊಂಡುಕೊಳ್ಳುವ ಹಕ್ಕನ್ನು ಕೊಡಬೇಕಾಗುತ್ತದೆ; ಆಗ ಅದರ ಹಣವನ್ನು ತಮ್ಮ ಸೋದರಿಗೆ ಅಥವಾ ಆಕೆಯ ಗಂಡನಿಗೆ ಕೊಟ್ಟು ಆಸ್ತಿಯನ್ನು ತಾವೇ ಇಟ್ಟುಕೊಳ್ಳುವ ಹಕ್ಕು ಅವರಿಗೆ ಇರುತ್ತದೆ. ಇದೂ ಸಹ ಒಂದು ದೊಡ್ಡ ಸಮಸ್ಯೆಗೆ ಎಡೆಮಾಡಿಕೊಡುತ್ತದೆ ಎಂಬುದು ನನ್ನ ಅನಿಸಿಕೆ. ಆಗ ಆಕೆಯ ಪಾಲಿನ ಆಸ್ತಿಯ ಬೆಲೆಯನ್ನು ನಿರ್ಧರಿಸುವುದು ಕಷ್ಟವಾಗಿ ಅದು ಕೊನೆಯಿಲ್ಲದ ಕೋರ್ಟು ವ್ಯವಹಾರಕ್ಕೆ ದಾರಿ ಮಾಡಿಕೊಡುತ್ತದೆ; ಹಾಗೂ ಮಗಳಿಗೆ ಆಗ ಏನೂ ಸಿಕ್ಕುವುದೇ ಇಲ್ಲ. ಈ ಮಸೂದೆ ವ್ಯವಸಾಯದ ಜಮೀನಿಗೆ ಅನ್ವಯಿಸುವುದಿಲ್ಲ, ವಾಸದ ಮನೆಗಳಿಗೆ ಅನ್ವಯಿಸುವುದಿಲ್ಲ; ಇನ್ನೂ ಅನೇಕ ವಿಷಯಗಳು ಇಲ್ಲಿ ಬರುತ್ತವೆ. ಆಕೆಗೆ ಇಡೀ ಆಸ್ತಿಯನ್ನು ಕೊಡುವುದು ಬಹಳವೆನಿಸಿದರೆ, ಅದರಲ್ಲಿ ಅರ್ಧಕೊಡಿ; ಅಥವಾ ಕಾಲು ಭಾಗ ಕೊಡಿ. ಆದರೆ ಪೂರ್ಣ ಪಾಲನ್ನು ಆಕೆಗೆ ಯಾಕೆ ಕೊಡಬಾರದು? ಎಂಬುದು ನನ್ನ ಪ್ರಶ್ನೆ.

ಸ್ಮೃತಿಗಳು ಆಕಾಶದಿಂದ ಬಂದಿವೆ ಎಂದು ತಿಳಿಯದೆ, ಶಾಂತಿ ಮತ್ತು ಸಮಾಧಾನಗಳಿಂದ ಈ ಮಸೂದೆಯನ್ನು ವಿಶ್ಲೇಷಿಸಿದರೆ ಸ್ತ್ರೀ ಉತ್ತರಾಧಿಕಾರಿಗಳಿಗೆ ಇದರಿಂದ ಕಿಂಚಿತ್ ಲಾಭವೂ ಇಲ್ಲ ಎಂಬುದು ವ್ಯಕ್ತವಾಗುತ್ತದೆ.

ಈ ಮಸೂದೆಯು ಹಿಂದೂ ಅವಿಭಕ್ತ ಕುಟುಂಬವನ್ನು ಒಡೆಯುತ್ತದೆ. ಅದು ಒಳ್ಳೆಯದೋ ಕೆಟ್ಟದೋ, ಜನ ಮಾತ್ರ ಅದಕ್ಕೆ ಅಂಟಿಕೊಳ್ಳುತ್ತಾರೆ. ಮದ್ರಾಸಿನ ಹಳ್ಳಿಗಳಲ್ಲಿ ಅದು ಇಂದಿಗೂ ಜಾರಿಯಲ್ಲಿದೆ ಎಂದು ನಮ್ಮ ಸೋದರ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ತೋರಿಸಿಕೊಟ್ಟರು ನನ್ನ ಸ್ನೇಹಿತರಾದ ಶ್ರೀ ಸಂತಾನಂ ಅವರು ಬೇರೆ ಅಭಿಪ್ರಾಯ ಕೊಟ್ಟರು. ಅಂತೂ ಅದು ಇದೆ. ಅದು ಎಷ್ಟು ಜನರಿಗೆ ಅನ್ವಯಿಸುತ್ತದೆಯೋ ಗೊತ್ತಿಲ್ಲ, ಆದರೆ ಅದು ಜಾರಿಯಲ್ಲಿದೆ. ಈ ಹಿಂದೂ ಕಾನೂನಿನ ಉಳಿದೆಲ್ಲ. ತತ್ತ್ವಗಳನ್ನೂ, ಅಂದರೆ ವಾರಸುದಾರತ್ವ, ಉತ್ತರಾಧಿಕಾರ, ಮಗನಿಗೆ ಸಿಗುವ ಪಾಲು, ಮುಂತಾದುವುಗಳಿಗೆ ಸಂಬಂಧಿಸಿದೆಲ್ಲವನ್ನೂ ನೀವು ರದ್ದು ಮಾಡುತ್ತಿದ್ದೀರಿ. ಅದರ ಆವಶ್ಯಕತೆಯೇನು? ಈಗ ಅಗತ್ಯವಾಗಿರುವುದೇನೆಂದರೆ ಮಗಳಿಗೆ ಪಾಲು ಸಿಗುವಂತೆ ಮಾಡುವುದಷ್ಟೆ. ಆದುದರಿಂದ ತಮ್ಮ ಮುಂದೆ ನಾನು ನಿವೇದಿಸಿಕೊಳ್ಳುವುದೇನೆಂದರೆ, ಈ ಮಸೂದೆಯ ೫, ೬ ಮತ್ತು ೭ನೆಯ ಭಾಗಗಳು ಹಿಂದೂ ಕೌಟುಂಬಿಕ ವ್ಯವಸ್ಥೆಯಲ್ಲಿ ಆತ್ಯಂತಿಕ ಬದಲಾವಣೆಗಳನ್ನುಂಟು ಮಾಡುತ್ತವೆ ಮತ್ತು ಅದು ಈಗಿರುವ ರೂಪದಲ್ಲಿ ಸ್ತ್ರೀಯರಿಗೆ ಅತ್ಯಂತ ಕಡಿಮೆ ಲಾಭವನ್ನು ತಂದುಕೊಡುತ್ತದೆ.

ಆದುದರಿಂದ ಮಸೂದೆಗೆ ಬೆಂಬಲ ನೀಡುತ್ತಿರುವವರನ್ನು ನಾನು ಕೇಳುವುದೇನೆಂದರೆ, ಈ ಹಂತದಲ್ಲಿ ಮಸೂದೆಯನ್ನು ಅವಸರದಿಂದ ಮುಂದಕ್ಕೆ ತಳ್ಳಿ, ನಾಳೆಯೇ ಆಗಲಿ ಅಥವಾ ಮುಂದಿನ ಅಧಿವೇಶನದಲ್ಲಿಯೇ ಆಗಲಿ ಅಂತಿಮವಾಗಿ ಮತಕ್ಕೆ ಹಾಕುವುದು ಅಗತ್ಯವೆ? ಅದರ ಬದಲು, ಈ ವಿಷಯವನ್ನು ಇನ್ನೂ ಹೆಚ್ಚು ಪರಾಮರ್ಶೆಗೊಳಪಡಿಸುವುದು, ಹಿಂದೂ ಅವಿಭಕ್ತ ಕುಟುಂಬದ ಸದಸ್ಯೆಯರಿಗೆ– ಅವರಿಗೆ ಮಿತಾಕ್ಷರ ಪದ್ಧತಿ ಅನ್ವಯವಾಗಬಹುದು, ಅಥವ ದಾಯಭಾಗ ಪದ್ಧತಿ ಅನ್ವಯವಾಗಬಹುದು, –ಅವರು ಯಾವ ಪದ್ಧತಿಗೆ ಸೇರಿದ್ದರೂ ಅದಕ್ಕೆ ಧಕ್ಕೆಯಾಗದಂತೆ ಪೂರ್ಣ ಲಾಭ ಸಿಗುವಂತೆ ಮಾಡಲು ಬೇರೆ ದಾರಿ ಹುಡುಕುವುದು ಹೆಚ್ಚು ಅಪೇಕ್ಷಣೀಯವಲ್ಲವೆ?

ನನ್ನ ಅನಿಸಿಕೆಗಳನ್ನು ನನ್ನ ಸಂಪ್ರದಾಯಸ್ಥ ಮಿತ್ರರ ಮುಂದೆಯೂ, ಸುಧಾರಕ ಮಿತ್ರರ ಮುಂದೆಯೂ ನಿವೇದಿಸಿಕೊಂಡಿದ್ದೇನೆ. ಈಗ ಒಂದೇ ಒಂದು ಸಲಹೆಯನ್ನು ಮಾಡಬೇಕಾಗಿದೆ. ಆ ಸಲಹೆಯನ್ನು ಒಂದು

ವ್ಯವಸ್ಥಿತ ರೂಪದಲ್ಲಿ ಇನ್ನೂ ಯೋಚಿಸಿಲ್ಲ, ಹಾಗೆ ಮಾಡಲು ಸಮಯ ಬಹಳ ಬೇಕಾಗುತ್ತದೆ. ಆದರೆ ಸದನದ ಮುಂದೆ ಅದರ ಸ್ಥೂಲ ರೂಪರೇಖೆಗಳನ್ನು ಇರಿಸುತ್ತೇನೆ, ಹಾಗೂ ಅದೊಂದು ಪರಿಶೀಲನೆ ಯೋಗ್ಯವಾದ ಒಂದು ವಿಕಲ್ಪವಲ್ಲವೆ ಎಂದು ಡಾ॥ ಅಂಬೇಡ್ಕರರನ್ನು ಕೇಳುತ್ತೇನೆ, ಇತರ ಕಾನೂನು ಸಮಿತಿಯ ಸದಸ್ಯರನ್ನು ಕೇಳುತ್ತೇನೆ, ಸುಧಾರಕ ಸದಸ್ಯರನ್ನು ಕೇಳುತ್ತೇನೆ, ಸಂಪ್ರದಾಯಸ್ಥ ಸದಸ್ಯರನ್ನು ಕೇಳುತ್ತೇನೆ. ವಾಸ್ತವವಾಗಿ, ಈ ದಿನದ ಬೆಳಿಗ್ಗೆಯವರೆಗೂ ಈ ವಿಷಯದ ಮೇಲೆ ಮಾತಾಡಲು ಹಿಂದೇಟು ಹಾಕುತ್ತಿದ್ದೆ. ಅಲ್ಲಿಯವರೆಗೂ ಸದ್ಯದಲ್ಲಿ ಸೇರುವ ಸಮಿತಿಯ ಸಭೆಯ ಮುಂದೆ ನನ್ನ ಸಲಹೆಯನ್ನು ಇಡಬೇಕೆಂಬುದೇ ನನ್ನ ಅಭಿಪ್ರಾಯವಾಗಿತ್ತು. ಒಂದು ವೇಳೆ, ನಾನು ಆ ಸಮಿತಿಯ ಸದಸ್ಯನಾಗಿದ್ದರೆ, ಅದರ ಮುಂದಿಡಬೇಕೆಂಬುದು ನನ್ನ ಅಭಿಪ್ರಾಯವಾಗಿತ್ತು. ಆದರೆ ಇಂದು ನನ್ನನ್ನು ಮಾತಾಡುವಂತೆ ಕೇಳಿಕೊಂಡಾಗ, ಆ ಸಲಹೆಯನ್ನು ಸದನದ ಮುಂದಿಡುವುದೇ ಲೇಸು ಎಂದೆನಿಸಿತು. ನನ್ನ ಸಲಹೆ ಹೀಗಿದೆ.

ನಮ್ಮ ಉದ್ದೇಶವೇನು? ನಮ್ಮ ಕುಟುಂಬದ ಸದಸ್ಯೆಯರಿಗೆ ಆಸ್ತಿಯಲ್ಲಿ ಪೂರ್ಣ ಹಕ್ಕನ್ನು ಕೊಡುವುದೇ ನಮ್ಮ ಉದ್ದೇಶ. ಆದುದರಿಂದ, ಅದನ್ನು ಸಾಧಿಸಲು ನಾವೇನು ಮಾಡಬೇಕಾಗಿದೆ? ಅವಿಭಕ್ತ ಕುಟುಂಬವನ್ನು ಪ್ರಕ್ಷುಬ್ಧಗೊಳಿಸಬಾರದು; ವಾರಸುದಾರತ್ವಕ್ಕೆ ಸಂಬಂಧಿಸಿದ ಕಾನೂನನ್ನು ರದ್ದು ಮಾಡಬಾರದು. ಅವುಗಳಿಗೆ ಎಲ್ಲಿಯವರೆಗೆ ಮುಂದುವರೆಯಲು ಸಾಧ್ಯವೋ, ಅಲ್ಲಿಯವರೆಗೂ ಅವು ಮುಂದುವರಿಯಲಿ. ಒಬ್ಬಳು ಮಿತಾಕ್ಷರ ಪದ್ಧತಿಯ ಕುಟುಂಬದ ಸದಸ್ಯನನ್ನು ಮದುವೆಯಾದ ತಕ್ಷಣವೇ, ಅವಳಿಗೆ ಆ ಆಸ್ತಿಯಲ್ಲಿ ಪೂರ್ಣ ಪ್ರಮಾಣದ ಸಹ–ಪಾಲುದಾರಿಕೆ ಸಿಕ್ಕಬೇಕು. ಸದ್ಯಕ್ಕೆ ಅವಳು ಅವಿಭಕ್ತ ಕುಟುಂಬದ ಸದಸ್ಯೆ, ಆದರೆ ಸಹ–ಪಾಲುದಾರಿಕೆ ಉಳ್ಳ ಸದಸ್ಯೆ. ನನ್ನ ಸಲಹೆಯನ್ನು ತಮ್ಮ ಮುಂದಿಡಲು ನನಗೆ ಮೂರು ನಿಮಿಷ ಕೊಡಬೇಕೆಂದೂ, ಅನಂತರ ಅದನ್ನು ಪರಿಶೀಲಿಸಬೇಕೆಂದೂ ಸನ್ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತಿದ್ದೇನೆ. ಯಾರಾದರೂ ಅದಕ್ಕೆ ಅಡ್ಡಿ ಮಾಡಿದರೆ, ಅದೇನೂ ಅನುಕೂಲಕರವಾಗುವುದಿಲ್ಲ. ಇದು ಕೇವಲ ಒಂದು ಸಲಹೆ, ಅಷ್ಟೆ. ಅದನ್ನು ನಿಮ್ಮ ಪರಿಶೀಲನೆಗಾಗಿ, ಸಮಿತಿಯ ಪರಿಶೀಲನೆಗಾಗಿ, ಕಾನೂನು ಮಂತ್ರಿ, ಪ್ರಧಾನ ಮಂತ್ರಿ ಈ ವಿಷಯದಲ್ಲಿ ಆಸಕ್ತಿಯುಳ್ಳ ಇತರರ ಪರಿಶೀಲನೆಗಾಗಿ ತಮ್ಮ ಮುಂದಿಡುತ್ತಿದ್ದೇನೆ. ಈಗ ರೂಢಿಯಲ್ಲಿರುವಂತೆ, ಹೆಂಗಸು ಮದುವೆಯಾದ ನಂತರ ಗಂಡನ ಗೋತ್ರಕ್ಕೆ ಸೇರುತ್ತಾಳೆ. ಅವಿಭಕ್ತ ಕುಟುಂಬದ ಸದಸ್ಯೆಯಾಗುತ್ತಾಳೆ; ಆದರೆ ಬಹಳ ಪರಿಮಿತವಾದ ಹಕ್ಕನ್ನು ಪಡೆಯುತ್ತಾಳೆ. ೧೯೩೭ರವರೆಗೆ ಭಾರತದ ಬ್ರಿಟಿಷ್ ನ್ಯಾಯಾಲಯಗಳು ಆಕೆಗೆ ಕೇವಲ ಜೀವನಾಂಶದ ಹಕ್ಕುಗಳನ್ನು ಮಾತ್ರ ಕೊಟ್ಟಿದ್ದವು. ಅವಳಿಗೆ ಆಸ್ತಿಯಲ್ಲಿ ಕಾನೂನು ಪ್ರಕಾರದ ಹಕ್ಕು ಇರಲಿಲ್ಲ; ಆ ಆಸ್ತಿಯಲ್ಲಿ ವಾಸಿಸಬಹುದಿತ್ತು, ಅದನ್ನು ಅನುಭವಿಸಬಹುದಿತ್ತು, ಅಷ್ಟೇ.

ಪರಿಸ್ಥಿತಿ ಹೀಗಿತ್ತು. ೧೯೩೭ರಲ್ಲಿ ದೇಶಮುಖ್ ಶಾಸನ ಬಂತು. ಅದರ ಪ್ರಕಾರ, ಗಂಡ ಸತ್ತ ನಂತರ ಹೆಂಡತಿಗೆ ಆಸ್ತಿಯಲ್ಲಿ ಪಾಲು–ಗಂಡನಿಗೆ ಸಿಗುವಷ್ಟೇ ಪಾಲು– ಸಿಕ್ಕುತ್ತದೆ; ಅಲ್ಲದೆ, ಒಂದು ವೇಳೆ ಆಕೆಗೆ ಗಂಡನ ಸೋದರರ ಜೊತೆಯಲ್ಲಿ ಅಥವಾ ಉಳಿದ ಸದಸ್ಯರ ಜೊತೆಯಲ್ಲಿ ಇರಲು ಸಾಧ್ಯವಾಗದಿದ್ದರೆ, ತನ್ನ ಪಾಲಿನ ಆಸ್ತಿಯನ್ನು ಭಾಗಮಾಡಿ ಪಡೆಯುವ ಹಕ್ಕು ಅವಳಿಗೆ ಸಿಕ್ಕುತ್ತದೆ. ನಾನು ಕೊಡುತ್ತಿರುವ ಸಲಹೆ ಏನೆಂದರೆ, ಇದರ ಜೊತೆಗೆ ಇನ್ನೂ ಒಂದನ್ನು ಸೇರಿಸಿರಿ. ಆಗ, ಅವಳು ಪೂರ್ಣ ಪ್ರಮಾಣದ ಸಹ–ಪಾಲುದಾರಳಾಗುತ್ತಾಳೆ. ಹೀಗೆ ಮಿತಾಕ್ಷರ ಪದ್ಧತಿಯ ಕುಟುಂಬದಲ್ಲಿ ಹೇಗೆ ಒಬ್ಬ ಮಗ ಹುಟ್ಟಿದಾಕ್ಷಣ ಆತ ತಂದೆಯ ಪಿತ್ರಾರ್ಜಿತ ಆಸ್ತಿಗೆ ಹಕ್ಕುದಾರನಾಗುತ್ತಾನೋ, ಹಾಗೆಯೇ, ಹೆಣ್ಣುಮಗಳು ಮದುವೆಯಾದ

ಕ್ಷಣದಿಂದಲೇ, ಗಂಡನ ಆಸ್ತಿಗೆ ಪಾಲುದಾರಳಾಗುವ ಹಕ್ಕು ಪಡೆಯಲಿ. ಆಕೆಗೆ ತನ್ನ ಮಕ್ಕಳಿರಬಹುದು, ಆ ಕುಟುಂಬದಲ್ಲಿ ಬೇರೆಯವರೂ ಇರಬಹುದು. ಅವರೆಲ್ಲರೂ ಒಟ್ಟಿಗೆ ವಾಸಿಸಬಹುದು, ಪಾಲಾಗುವ ಅಗತ್ಯವೂ ಬರದಿರಬಹುದು. ಆದರೆ ಅವರ ಜೊತೆಯಲ್ಲಿ ಒಟ್ಟಿಗಿರಲು ಸಾಧ್ಯವಿಲ್ಲ ಎಂದು ಆಕೆಗೆ ಅನಿಸಿದರೆ, ೧೯೩೭ರ ಶಾಸನದ ಪ್ರಕಾರ, ಗಂಡನ ಮರಣದನಂತರ ಹೇಗೆ ಆಸ್ತಿಯನ್ನು ಭಾಗಮಾಡಿ ತನ್ನ ಪಾಲನ್ನು ಪ್ರತ್ಯೇಕಪಡೆಯಬಹುದಿತ್ತೋ ಹಾಗೆಯೇ ಈಗಲೂ ಆಕೆಗೆ ತನ್ನ ಪಾಲಿನ ಆಸ್ತಿಯನ್ನು ಪ್ರತ್ಯೇಕಗೊಳಿಸಿ ಪಡೆಯುವಂತಿರಬೇಕು. ಇದು ಒಂದು ಬದಲಾವಣೆ. ಈ ಬದಲಾವಣೆಯನ್ನು ಒಪ್ಪಿಕೊಂಡರೆ, ತಂದೆಯ ಆಸ್ತಿಗೆ ಯಾವ ಧಕ್ಕೆಯೂ ಆಗುವುದಿಲ್ಲ. ಅವಿಭಕ್ತ ಕುಟುಂಬಕ್ಕೂ ಧಕ್ಕೆಯಾಗುವುದಿಲ್ಲ. ಅವಿಭಕ್ತ ಕುಟುಂಬ ಎಲ್ಲಿಯವರೆಗೂ ಮುಂದುರಿಯುತ್ತದೋ ಅಲ್ಲಿಯವರೆಗೂ ಮುಂದುವರಿಯಲಿ. ಯಾರೋ ಕೆಲವರು ಅವಿಭಕ್ತ ಕುಟುಂಬ ಪದ್ಧತಿ ಕುಸಿಯುತ್ತಿದೆ ಎಂದರು. ಮತ್ತೆ ಕೆಲವರು, ಆಯಕರದ ದೃಷ್ಟಿಯಿಂದ ಅದು ಕುಸಿಯುತ್ತಿದೆ, ಅಷ್ಟೆ, ಎಂದರು. ಮತ್ತೆ ಕೆಲವರು ಎಷ್ಟು ಜನ ಆಯಕರ ಕೊಡುತ್ತಿದ್ದಾರೆ, ಎಂದು ಕೇಳಿದರು; ಹಾಗೂ ಅವರೇ, ಶೇಕಡಾ ೯೯.೫ ರಷ್ಟು ಹಿಂದೂಗಳು ಆಯಕರ (ಆದಾಯ ತೆರಿಗೆ) ವನ್ನೇ ಕೊಡುವುದಿಲ್ಲ, ಆದರೂ ಅವರು ಅವಿಭಕ್ತ ಕುಟುಂಬದಲ್ಲೇ ಇದ್ದಾರೆ ಎಂದರು. ಇಂಥ ವಾದಗಳಿಗೆ ಅರ್ಥವಿಲ್ಲ. ಅವಿಭಕ್ತ ಕುಟುಂಬ ಈ ಕಾರಣಗಳಿಂದಾಗಿ ಕುಸಿಯುತ್ತಿದ್ದರೆ, ಕುಸಿಯಲಿ. ಆದರೆ ಅದಕ್ಕೆ ಮುಂದುವರಿಯಲು ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯವರೆಗೆ ಮುಂದುವರಿಯಲಿ.

ನಾನು ಈಗ ಸೂಚಿಸುತ್ತಿರುವುದು ಹೊಸದೂ ಅಲ್ಲ, ಹಿಂದೂ ಕಾನೂನಿನ ಸತ್ವಕ್ಕೆ ವಿರುದ್ಧವಾದುದೂ ಅಲ್ಲ. ನಾನು ಹೇಳುತ್ತಿರುವುದು ಮೂಲ ಕಾನೂನಿನ – ವೇದದ ಕಾನೂನಿನ, ಜೈಮಿನಿ ಮತ್ತಿತರರು ನಿರೂಪಿಸಿದ ಪುರಾತನ ಶಾಸ್ತ್ರದಲ್ಲಿರುವ ಕಾನೂನಿನ ಸತ್ವಕ್ಕೆ ಅನುಗುಣವಾಗಿದೆ. ನನ್ನ ಭಾಷಣವನ್ನು ಮುಂದುವರಿಸುವುದು ನನಗಿಷ್ಟವಿಲ್ಲ. ಆದರೆ ವೇದಕಾಲದಲ್ಲಿಯೂ ಅದರ ಬೆನ್ನ ಹಿಂದೆಯೇ ಬಂದ ಕಾಲದಲ್ಲಿಯೂ ಪರಿಸ್ಥಿತಿ ಏನಿತ್ತು ಎಂಬುದನ್ನು ತಿಳಿಸಬಯಸುತ್ತೇನೆ. ೧೯೧೩ರಲ್ಲಿ ಪ್ರಕಟವಾದ ಶ್ರೀ ದ್ವಾರಕಾನಾಥ್ ಮಿಟ್ಟರ್ ಅವರ 'ದಿ ಪೋಸಿಷನ್ ಆಫ್ ವಿಮೆನ್ ಇನ್ ಹಿಂದೂ ಲಾ' (=ಹಿಂದೂ ಕಾನೂನಿನಲ್ಲಿ ಸ್ತ್ರೀಯರ ಸ್ಥಾನ) ಎಂಬ ಪುಸ್ತಕದ ಕೆಲವು ಭಾಗಗಳನ್ನು ದಯವಿಟ್ಟು ಓದಿ. ಅದೇ ರೀತಿ 'ಅಲಹಾಬಾದ್ ಲಾ ಜರ್ನಲ್' (Allahabad Law Journal) ಎಂಬ ನಿಯತಕಾಲಿಕೆಯ ಹನ್ನೊಂದನೇ ಸಂಪುಟದಲ್ಲಿ ಅಲಹಾಬಾದಿನ ದಿವಂಗತ ಡಾ॥ ಸತೀಶ್ ಚಂದ್ರ ಬ್ಯಾನರ್ಜಿ ಬರೆದಿರುವ ಒಂದು ಬಹಳ ಪಾಂಡಿತ್ಯ ಪೂರ್ಣ ಲೇಖನವನ್ನೂ ಓದಿ (ಈ ದೇಶ ಕಂಡಿರುವ ಕೆಲವೇ ಅರಳುವ ಪ್ರತಿಭೆಯ ಹಾಗೂ ಅತ್ಯಂತ ಮೇಧಾವಿ ವಕೀಲರುಗಳಲ್ಲೊಬ್ಬರಾದ ಶ್ರೀ ಬ್ಯಾನರ್ಜಿಯವರ ವೃತ್ತಿಪರ ಝೀವನವು ದುರದೃಷ್ಟವಶಾತ್ ಅವರ ಅಕಾಲಿಕ ಮೃತ್ಯುವಿನಿಂದಾಗಿ ಬೇಗನೆ ಕೊನೆಗೊಂಡಿತು). ಅದೊಂದು ಬಹಳ ವಿವರಣಾತ್ಮಕವಾದ ಲೇಖನ. ಅದೇ ರೀತಿ ಪಾಟ್ನಾದ ಡಾ॥ ಕೆ. ಬಿಶ್ವಾಸ್ ರ ಪುಸ್ತಕವನ್ನೂ ಓದಿ. ಆ ಕಾಲದಲ್ಲಿ ಸ್ತ್ರೀಯರ ಪರಿಸ್ಥಿತಿ ಏನಿತ್ತೆಂಬುದನ್ನು ತಿಳಿಸಲು ಈ ಪುಸ್ತಕಗಳು ವೇದಗಳ ವಾಕ್ಯಗಳನ್ನೂ ಮನುವಿಗಿಂತ ಮೊದಲಿದ್ದವರ ವಾಕ್ಯಗಳನ್ನೂ ಉದ್ಧರಿಸುತ್ತವೆ. ಆಗಿನ ಕಾಲದಲ್ಲಿ ಸ್ತ್ರೀಯ ಪರಿಸ್ಥಿತಿ ಏನಿತ್ತೆಂದರೆ, ಆಕೆಗೆ ತನ್ನ ಗಂಡನ ಆಸ್ತಿಗೆ ಪೂರ್ಣ ಒಡೆತನವಿತ್ತು. ವೇದ ವಾಕ್ಯಗಳ ಮೇಲೆ ವ್ಯಾಖ್ಯಾನ ಬರೆಯುತ್ತಾ ಜೈಮಿನಿ ಮಹರ್ಷಿಗಳು ಹೀಗೆನ್ನುತ್ತಾರೆ: 'ಮದುವೆಯಾದ ಕ್ಷಣದಿಂದಲೇ ಹೆಂಡತಿಯು ಗಂಡನ ಸಂಪತ್ತಿಗೆ ಹಕ್ಕು ಪಡೆಯುತ್ತಾಳೆ, ಅಲ್ಲದೆ, ಗಂಡನು ಏನೇನನ್ನು ಗಳಿಸುತ್ತಾನೋ ಅದೆಲ್ಲವೂ ಅವಳಿಗೆ ಸೇರುತ್ತದೆ. ಅಂದರೆ, ಅವಳು ಪೂರ್ಣ ಸಹ–ಪಾಲುದಾರಳಾಗುತ್ತಾಳೆ.' ಮತ್ತೊಂದು ವಾಕ್ಯದ ಮೇಲೆ ವ್ಯಾಖ್ಯಾನ ಬರೆಯುತ್ತಾ ಅವರು ಹೀಗೆನ್ನುತ್ತಾರೆ:

'ಗಂಡನಿಗಿರುವ ಎಲ್ಲ ಧಾರ್ಮಿಕ ಮತ್ತು ನಾಗರಿಕ ಹಕ್ಕುಗಳೂ ಹೆಂಡತಿಗೂ ಇವೆ; ಅಷ್ಟೇ ಅಲ್ಲ, ಅವನು (ತನ್ನ ಗಂಡ) ಗಳಿಸುವ ಎಲ್ಲ ಆಸ್ತಿಯೂ ಅವಳಿಗೂ ಸೇರಿದುದು. ಗಂಡ ಗಳಿಸಿದ ಅಥವಾ ಪಡೆದ ಆಸ್ತಿಯನ್ನು ನಿಯಂತ್ರಿಸುವ ಹಾಗೂ ಮಾರುವ ಹಕ್ಕು ಆಕೆಗಿದೆ'. 'ಸಹ–ಪಾಲುದಾರ' ಎಂಬುದರ ಬಗೆಗಿನ ನಮ್ಮ ಪೂರ್ವಜರ ಪರಿಕಲ್ಪನೆಯಿದು. ಮಗನಿಗೆ ಹುಟ್ಟಿದ ಕ್ಷಣದಿಂದಲೇ ಪಾಲಿನ ಹಕ್ಕು ಹೇಗೆ ಸಿಗುತ್ತದೆಯೋ, ಮತ್ತು ತಂದೆ ತನ್ನ ಆಸ್ತಿಯನ್ನು ಪರಭಾರೆ ಮಾಡಿದಾಗ (ಅದನ್ನು ಕುಟುಂಬದ ಯಾವುದೋ ಅಗತ್ಯಕ್ಕಾಗಿ ಇಲ್ಲವೇ ಯೋಗ್ಯ ಉದ್ದೇಶಕ್ಕಾಗಿ ಮಾಡಿರದಿದ್ದರೆ) ಅದನ್ನು ನಿಯಂತ್ರಿಸುವ ಅಧಿಕಾರ ಹೇಗೆ ಸಿಗುತ್ತದೆಯೋ, ಹಾಗೆಯೇ, ಅಂಥ ಹಕ್ಕು ಹೆಂಗಸಿಗೆ ಮದುವೆಯಾದ ಕ್ಷಣದಿಂದಲೇ ಸಿಕ್ಕಬೇಕು. ನಾನು ತಮ್ಮ ಮುಂದೆ ನಿವೇದಿಸಿಕೊಳ್ಳುವುದೇನೆಂದರೆ, ನಾವು ಹಿಂದಿರುಗಿ ವೇದಗಳಿಗೂ, ಹಿಂದೂ ಕಾನೂನುಗಳಿಗೂ, ಅದರ ವೈಭವಕ್ಕೂ ಹೋಗೋಣ, ಅಂದರೆ ಅವನತಿ ಕಾಲ ಪ್ರಾರಂಭವಾಗಿ ಸ್ತ್ರೀಯರ ಹಕ್ಕುಗಳಿಗೆ ಚ್ಯುತಿ ಬರುವುದಕ್ಕಿಂತ ಮುಂಚಿನ ಕಾಲಕ್ಕೇ ಹಿಂತಿರುಗೋಣ; ಸ್ತ್ರೀಯರನ್ನು ಸಹ–ಪಾಲುದಾರರನ್ನಾಗಿ ಮಾಡೋಣ. ಇದು ನನ್ನ ಸಲಹೆಯ ಒಂದು ಭಾಗ.

ನನ್ನ ಸಲಹೆಯ ಮತ್ತೊಂದು ಭಾಗವೆಂದರೆ ನಿನ್ನೆ ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಕೊಟ್ಟ ಸಲಹೆ. ಅದೆಂದರೆ, ಸ್ತ್ರೀಗೆ ತನ್ನ ಆಸ್ತಿಯನ್ನು ಪರಭಾರೆ ಮಾಡುವ ಪೂರ್ಣ ಹಕ್ಕು ಇರಬೇಕು. ಹಿಂದೂ ವಿಧವೆಯ ಈ ಕಾಲ್ಪನಿಕ ಸ್ಥಿತಿಯನ್ನು ಕೊನೆಗಾಣಿಸಬೇಕು. ಈ ವಿಷಯವಾಗಿ ಸದನವು ಎರಡು ನಿಮಿಷ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಸೂದೆಯನ್ನು ವಿರೋಧಿಸುತ್ತಿರುವ ನನ್ನ ಮಿತ್ರರೆಲ್ಲ 'ಶಾಸ್ತ್ರ ಏನು ಹೇಳುತ್ತದೆಯೆಂಬುದನ್ನು ತಿಳಿದುಕೊಳ್ಳೋಣ' ಎನ್ನುತ್ತಿದ್ದಾರೆ. ಆದರೆ ಶಾಸ್ತ್ರಗಳಿಗಿಂತ ಅದರಲ್ಲೂ ನಮ್ಮ ದೇಶ ಅನುಸರಿಸುತ್ತಿರುವ ಮಿತಾಕ್ಷರಕ್ಕಿಂತ ಹಿಂದೆ ಹೋಗುವುದು ಬೇಡ. ಬಂಗಾಳವನ್ನು ಹೊರತು ಪಡಿಸಿ, ಇಡೀ ದೇಶವೇ ಅನುಸರಿಸುತ್ತಿದೆ. ಈ ವಿಷಯದಲ್ಲಿ ಮಿತಾಕ್ಷರ ಕಾನೂನು ಏನು ಹೇಳುತ್ತದೆ? ಒಬ್ಬ ಹೆಂಗಸಿನ ಸ್ತ್ರೀಧನ ವೆಂದರೇನೆಂಬುದನ್ನು ತಿಳಿದುಕೊಳ್ಳಬೇಕಾದರೆ, ಯಾಜ್ಞವಲ್ಕ್ಯರ ಪುಸ್ತಕದ ಮೇಲೆ ಬರೆದಿರುವ ವಿಜ್ಞಾನೇಶ್ವರರ ಭಾಷ್ಯದ ಅಧ್ಯಾಯ ಎರಡು, ಭಾಗ II ಮತ್ತು ಶ್ಲೋಕ ೨ ಮತ್ತು ೪ ನ್ನು ನೋಡಿ. ಸ್ತ್ರೀಗೆ ಕೊಡಬೇಕಾದ ವಸ್ತುಗಳ ಪಟ್ಟಿ ಅಂದರೆ, ಆಕೆಗೆ ಮದುವೆಯ ಸಮಯದಲ್ಲಿ ಮುಯ್ಯಿ ಬಂದ ವಸ್ತುಗಳ ಪಟ್ಟಿ ಮಾಡಿದ ನಂತರ ಅವನು ಹೀಗೆ ಹೇಳುತ್ತಾನೆ: 'ಇದೂ ಅಲ್ಲದೆ, ಸ್ತ್ರೀಧನದಲ್ಲಿ ಪಾಲು ಮಾಡಿದಾಗ ಉತ್ತರಾಧಿಕಾರದ ಮೂಲಕ ಬಂದ ಎಲ್ಲ ಆಸ್ತಿ, ಅಕ್ರಮ ಹಿಡುವಳಿ' ಇತ್ಯಾದಿಯೂ ಸೇರುತ್ತದೆ. ಅಂದರೆ, ಒಬ್ಬ ಹೆಂಗಸು ಉತ್ತರಾಧಿಕಾರದ ಮೂಲಕ ಗಂಡನಿಂದ ಅಥವಾ ತಂದೆಯಿಂದ ಅಥವಾ ಇತರರಿಂದ ಪಡೆದ ಆಸ್ತಿಯು ಸಂಪೂರ್ಣವಾಗಿ ಅವಳ ಸ್ವಾಧೀನಕ್ಕೆ ಸೇರಿದ್ದು, ಅದನ್ನು ಮತ್ತಾರೂ ನಿಯಂತ್ರಿಸುವಂತಿಲ್ಲ. ಹನ್ನೊಂದನೆಯ ಶತಮಾನದಲ್ಲಿ ವಿಜ್ಞಾನೇಶ್ವರರು ಮಾಡಿದ ಕಾನೂನು ಇದು. ಇದೇ ಕಾನೂನು ಬ್ರಿಟಿಷರು ಬರುವವರೆಗೂ ಮುಂದುವರಿದಿತ್ತು. ಮತ್ತೊಬ್ಬ ಬನಾರಸ್ ಪಂಥದ ಭಾಷ್ಯಕಾರರಾದ ಎನ್. ಎಸ್. ವೀರ ಮತಧೀರರೂ ಇದನ್ನೇ ಹೇಳುತ್ತಾರೆ. ಮುಂಬಯಿ ಪ್ರಾಂತದಲ್ಲಿ, ಅದರಲ್ಲೂ ಮುಖ್ಯವಾಗಿ ಗುಜರಾತ್ ಮತ್ತು ಮುಂಬಯಿ ದ್ವೀಪಗಳಲ್ಲಿ ಹೆಚ್ಚು ಪ್ರಚಲಿತವಿರುವ ಮಯೂಖದ ಕರ್ತೃವಾದ ನೀಲಕಂಠನೂ ಸಹ ಇದನ್ನೆ ಪುನರುಚ್ಚರಿಸುತ್ತಾನೆ. ಬಂಗಾಳವನ್ನು ಬಿಟ್ಟರೆ, ಉಳಿದೆಲ್ಲ ಪ್ರಾಂತ್ಯಗಳಲ್ಲಿ ಬ್ರಿಟಿಷರು ಬರುವವರೆಗೆ ಇದೇ ಕಾನೂನು ಚಾಲ್ತಿಯಲ್ಲಿತ್ತು. ಬ್ರಿಟಿಷರು ಬಂದು 'ಹಾಗಾದರೆ ಮಿತಾಕ್ಷರದ ಮೂಲ ಗ್ರಂಥಗಳನ್ನು ಪರಿಶೀಲಿಸೋಣ' ಎಂದರು. ಅವರು ಯಾಜ್ಞವಲ್ಕ್ಯರ ಗ್ರಂಥದ ಮೇಲೆ ಬರೆದ ಭಾಷ್ಯ ಅದೆಂದರು. ಯಾಜ್ಞವಲ್ಕ್ಯರು ಕೆಲವು ವಿಶಿಷ್ಟ ಪದಗಳನ್ನು ವಿಶಿಷ್ಟ ಅರ್ಥಗಳಲ್ಲಿ ಬಳಸಿದ್ದರು. ಅದರಲ್ಲಿ 'ಆದಿ' ಎಂಬ

ಪದ ಒಂದು. 'ಆದಿ' ಎಂಬ ಪದಕ್ಕೆ ವಿಜ್ಞಾನೇಶ್ವರರು ಈ ವ್ಯಾಖ್ಯಾನ ಕೊಡುತ್ತಾರೆ: 'ಸ್ಥಿತಿ' ಎಂಬುದು ಅದರ ಅರ್ಥ. ಇದರಿಂದಾಗಿ ಬಹಳ ಕಾಲದವರೆಗೆ ಚರ್ಚೆಯಾಯಿತು. ಈ ವಿಷಯವಾಗಿ ಅನೇಕ ನ್ಯಾಯಾಲಯಗಳು, ವಿಶೇಷವಾಗಿ ಮದ್ರಾಸ್ ನ್ಯಾಯಾಲಯಗಳು, ಬಹಳ ಕಾಲದವರೆಗೆ (ಅರ್ಥೈಸುವ ವಿಷಯದಲ್ಲಿ) ಸೆಣಸಾಡಿದವು. ಕೊನೆಗೆ (ಪ್ರಿವಿ ಕೌನ್ಸಿಲ್) 'ನಾವು ಒಪ್ಪಿಕೊಳ್ಳಬೇಕು' ಎಂದು ಹೇಳಿತು. ಸ್ಮೃತಿಕಾರ ಹೇಳುವುದಕ್ಕೂ ಭಾಷ್ಯಕಾರ ಹೇಳುವುದಕ್ಕೂ ವ್ಯತ್ಯಾಸವಿದ್ದರೆ, ಭಾಷ್ಯಕಾರ ಹೇಳಿದುದನ್ನೇ ನಾವು ಅನುಸರಿಸಬೇಕು ಎಂದು ಆಪ್ತಮಂಡಲಿಯೇ ನಿಯಮವನ್ನು ವಿಧಿಸಿದ್ದರೂ, ಆ ನಿಯಮಕ್ಕೆ ವಿರೋಧವಾಗಿ ಹಾಗೆಂದಿತು. ಆ ನಿಯಮವನ್ನು ಅವರೇ (ಆಪ್ತ ಮಂಡಲಿಯೇ) ಮಾಡಿದ್ದರು, ಆದರೂ ಹೇಗೋ ಅವರೇ ಅದನ್ನು ಬಿಟ್ಟು ದೂರ ಸರಿದಿದ್ದರು.

ಆದುದರಿಂದ, ನಾನು ಹೇಳುವುದೇನೆಂದರೆ ಮಗಳ ಕುಟುಂಬದ ಅಥವಾ ಗಂಡನ ಕುಟುಂಬದ ವಿಷಯವಾಗಿ ತಿಳಿದುಕೊಳ್ಳಬೇಕೆಂದರೆ ವೇದಕಾಲದಷ್ಟು ಹಿಂದಕ್ಕೆ ಮಿತಾಕ್ಷರ ಪದ್ಧತಿಗೆ ಹೋಗೋಣ. ಈ ದೇಶದಲ್ಲಿ ಅಲ್ಲಿಂದ ಹಿಡಿದು ಇಲ್ಲಿಯವರೆಗೂ ಆಗಿರುವ ನ್ಯಾಯಾಲಯ ತೀರ್ಪುಗಳನ್ನು ಹರಿದು ಬಿಸಾಡಿ, ಹದಿನೆಂಟನೆಯ ಶತಮಾನದವರೆಗೆ ನಮ್ಮ ಕಾನೂನು ಏನಿತ್ತೆಂಬುದನ್ನು ನೋಡೋಣ. ಈ ಎರಡು ಕೆಲಸ ನಾವು ಮಾಡಿದರೆ, ಮಸೂದೆಯನ್ನು ಬೆಂಬಲಿಸುವ ಮಿತ್ರರಿಗೂ ಅದನ್ನು ಸುಧಾರಿಸುವ ಮಿತ್ರರಿಗೂ ಅದರಿಂದ ಇನ್ನೂ ಹೆಚ್ಚು ಲಾಭವಾದೀತೆಂದು ನಾನು ಹೇಳುತ್ತೇನೆ. ಗಂಡನ ಕುಟುಂಬದಲ್ಲಿ ಸ್ತ್ರೀಯು ಸಹ–ಪಾಲುದಾರಳಾದರೆ, ಅವಿಭಕ್ತ ಕುಟುಂಬಕ್ಕೇನೂ ಹಾನಿಯಾಗುವುದಿಲ್ಲ; ಗಂಡುಮಕ್ಕಳು ಅದರಲ್ಲೇ ಮುಂದುವರಿಯುತ್ತಾರೆ. ಅದರಲ್ಲಿ ಒಳ್ಳೆಯ ಅಂಶಗಳಿರಬಹುದು, ಕೆಟ್ಟ ಅಂಶಗಳಿರಬಹುದು; ಆದರೆ ಅದು ಒಡೆದು ಹಾಳಾಗುವುದಾದರೆ, ಅದು ಸ್ವಾಭಾವಿಕವಾಗಿ, ಆಮೇಲೆ, ಆಗಲಿ ಬಿಡಿ. ಆದರೆ ಗಂಡನ ಆಸ್ತಿಯಲ್ಲಿ ಗಂಡನಿಗೆ ಅಥವಾ ಮಗನಿಗೆ ಎಷ್ಟು ಹಕ್ಕು ಇದೆಯೋ ಅಷ್ಟೇ ಹಕ್ಕನ್ನೂ ಹೆಂಗಸಿಗೂ ಕೊಡಿ. ಆಕೆ ಸತ್ತನಂತರ, ಆಕೆಯ ಆಸ್ತಿ ಏನಾಗುತ್ತದೆ, ಮುಂತಾದ ಪ್ರಶ್ನೆಗಳನ್ನು ನಾವು ಮುಂದೆ ಪರಿಶೀಲಿಸಬೇಕಾಗಬಹುದು. ಆದರೆ ಇಂಥ ವಿವರಗಳನ್ನು ನಾನಿಲ್ಲಿ ಪ್ರಸ್ತಾಪಿಸುವುದಿಲ್ಲ. ಈ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಶೀಲಿಸಬೇಕೆಂದೂ, ಈ ನನ್ನ ಯೋಜನೆ ಹೆಚ್ಚು ಸಮಂಜಸವಲ್ಲವೇ ಎಂಬುದನ್ನು ಪರಿಶೀಲಿಸಬೇಕೆಂದೂ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತಿದ್ದೇನೆ.

ತಂದೆಯ ಆಸ್ತಿಯಲ್ಲಿ ಮದುವೆಯಾಗದ ಹೆಣ್ಣು ಮಗಳು ತನ್ನ ಸೋದರರಂತೆ ಪೂರ್ಣ ಪ್ರಮಾಣದ ಪಾಲನ್ನು ಏಕೆ ಪಡೆಯಬಾರದೆಂಬುದಕ್ಕೆ ನನಗೆ ಸರಿಯಾದ ಕಾರಣಗಳೇ ಸಿಕ್ಕಿಲ್ಲ. ವರದಕ್ಷಿಣೆಯನ್ನು ಕೊಡದಿದ್ದಾಗ, (ಆಸ್ತಿಯಲ್ಲಿ ಪಾಲು ಸಿಗಬೇಕು). ಅವಳು ಪರತಂತ್ರಳಾಗಬಾರದು. ಸೋದರರಿಗೆ ತಮ್ಮ ಸೋದರಿಯ ಬಗ್ಗೆ ಇರುವ ಪ್ರೀತಿ, ಅವರು ತಮ್ಮ ಸೋದರಿಯ ಮದುವೆಗಾಗಿ ಮಾಡುವ ಪ್ರಯಾಸದ ಪ್ರಯತ್ನ – ಇವುಗಳನ್ನು ಕುರಿತು ನಮ್ಮ ಕೆಲ ಸ್ನೇಹಿತರು ವರ್ಣಮಯವಾಗಿ ಚಿತ್ರಿಸುತ್ತಿದ್ದಾರೆ. ಖಂಡಿತವಾಗಿಯೂ ಕೆಲವರು ಹಾಗೆ ಮಾಡುತ್ತಾರೆ, ಅನೇಕರು ಹಾಗೆ ಮಾಡುತ್ತಾರೆ; ಆದರೆ ಇದಕ್ಕೆ ವಿರುದ್ಧವಾಗಿ ನಡೆದಿರುವ ಸಂಗತಿಗಳು ನಮಗೆ ಗೊತ್ತಿದೆ. ಸೋದರರು, ಅದರಲ್ಲೂ ಸೋದರರ ಪತ್ನಿಯರು, ಎಲ್ಲವನ್ನೂ ತಾವೇ ಬಾಚಿಕೊಂಡು ಬಿಡುತ್ತಾರೆ. ಹೀಗಾಗಿ, ಆಕೆಗೆ ಸ್ತ್ರೀಧನದ ರೂಪದಲ್ಲಿ ಪಡೆಯಲು ಏನೂ ಉಳಿದಿರುವುದಿಲ್ಲ. ಅದರಲ್ಲೂ ಆಕೆ ಬಲವಾದ ಮನೆತನಕ್ಕೆ ಸೇರುವುದಿಲ್ಲವಾದರೆ ಹಾಗೂ ಆ ಮನೆತನಕ್ಕೆ ಹಳ್ಳಿಯಲ್ಲಿ ಸಾಕಷ್ಟು ಪ್ರಭಾವವಿಲ್ಲದಿದ್ದರೆ, ಅವಳಿಗೆ ಏನೂ ಉಳಿಯುವುದಿಲ್ಲ. ಆದುದರಿಂದ ಈ ಸಮಸ್ಯೆಗೂ ನಾವು ಪರಿಹಾರ ತೋರಿಸಬೇಕು. ಇದಕ್ಕೆ ಸಂಬಂಧಿಸಿದಂತೆಯೂ ಸಹ ಶಾಸ್ತ್ರದಲ್ಲಿ ಪ್ರಮಾಣವಿದೆ. ಆಕೆಗೆ ಕಾಲುಭಾಗ ಕೊಡಬೇಕೆಂದು ಕೆಲವು, ಸಮಪಾಲು ಕೊಡಬೇಕೆಂದು ಕೆಲವು, ಅರ್ಧ ಕೊಡಬೇಕೆಂದು ಮತ್ತೆ ಕೆಲವು

ಹೇಳುತ್ತವೆ. ಅರ್ಧ ಭಾಗ ಕೊಡಬೇಕೆಂಬುದನ್ನು ನಾನು ಒಪ್ಪುವುದಿಲ್ಲ. ಮಹಮ್ಮದೀಯ ಕಾನೂನು ಹೇಳುವಂತೆ ಆಕೆಗೆ ಪೂರ್ಣ ಕೊಡಬೇಕು ಎನ್ನುತ್ತೇನೆ, ನಾನು.

**ಶ್ರೀ ಬಿ. ಎಲ್. ಸೋಂಧಿ** (ಪೂರ್ವ ಪಂಜಾಬ್ : ಸಾಮಾನ್ಯ) : ಮದುವೆಯಾಗದ ಮಗಳು ಆಸ್ತಿಯನ್ನು ಎಷ್ಟು ಕಾಲದ ವರೆಗೆ ಅನುಭವಿಸುತ್ತಾಳೆ?

**ಡಾ॥ ಭಕ್ಷಿ ತೇಕ್‌ಚಂದ್ :** ಒಂದು ಸಾರಿ ಪಾಲನ್ನು ಆಕೆಗೆ ಕೊಟ್ಟ ಮೇಲೆ, ಅದನ್ನು ಹಿಂದಕ್ಕೆ ತೆಗೆದುಕೊಳ್ಳುವ ಪ್ರಶ್ನೆಯೇ ಏಳುವುದಿಲ್ಲ. ಹೇಗಿದ್ದರೂ, ಅದು ಕುಟುಂಬದಲ್ಲಿ ಕ್ಷೋಭೆಯನ್ನುಂಟುಮಾಡುವುದಿಲ್ಲ. ಅದಕ್ಕೇನಾದರೂ ಅವಕಾಶ ಮಾಡಿಕೊಡಬೇಕು. ಏನಾದರೂ ಹೊಂದಾಣಿಕೆ ಮಾಡಲು ಸಾಧ್ಯ. ಇದನ್ನು ಆಮೇಲೆ ನೋಡೋಣ.

ವಿವಾಹಕ್ಕೆ ಸಂಬಂಧಿಸಿದ ಅಧ್ಯಾಯ ಹಾಗೂ ವಿಚ್ಛೇದನಕ್ಕೆ ಸಂಬಂಧಿಸಿದ ಅಧ್ಯಾಯ, ಇವುಗಳ ಬಗ್ಗೆ ಒಂದು ಮಾತು. ಮಸೂದೆಯ ಈ ಭಾಗಕ್ಕೆ ನನ್ನ ಆಕ್ಷೇಪ ಬಹಳ ಸರಳವಿದೆ. ಅಧ್ಯಾಯದ ಮೊದಲನೆಯ ಭಾಗವು ಏಕಪತ್ನೀ ಪದ್ಧತಿಯನ್ನು ಪ್ರಸ್ತಾಪಿಸುತ್ತದೆ. ಹಿಂದೂ ಒಂದೇ ಸಾರಿ ಮದುವೆಯಾಗಬೇಕೇ ಹೊರತು ಹೆಚ್ಚು ಸಾರಿಯಲ್ಲ ಎಂಬ ನಿಯಮಕ್ಕೆ ನನ್ನ ಹೃತ್ಪೂರ್ವಕ ಬೆಂಬಲವಿದೆ. ನಮ್ಮಲ್ಲಿ ಬಹಳಷ್ಟು ಜನ ಒಂದೇ ಸಾರಿ ಮದುವೆಯಾಗುತ್ತಾರೆ.

**ಶ್ರೀ ಹೆಚ್. ವಿ. ಕಾಮತ್ :** ಒಂದೇ ಸಾರಿ ಅಥವಾ ಇಲ್ಲವೇ ಇಲ್ಲ.

**ಡಾ॥ ಭಕ್ಷಿ ತೇಕ್‌ಚಂದ್ :** ಗಂಡು ಸಂತಾನವಾಗಿಲ್ಲವೆಂಬ ವಾದ ಹುರುಳಿಲ್ಲದುದು. ಒಂದರ ಮೇಲೊಂದರಂತೆ ಮೂರು ಸಾರಿ ಮದುವೆಯಾದರೆ, ಮೂವರಲ್ಲಿ ಒಬ್ಬರು ಗಂಡನ್ನು ಹೆರುತ್ತಾರೆ ಎಂಬುದಕ್ಕೆ ಪ್ರಮಾಣವೇನು? ಅದೆಲ್ಲಾ ಕೇವಲ ಆಕಸ್ಮಿಕ. ಆದುದರಿಂದ ಅಂಥ ವಾದ ನನಗೆ ಕಿಂಚಿತ್ತೂ ಹಿಡಿಸುವುದಿಲ್ಲ. ವಾಸ್ತವವಾಗಿ ಹಾಗೂ ರೂಢಿಯಿಂದ ಬಂದಿರುವಂತೆ ಹಿಂದೂಗಳಲ್ಲಿ ಬಹುಸಂಖ್ಯಾತರು ಒಬ್ಬಳನ್ನೇ ಮದುವೆಯಾಗಿರುತ್ತಾರೆ. ಆದುದರಿಂದ, ಇದನ್ನೂ ಒಂದು ನಿಯಮವನ್ನಾಗಿ ಏಕೆ ಮಾಡಬಾರದು?

**ಶ್ರೀ ಲಕ್ಷ್ಮೀನಾರಾಯಣ ಸಾಹು :** ಉತ್ಕಲದಲ್ಲಿ ಗಂಡಸರಿಗಿಂತ ಹೆಂಗಸರು ಮೂರು ಲಕ್ಷ ಅಧಿಕವಿದ್ದಾರೆ. ನೀವು ಹೇಳಿದಂತೆ, ಒಬ್ಬ ಗಂಡಸು ಒಬ್ಬಳನ್ನೆ ಮದುವೆಯಾದರೆ, ಈ ಮೂರು ಲಕ್ಷ ಹೆಂಗಸರನ್ನೇನು ಮಾಡುತ್ತೀರಿ?

**ಡಾ॥ ಭಕ್ಷಿ ತೇಕ್‌ಚಂದ್ :** ಇಲ್ಲಿ ಮತ್ತೆ ಧರ್ಮವನ್ನು ತರುತೀರಿ. ಬರೋಡಾದಲ್ಲಿ, ಸಂಪ್ರದಾಯಸ್ಥ ಹಿಂದೂಗಳಾಗಿದ್ದ ಮಹಾರಾಜರ ಆಶ್ರಯದಲ್ಲಿ ೧೯೩೧ರಲ್ಲಿ ಜರುಗಿದ, ಹಾಗೂ ಶೇಕಡಾ ೯೫ ರಷ್ಟು ಹಿಂದೂಗಳೇ ಇದ್ದ, ವಿಧಾನಸಭೆಯಲ್ಲಿ ಏಕಪತ್ನಿತ್ವ ಮತ್ತು ವಿಚ್ಛೇದನ ಮಸೂದೆಯು ಅಂಗೀಕರಿಸಲ್ಪಟ್ಟಿತು. ಹತ್ತೊಂಬತ್ತು ವರ್ಷಗಳಿಂದಲೂ ಆ ಮಸೂದೆ ಜಾರಿಯಲ್ಲಿದೆ. ಆ ಮಸೂದೆಯಿಂದಾಗಿ ಬರೋಡಾದಲ್ಲಿ ಹಿಂದೂ ಧರ್ಮ ಕೊನೆಗಾಲಕ್ಕೆ ಬಂದಿದೆ ಎನ್ನಲಾದೀತೆ? ೧೯೪೬ ರಲ್ಲಿ ಮುಂಬಯಿ ಪ್ರಾಂತದಲ್ಲಿ ಶ್ರೀಮತಿ ಮುನ್ಷಿ ಮಸೂದೆ ಅಂಗೀಕೃತವಾಗಿ, ಅದು ಆ ಪ್ರಾಂತದ ಕಾನೂನಿನ ಒಂದು ಭಾಗವಾಗಿದೆ. ಮದ್ರಾಸಿನಲ್ಲಿ ಹೋದ ವರ್ಷ, ಮದ್ರಾಸ್ ವಿಧಾನಸಭೆಯಲ್ಲಿ ಇಂಥದೇ ಮಸೂದೆ ಸ್ವೀಕೃತವಾಯಿತು. ಹೀಗೆ, ಹೆಚ್ಚು ಕಡಿಮೆ ಇಡೀ ದಕ್ಷಿಣ ಭಾರತದಲ್ಲಿ ಏಕಪತ್ನಿತ್ವದ ಕಾನೂನು ಸ್ವೀಕೃತವಾಗಿದೆ. ಅಲ್ಲೇನೂ ಹಿಂದೂ ಧರ್ಮ ಹಾಳಾಗಿಲ್ಲ. ನಮ್ಮ ಎಲ್ಲ ಮದ್ರಾಸ್ ಸ್ನೇಹಿತರೂ ಎಂದಿನಂತೆ ಸದೃಢವಾಗೇ ಇದ್ದಾರೆ. ಆದುದರಿಂದ, ಇದೊಂದು ಹಿತಕರವಾದ ಕಾನೂನು, ಇದನ್ನು ಉಳಿಸಿಕೊಳ್ಳಬೇಕೆಂಬುದು ನನ್ನ ಅಭಿಪ್ರಾಯ.

**ಶ್ರೀ ಗೋಕುಲ್‌ಭಾಯ್ ದೌಲತ್‌ರಾಮ್ ಭಟ್ :** ಮಾನ್ಯರೆ, ಮಾಹಿತಿಯ ಸಲುವಾಗಿ, ಒಂದು

ಅಥವಾ ಎರಡು ಪ್ರಶ್ನೆಗಳನ್ನು ಕೇಳಲು ಅಪ್ಪಣೆ ಕೊಡುವಿರಾ?

**ಮಾನ್ಯ ಉಪಸಭಾಪತಿಗಳು :** ಅವರು ಸೋಲುವುದಿಲ್ಲ.

**ಶ್ರೀ ಗೋಕುಲ್‌ಭಾಯ್ ದೌಲತ್‌ರಾಮ್ ಭಟ್ :** ನೀವು ಏಕಪತ್ನಿತ್ವ ಬಗ್ಗೆ ಹೇಳಿದುದು ಪೂರ್ಣ ಸತ್ಯ. ಆದರೆ ನಾನು ಕೇಳಬಯಸುವುದೇನೆಂದರೆ, ಮೊದಲನೆಯ ಹೆಂಡತಿ ಬದುಕಿದ್ದಾಗಲೆ, ಒಬ್ಬ ಗಂಡಸು, ಅವಳ ಒಪ್ಪಿಗೆ ಪಡೆದು ಎರಡನೆಯ ಮದುವೆಯಾಗಲು ಅವಕಾಶವಿದೆಯೆ ?

**ಡಾ|| ಭಕ್ಷಿ ತೇಕ್‌ಚಂದ್ :** ನಮ್ಮ ಸನ್ಮಾನ್ಯ ಸೋದರ ಗೋಕುಲ್‌ಭಾಯಿಯವರು ಈ ಪ್ರಶ್ನೆಯನ್ನು ಕೇಳಿದುದರಿಂದ ನನಗೆ ಸಂತೋಷವಾಗಿದೆ. ನೀವು ಹೆಂಗಸಿನ ಒಪ್ಪಿಗೆಯನ್ನು ಯಾವ ವಿಧದಲ್ಲಿ ಬೇಕಾದರೂ ಪಡೆಯಬಹುದು. ಇಂಥ ಅನೇಕ ಸುಪ್ರಸಿದ್ಧ ಸಂಗತಿಗಳು ನನಗೆ ಗೊತ್ತು. ಇಂಥ ಒಂದು ಪ್ರಸಂಗ ಒಬ್ಬ ಮುದುಕ ಮತ್ತು ಒಬ್ಬ ಮುದುಕಿಗೆ ಸಂಬಂಧಿಸಿದುದು. ಘನ ವಿದ್ವಾಂಸನೂ ಜ್ಯೋತಿಷಿಯೂ ಆದ ಒಬ್ಬನನ್ನು ಅವರ ಮನೆಗೆ ಕರೆಸಲಾಯಿತು. ಅವನು ಮಾಡಬೇಕಾದ ಎಲ್ಲ ಪೂಜೆಗಳನ್ನೂ ಮಾಡಿದ ನಂತರ ಆ ಮುದುಕಿಗೆ 'ಇನ್ನು ಮುಂದಿನ ಮೂರು ತಿಂಗಳೊಳಗಾಗಿ ನಿನ್ನ ಗಂಡ ಸಾಯುವವನಿದ್ದಾನೆ; ಇದನ್ನು ತಪ್ಪಿಸಲು ಇರುವ ಏಕೈಕ ಉಪಾಯವೆಂದರೆ, ಅವನು ಮತ್ತೊಂದು ಮದುವೆಯಾಗಬೇಕು. ಅವನು ಮರುಮದುವೆಯಾದರೆ ಅವನಿಗೆ ಗಂಡು ಮಗುವಾಗುತ್ತದೆ' ಎಂದೆಲ್ಲಾ ಹೇಳಿದ. ಆಗ ಆ ಸಭ್ಯ ವೃದ್ಧೆಯು, ನಿಜವಾಗಿಯೂ ದೊಡ್ಡ ವಿಪತ್ತು ಬರಲಿದೆಯೆಂದು ತಿಳಿದು (ಅದನ್ನು ತಪ್ಪಿಸಲು) ಗಂಡನ ಮರುಮದುವೆಗೆ ಒಪ್ಪಿಗೆ ನೀಡಿದಳು. ಈಗ, ಆ ಮನೆಯಲ್ಲಿ ಒಬ್ಬಳಷ್ಟೇ ಅಲ್ಲ, ಐದು ಜನ ಹೆಂಗಸರಿದ್ದಾರೆ. (ಕೆಲವರು ಅಡ್ಡಿ ಮಾಡಿದರು)

**ಸನ್ಮಾನ್ಯ ಉಪಸಭಾಪತಿಗಳು :** ದಯವಿಟ್ಟು ಸಭೆಯ ನಿಯಮಗಳನ್ನು ಪಾಲಿಸಿ. ಮಾನ್ಯ ಸದಸ್ಯರು ಅರ್ಧ ಗಂಟೆಯಿಂದಲೂ ಕುಳಿತುಕೊಳ್ಳಲು ಕಾತರರಾಗಿದ್ದಾರೆ. ಆದರೆ ಆಗಾಗ್ಗೆ ಎದುರಾಗುವ ಪ್ರಶ್ನೆಗಳಿಂದಾಗಿ ಅವರು ಮುಂದುವರಿಯಬೇಕಾಗಿ ಬಂದಿದೆ.

**ಡಾ|| ಭಕ್ಷಿ ತೇಕ್‌ಚಂದ್ :** ಈಗ ಕೊನೆಯ ವಿಷಯಕ್ಕೆ, ವಿಚ್ಛೇದನದ ವಿಷಯಕ್ಕೆ ಬರುತ್ತೇನೆ. ಶಾಸನಿಕ ವಿವಾಹವನ್ನು ರದ್ದುಗೊಳಿಸುವ ನಿಯಮಗಳು ಧಾರ್ಮಿಕ ವಿವಾಹವನ್ನು ರದ್ದುಗೊಳಿಸುವ ನಿಯಮಗಳನ್ನು ಹೋಲುತ್ತವೆ. ಅಂಥ ಹೋಲಿಕೆಯುಳ್ಳ ನಿಯಮಗಳನ್ನು ಮಾಡಿರುವುದು ಈ ಮಸೂದೆಯ ಅನೇಕ ದೋಷಗಳಲ್ಲೊಂದು. ಈ ಅಂಶದಲ್ಲಿ ಮಸೂದೆಯು, ವಿಶೇಷ ಸಭೆಯು ವರದಿ ಮಾಡಿರುವಂತೆ, ೧೯೪೪ ರಲ್ಲಿ ಸರ್. ಬಿ. ಎನ್. ರಾವ್ ಸಮಿತಿಯಿಂದ ಮೊದಲು ರೂಪಿಸಿಲ್ಪಟ್ಟು, ಅನಂತರ ೧೯೪೭ ರಲ್ಲಿ ಅವರಿಂದ ಪರಿಷ್ಕೃತವಾದ ಮಸೂದೆಗಿಂತ ಭಿನ್ನವಾಗಿದೆ. ನಾನು ಹೇಳುತ್ತಿರುವುದೇನೆಂದರೆ, ಶಾಸನಿಕ ವಿವಾಹಕ್ಕೆ ಸಂಬಂಧಿಸಿದಂತೆ ಈಗಿರುವ ಕಾನೂನನ್ನೇ ಇಟ್ಟುಕೊಳ್ಳಿ, ಅದು ಮಸೂದೆಯು ಕೊಡುವ ಹಕ್ಕನ್ನೇ ಕೊಡುತ್ತದೆ. ಆದರೆ ಧಾರ್ಮಿಕ ವಿವಾಹವನ್ನು ಶಾಸನಿಕ ವಿವಾಹವನ್ನಾಗಿ ಪರಿವರ್ತಿಸಲು ಅನುಕೂಲವಾಗುವಂಥ ನಿಯಮಗಳನ್ನು ತರಲು ಮಾತ್ರ ಪ್ರಯತ್ನಿಸಬೇಡಿ. ಧಾರ್ಮಿಕ ಸಂಸ್ಕಾರ ಯಾವಾಗಲೂ ಧಾರ್ಮಿಕ ಸಂಸ್ಕಾರವೇ. ಮೂಲದಲ್ಲಿ ಸೂಚಿಸಿರುವಂತೆ, ಹಾಗೂ ನಮ್ಮ ಪುರಾತನ ಸ್ಮೃತಿಕಾರರಲ್ಲಿ ಕೆಲವರು ಅಪ್ಪಣೆ ಕೊಟ್ಟಿರುವಂತೆ, ವಿಚ್ಛೇದನಕ್ಕೆ ಸಂಬಂಧಿಸಿದ ನಿಯಮಗಳಿಗೆ ಆದಷ್ಟು ಸಂಕುಚಿತವಾದ ಅವಕಾಶ ಕೊಡಬೇಕು. ಇದಕ್ಕೆ ಸಂಬಂಧಿಸಿದಂತೆ, ಬಿ. ಎನ್. ರಾವ್ ಅವರ ನಿಲುವು ಹೀಗಿದೆ:

ಮದುವೆಯಾಗುವ ಸಮಯದಲ್ಲಿ ಷಂಡತನವಿದ್ದು, ಅದು ವಿಚ್ಛೇದನದ ಸಮಯದವರೆಗೂ

ಮುಂದುವರಿಯುವುದು – ವಿಚ್ಛೇದನದ ಈ ಷರತ್ತಿಗೆ ಯಾವ ವಿಚಾರಶೀಲ ವ್ಯಕ್ತಿಯೂ ಆಕ್ಷೇಪಿಸಲಾರ.

ಒಬ್ಬ ವ್ಯಕ್ತಿಯು ಅತಿಮೂರ್ಖನಿರಬಹುದು, ಹಾಗೂ ಈ ಸತ್ಯವನ್ನು ಗುಪ್ತವಾಗಿಟ್ಟಿರಬಹುದು. ಇದೂ ಒಂದು ಎರಡನೆಯ ಶಾರೀರಿಕ ಕಾರಣ. ಇದರ ಬಗೆಗೂ ಯಾರೂ ಜಗಳವಾಡಲಾರರು.

ಈ ಎರಡು ಷರತ್ತುಗಳ ಜೊತೆಗೆ, ಒಬ್ಬ ವ್ಯಕ್ತಿ ಮತಾಂತರಗೊಂಡರೆ, ಆಗಲೂ ವಿಚ್ಛೇದನಕ್ಕೆ ಅವಕಾಶ ಕೊಡಬೇಕು. ಒಬ್ಬ ಹಿಂದೂ ಮುಸ್ಲಿಮನಾಗಿ ಮದುವೆಯಾಗಬಹುದು ಮದುವೆಯನ್ನು ರದ್ದುಗೊಳಿಸಲು ಸಾಧ್ಯವಿಲ್ಲ. ಆ ಸಂಸ್ಕಾರ ಮುಂದುವರಿಯತಕ್ಕದ್ದು ಎಂಬ ಹಿಂದೂ ಕಾನೂನಿನ ಕಲ್ಪನೆಯಲ್ಲಿ, ಹೆಂಡತಿ ಅಸಹಾಯಕಳಾಗುತ್ತಾಳೆ. ಗಂಡನು ತನ್ನ ಧರ್ಮವನ್ನು ತ್ಯಜಿಸಿ ಮತ್ತೊಂದಕ್ಕೆ ಸೇರಿ, ಆ ಹೊಸ ಧರ್ಮಕ್ಕನುಗುಣವಾಗಿ ಅನೇಕ ಹೆಣ್ಣುಗಳನ್ನು ಮದುವೆಯಾದರೆ, ಹಳೆಯ ವಿವಾಹ ಮುಂದುವರಿಯತಕ್ಕದ್ದು ಎಂದು ಹೇಗೆ ಹೇಳುತ್ತೀರಿ?

**ಶ್ರೀ ಮಹಾವೀರ ತ್ಯಾಗಿ :** ಇದು ಹೀಗೇ ಆದರೆ, ಜನರಿಗೆ ವಿಚ್ಛೇದನ ಬೇಕಾದಾಗಲೆಲ್ಲ ಈ ದೈನಂದಿನ ಕಾನೂನು ಕಾರ್ಯಕಲಾಪಗಳಲ್ಲಿ ಸಿಕ್ಕಿಕೊಳ್ಳುವುದರ ಬದಲು ಅವರು ಮತಾಂತರಗೊಳ್ಳುತ್ತಾರೆ. ಈ ಪರಿಣಾಮವನ್ನು ತಪ್ಪಿಸಲು ಸಾಧ್ಯವೆ?

**ಡಾ॥ ಭಕ್ಷಿ ತೇಕ್‌ಚಂದ್ :** ಇಲ್ಲ, ಅವರು ತಮ್ಮ ಮತವನ್ನು ಬದಲಿಸುವುದಿಲ್ಲ. ವಿಚ್ಛೇದನಕ್ಕೆ ಅಗತ್ಯವಾದ ಮತ್ತೊಂದು ಪರಿಸ್ಥಿತಿಯೆಂದರೆ, ಕೆಲ ಕಾಲದವರೆಗೆ ಹೆಂಡತಿಯನ್ನು ತ್ಯಜಿಸುವುದು; ಅದು ಐದು ವರ್ಷವಿರಬಹುದು, ಆರು ವರ್ಷವಿರಬಹುದು ಅಥವಾ ಏಳು ವರ್ಷವಿರಬಹುದು. ಇಂಥ ಪರಿಸ್ಥಿತಿಗಳು ಹೊಸದೇನಲ್ಲ. ಇವೆಲ್ಲವೂ ನಮ್ಮ ಸ್ಮೃತಿಕಾರರಿಗೆ ಗೊತ್ತಿದ್ದವು. ವಿಚ್ಛೇದನವು ಇಂಥ ಮೂರು ಅಥವಾ ನಾಲ್ಕು ಕಾರಣಗಳಿಗೆ ಮಾತ್ರ ಸೀಮಿತವಾಗಿರಬೇಕು ಎಂಬುದು ನನ್ನ ಅಭಿಪ್ರಾಯ. ಮದುವೆಯಾದ ಮೇಲೆ ಹೆಂಡತಿಯನ್ನು ಬಿಟ್ಟಿರುವ ಸಂಗತಿಗಳನ್ನು ನಾವು ನೋಡಿಲ್ಲವೆ? ಈ ನತದೃಷ್ಟ ಹೆಂಗಸರಿಗೆ ಏನೂ ಪರಿಹಾರವಿಲ್ಲವೆ? ಅವರಿಗೆ ಏನಾದರೂ ಪರಿಹಾರವಿರಬೇಕು. ಆದರೆ ವಿಚ್ಛೇದನವನ್ನು ಈ ಮೂರು ಅಥವಾ ನಾಲ್ಕು ಕಾರಣಗಳಿಗೆ ಮಾತ್ರ ಸೀಮಿತಗೊಳಿಸಬೇಕು. ಇಲ್ಲಿ ಕಾನೂನಿನ ಕ್ರಮವನ್ನು ತರಬೇಡಿ. ವ್ಯಭಿಚಾರವನ್ನು ಮಾಡಿದ್ದಾಳೆಂದು ಸಿದ್ಧಪಡಿಸಲು ಸುಳ್ಳು ಸಾಕ್ಷಿ ತಯಾರಿಸಬಹುದು. ಒಳಸಂಚು ಮಾಡಿ, ಸಾಕ್ಷಿಗಳನ್ನು ತಯಾರಿಸಿ, ಆ ಅಪಾದನೆಯನ್ನು ಸಾಬೀತುಪಡಿಸಬಹುದು. ಇದನ್ನು ನಾನು ಧಾರ್ಮಿಕ ವಿವಾಹದಲ್ಲಿ ತರಬಯಸುತ್ತೇನೆ. ನನ್ನ ಅಸಮ್ಮತಿ ಸೂಚನೆಯಲ್ಲಿ ಈಗಾಗಲೇ ತಿಳಿಸಿರುವಂತೆ, ನಾನು ಹೇಳುವುದೇನೆಂದರೆ ವಿವಾಹ ಮತ್ತು ವಿಚ್ಛೇದನಗಳಿಗೆ ಸಂಬಂಧಿಸಿದ ಅಧ್ಯಾಯವನ್ನು ಪುನರ್ರೂಪಿಸಬೇಕು. ಹಿಂದೂ ವಿವಾಹಗಳಲ್ಲಿ ಎರಡು ವಿಧಗಳಿವೆ – ಒಂದು ಶಾಸನಿಕ, ಮತ್ತೊಂದು ಧಾರ್ಮಿಕ. ಒಂದರಲ್ಲಿ ಯಾವ ಪರಿಸ್ಥಿತಿಯಿದ್ದರೆ, ಅದನ್ನು ರದ್ದುಗೊಳಿಸಬಹುದು, ಎಂಬುದು ನಿಮಗೆ ಗೊತ್ತು. ಇನ್ನೊಂದರಲ್ಲಿ, ನೀವು ಎಲ್ಲ ಆಧುನಿಕ ವಿಚಾರಗಳನ್ನೂ ತರಬಹುದು. ಈ ಮಸೂದೆಯನ್ನು ಗಂಭೀರವಾಗಿ ಪರಿಗಣಿಸಿ, ಅದು ಸ್ತ್ರೀಯರ ಸ್ಥಾನವನ್ನು ಹೆಚ್ಚಿಸುತ್ತದೆಯೆ ಎಂಬುದನ್ನು ಪರಿಶೀಲಿಸಬೇಕೆಂದು ಈ ಮಸೂದೆಯನ್ನು ಬೆಂಬಲಿಸುತ್ತಿರುವವರನ್ನು ನಾನು ಕೇಳಿಕೊಳ್ಳುತ್ತಿದ್ದೇನೆ. ನನ್ನ ಸಲಹೆ – ಸೂಚನೆಗಳು ಅಂಗೀಕೃತವಾದರೆ, ಈ ಮಸೂದೆಯು ಇನ್ನೂ ಉತ್ತಮವಾಗುತ್ತದೆ. ಇದರಿಂದಾಗಿ, ಸ್ತ್ರೀಯರು ತಮ್ಮ ಸ್ತ್ರೀತ್ವದ ಔನ್ನತ್ಯವನ್ನು ಪೂರ್ಣವಾಗಿ ತಲುಪಿದಂತಾಗುವುದು. ಅವರಿಗೆ ಆಸ್ತಿಯಲ್ಲಿ ಪೂರ್ಣ ಹಕ್ಕು ಸಿಕ್ಕುತ್ತದೆ. ಆರ್ಥಿಕವಾಗಿಯೂ ಅವರಿಗೆ ಸ್ವಾತಂತ್ರ್ಯ ಸಿಕ್ಕುತ್ತದೆ. ಹೊಸ ಸಂವಿಧಾನದಡಿಯಲ್ಲಿ ಯುವಜನರಿಗೆ ಮತದಾನದ ಹಕ್ಕಿದೆ. ಆಡಳಿತದ ವಿವಿಧ ಇಲಾಖೆಗಳಲ್ಲಿ ಸ್ತ್ರೀಯರು ಮಂತ್ರಿಗಳಾಗಿದ್ದಾರೆ. ಮನೆಯ ಯಜಮಾನಿತಿಯಾದ

ಸ್ತ್ರೀಯ ಹಕ್ಕುಗಳನ್ನು ಮೊಟಕುಗೊಳಿಸಲು ಹಾಗೂ ಆಕೆಗೆ ಕೇವಲ ಝೀವನಾಂಶಕ್ಕೆ ಮಾತ್ರ ಹಕ್ಕಿದೆ, ಇತರ ಹಕ್ಕುಗಳಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಹಾಗೆ ಹೇಳಿದರೆ, ಅದೊಂದು ದೊಡ್ಡ ಅನ್ಯಾಯವಾಗುತ್ತದೆ. ಅದು ನಮ್ಮ ಪುರಾತನ ಕಾನೂನಿಗೆ ವಿರುದ್ಧವಾಗುತ್ತದೆ. ಈ ಮಧ್ಯದಲ್ಲಾದ ಬದಲಾವಣೆಗಳು ಆಗಿನ ಕಾಲದ ಪರಿಸ್ಥಿತಿ ಮತ್ತು ಕಾರಣಗಳಿಗೆ ಸೂಕ್ತವಾಗಿರಬಹುದು, ಆದರೆ ಅವು ಈಗ ಹಳೆಯದಾಗಿ ನಿರುಪಯುಕ್ತವಾಗಿವೆ. ಅವು ಈಗ ಹಿಂದೂ ಧರ್ಮದ ಭಾಗವಾಗಿ ಉಳಿದಿಲ್ಲ; ಆದುದರಿಂದ, ಅವನ್ನು ಕಿತ್ತು ಹಾಕಬೇಕು. ಈ ಅನಾಗರಿಕ ಬೆಳವಣಿಗೆಯಿಂದ ಮುಕ್ತರಾಗಿ, ನಾವು ವೈದಿಕ ವಿಚಾರಗಳಿಗೆ ಹಿಂದಿರುಗಬೇಕು. ಈ ನನ್ನ ಅನಿಸಿಕೆಗಳನ್ನು ನಾನು ಸಂಕ್ಷಿಪ್ತವಾಗಿ ನಿಮ್ಮ ಮುಂದೆ ಇರಿಸಿದ್ದೇನೆ; ಹಾಗೂ ಅವುಗಳನ್ನು ಎಲ್ಲರೂ, ಗಂಭೀರವಾಗಿ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಸನ್ಮಾನ್ಯ ಶ್ರೀ ಕೆ. ಸಂತಾನಂ** (ಪರಿವಹನ ಮತ್ತು ರೈಲ್ವೆಯ ರಾಜ್ಯಮಟ್ಟದ ಮಂತ್ರಿ) : ಸ್ಪಷ್ಟನೆಗೋಸ್ಕರ, ನಾನೊಂದು ಪ್ರಶ್ನೆ ಕೇಳಲೆ? ಗಂಡನ ಕುಟುಂಬಲ್ಲಿ ಹೆಂಡತಿ ಸಹ–ಪಾಲುದಾರಳಾಗುತ್ತಾಳೆ ಎಂದು ಊಹಿಸೋಣ. ಅವಳ ಪಾಲು ಗಂಡನ ಪಾಲಿನಲ್ಲಿ ಒಂದು ಭಾಗವಾಗಿರುತ್ತದೆಯೋ ಅಥವಾ ಅದೇ ಪ್ರತ್ಯೇಕವೂ?

**ಡಾ॥ ಭಕ್ಷಿ ತೇಕ್‌ಚಂದ್** : ಕುಟುಂಬ ಅವಿಭಕ್ತವಾಗಿದ್ದರೆ, ಆಸ್ತಿಯ ಒಡೆತನವೂ ಅವಿಭಕ್ತವಾಗಿರುತ್ತದೆ – ನೀವೂ ನಿಮ್ಮ ಪುತ್ರರೂ ಸಹ–ಪಾಲುದಾರರಾಗುತ್ತೀರಲ್ಲ, ಹಾಗೆ. ಆದರೆ ಭಾಗವಾದಾಗ, ಆಕೆ ಸ್ವತಂತ್ರಳಾಗುತ್ತಾಳೆ. ಮಗನಿಗೆ ಕೊಟ್ಟಿರುವ ಹಕ್ಕನ್ನೇ ಆಕೆಗೆ ಕೊಟ್ಟಿದೆ. ಇದೊಂದು ಹೊಸ ಸೇರ್ಪಡೆ. ಇದು ಬಹಳ ಸರಳ.

**ಒಬ್ಬ ಸನ್ಮಾನ್ಯ ಸದಸ್ಯ** : ಮಾನ್ಯರೇ, ಈಗ ಒಂದು ಪ್ರಶ್ನೆಯನ್ನು ಕೇಳಬಹುದು.

**ಕೆಲವು ಸನ್ಮಾನ್ಯ ಸದಸ್ಯರು** : ಬೇಡ, ಬೇಡ.

**ಮೌಲಾನಾ ಹಜರತ್ ಮೊಹಾನಿ** (ಉ.ಪ್ರ : ಮುಸ್ಲಿಂ) : ನಾನು ಕೇವಲ ಐದು ನಿಮಿಷ ತೆಗೆದುಕೊಳ್ಳುತ್ತೇನೆ.

ಆಗ ಕೆಲವು ಮಾನ್ಯ ಸದಸ್ಯರು ಎದ್ದುನಿಲ್ಲುತ್ತಾರೆ.

**ಮಾನ್ಯ ಉಪಸಭಾಪತಿಗಳು** : ಸಭೆಯ ನಿಯಮಾವಳಿಗಳನ್ನು ಪಾಲಿಸಿ. ದಯವಿಟ್ಟು ಎಲ್ಲ ಸದಸ್ಯರೂ ತಮ್ಮ ತಮ್ಮ ಆಸನಗಳಲ್ಲಿ ಕೂರುತ್ತೀರಾ ? ಅನೇಕ ಸದಸ್ಯರು ಮಾತಾಡಲು ಆಸಕ್ತರಾಗಿರುವಂತೆ ಕಾಣುತ್ತಿದೆ. ಆದರೆ ನಾನು ನಿನ್ನೆಯೆ ಹೇಳಿದಂತೆ, ಇದೇ ಗತಿಯಲ್ಲಿ ಮುಂದುವರಿದರೆ, ಒಂದು ತಿಂಗಳೇನು, ಎರಡು ತಿಂಗಳೂ ಸಾಕಾಗುವುದಿಲ್ಲ. ಸದಸ್ಯರು ತಮ್ಮ ಭಾಷಣವನ್ನು ಮೊಟಕುಗೊಳಿಸುವ ಪ್ರವೃತ್ತಿಯನ್ನೇ ತೋರಿಸುತ್ತಿಲ್ಲ. ಈ ಹಿಂದೂ ಕಾನೂನು ಕೇವಲ ಹಿಂದೂಗಳನ್ನು ಹಿಂದೂಗಳು ವಿವಾಹ ಮತ್ತು ಪದ್ಧತಿಗಳ ಕಾನೂನುಗಳನ್ನು ಒಳಗೊಳ್ಳದೆ, ಅದು ಜೈನ ಮತ್ತು ಸಿಖ್ಖರಿಗೂ ಅನ್ವಯಿಸುತ್ತದೆ. ಅದು ಮುಸ್ಲಿಮರಿಗೆ, ಕ್ರೈಸ್ತರಿಗೆ ಮತ್ತು ಪಾರಸಿಗಳಿಗೆ ಅನ್ವಯಿಸುವುದಿಲ್ಲ (ಇಲ್ಲಿ ಕೆಲವರು ಅಡ್ಡಿ ಮಾಡುತ್ತಾರೆ).

**ಒಬ್ಬ ಸನ್ಮಾನ್ಯ ಸದಸ್ಯರು** : ಆದರೆ ಇದರಲ್ಲಿರುವ ಕೆಲವು ಉಪನಿಯಮಗಳು ಇತರರಿಗೂ ತಟ್ಟುತ್ತದೆ.

**ಸನ್ಮಾನ್ಯ ಉಪಸಭಾಪತಿಗಳು** : ಸಭಾಪತಿಗಳು ಮಾತಾಡಲು ನಿಂತಿರುವಾಗ ಯಾವ ಸದಸ್ಯರೂ ಎದ್ದು ನಿಲ್ಲಬಾರದೆಂಬ ನಿಯಮ ನಿಮಗೆಲ್ಲರಿಗೂ ಚೆನ್ನಾಗಿ ಗೊತ್ತು. ಅದನ್ನು ಸನ್ಮಾನ್ಯ ಸದಸ್ಯರಿಗೆ ನಾನು ಜ್ಞಾಪಿಸಬೇಕಾಗಿಲ್ಲ ಆದುದರಿಂದ, ನಾನು ಜೈನ ಸಮುದಾಯದಿಂದ ಒಬ್ಬ, ಸಿಖ್ಖ್ ಸಮುದಾಯದಿಂದ ಒಬ್ಬ, ಆಮೇಲೆ ಇತರರನ್ನು ಮಾತಾಡುವಂತೆ ಕೇಳಲು ಯೋಚಿಸಿದ್ದೇನೆ. ಪ್ರೊ. ಕೆ. ಓ. ಷಹಾರವರೇ,

**ಶ್ರೀ ಹೆಚ್. ಜೆ. ಖಾಂಡೇಕರ್** (ಮ.ಪ್ರಾಂ. ಮತ್ತು ಬೆರಾರ್ : ಸಾಮಾನ್ಯ) : ಹರಿಜನರೇಕೆ ಬೇಡ?

ಮೌಲಾನಾ ಹಜರತ್ ಮೊಹಾನಿ : ಆಗ ಎದ್ದು ನಿಂತರು.

**ಮಾನ್ಯ ಉಪಸಭಾಪತಿಗಳು :** ಈ ಮಾನ್ಯ ಸದಸ್ಯರನ್ನು ನಾನು ಈಗ ಮಾತಾಡಲು ಬಿಡುವುದಿಲ್ಲ. ಮೊದಲು ಬೇರೆಯವರಿಂದ ಪ್ರಾರಂಭವಾಗಲಿ.

**ಸನ್ಮಾನ್ಯ ಶ್ರೀ ಸತ್ಯನಾರಾಯಣ ಸಿನ್ಹಾ** (ಸಂಸದೀಯ ವ್ಯವಹಾರಗಳ ರಾಜ್ಯಮಟ್ಟದ ಮಂತ್ರಿ): ನಾನು ಒಂದು ಸಲಹೆ ನೀಡಬಯಸುತ್ತೇನೆ. ಸದನವು ಒಪ್ಪಿದರೆ, ನಾವು ಇಂದು ಏಳುಗಂಟೆಯವರೆಗೂ, ಬೇಕಾದರೆ ಆಮೇಲೂ ಕೂರಬಹುದು; ಸದಸ್ಯರಿಗೆ ಸಮಾಧಾನವಾಗದಿದ್ದರೆ, ಹಾಗೂ ಮಾತಾಡಬಯಸುವವರು ಇನ್ನೂ ಇದ್ದರೆ, ನಾವು ಶನಿವಾರವೂ ಸಭೆ ಸೇರಬಹುದು. ಈ ಕಾರ್ಯಕಲಾಪಕ್ಕಾಗಿ ಸರ್ಕಾರವು ಶನಿವಾರದ ಅರ್ಧವನ್ನು ಕಾಯ್ದಿರಿಸಲು ಸಿದ್ಧವಿದೆ. ಶನಿವಾರದಂದು ಪ್ರಶ್ನೋತ್ತರ ಸಮಯವಿರುವುದಿಲ್ಲ. ಮಧ್ಯಾಹ್ನದ ಊಟ ಮುಗಿಯುವುದರೊಳಗಾಗಿ ನಮಗೆ ೨.೩೦ ಗಂಟೆಗಿಂತಲೂ ಹೆಚ್ಚು ಸಮಯ ಸಿಕ್ಕಿರುತ್ತದೆ. ಇದು ನಿಮ್ಮ ಉದ್ದೇಶಕ್ಕೆ ಹೊಂದಿಕೊಳ್ಳುವುದಾದರೆ ಹಾಗೂ ಸದನವು ಒಪ್ಪಿದರೆ – ಸದನವು ಒಪ್ಪುತ್ತದೆ – ಅದು ನಮ್ಮೆಲ್ಲ ಕಷ್ಟಗಳನ್ನು ನಿವಾರಿಸುತ್ತದೆ.

**ಮಾನ್ಯ ಉಪಸಭಾಪತಿಗಳು :** ಇದೊಂದು ಸೂಕ್ತ ಸಲಹೆಯೆಂದು ನನಗನಿಸುತ್ತದೆ. ನಾನು ಆಗಲೆ ಸದನವು ಮತ್ತೆ ಶನಿವಾರದಂದು ಸಮಾವೇಶಗೊಳ್ಳುತ್ತದೆ ಎಂದು ಹೇಳಿದ್ದೇನೆ. ಇದನ್ನು ಬದಲಿಸುವ ಅಗತ್ಯವಿಲ್ಲ. ಸಾರ್ವಜನಿಕ ವಿಷಯಗಳನ್ನು ಪರಿಶೀಲಿಸಲೇಬೇಕಾದ ತುರ್ತು ಪರಿಸ್ಥಿತಿ ಉಂಟಾದರೆ, ನಾವು ಶನಿವಾರವೂ ಸಭೆ ಸೇರಬೇಕಾದ ಆವಶ್ಯಕತೆ ಉಂಟಾಗುತ್ತದೆ. ಆಗೇನೂ ಆಕಾಶ ನಮ್ಮ ಮೇಲೆ ಬೀಳುವುದಿಲ್ಲ. ನಾವು ಶನಿವಾರ ಸಮಿತಿ ಸಭೆಗಳಲ್ಲಿ ಭಾಗವಹಿಸುವವರಿದ್ದೇವೆ. ಆದರೆ ನಾನು ಆ ದಿನದ ವಿಶೇಷ ಸಮಿತಿಯ ಸಭೆಯನ್ನು ರದ್ದುಪಡಿಸಬೇಕೆಂದು ಸರ್ಕಾರವನ್ನು ವಿನಂತಿಸಿಕೊಂಡಿದ್ದೇನೆ. ಅದೇ ರೀತಿ ಶನಿವಾರದಂದು ಯಾವ ವಿಶೇಷ ಸಮಿತಿಯ ಸಭೆಯೂ ನಡೆಯಲು ನಿರ್ಧರಿಸದಂತೆ ನಾನು ನೋಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಅಂದು ಎಲ್ಲ ಸಂಸದೀಯ ಕಾರ್ಯಗಳಿಂದ ಮುಕ್ತರಾಗಿ, ಹಿಂದೂ ಕಾನೂನಿನ ಮೇಲಿನ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಪಡೆಯುತ್ತಾರೆ.

ಮೊದಲು ಶನಿವಾರವನ್ನು ಸರ್ಕಾರದ ಬೇರೆ ವ್ಯವಹಾರಗಳ ಪರಿಶೀಲನೆಗೆ ಮೀಸಲಿಡಲಾಗಿದ್ದು, ಈಗ ಅದನ್ನು ಹಿಂದೂ ಕಾನೂನಿನ ಚರ್ಚೆಗೆ ಮೀಸಲಿಡಲಾಗಿದೆ, ಎಂದು ಈಗ ತಾನೆ ಸಂಸದೀಯ ವ್ಯವಹಾರಗಳ ಮಂತ್ರಿಗಳು, ಸರ್ಕಾರದ ಪರವಾಗಿ, ಸೂಚಿಸಿದ್ದಾರೆ. ಅನೇಕ ಸನ್ಮಾನ್ಯ ಸದಸ್ಯರು ಮಾತಾಡಲು ಕಾತರರಾಗಿದ್ದಾರೆ ಎಂಬುದನ್ನು ಗಮನಿಸಿದ ಸರ್ಕಾರವು ಶನಿವಾರವನ್ನು – ಅಂದರೆ ಪೂರ್ವಾಹ್ನವನ್ನು ಅಧಿಕಾರರಹಿತ ಸದಸ್ಯರಿಗೂ, ಸನ್ಮಾನ್ಯ ಕಾನೂನು ಮಂತ್ರಿಗಳ ಉತ್ತರ ಕೊಡಲೆಂದೂ ಮಧ್ಯಾಹ್ನದ ನಂತರದ ಸಮಯವನ್ನೂ – ಮೀಸಲಿಡಲು ಸಿದ್ಧವಿದೆ. ಇದೂ ಅಲ್ಲದೆ, ಅವರು ಸದನದ ಒಪ್ಪಿಗೆಗಾಗಿ ಮತ್ತೊಂದು ಸೂಚನೆಯನ್ನು ಮಂಡಿಸಲಿದ್ದಾರೆ. ಸದಸ್ಯರು ಅದನ್ನು ಅಂಗೀಕರಿಸಬಹುದು, ಇಲ್ಲ ತಿರಸ್ಕರಿಸಬಹುದು. ಈ ವಿಷಯದ ಮೇಲೂ ಅನೇಕ ಮಾನ್ಯ ಸದಸ್ಯರು ಮಾತಾಡಲು ಕಾತರರಾಗಿದ್ದಾರೆ. ಈ ದಿನ ನಾವು ಏಳು ಗಂಟೆಯವರೆಗೂ ಕೂತಿರಬಹುದು. ಸದನವು ಆಯಾಸಗೊಂಡಿದೆಯೋ ಅಥವಾ ಚರ್ಚೆಯನ್ನು ಮುಂದುವರಿಸುವಷ್ಟು ಉತ್ಸುಕತೆ ಅದಕ್ಕಿದೆಯೋ ಎಂಬುದನ್ನು ಈ ದಿನ ೫ ಗಂಟೆಗೆ ತಿಳಿದುಕೊಳ್ಳುತ್ತೇನೆ. ವೈಯಕ್ತಿಕವಾಗಿ ಹೇಳಬೇಕೆಂದರೆ, ನಾನು ಅಧ್ಯಕ್ಷರ ಗುಂಪಿನ ಮಿತ್ರರೂ ಏಳುಗಂಟೆಯವರೆಗೂ ಮುಂದುವರಿಯಲು ಸಿದ್ಧರಿದ್ದೇವೆ. ಈ ವಿಚಾರದಲ್ಲಿ ನಾನು ಸದನದ ದಾಕ್ಷಿಣ್ಯಕ್ಕೊಳಗಾಗಿದ್ದೇನೆ.

**ಸನ್ಮಾನ್ಯ ಶ್ರೀ ಸತ್ಯನಾರಾಯಣ ಸಿನ್ಹಾ :** ಮಾನ್ಯರೆ, ಶನಿವಾರದ ಅರ್ಧ ದಿನವನ್ನು ಹಿಂದೂ ಕಾನೂನು ಮಸೂದೆಯ ಚರ್ಚೆಗೆ ಮೀಸಲಾಗಿಡಲು ಸರ್ಕಾರ ಸಿದ್ಧವಿದೆ ಎಂದು ನಾನು ಸರ್ಕಾರದ ಪರವಾಗಿ ಹೇಳಿದೆ. ಆದರೆ, ನೀವಾಗಲೇ ಹೇಳಿರುವಂತೆ, ಈ ಸಲುವಾಗಿ ಇಡೀ ದಿನವನ್ನೇ ಮೀಸಲಾಗಿಡಬಹುದು ಮತ್ತು ಅದಕ್ಕೆ ಸರ್ಕಾರ ಒಪ್ಪುತ್ತದೆ.

**ಮಾನ್ಯ ಉಪಸಭಾಪತಿಗಳು :** ಸರ್ಕಾರವು ನಾನು ನೀಡಿರುವ ಸೂಚನೆಯನ್ನು ಒಪ್ಪಿಕೊಳ್ಳುತ್ತದೆ ಎಂದುಕೊಂಡಿದ್ದೇನೆ.

**ಪಂಡಿತ ಗೋವಿಂದ್ ಮಾಳವೀಯ** (ಉ.ಪ್ರ : ಸಾಮಾನ್ಯ) : ಮಾನ್ಯರೆ, ನೀವು ಇತ್ತಿರುವ ತೀರ್ಪಿಗೆ ಸಂಬಂಧಿಸಿದಂತೆ, ನಾನು ತಮ್ಮ ಮುಂದೆ ನಿವೇದಿಸಿಕೊಳ್ಳುವುದೇನೆಂದರೆ, ಶನಿವಾರವು ಬಿಡುವಿನ ದಿನವೆಂದು ಊಹಿಸಕೊಂಡು, ಆ ದಿನ ನಮ್ಮಲ್ಲಿ ಕೆಲವರು ಬೇರೆಡೆಯಲ್ಲಿ ಮುಖ್ಯವಾದ ಹಾಗೂ ಅನಿವಾರ್ಯವಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ನನ್ನ ವಿಚಾರದಲ್ಲೇ ಹೇಳಬೇಕೆಂದರೆ, ನನಗೆ ಆ ದಿನ ಬಹಳ ಮುಖ್ಯವಾದ ಹಾಗೂ ಅನಿವಾರ್ಯವಾದ ಕೆಲಸವಿದೆ. ಮಾನ್ಯರೆ, ಈ ಸಂಗತಿಯನ್ನು ಗಮನದಲ್ಲಿಟ್ಟುಕೊಂಡಿದ್ದೀರಿ ಎಂಬ ಭರವಸೆ ನನಗಿದೆ. ಶನಿವಾರವೂ ಕೆಲಸದ ದಿನ ಎಂದು ನಮಗೆ ಗೊತ್ತಿದ್ದರೆ, ನಾವು ಹಾಗೆ ಮಾಡುತ್ತಿರಲಿಲ್ಲ. ಈಗ ನೋಡಿದರೆ, ಇದು ನಮ್ಮೆಲ್ಲ ಯೋಜನೆಗಳನ್ನೂ ತಲೆಕೆಳಗು ಮಾಡುತ್ತದೆ. ಆದುದರಿಂದ, ಇಂಥ ಮುಖ್ಯ ನಿಬಂಧನೆಯನ್ನು ಚರ್ಚಿಸಲು ಶನಿವಾರದ ಬದಲು ಮತ್ತಾವುದಾದರೂ ದಿನವನ್ನು ಗೊತ್ತುಪಡಿಸಬಹುದೆಂದು ನಾನು ವಿನಂತಿಸಿಕೊಳ್ಳುತ್ತಿದ್ದೇನೆ. ಸರ್ಕಾರವು ಹಾಗೆ ಸುಲಭವಾಗಿ ಮಾಡುವ ಅವಕಾಶ ಇನ್ನೂ ಇದೆ. ಶನಿವಾರ ಸರ್ಕಾರದ ಕೆಲಸವನ್ನು ಕೈಗೆತ್ತಿಕೊಂಡು, ಈ ನಿಬಂಧನೆಯನ್ನು ಚರ್ಚಿಸಲೋಸ್ಕರ ಮತ್ತಾವ ದಿನವನ್ನಾದರೂ ಗೊತ್ತುಪಡಿಸಬಹುದು. ಅದಕ್ಕೆ ನಮ್ಮದೇನೂ ಆಕ್ಷೇಪವಿಲ್ಲ. ಬೇರೆಯವರಿಗೆ ಈ ಚರ್ಚೆಯಲ್ಲಿ ಭಾಗವಹಿಸಲು ಇಷ್ಟವಿದ್ದು ಆ ದಿನ ಅವರು ಬರಲಾಗದಿದ್ದರೆ, ಅವರನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ; ಇದನ್ನು ಸದನವು ಅರ್ಥಮಾಡಿಕೊಳ್ಳುತ್ತದೆ ಎಂಬ ಭರವಸೆ ನನಗಿದೆ.

**ಸನ್ಮಾನ್ಯ ಶ್ರೀ ಸತ್ಯನಾರಾಯಣ ಸಿನ್ಹಾ :** ಮಾನ್ಯ ಸದಸ್ಯರು ಸೋಮವಾರ ಸಭೆಗೆ ಬರಲು ಬಯಸಿದರೆ, ಸರ್ಕಾರದ್ದೇನೂ ಆಕ್ಷೇಪವಿಲ್ಲ. ಶನಿವಾರ ಸರ್ಕಾರದ ಕೆಲಸವನ್ನು ಕೈಗೆತ್ತಿಕೊಳ್ಳೋಣ.

**ಶ್ರೀ ಅಜಿತ್ ಪ್ರಸಾದ್ ಜೈನ್** (ಉ. ಪ್ರ : ಸಾಮಾನ್ಯ) : ನಾಳೆಯೇ ಇದನ್ನು ಮುಂದುವರಿಸಿ, ಮಸೂದೆಯ ಮೇಲಿನ ಚರ್ಚೆಯನ್ನೇಕೆ ಮುಗಿಸಬಾರದು?

**ಸನ್ಮಾನ್ಯ ಶ್ರೀ ಸತ್ಯನಾರಾಯಣ ಸಿನ್ಹಾ :** ಶನಿವಾರ ಸರ್ಕಾರದ ವ್ಯವಹಾರಗಳನ್ನು ಚರ್ಚಿಸಲು ಸಭೆ ಸೇರಲಿದ್ದೇವೆ. ಈ ಮಸೂದೆಯ ಮೇಲಿನ ಚರ್ಚೆಯನ್ನು ಸೋಮವಾರ ಇಟ್ಟುಕೊಳ್ಳಲು ಸರ್ಕಾರ ಸಿದ್ಧವಿದೆ; ಆದರೂ ಶನಿವಾರ ಕಛೇರಿಯ ದಿನವಾಗೇ ಇರುತ್ತದೆ.

**ಸನ್ಮಾನ್ಯ ಶ್ರೀ ಕೆ. ಸಂತಾನಂ :** ಶನಿವಾರಕ್ಕಿಂತ ಸೋಮವಾರದಂದೇ ಸದಸ್ಯರಿಗೆ ಕಡಿಮೆ ಸಮಯ ಸಿಕ್ಕುತ್ತದೆ. ಆದರೆ ಸದಸ್ಯರೇ ಚರ್ಚೆಯನ್ನು ಸೋಮವಾರದಂದು ಅಂತ್ಯಗೊಳಿಸಲು ನಿರ್ಧರಿಸಿದರೆ ನಮ್ಮದೇನೂ ತಕರಾರು ಇಲ್ಲ. ಆದರೆ, ಚರ್ಚೆಯನ್ನು ಹಿಗ್ಗಿಸುವ ಕುತಂತ್ರವಾಗಿ ಸುಮ್ಮನೆ ಮುಂದು ಮುಂದಕ್ಕೆ ಹಾಕುತ್ತಾ ಹೋದರೆ...

**ಮಾನ್ಯ ಉಪಸಭಾಪತಿಗಳು :** ನಮ್ಮ ಸ್ನೇಹಿತರು ಸಹಕಾರ ನೀಡುತ್ತಿಲ್ಲದಿರುವುದು ನನಗೆ ಖೇದವನ್ನುಂಟುಮಾಡುತ್ತಿದೆ. ಪಂಡಿತ ಗೋವಿಂದ ಮಾಳವೀಯರಿಂದಲೂ ಇತರ ಸನ್ಮಾನ್ಯ ಸದಸ್ಯರಿಂದಲೂ

ಒಂದು ಸಲಹೆ ಬಂದಿದೆ. ಮಾಳವೀಯರು ಒಬ್ಬ ಪ್ರಮುಖ ಸದಸ್ಯರು; ಅವರು ಈ ಸದ್ಯದ ಮಸೂದೆಯಲ್ಲಿ ಬಹಳ ಆಸಕ್ತಿವಹಿಸಿ, ಅದರ ಪರವಾಗಿಯೋ, ವಿರುದ್ಧವಾಗಿಯೋ ನಿಲುವನ್ನು ತಳೆದಿದ್ದಾರೆ. ಅವರ ಸಲಹೆ ಏನೆಂದರೆ, ಶನಿವಾರ ಒಂದನ್ನು ಬಿಟ್ಟು ಮತ್ತಾವುದೇ ದಿನ ಈ ಮಸೂದೆಯನ್ನು ಕೈಗೆತ್ತಿಕೊಳ್ಳುವುದು ಒಳ್ಳೆಯದು. ಸರ್ಕಾರವು ಇವರ ಇಷ್ಟವನ್ನು ಗಣನೆಗೆ ತೆಗೆದುಕೊಂಡು ಅದನ್ನು ಸೋಮವಾರ ಕೈಗೆತ್ತಿಗೊಳ್ಳಲು ಸಿದ್ಧವಿದೆ. ಹಾಗೆಂದು ಸರ್ಕಾರದ ವಕ್ತಾರರು ಹೇಳಿದ್ದಾರೆ. ಸೋಮವಾರದಂದು ಪ್ರಶ್ನೋತ್ತರ ಸಮಯವಿರುತ್ತದೆ ಎಂದು ಸನ್ಮಾನ್ಯ ಸದಸ್ಯರಿಗೆ ಗೊತ್ತು. ಇದನ್ನು ತಿಳಿದೇ ಅವರು ಸೋಮವಾರವನ್ನು ಒಪ್ಪಿಕೊಂಡಿದ್ದಾರೆ.

**ಶ್ರೀ ರೋಹಿಣಿ ಕುಮಾರ ಚೌಧರಿ :** ಮಾನ್ಯರೆ, ನಾನು ಗೌರವಪೂರ್ವಕವಾಗಿ ಸೂಚಿಸುತ್ತಿರುವುದೇನೆಂದರೆ, ಶನಿವಾರವು ಬಿಡುವಿನ ದಿನ; ಅದನ್ನು ಕೆಲವು ಉದ್ದೇಶಗಳಿಗಾಗಿ ಕೊಡಲಾಗಿದೆ. ಬಹಳ ಮುಖ್ಯವಾದ ಕಾರಣಗಳಿಗಾಗಿ ನಾನು ಆ ಬಿಡುವನ್ನು ತ್ಯಜಿಸಲು ನಿರ್ಧರಿಸಿದ್ದೇನೆ. ಆದರೆ ನಾನು ಸದನವನ್ನು ಕೇಳುತ್ತಿರುವುದೇನೆಂದರೆ, ಈ ಮಸೂದೆಯನ್ನು ಸಾಧ್ಯವಾದಷ್ಟು ಬೇಗ ಮುಗಿಸಬೇಕೆಂಬ ಮನವರಿಕೆ. ಅದಕ್ಕಾಗಿಯೇ ಇದೆಯೆ? ಮುಗಿಸಬೇಕೆಂದು ನಿರ್ಧರಿಸಿದೆಯೆ? ಈ ಮಸೂದೆಯ ಬಗೆಗೆ ಇಷ್ಟೊಂದು ಆತುರವೇಕೆ? ಇದಕ್ಕೂ ಹೆಚ್ಚು ಮುಖ್ಯವಾದ ಮಸೂದೆಗಳಿವೆ; ಜೀವ ವಿಮಾ ಮಸೂದೆಯಿದೆ; ನಿಮ್ಮ ಪ್ರಕಾರ ಅದನ್ನು ಈ ಅಧಿವೇಶನದಲ್ಲೇ ಒಂದು ಕಾನೂನನ್ನಾಗಿ ಮಾಡಬೇಕಾಗಿದೆ; ಈ ಮಸೂದೆಯು.....

**ಮಾನ್ಯ ಉಪಸಭಾಪತಿಗಳು :** ದಯವಿಟ್ಟು ಸನ್ಮಾನ್ಯ ಸದಸ್ಯರು ಆಸೀನರಾಗಬೇಕು. ಈ ಮಸೂದೆಯನ್ನು ತರಾತುರಿಯಿಂದ ಮುಗಿಸಬೇಕಾಗಿಲ್ಲ ಎಂಬ ಆಕ್ಷೇಪವನ್ನು ನಾನು ಅನೇಕ ಸನ್ಮಾನ್ಯ ಸದಸ್ಯರಿಂದ ಕೇಳುತ್ತಲೇ ಬಂದಿದ್ದೇನೆ. ಆದರೆ ಈ ವಿಷಯಕ್ಕೆ ಸಂಬಂಧಿಸಿದಂತೆ, ಸದನದಲ್ಲಿ ಸರ್ವಾನುಮತವಿಲ್ಲ. ಹಾಗೆ ಸರ್ವಾನುಮತವಿದ್ದಿದ್ದರೆ, ನಮಗೆ ಸಮಯದ ಅಭಾವ ಇರುತ್ತಿರಲಿಲ್ಲ. ಈ ಬಗೆಗಿನ ಅಭಿಪ್ರಾಯಗಳು ಭಿನ್ನವಾಗಿವೆ ಎಂಬುದು ಸರ್ವವಿದಿತ. ಕೇವಲ ಒಬ್ಬ ಮಾನ್ಯ ಸದಸ್ಯರು ಮಾಡಿದ ಸೂಚನೆಗನುಗುಣವಾಗಿ ನಾನು ಸದನದ ಅಭಿಪ್ರಾಯವನ್ನು ಕೇಳುವುದಿಲ್ಲ.

ಈಗ, ಶನಿವಾರವೂ ಕೆಲಸದ ದಿನ, ಅಂದು ಹಿಂದೂ ಕಾನೂನು ಮಸೂದೆಯನ್ನು ಹೊರತುಪಡಿಸಿ ಇತರ ಕಛೇರಿಯ ವ್ಯವಹಾರಗಳನ್ನು ಪರಿಶೀಲಿಸಲಾಗುವುದು ಎಂಬುದು ಖಚಿತವಾಗಿದೆ. ಸೋಮವಾರದಂದು ಅಧಿಕಾರ ರಹಿತ ಸದಸ್ಯರಿಗೆ ಮಧ್ಯಾಹ್ನದವರೆಗೆ ಮಾತಾಡಲು ಅವಕಾಶ ಮಾಡಿಕೊಡುತ್ತೇನೆ. ಮಧ್ಯಾಹ್ನದ ನಂತರ, ಡಾ॥ ಅಂಬೇಡ್ಕರ್ ಮಾತಾಡಬೇಕೆಂದು ನಾನು ನಿರ್ಧರಿಸಿದ್ದೇನೆ.

**ಶ್ರೀ ಮಹಾವೀರ ತ್ಯಾಗಿ :** ನಮ್ಮಲ್ಲಿ ಬಹಳ ಜನರು ಬಹಳ ಹೊತ್ತಿನಿಂದ ನಿಮ್ಮ ದೃಷ್ಟಿ ನಮ್ಮ ಮೇಲೆ ಬಿದ್ದೀತೆಂದು ಕಾಯುತ್ತಿದ್ದೇವೆ. ಹಾಗಾದರೆ, ಈ ಹಿಂದೂ ಕಾನೂನು ಮಸೂದೆಯ ಮೇಲೆ ಮಾತಾಡಲು ಇನ್ನು ಯಾವ ಹಿಂದೂ ಸದಸ್ಯರನ್ನು ಬಿಡುವುದಿಲ್ಲ ಎಂಬುದು ನಿಮ್ಮ ತೀರ್ಪಿನ ಅರ್ಥವೆಂದು ನಾನು ತಿಳಿದುಕೊಳ್ಳಲೆ?

**ಮಾನ್ಯ ಉಪಸಭಾಪತಿಗಳು :** ನಾನು ಹಾಗೆ ಹೇಳಲಿಲ್ಲ, ಹೇಳುವುದೂ ಇಲ್ಲ. ಸನ್ಮಾನ್ಯ ಸದಸ್ಯರು ಬಹಳ ಜಾಗರೂಕತೆಯಿಂದ ಇದ್ದರೂ, ದುರದೃಷ್ಟವಶಾತ್ ನನ್ನ ಮಾತನ್ನು ಅಪಾರ್ಥ ಮಾಡಿಕೊಂಡಿದ್ದಾರೆ. ಜೈನ ಅಥವಾ ಸಿಖ್ಖರಿಗೂ ಈ ಮಸೂದೆಯು ಅನ್ವಯವಾಗುತ್ತಿದ್ದರೂ, ಒಬ್ಬರೇ ಒಬ್ಬ ಜೈನ ಅಥವಾ ಸಿಖ್ಖ್ ಸದಸ್ಯರೂ ಇದುವರೆಗೂ ಮಾತಾಡಿಲ್ಲ ಎಂದಷ್ಟೇ ನಾನು ಹೇಳಿದುದು.

**ಶ್ರೀ ಹೆಚ್. ಜೆ. ಖಾಂಡೇಕರ್ :** ಹರಿಜನರ ವಿಚಾರವೇನು?

**ಮಾನ್ಯ ಉಪಸಭಾಪತಿಗಳು :** ಈ ಮಸೂದೆಯನ್ನು ಪ್ರಾಯೋಜಿಸುತ್ತಿರುವವರು ಹರಿಜನರ

ಮುಖಂಡರು. ಹರಿಜನರು ಹಿಂದೂ ಸಮಾಜಕ್ಕೆ ಸೇರಿಲ್ಲ ಎನ್ನುವುದು ಸರಿಯಲ್ಲ. ಉಳಿದವರು ಎಷ್ಟು ಹಿಂದೂಗಳೋ ಹರಿಜನರೂ ಅಷ್ಟೇ ಹಿಂದೂಗಳು. ಈ ಜಾತಿ ಪ್ರಶ್ನೆಯನ್ನು ಮುಂದುವರಿಸುವ ಅಗತ್ಯವಿಲ್ಲ. ಉಳಿದ ಸದಸ್ಯರಿಗಿಂತ ಜೈನ ಮತ್ತು ಸಿಖ್ ಸದಸ್ಯರಿಗೆ ಹೆಚ್ಚಿನ ಆದ್ಯತೆ ಕೊಡಲಾಗುವುದು ಎಂದಷ್ಟೇ ನಾನು ಹೇಳಿದುದು. ಬೇರೆಯವರಿಗೆ ಅವಕಾಶವಿಲ್ಲದಂತೆ ಬಾಗಿಲು ಮುಚ್ಚುವುದು ನನ್ನ ಉದ್ದೇಶವಲ್ಲ.

ಸಂಜೆ ನಾಲ್ಕು ಗಂಟೆಯ ಸಮಯದಲ್ಲಿ :

ನನಗೆ ಈಗ ಕಾಣುತ್ತಿರುವಂತೆ, ಸರ್ಕಾರ ಮಾಡಿರುವ ಸಲಹೆಯು ಸಮಂಜಸವೆನಿಸುತ್ತದೆ. ಸರ್ಕಾರವು ಈಗಾಗಲೇ ಮಸೂದೆಯ ಮೇಲೆ ಚರ್ಚೆ ಮಾಡುತ್ತಾ ಆನೇಕ ದಿನಗಳನ್ನು ಕಳೆದಿದೆ, ಅಲ್ಲದೆ, ಇನ್ನೂ ಒಂದು ದಿವಸದ ಅವಕಾಶವನ್ನು ನಮಗೆ ಕೊಟ್ಟಿದೆ. ಚರ್ಚೆಯನ್ನು ಇನ್ನೂ ಮುಂದುವರಿಸಬೇಕೆಂದು ಸೋಮವಾರವೂ ಸದನವು ಇಚ್ಛಿಸಿದರೆ, ನಾನು ಸದನದ ಇಚ್ಛೆಗೆ ಅಧೀನವಾಗಿರುತ್ತೇನೆ. ಅಧ್ಯಕ್ಷರು ಮಾತ್ರ, ಈಗಾಗಲೇ ಸಾಕಷ್ಟು ಚರ್ಚೆಯಾಗಿದೆಯೆಂದು ಸಮಾಧಾನಪಡುತ್ತಾರೆ.

**ಶ್ರೀ ಮಹಾವೀರ ತ್ಯಾಗಿ :** ನಾನು ಇದನ್ನು ಪ್ರತಿಭಟಿಸುತ್ತೇನೆ. ಅಧ್ಯಕ್ಷರ ಕೃಪಾದೃಷ್ಟಿಯಲ್ಲಿ ವರ್ಗ, ಜಾತಿ ಅಥವಾ ಮತಗಳ ಭೇದವಿರಬಾರದೆಂಬುದು ನನ್ನ ಅನಿಸಿಕೆ. ನಿಮ್ಮ ದೃಷ್ಟಿಯು ಬಹುಸಂಖ್ಯಾತರು, ಅಲ್ಪಸಂಖ್ಯಾತರು ಎಂಬ ಭೇದವಿಲ್ಲದೆ ಸದನದ ತುಂಬ ಹರಿದಾಡಬೇಕು.

**ಮಾನ್ಯ ಉಪಸಭಾಪತಿಗಳು :** ಸನ್ಮಾನ್ಯ ಸದಸ್ಯರು ನನ್ನನ್ನು ಸಂಪೂರ್ಣವಾಗಿ ಅಪಾರ್ಥ ಮಾಡಿಕೊಂಡಿದ್ದಾರೆ. ದುರದೃಷ್ಟವಶಾತ್, ನಮ್ಮ ದೇಶದಲ್ಲಿ ಅನೇಕ ವಿಭಿನ್ನ ಕೋಮುಗಳಿವೆ. ಯಾವುದೇ ಮಸೂದೆಯು ಚರ್ಚೆಗೆ ಬಂದಾಗ, ಅದು ಕೆಲವು ಕೋಮುಗಳಿಗೆ ತಟ್ಟುತ್ತದೆ. ಅಂಥ ವೇಳೆಯಲ್ಲಿ ಎಲ್ಲ ಕೋಮುಗಳ ಪ್ರತಿನಿಧಿಗಳಿಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಅವಕಾಶ ಕೊಡಬೇಕು. ಮಾನ್ಯ ಸದಸ್ಯರು ಈ ಮಸೂದೆಯನ್ನು ಓದಿದರೆ, ಅದರ ಕ್ಷೇತ್ರ ವ್ಯಾಪ್ತಿಯು ಜೈನ ಹಾಗೂ ಸಿಖ್ಖರನ್ನೂ ಒಳಗೊಳ್ಳುತ್ತದೆ ಎಂಬುದು ಅವರಿಗೆ ಕಂಡುಬರುತ್ತದೆ. ಅನೇಕ ಹಿಂದೂಗಳು ಈಗಾಗಲೆ ಮಾತಾಡಿದ್ದಾರೆ. ಆದುದರಿಂದ, ನಾನು ಕೆಲವು ಜೈನರಿಗೂ ಸಿಖ್ಖರಿಗೂ ಮಾತಾಡಲು ಅವಕಾಶ ಕೊಡಬೇಕು. ಮಸೂದೆಯ ಎಲ್ಲ ನಿಯಮ, ಉಪನಿಯಮಗಳನ್ನು ಕೂಲಂಕಷವಾಗಿ ಪರಿಶೀಲಿಸುವ ಮೊದಲು ನಾವು ಅವರ ದೃಷ್ಟಿಕೋನಗಳನ್ನು ತಿಳಿದುಕೊಳ್ಳಬೇಕಾಗುತ್ತದೆ.

**ಶ್ರೀ ಮಹಾವೀರ ತ್ಯಾಗಿ :** ನಾನು ಇದನ್ನು ಪ್ರತಿಭಟಿಸುತ್ತೇನೆ...

**ಮಾನ್ಯ ಉಪಸಭಾಪತಿ :** ನನಗಿದು ಸಹನೆಯಾಗುವುದಿಲ್ಲ. ಈ ತರಹದ ಭಾಷೆಯನ್ನು ಉಪಯೋಗಿಸುವುದು ಸಭ್ಯತನವಲ್ಲ ಎಂಬುದನ್ನು ಮಾನ್ಯ ಸದಸ್ಯರು ದಯವಿಟ್ಟು ಗಣನೆಗೆ ತೆಗೆದುಕೊಳ್ಳಬೇಕು.

***ಪ್ರೊ. ಕೆ.ಟಿ. ಷಹಾ** (ಬಿಹಾರ : ಸಾಮಾನ್ಯ) : ಮಾನ್ಯರೆ, ಮೊಟ್ಟಮೊದಲು ಈ ಮಸೂದೆಯನ್ನು ಮಂಡಿಸಿ, ಅದನ್ನು ಸದನದ ಪರಿಶೀಲನೆಗೆ ತಂದಾಗ ಚರ್ಚೆಯಲ್ಲಿ ಮಧ್ಯೆ ಪ್ರವೇಶಿಸಬೇಕೆಂಬ ದೊಡ್ಡ ಉದ್ದೇಶವೇನೂ ನನಗಿರಲಿಲ್ಲ. ಆದರೆ, ಈಗ ಚರ್ಚೆಯು ಬಹಳ ಮುಂದುವರಿದಿರುವುದರಿಂದ, ಸದನದ ಮುಂದೆ ವೈವಿಧ್ಯಮಯ ಅಭಿಪ್ರಾಯಗಳು ಬಂದಿರುವುದರಿಂದ, ಪಕ್ಷದ ಆಜ್ಞೆಯಿಂದ ಮುಕ್ತರಾಗಿ ಸ್ವತಂತ್ರರಾಗಿ ಮತ ಹಾಕುವ ಅವಕಾಶವಿರುವುದರಿಂದ, ಈ ಪರಿಶೀಲನೆಯಿಂದಲೂ ಮಸೂದೆಯಿಂದಲೂ ಉಂಟಾಗಿರುವ ಸಮಸ್ಯೆಗಳನ್ನು ಕುರಿತು ನಾನು ವಿಮರ್ಶೆ ಮಾಡಬಯಸುತ್ತೇನೆ. ಈ ನನ್ನ ವಿಮರ್ಶೆಯು ಸನ್ಮಾನ್ಯ

---

* C.A. (Leg) D, Voel. VI, pt ii, ೧೪ನೇ ಡಿಸೆಂಬರ್, ೧೯೪೯ ಪುಟ ೬೦೨–೬೦೭

ಕಾನೂನು ಮಂತ್ರಿ ಹಾಗೂ ಅವರ ಸಹೋದ್ಯೋಗಿಗಳ ಗಮನ ಸೆಳೆಯುತ್ತದೆ ಎಂದು ನಾನು ನಂಬುತ್ತೇನೆ.

ಮಾನ್ಯರೆ, ಈ ವಿಷಯದ ಬಗ್ಗೆ ನಾನೊಬ್ಬ ಜೈನನಂತೆ ಮಾತಾಡಲು ನನ್ನನ್ನು ಕರೆಯಲು ತಮಗೆ ಸಂತೋಷವಾಗುತ್ತಿದೆ ಎಂದು ತಾವು ಹೇಳಿದಿರಿ. ಆದರೆ ನಾನಿಲ್ಲಿ ನಿಂತಿರುವುದು ಕೇವಲ ಒಬ್ಬ ಸದನದ ಸದಸ್ಯನಂತೇ; ಯಾವ ಕೋಮಿನ ಸದಸ್ಯನಂತೆಯೂ ಮಾತನಾಡಲು ನನಗೆ ವಿಶೇಷ ಹಕ್ಕಾಗಲಿ ಗೌರವವಾಗಲಿ ಇದೆ ಎಂದು ನಾನು ಹೇಳಿಕೊಳ್ಳಲಾರೆ. ನಾನೊಬ್ಬ ಭಾರತೀಯ ಪ್ರಜೆ ಎಂದುಕೊಳ್ಳುತ್ತೇನೆ; ಯಾವುದೇ ಧರ್ಮದಲ್ಲಿನ ನಂಬಿಕೆಯು ಇಂಥ ಚರ್ಚೆಯಲ್ಲಿ ಭಾಗವಹಿಸುವ ಅರ್ಹತೆಯನ್ನು ಅಥವಾ ಅನರ್ಹತೆಯನ್ನು ನನಗೆ ನೀಡುತ್ತದೆ ಎಂದು ನಾನು ಪರಿಗಣಿಸುವುದಿಲ್ಲ. ನಾನು ಕೇವಲ ಈ ಸದನದ ಸದಸ್ಯನಂತೆ ಮಾತಾಡುತ್ತೇನೆ. ಅಷ್ಟೆ.

**ಶ್ರೀ ರೋಹಿಣಿ ಕುಮಾರ್ ಚೌಧರಿ :** ಮಾನ್ಯರೆ, ಸಭೆಯ ನಿಯಮಾವಳಿಯನ್ನು ನೆನಪಿಸುತ್ತೇನೆ. ತಾವು ಪ್ರೊ. ಷಹಾರವರನ್ನು ಜೈನರ ಪರವಾಗಿ ಮಾತಾಡಲು ಕೇಳಿಕೊಂಡಿರಿ. ಆದರೆ ಅವರು ತಾವು ಜೈನರನ್ನು ಪ್ರತಿನಿಧಿಸುತ್ತಿಲ್ಲವೆಂದು ಹೇಳುತ್ತಿದ್ದಾರೆ.

**ಮಾನ್ಯ ಉಪಸಭಾಪತಿಗಳು :** ಅದೇನೂ ಸಭೆಯ ನಿಯಮಾವಳಿಗೆ ವಿರುದ್ಧವಲ್ಲ.

**ಪ್ರೊ. ಕೆ.ಟಿ. ಷಹಾ :** ಅಷ್ಟೇ ಅಲ್ಲ, ನಾನು ಒಂದು ವಿರೋಧ ಪಕ್ಷವನ್ನು ರಚಿಸಲು ಯತ್ನಿಸಿದ್ದರೂ (ಅದಕ್ಕೆ ಇನ್ನೂ ಮಾನ್ಯತೆ ಸಿಕ್ಕಿಲ್ಲ) ನಾನು ಮಸೂದೆಯ ಹಿಂದಿರುವ ನಿಬಂಧನೆಗಳನ್ನು ಹೆಚ್ಚೂ ಕಡಿಮೆ ಪೂರ್ಣವಾಗಿ ಬೆಂಬಲಿಸುತ್ತೇನೆ. ವಿರೋಧ ಪಕ್ಷದಲ್ಲಿರುವವನೆಂದು ಹೇಳಿಕೊಳ್ಳುವ ಸದಸ್ಯನೊಬ್ಬನಿಂದ ಬಂದ, ಸಂವಿಧಾನದ ಹೆಚ್ಚೂ ಕಡಿಮೆ ಎಲ್ಲ ನಿಬಂಧನೆಗಳನ್ನೂ ಸರ್ಕಾರ ಮಾಡಿರುವ ಎಲ್ಲ ರಚನಾತ್ಮಕ ಅಥವಾ ಸುಧಾರಣಾತ್ಮಕ ಶಾಸನಗಳನ್ನೂ ಒಂದೇ ಸಮನೆ ವಿರೋಧಿಸುತ್ತಾ ಬಂದಿರುವ ಸದಸ್ಯನಿಂದ ಬಂದ ಬೆಂಬಲ ಇದು. ಮಸೂದೆಗೆ ಈಗ ನಾನು ನಿರುಪಾಧಿಕವಾಗಿ ಮತ್ತು ನಿಸ್ಸಂಕೋಚವಾಗಿ ನೀಡುತ್ತಿರುವ ಬೆಂಬಲಕ್ಕೆ, ಅದರ ಯೋಗ್ಯತೆಗನುಗುಣವಾದ, ಮಾನ್ಯತೆ ಸಿಕ್ಕುತ್ತದೆ ಎಂಬ ಭರವಸೆ ಮತ್ತು ವಿಶ್ವಾಸ ನನಗಿದೆ. ದೆವ್ವ ಸಹ ಪವಿತ್ರ ಗ್ರಂಥದ ವಾಕ್ಯಗಳನ್ನು ಉದ್ಧರಿಸಬಲ್ಲದು ಎಂಬ ಪುರಾತನ ವಿವೇಕವಾಣಿಯನ್ನು ಸರ್ಕಾರ ಗಣನೆಗೆ ತೆಗೆದುಕೊಳ್ಳದಿದ್ದರೆ, ನಾನು ಕೊಡುತ್ತಿರುವ ಬೆಂಬಲವನ್ನು ಯಾವುದೇ ರೀತಿಯ ಶಂಕೆಯಿಂದ ನೋಡದಿದ್ದರೆ, ಅದಕ್ಕೆ ನನ್ನ ಸ್ವಾಗತವಿದೆ. ಆದರೆ ಒಂದು ವೇಳೆ ಸರ್ಕಾರಕ್ಕೆ ಅಂಥ ಶಂಕೆಯಿದ್ದರೆ, ಮಸೂದೆಗೆ ನಾನು ಬಯಸುವುದಕ್ಕಿಂತ ಹೆಚ್ಚು ಪರಿಣಾಮಕಾರಿಯಾದ ವಿರೋಧವುಂಟಾಗುತ್ತದೆ.

ಮಾನ್ಯರೆ, ಈ ಅಭಿಪ್ರಾಯವನ್ನುಳ್ಳ ನಾನು, ಈ ರೀತಿಯಾಗಿ ಸಹಕಾರವನ್ನು ತೋರಿಸುತ್ತಾ, ವಿನಯಪೂರ್ವಕವಾಗಿ ಹಾಗೂ ಸದನಕ್ಕೆ ಅತ್ಯಂತ ಹೆಚ್ಚಿನ ಗೌರವವನ್ನು ತೋರಿಸುತ್ತಾ ಹೇಳುವುದೇನೆಂದರೆ, ಈ ಚರ್ಚೆಗೆ ಹಗುರತನವನ್ನು ಸೇರಿಸುವಂತಹ ಯಾವುದೇ ಭಾಷೆ ಅಥವಾ ಉದಾಹರಣೆಯನ್ನು ನಾನು ಬಳಸುವುದಿಲ್ಲ. ನಮಗೆ ಹಾಸ್ಯಪ್ರಜ್ಞೆಯೇ ಇಲ್ಲ ಎಂಬ ಆಪಾದನೆಗೆ ಗುರಿಯಾಗುವ ಅಪಾಯವಿದ್ದರೂ ನಾನಿದನ್ನು ಹೇಳುತ್ತಿದ್ದೇನೆ. ನಮ್ಮ ದೇಶದ ಅಸ್ತಿತ್ವಕ್ಕೆ ಈ ವಿಷಯ ಎಷ್ಟು ಪ್ರಾಣ ಸದೃಶವಾಗಿದೆಯೆಂದು ನಾನು ಪರಿಗಣಿಸುತ್ತಿದ್ದೇನೆಂದರೆ, ಈ ಮಸೂದೆಗೆ ಎಷ್ಟೊಂದು ದೂರಗಾಮಿ ಪರಿಣಾಮವಿದೆ ಎಂದು ನಾನು ಪರಿಗಣಿಸುತ್ತಿದ್ದೇನೆಂದರೆ, ಯಾವ ಪ್ರೇಕ್ಷಕನಿಗೆ ಆಗಲಿ, ಯಾವ ಹೊರಗಡೆಯವನಿಗೇ ಆಗಲಿ, ಈ ವ್ಯವಹಾರಗಳನ್ನು ಅಭ್ಯಸಿಸುತ್ತಿರುವ ಯಾರಿಗೇ ಆಗಲಿ, ನಾವು ಈ ವಿಷಯದಲ್ಲಿ ಗಂಭೀರವಾಗಿಲ್ಲ, ಎಂಬ ತೋರಿಕೆಯನ್ನುಂಟು ಮಾಡುವ ಯಾವ ಮಾತನ್ನಾಗಲಿ, ಉದಾಹರಣೆಯನ್ನಾಗಲಿ ನನ್ನ ಈ ಟೀಕೆಯೊಳಗೆ ನುಸುಳದಂತೆ ನೋಡಿಕೊಳ್ಳುತ್ತೇನೆ.

ಈ ಪರಿಶೀಲನೆಯ ನಂತರ, ನಾನು ಈ ವಿಷಯಕ್ಕೆ ಸಂಬಂಧಿಸಿದಂತೆ, ಅಥವಾ ಮಸೂದೆಯ ಮೂಲ ತತ್ತ್ವಕ್ಕೆ ಸಂಬಂಧಿಸಿದಂತೆ ಕೆಲವರು ಮಾಡಿರುವ ಆಕ್ಷೇಪಗಳನ್ನೂ ವಾದಗಳನ್ನೂ ಪರೀಕ್ಷೆ ಮಾಡಲು ತೊಡಗುತ್ತೇನೆ. ಮಾನ್ಯರೆ, ಇಂಥ ಗಹನವಾದ ವಿಷಯದೊಡನೆ ವ್ಯವಹರಿಸಲು ಈ ಸದನವು ಸಮರ್ಥವಾಗಿದೆಯೆ, ಮಸೂದೆಯ ವಿಷಯವನ್ನು ನಿರ್ಧರಿಸಬೇಕೆಂಬ ಸ್ಪಷ್ಟ ಆಣತಿಯ ಮೇಲೆ ಸದನವು ಚುನಾಯಿತವಾಗಿದೆಯೆ, ಈ ವಿಷಯವನ್ನು ಸದನವು ನಿರ್ಧರಿಸಬೇಕಾದ ತುರ್ತು ಪರಿಸ್ಥಿತಿ ಉಂಟಾಗಿದೆಯೆ, ಎಂದು ಕೆಲವರು ಪ್ರಶ್ನಿಸಿದ್ದಾರೆ. ಇಂಥ ವಿಚಾರಗಳನ್ನು ಚರ್ಚಿಸುವ ಸಾಮರ್ಥ್ಯ ಈ ಸದನಕ್ಕಿದೆಯೆ ಎಂಬ ಪ್ರಶ್ನೆ ಏಳಬಹುದು ಅಥವಾ ಏಳಬೇಕು ಎಂದು ನನಗಂತೂ ಅನಿಸುವುದಿಲ್ಲ. ನನಗಿಂತ ಒಂದು ನಿಮಿಷದ ಹಿಂದೆ ಮಾತಾಡಿದ ಮಾನ್ಯ ಸದಸ್ಯರು ಅನೇಕ ನಿದರ್ಶನಗಳನ್ನು ಕೊಟ್ಟು, ಹೇಗೆ ಈ ಸದನದಲ್ಲಿ ಅನೇಕ ರಚನಾತ್ಮಕ (ಸಂವಿಧಾನವೂ ಸೇರಿದಂತೆ) ಬದಲಾವಣೆಗಳನ್ನು ಶಾಸನಗಳ ಮೂಲಕ ಸೂಚಿಸಲಾಯಿತು ಹಾಗೂ ಅಂಗೀಕರಿಸಲಾಯಿತು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಇನ್ನೂ ಹೆಚ್ಚು ಪ್ರಾಮುಖ್ಯವುಳ್ಳ ಸುಧಾರಣೆಗಳನ್ನು ಇದಕ್ಕೂ ಮೊದಲಿನ ವಿಧಾನ ಸಭೆಯಲ್ಲಿ ಮಾಡಲಾಗಿತ್ತು. ಆದರೆ ಆ ಶಾಸನ ಸಭೆಗೆ ಈ ಶಾಸನ ಸಭೆಗಿರುವ ಸಾರ್ವಭೌಮತ್ವವಿರಲಿಲ್ಲ. ಆದುದರಿಂದ, ಇಂಥ ವಿಷಯಗಳನ್ನು ನಿರ್ಧರಿಸುವ ಸಾಮರ್ಥ್ಯ ಈ ಸದನಕ್ಕೆ ಇದೆಯೆ ಎಂಬ ಪ್ರಶ್ನೆ ನನಗೆ ಅಪ್ರಸ್ತುತವೆನಿಸುತ್ತದೆ, ಅಸಭ್ಯ ಎನಿಸುತ್ತದೆ; ವಿಧಾನಸಭೆಗೆ ತೋರಿಸುವ ಅಗೌರವ ಎನ್ನಲೂಬಹುದು.

ಸಂಜೆ ನಾಲ್ಕು ಗಂಟೆ.

ಏಕೆಂದರೆ, ಈ ಒಂದು ವಿಶಿಷ್ಟ ವಿಷಯವನ್ನು ನಾವು ಮತದಾರರ ಮುಂದಿಡಲಿಲ್ಲ ಎಂಬ ಮಾತೇನೋ ಅಪ್ಪಟ ಸತ್ಯವಾಗಿದ್ದರೂ, ದೇಶಕ್ಕೆ ಸ್ವಾತಂತ್ರ್ಯ ತಂದುಕೊಡಬೇಕು, ಮತ್ತು ದೇಶಕ್ಕೊಂದು ಸಂವಿಧಾನ ರೂಪಿಸಬೇಕು ಎಂಬ ಎರಡು ವಿಷಯಗಳನ್ನು ಬಿಟ್ಟರೆ, ಮತ್ತಾವ ವಿಷಯದ ಆಧಾರದ ಮೇಲೂ ನಾವು ಈ ಸದನಕ್ಕೆ ಆರಿಸಿ ಬಂದಿಲ್ಲ ಎಂಬ ಮಾತು ನಾವು ಯಾವ ರೀತಿ ಮತ್ತು ವಿಧಾನಗಳ ಮೂಲಕ ಆರಿಸಿ ಬಂದಿದ್ದೇವೆಂಬುದನ್ನು ಜ್ಞಾಪಿಸಿಕೊಳ್ಳುವವರಿಗೆ ಮನವರಿಕೆಯಾದೀತು. ಇದೇ ವಾದವನ್ನು ಮುಂದುವರಿಸಿದರೆ, ಸದನವು ಈಗಾಗಲೇ ನಿರ್ಧರಿಸಿರುವ ಅನೇಕ ವಿಷಯಗಳು ಅಕ್ರಮವೆಂದೋ, ಅಧಿಕಾರಕ್ಕೆ ಮೀರಿದವೆಂದೋ ಪರಿಗಣಿಸಬೇಕಾದೀತೆಂಬ ಭಯ ನನಗಿದೆ. ಆದುದರಿಂದ ಇಂಥ ವಿಷಯಗಳೊಡನೆ ವ್ಯವಹರಿಸಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ಸದನಕ್ಕೆ ಇರುವ ಸಾಮರ್ಥ್ಯ, ಅಧಿಕಾರ ಮತ್ತು ಯುಕ್ತತೆಗಳನ್ನು ಸಂದೇಹಿಸುವಂಥ ಸೂಚನೆಗಳನ್ನು ನಾವು ಕೊಡಬಹುದು ಅಥವಾ ಕೊಡಬೇಕು ಎಂಬ ವಾದ ನನಗಿಷ್ಟವಾಗುವುದಿಲ್ಲ.

ಮಾನ್ಯರೆ, ಸಾಮಾನ್ಯ ಚುನಾವಣೆಯ ಸಮಯದಲ್ಲಿ ಪ್ರತಿಯೊಂದು ವಿಷಯವನ್ನೂ ಪ್ರತ್ಯೇಕವಾಗಿ ಪರಿಶೀಲಿಸಲು ಸಾಧ್ಯವಾಗುವುದಿಲ್ಲ. ಅನೇಕ ವಿವಾದಾತ್ಮಕ ವಿಷಯಗಳ ಆಧಾರದ ಮೇಲೆ ನಾವು ಸಾಮಾನ್ಯ ಚುನಾವಣೆಯಲ್ಲಿ ಹೋರಾಡುತ್ತೇವೆ ಎಂಬುದು ಸಾಮಾನ್ಯ ಚುನಾವಣೆಯ ಅನುಭವ ಇರುವ ಎಲ್ಲರಿಗೂ ಮನವರಿಕೆಯಾಗಿದೆ. ಆದುದರಿಂದ, ನಾವೀಗ ಪರಿಶೀಲಿಸುತ್ತಿರುವ ವಿಷಯದಂಥ ಯಾವೊಂದು ಜಟಿಲ ವಿಷಯವಾಗಿಯೂ ಸ್ಪಷ್ಟ ಬಹುಮತವಿಲ್ಲ. ಸಂವಿಧಾನ ಮಾತ್ರ ಅನುಮತಿ ಕೊಡಬಲ್ಲ ಜನಮತ ಸಂಗ್ರಹಣೆ (Referendum) ಯಂಥ ವಿಧಾನವಿಲ್ಲದಿದ್ದರೆ, ಶ್ರೀ ಗೋಕುಲ್‌ಭಾಯ್ ಭಟ್ ಸೂಚಿಸಿದಂಥ ಸಂವಿಧಾನಾತ್ಮಕ ವಿಧಾನವಿಲ್ಲದಿದ್ದರೆ, ಈಗ ಪರಿಶೀಲಿಸುತ್ತಿರುವಂಥ ವಿಷಯದ ಮೇಲೆ ಜನರ ಸ್ಪಷ್ಟ ತೀರ್ಪನ್ನು ಪಡೆಯುವುದು,

ಅಸಾಧ್ಯವಲ್ಲದಿದ್ದರೂ, ವಿಪರೀತ ಕಷ್ಟ. ನಿಜವಾಗಿಯೂ ಜನಾಭಿಪ್ರಾಯವನ್ನು ಖಚಿತಪಡಿಸಿಕೊಳ್ಳಲು ಅನುವು ಮಾಡಿಕೊಡುವ ಯಾವ ಸಾಧನ-ಸಲಕರಣೆಯೂ ನಮ್ಮಲ್ಲಿಲ್ಲ. ಈ ದೇಶದಲ್ಲಿ ಸಾರ್ವಜನಿಕ ಶಿಕ್ಷಣ ಸ್ಥಿತಿಯನ್ನು ಗಮನಿಸಿದರೆ, ಪತ್ರಿಕೋದ್ಯಮವು ಕೇವಲ ಕೆಲವೇ ವ್ಯಕ್ತಿಗಳ ಏಕಸ್ವಾಮ್ಯಕ್ಕೊಳಪಟ್ಟಿರುವುದನ್ನು ಗಮನಿಸಿದರೆ, ಇಂಥ ವಿಷಯಗಳ ಬಗೆಗೆ ಮತದಾರನಿಗೆ ಇರುವ ಅನುಭವದ ಕೊರತೆಯನ್ನು ಗಮನಿಸಿದರೆ, ಜನರ ತೀರ್ಪು ಸಮರ್ಥವಿದ್ದರೂ ಪ್ರಶ್ನಾರ್ಹವಾಗಿರುತ್ತದೆ ಎನ್ನುವವರು ಆಗಲೂ ಇರುತ್ತಾರೆ; ಆದುದರಿಂದ, ಈ ತರಹದ ವಾದವು ಸದನದ ತೀರ್ಪಿನ ಮೇಲೆ ಯಾವ ಪ್ರಭಾವವನ್ನೂ ಬೀರಬಾರದು ಎಂಬುದು ನನ್ನ ಸಲಹೆ.

ನಾವು ಸೂಚನೆಯ ಚರ್ಚೆಯನ್ನು ಮಾತ್ರ ಗಮನಿಸೋಣ. ಅನೇಕ ಕಡೆ ಇದರ ಚರ್ಚೆ ನಡೆದಿರುವುದು ಸಂತೋಷದ ಸಂಗತಿ.

ಮಸೂದೆಗೆ ವಿರೋಧವನ್ನು ವ್ಯಕ್ತಪಡಿಸುತ್ತಿರುವವರ ಅಭಿಪ್ರಾಯಕ್ಕೆ ನನ್ನ ವೈಯಕ್ತಿಕ ಗೌರವ ಸಲ್ಲಿಸುತ್ತೇನೆ. ಆದುದರಿಂದ ಈ ವಿರೋಧವು ಪಟ್ಟಭದ್ರ ಹಿತಾಸಕ್ತರ ವಿರೋಧವೆಂದಾಗಲಿ, ಇದು ದುರುದ್ದೇಶದಿಂದ ಪ್ರೇರಿತವಾದ ವಿರೋಧವೆಂದಾಗಲಿ, ಅಥವಾ ಬೇರೆ ವಿಚಾರಗಳಿಂದ ಪ್ರೇರಿತವಾದ ವಿರೋಧವೆಂದಾಗಲಿ ಹೇಳಲು ನಾನು ಸಿದ್ಧವಿಲ್ಲ. ಮಾನ್ಯರೆ, ವಿರೋಧ ಪಕ್ಷದವರು ವ್ಯಕ್ತಪಡಿಸಿರುವವ ವಿರೋಧಕ್ಕೆ ಸಾಕಷ್ಟು ಗಂಭೀರವಾದ ಆಧಾರಗಳಿವೆ ಎಂಬುದು ನನಗೆ ಪೂರ್ಣ ಮನವರಿಕೆಯಾಗಿದೆ; ಹಾಗೂ ದುರದೃಷ್ಟವಶದಿಂದ, ಅವರ ಅಭಿಪ್ರಾಯಕ್ಕಿಂತ ನನ್ನ ಅಭಿಪ್ರಾಯ ಭಿನ್ನವಾಗಿದ್ದರೂ, ಅದೊಂದೇ ಆಧಾರದ ಮೇಲೆ ಅವರ ಅಭಿಪ್ರಾಯಗಳಿಗೆ ವಿಶಾಲ ಪರಿಗಣನೆ ಕೊಡಲಾಗುವುದಿಲ್ಲ ಎಂದು ನಾನು ಹೇಳಲಾರೆ. ಈ ನಿಲುವಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಈ ವಿಷಯದಲ್ಲಿ ಇಷ್ಟೊಂದು ತರಾತುರಿಯೇಕೆ ಎಂದು ಪ್ರಶ್ನಿಸುವವರ ವಾದದಲ್ಲಿ ಸಾಕಷ್ಟು ಶಕ್ತಿಯಿದೆ, ಎನ್ನಬಹುದು. ಅವರು ಚರ್ಚೆಯನ್ನು ಮುಂದಕ್ಕೆ ಹಾಕಬೇಕೆಂದು ಕೇಳದಿದ್ದರೂ, ಅದಕ್ಕೆ ಸಿಗಬಹುದಾದುದಕ್ಕಿಂತ ಹೆಚ್ಚಿನ ಸಮಯವನ್ನು ಕೇಳಲು ಅವರು ಸಿದ್ಧರಿದ್ದಾರೆ. ಆದರೆ ನಾನು ಈ ರೀತಿ ಹೇಳುತ್ತಿರುವುದಕ್ಕೆ **"ಈ ವಿಷಯವನ್ನು ಅನಿರ್ದಿಷ್ಟ ಕಾಲ ಮುಂದೂಡಬೇಕೆಂದು ಇವನು ಹೇಳುತ್ತಿದ್ದಾನೆ"** ಎಂಬ ತಪ್ಪು ಅರ್ಥ ಕಲ್ಪಿಸಬಾರದು. ನಾನು ಈ ಸದನದ ಸಾರ್ವಭೌಮತ್ವವನ್ನು ಪ್ರಶ್ನಿಸುವುದಿಲ್ಲ. ಆದರೆ, ಅದು ಈ ವಿಷಯದ ಮೇಲೆ ಒಂದು ಅಂತಿಮ ತೀರ್ಪು ಕೊಡಬೇಕು. 'ನಾವು ಅಂತಿಮ ತೀರ್ಪನ್ನು ಈಗ ಕೊಟ್ಟರೂ ಮುಂದೆ ರಚಿತವಾದ ಸದನವು ಅದನ್ನು ಒಪ್ಪಿಕೊಳ್ಳುತ್ತದೆ ಎಂಬ ಭರವಸೆ ಇಲ್ಲ' ಎಂಬ ವಾದವನ್ನು ಭಾಷಣಕಾರರು ಮಂಡಿಸಿದರು. ಈ ವಾದವನ್ನು ನಾನು ಪೂರ್ಣವಾಗಿ ಒಪ್ಪಿಕೊಂಡರೂ, ಒಂದು ಸಾರಿ ಆ ಇಂಗಿತವನ್ನು ವ್ಯಕ್ತಪಡಿಸಿಯಾದ ಮೇಲೆ, ಒಂದು ಸಾರಿ ಕೈ ಮರವನ್ನು ನಿಲ್ಲಿಸಿಯಾದ ಮೇಲೆ, ಒಂದು ಸೇರು ರಸ್ತೆಯನ್ನು ನಿರ್ಮಿಸಿಯಾದ ಮೇಲೆ, ಎಂಜಿನ್ನನ್ನು ಹಿಂತಿರುಗಿಸುವುದು ಕಷ್ಟವಾಗುತ್ತದೆ. ಆದರೆ ಇದು ವಿಶ್ವಾಸದ ಮಾತೇ ಹೊರತು, ವೈಚಾರಿಕ ಮಾತಲ್ಲ, ಸಾಮಾನ್ಯ ನಂಬಿಕೆಯ ಮಾತೇ ಹೊರತು, ಬೌದ್ಧಿಕವಾಗಿ ದೃಢೀಕೃತವಾದ ಮಾತಲ್ಲ. ಆದುದರಿಂದ, ಈ ವಿಷಯದ ಕುರಿತು ಚರ್ಚೆಗೆ ಇನ್ನೂ ಮುಕ್ತವಾಗಿದ್ದೇನೆ. ಆದರೆ ಮಸೂದೆಯಲ್ಲಿ ನಮೂದಿಸಿರುವ ನಿಬಂಧನೆಗಳ ವಿರುದ್ಧವಾಗಿ ಶಕ್ತಿಯುತವಾಗಿ ಮಂಡಿಸಲಾಗಿರುವ ಮುಖ್ಯ ಅಂಶಗಳನ್ನು ಗಮನಿಸಿದಾಗ, ಮತ್ತು ಮಸೂದೆಯ ಹಲವಾರು ಉಪವಿಭಾಗಗಳನ್ನು, ಹಲವಾರು ಅಧ್ಯಾಯಗಳನ್ನು, ಹಲವಾರು ನಿಬಂಧನೆಗಳನ್ನು ವಿರೋಧಿಸಿದವರಿಗೆ ಬೆಂಬಲ ಕೊಡುವುದು ನನಗೆ ಅಸಾಧ್ಯವೆನಿಸುತ್ತದೆ. ನನಗೆ ತೋರುವಂತೆ, ಮುಖ್ಯ ದೋಷವಿರುವುದು ಸ್ತ್ರೀಯರ ಸ್ಥಾನಮಾನಗಳಿಗೆ ಸಂಬಂಧಿಸಿದ ಚರ್ಚೆಯಲ್ಲಿ. ಮಾನ್ಯರೆ, ನಾನಾಗಲೆ ಹೇಳಿರುವುದೇನೆಂದರೆ,

'ಈ ಚರ್ಚೆಯಲ್ಲಿ, ಹಗುರತನವನ್ನು ಸೇರಿಸುವುದು ನನಗೆ ಕೊಂಚವೂ ಇಷ್ಟವಿಲ್ಲ. ಆದುದರಿಂದ ಈ ಚರ್ಚೆಯಲ್ಲಿ ಮಂಡಿಸಲಾಗಿರುವ ಕೆಲವು ವಾದಗಳು, ಈ ಮುಂಚೆ ಭಾಷಣಕಾರರು ತಲುಪಿರುವ ನಿರ್ಣಯಗಳು, ನನ್ನನ್ನು ಸ್ವಲ್ಪ ನಿರುತ್ಸಾಹಿಯನ್ನಾಗಿ ಮಾಡುತ್ತವೆ. ಜನರು ಯಾವುದೇ ಧರ್ಮ, ಲಿಂಗ, ವರ್ಗ ಅಥವಾ ಜಾತಿಗಳಿಗೆ ಸೇರಿದ್ದರೂ, ಅದನ್ನು ನಿರ್ಲಕ್ಷಿಸಿ, ನಾವು ಸಮಾನ ಪ್ರಜೆಗಳಿರುವ ರಾಷ್ಟ್ರವನ್ನು ಕಟ್ಟಲು ಹೊರಟಿದ್ದೇವೆ. ನಾವು ತಳೆದಿರುವ ನಿಲುವಿಗೆ ಇದೇ ತತ್ತ್ವ ತಳಹದಿಯಾಗಿದ್ದರೆ, ನಮ್ಮ ಸಂವಿಧಾನಕ್ಕೆ ಇದೇ ಮುನ್ನುಡಿಯಾಗಿದ್ದರೆ, ಹಾಗೂ ಈ ದೇಶದ ಮುಂದಿನ ಜನತೆಗೆ ಈ ತತ್ತ್ವವೇ ಮಾರ್ಗದರ್ಶಿಯಾಗಿದ್ದರೆ, ಆಗ, ಮಸೂದೆಯ ನಿಬಂಧನೆಗಳು ಸಂವಿಧಾನದ ಮುನ್ನುಡಿಯಲ್ಲಿ ಉಕ್ತವಾಗಿರುವ ಆದರ್ಶಗಳಿಗೆ ಪೂರ್ಣವಾಗಿ ಹೊಂದಿಕೊಳ್ಳುತ್ತವೆ. ಅವು ಹೀಗೆ ಹೊಂದಿಕೊಂಡಿರುವುದರಿಂದ, ಅವುಗಳಿಗಿಂತ ಭಿನ್ನವಾದ ಅಥವಾ ಅವು ತುಚ್ಛವೆಂದು ತೋರುವಂತೆ ಮಾಡುವ ಏನನ್ನೇ ನಾವು ಸೂಚಿಸಿದರೂ, ಅಂಥ ಸೂಚನೆಗಳನ್ನು ನಾವು ಒಪ್ಪಿಕೊಳ್ಳಬಾರದು. ಈ ಮಸೂದೆಯಲ್ಲಿ ಕೌಟುಂಬಿಕ ಸಂಬಂಧಗಳಿಗೆ ಸಂಬಂಧಿಸಿದಂತೆ, ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ, ಆಸ್ತಿಗೆ ಸಂಬಂಧಿಸಿದಂತೆ, ವಿವಾಹ ಅಥವಾ ವಿಚ್ಛೇದನಕ್ಕೆ ಸಂಬಂಧಿಸಿದಂತೆ ಸ್ತ್ರೀಯರಿಗೆ ಸಮಾನ ಸ್ಥಾನ ನೀಡಲು ಮಾಡಿರುವ ಪ್ರಯತ್ನಕ್ಕೆ, ಜಗತ್ತಿನಲ್ಲಿ ಎಲ್ಲೆಡೆಯಲ್ಲೂ ಪ್ರಚಲಿತವಿರುವ ಹಾಗೂ ನಮ್ಮ ಸಮಾಜದಲ್ಲೂ ಚಾಲ್ತಿಗೆ ಬರುತ್ತಿರುವ ನಿಬಂಧನೆಗಳೊಡನೆ ಸಾಂಗತ್ಯವಿದೆ; ಅಲ್ಲದೆ, ಆ ಪ್ರಯತ್ನಕ್ಕೆ ವಾಸ್ತವಾಂಶಗಳ ಪೂರ್ಣ ಮನವರಿಕೆಯಿಂದಾಗಿ ರೂಪಿಸಿದ ನಿಬಂಧನೆಗಳೊಡನೆಯೂ, ಎಲ್ಲ ಕಡೆಗಳಲ್ಲೂ ಇರುವ ವಿದ್ಯಮಾನಗಳನ್ನು ನೋಡಿ ರೂಪಿಸಿದ ನಿಬಂಧನೆಗಳೊಡನೆಯೂ ಸಾಂಗತ್ಯವಿದೆ. ಪೂರ್ವಕಾಲದಿಂದಲೂ ವಿವಾಹವು ಒಂದು ಧಾರ್ಮಿಕ ಸಂಸ್ಕಾರ ಎಂದು ಪರಿಗಣಿಸಿರುವುದು ಸತ್ಯವೇನೋ ಹೌದು. ಆದರೆ ಈಗಲೂ ಅದೊಂದು ಧಾರ್ಮಿಕ ಸಂಸ್ಕಾರವೆಂದು ಮನದಟ್ಟು ಮಾಡಿಕೊಳ್ಳುವುದನ್ನು ಪರಿಗಣಿಸುವುದನ್ನೂ ಈ ಮಸೂದೆಯ ಯಾವ ಅಂಶವೂ ಯಾರನ್ನೂ ತಡೆಹಿಡಿಯುವುದಿಲ್ಲ. ಮೇಲಾಗಿ, ಧಾರ್ಮಿಕ ಸಂಸ್ಕಾರ ನಿಮ್ಮ ಹೃದಯಕ್ಕೆ ಸಂಬಂಧಿಸಿದುದು ಅಥವಾ ನಿಮ್ಮ ಬುದ್ಧಿಯ ಸೃಷ್ಟಿಯೇ ಹೊರತು, ನಿಮ್ಮ ಮೇಲೆ ಯಾರೂ ಹೇರಿದುದಲ್ಲ, ಎಂದು ಧೈರ್ಯವಾಗಿ ಹೇಳಬಲ್ಲೆ. ನಾವು ಎಷ್ಟೊಂದು ಧಾರ್ಮಿಕ ಸಂಸ್ಕಾರಗಳನ್ನು–ಅವು ಧಾರ್ಮಿಕ ಸಂಸ್ಕಾರವೆಂದು ಗೊತ್ತಿದ್ದರೂ– ದಿನ ನಿತ್ಯ ಮುರಿಯುತ್ತೇವೆ? ಅದೂ ಅತ್ಯಂತ ಕೆಟ್ಟ ರೀತಿಯಲ್ಲಿ ಮತ್ತು ನಾಚಿಕೆಗೇಡುತನದಿಂದ? ಅವುಗಳನ್ನು ಮುರಿಯುವರೆಷ್ಟೊಂದು ಜನರಿದ್ದಾರೆ, ಅದರಲ್ಲಿ ಭಾಗವಹಿಸುವವರೆಷ್ಟು ಜನರಿದ್ದಾರೆ? ಈ ಮಸೂದೆಯು ಗಂಡ ಹೆಂಡತಿಯರ ಸಂಬಂಧಕ್ಕೆ ಒಂದು ಹೊಸ ಪಾತ್ರವನ್ನು ಕೊಡಲು ಪ್ರಯತ್ನಿಸುತ್ತಿದೆ. ಆದರೆ ಅಷ್ಟು ಮಾತ್ರಕ್ಕೆ ಧಾರ್ಮಿಕ ಸಂಸ್ಕಾರ ಬದಲಾಗುವುದಿಲ್ಲ. ಕಾನೂನು ಒಂದು ಮದುವೆಯು ಶಾಸನಿಕ ವಿವಾಹವೆಂದೋ, ಶಾಸನಿಕ ಒಪ್ಪಂದವೆಂದೋ ತೀರ್ಮಾನಿಸಿ ಅದಕ್ಕೆ ಮಾನ್ಯತೆ ನೀಡಬಹುದು ಅಥವಾ ನೀಡದಿರಬಹುದು. ಆದರೆ ತಮ್ಮ ವಿವಾಹದ ಸ್ವರೂಪ, ಕರ್ತವ್ಯ ಮತ್ತು ಉದ್ದೇಶಗಳ ಬಗೆಗೆ ಉದಾತ್ತ ಆದರ್ಶಗಳನ್ನು ಹೊಂದಿ ಮದುವೆಯಾದವರು ಗಂಡ ಹೆಂಡಿರಾಗೇ ಮುಂದುವರಿಯುತ್ತಾರೆ. ಆದರೆ ಇಂಥ ಸಂಬಂಧವನ್ನು ಮುಂದುವರಿಸಲು ಅಸಾಧ್ಯವಾಗುವಂಥ ಪರಿಸ್ಥಿತಿಗಳು ಉಂಟಾದರೆ ಆ ಉದಾತ್ತ ಆದರ್ಶಗಳನ್ನು ಕಾಯ್ದುಕೊಳ್ಳಲು ಅಸಾಧ್ಯವಾಗುವಂಥ ಪರಿಸ್ಥಿತಿಗಳು ಉಂಟಾದರೆ, ಗಂಡ ಹೆಂಡಿರು ಪರಸ್ಪರರ ಬಗೆಗೆ ಪೂರ್ವಾಗ್ರಹ ಇಟ್ಟುಕೊಂಡು, ಸತತ ಹಿಂಸೆಗೊಳಗಾಗಿ ಅಥವಾ ಮಕ್ಕಳನ್ನು ಹಿಂಸೆಗೊಳಗಾಗುವಂತೆ ಮಾಡಿ ಮುಂದುವರಿಯುವುದಕ್ಕಿಂತ, ಯಾವುದಾದರೂ ಕಾನೂನಿನ ಅಡಿಯಲ್ಲಿ ಅಥವಾ ಪ್ರಚಲಿತವಿರುವ ಮತ್ತಾವುದಾದರೂ ಔಚಿತ್ಯಪೂರ್ಣ ರೀತಿಯಲ್ಲಿ ಈ ಸಂಬಂಧವನ್ನು ಮುರಿಯುವುದು ಬಹಳ ಉತ್ತಮ.

ಇದು ಮಾತ್ರ ನನ್ನ ಅಭಿಪ್ರಾಯ. ಮಾನ್ಯರೆ, ವಿವಾಹವು ಒಂದು ಆದರ್ಶವೆಂಬಂತೆ ಮಾಡಲ್ಪಟ್ಟಿದ್ದರೆ, ಯಾವ ಅರ್ಥದಲ್ಲಿ ಅದನ್ನು ಮಾಡಲಾಯಿತೋ, ಆ ಅರ್ಥದಲ್ಲಿ ಅವು ಜರುಗಿದ್ದರೆ, ಆಗ ವಿಚ್ಛೇದನ ಪಡೆಯಲು ಸ್ವಾತಂತ್ರ್ಯವಿರಬೇಕೆಂದು ಹೇಳುವುದು ಬಹಳ ಸಂತಸದ ಮಾತೇನಲ್ಲ. ಆದರೆ ನಾವು ಬದುಕಿರುವುದು ಲೌಕಿಕ ಪ್ರಪಂಚದಲ್ಲಿ; ನಮಗೆ ಐಹಿಕ ಆಸೆಗಳಿವೆ, ನಮಗೆ ಮಾನವ ಸಹಜವಾದ ದೌರ್ಬಲ್ಯಗಳಿವೆ; ಆದುದರಿಂದ, ಯಾವ ಆದರ್ಶಗಳ ಆಧಾರದ ಮೇಲೆ ವಿವಾಹಗಳನ್ನು ನಂಬಿ, ಕಲ್ಪಿಸಿಕೊಂಡು, ಮುಂದುವರಿಸಿಕೊಂಡು ಹೋಗಬೇಕೆಂದು ಊಹಿಸಿಕೊಳ್ಳಲಾಗಿತ್ತೋ, ಆ ಅರ್ಥದಲ್ಲೇ ಅವನ್ನು ಶಾಸನಗಳ ಮೂಲಕ ಮುಂದುವರಿಸಿಕೊಂಡು ಹೋಗಬೇಕೆಂದು ಅಪೇಕ್ಷಿಸುವುದು ಸ್ವಲ್ಪ ಅತಿ ಎನಿಸುತ್ತದೆ.

ಆದುದರಿಂದ ಹಿಂಸೆಯನ್ನುಂಟು ಮಾಡುವ, ಗಂಡ ಹೆಂಡಿರ ಮತ್ತು ಅವರ ಮಕ್ಕಳ ಪಾಲಿಗೆ ದುಃಖದ ಸೆಲೆಯಾಗಿರುವ ವಿವಾಹಗಳನ್ನು ಕಾನೂನಿಗೆ ಅನುಗುಣವಾಗಿ ಔಚಿತ್ಯಪೂರ್ಣ ರೀತಿಯಲ್ಲಿ ಸಾರ್ವಜನಿಕರೆದುರು ರದ್ದುಗೊಳಿಸಲು ಅನುಮತಿ ನೀಡಬೇಕು. ಇಲ್ಲಿ ಅನುಮತಿಯೆಂದರೆ, ನನ್ನ ಪ್ರಕಾರ, ಪ್ರಸ್ತುತ ಜಾರಿಯಲ್ಲಿರುವ ಪರಿಸ್ಥಿತಿಯನ್ನೂ, ಅದರಿಂದ ಉಂಟಾಗಿರಬಹುದಾದ ಒಂದು ಬೆಳವಣಿಗೆಯನ್ನೂ ಅರಿತುಕೊಳ್ಳುವುದು. ಆದುದರಿಂದ, ಇದು ನಮಗೆ ಇಷ್ಟವಿಲ್ಲದಿರಬಹುದು; ಆದರೂ ನಾವು ಸತ್ಯವನ್ನು ಒಪ್ಪಿಕೊಳ್ಳಲೇಬೇಕು; ವಾಸ್ತವ ಸ್ಥಿತಿಯನ್ನು ಎದುರಿಸಲು ಮತ್ತು ಗಂಡ ಹೆಂಡಿರಿಗೆ ಆಗುವ ಹಿಂಸೆಯನ್ನು ಮುಂದುವರಿಸುವುದಕ್ಕಿಂತ, ಅಂಥ ವಿವಾಹಗಳನ್ನು ಮುರಿಯುವುದು ಅಥವಾ ರದ್ದುಗೊಳಿಸುವುದು ಬಹಳ ಉತ್ತಮ ಎಂಬುದನ್ನು ನಾವು ಒಪ್ಪಿಕೊಳ್ಳಬೇಕು.

ವಿವಾಹಗಳು ಎಲ್ಲಿಯವರೆಗೆ ಮುಂದುವರಿಯುತ್ತದೆಯೋ ಅಲ್ಲಿಯವರೆಗೂ ಅವಕ್ಕೆ ಏಕಪತ್ನೀತ್ವದ ಸ್ವರೂಪವಿರಬೇಕೆಂಬ ವಿಚಾರವು, ನನ್ನ ದೃಷ್ಟಿಯಲ್ಲಿ, ಆ ವಿವಾಹಗಳ ಸತತ ಸುಖಕ್ಕೆ, ಸತತ ಯಶಸ್ಸಿಗೆ ಮೂಲಭೂತ ಕಾರಣವಾಗುತ್ತದೆ. ಆದರೆ ಕೆಲವು ವಿವಾಹಗಳನ್ನು ತಡೆದುಕೊಳ್ಳಲಾಗದಂಥ, ಸಹಿಸಲಾಗದಂಥ ಸಂದರ್ಭಗಳು ಬರಬಹುದು. ಅಂಥ ಸಂದರ್ಭಗಳನ್ನು ಗಂಡನಾಗಲಿ ಹೆಂಡತಿಯಾಗಲಿ ನಿರೀಕ್ಷಿಸಿರಲಿಕ್ಕಿಲ್ಲ. ಆದರೆ ಅಂಥ ಸಂದರ್ಭಗಳಲ್ಲಿ, ಹೆಚ್ಚು ಸಮಸ್ಯೆಯನ್ನುಂಟು ಮಾಡದೆ, ಸಾರ್ವಜನಿಕರೆದುರು ಜಗಳವಾಡುವ ಸಂದರ್ಭವನ್ನು ಸೃಷ್ಟಿಸದೆ, ಅಥವಾ ಅದನ್ನೇ ಒಂದು ಕೌತುಕಪೂರ್ಣ ಸಂಗತಿಯನ್ನಾಗಿ ಮಾಡದೆ, ನಾವು ಒಂದು ಕಾನೂನನ್ನು ರೂಪಿಸಿ, ಆ ಮೂಲಕ ನಾವು ಯಾರೊಬ್ಬರ ಪಕ್ಷವನ್ನೂ ಅನಾವಶ್ಯಕವಾಗಿ ವಹಿಸದೆ, ಈ ವಿವಾಹವನ್ನು ಸುಲಭವಾಗಿ ರದ್ದುಗೊಳಿಸುವಂತಾಗಬೇಕು. ಆದುದರಿಂದ, ವಿಚ್ಛೇದನಕ್ಕೆ ಅನುಮತಿ ನೀಡಲು ಕಾನೂನುಗಳು ಅಗತ್ಯವೆಂದು ಪರಿಗಣಿಸಿರುವ ಕಾರಣಗಳು, ಉಪಾಧಿಗಳು, ನೆಪಗಳು ಯಾವುದರ ಅಗತ್ಯವೂ ಇಲ್ಲ. ನಾವು ಅನುಕರಿಸುತ್ತಿರುವ ಪಾಶ್ಚಾತ್ಯ ದೇಶಗಳಲ್ಲಿರುವುದಕ್ಕಿಂತ ನಮ್ಮ ದೇಶದಲ್ಲಿನ ವಿಚ್ಛೇದನಗಳು ಸುಲಭವಾಗಿರಬೇಕು, ಸರಳವಾಗಿರಬೇಕು ಮತ್ತು ಕಡಿಮೆ ಖರ್ಚಿನವಿರಬೇಕು. ಅದೇ ರೀತಿ, ಉತ್ತರಾಧಿಕಾರದ ಸಮಸ್ಯೆ ಅಥವಾ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆಯುವ ಸಮಸ್ಯೆಯು ಸದನದಲ್ಲಿ ಎಬ್ಬಿಸಿರುವ ಕಾವಿಗೆ ಯೋಗ್ಯ ಕಾರಣವೆಂದು ನನಗನಿಸುವುದಿಲ್ಲ. ಈ ದೇಶದಲ್ಲಿ ಎಷ್ಟು ಜನರಿಗೆ ಆಸ್ತಿಯನ್ನು ಪಡೆಯುವ ಮತ್ತು ಬೇರೆಯವರಿಗೆ ಬಿಟ್ಟು ಹೋಗುವ ಅವಕಾಶವಿದೆ? ಅಂತಸ್ತಿನ ದೃಷ್ಟಿಯಿಂದ ಅಥವಾ ಆದಾಯ ತೆರಿಗೆಯ ಅಂಕಿ ಅಂಶಗಳ ದೃಷ್ಟಿಯಿಂದ ನೋಡಿದರೆ, ತಿಂಗಳಿಗೆ ರೂ. ೨೫೦/– ರಷ್ಟು ಆದಾಯ ಪಡೆಯುವವರು ಹತ್ತು ಲಕ್ಷಕ್ಕಿಂತ ಕಡಿಮೆ ಇದ್ದಾರೆಂಬುದು ತಿಳಿಯುತ್ತದೆ; ಇದರಲ್ಲಿ ಆದಾಯ ತೆರಿಗೆ ಕೊಡುವವರೂ ಬರುತ್ತಾರೆ, ಪ್ರಯತ್ನ ಮಾಡಿ ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾಗುವವರೂ ಬರುತ್ತಾರೆ.

ಮುನ್ನೂರು ದಶಲಕ್ಷ ಜನಸಂಖ್ಯೆಯಲ್ಲಿ ಆದಾಯ ತೆರಿಗೆ ಕೊಡುವವರ ವರ್ಗದಲ್ಲಿ ಹೆಚ್ಚು ಕಡಿಮೆ

ಒಂದು ದಶಲಕ್ಷ ಬರುತ್ತಾರೆ; ಜೊತೆಗೆ ಅವರನ್ನು ಅವಲಂಬಿಸಿರುವವರನ್ನೂ ಸೇರಿಸಿದರೆ, ಮೂರು ಅಥವಾ ನಾಲ್ಕು ದಶಲಕ್ಷ ಜನ ಆಗುತ್ತಾರೆ. ಅಂದರೆ, ಒಟ್ಟು ಜನ ಸಂಖ್ಯೆಯ ಶೇಕಡ ಒಂದಕ್ಕಿಂತ ಕಡಿಮೆಯಾಗುತ್ತದೆ. ಇವರಿಗೆ ಆಸ್ತಿಯನ್ನು ಇಟ್ಟುಕೊಳ್ಳುವ ಸಾಧ್ಯತೆಯಿದೆ, ಹಾಗೂ ಆ ಆಸ್ತಿಯನ್ನು ಭಾಗ ಮಾಡುವ ಸಾಧ್ಯತೆಯಿದೆ, ಹಾಗೂ ಒಂದೇ ತಂದೆ–ತಾಯಿಗಳ ವಂಶಜರಲ್ಲಿ ದ್ವೇಷವನ್ನೂ ಹಕ್ಕಿನ ಅಸಮಾನತಾಭಾವವನ್ನೂ ಉಂಟುಮಾಡುತ್ತದೆ. ತಂದೆಯ ಆಸ್ತಿಯ ವಿಭಜನೆಯಲ್ಲಿ ಗಂಡುಮಕ್ಕಳಿಗೂ ಹೆಣ್ಣುಮಕ್ಕಳಿಗೂ ಸಮಾನ ಹಕ್ಕು ಇರಬೇಕೆಂಬ ವಿಷಯವಾಗಿ ಇಷ್ಟೊಂದು ಕಾವು ಏಕೆ ಉಂಟಾಗಬೇಕೆಂದು ನನಗೆ ಅರ್ಥವಾಗುವುದಿಲ್ಲ. ನನ್ನ ವಿಚಾರದಲ್ಲಿ ಹೇಳಬೇಕೆಂದರೆ, ನನಗೆ ಯಾವ ಆಸ್ತಿಯಲ್ಲಿಯೂ ನಂಬಿಕೆಯಿಲ್ಲ; ಮತ್ತು ಆಸ್ತಿಯನ್ನು ಸಂಪೂರ್ಣವಾಗಿ ನಿಷೇಧಿಸಿ, ಸಮಾಜವು ಪ್ರತಿಯೊಬ್ಬರೂ ಕೆಲಸ ಮಾಡಬೇಕು ಹಾಗೂ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಬೇಕು ಎಂಬ ನಿಯಮ ಮಾಡುವ ದಿನ ಎಷ್ಟು ಬೇಗ ಬರುತ್ತದೆಯೋ, ಸಮಾಜಕ್ಕೆ ಅಷ್ಟು ಉತ್ತಮ. ಕೇಡಿನ ಮೂಲವಾದ ಆಸ್ತಿಯನ್ನು ಒಬ್ಬ ವಿದ್ವಾಂಸನಾದ ವಕೀಲ ವಾದ–ವಿವಾದದ ಮೂಲ ಎಂದು ಕರೆದಿದ್ದಾನೆ. ನಾನು ಇದನ್ನು ಕೇಡಿನ ಮೂಲ ಎಂದು ಕರೆಯುತ್ತಿದ್ದೇನೆ. ಕೇಡಿನ ಮೂಲವಾದ ಈ ಆಸ್ತಿಯನ್ನು ನಿಷೇಧಿಸಬೇಕು. ಅದನ್ನು ಎಷ್ಟು ಬೇಗ ನಿಷೇಧಿಸಲಾಗುವುದೋ ಅಷ್ಟು ಸಮಾಜಕ್ಕೂ ಈ ರೀತಿಯ ಶಾಸನಕ್ಕೂ ಉತ್ತಮ, ಈ ಘಟ್ಟದಲ್ಲಿ ನಾನು ಬಯಸುವಂಥ ತಿದ್ದುಪಡಿಯನ್ನು ಸೂಚಿಸಲು ಸಾಧ್ಯವಾಗುವಂತಿದ್ದರೆ. ಆಗ ನಾನು ಆಸ್ತಿಗೆ ಸಂಬಂಧಿಸಿದ ಎಲ್ಲ ಉಪನಿಯಮಗಳನ್ನೂ ರದ್ದು ಪಡಿಸಬೇಕು ಅಥವಾ ಕಾಟು ಹಾಕಬೇಕೆಂದೂ, ಅವುಗಳ ಜಾಗದಲ್ಲಿ 'ಯಾವುದೇ ರೀತಿಯ ಆಸ್ತಿ ಅದು ಭೂಮಿಯಿರಬಹುದು, ವೈಯಕ್ತಿಕವಾದುದಿರಬಹುದು – ಸಮನಾಗಿ ವಿಭಜಿಸಲ್ಪಡಬೇಕು' ಎಂಬ ಒಂದು ಸರಳ ವಾಕ್ಯವನ್ನು ಸೇರಿಸಬೇಕು ಎಂದೂ ಸೂಚನೆ ನೀಡುತ್ತೇನೆ. ಈಗ ಸದ್ಯಕ್ಕೆ ಇಷ್ಟು ಸಾಕು. ಇಡೀ ಆಸ್ತಿಯನ್ನೇ ನಿಷೇಧಿಸಬೇಕು; ಪ್ರತಿಯೊಬ್ಬರಿಗೂ ಕೆಲಸ ಮಾಡುವ ಸಮಾನ ಹಕ್ಕಿರಬೇಕು, ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆದವರಿಗೆ ಯಾವ ಜೀವನ ಮಟ್ಟ ಇರುತ್ತದೆಯೋ ಅದೇ ಮಟ್ಟದ ಜೀವನ ನಡೆಸುವ ಹಕ್ಕು ಇತರರಿಗೂ ಇರಬೇಕು. ಅಂಥ ದಿನಗಳನ್ನು ಹತ್ತಿರ ತರಲು ನಾವೆಲ್ಲ ಪ್ರಯತ್ನಿಸಬೇಕು.

ವಿವಾಹ ಮತ್ತು ಉತ್ತರಾಧಿಕಾರ ಎಂಬ ಈ ಎರಡು ಮುಖ್ಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ, ಮಸೂದೆಯು ನಮ್ಮ ಸುತ್ತಮುತ್ತಲಿನ ಪರಿಸ್ಥಿತಿಗಳು ನಿರ್ಬಂಧಿಸುವುದಕ್ಕಿಂತ ಮುಂದೆ ಹೋಗುವುದಿಲ್ಲ ಎಂದು ಹೇಳುತ್ತೇನೆ. ನೀವು ವ್ಯಕ್ತಿಕೇಂದ್ರಿತ ಸಮಾಜವನ್ನು ಅನುಮೋದಿಸುವಿರಾದರೆ, ಆಸ್ತಿಯು ನಿಮ್ಮ ಸಮಾಜ ವ್ಯವಸ್ಥೆಯ ತಳಹದಿಯಾಗಿದ್ದರೆ, ಲಾಭೋದ್ದೇಶವೇ ಸಮಾಜ ಯಂತ್ರದ ಪ್ರೇರಕ ಶಕ್ತಿಯಾಗಿದ್ದರೆ, ಆಗ ಅಸಮಾನತೆ ನೆಲೆಸಲು ಕಾರಣವೇ ಇರಕೂಡದು. ಸಮಾನತೆ ಎಂದರೆ ಕೇವಲ ಹೆಸರಿಗೆ ಮಾತ್ರವಲ್ಲ. ಎಲ್ಲಿಯವರೆಗೆ ಪ್ರತಿಯೊಬ್ಬ ಮನುಷ್ಯನಿಗೂ, ಈ ದೇಶದ ಪ್ರತಿಯೊಬ್ಬ ಪ್ರಜೆಗೂ, ಆರ್ಥಿಕ ಸಮಾನತೆಯ ಭರವಸೆ ಇರುವುದಿಲ್ಲವೋ, ಅಲ್ಲಿಯವರೆಗೂ ರಾಜಕೀಯ ಸಮಾನತೆ, ಮತ ಚಲಾಯಿಸುವ ಹಕ್ಕುಗಳಿಗೆ ಏನೂ ಅರ್ಥವಿರುವುದಿಲ್ಲ. ಭಾರತೀಯ ನಾಗರಿಕತೆಯ ಸಾರದಲ್ಲಿ, ನಮ್ಮ ಸಾಮಾಜಿಕ ವ್ಯವಸ್ಥೆಯ ಸಾರದಲ್ಲಿ, ಸ್ತ್ರೀತ್ವಕ್ಕೆ ಅತ್ಯಂತ ಹೆಚ್ಚಿನ ಗೌರವ ಕೊಡಲಾಗಿದೆ ಎಂಬುದನ್ನು ನಾವು ಸಾಕಷ್ಟು ಕೇಳಿದ್ದೇವೆ; ನನಗೂ ಹಾಗೆಂದು ಕೇಳಲು ಬಹಳ ಸಂತೋಷವಾಯಿತು. ಇದು ಸತ್ಯವೇ ಆಗಿದ್ದರೆ – ಅದನ್ನು ಶಂಕಿಸುವುದಿಲ್ಲ – ಆಸ್ತಿಯಲ್ಲಿ ಸಮಾನ ಹಕ್ಕು ನೀಡುವುದನ್ನೇಕೆ ಕೈಬಿಡಬೇಕೆಂದು ನನಗೆ ಗೊತ್ತಾಗುವುದಿಲ್ಲ. ಸ್ತ್ರೀತ್ವದ ಬಗ್ಗೆ ನಿಮಗೆ ಅಷ್ಟೊಂದು ಪೂಜ್ಯ ಭಾವನೆ ಇದ್ದರೆ, ಅದಕ್ಕೆ ಅಷ್ಟೊಂದು ಗೌರವವನ್ನು ಕೊಡುವುದಾದರೆ,

ಈ ಲೌಕಿಕ ಆಸ್ತಿಯಲ್ಲಿ, ಎಲ್ಲರೂ ಕೊನೆಗೆ ಹೋಗುವಾಗ ಬಿಟ್ಟುಹೋಗಲೇ ಬೇಕದ ಆಸ್ತಿಯಲ್ಲಿ, ಸಮಾನ ಹಕ್ಕು ನೀಡುವಲ್ಲಿ ಏಕೆ ಹಿಂಜರಿಯುತ್ತೀರಿ? ನಮ್ಮ ಆಸ್ತಿಗೆ ನಾವು ಎಷ್ಟೇ ಅಂಟಿಕೊಂಡಿದ್ದರೂ, ನಾವು ಎಷ್ಟೇ ಆಸ್ತಿಯನ್ನು ಇಟ್ಟುಕೊಂಡಿದ್ದರೂ ಅಥವಾ ಗಳಿಸಿದ್ದರೂ, ಅತ್ಯಂತ ಗೌರವದಿಂದಲೂ ಅತ್ಯಂತ ವಿನಯದಿಂದಲೂ ನಾನು ಹೇಳುವುದೇನೆಂದರೆ, ವಿಕಾಸದ ಪ್ರಕ್ರಿಯೆಯಲ್ಲಿ ಸ್ತ್ರೀಯು ಗಂಡಸಿಗಿಂತ ಉನ್ನತ ಮಟ್ಟದಲ್ಲಿ ವಿಕಸಿತವಾಗಿರುವಂತೆ, ಆಕೆ ಗಂಡಸಿಗಿಂತ ಹೆಚ್ಚು ಉತ್ಕೃಷ್ಟವಾದ ಜೀವಿಯಂತೆ ಕಾಣುತ್ತಾಳೆ. ಯಾವುದೋ ಲಿಂಗವನ್ನು ನಾನು ಅವಮಾನಿಸುತ್ತಿದ್ದೇನೆ ಎಂಬುದು ಇದರ ಅರ್ಥವಲ್ಲ. ನಾನು ಹೇಳುತ್ತಿರುವುದು ಇಷ್ಟೇ : ಪ್ರಕೃತಿಯು ಸ್ತ್ರೀಗೆ ವಹಿಸಿಕೊಟ್ಟಿರುವ ಕರ್ತವ್ಯವನ್ನು ಗಮನಿಸಿದರೆ, ಈ ಸಮಾಜ ವ್ಯವಸ್ಥೆಯಲ್ಲಿ ಸ್ತ್ರೀಯು ವಹಿಸಿಕೊಂಡಿರುವ ಕರ್ತವ್ಯ ಮತ್ತು ಉದ್ದೇಶಗಳನ್ನು ಗಮನಿಸಿದರೆ, ನಾನು ಸ್ತ್ರೀತ್ವಕ್ಕೆ ಬಹಳ ಮರ್ಯಾದೆ ಅಥವಾ ಗೌರವವನ್ನು ತೋರಿಸಬಾರದು. ಆದರೆ, ಕಿಂಚಿತ್ ಅಸಮಾನತೆಯ ಗುರುತಾಗಲಿ, ವ್ಯತ್ಯಾಸವನ್ನು ಹೋಲುವುದೇನನ್ನೇ ಆಗಲಿ, ಗಂಡಸಿಗೂ ಹೆಂಗಸಿಗೂ, ಒಂದೇ ತಂದೆ–ತಾಯಿಗಳ ಪುತ್ರ–ಪುತ್ರಿಯರಿಗೂ ದುರುದ್ದೇಶದಿಂದ ಭೇದ ಮಾಡುವುದಾಗಲಿ ನನಗೆ ಸೇರುವುದಿಲ್ಲ.

ದತ್ತು ತೆಗೆದುಕೊಳ್ಳುವ ಅಥವಾ ಪೋಷಕರಾಗುವ ವಿಷಯದಲ್ಲಿ ಈ ಸದನದ ಮಾನ್ಯ ಸದಸ್ಯರಿಗಿರುವಷ್ಟು ಆಸಕ್ತಿ ನನಗಿಲ್ಲ. ದತ್ತು ತೆಗೆದುಕೊಳ್ಳುವುದು ಅಥವಾ ಅದೇ ಉದ್ದೇಶದಿಂದ ಅಧಿಕಾರ ವರ್ಗಾಯಿಸುವುದು, ಮಾನವ ವ್ಯಕ್ತಿತ್ವದ ಮರಣೋತ್ತರ ಕೃತಕ ಮುಂದುವರಿಕೆ ಇದ್ದೀತು. ಅದು ನನಗೆ ಅಸ್ವಾಭಾವಿಕವೆನಿಸುತ್ತದೆ. ಜೀವಿಸಿರುವ ತನಕವೂ ಆಸ್ತಿಯನ್ನು ಪಡೆಯುವುದು ಇಟ್ಟುಕೊಳ್ಳುವುದು ಮತ್ತು ನಿಯಂತ್ರಿಸುವುದೇ ಸಾಕಷ್ಟು ಅಹಿತವಾಗಿರುವಾಗ, ಬರೀ ಲಾಭದ ದೃಷ್ಟಿಯನ್ನೇ ಇಟ್ಟುಕೊಂಡಿರುವುದೇ ಸಾಕಷ್ಟು ಕೆಟ್ಟದಿರುವಾಗ, ನಮ್ಮ ವ್ಯಕ್ತಿತ್ವವನ್ನು (ಸತ್ತ ನಂತರವೂ) ಏಕೆ ಮುಂದುವರಿಸಬೇಕು? ನಾವು ಸತ್ತ ನಂತರವೂ ನಮ್ಮ ಆಜ್ಞೆಯನ್ನೇ ಪಾಲಿಸಬೇಕೆಂದು ನಾವೇಕೆ ಆಶಿಸಬೇಕು ಅಥವಾ ಹಟ ಹಿಡಿಯಬೇಕು? ದತ್ತು ಸ್ವೀಕಾರದ ಮೂಲಕ ನಮ್ಮ ವ್ಯಕ್ತಿತ್ವವನ್ನು ನಾವೇಕೆ ಕೃತಕವಾಗಿ ಮುಂದುವರಿಸಬೇಕು? ಅದೊಂದು ಪುರಾತನ ಸಂಸ್ಥೆ ಎಂಬುದನ್ನು ತಿಳಿದೂ, ನಮ್ಮ ಹಿರಿಯರ ಮೋಕ್ಷದಲ್ಲಿ ಈ ಸಂಸ್ಥೆಯೂ ಒಂದು ಪಾತ್ರ ವಹಿಸುತ್ತದೆ ಎಂಬುದನ್ನು ತಿಳಿದೂ ನಾವು ಈಗಿಂದೀಗಲೇ ಅದನ್ನು ನಿಷೇಧಿಸಬೇಕು ಎಂದು ಹೇಳಲು ನಾನು ಸಿದ್ಧವಿಲ್ಲ. ಒಂದು ವೇಳೆ ನೀವು ಅದನ್ನು ಮೋಕ್ಷದ ಮೂಲವೆಂದು ಪರಿಗಣಿಸಿದರೆ, ನಿಮ್ಮ ವ್ಯಕ್ತಿತ್ವವನ್ನು ಮುಂದುವರಿಸಲು ಅದೊಂದು ಸಾಧನವೆಂದು ನೀವು ತಿಳಿದುಕೊಂಡಿದ್ದರೆ, ಅದರಿಂದಾಗೇ ನಿಮ್ಮ ನಾಗರಿಕತೆ ಅಥವಾ ಸಂಸ್ಕೃತಿ ಅಥವಾ ಜೀವನದ ಕರ್ತವ್ಯಗಳು ಮುಂದುವರಿಯುತ್ತವೆ ಎಂದು ನೀವು ತಿಳಿದುಕೊಂಡಿದ್ದರೆ, ಆಗ ಅದು ಅಗತ್ಯವೆಂದು ಹೇಳಲು ನಾನು ಸಿದ್ಧನಿದ್ದೇನೆ. ಆದರೆ ಅಂಥ ಸಂದರ್ಭದಲ್ಲಿ ಸ್ತ್ರೀ–ಪುರುಷರ ನಡುವೆ ಭೇದಮಾಡುವ ಅಗತ್ಯವಿಲ್ಲ. ಸ್ತ್ರೀ ಪುರುಷರ ನಡುವೆ ಯಾವ ತಾರತಮ್ಯವಾಗಲಿ ಕಾನೂನಿನ ಮಿತಿಯಾಗಲಿ ಇರಕೂಡದು. ಸಮಾಜದ ಪ್ರತಿಯೊಬ್ಬರಿಗೂ ಒಂದೇ ತರಹದ ಹಕ್ಕು ಸಿಕ್ಕಬೇಕು. ಈ ಮಸೂದೆಗೆ ನಾನು ನೀಡುವ ಬೆಂಬಲಕ್ಕೆ ಸಾಮಾಜಿಕ ನ್ಯಾಯ, ಆರ್ಥಿಕ ಸಮಾನತೆ ಮತ್ತು ರಾಜಕೀಯ ಔಚಿತ್ಯವೇ ಆಧಾರ. ನಾವು ಅನುಷ್ಠಾನಕ್ಕೆ ತರಬೇಕೆಂದಿರುವ ಸಂವಿಧಾನವು, ನಾವು ನಮ್ಮ ಮುಂದಿಟ್ಟುಕೊಂಡಿರುವ ಆದರ್ಶಗಳು, ನಾವು ಯೋಜಿಸಿಕೊಂಡಿರುವ ಹಾಗೂ ಮುಂದಿನ ಸಮಾಜದ ಬಗೆಗಿನ ಆಶೋತ್ತರಗಳು– ಇವನ್ನೆಲ್ಲಾ ದೃಷ್ಟಿಯಲ್ಲಿಟ್ಟು ಕೊಂಡು ಹೇಳಬೇಕೆಂದರೆ ನಾವು ಈ ಮಸೂದೆಯನ್ನು ಒಪ್ಪಿಕೊಳ್ಳುವುದು ಸರಿಯಾದ ಮಾರ್ಗದಲ್ಲಿ ಹೋಗುವುದಕ್ಕೆ ಉತ್ತಮ ನಾಂದಿಯಾಗುತ್ತದೆ ಎಂದು ನನಗನಿಸುತ್ತದೆ. ಸ್ತ್ರೀ ಪುರುಷರ ನಡುವಿನ ಅಸಮಾನತೆಯನ್ನು ಹೋಗಲಾಡಿಸಲು ಅದು ಅಳವಡಿಸಿಕೊಂಡಿರುವ ನಿಯಮಗಳನ್ನು

ನಾವು ಮಾನ್ಯ ಮಾಡುವುದಕ್ಕಿಂತ ಹೆಚ್ಚಿನ ಒಳ್ಳೆಯದೇನನ್ನೂ ನಾವು ಮಾಡಲಾರೆವು. ಸಮಾನತೆಯೆಂದರೆ ಕೇವಲ ಐದು ವರ್ಷಕ್ಕೊಮ್ಮೆ ಅಥವಾ ಮೂರು ವರ್ಷಕ್ಕೊಮ್ಮೆ ಸಾಮಾನ್ಯ ಚುನಾವಣೆಯಲ್ಲಿ ಮತ ಚಲಾಯಿಸುವುದಲ್ಲ. ಅದರ ಜೊತೆಗೆ, ಜೀವನ ಮತ್ತು ಕರ್ತವ್ಯಗಳು, ಆರೋಗ್ಯ ಮತ್ತು ಶಿಕ್ಷಣಕ್ಕೆ ಸಮಾನ ಅವಕಾಶ, ಜೀವನದ ಮಟ್ಟ ಮತ್ತು ಆಹಾರ, ವಸತಿ ಮತ್ತು ಬಟ್ಟೆಗಳೆಂಬ ಮಾನವನ ಪ್ರಾಥಮಿಕ ಬೇಡಿಕೆಗಳನ್ನು ಪೂರೈಸುವುದೂ ಸೇರುತ್ತವೆ. ಇವುಗಳು ಲಭ್ಯವಾಗಬೇಕು. ಅವು ಲಭ್ಯವಿಲ್ಲದಿದ್ದರೆ, ಇಡೀ ಸಮಾಜದ ಎಲ್ಲರ ಸಹಕಾರ ಮತ್ತು ಸಾಮಾನ್ಯ ಪ್ರಯತ್ನಗಳ ಮೂಲಕ ಲಭ್ಯವಾಗುವಂತೆ ಮಾಡಬೇಕು. ಸಮಾಜವು ತನ್ನ ಈ ಜವಾಬ್ದಾರಿಯನ್ನು ಪೂರೈಸಬೇಕು. ಇದು ಸಂವಿಧಾನದಲ್ಲಿ ನಮೂದಿಸಲಾಗಿರುವ ಕೇವಲ ಹಾಳೆಯ ಮೇಲಿರುವ ಭರವಸೆಯಲ್ಲ; ಅದೊಂದು, ನಮಗೆ ಸಾಧ್ಯವಾದಷ್ಟು, ಕ್ಷಿಪ್ರಗತಿಯಲ್ಲಿ ನೆರವೇರಿಸಲೇಬೇಕಾದ ಒಂದು ಪವಿತ್ರ ಕರ್ತವ್ಯ ಮತ್ತು ಜವಾಬ್ದಾರಿ. ಈ ದೇಶದ ಪ್ರತಿಯೊಬ್ಬ ಪ್ರಜೆಗೂ ಇವು ಲಭ್ಯವಾಗುವಂತಾಗಬೇಕು ಹಾಗೂ ಆ ಮೂಲಕ ನಾವು ಸ್ವಾತಂತ್ರ್ಯ ಬಂದಾಗಿನಿಂದ ರೂಪಿಸಿಕೊಂಡಿರುವ ಆಸೆ–ಆಕಾಂಕ್ಷೆಗಳನ್ನು ಪೂರೈಸಲು ಸಾಧ್ಯವಾದೀತು. ಒಬ್ಬ ಮಹಾನ್ ಅಮೆರಿಕನ್, ಅಧ್ಯಕ್ಷ ಲಿಂಕನ್ "ಒಂದು ರಾಷ್ಟ್ರ ಅರ್ಧ ಗುಲಾಮ. ಅರ್ಧ ಸ್ವತಂತ್ರವಾಗಿರಲು ಸಾಧ್ಯವಿಲ್ಲ" ಎಂದಿದ್ದಾರೆ. ನಮ್ಮ ರಾಷ್ಟ್ರದ ಅರ್ಧ ಜನರು ಗುಲಾಮರಲ್ಲದಿದ್ದರೂ, ಅವರಿಗೆ ತಾವು ದುರ್ಬಲರು, ಅಶಕ್ತರು ಎನಿಸುತ್ತಿದೆ. ಅವರಲ್ಲಿ ತಾರತಮ್ಯವನ್ನೆಣಿಸಲಾಗುತ್ತಿದೆ. ಇದು ಮುಂದುವರಿಯಬೇಕೆಂದು ಅವರೇನೂ ಇಚ್ಛಿಸುವುದಿಲ್ಲ. ಈ ಸಂದರ್ಭದಲ್ಲಿ ಈ ಸದನದ ಎಲ್ಲರಿಗೂ ಗೊತ್ತಿಲ್ಲದ, ಅಂಕಿ ಅಂಶಗಳು ತಿಳಿಸುವ ಒಂದು ಸತ್ಯ ಸಂಗತಿಯನ್ನು ತಮಗೆ ತಿಳಿಸಬಯಸುತ್ತೇನೆ. ಅದೇನೆಂದರೆ, ಜನನದ ಸಮಯದಲ್ಲಿ ಸ್ತ್ರೀಯರೇ ಬಹುಸಂಖ್ಯಾತರಾಗಿದ್ದರೂ, ಒಟ್ಟು ಜನಸಂಖ್ಯೆಯಲ್ಲಿ ಅವರು ಅಲ್ಪಸಂಖ್ಯಾತರಾಗಿದ್ದಾರೆ. ಉತ್ಕಲದಂತಹ ಪ್ರಾಂತ್ಯಗಳಲ್ಲಿ ಪರಿಸ್ಥಿತಿ ಏನೇ ಇದ್ದರೂ, ಒಟ್ಟಿನಲ್ಲಿ ಹೇಳಬೇಕೆಂದರೆ, ಭಾರತದಲ್ಲಿ ಸ್ತ್ರೀಯರು ಯಾವಾಗಲೂ ಅಲ್ಪಸಂಖ್ಯಾತರಾಗೇ ಇದ್ದಾರೆ. ಮದುವೆಯಾಗುವ ವಯಸ್ಸಿನಿಂದ ಹಿಡಿದು ಹದಿನೈದನೆಯ ವರ್ಷದಿಂದ ಮೇಲ್ಪಟ್ಟು – ಅವರ ಸಂಖ್ಯೆ ಕಡಿಮೆಯಾಗುತ್ತಾ ಹೋಗುತ್ತದೆ. ಹೀಗಾಗಿ, ದೇಶದ ಒಟ್ಟು ಜನಸಂಖ್ಯೆಯಲ್ಲಿ ಸ್ತ್ರೀಯರು ಅಲ್ಪಸಂಖ್ಯಾತರಾಗಿದ್ದರು, ಹಾಗೂ ಈಗಲೂ ಅವರು ಅಲ್ಪಸಂಖ್ಯಾತರಾಗೇ ಇದ್ದಾರೆ. ಇದರ ಅರ್ಥವೇನು?

(ಈ ವೇಳೆಯಲ್ಲಿ ಮಾನ್ಯ ಸಭಾಪತಿಗಳು ತಮ್ಮ ಆಸನವನ್ನು ತೆರವು ಮಾಡಿದರು, ಹಾಗೂ ಅದನ್ನು ಶ್ರೀ ಎಸ್.ವಿ. ಕೃಷ್ಣಮೂರ್ತಿರಾವ್ ಅವರು (ಅಧ್ಯಕ್ಷರ ವರ್ಗದಲ್ಲಿದ್ದವರಲ್ಲಿ ಒಬ್ಬರು) ಆ ಆಸನದಲ್ಲಿ ಕುಳಿತುಕೊಂಡರು).

ಸ್ತ್ರೀಯರನ್ನು ತಾರತಮ್ಯ ದೃಷ್ಟಿಯಿಂದ – ಹುಡುಗಿಯರಿಗಿಂತ ಹುಡುಗರು ಹೆಚ್ಚು, ಮಗಳಿಗಿಂತ ಮಗ ಹೆಚ್ಚು ಎಂಬ ತಾರತಮ್ಯ ದೃಷ್ಟಿಯಿಂದ – ನಾವು ಕಾಣುತ್ತಿರುವುದರಿಂದಾಗಿ ಜನನ ಸಮಯದಲ್ಲಿ ಬಹುಸಂಖ್ಯಾತರಾಗಿದ್ದ ಸ್ತ್ರೀಯರು ಕೊನೆಯಲ್ಲಿ ಅಲ್ಪಸಂಖ್ಯಾತರಾಗಿದ್ದಾರೆ. ಹೀಗಾಗಿ, ನಾವು ಈ ತಾರತಮ್ಯ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಆ ಸಮಸ್ಯೆಯನ್ನು ಪರಿಹರಿಸಲು ಈ ಮಸೂದೆ ಪ್ರಯತ್ನಿಸುತ್ತದೆ. ಈ ಮಸೂದೆಯಲ್ಲಿ ಎಲ್ಲರಿಗೂ ಸಮಾಧಾನ ನೀಡದ ಅನೇಕ ನಿಬಂಧನೆಗಳಿವೆ. ಎಲ್ಲರಿಗೂ ಅಂದರೆ: ಮಸೂದೆಯನ್ನು ಅದರ ತತ್ತ್ವದ ಆಧಾರದ ಮೇಲೆ ಒಪ್ಪಿಕೊಳ್ಳುವ ಕೆಲವರು, ಅದು ನಮ್ಮ ಸಮಾಜವನ್ನು ಮುಂದೆ ವೈಚಾರಿಕವನ್ನಾಗಿ ಮಾಡುತ್ತದೆ, ನಮ್ಮ ಶಾಸನವನ್ನು ಸರಳಗೊಳಿಸುತ್ತದೆ. ನಮ್ಮ ಸಮಾಜವನ್ನು ವ್ಯವಸ್ಥೆಗೊಳಿಸಿ ಒಂದು ಧ್ಯೇಯದ ಕಡೆಗೆ ಸಾಗುವಂತೆ ಮಾಡುತ್ತದೆ ಎಂದು ಮನಗಂಡವರು. ಆದರೆ ಸದ್ಯಕ್ಕೆ ನಾವು ಆ ವಿವರಗಳನ್ನು ಚರ್ಚಿಸುತ್ತಿಲ್ಲ. ನಿರ್ದಿಷ್ಟ ನಿಬಂಧನೆಗಳನ್ನು

ಹೊರತುಪಡಿಸಿ. ಈ ಮಸೂದೆಯ ತಳಹದಿಯಾದ ತತ್ತ್ವವು, ಇಡೀ ಸಂರಚನೆಗೆ ಪ್ರೇರಕ ಶಕ್ತಿಯಾಗಿ, ಸದನದ ಗಮನವನ್ನು ಸೆಳೆಯಲು ಯೋಗ್ಯವಾಗಿದೆ. ಇದನ್ನು ಸದನವು ಅಂಗೀಕರಿಸುತ್ತದೆ ಎಂಬ ಭರವಸೆ ನನಗಿದೆ.

**ಶ್ರೀ ಲಕ್ಷ್ಮೀನಾರಾಯಣ ಸಾಹು** (ಒಡಿಸ್ಸಾ : ಸಾಮಾನ್ಯ) : ಮಾನ್ಯರೆ, ಉತ್ಕಲದಲ್ಲಿ ಸ್ತ್ರೀಯರೇ ಹೆಚ್ಚಾಗಿದ್ದಾರೆಂಬುದನ್ನು ನಾನು ಒಂದು ಹಾಸ್ಯದ ಮಾತಿನಂತೆ ಹೇಳಲಿಲ್ಲ ಎಂಬುದನ್ನು ತಿಳಿಸಬಯಸುತ್ತೇನೆ. ಉತ್ಕಲದಲ್ಲಿ (ಗಂಡಸರಿಗಿಂತ) ಹೆಂಗಸರು ಮೂರು–ನಾಲ್ಕು ಲಕ್ಷ ಹೆಚ್ಚಾಗಿದ್ದಾರೆ. ಅವರಿಗೆ ವಿವಾಹಕ್ಕೆ ಯೋಗ್ಯನಾದ ವರ ಸಿಕ್ಕದಿದ್ದರೆ, ಅವರು ಸಹ ಮರವನ್ನು ಮದುವೆಯಾಗುತ್ತಾರೆ.

**ಪ್ರೊ. ಕೆ. ಟಿ. ಷಹಾ :** ನಾನು ಇಡೀ ರಾಷ್ಟ್ರದ ವಿಚಾರವನ್ನು ಪ್ರಸ್ತಾಪಿಸುತ್ತಿದ್ದೇನೆಯೇ ಹೊರತು ಯಾವೊಂದು ವಿಶಿಷ್ಟ ಪ್ರಾಂತ್ಯವನ್ನೂ ಅಲ್ಲ. ಆದುದರಿಂದ ಈ ವಿಶಿಷ್ಟ ಉತ್ತರ ಹೇಳುವುದು ಅನಗತ್ಯ. ಅದನ್ನು ಅಲ್ಲಿಗೇ ನಿಲ್ಲಿಸಿ.

***ಸರ್ದಾರ್ ಹುಕುಂ ಸಿಂಗ್** (ಪೂರ್ವ ಪಂಜಾಬ್ : ಸಿಖ್) : ಇಷ್ಟು ದಿನಗಳಿಂದ ನಡೆಯುತ್ತಿರುವ ಚರ್ಚೆಯಲ್ಲಿ ಅನೇಕ ಗಣ್ಯ ವಕೀಲರೂ, ಘನ ವಿದ್ವಾಂಸರೂ ಭಾಗವಹಿಸಿದ್ದಾರೆ. ಇಷ್ಟೊಂದು ಮುಂದುವರಿದ ಈ ಚರ್ಚೆಯಲ್ಲಿ ಹೊಸ ವಾದಗಳನ್ನು ಮಂಡಿಸುವುದಾಗಲಿ ಹೊಸ ವಿಷಯಗಳನ್ನು ತಿಳಿಸುವುದಾಗಲಿ ಸುಲಭವಲ್ಲ. ಆದರೆ ಈ ಮಸೂದೆಯು ನನ್ನ ಕೋಮಿಗೆ ಅನ್ವಯಿಸುವುದರಿಂದ, ಹಾಗೂ ಆ ಕೋಮಿನ ಪ್ರತಿನಿಧಿಯಂತೆ ಮಾತಾಡಲು ನನಗೆ ಸೂಚನೆ ನೀಡಿರುವುದರಿಂದ, ಈ ಮಸೂದೆಗೆ ನನ್ನ ಕೋಮನ್ನು ಪ್ರತಿನಿಧಿಸುವ ಅನಿಸಿಕೆಗಳನ್ನು ಕುರಿತು ಏನನ್ನಾದರೂ ಹೇಳಬೇಕಾಗಿದೆ.

ತಾವು ಕೇವಲ ಒಬ್ಬ ಭಾರತೀಯನಾಗಿ ಮಾತನಾಡುವುದಾಗಿ ಹೇಳಿದ ನನ್ನ ವಿದ್ವಾಂಸ ಮಿತ್ರರಾದ ಪ್ರೊ. ಷಹಾರವರ ಮಾತನ್ನು ನಾನು ಒಪ್ಪುವುದಿಲ್ಲ. ಒಂದು ವೇಳೆ ಈ ಮಸೂದೆಯು ಎಲ್ಲ ಭಾರತೀಯ ಪ್ರಜೆಗೂ ಅನ್ವಯಿಸುವುದಾಗಿದ್ದರೆ, ನಾನೂ ಅದೇ ಮಾತನ್ನು ಸಂತೋಷದಿಂದ ಪುನರುಚ್ಚರಿಸುತ್ತಿದ್ದೆ. ಆದರೆ ಪರಿಸ್ಥಿತಿಯನ್ನು ನೋಡಿದರೆ, ಅದು ಕೆಲವು ಕೋಮುಗಳಿಗಷ್ಟೇ ಅನ್ವಯಿಸುತ್ತದೆ. ಆದುದರಿಂದ ನನ್ನ ಕೋಮಿನ ಪರವಾಗಿ ನಾನು ಮಾತಾಡುವ ಹಕ್ಕು ನನಗಿದೆ. ಅದು ನನ್ನ ಕರ್ತವ್ಯ ಎಂದು ನನಗನಿಸುತ್ತಿದೆ; ನಾನು ಹಾಗೆ ನಂಬುತ್ತೇನೆ.

ನಾನು ಅನೇಕ ಜನ ವಿದ್ವಾಂಸರ ಮಾತನ್ನು ಕೇಳಿರುವ ಲಾಭದಾಯಕ ಸ್ಥಿತಿಯಲ್ಲಿದ್ದರೂ ನಾನು ಒಂದು ವಿಶಿಷ್ಟ ಲಾಭದಾಯಕವಲ್ಲದ ಸ್ಥಿತಿಯಲ್ಲೂ ಇದ್ದೇನೆ. ಏಕೆಂದರೆ, ಈ ವಿಷಯವಾಗಿ, ಅನೇಕ ವಿಷಯಗಳು ಪ್ರಸ್ತಾಪಿಸಲ್ಪಟ್ಟಿವೆ. ಅವುಗಳನ್ನೇ ಮತ್ತೆ ನಾನೂ ಹೇಳಿದರೆ, ಅವು ಹಳಸಲಂತೆ ಕಾಣುತ್ತವೆ. ಆದುದರಿಂದ ನಾನು ನನ್ನ ಕೋಮಿಗೆ ಅನ್ವಯಿಸುವಂಥ ವಿಷಯಗಳಿಗೆ ಮಾತ್ರ ಸೀಮಿತಗೊಳಿಸಲು ನಿರ್ಧರಿಸಿ, ಅವುಗಳ ಮೇಲಿನ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತೇನೆ.

ಮೊಟ್ಟ ಮೊದಲೇ ನಾನೊಂದು ವಿಷಯವನ್ನು ಸ್ಪಷ್ಟಪಡಿಸುತ್ತೇನೆ. ಅದೇನೆಂದರೆ, ಸಮಾಜವು ನಿಂತಲ್ಲೇ ನಿಂತಿರಬಾರದು. ಸಾಮಾಜಿಕ ಕಾನೂನುಗಳು ಹೇಗಿವೆಯೋ ಹಾಗೆಯೇ ಯಾವಾಗಲೂ ಇರಬೇಕು ಎಂದು ಹೇಳುವವರಲ್ಲಿ ನಾನೊಬ್ಬನಲ್ಲ. ಕಾಲ ಬದಲಾದಂತೆ, ಅವುಗಳನ್ನೂ ನಾವು ಬದಲಾಯಿಸಬೇಕೆಂದು ಆಸಿಸುವವನು ನಾನು. ಕಾಲ ನಡೆದಂತೆ ನಾವು ನಡೆಯಬಾರದು ಎಂದು ಹೇಳುವಷ್ಟು

---

* C.A. (Leg) D, Voel. VI, pt ii, ೧೪ನೇ ಡಿಸೆಂಬರ್, ೧೯೪೯ ಪುಟ ೬೦೭–೬೧೦.

ಸಂಪ್ರದಾಯವಾದಿಯಲ್ಲ ನಾನು. ಅದೇ ರೀತಿ, ಸದನವು ಪರೋಕ್ಷವಾಗಿ ಚುನಾಯಿತವಾಗಿರುವುದರಿಂದ ಅಥವಾ ಈ ನಿರ್ದಿಷ್ಟ ಮಸೂದೆಯ ಪರವಾಗಿ ಯಾವ ವಿಶೇಷ ಅನುಮತಿಯನ್ನೂ (ಜನರಿಂದ) ಪಡೆಯದೇ ಇರುವುದರಿಂದ ಅಥವಾ ಮತ್ತಾವುದೇ ಕಾರಣದಿಂದ, ಈ ಸದನಕ್ಕೆ ಈ ಶಾಸನವನ್ನು (ಮಸೂದೆಯನ್ನು) ಮಾಡುವ ಸಾಮರ್ಥ್ಯವಿಲ್ಲ ಎಂದೂ ನಾನು ಹೇಳುವುದಿಲ್ಲ. ಸದನಕ್ಕೆ ಯಾವುದೇ ಶಾಸನ ಮಾಡುವ ಸಾಮರ್ಥ್ಯವಿದೆ ಎಂದು ನನಗನಿಸುತ್ತದೆ; ಆದುದರಿಂದ, ಈ ಮಸೂದೆಯೂ ಸಾಮರ್ಥ್ಯದೊಳಗೇ ಬರುತ್ತದೆ. ಇಷ್ಟಾದರೂ, ಈ ಮಸೂದೆಗೆ ಈಗಿರುವಂತೆ ನಾನು ಹೃತ್ಪೂರ್ವಕ ಬೆಂಬಲ ನೀಡಲಾರೆ.

ರಾವ್ ಸಮಿತಿ ಸೂಚಿಸಿದಂತೆ ನಾವು ಮೂಲ ಯೋಜನೆಯನ್ನೇ ಒಪ್ಪಿಕೊಂಡಿದ್ದರೆ, ಆಗ ಈ ನಿಯಮಾವಳಿಯ ಕೆಲವು ಭಾಗಗಳನ್ನು ನಾವು ಯಾವ ವಿರೋಧವೂ ಇಲ್ಲದೆ ಅಂಗೀಕರಿಸಬಹುದಿತ್ತು. ಈ ನಿಯಮಾವಳಿಯ ಕೆಲವು ಭಾಗಗಳ ಬಗೆಗೆ ಐಕಮತ್ಯವಿರಬೇಕು. ಆದರೆ, ನಾನು ನನ್ನನ್ನು ಕೆಲವೇ ವಿಚಾರಗಳಿಗೆ ಸೀಮಿತಗೊಳಿಸಿಕೊಳ್ಳುತ್ತೇನೆ. ಆದುದರಿಂದ, ನಾನು ಈ ಶಾಸನದ ಮೂಲ ತತ್ತ್ವಗಳ ಎಲ್ಲ ಅಂಶಗಳನ್ನೂ ಪರಿಶೀಲಿಸಬಯಸುವುದಿಲ್ಲ. ಈಗ ಜಾರಿಯಲ್ಲಿರುವ ಹಿಂದೂ ಕಾನೂನಿನ ಕೆಲವು ವಿಭಾಗಗಳನ್ನು ತಿದ್ದಿ ಅವುಗಳನ್ನು ಶಾಸನೀಕರಿಸುವ ಉದ್ದೇಶ ಈ ಮಸೂದೆಗಿದೆ ಎಂದು ಮುನ್ನುಡಿ ಹೇಳುತ್ತದೆ. ಆದರೆ ಮಸೂದೆಯ ಒಳಹೊಕ್ಕು ನೋಡಿದರೆ ಹಿಂದೂ ಕಾನೂನಿಗೆ ಮಾತ್ರ ಸೀಮಿತವಾದಂಥಾದ್ದೇನನ್ನೂ ನಾನು ಕಾಣುತಿಲ್ಲ. ವಿಚ್ಛೇದನದ ಕಾನೂನನ್ನು ಕ್ರೈಸ್ತ ದೇಶಗಳಿಂದ ತರಲಾಗಿದೆ, ಉತ್ತರಾಧಿಕಾರದ ಕಾನೂನನ್ನು ಮುಸ್ಲಿಂ ಕಾನೂನಿಂದ ತೆಗೆದುಕೊಳ್ಳಲಾಗಿದೆ. ಹಿಂದೂ ಕಾನೂನಿನ ಶಾಸನೀಕರಣ ಎಂದು ಇದನ್ನು ಕರೆಯುವುದು ನನಗೆ ಅಪನಾಮಕರಣವೆನಿಸುತ್ತದೆ.

**ಡಾ॥ ಮನ್ ಮೋಹನ್ ದಾಸ್** (ಪಶ್ಚಿಮ ಬಂಗಾಳ : ಸಾಮಾನ್ಯ) : ಈ ದೇಶದಲ್ಲಿರುವ ಅನೇಕ ಜಾತಿಗಳಲ್ಲಿಯೂ, ಬುಡಕಟ್ಟುಗಳಲ್ಲಿಯೂ ವಿಚ್ಛೇದನ ಪದ್ಧತಿ ರೂಢಿಯಲ್ಲಿದೆ. ಹಾಗಾದರೆ, ಅವರೆಲ್ಲ ಹಿಂದೂಗಳಲ್ಲವೇನು? ಸನ್ಮಾನ್ಯ ಸದಸ್ಯರು ಅವರನ್ನು ಹಿಂದೂ ಧರ್ಮದಿಂದ ಹೊರಗಿಟ್ಟು ಕೈ ತೊಳೆದುಕೊಳ್ಳಲು ಇಚ್ಛಿಸುತ್ತಾರೇನು?

**ಸರ್ದಾರ್ ಹುಕುಂ ಸಿಂಗ್ :** ನಿಮ್ಮ ಅನುಮತಿಯಂತೆ ನಾನು ಆ ವಿಷಯಕ್ಕೆ ಆಮೇಲೆ ಬರುತ್ತೇನೆ. ತಾಳ್ಮೆಯಿಂದ ನಾನು ಹೇಳುವುದನ್ನು ಕೇಳುತ್ತೀರೆಂದು ಆಶಿಸುತ್ತೇನೆ.

ನಾನಾಗಲೇ ಹೇಳಿದಂತೆ, ನಾನು ನನ್ನ ಕೋಮಿಗೆ ಅನ್ವಯಿಸುವಂಥ ಕೆಲವು ವಿಷಯಗಳಿಗಷ್ಟೇ ನನ್ನನ್ನು ಸೀಮಿತಗೊಳಿಸಿಕೊಳ್ಳುತ್ತಿದ್ದೇನೆ. ಅದಕ್ಕಿಂತ ಹೆಚ್ಚಿನ ವಿಷಯಗಳನ್ನು ನಾನು ಪ್ರಸ್ತಾಪಿಸುವುದಿಲ್ಲ. ಹಿಂದೂ ಕಾನೂನನ್ನು ತಿದ್ದಿ, ಶಾಸನೀಕರಿಸುವ ಉದ್ದೇಶವು ಈ ಮಸೂದೆಗಿದೆ ಎಂದು ಮುನ್ನುಡಿ ಹೇಳುತ್ತದೆ. ಆದರೆ ಈ ಶಾಸನದಲ್ಲಿ ಅದನ್ನು ನಾನು ಕಾಣುತ್ತಿಲ್ಲ ಎಂದು ಪುನರುಚ್ಚರಿಸುತ್ತಿದ್ದೇನೆ. ಮೊದಲೇ ಈ ಮಸೂದೆಯನ್ನು ಮಂಡಿಸುವವರು ಹೇಳಿದಂತೆ ಶೇಕಡಾ ೯೦ ಜನ ವಿಚ್ಛೇದನ ಪಡೆದರೆ, ನನ್ನದೇನೂ ಆಕ್ಷೇಪವಿಲ್ಲ; ಅವರು ಹಾಗೇ ಇರಲಿ. ಅದನ್ನೇ ನೀವು ಹಿಂದೂ ಕಾನೂನು ಎಂದು ಕರೆಯಬಹುದು. ಆದರೆ ಈ ನಿಯಮಾವಳಿಗೆ ನೀವು ಸೇರಿಸುತ್ತಿರುವ ವ್ಯವಸ್ಥೆಯಲ್ಲ.

ಉಪವಿಭಾಗ ೨ ರಲ್ಲಿ ಈ ಮಸೂದೆಯು ಸಿಖ್ಖರಿಗೂ ಅನ್ವಯಿಸುತ್ತದೆ ಎಂದು ಹೇಳಲಾಗಿದೆ. ಸಿಖ್ಖರೂ ಕೆಲವು ಹಕ್ಕುಗಳನ್ನು ಪಡೆಯಲೆಂಬ ಉದ್ದೇಶದಿಂದ ಅವರನ್ನೂ ಹಿಂದೂಗಳಲ್ಲಿ ಸೇರಿಸಿದ್ದರೆ, ಅದೊಂದು ಸಮಾಧಾನಕರ ಅಥವಾ ಹೆಮ್ಮೆಯ ಸಂಗತಿಯಾಗುತ್ತಿತ್ತು. ಆದರೆ ನಾನಿಲ್ಲಿ ಕಾಣುತ್ತಿರುವುದೇನೆಂದರೆ,

ಉಪವಿಭಾಗ ೨ ರಲ್ಲಿ ಕಾಣುವ ಅಪ್ಪುಗೆ ಆದನಂತರ, ಉಪವಿಭಾಗ ೪ ರಲ್ಲಿ ಎಲ್ಲ ಸಂಪ್ರದಾಯ ಮತ್ತು ರೂಢಿಗಳಿಗೆ ಒಂದು ಬಲವಾದ ಪೆಟ್ಟು ಕೊಡಲಾಗಿದೆ. ಎಲ್ಲ ಸಂಪ್ರದಾಯಗಳೂ, ರೂಢಿಗಳೂ ನಿರ್ನಾಮವಾಗಿವೆ. ಉಪವಿಭಾಗ ೩ ರಲ್ಲಿ "ಪದ್ಧತಿ" ('ಸಂಪ್ರದಾಯ') ಎಂದರೆ "ಸತತವಾಗಿ ಹಾಗೂ ಏಕಪ್ರಕಾರವಾಗಿ ನಡೆದುಕೊಂಡು ಬಂದಿರುವ" ಎಂದೂ, ಅದು "ಖಚಿತವಾಗಿರಬೇಕು, ಅವೈಚಾರಿಕವಾಗಿರಬಾರದು ಅಥವಾ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿರಬಾರದು" ಎಂದೂ ವ್ಯಾಖ್ಯಾನಿಸಲಾಗಿದೆ. ಅಂಥ ಪವಿತ್ರ ನೀತಿಸಂಹಿತೆಯನ್ನು ಶಾಶ್ವತವಾಗಿ ಕಿತ್ತುಹಾಕಲು ಯೋಗ್ಯವಾದಂಥ ಕ್ಷುದ್ರ ನಿಯಮವೆಂದೇಕೆ ಕಾಣಬೇಕು? ಇದಕ್ಕೆ ನನ್ನ ಬಹಳ ಗಂಭೀರ ಆಕ್ಷೇಪವಿದೆ. ನನ್ನ ಪ್ರಾಂತ್ಯದಲ್ಲಿ, ಅಂದರೆ ಪಂಜಾಬ್ ಪ್ರಾಂತ್ಯದಲ್ಲಿ, ಪದ್ಧತಿಯೇ ಕಾನೂನಿನ ಮೊಟ್ಟಮೊದಲ ನಿಯಮ ಎಂಬ ಸತ್ಯದ ಮೇಲೆ ನನ್ನ ಆಕ್ಷೇಪ ನಿಂತಿದೆ. ಪಂಜಾಬ್ ಕಾನೂನು ಶಾಸನದಲ್ಲಿ ಹೇಳಿರುವಂತೆ, ವಿಚ್ಛೇದನ, ವಿವಾಹ, ಉತ್ತರಾಧಿಕಾರ, ವಾರಸುದಾರತ್ವ, ಉಯಿಲು ಮುಂತಾದ ಎಲ್ಲ ವಿಷಯಗಳಲ್ಲಿಯೂ ಪದ್ಧತಿಯೇ ಕಾನೂನಿನ ಮೊಟ್ಟಮೊದಲ ನಿಯಮ. ಈ ಪದ್ಧತಿಗಳನ್ನು ಪಂಜಾಬಿಗಳು ಬಹಳ ಹಿಂದಿನ ಕಾಲದಿಂದಲೂ ನಡೆಸಿಕೊಂಡು ಬಂದಿದ್ದಾರೆ ಮತ್ತು ಪ್ರತಿಯೊಬ್ಬ ಹಳ್ಳಿಗನಿಗೂ ತಾನು ಯಾವ ನಿಯಮವನ್ನು ಪಾಲಿಸಬೇಕೆಂದು ಗೊತ್ತು. ಈ ಪದ್ಧತಿಗಳ ಬಗ್ಗೆ ನ್ಯಾಯಾಲಯಗಳಲ್ಲಿ ತೀರ್ಪುಗಳು ಆಗಿವೆ, ಹಾಗೂ ಅವು ಪ್ರತಿಯೊಬ್ಬ ಹಳ್ಳಿಗನಿಗೂ ಸಾಮಾನ್ಯವಾಗಿ ಅರ್ಥವಾಗುತ್ತವೆ. ಅವರ ಬಗ್ಗೆ ಎರಡು ಮಾತಿಲ್ಲ. ಆದುದರಿಂದ, ಈ ಬದಲಾವಣೆಯು ಹೊಸ ಪದಗಳ ಸೃಷ್ಟಿಗೆ ಕಾರಣವಾಗುತ್ತದೆಯಲ್ಲದೆ, ತಮ್ಮ ಕಾನೂನುಗಳನ್ನು ಇಷ್ಟು ದಿನ ತಿಳಿದುಕೊಂಡಿರುವ ಸರಳ ರೈತರಿಗೆ ಈ ಹೊಸ ಪದಗಳು ಜಟಿಲತೆಯನ್ನುಂಟು ಮಾಡುತ್ತವೆ, ಎಂಬುದು ನನ್ನ ಅನಿಸಿಕೆ.

ನನ್ನ ಎರಡನೆಯ ಆಕ್ಷೇಪವು ವಿವಾಹಕ್ಕೆ ಸಂಬಂಧಿಸಿದುದು. ಇಲ್ಲಿಯೂ ನಾನು ಒಂದು ಅಂಶವನ್ನು ಪರಿಶೀಲಿಸುತ್ತೇನೆ. ಇದುವರೆಗೂ ಹಿಂದೂ ಕಾನೂನುಗಳೇ ಸಿಖ್ಖರಿಗೂ ಅನ್ವಯಿಸುತ್ತಾ ಬಂದಿವೆ ಎಂದು ಕೆಲವರು ಹೇಳಬಹುದು. ಆದರೆ ನಾನು ಆಕ್ಷೇಪಿಸುತ್ತಿರುವುದು ಅದರಲ್ಲಿ ತಂದಿರುವ ಬದಲಾವಣೆಗೆ. ಹಿಂದೂ ಕಾನೂನು ಈಗಿರುವಂತೆಯೇ ಮುಂದುವರಿದರೆ, ನನ್ನದೇನೂ ಆಕ್ಷೇಪವಿಲ್ಲ. ಆದರೆ ಈ ಬದಲಾವಣೆಗಳನ್ನು ಹೊರಗಿನಿಂದ ತಂದಿರುವುದರಿಂದ, ಸಿಖ್ಖರು ಈ ಬಗ್ಗೆ ದೂರಬಹುದು ಎನಿಸುತ್ತದೆ. ಇದಕ್ಕೆ ನಾನು ಹೇಳುವುದೇನೆಂದರೆ, ಪದ್ಧತಿಗಳು ಈಗಿರುವಂತೆಯೇ ಮುಂದುವರಿಯಲು ಬಿಡಬೇಕು, ಅಥವಾ ಅವುಗಳನ್ನು ತಿರುಗುತ್ತಿರುವ ಚಕ್ರಕ್ಕೆ ಬಂಧಿಸಲೇಬೇಕು ಎಂದು ಹಟ ಹಿಡಿಯಬಾರದು. ನಾನು ವಿವಾಹದ ಪ್ರಶ್ನೆಯನ್ನು ಕುರಿತು ಪ್ರಸ್ತಾಪಿಸುತ್ತಿದ್ದೆ. ಹಿಂದೂ ಕಾನೂನಿನಲ್ಲಿ ಅಥವಾ ಹಿಂದೂ ಸಂಸ್ಕೃತಿಯಲ್ಲಿ ಹೆಂಡತಿಯು ಗಂಡನ ಹೃದಯದಲ್ಲಿ ಒಂದಾಗಬೇಕೆಂದು ಅವಳಿಗೆ ಬುದ್ಧಿವಾದ ಹೇಳಲಾಗುತ್ತದೆ. ಹೆಂಡತಿಯೆಂದರೆ ತ್ಯಾಗದ ಮೂರ್ತಿ. ಅದು ಅವಳ ಆರ್ಯ ಸ್ವಭಾವ, ಅವಳ ಘನತೆ. ಈಗ ನಮ್ಮ ಸ್ತ್ರೀಯರು ಇದುವರೆಗೂ ತಾವು ತುಳಿಯಲ್ಪಟ್ಟಿದ್ದೇವೆಂದು ಭಾವಿಸಿದರೆ, ತಾವು ನರಳುತ್ತಿರುವುದಾಗಿ ಭಾವಿಸಿದರೆ ಮತ್ತು ಇನ್ನು ಮುಂದೆ ನರಳಲು ಸಿದ್ಧರಿಲ್ಲವೆಂದು ಹೇಳಿದರೆ, ನಮ್ಮ ಸೋದರರೇ ಅಧೀನರಾಗಿರುವಂತೆ ಬುದ್ಧಿವಾದ ಹೇಳುತ್ತೇನೆ. ಆದರೆ ಈ ರೀತಿ ಪ್ರತಿಯೊಂದು ವಿಷಯದಲ್ಲಿಯೂ ಮತ್ತು ಕೌಟುಂಬಿಕ ಜೀವನದಲ್ಲಿಯೂ ಸಮಾನತೆ ಬೇಕೆಂದು ಹಟ ಹಿಡಿಯುವುದು ಕುಟುಂಬದಲ್ಲಿ ಸುಖ–ಶಾಂತಿ ನೆಲೆಸಲು ಕಾರಣವಾಗುವುದಿಲ್ಲ.

ನನ್ನ ಮತ್ತೊಂದು ಆಕ್ಷೇಪಣೆಯೆಂದರೆ, ಈ ಮಸೂದೆಯಲ್ಲಿ ಕೇವಲ ಎರಡು ರೀತಿಯ ವಿವಾಹಗಳಿಗೆ

ಮಾನ್ಯತೆ ನೀಡಲಾಗಿದೆ; ಒಂದು ಧಾರ್ಮಿಕ ಸಂಸ್ಕಾರದ ರೂಪವುಳ್ಳದ್ದು, ಮತ್ತೊಂದು ಶಾಸನಿಕ ಸ್ವರೂಪದ್ದು. ಸದನದ ಅನೇಕ ಜನರಿಗೆ ಗೊತ್ತಿದ್ದರೂ ನಾನು ಒಂದು ವಿಷಯವನ್ನು ತಿಳಿಸಬೇಕಾಗಿದೆ. ಅದೇಂದರೆ, ಸಿಖ್ಖರಲ್ಲಿ ಇನ್ನೂ ಒಂದು ರೀತಿಯ ವಿವಾಹ ಪದ್ಧತಿಯಿದೆ. ಅವರು ಅದನ್ನು ಕಳೆದ ನೂರು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಇದಕ್ಕೆ ಆನಂದ ವಿವಾಹ ಸಂಸ್ಕಾರ ಎಂದು ಹೆಸರು. ಇದೊಂದು ಸರಳ ರೂಪದ ಸಮಾರಂಭ. ಮೊದಲು ವಧು–ವರರನ್ನು ಗುರು ಗ್ರಂಥ ಸಾಹೇಬದೆದುರು ಕರೆತರುವುದು; ಆಗ ಅವರು ಪ್ರಮಾಣ ವಚನ ಸ್ವೀಕರಿಸಿ, ಗ್ರಂಥ ಸಾಹೇಬಕ್ಕೆ ನಾಲ್ಕು ಸಾರಿ ಪ್ರದಕ್ಷಿಣೆ ಹಾಕುತ್ತಾರೆ. ಆಮೇಲೆ ಪ್ರಾರ್ಥನೆ ಸಲ್ಲಿಸುತ್ತಾರೆ. ಇಲ್ಲಿಗೆ ಮದುವೆ ಮುಗಿಯಿತು. ಆದರೆ ಇದು ಶಾಸನಿಕ ವಿವಾಹವಲ್ಲ. ಏಕೆಂದರೆ ಶಾಸನಿಕ ವಿವಾಹದಲ್ಲಿ ಎಲ್ಲಾದರೊಂದು ಕಡೆ ನೋಂದಣಿ ಮಾಡಿಸಬೇಕು. ಅದು ಧರ್ಮ ಸಂಸ್ಕಾರವೂ ಅಲ್ಲ. ಏಕೆಂದರೆ ಸಪಿಂಡದ ನಿಯಮವನ್ನಾಗಲಿ, ಸಗೋತ್ರದ ನಿಯಮವನ್ನಾಗಲಿ ಇಲ್ಲಿ ಕಟ್ಟುನಿಟ್ಟಾಗಿ ಪಾಲಿಸುವುದಿಲ್ಲ. ಈಗ ನನಗಿರುವ ಭಯವೇನೆಂದರೆ, ಅಷ್ಟೊಂದು ವರ್ಷಗಳಿಂದ ನಡೆಸಿಕೊಂಡು ಬಂದಿರುವ ಈ ರೀತಿಯ ವಿವಾಹವು (ಈ ಹೊಸ ನಿಯಮದ ಪ್ರಕಾರ) ಸಾಧುವಾಗುವುದಿಲ್ಲವೇನೋ. ಈ ಶತಮಾನದ ಆದಿಯಲ್ಲಿ ಆ ಬಗ್ಗೆ ಕೆಲವು ಸಂಶಯಗಳು ಎದ್ದವು ಹಾಗೂ ೧೯೦೯ರಲ್ಲಿ ಒಂದು ವಿಶಿಷ್ಟ ಶಾಸನವನ್ನು ಆನಂದ ವಿವಾಹವನ್ನು ಸಕ್ರಮಗೊಳಿಸುವ ಶಾಸನ ಎಂಬ ಹೆಸರಿನಲ್ಲಿ ಮಾಡಬೇಕಾಯಿತು. ಈ ಶಾಸನವನ್ನು ಮಾಡಿ, ಈ ಪದ್ಧತಿಯ ಪ್ರಕಾರ ಜರುಗಿದ ಎಲ್ಲ ವಿವಾಹಗಳನ್ನೂ ಸಕ್ರಮವಾಗಿ ಪರಿಗಣಿಸಲಾಯಿತು. ಆದರೆ ಈಗ ನಾನು ಓದಿರುವಂತೆ, ಈ ಪ್ರಕಾರದ ವಿವಾಹವು ಹಿಂದೂ ನಿಯಮಾವಳಿಯಡಿಯಲ್ಲಿ ಮಾನ್ಯತೆ ಪಡೆಯುತ್ತದೆಯೋ ಇಲ್ಲವೋ ಎಂಬ ಆತಂಕ ನನಗೆ ಉಂಟಾಗಿದೆ. ಆದುದರಿಂದ, ಈ ವಿಷಯದಲ್ಲಿ ಸಿಖ್ಖರಿಗೆ ಹೆಚ್ಚು ಕಳವಳ ಉಂಟಾಗುತ್ತದೆ ಹಾಗೂ ಈ ಬಗ್ಗೆ ಅವರಲ್ಲಿ ಘೋರ ಭಯ ಉಂಟಾದೀತು. ನಾನು ಈ ಮೂಲಕ ಚರ್ಚೆಗೆ ಚಾಲನೆ ನೀಡಿದವರ ಗಮನಕ್ಕೆ ತರುವುದೇನೆಂದರೆ, ಸಿಖ್ಖರನ್ನು ಅವರ ಪಾಡಿಗೆ ಅವರನ್ನು ಬಿಟ್ಟರೆ, ಈ ಪ್ರಕಾರದ ವಿವಾಹ ಪದ್ಧತಿಯನ್ನು ಕೈಬಿಡಲು ಸಿದ್ಧರಿಲ್ಲ. ಚರ್ಚೆಗೆ ಚಾಲನೆ ನೀಡಿದವರು ಇದನ್ನು ವಿಶೇಷವಾಗಿ ಗಮನಿಸಬೇಕು.

**ಶ್ರೀ ನಝೀರುದ್ದೀನ್ ಅಹಮ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಂ) : ಅಂಥ ವಿವಾಹಗಳು ಈ ಮಸೂದೆಯಡಿಯಲ್ಲಿ ಅಕ್ರಮವಾಗುತ್ತವೆ.

**ಸರ್ದಾರ್ ಹುಕುಂ ಸಿಂಗ್ :** ಈ ಮಸೂದೆಯಡಿಯಲ್ಲಿ ಅದು ಅಕ್ರಮವಾಗಬಹುದೆಂದು ನನಗೂ ಅನಿಸುತ್ತದೆ. ಆದುದರಿಂದಲೆ ನಾನು ಸದನದ ಮುಂದೆ, ವಿಶೇಷವಾಗಿ, ಚರ್ಚೆಗೆ ಚಾಲನೆ ನೀಡಿದವರ ಮುಂದೆ, ನಿವೇದಿಸಿಕೊಳ್ಳುತ್ತಿದ್ದೇನೆ.

ವಿಚ್ಛೇದನಕ್ಕೆ ಸಂಬಂಧಿಸಿದ ನನ್ನ ಒಂದು ಪರಿಶೀಲನೆಯನ್ನೂ ತಮ್ಮ ಮುಂದಿಡುತ್ತೇನೆ. ನಮ್ಮ ಜನಸಂಖ್ಯೆಯ ಬಹಳ ದೊಡ್ಡ ಪಾಲಿನಲ್ಲಿ ಆಗಲೆ ವಿಚ್ಛೇದನ ಚಾಲ್ತಿಯಲ್ಲಿದೆ ಎಂದು ಹೇಳಲಾಗುತ್ತಿದೆ. ಇರಬಹುದು. ಆದರೆ ನನ್ನ ಬೇಡಿಕೆ ಇಷ್ಟೆ : ಈಗಾಗಲೇ ಚಾಲ್ತಿಯಲ್ಲಿದ್ದರೆ, ಅದು ಚಾಲ್ತಿಯಲ್ಲಿರಲಿ. ಆದರೆ ಕೆಲವು ವಿಶಿಷ್ಟ ವಿಧಿಗಳನ್ನು ಹೇರಿ, ಅದನ್ನು ಮಿತಿಗೊಳಿಸಿ. ಬಹಳ ಖರ್ಚಿನ ವಿಷಯವನ್ನಾಗಿ ಮಾಡಬೇಡಿ. ಹಾಗೆ ಮಾಡಿದರೆ ಜನಸಾಮಾನ್ಯರು ಈ ಬದಲಾವಣೆ ಯಾವುದೋ ಕೇಡಿಗೇ ಹೊರತು, ಒಳ್ಳೆಯದಕ್ಕಲ್ಲ ಎಂದು ಭಾವಿಸಿಯಾರು. ವಿವಾಹವನ್ನು ರದ್ದುಗೊಳಿಸುವ ಒಂದು ಸುಲಭೋಪಾಯ ಈಗ ಅವರಿಗಿದ್ದರೆ, ಹಾಗೂ ಇನ್ನು ಮುಂದೆ ಬಹಳ ಜಟಿಲ ಹಾಗೂ ಬಹಳ ದುಬಾರಿಯಾದ ಮಾರ್ಗವನ್ನು ಅನುಸರಿಸಲೇಬೇಕಾದ ಪ್ರಸಂಗ ಉಂಟಾದರೆ, ಖಂಡಿತವಾಗಿಯೂ ಅವರು ಈ ಬದಲಾವಣೆಯನ್ನು ಸ್ವಾಗತಿಸುವುದಿಲ್ಲ. ಈ

ಮಸೂದೆಯೊಳಕ್ಕೆ ಅನೇಕ ದೋಷಗಳು ನುಸುಳುತ್ತಿವೆ ಎಂದು ಕೆಲವರು ವಾದಿಸುತ್ತಿದ್ದಾರೆ. ಇದೊಂದು ಅನುಮತಿ ಮಸೂದೆ (Permissive Bill) ಎಂದು ಕರೆಯಲಾಗುತ್ತಿದೆ. ಇದು ಯಾರನ್ನೂ ಒತ್ತಾಯಿಸುವುದಿಲ್ಲ. ಆದರೆ ನಾನು ಜಾಗರೂಕತೆಯಿಂದಿದ್ದು, ಸೂಚಿಸಲಾಗಿರುವ ಔಷಧಿಯು ರೋಗಕ್ಕಿಂತ ಕೆಟ್ಟುದಲ್ಲವೆ? ಎಂದು ತೀರ್ಮಾನಿಸಬೇಕು. ಇದರಲ್ಲಿ ಕೆಲಮಟ್ಟಿಗೆ ದೋಷಗಳಿರುವುದೇನೋ ನಿಜ. ಆದರೆ ಕಟ್ಟುಗಳನ್ನು ಸಡಿಲಗೊಳಿಸಿದರೆ, ಸ್ವಲ್ಪ ಪ್ರಮಾಣದ ಜನರು ತಮ್ಮ ಬಂಧನಗಳನ್ನು ಕಳಚಿಕೊಂಡು ಸಂತೋಷಪಡಬಹುದು ಹಾಗೂ ಸ್ವಯಂಕೃತ ದುಃಖಗಳಿಂದ ಮುಕ್ತಿ ಪಡೆಯಬಹುದು. ಆದರೆ ಉಳಿದ ಅಲ್ಪಸಂಖ್ಯಾತ ಜನರ ಪಾಡೇನು? ಈ ಮೂಲಕ ನೀವು ಅವರಿಗೆ ಒಂದು ಬಲೆಯನ್ನು ಒಡ್ಡುತ್ತಿಲ್ಲವೇ? ತಪ್ಪೆಸಗಲು ಅವರಿಗೆ ಪ್ರಲೋಭನೆ ನೀಡುತ್ತಿಲ್ಲವೆ? ಅದನ್ನು ಕೊನೆಗಾಣಿಸಲು ಒಂದು ದಾರಿಯದೆ ಎಂದು ಅವರಿಗೆ ಮನವರಿಕೆಯಾದಾಗ ಅವರು ತಮ್ಮ ಭವಿಷ್ಯವನ್ನು ಪರೀಕ್ಷೆಗೀಡು ಮಾಡುತ್ತಿಲ್ಲವೇನು?

ಆಮೇಲೆ, ನಾನು ದತ್ತು ಸ್ವೀಕಾರಕ್ಕೆ ಸಂಬಂಧಿಸಿದ ಎರಡನೇ ಮುಖ್ಯ ಅಂಶಕ್ಕೆ ಬರುತ್ತಿದ್ದೇನೆ. ನನ್ನ ಪ್ರಾಂತ್ಯದಲ್ಲಿ, ಅಂದರೆ ಪಂಜಾಬಿನಲ್ಲಿ, ದತ್ತು ಸ್ವೀಕಾರವು ಒಂದು ವಿಚಿತ್ರ ಸಂಸ್ಥೆಯಾಗಿದೆ. ಅದಕ್ಕೆ ಪದ್ಧತಿಯ ಮೂಲಕ ಉತ್ತರಾಧಿಕಾರಿಯ ನೇಮಕ ಎಂದು ಹೆಸರು. ಅದಕ್ಕೂ ಧರ್ಮಕ್ಕೂ ಏನೂ ಸಂಬಂಧವಿಲ್ಲ. ವ್ಯಾವಹಾರಿಕ ಉದ್ದೇಶಗಳಿಗಾಗಿ ಮಾಡುವ ಒಂದು ಸರಳ ಘೋಷಣೆ. ಅದರ ಪ್ರಕಾರ ಭೂಮಿಯ ಒಡೆಯನು ಒಬ್ಬ ವ್ಯಕ್ತಿಯನ್ನು ನೇಮಿಸಿಕೊಳ್ಳುತ್ತಾನೆ. ಆ ಒಡೆಯನು ಬದುಕಿರುವವರೆಗೂ ಆ ವ್ಯಕ್ತಿ ಅವನ ಬೇಸಾಯ ಕಾರ್ಯಗಳಲ್ಲಿ ಸಹಾಯಕನಂತೆ ಕೆಲಸಮಾಡಬೇಕು. ಒಡೆಯ ಸತ್ತ ನಂತರ ಆ ವ್ಯಕ್ತಿ ಅವನ ಉತ್ತರಾಧಿಕಾರಿಯಾಗುತ್ತಾನೆ. ನಾನಾಗಲೇ ಹೇಳಿದಂತೆ, ಇದಕ್ಕೂ ಧರ್ಮಕ್ಕೂ ಏನು ಸಂಬಂಧವಿಲ್ಲ. ಉತ್ತರಾಧಿಕಾರಿಯಾಗುವವನಿಗೆ ಇಷ್ಟೇ ವಯಸ್ಸಾಗಿರಬೇಕು, ಇಂಥ ಅವನು ಒಡೆಯನೊಡನೆ ಇಂಥ ಸಂಬಂಧವನ್ನುಳ್ಳವನೇ ಆಗಿರಬೇಕು ಎಂಬ ನಿರ್ಬಂಧವೇನಿಲ್ಲ. ನೀವು ಮಗಳ ಮಗನನ್ನಾಗಲಿ, ಸೋದರಿಯ ಮಗನನ್ನಾಗಲಿ ದತ್ತು ತೆಗೆದುಕೊಳ್ಳಬಹುದು ಎಂದು ನೀವು ಈ ಮಸೂದೆಯಲ್ಲಿ ಸೂಚಿಸುತ್ತಿದ್ದೀರಿ. ಆದರೆ ಪದ್ಧತಿಯ ಮೂಲಕ ಮಾಡುವ ನೇಮಕಾತಿಯಲ್ಲಿ ಸರ್ವೇಸಾಮಾನ್ಯವಾಗಿ ಮಗಳ ಮಗನನ್ನೆ ಉತ್ತರಾಧಿಕಾರಿಯನ್ನಾಗಿ ನೇಮಿಸಲಾಗುತ್ತದೆ, ಸೋದರಿಯ ಪುತ್ರರನ್ನೂ ನೇಮಿಸಲಾಗುತ್ತದೆ ಎಂದು ನಾನಾಗಲೇ ಹೇಳಿದೆ. ಅದರಲ್ಲಿ ಯಾವುದೇ ನಿರ್ಬಂಧವಿಲ್ಲ ಒಬ್ಬ ಯುವಕ ತನ್ನ ತಂದೆ ವಯಸ್ಸಿನವನನ್ನು ದತ್ತು ತೆಗೆದುಕೊಳ್ಳಬಹುದು. ಅನೇಕ ಪುತ್ರರನ್ನುಳ್ಳ ವ್ಯಕ್ತಿ ಉತ್ತರಾಧಿಕಾರಿಯೆಂದು ನೇಮಿಸಲ್ಪಡಬಹುದು. ಇಲ್ಲಿಯ ಕೆಲವರಿಗೆ ಇದು ವಿಚಿತ್ರವೆಂದು ಕಾಣಬಹುದು. ಆದರೆ ನಾನು ಅದೊಂದು ಸತ್ಯಸಂಗತಿ ಎನ್ನುತ್ತೇನೆ. ವಿವಾಹಿತ ಮನುಷ್ಯ ಅಥವಾ ಮಕ್ಕಳುಳ್ಳ ಮನುಷ್ಯನನ್ನು ಉತ್ತರಾಧಿಕಾರಿಯಾಗಿ ನೇಮಿಸಬಹುದು. ಇದೊಂದು ಅತ್ಯಂತ ಧರ್ಮನಿರಪೇಕ್ಷ ಸಂಸ್ಥೆ; ಅದಕ್ಕೆ ಧರ್ಮದೊಡನೆ ಯಾವ ಸಂಬಂಧವೂ ಇಲ್ಲ. ಅಂಥ ಸಂಸ್ಥೆಗೆ ಈ ಮಸೂದೆಯಲ್ಲಿ ಹೇಗೆ ಅವಕಾಶ ಕೊಡುತ್ತೀರಿ? ಅಥವಾ ಅದನ್ನು ಕೈಬಿಡುತ್ತೀರೇನು? ನಿಜವಾಗಿಯೂ ಅದಕ್ಕೆ ಯುಗಯುಗಗಳಿಂದ ಮನ್ನಣೆ ಇದೆ. ಅದು ನಮ್ಮ ದೇಶದ ಈ ಭಾಗದಲ್ಲಿ ಎಷ್ಟು ಜನಪ್ರಿಯವಾಗಿದೆಯೆಂದರೆ, ಅದನ್ನು ಕೈ ಬಿಡಲು ಸಾಧ್ಯವೇ ಇಲ್ಲ. ಜನರು ಅದನ್ನು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ಮಸೂದೆಯ ಈ ಭಾಗಕ್ಕೆ ಸಂಬಂಧಿಸಿದಂತೆ ಹೇಳಬೇಕೆಂದರೆ, ಅದನ್ನು ನಮ್ಮ ಜನರ ಮೇಲೆ ಒತ್ತಾಯಪೂರ್ವಕವಾಗಿ ಹೇರಿದರೆ, ಅದಕ್ಕೆ ಮನ್ನಣೆ ಸಿಕ್ಕುವುದಿಲ್ಲ.

ಇನ್ನು ಉತ್ತರಾಧಿಕಾರದ ಸಮಸ್ಯೆ. ನಮ್ಮ ಹೆಂಗಸರಿಗೆ, ಅಂದರೆ ಸೋದರಿಯರು ಹಾಗೂ ಪುತ್ರಿಯರಿಗೆ ಆಸ್ತಿಯಲ್ಲಿ ಪಾಲು ಸಿಗಬೇಕೆಂಬ ನಮ್ಮ ಸ್ನೇಹಿತರ ಮಾತಿಗೆ ನನ್ನ ಒಪ್ಪಿಗೆಯಿದೆ. ನನ್ನ ಮಾತನ್ನು ಸಂಕ್ಷಿಪ್ತಗೊಳಿಸಿ

ಹೇಳುವುದೇನೆಂದರೆ ಹೆಂಗಸರಿಗೆ ಮದುವೆಯಾದ ಮೇಲೆ ತಂದೆಯ ಆಸ್ತಿಯಲ್ಲಲ್ಲ, ಮಾವನ ಆಸ್ತಿಯಲ್ಲಿ ಪಾಲು ಕೊಡಬೇಕು ಎಂದು ಸ್ವಲ್ಪ ಹೊತ್ತಿಗೆ ಮುಂಚೆ ಹೇಳಿದ ನನ್ನ ವಿದ್ವಾಂಸ ಸ್ನೇಹಿತ ಡಾ. ಭಕ್ಷಿ ತೇಕ್‌ಚಂದರ್‌ರ ಮಾತನ್ನು ನಾನು ಒಪ್ಪುತ್ತೇನೆ. ಹಾಗೆ ಹೇಳಲು ನನಗೆ ವಿಶಿಷ್ಟ ಕಾರಣಗಳಿವೆ. ಅದೇನೆಂದರೆ, ನಾನು ಈ ಮೊದಲೆ ಹೇಳಿದಂತೆ, ನಮ್ಮ ಪ್ರಾಂತ್ಯದಲ್ಲಿರುವ ಪರಿಸ್ಥಿತಿಗಳು ತೀರಾ ವಿಚಿತ್ರವಾಗಿವೆ. ಪಂಜಾಬ್ ಒಂದು ಸಣ್ಣ ಸಣ್ಣ ರೈತರ ಪ್ರಾಂತ್ಯ, ಸರ್ವೇಸಾಮಾನ್ಯವಾಗಿ ರೈತರಿಗೆ ಮೂರು ಅಥವಾ ನಾಲ್ಕು ಎಕರೆ ಭೂಮಿಯ ಹಿಡುವಳಿ ಇರುತ್ತದೆ. ಅಂಥವನ ಹತ್ತಿರ ಎರಡು ಎತ್ತುಗಳಿಗಿಂತ ಹೆಚ್ಚು ಇರಲು ಸಾಧ್ಯವೇ ಇಲ್ಲ. ಅವನ್ನೂ ಅವನು ಪ್ರಾಯಶಃ ಸಾಲ ಮಾಡಿ ತಂದಿರಬಹುದು. ಜೊತೆಗೆ ಒಂದು ನೇಗಿಲು, ಒಂದು ಪಂಜಲಿ ಇರುತ್ತವೆ. ಹೊಲಕ್ಕೆ ಗೊಬ್ಬರ ತೆಗೆದುಕೊಂಡು ಹೋಗಲು, ಹೊಲದಿಂದ ಮನೆಗೆ ಮೇವು ತರಲು ಒಂದು ಗಾಡಿಯೂ ಇರುತ್ತದೆ. ಈ ನಿಯಮಾವಳಿಯೇನೋ ವ್ಯವಸಾಯದ ಭೂಮಿಗೆ ಅನ್ವಯಿಸದೆ ಇರಬಹುದು. ಆದರೆ ಚರಾಸ್ತಿಗೆ ಅನ್ವಯಿಸುವುದಿಲ್ಲವೆ? ಆಗ ಅವನ ಎತ್ತುಗಳ ಪರಿಸ್ಥಿತಿ ಏನು? ಒಬ್ಬ ಮಗ, ಒಬ್ಬ ಮಗಳು ಇರುವ ಕುಟುಂಬದ ಒಂದು ಸರಳ ಉದಾಹರಣೆಯನ್ನು ತೆಗೆದುಕೊಳ್ಳಿ. ತಂದೆ ಸತ್ತರೆ, ಈ ಚರಾಸ್ತಿಯನ್ನು ಆ ಇಬ್ಬರು ಮಕ್ಕಳಲ್ಲಿ ಹಂಚಬೇಕು, (ಒಬ್ಬ ಸನ್ಮಾನ್ಯ ಸದಸ್ಯರು: ಏಕಾಗಬಾರದು?) ಹಂಚಬಾರದು ಎಂದು ನಾನು ಹೇಳುತ್ತಿಲ್ಲ, ನಾನು ಹಂಚಲೇಬೇಕು ಎಂದು ಹೇಳುತ್ತಿದ್ದೇನೆ. ಸಾಮಾನ್ಯವಾಗಿ, ಆ ಕುಟುಂಬಕ್ಕೆ ಒಂದು ಹಸುವೂ ಸೇರಿರುತ್ತದೆ. ಮಸೂದೆಯನ್ನು ಮಂಡಿಸಿದವರು ಹಸು, ಪಂಜಲಿ ಮತ್ತು ನೇಗಿಲನ್ನು ಹಂಚಿಕೊಳ್ಳುವ ವಿಧಾನವನ್ನು ತಿಳಿಸಿಕೊಡಬೇಕು. ದೂರದಿಂದ, ಉದಾಹರಣೆಗೆ ಐವತ್ತು ಮೈಲಿ ದೂರದಿಂದ, ಅಳಿಯ ಬರುತ್ತಾನೆ. ಅವನಿಗೂ ಈ ಆಸ್ತಿಯಲ್ಲಿ ಆಸಕ್ತಿ ಇದೆ. ಆದರೆ ಅವನು ಭಾವನ ಜೊತೆ ಬಾಳಲಾರ, ಏಕೆಂದರೆ ಇರುವ ಆ ನಾಲ್ಕು ಎಕರೆ ಹಿಡುವಳಿ ಅವನಿಗೆ ಏನನ್ನೂ ಕೊಡುವುದಿಲ್ಲ. ಅವನ ಆಸಕ್ತಿ ನಿಜವಾಗಿಯೂ ಇರುವುದು ಬೇರೆ ಕಡೆ. ಆಗ ಅವನು ತನ್ನ ಹೆಂಡತಿಯ ಪಾಲನ್ನು ಮಾರಿ ಹೋಗುತ್ತಾನೆ. ಸೋದರಿಯು ಪಾಲು ಕೇಳುತ್ತಾಳೆ, ಆಗ ಅವಳು ಒಂದು ಎತ್ತನ್ನು ತೆಗೆದುಕೊಳ್ಳಬೇಕು, ಗಾಡಿಯ ಅರ್ಧವನ್ನು ತೆಗೆದುಕೊಳ್ಳಬೇಕು, ಪಂಜಲಿಯ ಅರ್ಧವನ್ನು ತೆಗೆದುಕೊಳ್ಳಬೇಕು. ಇವನ್ನೆಲ್ಲ ತೆಗೆದುಕೊಂಡು ಅವಳು ಹಿಂತಿರುಗಿ ಬರದಂತೆ ಹೊರಟುಹೋಗುತ್ತಾಳೆ. ಪ್ರಾಯಶಃ ಅವಳು ಈ ಮಸೂದೆಯನ್ನು ರೂಪಿಸಿದವರನ್ನು ವಂದಿಸುತ್ತಾ ಹೋಗುತ್ತಾಳೆ. ಹಿಂತಿರುಗಿ ಬಂದಾಗ, ಆಕೆಯನ್ನು ಯಾರೂ ಸ್ವಾಗತಿಸುವುದಿಲ್ಲ! (ಆಗ ಸನ್ಮಾನ್ಯ ಸದಸ್ಯರು: ಆಕೆಯ ಸ್ವಂತ ಸೋದರನ ಭಾವನೇ ವಂದಿಸುತ್ತಾನೆ!) ಹೀಗೆ ಪ್ರಶ್ನಿಸುವುದು ಸುಲಭ. ಸೋದರ ಒಬ್ಬನಿಗಿಂತ ಹೆಚ್ಚಿದ್ದಾಗ? ಪೂರ್ವ ಪಂಜಾಬಿನಲ್ಲಿ ಇಬ್ಬರು, ಮೂವರು, ನಾಲ್ವರು ಸೋದರರಿರುತ್ತಾರೆ. ಅವರು ಸೈನಕ್ಕೆ ಸೇರುತ್ತಾರೆ, ಅವರು ಸಾಹಸಿಗಳು, ಅವರು ಅರ್ಜೆಂಟೈನ, ಬ್ರೆಜಿಲ್, ದಕ್ಷಿಣ ಅಮೆರಿಕಾಗಳಂತಹ ಪ್ರಪಂಚದ ಮೂಲೆ ಮೂಲೆಗಳಿಗೆ ಹೋಗುತ್ತಾರೆ. ಅಲ್ಲಿಂದ ಹಣ ತಂದು ಹೆಚ್ಚು ಭೂಮಿ ಕೊಳ್ಳುತ್ತಾರೆ, ಹಾಗೂ ಒಂದೇ ಒಲೆ ಹೂಡುತ್ತಾರೆ.

ಮಾನ್ಯರೆ, ನನ್ನ ಅರಿಕೆ ಇಷ್ಟೆ – ಈ ಮಸೂದೆಯು ಅನೇಕ ತೊಂದರೆಗಳನ್ನು ಸೃಷ್ಟಿಸುತ್ತದೆ. ಎಲ್ಲಿಯವರೆಗೆ ಮಗಳಿಗೆ ಮದುವೆಯಾಗುವುದಿಲ್ಲವೋ ಅಲ್ಲಿಯವರೆಗೆ ಆಕೆಗೆ ತಂದೆಯ ಆಸ್ತಿಯಲ್ಲಿ ಪಾಲಿರಬೇಕು ಎಂಬ ನನ್ನ ವಿದ್ವಾಂಸ ಗೆಳೆಯ ಡಾ. ಭಕ್ಷಿ ತೇಕ್‌ಚಂದ್‌ರ ಮಾತನ್ನು ನಾನು ಒಪ್ಪುತ್ತೇನೆ. ಆದರೆ, ಅವಳಿಗೆ ಮದುವೆಯಾದ ತಕ್ಷಣ, ಅವಳನ್ನು ಮಾವನ ಮನೆಗೆ ಕಳಿಸಬೇಕು. ಅಲ್ಲಿ ಅವಳಿಗೆ ಪಾಲಿನ ಹಕ್ಕು, ಮತ್ತಿತರ ಹಕ್ಕುಗಳು ಇರಬೇಕು. ಹೆಂಗಸರಿಗೆ ಪಾಲು ಕೊಡಬೇಕು ಎಂಬುದಕ್ಕೆ ನನ್ನ ವಿರೋಧವಿಲ್ಲ, ಈ ಬಗ್ಗೆ ನನ್ನನ್ನು ತಪ್ಪು ತಿಳಿಯಬಾರದು.

ನಮ್ಮ ವಿದ್ಯಾವಂತ ಹುಡುಗಿಯರಿಗೆ ಬಹಳ ವಿರಾಮವಿದೆಯೆಂದು ಕಾಣುತ್ತದೆ. ಒಬ್ಬ ಸಾಮಾನ್ಯ ಹುಡುಗಿ ವಿದ್ಯಾವಂತೆಯಾದ ಕೂಡಲೆ, ತನ್ನನ್ನು ತಾನು ಮನೆಗೆಲಸದಲ್ಲಿ ತೊಡಗಿಸಿಕೊಳ್ಳುವುದಿಲ್ಲ. ಆದುದರಿಂದ ಅವಳು ಯಾವಾಗಲೂ ಮನೆಯಲ್ಲಿ ಕಾರ್ಯೋನ್ಮುಖವಾಗಿರುವಷ್ಟು ಕೆಲಸ ಅವಳಿಗೆ ಇರುವುದಿಲ್ಲ.

(ಈ ಘಟ್ಟದಲ್ಲಿ, ಸನ್ಮಾನ್ಯ ಉಪಸಭಾಪತಿಗಳಾದ ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ ತಮ್ಮ ಆಸನದಲ್ಲಿ ಪುನರಾಸೀನರಾದರು.)

ಸರ್ಕಾರವು ಅವರಿಗೆ ಉದ್ಯೋಗ ಕೊಡಬೇಕು. ಪ್ರಯೋಜನಕಾರಿಯೂ ರಚನಾತ್ಮಕವೂ ಆದ ಕೆಲಸಗಳನ್ನು ಅವರು ವಿರಾಮದಲ್ಲಿ ಮಾಡಬೇಕು. ಇಂಥ ಶಾಸನಗಳು, ವಿಚ್ಛೇದನಗಳು ನೀವು ನಿರ್ಮೂಲನ ಮಾಡಬೇಕೆಂದಿರುವ ಅನಿಷ್ಟಗಳನ್ನು ನಿರ್ಮೂಲನ ಮಾಡಲು ಸಾಧ್ಯವಿಲ್ಲ. ಅವಿಭಕ್ತ ಕುಟುಂಬಗಳನ್ನು ನಾಶಮಾಡುವ ಮೊದಲು ರಾಜ್ಯ ಸರ್ಕಾರವು ವೃದ್ಧರಿಗೆ ಜೀವನಾಂಶ ಕೊಡಬೇಕು, ಆರೋಗ್ಯ ಭತ್ಯೆ ನೀಡಬೇಕು, ಮತ್ತಿತರ ಸೌಲಭ್ಯಗಳನ್ನು ನೀಡಬೇಕು. ಇಂಥ ಸತ್ಕಾರ್ಯಗಳನ್ನು ಮಾಡದೆ, ಕೇವಲ ಆಸ್ತಿಯ ಮೇಲೆ ಆಕ್ರಮಣ ಮಾಡುವುದು ತರವಲ್ಲ. ಈ ಮಸೂದೆಯನ್ನು ಜಾರಿಗೆ ತಂದರೆ ನನಗೆ ತಿಳಿದಂತೆ ಆಸ್ತಿಯ ವಿಭಜನೆ ಆಗುತ್ತದೆ. ಪ್ರೀತಿ ಅನುಕಂಪ ಇಲ್ಲವಾಗುತ್ತವೆ, ಆಸ್ತಿ ವಿಭಜನೆಯ ನ್ಯಾಯಾಲಯಗಳು ಹೆಚ್ಚುತ್ತವೆ, ಹೆಣ್ಣು ಶಿಶುಹತ್ಯೆಗೆ ಉತ್ತೇಜನ ಸಿಕ್ಕುತ್ತದೆ ಮತ್ತು ಮಕ್ಕಳ ಕಾಳಜಿ ಮತ್ತು ಹಾರೈಕೆಗೆ ಲಕ್ಷ್ಯ ನೀಡುವುದಿಲ್ಲ.

ಆಗ ಶ್ರೀ ವಿ. ಐ. ಮುನಿಸ್ವಾಮಿ ಪಿಳ್ಳೈ ಎದ್ದರು.

**ಶ್ರೀ ಬಿ. ದಾಸ್** (ಒಡಿಸ್ಸಾ : ಸಾಮಾನ್ಯ) : ಮಾನ್ಯರೆ, ನಾವು ಏಳು ಗಂಟೆಯವರೆಗೂ ಮುಂದುವರಿಸಬೇಕೊ?

**ಮಾನ್ಯ ಉಪಸಭಾಪತಿಗಳು :** ಏಳು ಗಂಟೆಯವರೆಗೂ ಕುಳಿತುಕೊಳ್ಳಲು ನನ್ನದೇನೂ ಅಭ್ಯಂತರ ಇಲ್ಲ. ಸದನದ ಸಾಮಾನ್ಯ ಇರಾದೆ ಏನು?

**ಕೆಲ ಸನ್ಮಾನ್ಯ ಸದಸ್ಯರು :** ಬೇಡ, ಬೇಡ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಸಭೆಗೆ ಬೇಕಾದ ಅಗತ್ಯ ಸಂಖ್ಯೆಯ ಸದಸ್ಯರು ಇರುವವರೆಗೂ ಕೂತಿರೋಣ.

**ಕೆಲ ಸನ್ಮಾನ್ಯ ಸದಸ್ಯರು :** ಬೇಡ, ಬೇಡ.

**ಮಾನ್ಯ ಉಪಸಭಾಪತಿಗಳು :** ನಾನು ಸಾಕಷ್ಟು ಕೇಳಿಸಿಕೊಂಡಿದ್ದೇನೆ. ಒಂದೇ ಧ್ವನಿ ಅನೇಕ ಧ್ವನಿಗಳಾಗಲಾರದು. ಮಾನ್ಯ ಸದಸ್ಯರು ಮಾತಾಡಲು ಎಷ್ಟು ಸಮಯ ತೆಗೆದುಕೊಳ್ಳಬಹುದು.

**ಶ್ರೀ ವಿ. ಐ. ಮುನಿಸ್ವಾಮಿ ಪಿಳ್ಳೈ** (ಮದ್ರಾಸ್ : ಸಾಮಾನ್ಯ) : ಸುಮಾರು ಹದಿನೈದು ನಿಮಿಷ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಮಾನ್ಯರೆ, ವಿಷಯವೇನೆಂದರೆ, ಎಷ್ಟು ಜನ ಸದಸ್ಯರು ಮಾತಾಡಲಿಚ್ಛಿಸುತ್ತಾರೋ ಅಷ್ಟು ಜನರಿಗೂ ಅವಕಾಶ ಕೊಡಬೇಕು. ಆದರೆ ಜನರಿಗೆ ಮಾತಾಡಲು ಇಷ್ಟವಿಲ್ಲದಿರುವುದು ಆಶ್ಚರ್ಯದ ಸಂಗತಿ. ಜನ ಎಲ್ಲಿಯವರೆಗೆ ಮಾತಾಡಲು ಸಿದ್ಧರಿರುತ್ತಾರೋ, ಅಲ್ಲಿಯವರೆಗೂ ಕೂತಿರೋಣ. ಸದಸ್ಯರ ಸಂಖ್ಯೆ ಅಗತ್ಯಕ್ಕಿಂತ ಕಡಿಮೆಯಾದ ಕೂಡಲೇ ನಿಲ್ಲಿಸೋಣ.

ಸಂಜೆ ೫ ಗಂಟೆ.

**ಶ್ರೀಮತಿ ಪೂರ್ಣಿಮಾ ಬ್ಯಾನರ್ಜಿ** (ಉ.ಪ್ರ : ಸಾಮಾನ್ಯ) : ಹಿಂದೂ ಕಾನೂನಿನಂಥ ಮುಖ್ಯ ಕಾನೂನಿನ ಬಗ್ಗೆ ಅನೇಕ ಸದಸ್ಯರು ಮಾತಾಡಲಿಚ್ಛಿಸುತ್ತಾರೆ ಎಂಬ ವಾದವನ್ನು ಮಾನ್ಯ ಸದಸ್ಯರು

ಮಂಡಿಸಿದ್ದಾರೆ. ತಾವು ಹೇಳಬೇಕೆಂದಿರುವುದನ್ನು ಹೇಳಲಿಚ್ಛಿಸುವವರು ಇನ್ನೂ ಅನೇಕರು ಇರುವಾಗ ಹಾಗೂ ಅದಕ್ಕೆ ಸಮಯಾವಕಾಶವಿರುವಾಗ ಏಳು ಗಂಟೆಯವರೆಗೂ ಕೂರಲು ಯಾವ ಆಕ್ಷೇಪಣೆ ಇದೆ?

**ಮಾನ್ಯ ಉಪಸಭಾಪತಿಗಳು :** ಇದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಬಹುತೇಕ ಸದಸ್ಯರು ಕೂತಿರಲು ನಿರ್ಧರಿಸಿದರೆ ಹಾಗೂ ಮಾತಾಡಿದರೆ, ನನ್ನದೇನೂ ಅಭ್ಯಂತರವಿಲ್ಲ.

**ಕೆಲ ಸನ್ಮಾನ್ಯ ಸದಸ್ಯರು :** ಹೌದು, ನಾವು ಹಾಗೇ ನಿರ್ಧರಿಸಿದ್ದೇವೆ.

**ಮಾನ್ಯ ಉಪಸಭಾಪತಿಗಳು :** ಒಳ್ಳೆಯದೇ ಆಯಿತು ಆಯಿತು ಹಾಗಾದರೆ, ಶ್ರೀ ಮುನಿಸ್ವಾಮಿ ಪಿಳ್ಳೈಯವರು ಮುಗಿಸಲಿ, ಆಮೇಲೆ ನೋಡೋಣ.

***ಶ್ರೀ ವಿ. ಐ. ಮುನಿಸ್ವಾಮಿ ಪಿಳ್ಳೈ:** ಅನೇಕ ಶತಮಾನಗಳಿಂದ ಹಿಂದೂ ಸಮಾಜದಿಂದ ಹೊರಗೇ ಇದ್ದ ಕೋಮಿನಿಂದ ಬಂದಿರುವ ನಾನು ಈ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಯ ಕಾಯಿದೆಯನ್ನು ಸ್ವಾಗತಿಸುತ್ತೇನೆ. ಭಾರತದ ಒಟ್ಟು ಜನಸಂಖ್ಯೆಯ ಆರನೆಯ ಒಂದು ಭಾಗದಷ್ಟಿರುವ ನಾವು ಮಹಾತ್ಮ ಗಾಂಧಿಯವರ ಬರವನ್ನು ಸ್ವಾಗತಿಸಿದೆವು. ಗಾಂಧೀಜಿ ಹಿಂದೂ ಸಮಾಜದಲ್ಲಿ ಕ್ರಾಂತಿಯನ್ನುಂಟು ಮಾಡಿ ಬರೀ ಜಾತಿ ಹಿಂದೂಗಳಿಗಷ್ಟೇ ಅಲ್ಲ, ಎಲ್ಲ ಪಂಥಗಳ ಹಿಂದೂಗಳಿಗೂ ಸಮಾನ ಸ್ಥಾನ ಕಲ್ಪಿಸಿಕೊಟ್ಟರು. ನನಗಿಂತ ಮೊದಲು ಮಾತಾಡಿದ ನನ್ನ ಗೆಳೆಯರು ಹಿಂದೂ ಧರ್ಮವು ಅಪಾಯದಲ್ಲಿದೆ ಎಂದರು. ಅವರು ಈ ಆಕ್ಷೇಪವನ್ನು ಯಾವ ಮೂಲದಿಂದ, ಯಾವುದರಿಂದ ಪಡೆದರೆಂಬುದು ನನಗೆ ಗೊತ್ತಿಲ್ಲ. ಈ ದೇಶವು ಅನೇಕ ಅವತಾರಗಳ ಬಗ್ಗೆ ಹೆಮ್ಮೆ ತಳೆದಿದೆ – ಭಗವಾನ್ ಬುದ್ಧ, ಶಂಕರ, ರಾಮಾನುಜ ಅದೇ ರೀತಿ ರಾಜಾರಾಂ ಮೋಹನ್ ರಾಯ್ ಮತ್ತು ಈ ಶತಮಾನದಲ್ಲಿ ಮಹಾತ್ಮ ಗಾಂಧಿಯವರಂಥ ಸಮಾಜ ಸುಧಾರಕರ ಬಗ್ಗೆಯೂ ಈ ದೇಶಕ್ಕೆ ಹೆಮ್ಮೆಯಿದೆ. ಅಸ್ಪೃಶ್ಯತೆಯು ನಮ್ಮ ರಾಷ್ಟ್ರದ ಝೀವಾಳವನ್ನೆ ತಿನ್ನುತ್ತಿದೆ ಎಂದು ಮನಗಂಡವರು, ಗಾಂಧೀಜಿ. ಅಂತರ್ಜಾತೀಯ ವಿವಾಹಕ್ಕೆ ಅವರೇ ದಾರಿ ತೋರಿಸಿಕೊಟ್ಟಿದ್ದಾರೆ. ಈ ಎಲ್ಲ ಸುಧಾರಣೆಗಳು ನಾವು ಈ ಕಾಲಕ್ಕೆ ತಕ್ಕಂತೆ ನಡೆಯುತ್ತಿದ್ದೇವೆ ಎಂಬುದನ್ನು ತೋರಿಸಿಕೊಡುತ್ತವೆ. ಯಾವಾಗ ಶಾಸನ ಸಭೆಗಳ ಮುಂದೆ ಸುಧಾರಣೆಗಳು ಬಂದಾಗಲೂ ಆ ಸುಧಾರಣೆಗಳು ಕಾರ್ಯಗತವಾಗದಿರಲಿ ಎಂಬ ಉದ್ದೇಶದಿಂದ, ಅವುಗಳಿಗೆ ಅಡ್ಡಿಯನ್ನುಂಟು ಮಾಡಲಾಗುತ್ತಿತ್ತು. ಮದ್ರಾಸ್ ಶಾಸನ ಸಭೆಯ ಮುಂದೆ ದೇವಾಲಯ ಪ್ರವೇಶ ಯೋಜನೆ ಬಂದಿದ್ದಾಗ, ನಾವು ಎಂಥ ಕಷ್ಟಗಳನ್ನು ಅನುಭವಿಸಬೇಕಾಯಿತು ಎಂಬುದನ್ನು ಮದ್ರಾಸಿನಿಂದ ಬಂದಿರುವ ನಾನು ಈ ಸದನಕ್ಕೆ ತಿಳಿಸುತ್ತೇನೆ. ಅಸ್ಪೃಶ್ಯರ ಸಾಮಾಜಿಕ ಕೊರತೆಗಳನ್ನು ನಿವಾರಿಸುವ ಸಂದರ್ಭದಲ್ಲಿಯೂ ಸಹ, ಮಂತ್ರಿಗಳು ತಮ್ಮ ಮುಖಕ್ಕೆ ಖಾರದ ಪುಡಿ ಎರಚುವವರ ಮಧ್ಯೆ ಸಿಕ್ಕಿಹಾಕಿಕೊಳ್ಳಬೇಕಾಯಿತು. ಈ ದೇಶದಲ್ಲಿ ಸಾಮಾಜಿಕ ಸುಧಾರಣೆ ತರಬೇಕೆನ್ನುವವರಿಗೆ ಈ ಸ್ಥಿತಿ ಬರುತ್ತದೆ. ನಮ್ಮ ದೇಶಕ್ಕೆ ಅದ್ವೈತದ ಕಾಣಿಕೆ ಕೊಟ್ಟ ಶಂಕರಾಚಾರ್ಯರನ್ನು ಅವರ ಗುರು "ನೀನು ಯಾರು?" ಎಂದು ಕೇಳಿದಾಗ, ಅವರು ಹೀಗೆ ಉತ್ತರಿಸಿದರು :

ನ ಮೇ ಮೃತ್ಯುಂಕಾ ನ ಮೇ ಜಾತಿಭೇದಃ ।
ಪಿತಾ ನೈವ ಮೇ ನ ಮಾತಾ ನ ಜನ್ಮಃ ॥

---

* C.A. (Leg) D, Voel. VI, pt ii, ೧೪ನೇ ಡಿಸೆಂಬರ್, ೧೯೪೯ ಪುಟ ೬೧೧–೧೪

ನ ಬಂಧುರ್ನ ಮಿತ್ರೋ ನ ಗುರೂರ್ನ ಶಿಷ್ಯಃ ।
ಚಿದಾನಂದ ರೂಪಃ ಶಿವೋಹಂ ॥

ಮಹಾನ್ ಶಂಕರರು ಆಡಿದ ಮಾತುಗಳಿವು. ಅವರೆಂದೂ ಪುರುಷ–ಪುರುಷರ ನಡುವೆ, ಸ್ತ್ರೀ–ಸ್ತ್ರೀಯರ ನಡುವೆ ಭೇದ ಮಾಡಲಿಲ್ಲ. ಅವರು ಪ್ರತಿಯೊಬ್ಬರೂ ಸಮಾನರೆಂದು ಭಾವಿಸಿದರು. ಈ ಮಸೂದೆಗೆ ಇಷ್ಟೊಂದು ವಿರೋಧವೇಕಿದೆ ಎಂಬುದೇ ನನಗೆ ಅರ್ಥವಾಗುವುದಿಲ್ಲ. ದಕ್ಷಿಣದ ಮಹಾನ್ ದಾರ್ಶನಿಕ ತಿರುವಳ್ಳುವರ್ ಜಗತ್ತಿಗೆ, ಗಂಡಸರು–ಹೆಂಗಸರು ಹೇಗೆ ನಡೆದುಕೊಳ್ಳಬೇಕು, ಅವರು ಯಾವ ಪರಿಸ್ಥಿತಿಯಲ್ಲಿ ಬದುಕಬೇಕು ಎಂಬ ವಿಷಯದಲ್ಲಿ ಕೆಲವು ತತ್ತ್ವಗಳನ್ನು ನೀಡಿದ್ದಾರೆ. ಅವು ಮುತ್ತುಗಳು. ದೇವರು ಮನುಷ್ಯನಿಗೆ ಕೊಟ್ಟಿರುವ ಸೌಕರ್ಯಗಳಲ್ಲಿ ಹೆಂಗಸರಿಗೂ ಸಮಪಾಲು ಕೊಡಬೇಕೆಂಬುದಕ್ಕೆ ಏಕೆ ಆಕ್ಷೇಪಿಸಬೇಕು ಎಂಬುದು ನನಗೆ ಅರ್ಥವಾಗುತ್ತಿಲ್ಲ.

ನನಗಿಂತ ಮೊದಲು ಮಾತಾಡಿದವರಲ್ಲಿ ಕೆಲವರು ಕಾಲ ಇನ್ನೂ ಪಕ್ವವಾಗಿಲ್ಲ ಎಂದರು. ೨೦ನೇ ಜನವರಿ ೧೯೪೪ರಂದು ಕೇಂದ್ರ ವಿಧಾನಸಭೆಯು ಗೊತ್ತುವಳಿಯನ್ನು ಅಂಗೀಕರಿಸಿದಾಗಿನಿಂದಲೂ ಈ ಕಾಯಿದೆಯು ದೇಶದ ಮುಂದಿದೆ. ಹಿಂದೂ ನಿಯಮಾವಳಿಯೂ ಭಾರತದ ಮೂಲೆ ಮೂಲೆಗೂ ಪಸರಿಸಿದೆ. ವಿದ್ಯಾವಂತರಷ್ಟೇ ಅಲ್ಲ, ಸಾಮಾನ್ಯ ಜನರೂ ಸಹ ಈ ಶಾಸನದ ತಿರುಳನ್ನು ಅರ್ಥ ಮಾಡಿಕೊಂಡಿದ್ದಾರೆ. ಈ ಮಸೂದೆಯನ್ನು ಚರ್ಚಿಸುವ ಅರ್ಹತೆ ಸದನಕ್ಕಿಲ್ಲ ಎಂದು ಈ ಸದನಕ್ಕೆ ತಿಳಿಸಿದ ಸದಸ್ಯರಿಗೆ ಈ ದೇಶದ ಬಗೆಗೆ ಹೊಣೆಗಾರಿಕೆ ಪ್ರಜ್ಞೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಸದನವು ರೂಪಿಸಿದ ಸಂವಿಧಾನವನ್ನು ಭಾರತದಲ್ಲಷ್ಟೇ ಅಲ್ಲ ವಿದೇಶಗಳಲ್ಲಿಯೂ ಸ್ವಾಗತಿಸಲಾಗಿದೆ. ಮೂವತ್ತು ಜನರಿಗೆ ಅಂಥ ಸಂವಿಧಾನವನ್ನು ರೂಪಿಸಿಕೊಟ್ಟ ಹೆಮ್ಮೆಯ ಅಧಿಕಾರವುಳ್ಳ ಈ ವಿಧಾನಸಭೆಯ ಸದಸ್ಯರಿಗೆ, ಈ ದೇಶದ ಸ್ತ್ರೀಯರ ಉದ್ಧಾರಕ್ಕಾಗಿ ಮಾಡಿದ ಈ ಮಸೂದೆಯನ್ನು ಪರಿಶೀಲಿಸುವ ಅರ್ಹತೆ ಇಲ್ಲವೇ, ಎಂಬುದು ನನಗೆ ಗೊತ್ತಿಲ್ಲ. ಸರ್ಕಾರವು ಕೇವಲ "ಧರ್ಮ, ಜಾತಿ, ಲಿಂಗಗಳ...." ಆಧಾರದ ಮೇಲೆ ತಾರತಮ್ಯ ಮಾಡಬಾರದು ಎಂದು ಸಂವಿಧಾನದ ಮೂಲಭೂತ ಹಕ್ಕುಗಳಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಹಾಗೆಯೇ, ವಿಧಿ ೧೫(೩) "ಹೆಂಗಸರು ಮತ್ತು ಮಕ್ಕಳಿಗೆ ಸರ್ಕಾರವು ಕೊಡುವ ವಿಶೇಷ ಅವಕಾಶಗಳನ್ನು ತಡೆಯುವಂತಹುದೇನೂ ಈ ವಿಧಿಯಲ್ಲಿಲ್ಲ" ಎಂದು ಹೇಳುತ್ತದೆ. ಅದೇ ರೀತಿ, ವಿಧಿ ೪೬ ರಲ್ಲಿ "ದುರ್ಬಲ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಉನ್ನತಿಗಾಗಿ ಸರ್ಕಾರವು ವಿಶೇಷ ಕಾಳಜಿ ವಹಿಸಬೇಕು" ಎಂದು ಹೇಳಲಾಗಿದೆ. ಸ್ತ್ರೀಯರು ಈ ವರ್ಗದಲ್ಲಿ ಬರುವುದಿಲ್ಲವೇನು? ಅವರನ್ನು ನಾವು ರಕ್ಷಿಸಬಾರದೇನು? ಈ ಶಾಸನಕ್ಕೆ ವಿಶಾಲ ಅವಕಾಶವಿದೆ, ಮತ್ತು ಪ್ರತಿಯೊಬ್ಬರೂ ಅದನ್ನು ಸ್ವಾಗತಿಸಲೇಬೇಕು.

ಬೇರೆ ಬೇರೆ ಪ್ರಾಂತ್ಯಗಳಲ್ಲಿರುವ ಹಿಂದೂಗಳ ವಿವಾಹ, ಉತ್ತರಾಧಿಕಾರ, ದತ್ತುಸ್ವೀಕಾರ ಮುಂತಾದುವುಗಳನ್ನು ಅಭ್ಯಸಿಸಿದರೆ, ಅವೆಲ್ಲ ಒಂದೇ ತೆರನಿಲ್ಲ ಎಂಬುದು ತಿಳಿಯುತ್ತದೆ. ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಅವು ಬದಲಾಗುತ್ತವೆ. ಸಂವಿಧಾನದಲ್ಲಿ ನಾವು 'ಒಂದು ಸಾಮಾನ್ಯ ನಾಗರಿಕ ನಿಯಮಾವಳಿ' ಮಾಡಬೇಕೆಂದು ಹೇಳಿದ್ದೇವೆ. ಈಗಿನ ಮಸೂದೆಯು ಆ ಮುಂಬರುವ ಶಾಸನದ ಮುನ್‌ಸೂಚಕವಾಗಿದೆ. ನಾನು ಪ್ರತಿನಿಧಿಸುವ ಜಿಲ್ಲೆಯಲ್ಲಿ ಅನೇಕ ಗಿರಿಜನರ ಬುಡಕಟ್ಟುಗಳಿವೆ. ಅವರು ತಾವು ಹಿಂದೂಗಳೆಂದು ಹೇಳಿಕೊಂಡರೂ, ಅವರ ವಿವಾಹ ಪದ್ಧತಿ, ಉತ್ತರಾಧಿಕಾರದ ನಿಯಮ, ಮುಂತಾದವುಗಳಿಗೂ ಹಿಂದೂಗಳ ಪದ್ಧತಿ ಮತ್ತು ನಿಯಮಗಳಿಗೂ ಮುಖ್ಯ ವಿಷಯಗಳಲ್ಲಿ ಬಹಳ ವ್ಯತ್ಯಾಸವಿದೆ. ವರ್ಣರಂಜಿತ ತೋಡ

ಮೂಲನಿವಾಸಿಗಳಲ್ಲಿ ಬಹು ಪತ್ನಿತ್ವದ ಪದ್ಧತಿಯಿದೆ. ಈ ಸಾಮಾಜಿಕ ಅನಿಷ್ಟದಿಂದಾಗಿ ಅವರ ಸಮಾಜ ಕುಗ್ಗುತ್ತಿದೆ. ಅದೇ ರೀತಿ, ಬಡಗ ಎಂಬ ಮತ್ತೊಂದು ಬುಡಕಟ್ಟು ಜನಾಂಗವಿದೆ. ಅವರೂ ಸಹ ತಾವು ಹಿಂದೂಗಳೆಂದು ಹೇಳಿಕೊಳ್ಳುತ್ತಾರೆ. ಆದರೆ ಅವರ ಆಚಾರಗಳೂ ಪದ್ಧತಿಗಳೂ ಹಿಂದೂಗಳ ಆಚಾರ, ಪದ್ಧತಿಗಳಿಂದ ಭಿನ್ನವಾಗಿವೆ. ಅವರ ಪದ್ಧತಿಯೆಂದರೆ, ಒಬ್ಬ ಗಂಡಸು ಒಬ್ಬಳನ್ನು ಮದುವೆಯಾಗಬೇಕೆಂದು ಬಯಸಿದರೆ, ಅವನು ಕನ್ಯಾಶುಲ್ಕವನ್ನು ಕೊಡಬೇಕು. ಅವರು ಅದಕ್ಕೆ ತಿರೈಪಣಂ ಎನ್ನುತ್ತಾರೆ. ಒಂದು ವೇಳೆ ಆಕೆ ಅವನನ್ನು ಬಿಟ್ಟು ಹೋಗಬೇಕೆಂದು ಇಚ್ಛಿಸಿದರೆ ಹಾಗೂ ಅದೇ ಕನ್ಯಾಶುಲ್ಕವನ್ನು, ಅಂದರೆ, ತಿರೈಪಣವನ್ನು ಕೊಡಲು ಇನ್ನೊಬ್ಬ ಸಿದ್ಧನಾದರೆ, ಆಕೆ ಅವನನ್ನು ವರಿಸಲು ಸ್ವತಂತ್ರಳಿರುತ್ತಾಳೆ.

ಮಹಾನ್ ಸಂತರೂ ಋಷಿಗಳೂ ಹುಟ್ಟಿದ ಈ ನಾಡಿನಲ್ಲಿ ಇಂಥವುಗಳನ್ನು ನಾವು ಮುಂದುವರಿಸಿಕೊಂಡು ಹೋಗಬೇಕೇ? ಗಿರಿಜನರಿರಲಿ, ಬುಡಕಟ್ಟು ಜನಾಂಗದವರಿರಲಿ, ಅವರೆಲ್ಲರನ್ನೂ ಹೊಸ ಸಂವಿಧಾನವು ರಕ್ಷಿಸಬೇಕಾಗಿದೆ.

ಮಾನ್ಯರೆ, ನನ್ನ ಮಾನ್ಯ ಮಿತ್ರರು ಈಗಾಗಲೇ ತಿಳಿಸಿರುವಂತೆ ಮದ್ರಾಸ್ ಪ್ರಾಂತ್ಯದಲ್ಲಿ ಬಹುಪತ್ನಿತ್ವವನ್ನು ಶಾಸನದ ಮೂಲಕ ನಿಷೇಧಿಸಲಾಗಿದೆ. ಈ ಕಾನೂನನ್ನು ಇಡೀ ದೇಶಕ್ಕೆ ವಿಸ್ತರಿಸದಿದ್ದರೆ, ಗಂಡಸರು ಮದ್ರಾಸನ್ನು ಬಿಟ್ಟು, ಮತ್ತೊಂದು ಪ್ರಾಂತ್ಯದಲ್ಲಿ ಮದುವೆಯಾಗಿ ಮದ್ರಾಸಿಗೆ ಹಿಂದಿರುಗುವ ಅವಕಾಶವಿದೆ. ಎಲ್ಲ ಪ್ರಾಂತ್ಯಗಳಲ್ಲಿರುವ ಕಾನೂನುಗಳಲ್ಲಿ ಏಕಪ್ರಕಾರತೆ ಇಲ್ಲದಿದ್ದರೆ, ಮದ್ರಾಸ್ ಪ್ರಾಂತ್ಯವೊಂದಕ್ಕೆ ಈ ಕಾನೂನನ್ನು ಜಾರಿಗೆ ತರುವುದು ಸಾಧ್ಯವಾಗುವುದಿಲ್ಲ.

ಈಗ ಸದನದ ಮುಂದಿರುವ ಹಿಂದೂ ಕಾನೂನು ಮಸೂದೆಯ ಇತರ ಮುಖ್ಯ ಅಂಶಗಳೆಂದರೆ ವಿವಾಹ ಮತ್ತು ವಿಚ್ಛೇದನಗಳಿಗೆ ಸಂಬಂಧಿಸಿದ ಅಧ್ಯಾಯಗಳು. ಶಾಸನಿಕ ವಿವಾಹ ಮತ್ತು ಧಾರ್ಮಿಕ ವಿವಾಹ ಪದ್ಧತಿಗಳೆರಡನ್ನೂ ಇಟ್ಟುಕೊಳ್ಳುವುದು ಎಷ್ಟು ಆವಶ್ಯಕ ಎಂಬುದನ್ನು ಈಗಾಗಲೇ ತೋರಿಸಿಕೊಟ್ಟಾಗಿದೆ. ಧಾರ್ಮಿಕ ಪದ್ಧತಿಯ ಪ್ರಕಾರ ಪರಿಶಿಷ್ಟ ಜಾತಿಯ ಜನರು ಮೊದಲು ಯೋಗಂ ಆಚರಿಸಿ, ಅನಂತರ ಸಾಧಾರಣ ತಾಳಿ ಕಟ್ಟುತ್ತಾರೆ. ಆಗಲೇ ವಿವಾಹ ನಿಜವಾದದ್ದೆಂದೆನಿಸಿಕೊಳ್ಳುತ್ತದೆ. ಶಾಸನಿಕ ವಿವಾಹ ಶಾಸನಗಳು ಜಾರಿಗೆ ಬಂದ ಮೇಲೂ ಸಹ ಜನರು ಈ ಹಳೆಯ ಪದ್ಧತಿಯನ್ನೆ ಅನುಸರಿಸುತ್ತಿದ್ದಾರೆ. ಇದೇ ಪದ್ಧತಿಯನ್ನು ಎಲ್ಲ ಕಡೆಯೂ, ಎಲ್ಲ ಹಿಂದೂಗಳೂ ಅವರು ಸಂಪ್ರದಾಯಸ್ಥರಿರಲಿ ಅಥವಾ ಇಲ್ಲದಿರಲಿ ಏಕೆ ಅನುಸರಿಸಬಾರದು?

ವಿಭಾಗ ೩೩(f) "ವ್ಯಭಿಚಾರ"ವನ್ನು ಕುರಿತು ಪ್ರಸ್ತಾಪಿಸುತ್ತದೆ. ನಿಯಾಮಾವಳಿಯಲ್ಲಿ "ವ್ಯಭಿಚಾರ" ಎಂಬ ಪದವನ್ನೇ ಪ್ರಯೋಗಿಸಬಾರದಿತ್ತು ಎಂದು ನನಗನಿಸುತ್ತದೆ. ಏಕೆಂದರೆ, ಸ್ವಾಮಿ ವಿವೇಕಾನಂದರು ತೋರಿಸಿಕೊಟ್ಟಿರುವಂತೆ, ಎಲ್ಲಿಯವರೆಗೆ ನಮ್ಮ ದೇಶದಲ್ಲಿ ಮೂವರು ಸ್ತ್ರೀಯರು ಬದುಕಿರುತ್ತಾರೋ ಅಲ್ಲಿಯವರೆಗೂ ಭಾರತದಲ್ಲಿ ಅದರ ಪರಿಶುದ್ಧತೆಯನ್ನು ಎತ್ತಿಹಿಡಿಯಲಾಗುತ್ತದೆ. ಮಾನ್ಯರೆ, ನನಗೆ ತಿಳಿದಿರುವಂತೆ ಹಿಂದೂ ಸಮಾಜದ ಯಾವೋದು ಕೋಮಿನಲ್ಲಿಯೂ ವ್ಯಭಿಚಾರ ವ್ಯಾಪಕವಾಗಿ ಅಸ್ತಿತ್ವದಲ್ಲಿಲ್ಲ. ಅಪರೂಪದ ಉದಾಹರಣೆಗಳೆನೋ ಇರಬಹುದು. ಆದರೆ ಶಾಸನೀಯ ನಿಯಮಗಳನ್ನು ಮಾಡಬೇಕಾದ ಅಗತ್ಯವೇನಿರಲಿಲ್ಲ.

ವಿಭಾಗ ೯ರ ಉಪ ವಿಭಾಗ (೨)ರಲ್ಲಿಯೂ, ವಿಭಾಗ ೧೬ರಲ್ಲಿಯೂ ಕಾನೂನನ್ನು ಉಲ್ಲಂಘಿಸಿದವರಿಗೆ ಕೊಡುವ ದಂಡವನ್ನು ಪ್ರಸ್ತಾಪಿಸಲಾಗಿದೆ. ವಿಧಿಸಿರುವ ದಂಡ ಅತಿಯಾಯಿತು, ಅದರಲ್ಲೂ ಬಡಜನರಿಗೆ ಅತಿಯಾಗುತ್ತದೆ. ನಾಮಕಾವಸ್ತೆಗೆ ದಂಡ ಹಾಕಿದರೆ ಸಾಕು ಎಂಬುದು ನನ್ನ ಅನಿಸಿಕೆ. ದುಡ್ಡಿರುವವರಿಗೆ ಹಾಗೂ ನ್ಯಾಯಾಲಯಗಳಿಗೆ ಹೋಗಿ ತಮ್ಮ ವಿವಾಹವನ್ನು ರದ್ದುಪಡಿಸಿಕೊಳ್ಳಲು ಶಕ್ತಿಯಿರುವವರಿಗೆ

ಕಾನೂನು ರೀತ್ಯಾ ಪ್ರತ್ಯೇಕ ಝೀವನ ನಡೆಸುವುದು ಸರಿಯಿರಬಹುದು. ಆದರೆ ಭಾರತದ ತುಂಬೆಲ್ಲ ಇರುವ ಹಳ್ಳಿಗಳ ಗತಿಯೇನು? ಜನರಿಂದ ಆರಿಸಲ್ಪಟ್ಟ ಪಂಚಾಯಿತಿ ಸದಸ್ಯರೇ ಇದನ್ನು ನಿರ್ಣಯಿಸುತ್ತಾರೆ. ಆದುದರಿಂದ ಈ ಕಾನೂನು ನನಗೆ ಸರಿ ಎನಿಸುವುದಿಲ್ಲ. ವಿವಾಹ ರದ್ದತಿಯ ಹಗರಣಗಳ ಪರಿಶೀಲನೆಗೆ ಸಂಬಂಧಿಸಿದ ನಿಯಮವನ್ನು ರೂಪಿಸಲು ಪ್ರಾತಿನಿಧಿಕ ಪಂಚಾಯಿತಿಗಳ ರಚನೆ ಮಾಡಬೇಕು, ಎಂಬುದು ನನ್ನ ಸಲಹೆ.

ಈಗ ಸ್ತ್ರೀಧನದ ವಿಷಯಕ್ಕೆ ಬರುತ್ತೇನೆ. ಸ್ತ್ರೀಧನವನ್ನು ಸ್ತ್ರೀಯರಿಗೆ ಅವರ ತಂದೆಯೋ ಅಥವಾ ಅವರ ಸೋದರರೋ ಕೊಡುತ್ತಾರೆ. ಒಂದು ವೇಳೆ ಅದನ್ನು ಆಕೆಯ ಗಂಡ ಸೂಕ್ತ ರೀತಿಯಲ್ಲಿ ಖರ್ಚು ಮಾಡದಿದ್ದರೆ ಏನಾಗುತ್ತದೆ? ಆದುದರಿಂದ, ಮಾನ್ಯರೆ, ಸ್ತ್ರೀಧನವು ಯಾವಾಗಲೂ ಆ ಸ್ತ್ರೀಯ ಸ್ವತ್ತೇ ಆಗಿರಬೇಕು ಎಂದು ತಿಳಿಸುವಂಥ ಒಂದು ಉಪ ನಿಯಮವನ್ನು ಸೇರಿಸಬೇಕು ಎಂದು ನನಗನ್ನಿಸುತ್ತದೆ.

ದತ್ತು ಸ್ವೀಕಾರದ ಬಗ್ಗೆ ವಿಭಾಗ ೭೨ ಹೀಗೆ ಹೇಳುತ್ತದೆ: "ವಿಧ್ಯುಕ್ತವಾಗಿ ಮಾಡಿದ ದತ್ತು ಸ್ವೀಕಾರವನ್ನು ದತ್ತಕ ತಂದೆಯಾಗಲಿ, ದತ್ತಕ ತಾಯಿಯಾಗಲಿ, ಮತ್ತಾವ ವ್ಯಕ್ತಿಯೇ ಆಗಲಿ ರದ್ದುಪಡಿಸಲು ಸಾಧ್ಯವಿಲ್ಲ. ಅದೇ ರೀತಿ ದತ್ತುಪುತ್ರನು ತನ್ನ ದತ್ತು ಸಂಬಂಧವನ್ನು ತ್ಯಜಿಸಿ ತಾನು ಜನಿಸಿದ ಕುಟುಂಬಕ್ಕೆ ಹಿಂತಿರುಗಲು ಸಾಧ್ಯವಿಲ್ಲ." ಮಾನ್ಯರೆ, ನನ್ನ ಅಭಿಪ್ರಾಯವೇನೆಂದರೆ, ದತ್ತಕವಾಗಿ ಬಂದ ಮಗನೇ ಆಗಲಿ ಮತ್ತಾರೇ ಆಗಲಿ ಸರಿಯಾಗಿ ನಡೆದುಕೊಳ್ಳದಿದ್ದರೆ, ಮತ್ತು ಆ ಕುಟುಂಬದ ಹಣವನ್ನು ಪೋಲು ಮಾಡಿದರೆ, ಅಂಥದನ್ನು ತಪ್ಪಿಸಲು ಒಂದು ರಕ್ಷಣಾತ್ಮಕ ನಿಯಮವನ್ನು ಸೇರಿಸಬೇಕು.

ವಿಭಾಗ ೯೩ ವರದಕ್ಷಿಣೆಯನ್ನು ಹೆಂಡತಿಯ ವಶಕ್ಕೆ ಒಪ್ಪಿಸಬೇಕು ಎನ್ನುತ್ತದೆ ಹಾಗೂ ಇದು ಈ ನಿಯಮಾವಳಿ ಪ್ರಾರಂಭವಾದ ನಂತರ ಜಾರಿಗೆ ಬರಬೇಕು ಎನ್ನುತ್ತದೆ. ಮಾನ್ಯರೆ, ಈ ವಿಭಾಗದ ನಿಯಮವು ಈ ನಿಯಮಾವಳಿಯ ಪ್ರಾರಂಭಕ್ಕಿಂತ ಮುಂಚಿನ ಎಲ್ಲ ಪ್ರಕರಣಗಳಿಗೂ ಅನ್ವಯಿಸಬೇಕು ಎಂಬುದು ನನ್ನ ಅಭಿಪ್ರಾಯ.

ಮಾನ್ಯರೆ, ಕೊನೆಯದಾಗಿ ನಾನು ಹೇಳುವುದೇನೆಂದರೆ, ಈ ಹಿಂದೂ ಕಾನೂನನ್ನು ಜಾರಿಗೆ ತರುವುದರಿಂದ ಗಂಡಸರ ಕಠೋರ ವರ್ತನೆಗೊಳಗಾದ ಎಲ್ಲ ಹೆಂಗಸರಿಗೂ ಬಿಡುಗಡೆ ಸಿಕ್ಕುತ್ತದೆ. ಸ್ತ್ರೀಯರು ಸಮಾನ ಅಧಿಕಾರಗಳನ್ನೂ ಸಮಾನ ಅನುಕೂಲಗಳನ್ನೂ ಅನುಭವಿಸುತ್ತಿದ್ದಾರೆ ಎಂದು ಅನೇಕರು ಹೇಳುತ್ತಾ ಬಂದಿದ್ದಾರೆ. ಆದರೆ ವಾಸ್ತವಿಕತೆ ಹಾಗಿಲ್ಲ. ಶೇಕಡ ೯೦ ರಷ್ಟು ಸ್ತ್ರೀಯರು ಅನೇಕ ಸಾಮಾಜಿಕ ತೊಂದರೆಗಳಿಗೆ ಒಳಗಾಗಿದ್ದಾರೆ. ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ನಾಲ್ಕು ಯುಗಗಳಲ್ಲಿ ಇಂದು ನಾವು ನಾಲ್ಕನೇ ಯುಗದಲ್ಲಿದ್ದೇವೆ. ಕಬ್ಬಿಣದ ಯುಗ ಎಂದು ಕರೆಯಬಹುದಾದ ಈ ಯುಗದಲ್ಲಿ ನಾವು ಸುಧಾರಣೆ ತರುವಷ್ಟು ಪ್ರಬಲರಾಗಿದ್ದೇವೆ. ಗಂಡಸರಿಗೆ ಸಿಕ್ಕಷ್ಟೇ ಅನುಕೂಲಗಳು ಹೆಂಗಸರಿಗೂ ಸಿಗುವಂತೆ ನಾವು ನೋಡಿಕೊಳ್ಳಬೇಕಾಗಿದೆ. ತೊಟ್ಟಿಲು ತೂಗುವ ಕೈ ಜಗತ್ತನ್ನೇ ಗೆಲ್ಲಬಲ್ಲದು ಎಂಬ ಸೂಕ್ತಿಯಿದೆ. ಅವರೇ ಈ ಅನುಕೂಲಗಳನ್ನು ನಮ್ಮಿಂದ ಬಲಾತ್ಕಾರವಾಗಿ ಕಿತ್ತುಕೊಳ್ಳುವ ಮೊದಲೇ ನಾವು ಶಾಂತಿಯುತವಾಗಿ ಅವರಿಗೆ ಕೊಡೋಣ. ಆದುದರಿಂದ ಈ ಸರ್ಕಾರ ತಂದಿರುವ ಹಿಂದೂ ನಿಯಮಾವಳಿ ಮಸೂದೆಯನ್ನು ನಾನು ಬೆಂಬಲಿಸುತ್ತೇನೆ ಹಾಗೂ ಅದು ಫಲಪ್ರದವಾದಾಗ, ಅದನ್ನು ತರಲು ಬಹಳ ಕಷ್ಟಪಟ್ಟಿರುವ ನನ್ನ ಸನ್ಮಾನ್ಯ ಗೆಳೆಯರಾದ ಡಾ. ಅಂಬೇಡ್ಕರರು ತಮ್ಮ ಹ್ಯಾಟಿಗೆ ಮತ್ತೊಂದು ಗರಿ ಸಿಕ್ಕಿಸಿಕೊಂಡಾರು.

***ಶ್ರೀ ಓ. ವಿ. ಅಳಗೇಶನ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನಿನ್ನೆ ಡಾ. ಅಂಬೇಡ್ಕರ್ ಮಸೂದೆಯನ್ನು ಮಂಡಿಸುವುದು ತಮ್ಮ ಪಾಲಿಗೆ ಬಂದುದಕ್ಕೆ ಬಹಳ ಸಂತೋಷವಾಯಿತೆಂದು ಹೇಳಿದರು.

ಮಾನ್ಯರೆ, ಸ್ವತಂತ್ರ ಭಾರತದ ಸಂವಿಧಾನ ಹುಟ್ಟುವಾಗ ಸಹಾಯ ಮಾಡಿದ ಸಮರ್ಥ ಸೂಲಗಿತ್ತಿ ಎಂಬ ಹೆಸರು ಅವರಿಗೆ ಸಲ್ಲುವುದಲ್ಲದೆ, ಅದು ಖಂಡಿತವಾಗಿಯೂ ಇತಿಹಾಸದಲ್ಲಿ ಸೇರ್ಪಡೆಯಾಗುತ್ತದೆ. ಮಾನ್ಯರೆ, ಅವರು ಮಹತ್ವಾಕಾಂಕ್ಷಿಗಳು. ಅವರು ತಮ್ಮ ಟೋಪಿಗೆ ಮತ್ತೊಂದು ಗರಿಯನ್ನು ಸಿಕ್ಕಿಸಿಕೊಳ್ಳಲು ಬಯಸುತ್ತಾರೆ. ಅವರ ಈ ಬಯಕೆಗೆ ಸಮರ್ಥನೆಯಿದೆ. ಪುರಾತನ ಋಷಿಗಳನ್ನೂ, ಮನು, ಯಾಜ್ಞವಲ್ಕ್ಯ ಮುಂತಾದ ಪುರಾತನ ಸ್ಮೃತಿ ಕಾರ್ಯಶ್ರೇಣಿಯನ್ನು ಮೀರಿ ಮುಂದೆ ಹೋಗಬೇಕೆಂಬುದೇ ಅವರ ಬಯಕೆ.

ನನಗಿಂತ ಮೊದಲು ಮಾತನಾಡಿದವರಲ್ಲಿ ಒಬ್ಬರು – ಪ್ರಾಯಶಃ ಶ್ರೀ ಪಾಟಸ್ಕರ್ ಇರಬಹುದು – ಹೊಸ ಸಂವಿಧಾನದ ೪೪ನೇ ವಿಭಾಗವನ್ನು ಪ್ರಸ್ತಾಪಿಸಿದರು. ಈ ವಿಭಾಗವು ಇಡೀ ದೇಶಕ್ಕೆ ಅನ್ವಯವಾಗಬಲ್ಲ ಏಕಪ್ರಕಾರ ನಾಗರಿಕ ನಿಯಮಾವಳಿಗೆ ಸಂಬಂಧಿಸಿದುದು. "ಈ ಹಿಂದೂ ಕಾನೂನನ್ನು ಹಿಂತೆಗೆದುಕೊಂಡು ಅದರ ಬದಲು ನಾಗರಿಕ ಕಾನೂನನ್ನೇಕೆ ಮಂಡಿಸಬಾರದು? ಕುತಂತ್ರವನ್ನು ಮುಂದೂಡಲು ಇದೊಂದು ಉಪಾಯದಂತೆ ಕಾಣಬಹುದು. ಆದರೆ ಸರ್ಕಾರವು ಈ ಬಗ್ಗೆ ತನ್ನ ನಿಲುವೇನೆಂಬುದನ್ನು ಸ್ಪಷ್ಟವಾಗಿ ಏಕೆ ತಿಳಿಸಬಾರದು? ಆ ದಿಶೆಯಲ್ಲಿ ಇದೊಂದು ಮೊದಲ ಹೆಜ್ಜೆಯೆ? ಇದಾದ ನಂತರ, ಸಂವಿಧಾನದ ವಿಧಿ ೪೪ನ್ನು ಜಾರಿಗೆ ತರಲು ಇನ್ನೂ ಕಾಯಿದೆಗಳನ್ನು ಮಾಡುತ್ತಿದೆಯೇ? ಸರ್ಕಾರವನ್ನು ತಬ್ಬಿಬ್ಬು ಮಾಡಲು ನನಗಿಷ್ಟವಿಲ್ಲ. ಆದರೆ ಈ ಬಗ್ಗೆ ಸರ್ಕಾರವು ತನ್ನ ನಿಲವೇನೆಂಬುದನ್ನು ಸ್ಪಷ್ಟವಾಗಿ ತಿಳಿಸಲಿ" ಎಂದು ಅವರು ವಾದಿಸಿದರು.

ಮಾನ್ಯರೆ, ಕೆಲವು ದಿನಗಳ ಹಿಂದೆ ಮಾನ್ಯ ಶ್ರೀ ಸಂತಾನಂ ಏಕಪತ್ನಿತ್ವದ ಪರವಾಗಿ ಮಾಡಿದ ವಾದವು ಎಲ್ಲರನ್ನೂ ಮುದಗೊಳಿಸಿತು. ಏಕಪತ್ನಿತ್ವದ ವಿರುದ್ಧವಾಗಿ ಒಂದು ಕಿರುಬೆರಳನ್ನಾದರೂ ಎತ್ತುವ ಧೈರ್ಯ ಯಾರಿಗಾದರೂ ಇದೆಯೆ ಎಂದು ಕೇಳಿದರು. ಸಂತ ತ್ಯಾಗರಾಜರು ರಾಮನ ಸದ್ಗುಣಗಳನ್ನು ಸಂಕ್ಷಿಪ್ತವಾಗಿ, ತಮ್ಮದೇ ಆದ ಶೈಲಿಯಲ್ಲಿ ಹೀಗೆ ವರ್ಣಿಸುತ್ತಾರೆ:

ಒಕ ಮಾಟ, ಒಕ ಬಾಣಂ ಒಕ ಪತ್ನಿ

ಅಂದರೆ, ಒಂದೇ ಮಾತು, ಒಂದೇ ಬಾಣ, ಒಬ್ಬಳೇ ಪತ್ನಿ.

ನಮ್ಮೆದುರಿಗೆ ಅಂಥ ಆದರ್ಶಗಳನ್ನು ಇರಿಸಿದ್ದಕ್ಕೆ ನಮಗೆ ಸಂತೋಷವಾಗಿದೆ. ಮಾನ್ಯರೆ, ಈಗ ನಾನು ಕೇಳುವುದೇನೆಂದರೆ, ಈ ಆದರ್ಶ (ಏಕಪತ್ನಿತ್ವ) ಕೇವಲ ಹಿಂದೂಗಳಿಗೆ ಮಾತ್ರ ಒಳ್ಳೆಯದೇ? ಸರ್ಕಾರವು ಒಂದು ಸಾಮಾನ್ಯ ಮಸೂದೆಯನ್ನು ಮಾಡಿ, ಏಕಪತ್ನಿತ್ವವು ಭಾರತದ ಎಲ್ಲ ಪ್ರಜೆಗಳಿಗೂ ಅನ್ವಯವಾಗುವಂತೆ ಮಾಡುತ್ತದೆಯೆ? ಸರ್ಕಾರವನ್ನು ತಬ್ಬಿಬ್ಬು ಮಾಡಲು ನಾನು ಇದನ್ನು ಹೇಳುತ್ತಿಲ್ಲ ಎಂದು ನಾನು ಮತ್ತೊಮ್ಮೆ ಹೇಳಬಯಸುತ್ತೇನೆ. ಹೀಗೆ ಮಂಡಿಸುವಾಗ, ನೀವು ಅದಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಸಮರ್ಪಕವಾಗಿ ತಿಳಿಸಬೇಕು. ಭಾರತದಲ್ಲಿರುವ ಒಂದು ಕೋಮು ಧರ್ಮದ ಆಧಾರದ ಮೇಲೆ ಏಕಪತ್ನತ್ವ ಮಸೂದೆಗೆ ಆಕ್ಷೇಪಿಸುತ್ತದೆ ಎಂಬುದು ನೆನಪಿರಲಿ. ದೇಶ ವಿಭಜನೆಯಾದ ನಂತರ ಆದ ದುರ್ಘಟನೆಗಳೂ ನೆನಪಿರಲಿ. ಇದು ಧರ್ಮದಲ್ಲಿ ಹಸ್ತಕ್ಷೇಪ ಮಾಡಿದಂತೆ, ಇದು ನಮ್ಮ ರಾಷ್ಟ್ರದ ಧರ್ಮನಿರಪೇಕ್ಷ ನೀತಿಗೆ ವಿರುದ್ಧವಾದಂತೆ ಎಂದೆಲ್ಲ ನೀವು ಹೇಳುತ್ತೀರಿ. ನಮ್ಮ ರಾಷ್ಟ್ರವು ಧರ್ಮನಿರಪೇಕ್ಷವಾಗುತ್ತದೆ ಎಂದು ಪ್ರಧಾನಮಂತ್ರಿಗಳು ಘೋಷಿಸಿದ್ದಾರೆ. ನಮ್ಮ ರಾಷ್ಟ್ರದ ಧರ್ಮನಿರಪೇಕ್ಷತೆಯ ಬಗ್ಗೆ ಜನತೆಗೆ ತಿಳಿಸಿಕೊಡಬೇಕು. ಗಡಿಯಿಂದಾಚೆಗೆ ಅನೇಕ ಘಟನೆಗಳು ನಡೆಯುತ್ತಿವೆ, ಅವುಗಳಿಗೆ ಖಂಡಿತವಾಗಿಯೂ ಗಡಿಯಿಂದೀಚೆಗಿನ

---

* C.A. (Leg) D, Voel. VI, pt ii, ೧೪ನೇ ಡಿಸೆಂಬರ್, ೧೯೪೯ ಪುಟ ೬೧೪–೨೧

ಜನರು ಪ್ರತಿಕ್ರಿಯೆ ತೋರಿಸುತ್ತಾರೆ. ಆ ರಾಷ್ಟ್ರವು ನಾಚಿಕೆಯಿಲ್ಲದೆ ದೇವಪ್ರಭುತ್ವದ ಮೇಲೆ ನಿಂತಿದೆಯಲ್ಲದೆ, ತಮ್ಮ ಕಾರ್ಯನೀತಿಯ ಎಲ್ಲ ವಿಚಾರಗಳನ್ನು ಕಾರ್ಯಗತ ಮಾಡಲು ಅವರು ಯೋಜಿಸಿದ್ದಾರೆ. ಗಡಿಯಾಚೆಗಿನ ಅಂಥ ಕಾರ್ಯನೀತಿಗೆ ಖಂಡಿತವಾಗಿಯೂ ಗಡಿಯೀಚೆಗಿನ ಜನರು ಪ್ರತಿಕ್ರಿಯೆ ತೋರಿಸುತ್ತಾರೆ. ಹೀಗಾಗಿ, ನಮ್ಮ ರಾಷ್ಟ್ರದ ಧರ್ಮನಿರಪೇಕ್ಷತೆಯ ಬಗ್ಗೆ ಜನರಿಗೆ ತಪ್ಪು ಕಲ್ಪನೆ ಉಂಟಾಗಲು ಪ್ರಾರಂಭವಾಗುತ್ತದೆ. ಧರ್ಮನಿರಪೇಕ್ಷತೆಯೆಂದರೆ ಹಿಂದೂ ಅನಿಸಿಕೊಂಡದ್ದೆಲ್ಲದರಲ್ಲೂ ಹಸ್ತಕ್ಷೇಪ ಮಾಡುವುದು, ಬೇರೆ ಕೋಮುಗಳನ್ನು ಮುಟ್ಟಲು ಸಂಕೋಚಪಡುವುದು ಎಂದು ಅವರು ತಪ್ಪು ತಿಳಿದುಕೊಳ್ಳುತ್ತಾರೆ. ಹಾಗೆ ತಪ್ಪು ತಿಳಿದುಕೊಳ್ಳಲು ಸರಿಯಾದ ಕಾರಣಗಳೂ ಇವೆ. ಇಂಥ ಕಾನೂನುಗಳಿಗೆ ಈ ದೇಶದ ಜನಸಾಮಾನ್ಯರು ತೋರಿಸುವ ಪ್ರತಿಕ್ರಿಯೆಯೇ ಹೀಗೆ. ಆದುದರಿಂದ ನಾವು ಈ ದೇಶದಲ್ಲಿ ಸ್ಥಾಪಿಸಬೇಕೆಂದಿರುವ ಧರ್ಮನಿರಪೇಕ್ಷ ಸರ್ಕಾರದ ಹಿತದೃಷ್ಟಿಯಿಂದ ಜನತೆಯನ್ನೂ ನಮ್ಮೊಂದಿಗೆ ಕರೆದೊಯ್ಯಲು ಪ್ರಯತ್ನಿಸಬೇಕು. ನಮ್ಮದು ಧರ್ಮನಿರಪೇಕ್ಷ ರಾಷ್ಟ್ರ ಎಂದ ಕೂಡಲೇ ಸರ್ಕಾರ ಒಳ್ಳೆಯ ಸರ್ಕಾರವಾಗುವುದಿಲ್ಲ, ಏಕೆಂದರೆ ಹಾಗೆ ಹೇಳಿದುದು ಈ ದೇಶದ ಜನಸಾಮಾನ್ಯರಿಗೆ ಸರಿಯಾಗಿ ಅರ್ಥವಾಗದಿದ್ದರೆ ಹಾಗೂ ಅದರ ಮೌಲ್ಯಮಾಪನೆಯನ್ನು ಅವರು ಮಾಡದಿದ್ದರೆ, ಆಗ ರಾಷ್ಟ್ರವು ಧರ್ಮನಿರಪೇಕ್ಷವಾಗಿ ಮುಂದುವರಿಯಲು ಸಾಧ್ಯವಿಲ್ಲ. ಆಗ, ಈ ರಾಷ್ಟ್ರದಲ್ಲಿ ನಾವು ಸಾಕ್ಷಾತ್ಕರಿಸಿಕೊಳ್ಳಬೇಕೆಂದಿರುವ ಆದರ್ಶಗಳನ್ನು ಕಳೆದುಕೊಳ್ಳುತ್ತೇವೆ ಹಾಗೂ ಹಾಗೆ ಸಾಕ್ಷಾತ್ಕರಿಸಿಕೊಳ್ಳುವ ದಿನಗಳನ್ನು ಮುಂದಕ್ಕೆ ಹಾಕುತ್ತೇವೆ. ಮಾನ್ಯರೆ, ಅದಕ್ಕೇ ನಾನು ಹೇಳಿದುದು, ಜನರ ಮಾನಸಿಕ ಸ್ಥಿತಿ ಈಗ ಸೂಕ್ತವಾಗಿಲ್ಲ ಎಂದು. ಅವರು ಕೋಪಗೊಂಡಿದ್ದಾರೆ, ಮುನಿಸಿಕೊಂಡಿದ್ದಾರೆ. ಮುನಿಸಿಕೊಂಡಿರುವ ಮಗು ಎಂಥ ಸಿಹಿ ತಿಂಡಿಯನ್ನೂ ಹೇಗೆ ತಿರಸ್ಕರಿಸುವುದೋ ಹಾಗೆಯೇ ಇಂಥ ಸುಧಾರಣೆಯ ಮೌಲ್ಯಮಾಪನ ಮಾಡುವ ಮನಸ್ಸು ಜನರಿಗಿಲ್ಲ. ಈ ಸುಧಾರಣೆಯಲ್ಲಿ ಕೆಲವು ಒಳ್ಳೆಯ ಭಾಗಗಳಿದ್ದರೂ ಅವರು ಅದನ್ನು ಮನಗಾಣುತ್ತಿಲ್ಲ. ಇಂಥ ವೇಳೆಯಲ್ಲಿ ನಾವು ಮಾಡಬೇಕಾದ ಅತ್ಯುತ್ತಮ ಕಾರ್ಯವೆಂದರೆ, ಅವರಿಗಿಷ್ಟವಿಲ್ಲದ ಏನನ್ನೂ ಅವರ ಗಂಟಲೊಳಗೆ ತುರುಕದಿರುವುದು. ಹೋದ ಸಾರಿ ಡಾ॥ ಅಂಬೇಡ್ಕರ್ ಅವರು ಬರ್ಕ್ ಹೇಳಿದುದನ್ನು ಹೇಳಿದರು. ಸಂವಿಧಾನವನ್ನು ಮೂರನೆಯ ಸಾರಿ ಓದುವಾಗ ಅವರು ತಮ್ಮ ಭಾಷಣದ ಕೊನೆಯಲ್ಲಿ ಹೇಗೆ ವಿಷಣ್ಣತೆಯನ್ನು ಸೂಚಿಸಿ, ನಮಗೆ ಎಚ್ಚರಿಕೆ ನೀಡಿದರೋ ಹಾಗೆಯೇ ಹೋದ ಸಾರಿಯೂ ಮಾಡಿದರು. ಆಗ ಅವರು ಹೇಳಿದುದೇನೆಂದರೆ–

"ಹಳೆಯದನ್ನು ಉಳಿಸಿಕೊಳ್ಳಬೇಕೆನ್ನುವವನು ರಿಪೇರಿ ಮಾಡಲು ಸಿದ್ಧನಿರಬೇಕು".

ಒಳ್ಳೆಯದು, ಮಾನ್ಯರೆ, ನಾವು ರಿಪೇರಿ ಮಾಡಲು ಸಿದ್ಧರಿದ್ದೇವೆ. ಆದರೆ ಈ ಮಸೂದೆ ಕೇವಲ ರಿಪೇರಿಯನ್ನು ಒಳಗೊಳ್ಳುತ್ತದೆಯೆ? ನನ್ನ ಪ್ರಕಾರ ಈ ಮಸೂದೆಯು ನಾವಿರುವ ಮನೆಯನ್ನು ಕೆಡುವುತ್ತದೆ. ಅದು ಹೊಸ ಕಟ್ಟಡ ನಿರ್ಮಿಸಲು ಯೋಜಿಸುತ್ತಿದೆ. ಅದು ಇಡೀ ರಚನೆಯಲ್ಲೇ ಬದಲಾವಣೆಯಾಗಬೇಕು ಎನ್ನುತ್ತದೆ. ಅದು ಅಲ್ಲಲ್ಲಿ ಮಾಡುವ ರಿಪೇರಿಯಲ್ಲ, ಅದು ಇಡೀ ರಚನೆಯನ್ನೆ ಬದಲಾಯಿಸುವಂಥ ರಿಪೇರಿ. ಹಳೆಯ ಕಟ್ಟಡವಿದ್ದ ಜಾಗದಲ್ಲಿ ಹೊಸ ಕಟ್ಟಡ ನಿರ್ಮಿಸಲು ಅದು ಬಯಸುತ್ತಿದೆ. ಇದು ನನ್ನ ಅನಿಸಿಕೆ.

**ಸನ್ಮಾನ್ಯ ಡಾ। ಬಿ. ಆರ್. ಅಂಬೇಡ್ಕರ್ :** ಎಲ್ಲ ರಿಪೇರಿಯೂ ರಚನೆಯ ರಿಪೇರಿಯೇ.

**ಶ್ರೀ ಓ. ವಿ. ಅಳಗೇಶನ್ :** ರಚನೆಯನ್ನೆ ಬದಲಾಯಿಸುವಂಥ ರಿಪೇರಿಗೂ ಸಹ ನನ್ನ ಆಕ್ಷೇಪವಿಲ್ಲ. ಆದರೆ ಅಂಥ ರಚನಾತ್ಮಕ ರಿಪೇರಿಯನ್ನು ಕೈಗೊಳ್ಳುವ ಮೊದಲು ಈ ಸದನವೇ ರಚನಾತ್ಮಕ ರಿಪೇರಿಗೆ ಒಳಗಾಗಬೇಕು. ಇದನ್ನೇ ನಾನು ಹೇಳಬೇಕೆಂದಿರುವುದು. ಹೀಗೆ ಹೇಳುವ ಮೂಲಕ ನಾನು ಸದನದ

ಪ್ರಾತಿನಿಧ್ಯ ಹಾಗೂ ಸಾರ್ವಭೌಮತ್ವ ಸ್ವರೂಪದಲ್ಲಿ ಒಂದು ರವೆಯಷ್ಟೂ ಕಡಿಮೆ ಮಾಡುತ್ತಿಲ್ಲ. ಇದನ್ನು ಶಾಸನಕ್ಕೊಳಪಡಿಸಿದರೆ, ಯಾರಿಗೂ ಆಶ್ಚರ್ಯವಾಗುವುದಿಲ್ಲ. ಪ್ರೊ. ಷಹಾ ಇದನ್ನೆ ಒತ್ತಿ ಹೇಳುತ್ತಿದ್ದರು. ಇದು ದೈನಂದಿನ ವಿಷಯ ಆದರೂ ಅದನ್ನು ವಿಶೇಷ ರೀತಿಯಲ್ಲಿ ನೋಡಲಾಗುತ್ತಿದೆ, ಅದನ್ನು ಸಂದೇಹದಿಂದ ನೋಡಲಾಗುತ್ತಿದೆ, ಕೋಪದಿಂದ ನೋಡಲಾಗುತ್ತಿದೆ. ಅದಕ್ಕೆ ನಾವು ತಾರತಮ್ಯ ಮಾಡಬೇಕೆಂದೂ ಈ ಸುಧಾರಣೆಯನ್ನು ತರಲು ಸದನವನ್ನು ರಚನಾತ್ಮಕವಾಗಿ ರಿಪೇರಿ ಮಾಡಬೇಕು. ಅಷ್ಟರೊಳಗಾಗಿ ಅದಕ್ಕೆ ಅಗತ್ಯವಾದ ಹೆಚ್ಚಿನ ಆತ್ಮವಿಶ್ವಾಸವನ್ನೂ ಹೆಚ್ಚಿನ ಯಶಸ್ಸನ್ನೂ ಅದು ಗಳಿಸಿಕೊಂಡಿರುತ್ತದೆ ಎಂದೂ ನಾನು ಹೇಳಿದುದು.

ಮಾನ್ಯರೆ, ಮತ್ತೊಂದು ವಿಷಯ ಯಾವ ಪರಿಸರದಲ್ಲಿ ನಾವು ಈ ಮಸೂದೆಯನ್ನು ತೂರಿಸಲು ಪ್ರಯತ್ನಿಸುತ್ತಿದ್ದೇವೆಯೋ ಆ ಪರಿಸರಕ್ಕೆ ಸಂಬಂಧಿಸಿದ ವಿಷಯುವದು. ಮಾನ್ಯರೆ, ಈ ದೇಶದಲ್ಲಿ ಒಬ್ಬ ಮಹಾತ್ಮರಿದ್ದರು. ನಮ್ಮ ಆಲೋಚನೆ ಮತ್ತು ಕ್ರಿಯೆಗಳೆಲ್ಲವೂ ಅವರನ್ನೇ ಅನುಸರಿಸುತ್ತಿದ್ದವು. ನಾವು ಗುಲಾಮರಾಗಿದ್ದರೂ, ಸ್ವತಂತ್ರ ವ್ಯಕ್ತಿಗಳಂತೆ ಯೋಚಿಸಲು ಹಾಗೂ ಕ್ರಿಯೆ ಮಾಡಲು ಅವರು ನಮಗೆ ಕಲಿಸಿದರು. ನಾವು ಅವರನ್ನೆ ಅನುಸರಿಸಿದೆವು. ಅಂಥ ಸಂಪ್ರದಾಯವನ್ನು ಅವರು ಸ್ಥಾಪಿಸಿದರು. ಈ ದೇಶ ಪಾರಿಭಾಷಿಕ ಅರ್ಥದಲ್ಲಿ ಸ್ವತಂತ್ರವಾಗುವ ಮುನ್ನ, ಅವರು ಸ್ವತಂತ್ರ ಆಲೋಚನೆ ಮತ್ತು ಸ್ವತಂತ್ರ ಕ್ರಿಯೆಗಳಿಗೆ ಅಗತ್ಯವಾದ ವಾತಾವರಣವನ್ನು ಸೃಷ್ಟಿಸಿದರು. ಆದರೆ ದುರದೃಷ್ಟವಶಾತ್ ಮಾರ್ಗದರ್ಶನ ಮಾಡಲು ಅವರು ನಮ್ಮೊಂದಿಗಿಲ್ಲ. ಆದರೆ ಅವರು ಹಾಕಿಕೊಟ್ಟ ಉದಾಹರಣೆಯಿದೆ. ನಾವು ಅದನ್ನು ಅನುಸರಿಸಬಹುದು. ಅಸ್ಪೃಶ್ಯತಾ ನಿವಾರಣೆ, ದೇವಾಲಯ ಪ್ರವೇಶ ಮುಂತಾದ ಪರಸ್ಪರ ಸಂಬಂಧವುಳ್ಳ ವಿಷಯಗಳನ್ನು ಕುರಿತು ಅವರು 'ಇಂಥ ಉದಾತ್ತ ಧ್ಯೇಯಗಳನ್ನು ಶಾಸನದ ಮೂಲಕ ಸಾಧಿಸಬಾರದೆಂದು' ಬುದ್ಧಿವಾದ ಹೇಳಿದರು. ಇಂಥ ಸುಧಾರಣೆಯ ಆವಶ್ಯಕತೆಯ ಬಗ್ಗೆ ಅವರು ಜನರ ಮನವೊಲಿಸಿದರು, ಅವರಿಗೆ ಬೋಧನೆ ನೀಡಿದರು. ಅವರು ತಮ್ಮ ಮೇಲೆ ತಾವೇ ನೋವನ್ನು ಹೇರಿಕೊಂಡರು. ಇಂಥ ಮಾರ್ಗದಿಂದಲೇ ಅವರು ಇಷ್ಟು ಆಗಾಧವಾದ ಸುಧಾರಣೆಯನ್ನು ತರಲು ಸಾಧ್ಯವಾದುದು. ಈಗ ಅದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ನಾವು ಅನುಸರಿಸಬೇಕಾದುದು ಆ ದಾರಿಯನ್ನೇ ಹೊರತು, ಒಲ್ಲದ ಜನರ ಗಂಟಲೊಳಕ್ಕೆ ಬಲಾತ್ಕಾರದಿಂದ ಸುಧಾರಣೆಯನ್ನು ತುರುಕುವುದನ್ನಲ್ಲ.

**ಶ್ರೀ ವಿ. ಐ. ಮುನಿಸ್ವಾಮಿ ಪಿಳ್ಳೈ :** ಅವರಿಗೆ ಬೋಧನೆ ಮಾಡುವ ಕಾರ್ಯ ನಿಮ್ಮ ಪಾಲಿನದು.

**ಶ್ರೀ ಓ.ವಿ. ಅಳಗೇಶನ್ :** ನಾವು ದೇಶದ ತುಂಬೆಲ್ಲ ಸಂಚರಿಸಿ ಜನರಿಗೆ ಬೋಧಿಸಬೇಕು. ಸದ್ಯದಲ್ಲೇ ಸಾರ್ವತ್ರಿಕ ಚುನಾವಣೆಗಳು ಬರುತ್ತವೆ ಈ ಉದ್ದೇಶಕ್ಕೆ ಇದೇ ಸೂಕ್ತ ಸಮಯ.

**ಶ್ರೀಮತಿ ಜಿ. ದುರ್ಗಾಬಾಯಿ** (ಮದ್ರಾಸ್ : ಸಾಮಾನ್ಯ) : ಅದೇ ಪೂರ್ಣ ಭಯ.

**ಶ್ರೀ ಓ.ವಿ. ಅಳಗೇಶನ್ :** ಈ ಮಸೂದೆಯಲ್ಲಿರುವ ವಿವಿಧ ನಿಯಮಗಳನ್ನು ಜನರಿಗೆ ತಿಳಿಸಿಕೊಡಲು ಇದೊಂದು ಅದ್ಭುತ ಅವಕಾಶ ನೀಡುತ್ತದೆ. ನಿನ್ನೆ ಕಾಂಗ್ರೆಸ್ ಅಧ್ಯಕ್ಷರು ಹೇಳಿದುದರಲ್ಲಿ ಸಾಕಷ್ಟು ಶಕ್ತಿಯಿದೆ. ಬ್ರಿಟನ್ನಿನಲ್ಲಿರುವ ಲೇಬರ್ ಸರ್ಕಾರ ಹೇಗೆ ಕಾರ್ಯ ಮಾಡುತ್ತದೆ? ಅಲ್ಲಿ ಮತದಾರರ ಅನುಮತಿ ಪಡೆದ ಮಸೂದೆಯನ್ನು, ಬಹಳ ಮುಖ್ಯವಾದ ಮಸೂದೆಯನ್ನು, ಅಂಗೀಕರಿಸದೆ ಮುಂದೂಡುತ್ತಿದ್ದಾರೆ. ಸರ್ಕಾರವು ಮತದಾರರ ಒಪ್ಪಿಗೆ ಪಡೆದಿತ್ತು, ಆದರೆ ದೇಶದಲ್ಲಿರುವ ಸದ್ಯದ ಪರಿಸ್ಥಿತಿಯನ್ನು ಗಮನಿಸಿ ಸಾರ್ವತ್ರಿಕ ಚುನಾವಣೆಗಳ ನಂತರದ ಕಾಲಕ್ಕೆ ಮುಂದೂಡಲಾಗಿದೆ. ಅವರು ಜನರ ತೀರ್ಪನ್ನು ಮತ್ತೊಮ್ಮೆ ಪಡೆದು, ಅನಂತರ ಆ ಕಾಯಿದೆಯನ್ನು ಮಂಡಿಸುತ್ತಾರೆ. ಮತದಾರರ ಅನುಮತಿ ಮತ್ತು ಅಪ್ಪಣೆಯನ್ನು ಪಡೆದ

ಇಂಥ ವಿಷಯದ ಗತಿ ಹೀಗಿರುವಾಗ, ಈ ಬಗ್ಗೆ ನಾವು ಮತದಾರರಿಗೆ ಯಾವ ಸುಳಿವನ್ನೂ ಕೊಡದೇ ಇರುವುದರಿಂದ ಇದನ್ನು ಪರಿಶೀಲಿಸುವುದು ಇನ್ನೂ ಹೆಚ್ಚು ಅಗತ್ಯ ಎಂಬುದು ನನ್ನ ಅನಿಸಿಕೆ. ಎರಡು ದಿನಗಳಿಂದಲೂ ಪ್ರತಿಯೊಂದು ಅಧಿವೇಶನದಲ್ಲಿ ಈ ಮಸೂದೆಯ ಬಗ್ಗೆ ಚರ್ಚೆಯಾಗುತ್ತಿರುವ ದೃಶ್ಯವನ್ನು ನಾವು ನೋಡಿದ್ದೇವೆ. ಮುಂದಿನ ದೀಪಾವಳಿಗೆ ಚಿನ್ನದ ಬಳೆಯನ್ನು ನವೀಕರಿಸೋಣ ಎಂಬ ಪ್ರಮಾಣ ವಚನದಂತಿದೆ, ಇದು. ನಾವು ಮುಂದುವರಿಯುತ್ತಿರುವುದು ಹೀಗಿದೆ, ಮತ್ತು ಹೀಗೆ ಮುಂದುವರಿಯುವುದೇ ಲೇಸು; ಏಕೆಂದರೆ, ಯಾರಿಗೆ ಗೊತ್ತು ಮಸೂದೆಗೆ ಉತ್ಸಾಹ ಪೂರ್ಣ ಬೆಂಬಲ ನೀಡಿರುವ ಸೋದರಿಯರೇ ನಾಳೆ ಮನಸ್ಸು ಬದಲಾಯಿಸಬಹುದು ಹಾಗೂ ಮಸೂದೆಯನ್ನು ತಮಗೆ ತಿಳಿದಂತೆ ತಿದ್ದಲು ಪ್ರಯತ್ನಿಸಬಹುದು. ಯಾರೂ ಒಂದೇ ತೆರನಿರುವುದಿಲ್ಲ; ಹೆಂಗಸರಂತೂ ಇರುವುದಿಲ್ಲ.

**ಶ್ರೀಮತಿ ಜಿ. ದುರ್ಗಾಬಾಯಿ :** ತಮ್ಮ ಅಭಿಪ್ರಾಯಗಳನ್ನು ಬದಲಾಯಿಸುತ್ತಲೇ ಇರುವ ಗಂಡಸರೂ ಇದ್ದಾರೆ.

**ಶ್ರೀ ಓ. ವಿ. ಅಳಗೇಶನ್ :** ನಮ್ಮ ದೇಶದ ಮಹಾಕವಿ, ಆದಿಕವಿ ವಾಲ್ಮೀಕಿ ಹೇಳಿದ ಮಾತಿದು. ಇದು ಸ್ತ್ರೀಯರ ಸಾಮಾನ್ಯ ಸ್ವಭಾವಕ್ಕೆ ಅನ್ವಯವಾಗುತ್ತದೆ. ಆದರೆ ಯಾವೊಬ್ಬ ಸ್ತ್ರೀಗೂ ವಿಶೇಷವಾಗಿ ಅನ್ವಯವಾಗುವುದಿಲ್ಲ. ವಾಲ್ಮೀಕಿ ಹೇಳಿದರು.

"ಸತಿವದನಂ ಲೋಲತರಂ"

ಅಂದರೆ : ಹೆಂಗಸರು ಮಿಂಚಿನಂತೆ ಬದಲಾಗುತ್ತಾರೆ.

ಇದು ಅವರು ಹೇಳಿದ ಮಾತು.

ಅದೇ ರೀತಿ, ಅವರು ಮನಸ್ಸು ಬದಲಾಯಿಸಿ, ಅದನ್ನು ಉತ್ತಮಗೊಳಿಸಲು ಪ್ರಯತ್ನಿಸಬಹುದು. ನಾನು ತಮ್ಮನ್ನೂ ಸದನವನ್ನೂ ಕೇಳುವುದೇನೆಂದರೆ, ಅವರು ಇಲ್ಲಿಯವರೆಗೂ ಕಾದುದರಿಂದ ಅವರಿಗೆ ಲಾಭವಾಗಿಲ್ಲವೆ? ಅವರಿಗೆ ಲಾಭವಾಗಿದೆ; ಏಕೆಂದರೆ, ರಾವ್ ಸಮಿತಿಯ ಶಿಫಾರಸ್ಸುಗಳ ಮೇರೆಗೆ ಪುತ್ರಿಯರಿಗೆ ಅರ್ಧ ಪಾಲಷ್ಟೇ ಸಿಗುತ್ತಿತ್ತು. ಆದರೆ ಈಗಿನ, ಡಾ. ಅಂಬೇಡ್ಕರರ ಮಸೂದೆಯ ಮೇರೆಗೆ, ಪುತ್ರಿಯರಿಗೆ ಪುತ್ರರಿಗೆ ಸಿಗುವಷ್ಟೇ (ಸಮಾನ) ಪಾಲು ಸಿಗುತ್ತದೆ.

ಆದುದರಿಂದ, ಮಾನ್ಯರೆ, ಅವರು ಇನ್ನೂ ಸ್ವಲ್ಪ ಕಾದರೆ ಇನ್ನೂ ಹೆಚ್ಚು ಸಿಗಬಹುದು. ಪುತ್ರಿಯರಿಗೆ ಎರಡಷ್ಟು ಸಿಕ್ಕಬಹುದು. ಮೊದಲನೆ ದಿನ ಮಾನ್ಯ ಶ್ರೀ ಎ. ಕೆ. ಮೆನೋನ್ ಆಡಿದ ಮಾತುಗಳನ್ನು ಕೇಳಿಸಿಕೊಂಡಿದ್ದೇವೆ. ಕೆಲ ದಿನಗಳ ಹಿಂದೆ ಬೇರೆ ಕಡೆ ಶ್ರೀ ಥಾನು ಪಿಳ್ಳೈ ಆಡಿದ ಮಾತುಗಳನ್ನು ಕೇಳಿಸಿಕೊಂಡಿದ್ದೇವೆ. ಅವರಿಗೆ ಈ ಬಗ್ಗೆ ಬಹಳ ಕಾತರವಿದೆ. ಅವರ ಪ್ರಕಾರ, ಹೆಂಗಸರನ್ನು ಮುಂದಕ್ಕೆ ತಳ್ಳುವುದರ ಬದಲು ಹಿಂದಕ್ಕೆ ತಳ್ಳುತ್ತಿದ್ದೇವೆ. ಮಲಬಾರಿಗಳನ್ನುಳಿದು ಭಾರತದ ಎಲ್ಲರನ್ನೂ ಮುಂದಕ್ಕೆ ತಳ್ಳುತ್ತಿದ್ದರೆ, ಮಲಬಾರಿಗಳು 'ಈ ಮಸೂದೆಯಿಂದಾಗಿ ತಮ್ಮನ್ನು ಹಿಂದಕ್ಕೆ ತಳ್ಳಲಾಗುತ್ತಿದೆ' ಎಂದು ಬಲವಾಗಿ ನಂಬುತ್ತಾರೆ. ಮಾನ್ಯರೆ, ಅವರು ಬೇರೆಯವರನ್ನು ಒಪ್ಪಿಸಿ–ಮಾತೃಪ್ರಧಾನ ಪದ್ಧತಿ ಬೇರೆ ಕಡೆ ಕಣ್ಮರೆಯಾಗುತ್ತಿದ್ದರೂ – ಇಡೀ ದೇಶವೇ ಮರುಮಕ್ಕತ್ತಾಯಂಗೆ ಒಳಪಡುವಂತೆ ಮಾಡಿಯಾರು. ಮಲಬಾರಿನಿಂದ ಬಂದಿರುವ ಮಿತ್ರರು ಸದನದ ಇತರ ಸನ್ಮಾನ್ಯ ಸದಸ್ಯರನ್ನು ಒಪ್ಪಿಸಲು ಶಕ್ತರಾಗಬಹುದು. ಆಗ ಎಲ್ಲವೂ ಮರುಮಕ್ಕತ್ತಾಯಂ ಆಗುತ್ತದೆ. ಅದಂತೂ ಇನ್ನೂ ಒಳ್ಳೆಯದು. ಕಾಯುವುದರಿಂದ ಅವರು ಏನನ್ನೂ ಕಳೆದುಕೊಳ್ಳುವುದಿಲ್ಲ, ಏಕೆಂದರೆ ಅವರಿಗೆ ಮನವೊಲಿಸುವ ಶಕ್ತಿಯಿದೆ. ಅವರು ಮನವೊಲಿಸಬಹುದು, ಮನಸ್ಸನ್ನು ಕೆಡಿಸಬಹುದು, ಇವೆಲ್ಲವನ್ನು ಅವರು ಮಾಡಬಲ್ಲರು.

**ಮಾನ್ಯ ಉಪಸಭಾಪತಿಗಳೂ :** ಮಾನ್ಯ ಸದಸ್ಯರು ಆ ಪದವನ್ನು ಬಳಸುವ ಅಗತ್ಯವಿಲ್ಲ.

**ಶ್ರೀ ಓ. ವಿ. ಅಳಗೇಶನ್ :** ನನಗೆ ವಿಷಾದವೆನ್ನಿಸುತ್ತದೆ. ಆ ಪದವನ್ನು ಹಿಂತೆಗೆದುಕೊಳ್ಳುವೆ. ಮಾನ್ಯರೆ, ನಿನ್ನೆ ಈ ಸದನದಲ್ಲಿ ಭಾಷಣವೊಂದರ ಅದ್ಭುತ ದೃಶ್ಯವೊಂದನ್ನು ನೋಡಿದೆವು. ಆ ಭಾಷಣವು ಒಂದು ಅದ್ಭುತ ವಿಡಂಬನೆಯಂತೆ ಪ್ರಾರಂಭವಾಗಿ, ದುಃಖಪೂರಿತ ಬೋಧನೆಯಂತೆ, ಮುಕ್ತಾಯವಾಯಿತು. ಬೆಳಗಾಗುವುದರೊಳಗಾಗಿ ವಿಡಂಬನೆ ಬೋಧನೆಯಾಗಿ ಮಾರ್ಪಾಟಾಗಿತ್ತು. ಇದನ್ನು ನೋಡಿದ ಮೇಲೆ, ಯಾವುದೂ ಅಸಾಧ್ಯವಲ್ಲ ಎನಿಸುತ್ತದೆ. ಈ ಮಸೂದೆಯನ್ನು ಬೆಂಬಲಿಸುವವರ ಪ್ರಕಾರವೂ ಸಹ, ಅದನ್ನು ಆಮೂಲಾಗ್ರವಾಗಿ ಸುಧಾರಿಸಬಹುದು; ಸ್ವಲ್ಪ ಕಾದರೆ, ಇನ್ನೂ ಒಳ್ಳೆಯ ಮಸೂದೆ ಸಿಗಬಹುದು; ಅಲ್ಲದೆ, ಅದಕ್ಕೆ ಜನತೆಯ ಒಪ್ಪಿಗೆಯನ್ನು ಪಡೆದ ಸಮಾಧಾನವೂ ಅವರಿಗುಂಟಾಗಬಹುದು.

ಮಾನ್ಯರೆ, ನಾನು ಮತ್ತೊಂದು ವಿಷಯವನ್ನು ತಮ್ಮ ಮುಂದಿಡಬಯಸುತ್ತೇನೆ. ಈಗಿರುವ ಸಮಸ್ಯೆಯ ಬಗೆಗೆ ಈ ಮಸೂದೆಯ ಧೋರಣೆ ಏನು? ಧೋರಣೆ ಏನೆಂದರೆ, ಹಿಂದೂ ಸಮಾಜದಲ್ಲಿ ಗಂಡು–ಹೆಣ್ಣುಗಳ ಮಧ್ಯೆ ಅಸಮಾನತೆ ಇದೆ. ತಮಗೆ ನಾನು ವಿನಯಪೂರ್ವಕವಾಗಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಗಂಡು–ಹೆಣ್ಣುಗಳ ನಡುವಿನ ಅಸಮಾನತೆ ಭಾವನೆಯು ಬೈಬಲ್ಲಿನ ಭಾವನೆ. ಹಿಂದೂ ಭಾವನೆಯೆಂದರೆ ಅರ್ಧನಾರೀಶ್ವರ ಭಾವನೆ, ಅಂದರೆ ಗಂಡಸರೂ ಹೆಂಗಸರೂ ಸಮಾನರು ಎಂಬ ಭಾವನೆ. ಅದು ನಮ್ಮ ಭಾವನೆ. ಮಾನ್ಯರೆ, ಅದು ಹಿಂದೂಗಳ ಮೂಲಭೂತ ಭಾವನೆ. ಆ ಭಾವನೆಯನ್ನು ನಾವು ಸಂಪೂರ್ಣವಾಗಿ ಅನುಷ್ಠಾನಕ್ಕೆ ತಂದಿದ್ದೇವೆ ಎಂದೇನೂ ನಾನು ಹೇಳುತ್ತಿಲ್ಲ. ಹಾಗೇನೂ ನಾನು ಹೇಳಿಕೊಳ್ಳುವುದಿಲ್ಲ. ಆದರೆ ಅದು ಮೂಲಭೂತ ಹಿಂದೂ ಕಲ್ಪನೆ. ಅಸಮಾನತೆಯ ಕಲ್ಪನೆಯಲ್ಲ. ಅದು ಕೇವಲ ವಿಷಮತೆಯ ಕಲ್ಪನೆಯಷ್ಟೆ. ಗಂಡಸು ಬಲದ ಪ್ರತೀಕವಾಗಿದ್ದರೆ, ಹೆಂಗಸು ತಾಳ್ಮೆಯ ಪ್ರತೀಕ. ಗಂಡಸು ಬುದ್ಧಿಯ ಪ್ರತೀಕವಾಗಿದ್ದರೆ ಹೆಂಗಸು ವಿವೇಕದ ಪ್ರತೀಕವಾಗಿದ್ದಾಳೆ, ಗಂಡಸು ವ್ಯಾಕರಣದ ಪ್ರತೀಕವಾಗಿದ್ದರೆ, ಹೆಂಗಸು ಕವಿತೆಯ ಪ್ರತೀಕವಾಗಿದ್ದಾಳೆ, ಮಹಾಕವಿ ಕಾಳಿದಾಸ ಪಾರ್ವತಿ ಪರಮೇಶ್ವರರನ್ನು ಪದ ಮತ್ತು ಅದರೊಳಗಿನ ಅರ್ಥ ಎಂದು ವರ್ಣಿಸಿದ್ದಾನೆ. ಅದು ನಮ್ಮ ಮೂಲಭೂತ ಧೋರಣೆ. ನಾವು ಈ ಸಮಸ್ಯೆಯನ್ನು ಪರಿಹರಿಸಲು ಗಂಡಸು–ಹೆಂಗಸರ ನಡುವಿನ ಅಸಮಾನತೆಯ ದೃಷ್ಟಿಯಿಂದ ಹೊರಟರೆ, ನಾವೊಂದು ಮೂಲಭೂತ ತಪ್ಪನ್ನು ಮಾಡುತ್ತಿದ್ದೇವೆಂದರ್ಥ.

ಅಲ್ಲದೆ, ಮಾನ್ಯರೆ, ಸದ್ಯದ ಪರಿಸ್ಥಿತಿಯು ಮುಕ್ತ ಪರಿಸ್ಥಿತಿಯಲ್ಲ. ಏಕೆಂದರೆ, ನಮ್ಮ ಸಂಸ್ಥೆಗಳನ್ನು – ಅದರಲ್ಲೂ ಈ ವಿಷಯವನ್ನು – ನಾವು ಒಂದು ಸ್ವತಂತ್ರ ರಾಷ್ಟ್ರದಂತೆ ಪರಿಶೀಲಿಸಿಯೇ ಇಲ್ಲ. ಈಗ ಚಾಲ್ತಿಯಲ್ಲಿರುವುದು ಬ್ರಿಟಿಷರು ಮಾಡಿದ ನ್ಯಾಯಾಲಯಗಳೇ ಹೊರತು, ಯಾಜ್ಞವಲ್ಕ್ಯ ಅಥವಾ ಮನು ಸ್ಮೃತಿ ಅಲ್ಲ. ನಮ್ಮ ಸಂಸ್ಥೆಗಳನ್ನು ರಾಗದ್ವೇಷಗಳಿಲ್ಲದೆ, ನಿಷ್ಪಾಕ್ಷಿಕವಾಗಿ ಮುಕ್ತ ಮನಸ್ಸಿನಿಂದ ಪರೀಕ್ಷಿಸುವ ಅವಕಾಶವೇ ನಮಗೆ ಸಿಕ್ಕಿಲ್ಲ. ನಮಗೆ ಯಾವಾಗಲೂ ಪಾಶ್ಚಾತ್ಯ ಆದರ್ಶಗಳು. ಪಾಶ್ಚಾತ್ಯ ಆಲೋಚನೆಗಳ ಗೀಳೂ ಇದ್ದೇ ಇದೆ. ರಾಜಕೀಯ ದಾಸ್ಯದಿಂದ ಮುಕ್ತರಾಗಿದ್ದರೂ, ಪಾಶ್ಚಾತ್ಯ ನಾಗರಿಕತೆ ಮತ್ತು ಸಿದ್ಧಾಂತಕ್ಕೆ ನಾವು ಮಂತ್ರಮುಗ್ಧರಾಗಿದ್ದೇವೆ. ಅದುದರಿಂದ ಇನ್ನೂ ಸ್ವಲ್ಪ ಸಮಯ ಕಳೆದರೆ ಒಳ್ಳೆಯದು; ಆಗ ನಾವು ನಮ್ಮ ಸಂಸ್ಥೆಗಳ ಗುಣದೋಷಗಳ ವಿಮರ್ಶೆಯನ್ನು ಒಂದು ಸ್ವತಂತ್ರ ರೀತಿಯಲ್ಲಿ, ಒಂದು ಹೊಸ ರೀತಿಯಲ್ಲಿ ಮಾಡಬಹುದು. ಆಗ ನಮಗೆ ಈ ಮಸೂದೆಯನ್ನು ತಿದ್ದುವ ಹಾಗೂ ಉತ್ತಮಪಡಿಸುವ ಅವಕಾಶ ದೊರೆಯುತ್ತದೆ.

ಮಾನ್ಯರೆ, ಈ ಮಸೂದೆಯ ಹಿಂದಿರುವ ಮತ್ತೊಂದು ಕಾರಣವೆಂದರೆ, ಗಂಡಸರು ಹೆಂಗಸರಿಗೆ

ಮಾಡಿರುವ ಅನ್ಯಾಯ. ತಮಾಷೆಗಾಗಿಯೂ ಗಂಭೀರವಾಗಿಯೂ ಈ ಹಿಂದೆ ಹೇಳಲಾಗಿರುವುದೆಲ್ಲವನ್ನೂ ನಾನು ಮತ್ತೆ ಹೇಳಲು ಇಷ್ಟಪಡುವುದಿಲ್ಲ. ಆದರೆ, ಮಾನ್ಯರೆ, ಗಂಡಸರು ಹೆಂಗಸರಿಗೆ ಎಂದೂ ಅನ್ಯಾಯ ಎಸಗಿಲ್ಲ ಎಂದು ನಾನು ಘಂಟಾಘೋಷವಾಗಿ ಹೇಳಬಲ್ಲೆ. ಸಾಧಾರಣ ರೀತಿಯ ಝೀವನ ನಡೆಸುವಂತೆ ಪ್ರೇರೇಪಿಸುವ ಬದಲು ಉಳಿದುದೆಲ್ಲವನ್ನೂ ಮಾಡುವಂತೆ ಪ್ರೇರೇಪಿಸಬಲ್ಲ ಅನಿರ್ಬಂಧಿತ ಪರಿಸ್ಥಿತಿಗಳ ದೆಸೆಯಿಂದಾಗಿ ಶೀಘ್ರವಾಗಿ ಉದ್ರೇಕಗೊಳ್ಳುವವರ ಚಂಚಲ ಪ್ರವೃತ್ತಿ ಇದು, ಅಷ್ಟೇ. ನಾನು ಹೇಳುವ ರೀತಿ ಇದು. ಸ್ತ್ರೀಯರಿಗೆ ಅನ್ಯಾಯವಾಗುವಂಥಾದ್ದೇನನ್ನೂ ಪುರುಷರು ಈ ದೇಶದಲ್ಲಿ ಮಾಡಿಲ್ಲ. ನಮ್ಮ ಎದುರಾಳಿಗಳು ಮಂಡಿಸಿರುವ ಕೆಲವು ವಾದಗಳನ್ನು ನಾನು ಪರೀಕ್ಷಿಸಬಯಸುತ್ತೇನೆ. ಮಂತ್ರಿ ಮಂಡಲದ ಸದಸ್ಯರಲ್ಲಿ ಇತ್ತೀಚಿಗೆ ಒಂದು ಪ್ರವೃತ್ತಿ ಹೆಚ್ಚುತ್ತಿದೆ. ಯಾವಾಗ ಒಂದು ಮಸೂದೆ ಚರ್ಚೆಗೆ ಬಂದರೂ ಅವರು 'ಕೆಲವರು ಇದನ್ನು ವಿರೋಧಿಸಿದ್ದಾರೆ ಮತ್ತೆ ಕೆಲವರು ಬೆಂಬಲಿಸಿದ್ದಾರೆ ಆದ್ದರಿಂದ ಇದಕ್ಕೆ ಜನ ಸಾಮಾನ್ಯರ ಬಹುಮತದ ಬೆಂಬಲವಿದೆ' ಎನ್ನುತ್ತಾರೆ. ಇದು ಚರ್ಚೆಯನ್ನು ಮುಗಿಸುವ ಬಹಳ ಸುಲಭವಾದ ದಾರಿ. ಆದರೆ ಈ ಮಸೂದೆಯ ಹೊಣೆ ಹೊತ್ತಿರುವ ನಮ್ಮ ವಿದ್ವಾಂಸ ಮಂತ್ರಿಗಳು ಈಗಲೂ ಹಾಗೇ ಮಾಡುತ್ತಾರೆಂದು ನನಗನಿಸುವುದಿಲ್ಲ. ಅದರಲ್ಲಿ ನನಗೆ ಸಂದೇಹವೇ ಇಲ್ಲ. ನನ್ನ ಪ್ರಕಾರ, ಈ ಮಸೂದೆಗಿರುವುದು ಜನಸಾಮಾನ್ಯರ ಬಹುಮತ ಬೆಂಬಲವಲ್ಲ, ಅತ್ಯಂತ ಕಡಿಮೆಯ ಅಲ್ಪಮತ.

ಹಾಗೆಯೇ, ಮಾನ್ಯರೆ, ಈ ಮಸೂದೆಗೆ ತೋರಿಸುತ್ತಿರುವ ವಿರೋಧವು ಪೂರ್ವಾಗ್ರಹ ಮತ್ತು ಭಾವಾತಿರೇಕಗಳ ಮೇಲೆ ನಿಂತಿದೆಯೆ ಹೊರತು ವೈಚಾರಿಕತೆಯ ಮೇಲಲ್ಲ ಎಂದು ಹೇಳಲಾಗುತ್ತಿದೆ. ನನ್ನ ಪ್ರಕಾರ, ಬೆಂಬಲವೂ ಸಹ ಭಾವಾಂಧತೆಯ ಮೇಲೆ, ಪೂರ್ವಾಗ್ರಹದ ಮೇಲೆ, ಅವೈಚಾರಿಕತೆಯ ಮೇಲೆ ನಿಂತಿದೆ. ಬೆಂಬಲ ನೀಡುವುದು ವಿವೇಕ, ವಿರೋಧಿಸುವುದು ಅವಿವೇಕ, ಎಂಬುದು ಕೇವಲ ತೋರಿಕೆ.

ಅಲ್ಲದೆ ಮಾನ್ಯರೆ, ಈ ಮಸೂದೆಗೆ ಸಮರ್ಥನೆ ನೀಡುತ್ತಾ, ಈ ಮಸೂದೆಯು ನಮಗೆ ಕೆಲವು ಅಧಿಕಾರಗಳನ್ನೂ ಅವಕಾಶಗಳನ್ನೂ ನೀಡುತ್ತದೆ, ಅಷ್ಟೇ ಎಂದು ಕೆಲವರು ಹೇಳುತ್ತಾರೆ. ಮತ್ತೊಂದು ಕಡೆ "ಸಂಪ್ರದಾಯಸ್ಥರು ಯಾವ ಅಡೆತಡೆಯೂ ಇಲ್ಲದೆ, ತಮ್ಮ ಹಳೆಯ ದಾರಿಯಲ್ಲೇ ಸಾಗಬಹುದು, ಮತ್ತು ಸುಧಾರಕರು ಸಹ ತಮ್ಮದೇ ಆದ ದಾರಿಯಲ್ಲಿ ಸಾಗಬಹುದು, ಅಥವಾ ಮಸೂದೆಯ ನಿಬಂಧನೆಗಳನ್ನು ಸದುಪಯೋಗ ಪಡಿಸಿಕೊಳ್ಳುವವರಿಗೆ ತಮ್ಮದೇ ಆದ ದಾರಿಯಲ್ಲಿ ಸಾಗಲೂ ಹಾಗೂ ಉಳಿದವರು ಪೂರ್ಣ ಸ್ವಾತಂತ್ರ್ಯದಿಂದ ತಮ್ಮದೇ ಆದ ದಾರಿಯಲ್ಲಿ ಸಾಗಲೂ ಅವಕಾಶ ಮಾಡಿಕೊಡುವ ಮಸೂದೆ, ಇದು" ಎಂದೂ ಹೇಳಲಾಗುತ್ತದೆ. ಪ್ರಾಯಶಃ ಹೀಗೆಂದು ಡಾ. ಅಂಬೇಡ್ಕರ್ ಹೇಳಿದರೇನೋ. ಮಾನ್ಯರೇ, ಇದು ಯಾವ ರೀತಿ ಆಯಿತೆಂದರೆ, ಸ್ವೇಚ್ಛಾಚಾರದ ಒಂದು ಸಾಮಾನ್ಯ ನಿಯಮವನ್ನು ಜಾರಿಗೊಳಿಸಿ ಇದನ್ನು ಸದುಪಯೋಗಪಡಿಸಿಕೊಳ್ಳಲಿಚ್ಛಿಸುವವರು ಹಾಗೆ ಮಾಡಬಹುದು ಎಂದು ಹೇಳಿದಂತಾಯಿತು. ಇದೊಂದು ಕೇವಲ ಅಧಿಕಾರದಾಯಕ ಮತ್ತು ಅವಕಾಶದಾಯಕ ಮಸೂದೆ ಎಂಬ ವಾದದಲ್ಲಿ ಏನೂ ಹುರುಳಿಲ್ಲ. ಅದೇ ರೀತಿ "ಶಾರದಾ ಶಾಸನ ಮತ್ತು ಇದೇ ರೀತಿಯ ಮಸೂದೆಗಳಿಗೂ ಹಿಂದೆ ವಿರೋಧ ಇತ್ತು" ಎಂದೂ ಹೇಳಲಾಗಿದೆ. ಆದರೆ ಆಗಿನ ಸಂದರ್ಭಗಳೇ ಬೇರೆ ಇದ್ದವು. ಆಗಿನ ಆ ಶಾಸನಕ್ಕೂ ಈ ಮಸೂದೆಗೂ ವ್ಯತ್ಯಾಸವಿದೆ.

ಈ ಮಸೂದೆಯು ಬಹಳ ಕಾಲದಿಂದಲೂ ದೇಶದ ಮುಂದಿದೆ. ಆದುದರಿಂದ, ನಾವು ಇನ್ನೂ ಕಾಯಬೇಕಾದ ಅಗತ್ಯವಿಲ್ಲ ಎಂದು ಡಾ. ತೇಕ್‌ಚಂದ್ ಹೇಳಿದರು. ಈ ಮಸೂದೆ ಬಹಳ ವರ್ಷಗಳಿಂದಲೂ ದೇಶದ ಮುಂದಿರುವುದೇನೋ ನಿಜ. ಆದರೆ ಆಗ ಕಾಂಗ್ರೆಸ್ ಅಧಿಕಾರದಲ್ಲಿರಲಿಲ್ಲ. ಅಲ್ಲದೆ ಅದನ್ನು

ಯಾರೂ ಗಂಭೀರವಾಗಿ ಪರಿಗಣಿಸಲಿಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬಂದು, ಡಾ. ಅಂಬೇಡ್ಕರ್ ಕಾಂಗ್ರೆಸ್ ಪಕ್ಷದ ಮಂತ್ರಿಗಳಾಗಿ ಮಸೂದೆಯನ್ನು ತಮ್ಮ ಮುಂದಾಳತ್ವದಲ್ಲಿ ಮಂಡಿಸಿದ ಕೂಡಲೆ, ಪ್ರತಿಯೊಬ್ಬರೂ ಅದನ್ನು ಗಂಭೀರವಾಗಿ ಪರಿಗಣಿಸತೊಡಗಿದರು. ಈಗ ಅದನ್ನು ಜಾರಿಗೆ ತರಲಾಗುವುದೆಂದು ಅವರಿಗೆ ಗೊತ್ತು. ಈ ಕಾರಣಕ್ಕಾಗಿ ನಾನು ಈ ಮಸೂದೆಯನ್ನು ಪರಿಶೀಲಿಸುವ ಅವಕಾಶವನ್ನು ಜನರಿಗೆ ಕೊಡಬೇಕೆಂದು ಹೇಳುತ್ತಿರುವುದು. ಮಸೂದೆಯು ಇದುವರೆಗೂ ಪಡೆದಿದ್ದ ಸ್ಥಾನಕ್ಕೂ ಈಗ ಪಡೆದಿರುವ ಸ್ಥಾನಕ್ಕೂ ವ್ಯತ್ಯಾಸವಿದೆ.

ಮಾನ್ಯರೆ, ಅನೇಕ ಹೆಂಗಸರು ತಮ್ಮ ಗಂಡಸರ ಒತ್ತಾಯದಿಂದಾಗಿ ಈ ಮಸೂದೆಯನ್ನು ವಿರೋಧಿಸುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ನನ್ನ ಪ್ರಕಾರ, ಇದೊಂದು ನಿರಾಧಾರಿತ ದೂಷಣೆ. ಹಾಗಾದರೆ ಈ ಮಸೂದೆಯನ್ನು ಬೆಂಬಲಿಸುತ್ತಿರುವ ಸ್ತ್ರೀಯರಿಗೆ ತಮ್ಮ ಗಂಡಂದಿರ ಬಗ್ಗೆ ಅಸಮಾಧಾನವಿದೆಯೆ ಎಂದು ನಾನು ಕೇಳಬಹುದೆ? ಅಥವಾ, ಈ ಮಸೂದೆಯನ್ನು ಬೆಂಬಲಿಸುತ್ತಿರುವ ಗಂಡಸರು ತಮ್ಮ ಹೆಂಡಂದಿರ ಒತ್ತಾಯದಿಂದಾಗಿ ಹಾಗೆ ಮಾಡುತ್ತಿದ್ದಾರೆಯೆ, ಎಂದು ನಾನು ಕೇಳಬಹುದೆ? ಇಂಥ ಕ್ಷುಲ್ಲಕ ವಾದಗಳನ್ನು ಮಂಡಿಸುವುದು ನಿಷ್ಪ್ರಯೋಜಕ.

**ಶ್ರೀ ಬಿ. ದಾಸ್ :** ನಿಮ್ಮ ಪ್ರಶ್ನೆಗಳಿಗೆ ಉತ್ತರ ಹೇಳುವವರು ಇಲ್ಲಿ ಯಾರೂ ಇಲ್ಲ.

**ಶ್ರೀಮತಿ. ಜಿ. ದುರ್ಗಾಬಾಯಿ :** ಪದೇ ಪದೇ ಮದುವೆಯಾಗುವ ಹೆಂಗಸರಿಗೆ ತಮ್ಮ ಗಂಡಂದಿರ ಬಗ್ಗೆ ಸಮಾಧಾನವಿದೆ, ಎಂದು ನೀವು ಹೇಳಬಲ್ಲಿರಾ?

**ಶ್ರೀ ಓ. ವಿ. ಅಳಗೇಶನ್ :** ಮೇಡಂ, ನಾನು ಆ ವಿಷಯಕ್ಕೂ ಬರುತ್ತೇನೆ, ಸ್ವಲ್ಪ ತಾಳ್ಮೆಯಿಂದಿರಿ.

**ಶ್ರೀಮತಿ ಜಿ. ದುರ್ಗಾಬಾಯಿ :** ದಯವಿಟ್ಟು ಮೊದಲು ಈ ಪ್ರಶ್ನೆಗೆ ಉತ್ತರ ಹೇಳಿ.

**ಶ್ರೀ ಓ. ವಿ. ಅಳಗೇಶನ್ :** ಆಗಲಿ, ನನ್ನದೇ ಆದ ವೇಳೆಯಲ್ಲಿ, ನನ್ನದೇ ಆದ ಶೈಲಿಯಲ್ಲಿ ನಾನು ಇದನ್ನು ಉತ್ತರಿಸುವೆ.

**ಪಂಡಿತ ಗೋವಿಂದ ಮಾಳವೀಯ :** ನಾವು ಎಷ್ಟು ಹೊತ್ತಿನವರೆಗೆ ಕುಳಿತಿರಬೇಕೆಂಬ ಉದ್ದೇಶವಿದೆಯೆಂಬುದನ್ನು ನಾನು ತಿಳಿದುಕೊಳ್ಳಬಹುದೆ?

**ಕೆಲವು ಸನ್ಮಾನ್ಯ ಸದಸ್ಯರು :** ಆರು ಗಂಟೆಯವರೆಗೆ.

**ಕೆಲವು ಸನ್ಮಾನ್ಯ ಸದಸ್ಯರು :** ಏಳು ಗಂಟೆಯವರೆಗೆ.

**ಮಾನ್ಯ ಉಪಸಭಾಪತಿಗಳು :** ಸದನದಲ್ಲಿ ಸದಸ್ಯರ ಸಂಖ್ಯೆ ಕ್ಷೀಣಿಸುತ್ತಿರುವಂತೆ ನನಗೆ ಕಂಡುಬರುತ್ತಿದೆ. ಸಂಖ್ಯೆ ಸಾಕಷ್ಟು ಕ್ಷೀಣಿಸಿದರೆ, ನಾನೇ ಮೇಲೇಳುತ್ತೇನೆ.

**ಶ್ರೀ ರೋಹಿಣಿಕುಮಾರ್ ಚೌಧರಿ :** ಮಾನ್ಯರೆ, ಈಗ ಚಹಾಕ್ಕೆ ಏಳೋಣ.

**ಮಾನ್ಯ ಉಪಸಭಾಪತಿಗಳು :** ಬೇಡ, ಮಾನ್ಯ ಸದಸ್ಯರು ಬೇಗ ಮುಗಿಸುತ್ತಾರೆ.

**ಶ್ರೀ ಓ. ವಿ. ಅಳಗೇಶನ್ :** ಮಾನ್ಯರೆ, ಈ ರೀತಿಯ ಒಂದು ಕಾಯ್ದೆಗೆ ಎರಡು ರೀತಿಯ ಸಮರ್ಥನೆಗಳಿರಬಹುದು. ಸಾರ್ವಜನಿಕರಿಂದ ಅಂಥ ಒಂದು ಕಾಯಿದೆಗಾಗಿ ಒಂದು ಪ್ರಜ್ಞಾಪೂರ್ವಕ ಬೇಡಿಕೆ ಬರಬೇಕು, ಅಥವಾ ಸಮಾಜಕ್ಕೆ ಅಂಥ ಕಾಯಿದೆಯ ಲಾಭಗಳು ಗೊತ್ತಿಲ್ಲದಿದ್ದರೆ, ಸುಧಾರಣೆ ಮಾಡಬೇಕೆಂದು ತೀರ್ಮಾನಿಸಿದ ಕೆಲಜನರು ಅಂಥ ಒಂದು ಕಾಯಿದೆಯಿಂದ ಇಡೀ ಸಮಾಜಕ್ಕೆ ಒಳ್ಳೆಯದಾಗುತ್ತದೆ ಎಂದು ಆಲೋಚಿಸಿರಬೇಕು. ಆಗ ಜನರಿಗೆ ತಮ್ಮ ನಿಲುವಿನ ಸಾಮಂಜಸ್ಯದ ಬಗ್ಗೆ ತಿಳಿಸಿಕೊಡುವುದು ಅಂಥ ಒಂದು ಸುಧಾರಣೆಯಿಂದ ಇಡೀ ಸಮಾಜಕ್ಕೆ ಲಾಭವಾಗಲಿದೆಯೆಂದು ಬಗೆದ

ಜನರ ಕರ್ತವ್ಯವಾಗುತ್ತದೆ. ಈ ಸುಧಾರಣೆಯ ಕಾಯಿದೆಯನ್ನು ತಂದಿರುವವರು ಮತ್ತು ಅದರಿಂದ ಹಿಂದೂ ಸಮಾಜಕ್ಕೆ ಲಾಭವಾಗಲಿದೆಯೆಂದು ತಿಳಿದವರು ಜನರ ಬಳಿ ಹೋಗಿ ಅವರಿಗೆ ತಿಳಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಸೂದೆಯನ್ನು ಬೆಂಬಲಿಸುವವರಿಂದ ನಾನು ಮತ್ತೇನನ್ನೂ ಅಪೇಕ್ಷಿಸುವುದಿಲ್ಲ.

**ಶ್ರೀಮತಿ ಜಿ. ದುರ್ಗಾಬಾಯಿ :** ಅವರು ಆಗಲೇ ಅದನ್ನು ಮಾಡಿದ್ದಾರೆ.

**ಶ್ರೀ ಓ. ವಿ. ಅಳಗೇಶನ್ :** ಇಲ್ಲಿ ನಮ್ಮ ಸೋದರಿ 'ಅವರು ಆಗಲೇ ಅದನ್ನು ಮಾಡಿದ್ದಾರೆ' ಎಂದು ಹೇಳುತ್ತಿದ್ದಾರೆ. ಆದರೆ, ಸೂಕ್ಷ್ಮ ದರ್ಶಕದಲ್ಲಿ ಮಾತ್ರ ಕಾಣುವ ಈ ಅಲ್ಪಸಂಖ್ಯಾತರು, ಬಹುಸಂಖ್ಯಾತ ಹಿಂದೂಗಳ ಪರವಾಗಿ ಮಾತಾಡುವ ಈ ಸುಧಾರಣಾ ಮಿತ್ರರು ಹೇಳಿಕೊಳ್ಳುತ್ತಿರುವುದು ಒಂದು ದೊಡ್ಡ ಉತ್ಪ್ರೇಕ್ಷೆ, ಅಷ್ಟೆ. ಅವರಿಗೆ ತಾಳ್ಮೆಬೇಕು, ಮತ್ತು ನಾನು ಈ ಮೊದಲೇ ಹೇಳಿದಂತೆ, ಅವರು ಅಲ್ಪತೃಪ್ತಿಗಾಗಿ ಮಸೂದೆಯನ್ನು ತರಾತುರಿಯಿಂದ ಮುಂದಕ್ಕೆ ನೂಕುವ ಬದಲು, ಆ ಮಸೂದೆಯ ಕಲ್ಯಾಣಕರ ಅಂಶಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು.

ನಾನು ತಿಳಿಸಬೇಕಾಗಿರುವ ಮತ್ತೊಂದು ಮುಖ್ಯ ವಿಷಯವೆಂದರೆ ಇದು. ಒಂದು ವೇಳೆ ಈ ಮಸೂದೆಯನ್ನು ತರಾತುರಿಯಿಂದ ಅಂಗೀಕರಿಸಿ ಅದನ್ನೊಂದು ಶಾಸನವನ್ನಾಗಿ ಮಾಡಿದರೆ, ಅದರ ಕೆಲವು ಭಾಗಗಳು ನಿರ್ಜೀವ ಅಕ್ಷರಗಳಾಗೇ ಉಳಿಯುತ್ತವೆ – ಒಂದು ಶತಮಾನದ ಹಿಂದೆಯೇ ಜಾರಿಗೆ ಬಂದ ವಿಧವಾ ಪುನರ್ವಿವಾಹ ಶಾಸನ ಈಗ ಕೇವಲ ಒಂದು ನಿರ್ಜೀವ ಅಕ್ಷರವಾಗಿ ಉಳಿದಿರುವಂತೆ. ಆದುದರಿಂದ, ಅದು ಕೇವಲ ಒಂದು ನಿರ್ಜೀವ ಅಕ್ಷರವಾಗಿ ಉಳಿಯುವುದು ಬೇಡವಾಗಿದ್ದರೆ, ಈ ಸಮಾಜದ ಜನರು ಅದರ ಲಾಭ ಪಡೆಯಬೇಕೆಂದಿದ್ದರೆ, ಇನ್ನೂ ಸ್ವಲ್ಪ ಕಾದು, ಜನರಿಗೆ ಅದರ ಬಗ್ಗೆ ಅರಿವು ಮೂಡಿಸುವುದು ಲೇಸು.

ಈಗ ನಾನು ಡಾ. ಅಂಬೇಡ್ಕರ್ ಪರಿಶೀಲನೆ ಮಾಡಿರುವ ಕೆಲವು ಮುಖ್ಯ ಸಂಗತಿಗಳಿಗೆ ಬರುತ್ತೇನೆ. ಈ ಮಸೂದೆಯು ವಿನಾಯಿತಿಯ ಕಾನೂನಿನಂತೆ ಕಾಣುತ್ತದೆ. ಸಹ–ಪಾಲುದಾರಿಕೆ ಪದ್ಧತಿಯು ಹತ್ತು ರೀತಿಯ ಆಸ್ತಿಗಳು ಸಹ–ಪಾಲುದಾರರಿಗೆ ದಕ್ಕುವುದಿಲ್ಲ ಎಂದು ಹೇಳುತ್ತದೆ ಎಂದು ಡಾ. ಅಂಬೇಡ್ಕರ್ ಹೇಳಿದರು. ಆ ಆಸ್ತಿಗಳು ಖಾಸಗಿ ಆಸ್ತಿ ಎನಿಸಿಕೊಳ್ಳುತ್ತವೆ. ಅಂಬೇಡ್ಕರರ ಪ್ರಕಾರ, ಆ ಪದ್ಧತಿಯು ಅನೇಕ ವಿನಾಯಿತಿಗಳಿಗೆ ಅವಕಾಶ ಕೊಟ್ಟಿರುವುದರಿಂದ ಅದು ಶಾಶ್ವತವಾಗಿ ಕೊನೆಗಾಣಬೇಕು. ಅವರು ಪರಿಶೀಲಿಸಿರುವ ವಿಷಯಗಳಲ್ಲಿ ಇದೂ ಒಂದು. ಸ್ತ್ರೀಧನದ ಮೇಲೆ ಸ್ತ್ರೀಯರಿಗೆ ಸಂಪೂರ್ಣ ಹಕ್ಕಿರಬೇಕು, ಅದೇ ಹಕ್ಕು ಎಲ್ಲ ಆಸ್ತಿಗೂ ಅನ್ವಯಿಸಲಿ, ಎಂದೂ ಡಾ. ಅಂಬೇಡ್ಕರ್ ಹೇಳುತ್ತಾರೆ. ಆಮೇಲೆ, ಅವರು ಸಹ–ಪಾಲುದಾರಿಕೆ ಪದ್ಧತಿಯು ವೈಷಮ್ಯದ ಬೀಜ ಬಿತ್ತುತ್ತದೆ, ಆದುದರಿಂದ ಅವಿಭಕ್ತ ಕುಟುಂಬವೂ ಹೋಗಬೇಕು, ಎನ್ನುತ್ತಾರೆ. ಈಗ ನಾನು ಅವರನ್ನು ಕೇಳುವುದೇನೆಂದರೆ ಅವರು ಈಗ ತಾನೆ ಸಂವಿಧಾನವನ್ನು ತಂದಿದ್ದಾರೆ. ನಿಮಗೆ ಗೊತ್ತಿರುವಂತೆ, ಸಂವಿಧಾನದಲ್ಲಿರುವ ಅನೇಕ ನಿಬಂಧನೆಗಳು ಅವಕಾಶ ಮತ್ತು ವಿನಾಯಿತಿಗಳೆಂಬ ಒಗಟುಗಳಿಂದ ತುಂಬಿಹೋಗಿವೆ. ಈ ಕಾರಣಕ್ಕಾಗಿ ನಾವು ವಿನಾಯಿತಿಗಳನ್ನು ಮುಖ್ಯ ವಿಧಿಗಳಿಗೆ ಸೇರಿಸಬೇಕು. ಅವರು ಮಂಡಿಸಿರುವ ವಾದಗಳನ್ನು ನೋಡಿದರೆ, ಮುಖ್ಯ ವಿಧಿಗಳಿಗೆ ಈ ವಿನಾಯಿತಿಗಳನ್ನೂ ಸೇರಿಸಬೇಕೇನೋ ಎಂಬ ಸಂದೇಹ ಉಂಟಾಗುತ್ತದೆ.

ಆಮೇಲೆ ಮಾನ್ಯರೆ, ಈ ಮಸೂದೆಯಿಂದ ನಮ್ಮ ಸೋದರಿಯರು ಎಷ್ಟು ಆಕರ್ಷಿತರಾಗಿದ್ದಾರೆಂದರೆ...

**ಶ್ರೀಮತಿ ಜಿ. ದುರ್ಗಾಬಾಯಿ :** ಸೋದರರೂ ಆಕರ್ಷಿತರಾಗಿದ್ದಾರೆ.

**ಶ್ರೀ ಓ. ವಿ. ಅಳಗೇಶನ್ :** ನನ್ನ ದೃಷ್ಟಿಯಲ್ಲಿ ಈ ಮಸೂದೆಗೆ ಆ ಅರ್ಹತೆ ಇಲ್ಲ. ಏಕಪತ್ನಿತ್ವವನ್ನು

ಎಲ್ಲರೂ ಕೊಂಡಾಡಿದ್ದಾರೆ. ಅದೇನೂ ಹೊಸ ಸಂಸ್ಥೆಯೇನಲ್ಲ. ಸ್ತ್ರೀಯರೂ ಈ ದೇಶದಲ್ಲಿ ಏಕಪತಿತ್ವವನ್ನೇ ಪಡೆದಿದ್ದಾರೆ. ಆದರೆ ಅವರಿಗೆ ವಿಚ್ಛೇದನ ಪಡೆಯುವ ಅವಕಾಶವಿತ್ತೆ? ಏಕಪತ್ನಿತ್ವದ ಕಾನೂನಿನೊಳಗೆ ಗಂಡಸರನ್ನು ಸೇರಿಸಿದ ಕೂಡಲೆ, ವಿಚ್ಛೇದನಕ್ಕೆ ಬೇಡಿಕೆ ಬರುತ್ತಿದೆ. ಏಕಪತಿತ್ವದ ಕಾನೂನು ಹೆಂಗಸರಿಗೆ ಅನ್ವಯವಾಗುತ್ತಿದ್ದಾಗ, ಅವರಿಗೆ ವಿಚ್ಛೇದನದ ಅವಕಾಶವಿರಲಿಲ್ಲ. ಆದರೆ ಈಗ ಏಕಪತ್ನೀತ್ವವಿದ್ದರೆ ವಿಚ್ಛೇದನ ಸ್ವಾಭಾವಿಕ, ಅದು ಬೇಕೇ ಬೇಕು ಎನ್ನಲಾಗುತ್ತದೆ. ನನ್ನ ಸೋದರಿಯರು ಈ ಬಗ್ಗೆ ಅಷ್ಟೊಂದು ಏಕೆ ಉತ್ಸುಕರಾಗಿದ್ದಾರೆಂದು ನನಗೆ ತಿಳಿಯುತ್ತಿಲ್ಲ – ಏನಿದರರ್ಥ? ಏಕಪತ್ನೀತ್ವಕ್ಕೆ ವಿಚ್ಛೇದನವು ಅಗತ್ಯವಾಗಿದ್ದರೆ, ಅದು ಇದುವರೆಗೂ ಏಕೆ ಅಸ್ತಿತ್ವಕ್ಕೆ ಬಂದಿಲ್ಲ?

**ಮಾನ್ಯ ಉಪಸಭಾಪತಿಗಳು :** ಮಾನ್ಯ ಸದಸ್ಯರಿಗೆ ಇನ್ನೂ ಎಷ್ಟು ಸಮಯ ಬೇಕು?

**ಶ್ರೀ ಓ. ವಿ. ಅಳಗೇಶನ್ :** ಕೇವಲ ಹತ್ತು ನಿಮಿಷಗಳು. ಆದರೆ ಬೇಗ ಮುಗಿಸಲು ಪ್ರಯತ್ನಿಸುತ್ತೇನೆ. ಆದುದರಿಂದ ವಿಚ್ಛೇದನಕ್ಕೆ ಹಕ್ಕು ಕೊಡುವುದು ಸಂತಸದ ಸಂಗತಿಯಲ್ಲವೆಂದು ನಾನು ಹೇಳುತ್ತೇನೆ. ಇದರಲ್ಲಿರುವ ವಾಕ್ಯಗಳನ್ನು ಓದಲು ನನಗಿಷ್ಟವಿಲ್ಲ. ಆದರೆ ಅನೇಕ ಸ್ತ್ರೀಯರು ವಿಚ್ಛೇದನದಿಂದ ದೊಡ್ಡ ಅನಾಹುತ ಗಂಡಸರಿಗಿಂತ ಹೆಂಗಸರಿಗೇ ಆಗುವುದು ಎಂದು ದೂರಿದ್ದಾರೆ.

**ಶ್ರೀ ಎ. ಥಾನು ಪಿಳ್ಳೈ :** ಹಾಗಾದರೆ, ಸನ್ಮಾನ್ಯ ಸದಸ್ಯರು ವಿಚ್ಛೇದನವೇ ಇಲ್ಲದ ಏಕಪತ್ನೀತ್ವವನ್ನು ಅನುಮೋದಿಸುತ್ತಿದ್ದಾರೆಯೆ?

**ಶ್ರೀ ಓ. ವಿ ಅಳಗೇಶನ್ :** ನನಗೆ ವಿಚ್ಛೇದನಕ್ಕೆ ಅವಕಾಶವಿಲ್ಲದ ಏಕಪತ್ನೀತ್ವ ಬೇಕು. ಅಲ್ಲದಿದ್ದರೆ, ಈ ಮಸೂದೆ ಬಲಗೈಯಲ್ಲಿ ಕೊಟ್ಟಿದ್ದನ್ನು ಎಡಗೈಯಲ್ಲಿ ಕಿತ್ತುಕೊಳ್ಳುತ್ತದೆ.

ಡಾ. ಅಂಬೇಡ್ಕರ್ ವಿಚ್ಛೇದನದ ನಿಯಮವನ್ನು ಸಮರ್ಥಿಸಿಕೊಳ್ಳುತ್ತಾ, ಇತೀಚಿಗೆ ಗಂಡಸರಿಂದ ತ್ಯಜಿಸಲ್ಪಟ್ಟ ಹೆಂಗಸರು ಯಾವ ರೀತಿಯ ಕಷ್ಟಗಳನ್ನು ಅನುಭವಿಸುತ್ತಾರೆಂದು ತಿಳಿಸಿದರು. ವಿಚ್ಛೇದಿಸಲ್ಪಟ್ಟ ಹೆಂಗಸರೆಲ್ಲರೂ ಇದನ್ನು ಅನುಭವಿಸಲೇಬೇಕು. ವಿಚ್ಛೇದನಕೊಳ್ಳಗಾದ ಹೆಂಗಸರ ಭವಿಷ್ಯವು ಇಂದು ಯಾವುದೇ ಪರಿತ್ಯಕ್ತ ಹೆಂಗಸಿನ ಭವಿಷ್ಯದಂತೆ ಮಸುಕಾಗಿದೆ. ವಿಚ್ಛೇದನ ಪಡೆದ ಗಂಡಸಿಗೆ ಮತ್ತೊಮ್ಮೆ ಮದುವೆಯಾಗುವುದು ಸುಲಭ, ಆದರೆ ವಿಚ್ಛೇದನ ಪಡೆದ ಹೆಂಗಸಿಗೆ ಮರುಮದುವೆಯಾಗುವುದು ಅಷ್ಟೇ ಸುಲಭವಲ್ಲ.

**ಡಾ. ಪಿ. ಸುಬ್ಬರಾಯನ್** (ಮದ್ರಾಸ್ : ಸಾಮಾನ್ಯ) : ಆದುದರಿಂದ ನಿಮಗೆ ಬೇರೆ ಬೇರೆ ಮಾನದಂಡಗಳು ಬೇಕು.

**ಶ್ರೀ ಓ. ವಿ. ಅಳಗೇಶನ್ :** ನನ್ನ ಸೋದರಿಯರು ಇದನ್ನು ಗಮನಿಸಬೇಕೆಂದು ಇಚ್ಛಿಸುತ್ತೇನೆ. ಅಲ್ಲದೆ, ಅವರು ಬೀಳುವ ಗುಂಡಿಯ ಬಗ್ಗೆ ಜಾಗರೂಕತೆಯಿಂದಿರಬೇಕು.

ಮತ್ತೊಂದು ಆಧಾರದ ಮೇಲೂ ನಾನು ವಿಚ್ಛೇದನದ ನಿಬಂಧನೆಗೆ ಆಕ್ಷೇಪಿಸುತ್ತೇನೆ. ಈ ವಿಷಯವಾಗಿ ಬೇರೆ ದೇಶಗಳ ಅನುಭವವೇನು? ಈ ಬಗ್ಗೆ ಇತರ ಭಾಷಣಕಾರರು ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನು ವಿಸ್ತರಿಸಬಯಸುವುದಿಲ್ಲ. ಪ್ಯಾರಿಸ್ ಒಂದರಲ್ಲೇ ವಿಚ್ಛೇದನ ಪ್ರಕರಣಗಳು ೬೦೦ ರಿಂದ ೧೨೦೦ಕ್ಕೆ ಹೆಚ್ಚಿದವು, ಅಂದರೆ, ಶೇಕಡ ನೂರರಷ್ಟು ಹೆಚ್ಚಿದವು ಎಂದು ನಿನ್ನೆ ಮೊನ್ನೆ ಯಾರೋ ಹೇಳಿದರು.

**ಒಬ್ಬ ಸನ್ಮಾನ್ಯ ಸದಸ್ಯರು :** ಆದರೆ ಭಾರತದಲ್ಲಿ ಪ್ಯಾರಿಸ್ ಇಲ್ಲ.

**ಶ್ರೀ ಓ. ವಿ. ಅಳಗೇಶನ್ :** ಸದ್ಯಕ್ಕೆ ಭಾರತದಲ್ಲಿ ಪ್ಯಾರಿಸ್ ಇಲ್ಲ ಎಂಬುದು ಸಂತಸದ ವಿಷಯ.

ಆದರೆ ಈ ಮಸೂದೆ ಭಾರತಕ್ಕೆ ಪ್ಯಾರಿಸ್ಸನ್ನು ತಳ್ಳಿಕೊಂಡು ತರಲು ಪ್ರಯತ್ನಿಸುತ್ತೇನೋ ಎಂಬ ಭಯ ನನಗಿದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಏಕೆ ಬರೋಡ ಇದೆಯಲ್ಲ? ಮಲಬಾರ್ ಇದೆಯಲ್ಲ?

**ಶ್ರೀ ಓ. ವಿ. ಅಳಗೇಶನ್ :** ಜಗತ್ತಿನಲ್ಲೇ ಅತ್ಯಂತ ಮುಂದುವರಿದ ರಾಷ್ಟ್ರಗಳಲ್ಲಿ ಒಂದಾದ ರಷ್ಯಾದಲ್ಲಿ ಕುಟುಂಬವೆಂಬ ಸಂಸ್ಥೆಯು ಒಡೆಯುತ್ತಿದೆ. ಮೊದಲು ಸುಲಭ ವಿಚ್ಛೇದನಕ್ಕೆ ಅವಕಾಶ ಕೊಟ್ಟಿದ್ದ ರಷ್ಯಾ ಈಗ ಕುಟುಂಬ ಸಂಸ್ಥೆಗೆ ಝೀವ ತುಂಬಲು ಹೆಣಗಾಡುತ್ತಿದೆ. ಈಗ ರಷ್ಯನರು ಕುಟುಂಬದ ಪಾವಿತ್ರ್ಯವನ್ನು ಮೈಗೂಡಿಸಿಕೊಳ್ಳಲು ಹಾಗೂ ಸಮತಾವಾದೀಯ ನೀತಿಯನ್ನು ಜನರ ಮನಸ್ಸಿನಲ್ಲಿ ತುಂಬಲು ತವಕಿಸುತ್ತಿದ್ದಾರೆ. ಸುಲಭ ವಿಚ್ಛೇದನವನ್ನು ತಮ್ಮ ನಾಡಿನಲ್ಲಿ ಜಾರಿಗೊಳಿಸುವ ಮೂಲಕ ಯಾವ ಕುಟುಂಬ ವ್ಯವಸ್ಥೆಯನ್ನು ಕಳೆದುಕೊಂಡಿದ್ದಾರೋ ಅದನ್ನು ಉಳಿಸಿಕೊಳ್ಳಲು ಅವರು ಕಠಿಣ ಪ್ರಯತ್ನ ಮಾಡುತ್ತಿದ್ದಾರೆ. ರಷ್ಯಾದಲ್ಲಿ ಒಬ್ಬ ರಿಜಿಸ್ಟ್ರಾರರಿಗೆ ಒಂದು ಕಾರ್ಡ್ ಬರೆದು, ತಾನು ತನ್ನ ಹೆಂಡತಿಯನ್ನು ವಿಚ್ಛೇದನ ಮಾಡುತ್ತಿದ್ದೇನೆ ಎಂದು ತಿಳಿಸಿದರೆ ಸಾಕು, ಅವನಿಗೆ ವಿಚ್ಛೇದನ ಸಿಕ್ಕುತ್ತದೆ. ಈಗ ಅವರು ವಿಚ್ಛೇದನದ ಕಾನೂನನ್ನು ಹೆಚ್ಚು ಕಠಿಣಗೊಳಿಸಿದ್ದಾರೆಂದು ಕೇಳಿದ್ದೇನೆ. ಇದು ನಮ್ಮೆದುರಿಗಿರುವ ಒಂದು ಉದಾಹರಣೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಮಲಬಾರಿನ ವಿಷಯವೇನು? ರಷ್ಯಾದವರೆಗೆ ಅಥವಾ ಪ್ಯಾರಿಸ್‌ವರೆಗೆ ಏಕೆ ಹೋಗುತ್ತೀರಿ?

**ಶ್ರೀ ಓ. ವಿ. ಅಳಗೇಶನ್ :** ಅವರು ಈ ವಿಧಾನವನ್ನು ಅನುಸರಿಸಿ, ಅದು ಅಪಾಯಕಾರಿ ಎಂದು ಮನಗಂಡಿದ್ದಾರೆ. ನಮ್ಮನ್ನು ನಾವೇ ಅಂಥ ಪರಿಸ್ಥಿತಿಯಲ್ಲಿ ಮತ್ತೆ ಇರಿಸಿಕೊಂಡು, ಆಮೇಲೆ ಅದನ್ನು ನಿವಾರಿಸಲು ಪ್ರಯತ್ನಿಸಬೇಕೆ? ಇಂದಿನ ನಮ್ಮ ಭಾರತೀಯ ಕುಟುಂಬಗಳು ಅಜ್ಞಾನದಲ್ಲೂ ಅನಾರೋಗ್ಯದಲ್ಲೂ ಮುಳುಗಿವೆ. ಆದರೆ ನಮ್ಮ ಕುಟುಂಬಗಳು ಒಡೆದಿವೆ ಎನ್ನಲು ಬರುವುದಿಲ್ಲ. ಬೇರೆ ದೇಶಗಳ ಕುಟುಂಬದವರು ಶ್ರೀಮಂತರಿರಬಹುದು, ಆರೋಗ್ಯವಂತರಿರಬಹುದು, ಜ್ಞಾನಿಗಳೂ ಇರಬಹುದು. ಆದರೆ ಆ ದೇಶಗಳಲ್ಲಿ ಬಹಳ ಕುಟುಂಬಗಳು ಒಡೆದಿರುತ್ತವೆ. ವಿಚ್ಛೇದನ ನಿಯಮಗಳಲ್ಲಿ ಸ್ವೇಚ್ಛಾಚಾರವಿರುವುದೇ ಇದಕ್ಕೆ ಸಂಪೂರ್ಣ ಕಾರಣ. ಇದು ನನ್ನ ಅಭಿಪ್ರಾಯ.

ಡಾ. ತೇಕ್‌ಚಂದ್‌ರಂಥ ಗಣ್ಯ ವ್ಯಕ್ತಿಗಳು ಅವಿಭಕ್ತ ಕುಟುಂಬಗಳನ್ನು ಇಟ್ಟುಕೊಳ್ಳಬೇಕೆಂದೂ, ಕುಟುಂಬದಲ್ಲಿ ಸ್ತ್ರೀಯರು ಸಹ-ಪಾಲುದಾರರಾಗಿರಬೇಕೆಂದೂ ಹೇಳಿದರು. ನನ್ನ ಪ್ರಕಾರ, ಸ್ತ್ರೀಯರಿಗೆ ಆರ್ಥಿಕ ಸ್ವಾತಂತ್ರ್ಯ ಬರುವುದು ಗಂಡನ ಆಸ್ತಿಯಲ್ಲಿ ಮಗಳಿಗೆ ಸಮಪಾಲು ಕೊಡುವುದರಿಂದಾಗಿಯೇ ಹೊರತು ಆಕೆಗೆ ಒಂದು ಪಾಲು ಕೊಡುವುದರಿಂದಾಗಿ ಅಲ್ಲ (ಆಕೆಗೆ ಪಾಲು ಕೊಡುವುದಕ್ಕೆ ನನ್ನ ಆಕ್ಷೇಪವೇನೂ ಇಲ್ಲ). ಅವಳಿಗೆ ಆರ್ಥಿಕ ಸ್ವಾತಂತ್ರ್ಯ ಸಿಕ್ಕುವುದು ಹೀಗೆ. ಅವಳು ತನ್ನ ತಂದೆಯ ಆಸ್ತಿಯಲ್ಲಿ ಪಾಲು ಪಡೆಯುವುದರಿಂದ ಆರ್ಥಿಕವಾಗಿ ಸ್ವತಂತ್ರಳಾಗುವುದಿಲ್ಲ. ಮಗಳನ್ನು ಎಂದಾದರೂ ಅಳಿಯನಿಗೆ ಒಪ್ಪಿಸಲೇಬೇಕು. ಕನ್ಯೆಯಾಗಿರುವಾಗ ಅವಳು ತಂದೆಯ ವಶದಲ್ಲಿರುತ್ತಾಳೆ. ಆದುದರಿಂದ, ತಂದೆಯ ಆಸ್ತಿಯಲ್ಲಿ ಆಕೆ ಪಾಲು ಕೇಳುವುದಕ್ಕಿಂತ ಗಂಡನ ಆಸ್ತಿಗೆ ಸಹ-ಮಾಲೀಕಳೋ ಸಮಾನ ಪಾಲುದಾರಳೋ ಆಗುವುದು ಲೇಸು ಮತ್ತು ಹೆಚ್ಚು ಸೂಕ್ತ. ಒಂದು ವೇಳೆ ಆಕೆ ಮದುವೆಯಾಗದೆ ಹಾಗೇ ಉಳಿದರೆ, ಆಗ ಆಕೆ ತಂದೆಯ ಆಸ್ತಿಯಲ್ಲಿ ಪಾಲು ಕೇಳಬಹುದು.

ಇದನ್ನು ಇನ್ನೂ ಹಿಗ್ಗಿಸುವುದು ನನಗಿಷ್ಟವಿಲ್ಲ. ಆದರೆ ಇದನ್ನು ಈ ವಿಷಯದೊಂದಿಗೆ ಮುಗಿಸಬಯಸುತ್ತೇನೆ. ಈ ನಿಯಮಾವಳಿಯನ್ನು ಕಲ್ಪಿಸಿಕೊಂಡ ಮುಖ್ಯ ವ್ಯಕ್ತಿಯೆಂದರೆ

ಶ್ರೀ ಬಿ. ಎನ್. ರಾವ್ ಅವರು. *'ಕಲ್ಪನೆಗಳು' ಎನ್ನುವುದು (ನಿನ್ನೆ ಒಬ್ಬ ಸಭ್ಯರು Conceive ಮಾಡುವುದು ಸಾಧ್ಯವಿಲ್ಲ ಎಂದರು). ಅವರು ಈ ಮಸೂದೆಯ ಬಗೆಗೆ ಬಹಳ ಕಾತರರಾಗಿದ್ದಾರೆ. ಅವರಿಗೆ ಆದಷ್ಟು ಬೇಗ ತಮ್ಮ ಎಲ್ಲ ಸಲಹೆಗಳೂ – ಅವು ಸ್ವಲ್ಪ ರೂಪಾಂತರಗೊಂಡರೂ ಚಿಂತೆಯಿಲ್ಲ – ಅಂಗೀಕರಿಸಲ್ಪಡಲಿ ಎಂಬ ಆಸೆ. ಅವರ ಅಭಿಪ್ರಾಯ ಮತ್ತು ಹಿಂದೂ ಕಾನೂನು ಸಮಿತಿಯ ಅಭಿಪ್ರಾಯ ಎರಡೂ ಒಂದೇ; ಅದನ್ನು ನಾನು ಓದಬಯಸುತ್ತೇನೆ...

**ಶ್ರೀಮತಿ ಜಿ. ದುರ್ಗಾಬಾಯಿ :** ಅಂಥ ಸಲಹೆಗಳನ್ನು ಪರಿಶೀಲಿಸಲು ಒಂದು ಸೆಲೆಕ್ಟ್ ಸಮಿತಿ ಇತ್ತು; ಅವರೊಬ್ಬರೇ ಅಲ್ಲ.

**ಶ್ರೀ ಓ. ವಿ. ಅಳಗೇಶನ್ :** ಹಿಂದೂ ಕಾನೂನು ಸಮಿತಿಯು ಹೀಗೆ ಹೇಳಿದೆ :

————————————

"ಆದಷ್ಟು ಸರ್ವಾಭಿಪ್ರಾಯದ ಪರಿಹಾರಗಳನ್ನು ಕಂಡುಹಿಡಿಯುವುದು ಇದರ ಗುರಿಯೇ ಹೊರತು, ಯಾವುದೇ ರೀತಿಯ, ಕೋಪ ಬರಿಸುವಂಥ ವಾದವಿವಾದವನ್ನು ಸೃಷ್ಟಿಸುವುದಲ್ಲ. ಆದರೆ ಸುಧಾರಣೆಯ ಗತಿಯನ್ನು ನಿಜವಾಗಿಯೂ ನಿಧಾನಗೊಳಿಸುತ್ತಿದ್ದೇವೆ ಎಂಬುದು ಇದರರ್ಥವಲ್ಲ; ಏಕೆಂದರೆ, ನಿಜವಾದ ಸುಧಾರಣೆಯ ಮಾರ್ಗ ಮನವೊಲಿಸುವುದೇ ಹೊರತು, ಬಲಾತ್ಕಾರವಲ್ಲ."

ಮಾನ್ಯರೆ, ನಾನು ಮುಗಿಸಿದ್ದೇನೆ.

ಆಗ ವಿಧಾನ ಸಭೆಯು ೧೫–೧೨–೧೯೪೯ ರ ಗುರುವಾರ ಹತ್ತೂ ಮುಕ್ಕಾಲರವರೆಗೆ ಮುಂದೂಡಲ್ಪಟ್ಟಿತು.

**ಹಿಂದೂ ಕಾನೂನು ಮಸೂದೆ (ಮುಂದುವರಿದುದು)**

**ಮಾನ್ಯ ಸಭಾಪತಿಗಳು :** ಸದನವು ಪರಿಶೀಲಿಸುತ್ತಿದ್ದ ಗೊತ್ತುವಳಿಯು ಹೀಗಿತ್ತು:

"ಸೆಲೆಕ್ಟ್ ಸಮಿತಿಯು ವರದಿ ಮಾಡಿರುವಂತೆ, ಹಿಂದೂ ಕಾನೂನಿನ ಕೆಲವು ಶಾಖೆಗಳನ್ನು ತಿದ್ದಿ ಮತ್ತು ನಿಯಮಗಳಂತೆ ಮಾಡಲು ಉದ್ದೇಶಿಸಲಾಗಿರುವ ಮಸೂದೆಯನ್ನು ಪರಿಶೀಲನೆಗೆ ಕೈಗೆತ್ತಿಕೊಳ್ಳಬೇಕು".

**ಸನ್ಮಾನ್ಯ ಶ್ರೀ ಜವಾಹರ್‌ಲಾಲ್ ನೆಹರು** (ಪ್ರಧಾನ ಮಂತ್ರಿಗಳು) : ಮಾನ್ಯರೆ, ಹಿಂದೂ ಕಾನೂನು ಮಸೂದೆಯನ್ನು ಕುರಿತು ಒಂದು ಹೇಳಿಕೆ ನೀಡಲು ನಿಮ್ಮ ಅನುಮತಿಯನ್ನೂ ಸದನದ ಆಸಕ್ತಿಯನ್ನು ಅಪೇಕ್ಷಿಸುತ್ತೇನೆ, ಹಾಗೂ ನನ್ನ ಹೇಳಿಕೆ, ಸದನದ ಒಪ್ಪಿಗೆಗೆ ಅರ್ಹವಾಗುತ್ತದೆ ಎಂದು ನಂಬುತ್ತೇನೆ.

ಈ ಅಧಿವೇಶನದ ಪ್ರಾರಂಭದಲ್ಲಿ ಹಿಂದೂ ಕಾನೂನು ಮಸೂದೆಯನ್ನು ಪ್ರಸ್ತಾಪಿಸುತ್ತಾ ನಾನು ಕೆಲವು ಟೀಕೆಗಳನ್ನು ಮಾಡಿದ್ದೆ. ಆಗ ನಾನು ಸರ್ಕಾರವು ಈ ಕಾಯಿದೆಗೆ ಅತಿಯಾದ ಪ್ರಾಮುಖ್ಯ ನೀಡುತ್ತದೆ ಎಂದು ಹೇಳಿದ್ದೆ. ಅಲ್ಲದೆ, ಈ ಅಧಿವೇಶನದಲ್ಲೇ ಪರಿಶೀಲನೆ ಮುಗಿಯಬಹುದೆಂದೂ ನಿರೀಕ್ಷಿಸಿದ್ದೆ. ಆದರೆ ಈ ಮಸೂದೆಯ ವಿಷಯವಾಗಿ ವೈವಿಧ್ಯಮಯ ಅಭಿಪ್ರಾಯಗಳಿವೆ ಹಾಗೂ ಅನೇಕರು ಈ ಮಸೂದೆಯ ನಿಬಂಧನೆಗಳಲ್ಲಿ ಆಸಕ್ತರಾಗಿದ್ದಾರೆ ಎಂಬುದೂ ಸರ್ಕಾರದ ಗಮನಕ್ಕೆ ಬಂದಿತ್ತು. ಆದುದರಿಂದ, ಈ ಮಸೂದೆಯ ಅನೇಕ ವಿವಾದಾತ್ಮಕ ವಿಧಿಗಳ ಬಗೆಗೆ ಬಹುಮತ ಪಡೆಯುವುದಕ್ಕೆ ಅನುಕೂಲವಾಗುವಂಥ ಒಂದು ದಾರಿಯನ್ನು ಹುಡುಕಬೇಕೆಂದು ನಾನು ಸೂಚಿಸಿದ್ದೆ. ಅಂದು ಮಾಡಿದ ನನ್ನ ಹೇಳಿಕೆಯನ್ನು

---

* 'ಕಲ್ಪಿಸಿಕೊಳ್ಳು' ಎನ್ನುವುದು ಇಂಗ್ಲಿಷಿನ 'Conceive' ಪದದ ಭಾಷಾಂತರ? ಆ ಪದಕ್ಕೆ 'ಬಸಿರಾಗುವುದು' ಎಂಬರ್ಥವೂ ಇದೆ. ಇಲ್ಲಿ ಆ ಪದ ದ್ವಂದ್ವಾರ್ಥದಲ್ಲಿ ಪ್ರಯೋಗವಾಗಿದೆ.

ನಾನು ಇಂದು ವಿಸ್ತರಿಸುತ್ತಿದ್ದೇನೆ, ಹಾಗೂ ಈ ವಿಷಯವಾಗಿ ಸರ್ಕಾರದ ನಿಲುವು ಏನಿದೆಯೆಂಬುದನ್ನು ಸ್ಪಷ್ಟಪಡಿಸುತ್ತೇನೆ. ಈ ಮಸೂದೆಯ ಮೇಲೆ ನಾವು ಸಾಕಷ್ಟು ದೀರ್ಘವಾದ ಚರ್ಚೆಯನ್ನು ಮಾಡಿದ್ದೇವೆ – ಈ ಅಧಿವೇಶನವೊಂದರಲ್ಲೇ ಅಲ್ಲ, ಹಿಂದಿನ ಅಧಿವೇಶನಗಳಲ್ಲಿಯೂ. ಇದಕ್ಕಾಗಿ ನಾವು ಎರಡು ದಿವಸಗಳನ್ನು ಮೀಸಲಿಟ್ಟಿದ್ದೆವು ಹಾಗೂ, ಸದನಕ್ಕೆ ಗೊತ್ತಿರುವಂತೆ, ಆ ಎರಡು ದಿನಗಳನ್ನು ಎರಡು ಸಾರಿ ವಿಸ್ತರಿಸಲಾಯಿತು. ಇಂಥ ಮುಖ್ಯವಾದ ಕಾಯಿದೆಯ ಮೇಲಿನ ಚರ್ಚೆಯನ್ನು ಮೊಟಕುಗೊಳಿಸಬೇಕೆಂಬ ಆಸೆ ಸರ್ಕಾರಕ್ಕೆ ಆಗಲೂ ಇರಲಿಲ್ಲ, ಈಗಲೂ ಇಲ್ಲ. ನಾವು ಸಮಯಕ್ಕಾಗಿ ಪರದಾಡುತ್ತಿದ್ದೇವೆ; ಅಲ್ಲದೆ, ಇದೇ ಅಧಿವೇಶನ ಮುಗಿಯುವುದರೊಳಗಾಗಿ ನಾವು ಬಹಳ ಮುಖ್ಯವಾದ ಕೆಲವು ವಿಧೇಯಕಗಳನ್ನು ಮುಗಿಸಬೇಕೆಂದಿದ್ದೇವೆ. ಇಷ್ಟಾದರೂ ಸಹ, ನಾವು ಚರ್ಚೆಯನ್ನು ಎರಡು ಸಾರಿ ವಿಸ್ತರಿಸಿದ್ದೇವೆ. ಅಲ್ಲದೆ, ಈ ದಿನವನ್ನು ಚರ್ಚೆಗೆ ಮೀಸಲಾಗಿಡಲಾಗಿದೆ.

ಚರ್ಚೆಯನ್ನು ಮೊಟಕುಗೊಳಿಸಬೇಕೆಂಬ ಆಸೆ ಸರ್ಕಾರಕ್ಕಿಲ್ಲದಿದ್ದರೂ, ಸರ್ಕಾರ ಸಮಯಕ್ಕಾಗಿ ಪರದಾಡುತ್ತಿದೆ; ಈ ಕಾಯಿದೆಯ ಪ್ರಾಮುಖ್ಯದಿಂದಾಗಿ ಹಾಗೂ ಸದನದ ಕೆಲವು ಸದಸ್ಯರ ಆಸೆಯ ಮೇರೆಗೆ ಹಾಗೂ ಸರ್ಕಾರವು ಸಮಯವನ್ನು ಕಷ್ಟ ಪಟ್ಟಾದರೂ ಪಡೆಯುತ್ತಿದೆ. ಆದರೆ ಈ ಸಮಸ್ಯೆಯಲ್ಲಿ ಮತ್ತೊಂದು ಅಂಶವೂ ಇದೆ. ಅದೆಂದರೆ: ವಿವಾದಾತ್ಮಕ ವಿಧಿಗಳಿಗೆ ಸಂಬಂಧಿಸಿದಂತೆ, ಸಾಧ್ಯವಾದಷ್ಟು ಪ್ರಯತ್ನಮಾಡಿ ಒಂದು ಒಮ್ಮತಕ್ಕೆ ಬರಬೇಕೆಂಬ ಇಚ್ಛೆಯಿಂದ ನಾವು ಈ ವಿಷಯವನ್ನು ಪರಿಶೀಲಿಸಿದರೆ ಹಾಗೂ ಅಧಿವೇಶನದ ಪ್ರಾರಂಭದಲ್ಲಿ ನಾನು ಸೂಚಿಸಿದ ಜಾಡಿನಲ್ಲೆ ನಾವು ಮುಂದುವರಿಯುವುದಾದರೆ ಆಗ ಚರ್ಚೆಯನ್ನು ಈ ಘಟ್ಟದಲ್ಲಿ ಮುಂದುವರಿಸುವುದು ಹಾಗೂ ಅಂಥ ಒಪ್ಪಂದಕ್ಕೆ ಬರಲು ಅನುವು ಮಾಡಿಕೊಡುವಂಥ ಪರಿಸ್ಥಿತಿಯೊಂದನ್ನು ನಾವು ಸೃಷ್ಟಿಸಬಹುದು ಅಥವಾ ಸೃಷ್ಟಿಸಲು ಸಹಾಯ ಮಾಡಬಹುದು. ಆಗ ಸರ್ಕಾರ ಗಮನದಲ್ಲಿಟ್ಟುಕೊಂಡಿದ್ದ ಒಂದು ಮುಖ್ಯ ಪರಿಶೀಲನೆ ಇದು. ಸದನಕ್ಕೆ ನಾನೀಗಾಗಲೆ ನೆನಪಿಸಿರುವಂತೆ, ಅಧಿವೇಶನದ ಪ್ರಾರಂಭದಲ್ಲೇ ನಮಗೆ ಆ ದೃಷ್ಟಿ ಇತ್ತು. ಮಸೂದೆಯ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಸಹ ಕೇವಲ ಬಹುಮತದ ಆಧಾರದ ಮೇಲೆ ಈ ಮಸೂದೆಯ ಪ್ರತಿಯೊಂದು ವಿಭಾಗಕ್ಕೂ ಸಂಪೂರ್ಣ ಒಪ್ಪಿಗೆ ಪಡೆಯುವುದು ಸರ್ಕಾರದ ಉದ್ದೇಶವಾಗಿರಲಿಲ್ಲ. ಈ ಮಸೂದೆಗೆ ಸಂಬಂಧಿಸಿದಂತೆ ಸರ್ಕಾರದ ನಿಲುವು ಇದೇ. ಇಡೀ ಮಸೂದೆಯ ಈ ವಿಶಾಲ ನಿಲುವಿಗೆ ನಾವು ಬದ್ಧರಾಗಿದ್ದೇವೆ. ಆದರೆ, ನಾವು ಪ್ರತಿಯೊಂದು ವಿಭಾಗವನ್ನೂ ವಿಶಾಲ ಮನೋಭಾವದಿಂದ ಪರಿಶೀಲಿಸಲು ಸಿದ್ಧರಿದ್ದೇವೆ. ಈ ಮಸೂದೆಯನ್ನು ಸರ್ಕಾರವು ಸ್ವಾಭಾವಿಕವಾಗಿಯೇ ಅದು ಇರುವಂತೆಯೆ ಮಂಡಿಸಿದೆ. ಏಕೆಂದರೆ, ಸರ್ಕಾರಕ್ಕೆ ಅದರಲ್ಲಿ ವಿಶ್ವಾಸವಿದೆ. ಆದರೆ ಅಂಥ ವಿಷಯದಲ್ಲಿ ಸರ್ಕಾರಕ್ಕೆ ಸಾಧ್ಯವಾದಷ್ಟು ಹೆಚ್ಚಿನ ಪ್ರಮಾಣದ ಬೆಂಬಲವನ್ನು ಪಡೆಯುವ ಆಸೆಯಿದೆ. ಈಗ ಅದಕ್ಕೂ ಈ ಘಟ್ಟದಲ್ಲಿ ನಡೆಯುತ್ತಿರುವ ಸಾಮಾನ್ಯ ಪರಿಶೀಲನೆಗೂ ವ್ಯತ್ಯಾಸವಿದೆ. ಇದನ್ನು ಸಾಕಷ್ಟು ಚರ್ಚಿಸಲಾಗಿದೆ ಮತ್ತು ಸದನದ ಅನೇಕಾನೇಕ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಈ ಘಟ್ಟದ ಚರ್ಚೆಯಿಂದ ಹೊರಹೊಮ್ಮಿದ ತೀರ್ಪಿಗೆ ಸರ್ಕಾರವು ಪ್ರಾಮುಖ್ಯ ನೀಡುತ್ತದೆ; ಇದರಿಂದಾಗಿ, ಆದಷ್ಟು ಶೀಘ್ರವಾಗಿ ಮುಂದಿನ ಘಟ್ಟದ ಪರಿಶೀಲನೆಯನ್ನು – ಅನೌಪಚಾರಿಕ ಪರಿಶೀಲನೆಯನ್ನು – ಕೈಗೆತ್ತಿಗೊಳ್ಳಲು ಅದಕ್ಕೆ ಸಾಧ್ಯವಾಗಬಹುದು. ಆದರೆ, ಈ ಮೊದಲನೆಯ ಘಟ್ಟದ ಚರ್ಚೆ ಮುಗಿಯುವವರೆಗೂ, ಆ ಅನೌಪಚಾರಿಕ ಪರಿಶೀಲನೆಯು ಹಾಗೆ ಪರಿಣಾಮಕಾರಿಯಾಗಿ ಜರುಗಲು ಸಾಧ್ಯವಿಲ್ಲ. ಅಲ್ಲದಿದ್ದರೆ, ನಾವು ಗಾಳಿಯಲ್ಲಿ ತೇಲಾಡಿಕೊಂಡು ಮಧ್ಯದಲ್ಲೇ ಇರಬೇಕಾಗುತ್ತದೆ. ಆಗ ನಮಗೆ ಮುಂದಿನ ಘಟ್ಟಕ್ಕೆ ಹೋಗಲಾಗುವುದಿಲ್ಲ.

ಆದುದರಿಂದ ನಮ್ಮ ಸಲಹೆಯನ್ನು ಧೈರ್ಯದಿಂದ ಸದನದ ಮುಂದಿಡಲು ಪ್ರಯತ್ನಿಸುತ್ತಿದ್ದೇನೆ. ಅದೇನೆಂದರೆ, ಈ ಸೂಚನೆಯ ಮೇಲಿನ ಪರಿಶೀಲನೆಯನ್ನು ಸಾಧ್ಯವಾದಷ್ಟು ಬೇಗ ಮುಗಿಸೋಣ. ಬೇರೆ ವಿಧೇಯಕಗಳನ್ನು ಬದಿಗೊತ್ತಿ ಇದಕ್ಕೆ ಇನ್ನೂ ಸಮಯವನ್ನು ಕೊಟ್ಟರೆ, ನನ್ನದೇನೂ ಅಭ್ಯಂತರವಿಲ್ಲ. ಆದರೆ ನಾನು ಸದನದ ಮುಂದೆ ಅರಿಕೆ ಮಾಡಿಕೊಳ್ಳುವುದೇನೆಂದರೆ, ಅನೌಪಚಾರಿಕ ಚರ್ಚೆ ನಡೆಯಲಿ ಎಂಬ ಸಾಮಾನ್ಯ ಸಲಹೆಯು ಸದನಕ್ಕೆ ಒಪ್ಪಿಗೆಯಾದರೆ, ಆ ಘಟ್ಟಕ್ಕೆ ನಾವು ಮುಂದುವರಿಯುವುದು ಒಳ್ಳೆಯದೇ ಹೊರತು, ಕೋಪ ಬರಿಸುವಂಥ ಚರ್ಚೆಯ ಮೂಲಕ ವಾತಾವರಣವನ್ನು ಕಲುಷಿತಗೊಳಿಸುವುದಲ್ಲ.

ಅನೌಪಚಾರಿಕ ವಿಚಾರ ವಿನಿಮಯ ಎಂದರೇನು ಎಂಬುದನ್ನು ನಾನು ಸ್ಪಷ್ಟಪಡಿಸಬಯಸುತ್ತೇನೆ. ನನ್ನ ಪ್ರಕಾರ 'ಅನೌಪಚಾರಿಕ' ಎಂದರೆ ಪರಿಶೀಲನೆ ಮುಖ್ಯವಲ್ಲ ಎಂದಲ್ಲ. ಚರ್ಚೆಗೆ ಸಾಕಷ್ಟು ಮೃದುತ್ವವನ್ನು ಕೊಡುವ ಉದ್ದೇಶದಿಂದ, ಹಾಗೂ ಆ ಮೂಲಕ, ಈ ಮಸೂದೆಯ ಭಾರವನ್ನು ಹೊತ್ತಿರುವ, ನನ್ನ ಮಾನ್ಯ ಸಹೋದ್ಯೋಗಿಗಳಾದ ಕಾನೂನು ಮಂತ್ರಿಯವರು ನಾನು ಕೊಟ್ಟಿರುವ ಸಲಹೆಗಳನ್ನು ಸಂತೋಷದಿಂದ ಸ್ವೀಕರಿಸಿ, ಅವುಗಳನ್ನು ಜಾರಿಗೊಳಿಸುವರೆಂಬ ಭರವಸೆ ನನಗಿದೆ; ಅಲ್ಲದೆ, ಚರ್ಚೆಯ ಮೃದುತ್ವದಿಂದಾಗಿ, ಅವರು ಸೆಲೆಕ್ಟ್ ಸಮಿತಿಯ ಸದಸ್ಯರನ್ನಷ್ಟೇ ಅಲ್ಲ, ಈ ವಿಷಯದಲ್ಲಿ ಆಸಕ್ತಿಯುಳ್ಳ ಸದನದ ಇತರ ಸದಸ್ಯರ ಸಲಹೆಯನ್ನೂ ಸದನದ ಹೊರಗಿರುವವರನ್ನೂ ಬೇಕಾದರೆ ಕೇಳಲಿ ಎಂಬ ಉದ್ದೇಶದಿಂದ, ಈ ಚರ್ಚೆಯನ್ನು ಅನೌಪಚಾರಿಕವೆಂದು ಕರೆಯುತ್ತೇನೆ. ಒಂದು ವೇಳೆ ನಾವು ಚರ್ಚೆಯನ್ನು ನಿಷ್ಠುರಗೊಳಿಸಿದ್ದರೆ, ಈ ರೀತಿ ಮಾಡುವುದು ಕಷ್ಟವಾಗುತ್ತಿತ್ತು. ಅಲ್ಲದೆ, ನಾವು ಔಪಚಾರಿಕ ಮತ್ತು ನಿಷ್ಠುರ ನೀತಿಯನ್ನು ಅನುಸರಿಸಿದ್ದರೆ, ಮುಕ್ತವಾದ ಹಾಗೂ ಸುಲಭವಾದ ಚರ್ಚೆ ನಡೆಯಲು ಇನ್ನೂ ಹೆಚ್ಚು ಕಷ್ಟವಾಗುತ್ತಿತ್ತು; ಅಲ್ಲದೆ, ನಮ್ಮ ನೀತಿ ಹೆಚ್ಚು ಮೃದುವಾಗಿದ್ದರೆ ಹಾಗೂ ಅನೌಪಚಾರಿಕವಾಗಿದ್ದರೆ ಕೊಡು–ಕೊಳ್ಳುವ ವ್ಯವಹಾರ ಸ್ವಲ್ಪ ಹೆಚ್ಚು ಸುಗಮವಾಗುತ್ತದೆ. ಆದುದರಿಂದ ಈ ಸಲಹೆಯನ್ನು ಸದನದ ಮುಂದಿಡುತ್ತಾ ಅರಿಕೆ ಮಾಡಿಕೊಳ್ಳುವುದೇನೆಂದರೆ, ನಾವೀಗಾಗಲೇ ನೋಡಿರುವ ವಾದವಿವಾದಗಳನ್ನೂ ಚರ್ಚೆಗಳನ್ನೂ ಗಮನದಲ್ಲಿಟ್ಟುಕೊಂಡು ಹೇಳುವುದಾದರೆ, ಈ ನನ್ನ ಸಲಹೆಯು ಸಾಕಷ್ಟು ಸಮಂಜಸವಾಗಿದೆ, ಎನಿಸುತ್ತದೆ. ಏಕೆಂದರೆ, ಒಂದು ವಿಶಿಷ್ಟವಾದ ಕಾರ್ಯವನ್ನು ಸದನದ ಮೂಲಕ, ದೇಶದ ಮೂಲಕ, ಬಹಳಷ್ಟು ಪ್ರಮಾಣದ ಬೆಂಬಲದೊಂದಿಗೆ, ಮಾಡಬೇಕೆಂಬ ಪ್ರಯತ್ನವನ್ನು, ನಿಜವಾದ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಇದರರ್ಥ, ಕೆಲವು ವಿಷಯಗಳಲ್ಲಿ ನಮಗೆ ಎಷ್ಟೇ ತೀವ್ರ ವಿರೋಧವಿದ್ದರೂ, ನಮ್ಮ ಅಭಿಪ್ರಾಯಗಳನ್ನು ಬಿಟ್ಟುಕೊಟ್ಟು, ಬೇರೆಯವರು ಹೇಳಿದುದನ್ನು ನಮ್ರವಾಗಿ ಒಪ್ಪಿಕೊಳ್ಳಬೇಕು, ಎಂದಲ್ಲ. ಸದನದ ಯಾವ ಸದಸ್ಯರೂ ಇದನ್ನು ಮಾಡಬೇಕೆಂದು ನಿರೀಕ್ಷಿಸುವುದಿಲ್ಲ – ಅವರಿಗೆ ಯಾವುದರಲ್ಲಾದರೂ ವಿಶ್ವಾಸವಿದ್ದರೆ. ಆದರೆ, ಚರ್ಚಿಸುವುದು, ಪರಿಶೀಲಿಸುವುದು, ಪರಸ್ಪರರನ್ನು ಒಪ್ಪಿಸಲು ಪ್ರಯತ್ನಿಸುವುದು, ಬೇರೆಯವರ ಅಭಿಪ್ರಾಯಗಳನ್ನು ಒಪ್ಪಿಕೊಳ್ಳುವುದು, ಜಾರಿಗೊಳಿಸಲು ಅನುಕೂಲವಾಗುವಂಥ ಹಾಗೂ ಬಹುಮತದ ಆಧಾರದ ಮೇಲೆ ತೀರ್ಮಾನಕ್ಕೆ ಬರಲು, ಕೆಲವು ವೇಳೆ ತಮ್ಮದನ್ನು ಬಿಟ್ಟುಕೊಡುವುದು – ಇವೆಲ್ಲ ಪ್ರಜಾಪ್ರಭುತ್ವದ ಜೀವಾಳ. ಅದೇ ನಿಜವಾದ ಕ್ರಮ. ನಾನು ಸದನಕ್ಕೆ ಅರಿಕೆ ಮಾಡಿಕೊಳ್ಳುವುದೇನೆಂದರೆ, ಇಂಥ ಮುಖ್ಯ ಕಾಯಿದೆಯ ವಿಚಾರದಲ್ಲೂ ನಾವು ಅದೇ ಕ್ರಮವನ್ನು ಅನುಸರಿಸಬೇಕು.

ಹಿಂದೂ ಕಾನೂನು ಮಸೂದೆಯು ಮುಖ್ಯವಾದುದಲ್ಲವೆಂದು ನಾವು ಪರಿಗಣಿಸುತ್ತಿದ್ದೇವೆ ಎಂದು ಸದನವು ಕಿಂಚಿತ್ ಮಾತ್ರವೂ ತಿಳಿಯಬಾರದು. ಏಕೆಂದರೆ, ನಾವು ನಿಜವಾಗಿಯೂ ಅದಕ್ಕೆ ಪ್ರಾಮುಖ್ಯ ಕೊಡುತ್ತೇವೆ. ನಾವು ಹೀಗೆ ಪ್ರಾಮುಖ್ಯ ಕೊಡುತ್ತಿರುವುದು, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳೊಂದಿಗೆ

ನಿಕಟ ಸಂಬಂಧ ಹೊಂದಿದ ಈ ದೇಶದ ವಿಶಾಲವಾದ ಸಮಸ್ಯೆಗೆ ನಾವು ತೋರಿಸುತ್ತಿರುವ ಧೋರಣೆಯನ್ನು ಗಮನದಲ್ಲಿಟ್ಟುಕೊಂಡೇ ಹೊರತು, ಯಾವುದೋ ಒಂದು ವಿಭಾಗವನ್ನು ಗಮದಲ್ಲಿಟ್ಟುಕೊಂಡಲ್ಲ. ನಾವು ಈ ದೇಶದಲ್ಲಿ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿಕೊಂಡಿದ್ದೇವೆ. ನಮ್ಮ ಪ್ರಮಾಣದಲ್ಲಿ ಇದೊಂದು ಘಟ್ಟ. ಆದರೆ ಆರ್ಥಿಕ, ಸಾಮಾಜಿಕ, ಮತ್ತಿತರ ಘಟ್ಟಗಳೂ ಇವೆ. ನಮ್ಮ ಸಮಾಜ ಮುಂದುವರಿಯಬೇಕಾದರೆ, ಎಲ್ಲ ರಂಗಗಳಲ್ಲಿಯೂ ಒಂದು ಸಮಗ್ರ ರೀತಿಯಲ್ಲಿ ಮುಂದುವರಿಯಬೇಕಾಗುತ್ತದೆ. ಒಂದು ರಂಗದಲ್ಲಿ ಮುಂದುವರಿದು ಉಳಿದ ರಂಗಗಳಲ್ಲಿ ಹಿಂದುಳಿದಿದ್ದರೆ, ನಮ್ಮ ಕಾರ್ಯ ವೈಖರಿ ಅಪರಿಪೂರ್ಣವಾಗಿದೆಯೆಂದರ್ಥ. ಅಲ್ಲದೆ, ಆ ಒಂದು ಮುಂದುವರಿದ ರಂಗವೂ ಅಪಾಯ ಸ್ಥಿತಿಯಲ್ಲಿದೆ ಎಂದರ್ಥ. ಆದುದರಿಂದ, ಈ ವಿಚಾರವನ್ನು ನಾವು ಅದರ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು, ಹಾಗೂ ವಿವಿಧ ರಂಗಗಳಲ್ಲಿ ಹೊಂದಾಣಿಕೆಯಿರುವಂಥ ಮತ್ತು ಹೆಚ್ಚಿನ ಪ್ರಮಾಣದ ಜನತೆಗೆ ಒಪ್ಪಿಗೆಯಾಗುವಂಥ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು, ನಾವು ಎಲ್ಲ ರಂಗಗಳಲ್ಲಿಯೂ ಹೇಗೆ ಮುಂದುವರಿಯಬೇಕೆಂಬುದನ್ನು ಪರಿಶೀಲಿಸಬೇಕು. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಭಾರತದ ಜನತೆಗೆ ಉತ್ತರದಾಯಿತ್ವ ಹೊಂದಿದ ಒಂದು ಪ್ರಜಾಪ್ರಭುತ್ವದ ಸಂಘಟನೆಯಂತೆ ನಾವು ಕೆಲಸ ಮಾಡುತ್ತಿದ್ದೇವೆ ಮತ್ತು ಜನತೆಯನ್ನು ನಾವು ನಮ್ಮೊಂದಿಗೆ ಕರೆದೊಯ್ಯಬೇಕಾಗಿದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ, ನಮಗೆ ಅಥವಾ ಸದನಕ್ಕೆ ಬೇರೆಯವರು ದಾರಿ ತೋರಿಸುವುದು ನಮಗೂ ಒಳ್ಳೆಯದಲ್ಲ, ಸದನಕ್ಕೂ ಒಳ್ಳೆಯದಲ್ಲ. ನಾವು ಬೇರೆಯವರಿಗೆ ಮಾರ್ಗದರ್ಶನ ನೀಡಬೇಕು; ಮಾರ್ಗದರ್ಶನ ನೀಡಬೇಕಾದವರು ನಾವು; ಹಾಗೆ ಮಾರ್ಗದರ್ಶನ ನೀಡುವ ಮೂಲಕ, ಬೇರೆಯವರನ್ನು ನಮ್ಮೊಂದಿಗೆ ಕರೆದೊಯ್ಯಬೇಕು; ಈ ವಿಷಯದಲ್ಲಿಯೂ ಇತರ ವಿಷಯಗಳಲ್ಲಿ ನಾವು ಇತರರನ್ನು ನಮ್ಮ ಜೊತೆಯಲ್ಲಿ ಕರೆದೊಯ್ಯುವ ಮೂಲಕ ಮಾರ್ಗದರ್ಶನ ನೀಡಬೇಕೆಂದು ಹಮ್ಮಿಕೊಂಡಿದ್ದೇವೆ.

ನಾನು ವಿವರವಾಗಿ ತಿಳಿಸಿರುವ ಕಾರ್ಯಕ್ರಮ ಇದು. ಅಂದರೆ, ಸೂಚನೆಯ ಮೇಲಿನ ಈ ಹಂತದ ಪರಿಶೀಲನೆಯನ್ನು ಇಲ್ಲಿಗೆ ಮುಗಿಸಿ, ಅದನ್ನು ಅಂಗೀಕರಿಸೋಣ; ಆಮೇಲೆ, ಮಸೂದೆಯ ವಿವಿಧ ಭಾಗಗಳ ಮತ್ತು ವಿಭಾಗಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳುವಂತೆ ಅನೌಪಚಾರಿಕ ಕ್ರಮ ತೆಗೆದುಕೊಳ್ಳಲು ಸದನದಿಂದ ಸರ್ಕಾರಕ್ಕೆ ಅನುಮತಿ ನೀಡಲಾಗುವುದು. ನಾವು ಈ ಕ್ರಮವನ್ನು ತೆಗೆದುಕೊಳ್ಳಬೇಕಾಗಬಹುದು; ಆಗ, ಮುಂದಿನ ಅಧಿವೇಶನದಲ್ಲಿ ಇದನ್ನು ಮತ್ತೆ ಕೈಗೆತ್ತಿಕೊಂಡಾಗ, ಈ ಸದನದ ಮತ್ತು ಹೊರಗಿನ ಜನರ ಅತಿ ಹೆಚ್ಚು ಪ್ರಮಾಣದ ಬೆಂಬಲ ಅದಕ್ಕೆ ಸಿಕ್ಕಬಹುದು.

**ಸನ್ಮಾನ್ಯ ಶ್ರೀ ಸತ್ಯನಾರಾಯಣ ಸಿನ್ಹಾ** (ಸಂಸದ್ ವ್ಯವಹಾರಗಳ ರಾಜ್ಯಮಂತ್ರಿ) : ಮಾನ್ಯರೆ, **“**ಈಗ ಪ್ರಶ್ನೆಯನ್ನು ಕೇಳಬಹುದು**”** ಎಂಬ ಸೂಚನೆಯನ್ನು ಮಂಡಿಸುತ್ತೇನೆ.

**ಶ್ರೀ ನಝೀರುದ್ದೀನ್ ಅಹಮ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಂ) : ಸ್ಪಷ್ಟನೆಗಾಗಿ ನಾನೊಂದು ಪ್ರಶ್ನೆ ಕೇಳಲೆ?

**ಮಾನ್ಯ ಸಭಾಪತಿಗಳು :** ಸದನದ ಸನ್ಮಾನ್ಯ ನಾಯಕರು ಈಗ ತಾನೆ ಒಂದು ಪ್ರಾಮಾಣಿಕ ಹೇಳಿಕೆ ನೀಡುವುದನ್ನು ನೋಡಿದರೆ, ನಮಗೆ ಇನ್ನು ಹೆಚ್ಚು ಸಮಯ ಬೇಕಾಗಿಲ್ಲ, ಎನಿಸುತ್ತದೆ. ಈ ಹಂತದ ಸೂಚನೆಯನ್ನು ಕುರಿತು ಪೂರ್ಣ ಒಂಬತ್ತು ದಿನಗಳ ಚರ್ಚೆಯಾಗಿದೆ; ಈ ದಿನ ಹತ್ತನೆಯ ದಿನ. ಇದರಲ್ಲಿ ಮೂವತ್ಮೂರು ಭಾಷಣಕಾರರು ಭಾಗವಹಿಸಿದ್ದಾರೆ ಮತ್ತು ಚರ್ಚೆಗೆ ಮೂವತ್ತು ಗಂಟೆ ಇಪ್ಪತ್ತೆಂಟು ನಿಮಿಷಗಳನ್ನು ಮೀಸಲಿಡಲಾಗಿದೆ. ಮೀಸಲಿಟ್ಟ ಸಮಯ ಸಾಕೆನಿಸುತ್ತದೆ...

**ಒಬ್ಬ ಮಾನ್ಯ ಸದಸ್ಯರು :** ನಾನು....

**ಮಾನ್ಯ ಸಭಾಪತಿಗಳು :** ಚರ್ಚೆಯನ್ನು ಮುಗಿಸಬೇಕೆಂಬ ಬೇಡಿಕೆಯನ್ನು ಒಪ್ಪಿಕೊಂಡಿದುದಕ್ಕೆ ನಾನು ಕಾರಣ ನೀಡುವ ಅಗತ್ಯವಿಲ್ಲ. ಆದರೆ, ಸದನದ ಒಳಗಿನ ಮತ್ತು ಹೊರಗಿನ ಪ್ರತಿಯೊಬ್ಬರಿಗೂ, ಮಸೂದೆಯ ವಿವಿಧ ನಿಬಂಧನೆಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಪೂರ್ಣ ಅವಕಾಶ ಪಡೆಯಲಿದ್ದಾರೆ ಎಂದು ಮಾನ್ಯ ಪ್ರಧಾನ ಮಂತ್ರಿಗಳು ನೀಡಿದ ಹೇಳಿಕೆ ನನಗೆ ಒಪ್ಪಿಗೆಯಾಗಿದೆ. ಈ ಹಂತವು ಸಾಮಾನ್ಯ ಪರಿಶೀಲನೆಯ ಹಂತವಾಗಿದೆ; ಈಗ ನಾವು ಯಾವುದೇ ವಿಶೇಷ ವಿಷಯದ ಯಾವುದೇ ವಿಶೇಷ ವಿಧಿಯನ್ನು ಕುರಿತು ಚರ್ಚಿಸುತ್ತಿಲ್ಲ. ವಿವರಗಳ ಬಗ್ಗೆ ಜನರಲ್ಲಿ ಭಿನ್ನಾಭಿಪ್ರಾಯವಿರುವುದು ಸಾಧ್ಯವಿದೆ. ಆದರೂ, ಮಸೂದೆಯ ಸಾಮಾನ್ಯತೆಯ ವಿಷಯವಾಗಿ ಮಾತ್ರ ಹೆಚ್ಚಿನ ಪ್ರಮಾಣದ ಬೆಂಬಲವಿದೆ. ಒಂದು ವೇಳೆ ನಾವು ಚರ್ಚೆಯನ್ನು ಈ ಹಂತದಲ್ಲಿ ಮುಂದುವರಿಸಿದರೆ, ಅದು ಖಂಡಿತ ಅಸ್ಪಷ್ಟವಾಗಿರುತ್ತದೆ, ಸಾಮಾನ್ಯವಾಗಿರುತ್ತದೆ, ಹಾಗೂ ವಿಷಯಭಂಗವಾಗುತ್ತದೆ ಎಂಬ ಭಯ ನನಗಿದೆ. ಪ್ರಾಯಶಃ ಅದು ಪುನರುಕ್ತಿಯೂ ಆಗಬಹುದು. ಆದುದರಿಂದ ಚರ್ಚೆಯ ಮುಖ್ಯವಾದ ಹಂತವೆಂದರೆ ಮಸೂದೆಯ ಪ್ರತಿಯೊಂದು ವಿಭಾಗವನ್ನೂ ಪರಿಶೀಲಿಸುವುದು. ಅಂಥ ಒಂದು ಹಂತ ಬರುವ ಮೊದಲು ಸನ್ಮಾನ್ಯ ಸದಸ್ಯರು ಎಲ್ಲ ಪ್ರಶ್ನೆಗಳನ್ನೂ ಪರಿಶೀಲಿಸುವ ಮತ್ತು ಸರ್ಕಾರದೊಡನೆ ಚರ್ಚಿಸುವ ಪೂರ್ಣ ಅವಕಾಶ ಪಡೆಯುತ್ತಾರೆ. ಅದೇ ರೀತಿ ಸದನದ ಹೊರಗಿನವರಿಗೂ ಆ ಅವಕಾಶ ದೊರೆಯುತ್ತದೆ. ಆದುದರಿಂದ ಈ ಮಸೂದೆಯ ಮೇಲಿನ ಪರಿಶೀಲನೆಯನ್ನು ಮತ್ತೆ ಮುಂದುವರಿಸುವುದು ವ್ಯರ್ಥ ಕಾಲಹರಣವೆನಿಸುತ್ತದೆ. ಆದುದರಿಂದ, ಚರ್ಚೆಯ ಮುಕ್ತಾಯಕ್ಕೆ ನನ್ನ ಒಪ್ಪಿಗೆಯಿದೆ ಮತ್ತು ಮಾನ್ಯ ಕಾನೂನು ಮಂತ್ರಿಗಳನ್ನು ಮಾತಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ರೋಹಿಣಿ ಕುಮಾರ್ ಚೌಧರಿ** (ಅಸ್ಸಾಂ : ಸಾಮಾನ್ಯ) : ನಾನೊಂದು ಹೇಳಿಕೆ ನೀಡಬಯಸುತ್ತೇನೆ.

**ಮಾನ್ಯ ಸಭಾಪತಿಗಳು :** ಸನ್ಮಾನ್ಯ ಸದಸ್ಯರು ಯಾವ ಹೇಳಿಕೆ ನೀಡಲಿದ್ದಾರೆ? ಸನ್ಮಾನ್ಯ ಸದಸ್ಯರಿಗೆ ಹೇಳಿಕೆ ನೀಡಲು ನಾನು ಅನುಮತಿ ಕೊಟ್ಟರೆ, ಪ್ರತಿಯೊಬ್ಬರಿಗೂ ತಮಗೂ ಹೇಳಿಕೆ ನೀಡುವ ಹಕ್ಕಿದೆ ಎನಿಸುತ್ತದೆ. ಆದುದರಿಂದ ಸನ್ಮಾನ್ಯ ಸದಸ್ಯರು ದಯವಿಟ್ಟು ಪುನರಾಸೀನರಾಗಬೇಕು.

**ಶ್ರೀ ಮಹಾವೀರ ತ್ಯಾಗಿ** (ಉ.ಪ್ರ : ಸಾಮಾನ್ಯ ) : ಮಾನ್ಯರೆ, ಸೂಚನೆಯನ್ನು ಈ ಹಂತದಲ್ಲಿ ಅಂಗೀಕರಿಸಿದ ನಂತರ, ಮಸೂದೆಯ ಎಲ್ಲ ವಿಭಾಗಗಳ ತತ್ತ್ವಗಳಿಗೂ ಸದನವು ಬದ್ಧವಾಗಿದೆ, ಎಂದರ್ಥವಾಗುತ್ತದೆಯೆ? ಇದಕ್ಕೆ ತಮ್ಮ ವ್ಯಾಖ್ಯಾನವೇನೆಂಬುದನ್ನು ನಾನು ತಿಳಿಯಲಿಚ್ಛಿಸುತ್ತೇನೆ.

**ಮಾನ್ಯ ಸಭಾಪತಿಗಳು :** ನಾನು ಸ್ಪಷ್ಟಪಡಿಸುತ್ತೇನೆ. ಸೂಚನೆಯನ್ನು ಸೆಲೆಕ್ಟ್ ಸಮಿತಿಗೆ ಕಳಿಸಬೇಕೆಂದು ಸದನವು ಒಪ್ಪಿಕೊಂಡಾಗ, ಅದು ಮಸೂದೆಯ ತತ್ತ್ವವನ್ನು ಒಪ್ಪಿಕೊಂಡಿತು ಎಂದರ್ಥ. ಆದರೆ, ಈ ರೀತಿಯ ಮಸೂದೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಆ ತತ್ತ್ವ ಏನು ಎಂಬುದನ್ನು ನಿರ್ಧರಿಸುವುದು ಬಹಳ ಕಷ್ಟ; ಏಕೆಂದರೆ, ಪ್ರತಿಯೊಂದು ವಿಭಾಗವನ್ನು ಒಂದು ತತ್ತ್ವವನ್ನಾಗಿ ಮಾರ್ಪಡಿಸಬಹುದು. ಆದರೂ ನಾನು ಇದನ್ನು ಸ್ಪಷ್ಟಪಡಿಸುತ್ತೇನೆ. ಮಸೂದೆಯ ನಿಬಂಧನೆಗಳ ವಿಸ್ತೀರ್ಣವನ್ನು – ಬಹಳ ದೊಡ್ಡ ವಿಸ್ತೀರ್ಣವನ್ನು – ಗಮನಿಸಿದರೆ, ಸದನವು ಒಂದೇ ಒಂದು ತತ್ತ್ವವನ್ನು ಒಪ್ಪಿಕೊಂಡಿದೆ. ಅದೇಂದರೆ, ಹಿಂದೂ ಕಾನೂನನ್ನು ನಿಯಮಬದ್ಧಗೊಳಿಸುವುದು ಒಳ್ಳೆಯದು ಮತ್ತು ಮಸೂದೆಯ ಪ್ರತಿಯೊಂದು ನಿಬಂಧನೆಯೂ ಚರ್ಚೆಗೆ, ತಿದ್ದುಪಡಿಗೆ, ಬದಲಾವಣೆಗೆ ಮುಂತಾದ ಎಲ್ಲಕ್ಕೂ ಮುಕ್ತವಾಗಿರಬೇಕು.

**ಶ್ರೀ ಮಹಾವೀರ ತ್ಯಾಗಿ :** ಹಾಗಾದರೆ, ಮಾನ್ಯರೆ, ನಮ್ಮದೇನೂ ಆಕ್ಷೇಪವಿಲ್ಲ.

**ಶ್ರೀ ರೋಹಿಣಿ ಕುಮಾರ್ ಚೌಧರಿ** : ಈ ಸೂಚನೆಯ ಮೇಲೆ ಸದನಕ್ಕೆ ಒಂದು ಸಲಹೆ ನೀಡಲಿಚ್ಛಿಸುತ್ತೇನೆ. ಚರ್ಚೆಯ ಮುಕ್ತಾಯವನ್ನು ಮಂಡಿಸಿ, ಅಂಗೀಕರಿಸಬಹುದು. ಅದಕ್ಕೆ ನನ್ನದೇನೂ ಆಕ್ಷೇಪವಿಲ್ಲ. ಆ ವಿಷಯದ ಮೇಲೆ ಚರ್ಚೆಯನ್ನು ಮುಂದುವರಿಸುವುದು ನನಗಿಷ್ಟವಿಲ್ಲ. ವಾಸ್ತವವಾಗಿ, ಒಂದು ಒಪ್ಪಂದದ ವಾತಾವರಣವನ್ನು ಸೃಷ್ಟಿಸಲೋಸ್ಕರ, ನಾನೇ ಆ ವಿಷಯದ ವಿರುದ್ಧವಾಗಿ ಮಾತಾಡಿಲ್ಲ. ಆದುದರಿಂದ, ಈ ಸೂಚನೆಯನ್ನು ಈಗ ಮತಕ್ಕೆ ಹಾಕಬಾರದೆಂದು ನಾನು ಹೇಳುತ್ತೇನೆ. ಪ್ರಧಾನ ಮಂತ್ರಿಗಳ ಹೇಳಿಕೆಯ ಮೂಲಕ ನಾವೊಂದು ವ್ಯಾವಹಾರಿಕ ಲಾಭ ಗಳಿಸಿದ್ದೇವೆ ಎಂಬುದನ್ನು ಕುರಿತು ನಾವು ಹೊರಗಿರುವ ವಿರೋಧ ಪಕ್ಷದವರನ್ನು ಒಪ್ಪಿಸಬೇಕಾಗಿದೆ.

**ಮಾನ್ಯ ಸಭಾಪತಿಗಳು** : ನಾವು ಯಾವ ಕ್ರಮವನ್ನು ಅನುಸರಿಸಬೇಕು ಎಂಬುದರ ಬಗ್ಗೆ ಸದನದ ಮಾನ್ಯ ನಾಯಕರು ಹೇಳಿಕೆ ನೀಡಿದ ಮೇಲೆ ಮತ್ತು ನಾವು ಯಾವುದಕ್ಕೆ ಬದ್ಧರಾಗಿರಬೇಕು, ಯಾವುದಕ್ಕೆ ಬದ್ಧರಾಗಿರಬೇಕಿಲ್ಲ ಎಂಬುದರ ಬಗ್ಗೆ ನಾನು ಹೇಳಿಯಾದ ಮೇಲೆ, ಈ ಪರಿಶೀಲನಾ ಸೂಚನೆಯನ್ನು ಮುಂದಕ್ಕೆ ಹಾಕುವುದರ ಪರಿಣಾಮವೇನೆಂಬುದರ ಬಗ್ಗೆ ಯಾರಿಗೂ ಸಂದೇಹವಿಲ್ಲ. ವಾಸ್ತವವಾಗಿ ಅದನ್ನು ಮುಕ್ತವಾಗಿಡುವುದು ಅಪೇಕ್ಷಣೀಯವೇ ಅಲ್ಲ. ಏಕೆಂದರೆ, ಅದರ ಪರಿಶೀಲನೆಯನ್ನು ಮತ್ತೆ ಕೈಗೆತ್ತಿಕೊಂಡರೆ, ಮತ್ತೆ ಚರ್ಚೆಗಳಾಗುತ್ತವೆ. ಭಾಷಣಗಳಿಗೆ ಮತ್ತೆ ಪ್ರೇರಣೆಗಳು ಸಿಕ್ಕುತ್ತವೆ. ಆದುದರಿಂದ ಸೂಚನೆಯನ್ನು ಸದನದ ಮುಂದಿಡುತ್ತೇನೆ.

**ಡಾ. ಪಿ.ಎಸ್. ದೇಶಮುಖ್** (ಮ.ಪ್ರಾಂ. ಮತ್ತು ಬೆರಾರ್ : ಸಾಮಾನ್ಯ) : ಮಾನ್ಯರೆ, ಇಲ್ಲೊಂದು ನಿಯಮೋಲ್ಲಂಘನೆಯಾಗಿದೆ. ಮಾನ್ಯ ಪ್ರಧಾನ ಮಂತ್ರಿಗಳು ಮಾಡಿದ ಒಂದು ಅತ್ಯುತ್ತಮ ಸಲಹೆಯನ್ನು ನಾವೆಲ್ಲ ಕೇಳಿದ್ದೇವೆ; ಹಾಗೂ ಸದನವು ಅದನ್ನು ಒಪ್ಪಿಕೊಳ್ಳುವುದರಲ್ಲಿ ಅನುಮಾನವೇ ಇಲ್ಲ. ನನ್ನ ಆಕ್ಷೇಪವೆಂದರೆ, ಸದನದ ಮುಂದಿರುವುದು ಸೂಚನೆಯ ಪರಿಶೀಲನೆ. ಆದರೆ ಈಗಿನ ಸಲಹೆಯನ್ನು ನೋಡಿದರೆ, ಮಸೂದೆಯನ್ನು ಮತ್ತೆ ಸೆಲೆಕ್ಟ್ ಸಮಿತಿಗೆ ಹಿಂದಿರುಗಿಸಬೇಕು ಎಂದರ್ಥವಾಗುತ್ತದೆ.

**ಕೆಲವು ಸನ್ಮಾನ್ಯ ಸದಸ್ಯರು** : ಇಲ್ಲ, ಇಲ್ಲ.

**ಡಾ॥ ಪಿ. ಎಸ್. ದೇಶಮುಖ್** : ಮಾನ್ಯರೆ, ಇದೊಂದು ಸಂಸದೀಯ ಕ್ರಮವನ್ನು ತಪ್ಪಿಸುವ ಕ್ರಮವಾಗಿದೆ ಎಂಬುದನ್ನು ತಮಗೆ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಸರಿಯಾದ ಮತ್ತು ನ್ಯಾಯಬದ್ಧವಾದ ಒಂದೇ ಒಂದು ಕ್ರಮವೆಂದರೆ, ಮಸೂದೆಯನ್ನು ಸೆಲೆಕ್ಟ್ ಸಮಿತಿಗೆ ಕಳಿಸುವುದು – ಸಮಿತಿ ಅದೇ ರೀತಿ ಇರಬಹುದು ಅಥವಾ ವಿಸ್ತೃತವಾಗಿರಬಹುದು. ಸಲಹೆಯು ಸಂಸದೀಯ ಕ್ರಮಕ್ಕೆ ವಿರುದ್ಧವಾದುದು ಮತ್ತು ನಾವು ಅದನ್ನು ಒಪ್ಪಿಕೊಳ್ಳಬಾರದು. ಸಲಹೆಯು ಸದನಕ್ಕೆ ಸ್ವೀಕಾರಾರ್ಹವಾದರೆ, ನನ್ನದು ಒಂದು ರವೆಯಷ್ಟೂ ಆಕ್ಷೇಪವಿಲ್ಲ. ಆದರೆ ಪದ್ಧತಿಯ ಪ್ರಕಾರ, ಮಸೂದೆಯನ್ನು ಅದೇ ಸೆಲೆಕ್ಟ್ ಸಮಿತಿಗೆ ಅಥವಾ ವಿಸ್ತೃತ ಸೆಲೆಕ್ಟ್ ಸಮಿತಿಗೆ ಕಳಿಸಬೇಕು.

**ಮಾನ್ಯ ಸಭಾಪತಿಗಳು** : ಕ್ರಮಬದ್ಧತೆಯ ದೃಷ್ಟಿಯಿಂದ ಮಾನ್ಯ ಸದಸ್ಯರು ಮಾಡಿರುವ ಆಕ್ಷೇಪದಲ್ಲಿರುವ ಶಕ್ತಿಯನ್ನು ನಾನು ಗಮನಿಸಿದ್ದೇನೆ. ಆದರೆ, ಸದನದ ಸನ್ಮಾನ್ಯ ನಾಯಕರು ಹೇಳಿರುವುದೇನೆಂದರೆ, ಸದನದ ಮುಂದೆ ಯಾವುದೇ ಸೂಚನೆಯನ್ನು ಹೆಚ್ಚಿನ ಪರಿಶೀಲನೆಗಾಗಿ ಇಡುವುದಿಲ್ಲ, ಎಂದಷ್ಟೇ. ಅವರು ತಮ್ಮ ನಿಲುವನ್ನು ವಿವರಿಸಿದ್ದಾರೆ, ಅಷ್ಟೇ. ಅವರು ಕೇವಲ, ಸರ್ಕಾರ ಯಾವ ಕ್ರಮವನ್ನು ತೆಗೆದುಕೊಳ್ಳುತ್ತದೆ, ಸರ್ಕಾರ ಮಸೂದೆಯ ವಿಭಾಗಗಳ ಪರಿಶೀಲನೆಯ ಬಗ್ಗೆ ಏನು ಮಾಡುತ್ತದೆ ಎಂಬುದನ್ನು ತಿಳಿಸಿದ್ದಾರೆ. ಅವರ ಹೇಳಿಕೆಯಲ್ಲಿ ಸದನದ ಯಾವುದೇ ಔಪಚಾರಿಕ ಸಮಿತಿಗೆ ಮತ್ತೆ ಕಳಿಸುವ ಪ್ರಸ್ತಾಪವೇ ಇಲ್ಲ.

ಒಂದು ವೇಳೆ ಅಂಥ ಸೂಚನೆಯನ್ನು ಅವರು ಮಾಡಿದ್ದರೆ, ಆಗ ನಿಯಮೋಲ್ಲಂಘನೆಯ ಬಗೆಗಿನ ನಿಮ್ಮ ಆಕ್ಷೇಪವನ್ನು ಸಂತೋಷವಾಗಿ ಒಪ್ಪಿಕೊಳ್ಳುತ್ತಿದ್ದೆ. ಸದ್ಯಕ್ಕಂತೂ ಸದನದ ಮುಂದೆ ಅಂಥ ಯಾವ ಸೂಚನೆಯೂ ಇಲ್ಲ, ಹಾಗೂ ಅದು ಸಂಸದೀಯ ಕ್ರಮಕ್ಕೆ ವಿರುದ್ಧವಾದುದೂ ಅಲ್ಲ. ಇಷ್ಟೇ ಅಲ್ಲ, ಒಂದು ವೇಳೆ, ಅದು ನಮ್ಮ ಸಾಮಾನ್ಯ ರೂಢಿಗಿಂತ ಸ್ವಲ್ಪ ಭಿನ್ನವಾಗಿದ್ದರೂ, ನಾವು ಹೊಸ ಕ್ರಮವನ್ನು ರೂಪಿಸಿಕೊಳ್ಳಬೇಕು; ಏಕೆಂದರೆ, ನನ್ನ ಪ್ರಕಾರ, ಪ್ರಜಾಪ್ರಭುತ್ವವೆಂದರೆ ರಾಜಿ ಮನೋಭಾವ ಮತ್ತು ಕೊಡುಕೊಳ್ಳುವ ಮನೋಭಾವವಿರಬೇಕು. ಆದುದರಿಂದ ನಾನು ಸೂಚನೆಯನ್ನು ಸದನದ ಮುಂದಿಡುತ್ತೇನೆ:

ವಿಷಯವೆಂದರೆ : **"**ಈಗ ಪ್ರಶ್ನೆಯನ್ನು ಕೇಳಬಹುದು**"**.

ಸೂಚನೆಯು ವಿರೋಧಿಸಲ್ಪಟ್ಟಿತು.

*__ಸನ್ಮಾನ್ಯ ಡಾ|| ಬಿ. ಆರ್. ಅಂಬೇಡ್ಕರ್__ (ಕಾನೂನು ಮಂತ್ರಿಗಳು) : ಮಾನ್ಯರೆ ಸದನದ ಮುಂದೆ ಒಟ್ಟು ಮೂರು ಸೂಚನೆಗಳಿವೆ. ಅವುಗಳಲ್ಲಿ ಎರಡನ್ನು ಶ್ರೀ ನಝೀರುದ್ದೀನ್ ಅಹಮ್ಮದ್ ಕಳಿಸಿದ್ದಾರೆ. ಮಸೂದೆಯನ್ನು ಸೆಲೆಕ್ಟ್ ಸಮಿತಿಗೆ ಹೆಚ್ಚಿನ ಪರಿಶೀಲನೆಗಾಗಿ ಕಳಿಸಬೇಕು ಎಂಬುದು ಅದರಲ್ಲೊಂದು. ಹೆಚ್ಚಿನ ಜನಾಭಿಪ್ರಾಯ ಸಂಗ್ರಹಣೆಗಾಗಿ ಮಸೂದೆಯನ್ನು ಜನರಲ್ಲಿ ಹಂಚಬೇಕು ಎಂಬುದು ಎರಡನೆಯದು. ಮೂರನೆಯದೆಂದರೆ ಸದನದ ಮುಂದಿರುವ ನನ್ನ ಸೂಚನೆ, ಸೆಲೆಕ್ಟ್ ಸಮಿತಿಯ ವರದಿಯನ್ನು ಪರಿಶೀಲಿಸಬೇಕೆಂಬುದೇ ನನ್ನ ಸೂಚನೆ. ಶ್ರೀ ನಝೀರುದ್ದೀನ್ ಅಹಮ್ಮದ್ ಮಂಡಿಸಿರುವ ಸೂಚನೆಗಳ ಬಗ್ಗೆ ನಾನು ಕೆಲವು ಮಾತುಗಳನ್ನಾಡಬಯಸುತ್ತೇನೆ. ಈ ಒಂಬತ್ತು ದಿನಗಳಲ್ಲಿ ಹರಡಿಕೊಂಡಿರುವ ಚರ್ಚೆಯಲ್ಲಿ ನಾನು ಗಮನಿಸಿರುವ ಒಂದು ವಿಷಯವೆಂದರೆ, ಆ ಸೂಚನೆಗೆ ಮಸೂದೆಯನ್ನು ವಿರೋಧಿಸುತ್ತಿರುವವರ ಬೆಂಬಲವೂ ಇಲ್ಲ. ಈ ಚರ್ಚೆಯಲ್ಲಿ ಭಾಗವಹಿಸಿರುವ ಮೂವತ್ತೂರು ಸದಸ್ಯರಲ್ಲಿ ಹೆಚ್ಚೆಂದರೆ ಇಬ್ಬರು ಮಾತ್ರ ಅವರ ಸೂಚನೆಯನ್ನು ಬೆಂಬಲಿಸಿದ್ದಾರೆ. ಉಳಿದವರು ಅವರನ್ನು ಬೆಂಬಲಿಸಿಯೇ ಇಲ್ಲ. ಎರಡನೆಯದಾಗಿ, ಮಸೂದೆಯನ್ನು ಮತ್ತೆ ಸೆಲೆಕ್ಟ್ ಸಮಿತಿಗೆ ಏಕೆ ಕಳಿಸಬೇಕು ಅಥವಾ ಸಾರ್ವಜನಿಕರಲ್ಲಿ ಹಂಚಬೇಕು ಎಂಬ ಪ್ರಶ್ನೆಯನ್ನು' ಅವರು ಮಾತಾಡುತ್ತಿದ್ದಾಗ, ಪದೇ ಪದೇ ಕೇಳಿದರೂ ಅವರು ತಮ್ಮ ಸೂಚನೆಯನ್ನು ಬೆಂಬಲಿಸಲು ಒಳ್ಳೆಯ ಕಾರಣ ಕೊಡುವಲ್ಲಿ ಯಶಸ್ವಿಯಾಗಿಲ್ಲ ಎಂದು ಅವರ ಆರು ಗಂಟೆಗಳ ಭಾಷಣ ಕೇಳಿದವರಿಗೆ ಸುಸ್ಪಷ್ಟವಾಗಿದೆ. ಆದುದರಿಂದ, ಅವರ ಸೂಚನೆಯನ್ನು ಪರಿಶೀಲಿಸುವುದು ನನ್ನ ಮತ್ತು ಸದನದ ಅನಾವಶ್ಯಕ ಕಾಲಹರಣವಾಗುತ್ತದೆ.

---------

ಮಾನ್ಯರೆ, ಈಗ ನಾನು ನನ್ನ ಸೂಚನೆಗೆ ಬರುತ್ತೇನೆ. ನೀವಾಗಲೇ ಹೇಳಿರುವಂತೆ, ಈ ಚರ್ಚೆಯಲ್ಲಿ ಒಟ್ಟು ಮೂವತ್ತುಮೂರು ಭಾಷಣಕಾರರು ಭಾಗವಹಿಸಿದ್ದಾರೆ. ಈ ಸೂಚನೆಗೆ ಸದನದ ಸದಸ್ಯರಲ್ಲಿ ಎಷು ಜನ ಬೆಂಬಲಿಸಿದರೆ, ಎಷ್ಟು ಜನ ವಿರೋಧಿಸಿದರು ಎಂಬುದನ್ನು ಸದನಕ್ಕೆ ತಿಳಿಸಬಯಸುತ್ತೇನೆ. ಭಾಗವಹಿಸಿದ ಮೂವತ್ತು ಮೂರು ಸದಸ್ಯರಲ್ಲಿ ಸುಮಾರು ಇಪ್ಪತ್ತೂರು ಜನರು ಪರವಾಗಿ ಮಾತನಾಡಿದ್ದಾರೆ. ಈ ಇಪ್ಪತ್ತೂರು ಸದಸ್ಯರಲ್ಲಿ ಇಬ್ಬರು ಮಾತ್ರ ತಾವು ಮಸೂದೆಗೆ ಕೇವಲ ಪರಿಮಿತ ಬೆಂಬಲ ನೀಡಲು ಸಿದ್ಧವಿರುವುದಾಗಿ ತಿಳಿಸಿದರು; ಮೂವರು ತಟಸ್ಥರಿದ್ದರು; ಮೂವರು ಸಾರ್ವಜನಿಕರಲ್ಲಿ ಹಂಚುವುದರ ಪರವಾಗಿದ್ದರು; ನಾಲ್ವರು ಮಸೂದೆಯ ಪರಿಶೀಲನೆಯನ್ನು ಮುಂದೂಡುವ ಪರವಾಗಿದ್ದರು. ಆದುದರಿಂದ,

* C.A. (Leg) D, Voel. VI, pt ii, ೧೪ನೇ ಡಿಸೆಂಬರ್, ೧೯೪೯ ಪುಟ ೬೮೭–೯೨.

ಸದನದ ಬಹುತೇಕ ಸದಸ್ಯರು ಇಪ್ಪತ್ತೊಂರಷ್ಟು ಸದಸ್ಯರು – ಮಸೂದೆಯ ಪರವಾಗಿದ್ದಾರೆ, ಎಂಬುದು ಸುಸ್ಪಷ್ಟವಾಗಿದೆ.

**ಶ್ರೀಯುತ ರೋಹಿಣಿ ಕುಮಾರ್ ಚೌಧರಿ** : ಆದರೆ ಮೂವತ್ನಾಲ್ಕು ಜನ ಮಸೂದೆಯನ್ನು ವಿರೋಧಿಸಿ ಮಾತನಾಡಬಯಸಿದವರು ತಮ್ಮ ಹೆಸರು ಕೊಟ್ಟಿದ್ದರು; ಅವರಿಗೆ ಮಾತನಾಡುವ ಅವಕಾಶ ಕೊಡಲಿಲ್ಲ, ಎಂಬುದು ಮಂತ್ರಿಗಳಿಗೆ ಗೊತ್ತೋ?

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್** : ನಾನು ಯಾರಾರು ಮಾತನಾಡಿದರು ಎಂಬುದರ ವಿಶ್ಲೇಷಣೆ ಮಾಡುತ್ತಿದ್ದೆ ಅಷ್ಟೆ. (ಆಗ ಅಡ್ಡಿಮಾಡಲಾಯಿತು).

**ಮಾನ್ಯ ಸಭಾಪತಿಗಳು** : ಸದ್ದು, ಸದ್ದು.

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್** : ಇನ್ನೂ ಸ್ವಲ್ಪ ಮುಂದುವರಿದು, ಮಸೂದೆಯ ಯಾವ ಭಾಗವನ್ನು ಖಂಡಿಸಲಾಗಿದೆ ಎಂಬುದನ್ನು ತಿಳಿದುಕೊಳ್ಳಲು ವಿರೋಧಿಸಿದವರ ನಿಲುವನ್ನು ವಿಶ್ಲೇಷಣೆ ಮಾಡೋಣ. ಎಂಟು ವಿಷಯಕ್ಕೆ ಸಂಬಂಧಿಸಿದ ಹಿಂದೂ ಕಾನೂನನ್ನು ನಿಯಮಬದ್ಧಗೊಳಿಸುವ ಉದ್ದೇಶದಿಂದ ರೂಪಿಸಿದ ಈ ಮಸೂದೆಯಲ್ಲಿ ಐದಕ್ಕೆ ಯಾವ ವಿರೋಧವೂ ಇರಲಿಲ್ಲ.

**ಶ್ರೀ ರೋಹಿಣಿ ಕುಮಾರ್ ಚೌಧರಿ** : ಏಕೆಂದರೆ, ನೀವು ನಮ್ಮನ್ನು ಮಾತಾಡಲು ಬಿಡಲಿಲ್ಲ.

**ಮಾನ್ಯ ಸಭಾಪತಿಗಳು** : ನಿಯಮ ಪಾಲಿಸಿರಿ !

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್** : ಮಾನ್ಯರೆ, ನನ್ನ ಮಿತ್ರರು ಅಡ್ಡಿಮಾಡುವುದಿಲ್ಲವೆಂದು ನಂಬುತ್ತೇನೆ.

**ಮಾನ್ಯ ಸಭಾಪತಿಗಳು** : ರಾಷ್ಟ್ರೀ ಮನೋಭಾವದ ವಾತಾವರಣವನ್ನು ತಾವು ಕೆಡಿಸುವುದಿಲ್ಲ ಎಂದು ಮಾನ್ಯ ಸದಸ್ಯರು ಈಗ ತಾನೇ ವಚನ ನೀಡಿದ್ದಾರೆ.

**ಶ್ರೀ ರೋಹಿಣಿ ಕುಮಾರ್ ಚೌಧರಿ** : ಹಾಗಾದರೆ, ಒಪ್ಪಂದದ ಮೇರೆಗೆ, ಅವರೂ ಈಗ ಮಾತಾಡಬಾರದು.

**ಮಾನ್ಯ ಸಭಾಪತಿಗಳು** : ನಿಯಮ ಪಾಲಿಸಿರಿ ! ಈಗ ಯಾವ ರನ್ನಿಂಗ್ ಕಾಮೆಂಟರಿಯೂ ಬೇಡ.

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್** : ಮಾನ್ಯರೆ, ನಾನೀಗಾಗಲೇ ಹೇಳಿದಂತೆ, ಮಸೂದೆಗೆ ವಿವಾಹ, ದತ್ತು ಸ್ವೀಕಾರ, ಪೋಷಕತ್ವ, ಅವಿಭಕ್ತ ಕುಟುಂಬದ ಆಸ್ತಿ, ಸ್ತ್ರೀಯರ ಆಸ್ತಿ, ಉಯಿಲು ಬರೆಯದೇ ಸತ್ತವರ ಆಸ್ತಿಗೆ ಉತ್ತರಾಧಿಕಾರ, ರಾಷ್ಟ್ರೀ ಉತ್ತರಾಧಿಕಾರ ಮತ್ತು ಜೀವನಾಂಶಗಳಿಗೆ ಸಂಬಂಧಿಸಿದ ಹಿಂದೂ ಕಾನೂನನ್ನು ತಿದ್ದುವ ಹಾಗೂ ನಿಯಮಗಳನ್ನಾಗಿ ಪರಿವರ್ತಿಸುವ ಉದ್ದೇಶವಿದೆ. ದತ್ತು ಸ್ವೀಕಾರಕ್ಕೆ ಸಂಬಂಧಿಸಿದಂತೆ, ಪೋಷಕತ್ವಕ್ಕೆ ಸಂಬಂಧಿಸಿದಂತೆ ಮಸೂದೆಯ ಈ ಭಾಗಗಳಿಗೆ ನಾನು ಯಾವ ವಿರೋಧವನ್ನೂ ಕಂಡಿಲ್ಲ.......

**ಪಂಡಿತ್ ಠಾಕೂರದಾಸ್ ಭಾರ್ಗವ** (ಪೂರ್ವ ಪಂಜಾಬ್ : ಸಾಮಾನ್ಯ) : ದತ್ತು ಸ್ವೀಕಾರಕ್ಕೆ ಸಂಬಂಧಿಸಿದಂತೆಯೂ ಉತ್ತರಾಧಿಕಾರಿಗಳ ನೇಮಕಾತಿಯ ನಿಬಂಧನೆಗಳು ಇಲ್ಲದಿರುವುದಕ್ಕೆ ಸಂಬಂಧಿಸಿದಂತೆಯೂ ನಾನು ವಿರೋಧ ವ್ಯಕ್ತಪಡಿಸಿದ್ದೇನೆ.

**ಸನ್ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್** : ಈಗ ಸ್ತ್ರೀಯರ ಆಸ್ತಿಯ ವಿಷಯ, ಒಪ್ಪಂದದ ಮೂಲಕ ಉತ್ತರಾಧಿಕಾರ ಪಡೆಯುವ ವಿಷಯ, ಮತ್ತು ಜೀವನಾಂಶಕ್ಕೆ ಸಂಬಂಧಿಸಿದ ವಿಷಯ, ಮಸೂದೆಯ ಭಾಗಗಳಾದ ವಿವಾಹ, ಅವಿಭಕ್ತ ಕುಟುಂಬದ ಆಸ್ತಿ ಮತ್ತು ಉಯಿಲು ಬರೆಯದೇ ಸತ್ತವರ ಆಸ್ತಿಗೆ ಉತ್ತರಾಧಿಕಾರ, ಇವುಗಳಿಗೆ ಸಂಬಂಧಿಸಿದಂತೆ ಮಾತ್ರ ಏನೋ ಸ್ವಲ್ಪ ವಿರೋಧ ಬಂದಿದೆ, ಮಸೂದೆಯ

ಈ ಭಾಗಗಳಿಗೆ ಸಂಬಂಧಿಸಿದಂತೆಯೂ ವಿರೋಧವು ಕೇಂದ್ರೀಕೃತವಾಗಿರುವುದು ಒಂದೋ ಎರಡೋ ವಿಷಯಗಳಿಗೆ ಮಾತ್ರ.

**ಶ್ರೀ ರೋಹಿಣಿ ಕುಮಾರ್ ಚೌಧರಿ :** ಸಭಾನಿಯಮಕ್ಕೆ ಸಂಬಂಧಿಸಿದಂತೆ, ಮಾನ್ಯರೆ, ಇವೆಲ್ಲ ವಿಷಯಗಳನ್ನೂ ತಿದ್ದುಪಡಿಯ ಸಮಯದಲ್ಲಿ ಚರ್ಚಿಸಬಹುದು ಎಂದೂ ತಾವೇ ಅಪ್ಪಣೆ ಕೊಡಿಸಿದಿರಿ.

**ಮಾನ್ಯ ಸಭಾಪತಿಗಳು :** ಸನ್ಮಾನ್ಯ ಸದಸ್ಯರು ಆಸೀನರಾಗುತ್ತಾರೋ ಇಲ್ಲವೋ? ಸದಸ್ಯರು ತಾಳ್ಮೆಯಿಂದಿರಬೇಕು. ಹಾಗೂ ಇತರ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಿರುವಾಗ ಅಡ್ಡಿ ಮಾಡಬಾರದು. ಸನ್ಮಾನ್ಯ ಮಂತ್ರಿಗಳು ಯಾವ ಅಡ್ಡಿ ಆತಂಕಗಳಿಲ್ಲದೆ ಮುಂದುವರಿಯಲು ಬಿಡಬೇಕು; ಒಂದು ವೇಳೆ, ಸನ್ಮಾನ್ಯ ಸದಸ್ಯರು ಏನಾದರೂ ಹೇಳುವುದಿದ್ದರೆ, ಆಮೇಲೆ, ಅಂದರೆ, ಮಸೂದೆ ಚರ್ಚೆಗೆ ಬಂದಾಗ, ಅವರಿಗೆ ಅವಕಾಶ ನೀಡಲಾಗುವುದು.

**ಶ್ರೀ ರೋಹಿಣಿ ಕುಮಾರ್ ಚೌಧರಿ :** ಆದರೆ, ಮಾನ್ಯರೆ, ತಾವು ನಮಗೆ ಅವಕಾಶ ಕೊಡದಿದ್ದರೆ.....

**ಮಾನ್ಯ ಸಭಾಪತಿಗಳು :** ಹೀಗೆ ಅಡ್ಡಿಮಾಡಲು ಬಿಡಬೇಕೆಂದು ನಾನು ತೀರ್ಮಾನಿಸಿಲ್ಲ.

**ಶ್ರೀ ರೋಹಿಣಿ ಕುಮಾರ್ ಚೌಧರಿ :** ನನ್ನ ನಿಲುವನ್ನು ವಿವರಿಸಲು......

**ಮಾನ್ಯ ಸಭಾಪತಿಗಳು :** ನಿಮ್ಮ ನಿಲುವನ್ನು ವಿವರಿಸಲು ಬಿಡುವುದೆಂದರೆ, ಮತ್ತೆ ನಿಮ್ಮ ಪ್ರತಿಯೊಂದು ವಾಕ್ಯಕ್ಕೂ ಉತ್ತರ ಕೊಡಬೇಕೆಂದರ್ಥ. ಆ ತರಹದ ಯಾವುದಕ್ಕೂ ನಾನು ಅವಕಾಶ ಕೊಡುವುದಿಲ್ಲ (ಮತ್ತೆ ಅಡ್ಡಿ). ಮಾನ್ಯ ಸದಸ್ಯರು ಈಗ ಅಡ್ಡಿ ಮಾಡಕೂಡದು; ಅಂದರೆ ಮಾತ್ರ, ಅಡ್ಡಿ ಆತಂಕಗಳ ಬಗ್ಗೆ, ಸಭಾ ನಿಯಮೋಲ್ಲಂಘನೆ ಎತ್ತಿ ತೋರಿಸುವ ಬಗ್ಗೆ, ಸಲಹೆಸೂಚನೆಗಳ ಬಗ್ಗೆ, ನಾನು ಕಠಿಣ ಕ್ರಮ ಪ್ರಾಯಶಃ ತೆಗೆದುಕೊಳ್ಳಬೇಕಾಗುವುದಿಲ್ಲ. ಆದರೆ ಸೂಚನೆಯನ್ನು......

**ಶ್ರೀ ಎಚ್. ವಿ. ಕಾಮತ್** (ಮ.ಪ್ರಾಂ. ಮತ್ತು ಬೆರಾರ್ : ಸಾಮಾನ್ಯ) : ಮಾನ್ಯರೆ, ಈ ಮಸೂದೆ ಮತ್ತೆ ಪರಿಶೀಲನೆಗೆ ನಮ್ಮ ಮುಂದೆ ಬರುತ್ತದೆ ಎಂದು ತಾವು ಹೇಳಿದಿರಾ?

**ಮಾನ್ಯ ಸಭಾಪತಿಗಳು :** ವಿಭಾಗಗಳಷ್ಟೇ ಪರಿಶೀಲನೆಗೆ ಬರುತ್ತವೆ.

**ಡಾ॥ ಪಟ್ಟಾಭಿ ಸೀತಾರಾಮಯ್ಯ** (ಮದ್ರಾಸ್ : ಸಾಮಾನ್ಯ ) : ಸಭ್ಯ ರೀತಿಯಲ್ಲಿ ನಾನೊಂದು ಸಣ್ಣ ಸಲಹೆ ನೀಡಬಹುದೆ? ಪರಿಶೀಲನಾ ಸೂಚನೆಯ ಪ್ರಶ್ನೆಯನ್ನು ಅಂಗೀಕರಿಸುವುದರಿಂದ, ನನ್ನ ಸಲಹೆಯನ್ನು ಚರ್ಚಿಸಬಹುದು, ಬಿಡಬಹುದು. ಆದುದರಿಂದ, ಮಸೂದೆಯನ್ನು ವಹಿಸಿಕೊಂಡಿರುವ ಮಾನ್ಯ ಮಂತ್ರಿಗಳು ಯಾವ ಹೇಳಿಕೆ ನೀಡುತ್ತಾರೋ ಆ ಹೇಳಿಕೆ ಅಬಾಧಿತವಾಗಿ ಸ್ವೀಕೃತವಾಗುತ್ತದೆ. ಎಲ್ಲಿಯವರೆಗೆ ಅವರ ಹೇಳಿಕೆಗಳು ಅಬಾಧಿತವಾಗಿರುತ್ತವೆಯೋ ಮತ ಸಂಗ್ರಹ ಅಲ್ಲಿಯವರೆಗೆ ಸಾಧ್ಯವಿಲ್ಲ. ಸೂಚನೆಯನ್ನು ಮಂಡಿಸಿದ ಮಾನ್ಯ ಸದಸ್ಯರು ಅನೇಕ ಗಂಟೆಗಳಿಂದ ಅನುಪಸ್ಥಿತರಿದ್ದಾರೆ ಹಾಗೂ ಮಸೂದೆಯ ಬಗ್ಗೆ ಏನು ಹೇಳಲಾಯಿತು, ಏನು ಹೇಳಲಾಗಿಲ್ಲ ಎಂಬ ಮಾಹಿತಿಯನ್ನೂ ಅವರಿಗೆ ಯಾರಿಗೂ ನೀಡಿಲ್ಲ. ಉದಾಹರಣೆಗೆ, ಅವರು ದತ್ತು ಸ್ವೀಕಾರದ ಬಗ್ಗೆ ಯಾವುದೇ ವಿರೋಧವಿಲ್ಲ ಎನ್ನುತ್ತಾರೆ. ಆದರೆ ಇಲ್ಲೊಬ್ಬ ಸಭ್ಯರು ಎದ್ದು ನಿಂತು, ತಾವು ಆ ನಿಬಂಧನೆಗಳನ್ನು ವಿರೋಧಿಸಿದುದಾಗಿ ಹೇಳುತ್ತಾರೆ. ಆದುದರಿಂದ ಮಾನ್ಯ ಮಂತ್ರಿಗಳು ತಮ್ಮ ಉತ್ತರವನ್ನು ವಾದಗ್ರಸ್ತವನ್ನಾಗಿ ಮಾಡಬಾರದೆಂದು ವಿನಂತಿಸಿಕೊಳ್ಳುತ್ತೇನೆ.

**ಮಾನ್ಯ ಸಭಾಪತಿಗಳು :** ಮಾನ್ಯ ಮಂತ್ರಿಗಳನ್ನು ನಾನು ಅರ್ಥ ಮಾಡಿಕೊಂಡಿರುವಂತೆ ಅವರು ಕೇವಲ ತಮ್ಮ ಅಭಿಪ್ರಾಯಗಳ ಸಾರಾಂಶವನ್ನು ಕೊಡಲು ಪ್ರಯತ್ನಿಸುತ್ತಿದ್ದಾರಷ್ಟೆ.

**ಡಾ॥ ಪಟ್ಟಾಭಿ ಸೀತಾರಾಮಯ್ಯ :** ಇಲ್ಲ.

**ಮಾನ್ಯ ಸಭಾಪತಿಗಳು :** ಸದ್ದು, ಸದ್ದು. ಮಾನ್ಯ ಸದಸ್ಯರು ಮಧ್ಯೆ ಮಾತಾಡದಿರಲಿ. ಮಾನ್ಯ ಮಂತ್ರಿಗಳಿಗೆ ತಮ್ಮ ಅಭಿಪ್ರಾಯಗಳನ್ನು ಸದನದ ಮುಂದಿಡುವ ಪೂರ್ಣ ಹಕ್ಕಿದೆ. ಅವರ ಅಭಿಪ್ರಾಯ ಸರಿಯಿರಬಹುದು, ತಪ್ಪಿರಬಹುದು. ಆದುದರಿಂದ ಅವರು ಉತ್ತರ ಹೇಳುತ್ತಿರುವಾಗ, ಅದರ ಯೋಗ್ಯತೆಗನುಗುಣವಾಗಿ, ನೀವು ಕೇಳಿಸಿಕೊಳ್ಳಬೇಕು. ಮಾನ್ಯ ಸದಸ್ಯರು ತಕ್ಷಣವೇ ಎದ್ದು 'ಈ ಹೇಳಿಕೆ ತಪ್ಪು ಆ ಹೇಳಿಕೆ ತಪ್ಪು' ಎನ್ನಬಾರದು, ಏಕೆಂದರೆ ಆಗ ನಾವು ವಾದವಿವಾದದ ಕಡೆಗೆ ತೇಲಿಹೋಗಬೇಕಾಗುತ್ತದೆ. ಅವರು ಹೇಳುವುದನ್ನು ಕೇಳೋಣ. ಪ್ರಜಾಪ್ರಭುತ್ವದ ಅತ್ಯುತ್ತಮ ವಿಧಾನವೆಂದರೆ, ಎದುರಾಳಿಯ ಬಗ್ಗೆ ತಾಳ್ಮೆಯಿಂದಿರುವುದು.

**ಶ್ರೀ ರೋಹಿಣಿ ಕುಮಾರ್ ಚೌಧರಿ :** ತಪ್ಪು ಹೇಳಿಕೆಗಳಿಗೆ ನಾವು ಉತ್ತರ ಕೊಡಬೇಡವೆ?

**ಮಾನ್ಯ ಸಭಾಪತಿಗಳು :** ಈಗ ಉತ್ತರ ಬೇಡ. ಏಕೆಂದರೆ ಮಸೂದೆಯ ಪ್ರತಿಯೊಂದು ವಿಭಾಗವನ್ನು ಓದುವಾಗ ವಿರೋಧ ಪಕ್ಷದವರಿಗೆ ಅವಕಾಶ ನೀಡಲಾಗುವುದು.

**ಶ್ರೀ ರೋಹಿಣಿ ಕುಮಾರ್ ಚೌಧರಿ :** ಹಾಗಾದರೆ ಅವರಿಗೂ ಒಂದು ಅವಕಾಶ ಸಿಕ್ಕುತ್ತದೆ.

**ಮಾನ್ಯ ಸಭಾಪತಿಗಳು :** ಮಾನ್ಯ ಸದಸ್ಯರು ಈಗಲೂ ಅಡ್ಡಿಮಾಡಿದರೆ, ನಾನದನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತೇನೆಂಬ ಭಯ ನನಗಿದೆ. ಯಾವ ರೀತಿಯ ಮಧ್ಯಪ್ರವೇಶವೂ ಇರಕೂಡದು, ಯಾವ ರೀತಿಯ ಅಡ್ಡಿಯೂ ಇರಕೂಡದು; ಯಾವ ಟೀಕೆಯೂ ಇರಕೂಡದು. ಕಾನೂನು ಮಂತ್ರಿಗಳಿಗೆ ಮುಂದುವರಿಯುವ, ಹಾಗೂ ಸಂಗತಿಗಳ ಬಗ್ಗೆ ತಮಗೆ ಸರಿ ಎಂದು ಕಂಡುಬಂದಂತಹ ವ್ಯಾಖ್ಯಾನ ನೀಡುವ ಮತ್ತು ಅವುಗಳನ್ನು ಅರ್ಥಮಾಡಿಕೊಳ್ಳುವ ಹಕ್ಕಿದೆ. ಅವರ ಅಭಿಪ್ರಾಯಗಳನ್ನು ನಾವು ಒಪ್ಪದಿರಬಹುದು. (ಮತ್ತೆ ಕೆಲವರು ಅಡ್ಡಿಮಾಡುತ್ತಾರೆ). ಸದ್ದು, ಸದ್ದು. ಈಗ ಯಾವ ಉತ್ತರವೂ ಬೇಡ, ವಾದವೂ ಬೇಡ. ಯಾರೂ ಅಡ್ಡಿ ಮಾಡಿಕೊಡದೆಂದೂ ನಾನು ತೀರ್ಮಾನಿಸಿದ್ದೇನೆ. ಈಗ ಮಾನ್ಯ ಕಾನೂನು ಮಂತ್ರಿಗಳು ಮುಂದುವರಿಸಬಹುದು.

**ಸನ್ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ಈ ಹಿಂದೆ ಹೇಳುತ್ತಿದ್ದಂತೆ, ಮಸೂದೆಯ ಐದು ಭಾಗಗಳಿಗೆ ಹೆಚ್ಚೂ ಕಡಿಮೆ ಯಾವ ವಿರೋಧವೂ ಇಲ್ಲ. ಮೂರು ಭಾಗಗಳಾದ ವಿವಾಹ, ಅವಿಭಕ್ತ ಕುಟುಂಬದ ಆಸ್ತಿ ಮತ್ತು ಉಯಿಲು ಬರೆಯದೇ ಸತ್ತವರ ಆಸ್ತಿಗೆ ಉತ್ತರಾಧಿಕಾರಿಗಳಿಗೆ ಸಂಬಂಧಿಸಿದಂತೆ, – ಈ ಮಸೂದೆಯನ್ನು ವಿರೋಧಿಸುತ್ತಿರುವವರ ಧೋರಣೆಯನ್ನು ನಾನು ಅರ್ಥ ಮಾಡಿಕೊಂಡಿರುವ ಮೇರೆಗೆ ಅವರ ವಿರೋಧ ಆ ಭಾಗಗಳ ಕೆಲವು ಅಂಶಗಳ ಮೇಲೆ ಕೇಂದ್ರೀಕೃತವಾಗಿದೆಯೇ ಹೊರತು ಆ ಭಾಗಗಳ ಎಲ್ಲಾ ಅಂಶಗಳ ಮೇಲೂ ಅಲ್ಲ. ವಿವಾಹಕ್ಕೆ ಸಂಬಂಧಿಸಿದಂತೆ ಅವರ ವಿರೋಧವೂ ವಿಚ್ಛೇದನದ ವಿಷಯದ ಮೇಲೆ ಕೇಂದ್ರೀಕೃತವಾಗಿದೆ. ಅವಿಭಕ್ತ ಕುಟುಂಬ ಕಾಣುತ್ತದೆ. ಉಯಿಲು ಬರೆಯದೇ ಸತ್ತವರ ಆಸ್ತಿಯ ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ಅವರ ವಿರೋಧವು ಮಗಳಿಗೆ ಕೊಡುವ ಪಾಲಿನ ಮೇಲೆ ಕೇಂದ್ರಿಕೃತವಾಗಿರುವಂತೆ ಕಾಣುತ್ತದೆ. ಆದುದರಿಂದ ಚರ್ಚೆಗೂ, ಮಸೂದೆಯನ್ನು ವಿರೋಧಿಸುವವರಿಗೂ ಪೂರ್ಣ ಉತ್ತರ ಕೊಡಬೇಕಾಗಿದ್ದರೆ, ನಾನು ಈ ಮೂರು ವಿಷಯಗಳ ಮೇಲೆ, ಅಂದರೆ, ವಿಚ್ಛೇದನ, ವಾರಸುದಾರ ನಿಯಮ ಮತ್ತು ಮಗಳ ಪಾಲು, ಇವುಗಳ ಮೇಲೆ, ನನ್ನ ಉತ್ತರವನ್ನು ಕೇಂದ್ರೀಕರಿಸಿದರೆ ಸಾಕು. ಮಸೂದೆಯ ಈ ಮೂರು ವಿಷಯಗಳಿಗೆ ಸಂಬಂಧಿಸಿದ ನಿಬಂಧನೆಗಳನ್ನು ಸಮರ್ಥಿಸಿಕೊಳ್ಳಲು ನಾನು ಸಾಕಷ್ಟು ಸಿದ್ಧತೆ ಮಾಡಿಕೊಂಡಿದ್ದೆ. ಆದರೆ ಮಾನ್ಯ ಪ್ರಧಾನ ಮಂತ್ರಿಗಳ ನೀಡಿರುವ ಹೇಳಿಕೆಯನ್ನು ಗಮನದಲ್ಲಿಟ್ಟುಕೊಂಡು ಈಗ ಯಾವುದೇ ವಿವಾದಕ್ಕಿಳಿಯುವುದು

ಅನಾವಶ್ಯಕವೆಂದುಕೊಂಡಿದ್ದೇನೆ. ಮಾನ್ಯ ಪ್ರಧಾನ ಮಂತ್ರಿಗಳು ನೀಡಿರುವ ಸಲಹೆಯನ್ನು ಸ್ವಾಗತಿಸುತ್ತೇನೆ ಮತ್ತು ಅವರು ನೀಡಿರುವ ಸಲಹೆಯನ್ನು ಪೂರ್ಣ ಪರೀಕ್ಷೆಗೆ ಒಳಪಡಿಸಲು ಕ್ರಮ ತೆಗೆದುಕೊಳ್ಳುತ್ತೇನೆ. ಆದುದರಿಂದ, ಈ ಹಂತದಲ್ಲಿ ಈ ವಿಷಯಗಳಿಗೆ ಸಂಬಂಧಿಸಿದಂತೆ ವಿವರವಾದ ಉತ್ತರವನ್ನು ಕೊಡಬೇಕೆಂದು ನಾನು ತೀರ್ಮಾನಿಸಿಲ್ಲ. ಮಾನ್ಯರೆ, ನೀವು ಸೂಚಿಸಿರುವಂತೆ, ನಾನು ನನ್ನ ಉತ್ತರವನ್ನು ಮುಂದಿನ ಹಂತಕ್ಕೆಂದು ಮೀಸಲಿರಿಸಿದ್ದೇನೆ.

ದೇಶವು ಯಾವ ಪರಿಸ್ಥಿತಿಯಲ್ಲಿದೆ ಎಂಬುದರ ಬಗ್ಗೆ ಸದನಕ್ಕೆ ಅರಿವು ಮೂಡಿಸಲು ನಾನು ಆವಶ್ಯಕವೆಂದು ತಿಳಿದು ಪ್ರಸ್ತಾಪಿಸಬೇಕಾದ ಒಂದೇ ಒಂದು ವಿಷಯ ಉಳಿದಿದೆ. ಭಾರತವು ಒಂದು ರಾಷ್ಟ್ರ ಮತ್ತು ಒಂದು ಗಣರಾಜ್ಯವಾಗಿ ಏಕೀಕೃತವಾದುದರಿಂದ, ಅದು ತನ್ನ ಪರಿಧಿಯಲ್ಲಿ ಹಿಂದೂ ಕಾನೂನಿಗೆ ಸಂಬಂಧಿಸಿದ ವಿವಿಧ ರೀತಿಯ ನಿಯಮಾವಳಿಗಳನ್ನು ತಂದುಕೊಂಡಿರುವುದು ಎಲ್ಲರ ಗಮನಕ್ಕೆ ಬಂದ ವಿಷಯ. ಬರೋಡಾ ರಾಜ್ಯದಲ್ಲಿರುವ ಹಿಂದೂ ನಿಯಮಾವಳಿಯು ಭಾರತದ ಇತರ ಪ್ರಾಂತ್ಯಗಳಲ್ಲಿ ಜಾರಿಯಲ್ಲಿರುವ ಹಿಂದೂ ಕಾನೂನಿಗಿಂತ ಭಿನ್ನವಾಗಿದೆ. ಈಗ ಆ ರಾಜ್ಯ ಮುಂಬಯಿ ಪ್ರಾಂತ್ಯದ ಒಂದು ಅವಿಭಾಜ್ಯ ಅಂಗವಾಗಿದೆ. ಅದೇ ರೀತಿ, ತಿರುವಾಂಕೂರು ಮತ್ತು ಕೊಚ್ಚಿ, ನಮಗೆ ತಿಳಿದಿದ್ದ ೧೯೩೫ರ ಭಾರತ ಸರ್ಕಾರದ ಶಾಸನದ ಮೇರೆಗೆ ಭಾರತದ ಗಡಿಯಿಂದ ಹೊರಗಿದ್ದವು ಹಾಗೂ ಭಾರತದ ಸಾರ್ವಭೌಮತ್ವಕ್ಕೆ ಒಳಪಟ್ಟಿರಲಿಲ್ಲ. ಆದರೆ ಈಗ ಅವು ಭಾರತದ ಅವಿಭಾಜ್ಯ ಅಂಗವಾಗಿದೆ. ಸ್ತ್ರೀಯರ ಆಸ್ತಿಯ ಹಕ್ಕಿಗೆ ಸಂಬಂಧಿಸಿದಂತೆ ಮೈಸೂರು ಸಂಸ್ಥಾನಕ್ಕೆ ತನ್ನದೇ ಆದ ಹಿಂದೂ ನಿಯಮಾವಳಿ ಇತ್ತು. ಹಾಗೂ ಅದು ಬ್ರಿಟಿಷ್ ಭಾರತದ ಇತರ ಪ್ರಾಂತ್ಯಗಳಲ್ಲಿದ್ದ ಕಾನೂನಿಗಿಂತ ಸಾಕಷ್ಟು ಭಿನ್ನವಾಗಿತ್ತು. ಈಗ ಮೈಸೂರು ಸಹ ಭಾರತದ ಅವಿಭಾಜ್ಯ ಅಂಗವಾಗಿದೆ. ಆದುದರಿಂದ ೧೯೫೦ರ ಜನವರಿ ೨೬ರಂದು ಗಣರಾಜ್ಯ ಉದ್ಘಾಟನೆಯಾದಾಗ, ಹಿಂದೂ ಕಾನೂನಿನ ವಿವಿಧ ಪದ್ಧತಿಗಳನ್ನು ನಾವು ಎದುರಿಸಬೇಕಾಗುತ್ತದೆ. ಹಾಗೂ ನಮ್ಮ ಅತ್ಯುತ್ತಮ ಪ್ರಯತ್ನದ ಮೂಲಕ ಅವುಗಳಲ್ಲಿ ಹೊಂದಾಣಿಕೆ ಮೂಡಿಸಬೇಕಾಗುತ್ತದೆ. ಈಗ ಉದಾಹರಣೆಗೆ, ಮುಂಬಯಿ ಪ್ರಾಂತ್ಯದಲ್ಲಿ, ಈಗ ನಾವು ಬರೋಡಾ ಎಂದು ಕರೆಯುವ ಮತ್ತಿತರ ಪ್ರದೇಶಗಳಿವೆ. ಇವೆರಡೂ ಪ್ರದೇಶಗಳು ಒಂದೇ ಪ್ರಾಂತ್ಯದಲ್ಲಿ ಮತ್ತು ಒಂದೇ ರಾಷ್ಟ್ರದಲ್ಲಿ ಅವುಗಳ ಅವಿಭಾಜ್ಯ ಭಾಗವಾಗಿರುವಾಗ, ಮುಂಬಯಿ ಪ್ರಾಂತ್ಯದ ಹಿಂದೂ ಕಾನೂನಿನ ಎರಡು ಪದ್ದತಿಗಳನ್ನು ಬರೋಡಾದಲ್ಲಿ ಒಂದು ಪದ್ಧತಿ, ಉಳಿದ ಪ್ರದೇಶಗಳಲ್ಲಿ ಮತ್ತೊಂದು ಪದ್ಧತಿಯನ್ನು – ಅನ್ವಯಿಸಲು ಹೇಗೆ ಸಾಧ್ಯ? ಈ ಸಮಸ್ಯೆ ಉಳಿದ ರಾಜ್ಯಗಳಿಗೂ ಅನ್ವಯಿಸುತ್ತದೆ. ಈಗ ಪೋರ್ಚುಗೀಸರ ಅಥವಾ ಫ್ರೆಂಚರ ಸಾರ್ವಭೌಮತ್ವಕ್ಕೆ ಒಳಪಟ್ಟಿರುವ ಭಾರತದ ಕೆಲವು ಪ್ರಾಂತ್ಯಗಳಿವೆ; ಅವುಗಳನ್ನು ನಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತೇವೆ ಎಂದು ಊಹಿಸೋಣ. ಅಲ್ಲಿಯೂ ಹಿಂದೂ ಕಾನೂನಿನ ಬೇರೆ ಬೇರೆ ಪದ್ಧತಿಗಳಿವೆ. ಅವು ನಮ್ಮ ವಶಕ್ಕೆ ಬಂದಾಗ, ನಮಗೆ ಅದೇ ಸಮಸ್ಯೆ ಎದುರಾಗುತ್ತದೆ. ಆಗ ಗೋವಾದಲ್ಲಿರುವ ಹಿಂದೂಗಳ ಹಿಂದೂ ಕಾನೂನಿಗೆ ಏನಾಗುತ್ತದೆ? ಅವರ ಕಾನೂನನ್ನು ಹಾಗೆ ಮುಂದುವರಿಯಲು ನಾವು ಬಿಡಬೇಕೆ? ಅಥವಾ ಈಗ ನಮ್ಮಲ್ಲಿ ಜಾರಿಯಲ್ಲಿರುವ ಹಿಂದೂ ಕಾನೂನನ್ನು ಅವರ ಮೇಲೆ ಹೇರಬೇಕೆ? ಅಥವಾ ನಮಗೂ ಅವರಿಗೂ ಒಪ್ಪಿಗೆಯಾಗುವಂಥ ಕಾನೂನು ಪದ್ಧತಿಯನ್ನು ರೂಪಿಸಬೇಕೆ? ಹೀಗೆ, ಭಾರತದ ಏಕೀಕರಣವು ಹಿಂದೂ ಕಾನೂನನ್ನು ಸಮನ್ವಯಗೊಳಿಸುವ ಮತ್ತು ತಿದ್ದುವ ಒಂದು ಸಮಸ್ಯೆಯನ್ನು ಸ್ಪಷ್ಟವಾಗಿ ನಮ್ಮೆದುರಿಗಿಟ್ಟಿದೆ. ಆದುದರಿಂದ, ಸದನಕ್ಕೆ ನಾನು ಸೂಚಿಸುವುದೇನೆಂದರೆ, ಭಾರತ ಗಣರಾಜ್ಯಕ್ಕೆ ಮುಂದೆ ಸೇರಿ, ಅದರ ಪ್ರಜೆಗಳಾಗುವ ವಿವಿಧ ರೀತಿಯ ಜನರಲ್ಲಿ ನಾವು ಸಮನ್ವಯ ಏರ್ಪಡಿಸಬೇಕೆಂದರೆ,

ಈ ಸಮಸ್ಯೆಯನ್ನು ನಾವು ಮುಂದೂಡಬಾರದು, ಕೈಬಿಡಲೂ ಬಾರದು.

**ಡಾ॥ ಬಿ. ಪಟ್ಟಾಭಿ ಸೀತಾರಾಮಯ್ಯ :** ಸಮನ್ವಯ ಮಾಡುವುದಕ್ಕೆ ಒಪ್ಪಿಗೆ ಇದೆ.

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್** : ಹಾಗಾದರೆ, ಮಾನ್ಯರೆ, ನನಗೆ ಬಹಳ ಮುಖ್ಯವೆಂದು ಕಾಣುವ ಮತ್ತೊಂದು ವಿಷಯದ ಬಗ್ಗೆ ಸದನದ ಗಮನವನ್ನು ಸೆಳೆಯಬಯಸುತ್ತೇನೆ. ಸದನವು, ಕೊನೆಯ ಪಕ್ಷ ಈ ಮಸೂದೆಯನ್ನು ವಿರೋಧಿಸುವುದರಲ್ಲಿ ನಿರತರಾಗಿರುವವರು, ಭಾರತೀಯ ಸಂವಿಧಾನದ ಕೆಲವು ನಿಬಂಧನೆಗಳನ್ನು ಸಂಪೂರ್ಣವಾಗಿ ಮರೆತಂತೆ ಕಾಣುತ್ತದೆ. ನಾವು ಅಂಗೀಕರಿಸಿರುವ ಭಾರತೀಯ ಸಂವಿಧಾನದ ವಿಧಿ ೧೫ (ಮೂಲಭೂತ ಹಕ್ಕುಗಳ ಅಡಿಯಲ್ಲಿ) ಸ್ಪಷ್ಟ ಮತ್ತು ಖಚಿತ ಶಬ್ದಗಳಲ್ಲಿ ಹೀಗೆ ಹೇಳುತ್ತದೆ:

"ಸರ್ಕಾರವು ಯಾವುದೇ ಪ್ರಜೆಯ ವಿಷಯದಲ್ಲೂ ಧರ್ಮ, ಜನಾಂಗ, ಜಾತಿ, ಲಿಂಗ, ಜನ್ಮಸ್ಥಳ ಅಥವಾ ಇವುಗಳಲ್ಲಿ ಯಾವೊಂದರ ಆಧಾರದ ಮೇಲೂ ತಾರತಮ್ಯ ಮಾಡಬಾರದು."

ಹಿಂದೂ ಕಾನೂನುಗಳಲ್ಲಿರುವ ಅನೇಕ ದೋಷಗಳ ಜೊತೆಗೆ ಸವರ್ಣೀಯ ಜಾತಿಗಳು ಮತ್ತು ಶೂದ್ರರಲ್ಲಿ ತಾರತಮ್ಯ ಮಾಡುವಂಥ ಅನೇಕ ತತ್ತ್ವಗಳು ಹಿಂದೂ ಕಾನೂನಿನಲ್ಲಿವೆ ಎಂಬುದು ಹಿಂದೂ ಕಾನೂನನ್ನು ಎಚ್ಚರಿಕೆಯಿಂದ ಅಭ್ಯಾಸಮಾಡಿದವರು ಒಪ್ಪಿಕೊಳ್ಳುವ ಮಾತು. ಅದೇ ರೀತಿ, ಅವರು ಹಿಂದೂ ಪುರುಷ ಮತ್ತು ಹಿಂದೂ ಸ್ತ್ರೀಯರಲ್ಲಿ ತಾರತಮ್ಯ ಮಾಡುತ್ತಾರೆ.

**ಶ್ರೀ ಮಹಾವೀರ ತ್ಯಾಗಿ :** ಹಿಂದೂ ಮತ್ತು ಮುಸ್ಲಿಮರಲ್ಲಿಯೂ ತಾರತಮ್ಯ ಮಾಡುತ್ತಾರೆ !

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್** : ಆದುದರಿಂದ, ಹಿಂದೂ ಕಾನೂನಿನ ಕೆಲವು ಭಾಗಗಳಿಗೂ ಸಂವಿಧಾನದ ನಿಬಂಧನೆಗಳಿಗೂ ಘರ್ಷಣೆಯುಂಟಾಗುತ್ತದೆ ಎಂಬುದು ಸುಸ್ಪಷ್ಟ. ಇದು ಕೇವಲ ಅಧೀನ ಹೇಳಿಕೆ. ಅಲ್ಲಿ ಇನ್ನೂ ಒಂದು ಪರಿಶೀಲಿಸಬೇಕಾದ ಅಂಶವಿದೆ. ವಿಧಿ ೧೫ ಹೇರಿರುವ ಪರಿಮಿತಿಯು ಸಂಸತ್ತೇ ಆಗಲಿ ರಾಜ್ಯ ವಿಧಾನ ಸಭೆಗಳೇ ಆಗಲಿ ಮುಂದೆ ಮಾಡಬಹುದಾದ ಕಾನೂನುಗಳಿಗೆ ಅನ್ವಯಿಸಲೇಬೇಕೆಂಬುದೇನಿಲ್ಲ. ಸಂವಿಧಾನವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ವಿಧಿ ೧೩ರಲ್ಲಿ ಹೀಗೆ ಹೇಳುತ್ತದೆ (ನಾನದನ್ನು ಸದನದ ಮುಂದೆ ಓದುತ್ತೇನೆ) :

"ಈ ಸಂವಿಧಾನ ಪ್ರಾರಂಭವಾಗುವ ಮುನ್ನ ಭಾರತೀಯ ಪ್ರದೇಶಗಳಲ್ಲಿ ಜಾರಿಯಲ್ಲಿದ್ದ ಎಲ್ಲ ಕಾನೂನುಗಳೂ ಒಂದು ವೇಳೆ ಈ ಭಾಗದ ನಿಬಂಧನೆಗಳಿಗೆ ಹೊಂದಿಕೊಳ್ಳದಿದ್ದರೆ, ಅವು ಹೊಂದಿಕೊಳ್ಳುವವರೆಗೆ ರದ್ದಾಗಬೇಕು"

ಆದುದರಿಂದ, ಈ ವಿಷಯವನ್ನು ಒಬ್ಬ ವಕೀಲನಂತೆ ನೋಡಿದಾಗ, ವಿಧಿ ೧೫ರ ನಿಬಂಧನೆಗಳಿಗೆ ಹೊಂದಿಕೊಳ್ಳುವಂತೆ ಹಿಂದೂ ಕಾನೂನನ್ನು ಸಮನ್ವಯಗೊಳಿಸಿ, ತಿದ್ದುವವರೆಗೂ, ನ್ಯಾಯಾಂಗವು ವಿಧಿ ೧೩ರ ದೃಷ್ಟಿಯಿಂದ, ಹಿಂದೂ ಕಾನೂನಿನ ಈ ಭಾಗಗಳು ರದ್ದಾಗಿವೆಯೆಂದು ಘೋಷಿಸುತ್ತದೆ ಎಂಬುದರಲ್ಲಿ ನನಗೆ ಲೇಶ ಮಾತ್ರವೂ ಸಂಶಯವಿಲ್ಲ. ಸಂವಿಧಾನದ ವಿಧಿ ೧೩ನ್ನು ದೃಷ್ಟಿಯಲ್ಲಿಟ್ಟುಕೊಂಡು, ಹಿಂದೂ ಕಾನೂನು ನ್ಯಾಯಾಂಗದ ಸೂಕ್ಷ್ಮ ಪರೀಕ್ಷೆಗೊಳಪಡಬೇಕು ಹಾಗೂ ಹಿಂದೂ ಕಾನೂನಿನ ಭಾಗಗಳು, ಅಂಶ ಅಂಶವಾಗಿ, ಅಂದರೆ ನ್ಯಾಯಾಲಯದ ಮುಂದೆ ಪ್ರಕರಣಗಳು ಬಂದಾಗಲೆಲ್ಲ, ರದ್ದಾಗಿವೆ ಎಂದು ಘೋಷಿಸಬೇಕೆಂದು ಸದನವು ಅಪೇಕ್ಷಿಸುತ್ತದೆಯೇ? ಅಥವಾ, ವಿಧಿ ೧೩ರ ದೃಷ್ಟಿಯಲ್ಲಿ ಹಿಂದೂ ಕಾನೂನಿನ ಕೆಲವು ಭಾಗಗಳು ರದ್ದಾಗಿವೆ ಎಂದು ಘೋಷಿಸುವುದನ್ನು ನ್ಯಾಯಾಂಗಕ್ಕೆ ಬಿಡುವುದರ ಬದಲು, ಸದನವು ಸ್ವತಃ ತಾನೇ ಈ ವಿಷಯವನ್ನು ಕೈಗೆತ್ತಿಕೊಂಡು, ವಿಧಿ ೧೫ಕ್ಕೆ ಹೊಂದಿಕೊಳ್ಳುವಂತೆ ಹಿಂದೂ ಕಾನೂನನ್ನು

ತಿದ್ದಲು ಇಷ್ಟಪಡುತ್ತದೆಯೆ? ನ್ಯಾಯಾಂಗವು ಹಿಂದೂ ಕಾನೂನನ್ನು ಚೂರುಚೂರಾಗಿ ಮುರಿದು ಹಾಕಬಾರದು, ಅದರ ಬದಲು, ಅದು ನಮ್ಮ ಸಂವಿಧಾನಕ್ಕೆ ಹೊಂದಿಕೊಳ್ಳುವಂಥ ಒಂದು ಸಮಗ್ರ ವ್ಯವಸ್ಥೆಯಾಗಬೇಕು ಎಂದು ಸದನವು ಇಚ್ಛಿಸಿದರೆ, ಈ ವಿಷಯದ ಪರಿಶೀಲನೆಯನ್ನು ಮುಂದೂಡುವುದು ಸದನವು ಮಾಡುವ ದೊಡ್ಡ ತಪ್ಪು, ಎಂಬುದು ನನ್ನ ಅರಿಕೆ.

ಮಾನ್ಯರೆ, ನನ್ನ ದೃಷ್ಟಿಯಲ್ಲಿ ಇವು ಬಹಳ ಮುಖ್ಯವಾದ ಪರಿಶೀಲನೆಗಳು. ಆದುದರಿಂದ, ಸದನವು ಈ ವಿಷಯದ ಪರಿಶೀಲನೆಯನ್ನು ಮುಂದೂಡಬಾರದು ಅಥವಾ ಅದನ್ನು ಪರಿಶೀಲಿಸಲು ತಡಮಾಡಬಾರದು. ಆದುದರಿಂದ, ಸದನವು ನನ್ನ ಸೂಚನೆಯನ್ನು ಒಪ್ಪಿಕೊಂಡು, ಈ ಮಸೂದೆಯ ಪರಿಶೀಲನೆಯ ಹಂತವನ್ನು ಮುಂದುವರಿಸುತ್ತದೆ ಎಂದು ನಾನು ಆಶಿಸುತ್ತೇನೆ.

**ಡಾ॥ ಬಿ. ಪಟ್ಟಾಭಿ ಸೀತಾರಾಮಯ್ಯ :** ಮಾನ್ಯರೆ, ಸ್ಪಷ್ಟನೆಗಾಗಿ ನಾನೊಂದು ಪ್ರಶ್ನೆ ಕೇಳಬಹುದೆ? ಸಂವಿಧಾನದ ಒಂದು ವಿಶಿಷ್ಟ ವಿಧಿಗೆ ಹೊಂದಿಕೊಳ್ಳದ ಎಲ್ಲ ನಿಬಂಧನೆಗಳೂ ರದ್ದಾಗುತ್ತವೆ ಎಂದು ಡಾ॥ ಅಂಬೇಡ್ಕರ್ ತಿಳಿಸಿದರು. ಜನವರಿ ೨೬ ರಂದು ಹೊಸ ಸಂವಿಧಾನ ಜಾರಿಗೆ ಬರುವ ದಿನ, ಅವರು ಹೇಳಿದ ಸಂವಿಧಾನದ ವಿಧಿಯು ಜಾರಿಗೆ ಬಂದಾಗ, ಹಿಂದೂ ಕಾನೂನಿನ ಈ ಎಲ್ಲ ಭಾಗಗಳೂ ರದ್ದಾಗಿ, ಅಲ್ಲೊಂದು ಶೂನ್ಯ ಪ್ರದೇಶವೇರ್ಪಡುತ್ತದೆ ಎಂಬುದು ಅವರ ವಾದವೆ? ಹಾಗಿದ್ದರೆ, ಇದಕ್ಕಿಂತ ಹೆಚ್ಚಿನ ಅವಿಚಾರವನ್ನು ಊಹಿಸಿಕೊಳ್ಳಲಾಗುವುದಿಲ್ಲ.

**ಮಾನ್ಯ ಸಭಾಪತಿಗಳು :** ಸದ್ದು, ಸದ್ದು. ಅದು ಸನ್ಮಾನ್ಯ ಸದಸ್ಯರು ಸ್ವಂತ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ.

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್** : ಮಾನ್ಯರೆ, ನನ್ನ ಸ್ನೇಹಿತರಾದ ಡಾ. ಪಟ್ಟಾಭಿ ಸೀತಾರಾಮಯ್ಯನವರ ವಿಷಯವಾಗಿ ನಾನು ಬಹಳ ಆತ್ಮಸಂಯಮದಿಂದ ಇದ್ದೇನೆ ಎಂದು ಹೇಳಬಹುದು. ನಾನು ಹೇಳಬೇಕಾದುದೆಲ್ಲವನ್ನೂ ನಾನು ಒಂದು ವೇಳೆ ಹೇಳಿದ್ದರೆ, ಅವರು ಮೊದಲು ಕೇಳಿಸಿಕೊಳ್ಳಬೇಕಿತ್ತು.

**ಮಾನ್ಯ ಸಭಾಪತಿಗಳು :** ಮೂಲ ಸೂಚನೆಗೆ ಎರಡು ತಿದ್ದುಪಡಿಗಳಿವೆ. ಸೆಲೆಕ್ಟ್ ಸಮಿತಿ ವರದಿ ಮಾಡಿರುವಂತೆ, ಹಿಂದೂ ಕಾನೂನಿನ ಕೆಲವು ನಿರ್ದಿಷ್ಟ ಭಾಗಗಳನ್ನು ತಿದ್ದಿ, ಸಮನ್ವಯಗೊಳಿಸಬೇಕೆಂಬ ಮಸೂದೆಯನ್ನು ಪರಿಶೀಲನೆಗೆ ಕೈಗೆತ್ತಿಕೊಳ್ಳೋಣ. ಮೊದಲು ನಾನು ಸದನಕ್ಕೆ ತಿದ್ದುಪಡಿಗಳನ್ನು ಮಂಡಿಸುತ್ತೇನೆ. ಮೊದಲನೆಯದು ಶ್ರೀ ನಝೀರುದ್ದೀನ್ ಅಹಮ್ಮದ್ ಮಂಡಿಸಿರುವ ತಿದ್ದುಪಡಿ. ಮಸೂದೆಯನ್ನು ಜನರಿಗೆ ಹಂಚಿ, ಆ ಮೂಲಕ, ಅದರ ಮೇಲಿನ ಅವರ ಅಭಿಪ್ರಾಯವನ್ನು ೧೯೪೯ರ ಕೊನೆಯೊಳಗಾಗಿ ಪಡೆಯಬೇಕೆಂದು ಅವರ ತಿದ್ದುಪಡಿ ಕೇಳುತ್ತದೆ. ಆದರೆ ಅವಧಿಯನ್ನು ವಿಸ್ತರಿಸಲು ಈಗಾಗಲೇ ಬಹಳ ತಡವಾಗಿದೆ.

**ಶ್ರೀ ನಝೀರುದ್ದೀನ್ ಅಹಮ್ಮದ್ :** ಮಾನ್ಯರೆ, ನನ್ನ ನಿಲುವೇನೆಂಬುದನ್ನು ನಾನು ಸ್ಪಷ್ಟಪಡಿಸಲೆ?

**ಮಾನ್ಯ ಸಭಾಪತಿಗಳು :** ಬೇಡ. ಈಗ ಪ್ರಶ್ನೆಯೆಂದರೆ :

"ಜನರ ಅಭಿಪ್ರಾಯವನ್ನು ೧೯೪೯ರ ಕೊನೆಯೊಳಗಾಗಿ ಪಡೆಯುವ ಉದ್ದೇಶದಿಂದ ಮಸೂದೆಯನ್ನು ಜನರಲ್ಲಿ ಹಂಚಬೇಕು".

ಈ ಸೂಚನೆ ತಿರಸ್ಕೃತವಾಯಿತು.

**ಮಾನ್ಯ ಸಭಾಪತಿಗಳು :** ಈಗ ಮುಂದಿನ ತಿದ್ದುಪಡಿ. ಇಲ್ಲಿ ಪ್ರಶ್ನೆಯೆಂದರೆ:

"೯–೪–೧೯೪೮ ರಂದು ಕಳಿಸಲಾಗಿದ್ದ ಮೂಲ ಮಸೂದೆಯ ಮೇಲೆ ಮತ್ತೊಂದು ವರದಿಯನ್ನು ಕಳಿಸಬೇಕೆಂದು ಕೇಳಿ, ಮೊದಲಿನ ಸೆಲೆಕ್ಟ್ ಸಮಿತಿಗೇ ಮಸೂದೆಯನ್ನು ಮತ್ತೆ ಕಳಿಸಬೇಕು."

ಈ ಸೂಚನೆಯು ತಿರಸ್ಕೃತವಾಯಿತು.

**ಶ್ರೀ ನಝೀರುದ್ದೀನ್ ಅಹಮ್ಮದ್** : ಮಾನ್ಯರೆ, ನಾನು ಒಪ್ಪುವುದಿಲ್ಲ.

**ಮಾನ್ಯ ಸಭಾಪತಿಗಳು** : ಸರಿ **'ಹೌದು'** ಎನ್ನುವವರು ಐದು ಜನರೂ, **'ಬೇಡ'** ಎನ್ನುವವರು ಉಳಿದವರೆಲ್ಲರೂ ಇರುವಂತೆ ಕಾಣುತ್ತಿದೆ. ಈ ಸೂಚನೆಯು ಬಹುಮತದ ಆಧಾರದ ಮೇಲೆ ಬಿದ್ದುಹೋಗಿದೆ. ನಾನೀಗ ಮೂಲ ಸೂಚನೆಯನ್ನು ತಮ್ಮ ಮುಂದಿಡುತ್ತೇನೆ.

**"**ಸೆಲೆಕ್ಟ್ ಸಮಿತಿ ವರದಿ ಮಾಡಿರುವಂತೆ**,** ಹಿಂದೂ ಕಾನೂನಿನ ಕೆಲವು ನಿರ್ದಿಷ್ಟ ಭಾಗಗಳನ್ನು ತಿದ್ದಿ ಸಮನ್ವಯಗೊಳಿಸಬೇಕೆಂಬ ಮಸೂದೆಯನ್ನು ಪರಿಶೀಲನೆಗೆ ತೆಗೆದುಕೊಳ್ಳೋಣ" ಈ ಮಸೂದೆಯು ಅಂಗೀಕೃತವಾಯಿತು.

**ಪ್ರೊ. ಶಿಬ್ಬನ್ ಲಾಲ್ ಸಕ್ಸೇನಾ** (ಉ.ಪ್ರ : ಸಾಮಾನ್ಯ) : ಮಾನ್ಯರೇ ಅದು **'ಬೇಡ'** ಎಂದವರ ಪರವಾಗಿದೆ.

**ಮಾನ್ಯ ಸಭಾಪತಿಗಳು** : ಹಾಗೆಂದವರ ಸಂಖ್ಯೆ ಆರೋ ಏಳೋ ಇರಬಹುದು. ಸದಸ್ಯರಲ್ಲಿ ಬಹಳಷ್ಟು ಜನ ಸೂಚನೆಯ ಪರವಾಗಿದ್ದಾರೆ.

***ಹಿಂದೂ ವಿವಾಹ ಸಿಂಧುತ್ವ (ತಿದ್ದುಪಡಿ) ಮಸೂದೆ**

(ಭಾಗ ೨ರ ತಿದ್ದುಪಡಿ)

**ಶ್ರೀ ಹಿಮ್ಮತ್ ಸಿಂಕ** (ಪಶ್ಚಿಮ ಬಂಗಾಳ) : ಹಿಂದೂ ವಿವಾಹಸಿಂಧುತ್ವ ಶಾಸನ, ೧೯೪೯ (ಭಾಗ ೨ರ ತಿದ್ದುಪಡಿ) ಎಂಬ ಶಾಸನವನ್ನು ಇನ್ನೂ ತಿದ್ದಲು ಮಸೂದೆಯೊಂದನ್ನು ಮಂಡಿಸಲು ನಾನು ತಮ್ಮ ಅಪ್ಪಣೆ ಕೇಳುತ್ತೇನೆ.

**ಮಾನ್ಯ ಸಭಾಪತಿಗಳು** : ಈಗ ಸಮಸ್ಯೆಯೆಂದರೆ :

**"**ಹಿಂದೂ ವಿವಾಹ ಸಿಂಧುತ್ವ ಶಾಸನ, ೧೯೪೯ (ಭಾಗ ೨ರ ತಿದ್ದುಪಡಿ) ಎಂಬ ಶಾಸನವನ್ನು ಇನ್ನೂ ತಿದ್ದಲು ಮಸೂದೆಯನ್ನು ಮಂಡಿಸಲು ಅಪ್ಪಣೆ ಕೊಡಬೇಕೆ ?**"**

ಈ ಸೂಚನೆಯನ್ನು ಅಂಗೀಕರಿಸಲಾಯಿತು.

**ಶ್ರೀ ಹಿಮ್ಮತ್ ಸಿಂಕ್** : ನಾನು ಮಸೂದೆಯನ್ನು ಮಂಡಿಸುತ್ತೇನೆ.

***ಹಿಂದೂ ಸಂಹಿತೆ**

**ಮಾನ್ಯ ಸಭಾಪತಿಗಳು** : ಈಗ ನಾವು ಕಾರ್ಯಕ್ರಮದ ಮುಂದಿನ ಘಟ್ಟಕ್ಕೆ, ಅಂದರೆ, ಡಾ॥ ಅಂಬೇಡ್ಕರರ ಸೂಚನೆಗೆ ಬರಬಹುದು; ಅದೆಂದರೆ: ಸೆಲೆಕ್ಟ್ ಸಮಿತಿ ವರದಿ ಮಾಡಿರುವಂತೆ ಹಿಂದೂ ಕಾನೂನಿನ ಕೆಲವು ನಿರ್ದಿಷ್ಟ ಭಾಗಗಳನ್ನು ತಿದ್ದಿ, ಸಮನ್ವಯಗೊಳಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಅನೇಕ ತಿದ್ದುಪಡಿಗಳಿವೆ. ಈಗ ಸದಸ್ಯರನ್ನು ಒಬ್ಬೊಬ್ಬರನ್ನಾಗಿ ಆಮಂತ್ರಿಸುತ್ತೇನೆ.

———————

**ಶ್ರೀ ತ್ಯಾಗಿ** (ಉತ್ತರ ಪ್ರದೇಶ) : ಸದನಕ್ಕೆ ಮೊದಲು ತಿಳಿಸದೆಯೇ ಏಕಾಏಕಿ ಈ ವಿಚಾರವನ್ನು ಮಂಡಿಸುತ್ತಿದ್ದೀರಿ. ಸದಸ್ಯರಿಗೆ ಸ್ವಲ್ಪ ಕಾಲಾವಕಾಶ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು.

---

* C.A. (Leg) D, Voel. VI, pt ii, ೧೨ನೇ ಡಿಸೆಂಬರ್, ೧೯೫೦ ಪುಟ ೬೧೪–೨೧.

* C.A. (Leg) D, Voel. VI, pt ii, ೧೪ನೇ ಡಿಸೆಂಬರ್, ೧೯೫೦ ಪುಟ ೭೮೦–೯೩.

**ಮಾನ್ಯ ಸಭಾಪತಿಗಳು** : ಸದ್ದು, ಸದ್ದು. ಒಬ್ಬರಾದ ಮೇಲೊಬ್ಬರು. ಈ ವಿಚಾರವಾಗಿ ಮಾನ್ಯ ಕಾನೂನು ಮಂತ್ರಿಗಳು ಹೇಳುವುದೇನಾದರೂ ಇದೆಯೆ?

**ಕಾನೂನು ಮಂತ್ರಿಗಳು** (ಡಾ॥ ಅಂಬೇಡ್ಕರ್) : ಅದನ್ನು ಕೈಗೆತ್ತಿಕೊಳ್ಳಬಹುದು.

**ಮಾನ್ಯ ಸಭಾಪತಿಗಳು** : ಸದಸ್ಯರನ್ನು ಆಶ್ಚರ್ಯಗೊಳಿಸಲಾಗಿದೆ ಎಂದು ಯಾರೋ ಸೂಚನೆ ಕೊಟ್ಟಿದ್ದಾರೆ.

**ಡಾ॥ ಅಂಬೇಡ್ಕರ್** : ಹಾಗೆನ್ನಲು ಬರುವುದಿಲ್ಲ, ಏಕೆಂದರೆ, ಮಸೂದೆಯು ಕಳೆದ ಹದಿನೈದು ದಿನಗಳಿಂದಲೂ ಕಾರ್ಯಕ್ರಮದ ಪಟ್ಟಿಯಲ್ಲಿದೆ.

**ಶ್ರೀ ಜೆ. ಆರ್. ಕಪೂರ್** (ಉತ್ತರ ಪ್ರದೇಶ) : ಆದರೆ ಮಸೂದೆಯ ಪರಿಶೀಲನೆಯಲ್ಲಿ ಆಸಕ್ತಿಯಿದ್ದವರು ದೂರಬಹುದು. ಶ್ರೀಮತಿ ರೇಣುಕಾ ರೇ ಮತ್ತು ಆಸಕ್ತಿಯುಳ್ಳ ಇತರರು ಈಗ ಇಲ್ಲಿಲ್ಲ.

**ಮಾನ್ಯ ಸಭಾಪತಿಗಳು** : ನನಗೇನನ್ನಿಸುತ್ತದೆಯೆಂದರೆ, ಅನೇಕ ತಿದ್ದುಪಡಿಗಳಿಗೂ, ಸಭೆಯನ್ನು ಮುಂದೂಡಬೇಕೆಂಬ ಸೂಚನೆಗಳಿಗೂ ಏನಾದರೂ ಆಗಲಿ, ಆದರೆ ಸೂಚನೆಗಳನ್ನು ಮಂಡಿಸಿದ ಸದಸ್ಯರೇ ತಮ್ಮ ಆಸನಗಳಲ್ಲಿಲ್ಲ. ಹೀಗೆ ಅನಿರೀಕ್ಷಿತವಾಗಿ ವಿಷಯವನ್ನು ಕೈಗೆತ್ತಿಕೊಂಡು ಅವರ ಹೆಸರನ್ನು ಕರೆಯುವುದು ಸರಿಯೆ ಅಥವಾ ನ್ಯಾಯವೆ ಎಂದು ನಾನು ಯೋಚಿಸುತ್ತಿದ್ದೇನೆ. ಅದೊಂದೇ ವಿಷಯ ನನ್ನನ್ನು ಚಿಂತೆಗೀಡು ಮಾಡಿರುವುದು. ಶ್ರೀ ರೋಹಿಣಿ ಕುಮಾರ್ ಚೌಧರಿ ಹಾಜರಿರುವುದು ನನಗೆ ಕಂಡುಬರುತ್ತಿದೆ. ಶ್ರೀ ನಝೀರುದ್ದೀನ್ ಅಹಮ್ಮದ್ ಇರುವುದನ್ನೂ ನಾನು ಗಮನಿಸಿದ್ದೇನೆ.

**ಶ್ರೀ ಆರ್.ಕೆ. ಚೌಧರಿ** (ಅಸ್ಸಾಂ) : ನಮಗೆ ಅರ್ಧ ಗಂಟೆಯ ಕಾಲಾವಕಾಶ ಕೊಡಿ, ಅಷ್ಟರೊಳಗೆ ಉಳಿದ ಸದಸ್ಯರೂ ಬರಬಹುದು.

**ಮಾನ್ಯ ಸಭಾಪತಿಗಳು** : ಹಾಗಾದರೆ ನಾವು ಮುಂದುವರಿಸೋಣ. ಈಗ ನಾನು ಶ್ರೀ ನಾಸಿರುದ್ದೀನ್ ಅಹ್ಮದರನ್ನು ಕರೆಯುತ್ತೇನೆ.

**ಪಂಡಿತ್ ಕುಂಜ್ರು** (ಉತ್ತರ ಪ್ರದೇಶ) : ವಿವಿಧ ಹಿತಾಸಕ್ತಿಯುಳ್ಳ ಜನರೊಡನೆ ಗೋಷ್ಠಿ ನಡೆಸಿರುವ ಕಾನೂನು ಮಂತ್ರಿಗಳ ಹೇಳಿಕೆಯೊಡನೆ ಚರ್ಚೆ ಪ್ರಾರಂಭವಾಗಬೇಕು ಎಂದು ನಾನು ಸೂಚಿಸುತ್ತೇನೆ. ಗೋಷ್ಠಿಯಲ್ಲಿ ನಡೆದ ಚರ್ಚೆಯ ಮೇಲೆ ಅವರು ಸಂಕ್ಷಿಪ್ತ ವರದಿಯೊಂದನ್ನು ತಯಾರಿಸಿ, ಅದನ್ನು ಸುತ್ತೋಲೆಯ ರೂಪದಲ್ಲಿ ಕಳಿಸಿದ್ದಾರೆ. ಆದರೆ, ಗೋಷ್ಠಿಯ ಮೇಲಿನ ಪೂರ್ಣ ವರದಿಯನ್ನೂ ಅವರು ಸಲಹೆ ಮಾಡಿರುವ ತಿದ್ದುಪಡಿಗಳ ಸಾರಾಂಶವನ್ನೂ ಅವರಿಂದಲೇ ಕೇಳಿ ತಿಳಿದುಕೊಳ್ಳಲು ಸದನದ ಎಲ್ಲ ಪಕ್ಷಗಳೂ ಸಂತೋಷಪಡುತ್ತವೆ ಎಂದು ನಾನು ಭಾವಿಸಿದ್ದೇನೆ. ಪ್ರಾಯಶಃ ಇದೇ ಸರಿಯಾದ ಮಾರ್ಗವೆಂದು ನನ್ನ ಅಭಿಪ್ರಾಯ; ಅಲ್ಲದೆ ಇದು ಸದಸ್ಯರಿಗೆ ಸ್ವಲ್ಪ ಕಾಲಾವಕಾಶವನ್ನು ಕೊಡುತ್ತದೆ.

**ಡಾ॥ ಅಂಬೇಡ್ಕರ್** : ಪ್ರಾಯಶಃ ನಾನು ಹೆಚ್ಚು ಹೇಳಬೇಕಾದುದು ಏನೂ ಇಲ್ಲ. ವಿಶೇಷ ಎಚ್ಚರಿಕೆ ವಹಿಸಿ ಹೇಳಿಕೆಯೊಂದನ್ನು ತಯಾರಿಸಿ, ಅಧಿವೇಶನದ ಪ್ರಾರಂಭದ ಸಮಯದಲ್ಲೇ ಅದನ್ನು ಸುತ್ತೋಲೆಯಂತೆ ಸದಸ್ಯರಿಗೆ ಕಳಿಸಲಿ ಎಂಬ ಉದ್ದೇಶದಿಂದ, ತಮಗೆ ಒಪ್ಪಿಸಿದ್ದೇನೆ. ಇದರಿಂದಾಗಿ ಸದಸ್ಯರಿಗೆ ಗೋಷ್ಠಿಯಲ್ಲಿ ಏನು ನಡೆಯಿತು ಎಂಬುದು ಗೊತ್ತಾಗುತ್ತದೆ. ಆದರೆ, ಬೇರೆ ಬೇರೆ ಸದಸ್ಯರು ಬೇರೆ ಬೇರೆ ಭಾಷೆಗಳಲ್ಲಿ ಮಾತನಾಡಿದ ಕಾರಣ, ಗೋಷ್ಠಿಯ ಎಲ್ಲ ವ್ಯವಹಾರಗಳ ಪದಶಃ ದಾಖಲೆಯನ್ನು ತಯಾರಿಸುವುದು ಸಾಧ್ಯವಾಗದಿದ್ದುದಕ್ಕೆ ನನಗೆ ವಿಷಾದವಾಗುತ್ತದೆ. ಕೆಲವರು ಹಿಂದಿಯಲ್ಲಿ ಮಾತಾಡಿದರು, ಕೆಲವರು ಇಂಗ್ಲಿಷಿನಲ್ಲಿ

ಮಾತಾಡಿದರು, ಕೆಲವರು ಮರಾಠಿಯಲ್ಲಿ ಮಾತಾಡಿದರು, ಕೆಲವರು ಗುಜರಾತಿಯಲ್ಲಿ ಮಾತಾಡಿದರು, ಕೆಲವರು ಸಂಸ್ಕೃತದಲ್ಲಿ ಸಹ ಮಾತಾಡಿದರು. ಪದಶಃ ದಾಖಲೆಯನ್ನು ಬರೆದುಕೊಳ್ಳುವುದು ಪೂರ್ಣ ಅಸಾಧ್ಯವಾಗಿತ್ತು. ಕೆಲವರು ಪ್ರಾಯಃ ತಮಿಳು ಭಾಷೆಯಲ್ಲಿ ಸಹ ಮಾತಾಡಿದರು. ಆದುದರಿಂದ ಯಾವುದೇ ಶೀಘ್ರಲಿಪಿಕಾರನಿಗೂ ಪದಶಃ ಬರೆದುಕೊಳ್ಳುವುದು ಪೂರ್ಣ ಅಸಾಧ್ಯವಾಗಿತ್ತು. ಅಲ್ಲದಿದ್ದರೆ, ಅದನ್ನು ನಾನು ಅತಿ ಸಂತೋಷದಿಂದ ಮಾಡುತ್ತಿದ್ದೆ. ಇದರ ಪರಿಣಾಮವಾಗಿ, ಗೋಷ್ಠಿಯಲ್ಲಿ ಚರ್ಚೆಗಾಗಿ ಮಂಡಿಸಿದ ವಿಷಯಗಳನ್ನು, ನಾನೇ, ನನ್ನ ನೆನಪಿನ ಆಧಾರದ ಮೇಲೆ, ಸಂಕ್ಷೇಪಗೊಳಿಸಿ ಬರೆದಿಟ್ಟಿದ್ದೇನೆ. ಈ ವಿಷಯಗಳೆಂದರೆ ಸದನದಲ್ಲಿ ನಡೆದಿದ್ದ ಚರ್ಚೆಯ ವಿವಿಧ ಹಂತಗಳಲ್ಲಿ, ಸದನದ ವಿವಿಧ ವಲಯಗಳಿಂದ ಉದ್ಭವವಾಗಿದ್ದ ವಿಷಯಗಳು. ಈ ವಿಷಯಗಳನ್ನು ಗೋಷ್ಠಿಯಲ್ಲಿದ್ದವರ ಮುಂದಿಟ್ಟು, ಗೋಷ್ಠಿಯನ್ನುದ್ದೇಶಿಸಿ ಮಾತಾಡಿ ಎಂದು ಕೇಳಿಕೊಂಡಾಗ, ಅವರ ಮಾತುಗಳಿಂದ ಬಹುತೇಕ ಭಾಷಣಕಾರರು ಯಾವ ಕಡೆ ಒಲವು ತೋರಿಸುತ್ತಿದ್ದಾರೆಂಬುದನ್ನು ಕಂಡುಕೊಂಡೆ, ಅದರ ಪ್ರಕಾರ, ನಾನು ಮೂಲ ಮಸೂದೆಗೆ ಕೆಲವು ತಿದ್ದುಪಡಿಗಳನ್ನು ಸೂಚಿಸಿದ್ದೇನೆ.

ಮಾನ್ಯರೆ, ಸದಸ್ಯರಿಗೆ ಸಹಾಯಕವಾಗಲಿ ಎಂಬ ಉದ್ದೇಶದಿಂದ, ನಾನು ಹಿಂದೂ ಕಾನೂನಿನ ಎರಡು ಬೇರೆ ಬೇರೆ ಪಾಠಗಳನ್ನು ತಯಾರಿಸಿದ್ದೇನೆಂಬುದನ್ನು ತಾವು ಇಲ್ಲಿ ಸ್ಮರಿಸಬಹುದು. ಒಂದು ಧಾರಾವಾಹಿ ಕ್ರಮದಲ್ಲಿದ್ದು, ಅದರಲ್ಲಿ ಮೂಲ ಪಾಠವಿದೆ. ಹಾಗೂ ಜೊತೆಗೆ ನಾನು ಸೇರಿಸಬೇಕೆಂದಿರುವ ತಿದ್ದುಪಡಿಗಳೂ ಇವೆ. ಇದರಿಂದಾಗಿ ಸದಸ್ಯರಿಗೆ ಮಸೂದೆಯ ಸಮಗ್ರ ದೃಷ್ಟಿ ಸಿಕ್ಕುತ್ತದೆ. ಇದಲ್ಲದೆ, ನಾನು ಎರಡನೆಯ ಪಾಠವೊಂದನ್ನೂ ತಯಾರಿಸಿದ್ದೇನೆ. ಅದರಲ್ಲಿ ಬಲಗಡೆ ಸೆಲೆಕ್ಟ್ ಸಮಿತಿಯ ಮೂಲಪಾಠಗಳ ವಿಭಾಗಗಳಿದ್ದು, ಎಡಗಡೆಯಲ್ಲಿ ತಿದ್ದುಪಡಿಯಾದ ಹೊಸ ನಿಯಮಾವಳಿ ಇದೆ. ಇದರಿಂದಾಗಿ, ಯಾವುದೇ ತಿದ್ದುಪಡಿಯನ್ನು ಸದಸ್ಯರು ಹಳೆಯ ವಿಧಿ ಏನು ಹೇಳುತ್ತದೆ ಎಂಬುದನ್ನೂ ನೋಡಬಹುದು, ಹೊಸ ವಿಧಿ ಏನು ಹೇಳುತ್ತದೆ ಎಂಬುದನ್ನೂ ನೋಡಬಹುದು. ಅನೌಪಚಾರಿಕ ಸಮಿತಿಗಳು ತಿದ್ದಿದ ಹಿಂದೂ ನಿಯಮಾವಳಿಯ ನಿಬಂಧನೆಗಳನ್ನು ಸದನವು ಸರಿಯಾಗಿ ಅರ್ಥಮಾಡಿಕೊಳ್ಳುವಂತೆ ನಾನು ನನಗೆ ಸಾಧ್ಯವಾದ ಸಹಾಯವನ್ನೆಲ್ಲ ಮಾಡಿದ್ದೇನೆಂದು ನನಗನಿಸುತ್ತದೆ. ಯಾವುದೇ ಸನ್ಮಾನ್ಯ ಸದಸ್ಯರು ಪ್ರಶ್ನೆ ಕೇಳಿದರೆ, ನಾನು ಅತಿ ಸಂತೋಷದಿಂದ, ನಾನಾಗಲೇ ಕೊಟ್ಟಿರುವ ಹೇಳಿಕೆಗೆ, ಹೊಸ ವಿಷಯವನ್ನು ಸೇರಿಸುತ್ತೇನೆ.

**ಶ್ರೀ ಜ್ಞಾನಿ ರಾಮ್ :** ಮಾನ್ಯ ಕಾನೂನು ಮಂತ್ರಿಗಳ ಮಸೂದೆಯನ್ನು ಒಂದು ಅಥವಾ ಎರಡು ದಿನ ಚರ್ಚಿಸಲಾಗುವುದು ಎಂದು ಹೇಳಿದ್ದಾರೆ; ಅದನ್ನು ಮುಂದೂಡಲಾಗುವುದು ಎಂದೂ ಹೇಳಿದ್ದಾರೆ.

**ಮಾನ್ಯ ಸಭಾಪತಿಗಳು :** ಪಕ್ಷದ ಸಭೆಯಲ್ಲಿ ಏನು ನಡೆಯಿತು ಎಂಬುದು ನಮಗೆ ಬೇಕಿಲ್ಲ.

**ಶ್ರೀ ಆರ್. ಕೆ. ಚೌಧರಿ :** ಪಕ್ಷದ ಸಭೆಯಲ್ಲಿ ಏನು ನಡೆಯಿತು ಎಂಬುದರ ಬಗ್ಗೆ ಮಾನ್ಯ ಕಾನೂನು ಮಂತ್ರಿಗಳೇ ಒಂದು ಹೇಳಿಕೆ ನೀಡಬಹುದಲ್ಲ.

**ಮಾನ್ಯ ಸಭಾಪತಿಗಳು :** ಸದ್ದು, ಸದ್ದು. ಪಕ್ಷದ ಕಾರ್ಯಕಲಾಪಗಳು ನಮ್ಮ ಮುಂದಿಲ್ಲ.

**ಶ್ರೀ ಶಿವನ್ನ ಪಿಳ್ಳೈ** (ತಿರುವಾಂಕೂರು – ಕೊಚ್ಚಿ) **:** ಪ್ರತಿಯೊಂದು ವಿಭಾಗವನ್ನು ಕುರಿತು ಮಾಡಲಾಗುವ ಚರ್ಚೆ ಈಗ ನಡೆಯುತ್ತದೆಯೋ ಇಲ್ಲವೋ ಎಂಬುದನ್ನೂ ಮಸೂದೆಯ ತತ್ತ್ವಗಳನ್ನು ಕುರಿತ ಸಾಮಾನ್ಯ ಚರ್ಚೆ ಮುಗಿಯಿತೋ ಇಲ್ಲವೋ ಎಂಬುದನ್ನೂ ನಾನು ತಿಳಿದುಕೊಳ್ಳಬಹುದೇ?

**ಮಾನ್ಯ ಸಭಾಪತಿಗಳು :** ಮಸೂದೆಯ ಪ್ರಗತಿಯನ್ನು ಮಾನ್ಯ ಸದಸ್ಯರು ಗಮನಿಸಲಿಲ್ಲವೆಂದು

ಕಾಣುತ್ತದೆ. ಪರಿಶೀಲನಾ ಸೂಚನೆಯು ಅಂಗೀಕರಿಸಲ್ಪಟ್ಟಿದೆ. ಈಗ ಉಳಿದಿರುವುದೆಂದರೆ, ಅದರ ಒಂದೊಂದು ವಿಭಾಗವನ್ನೂ ಕುರಿತು ಚರ್ಚಿಸುವುದು. ಈಗ ನಾನು ಎರಡನೇ ವಿಭಾಗವನ್ನು ಸದನದ ಮುಂದಿಡುತ್ತಿದ್ದೇನೆ. ಆದರೆ ಅದಕ್ಕೂ ಮೊದಲು ಕೆಲವು ತಿದ್ದುಪಡಿಗಳಿವೆ ಅಥವಾ ಚರ್ಚೆಯನ್ನು ಮುಂದೂಡಬೇಕೆಂಬ ಕೆಲವು ಸೂಚನೆಗೆ ಆದ್ಯತೆ ಕೊಟ್ಟು ನಾನು ಶ್ರೀ ನಝೀರುದ್ದೀನ್ ಅಹಮ್ಮದರನ್ನು ಕರೆಯುತ್ತೇನೆ. ಬೇಕಾದರೆ ಅವರು ತಮ್ಮ ಸೂಚನೆಯನ್ನು ಮಂಡಿಸಬಹುದು.

**ಪ್ರಧಾನ ಮಂತ್ರಿಗಳು ಮತ್ತು ವಿದೇಶಾಂಗ ವ್ಯವಹಾರಗಳ ಮಂತ್ರಿಗಳು** (ಶ್ರೀ ಜವಾಹರ್‌ಲಾಲ್ ನೆಹರು) : ಮಾನ್ಯ ಸದಸ್ಯರೊಬ್ಬರು ಒಂದು ನಿರ್ದಿಷ್ಟ ಪ್ರಶ್ನೆಯನ್ನು ಕೇಳಿದರು ಹಾಗೂ, ಮಾನ್ಯರೆ, ಅದಕ್ಕೆ ಉತ್ತರ ಕೊಡುವುದು ಅನಾವಶ್ಯಕವೆಂದು ತಾವು ಹೇಳಿದರೂ, ನಾನು ಸದನದ ಗೌರವಕ್ಕೆ ತಕ್ಕಂತೆ ಉತ್ತರಿಸಬೇಕಾದುದು ನ್ಯಾಯ. ಮಸೂದೆಯ ಪ್ರತಿಯೊಂದು ವಿಭಾಗವನ್ನು ನಾವು ಚರ್ಚಿಸುವುದಾದರೆ, ಈ ಮಸೂದೆಯ ಸದನದ ಬಹಳ ಸಮಯವನ್ನು ತೆಗೆದುಕೊಳ್ಳುತ್ತದೆ. ಇದೊಂದು ವಿವಾದಗ್ರಸ್ತ ವಿಷಯ ಮತ್ತು ಅದರ ಬಗ್ಗೆ ಭಿನ್ನಾಭಿಪ್ರಾಯಗಳು ಇರುತ್ತವೆ. ಆದರೂ ಸರ್ಕಾರವು ಅದು ಬಹಳ ಮುಖ್ಯ ವಿಷಯವೆಂದು ಪರಿಗಣಿಸುತ್ತದೆ. ಆದುದರಿಂದ, ಅದನ್ನು ಈಗಲೇ ಕೈಗೆತ್ತಿಕೊಳ್ಳೋಣ. ಆದರೆ, ಒಂದು ವೇಳೆ ನಾವದನ್ನು ಇಂದೇ ಕೈಗೆತ್ತಿಕೊಂಡರೂ, ಪರಿಸ್ಥಿತಿಗಳನ್ನು ನೋಡಿದರೆ, ಅದನ್ನು ಈ ಅಧಿವೇಶನದಲ್ಲೇ ಮುಗಿಸಲು ಸಾಧ್ಯವಿಲ್ಲ ಎಂಬುದನ್ನೂ ನಾವು ಮನಗಾಣಬೇಕು. ಆದುದರಿಂದ, ಮಾನ್ಯರೆ, ನೀವು ಅಪ್ಪಣೆ ಕೊಟ್ಟರೆ, ನಾವು ಪ್ರಾರಂಭಿಕ ಹಂತವನ್ನು ಕೈಗೆತ್ತಿಕೊಳ್ಳಬೇಕು ಎಂದು ಸರ್ಕಾರ ನಿರ್ಣಯಿಸಿದೆ. ಇದರಲ್ಲಿ ಕೆಲವು ಆಕ್ಷೇಪಗಳೂ ಇವೆ; ಈ ಎಲ್ಲ ಆಕ್ಷೇಪಗಳನ್ನೂ ನಾವು ಹೇಗಾದರೂ ಮಾಡಿ ಪರಿಹರಿಸಿದರೆ, ನಮಗೆ ಎಲ್ಲವೂ ಸ್ಪಷ್ಟವಾಗುತ್ತದೆ. ಅಲ್ಲದಿದ್ದರೆ, ಈ ಅಧಿವೇಶನದಲ್ಲಿ ಸದನದ ಕಾಲವನ್ನು ತೆಗೆದುಕೊಳ್ಳುವುದು ಬೇಡ.

**ಮಾನ್ಯ ಸಭಾಪತಿಗಳು :** ಅಂದರೆ, ತಿದ್ದುಪಡಿಗಳನ್ನೂ ಮುಂದಕ್ಕೆ ಹಾಕುವ ಸೂಚನೆಯನ್ನು ಮೊದಲು ಮುಗಿಸಿ, ಒಂದೊಂದು ವಿಧಿಯನ್ನೂ ಆಮೇಲೆ ಪರಿಶೀಲಿಸಬೇಕು ಎಂಬುದು ಇದರ ಅರ್ಥವೆ?

**ಸಂಸದೀಯ ಕಾರ್ಯಕಲಾಪಗಳ ರಾಜ್ಯ ಮಂತ್ರಿ** (ಶ್ರೀ ಸತ್ಯನಾರಾಯಣ ಸಿನ್ಹಾ) : ಹೌದು, ಅದೇ ಅರ್ಥ.

**ಮಾನ್ಯ ಸಭಾಪತಿಗಳು :** ಈ ದೃಷ್ಟಿಯಿಂದ ನೋಡಿದರೆ, ಮುಂದಕ್ಕೆ ಹಾಕಬೇಕೆಂದು ಸೂಚಿಸುವುದು ಅಗತ್ಯವೆ?

**ಶ್ರೀ ನಝೀರುದ್ದೀನ್ ಅಹಮ್ಮದ್** (ಪಶ್ಚಿಮ ಬಂಗಾಳ) : ಇಲ್ಲ.

**ಮಾನ್ಯ ಸಭಾಪತಿಗಳು :** ಸದಸ್ಯರೂ ಯಾವುದೇ ಭಾಷಣ ಮಾಡದೆ, ತಮ್ಮ ಸೂಚನೆಯನ್ನು ಔಪಚಾರಿಕವಾಗಿ ಮಂಡಿಸಬೇಕು. ಅದರಿಂದಾಗಿ ನಾವು ಇತರೆ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾದೀತು.

**ಶ್ರೀ ನಝೀರುದ್ದೀನ್ ಅಹಮ್ಮದ್ :** ನಾನು ತಮ್ಮ ಅನುಮತಿಯನ್ನು ಬೇಡಿ, ಹೀಗೆ ಮಂಡಿಸುತ್ತೇನೆ:

"ಹಿಂದೂ ನಿಯಮಾವಳಿ ಮಸೂದೆಯ ಮೇಲಿನ ಚರ್ಚೆಯನ್ನು, ಅದೇ ಉದ್ದೇಶದಿಂದ ಕರೆಯಲಾದ ಸಂಸತ್ತಿನ ವಿಶೇಷ ಅಧಿವೇಶನಕ್ಕೆ ಮುಂದೂಡಬೇಕು; ಇದರಿಂದಾಗಿ, ಸದಸ್ಯರಿಗೆ ಈ ಮಸೂದೆಯನ್ನು ಸರ್ಕಾರದ ಇತರ ಅನೇಕ ತಿದ್ದುಪಡಿಗಳನ್ನೂ ಕೂಲಂಕಷವಾಗಿ ಪರಿಶೀಲಿಸಲು ಸಾಧ್ಯವಾಗುತ್ತದೆ."

ನಾನು ಇತರ ವಿಕಲ್ಪಗಳನ್ನು ಮಂಡಿಸಲು ಇಚ್ಛಿಸುವುದಿಲ್ಲ.

**ಮಾನ್ಯ ಸಭಾಪತಿಗಳು :** ಸದಸ್ಯರು ಒಂದು ವಿಶೇಷ ಅಧಿವೇಶನಕ್ಕೆ ಒತ್ತು ಕೊಡುತ್ತಿದ್ದಾರೆಯೆ?

**ಶ್ರೀ ನಝೀರುದ್ದೀನ್ ಅಹಮ್ಮದ್ :** ನಾನು ಕೆಲವು ವಿಷಯಗಳನ್ನು ಸದನದ ಮುಂದಿಡುತ್ತಿದ್ದೇನೆ. ಅವುಗಳನ್ನು ಏನು ಮಾಡಬೇಕೆಂಬುದು ಪೂರ್ಣವಾಗಿ ಸರ್ಕಾರಕ್ಕೆ ಬಿಟ್ಟಿದ್ದು. ಅದಕ್ಕೆ ನಾನು ವಿರೋಧವನ್ನೂ ಮಾಡುವುದಿಲ್ಲ, ಅಡ್ಡಿಯನ್ನೂ ಮಾಡುವುದಿಲ್ಲ.

**ಮಾನ್ಯ ಸಭಾಪತಿಗಳು :** ಈಗ ಪ್ರಶ್ನೆ ಏನೆಂದರೆ, ನಿಮ್ಮ ಸೂಚನೆಯು ಯಾವ ರೀತಿಯದು? ಅವರು ಅದನ್ನು ಮುಂದಿನ ಅಧಿವೇಶನಕ್ಕೆ ಮುಂದೂಡಬೇಕೆನ್ನುತ್ತಾರೆ. ಇದರ ಸಾರಾಂಶ ಅಷ್ಟೇ.

**ಶ್ರೀ ನಝೀರುದ್ದೀನ್ ಅಹಮ್ಮದ್ :** ಹಾಗಾದರೆ, ನಿಮ್ಮ ಅನುಮತಿ ಪಡೆದು, ಬದಲಿ ಸೂಚನೆಯನ್ನು ಮಂಡಿಸುತ್ತೇನೆ. ನಾನು ಮಂಡಿಸುವ ಸೂಚನೆಯೆಂದರೆ:

"ಹಿಂದೂ ನಿಯಮಾವಳಿ ಮಸೂದೆಯ ಮೇಲಿನ ಚರ್ಚೆಯನ್ನು, ಬಜೆಟ್ ಅಧಿವೇಶನದ ಅವಧಿಯಲ್ಲೇ ಮತ್ತೊಂದು ದಿನಾಂಕಕ್ಕೆ ಮುಂದೂಡಬೇಕು"

ಈ ಸೂಚನೆಯು ಯಾವ ರೀತಿಯದಿರಬೇಕೆಂಬುದು ಪೂರ್ಣವಾಗಿ ಸರಕಾರಕ್ಕೆ ಬಿಟ್ಟಿದ್ದು. ಸನ್ಮಾನ್ಯ ಪ್ರಧಾನ ಮಂತ್ರಿಗಳು ಪರಿಸ್ಥಿತಿಯನ್ನು ಸ್ಪಷ್ಟವಾಗಿ ತಿಳಿಸಿದ್ದಾರಲ್ಲದೆ, ನಾವು ಕೆಲವು ಆಕ್ಷೇಪಗಳನ್ನು ಪರಿಶೀಲಿಸಬೇಕೆಂದೂ, ಆಮೇಲೆ, ಸೂಕ್ತ ಸಮಯ ಬಂದಾಗ, ವಿಭಾಗಗಳನ್ನು ಒಂದೊಂದಾಗಿ ಪರಿಗಣಿಸಬೇಕೆಂದೂ ಹೇಳಿದ್ದಾರೆ. ಇದು ನನ್ನ ದೃಷ್ಟಿಯಿಂದ ಬಹಳ ತೃಪ್ತಿಕರವಾಗಿದೆ. ಸೂಕ್ತ ದಿನಾಂಕ ಅಥವಾ ಸಮಯವನ್ನು ಪರಿಶೀಲಿಸಿ ನಿಗದಿಪಡಿಸುವುದು ಈಗ ಸರ್ಕಾರಕ್ಕೆ ಬಿಟ್ಟಿದೆ.

ನಾವು ಮಸೂದೆಯ ತತ್ತ್ವಗಳನ್ನೇನೋ ಒಪ್ಪಿಕೊಂಡೆವು; ಅದರಲ್ಲೇನೂ ಸಂದೇಹವೇ ಇಲ್ಲ. ಆದರೆ ಒಂದು ಷರತ್ತಿನ ಮೇಲೆ, ಸನ್ಮಾನ್ಯ ಕಾನೂನು ಮಂತ್ರಿಗಳು ವಚನ ನೀಡಿದ್ದಾರೆ. ಆ ವಚನ ಗೊತ್ತುವಳಿಗಳಲ್ಲಿ ಸೇರ್ಪಡೆಯಾಗಿಲ್ಲ : ಹಿಂದೂ ಕಾನೂನಿನಲ್ಲಿ ಪರಿಣತಿ ಇರುವಂಥ ಸಾರ್ವಜನಿಕರ ಪ್ರತಿನಿಧಿಗಳ ಅಭಿಪ್ರಾಯಪಡೆದು, ಮಸೂದೆಗೆ ತಿದ್ದುಪಡಿ ಸೂಚಿಸುವುದೇ ಅವರ ವಾಗ್ದಾನ. ನಾನೀಗಾಗಲೇ ತಮ್ಮಲ್ಲಿ ಅರಿಕೆ ಮಾಡಿಕೊಂಡಿರುವಂತೆ, ಸೂಕ್ತ ತಿದ್ದುಪಡಿಯ ಸೂತ್ರಗಳನ್ನು ಸರ್ಕಾರ ಪಡೆಯಲು ಶಕ್ತವಾಗಬೇಕು. ಆ ಸೂತ್ರಗಳನ್ನು ಸದನದ ಮುಂದಿಡಬೇಕು ಮತ್ತು ಅವು ಎರಡು ಪಕ್ಷಗಳಿಗೂ ಸಮ್ಮತವಾಗಬೇಕು, ಎಂಬ ಷರತ್ತಿನ ಮೇಲೆ ಮೊದಲನೆಯ ಓದನ್ನು ಅಂಗೀಕರಿಸಲಾಯಿತು. ಆದರೆ, ಕಾನೂನು ಮಂತ್ರಿಗಳು ಬಹಳ ಮುಖ್ಯವಾದ ಅನೇಕ ತಿದ್ದುಪಡಿಗಳನ್ನು ಮಂಡಿಸಿರುವುದು ನನಗೆ ಕಂಡುಬಂದಿದೆ. ಅದೇ ರೀತಿ ಸದಸ್ಯರೂ ಸಹ ಅನೇಕ ತಿದ್ದುಪಡಿಗಳನ್ನು ಮಂಡಿಸಿರುವುದು ನನಗೆ ಕಂಡಬಂದಿದೆ. ಈಗಾಗಲೇ ನಮ್ಮೆದುರಿಗೆ ೧೭ ಪಟ್ಟಿಗಳಿವೆ, ಮತ್ತು ವಿಭಾಗಗಳನ್ನು ಒಂದೊಂದಾಗಿ ಪರಿಶೀಲಿಸಲು ಸರ್ಕಾರವು ಇನ್ನೊಂದು, ಅಂತಿಮ ಅಧಿವೇಶನವನ್ನು ನಡೆಸಲು ತೀರ್ಮಾನಿಸಿದೆಯೆಂದು ನನಗೆ ವೃತ್ತಿಪತ್ರಿಕೆಗಳಿಂದ ಗೊತ್ತಾಗಿದೆ. ಹಾಗೇನಾದರೂ ಇದ್ದರೆ, ಇನ್ನೂ ಅನೇಕ ತಿದ್ದುಪಡಿಗಳು ಬರುತ್ತವೆ ಎಂದು ಊಹಿಸಲು ಸಾಕಷ್ಟು ಕಾರಣಗಳಿರುತ್ತವೆ; ಹಾಗೂ ಅದೊಂದು ಗಂಭೀರ ಪರಿಶೀಲನೆಗೆ ವಿಷಯವಾಗುತ್ತದೆ.

ನನ್ನ ಅಭಿಪ್ರಾಯವಿದು. ಇದು ಬಹಳ ಮುಖ್ಯವಾದ ವಿಷಯಗಳು, ವಿಭಾಗಗಳನ್ನು ಒಂದೊಂದಾಗಿ ಪರಿಶೀಲಿಸಬೇಕಾಗಿ ಬಂದಾಗ, ವಿವರಗಳಿಗೆ ಸಂಬಂಧಿಸಿದಂತೆ ಸದನದಲ್ಲಿ ಗಂಭೀರವಾದ ಭಿನ್ನಾಭಿಪಾಯಗಳಿರುತ್ತವೆ ಎಂಬುದನ್ನು ನಿರ್ಲಕ್ಷಿಸಬಾರದು. ಅಂಥ ಸಂದರ್ಭಗಳಲ್ಲಿ ಸರ್ಕಾರವು ಪರಿಶೀಲನೆಗೆ ಸಾಕಷ್ಟು ಸಮಯವನ್ನು ಕೊಡುವುದು ಲೇಸು ಮತ್ತು ಯಾವ ವಿಷಯಗಳಲ್ಲಿ ಒಮ್ಮತವೇರ್ಪಡುತ್ತದೆ ಎಂಬುದನ್ನು ಸರ್ಕಾರ ತಿಳಿದುಕೊಳ್ಳಬೇಕು, ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಮಾನ್ಯ ಕಾನೂನು ಮಂತ್ರಿಗಳು ತಾವು ಅನೇಕ ಜನರ ಸಲಹೆ ಕೇಳಿದುದಾಗಿ ಹೇಳಿದರು; ಆದರೆ, ನನಗೆ ತಿಳಿದಂತೆ, ಮಸೂದೆಯ

ತತ್ತ್ವಗಳನ್ನು ವಿರೋಧಿಸುವ ಸದನದ ವಿವಿಧ ಭಾಗಗಳ ಸಲಹೆಯನ್ನು ಅವರು ಕೇಳಲಿಲ್ಲ. ಮೊದಲನೆಯ ಓದನ್ನು ವಿರೋಧಿಸಿದ ಅನೇಕರ ಸಲಹೆಯನ್ನು ಅವರು ಕೇಳಿಲ್ಲ.

**ಶ್ರೀ ತ್ಯಾಗಿ :** ಅವರೆಲ್ಲ ಹಿಂದೂಗಳಲ್ಲ.

**ಶ್ರೀ ನಝೀರುದ್ದೀನ್ ಅಹಮ್ಮದ್ :** ಅವರಲ್ಲಿ ಕನಿಷ್ಠ ಒಬ್ಬನಂತೂ ಹಿಂದೂ ಅಲ್ಲ. ಅದೇನೆಂದರೆ, ನಾನು. ಇಲ್ಲಿ ಸಮಸ್ಯೆಯೆಂದರೆ ಇದು: ಈ ಎಲ್ಲ ವಿಷಯಗಳನ್ನೂ ಸದನದಲ್ಲಿ ಸರಿಯಾಗಿ ಚರ್ಚಿಸಲಾಗಲಿಲ್ಲ; ಅವುಗಳ ಮೇಲೆ ಯಾವ ನಿರ್ಣಯವನ್ನೂ ತೆಗೆದುಕೊಳ್ಳಲಾಗಲಿಲ್ಲ. ಅವೆಲ್ಲವೂ ಮಸೂದೆಯ ಮೂಲ ತಟ್ಟುತ್ತವೆ. ಪ್ರತಿಯೊಂದು ವಿಭಾಗವು ಹೆಚ್ಚೂಕಡಿಮೆ ಹೊಸದು ಮತ್ತು ಮುಖ್ಯವಾದ ವಿಷಯ. ಪ್ರತಿಯೊಂದು ವಿಭಾಗಕ್ಕೂ ವಿವರವಾದ ಪರಿಶೀಲನೆ ಬೇಕು. ಆದುದರಿಂದ ನನ್ನ ಅರಿಕೆ ಏನೆಂದರೆ : ಸರ್ಕಾರವು ನಮಗೆ ಕಾಲಾವಕಾಶ ನೀಡಬೇಕು; ಸಾಮಾನ್ಯವಾಗಿ ಸದನದ ಎಲ್ಲರಿಗೂ ಸಮ್ಮತವಾಗಬಲ್ಲ ಮಸೂದೆಯನ್ನು ರೂಪಿಸುವ ಸಲುವಾಗಿ ಅದು ದುಂಡು ಮೇಜಿನ ಸಭೆಯಲ್ಲಿ ಕುಳಿತುಕೊಳ್ಳಲು ಮನಸ್ಸುಮಾಡಿ, ಎಲ್ಲ ಭಿನ್ನಾಭಿಪ್ರಾಯಗಳನ್ನೂ ಬಗೆಹರಿಸಬೇಕು. ಇಂಥ ವಿಷಯಗಳ ವಿಷಯದಲ್ಲಿ ತಕ್ಷಣವೇ ನಿರ್ಧಾರ ತೆಗೆದುಕೊಳ್ಳಬಾರದು. ಸದನದಲ್ಲಿ ಹಾಗೆ ನಿರ್ಣಯಿಸಬಾರದು.

ಅಷ್ಟರಲ್ಲಿ ಕೆಲವು ಮಹತ್ತರ ಸಂಗತಿಗಳು ಘಟಿಸಿವೆ. ಭಾರತೀಯ ರಾಜ್ಯಗಳು ಭಾರತಕ್ಕೆ ಸೇರ್ಪಡೆಯಾಗಿವೆ. ಅವುಗಳ ಅಭಿಪ್ರಾಯವನ್ನು ಯಾವಾಗಲೂ ಕೇಳಲೇ ಇಲ್ಲ. ಮಸೂದೆಯ ಪರಿಧಿಯಲ್ಲಿ ವ್ಯವಸಾಯದ ಭೂಮಿಯೂ ಬರುತ್ತದೆ ಎಂದು ನಾನು ನಂಬಿದ್ದೇನೆ. ಇದು ಮತ್ತೊಂದು ಹೊಸ ಸಮಸ್ಯೆಯನ್ನು ಸೃಷ್ಟಿಸುತ್ತದೆ. ಆದುದರಿಂದ, ಸರ್ಕಾರದ ಕಡೆಯಿಂದ ಅನೇಕ ತಿದ್ದುಪಡಿಗಳು ಬರಲಿವೆ ಎಂಬುದನ್ನು ಗಮನದಲ್ಲಿಟ್ಟುಕೊಂಡು, ಮತ್ತು ಭಾರತದ ಭೌಗೋಳಿಕ ವಿಸ್ತೀರ್ಣ ಮತ್ತು ಪ್ರಜೆಗಳ ಸಂಖ್ಯೆ ಹೆಚ್ಚಾಗಲಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು, ಸದಸ್ಯರು ಮಸೂದೆಯ ಬಗ್ಗೆ ಹೆಚ್ಚಿನ ಪರಿಶೀಲನೆ ಮಾಡಲಿ ಎಂಬ ಉದ್ದೇಶದಿಂದ, ನಮಗೆ ಸಾಕಷ್ಟು ಕಾಲಾವಕಾಶ ನೀಡಬೇಕು. ಈ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲು ಒಳ್ಳೆಯ ಉಪಾಯಗಳು ಬೇಕು; ಹೀಗಾದರೆ ಮಾತ್ರ, ಒಂದು ಒಪ್ಪಂದವನ್ನು, ಅಥವಾ ಬಹುಮತದ ಆಧಾರದ ಮೇಲಿನ ಒಂದು ಸೂತ್ರವನ್ನು ರೂಪಿಸಲು ಸಾಧ್ಯವಾದೀತು. ಇಂಥ ವಿವಾದಾಸ್ಪದ ಮಸೂದೆಯನ್ನು ಚರ್ಚಿಸಲು ನಮಗೆ ಸಾಕಷ್ಟು ಸಮಯ ನೀಡಬೇಕು. ಮೊದಲನೆಯ ಓದಿನ ಹಂತದಲ್ಲಿ ನಾನೊಂದು ಅಭಿಪ್ರಾಯವನ್ನು ಅರಿಕೆ ಮಾಡಿಕೊಂಡಿದ್ದೆ. ಆ ಸಮಯದಲ್ಲಿ ಅದು ಹಿಂದೂ ಸಮಾಜದ ಗಮನವನ್ನು ಸಾಕಷ್ಟು ಸೆಳೆದಿರಲಿಲ್ಲ ಎಂಬುದನ್ನು ನೋಡಿದರೆ, ಆ ನನ್ನ ಅಭಿಪ್ರಾಯಕ್ಕೆ ಪೂರ್ಣ ಸಮರ್ಥನೆ ಸಿಕ್ಕಂತಾಯಿತು ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಸ್ವತಃ ಸರ್ಕಾರವೇ ಹೆಚ್ಚಿನ ಸಂಖ್ಯೆಯ ಮುಖ್ಯ ತಿದ್ದುಪಡಿಗಳನ್ನು ಸೂಚಿಸಿರುವುದನ್ನು ನೋಡಿದರೆ, ನನ್ನ ಆಕ್ಷೇಪಕ್ಕೆ ಮತ್ತಷ್ಟು ಸಮರ್ಥನೆ ಸಿಕ್ಕಂತಾಯಿತು. ನನ್ನ ಕೆಲಸ ಸಾರ್ಥಕವಾದಂತಾಯಿತು. ಇದರಲ್ಲಿರುವ ಕೆಲವು ದೋಷಗಳ ಕಡೆಗೆ ಗಮನ ಸೆಳೆಯುವುದು ಸಾರ್ವಜನಿಕ ಸೇವೆ ಎಂದು ಆಗ ನಾನು ನಂಬಿದ್ದೆ. ಅಲ್ಲದಿದ್ದರೆ, ಪ್ರಾಯಃ ಆ ದೋಷಗಳು ಯಾರ ಗಮನಕ್ಕೂ ಬರುತ್ತಿರಲಿಲ್ಲ. ಯಾವ ರೀತಿಯ ಕಾನೂನು ಈ ಸದನಕ್ಕೂ, ಹಿಂದೂ ಸಮಾಜಕ್ಕೂ ಒಪ್ಪಿಗೆಯಾಗುತ್ತದೆ ಎಂಬುದು ನಿಜಕ್ಕೂ ಮೂಲತಃ ಹಿಂದೂಗಳಿಗೆ ಸಂಬಂಧಿಸಿದ ವಿಷಯ. ಹಿಂದೂ ನಿಯಮಾವಳಿಗೆ ಯಾವ ಸ್ಪಷ್ಟ ರೂಪ ಕೊಟ್ಟು ಅದನ್ನು ಅಂಗೀಕರಿಸಬೇಕು, ಎಂಬುದರಲ್ಲಿ ಮೂಲತಃ ನನಗೆ ಆಸಕ್ತಿಯಿಲ್ಲ. ಅನುಷ್ಠಾನಕ್ಕೆ ಸಂಬಂಧಿಸಿದ ಕೆಲವು ಸಮಸ್ಯೆಗಳನ್ನು ತಿಳಿಸುವುದು ಮತ್ತು ಕೆಲವು ತಿದ್ದುಪಡಿಗಳನ್ನು ಸೂಚಿಸುವುದಷ್ಟೇ ನನ್ನ ಕೆಲಸ. ಸರ್ಕಾರ ಈ ವಿಷಯವನ್ನು ಈ ದೃಷ್ಟಿಯಿಂದ ಪರಿಶೀಲಿಸಬೇಕು. ಸರ್ಕಾರ

ಏನು ಮಾಡಬೇಕೆಂದಿದೆ ಎಂಬುದನ್ನು ಈಗ ನೋಡೋಣ. ನಾನಂತೂ ಮಸೂದೆಯ ಅಂಗೀಕಾರಕ್ಕಾಗಿ ರಚನಾತ್ಮಕ ಸಹಾಯ ನೀಡಲು ಸಿದ್ಧನಿದ್ದೇನೆ. ವಿವಾದಾತ್ಮಕ ವಿಧಿಗಳು ಯಾವ ಸ್ಪಷ್ಟ ರೂಪ ಪಡೆಯುತ್ತವೆ, ಎಂಬುದು ನನಗೆ ಹೆಚ್ಚಿನ ವೈಯಕ್ತಿಕ ಸಮಸ್ಯೆಯಲ್ಲ. ಆದರೆ ನನಗೇ ಏನೇನೂ ಆಸಕ್ತಿ ಇಲ್ಲದ ವಿಷಯವೂ ಇಲ್ಲ. ಆದರೆ ಈ ವಿಷಯವು, ನಮಗೆ ಹೆಚ್ಚು ಸಮಯವನ್ನು ನೀಡುವಂತೆ, ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ಉಪಾಯವನ್ನು ಹುಡುಕುವಂತೆ, ಸದನದ ಹೆಚ್ಚು ಕಡಿಮೆ ಎಲ್ಲರಿಗೂ ಸಮ್ಮತವಾಗಬಲ್ಲಂಥ ಒಂದು ಕಾನೂನನ್ನು ಅಂಗೀಕರಿಸುವಂತೆ, ಸರ್ಕಾರಕ್ಕೆ ಪ್ರೇರಣೆ ನೀಡುತ್ತದೆ. ನಾನು ಅರಿಕೆ ಮಾಡಿಕೊಳ್ಳುವುದಿಷ್ಟೇ.

**ಶ್ರೀ ಸಿಧ್ವಾ** (ಮಧ್ಯ ಪ್ರದೇಶ) : ಮಾನ್ಯರೆ, ನನಗೆ ಒಂದು ಮಾಹಿತಿ ಬೇಕಾಗಿದೆ. ಮಾನ್ಯರು ಎರಡು ತಿದ್ದುಪಡಿಗಳನ್ನು ಸೂಚಿಸಿದರು. ಒಂದು, ಅನಿರ್ದಿಷ್ಟ ಕಾಲದವರೆಗೆ ಮುಂದೂಡುವುದು, ಮತ್ತು.....

**ಮಾನ್ಯ ಸಭಾಪತಿಗಳು :** ನಾನದಕ್ಕೆ ಅಪ್ಪಣೆ ಕೊಡುವುದಿಲ್ಲ.

ಸೂಚನೆಗೆ ಯಾವ ರೂಪ ಕೊಟ್ಟರೆ ಉತ್ತಮ ಎಂದು ನಾನು ಯೋಚಿಸುತ್ತಿದ್ದೆ. ಒಂದು ವಿಶೇಷ ಅಧಿವೇಶನಕ್ಕೆ, ಮತ್ತೊಂದು ಬಜೆಟ್ ಅಧಿವೇಶನದಲ್ಲಿನ ಯಾವುದಾದರೊಂದು ದಿನಕ್ಕೆ. ಮೂರನೆಯದು ಬಜೆಟ್ ಅಧಿವೇಶನ ಮುಗಿದ ನಂತರ ಯಾವುದಾದರೊಂದು ದಿನಕ್ಕೆ. ಇದನ್ನು ಮುಂದಿನ ಅಧಿವೇಶನದ ತನಕ ಮುಂದೂಡೋಣವೆ?

**ಶ್ರೀ ನಝೀರುದ್ದೀನ್ ಅಹಮ್ಮದ್ :** ಅದು ಸಂಪೂರ್ಣವಾಗಿ ಸರ್ಕಾರಕ್ಕೆ ಬಿಟ್ಟಿದ್ದು.

**ಮಾನ್ಯ ಸಭಾಪತಿಗಳು :** ಈಗಿನ ತಿದ್ದುಪಡಿಯೇನೋ ಮುಂದಿನ ಅಧಿವೇಶನದವರೆಗೆ ಎಂದಿದೆ. ಹಾಗಾದರೆ : ಹಿಂದೂ ನಿಯಮಾವಳಿ ಮಸೂದೆಯ ಮೇಲಿನ ಚರ್ಚೆಯನ್ನೂ ಬಜೆಟ್ ಅಧಿವೇಶನದಲ್ಲಿ ಅಥವಾ ಬಜೆಟ್ ಅಧಿವೇಶನದ ನಂತರದ ದಿನಾಂಕವೊಂದಕ್ಕೆ ಮುಂದೂಡಲಾಗಿದೆ ಎನ್ನಲೆ?

ಮಧ್ಯಾಹ್ನ ೩ ಗಂಟೆ

**ಡಾ॥ ಅಂಬೇಡ್ಕರ್ :** ಮಸೂದೆಯ ಧ್ಯೇಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಸರ್ಕಾರದ ಸದಸ್ಯರಿಗೂ, ಈ ವಿಷಯವಾಗಿ ಸರ್ಕಾರದ ನಿಲುವನ್ನು ಪೂರ್ಣವಾಗಿ ಒಪ್ಪಿಕೊಳ್ಳುವವರಿಗೂ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಸರ್ಕಾರದ ಈ ನಿಲುವೆಂದರೆ, ಮಸೂದೆಯನ್ನು ಅಭ್ಯಸಿಸಲು ಮತ್ತು ಪರಿಶೀಲನಾತ್ಮಕ ಅಭಿಪ್ರಾಯವನ್ನು ಕೊಡಲು ಸದಸ್ಯರಿಗೆ ಹೆಚ್ಚು ಸಮಯವನ್ನು ಕೊಡಬೇಕು. ಈಗ ತಾನೆ ಪ್ರಧಾನ ಮಂತ್ರಿಗಳು ಹೇಳಿದಂತೆ, ಸರ್ಕಾರದ ಉದ್ದೇಶ, ಮಸೂದೆಯ ವಿಭಾಗಗಳನ್ನು ಒಂದೊಂದಾಗಿ ಧಾರಾವಾಹಿಯಾಗಿ ಪರಿಶೀಲಿಸುವುದಲ್ಲ. ಆದುದರಿಂದ, ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಹಿಂದೂ ಕಾನೂನು ಮಸೂದೆಯನ್ನು ಮುಂದಿನ ಅಧಿವೇಶನದಲ್ಲಿ ಯಾವಾಗಲಾದರೂ ಕೈಗೆತ್ತಿಕೊಳ್ಳುವುದನ್ನು ಸರ್ಕಾರಕ್ಕೇ ಬಿಡಬೇಕು. ಸರ್ಕಾರವು ಒಂದು ವಿಶೇಷ ಅಧಿವೇಶನವನ್ನು ಕರೆಯಬಹುದು : ಅಥವಾ ಬಜೆಟ್ ಅಧಿವೇಶನವನ್ನೇ ದೊಡ್ಡದು ಮಾಡಿ, ಒಂದು ಭಾಗವನ್ನು ಹಿಂದೂ ಕಾನೂನು ಮಸೂದೆಗೆ ಮೀಸಲಾಗಿಟ್ಟು, ಮತ್ತೊಂದು ಭಾಗವನ್ನು ಮಾಮೂಲಿನಂತೆ ಬಜೆಟ್ ಚರ್ಚೆಗೆ ಮೀಸಲಾಗಿಡಬಹುದು ಅಥವಾ ಬಜೆಟ್ ಅಧಿವೇಶನ ಮುಗಿದನಂತರ ಮತ್ತೊಂದು ಅಧಿವೇಶನವನ್ನು ಕರೆಯಬಹುದು. ಯಾವ ಸೂಚನೆಯೂ ಸರ್ಕಾರದ ಕೈಕಟ್ಟುವುದು ನನಗೆ ಬೇಕಿಲ್ಲ. ನಾನೀಗಾಗಲೇ ಹೇಳಿದ್ದಂತೆ, ಈ ಮಸೂದೆಯನ್ನು ಈ ಅಧಿವೇಶನದಲ್ಲಿ ಮುಂದುವರಿಸುವಂತೆ ನಾನು ಕೇಳಿಕೊಳ್ಳುವುದಿಲ್ಲ. ಅದು ಸಾಧ್ಯವೇ ಇಲ್ಲ. ಹಾಗೆ ಮಾಡುವುದ ಪ್ರಾಯಃ ದೊಡ್ಡ ಅನ್ಯಾಯವೂ ಆದೀತು. ಅದರೇನು, ನಾನು ಸೂಚನೆಯನ್ನು ವಿರೋಧಿಸುತ್ತೇನೆ. ಏಕೆಂದರೆ, ನಝೀರುದ್ದೀನ್ ಅಹಮ್ಮದ್ ಸೂಚನೆಯನ್ನು ಮಂಡಿಸಿದರೆಂಬ ಕಾರಣದಿಂದ ಮಸೂದೆಯ

ಪರಿಶೀಲನೆಯನ್ನು ಮುಂದೂಡುವುದು ನನಗಿಷ್ಟವಿಲ್ಲ. ಸರ್ಕಾರವು ಹಾಗೆಂದು ಮಾತುಕೊಟ್ಟಿದೆ, ಹಾಗೂ ಸರ್ಕಾರ ಆ ವಚನಕ್ಕೆ ಬದ್ಧವಾಗಿದೆ.

**ಶ್ರೀ ನಝೀರುದ್ದೀನ್ ಅಹ್ಮದ್ :** ಈ ಪರೋಕ್ಷ ನಿಂದೆಗೆ ನಾನೇಕೆ ಗುರಿಯಾಗಬೇಕು ಎಂಬುದು ನನಗೆ ಗೊತ್ತಾಗುತ್ತಿಲ್ಲ.

**ಮಾನ್ಯ ಸಭಾಪತಿಗಳು :** ಆದುದರಿಂದ ಮಸೂದೆಗೆ ಯಾವ ರೂಪವಿರಬೇಕು ಎಂಬುದನ್ನು ನಾನೀಗ ಗಂಭೀರವಾಗಿ ಪರಿಶೀಲಿಸಬೇಕಾಗಿಲ್ಲ.

**ಡಾ॥ ಅಂಬೇಡ್ಕರ್ :** ಅವರು ಎಲ್ಲ ಸೂಚನೆಗಳನ್ನೂ ಮಂಡಿಸಲಿ, ನಾವು ಅವುಗಳನ್ನು ತಿರಸ್ಕರಿಸೋಣ.

**ಶ್ರೀ ತ್ಯಾಗಿ :** ಅಥವಾ, ಇದರ ಹಿಂದಿನ ಪ್ರಶ್ನೆಯನ್ನು ಮಂಡಿಸೋಣ, ಮತ್ತು ಈ ಪ್ರಶ್ನೆಯನ್ನು ಮುಂದಕ್ಕೆ ಹಾಕೋಣ.

**ಮಾನ್ಯ ಸಭಾಪತಿಗಳು :** ಅದು ಅಗತ್ಯವೆಂದು ನನಗನಿಸುವುದಿಲ್ಲ. ನಾವು ಈ ವಿಷಯವನ್ನು ಮುಂದೂಡಿದ್ದೇವೆಂದು ಊಹಿಸೋಣ. ಆಗ ಮುಂದಿನ ವ್ಯವಹಾರವನ್ನು ಕೈಗೆತ್ತಿಕೊಳ್ಳಬಹುದೆ?

**ಡಾ॥ ಅಂಬೇಡ್ಕರ್ :** ಇದಕ್ಕೆ ನಾನೊಂದು ಪರಿಹಾರ ಸೂಚಿಸಲೆ? ನನ್ನ ದೃಷ್ಟಿಯಲ್ಲಿ ಶ್ರೀ ನಝೀರುದ್ದೀನ್ ಅಹಮ್ಮದ್‌ರ ಸೂಚನೆಯನ್ನು ತೀರಿಸಿಬಿಟ್ಟರೆ......

**ಶ್ರೀ ನಝೀರುದ್ದೀನ್ ಅಹಮ್ಮದ್** : ನನ್ನನ್ನೇ ತೀರಿಸಿಬಿಟ್ಟರೆ !

**ಡಾ॥ ಅಂಬೇಡ್ಕರ್ :** ಅವರ ಸೂಚನೆಯನ್ನು ಮುಗಿಸಿದನಂತರ, ವಿಭಾಗ ೨ ಮಸೂದೆಯ ಭಾಗವಾಗಿದೆ, ಎಂದಷ್ಟೇ ಹೇಳಿ, ಆಗ ನಾನೇ, ಮಸೂದೆಯ ಮೇಲಿನ ಮುಂದಿನ ಚರ್ಚೆಯು ಮುಂದೂಡಲ್ಪಟ್ಟಿದೆ ಎಂಬ ಸೂಚನೆಯನ್ನು ಮಂಡಿಸುತ್ತೇನೆ. ಹಿಂದೂ ಕಾನೂನು ಮಸೂದೆಯನ್ನು ಸರ್ಕಾರದ ಕಾರ್ಯಕ್ರಮ ಪಟ್ಟಿಯಲ್ಲಿ ಎಲ್ಲಕ್ಕಿಂತ ಕೆಳಗಿಡಲು ನಾನು ಸಿದ್ಧನಿದ್ದೇನೆ.

**ಶ್ರೀ ಆರ್. ಕೆ. ಚೌಧರಿ :** ನಾನು ಒಂದು ತಿದ್ದುಪಡಿ ಸೂಚನೆಯನ್ನು ಮಂಡಿಸಿದ್ದೆ. ಆದರೆ ಅದು ಯಾವುದೆಂದು ನಾನು ಖಚಿತವಾಗಿ ಹೇಳಲಾರೆ. ಏಕೆಂದರೆ, ಅದಕ್ಕೆ ಸಂಬಂಧಿಸಿದ ಪತ್ರಗಳು ಈಗ ನನ್ನ ಬಳಿ ಇಲ್ಲ. ಈ ವಿಷಯಕ್ಕೆ ನಾನು ಸಿದ್ಧವಾಗಿ ಬಂದಿಲ್ಲ. ಆದರೆ ನನ್ನ ಜ್ಞಾಪಕ ಶಕ್ತಿ ಸರಿಯಿದೆ ಎಂದು ಊಹಿಸಿಕೊಂಡರೆ, ಹಿಂದೂ ಕಾನೂನು ಮಸೂದೆಯ ಪರಿಶೀಲನೆಗೆಂದೇ ಒಂದು ವಿಶೇಷ ಅಧಿವೇಶನವನ್ನು ಕರೆಯಬೇಕು, ಎಂಬುದು ನಾನು ಮಂಡಿಸಿದ್ದ ಸೂಚನೆ. ನಾವು ತೀವ್ರ ಕಾರ್ಯನಿರತರಾಗಿರುವಂಥ ಇಂಥ ಒಂದು ಅಧಿವೇಶನದಲ್ಲಿ ಈ ರೀತಿಯ ಚರ್ಚೆಯನ್ನು ತರುವುದರ ವಿರುದ್ಧ ನನ್ನ ದೂರು. ಇದೆ. ಅದೇನೆಂದರೆ, ಈ ವಿಷಯವನ್ನು ಅಭ್ಯಸಿಸಲು ನಮಗೆ ಸಾಕಷ್ಟು ಕಾಲಾವಕಾಶವಿಲ್ಲ. ಆದುದರಿಂದ ಈ ಸಮಸ್ಯೆಯನ್ನು ಒಂದು ವಿಶೇಷ ಅಧಿವೇಶನದಲ್ಲೇ ಪರಿಶೀಲಿಸಬೇಕು.

**ಶ್ರೀ ಎಂ. ಎ. ಅಯ್ಯಂಗಾರ್** (ಮದ್ರಾಸ್) : ಶ್ರೀ ನಝೀರುದ್ದೀನ್ ಅಹಮ್ಮದ್ ಕೇಳುತ್ತಿರುವುದು ಸದಸ್ಯರಿಗೆ ಸಾಕಷ್ಟು ಕಾಲಾವಕಾಶ ಬೇಕು, ಎಂದಷ್ಟೆ ; ಅಲ್ಲದೆ, ಪ್ರಧಾನ ಮಂತ್ರಿಗಳೂ ಸಹ ಇದಕ್ಕೆ ಒಪ್ಪಿದ್ದಾರೆ. ಆದುದರಿಂದ, ಮಂಡನೆಗೆ ಹೆಚ್ಚು ಒತ್ತಾಯ ಮಾಡಬಾರದೆಂದು ನಾನು ಶ್ರೀ ನಝೀರುದ್ದೀನ್ ಅಹಮ್ಮದರನ್ನು ಬೇಡಿಕೊಳುತ್ತೇನೆ. ಈಗ ಪ್ರಧಾನ ಮಂತ್ರಿಗಳ ಹೇಳಿಕೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಮುಂದಿನ ಅಧಿವೇಶನದ ಯಾವುದಾದರೊಂದು ದಿನಾಂಕಕ್ಕೆ ಮುಂದಕ್ಕೆ ಹಾಕಬಹುದು. ಮುಂದಿನ ಅಧಿವೇಶನದ ಯಾವ ದಿನಾಂಕಕ್ಕೆ ಇದನ್ನು ಮುಂದೂಡಬೇಕು ಅಥವಾ ಮುಂದಿನ ಅಧಿವೇಶನ ಮುಗಿದ ತಕ್ಷಣ ಎಂದು ವಿಶೇಷ ಅಧಿವೇಶನ ಕರೆಯಬೇಕು ಎಂಬುದು ಸರ್ಕಾರಕ್ಕೆ ಬಿಟ್ಟಿದ್ದು. ಮಸೂದೆಯ ವಿಭಾಗಗಳನ್ನು

ಒಂದೊಂದಾಗಿ ಪರಿಶೀಲಿಸುವುದು ಬೇಡ ಎಂದು ನಾವೀಗ ಒಪ್ಪಿರುವುದರಿಂದ, ಎರಡು ಪಕ್ಷಗಳಿಗೂ ಸಮಾಧಾನವಾಗಿದೆ, ಎಂದುಕೊಂಡಿದ್ದೇನೆ. ಆದುದರಿಂದ, ಪ್ರಧಾನ ಮಂತ್ರಿಗಳ ಹೇಳಿಕೆಯನ್ನು ಸ್ವೀಕರಿಸೋಣ ಹಾಗೂ ಶ್ರೀ ನಝೀರುದ್ದೀನ್ ಅಹಮ್ಮದ್ ತಮ್ಮ ಮಂಡನೆಗೆ ಒತ್ತಾಯ ಮಾಡುವ ಅಗತ್ಯವಿಲ್ಲ. ಆದುದರಿಂದ, ಇದನ್ನು ಮುಂದಿನ ಅಧಿವೇಶನದ ಯಾವುದಾದರೊಂದು ದಿನಕ್ಕೆ ಮುಂದೂಡೋಣ. ಇದರಿಂದ, ಪ್ರಧಾನ ಮಂತ್ರಿಗಳು ಅಥವಾ ಸರ್ಕಾರ ಸೂಕ್ತವಾದ ಮತ್ತು ಅನುಕೂಲಕರವಾದ ದಿನಾಂಕವನ್ನು ನಿಗದಿಪಡಿಸುತ್ತದೆ ಎಂದರ್ಥವಾಗುತ್ತದೆ.

**ಡಾ॥ ಅಂಬೇಡ್ಕರ್ :** ನಾನು ಸ್ವಲ್ಪ ಅಡ್ಡಿಮಾಡಲೆ? ಈ ಸದನದಲ್ಲಿ ಏನು ನಡೆಯುತ್ತಿದೆಯೋ ಅದು ಪುನರಾವರ್ತನೆಯಾಗುವುದು ನನಗಿಷ್ಟವಿಲ್ಲ. ಯಾವಾಗ ಈ ಮಸೂದೆ ಸದನದ ಮುಂದೆ ಬಂದಿದೆಯೋ ಅವಾಗಲೆಲ್ಲ ಯಾರಾದರೂ ಒಬ್ಬ ಮಾನ್ಯ ಸದಸ್ಯರು ಅದನ್ನು ವಿಸ್ತರಿಸುವ ಮನಸ್ಸು ಮಾಡುತ್ತಾರೆ. ಇದು ನಿಲ್ಲಬೇಕು. ನಾವೀಗ ಯಾವ ಹಂತವನ್ನು ತಲುಪಿದ್ದೇವೆಂದರೆ, ಮಸೂದೆಯ ವಿಭಾಗಗಳನ್ನು ಒಂದೊಂದಾಗಿ ಪರಿಶೀಲಿಸುವುದು ಯುಕ್ತವಾಗಿದೆ. ಆದುದರಿಂದ, ಸದನವು ಮಸೂದೆಯ ವಿಭಾಗಗಳನ್ನು ಒಂದೊಂದಾಗಿ ಪರಿಶೀಲಿಸಲು ಒಪ್ಪಿಗೆ ನೀಡಿರುವುದರಿಂದ, ನೀವು ವಿಭಾಗ ೨ ನ್ನು ಸದನದ ಮುಂದಿಡಬೇಕು ಎಂದು ವಿನಂತಿಸಿಕೊಳ್ಳುತ್ತೇವೆ; ಅನಂತರ ನಾವು ಚರ್ಚೆಯನ್ನು ಮುಂದೂಡಬಹುದು.

**ಶ್ರೀ ನಝೀರುದ್ದೀನ್ ಅಹಮ್ಮದ್ :** ಈ ಪರೋಕ್ಷ ಟೀಕೆಯು ಕೊನೆಗೆ ತಟ್ಟುವುದು ಬಡಪಾಯಿಯಾದ ನನಗೇ ಎಂದು ಕಾಣುತ್ತದೆ. ನಾನು ಯಾವುದೇ ರೀತಿಯ ವಿಳಂಬ ಸೂಚನೆಯನ್ನು ಮಂಡಿಸುವುದಿಲ್ಲ ಎಂದು ಅಚಲ ವಚನಕೊಡುತ್ತೇನೆ.

**ಮಾನ್ಯ ಸಭಾಪತಿಗಳು :** ಕಾನೂನು ಮಂತ್ರಿಗಳೂ ಶ್ರೀ ನಝೀರೂದ್ದೀನ್ ಅಹಮ್ಮದರೂ ತಂತಮ್ಮ ನಿಲುವುಗಳನ್ನು ತಿಳಿಸಿದ್ದಾರೆ. ಆದರೆ, ಇವೂ ಅಲ್ಲದೆ, ಶ್ರೀ ಚೌಧರಿಯವರ ಆಕ್ಷೇಪವೂ ಇದೆ. ಆದುದರಿಂದ ನಾನೇನು ಮಾಡಬೇಕೆಂದರೆ, ನಾನು ಸೂಚನೆಗಳನ್ನು ಸದನದ ಮುಂದಿಡುತ್ತೇನೆ. ಸದನವು ಅದರ ಮೇಲೆ ಮತ ಚಲಾಯಿಸಬಹುದು.

**ಶ್ರೀ ಆರ್. ಕೆ. ಚೌಧರಿ :** ಆದರೆ, ಮಾನ್ಯರೆ, ನಾನು ನನ್ನ ಸೂಚನೆಯನ್ನು ವಿವರಿಸಬೇಕಾಗಿದೆ.

**ಮಾನ್ಯ ಸಭಾಪತಿಗಳು :** ಮಾನ್ಯ ಸದಸ್ಯರು ಆಗಲೇ ವಿವರಿಸಿ ಆಗಿದೆ. ಅದಕ್ಕೆ ಇನ್ನೂ ಹೆಚ್ಚಿನ ಸಮಯ ಬೇಕಿಲ್ಲವೆನಿಸುತ್ತದೆ.

**ಶ್ರೀ ಎಂ. ಎ. ಅಯ್ಯಂಗಾರ್ :** ಶ್ರೀ ಚೌಧರಿಯವರು ತಮ್ಮ ಪ್ರಶ್ನೆಯನ್ನು ವಿಶೇಷ ಅಧಿವೇಶನಕ್ಕೆ ಮುಂದೂಡಬೇಕೆಂಬುದನ್ನು ಗುರಿಯಾಗಿಟ್ಟುಕೊಂಡಿರುವುದರಿಂದ, ಅದು ಬಿದ್ದುಹೋಗಿದೆ ಎಂದು ನಾವು ಹೇಳಬಹುದು. ವಿಶೇಷ ಅಧಿವೇಶನ ಇದಕ್ಕಾಗಿ ಕರೆಯುವುದು ಅಸಾಧ್ಯ. ಏನೇ ಆಗಲಿ, ಇದನ್ನು ನಾವು ಸರ್ಕಾರದ ಇಷ್ಟಕ್ಕೇ ಬಿಡೋಣ. ಬಜೆಟ್ ಅಧಿವೇಶನದಲ್ಲೇ ಒಂದು ಸೂಕ್ತ ಸಮಯವನ್ನು ನಿಗದಿಪಡಿಸಬಹುದು. ಅವರು ವಿಶೇಷ ಅಧಿವೇಶನವೇ ಬೇಕೆಂದು ಏಕೆ ಒತ್ತಾಯಿಸಬೇಕು? ಸರ್ಕಾರಕ್ಕೆ ಒಂದು ವಿಶೇಷ ಅಧಿವೇಶನ ಅಗತ್ಯವೆನಿಸಿದರೆ, ಅದು ಅಂಥ ಅಧಿವೇಶನವನ್ನು ಕರೆಯಬಹುದು. ಆದರೆ ಒಂದು ವಿಶೇಷ ಅಧಿವೇಶನ ಕರೆಯಬೇಕೆಂದು ಸರ್ಕಾರವನ್ನು ಒತ್ತಾಯಿಸುವುದರಿಂದ ಯಾವ ಪ್ರಯೋಜನವೂ ಇಲ್ಲ.

**ಡಾ॥ ಪಟ್ಟಾಭಿ** (ಮದ್ರಾಸ್) : ಸರ್ಕಾರದ ನಿಲುವಿನಲ್ಲಿ ಬದಲಾವಣೆಗಾಗಿ, ಈ ವಿಷಯವನ್ನು ವಿರಾಮವಾಗಿ ಪರಿಶೀಲಿಸುವ ಕಡೆಗೆ ಒಲವು ತೋರಿಸುತ್ತಿದೆ. ಈ ವಿಷಯದ ಮೇಲೆ ನಾನು ವಿಸ್ತಾರವಾಗಿ ಮಾತಾಡುವುದಿಲ್ಲ. ಆದರೆ ಈ ರೀತಿ ಮುಂದೂಡಿಕೆಯ ಬೇಡಿಕೆಯನ್ನು ಮಾನ್ಯ ಮಾಡುವುದಿಲ್ಲ ಎಂಬ

ಕಾನೂನು ಮಂತ್ರಿಗಳ ಪಾಂಡಿತ್ಯ ಪ್ರದರ್ಶಕ ರೀತಿಗೆ ಮಾತ್ರ ಖಂಡಿತ ನನ್ನ ಆಕ್ಷೇಪವಿದೆ. ಅದನ್ನು ಮಾನ್ಯ ಮಾಡಲೇಬೇಕು. ವಿರೋಧಪಕ್ಷದವರಿಗೆ ಎಲ್ಲಿಯವರೆಗೆ ಪ್ರಾಮಾಣಿಕ ಮತ್ತು ಶ್ರದ್ಧಾಪೂರ್ವಕ ಅಭಿಪ್ರಾಯವಿರುತ್ತದೆಯೋ ಅಲ್ಲಿಯವರೆಗೂ, ವಿರೋಧಿಸಲು ಯಾವುದೇ ರೀತಿಯ ನ್ಯಾಯಯುತ ವಿಧಾನವನ್ನು ಅನುಸರಿಸುವುದು ಈ ಸದನದ ಪ್ರತಿಯೊಬ್ಬ ಸದಸ್ಯನ ಹಕ್ಕು. ಸಾಧ್ಯವಾದರೆ, ಎಲ್ಲ ನ್ಯಾಯಯುತ ವಿಧಾನಗಳ ಮೂಲಕ, ಅಗತ್ಯಬಿದ್ದರೆ ಎಲ್ಲ ಅನ್ಯಾಯ ವಿಧಾನಗಳ ಮೂಲಕ, ಸರ್ಕಾರವನ್ನು ವಿರೋಧಿಸುವುದು ವಿರೋಧ ಪಕ್ಷದವರ ಕರ್ತವ್ಯ, ಎಂದು ಬ್ಯಾಲ್‌ಪೋರ್ ಹೇಳಿದರು. ಅವರು ಹೇಳಿದುದೆಲ್ಲವನ್ನೂ ನಾನು ಒಪ್ಪದಿದ್ದರೂ, ನಾನು ಇಷ್ಟು ಮಾತ್ರ ಹೇಳುತ್ತೇನೆ : ಪ್ರಧಾನ ಮಂತ್ರಿಗಳು ತಮ್ಮ ಅಪಾರ ವಿವೇಕದಿಂದಾಗಿ, ಮಸೂದೆಯ ವಿಷಯವಾಗಿ ಎರಡು ವಿಭಿನ್ನ ಅಭಿಪ್ರಾಯಗಳಿವೆ ಎಂಬುದನ್ನು ಒಪ್ಪಿಕೊಂಡು, ಮುಂದೂಡಿಕೆಯ ಸೂಚನೆಗೆ ತಮ್ಮ ಉದಾರ ಮತ್ತು ನ್ಯಾಯವಾದ ಒಪ್ಪಿಗೆ ಕೊಟ್ಟಿದ್ದಾರೆ; ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ, ಮಾನ್ಯ ಕಾನೂನು ಮಂತ್ರಿಗಳು ವ್ಯಾಪಾರಿ ಮನೋಭಾವದ, ಪಾಂಡಿತ್ಯ ಪ್ರದರ್ಶಕ ರೀತಿಯ, ಪ್ರವಚನ ನೀಡುವುದು ಅಪೇಕ್ಷಣೀಯವಲ್ಲ. ಈಗಾಗಲೇ ಹೆಚ್ಚುಕಡಿಮೆ ತಲುಪಿರುವ ರಾಜಿಯ ಮನೋಭಾವವನ್ನು ಇದು ದೂರ ಮಾಡುತ್ತದೆ, ಅಷ್ಟೇ.

**ಶ್ರೀ ನಝೀರುದ್ದೀನ್ ಅಹಮ್ಮದ್ :** ಅಲ್ಲದೆ, ಈಗ ವಿರೋಧವೇ ಇಲ್ಲದಿದ್ದರೂ, ವಿರೋಧಕ್ಕೆ ಆಹ್ವಾನ ಕೊಟ್ಟಂತಾಗುತ್ತದೆ.

**ಶ್ರೀ ಜವಾಹರ್‌ಲಾಲ್ ನೆಹರು :** ಮಾನ್ಯ ಕಾನೂನು ಮಂತ್ರಿಗಳು ಹೇಳಿದ ಪ್ರತಿಯೊಂದು ಪದವನ್ನೂ ನಾನು ಅನುಮೋದಿಸುತ್ತೇನೆ, ಇದನ್ನು ನಾನು ಪೂರ್ಣ ಸ್ಪಷ್ಟಗೊಳಿಸಬೇಕು. ಪರಿಸ್ಥಿತಿ ಹೀಗಿದೆ : ಈ ಪ್ರಶ್ನೆಯನ್ನು ಚರ್ಚಿಸಲು ಕಾಲಾವಕಾಶ ಬೇಕು ಎಂದು ಪ್ರತಿಯೊಬ್ಬರಿಗೂ ಅನಿಸುತ್ತದೆ; ಆದುದರಿಂದ, ವಿಭಾಗಗಳನ್ನು ಒಂದಾದ ಮೇಲೊಂದರಂತೆ ಚರ್ಚಿಸುವುದನ್ನು ಮುಂದಕ್ಕೆ ಹಾಕೋಣವೆಂದು ಸಲಹೆ ನೀಡಲು ನಾವು ನಿರ್ಧರಿಸಿದೆವು. ಸೂಚನೆಯು ಯಾವ ರೂಪದಲ್ಲಿರಬೇಕು ಎಂಬುದನ್ನು ನಾವು ನಿರ್ಧರಿಸಬೇಕಾಗಿದೆ. ಅದೊಂದು ದೀರ್ಘ ಸೂಚನೆಯಾಗಿದ್ದರೆ, ಹಾಗೂ ಅದನ್ನು ಪರಿಶೀಲಿಸಬೇಕೆಂಬುದು ಮಾನ್ಯ ಸದಸ್ಯರ ಇಚ್ಛೆಯಾಗಿದ್ದರೆ, ಅದನ್ನು ಇಲ್ಲೇ ಈಗಲೇ ಪರಿಶೀಲಿಸೋಣ. ಆ ಸೂಚನೆಯನ್ನು ಮುಂದಕ್ಕೆ ಹಾಕುವುದು ಬೇಡ. ನನಗೆ ಯಾವ ಸೂಚನೆಯನ್ನು ತಡೆಯುವುದೂ ಬೇಡವಾಗಿದೆ. ಅದು ದೀರ್ಘ ಸೂಚನೆಯಾಗಿದ್ದರೆ, ಅದನ್ನು ಇಲ್ಲೇ, ಈಗಲೇ ತೀರ್ಮಾನಿಸೋಣ.

**ಪಂಡಿತ ಮಾಳವೀಯ** (ಉ. ಪ್ರ) : ಈ ವಿಷಯದ ಬಗ್ಗೆ ಬಹಳ ಆಳವಾದ ಭಿನ್ನಾಭಿಪ್ರಾಯಗಳಿರುವುದೂ, ಈ ಸದನದ ವಿವಿಧ ಭಾಗಗಳಲ್ಲಿ ಭಿನ್ನಾಭಿಪ್ರಾಯಗಳಿರುವುದೂ ನಮಗೆ ಗೊತ್ತು. ನಮ್ಮ ಪ್ರಧಾನ ಮಂತ್ರಿಗಳು ಒಂದು ವ್ಯಾವಹಾರಿಕ ನಿಲುವನ್ನು ತಳೆದಿದ್ದಾರೆ, ಮತ್ತು ನಮಗೆ ನಿರೀಕ್ಷಿಸಿರುವಂತೆ, ಈ ವಿಷಯದಲ್ಲಿ ಅವರು ಮಾರ್ಗದರ್ಶನ ನೀಡುತ್ತಾ, 'ಇದೊಂದು ವಿವಾದಾಸ್ಪದ ಸಮಸ್ಯೆ, ಇದಕ್ಕೆ ಬಹಳ ಸಮಯ ನೀಡಬೇಕಾದುದು ಸ್ವಾಭಾವಿಕ' ಎಂದಿದ್ದಾರೆ. ಆದುದರಿಂದ, ನನ್ನ ವಿನಂತಿ ಏನೆಂದರೆ, ಈ ವಿಷಯವನ್ನು ಮುಂದಕ್ಕೆ ಹಾಕುವುದರಿಂದ ಯಾವುದೇ ಸೂಚನೆಯ ಮೇಲಿನ ಅಥವಾ ವಿಭಾಗದ ಮೇಲಿನ ಚರ್ಚೆಯನ್ನು ಇಂದು ಮುಂದುವರಿಸುವುದರಿಂದ ಯಾವ ವ್ಯಾವಹಾರಿಕ ಲಾಭವೂ ಆಗುವುದಿಲ್ಲವಾದುದರಿಂದ, ಈಗ ಹಿಂದೂ ಕಾನೂನನ್ನು ಕೇವಲ ಪರಿಶೀಲನೆಗೆ ಕೈಗೆತ್ತಿಕೊಂಡು ಅದನ್ನು ಅನುಷ್ಠಾನಕ್ಕೆ ತಂದಂತಾಗುವುದಿಲ್ಲವಾದುದರಿಂದ, ವಿಷಯವನ್ನು ಈಗಿರುವಂತೆಯೇ ಹೀಗೆಯೇ ಬಿಟ್ಟರೆ ಯಾವ ವಿಭಾಗಕ್ಕೂ ಯಾರ ದೃಷ್ಟಿಕೋನಕ್ಕೂ ಯಾವ ನಷ್ಟವೂ ಆಗುವುದಿಲ್ಲ. ಏಕೆಂದರೆ, ಈ ವಿಷಯವನ್ನು ಹೇಗಿದ್ದರೂ

ಮುಂದಕ್ಕೆ ಹಾಕಲಾಗುತ್ತದೆ. ಮಸೂದೆಯನ್ನು ಪರಿಶೀಲನೆಗೆ ತೆಗೆದುಕೊಂಡು ನಿಜವಾಗಿಯೂ ಪ್ರಗತಿ ಸಾಧಿಸಬೇಕೆಂಬುದು ಉದ್ದೇಶವಾಗಿದ್ದರೆ, ಆಗ ನಾನು ಹೇಳಬೇಕಾದುದು ಏನೂ ಇಲ್ಲ. ಏಕೆಂದರೆ, ಆಗ ಪ್ರತಿಯೊಬ್ಬ ಸದಸ್ಯರಿಗೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅವಕಾಶ ಸಿಕ್ಕುತ್ತದೆ; ಆಗ ಸದನವು ತನ್ನ ಸಾಮೂಹಿಕ ವಿವೇಕದಿಂದ ಏನನ್ನು ತೀರ್ಮಾನಿಸುತ್ತದೆಯೊ ಅದು ನಿಯಮದ ಪುಸ್ತಕದಲ್ಲಿ ದಾಖಲಾಗುತ್ತದೆ. ಆದರೆ, ಈಗ ನೀಡಿರುವ ಸಲಹೆಯ ಪ್ರಕಾರ ಹೋದರೆ, ನಿಜವಾದ ಪ್ರಗತಿಯನ್ನು ಸಾಧಿಸುವುದಿಲ್ಲವಾದುದರಿಂದ, ನಾನು ಸೂಚಿಸುವುದೇನೆಂದರೆ ಈಗಿರುವ ದೊಡ್ಡ ವಿರೋಧವು, ದೇಶದಲ್ಲಿ ಈಗಿರುವ ದೊಡ್ಡ ತಳಮಳವು ಇನ್ನೂ ಹೆಚ್ಚು ಕೆಡಬಾರದು, ಇನ್ನೂ ಹೆಚ್ಚು ದೊಡ್ಡದಾಗಬಾರದು. ಈ ವಿಷಯವಾಗಿ ದೇಶ ಏನು ಯೋಚಿಸುತ್ತಿದೆ ಎಂಬುದು ಮುಖ್ಯವಲ್ಲ ಎಂಬ ಒಂದು ಅಭಿಪ್ರಾಯವಿದೆ ಎಂದು ನನಗೆ ಗೊತ್ತು. ಅದೊಂದು ದುರದೃಷ್ಟಕರ ಅಭಿಪ್ರಾಯ. ಆದರೆ ಸಮಸ್ಯೆಯ ಪ್ರತಿ ಮಗ್ಗುಲನ್ನೂ ಎಚ್ಚರಿಕೆಯಿಂದ ಪರಿಶೀಲಿಸಬೇಕು ಗೌರವಿಸಬೇಕು ಎಂಬ ಮತ್ತೊಂದು ದೃಷ್ಟಿಯೂ ಇದೆ. ಆ ವಿಷಯದ ವಿವರಗಳಿಗೆ ನಾನೀಗ ಹೋಗುವುದಿಲ್ಲ. ಆದರೆ, ಯಾವ ಉಪಯೋಗಕ್ಕೂ ಬಾರದ ಅನಾವಶ್ಯಕವಾದುದೇನನ್ನೂ ಮಾಡಬಾರದು, ದೇಶದಲ್ಲಿ ದ್ವೇಷವನ್ನೂ ಅಸಮಾಧಾನವನ್ನೂ ಉಂಟುಮಾಡುವಂಥದೇನನ್ನೂ ಮಾಡಬಾರದು ಎಂದು ಸರ್ಕಾರವನ್ನು ನಾನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಆದುದರಿಂದ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ: ಈ ವಿಷಯವನ್ನು ನಾವು ಮುಂದೂಡುವುದೇ ಆದರೆ, – ಮುಂದೂಡುವುದನ್ನೇನೋ ನಾನು ಪೂರ್ಣವಾಗಿ ಅನುಮೋದಿಸುತ್ತೇನೆ – ನಾವು ಹೃತ್ಪೂರ್ವಕವಾಗಿ ಮುಂದೂಡಬೇಕು. ಅಷ್ಟೇ ಹೊರತು, ನಾವು ಮುಂದೂಡುತ್ತಿದ್ದೇವೆ, ಆದರೂ ಮುಂದೂಡುತ್ತಿಲ್ಲ; ನಾವದನ್ನು ಈಗ ಕೈಗೆತ್ತಿಕೊಳ್ಳುತ್ತಿಲ್ಲ, ಆದರೂ ನಾವು ಕೈಗೆತ್ತಿಕೊಳ್ಳುತ್ತಿದ್ದೇವೆ. ನಾವದನ್ನು ಮುಂದುವರಿಸಿಕೊಂಡು ಹೋಗುತ್ತಿಲ್ಲ, ಆದರೂ ನಾವು ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ ಎಂದೆನ್ನುವಂತಾಗಬಾರದು. ಆದುದರಿಂದ, ಈ ವಿಷಯವನ್ನು ಮುಂದೂಡುವುದೇ ಆದರೆ, ಅದು ಹೇಗಿದೆಯೋ ಹಾಗೆಯೇ, ಸರ್ಕಾರ ಸೂಕ್ತ ಸಮಯವನ್ನು ನಿಗದಿಪಡಿಸುವ ತನಕ ಮುಂದೂಡಬೇಕು.

**ಪಂಡಿತ ಎಂ. ಬಿ. ಭಾರ್ಗವ** (ಅಜ್ಮೀರ್) : ಕಾನೂನು ಮಂತ್ರಿಗಳ ಸೂಚನೆಯನ್ನು ನನಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಸದನದಲ್ಲಿ ಮುಂದೆಂದೂ ಮುಂದೂಡುವಿಕೆಯ ಸೂಚನೆಯನ್ನು ಮಂಡಿಸಬಾರದು ಎಂದು ಸಭಾಪತಿಗಳು ಅಜ್ಞೆ ಹೊರಡಿಸಬೇಕೆಂಬುದು ಅವರ ಇಚ್ಛೆಯೇ? ಆದರೆ ಹಾಗೆ ಮಾಡುವುದು ಸಂವೈಧಾನಿಕ ವಿಷಯವಾಗುತ್ತದೆ; ಮತ್ತು ಹಾಗೆ ಆಜ್ಞೆ ಹೊರಡಿಸುವುದು ಸಭಾಪತಿಗಳಿಗೆ ಬಿಟ್ಟಿದ್ದು. ಆದರೆ ನನಗೆ ತಿಳಿದಂತೆ, ಯಾವುದೇ ಸಮಯದಲ್ಲಿ ಮುಂದೂಡಿಕೆಯ ಸೂಚನೆ ಮಂಡಿಸುವುದು ಸದನದ ಪ್ರತಿಯೊಬ್ಬ ಸದಸ್ಯರ ಅನಿರ್ಬಂಧಿತ ಹಕ್ಕು. ಅದನ್ನು ಮಾನ್ಯ ಮಾಡುವುದು ಬಿಡುವುದು ಸಭಾಪತಿಗಳಿಗೆ ಬಿಟ್ಟಿದ್ದು. ಸೂಚನೆಯು ವಿಳಂಬೀ ಸೂಚನೆಯೆಂದು ಸಭಾಪತಿಗಳಿಗೆನಿಸಿದರೆ, ಅದಕ್ಕೆ ಅವರು ಅನುಮತಿ ನೀಡುವುದಿಲ್ಲ. ಒಂದು ವೇಳೆ ಸಭಾಪತಿಗಳು ಸೂಚನೆಗೆ ಮಾನ್ಯತೆ ನೀಡಿದರೂ ಅದನ್ನು ಪರಿಶೀಲಿಸಿ ಒಪ್ಪಿಕೊಳ್ಳುವುದು ಅಥವಾ ತಿರಸ್ಕರಿಸುವುದು ಸದನಕ್ಕೆ ಬಿಟ್ಟಿದ್ದು. ಆದರೆ ಅದನ್ನು ಸೂಚಿಸಲು ಸದಸ್ಯರಿಗಿರುವ ಹಕ್ಕು ಮಾತ್ರ ಅನಿರ್ಬಂಧಿತ; ಅವರು ಯಾವಾಗ ಬೇಕಾದರೂ ಮುಂದೂಡಿಕೆಯ ಸೂಚನೆಯನ್ನು ಮಂಡಿಸಬಹುದು. ವಿಭಾಗ ೨ ನ್ನು ಸದನದ ಮುಂದಿಟ್ಟು, ಮಸೂದೆಯ ಮೇಲಿನ ಚರ್ಚೆಯ ಯಾವುದೋ ಹಂತದಲ್ಲಿ ಅದನ್ನು ಮುಂದೂಡಲೇಬಾರದು ಎಂದು ಹೇಳಿದರೆ, ಅದು ಸಂವೈಧಾನಿಕ ವಿಷಯವಾಗುತ್ತದೆ.

**ಶ್ರೀ ನಝೀರುದ್ದೀನ್ ಅಹಮ್ಮದ್ :** ಅದು ಸಭಾಪತಿಗಳ ಒಪ್ಪಿಗೆಯ ಮೇಲೆ ನಿಂತಿದೆ.

**ಮಾನ್ಯ ಸಭಾಪತಿಗಳು :** ಮುಂದೆ ಮುಂದೂಡಿಕೆಯ ಸೂಚನೆಯನ್ನು ಮಂಡಿಸಲು ಬಿಡಬೇಕೆ ಅಥವಾ ಬಿಡಬಹುದೇ ಎಂಬುದರ ಬಗ್ಗೆ ಇಂದು ನಾನು ಯಾವ ಅಭಿಪ್ರಾಯವನ್ನು ವ್ಯಕ್ತಪಡಿಸಲಾರೆ. ಸದನದ ಮುಂದೆ ಅಂಥ ಸೂಚನೆ ಬಂದಾಗ ಪರಿಸ್ಥಿತಿ ಏನಿರುತ್ತದೆಯೋ ಅದರ ಮೇಲೆ ನನ್ನ ಅಭಿಪ್ರಾಯ ನಿಂತಿರುತ್ತದೆ. ಕೇವಲ ಮಸೂದೆಯ ಮುಂದೂಡುವಿಕೆಗೆ ಒಪ್ಪಿಗೆ ಪಡೆಯುವ ಉದ್ದೇಶದಿಂದ ವಿಳಂಬ ಮಾಡುವ ಯಾವ ಸೂಚನೆಯನ್ನು ಮಂಡಿಸಬಾರದು ಎಂಬ ಸಿದ್ಧಾಂತಕ್ಕೆ ಸದನವು ಸಂವಿಧಾನಾತ್ಮಕವಾಗಿ ಅಥವಾ ಕಾನೂನು ರೀತ್ಯಾ ಅಲ್ಲ – ನೈತಿಕವಾಗಿ ಬದ್ಧವಾಗಿದೆ. ಎಂಬುದು ಮಾನ್ಯ ಕಾನೂನು ಮಂತ್ರಿಗಳ ಅಭಿಪ್ರಾಯವಾಗಿರುವಂತೆ ಕಾಣುತ್ತದೆ.

**ಡಾ॥ ಅಂಬೇಡ್ಕರ್ :** ಹೌದು, ಅಷ್ಟೆ.

**ಮಾನ್ಯ ಸಭಾಪತಿಗಳು :** ಅದಷ್ಟೇ ಅವರ ಅಭಿಪ್ರಾಯವಾಗಿರುವಂತೆ ಕಾಣುತ್ತದೆ. ಅಷ್ಟೇ ಹೊರತು, ಸದಸ್ಯರ ಸಂವಿಧಾನಾತ್ಮಕ ಹಕ್ಕುಗಳಿಗೆ ಚ್ಯುತಿಯುಂಟು ಮಾಡುವುದು ಅವರ ಉದ್ದೇಶವಲ್ಲ. ಆದುದರಿಂದ, ನಾನು ಸೂಚಿಸುವುದೇನೆಂದರೆ, ಮಸೂದೆಯ ವಿಭಾಗ ೨ ನ್ನು ಸದನದಲ್ಲಿ ಮಂಡಿಸಿ, ಅನಂತರ ಅದನ್ನು ಮುಂದೂಡುವುದರ ಬದಲು, ಮಸೂದೆಯ ವಿಭಾಗ ೨ ನ್ನು ಮಂಡಿಸದೆಯೇ ನೇರವಾಗಿ ಮುಂದೂಡೋಣ. ಜೊತೆಗೆ, ಕೇವಲ ಮುಂದೂಡುವಿಕೆಗೆ ಒಪ್ಪಿಗೆ ಪಡೆಯುವ ಉದ್ದೇಶವೊಂದನ್ನು ಬಿಟ್ಟು ಮತ್ತಾವ ಉದ್ದೇಶವೂ ಇಲ್ಲದೆ ಅಂಥ ಸೂಚನೆಯನ್ನು ಮಂಡಿಸಬಾರದು, ಎಂಬ ನಮ್ಮ ನೈತಿಕ ಬದ್ಧತೆಯ ಬಗೆಗಿನ ಒಂದು ಹೇಳಿಕೆಯನ್ನೂ ಸೇರಿಸೋಣ.

**ಮಾನ್ಯ ಕೆಲವು ಸದಸ್ಯರು :** ಬೇಡ, ಬೇಡ.

**ಮಾನ್ಯ ಸಭಾಪತಿಗಳು :** ಈ ವಿಷಯ ಬಹಳ ಮುಖ್ಯವಾದುದು. ಈ ಅರ್ಥ ಬರುವಂತೆ ಕಾನೂನು ಮಂತ್ರಿಗಳು ಹೇಳಿಕೆ ನೀಡಿದರು. ನಾನು ಅವರ ನಿಲುವನ್ನೂ ಅದರ ಹಿಂದಿರುವ ಶಕ್ತಿಯನ್ನೂ ಮನಗಂಡಿದ್ದರೂ, ನನ್ನ ಅಂತಿಮ ಅಭಿಪ್ರಾಯವನ್ನು ನಾನು ವ್ಯಕ್ತಪಡಿಸಿಲ್ಲ. ನನ್ನ ಒಪ್ಪಿಗೆ ಇನ್ನೂ ಮುಕ್ತವಾಗಿದೆ. ಈ ಸದನದ ಪ್ರತಿಯೊಬ್ಬ ಸದಸ್ಯರೂ ಮುಂದೂಡಿಕೆಯ ಸೂಚನೆಯನ್ನು ಮಂಡಿಸಲು ಇಚ್ಛಿಸಿದರೆ, ಹಾಗೆ ಮಾಡುವುದನ್ನು ತಡೆಯಲು ಸಾಧ್ಯ ಎಂದು ಯಾರೂ ಯೋಚಿಸಕೂಡದು. ಅದು ವಿಲಂಬೀ ಸೂಚನೆ ಎಂಬ ಆಧಾರದ ಮೇಲೆ, ಸಭಾಪತಿಗಳು ಅದನ್ನು ಮಂಡಿಸಲು ಅವಕಾಶ ನೀಡದಿರಬಹುದು. ಆದರೆ ಅದು ಸೂಚನೆಯ ಮಂಡನೆಯ ಸಮಯದಲ್ಲಿದ್ದ ಪರಿಸ್ಥಿತಿಯನ್ನು ಅವಲಂಬಿಸುತ್ತದೆ. ನನ್ನ ದೃಷ್ಟಿಯಲ್ಲಿ ವಿಭಾಗ ೨ನ್ನು ಮಂಡಿಸಿ, ಅನಂತರ ಅದನ್ನು ಮುಂದೂಡಬೇಕೋ ಬೇಡವೋ ಎಂಬುದು ಮುಖ್ಯ ವಿಷಯವಲ್ಲ. ಆದುದರಿಂದ, ನಾನು ಈಗಾಗಲೇ ಹೇಳಿರುವಂತೆ, ಈ ಮಸೂದೆಗೆ ಸಂಬಂಧಿಸಿದಂತೆ ಯಾರೋ ವಿಲಂಬೀ ಸೂಚನೆಯನ್ನು ಮಂಡಿಸಿ, ಅದನ್ನು ಅನಂತರ ಮುಂದಕ್ಕೆ ಹಾಕಬಾರದು ಎಂಬ ಸಿದ್ಧಾಂತಕ್ಕೆ ಈ ಸದನದ ಸದಸ್ಯರು ನೈತಿಕವಾಗಿ ಬದ್ಧರಾಗಿದ್ದಾರೆಂದು ಘೋಷಿಸುತ್ತೇನೆ. ಅಂಥ ಸೂಚನೆಯನ್ನು ಮಂಡಿಸಬಹುದೆ ಅಥವಾ ಮಂಡಿಸಬಾರದೆ ಎಂಬ ಸಂವಿಧಾನಾತ್ಮಕ ಸಮಸ್ಯೆಯನ್ನು ಮತ್ತೆ ಎತ್ತುವುದಾಗಲಿ ಅಥವಾ ಮುಂದಿನ ಸಾರಿಗೆಂದು ಅದನ್ನು ಝೀವಂತವಿಡುವುದಾಗಲಿ ನನಗಿಷ್ಟವಿಲ್ಲ. ನಾನು ಇಂದಿನ ವ್ಯವಹಾರವನ್ನು ಮುಂದಕ್ಕೆ ಹಾಕುತ್ತೇನೆ ಮತ್ತು ಸರ್ಕಾರವು.......

**ಡಾ॥ ಅಂಬೇಡ್ಕರ್ :** ಹಾಗಾದರೆ ಈ ಸೂಚನೆಗಳನ್ನು ಹೊರಗಿಡುವುದೆ?

**ಮಾನ್ಯ ಸಭಾಪತಿಗಳು :** ಸೂಚನೆಗಳು ಬಿದ್ದು ಹೋಗುತ್ತವೆ.

**ಡಾ॥ ಅಂಬೇಡ್ಕರ್ :** ಹಾಗಾದರೆ, ಈ ಸೂಚನೆಗಳ ಗತಿ ಏನು?

**ಮಾನ್ಯ ಸಭಾಪತಿಗಳು :** ಸದಸ್ಯರು ಸೂಚನೆಗಳಿಗಾಗಿ ಒತ್ತಾಯಿಸುತ್ತಿಲ್ಲ. ಒಂದು ವೇಳೆ ಅವರು ಒತ್ತಾಯಿಸಿದ್ದರೆ, ಆಗ ನಾನು ಅವನ್ನು ಸದನದ ಮುಂದೆ ಇಡಲೇಬೇಕಾಗಿತ್ತು.

**ಮಾನ್ಯ ಕೆಲವು ಸದಸ್ಯರು :** ಆದರೆ ಅವರಾರೂ ಹಾಗೆ ಹೇಳಿಲ್ಲ.

**ಮಾನ್ಯ ಸಭಾಪತಿಗಳು :** ನಾನು ಅವರನ್ನು ಕೇಳಿದ್ದೇನೆ.

**ಶ್ರೀ ಆರ್. ಕೆ. ಚೌಧರಿ :** ಈಗ ನೈತಿಕ ಪ್ರಶ್ನೆಯನ್ನು ಪ್ರಸ್ತಾಪಿಸಿರುವುದರಿಂದ, ನಾನೊಂದು ಸೂಚನೆಯನ್ನು ಸದನದ ಮುಂದೆ ಇಡಬಯಸುತ್ತೇನೆ. ಅದು ವಿಲಂಬೀ ಸೂಚನೆಯೋ ಅಲ್ಲವೋ ಎಂಬುದನ್ನು ಸದನವೇ ತೀರ್ಮಾನಿಸಲಿ.

**ಮಾನ್ಯ ಸಭಾಪತಿಗಳು :** ಹಾಗಾದರೆ ಪರಿಸ್ಥಿತಿ ಸ್ಪಷ್ಟವಾಗೇ ಇದೆ. ನಾನು ಅದನ್ನು ನೇರವಾಗಿ ಸದನದ ಮುಂದಿಡುತ್ತೇನೆ. ಅನಂತರ ನಾವು ಮುಂದುವರಿಯಬಹುದು. ನಾನೀಗ ಶ್ರೀ ಆರ್. ಕೆ. ಚೌಧರಿಯವರ ಸೂಚನೆಯನ್ನು ಸದನದ ಮುಂದಿಡುತ್ತೇನೆ.

**ಶ್ರೀ ಆರ್. ಕೆ. ಚೌಧರಿ :** ಮಾನ್ಯರೆ, ವಿವೇಚಿತ ಮತ್ತು ಪುನರ್ ಗಣನೆಯ ನಂತರ, ನನ್ನ ಸೂಚನೆಯನ್ನು ಒತ್ತಾಯಿಸಬಾರದೆಂದು ನಾನು ನಿರ್ಧರಿಸಿದ್ದೇನೆ.

**ಮಾನ್ಯ ಸಭಾಪತಿಗಳು :** ಈಗ ವಿಷಯದ ಮೇಲಿನ ಪರಿಶೀಲನೆಯು ವಿವೇಚಿತವಾಗಿರುವುದರಿಂದ ಅದನ್ನು ಮುಂದಕ್ಕೆ ಹಾಕೋಣ, ಮತ್ತು ಸರ್ಕಾರವು ಒಂದು ದಿನವನ್ನು ನಿಗದಿಪಡಿಸಿ......

**ಮಾನ್ಯ ಕೆಲವು ಸದಸ್ಯರು :** ಸದನದ ಅಪ್ಪಣೆ ಕೇಳಿ ಅವರು ಅದನ್ನು ಹಿಂತೆಗೆದುಕೊಳ್ಳಬೇಕು.

**ಮಾನ್ಯ ಸಭಾಪತಿಗಳು :** ಈ ಮುಂದೂಡಿಕೆಯ ಸೂಚನೆಯು ಇನ್ನೂ ಪರಿಶೀಲನೆಯಲ್ಲಿದೆಯೆ ಎಂಬುದನ್ನು ನಾನು ತಿಳಿದುಕೊಳ್ಳಬೇಕಾಗಿದೆ.

**ಮಾನ್ಯ ಸಭಾಪತಿಗಳು :** ಎಲ್ಲವೂ ಬಿದ್ದುಹೋಗಿವೆ. ಅವರು ಮಂಡಿಸಿದ ಮುಂದೂಡಿಕೆಯ ಸೂಚನೆಗಳು ಬಿದ್ದುಹೋಗಿವೆ. ಈಗೇನೂ ಉಳಿದಿಲ್ಲ. ಅವರು ಕೇಳಿದರು, ಆದರೆ ಅವರು ಒತ್ತಾಯಿಸುತ್ತಿಲ್ಲ. ಮತ್ತೆ ಕೆಲವರು ಅಂಥವೇ ಸೂಚನೆಗಳನ್ನು ಮಂಡಿಸಬೇಕೆಂದು ಕೇಳಿದ್ದರು. ಆದರೆ, ಅವರು ಅವುಗಳನ್ನು ಮಂಡಿಸುವಂತೆ ಕೇಳಿದಾಗ, ಅವರು ಸದನದಲ್ಲಿ ಹಾಜರಿರಲಿಲ್ಲ. ಪರಿಸ್ಥಿತಿ ಹೀಗಿದೆ. ಈಗ, ಚರ್ಚೆಯು ಮುಂದೂಡಲ್ಪಟ್ಟಿದೆ. ಎಲ್ಲಕಾಲಕ್ಕೂ ಎಲ್ಲ ಜನರನ್ನೂ ಬದ್ಧರಾಗಿಡುವುದು ಸಾಧ್ಯವಿಲ್ಲ. ಅಂಥ ಪರಿಸ್ಥಿತಿ ಬಂದರೆ, ಅದನ್ನು ಆಗ ಎದುರಿಸೋಣ.

**ಶ್ರೀ ತ್ಯಾಗಿ :** ಯಾರು ಮಂಡಿಸಿದರೋ ಅವರು....

**ಮಾನ್ಯ ಸಭಾಪತಿಗಳು :** ಮಾನ್ಯ ಸದಸ್ಯರು ಚರ್ಚೆಯನ್ನು ಗಮನವಿಟ್ಟು ಕೇಳಿಸಿಕೊಂಡಿಲ್ಲದಿರುವುದು ದುರದೃಷ್ಟಕರ. ಈಗ ನಾನು ಯಾವ ಸೂಚನೆಯನ್ನೂ ಸದನದಲ್ಲಿ ಮಂಡಿಸಿಲ್ಲ. ನಾನು ಸೂಚನೆಯನ್ನೆ ಸದನದಲ್ಲಿ ಮಂಡಿಸಿರದಿದ್ದರೆ, ಅದನ್ನು ಮತಕ್ಕೆ ಹಾಕುವ ಅಥವಾ ಹಿಂತೆಗೆದುಕೊಳ್ಳುವ ಅವಕಾಶವೇ ಇರುವುದಿಲ್ಲ.

**ಶ್ರೀ ತ್ಯಾಗಿ :** ಹಾಗಾದರೆ, ಇಲ್ಲಿ ಯಾವ ನೈತಿಕ ಹೊಣೆಗಾರಿಕೆಯೂ ಇಲ್ಲವೆ?

**ಮಾನ್ಯ ಸಭಾಪತಿಗಳು :** ನೈತಿಕ ಹೊಣೆಗಾರಿಕೆ ಇದೆ.

**ಶ್ರೀ ತ್ಯಾಗಿ :** ಹಾಗಾದರೆ ನಾನು ಅನೈತಿಕವಾಗಿರಲು ಇಚ್ಛಿಸುತ್ತೇನೆ.

**ಶ್ರೀಮತಿ ದುರ್ಗಾಬಾಯಿ :** ಸೂಚನೆಗಳನ್ನು ಮಂಡಿಸಿದರು, ಆದರೆ ಒತ್ತಾಯಿಸಲಿಲ್ಲ.

**ಮಾನ್ಯ ಸಭಾಪತಿಗಳು :** ಈ ಸೂಚನೆಗಳನ್ನು ಮಂಡಿಸಲೇ ಇಲ್ಲ. ಅವುಗಳನ್ನು ನಾನು ಸದನದ ಮುಂದೆ ಇಟ್ಟಿಲ್ಲ.

**ಶ್ರೀಮತಿ ದುರ್ಗಾಬಾಯಿ :** ಮಾನ್ಯ ಸದಸ್ಯರು ಮಂಡಿಸಿದರು, ಆಮೇಲೆ ತಮ್ಮ ಸೂಚನೆಯನ್ನು ಮಂಡಿಸಬೇಕೆಂದು ಒತ್ತಾಯಿಸಲಿಲ್ಲ.

**ಮಾನ್ಯ ಸಭಾಪತಿಗಳು :** ಹೌದು, ಅವುಗಳಲ್ಲಿ ವ್ಯತ್ಯಾಸವೇನುಂಟಾಗಿದೆ? ಒಂದು ವೇಳೆ, ಅವರು ತಮ್ಮ ಸೂಚನೆಯನ್ನು ಮಂಡಿಸಿಯೂ, ಮತ ಚಲಾಯಿಸಿದಾಗ ಬಿದ್ದು ಹೋದರೆ, ಅಂಥ ಸೂಚನೆಯನ್ನು ಮತ್ತೆಂದೂ ಮಂಡಿಸಬಾರದು ಎಂದರ್ಥವೆ?

**ಶ್ರೀ ತ್ಯಾಗಿ :** ಈ ದಿನ ಮಾತ್ರ ನಾವು ನೈತಿಕವಾಗಿ ಬದ್ಧರಾಗಿದ್ದೇವೆ.

**ಮಾನ್ಯ ಸಭಾಪತಿಗಳು :** ಆ ನೈತಿಕ ಬದ್ಧತೆ ಸಾರ್ವಕಾಲಿಕ. ಇದರ ಮೇಲೆ ಹೆಚ್ಚಿನ ಚರ್ಚೆ ಬೇಡ. ಕಾರ್ಯಕ್ರಮದ ಮುಂದಿನ ಘಟಕವನ್ನು ಕೈಗೆತ್ತಿಕೊಳ್ಳೋಣ.

**ಶ್ರೀಮತಿ ರೇಣುಕಾ ರೇ** (ಪಶ್ಚಿಮ ಬಂಗಾಳ) : ಮೇಲೆದ್ದರು.

**ಮಾನ್ಯ ಸಭಾಪತಿಗಳು :** ಈ ವಿಷಯ ಕೊನೆಗೊಂಡಿದೆ, ಹಾಗೂ ಇದರ ಮೇಲೆ ಮುಂದುವರೆದ ಚರ್ಚೆ ಬೇಡ.

* * * *

# ವಿಷಯಸೂಚಿ


**ಅ**

ಅಂಬಾವೇದ ೫೫೪

ಅಂಬೇಡ್ಕರ್ ೩, ೪, ೯, ೨೧, ೩೪, ೩೭, ೨೪೯, ೨೫೧, ೨೫೨, ೨೫೩, ೨೫೪, ೨೫೮, ೨೬೦, ೨೬೧, ೨೬೫, ೨೬೯, ೨೭೦, ೨೭೨, ೨೭೩, ೨೭೫, ೨೭೬, ೨೭೮, ೨೮೦, ೨೮೧, ೨೮೨, ೨೮೩, ೨೮೪, ೨೮೬, ೨೯೪, ೨೯೫, ೨೯೬, ೨೯೮, ೨೯೯, ೩೦೦, ೩೦೧, ೩೦೨, ೩೧೨, ೩೧೩, ೩೧೪, ೩೧೬, ೩೨೦, ೩೨೧, ೩೨೨, ೩೨೩, ೩೨೪, ೩೨೬, ೩೨೮, ೩೨೯

ಅಗ್ಗರವಾಲಾಜ ೨೪೨

ಅಚಿಂತರಾಮ ೨೪೧, ೨೪೬, ೨೫೪

ಅಜ ೪೩೭

ಅಜಿತ್ ೬೯೮

ಅಜಿತ್ ಪ್ರಸಾದ್ ಜೈನ್ ೬೯೮

ಅಜ್ಮೀರ್ ೨೬೦, ೨೮೦, ೩೩೭, ೫೧೫, ೫೬೭, ೫೬೯, ೭೫೩

ಅತುಲ್ ಗುಪ್ತ ೪೫೪

ಅದ್ವೈತ ೪೦೩, ೭೧೬

ಅನಂತಶಯನಮ್ ಅಯ್ಯಂಗಾರ್ ಎಂ. ೪, ೧೧, ೩೮, ೨೪೧, ೨೪೬, ೨೮೬, ೩೪೫, ೪೧೦, ೪೧೨, ೪೯೫, ೫೪೦, ೫೫೭, ೫೮೨, ೬೨೩, ೬೫೨, ೬೭೭, ೭೧೫, ೭೫೦, ೭೫೧

ಅನ್ನಿಮಾಯಸ್ಕರೀನಿ ೩೮೬

ಅನ್ನೆಮಸ್ಕರೆನು ೨೪೬

ಅನ್ನೀ ಮಾಸ್ಕರೀನ್ ೨೫೪

ಅಬು ಹನೀಫಾ ೫೨೯

ಅಭಯಚರಣ ಮಲ್ಲಿಕ್ ೬೨೨

ಅಮೃತ್ ಬಜಾರ್ ಪತ್ರಿಕಾ ೬೭೮

ಅಮೆರಿಕ ೧೯, ೩೮೦, ೪೦೪, ೫೭೪, ೬೨೩, ೬೫೧, ೬೫೨, ೭೦೮, ೭೧೪

ಅಮ್ಮು ಸ್ವಾಮಿನಾಥನ್ ೪, ೪, ೧೨, ೩೮, ೨೬೨, ೩೩೦, ೪೭೧

ಅರುಣಚಂದ್ರ ಗುಹಾ ೫೧೭

ಅರೇಬಿಯ ೫೨೮, ೫೭೯

ಅರ್ಜುನ ೩೮೩

ಅರ್ಜೆಂಟೈನ ೭೧೪

ಅರ್ಥಶಾಸ್ತ್ರ ೨೮೨, ೨೮೩

ಅಲಹಾಬಾದ್ ೨೪೧, ೩೬೦, ೫೫೯, ೬೯೦

ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ೪, ೧೧, ೩೮, ೬೧೨, ೬೧೫, ೬೧೯, ೬೨೦, ೬೨೧, ೬೪೪, ೬೫೫, ೬೬೦, ೬೭೬, ೬೭೮, ೬೯೧

ಅಸ್ಪೃಶ್ಯ ೬೭೩

ಅಸ್ಸಾಂ ೩೨, ೩೩, ೫೧೫, ೫೬೫, ೫೭೩, ೫೮೩, ೫೮೭, ೫೯೦, ೬೫೯, ೭೩೪, ೭೪೪

ಅಸ್ಸೀರಿಯಾ ೪೨೦

ಅಹಮದಾಬಾದ್ ೬೬೪

ಅಹಮದ್‌ನಗರ ೬೩೭

ಅಳಗೇಶನ್ ಓ. ವಿ. ೭೨೦, ೭೨೧, ೭೨೨, ೭೨೩, ೭೨೪, ೭೨೬, ೭೨೭, ೭೨೮, ೭೨೯, ೭೩೦

**ಆ**

ಆಂಟ್‌ವರ್ಪ್ ೬೩೬

ಆಂಧೀ ೪೪೨

ಆಚಾರ್ಯ ಕೃಪಲಾನಿ ೩೧೭, ೩೨೦, ೩೨೧, ೩೨೨, ೩೨೩, ೩೩೪, ೩೭೧, ೬೪೮, ೬೪೯, ೬೫೦,

೬೫೧, ೬೫೨, ೬೫೩, ೬೫೫, ೬೫೭, ೬೫೮, ೬೫೯, ೬೬೩, ೬೬೪, ೬೭೦
ಆರ್ಯ ೨೪೩, ೫೯೦, ೬೦೩, ೬೦೫
ಆರ್ಯವಿವಾಹ ೨೪೩
ಆರ್ಯಸಮಾಜ ೨೪೪
ಆಲ್ಬರ್ಟ್ ೬೪೮
ಆಶುತೋಷ ಮುಖರ್ಜಿ ೫೫೨
ಆಸ್ಟ್ರಿಯಾ ೫೩೬

## ಇ

ಇಂಗ್ಲಿಷ್ ೧೩, ೧೫, ೧೯, ೨೦, ೨೮, ೨೫೨, ೩೨೫, ೩೪೧, ೪೦೪, ೪೦೮, ೫೯೮, ೬೪೫, ೬೪೬, ೬೫೪, ೬೬೨, ೭೪೫
ಇಂಗ್ಲೆಂಡ್ ೧೬, ೬೧೫, ೬೧೬, ೬೨೩, ೬೩೬, ೬೩೮, ೬೪೨, ೬೪೬, ೬೪೮, ೬೫೨, ೬೫೪, ೬೭೨
ಇಂಡಿಯಾನಾ ೧೯
ಇಡಪಲ್ಲಿ ೧೪೬
ಇಸ್ಲಾಂ ೩೩, ೩೯೭, ೩೯೮, ೪೧೪, ೫೭೬, ೫೯೩, ೫೯೮

## ಈ

ಈಜಿಪ್ಟ್ ೫೭೨, ೬೩೭
ಈಶ್ವರಚಂದ್ರ ೬೨೨, ೬೬೩, ೬೭೮

## ಉ

ಉಗ್ರವಾದಿ ೪೪೮
ಉತ್ಕಲ ೬೯೩, ೭೦೮, ೭೦೯
ಉತ್ಕ್ರಾಂತಿ ೫೯೫, ೬೦೦, ೬೦೪
ಉಪನಿಷತ್ತು ೨೪೩, ೩೮೨, ೬೪೯
ಉಪೇಂದ್ರನಾಥ ಬರ್ಮನ್ ೨೫೧
ಉಭಯಭಾರತಿ ೩೮೬, ೩೮೭
ಉರ್ದು ೩೫೭

## ಋ

ಋಷಿಋಣ ೬೦೪
ಋಷೀಂದ್ರನಾಥ ೪೭೨

## ಎ

ಎಡ್ಮಂಡ್ ಬರ್ಕ್ ೨೫, ೨೫, ೨೯೬, ೭೨೧
ಎನ್ನಿ ಮೆಸ್ಕಾರೀನ್ ೪೩೫, ೪೭೩

## ಏ

ಏಕೋದರ ೨೩೬, ೨೩೭
ಏಷ್ಯಾ ೩೮೦

## ಒ

ಒರಿಸ್ಸಾ ೨೬೯, ೩೦೬, ೩೮೦, ೩೯೩, ೪೧೨, ೪೭೦, ೫೦೩, ೫೮೦, ೫೮೨, ೬೨೪

## ಓ

ಓಂ ೩೯೬
ಓಪಿಯಮ್ ೬೦೧
ಓಸ್‌ಬಾರನ್ ೫೪೪
ಓಸ್ಲೋ ೩೩೯

## ಕ

ಕಣ್ವ ೩೯೩, ೪೩೪
ಕನ್ನಾಟ್ ಪ್ಲೇಸ್ ೬೦೪
ಕನ್ಯಾಕುಮಾರಿ ೩೮೬, ೫೬೬, ೬೮೨
ಕಮಲಾ ಚೌಧರಿ ೬೨೭, ೬೭೧
ಕರುಣಾಕರನ್ ಮೆನನ್ ಎ. ೪೩೫, ೪೩೫, ೪೫೫, ೫೬೧, ೬೦೬
ಕರೇವಾ ೩೫೧
ಕರ್ಮಸಿದ್ಧಾಂತ ೬೨೯
ಕರ್ವಾರಿ ೨೪೧
ಕಲ್ಕತ್ತ ೨೪೧, ೩೫೨, ೩೬೯, ೪೩೭, ೪೪೩, ೪೪೪,

೪೫೫, ೫೫೨, ೫೫೩, ೫೫೯, ೫೮೪, ೬೧೯, ೬೩೭
ಕಸ್ತೂರಬಾ ೩೯೬
ಕಾಂಗ್ರೆಸ್ ೧೪, ೩೧೯, ೩೬೮, ೩೭೨, ೪೫೪, ೬೩೧, ೬೩೭, ೬೪೭, ೬೫೨, ೬೫೩, ೭೨೨, ೭೨೬
ಕಾಬ ೩೩೮
ಕಾಮೇಶ್ವರ್ ೬೩೦, ೬೩೧
ಕಾಲಿದಾಸ ೪೩೮
ಕಾಶ್ಮೀರ್ ೪೪೪
ಕಿಲಿಮನ್ನೂರ ೧೪೬
ಕಿಶೋರಿ ಮೋಹನ್ ತ್ರಿಪಾಠಿ ೪, ೧೧, ೩೮
ಕುರಾನ್ ೫೨೯
ಕುಲಧರ ಛಾಲಿಯಾ ೫೬೫
ಕೃಷ್ಣಚಂದ್ರ ಶರ್ಮ ೩೧೫, ೪೧೭, ೪೫೪, ೬೦೦, ೬೦೧, ೬೦೨, ೬೦೪, ೬೦೫, ೬೧೦, ೬೬೩
ಕೃಷ್ಣಮಾಚಾರಿ ಟಿ.ಟಿ. ೪೫೮, ೫೮೦
ಕೃಷ್ಣಮೂರ್ತಿರಾವ್ ಎಸ್. ವಿ. ೩೭೪, ೩೯೨, ೪೨೬, ೬೩೯, ೭೦೮
ಕೃಷ್ಣವಾಕ ೪೮
ಕೃಷ್ಣಸ್ವಾಮಿಭಾರತಿ ಎಲ್. ೨೪, ೩೮, ೨೫೦, ೨೫೧, ೨೭೬, ೩೦೨, ೩೦೪, ೩೦೯, ೩೧೦, ೩೩೧, ೩೩೨, ೩೪೧, ೩೫೨, ೩೫೩, ೩೫೬, ೩೬೧, ೩೬೩, ೩೭೩, ೩೭೪, ೩೮೪, ೩೯೬, ೩೯೭, ೩೯೮, ೩೯೯, ೪೦೧, ೪೦೪, ೪೧೬, ೪೨೨, ೪೨೩, ೪೩೦, ೪೩೪, ೪೪೨, ೪೫೪, ೪೫೫, ೪೫೬, ೪೫೮, ೪೬೬, ೫೪೭, ೫೪೮, ೫೭೫
ಕೇಶವಚಂದ್ರಸೇನ್ ೬೨೨, ೬೨೨, ೬೨೫
ಕೇಶವರಾವ್ ವಿ.ಪಿ. ೩೮
ಕೇಶವರಾವ್ ವಿ.ಸಿ. ೪, ೧೨, ೩೮
ಕೈಸರ್ ೬೪೭, ೬೪೮
ಕೊಚ್ಚಿನ್ ೪೮, ೪೯, ೧೪೬, ೩೨೩, ೬೭೧
ಕೊಡಗು ೫೬೭
ಕೊವಾಸ್‌ಜಿ ಜೆಹಾಂಗೀರ್ ೬೬೩
ಕೌಟಿಲ್ಯ ೨೮೨, ೨೮೩, ೬೩೪
ಕ್ರಿಶ್ಚಿಯನ್ ೧೪, ೩೨, ೩೭, ೪೫, ೩೨೩, ೩೪೯, ೩೫೩, ೩೭೮, ೪೧೧, ೪೧೨, ೪೧೬, ೪೧೭, ೪೮೧, ೪೮೨, ೫೭೮, ೫೯೧, ೫೯೨, ೫೯೩, ೫೯೭, ೬೦೧, ೬೦೬, ೬೬೬, ೬೭೦
ಕ್ರಿಸ್ತ ೫೯೩
ಕ್ರಿಸ್‌ಮಸ್ ೬೧೭
ಕ್ರೆಮರ್ ೫೨೮
ಕ್ರೈಸ್ತ ೫೩೯, ೬೩೧, ೬೭೮, ೬೯೬
ಕ್ಲೀಬೇಚ ೪೪೮

## ಖ

ಖಸಿಯಾ ೩೩
ಖಾಂಡೇಕರ್ ಹೆಚ್. ಜೆ. ೬೯೭, ೭೦೦
ಖಾಡೇಕರ್ ಹೆಚ್. ಜೆ. ೬೨೪
ಖುದಾಭಕ್ಷ್ ೫೨೮
ಖುರ್ಷಿದ್ ಲಾಲ್ ೪, ೧೨, ೩೮, ೫೦೭, ೫೦೮, ೫೪೩
ಖೈಬರ್ ೩೮೬

## ಗ

ಗಂಗಾಲಹರಿ ೬೦೨
ಗಾಂಧಿ ೨೪೫, ೨೪೬, ೨೫೩, ೩೨೪, ೩೨೯, ೩೬೮, ೩೮೧, ೩೯೫, ೩೯೬, ೪೩೩, ೬೧೦, ೬೧೧, ೬೨೯, ೬೩೦, ೬೩೮, ೬೬೬, ೭೧೬, ೭೨೨
ಗಾಡ್ಗೀಳ್ ಎನ್. ವಿ. ೪೩೩, ೪೩೮, ೪೪೬, ೪೪೮, ೪೫೧
ಗಾರ್ಗಿ ೩೮೬
ಗಿಯಾನಿ ಗುರುಮುಖ ಸಿಂಗ ಮುಸಾಫೀರ್ ೨೪೧, ೨೪೬
ಗೀತಾ ೫೯೦

ಗುಜರಾತ್ ೫೬೬, ೬೮೨, ೬೯೧
ಗುಜರಾತಿ ೭೪೫
ಗೋಕುಲ್‌ಭಾಯ್ ದೌಲತ್‌ರಾಮ್ ಭಟ್ ೬೧೦, ೬೬೧, ೬೬೨, ೬೬೩, ೬೬೯, ೬೭೦, ೬೭೨, ೬೭೩, ೬೯೪, ೭೦೩
ಗೋದಾ ೨೭೪, ೨೮೫, ೩೪೮, ೪೯೭
ಗೋಯಂಕ ೨೪೧, ೨೪೬, ೨೫೪, ೫೪೩
ಗೋವಾ ೫೯೭, ೫೯೮, ೭೪೦
ಗೋವಿಂದ ಮಾಳವೀಯ, ಪಂಡಿತ ೪೬೮, ೫೯೦, ೬೫೬, ೬೯೮, ೬೯೯, ೭೨೬, ೭೫೨
ಗೌರ್ ಎಚ್.ಎಸ್. ೨೪೩, ೨೪೪, ೨೪೯, ೬೬೬, ೬೭೦
ಗ್ರೀಕರು ೬೦೦
ಗ್ರೀಸ್ ೪೨೦, ೫೭೨
ಗ್ವಾಲಿಯರ್ ೨೮

### ಚ

ಚಂದ್ರದಾರಿ ೨೪೧
ಚಿಮಣ್‌ಲಾಲ್ ಸೆಟಲ್‌ವಾಡ್ ೬೬೫
ಚಿರಾಪುಂಜಿ ೩೮೬
ಚೈನಾ ೬೦೧, ೬೩೮

### ಛ

ಛಾದರ್ ೩೫೧

### ಜ

ಜಗಜೀವನರಾಂ ೩೧೩, ೩೨೧, ೩೬೨, ೫೭೧
ಜಮ್ಮು ೪೪
ಜಯಪಾಲ ಕಪೂರ್ ೨೬೫
ಜಯಸ್ವಾಲ್ ೬೦೨
ಜರ್ಮನ್ ೩೯೪, ೫೨೮, ೫೫೬
ಜರ್ಮನಿ ೫೫೬, ೬೪೨, ೬೪೩, ೬೪೭
ಜವಾಹರ್‌ಲಾಲ್ ನೆಹರು ೬೫೬, ೬೬೮, ೬೭೪, ೭೩೦, ೭೪೬, ೭೫೨
ಜಸಪತರಾಯ್(ಜೆ.ಆರ್.) ಕಪೂರ್ ೨೫೪, ೨೫೬, ೨೫೭, ೨೬೪, ೨೬೫, ೨೬೬, ೩೧೦, ೫೨೨, ೭೪೪
ಜಾಜೂ ಸೀತಾರಾಮ ಎಸ್. ೬೦೯, ೬೧೦, ೬೧೧, ೬೧೨
ಜಾಟ್ ೨೫೨, ೩೨೯, ೩೫೬, ೩೫೭, ೬೩೪
ಜಿನ್ನಾ ೫೨೯
ಜೀಮೂತವಾಹನ ೫೫೬
ಜುಂಜನವಾಲ ೩೦೫, ೩೯೬
ಜೆರೂಸಲಂ ೫೭೯
ಜೈನಧರ್ಮ ೨೨೮, ೨೨೯, ೩೯೮
ಜೈಮಿನಿ ೬೯೦
ಜೊರಾಷ್ಟ್ರ ೫೯೩
ಜೊರಾಷ್ಟ್ರಿಯನ್ ೫೯೨, ೫೯೩
ಜೊಸೆಫೈನ್ ೫೩೬
ಜೋಗೇಂದ್ರನಾಥ ಮಂಡಲ ೪೭೩, ೪೭೮, ೪೭೯, ೪೮೦, ೪೮೨, ೫೪೫
ಜೋನ್ ಆಫ್ ಆರ್ಕ್ ೬೪೦
ಜ್ಯೂ ೪೮೧, ೪೮೨, ೫೯೮

### ಬ

ಬಕ್ಷಿ ಟೇಕ್‌ಚಂದ್ ೨೪೧, ೨೪೯, ೨೫೩, ೨೫೪, ೨೬೪

### ಟ

ಟ್ರಾವಂಕೂರು ೪೮, ೪೩೫

### ಠ

ಠಕ್ಕ ೬೪೯
ಠಾಕುರದಾಸ್ ಭಾರ್ಗವ ಪಂಡಿತ ೪, ೯, ೩೯, ೨೪೧, ೨೪೬, ೨೪೭, ೨೪೯, ೨೫೨, ೨೫೪, ೨೫೫, ೨೫೭, ೨೫೮, ೨೬೦, ೨೬೧, ೨೬೨, ೨೭೨, ೨೯೭, ೨೯೯, ೩೦೦, ೩೦೬, ೩೨೪, ೩೨೫,

೩೨೬, ೩೩೦, ೩೩೧, ೩೩೨, ೩೩೪, ೩೩೫, ೩೩೬, ೩೩೮, ೩೪೦, ೩೪೧, ೩೪೨, ೩೪೩, ೩೪೪, ೩೪೫, ೩೪೬, ೩೪೯, ೩೫೦, ೩೫೧, ೩೫೨, ೩೫೩, ೩೫೪, ೩೫೬, ೩೫೭, ೩೫೮, ೩೬೦, ೩೬೭, ೩೭೨, ೩೭೩, ೩೮೦, ೩೮೩, ೩೮೪, ೩೯೦, ೩೯೧, ೩೯೨, ೩೯೩, ೩೯೪, ೪೧೩, ೪೫೯, ೪೬೦, ೫೬೩, ೬೦೦, ೭೩೭

**ಡ**

ಡೆರೋ ಫಹ್ರೆರ್ ಹಿಟ್ಲರ್ ೩೯೪

ಡೇನಿಯಲ್ ೫೮೮

**ತ**

ತಜಮುಲ್ ಹುಸೇನ ೩೦೩, ೩೦೯, ೩೧೫, ೩೨೦, ೩೨೨, ೩೩೧, ೩೩೪, ೩೩೫, ೩೩೮, ೩೪೨, ೩೪೩, ೩೪೪, ೩೫೩, ೩೫೪, ೩೭೮, ೩೯೩, ೩೯೫, ೩೯೯

ತಲಾಖ್ ೩೧೩, ೩೯೪

ತಾಂಪುರಂ ೧೪೬

ತಾಜಾಮುಲ್ ಹುಸೇನ್ ೪೭೫, ೪೭೬, ೪೭೮, ೪೮೨, ೪೯೬, ೪೯೭, ೫೦೩, ೫೦೮, ೫೨೮, ೫೩೧, ೫೩೬, ೫೪೬, ೫೪೮, ೫೭೦

ತಿರುಮಲರಾವ್ ಎಂ ೨೬೦, ೪೩೮, ೪೯೪, ೫೮೧, ೫೯೦, ೫೯೧, ೬೧೦, ೬೨೩, ೬೨೪

ತಿರುವಳ್ಳುವರ್ ೭೧೭

ತಿರುವಾಂಕೂರು ೪೩೫

ತಿರೈಪಣಂ ೭೧೮

ತಿರೋಗಾಮಿ ೬೫೫

ತುಳಸೀದಾಸರು ೩೮೨

ತೇಜ್ ಬಹದ್ದೂರ್ ಸಪ್ರು ೫೫೬, ೬೬೫

ತ್ಯಾಗರಾಜ ೭೨೦

**ಥ**

ಥಾನು ಪಿಳ್ಳೆ ಎ. ೬೪೬, ೭೨೩, ೭೨೮

**ದ**

ದತ್ತಸ್ವೀಕಾರ ೫, ೧೧, ೧೯, ೨೦, ೩೧, ೧೦೬, ೧೦೭, ೧೧೦

ದತ್ತುಪುತ್ರ ೧೨೦, ೫೬೪, ೬೧೬, ೭೧೯

ದಮಯಂತಿ ೩೮೬

ದರ್ಭಾಂಗ ೬೩೦, ೬೩೧

ದಾತಾರಂ ೩೨೮

ದಾಸ್ ಡಿ. ೫೧೧

ದಾಸ್ ಬಿ. ೨೮೪, ೨೯೮, ೩೦೮, ೩೮೦, ೩೯೩, ೪೧೨, ೪೪೧, ೪೭೦, ೪೯೦, ೪೯೧, ೫೦೧, ೫೦೨, ೫೨೬, ೭೧೫, ೭೨೬

ದಾಸ್ ಬಿ.ಸಿ. ೨೯೯

ದೀಪಾವಳಿ ೭೨೩

ದುರ್ಗಾಬಾಯಿ ಜಿ ೪, ೧೧, ೩೮, ೨೪೬, ೨೫೪, ೩೧೪, ೩೨೫, ೩೩೪, ೩೩೫, ೩೪೧, ೩೭೩, ೪೦೭, ೪೧೦, ೪೧೨, ೪೧೪, ೪೧೬, ೪೧೭, ೪೨೧, ೪೨೩, ೪೩೦, ೪೩೨, ೪೩೯, ೪೪೦, ೪೪೧, ೪೬೭, ೪೭೪, ೪೮೬, ೪೮೭, ೪೯೩, ೪೯೪, ೪೯೬, ೫೧೨, ೫೧೩, ೫೧೭, ೫೫೮, ೫೬೦, ೫೬೯, ೫೮೬, ೫೮೭

ದೆಹಲಿ ೨೪೮, ೨೮೩, ೩೩೬, ೩೩೭, ೩೫೨, ೩೬೯, ೩೮೩, ೫೪೮, ೫೬೭, ೬೧೮, ೬೧೯, ೬೫೦

ದೇಶಮುಖ ೨೭೫, ೬೬೧

ದ್ವಾರಕನಾಥ್ ೬೩೩, ೬೬೫

ದ್ವಾರಕನಾಥ ಮಿತ್ತರ್ ೨೯೬, ೫೬೩, ೬೯೦

ದ್ವೈಮುಷಾಯನ ೨೮೫

**ಧ**

ಧರ್ಮನಿರಪೇಕ್ಷತೆ ೬೦೯, ೭೨೧

ಧರ್ಮಶಾಸ್ತ್ರ ೩೧೭, ೪೨೦

ಧರ್ಮಸಂಘ ೬೮೨

ಧರ್ಮಾತೀತ ೬೦೯

ಧುಳೇಕರ್ ಆರ್. ವಿ. ೩

ನಜೀರುದ್ದೀನ್ ಅಹಮ್ಮದ್ ೪೯, ೨೫೪, ೨೫೮,

೨೫೮, ೨೬೧, ೨೬೫, ೨೬೭, ೩೯೬, ೪೨೧, ೪೪೮, ೪೫೩, ೪೫೪, ೪೫೫, ೪೫೬, ೪೫೮, ೪೫೯, ೪೬೦, ೪೬೧, ೪೬೨, ೪೬೩, ೪೬೪, ೪೬೫, ೪೬೬, ೪೬೭, ೪೬೮, ೪೬೮, ೪೭೧, ೪೭೩, ೪೭೪, ೪೭೫, ೪೭೭, ೪೭೮, ೪೭೯, ೪೮೨, ೪೮೩, ೪೮೭, ೪೮೮, ೪೮೯, ೪೯೦, ೪೯೧, ೪೯೨, ೪೯೩, ೪೯೪, ೪೯೫, ೪೯೬, ೪೯೭, ೪೯೮, ೪೯೯, ೭೪೬, ೭೫೦, ೭೫೧,

ನಟ್ಟು ಕೋಟ್ಟೈ ಚೆಟ್ಟಿಯಾರ್ ೨೮೨

ನರಸಿಂಹ ೩೮೨

ನಸೀರುದ್ದೀನ್ ಅಹ್ಮದ್ ೩, ೨೧, ೨೨, ೨೪, ೩೦, ೩೪, ೩೫, ೨೫೫, ೨೫೬, ೨೬೯, ೨೬೯, ೨೭೦, ೨೯೭, ೨೯೮, ೩೦೦, ೩೦೧, ೩೦೨, ೩೦೨, ೩೦೩, ೩೦೪, ೩೦೫, ೩೦೬, ೩೦೭, ೩೦೮, ೩೦೯, ೩೨೪, ೩೨೫, ೩೩೨, ೩೩೫, ೩೪೬, ೩೬೭, ೩೬೯, ೩೮೧, ೩೯೬, ೪೦೧, ೫೪೯, ೭೫೦

ನಾಗಪುರ ೫೫೮, ೬೭೦

ನಾಗಪ್ಪ ೫೭೦, ೫೭೮, ೬೨೪

ನಾಟಕೋಟಿ ಚೆಟ್ಟಿಯಾರ ೬೧೭

ನಾರದ ೨೮೩, ೩೫೫, ೫೬೩, ೬೨೫

ನಾರದಸ್ಮೃತಿ ೨೭

ನಾಸಿರುದ್ದೀನ್ ಅಹ್ಮದ್ ೭೪೪

ನಾಸ್ತಿಕ ೬೩೮

ನಿಝಾಮುದ್ದೀನ ಅಹ್ಮದ ೨೫೬

ನೆಪೋಲಿಯನ್ ೫೩೬

ನೇಪಾಳ ೨೪೧

ನೋಮಿನಿಸ್ ಹೆರಿಡಿಷಿಯೊ ೩೪೮

ನೌಖಾಲಿ ೪೫೫

ನ್ಯಾಯಶಾಸ್ತ್ರ ೨೮೫, ೨೯೨

**ಪ**

ಪಂಚತಂತ್ರ ೩೮೭

ಪಂಚಾಯಿತಿ ೫೬೩, ೬೨೯, ೬೭೪

ಪಂಜಲಿ ೭೧೪

ಪಂಜಾಬ್ ೯, ೧೩, ೩೧, ೨೪೧, ೨೪೨, ೨೪೭, ೨೪೯, ೨೫೦, ೨೫೨, ೨೫೪, ೨೭೨, ೩೨೫, ೩೨೬, ೩೩೦, ೩೪೭, ೩೪೮, ೩೫೧, ೩೫೨, ೩೫೩, ೩೫೬, ೩೫೭, ೩೬೪, ೩೬೫, ೩೬೬, ೩೭೩, ೩೮೩, ೩೯೪, ೩೯೫, ೪೦೪, ೪೪೪, ೪೫೯, ೫೭೫, ೫೮೯, ೬೩೪, ೬೭೫, ೬೯೩, ೭೦೯, ೭೧೧, ೭೧೩, ೭೧೪, ೭೩೭

ಪಂಜಾಬಿ ೭೧೧

ಠಾಕೂರ್ ದಾಸ್ ಭಾರ್ಗವ, ಪಂಡಿತ್ ೪, ೯, ೨೪೬, ೨೯೭, ೩೦೦, ೩೦೬, ೩೦೯ ೩೧೬, ೩೨೪, ೩೨೫, ೩೨೬, ೩೩೦, ೩೩೧, ೩೩೨, ೩೩೪, ೩೩೫, ೩೩೬, ೩೩೮, ೩೪೦, ೩೪೧, ೩೪೨, ೩೪೩, ೩೪೪, ೩೪೫, ೩೪೬, ೩೪೯, ೩೫೦, ೩೫೧, ೩೫೨, ೩೫೩, ೩೫೪, ೩೫೬, ೩೫೭, ೩೫೮, ೩೬೦, ೩೬೨, ೩೬೩, ೩೬೭, ೩೭೨, ೩೮೩, ೩೮೪, ೩೯೦, ೩೯೧, ೩೯೨, ೩೯೪, ೩೯೫, ೪೧೩, ೪೫೯, ೪೬೦, ೪೬೨, ೬೦೦

ಪರ್ದಾ ೬೫೦

ಪರ್ಷಿಯಾ ೬೬೪

ಪಾಕಿಸ್ತಾನ ೨೪೨, ೩೨೮, ೫೩೭, ೫೪೨, ೫೪೫, ೫೪೬, ೫೯೭

ಪಾಟಸ್ಕರ್ ಹೆಚ್. ವಿ. ೫೯೧, ೫೯೨, ೫೯೩, ೬೬೮, ೭೨೦

ಪಾಟ್ನಾ ೨೭೯, ೫೫೯, ೬೯೦

ಪಾರಸಿ ೩೭, ೬೬೪, ೬೭೦, ೬೯೬

ಪಾರ್ಸಿ ೧೪, ೪೫, ೨೯೪, ೩೧೨, ೩೪೯, ೩೭೮, ೪೧೬, ೪೧೭, ೪೮೧, ೪೮೨, ೫೯೭, ೬೬೧, ೬೬೩

ಪುರೋಗಾಮಿ ೪೫೦, ೪೫೧, ೬೧೦, ೬೧೬

ಪೂರ್ಣಿಮಾ ಬ್ಯಾನರ್ಜಿ ೩೮೫, ೩೯೫, ೬೯೦, ೭೧೬

ಪೂರ್ವಪಂಜಾಬ್ ೪

ಪೆರು ೬೩೮

ಪೋರ್ಚುಗೀಸ್ ೫೯೭, ೫೯೮, ೭೪೦
ಪೋರ್ಷಿಯಾ ೩೮೨
ಪ್ಯಾರಿಸ್ ೭೨೮, ೭೨೯
ಪ್ರಬಜಿತ್ ೪೪೮
ಪ್ರಭಾವತಿ ರಾಜೆ ೬೪೦
ಪ್ರಾಕ್ಟರ್ ೮೩, ೮೪, ೮೫
ಪ್ರಿವಿಕೌನ್ಸಿಲ್ ೪೧೨, ೪೮೫, ೪೯೨
ಪ್ಲೇಟೋ ೪೩೮

ಫ

ಫ್ರೆಂಚ್ ೨೯೬, ೭೪೦

ಬ

ಬಂಗಾಲಿ ೪೧೨, ೫೩೫, ೫೮೬
ಬಂಗಾಳ ೩, ೧೯, ೨೧, ೨೨, ೨೩, ೨೫೧, ೨೬೯, ೨೭೦, ೨೭೬, ೨೮೯, ೨೯೦, ೨೯೪, ೩೧೭, ೩೨೪, ೩೨೫, ೩೩೦, ೩೯೬, ೩೯೮, ೩೯೯, ೪೧೩, ೪೧೪, ೪೨೦, ೪೨೧, ೪೨೯, ೪೩೫, ೪೩೭, ೪೪೧, ೪೪೩, ೪೪೫, ೪೫೪, ೪೫೫, ೪೬೨, ೪೬೮, ೪೭೧, ೪೭೨, ೪೭೪, ೪೭೫, ೪೭೬, ೫೦೮, ೫೧೪, ೫೧೭, ೫೧೮, ೫೩೪, ೫೫೨, ೫೫೩, ೫೬೫, ೫೬೬, ೫೭೩, ೫೮೦, ೫೮೫, ೫೮೬, ೫೮೭, ೬೩೭, ೬೫೮, ೬೫೯, ೬೬೨, ೬೬೭, ೬೮೨, ೬೯೧, ೭೧೦, ೭೧೨, ೭೩೩, ೭೪೩, ೭೪೬, ೭೫೬
ಬಂಡವಾಳಶಾಹಿ ೩೧೬, ೬೩೬
ಬಡೋದ ೬೨೫
ಬನಾರಸ್ ೨೯೦, ೬೪೦, ೬೯೧
ಬರೋಡ ೨೮೩, ೩೨೩, ೬೯೩, ೭೨೯, ೭೪೦
ಬರ್ಟ್ರಾಂಡ್ ರಸೆಲ್ ೬೦೭
ಬರ್ದ್ವಾನ್ ೪೭೫
ಬರ್ಮಾ ೩೮೧, ೫೪೨
ಬಲದೇವಸ್ವರೂಪ್ ೪, ೧೨, ೩೮
ಬಹದ್ದೂರ್‌ಘರ್ ೩೩೬
ಬಾಂಬೆ ೨೪೫, ೨೪೬, ೨೮೩, ೩೯೫
ಬಾಬಿಲೋನ್ ೪೨೦
ಬಾಬು ರಾಜೇಂದ್ರ ಪ್ರಸಾದ್ ೩೩೪, ೪೪೩, ೪೪೭, ೬೩೧, ೬೬೬
ಬಾಬು ರಾಮನಾರಾಯಣಸಿಂಗ್ ೨೬೭, ೩೩೪, ೪೧೭, ೪೧೮, ೪೧೯, ೪೨೮, ೪೫೧
ಬಾಲಕೃಷ್ಣ ಶರ್ಮ ಪಂಡಿತ್ ೪, ೧೨, ೩೮, ೨೬೩, ೨೬೪, ೩೪೧, ೩೪೩, ೩೪೭, ೬೨೪, ೬೮೭
ಬಿರಾರ್ ೪೧೦, ೪೫೫, ೪೯೭, ೫೬೯, ೫೮೫, ೫೮೮, ೬೨೪, ೬೨೬
ಬಿರ್ಕೆನ್ ಹೆಡ್ ೬೧೫
ಬಿಶ್ವಾಸ್ ಕೆ. ಡಾ॥ ೬೯೦
ಬಿಸ್ವದಾಸ ೨೫೫
ಬಿಸ್ವನಾಥ ದಾಸ ೨೬೧, ೬೨೪
ಬಿಹಾರ್ ೨೬೭, ೨೮೦, ೩೦೩, ೩೦೫, ೩೩೧, ೩೯೨, ೩೯೩, ೩೯೬, ೪೧೫, ೪೧೮, ೪೪೩, ೪೭೫, ೫೨೧, ೫೨೮, ೫೭೦, ೫೮೮, ೫೯೯, ೬೨೧, ೬೩೦, ೬೩೪, ೬೬೧, ೭೦೦
ಬೀರಾರ್ ೨೮೪, ೨೯೭, ೩೪೪, ೩೪೫, ೩೮೪, ೩೮೬
ಬೆರಾರ್ ೫೧೬, ೬೭೨, ೬೭೫, ೬೯೭, ೭೩೫, ೭೩೮
ಬೇಗಂ ಎಜಾಜ್ ರಸೂಲ್ ೩೧
ಬೈಜನಾಥ ಬಜೋರಿಯಾ ೪೯೦
ಬೈಬಲ್ ೭೨೪
ಬೊಂಬಾಯಿ ೫೯೩, ೬೧೯
ಬೌದ್ಧಧರ್ಮ ೨೨೯, ೩೯೭
ಬೌದ್ಧ ೪೧೬, ೪೪೦, ೫೯೩, ೬೭೩
ಬ್ಯಾಲ್‌ಪೋರ್ ೭೫೨
ಬ್ರಜೇಶ್ವರ್ ಪ್ರಸಾದ್ ೪, ೧೨, ೩೮
ಬ್ರಿಜೇಶ್ವರ ಪ್ರಸಾದ ೪೧೮, ೫೮೮
ಬ್ರಿಟನ್ ೩೩೯, ೭೨೨

ಬ್ರಿಟಿಷ್ ೧೩, ೨೬೮, ೩೧೭, ೩೨೩, ೩೭೨, ೪೦೩, ೪೦೫, ೪೧೭, ೪೨೦, ೫೨೬, ೫೫೫, ೫೬೫, ೫೮೫, ೫೯೭, ೫೯೮, ೬೧೨, ೬೩೬, ೬೪೩, ೬೪೪, ೬೭೬, ೬೯೧, ೬೯೨, ೭೨೪

ಬ್ರೆಜಿಲ್ ೭೧೪

## ಭ

ಭಕ್ಷಿ ತೇಕ್‌ಚಂದ್ ೧೧, ೩೮, ೨೪೬, ೩೩೧, ೩೪೩, ೩೪೭, ೩೬೭, ೫೦೧, ೫೦೬, ೬೧೫, ೬೭೫, ೬೭೭, ೬೭೮, ೬೮೩, ೬೮೪, ೬೮೬, ೬೮೭, ೬೯೩, ೬೯೪, ೬೯೫, ೬೯೬, ೭೧೪, ೭೨೬, ೭೨೯

ಭಗೀರಥ ೫೦೬

ಭೀಮಸ್ಮೃತಿ ೩೮೨

ಭೀಷ್ಮ ೩೯೧

ಭೂಬಾನ್ ಮಾಯೀಸ್ ೬೧೬

## ಮ

ಮಂಡನಮಿಶ್ರ ೩೮೭

ಮತಾಂತರ ೮೩, ೨೭೪

ಮದ್ರಾಸ್ ೭೫, ೧೪೬, ೨೪೧, ೨೫೧, ೨೬೦, ೨೭೬, ೨೮೩, ೨೯೫, ೩೨೫, ೩೩೧, ೩೪೧, ೩೫೩, ೩೬೦, ೩೮೪, ೪೦೭, ೪೧೨, ೪೧೬, ೪೩೫, ೪೩೮, ೪೫೮, ೪೭೦, ೪೭೪, ೪೯೪, ೫೪೩, ೫೫೮, ೫೬೧, ೫೭೦, ೫೭೩, ೫೮೦, ೫೮೧, ೫೮೬, ೫೮೮, ೬೦೬, ೬೦೭, ೬೧೩, ೬೧೭, ೬೨೩, ೬೩೩, ೬೩೭, ೬೬೨, ೬೬೪, ೬೬೭, ೬೭೮, ೬೯೨, ೬೯೩, ೬೯೪, ೭೧೫, ೭೧೬, ೭೧೮, ೭೨೦, ೭೨೨, ೭೨೮, ೭೩೮, ೭೫೦

ಮನುಸ್ಮೃತಿ ೫೫೩, ೬೭೧

ಮನ್ ಮೋಹನ್ ದಾಸ್ ೭೧೦

ಮಯೂಖ ೬೯೧

ಮರಮಕ್ಕತ್ತಾಯಂ ೪೮, ೪೮, ೭೧, ೭೨, ೭೩, ೯೬, ೯೭, ೯೯, ೧೦೦, ೧೦೨, ೧೦೩, ೧೪೫, ೧೭೨, ೧೮೩, ೨೮೦, ೨೮೩, ೫೮೫, ೫೯೩, ೬೦೬, ೬೦೭, ೬೦೮, ೬೪೬, ೭೨೩

ಮರಾಠ ೬೦೨

ಮರಾಠಿ ೭೪೫

ಮರೀನ್ ೩೫೨

ಮಲಬಾರ್ ೧೮, ೧೪೬, ೩೨೩, ೩೭೩, ೪೩೫, ೫೮೫, ೫೮೬, ೬೦೭, ೬೦೮, ೬೦೯, ೬೪೬, ೬೬೩, ೭೨೩, ೭೨೯

ಮಲಯಾಳ ೪೯

ಮಲೇಶಿಯಾ ೫೪೨

ಮಹಮದ್ ಪೈಗಂಬರ ೫೯೩

ಮಹಮ್ಮದ್ ಇಸ್ಮಾಯಿಲ್ ಖಾನ್ ೫೧೮

ಮಹಮ್ಮದೀಯ ೫೯೦, ೫೯೩

ಮಹಾಭಾರತ ೨೪೩, ೩೮೭, ೩೮೮, ೩೯೦, ೪೩೯

ಮಹಾವೀರ್ ತ್ಯಾಗಿ ೨೪೬, ೨೯೮, ೬೩೭

ಮಾಂಟೆಗೋ ಚೆಲ್ಮ್ಸ್‌ಫೋರ್ಡ್ ೨೪೯

ಮಾತೃಪ್ರಧಾನ ೬೦೮, ೬೦೯, ೬೬೨, ೭೨೩

ಮಾತೃಭಾಷೆ ೩೨೫, ೬೬೨

ಮಾನದಂಡ ೨೯೨, ೭೨೮

ಮಾವಳಂಕರ ಜಿ.ವಿ. ೧೭, ೪೭೩, ೫೪೫

ಮಾಸ್ಟರ ನಂದಲಾಲ ೨೭೨

ಮಾಳವೀಯ ೬೬೫, ೬೬೬

ಮಿಟ್ಟರ್ ೩೫, ೫೪೮, ೫೪೯, ೫೫೦, ೫೫೧, ೫೫೩, ೫೬೩, ೬೩೩, ೬೬೫, ೬೬೭, ೬೯೦

ಮಿತಾಕ್ಷರ ೫, ೬, ೧೯, ೧೩೭, ೨೭೮, ೨೭೯, ೩೫೭, ೩೭೧, ೪೧೨, ೪೪೧, ೫೭೭, ೫೮೫, ೫೮೬, ೫೮೭, ೬೮೦, ೬೯೧, ೬೯೨

ಮಿಥಿಲಾ ೨೯೦

ಮಿಶನರಿ ೧೩

ಮಿಹಿರ್‌ಲಾಲ್ ಚಟ್ಟೋಪಾಧ್ಯಾಯ ೪, ೧೧, ೩೮, ೪೬೨

ಮುಂಬೈ ೧೯, ೨೪೧, ೨೪೭, ೨೭೯, ೩೫೨, ೪೧೧, ೪೩೫, ೬೩೭
ಮುಕುಟ ಬಿಹಾರಿಲಾಲ್ ಭಾರ್ಗವ ೨೬೦, ೩೦೫, ೩೦೮, ೫೧೫, ೫೫೪, ೫೫೮, ೫೬೦, ೫೬೧, ೫೬೪, ೫೬೫, ೫೬೬, ೫೬೭, ೫೬೮, ೫೬೯, ೫೭೦, ೫೭೧, ೫೭೩, ೫೭೫, ೫೭೭, ೫೭೮, ೫೮೦, ೫೮೧, ೫೮೬, ೫೯೪, ೬೧೦
ಮುಖಜಿ ಬಿ.ಕೆ. ೪೫೫
ಮುನವಳ್ಳಿ ಬಿ.ಎನ್. ೪೩೮, ೫೦೭, ೫೬೬
ಮುನಷಿ ಕೆ. ಎಮ್. ೨೪೬, ೨೪೮, ೨೫೦, ೨೫೨, ೫೧೪, ೬೮೨, ೬೯೩
ಮುನಿ ೩೮೭, ೩೮೮, ೪೩೮, ೬೧೧, ೬೭೬
ಮುನಿಸ್ವಾಮಿ ಪಿಳ್ಳೈ ವಿ. ಐ. ೭೧೫, ೭೧೬, ೭೨೨
ಮುಸ್ಲಿಂ ೩, ೧೨, ೧೪, ೧೮, ೨೧, ೨೨, ೩೧, ೩೨, ೩೭, ೫೪, ೨೫೧, ೨೭೦, ೨೯೪, ೩೦೩, ೩೧೨, ೩೧೩, ೩೨೩, ೩೨೪, ೩೩೧, ೩೪೯, ೩೫೬, ೩೭೮, ೩೯೩, ೩೯೬, ೪೧೪, ೪೧೬, ೪೧೭, ೪೨೧, ೪೫೪, ೪೫೬, ೪೫೭, ೪೭೧, ೪೭೫, ೪೮೧, ೪೮೨, ೪೯೯, ೫೧೨, ೫೧೭, ೫೧೮, ೫೨೦, ೫೨೮, ೫೨೯, ೫೩೦, ೫೩೧, ೫೩೨, ೫೩೩, ೫೩೪, ೫೩೫, ೫೩೯, ೫೪೩, ೬೦೧, ೬೦೬, ೬೩೧, ೬೬೧, ೬೬೬, ೬೭೮, ೬೯೫, ೬೯೬, ೭೪೧
ಮೃತ್ಯಪತ್ರ ೧೪೯, ೧೫೪, ೧೫೭, ೧೫೮, ೧೬೫, ೧೬೮, ೧೭೧, ೧೭೪, ೧೭೫, ೧೭೬, ೧೭೭, ೧೭೮, ೧೭೯, ೧೮೦, ೧೮೧, ೧೮೨, ೧೮೩, ೧೮೪, ೧೮೬, ೧೯೨, ೧೯೩, ೨೦೩, ೨೦೭, ೨೭೭, ೪೩೭, ೭೧೭
ಮೆಕಾಲೇ ೫೪೩
ಮೆಕ್ಸ್‌ವೆಲ್ ರೆಜಿನಾಲ್ಡ್ ಸರ್ ೪೭೨
ಮೆಡಿಟರೇನಿಯನ್ ೫೨೯
ಮೆನೋನ್ ಎ. ಕೆ. ೭೨೩
ಮೇರ್‌ವಾರ ೨೬೦, ೩೩೭, ೫೬೭, ೫೬೯
ಮೇವಾಡ ೨೮೦, ೫೧೫
ಮೈತ್ರೇಯಿ ೩೮೬
ಮೈಸೂರು ೪೦೨, ೪೨೨, ೪೨೩
ಮೊಗಲರು ೫೫೬, ೬೩೪
ಮೊನೋ ಮೋಹನದಾಸ್ ಡಾ. ೩೧೭, ೩೨೫, ೩೪೧, ೩೯೮, ೪೨೦, ೫೦೮, ೫೩೪, ೫೫೨, ೫೮೦, ೭೧೦
ಮೋಹನ್‌ಲಾಲ್ ಗೌತಮ್ ೨೫೫, ೩೧೫, ೩೧೫, ೩೩೦, ೩೩೩, ೩೪೨
ಮೋಹನ್‌ಲಾಲ್ ಸಕ್ಸೇನ ೩, ೪
ಮೌಂಟ್ ಬ್ಯಾಟನ್ ೩೮೧
ಮೌಲಾನ ಅಬ್ದುಲ್ ಕಲಂ ಆಜಾದ್ ೩೧೬, ೩೮೫
ಮೌಲಾನ ಹಸ್ರತ್ ಮೊಹಾನಿ ೩೮೫, ೩೮೫, ೬೫೭, ೯೯೬, ೯೯೭
ಮೌಲಾನಾ ಹಜರತ್ ಮೋಹಾನಾ ೪೧೬, ೪೧೭
ಮೌಲಾನಾ ಹಜರತ್ ಮೋಹಾನಿ ೪೧೪, ೪೧೪, ೪೧೬, ೪೧೭, ೫೧೭, ೬೫೭, ೬೯೬, ೬೯೭

## ಯ

ಯಹೂದಿ ೬೩೧
ಯಹೂದ್ಯ ೪೫
ಯಾಜ್ಞವಲ್ಕ್ಯ ೨೯೩, ೨೯೪, ೩೧೪, ೩೮೬, ೩೯೦, ೪೪೭, ೫೬೮, ೫೮೫, ೬೭೧, ೬೭೬, ೬೯೧, ೬೯೨, ೭೨೦, ೭೨೪
ಯುರೋಪಿಯನ್ ೧೮, ೫೪೧, ೫೭೪
ಯುರೋಪು ೩೮೦, ೫೩೬, ೫೪೧
ಯೆಹೂದಿ ೧೪

## ರ

ರಂಗಪ್ರವೇಶ ೬೨೮
ರಜಪೂತ ೩೫೬
ರಣಬೀರ್ ಸಿಂಗ್ ಚ. ೨೪೧, ೨೪೬, ೨೫೧, ೨೫೨, ೨೫೪, ೩೫೬, ೪೦೪, ೫೮೯

ರನಿಶಕಿಷನ್ ಮಲ್ಲಿಕ್ ೬೨೨
ರಷ್ಯಾ ೩೯೪, ೫೫೩, ೭೨೯
ರಸೂಲ್ ೩೧
ರಾಜಾರಾಂ ಮೋಹನ್ ರಾಯ್ ೩೬೭, ೬೧೧, ೬೭೬, ೬೭೭, ೭೧೬
ರಾಜೇಂದ್ರ ಪ್ರಸಾದ್ ೩೩೪, ೪೪೩, ೪೪೭, ೬೩೧
ರಾಧಾಕೃಷ್ಣನ್ ಎಸ್. ೩೮೬, ೩೮೮
ರಾಧಾನಾಥ ಸಿಖಧರ ೬೨೨
ರಾಬರ್ಟ್ ಲೋ ೬೪೧
ರಾಮಕೃಷ್ಣ ಮಿಶನ್ ೩೮೭
ರಾಮನಾಥ ಗೋಯಂಕ ೨೪೧, ೨೪೬, ೨೫೪, ೫೪೩
ರಾಮನಾರಾಯಣಸಿಂಗ್ ೧೧, ೩೮, ೨೬೫, ೨೬೬, ೨೬೭, ೩೦೩, ೩೯೨, ೩೯೭, ೩೯೮, ೩೯೯, ೪೦೧, ೪೧೫, ೪೩೯, ೪೫೮, ೪೮೦, ೫೨೧, ೫೩೪, ೫೪೪, ೫೪೯, ೫೫೧, ೫೬೦, ೫೬೪, ೫೯೯, ೬೩೧
ರಾಮಪ್ರಸಾದ್ ೬೨೨
ರಾಮಲಿಂಗಂ ಚೆಟ್ಟಿಯಾರ್ ಟಿ.ವಿ. ೨೯೫, ೩೪೧, ೪೭೦, ೬೧೭
ರಾಮಾಯಣ ೩೫೮, ೪೩೯, ೬೨೮
ರೆಜಿನಾಲ್ಡ್ ೪೭೨
ರೇಣುಕಾ ೨೪೬
ರೆನಾಲ್ಡ ೫೪೫
ರೆನಾಲ್ಡ ಮ್ಯಾಕ್ಸವೆಲ್, ಸರ್ ೫೪೫
ರೇಣುಕಾ ರಾಯ್ ೪, ೧೧, ೩೮, ೨೫೪, ೨೬೨, ೨೯೪, ೩೦೬, ೩೦೭, ೩೦೮, ೩೧೪, ೩೩೦, ೩೩೬, ೩೫೬, ೩೬೭, ೩೬೯, ೩೭೦, ೩೭೨, ೩೮೦, ೪೧೪, ೪೧೬, ೪೧೭, ೪೧೮, ೪೨೧, ೪೩೯, ೪೫೪, ೪೫೫, ೪೫೭, ೪೬೦, ೪೬೧, ೫೧೭, ೫೮೭, ೬೧೯, ೬೪೬, ೬೬೪, ೬೬೫, ೬೬೯, ೬೭೪
ರೇಣುಕಾ ರೇ ೩೬೭
ರೋಮ್ ೪೨೦, ೫೭೨
ರೋಹಿಣಿಕುಮಾರ್ ಚೌಧರಿ ೩೨, ೩೬, ೩೭, ೩೪೯, ೩೫೬, ೫೧೫, ೫೮೩, ೫೮೪, ೫೮೬, ೫೮೭, ೫೮೮, ೫೯೦, ೬೨೩, ೬೩೯, ೬೫೯, ೬೭೭, ೬೯೯, ೭೦೧, ೭೨೬, ೭೩೪, ೭೩೫, ೭೩೭, ೭೩೮, ೭೩೯, ೭೪೪, ೭೪೫, ೭೫೦, ೭೫೧, ೭೫೫

## ಲ

ಲಂಡನ್ ೬೩೬
ಲಕ್ಷ್ಮಣ ೩೫೮
ಲಕ್ಷ್ಮಿಕಾಂತ ಮಿಶ್ರ ಪಂಡಿತ ೫೫೪
ಲಕ್ಷ್ಮಿಕಾಂತ ಮೈತ್ರ ೪೬, ೪೯, ೩೯೯, ೪೦೪, ೪೦೫, ೪೧೩, ೪೧೪, ೪೧೫, ೪೧೬, ೪೧೭, ೪೧೮, ೪೧೯, ೪೨೦, ೪೨೧, ೪೨೨, ೪೨೩, ೪೨೫, ೪೨೬, ೪೨೮, ೪೨೯, ೪೩೦, ೪೩೩, ೪೩೪, ೪೩೫, ೪೩೬, ೪೩೮, ೪೩೯, ೪೪೦, ೪೪೧, ೪೪೨, ೪೪೪, ೪೫೩, ೪೫೮, ೪೫೯, ೪೬೦, ೪೬೮, ೪೭೨, ೪೭೪, ೪೭೭, ೪೯೫, ೫೧೪, ೫೧೫, ೫೫೪, ೫೬೫, ೫೬೬, ೫೮೨, ೫೮೬, ೫೮೭, ೬೦೧, ೬೧೯, ೬೨೩, ೬೬೬
ಲಕ್ಷ್ಮೀನಾರಾಯಣ ಸಾಹು ೫೦೩, ೫೯೦, ೬೫೩, ೬೯೩, ೭೦೯
ಲಾಲೂಬಾಯಿ ೨೪೭
ಲಾಹೋರ್ ೩೬೫, ೫೫೦, ೫೫೯
ಲಿಂಕನ್ ೭೦೮
ಲಿಂಡ್ಸೆ ೪೦೪, ೪೨೮
ಲೆನಿನ್ ೫೫೩
ಲ್ಯೂಡೆನ್‌ಡ್ರೋಫ್ ೬೪೮

## ವ

ವಕ್ಫ್ ೫೨೯, ೫೩೧
ವಾಟಣಿ ೧೩೮, ೧೪೦, ೧೪೨, ೧೪೩, ೧೪೪, ೧೪೫, ೧೪೮, ೧೪೯

ವಾಟಣೆ ೧೪೨
ವಾರಸಾನಾತೆ ೧೪೪, ೧೭೫, ೧೮೪, ೨೪೨, ೨೪೪, ೨೭೮
ವಿಕ್ಟೋರಿಯಾ ೬೪೮
ವಿಜ್ಞಾನೇಶ್ವರ ೫೫೬, ೬೭೧, ೬೯೧, ೬೯೨
ವಿಠಲಬಾಯಿ ೨೪೯
ವಿದ್ಯಾಚಂದ್ರ ೩೧೦
ವಿದ್ಯಾಸಾಗರ ೪೩೧, ೬೨೨, ೬೬೩, ೬೭೮
ವಿನ್ನಿ ಮೆಸಕೆರಿನ್ ೨೫೪
ವಿಮಲಕುಮಾರಿ ೬೦೦
ವೃತ್ತಪತ್ರಿಕೆ ೨೦, ೪೩೮, ೬೭೫
ವೆಂಕಟರಮಣ ಶಾಸ್ತ್ರಿ ಟಿ.ಆರ್. ೨೯೫
ವೇಲ್ಸ್ ೧೨

## ಶ

ಶಂಕರಚಾರ್ಯ ೩೮೬, ೩೮೭, ೩೯೭, ೬೮೯, ೭೧೬, ೭೧೭
ಶಕುಂತಲೆ ೩೯೩, ೪೩೪, ೪೩೮, ೪೩೯
ಶಕ್ತಿಮಾನ್ ೪೧೩, ೫೦೨
ಶರಣ ೪೫೧
ಶರದೃತು ೫೩೯
ಶರಿಯತ್ ೩೧
ಶಾಂತಿಪರ್ವ ೩೯೦
ಶಾಕುಂತಲ ೪೩೪, ೪೩೮
ಶಾರದಾ ೩೧೦, ೩೧೧, ೩೩೫, ೩೬೪, ೩೮೯, ೫೩೭, ೫೩೮, ೫೭೦, ೬೮೦, ೭೨೫
ಶಾರ್ದಾ ೧೪, ೨೭
ಶಿಖ್ ೨೨೮, ೨೨೯
ಶಿಬ್ಬನ್ ೭೪೩
ಶಿವನ್ನ ಪಿಳ್ಳೈ ೭೪೫
ಶಿವರಾತ್ರಿ ೩೯೬
ಶಿವರಾವ್ ೪, ೧೨, ೩೮, ೨೬೨
ಶೂದ್ರ ೩೧೨, ೩೮೪, ೪೫೦, ೬೭೦
ಶೂರ್ಪಣಿಕೆ ೬೨೮
ಶೇಕ್ಸ್‌ಪಿಯರ್ ೩೮೨
ಶೇಷಗಿರಿ ೬೪೪
ಶ್ಯಾಮಪ್ರಸಾದ ಮುಖರ್ಜಿ ೩೬೯, ೫೫೩
ಶ್ರೀನಿವಾಸ ಮಲ್ಯ ಯು. ೪, ೧೧, ೩೮
ಶ್ರುತಿ ೨೨, ೫೫೪, ೬೦೨, ೬೦೩

## ಷ

ಷರೀಯತ್ ೫೪೩
ಷೇಕ್ಸ್‌ಪಿಯರರ ೬೦೨

## ಸ

ಸಂತಾನಂ ೨೫೮, ೨೮೦, ೪೬೫, ೪೬೬, ೪೭೩, ೪೭೪, ೫೮೧, ೫೮೨, ೫೮೩, ೫೮೪, ೫೮೫, ೫೮೬, ೫೮೭, ೫೮೮, ೫೮೯, ೫೯೦, ೫೯೧, ೫೯೩, ೫೯೬, ೫೯೮, ೬೧೭, ೬೧೮, ೬೧೯, ೬೨೦, ೬೨೩, ೬೭೮, ೬೯೬, ೬೯೮, ೭೨೦
ಸಂವಿಧಾನ ೨೬೫, ೫೭೧, ೫೮೦, ೬೮೫
ಸಕ್ಸೇನ ೩, ೪
ಸಕ್ಸೇನಾ ೭೪೩
ಸತಿಪದ್ಧತಿ ೩೨೯, ೬೭೬, ೬೭೭
ಸತೀಶ್ ಚಂದ್ರ ಬ್ಯಾನರ್ಜಿ ಡಾ॥ ೬೯೦
ಸತ್ಯನಾರಾಯಣ ಸಿನ್ಹಾ ೬೯೭, ೬೯೮, ೭೩೩, ೭೪೬
ಸಪಿಂಡ ೯, ೧೦, ೨೬, ೫೩, ೫೫, ೩೫೩, ೩೬೪, ೪೯೮, ೪೯೯, ೫೧೧, ೫೬೨, ೭೧೨
ಸರದಾರ ವಲ್ಲಭಭಾಯಿ ಪಟೇಲ್ ೨೪೬, ೨೫೦, ೨೫೨, ೬೧೦
ಸರಸ್ವತಿ ೩೮೮, ೩೯೬
ಸರ್ದಾರ ಭೋಪಿಂದರ್‌ಸಿಂಗ್ ಮಾನ್ ೩೯೪
ಸರ್ವತೆ ೨೬೬, ೨೬೭, ೨೭೧, ೩೦೯, ೩೧೦, ೩೭೩, ೩೭೪, ೩೭೭, ೩೭೮, ೩೭೯, ೩೮೦, ೬೬೮
ಸಿಂಗಪುರ ೬೩೭

ಸಿಂಧ್ ೬೫೯, ೬೬೦
ಸಿಖ್‌ಧರ್ಮ ೩೯೮
ಸಿದ್ವಾ ಆರ್.ಕೆ. ೨೯೭, ೩೦೭, ೩೧೨, ೩೪೪, ೩೮೪, ೩೮೬, ೪೫೫, ೫೬೯, ೫೮೧, ೫೮೫, ೬೨೪, ೬೪೬, ೬೫೨, ೬೭೫, ೭೪೯
ಸಿಮ್ಲಾ ೩೫೨
ಸಿರೋಹಿ ೬೧೦
ಸೀತಾರಾಮ ಎಸ್. ಜಾಜೂ ೬೦೯, ೬೧೦, ೬೧೧, ೬೧೨
ಸೀತಾರಾಮಯ್ಯ ಪಟ್ಟಾಭಿ ೧೨, ೧೭, ೩೭, ೬೩೩, ೬೩೪, ೬೩೯, ೬೪೨, ೬೪೬, ೬೪೭, ೭೩೮, ೭೩೯, ೭೪೧, ೭೪೨
ಸುಂದರ್‌ಬನ್ಸ್ ೩೦
ಸುಚೇತಾ ಕೃಪಲಾನಿ ೩೧೭, ೩೨೦, ೩೨೧, ೩೨೨, ೩೨೩, ೩೩೪, ೩೭೧, ೬೬೪
ಸುಬುರುಲ್ ೩೬೫
ಸುಬ್ಬರಾಯನ್ ಪಿ. ಡಾ. ೭೨೮
ಸುಭಾಷ್ ಚಂದ್ರ ಬೋಸ್ ೩೮೧, ೩೯೫, ೩೯೬
ಸುರೇಶ್ ಚಂದ್ರ ಮಜುಂದಾರ್ ೬೫೯
ಸೇನ್ ಪಿ.ಕೆ. ಡಾ. ೪, ೪, ೧೧, ೩೮, ೬೨೧, ೬೨೩, ೬೨೪, ೬೨೫, ೬೨೬, ೬೨೭, ೬೬೧
ಸೇತ್ ಗೋವಿಂದ ದಾಸ್ ೩೦೯, ೩೧೦, ೩೧೨, ೩೧೩, ೩೧೪, ೩೧೫, ೩೧೬, ೩೧೭, ೩೨೫, ೩೭೧, ೫೧೬, ೫೧೭
ಸೈತಾನ ೫೫೭, ೬೫೧
ಸೊಂಧಿ ಬಿ.ಎಲ್. ೩೯೫, ೪೪೪, ೫೨೧, ೬೩೪, ೬೫೦, ೬೫೫, ೬೯೩
ಸೋವಿಯತ್ ರಷ್ಯ ೩೯೪
ಸೋಷಿಯಲಿಸಂ ೩೧೬
ಸ್ತ್ರೀಧನ ೭, ೭, ೨೭೭, ೨೮೨, ೨೯೦, ೪೪೧, ೪೯೪, ೫೧೩, ೫೭೬, ೬೨೦, ೬೪೪, ೬೭೧, ೬೯೧, ೬೯೨, ೭೧೯, ೭೨೭
ಸ್ತ್ರೀಹಕ್ಕುಬಾಧ್ಯತೆ ೩೮೭
ಸ್ಥವಿರಂ ೩೮೮
ಸ್ಮೃತಿ ೨೯೩, ೩೧೧, ೩೮೨, ೪೦೯, ೫೫೪, ೫೫೬, ೫೬೧, ೬೦೦, ೬೦೨, ೬೩೨
ಸ್ಮೃತಿಕಾರ ೩೨೬, ೩೮೨, ೩೮೭, ೫೫೬, ೬೦೦, ೬೦೩, ೬೩೨, ೬೭೧, ೬೭೬, ೬೯೨, ೬೯೪, ೬೯೫
ಸ್ವಿಸ್ ೫೫೬

## ಹ

ಹಂಸಾ ೪೩೫, ೫೩೩
ಹನುಮಂತಯ್ಯ ಕೆ. ೨೪೬, ೨೫೦, ೨೫೪
ಹನ್ಸಾ ಮೆಹತಾ ೨೫, ೨೮, ೩೭, ೩೪೭, ೩೯೫, ೪೩೫, ೫೩೩
ಹರಿಜನ ೫೯೦, ೬೯೭, ೭೦೦
ಹಿಂದು ೫, ೬, ೧೧, ೨೨, ೨೩, ೩೧, ೩೩, ೩೭, ೪೫, ೪೭, ೫೪, ೮೩, ೧೦೮, ೧೦೯, ೧೧೪, ೧೨೦, ೧೩೦, ೧೩೧, ೧೩೩, ೧೩೮, ೧೯೬, ೧೯೭, ೨೦೨, ೨೪೧, ೨೪೨, ೨೪೩, ೨೪೪, ೨೪೬, ೨೪೯, ೨೫೨, ೨೫೪, ೨೭೪, ೨೭೫, ೨೭೭, ೨೮೩, ೨೮೮, ೩೧೨, ೩೧೩, ೩೨೨, ೩೨೩, ೩೩೦, ೩೩೨, ೩೪೯, ೩೫೮, ೩೫೯, ೩೬೯, ೩೭೬, ೩೮೩, ೩೮೪, ೪೦೭, ೪೦೮, ೪೨೪, ೪೨೮, ೪೩೧, ೪೩೫, ೪೪೨, ೪೫೧, ೪೫೪, ೪೫೫, ೪೭೮, ೪೮೪, ೫೨೧, ೫೨೪, ೫೨೯, ೫೩೦, ೫೩೨, ೫೩೫, ೫೩೬, ೫೩೭, ೫೩೯, ೫೪೩, ೫೫೯, ೫೬೧, ೫೬೪, ೫೭೮, ೫೮೪, ೫೮೫, ೫೮೬, ೫೯೦, ೫೯೩, ೫೯೭, ೬೦೩, ೬೦೯, ೬೨೦, ೬೩೩, ೬೪೯, ೬೬೧, ೬೭೫, ೬೮೬, ೬೮೭, ೬೯೩, ೬೯೬, ೭೦೦, ೭೧೦, ೭೧೧, ೭೧೬, ೭೧೭, ೭೧೮, ೭೨೦, ೭೨೪, ೭೪೮
ಹಿಂದುಸ್ಥಾನ ೪೨೨
ಹಿಂದೂಧರ್ಮ ೨೪೨, ೩೮೯, ೩೯೭, ೫೭೬, ೬೧೧,

೬೭೬, ೬೮೦
ಹಿಂದೂಸ್ತಾನಿ ೩೨೫, ೩೪೧, ೩೪೨
ಹಿಟ್ಲರ್ ೩೯೪
ಹಿಮತ್ಸಿನಿಂಗಕಾ ೨೭೬
ಹಿಸ್ಸಾರ್ ೩೯೦
ಹೀರಾಚಂದಮಿತ್ರ ೬೨೨
ಹುಕುಮಸಿಂಗ ೨೪೧, ೨೪೬, ೬೧೦
ಹುಸೇನ್ ೩೦೩, ೩೦೯, ೩೧೫, ೩೨೦, ೩೨೨, ೩೩೧, ೩೩೪, ೩೩೫, ೩೩೮, ೩೪೨, ೩೪೩, ೩೪೪, ೩೫೩, ೩೫೪, ೩೭೮, ೩೯೩, ೩೯೫, ೩೯೯, ೪೭೫, ೪೭೬, ೪೭೮, ೪೮೨, ೪೯೬, ೪೯೭, ೫೦೩, ೫೦೮, ೫೨೮, ೫೩೧, ೫೩೬, ೫೪೬, ೫೪೮, ೫೭೦
ಹೃದಯನಾಥ ಕುಂಜ್ರು, ಪಂಡಿತ ೩೦೧, ೩೦೪, ೭೪೪
ಹೆನ್ರಿ ಮೇನ್ ೬೨೨
ಹೇಸ್ಟಿಂಗ್ಸ್ ೪೦೩
ಹ್ಯಾನ್ಸರ್ಡ ೩೪೦, ೩೪೭
ಹ್ಯಾಮ್ಲೆಟ್ ೬೪೭
ಹ್ಯಾಲಿಸ್‌ಬರಿ ೬೩೮